ವಾರ್ಷಿಕ ಚಂದಾ: 2 ರೂಪಾಯಿ. ಬಿಡಿ ಸಂಚಿಕೆ 1 ಆಣೆ ಟಪ್ಪಾಲು ಹಾಸಲು ಸೇರಿ ರೂ. 2-13-0.

P
or Quality Snuff
H. Rama Rao and Sons.
hClass Snuff Manufacturers
Mangalore, S. I.
ASK FOR:-
RAMA SNUFF.
e charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your Family TODAY.
Buy a policy in THE BOMBAY LIFE
Madras Branch Secretaries:
Kochikar Brothers,
Calicut, Mangalore, Bangalore, Madras, Bombay and Calcutta

ESTABLISHED 1906
(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರ್ತಪತ್ರಿಕೆ.

ಪುಸ್ತಕ ೨೯. ಮಂಗಳೂರು ತಾ. ೩ನೇ ಶುಕ್ರವಾರ ಮೇ ೧೯೩೫. (3 - 5 - '35) ಸಂಚಿಕೆ ೧೮

ಮೇ ದಿನಾಚರಣೆ.

ಇದು ಅಂತರ್ರಾಷ್ಟ್ರೀಯ ಮಜೂರರ ಉತ್ಸವದ ದಿನವಾಗಿದೆ. ಲಂಡನಿನ ಹ್ಯಾಡ್ ಪಾರ್ಕಿನಲ್ಲಿ ಮಿ. ಟೊಮ್ ಮೆನ್ ಎಂಬವರು ಮಜೂರರಿಗೆ ಭಾಷಣ ಮಾಡುತ್ತಿರುವರು.

(All Rights Revers

ಸಾರಿಹೂರಿ ಹೇಳುತ್ತೇನೆ, ಕೆಟ್ಟ ಕಂದ್ಯಾ ಬೊಡ್ಡಿ ಮಗನೇ!
ಮುಟ್ಟುಗದ್ದ ಮಾಡಬೇಡ–ಕೈಯಲ್ಲಿ ಕೊಳದ್ದ
ನಿನ್ನ ಕೈಯಲ್ಲಿ ಕೊಳೆದ್ದ
ಬೋರ್ಡಿನ ಸುದ್ದಿ ಹೇಳಬೇಡ,
ಅವರ ಕೋಪ ನಿನಗೆ ಬೇಡ,
ಬುದ್ಧಿ ನೀನು ಹೇಳಬೇಡ,
ಸದ್ದು ಕೂಡಾ ಮಾಡಬೇಡ
ಹೊಗಳುಭಟ್ಟನಾಗು, ಮೂಢಾ
ತೆಗಳು ಮಂಗನಾಗಬೇಡ
ಸಾರಿಹೂರಿ ಹೇಳುತ್ತೇನೆ–ಕೆಟ್ಟ ಕೊಂದ್ಯಾ

ಜಿಲ್ಲಾ ಬೋರ್ಡಿನ ಆಡಳಿತವನ್ನು ಸ್ವದೇಶಾಭಿಮಾನಿಯಲ್ಲಿ ಟೀಕಿಸಿದುದರ ಫಲವಾಗಿ ಮೊನ್ನೆ ಬೋರ್ಡು ಸಭೆಯಲ್ಲಿ 'ಎಡ್ಜರ್ನ್‌ಮೆಂಟ್ ಮೋಶನ್' ಮುಂದೆ ಬಂತು ಕಾಣ್ರಿಯಾ! 'ಸ್ವದೇಶಾಭಿಮಾನಿಯ ಟೀಕೆಯು ಸಂಘವಾದುದಲ್ಲ' ಎಂಬಿವೇ ಮೊದಲಾದ ಅರ್ಥ ಮತ್ತು ಅನರ್ಥಗಳನ್ನೊಳಗೊಂಡ ವಿವಾದವು ಜರಗಿತು ಕಾಣ್ರಿಯಾ!

× + × × × ×

ಸ್ವದೇಶಾಭಿಮಾನಿಯು ಬರೆದುದು ಮಾತ್ರ ತಪ್ಪಲ್ಲ ಅದು ಸತ್ಯ ಸಂಗತಿಗಳನ್ನು ಪ್ರಕಟಿಸಿ ಬೋರ್ಡಿನವರ ವರ್ತನೆಯ ನ್ಯಾಯಾನ್ಯಾಯಗಳನ್ನು ಸಾರ್ವಜನಿಕರಿಗೆ ತಿಳುಹಿಸಿ ಅವರ ಸೇವೆ ಮಾಡಿದುದು ಮಾತ್ರ ಸರಿಯಾಗ ಲಿಲ್ಲ!

+ × × × × ×

ಕಂಡದ್ದು ಹೇಳಿದರೆ ಕಂಡದಂತಹ ಕೋಪ–ಅದು ಸಹಜವಾದುದೇ! ಕಾಣದ್ದನ್ನು ಹೇಳಿದರೆ ಪ್ರಾಣ ಬಂದಷ್ಟು ಸಂತೋಷವಾಗುತ್ತಿರಲಿಲ್ಲವೇ? ನಿಜವಾಗಿ ಯೂ ಆಗುತ್ತಿತ್ತು! ಮುಂದಾಳುಗಳೆಂಬವರ ಮನೋ ಪರಿಸ್ಥಿತಿಯೇ ಹಾಗೆನ್ನಿ. ಬೇಕಾದಂತೆ ಹೊಗಳಿದರೆ ಸಂತೋಷ, ಬೇಡವಾದಂತೆ ನುಡಿದರೆ ಕೋಪ!

× × × × × ×

ಜಿಲ್ಲಾ ಬೋರ್ಡಿನವರು ಸಾರ್ವಜನಿಕ ಸೇವಕರು. ಅವರು ಎಂದಿನ ವರೆಗೆ ಅಧಿಕಾರದಲ್ಲಿರುವರೋ ಅಂದಿನ ವರೆಗೆ ಅವರು ಸಾರ್ವಜನಿಕರ ಟೀಕಾತ್ಮಕ ದೃಷ್ಟಿಗೊಳಗಾಗಲೇ ಬೇಕು "ಟೀಕೆಗೆ ನಾನು ಸಿದ್ಧನಿಲ್ಲ" ಎಂಬವನು ಸಾರ್ವಜನಿಕ ವೇದಿಕೆಯನ್ನು ಏರಲು ಸಿದ್ಧನಾಗಬಾರದು.

× × × × × ×

ನ್ಯಾಯಪರವಾದ ವಿಮರ್ಶೆಮಾಡಲು ಸಾರ್ವಜನಿಕರಿಗೆ ಅಧಿಕಾರವೇ ಇಲ್ಲವೆಂದು ಹೇಳುವ ಸಂಸ್ಥೆಗಳಾವುವು? ಅಂತಹವುಗಳು ಅಸ್ತಿತ್ವದಲ್ಲಿರುವುದಾದರೆ ಅವುಗಳು ಬಾಗಿಲು ಮುಚ್ಚಿಕೊಳ್ಳುವುದೇ ಯೋಗ್ಯವಾಗಿದೆ

× × × × × ×

ಮುಂದಕ್ಕೆ ಅಪ್ರಿಯವಾದ ಸತ್ಯವನ್ನು ಹೇಳದೆ ಪ್ರಿಯವಾದ ಸುಳ್ಳನ್ನು ಹೇಳುವ ಯುಗವು ಖಂಡಿತವಾಗಿ ಬರಲೆಂದು ಸಾಯ್ಬನ ಹಾರೈಕೆ

ಬರಲಿ ಸುಳ್ಳಿನ ರಾಜ್ಯ
ಇರಲಿ ಕೋಪದ ತೇಜ
ಬೇಗಲಿ ದ್ವೇಷದ ರಾಜ್ಯ, ಬರಲಿ, ಇರಲಿ!

× × × × × ×

ಎಡ್ಜರ್ನ್‌ಮೆಂಟ್ ಮೋಷನ್‌ಗಳನ್ನು ತರುವುದು ಸುಲಭವಾಗಿಲ್ಲ ಆದರೆ ಆ ಮೋಷನನ್ನು ನ್ಯಾಯಪರವೆಂದು ಸಮರ್ಥಿಸುವ ಸತ್ಯತೆಯು ಬೇಕು.

× × × × × ×

ಸ್ವದೇಶಾಭಿಮಾನಿಯು ಜಮಾಬಂದಿಯಲ್ಲಿ ಬರೆದ ಎತ್ತಿದ ತಪ್ಪು ತಪ್ಪು ಸಂಖ್ಯೆಗಳನ್ನೂ ಅಭಿಪ್ರಾಯಗಳನ್ನೂ ಪ್ರಕಟಿಸುತ್ತದೆ ಎಂದು ಶ್ರೀ ಪೂಂಜರವರು ಖಂಡನಾ ಠರಾವನ್ನು ತಂದರು.

× × × × × ×

ಸಂಖ್ಯೆಯು ತಪ್ಪಾದರೆ ಸರಿಯಾದ ಸಂಖ್ಯೆಯನ್ನು ಬೋರ್ಡಿನವರು ಪ್ರಕಟಿಗೊಳಿಸಬಹುದಲ್ಲವೇ? ತಪ್ಪನ್ನು ಸರಿಗೊಳಿಸುವ ಅಧಿಕಾರವು ಎಲ್ಲರಿಗಿದೆ.

'ಸಾಯ್ಬ'.

ರಾತ್ರಿ ಮಲಗಲು ಹೋಗುವ ಮೊದಲು ಒಂದು ಕಪ್ 'ಓವಲ್ಟಿನ್' ಸೇವಿಸಿದಿರೆಂದರೆ, ನಿಮಗೆ ಸುಖವಾದ ಸ್ವಸ್ಥವಾದ ನಿದ್ರೆಯು ಲಭಿಸುವುದು ಈ ನಿದ್ರೆಯು ನಿಮ್ಮ ಸ್ನಾಯುಗಳನ್ನು ಶಾಂತಗೊಳಿಸಿ, ಅದಕ್ಕೆ ಹೊಸ ಚೇತನದ ಬಲವನ್ನೀಯುವುದು ಓವಲ್ಟಿನ್ ಬಳಲಿದ ದೇಹವನ್ನೂ ಮನಸ್ಸನ್ನೂ ಪುನರ್ರಚಿಸುತ್ತದೆ ಬೆಳಗ್ಗೆ ಏಳುವಾಗ ನೀವು ನೂತನ ಚೇತನವುಳ್ಳವರಾಗುವಿರಿ

ಓವಲ್ಟಿನ್ ಪೂರ್ಣವಾಗಿ ಶುದ್ಧವಾದ ಪೋಷಣೆಯ ವಸ್ತು ಪ್ರಕೃತಿಸಿದ್ಧವಾದ ಬೆಳೆದ ಬಾರ್ಲಿ, ದನದ ಕೆನೆಹಾಲು, ವಿಶಿಷ್ಟವಾದ ಕೋಕೋಗಳಿಂದ ತಯಾರಾಗಿದೆ ಟೋನಿಕ್ ಆಹಾರವೂ, ಪಾನಕವೂ ಆದ ಇದನ್ನು ಬಿಡದೆ ಸೇವಿಸುತ್ತಾ ಬಂದಲ್ಲಿ ದೇಹಕ್ಕೆ ಶಕ್ತಿ ಬಲಗಳನ್ನು ಕೊಡುತ್ತದೆ

ನಿಮ್ಮ ಚಹಾಕ್ಕೆ 'ಓವಲ್ಟಿನ್' ಸೇರಿಸಿರಿ–ಅದು ಆರೋಗ್ಯಕರ, ಬಲವರ್ಧಕ, ಮತ್ತು ಶಕ್ತಿದಾಯಕ.

ಓವಲ್ಟಿನ್

ಟೋನಿಕ್ ಆಹಾರ ಪಾನಕ ಶಾಂತವೂ ಸುಖನಿದ್ರೆಯನ್ನುಂಟುಮಾಡುತ್ತದೆ.

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ದೊರೆಯುತ್ತದೆ

ಏಜಂಟ್–ಜೇಮ್ಸ್ ರೈಟ್ ೩೬ ಎ ಏಸ್ಪ್ಲನೇಡ್ ಕಲ್ಕತ್ತಾ ಮತ್ತು ಮುಂಬಾಯಿ ಮತ್ತು ಮದ್ರಾಸು

OV 303

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ.

ಹೊಸತಾಗಿ ಆಮದಾದುದು ದೊರೆಯುವ ಇತರ ಕ್ಯಾಮರಗಳಿಗಿಂತ ಬಾಳಿಕೆ ಬರುವಂಥದು ಮತ್ತು ಉತ್ತಮವಾದುದು ಫೋಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ. ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್ ೪ ಫಿಲ್ಮ್ ಎಕ್ಸ್‌ಪೋಜರ್ಸ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಆವಶ್ಯಕವಾದ ರಸಾಯನಿಕ ವಸ್ತುಗಳು, ಫೋಟೋ ತೆಗೆಯುವ ವಿಧಾನ, ಶಿಕ್ಷಣಕೊಡುವ ಸಾಹಿತ್ಯ ಇವು ಉಚಿತವಾಗಿ ಕಳುಹಿಸಲಾಗುತ್ತದೆ ಬಲವಾದ ಲೆನ್ಸ್ ಬೆಲೆ ಸಾಮಾನ್ಯವಾದುದು ರೂ. ३–१३–०, ಉತ್ತಮವಾದುದು ६–१२–०, ಮಡಚುವ ಕ್ಯಾಮರಾ ರೂ ೫. ಉತ್ತಮವಾದ್ದು ರೂ. ೭ ಸ್ಪೆಶಲ್ ರೂ. ೧೦, ಪೆಟ್ಟಿಗೆ ಫಿಲ್ಮ್ ಬೇಕಾದರೆ ಡಜನ್ ೧ಕ್ಕೆ ೬ ಆಣೆ. ಎನ್‌ಲಾರ್ಜ್‌ಮೆಂಟಿನ ಸಾಧನ ಸಾಮಗ್ರಿ ೦ ಶೀಸೆಗೆ ೪ ಆಣೆ. ಫಿಕ್ಸಿಂಗ್ ಸಾಲ್ಟ್ ೧ ಡಬ್ಬಿಕ್ಕೆ ೩ ಆಣೆ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ. ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ.

ಭಾರತ ಯೂನಿಯನ್ ಟ್ರೇಡಿಂಗ್ ಕಂ.

ಸ್ಟ ನಂಬ್ರ

[Estd 1920] **THE** [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು.

Authorised capital } ಅಧಿಕೃತ ಮೂಲಧನ }	2,00,000–0–0
Subscribed capital } ಚಂದಾ ಆರ್ಜಿಸಿದ್ದು }	34,930 0–0
Paid-up capital } ತೆತ್ತು ಬಂದದ್ದು }	30847–8 0

Fixed, Current, Cumulative and Savings Banks deposits are accepted at most-favourable rates.

All kinds of Banking business undertaken

Shares are now available.

For further particulars apply to:—

Puttur,
Dated 10–4–1935.

G. N. Lakshman Pai,
Secretary.

ಪತ್ರಿಕಾ ಪ್ರಪಂಚ:

ಆಂಗ್ಲ ಪತ್ರಿಕೆಗಳಿಂದ

ಭಾರತೀಯ ಮಹಿಳೆಯರಿಗೆ ಅಗತ್ಯ ವಿರುವ ಶಿಕ್ಷಣವಾವುದು?

'The Indian Ladies' Magazine' ನಲ್ಲಿ ಶ್ರೀ ಗೋವಿಂದಲಾಲ್ ಡಿ. ಶಾಹರವರು ಒಂದು ಲೇಖನವನ್ನು ಪ್ರಕಟಿಸಿ, ಭಾರತೀಯ ಮಹಿಳೆಯರಿಗೆ ಈಗ ಅಗತ್ಯವಿರುವ ಶಿಕ್ಷಣವು ಹೇಗಿರಬೇಕೆಂದು ಸೂಚಿಸಿರುತ್ತಾರೆ. "ತನ್ನ ಏಳನೇ ವರ್ಷ ಪ್ರಾಯದಲ್ಲಿ ಬಾಲಕಿಯು ಶಾಲೆಗೆ ಹೋಗಬೇಕು. ಎರಡು ವರ್ಷಗಳ ತನಕ ಅವಳು ಭಾಷೆಗಳನ್ನು ಕಲಿಯಬೇಕು. ಧಾರ್ಮಿಕ ವಿಷಯಗಳನ್ನು ಅವಳಿಗೆ ಕಲಿಸುತ್ತಿರಬೇಕು. ಇನ್ನೆರಡು ವರ್ಷಗಳಲ್ಲಿ ಅವಳು ಗಣಿತಾಭ್ಯಾಸವನ್ನು ಮಾಡಬೇಕು. ಈ ನಾಲ್ಕು ವರ್ಷಗಳಲ್ಲಿ ಅವಳು ಓದು, ಬರಹ ಮತ್ತು ಗಣಿತವನ್ನು ಕಲಿಯಬೇಕು. ಅವುಗಳೊಡನೆ ನೈತಿಕ ವಿಷಯಗಳನ್ನೂ ಅವಳು ಕಲಿಯುತ್ತಿರಬೇಕು. ಅನಂತರ ಅವಳಿಗೆ ಇಂಗ್ಲೀಷನ್ನು ಕಲಿಸಲಾರಂಭಿಸಬೇಕು. ಅದರೊಡನೆ ಚರಿತ್ರೆ, ಭೂಗೋಳಗಳನ್ನೂ ಅವಳು ಸಂಕ್ಷೇಪವಾಗಿ ಕಲಿಯುತ್ತಾ ಬರಬೇಕು. ಹೀಗಾಗುತ್ತಾ ತನ್ನ ೧೬ ಯಾ ೧೭ನೇ ವರ್ಷ ಪ್ರಾಯದಲ್ಲಿ ಅವಳು ಅಗತ್ಯವಿರುವ ವಿಷಯಗಳ ಪ್ರಾಥಮಿಕ ಜ್ಞಾನವನ್ನು ಸಂಪಾದಿಸಿದಂತಾಗುವುದು. ತನಗೆ ಕಲಿಯಲಾಶೆಯಿಲ್ಲದ ವಿಷಯಗಳನ್ನು ಅವಳು ಪರಿತ್ಯಜಿಸಬೇಕು. ಅವಳಿಗೆ ದೇಹಶಾಸ್ತ್ರ, ಮನುಷ್ಯಶಾಸ್ತ್ರ, ಮನೆಗೆಲಸ ಮತ್ತು ಸಾಹಚರ್ಯ ಹಿತಾರ್ಥಗಳಲ್ಲಿ ಶಿಕ್ಷಣವೀಯಬೇಕು. ಈ ಪ್ರಾಯದಲ್ಲಿ ಅವಳಿಗೆ ಸ್ತ್ರೀಪುರುಷ ಸಂಬಂಧವಾದ ವಿಷಯಗಳನ್ನೂ ತಿಳಿಸಬೇಕು. ಅನಂತರ ಅವಳು ತನ್ನ ಇಚ್ಛಾನುಸಾರವಾಗಿ ಚಿತ್ರಕಲೆ, ಕಸೂತಿಕಲೆ, ಸಂಗೀತಕಲೆಗಳನ್ನು ಕಲಿಯಲು ಉಪಕ್ರಮಿಸಬೇಕು. ತನಗೆ ಯಾವುದು ಪ್ರಿಯವೋ ಅಂತಹ ವಿಷಯವನ್ನೇ ಅವಳು ಪರಿಗ್ರಹಿಸಬೇಕು. ತರುವಾಯ ಅವಳು ಅಂಗಸಾಧನೆಗೆ ತೊಡಗಬೇಕು. ತನ್ನಲ್ಲಿ ಅರ್ಥ ತಾಸಸ್ಸಾದರೂ ತನ್ನ ದೈಹಿಕ ಬಲದಿಂದಾಗಿ ಅವಳು ಪ್ರತ್ಯೇಕವಾಗಿ ಸಂಚಾರಬೇಕು. ಇವುಗಳೆಲ್ಲ ತವಳಿಗೆ ಭಾರತೀಯ ಕಾರ್ಯಕ್ರಮಗಳೆಂದು ಭಾವಿಸಲಿಕ್ಕೆಡೆಯಿದೆ. ಆದರೆ ಜೀವನದ ಜವಾಬ್ದಾರಿಕೆಗಳನ್ನು ಹೊರಲು ಅವಳಿಗಿದೇ ಸುಸಮಯ. ಜೀವನದ ಆರಂಭದಶೆಯಲ್ಲಿಯೇ ಅವಳು ಎಲ್ಲಾ ವಿಧದ ಜವಾಬ್ದಾರಿಕೆಗಳನ್ನು ತಿಳಿದರೆ, ಅವಳು ತನ್ನ ಭಾವೀ ಜೀವನದಲ್ಲಿನ ಸುಖದುಃಖಗಳನ್ನು ಸಮಾಧಾನದಿಂದೀಕ್ಷಿಸಲು ಶಕ್ತಳಾಗುವಳು. ಹೀಗಾದರೆ ಮಾತ್ರ ಅವಳು ತನ್ನ ಪತಿಗೆ ಪ್ರಯೋಜನಕಾರೀ ಜೀವಿಯಾಗಿ ದೇಶಕ್ಕೂ, ಕುಟುಂಬಕ್ಕೂ, ಸಮಾಜಕ್ಕೂ ಹಿತವನ್ನುಂಟು ಮಾಡುವಳು.

ಭಾರತೀಯ ಶಿಕ್ಷಣಸೂತ್ರದಲ್ಲಿ

2 ಭಾಷಾ ವಿಷಯಕ ಸಮಸ್ಯೆ.

ಅನಂತಪುರದಲ್ಲಿ ಇತ್ತೀಚೆಗೆ ಜರಗಿದ ೩೦ನೇ ಪ್ರಾಂತಿಕ ಶಿಕ್ಷಣ ಪರಿಷತ್ತಿನ ಅಧ್ಯಕ್ಷರಾಗಿ ಡಾ ಜೇಮ್ಸ್ ಎಚ್. ಕಜಿನ್ಸ್‌ರವರು ಮಾಡಿದ ಭಾಷಣದ ಸಾರಾಂಶವನ್ನು 'The Scholar' ಎಂಬ ಮಾಸಿಕ ಪತ್ರಿಕೆಯು ಎತ್ತಿ ಕೊಟ್ಟಿರುತ್ತದೆ. ಕಜಿನ್ಸ್‌ರವರು ಶಿಕ್ಷಣದ ಕುರಿತಾಗಿ ಮಾಡಿದ ಕೆಲವು ಸೂಚನೆಗಳು ಮನನೀಯವಾಗಿವೆ. ಅವರೆಂದುದೇನೆಂದರೆ –

ವೈಯಕ್ತಿಕ ಶಿಕ್ಷಣ ವಿಷಯದಲ್ಲಿರುವ ಒಂದು ಮಹದ್ವಿಷಯವೆಂದರೆ, ಒಂದು ಭಾಷೆಯನ್ನು ತಿಳಿದುಕೊಳ್ಳುವ ಮತ್ತು ತನ್ನ ಭಾವನೆಯನ್ನು ವ್ಯಕ್ತಗೊಳಿಸುವ ಭಾಷೆಯ ಜಾಣ್ಮೆ. ಭಾಷಾ ಜ್ಞಾನವೇ ಪ್ರಾಮುಖ್ಯವಾದುದು. ಒಬ್ಬ ವ್ಯಕ್ತಿಯ ಜನ್ಮವೆತ್ತಿದ ಜಾತಿಯು ಉಪಯೋಗಿಸುವ ಭಾಷೆಯೇ ಅವನ ಶಿಕ್ಷಣಕ್ಕೆ ಸಹಕಾರಿಯಾದುದು. ಅವನು ಮನೆಯಲ್ಲಿ ಉಪಯೋಗಿಸುವ ಭಾಷೆ, ಅವನ ಪ್ರಾಂತ್ಯವು ಅನುಸರಿಸುತ್ತಿರುವ ಭಾಷೆ, ಇವುಗಳೇ ಒಬ್ಬನ ಉಚ್ಚಶಿಕ್ಷಣಕ್ಕೆ ಸಹಕಾರಿಯಾಗಿರುವಂತಹಗಳು. ಶಿಕ್ಷಣದ ಸಹಜವಾದ ಸೂತ್ರದಲ್ಲಿ ಶೈಕ್ಷಣಿಕ ಭಾಷೆಯ ಸಮಸ್ಯೆಯು ಆದರವಾಗಿರುವುದಿಲ್ಲ. ಭಾಷಾಭೇದದ ಪ್ರಶ್ನೆಯು ಪರಕೀಯರ ಬಲಾತ್ಕಾರದಿಂದಾಗಿಯೇ ಜನ್ಮವೆತ್ತಿತು. ಒಂದು ಸಂಸ್ಕೃತಿಯು ಇನ್ನೊಂದು ಸಂಸ್ಕೃತಿಯ ಸ್ಥಾನವನ್ನು ಹೊಡೆದು ಓಡಿಸಲಾರಂಭಿಸಿದುದರಿಂದಾಗಿಯೇ ಇಂತಹ ಪ್ರಶ್ನೆಯು ತಲೆದೋರಿತು. ಹಿಂದೂ ದೇಶದಲ್ಲಿನ ಪ್ರಸ್ತುತ ಸ್ಥಿತಿಯು ಈ ವೈಚಿತ್ರ್ಯವನ್ನೊಳಗೊಂಡಿದೆ. ಭಾರತೀಯ ಶಿಕ್ಷಣವಿಚಾರದಲ್ಲಿ ಆಂಗ್ಲ ಭಾಷೆಯು ನಿಂತುದರ ಪರಿಣಾಮವೇನೆಂದು ಬೇರೆ ಹೇಳಬೇಕಾಗಿಲ್ಲ. ಆಂಗ್ಲ ಭಾಷೆಯು ಮಹತ್ತಾದ ಭಾಷೆಯೆಂಬುದೇನೋ ನಿಜ, ಅದು ಅಮರ ಸಾಹಿತ್ಯವನ್ನು ಹುಟ್ಟಿಸಿದುದೂ ಸತ್ಯ, ಆದರೆ ಅದರಲ್ಲಿರುವ ವೈಶಿಷ್ಟ್ಯಗಳಿಂದಾಗಿ ಅದು ಭರತಖಂಡದ ವಾತಾವರಣ, ಸಂಸ್ಕೃತಿ ಮತ್ತು ಭಾವೀ ವರ್ಚಸ್ಸುಗಳ ಮೇಲೆ ತನ್ನ ಪ್ರಾಬಲ್ಯದ ಯಾವ ಪರಿಣಾಮವನ್ನೂ ತೋರಿಸಲು ಸಮರ್ಥವಾಗಲಿಲ್ಲ. ಬದಲಿಗೆ ಅದು ಅದರ ಉಚ್ಛ್ರಾಯ ದಿನಗಳಲ್ಲಿ ಭಾರತೀಯ ಸಂಸ್ಕೃತಿಯನ್ನು ಕೆಡಿಸಿ, ಇಲ್ಲಿನ ಸಾಹಿತ್ಯ ಸರೋವರವನ್ನು ಅನ್ಯರಾಷ್ಟ್ರಾಭಿಮುಖವಾಗಿ ತಿರುಗಿಸಿತು. ತನ್ನ ಆಚರಣೆಯು ತನಗೂ ಇತರರಿಗೂ ಹಿತವನ್ನುಂಟುಮಾಡದೆ ತನ್ನ ಅಂತರಂಗ ಜೀವನವನ್ನು ಹಾಳುಗೆಡಿಸಿತು. ಇಲ್ಲಿಯ ವಾತಾವರಣಕ್ಕನುಗುಣವಾದ ಶಿಕ್ಷಣಕ್ರಮವನ್ನು ಪ್ರಚಾರದಲ್ಲಿಡದೆ, ಬಿಡಿಸಿತ್ತು. ಪರಿಣಾಮವಾಗಿ, ಅದು ಈಗ ತನ್ನ ಮೊದಲಿನ ಸತ್ವವನ್ನು ದಿನೇ ದಿನೇ ಕಳೆದುಕೊಳ್ಳುತ್ತಿದೆ. ಶಾಲಾ ಕಾಲೇಜುಗಳಲ್ಲೂ ಕೂಡಾ ಅದಕ್ಕೆ ತಕ್ಕ ಗೌರವವು ದೊರೆಯುವುದಿಲ್ಲ. ಈಗ ಎರಡು ಸುಧಾರಣೆಗಳ ಅವಶ್ಯಕತೆಯಿದೆ. ಭಾರತೀಯ ಶಿಕ್ಷಣಕ್ರಮವನ್ನು ಪೂರ್ಣ ದೇಶಭಾಷಾಮಯವನ್ನಾಗಿ ಮಾಡಬೇಕು. ಸಣ್ಣ ಕ್ಲಾಸಿನಿಂದ ಮೊದಲ್ಗೊಂಡು ಎಂ.ಎ.ಯ ವರೆಗೂ ಇದು ಅಗತ್ಯ. ಆಂಗ್ಲ ಭಾಷೆಯು ದೇಶಭಾಷೆಯ ಸ್ಥಾನವನಾಕ್ರಮಿಸಿ ಶಕ್ತಿಯನ್ನು ಪ್ರದರ್ಶಿಸದಂತೆ ನಿರ್ಬಂಧಿಸಬೇಕು. ವಿದ್ಯಾರ್ಥಿ ವಿದ್ಯಾರ್ಥಿನಿಯರ ಶಿಕ್ಷಣಕ್ಕೆ ರಾಷ್ಟ್ರಭಾಷೆಯನ್ನುಪಯೋಗಿಸುವ ವಿಷಯವು ಕಷ್ಟತರವಾದುದೇನೋ ನಿಜ. ಆದರ್ರೆ ಇನ್ನೂ ಶೇಕಡಾ ೯೦ರಷ್ಟು ಜನರು ಅಶಿಕ್ಷಿತರಾಗಿರುವಾಗ ಈ ಕಷ್ಟವು ಕ್ಷಣಪ್ರಾಯವಾಗಿಯೇ ಕಂಡುಬರುವುದರಲ್ಲಿ ಸಂದೇಹವಿಲ್ಲ. ಈಗ ವಿದ್ಯಾವಂತರೆಂದೆನಿಸಿಕೊಂಡಿರುವ ಅಲ್ಪಸಂಖ್ಯಾಕರ ಹಿತಚಿಂತನೆಯೇ ನಮ್ಮ ಮೂಲೋದ್ದೇಶವಾಗಿರಬೇಕಾದುದಲ್ಲ. ಅಧಿಕಪ್ರಮಾಣದಲ್ಲಿರುವ ಜನತೆಯ ಉದ್ಧಾರವೇ ನಮ್ಮ ಗುರಿಯಾಗಿರಬೇಕು. ವೈಯಕ್ತಿಕ ಹಿತಕ್ಕಿಂತ ಸಮಷ್ಟಿಯ ಹಿತವೇ ನಮ್ಮ ಧ್ಯೇಯವಾಗಿರಬೇಕು. ವಿದ್ಯೆಯಿಂದ ವಿದ್ಯಾವಂತನು ಉನ್ನತಿಹೊಂದುವುದು ಸಹಜ. ಆವನ ಉನ್ನತಿಯೊಡನೆ ಅವನು ತನ್ನ ಸುತ್ತುಮುತ್ತಲಿನವರನ್ನು ಉದ್ಧರಿಸಬೇಡವೇ?[2]

1 ಶ್ರೀ ಗೋವಿಂದಲಾಲ್ ಡಿ. ಶಹಾರವರು ಕೊಟ್ಟಿರುವ ಸೂಚನೆಗಳು ಎಲ್ಲರ ಗಮನಾರ್ಹವಾದುವುಗಳು. ಪಾಶ್ಚಾತ್ಯ ಸಂಸ್ಕೃತಿಯ ಘರ್ಷಣೆಗೊಳಗಾಗಿರುವ ನಮ್ಮ ಬಾಲಕಿಯರ ಶಿಕ್ಷಣ ಸಮಸ್ಯೆಯು ಈ ಸಲಹೆಗಳಿಂದಾಗಿ ಕೊಂಚವಮಟ್ಟಿಗಾದರೂ ಪರಿಷ್ಕಾರಗೊಳ್ಳಬಹುದು. ಆದರೆ, ನಮ್ಮ ಬಾಲಕಿಯರು ಈ ಸಲಹೆಗಳನ್ನೇ ಅನುಸರಿಸಿ ನಡೆಯುತ್ತಾರೋ ಇಲ್ಲವೋ ಎಂದು ಜಾಗರೂಕತೆಯನ್ನು ವಹಿಸುವ ಕೃದ್ಧ್ವಾಪಂತಿಯಂತಾದ ಉಪಾಧ್ಯಾಯಿನಿಯರೂ ನಮಗೆ ಬೇಕಾಗಿದ್ದಾರೆ.]

2 ಡಾ. ಜೇಮ್ಸ್ ಎಚ್. ಕಜಿನ್ಸರು ಮಹಾ ವಿದ್ವಾಂಸರಾಗಿರುವರು. "ದೇಶದ ಶಿಕ್ಷಣಕ್ರಮಗಳನ್ನೆಲ್ಲ ಪೂರ್ಣವಾಗಿ ರಾಷ್ಟ್ರಭಾಷಾಮಯವನ್ನಾಗಿ ಮಾಡಬೇಕೆಂ"ಬ ಅವರ ಸೂಚನೆಯು ಜನರಿಂದ ಅಂಗೀಕೃತವಾದರೆ ನಮ್ಮ ಸಂಸ್ಕೃತಿಪಾಲನೆಯ ಕಾರ್ಯವು ನಿಷ್ಕಂಟಕವಾಗಿ ನಡೆಯುವುದು ಖಂಡಿತ. ಆದರೆ ಈ ಬಗ್ಗೆ ಮುಂದಾಳುತನವನ್ನಾದರೂ ವಹಿಸಬೇಕಾದರು? ಸರಕಾರವೋ? ಜನರೋ? ಸರಕಾರವು ವಹಿಸುವುದು ಸಂಗತವೋ? ಜನರು ವಹಿಸುವುದು ಸಂಭವನೀಯವೋ?]

ಕನ್ನಡ ಪತ್ರಿಕೆಗಳಿಂದ

1 ಕವಿ ಹುಟ್ಟದೆ ಕಾವ್ಯವಿಲ್ಲ.

ಒಳ್ಳೆಯ ಸಜೀವ ಕಾವ್ಯಗಳು ಹುಟ್ಟಬೇಕಾದರೆ ಅವುಗಳನ್ನು ಬರೆಯುವವರ ಸುತ್ತುಮುತ್ತ ಹೊಸ ಹೊಸ ಭಾವನೆಗಳ ಪರಸ್ಪರ ಸಂಘಟನೆ ಇರಬೇಕು. ಜೀವಿತ ಧರ್ಮವನ್ನು ಹೊಸ ಹೊಸ ದೃಷ್ಟಿಗಳಿಂದ ನೋಡಲು ಅವಕಾಶವಿರಬೇಕು. ಸಮಾಜಜೀವನದ ರಹಸ್ಯವೇನು? ಅದು ಎಲ್ಲಿಗೆ ಹೋಗುತ್ತಿದೆ? ಅದನ್ನು ಪರಿಷ್ಕಾರಗೊಳಿಸುವುದು ಹೇಗೆ?—ಎಂಬ ಪ್ರಶ್ನೆಗಳು ಇರಬೇಕು. ಇದು ಒಳ್ಳೆಯದೆ, ಅದು ಒಳ್ಳೆಯದೆ? ಈ ದಾರಿ ಸರಿಯೋ ಆ ದಾರಿ ತಪ್ಪೋ? ಎಂಬ ಸಂದೇಹಗಳಿರಬೇಕು. ಈ ಬಗೆಯ ಪ್ರಶ್ನೆಗಳೂ, ಸಂದೇಹಗಳೂ, ಸಮಸ್ಯೆಗಳೂ ಅದುವರೆಗೆ ಜನಜೀವನಕ್ಕೆ ಒದಗಿರುವುದಿಲ್ಲವೋ ಅದು ವರೆಗೆ ಕವಿ ಹುಟ್ಟುವ ಸಂಭವವಿಲ್ಲ. ದೊಡ್ಡ ಕವಿ ಹುಟ್ಟದಿದ್ದರೆ ದೊಡ್ಡ ಕಾವ್ಯವಿಲ್ಲ.

ಕವಿಯ ವಾಕ್ಚಾತುರ್ಯವು ಎಂತಹುದೇ ಆಗಿರಲಿ, ಆವನ ಪ್ರತಿಭಾ ಸಂಪತ್ತು ಎಂತಹುದೇ ಆಗಿರಲಿ, ಅವನ ಕಾವ್ಯಕ್ಕೆ ಬರುವ ಮಹತ್ವವು ಅತನ ಲೋಕಾನುಭವ ಮಹತ್ವದಿಂದ. ಇಂತಹ ಅನುಭವ ವಿಶೇಷವನ್ನೊದಗಿಸುವುದು ಸಮಾಜದ ಕೆಲಸ. ಅವನಲ್ಲಿ ಚಿಂತೆಯನ್ನೂ, ಸಂತಾಪವನ್ನೂ, ಉತ್ಸಾಹವನ್ನೂ, ಶೌರ್ಯವನ್ನೂ ಉದ್ರೇಕಗೊಳಿಸುವಂತಹ ಸಂದರ್ಭಗಳು ಅವನ ಸುತ್ತುಮುತ್ತಲೂ ಕಾಣುತ್ತಿರಬೇಕು. ಇಂತಹ ಸಂದರ್ಭಗಳ ಅನುಭವಗಳು ಅವನಿಗೆ ಎಷ್ಟೆಷ್ಟು ವಿಶಾಲವಾಗಿ, ಆಳವಾಗಿ, ಗಾಢವಾಗಿ ಆಗುವುವೋ ಅವನ ಪ್ರತಿಭೆಯು ಅಷ್ಟಷ್ಟು ಸಂಪುಷ್ಟವಾಗಿ, ತೇಜಸ್ವಿಯಾಗಿ ಬೆಳಗುತ್ತದೆ. ಅವನ ವಾಗ್ಧಾರೆಯೂ ಅಷ್ಟಷ್ಟು ರಸವತ್ತಾಗಿ ಹರಿಯುತ್ತದೆ. ಮಹಾ ಅನುಭವವಿಲ್ಲದೆ ಮಹಾಕಾವ್ಯವಾಗದು.

ಶ್ರೀ ಡಿ. ವಿ. ಜಿ., "ವಿಶ್ವಕರ್ಣಾಟಕ"

2 ಲೀಗ್ ಆಫ್ ನೇಶನ್ಸ್ ಸಂಸ್ಥೆ

೧೯೧೪ನೇ ಯೂರೋಪಿಯ ಯುದ್ಧದ ಪರಿಣಾಮವಾಗಿ ಲೀಗ್ ಆಫ್ ನೇಶನ್ಸ್ ಸಂಸ್ಥೆಯು ಯೂರೋಪಿನಲ್ಲಿ ನಿರ್ಮಿಸಲ್ಪಟ್ಟಿತು. ಕೀರ್ತಿಶೇಷರಾದ ಪ್ರೆಸಿಡೆಂಟ್ ವಿಲ್ಸನರವರೇ ಇದರ ಜನ್ಮದಾತರು. ಆದರೆ, ಅವರ ದೇಶವಾದ ಅಮೇರಿಕಾ ಸಂಯುಕ್ತ ಸಂಸ್ಥಾನವೇ[1] ಲೀಗಿಗೆ ಸೇರಲು ಒಗ್ಗಿಕೊಂಡಿಲ್ಲ. ಯೂರೋಪಿನಲ್ಲಿ ಕೂಡಾ, ಫ್ರಾನ್ಸ್, ಇಂಗ್ಲೆಂಡ್ ಮತ್ತು ಇಟೆಲಿಯೇ ಆ ಸಂಸ್ಥೆಯಲ್ಲಿ ಪ್ರಾಬಲ್ಯವನ್ನು ಹೊಂದಿ, ಇತರ ರಾಷ್ಟ್ರಗಳಿಗೆ ಆ ಲೀಗಿನಲ್ಲಿ ವಿಶ್ವಾಸವುಂಟಾಗಲಿಲ್ಲ. ಲೀಗಿಗೆ ಸ್ವತಂತ್ರವಾದ ಅಸ್ತಿತ್ವವಿದ್ದಾಗ್ಯೂ ಅದರ ಕಾರ್ಯಕಲಾಪಗಳು, ಫ್ರಾನ್ಸ್ ಮತ್ತು ಇಂಗ್ಲೆಂಡಿನ ರೀತಿನೀತಿಗಳನ್ನೇ ಅನುಸರಿಸುತ್ತಿದ್ದುವು. ಜರ್ಮನಿಗೆ ಈ ಲೀಗಿನಿಂದ ಏನೂ ಪ್ರಯೋಜನ ಕಾಣದೆ, ಅದು ಹೋದ ವರ್ಷ ಅದರಿಂದ ನಿವೃತ್ತವಾಯಿತು. ಲೀಗಿನ ಶಕ್ತಿಯು ಇನ್ನೂ ತಗ್ಗಿತು. ಈಚೆಗೆ ಜರ್ಮನಿಯಲ್ಲಿ ಕಡ್ಡಾಯ ಸೈನ್ಯ ಪದ್ಧತಿಯು ಜಾರಿಗೆ ಬಂದುದರಿಂದ ಫ್ರಾನ್ಸ್ ಮತ್ತು ಇಂಗ್ಲೆಂಡಿಗೆ ಭೀತಿಯು ಅಧಿಕವಾಯಿತು. ಮೊನ್ನೆ ನಡೆದ ಲೀಗ್ ಕೌನ್ಸಿಲ್ ಮೀಟಿಂಗಿನಲ್ಲಿ ಫ್ರಾನ್ಸಿನ ಅಭ್ಯರ್ಥನೆಯಂತೆ ಜರ್ಮನಿಯ ಶಸ್ತ್ರನೀತಿಯನ್ನು ಖಂಡಿಸಲಾಗಿದೆ. ಈ ಖಂಡನೆಯು ಜರ್ಮನಿಯಲ್ಲಿ ಉದ್ರೇಕವಮಾಡಿದೆ. ಲೀಗು ತನ್ನ ಅಭಿಪ್ರಾಯಗಳನ್ನು ನಿಷ್ಪಕ್ಷಪಾತವಾಗಿ ಪ್ರದರ್ಶಿಸಲು ಶಕ್ತವಿಲ್ಲ. ಒಂದು ವೇಳೆ ನಿಷ್ಪಕ್ಷಪಾತವಾದ ಅಭಿಪ್ರಾಯವನ್ನು ಪ್ರದರ್ಶಿಸಿದರೂ, ಅದನ್ನು ಜ್ಯಾರಿಯಲ್ಲಿ ತರಲು ತಕ್ಕ ಶಸ್ತ್ರಸಾಮರ್ಥ್ಯ ಹೊಂದಿಲ್ಲ. ಕೇವಲ ಸೌಮ್ಯತೆಯ ನೀತಿಯ ಬಲಕ್ಕೆ ರಾಷ್ಟ್ರಗಳು ಬಗ್ಗುವ ಹಾಗಿದ್ದರೆ, ಲೀಗಿನ ಸಾಫಲ್ಯತೆಯುಂಟು. ಅದಿಲ್ಲದೆ ಲೀಗು ಬರೀ ಧರ್ಮಪ್ರವಚನದ ಗೋಷ್ಠಿ ಸಂಸ್ಥೆಯಾದರೆ ಪ್ರಯೋಜನವಿಲ್ಲ. ಈಗ ಲೀಗಿನ ಸ್ಥಿತಿಯೂ ಅದೇ ಆಗಿರುವುದು.

"ತ್ರಿಕರ್ಣಾಟಕ"

3 ಸೋಮಾರಿತನವನ್ನು ಯಾರು ದೂರಮಾಡಬೇಕು?

ಶ್ರೀ ಕೆ. ಚಂಗಪ್ಪನವರು "ಕೊಡಗು" ಪತ್ರಿಕೆಯಲ್ಲಿ ಕೊಟ್ಟಿರುವ ಲೇಖನದ ಆಶಯವು —

"ಬಡತನವು ಸೋಮಾರಿತನವನ್ನೂ, ಸೋಮಾರಿತನವು ಬಡತನವನ್ನೂ ಜೋಡಿಯಾಗಿ ಹೊಂದಿಕೊಂಡಿರುವುದರಿಂದ, ಇವೆರಡನ್ನು ಇಲ್ಲದಂತೆ ಮಾಡುವುದು ಸರಕಾರದವರ, ವಿದ್ಯಾವಂತರ ಮತ್ತು ಬುದ್ಧಿವಂತರ ಮುಖ್ಯ ಕರ್ತವ್ಯವಾಗಿದೆ ಎಂದರೆ ತಪ್ಪಾಗಲಾರದೆಂದು ಭಾವಿಸಿ ಕೆಲವು ಸೂಚನೆಗಳನ್ನು ಕೊಡುವುದಾಗಿದೆ. (೧) ದೇಶದ ಜನಸಂಖ್ಯೆಯಲ್ಲಿ, ಹೆಚ್ಚಿನ ಸಂಖ್ಯೆಯವರೆಲ್ಲ ರೂಢಿಯಲ್ಲಿ ಬಂದಿರುವ ನಿಷ್ಕ್ರಿಯತೆಯ ದುರಾಭ್ಯಾಸವು ಜನರನ್ನು ಸೋಮಾರಿಗಳನ್ನಾಗಿಯೂ ಬಡವರನ್ನಾಗಿಯೂ ತುಂಟರನ್ನಾಗಿಯೂ ಮತ್ತು ದುರಾಚಾರ ಪ್ರವರ್ತಕರನ್ನಾಗಿಯೂ ಮಾಡುತ್ತಿರುವುದರಿಂದ ಕಾನೂನು ಮೂಲಕ ಅಥವಾ ತಕ್ಕ ಬೋಧನೆ ಕೊಟ್ಟು ನಿಷ್ಕ್ರಿಯತೆ ಇಲ್ಲದಂತೆ ಮಾಡುವುದು (೨) ವ್ಯವಸಾಯದ ಜೊತೆಗೆ ಗ್ರಾಮ್ಯಕೈಗಾರಿಕೆ ಅಥವಾ ಬೇರೆ ಸುಲಭದ ಸಂಪಾದನೆಯ ದಾರಿಯನ್ನು ಕಲ್ಪಿಸಿಕೊಡುವುದು. ಗ್ರಾಮಾಂತರಗಳಲ್ಲಿ ನ್ಯಾಯ ಪಂಚ ರೀತಿಯ ಸಹಕಾರ ಸಂಸ್ಥೆಗಳನ್ನು ಏರ್ಪಡಿಸಿ ತತ್ಕಾಲಿಕ ಕೂಲಿ, ದರೋಡೆ, ಮೊದಲಾದ ಹೆಚ್ಚಿನ ತಕ್ಷೀರುಗಳಿಗೆ ಒಳಗಾಗುವಂತಹ ಕ್ರಿಮಿನಲ್ ತಕ್ಷೀರುಗಳಲ್ಲದೆ ಇತರ ಎಲ್ಲಾ ತಕರಾರುಗಳನ್ನು ತೀರ್ಮಾನಿಸಿಕೊಳ್ಳುವಂತೆ ಗ್ರಾಮಪಂಚಾಯತಿ ಪದ್ಧತಿಯನ್ನು ಜಾರಿಗೆ ತರುವುದು. (೪) ಜನರ ಆರೋಗ್ಯ ಮೊದಲಾದ ಗ್ರಾಮಾಭಿವೃದ್ಧಿ ಬಗ್ಗೆ ಅವಶ್ಯವಿರುವ ಕೆಲಸಗಳನ್ನೆಲ್ಲ ಗ್ರಾಮವಾಸಿಗಳು ಮಾಡಿಯೇ ತೀರಬೇಕೆಂಬ ನಿರ್ಬಂಧನೆಗಳನ್ನೂ ಕಲ್ಪಿಸಿ ತತ್ಕಾಲಿಕ ರೀತಿನೀತಿಗಳ ಶಿಕ್ಷಣ ಕೊಡುತ್ತಾ ಬಂದಲ್ಲಿ, ಪಠಮಾನದ ಆಕ್ಷೇಪಣೆಯಲ್ಲಿ ಗ್ರಾಮಾಂತರಗಳಲ್ಲಿ ಸ್ಥಿರಗೊಳ್ಳಬೇಕೆಂದಿರುವ ಬಡತನಕ್ಕೆ ಅಸ್ಪದವಿಲ್ಲದೆ ಆಗುವುದಲ್ಲದೆ ನಿರ್ಜನಪ್ರದೇಶವಾದ ಅಥವಾ ಗಲಭೆಯಾದ ಗ್ರಾಮಗಳೂ ಕೂಡಾ ಜನಭರಿತವಾಗಿ ಇನ್ನೊಂದು ದಶಮಾನದೊಳಗೆ ಕುಬೇರನ ವಾಸಸ್ಥಾನಕ್ಕೆ ಯೋಗ್ಯವಾಗಿ ಪರಿಣಮಿಸುವುದಲ್ಲದೆ ಸರಕಾರದ ಆದಾಯವೂ ಕೂಡಾ ಅವರಂತೆ ಹೆಚ್ಚುವುದರಲ್ಲಿ ಸಂದೇಹವಿಲ್ಲವೆಂದು

1 ಶ್ರೀ ಡಿ. ವಿ. ಗುಂಡಪ್ಪನವರ ನುಡಿಗಳಲ್ಲಿ ಸತ್ಯತೆಯು ಅಡಗಿಕೊಂಡಿದೆ. ಜೀವನದ ರಹಸ್ಯವನ್ನು ತನ್ನ ಮನದ ದೃಷ್ಟಿಯಿಂದ ನೋಡದ ವ್ಯಕ್ತಿಯು ಕವಿಯೆನಿಸಲಾರನು. ಅವನಲ್ಲಿ ಕವಿತಾಶಕ್ತಿಯು ಎಂದೂ ಮೂಡದು. ಕವಿಯ ಜನನಕ್ಕೆ ವಾತಾವರಣದ ವರ್ಚಸ್ಸೇ ಹೆಚ್ಚಿನ ಮಟ್ಟಿಗೆ ಕಾರಣವೆನ್ನುವ ಶ್ರೀಯುತರ ಅಭಿಪ್ರಾಯವು ಸ್ವೀಕಾರಾರ್ಹ.]

2 ಕೇವಲ ಸೌಮ್ಯತೆಯ ನೀತಿಯ ಬಲಕ್ಕೆ ರಾಷ್ಟ್ರಗಳು ಬಗ್ಗುವುದಿಲ್ಲವೆಂಬುದು ಪ್ರಚಲಿತ ವಿಷಯ. ರಾಷ್ಟ್ರಗಳೆಲ್ಲ ಸ್ವಾರ್ಥಜಗತ್ತಿನಲ್ಲಿ ಓಲಾಡುತ್ತಿವೆ. ಸ್ವಾರ್ಥಕ್ಕೆ ವಿವೇಕದ ಬಲವಿರುವುದಿಲ್ಲ. ಅಂತಹ ಪೌರ್ವಾತ್ಯವು ಅವನನ್ನು ವಿಧ್ವಂಸಗೊಳಿಸುತ್ತದೆಂಬುದು ಬೇರೆ ಹೇಳಬೇಕಾದ್ದಿಲ್ಲ. ಸದ್ಯದ ಮಟ್ಟಿಗೆ ಲೀಗು "ಗೋಷ್ಠಿ ಸಂಸ್ಥೆಯೇ".

3. ಶ್ರೀಯುತರ ಅಮೂಲ್ಯ ಸಲಹೆಗಳಲ್ಲಿ ರಷ್ಯಾ ರಾಜ್ಯಾಡಳಿತಸೂತ್ರಗಳನ್ನೊಳಗೊಂಡಿವೆಯೆಂದೆನಿಸುತ್ತದೆ. ನಮ್ಮ ಸರಕಾರಗಳು ಅವುಗಳನ್ನು ಪರ್ಯಾಲೋಚಿಸುವುವೆ. ಅನಕ್ಷರಸ್ಥರಿಗೆ ಹಿತಕರವೆನಿಸುವ ಸಲಹೆಗಳು "ಕಮ್ಯೂನಿಸ್ಟ್" ಪ್ರಚಾರಕರಿಂದ ಬಂದುವೆಂಬ ಅಭಿಪ್ರಾಯವು ಸರಕಾರಕ್ಕಿರುವಾಗ ಈ ಸಲಹೆಗಳು ಅಂಗೀಕೃತವಾಗುವುದು ಸುಲಭಸಾಧ್ಯವಲ್ಲ. ಸ್ವತಂತ್ರ ದೇಶೀಯ ಸರಕಾರವು ಮಾತ್ರ ಇವುಗಳನ್ನು ಒಪ್ಪಬಹುದು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಭರ್ಗಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ ರೂ 8 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೋಪ್ಯುಲರ್ ಸ್ಟೋರ್ಸ್, ಮಂಗಳೂರು

ಜೀವಾಮೃತವನ್ನು ಸೇವಿಸಿ

ಆರೋಗ್ಯಲಾಭವನ್ನು ಹೊಂದಿರಿ.

ನಿಮ್ಮಲ್ಲಿ ಚೈತನ್ಯವಿಲ್ಲವೋ, ಅಸುಖಿಯಾಗಿದ್ದೀರೋ, ದೇಹವು ಕಂಪಿಸುತ್ತಿದೆಯೋ, ನಿರಾಶಾಸ್ಥಿತಿಯಲ್ಲಿ, ದುಃಖದಲ್ಲಿರುವಿರೋ—ಹಾಗಿದ್ದರೆ ನಿಮಗೆ ಪರಿಣಾಮಕಾರಿಯಾಗುವ ಒಳ್ಳೆಯ ಟೋನಿಕ್ ಬೇಕು ಪಂಡಿತ ಡಿ ಗೋಪಾಲಾಚಾರ್ಲುರವರ ಪೂರ್ಣ ಆರೋಗ್ಯದಾಯಕವಾದ ಜೀವಾಮೃತವನ್ನು ಸೇವಿಸಿರಿ ನಿಮ್ಮ ಕೆಮಿಸ್ಟರಿಂದ ಒಂದು ಬಾಟ್ಲಿಯನ್ನು ಪಡೆಯಿರಿ ಅನುಪಾನಪತ್ರದಂತೆ ಅದನ್ನು ಸೇವಿಸಿ ಆಶ್ಚರ್ಯಕರ ರೀತಿಯಿಂದ ಶಾಂತಿಯೂ ಆರೋಗ್ಯವೂ ಲಭಿಸುವುದನ್ನು ಕಾಣಿರಿ ಒಂದು ಡೋಜು ಕುಡಿದಾಗಲೇ ನಿಮಗದರ ಮಹತ್ವವು ತಿಳಿದುಬರುವುದು. ಜೀವಾಮೃತವು ಬಲವನ್ನು ಹೆಚ್ಚಿಸುತ್ತದೆ ರಕ್ತವನ್ನು ಹೆಚ್ಚಿಸುತ್ತದೆ ನರಯೋಗಗಳ ಅಣುಗಳನ್ನು ಪೋಷಿಸುತ್ತದೆ ಜೀವನದ ಆನಂದವೇ ಹಸ್ತಗತವಾಗುತ್ತದೆ ಪ್ರಾಯ ಪುಂಸ್ತ್ರೀಭೇದ, ಕಾಲಗಳ ಭೇದಾಭೇದವೇ ಇಲ್ಲ

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ಸಿಗುತ್ತದೆ

ತಯಾರಿಸುವವರು — **ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು**

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು — **ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಅರುಣೋದಯ.

ಇದರಲ್ಲಿ ಸುಪ್ರಸಿದ್ಧ ವಿದ್ವಾಂಸರ ವಿವಿಧ ವಿಷಯಗಳ ಮೇಲೆ ವಿಚಾರ ಪರಿಷ್ಕೃತ ಲೇಖಗಳು ಬರುವವಲ್ಲದೆ ದೇಶ ವಿದೇಶದ ಸುದ್ದಿ ಸಂಗತಿಗಳೂ ಬರುವುವು. ಅಲ್ಲದೆ ಮನೋಹರವಾದ ಕತೆ ಕವಿತೆಗಳೂ ಇರುವುವು ಚಿತ್ರ ಪ್ರಪಂಚದೊಳಗಿನ ವಿಚಿತ್ರ ಸಂಗತಿಗಳೂ, ಶಾಸ್ತ್ರೀಯ ಶೋಧಗಳೂ ಪ್ರಕಟವಾಗುವುವು. ಇಡೀ ಕರ್ನಾಟಕದಲ್ಲಿ ಇದರ ಪ್ರಚಾರವಿರುವುದರಿಂದ ಜಾಹೀರಾತುದಾರರಿಗೆ ಇದೊಂದು ಉತ್ತಮ ಸಾಧನ ಅಲ್ಲಲ್ಲಿಗೆ ಏಜಂಟರು ಬೇಕು

ವಾರ್ಷಿಕ ಚಂದಾ ರೂ ೨—೮—೦

ಮೆನೇಜರ್—ಅರುಣೋದಯ. ಬೆಳಗಾಂವಿ

Modern Hindu Hotel

P. J. R. Bros.,

Mangalore S K

ಬೋರ್ಡಿಂಗ್ ಮತ್ತು ಲೋಜಿಂಗ್, ಕಾಫಿ, ಚಾ, ಕೋಕೋ, ಇನ್ನೂ ಇತರ ಪಾನೀಯಗಳೂ ಒಳ್ಳೇ ತರದ ತಿಂಡಿ ಸಾಮಾನುಗಳೂ ಯಾವಾಗಲೂ ನಮ್ಮಲ್ಲಿ ತಯಾರಿರುತ್ತವೆ ರುಚಿಕರವಾದ ಊಟ, ಕಡಿಮೆ ಚಾರ್ಜು, ಸ್ನಾನಕ್ಕೂ ಇನ್ನು ಇತರ ದಿನಚರ್ಯೆಗಳಿಗೂ ಅನುಕೂಲವಾಗಿದೆ

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari

(PILCO)

ಕಾಲರೆಕ್ಕೆ ದಿವ್ಯೌಷಧ ಉಪಯೋಗಿಸಿದರೆ ಗುಣ ಖಾತ್ರಿ

ಕ್ರಯ ಡಪ್ಪಿ 1ಕ್ಕೆ ರೂ 1-0-0

ಗುಹ್ಯರೋಗ ನಿವಾರಿಣೀ ತೈಲ
Anti-Venerael Oil

(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ ಕುಟುಂಬ ಪಾರಂಪರ್ಯದ ಈ ತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು

೪ ಔನ್ಸುಗಳ ಬಾಟ್ಲಿ 1ಕ್ಕೆ ರೂ 2 ೮—0

ಕೆ. ವಿ. ಕೃಷ್ಣನ್,
ಕಲ್ಲಾಯಿ ಮಲಬಾರ್,
ಅಥವಾ
ಬಾಲ್ ಸಿ ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು

An Advertisement In

'Swadeshabhimani'

Means a sure fortune to you

Ask for Contract Rates

The Swadeshabhimani office,

Car Street, Mangalore

ಕಿರ್ಲೋಸ್ಕರ ಕೈ ಮತ್ತು ಪವರ್ ಪಂಪುಗಳು



ಬಾವಿಗಳಿಂದ ನೀರು ಸೇದುವುದಕ್ಕಾಗಿ,—ಎಷ್ಟು ಆಳದಿಂದಲೂ ನೀರನ್ನು ಎತ್ತಿ ಮೇಲೆ ಅಥವಾ ಬೇಕಾದಷ್ಟು ಎತ್ತರಕ್ಕೆ ತರುವುದಕ್ಕಾಗಿ

ಕೃಷಿಗಾಗಿ,

ಕಾರ್ಖಾನೆಗಳಿಗಾಗಿ,

ಮನೆಯ ಉಪಯೋಗಕ್ಕಾಗಿ,—

ಸಂತೃಪ್ತಿಕರ, ಬಾಳಿಕೆ ಬರುವ, ಸುಲಭಕರ ಉಪಯೋಗಕ್ಕಾಗಿ ಇದು ರಚಿಸಲ್ಪಟ್ಟಿದೆ

ಇಡೀ ಹಿಂದೂಸ್ಥಾನದಲ್ಲಿ ನೂರಾರು ಜನರು ಉಪಯೋಗಿಸಿ ತೃಪ್ತಿಗೊಂಡರು.

ವಿವರಕ್ಕೆ ಈ ಕೆಳಗಿನವರಿಗೆ ಬರೆಯಿರಿ—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ.

ಡಿಸ್ಟ್ರಿಬ್ಯೂಟರರು—ಪೆರ್ರಿ ಎಂಡ್ ಕೋ, ಲಿಮಿಟೆಡ್, ಮದ್ರಾಸು.

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾಕೃತಿ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು

ಹೊಸ ಕೆಟಲಾಗು ಧರ್ಮಾರ್ಥ

ವಿಳಾಸ

The Scientific Gold Bangles Co. Ltd
Head Office 43 Byragimatam Street,
Post Box No 208, Madras.

77 ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೋರಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಕ್ಕಾಲು ಶತಮಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್, ಬಾತ್ ಟುವಾಲುಗಳೂ, ಧೋತಿ, ಸೀರೆ, ಬೈರವಾಸು, ಚೆಳ್ಳು, ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,

[ಸಾಹುಕಾರ ಮಹಾಲ್]

ರಥಬೀದಿ, ಮಂಗಳೂರು.

Srinivasa Ranga Pai,
Representatives for South Kanara and Malabar,

For— **A & F Harvey,**
Managers—Madura Mills Co., Ltd.,

ಅನೆಯ ಗುರುವಾರ ಪ್ರಾತಃಕಾಲ ೮॥ ಘಂಟೆಗೆ ಮೇಲೆಕಂಡ ಉತ್ಸವದ ಪ್ರಾರಂಭೋತ್ಸವವು ಅತಿ ವಿಜೃಂಭಣೆಯಿಂದ ನೆರವೇರಿತು ವಿಶೇಷ ಸಾಹಿತ್ಯೋತ್ಸವದ ಪ್ರಯುಕ್ತ ಪರಿಷನ್ಮಂದಿರವು ತಳಿರುತೋರಣ ಮೈಸೂರು ರಾಜಧ್ವಜಗಳಿಂದಲಂಕೃತವಾಗಿ ವಿಶೇಷ ವೈಭವದಿಂದ ಮೆರೆಯುತ್ತಿತ್ತು

ಸಾಯಂಕಾಲ ೬॥ ಘಂಟೆಯ ಹೊತ್ತಿಗೆ ಮಂಗಳವಾದ್ಯವು ಸ್ವಾಗತಗೀತವನ್ನು ನುಡಿಯುತ್ತಿತ್ತು ಮಂದಿರದ ಮುಂಭಾಗದಲ್ಲಿ ಪೂಜ್ಯರಾದ ಶ್ರೀಮಾನ್ ಬೆಳ್ಳಾವೆ ವೆಂಕಟನಾರಾಯಣಪ್ಪನವರು, ಶ್ರೀಮಾನ್ ಬಿ ಎಮ್ ಶ್ರೀಕಂಠಯ್ಯನವರು, ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀಮಾನ್ ಡಿ ವಿ ಗುಂಡಪ್ಪನವರು, ಗೌರವ ಕಾರ್ಯದರ್ಶಿ ಸಿ ಕೆ ವೆಂಕಟ ರಾಮಯ್ಯನವರು ಮತ್ತು ಇತರ ಪ್ರಮುಖ ಪರಿಷದಭಿಮಾನಿಗಳೂ ಅಂದಿನ ಅಧ್ಯಕ್ಷರಾದ ಶ್ರೀಮಾನ್ ರಾಜಮಂತ್ರಪ್ರವೀಣ ಎಸ್ ಪಿ ರಾಜಗೋಪಾಲಾಚಾರ್ಯರವರನ್ನು ಎದುರುಗೊಳ್ಳುವುದಕ್ಕಾಗಿ ತವಕ ಉತ್ಸಾಹಗಳಿಂದ ಕಾದು ನಿಂತಿದ್ದರು ಸುಮಾರು ೭ ಘಂಟೆಯ ಹೊತ್ತಿಗೆ ಅಧ್ಯಕ್ಷರು ದಯಮಾಡಿಸಿದರು

"ರಂಗಭೂಮಿ"ಯ ಸಂಪಾದಕರಾದ ಶ್ರೀಮಾನ್ ಸುಬ್ರಹ್ಮಣ್ಯ ಶಾಸ್ತ್ರಿಗಳು ಪ್ರಾರ್ಥನಾ ಶ್ಲೋಕವನ್ನು ಹಾಡಿದರು ಅನಂತರ ಉಪಾಧ್ಯಕ್ಷರು ತಮ್ಮ ಅಮೋಘವಾದ ಸ್ವಾಗತ ಭಾಷಣವನ್ನು ಓದಿದರು. (ಅದನ್ನು ಬರುವ ಸಂಚಿಕೆಯಲ್ಲಿ ಕ್ರಮಶಃ ಪ್ರಕಟಿಸಲಾಗುವುದು) ತರುಣ ವೈಣಿಕ ಶ್ರೀಮಾನ್ ಎಲ್. ರಾಜಾರಾಯರವರ ಮಧುರ ಮನೋಹರವಾದ ವೀಣಾ ವಾದನವಾದ ಬಳಿಕ ಅಧ್ಯಕ್ಷರೆದ್ದು ತಮ್ಮ ಚಿಕ್ಕ ಇಂಗ್ಲಿಷ್ ಭಾಷಣವನ್ನು ಓದಿದರು ಅಧ್ಯಕ್ಷರ ಭಾಷಣವಾದ ಬಳಿಕ ಶ್ರೀಮಾನ್ ಬಿ ಎಮ್. ಶ್ರೀ ಕಂಠಯ್ಯನವರು ಕೆಲವು ಸಂದೇಶ ಪತ್ರಗಳನ್ನು ಓದಿದರು ಅಧ್ಯಕ್ಷರಿಗೆ ಪುಷ್ಪಮಾಲಾರ್ಪಣೆಯೂ ಸಭಿಕರಿಗೆ ಪುಷ್ಪವಿನಿಯೋಗವೂ ಆದ ಬಳಿಕ ಆರಂಭೋತ್ಸವ ಸಭೆಯು ಕೊನೆಗೊಂಡಿತು

ಮಧ್ಯಾಹ್ನ ೪ ಘಂಟೆಗೆ ಸುಪ್ರಸಿದ್ಧ ಗಮಕಿಗಳಾದ ಶ್ರೀಮಾನ್ ಎಸ್ ಜಿ ಬಿಂದೂರಾಯರು ಕುಮಾರವ್ಯಾಸ ಭಾರತದಿಂದ "ಉತ್ತರ ಗೋಗ್ರಹಣ" ಭಾಗವನ್ನು ಸುಶ್ರಾವ್ಯವಾಗಿ ಓದಿದರು

ಸಾಯಂಕಾಲ ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರದ ಪ್ರೊಫೆಸರಾಗಿರುವ ರಾವ್ ಬಹದ್ದೂರ್ ಬಿ ವೆಂಕಟೇಶಾಚಾರ್ಯರವರು ಮಾಯಾದೀಪ ಚಿತ್ರಸಹಿತವಾಗಿ "ಭೌತ ಶಾಸ್ತ್ರದಲ್ಲಿ ಶಕ್ತಿಯ ವಿಚಾರ" ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು

ಉಪನ್ಯಾಸ ಪರಿಚಯ.

ದ್ರವ್ಯ (matter) ಬೇರೆಯಲ್ಲ, ಶಕ್ತಿ (energy) ಬೇರೆಯಲ್ಲ ಎರಡೂ ಒಂದೇ ಶಕ್ತಿಯ ರೂಪಾಂತರವೇ ದ್ರವ್ಯ ದ್ರವ್ಯದಲ್ಲಿ ಅನೇಕ ಅಣುಗಳಿವೆ ಯಾವುದೇ ದ್ರವ್ಯವನ್ನು ಭಾಗ ಮಾಡಿಕೊಂಡು ಹೋದರೆ ಅಣುವು ಕಾಣುತ್ತದೆ ಅಣುಗಳ ಸಂಖ್ಯೆ ಸಂಯೋಜನಾ ಕ್ರಮವನ್ನನುಸರಿಸಿ ದ್ರವ್ಯಗಳಲ್ಲಿ ರೂಪಗುಣ ಭೇದಗಳು ಕಂಡುಬರುತ್ತವೆ

ಅಣುವನ್ನೂ ಒಡೆದರೆ ಎರಡು ಶಕ್ತಿವಿಶೇಷಗಳು ದೊರೆಯುತ್ತವೆ, ಒಂದು ಪ್ರೋಟನ್ (Proton) ಅಥವಾ 'ಅಧಿಕ ವಿದ್ಯುತ್‌ಶಕ್ತಿ', ಇನ್ನೊಂದು ಇಲೆಕ್ಟ್ರನ್ ಅಥವಾ 'ನ್ಯೂನ ವಿದ್ಯುತ್‌ಶಕ್ತಿ.' ಸಾರತಃ, ಒಂದು ವಿಶಿಷ್ಟ ಶಕ್ತಿಯ ರೂಪಾಂತರವೇ ದ್ರವ್ಯ.

೨೪-೫-೧೯೩೫.

ಈ ದಿವಸ ಪ್ರಾತಃಕಾಲ ಪ್ರೊ. ಬಿ. ಎಮ್ ಶ್ರೀಕಂಠಯ್ಯ, ಎಮ್. ಎ , ಬಿ. ಎಲ್., ಅವರು "ಇಂಡಿಯಾ ದೇಶದ ದೇಶಭಾಷೆಗಳ ಪುನರುಜ್ಜೀವನ" ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು

ಕರ್ಣಾಟಕ ಸಾಹಿತ್ಯ ಪರಿಷತ್ತು.

ಎರಡನೆಯ ವಿಶೇಷ ಸಾಹಿತ್ಯೋತ್ಸವ

(ಬೆಂಗಳೂರು, ಗುರುವಾರ, ಮೇ ೨೩—೫—೧೯೩೫.)

(ನಮ್ಮ ಸ್ವಂತ ಪ್ರತಿನಿಧಿಗಳಿಂದ)

ಉಪನ್ಯಾಸ ಪರಿಚಯ

ಉಪನ್ಯಾಸಕರು ಮೊದಲು 'ಪುನರುಜ್ಜೀವನ'ಎಂಬ ಪದದ ಅರ್ಥವಿವರಣೆಯನ್ನು ಮಾಡಿದರು ಪುನರುಜ್ಜೀವನವೆಂದರೆ ಪುನರುತ್ಥಾನವಲ್ಲ ಒಂದು ಹೊಸ ಆತ್ಮಶಕ್ತಿಯನ್ನುಂಟು ಮಾಡುವುದೇ ಪುನರುಜ್ಜೀವನ

ಕನ್ನಡವನ್ನೇ ಉದಾಹರಣೆಯಾಗಿ ತೆಗೆದುಕೊಂಡು ಅದನ್ನು ಹೇಗೆ ಪುನರುಜ್ಜೀವನಗೊಳಿಸಬೇಕೆಂದು ತಿಳಿಸಿದರು ಕನ್ನಡ ಭಾಷೆ ಮಾತೃಭಾಷೆಯೂ ಹೌದು, ದೇಶಭಾಷೆಯೂ ಹೌದು ಜನಜೀವನವನ್ನು ಜಾಗೃತಗೊಳಿಸಿ, ಅದನ್ನು ಮೇಲಿನ ಮಟ್ಟಕ್ಕೆ ಒಯ್ಯಬೇಕಾದರೆ ದೇಶಭಾಷೆಯಿಂದಲೇ ಸಾಧ್ಯ

ಆದ್ದರಿಂದ ನಮ್ಮ ದೇಶಭಾಷೆಯಾದ ಕನ್ನಡವನ್ನು ಈಗ ಪುನರುಜ್ಜೀವನಗೊಳಿಸಬೇಕಾಗಿದೆ ಹಿಂದಿನವರು ಕನ್ನಡಕ್ಕೆ ಹೊರಲಾರದಷ್ಟು ಸಂಸ್ಕೃತದ ಭಾರವನ್ನು ಹೊರಿಸಿದರು ಆದರಿಂದ ಈಗ ಉಪಯೋಗವಿಲ್ಲ ಕನ್ನಡದಲ್ಲಿ ಈಗ ಶಬ್ದ ಸಂಪತ್ತು ಸಾಲದು ಸಂಸ್ಕೃತ, ಇಂಗ್ಲಿಷ್ ಮೊದಲಾದ ಎಲ್ಲ ಭಾಷೆಗಳಿಂದಲೂ ಸಹಾಯ ತೆಗೆದುಕೊಂಡು ಕನ್ನಡದ ಶಬ್ದಸಂಪತ್ತನ್ನು ಹೆಚ್ಚಿಸಬೇಕು ನಮ್ಮ ಹಿಂದಿನ ಜೈನಕವಿಗಳು ವೀರಶೈವ ಕವಿಗಳು ಮತ್ತು ಬ್ರಾಹ್ಮಣ ಕವಿಗಳ ತಮ್ಮ ತಮ್ಮ ರೀತಿಯಲ್ಲಿ ಕನ್ನಡ ಭಾಷೆಯನ್ನು ಪುನರುಜ್ಜೀವನಗೊಳಿಸಿದರು ಈಗ ನಾವು ಆ ಕೆಲಸಮಾಡಬೇಕಾಗಿದೆ

ಈಗ ನಾವು ಮುಖ್ಯವಾಗಿ ಗದ್ಯ-ಪತ್ತ್ಯ ಭಾಗಕ್ಕೆ ಹೆಚ್ಚು ಗಮನಕೊಡಬೇಕಾಗಿದೆ ಲಿಪಿ ಸುಧಾರಣೆ ಮಾಡಿ ಮಕ್ಕಳು ವಿದ್ಯೆ ಕಲಿಯಲು ಸೌಲಭ್ಯವನ್ನು ಮಾಡಿಕೊಡಬೇಕು ಮಕ್ಕಳಿಗಾಗಿ ಒಂದು ಸಾಹಿತ್ಯವನ್ನು ಸೃಷ್ಟಿಸಬೇಕು

ಇದಿಷ್ಟು ಅವರ ಭಾಷಣದ ಸಾರಾಂಶ ಮಾತ್ರ

ಸಾಯಂಕಾಲ ಪ್ರೊ. ಎಲ್ ರಾಮರಾಯರವರು 'ಭೂಮಿಯ ವಯಸ್ಸು' ಎಂಬ ವಿಷಯವನ್ನು ಕುರಿತು ದೀಪಚಿತ್ರಸಹಿತವಾಗಿ ಸ್ವಾರಸ್ಯವಾಗಿ ಉಪನ್ಯಾಸಮಾಡಿದರು

ಉಪನ್ಯಾಸ ವಿಷಯ ಪರಿಚಯ.

ಮೊದಲು ಭೂಮಿ ಸೌರವ್ಯೂಹದಿಂದ ಒಡೆದುಕೊಂಡು ಬಂದು ಹೇಗೆ ಹುಟ್ಟಿತೆಂಬುದನ್ನು ವಿವರಿಸಿದರು. ಹಾಗೆ ಒಡೆದುಕೊಂಡು ಬಂದ ಕಾಲವೇ ಅದು ಹುಟ್ಟಿದ ದಿವಸ ಆಗ ಭೂಮಿಯು ಕೇವಲ ಕಾವಿನಿಂದ ಕೂಡಿದ ತೇಜೋರೂಪವಾಗಿದ್ದು, ಬರಬರುತ್ತ ಘನೀಭೂತವಾಗುತ್ತ ಬಂದಿತು ಘನೀಭೂತವಾದ ಹಾಗೆ ಭೂಮಿಯಲ್ಲಿ ಸಮುದ್ರವು ಉತ್ಪನ್ನವಾಯಿತು. ಅನಂತರ ಭೂಮಿಯಲ್ಲಿ ಜೀವರಾಶಿ ಹುಟ್ಟುವುದಕ್ಕೆ ಪ್ರಾರಂಭವಾಯಿತು ಭೂಮಿಯಲ್ಲಿ ಈಗ ದೊರೆಯುವ ಶಿಲೆಗಳಿಂದಲೂ ಭೂಮಿಯ ಒಳಗಿನ ಪದರಗಳಲ್ಲಿರುವ ಲಕ್ಷಣ ವಿಶೇಷಗಳಿಂದಲೂ ಭೂಮಿಯ ವಯಸ್ಸನ್ನು ಕಂಡುಹಿಡಿಯಬಹುದು ಈ ಮಾನದಂಡದಿಂದ ಪರಿಶೀಲಿಸಿದ್ದರಲ್ಲಿ ಭೂಮಿ ಹುಟ್ಟಿ ನೂರಾರು ಕೋಟ್ಯಾಂತರ ವರ್ಷಗಳಾಗಿರುವಂತೆ ಕಂಡುಬರುತ್ತದೆ. ಭೂಮಿ ಹುಟ್ಟಿದ ಮೇಲೆ ಎಷ್ಟೋ ಮಾರ್ಪಾಟುಗಳಾಗುತ್ತಲೇ ಇವೆ ಸಮುದ್ರವಾಗಿದ್ದ ಜಾಗದಲ್ಲಿ ಪರ್ವತಗಳಾಗಿವೆ, ನೆಲವಿದ್ದ ಜಾಗದಲ್ಲಿ ಸಮುದ್ರಗಳಾಗಿವೆ ಭೂಮಿಯ ವಯಸ್ಸಿನ ಪ್ರಮಾಣದ ಒಂದು ನೂರು ಕೋಟಿ ವರ್ಷಗಳಿಗೆ ನಮ್ಮ ದಿನಚರಿಯ ಒಂದು ಗಂಟೆ ಎಂದು ಇಟ್ಟುಕೊಂಡರೆ, ಭೂಮಿ ಹುಟ್ಟಿ ೨೪ ಗಂಟೆಗಳಾಗಿರಬಹುದು, ಮೈಸೂರು ದೇಶದ ಶಿಲೆಗಳನ್ನು ಪರೀಕ್ಷಿಸಿದ್ದರಲ್ಲಿ, ಅವು ಭೂಮಿ ಹುಟ್ಟಿದ ೯ ಗಂಟೆಯ ಮೇಲೆ, ೧೨ ಗಂಟೆಯ ಒಳಗೆ ಹುಟ್ಟಿದಂತೆ ತೋರುತ್ತದೆ ಮೈಸೂರು ಭೂಮಿ ಬಹಳ ಪುರಾತನವಾದುದು

ಶನಿವಾರ, ೨೫-೫-೧೯೩೫.

ಈ ದಿವಸ ಪ್ರಾತಃಕಾಲ ಮೈಸೂರು ಟ್ರೇನಿಂಗ್ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿರುವ ಡಾ। ಎಂ ಸಿದ್ಧಲಿಂಗಯ್ಯ, ಎಮ್ ಎ , ಬಿ ಟಿ ಪಿ ಎಚ್ ಡಿ, ಅವರು 'ವಿದ್ಯಾಭ್ಯಾಸಕ್ರಮದಲ್ಲಿ ಈಚಿನ ಪ್ರಯೋಗ ಪರೀಕ್ಷೆಗಳು ಎಂಬ ವಿಷಯವನ್ನು ಕುರಿತು ಉಪನ್ಯಾಸಮಾಡಿದರು ತಾವು ಅಮೆರಿಕ ಇಂಗ್ಲೆಂಡು ಮುಂತಾದ ದೇಶಗಳಿಗೆ ವ್ಯಾಸಂಗ ಸಂಬಂಧವಾಗಿ ಮಾಡಿದ ಪ್ರವಾಸಕಾಲದಲ್ಲಿ ಬೋಧನ ಕ್ರಮದ ವಿಷಯವಾಗಿಯೂ, ವಿದ್ಯಾಭ್ಯಾಸ ಕ್ರಮದ ವಿಷಯವಾಗಿಯೂ ತಮ್ಮ ಅನುಭವಕ್ಕೆ ಬಂದ, ತಿಳಿವು ಕಂಡು ಕಲಿತ ಪ್ರಯೋಗ ಪರೀಕ್ಷೆಗಳನ್ನು ಸೂಕ್ಷ್ಮವಾಗಿ ವಿವರಿಸಿದರು ಪಾಶ್ಚಾತ್ಯ ವಿದ್ಯಾಭ್ಯಾಸ ಕ್ರಮದಲ್ಲಿ ನಡೆದು ನಡೆಯುತ್ತಿರುವ ಕೆಲವು ಪ್ರಯೋಗಪರೀಕ್ಷೆ (Experiment)ಗಳಲ್ಲಿ ಪ್ರಯೋಜನ ಕಂಡು ಬಂದಿರುವುದರಿಂದ ಅವನ್ನು ನಮ್ಮ ದೇಶದ ಸ್ಥಿತಿಗತಿಗಳಿಗೆ ಹೊಂದಿಸಿಕೊಂಡು ಆಚರಣೆಗೆ ತರುವುದರಿಂದ ಪ್ರಯೋಜನವುಂಟೆಂದೂ ತಿಳಿಸಿದರು ವಿದ್ಯಾಭ್ಯಾಸಕ್ರಮದಲ್ಲಿ ಅಂತರ್ರಾಷ್ಟ್ರೀಯ ಭಾವನೆ ಹುಟ್ಟಾಗುವುದಕ್ಕೆ ಅವಕಾಶವಿರಬೇಕೆಂದು ಎಲ್ಲರೂ ಒಪ್ಪುತ್ತಾರೆ ಆದರೆ ಪಾಶ್ಚಾತ್ಯ ದೇಶಗಳಲ್ಲಿ ವಿದ್ಯಾಭ್ಯಾಸವು ರಾಷ್ಟ್ರೀಯವಾಗಿಯೇ ಇದೆಯೆಂದು ತಿಳಿಸಿದರು

ಮಧ್ಯಾಹ್ನ ಶ್ರೀಮಾನ್ ಎಲ್ ರಾಜರಾಯರವರ ಅಮೋಘವೀಣಾವಾದನವಾಯಿತು ಅವರು ತಮ್ಮ ಕಲಾಕೌಶಲ್ಯದಿಂದ ಸಭಿಕರನ್ನು ಎರಡು ಗಂಟೆಗಳ ಕಾಲ ತಣಿಸಿದರು 'ಶ್ರೀಮಾನ್ ರಾಜರಾಯರವರು ದಿವಂಗತ ವೀಣೆ ಶೇಷಣ್ಣನವರಂತೆ ಮೈಸೂರಿಗೂ ಕನ್ನಡನಾಡಿಗೂ ಕೀರ್ತಿ ತರಲಿ' ಎಂದು ಉಪಾಧ್ಯಕ್ಷರು ಅವರನ್ನು ಹರಸಿದರು

ಶ್ರೀಮಾನ್ ಎಲ್ ರಾಜಾರಾಯರವರು ಇನ್ನೂ ಹೀರ ತರುಣರು, ಸೆಂಟ್ರಲ್ ಕಾಲೇಜು ವಿದ್ಯಾರ್ಥಿಗಳು, ಮೈಸೂರು ಆಸ್ಥಾನ ವಿದ್ವಾನರಾಗಿದ್ದ ದಿವಂಗತ ವೀಣೆ ಲಕ್ಷ್ಮೀನಾರ್ಣಪ್ಪನವರ ಮಕ್ಕಳು ಶ್ರೀಮಾನ್ ರಾಜಾರಾಯರವರ ವೀಣಾವಾದನದಲ್ಲಿ ಅವರ ತಂದೆಯವರಿಂದ ಬಂದ ಪ್ರಾಚೀನ ಸಂಪ್ರದಾಯದ ಪ್ರಾತಿಭೆಯಿದೆ, ಅವರದೇ ಆದ ಒಂದು ವೈಖರಿಯಿದೆ

ಸಾಯಂಕಾಲ ಸೆಂಟ್ರಲ್ ಕಾಲೇಜಿನಲ್ಲಿ ಅ। ಪ್ರೊಫೆಸರರಾದ ಶ್ರೀಮಾನ್ ಎಲ್ ನಾರಾಯಣರಾಯರು ಎಂ ಎ ಸಿ ಅವರು 'ಜೀವೋತ್ಪತ್ತಿಯ ವಿಚಾರದಲ್ಲಿ ಈಚಿನ ಸಿದ್ಧಾಂತಗಳು' ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು

ಉಪನ್ಯಾಸಕರು 'ಜೀವದಿಂದ ಜೀವ' ಎಂಬ ತತ್ತ್ವವನ್ನು ವಿಶದವಾಗಿ ಪ್ರತಿಪಾದಿಸಿ ಜೀವೋತ್ಪತ್ತಿ ಭೂಮಿಯಲ್ಲಿಯೇ ಕೋಟ್ಯಾಂತರ ವರ್ಷಗಳ ಹಿಂದೆ ಉಂಟಾಗಿರಬೇಕೆಂದೂ ಸನ್ನಿವೇಶ ಸಂದರ್ಭಗಳಿಗನುಸಾರವಾಗಿ ಜೀವಕೋಟಿಯ ಈಗಿರುವ ರೂಪಭೇದ ರೂಪಾಂತರಗಳು ಉಂಟಾಗಿವೆಯೆಂದೂ ತಿಳಿಸಿದರು

ಭಾನುವಾರ, ೨೬-೫-೧೯೩೫.

ಈ ದಿವಸ ಇಲ್ಲಿನ ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ ಅಧ್ಯಾಪಕರಾಗಿರುವ ಡಾ। ಎ ನಾಗರಾಜರಾವ್, ಡಿ ಎಸ್ಸಿ, ಅವರು "ಕಾರ್ಖಾನೆಗಳೂ ರಸಾಯನ ಶಾಸ್ತ್ರವೂ" ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು

ಉಪನ್ಯಾಸ ಪರಿಚಯ.

ನಾವು ಕೈಯಲ್ಲಿ ಹಿಡಿಯುವ ಸೀಸದ ಕಡ್ಡಿ ದಿನ ಬೆಳಗಾದರೆ ಉಪಯೋಗಿಸುವ ಸಾಬೂನು ಮುಂತಾದ ನಮ್ಮ ದಿನಚರಿಯ ಜೀವನಕ್ಕೆ ಬೇಕಾದ ಅನೇಕ ವಸ್ತುಗಳನ್ನು ತಯಾರಿಸಬೇಕಾದರೆ ರಸಾಯನ ಶಾಸ್ತ್ರದ ಸಹಾಯ ಬೇಕಾಗುತ್ತದೆ ಈ ವಸ್ತುಗಳನ್ನು ತಯಾರಿಸಬೇಕಾದರೆ ಕಾರ್ಖಾನೆಗಳು ಬೇಕು ಆದುದರಿಂದ ಕಾರ್ಖಾನೆಗಳಿಗೂ ರಸಾಯನ ಶಾಸ್ತ್ರಕ್ಕೂ ನಿಕಟ ಸಂಬಂಧವಿದೆ

ಉಪಯುಕ್ತ ಸಾಮಗ್ರಿಗಳನ್ನು ತಯಾರಿಸಬೇಕಾದರೆ ಕೆಲವು ಮೂಲ ವಸ್ತುಗಳು ಬೇಕು ಆ ಮೂಲ ವಸ್ತುಗಳ ದೊರೆಯದ ಸ್ಥಳಗಳಲ್ಲಿ ರಸಾಯನ ಶಾಸ್ತ್ರದ ಸಹಾಯದಿಂದ ಆ ಮೂಲ ವಸ್ತುಗಳನ್ನೇ ತಯಾರಿಸಬಹುದು ಇದಕ್ಕೆ ನೀಲಿಯ ತಯಾರಿಕೆ ನಿದರ್ಶನ

ನಮ್ಮ ಇಂಡಿಯಾ ದೇಶದಲ್ಲಿ ಅನೇಕ ನ ಲವಸ್ತು (raw materials) ಗಳಿವೆ ಈ 'ಕಚ್ಚಾ' ವಸ್ತುಗಳನ್ನು ಪರದೇಶಕ್ಕೆ ಕಳುಹಿಸಿ "ಪಕ್ಕಾ ಮಾಲು ಮಾಡಿ" ತರಿಸುತ್ತೇವೆ ಅದರ ಬದಲು ನಾವೇ ಕಾರ್ಖಾನೆಗಳನ್ನು ಸ್ಥಾಪಿಸಿ ನಮ್ಮ ರಸಾಯನ ಶಾಸ್ತ್ರದ ಸಹಾಯದಿಂದ ನಮ್ಮ ಮಾಲನ್ನು ನಾವೇ ತಯಾರಿಸಿಕೊಳ್ಳಬಹುದು ಹೀಗೆ ದೇಶದಲ್ಲಿ ಕೈಗಾರಿಕೆ ಹೆಚ್ಚಿದರೆ ನಮ್ಮ ದೇಶದ ಸಂಪತ್ತು ನಮ್ಮಲ್ಲಿಯೇ ಉಳಿಯುತ್ತದೆ

ಇಂಥ ಕಾಲವು ಬೇಗ ಬರಲೆಂದೂ ಆ ಕಾಲ ಬಂದಾಗ ಡಾ। ನಾಗರಾಜರಂಥವರಿಂದ ದೇಶಕ್ಕೆ ಮಹೋಪಕಾರವಾಗಲೆಂದೂ, ಉಪಾಧ್ಯಕ್ಷರು ಉಪನ್ಯಾಸಕರನ್ನು ವಂದಿಸುವ ಸಮಯದಲ್ಲಿ ಹೇಳಿದರು

ಮಧ್ಯಾಹ್ನ ೪ ಗಂಟೆಗೆ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಲೈಬ್ರೇರಿಯನ್ ಆಗಿರುವ ಶ್ರೀಮಾನ್ ಕೆ ಕೃಷ್ಣರಾಯರವರು ಕುಮಾರವ್ಯಾಸ ಭಾರತದಿಂದ 'ಸೌಗಂಧಿಕಾ ಪುಷ್ಪಹರಣ' ಎಂಬ ಕಾವ್ಯಭಾಗವನ್ನು ಓದಿ ಸಭಿಕರನ್ನು ತಣಿಸಿದರು

ಸಾಯಂಕಾಲ ೬ ಗಂಟೆಗೆ ಬೆಂಗಳೂರು 'ಪಬ್ಲಿಕ್ ಹೆಲ್ತ್ ಇನ್ಸ್‌ಟಿಟ್ಯೂಟ್' ಸಂಸ್ಥೆಯ ಮುಖ್ಯಾಧಿಕಾರಿಗಳಾದ ಡಾ। ಸಿ ವಿ ನಟರಾಜನ್, ಬಿ ಎಸ್ ಸಿ ಎಂ ಬಿ ಬಿ ಎಸ್ ಅವರು ಮಿತಸಂತಾನ (Birth Control) ಎಂಬ ವಿಷಯವಾಗಿ ಬಹು ಗಂಭೀರವಾಗಿ ಭಾಷಣಮಾಡಿದರು ಸಂತಾನೋತ್ಪತ್ತಿಯ ಕ್ರಮ ಹೇಗೆ ಎಂಬುದನ್ನೂ, ಮಿತಸಂತಾನಕ್ಕಾಗಿ ಆಚರಣೆಗೆ ತರಬಹುದಾದ ಕೆಲವು ಮಾರ್ಗಗಳನ್ನು ದೀಪಚಿತ್ರಸಹಿತವಾಗಿ ಸೂಕ್ಷ್ಮವಾಗಿ ವಿವರಿಸಿದರು ಉಪನ್ಯಾಸ ಬೆಳೆದಂತೆ ನೆರೆದಿದ್ದ ಮಹಿಳೆಯರ ಗುಂಪು ಕರಗುತ್ತ ಬಂದಿತ್ತು ಮಹಿಳೆಯರು ಧೈರ್ಯದಿಂದ ಕಡೆಯ ತನಕ ಕುಳಿತಿದ್ದರು.

ಈ ಉಪನ್ಯಾಸದಿಂದ ಒಂದು ವಿಷಯ ಸ್ಪಷ್ಟವಾಗುತ್ತದ ನಮ್ಮ ಮಹಿಳೆಯರು ಇಂಥ ವಿಷಯಗಳನ್ನು ಕೇಳುವುದಕ್ಕೆ ಇನ್ನೂ ಸಿದ್ಧವಾಗಿಲ್ಲವೆಂದು ಆದರೆ ಅವರಿಗೆ ತಕ್ಕ ತಿಳಿವಳಿಕೆ ಕೊಡುವುದು ನಮ್ಮೆಲ್ಲರ ಕರ್ತವ್ಯ

(೭ನೇ ಪುಟಕ್ಕೆ ಮುಂದುವರಿದಿದೆ)

LOOK SHARP! LOOK AHEAD!

Murdeshwar's Banking Institute.

Pioneer Institute on the WestCoast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Special-ised Banking Courses (C. A. I. B. & C. A. I. I. B.) and also for Account-ancy; Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Exa-mination for 1935 and for the Bombay Advocates Examination are also held

Ladies are also admitted.

Enrol yourself NOW Classes are in full swing Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to—

D. R Murdeshwar,
Dip. Econ, F R Econ, S (Lond.)
Principal
Ganapathy High School Street,
Mangalore.

WHITE LEPROSY AND LEUCODERMA

A few day's application of this medicine cures WHITE LEPROSY and LEUCODERMA radically Get rid of this horrible disease by application of this medicine in spite of failure by hundreds of Hakims, Doctors, Kavirajas and advertisers. Rs 500 rewrded if proved fallible. Price Rs 2/

VAIDYARAJ AKHIL KISHORE RAM
P. O KATRISARAI, (GAYA)

ಶಿವರಾಮ ಕಾರಂತ ವಿರಚಿತ

ಗ್ನಾನ—

ಜ್ಞಾನದ ಮೇಲೆ ವ್ಯಂಗ ಟೀಕೆ.
ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ
ಧಪ್ಪಗಿನ ಆಂಟಿಕ್ ಕಾಗದದಲ್ಲಿ ಮುದ್ರಣ
ಕ್ರೌನ್ ⅛ ಆಕಾರದ 188 ಪುಟಗಳು
ಉತ್ತಮ ತರಗತಿಯ ಹಾಸ್ಯ
ಬೆಲೆ ರೂ. 1—4—0.
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು.
ಇಲ್ಲಿಂದ ಪಡಕೊಳ್ಳಬಹುದು

ಕಣ್ಣಿನ ಪರೆ.

"ಐ—ಸನ್" ಎಂಬ ನೇತ್ರಭಾಸ್ಕರ—ಈ ಔಷಧವು ಕಣ್ಣಿನಪರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ ಶಸ್ತ್ರಕ್ರಿಯೆಯು ಅವಶ್ಯವಿಲ್ಲ. ಖಾತರಿ ಗುಣಲಾಭ. ಗುಣವಾಗದಿದ್ದರೆ ಹಣ ವಾಪಸ್ ಕ್ರಯ ರೂ. 2.

ಸಚಿತ್ರವಿವರಕ್ಕಾಗಿ ಇಂಗ್ಲೀಷಿನಲ್ಲಿ—

Hary yasram, Panchpota, Bengal

Swadeshabhimani

enjoys circulation in India and abroad.

APPLY FOR ADVERTISEMENT RATES

ಮಂಗಳೂರಿನ ಪೇಟೆಧಾರಣೆ

ಸಾಮಾಗ್ರಿಗಳು	ಇಂದ	ವರೆಗೆ
	ರೂ ಆ	ರೂ ಆ
ರಾಶಿ ಅಕ್ಕಿ	4— 2	4— 6
ಮುಸ್ಸಿ	4— 4	4—10
ಗುಡ್ಡು	4— 0	4— 8
ಊರ ಅವ್ವಲ್ ಬೆಣ್ತಿಗೆ	4— 0	4—12
ರಂಗೂನು ಬೆ. ಗೋ ೧ಕ್ಕೆ	6— 8	7— 0
ಎಲ್ಲೋರು ಬೆ. ಮು ೧ಕ್ಕೆ	4 — 4	4— 8
ಗೋಧಿ ಗೋಣಿ ೧ಕ್ಕೆ	10— 0	10— 8
ತೊಗರಿ ಗೋಣಿ ೧ಕ್ಕೆ	8—12	9— 8
ಹುರುಳಿ ಗೋಣಿ ೧ಕ್ಕೆ	7— 5	8— 4
ಕಡಲೆ ಗೋಣಿ ೧ಕ್ಕೆ	8 — 0	10— 8
ತೊಗರಿಬೇಳೆ ಗೋಣಿ ೧ಕ್ಕೆ	10— 0	17— 0
ಉದ್ದು ಗೋಣಿ ೧ಕ್ಕೆ	8— 0	8— 8
ಹೆಸರು ಗೋಣಿ ೧ಕ್ಕೆ	9— 0	9— 8
ಊರುಬೆಲ್ಲ ಖಂಡಿ ೧ಕ್ಕೆ	32— 8	35— 0
ಉಪ್ಪು ಗೋಣಿ ೧ಕ್ಕೆ	4—12	5— 0
ಕೊಬ್ರಿ ಖಂಡಿ ೧ಕ್ಕೆ	48— 0	5— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	22— 0	22— 8
ಎಳ್ಳಿಂಡಿ ಖಂಡಿ ೧ಕ್ಕೆ	37— 8	40— 0
ಕೊಬ್ರಿ ಎಣ್ಣೆ ಮಣ ೧ಕ್ಕೆ	3—10	4—1[illegible]
ಎಳ್ಳೆಣ್ಣೆ ಮಣ ೧ಕ್ಕೆ	5— 2	5—10
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	5— 7	5—7
ಮೋರಿಸ ಸಕ್ಕರೆ ಮು. ೧ಕ್ಕೆ	5— 8	3— 9
ಮೆಣಸು	5— 2	6— 6
ಸಾಸಿವೆ ಮುಡಿ ೧ಕ್ಕೆ	5 —12	6— 0
ಕಾಳುಮೆಣಸು ಖ. ೧ಕ್ಕೆ	120— 0	122 8
ಯೇಲಕ್ಕಿ ಮಣ ೧ಕ್ಕೆ	22— 0	27— 0
ಗೇರುಬೀಜ ಮು. ೧ಕ್ಕೆ	3—11	3—12
ಕಬ್ಬಿಣ ಖಂಡಿ ೧ಕ್ಕೆ	40— 0	40— 6
ತಾಂಮ್ರ ತಗಡು ಮ. ೧ಕ್ಕೆ	9 — 6	9— 5
ತಾಂಮ್ರಪಾತ್ರಗಳು ಮ ೧ಕ್ಕೆ	11— 0	12— 0
ಚೀನಬೆಳ್ಳಿ ಸೇರು ೧ಕ್ಕೆ	14 —12	15— 0
ಹಿತ್ತಾಳೆ ತಗಡು ಮ ೧ಕ್ಕೆ	8— 12	9— 0
ಸತುವು ೧ಕ್ಕೆ	23— 0	23— 4
ಹುಣಿಸೆ ಹುಳಿ ಖಂಡಿ ೧ಕ್ಕೆ	20— 0	25— 8
ನೇಟಿವ್ ಕಾಫಿ ಖಂಡಿ ೧ಕ್ಕೆ	160— 0	170— 0
ಫ್ಲಾಂಟೇಶನ್ ಕಾಫಿ ಖಂಡಿ ೧ಕ್ಕೆ	240— 0	245— 0
ಹಳೆ ಅಡಿಕೆ	100— 0	110 - 0
ಹೊಸ ಅಡಿಕೆ	80— 0	96 — 0

ಇಷ್ಟರವರೆಗೆ ಯಾರೂ ಕೇಳಲಿಲ್ಲ, ಪಡೆಯಲಿಲ್ಲ.

ನಮ್ಮ ಒಟ್ಟೋಮ್ಯಾನ್ ಗೋಲ್ಡ್ ಅಥವಾ ಹಾಸ್ ಹೃದಯ ಮನಗಳನ್ನು ಸೆಳೆಯುವಂತಹದ್ದು. ೧೨ ಬಾಟ್ಲಿಗಳನ್ನು ರೂ ೧—೧೫—೦ಕ್ಕೆ ಕೊಳ್ಳುವವರಿಗೆ ೧ ಡಬ್ಲ್ ರಿಸ್ಟ್ ವಾಚ್, ೧ ಇನ್‌ಫೆಂಟ್ ಪೋಕೆಟ್ ವಾಚ್ (ಟೈಮ್ ಸರ್ವೀಸ್), ೧ ಟಿ ಟ್ರಿಂಬೀಸ್ (ಸರಿಯಾಗಿ ಸಮಯ ತೋರಿಸುತ್ತದೆ)—ಹತ್ತು ವರ್ಷಗಳ ಗ್ಯಾರಂಟಿ, ಒಂದು ಇಮಿಟೇಶನ್ ಮುತ್ತಿನ ಸರ, ಪೆಕಿಂಗ್ ಮತ್ತು ಪೋಸ್ಟೇಜ್ ಧ್ರೀ. (ಒಪ್ಪಿಗೆಯಾಗದಿದ್ದರೆ ಹಣ ವಾಪಸ್)

ವಿಳಾಸ—International Trading Co.,
G I P A Post Box No 6714 Section S P, Calcutta.

NEW ARRIVLAS.

Medicines.

Dr. Schuessler's Twelve Tissue Remedies 5 gr bot As. 4/-
Homoeopathy Medicines 5 gr. bot As 5/—
Sugar of Milk Dr Schwabe's original bot 1 lb Rs 2/-
Haarlem Oil-a world-renowned remedy As 8/-per phial
Dr Hiele s New Curative Earth-Radium Cure Rs 4/-per lb
Dr Schwabe's other special remedies are always in stock
Please consult us for your requirements
Kanarese Book a Family Guide to Biochemistry Re 1/-
" Domestic Homoeopathy Rs 1-4/-
If you own these two Books you will be able to pick up treatment and administer Tissue & Homoeopathy Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes and prices from As 2/6
Delightful in use and charming in appearance Please try

Kirloskar Pumps

We are the Representatives for Kirloskar Brothers for their reliable Shallow well and Deep well Pumps, Spring Cots, Spring Couches etc, and steel
Pipes and pipe fittings at cheap prices. Coir Mats and Mattings
Steadler Pencils and Stationeries
We are the recognised agents for STEADLER S all stationeries and shall be glad to serve you

Olympia Typwriter.

An up to date Machine in Standard and portable sizes
Full particulars on request —

Basel Mission Book & Tract Depository,
Mangalore, S K or Hubli, S M

ರೇಶ್ಮೆಯಂತೆ ನುಣುಪಾದ ಮತ್ತು
ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ
ಕೂದಲುಗಳ ಬುಡವನ್ನು ಜಾಗರೂ
ಕತೆಯಿಂದ ತಿಕ್ಕಿರಿ
(ಮನಮುಗ್ಧಕರವಾದ ಸುಗಂಧವನ್ನುಳ್ಳದು)
ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.
ತಯಾರಿಸುವವರ — ಬೆಲೆ ಸೀಸೆ ಒಂದಕ್ಕೆ ರೂ 0—12—0
ಆರ್ ಸಿ ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.
ಏಜಂಟರು —
ಕುಂತಳ ಕೌಮುದಿ ತೈಲ,
ವೆನ್‌ಲೊಕ್ ಆಸ್ಪತ್ರೆ ಎದುರು ಮಂಗಳೂರು.

ಶಾಲಿವಾಹನ ಬ। ಶಕ ೧೮೫೭ನೆಯ ಭಾವ ಸಂವತ್ಸರದ ವೈಶಾಖ ಶು। ೨ ಶನಿವಾರದಿಂದ ವೈಶಾಖ ಶು। ೭ ಶುಕ್ರವಾರದ ವರೇಗಿನ ಪಂಚಾಂಗ. (ಗಣಕಲನೇಯನುಸರಿಸಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ದಿನಮಾನ	ವಿಶೇಷ
4	ಶನಿ	೨	೫೧	ಕೃತ್ತಿಕಾ	೩೦	೨೧	
5	ರವಿ	೩	೫೦	ರೋಹಿಣೀ	೩೦	೨೨	
6	ಸೋಮ	೪	೫೧	ಮೃಗಶಿರಾ	೩೨	೨೩	
7	ಮಂಗಳ	೫	೫೩	ಆರ್ದ್ರಾ	೩೬	೨೪	
8	ಬುಧ	೬	೫೭	ಪುನರ್ವಸೂ	೪೦	೨೫	
9	ಗುರು	೭	೬೦	ಪುಷ್ಯಾ	೪೬	೨೬	
10	ಶುಕ್ರ	೭	೧	ಅಶ್ಲೇಷಾ	೫೨	೨೭	

ಮೆನೇಜರರ ನೋಟೀಸು

ಸ್ವದೇಶಾಭಿಮಾನಿಯ ಚಂದಾ ಅವಧಿ ಮುಗಿಯಿತೆಂದು ನೋಟೀಸು ಕೊಟ್ಟೊಡನೆ ಅಂತಹ ಚಂದಾದಾರರು ಮುಂದಿನ ವರ್ಷದ ಬಗ್ಗೆ ಚಂದಾ ಮೊಬಲಗನ್ನು ಕೂಡಲೇ ರವಾನಿಸಬೇಕು ಪತ್ರಿಕೆಯು ಮುಂದಕ್ಕೆ ಬೇಕೋ ಬೇಡವೋ ಎಂಬ ಬಗ್ಗೆ ನೋಟೀಸು ತಲಪಿದೊಡನೆ— ಅಗತ್ಯವಾಗಿ ತಿಳಿಸಬೇಕು.

ಚಿಕ್ಕದೊಡ್ಡವರು-ದೊಡ್ಡಚಿಕ್ಕವರು

ಲೇಖಕರು — ಶ್ರೀ ಶಿವರಾಮ ಕಾರಂತರು.

ಉದ್ಧಾರದ ಉತ್ತಮರಾಯರು.

ಸಾರ್ವಜನಿಕ ಚಳವಳಿಗಳಲ್ಲಿ ಭಾಗವಹಿಸಬೇಕು, ಜನರಿಗೆ ಏನಾದರೂ ಮಾಡಿ, ಅವರನ್ನು ಹೇಗಾದರೂ ಉದ್ಧರಿಸಬೇಕು—ಎಂಬುದು ಉತ್ತಮರಾಯರ ಉತ್ತಮ ಹಂಬಲ. ಉತ್ತಮರಾಯರು ಸಿರಿವಂತರಲ್ಲ. ಆದರೆ ಹೇಗಾದರೂ ಮಾಡಿ ಸಿರಿವಂತರನ್ನು ಕಾಲುಕಟ್ಟಿಯಾದರೂ ಕೆಲಸ ಮಾಡಿಕೊಳ್ಳುವ ಚಮತ್ಕಾರ ಬಲ್ಲವರು. ಅವರಿಗೆ ಯಾವಾಗಲೂ ಜನರಲ್ಲಿ ಕಾಣುವ ಕೊರತೆಯೆಂದರೆ—ಜನರು ರಸಿಕರಾಗಿಲ್ಲವಲ್ಲಾ ಎಂದು. ಜನರು ಹೇಗಾದರೂ ರಸಿಕರಾದರೆ ಸಾಕು ಎಂದು ಅವರು ಹೋರಾಡುವಂಥವರು. ಈ ಹೋರಾಟದಲ್ಲಿ ಕಪಟವಿಲ್ಲ. ಅನ್ನ ನೀರು ಬಿಟ್ಟು—ನಾಳೆ ದಿವಸ ಅಖಿಲಭಾರತ (ಸಾಧ್ಯವಾದರೆ ಅಂತರ್ರಾಷ್ಟ್ರೀಯ) ರಂಗವಲ್ಲಿ ಪರಿಷತ್ತನ್ನು ಕರೆಯಬೇಕೇ, ಅಖಿಲ ಕರ್ನಾಟಕದ ಗೆಜ್ಜೆಯವರ ಕಾನ್ಫರೆನ್ಸು ಕರೆಯಬೇಕೇ—ಅವರು ಸಿದ್ಧರು. ಈ ವಿಷಯವಾಗಿ ಯಾವುದಾದರೂ ಪತ್ರಿಕೆಯಲ್ಲಿ ಲೇಖನ ಬರೆಯಬೇಕೇ—ಅವರು ಸಿದ್ಧರು. ಇದಕ್ಕೆಲ್ಲಾ ಹಣ ಬೇಡವೇ, ಬೇಕು ಕೂಡಿಸುತ್ತಾರೆ, ಕಾಕಪ್ಪನವರಿಂದ ಹಿಡಿದು ಪೋಕಪ್ಪನವರ ತನಕ ಹೋಗಿ ಬೇಡುತ್ತಾರೆ.

ಒಮ್ಮೆ ಅವರಿಗೆ ಅಖಿಲ ಭಾರತ ರಂಗವಲ್ಲಿ ಪರಿಷತ್ತನ್ನು ಕರೆಯುವ ಮನಸ್ಸಾಯಿತು. 'ರಂಗವಲ್ಲಿ ಯೆನ್ನುವುದು ಮನುಷ್ಯನ ಸಭಿಗಾಂಕೆಯ ಪ್ರಥಮ ಚಿಹ್ನೆಯಷ್ಟೆ' ಹಾಗೆಂದು ಪರಿಷತ್ತನ್ನು ಕರೆದರು. ಪರಿಷತ್ತು ಅವರ ಮನೆಯಲ್ಲಿ, ಅನುಕೂಲವಿಲ್ಲವಾದರೆ ಊರಿನ ನಾಟಕ ಶಾಲೆಯಲ್ಲಿ ಕರೆಯುವುದೆಂದು ನಿರ್ಣಯವಾಯಿತು. ಆ ಗಳಿಗೆಯಿಂದಲೇ ಹ್ಯಾಂಡು ಬಿಲ್ಲು ಹಂಚಿಸಿದರು. 'ರಂಗವಲ್ಲಿಯಿಲ್ಲದೆ—ಯಾವ ದೇಶವೂ ಉದ್ಧಾರವಾಗಲಾರದು. ಆದುದರಿಂದ ಕನ್ನಡಿಗರ ಪ್ರಥಮ ರಂಗವಲ್ಲಿ ಪರಿಷತ್ತನ್ನು ಕರೆಯಲೇ ಬೇಕು'—ಎಂದು ಸಾರಿದರು. ಸ್ವಾಗತ ಸಮಿತಿಗೆ ಊರಿನ ಮುಂದಾಳಿನವರೆಲ್ಲರೂ ಸೇರಿಸಲ್ಪಟ್ಟರು.

ಮಂಗಳೂರಿನ ಮುಂದಾಳುಗಳಾದ ಶ್ರೀ ಬಸವಣ್ಣನವರು, ಆನಂದಪ್ಪನವರು, ಕೋಟ್ಯಪ್ಪನವರು ಎಲ್ಲರೂ ಸ್ವಾಗತ ಮಂಡಲದ ಸದಸ್ಯರು ಆದರು. ಊರಿನ ಪ್ರತಿಯೊಂದು ಸಭೆ, ಮಂಡಲಕ್ಕೆ ಅವರೇ ಸಾರ್ವಜನಿಕ ಅಧ್ಯಕ್ಷರೋ ಉಪಾಧ್ಯಕ್ಷರೋ ಆದದರಿಂದ—ಅವರನ್ನು ಸೇರಿಸಿಕೊಂಡರು. ಮುಂದಿನ ವಾರದ ಆರೆಂಟು ಕಾರ್ಯಕಾರಿ ಮಂಡಲದ ಸಭೆಗಳು ಜರುಗಿದುವು. ಉತ್ತಮರಾಯರೇ ಪ್ರೊಸಿಡಿಂಗ್ಸು ಬೂಕನ್ನು ಪ್ರತಿಯೊಬ್ಬರ ಮನೆಗೂ ಒಯ್ದು ಕೂತಲ್ಲಿಂದ ಸಭೆ ಕೂಡಿಸಿದರು. ಶ್ರೀ ಕೋಟ್ಯಪ್ಪನವರು ಸ್ವಾಗತ ಮಂಡಲಕ್ಕೆ ಅಧ್ಯಕ್ಷರಾದರು. ಊರಿನ ಶವದಹನ ಮಂಡಲ, ಸಮುಗಾರ ಕೂಟ, ಲಲಿತಕಲಾಕೂಟ, ವಿದ್ಯಾವರ್ಧಕ ಸಂಘ, ವೇದಾಂತ ಸಂಘ, ಥಿಯಾಸಫಿಕಲ್ ಲಾಜ್, ಆರ್ಯಸಮಾಜ ಮೊದಲಾದ ಸಂಸ್ಥೆಗಳಿಗೆ ಅವರೇ ಅಧ್ಯಕ್ಷರಾದುದರಿಂದ—ಇವರೇ ಸ್ವಾಗತ ಸಮಿತಿಗೆ ತಕ್ಕವರೆಂದು ನಿರ್ಣಯಿಸಿದರು.

ಇನ್ನು ಪರಿಷತ್ತಿಗೆ ಅಧ್ಯಕ್ಷರು ಯಾರು? ಬಹು ಪಜೀತಿಯ ಪ್ರಶ್ನೆ. ಜನ ಕೂಡಬೇಕು—ಕಾಸೂ ಬೇಕು—ಏನುಪಾಯ? ಶ್ರೀಮತಿ ಎಸ್ ನೂರ್‌ಜಾನ್ ಬೇಗಮರು ಆಗಾಗಲೇ ಭೋರ್‌ಘಾಟಿನಿಂದ ಬಂದಿದ್ದರು. ಅವರು ತಮಗೆ ಇದು ಸಲ್ಲದ ಕೆಲಸವೆಂದರು. ಆದರೂ, ತಾವು ಶ್ರಮ ವಹಿಸುವ ಕಾರಣವಿಲ್ಲ—ಬರೇ ಒಂದು ಲೆಕ್ಚರು ಕೊಟ್ಟರೆ ಸಾಕು' ಎಂದು ಸಮಾಧಾನಪಡಿಸಿದರು.

ಪರಿಷತ್ತಿನ ದಿನ ಬಂದಿತು. ಉತ್ತಮರಾಯರ ಮನೆ ಸಾಲದೆಂದು ಊರಿನ ನಾಟಕ ಶಾಲೆಯಲ್ಲಿ ಅದನ್ನು ಪ್ರಾರಂಭಿಸಿದರು. ಸಾವಿರಾರು ಮುದ್ದುಮಣಿಯರು ಬಂದಿದ್ದರು. ರಂಗವಲ್ಲಿ ಮುಖವನ್ನು ಕಾಣದ ಮಿಸ್, ಸುಬ್ಬುಲಚ್ಮಿಯವರು ಬಂದು ಮಿ। ಉತ್ತಮರಾಯರಿಗೆ ಶೇಕ್ ಹೇಂಡ್ ಮಾಡಿದರು. ಮಿ। ಕೋಟ್ಯಪ್ಪನವರಿಗೆ ಉತ್ತಮರಾಯರೇ ಬೇಗಮರ ಪರಿಚಯ ಮಾಡಿಕೊಟ್ಟರು. ಅಂದಿನ ಪರಿಷತ್ತು ಯಶಸ್ವಿಯಾಯಿತು. ಬೇಗಮರು ಉರ್ದು ಮಾತಿನಲ್ಲಿ ರಂಗವಲ್ಲಿಯು ಅತಿ ಅವಶ್ಯವೆಂದು ಒಂದು ಮಾತು ಹೇಳಿ ಅರ್ಧ ತಾಸಿನ ತನಕ ಶಿಶು ಸಂಗೋಪನೆಯ ವಿಚಾರ ಮಾತನಾಡಿದರು. ಸಭೆಯು ಯಶಸ್ವಿಯಾಯಿತು. ಸಭೆಯು ಜರಗಿದ ಒಂದು ವಾರದಲ್ಲಿ ಉತ್ತಮರಾಯರ ಮನೆಯ ಅಂಗಳ ಹುಡುಕಿ ನಾನೇ ಹೋಗಿದ್ದೆ. ಅವರ ಮನೆಯ ಹೊಸ್ತಿಲಿನಲ್ಲಿ ರಂಗವಲ್ಲಿಯೊಂದಲ್ಲದೆ ಇನ್ನೆಲ್ಲಾ ಇತ್ತು. ಅವರು ನನ್ನನ್ನು ಭೇಟಿಯಾದರು. ಸಮಸ್ಕರಿಸಿದರು. ಅವರಿಗೆ ನಾನೆಂದರೆ ಪ್ರಾಣ. ಕರ್ನಾಟಕಕ್ಕೆ ಕಲೆಯ ಒಬ್ಬ ಬ್ರಹ್ಮಸಿದ್ಧರೆ ಅದು ನಾನೆಂದು ಹೇಳಿದ್ದಾರೆ. ಹೀಗೆ ಹೇಳುವ ಸಲುವಾಗಿಯೇ ಒಂದು ಸಂತೋಷ ಕೂಟ ಏರ್ಪಡಿಸಿದ್ದರು. ಈ ಕೂಟಕ್ಕೆ ಹಿಂದಿನ ರಂಗವಲ್ಲಿ ಪರಿಷತ್ತಿನ ಸ್ವಾಗತ ಸಮಿತಿಯೇ ಸೇರಿತ್ತು. ಅಲ್ಲಿ ಅವರು ನನ್ನ ಪರಿಚಯ ಮಾಡಿಸಿ—"ಶ್ರೀ ಕಾರಂತರು ಕಲಾವಂತರು. ಅವರು ಎಷ್ಟೋ ಹೊಸ ನಾಟಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಎಷ್ಟೋ ನಾಟಕಗಳು ಗುಬ್ಬಿ ವೀರಣ್ಣನವರ ಪ್ರಭಾಮಣಿಯಂತೆ ರಸ, ಭಾವ, ಕಲಾ, ಸಂಗೀತ, (ಧಾತು?) ಪುಷ್ಟವಾಗಿವೆ" ಎಂದು ಚಪ್ಪಾಳೆ ಹೊಡೆದು ನನಗೆ ಹಾರ ಹಾಕಿದರು. ಎಲ್ಲರೂ ಚಪ್ಪಾಳೆ ಹೊಡೆದರು. ನನ್ನ ಒಂದು ಕೈಯಲ್ಲಿ ಹಾರವಿದ್ದುದರಿಂದ, ಬರೇ ಒಂದು ಕೈಯಿಂದ ಹಣೆಯನ್ನು ಸವರಿಕೊಂಡೆ.

ಅದೇ ದಿನ ಸಭೆ ಮುಗಿಯುವ ಮೊದಲು ನಾನು ಸದ್ಯವೇ "ಕುಂಕುಮ ವಿಭೂತಿ" ಪರಿಷತ್ತನ್ನು ಕರೆಯಬೇಕೆಂದಿದ್ದೇನೆ. ನಮ್ಮ ಆರ್ಯಮಹಿಳೆಯರು ಹಣೆಯನ್ನು ಇನ್ನೂ ಚೆನ್ನಾಗಿ ಶೃಂಗರಿಸಲಾರರೆಂದರೆ ತೀರ ವಿಷಾದದಾಯಕವಾಗಿದೆ—ಎಂದು ಎಲ್ಲರನ್ನು ಬೀಳ್ಕೊಟ್ಟರು. ಅದಿನ್ನೂ ಅಪಕ್ವಸ್ಥಿತಿಯಲ್ಲಿದೆ. ಮಿ। ಗುಡ್‌ಬರೋ ಸಾಹೇಬರಿಗೆ ಅವಕಾಶವಾಗದ್ದರಿಂದ ಪರಿಷತ್ತು ಮುಂದರಿಸಲ್ಪಟ್ಟಿದೆಯೆಂದು ಅವರು ನನಗೆ ತಿಳಿಸಿದರು.

ಉತ್ತಮರಾಯರಿಗೆ—ಅರ್ಥಶಾಸ್ತ್ರ, ನೀತಿಶಾಸ್ತ್ರ, ನಯಶಾಸ್ತ್ರ ಮೊದಲಾದ ಹಲವು ಶಾಸ್ತ್ರಗಳಲ್ಲಿ ಪರಿಚಯ. ಪರಿಚಯವೇಕೆ ಪ್ರೇಮ, ಅವರು—ಮಿ। ರಾಚಪ್ಪನವರು ಶ್ರೀ ಬಸವೇಶ್ವರ ಕರ್ನಾಟಕ ಸಂಗೀತ ನಾಟ್ಯಕಲಾ ವಿವರ್ಧಕ ಸಂಘದ ಅಂಕದ ಪರದೆಯ ಡಿಸ್ಯಾಸಿಗೆ ಮೆಚ್ಚಿ ಅದರ ಫೋಟೋವನ್ನು ತಮ್ಮ ದೇವರ ಕೋಣೆಯಲ್ಲಿರಿಸಿದ್ದಾರೆ. ಆ ಪರದೆಯನ್ನು ಬ್ರಿಟಿಷ್ ಆರ್ಟ್ ಎಗ್ಸಿಬಿಷನ್‌ಗೆ ಕಳುಹಿಸುವ ಯೋಚನೆ ಅವರಿಗಿತ್ತು. ಆದರೆ ಅಷ್ಟರಲ್ಲೇ ಕಂಪೆನಿಯವರು ಈ ಅಮೂಲ್ಯ ಕಲಾಸಂಪತ್ತನ್ನು ರಾಣಿ ಚೆನ್ನಮ್ಮನ ಕಾಫಿ ಹೊಟೆಲಿನ ಮಾಲಿಕರೊಬ್ಬರಿಗೆ ಅಡವಿರಿಸಬೇಕಾಯಿತು.

ಉತ್ತಮರಾಯರು ಸಂಗೀತಪ್ರಿಯರು. ಅವರ ಸೋದರಿಯೊಬ್ಬಳಿಗೆ ಅವರು ದಕ್ಷಿಣಾದಿ ಸಂಗೀತ ಪ್ರಾಕ್ಟೀಸು ಕೊಡಿಸಿದ್ದರು. ಆದರೆ—ನಮ್ಮ ಸಂಗೀತವು ಇನ್ನೂ ಬಡಾವಸ್ಥೆಯಲ್ಲಿ ಇದೆಯೆಂದು ಅವರ ಸಂಗೀತವನ್ನು ಸುಧಾರಿಸಲು ಯತ್ನಿಸಿದ್ದಾರೆ. ಈಗ ಅವರ ಸೋದರಿಯವರು ತ್ಯಾಗರಾಜರ 'ಮೋಕ್ಷಮು ಗಲದಾ' ಕೃತಿಯನ್ನು ಮರಾಠೀ ಪ್ರೇಮಾ ನಂದ ನಂದಾ ಹಾಡಿನಂತೆಯೇ ಹಾಡಲು ಕಲಿತಿದ್ದಾರೆ. ತ್ಯಾಗರಾಜರ ಎವರುನಿ ಹಾಡನ್ನು ಕಮಲಿನ ಅಂದಿ ಪಂಡಾರದ 'ನಂತ ತೊಡಗಿ ಗಾಂಧಿ ಮಾರಾಜಂ' ಎಂಬಂತೆ ಸಾಗಿಸಿ ಚರಕಾ ಚಲಾ ಚಲಾಕೆ ಲೇಂಗೆ'—ಎಂಬಂತೆ ಮುಗಿಸುತ್ತಾರೆ. ಆ ಹಾಡನ್ನು ಕೇಳಿದ ಉತ್ತಮರಾಯರ ಗೆಳೆಯರೆಲ್ಲ 'ಇದು ಬಿಥೋವನ ಸಿಂಫನಿಯಂತೆ' ಇದೆಯೆಂದು ಹೇಳಿದ್ದಾರೆಂದು ಅವರು ನನಗೆ ತಿಳಿಸಿದರು. 'ನಿಮ್ಮ ಅಭಿಪ್ರಾಯವೇನು ಸ್ವಾಮಿ' ಎಂದರು. 'ನನಗೆ ಬಿಥೋವನ ಭೇಟಿಯಾಗಿಲ್ಲ. ಅವನು ಮಂಗಳೂರಿಗೆ ಬಂದಿದ್ದನೇ' ಎಂಬ ವಿಚಾರ ಮಾತನಾಡಿದೆ.

ಅಷ್ಟರಲ್ಲಿ ಅವರ ಮನಸ್ಸು ಎರಡನೇ ರಂಗವಲ್ಲಿ ಪರಿಷತ್ತಿನ ವಿಚಾರ ಹರಿಯಿತು. ಅದನ್ನು ಲಕ್ನೋವಿನಲ್ಲಿ ಜರುಗಿಸಿ, ಕರ್ನಾಟಕದ 'ರಂಗವಲ್ಲಿ ಕ್ರಮವನ್ನು ಹಿಮಾಲಯದ ತನಕ ಸಾರುವಂತೆ ಮಾಡಬೇಕೆಂಬ ಅಭಿಲಾಷೆಯಿದೆ ಯೆಂದರು.

ಶ್ರೀ ಉತ್ತಮರಾಯರು ಇನ್ನು ಕೆಲವು ವರುಷವಿದ್ದರೆ ಕನ್ನಡ ನಾಡಿನ ರಂಗವಲ್ಲಿ, ಕುಂಕುಮ, ತಾಂಬೂಲ ವಿಧಿ, ಅರ್ಥಶಾಸ್ತ್ರ ಮೊದಲಾದ ವಿಷಯಗಳೆಲ್ಲ ಪ್ರಗತಿಗೊಂಡು, ಕೆಲವು ವರ್ಷಗಳಲ್ಲಿ ಜರ್ಮನಿ, ಅಮೇರಿಕ, ಜಪಾನ ಮೊದಲಾದ ದೇಶಗಳ ವಿದ್ಯಾರ್ಥಿಗಳನ್ನು ಒರಮಾಡೀತೆಂದು ನನಗೆ ನಂಬುಗೆಯಿದೆ. ಯಾವುದಕ್ಕೂ ಯುರೋಪಿನ ರಾಜಕೀಯ ವಾತಾವರಣ ಅಸ್ಥಿರವಾಗಿ ಭವಿಷ್ಯವು ಇದಕ್ಕೆ ಅವಕಾಶ ಕೊಟ್ಟೀತೇ—ಎಂಬ ವಿಷಯದಲ್ಲಿ ನನಗೆ ಸಂಶಯವಿದೆ.

(ಆನೇ ಪುಟದಿಂದ ಮುಂದುವರಿದುದು)

ಸೋಮವಾರ, ತಾ. ೨೯-೪-೧೯೩೫.

ಈ ದಿನ ಪ್ರಾತಃಕಾಲ ಸುಪ್ರಸಿದ್ಧ ಸಾಹಿತಿಗಳೂ ಪರಿಷತ್ತಿನ ಗೌರವ ಕೋಶಾಧ್ಯಕ್ಷರೂ ಆದ ಶ್ರೀಮಾನ್ ವಿ ಸೀತಾರಾಮಯ್ಯ ಎಂ ಎ, ಇವರು 'ಇಂಡಿಯಾ ದೇಶದ ರಿಸರ್ವ್ ಬ್ಯಾಂಕ್' ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು. ವಿಷಯವು ಎಲ್ಲರಿಗೂ ತಿಳಿಯುವಂತೆ ಸುಲಭವಾಗಿ ಹೇಳಿದರು. ಅಸಲು ಕ್ರಮವಾಗಿ ಹಣವೆಂದರೇನು, ಹಣದ ರೂಪ ಭೇದಗಳು, ಹಣದ ಬೆಲೆ, ಆ ಬೆಲೆ ಹೇಗೆ ಹೇಗೆ ವ್ಯತ್ಯಾಸ ಹೊಂದುತ್ತ ಹೋಗುತ್ತದೆ, ಆ ಬೆಲೆಯ ಏರಿಳಿತಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಒಂದು ಸೆಂಟ್ರಲ್ ಬ್ಯಾಂಕ್ ಹೇಗೆ ಆವಶ್ಯಕ ಎಂಬುವನ್ನೂ ವಿಸ್ತಾರವಾಗಿ ತಿಳಿಸಿ, ಈಗ ಹೊಸದಾಗಿ ಇಂಡಿಯಾ ದೇಶದಲ್ಲಿ ಸ್ಥಾಪಿತವಾಗಿರುವ ಇಂಡಿಯಾ ದೇಶದ ರಿಸರ್ವ್ ಬ್ಯಾಂಕು ಯಾವ ಉದ್ದೇಶದಿಂದ ಸ್ಥಾಪಿತವಾಗಿದೆ, ಅದು ಮಾಡಲಿರುವ ಕೆಲಸಕಾರ್ಯಗಳೇನು ಎಂಬ ಅಂಶಗಳನ್ನು ಕುರಿತು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು.

ಸಾಯಂಕಾಲ ೬ ಘಂಟೆಗೆ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್' ಎಂಬ ಸಂಸ್ಥೆಯಲ್ಲಿ ಸಂಶೋಧಕಶಾಖೆಯಲ್ಲಿರುವ ಪ್ರೊ। ಕೆ ಶ್ರೀನಿವಾಸನ್‌ರವರು 'ರೇಡಿಯೋ ವಿಚಾರ' ಎಂಬ ವಿಷಯವನ್ನು ಕುರಿತು ಇಂಗ್ಲಿಷಿನಲ್ಲಿ ಭಾಷಣ ಮಾಡಿದರು.

ಉಪನ್ಯಾಸಕರು ಮೊದಲು 'ರೇಡಿಯೋ ಯಂತ್ರದ ವಿಚಾರವನ್ನು ವೈಜ್ಞಾನಿಕ ದೃಷ್ಟಿಯಿಂದ ವಿವರಿಸಿದರು. ದೂರದೇಶದಲ್ಲಿ ಆಗುವ ಸಂಗೀತ, ಭಾಷಣ ಮೊದಲಾದ ಶಬ್ದ ಸಮಾಚಾರಗಳನ್ನು ಭೂತಾಕಾಶದ ಮೂಲಕ ಹೇಗೆ ಸಾಗಿಸಬಹುದು ಎಂಬುದನ್ನು ಚಿತ್ರಪಟದ ಸಹಾಯದಿಂದ ವಿವರಿಸಿದರು.

ಪರಿಷತ್ತಿನ ವಿಶೇಷ ಸಾಹಿತ್ಯೋತ್ಸವದ ಆರಂಭೋತ್ಸವವನ್ನು ನೆರವೇರಿಸುವ ಸಂದರ್ಭದಲ್ಲಿ ಶ್ರೀ ರಾಜಮಂತ್ರ ಪ್ರವೀಣ ಎಸ್ ಪಿ ರಾಜಗೋಪಾಲಾಚಾರ್ಯರವರು ಮಾಡಿದ ಇಂಗ್ಲಿಷ್ ಭಾಷಣದ ಕೆಲವು ವಾಕ್ಯಗಳು

ಪರಿಷತ್ತು ಈ ವರ್ಷ ಏರ್ಪಡಿಸಿರುವ ವಿಶೇಷ ಸಾಹಿತ್ಯೋತ್ಸವವನ್ನು ಆರಂಭಿಸುವುದಕ್ಕೆ ಆಹ್ವಾನಿಸಿದ್ದಕ್ಕಾಗಿ ನಾನು ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಗೆ ಕೃತಜ್ಞನಾಗಿದ್ದೇನೆ. ಈ ದಿವಸ ಪ್ರಾತಃಕಾಲ ಇಲ್ಲಿದ್ದ ಅವರ ಪ್ರಾರ್ಥನೆಯನ್ನು ಸಲಿಸಲು ನನಗೆ ಹೃತ್ಪೂರ್ವಕ ಸಂತೋಷವಾಗುತ್ತದೆ.

ಪರಿಷತ್ತು ಈಗ ಬಹಳ ದಿವಸದಿಂದಲೂ ನೆಲೆಸಿ ಇದೆ. ಅದು ನಡೆಸುತ್ತಿರುವ ಮುಖ್ಯ ಕಾರ್ಯಗಳ ಪರಿಚಯವೂ ಎಲ್ಲರಿಗೂ ಇರಬೇಕು. ಕನ್ನಡ ಭಾಷೆ ಸಾಹಿತ್ಯಗಳನ್ನು ಅಭಿವೃದ್ಧಿಗೊಳಿಸುವುದು, ಮತ್ತು ಆ ಅಭಿವೃದ್ಧಿಗೆ ಅವಶ್ಯಕವಾದ ಎಲ್ಲಾ ಅವಕಾಶಗಳನ್ನು ಕಲ್ಪಿಸುವುದು ಇವೇ ಅದರ ಮುಖ್ಯೋದ್ದೇಶ. ಈ ಉದ್ದೇಶ ಸಾಧನೆಗಾಗಿ ಪರಿಷತ್ತು ಕೈಕೊಂಡಿರುವ ಕಾರ್ಯಕ್ಷೇತ್ರದ ವಿವಿಧ ಭಾಗಗಳನ್ನು ಈಗ ನಾನು ಸಮಾಲೋಚಿಸಲಿಚ್ಛಿಸುವುದಿಲ್ಲ. ಆದರೆ ಅದ ಮುಖ್ಯವಾಗಿ ಕೈಕೊಳ್ಳಬೇಕಾದ ಒಂದೆರಡು ವಿಚಾರಗಳನ್ನು ಸೂಚಿಸಬಯಸುತ್ತೇನೆ. ಮೊದಲನೆಯದಾಗಿ ಈಗಿನ ಕಾಲದ ಆವಶ್ಯಕತೆಗಳಿಗೆ ತಕ್ಕ ರಾಜಕೀಯ ವಿದ್ಯುತ್ ಮತ್ತು ವೈಜ್ಞಾನಿಕ ಮುಂತಾದ ಎಲ್ಲಾ ವಿಷಯ ವಿಚಾರಗಳನ್ನೂ ಪ್ರಕಾಶಿಗೊಳಿಸಲು ಅನುಗುಣವಾದ ಉತ್ತಮವಾದ ಶಕ್ತಿಯುತವಾದ ಗದ್ಯ ಶೈಲಿಯನ್ನು ಸೃಷ್ಟಿಸುವುದು. ಎರಡನೆಯದಾಗಿ ಸಮಸ್ತ ಕರ್ನಾಟಕಕ್ಕೂ ಸಮಾನವಾದ ಸಾಹಿತ್ಯ ಭಾಷೆಯನ್ನು ಸೃಷ್ಟಿಸುವುದು ಅಥವಾ ಕನ್ನಡ ಭಾಷೆಯ ಏಕೀಕರಣ. ಕರ್ನಾಟಕ ಸಾಹಿತ್ಯ ಪರಿಷತ್ತು ಈಗ ಕೈಗೊಂಡಿರುವ ಅತ್ಯಂತ ಪ್ರಯೋಜನಕರವಾದ ಕಾರ್ಯವು ಯಶಸ್ವಿಯಾಗಲೆಂದು ಹಾರೈಸುತ್ತೇನೆ. ಕಾರ್ಯವು ಅಷ್ಟು ಸುಲಭವಾದುದಲ್ಲ. ಅದರ ಕಾರ್ಯಕರ್ತರು ಎಷ್ಟು ತೊಂದರೆಗಳಿಗೆ ಸಿಲುಕಿ ಕೆಲಸ ಮಾಡುತ್ತಾರೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ಸರಕಾರದವರು ಈ ಸಂಸ್ಥೆಗೆ ಬಹಳ ಔದಾರ್ಯ ತೋರಿಸಿದ್ದಾರೆ, ಆದರೆ ಎಂದೆಂದಿಗೂ ಅದೇ ಔದಾರ್ಯ ತೋರುವುದು ಸಾಧ್ಯವಲ್ಲ. ಆದುದರಿಂದ, ಪರಿಷತ್ತು ಜನತೆಗೆ ಸಂಸ್ಕೃತಿಯನ್ನು ನೀಡಬೇಕೆಂದು ಹೊರಟಿರುವ ಕಾರ್ಯಗಳ ಪ್ರಾಮುಖ್ಯತೆಯನ್ನರಿತು, ಅದರ ಉದ್ದೇಶದ ಸಾಧನೆಗಳಿಗಾಗಿ ಅದಕ್ಕೆ ಸಹಾಯ ಮಾಡಬೇಕೆಂದು ನಾನು ಎಲ್ಲ ಜನರನ್ನೂ ಪ್ರಾರ್ಥಿಸಿಕೊಳ್ಳುತ್ತೇನೆ.

ಹಿಂದೂಧರ್ಮ.

ಜಗದ್ವಂದ್ಯ ಮಹಾತ್ಮಾ ಗಾಂಧಿಯವರು ಹಿಂದೂ ಧರ್ಮದ ಕುರಿತಾಗಿ "ಯಂಗ್ ಇಂಡಿಯಾ" ಪತ್ರಿಕೆಯಲ್ಲಿ ಪ್ರಕಟಿಸಿದ ಲೇಖನದ ಅನುವಾದವಿದು. ಹಿಂದೂಧರ್ಮವೆಂಬುದರ ನೈಜ ಅರ್ಥವೇನೆಂದು ಇದರಿಂದ "ಹಿಂದೂಧರ್ಮ"ವೆಂದು, ಅದರ ಹೆಸರಿನಲ್ಲಿ ದುಷ್ಕರ್ಮ ಪ್ರವರ್ತಕರಾಗುವ ಹಿಂದೂಗಳು ತಿಳುವಳಿಕೆಯಿಂದ ವರ್ತಿಸಬೇಕಾಗಿದೆ. ಮನುಷ್ಯ ಸಮಾನವಾದ ವಿವೇಕವನ್ನು ಮರೆತು ಶಾಸ್ತ್ರಬದ್ಧ ವಿಧಿ ನಿಯಮಗಳಿಗೆ ಶರಣಾಗತರಾಗಿ ವರ್ಣದ್ವೇಷವನ್ನು ಕಟ್ಟಿಕೊಳ್ಳುವ ವಿಚಾರವಾಗಿ ಮಹಾತ್ಮಾಜೀಯವರು ವ್ಯಕ್ತಪಡಿಸಿರುವ ಅಭಿಪ್ರಾಯವು ಎಂತಹ ಪಂಡಿತರ ಜ್ಞಾನನಯನಗಳನ್ನೂ ತೆರೆಯದಿರಲಾರದು. ಅನ್ಯ ಮತಸ್ಥನು ಹಿಂದುವಿನ ಪಾತ್ರೆಯೊಂದನ್ನು ಸ್ಪರ್ಶಿಸಿದೊಡನೆ ಹಿಂದೂಧರ್ಮವೂ—ಅದರ ಪಾವಿತ್ರ್ಯವೂ—ಕಳಂಕಿತವಾಗುತ್ತದೆಯೇ? ಎಂದೂ ಇಲ್ಲ. ಅಂತಹ ಉದಾಹರಣೆಯನ್ನಿತ್ತು ಗಾಂಧಿಜೀಯವರು ಟೀಕಿಸಿರುವರು. ಹಿಂದೂಮತವು ಆತ್ಮನಿಗ್ರಹ, ಆತ್ಮವಿಕಾಸ, ಮತ್ತು ಸೇವೆಗಳಿಗಾಗಿ ಉಂಟಾಗಿದೆ—ಎಂಬುದನ್ನು ನಾವು ತಿಳಿದುಕೊಳ್ಳುವುದು ಅಗತ್ಯವಿದೆ

ಧರ್ಮದ ತತ್ವ.

ಹಿಂದೂ ಧರ್ಮಬೋಧಕ ಗ್ರಂಥಗಳಾದ ವೇದವೇದಾಂತಗಳನ್ನೂ, ಪುರಾಣ ಗ್ರಂಥಗಳನ್ನೂ, ಪುನರ್ಜನ್ಮ, ಅವತಾರ ಮೊದಲಾದುವುಗಳನ್ನೂ ನಾನು ನಂಬುತ್ತೇನೆ. ಪ್ರಸ್ತುತ ಪ್ರಚಾರದಲ್ಲಿರುವ ವರ್ಣಾಶ್ರಮಧರ್ಮದಲ್ಲಿ ನನಗೆ ಅಭಿಮಾನವಿಲ್ಲವಾದರೂ ವೇದೋಕ್ತವಾದ ವರ್ಣಾಶ್ರಮದಲ್ಲಿ ಮಾತ್ರ ನನಗೆ ಆಸಕ್ತಿಯಿದೆ. ಗೋರಕ್ಷಣಾ ವಿಚಾರದಲ್ಲಿ ಸಾಮಾನ್ಯ ಜನರಿಗಿರುವ ಆಸಕ್ತಿಗಿಂತ ನನಗೆ ಅಧಿಕ ಆಸಕ್ತಿಯುಂಟು. ವಿಗ್ರಹಾರಾಧನೆಯಲ್ಲಿ ನನಗೆ ಪೂರ್ಣ ನಂಬಿಕೆಯಿದೆ, ನಾನು ಸನಾತನ ಹಿಂದೂ ಧರ್ಮಾನುಯಾಯಿ ಅಹುದು. ಆದರೂ ಹಿಂದೂಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಅನೇಕಾನೇಕ ಅಕೃತ್ಯಗಳನ್ನು ಪರಿಪೂರ್ಣವಾಗಿ ಖಂಡಿಸುವವನಾಗಿದ್ದೇನೆ.

ಮತ ಗ್ರಂಥವಿಚಾರ.

ವೇದವು ಮಾತ್ರ ದೈವಪ್ರೇರಿತವಾದ ಪವಿತ್ರ ಗ್ರಂಥವೆಂದೂ ಇತರ ಮತಗ್ರಂಥಗಳೆಲ್ಲ ಬರೀ ಮಾನುಷಿಕವೆಂದೂ ಹೇಳುವುದಕ್ಕೆ ನಾನು ಸಿದ್ಧನಿಲ್ಲ. ಕ್ರೈಸ್ತ ಮತಸ್ಥರ ಬೈಬಲ್ ಗ್ರಂಥವೂ, ಮಹಮ್ಮದೀಯ ಮತಸ್ಥರ ಕೊರಾನು ಗ್ರಂಥವೂ, ಪಾರ್ಸಿಗಳ ಜಂದ ಅವಸ್ಥವೂ ಹಿಂದೂಗಳ ವೇದದಂತೆಯೇ ದೈವಪ್ರೇರಿತವೂ ಪವಿತ್ರವೂ ಆದ ಗ್ರಂಥಗಳೆಂದು ನನ್ನ ನಂಬಿಕೆಯಿದೆ

ಧರ್ಮವೆಂದರೇನು?

ಹಿಂದೂಮತ ಗ್ರಂಥಗಳೆಲ್ಲ ನನಗೆ ನಂಬಿಕೆಯಿದೆಯೆಂದು ಹೇಳಿದೊಡನೆ ನಾನು ಆ ಗ್ರಂಥಗಳಲ್ಲಿನ ವಿಷಯಗಳೆಲ್ಲ ಅಕ್ಷರಶಃ ದೈವ ಪ್ರೇರೇಪಣೆಯಿಂದ ಬಂದುವುಗಳೆಂದು ಎಂದೂ ಹೇಳಲಾರೆ. ಆ ಗ್ರಂಥಗಳ ಪೂರ್ಣ ಪರಿಚಯವು ನನಗಿಲ್ಲವಾದರೂ ಆ ಗ್ರಂಥಗಳಲ್ಲಡಕವಾಗಿರುವ ಉದಾತ್ತವೂ ಉದ್ಧಾಮವೂ ಆದ ಬೋಧೆಗಳ ತಿರುಳೇನೆಂದು ನಾನು ಬಲ್ಲೆ. ವ್ಯವಹಾರ ಮತ್ತು ನೀತಿಗೆ ತೀರ ವಿರುದ್ಧವಾಗಿರುವ ಯಾವ ಶಾಸ್ತ್ರವನ್ನಾಗಲೀ (ಆ ಶಾಸ್ತ್ರವನ್ನು ಯಾವ ಪಂಡಿತ ಮಹಾಶಯನು ಬರೆದಿದ್ದರೂ—)ನಾನು ಸಮ್ಮತಿಸುವುದಿಲ್ಲ. ತಮ್ಮ ಧರ್ಮಗ್ರಂಥಗಳನ್ನು ವಿಮರ್ಶಿಸುವ ಅಧಿಕಾರವು ತಮಗಿರುವುದೆಂದೂ ತನ್ನ ಟೀಕಾಟಿಪ್ಪಣಿಗಳೇ ನ್ಯಾಯಸಮ್ಮತವಾದುವುಗಳೆಂದೂ ಹೇಳುವ ಯಾವ ಶಾಸ್ತ್ರಾಚಾರ್ಯರೇ ಇರಲಿ,—ಸ್ವಾಮಿಗಳೇ ಇರಲಿ—ನಾನು ಅವರೆಲ್ಲರ, ಅಂತಹ ಅಧಿಕಾರವನ್ನು ಅಲ್ಲಗಳೆಯುವುದೇ ಸರಿ

ಹಿಂದೂಧರ್ಮದ ವೈಶಿಷ್ಟ್ಯಗಳು.

ಮತಗ್ರಂಥಗಳ ಕುರಿತಾಗಿ ನಮಗಿರುವ ಜ್ಞಾನವು ತೀರ ಕಡಮೆಯೆಂದೇ ಹೇಳಬೇಕು. ಅವುಗಳಲ್ಲಡಗಿರುವ ತತ್ವಜ್ಞಾನಗಳು ಸುಲಭವಾಗಿ ತಿಳಿಯಬರುವಂತಹುಗಳಲ್ಲ. ಹಿಂದೂ ಮತಗ್ರಂಥಗಳಲ್ಲಿ ಅಡಕವಾಗಿರುವ ಅಹಿಂಸೆ, ಬ್ರಹ್ಮಚರ್ಯ, ಸತ್ಯ ಮತ್ತು ಸನ್ಯಾಸಗಳ ಸಾಧನಾಕಾರ್ಯದಲ್ಲಿ ಪೂರ್ಣ ಜ್ಞಾನಸಂಪಾದನೆಯಾಗದ ಹೊರತು ನಮಗೆ ನಿಜವಾದ ತತ್ವಗಳು ತಿಳಿದುವೆಂದು ಹೇಳಲು ನನಗೆ ಸಾಧ್ಯವಿಲ್ಲ. ಹೀಗೆಂದೊಡನೆ, ಹಿಂದೂಧರ್ಮತತ್ವವನ್ನು ಅರಿತುಕೊಳ್ಳುವ ಕೆಲಸವು ಸಾಮಾನ್ಯ ಜನರಿಂದ ಅಸಾಧ್ಯವೆಂದು ತಿಳಿಯಬಾರದು. ಹಿಂದೂಮತದ ತತ್ವಗಳು ಇತರ ಎಲ್ಲಾ ಮತಗಳ ತತ್ವಗಳಂತೆಯೇ ಚಿರಸ್ಥಾಯಿಯೂ ಸುಲಭಗ್ರಾಹ್ಯವೂ ಆಗಿವೆ. ಹಿಂದೂವು ದೇವರ ಏಕತೆ, ಪುನರ್ಜನ್ಮ, ಮತ್ತು ಮುಕ್ತಿ ವಿಷಯಗಳನ್ನು ನಂಬುತ್ತಾನೆ. ಹಿಂದೂಧರ್ಮದಲ್ಲಿ, ಇತರ ಮತಗಳಲ್ಲಿ ಕಾಣಲಾಗದ ಎರಡು ವಿಶಿಷ್ಟ ಗುಣಗಳಿವೆ—ಮೊದಲನೆಯದು ಗೋರಕ್ಷಣೆ, ಎರಡನೆಯದು ವರ್ಣಾಶ್ರಮ ಧರ್ಮ.

ಮನುಷ್ಯನೂ ಧರ್ಮವೂ.

ವರ್ಣಾಶ್ರಮ ಧರ್ಮವನ್ನನುಸರಿಸಲೆತ್ನಿಸುವುದು ಮನುಷ್ಯನ ಸಾಹಜಿಕ ಗುಣ. ಆದರೆ ಹಿಂದೂಧರ್ಮವು ಮಾತ್ರ ಅದನ್ನು ಒಂದು ಶಾಸ್ತ್ರಬದ್ಧ ವಿಷಯವನ್ನಾಗಿ ನಿರ್ದೇಶಿಸಿಬಿಟ್ಟಿರುತ್ತದೆ. ವರ್ಣಾಶ್ರಮಕ್ಕೂ ಮನುಷ್ಯನ ಜನನ ಮತ್ತು ಕುಲ ಮೊದಲಾದುವುಗಳಿಗೂ ನಿಕಟ ಸಂಬಂಧವಿದೆ. ಮನುಷ್ಯನಾದವನು ತನ್ನಿಚ್ಛೆಪ್ರಕಾರ ತನ್ನ 'ವರ್ಣ'ವನ್ನು ಬದಲಾಯಿಸಿಕೊಳ್ಳಲು ಸಾಧ್ಯವಿಲ್ಲ. ತನ್ನ 'ವರ್ಣ' ಧರ್ಮವನ್ನನುಸರಿಸಿ ನಡೆಯುವುದೆಂದರೆ ವಂಶವನ್ನೇ ಧಿಕ್ಕರಿಸಿಬಿಟ್ಟಂತಾಗುವುದು. ಹಿಂದೂ ಧರ್ಮಕ್ಕೆ ನಾಲ್ಕು ವರ್ಣಭೇದಗಳು ಸಾಕಾಗಿವೆ. ಆದರೆ ಈ ವರ್ಣಧರ್ಮದ ಹೆಸರಿನಲ್ಲಿ ಸಮಾಜವನ್ನು ಮನಬಂದಂತೆ ವಿಭಾಗಿಸುವ ಆಚರಣೆಯಿಂದ ವರ್ಣಾಶ್ರಮ ಧರ್ಮದ ದುರುಪಯೋಗಮಾಡಿಕೊಂಡಂತೆಯೇ ಸರಿ

ವರ್ಣಸ್ಥಾನ

ಸಹಭೋಜನ ಮತ್ತು ಅಂತರ್ವಿವಾಹಗಳಲ್ಲಿ ಸೇರಿದ ಮಾತ್ರಕ್ಕೆ ಒಬ್ಬನು ತನ್ನ ಜನ್ಮಸಿದ್ಧವಾದ ವರ್ಣಗಳನ್ನು ಕಳೆದುಕೊಳ್ಳಲಾರನು. ಮನುಷ್ಯನ ಕಾರ್ಯ ವೃತ್ತಿಯ ನಿರ್ಣಯಕ್ಕಾಗಿ ವರ್ಣಭೇದವು ತಲೆದೋರಿದ ದಾಗಿದೆ. ಅಲ್ಲದೆ ಒಬ್ಬನಿಗಿರುವ ಸಾಮಾಜಿಕ ಸ್ಥಾನಮಾನಗಳನ್ನು ನಿರ್ಣಯಿಸುವುದಕ್ಕಾಗಿ ಈ ವರ್ಣಭೇದವು ಉಂಟಾಗಿರುವುದಿಲ್ಲ. ಹೀಗೆ ವ್ಯತಿರಿಕ್ತವಾಗಿ ಭಾವಿಸುವುದು ಹಿಂದೂಧರ್ಮಕ್ಕೆ ವಿರೋಧವಾಗಿದೆ

ಬ್ರಾಹ್ಮಣನು ತನ್ನ ಜ್ಞಾನಭಂಡಾರವನ್ನುಪಯೋಗಿಸಿಯೂ, ಕ್ಷತ್ರಿಯನು ತನ್ನ ಪರಾಕ್ರಮ ಪ್ರದರ್ಶನದಿಂದಲೂ, ವೈಶ್ಯನು ತನ್ನ ವಾಣಿಜ್ಯ ವಿಚಾರಜ್ಞಾನದ ಪ್ರಯೋಗದಿಂದಲೂ ಶೂದ್ರನು ತನ್ನ ದುಡಿಮೆಯಿಂದಲೂ ದೇವರಿಂದ ಸೃಷ್ಟಿಸಲ್ಪಟ್ಟ ಈ ಭೂಮಿಯಲ್ಲಿ ಸೇವೆಯನ್ನೆಸಗಲು ಜನ್ಮಿಸಿದುದಾಗಿದೆ. ಹೀಗೆಂದೊಡನೆ ಬ್ರಾಹ್ಮಣನು ಕಾರ್ಮಿಕವೃತ್ತಿಗಿಳಿಯಬಾರದೆಂದೂ, ತನ್ನ ಅಥವಾ ತನ್ನ ನೆರೆಹೊರೆಯವರ ರಕ್ಷಣೆಗಾಗಿ ಯುದ್ಧಿಸಲೇಬಾರದು ಎಂದೂ ಹೇಳಿದಂತಾಗುವುದಿಲ್ಲ. ಬ್ರಾಹ್ಮಣನಾದವನು ಜ್ಞಾನಸಂಪತ್ತಿಯನ್ನು ಬೆಳೆಸಿಕೊಂಡು, ತನ್ನ ಜ್ಞಾನಭಂಡಾರದಿಂದ ಅನ್ಯರ ಉನ್ನತಿಗಾಗಿ ಸಾಧನೆಯನ್ನು ನಡೆಸಬೇಕಾಗಿದೆ. ಅವನ ಜನ್ಮವು ಅವನಿಗೆ ಆ ವಿಷಯಕವಾದ ಅರ್ಹತೆಯನ್ನೂ ಅಧಿಕಾರವನ್ನೂ ಕೊಟ್ಟಿರುತ್ತದೆ. ಶೂದ್ರನ ಜನ್ಮವು ಅವನಿಗೆ ಅವನ ದುಡಿತದ ಮಟ್ಟಿನ ಅರ್ಹತೆಯನ್ನೂ ಅಧಿಕಾರವನ್ನೂ ಒದಗಿಸಿಕೊಟ್ಟಿದೆ. ಅವನು ಜ್ಞಾನಸಂಪಾದನೆ ಮಾಡಕೂಡದೆಂಬ ಯಾವ ಅಡ್ಡಿಯೂ ಇಲ್ಲ, ಆದರೆ ಅವನು ತನ್ನ ವೃತ್ತಿಯಲ್ಲಿ ಆಸಕ್ತನಾಗಿದ್ದುಕೊಂಡು ಅದರ ಉನ್ನತಿಗಾಗಿ ಸಾಧಿಸುತ್ತಿರಬೇಕು. ಆದರೆ ಅವನು ಪರರ ವೃತ್ತಿಯ ಮೇಲೆ ಮತ್ಸರವನ್ನು ವಹಿಸಬಾರದು. ತಾನು ಮಹಾತಿಳುವಳಿಕೆಯುಳ್ಳವನೆಂದೂ, ತಾನು ಎಲ್ಲರಿಗಿಂತಲೂ ಶ್ರೇಷ್ಠನೆಂದೂ ಅಹಂಭಾವದಿಂದಿರುವ ಬ್ರಾಹ್ಮಣನು ಎಂದೂ ವಿವೇಕಿಯಲ್ಲ. ಅಂತಹ ಬ್ರಾಹ್ಮಣನ ಅಧಃಪತನವು ಖಂಡಿತ. ತಮ್ಮ ವೃತ್ತಿಯು ಮಾತ್ರ ಘನವೆಂದು ಹೆಮ್ಮೆಪಡುವ ಜನರ ಬಾಳು ಎಷ್ಟೆಂದರೂ ಅಷ್ಟೆ. ಇಂದ್ರಿಯನಿಗ್ರಹ, ಆತ್ಮನಿಗ್ರಹ, ಶಕ್ತಿಪಾಲನೆ ಮತ್ತು ಮಿತವ್ಯಯಗಳೇ ವರ್ಣಾಶ್ರಮ ಧರ್ಮದ ಮುಖ್ಯ ತತ್ವಗಳು

ವರ್ಣರಹಸ್ಯ

ಅಂತರ್ಭೋಜನ, ಅಂತರ್ವಿವಾಹಗಳಿಂದಾಗಿ ವರ್ಣಾಶ್ರಮ ಧರ್ಮ ಪರಿಪಾಲನೆಗೆ ಹಾನಿಯುಂಟಾಗುವುದಿಲ್ಲವಾದರೂ, ಹಿಂದೂ ಧರ್ಮದ ಸೂತ್ರಗಳಿಗನುಸಾರವಾಗಿ ಅಂತಹ ಆಚಾರಗಳ ನಿಷೇಧಿಸಲ್ಪಟ್ಟಿವೆ. ಇದೇಕೆ? ಹಿಂದೂ ಧರ್ಮವೆಂಬುದು ಆತ್ಮವಿಕಾಸಕ್ಕಾಗಿ ದೈಹಿಕ ಸುಖವನ್ನು ತೊರೆಯಲು ಸೂಚಿಸುವ ಧರ್ಮವಾಗಿರುತ್ತದೆ. ಆಯಾ ವರ್ಗಕ್ಕೆ ಸೇರಿದ ತರುಣರು ಅದೇ ವಂಗಡದವರನ್ನು ಮಾತ್ರ ವಿವಾಹವಾಗಬೇಕೆಂದು ಹಿಂದೂ ಧರ್ಮವು ನಿರ್ಣಯಿಸಿರುವುದರಿಂದ ಹಿಂದೂವು ಅನುಪಮ ರೀತಿಯ ಆತ್ಮನಿಗ್ರಹವನ್ನು ಅಭ್ಯಸಿಸುತ್ತಾನೆ. ವಿವಾಹವು ಮೋಕ್ಷ ಸಂಪಾದನೆಗೆ ಸಾಧಕವಾದ ಧರ್ಮಾಂಗವೆಂದು ಹಿಂದೂಗಳು ಭಾವಿಸುವುದಿಲ್ಲ. ಬದಲಿಗೆ, ಅದು ಪ್ರತಿಬಂಧಕವೆಂದೇ ತಿಳಿಯುತ್ತಾರೆ. ಜನನ ಮರಣಗಳ ಬಂಧನಗಳಿಂದ ವಿಮುಕ್ತಿಹೊಂದುವುದೇ ಹಿಂದೂಗಳ ದೃಷ್ಟಿಯಿಂದ 'ಮೋಕ್ಷ'ವಾಗಿದೆ. ಅಂತಹ ಮೋಕ್ಷಸಂಪಾದನೆಗೆ ಸಹಭೋಜನ ಮತ್ತು ಸಹವಿವಾಹಗಳು ಸಹಕಾರಿಗಳೆಂದು ಹಿಂದೂಗಳು ಭಾವಿಸುವುದಿಲ್ಲ. ಆದುದರಿಂದ ಮುಮುಕ್ಷುವು ಇಂತಹ ಆಚಾರ ವಿಚಾರಗಳಲ್ಲಿ ನಿರತನಾಗಬಾರದು. ಆದರೆ ಈ ನೀತಿಯು ಆತ್ಮನಿಗ್ರಹ, ಇಂದ್ರಿಯ ನಿಗ್ರಹಗಳ ವರ್ಣಧರ್ಮದ ಅದ್ಭುತ ತತ್ವಗಳೆಲ್ಲ. ಬ್ರಾಹ್ಮಣನು ಶೂದ್ರನೊಂದಿಗೆ ಕೂಡಿ ಭೋಜನ ಮಾಡಿದರೂ ಜ್ಞಾನಸಂಪಾದನೆಯ ತನ್ನ ಜನ್ಮಸಿದ್ಧವಾದ ಹಕ್ಕನ್ನು ಕಳೆದುಕೊಳ್ಳುವುದಿಲ್ಲ. ಬ್ರಾಹ್ಮಣ್ಯವನ್ನು ಅವನು ಕಳೆದುಕೊಳ್ಳಲಾರನು. ಹೀಗೆಂದೊಡನೆ ಅಂತರ್ವಿವಾಹ ಅಂತರ್ಭೋಜನಗಳು ವರ್ಣಗಳ ಮೇಲು ಕೀಳು ಸ್ಥಿತಿಗಳನ್ನು ನಿರ್ಧರಿಸಿರುವುದಿಲ್ಲ. ಮೇಲು ಕೀಳೆಂಬ ಭಾವನಾಪರನಾಗಿ ಅನ್ಯವರ್ಣೀಯರೊಂದಿಗೆ ಸಹಪಂಕ್ತಿ ಭೋಜನವನ್ನು ಮಾಡುವುದಿಲ್ಲವೆಂದು ನಿರಾಕರಿಸುವ ಹಿಂದೂವು ತನ್ನ ಧರ್ಮದ ನೈಜತತ್ವವನ್ನರಿತಿರುವವನೆಂದು ಹೇಳಲಾರೆ. ಅಂತಹವನಿಗೆ ಧರ್ಮದ ತಪ್ಪು ಅಭಿಪ್ರಾಯವೇ ಇರುವುದೆಂದು ಹೇಳುವೆನು

ಎಚ್ಚರಿಕೆ

ಪ್ರಕೃತಾವಸ್ಥೆಯಲ್ಲಿ, ಹಿಂದೂ ಧರ್ಮದ ತತ್ವಗಳೆಲ್ಲ ಭೋಜನ ಮೊದಲಾದ ವಿಷಯಗಳೊಳಗೆ ನಿರ್ಬಂಧಿಸಲ್ಪಟ್ಟವೆ. ನನ್ನ ಮುಸಲ್ಮಾನ ಬಂಧುಗಳೊಬ್ಬರು ಕೊಟ್ಟ ಪಾತ್ರೆಯನ್ನು ತೊಳೆಯದೆ ನಾನು ಅದರಿಂದ ಹಾಲು ಕುಡಿದುದಕ್ಕಾಗಿ ಬಳಿಯಲ್ಲಿದ್ದ ಬ್ರಾಹ್ಮಣ ಮಿತ್ರರೊಬ್ಬರು ನನ್ನ ಮೇಲೆ ರೇಗಿಕೊಂಡು, ತನ್ನನ್ನು ತಾನು ಮರೆತು, ವಿವಾದವನ್ನು ಹೂಡಿ ಕೋಪಾಟೋಪವನ್ನು ಪ್ರದರ್ಶಿಸಿದರು. ಹಿಂದೂಧರ್ಮವು ಇಷ್ಟು ಸಂಕುಚಿತ ಸೂತ್ರವನ್ನೊಳಗೊಂಡು ಮುಂದಕ್ಕೆ ಪ್ರಾಣಧಾರಣ ಮಾಡುವುದೇ ದುರ್ಲಭ. ಹೀಗೆ ಮಾಡಿದೊಡನೆ ಅದರ ತತ್ವಗಳು ಕ್ರಮೇಣ ಶಿಥಿಲಗೊಳ್ಳುವುದು ನಿಸ್ಸಂದೇಹ. ಮದ್ಯ ಮತ್ತು ಮಾಂಸಗಳೇ ಮೊದಲಾದ ವರ್ಜ್ಯ ವಸ್ತುಗಳನ್ನು ಪರಿತ್ಯಜಿಸುವುದರಿಂದ ವ್ಯಕ್ತಿಯ ಆತ್ಮವಿಕಾಸವಾಗುತ್ತದೆಂಬುದು ನಿರ್ವಿವಾದ ವಿಷಯ. ಆದರೆ ಇವುಗಳನ್ನು ಸೇವಿಸುವವರಿಗೆ ಮುಕ್ತಿಯು ಎಂದೂ ದೊರೆಯದೆಂದು ಹೇಳುವುದು ತಪ್ಪು. ಮದ್ಯ ಮಾಂಸಗಳ ಸೇವನೆಯನ್ನು ಮಾಡದ ದೈವದ್ರೋಹಿಗಿಂತ ಮದ್ಯಪಾಯಿಯೂ ಮಾಂಸಾಹಾರಿಯೂ ಆದ ದೈವಭಕ್ತನೇ ಮೇಲೆಂದು ನನ್ನ ಮತವಿರುತ್ತದೆ. ಹಿಂದೂಧರ್ಮದ ಮೇಲೆ ನನಗೆ ಬಹುವಾದ ಪ್ರೇಮವಿದೆ—ಅಭಿಮಾನವಿದೆ. ನಾನು ಇಂತಹ ಅಭಿಮಾನಿಯಾಗಿರುವೆನೆಂದಾಗ ನನ್ನ ವಿವೇಕಶಕ್ತಿಯನ್ನು ಕಳೆದುಕೊಂಡು ನಾನು ಅಂಧನಾಗಿರುವೆನೆಂದು ತಿಳಿಯಕೂಡದು. ಹಿಂದೂಧರ್ಮದ ಹೆಸರಿನಲ್ಲಿ ಅನೇಕ ಅಕೃತ್ಯಗಳು ನಡೆಯುತ್ತಿವೆ. ಇವುಗಳನ್ನು ಕಂಡು ನಾನು ಅಂತಹ ಹಿಂದೂ ಧರ್ಮಾನುಯಾಯಿಗಳ ವರ್ತನೆಯನ್ನು ಖಂಡಿಸದಿರಲಾರೆ

1¼ CRORE

Karnatics know nothing of your products,—

Advertise them in

Swadeshabhimani

the pioneer Weekly of the South Kanara District.

For Advt. rates apply to

The Advertisement Manager,

Swadeshabhimani,

Mangalore

ಕುಷ್ಠ ರೋಗ ಮತ್ತು ಫರಂಗಿ ರೋಗ ನಿವಾರಣೆಯಿಲ್ಲ; ದುಡ್ಡೂ ಇಲ್ಲ.

ಎಷ್ಟು ದೀರ್ಘಕಾಲದ ರೋಗವೇ ಆಗಿರಲಿ, ಯಾವ ಕಾರಣವೇ ಇರಲಿ, ನಮ್ಮ ಮದ್ದು ಮಾಡಿ ಮಾಡಿ ದಣಿದಿರಿ ... ನಮ್ಮ ರೋಗಗಳನ್ನು ಇಂದ್ರಜಾಲದಂತೆ ಶಾಶ್ವತವಾ[illegible] ವಾರಗಳಲ್ಲಿ ಗುಣಪಡಿಸಲಾಗುತ್ತದೆ. ಪೂರ್ಣ ಗುಣ ಗೇರಂಟಿ. ಕ್ರಿಯೆ, ರೋಗನಿವಾರಣೆಯಾದ ಮೇಲೆ ಕ್ರಯ ಮತ್ತು ಬಹುಮಾನ ಕೊಡಬೇಕು. ಬರೆಯಿರಿ

Kamala Works,

Panchpota Bengal S. B.

ಲಾಭಗಳು!

ವಾಚುಗಳು, ರಿಸ್ಟ್ ವಾಚುಗಳು, ಟೈಮ್ ಪೀಸುಗಳು ಗಡಿಯಾರಗಳು, ಎಲೆಕ್ಟ್ರಿಕ್ ಟಾರ್ಚ್ ... ಟೈಪ್‌ರೈಟರುಗಳು ಸಂತತಿ ಪ್ರತಿಬಂಧಕ ವಸ್ತುಗಳು, ಬೀಜಗಳು, ಸಸಿಗಳು, ಚಹಾ ಸಂಗೀತ ಸಾಮಗ್ರಿ ಕೆಮರಗಳು ಅಮೇರಿಕದ ವಾದರಕ್ತಗಳು ಪೇಟೆಂಟ್ ಔಷಧಗಳು ... ಸುಲಭ ಮೌಲ್ಯ ... ಕಮಿಷನ್ ಹೆಚ್ಚು ... ಧರ್ಮಾರ್ಥ ಇಂಗ್ಲೀಷಿನಲ್ಲಿ ಬರೆಯಿರಿ

General Trading Co.,

(J) 165, Maniktolla St., Calcutta.

C P S

ಶಾಲಾ ಪಠ್ಯಪುಸ್ತಕಗಳು.

ಐದು ವರ್ಷಗಳಿಗೊಮ್ಮೆ ಮಾತ್ರವಲ್ಲದೆ, ಕನ್ನಡ್ಮ ಸಂಸ್ಥಾನದ ಶಾಲೆಗಳಲ್ಲಿನ ಶಾಲಾ ಪಠ್ಯಪುಸ್ತಕಗಳನ್ನು ಬದಲಾಯಿಸಬಾರದೆಂದು ಸರಕಾರವು ಅಪ್ಪಣೆ ಹೊರಡಿಸಿದುದು ಸರಿಯಷ್ಟೆ,-ಈ ಆಜ್ಞೆಯು ಹಲವೆಡೆಗಳಲ್ಲಿ ಭಿನ್ನಾಭಿಪ್ರಾಯಗಳನ್ನೆಬ್ಬಿಸಿರುತ್ತದೆ ಪಠ್ಯಪುಸ್ತಕಗಳನ್ನು ಪದೇ ಪದೇ ಬದಲಾಯಿಸುತ್ತಿರುವುದರ ಪರಿಣಾಮವಾಗಿ ವಿದ್ಯಾರ್ಥಿಗಳ ಹೆತ್ತವರೂ ಪುಸ್ತಕಗಳ ಪ್ರಕಾಶಕರೂ ಬಹಳ ತೊಂದರೆಗಳಿಗೀಡಾಗುತ್ತಿರುವೆಂದು ಹೇಳಿ ವಾದಿಸುವವರು ಸರಕಾರದ ಅಪ್ಪಣೆಯು ಶ್ಲಾಘ್ಯವೆನ್ನುತ್ತಿದ್ದಾರೆ ಆದರೆ ಮತ್ತೆ ಕೆಲವರು ಐದು ವರ್ಷಗಳ ವರೆಗೆ ಒಂದೇ ಜಾತಿಯ ಪುಸ್ತಕಗಳನ್ನು ನಿರ್ಣಯಿಸುವುದರಿಂದ ಪುಸ್ತಕ ಲೇಖಕರಿಗೂ ಪ್ರಕಾಶಕರಿಗೂ ಯಾವ ಪ್ರೋತ್ಸಾಹವೂ ದೊರೆತಂತಾಗುವುದಿಲ್ಲ, ಅದರಿಂದಾಗಿ ಸಾಹಿತ್ಯ ಸೃಷ್ಟಿಗೆ ಬಹು ತೊಡಕಿದೆಯೆಂದು ವಾದಿಸುತ್ತಿರುವರು ಇನ್ನು ಕೆಲವರು, ಐದು ವರ್ಷಗಳ ಅವಧಿಯು ಬಹು ದೀರ್ಘವಾಗಿದೆ ಅದನ್ನು ಮೂರು ವರ್ಷಗಳಿಗೆ ತಂದು ಇಳಿಸಿದರಾಗದೇ? ಎನ್ನುತ್ತಿರುವರು ಅದು ಹೇಗೂ ಇರಲಿ ಸರಕಾರವು ಈ ವಿಚಾರವಾಗಿ ಒಂದು ನಿರ್ಧಾರಕ್ಕೆ ಬರುವ ಮೊದಲು ಸಾರ್ವಜನಿಕರ ಅಭಿಪ್ರಾಯಸಂಗ್ರಹವನ್ನು ಮಾಡುವಷ್ಟಾದರೂ ಮನಸ್ಸು ಮಾಡಿತ್ತೋ? ಎಂಬುದು ನಮ್ಮ ಪ್ರಶ್ನೆ "ಮದ್ರಾಸಿನ ಕೆಲವು ಪ್ರಕಾಶಕರು ಒಂದು ಮನವಿಯನ್ನು ವಿದ್ಯಾಧಿಕಾರಿಗಳಿಗೆ ಮಾಡಿರುವರು" ಎಂಬ ವಾರ್ತೆಯು ಪ್ರಕಟವಾದ ಕೆಲವು ದಿನಗಳಲ್ಲೇ ಮದ್ರಾಸು ಸರಕಾರವು ಆ ಮನವಿದಾರರನ್ನು ಸಮಾಧಾನಿಸುವುದಕ್ಕಾಗಿ ಕಂಗೆಟ್ಟ ಅವಸರದಿಂದ ಈ ಪ್ರಕಟಣೆಯನ್ನು ಹೊರಡಿಸಿಯೇ ಬಿಟ್ಟರು ಸಾರ್ವಜನಿಕರ ಮತವು ಹೇಗಿರುವುದು- ಮನವಿದಾರರ ವಾದವು ಏಕಪಕ್ಷೀಯವೋ? ತಪ್ಪು ಜತೆಯ ಪರಿಣಾಮವೇನು—ಎಂದು ಎಳ್ಳಷ್ಟು ವಿಚಾರಿಸಿಕೊಳ್ಳದೆ, ಈ ಅಪ್ಪಣೆಯನ್ನು ಕೊಡಿಸಿದುದರಿಂದ ಸರಕಾರವು ನಿರಂಕುಶವರ್ತನೆಯಲ್ಲೇ ಮಗ್ನವಾಗಿಬಿಟ್ಟಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. 'ಕೆಲವು ಕಡೆಗಳಲ್ಲಿ' ಮಾತ್ರ ಈ ಪಠ್ಯಪುಸ್ತಕಗಳ ಬದಲಾವಣೆಗಳಿಂದಾಗಿ ತೊಂದರೆಯುಂಟಾಗಿದೆಯೆಂದು ಸರಕಾರವು ಹೇಳುವಾಗ, ಆ 'ಕೆಲವು' ಕಡೆಗಳ ಅಧಿಕಾರಿಗಳೂ, ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಆಫೀಸರುಗಳೂ ಅಂತಹ ತೊಂದರೆಗಳನ್ನು ತಡೆಯಬಹುದಿತ್ತು ಆದರೆ ಈಗ ನಡೆದುದೇನು? ಆ 'ಕೆಲವು' ಕಡೆಗಳ ಆಚರಣೆಯು ಸಾರ್ವತ್ರಿಕವಾದ ಬಾಧೆಯನ್ನುಂಟುಮಾಡಿದಂತಾಗಿದೆ ಶಾಲೆಗಳಿಗೆ ಶಾಲಾ ಪಠ್ಯಪಟ್ಟಿಯಿಂದಲೇ ಪುಸ್ತಕಗಳನ್ನು ಬೇಕು ಬೇಕಾದಂತೆ ಆರಿಸುವುದು ಆಯಾಯ ಶಾಲೆಗಳ ಮುಖ್ಯೋಪಾಧ್ಯಾಯರ ಕೆಲಸವಾಗಿದೆ ಹೀಗಿರುವಾಗ, ಈಗಿನ ಆಜ್ಞೆಯು ಅವರ ಅಭಿಮಾನ ಗೌರವಗಳಿಗೆ ಗದಾಪ್ರಹಾರವನ್ನಿತ್ತಿದೆಯೆನ್ನುವುದರಲ್ಲಿ ಸಂದೇಹವಿಲ್ಲ. ಸರಕಾರವು ಈ ಬಗ್ಗೆ ಒಂದು ವಿಚಾರಣಾ ಮಂಡಲವನ್ನು ಸ್ಥಾಪಿಸಿ, ಅದರ ಶಿಫಾರಸುಗಳು ಹೊರಬರುವ ವರೆಗೆ ಈ ಜಬರಿಗೆ ಶರಣಾಗತರಾಗಿರುವುದು ಅಗತ್ಯವಿಲ್ಲವೆಂದು ಸೂಚಿಸುತ್ತೇವೆ.

ಕಿಗ್ಗಾ ಋಷಿ ಶೃಂಗೇಶ್ವರ ದೇವರ ರಥೋತ್ಸವ.

ಕೊಪ್ಪ ತಾಲೂಕು ಕಿಗ್ಗಾದಲ್ಲಿ ಋಷಿ ಶೃಂಗೇಶ್ವರ ದೇವರ ರಥೋತ್ಸವವು ಮೊನ್ನೆ ನಡೆಯಿತು. ಬ್ರಾಹ್ಮಣರಿಗೂ ವೈಶ್ಯರಿಗೂ ಇದ್ದ ಪರಸ್ಪರ ಮನಃಕ್ಲೇಶಗಳ ಪರಿಣಾಮವಾಗಿ ಅನೇಕ ವರ್ಷಗಳಿಂದ ಸರಿಯಾದ ರಥೋತ್ಸವವೇ ಇಲ್ಲಿ ಜರಗುತ್ತಿದ್ದಿಲ್ಲ ಮೊನ್ನೆ ನಡೆದ ಉತ್ಸವಕಾಲದಲ್ಲಾದರೂ ದ್ವಿಪಕ್ಷಗಳು ಸೌಹಾರ್ದತೆಯಿಂದ ಭಾಗವಹಿಸಿ ಉತ್ಸವವನ್ನು ಯಶಸ್ವಿಯನ್ನಾಗಿ ಮಾಡುವುವೆಂದು ಕೋರಲಾಗಿದ್ದಿತು ಆದರೆ,ದುರ್ದೈವವಶಾತ್ ಚರ್ಚೆಯೆದ್ದು 'ವೈಶ್ಯಮತಸ್ಥರು ರಥವನ್ನು ಎಳೆಯುವುದಾದರೆ ತಾವು ಅದನ್ನೆಳೆಯಲಾರೆವು' ಎಂದು ಬ್ರಾಹ್ಮಣರು ತಾಟಸ್ಥ್ಯವನ್ನು ವಹಿಸಿದರು ವಿವಾದವು ಬೆಳೆದಂತೆ, ಎರಡು ಪಂಗಡಗಳೂ ವಿವೇಕವನ್ನು ಮರೆತುವು ಕೊನೆಗೆ ನಾಡವರೇ ರಥವನ್ನು ಎಳೆದುಬಿಟ್ಟರು ಈ ಘಟನೆಯಿಂದ ವ್ಯಕ್ತವಾಗುವ ಒಂದು ವಿಶೇಷ ವಿಷಯವೆಂದರೆ—ಹಿಂದೂಗಳೆಂದು ಜಂಭಕೊಚ್ಚುತ್ತಿರುವ ಪಂಗಡಗಳೊಳಗಣ ಪರಸ್ಪರ ದ್ವೇಷಾಸೂಯೆ ಸ್ಥಾನಮಾನ ಸಂಪಾದನೆಯ ದುಷ್ಟ ಆಗ್ರಹ ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವ ಮಹಾತ್ಮಾಜಿಯವರ 'ಹಿಂದೂ ಧರ್ಮ'ವೆಂಬ ಲೇಖನವನ್ನು ಮನವಿಟ್ಟು ಓದಿದ ಈ ತಂಡಗಳವರು ತಮ್ಮ ತಪ್ಪನ್ನು ತಿಳಿದು ಎಡವಾಗಿಯಾದರೂ ತಲೆತಗ್ಗಿಸಬೇಕಾಗಿದೆ ಹಿಂದೂ ಧರ್ಮವೆಂದರೆ ಒಗಟ್ಟಿನ, ಅತ್ಯುಗ್ರಹದ, ಸೇವೆಯ ಉಜ್ವಲ ಪ್ರಕಾಶಮಾನವಾದ ಧರ್ಮ ಅಂತಹ ಪವಿತ್ರೋದ್ದೇಶಗಳನ್ನು ಮುಂದಿಟ್ಟುಕೊಂಡಿರುವ ಧರ್ಮದಲ್ಲಿನ ವಿಭಾಗಗಳು ಕೇವಲ ಸ್ವಾರ್ಥಪ್ರಯುಕ್ತಿ ದಲೂ ದ್ವೇಷಾಸೂಯೆಗಳಿಂದಲೂ ವಿಕೃತಿ ನಾಶಗಳಿಗೀಡಾಗುವುದೆಂದರೆ ಅದು ನಾಗಿಯೂ ಹಿಂದೂಧರ್ಮದ ದುರದೃಷ್ಟವೆನ್ನಲೇ ಬೇಕು. ಹಿಂದೂಗಳು ಬಹು ವಿಶಾಲಬುದ್ಧಿಯ ಳವರ -ಕ್ಷಮಾಸಂಪನ್ನರು ಎಂಬ ಖ್ಯಾತಿಯುಳ್ಳವಾಗ ಅವರು ಇಂತಹ ಅಂತಃಕಲಹಗಳಿಗೆಡೆಗೊಟ್ಟು ತಮ್ಮ ಧರ್ಮದ ನ್ಯಷ್ಟಕ್ಕೆ ಕೊಡಲಿಯಿಡುವುದು ಸರಿ ಇದು ನಮ್ಮವರ ಕೇವಲ ಮೌಢ್ಯ'

ಆ ಬಜೆಟು ಈ ಬಜೆಟು

ಮೊನ್ನೆ ಚೆನ್ಸಲರ್ ಒಪ್ ಎಕ್ಸ್‌ಚೆಕರ್ ರಾದ ಮಿ. ನೇವಿಲ್ ಚೆಂಬರ್‌ಲೈನರು ಆನೇ ಬ್ರಿಟಿಷ್ ಬಜೆಟನ್ನು ಪಾರ್ಲಿಮೆಂಟಿನೆದುರಿಟ್ಟರು. ಬ್ರಿಟನಿನ ಕಂದಾಯ ಧೋರಣೆಯು ತೃಪ್ತಿಕರವಾಗಿಯೂ ಕೈಗಾರಿಕೆಗಳಿಗೆ ಯಾವ ಬಾಧಕವನ್ನು ಮಾಡದಂತೆಯೂ, ಪರರಾಷ್ಟ್ರಗಳ ಸ್ಪರ್ಧೆಯಿಂದ ದೇಶದ ಕೈಗಾರಿಕೆಗಳು ಕಷ್ಟಕ್ಕೀಡಾಗದಂತೆಯೂ, ಕೈಗಾರಿಕಾ ಮಂದಿರಗಳು ಸಿದ್ಧಪಡಿಸಿದ ಸಾಮಗ್ರಿಗಳನ್ನು ವಿಕ್ರಯಿಸಲು ತಕ್ಕ ಮಾರ್ಕೆಟುಗಳನ್ನು ಹೊಂದುವಂತೆಯೂ ತಾವು ಏರ್ಪಡಿಸಿರುವೆವೆಂದು ಅವರು ಸಭೆಗೆ ತಿಳಿಸಿದರು. ಅಂತೂ ಬ್ರಿಟಿಷ ಬಜೆಟನ್ನು ತನ್ನ ಜನರಿಗೆ ಬೇಕಾಗುವಂತೆ—ಅವರ ಹಿತದ ಒಂದೇ ದೃಷ್ಟಿಯಿಂದ ತಯಾರಿಸಿರುವರು ತಮ್ಮ ವ್ಯಾಪಾರಗಳು ವೃದ್ಧಿಗೊಳ್ಳಬೇಕೆಂದು ಆಂಗ್ಲೋ-ರಷ್ಯನ್ ಒಪ್ಪಂದವನ್ನೋ,ಸಾಲಮೊಬಲಗಳನ್ನು ಪಡೆದುಕೊಳ್ಳುವ ವ್ಯವಸ್ಥೆಯನ್ನೋ ಮಾಡಿರುವರು ತಮ್ಮ ರಾಷ್ಟ್ರವು ಶಾಂತಿಯಿಂದ, ಸುಖವಾಗಿರಬೇಕೆಂಬ ಅವರ ಅಂತಿಮೋದ್ದೇಶವು ಈ ಬಜೆಟಿನಿಂದ ಕಂಡುಬರುತ್ತದೆ. ಆದರೆ ಹಿಂದೂದೇಶದಲ್ಲಿ ಸರ್ ಜೇಮ್ಸ್ ಗ್ರಿಗ್ಗರು ತಯಾರಿಸಿದ ಬಜೆಟಿನ ಸ್ಥಿತಿಯೇ ಬೇರೆ.—ಬ್ರಿಟನಿನಲ್ಲಿ—ಮಧ್ಯಮ-ತರಗತಿಯವರ ಆದಾಯ ಕಂದಾಯದಲ್ಲಿ ತೃಪ್ತಿಕರ ರಿಯಾಯಿತಿ ತೋರಿಸಿರುವರಾದರೆ, ಹಿಂದೂದೇಶದಲ್ಲಿ ಅಂತಹ ರಿಯಾಯಿತಿಯು ಜನರಿಗೆ ತೃಪ್ತಿಯನ್ನುಂಟುಮಾಡಲೇ ಇಲ್ಲ. ಬ್ರಿಟನಿನಲ್ಲಿ ಕಳೆದ ವರ್ಷ ಮಧ್ಯಮ ತರಗತಿಯವರಿಗೆ ಉದಾರವಾದ ರಿಯಾಯಿತಿಗಳನ್ನು ಕೊಟ್ಟಿರುವರು ಆದರೆ ಇಲ್ಲಿ ಕಳೆದ ವರ್ಷ ಅಂತಹ ರಿಯಾಯಿತಿಯ ಸುದ್ದಿಯೇ ಇದ್ದಿಲ್ಲ ಇನ್‌ಕಂ ಟೇಕ್ಸ್‌ನಲ್ಲಿ ಮಧ್ಯಮ ತರಗತಿಯವರಿಗೆ ರಿಯಾಯಿತಿ ಕೊಟ್ಟರೆ ದೇಶದ ಕೈಗಾರಿಕೆಗಳು ವೃದ್ಧಿಗೊಳ್ಳುವುವೆಂದು ಚೆಂಬರ್‌ಲೈನರು ಪ್ರತಿಪಾದಿಸುತ್ತಾರೆ ಆದರೆ ಗ್ರಿಗ್ಗರು ಅಂತಹ ವಾದವನ್ನು ಖಂಡಿಸುತ್ತಾರೆ. ಬ್ರಿಟನಿಗೆ ಪರರಾಷ್ಟ್ರ ಮಾಲುಗಳು ಆಮದು ಆಗಬಾರದೆಂದು ಬ್ರಿಟನಿನಲ್ಲಿ ಸಾಹಸ, ಇಲ್ಲಿ ಮಾತ್ರ ಅಂತಹ ಮಾಲುಗಳು ಆಮದಾಗಬೇಕೆಂದು ಸರಕಾರದ ಪ್ರೋತ್ಸಾಹ' ಎಂತಹ ಸಾಮ್ಯ'

ಸ್ವೀಕಾರ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಮಂಗಳೂರು ಇದರ ವಾರ್ಷಿಕ ವರದಿಯೂ ಲೆಕ್ಕಪಟ್ಟಿಯೂ ಹಸ್ತಗತವಾಗಿವೆ. ಅದರದಿಂದ ಸ್ವೀಕರಿಸಿದ್ದೇವೆ ಈ ವಿಮಾಕಂಪೆನಿಯು ೧೯೩೦ರಲ್ಲಿ ಸ್ಥಾಪಿಸಲ್ಪಟ್ಟಿತು ಬರಿಯ ೫ ವರ್ಷಗಳ ಸಣ್ಣ ಜೀವಮಾನದಲ್ಲಿ ಇದರ ವಿಮಾಫಂಡು ರೂ ೫೦ ೧೧೧೦-೧೨-೮ ಕ್ಕೇರಿದೆಯೆಂದರೆ ಈ ಕಂಪೆನಿಯ ಮೇಲೆ ಜನತೆಗಿರುವ ಆದರ ವಿಶ್ವಾಸಗಳು ಎಷ್ಟೆಂದು ವ್ಯಕ್ತವಾಗುತ್ತದೆ ತನ್ನ ೫ನೇ ವರ್ಷದಲ್ಲಿ ಇಷ್ಟು ಪ್ರಗತಿಯನ್ನು ಹೊಂದಿದ ಇನ್ನಿತರ ವಿಮಾಕಂಪೆನಿಗಳು ವಿರಳವೇ ಸರಿ ಪಶ್ಚಿಮ ಕರಾವಳಿಯಲ್ಲಿ ಅದರಲ್ಲೂ ನಮ್ಮ ಜಿಲ್ಲೆಯ ಒಂದೇ ಒಂದಾದ ಈ ಕಂಪೆನಿಯನ್ನು ಪ್ರೋತ್ಸಾಹಿಸುವುದು ಎಲ್ಲರ ಆದ್ಯ ಕರ್ತವ್ಯವಿದೆ ನಮ್ಮವರು ವಿದೇಶೀಯ ಕಂಪೆನಿಗಳಲ್ಲಿ ವಿಮೆಯಿಳಿಸುತ್ತಾರೆ ದೇಶದ ದ್ರವ್ಯವನ್ನು ಪರರ ಬೊಕ್ಕಸಕ್ಕೆ ಸೇರಿಸುತ್ತಾರೆ ಸ್ವದೇಶೀಯ ಜನರ ಪ್ರವೃತ್ತಿಯಿಂದ ಸಾಗುತ್ತಿರುವ ಈ ಕಾಲದಲ್ಲೂ ನಮ್ಮವರ ಅಭ್ಯಾಸವು ನಿಂತಿರುವುದಿಲ್ಲ ಇನ್ನಾದರೂ ನಮ್ಮವರು ನಮ್ಮೂರಿನ ಇಂತಹ ಕಂಪೆನಿಗಳೊಡನೆ ವ್ಯವಹರಿಸಬೇಕಾಗಿದೆ.

ದುಡ್ಡಿಲ್ಲವೆಂಬುದು ಸುಳ್ಳು

ಜಯಪುರದಲ್ಲಿ ದೊಡ್ಡ ಹಬ್ಬದ ಮರೆವಣಿಗೆಯನ್ನು ನೋಡಿದ ಮಾತ್ರಕ್ಕೆ ನಿಜವು ತಿಳಿಯುವುದು ದೊಡ್ಡ ಆನೆಯ ನೆತ್ತಿಯ ಮೇಲೆ ಇದರ ಸುವರ್ಣ ಅಂಬಾರಿಯನ್ನು ಬೆಲೆಯ ರೂಪಾಯಿಗಳ ನೋಟು ತಗಲಿದೆ ಬಟ್ಟೆಗಳು ಕಟ್ಟಿಗೆಯ ಅವುಗಳಲ್ಲಿ ಕೆಲಸ ಮಾಡಿದ ತೋರಣದ ಕೌಶಲ್ಯವನ್ನು ನೋಡಿದರೆ 'ದುಡ್ಡಿನ ಸರೋವರವೇ ಎದುರು ನಿಂತಂತಾಗುತ್ತದೆ ಜಯ ಪುರ ಮಹಾರಾಜರ ದಿವಾನರ್ಮಂತೆ'

ಸ್ತ್ರೀಯರೂ ಸಮಾಜ ಸೇವೆಯೂ

ಸಮಸ್ತ ಭಾರತದಲ್ಲಿ ಸ್ತ್ರೀಯರು ಸಮಾಜಸೇವೆಗೆ ತೊಡಗಿರುವರು ಮುಂಬಯಿಯ ಸ್ತ್ರೀಯರ ಚಟುವಟಿಕೆಗಳನ್ನು ಶ್ರೀಮತಿ ಹಂಸ ಮೆಹತಾರವರು Drashti ಎಂಬ ಪತ್ರಿಕೆಯಲ್ಲಿ ಹೀಗೆಂದು ಬರೆದಿರುವರು.—

ಮುಂಬಯಿ ನಗರದಲ್ಲಿ ಹುಡುಗಿಯರು ಹಾಗೂ ವಿದ್ಯಾವಂತ ಸ್ತ್ರೀಯರು ಕಾರ್ಯಕರ್ತರಾಗಿ ಮಾಡುತ್ತಿರುವ ಸಾಹಸವು ವರ್ಣನೀಯವಾಗಿದೆ. ಸ್ತ್ರೀಯರ ಶಿಕ್ಷಣಕ್ಕಾಗಿ ಅಖಿಲ ಭಾರತ ಮಹಿಳಾ ಪರಿಷತ್ತು ಯತ್ನಿಸುತ್ತಿದೆ. ಪ್ರಾಯ ಬಂದ ಸ್ತ್ರೀಯರು ತಮ್ಮ ಮನೆಗಳನ್ನು ಬಿಟ್ಟು ಹೋಗಿ ರಾತ್ರಿ ಶಾಲೆಗಳಿಗೆ ಹೋಗಲು ಸಾಧ್ಯವಿಲ್ಲದಿರುವುದರಿಂದ ಒಂದು ಅನನುಕೂಲತೆಯೊದಗಿದೆ. ಆದರೂ ಒಬ್ಬಳು ಉಪಾಧ್ಯಾಯಿನಿಯು ಇಂತಹ ಸ್ತ್ರೀಯರ ಮನೆಗಳಿಗೆ ಹೋಗಿ ಅವರಿಗೆ ಓದು ಬರಹಗಳನ್ನು ಕಲಿಸಬೇಕೆಂದು ನಿಶ್ಚಯಿಸಲಾಗಿದೆ. ಬರಿಯ ಮೂರು ತಿಂಗಳ ಅವಧಿಯೊಳಗೆ ಅಶಿಕ್ಷಿತ ಸ್ತ್ರೀಯರನ್ನು ಸುಶಿಕ್ಷಿತರನ್ನಾಗಿ ಮಾಡುವ ಏರ್ಪಾಡನ್ನು ಭಾವನಗರದ ದಕ್ಷಿಣಾಮೂರ್ತಿ ವಿದ್ಯಾರ್ಥಿಭವನವು ಮಾಡಿರುತ್ತದೆ. ಒಂದೊಂದೇ ಸಂಘವನ್ನು ಹಿಡಿದು ಉಪಾಧ್ಯಾಯಿನಿಯರು ಕೆಲಸಮಾಡಿ ಮುಂದುವರಿಸುತ್ತಿದ್ದಾರೆ. ಈ ಕ್ರಮವು ಇನ್ನೂ ಪ್ರಯೋಗವಾಗಿಯೇ ಇದೆ. ಪರಿಣಾಮವು ಕಂಡುಬರಲು ಸ್ವಲ್ಪ ಸಮಯವು ಬೇಕಾದೀತೆಂದು ಊಹಿಸಲ್ಪಟ್ಟಿದೆ. ಕಲಿತ ಓದು ಬರಹಗಳನ್ನು ಆ ಸ್ತ್ರೀಯರು ಮರೆತುಬಿಡದಂತೆ ಬಳಕೆಗಾಗಿ ಅವರಿಗೆ ಸಾಹಿತ್ಯಗಳನ್ನು ಒದಗಿಸಿಕೊಡಬೇಕಾಗಿದೆ ಇದಕ್ಕಾಗಿ ಸಂಚರಿಸುವ ಒಂದು ಗ್ರಂಥಭಂಡಾರವನ್ನು ಸ್ಥಾಪಿಸಬೇಕಾಗಿದೆ

ಈ ಅನನುಕೂಲತೆಯನ್ನು ಹೋಗಲಾಡಿಸುವುದಕ್ಕಾಗಿ ಮುಂಬಯಿಯ ಭಗಿನೀಸಮಾಜವು ಸಾಹಸಗೈಯುತ್ತಿದೆ. ಈ ಸಂಚಾರ ಪುಸ್ತಕಭಂಡಾರದ ಯೋಜನೆಯನ್ನಲ್ಲದೆ ಸ್ತ್ರೀಯರ ಪ್ರಯೋಜನಕ್ಕಾಗಿ ಒಂದು ವಾರಪತ್ರಿಕೆಯನ್ನು ಸರಳಭಾಷೆಯಲ್ಲಿ ಪ್ರಕಟಿಸಬೇಕಾಗಿ ಈ ಸಂಸ್ಥೆಯು ಸಂಕಲ್ಪಿಸಿರುತ್ತದೆ ಭಗಿನೀಸಮಾಜವು ಮಾಡುವ ಇನ್ನೊಂದು ಕೆಲಸವೆಂದರೆ—ಕೆಲಸ ಮಾಡುವ ಸ್ತ್ರೀಯರಿಗಾಗಿ ಒಂದು ವಸತಿಯನ್ನು ಮುಂಬಯಿ ನಗರದೊಳಗೊಂದು ಹಾಸ್ಟೆಲನ್ನು ಸ್ಥಾಪಿಸಬೇಕಾಗಿ Drashti ಪತ್ರಿಕೆಯ ಮೊದಲೇ ಪ್ರಕಟಿಸುತ್ತದೆ ಅಲ್ಲ ಸಂಪಾದನೆ ಮಾಡುತ್ತಿರುವ ಸ್ತ್ರೀಯರು ಸುಖದಿಂದಿರು ಸಾಧ್ಯವಾಗುವುದಿಲ್ಲ ಒಂದು ಸಣ್ಣ ಕೋಣೆಗೂ ಅವರು ಹೇರಳ ಬಾಡಿಗೆಯನ್ನು ಕೊಡಬೇಕಾಗುವುದು ಇಂತಹ ಸ್ತ್ರೀಯರ ಬಗ್ಗೆ ಒಂದ ವರ್ಷದ ಮೊದಲು ಈ ಹಾಸ್ಟೆಲನ್ನು ಸ್ಥಾಪಿಸಲಾಯಿತು. ಈ ಸಂಬಂಧವಾದ ಕೆಲಸವನ್ನು ಇನ್ನೂ ಅಭಿವೃದ್ಧಿಗೊಳಿಸಬೇಕಾಗಿದೆ ಈ ಉದ್ದೇಶಸಾಫಲ್ಯಕ್ಕಾಗಿ ಬರುವ ಸಹಾಯ ಮತ್ತು ಸಲಹೆಗಳನ್ನು ಉತ್ಸಾಹದಿಂದ ಸ್ವೀಕರಿಸಲಾಗುತ್ತದೆ ಇಂತಹ ಸಂಸ್ಥೆಗಳು ದೇಶದ ಇತರೆಡೆಗಳಲ್ಲಿಯೂ ನಡೆಸಲ್ಪಟ್ಟು ಸಮಾಜಸೇವೆಯು ಅವ್ಯಾಹತವಾಗಿ ನಡೆಯುತ್ತದೆ

ಮಂಗಳೂರಲ್ಲಿ
ಕಾಂಗ್ರೆಸ್ ಪ್ರೆಸಿಡೆಂಟರಿಗೆ ಮಾನಪತ್ರ

ಕಳೆದ ಶನಿವಾರ ನಡೆದ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನಲ್ಲಿ ಕರ್ನಾಟಕ ಪ್ರಾಂತಿಕ ಪರಿಷತ್ತನ್ನು ತೆರೆಯಲು ಬರುವ ಕಾಂಗ್ರೆಸ್ ಪ್ರೆಸಿಡೆಂಟರಾದ ಬಾಬು ರಾಜೇಂದ್ರ ಪ್ರಸಾದರಿಗೆ ಮಾನಪತ್ರವನ್ನೀಯಬೇಕೆಂದೂ ಅದರಲ್ಲಿ ಶ್ರೀಪ್ರಕಾಶ ಜನರನ್ನು ಗೌರವಿಸಬೇಕೆಂದೂ ನಿರ್ಣಯಿಸಲಾಯಿತು. ಇದಕ್ಕಾಗಿ ಒಂದು ಕಮಿಟಿಯು ನೇಮಿಸಲ್ಪಟ್ಟು ರೂ ೫೦ ಕ್ಕೆ ಕಡಿಮೆಯಾಗದ ಮಂಜೂರಿಯನ್ನು ಮೊಬಲಗಲ್ಲಿ ಕೊಡಬೇಕೆಂದಾಯಿತು. ಚಿತ್ರಪಟಗಳ ರಜತೋತ್ಸವ ಫಂಡಿಗೆ ರೂ ೫೦ ಸ್ಟೇಟು ಉತ್ಸವಕ್ಕೆ ರೂ ೨೫ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸು ಕಟ್ಟಡವನ್ನು ಅಲಂಕರಿಸುವುದಕ್ಕೆ ರೂ ೧ ಮಂಜೂರು ಮಾಡಲಾಯಿತು

ರಾಮು—ಏನು, ಓಡುತ್ತೀರಿ?'

ಜೋಜ್—ಸ್ವದೇಶಾಭಿಮಾನಿಯು ಏಜಂಟರ ಬಳಿಗೆ— ಮಾತಾಡಲು ಸಮಯವಿಲ್ಲ—ಮತ್ತೆ ಪ್ರತಿಗಳು ದೊರೆಯುವುದಿಲ್ಲ ಬೇಗನೇ ಒಂದು ಪ್ರತಿಯನ್ನು ಪಡೆದ ತರು ಬರುತ್ತೇನೆ—

ರಾಮು—ಬೇಗನೇ ಧಾವಿಸಿರಿ—ನನಗೂ ಒಂದು ಪ್ರತಿಯನ್ನು ತನ್ನಿ. ಇಗೊಳ್ಳಿ ಒಂದಾಣೆ'

'ಸ್ವದೇಶಾಭಿಮಾನಿ'ಯು

ಪ್ರಕಟವಾದ ಪ್ರತಿವಾರದಲ್ಲೂ ಈ ಗುಲ್ಲು ಜಿಲ್ಲೆ ಕರ್ನಾಟಕದಲ್ಲಿ ಕೇಳುತ್ತದೆ. ಸ್ವದೇಶಾಭಿಮಾನಿಯನ್ನು ಓದುವುದೆಂದರೆ ಜನರಿಗೆ ಅಷ್ಟು ಉತ್ಸಾಹ'—ಅಷ್ಟು ಆಶೆ'—ಕಾರಣವೇನು?— ಭಾಷಾಶೈಲಿ, ಚಿತ್ರಪಟಗಳು, ವರ್ತಮಾನ ಸಂಗ್ರಹಗಳು,—ಇವುಗಳಲ್ಲೆಲ್ಲ ಅದು ಅಗ್ರಗಣ್ಯವಾಗಿ ನಿಂತಿದೆ

ಬಿಡಿ ಸಂಚಿಕೆ ಬೆಲೆ ಆಣೆ 1.

ಅನುಕ್ರಮಣಿಕೆ.

ಪತ್ರ	೨
ಪತ್ರಿಕಾ ಪ್ರಪಂಚ.	೩
ಕರ್ನಾಟಕ ಸಾಹಿತ್ಯ ಪರಿಷತ್ತು	೫
ನಮ್ಮ ಮೈಸೂರಿನ ಪತ್ರ.	೪
ಉಪ್ಪಾರದ ಉತ್ತಮರಾಯರು	೬
ಹಿಂದೂ ಧರ್ಮ	೮
ಅಗ್ರಲೇಖ	
ಸ್ಫುಟವಿಚಾರಗಳು	೯
ಜಿಲ್ಲಾಬೋರ್ಡಿನ ಶ್ರೀ ಪೂಂಜರು	೧೦
ವರ್ತಮಾನ ಸಂಗ್ರಹ	
ಮಂಗಳೂರು, ತಾಲೂಕುಗಳಿಂದ	೧೩
ಮಲೆನಾಡು ವಾರ್ತೆಗಳು	೧೪
ವಿವಿಧ ಸಮಾಚಾರಗಳು	೧೬
ನಮ್ಮ ಮುಂದಾಳುಗಳು	೧೮

ಸ್ವದೇಶಾಭಿಮಾನಿ.

ತಾ ೩ನೇ ಶುಕ್ರವಾರ ಮೇ ೧೯೩೫

ಜಿಲ್ಲಾ ಬೋರ್ಡಿನಲ್ಲಿ ಶ್ರೀ। ಪೂಂಜರು

ಇದುವರೆಗೆ ಪತ್ರಿಕೆಗಳ ಕಡೆಗೆ ಉದಾಸೀನವಾಗಿದ್ದ ಜಿಲ್ಲಾ ಬೋರ್ಡು ಈಗ ಕಣ್ತೆರೆದುದು ಸಂತೋಷವೇ ಸರಿ. ಆ ಗೌರವವನ್ನು ಶ್ರೀ। ಪೂಂಜರು ಈ ಪತ್ರಿಕೆಗೇನೆ ಕೊಡಿಸಿದುದು ನಮ್ಮ ಭಾಗ್ಯ. ಸ್ವದೇಶಾಭಿಮಾನಿಯು ಜವಾಬುದಾರಿಯಿಲ್ಲದೆ ಬರೆಯುತ್ತಿದೆ. ತಪ್ಪು ಸಂಖ್ಯೆ, ಅಭಿಪ್ರಾಯಗಳನ್ನು ಹುಟ್ಟಿಸುತ್ತಿದೆ ಎಂದು ಅದನ್ನು ಖಂಡಿಸುವ ಎಡ್ಜರ್ನಮೆಂಟು ಮೋಶನು—ಅವರಿಂದ ಮೊನ್ನೆ ತಾ. ೨೭ರಲ್ಲಿ ಬೋರ್ಡು ಸಭೆಯಲ್ಲಿ ಬಂದಿತು.

ಪತ್ರಿಕೆಗಳು ಕಂಡಾಬಟ್ಟೆ ಬರೆದರೆ, ಅಲ್ಲಿ ಎಡ್ಜರ್ನಮೆಂಟ್ ಮೋಶನ್ ತರುವುದು ಯಾವ ಕ್ರಮ? ಇರಲಿ. ಈ ಪತ್ರಿಕೆಯು ಬೋರ್ಡಿನ ಅಂದಾಜುಪಟ್ಟಿಯ ವಿಷಯ ಸುಳ್ಳು ಸಂಖ್ಯೆಗಳನ್ನು ಕೊಟ್ಟಿದ್ದರೆ ಸರಿಯಾದ ಸಂಖ್ಯೆಗಳನ್ನು ಇವರು ಕೊಡಿಸಲಿ. ಜಿಲ್ಲಾ ಬೋರ್ಡು, ಸದಸ್ಯರ ಮನೆವಾರ್ತೆ ವ್ಯಾಪಾರವಲ್ಲ. ಹತ್ತು ಜನ ಕಂದಾಯ ತೆರುವವರ ಅಧಿಕಾರದ್ದು. ಅವರಿಗೆ ಉತ್ತರವಾದಿಯಾಗುವ ರೀತಿಯಲ್ಲಿ ಇವರು ವರ್ತಿಸಲು ಕಲಿಯಲಿ.

ನಾವು ಕೊಟ್ಟ ಸಂಖ್ಯೆಯು ತಪ್ಪಿರಬಹುದು. ಅದೂ ಮಾರ್ಚ ತಿಂಗಳಲ್ಲಿ ಕೊಟ್ಟುದು—೬—೭,೦೦೦ ಶಿಲ್ಕು ಇದೆಯೆಂದು. ಈಗ ೫೬,೦೦೦ ಉಳಿದಿದೆಯಂತೆ. ಸಂತೋಷ. ಈ ಸಂಖ್ಯೆಯು ಬದಲಾವಣೆ ಹೇಗಾಯಿತು? ಕಳೆದ ವರುಷ, ವಿದ್ಯಾಖಾತೆಯಲ್ಲಿ ಸಲ್ಲಬೇಕಾದ ಹೆಚ್ಚಿನ ಸ್ಕೇಲನ್ನು ಕೊಟ್ಟರೇನು? ಅದನು ಕೊಡದೆ, ಈ ಶಿಲ್ಕನ್ನು ತುಸು ಹೆಚ್ಚಿಸಿರಬಹುದು. ಇನ್ನೂ ಕೆಲವು ಹಣ ಸೇರಿರಬಹುದು. ನನ್ನ ಸಂಖ್ಯೆ ತಪ್ಪಾದರೂ—ಬೋರ್ಡು ದಿವಾಳಿಯಾದ ಹಿಡಿದುದು ಸುಳ್ಳಲ್ಲ. ಕಳೆದ ವರುಷ ಆದಿಯ ಶಿಲ್ಕು ೫॥ ಲಕ್ಷದ ಅಂದಾಜು ಇದ್ದು ಈ ವರುಷ ಅದನ್ನು ಕರಗಿಸಿ ॥ ಲಕ್ಷಕ್ಕೆ ತಂದಿಳಿಸಿದ ಸದಸ್ಯರು ಶೂರರಲ್ಲವೇನು?

ಶ್ರೀ। ಪೂಂಜರ ಅಂಬೋಣವೇನು? ಪತ್ರಿಕೆಗಳು ಅವರನ್ನು ಟೀಕಿಸಬಾರದೆಂದೇ? ಜನರ ಟೀಕೆಗೆ ಅಂಜುವವರು, ಅದರಿಂದ ಮತಿಯ ತೋಲವನ್ನು ಕಡಿಸಿಕೊಳ್ಳುವವರು ಸಾರ್ವಜನಿಕ ಕೆಲಸಕ್ಕೆ ಕೈಹಚ್ಚಬಾರದು. ಅದರಲ್ಲೂ ಶ್ರೀ। ಪೂಂಜರಂತಹ ಜಾತ್ಯಭಿಮಾನಿಗಳು.

ಅವರ ಜಾತಿಯ ಅಭಿಮಾನ ಕಾಯ್ದು, ನಂಟರಿಷ್ಟರಿಗೋ, ಬಂದುಬಳಗದವರಿಗೋ, ಜಾತಿಯವರಿಗೋ ಉದ್ಯೋಗ ಕೊಡಿಸುವ ಭರದಲ್ಲಿ—ಈಗಾಗಲೇ ಕೆಲಸಮಾಡಿ, ಹಂಗಾಮಿ ಸರ್ವಿಸುಳ್ಳ ಎಷ್ಟು ಜನರು ನಿರಾಶರಾದರು?

ಜಿಲ್ಲಾ ಬೋರ್ಡು ಈ ಮೂರು ವರುಷಗಳಲ್ಲಿ ಮಾಡಿದ ಕೆಲಸದ ನೇಮಕವನ್ನು ನೇಮಕಗೊಂಡವರ ಜಾತಿವೃತ್ತಾಂತವನ್ನು ಸಾರ್ವಜನಿಕರ ಮುಂದೆ ಇರಿಸುವರೇನು?

ಅವರ ಹೊಸ ಯೋಜನೆಗಳಿಗೆ, 'ಕೆಲವರಿಗೆ ಕೆಲಸ ಕೊಡಿಸುವುದೇ ಗುರಿಯಲ್ಲದೆ'—ಜಿಲ್ಲಾ ಬೋರ್ಡಿನ ಸಂಪತ್ತಿನ ನ್ಯಾಯವಾದ ವ್ಯಯವು ಕಾರಣವಲ್ಲವೆಂದು ಏಕೆ ಹೇಳಬಾರದು?

ನಮ್ಮ ಪತ್ರಿಕೆಗಳು ಇದುವರೆಗೆ, ನಮ್ಮ ಸಂಸ್ಥೆಗಳ ಕಡೆಗೆ ವಹಿಸಿದ ತಟಸ್ಥಭಾವವನ್ನು ಮುರಿದು, ನೀರ್ಭೀತ ವಿಮರ್ಶೆ ಮಾಡುವುದೇ ನಮ್ಮ ಉದ್ದೇಶ. ನಾವು ಅದನ್ನು ನಿಷ್ಪಕ್ಷಪಾತದಿಂದ ವಿಮರ್ಶೆಮಾಡಲು ಬಯಸುತ್ತೇವೆ. ತಪ್ಪಿದಲ್ಲಿ ಯಾವ ಗಳಿಗೆಗೂ ಕ್ಷಮೆ ಕೇಳಲು ಸಿದ್ಧರಿದ್ದೇವೆ.

ಶ್ರೀ ಪೂಂಜರೂ ಅದೇ ಧೋರಣೆಯನ್ನು ವಹಿಸಿ ಸಾರ್ವಜನಿಕ ಸೇವೆಗೆ ಕೈಹಚ್ಚಿದರೆ ಸಂತೋಷ. ನಂಬಲ್ಲರೂ ಸಮಾಜದ ವಿಚಾರ ಮಾತಾಡುತ್ತಿದ್ದೇವೆ—ಹೊಸ ಕೆಲಸಗಳ ವಿಷಯವಲ್ಲ.

Latest News.

ನೆಸ್ಟೊಕೆಲೆಂಟ್ (ಇಟಲಿ) 1 5-35

ಇಟಲಿ ನಗರದ ವಿಮಾನ ನಿಲ್ದಾಣದ ಮೇಲೆ ಹಾರಾಡುತ್ತಿದ್ದ ಒಂದು ವಿಮಾನವನ್ನು ಇಟಲೀ ಮಿಲಿಟರಿ ಮೈದಾನದ ಅಧಿಕಾರಿಗಳು ಕೆಳಗಿಳಿಸಿ ತನಿಖೆ ನಡೆಸಿದರು. ನೋಡಲಾಗಿ ವಿಮಾನದಲ್ಲಿದ್ದುದು ಒಬ್ಬ ಜರ್ಮನನೆಂದೂ ಅವನು ಸಾಧಾರಣವಾದ ಉಡುಪುಗಳನ್ನು ಧರಿಸಿಕೊಂಡಿದ್ದನೆಂದೂ ಅವನ ವಶದಲ್ಲಿ ಎರಡುಕೆನ ರಗಳಿದ್ದುವೆಂದೂ ತಿಳಿಯಿತು. ಇವನು ಜರ್ಮನಿಯಿಂದಲೇ ಇತ್ತ ಬಂದಿದ್ದನು. ಇವನನ್ನು ಕೂಡಲೇ ಸೆರೆ ಹಿಡಿಯಲಾಯಿತು. ಈ ಸುದ್ದಿಯು ವಿಶ್ವಾಸಾರ್ಹವಾದುದೋ ಎಂದು ಇಟಲಿಯ ಚಕ್ರಾಧಿಪತಿಗಳ ಕಚೇರಿಯಲ್ಲಿ ವಿಚಾರಿಸಿದಾಗ ಅಂತಹ ವಾರ್ತೆಯು ತಮಗೆ ತಲಪಲಿಲ್ಲವೆಂದು ಹೇಳಿದರು. ಇದು ಸತ್ಯವೆಂದಾದರೆ ಜರ್ಮನಿಯು ಉದ್ವಿಗ್ನಗೊಳ್ಳದಿರಲಾರದೆಂದು ಊಹಿಸಲಾಗಿದೆ.

ಐರ್ಲೆಂಡಿನಲ್ಲಿ ಶಿಕ್ಷೆಯಾಯಿತು

ಎಪ್ರಿಲ್ ೩೦ ೩೮

ಐರಿಷ್ ರಿಪಬ್ಲಿಕನ್ ಆರ್ಮಿಯ ಮುಂದಾಳುಗಳಾದ ಮಿ। ಥಾಮಸ್ ಬ್ಯಾರಿ ಎಂಬವರು ೬ ತಿಂಗಳ ಕಠಿಣ ಶಿಕ್ಷೆಗೆ ಗುರಿಯಾಗಿದ್ದಾರೆ.

ಬೋಂಬು ಒಡೆಯಿತು!

ಲಕ್ನೋ, ಮೇ ೧

ಫರೂಕಾಬಾದಿನ ಪಲ್ರಸಾರ್ ಕ್ಲಬ್ಬಿನವರು ಇಸ್ಪೀಟು ಆಟವಾಡುತ್ತಿದ್ದಾಗ ಅವರು ಕೂತ ಕಟ್ಟಡದ ಹಿಂದುಗಡೆಯಿಂದ ಬೊಂಬು ಸ್ಫೋಟನಗೊಂಡ ಶಬ್ದವಾಯಿತು. ಅವರು ಓಡಿ ನೋಡಲು ಇಬ್ಬರು ಬೊಂಬಿನಿಂದ ಜಖಂಗೊಂಡುದು ಕಂಡು ಬಂತು. ವಿವರವು ಸಿಕ್ಕಿಲ್ಲ.

ವಿಮಾನಗಳು ಢಿಕ್ಕಿ ಹೊಡೆದುವು.

ನಾಲ್ಕು ಜನರ ಮರಣ

ಲಂಡನ್ ವಿಮಾನನಿಲ್ದಾಣದಲ್ಲಿ ಘಟನೆ.

ಲಂಡನಿನಲ್ಲಿ ಎಂದೂ ನಡೆಯದ ಒಂದು ವಿಷಾದಕರ ವೈಮಾನಿಕ ಅನಾಹುತವು ತಾ. ೨೮ರಲ್ಲಿ ನಡೆಯಿತು. ಅದರಿಂದಾಗಿ ೪ ಜನರು ಮೃತಪಟ್ಟಿರುವರು. ಆಕಾಶದಲ್ಲಿ ಹಾರಾಡುತ್ತಿದ್ದ ಎರಡು ವಿಮಾನಗಳು ಢಿಕ್ಕಿ ಹೊಡೆದುಕೊಂಡುದರಿಂದ ಈ ಅನಾಹುತವಾಯಿತು.

ಬ್ರಿಟನಿಗೆ ರಿಯಾಯಿತಿ ಬೇಕು

ಲಂಡನ್ ಎಪ್ರಿಲ್ ೩೦ ೫

ಹತ್ತಿಯ ವ್ಯಾಪಾರೀ ಸಂಘದ ಕಾರ್ಯಕಾರಿ ಸಮಿತಿಯು ಇಂಡಿಯಾ ಸ್ಟೇಟ್ ಸೆಕ್ರಟರಿಯವರಾದ ಸರ್ ಸಾಮುವೇಲ್ ಹೋರ್‍ರವರಿಗೆ ಒಂದು ಕರಾರನ್ನು ಕಳುಹಿಸಿ ಇಂಡಿಯಾದಿಂದ ಬರ್ಮಾವು ಪ್ರತ್ಯೇಕವಾಗುವುದಾದರೆ ಬ್ರಿಟನಿಗೆ ಬರ್ಮಾದಲ್ಲಿ ವ್ಯಾಪಾರಸಂಬಂಧವಾದ ರಿಯಾಯಿತಿಗಳನ್ನು ಕೊಡಬೇಕೆಂದೂ ಹಿಂದೂದೇಶವು ಬರ್ಮಾದಲ್ಲಿ ಅನುಭವಿಸುವ ಸೌಲಭ್ಯವು ತಮಗೂ ಇರಬೇಕೆಂದೂ ಹೇಳಲಾಗಿದೆ.

ಕ್ರೊಯಿಡನ್ ವಿಮಾನ ನಿಲ್ದಾಣದಲ್ಲಿ ಕಳವು!

ಲಂಡನ್ ಎಪ್ರಿಲ್ ೨೬

ಕ್ರೊಯಿಡನ್ ವಿಮಾನ ನಿಲ್ದಾಣದಲ್ಲಿ ೨ ಸಾವಿರ ಪವನುಗಳ ಬೆಲೆಯ ಚಿನ್ನವನ್ನು ಕಳವುಮಾಡಿದರೆಂದು ಸಿಸಿಲ್ ಸ್ಪಾರ್ಜೇಂಟ್ ಸಿಲ್ವಿಯೋ ಮಿಸ್ಸಾರ್ಡ್ ಮತ್ತು ಜೋನ್ ಒಬ್ರೀನ್ ಎಂಬ ಮೂವರನ್ನು ವಿಚಾರಣೆಗೆಳೆದಿದ್ದಾರೆ. ಇವರನ್ನು ಲಂಡನಿನಿಂದ ನಿಲ್ದಾಣಕ್ಕೆ ಒಯ್ದ ಕಾರ್ ಡ್ರೈವರನ ಸಾಕ್ಷಿಯ ಪ್ರಕಾರ ಒಬ್ರೀನ್‍ನನ್ನು ಕಾರಿನಲ್ಲಿ [illegible] ತನ್ನ ಸ್ನೇಹಿತನೆಂದು ಡ್ರೈವರನು ಹೇಳಿದುದರಿಂದ ಒಬ್ರೀನನಿಗೆ ಬಿಡುಗಡೆಯಾಗಿದೆ.

ಚೀನವು ದಕ್ಕಿಸಿಕೊಂಡಿದ ಆರ್ಥಿಕ ಸಂಕಷ್ಟ

ವಾಷಿಂಗ್‍ಟನ್ ಎಪ್ರಿಲ್ ೨೮

ಚೀನಾದ ಪಟವರಿಗೆ [illegible] ಒಂದು ಸಂಕಷ್ಟದ ಸ್ಥಿತಿ [illegible] ನಡೆಸಿ ೧೯೩೪ರಲ್ಲಿ ಅಮೇರಿಕಾ ದೇಶದ [illegible] ಆರ್ಥಿಕ ಸಂಕಷ್ಟವು ಬಂದಿತೆಂದೂ [illegible] ಚೀನಕ್ಕೆ ಸನ್ನಿಹಿತವಾಗಿದೆಯೆಂದೂ ಅಮೇರಿಕವನ್ನು ರಕ್ಷಿಸಲು [illegible] ಚೀನಕ್ಕೆ [illegible] ಸಹಾಯ ಮಾಡಬೇಕೆಂದೂ ಅವರು ತಿಳಿಸಿರುತ್ತಾರೆ.

ಜರ್ಮನಿಯ ವಿಮಾನಗಳು ಫ್ರಾನ್ಸಿನಲ್ಲಿ ಹಾರಾಡುತ್ತವೆ

ಪೆರಿಸ್ ಎಪ್ರಿಲ್ ೨೮

ಫ್ರಾನ್ಸಿನ ಸರಹದ್ದುಗಳಿಗೆ ವಿಮಾನಗಳು ಬರತೊಡಗಿದೆಂದು ಕೆಲವು ಕಡೆಗಳಲ್ಲಿ ಆಕ್ಷೇಪಿಸಲಾಗಿದೆ. ಜರ್ಮನಿಯ ವಿಮಾನಗಳು ಮಾತ್ರ ಅತ್ತ ಬರುತ್ತವೆಂದು ಫ್ರಾನ್ಸ್ ಸರಕಾರವು ತಿಳಿದಿದೆ. ವಿಮಾನಸಂಬಂಧ ಮಂತ್ರಾಲಯದ ಮಂತ್ರಿಯು ಈ ವಿಷಯವನ್ನು ತಿಳಿದುದರಿಂದಲೇ ಜರ್ಮನಿಯ ವಿಮಾನಗಳು ತಮ್ಮ ಗಡಿಗೆ ಬರಕೂಡದೆಂದು ವ್ಯವಸ್ಥೆ ಮಾಡುತ್ತಿರುವರು.

೧೧೦ ಜನರನ್ನು ಕೈದು ಮಾಡಿದರು

ಗುಜ್ರನ್‍ವಾಲದಲ್ಲಿ ಮತವಿಷಯಕ ಕಲಹ!

ಲಾಹೋರು, ಎಪ್ರಿಲ್ ೩೦

ಗುಜರನ ವಾಲದಲ್ಲಿನ ತಮ್ಮ ಗದ್ದೆಗಿಳಿದ ಒಂದು ದನವನ್ನೂ ಒಂದು ಕರುವನ್ನೂ ಮುಸ್ಲಿಮರು ಕೊಂದುದರಿಂದಾಗಿ ಹಿಂದೂಗಳು ಉದ್ರೇಕಗೊಂಡು ಹಿಂದೂ ಮುಸ್ಲಿಮ್ ಕಲಹವು ತಲೆದೋರುವುದರಲ್ಲಿದ್ದಿತು. ಕೂಡಲೇ ಪೋಲೀಸಿನವರು ಬಂದು ಒಟ್ಟು ೧೧೦ ಜನ ಜನರನ್ನು ಕೈದುಮಾಡಿದರು.

ಕಲ್ಕತ್ತಾ ಮೇಯರ ಮೇಲೆ ವ್ಯಭಿಚಾರದ ಆಪಾದನೆ.

ಆಪಾದಿತರ ಹೇಳಿಕೆ.

ಕಲ್ಕತ್ತಾ, ಎಪ್ರಿಲ್, ೧೮.

ಕಲ್ಕತ್ತಾ ಮೇಯರರಾದ ನಳಿನೀರಂಜನ್ ಸರಕಾರರವರ ಮೇಲೆ ಪ್ರಮಥನಾಥ ಸರಕಾರರ ಹೆಂಡತಿ ಲೀಲಾ ಸರಕಾರರನ್ನು ವ್ಯಭಿಚಾರ ಮಾಡಿದರು ಎಂಬ ಆಪಾದನೆಯು ಕೋರ್ಟಿನಲ್ಲಿ ವಿಚಾರಣೆಯಲ್ಲಿದೆಯಷ್ಟೆ. ವಾದಿ ಪ್ರತಿವಾದಿಗಳಾದ ಮೇಲೆ ಅಪರಾಧಿ ಶ್ರೀ ನಳಿನೀರಂಜನ ಸರಕಾರರವರು ಈ ಕೆಳಗಿನ ಹೇಳಿಕೆಯನ್ನು ಕೋರ್ಟಿನಲ್ಲಿ ಕೊಟ್ಟರು. ಅದರಲ್ಲಿ ಅವರು ಹೇಳಿರುವುದೇನೆಂದರೆ, "ನನ್ನ ಮೇಲೆ ಮಾಡಿರುವ ಆಪಾದನೆಗಳೆಲ್ಲಾ ಶುದ್ಧ ಸುಳ್ಳು. ನನಗೆ ಹೆಂಡತಿಯಿಲ್ಲ, ಮಕ್ಕಳಿಲ್ಲ. ನನಗೆ ಮದುವೆಯಾಗಿತ್ತು. ಹೆಂಡತಿ ಮೃತಳಾದಳು. ನನ್ನ ಸಹೋದರರ ಮತ್ತು ಜ್ಞಾತಿಗಳ ಮಕ್ಕಳನ್ನು ನನ್ನ ಮಕ್ಕಳಂತೆಯೇ ನೋಡುತ್ತೇನೆ. ಲೀಲಾಳು ನನ್ನ ಸ್ನೇಹಿತರ ಮಗಳು. ಅವಳನ್ನೂ ಅವಳ ಇತರ ಸಹೋದರಿಯರನ್ನೂ ನನ್ನ ಹೆಣ್ಣುಮಕ್ಕಳಂತೆಯೇ ಕಾಣುತ್ತೇನೆ. ನನ್ನ ಮನಸ್ಸಿನಲ್ಲಿ ಅವರ ವಿಷಯವಾಗಿ ಬೇರೆ ಇನ್ನು ಯಾವ ಭಾವನೆಯೂ ಇರಲಿಲ್ಲ. ಅವಳಿಗೂ ನನ್ನ ಮೇಲೆ ತನ್ನ ತಂದೆಯ ಮೇಲಿನ ಭಾವನೆಯೇ ಇದೆ. ನಮ್ಮ ಮನೆಯವರೆಲ್ಲರಿಗೂ ಸುತ್ತುಮುತ್ತಲಿನವರೆಲ್ಲರಿಗೂ ನನಗೂ ಅವಳಿಗೂ ಬೇರೆ ವಿಧವಾದ ಸಂಬಂಧವಿದೆಯೆಂದು ಯಾರೂ ತಿಳಿದಿಲ್ಲ. ಫಿರ್ಯಾದಿಯು ಕೋರ್ಟಿಗೆ ಬೇರೆ ರೀತಿಯಾದ [illegible] ದೇಹವಿದೆಯೆಂದು ಯಾವಾಗಲೂ ತೋರಿಸಲಿಲ್ಲ. ಲೀಲಾಳಿಗೆ ಆಗಿಂದಾಗ್ಗೆ ಖಾಯಿಲೆ ಬರುತ್ತಿತ್ತು. ಅವಳ ತಂದೆತಾಯಿ ಮತ್ತು ಫಿರ್ಯಾದಿಯು ಆಕೆ [illegible] ರಲ್ಲಿ ಅವಳ ಆರೋಗ್ಯವನ್ನು ಸುಧಾರಿಸಿಕೊಳ್ಳಲಿಕ್ಕೆ ನನ್ನ ಕೂಡೆ ಬಂದಳು. [illegible] ತಂದೆಯು ಒಡನೆ ಯಾರೂ ಇರಲಿಲ್ಲ. ಅವಳು ಇರುವಳೋ ಅದೇ [illegible] ನನ್ನ ಒಡನೆಯೂ ಅವಳ ಇದ್ದಳು. [illegible] ರಲ್ಲಿ ಹಿಂದೂಸ್ಥಾನ್ ಬಿಲ್ಡಿಂಗಿನಲ್ಲಿ ನಡೆದುದೆಂದು ಹೇಳಲ್ಪಟ್ಟಿರುವ ಘಟನೆಯು ಶುದ್ಧ ಸುಳ್ಳು. ಲೀಲಾಳಾಗಲೀ ಫಿರ್ಯಾದಿಯಾಗಲೀ ಒಮ್ಮೆ ಎಂದಾಗಲೀ ಆ ದಿನ ನನ್ನ ಮನೆಗೆ ಬರಲೇ ಇಲ್ಲ. ಫಿರ್ಯಾದಿಯೂ ಹೆಂಡತಿಯೂ ನನ್ನ ಮನೆಗೂ [illegible] [illegible] ನನ್ನ ಮನೆಯಲ್ಲಿ [illegible] [illegible]

ಮೆಕ್ಸಿಕೋ ಲಂಡನಿನಲ್ಲಿ ಬೆಳ್ಳಿಯ ಬೆಲೆ

ಮೆಕ್ಸಿಕೋ, ಎಪ್ರಿಲ್ ೨೨

ಮೆಕ್ಸಿಕೋದಲ್ಲಿ ಬೆಳ್ಳಿಯ ನಾಣ್ಯಗಳನ್ನು ಹಿಂತೆಗೆದುಕೊಳ್ಳುತ್ತಿದ್ದಾರೆ. ಬೆಳ್ಳಿಯನ್ನು ರಿಜರ್ವ್ ಬ್ಯಾಂಕಿನಲ್ಲಿಡುವ ವ್ಯವಸ್ಥೆಯಾಗುತ್ತಲಿದೆ. ಜನರು ಲಾಭದ ಆಶೆಯಿಂದ ಬೆಳ್ಳಿಯನ್ನು ಪರದೇಶಗಳಿಗೆ ರಫ್ತು ಮಾಡುತ್ತಿದ್ದಾರೆ. ಬ್ಯಾಂಕುಗಳು ಮುಚ್ಚಲ್ಪಟ್ಟಿವೆ. ಲಂಡನಿನಲ್ಲಿ ಬೆಳ್ಳಿಯ ಬೆಲೆಯು ತಾ. ೨೮ರಲ್ಲಿ ಒಂದು ಔನ್ಸಿಗೆ ೩೬ ಪೆನ್ಸಿಗಳಿಂದ ೩೦/ ಪೆನ್ಸಿಗೆ ಇಳಿದಿದೆ.

ಪೋಲೀಸರಿಗೂ ಜಾರರಿಗೂ ಜಗಳ

ಸಿಲ್ಹೆಟ್‍ನಲ್ಲಿ [illegible] ಪೋಲೀಸರಿಗೂ [illegible] ಗೂ ಜಗಳವುಂಟಾಯಿತು. ಪೋಲೀಸ [illegible] ಕಂದಾಯವನ್ನು ವಸೂಲು ಮಾಡಲು ಹೋಗಿದ್ದರು. ಆಗ ಒಬ್ಬ ಪೋಲೀಸ್ ಅಧಿಕಾರಿಯು ಒಬ್ಬ [illegible] ಮನೆಯ ಮೇಲೆ ಕೈ ಮಾಡಿದನೆಂದು ಅವರೆಲ್ಲರೂ ಅವರ ಮೇಲೆ ಬಿದ್ದರು. ಪೋಲೀಸರು ಸುಮಾರಾಗಿದ್ದರು. ಜನರ ಸಂಖ್ಯೆ ನೂರಾರು ಇದ್ದಿತು. ಜನರು ಪೋಲೀಸರ ಮೇಲೆ ಬಿದ್ದು ಕೂಡಲೇ ಪೋಲೀಸರು ಗುಂಡನ್ನು ಹಾರಿಸಿದರು. ಅವರು ಎರಡಾವರ್ತಿ ಗುಂಡನ್ನು ಹಾರಿಸಿದರು. ಈ ಗಡಿಬಿಡಿಯ ಫಲವಾಗಿ ೩೬ ಜನರ ಮರಣವೂ ಅನೇಕರಿಗೆ ಗಾಯವೂ ಉಂಟಾಗಿದೆಯೆಂದು ಸುದ್ದಿ ಬಂದಿದೆ. ಪೋಲೀಸ್ ಅಧಿಕಾರಿಗೂ ಏಟು ಬಿದ್ದಿದೆ. ೧೦೦ ಜನರ ಜಾಮೀನನ್ನು ದಸ್ತಗಿರಿ ಮಾಡಲಾಗಿದೆ.

ಸರ್ ಹೋರರ ಅಸ್ವಸ್ಥ.

ಲಂಡನ್, ಎಪ್ರಿಲ್ ೨೪.

ಇಂಡಿಯಾ ಸ್ಟೇಟ್ ಸೆಕ್ರೆಟರಿಗಳಾದ, ಸರ್ ಸಾಮ್ಯುಯೆಲ್ ಹೋರರು ಆಸ್ಪತ್ರೆ, ಗಾರ್ಡನ್ಸಿನಲ್ಲಿ ಅಸ್ವಸ್ಥರಾಗಿ ಹಾಸಿಗೆ ಹಿಡಿದಿದ್ದಾರೆ. ಶ್ವಾಸಕೋಶದ ರೋಗವು ಸ್ವಲ್ಪ ಸ್ವಲ್ಪ ಕಡಿಮೆಯಾಗುತ್ತಾ ಅವರು ಗುಣಮುಖರಾಗುತ್ತಿದ್ದಾರೆ.

ತಿನ್ನವೆಲ್ಲಿಯಲ್ಲಿ ಇಬ್ಬರ ಮರಣ: ೧೪ ಜನರಿಗೆ ಗಾಯ.

ಶ್ರೀ ವೈಕುಂಠಂ ತಾಲೂಕು ಅರಿಯನಾಯಕಿಪುರಂ ಗ್ರಾಮದಲ್ಲಿ ಮಾರವಾಡಿಗಳಿಗೂ ಗ್ರಾಮಸ್ಥರಿಗೂ ಘೋರ ಜಗಳವುಂಟಾಯಿತು. ಇಬ್ಬರ ಮರಣವೂ ೧೪ ಜನರಿಗೆ ತೀವ್ರ ಗಾಯವೂ ಉಂಟಾಗಿದೆ. ಗ್ರಾಮಸ್ಥರಲ್ಲಿ ನಾದಾರರೂ, ಕೋನಾರರೂ, ಮತ್ತು ಪಲ್ಲರಗಳೂ ಇರುವರು. ಗಲಭೆಗೆ ಕಾರಣಭೂತವಾದುದು ಒಂದು ಜಮೀನಿನ ಸ್ವಾಧೀನದ ವಿಷಯ. ಈ ಜಮೀನನ್ನು ಮಾರವಾಡಿಗಳು ತಾವು ಉಳಬೇಕೆಂದು ಹೊರಟಾಗ, ಗ್ರಾಮಸ್ಥರು ಕೂಡದೆಂದರು. ಅವರು ಕೇಳಲಿಲ್ಲ. ಆಗ, ಗಲಭೆ ಶುರುವಾಯಿತು. ಗಲಭೆಯ ಫಲವಾಗಿ ಇಬ್ಬರು ಗ್ರಾಮಸ್ಥರು ಸತ್ತರು. ಮಾರವಾಡಿಗಳ ಕಡೆ ಕೆಲವು ಹೆಂಗಸರಿಗೂ ಗಾಯವಾಗಿದೆ. ಒಟ್ಟು ೧೪ ಜನರಿಗೆ ಗಾಯವಾಗಿದೆ. ಶ್ರೀ ವೈಕುಂಠಂ ಆಸ್ಪತ್ರೆಯಲ್ಲಿ ಗಾಯಹೊಂದಿದವರಿಗೆ ಚಿಕಿತ್ಸೆ ನಡೆಸುತ್ತಿದ್ದಾರೆ. ಮಾರವಾಡಿಗಳು ಕೆಂಗಿನ ಮತ್ತು ಈಚಲ ಗಿಡಗಳ ಸ್ವಾಧೀನಕ್ಕಾಗಿ ಗಲಾಟೆ ನಡೆಸಿದರು. ಎಂದು ಗ್ರಾಮಸ್ಥರು ಹೇಳುತ್ತಿದ್ದಾರೆ.

ನಮಗೆ ರಿಪಬ್ಲಿಕ್ ರಾಜ್ಯಾಂಗವು ಬೇಕಾಗಿದೆ.

ಡಿ| ವೆಲರಾರವರ ಹೇಳಿಕೆ.

ಡಬ್ಲಿನ್, ಎಪ್ರಿಲ್ ೨೪

ಆದಷ್ಟು ಶೀಘ್ರದಲ್ಲೇ ಐರ್ಲೆಂಡಿಗೆ ರಿಪಬ್ಲಿಕ್ ರಾಜ್ಯಾಂಗವು ಬೇಕು. ಆದರೆ ಅದಕ್ಕೆ ಇನ್ನೂ ಸಮಯವು ನಿಶ್ಚಿತವಾಗಲಿಲ್ಲ ಎಂದು ಡಿ| ವೆಲೆರಾರವರು ಈಸ್ಟರ್ ಹಬ್ಬದ ದಿನ ಸಭೆಯೊಂದರಲ್ಲಿ ಹೇಳಿದರು.

ಡ್ಯೂಕ್ ಆಫ್ ಕೆಂಟರು ಗ್ರೀಸಿನ ಅರಸರೋ?

ಅಥೆನ್ಸ್, ಎಪ್ರಿಲ್ ೨೪,

ಗ್ರೀಸ್ ದೇಶದಲ್ಲಿ ರಾಜನನ್ನು ಪುನಃ ಪಟ್ಟಕ್ಕೇರಿಸಬೇಕೋ ಏನೆಂಬ ಪ್ರಶ್ನೆಯೂ ತಲೆಯೆತ್ತಿದೆ. ಉಪಸಚಿವರಾದ ಕಂಡಲಿಸ್‌ರವರು ಒಂದು ಪ್ರಕಟಣೆಯನ್ನು ಮಾಡಿ "ಗ್ರೀಸ್ ದೇಶದ ಪ್ರಜೆಗಳು ರಾಜನನ್ನು ಬಯಸಿದರೆ, ರಾಜನನ್ನು ಪಟ್ಟಕ್ಕೇರಿಸಲಾಗುವುದು. ದೇಶವು ಶಾಂತಮಯವಾಗಿದ್ದಾಗ ಶಾಸನಸಭೆಯನ್ನು ಸೇರಿಸಲಾಗುವುದು" ಎಂದಿರುವರು. ಅಮೇರಿಕಾ ಪತ್ರಿಕೆಗಳು ತಿಳಿಸುವಂತೆ, ಗ್ರೀಸಿನ ಸಿಂಹಾಸನಕ್ಕೆ ಡ್ಯೂಕ್ ಆಫ್ ಕೆಂಟರನ್ನು ಏರಿಸುವ ಯೋಚನೆಯಿದೆಯೆಂದು ತಿಳಿದು ಬರುತ್ತದೆ.

ಬೋಸರ ಗ್ರಂಥ:

ಪ್ರಕಾಶಕರ ಅಭಿಪ್ರಾಯವೇನು?

ಶ್ರೀ| ಸುಭಾಷ್ಚಂದ್ರ ಬೋಸರು ಬರೆದಿರುವ 'ಭಾರತೀಯ ಚಳವಳಿ' ಎಂಬ ಗ್ರಂಥವನ್ನು ಲಂಡನಿನಲ್ಲಿ ಮೆಸರ್ಸ್ ವಿಶರಟ್ ಅಂಡ್ ಕಂಪೆನಿಯವರು ಪ್ರಕಟಿಸಿದುದು ಸರಿಯಷ್ಟೆ. ಈ ಕಂಪೆನಿಯ ವ್ಯಾಪಾರಿಗಳಾದ ಮಿ| ವಿಷರಟ್‌ರವರನ್ನು ಯುನೈಟೆಡ್ ಪ್ರೆಸ್ಸಿನ ಪ್ರತಿನಿಧಿಯು ಸಂದರ್ಶಿಸಿ "ಇಂಡಿಯಾ ಸರಕಾರವು ಈ ಗ್ರಂಥವನ್ನು ನಿಷೇಧಿಸಿರುವುದರಿಂದ ನಿಮಗೇನಾದರೂ ನಷ್ಟವು ಸಂಭವಿಸಿದೆಯೇ?" ಎಂದು ಪ್ರಶ್ನಿಸಲು-ಪ್ರಾಗ- "ಇಂಡಿಯಾ ಸರಕಾರದ ಆಜ್ಞೆಯನ್ನು ನೋಡಿ ನಮಗೆ ಆಶ್ಚರ್ಯವಾಯಿತು. ಆದರೂ, ಭಾರತೀಯ ವಿಷಯಗಳಿಗೆ ಸಂಬಂಧಪಟ್ಟಿರುವ ಗ್ರಂಥಗಳನ್ನು ನಾವು ಪ್ರಕಟಿಸದಿರಲು ಸಾಧ್ಯವಿಲ್ಲ" ಎಂದರು. ಬೋಸರ ಗ್ರಂಥವು ಇಂಗ್ಲೆಂಡಿನಲ್ಲಿಯೂ ಕೊಲೊನಿಗಳಲ್ಲಿಯೂ ಹೇರಳವಾಗಿ ವಿಕ್ರಯವಾಗುತ್ತದೆಂದೂ, ಶ್ರೀ| ಬೋಸರು ಇನ್ನೊಂದು ಗ್ರಂಥವನ್ನು ತಾನೇ ಪ್ರಕಟಿಸುವರೆಂದೂ ವಿಷರಟ್‌ರವರು ತಿಳಿಸಿದರು.

ಪ್ರಧಾನ ಮಂತ್ರಿಗಳು ರಾಜೀನಾಮೆ ಕೊಡುವರೇ?

ಮಿ| ಬಾಲ್ಡ್‌ವಿನ್ನರು ಮಂತ್ರಿಗಳಾಗುವರೆ?

ಲಂಡನ್, ಎಪ್ರಿಲ್ ೨೪

ಬ್ರಿಟಿಷ್ ಪ್ರಧಾನ ಸಚಿವರಾದ ಮಿ| ಮೆಕ್ಡೊನಾಲ್ಡರವರು ಸಾರ್ವಭೌಮರ ರಜತೋತ್ಸವವು ಕೊನೆಗೊಂಡ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವರು. ಮಿ| ಬಾಲ್ಡ್‌ವಿನ್ನರು ಮುಖ್ಯ ಮಂತ್ರಿಗಳಾಗುವರು.

ಮಿ| ಬಾಲ್ಡ್‌ವಿನ್ನರು

ರಾಮ್ಸೆಮೆಕ್ಡೊನಾಲ್ಡರು ಬಾಲ್ಡ್‌ವಿನ್ನರ ಸ್ಥಾನವನ್ನು ಹೊಂದಬಹುದು ಎಂದು ಟೈಮ್ಸ್ ಪತ್ರಿಕೆಯ ಲಂಡನ್ ವಾರ್ತಾದಾಯಕನು ತಿಳಿಸಿದ್ದಾನೆ. ಪಾರ್ಲಿಮೆಂಟ್ ಕೂಡಿಬಂದ ಮೇಲೆ ಈ ಬದಲಾವಣೆಗಳಾಗುವುವು. ಮುಂದಿನ ವರ್ಷದ ಬಜೆಟ್ ಅಧಿವೇಶನದ ನಂತರ ಸಾರ್ವಜನಿಕ ಚುನಾವಣೆಯು ನಡೆಯುವುದು.

ಯುದ್ಧನಾವೆಗಳ ಕುರಿತು ಜರ್ಮನಿಯ ಹೇಳಿಕೆ.

ಲಂಡನ್, ಎಪ್ರಿಲ್ ೩೦

ಆಂಗ್ಲೋ ಜರ್ಮನ್ ಒಪ್ಪಂದವೊಂದು ಜರ್ಮನಿಯ ನಾವಿಕಸೈನ್ಯದ ಕುರಿತು ಜರುಗಲಿತ್ತು. ಆದರೆ, ಜರ್ಮನಿಯ ಹರ್ ಹಿಟ್ಲರರು ಬ್ರಿಟನಿಗೆಂದು ಸಮಾಚಾರವನ್ನು ಕಳುಹಿಸಿ ಸದ್ಯಕ್ಕೆ ಆ ಮಾತುಕತೆಗಳು ನಡೆಯುವುದು ಸಾಧ್ಯವಿಲ್ಲವೆಂದೂ, ಮೇ ತಿಂಗಳ ನಂತರ ಸಭಾಭಿಪ್ರಾಯ ಸಂಗ್ರಹವಾದ ಮೇಲೆ ತಾನು ಆ ಬಗ್ಗೆ ಜರ್ಮನಿಯ ವಿದೇಶೀಯ ಧೋರಣೆಯೇನೆಂದು ಪ್ರಕಟಿಸುವೆನಾಗಿಯೂ ಹೇಳಿರುವರು. ಜರ್ಮನರು ರಚಿಸಬೇಕೆಂದು ಆಗ್ರಹಪಡುತ್ತಿರುವ ಸಬ್‌ಮೆರೀನ್‌ಗಳ ಕುರಿತಾಗಿ ಯಾವ ತೀರ್ಮಾನವೂ ಆಗಿರುವುದಿಲ್ಲ. ಜರ್ಮನಿಯ ನಾವಿಕ ಸೈನ್ಯಗಳ ಕುರಿತಾದ ಬೇಡಿಕೆಗಳಿಗೆ ಇಂಗ್ಲೆಂಡು ಒಪ್ಪಲಾರದು.

ರೂಜ್‌ವೆಲ್ಟರು ಎಚ್ಚರಿಸಿದರು!

ವಾಶಿಂಗ್ಟನ್, ಎಪ್ರಿಲ್ ೩೦

ಅಮೇರಿಕಾದ ಹೌಸ್ ಆಫ್ ರೆಪ್ರೆಸೆಂಟೇಟಿವ್ ಮಂಡಳಿಯ ಕಮಿಟಿಗೆ ಒಂದು ಎಚ್ಚರವನ್ನು ಕೊಡುತ್ತಾ, ರೂಜ್‌ವೆಲ್ಟರು "ಮುಂದಕ್ಕೆ ಯುದ್ಧವಾದರೆ ತನ್ನ ಯಾವ ಅಭಿಪ್ರಾಯವನ್ನೂ ಪ್ರಕಟಿಸಬಾರದೆಂ"ದು ಹೇಳಿರುವರು. ಸರಂಜಾಮುಗಳ ಸೈನ್ಯಗಳನ್ನೂ ವಿಮಾನಗಳನ್ನೂ ನಡೆಸಬೇಕೆಂದು [illegible] ಅಮೇರಿಕಾದ ಸರಕಾರದ ಸಮಿತಿಯವರು ಬಹಿರಂಗವಾಗಿ ಆಲೋಚಿಸುತ್ತಿರುವುದರಿಂದ ಪರರಾಷ್ಟ್ರಗಳು ಸೊಂಡೆ [illegible] ಆತಳ ಅಪಚಾರವು ನಡೆಯಬಾರದೆಂದೂ ಹೇಳಿ ರೂಜ್‌ವೆಲ್ಟರು ಹೀಗೆ ಮಾಡಿದರು. ಈ ಆಜ್ಞೆಯನ್ನು ಉಲ್ಲಂಘಿಸಿದರೆ ತಕ್ಕ ಶಿಕ್ಷೆಯನ್ನು ವಿಧಿಸುವೆನೆಂದಿರುವರು.

ಜಮೀನ್ದಾರೀ ಪದ್ಧತಿಯು ರದ್ದಾಗಬೇಕು.

ಸರ್ದಾರ್ ವಲ್ಲಭಭಾಯಿ ಪಟೇಲರವರ ಅಧ್ಯಕ್ಷತೆಯಲ್ಲಿ ಕಿಸಾನ್ (ರೈತರ) ಸಮ್ಮೇಳನವು ಎಪ್ರಿಲ್ ೩೭, ೩೮ರಲ್ಲಿ [illegible] ನಡೆಯಿತು. ಈ ಸಮ್ಮೇಳನದಲ್ಲಿ ಜಮೀನ್ದಾರೀ ಪದ್ಧತಿಯು [illegible]

ಕಿಸಾನ್ (ರೈತರ) ಸಮ್ಮೇಳನದ ಕಾರ್ಯಕಾರಿ ಸಮಿತಿಯು ಜಮೀನ್‌ದಾರೀ ಪದ್ಧತಿಯನ್ನೇ ರದ್ದು ಮಾಡಬೇಕೆಂದು ಒಂದು ಠರಾವು ಪಾಸು ಮಾಡಿರುವುದು. [illegible] ಸರಕಾರದೊಡನೆ ನೇರವಾದ ವ್ಯವಹಾರವಿಟ್ಟುಕೊಳ್ಳಬೇಕೆಂದೂ, ಮತ್ತು ಇದಕ್ಕಾಗಿ ಜಮೀನ್‌ದಾರರಿಗೆ ಪರಿಹಾರ ಕೊಡತಕ್ಕದ್ದೆಂದೂ ಇದೇ ಕಾರ್ಯಕಾರಿ ಸಮಿತಿಯು ಠರಾಯಿಸಿ [illegible]

ಚುಟುಕು ವಾರ್ತೆ.

ಮೊನ್ನೆ 'ಮುಂಬಯಿ'ಯಿಂದ ಇಂಗ್ಲೆಂಡಿಗೆ ಪ್ರಯಾಣ ಮಾಡಿದವರಲ್ಲಿ ಲೆಜಿಸ್ಲೇಟಿವ್ 'ಎಸೆಂಬ್ಲಿ' ಪ್ರೆಸಿಡೆಂಟರಾದ ಸರ್ ಅಬ್ದುಲ್ ರಹೀಮರು ಇದ್ದರು.

ದೆಹಲಿ ಸಂಸ್ಥಾನದಲ್ಲಿರುವ ಗೋವಿಂದಘರ್ ಎಂಬಲ್ಲಿ ಒಂದು ಮೋಟಾರು ಅನಾಯಕವಾಗಿ ಅವರ ಫ್ಲಿಂಟ್ ಕಂಪೆನಿಯ ೧೨ ಜನ ಕೆಲಸಗಾರರು ಗಾಯ ಹೊಂದಿದ್ದಾರೆ.

ಎಂ. ಎಸ್. ರಾಯರವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಮಹಾತ್ಮಾ ಗಾಂಧಿಯವರು ಒಂದು ಪತ್ರವನ್ನು ಠರಾಯಿ [illegible] ಕಮಿಟಿಗೆ ಬರೆದಿದ್ದಾರೆ.

[illegible] ಯಲ್ಲಿರುವ ಕೊಲ್ಹಾಪೂರ ಸಂಸ್ಥಾನದ ಮಹಾರಾಜರವರು ಮರಣ ಹೊಂದಿದರು. ಅವರು ವೃದ್ಧರಾಗಿ [illegible] ದಿನ ಇದ್ದರು.

ಮದ್ರಾಸಿನ ಯೂಸ್ಟಿಸ್ ನೇಶನಲಿಸ್ಟ್ ಪಾರ್ಟಿಯು ರದ್ದಾಗಿದೆಯೆಂದೂ ಅದರ ಸದಸ್ಯರು ಕೆಲವರು ಕಾಂಗ್ರೆಸ್ಸನ್ನೂ ಇನ್ನು ಕೆಲವರು ಜಸ್ಟಿಸ್ ಪಾರ್ಟಿಯನ್ನೂ ಸೇರುವರೆಂದೂ ಇರುವ ಸುದ್ದಿಯು ತೀರಾ ಸುಳ್ಳೆಂದು ತಿಳಿದುಬಂದಿದೆ.

ಇಂಗ್ಲೆಂಡನ್ನು ಕಾಯುತ್ತಿರುವ ಪ್ರಸಿದ್ಧ ವೈಜ್ಞಾನಿಕರಾದ ಎಂ. ಆಲ್ಬರ್ಟ್ ಐನ್‌ಸ್ಟೈನ್‌ರವರಿಗೂ, [illegible] ಸರ್ ಆಂಬ್ರೋಸ್ ಫ್ಲೆಮಿಂಗ್ ರವರಿಗೂ ಫ್ರಾಂಕ್ಲಿನ್ ಬಹುಮಾನ ಪದಕವು (ಅಮೇರಿಕಾದ) ಕೊಡಲ್ಪಟ್ಟಿದೆ.

[illegible] ಒಂದು [illegible] ಸರ್ಕಾರ [illegible] ದೇವರ [illegible] ಉತ್ತಮ [illegible] ಗೊಳಿಸುವ ಉತ್ತಮ ತರದ ಪ್ರೋತ್ಸಾಹವಿದೆ [illegible]

[illegible] ಅಂಡಮಾನ್ [illegible]

[illegible]

ಸಂಸ್ಥಾನವನ್ನು [illegible]

ಲಂಡನಿನಲ್ಲಿ [illegible] ಹೊಸ [illegible]

[illegible] ಕೊಡಲಾಗದೆಂದು ತಿಳಿದುಬಂದಿದೆ.

ವಜ್ರಗಳು! —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ

ವಜ್ರಗಳು ಯಾವಾಗಲೂ ಸಿಗುತ್ತವೆ.

ವ್ಹಾಯಿಟ್ ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವುಕಾರ ಶ್ರೀನಿವಾಸ ರಂಗ ಪೈ,

ಸಾವುಕಾರ ಮಹಾಲ್, ರಥಬೀದಿ ಮಂಗಳೂರು.

(ಸನ್ ೧೮೫೮ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

ಪ್ಯಾಲೇಸ್ ಶ್ರೀ ಕೃಷ್ಣ ಸಿನೆಮದಲ್ಲಿ ಬೇಗನೇ ಪ್ರದರ್ಶಿಸಲ್ಪಡಲಿರುವ "ಸೀತಾ" ಎಂಬ ಚಿತ್ರದ ಒಂದು ದೃಶ್ಯ.

ಮಂಗಳೂರು.

ಅಮ್ಮೆಂಬಳ ಸುಬ್ಬರಾವ್ ಮೆಮೋರಿಯಲ್ ಹೋಲಿನ ಫಂಡಿಗೆ ಧನ ಸಹಾಯ ಮಾಡಿದವರ ಐದನೇ ಪಟ್ಟಿ.

ಡಾಕ್ಟರ್ ಸುಜೀರ್ ನರಸಿಂಹ ರಾಮಚಂದ್ರ ನಾಯಕ್ ಎಲ್ ಎಂ. ಎಂಡ್ ಎಸ್, ರೂ, ೫೦೦, ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ರೂ, ೨೦೦; ಮೂಲ್ಕಿ ಮೇಗಿನ ಪೇಟೆ ಮುಕುಂದ ವಾಸುದೇವ ಕಮ್ತಿಯವರು ರೂ, ೧೦೦; ಹೊಸದುರ್ಗ ಪುಂಡಲೀಕ ಭಟ್ ಬಿ, ಎ,, ಬಿ, ಎಲ್ ಪುತ್ತೂರು, ರೂ, ೧೦೦; ಉದ್ಯಾವರ ಶ್ರೀನಿವಾಸ ರಾವ್, ಫೌಂಡೇಶನ್ ಟೀಚರ್, ರೂ ೧೦೦; ಪೊಳಲಿ ರಾಮರಾಯರ ಸ್ಮರಣಾರ್ಥ ಅವರ ಪುತ್ರರು, ರೂ, ೧೦೫; ಬಂಟ್ವಾಳ ವಿಟ್ಠಲ್ ಬಾಳಿಗಾ ಎಂಡ್ ಸನ್ಸ್‌ರವರ ಎರಡನೇ ಕಂತು, ರೂ, ೫೦, ಜುಮ್ಲಾ ರೂಪಾಯಿ, ೧೬,೩೦೦.

ರೌಪ್ಯೋತ್ಸವ ಸಂದರ್ಭದಲ್ಲಿ ಮಂಗಳೂರಲ್ಲಿ 'ನದೀ ಶ್ರೀಶೋಭೆಯೊಂದು ಜರಗುವುದು. ೬ನೆಯ ತಾರೀಕಿನ ರಾತ್ರಿ ೯ರಿಂದ ೧೦-೩೦ರ ವರೆಗೆ, ಬಂದರದ ಸುತ್ತು ಮುತ್ತಲಿನ ಪಕಾರವು ದೀಪಗಳಿಂದ ಬೆಳಗಲ್ಪಡುವುದು. ದೀಪ ಬೆಳಗುವ ದೋಣಿಗಳು, ಸಿಡಿಮದ್ದುಗಳು, ಬ್ಯಾಂಡುಗಳು ಮೊದಲಾದುವು ಸಂದರ್ಭವನ್ನು ಕಳೆಯೇರಿಸುವುವು. ಖಾಸಗಿಗೃಹಸ್ಥರು ಬಾಡಿಗೆಗೆ ದೋಣಿಗಳನ್ನು ಕೊಂಡು ಕೊಂಡು, ಅವುಗಳನ್ನು ಚೆನ್ನಾಗಿ ಶೃಂಗರಿಸಿ ಬೆಳಗಿಸುವರೆಂದು ನಿರೀಕ್ಷಿಸಲಾಗಿದೆ. ಉತ್ಕೃಷ್ಟ ರೀತಿಯಲ್ಲಿ ಬೆಳಗಿಸಲ್ಪಟ್ಟ ೬ ದೋಣಿಗಳಿಗೆ ೧೦ ರೂಪಾಯಿಗಳ ಬಹುಮಾನವನ್ನು ಕೊಡುವರೆಂದು ರೌಪ್ಯೋತ್ಸವ ಸಂಬಂಧ ಹಾವ ಉಪಸಮಿತಿಯ ಅಧ್ಯಕ್ಷರಾದ ಶ್ರೀ| ನೆಲ್ಲಿಕಾರು ವೆಂಕಟರಾಯರು ತಿಳಿಸುತ್ತಾರೆ

ಇಲ್ಲಿಯ ರಿಟಾಯರ್ಡ್ ಡೆಪ್ಯುಟಿ ಕಲೆಕ್ಟರರಾದ ಮಿ| ಎಸ್, ಎನ್ ಸಾಲ್ಯಾನರು ಹೃದ್ರೋಗದಿಂದಾಗಿ ಹೊಸ್ಸೆ ಅಕಸ್ಮಾತ್ತಾಗಿ ಕಾಲವಾದರು

ಇಲ್ಲಿಯ ಪೋಸ್ಟ್ ಮಾಸ್ಟರರಿಗೆ ತಲಚೇರಿಗೆ ವರ್ಗವಾಗಿದೆ ಇವರ ಸ್ಥಾನವನ್ನು ಮಿ| ಎ, ವಿ ಫೆರ್ನಾಂಡಿಸರವರು ವಹಿಸಲಿದ್ದಾರೆ

ಮಂಗಳೂರ ಸೀರೆಶ್ವಾಳ್ಯ ಆರ್ಯ ಬಜನೆ ಮಂಡಲಿಯ ಚತ್ವನೇ ವಾರ್ಷಿಕೋತ್ಸವವು ಇದೇ ಕಳೆದ ತಿಂಗಳ ತಾ ೨೭ ಮತ್ತು ೨೮ನೇ ದಿನ ಈ ಕೆಳಗಿನ ಕಾರ್ಯಕ್ರಮದಂತೆ ಬಹುತರ ವಿಜೃಂಭಣೆಯಿಂದ ಸುಸೂತ್ರವಾಗಿ ನೆರವೇರಿತು ತಾ ೨೭ನೇ ಶನಿವಾರ ಬೆಳಗ್ಗೆ ಘಂಟೆ ೫ಕ್ಕೆ ಸುಮಾರು ೩೦-೩೫ರ ಜನ ಸಮುದಾಯದಿಂದೊಡಗೂಡಿರುವ ಪ್ರಭಾತ ಪೇರಿಯು ಹೆಚ್ಚಿನ ಉಲ್ಲಾಸದಿಂದ ನಗರದ ಕೆಲವು ಬೀದಿಗಳಲ್ಲಿ ಸಂಚರಿಸಿ, ಬೆಳಗ್ಗೆ ಘಂಟೆ ೭-೧೫ಕ್ಕೆ ಸದ್ರಿ ಮಂಡಲಿಗೆ ತಲಪಿ ಘಂಟೆ ೭-೩೦ಕ್ಕೆ ಮಂಡಲಿಯ ಅಧ್ಯಕ್ಷ ಎಸ್ ತಿಮ್ಮಪ್ಪರವರಿಂದ ವೈದಿಕ ಧ್ವಜಾರೋಹಣವು ವೈದಿಕ ಮಂತ್ರಘೋಷದಿಂದ ಸಾಂಗವಾಗಿ ನೆರವೇರಿಸಲ್ಪಟ್ಟಿತು

ಇದೇ ದಿನ ರಾತ್ರಿ ಘಂಟೆ ೮ಕ್ಕೆ ಮಂಡಲಿಯಿಂದ ಹೊರಟ ಭಜನೆ ಮೆರವಣಿಗೆಯಲ್ಲಿ ಭಾಗ ವಹಿಸುವರೆ ಮಂಡಲಿಯ ಆಮಂತ್ರವನ್ನು ಮಾನಿಸಿ ಬಂದ ಪಾಂಡೇಶ್ವರ ಶ್ರೀ ಮುತ್ತಪ್ಪರವರ ಭಜನೆ ಮಂಡಲಿಯವರನ್ನು ಸ್ವಾಗತೀಕರಿಸಿದ ನಂತರ ಹೊರಟ ಮೆರವಣಿಗೆಯು ನಗರದ ಪ್ರಮುಖ್ಯ ಬೀದಿಗಳನ್ನು ಸಂಚರಿಸಿ, ರಾತ್ರಿ ಗಂಟೆ ೧೦ಕ್ಕೆ ಸದರಿ ಮಂಡಲಿಗೆ ತಲಿಪಿ, ಮಂಗಲಗೀತೆಯೊಂದಿಗೆ ಅಂತ್ಯಗೊಳಿಸಲ್ಪಟ್ಟಿ ನಂತರ ಘಂಟೆ ೧೦-೧೫ರಿಂದ ೧೨-೩೦ರ ವರೆಗೆ ಶ್ರೀಮತಿ ಕೆ, ಸುನಂದಾ ಬಾಯಿಯವರ ಸುಮಧುರ ಗಾನದಿಂದೊಡಗೂಡಿರುವ 'ಪ್ರಹ್ಲಾದ ಚರಿತ್ರೆ'ಯೆಂಬ ಪೌರಾಣಿಕ ಕಥೆಯು ಹರಿಕಥಾ ರೂಪವಾಗಿ ಜನಮನರಂಜನೆಯಾಗುವಂತೆ ಅಭಿನಯಿಸಲ್ಪಟ್ಟಿತು ಅಲ್ಲದೆ ಇಂದಿನ ಪ್ರಭಾತ ಪೇರಿ ಮತ್ತು ನಗರ ಸಂಕೀರ್ತನೆ, ಇನ್ನು ಧ್ವಜಾರೋಹಣಾದಿ ಕಾರ್ಯಗಳಲ್ಲಿ ಭಾಗ ವಹಿಸಿರುವ ಹಿತೈಷಿಗಳೆಲ್ಲರ ಆಭಾರ ಸೂಚಿಸಿದ ಶ್ರೀಯುತ್ ತಿಮ್ಮಪ್ಪರವರಿಂದ ಶ್ರೀಮತಿ ಕೆ, ಸುನಂದ ಬಾಯಿಯವರಿಗೊಂದು ಬಂಗಾರದ ಪದಕವನ್ನು ಕೊಡಿಸಲಾಯಿತು

ತಾ, ೨೮ನೇ ಆದಿತ್ಯವಾರ ದಿನ ಸಂಜೆ ೫ ಗಂಟೆಗೆ ಸೇರಿದ ಸಭೆಯು ರೆವೆರೆಂಡ್ ಸುಬ್ಬ ಕೃಷ್ಣಯ್ಯ ಎಂ. ಎ, ಬಿ, ಯಸ್‌ಸಿ, ಬಿ, ಡಿ, ಶ್ರೀ ಪಿ, ಎಲ್ ಪುಣಿಂಚತ್ತಾಯರು ಶ್ರೀ ಬಿ, ಎಂ, ತಿಂಗಳಾಯ, ಶ್ರೀ ವೈದ್ಯರೇ ಮೊದಲಾದ ಮಹನೀಯರ ಉಪನ್ಯಾಸಗಳ ನಂತರ ... ಅಧ್ಯಕ್ಷರ ಭಾಷಣ ನಂತರ

ದಿನ ಮಹಾ ಸಭೆಯು ಅಧ್ಯಕ್ಷ ರಾವ್ ಬಹದ್ದೂರ್ ಕೆ, ಎನ್, ಎಸ್, ಸುವರ್ಣ ಬಿ ಎ,, ಬಿ, ಎಲ್,ರವರ ಸಂದರ್ಭೋಚಿತ ಮತ್ತು ಅರ್ಥಗರ್ಭಿತ ಭಾಷಣವೂ ನಡೆಯಿತು.

ಕಳೆದ ಸೋಮವಾರ ಮಧ್ಯಾಹ್ನ ಘಂಟೆ ೧೧ಕ್ಕೆ ಇಲ್ಲಿಯ ಮಣ್ಣಗುಡ್ಡೆಯಲ್ಲಿ ಕೆಲವು ಜನರು ಬಾವಿಯೊಂದರ ಮಣ್ಣು ತೆಗೆಯುತಿದ್ದಾಗ, ಹಗ್ಗ ಕಡಿದು ಬಾವಿಯಲ್ಲಿ ನಿಂತಿರುವವನ ತಲೆಯ ಮೇಲೆ ಕಲ್ಲು ಬಿದ್ದು ಅವನು ಬಾವಿಯಲ್ಲಿಯೇ ಮೃತನಾಗಿರುವನು.

ಇದೇ ತಾ ೨೬-೪-೩೫ಕ್ಕೆ ಅಂತ್ಯವಾಗುವ ವಾರದಲ್ಲಿ ನಮ್ಮ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೨೦ ಮರಣಗಳೂ, ೩೬ ಜನನಗಳೂ ಆದುವು. ಮರಣಗಳ ಪೈಕಿ ಸಿಡುಬಿನಿಂದ ೪.

ಕಳೆದ ೨೬-೩-೩೫ರಲ್ಲಿ ಜಿಲ್ಲಾ ಹರಿಜನ ಸೇವಾ ಸಂಘದ ಕಾರ್ಯದರ್ಶಿಯವರು ಬೆಳ್ತಂಗಡಿಗೆ ಹೋಗಿದ್ದು ವೈದ್ಯ ವಿದ್ವಾನ್ ಅನಂತರಾಮ ಅಡ್ಯಂತಾಯರನ್ನೂ ಶ್ರೀಮಾನ್ ಯನ್ ಕೆ ಬಿಡೆಯವರನ್ನೂ ಕಂಡು ಮಾತಾಡಿ ಮರುದಿನ ಬೆಳಗ್ಗೆ ೧೦ ಗಂಟೆಗೆ ಅಲ್ಲಿ ಲ್ಯಾಲಾ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಿದ್ದರು. ಅಲ್ಲಿ ಕಲಿಯುವ ೫ ಮಂದಿ ಹರಿಜನ ಹುಡುಗರಿಗೆ ಆ ಊರ ಪಟೇಲ್ ಶ್ರೀ ಯುವರಾಜ ಹೆಗ್ಡೆಯರಿಂದ ಒಪ್ಪೊಬ್ಬನಿಗೆ ಒಂದೊಂದು ಅಂಗಿ ಇಜಾರು ಟೊಪ್ಪಿಯಂತೆ ಕೊಡಿಸಿದ್ದರು ೩ ಮಂದಿ ಹುಡುಗಿಯರಿಗೆ ಬೇಕಾದ ವಸ್ತ್ರವನ್ನು ಕೂಡಲೇ ಕಳುಹಿಸಿ ಕೊಡುವುದಾಗಿಯೂ ಹೇಳಿರುತ್ತಾರೆ. ಈ ಎಂಟು ಮಕ್ಕಳ ಉಡುಗೆಗೆ ತಗಲುವ ಖರ್ಚಿನ ಅರ್ಧ ಐವೇಜು ರೂ, ೪ ಅಲ್ಲಿಯೇ ವಸೂಲಾಗಿತ್ತು

ಬಾಬು ರಾಜೇಂದ್ರ ಪ್ರಸಾದರ ಕರ್ನಾಟಕ ಸಂಚಾರ.

ಕಾಂಗ್ರೆಸ್ ಪ್ರೆಸಿಡೆಂಟರಾದ ಬಾಬು ರಾಜೇಂದ್ರ ಪ್ರಸಾದರು ಮೇ ತಾ ೩ನೇ ಬೆಳಗ್ಗೆ ಗಂಟೆ ೪ಕ್ಕೆ ಹುಬ್ಬಳ್ಳಿಗೆ ಬತ್ತ್ಯಸಿ ೮ ಗಂಟೆಗೆ ಅಲ್ಲಿಂದ ಹೊರಟು ಅಪರಾಹ್ನ ಗಂಟೆ ೧ಕ್ಕೆ ಅಂಕೋಲೆಗೆ ತಲ್ಪಿ ಅಲ್ಲಿ ಭೋಜನಾದಿಗಳನ್ನು ತೀರಿಸುವರು. ಅನಂತರ ರಾತ್ರಿ ಗಂಟೆ ೮ಕ್ಕೆ ಕುಮ್ಟೆಗೆ ತೆರಳಿ ಅಲ್ಲಿ ರಾತ್ರಿ ಉಳಿದು ತಾ ೪ನೇ ಬೆಳಗ್ಗೆ ೭ ಗಂಟೆಗೆ ಹೊರಟು ೧೦ ಗಂಟೆಗೆ ಸಿರ್ಸಿಗೆ ತಲುಪಿ ಊಟ ತೀರಿಸಿ ಸಂಜೆ ೬ ಗಂಟೆಗೆ ಅಲ್ಲಿಂದ ಹೊರಟು ರಾತ್ರಿ ೮ ಗಂಟೆಗೆ ಬೇಗಿಗೆ ತಲಪಿ ರಾತ್ರಿ ಉಳಿದು ತಾ ೫ನೇ ಬೆಳಗ್ಗೆ ಗಂಟೆ ೭ಕ್ಕೆ ಅಲ್ಲಿಂದ ಹೊರಟು ಗಂಟೆ ೮ಕ್ಕೆ ಸಿದ್ದಾಪುರಕ್ಕೆ ಮುಟ್ಟಿ ಅಲ್ಲಿಂದ ಹಾನೇರಿಗೂ, ಜಾವೇರಿಯಿಂದ ಹಂಪರಕ್ಕೂ ಹೋಗಿ ಅಲ್ಲಿಂದ ರಾತ್ರಿ ೯ ಗಂಟೆಗೆ ಜರವನಹಳ್ಳಿಗೆ ಮುಟ್ಟಿ ರಾತ್ರಿ ಕಳೆದು ತಾ ೬ನೇ ಬೆಳಗ್ಗೆ ಗಂಟೆ ೫ಕ್ಕೆ ಅಲ್ಲಿಂದ ಹೊರಟು ೮ಕ್ಕೆ ಹೊಸಪೇಟೆಗೆ ಹೋಗಿ ಫಲಾಹಾರ ಮುಗಿಸಿ ೧೦ಕ್ಕೆ ಬಳ್ಳಾರಿಗೆ ಮುಟ್ಟುವರು ಅಲ್ಲಿ ಭೋಜನ ತೀರಿಸಿ ಅಪರಾಹ್ನ ಗಂಟೆ ೩ಕ್ಕೆ ಕುರ್ಗೋಡಿಗೆ ಹೋಗಿ ಅಲ್ಲಿಂದ ಗುಂತಕಲ್ಲಿಗೆ ತೆರಳಿ ಸಂಜೆ ೬-೪೦ಕ್ಕೆ ಗುಂತಕಲ್ಲಿನಿಂದ ಹೊರಟು ತಾ ೭ನೇ ಬೆಳಗ್ಗೆ ಗಂಟೆ ೬-೧೫ಕ್ಕೆ ಬೆಂಗಳೂರಿಗೆ ತಲಪಿ ಅಪರಾಹ್ನ ಗಂಟೆ ೩ಕ್ಕೆ ಅಲ್ಲಿಂದ ಹೊರಟು ಗಂಟೆ ೮ಕ್ಕೆ ಮೈಸೂರಿಗೆ ತಲಪಿ ರಾತ್ರಿ ವಿಶ್ರಮಿಸಿ ತಾ ೮ನೇ ಬೆಳಗ್ಗೆ ಗಂಟೆ ೬ಕ್ಕೆ ಮೈಸೂರಿಂದ ಹೊರಟು ೯ಕ್ಕೆ ವೀರರಾಜಪೇಟೆಗೆ ಬಂದು ಅಲ್ಲಿಂದ ಗಂಟೆ ೧೧ಕ್ಕೆ ಮಡಿಕೇರಿಗೆ ಬತ್ತ್ಯಸುವರು ಅಪರಾಹ್ನ ಗಂಟೆ ೨ಕ್ಕೆ ಮಡಿಕೇರಿಯಿಂದ ಹೊರಟು ಸಂಜೆ ಗಂಟೆ ೬ಕ್ಕೆ ಪಾಣೆಮಂಗಳೂರು ಬಂದು ಅಲ್ಲಿ ರಾತ್ರಿ ವಿರಮಿಸಿ ತಾ ೯ನೇ ಬೆಳಗ್ಗೆ ಗಂಟೆ ೬ಕ್ಕೆ ಅಲ್ಲಿಂದ ಹೊರಟು ಗಂಟೆ ೧೦ಕ್ಕೆ ಪುತ್ತೂರಿಗೆ ತಲಪಿ ಅಲ್ಲಿಂದ ಗಂಟೆ ೧೨ಕ್ಕೆ ಬಂಟ್ವಾಳಕ್ಕೆ ಬತ್ತ್ಯಸಿ ಭೋಜನ ತೀರಿಸಿ ಅಪರಾಹ್ನ ೩ಕ್ಕೆ ಬಂಟ್ವಾಳದಿಂದ ಹೊರಟು ಸಂಜೆ ಗಂಟೆ ೬ಕ್ಕೆ ಕಾರ್ಕಳಕ್ಕೆ ತಲಪಿ ರಾತ್ರಿ ವಿಶ್ರಮಿಸಿ, ತಾ ೧೦ನೇ ಬೆಳಗ್ಗೆ ಗಂಟೆ ೬ಕ್ಕೆ ಕಾರ್ಕಳದಿಂದ ಹೊರಟು ಗಂಟೆ ೯ಕ್ಕೆ ಉಡುಪಿಗೆ ತಲಪಿ ಗಂಟೆ ೧೨ಕ್ಕೆ ಉಡುಪಿಯಿಂದ ಹೊರಟು ಮಂಗಳೂರಿಗೆ ಹೊರಟುಹೋಗುವರು ಸಂಜೆ ಗಂಟೆ ೬ಕ್ಕೆ ಚಿಕ್ಕಮಂಗಳೂರಿಗೆ ತಲಪಿ ಅಲ್ಲಿಂದ ಕಡೂರಿಗೆ ಹೋಗಿ ರಾತ್ರಿ ಗಂಟೆ ೨ಕ್ಕೆ ಕಡೂರಿನಿಂದ ಬೆಳ್ಗಾಂವಿಗೆ ತೆರಳಿ ತಾ ೧೨ನೇ ಅಪರಾಹ್ನ ಗಂಟೆ ೨-೩೦ಕ್ಕೆ ಬೆಳ್ಗಾಂವಿಗೆ ತಲಪುವರು

ತಾಲೂಕುಗಳಿಂದ.

ಪಡುಪಣಂಬೂರು—ಇಲ್ಲಿಯ ಬೋರ್ಡ್ ಹಾ| ಎ| ಶಾಲೆಯ ವಾರ್ಷಿಕ ವರ್ಧಂತಿ ಉತ್ಸವವು ಇದೇ ತಿಂಗಳ ತಾರೀಖು ೨೮ನೇ ಬುಧವಾರ ರಾಜಶ್ರೀಯು ಸಿ ಸುಬ್ರಮಣ್ಯ ಭಟ್ ಬಿ, ಎ, ಬಿ, ಎಲ್, ಎಂ, ಎಲ್ ಸಿ, ಯವರ ಅಧ್ಯಕ್ಷತೆಯಲ್ಲಿ ಜರಗಿತು.

ಪುತ್ತೂರು— ನರಿಮೊಗರು ಬೋರ್ಡು ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವದ ತೃತೀಯ ಸಮಾರಂಭವು ತಾ ೨೫-೪-೩೫ನೇ ಗುರುವಾರ ಮ. ರಾ. ರಾ, ಪುತ್ತೂರು ರೇಂಜ್ ಶಾಲೆಗಳ ಸೀನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರ್ ಬಿ, ವಿ ವೆಂಕಟ್ರಮಣ ಅವರ್ಗಳ್ ಬಿ ಎ ಎಲ್ ಟಿ, ಯವರ ಅಧ್ಯಕ್ಷತೆಯಲ್ಲಿ ಜರಗಿತು

ಕಲ್ಲಡ್ಕ—ದಿ ಮುಸ್ಲಿಂ ಜಮಾತ್ ಐಕ್ಯ ಸಂಘದ ೫ನೇ ಮಹಾ ಸಭೆಯು ಕಲ್ಲಡ್ಕ ಮೊಹಿಯುದ್ದೀನ ಮಹಜೂದಿ ವಠಾರದಲ್ಲಿ ತಾ ೧೯-೫-೩೫ನೇ ಆದಿತ್ಯವಾರ ೧೦ ಗಂಟೆಗೆ ಬಹು ವಿಜೃಂಭಣೆಯಿಂದ ನಡೆಯುವುದಾಗಿಯೂ ತತ್ಸಮಯದಲ್ಲಿ ಹಲವು ವಿದ್ಯಾವಂತ ಮಹನೀಯರ ಭಾಷಣಗಳಿರುವುದಾಗಿಯೂ ಸರ್ವರಿಗೂ ಸ್ವಾಗತವಿರುವುದಾಗಿಯೂ ಸದ್ರಿ ಸಂಘದ ಅಧ್ಯಕ್ಷರು ತಿಳಿಸುತ್ತಾರೆ

ಮೂಡುಬಿದ್ರೆ—ಜ್ಯೋತಿಷ್ಯದಲ್ಲಿ ಹೆಚ್ಚಿನ ಅನುಭವಶಾಲಿಗಳಾದ ಶ್ರೀಮಾನ್ ಪಿ ಕೆ ಜನಾರ್ದನ ಶರ್ಮರ ಸಹೋದರ ಶ್ರೀ ಪಿ ಕೆ ಹಯಗ್ರೀವನ್ ಪೋತಿಯು ತಿರುವಾಂಕೂರಿನ ಲಲಿತ ಕಲಾ ವಿದ್ಯಾಲಯದಲ್ಲಿ ವ್ಯಾಸಂಗವನ್ನು ಪೂರೈಸಿ, ಮದ್ರಾಸ್ ಸರಕಾರದ ಹಲವು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಯೋಗ್ಯವಾದ ಸರ್ಟಿಫಿಕೇಟುಗಳನ್ನು ಪಡೆದು ಬಂದಿರುವರೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ

ಉಡುಪಿ—ಇದೇ ತಾರೀಖು ೨೬ನೇ ರಾತ್ರಿ ಸುಮಾರು ೯ ಗಂಟೆಗೆ ಉಡುಪಿ ತಾಲೂಕು ಬೋರ್ಡಿನ ಮಾಜಿ ಪ್ರೆಸಿಡೆಂಟರಾಗಿದ್ದ ರಾ ಹಂದಾಡಿ ರಾಮಯ್ಯಟ್ಟಣವರು ದೈವಾಧೀನರಾದರೆಂದು ತಿಳಿಸಲು ವಿಷಾದಪಡುತ್ತದೆ ಇವರ ಆರೋಗ್ಯವು ಕೆಲವು ಸಮಯದಿಂದ ನೆಟ್ಟಗಿದ್ದಿಲ್ಲ, ಈಚೆಗೆ ಅವರನ್ನು ಅವರ ಹಂದಾಡಿ ಮನೆಗೆ ಒಯ್ಯಲಾಗಿದ್ದು, ಅಲ್ಲಿಯೇ ಮೃತಪಟ್ಟರು. ಇವರ ಕುಟುಂಬದವರೊಡನೆ ಉಡುಪಿ ನಿವಾಸಿಗಳ ಸಹಸಂತಾಪವಿರಲಿ'

ಮೇ ತಾ ೪ನೇ ರಾತ್ರಿ ೯ ಗಂಟೆಗೆ ಇಲ್ಲಿನ ರಾಮಕೃಷ್ಣ ಬಿಲ್ಡಿಂಗ್ಸಿನ ಭವ್ಯ ಥಿಯೇಟರಿನಲ್ಲಿ ಜಾರ್ಜ್ ಸಾರ್ವಭೌಮರ ರೌಪ್ಯ ಮಹೋತ್ಸವ ಧನ ಸಹಾಯಾರ್ಥವಾಗಿ ಟೇಮಿಂಗ್ ಆಫ್ ದಿ ಶ್ರೂ ಎಂಬ ಇಂಗ್ಲಿಷ್ ಕಥಾವಸ್ತುವೂ ಪುನರ್ಜನ್ಮ ಎಂಬ ಕನ್ನಡ ನಾಟಕವೂ ಅಭಿನಯಿಸಲ್ಪಡಲಿವೆ ಪ್ರವೇಶವು ಟಿಕೇಟುಗಳ ಮೂಲಕ ಸರ್ವರೂ ಪ್ರೋತ್ಸಾಹಿಸಬೇಕಾಗಿ ಕಾರ್ಯನಿರ್ವಾಹಕ ಸಮಿತಿಯವರ ಆಗ್ರಹಪೂರ್ವಕ ವಿನಂತಿಯಿದೆ

ದ. ಕ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯರಾದ ಶ್ರೀ ಎಚ್ ಸೂರಪ್ಪಯ್ಯನವರು ತಾಲೂಕು ಕಾಂಗ್ರೆಸ್ ಕಮಿಟಿಯನ್ನು ಸಂಸ್ಥಾಪಿಸುವರೆಂದೂ ಚಾಲ್ತಿ ವರುಷಕ್ಕೆ ಕಾಂಗ್ರೆಸ್ ಸದಸ್ಯರನ್ನು ಸೇರಿಸುವರೆಂದೂ ಇಲ್ಲಿಗೆ ಚಿತ್ತೈಸಿದ್ದು ತಾ ೨೯ನೇ ಸಾಯಂಕಾಲ ತುಳುನಾಡ್ ಛಾಪಖಾನೆಯ ವಠಾರದಲ್ಲಿ ಕಾಂಗ್ರೆಸು ಸದಸ್ಯರ ಸಭೆ ಸೇರಿಸಲಾಯಿತು ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯು ಸ್ಥಾಪಿಸಲಾಗಿ ಶ್ರೀ ಡಾ ಪಿ ಜಿ ಆಚಾರ್ಯರು ಅಧ್ಯಕ್ಷರಾಗಿಯೂ ಶ್ರೀ ಬಿ ಕೃಷ್ಣಯ್ಯ ಹೆಗ್ಡೆಯರು ಕಾರ್ಯದರ್ಶಿಯರಾಗಿಯೂ, ಶ್ರೀ, ಎಸ್ ಯು ಪಣಿಯಾಡಿಯವರು ಅಸಿಸ್ಟೆಂಟ್ ಕಾರ್ಯದರ್ಶಿಯರಾಗಿಯೂ ಚುನಾಯಿಸಲಾಯಿತು ಮೇ ತಾ ೧೦ನೇ ಪ್ರಾತಃ ಸುಮಾರು ೯ ಗಂಟೆಗೆ ಅಖಿಲ ಭಾರತ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿರುವ ಶ್ರೀ ಬಾಬುರಾಜೇಂದ್ರ ಪ್ರಸಾದರವರು ಕಾಂಗ್ರೆಸು ಕಾರ್ಯ ನಿರ್ವಹಣದ ಬಗ್ಗೆ ಇಲ್ಲಿಗೆ ಚಿತ್ತೈಸುವವರಿರುತ್ತಾ, ತಾಲೂಕಿನ ಮಹಾಜನರು ಅಸ್ಯರೊಳಗೆ ನೂರುಗಟ್ಟಲೆಯಲ್ಲಿ ಕಾಂಗ್ರೆಸು ಸದಸ್ಯರಾಗಬೇಕಾಗಿ ಅಪೇಕ್ಷಿಸಲಾಗುತ್ತದೆಯಲ್ಲದೆ, ಅವರನ್ನು ಸ್ವಾಗತೀಕರಿಸುವ ಬಗ್ಗೆ ಅಂಗಡಿ ಮನೆ ಬೀದಿಗಳನ್ನು ತಳಿರು ತೋರಣ ಮೊದಲಾದುವುಗಳಿಂದ ಅಲಂಕರಿಸಿ, ಅಗ್ಗೆ ನೆರೆಯಲಾಗುವ ಮಹಾ ಸಭೆಗೆ ಬಹುತೇಕವಾಗಿ ಕೂಡಿ ಬರಬೇಕೆಂದೂ ಕೋರಲಾಗುತ್ತದೆ.

ಸ್ಥಳೀಯ ಶ್ರೀ. ಪೇಜಾವರ ಮಠೀಯ ಸರಸ್ವತೀ ಭಂಡಾಗಾರಕ್ಕೋಸ್ಕರ ಹೊಸತಾಗಿ ಕಟ್ಟಿಸುತ್ತಿರುವ ಶ್ರೀ ಜ್ಞಾನಭವನದ ಕೆಲಸವು ಬಹು ರಭಸದಿಂದ ಸಾಗುತ್ತಿದೆ. ಆರಂಭೋತ್ಸವವನ್ನು ಅಖಿಲ ಕರ್ನಾಟಕ ರಾಜಕೀಯ ಪರಿಷತ್ತಿನ ಸಮಯದಲ್ಲಿ ಜರಗಿಸುವ ಆಲೋಚನೆ ಇದೆ. ಆ ಬಗ್ಗೆ ಶ್ರೀಮಾನ್ ರಾಷ್ಟ್ರಸಭಾಧಿಪತಿ ಬಾಬು ರಾಜೇಂದ್ರ ಪ್ರಸಾದರನ್ನು ಕೇಳಿಕೊಳ್ಳಲಾಗಿದೆ

ಹಿಂದೂ ಮಠಗಳ ಮಸೂದೆಯ ಕುರಿತು ಬಾಯ್ಮರೆ ಸಾಧಕ ಬಾಧಕ ಸಾಕ್ಷ್ಯಗಳನ್ನೀಯುವರೆ ಉಡುಪಿಯ ಹಿಂದೂ ಮಠಗಳ ಸಂರಕ್ಷಣಾ ಸಮಿತಿಯ ಪರವಾಗಿ ಶ್ರೀ ಎಸ್ ಯು, ಪಣಿಯಾಡಿಯವರಿಗೆ ಮದ್ರಾಸ್ ಕೌನ್ಸಿಲು ಸೆಕ್ರೆಟರಿಯವರಿಂದ ಆಹ್ವಾನಪತ್ರಿಕೆ ಬಂದಿರುವುದು ಶ್ರೀಯುತರು ಉದಕಮಂಡಲಕ್ಕೆ ಸಕಾಲದಲ್ಲಿ ಹೋಗುವವರಿದ್ದಾರೆ

ಮಲ್ಪೆ—ಮೂರು ಕ್ರಿಮಿನಲ್ ಮೊಕದ್ದಮೆಗಳು— ಮಲ್ಪೆ ಅಣ್ಣಯ್ಯ ಪೂಜಾರಿಯವರ ಮುದ್ದತಿನಿಂದ ಸದರಿಯವರ ಕಡೆಯವರು ದೋಣಿಗಳಿಗೆ ಬೆಂಕಿ ಕೊಟ್ಟಿದೆಂದು ಮಾಡಿದ ನಂಬರವು ತೀರಾ ಸುಳ್ಳು. ದ್ವೇಷಕರು ಸದರಿಯವರನ್ನು ಉಪದ್ರಕ್ಕೂ ನಷ್ಟಕ್ಕೂ ಒಳಪಡಿಸಿ ಕೀರ್ತಿಗೆ ಭಂಗತರಿಸಬೇಕೆಂಬ ಇರಾದೆಯಿಂದ ಮಾಡಿದ್ದಾಗಿ ತೀರ್ಮಾನಿಸಿ ಕುಂದಾಪುರ ಡಿವಿಜನಿನ ಜಾಯಿಂಟ್ ಮ್ಯಾಜಿಸ್ಟ್ರೇಟರು ಸದರಿ ನಂಬರವನ್ನು ಸುಳ್ಳೆಂದು ಬಿಟ್ಟುಬಿಟ್ಟರು ತಾ ೨೫-೪-೩೫ರಿಂದ ಮಂಗಳೂರಿನ ರಾವ್ ಬಹದ್ದೂರ್ ಎನ್ ಎಸ್ ಸುವರ್ಣರು ಶ್ರೀ ಅಣ್ಣಯ್ಯ ಪೂಜಾರಿಯವರ ಕಡೆಯಿಂದ ವಕಾಲತು ನಡೆಸಿದರು.

ಉಳ್ಳಾಲ—ಉಳ್ಳಾಲದ ಅದ್ವೈತಾಶ್ರಮದಲ್ಲಿ ಇದೇ ತಾ ೭-೯-೩೫ನೇ ಮಂಗಳವಾರ ಸಾಯಂ ಘಂಟೆ ೫ ೪೫ಕ್ಕೆ ಶ್ರೀಯುತ ರಾವ್ ಬಹದ್ದೂರ್ ಯು ಆನಂದರಾವ್ ಅವರ್ಗಳ್ (ಮಾಜಿ ಏಜೆಂಟ್, ಇಂಪೀರಿಯಲ್ ಬ್ಯಾಂಕ್)ರವರ ಅಧ್ಯಕ್ಷತೆಯಲ್ಲಿ ಶ್ರೀ ಶಂಕರಜಯಂತ್ಯುತ್ಸವ ಜರಗಲಿರುವುದು.

ಅದ್ವೈತ ಸಮಿತಿಯು ಈ ಮೊದಲೇ ನಿಶ್ಚಯಿಸಿದಂತೆ ಚಕ್ರವರ್ತಿ ಸಾರ್ವಭೌಮರ ರಜತೋತ್ಸವನ್ನು ಉಳ್ಳಾಲದ ಅದ್ವೈತಾಶ್ರಮದಲ್ಲಿ ಇದೇ ಬರುವ ಮೇ ತಿಂಗಳ ತಾ ೬ರಲ್ಲಿ ಜರಗಲಿರುವ ಶ್ರೀ ಶಂಕರ ಜಯಂತ್ಯುತ್ಸವ ಸಮಾರಂಭಾವಸರ ಆಚರಿಸಲ್ಪಡುವರು ಅಲ್ಲದೆ ಸಮಿತಿಯು ನಿರ್ಧರಿಸಿದಂತೆ ಮೈಸಂಯಗಳ ಸಿಲ್ವರ್ ಜುಬ್ಲೀ ಫಂಡಿಗೆ ರೂಪಾಯಿ ೧೦ನ್ನು ನಮ್ಮ ಜಿಲ್ಲಾ ಕಲೆಕ್ಟರ ದ್ವಾರಾ ರವಾನಿಸಲ್ಪಟ್ಟಿತೆಂದೂ ಸಮಿತಿಯ ಗೌ ಕಾರ್ಯದರ್ಶಿಯು ತಿಳಿಸುತ್ತಾರೆ

ಫಲಿಮಾರು—ಇದೇ ಮೇ ತಿಂಗಳ ತಾ ೧ನೇ ಬುಧವಾರ ಅಪರಾಹ್ನ ಘಂಟೆ ೪ಕ್ಕೆ ಶ್ರೀ ಅದಮಾರು ಮಠದ ಶ್ರೀ ವಿಬುಧಪ್ರಿಯ ತೀರ್ಥ ಶ್ರೀಪಾದಂಗಳವರ ದಿವ್ಯಾಚರಣೆಯೂ, ಸ್ಥಳೀಯ ಶ್ರೀ ರಾಮ ಸಾರ್ವಜನಿಕ ವಾಚನಾಲಯದ ತೃತೀಯ ವರ್ಧಂತ್ಯುತ್ಸವವೂ ಉಡುಪಿಯ ಪ್ರಸಿದ್ಧ ಡಾಕ್ಟರರೂ, ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರೂ ಆದ ಶ್ರೀಯುತ ಗುರುರಾವ ಆಚಾರ್ಯರವರ ಅಧ್ಯಕ್ಷತೆಯಲ್ಲಿ ಜರಗುವುದೆಂದು ನಿಶ್ಚಯಿಸಿರುವುದರಿಂದ ಸರ್ವರೂ ಬಂದು ಈ ಸಮಾರಂಭದಲ್ಲಿ ಭಾಗಿಗಳಾಗಬೇಕಾಗಿ ಸಂಬಂಧ ಪಟ್ಟವರ ಅಪೇಕ್ಷೆ

ಬೆಳ್ವಾಯಿ—ಸ್ಥಳೀಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತಿ ಉತ್ಸವವು ಇದೇ ಎಪ್ರಿಲ್ ತಿಂಗಳ ೨೨ನೇ ಸೋಮವಾರ ಅತಿ ವಿಜೃಂಭಣೆಯಿಂದ ಜರಗಿತು ಪುತ್ತೂರಿನ ವಕೀಲರಾದ ಶ್ರೀಮಾನ್ ಎಂ ಸದಾಶಿವರಾಯರು ಅಧ್ಯಕ್ಷರಾಗಿದ್ದರು ಅಲ್ಲದೆ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರಾದ ಶ್ರೀ ಮೊಳಹಳ್ಳಿ ಶಿವರಾಯರೂ ಮಂಗಳೂರಿನ ಶ್ರೀ ಲಕ್ಷ್ಮಣದೇವ ವಿದ್ಯಾರ್ಥಿಯವರೂ ಇನ್ನೂ ಅನೇಕ ಮಹನೀಯರೂ ನೆರೆದು ಬಂದಿದ್ದರು

ಮೂಲ್ಕಿ—ಇಲ್ಲಿಯ ಆಸ್ಪತ್ರೆಯ ನಿರಾಶ್ರಿತ ಫಂಡಿನ ವಾರ್ಷಿಕ ಮಹಾ ಸಭೆಯನ್ನು ತಾ ೫-೫-೩೫ನೇ ಆದಿತ್ಯವಾರ ಸಾಯಂಕಾಲ ೪ ಗಂಟೆಗೆ ಆಸ್ಪತ್ರೆಯ ವಠಾರದಲ್ಲಿ ಜರಗಿಸಬೇಕಾಗಿ ನಿರ್ಧರಿಸಿದ್ದರಿಂದ ಆ ಸಭೆಗೆ ಸರ್ವರೂ ಚಿತ್ತೈಸಬೇಕಾಗಿ ಈ ಮೂಲಕ ನಿರೀಕ್ಷಿಸಲಾಗುತ್ತದೆ.

ಹಿಂದೀಯರಾದ ನಾವು ಹೇಗೆ ಮೋಸಹೊಂದುವೆವು!

ಓದಿರಿ — ದೀನರಾದ ನಮ್ಮ (ಹಿಂದೀಯರ) ಅಜ್ಞಾನವನ್ನು ವಿದೇಶೀ ಕಾರ್ಖಾನೆದಾರರು ಹೇಗೆ ಸದುಪಯೋಗ ಪಡಿಸಿಕೊಳ್ಳುವರೆಂಬುದನ್ನು ತಿಳಿದುಕೊಳ್ಳಲು— ಓದಿರಿ ಇದನ್ನು!—

ನೆಲಗಡಲೆ ಎಣ್ಣೆಯು ಬಾದಾಮಿ ಎಣ್ಣೆಯಾಗಿದೆಯೆಂದು ಗೊತ್ತೇ?

ನಮ್ಮ ದೇಶದಲ್ಲಿ "ಶುದ್ಧ ಲೂಕಾ ಬಾದಾಮಿ ಎಣ್ಣೆ" ಎಂಬ ಹೆಸರಲ್ಲಿ ಮಾರಾಟಮಾಡಲ್ಪಡುತ್ತಿರುವ ಎಣ್ಣೆಯು ಬಾದಾಮಿ ಎಣ್ಣೆಯಲ್ಲ, ನಮ್ಮ ದೇಶದಿಂದಲೇ ಒಯ್ದು ನೆಲಗಡಲೆಯಿಂದ ತೆಗೆದ ಶುದ್ಧ ನೆಲಗಡಲೆ ಎಣ್ಣೆಯಾಗಿದೆ ("ಇಂಡಿಜೆನಸ್ ಡ್ರಗ್ ಒಫ್ ಇಂಡಿಯಾ" ಇದರ ಪುಟ 59ನ್ನು ನೋಡಿ)

ವನಸ್ಪತಿ ತೈಲವಲ್ಲ – ಮೀನಿನ ತೈಲ' ತಿಳಿಯಿತೇ?

"ಇಂಪೀರಿಯಲ್ ಕೌನ್ಸಿಲ್ ಒಫ್ ಅಗ್ರಿಕಲ್ಚರಲ್ ರಿಸರ್ಚ್" ಇದರ "ಇಂಡಿಯನ್ ಓಯಿಲ್ ಕ್ರಷಿಂಗ್ ಇಂಡಸಿ ಕಮಿಟಿ"ಯ ತೃತೀಯ ಸಭೆಯಲ್ಲಿ, ಪ್ರಕೃತ ಪರದೇಶದಿಂದ "Edible Hardened Oil" (ಆಹಾರಕ್ಕುಪಯೋಗಿಸಬಹುದಾದ ತೈಲ) ಎಂಬ ಚೀಟನ್ನು ಹಚ್ಚಿಸಿ, ಪರದೇಶಗಳಿಂದ ಮತ್ಸ್ಯತೈಲವನ್ನು ಹಿಂದೂದೇಶಕ್ಕೆ ಆಮದು ಮಾಡಿ "ಸಸ್ಯತೈಲ"ವೆಂಬುದಾಗಿ ಮಾರಾಟಮಾಡುತ್ತಿರುವರೆಂದು ಬಯಲಾಯಿತು ಆದರೆ,—

ಸತ್ತ ಹೆಗ್ಗಣಗಳ, ಬೆಕ್ಕುಗಳ, ನಾಯಿಗಳ ಮತ್ತು ದನ ಇತ್ಯಾದಿಗಳ ಕೊಬ್ಬಿನಿಂದಾಗುವ 'ಸಾಬೂನುಗಳು'—

ಇವುಗಳಿಗೆ ಸರಿಗಟ್ಟುವಂತಹುದು ಮತ್ತಾವುದಿದೆ? ಯುರೋಪಿನಲ್ಲಿ ಮೃಗಗಳ ಕೊಬ್ಬನ್ನು ಮೀನು ಎಣ್ಣೆಯನ್ನೂ ಆಹಾರಕ್ಕಾಗಿ ಉಪಯೋಗಿಸುತ್ತಿರುವಲ್ಲಿ ಸಾಬೂನುತಯಾರಿಯಲ್ಲಿ ಉಪಯೋಗಿಸುವ ಹೆಚ್ಚಿನ ಕೊಬ್ಬುಗಳು ಸತ್ತ ಮೃಗಗಳ ಶರೀರಗಳಿಂದಲೂ, ವಧಾಖಾನೆಗಳಿಂದಲೂ, ರಸ್ತೆಗಳ 'ಕಚರಾ'ದಿಂದಲೂ, ಒಮ್ಮೊಮ್ಮೆ ನರದೇಹಗಳಿಂದಲೂ ದೊರಕಿಸಿಕೊಂಡಂಥವುಗಳಾಗಿವೆ (ಸರ್ ಎಫ್ ಎ ಟಾಲ್ಬೂಟರವರ "ಮಿಲ್ಲಿಯನ್ಸ್ ಫ್ರಾಮ್ ವೇಸ್ಟ್" ಎಂಬ ಗ್ರಂಥವನ್ನೋದಿರಿ)

ಗೋದ್ರೆಜ್ ವನಸ್ಪತಿ ಸುಗಂಧಸಾಬೂನುಗಳ

ವಿಷಯವಾಗಿ, ಅದನ್ನುಪಯೋಗಿಸುವ ಪ್ರಸಿದ್ಧ ಪುರುಷರೇನು ಹೇಳುವರೋ ಓದಿ.

ಕವಿರವೀಂದ್ರ.— "ಗೋದ್ರೆಜ್ ಸಾಬೂನುಗಳಿಗಿಂತ ಉತ್ತಮವಾದ ವಿದೇಶೀ ಸಾಬೂನುಗಳನ್ನು ನಾನು ಕಂಡಿಲ್ಲ. ಇನ್ನು ಮುಂದೆ ಗೋದ್ರೆಜ್ ಸಾಬೂನುಗಳನ್ನ ಉಪಯೋಗಿಸಲು ನಿರ್ಧರಿಸಿದ್ದೇನೆ

ಕೆಲ ವರ್ಷಗಳ ಹಿಂದೆ **ಡಾ। ಅನ್ನಿಬಿಸೆಂಟರು** ತಮ್ಮ "ನ್ಯೂ ಇಂಡಿಯಾ"ದ ಪತ್ರಿಕೆಯಲ್ಲಿ ಗೋದ್ರೆಜ್ ಸಾಬೂನುಗಳು ಪ್ರಪಂಚದಲ್ಲಿ ಅತ್ಯುತ್ಕೃಷ್ಟವೆಂದು ಪ್ರಶಂಸಿಸಿದ್ದರು

ರಾಷ್ಟ್ರೀಯ ಮ. ಹಾಸಭೆಯ ಮಾಜಿ ಅಧ್ಯಕ್ಷರಾದ ಡಾ। ಅನ್ಸಾರಿಯವರು— ಗೋದ್ರೆಜ್ ಸಾಬೂನುಗಳ ವಿಷಯವಾಗಿ ಹೇಳುವರು —"ಗೋದ್ರೆಜ್ ಸಾಬೂನುಗಳ ಉತ್ತಮ ಗುಣಗಳನ್ನು ಗುರುತಿಸಲು ನನಗೆ ಅತ್ಯಾನಂದವಾಗುತ್ತದೆ ನಾನು ಅವುಗಳನ್ನು ಕಳೆದ ಹತ್ತು ವರ್ಷಗಳಿಂದಲೂ ಉಪಯೋಗಿಸುತ್ತಿದ್ದು, ಪರದೇಶದ ಉತ್ತಮೋತ್ತಮ ಸಾಬೂನುಗಳಿಗಿಂತಲೂ ಉತ್ಕೃಷ್ಟವೆಂಬುದನ್ನು ಮನಗಂಡಿದ್ದೇನೆ. ಅವುಗಳು ಹಿಂದೂದೇಶದಲ್ಲಿ ಸಿದ್ಧವಾಗುತ್ತಿರುವುದಕ್ಕೂ ಅವುಗಳ ಉತ್ಕೃಷ್ಟತೆಯ ದೆಸೆಯಿಂದಲೂ ಹಿಂದೀಯರೆಲ್ಲ ಅವುಗಳನ್ನೇ ಉಪಯೋಗಿಸಬೇಕೆಂದು ನನ್ನ ಸಲಹೆ."

ಗೋದ್ರೆಜ್ ಗಂಧದ ಸಾಬೂನು ಮತ್ತು ಶೇವಿಂಗ್ ಸ್ಟಿಕ್ } ಇವುಗಳನ್ನು ಉಪಯೋಗಿಸಿರಿ.

ಸೋಲ್ ಏಜಂಟರು:

ನಾದಿರ ಷಾ ಪ್ರಿಂಟರ್ ಎಂಡ್ ಕೊ, ... ಬ್ರೋಡ್ವೆ, ಮದರಾಸು.

ಹೆಡ್ ಆಫೀಸು: ಮುಂಬಯಿ. ಇತರ ಶಾಖೆಗಳು— ಕಲ್ಕತ್ತಾ ಲಾಹೋರ್ ಮತ್ತು ಕರಾಚಿ

ವಿ. ಸೂ:—ಗೋದ್ರೆಜ್‌ರವರ ಹೆಸರಲ್ಲಿ ಮಾರಾಟವಾಗುತ್ತಿರುವ ಒಂದ್‌ಸೋಪ್ ಮತ್ತು ಇತರ ಬಟ್ಟೆಯೊಗೆಯುವ) ಸಾಬೂನುಗಳಲ್ಲಿ ಗೋದ್ರೆಜ್‌ರವರಿಗೆ ಸಂಬಂಧವಿಲ್ಲ

Comfortable like an Aeroplane

Use our swadeshi Mosquitonet for health, Comfort and sound sleep, as if you are in an Aeroplane. Sample cutting free. More convenient if some advance sent with order

L.	B	H	Price.	Best.
6 Ft.	3½ Ft.	3½ Ft.	Rs. 1/12	2/8
6 „	4 „	4 „	„ 2/4	3/-
6½ „	4½ „	4½ „	„ 2/8	3/8
7 „	5 „	5 „	„ 3/2	4/10
7½ „	6 „	6 „	„ 4/4	5/12

G N Sharma, Post Box F 6706 Calcutta.

ಗುಪ್ತ ಮಹಾಮಂತ್ರ.

ಅತ್ಯಂತ ಫಲಕಾರಿ

ಇದನ್ನು ಉಚ್ಚರಿಸಿದ ಮಾತ್ರದಲ್ಲಿ ಎಂತಹ ಕಷ್ಟ ಕೆಲಸವೂ ಸುಲಭವಾಗುವುದು ಸ್ತ್ರೀ ಪರೀಕ್ಷೆಯಲ್ಲಿ ವಿಜಯ, ಕೋರ್ಟು ವ್ಯವಹಾರದಲ್ಲಿ ಗೆಲುವು, ನೌಕರಿಯಲ್ಲಿ ಜಯ, ಪ್ರಗತಿ, ಮಕ್ಕಳ ಐಶ್ವರ್ಯವೆಲ್ಲ ಲಭ್ಯವಾಗುತ್ತದೆ ಇದು ನಿಮ್ಮನ್ನು ಅದೃಷ್ಟಶಾಲಿಗಳನ್ನಾಗಿ ಮಾಡುತ್ತದೆ

2 ರೂಪಾಯಿಗಳನ್ನು ಕಳುಹಿಸಿ ಅಥವಾ ... 10 ರೂಪಾಯಿ ...

Prasidha Mantra Asram,
N ... P O Katrisari Gay

The Canara Public Conveyance Company, Ltd., Mangalore.

WE TAKE UTMOST CARE OF PASSENGERS

Read the following letter :—

Modern Hindu Hotel,
Calicut, 17—6—1934

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,
(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance. Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
— ಮೂಡಿಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಮಲೆನಾಡು ವಾರ್ತೆಗಳು.

(ನಮ್ಮ ಸ್ವಂತ ಪ್ರತಿನಿಧಿಗಳಿಂದ)

ಕೊಪ್ಪಾ ತಾಲೂಕು ಕಿಗ್ಗಾ ಋಷಿ ಶೃಂಗೇಶ್ವರ ದೇವರ ರಥೋತ್ಸವ

ಚೈತ್ರ ಶುದ್ಧ ಸಪ್ತಮಿ ತಾ. ೧೦-೪-೩೪ ಆದ್ರಾ್ರ ನಕ್ಷತ್ರದಲ್ಲಿ ವರ್ಷಂಪ್ರತಿ ನಡೆಯಬೇಕಾದ ಕಿಗ್ಗಾ ಋಷಿ ಶೃಂಗೇಶ್ವರ ಸ್ವಾಮಿಯ ರಥೋತ್ಸವದ ಏರ್ಪಾಟು ಮಾಡಲಾಗಿತ್ತು ಈಗ್ಯೆ ಕೆಲವು ಸಂವತ್ಸರಗಳಿಂದ ಯಾವುದೋ ನೆವದಿಂದ ಬ್ರಾಹ್ಮಣವೃಂದದವರಿಗೂ, ವೈಶ್ಯ ವೃಂದದವರಿಗೂ ಜಾತಿವೈಷಮ್ಯವು ಹುಟ್ಟಿ ರಥೋತ್ಸವವೇ ನಡೆಯುತ್ತಿಲ್ಲ. ಘನ ಸರಕಾರದವರೇನೋ ಮಾಮೂಲಿನಂತೆ ಬ್ರಾಹ್ಮಣರೊಂದಿಗೆ ವೈಶ್ಯರೂ ಸೇರಿ ರಥೋತ್ಸವವನ್ನು ಜರಗಿಸಬಹುದೆಂದು ಬಗೆದು ರಥವನ್ನು ಎಳೆಯಬಹುದೆಂದು ಅಪ್ಪಣೆ ದಯಪಾಲಿಸಿರುವುದಾಗಿ ತಿಳಿಯಬರುತ್ತದೆ ಈ ದೇವಸ್ಥಾನವು ಮುಜರಾಯಿ ಇಲಾಖೆಯದ್ದೆಂದೂ ಸುಮಾರು ೬೦೦ ರೂಪಾಯಿಗಳು ಈ ರಥೋತ್ಸವದ ಪ್ರಯುಕ್ತ ವಿನಿಯೋಗಿಸಲ್ಪಡುವುದೆಂದು ತಿಳಿದುಬರುತ್ತದೆ ಯಾಮುದರಿಂದಲೂ, ಘನ ಸರಕಾರದ ಪ್ರತಿನಿಧಿಗಳಾದ ಮೆ| ಅಮಲ್ದಾರರೂ, ಪೋಲೀಸ್ ಇನ್ಸ್‌ಪೆಕ್ಟರವರೂ ಮತ್ತು ಪೋಲೀಸ್ ಸಬ್ ಇನ್ಸ್‌ಪೆಕ್ಟರವರೂ ರಥೋತ್ಸವ ಸಮಾರಂಭದ ಪ್ರಯುಕ್ತ ಹಾಜರಿದ್ದರು. ರಥಾರೋಹಣವಾದ ಕೂಡಲೇ ಬ್ರಾಹ್ಮಣ ವೃಂದದವರಿಗೇರ್ಪಡಿಸಲ್ಪಟ್ಟಿದ್ದ ವಸತಿಗಳಿಗೆ ಬ್ರಾಹ್ಮಣರು ಆಹ್ವಾನಿಸಲ್ಪಡಲು, ಇತರರೂ ಅವರವರು ಏರ್ಪಡಿಸಿಕೊಂಡಿದ್ದ ವಸತಿಗಳಿಗೆ ತೆರಳಿದರು ನಂತರ ಮೆ. ಅಮಲ್ದಾರರೇ ಮೊದಲಾದ ಸರಕಾರಿ ಪ್ರತಿನಿಧಿಗಳು ರಥೋತ್ಸವ ನಡೆಯಲು ಅಪ್ಪಣೆ ಮಾಡಲು, ಬ್ರಾಹ್ಮಣವೃಂದವರು, ವೈಶ್ಯರು ಬ್ರಹ್ಮರಥವನ್ನು ಎಳೆಯುವುದಾದರೆ ತಾವು ಎಳೆಯುವುದಿಲ್ಲವೆಂತಲೂ, ವೈಶ್ಯರೇ ಎಳೆಯಲೆಂದೂ, ಇಲ್ಲವಾದರೆ ಬ್ರಹ್ಮರಥದ ಗಡಿಯ ವರೆಗೂ ಬ್ರಾಹ್ಮಣರು ಮಾತ್ರ ಎಳೆದು ನಂತರ ಹೇಗೆ ಬೇಕಾದರೂ ಇತರರು ಎಳೆಯಬಹುದೆಂದೂ ತಿಳಿಸಿದರು ವೈಶ್ಯರು ಸಮ್ಮತಿಸಲಿಲ್ಲ ಇತರರು, ತಾವು ಯಾರೊಂದಿಗೆ ಬೇಕಾದರೂ ಎಳೆಯುತ್ತೇವೆಂದೂ ತಿಳಿಸಿದ ಛಲ್ಲದೆ, ಯಾರೂ ಸೇರದೆ ಇದ್ದರೂ ಬ್ರಾಹ್ಮಣರು ಅಪ್ಪಣೆ ಕೊಟ್ಟರೆ ತಾವೇ ಎಳೆಯುವುದಾಗಿಯೂ ತಿಳಿಸಿದರು ಎಲ್ಲರೂ ಅವರಿಗೆ ಅವರವರಿಂದಲೇ ಏರ್ಪಡಿಸಲಾಗಿದ್ದ ಸಂತರ್ಪಣೆಗಳಿಗೆ ತೆರಳಿದರು. 'ರಥೋತ್ಸವಕ್ಕಾಗಿ ಬಂದವರಿಗೆಲ್ಲಾ ಸಂತರ್ಪಣಾದಿಗಳೂ, ದೇವತಾಕಾರ್ಯಕ್ಕೆ ಚ್ಯುತವೂ ಬಿತ್ತು' ಅದೇ ರಾತ್ರಿ ಸುಮಾರು ೩ ಘಂಟೆಯ ಸಮಯಕ್ಕೆ ನಾಡರವರೇ ಮಾಮೂಲಿನಂತೆ ರಥವನ್ನು ಎಳೆದರು

ಈ ಮಲೆನಾಡಿನ ಪ್ರದೇಶಕ್ಕೆ ಸಕಾಲಕ್ಕೆ ಮಳೆಸುರಿಸಿ ಪ್ರಜೆಗಳ ಜೀವನೋಪಾಯವನ್ನು ಕಲ್ಪಿಸಿಕೊಡುತ್ತಿರುವ ಈ ಋಷಿ ಶೃಂಗೇಶ್ವರ ದೇವರ ಕಾರ್ಯಕ್ಕೆ ವರ್ಷಂಪ್ರತಿ ಇದೇ ರೀತಿಯಲ್ಲಿ ವಿಘ್ನಗಳು ಬರುತ್ತಿರುವುದರಿಂದ, ಸಕಾಲಕ್ಕೆ ಮಳೆಯಿಲ್ಲದೆ, ಬೆಳೆಯತಕ್ಕ ಪೈರುಗಳಿಗೆ ಸರಿಯಾದ ಬೆಲೆಯಿಲ್ಲದೆ ಕ್ಷಿಪ್ರದಲ್ಲಿಯೇ ಮಹಾ ಕಷ್ಟವು ತಲೆದೋರುವಂತಿದೆ ಆದುದರಿಂದ ಘನ ಸರಕಾರದವರು ಅಪ್ಪಣೆ ಕೊಡಿಸಿರುವಂತೆ ದೇವತಾಕಾರ್ಯವನ್ನೂ ಬಂದೊದಗಿರತಕ್ಕ ವೈಷಮ್ಯವನ್ನೂ ಇತ್ಯರ್ಥ ಮಾಡಿಸಿ ಈ ಸಂವತ್ಸರದಲ್ಲಿ ಮತ್ತೊಮ್ಮೆ ಸಾಂಗವಾಗಿ ನೆರವೇರುವಂತೆ ಏರ್ಪಡಿಸುವರಾಗಿಯೂ, ಈ ದೇವರ ಭಕ್ತಾದಿಗಳಿಗೆ, ಸರಕಾರದ ಸ್ತಂಭದೋಪಾದಿಯಲ್ಲಿರುವ ರೈತಾಪಿಗಳಿಗೆ ಬಂದೊದಗಿರತಕ್ಕ ಆರ್ಥಿಕ ಮತ್ತು ಇತರ ದುರ್ಘಟನೆಗಳನ್ನು ಸಂಹರಿಸಿ ಕಾಪಾಡುತಾ ಾಗಿ ಬಡಪಾದಗಳಾದ ರೈತಾಪಿಗಳು ನಂಬಿ ಘನ ಸರಕಾರದವರಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ ಘನ ಸರಕಾರದವರು ಈ ಪುರೋಭಿವೃದ್ಧಿಯ ಕಾರ್ಯವನ್ನು ಕೂಡಲೇ ವಿಮರ್ಶಿಸಿ ನಡೆಸಿ ರೈತಾಪಿಗಳನ್ನು ಕಾಪಾಡುವರಾಗಿ ನಂಬಿಕೆ

ಪ್ರಜಾ ಹಿತೈಷಿ.

ಕೊಪ್ಪಾ ತಾಲೂಕು ಬಡ ರೈತರ ಮೊರೆ.

ಕೊಪ್ಪಾ ತಾಲೂಕು ರೈತಾಪಿಗಳು ಘನ ಕೊಂದಿದ ಶ್ರೀಮನ್ಮಹಾರಾಜಾ ಸರಕಾರದ ಜನಾಬಿಗೆ ಖುದ್ದು ತಾ ೨೭-೧-೩೪ರಲ್ಲಿಯೂ, ಕಡೂರು ಜಿಲ್ಲಾ ತರೀಕೆರೆ ಸಬ್ ಡಿವಿಜನ್ ಆಫೀಸರರ ಮೂಲಕ ಸದ್ರಿ ಜಿಲ್ಲಾ ಡಿಪ್ಯುಟಿ ಕಮಿಷನರವರಿಗೆ ತಾ ೨೮-೧-೩೪ರಲ್ಲಿಯೂ, ಡಿಪ್ಯುಟಿ ಕಮಿಷನರರಿಗೂ, ಶ್ರೀಮನ್ಮಹಾರಾಜರ ಜನಾಬಿಗೂ ಪುನಃ ಖುದ್ದು ತಾ ೨-೪-೩೪ ರಲ್ಲಿಯೂ ಮತ್ತು ರೆವಿನ್ಯೂ ಕಮಿಷನರ್ ಸಾಹೇಬರ ಜನಾಬಿಗೆ ಡಿಪ್ಯುಟಿ ಕಮಿಷನರರ ಮೂಲಕ ತಾ ೬-೬-೩೪ರಲ್ಲಿಯೂ ರಿಜಿಸ್ಟ್ರೇಷನ್ ಅಕ್ನಾಲೆಡ್ಜ್‌ಮೆಂಟ್ ಮೂಲಕ ತಾ, ೧-೪-೩೪ನೇ ಸ್ವದೇಶಾಭಿಮಾನಿಯಲ್ಲಿ "ನಿರ್ಭಾಗ್ಯ ಮಲೆನಾಡು ರೈತರು' ಎಂಬ ಶಿರೋನಾಮೆಯಲ್ಲಿ ಪ್ರಕಟಿಸಲ್ಪಟ್ಟಿದ್ದ ಲೇಖನದಲ್ಲಿ ನಮೂದಿಸಿದಂತೆ ಅರಿಕೆ ಮಾಡಿಕೊಂಡು 'ಪ್ರಜಾ ಹಿತೈಷಿ' ಸುಬ್ರಹ್ಮಣ್ಯಂರವರಿಂದ ರೈತಾಪಿಗಳ ಕೋರಿಕೆಯಂತೆ ಸದ್ರಿ ಅಧಿಕಾರಿಗಳಿಗೆ ರವಾನಿಸಲ್ಪಟ್ಟಿತು ಈ ತಾರೀಖು ವರೆಗೂ ಯಾವ ತರದ ಉದಾರ ಸಹಾಯದ ಪ್ರತ್ಯುತ್ತರವೂ ಘನ ಸರಕಾರದವರಿಂದ ಬರಹ ಮೂಲಕ ಬಂದಿರುವುದಿಲ್ಲ ಕಾರಣವು ತಿಳಿಯದು.

ರೈತಾಪಿಗಳ ಮೇಲೆ ಘನ ಸರಕಾರದವರು ಕರುಣೆಯ ದೃಷ್ಟಿಯನ್ನು ಬೀರದೆ, ರೈತಾಪಿಗಳ ಕೋರಿಕೆಯಂತೆ ಅವರ ಅರಿಕೆಯನ್ನು ಘನ ಸರಕಾರಕ್ಕೆ ಅರ್ಪಿಸಿದ ಪ್ರಜಾ ಹಿತೈಷಿ' ಸುಬ್ರಹ್ಮಣ್ಯಂರವರನ್ನು ಇದೇ ಜಿಲ್ಲಾ ಡಿಪ್ಯುಟಿ ಕಮಿಶನರ್ ಸಾಹೇಬರವರು ತಾ ೧೬ನೇ ದಿನ ಶೃಂಗೇರಿಯಲ್ಲಿ ಕಾಣಬೇಕೆಂದು ಅಪ್ಪಣೆಯಿತ್ತ ಪ್ರಕಾರ ಸದ್ರಿ 'ಪ್ರಜಾ ಹಿತೈಷಿ' ಸುಬ್ರಹ್ಮಣ್ಯರವರು ಹಾಜರಿದ್ದರು ಸದ್ರಿ ಸಾಹೇಬರು ತಮ್ಮ ಪರಿವಾರದೊಡನೆ ಆ ದಿನ ಶೃಂಗೇರಿಗೆ ಸುಮಾರು ೩೦ ಮೈಲು ದೂರವಿರುವ ಗಂಗಾಮೂಲಕ್ಕೆ ಹೋಗಿ ಬರಲು ಸಾವಕಾಶವಾದುದರಿಂದ, ತಾ ೧೭ನೇ ಬೆಳಿಗ್ಗೆ ಸದ್ರಿ 'ಪ್ರಜಾ ಹಿತೈಷಿ'ಗಳು ಮೆ| ಡಿಪ್ಯುಟಿ ಕಮಿಶನರರನ್ನು ಭೇಟಿಮಾಡಲು, ಮೆ| ಡಿಪ್ಯುಟಿ ಕಮಿಶನರ್‌ರವರು ಪ್ರಜಾಹಿತೈಷಿಗಳು' ಇನ್ನು ಮುಂದೆ ರೈತಾಪಿಗಳ ವಿಷಯದಲ್ಲಿ ಕಂದಾಯದ ಬಗ್ಗೆ ಪ್ರಶಂಸೆ ಮಾಡಿದಲ್ಲಿ ಘನಸರಕಾರದ ಕಾನೂನಿನ ಪ್ರಕಾರ ತಮ್ಮ ಚಳಿಯಿಂದಲೇ ಗಡೀಪಾರು ಮಾಡುವುದಾಗಿಯೂ ರೈತಾಪಿಗಳ ವಿಷಯ ಪ್ರಶಂಸೆ ಮಾಡದೆ ಇದ್ದರೆ ಪ್ರಜಾ ಹಿತೈಷಿಗಳ ಚರಕ ಪ್ರಚಾರಕ್ಕೆ ಸಹಾಯ ಮಾಡಲು ಪ್ರಯತ್ನಿಸಲು ಬಹುದೆಂದು ಜೊತೆಯಲ್ಲಿದ್ದ ಮೆ| ಸಬ್ ಡಿವಿಜನ್ ಆಫೀಸರವರಿಗೆ ಹುಕುಂ ದಯಪಾಲಿಸಿದರು ನಂತರ ಮೆ| ಡಿಪ್ಯುಟಿ ಕಮಿಶನರ್ ಸಾಹೇಬರವರು 'ಪ್ರಜಾ ಹಿತೈಷಿ'ಗಳು ತಯಾರಿಸುತ್ತಲಿರುವ ನೂತನ ಮಾದರಿಯ ಚರಕವನ್ನು ತಾವು ಅಪೇಕ್ಷಿಸಿದಂತೆ ನೋಡಲು ಹೋದರು ನೋಡಿ ಸಬ್ ಡಿವಿಜನ್ ಆಫೀಸರರವರಲ್ಲಿ ಪ್ರಜಾ ಹಿತೈಷಿಗಳ ಚರಕ ಪ್ರಚಾರದ ಬಗ್ಗೆ ಬೇಕಾದ ಸಹಾಯಗಳನ್ನು ಸದ್ರಿ ಸಬ್ ಡಿವಿಜನಿನಿಂದ ಒದಗಿಸಿ ಕೊಡಲು ಅಪ್ಪಣೆಯನ್ನು ದಯಪಾಲಿಸಿ ನರಸಿಂಹಪುರದ ಮಾರ್ಗವಾಗಿ ಚಿಕ್ಕಮಗಳೂರಿಗೆ ಪಯಣ ಬೆಳೆಸಿದರು

ಬಡ ರೈತಾಪಿಗಳ ಪರವಾಗಿ ಕೆಲಸ ಮಾಡಲು ಕುತೂಹಲಿಗಳಾಗಿದ್ದ ಪ್ರಜಾಹಿತೈಷಿಗಳ ಮೇಲೆ ಮೆ| ಡಿಪ್ಯುಟಿ ಕಮಿಷನ್‌ರವರು ಕೊಡಿಸಿದ ಹುಕುಂನ್ನು ನೋಡಿದರೆ ವಿಷಾದವಾಗಿರುತ್ತದೆ. ಸದ್ರಿ ಪ್ರಜಾಹಿತೈಷಿಗಳು ಈ ಹಿಂದೂ ಮೈಸೂರು ದೇಶದಲ್ಲಿ ದಿವಾನರಾಗಿದ್ದ ದಿವಂಗತ ಸರ್ ಕೆ. ಶೇಷಾದ್ರಿ ಅಯ್ಯರ್‌ರವರ ವಂಶೀಕರೆಂಬುದಾಗಿ ತಿಳಿದು ಬರುತ್ತದೆಯಾದುದರಿಂದ ಅವರಿಗೆ ಬಡ ರೈತರ ಕಷ್ಟ ಪರಿಹಾರದ ಕೆಲಸದಿಂದ ಹಿಂದುಳಿಯಲು ಪ್ರಥೆಗೀಡಾಗಿರುತ್ತಾರೆ. ರೈತಾಪಿಗಳೇ ಮುಂದುವರಿಯುವುದೆಂದರೆ ಘನ ಸರಕಾರದವರು ನಿರ್ದಾಕ್ಷಿಣ್ಯದಿಂದ ೩೯ನೇ ಸೆಕ್ಷನ್ ಜಾರಿ ಮಾಡುತ್ತಾರೆ. ಘನ ಸರಕಾರಕ್ಕೆ ರಾಜಾದಾಯವನ್ನು ಕೆರುತ್ತಾ, ಸರಕಾರದ ಬೆನ್ನೆಲುಬಿನಂತಿರುವ ರೈತಾಪಿಗಳು ಆರ್ಥಿಕ ಮತ್ತು ಇತರ ಮುಗ್ಗಟ್ಟಿನ ದುರ್ಘಟನೆಗಳಿಗೆ ತುತ್ತಾಗಿರುವಾಗ ರಿಯಾಯತಿಗಳನ್ನು ಘನ ಸರಕಾರದವರಲ್ಲಿ ಬೇಡುವುದೂ ಒಂದು ತಪ್ಪೇ? 'ಪ್ರಜಾಹಿತೈಷಿ'ಗಳ ನಂತರ ಮತ್ತಾರು ಬಡ ರೈತಾಪಿಗಳ ಪರವಾಗಿ ಹೆಣಗಾಡಲು ಸಿದ್ಧರಿದ್ದಾರೆ? ರೈತಾಪಿಗಳು ಈ ಬಗ್ಗೆ ತಮ್ಮ ಬುದ್ಧಿ, ಶಕ್ತಿ, ಸಹಾಯಗಳನ್ನು ಒದಗಿಸಲು ಸಿದ್ಧರಾಗುವರೇ? ಇಲ್ಲವೇ ಘನ ಸರಕಾರದವರೇ ಬಡ ರೈತಾಪಿಗಳ ಮೇಲೆ ಕರುಣೆಯನ್ನಿಟ್ಟು "ಪ್ರಜಾ ಹಿತೈಷಿ'ಗಳ ಮೂಲಕ ರವಾನಿಸಲಾಗಿದ್ದ ಅಹ್ವಾಲ್ ಅರ್ಜಿಗಳಿಗೆ ಮನವಿಯನ್ನು ಕೊಟ್ಟು ಬಡ ರೈತಾಪಿಗಳನ್ನು ಕಾಪಾಡುವರೇ?

'ಒಬ್ಬ ಬಡ ರೈತ'

೬ನೇ ಕರ್ನಾಟಕ ಸ್ತ್ರೀ ಸಮ್ಮೇಳನದ ಮುಂದೆ ತರುವುದಕ್ಕಾಗಿ ಸ್ವಾಗತ ಕಮಿಟಿಯಲ್ಲಿ ಚರ್ಚಿಸಿ ಮುಂದೆ ತಂದ ಠರಾವುಗಳು

೧ ಪ್ರಕೃತ ಮದ್ರಾಸು ಕೌನ್ಸಿಲಿನ ಮುಂದಿರುವ ಅಳಿಯ ಸಂತಾನ ಬಿಲನ್ನು ಸ್ತ್ರೀ ಸಮ್ಮೇಳನವು ಮಂಜೂರು ಮಾಡಿ ಅದು ಕಾನೂನಾಗಿ ಜ್ಯಾರಿಗೆ ಬರಬೇಕೆಂದು ಕೋರುತ್ತದೆ

೨ ಆಸ್ತಿ ಮತ್ತು ಇತರ ಅಧಿಕಾರಗಳ ವಿಷಯದಲ್ಲಿ ಪುರುಷರ ಸಮಾನಸ್ಥಾನವನ್ನು ಸ್ತ್ರೀಯರಿಗೂ ಇರಿಸುವಂತೆ ಹಿಂದುಗಳಲಿನ ವಿವಾಹಗಳು ಪ್ರತ್ಯೇಕ ವಿವಾಹ ಕಾನೂನಿನ ಮೇರೆಗೆ ರಿಜಿಸ್ಟ್ರಿಯಾಗಬೇಕೆಂದೂ ಬಲವಾಗಿ ಅಪೇಕ್ಷಿಸುತ್ತದೆ

೩ ಮಜೂರರಲ್ಲಿ ಪುರುಷರಿಗೂ ಸ್ತ್ರೀಯರಿಗೂ ಪ್ರಕೃತ ತೋರುವ ಸಂಬಳದ ಹಾಗೂ ಇತರ ಸಂಕಷ್ಟಗಳ ವಿಚಾರದಲ್ಲಿನ ಮಾನವಾದ ಹಕ್ಕುಗಳು ದೊರೆಯುವಂತೆ ಆ ಮಜೂರರ ಮೇಲೆ ಈಗ ವಾಡಿಕೆಯಲ್ಲಿರುವ ಸ್ಥಿತಿಗಳನ್ನು ಪರಿಶೀಲಿಸಿ ಬದಲು ಮಾಡುವುದಕ್ಕೆ ಬೇಕಾದ ವಿಚಾರಣಾ ಕಮಿಟಿಯೊಂದನ್ನು ಸ್ಥಾಪಿಸಬೇಕಾಗಿರುತ್ತದೆ

೪ ಹೆಮ್ಮಕ್ಕಳಿಗೆ ಪ್ರತ್ಯೇಕ ಶಾಲೆಗಳಿದ್ದರೂ ಅವರು ಹೈಸ್ಕೂಲುಗಳಲ್ಲಿ ಕಲಿಯುವುದರ ಕಾರಣಗಳನ್ನು ತಿಳಿಯುವುದಕ್ಕಾಗಿ ಒಂದು ವಿಚಾರಣಾ ಕಮಿಟಿಯನ್ನು ಸ್ಥಾಪಿಸುವ ಹಾಗೂ ಅಗತ್ಯವಿದ್ದಲ್ಲಿ ಹುಡುಗರ ಶಾಲೆಗಳಲ್ಲಿಯೇ ಅವರ ವೃದ್ಧಿಗೆ ಬೇಕಾದ ಹೆಚ್ಚಿನ ಅನುಕೂಲತೆಗಳನ್ನು ಒದಗಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತದೆ

೫ ಜಿಲ್ಲೆಯಲ್ಲಿ ಮೊದಲಾಗಿ ಮುನಿಸಿಪಾಲಿಟಿಗಳಲ್ಲಿಯೂ ಆ ಮೇಲೆ ನಿಧಾನವಾಗಿ ಹಳ್ಳಿಗಳಲ್ಲಿಯೂ ಹೆಚ್ಚುವಂತೆ ಪ್ರಾಥಮಿಕ ಶಿಕ್ಷಣವನ್ನು ಧರ್ಮಾರ್ಥವಾಗಿ ಯಾ ಕಡ್ಡಾಯವಾಗಿಯೂ ಕೊಡಿಸುವಂತೆ ಸರಕಾರವನ್ನು ಕೇಳಿಕೊಳಬೇಕು

೬. ಇತ್ತೀಚೆಯ ರಿಸೆಟ್ಲ್‌ಮೆಂಟು ತಿಜಿಲ್ಲೆಯ ಪ್ರಜೆಗಳಿಗೆ ಕಠಿಣ ತರ ಭಾರವಾಗಿರುವುದರಿಂದ ಹಿಂದಿನ ತರದ ಕೀವೆಯನ್ನೇ ಸ್ಥಾಪಿಸುವಂತೆ ಮನಸ್ಸು ಮಾಡಬೇಕಾಗಿ ಸರಕಾರವನ್ನು ಕೇಳಿಕೊಳ್ಳುತ್ತದೆ

೭. ಬಡಬಗ್ಗರಿಗೆ ಪ್ರಯೋಜನ ಸಿಕ್ಕುವಂತೆ ಸ್ವದೇಶಿ ಸಾಮಾನುಗಳನ್ನು ಮಾತ್ರ ಉಪಯೋಗಿಸಬೇಕು ಮತ್ತು ಪ್ರೋತ್ಸಾಹಿಸಬೇಕು. ಹೊರತು ಪಾರ್ಲಿಮೆಂಟಿನ ಮುಂದಿರುವ ಇಂಡಿಯಾ ಬಿಲಿನಲ್ಲಿ ಸೇರಿಸಿರುವ ಪ್ರಕೃತದ ಫ್ರಾಂಚಾಯಿಸ್ (ವೋಟು ಕೊಡುವ ಪದ್ಧತಿ) ಅಯೋಗ್ಯವೂ ಅಸಮಾಧಾನಕರವೂ ಆಗಿದೆ ಮತ್ತು ಪ್ರಾಯ ಬಂದವರೆಲ್ಲಾ ಮತದಾರರಾಗುವ ಹಕ್ಕು ಸಂಪೂರ್ಣ ದೊರೆಯಬೇಕು.

೮. ಪ್ರಕೃತ ಪ್ರತಿಯೊಂದು ಶಕ್ಕಿಗೂ ಸಮರ್ಥಳೂ ಯೋಗ್ಯಳೂ ಆದ ಒಬ್ಬಳಾದರೂ ಸೂಲಗಿತ್ತಿಯನ್ನು ದೊರಕಿಸಿ ಕೊಡುವಂತೆ ಜಿಲ್ಲಾ ಬೋರ್ಡನ್ನೂ ಸ್ಥಳೀಕ ಬೋರ್ಡುಗಳನ್ನೂ ಕೇಳಿಕೊಳ್ಳುತ್ತದೆ

ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಾಯಿ.

ತಾ. ೨೧-೪-೧೯೩೪ರಲ್ಲು ಕರೆಯಲ್ಪಟ್ಟ ಈ ಮೇಲಿನ ಸಂಘದ ೧೯೩೪ನೇ ಇಸವಿಯ ಮೆಂಬರರ ವಾರ್ಷಿಕ ಮಹಾಸಭೆಯಲ್ಲಿ ಸಾಕಷ್ಟು ಮಂದಿ ಮೆಂಬರರು ಹಾಜರಿಲ್ಲದುದರಿಂದ ಮಂಡಳಿಯ ಕ್ರಮನಿಬಂಧನೆಯ ಕಲಮ್ ನಂಬ್ರ 28(೧)ಗನುಸಾರವಾಗಿ ಮುಂದುವರಿಸಿಟ್ಟು ಮೀಟಿಂಗನ್ನು ಇದೇ ಬರುವ ಮೇ ತಿಂಗಳ ತಾ ೧೩ನೇ ರವಿವಾರ ಅಪರಾಹ್ನ ಘಂಟೆ ೨ಕ್ಕೆ (S T) ೧೪೫, ಮೋದಿರಸ್ತೆಯಲ್ಲಿರುವ ಮಂಡಳಿಯ ಧರ್ಮಾರ್ಥ ರಾತ್ರಿಶಾಲೆಯ ಮಂದಿರದಲ್ಲಿ ಜರಗಿಸಲು ನಿಶ್ಚೈಸಿರುವುದರಿಂದ ಸರ್ವ ಮೆಂಬರರೂ ಹಾಜರಾಗಬೇಕಾಗಿ, ಮಂಡಳಿಯ ಗೌರವ ಕಾರ್ಯದರ್ಶಿಯರು ಈ ಮೂಲಕವಾಗಿ ತಿಳಿಸುತ್ತಾರೆ

ಜಿನ್ನಾ-ಪ್ರಸಾದರ ಮತಸಂಬಂಧ ಒಪ್ಪಂದ.
ಸಿ ರಾಜಗೋಪಾಲಾಚಾರ್ಯರ ಪ್ರಶಂಸೆ.

ಕಾಂಗ್ರೆಸು ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರಿಗೂ, ಮಿ| ಮಹಮ.ದಾಲಿ ಜಿನ್ನಾರವರಿಗೂ ಕೆಲವು ದಿನಗಳ ಹಿಂದೆ ಡಿಲ್ಲಿಯಲ್ಲಿ ಕೋಮುವಾರು ಸಮಸ್ಯೆಯ ವಿಷಯವಾಗಿ ಮಾತುಕತೆಗಳಾಯಿತಷ್ಟೆ ಈ ಮಾತುಕತೆಗಳಲ್ಲಿ ಒಂದು ರೀತಿಯ ಒಪ್ಪಂದವಾಗಿದೆಯೆಂದೂ, ಈ ಒಪ್ಪಂದವು ಎಲ್ಲ ಪಂಗಡಗಳಿಗೂ ಒಪ್ಪಿಗೆಯಾಗುವಂತಹದೆಂದೂ, ಬಹಳ ಶ್ರೇಷ್ಠವಾದುದೆಂದೂ, ಶ್ರೀ| ಸಿ ರಾಜಗೋಪಾಲಾಚಾರಿಯವರು ಈ ರೀತಿಯಾಗಿ ತಿಳಿಸಿರುವರೆಂದೂ ಒಂದು ಲಾಹೋರ್ ರಾಷ್ಟ್ರೀಯ ಪತ್ರಿಕೆಯು ತಿಳಿಸುತ್ತದೆ ಆ ಪತ್ರಿಕೆಯು ಇನ್ನೂ ಹೇಳುವುದೇನೆಂದರೆ 'ಸಿ ರಾಜಗೋಪಾಲಾಚಾರಿಯವರಿಗೆ ಒಪ್ಪಿಗೆಯಾಗುವಂತಹ ಮತ್ತು ಅವರಲ್ಲಿ ಇಷ್ಟು ಪ್ರಶಂಸೆ ಪಡೆಯುವಂತಹ ಒಪ್ಪಂದವಾದರೆ ಅದು ನಿಜವಾಗಿಯೂ ಉತ್ಕೃಷ್ಟವಾದುದೆಂದು ಹೇಳಬಹುದು. ಇದು ಸರ್ವಸಮ್ಮತವಾಗುವುದರಲ್ಲಿ ಸಂದೇಹವಿಲ್ಲ. ಇದನ್ನು ಬ್ರಿಟಿಷ್ ಮುಖ್ಯ ಮಂತ್ರಿಗಳು ಕೊಟ್ಟಿರುವ ಕೋಮುವಾರು ತೀರ್ಪಿಗೆ ಬದಲಾಗಿ ಆಚರಣೆಗೆ ತರಬಹುದು ಇಂತಹ ಒಪ್ಪಂದವನ್ನು ಮಹಾಜನರ ಅವಗಾಹನೆಗೆ ಪ್ರಕಟಿಸುವುದು ಅತ್ಯಾವಶ್ಯಕ.'

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY

Shiromani Narayanacharya
Choukhamba, Benares City

ಶಾಸ್ತ್ರಗಳೇ ಪೂರ್ವಿಕರು ಆರೋಗ್ಯವೇ ಅಥವಾ ಈಗಿನವರೇ, ರಾಜಮಹಾರಾಜರುಗಳೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ, ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಸಹೋರ್ಯಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಈ ಎಲ್ಲಾ ಕೀರ್ತಿ ಇವುಗಳೆಲ್ಲಾ ಆಗುವು. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಅರ್ಧ ಪ್ರಮಾಣದ ಕಂಠಸರ 1ಕ್ಕೆ ಆದಿ 100ರ ರೂ. 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆದಿ 3ರಿಂದ ರೂ 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ 3ರಿಂದ ರೂ 50ರ ವರೆಗೆ ಮತ್ತು 3–4–5–6–7–8 ಮುಖಗಳ ಕಾಳು 1ಕ್ಕೆ ಆದಿ 400ರ ರೂಪಾಯಿ 10, ಮತ್ತು 9–10–11 ಮುಖಗಳುಳ್ಳ ಕಾಳು 1ಕ್ಕೆ ರೂ 200ರ 30ರ ವರೆಗೆ 12–13–14 ಮುಖದ ಕಾಳು 1ಕ್ಕೆ ರೂಪಾಯಿ 500ರ 100ರ ವರೆಗೆ. ಸಣ್ಣ ರುದ್ರಾಕ್ಷಿ [illegible] ದೊಡ್ಡ ರುದ್ರಾಕ್ಷಿ [illegible] ಕ್ರಯ ಜಾಸ್ತಿ ಆಗುವುದು (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು— 1 ವಿಕ್ಟೋರಿಯ [illegible], 1 [illegible], 1 ಕೆಟಲಾಗಿ ಸೊಡನೆ 3 ಇನಾಮುಗಳು).

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ ಬೆನಾರಸ್ (ಕಾಶೀ)

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ



ಮೂರು ಫ್ಯಾನ್ಸಿ ಮೂಟ್ ರಿಸ್ಟ್ ವಾಚುಗಳು ಇವು ಹೊಳಪಿನಲ್ಲಿ ಬಂಗಾರಕ್ಕಿಂತಲೂ ಹೆಚ್ಚು ಬಹು ರಮ್ಯವಾಗಿವೆ. ಐದು ವರ್ಷಗಳ ಗ್ಯಾರಂಟಿ. ಒಂದು ಉತ್ತಮವಾದ ಟೈಂಪೀಸ್ ಸುಂದರ ಗಂಟೆಯನ್ನು ತೋರಿಸುತ್ತ ೧೦ ವರ್ಷಗಳ ಗ್ಯಾರಂಟಿ. ಒಂದು ಲಿವರ್ ಪಾಕೆಟ್ ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವುದಿಲ್ಲ. ಗ್ಯಾರಂಟಿ ೮ ವರ್ಷ. ಆತಿ ಚೆಲುವುಳ್ಳ ಹಂಟಿಂಗ್ ಟ್ರಿಪ್ಲಿಟ್ [illegible] ಮತ್ತು ಬಂಗಾರದ ಪ್ಲೇಟ್ ಮೂರು ಹಾಕಿರ ವಸ್ತ್ರದ, ಫೌಂಟನ್ ಪೆನ್. ಈ ಅತ್ಯುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ ಕೊಡುವೆವು. ನಿಮಗೆ ಇಷ್ಟವಿದ್ದರೆ ಬೆಲೆಯು ವಾಪಾಸ್. ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ.

ಶರ್ಮಾ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ [illegible] A ಕಲ್ಕತ್ತಾ

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಜ್ಡ ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ.
೪೫ ವರ್ಷದ ಅನುಭವ
ಉಪಯೋಗಿಸಿದವರೇ ಹೇಳಿದ್ದಾರೆ
ಡಾ॥ ಗೌತಮ ರಾವ್ ಕೇಶವರವರ
ಫೋಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೪
ಸ್ಟೊಕಿಸ್ಟ—ಶಾ ಕಂಪೆನಿ, ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಸ್ ಕೆ ರಾಜಪೂತ ರವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆಶಕ್ತಿಯು ಆಧಿಕ್ಯವಾಗುತ್ತದೆ. ಬಹಳ ಜನರಿಗೆ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಋತುಸ್ರಾವ ನೇಮದಂತೆ ಶುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಶುರುವಾಗುವುದಿಲ್ಲ. ಕೂಡಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ಡಾಕ್ಟರ ಪಿ. ಎ ವೈದ್ಯ, ಎಲ್ ಸಿ ಪಿ ಎಸ್, ಕೆಳವಾಣಗಿಹರು. ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವಾಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ ೪–೦ ೦ ವಿ ಪಿ ಆಣೆ ೮

ವಿಳಾಸ—ಸಂಜೀವಿನೀ ಔಷಧಾಲಯ ಮು ಪೋ ಮಿರಜ, S M C

"ವಿಶ್ವಬಂಧು"ವಿಗೆ ಚಂದಾದಾರರಾಗಿರಿ.

೧ ವಿಶ್ವಬಂಧುವು ಜೈನಧರ್ಮದ ವಿಷಯಗಳನ್ನು ಸರ್ವಗ್ರಾಹ್ಯವಾಗುವ ರೀತಿಯಲ್ಲಿ ಸುಲಭಶೈಲಿಯಲ್ಲಿ ಪ್ರಕಟ ಮಾಡುವನು ೨ 'ವಿಶ್ವಬಂಧು'ವು ಅಹಿಂಸಾ ಧರ್ಮಪ್ರಚಾರಕನು ೩ 'ವಿಶ್ವಬಂಧು'ವು ಲೌಕಿಕ ಮತ್ತು ಪಾರಮಾರ್ಥಿಕ ವಿಷಯಗಳನ್ನು ಪ್ರಕಟ ಮಾಡುವನು ೪ ಕನ್ನಡ ನುಡಿಸೇವೆಯೂ, ಕನ್ನಡ ಸಾಹಿತ್ಯ ಪ್ರಭಾವನೆಯೂ 'ವಿಶ್ವಬಂಧುವಿನ ಧ್ಯೇಯಗಳು ೫ ವಿದ್ಯಾಭ್ಯಾಸದ ನೂತನ ರೀತಿ ನೀತಿಗಳನ್ನು ವಿಶ್ವಬಂಧು'ವು ಪ್ರಕಟಮಾಡುವನು ೬ ಒಟ್ಟಿನಲ್ಲಿ ಆರ್ಥಿಕ, ನೈತಿಕ, ಧಾರ್ಮಿಕ, ರಾಜಕೀಯ, ಸಾಹಿತ್ಯಾತ್ಮಕ ವಿಷಯಗಳನ್ನೊಳಗೊಂಡು ಸರ್ವಾಂಗ ಸುಂದರನಾದ 'ವಿಶ್ವಬಂಧು'ವು ಸರ್ವರ ಆದರಣೆಗೂ ಪಾತ್ರನಾಗಿರ್ಪನು.

ಅಂಚೆವೆಚ್ಚ ಸೇರಿ ವಾರ್ಷಿಕ ಚಂದಾ ರೂ ೨–೧೪–೦ ಮಾತ್ರ.

"ವಿಶ್ವಬಂಧು" ಕಾರ್ಯಾಲಯ, ಎಂ ಎಲ್ ಜೈನವಿದ್ಯಾರ್ಥಿನಿಲಯ, ಮೈಸೂರು

The Popular Insurance Company, Ltd.

Head Office:—MANGALORE, S India

The Pioneer Life Office of the West Coast.

Wanted influential District agents in Unrepresented areas

A few Press opinions.

'INSURANCE HERALD,' CALCUTTA. This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country. If the Directors of this Comany can continue in the present rate of progress and can control the finances with wisdom and care, they would make history. From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds.

'THE ARTISAN,' TRIVANDRUM. We are glad to see from the Fourth Annual Report and Balance Sheet of the Company that it has been making steady and satisfactory progress considering its age and the fact of the economic depression prevailing throughout the country.

THE INDIAN INSURANCE, BOMBAY. Mangalore is noted for its enterprise, and the Popular Insurance Company Ltd., promoted by the local residents of that place, is steadily gaining ground. It is directed by influential epople of Mangalore and managed by Mr. B Vitta Rao, who has developed in him a great deal of life insurance sense

ಕಾಂಚಾರ ವರ್ತಮಾನ.

[illegible]

ಮುಂದಿನ ಲೋಕವು ಹೇಗಿರುವುದು?

[illegible] "Our Wonderful World of Tomorrow" ಎಂಬ [illegible]

ಹಾಗೆಯೇ ಇದೇ ಇತ್ತು.

[illegible]

ತಲೆನೋವಿಗೆ ಕಾರಣವೇನು?

[illegible]

ರೋಗನಿವಾರಣೆಗೆ ಔಷಧಿಯು ಅಗತ್ಯವಿಲ್ಲ.

[illegible]

ಯಮನ ಅವತಾರವನ್ನು-

[illegible]

ವಿಧಿವಿಲಾಸ

[illegible]

[illegible]

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, [illegible]

ಪಾರಂಪರ್ಯದ ಅನುಭವಸಿದ್ಧೌಷಧಗಳು. ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು.

ಮೃದ್ವೀಕಾಸವ (ನಿಶ್ಶಕ್ತಿಗೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ—([illegible])

ಹಿಮಸಾಗರ ತೈಲ—([illegible])

ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ—([illegible])

ಗುಡ ಪಿಪ್ಪಲಿ—(ಲಿವರ್ ರೋಗಕ್ಕೆ ಅತ್ಯುತ್ತಮ)

[illegible]

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, [illegible]



Distributors for South Kanara:—

Raghavendra Ranga Pai, Car Street, Mangalore.

[illegible]

Writing an Advertisement: [illegible] not blatant or vulgar, crisp in their appeals [illegible] that appeals to the practicable mind [illegible]

[illegible] The Publicity Department, [illegible]

ಕೆನರಾ ಬ್ಯಾಂಕ್ ಲಿಮಿಟೆಡ್

([illegible])

[illegible]

[illegible]

[illegible]	[illegible]	[illegible]	[illegible]	[illegible]	[illegible]
10 [illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]
	[illegible]	4,81,000	6,50,000	56,68,000	[illegible]

ಸಾಂಬಾರ ವರ್ತಮಾನ.

[“ಸಾಂಬಾರ ವರ್ತಮಾನ”ಗಳಿಗೆ ಮೀಸಲಾಗಿಟ್ಟ ಈ ನಾಲ್ಕು ಕಲಮುಗಳಲ್ಲಿ ಅಲ್ಲಲ್ಲಿನ ನೈಜ ವಾರ್ತೆಗಳನ್ನು ಹಾಸ್ಯರಸಪೂರಿತವಾಗಿ ಪ್ರಕಟಿಸಬೇಕೆಂದು ನಿಶ್ಚಯಿಸಲಾಗಿದೆ. ಈ ವಾರ್ತೆಗಳನ್ನು ಲಘುಹಾಸ್ಯಪ್ರಿಯರಾದ ಪ್ರಖ್ಯಾತ ಸಾಹಿತಿಗಳೊಬ್ಬರಿಂದ ವಿಶಿಷ್ಟವಾಗಿ ಸ್ವದೇಶಾಭಿಮಾನಿಗೆಂದೇ ಬರೆಸಲಾಗುತ್ತಿದೆ.]

ಕೆಂಬಣ್ಣದ ಹಿಮ

“ಟುಕ್ಕಾ ದೇಶದ ಕಾರ್ಸ್ ಎಂಬಲ್ಲಿ ಮೊನ್ನೆ ಆಕಸ್ಮಾತ್ತಾಗಿ ಹಿಮ ಬೀಳಲಾರಂಭವಾಯಿತು. ಜನರು ನೋಡು ನೋಡುತ್ತಿದ್ದಂತೆ ಪೂರ್ಣ ಕೆಂಬಣ್ಣದ ಹಿಮವು ಬಿದ್ದು ಪ್ರದೇಶವನ್ನೆಲ್ಲಾ ಮುಚ್ಚಿಬಿಟ್ಟಿತು. ದೇಶವು ಮಹಾಪ್ರಳಯಕ್ಕೆ ಗುರಿಯಾಗಲಿದೆಯೆಂದು, ಎಷ್ಟೋ ಶಕುನವಾದಿಗಳ ಹೇಳಿಕೆ. ರಾಸಾಯನಿಕ ಶೋಧೆಯು ನಡೆದಾಗ ಆ ಹಿಮದಲ್ಲಿ ಕಡು ಕೆಂಬಣ್ಣದ ಸಣ್ಣ ಸಣ್ಣ ಕ್ರಿಮಿಗಳು ತುಂಬಿಕೊಂಡಿದ್ದುವೆಂದೂ” ಅವುಗಳು ರಕ್ತರೂಪದ ಕೆಂಬಣ್ಣವನ್ನು ಕಾರುತ್ತಿದ್ದುವೆಂದೂ ತಿಳಿದು ಬಂದಿತು.

ಭೂತಗಳಿವೆಯೋ?

ರೆವರೆಂಡ್ ಫೇಕರ್ ನೇಪ್ ಎಂಬವರು ಮೊನ್ನೆ ಲಂಡನಿನ ಸ್ವೀಡನ್ ಹೋಲಿನಲ್ಲಿ ಒಂದು ಅದ್ಭುತ ಪ್ರದರ್ಶನವನ್ನು ಮಾಡಿತೋರಿಸಿದರು. ಪ್ರೇಕ್ಷಕರು ಕುಳಿತಿದ್ದಂತೆಯೇ ಆ ಅಂಧಕಾರಮಯ ಮಂದಿರದೊಳಗೆ ಯಾರೋ ನರಳಿದ ಭಯಂಕರ ಧ್ವನಿಯೂ, ಸರಪಣಿಯೂ ಬಿದ್ದ ಶಬ್ದವೂ ಕೇಳಿಬಂತು. ಜನರು ಒಮ್ಮೆ ದಿಗಿಲುಗೊಂಡರು. ಮಂದಿರದೊಳಗೆ ವಿಚಿತ್ರ ರೂಪದ ಪ್ರೇತಗಳು ಹಾರ್‍ಯಾಡಿದುವು. ಜೀವಂತ ಕೈ ಒಂದು ಪ್ರತ್ಯೇಕವಾಗಿಯೇ ಬಂದು ಪ್ರೇಕ್ಷಕರ ಮೋರೆಗಳನ್ನು ತಟ್ಟಿ ತಲೆಗಳನ್ನು ಸವರಿತು. ‘ಸಿಟಿಜನ್’ ಪತ್ರಿಕೆಯ ಪ್ರತಿನಿಧಿಯನ್ನು ಅದು ಮುಟ್ಟಿ ಅವನನ್ನು ಭಯವಿಹ್ವಲನನ್ನಾಗಿ ಮಾಡಿತು. ಒಂದು ಬೋರ್ಡಿನ ಮೇಲೆ ಅದೇ ಕೈಯು ನಡೆದು, ಸಭಿಕರು ಕೇಳಿದ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಿತು. ‘ಸಿಟಿಜನ್’ ಪತ್ರಿಕೆಯ ಪ್ರತಿನಿಧಿಯು ಬರೆಯುತ್ತಾನೆ—“ಇದನ್ನು ಕಂಡ ನಾನು ಬೆವತುಕೊಂಡೆ. ಗಾಬರಿಗೊಂಡೆನು. ಭೂತಪ್ರೇತಗಳ ರೂಪಗಳು ಪ್ರತ್ಯಕ್ಷವಾಗಿ ಎದುರಿರುವಾಗ ನನ್ನ ಭಯಕ್ಕೆ ಮಿತಿಯೇ ಇರಲಿಲ್ಲ. ಆದರೆ ಮಂತ್ರಗಾರನು ಮಾತ್ರ “ಇದು ಇಂದ್ರಜಾಲವಲ್ಲ—ಎಲ್ಲವೂ ತಂತ್ರೋಪಾಯಗಳಿಂದ ಮಾಡಲ್ಪಡುತ್ತಿವೆ. ಭೂತಪ್ರೇತಗಳಿಂಬುವು ಇಲ್ಲವೆಂದೇ ತೋರಿಸುವುದಕ್ಕಾಗಿ ಈ ಪ್ರದರ್ಶನವನ್ನು ನೆರವೇರಿಸಲಾಯಿತು.”

ಮಾತನಾಡಿದುದಕ್ಕಾಗಿ -

ದಿಲ್ಲಿಯಲ್ಲಿ ಗುಲಾಂ ಹೈದರ್ ಎಂಬವನಿಗೆ ತನ್ನ ಪತ್ನಿಯು ಮಹಮ್ಮದ್ ದೀನ್ ಎಂಬವನೊಡನೆ ಸ್ನೇಹವನ್ನು ಬೆಳೆಸುತ್ತಿರುವ ಸೂಚನೆಯು ಸಿಕ್ಕಿತು. ಅದಿಗ ಕುಳಿತ ಅವರಿಬ್ಬರೂ ಮಾತನಾಡುತ್ತಿರುವುದನ್ನು ಕಂಡ ಒಡನೆ ಮನೆಗೆ ಹೋಗಿ ಹೆಂಡತಿಯನ್ನು ಒಂದು ಕೋಣೆಗೊಯ್ದು ಅವಳ ಮೂಗಿನ ತುದಿಯನ್ನು ಮಾತ್ರ ಕೊಯ್ದು ಕೈಯಲ್ಲಿ ಹಿಡಿದುಕೊಂಡು ಸೆಟ್ಟಿಗೆ ಬಟ್ಟೆ ಕೊತವಾಲನ ಬಳಿಗೆ ಹೋಗಿ ತನ್ನ ಕ್ರಿಯೆಯ ವರ್ಣನೆಯನ್ನು ಮಾಡಿದ. ಪೋಲೀಸರು ಅವನನ್ನು ಸೆರೆ ಹಿಡಿದರು. ಮೂಗಿನ ತುದಿಯು ಏನಾಯಿತೋ ತಿಳಿದು ಬರುವುದಿಲ್ಲ.

ರೂಪ ಪರಿವರ್ತನೆ

ಬರ್ಮಿಂಗ್ ಹೋಂ‌ನಲ್ಲಿ ಕೀಟ್‌ಲೀನ್ ಎಂಬ ಹನ್ನೆರಡು ವರ್ಷ ಪ್ರಾಯದ ಬಾಲಿಕೆಯೋರ್ವಳಿರುವಳು. ಅವಳು ಹುಟ್ಟಿ ಮೂರು ವರ್ಷಗಳು ದಾಟುತ್ತಲೇ ವಿಚಿತ್ರ ರೋಗ ಒಂದಕ್ಕೆ ಗುರಿಯಾದಳು. ಪ್ರತಿ ವರ್ಷಾವಧಿಯಲ್ಲಿ ಅವಳ ಸ್ವಭಾವದ ರೂಪು ದಿನೇ ದಿನೇ ಮಾಯವಾಗಿ ಅವಳ ಮೋರೆಯು ಪೂರ್ಣ ಕಳೆಗುಂದುವುದು. ಬೆನ್ನು ಬಾಗಿಕೊಳ್ಳುವುದು, ಕೈಕಾಲುಗಳು ಸುಕ್ಕುಗಟ್ಟುವುವು. ಬೆರಳುಗಳು ಉಗುರು ಮೃಗಗಳ ಬೆರಳುಗಳಂತಾಗುವುವು. ಅಂಗ್ಗೆಗಳು ಕಾಡು ಮೃಗಗಳಂತಾಗುವುವು. ದೇಹದ ಎಲುಬುಗಳು ಕರಗಿ ಅವಳು ಮಾಂಸದ ಒಂದು ದೊಡ್ಡ ಮುದ್ದೆಯಂತಾಗಿ ಪರಿವರ್ತನೆಗೊಳ್ಳುವಳು. ದಿನಗಳು ಕಳೆದಂತೆ ಅವಳ ರೂಪು ಪುನಃ ಬದಲಾಗಿ ಮುಂಚಿನಂತೆಯೇ ಆಗುವಳು. ಆದರೆ ಈ ವರ್ಷ ಅವಳ ರೋಗವು ಉಲ್ಬಣಗೊಂಡಿದೆ. ಎಂಥೆಂಥ ಔಷಧಿಗಳೂ ಪ್ರಯೋಜನಕಾರಿಯಾಗುವುದಿಲ್ಲ. ಈ ವರ್ಷದಿಂದ ಮೊದಲುಗೊಂಡು ಅವಳ ಆಕೃತಿಯು ಮುಂಚಿನ ಸ್ಥಿತಿಯನ್ನು ಹೊಂದಲಾರದೆಂದು ತೀರ್ಮಾನಿಸಿರುವರು.

ಭೇದಬುದ್ಧಿಯಿಲ್ಲ.

ಉತ್ತರ ಆರ್ಕಾಟ್ ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಮಿ|| ಸಿ. ಅಬ್ದುಲ್ ಹಕೀಮರು ತಿರುವಣ್ಣಾಮಲೆಯ ಅರುಣಾಚಲೇಶ್ವರ ದೇವಸ್ಥಾನಕ್ಕೆ ಒಂದು ಆನೆಯನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ. ಇವರು ಮಹಮ್ಮದೀಯರಾದರೂ ಹಿಂದೂದೇವಾಲಯಕ್ಕೆ ಇಷ್ಟು ಉದಾರ ಸಹಾಯ ಮಾಡಿರುವುದನ್ನು ಕುರಿತು ಪ್ರಶಂಸಿಸಿ ದೇವಸ್ಥಾನದ ಅಧಿಕಾರಿಗಳು ಒಂದು ಅಭಿವಂದನಾ ಠರಾವನ್ನು ಮಂಜೂರ ಮಾಡಿಕೊಂಡಿರುವರು.

ವಿಧಿವಿಲಾಸ!

ಫ್ರೆಂಚ್ ಕೋರ್ಟಿಗೊಂದು ದಾವೆ ಬಂದಿದೆ. ಮೊನ್ಸಿಯರ್ ಎಂಬ ದೊಡ್ಡ ವರ್ತಕನೊಬ್ಬನು ಮಾಸಂ ಪ್ರತಿ ಪರ್ವೂರಿಗೆ ಹೋಗುತ್ತಿದ್ದನು. ತನ್ನ ವ್ಯಾಪಾರ ಸಂಬಂಧವಾಗಿ ತನಗೆ ಅತ್ತ ಹೋಗುತ್ತಿರಬೇಕೆಂದು ಪತ್ನಿಗೆ ಹೇಳಿ ಅವಳನ್ನು ಸಮಾಧಾನಿಸುತ್ತಿದ್ದನು. ಒಂದು ದಿನ ಅವನು ಪರ್ವೂರಿಗೆ ಹೋಗಿದ್ದಾಗ ಅವನ ಪತ್ನಿಯು ಸಿನಿಮಕ್ಕೆ ಹೋಗಿದ್ದಳು. ಇಂಗ್ಲಾಂಡಿನಲ್ಲಿ ತೆಗೆಯಲ್ಪಟ್ಟ ತುಂಡು ತುಂಡು ಚಲಚ್ಚಿತ್ರಗಳನ್ನು ತೋರಿಸುತ್ತಿದ್ದಾಗ ಅವುಗಳಲ್ಲೊಂದರಲ್ಲಿ ಅವಳ ಪತಿ ಮಹಾಶಯನು ಒಬ್ಬ ತರುಣಿಯ ಕೈ ಕೈ ಹಿಡಿದು ನಡೆಯುತ್ತಿದ್ದುದು ಅವಳಿಗೆ ಕಾಣ ಬಂತು. ಮರುದಿನ ಆ ಚಿತ್ರವನ್ನು ಪುನಃ ನೋಡಿ ತನ್ನ ಪತಿಯೆಂದು ಪೂರ್ಣ ಕಂಡ ಹಿಡಿದು ವಕೀಲರ ಬಳಿಗೆ ಹೋಗಿ ವಿಚ್ಛೇದದಾವೆಯನ್ನು ಗಂಡನ ಮೇಲೆ ಹೂಡಿದಳು. ಕೋರ್ಟಿನವರು ಆ ಚಲಚ್ಚಿತ್ರವನ್ನು ನೋಡಿ ಅವಳ ವಾದದ ಸತ್ಯತೆಯನ್ನು ಅರಿತರು. ಅವಳ ಪತಿಯು ಈ ಉಪಪತ್ನಿಯನ್ನು ಹಲವು ವರ್ಷಗಳಿಂದ ಪೋಷಿಸುತ್ತಿದ್ದನು.

ರೋಗನಿವಾರಣೆಗೆ ಔಷಧಿಯು ಅಗತ್ಯವಿಲ್ಲ.

ನ್ಯೂಯೋರ್ಕಿನಲ್ಲಿ ಕೆಲವು ಪಂಡಿತರು ಒಟ್ಟುಗೂಡಿ ಪ್ರಸಿಡೆಂಟ್ ರೂಜ್‌ವೆಲ್ಟರಿಗೊಂದು ಮನವಿ ಮಾಡಿ ತಮಗೆ ೧೫,೦೦೦ ಡಾಲರುಗಳನ್ನು ಕೊಟ್ಟರೆ ತಾವು ದೇಶದಲ್ಲಿರುವ ಭಯಂಕರ ಭ್ರಾಂತಿಯನ್ನು ಹೋಗಲಾಡಿಸುವೆವೆಂದೂ, ಮಾನಸಿಕ ರೋಗನಿವಾರಣೆಗೆ ಶಕ್ತ ಚಿಕಿತ್ಸೆಯನ್ನು ಮಾಡುವೆವೆಂದೂ ತಿಳಿಸಿರುವರು. ಬಣ್ಣಗಳನ್ನು ಉಪಯೋಗಿಸಿಯೇ ಆ ಬಣ್ಣಗಳನ್ನು ರೋಗಿಗಳಿಗೆ ತೋರಿಸಿಯೇ ತಾವು ಮಾನಸಿಕ ಸುಖವನ್ನು ಕೊಡುವೆವೆನ್ನುತ್ತಿರುವರು. ಔಷಧಿಗಳ ಅಗತ್ಯವೇ ತಮಗಿಲ್ಲವೆಂದು ಅವರ ಹೇಳಿಕೆ.

ಯಮನ ಅವತಾರವನ್ನು

ಕಂಡವರು ಪರಲೋಕವಾಸಿಗಳು ಮಾತ್ರ. ಆದರೆ ನರಲೋಕವಾಸಿಗಳೂ ಯಮನವತಾರವನ್ನು ನೋಡಬಹುದು. ದಕ್ಷಿಣ ಅಮೇರಿಕದಲ್ಲಿ ಒಂದು ದೊಡ್ಡ ವೃಕ್ಷವಿರುವುದು. ಬಹಳ ಸುವಾಸನೆಯೂ ಅದಕ್ಕಿದೆ. ಯಾರ ಮನಸ್ಸನ್ನೂ ಸೆಳೆಯುವಂತಹುದು ಈ ಹೂವು. ಅದನ್ನು ಮನೆಗೆ ತೆಗೆದುಕೊಂಡುಹೋಗಿ ಹನ್ನೆರಡು ಗಂಟೆಗಳ ತನಕ ಅಲ್ಲಿಟ್ಟು ವಾಯುವನ್ನು ಕೆಡಿಸಿ ಮೃತರಾದವರು ಬಹಳ ಹಲವು ವರ್ಷಗಳ ಪರಿಗೆ ಈ ಹೂವಿನ ವಿಷದ ಪ್ರಯೋಜನದ ಅರಿವು ಯಾರಿಗೂ ಉಂಟಾಗಲಿಲ್ಲ. ಒಬ್ಬ ಶ್ರೀಮಂತನು ಈ ಹೂವನ್ನು ಮನೆಯಲ್ಲಿಟ್ಟು ೧ ತ್ರಿ ವ ಒಗಿದವನು ಬೆಳಿಗ್ಗೆ ಹಾಸಿಗೆಯಿಂದ ಏಳಲೇ ಇಲ್ಲ.

> “ನಮ್ಮ ದೇಶದಲ್ಲಿ ಈಗ ರೂಢಿಯಲ್ಲಿರುವ ವಿದ್ಯಾಭ್ಯಾಸದ ಕ್ರಮದಲ್ಲಿ ಇಂಗ್ಲೀಷು ಭಾಷೆಗಿರುವ ಪ್ರಾಧಾನ್ಯದ ಕಾರಣದಿಂದ ವಿದ್ಯಾರ್ಥಿಗಳಿಗೆ ಆಯುಷ್ಯದ ವ್ಯರ್ಥವ್ಯಯವೂ ಶಕ್ತಿಯ ವ್ಯರ್ಥವ್ಯಯವೂ ಅತಿಯಾಗಿ ಆಗುತ್ತಿವೆ. ನಮ್ಮ ವಿದ್ಯಾರ್ಥಿಗಳಿಗೆ ಈಗಿರುವ ಕಷ್ಟವು ಎರಡು ಬಗೆಯದು. ಒಂದು ವಿಷಯ ನವೀನತೆಯಿಂದ ಆಗಿರುವುದು. ಇನ್ನೊಂದು ಭಾಷಾ ನವೀನತೆಯಿಂದಾಗಿರುವುದು. ಅವರು ಹೊಸ ವಿಷಯಗಳನ್ನು ತಿಳಿದುಕೊಳ್ಳುವುದಕ್ಕಾಗಿ ಹೊಸ ಭಾಷೆಯನ್ನು ಕಲಿತುಕೊಳ್ಳಬೇಕಾಗಿದೆ. ಆದರೆ ಈ ಹೊಸ ಭಾಷೆಯನ್ನು ಕಲಿತುಕೊಳ್ಳುವುದಕ್ಕೆ ಬೇಕಾಗಿರುವ ಶಾರೀರಕ ಶಕ್ತಿ ಮನಸ್ಸುಗಳಲ್ಲಿ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಬೇಕಾದ ಸಾಕಷ್ಟು ಶಕ್ತಿಯೂ ಅವರಿಗೆ ಉಳಿಯದಂತಾಗಿ ಜ್ಞಾನಕ್ಕೆ ಕೊಡಬೇಕಾದ ಗಮನವನ್ನು ಅದಕ್ಕೆ ಸಲ್ಲಿಸಬೇಕಾಗಿದೆ. ಇದು ವರೆಗೂ ನಮ್ಮ ದೇಶದಲ್ಲಿ ಈ ಕಷ್ಟವು ಅನಿವಾರ್ಯವಾಗಿತ್ತು. ಈಗ ಪರರೂ ಅಂಗ್ಲ ಭಾಷೆಯೊಳಗಿನ ತಿರುಳು ನಮ್ಮ ಭಾಷೆಯಲ್ಲಿಯೇ ದೊರೆಯುವಂತಾಗಿದೆ. ಯುರೋಪ್ ಭಾಷೆಗಳಲ್ಲಿಯ ಸಾಂಪ್ರದಾಯಿಕವಾದ ವಿಷಯಗಳನ್ನು ಶ್ರೇಷ್ಠ ಗ್ರಂಥಗಳನ್ನೂ ಕನ್ನಡದಲ್ಲಿ ರೂಪಾಂತರಗೊಳಿಸಿಕೊಡಲು ವಿದ್ವಾಂಸರು ಈಗ ಸಿದ್ಧರಾಗುತ್ತಲಿದ್ದಾರೆ. ಆಧುನಿಕ ವಿಜ್ಞಾನಶಾಸ್ತ್ರಗಳನ್ನು ಸರ್ವಜನ ಬೋಧ್ಯವಾಗಿ ಕನ್ನಡದಲ್ಲಿ ಪ್ರಕಟಿಸಿ ಹೇಳುವುದು ಈಗ ಸಾಧ್ಯವೆಂದು ಸಾಕಷ್ಟಾಗಿ ತೋರುತ್ತಿದೆ. ನಮ್ಮ ವಿದ್ಯಾರ್ಥಿಗಳ ಮೇಲಿರುವ ಇಂಗ್ಲೀಷಿನ ಹೊರೆಯನ್ನು ಇಳಿಸಲು ಈಗ ಸಕಾಲವಾಗಿದೆ.”
>
> “ನಮ್ಮ ೯ ಓತ್ತಿದೊಳಕ್ಕೆ ಹೊಸ ಹೊಸ ವಸ್ತು ವಿಚಾರಗಳು ಬರಬೇಕು. ಸಾಹಿತ್ಯದಲ್ಲಿ ಪ್ರಕಾರ ನವೀನತೆಗಿಂತ ಮುಖ್ಯವಾದದ್ದು ವಿಷಯ ನವೀನತೆ. ವಿಷಯ ನವೀನತೆಯುಂಟಾಗಬೇಕಾದರೆ ಲೇಖಕರ ಮತ್ತು ಬೋಧಕರ ಅಂತಃಕರಣ ಕೋಶದಲ್ಲಿ ಪರಿಪಾಕ ನೂತನ ಜ್ಞಾನಗಳೂ ನೂತನ ಭಾವನೆಗಳೂ ತುಂಬಿರಬೇಕು. ಹೀಗೆ ಗ್ರಂಥಗಳಲ್ಲಿ ನವೀನತೆಯುಂಟಾಗಿ ಅದರಿಂದ ಜನಸಾಮಾನ್ಯದ ಮನೋಬುದ್ಧಿಗಳ ವ್ಯಾಪಾರದಲ್ಲಿಯೂ ಜೀವನನಿಧಾನದಲ್ಲಿಯೂ ನವೀನತೆಯುಂಟಾದೀತು. ಒಂದು ಹೊಸ ಸ್ವತಂತ್ರ ಬುದ್ಧಿವಿಚಾರ, ಒಂದು ಹೊಸ ವಿಚಾರಸ್ಫುರಣೆ, ಒಂದು ಹೊಸ ದೃಷ್ಟಿ ವಿಶಾಲತೆ ಒಂದು ಹೊಸ ಪ್ರಪಂಚ ಸಹಾನುಭೂತಿ ಒಂದು ಹೊಸ ಜೀವನಕರ್ತವ್ಯ ಯೋಗ್ಯತೆ— ಇವು ನವೀನತೆಯ ಲಕ್ಷಣಗಳು. ಈ ತೆರದ ಸಾಹಿತ್ಯ ನವೀನತೆ ಜನಜೀವನದ ನವೀನತೆಗೆ ಸಾಧಕವಾದೀತು.

ಲೋಭಿಗಳಾದ ಶ್ರೀಮಂತರು.

ಸಿ. ಮಿ. ಪೀಲ್ ಟಾರ್ನ ಎಂಬ ಕೋಟ್ಯಾಧೀಶನು ಪ್ರಪಂಚದಲ್ಲಿರುವ ಲೋಭಿಗಳಲ್ಲಿ ಅಗ್ರಗಣ್ಯನು. ಅವನು ಇತ್ತೀಚೆಗೆ ಆತ್ಮಹತ್ಯ ಮಾಡಿಕೊಂಡ. ದೈವಾಧೀನನಾದನು. ೫೦,೦೦೦ ಪೌಂಡು ನಷ್ಟವು ತಲೆದೋರಿದುದರಿಂದ ತನ್ನ ವ್ಯಾಪಾರವನ್ನು ಮುಚ್ಚಿ ಮನೆಗೆ ಹೋಗಿ ಗಟ್ಟಿಯಾದ ಹಗ್ಗವನ್ನು ತೆಗೆದುಕೊಂಡು ಕೊರಳಿಗೆ ಹಾಕಿಕೊಂಡು ಸ್ವರ್ಗವಾಸಿಯಾದನು. ಇವನ ಮನೆಯಲ್ಲಿ ಯಾವ ಸಾಮಗ್ರಿಗಳೂ ಇಲ್ಲ. ವಿಲಾಸಗಳೂ ಇಲ್ಲ. ಒಂದೇ ಬಟ್ಟೆಯನ್ನು ದಿನಗಟ್ಟಲೆ ಉಟ್ಟು ದುಂದು ವ್ಯಯ ಮಾಡುವವರಿಗೆ ಬುದ್ಧಿ ಹೇಳುತ್ತಿದ್ದ. ಪ್ರತಿಫಲಪತ್ನಿಯು ಅತ್ತ ತೆರಳದಂತೆ ಆಕೆಗೆ ಮಾಡುವವರು ಆಹಾರವನ್ನು ಮಾತ್ರ ತನ್ನ ದೇಹಕ್ಕೆ ಕೊಡುತ್ತಿದ್ದನು. ಕಾಳಾದ ಸಾಮಾನುಗಳನ್ನು ತಾನೇ ಸಜ್ಜುಗೊಳಿಸುವನು. ಸಾಯುವಾಗ ಮಾತ್ರ ವಿಶ್ವವಿದ್ಯಾಲಯಗಳಿಗೆ ೭೫,೦೦೦ ಪವನುಗಳನ್ನು ಕೊಟ್ಟನು.

ಚಾರ್ಲಿ ಚೇಪ್ಲಿನ್.

ಇವನು ಚಲಚ್ಚಿತ್ರ ಪ್ರಪಂಚದಲ್ಲಿ ಖ್ಯಾತನಾದುದು ಹೇಗೆಂದು ಮೀರ ಪ್ರಸ್ತರಲು ತನ್ನ ಜೀವನಚರಿತ್ರೆಯಲ್ಲಿ ಬರೆದಿಟ್ಟಿರುವನು. ಚಿಲ್ಲರ್ಸ್ ಪಕ್ಷದ ರೋಮಾನ್ಸ್ ಎಂಬ ಚಲಚ್ಚಿತ್ರವನ್ನು ಅವರು ತಯಾರಿಸಬೇಕೆಂದಿದ್ದರು. ಅದಕ್ಕೆ ಸರಿಯಾದ ಅಭಿನಯಕಾರನೊಬ್ಬನ ಅಗತ್ಯವಿತ್ತು. ಲಂಡನಿನ ಬೀದಿಗಳಲ್ಲಿ ತಿರುಗಾಡುತ್ತಿದ್ದ ಚಾರ್ಲಿ ಚೆಪ್ಲಿನನ ನೆನಪಾಗಿ ‘ಅವನಲ್ಲಿ ಅಭಿನಯದ ಅಜ್ಞನ ವಾಸನೆಯಿದೆ, ಒಳ್ಳೆಯ ಚತುರನವನು, ಅವನನ್ನು ತಂದ ರಾದೀತು’ ಎಂದು ಅವರು ಹೇಳಿದರು. ಚೆಪ್ಲಿನನ ಪರಿಚಯವಿಲ್ಲದವರು ನಕ್ಕರು. ಯಾರೋ ಒಬ್ಬನನ್ನು ತರಲು ಹೊರಟಿರುವರೆಂದು ಪರಿಹಾಸ್ಯ ಮಾಡಿದರು. ಚೆಪ್ಲಿನನು ಬಂದನು. ಅಭಿನಯಿಸಿದನು. ಪ್ರಥಮ ಚಿತ್ರವೇ ಜಯಪ್ರದವಾಗಿ ಅವನು ದಿನೇ ದಿನೇ ಕೀರ್ತಿಶಾಲಿಯಾದನು.

ಮುಂದಿನ ಲೋಕವು ಹೇಗಿರಬಹುದು?

—ಎಂಬ ತಲೆಕರಡುಗೊಳಿಸುವ ಪ್ರಶ್ನೆಯನ್ನು ಪ್ರೊ|| ಲೋ ಎಂಬುವರು ಇತ್ತೀಚೆಗೆ “Our Wonderful World of Tomorrow” ಎಂಬ ಪತ್ರಿಕೆಯಲ್ಲಿ ಹೀಗೆ ಬರೆದಿದ್ದಾರೆ—“ಮನುಷ್ಯನ ಪ್ರಗತಿಯು ರೇಖಾ ಸಕಾರತೆಯನ್ನು ದಾಟಿಸಿದೆ. ಅವನ ಹಿಂದಿನ ಬೆಳವಣಿಗೆಯು ಮುಟ್ಟಿವು ದಿನೇ ದಿನೇ ಹೇಗೆ ಏರಿತೆಂದು ಚರ್ಚಿಸಿದೆ. ಮುಂದಿನ ಲೋಕವು ಹೇಗಿರುತ್ತದೆಂದು ಚರ್ಚಿಸಿದೆ. ಉತ್ತರವಾಗಿ—ಮುಂದಕ್ಕೆ ಮನುಷ್ಯನು ದೇಹವಿಲ್ಲದೆ, ಮಿದುಳು ಮಾತ್ರ ಇರುವ ಜ್ಞಾನಿಯಾಗುವನೆಂದು ತಿಳಿದುಬಂತು. ಹಲ್ಲು, ಕೂದಲುಗಳು ಉದುರುವುವು. ಕೈಕಾಲುಗಳು ಕೆಲಸವಿಲ್ಲದೆ ನಿಷ್ಪ್ರಯೋಜಕವಾಗುವುವು, ಬಲು ಕ್ಷೀಣವಾಗುವುವು, ಮನುಷ್ಯನು ಪೂರ್ಣ ಯಾಂತ್ರಿಕ ಬಲದಿಂದ ಬದುಕುವನು. ಒಂದು ಗುಂಡಿಯನ್ನು ಒತ್ತಿದೊಡನೆ ಅವನಿಗೆ ಬೇಕಾಗುವ ಎಲ್ಲಾ ಸಾಹಿತ್ಯಗಳು ಅವನೆದ ರಿಗೆ ಬರುವುವು. ಕುಳಿತಲ್ಲಿಂದಲೇ ಜಗತ್ತಿನ ಇನ್ನೊಂದೆಡೆಯ ಮನುಷ್ಯನನ್ನು ನೋಡಿ ಮಾತನಾಡುವನು. ಟೆಲಿವಿಜನ್ ಎಂಬುದು ಪ್ರಚಾರಕ್ಕೆ ಬಂದು ಅವನು ಕೂತಲ್ಲಿಂದ ಕದಲುವ ಅಗತ್ಯವೇ ಬೀಳಲಾರದು. ಎಲ್ಲಾ ಆಟಗಳು ಮನಸ್ಸಿನಲ್ಲೇ ನಡೆಯುವುವು.

ಹಾಗೆಯೇ ಇಡೀ ಇತ್ತು.

ವೆಸ್ಟ್ ಆಫ್ರಿಕಾದಲ್ಲಿನ ಬಂದರಕ್ಕೆ ಬಂದಿಳಿದ ಅಟ್ಲಾಂಟಿಕ್ ಎಂಬ ಸ್ಟೀಮರಿನ ಕೆಲಸಿಗರು ಹಿಡಿದ ಒಂದು ದೊಡ್ಡ ಮೀನನ್ನು ಸಿಗಿಯುವಾಗ ಅದರ ಹೊಟ್ಟೆಯಲ್ಲಿ ಹಂದಿ ಮತ್ತು ಬಾಮಾಂದ ಬಿಸ್ಕಿಟಿನ ಟಿನ್ ಒಂದು ಇಡೀ ಇತ್ತು.

ತಲೆನೋವಿಗೆ ಕಾರಣವೇನು?

ಹೆಚ್ಚು ಓದಿದರೆ ಹೆಚ್ಚು ಯೋಚಿಸಿದರೆ ಮಿದುಳಿಗೆ ಹೆಚ್ಚು ಕೆಲಸಕೊಟ್ಟರೆ ತಲೆನೋವು ಉಂಟಾಗುತ್ತದೆಂಬ ಭಾವನೆಯು ಹಲವರಲ್ಲಿದೆ. ಆದರೆ ಅದು ತಪ್ಪು ಎಂದು ಸಂಡೇ ಟೈಮ್ಸ್ ಪತ್ರಿಕೆಯಲ್ಲಿ ಒಂದು ಹೊಸ ಸೂಚನೆ ಪ್ರಕಟವಾಗಿದೆ. ಅಧವಾ ಹೆಚ್ಚು ಆಲೋಚನೆ ಮಾಡುತ್ತಿರುವವರ ಕಣ್ಣನ್ನು ಪರೀಕ್ಷಿಸಿಕೊಂಡೇ ಹಣೆಯನ್ನು ಸುತ್ತ ಕಟ್ಟಿಸಿಯೇ ಅಂಗಚೇಷ್ಟೆಯನ್ನು ಮಾಡಿಕೊಂಡೋ ಇರುವುದರಿಂದಲೇ ತಲೆನೋವಿಗೆ ಕಾರಣಗಳಿವೆ. ಕ್ರಮವಾಗಿ ಸುಖವಾಗಿ ಕುಳಿತು ಓದಿದರೆ ಅಥವಾ ಆಲೋಚಿಸಿದರೆ ತಲೆನೋವು ಉಂಟಾಗುವುದಿಲ್ಲ.

ಯಾರಿಗಾಗಿ ಈ ಸೌಂದರ್ಯ?

ಪೆರಿಸ್‌ನಲ್ಲಿ ಕೆಮಿಲ್ ದೆಲಕರ್ ಎಂಬವನೊಬ್ಬನು. ಅವನಿಗೆ ವಿವಾಹವಾಗಿ ೩೦ ವರ್ಷಗಳಾಗಿದ್ದುವು. ದಂಪತಿಗಳು ಸುಖದಿಂದಲೇ ಇದ್ದರು. ಇತ್ತೀಚೆಗೆ ಅವನ ಪತ್ನಿಗೆ ಸೌಂದರ್ಯವನ್ನು ಬೆಳೆಸುವ ಹುಚ್ಚು ಹಿಡಿಯಿತು. ತಲೆಗೂದಲನ್ನು ಬಣ್ಣದಿಂದ ಕಪ್ಪಗೆ ಮಾಡುತ್ತಿದ್ದಳು. ತುಟಿಗಳನ್ನು ತೊಂಡೆಯ ಹಣ್ಣಿನಂತೆ ಮಾಡುತ್ತಿದ್ದಳು. ದಿನಕ್ಕೊಂದು ಬಗೆ “ಬ್ಯೂಟಿ ಪಾರ್ಲರ್”ಗೆ ಹೋಗುತ್ತಿದ್ದಳು. ಗಂಡನಿಗೆ ಆಶ್ಚರ್ಯವಾಯಿತು. ಇವಳ ಬದಲಾವಣೆಗೆ ಕಾರಣವೇನೆಂದು ವಿಚಾರಿಸಲಾಗಿ ತನ್ನ ಅಂಗಡಿಯ ಬಳಿಯಿರುವ ಪರೀಜೇನ್ ಎಂಬವ ಮೈತ್ರಿಗೆ ಇವಳು ಪೂರ್ಣ ದಾಸಳಾಗಿದ್ದಳೆಂದು ತಿಳಿದುಬಂತು. ಒಂದು ದಿನ ತನ್ನ ಪತ್ನಿಯು ಕನ್ನಡಿಯ ಬಳಿ ಬಣ್ಣ ಕೊಡುತ್ತಿದ್ದಾಗ ಸಹಿಸಲಾರದೆ “ಈ ಸೌಂದರ್ಯ ಯಾರಿಗಾಗಿ? ನನಗೆ ಬೇಡ. ಬೇರೆ ಯಾರಿಗಾಗಿ” ಎಂದ ಹೇಳುತ್ತಾ ಅವಳನ್ನು ಗುಂಡಿಕ್ಕಿಕೊಂದನು. ಅವನ ಸಿದಬಾಧೆಯ ಬಗ್ಗೆ ಕೋರ್ಟಿನವರು ತೀರ್ಮಾನಿಸಿ ಅವನನ್ನು ಬಿಟ್ಟುಬಿಟ್ಟಿರುವರು.

ಕೇಶವನ್ನು ತೆಗೆದುದಕ್ಕಾಗಿ

ಸಭಾ ಸಂಸ್ಥಾನದಲ್ಲಿ ಮಹಾಕ್ಷೋಭೆಯೆದ್ದಿದೆ. ಸಿಖ್ಖರು ಸಭೆಗೇರಿ ಬಂದವರಿಗೆ ತೊಡಗಿರುವರು. ಸಿಖ್ ಧರ್ಮಕ್ಕೆ ಮನವಿಗಳನ್ನು ಕಳುಹಿಸುವರು. ಧರ್ಮನ್ನಿ ಹಾಳು ಮಾಡುತ್ತಿಯೆಂದು ಹೇಳುತ್ತಿರುವರು. ದಾಡಿಯನ್ನ ಹೂಡಿರುವರು. ಏಕೆಂದು ತಿಳಿದಿರುವಿರಾ? ಅಲ್ಲಿಯ ರಾಜಕುಮಾರರಾದ ಪ್ರತಾಪಸಿಂಹರು ತನ್ನ ಕೇಶವನ್ನು ತೆಗೆದುಬಿಟ್ಟುದಕ್ಕಾಗಿ! ಧರ್ಮಘಾತುಕವಾದ ಈ ಆಚರಣೆಯನ್ನು ತಾವು ಸಹಿಸಲಾರೆವೆಂದು ಶಿರೋಮಣಿ ಗುರುದ್ವಾರ ಪ್ರಬಂಧಕ ಕಮಿಟಿಯವರು ಮಾಡಿರುವರು.

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು — ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ



Distributors for South Kanara —

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!
ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಅಪ್ರತಿಮ.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ... 1

ಕಾಮಶಾಸ್ತ್ರ ಪುಸ್ತಕ ...

Shah Company ...
Pearl & Sons ...

Atank Nigrah Pharmacy
... Bang...

ಆತಂಕನಿಗ್ರಹ ಫಾರ್ಮಸಿ,
...

ಎಲ್ಲಾ ಚಂದಾದಾರರೂ ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

Writing an Advertisement Advertisements make both the concious and sub-concious appeal and should be beautiful ... not blatant or vulgar crisp in their appeals whether of wording or design, not too highly coloured metaphorically, and with ... (wherever possible) that appeals to the pr... mind; a mere statement of the name of the article or place is insufficient.

... —The Publicity Department Swadeshabhimani Mangalore

ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ 1906)

ಕೆಳಗಿನ ಪ್ರಗತಿಸೂಚಕ ಪಟ್ಟಿ ... ಸಂಸ್ಥೆಯು ವರ್ಷ-ಪ್ರತಿ ದೃಢವಾಗಿ ಬೆಳೆಯುತ್ತಿರುವುದಕ್ಕೆ ಸಾಕ್ಷಿಯಾಗಿದೆ. ದಿ ಕೆನರಾ ಬ್ಯಾಂಕ್ ಲಿಮಿಟೆಡ್ ... ಸಾರ್ವಜನಿಕರ ಇಟ್ಟಿರುವ ವಿಶ್ವಾಸಕ್ಕೂ ಸಂಸ್ಥೆಯ ಸೇವೆಗೂ ಇದೇ ದಾಖಲೆಯಾಗಿದೆ.

19 ಆಫೀಸುಗಳಿರುವ ಹೆಸರಾದ ಬೇಂಕು
ನಮ್ಮ ಆಫೀಸುಗಳು—
ಬೊಂಬಾಯಿ (ಫೋರ್ಟ್ ಮತ್ತು ಮಾರ್ಕೆಟ್), ಹುಬ್ಬಳ್ಳಿ, ಮಂಗಳೂರು, ಕಲ್ಲಿಕೋಟೆ, ಕೊಚ್ಚಿ, ಎರ್ನಾಕುಲಂ, ಅಲ್ಲೆಪ್ಪಿ, ಬೆಂಗಳೂರು, ದಾವಣಗೆರೆ, ಚಿಕ್ಕಮಗಳೂರು ಇತ್ಯಾದಿ ಕಡೆಗಳಲ್ಲಿವೆ

ಪ್ರಗತಿಸೂಚಕ ಪಟ್ಟಿ.

ವಂತಿಗೆ ಭಂಡವಾಳ	ತೆತ್ತ ಭಂಡವಾಳ	ರಿಜರ್ವ್	ಡಿಪೋಜಿಟ್	ವ್ಯವಹಾರದಲ್ಲಿರುವ ಭಂಡವಾಳ
1916	1916	1916	1916	1916
2,2[illegible],000	2,00,000	89,000	[illegible]60,000	6,83,000
1920	1920	1920	1920	1920
3,00,000	3,00,000	1,61,000	8,99,000	14,19,000
1924	1924	1924	1924	1924
3,00,000	3,00,000	2,62,000	18,10,000	24,69,000
1928	1928	1928	1928	1928
3,00,000	3,00,000	3,88,000	37,42,000	46,99,000
1932	1932	1932	1932	1932
6,00,000	3,30,000	4,81,000	55,46,000	65,62,000
1934	1934	1934	1934	1934
6,00,000	3,31,000	4,50,000	58,62,000	73,49,000

ಗಿರಾಕಿಗಳಿಗೆ ಎಲ್ಲಾ ತರದ ಸೌಕರ್ಯಗಳು.
ಸುಲಭ ರೀತಿಯ ವ್ಯಾಪಾರ ವಹಿವಾಟುಗಳು

ನಮ್ಮ ಮುಂದಾಳುಗಳು

ಸ್ವದೇಶಾಭಿಮಾನಿಗೆ ಈ ಬ್ಯಾರಿ ಸೆಕ್ರೆಟರಿ ಸಾಹೇಬರು ಬಹಿಷ್ಕಾರವಿತ್ತಿದ್ದಾರೆ. ಇದುತನಕ ನಮ್ಮ ಆಫೀಸಿಗೆ ಜಿಲ್ಲಾ ಬೋರ್ಡು ಮೀಟಿಂಗ್ ಇಂಥ ತಾರೀಕಿಗೇನೆ ಆಗುವುದೆಂದು ತಿಳಿಸುತ್ತಿದ್ದರು. ಈ ಬಾರಿಯ ಮೀಟಿಂಗಿಗೆ ಅದಕ್ಕೆ ಸುದ್ದಿಯಿಲ್ಲ. ಪ್ರಾಯಶಃ ಅದರ ಹಾಳುಹರಟೆ ಹೆಚ್ಚಾಯಿತೆಂದೋ, ಜಿಲ್ಲಾ ಬೋರ್ಡು ಖಾಸಗಿ ಕೆಲಸವೆಂದೋ ಹೀಗೆ ಮಾಡಿರಬೇಕು. ಇಂಡಿಯಾ ಗವರ್ನಮೆಂಟು ಸಹ, ತನ್ನ ವಿರುದ್ಧ ಪಕ್ಷದ ಪತ್ರಿಕೆಗಳಿಗೆ ಈ ರೀತಿ ಬಹಿಷ್ಕಾರ ವಿತ್ತಿಲ್ಲ.

\+ + + +

ಈ ಬಾರಿಯ ಬೋರ್ಡು ಎಜೆಂಡಾದಲ್ಲಿ ಹಳ್ಳಿಯ ಶಾಲಾ ಉಪಾಧ್ಯಾಯರಿಗೆ (ಕೇವಲ) ೬|./ ಕಡಿತ. ಆದರೂ ೩೬,೦೦೦ ರೂಪಾಯಿ ಕಡಿಮೆಯೆನ್ನಿ. ಇತ್ತ ಕಡಿತ ಮಾಡುತ್ತಾರೆ, ಅತ್ತ ಹೊಸ ಶಾಲೆಗಳನ್ನೂ ಮಾಡುತ್ತಾರೆ ಈ ಕಡಿತದ ಜಾತಿಯಲ್ಲಿ ಹೆಚ್ಚಿನ ಸಂಬಳದ ಹ್ಯಾಸ್ಕೂಲಿನವರೂ, ಜನರಲ್ ಸ್ಟಾಫಿನವರೂ ಬರುವುದಿಲ್ಲ. ಹಳ್ಳಿಯ ಮಾಸ್ತರರಲ್ಲವೇ? ಮಳೆಗಾಲ ಬಂದಿತು ಚಿಗುರೆಲೆ ತಿಂದು ಜೀವನ ಮಾಡಿಯಾರು ಉಳಿದ ನೌಕರರು ಹಾಗೆಯೇ?

\+ + + +

ಜಿಲ್ಲಾ ಬೋರ್ಡಿನ ಮೆಂಬರರ ಭತ್ತೆಗೆ ಕಡಿತವಿದ್ದರೆ ಲೇಸಿತ್ತು ಜನರ ಸೇವೆಗೆ ಹೊರಟ ಮುಂದಾಳುಗಳು ಕಡಿಮೆ ಭತ್ತೆಗೆ ಒಪ್ಪಿಯಾರೇ?

\+ + + +

ತಿರುವಾಂಕೂರು ಸರಕಾರವು ಸಮುದ್ರ ತೀರದ ಮೂಲಕ ಹಾಯುವ—ಟ್ರಿವೆಂಡ್ರಮ್, ಮುಂಬಯಿಯ ವಾಯುವಿಮಾನದ ಟಪ್ಪಾಲು ಮೂಲಕ ಸರ್ವಿಸಿಗೆ ಯತ್ನಿಸುತ್ತಿದ್ದಾರೆ ಮಂಗಳೂರಿನ ಮುಂದಾಳುಗಳೂ ಈ ವಿಷಯ ಯೋಚಿಸಿದ್ದಾರೆ ನಮ್ಮಲ್ಲಿ ಏಕೆ ಅದರ ಒಂದು ನಿಲ್ದಾಣ ಮಾಡಬಾರದೆಂದು ಮಂಗಳೂರು ಈ ಹಾದಿಯ ಮಧ್ಯ ಕೇಂದ್ರವಾಗುವುದು ಅಲ್ಲದೆ—ಈ ವಿಮಾನ ಯುಗಕ್ಕಿದ್ದ ಆವಶ್ಯಕತೆಯನ್ನು ನಾವು ತಿಳಿದಂತಾಗುವುದು

\+ + + +

ಇಂಡಿಯಾ ಸರಕಾರದಿಂದ, ಗ್ರಾಮಾಭಿವೃದ್ಧಿಗೆ ದೊರೆಯುವ ಹಣವನ್ನು ಮದ್ರಾಸು ಸರಕಾರವು-ಜಿಲ್ಲೆಗೆ ಒಂದೊಂದರಂತೆ ಹೊಸ ಶಾಲೆಯನ್ನು ತೆರೆಯುವುದರಲ್ಲಿ ವಿನಿಯೋಗಿಸಲು ನಿರ್ಣಯಿಸಿದೆ ಸಾಧಾರಣ ೨೦೦ ಹುಡುಗರಿಗೆ,೧೬,೦೦೦ ರೂ ಖರ್ಚು ಮಾಡಲು ಅವರು ಸಿದ್ಧರಿದ್ದಾರೆ ಸಾಮಾನ್ಯ ವಿದ್ಯೆಯ ಜತೆಗೆ ಉದ್ಯೋಗಶಿಕ್ಷಣವನ್ನು ಕೊಡಿಸಲು ಅನುಕೂಲವಾಗಲೆಂದು ಅವರ ಹಂಚಿಕೆಯ ಉದ್ದೇಶ ಈ ಕೇಂದ್ರವು ಪಂಚಾಯತವಿರುವ ಕೇಂದ್ರವಾಗಿದ್ದರೆ ಲೇಸು—ಅದೇ ಬೇಕೆಂದಿಲ್ಲ ಈ ಕುರಿತು 'ಎಲ್ಲಿ ಏನು ಎಂಬ ಅಭಿಪ್ರಾಯವನ್ನು ಸರಕಾರಕ್ಕೆ ಮೇ ತಿಂಗಳ ಒಳಗೆ ತಿಳಿಸಬೇಕಾಗಿ ಕೋರಿದ್ದಾರೆ ನಮ್ಮಲ್ಲಿಯ ಮೆಂಬರರಿಗೆ ಆ ಸುದ್ದಿ ಇಲ್ಲವೊ ಏನೋ

ಇದ್ದರೆ ಮಂಗಳೂರಿನಲ್ಲಿ ಒಂದು ಬೋರ್ಡ ಹೈಸ್ಕೂಲನ್ನಾದರೂ ತೆರೆಯಬಹುದಿತ್ತು ಜಿಲ್ಲೆಯ ಕೇಂದ್ರದಲ್ಲಿ ಬೋರ್ಡಿಗೆ ಒಂದು ಸ್ವಂತ ಹೈಸ್ಕೂಲು ಇಲ್ಲವಾದರೆ ಹೇಗೆ? ಬೇಡವಾದರೆ ಮೂಡಬಿದ್ರಿಯ ಶಾಲೆಯನ್ನು ಹ್ಯಾಸ್ಕೂಲಾಗಿ ಮಾಡಬಹುದು ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಾಲೇಜಿಗೆ ಸಾಕಾಗುವಷ್ಟಿದೆ

\+ + + +

ಎಡ್ಯುಕೇಶನಿನಲ್ಲಿ ಕೌನ್ಸಿಲಿಗೆ ಶೇಖಾಯಿಸಿದ ಮೊಬಲಗು ಬರೇ ೧೧,೦೦೦ವಂತೆ. ಶ್ರೀ ಗಾನ್ ಸಾಹೇಬರು—ಈಗಿನ ಅಧ್ಯಕ್ಷರು ಈ ಕೆಲಸಕ್ಕೆ ನಾಲಾಯಕ್ ಎಂದು ಶಿಫಾರಸು ಮಾಡಿದ್ದಾರಂತೆ. ಆದರೆ ಶ್ರೀ ನೆಲ್ಲಿಕಾಯಿ ವೆಂಕಟರಾಯರಂಥ ಕಾರ್ಯವಿಚಕ್ಷಣರನ್ನು ಬಿಟ್ಟರೆ ಮುಂದೇನು ಗತಿ? ಅವರ ಮುಂದಾಳುತನದಲ್ಲಿ ಮುನಿಸಿಪಾಲಿಟಿಯೂ ತುಸು ದಾನಧರ್ಮ ಮಾಡಿತ್ತು. ಈಗ ಕೌನ್ಸಿಲು ೧೧,೦೦೦ ದಾನ ಮಾಡಿದೆ. ಇನ್ನೂ ಅರ್ಧ ಲಕ್ಷ ಭರ್ತಿಯೂ ಗಿಲ್ಲ. ಈ ಸಂಖ್ಯೆಯು ಒಂದು ಲಕ್ಷಕ್ಕಾದರೂ ಏರುವ ತನಕ ಅವರು ನಮ್ಮ ಎಲ್ಲಾ ಸಂಸ್ಥೆಗಳ ಅಧ್ಯಕ್ಷರಾಗಲು ಯೋಗ್ಯರು. ಗಾನ್ ಸಾಹೇಬರು ಹೇಳುತ್ತಾರೆ—ಅವರಿಗೆ ಜನರ ಔದಾರ್ಯವೇನು ತಿಳಿದಿದೆ!

\+ + + +

ಕೊನೆಗೂ ಬರಗಾಲದಲ್ಲೊಂದು ಔತಣ ಬಂದಿತು. ಬೋರ್ಡಿಗೆ ಒಬ್ಬರು ಅಸಿಸ್ಟೆಂಟ್ ಪಂಚಾಯತ ಆಫೀಸರರು ಸಿಕ್ಕಿದರು ಇದು ತನಕ ಪಂಚಾಯತವೆಂದರೆ ಮೂಗು ತಿರುಗಿಸುತ್ತಿದ್ದ ಸದಸ್ಯರು ಸಹ—ಈ ಹೊಸ ಹುದ್ದೆಯ ನೇಮಕದ ವಿಚಾರ ಬಲು ಉತ್ಸಾಹ ತಾಳಿದರು ಶ್ರೀ ಶೀನ ಸೆಟ್ಟರಿಗೇ ಆ ಕೆಲಸ ಸಿಗುವಾಗ ಉತ್ಸಾಹ ತಾಳದೆ ಏನು ಮಾಡಲಿ' ಇನ್ನು ಎರಡೆರಡು ಆಫೀಸರರ ರಭಸದಿಂದ ನಮ್ಮಲ್ಲಿ ಪಂಚಾಯತುಗಳು ನಾಚಿಕೆ ಮುಳ್ಳಿನ ಗಿಡದಂತೆ ಅಭಿವೃದ್ಧಿಗೊಂಡಾವೆಂದು ಹಾರೈಸುತ್ತೇವೆ

ಬೋರ್ಡು ಮೂಲ ಶಾಲಾ ಅಧ್ಯಾಪಕರ ಸಂಘ, ಉಡುಪಿ ತಾಲೂಕು.

ಉಪಾಧ್ಯಾಯರಿಗೆ ಸೂಚನೆಗಳು

ಇದೇ ೧೯೩೫ನೇ ಮೇ ತಿಂಗಳಲ್ಲಿ ಶಿರೋಕ್ತ ಸಂಘದವರು ಜರಗಿಸಬೇಕೆಂದು ನಿಶ್ಚಯಿಸಿರುವ "ಶಿಕ್ಷಣ ಪ್ರದರ್ಶನ"ಕ್ಕೆ ಎಲ್ಲಾ ಶಾಲೆಗಳ ವಿದ್ಯಾರ್ಥಿಗಳೂ ಅಧ್ಯಾಪಕರೂ ಶಿಕ್ಷಣ ವಿಷಯಕವಾದ ಸಾಹಿತ್ಯಗಳನ್ನು ಉತ್ಸುಕತೆಯ ಪ್ರಯತ್ನದಿಂದ ತಯಾರಿಸಿ ಉಡುಪಿಯ ಬೋರ್ಡು ಎಲಿಮೆಂಟರಿ ಮೇಯಿನ್ ಶಾಲಾ ಮುಖ್ಯೋಪಾಧ್ಯಾಯರಿಗೆ ರವಾನಿಸಬೇಕಾಗಿ ಕೇಳಿಕೊಳ್ಳೋಣಾಗುತ್ತದೆ ಮಾತ್ರವಲ್ಲ, ಪ್ರದರ್ಶಿಸಿ ತೋರಲುಳ್ಳ ಆಟ, ನಾಟಕ, ಸಾಧಕ ಮುಂತಾದುವುಗಳನ್ನು ಪ್ರದರ್ಶಿಸಿ ತೋರಬಹುದು ಹಾಗೆ ತೋರಪಡಿಸಲುಳ್ಳವರು ಪ್ರದರ್ಶಿಸಲಿರುವ ವಿಷಯಗಳನ್ನು ಸದರೀ ಮುಖ್ಯೋಪಾಧ್ಯಾಯರಿಗೆ ಬರೆದು ತಿಳಿಸಬೇಕಾಗಿದೆ ಹಾಗೆ ಪ್ರದರ್ಶಿಸಿ ತೋರಲಿಕ್ಕೆ ಅಗತ್ಯವಿರುವ ಎಲ್ಲಾ ಸಾಹಿತ್ಯ ಸಾಮುಗ್ರಿಗಳನ್ನು ಅವರವರೇ ತರಬೇಕಾಗಿದೆ ಈ ಸ್ಪರ್ಧೆಯಲ್ಲಿ ಉತ್ತಮವೆಂದು ಪರಿಗಣಿಸಿ ತೀರ್ಮಾನಿಸಲ್ಪಟ್ಟ ವಿಷಯಗಳಿಗೆ ಒಳ್ಳೇ ತರದ ಇನಾಮುಗಳೂ ಯಾ ಶಿಫಾರಸು ಪತ್ರಗಳೂ ದೊರೆಯುವ ಏರ್ಪಾಡುಗಳನ್ನು ಮಾಡೋಣಾಗುವುದು ಸ್ಪರ್ಧೆಗೆ ಕಳುಹಿಸುವ ವಸ್ತುಗಳನ್ನು ಭದ್ರವಾಗಿ ಪೆಟ್ಟಿಗೆಯಲ್ಲಿ ತುಂಬಿಸಿ, ಅವುಗಳ ತಪಸೀಲು ತೋರುವ ಪಟ್ಟಿಯ ಸಮೇತ ಇದೇ ಮೇ ತಿಂಗಳ ತಾ ೧೫ಕ್ಕೆ ಪೂರ್ವ ಸದರೀ ಮುಖ್ಯೋಪಾಧ್ಯಾಯರಿಗೆ ತಲುಪುವಂತೆ ರವಾನಿಸಬೇಕು ಪ್ರದರ್ಶನದ ಸಮಾರಂಭವು ಉಡುಪಿ ಬೋರ್ಡು ಎಲಿಮೆಂಟರಿ ಮೇಯಿನ್ ಶಾಲೆಯಲ್ಲಿ ಜರಗುವುದು ಪ್ರದರ್ಶನ ಸಮಾರಂಭದ ನಿಶ್ಚಿತ ದಿವಸಗಳನ್ನು ಸ್ಥಳೀಯ ವಾರ್ತಾಪತ್ರಿಕೆಗಳಲ್ಲಿ ಪ್ರಕಟಿಸಲಾಗುತ್ತದೆ

ಪ್ರದರ್ಶನಕ್ಕೆ ರವಾನಿಸಬೇಕಾದ ವಸ್ತುಗಳು

೧ ಸಸ್ಯಶಾಸ್ತ್ರ, ೨ ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ, ೩ ಪ್ರಾಣಿಶಾಸ್ತ್ರ, ೪ ಭೂಗೋಳಶಾಸ್ತ್ರ, ೫ ಚರಿತ್ರೆ, ಇತಿಹಾಸ ೬ ಗಣಿತಶಾಸ್ತ್ರ, ೭ ಖಗೋಲ ವೈಚಿತ್ರ್ಯ, ೮ ಕಿಂಡರ್ಗಾರ್ಟನ್ ೯ ಕಸೂತಿ ಮತ್ತು ಕೈಗಾರಿಕೆ, ೧೦. ಸಾಹಿತ್ಯ, ಕೈಬರಹ ೧೧ ಪದಾರ್ಥ ವಿಜ್ಞಾನ ಮತ್ತು ರಸಾಯನಶಾಸ್ತ್ರ, ೧೨ ಕಲಾಶಾಸ್ತ್ರ, ೧೩ ಶಾಲಾ ಪಾಠಗಳಿಗೆ ಹೊರಗಣ ಚಟುವಟಿಕೆಗಳು ಮತ್ತು ವಿವಿಧ

ವಿ ಸೂ—ಮೇಲೆ ಹೇಳಿದ ವಿಷಯಗಳಿಗೆ ಸಂಬಂಧಪಟ್ಟವುಗಳಾಗಿಯೂ ಕಲಿಸಲಿಕ್ಕೆ ಮುಖ್ಯವಾದವುಗಳಾಗಿಯೂ ಬೋಧಪ್ರದವಾಗಿಯೂ ಪ್ರದರ್ಶಿಸಲಿಕ್ಕೆ ಇರುವ ಎಲ್ಲಾ ಸಾಮುಗ್ರಿ ಮತ್ತು ಸಾಹಿತ್ಯಗಳು.

ಹೆಚ್ಚಿನ ವಿವರವನ್ನು ತಿಳಿಯಬೇಕೆಂದಿರುವವರು ಸಂಘದ ಕಾರ್ಯದರ್ಶಿಗಳಿಗೆ ಬರೆದುಕೊಂಡಲ್ಲಿ ತಿಳಿಸೋಣಾಗುವುದು.

ಬೋರ್ಡು ಮೂಲಶಾಲಾ ಅಧ್ಯಾಪಕರ ಸಂಘ, ಉಡುಪಿ ತಾಲೂಕು.

ಸಂಘದ ಎಲ್ಲಾ ಬೋರ್ಡು ಮೂಲ ಶಾಲಾಧ್ಯಾಪಕರಲ್ಲಿ

ಒಂದು ವಿಜ್ಞಾಪನೆ

ಅಧ್ಯಾಪಕ ಮಹಿಳೆಯರೇ, ಮಹನೀಯರೇ, ನನ್ನ ಸಹೋದ್ಯೋಗಸ್ಥರುಗಳೇ,

ಈ ತಾಲೂಕಿನ ಎಲ್ಲಾ ಬೋರ್ಡು ಮೂಲಾಧ್ಯಾಪಕರೂ ನಮ್ಮ ಸಂಘದ ಸದಸ್ಯರೆಂಬುದನ್ನು ಬಲ್ಲಿರಿ ನಮ್ಮ ಸಂಘದ ನೇತೃತ್ವದಲ್ಲಿ ಜರಗಿಸಬೇಕೆಂದು ನಿಶ್ಚಯಿಸಿರುವ "ಶಿಕ್ಷಣ ಪ್ರದರ್ಶನ"ವು ಇದೇ ಬರುವ ಮೇ ತಿಂಗಳ ಅಪರಾರ್ಧದಲ್ಲಿ ಜರಗಲಿಕ್ಕಿದೆ ಈ ಸಮಾರಂಭವು ಯಶಸ್ವಿಯಾಗಿ ಸಂಪಾದಲ್ಲಿ ಜನತೆಯ ಪ್ರೀತಿಯುಂಟಾಗಬೇಕಾದರೆ ಉಪಾಧ್ಯಾಯರ ಸಹಾಯವು ಅತ್ಯಗತ್ಯ ಈ ಬಗೆಯಲ್ಲಿ ಅಧ್ಯಾಪಕರೆಲ್ಲರೂ ಸಹಕಾರ ಮಾಡುವವರೇ ಎಂಬ ನಿರೀಕ್ಷಣೆಯಿದೆ ಮುಖ್ಯತಃ ಮೇಯಿನ್ ಡುರ್ ಶಾಲೋಪಾಧ್ಯಾಯರೆಲ್ಲರೂ ತಮ್ಮ ತನುಮನಧನಗಳಿಂದ ಸಹಕರಿಸಿ, ಸಂಘವು ಯಶಸ್ವಿಯಾಗುವಂತೆ ಸಹಾನುಭೂತಿಯನ್ನು ತೋರದಿರಲಾರರೆಂಬ ಪೂರ್ಣ ಭರವಸೆಯು ಇದುದರಿಂದ ಸಂಘಮುಖೇನ ಈ ಸದುದ್ದೇಶದ ಕೆಲಸಕ್ಕೆ ಸಂಕಲ್ಪ ಮಾಡೋಣಾಗಿಯದೆ ಸಂಕಲ್ಪಿಸಿದ ಕಾರ್ಯವು ಯಶಸ್ವಿಯಾಗಿ ನೆರವೇರುವಂತೆ ಮಾಡಲು ನಮಗೆಲ್ಲರಿಗೂ ಶ್ರೀ ಪರಮಾತ್ಮನು ಸದ್ಬುದ್ಧಿಯನ್ನೀಯಲಿ.

ಪ್ರಕೃತದ ವಾತಾವರಣವು ಅಧ್ಯಾಪಕರನ್ನೆಲ್ಲ ಹಣದಡಚಣೆಯ ತಿರ್ಕ್ಯಾಟಿಕ್ಕೆ ಹಾಕಿ, ಬಿಗಿದು ಅವರ ಉತ್ಸುಕತೆಯ ಚರಿತವನ್ನು ಮೊಂಡನ್ನಾಗಿ ಮಾಡಿದೆ ಎಂದ ಎಲ್ಲರೂ ಅರಿತಿರುವ ವಿಷಯ ಬಗೆದು ಯೋಚಿಸಿದರೆ ಇದೊಂದು ಮಹತ್ತಾದುದು ಎನ್ನೆನ್ನಲಾಗದು. ಇದ ಭರತಖಂಡಕ್ಕೊಂದು ಪರಿವರ್ತನೆಯ ಕಾಲ ಮಹಾಶಕ್ತಿಗಳು ಮಹಾ ವಾಹಿನಿಯನ್ನು ದೇಶದ ಮೇಲೆಲ್ಲಾ ಹರಿಯಬಿಟ್ಟಿವೆ ಅಸಾಮಾನ್ಯವಾದ ಪ್ರವಾಹವು ದೇಶದ ಪ್ರತಿ ಹಳ್ಳಿ ಸಂದುಮೂಲೆಗಳ ಅದರ ಸ್ಪರ್ಶದಿಂದ ಸಜೀವವಾಗಿರುವ ಪ್ರಪಂಚವಾಗಲೇ ಕೂಡ ಸಚೇತನವಾಗಿ ಕಾರ್ಯೋನ್ಮುಖವಾಗಲಾರಂಭಿಸಿವೆ ' ಹೀಗೆ ರಾಜಕೀಯ ಪ್ರಪಂಚದಲ್ಲಿ ನವಚೇತನೋತ್ಪತ್ತಿಯುಂಟಾದ ಈ ಕಾಲದಲ್ಲಿ ಮುಂದಿನ ಜನಾಂಗವಾದ ಇಂದಿನ ಪುಟ್ಟ ಅರ್ಭಕ-ಅರ್ಭಕಿಯರ ಮೂಲ ವಿದ್ಯಾಭ್ಯಾಸದ ಜವಾಬ್ದಾರಿಯ ಹೊರೆಯನ್ನು ಹೆಗಲ ಮೇಲೆ ಹೊತ್ತ ನಾವು ಕೂಡ ಕರ್ತವ್ಯದಕ್ಷತೆಯನ್ನು ಪುನರಾಲೋಚನೆಗೆ ತಂದುಕೊಂಡು ಸಚೇತನದಿಂದ ಕಾರ್ಯೋನ್ಮುಖರಾಗಬೇಕು. ಎಂಬುದನ್ನು ಯಾರೂ ಅಲ್ಲಗಳೆಯಲಾರರು ಎಂಬುದನ್ನು ಬಲ್ಲೆನು. ಇದಕ್ಕಾಗಿಯೇ ನಮ್ಮ ಸಂಘ ಸ್ಥಾಪನೆಯಾದುದು. ಆದರೆ ಇತ್ತೀಚೆಗೆ ನಮ್ಮ ಸಂಘವು ಹರುಪಿನಿಂದ ತನ್ನ ಕಾರ್ಯವನ್ನು ಮುಂಸಾಗುವಂತಿರುವುದಿಲ್ಲವೆಂದು ನಿಮ್ಮೆಲ್ಲರ ಎದುರು ಉಸುರುವುದಕ್ಕೆ ಅಂಜಿಕೆಯೂ ನಾಚಿಕೆಯೂ ಆಗುತ್ತದೆ ಸಂಘವು ಚೇತನ, ವ್ಯವಸ್ಥೆ, ಶಕ್ತಿ ಈ ತ್ರಿಗುಣಾತ್ಮಕವಾಗಿದ್ದರೆ ಮಾತ್ರ ನಮಗದು ಕಾಮಿತಾರ್ಥವನ್ನು ತಂದೊದ್ಗುವುದು ಆ ಗುಣಗಳಲ್ಲಿ ಅವ್ಯದಾದರೂ ಒಂದು ಲೋಪವಾದರೆ ಅಥವಾ ಕುಂದಿದರೆ ಸಂಘ ಮುಖೇನ ದೊರಕಬಹುದಾದ ಲಾಭಕಕ್ಕ ಲೋಪ ಅಥವಾ ಕುಂದು ಬರುವುದು ಸಹಜವೇ ಆದುದರಿಂದ ನಮ್ಮ ಸಂಘದ ಕುಂದುಕೊರತೆಗಳನ್ನು ಸರಿಪಡಿಸಿಕೊಳಿಸುವುದಕ್ಕೆ ನಮ್ಮಲ್ಲಿ ಪ್ರತಿ ಒಬ್ಬರೂ ಬದ್ಧಕಂಕಣರಾಗಬೇಕೆಂಬೀ ನನ್ನ ಕೋರಿಕೆಯನ್ನು ಅನುರಾಗದಿಂದ ಪರಿಪಾಲಿಸುವಿರಿ ಎಂಬ ವಿಶ್ವಾಸವು ನನಗಿದೆ ಇದಕ್ಕಾಗಿ ಏನು ಮಾಡಬೇಕೆಂದು ಹಿಂದುಮುಂದು ನೋಡುವ ಆವಶ್ಯಕತೆಯಿಲ್ಲ ಸಂಘದ ನಿಯಮಗಳನ್ನೂ ನಿಬಂಧನೆಗಳನ್ನೂ ಸಂಘದ ಸಭೆಗಳ ನಿರ್ಣಯಗಳನ್ನೂ ಯೋಚಿಸಿ, ತಿಳಿದು, ಅದರಂತೆ ವರ್ತಿಸಿದರೆ ಆಯಿತು. ಸಂಘವು ಸಚೇತನವಾಗಿ ತನ್ನ ಕಾರ್ಯೋದ್ಯೋಗದಲ್ಲಿ ಮುಂದರಿದು, ತನ್ನವರಿಗೆ ಮಹತ್ತಾದ ಫಲವನ್ನೀಯದಿರದು. ಸಂಘಶಕ್ತಿಯ ಕಾರ್ಯಕಲಾಪಗಳನ್ನು ವರ್ಣಿಸುವವರಾರು?

ವಿವೇಕಾಗ್ರಹಿಗಳಾದ ನೀವೆಲ್ಲರೂ ನನ್ನವರು ಎಂಬ ಕೇವಲ ಭರವಸೆಯ ಅನುರಾಗದಿಂದ ಈ ಉಲ್ಲೇಖನವನ್ನುಲ್ಲೇಖಿಸಿದೆನಲ್ಲದೆ ಅಲ್ಪಗಣನೀಯನಾದ ನನ್ನ ಬೋಧನೆಯನ್ನಲ್ಲ. ಅಧ್ಯಾಪಕ ಬಂಧುಭಗಿನಿಯರೇ, ಅವಧಾನಿಸಿ ಯೋಚಿಸಿರಿ ನಮ್ಮ ಸಂಘವು ಸಜೀವದಿಂದ ಇರಬೇಕು, ನಮ್ಮ ಉನ್ನತಿಯಾಗಬೇಕು, ನಮ್ಮ ಉದ್ಯೋಗದ ಮಾನವು ಅಚ್ಚಳಿಯದೆ ಉಳಿಯಬೇಕು ಮುಂದಿನ ಜನಾಂಗಕ್ಕೆ ಒಳ್ಳಿತಾಗಬೇಕು ಎಂದು ಆಗ್ರಹಿಸುವಿರಾದರೆ ನಮ್ಮ ಸಂಘದ ನಿಯಮ ನಿಬಂಧನೆಗಳನ್ನೂ ನಿರ್ಣಯಗಳನ್ನೂ ಭಕ್ತಿವಿಶ್ವಾಸದಿಂದ ಅನುಸರಿಸಿ ಇತರರೆಲ್ಲರಿಗೂ ಮಾದರಿಯಾಗಿರುವಂತೆ ಉದ್ಯೋಗಿಸತೊಡಗುವ ನೀವು ನನ್ನನ್ನು ಗೌರವಿಸಿ ಈ ವಿಜ್ಞಾಪನೆಯನ್ನು ಮನ್ನಿಸುವುದಕ್ಕಾಗಿ ನಿಮಗೆಲ್ಲರಿಗೂ ನನ್ನ ಅಭಿವಂದನೆಗಳಿರಲಿ!

ಎಮ್. ಗೋವಿಂದ ರಾವ್,

ಜೊಯಿಂಟ್ ಸೆಕ್ರೆಟೀ

ಬೋರ್ಡ ಹಾಯರ್ ಎಲಿಮೆಂಟರಿ ಶಾಲೆ ಕಾಪು

Canara Bank Limited
UDIPI

ನೋಟೀಸು.

ಇದೇ 1935ನೇ ಇಸವಿ ಎಪ್ರಿಲ್ ತಿಂಗಳ ತಾ ೫ನೇ ಶುಕ್ರವಾರದ ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಿದಂತೆ ಈ ಕೆಳಗೆ ಹೆಸರು ಕಾಣಿಸಿದವರ ಅಡವಿಟ್ಟ ನಗಗಳನ್ನು ತಾರೀಕು 27ನೇ ಎಪ್ರಿಲ್ ತಿಂಗಳ 1935ರಲ್ಲಿ ಬ್ಯಾಂಕಿನ ಆಫೀಸಿನಲ್ಲಿ ಘಂಟೆ 12ರಿಂದ 1ರ ವರೆಗೆ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿ ಬಂದ ಐವೇಜನ್ನು ಬ್ಯಾಂಕಿಗೆ ಬರಾ ಅಸಲು ಬಡ್ಡಿ ವಗೈರೆ ದರ್ಜು ಮಾಡಿ ಉಳಿದ ಐವೇಜನ್ನು ಸದ್ರಿಯವರ ಲೆಕ್ಕಕ್ಕೆ ಅಮಾನತು ಇಟ್ಟಿದ್ದು ಬೇಗನೇ ಕೊಂಡುಹೋಗಬೇಕಾಗಿಯೂ, ಅದಕ್ಕೆ ಬಡ್ಡಿ ಸಿಗಲಿಕ್ಕಿಲ್ಲವಾಗಿಯೂ ಈ ಮೂಲಕ ತಿಳಿಸೋಣಾಗುತ್ತದೆ

ಲೋನ್ ನಂಬ್ರು 126/32 ಹೆಸರು P Bheema Rao, C o S V M S Mangalore ಏಲಂ ಮಾಡಿ ಹುಟ್ಟಿ ಬಂದ ಐವೇಜು ರೂ 111 6 ೦ ಬ್ಯಾಂಕಿಗೆ ಬರಾ ಅಸಲು ಬಡ್ಡಿ ವಗೈರೆ ಪಜಾವಣಿದ್ದು ರೂ 61—6—೦ ಬಾಕಿ ಉಳಿದ ಹಣ ರೂ ೫೦ —

N B ಬಾಕಿ ಉಳಿದ ಐವೇಜು ಕೊಂಡುಹೋಗುವಾಗ್ಯೆ ಈ ನೋಟೀಸಿನ ಪ್ರತಿ ಕೊಡತಕ್ಕದ್ದು

H. S Bhat,

27—4—35 Agent

"GUPTA MANTRA"

A reward of Rs 100

The objects which cannot be achieved by spending lac of rupees may be had b repeating this Mantra seven times There is no necessity of undergoing any hardshid to make it effective It is effective without any preparation This is a "WASHIKARAN MANTRA." It will make you forunate give you service and advancement and bring you profit in trade A reward of Rs 100 if proved fallible. Price including postage etc, Rs 2-7-0

Siddh Mantra Ashram,
KATRISARAI (GAYA)

ವಾತದಿಂದಾಗಿ ನಿದ್ದೆ ಹೋಯಿತು!

ತನ್ನ ಬೆನ್ನು ಒಡೆದಂತೆ ಅವಳಿಗೆ ಭಾಸವಾಯಿತು.

ಕೆಲವು ವಾರಗಳ ತನಕ ಕ್ರುಶ್ಶೆನ್; ಈಗ ಬೇನೆ ಇಲ್ಲ!

'ಭಯಂಕರ ಎಂದು ಭಾವಿಸಲ್ಪಟ್ಟದ್ದ ನೋವಿನಿಂದ ಪಾರಾದ ಸ್ತ್ರೀಯೊಬ್ಬಳು ಹೀಗೆ ಬರೆದಿರುವಳು -

"ನನ್ನ ಮೊಣಕಾಲು ಮುಂಗೈ ಮತ್ತು ಹೆಗಲುಗಳಲ್ಲಿ ಭಯಂಕರ ನೋವುಂಟಾಗುತ್ತಿತ್ತು ಬೆನ್ನಿನಲ್ಲೂ ನೋವಿತ್ತು. ನೋವಿನಿಂದ ಬೆನ್ನು ಒಡೆದಂತೆ ಭಾಸವಾಗುತ್ತಿತ್ತು ರಾತ್ರಿಯಿಡೀ ನನಗೆ ಶಾಂತಿಯಿದ್ದಿಲ್ಲ ಆದರೆ ಕ್ರುಶೆನ ಲವಣಗಳನ್ನು ಕೆಲವು ವಾರಗಳ ತನಕ ತೆಗೆದುಕೊಂಡಂದಿನಿಂದ ನಾನು ಬೇರೆಯೆ ಹೆಂಗಸಾಗಿದ್ದೇನೆ ನನಗೆ ಈಗ ಯಾವ ನೋವೂ ಇಲ್ಲ ಎಲ್ಲಾ ವಿಧದಲ್ಲೂ ನಾನು ಸಂತುಷ್ಟಳಾಗಿದ್ದೇನೆ ಕ್ರುಶೆನ್ನುಪಯೋಗಿಸುತ್ತಾ ಮುಂದಕ್ಕೆ ಸುಖವಾಗಿರುವೆನು

(ಮಿಸೆಸ್) ಎನ್. ಎಚ್.

ದೇಹದಲ್ಲಿ ಯೂರಿಕ್ ಎಸಿಡ್ ಎಂಬುದು ಬಹು ಹೆಚ್ಚಾಗಿದ್ದರೆ ವಾತದ ನೋವೂ ಬಾತುಕೊಳ್ಳುವಿಕೆಯೂ ಹೆಚ್ಚುತ್ತದೆ ಸ್ನಾಯುಗಳಲ್ಲಿ ಸಣ್ಣ ಸೂಜಿಯಂತಹ ಅಣುಗಳ ಉಂಟಾಗುವುದರಿಂದ ಯೂರಿಕ್ ಎಸಿಡ್ ಹೆಚ್ಚುತ್ತದೆ ಈ ಅಣುಗಳು ಸ್ನಾಯು ಗಂಟುಗಳಲ್ಲಿದ್ದ ನರಗಳಿಗೆ ಚುಚ್ಚಿ ಉಪದ್ರವಗಳನ್ನುಂಟು ಮಾಡುತ್ತದೆ ಕ್ರುಶೆನ್ ಲವಣವು ವಾತದಿಂದ ಎಲ್ಲವನ್ನು ಪರಿಶುದ್ಧವನ್ನಾಗಿ ಮಾಡುತ್ತದೆ ಯೂರಿಕ್ ಎಸಿಡನ್ನು ಅದು ತೆಗೆದುಬಿಡುತ್ತದೆ ಕ್ರುಶೆನಿನ ಎರಡು ಮಿಶ್ರಣಗಳು ಯೂರಿಕ್ ಎಸಿಡನ್ನು ಒಡೆದು ಕರಗಿ ಹೊರಗಟ್ಟುತ್ತವೆ ಇದರ ಇನ್ನಿತರ ಮಿಶ್ರಣಗಳು ದೇಹಶುದ್ಧಿಗಾಗಿ ಸಹಕಾರಿಯಾಗಿವೆ ಆದದರಿಂದ ಅವು ಗೆಲ್ಲುವನೆ ಈ ರೋಗವೂ ಹೋಗಿ ಸುಖ ಎರುವುದು ಖಚಿತ

ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ

ಕ್ರುಶ್ಶೆನ್ ಸೋಲ್ಟ್ ದೊರೆಯುತ್ತದೆ

Feb 21—1

ಕೆನರಾ ವಾಚ್ ವರ್ಕ್ಸ್, ಮಂಗಳೂರು.

ದಿನಂಪ್ರತಿ ನೂರಾರು ಗಿರಾಕಿಗಳು ಬಂದು ನಮ್ಮಲ್ಲಿರುವ ಹಲವು ಬಗೆಯ ಕೈಗಡಿಯಾರ, ಗೋಡೆಯ ಗಡಿಯಾರ, ಅಚ್ಚುದ ಸಾಮಾನು ಮೊದಲಾದುವುಗಳನ್ನು ಪಡೆದುಕೊಂಡ್ಹೋಗಿ ಹೊಂದಿ ಸಂತೋಷದಿಂದ ಹೋಗುವ ವಿಷಯವೊಂದೇ ನಮ್ಮಲ್ಲಿನ ಸರಕುಗಳಿಗೆ ಜನರಿಂದ ದೊರೆಕುವ ಪ್ರಶಂಸೆ, ನೀವೂ ನಮ್ಮಲ್ಲಿಗೆ ಬರಬಹುದು_ ತೃಪ್ತಿ ಹೊಂದಬಹುದು-ಬೇಕಾದರೆ ಪರೀಕ್ಷಿಸಬಹುದು

Old! *Famous!*

East & West Insurance Co., Limited.

Bonus Declared Rs 15/- Per Thousand Per Annum.

Insurance in Force About	Rs. 90,00,000
Annual Premium Income Over	Rs. 4,50,000
Life Fund Over	Rs. 7,00,000

Prompt Settlement of Claims

Low Rates of Premium and Various Attractive Plans.

Attractive and liberal agency contracts are offered to honest influential gentlemen

Enquiries Solicited —
Messrs Padubidri Bros.
Chief Agents
PADUBIDRI BOMBAY

or

Head Office
East & West Buildings,
Apollo Street, Fort Bombay

ಲೇಡಿಸ್ ಬಾಂ

ಸ್ತ್ರೀಯರ ಜೀವನಾಧಾರ

ಸ್ತ್ರೀಯರು ಪ್ರಸ್ಥರಾಗಿಯೂ ಕಾಂತಿಯುಕ್ತರಾಗಿಯೂ ಇರಬೇಕಾದರೆ ಅವರ ಮುಟ್ಟಿನ ದೋಷ, ಆ ಸಮಯದಲ್ಲಿ ಕಾಣುವ ಒಡಲು ಹೊಟ್ಟೆನೋವು ಸೊಂಟ ಹಿಡಿತ, ಗಂಟುನೋವು, ನಿದ್ರೆಯಲ್ಲಿ ಬೆಚ್ಚಿಬೀಳುವುದು ಬಿಳೀ ಸೆರಗು, ಗರ್ಭಕೋಶದ ನೋವು, ಅಕ್ರಮ ರೀತಿಯಿಂದ ಮುಟ್ಟಾಗುವಿಕೆ, ಬಂಜೆತನ, ಸಾಧಾರಣ ಕ್ಷಯವಿಕಾರ ಮತ್ತು ಅವರ ಅನೇಕ ತರದ ಗುಪ್ತರೋಗಗಳನ್ನು ನಿವಾರಿಸಲು ಇದರ ಒಂದೇ ಒಂದು ಶೀಸೆಯನ್ನು ಉಪಯೋಗಿಸಿದರೆ ಗುಣವನ್ನು ಕಾಣುವಿರಿ

ಉಪಯೋಗಿಸಿದವರ ಅಭಿಪ್ರಾಯ —

ರಾಮಕೃಷ್ಣ ಜೈನ್ ಬಿ ಎ ಲಾಹೋರ್ 'I found your Ladies Balm worth the money I spend on it '

ಯಾವ ತೆರದ ಔಷಧಿಯಿಂದಲೂ ಬಹಿಷ್ಟೆಯ ಅಕ್ರಮವನ್ನು ಸೋಗಲಾಡಿಸಲು ಅಸಮರ್ಥರೆಂದಾದರೆ ನಮ್ಮ ಲೇಡಿಸ್ ಬಾಮನ್ನು ಉಪಯೋಗಿಸಿರಿ ಬ್ರಹ್ಮ ತಿಂಗಳ ಔಷಧಿಯಿರುವ ಶೀಸೆಗೆ ರೂ ೩—೦—೦ ವಿ ಪಿ ಖರ್ಚ ೦—೬—೦

ತಯಾರಿಸುವವರು — **ದಿ. ಬಿಹಾರ್ ಕೆಮಿಕಲ್ ವರ್ಕ್ಸ್, ಬಾಗಲಪುರ.**

ಏಜಂಟರು—ಪ್ರಭಾ ಕಂಪೆನಿ, ಗ ಕೋಲೇಜು ಎದರು ಮಂಗಳೂರು.

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ.

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

ಕೆಲಸದ ಫಲಿತಾಂಶ.		ಲೈಫ್ ಫಂಡ್
1925—	ರೂ 21,24,250.	500
1929—	ರೂ. 1,66,16,620	9,32,000
1934—	ರೂ ,46,77,213.	49 06 771.

ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮಿಾರಿದೆ ಕಂಪೆನಿಯ ಆಸ್ತಿ-57,00,000ಕ್ಕೆ ಮಿಾರಿದೆ. 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ ಲಾಭಹೊಂದಬೇಕಾಗಿದೆ ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ ಲಕ್ಷ್ಮಿಯಲ್ಲಿವೆ.

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co , Ltd ,
Madras Branch,
No 6, Sankuram Chetty St., G. T. MADRAS.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6, ಸಂಕುರಾಮ ಚೆಟ್ಟಿ ಬೀದಿ, ಜಿ. ಟಿ ಮದ್ರಾಸು

The Canara Banking Corporation Udipi, Ltd.

Head office:—UDIPI, S. K. (Incorporated in British India) TEL.-'BANKING' **ESTD. 1906.**

Branches:—1. Udipi, 2. Coondapoor, 3. Car Street, Mangalore, 4. Shimoga, 5. Madras, 6. Bunder Mangalore, 7. Mercara

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟ ದೇಶೀಯ ಸಾರ್ವಜನಿಕ ಮೊದಲನೇ ಬೇಂಕು ಇದೇ ಆಗಿರುತ್ತದೆ

ಅಧಿಕೃತ ವ ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಎತ್ತಿ ಬಂದ ಮೂಲಧನ	ರೂ| 3,50,000—0—0
ತೆತ್ತು ಬಂದ ಮೂಲಧನ	2,58,305—0—0
ಕ್ಷೇಮನಿಧಿ ಮತ್ತು ಇತರ ಆಪದ್ಧನಗಳು	3,12,144—0—0

ಚಾಲ್ತಿ ಸೇವಿಂಗ್ಸ್ ಬೇಂಕ್, ಕಾಯಂ ವ ಅಲ್ಪ ಅವಧಿಯ ಠೇವಣಾತಿಗಳು ಸ್ವೀಕರಿಸಲ್ಪಡುವುವು' ಯೋಗ್ಯ ಜವಾಬ್ದಾರಿಯ ಮೇಲೆ ಸುಲಭ ದರದ ಬಡ್ಡಿಯಿಂದ ಸಾಲಗಳು ಕೊಡೋಣಾಗುವುವು ವಿನಿಮಯ ಸೌಕರ್ಯವೇ ಪ್ರಾಮುಖ್ಯ ಲಕ್ಷಣ''

ಬೊಂಬಾಯಿ, ಮದ್ರಾಸು, ಕರಾಚಿ, ಕಲ್ಕತ್ತಾ ಮೊದಲಾದ ಪ್ರಾಮುಖ್ಯ ಪಟ್ಟಣಗಳಿಗೆ ಹಣವನ್ನು ತಂತಿ ವ ಪತ್ರಕವಾಗಲೀ ಡಿಮಾಂಡ್ ಡ್ರಾಫ್ಟ್ ಮೂಲಕವಾಗಲೀ ಅತಿ ಸುಲಭ ವೆಚ್ಚದಿಂದ ಕಳುಹಿಸುವ ಸೌಕರ್ಯವು ನಮ್ಮಲ್ಲಿದೆ ಬೇಂಕಿಗೆ ಸಂಬಂಧಪಟ್ಟ ಇತರ ಎಲ್ಲಾ ವಹಿವಾಟುಗಳೂ ನಡೆಸಲ್ಪಡುವುವು

ಹೆಚ್ಚಿನ ಮಾಹಿತಿ ಬಗ್ಗೆ ನಮ್ಮ ಯಾವುದೇ ಆಫೀಸಿಗೆ ಬರಕೊಳ್ಳಿರಿ.

ಕೋರ್ಪರೇಶನ್ ಆಫೀಸು, ಉಡುಪಿ, 7-1-35 — **M. Shrinivas Prabhu,** *Manager*

(Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು ಇಲ್ಲಿಯ ವರೆಗಿನ ನಮ್ಮ ಪಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ [illegible] ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ಮನಸಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಪೇಕ್ಷಿಸುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದು ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ,

[illegible]

ರಜತೋತ್ಸವ ವರ್ಷ. — ಮೆಸರ್ಸ್ ಕೊಟ್ಟಿಕಾರ್ ಬ್ರದರ್ಸ್ (ಸ್ಥಾ. 1910) — ರಜತೋತ್ಸವ ವರ್ಷ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಚೆಯರ್ ಮೆನ್:— ಸರ್. ಲಲ್ಲೂಭಾಯಿ ಸಮಲ್ದಾಸ್, [illegible])

[illegible]

ಪೋಲಿಸಿದಾರರು ಮತ್ತು ಏಜಂಟರುಗಳಿಗೆ ನಮ್ಮ ಸಂದೇಶ —

[illegible]

[illegible]

ನಮ್ಮ ಈ ಕೆಳಗಿನ ಯಾವುದಾದರೂ ಆಫೀಸುಗಳಿಗೆ ಬರೆಯಿರಿ ಅಥವಾ ಸ್ವತಃ ಬಂದು ಕಾಣಿರಿ

(1) [illegible]	(2) ಪೋಸ್ಟ್ ಬಾಕ್ಸ್ 337	(3) [illegible]	(4) [illegible]	(5) [illegible]	(6 ಉಡುಪಿ
[illegible] ನಂ. 2	[illegible] ಮದರಾಸು	[illegible]	[illegible]	ಮಂಗಳೂರು	ದಕ್ಷಿಣ ಕನ್ನಡ

Karnataka Chemical and Pharmaceutical Works, Ltd., Udipi (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ — ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ.

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್ಹೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು, ಖರ್ಚೂ ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ. ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ'

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)

ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲಿಂಟ್ಯಾನ್, ಆರೋರಾ ಕ್ರೀಮ್, ಕ್ರಿಮೊರ್ ಲಿಮೊಸಿಸ್, ಕರ್ಣಾಟಕ ರೋಸ ಪೊಮೇಡ್ ಇದಲ್ಲದೆ ನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್ ಪೇನು ಶಾಯಿಗಳೂ ಸಿದ್ಧವಾಗುವುವು.

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಪ್ಪಪ್ಪ ಬಾಳಿಗ.

ಹೆಡ್ ಆಫೀಸು ಮತ್ತು ಕಾರಖಾನೆ.—ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೋ:—(1) ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2

ಏಜಂಟ್ಸ್— (2) 1/70 ನ್ಯಾನಪ್ಪ ನ್ಯಾಕನ ಬೀದಿ, ಜಾರ್ಜ್ ಟೌನ್ ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

Edited, Printed & Published By A. S. Kamath at the Sharada Press, Car Street, Mangalore.

ವಾರ್ಷಿಕ ಚಂದಾ: 2 ರೂಪಾಯಿ. ಬಿಡಿ ಸಂಚಿಕೆ 1 ಆಣೆ. ಟಪಾಲು ಹಾಸಲು ಸೇರಿ ರೂ. 2-18-0.

P
for Quality Snuff
H. Rama Rao and Sons.
High Class Snuff Manufacturers
Mangalore, S. I.
ASK FOR:-
RAMA SNUFF.
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY.
Buy a policy in THE BOMBAY LIFE
Madras Branch Secretaries:
Kochikar Brothers,
Udipi, Mangalore, Bangalore, Madras, Bombay and Calicut.

ESTABLISHED 1906
(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟನಾಗುವ ವಾರಪತ್ರಿಕೆ.

ಪುಸ್ತಕ ೨೯. ಮಂಗಳೂರು ತಾ. ೧೦ನೇ ಶುಕ್ರವಾರ ಮೇ ೧೯೩೫. (10-5-'35) ಸಂಚಿಕೆ ೧೯

ಹಿಂದೆ ಮೇ ತಿಂಗಳಲ್ಲಿ ಜಿನೇವಾ ಪಟ್ಟಣದಲ್ಲಿ ನಡದ ಆಂತರ್ರಾಷ್ಟ್ರೀಯ ಮಜೂರರ ಪರಿಷತ್ತು.

ಚಕ್ರ

(All Rights Reversed)

ಓಹೋ, ಹೋ, ಏನು ಗಡಿಬಿಡಿಯಯ್ಯಾ ದೇಶದಲ್ಲೆಲ್ಲ! ತಾ. ೫-೬ನೇ ದಿನಗಳಲ್ಲಿ ರೋಯಲ್ ಸಿಲ್ವರ್ ಜುಬಿಲಿಯ ಸಂಬಂಧವಾಗಿ ನಡೆದ ಮಹೋತ್ಸವವು ಎಲ್ಲಾ ಸರಕಾರೀ ಮುಖ್ಯಾಧಿಕಾರಿಗಳಿಗೂ ಬರುವ ಜನವರಿ ತಿಂಗಳಲ್ಲಿ ಅವಶ್ಯವಾಗಿಯೂ ಕಿರುದಾವಳಿಗಳನ್ನು ತರುವಂತಹುದಾಗಿತ್ತು.

× × × × × ×

ದೀಪೋತ್ಸವಗಳೇನು! ಇಲೆಕ್ಟ್ರಿಕ್ ಕಂಪೆನಿಗೆ ಆದ ಲಾಭವೇನು? ಸಿಡಿಮದ್ದು ತಯಾರಿಸುವವರಿಗೆ ದೊರೆತ ಕೆಲಸವೇನು? ಪತಾಕೆಗಳನ್ನು ಸ್ವಲ್ಪ ಬಲಾತ್ಕಾರದಿಂದ ವಿಕ್ರಯಿಸಿದ ಹುಡುಗ ಹುಡುಗಿಯರಿಗೆ ದೊರೆತ ಸಾಹಸಪ್ರದರ್ಶನದ ಸಂದರ್ಭವೇನು? ಅವರ ಮಾತಿನ ಮೋಜು ಏನು? ಅವರು ಹರಿಸಿದ ಬೆವರು ಎಷ್ಟು? ಮೋಟಾರ್ ಕಾರುಗಳಲ್ಲಿ ವೆಚ್ಚವಾದ ಪೆಟ್ರೋಲ್ ಏನು? ಎಲ್ಲವೂ ವರ್ಣನಾತೀತ! ಖುದ್ದು ಸಾರ್ವಭೌಮರು ಬಂದು ನೋಡಬೇಕಿತ್ತು ನಮ್ಮ ಸೇವೆಯ ಮಹತ್ವಿಕೆಯನ್ನು!

× + × × × ×

ಕಾಂಗ್ರೆಸ್ಸಿನ ಹಲವು ಮುಂದಾಳುಗಳು ಇನ್ನೂ ಜೈಲಲ್ಲಿಷ್ಟರೇನು? ಅವರ ಸಹಕಾರವು ದೊರೆಯದಿದ್ದರೇನು? ರೋಯಲ್ ಜುಬಿಲಿ ಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ಜರಗಲಿಲ್ಲವೇ? ಹಿಂದೂದೇಶವು ಬ್ರಿಟಿಷ್ ಸರಕಾರವನ್ನು ಮನಮುಟ್ಟಿ ಪ್ರೀತಿಸುತ್ತದೆಂದು ಜಗತ್ತಿಗೇ ತೋರಿಸಲಾಗಲಿಲ್ಲವೇ? ಕುರ್ಚಿಯನ್ನು ಅಳಗಿಸಿಟ್ಟರೆ ಮದುವೆಯ ಕಾರ್ಯವು ನೆರವೇರುವುದಿಲ್ಲವೇ?

× × × × × ×

ಬಳ್ಳಾರಿಯಲ್ಲಿ ಕ್ಷಾಮವಂತೆ, ರೈತರಿಗೆ ಕಷ್ಟವಂತೆ, ಜನರ ಕೈಯಲ್ಲಿ ಕಾಸಿಲ್ಲವಂತೆ ಬಡವರು ಕಷ್ಟಪಡುತ್ತಿರುವರಂತೆ, ಆದರೇನು ಮಾಡುವುದು? ಇಷ್ಟು ದೊಡ್ಡ ಲೋಕದಲ್ಲಿ ಹಲಕೆಲವರು—ಅಥವಾ ಹೆಚ್ಚಿನವರು ಕಷ್ಟಗಳಿಂದ ಬಳಲುತ್ತಿರುವರೆಂದು ಹಣವಿದ್ದ ಶ್ರೀಮಂತರು ತಮ್ಮ ಔದಾರ್ಯ ಪ್ರದರ್ಶನದ ಸಂದರ್ಭವನ್ನು ಕಳೆದುಕೊಂಡು ತಮ್ಮ ಲೋಯಲ್ಟಿಯನ್ನು ಮರೆಯಬೇಕೆಂದು ಶಾಸನವಿದೆಯೇ?

× × × × × ×

ಕಡಲ ದಂಡೆಯಲ್ಲಿ ಒಂದು ದೊಡ್ಡ ಬೆಂಕಿಯ ಕುಂಡವನ್ನು ಹೂಡಿದರು ಅದರಲ್ಲಿ ಸುಟ್ಟ ಮಡಲುಗಳೆಷ್ಟು?—ಹಳೆಯ ಟಾಯರುಗಳೆಷ್ಟು? ಸೀದಾಗಿ ಹೋದ ರೂಪಾಯಿಗಳೆಷ್ಟು? ಅದರಿಂದ ಜನರಿಗೆ ದೊರೆತ ಲಾಭವೇನು? ಎಲ್ಲವೂ ಊಹನಾತೀತ!

× × × × × ×

ಬ್ರಿಟಿಷ್ ಸಾರ್ವಭೌಮರ ಸಿಲ್ವರ್ ಜುಬಿಲಿ ಎಂದರೆ ಕೆಲವರು ರಾಷ್ಟ್ರೀಯರಿಗೆ ಬಹಳ ವ್ಯಸನಕರ ವಿಷಯವಾಗಿ ಸಿಂತಂತೆ ಅವರು ಪತಾಕೆಗಳನ್ನು ಪಡೆಯಲಿಲ್ಲವಂತೆ—ಹಿಂದೂದೇಶದ ಬಡವರ ಉದ್ಧಾರಕ್ಕಾಗಿ ಬಂದ ಮೊತ್ತವನ್ನು ವಿನಿಯೋಗಿಸಲಾಗುತ ದೆಯೆಂದು ಭಾಷಣ ಕೊಟ್ಟ ಮೇಲೂ—ಪತಾಕೆಗಳಲ್ಲಿ ಅಚ್ಚುಗೊಳಿಸಿದ ಮೇಲೂ—ಈ ಬಗೆಯ ತಿರಸ್ಕಾರವೇ? ದೊಡ್ಡ ಆಶ್ಚರ್ಯವಯ್ಯ!

× × × × × ×

"ಈ ಸಾರ್ವಭೌಮರ ಕಾಲದಲ್ಲಿ ಹಿಂದೂದೇಶಕ್ಕೆ ಅನೇಕ ಕಷ್ಟಗಳು ಒದಗಿವೆ" ಎಂದು ಕೆಲವರ ಅಂಬೋಣ ಅಂತಹ ಕಷ್ಟಗಳಿಗೆ ನಮ್ಮ ಚಕ್ರವರ್ತಿಯವರು ಕಾರಣರೇ? ಪಾರ್ಲಿಮೆಂಟಿನಲ್ಲಿ ಒಂದೆರಡು ಮಾತುಗಳನ್ನು ಆಡಬೇಕೆಂದಿದ್ದರೆ—ಭಾಷಣವನ್ನು ಬರೆದು ಅಥವಾ ಬರೆಸಿ ತಂದು ಓದುವಷ್ಟು ಸ್ವಾತಂತ್ರ್ಯವು ಚಕ್ರವರ್ತಿಯವರಿಗೆ ಇದೆ ಪಾರ್ಲಿಮೆಂಟಿನ ಸ್ವದೇಶಾಭಿಮಾನಿಗಳ ಆಟದಿಂದಾಗಿಯಲ್ಲವೇ ಹಿಂದೀಯರಿಗೆ ಕಷ್ಟಗಳು ಬಂದುದು? ಅನ್ಯನ್ಯಾನ ತಪ್ಪಿಗೆ ತಮ್ಮನ್ನು ದೂರುವುದು ನ್ಯಾಯವೇ?

× × × × × ×

ಸಿಲ್ವರ್ ಜುಬಿಲಿ ಮಹೋತ್ಸವದಲ್ಲಿ ಸಿದ್ಧಗೆಟ್ಟು, ವಿಶ್ರಾಂತಿಯಿಲ್ಲದೆ — ಸಾಹಸಪಟ್ಟು ಕೆಲಸಮಾಡಿ ಭಾಗವಹಿಸದವರಿಗೆ ಪುಣ್ಯವೇ ಇಲ್ಲವೆಂದು ನಿರ್ಧಾರಪೂರ್ವಕವಾಗಿ ಹೇಳುವ,—

'ಸಾಯ್ಬ'.

ಅನ್ಯರಲ್ಲಿನ ಶಕ್ತಿಬಲಗಳನ್ನು ಕಂಡು ಬೆರಗಾಗುವಿರೇಕೆ? ಅದನ್ನು ನೀವೂ ಹೊಂದಲಾಗುವುದಿಲ್ಲವೇ? ಶಕ್ತಿಯುತ ಸ್ನಾಯು, ಗಟ್ಟಿಯಾದ ಮೆದುಳು, ಚೇತನಯುತ ದೇಹಗಳು ಪೂರ್ಣವೂ ಯುಕ್ತವೂ ಆದ ರಕ್ಷಣೆಯಲ್ಲಿದೆ

'ಓವಲ್ಟಿನ್'ನಲ್ಲಿ ನಿಸರ್ಗಸಿದ್ಧವಾದ ಅಮೂಲ್ಯ ಆಹಾರಸಾರವಿದೆ ಬೆಳೆದ ಬಾರ್ಲಿ, ದನದ ಕೆನೆಹಾಲುಗಳು ಅತ್ಯಮೂಲ್ಯ ಪಾನೀಯಗಳು, ದೇಹವೃದ್ಧಿಗೆ ಸಾಧಕವಾದವುಗಳ ಬಲವನ್ನೂ ಶಕ್ತಿಯನ್ನೂ ಆರೋಗ್ಯವನ್ನೂ ಕೊಟ್ಟು ಕಾಪಾಡುತ್ತದೆ ಅದರ ಚೇತನದಾಯಕ ಗುಣವನ್ನು ನೀವು ಕೂಡಲೇ ಕಂಡುಹಿಡಿಯುವಿರಿ ಆರೋಗ್ಯವನ್ನು ಹೊಂದುವಿರಿ

ನಿಮ್ಮ ಆಹಾರಕ್ಕೆ ಓವಲ್ಟಿನ್ ಸೇವಿಸಿರಿ,—ಅದು ಆರೋಗ್ಯಕರ ಬಲವರ್ಧಕ ಮತ್ತು ಶಕ್ತಿದಾಯಕ

ಓವಲ್‌ಟಿನ್

ಮೆದುಳು, ನರ, ದೇಹಗಳನ್ನು ವೃದ್ಧಿಸುತ್ತದೆ

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ, ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ಸಿಗುತ್ತದೆ.

ಏಜಂಟ್ —ಜೇಮ್ಸ್ ರ್‍ಯಾಟ್ 8/5 ಎ ರಾನ್ ಸ್ಟ್ರೀಟ್, ಕಲ್ಕತ್ತ ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ

OV 241

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

R E P No 186/'35

A S ಯೂಸೂಫ್ ಸಾಹೇಬ—ಅರ್ಜಿದಾರ

ಮತ್ತು

1 ರಹಿಮಾನ್ ಸಾಹೇಬ 2 ಮೈದಿನ ಸಾಹೇಬ 3 ರಾಜಾ ಸಾಹೇಬ 4 ಹಸನ ಸಾಹೇಬ — ಶೇಕ ಅಬ್ದುಲ ಗನಿ ಸಾಹೇಬರ ಮಕ್ಕಳು—ಕಾರ್ಕಳ ತಾಲೂಕು ಸಾಣೂರು ಗ್ರಾಮದಲ್ಲಿ ಬದುಕುವರು—ಎದ್ರಿರು

ಇವರೊಳಗೆ

ಸದ್ರಿ ಅಮಲ್ದಾರಿಯ ಎದ್ರಿರಿಗೆ ಈ ಮೂಲಕ ತಿಳಿಸುವುದೇನೆಂದರೆ —ಅರ್ಜಿದಾರನು ನಿಮ್ಮ ಮೇಲೆ ಈ ಕೋರ್ಟಿನ ಕ್ರಮ ನಂಬ್ರ 220/1033ನೇಗೆ ಪಡೆದ ಸದ್ರಿ ಡಿಕ್ರಿ ಮೇಲೆ ನಡೆಸಿದ ಮೇಲ್ಕಂಡ ಅಮಲ್ದಾರಿಯು ತನ್ನ ಬಗ್ಗೆ ಇದೇ ತಾ 29-6-35ಕ್ಕೆ ಇಡಲ್ಪಟ್ಟಾಗಿಯದೆ. ಆದುದರಿಂದ ಎದ್ರಿರು ತಾ 29-6-35ರಲ್ಲು ಬೆಳಗ್ಗೆ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪ ಇದ್ದರೆ ಜಾಹೀರು ಮಾಡಿಕೊಳ್ಳತಕ್ಕದ್ದು ಇಲ್ಲವಾದರೆ ಎದ್ರಿರನ್ನು ಎಕ್ಸಪಾರ್ಟಿ ಮಾಡಿ ಅಮಲ್ದಾರಿ ಮುಂದರಿಸೋಣಾದೀತೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

ಕಾರ್ಕಳ, 5—5—35.

H. S. Hussain, ಅರ್ಜಿದಾರನ ಕಡೆ ವಕೀಲ,

Estd 1920] THE [1920ರಲ್ಲು ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು

ಠೇವಣಾತಿಗಳ ದರ

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur, Dated 10—4—1935

G. N Lakshman Pai, *Secretary.*

ಪತ್ರಿಕಾ ಪ್ರಪಂಚ:

ಆಂಗ್ಲ ಪತ್ರಿಕೆಗಳಿಂದ

೧. ಭರತಖಂಡದಲ್ಲಿ ಮಕ್ಕಳ ದುಡಿಮೆ.

ಜಿನೀವಾದ ಇಂಟರ್ ನೇಶನಲ್ ಲೇಬರ್ ಆಫೀಸಿನ ಡಾ॥ ರಜನಿಕಾಂತ ದಾಸರು ೧೯೩೦ರಲ್ಲಿ International Labour Review ಪತ್ರಿಕೆಗೊಂದು ಲೇಖನವನ್ನು ಕೊಟ್ಟು ಅದರಲ್ಲಿ ಭರತಖಂಡದ ಲೇಬರ್ ಶಾಸನಗಳ ಕುರಿತಾಗಿ ಪ್ರತಿಪಾದಿಸಿದರು. ಅದರಲ್ಲಿ ಅವರು ಹೇಳಿದುದೇನೆಂದರೆ —

ಕೃಷಿಪ್ರಧಾನವಾದ ದೇಶಗಳಲ್ಲೂ ಕೈಗಾರಿಕೆಗಳು ಹೆಚ್ಚು ಅಭಿವೃದ್ಧಿಗೊಂಡ ದೇಶಗಳಲ್ಲೂ ಇರುವಂತೆ ಹಿಂದೂದೇಶದಲ್ಲೂ ವೃತ್ತಿಸಾಧನೆಯಲ್ಲಿ ಮಕ್ಕಳ ದುಡಿತವು ಪ್ರಾಮುಖ್ಯತೆಯನ್ನು ಒಳಗೊಂಡಿರುತ್ತದೆ. ಪಾಶ್ಚಾತ್ಯದೇಶಗಳಲ್ಲಿರುವಷ್ಟು ಪ್ರೌಢ ವಯಸ್ಕರು ಇಲ್ಲದಿರುವುದರಿಂದಲೂ ಅಲ್ಲದೆ ಅಲ್ಲಿಯಂತೆ ಇಲ್ಲಿ ಸಿದ್ಧಾಂತಯ ಶಿಕ್ಷಣವು ಇಲ್ಲದಿರುವುದರಿಂದಲೂ, ಅದೂ ಅಲ್ಲದೆ ಹಿಂದೂದೇಶದಲ್ಲಿ ಮಕ್ಕಳು ಕಮ್ಮಿ ಅಲ್ಪ ವಯಸ್ಸಿನಿಂದಲೇ ದುಡಿತಕ್ಕಾರಂಭಿಸುವುದರಿಂದಲೂ ರಾಷ್ಟ್ರದ ಸಂಪತ್ತನ್ನು ಉತ್ಪನ್ನಗೊಳಿಸುವ ಭಾರವು ಇಲ್ಲಿಯ ಕಿರಿಯ ಜನಾಂಗಿಗಳ ಮೇಲೆ ಬಿದ್ದಿದೆ. ರಕ್ಷಣಾ ಶಾಸನಗಳಿಂದಾಗಿಯೂ ಕೈಗಾರಿಕೆಗಳು ಅಭಿವೃದ್ಧಿಗೊಂಡಿರುವುದರಿಂದಾಗಿಯೂ, ಕಾರಖಾನೆಗಳಲ್ಲಿ ಮಕ್ಕಳ ದುಡಿಮೆಯ ಅಭ್ಯಾಸವು ಬಹು ಕಡಿಮೆಯಾಗಿದೆ. ಇಷ್ಟಿದ್ದರೂ, ಬಹು ಸಂಖ್ಯಾತ ಮಕ್ಕಳು ತಮ್ಮ ಕುಟುಂಬದ ಕೃಷಿಕೆಲಸದಲ್ಲಿ ಬೇಕಾಬೇಕಾದ ಸಹಾಯವನ್ನಿತ್ತೋ ಕೈಗಾರಿಕೆಗಳಲ್ಲಿ ಭಾಗವಹಿಸಿಯೋ ಫೆಕ್ಟರೀಸ್ ಏಕ್ಟಿನಿಂದ ಬಾಹಿರರಾಗಿರುತ್ತಾರೆ. ಇದನ್ನು ನಿಲ್ಲಿಸುವುದಕ್ಕಾಗಿ ಇಂಡಿಯನ್ ಫೆಕ್ಟರೀಸ್ ಏಕ್ಟನ್ನು ಇನ್ನೂ ವಿಶಾಲಗೊಳಿಸುವ ಯೋಚನೆಯಲ್ಲಿ ಸರಕಾರವು ಇದೆ. ಮಕ್ಕಳನ್ನು ರಕ್ಷಿಸಬೇಕಾದರೆ ಈ ಶಾಸನವು ಆವಶ್ಯಕವಾಗಿ ಬೇಕಾದುದು. ಆದರೆ ಮಕ್ಕಳ ಉದ್ಯೋಗವನ್ನು ನಿರ್ಬಂಧಿಸುವಾಗ ಅವರಿಗೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೊಡುವ ಪ್ರಶ್ನೆಯೂ ಎದುರು ಬರುತ್ತದೆ. ಅಥವಾ ಅವರಿಗೆ ಉದ್ಯೋಗಿಕ ಶಿಕ್ಷಣವನ್ನು ಕೊಡುವ ಪ್ರಶ್ನೆಯೂ ತಲೆಯೆತ್ತುತ್ತದೆ. ಈ ವಿಷಯಕವಾಗಿ ಸುಧಾರಣೆಗಳಾದರೆ ಮಾತ್ರ ಮಕ್ಕಳ ಉದ್ಯೋಗದ ಈ ಜಟಿಲ ಪ್ರಶ್ನೆಯನ್ನು ಸಾಂಗವಾಗಿ ಪರಿಷ್ಕರಿಸಬಹುದು.

೨. ಪಠ್ಯಪುಸ್ತಕಗಳ ಆರಿಸುವಿಕೆ

ದೇಶದ ಹಲವೆಡೆಗಳಲ್ಲಿ ಪಠ್ಯಪುಸ್ತಕಗಳನ್ನು ಆರಿಸುವ ವಿಷಯದಲ್ಲಿರುವ ಘ್ಯಾಸ್ತ್ಯಾತಿರೇಕಗಳು ಸಾರ್ವಜನಿಕರಿಗೆ ಸರ್ವವಿದಿತವಿದೆ, ಇತ್ತೀಚೆಗೆ ಪಂಜಾಬಿನಲ್ಲಿ ಈ ಕೊರತೆಯು ತನ್ನ ಪರಮಾವಧಿಯನ್ನೇ ಮುಟ್ಟಿತು, —ಪರಿಣಾಮವಾಗಿ ಸರಕಾರವು ಒಂದು ಸಮಿತಿಯನ್ನೇರ್ಪಡಿಸಿ ವಿಚಾರಿಸಿ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಯಾರು ಯಾವ ಅನ್ಯಾಯಗಳನ್ನೆಲ್ಲ ಮಾಡುತ್ತಿರುವರೆಂದು ವಿಚಾರಿಸಿಕೊಳ್ಳಲಾಯಿತು. ಆ ಸಮಿತಿಯು ಹೇಳಿರುವುದೇನೆಂದರೆ—ಈಗಿನ ಟೆಕ್ಸ್ಟ್‌ಬುಕ್ ಕಮಿಟಿಯನ್ನು ತೆಗೆದುಬಿಟ್ಟು ಮಂತ್ರಿಮಂಡಲದಿಂದ ಚುನಾಯಿತರಾದ ೨೭ ಸದಸ್ಯರನ್ನು ಅದರ ಬದಲಿಗೆ ನೇಮಿಸಬೇಕು. ಎಲ್ಲಾ ಅಧಿಕಾರಗಳು ಮಂತ್ರಿಮಂಡಲಕ್ಕಿರಬೇಕು. ಪಠ್ಯಪುಸ್ತಕಗಳ ಕ್ರಯವನ್ನು ಹೆಚ್ಚಿನ ಮಟ್ಟಿಗೆ ಇಳಿಸಬೇಕು. ಈ ಕೆಲಸವನ್ನು ತೃಪ್ತಿಕರವಾಗಿ ಕೆಲಸ ನಡೆಸುವ ಒಂದು ಸಮಿತಿಗೆ ಕಟ್ಟುಕೊಡಬೇಕು. ಒಂದು ದರ್ಜೆಗೆ ಒಂದೇ ವಿಷಯಕವಾಗಿ ಬರೆಯಲ್ಪಟ್ಟ ಎರಡು ಪುಸ್ತಕಗಳಲ್ಲದೆ ಹೆಚ್ಚಿನವುಗಳನ್ನು ಆರಿಸಬಾರದು. ಅವುಗಳನ್ನು ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಮೇಶನ್ ಇವರಿಗೆ ವಿಮರ್ಶೆಗಾಗಿ— ಕಳುಹಿಸಬೇಕು. ಈ ಪುಸ್ತಕಗಳನ್ನು ವಿಮರ್ಶಿಸುವವರ ಹೆಸರಿನ ಪಟ್ಟಿಯೊಂದನ್ನು ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರು ರಹಸ್ಯವಾಗಿ ಇಟ್ಟುಕೊಳ್ಳಬೇಕು. ಎಡ್ವೈಸರಿ ಬೋರ್ಡಿನವರು ಈ ವಿಮರ್ಶೆಗಳನ್ನು ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರು ಇಡಬೇಕು. ೧೯೩೭—೩೮ರಿಂದ ಮೊದಲುಗೊಂಡು ಹೀಗೆ ಆರಿಸಲ್ಪಟ್ಟ ಪುಸ್ತಕಗಳನ್ನು ಉಪಯೋಗಿಸಬೇಕು, ಪ್ರತಿ ಐದು ವರ್ಷಗಳಿಗೊಮ್ಮೆ ಈ ಪಠ್ಯಪುಸ್ತಕಗಳನ್ನು ಸವಿವರವಾಗಿ ವಿಮರ್ಶಿಸಿ ಸಮ್ಮತವನ್ನು ಪಡೆಯಬೇಕು. ಈಗ ಇರುವ ಪುಸ್ತಕಗಳು ಮುಂದಿನ ಪುಸ್ತಕಗಳೊಡನೆ ಸಮಾನತೆಯಿಂದ ನಿಲ್ಲುವವೋ ನೋಡಬೇಕು. ಎಲ್ಲಾ ಪ್ರಾಂತ್ಯಗಳವರೂ ಈ ಶಿಫಾರಸನ್ನು ಅವುಗಳ ಕೂಲಂಕಷ ವಿಷಯಗಳ ಮೇಲಿನ ವಿಮರ್ಶೆಯೊಡನೆ ತಿಳಿಯಬೇಕಾಗಿದೆ. ಮುಖ್ಯವಾದ ವಿದ್ಯಾರ್ಥಿಗಳಿಗೂ ಅವರ ಹೆತ್ತವರಿಗೂ ಸಂಬಂಧಿಸಿರುವ ಈ ಮಹತ್ವಾಚಾರದಲ್ಲಿ ಎಷ್ಟು ಸಮಯವನ್ನು ವೆಚ್ಚಮಾಡಿದರೂ ಹೆಚ್ಚಾಗಲಾರದು."

The Educational Review

೩. ಆಸ್ಪತ್ರೆಗಳ ಉಪಯೋಗ ಮತ್ತು ದುರುಪಯೋಗ.

ಸಂಸ್ಥಾನಗಳಲ್ಲಿರುವ ಆಸ್ಪತ್ರೆಗಳನ್ನು ಸರಕಾರವು ಆಡಳಿತವನ್ನು ವಹಿಸಿಕೊಂಡು ಎಷ್ಟರಿಂದಾಗಿಯೂ ನ ಖಾಸಗಿ ಆಸ್ಪತ್ರೆಗಳು ಹೆಚ್ಚುವುದರಿಂದಲೂ ಅಪರೀಕ್ಷಿತವಾದ ದುಷ್ಪರಿಣಾಮಗಳು ತಲೆಯೆತ್ತಿವೆ. ರೋಗಿಯು ತನ್ನ ಚಿಕಿತ್ಸೆಗಾಗಿ ಅಲ್ಪಸ್ವಲ್ಪ ಹಣವನ್ನು ಕೊಡಬೇಕಾಗಿ ಬಂತು. ಮಾನಾರ್ಹ ವೈದ್ಯರನ್ನು ನೇಮಿಸುವುದು ಅಗತ್ಯವಿತ್ತು. ಹಲವು ರೋಗಿಗಳು—ಅವರು ತಮ್ಮ ಔಷಧಿಗಳ ಕ್ರಯವನ್ನು ಕೊಡಲು ಶಕ್ತರಾಗಿದ್ದರೂ— ಅವರಿಗೂ ಧರ್ಮಾರ್ಥವಾಗಿ ಚಿಕಿತ್ಸೆನಡೆಸುವ ತಾರತಮ್ಯವಿಲ್ಲದ ಅಭ್ಯಾಸವು ಹುಟ್ಟಿಬಂತು. ಈ ಆಸ್ಪತ್ರೆಗಳಿಂದಾಗಿ ಸಾಮಾನ್ಯ ತರಗತಿಯ ವೈದ್ಯರ ಕಷ್ಟಗಳು ಹೆಚ್ಚಿ ಸ್ಪರ್ಧೆಯು ನಡೆಯುವಂತಾಯಿತು. ಔಟ್ ಪೇಶಂಟ್ ಶಾಖೆಗಳಲ್ಲಿ ಅನಾವಶ್ಯಕವಾದ ಪರಿಪಾಠ ಕೆಲ್ಸಕಾಗಬೇಕಾದಂತ. ಹೀಗಾಗಿ ಆಸ್ಪತ್ರೆಗಳ ಆಡಳಿತವನ್ನು ಉತ್ತಮಗೊಳಿಸುವುದರಲ್ಲಿ ಸಾಮಾನ್ಯ ತರಗತಿಯ ಪ್ರಾಕ್ಟೀಸನರು ಸಹಕರಿಸಿ ನಡೆಯಬೇಕೋ ಅಥವಾ ಈಗಿನಂತೆ ಮುಂದೆಯೂ — ತಮ್ಮ ಸ್ಥಿತಿಯನ್ನು ರಕ್ಷಿಸಿಕೊಳ್ಳುವುದಕ್ಕಾಗಿ—ಹೋರಾಡಬೇಕೋ ಏನೆಂದು

(೧೩ನೇ ಪುಟಕ್ಕೆ ಮುಂದುವರಿದುದು.)

ಕನ್ನಡ ಪತ್ರಿಕೆಗಳಿಂದ

೪. ಬಳ್ಳಾರಿ ಸೀಮೆಯ ಬರಗಾಲ

ಬಳ್ಳಾರಿ ಜಿಲ್ಲೆಯ ಕ್ಷಾಮದ ವೃತ್ತಾಂತವನ್ನು ವಿವರವಾಗಿ ತಿಳಿದುಕೊಳ್ಳಲು ಕರ್ನಾಟಕ ಪ್ರಾಂತಿಕ ಕಮಿಟಿಯವರು ಶ್ರೀ ಕೌಜಲಗಿ ಹಣಮಂತ ರಾಯರನ್ನು ಕಳಿಸಿದ್ದರು. ಅವರೊಪ್ಪಿಸಿದ ವರದಿಯನ್ನು ಕಮಿಟಿಯವರು ಪ್ರಕಟಿಸಿದ್ದಾರೆ. ಕ್ಷಾಮದ ನಿಜವೃತ್ತಾಂತ, ಸರಕಾರದವರೂ ಸಾರ್ವಜನಿಕರೂ ಮಾಡುತ್ತಿರುವ ಕ್ಷಾಮಪರಿಹಾರದ ಕೆಲಸ ಮುಂದಿನ ಕಾರ್ಯ ಇವನ್ನೆಲ್ಲ ಅದರಲ್ಲಿ ಚೆನ್ನಾಗಿ ವಿವೇಚಿಸಲಾಗಿದೆ.

ಕಳೆದ ೧೦ ವರುಷಗಳಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ೪ ಬರಗಾಲಗಳು ಬಂದು ಹೋದವು. ಮಳೆಯ ಪ್ರಮಾಣವು ಕ್ರಮೇಣ ಕಡಿಮೆಯಾಗುತ್ತಾ ಬಂದಿದ್ದು, ಈಗಲದು ಸರಾಸರಿ ೧೩ ಇಂಚು ಮಾತ್ರ ಇದೆ. ತಿರುತಿರುಗಿ ಬರಗಾಲಗಳು ಬರುತ್ತಿರುವುದರ ಮೂಲಕ ರೈತನು ತಡೆದುಕೊಳ್ಳುವ ತ್ರಾಣವೆ ಇಲ್ಲದಾಗಿದೆ. ಬೇರೆ ಕಡೆಗೆ ಕೂಡಾ ರೈತನು ಸಾಲದ ಭಾರದಿಂದ ನರಳುತ್ತಿರುವಾಗ, ಕ್ಷಾಮಪೀಡಿತರಾದ ಬಳ್ಳಾರಿ ಜಿಲ್ಲೆಯವರ ಗೋಳನ್ನು ಊಹಿಸಬಹುದು. ೧೯೨೬ರಲ್ಲಾದ ಕಂದಾಯ ವಿಚಾರಣೆಯಲ್ಲಿ, ಮಹಾ ಯುದ್ಧದ ಅವಧಿಯ ಏರಿಕೆಯ ಬೆಲೆಗಳನ್ನು ಲಕ್ಷದಲ್ಲಿಟ್ಟುಕೊಂಡು, ಜಿಲ್ಲೆಯ ತೆರಿಗೆಯ ಪ್ರಮಾಣವನ್ನು ೧೦೦ಕ್ಕೆ ೩೦ರಂತೆ ಏರಿಸಲಾಯಿತು. ಆದರೆ ೧೯೩೦ರಿಂದ ಧಾರಣೆಗಳು ಇಳಿಯ ಹತ್ತಿ ೧೯೩೪ರ ಆ ಭಾಗದಲ್ಲಿ ಅವು ತೀರ ಕೆಳಗಿನ ಮಟ್ಟಕ್ಕೆ ಬಂದು ನಿಂತವು. ಕಾಲಮಾನಕ್ಕೆ ೧೯೩೪ರಲ್ಲಿ ವರ್ಷನ್ನವು ತೀರಾ ಅಪರೂಪವಾಯಿತು. ಕಳೆದ ವರುಷದ ಮಳೆಯ ಪ್ರಮಾಣವು ಸರಾಸರಿ ೭ ಇಂಚು ಮಾತ್ರ ಇದ್ದಿತು. ಈ ವರುಷದಷ್ಟು ಭೀಕರ ಕ್ಷಾಮವು ಕಳೆದ ೪೦ ವರುಷಗಳಲ್ಲಿ ಜಿಲ್ಲೆಯ ೮ ತಾಲೂಕುಗಳಲ್ಲಿ ಆದ ಹಾನಿಯೊಂದನ್ನು ಬಿಟ್ಟರೆ ಉಳಿದುವೆಲ್ಲ ಕ್ಷಾಮದಿಂದ ಜರ್ಜರವಾಗಿವೆ. ಅದರಲ್ಲಿಯೂ ಬಳ್ಳಾರಿ ರಾಯದುರ್ಗ ಸಿರಗುಪ್ಪ, ಅಲೂರು ತಾಲೂಕುಗಳ ಕಷ್ಟವು ಹೆಚ್ಚಿನದು.

ಜಯಕರ್ನಾಟಕ.

೫. ಉದ್ಯೋಗ ವ್ಯವಸಾಯವನ್ನು ರಕ್ಷಿಸುವ ಮಂತ್ರ

ಸ್ವದೇಶಿ ಮತ್ತು ಬಹಿಷ್ಕಾರ ಇವೆರಡೂ ಒಂದು ವಸ್ತುವಿನ ಎರಡು ಅಂಗಗಳು, ಒಂದನ್ನು ಬಿಟ್ಟರೆ ಇನ್ನೊಂದು ಬೆಳೆಯದು, ಅಷ್ಟೇ ಅಲ್ಲದೆ, ಜಗತ್ತಿನ ಇತಿಹಾಸವನ್ನು ನೋಡಿದರೆ, ಇವೆರಡರಲ್ಲಿ ಒಂದನ್ನು ಬಿಟ್ಟು ಇನ್ನೊಂದು ಯಶಸ್ವಿಯಾದುದನ್ನು ಯಾರೂ ಓದಿಲ್ಲ; ಯಾವುದೇ ಒಂದು ಸ್ವತಂತ್ರ ರಾಷ್ಟ್ರದವರು ಯಾವ ಯಾವ ಕಾಲಕ್ಕೆ ತಮ್ಮ ಉದ್ಯೋಗ ಕೈಗಾರಿಕೆಗಳನ್ನು ಬೆಳಸಬೇಕೆಂದರೂ ಆಯಾ ಕಾಲಕ್ಕೆ ಅವರು ಬಹಿಷ್ಕಾರ ಶಸ್ತ್ರವನ್ನು ಕೈಯಲ್ಲಿ ಹಿಡಿದುಕೊಂಡೇ ಅದನ್ನು ಸಾಧಿಸಿದರು. ಬಹಿಷ್ಕಾರ ಎಂಬ ಶಬ್ದವು ಇತ್ತೀಚೆ—ನೂರಾರು ವರುಷಗಳಲ್ಲಿಯೇ ಪ್ರಚಾರದಲ್ಲಿ ಬಂದಿತು. ಆದರೆ ಅದರ ಭಾವನೆಯು ಮಾತ್ರ ಮಾನವ ಹೃದಯ ಹುಟ್ಟಿದಂದಿನಿಂದಲೇ ಜಗತ್ತಿನಲ್ಲಿ ಪ್ರಚಾರದಲ್ಲಿದೆ. ಆಯಂತ್ರ ವ್ಯಾಪಾರದಲ್ಲಿ ಹೆಸರುಗೊಂಡ ಇಂಗ್ಲೆಂಡ ದೇಶದವರು ಕೂಡಾ ಮೊದಲು ತಮ್ಮ ಉದ್ಯೋಗ ಬೆಳಸುವಾಗ ಕೂಡ ಬಹಿಷ್ಕಾರ ಶಸ್ತ್ರವನ್ನೇ ಉಪಯೋಗಿಸಿ ಮುಂದೆ ಬಂದರು.

“ಇಂಗ್ಲೆಂಡದಲ್ಲಿ ಈ ಹೊತ್ತು ಮರದಂತೆ ಬೆಳೆದು ನಿಂತಿರುವ ಕೈಗಾರಿಕೆ ಉದ್ಯೋಗಗಳು ಇಂಗ್ಲಿಷ ಸರಕಾರದಿಂದ ಯಥೇಷ್ಟ ಸಹಾಯ ಹೊಂದಿದ್ದು, ಮತ್ತು ಪರದೇಶದಿಂದ ಬರುತ್ತಿರುವ ಪದಾರ್ಥಗಳಿಂದ ಸಂರಕ್ಷಿಸದೆ (ಪರದೇಶದ ಪದಾರ್ಥಗಳ ಮೇಲೆ ಭಾರವಾದ ಸುಂಕ ಹೇರದೆ) ಮುಂದೆ ಬಂದಿಲ್ಲ. ತಮ್ಮ ಕಾರಖಾನೆಗಾರರ ಸ್ವಾರ್ಥಸಾಧಿಸುವುದಕ್ಕಾಗಿಯೇ ಅವರು ಅನೇಕ ದೇಶವನ್ನು ಕಳೆದುಕೊಳ್ಳಬೇಕಾಯ್ತು. ಹಿಂದೆ ಮುಂದೆ ನೋಡದಲ್ಲ ಐರ್ಲೆಂಡ್ ದೇಶದಲ್ಲಿಯ ಕೈಗಾರಿಕೆಯನ್ನು ಅವರು ಸಂಪೂರ್ಣ ಬುಡಸಹಿತವಾಗಿ ಕಿತ್ತೊಗೆದರು, ಮತ್ತು ಹಿಂದೂಸ್ಥಾನದ ಬಟ್ಟೆಯ ವ್ಯವಸಾಯವನ್ನು ಹೇಳ ಹೆಸರಿಲ್ಲದಂತೆ ನಾಶಮಾಡಿದರು” ಎಂದು ಇಂಗ್ಲಿಷ ಇತಿಹಾಸಕಾರರಾದ ಲೆಕೀಯವರು ಹೇಳುತ್ತಾರೆ.

ಧನಂಜಯ.

೬. ಮಕ್ಕಳ ಮನೋರಂಜನೆ.

ರಂಗಭೂಮಿಯಲ್ಲಿ ಶ್ರೀ ಎ. ಎಸ್. ರಾಮಶಾಸ್ತ್ರಿಯವರು ಸಂಗ್ರಹಿಸಿದ ಲೇಖನದ ಅಂಶವಿದು "ಲಂಡನಿನ ನ್ಯೂಸ್ಟೇಟ್ಸ್‌ಮನ್ ಅಂಡ್ ನೇಶನ್" ಎಂಬ ಪತ್ರಿಕೆಯಲ್ಲಿ ಮಿ ವಿಲಿಯಂಫ್ರೀದು ಹೀಗೆ ಬರೆಯುತ್ತಾರೆ —

ಚಿಕ್ಕಮಕ್ಕಳಿಗಾಗಿ ಕ್ರಿಸ್‌ಮಸ್ ಹಬ್ಬಗಳಲ್ಲಿ ಹೊರತು ಮತ್ತ್ಯಾವಾಗಲೂ, ಅವರು ನೋಡಲು ಯೋಗ್ಯವಾದ, ನಾಟಕ, ಸಿನಿಮಾ ಮುಂತಾದ ಮನೋರಂಜನೆಯ ಏರ್ಪಾಡುಗಳನ್ನು ಮಾಡುವವರಿಲ್ಲ. ಹಲವು ವರುಷಗಳಿಂದೀಚೆಗೆ ಮಕ್ಕಳಿಗಾಗಿಯೇ ಹಲವು ಗ್ರಂಥಾಲಯಗಳು (Libraries) ಏರ್ಪಟ್ಟಿವೆ. ಈ ಗ್ರಂಥಾಲಯಗಳಲ್ಲಿ ಮಕ್ಕಳಿಗೆ ಉತ್ತಮವಾದ ಮಾಸಪತ್ರಿಕೆಗಳೂ ಪುಸ್ತಕಗಳೂ ದೊರೆಯುವಂತಾಗಿದೆ. ಇವುಗಳಿಂದ ಅವರೂ ಹೆಚ್ಚು ಹೆಚ್ಚಾಗಿ ಪ್ರಯೋಜನವನ್ನು ಹೊಂದುತ್ತಿರುವುದು ತೃಪ್ತಿಕರವಾಗಿದೆ. ಆದರೆ ಅವರು ನೋಡಲರ್ಹವಾದ ಚಲಚಿತ್ರಗಳಲ್ಲಿ ಕ್ರಿಸ್‌ಮಸ್ ಹಬ್ಬಗಳಲ್ಲಿ ಹೊರತು ಮಕ್ಕಳಿಗಾಗಿಯೇ ರಚಿತವಾದ ನಾಟಕವು ಒಂದಾದರೂ ದೊರೆಯುವುದಿಲ್ಲ. ಆ ಹಲವು ಮೂಕ ಪ್ರದರ್ಶನಗಳೂ (Panto mimes) ಅವರು ನೋಡಲು ತಕ್ಕವುಗಳಲ್ಲ. ಪಾಂಟೋಮೈಮ್ ಚಿತ್ರಪರಿಗಾಗಿ ನೃತ್ಯಗೀತಾದಿಗಳನ್ನು ವರ್ಗೀಕರಿಸುವುದಿಲ್ಲ. ಅದ್ದರಿಂದಲೇ ಹುಡುಗರು ಸಿಕ್ಕಿದ ಸಿನಿಮಾ ಶಾಲೆಗಳಿಗೆ ಮನೋರಂಜನೆಗೆಂದು ಹೋಗುವರು. ಈ ತೆರನಾದ ಪ್ರದರ್ಶನಗಳು ಅವರ ಮೇಲೆ ಉತ್ತಮ ಪರಿಣಾಮವನ್ನುಂಟು ಮಾಡುತ್ತಿಲ್ಲ. ಷೇಕ್ಸ್‌ಪಿಯರನ ನಾಟಕಗಳನ್ನು ಹಾಸ್ಯಕ್ಕೊಂದಾಗಿ ನೋಡುವುದೇ ಅವರಿಗೆ ನಾಟಕಗಳನ್ನು ನೋಡಲು ಒದಗುವ ಸಂದರ್ಭ. ಮಕ್ಕಳ ಕ್ರೀಡಾಚಿಂತನೆಯನ್ನು ಒಲಿಸುವುದು. ಅದರಿಂದಾಗಿಯೇ ಉತ್ತಮ ಮನೋರಂಜನೆಗಳನ್ನು—ಅವರ ಮೇಧಾಶಕ್ತಿ, ಊಹಾಶಕ್ತಿ—(Imagination) ಮತ್ತು ಸಹಾನುಭೂತಿಗಳನ್ನು ವಿಕಾಸಗೊಳಿಸುತ್ತ ಮನೋರಂಜನೆಗಳನ್ನು ಹೆಚ್ಚು ಹೆಚ್ಚಾಗಿ ಒದಗಿಸಬೇಕು.

---

(೧) ಸಣ್ಣಮಕ್ಕಳನ್ನು ಕಾರಖಾನೆಗಳಲ್ಲಿ ಕೆಲಸಕ್ಕೆ ನೇಮಿಸಬಾರದೆಂಬ ಶಾಸನವು ಇದೆಯಾದರೂ ಹಲಕೆಲವು ಕಾರಖಾನೆಗಳಲ್ಲಿ ಆ ಶಾಸನಗಳು ಮನ್ನಿಸಲ್ಪಡುವುದಿಲ್ಲವೆಂದು ಹೇಳಬಹುದು. ಮಕ್ಕಳ ಪ್ರಾಯವನ್ನು ಹೆಚ್ಚೆಂದು ಹೇಳಿಯೋ ಗುಟ್ಟಾಗಿಟ್ಟೋ ಮಕ್ಕಳನ್ನು ಉದ್ಯೋಗಕ್ಕೆ ನೇಮಿಸುತ್ತಾರೆ. ಅಂತಹ ಮಕ್ಕಳಿಗೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಅವರ ಹೆತ್ತವರು ಶಕ್ತರಾಗಿಲ್ಲ—ಬಡತನವು ಅವರನ್ನು ಪೀಡಿಸುತ್ತಿರುತ್ತದೆ. ಇದರ ಪರಿಣಾಮವೇ ಈ ವಿಷಯಕವಾದ ಶಿಕ್ಷೆಗೆ ಕಾರಣವಾಗಿದೆ.

(೨) ಟೆಕ್ಸ್ಟ್‌ಬುಕ್ ಕಮಿಟಿಯ ಸದಸ್ಯರೇ ಪಠ್ಯಪುಸ್ತಕಗಳನ್ನು ಬರೆಯುವ ಅಭ್ಯಾಸವೂ ಇದೆ. ಅವರೇ ಕೆಲವು ಅಂಗಡಿಗಳನ್ನು ಮಾಡಿ ಶಾಲಾ ಪಠ್ಯಪುಸ್ತಕಗಳನ್ನು ವಿಕ್ರಯಿಸಿ— ಆ ಸಂಬಂಧವಾದ ವ್ಯಾಪಾರವನ್ನು ಕೈವಶ ಮಾಡಿಕೊಳ್ಳುತ್ತಿರುವರು. ಇಂತಹ ದುರಭ್ಯಾಸವು ಕಮಿಟಿಯೊಳಗಣ ಶುದ್ಧ ವಾತಾವರಣವನ್ನು ಕೆಡಿಸಲು ಬಹುಮಟ್ಟಿಗೆ ಸಹಕಾರಿಯಾಗುತ್ತದೆ. ಪಂಜಾಬಿನ ಸಮಿತಿಯು ಮಾಡಿದ ಸೂಚನೆಗಳು ನ್ಯಾಯವಾಗಿವೆ, ಮದ್ರಾಸು ಸರಕಾರವು ಏನನ್ನು ಮಾಡಲಿರುವುದೋ!

(೩) ಈ ಪತ್ರಿಕೆಯು ಪಟ್ಟ ಅಭಿಪ್ರಾಯವು ಶ್ರೇಷ್ಠವಾಗಿದೆ. ಈಗಿನ ಕಾಲದ ವೈದ್ಯರ ಗತಿಯೇನೆಂದು ಕೇಳಬೇಕಿಲ್ಲ. ಆಸ್ಪತ್ರೆಗಳಲ್ಲಿ ನಡೆಯುವ ಧರ್ಮಾರ್ಥ ಚಿಕಿತ್ಸೆಗಳು ಎಷ್ಟು ಸಾಕಷ್ಟವೆಂಬುದನ್ನು ಕಂಡವರಿಗೆ ಬೇರೆ ಹೇಳುವುದನಾವಶ್ಯಕ. ಆಸ್ಪತ್ರೆಗಳೆಂದರೆ ಅಲ್ಲಿಯ ವೈದ್ಯರ ಇಚ್ಛಾನುಸಾರವಾದ ವರ್ತನೆಯು ಕವಲೊಡೆದಿದೆ. ಆಸ್ಪತ್ರೆಗಳ ಆಡಳಿತವು ಉತ್ತಮವಾದರೆ ದೇಶಕ್ಕೆ ಹಿತ.

(೪) ಬಳ್ಳಾರಿ ಸೀಮೆಯಲ್ಲಿ ಮಹಾ ಬರಗಾಲವು ಬಂದಿದೆಯೆಂಬುದು ಸರ್ವವಿದಿತ ವಿಷಯ. ಇಷ್ಟರ ತನಕ ಸಾರ್ವಜನಿಕರು ಅಲ್ಲಿ ಕ್ರಮದಂತೆ ಕೊಟ್ಟ ಸಹಾಯವು ಎಷ್ಟು ಕಷ್ಟ ಸ್ವಲ್ಪವಾಗಿದೆ. ಈ ಬಗ್ಗೆ ನಮ್ಮ ಜಿಲ್ಲೆಯವರು ಪ್ರತ್ಯೇಕ ಸಮಿತಿಗಳನ್ನೇರ್ಪಡಿಸಿ ಸಹಾಯವನ್ನು ಕೊಡಬೇಕಾಗಿದೆ.

(೫) ಒಂದನ್ನು ತಳೆದು ಇನ್ನೊಂದನ್ನು ನಡೆಸಬಹುದುವುದೇ ಬಹಿಷ್ಕಾರದ ನೀತಿ. ಇಂಗ್ಲಿಷರು ಪ್ರಪಂಚದ ವಾಣಿಜ್ಯ ವ್ಯವಹಾರವನ್ನು ಹಸ್ತಗತಮಾಡಿಕೊಂಡುದು ಬಹಿಷ್ಕಾರಾಸ್ತ್ರದಿಂದಲೇ ಎಂಬ ಮಾತು ನಿಜ. ಆದರೆ ಅವರು ಘಳಿಸಿಕೊಂಡ ಬಹಿಷ್ಕಾರವನ್ನು ಸಾಕಷ್ಟು ಮಾಡಿದುದರಿಂದ ಅದಕ್ಕೆ ಬಹಿಷ್ಕಾರವೆಂಬ ಹೆಸರು ಬರಲಿಲ್ಲ. ಅವರು ಅಂತಹ ಶಬ್ದವನ್ನು ಸ್ವಪ್ರಯೋಜನಾರ್ಥವಾಗಿ ಉಪಯೋಗಿಸುತ್ತಿಲ್ಲ. ಬಹಿಷ್ಕಾರವಿಲ್ಲದೆ ಯಾವ ದೇಶವೂ ಇನ್ನೊಂದನ್ನು ಮೆಟ್ಟಿ ಮುಂದರಿಯಲು ಸಾಧ್ಯವಿಲ್ಲ.

(೬) ಮಕ್ಕಳ ಶಿಕ್ಷಣಾಭಿಮಾನಿಗಳೆಂಬವರು ಇರುವುದೇ ಹಲಕೆಲವರು. ಮಕ್ಕಳ ಬುದ್ಧಿಬಲವನ್ನು ಅಭಿವೃದ್ಧಿಗೊಳಿಸಲು ಸಾಧಕವಾದ ನಾಟಕ, ಸಿನೇಮಾ ಮೊದಲಾದ ಮನೋರಂಜನೆಗಳನ್ನು ಏರ್ಪಡಿಸುವ ಸಂಸ್ಥೆಯು ವಿರಳ. ಒಂದು ವೇಳೆ ಅಂತಹ ಸಾಹಿತ್ಯಾಭಿಮಾನಿಗಳು ಆ ಸಾಹಸಕ್ಕೆ ಕೈಯಿಕ್ಕಿದರೆ ಅವರು ತಮ್ಮ ಉದ್ಯಮದಲ್ಲಿ ಯಶಸ್ಸನ್ನು ಹೊಂದುವುದೂ ಕಷ್ಟ. ಇದರಿಂದಾಗಿಯೇ ಮಕ್ಕಳ ಸಾಹಿತ್ಯವು ವೃದ್ಧಿಯಾಗುತ್ತಿಲ್ಲ.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,

ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು

ಗೌರವ ಕಾರ್ಯದರ್ಶಿ,

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾಕೃತಿ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ–ಊರ್ಧ್ವಪುಂಡ್ರ–ಮುದ್ರಾಧಾರಣ ವಿಧಿ)

ಸ್ಮಾರ್ತರಿಗೆ–ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.

ಇವರಿಂದ ರಚಿತವಾದ

ಪ್ರತಿಪದಾರ್ಥಟೀಕಾ ವಿಧಸಹಿತ.

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ಆವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ

ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ

ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು

ಒಂದು ತಿಂಗಳಲ್ಲಿ ಅಮೋಘವಾದ ಗುಣ, ಇದು ಜಾಡ್ಯವನ್ನು ಗುಣಪಡಿಸುವುದಲ್ಲದೆ ವ್ಯಾಧಿಯು ಬಾರದಂತೆ ತಡೆಮಾಡುವುದು

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವೆ

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯುಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಜಾತ್ಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ

Vishuchika Samhari

(PILCO)

ಕಾಲೆರಕ್ಕೆ ದಿವ್ಯೌಷಧ! ಉಪಯೋಗಿಸಿದ್ದರೆ ಗುಣ ಖಾತ್ರಿ!

ಕ್ರಯ ಡಬ್ಬಿ 1ಕ್ಕೆ ರೂ 1–0–0

ಗುಹ್ಯರೋಗ ನಿವಾರಿಣೀ ತೈಲ

Anti-Venerael Oil

(A. V. Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧ ಕುಟುಂಬ ಪಾರಂಪರ್ಯದ ಪ ತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮಾತ್ರೆಯಂತೆ ತೆಗೆದುಕೊಳ್ಳಬಹುದು

8 ಔನ್ಸಿನ ಬಾಟ್ಲಿ 1ಕ್ಕೆ ರೂ 2–8–0

ಕೆ. ವಿ. ಕೃಷ್ಣನ್,

ಕಲ್ಲಾಯಿ, ಮಲಬಾರ್,

ಅಥವಾ

ಬಾಲ್ ಸಿ ಮತ್ತು ಕಂಪೆನಿ, ಕಲ್ಲಿಕೋಟೆ

ಇಲ್ಲಿ ಸಿಗುವುದು

ಅರುಣೋದಯ.

ಇದರಲ್ಲಿ ಸುಪ್ರಸಿದ್ಧ ವಿದ್ವಾಂಸರ ವಿವಿಧ ವಿಷಯಗಳ ಮೇಲೆ ವಿಚಾರ ಪರಿಪೂರ್ಣ ಲೇಖನಗಳು ಬರುವವಲ್ಲದೆ ದೇಶ ವಿದೇಶದ ಸುದ್ದಿ ಸಂಗತಿಗಳೂ ಬರುವುವು. ಅಲ್ಲದೆ ಮನೋಹರವಾದ ಕತೆ ಕವಿತೆಗಳೂ ಇರುವುವು ಚಿತ್ರಪ್ರಪಂಚದೊಳಗಿನ ವಿಚಿತ್ರ ಸಂಗತಿಗಳೂ, ಶಾಸ್ತ್ರೀಯ ಶೋಧಗಳೂ ಪ್ರಕಟವಾಗುವುವು. ಇದೀ ಕರ್ನಾಟಕದಲ್ಲಿ ಇದರ ಪ್ರಚಾರವಿರುವುದರಿಂದ ಜಾಹೀರಾತುದಾರರಿಗೆ ಇದೊಂದು ಉತ್ತಮ ಸಾಧನ ಅಲ್ಲಲ್ಲಿಗೆ ಏಜಂಟರು ಬೇಕು.

ವಾರ್ಷಿಕ ವರ್ಗಣಿ ರೂ. ೨—೮—೦.

ಮೆನೇಜರ್–ಅರುಣೋದಯ, ಬೆಳಗಾಂವಿ

ಲಾಭಗಳು!

ವಾಚುಗಳು, ರಿಸ್ಟ್‌ವಾಚುಗಳು ಟೈಮ್‌ಪೀಸುಗಳು ಗಡಿಯಾರಗಳು, ರಿಪೇರಿಮಾಡಿದ ಟೈಪ್‌ರೈಟರುಗಳು, ಸಂತತಿ ಪ್ರತಿಬಂಧಕ ವಸ್ತುಗಳು, ಬೀಜಗಳು ಸಸಿಗಳು, ಚಹಾ, ಸಂಗೀತ ಸಾಹಿತ್ಯ, ಕೆಮರಾಗಳು, ಚರ್ಮದ ಬಾದರಕ್ಷೆಗಳು. ಪೇಟುಗಳು, ಮುಸಿಪೆರದಗಳೂ ಇವ. ಬೆಲೆ ಸುಲಭ, ಮಾಲು ಉತ್ತಮ, ಕಮಿಶನ್ ಹೆಚ್ಚು, ಕೆಟಲಾಗು ಧರ್ಮಾರ್ಥ ಇಂಗ್ಲೀಷಿನಲ್ಲಿ ಬರೆಯಿರಿ

General Trading Co,

(G) 185, Maniektolla St, Calcutta.

C P S

An Advertisement In

'Swadeshabhimani'

Means a sure fortune to you

Ask for Contract Rates

The Swadeshabhimani office,

Car Street, Mangalore

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾ ಇವು ತಯಾರಿಸಲ್ಪಟ್ಟವೆ.)

ಹೈಕೋರ್ಟ್ ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲೇ ಮಾಡಬೇಕು



ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ.

The Scientific Gold Bangles Co., Ltd,
Head Office 45, Byragimatum Street,
Post Box No. 208, Madras.

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ

ಹೊಸತಾಗಿ ಆಮದಾದುದು ದೊರೆಯುವ ಇತರ ಕ್ಯಾಮರಗಳಿಗಿಂತ ಬಾಳಿಕೆ ಬರುವಂಥದು ಮತ್ತು ಉತ್ತಮವಾದುದು ಫೋಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್ ೪ ಫಿಲ್ಮ್ ಎಕ್ಸ್‌ಪೋಜರ್ಸ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಆವಶ್ಯಕವಾದ ರಸಾಯನಿಕ ವಸ್ತುಗಳು, ಫೋಟೋ ತೆಗೆಯುವ ವಿಧಾನ, ಶಿಕ್ಷಣ ಕೊಡುವ ಸಾಹಿತ್ಯ ಇವು ಉಚಿತವಾಗಿ ಕಳುಹಿಸಲಾಗುತ್ತದೆ ಬಲವಾದ ಲೆನ್ಸ್ ಬೆಲೆ ಸಾಮಾನ್ಯವಾದುದು ರೂ. ೪—೧೨—೦ ಉತ್ತಮವಾದುದು ೬—೦—೦ ೮ ಮಡಚುವ ಕ್ಯಾಮರಾ ರೂ. ೫, ಉತ್ತಮವಾದ್ದು ರೂ. ೬ ಸ್ಪೆಶಲ್ ರೂ ೧೦, ಹೆಚ್ಚಿಗೆ ಫಿಲ್ಮ್ ಬೇಕಾದರೆ ಡಜನ್ ೧ಕ್ಕೆ ೩ ಆಣೆ. ಎನ್‌ಲಾರ್ಜ್ ಮೆಂಟಿನ ಸಾಧನಾ ಸಾಮಗ್ರಿ ೧ ಶೀಸೆಗೆ ೪ ಆಣೆ. ಫಿಕ್ಸಿಂಗ್ ಸಾಲ್ಟ್ ೧ ಡಬ್ಬಿಕ್ಕೆ ೩ ಆಣೆ. ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ. ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ,

ಭಾರತ ಯೂನಿಯನ್ ಟ್ರೇಡಿಂಗ್ ಕಂ.

ಪೋಸ್ಟ್‌ಬಾಕ್ಸ್ ನಂಬ್ರ ೨೧೯ (ಎಸ್. ಎ) ಕಲ್ಕತ್ತಾ

ಕಿರ್ಲೋಸ್ಕರ ಕೈ ಮತ್ತು ಪವರ್ ಪಂಪುಗಳು



ಬಾವಿಗಳಿಂದ ನೀರು ಮೊಗೆಯುವುದಕ್ಕಾಗಿ,—ಎಷ್ಟು ಆಳದಿಂದಲೂ ನೀರನ್ನು ಎತ್ತಿ ಮೇಲೆ ಅಥವಾ ಬೇಕಾದಷ್ಟು ಎತ್ತರಕ್ಕೆ ತರುವುದಕ್ಕಾಗಿ

ಕೃಷಿಗಾಗಿ,

ಕಾರ್ಖಾನೆಗಳಿಗಾಗಿ,

ಮನೆಯ ಉಪಯೋಗಕ್ಕಾಗಿ,—

ಸಂತೃಪ್ತಿಕರ, ಬಾಳಿಕೆ ಬರುವ, ಸುಲಭಕರ ಉಪಯೋಗಕ್ಕಾಗಿ ಇದು ರಚಿಸಲ್ಪಟ್ಟಿದೆ.

ಇಡೀ ಹಿಂದೂಸ್ಥಾನದಲ್ಲಿ ನೂರಾರು ಜನರು ಉಪಯೋಗಿಸಿ ತೃಪ್ತಿಗೊಂಡರು.

ವಿವರಕ್ಕೆ ಈ ಕೆಳಗಿನವರಿಗೆ ಬರೆಯಿರಿ—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ.

ಡಿಸ್ಟ್ರಿಬ್ಯೂಟರ್ಸ್—ಪೆರ್ರಿ ಎಂಡ್ ಕೋ, ಲಿಮಿಟೆಡ್, ಮದ್ರಾಸು.

ಕರ್ಣಾಟಕ ಸಾಹಿತ್ಯ ಪರಿಷತ್ತಿನ

ವಿಶೇಷ ಸಾಹಿತ್ಯೋತ್ಸವ.

ಮೈಸೂರಿನ ಪತ್ರ—(ನಮ್ಮ ಸ್ವಂತ ಪ್ರತಿನಿಧಿಯಿಂದ)
ಬೆಂಗಳೂರು, ತಾ. ೬-೫-'೩೬

ಶ್ರೀ ಬಿ. ಎಂ. ಶ್ರೀಕಂಠಯ್ಯನವರ ಔದಾರ್ಯ

ಹೋದ ವಾರ ಎಪ್ರಿಲ್ ೨೦ನೆಯ ತಾರೀಕಿನ ವರೆಗಿನ ಕಾರ್ಯ ವಿವರಗಳನ್ನು ಕೊಡಲಾಗಿದೆ. ಅಲ್ಲಿಂದ ಮುಂದೆ ನಡೆದ ಕಾರ್ಯಕ್ರಮವು ಇದೆ -

ಎಪ್ರಿಲ್ ೨೦ನೇ ತಾರೀಕು ಮಂಗಳವಾರ ಬೆಳಗ್ಗೆ ಶ್ರೀಮಾನ್ ನವರತ್ನ ರಾಮರಾವ್, ಬಿ. ಎ., ಬಿ. ಎಲ್., ಅವರು **'ಇಂಡಿಯಾ ದೇಶದ ಹೊಸ ರಾಜ್ಯ ವ್ಯವಸ್ಥೆ'** ಎಂಬ ವಿಷಯವನ್ನು ಕುರಿತು ಅಮೋಘವಾದ ಭಾಷಣಮಾಡಿದರು.

ಸಾಯಂಕಾಲ ಸೆಂಟ್ರಲ್ ಕೋಲೇಜಿನಲ್ಲಿ ಪ್ರೊಫೆಸರರಾಗಿರುವ ಶ್ರೀ| ವಿ. ನಾರಾಯಣ ರಾವ್, ಅವರು 'ವಿಕಾಸವಾದ' (Theory of Evolution) ಎಂಬ ವಿಷಯವನ್ನು ಕುರಿತು ದೀಪಚಿತ್ರಸಹಿತವಾಗಿ ಉಪನ್ಯಾಸ ಮಾಡಿದರು.

ಮೇ ೧ನೆಯ ತಾರೀಕು ಬುಧವಾರ ಬೆಳಗೆ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿ, ಎಂ. ಎ. ಅವರು 'ಸಂಸ್ಕೃತ ನಾಟಕ'ಗಳು ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು. ಅವರು ತಮ್ಮ ಉಪನ್ಯಾಸದಲ್ಲಿ ಭಾಸನ ಮತ್ತು ಅಶ್ವಘೋಷನ ನಾಟಕಗಳನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಿದರು. ಉಪನ್ಯಾಸದ ಬಹು ಭಾಗವೆಲ್ಲ ಪಾಶ್ಚಾತ್ಯ ದೇಶಗಳಲ್ಲಿ ಸಂಸ್ಕೃತ ವ್ಯಾಸಂಗಕ್ಕೂ ಸಂಸ್ಕೃತ ಸಾಹಿತ್ಯದಲ್ಲಿ ಸಂಶೋಧನ ಕಾರ್ಯಕ್ಕೂ ಯಾವ ಬಗೆಯ ಸೌಕರ್ಯಗಳೂ ಪ್ರೋತ್ಸಾಹವೂ ಇವೆ, ನಮ್ಮ ದೇಶದಲ್ಲಿಯೋ ಅಷ್ಟು ಇಲ್ಲ ಎಂಬ ಅಂಶಗಳನ್ನು ಕುರಿತದ್ದಾಗಿತ್ತು. ಒಟ್ಟಿನ ಮೇಲೆ ಉಪನ್ಯಾಸವು ಸ್ವಾರಸ್ಯವಾಗಿತ್ತು.

ಶ್ರೀಮಾನ್ ಕೃಷ್ಣಶಾಸ್ತ್ರಿಗಳ ಉಪನ್ಯಾಸವಾದ ಬಳಿಕ ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯ, ಎಂ. ಎ. ಅವರು ಪಂಪಭಾರತದಿಂದ ಕೆಲವು ಭಾಗಗಳನ್ನು ಓದಿ, 'ಪಂಪನ ದುರ್ಯೋಧನ ಪಾತ್ರವನ್ನು' ಕುರಿತು ಉಪನ್ಯಾಸ ಮಾಡಿದರು.

ಮಧ್ಯಾಹ್ನ ಸುಪ್ರಸಿದ್ಧ ಕೀರ್ತನಕಾರರಿಂದ ಶ್ರೀ| ಬಿ. ಎಂ. ಶಿವಮೂರ್ತಿ ಶಾಸ್ತ್ರಿಗಳವರು 'ಕರ್ಣಾಟಕ ವಿಜಯ' ಎಂಬ ಕೀರ್ತನೆಯನ್ನು ಮಾಡಿದರು.

ಸಾಯಂಕಾಲ ಡಾ| ಜಿ. ಎ. ಈಶ್ವರಮೂರ್ತಿಗಳು ಮೇಹ ಚಾಂದ್ಯಗಳನ್ನು (Ghonorrhea and Syphilis) ಕುರಿತು ಚಲನಚಿತ್ರ ಸಮೇತ ಬೋಧಪ್ರದವಾದ ಉಪನ್ಯಾಸಮಾಡಿ ಮಹೋಪಕಾರ ಮಾಡಿದರು.

ಮೇ ೨ನೆಯ ತಾರೀಕು ಗುರುವಾರ ಬೆಳಗೆ ಪರಿಷತ್ತಿನ ಸದಸ್ಯರ ವಿಶೇಷ ಅಧಿವೇಶನವೊಂದು ನಡೆಯಿತು.

ಮಧ್ಯಾಹ್ನ ಪರಿಷತ್ತಿನವರು ಸದಸ್ಯರಿಗೂ ಉಪಾಧ್ಯಾಯರಿಗೂ ಒಂದು ಸಂತೋಷ ಕೂಟವನ್ನು ಏರ್ಪಡಿಸಿದ್ದರು.

ಸಾಯಂಕಾಲ ಉಪಸಂಹಾರ ಸಭೆ ಸೇರಿದ್ದಿತು. ಅನೇಕ ಮಹನೀಯರು ಈ ಸಲ ನಡೆದ ವಿಶೇಷ ಸಾಹಿತ್ಯೋತ್ಸವದ ಬಗ್ಗೆ ತಮ್ಮ ತೃಪ್ತಿ ಸಂತೋಷಗಳನ್ನು ವ್ಯಕ್ತಪಡಿಸಿದಲ್ಲದೆ, ಪ್ರತಿ ವರ್ಷವೂ ಪರಿಷತ್ತಿನವರು ಈ ತೆರನಾದ ಉತ್ಸವವನ್ನು ಏರ್ಪಡಿಸಿ ಉಪಕಾರ ಮಾಡಬೇಕೆಂದು ಪ್ರಾರ್ಥಿಸಿಕೊಂಡರು.

ಉಪಾಧ್ಯಕ್ಷರು ಉಪಸಂಹಾರ ಭಾಷಣ ಮಾಡಿ, ಪರಿಷತ್ತಿಗೆ ಅನೇಕ ರೀತಿಗಳಲ್ಲಿ ಸಹಾಯವನ್ನು ಮಾಡಿದವರಿಗೂ ಸಭಿಕರಿ[illegible] ಪರಿಷತ್ತಿನ ವಂದನೆಗಳನ್ನು ಸಮರ್ಪಿಸಿದರು. ಅಲ್ಲದೆ, ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ಪರಿಷತ್ತಿನ ನಿಧಿಗೆ ಒಂದು ಸಾವಿರ ರೂಗಳನ್ನು ಕೊಡುವುದಾಗಿ ವಾಗ್ದಾನ ಮಾಡಿರುವರೆಂಬುದಾಗಿ ತಿಳಿಸಿದರು. ಪರಿಷತ್ತು ಏನು ಮಾಡಿದೆ ಏನು ಮಾಡುತ್ತಿದೆ ಎಂದು ಸಲಹೆ ಕೊಡುವವರೂ, ಪರಿಷತ್ತು ಅದು ಮಾಡಬೇಕು ಇದು ಮಾಡಬೇಕು ಎಂದು ಸಲಹೆ ಕೊಡತಕ್ಕಂಥ ಭಾಷಾಭಿಮಾನಿಗಳೂ ಈ ರೀತಿ ಮುಂದೆ ಬಂದು ತಮ್ಮ ಶಕ್ತಿಯಿದ್ದಷ್ಟು ಔದಾರ್ಯ ತೋರುವರೆ? ಉಪಸಂಹಾರ ಭಾಷಣವಾದ ನಂತರ ಮೈಸೂರಿನ ಮಹಾವಿದ್ವಾನ್ ರಾಳ್ಲಪಲ್ಲಿ ಅನಂತಕೃಷ್ಣ ಶರ್ಮರವರು ಎರಡು ಗಂಟೆಗಳ ಸಮಯ ಅಮೋಘವಾಗಿ ಹಾಡಿದರು.

ಅಲ್ಲಿಗೆ ವಿಶೇಷ ಸಾಹಿತ್ಯೋತ್ಸವವು ಕೊನೆಗೊಂಡಿತು. ಒಟ್ಟಿನಲ್ಲಿ ಈ ಉತ್ಸವವು ಯಶಸ್ವಿಯಾಗಿತ್ತೆಂದು ಹೇಳಬಹುದು. ಪ್ರತಿ ಉಪನ್ಯಾಸಕ್ಕೂ ಸುಮಾರು ೨೦೦ ಜನರ ಮೇಲೆ ಸೇರುತ್ತಿದ್ದರು. ಪ್ರತಿ ಉಪನ್ಯಾಸವಾದ ಬಳಿಕ ಪ್ರಶ್ನೋತ್ತರ [illegible] ನಡೆಯುತ್ತಿತ್ತು. [illegible] ಬಹಳ ದಕ್ಷತೆಯಿಂದಲೂ ದರ್ಪದಿಂದಲೂ ಸಭೆಯ ಕಾರ್ಯಗಳನ್ನು ನಡೆಸುತ್ತಿದ್ದರು. ವಿಶೇಷ ಸಾಹಿತ್ಯೋತ್ಸವವು ಅಷ್ಟು ಯಶಸ್ವಿಯಾಗುವುದಕ್ಕೆ ಅವರೇ ಕಾರಣಭೂತರೆಂದರೆ ಅತಿಶಯೋಕ್ತಿಯಾಗಲಾರದು.

ಮೈಸೂರು ಇಂಜಿನಿಯರುಗಳ ಸಮ್ಮೇಳನ

ಮೈಸೂರು ಇಂಜಿನಿಯರಿಂಗ್ ಅಸೋಸಿಯೇಷನ್ನಿನ ೨೩ನೇ ಅಧಿವೇಶನವು ಮೇ ೨ನೆಯ ತಾರೀಕಿನ ದಿವಸ ಆ ಅಸೋಸಿಯೇಷನ್ನಿನ ಹಾಲ್ ಭವನದಲ್ಲಿ ನೆರೆದಿದ್ದಿತು. ದಿವಾನ್ ಬಹದ್ದೂರ್ ಕೆ. ಮಾಧವರಾಯರವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಮಿಸ್ಟರ್ ಎನ್. ಎಸ್. ಅಯ್ಯಂಗಾರ್ಯರವರ ಪ್ರಾರಂಭ ಭಾಷಣ ಮಾಡಿದರು.

ಶ್ರೀಮಾನ್ ಅಯ್ಯಂಗಾರ್ಯರವರು ತಮ್ಮ ಭಾಷಣದಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಕೆಲವು ಅಮೂಲ್ಯವಾದ ಸಲಹೆಗಳನ್ನು ಕೊಟ್ಟರು. ಇಂಜಿನಿಯರಿಂಗ್ ಪರೀಕ್ಷೆಗಳನ್ನು ಮಾಡಿದವರು ಉದ್ಯೋಗ ದೊರೆಯದೆಂದು ನಿರಾಶೆ ಪಡಬಾರದೆಂದೂ, ಅವರು ತಮ್ಮ ಇಂಜಿನಿಯರಿಂಗ್ ವಿದ್ಯೆಯನ್ನು ನಮ್ಮ ದೇಶದ ವ್ಯವಸಾಯವನ್ನು ಅಭಿವೃದ್ಧಿ ಸ್ಥಿತಿಗೆ ತರುವುದಕ್ಕೆ ಸಹಾಯಕವಾಗಿ ಉಪಯೋಗಿಸಬಹುದೆಂದೂ, ಅಲ್ಲದೆ ಅದರ ಮೂಲಕ ನಾನಾ ವಿಧಗಳಲ್ಲಿ ಹಳ್ಳಿಗಳ ಜನಜೀವನವನ್ನು ಉತ್ಕೃಷ್ಟಪಡಿಸಬಹುದೆಂದೂ ಸೂಚಿಸಿದರು.

ವ್ಯವಸಾಯಕ್ಕೆ ಬೇಕಾದ ನೀರಿನ ಸರಬರಾಯಿಯ ವ್ಯವಸ್ಥೆಗೂ ರಸ್ತೆಗಳನ್ನು ಒಳ್ಳೆಯ ಸ್ಥಿತಿಯಲ್ಲಿ ಇಡುವ ವ್ಯವಸ್ಥೆಗೂ ಇಂಜನಿಯರುಗಳು ಮುಖ್ಯ ಗಮನ ಕೊಡಬೇಕೆಂದು ವ್ಯಾಖ್ಯಾನರವರು ತಮ್ಮ ಭಾಷಣದಲ್ಲಿ ಸೂಚಿಸಿದರು.

ಚಕ್ರವರ್ತಿ ಸಾರ್ವಭೌಮರವರ ರಜತ ಮಹೋತ್ಸವ.

ಬೆಂಗಳೂರಿನ ಪ್ರಜೆಗಳು ಚಕ್ರವರ್ತಿ ಸಾರ್ವಭೌಮರಲ್ಲಿ ತಮಗಿರುವ ಭಕ್ತಿವಿಶ್ವಾಸಗಳನ್ನು ತಾ. ೬-೭ನೇ ದಿನಗಳಲ್ಲಿ ನಾನಾ ವಿಧದಿಂದ ಪ್ರದರ್ಶಿಸಿದರು. ಸಾವಿರಾರು ಮಂದಿ ಪೌರರು ಎಲ್ಲೆಲ್ಲೂ ಹೊಸ ಹೊಸ ವಸ್ತ್ರಾಭರಣಗಳನ್ನು ಧರಿಸಿ ಉತ್ಸಾಹದಿಂದ ತಿರುಗಾಡುತ್ತಿದ್ದರು. ಬೆಂಗಳೂರಿನ ಪೌರಸಭೆಯವರು ನಗರದ [illegible] ಕಟ್ಟಡಗಳನ್ನು ವಿದ್ಯುಚ್ಛಕ್ತಿ ದೀಪಗಳಿಂದ ಅಲಂಕರಿಸಿ ದೀಪೋತ್ಸವವನ್ನು ನಡೆಸಿದರು. ನಗರದ [illegible] ದೇವಾಲಯಗಳಲ್ಲಿ ನಾಗಸ್ವರ [illegible] ನಡೆದುವು. ಎಲ್ಲಾ [illegible] ಕಟ್ಟಡಗಳ ಮೇಲೂ ಪತಾಕೆಗಳು ಹಾರಾಡುತ್ತಿದ್ದುವು. [illegible] ರಾಜರಸ್ತೆಗಳೆಲ್ಲವೂ [illegible] ಅಲಂಕೃತವಾಗಿದ್ದುವು.

[illegible] ದೇವಾಲಯಗಳಲ್ಲಿ [illegible] ವಿಶೇಷ ಪೂಜೆ [illegible] ನಡೆದುವು. [illegible] ವಿದ್ಯಾರ್ಥಿಗಳಿಗೆ [illegible] ಏರ್ಪಡಿಸಿತ್ತು. [illegible] ನಡೆದುವು.

[illegible] ಟೌನ್ ಹಾಲಿನಲ್ಲಿ [illegible] ರಜತ ಮಹೋತ್ಸವದ [illegible] ನಡೆದುವು.

ಕಲಾ ಉತ್ಸವ

ಶ್ರೀಮಾನ್ ದಿವಂಗತ ನಾಟಕಶಿರೋಮಣಿ ಎ. ವಿ. ವರದಾಚಾರ್ಯರ ಸ್ಮಾರಕ ನಿಧಿಯ [illegible] ವಿಶ್ವನಾಥರವರ ವೇತಾ. ೬ರಿಂದ ಕಲಾ ಉತ್ಸವವನ್ನು ಏರ್ಪಡಿಸಿದ್ದಾರೆ.

ಮೇಲೆ ಕಂಡ ಉತ್ಸವದ ಪ್ರಾರಂಭವು ಮೊನ್ನೆ ೬ನೇ ದಿನ ಸಾಯಂಕಾಲ ೬ ಘಂಟೆಗೆ ಗುಬ್ಬಿ ವೀರಣ್ಣನವರ ಶಿವಾನಂದ ಥಿಯೇಟರಿನಲ್ಲಿ ನಡೆಯಿತು. ಸರ್ ಸಿ. ವಿ. ರಾಮನ್‌ರವರು ಪ್ರಾರಂಭೋತ್ಸವವನ್ನು ನೆರವೇರಿಸಿದರು. ಮೈಸೂರಿನ ಶ್ರೀಮತಿ ಚಂದ್ರಮುಖಿಯವರ ಸಂಗೀತವೂ ಆಯಿತು.

ಕರ್ಣಾಟಕ ಸಾಹಿತ್ಯ ಪರಿಷತ್ತು

ಎರಡನೆಯ ವಿಶೇಷ ಸಾಹಿತ್ಯೋತ್ಸವ

ತಾ. ೨೫ನೆಯ ಎಪ್ರಿಲ್ ೧೯೩೬

ಪರಿಷದುಪಾಧ್ಯಕ್ಷರ ಸ್ವಾಗತ ಭಾಷಣ.

ರಾಜಮಂತ್ರಪ್ರವೀಣ ಶ್ರೀಮಾನ್ ರಾಜಗೋಪಾಲಾಚಾರ್ಯರವರೆ, ಸಭಿಕ ಮಹಾಶಯರೆ,

ಈ ದಿವಸ ನಮ್ಮನ್ನು ಇಲ್ಲಿ ಸೇರಿಸಿರುವ ಸಂದರ್ಭ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಎರಡನೆಯ ಸಲದ ವಿಶೇಷ ಸಾಹಿತ್ಯೋತ್ಸವ. ಈ ಉತ್ಸವಕ್ಕೆ ತಮ್ಮಗಳನ್ನೆಲ್ಲ ಬರಮಾಡಿಕೊಂಡು ತಮಗೆ ಸ್ವಾಗತಬಯಸುವುದು ಪರಿಷತ್ತಿಗೆ ಆನಂದಪ್ರದವಾದ ಸಂಗತಿ. ಪರಿಷತ್ತಿನ ಆಹ್ವಾನವನ್ನು ತಾವುಗಳು ಅಭಿಮಾನದಿಂದ ಸ್ವೀಕರಿಸಿ ಅನೇಕ ಕೆಲಸಗಳನ್ನು ಬಿಟ್ಟು ನಡೆ ದೂರಸ್ಥಳಗಳಿಂದ ಪ್ರಯಾಣಮಾಡಿ ಶ್ರೀಘ್ರ ಇದಕ್ಕಾಗಿ ಪರಿಷತ್ತಿನ ಪ್ರಶಂಸಾಪೂರ್ವಕವಾದ ಧನ್ಯವಾದಗಳು ತಮಗೆಲ್ಲರಿಗೆ ಸಲತಕ್ಕವಾಗಿವೆ. ಈ ಉತ್ಸವ ಕಾಲವು ತಮಗೆಲ್ಲ ಪೂರ್ಣವಾಗಿ ತೃಪ್ತಿಕರವೂ ಲಾಭಕರವೂ ಆಗಲೆಂದು ಪರಿಷತ್ತು ಹಾರೈಸುತ್ತದೆ.

ಈ ತರದ ವಿಶೇಷ ಸಾಹಿತ್ಯೋತ್ಸವವನ್ನು ಏರ್ಪಡಿಸಲು ಪರಿಷತ್ತು ಮೊದಲು ಯೋಚಿಸಿದ್ದು ಕಳೆದ ವರ್ಷ. ಆಗ ನಮ್ಮ ಸಸ್ಥಾನದ ಎಂಜಿನಿಯರ್ ಆಫೀಸರ್-ಇನ್-ಚೀಫ್ ಸರ್ ಮಿರ್ಜಾ ಇಸ್ಮಾಯಿಲ್ ರವರು ಇಲ್ಲಿಗೆ ದಯಮಾಡಿ ಬಂದು, ಅಧ್ಯಕ್ಷಸ್ಥಾನವಹಿಸಿ ಸೂಚಕವೂ ಉತ್ತೇಜನದಾಯಕವೂ ಆದ ಭಾಷಣದಿಂದ ಉತ್ಸವವನ್ನು ಪ್ರಾರಂಭಗೊಳಿಸಿ ತಮ್ಮಗಳನ್ನೆಲ್ಲ ಉಪಕೃತರನ್ನಾಗಿ ಮಾಡಿದ್ದು ತಮಗೆ ಜ್ಞಾಪಕದಲ್ಲಿರಬಹುದು. ಪರಿಷತ್ತಿನ ಮಹಾಪೋಷಕರಾದ ನಮ್ಮ ಶ್ರೀಮನ್ಮಹಾರಾಜರವರು ಪರಿಷತ್ತಿನ ಪೋಷಕರೂ ಅಧ್ಯಕ್ಷರೂ ಆದ ಶ್ರೀಮದ್ಯುವರಾಜರವರೂ ಆ ನಮ್ಮ ಪ್ರಯತ್ನವನ್ನು ಕೃಪಾದೃಷ್ಟಿಯಿಂದವಲೋಕಿಸಿ ಉದಾರವಾದ ಸಹಾಯವನ್ನನುಗ್ರಹಿಸಿ ಪ್ರೋತ್ಸಾಹಿಸಿದರು. ಆ ಉತ್ಸವದ ಪರಿಸಮಾಪನ ಸಮಯದಲ್ಲಿ ಕರ್ಣಾಟಕ ಪ್ರಪಂಚಕ್ಕೆ ಪೂಜ್ಯರಾಗಿರುವ ನಮ್ಮ ಮಹಾಮಹೋಪಾಧ್ಯಾಯರು ರಾವ್ ಬಹದೂರ್ ಶ್ರೀ| ಆರ್. ನರಸಿಂಹಾಚಾರ್ಯರವರು ತಮ್ಮ ಸಂತೋಷವನ್ನು ಆದರದಿಂದ ವ್ಯಕ್ತಪಡಿಸಿ ಸಭಿಕರ ಮೆಚ್ಚಿಕೆಯನ್ನು ತಿಳಿಸಿ, ಬಹು ವಿಧಗಳಲ್ಲಿ ಆ ಪ್ರಯತ್ನವನ್ನು ಹರಸಿದರು. ಆಗಿನ ಉಪನ್ಯಾಸಗಳೂ ಗ್ರಂಥಪ್ರದರ್ಶನವೂ ಇತರ ವಿದ್ಯಾಸಾಧಕ ಕಾರ್ಯಗಳೂ ಸಮಸ್ತ ಮಹಾಜನರ ಒಪ್ಪಿಗೆಯನ್ನು ಪಡೆದುವು. ಅಲ್ಲಿಂದೀಚೆಗೆ ಅಂಥ ಉತ್ಸವವನ್ನು ವರ್ಷ ವರ್ಷ ನಡೆಸಬೇಕೆಂಬ ಕೋರಿಕೆ ನಾನಾ ಕಡೆಗಳಿಂದ ಪರಿಷತ್ತಿಗೆ ಬಂದಿರುತ್ತದೆ. ಹೀಗೆ ಪರಿಷತ್ತು ಮಾಡಿದ ಪ್ರಯತ್ನಕ್ಕೆ ಮಹಾಪ್ರಭುಗಳವರ ಮತ್ತು ಮಹಾಜನರ ಅನುಮೋದನೆ ದೊರೆತದ್ದು ಈ ಸಂಸ್ಥೆಗೆ ಪರಮ ಪ್ರೋತ್ಸಾಹಕರವಾಗಿದೆ. ಪ್ರಯತ್ನವು ಕಷ್ಟಕರವಾದದ್ದಾದರೂ ಅದು ಎಲ್ಲರಿಗೂ ಪ್ರಿಯವಾದದ್ದೆಂಬುದನ್ನು ಪರಿಷತ್ತು ಲಕ್ಷ್ಯದಲ್ಲಿಟ್ಟು ಆ ತೆರೆದ ಸಮಾರಂಭಕ್ಕೆ ಈಗ ಮತ್ತೊಮ್ಮೆ ಕೈಹಚ್ಚಿದೆ.

(ಮುಂದುವರಿಯುವುದು.)

ಪ್ರತಿಯೊಬ್ಬ ತಾಯಿಯೂ

ಬೆಳೆಯುತ್ತಿರುವ ಮಕ್ಕಳಿಗೆ ಕೆಸ್ಟರ್ ಒಯಿಲ್ ಎಷ್ಟು ಅನುಕೂಲ ಎಂದು ತಿಳಿದಿರುವಳು. ಇದನ್ನು ವೈದ್ಯರು ಬಹುವಾಗಿ ಶಿಫಾರಸು ಮಾಡುತ್ತಾರೆ. ಆ ಬಗ್ಗೆ ಇದರ ಒಂದೊಂದು ಡೋಜನ್ನು ಕೊಟ್ಟರೆ ಅದು ಹೊಟ್ಟೆಯನ್ನು ಶುದ್ಧಗೊಳಿಸಿ ಆರೋಗ್ಯವಾಗಿಡುತ್ತದೆ. ನಿಮ್ಮ ಮಗುವು ಆಹಾರವನ್ನು ತಿನ್ನದೆ ಚಂಡಿ ಹಿಡಿಯುತ್ತದಾದರೆ ಅದಕ್ಕೆ ಒಂದು ಡೋಜು ಕೆಸ್ಟರ್ ಎಣ್ಣೆಯನ್ನು ಕೊಡಿರಿ. ಇದಕ್ಕೆ ರುಚಿಯಿಲ್ಲ-ವಾಸನೆಯಿಲ್ಲ ಸ್ವೀಕಾರ ಪ್ರಿಯವಾಗಿದೆ.

ಸ್ವಸ್ತಿಕ್ ಔಷಧಸಮಾನ ಕೆಸ್ಟರ್ ಒಯಿಲ್

ದಕ್ಷಿಣ ಕನ್ನಡ ಜಿಲ್ಲಾ ಏಜಂಟರು—ಎಸ್. ಎಸ್. ವಿ. ನಾಯಕ್ ಎಂಡ್ ಕೊ., ಮಂಗಳೂರು. ಉತ್ತರ ಕನ್ನಡ ಏಜಂಟರು—ಎಸ್. ಎಸ್. ರಂಗ್ರೇಕರ್, ಟಿ. ಆಫೀಸು ಹೊನ್ನಾವರ್

LOOK SHARP! LOOK AHEAD!

Murdeshwar's Banking Institute.

Pioneer Institute on the WestCoast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

Ladies are also admitted.

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to —

D. R. Murdeshwar,

Dip. Econ., F. R. Econ., S. (Lond.)

Principal

Ganapati High School Street,

Mangalore.

WHITE LEPROSY
AND
LEUCODERMA

A few day's application of this medicine cures WHITE LEPROSY and LEUCODERMA radically. Get rid of this horrible disease by application of this medicine inspite of failure by hundreds of Hakims, Doctors, Kavirajas and advertisers. Rs 500 rewarded if proved fallible. Price Rs 2/-.

VAIDYARAJ AKHIL KISHORE RAM

P. O. Katrisarai, (Gaya)

ಶಿವರಾಮ ಕಾರಂತ ವಿರಚಿತ

ಗ್ನಾನ—

ಜ್ಞಾನದ ಮೇಲೆ ವ್ಯಂಗ ಟೀಕೆ

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ.

ದಪ್ಪಗಿನ ಆಂಟಿಕ್ ಕಾಗದದಲ್ಲಿ ಮುದ್ರಣ

ಕ್ರೌನ್ ೧೬ ಆಕಾರದ 188 ಪುಟಗಳು

ಉತ್ತಮ ತರಗತಿಯ ಹಾಸ್ಯ

ಬೆಲೆ ರೂ. 1—4—0.

ಶಾರದಾ ಛಾಪಖಾನೆ,

ರಥಬೀದಿ ಮಂಗಳೂರು.

ಇಲ್ಲಿಂದ ಪಡಕೊಳ್ಳಬಹುದು

ಕಣ್ಣಿನ ಪಡೆ.

"ಐ—ಸನ್" ಎಂಬ ನೇತ್ರಭಾಸ್ಕರ—ಈ ಔಷಧವು ಕಣ್ಣುಪರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ ಶಸ್ತ್ರಕ್ರಿಯೆಯು ಅವಶ್ಯವಿಲ್ಲ. ಖಾತರಿ ಗುಣಲಾಭ ಗುಣವಾಗದಿದ್ದರೆ ಹಣ ಪರತ್ ಕ್ರಯ ರೂ. 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ —

Hary yasram, Panchpota, Bengal

Swadeshabhimani

enjoys circulation in India and abroad.

Apply for Advertisement rates.

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ಜಾತಿ ಅಕ್ಕಿ	4— 2	4— 5
ಮುಸ್ಕಿ	4— 4	4—10
ಗುಡ್ಡು	4— "	4— 6
ಊರ ಅವ್ವಲ್ ಬೆಳ್ತಿಗೆ	4— 0	4—12
ರಂಗೂನು ಬೆ. ಗೋ. ೧ಕ್ಕೆ	6—12	7— 4
ಎಲ್ಲೂರು ಬೆ. ಮು. ೧ಕ್ಕೆ	4— 4	4— 8
ಗೋದಿ ಗೋಣಿ ೧ಕ್ಕೆ	10— 0	0— 8
ತೊಗರಿ ಗೋಣಿ ೧ಕ್ಕೆ	8—12	9— 8
ಹುರುಳಿ ಗೋಣಿ ೧ಕ್ಕೆ	7— 8	8— 4
ಕಡಲೆ ಗೋಣಿ ೧ಕ್ಕೆ	8 — 0	10— 8
ತೊಗರಿಬೇಳೆ ಗೋಣಿ ೧ಕ್ಕೆ	10— 0	17— 0
ಉದ್ದು ಗೋಣಿ ೧ಕ್ಕೆ	8— 0	8— 8
ಹೆಸರು ಗೋಣಿ ೧ಕ್ಕೆ	9— 0	9— 8
ಊರುಬೆಲ್ಲ ಖಂಡಿ ೧ಕ್ಕೆ	32— 8	35— 0
ಉಪ್ಪು ಗೋಣಿ ೧ಕ್ಕೆ	4—12	5— 0
ಕೊಬ್ರಿ ಖಂಡಿ ೧ಕ್ಕೆ	48— 0	55— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	22— 0	22— 8
ಎಳ್ಳಿಂಡಿ ಖಂಡಿ ೧ಕ್ಕೆ	37— 8	40— 0
ಕೊಬ್ರಿ ಎಣ್ಣೆ ಮಣ ೧ಕ್ಕೆ	4— 2	4—15
ಎಳ್ಳೆಣ್ಣೆ ಮಣ ೧ಕ್ಕೆ	5— 2	5—10
ಛಾವಣಿಎಣ್ಣೆ ಪೆಟ್ಟಿಗೆ ೧ಕ್ಕೆ	5— 7	5—7
ಮೋರಿಸ ಸಕ್ಕರೆ ಮ. ೧ಕ್ಕೆ	3—10	3—11
ಮೆಣಸು	5— 2	6— 8
ಸಾಸಿವೆ ಮುಡಿ ೧ಕ್ಕೆ	5 —12	6— 0
ಕಾಳುಮೆಣಸು ಖ. ೧ಕ್ಕೆ	120— 0	122 8
ಯೇಲಕ್ಕಿ ಮಣ ೧ಕ್ಕೆ	22— 0	27— 0
ಗೇರುಬೀಜ ಮು. ೧ಕ್ಕೆ	3—11	3—15
ಕಬ್ಬಿಣ ಖಂಡಿ ೧ಕ್ಕೆ	40— 0	40— 8
ತಾಂಬ್ರತಗಡು ಮ ೧ಕ್ಕೆ	9 — 6	9— 5
ತಾಂಬ್ರಪಾತ್ರಗಳು ಮ ೧ಕ್ಕೆ	11— 0	12— 0
ಜೀನಿಬೆಲ್ಲ ಸೇರು ೧ಕ್ಕೆ	14—12	15— 0
ಹಿತ್ತಾಳೆ ತಗಡು ಮ. ೧ಕ್ಕೆ.	8— 12	9— 0
ಹವನು ೧ಕ್ಕೆ	23— 0	23— 4
ಹುಣಸೆ ಹುಳಿ ಖಂಡಿ ೧ಕ್ಕೆ	20— 0	25— [illegible]
ನೇಟಿವ್ ಕಾಫಿ ಖಂಡಿ ೧ಕ್ಕೆ	150— 0	165— 0
ಫಿಬೇರಿ ಕಾಫಿ ಖಂಡಿ ೧ಕ್ಕೆ	220— 0	235— 0
ಹಳೆ ಅಡಿಕೆ	100— 0	110— 0
ಹೊಸ ಅಡಿಕೆ	80— 0	96 — 0

ಶಾಲಿವಾಹನ ಬ| ಶಕ ೧೮೫೭ನೆಯ ಭಾವ ಸಂವತ್ಸರದ ವೈಶಾಖ ಶು| ೮ ಶನಿವಾರದಿಂದ ವೈಶಾಖ ಶು| ಶುಕ್ರವಾರದ ವರೆಗಿನ ಪಂಚಾಂಗ. (೧೯೩೫ನೇಯ ಮೇ ತಿಂಗಳು)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	[illegible]
11	ಶನಿ	೮	೩	ಮಘಾ	೫೮	೨೮	
12	ರವಿ	೯	೧೦	ಪುಬ್ಬಾ	೬೦	೨೯	
13	ಸೋಮ	೧೦	೧೫	ಪುಬ್ಬಾ	೫	೩೦	
14	ಕುಜ	೧೧	೨೦	ಉತ್ತರಾ	೧೧	೩೧	
15	ಬುಧ	೧೨	೨೩	ಹಸ್ತಾ	೧೬	೧	
16	ಗುರು	೧೩	೨೫	ಚಿತ್ರಾ	೨೦	೨	
17	ಶುಕ್ರ	೧೪	೨೬	ಸ್ವಾತಿ	೨೩	೩	

ಇಷ್ಟು ತನಕ ಯಾರೂ ಕೇಳಲಿಲ್ಲ, ಪಡೆಯಲಿಲ್ಲ.

ನಮ್ಮ ಒಟ್ಟೋ ಗೋಲ್ಡ್ ಅಥವಾ ಪ್ಲಾಸ್ ಹೃದಯ ಮನಗಳನ್ನು ಹೆಚ್ಚಿಸುವಂತಹದ್ದು. ೧೨ ವಾಚ್ಗಳನ್ನು ರೂ ೧—೧೪—೦ಕ್ಕೆ ಪಡೆಯುವವರಿಗೆ ೧ ರಿಸ್ಟ್ ವಾಚ್, ೧ ಇನ್ಷೆಂಟ್ ಪೋಕೆಟ್ ವಾಚ್ (ಜೈನ್ ಸಮೇತ), ೧ ಟೈಂಪೀಸ್ (ಸರಿಯಾಗಿ ಸಮಯ ತೋರಿಸುತ್ತದೆ)—ಹತ್ತು ವರ್ಷಗಳ ಗ್ಯಾರಂಟಿ, ಒಂದು ಇಮಿಟೇಶನ್ ಮುತ್ತಿನ ಸರ, ಪೆಕಿಂಗ್ ಮತ್ತು ಪೋಸ್ಟೇಜ್ ಫ್ರೀ, (ಒಳ್ಳೆಯದಲ್ಲವಾದರೆ ಹಣ ವಾಪಸು)

ವಿಳಾಸ—International Trading Co..

G. I. P. A. Post Box No 6714, Section S. P., Calcutta.

NEW ARRIVLAS.

Medicines.

Dr. Schuessler's Twelve Tissue Remedies 5 gr. bot. As. 4/-

Homoeopathy Medicines 5 gr. bot As 5/—

Sugar of Milk Dr Schwabe's original bot 1 lb Rs 2/-

Haarlem Oil—a world renowned remedy As 8/-per phial

Dr Haele's New Curative Earth—Radium Cure Rs 4/-per lb.

Dr Schwabe's other special remedies are always in stock

Please consult us for your requirements

Kanarese Book a Family Guide to Biochemistry Re. 1/-

" Domestic Homoeopathy Rs. 1-4/-

If you own these two Books you will be able to pick up treatment and administer Tissue & Homoeopathy Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes and prices from As 2/6

Delightful in aroma, charming in appearance. Please try

Kirloskar Pumps.

We are the Representatives for Kirloskar Brothers for their reliable Shallow well and Deep-well Pumps, Spring Cots, Spring Couches etc., and stock—

Pipes and pipe fittings at cheap prices Coir Mats and Mattings

Steadler Pencils and Stationeries

We are the recognised agents for STEADLER'S all stationeries and shall be glad to serve you.

Olympia Typwriter.

An up-to-date Machine in Standard and portable sizes.

For Further particulars please write to —

Basel Mission Book & Tract Depository,

Mangalore, S. K. or Hubli, S. M.

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ



ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಸ್ಸಿಗೊಗ್ಗುವಂತಹ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ.0—12—0.

ಆರ್. ಸಿ. ಸೇನ್ ಎಂಡ್ ಕೋ.,

ಲಿಮಿಟೆಡ್, ಕಲ್ಕತ್ತ.

ಏಜಂಟರು.—

ಕುಂತಳ ಕೌಮುದಿ ತೈಲ,

ವೆನ್‌ಲಾಕ್ ಆಸ್ಪತ್ರೆ ಎದುರು, ಮಂಗಳೂರು.

ಮೆನೇಜರರ ನೋಟೀಸು.

ಸ್ವದೇಶಾಭಿಮಾನಿಯ ಚಂದಾ ಅವಧಿ ಮುಗಿಯಿತೆಂದು ನೋಟೀಸು ಕೊಟ್ಟವರ್ ಅಂತಹ ಚಂದಾದಾರರು ಮುಂದಿನ ವರ್ಷದ ಬಗ್ಗೆ ಚಂದಾ ಮೊಬಲಗನ್ನು ಕೂಡಲೇ ರವಾನಿಸಬೇಕು. ಪತ್ರಿಕೆಯು ಮುಂದಕ್ಕೆ ಬೇಕೋ ಬೇಡವೋ ಎಂಬ ಬಗ್ಗೆ ನೋಟೀಸು ತಲಪಿದೊಡನೆ—ಅಗತ್ಯವಾಗಿ ತಿಳಿಸಬೇಕು.

ಚಿಕ್ಕದೊಡ್ಡವರು-ದೊಡ್ಡಚಿಕ್ಕವರು

ಲೇಖಕರು—ಶ್ರೀ ಶಿವರಾಮ ಕಾರಂತರು

ಸುಧಾರಣೆಯ ಸದಾಶಿವಯ್ಯ

ನಿಶ್ಚಯಕ್ಕೂ ಸದಾಶಿವಯ್ಯನವರ ಸುಧಾರಣೆಗೆ ಸಿಲುಕದ ವಿಷಯ ಯಾವುದೂ ಇಲ್ಲ. ಗ್ರಾಮಸೇವೆ, ಜಲಾಸೇವೆ, ಸಾಹಿತ್ಯ ಇವು ಅವರ ಇಷ್ಟದ ವಿಷಯಗಳು. ಶಿಕ್ಷಣ ಭಾಷಣಗಳಲ್ಲಿಯೂ ಅವರ ಮಾಹಿತಿಯು ತುಂಬಾ ಇದೆ. ಮುಖ್ಯವಾಗಿ ನಾಡಿನ ಜೀವನದಲ್ಲಿ ಗಣ್ಯಸ್ಥಾನವು ತಮ್ಮದೆಂದು ಅವರು ತಿಳಿದಿದ್ದಾರೆ. ನಾವು ತಿಳಿಯದಿದ್ದರೆ ಅದು ನಮ್ಮ ತಪ್ಪು. ನನಗೆ ಅವರ ಪರಿಚಯವು ಬಹಳ ಹಿಂದಿನಿಂದಲೂ ಇದೆ. ಇನ್ನೂ ಇರುವಂಥ ಗೆಳೆತನವು ನಮ್ಮದು. ಆಗಾಗ ಅವರ ಬಳಿಗೆ ಹೋಗಿ ಬರುತ್ತಿದ್ದು, ಅವರನ್ನು ಅಟ್ಟಕ್ಕೇರಿಸಿದರೆ ಆಯಿತು—ಅವರಿಗೆ ಖುಶಿ. ಅವರಿಂದಾಗುವ ಎಷ್ಟೋ ಕೆಲಸಗಳನ್ನು ನಿಮಗಾಗಿ ಹೇಗಾದರೂ ಮಾಡಬೇಕೆನ್ನುವ ಜನ ಅವರು. ಅದಕ್ಕಾಗಿ ಎಷ್ಟೋ ಎಲ್ಲಿ ಅತಿ ಹೆಚ್ಚಿನ ತ್ಯಾಗವನ್ನು ಮಾಡಬಲ್ಲರು. ಆದರೆ ಒಂದು ದುರ್ದೈವ—ಅವರು ಏನಾದರೂ ಮಾಡಲು ಹೋದರೆ ಅದು ಏನಾದರೂ ಆಗುವ ಸಂಭವವಿದೆ. ಆ ಭೀತಿ ಅವರಿಗಿಲ್ಲ—ಅದು ನಮಗಿರುವುದರಿಂದ—ಆರೋಗ್ಯಕ್ಕೆ ಒಳಿತಿದೆ. ಮುಷ್ಟಿ ವಿನಾಯಕನನ್ನು ಬಿಡಿಸಲು ಹೋಗಿ, ಹನುಮನ ಸೃಷ್ಟಿ ಮಾಡುವ ಧೋರಣೆ ಅವರದು. 'ಏನು ಸ್ವಾಮಿ ಹನುಮಂತನನ್ನು ಏಕೆ ಮಾಡಿದಿರಿ, ನಮಗೆ ಬೇಕಿತ್ತು ವಿನಾಯಕನ ಮೂರ್ತಿ'—ಎಂದರೆ ಕೆಟ್ಟರಿ ನೀವು. ಅವರು ಸಿಟ್ಟಾಗಲೂ ಬಹುದು. ಸಿಟ್ಟು ಅವರ ಜೀವನದಲಿ ಉಸಿರು ಒಟ್ಟು... ಆದರೆ ಬಲು ಆಳದ ಸಿಟ್ಟಲ್ಲ. ಅವರು ಶಾಂತವಾಗಿರುವಾಗ ನೀವು ಈ ಪ್ರಶ್ನೆ ಕೇಳಿದರೆ ಇಲ್ಲವೆ ಪ್ರಶ್ನೆ ಕೇಳಿದ ಮೇಲೂ ಅವರ ಶಾಂತರಾಗಿದ್ದರೆ ಆಗ ಬರುವ ಉತ್ತರ ಇಂಥದು—'ಸ್ವಾಮಿ, ವಿನಾಯಕನಿಂದ ಏನು ಉಪಯೋಗ ಜನಕ್ಕೆ? ಆಕಾಲಕ್ಕೆ ಅವನು ಸರಿಯೋ. ಒದಗಿ ಬರುವ ಶಕ್ತಿ ಜನ ಅವನು—ನಮಗೆ ಕೆಲಸವಾಗಬೇಕಾದರೆ ಹನುಮಂತನೇ ಬೇಕು. ಅದಕ್ಕಾಗಿ ವಿನಾಯಕನನ್ನು ಸುಧಾರಿಸಿ ಹನುಮಂತನನ್ನು ಮಾಡಿದೆ. ಮುಖ್ಯವಾಗಿ ಎಲ್ಲ ... ಗಳನ್ನು ಸುಧಾರಿಸಿ ಬಿಡುವುದೇ ಆ ... ಸುಧಾರಣೆ ಇಲ್ಲದೆ ಯಾವ ವಸ್ತುವೂ ಇರಬಾರದು ಎಂಬುದು ಅವರ ಮಂತ್ರ. "ಸುಧಾರಣೆ—ಎಂದರೆ ಅದರ ಅರ್ಥ ಇಷ್ಟಿರಬೇಕು— ಇದ್ದ ರೂಪದಲ್ಲಿ ಒಂದು ವಸ್ತುವನ್ನು ಇರಗೊಡಿಸದಿರುವುದು"—ಎಂದ.

ಹಿಂದಿನಿಂದ ಅವರಿಗೆ ಸಾಹಿತ್ಯದಲ್ಲಿ ಅಭಿರುಚಿ. ಚಿಕ್ಕ ಕಥೆ, ನಾಟಕ, ನಾಟಕ ಕವಿತೆ ಉಪನ್ಯಾಸ, ವಿಮರ್ಶೆ—ಇಂಥ ವಿಷಯಗಳಲ್ಲಿ ಅವರ ಆತುರ ಬಹಳ. ನಾನು ಹೋದಾಗಲೆಲ್ಲ ಈ ಒಂದೊಂದು ವಿಷಯ ಮಾತನಾಡುತ್ತಿರುತ್ತಾರೆ. ಸಾರ್ವಜನಿಕ ಸಭೆಗಳು ಅನೇಕದರಲ್ಲಿ ಅವರು ಇವೇ ವಿಷಯವನ್ನು ಮಾತನಾಡುವರು.

ಒಮ್ಮೆ ಹೋದಾಗ 'ಸ್ವಾಮಿ ನೀವು ಒಪಸೇಮನ ಈ ಪುಸ್ತಕ ನೋಡಿಲ್ಲವೇ' ಎಂದು ಕೇಳಿದರು. ನಾನು—"ಯಾವುದು?" ಎಂದೆ. 'ಅ—ಇದು. ಆದರೆ ಅದರಲ್ಲಿ ಪ್ಲೇಟು ಪ್ರಸಂಗ ಎಲ್ಲ—ಬಲು ಚೆನ್ನಾಗಿದೆ. ಆದರೆ ಕಾನಂಡ್ಯಾಲನಿಗಿಂತಲೂ ಅವನ ಪ್ರವೀಣ. ಆದರೆ ಒಂದು ವಿಷಯದಲ್ಲಿ ಯಾಕೋ ತಪ್ಪಿದ ಹಾಗಿದೆ. ಆದರೂ ಈ ಕಥೆಯನ್ನು ತುಸು ಸುಧಾರಿಸಿದರೆ ಕನ್ನಡಕ್ಕೆ ಚೆನ್ನಾಗಿ ಆದೀತು" ಎಂದರು. ಆಗಲಿ ಎಂದೆ.

ಇನ್ನೊಮ್ಮೆ ಭೇಟಿಯಾಯಿತು—'ಹಾರ್ಡಿ ಇವರೇ— ನೀವು ಇಬ್ಸೆನನ ಅಲ್ಲ, ಮಾಲಿಯರನ ಡೆಪೆ ಜಡ ಗೂಡ್ಸ್ ನೋಡಿಲ್ಲವೆ? ಅದು ಮಾರಿಕೋರಲಿಯ ಈ ಪುಸ್ತಕಕ್ಕಿಂತ ಚೆನ್ನಾಗಿದೆ. ನೋಡಿ ಅದು ಬಲು ದೊಡ್ಡ ಗ್ರಂಥ. ಅದನ್ನು ಸುಧಾರಿಸಿ ಕನ್ನಡದಲ್ಲಿ ಬರೆಯಬೇಕು' ಎಂದರು.

ಮಗದೊಮ್ಮೆ ಭೇಟಿಯಾಯಿತು. ಆಗ ಎಂದರು,' ನನಗೆ ಪುಟ್ಟಪ್ಪನವರ ಆ ಕವಿತೆ ನೋಡಿ ಮನಸ್ಸಿಗೆ ಒಂದಿತು. ಯಾಕೆ ಶ್ರೀಕಂಠಯ್ಯನವರ ಈ ಕವಿತೆಗಿಂತಲೂ ಅದು ಚೆನ್ನಾಗಿದೆ. ಆದರೆ ಶ್ರೀಕಂಠಯ್ಯನವರಾಗಲಿ ಪುಟ್ಟಪ್ಪನವರಾಗಲಿ ಇವನ್ನು ಸುಧಾರಿಸಿ ಬರೆದಿದ್ದರೆ ಚೆನ್ನಾಗಿತ್ತು. ನೋಡಿ ಶರ್ಲಾಕ್ ಹೋಮ್ಸಿನಲ್ಲಿ ಇಂಥಾದೇ ಒಂದು ಪ್ರಸಂಗವಿದೆ. ಅದನ್ನು ಸುಧಾರಿಸಿ ಬರೆದರೆ ಎಷ್ಟು ಲಾಯಕಾದೀತ'—ಎಂದರು.

ಒಂದು ದಿನ ನಾನು ಧೈರ್ಯತಾಳಿ 'ಅಲ್ಲ, ನೀವೇಕೆ ಬರೆಯುವುದಿಲ್ಲ ಎಂದೆ.' ಅವರು 'ಯಾಕೆ, ನಿಮಗೆ ಗೊತ್ತೇ ಇಲ್ಲವೆ. ನಾನು ಗಾರ್ಡಿನರು, ಡಿಕೆನ್ಸು, ಬನಿಯನು, ಪೋಪ ಇವರದ್ದೆಲ್ಲಾ ಸ್ವಲ್ಪ ಸ್ವಲ್ಪ ತೆಗೆದು-ಸುಧಾರಿಸಿ ಇಲ್ಲಿಗೆ ತಕ್ಕಂತೆ ಮಾಡಿ ನಾಲ್ಕಾರು ಪುಸ್ತಕ ಬರೆದಿರಿಸಿದ್ದೇನೆ. ಆದರೂ ನೋಡಿ, ಪೂರ್ಣ ಮುಗಿಸಲಿಕ್ಕೆ ಆಗಲಿಲ್ಲ'—ಎಂದರು.

'ಛೇ, ನಿಮ್ಮಂಥವರು ಕೆಲಸ ಮಾಡದಿದ್ದರೆ ಮತ್ತಾರು ಹಾಗೆ ಮಾಡಬೇಕು' ಎಂದೆ. ಪ್ರಸನ್ನವದನರಾದರು. ಒಂದು ರಿಂಜನ್ ಕಾಫಿ ಬಂದಿತು. ಅದನ್ನು ಕುಡಿದ ಮೇಲೆ ನನ್ನೆದುರಿಗೆ ಅಡಂಗಳದಷ್ಟು ದೊಡ್ಡ ಒಂದು ಪುಸ್ತಕವನ್ನು ತಂದಿರಿಸಿದರು. 'ಇದು ಮಾರ್ಟೆಥೂಮನ ಸುಧಾರಣೆ. ಇಲ್ಲಿ ಪ್ರಥಮ ಭಾಗವಿದೆ. ನೋಡಿ, ಮೆಕ್ಸಿಕೋ ಜನರ, ಆ ಸಂಸ್ಕೃತಿ ಆ ಜಗಳ—ನಮ್ಮಲ್ಲಿಗೆ ಬ್ರಿಟಿಷರು ಇಲ್ಲವೆ ಮುಸಲ್ಮಾನರು, ಇಲ್ಲವೆ ಆರ್ಯರು ಬಂದ ಕಾಲದಲ್ಲಿದ್ದಂತೆ ಇದೆ. ಅದನ್ನು ಇದಕ್ಕೆ ಹೋಲಿಸಿ ಬರೆದಿದ್ದೇನೆ'—ಎಂದರು. ಗ್ರಂಥ ಹೊತ್ತು ಮನೆಗೆ ತಂದೆ. ಆ ಅರ್ಧಟನ್ ತೂಕದ ಪುಸ್ತಕವನ್ನು ಓದಿ ಕುಳಿತರೆ ನಾನು ಬಚಾವಾದೇನೆಯೋ' ನನಗೂ ಸೊಕ್ಕು—ನನ್ನಂಥ ಮಹಾ ಸಾಹಿತಿ, ಇನ್ನೊಬ್ಬರ ಬೂಕು ಓದುತ್ತ ಬಿದ್ದಿರುವುದೇ ಎಂದು. ನನ್ನದನ್ನು ಓದಲು ನನಗೆ ಪುರುಸತ್ತು ಇಲ್ಲ. ಆದರೂ ಅಧೈರ್ಯ ಸಿಕ್ಕಿದಾಗ 'ಹೇಗಿದೆ ನನ್ನ ಮಾಂಟೆಥೂಮ' ಎಂದರೆ ಏನು ಮಾಡಲಿ ಎಂದು ಓದಿದೆ. ಚೇಷ್ಟೆ ಕಂಡಿತು, ಪಟಹಿಡಿದು ಮುಗಿಸಿದೆ. ಕೋಲಾಂಡರ ಜೀನ ಕ್ರಿಸ್ತಾಫರನನ್ನು ಓದಿದಷ್ಟು ಭಕ್ತಿಯಿಂದ ಓದಿ ಮುಗಿಸಿರಬೇಕು. ಆದರೆ ಮುಗಿಸಿದಾಗ ನನಗೆ ಮೈಮೇಲೆ ಎಚ್ಚರವಿದ್ದಿಲ್ಲ. ನಾಲ್ಕಾರು ಸ್ನೇಹಿತರು ತಲೆಗೆ ತಂಡಿ ಬಟ್ಟೆಯಿಟ್ಟು, ಗಾಳಿ ಹಾಕಿ ನನ್ನನ್ನು ಚೇತನಗೊಳಿಸುತಿದ್ದರು.

ಮಾಂಟೆಥೂಮನ ಸುಧಾರಣೆ ಕಂಡು ದಿಗಿಲುಗೊಂಡೆ. ಕಥೆಯಲ್ಲಿ ಮಾಂಟೆಥೂಮನೂ ಇಲ್ಲ, ಅವನನ್ನು ಬರೆದವನೂ ಇಲ್ಲ. ಬರೀ ಸುಧಾರಣೆ. ದೇಶಸೇವೆ, ಭಾಷಾಸೇವೆ,—ನಡುನಡುವೆ ಇಂದಿನ ಫರಂಗಿ ನಾಳಿನ ಚಕ್ರಿಯ... ಎದ್ದು ತಲಾಂದ್ರ ಮೊನ್ನೆಯ ಬಾಣಬಿಲ್ಲು—ಎಲ್ಲಿ ಕೈಹಿಡಿದು ತಲೆ ತಿದ್ದುವ ಅಹಮ್ಮದ್ ಸಿಗ... ಅಸಿಲ ಫೆರ್ನಾಂಡಿಸನು ಕಥಾನಾಯಕನು' (ಹಿಂದು ಕ್ರೈಸ್ತ ಸಲ್ಮಾನ ಏಕ) ಅವನ ಸಾಹಸ. ಅವನ ... ಗಾಗಿ ಮೀರಾಬಾಯಿ ಆತ್ಮಹತ್ಯೆಯನ್ನು ಮಾಡಿದ ರೀತಿಯನ್ನು ಮಾಂಟೆಥೂಮ ... ಜನರ ಮೇಲೆ ಸಾಧಿಸಿದ ... ಹೋಲಿಸಿ ಅವನನ್ನು ಕೊಂದಿದ್ದರು—ಅಲ್ಲ ಕೊಂದ ... ಬರೆದ್ದರು.

ನಾನು ಹೋದಾಗಲೆಲ್ಲ— ಹೇಗಿದೆ? ಎಂದು ಹೇಳು ... ನನ್ನ ಇನ್ನೇನೇ ಪುಸ್ತಕವಿದೆ ಇಲ್ಲ ಎಂದು ... ವಿಷಯಕ್ಕೆ ಹಾರುತ್ತಿದ್ದೆ. ಪ್ರತಿ ಪ್ರಸಂಗದಲ್ಲೂ ಅವರ ಕಾಲಾತೀತ ಕಲ್ಪನಾತೀತವಾದ ಸುಧಾರಣೆಯಿಂದ ಮೂಲ ಗ್ರಂಥಕರ್ತರೆ ಹತವಾಗಿರಲು ನನ್ನಂಥ ಬಡಪಾಯಿಯ ಗತಿಯೇನು?

ಅವರ ಸುಧಾರಣೆಯ ಬುದ್ಧಿಯ ವಿಷಯ ಇನ್ನೊಂದು ಸಂಗತಿ ಹೇಳಿ ಮುಗಿಸಿಬಿಡುತ್ತೇನೆ. ಅವರಿಗೆ ಈಗಿನ ಸಾಹಿತಿಗಳ ಮೇಲೆ ಪ್ರೇಮ. ಸತ್ತ ಹೆಗ್ಗಣದ ಮೇಲೆ ಜಿಮುಗುವ ... ಪಂಡಿತ ಜನರನ್ನು ಕಂಡರೆ, ರೇಗಿ ಬಿಡುತ್ತಾರೆ. ಜನರಲ್ಲಿ ಅದರಲ್ಲೂ ಈ ಪಂಡಿತರಲ್ಲಿ ಆಧುನಿಕ ಸಾಹಿತ್ಯದ ಕಡೆಗೆ ಇರುವ ತಿರಸ್ಕಾರ ಹೋಗಲಾಡಿಸಬೇಕೆಂದು ಅವರದು ಬಹಳ ಪ್ರಯತ್ನ. ಎಷ್ಟೋ ಬಾರಿ ಇದಕ್ಕೆ ಬಾರಿ ಪ್ರಯತ್ನಪಟ್ಟಿದ್ದಾರೆ. ಅದಕ್ಕಾಗಿ ಕವಿತಾವಾಚನ, ವಿಮರ್ಶೆ ಉಪನ್ಯಾಸ ಮಾಡಿರುತ್ತಾರೆ. ಒಂದು ಸಭೆಯಲ್ಲಿ ಅವರ ರಸಿಕತೆಗೆ ಮೆಚ್ಚಿ—ಸಭೆಯಿಂದ ಅರೆವಾಶಿ ಜನರು ಅಂತರ್ಧಾನರಾದರು. ಕಾಲುವಾಶಿ ಜನರು ಸ್ವಪ್ನದಲ್ಲಿ ಕೇಳಿದ್ದರು. ಉಳಿದವರು ಉಪನ್ಯಾಸ ಮುಗಿಯುತ್ತಲೇ ವೆನಲಾಕ್ ಆಸ್ಪತ್ರೆಗೇನೇ ನಡೆದುಬಿಟ್ಟರು. ಕೋಣನ ಮುಂದೆ ವೀಣೆ ಬಾರಿಸಿದಂತೆ, ನಮ್ಮ ಜನರಿಗಾಗಿ ಏನು ಮಾಡಿದರೇನು?

ನಮ್ಮ ಜನ ಎಂದರೆ—ಬದುಕಿರುವಾಗ ಸುಮ್ಮನಿದ್ದು ಸತ್ತಮೇಲೆ ಗೋಳಿಡುವವರು. ಸದಾಶಿವಯ್ಯನವರಂಥವರು ಅಗ್ಗಕ್ಕೆ ಸಂತೆಯಲ್ಲಿ ಸಿಗುವ ಜನರೇ! ಅವರಿರುವ ಕಾಲಕ್ಕೆ ಅವರನ್ನು ಕಂಡು ತಾವಿಷ್ಟು ಸುಧಾರಣೆ ಹೊಂದದೆ ಹೋದರೆ ನಮ್ಮ ಜನರಿಗೆ ಸ್ವರಾಜ್ಯ ಸಿಗುವುದು ಹೇಗೆ?

ನಮ್ಮೂರ ನಚ್ಚು.

(ಒಂದು ಹರಟೆ)

ನಮ್ಮೂರು ಚಿಕ್ಕದಾದರೂ ನಮ್ಮೂರವರು ಚಿಕ್ಕದರಂತಲ್ಲ. ಅವರಲ್ಲೂ ನಚ್ಚು ಎಂದರೆ ಸಾಮಾನ್ಯನಲ್ಲ. ಎಲ್ಲರಿಗಿಂತಲೂ ಮಿಗಿಲಾದ ಬುದ್ಧಿವಂತಿಕೆಯುಳ್ಳವನು. ಬಾಲ್ಯದಲ್ಲಿ ನಮ್ಮೂರ ಎಲಿಮೆಂಟರಿ ಶಾಲೆಯಲ್ಲಿ ಆತನ ಪ್ರಥಮ ವಿದ್ಯಾಭ್ಯಾಸ. ಮುಂದಿನ ವಿದ್ಯಾಭ್ಯಾಸವು ನಗರದ ಹೈಸ್ಕೂಲಿನಲ್ಲಿ. ಅಲ್ಲೇನು ಆತನ ಪ್ರತಿಭೆಯು ಕಡಮೆಯೇ? ವಿಮರ್ಶಕರನ್ನು ಬೆರಗುಗೊಳಿಸಿ ಒಂದೇಟಿಗೆ ಉತ್ತಮ ತರಗತಿಗಳಲ್ಲಿ ತೇರ್ಗಡೆ ಹೊಂದಿ ಸರಕಾರಿ ನೌಕರಿಯನ್ನು ಪಡೆದನು. ಆಗಿನ ಕಾಲದಲ್ಲಿ ಸರಕಾರಿ ನೌಕರಿಯೆಂದರೆ ಸ್ವರ್ಗದ ಸೋಪಾನ. ಆ ಸೋಪಾನದಲ್ಲಿ ಆಸೀನರಾದರೆಂದರೆ ತನ್ನ ಆಪ್ತವಸ್ತೆಯನ್ನು ಮರೆತೇ ಬಿಡುವರು ಎಂದ ಮೇಲೆ ನಮ್ಮೂರ ನಚ್ಚುವು ತನ್ನ ಬಾಲ್ಯಾವಸ್ಥೆಯನ್ನು ಮರೆತುದು ಆಶ್ಚರ್ಯವಲ್ಲ. ತೀರ್ಪುಗಳನ್ನು ಬರೆಯುವ ಮೊದಲು ಕಂಡ ಕಂಡವರೊಡನೆ ಅಭಿಪ್ರಾಯಗಳನ್ನು ಕೇಳಿ ಅವುಗಳನ್ನನುಸರಿಸಿ ತೀರ್ಪು ಬರೆಯುತ್ತಿದ್ದ. ನಚ್ಚುವಿನಲ್ಲಿ ಅದೊಂದು ದುರ್ಗುಣವು ಹೆಚ್ಚಿತು.

ನೌಕರಿಯಿಂದ ನಿವೃತ್ತನಾಗಿ ಬಂದ ನಚ್ಚುವು ನಮ್ಮೂರನ್ನು ತ್ಯಜಿಸಿಯೇ ಬಿಟ್ಟನು. ನಗರದಲ್ಲಿಯೇ ಸ್ವಂತ ಮನೆ, ಸ್ವಂತ ಮೋಟಾರು ಕಾರು. ಮತ್ಸ್ಯರಾಯನ ಕಟಾಕ್ಷದಿಂದ ಸೊಗಸಾದ ಭೋಜನ. ಸಾಯಂಕಾಲದಲ್ಲಿ ಹವಾ ವಿಹಾರ. ಎತ್ತರವಾದೊಂದು ಬಯಲು ಪ್ರದೇಶದಲಿ ಕುಳಿತುಕೊಂಡ ನಮ್ಮ ನಚ್ಚುವಿನ ಸುತ್ತಲೂ ಹೊಗಳು ಭಟ್ಟರು ಕೆಲವರು. ಅಲ್ಲಲ್ಲಿಯ ದೂರುಗಳನ್ನು ಸುರುತ್ತಿರುವರೊಬ್ಬರಿಬ್ಬರು. ಒಹೋ ಮರೆತೆ. ನಮ್ಮೂರ ನಚ್ಚುವು ನಿವೃತ್ತನಾಗಿ ಬಂದೊಡನೆ ನಗರದಲ್ಲಿ ತಾನು ಕಲಿತು ಉಚ್ಚ ತರಗತಿಯಲ್ಲಿ ತೇರ್ಗಡೆ ಹೊಂದಿದ ಶಾಲೆಯ ಕಾರ್ಯನಿರ್ವಾಹಕ ಸಂಘದ ಲಿಯ ಸದಸ್ಯನಾಗಿ ಆರಿಸಲ್ಪಟ್ಟನು. ಶಾಲೆಯ ಕಾರ್ಯನಿರ್ವಾಹಕನಾಗುವ ಬದಲಾಗಿ ನಚ್ಚುವು ಶಾಲೆಯ ಅಹಿತ ಸಾಧಕನಾದದು ಇತರರಿಗೆ ಆಶ್ಚರ್ಯವನ್ನುಂಟುಮಾಡಿದರೂ ಬಾಲ್ಯದಿಂದಲೂ ಬಲ್ಲ ನಮ್ಮೂರವರು ಆತನಲ್ಲಿ ಇದಕ್ಕಿಂತ ಅತಿಶಯವಾದ ಸತ್ಕಾರ್ಯವನ್ನು ಅಪೇಕ್ಷಿಸಲಿಲ್ಲ. ಇರಲಿ.

ರುಮಾಲು ಸುತ್ತುವುದು, ಇಜಾರು ತೊಡುವುದು, ಅಂಗಿ ಇಟ್ಟು ಬೂಟ್ಸು ಹಾಕುವುದೆ ದರೆ ನಚ್ಚುವಿಗೆ ವೇಷ್ಟಿಗೆ ಆದರೆ ವಿಲಾಯತಿಯಿಂದ ಬಂದ ಡಾಕ್ಟರರೊಬ್ಬರಿಗೆ ಕೊಟ್ಟ ಉಪಹಾರ ಸತ್ಕಾರದಲ್ಲಿ ಸಂಪೂರ್ಣ ಪೋಷಾಕನ್ನು ನಚ್ಚುವು ಧರಿಸಿದುದು ಕೇವಲ ಸರಿ.

ನಚ್ಚುವು ಉತ್ತಮ ವಿದ್ವಾಂಸನು. ಕನ್ನಡದಲ್ಲಿ ಪಂಡಿತನು. ಆತನ ಓದದ ಪದ್ಯಗದ್ಯಗಳಿಲ್ಲ. ಬರೆಯದ ಗ್ರಂಥಗಳಿಲ್ಲ. ಕನ್ನಡ ಭಾಷಾ ಪ್ರವರ್ತಕನೆಂಬ ಬಿರುದ ಇರುವುದಾದರೆ ಅದ ... ನಮ್ಮೂರ ... ಸಲ್ಲಬೇಕಿದ್ದು. ಅಲ್ಲಿಷ್ಟು ಇಲ್ಲಿಷ್ಟು ಅಲ್ಪ ತಪ್ಪು ಕೆಲವು ದೋಷಗಳು ಆತನ ಬರವಣಿಗೆಯಲ್ಲಿದ್ದರೂ ಅವು ಮುಖ್ಯವಲ್ಲದವು ... ಪರೀಕ್ಷೆಯೇ ... ನಮ್ಮೂರ ನಚ್ಚುವಿನ ಬರವಣಿಗೆಯು ... ಅಚ್ಚರಿ ಪಡೆಯದಿರರು.

ಗೀತೆಯೆಂದರ ನಚ್ಚುವಿಗೆ ... ಅದನ್ನು ತಾನು ಪರರ ಮಾಡಿದರೆ ... ಯೋಗ್ಯವಾಗುವ ... ಪ್ರಕಟಿಸುವನು ... ಯಾವ್ಯಾವ ... ಗೀತೆಗಳನ್ನು ಪ್ರಕಟಿಸುವನು ... ಗೀತೆಯನ್ನು ಬರೆದ ನಚ್ಚುವಿಗೆ ... ಗೀತಾವ್ಯಾಖ್ಯಾನಗಳು ರುಚಿಸವು ... ಹುಟ್ಟುಗುಣ ... ಹೋಗದು ...

ತಾನೊಬ್ಬ ... ಶಾಲೆಯ ... ವ್ಯಾದರೂ ಶಾಲಾಸೇವೆಗಾಗಿ ... ನಮ್ಮೂರ ನಚ್ಚುವು ... ಹಣಗೂಡಿಸಿ ನಾವು ... ದಲ್ಲವೇ? ಎಂದನು. ಆದರೆ ... ನಮ್ಮಲ್ಲಿ ... ಹಣವಿದೆ ... ಇಟ್ಟರಾಗದೆ? ಎಂದ ಅಭಿಪ್ರಾಯ ... ಉದಕ ... ರ್ಥಕವಾಗಿ ಉಸುರು ... ಮನಸ್ಸಿನಲ್ಲಿಯೇ ... ನಚ್ಚುವು ... ನಾದುದು.

ಸಂಕ್ಷೇಪವಾಗಿ ಹೇಳುವುದಾದರೆ ... ನಿವೃತ್ತಿಯಾದ ನಚ್ಚುವನ್ನು ... ಆತನ ಅಭಿಸಲ್ಲದ ಬುದ್ಧಿವಾದವನ್ನು ... ಕೊಳ್ಳಬೇಕು. ಅನ್ಯಾಯವಾದುದನ್ನು ನ್ಯಾಯವೆಂದು ವಾದಿಸಿ ಕೋಪಾಧ್ಯಾಯನೆಂದು ಹಿಯ್ಯಾಳಿಸುವನು. ... ವನ್ನನುಸರಿಸಬೇಕೆನ್ನುವನು. ತನ್ನ ಅಧಿಕಾರ ನಡೆವ ಪ್ರದಿಲ್ಲವಲ್ಲಾ ಎಂದು ಒದ್ದಾಡುವನು. ತನ್ನನ್ನು ಗಣಿಸದೆ ಯಾವ ಕಾರ್ಯಗಳೂ ಸಾಂಗವಾಗಿ ನಡೆಯುತ್ತದಲ್ಲವೆ ಎಂಬ ಕಳವಳ ಒಂದೆಡೆ, ಅದೆಂತೂ ಇರಲಿ. ಸಿಕ್ಕಸಿಕ್ಕಲ್ಲಿ ಅಧ್ಯಕ್ಷನಾಗಿ ಮೆರೆದು ಇಂಗ್ಲಿಷಿನ ಕನ್ನಡ ರೂಪವನ್ನು ವ್ಯಾಖ್ಯಾನಗಳಲ್ಲಿ ಉಪಯೋಗಿಸಿ ತನ್ನ ಹಿರಿತನವನ್ನು ಖಳೆ ಮಾರಿಕೊಳ್ಳುವನೇ ನಮ್ಮೂರ ನಚ್ಚು ಎಂಬ ಚಿಂತೆ ನಮ್ಮೂರವರಿಗೆ. ನಿವೃತ್ತಿಯಾದ ನಮ್ಮೂರ ನಚ್ಚುವು ಇನ್ನು ಯಾವ ದುಷ್ಪ್ರವೃತ್ತಿಯನ್ನು ಕೈಗೊಳ್ಳುವನೋ ಎಂಬ ಹೆದರಿಕೆ ಇನ್ನೊಂದು ನಮ್ಮೂರವರಿಗೆ. ಅಂತೂ ಒಂದು ಸುತ್ತು ಜಪಮಯಾಗಿರಲಿಕ್ಕಿಲ್ಲವೆಂದು ನಮ್ಮೂರವರ ಭರವಸೆ.

ವಾಚಕರೇ, ಕಟ್ಟು ಪುರುಷನಾದ ನಚ್ಚುವಿನ ... ಗುಣಗಳನ್ನು ಹಚ್ಚಿಕೊಳ್ಳದೆ ಪ್ರವರ್ತಿಸಿದರೆ ನಾನು ಬರೆದ ಈ ಲೇಖನವು ಸಾರ್ಥಕವೆಂದು ತಿಳಿದು ಕೃತಾರ್ಥನಾಗುವೆನು.

(ಈ ಲೇಖನದ ನಚ್ಚುವು ಜೀವವಿಲ್ಲದ ಕಟ್ಟುಪುರುಷನು)

ಅಸ್ಪೃಶ್ಯತೆ.

ಮಹಾತ್ಮಾ ಗಾಂಧಿಯವರು ತನ್ನ ಹರಿಜನ ಯಾತ್ರೆಯ ವೇಳೆ ವಾರಣಾಸಿಗೆ ಹೋಗಿದ್ದರು. ಅಲ್ಲಿ ನಿಧಿಯನ್ನು ಪಡೆದ ಮಹಾತ್ಮಾಜಿಯವರು ದೀರ್ಘ ಭಾಷಣ ಮಾಡಿದರು. 'ಪುರುಷರನ್ನಾದರೂ ಬೋಧನೆಯ ಮೂಲಕ ಸುಲಭಸಾಧ್ಯವಾಗಿ ಸದ್ದಾರಿಗೆಳೆಯಬಹುದು. ಆದರೆ ಸಂಪ್ರದಾಯಕ್ಕೆ ಬಹುಮಟ್ಟಿಗೆ ಶರಣಾರ್ಥಿಗಳಾಗಿರುವ ಸ್ತ್ರೀಯರ ಮನೋಪರಿವರ್ತನೆಯ ಕೆಲಸವು ಕಷ್ಟವಾದುದು' ಎಂದು ತಿಳಿದ ಗಾಂಧಿಜೀಯವರು ಅಲ್ಲಿ ಕೊಟ್ಟ ಭಾಷಣವು ತನ್ನ ನಿತ್ಯದ ಉಜ್ವಲತೆಯನ್ನೂ ಅರ್ಥವನ್ನೂ ಮೀರಿ ಉದ್ದಾಮವಾಗಿದೆ. ಅಂತಹ ಭಾಷಣವನ್ನು ಇಲ್ಲಿ ಎತ್ತಿಕೊಡಲಾಗಿದೆ. ಹಿಂದೂದೇಶದಲ್ಲಿ ಈ ಸ್ಪೃಶ್ಯಾಸ್ಪೃಶ್ಯತೆಗಳ ಭೇದದ ಪರಿಣಾಮವಾಗಿ ನಡೆಯುವ ಅನೇಕ ಅನಾಚಾರಗಳು ನಮ್ಮ ಕಣ್ಣೆದುರು ನಿಂತಂತಾಗಿ, ನಮ್ಮ ವಿವೇಕವು ಕ್ರಿಯಾಸಕ್ತವಾಗಿ, ನಾವು ಮಾನವಯೋಗ್ಯವಾದ ನ್ಯಾಯಮಾರ್ಗವನ್ನು ತಿಳಿದು ಆಚರಿಸಬೇಕಾಗಿದೆ.

'ಹಲಕೆಲವು ಆಹಾರ ಪದಾರ್ಥಗಳನ್ನೂ ಕೆಲವು ಬಗೆಯ ಪಾನೀಯಗಳನ್ನೂ ವರ್ಜಿಸಿರುವುದರಿಂದ ನಾವು ಉತ್ತಮಕುಲದವರಾಗಿರುವೆವೆಂದು ಹೇಳಿಕೊಳ್ಳುತ್ತಿರುವ ಅದೊಂದು ಪದ್ಧತಿಯು ಎಲ್ಲೆಲ್ಲೂ ತಲೆಯೆತ್ತಿ ನಿಂತಿದೆ. ಆಹಾರ ಪಾನೀಯಗಳು ನಮ್ಮ ಉತ್ತಮ ಮತ್ತು ಅಧಮ ತರಗತಿಗಳನ್ನು ನಿರ್ಣಯಿಸುವುವೆಂದು ನಾವು ಭಾವಿಸಕೂಡದು. ಸಂಪ್ರದಾಯಗಳೆಂದು ನಾವು ಅನುಸರಿಸುವುದಾದರೂ ಇಂತಹ ದುಷ್ಟಪದ್ಧತಿಗಳನ್ನೇ. ಕೆಲವು ನಿಯಮಪಾಲನೆಯಿಂದಾಗಿ ಮಾತ್ರ ಮಾನವನಿಗೆ ಪೂಜ್ಯಾಪೂಜ್ಯತೆಗಳು ಎಂದೂ ಬರಲಾರವು. ಉತ್ತಮ—ಅಧಮಗಳೆಂಬ ಭಾವನೆಗಳಿಂದ ಪರಮಾತ್ಮನು ಈ ಸೃಷ್ಟಿಯ ತಿರ್ಯಗ್ಜಂತುಗಳನ್ನಾಗಲೀ ಇನ್ನಾವುದನ್ನಾಗಲೀ ಸೃಷ್ಟಿಸಲಿಲ್ಲ. ಸನ್ಮಾರ್ಗಪ್ರವರ್ತನೆ—ಸತ್ಯಪೂರ್ಣ ಸಂಪ್ರದಾಯಗಳೇ ಮಾನವನ ಸ್ಥಾನಮಾನಗಳನ್ನು ಅಳೆಯುವ ಮಾನವಾಗಿವೆ. ನಾವು ವರ್ಣಶ್ರೇಷ್ಠರಾಗಿ ಜನಿಸಿದ ಮಾತ್ರಕ್ಕೆ ನಾವು ಎಲ್ಲಾ ವಿಷಯಗಳಲ್ಲೂ ಆಜನ್ಮಸಿದ್ಧರಾಗಿ ಶ್ರೇಷ್ಠರೆಂದು ತಿಳಿಯುವುದರಿಂದ ನಾವು ಭಗವಂತನಿಗೇ ಮೋಸಮಾಡಿದಂತಾಗುವುದು. ಸತ್ಯಸ್ವರೂಪಿಯಾದ ಪರಮಾತ್ಮನೆದುರು ಅತ್ಯವಂಚನೆಮಾಡಿದಂತಾಗುವುದು. ಮಾನವನಿಗೆ ಆಜನ್ಮಸಿದ್ಧವಾಗಿ ಜೀವನದ ಶ್ರೇಷ್ಠತ್ವವು ಇರುವುದೆಂದು ಪ್ರತಿಪಾದಿಸುವ ಯಾವ ಧರ್ಮಗ್ರಂಥವೇ ಇರಲಿ—ಅದು ಅಂತಹ ಹೆಸರಿನಿಂದ ಕರೆಯಲ್ಪಡಲು ಅರ್ಹವಾಗಿಲ್ಲ.

ನಮ್ಮ ದೇಶದಲ್ಲಿರುವ ಜನಸಂಖ್ಯೆಯಲ್ಲಿ ಐದರಲ್ಲೊಂದು ಪಾಲು ಹರಿಜನರಾಗಿರುತ್ತಾರೆ. ಅವರನ್ನು ಸವರ್ಣ ಹಿಂದೂಗಳು ಅಸ್ಪೃಶ್ಯರೆಂದು ಪರಿಗಣಿಸುತ್ತಿದ್ದಾರೆ. ಸತ್ಯಸಂಕಲ್ಪಿಯೂ, ನ್ಯಾಯವಾದಿಯೂ ಧರ್ಮಾತ್ಮನೂ ಆದ ಪರಮಾತ್ಮನು ಈ ಭೇದವನ್ನು ಮಾಡಿರುವನೆಂದು ಧರ್ಮದ ಹೆಸರಿನಲ್ಲಿ ಭ್ರಾಂತರಾಗಿ ವರ್ತಿಸುವ ಜನರು ಅವಿವೇಕಿಗಳಾಗಿದ್ದಾರೆ. ಅವರ ದಾರಿಯು ತಪ್ಪು ದಾರಿ. ಇಂತಹ ದುರಭಿಪ್ರಾಯಗಳನ್ನು ವಿಧ್ವಂಸಗೊಳಿಸಬೇಕಾಗಿದೆ. ಅವರನ್ನು ಅಸ್ಪೃಶ್ಯರೆಂದು ಕರೆಯುವುದರಿಂದ ನಾವೇ ಅಸ್ಪೃಶ್ಯರಾಗುತ್ತಿದ್ದೇವೆ ಎಂಬುದನ್ನು ಸ್ಮರಣೆಯಲ್ಲಿಡಬೇಕಾಗಿದೆ. ನಮ್ಮ ನಿಕೃಷ್ಟತೆಯ ವ್ಯವಹಾರಗಳೊಳಗೆ ಸಿಲುಕಿ, ನಾವು ನಿಜವಾಗಿಯೂ ಮಾನವರೇ ಎಂದು ಸಂದೇಹವನ್ನುತ್ಪನ್ನಗೊಳಿಸಲೆಡೆಗೊಡೆಯುವ ದುಷ್ಕಾರ್ಯಗಳಲ್ಲಿ ಮಗ್ನರಾಗುತ್ತೇವೆ. ಹೀಗಿದ್ದರೂ ನಾವು ಉತ್ತಮರೆಂಬ ಭಾವನೆಯು ನಮ್ಮ ಹೃದಯದಿಂದ ಮಾಯವಾಗಿ ಹೋಗುವುದೇ ಇಲ್ಲ. ದುಷ್ಕಾರ್ಯಗಳನ್ನೆಸಗಿದನಂತರ ಸ್ನಾನ ಸಂಧ್ಯಾವಂದನೆಗಳನ್ನು ಮಾಡಿ, ನಾವು ದೇವರ ಪೂಜೆಯನ್ನು ಮಾಡಿಬಿಟ್ಟರೆ ಆ ದುಷ್ಕಾರ್ಯಗಳ ಫಲವಾಗಿ ನಮ್ಮನ್ನು ಬೆಂಬತ್ತಿರುವ ಕರ್ಮವು ನಮ್ಮನ್ನು ತೊಲಗಿಹೋಗುವುದೆಂದು ನಾವು ತಿಳಿಯುತ್ತಿದ್ದೇವೆ. ಇಂತಹ ಭಾವನೆಯೇ ನಮ್ಮ ನಾಶಕ್ಕೆ ಹೇತುವಾಗಿದೆ. ಹರಿಜನರು ನಾಮಮಾತ್ರ ಹರಿಜನರಾಗಿದ್ದಾರೆ. ಆದರೆ ನಾವೋ?—ಕಾಯಾ, ವಾಚಾ, ಮನಸಾ ಮತ್ತು ಕರ್ಮಗಳಲ್ಲಿಯೂ ಅಸ್ಪೃಶ್ಯರಾಗಿದ್ದೇವೆ. ಎಂತಹ ಪಾಪಿಷ್ಠನಾದರೂ ಹೃದಯಪೂರ್ವಕವಾಗಿ ಭಗವಂತನನ್ನು ಆರಾಧಿಸಿದರೆ ಅವನ ಪಾಪಗಳೆಲ್ಲ ಪರಿಹಾರವಾಗುತ್ತವೆಂದು, ಗೀತೆಯು ಬೋಧಿಸುತ್ತದೆ—ಅಂದರೆ ಪರಮಾತ್ಮನ ಸಮಕ್ಷಮದಲ್ಲಿ ಎಲ್ಲರೂ ಸರಿಸಮಾನರು ಎಂದು ತಿಳಿಯತಕ್ಕದು. ಯಾರು ಅವನ ದಿವ್ಯನಾಮಸ್ಮರಣೆಯನ್ನು ಹೃತ್ಪೂರ್ವಕವಾಗಿ, ಭಯಭಕ್ತಿಗಳಿಂದ ಮಾಡುವನೋ ಅವನೇ ಮನುಜಶ್ರೇಷ್ಠನು. ಅಂತಹ ಪವಿತ್ರಾತ್ಮನಿಗೆ ಸ್ಪೃಶ್ಯ—ಅಸ್ಪೃಶ್ಯಗಳೆಂಬ ದ್ವಂದ್ವಗಳ ಭಯವಿಲ್ಲ. ಯಾವ ವರ್ಣದವನೇ ಆಗಿರಲಿ,—ಯಾವ ಪಂಗಡಿಗನೇ ಆಗಿರಲಿ,—ಯಾರು ಸರ್ವವನ್ನು ಭಗವಂತನಿಗೆ ಸಮರ್ಪಿಸಿ ಅವನ ಮರೆಹೊಗುವನೋ ಅವನೇ ದೇವರ ಮಗನು—ಜಗದ್ವಂದ್ಯನು. ಇದಕ್ಕೆ ನಮ್ಮ ಪುರಾಣವೇ ಸಾಕ್ಷಿಯಾಗಿದೆ. ಇದೇ ತತ್ವವನ್ನು ನಮ್ಮ ವೇದೋಪನಿಷತ್ತುಗಳೂ ಘಂಟಾಘೋಷವಾಗಿ ಸಾರುತ್ತಿರುವುವು. ಹೀಗಿದ್ದರೂ ದೇವನ ಮಕ್ಕಳಾದ ೭ ಕೋಟಿ ಜನರನ್ನು ನಾವು ಅಸ್ಪೃಶ್ಯರೆಂದು ದೂರ ತಳ್ಳುತ್ತಿದ್ದೇವೆ. ಅನೀತಿಪರ, ಅಸಹನೀಯ ಕ್ರಿಯೆಯನ್ನು ಮಾಡುತ್ತಿದ್ದೇವೆ. ಶ್ರೇಷ್ಠರೆಂದು ಹೇಳಿಕೊಳ್ಳುತ್ತಿದ್ದೇವೆ. ಎಂತಹ ಧರ್ಮವಿದು. ಎಂತಹ ನ್ಯಾಯವಿದು."

ಪ್ರಪಂಚದಲ್ಲಿ ಮನುಷ್ಯವರ್ಗವೊಂದೇ ಅಲ್ಲದೆ ಕೋಟ್ಯಾವಧಿಯಲ್ಲಿ ಇತರ ಜೀವರಾಶಿಗಳೂ ಸೃಷ್ಟಿಗೊಂಡಿವೆ. ಒಂದು ಪ್ರಾಣಿಗೂ ಇನ್ನೊಂದಕ್ಕೂ ಭೇದಾಭೇದವಿದೆ. ಕಾಗೆಗೂ ಕೋಗಿಲೆಗೂ ಎಷ್ಟು ವ್ಯತ್ಯಾಸವಿಲ್ಲ? ಅಂದರೆ ಅವು ಬೇರೆಬೇರೆಯಾಗಿ ಸೃಷ್ಟಿಸಲ್ಪಟ್ಟವು. ಕೋಗಿಲೆಗಳೊಳಗೂ ಒಂದು ಭಿನ್ನತೆಯನ್ನು ಭಗವಂತನು ಕಲ್ಪಿಸಿರುತ್ತಾನೆಯೇ? ಮಾನವಕೋಟಿಯು ಭಗವಂತನ ಒಂದು ಸೃಷ್ಟಿ. ರೂಪ, ಗುಣ, ಆಶೆ, ನಿರಾಶೆಗಳೆಲ್ಲ ಒಬ್ಬನಿಗಿದ್ದಂತೆ ಇನ್ನೊಬ್ಬನಿಗಿದೆ. ಎಂದಾಗ ಮಾನವರೆಂಬವರೊಳಗೆ ಭೇದವನ್ನಾದರೂ ಭಗವಂತನು ಕಲ್ಪಿಸಿರುವನೆಂದು ಹೇಳುವುದಾದರೂ ಯಾವ ಆಧಾರದಿಂದ?

ಇಂತಿಂಥವನು ಬ್ರಾಹ್ಮಣ, ಇಂತಿಂಥವನು ವೈಶ್ಯ, ಇಂತಿಂಥವನು ಹರಿಜನ—ಎಂದು ಪರಮಾತ್ಮನು ಭೇದಗಳನ್ನು ಮಾಡಿರುತ್ತಾನೆಯೇ? ಇಂತಹ ಸೃಷ್ಟಿಕಾರ್ಯಕ್ಕೆ ಅವನು ತೊಡಗಿರುತ್ತಿದ್ದರೆ ಸೃಷ್ಟಿಯ ರಚನೆಯೇ ಇನ್ನೊಂದು ರೂಪದಿಂದಾಗುತ್ತಿತ್ತು. ದೇಹರಚನೆಯಲ್ಲಿ ಭೇದಾಭೇದವು ಇದೆಯೇ? ಸ್ಪೃಶ್ಯಾಸ್ಪೃಶ್ಯ ವ್ಯತ್ಯಾಸಗಳಿವೆಯೇ? ವರ್ಣಭೇದವು ಮನುಷ್ಯನಿರ್ಮಾಣವಾದುದು. ನಮ್ಮ ಅನುಕೂಲತೆಗಾಗಿ ಕಲ್ಪಿಸಿರುವಂತಹುಗಳು.

ಮಾನವನಿರ್ಮಿತವಾದುದು ಯಾವುದೂ ಶಾಶ್ವತವಾಗಿಲ್ಲ. ಮಾನವ ನಿರ್ಮಾಣದಲ್ಲಡಕವಾಗಿರುವ ವಿಷಯಗಳೆಂದರೆ—ಅವನ ಯಶಸ್ಸು—ಅವನ ವಿಲಾಸ—ಅವನ ಸುಖಾನುಕೂಲತೆ. ಅವನ ಭಾವವು ಎಷ್ಟು ಸಂಕುಚಿತವೋ ಅಷ್ಟೇ ಸಂಕುಚಿತವಾಗಿ ಅವನ ಕಲ್ಪನೆಗಳೂ. ಒಂದು ಕಾಲದ ಸಂಕುಚಿತ ವರ್ಗವು ವಿಜಯಿಸಿರುವ ಕಟ್ಟುಗಳನ್ನೂ ನಿಧಿನಿಯಮಾವಳಿಗಳನ್ನೂ ಕಾಲಾನುಕಾಲವೂ ಅನುಸರಿಸಲೇಬೇಕೆಂದು ಬಲವಂತಪಡಿಸುವ ಭಾವನೆಯು ಬರಿಯ ಗೊಡ್ಡು ಭಾವನೆ—ಜೀವನವು ವಿಕಾಸಗೊಂಡಂತೆ ನಮ್ಮ ಆಚಾರವಿಚಾರಗಳೂ ವಿಕಸಿತವಾಗಬೇಕು. ಪ್ರಾಚೀನ ಕಾಲದಲ್ಲಿನ ನೈತಿಕ ನಿಯಮ ರಕ್ಷಣೆಗಾಗಿ ಅಂದಿನ ಆರ್ಯರು ಸ್ಪೃಶ್ಯಾಸ್ಪೃಶ್ಯ ಭೇದವನ್ನು ಕಲ್ಪಿಸಿಕೊಂಡರು. ಆಗ ಅಂತಹ ಭೇದಗಳಿಂದಾಗಿ ಅವರಿಗೆ ಹೆಚ್ಚಿನ ಪ್ರಯೋಜನಗಳೂ ದೊರೆತುವು. ಅಂತಹ ಕಲ್ಪನೆಗಳಿಂದಾಗಿ ಭರತಖಂಡವು ಪುಣ್ಯಕರವಾಯಿತು. ಆದರೆ ಅಂದಿನವರು ತಮ್ಮ ವಾತಾವರಣವನ್ನಾಧರಿಸಿ ನಿರ್ಣಯಿಸಿರುವ ಸಂಪ್ರದಾಯಗಳನ್ನ ಈಗಿನವರು, ಈಗಿನ ಸಂಪ್ರದಾಯದಲ್ಲೂ ಅನುಕರಿಸಿ ಬರಬೇಕೆಂಬ ನಿಯಮವಿಲ್ಲ. ನಮ್ಮ ಹಿತದೃಷ್ಟಿಯಿಂದ, ನಮ್ಮ ಶ್ರೇಯೋಭಿವೃದ್ಧಿಯ ದೃಷ್ಟ್ಯಾ ನಾವು ಯಾವ ವಿಧಿನಿಯಮಾವಳಿಗಳನ್ನಾದರೂ ಬೇಕುಬೇಕಾದಂತೆ ಕಲ್ಪಿಸಿಕೊಳ್ಳಬಹುದು, ಹಳೆಯದ ಮೇಲೆ ಗೋರಿ ಕಟ್ಟಿ, ಹೊಸತನ್ನು ನಿರ್ಮಿಸಿಕೊಳ್ಳಬಹುದು. ನಮ್ಮ ಆರ್ಯರ ವರ್ತನೆಯೂ ಹೀಗೆಯೇ ಇದ್ದಿತು.

ಹಿಂದೂಮತದ ಮೇರೆಗೆ, ಪಾಪ ಮಾಡಿದವನಿಗೆ ಪ್ರಾಯಶ್ಚಿತ್ತವಿದೆ. ಅಸ್ಪೃಶ್ಯರು ಅನೇಕ ಶತಮಾನಗಳಿಂದ ಮಾಡಿದ ಪಾಪವನ್ನು ಅನುಭವಿಸಿಯೇ ತೀರಿದರು. ಈಗ ನಮ್ಮ ಕರ್ತವ್ಯವನ್ನು ಮಾಡುವ ಕಾಲವು ಬಂದೊದಗಿದೆ. ಈಗ ಅಸ್ಪೃಶ್ಯರಿಗೆ ತಕ್ಕ ಪ್ರಾಯಶ್ಚಿತ್ತ ಮಾಡಿಸಿ ನಾವು ಅವರನ್ನು ಸ್ಪೃಶ್ಯರನ್ನಾಗಿ ಮಾಡಬೇಕಾಗಿದೆ. ನಾವು, ಸವರ್ಣ ಹಿಂದೂಗಳು ಯಾವ ಶಿಥಿಲ ಸಂಪ್ರದಾಯಗಳನ್ನು ಅನುಸರಿಸುತ್ತಿವೆಯೋ ಅಂತಹವುಗಳನ್ನು ಅವರೂ ಅನುಸರಿಸುವಂತೆ ಮಾಡೋಣ. ನಮ್ಮ ಹೃದಯದಲ್ಲಿ ಯಾವ ರೀತಿಯ ಆಶೆಗಳಿವೆಯೋ ಅಂತಹ ಆಶಾಸಂಕುಲವು ಅವರ ಹೃದಯಗಳಲ್ಲೂ ಇವೆ. ಸುಖದುಃಖಗಳ ಅನುಭವವು ನಮ್ಮಂತೆ ಅವರಿಗೂ ಉಂಟು. ಜಗತ್ತಿನಲ್ಲಿ ತಾವೂ ಪ್ರಧಾನರಾಗಿ ಮೆರೆಯಬೇಕೆಂಬ ಆಶಾಭರವು ಅವರ ಹೃದಯಗಳಲ್ಲೂ ಉಜ್ವಲಿಸುತ್ತದೆ. ನಮ್ಮನ್ನಾಳಲು ಇತರರು ಬಂದಾಗ ನಮಗೆ ಎಷ್ಟು ಅಸಹ್ಯವಾಗುತ್ತದೋ, ಅಷ್ಟೇ ಅಸಹನೆಯು ಅವರಿಗೆ ನಮ್ಮ ಈಗಿನ ವರ್ತನೆಯಿಂದಲೂ ಆಗುತ್ತದೆ. ಅವರೂ ಮಾನವ ಪ್ರಾಣಿಗಳು. ಈ ಜಗತ್ತಿನಲ್ಲಿ ಅವರು ಕೂಡಾ ನೆರವೇರಿಸಬೇಕಾದ ಅನೇಕ ಕರ್ತವ್ಯಗಳಿವೆ,—ಧರ್ಮಗಳಿವೆ. ಅಂತಹ ಮಾನವಕೋಟಿಯನ್ನು ಮೆಟ್ಟಿ ಹಿಡಿದಿಟ್ಟು, ನಾಯಿಗಳಿಗಿಂತ ಕಡೆಯೆಂದು ಭಾವಿಸುವ ನಮ್ಮ ಮನೋವೃತ್ತಿಯು ನಮಗೆ ಕಳಂಕಪ್ರಾಯವಾಗಿದೆ. ಧರ್ಮದ ಸೋಗಿನಿಂದ ಅಧರ್ಮವು ತಾಂಡವವಾಡುತ್ತಲಿದೆ. ಅನ್ಯರ ಸ್ವಾತಂತ್ರ್ಯದ ಮೇಲೆ ಕಾಲೆತ್ತಿದ ನಾವು ನಮ್ಮಿಂದಾಗಿಯೇ ಅಧೋಗತಿಗೀಡಾಗುತ್ತಿದ್ದೇವೆ. ಅವರೂ ನಾಶವಾಗಬಾರದು, ನಾವೂ ನಾಶವಾಗಬಾರದು. ಇಬ್ಬರೂ ಏಕತ್ರರಾಗಿ ಐಕ್ಯಭಾವದಿಂದ ಜೀವನಯಾತ್ರೆಗೆ ತೊಡಗೋಣ. ನೈಜಧರ್ಮವು ವ್ಯಾಪಿಸಿಕೊಳ್ಳುವಂತೆ ಮಾಡಿ ಭಾರತಕ್ಕೆ ಹೆಸರನ್ನು ತರೋಣ.

ಈ ಸಾಹಸದಲ್ಲಿ ಸ್ತ್ರೀಯರ ನೆರವು ಅತ್ಯವಶ್ಯ. ಪುರುಷರಲ್ಲಿ ಯಾವ ಕ್ರಾಂತಿಯಾದರೂ ಸುಲಭವಾಗಿ ಆಗಿ ಬಿಡುತ್ತದೆ. ಸ್ತ್ರೀಯರಲ್ಲಿ ಮಾತ್ರ ಅದು ಸಾಧ್ಯವಾಗಿಲ್ಲ. ಹಿಂದಿನ ಕಟ್ಟುಕಟ್ಟಳೆಗಳನ್ನು ಬಿಡಿರೆಂದು ಹೇಳಿದರೆ ಅವರಿಗಾಗುವ ಸಂಕಷ್ಟವು ಅಷ್ಟಿಷ್ಟಲ್ಲ. ಈಗ, ವಿದ್ಯಾವಂತೆಯರು ಪ್ರಚಾರಕಾರ್ಯಕ್ಕಾಗಿ ಮುಂಬರಬೇಕಾಗಿದೆ. ಶತಮಾನಗಳಿಂದ ನೆಲೆನಿಂತಿರುವ ಈ ಅಸ್ಪೃಶ್ಯತೆಯ ಈ ದುಷ್ಟಾಚಾರವು ತೊಲಗಿ ಹೋಗಬೇಕು. ಜನರಲ್ಲಿ ಅಸ್ಪೃಶ್ಯರ ಮೇಲಿನ ಸಹಾನುಭೂತಿಯು ತಲೆದೋರುವಂತೆ ಮಾಡಬೇಕು. ಭಾರತೀಯರ ಆ ಅಸ್ವಾತಂತ್ರ್ಯಸ್ಥಿತಿಯು ನಾಶವಾಗಿ ಸ್ವಾತಂತ್ರ್ಯ ಧ್ವಜವು ಹಾರಿ ಮೆರೆಯಬೇಕೆಂದಿರುವವರು ಈ ಕಾರ್ಯಕ್ಕಿಳಿಯಬೇಕಾಗಿದೆ.

ನಡೆದ ಕತೆಗಳು

True Stories

ಓದಿ ತಿಳಿಯಬೇಕಾಗಿರುವ ಸತ್ಯ ನಿದರ್ಶನಗಳು.

ಎಳೆಯ ಹುಡುಗಿ

೧

[ಸಮಾಜದಲ್ಲಿನ ಕುಂದುಕೊರತೆಗಳನ್ನು ಹೋಗಲಾಡಿಸುವುದೇ "ನಡೆದ ಕತೆಗಳು" ಇವುಗಳ ಉದ್ದೇಶ. ಘಟನೆಗಳನ್ನು ಸಂಯೋಜಿಸುವುದರಲ್ಲಿ ಮಾತ್ರ ಅನುಕೂಲ ಹಕ್ಕುಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಘಟನೆಗಳೆಲ್ಲ ನಿಜವಾದುವುಗಳು. ಹೆಸರುಗಳನ್ನು ಕೆಲವೆಡೆಗಳಲ್ಲಿ ಮಾತ್ರ ಬದಲಾಯಿಸಲಾಗಿದೆ.]

ನಂದಿಗುಡ್ಡೆಯ ಜಾರು ಗುರಿಕಾರರೆಂದರೆ ಒಳ್ಳೆಯ ಹೆಸರಿದ್ದವರು. ಗುರಿಕಾರತನದೊಡನೆ ವೈದ್ಯವಿದ್ಯೆಯನ್ನೂ ನಡೆಸುತ್ತಿದ್ದರು. ವಯಸ್ಸು ಐವತ್ತಾರು ದಾಟಿದ್ದರೂ, ಗಡ್ಡ ಮೀಸೆಗಳು ನರೆತುಕೊಂಡಿದ್ದರೂ ಅವರನ್ನು 'ಅಜ್ಜ' ಎಂದು ಸಂಬೋಧಿಸಿದ ಪಿಳ್ಳೆಗಳ ಹಲ್ಲು ಉಳಿಯುತ್ತಿದ್ದಿಲ್ಲ—ತಪ್ಪಿದರೆ, ಬೈಗಳಿಂದ ಕಿವಿಯನ್ನೇ ಕುರುಡುಗೊಳಿಸುತ್ತಿದ್ದರು.

ಎರಡನೆಯ ಹೆಂಡತಿಯು ತೀರಿಕೊಂಡುದು ೧೯೩೧ರ ಬೇಸಿಗೆಯಲ್ಲಿ. ಅವಳು ಪ್ರಾಣ ಬಿಡುವಳೆಂಬ ಪೂರ್ವಸೂಚನೆಯನ್ನು ಕಂಡ ಗುರಿಕಾರರು ಸೋಮುವಿನ ಕೆಲವು ಚಿನ್ನಾಭರಣಗಳನ್ನು ತನ್ನ ಮಗ ರಂಗಪ್ಪನ ಕಣ್ಣಿನಿಂದ ತಪ್ಪಿಸಿಬಿಟ್ಟರು. ಇವರ ಈ ಮುಂಜಾಗ್ರತೆಯು ಒಂದಷ್ಟು ಶೋಕವು ರಂಗಪ್ಪನಿಗಾಗುತ್ತಿದ್ದರೆ ಅವನು ಚಿನ್ನದ ಒಂದು ಚೂರೂ ತಂದೆಯ ಮುದಿ ಕೈಗೆ ಬೀಳದಂತೆ ಮಾಡುತ್ತಿದ್ದ. ಶರಾಬಿನ ಅಂಗಡಿಗಳಲ್ಲೋ ಕೇರಿ ಹೆಂಗಸರ ಪೆಟ್ಟಿಗೆಗಳಲ್ಲೋ ಇರಿಸಿಬಿಡುತ್ತಿದ್ದ.

ಸೋಮುವು ತೀರಿಕೊಂಡ ತೊಂಭತ್ತು ದಿನಗಳಲ್ಲೇ ಜಾರು ಗುರಿಕಾರರಿಗೆ ಮನೆಯಾಕೆಯೊಬ್ಬಳ ಆವಶ್ಯಕತೆಯು ಒಡೆದುಕಂಡಿತು. ವಸ್ತ್ರ ಒಗೆದು ಹಾಕುವ, ಮದ್ದು ಹುಡಿಮಾಡುವ, ದನಕರೆಯುವ ಮತ್ತು ಅಡಿಗೆಮಾಡುವ ಒಬ್ಬಾಕೆಯು ಬೇಕೇಬೇಕು—ಎಂದು ಅವರಿಗೆ ಪೂರ್ಣ ತಿಳಿಯಿತು.

ನಂದಿಗುಡ್ಡೆಯ ಬಳಿಯಲ್ಲೇ ಅತ್ತಾವರ ಕೂಸಮ್ಮಳೆಂಬ ಜಾತಿಗೃಹಸ್ಥಳು ಒಂದು ದಿನ ಮಧ್ಯರಾತ್ರಿ ಜಾರುಪಂಡಿತರ ಮನೆಗೆ ಓಡಿಬಂದು, ತನ್ನ ಮಗಳು ಲಕ್ಷ್ಮಿಯ ಹೊಟ್ಟೆನೋವನ್ನು ಹೇಗಾದರೂ ನಿಲ್ಲಿಸುವಷ್ಟು ಸಾಹಸಗೊಳ್ಳಬೇಕು—ಎಂದು ಸೆರಗೊಡ್ಡಿ ಬೇಡಿದಳು. ಸೇವಾಕಾಂಕ್ಷಿತರಾದ ಪಂಡಿತರು ಒಡನೆ ಕೆಲವು ಗುಳಿಗೆಗಳನ್ನು ತೆಗೆದುಕೊಂಡು, ಲಾಟೀನು ಹಿಡಿದುಕೊಂಡು ಕೂಸಮ್ಮಳೊಡನೆ ಹೊರಟರು.

ಲಕ್ಷ್ಮಿಯು ಚಾಪೆಯ ಮೇಲೆ ಹೊರಳಾಡುತ್ತಿದ್ದಳು. ಪಂಡಿತರು ತನ್ನ ಒಳಜೇಬಿನಿಂದ ಮಾತ್ರೆಗಳೆರಡನ್ನು ತೆಗೆದು ಕೂಸಳ ಕೈಯಲ್ಲಿ ಕೊಟ್ಟರು. ಅವಳು ಅವುಗಳನ್ನು ಮಗಳಿಗೆ ತಿನ್ನಿಸಿದಳು. ಐದೇ ನಿಮಿಷಗಳಲ್ಲಿ ಹೊಟ್ಟೆನೋವು ಕಡಮೆಯಾಯಿತು. ಲಕ್ಷ್ಮಿಯು ಕಣ್ತೆರೆದು ಪಂಡಿತರನ್ನೊಮ್ಮೆ ನೋಡಿದಳು. ಪಂಡಿತರೂ ಹಾಗೆಯೇ ನೋಡಿದರು. ಅವರಿಗೆ ಅವಳ ರೂಪದ ಅರಿವಾಯಿತು. ಅವಳು ಬರಿಯ ೧೪ ವರ್ಷಗಳ ಎಳೆಯ ಹುಡುಗಿ ಎಂದು ತಿಳಿಯಿತು.

ಮರುದಿನದಿಂದಲೇ ಪಂಡಿತರು ಲಕ್ಷ್ಮಿಯ ಯೋಗಕ್ಷೇಮಗಳನ್ನು ತಿಳಿಯುವುದಕ್ಕಾಗಿ ಕೂಸಳ ಮನೆಗೆ ಹೋಗಲಾರಂಭಿಸಿದರು. ಪಂಡಿತರಂತೆ ಯಾರಾದರೊಬ್ಬ ಯುವಕನು ಕೂಸಳ ಮನೆಗೆ ಹಾಗೆ, ಬಿಡದೆ ದಿನಕ್ಕೆ ಎರಡು ಸಲ ಹೋಗುತ್ತಿದ್ದರೆ ಕತೆಯೇ ಬೇರಾಗುತ್ತಿತ್ತು.

ಎರಡೇ ಎರಡು ತಿಂಗಳುಗಳು ದಾಟಲಿಲ್ಲ:—ಹಲವು ಗುರಿಕಾರರು, ಊರವರ ಮತ್ತು ನೆಂಟರಿಷ್ಟರ ಸಮಕ್ಷಮ ಲಕ್ಷ್ಮಿಯನ್ನು ಜಾರು ಪಂಡಿತರಿಗೆ ಧಾರೆಯೆರೆದು ಕೊಟ್ಟರು.

(೪೮ನೇ ಪುಟಕ್ಕೆ ಮುಂದುವರಿದಿದೆ)

ಬಾಬು ರಾಜೇಂದ್ರರಿಗೆ ಸುಖಾಗಮನ ವಿರಲಿ!

ರಾಷ್ಟ್ರಾಧಿಪತಿಗಳಾಗಿರುವ ಬಾಬು ರಾಜೇಂದ್ರ ಪ್ರಸಾದರು ನಾಳೆ ಮಂಗಳೂರಿಗೆ ಅಖಿಲಕರ್ಣಾಟಕಪ್ರಾಂತಿಕಪರಿಷತ್ತಿನ ಸಲುವಾಗಿ ಚಿತ್ತೈಸಲಿರುವರೆಂದು ಕೇಳಿ ಪ್ರತಿಯೊಬ್ಬನೂ ಸಂತೋಷಿಸಬೇಕಾಗಿದೆ ರಾಜೇಂದ್ರರು ನಿಸ್ಸೀಮ ರಾಷ್ಟ್ರಾಭಿಮಾನಿಗಳು ದೇಶ ಮಾತೆಯ ಸೇವೆಗಾಗಿ ತನ್ನ ದೇಹವನ್ನು ಮುಡಿಪನ್ನಾಗಿ ಅರ್ಪಿಸಲು ಸದಾಸಿದ್ಧರಾಗಿರುವ ಉಜ್ವಲಭಾರತೀಯರಲ್ಲಿ ಒಬ್ಬರು ಬಿಹಾರಿನ ಲಕ್ಷಗಟ್ಟಳೆ ಜನರು ಅನ್ನ ಅನ್ನವೆಂದು ಬಳಲಿ ಬಾಯಾರಿ ಪ್ರಾಣಾಪಾಯದಲ್ಲಿದ್ದಾಗ, ಜಗತ್ತಿಗೆ ಮೊರೆಯಿಟ್ಟು, ಅವರಿಗಾಗಿ ಸಹಾಯವನ್ನು ಬೇಡಿ, ತನ್ನ ಆಯುರಾರೋಗ್ಯವನ್ನೂ ಗಣ್ಯಕ್ಕೆ ತಾರದೆ, ರಾತ್ರಿಂದಿವ ಹೆಣಗಾಡಿ ದೀನದಾಸರೆಂಬ ಕೀರ್ತಿಗೆ ಪಾತ್ರರಾದವರು ಅದರಲ್ಲೂ ಭಾರತೀಯರ ಒಂದೇ ಒಂದಾದ ಪ್ರಧಾನ ಸಂಸ್ಥೆ ಮತ್ತು ಪ್ರತಿನಿಧಿಯಾದ ಕೊಂಗ್ರೆಸ್ಸಿನ ಅಧ್ಯಕ್ಷರು ಅಂತಹ ಪುಣ್ಯ ಪುರುಷರನ್ನು ತನ್ನೂರಿಗೆ ಸ್ವಾಗತೀಕರಿಸುವಾಗ ಎಂತಹ ರಾಷ್ಟ್ರಾಭಿಮಾನಿಗೂ ಮಹದಾನಂದವು ಆಗುವುದು ಸಹಜಸಿದ್ಧನೇ ಆಗಿದೆ ಅವರಿಗೆ ನಾವೂ ಸುಖಾಗಮನವನ್ನು ಬಯಸುತ್ತೇವೆ

ಈ ಸಂದರ್ಭದಲ್ಲಿ ನಮ್ಮವರ ಆಚಾರ ವಿಚಾರಗಳು ಹೇಗಿರಬೇಕೆಂದು ನಾವು ನಾವೇ ಯೋಚಿಸಿಕೊಳ್ಳಬೇಕಾಗಿದೆ 'ಕೊಂಗ್ರೆಸ್ಸಿನ ಶಕ್ತಿಯು ಕುಂದಿದೆ ರಾಷ್ಟ್ರೀಯತಾಭಾವವು ಕಾಡುಪಾಲಾಗಿದೆ, ' ಎಂದು ಎಲ್ಲೆಲ್ಲೂ ಕೇಳಿ ಬರುವ ಈ ವೇಳೆಯಲ್ಲಿ ನಮ್ಮವರು ತಮ್ಮ ನೈಜ ಶಕ್ತಿಯನ್ನು ಈಗ ತೋರಿಸಬೇಕಾಗಿದೆ ಪರಪ್ರಾಂತೀಯರಾದ ರಾಜೇಂದ್ರರಿಗೆ ನಮ್ಮ ಒಗ್ಗಟ್ಟು, ನಮ್ಮ ಸೇವಾಸಕ್ತಿ, ನಮ್ಮ ಗುಣಗಣಗಳು-ಇವುಗಳನ್ನೆಲ್ಲ ತೋರಿಸಿ ನಾಡಿಗೊಂದು ಕೀರ್ತಿಯನ್ನು ತರಬೇಕಾಗಿದೆ ''ಇಂತಹ ಪರಿಷತ್ತುಗಳನ್ನು ಕೂಡಿಸಿ, ಹಣ ವೆಚ್ಚಮಾಡಿ, ರಗಳೆ ಮಾಡಿ ಏನು ಫಲ?' ಎಂದು ಪ್ರಶ್ನೆಯಿಡುವ ಜನರು ತಮ್ಮ ತಪ್ಪನ್ನು ತಿಳಿಯ, ಇಂತಹ ಪರಿಷತ್ತುಗಳ ಆವಶ್ಯಕತೆಯು ಒಂದು ದೇಶಕ್ಕೆ, ಒಂದು ಪ್ರಾಂತ್ಯಕ್ಕೆ, ಒಂದು ಜನಾಂಗಕ್ಕೆ ಎಷ್ಟಿದೆ — ಅದರಿಂದಾಗುವ ಲಾಭವೆಷ್ಟು—ಎಂಬಿವೇ ವಿಷಯಗಳನ್ನು ಅವರು ಮಂದಟ್ಟುಮಾಡುವಂತೆ, ರಚನಾಬದ್ಧವಾದ, ಕಾರ್ಯಕಾರಿಯಾದ ನಿರ್ಣಯಗಳನ್ನು ಮಾಡಿಕೊಳ್ಳಬೇಕಾಗಿದೆ ಮುಖ್ಯವಾಗಿ, ಕರ್ಣಾಟಕಏಕೀಕರಣವಾಗಬೇಕೆಂಬುದು. ಅದಿಲ್ಲದೆ ಕನ್ನಡ ನಾಡಿಗಾಗಲಿ, ಅದನ್ನು ಹೊಂದಿಕೊಂಡಿರುವ ದೇಶಕ್ಕಾಗಲೀ ಏಳಿಗೆಯಿಲ್ಲವೆಂಬ ನಿರ್ಣಯವು ಮುಂಬರಬೇಕಾಗಿದೆ. ಅದರೊಡನೆ ರೈತಾಪಿಗಳ ಏಳಿಗೆ— ರಿಸೆಟ್ಲ್ಮೆಂಟ್ ಪ್ರಶ್ನೆ – ಇವೆಲ್ಲವುಗಳನ್ನೂ ಚರ್ಚಿಸಿ ಇಲ್ಲಿಯ ಸಮಿತಿಗಳಿಗೆ ಸಮತಾವಾದ ಪಕ್ಷವು ಯತಸ್ಸಂಪಾನೆಯನ್ನು ಮಾಡಬೇಕಾಗಿದೆ ಹೀಗಾಗಲೆಂದು ನಿರೀಕ್ಷಿಸುತ್ತಿರೋಣ

ಸಿಲ್ವರ್ ಜುಬಿಲಿಯ ಪಾಠ.

ಸಾರ್ವಭೌಮರ ಪಟ್ಟಾಭಿಷೇಕ ರಜತೋತ್ಸವವು ಇಚ್ಛಿತ ರೀತಿಯಲ್ಲೇ ಯಶಸ್ವಿಯಾಗಿ ಕೊನೆಗಂಡಿತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಬ್ರಿಟಿಷ ಹಿಂದೂಸ್ಥಾನದಲ್ಲಂತೂ(ಕೊಂಗ್ರೆಸ್ಸನ್ನುಬಿಟ್ಟು)ಎಲ್ಲರೂ ತಮ್ಮ ಶಕ್ತ್ಯನುಸಾರವಾಗಿ ಈ ಮಹೋತ್ಸವಗಳಲ್ಲಿ ಭಾಗ ವಹಿಸಿ ತಮಗೆ ಸಾರ್ವಭೌಮರ ಮೇಲಿರುವ ಪ್ರೇಮಾದರಗಳನ್ನು ವ್ಯಕ್ತಿಪಡಿಸಿದರು ಜನರ ಉತ್ಸಾಹ-ಆವೇಶಗಳನ್ನು ಕಂಡುಕೊಂಡ ಜೋರ್ಜ್ ನರಪಾಲರು ತಮ್ಮ ಪ್ರೇಮಪೂರಿತ ಸಂದೇಶವನ್ನು ಪ್ರಜೆಗಳಿಗೆ ಕಳುಹಿಸಿ,'ನನ್ನಹೃತ್ಪೂರ್ವಕಆಶೀರ್ವಾದಗಳು' ಎಂದಿರುವರು ಅವರಂತಹ ಗುಣಾಢ್ಯರ ಆಶೀರ್ವಾದವನ್ನುಶಿರಸಾಗಿಅಂಗೀಕರಿಸುವುದು ಪ್ರಜೆಗಳ ಧರ್ಮವಿದೆ ಇಷ್ಟನ್ನೆಲ್ಲ ಹೇಳುವಾಗ ಸಿಲ್ವರ್ ಜುಬಿಲಿಯು ನಮಗೆ ಕೊಟ್ಟ ಪಾಠವಾವುದೆಂದು ತಿಳಿದುಕೊಳ್ಳುವ ಕರ್ತವ್ಯವನ್ನು ನಾವು ಮರೆಯಬಾರದು ೬,೦೦೦ ಮೈಲುಗಳ ದೂರದಲ್ಲಿರುವ ಚಕ್ರವರ್ತಿಯವರ ರಜತೋತ್ಸವ ಅದರಲ್ಲಿ ಭಾಗವಹಿಸಬೇಕೆಂದು ಬ್ರಿಟಿಷ ಹಿಂದೂಸ್ಥಾನದೊಡನೆ ಕೇಳಿಕೊಂಡುದೇ ತಡ,–ಸಾಮಾನ್ಯ ಜನರು ಒಡನೆ ಆ ಮಹೋತ್ಸವದಲ್ಲಿ ಭಾಗವಹಿಸಿಯೇ ಬಿಟ್ಟರು. ತಮ್ಮ ತಮ್ಮ ವ್ಯಕ್ತಿಪರ ಕಷ್ಟಪರಂಪರೆಗಳನ್ನು ಮರೆತು ಅವರು ಹೃದಯಪೂರ್ವಕವಾಗಿ ಈ ಉತ್ಸವಗಳಲ್ಲಿ ಭಾಗಿಗಳಾದರು. ಸರಕಾರವು ತಮ್ಮ ಅನೇಕ ಬಂಧುಮಿತ್ರರನ್ನು ಕಾಯಿದೆ ಭಂಗದ ಕಾಲದಲ್ಲಿ ಸಿಕ್ಕಿಸಿದೆಯೆಂದು ಖಂಡಿತವಾಗಿ ತಿಳಿದುಕೊಂಡ ಸಾವಿರಗಟ್ಟಳೆ ಜನರೂ ಈ ಉತ್ಸವಕ್ಕೆ ತಮ್ಮ ಸಹಕಾರವನ್ನು ನೀಡದಿರಲಿಲ್ಲ. ಸ್ಥೂಲ ದೃಷ್ಟಿಯಿಂದ ನೋಡಿದರೆ ಜನರ ಈ ಭಕ್ತಿಯ ಸಮರ್ಪಣೆಯು ಸರಕಾರದ ಅಧಿಕಾರೀ ವರ್ಗದವರ ಕಾಲುಬುಡಕ್ಕಾದುದಲ್ಲ ಸಾರ್ವಭೌಮರ ಗುಣ ಸಂಪತ್ತನ್ನು ಪೂರ್ಣವಾಗಿ ತಿಳಿದ ಭಾರತೀಯರು ಅವರ ಮೇಲಣ ಭಕ್ತಿಪೂರ್ವಕ ಪ್ರೇಮದಿಂದ ಈ ರಜತೋತ್ಸವದಲ್ಲಿ ಪಾಲು ಪಡೆದರು, ಇದರಿಂದ ತಿಳಿಯುವುದಾದರೂ ಏನು? ಭಾರತೀಯರು ಕ್ಷಮಾಶೀಲರೂ ಜಗತ್ಯಬಿದ್ದಾಗ (ಯುದ್ಧದ ವೇಳೆ ಸಹಾಯವಿತ್ತರೆ) ತಮ್ಮ ವಿರೋಧಿಗಳಿಗೂ ಸಹಕಾರವನ್ನು ನೀಡುವ ವಿಶಾಲಭಾವವುಳ್ಳವರು ಅಂತಹ ಉದಾರಿಗಳ ಸಹಕಾರವನ್ನು ಪ್ರೀತಿಯ ಮೂಲಕ ಗಳಿಸುವುದರಲ್ಲಿ ಸಹಕಾರಕ್ಕೆ ಏನೂ ಕಷ್ಟವಾಗಲಾರದು ಸರಕಾರವು ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿ ಹಿಂದೂದೇಶಕ್ಕೆ ಉದಾರದಾನವನ್ನು ಕೊಟ್ಟು ಎಂದು ತನ್ನ ಭಾವವೈಶಾಲ್ಯವನ್ನು ತೋರಿಸುವುದೋ?

ಎಸ್. ಎಸ್. ಎಲ್. ಸಿ. ವಿದ್ಯಾಕ್ರಮದ ಪುನರ್ವ್ಯವಸ್ಥೆ.

ಮೊನ್ನೆ ಉದಕಮಂಡಲದಲ್ಲಿ ಮಿ। ಚೆಂಪಿಯನರು ಭಾಷಣಮಾಡುತ್ತಾ ಎಸ್ ಎಸ್. ಎಲ್. ಸಿ ಬೋರ್ಡು ೧೯೩೪ರ ಸ್ಕೀಮನ್ನು ಏಕೆ ರದ್ದುಗೊಳಿಸುತ್ತದೆ, ಅದರಲ್ಲಡಕವಾಗಿರುವ ನ್ಯೂನ್ಯಾತಿರೇಕಗಳೇನು ಎಂದು ಸವಿವರವಾಗಿ ತಿಳಿಸಿದರು ೧೯೩೪ರ ಸ್ಕೀಮಿನಲ್ಲಿ ಅನೇಕ ಕುಂದುಕೊರತೆಗಳಿವೆಯೆಂದು ಅವರು ಒತ್ತಿ ಒತ್ತಿ ಹೇಳಿದುದರಲ್ಲಿ ಸತ್ಯಾಂಶವಿದೆ ೧೯೩೪ರ ಸ್ಕೀಮ್‌ನ ಮೇರೆಗೆ ವಿದ್ಯಾರ್ಥಿಗಳಿಗೆ ತಲೆ ಭಾರವಾದ ಪಾಠಗಳನ್ನು ಕಲಿಯಲಿದೆಯೆಂದೂ ಅವರು ಅಭಿಪ್ರಾಯಪಟ್ಟಿರುವರು ಅದರೊಡನೆ ೧೯೩೪ರ ಸ್ಕೀಮನ್ನು ಪುನಃ ಎತ್ತಿಕೊಂಡರೆ ಸಿಲಿಬಸ್‌ನಲ್ಲಿ ಅನೇಕ ತಾರತಮ್ಯಗಳಾಗುತ್ತವೆ ಎಂಬುದಕ್ಕೂ ಅವರು ಸಮ್ಮತಿಸಿದ್ದಾರೆ ಹಾಗೆಂದು ೧೯೩೪ರ ಸ್ಕೀಮನ್ನು ಅನುಸರಿಸಿದರೆ ಶಿಕ್ಷಣದ ಮಟ್ಟವೇ ಅಧೋಗತಿಗೀಡಾಗುವುದೆಂದೂ ಅವರು ಅಭಿಪ್ರಾಯವಿತ್ತಿದ್ದಾರೆ ೧೯೩೪ರ ಸ್ಕೀಮನ್ನು ರದ್ದುಗೊಳಿಸಿ, ೧೯೩೫ರ ಸೂತ್ರವನ್ನು ಅಂಗೀಕರಿಸುವ ನಿರ್ಣಯವನ್ನು ಮಾಡುವ ಮೊದಲು ಖಾತೆಯವರು ಸಾರ್ವಜನಿಕರ ಅಭಿಪ್ರಾಯಸಂಗ್ರಹಕ್ಕೆ ತೊಡಗುತಿದ್ದರೆ ಇಂತಹ ತ್ರಿಶಂಕು ಸ್ವರ್ಗವನ್ನು ಕಾಣುವ ಸಂದರ್ಭವೇ ಇರುತ್ತಿದ್ದಿಲ್ಲ ಸೆಕೆಂಡರಿ ಶಾಲೆಗಳ ವಿದ್ಯಾಭ್ಯಾಸ ಕ್ರಮದಲ್ಲಿ ಸರ್ವಾನುಮೋದಿತ ಸೌಕರ್ಯಗಳನ್ನೇರ್ಪಡಿಸಿ ಕೊಡಲು ಸಾಧ್ಯವಾಗುವುದಿಲ್ಲವೆಂದು ಹೇಳುವುದರಲ್ಲಿ ವಾಸ್ತವ್ಯವಿದೆಯಾದರೂ, ಖಾತೆಯು ಸೆಕೆಂಡರಿ ಶಾಲೆಗಳಿಗೆ ಸಾಕಷ್ಟುಗ್ರೇಂಟುಗಳನ್ನುಕೊಟ್ಟು ಆ ಶಾಲೆಗಳಿಗೆ ಅಗತ್ಯವಿರುವ ಉತ್ತಮ ಸಾಹಿತ್ಯೋಪಕರಣಗಳನ್ನು ಒದಗಿಸಿಯೋ ಪ್ರೋತ್ಸಾಹಿಸಿದರೆ ಸೆಕೆಂಡರಿ ಶಾಲೆಗಳ ಹೆಚ್ಚಿನ ನ್ಯೂನ್ಯತೆಗಳು ಮಾಯವಾಗುವುದೆಂಬುದರಲ್ಲಿ ಸಂದೇಹವಿಲ್ಲ. ೧೯೩೫ರ ಸ್ಕೀಮನ್ನು ಎರಡು ವರ್ಷಗಳ ಅವಧಿಯ ವರೆಗೆ ಮಾತ್ರ ಪ್ರಯೋಗದಲ್ಲಿಡಲಾಗುವುದೆಂದೂ, ತನ್ಮಧ್ಯೆ ಸಿಗುವ ಸಮಯವನ್ನು ಈ ದರ್ಜೆಯ ಶಿಕ್ಷಣ ವಿಷಯಕವಾದ ಸಮಸ್ಯೆಯ ಕೂಲಂಕಷ ಪರಿಶೀಲನೆಗೆ ವಿನಿಯೋಗಿಸಲಾಗುವುದೆಂದೂ ತಿಳಿಸಿದ್ದಾರೆ ಇದು ಸಂತೋಷಪ್ರದವೇ ಎಷ್ಟ ವಿದ್ಯಾಲಯಗಳೂ, ಸರಕಾರ, ಅಧ್ಯಾಪಕ ವರ್ಗ ಮತ್ತು ಸಾರ್ವಜನಿಕರು ದೀರ್ಘವಾಗಿ ಆಲೋಚಿಸಿ, ಉತ್ತಮ ಸೂತ್ರವೊಂದನ್ನು ನಿರ್ಣಯಿಸಲಿ. ಇದೊಂದು ಸುಸಂದರ್ಭ ಈಗಿರುವ ಸೆಕೆಂಡರಿ ಶಾಲೆಗಳ ಅಧ್ಯಾಪಕರ ಸಂಬಳವನ್ನು ಸಾಕಷ್ಟು ಹೆಚ್ಚಿಸುವ ನಿರ್ಣಯವೂ ಇವರಿಂದಾಗಲೆಂದು ಹಾರೈಸುವ

ಸಾರ್ವಭೌಮರ ಜೀವನಚರಿತ್ರ

ಬ್ರಿಟಿಷ ಸಾಮ್ರಾಜ್ಯದಾದ್ಯಂತವೆಲ್ಲಾ ಈ ೫-೬ನೇ ದಿನಗಳಲ್ಲಿ ಕೋಲಾಹಲವು ಬ್ರಿಟಿಷ ಸಿಂಹಾಸನಕ್ಕೆ ೫ನೇ ಜಾರ್ಜರು ಬಂದು ಈ ದಿನಕ್ಕೆ ೨೫ ವರ್ಷಗಳಾದುದರಿಂದ ರಜತೋತ್ಸವ (ಸಿಲ್ವರ ಜುಬಿಲಿ)ವನ್ನು ನಡೆಸುವುದೇ ಈ ಸಂತೋಷಕ್ಕೆ ಕಾರಣ

ಜಾರ್ಜ ಫ್ರೆಡರಿಕ್ ಅರ್ನೆಸ್ಟ ಆಲ್ಬರ್ಟ ಜಾರ್ಜ ೬ ರವರು ೧೮೬೫ನೇ ಜೂನ್ ೩ನೇ ತಾರೀಕು ೭ನೇ ಎಡ್ವರ್ಡರಿಗೆ ದ್ವಿತೀಯ ಪುತ್ರರಾಗಿ ಜನಿಸಿದರು ಬಾಲ್ಯವಸ್ಥೆಯಲ್ಲಿಯೇ ಇವರು ಹಡಗಿನಲ್ಲಿ ಕೆಲಸ ಮಾಡಲು ಪ್ರಾರಂಭ ಮಾಡಿದರು ಸಮುದ್ರ ಯಾನದಲ್ಲಿ ಇವರಿಗೆ ಬಹು ಪ್ರೇಮ ಆದಕ್ಕಾಗಿಯೇ ಇವರನ್ನು ನೌಕಾ ರಾಜಕುವರ ಎಂದು ಕರೆದರು ೧೮೭೭ರಿಂದ ೧೮೯೨ರ ವರೆಗೆ ಇವರು ನಾವೆಯಲ್ಲಿಯೇ ಕಾಲಕಳೆದರು ೧೮೯೨ರಲ್ಲಿ ಇವರ ಅಣ್ಣಂದಿರಾದ ಪ್ರಿನ್ಸ್ ಆಲ್ಬರ್ಟ ವಿಕ್ಟರ್‌ರವರು ಮರಣಹೊಂದಿದರು ಅದರ ಫಲವಾಗಿ ಇವರು ಪ್ರಿನ್ಸ್ ಆಫ್ ವೇಲ್ಸರಾಗಬೇಕಾಯಿತು ಇನ್ನು ಮುಂದೆ ಇವರಿಗೆ ನಾವಾ ಸಂಬಂಧವು ಕಡಿಮೆಯಾಯಿತು ಇವರು ೧೮೮೦ ಯಾತ್ರೆಯ ಕಾಲದಲ್ಲಿ ವೆಸ್ಟ್ ಇಂಡೀಸ್, ದಕ್ಷಿಣ ಅಮೇರಿಕ, ಆಸ್ಟ್ರೇಲಿಯಾ ಫಿಜಿ ದ್ವೀಪಗಳು, ಜಪಾನ್, ಸಿಲೋನ್ ಈಜಿಪ್ಟ್ ಪ್ಯಾಲೆಸ್ಟೈನ್ ಮತ್ತು ಗ್ರೀಸ್ ಈ ದೇಶಗಳಿಗೆ ಹೋಗಿದ್ದರು. ೧೮೯೩ರಲ್ಲಿ ಇವರು ಡ್ಯೂಕ್ ಆಫ್ ಯಾರ್ಕರಾದರು

ಸಾಮ್ರಾಜ್ಞಿಯಾದ ಮೇರಿಯವರು ೧೮೬೭ನೇ ಮೇ ೨೬ರಲ್ಲಿ ಜನಿಸಿದರು ಡ್ಯೂಕ್ ಆಫ್ ಟೆಕ್‌ರವರಿಗೆ ಇವರೊಬ್ಬರೇ ಪುತ್ರಿ ೧೮೯೩ರಲ್ಲಿ ಜಾರ್ಜರವರು ಮೇರಿಯವರನ್ನು ಮದುವೆಯಾಗಲು ನಿರ್ಧರಿಸಿದರು ಅದೇ ವರ್ಷದ ಜುಲಾಯಿ ೬ರಲ್ಲಿ ಅಂದರೆ ಬಕಿಂಗ್‌ಹ್ಯಾಂ ಅರಮನೆಯಲ್ಲಿದ್ದ ರಾಜಕುಮಾರಿಯಾದರು ೬ನೇ ತಾರೀಕಿಗೆ ಮದುವೆ ನಡೆಯಿತು ೧೮೯೪ನೇ ಜೂನ್ ೨೩ರಲ್ಲಿ ಈಗಿನ ಪ್ರಿನ್ಸ್ ಆಫ್ ವೇಲ್ಸರವರ ಜನನವಾಯಿತು

೧೯೦೧ರಿಂದ ೧೯೦೨ರ ವರೆಗೆ ಜಾರ್ಜರು ತಮ್ಮ ಪತ್ನಿಯೊಡನೆ ಬ್ರಿಟಿಷ್ ಸಾಮ್ರಾಜ್ಯದ ಎಲ್ಲಾ ಕಡೆಯಲ್ಲೂ ಪ್ರವಾಸ ನಡೆಸಿದರು. ಈ ಪ್ರವಾಸವೇ ಇವರ ಔದಾರ್ಯ, ಘನತೆ ಮತ್ತು ಅನುಭವಗಳನ್ನು ಹೆಚ್ಚಿಸಿತು. ೧೯೦೫ರಲ್ಲಿ ಪ್ರಿನ್ಸ್ ಜಾರ್ಜರೂ ಪ್ರಿನ್ಸೆಸ್ ಮೇರಿಯವರೂ ಇಂಡಿಯಾ ದೇಶಕ್ಕೆ ಬಂದರು ಈ ದೇಶದಲ್ಲಿ ಇವರಿಗೆ ಅಸಾಧಾರಣ ಸ್ವಾಗತವು ಬಂದಿತು ಪ್ರಥಮತಃ ಮುಂಬೈ ನಗರವು ಸರ್ ಫಿರೋಜ್ ಮಹಾ ಮೆಹತಾರವರ ನಾಯಕತ್ವದಲ್ಲಿ ಅದರ ಸ್ವಾಗತವನ್ನಿತ್ತಿತು ೫ ತಿಂಗಳು ಈ ದೇಶದಲ್ಲಿ ಇವರು ಪ್ರವಾಸ ಮಾಡಿಕೊಂಡು ೧೯೦೬ನೇ ಮೇ ತಿಂಗಳಲ್ಲಿ ಇಂಗ್ಲಂಡಿಗೆ ಹಿಂತಿರುಗಿದರು ೧೯೦೬ನೇ ಮೇ ೧೭ರಲ್ಲಿ ಲಂಡನ್ನಿನಲ್ಲಿ ಇಂಡಿಯಾವಿಗೆ ಸಂಬಂಧಿಸಿದಂತೆ ಬಹಳ ಪ್ರಸಿದ್ಧವಾದ ಒಂದು ಭಾಷಣಮಾಡಿದರು

೧೯೧೧ನೇ ಜೂನ್ ೨೨ರಲ್ಲಿ ಜಾರ್ಜ ಮತ್ತು ಮೇರಿಯವರು ಚಕ್ರವರ್ತಿ ಮತ್ತು ಚಕ್ರವರ್ತಿನಿಯಾಗಿ ಸಿಂಹಾಸನಕ್ಕೇರಿಸಲ್ಪಟ್ಟರು ೧೯೧೧ನೇ ಡಿಸೆಂಬರ್ ೧೨ರಲ್ಲಿ ಇವರು ಡಿಲ್ಲಿಗೆ ಬಂದು ಡಿಲ್ಲಿ ದರ್ಬಾರ ನಡೆಸಿದರು. ೧೯೧೨ನೇ ಫೆಬ್ರವರಿಯಲ್ಲಿ ಇವರು ಇಂಗ್ಲಂಡಿಗೆ ಹಿಂತಿರುಗಿದರು. ನಂತರವೇ ಇಡೀ ಪ್ರಪಂಚವನ್ನೇ ಆವರಿಸಿದ ಮಹಾಯುದ್ಧವು ಪ್ರಾರಂಭವಾಯಿತು.

೧೯೨೮ನೇ ಜೂನ್ ೨೨ರಲ್ಲಿ ಉತ್ತರ ಐರ್ಲಂಡಿನಲ್ಲಿ ಬೆಲ್‌ಫಾಸ್ಟನಲ್ಲಿ ಮೊದಲನೆಯ ಪಾರ್ಲಮೆಂಟನ್ನು ಪ್ರಾರಂಭಿಸಿದರು ೧೯೨೮ರಲ್ಲಿ ಚಕ್ರವರ್ತಿಯವರಿಗೆ ಬಹಳ ಕಾಯಿಲೆಯಾಗಿತ್ತು. ೩ ತಿಂಗಳುಗಳ ಕಾಲ ಇವರು ಕಾಯಿಲೆಯಿಂದ ನರಳಿದರು. ಸಾಮ್ರಾಜ್ಯವೆಲ್ಲಾ ಇವರ ರೋಗನಿವಾರಣೆಗಾಗಿ ಪ್ರಾರ್ಥಿಸಿತು.

ಜಾರ್ಜರ ಈ ೨೫ ವರ್ಷದ ಆಳ್ವಿಕೆಯ ಕಾಲದಲ್ಲಿ ಪ್ರಪಂಚದಲ್ಲಿ ಅನೇಕ ವಿಪ್ಲವಗಳಾಗಿವೆ ರಾಜ್ಯಗಳಾಗಿವೆ ಸಾಮ್ರಾಜ್ಯಗಳು ನಾಶವಾಗಿವೆ ಆದರೆ ಬ್ರಿಟಿಷ ಸಾಮ್ರಾಜ್ಯವು ಮಾತ್ರ ಹಾಗೇ ಉಳಿದ ಬಲ್ಲಿ... ಅಶಾಂತಿಯ ಕಾಗುವೇಳೆ ... ನೋಟಕ್ಕಾದರೂ ಒಂದಾಗಿ ಉಳಿದಿದೆ

ಮಿ ಮೆಕ್ಡೊನಾಲ್ಡರ ಭಾಷಣದ ಅನುಮೋದನೆ

ಸ್ವರಾಜ್ಯದ ವಿಷಯದಲ್ಲಿ ಲಂಡನಿನ ಕೋ... ...ಯಲ್ಲಿ ಮೆಕ್ಡೊನಾಲ್ಡರು ಮಾಡಿದ ಭಾಷಣವು ... ನಿಯ ಪತ್ರಿಕೆಗಳಲ್ಲಿ ಸಾಕಷ್ಟು ... ತ್ತಿದೆ ಜರ್ಮನಿಗೂ ಇಂಗ್ಲಂಡಿಗೂ ... ಭಾವವು ಮುರಿದು ಹೋಗುವುದಕ್ಕೆ ಮೆಕ್ಡೊನಾಲ್ಡರ ಭಾಷಣವು ಸಾಧಕವಾಗಿದೆ ... ಜರ್ಮನಿಯ ಎಂಬ ಪತ್ರಿಕೆಯ ಅಭಿಪ್ರಾಯವಿದೆ ... ಪತ್ರಿಕೆಯು ಮೆಕ್ಡೊನಾಲ್ಡರ ಭಾಷಣವನ್ನು ... ಯೆಂದು ಟೀಕಿಸುತ್ತದೆ

ರಾಮ–'ಏನು, ಓಡುವಿರೆತ್ತ?'

ಜೋರ್ಜ–'ಸ್ವದೇಶಾಭಿಮಾನಿಯು ಏಜಂಟರ ಬಳಿಗೆ– ಮಾತಾಡಲು ಸಮಯವಿಲ್ಲ–ಪ್ರತಿಗಳು ದೊರೆಯುವುದಿಲ್ಲ ಬೇಗನೇ ಒಂದು ಪ್ರತಿಯನ್ನು ಪಡೆದುಕೊಂಡು ಬರುತ್ತೇನೆ–

ರಾಮ –'ಬೇಗನೇ ಧಾವಿಸಿರಿ–ನನಗೂ ಒಂದು ಪ್ರತಿಯನ್ನು ತನ್ನಿ. ಇಗೊಳ್ಳಿ ಬಂದಾನೆ'

'ಸ್ವದೇಶಾಭಿಮಾನಿ'ಯು

ಪ್ರಕಟವಾದ ಪ್ರತಿವಾರದಲ್ಲೂ ಈ ಗುಲ್ಲು ಅಖಿಲ ಕರ್ಣಾಟಕದಲ್ಲಿ ಕೇಳುತ್ತದೆ. ಸ್ವದೇಶಾಭಿಮಾನಿಯನ್ನು ಓದುವುದೆಂದರೆ ಜನರಿಗೆ ಅಷ್ಟು ಉತ್ಸಾಹ!–ಅಷ್ಟು ಆಶೆ!–ಕಾರಣವೇನು?–ಭಾಷಾಶೈಲಿ, ಚಿತ್ರಪಠಗಳು, ವರ್ತಮಾನ ಸಂಗ್ರಹಗಳು,–ಇವುಗಳಲ್ಲೆಲ್ಲ ಅದು ಅಗ್ರಗಣ್ಯವಾಗಿ ನಿಂತಿದೆ. **ಬಿಡಿ ಸಂಚಿಕೆ ಬೆಲೆ ಆಣೆ 1.**

ಅನುಕ್ರಮಣಿಕೆ.

ಪತ್ರ ೩
ಪತ್ರಿಕಾ ಪ್ರಪಂಚ ೪
ಕರ್ನಾಟಕ ಸಾಹಿತ್ಯ ಪರಿಷತ್ತಿನ ವಿಶೇಷ ಸಾಹಿತ್ಯೋತ್ಸವ ೫
ನಮ್ಮ ಮೈಸೂರಿನ ಪತ್ರ ೬
ಸುಧಾರಣೆಯ ಸದಾಶಿವರಾಯರು. ೭
ಅಸ್ಪೃಶ್ಯತೆ ೮
ಅಗ್ರಲೇಖ
ಸ್ಫುಟವಿಚಾರಗಳು ೯
"ದಕ್ಷಿಣ ಕನ್ನಡವೂ ಮನಸ್ಸಿನ ಮಟ್ಟವೂ. ೧೦
ವರ್ತಮಾನ ಸಂಗ್ರಹ
ಜಿಲ್ಲೆಗೊಂದು ವಾಗ್ವಿಚಿತ್ರ ಕಂಪೆನಿ ೧೪
ಮಂಗಳೂರು, ತಾಲೂಕುಗಳಿಂದ ೧೩
ವಿವಿಧ ಸಮಾಚಾರಗಳು ೧೬
ನಮ್ಮ ಮುಂದಾಳುಗಳು ೧೭

ಸ್ವದೇಶಾಭಿಮಾನಿ.

ತಾ ೧೦ನೇ ಶುಕ್ರವಾರ ಮೇ ೧೯೩೫

ದಕ್ಷಿಣ ಕನ್ನಡವೂ ಮನಸ್ಸಿನ ಮಟ್ಟವೂ

ನಮ್ಮ ಜಿಲ್ಲೆಯು ದಕ್ಷಿಣಪ್ರಾಂತಗಳಲ್ಲೇ ವಿದ್ಯಾಪ್ರಸಾರಕ್ಕೆ ಹೆಸರಾದುದು ನಮ್ಮ ಜನರು ತಮ್ಮ ರೂಪಲಾವಣ್ಯದಲ್ಲಾಗಲೀ, ಬುದ್ಧಿ ಶಕ್ತಿಯಲ್ಲಾಗಲೀ ಹಿಂದುಸ್ಥಾನದ ಇನ್ನಾರಿಗೂ ಕಡಮೆಯಾಗದವರು, ಇಷ್ಟು ಸಂತೋಷದ ಮಾತುಗಳು ಆದರೆ ವಿದ್ಯೆಯಲ್ಲಿ ಮುಂದರಿದ ಜನರಲ್ಲಿ ಇರಬೇಕಾದ, ಮಾನಸಿಕ ಅಭಿರುಚಿ, ಸಂಸ್ಕಾರಗಳು ನಮ್ಮಲ್ಲಿ ಬೆಳೆಯುತ್ತಿವೆ-ಎಂಬುದನ್ನು ನಾವು ವಿಚಾರಿಸುವುದು ಅವಶ್ಯ ಈ ಕಡೆಗೆ ನಮ್ಮ ಸಾರ್ವಜನಿಕ ಸಂಸ್ಥೆಗಳೂ ವ್ಯಕ್ತಿಗಳೂ ಕೆಲಸಮಾಡುತ್ತಿದ್ದಾರೆಯೆ' ಎಂದು ವಿಚಾರಿಸಬೇಕು ದ್ರವ್ಯ ಸಂಪಾದನೆ, ತಂಡೂಲ ಧ್ವಂಸ-ಇವೆರಡೇ ನಮ್ಮ ಬೆಳವಣಿಗೆಗೆ ಕಾರಣವಾಗಲಾರವು ಆರ್ಥಿಕ ಅವನತಿಯ ಕಾಲದಲ್ಲೂ-ನಾವು ಮುಂದರಿಸಲು, ಸುಖಿಸಲು ನಮ್ಮ ಮನಸ್ಸು ಪಕ್ವವಾಗಿರಬೇಕು ಅದರ ಅಭಿರುಚಿ, ನೋಟ, ವಿಮರ್ಶೆ ವಿಚಾರ ಪದ್ಧತಿಗಳೂ ಮುಂದರಿಯಬೇಕು ಇಲ್ಲವಾದರೆ ನಮ್ಮ ಬಾಳ್ವೆಯು ಕೇವಲ ಪಶು ಜೀವನವೇ ಸರಿ

ನಮ್ಮ ಜಿಲ್ಲೆಯಲ್ಲಿ ಸೊಗಸಾದ ಪುಸ್ತಕಾಲಯವು ಒಂದೇ ಒಂದಿದೆಯೇ? ನಮ್ಮಲ್ಲಿನ ಕಾಲೇಜುಗಳ ಎರಡು ಪುಸ್ತಕಾಲಯವನ್ನು ಮರೆತು ಬಿಡುವ ಅವುಗಳಗೋಷ್ಠಿ ಕೇವಲ ಶಿಕ್ಷಣದ ಗೋಷ್ಠಿ ಅದಕ್ಕೆ ತಕ್ಕಂತೆ ಅಲ್ಲಿನ ಪುಸ್ತಕ ಸಂಗ್ರಹವಿದೆ ಇವುಗಳನ್ನು ಬಿಟ್ಟರೆ ಹೊರಗೆ ಜನರಿಗೆ ತೆರೆದಿರುವ ಪುಸ್ತಕಾಲಯವಿದೆಯೇ? ಮೇಧಾವಿಗಳು, ಯೋಚನೆ ಮಾಡುವವರು, ವಿಷಯಗಳನ್ನು ಅಧ್ಯಯನ ಮಾಡುವವರು ಆತುರಗೊಂಡರೆ, ಇವುಗಳಲ್ಲಿ ನಾಲ್ಕೇ ನಾಲ್ಕು ಬೇಕೆನ್ನುವ ಪುಸ್ತಕಗಳು ಸಿಕ್ಕಬಹುದೆ? ಯಾವಾವ ವಿಷಯಗಳ ಮೇಲೆ ಪುಸ್ತಕಗಳಿವೆ? ಪುಸ್ತಕಗಳನ್ನು ಓದಿ, ಪ್ರತಿ ವಾರ ಎಂತಹ ಗ್ರಂಥಗಳು ಹೊರಬಿದ್ದಿವೆ-ಎಂದು ಹೇಳಬಲ್ಲ ಲ್ಯಾಬ್ರೇರಿಯನ್ ಎಲ್ಲಾದರೂ ಇದ್ದಾನೆಯೇ'

ನಮ್ಮ ವ್ಯಾಪಾರಿಗಳು-ಸಾಲ್ಮೆಂಟು ಅಗ್ಗದ ಪತ್ತೆದಾರಿ ಕಥೆಗಳನ್ನು ಬಿಟ್ಟು ಅದಕ್ಕೂ ಮುಂದರಿದ ನಾಲ್ಕು ಪುಸ್ತಕಗಳನ್ನು ಮಾರುತ್ತಿದ್ದಾರೆಯೇ? ಅರ್ಥಶಾಸ್ತ್ರ, ನಯಶಾಸ್ತ್ರ, ಕಲೆ, ತತ್ವಜ್ಞಾನ ಇಂಥ ವಿಷಯಗಳ ಮೇಲೆ ವಿದೇಶಗಳಿಂದ ಆಗಾಗ ಗ್ರಂಥಗಳನ್ನು ತರಿಸಿ ಜನರ ಮುಂದಿಡುವ ಸಾಹಸಿ ವ್ಯಾಪಾರಿಗಳಿದ್ದಾರೆಯೆ? ಅವರಾಗಿ ಇವುಗಳನ್ನು ತರಿಸಿ ಇಟ್ಟರೆ ಓದುವ ಮನಸ್ಸಿನ ಹಸಿವು ಉಳ್ಳವರು ಇದ್ದಾರೆಯೆ?

ದೇಶದ ಭಾಷೆಯಲ್ಲಿ-ಎಷ್ಟು ಗ್ರಂಥಗಳು ನಮ್ಮ ಜಿಲ್ಲೆಯಲ್ಲಿ ಪ್ರಕಟವಾಗುತ್ತಿವೆ? ವಿವಿಧ ವಿಷಯಗಳ ಮೇಲೆ (ಬರೀ ಸಾಹಿತ್ಯ, ಧರ್ಮಗಳಲ್ಲಿ) ಕನ್ನಡ ನುಡಿಯಲ್ಲಿ ಮಾತನಾಡಬಲ್ಲ ಉಪನ್ಯಾಸಕರಿದ್ದಾರೆಯೇ! ನಮ್ಮ ಕಾಲೇಜಿನ ಪ್ರೊಫೆಸರರೇ ಆಗಲಿ, ತಮ್ಮ ಐಚ್ಛಿಕ ವಿಷಯಗಳಲ್ಲಿ-ಪ್ರತಿದಿನವೆಂಬಂತೆ ಆಗುತ್ತಿರುವ ಬೆಳವಣಿಗೆ ವಿಚಾರ ಸರಣಿಗಳನ್ನು ಓದಿ ತಿಳಿಯುತ್ತಿದ್ದಾರೆಯೇ? ಜನರಿಗೆ ಹೇಳುತ್ತಿದ್ದಾರೆಯೇ'

ಜನರ ಸವಿಗಾಣಿಕೆಯನ್ನು, ಸೌಂದರ್ಯ ಬುದ್ಧಿಗಳನ್ನು ಹೆಚ್ಚಿಸಲು ಯಾವ ಯತ್ನ ನಮ್ಮಲ್ಲಿ ನಡೆದಿದೆ? ನಮ್ಮ ವಿದ್ಯಾವಂತರಿಗೂ ಅರ್ಥವಿಲ್ಲದ, ಹೇಸು ನಾಟಕ ಸಿನೆಮಾಗಳಿದ್ದರೆ ಅತಿ ತೃಪ್ತಿ ಮಹಾಜನರು, ಸಭಾರವ ನಾಟಕಗಳನ್ನು ಮೆಚ್ಚುವ ಮನಸ್ಸು ನಮ್ಮದು ಒಂದು ಚೆನ್ನಾದ ನಾಟಕ ಕಾಣಲು ಸಿಗುತ್ತದೆಯೇ? ಯೋಗ್ಯವಾದ ಚಲಚ್ಚಿತ್ರ ಬಂದರೆ ಆ ದಿನ ಸಿನೆಮಾ ಮಂದಿರಕ್ಕೆ ಉಪವಾಸ ಸಂಗೀತವೆ? ದಾರಿಯುದ್ದಕ್ಕೂ ಕಿರುಚುವ ನಮ್ಮ ಗ್ರಾಮಫೋನ್ ರಿಕಾರ್ಡುಗಳ ನಾವೆಷ್ಟು ಮೂರ್ಖರೆಂದು ಸಾರುತ್ತಿವೆ ನಮ್ಮಲ್ಲಿನ ಗಾನಶಿಕ್ಷಕರೇ' ಅರ್ಥ ನಾಟಕ ಹಾಡಗಳನ್ನು ಜೀರ್ಣಿಸಿಕೊಂಡ ಮಹಾ ಪಂಡಿತರು ನಮ್ಮ ಜನಜೀವನ ಜೀವನದ ತಿರುಳಾದ ಯಕ್ಷಗಾನವೇ? ಒಂದೆಡೆ ನಾಟಕದ ಜತೆಗೆ ಅದನ್ನು ಎಳೆದು, ಹಿಂದಿನ ನರ್ತನ ಉಡುಗೆಗಳನ್ನು ಬಿಟ್ಟು ಅದನ್ನು ಹೇಸರಕತ್ತೆಯಾಗಿ ಮಾಡಿದ ಪಂಡಿತರು ಇನ್ನೊಂದೆಡೆ ವ್ಯಕ್ತಿದ್ವೇಷದಿಂದ ತುಂಬಿದ ಅರ್ಥಗಾರರು ಅವರ ಮಹಾಶಕ್ತಿಯೆಂದರೆ ಸಂಸ್ಕೃತ ಶ್ಲೋಕಗಳನ್ನು ಉಗುಳುವುದು, ಮಾತಿನಿಂದ ಇನ್ನೊಬ್ಬನನ್ನು ಸೋಲಿಸುವುದು ತಾವು ಅರ್ಥ ವಹಿಸುವ ಪಾತ್ರಗಳ ಸ್ವಭಾವ ಇಂಥಹದೆ' ಎಂದು ಅದರ ಪೂರ್ಣ ಚಿತ್ರವನ್ನು ಧೈರ್ಯವಾಗಿ ಒಂದು ಸಭೆಯಲ್ಲಿ ಒಬ್ಬರಾದರೂ ಉಪನ್ಯಾಸ ಕೊಟ್ಟಾರೇ! ನಮ್ಮ ಪ್ರಸಿದ್ಧ ಅರ್ಥಗಾರರೇ ಮುಂದೆ ಬಂದು-ಇಂದು ಕರ್ಣನ ವಿಚಾರ ಉಪನ್ಯಾಸ ಕೊಡುತ್ತೇನೆ (ಕರ್ಣನ ಕಥೆ ಹೇಳುವುದಲ್ಲ) ಕರ್ಣನ ಜೀವನ ಸಮಸ್ಯೆ-ಅವನ ಮನೋಲಹರಿ,ಅವನ ಜೀವನದ ಆವರಣ, ಅದರಲ್ಲಿ ಅವನು ಬೆಳೆದ ಬಗೆ, ಅದೇ ವಾತಾವರಣದಲ್ಲಿ ಬೆಳೆದ ಅವನ ಕಾಲದ ಇತರ ವ್ಯಕ್ತಿಗಳಿಗೂ ಅವನಿಗೂ ಇರುವ ತಾರತಮ್ಯ- ಇಂಥ ವಿಷಯಗಳನ್ನು ಬಿಡಿಸಿ ಬರೆಯುವ ಜನರೆಷ್ಟು ಇದ್ದಾರೆ? ಈ ಯೋಗ್ಯತೆಯಿಲ್ಲವಾದರೂ, ಇದಕ್ಕೆ ಬೇಕಾದ ಕಥಾವ್ಯಾಸಂಗ, ಸಾಹಿತ್ಯವ್ಯಾಸಂಗ, ಮನೋಧರ್ಮ ವಿಚಾರ- ಯಾವುದೂ ಇಲ್ಲದೆ ಪಾಂಡಿತ್ಯ ತೋರಿಸುವ ಮಹಾ ವೀರರು ಎಷ್ಟು ಬೇಕು?

ಇನ್ನು ಬಯಲಾಟ ಅದೇನೋ ಪಾಪಕ್ಕೆ ಜೀವ ಹಿಡಿದು ಸಾಗುತ್ತಿದೆ ಅದನ್ನು ಇಂದಿನ ಯುಗಕ್ಕೆ ಸರಿಯಾಗಿ ಎಳೆದು ವಿದ್ಯಾವಂತರೂ ಅದರ ಸಂಸರ್ಗ ಬೆಳೆಯಿಸದಿದ್ದರೆ ಅದರ ಜೀವನವು ಅಷ್ಟೇ ಮಿತವಾಗಿದೆ

ನಮ್ಮ ಜಿಲ್ಲೆಯಲ್ಲಿ ಜನರ ಕಣ್ಣನ್ನು ಬಳಗಿಸುವ ತಿಳುವಳಿಕೆ ಹೆಚ್ಚಿಸುವ-ಕಲಾಪ್ರದರ್ಶನಗಳಾದುವೇ? ನಗರೋದ್ಯಾನ, ಸಾಲುಮರಗಳು ಆಗಿವೆಯೇ? ನೀವು ಅನ್ನಬಹುದು ಕಲಾ ಪ್ರದರ್ಶನಗಳಾಗಿವೆಯೆಂದು ಬಂದ ಚಿತ್ರಗಳನ್ನು ತುಂಬಿಸಿಟ್ಟೊಡನೆ ಕಲಾಪ್ರದರ್ಶನವಾಗದ ಇಂಥ ಚಿತ್ರಕಾರರು ಪ್ರಸಿದ್ಧರು, ಇಂಥವರ ವಿಧಾನ ಹೀಗೆ-ಎಂದು ತಿಳಿದು ಜನರಿಗೆ ಅದರ ಪರಿಚಯವನ್ನುಮಾಡುವಜನರುಬೇಕು ಆ ಉದ್ದೇಶದಿಂದ ಮಾಡಬೇಕು ಇಂಥ ಯತ್ನಗಳು ನಮ್ಮಲ್ಲಿ ನಡೆಯಲಿಲ್ಲವೆಂದೇ ನಮ್ಮ ಮನೆಯ ಮುಂದಿನ ಚಿತ್ರಗಳು-ಭೀಷಣರೂಪತಾಳಿವೆ

ದಕ್ಷಿಣ ಕನ್ನಡದ ಸಂಸ್ಕಾರವೆಷ್ಟಿದೆಯೆಂದು ನಮ್ಮನ್ನೆ ನಾವು ಅಳೆಯ ಹೋದರೆ ಆಗ ನಾವು ಎಂಥವರೆಂದು ತಿಳಿದೀತು. ನಮ್ಮಲ್ಲಿ ಪ್ರತಿ ಸಭೆಗೂ ಅಧ್ಯಕ್ಷರಾಗಲು ಹಾತೊರೆಯುವ ಶ್ರೀಮಂತರು, ಬಿರುದಾಂಕಿತರು ಸಿಗಬಹುದು. ಆದರೆ ತಿಳಿದಿದ್ದು ಇಂಥ ಮಾನಸಿಕ ಉದ್ಯೋಗಗಳಲ್ಲಿ ಕೆಲಸ ಮಾಡುವ ವ್ಯಕ್ತಿಗಳು ಬೆರಳಿನಿಂದ ಎಣಿಸುವಷ್ಟು ಇಲ್ಲವೆಂದು ವ್ಯಥೆ ಪಡಬೇಕು ನಮ್ಮ ಮಾತು, ನಮ್ಮ ಗಾನ, ನಮ್ಮ ವಿಹಾರ, ನಮ್ಮ ಮನೆಮಾರು, ದೇವಾಲಯಗಳೆಲ್ಲ ನಮ್ಮ ಮನೋದಾರಿದ್ರ್ಯಕ್ಕೆ, ಅಷ್ಟೇ ಅಲ್ಲ ವಕ್ರತೆಗೆ ಸಾಕ್ಷಿಯಾಗಿವೆ

ಬಾಬು ರಾಜೇಂದ್ರರ ಪರಿಚಯು.

'ಬೀಹಾರ್ ಗಾಂಧಿ' ಎಂದು ದೇಶದಲ್ಲೆಲ್ಲಾ ಸುಪ್ರಸಿದ್ಧರಾಗಿ ಪ್ರಜಾ ಸೇವೆಯಲ್ಲಿ ತಮ್ಮ ಜೀವನವನ್ನು ಸವೆಸಲು ನಿರ್ಧರಿಸಿ, ದೇಶ ಸೇವೆಯೇ ಈಶಸೇವೆ ಹಾಗೂ 'ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿಗರೀಯಸಿ' ಎಂಬ ಮಂತ್ರಗಳನ್ನನುಸರಿಸಿ, ರಾಷ್ಟ್ರದ ಏಳಿಗಾಗಿ ಕಂಕಣಬದ್ಧರಾಗಿ ನಿಂತಿರುವ ಶ್ರೀ. ಬಾಬೂ ರಾಜೇಂದ್ರ ಪ್ರಸಾದರು ಇಂದು ಇಡೀ ಭರತಖಂಡದಲ್ಲಿ ಒಂದೇ ಒಂದು ಪ್ರಚಂಡ ರಾಜಕೀಯ ಸಂಸ್ಥೆಯಾದ ಕಾಂಗ್ರೆಸ್ಸಿನ ಅಧಿಪತಿಗಳಾಗಿರುವರು. ಶ್ರೀ ಬಾಬು ರಾಜೇಂದ್ರರು ಈ ಉನ್ನತ ಸ್ಥಾನಕ್ಕೆ ಏರಬೇಕಾದರೆ ಅವರಲ್ಲಿ ಅಚಾನಕವಾಗಿ ಯಾವುದೂ ಅಸಾಧಾರಣ ಶಕ್ತಿಯೇನೂ ಬರಲಿಲ್ಲ ಮಗುವೇ ಮನುಷ್ಯನ ತಂದೆಯೆಂಬ ವಾಕ್ಯದಂತೆ ಎಳೆಯತನದಲ್ಲಿಯೇ ಇವರ ಭವಿಷ್ಯದ ಸೂಚನೆಗಳು ಕಾಣಬರುತ್ತಿದ್ದವು

ಹುಟ್ಟಿದ್ದು ಬೀಹಾರ್ ಪ್ರಾಂತ್ಯದ ಸರನ್ ಜಿಲ್ಲೆಯಲ್ಲಿ ೧೮೮೪ರಲ್ಲಿ ಬಾಲ್ಯದಲ್ಲಿಯೇ ಇವರ ಕುಶಾಗ್ರಬುದ್ಧಿಯನ್ನು ಕಂಡಾತರವರು ಇವನೊಬ್ಬ ಮಹಾ ಪುರುಷನಾಗುವನೆಂದು ಹೇಳುತ್ತಿದ್ದರು ತಂದೆ ತಾಯಿಗಳು ಅತಿ ಆಚಾರಶೀಲರು, ಸತ್ಯಸಂಪನ್ನರು ಅವರ ಶಿಕ್ಷಣ ಕೈಕೊಳಗಾದ ರಾಜೇಂದ್ರರಾದರೋ ಧರ್ಮಬುದ್ಧಿಯನ್ನು ಪಡೆದುದರಲ್ಲಿ ಆಶ್ಚರ್ಯವಿಲ್ಲ ಚಿಕ್ಕತನದಿಂದಲೇ ಇವರಿಗೆ ಸಾರ್ವಜನಿಕ ಜೀವನದಲ್ಲಿ ಪ್ರವೇಶಿಸಲು ಉತ್ಸಾಹ ವಿದ್ಯಾರ್ಥಿ ದೆಶೆಯಲ್ಲಿ ಇವರ ಸ್ನೇಹವು ಎಲ್ಲಾ ಸಹಪಾಠಿಗಳಲ್ಲಿಯೂ ಇದ್ದಿತ್ತು ಇವರ ಪ್ರಿಯ ವ್ಯಾಸಂಗವು ಪಾಟ್ನಾದಲ್ಲಿ ನಡೆಯಿತು. ನಂತರ ಕಾಲೇಜಿನ ಶಿಕ್ಷಣಕ್ಕಾಗಿ ಕಲ್ಕತ್ತಾವಿಗೆ ಹೋದರು. ಅಲ್ಲಿಂದ ಮುಂದೆ ಇವರ ವಿದ್ಯಾ ಪ್ರಭಾವವು ಎಲ್ಲರನ್ನೂ ಆಶ್ಚರ್ಯಚಕಿತರನ್ನಾಗಿ ಮಾಡಿತು ಇಂಟರ್ ಮೀಡಿಯೇಟ್ ಬಿ ಎ ಎಂ ಎ ಈ ಡಿಗ್ರೀ ಪರೀಕ್ಷೆಗಳಲ್ಲಿ ಅತ್ಯುಚ್ಚ ಪದವಿಯಲ್ಲಿಯೇ ಉತ್ತೀರ್ಣರಾದರು. ಕಾಲೇಜಿಗೆ ಬಂದ ಕೂಡಲೇ ಇವರ ತಂದೆಯವರು ಕಾಲವಾದರು ಇದರ ಫಲವಾಗಿ ಇವರ ಅಣ್ಣಂದಿರೇ ಇವರ ವ್ಯಾಸಂಗಕ್ಕೆ ಧನ ಸಹಾಯ ಮಾಡಬೇಕಾಯಿತು. ೧೯೦೨ರಲ್ಲಿ ಎಂಟ್ರನ್ಸಿಯೋ ಅತ್ಯುಚ್ಚ ವರ್ಗದಲ್ಲಿ ಇವರು ಬಿ ಎ ಪಾಸಾಗಿ ನಂತರ ಎಂ ಎಗೆ ಎರಡು ವರ್ಷಗಳು ಓದಿ ಅಲ್ಲಿಯೂ ಪ್ರಥಮ ವರ್ಗದಲ್ಲಿಯೇ ಉತ್ತೀರ್ಣರಾದರು ಇವರ ಬುದ್ಧಿಶಕ್ತಿಯು ಅಸಾಧಾರಣವಾದುದು ಶಾಲೆಯಲ್ಲಿ ಇವರ ಬುದ್ಧಿಯನ್ನು ನೋಡಿ ಆನಂದಿಸದವರಿಲ್ಲ ಇಂಗ್ಲೀಷ್ ಭಾಷಾ ಸಾಹಿತ್ಯದಲ್ಲಂತೂ ಇವರು ಅಸಾಧಾರಣ ಪಂಡಿತರಾದರು. ಉಪಾಧ್ಯಾಯರುಗಳಿಗೇ ಅಸಾಧ್ಯವಾದವುಗಳು ಇವರಿಗೆ ಸಾಧ್ಯವೆನಿಸಿದ್ದವು ಇವರು ಬಿ ಎ ಯಲ್ಲಿ ಓದುತ್ತಿದ್ದಾಗ ಪ್ರಸಿಡೆನ್ಸಿ ಕಾಲೇಜಿನ ಪ್ರಿನ್ಸಿಪಾಲರು ಇವರಿಗೆ ಇಂಗ್ಲೀಷಿನಲ್ಲಿರುವ ಶಕ್ತಿಯನ್ನು ಕುರಿತು "ನಮ್ಮ ಕಾಲೇಜಿನಲ್ಲಿ ಚೆನ್ನಾಗಿ ಇಂಗ್ಲಿಷನ್ನು ಬಲ್ಲವನು ರಾಜೇಂದ್ರನೊಬ್ಬನೇ" ಎಂದರು. ನಂತರ ಎಂ ಎಲ್ ಪರೀಕ್ಷೆಯಲ್ಲಿ ಮೊದಲನೆಯ ಶ್ರೇಣಿಯಲ್ಲಿ ಮೊದಲನೆಯ ಸ್ಥಾನವನ್ನು ಪಡೆದು ತೇರ್ಗಡೆಯಾದರು.

೧೯೦೫—ರಲ್ಲಿ ಇಡೀ ಭರತಖಂಡವನ್ನೇ ಕುಲುಕುವಂತಹ ಒಂದು ಪ್ರಚಂಡ ಚಳವಳಿಯೆದ್ದಿತು. ಅದೇ ವಂಗವಿಭಜನೆಯ ಮೇಲಿನ ಚಳವಳಿ ಈ ಚಳವಳಿಯಲ್ಲಿ ಬಾಬೂರಾಜೇಂದ್ರರು ಭಾಗ ತೆಗೆದುಕೊಂಡು ಆಗ ತಾನೇ ಸಾರ್ವಜನಿಕ ಜೀವನವನ್ನು ಪ್ರವೇಶಿಸಿದರು. ವಿದ್ಯಾರ್ಥಿವರ್ಗಕ್ಕೂ ಇತರ ಪ್ರಜಾಜನರಿಗೂ ಇವರಲ್ಲಿ ಗೌರವವು ಉಂಟಾಯಿತು

ಇವರ ವಿದ್ಯಾವಿನಯತೆಯನ್ನು ನೋಡಿ, ಅನೇಕ ಶಿಕ್ಷಣ ಸಂಸ್ಥೆಗಳು ಉಪಾಧ್ಯಾಯರಾಗಿರೆಂದು ಕೇಳುತ್ತಿದ್ದರು. ಇವರು ಯಾವುದಕ್ಕೂ ಹೋಗಲಿಲ್ಲ. ಆದರೆ ಕಲ್ಕತ್ತಾ ಸಿಟಿ ಕಾಲೇಜಿನವರ ಒತ್ತಾಯದ ಮೇಲೆ ಅಲ್ಲಿ ಉಪಾಧ್ಯಾಯರಾಗಬೇಕಾಯಿತು. ಕೆಲವು ಕಾಲ ಅಲ್ಲಿದ್ದರು. ಅಷ್ಟರೊಳಗೆ ತಮ್ಮ ಜನ್ಮಸ್ಥಳದಲ್ಲಿ ಒಂದು ಕಾಲೇಜು ತೆರೆಯುವ ಸ್ನೇಹಿತರ ಒತ್ತಾಯದ ಮೇಲೆ ಅವರು ಊರಿಗೆ ಹಿಂದಿರುಗಬೇಕಾಯಿತು. ಅವರು ಕೈಕೊಂಡ ಕೆಲಸವನ್ನು ನಿರ್ದಿಷ್ಟ ಅವಧಿಗೆ ಮುಗಿಸಿದರು. ನಂತರ ಪುನಃ ಕಲ್ಕತ್ತಾವಿಗೆ ಪ್ರಯಾಣ ಬೆಳಸಿದರು ಅಲ್ಲಿ ವಕೀಲ ವೃತ್ತಿಯನ್ನವಲಂಬಿಸಿದರು. ೧೯೧೬ರಲ್ಲಿ ಪಾಟ್ನಾದಲ್ಲಿ ಹೈಕೋರ್ಟಾಯಿತು. ಆಗ ಪಾಟ್ನಾವಿಗೆ ಬಂದು ವಕಾಲತ್ತು ಪ್ರಾರಂಭಿಸಿದರು.

ಪಾಟ್ನಾದಲ್ಲಿ ರಾಜೇಂದ್ರರ ಪ್ರಭಾವವು ಇನ್ಮಡಿಸಿತು. ಸಾರ್ವಜನಿಕ ಕಾರ್ಯಕ್ರಮವ್ಯಾವುದಕ್ಕಾಗಲೀ ಬಾಬೂರವರಿಲ್ಲದಿದ್ದರೆ ಅದು ಕಳೆಯಿಲ್ಲದಂತಾಗುತ್ತಿತ್ತು.

೧೯೧೧ರಲ್ಲಿ ಗೋಖಲೆಯವರು ತಮ್ಮ 'ಸರ್ವೆಂಟ್ಸ್ ಆಫ್ ಇಂಡಿಯಾ' ಸಂಸ್ಥೆಗೆ ಕೆಲವು ಯೋಗ್ಯ ತರುಣರನ್ನು ಆರಿಸಿಕೊಳ್ಳಲು ಸುರುಮಾಡಿದರು ಬೀಹಾರಿನ ತರುಣ ವರ್ಗದಲ್ಲಿ ಬಾಬೂರಾಜೇಂದ್ರರಿಗೂ ಆಹ್ವಾನ ಬಂತು. ಇವರು ಅದಕ್ಕೆ ಒಪ್ಪಿ ಹೋಗಲೆತ್ನಿಸಿದರು. ಆದರೆ ಮನುಷ್ಯ ಯತ್ನವೊಂದಾದರೆ ದೈವೇಚ್ಛೆಯೇ ಒಂದು ಇವರು ಗೋಖಲೆಯವರಲ್ಲಿಗೆ ಹೋಗಿದ್ದರೆ ನಾವು ರಾಷ್ಟ್ರಾಧಿಪತಿ ರಾಜೇಂದ್ರರನ್ನೆಲ್ಲಿ ನೋಡುತ್ತಿದ್ದೆವು. ಇವರ ಅಣ್ಣನವರು ಸರ್ವೆಂಟ್ಸ್ ಒಫ್ ಇಂಡಿಯಾ ಸೊಸೈಟಿಗೆ ಹೋಗಬೇಡವೆಂದು ತಮ್ಮನಿಗೆ ಬರೆದರು. ಅಣ್ಣನ ಮಾತಿನ ಮೇಲೆ ಇವರು ತಟಸ್ಥರಾದರು

೧೯೧೭ರಲ್ಲಿ ಇವರಿಗೆ ಮಹಾತ್ಮಾ ಗಾಂಧಿಯವರ ದರ್ಶನವಾಯಿತು ಆಗ ತಾನೇ ಚಂಪಾರಣ್ಯದ ಸತ್ಯಾಗ್ರಹ ಸುರುವಾದುದು ಬಾಬೂರವರು ಮಹಾತ್ಮರ ಅಸಾಧ್ಯ ವ್ಯಕ್ತಿತ್ವಕ್ಕೆ ಮನಸೋತು ಅವರ ಚಳವಳಿಗೆ ಸೇರಿದರು ತಮ್ಮ ಅನುಯಾಯಿಗಳೊಡನೆ ಕಾರಾಗೃಹವನ್ನನುಭವಿಸಿದರು ೧೯೧೯ರಲ್ಲಿ ರೌಲೆಟ್ ಆಕ್ಟನ್ನು ವಿರೋಧಿಸುವ ಸಮಯದಲ್ಲಿ ಇವರು ಸಂಪೂರ್ಣ ಅಸಹಕಾರಿಗಳಾದರು ಅಲ್ಲಿಂದೀಚೆಗೆ ಮಹಾತ್ಮಾಗಾಂಧಿಯವರ ಪೂರ್ಣ ಅನುಯಾಯಿಗಳಾಗಿ ದೇಶದ ಉನ್ನತಿಯ ಮಾರ್ಗದಲ್ಲಿ ಅತೀ ದುಡಿಯುತ್ತಿದ್ದಾರೆ ಬಿಹಾರಿನಲ್ಲಿ ಉಂಟಾದ ಪಿಹಾದ ಭೂಕಂಪದ ಫಲವಾಗಿ ಸಾವಿರಾರು ಜನರು ಸತ್ತರು ಅನೇಕ ಸಹಸ್ರಕ್ಕೆ ನೆಲೆಯಿಲ್ಲದೆ ಹೋಯಿತು ಆಗ ಬಾಬೂ ರಾಜೇಂದ್ರರು ತಮ್ಮ ದೇಶೀಯರ ದುಃಖವನ್ನು ನೋಡಿ ಸಹಿಸಲಾರದೆ ಮುಂದೆ ಬಂದು ಪರಿಹಾರ ನಿಧಿಯನ್ನೇರ್ಪಡಿಸಿ ಅಸಾಧ್ಯ ಕಾರ್ಯಕ್ರಮ ನಡೆಸಿದರು ಇವರ ಈ ಸೇವೆಯು ಇವರನ್ನು ಜಗತ್ಪ್ರಸಿದ್ಧರನ್ನಾಗಿ ಮಾಡಿತು.

೧೯೩೪ನೇ ಅಕ್ಟೋಬರಿನಲ್ಲಿ ಮುಂಬಯಿಯಲ್ಲಿ ನಡೆದ ಕಾಂಗ್ರೆಸ್ಸಿಗೆ ಇವರು ಅಧ್ಯಕ್ಷರಾದರು. ಅಧ್ಯಕ್ಷ ಬಾಬೂ ರಾಜೇಂದ್ರರು ಇಂದು ಇಡೀ ದೇಶದ ತಿಲಕಪ್ರಾಯರಾಗಿದ್ದಾರೆ ಇವರ ಅಧ್ಯಕ್ಷ ಭಾಷಣದ ಕೆಲವು ವಾಕ್ಯಗಳನ್ನು ನೋಡಿದರೆ ಅವರ ಸಹಜ ಕಲ್ಯಾಣ ಗುಣಗಳ ಪರಿಚಯವಾಗುವುದು. ತಾ)

ಇಂಡಿಯಾ ರಜತೋತ್ಸವದ ನಿಧಿ

ಅರ್ಧ ಕೋಟಿಯಾಯಿತು

ಸಿಮ್ಲಾ ಮೇ ೬

ಇಂಡಿಯಾ ರಜತ ಮಹೋತ್ಸವದ ನಿಧಿಯು ಇಷ್ಟರವರೆಗೆ ೫೦ ಲಕ್ಷ ರೂಪಾಯಿಗಳಾಗಿವೆ ಪ್ರಾಂತ್ಯಗಳೂ ಸಂಸ್ಥಾನಗಳೂ, ಅಧಿಕಾರ ವರ್ಗದಲ್ಲಿಯೂ ಒಟ್ಟು ಆಷ್ಟಾಗಿದೆ ಪ್ರಾಂತ್ಯಗಳಿಂದ ನಿಧಿಗೆ ಏಪ್ರಿಲ್ ೩೦ನೇ ತಾರೀಖಿನ ವರೆಗೆ ಬಂದಿರುವ ಹಣದ ವಿವರವಿದು.

ಮದರಾಸು	ರೂ	೩೬೪೦೦೦
ಬೊಂಬಾಯಿ	ರೂ	೯೬೪೫೦೦
ಬಂಗಾಳಾ	ರೂ.	೩೪೦೫೦೫
ಸಂಯುಕ್ತ ಪ್ರಾಂತ್ಯ	ರೂ	೪೬೩೫೮೨
ಪಂಜಾಬ	ರೂ.	೬೪೩೦೫೯
ಬರ್ಮಾ	ರೂ	೧೨೯೩೭೮
ಮಧ್ಯ ಪ್ರಾಂತ್ಯ	ರೂ.	೧೭೬೧೩೩
ಬೀಹಾರ್ ಒರಿಸ್ಸಾ	ರೂ	೧೬೮೩೯೮
ಅಸ್ಸಾಂ	ರೂ.	೫೬೩೨೭
ವಾಯವ್ಯ ಸರಹದ್ದು	ರೂ.	೨೭೮೪೬
ಡೆಲ್ಲಿ — —	ರೂ	೪೯೨೫೮
ಬಲೂಚಿಸ್ಥಾನ	ರೂ.	೪೦೦೯೯
ಅಜ್ಮೀರ್ ಮಾರ್ವಾರ್	ರೂ.	೨೫೦೦೦
ಕೊಡಗು ಮತ್ತು		
ಬೆಂಗಳೂರು ದಂಡು	ರೂ.	

ರಜತ ಮಹೋತ್ಸವ.

ಲಂಡನ್ನಿನಲ್ಲಿ ವಿಶೇಷ ಸಿದ್ಧತೆಗಳು

ಲಂಡನ್, ಮೇ ೭

ಚಕ್ರವರ್ತಿಯವರ ರಜತೋತ್ಸವಕ್ಕೆ ಲಂಡನು ಶೃಂಗಾರ ಯಿಂದ ಸಿದ್ಧವಾಯಿತು. ಸಾಮ್ರಾಜ್ಯದ ಎಲ್ಲಾ ಭಾಗಗಳಿಂದಲೂ ರಾಜಭಕ್ತಿಯುತರುಗಳು ಸಾವಿರಗಟ್ಟಲೆ ಬಂದರು. ಕೆನಡಾ, ಆಸ್ಟ್ರೇಲಿಯಾ, ನ್ಯೂಜೀಲೆಂಡ್, ದಕ್ಷಿಣ ಆಫ್ರಿಕಾ, ಇಂಡಿಯಾ, ಮಲಯಾ, ಸ್ಕಾಟ್ಲೆಂಡ್, ಐರ್ಲೆಂಡ್, ವೇಲ್ಸ್ ಇವುಗಳಿಂದೆಲ್ಲಾ ಅನೇಕರು ಬಂದಿದ್ದರು. ಎಲ್ಲಾ ಉತ್ಸವಕ್ಕೆ ಬಂದಿದ್ದರು.

ಚಕ್ರವರ್ತಿಯವರು ತಮ್ಮ ಸಂರಾಜ್ಞಿಯೊಡನೆ ಮೇ ೬ನೇ ತಾರೀಕು ತಮ್ಮ ನಿವಾಸಸ್ಥಳವಾದ ಬಕಿಂಗ್‌ಹ್ಯಾಂ ಅರಮನೆಯಿಂದ ಸೈಂಟ್ ಪಾಲರ ಕ್ಯಾಥೆಡ್ರಲ್‌ಗೆ ರಸ್ತೆಗಳಲ್ಲಿ ಮೆರವಣಿಗೆಯಲ್ಲಿ ಹೋದರು. ಮುಂದಿನ ಜೂನ್ ತಿಂಗಳು ೩ನೇ ತಾರೀಕು ಜಾರ್ಜರವರಿಗೆ ೭೦ನೇ ವರ್ಷ ವರ್ಧಂತಿ ಬೇರೆ.

ಲಂಡನ್ ನಗರವು ಈಗ ಬೆಳ್ಳಿಯ ನಗರವಾಗಿದೆ. ಬೆಳ್ಳಿಯೇ ಹಾಗೆ ರಾತ್ರಿಯೆಲ್ಲಾ ದೀಪ ಪ್ರವಾಹಗಳು. ಲಂಡನ್ ನಗರವೆಲ್ಲಾ ಬೆಳಗುತ್ತಲಿವೆ. ರಾತ್ರಿಗೂ ಹಗಲಿಗೂ ವ್ಯತ್ಯಾಸವೇ ಕಂಡು ಬರುತ್ತಿಲ್ಲ. ಬಕಿಂಗ್‌ಹ್ಯಾಂ ಅರಮನೆ, ಸೈಂಟ್ ಜೇಮ್ಸ್ ಅರಮನೆ, ಅಡ್ಮಿರಾಲಿಟಿ, ಬಿಗ್‌ಬೆನ್, ವೆಸ್ಟ್‌ಮಿನಿಸ್ಟರ್ ಅಬ್ಬೆ ಈ ಮುಖ್ಯ ಕಟ್ಟಡಗಳು ಇನ್ನೂ ಇತರ ಸಾರ್ವಜನಿಕ ಕಟ್ಟಡಗಳು ಪ್ರವಾಹ ದೀಪದಿಂದ ಪ್ರಜ್ವಲಿಸುತ್ತಿವೆ. ರಾತ್ರಿಯ ಹೊತ್ತು ವಿದ್ಯುತ್ತಿನ ಪ್ರಭಾವವಾದರೆ ಹಗಲಿನ ಹೊತ್ತು ಪುಷ್ಪಗಳ ಪ್ರಭಾವ. ದಿಗಲೆಲ್ಲಾ ಲಂಡನ್ ನಗರವು ಹೂದೋಟವಾಗಿ ಕಾಣುವುದು.

ಲಂಡನ್ ನಗರದಲ್ಲಿ ರಜತೋತ್ಸವಕ್ಕಾಗಿ ಕಾಲೀ ಪೆಂಟು ೩೦ ಸಾವಿರ ಪೌಂಡು ಖರ್ಚು ಮಾಡಿದರು ನಾಡಿದೆ.

ಅಲ್ಡರ್‌ಷಾಟ್‌ನಲ್ಲಿ ೪೫ ಸಾವಿರ ಯೋಧಾಳುಗಳ "ಮಾರ್ಚ್ ಪಾಸ್ಟ್" ಎಂದು ಗಂಟೆಗಳ ಕಾಲ ನಡೆಯುವುದು. ಬ್ರಿಟನಿನ ಎಲ್ಲಾ ಕಡೆಗಳಿಂದಲೂ ೮ ಸಾವಿರ ವಿದ್ಯಾರ್ಥಿಗಳು ರಾಜಭಕ್ತಿ ಸಂದೇಶಗಳನ್ನು ಕಳುಹಿಸುವರು. ವೇಲ್ಸ್ ದೇಶವು ಆ ದಿನ ಪ್ರಿನ್ಸ್ ಆಫ್ ವೇಲ್ಸ್‌ರನ್ನು ಸ್ವಾಗತಿಸುವರು. ಬ್ರಿಟನ್ನಿನಿಂದ ಸ್ಕೌಟ್ ಹುಡುಗರ ಭಾರಿ ಗುಂಪೊಂದು ನಡೆಯಲಿರುವುದು. ... ದೇಶದ ಎಲ್ಲಾ ... ನಗರಗಳಲ್ಲಿ ... ವ್ಯಾಯಾಮ ಸ್ಪರ್ಧೆಗಳು ... ಉತ್ಸವ ವಿಶೇಷವಾಗಿ ನಡೆಯುತ್ತಿದೆ.

ಇಲ್ಲಿನ್ಸೋಸಾನಲ್ಲಿ ಬರಗಾಲ! ಸಾವಿರಾರು ಜನರ ಉಪವಾಸ!

ಇಲ್ಲಿನ್ಸೋಸ್‌ನಲ್ಲಿ ೩೦೦,೦೦೦ ಜನರು ಬರಗಾಲಕ್ಕೆ ತುತ್ತಾಗಿರುವರು. ಸಹಾಯ ಸಮಿತಿಗಳು ತಮ್ಮ ಸಹಾಯವನ್ನು ನಿಲ್ಲಿಸಿವೆ. ಉಂಡಾಯವನ್ನು ಹೆಚ್ಚಿಸದರ ಮತ್ತು ಜನರಿಗೆ ಸಹಾಯ ಧನವನ್ನು ಕೊಡಲು ಸಾಧ್ಯವೆಂದು ಅಲ್ಲಿಯ ಅಧಿಕಾರಿಗಳ ಹೇಳಿಕೆ.

ಮಾಂಚುಕೋವಿನ ಎಣ್ಣೆಯ ಹಕ್ಕು.

ಲಂಡನ್, ಏಪ್ರಿಲ್ ೨೫

ಮಾಂಚೂರಿಯಾ ಎಣ್ಣೆಯ ಹಕ್ಕನ್ನು (ಮೊನಾಪಲಿ) ಜಪಾನೀಯರೇ ಇಟ್ಟುಕೊಂಡಿರುವುದಕ್ಕಾಗಿ ಜಪಾನಿನ ಸರಕಾರವು ತಿಳಿಸಿದ್ದಿತಷ್ಟೆ. ಈ ವಿಷಯವಾಗಿ ಬ್ರಿಟನ್ನಿನ ಒಂದು ಪತ್ರವು ಟೀಕೆಯೋಗಿ ಹೇಳಿದೆ: "ಜಪಾನೀಯರು ಹೇಳಿರುವ ಹಕ್ಕಿನ ವಿಷಯವು ತಪ್ಪಾಗಿದೆ. ಮಂಚೂರಿಯಾದಲ್ಲಿ ಎಲ್ಲಾ ಕಾರ್ಖಾನೆಯವರೂ ಸರಿ ಸರಕಾರ ಸಂಭಾಷಣೆ ನಡೆಸಿ ಬದ್ಧವಾದರೂ ಒಪ್ಪಂದಕ್ಕೆ ಬರುವುದನ್ನು ಬಿಟ್ಟು ಹಿಂದಿನ ಒಪ್ಪಂದಗಳನ್ನೆಲ್ಲಾ ಜಾರಿ ಕರಿಸಿ ಜಪಾನು ತನ್ನದೇ ರಾಜ್ಯವೊಂದನ್ನು ಹಿಡಿದಿದೆ. ಮಂಚುಕೋ ಎಣ್ಣೆಯ ಹಕ್ಕನ್ನು ಪಡೆಯುವಂತಹದು ಬ್ರಿಟಿಷ್ ಕೈಗಾರಿಕೆಗಾರರಿಗೆ ಉಂಟಾಗುವ ನಷ್ಟವನ್ನು ಹೊರಬೇಕು" ಹೀಗೆಂದು ಆ ಪತ್ರದಲ್ಲಿ ಜಪಾನಿನ ನೀತಿಯನ್ನು ಖಂಡಿಸಿದೆ.

ಅನಂತಪುರದ ಕ್ಷಾಮ

ಅನಂತಪುರದ ಬರಗಾಲ ಸಂಬಂಧವಾದ ಪರಿಹಾರ ಕೆಲಸಗಳನ್ನು ನಡೆಸುವುದಕ್ಕಾಗಿ ಶ್ರೀ ಜಿ. ರಾಮೇಶ್ವರ ರಾಯರು ಮದ್ರಾಸು ಗವರ್ನರರನ್ನು ಉದಕಮಂಡಲದಲ್ಲಿ ಕಂಡು ಮತ್ತು ಭಾವಿಗಳನ್ನು ತೋಡಬೇಕಾಗಿ ಸೂಚಿಸಿದರು.

ಇಟೆಲಿಯಲ್ಲಿ ಪರದೇಶೀ ಚಲಚಿತ್ರಗಳು.

ರೋಂ, ಮೇ ೪.

ಇಟೆಲಿಯಲ್ಲಿ ವಿದೇಶೀ ಚಲಚ್ಚಿತ್ರಗಳನ್ನು ಆದಷ್ಟು ಕಡಮೆ ಮಾಡುವ ಏರ್ಪಾಟಾಗಿದೆ. ವಿದೇಶೀ ಚಿತ್ರಗಳು ಮೂರಾದರೆ ಒಂದಾದರೂ ಇಟೆಲಿಯ ಚಿತ್ರವನ್ನು ಪ್ರದರ್ಶಿಸಬೇಕೆಂದು ಮಂತ್ರಿಮಂಡಲವು ತೀರ್ಮಾನಿಸಿರುತ್ತದೆ.

ಫ್ರಾಂಕೋ-ಸೋವಿಯಟ್ ಒಪ್ಪಂದಕ್ಕೆ ಜರ್ಮನಿಯ ಅಸಂತುಷ್ಟಿ

ಫ್ರಾಂಕೋ-ಸೋವಿಯಟ್ ಒಪ್ಪಂದಕ್ಕೆ ಜರ್ಮನಿಯು ಖಂಡನೆಗಳ ಸುರಿಮಳೆಯನ್ನೇ ಕರೆದಿದೆ. ಫ್ರಾನ್ಸ್ ಮತ್ತು ರಷ್ಯಾಗಳು ಜರ್ಮನಿಗೆ ವಿರೋಧವಾಗಿ ಒಪ್ಪಂದಗಳನ್ನು ಮಾಡಿಕೊಂಡಿವೆಯೆಂದು ಜರ್ಮನಿಯ ಆರೋಪ. ಇದರಿಂದಾಗಿ ಯೂರೋಪಿನ ಶಾಂತಿಗೆ ಭಂಗಬರುವಂತಿದೆ.

ರಾಜಕಿರೀಟವನ್ನು ರಕ್ಷಿಸಿರಿ

ರಗ್ಬಿ, ಮೇ ೪

ಬ್ರಿಟಿಷ್ ಸಾಮ್ರಾಜ್ಯಕ್ಕೆ ಎಲ್ಲೆಲ್ಲೂ ಅಭ್ಯಕೆಯು ಶಕ್ತಿಯಿರುವುದು ಕಲ್ಪನೆ ಮಾತ್ರವಲ್ಲ. ಈ ವಿಷಯವು ನಿಜವಾದ್ದು. ರಾಜಕೀಯ ಪ್ರಪಂಚದಲ್ಲಿ ಪ್ರಾಧಾನ್ಯವನ್ನು ಹೊಂದಿದೆ. ಅಕಸ್ಮಾತ್ತಾಗಿ ನಮ್ಮ ರಾಜತ್ವವು ಕಳೆದುಹೋದರೆ ಅದರೊಡನೆ ನಮ್ಮ ಸಾಮ್ರಾಜ್ಯವೂ ನಾಶವಾಗುವುದು. ಬ್ರಿಟಿಷ ಜನರಿಗೆ ಭೂಷಣಪ್ರಾಯವೆಂದರೆ ಈ ಕಿರೀಟ. ಅಭ್ಯಕೆಯು ಬಲೀ ಬ್ರಿಟಿಷ ಪ್ರಭುತ್ವವು ಮೆರೆಯುತ್ತಿದೆ. ಈ ಕಿರೀಟವನ್ನು ದೇವರು ರಕ್ಷಿಸಲಿ" ಎಂದು ಸ್ಟಾನ್ಲಿ ಬಾಲ್ಡ್‌ವಿನ್ನರು ಜುಬಿಲಿ ದಿನ ಭಾಷಣಮಾಡಿದರು.

ಫ್ರಾನ್ಸಿನ ಮಂತ್ರಿಗಳ ಕೈಯು ಮುರಿಯಿತು ಮೋಟಾರು ಅಪಘಾತ.

ಪ್ಯಾರಿಸ್, ಮೇ ೫

ಫ್ರಾನ್ಸಿನ ಮುಖ್ಯ ಮಂತ್ರಿಗಳಾದ ಫ್ಲಾಂಡಿನ್‌ರವರು ಮೋಟಾರು ಅಪಘಾತಕ್ಕೆ ಸಿಕ್ಕಿದರು. ಅವರ ಕಾರು ... ಕೈ ಮುರಿದಿದೆ ... ಆಸ್ಪತ್ರೆಯಲ್ಲಿ ... ಅವರು ... ಅನಂತರ ... ಅವರು ಕಷ್ಟ ... ಕೊಂಡೊಯ್ಯಲಾಗಿದೆ. ... ಅವರು ಸಂತೋಷದಿಂದ ... ದೊರೆಯುತ್ತಿದ್ದರು.

ಚೀನದ ಕಮ್ಯೂನಿಸ್ಟರ ಭಂಡಾಯ.

ಪೇಕಿಂಗ್‌ನಿಂದ ಬಂದ ವಾರ್ತೆಯಿಂದ ತಿಳಿದು ಬರುವಂತೆ ಚೀನದಲ್ಲಿ ಕಮ್ಯೂನಿಸ್ಟ್ ಸೈನಿಕರಿಗೆ ವಿದೇಶೀಯರು ಜನಾಂಗಗಳು ಬಹಳವಾಗಿ ಭಯಪಡುತ್ತಿವೆ ಎಂದು ತಿಳಿದುಬಂದಿದೆ. ಯನ್ನನುಫು ಎಂಬಲ್ಲಿ ವಿದೇಶೀಯರೆಲ್ಲರೂ ತಮ್ಮ ಕುಟುಂಬಗಳನ್ನು ಹೊರಪ್ರಾಂತ್ಯಗಳಿಗೆ ಕಳುಹಿಸುತ್ತಿರುವರು. ಅಲ್ಲಲ್ಲಿ ಕಮ್ಯೂನಿಸ್ಟ ಭಂಡಾಯಕ್ಕಾರಂಭವಾಗಿದೆ.

ಜುಬಿಲಿಯ ವೇಳೆಯಲ್ಲಿ ಅನಾಹುತ. ಬೆಂಕಿಯಿಂದ ಸುಟ್ಟು ಹೋದಳು.

ರಜತೋತ್ಸವ ಸಂತೋಷ ವೇಳೆ ಅನಾಹುತಗಳಾರಂಭವಾಗಿದೆ. ಇಸ್ಲಿಂಗ್‌ಟನ್‌ನಲ್ಲಿ ಒಂದು ಪ್ರಸಂಗವು ನಡೆಯಿತು. ಮನೆಯ ಮೇಲುಪ್ಪರಿಗೆಯ ಮೇಲೆ ಕೆಲವು ಹುಡುಗರು ಶೃಂಗಾರಗಳನ್ನು ಮಾಡುತ್ತಿದ್ದರು. ಹೇಗೋ ಬೆಂಕಿಯು ಎದ್ದಿತು. ಎಲ್ಲವೂ ಸುಟ್ಟು ಹೋಯಿತು. ಎಲಿಜಬೆತ್ ಅಲನ್ ಎಂಟು ವರ್ಷ ಪ್ರಾಯದ ಹುಡುಗಿಯು ಸುಟ್ಟು ಭಸ್ಮವಾಗಿ ಬಿಟ್ಟಳು. ಅವಳೊಡನೆ ಕೆಲಸ ಮಾಡುತ್ತಿದ್ದ ೯ ಸಣ್ಣ ಮಕ್ಕಳನ್ನು ರಕ್ಷಿಸಿದರು. ಉಪ್ಪರಿಗೆಯ ಮೇಲೇರಿ ಆ ಮಕ್ಕಳನ್ನು ಕೆಳಗೆ ಎಸೆದರು. ಕೆಳಗಿನವರು ವಸ್ತ್ರವನ್ನು ಹಿಡಿದು ಅವರನ್ನು ಎತ್ತಿಕೊಂಡರು. ಮಕ್ಕಳು ರಕ್ಷಿತವಾಗಿವೆ.

ನಮ್ಮ ಪೆನ್ಶನ್ ತೆಗೆಯಬೇಡಿ!

'ಒಂದೂದೇಶಕ್ಕೆ ಹೊಸ ರಾಜಾಂಗ್ಯವನ್ನು ಕೊಡಲಾಗುತ್ತದ್ದಲ್ಲವೇ? ಈ ರಾಜ್ಯಾಂಗದ ಮೇರೆಗೆ ನಿವೃತ್ತ ಬ್ರಿಟಿಷ್ ಸೈನಿಕರಿಗೆ ಪೆನ್ಶನ್ ಕೊಡುವ ಶರ್ತವಿದೆಯಲ್ಲವೇ?" ಎಂದು ಮಿ. ಪಸ್ಸಿ ಸಾಮರ್ವಿಲೆಯವರು ಕೇಳಿದರು. ಇದಕ್ಕೆ ಉತ್ತರವಾಗಿ ಮಿ. ಬಟ್ಲರ್‌ರವರು ಇದಕ್ಕೆ ತಕ್ಕ ಭದ್ರತೆಗಳನ್ನು ಮಾಡಿರುವೆವು ಎಂದರು.

ಈಜಿಪ್ಟಿನ ಸಚಿವರ ರಾಜಿನಾಮೆ

ಕೈರೋ, ಮೇ ೧

ಕೈರೋ ಸರಕಾರದ ಮುಖ್ಯ ಮಂತ್ರಿಗಳಾದ ಜನಾಬ್ ಪಾಷಾರವರು ತಮ್ಮ ಪದವಿಗೆ ರಾಜಿನಾಮೆ ಕೊಟ್ಟರು. ಅಲ್ಲಿಯ ಅರಸರ ಅರಮನೆಗೆ ಸಂಬಂಧಿಸಿದ ಇಬ್ರಾಹಿಂ ಪಾಷಾರವರು ಕೆಲವು ಅನಾವಶ್ಯಕ ಕೆಲಸಕ್ಕೆ ಕೈಹಾಕಿದ್ದು ಮಂತ್ರಿಗಳು ಕಲಿದೋಡ್ಡುವ ಅದು ಮನೆಗೂ ಸರಕಾರಕ್ಕೂ ಮಧ್ಯಸ್ಥಿಕೆಯಲ್ಲಿದ್ದು ಒಪ್ಪಂದವನ್ನು ಮಾಡಬೇಕೆಂದಿದ್ದ ಪಾಷಾರವರ ಸಹಾಯ ಮಾಡಿರುತ್ತಾ ಇವರ ರಾಜಿನಾಮೆಯು ಸ್ವೀಕೃತವೊಂದಲ್ಲ. ಇಂದಿನ ಕಳೆದುಕೊಳ್ಳುವುದರಿಂದ ಈಜಿಪ್ಟ್ ಮಂತ್ರಿಮಂಡಲಕ್ಕೆ ಗುರಿಯಾಗುವುದು.

ಸಂದೇಹದ ಮೇಲೆ ಕೈದು ಮಾಡಿದರು

ಸ್ಪೆಟ್ ಹಾನಿಗೆ ಹೊರಗೆ ಒಬ್ಬರು ಸಂದೇಹಾಸ್ಪದ ರೀತಿಯಲ್ಲಿ ನಿಂತುಕೊಂಡಿದ್ದರು. ಅವರನ್ನು ಒಡನೆ ಸಂದೇಹದ ಮೇಲೆ ಸೆರೆ ಹಿಡಿದರು. ಸ್ಪೆಟ್ ಹಾನಿಗೆ ಇಟೆಲಿಯ ರಾಯಭಾರಿಯನ್ನು ಸ್ಪೆಟ್ ಗವರ್ನರರು ಆಮಂತ್ರಿಸಿದ್ದರು. ಅವರ ಕೊಲೆಗಾಗಿ ಈ ವ್ಯಕ್ತಿಯು ಹೊಂಚು ಹಾಕುತಿದ್ದನೆಂದು ಆರೋಪ.

ಕಲ್ಲು ಹೃದಯ.

ಎಂಬುದು ಇದೆ. ಹೃದಯದ ಮೇಲಿನ ಚರ್ಮದ ಮೇಲೆ ಅದರ ಬಿರುಕುಗಳು ಹೊಂದಿಕೊಂಡಿದೆಯೋ ತಿಳಿಯದು. ದೈಲ ಪೈಲ ಪತ್ರಿಕೆಯು ಹೇಳುವಂತೆ ಬರ್ಮಿಂಗ್‌ಹಾಮಿನ ಒಬ್ಬ ಪ ಗುಗನ ಎದೆಯಲ್ಲಿ ಭಯಂಕರ ನೋವು ಇತ್ತು. ಎಂತಹ ಚಿಕಿತ್ಸೆಯಿಂದಾಗಿಯೂ ಆ ನೋವು ಹೋಗಲಿಲ್ಲ. ಎಕ್ಸ್ ರೇಯಿಂದ ಪರೀಕ್ಷಿಸಿದಾಗ ಅವನ ಹೃದಯದ ಹೊರಭಾಗವು ಪೂರ್ಣ ಕಲ್ಲಿನ ರೂಪಕ್ಕೆ ಬಂದಿದ್ದುದು ಕಂಡು ಬಂತು. ಬಳಿಕ ಶಸ್ತ್ರ ಚಿಕಿತ್ಸೆ ಮಾಡಲಾಯಿತು. ಬಹು ಜಾಗ್ರತೆಯಿಂದ ಅವನ ಎದೆಯಿಂದ ಆ ಕಲ್ಲನ್ನು ತೆಗೆದರು.

ವಜ್ರಗಳು! —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ' ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮ ವರ್ಗದ "ಬ್ಲು ಜಾಗ್ಗರ" ವಜ್ರಗಳೂ, "ಎಕ್ಸ್‌ಟ್ರಾ ವ್ಹಾಯಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವುಕಾರ ಮಹಾಲ್, ರಥಬೀದಿ ಮಂಗಳೂರು.

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

ಚುಟುಕು ವಾರ್ತೆ

ಕಂಜೀವರಂನಲ್ಲಿ ಅಬ್ದುಲ್ ಖುದ್ದುಸ್ ಸಾಹೇಬ್ ಎಂಬವನು ತನ್ನ ಅಂಗಡಿಯ ಮಾಳಿಗೆಯ ಮೇಲೆ ತನ್ನ ಸಂತೋಷಾರ್ಥವಾಗಿ ರೇಡಿಯೋವನ್ನು ಇಟ್ಟಿದ್ದನು. ಜನಸಂದಣಿಯೂ ಅಲ್ಲಿ ನೆರೆದು ಬಂತು. ಪೋಲೀಸರು ಬಂದು ಅಬ್ದುಲ್ಲನನ್ನು ಸ್ವೀಕರಿಸಿಕೊಂಡರು. ರಾಜಮಾರ್ಗದಲ್ಲಿ ರೇಡಿಯೋ ಇಟ್ಟು ಜನರನ್ನು ಕೂಡಿಸಿ ಸಾರ್ವಜನಿಕರಿಗೆ ಆತಂಕವನ್ನುಂಟು ಮಾಡಿದುದಕ್ಕಾಗಿ ಮೆಜಿಸ್ಟ್ರೇಟರು ಅವನಿಗೆ ೫ ರೂಪಾಯಿ ದಂಡ ವಿಧಿಸಿದರು.

ಕಪೂರ್ಥಲಾ ಸಂಸ್ಥಾನದ ದೈವಾನ ನಾಲ್ವರು ಮುಸಿಂರನ್ನು ದಸ್ತಗಿರಿ ಮಾಡಿದ್ದಾರೆ. ಸೈಕರು ಅಧಿಕಾರಿಗಳ ಈ ವರ್ತನೆಯನ್ನು ಖಂಡಿಸಿರುವರು.

ಇಂಡಿಯಾ ರಿಜರ್ವ್ ಬೇಂಕಿನ ಗವರ್ನರರಾದ ಸರ್ ಸಿಕಂದರ್ ಹಯಾತ್ ಖಾನ್‌ರವರ ಇಂಗ್ಲೆಂಡಿಗೆ ಹೋಗಿ ಅಲ್ಲಿ ಒಂದು ವರ್ಷದ ಕಾಲ ಉಳಿದು ರಿಜರ್ವ್ ಬೇಂಕಿನ ಕೆಲಸಗಳಲ್ಲಿ ಅಸಕ್ತರಾಗುವರು.

ಕಲ್ಕತ್ತಾ ಲೋಯರ್ ಸರ್ಕಲ್ ರೋಡಿನಲ್ಲಿ ಜಿಲ್ಲಾ ಎಡಿಶನಲ್ ಮೆಜಿಸ್ಟ್ರೇಟರಾದ ಶ್ರೀ ಎಸ್. ಡಿ. ಸೇನರವರ ಒಂದ ಕಾರು ಒಂದ ಎತ್ತಿನ ಗಾಡಿಗೆ ಢಕ್ಕೆ ಹೊಡೆದು ಮೆಜಿಸ್ಟ್ರೇಟರೂ ಅವರ ... ವರ್ಷ ಪ್ರಾಯದ ಮಗುವೂ ಜಖಂಗೊಳ್ಳಪಡಂತಾಗಿದೆ.

ಅಧಿಕಾರಿಗಳು ಎಷ್ಟೇ ಜಾಗರೂಕರಾಗಿ ಕೆಲಸ ಮಾಡುತ್ತಿದ್ದರೂ ಸಿಲ್ಹೆಟ್ಟಿನ ಜಿಲ್ಲೆಗಳಲ್ಲಿ ಮಲೇರಿಯಾ ಹಾವಳಿಯು ಹೆಚ್ಚಾಗುತ್ತಲೇ ಇದೆ.

ಸರಹದ್ದು ಪ್ರಾಂತ್ಯದ ಟ್ರೈಬ್ ಜನರ ಮುಖಂಡರ ರ್ಹಿಮ್ದ್ವಾದ ಖಾನ್ ಸಾಹೇಬ್ ಅಲ್ಲಾಬಾನನು ತನ್ನ ಒಬ್ಬ ಬಂಧುವಿನಿಂದ ಕೊಲೆಯಾಗಿದ್ದಾನೆ. ಇವನ ಅಪ್ಪನು ಮಕ್ಕಳೂ ಕೊಲೆಯಾಗಿದ್ದಾರೆ. ಕೊಲೆಗೆ ಕಾರಣ ಗೊತ್ತಿಲ್ಲ.

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

O. P. No. 22 1935

ಡನ್ನಸ್ ಪಿಂಟೋ ... ಅರ್ಜಿದಾರರ

...

ಸ್ವಾರಿನ ... ಬ್ಬ ... ಜನರ ... 9

...

... ಸ ಕಾರ್ಕಳ ತಾಲೂಕ ... ದ್ದಿರುತ್ತಿದ್ದ ... ಈಗ ವ್ಯಕ್ತ ವಟ್ಟ ... ಸ್ವತ್ತುಗಳು. ಈ ಕೋರ್ಟಿನ ... 398 31ರಲ್ಲಿ ಆದ ... ಇಲ ನಡಸಿದ ಕ್ರಮ ಅವ ... ಜ್ಯಾರಿಯಲ್ಲಿ ... ಉಳಿದ ಐವೇಜನಲ್ಲಿ ಅರ್ಜಿದಾರನ ಈಗ ವ್ಯಕ್ತ ಪಟ್ಟಿರುವ ಹಿಸ್ಸೆ, ... ಉಡುಪಿ ... ಫರ್ನಾಂಡಿಸ್ ... ಒಬ್ಬ ... ರಾಗಿದ್ದ ... ವಿವರ ವಗೈರೆ ಮಾಡದ ವ್ಯತಿರಿಕ್ತ ... ಸದ್ರಿಯವಳ ವಾರಿಸ್ದಾರಳಾಗಿ ... ಅರ್ಜಿದಾರನ ತನಗೆ ಸಿಕ್ಕತಕ್ಕ ಐವೇಜಿನ ... ಅದೇ ಪ್ರಕಾರ ಸದರಿ ಜಾಕೋಬ ... ಮಂಗಳೂರು ರೋಮನ್ ಕಥೊಲಿಕ್ ಪ್ರೊವಿಡೆಂಟ್ ಫಂಡಿನ ಬಾಬ್ತು I ಕ್ಲಾಸಿನ ನಂಬ್ರ 671ನೇ ಪೊಲಿಸಿ ಪ್ರಕಾರ ಬರತಕ್ಕ ಐವೇಜುಗಳಲ್ಲಿ ಕೂಡ ತನಗೆ ಸಿಕ್ಕತಕ್ಕ ಐವೇಜಿನ ಕುರಿತು ಒಂದು ವಾರಿಸ ಸರ್ಟಿಫಿಕೇಟು ಅಪೇಕ್ಷಿಸಿ, ಅರ್ಜಿದಾರನು ಕೊಟ್ಟ ಮೇಲ್ಕಂಡ ಅರ್ಜಿಯು ಈ ಕೋರ್ಟಿನಲ್ಲಿ ತಾ. 5-6-35ಕ್ಕೆ ಕನವಿಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ತಮ್ಮ ಆಕ್ಷೇಪಗಳನ್ನು ಈ ಕೋರ್ಟಿನ ಮುಂದೆ ಸದರಿ ತಾರೀಕು ಹಗಲು ಗಂಟೆ 11ಕ್ಕೆ ಹಾಜರಾಗಿ ಜ್ಯಾಹೀರು ಮಾಡಬೇಕಾಗಿ ಈ ಮೂಲಕ ಸರ್ವ ಜನರಿಗೆ ತಿಳಿಸಲಾಗುತ್ತದೆ.

Udipi, 8-5-35. K Vittal Nayak, Vakil for Petition.

ಮಂಗಳೂರು

ನಮ್ಮ ಜಿಲ್ಲೆಯ ಮಿಸ್ಸೆಸ್ ಪಿ. ಸ್ವೆಲ್ಡ್ ಫಾಸ್‌ರವರು ಮಲಬಾರ ಜಿಲ್ಲೆಯ ತಲಚೇರಿಯಲ್ಲಿ ೩ ನರರಿ ಬೆಂಚ್ ಮೆಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು.

"ಜಂಗ್ಲಿ ರಿಯೂಯಿತಿ ರದ್ದಿನ ಕುರಿತು ವಿಚಾರ ನಡೆಸುವ ಕಮಿಟಿಯವರು ಸಂಚಾರಣೆಯ ವಿಷಯ ಈ ಮುಂಚೆ ಮಾಡಿದ ಪ್ರಕಟಣೆಗೆ ಅನುಸಾರವಾಗಿ ಕಮಿಟಿಯವರು ಸಂಚರಿಸುವರು. ಯಾವ ಯಾವ ವಿಷಯಗಳಲ್ಲಿ ಅನುಭವವನ್ನು ದೊರಕಿಸಬೇಕೆಂಬುದಕ್ಕೆ ತಯಾರಿಸಿದ ಭಾಷಾ ಪ್ರಶ್ನೆ ಪತ್ರಿಕೆಗಳು ಸಿಕ್ಕುವವು. ಅವುಗಳನ್ನು ಸಂಬಂಧಪಟ್ಟ ರಹಿತರು ಪಡೆದುಕೊಂಡು ಬೇಕಾದ ಯಾವತ್ತೂ ಅನುಭವವನ್ನು ಮುಂದಾಗಿಯೇ ತಿಳಿಸಬೇಕಾಗಿಯೂ ಕಮಿಟಿಯವರು ಈ ಕುರಿತಾಗಿ ಸಂದರ್ಶಿಸಬೇಕಾದ ಸ್ಥಳಗಳಿದ್ದರೆ ಅವುಗಳನ್ನು ಮುಂದಾಗಿಯೇ ತಿಳಿಸಬೇಕಾಗಿ ಕೂಡಾ ವಿನಂತಿ" ಎಂದು ದಕ್ಷಿಣ ಕನ್ನಡ ಜಿಲ್ಲಾ ಭೂಮಾಲೀಕರ ಸಂಘದ ಪ್ರಕಟಣೆ.

ಮಂಗಳೂರಲ್ಲಿ ಜರಗುವ ಕರ್ನಾಟಕ ಪ್ರಾಂತಿಕ ಪರಿಷತ್ತಿನ ಗೌರವಾರ್ಥ ಭಾರತ ಭಾಷಾ ಪ್ರವರ್ಧಕ ಸಂಘ, ಮಂಗಳೂರು, ಇದರ ಎಮೆಚೂರ್ ನಟರು ಇದೇ ಮೇ ತಾ. ೧೦, ೧೧, ೧೨ನೇ ಪ್ರತಿ ರಾತ್ರಿ ಘಂಟೆ ೯॥ಕ್ಕೆ ಮಂಗಳೂರಿನ ಗಣಪತಿ ಹೈಸ್ಕೂಲಿನ ಥಿಯೇಟರಿನಲ್ಲಿ ಕನ್ನಡ ಹಿಂದಿ ಮತ್ತು ಇಂಗ್ಲಿಷಿನಲ್ಲಿ ನಾಟಕ, ನಕಲಿಗಳನ್ನು ಪ್ರದರ್ಶಿಸಲಿರುವರು. ಅನುಭವಿಗಳ ನೇತೃತ್ವದಲ್ಲಿ ಮೇಲಿನ ಸಂಘದ ಸ್ತ್ರೀಪುರುಷ ಉತ್ತಮ ನಟರು ಈ ವಿವಿಧ ಪ್ರದರ್ಶನದಲ್ಲಿ ಭಾಗವಹಿಸುವರು. ಮೇ ತಾ ೧೦ನೇ ಶುಕ್ರವಾರ ಹಿಂದಿ, ಕನ್ನಡ ಮತ್ತು ಇಂಗ್ಲೀಷಿನಲ್ಲಿ ವಿವಿಧ ವಿನೋದಾವಳಿ; ತಾ. ೧೧ನೇ ಶನಿವಾರ ಬಂಗಾಳದ ಪ್ರಸಿದ್ಧ ನಾಟಕಕರ್ತರಾದ ಡಿ. ಎಲ್. ರಾಯರ ರಚಿತ ಪ್ರಚಂಡ ಮನೋಮುಗ್ಧಕರ (ಚಂದ್ರಗುಪ್ತ) ಹಿಂದೀ ನಾಟಕ; ತಾ ೧೨ನೇ ಆದಿತ್ಯವಾರ ಹಿಂದಿ ಉರ್ದು ಕನ್ನಡ ಮತ್ತು ಇಂಗ್ಲಿಷಿನಲ್ಲಿ ಬೇರೆ ಬೇರೆ ನವನವೀನ ವಿನೋದ, ಪ್ರಹಸನಾದಿಗಳು ಮತ್ತು ನಡುನಡುವೆ ಉತ್ತಮ ಸಂಗೀತವಿರುವ ವಿಸ್ಮಯ ಆನಂದಕರ ಪ್ರದರ್ಶನಗಳು. ಪ್ರವೇಶ ದರ ರೂ ೨, ೧-೮-೦ ೧-೦-೦, ಮತ್ತು ಆಣೆ ೮.

ರಾಷ್ಟ್ರಸಭಾಪತಿ ಬಾಬೂರಾಜೇಂದ್ರ ಪ್ರಸಾದರವರು ಶುಕ್ರವಾರ (೧೦-೫-೩೫ರಲ್ಲಿ) ಕೆನರಾ ಹೈಸ್ಕೂಲ್ ಶ್ರೀ ಮಧ್ವವರೇಂದ್ರ ಸಭಾಸದನದಲ್ಲಿ ಡಾ. ಅನ್ನಿಬೆಸೆಂಟರ ವರ್ಣಚಿತ್ರ ದಿವಂಗತ ಸೇತುಗುಪ್ತರ ತೈಲಚಿತ್ರಗಳನ್ನು ಅನಾವರಣ ಮಾಡುವರು. ಪುರನಿವಾಸಿಗಳೆಲ್ಲರೂ ಬಹುಸಂಖ್ಯಾತರಾಗಿ ಬಂದು ಇದರಲ್ಲಿ ಭಾಗಿಗಳಾಗಬೇಕೆಂದು ವಿನಂತಿ.

ಈ ಮೊದಲು ಪ್ರಕಟಿಸಿದಂತೆ ಉಳ್ಳಾಲದ ಅದ್ವೈತಾಶ್ರಮದಲ್ಲಿ ಶ್ರೀ ಶಂಕರ ಜಯಂತ್ಯುತ್ಸವ ಸಮಾರಂಭವನ್ನು ತಾ. ೭-೫-೩೫ನೇ ಮಂಗಳವಾರ ವೈಶಾಖ ಶು. ೫ ಮಿಗಿ ದಿವಸ ಸಾಯಂಕಾಲ ಘಂಟೆ ೫॥ಕ್ಕೆ ಮ. ರಾ. ರಾ. ರಾವ್‌ಬಹದ್ದೂರು ಯು. ಆನಂದರಾವ್ ಅವರ್ಗಳವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಆಚರಿಸಲಾಯಿತು.

ಎಂಟನೇ ಕರ್ನಾಟಕ ಪ್ರಾಂತಿಕ ಪರಿಷತ್ತಿನ ಸಮಯದಲ್ಲಿ ಮಂಗಳೂರಿಗೆ ತಾ. ೧೧-೫ ೧೯೩೫ನೇ ಶನಿವಾರ ಚಿತ್ತೈಸಲಿರುವ ಶ್ರೀ ಬಾಬೂರಾಜೇಂದ್ರ ಪ್ರಸಾದರವರಿಗೆ ಒಂದು ಮಾನಪತ್ರವನ್ನರ್ಪಿಸಬೇಕೆಂದು ನಮ್ಮ ಡಿಸ್ಟ್ರಿಕ್ಟ್ ಬೋರ್ಡು ನಿಶ್ಚಯಿಸಿದೆ.

ಈ ವರೆಗೆ ಮಧುರಾ ಡಿಸ್ಟ್ರಿಕ್ಟ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರಾಗಿದ್ದ ನಮ್ಮ ಜಿಲ್ಲೆಯ ಶ್ರೀ ಎನ್. ಪಿ. ವೈ. ಐ. ಸಿ. ಎಸ್. ರವರು ರಾಮನಾಡ ಜಿಲ್ಲೆಯ ದೇವಕೋಟೆಯ ಸಬ್ ಕಲೆಕ್ಟರ್ ಮತ್ತು ಜೊಯಿಂಟ್ ಮೆಜಿಸ್ಟ್ರೇಟರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ಇಲ್ಲಿಯ ಮುನಿಸಿಪಾಲಿಟಿಯ ವಿಶೇಷ ಸಭೆಯೊಂದು ನಡೆದು ಕರ್ನಾಟಕ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷರಾಗಿ ಬರುವ ಶ್ರೀ ಶ್ರೀಪುರಕಾರರಿಗೆ ಮಾನಪತ್ರವೀಯುವ ನಿರ್ಧಾರ ಮಾಡಿರುವರು.

ಇಲ್ಲಿಯ ಸೆಟ್ಲಮೆಂಟು ಆಫೀಸು ಸದ್ಯದಲ್ಲೇ ಕಡೂರು ಜಿಲ್ಲೆಗೆ ವರ್ಗಾಯಿಸಲ್ಪಡುವುದಾಗಿ ತಿಳಿದು ಬರುತ್ತದೆ.

ಮಂಗಳೂರು ಗವರ್ನಮೆಂಟ್ ಕಾಲೇಜಿನ ಜೂನಿಯರ್ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಶ್ರೀ ಪದ್ಮನಾಭಯ್ಯನವರು ಉಡುಪಿಗೂ, ಅಲ್ಲಿನ ಶಾಸನಗಾರರಿಗೂ, ಶಾಸನಗೋದಿನವರು ವೃತ್ತಾಂತರ ಜಾರಿಯಾಗಿರುತ್ತಾರೆ. ಗವರ್ನಮೆಂಟ್ ಕಾಲೇಜಿನ ಉಪಾಧ್ಯಾಯರಾದ ಶ್ರೀ ಸುಬ್ಬಯ್ಯನವರು ಮಂಗಳೂರಿನ ಜೂನಿಯರ್ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರರಾಗಿ ನೇಮಕ ಹೊಂದಿರುತ್ತಾರೆ.

ತಾಲೂಕುಗಳಿಂದ

ಕಡಂದಲೆ:— ಕಡಂದಲೆ ಬೋರ್ಡು ಶಾಲಾ ವರ್ಧಂತ್ಯುತ್ಸವವು ತಾ. ೨೭-೪-೩೫ರಲ್ಲು ಮ. ರಾ. ರಾ. ರಾಮಚಂದ್ರ ರಾವ್ ಅವರ್ಗಳ್ ಬಿ. ಎ. ಎಲ್. ಟಿ. (ಮೂಡಬಿದ್ರೆ ಮಿಡ್ಲ್‌ಸ್ಕೂಲ್ ಹೆಡ್ಮಾಸ್ಟರ್)ರವರ ಅಧ್ಯಕ್ಷತೆಯಲ್ಲಿ ಜರಗಿತು.

ಇದೇ ತಿಂಗಳ ಅಂತ್ಯದಲ್ಲಿ ನಮ್ಮ ಕಡಂದಲೆ ಯುವಕ ಸಂಘದವರು "ಮನೋನಿರ್ಧಾರ"ವೆಂಬ ಸಂಗೀತ ನಾಟಕವನ್ನು ಆಡುವರು. ಟಿಕೇಟು ವಿಕ್ರಯದಿಂದ ಬಂದ ಹಣವನ್ನು ಕಡಂದಲೆ ಹಾಯರ್ ಎಲಿಮೆಂಟರಿ ಶಾಲಾ ಕಟ್ಟೋಣದ ದುರುಸ್ತಿಗಾಗಿ ಉಪಯೋಗಿಸುವರು. ವಿದ್ಯಾಭಿಮಾನಿಗಳು ತನುಮನಧನಗಳಿಂದ ಪ್ರೋತ್ಸಾಹಿಸಿ ಕೃತಾರ್ಥರಾಗುವರೆಂದು ನಂಬಿರುತ್ತೇವೆ.

ಫಲಿಮಾರು:— ಇದೇ ಮೇ ತಿಂಗಳ ತಾ. ೧ನೇ ಬುಧವಾರ ಅಪರಾಹ್ನ ಘಂಟೆ ೪ಕ್ಕೆ ಅದಮಾರು ಮಠದ ಶೀರ್ಥಕೀಚ ಶ್ರೀ ವಿಬುಧಪ್ರಿಯ ತೀರ್ಥ ಶ್ರೀ ಪಾದಂಗಳವರ ದಿವ್ಯಾಶ್ರಯದಲ್ಲಿ ಸ್ಥಳೀಯ ಶ್ರೀರಾಮ ಸಾರ್ವಜನಿಕ ವಾಚನಾಲಯದ ತೃತೀಯ ವರ್ಧಂತ್ಯುತ್ಸವವು ಡಾ. ಬೆಲಿ ಮೆಂಬರ ಡಾಕ್ಟರ್ ಪಿ. ಜಿ. ಆಚಾರ್ಯರವರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಗಿದುವು. ಮಂಗಳೂರು ಗವರ್ನಮೆಂಟ್ ಕಾಲೇಜಿನ ಕನ್ನಡ ಪಂಡಿತರಾದ ಶ್ರೀಯುತ ಪೇಜಾವರ ಸೀತಾರಾಮ ಆಚಾರ್ಯರು "ವಾಚನಾಭಿರುಚಿ"ಯ ಕುರಿತು ಒಂದು ಚಲೋ ಭಾಷಣವನ್ನಿತ್ತು ಸಭಿಕರ ಮನಸಂತೋಷಗೊಳಿಸಿದರು. ಅದೇ ರಾತ್ರಿ ಇಲ್ಲಿಯ ಶ್ರೀರಾಮ ಸ್ಪೋರ್ಟ್‌ರವರಿಂದ ಕಿಶೋರಾಗ್ನಿಯೂ, ಒಂದು ತುಳು ನಾಟಕವೂ ವ್ಯವಸ್ಥೆ ಮಾಡಲ್ಪಟ್ಟಿದ್ದವು.

ಬೆಳ್ಮಣ್ಣ:— ಇಲ್ಲಿನ ಪಂಚಾಯತ್ ಕೋರ್ಟ್ ಪ್ರೆಸಿಡೆಂಟರೂ ಸ್ಕೂಲ್‌ಕಮಿಟಿ ಅಧ್ಯಕ್ಷರೂ, ಈ ಊರಿನ ಪ್ರಮುಖ ಜಮೀನುದಾರರೂ ಆಗಿದ್ದ ಶ್ರೀಯುತ ನೆಟ್ಟಾರು ಸುಬ್ರಾಯರು ಇದೇ ಮೇ ತಿಂಗಳ ೫ನೇ ಆದಿತ್ಯವಾರ ದಿನ ತಮ್ಮ ೩೦ನೇ ವಯಸ್ಸಿನಲ್ಲಿ ಶಿವಾಧೀನರಾದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ. ಶ್ರೀಯುತರು ನಿಗರ್ವಿಗಳೂ, ಉದಾರಿಗಳೂ, ನ್ಯಾಯಶೀಲರೂ ಆಗಿದ್ದು ಆದರ್ಶಜೀವನವನ್ನು ನಡೆಸುತ್ತಿದ್ದರು. ಯಾವಾಗಲೂ ಇತರರ ಪರೋಪಕಾರದ ಶ್ರಮವನ್ನು ವಿರೋಧಿಸುವವರಾಗಿದ್ದರು. ಇವರ ಮರಣಕ್ಕಾಗಿ ಊರಿನವರೆಲ್ಲಾ ಮನಮರುಗುತ್ತಿರುವರು. ಹಲವರು ಬೆಳ್ಮಣ್ಣಿನ ಜ್ಯೋತಿಯೇ ಮಾಯವಾಯಿತೆನ್ನುವರು. ಇಂಥಾ ಮಹನೀಯರ ಅಗಲುವಿಕೆಯಿಂದ ದುಃಖಿಸುತ್ತಿರುವ ಅವರ ಕುಟುಂಬಕ್ಕೆ ಧೈರ್ಯವನ್ನೂ ಮೃತರ ಆತ್ಮಕ್ಕೆ ಶಾಂತಿಯನ್ನೂ ಶ್ರೀ ಪರಮಾತ್ಮನು ಕರುಣಿಸಲಿ!

ಮೂಡಬಿದ್ರೆ:— ಇಲ್ಲಿಯ ಸಾರ್ವಜನಿಕ ಧರ್ಮಾರ್ಥ ವಾಚನಾಲಯದ ೩ನೇ ವಾರ್ಷಿಕೋತ್ಸವವನ್ನು ಇದೇ ತಾರೀಕು ೬-೫-೧೯೩೫ನೇ ಸೋಮವಾರ ಸಾಯಂಕಾಲ ಘಂಟೆ ೬ಗೆ ಜರಗಿಸಲಾಯಿತು.

ಸಂಪಾಜೆ:— ಇದೇ ತಾ. ೬-೫-೧೯೩೫ರಲ್ಲು ಚಕ್ರವರ್ತಿಯವರ ಸಿಲ್ವರ್ ಜುಬಿಲಿ ಮಹೋತ್ಸವವು ಜಮೀನುದಾರ್ ಸಂಪಾಜೆ ತಿಮ್ಮಪ್ಪಯ್ಯ ದೇಶಕೋಡಿಕಾರರ ಅಧ್ಯಕ್ಷತೆಯಲ್ಲಿ ಬಹಳ ಸಂಭ್ರಮದಿಂದ ಜರಗಿಸಲ್ಪಟ್ಟಿತು.

ಕಿನ್ನಿಗೋಳಿ:— ನಮ್ಮ ಸಾರ್ವಭೌಮರ ರಜತೋತ್ಸವದ ನಿಮಿತ್ತದಿಂದ ಇದೇ ತಾ. ೬-೫-೩೫ರಲ್ಲು ಇಲ್ಲಿಯ ಸ್ಕೂಲು ಇಲ್ಲಿ ಆವರಣದಲ್ಲಿ ೭ ಗಂಟೆಗೆ ಸ್ಪೆಷಲ್ ಪೂಜೆಯೂ ಇಡೀ ದಿನ ಗಂಟೆಯೂ ಭಾರಿಸಲ್ಪಟ್ಟಿತು. ಸಂಜೆ ೪ ಗಂಟೆಗೆ ಸದರಿ ಇಗರ್ಜಿಯಲ್ಲಿ ೨ ಲ್ಲ ಮಕ್ಕಳಿಗೆ ಸಿಹಿ ಹಣ್ಣೆ ಹಂಚಿ ಮೆರವಣಿಗೆಯು ಬ್ಯಾಂಡ್ ವಾದ್ಯದೊಂದಿಗೆ ಹೊರಟು ಮುಖ್ಯಾಗದಲ್ಲಿ ಚಕ್ರವರ್ತಿ ಚಕ್ರವರ್ತಿನಿಯರ ಫೋಟೋಗಳನ್ನು ಇರಿಸಿ ಮೆರವಣಿಗೆಯಿಂದ ಜಯಕಾರದೊಂದಿಗೆ ಕಿನ್ನಿಗೋಳಿ ಪೇಟೆಯಲ್ಲಿರುವ ಶಾಲಾ ಕಟ್ಟಡಕ್ಕೆ ತೆರಳಿ, ಅಲ್ಲಿ ಸದರಿ ಗುಣಕಥನ ಮಾಡಿ ಶಾಲಾಮಕ್ಕಳ ವಿನೋದದ ಆಟದ ನಂತರ ಕೊನೆಗೆ ಮಕ್ಕಳಿಗೆ ಸಿಹಿ ಹಂಚಿ ಮುಕ್ತಾಯಗೊಳಿಸಲಾಯಿತು.

ಬಂಟ್ವಾಳ:— ಸುಜಾಯಿದ ಜುಬಿಲಿ ಮಹೋತ್ಸವವು ಬಹಳ ವಿಜೃಂಭಣೆಯಿಂದ ಜರಗಿತು. ಹಳೆ ಮತ್ತು ಹೊಸ ಡಿಸ್ಟ್ರಿಕ್ಟ್ ಕಚೇರಿಯವರ ಒಟ್ಟುಗೂಡು ಎಲ್. ಎಫ್ ಇನ್‌ಸ್ಪೆಕ್ಟರ್, ಟಿಪ್ಪಾಲು ಆಫೀಸುಗಳನ್ನು ದೀಪ ಗಳಿಂದ ಶೃಂಗರಿಸಲ್ಪಟ್ಟವು. ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಮಹಾರಾಜರ ದೀರ್ಘಾಯುಷ್ಯಕ್ಕಾಗಿ ಬಡವರಿಗೆ ಅನ್ನದಾನ, ಮಕ್ಕಳಿಗೆ ತಿಂಡಿ ಹಂಚುವಿಕೆಗಳು ನಡೆದುವು. ಹೊಸ ಮಾರ್ಗ ಜುಬಿಲಿಯಲ್ಲಿ ಪಾರ್ಥಿವ ಸುಡುವದು, ಭಾರತದ ನೆಲ್ಲೆಯವರ ನಾಟ್ಯ, ಅದರ ದ್ರಾವಿಡರ ನಾಟ್ಯ, ಮೆರವಣಿಗೆಗಳು ಬಹಳ ಆನಂದದಿಂದ ನಡೆದುವು.

ಪಾಣೆಮಂಗಳೂರು:— ಇಲ್ಲಿಯ ಮತ್ತು ಗೂಡಿನ ಬಳಿ ಮಾಪಿಳ್ಳಾ ಶಾಲಾಮಕ್ಕಳೂ ಊರ ಮಹಮ್ಮದಿ ಗೃಹಸ್ಥರೂ ಇಲ್ಲಿಯ ಮಾಪಿಳ್ಳಾ ಶಾಲೆಯಲ್ಲಿ ಸಭೆ ಜರಗಿಸಿ ಮಕ್ಕಳಿಗೆ ತಿಂಡಿ ಮುಂತಾದ್ದನ್ನೇ ಹಂಚಿ ಮೆರವಣಿಗೆಯ ಜೊತೆಯಲ್ಲಿ ಮಸೀದಿಗೆ ಹೋಗಿ ಮಹಾರಾಜರಿಗೆ ದೀರ್ಘಾಯುಷ್ಯವನ್ನು ಕೊಡುವಂತೆ ಪ್ರಾರ್ಥನೆ ಮಾಡಿ ತಿರುಗಿ ಪಾಣೆಮಂಗಳೂರಿಗೆ ಬಂದರು. ಎಸ್. ವಿ. ಎಸ್. ಶಾಲೆಯಲ್ಲಿಯೇ ಇದೇ ರೀತಿ ನಡೆಯಿತು. ಇವನ್ನೆಲ್ಲಾ ಒಳ್ಳೇ ರೀತಿಯಲ್ಲಿ ಜರಗುವಂತೆ ಗಾರ ಚಂದ್ರಶೇಖರಯ್ಯನವರ ಸಹಾಯವು ಸ್ತುತ್ಯವಾದುದು.

ಶಿರ್ವ:— ಶ್ರೀ ದತ್ತ ಮಾಲಾಕಾರ್ಯಾಲಯದಲ್ಲಿ ಇದೇ ತಿಂಗಳ ಅಂತ್ಯದೊಳಗೆ ಶ್ರೀ ದತ್ತಾತ್ರೇಯ ವಾಚನಾಲಯದ ಸದಸ್ಯರು ಶ್ರೀ ಗರೂಡ ಸದಾಶಿವರಾಯ ರವರ (ಕರ್ನಾಟಕ ನಾಟಕಾಲಂಕಾರ, ಅಭಿನಯ ಕೇಸರಿ) ರಚಿತವಾದ ಸಾಗ್ರಸಂಗೀತ ನಾಟಕವಾದ "ವಿಷಮ ವಿವಾಹ"ವನ್ನು ಅಭಿನಯಿಸಿ ತೋರಿಸಲಿಕ್ಕಿರುವರು. ಶ್ರೀ. ದತ್ತ ಮಾಲೆಯ ವಾರ್ಷಿಕೋತ್ಸವದ ಮಹೋತ್ಸವದ ಉದ್ದಿಷ್ಟವಾಗ ವ ಅದಕ್ಕೆ ಮುಖ್ಯಾಗಕವಿದೆ. ಕಳೆದ ಗುರುವಾರದ ಶ್ರೀ ಗುರುದತ್ತ ಪೂಜೆಯೂ ಶನಿವಾರದ ಗ್ರಾಮಸಂಕೀರ್ತನಾ ಸಭೆಯೂ ಯಶಸ್ವಿಯಾಗಿ ಜರಗಿಸಲ್ಪಟ್ಟು ಪರಿಣಾಮಕಾರಿಯಾಗಿ ಅಂತ್ಯಕಾಣದು. ಮುಂದಿನ ನೆಲ್ಲಿಯ ಕುರುಹಾಗಿದೆ. ಬರುವ ಶನಿವಾರದ ಸಭೆಗೆ "ಗ್ರಾಮಜೀವನ" ಎಂಬ ಕುರಿತು ಉಪನ್ಯಾಸಗಳಿವೆ.

ಶಿರ್ವ ಇಗರ್ಜಿಯ "ಕೆಥೊಲಿಕ್ ಲೋಟ್ರಿಯು" ಕಳೆದ ತಾ. ೧೬-೪-೧೯೩೫ನೇ ಬುಧವಾರ ತೆಗೆಯಲ್ಪಟ್ಟಿತು. ನಾಲ್ಕು ಸಾವಿರದ ಪ್ರಥಮ ಇನಾಮು ಒಂದು ಸಾವಿರಕ್ಕೆ ಇಳಿಸಲ್ಪಟ್ಟಿತು. ಪ್ರಥಮ, ದ್ವಿತೀಯ, ತೃತೀಯ, ಚತುರ್ಥ ಇನಾಮುಗಳು ಕೆಥೊಲಿಕರಿಗೇನೆ ಹೋಗಿವೆ.

ಉಡುಪಿ:— ತಾ. ೨೮-೪-೩೫ರಲ್ಲು ಇಲ್ಲಿನ ಶಿವಳ್ಳಿ ಪಂಚಾಯತ ಬೋರ್ಡಿನ ೫ ಸ್ಥಾನಗಳಿಗೆ ೯ ಮಂದಿ ಉಮೇದ್ವಾರರಿದ್ದು ೫ ಸ್ಥಾನಗಳಿಗೆ ಶ್ರೀಗಳಾದ ಪಿ. ನಾರಾಯಣ ಪ್ರಭು, ಯು. ಪಿ. ರಮನಾಥರಾವ್, ಎಮ್. ವಾಮನ ಭಟ್, ಯು. ಸುಂದರ ಶಿಣ್ಯ ಮತ್ತು ಬೊಮ್ಮಯ್ಯ ಶೆಟ್ಟಿಯವರು ಬಹುಮತದಿಂದ ಚುನಾಯಿಸಲ್ಪಟ್ಟಿರುವರು.

ರಾಷ್ಟ್ರೀಯ ಪ್ರಾಂತಿಕ ಪರಿಷತ್ತಿನ ಹಾಗೂ ರಾಷ್ಟ್ರಸಭಾಪತಿಯಾದ ಶ್ರೀ ಬಾಬೂರಾಜೇಂದ್ರ ಪ್ರಸಾದರವರು ಉಡುಪಿಯನ್ನು ಸಂದರ್ಶಿಸುವ ಸಂದರ್ಭದಲ್ಲಿ ವ್ಯವಸ್ಥೆ ಮಾಡುವ ಬಗ್ಗೆ ಶ್ರೀಮತಿ ಕಮಲಾದೇವಿ ಶ್ರೀಗಳಾದ ಅನಂತಕೃಷ್ಣ, ಯು. ಶ್ರೀನಿವಾಸ ಮಲ್ಯ, ಮತ್ತು ಸಾಂಘಿಕ ಶಿಲ್ಪಿಯವರು ತಾ. ೪ನೇ ಸಾಯಂಕಾಲ ಇಲ್ಲಿಗೆ ಬಂದಿದ್ದು, ರಾತ್ರಿ ಕೆನರಾ ಬೇಂಕ್ ಇನ್ಸ್‌ಟ್ಯೂಟಿನ ಮಹಡಿಯಲ್ಲಿ ಉಳಕೊಂಡು, ಅಲ್ಲಿ ಶ್ರೀ ಬಾಬೂರಾಜೇಂದ್ರ ಪ್ರಸಾದರು ಉಳಕೊಳ್ಳುವ ಬಗ್ಗೆ ಎಸ್ಸರ್ಕಾರ ಮಾಡಿದರು. ಮರುದಿನ ಉಡುಪಿಯ ಹಲವು ಗೃಹಸ್ಥರನ್ನು ಕಂಡು, ಸದರಿಯವರನ್ನು ಸ್ವಾಗತಿಸಬೇಕಾದ ಹಾಗೂ ಅಲ್ಲಿನ ಕಾರ್ಯಕ್ರಮದ ವಿಚಾರ ವನ್ನು ಮಾಡಿರುವರು.

ಶ್ರೀಮನ್ಮಹಾರಾಜರ ರಜತೋತ್ಸವ ಸಂಬಂಧವಾದ ಸಂಭ್ರಮಗಳು ಪ್ರಾತಃ ದೇವಸ್ಥಾನ, ಮಸೀದಿ, ಇಗರ್ಜಿಗಳಲ್ಲಿ ಪ್ರಾರ್ಥನೆಗಳಿಂದ ಪ್ರಾರಂಭವಾಗಿ, ತಾಲೂಕು ಆಫೀಸಿನಲ್ಲಿ ಧ್ವಜಾರೋಹಣ ವಂದನೆಗಳಾದುವು. ಪೂರ್ವಾಹ್ನ ಬಂದಿದ ಬಡವರಿಗೆ ಅಕ್ಕಿ ಹಂಚಲಾಯಿತು. ಅಪರಾಹ್ನ ಪಂದ್ಯಾಟಗಳು ನಡೆಸಲಾಗಿ, ಇನಾಮು ಹಂಚೋಣ ೩ ಮೇಲೆ ೫ ಗಂಟೆಗೆ ಮಕ್ಕಳಿಗೆ ಮಿಠಾಯಿ ಹಂಚೋಣವಾದುವು.

ಸುಮಾರು ೬ ಗಂಟೆಯ ಕಾಲಕ್ಕೆ ತಾಲೂಕು ಆಫೀಸಿನಿಂದ ಶ್ರೀಮನ್ಮಹಾರಾಜ ಮಹಾರಾಣಿಯವರ ಆಲಂಕರಿಸಲ್ಪಟ್ಟ ಪಟಗಳನ್ನಿಟ್ಟ ಶೃಂಗರಿಸಲಾದ ಮೋಟಾರು ಕಾರು ವಾದ್ಯ ದೀವಟಿಗೆ, ಚಿಕ್ಕ ಮಕ್ಕಳು, ಸರಕಾರಿ ಅಧಿಕಾರಿಗಳು ಮತ್ತು ಕೆಲ ಊರಗೃಹಸ್ಥರಿಂದೊಡಗೂಡಿದ ಮೆರವಣಿಗೆಯು ಪಟ್ಟಣದ ಮುಖ್ಯ ಬೀದಿಗಳಿಂದ ಇತ್ಯಾದಿ ಧ್ವಜ ತಾಲೂಕು ಆಫೀಸಿನ್ನೇ ಸೇರಿತು. ಶ್ರೀ ಅದೂರು ಲಕ್ಷ್ಮೀನಾರಾಯಣರಾವ್ ಬಿ. ಎ., ಬಿ. ಎಲ್. ಎಡ್ವೋಕೇಟ್ ಇವರ ಅಧ್ಯಕ್ಷತೆಯಲ್ಲಿ ಮಹಾಸಭೆಯು ಸೇರಿತು. ರಾ॥ ಬಿ. ರಾಮರಾವ್ ಎಮ್. ಎ., ಬಿ. ಎಲ್. ಎಡ್ವೋಕೇಟ್, ಮಿ. ಲೂಕ್ ಫೆರ್ನಾಂಡಿಸ್ ಬಿ. ಎ., ಎಲ್. ಟಿ., ಹೆಡ್‌ಮಾಸ್ಟರ್, ಬೋರ್ಡ್ ಹೈಸ್ಕೂಲ್ ಇವರು ಇಂಗ್ಲೀಷಿನಲ್ಲಿಯೂ, ಶ್ರೀ ಎಸ್. ವಾಮನರಾಯ ಶೆಟ್ಟಿ, ಬಿ. ಎ. ಎಲ್. ಟಿ. ಕಟಪಾಡಿ ನಲ್ಲಿಯೂ, ಮಿ. ಎ. ಎಸ್. ಶಾರ್ಟ್ ಬಿ. ಎ. ಎಲ್. ಟಿ. ಯವರು ಕನ್ನಡದಲ್ಲಿಯೂ ಸಂದರ್ಭೋಚಿತ ಭಾಷಣಗೈದು ಮಹಾರಾಜ ಮಹಾರಾಣಿಯವರ ದೀರ್ಘಾಯುಷ್ಯ ಶ್ರೇಯೋಭಿವೃದ್ಧಿಯನ್ನು ಕೋರಿ ಭಾಷಣಗಳನ್ನು ಮಾಡಿ ಸರ್ವಾನುಮತದಿಂದ ಕರಾವ್ ಪಾಸಾಯಿತು. ತಾಲೂಕು ಆಫೀಸನ್ನೂ ಪರಿಸರವನ್ನೂ ಅಂದವಾಗಿ ಅಲಂಕರಿಸಿದ್ದು ದೀಪೋತ್ಸವ ಮಾಡಲಾಗಿತ್ತು. ಸರಕಾರಿ ಆಸ್ಪತ್ರೆಯನ್ನೂ ಚಂದವಾಗಿ ಶೃಂಗರಿಸಲಾಗಿತ್ತು. ಮಕ್ಕಳಿಗೆ ಮಿಠಾಯಿ ಹಂಚುವಾಗ ಮಾತ್ರ ವ್ಯವಸ್ಥೆಯು ಸ್ವಲ್ಪ ಮಟ್ಟಿಗೆ ತೃಪ್ತಿಕರವಾಗಿಲ್ಲದೆ, ಮಕ್ಕಳಿಷ್ಟು ಕಷ್ಟ ಪಟ್ಟಿದ್ದರ ಅಧಿಕಾರಿ ಲೋಕರಲ್ಲಿ ಕಡಿಮೆಯಿದ್ದು ಸ್ವಲ್ಪ ಅಪಜಯವಾಯಿತೆಂದು ತಿಳಿಯಬರುತ್ತದೆ.

ಶ್ರೀಮನ್ಮಹಾರಾಜರ ರಜತಮಹೋತ್ಸವದ ಸಲುವಾಗಿ ತಾ. ೬ರಲ್ಲಿ ಆಧಿನಮಾಸಲಾದ ನಾಟಕವು ಯಶಸ್ವಿಯಾಗಿತ್ತಲ್ಲದೆ ಪ್ರೇಕ್ಷಕ ವರ್ಗವೂ ತಕ್ಕಮಟ್ಟಿಗೆ ಜಾಸ್ತಿಯಾಗಿತ್ತು. ಟಿಕೇಟುಗಳಿಂದ ಸುಮಾರು ರೂ. ೩೩೫ ಉತ್ಪನ್ನವಾಗಿ, ಖರ್ಚು ಕಳೆದು ಸುಮಾರು ರೂ. ೩೦೦ ಉಳಿಯಬಹುದಾಗಿ ಅಂದಾಜಿದೆ. ಇಲ್ಲಿನ ದಿನ ಸಂಗ್ರಹದಿಂದ ವ್ಯಾಪಾರಾಯರ ಫಂಡಿಗೆ ಸುಮಾರು ರೂ. ೭೦೦ ಕೊಡುವುದಾಗಿಯೂ ಸುಮಾರು ೪೫ ಮಡಿ ಅಕ್ಕಿ ಹಂಚಲಾಯಿತೆಂದೂ ತಿಳಿದುಬರುತ್ತದೆ.

ಶ್ರೀ ಬಾಬೂರಾಜೇಂದ್ರ ಪ್ರಸಾದರವರು ಇದೇ ತಾ. ೧೫ನೇ ರಾತ್ರಿ ಸುಮಾರು ೭ ಘಂಟೆಗೆ ಕೆನರಾ ಬೇಂಕ್ ಇನ್ಸ್‌ಟ್ಯೂಟ್‌ನ ಮಹಡಿಯಲ್ಲಿ ತಂಗುತ್ತಾರೆ. ರಾತ್ರಿ ಅಲ್ಲೇ ಉಳಕೊಳ್ಳುವರಾಗಿಯೂ, ತಾ. ೧೬ನೇ ಪ್ರಾತಃಕಾಲ ಅಲ್ಲಿಂದ ಹೊರಟು ಉಡುಪಿ ಕಲ್ಸಂಕದ ಬಳಿ ಆಕ್ಕೆ ಬಂದು, ಪಟ್ಟಣಿಗರಿಂದ ಸ್ವಾಗತೋಕ್ತರಿಸಲ್ಪಟ್ಟು, ಮೆರವಣಿಗೆಯಿಂದ ರಥಬೀದಿಗೆ ಬಂದು, ಶ್ರೀ ಪೇಜಾವರ ಮಠದ ಸರಸ್ವತಿ ಭಂಡಾರಕ್ಕೋಸ್ಕರ ಹೊಸತಾಗಿ ಕಟ್ಟಿಸಲಾಗುವ ಶ್ರೀ ವಾಸುದೇವನ ಆರಂಭೋತ್ಸವವನ್ನು ಮಾಡಿ ತೆಂಕಪೇಟೆ ಕೊಳದ ಪೇಟೆ ಸ್ವದೇಶಿ ಭಂಡಾರ ೬ ಪೇಟೆಡಿನ ದಾರಿ ಅಗಿಯಿಂದ ಸರಕಾರಿ ಆಸ್ಪತ್ರೆ ಬಳಿಯಲ್ಲಿನ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಪುರಜನ ಸಲ್ಲಿಸುವ ಮಾನಪತ್ರವನ್ನು ಸ್ವೀಕರಿಸಿ ಭಾಷಣವಿತ್ತು, ಪೂರ್ವಾಹ್ನ ೧೧ ಘಂಟೆಯ ಹರಿ ವಾಯ ಮೂಲ್ಕಿಗಾಗಿ ಪಯಣ ಬೆಳೆಸುವರೆಂದು ತಿಳಿದುಬರುತ್ತದೆ.

ಸುರತ್ಕಲ್:— ಸಾರ್ವಭೌಮರ ರಜತೋತ್ಸವದ ಸಲುವಾಗಿ ಇಲ್ಲಿಯ ಸುರತ್ಕಲ್ ಇಡ್ಯ ಮತ್ತು ಹೊಸಬೆಟ್ಟು ಗ್ರಾಮವಾಸಿಗಳು ಇದೇ ತಾ. ೬-೫ ೩೫ನೇ ಸೋಮವಾರ ಸ್ಥಳೀಯ ಇ. ಪಿ. ಶಾಲಾ ಮಂದಿರದಲ್ಲಿ ಅಭಿನಂದನ ಸೂಚಕ ಸಭೆ ಇತ್ಯಾದಿಗಳನ್ನು ಜಯಶೀಲರಾಗಿ ಜರಗಿಸಿದರು. ಪ್ರಾತಃಕಾಲ ಘಂಟೆ ೮ಕ್ಕೆ ಊರ ಮತ್ತು ಸೀಮೆಯ ನೆರೆಕರೆಯ ಶಾಲಾಬಾಲಕರೂ ಶಿಕ್ಷಕರುಗಳೂ ಇಗರ್ಜಿಯಿಂದ ಹೊರಟಾಗಿದ್ದು ೩ ೬ ಶಾಲೆಯಿಂದ ಆಕ್ಷವರ್ಗಗಳ ಚಿತ್ರದೊಂದಿಗೆ ಬ್ಯಾಂಡ್ ವಾದ್ಯ ಸಹಿತ ಮೆರವಣಿಗೆಯಾಗಿ ಪೇಟೆಯವರೆಗೆ ಹೋಗಿ ಪುನಃ ಅದೇ ಶಾಲೆಗೆ ಬಂದು ಸಭೆ ಕೂಡಿದರು. ಅಲ್ಲಿ ಅಂದಿನ ಉತ್ಸವದ ಕುರಿತು ಭಾಷಣವೂ, ಚಕ್ರವರ್ತಿಗಳ ಶ್ರೇಯಃಪ್ರಾರ್ಥನೆಯೂ ಆದ ಮೇಲೆ ತಿಂಡಿ ಹಂಚೋಣ ಮತ್ತು ರಾಜಗೀತೆಗಳೊಂದಿಗೆ ಆ ಸಂತೋಷಸಮಾರಂಭವು ಕೊನೆಗೊಂಡಿತು. ಅಂದು ಸ್ಥಳೀಯ ಹಿಂದೂ, ಮುಸಲ್ಮಾನ ಮತ್ತು ಕ್ರೈಸ್ತ ದೇವಾಲಯಗಳಲ್ಲಿ ಈ ಸಂಬಂಧ ವಿಶೇಷ ಪೂಜಾದಿಗಳೂ ನೆರವೇರಿದುವು.

ಕಾರ್ಕಳ:— ಇಲ್ಲಿಯ ಜಕ್ಕಿಗರೂ ಆರೆಸರ ಜೊತೆಯು ಜ್ಯುಬ್ಲಿ ದಿನವನ್ನು ಗ್ರಾಮ ಮೆರವಣಿಗೆ, ದೇವಾಲಯ ಸಂದರ್ಶನ, ಪೂಜೆ ಪ್ರಾರ್ಥನಾದಿಗಳು, ಮಕ್ಕಳಿಗೆ ತಿಂಡಿ ಹಂಚೋಣ ಇತ್ಯಾದಿ ಕಾರ್ಯಕ್ರಮಗಳಿಂದ ಆಚರಿಸಿದರು.

ಕಲ್ಲಡ್ಕ:— ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ರಜತೋತ್ಸವ ಸಮಾರಂಭವು ಬೆಳಗ್ಗೆ ೯॥೦ ಗಂಟೆಗೆ ಪ್ರಾರಂಭವಾಗಿ ಪ್ರಭೇಗಳು ಸ್ಥಳೀಯ ಮೆಜಿಸ್ಟ್ರೇಟರ ನೇತೃತ್ವದಲ್ಲಿ ಜರಗಿದುವು.

ಜಿಲ್ಲೆಗೊಂದು ವಾಗ್ಚಲಚಿತ್ರ ಕಂಪೆನಿ.

ಇತ್ತೀಚೆಗೆ ನಮ್ಮ ಕರ್ನಾಟಕದಲ್ಲಿ ನಾಟ್ಯ ಪ್ರಪಂಚಕ್ಕೆ ಬಹು ದೊಡ್ಡದಾದ ಪೆಟ್ಟು ತಗಲಿ ಬಿಟ್ಟಿದೆ. ದೊಡ್ಡ ದೊಡ್ಡ ನಾಟ್ಯ ಸಂಘಗಳು ನಿರ್ಮೂಲಗೊಂಡಾಗ ಹತ್ತಿವೆ. ಅವುಗಳಿಗೆ ಜನಗಳ ಪ್ರೋತ್ಸಾಹನವು ಸಾಕಷ್ಟು ಸಿಕ್ಕುವುದಿಲ್ಲ ಜನತೆಯಿಂದ ಪ್ರೋತ್ಸಾಹನೆಯನ್ನು ಪಡೆಯುವಷ್ಟು ಉಚ್ಚ ತರಗತಿಯ ನಟರನ್ನು ವೇತನದಿಂದ ಹಿಡಿಯುವಷ್ಟು ಶಕ್ತಿಯೂ ಅವುಗಳಲ್ಲಿ ಉಳಿದಿಲ್ಲ. ಅದಿಲ್ಲದ್ದಕ್ಕೆ ಜವಾಬ್ದಾರ ನಟರು ಎತ್ತಾದರೂ ಕಾಲಹರಣ ಮಾಡುವುದಕ್ಕಾಗಿ ಹೊಟ್ಟೆಯ ಪಾಡಿಗೆ ಕೇರೆ ಹಾವು ಆಡಿಸಿದಂತೆ ಚಿಕ್ಕ ಚಿಕ್ಕ ನಾಟ್ಯ ಸಂಘಗಳನ್ನು ಸ್ಥಾಪಿಸಿಕೊಂಡು ಎತ್ತೋ, ಹೇಗೋ ಕಾಲಹರಣ ಮಾಡತೊಡಗಿದ್ದಾರೆ. ಇನ್ನು ಮುಂದೆ ಈ ಪರಿಸ್ಥಿತಿಯೂ ಕೂಡಾ ಉಳಿಯಲಿಕ್ಕಿಲ್ಲ. ಹೀಗಾಗುವುದಕ್ಕೆ ಅನೇಕ ಕಾರಣಗಳಿದ್ದರೂ, ಮುಖ್ಯ ಕಾರಣವೆಂದರೆ "Talkie" ವಾಚಾಲಚಿತ್ರಗಳು ಪ್ರಚಾರದಲ್ಲಿ ಬಂದುದೇ. ಮಿಕ್ಕ ದೇಶದ ಅಭಿಮಾನಿಗಳಾದ ದೇಶ ಹಿತೈಷಿಗಳು ಸಕಾಲಕ್ಕೆ ಸಾವಧಾನಾಗಿ ಕಲಾಜೀವಿಗಳ ಜೀವನವು ಸುಗಮವಾಗಿ ಸಾಗುವಂತೆ ಅಲ್ಲಲ್ಲಿ ವಾಚಾಲ ಚಲಚಿತ್ರ ನಿರ್ಮಾಣಕ ಸಂಸ್ಥೆಗಳನ್ನು ಏರ್ಪಡಿಸಿದ್ದಾರೆ. ಇದನ್ನು ಪ್ರತ್ಯೇಕ ಪುರಾವೆ ಕೊಟ್ಟು ರುಜುಪಡಿಸುವುದು ಅಗತ್ಯವಿಲ್ಲ. ಕರ್ನಾಟಕದ ಅನೇಕ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವರ್ಷಾವಧಿ ಕಾರ್ಯಕ್ರಮಗಳನ್ನು ಸಭಾಭವನಗಳಲ್ಲಿ ನಡೆಸಿ ಸಾಲದುದಕ್ಕೆ Touring Talkie ಸಂಚಾರಿ ವಾಚಾಲಚಿತ್ರಗಳು ಎನ್ನುವಂತಹ ಸಂಸ್ಥೆಗಳ ಪರಿಮುಖದಿಂದ ನಮ್ಮ ಕರ್ನಾಟಕದ ಹೊನ್ನಿನ ಕಾಲುವೆಯನ್ನು ತಮ್ಮ ದೇಶದ ನಾಟ್ಯಕಲೆಯ ಗದ್ದೆಗಳಿಗೆ ತಿರುವಿ ಬಿಟ್ಟಿದ್ದಾರೆ. ಅಂದಲ್ಲಿಯೇ, ಅಲ್ಲಿಯ ನಾಟ್ಯ ಪ್ರಪಂಚಕ್ಕೆ ಸುಭಿಕ್ಷ ಸುಭಕ್ಷ ತದ್ವಿರುದ್ಧವಾಗಿ ಇಲ್ಲಿ ಮಾತ್ರ ಉಗ್ರವಾದ ಬರ ಹೀಗಿದ್ದ ಸಂದರ್ಭದಲ್ಲಿ ಈ ಕಲಾಜೀವಿಗಳು ವ್ಯವಸಾಯಾಂತರವನ್ನು ಮಾಡಬೇಕಾಗುವುದು

ಪ್ರಗತಿ ಕಾಲಕ್ಕನುಸರಿಸಿ, ನಮ್ಮ ಕರ್ನಾಟಕದವರು ತಮ್ಮ ಕಲೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಅವರಂತೆ ಸಾಹಸಪಡುವುದು ಬೇಡವೇ? ಇಲ್ಲಿ ಹಣವಿಲ್ಲವೇ? ನಟರಿಲ್ಲವೇ? ಅದ್ವಿತೀಯವಾದ ನೈಸರ್ಗಿಕ ಸೌಂದರ್ಯವಿಲ್ಲವೇ? ಎಲ್ಲವೂ ಇದೆ, ಹಾಗಾದರೆ ಇಲ್ಲದ್ದಾವುದು! ಇಲ್ಲದ್ದಾವುದೆಂದರೆ ಉತ್ಸಾಹ

ಹೀಗೆ ಉತ್ಸಾಹರಹಿತರಾಗಿ ಜೀವಿಸುವುದು ಮಾನ್ಯವೇ! ನಮ್ಮ ಕರ್ನಾಟಕ, ನಮ್ಮ ನಾಡು, ನಮ್ಮ ನುಡಿ, ನಮ್ಮ ಕಲೆ—ಹೀಗೆಂದು ಶಾಬ್ದಿಕ ಅಭಿಮಾನವನ್ನು ವ್ಯಕ್ತಪಡಿಸುವುದಕ್ಕಿಂತಲೂ ಕೃತಿಯಿಂದ ಸಿದ್ಧಮಾಡಿ ತೋರಿಸುವುದೇ ನಿಜವಾದ ಅಭಿಮಾನ ಲಕ್ಷಣವು ಅದೇ ಬದುಕಿದ ಲಕ್ಷಣ

ಅದಕ್ಕಾಗಿ, ಅತೀ ಕ್ಷಿಪ್ರದಲ್ಲಿ ವಾಚಾಲ ಚಲಚಿತ್ರ ನಿರ್ಮಾಣಕ ಸಂಸ್ಥೆಯನ್ನು ನಿರ್ಮಾಣಿಸಿ ಕೊಡಬೇಕೆಂದ ಎಲ್ಲಾ ಕರ್ನಾಟಕ ನಾಟ್ಯ ಕಲಾಜೀವಿಗಳ ಪರಿಯಿಂದ ನಾವು ಪ್ರತಿಯೊಬ್ಬ ಕನ್ನಡಿಗನಿಗೆ ವಿಜ್ಞಾಪಿಸುತ್ತೇವೆ

ಸಹಸ್ರಾರು ರೂಪಾಯಿಗಳ ಹಿಂದೂಸ್ಥಾನ, ಮರಾಟಿ, ತಮಿಳು, ತೆಲುಗು ಇತ್ಯಾದಿ ಟಾಕೀಗಳನ್ನು ಈ ವರೆಗೂ ನೋಡುವುದಕ್ಕಾಗಿ ಎಷ್ಟು ಹಣ ವೆಚ್ಚ ಮಾಡಿರಬಹುದೋ ಅದರ ನಾಲ್ಕನೇ ಒಂದಂಶದಷ್ಟು ಹಣವನ್ನಾದರೂ ವಿಜ್ಞಾಪಿಸಲ್ಪಟ್ಟ ಕಾರ್ಯಕ್ಕೆ ಕೊಟ್ಟುದಾದರೆ ನಿಸ್ಸಂದೇಹವಾಗಿ ಅಂತಹುದೊಂದು ಸಂಸ್ಥೆಯನ್ನು ಇಲ್ಲಿ ತೆಗೆಯುವುದು ನಮಗೆ ಸಾಧ್ಯವಿದೆ. ಶ್ರೀ। ಗರುಡರು, ಇದೊಂದು ಏನೋ ಹೊಸತಾದ ರಾಗ ತೆಗೆದಿದ್ದಾರೆಂದು ಭಾವಿಸಬೇಡಿರಿ, ಅಥವಾ ಭಾವಿಸಿದರೂ ತರವಿಲ್ಲ. ಶ್ರೀ। ಗರುಡರ ಹಳೇ ರಾಗವಾದ, ನಾಟಕಮಂಡಳಿಗೆ ಪ್ರೋತ್ಸಾಹನವಿರುತ್ತಿದ್ದರೆ, ಈ ಹೊಸ ರಾಗಕ್ಕೆ ಉದ್ಯುಕ್ತರಾಗುತ್ತಿರಲಿಲ್ಲ. ಈ ಹೊಸ ರಾಗವು ಅದರ ತಕ್ಕ ಪದದಲ್ಲಿ ವಿಲೀನವಾಗಬೇಕಾದರೆ, ನಾಡಿನ ಲಕ್ಷ್ಮೀಪುತ್ರರ ಬೆಂಬಲ ಬೇಕು. ಅದಕ್ಕಾಗಿಯೇ ಇದೇ ದಕ್ಷಿಣಕನ್ನಡ ಜಿಲ್ಲೆಯಲ್ಲಿಯೇ ಸೂಚಿತ ಸಂಸ್ಥೆಯು ಸ್ಥಾಪನೆಯಾಗಬೇಕೆಂದು ನಮ್ಮ ಅತ್ಯಾಗ್ರಹದ ಕೋರಿಕೆ. ಅದು ಕರ್ನಾಟಕದ ಮಿಕ್ಕ ಯಾವ ಭಾಗದಲ್ಲಿ ಸ್ಥಾಪಿಸಲ್ಪಟ್ಟರೂ ಅಷ್ಟು ಫಲಕಾರಿಯಾಗದು. ಅದಕ್ಕೆ ಕಾರಣಗಳು —

ದಕ್ಷಿಣ ಕನ್ನಡದ ಎಡಬಲ ಸೇವೆಗಾಗಿ ಸಮುದ್ರ ಪಟ್ಟಗಳು ಸಿದ್ಧವಾಗಿ ನಿಂತಿವೆ. ಜನಗಳಿಗೆ ಬಣ್ಣ ಮತ್ತು ರೂಪಗಳು ಅನುಕೂಲವಾಗಿವೆ. ವ್ಯವಹಾರದ ಮಹತ್ವವನ್ನು ಇಲ್ಲಿಯವರು ಅರಿತವರು. ಕರ್ನಾಟಕದ ಮಿಕ್ಕ ಎಲ್ಲಾ ಭಾಗಕ್ಕಿಂತಲೂ ಸಾಂಘಿಕ ರೀತಿಯಿಂದ ಅನೇಕ ಸಂಸ್ಥೆಗಳು ಇಲ್ಲಿ ನಡೆದುದನ್ನು ನಾವು ಬಲ್ಲೆವು. ಅದಕ್ಕಾಗಿಯೇ ಇಲ್ಲಿ ಅದು ಸುವ್ಯವಸ್ಥಿತವಾಗಿ ನಡೆದು ಫಲಪ್ರದವಾಗಬಹುದೆಂದು ನಮ್ಮ ನಂಬಿಕೆ

ಅದಕ್ಕಾಗಿ, ತಜರಿಂದ ತಿಳಿದುಕೊಂಡ ಪ್ರಕಾರ ಸಂಸ್ಥೆಗೆ ಮೂಲಧನವೆಷ್ಟು ಬೇಕಾಗುವುದು? ಅದನ್ನು ಕೂಡಿಸುವುದಕ್ಕಾಗಿ ಸಕಲರೂ ಸುಲಭವಾಗಿ ಕೊಡುಕೊಳ್ಳತಕ್ಕ ಹತ್ತು ಹತ್ತು ರೂಪಾಯಿದ್ದೇ "ಶ್ಯಾರು"ಗಳನ್ನು ಇಡತಕ್ಕವರು. ಸಮರ್ಥರಾದ ಧನಿಕರು ಇಷ್ಟು ಚಿಕ್ಕ "ಶ್ಯಾರು"ಗಳನ್ನು ಇಡುವುದು ಒಂದು ಬಗೆಯ ತಮ್ಮ ಅಪಮಾನವೆಂದು ಭಾವಿಸುವುದಾದರೆ ಬಹು ಜನ ಬಡವರ 'ಶ್ಯಾರು'ಗಳನ್ನು ಒಬ್ಬರೇ ಪಡೆದ ಶ್ರೇಯೋಭಾಗಿಗಳಾಗಬೇಕು.

ಮೊದಲು ಕಾರ್ಯಾರಂಭವನ್ನು ಮಾಡಲು ಸಾಕಷ್ಟು ಧೈರ್ಯ ನಮಗುಂಟಾಗುವುದಕ್ಕೆ. ನಮ್ಮ ಶ್ರೀ ದತ್ತಾತ್ರೇಯ ಕಂಪನಿಯವರಿಂದಲೇ, ಈ ದಕ್ಷಿಣ ಕನ್ನಡ ಜಿಲ್ಲೆಯ ಆರು ತಾಲೂಕುಗಳಲ್ಲಿ ಎಷ್ಟು "Share" ಪಾಲುಗಳು ಶೀಘ್ರವಾಗುವುದು ಶಕ್ಯವಿದೆ? ಅದನ್ನು ತಿಳಿದುಕೊಳ್ಳುವುದಕ್ಕೆ ಪ್ರತಿನಿಧಿಗಳು ಬರತಕ್ಕವರಿರುವರು. ಅವರಿಗೆ Share ತೆಗೆದುಕೊಳ್ಳತಕ್ಕವರು "ನಾನು ಇಷ್ಟು 'ಶ್ಯಾರು' ಪಾಲು ತೆಗೆದುಕೊಳ್ಳುತ್ತೇನೆಂದು ಅರ್ಜಿಯ ಫಾರ್ಮಿನ ಮೇಲೆ ಬರೆದು ಸಹಿ ಮಾಡತಕ್ಕದ್ದು. ಯೋಚಿತ ಕಾರ್ಯಕ್ಕೆ ಇಚ್ಛಿತ ನಿಧಿ ಕೂಡುವುದೆಂದು ಮುಂದಟ್ಟವಾದ ತಕ್ಷಣವೇ ಸ್ಥಾಪಿಸುವ ವಾಚಾಲ ಚಲಚಿತ್ರ ಸಂಸ್ಥೆಗೆ ದಕ್ಷಿಣ ಕನ್ನಡ ಜಿಲ್ಲೆಯ ಸಾರ್ವಜನಿಕ ಅಭಿಮಾನದ್ಯೋತಕವೆಂದ ಒಂದು ಹೆಸರನ್ನಿಟ್ಟು ಅದನ್ನು ರಿಜಿಸ್ಟರ್ ಮಾಡಿಸಿ, ಪಾಲಿನ ಹಣದ ವಸೂಲಿಗಾರಂಭಿಸುವರು. ಈ ನಮ್ಮ ಯೋಚಿತ, ಉಚಿತ ಕಾರ್ಯವು ಯೋಚನೆಯಲ್ಲಿಯೇ ಮಾಯವಾಗದಂತೆ ಪ್ರಯತ್ನಪಡುವುದು ಪ್ರತಿಯೊಬ್ಬ ದೇಶಾಭಿಮಾನಿಯ ಇತಿ ಕರ್ತವ್ಯವಾಗಿದೆಯೆಂದು ಸೂಚಿಸುವ ನಿಮ್ಮೆಲ್ಲರ ಪರಿಚಿತನಾದ—

ಗರುಡ ಸದಾಶಿವರಾಯ.

The Canara Public Conveyance Company, Ltd., Mangalore.

WE TAKE UTMOST CARE OF PASSENGERS

Read the following letter –

Modern Hindu Hotel,
Calicut, 17—6—1934

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,

(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ಕಿರಾಯಾಕಡ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ನಮ್ಮ ಮುಂದಾಳುಗಳು

'ನವಯುಗವು ಜಿಲ್ಲಾ ಬೋರ್ಡಿನ ಸಭೆಯ ವಿಮರ್ಶೆಯನ್ನು ಮಾಡಿದೆಯೆಂಬುದು ಸಂತೋಷ. ಚುಟುಕಿನಲ್ಲಿ ಅದರ ವಿಚಾರ 'ಗೋಷ್ಠಿ'ಯನ್ನು ತರ್ಕಿಸಿದರೆ ತಪ್ಪಾಗದಷ್ಟೆ. 'ಬೇಜವಾಬುದಾರಿ' ಅಗಲೂ ಬಹುದು, ಈ ಪದದ ಅರ್ಥ—ತಮಗೆ ಒಪ್ಪಿಗೆಯಿಲ್ಲದ ಮಾತು ಬೇಜವಾಬುದಾರಿ ಮಾತು ಎಂದು ತಿಳಿದ ರಾಯಿತು

ಶ್ರೀ ಎ ಬಿ ಶೆಟ್ಟರು ಬೋರ್ಡು ಮೀಟಿಂಗುಗಳಲ್ಲಿ ವಹಿಸುತ್ತಿದ್ದ ಗಾಂಭೀರ್ಯ ಮಾನನೀಯವೇ ಸರಿ ಅವರು ಎಷ್ಟೋ ಹೊಸ ಚಟುವಟಿಕೆಗಳ ವಿಷಯದಲ್ಲಿ ವಹಿಸುವ ಉತ್ಸಾಹವನ್ನು ಯಾರೂ ಅಲ್ಲಗಳೆಯಲಾರರು. ಆದರೆ ಶ್ರೀ ಎ ಬಿ ಶೆಟ್ಟರವರಿಂದಲೇ ನಡೆಯಿಸಲ್ಪಡುವ ಪತ್ರಿಕೆಯಾದ, (ಹೆಸರಿಲ್ಲವಾದುದರಿಂದ ಸಂಪಾದಕರ ಲೇಖನ) ನವಯುಗವು ಈ ಮಾತುಗಳನ್ನು ಹೇಳಿದರೆ ಮಾತ್ರ ಚಂದಕದೀತೆ?

\+ + + +

ಆ ಲೇಖದ ಉದ್ದೇಶ ಇತರ ಪತ್ರಿಕೆಗಳು ಹಬ್ಬಿಸುವ ದುರಭಿಪ್ರಾಯ ಓಡಿಸುವುದಂತೆ ಆದರೆ ಅಲ್ಲಲ್ಲಿ ದಿವಾನ ಬಹದೂರ್ ಹೆಗ್ಗಡೆಯರನ್ನು 'ಅವರು ಕುಚ್ಛಿದರು—ಇವರು ಬೆಪ್ಪಾದರು' ಎಂದು ಹೇಳುವ ಮೇಲುಮೇಲಿನ ಮಾತಿನ ಉದ್ದೇಶ, ಅಂತರಂಗದ ನಂಜನ್ನಿಷ್ಟೆ ಕಾರುವುದು

\+ + + +

ಶ್ರೀ ಹೆಗ್ಗಡೆಯವರು ಜನಭರತಿಯ ಶಾಲೆಯನ್ನು ಮುಚ್ಚಬೇಕೆಂದುದ ಮಹಾಪರಾಧವಾಗಲಾರದು. ಅಂಥವು ಬೇಕಷ್ಟು ಇವೆ ಯಾಕೆ ಬೋರ್ಡಿನವರ ಸುಧಾರಿಸಲು ಯುಕ್ತಿಸಿಲ್ಲ? ಅವರಿಂದ ಸಾಧ್ಯವಿಲ್ಲವಾಯಿತೆಂದೇ ಶಾಲೆಗಳನ್ನಿರಿಸುವುದು ಶಿಕ್ಷಣದ ಪ್ರಚಾರಕ್ಕೆ ಅದರಲ್ಲಿ ಮಾಸ್ತರಗಳನ್ನು ಸಾಕುವ ಉದ್ದೇಶಕ್ಕಿಂತ ಹೆಚ್ಚಿಗೆ ಇರುವ ಹಣದಲ್ಲಿ ಆದಷ್ಟು ಹೆಚ್ಚಿನ ಜನರಿಗೆ ವಿದ್ಯಾ ಪ್ರಸಾರವಾಗಬೇಕೆಂದು. ಮಾಸ್ತರರು ಇರುವುದು, ಅವರನ್ನು ಬೋರ್ಡು ಸಾಕುವುದು ಆ ಉದ್ದೇಶಕ್ಕೆ ಹೀಗಿರಲು—ಬರಿಗೆಭರತಿ ಶಾಲೆಗಳನ್ನು ಜನಹಿತದ ದೃಷ್ಟಿಯಿಂದ ಮುಚ್ಚಬೇಡವೆ? ನೂರು ಜನರಿಗೆ ಇನ್ನೊಂದು ಕಡೆ ಬೇಕಾಗುವ ಹಣವನ್ನು ಹತ್ತು ಜನರ ಮೇಲೆ ವ್ಯಯಿಸಲು—ಇದು ಅನ್ನಛತ್ರವಲ್ಲ ಇಂತಹ ರಠಾವನ್ನು ಹೆಗ್ಗಡೆಯವರು ತಂದುದು ಅನ್ಯಾಯವೇ?

\+ + +

ಘೋರ ಅಪರಾಧವಿನ್ನೊಂದು ಸೇರಿಬಿಡಿ ಬೋ ಎಡ್ಯುಕೇಶನ್ ಆಫೀಸರರು. ಅದಕ್ಕೆ ಸೈಗುಟ್ಟಿದುದು. ಹೆಗ್ಗಡೆಯವರ ತಂದ ಠರಾವಿಗೆ ಅವರು ಸೈಗುಟ್ಟಿದುದು ತಪ್ಪೇ ಸರಿ ಅವರಿಗೆ ಶ್ರೀ ಹೆಗ್ಗಡೆ ಶೆಟ್ಟರ ಕರ್ಣಾರ್ಜುನ ಕಾಳಗ ತಿಳಿದಿದ್ದ ಸನ್ನಿವೇಶಬಾರದಿತ್ತೇ? ಜಿಲ್ಲಾ ಬೋರ್ಡು ಶಾಲೆಗಳನ್ನು ಸುಧಾರಿಸುವ ಸೂಚನೆ ಅವರು ಅಲ್ಲಿ ಮಾಡಲಿಲ್ಲ ಪಾಪ, ಬಜೆಟ್ ಸಭೆಯಲ್ಲಿ ಶಿಕ್ಷಣದ ಸುಧಾರಣೆಯ ವಿಷಯ ಅವರೆಡೊಂದು ಉಪನ್ಯಾಸಕ್ಕೆ ಕರೆಯಬಹುದಿತ್ತಲ್ಲ. ಅಲ್ಲಿತ್ತು ರೂ. ಆ. ಸೈ ವಿಚಾರ ಅವರು ಅದಕ್ಕೆಂದು ಮಾತನಾಡಿದರು

\+ + + +

ಇನ್ನು ರೋಡ್ ಡೆವಲಪ್‌ಮೆಂಟ್ ಫಂಡಿನ ಹಣ ಈ ಜಿಲ್ಲೆಗೆ ಸಿಗದ ವಿಚಾರ ನಮ್ಮಲ್ಲಿ ಸಿಬ್ಬಂದಿ ಕಡಿಮೆಯಾಗಿ ಹಾಗಾಗಿಲ್ಲ ಹಾಲಾಡಿ ಸಂಕ ಹಾರ್ಡಿಂಜ ಸೇತುವೆಯಲ್ಲಿ! ಆಲಸ್ಯ ಹೆಚ್ಚಾಗಿ ಹಾಳಾದ ಕೆಲಸಗಳಿಗೆ, ಸಿಬ್ಬಂದಿ ಕಡಿಮೆಯೆಂದು ಗೋಳಿಡಬೇಕೇ? ಇನ್ನಷ್ಟು ಸಿಬ್ಬಂದಿಯಿದ್ದರೂ, 'ಸರಕಾರಿ ಹಣ' ಎಂದು ತಿಳಿಯುವ ಜನರಿದ್ದರೆ ಆಗುವ ಪರಿಣಾಮವೇ ಇಷ್ಟು ಸಿಬ್ಬಂದಿ ಹೆಚ್ಚಾಗಿ—ಈ ಮೂರು ವರುಷದ ಅವಧಿಯಲ್ಲಿ ಅದಂಥ ಕಾಮಗಾರಿಗಳ ಮಹತ್ವ, ನಷ್ಟದ ಉಳಿತಾಯ ಇವುಗಳನ್ನು ಯಾವ್ಯಾವ ರೀತಿಯಿಂದ ಮಾಡಿಸಿದರು'—ಎಂದು ಹೇಳಲಿ'

\+ + + +

ಒಂದು ಕಡೆ ಶಿಲ್ಕಿನ ಹಣ ಕಡಿಮೆಯಾದ ಬಗ್ಗೆ ಉಪನ್ಯಾಸ ದೊರಕಿದೆ "ಪ್ರಗತಿಪರವಾದ' ಬೋರ್ಡಿನ ಮಹತ್ವ ಕೊಂಡಾಡಿದ್ದಾರೆ 'ಪ್ರಗತಿ ಎಂಬ ದಪ್ಪ ಶಬ್ದದಿಂದ ಯಾರೂ ಬೆರಗಾಗರು ಪ್ರಗತಿಯನ್ನು ತೋರಿದ ಉದಾಹರಣೆಗಳು ಬರಲಿ ತನ್ನ ಹಾಸಿಗೆಗೆ ಸರಿಯಾಗಿ ಕಾಲು ಚಾಚುವುದು ಪ್ರಗತಿಯೇ? ಕಾಸರಗೋಡು ಮಾಜಿ ತಾಲೂಕು ಬೋರ್ಡಿನಂತೆ ವ್ಯತುಂಬ ಸಾಲವಾದರೆ ಪ್ರಗತಿಯೇ ಅವರೂ ಬಲು ಸುಧಾರಣೆ ನಡೆಸಿದರು ಶಕ್ತಿಗೆ ಮೀರಿ ಸುಧಾರಣೆ ನಡೆಸಿದರೆ, ಲಾಭದ ಬದಲು ಹಾನಿಯೇ ಆದೀತು

\+ + + +

ಕೊನೆಯ ಎಸಂಬು—ಸ್ವದೇಶಾಭಿಮಾನಿಯ ಕಡೆಗೆ ಪಾಪ ಇರಲಿ ಅಂಕ—ಆದು ತಪ್ಪು ಸಂಖ್ಯೆ ಕೊಟ್ಟಿದೆ ಎಂದ ತಿಳಿದ ಒಳ್ಳೆ ಯಾದರೂ ಸರಿ ಸಂಖ್ಯೆ ಕೊಡಲ ಇವರ ಪ್ರಕಟಿಸಬಾರದಿತ್ತೇ ಇನ್ನು ಆ ಸಂಖ್ಯೆ ಕೊಟ್ಟವರ ಬಜೆಟಿನ ಕವಿ ಟಿಪ್ಪಣಿ ಇರಬೇಕೆ ಚಕ್ರ ಬಾಣ—ಅದರ ಅರ್ಥವೇನು. ಒಳಗುಟ್ಟು ಹೊರಗೆ ಹೋಯಿತೆಂದೇ ಇವರ ಬಜೆಟು ಕವಿಟಿಗೆ ಸರಿಸಂಖ್ಯೆ ತಿಳಿಯದ ಮೆಂಬರರೂ ಸೇರಿಬಿಟ್ಟಿದ್ದಾರೆಂದೇ! ಹಾಗೆ ಅಂಕೆಸಂಖ್ಯೆ ಗೊತ್ತಿಲ್ಲದ ಜನರನ್ನು ಸೇರಿಸಿಕೊಂಡಿದ್ದರೆ—ಬಜೆಟು ಎಷ್ಟು ಚೆನ್ನಾಗಿ ಆದೀತ? ಬಜೆಟು ಬಹಳ ಮೋಸವಾಗಿ ಡಿಸ್ಟ್ರಿಕ್ಟ್ ಬೋರ್ಡಿಗೆ ನಷ್ಟವಾದರೆ ಅದನ್ನು ತಾನು ಧರಿಸುವೆನೆಂದು ನಮ್ಮ ಸದಸ್ಯರಲ್ಲಿ ಮುಂದೆ ಯಾರಾದರೂ ಬರುತ್ತಾರೆಂದು ನಂಬಿದ್ದೇವೆ

\+ + + +

ಬೋರ್ಡಿನವರು ಇನ್ನು ಮುಖಾಬಲೆಗೆ ಪತ್ರಿಕೆಗಳಿಗೆ ಅವಕಾಶ ಕೊಡುವರೆಂಬುದು ಸಂತೋಷ ಒಂದೊಂದೇ ಪತ್ರಿಕೆಯವರು, ಅವರಿಂದ ಒಂದೊಂದು ಸಮಯ ಮಾಡಿಕೊಂಡು ಪಚೀತಿಪಡುವುದಕ್ಕಿಂತ—ತಿಂಗಳಿಗೊಮ್ಮೆ ಇಂಥಾ ದಿನವೇ ಎಂದು ಅವರಿಗೆ ನಿರ್ಣಯ ಮಾಡಿದರೆ ಪತ್ರಿಕೆಯವರು ಅವರಿಗೆ ಧನ್ಯವಾದವಿತ್ತಾರ ವಾರಕ್ಕೊಂದು ದಿನ ಈ ಮುಖಾಬಿಲೆ ಮಾಡಿದರೆ ಅವರಿಂದಲೂ ಪೂರೈಸಲು ಬರಲಾರದು.

\+ + + +

ಸಿಲ್ವರ್ ಜುಬಿಲಿ ಮುಗಿಯಿತು—ಎಲ್ಲಾ ಬಿಟ್ಟು ಯೂರೋಪಿಯನ್ ಕ್ಲಬ್ಬಿನಲ್ಲೀ ಗದ್ದಲವಿಲ್ಲವಂತೆ. ಅವರು ಬೇರೆ ಕಡೆಗೆ ಗದ್ದಲ ಕಾಣಲು ಹೋದರೋ ಏನೋ

(ಹಿಂದೇ ಪುಟದಿಂದ ಮುಂದುವರಿದುದು)

ಲಕ್ಷ್ಮಿಯು ಮನೆಗೆ ಬಂದಂದಿನಿಂದ ಪಂಡಿತರಿಗೆ ಅವಳ ದೃಷ್ಟಿಯ ಹರಿತವನ್ನು ನೋಡಿ ನೋಡಿ ಸಂಶಯಿಸುವುದೊಂದೇ ಕೆಲಸ ಹೊರಗಿನ ಯುವಕರೆದುರಂತೂ ಲಕ್ಷ್ಮಿಯು ನಿಲ್ಲಲಪ್ಪಣೆಯಿಲ್ಲ—ಅದರೊಡನೆ ತನ್ನ ಮಗ ರಂಗಪ್ಪನೆದುರೂ ಅವಳು ನಿಲ್ಲಬಾರದು'

ಕಳೆದ ವರ್ಷದ ದಶಂಬರ ತಿಂಗಳಲ್ಲಿ ಪಂಡಿಗುಡ್ಡೆಯಲ್ಲಿ ಯಾವ ರೋಗವೂ ತಲೆದೋರಿದ್ದಿಲ್ಲವಾದರೂ ಜಾರು ಗುರಿಕಾರರು ಒಂದೋ ದಿನದೊಳಗೆ ತನ್ನ ಎರಡನೆಯ ಹೆಂಡತಿಯ ಹಾದಿ ಹಿಡಿದರು (ಮೊದಲನೆಯವಳು ತಾನು ಮದ್ದು ಕುಡಿಸುವ ಗಾಣವಲ್ಲವೆಂದು ಹೇಳಿ ಮನೆಗೆ ಹೋಗಿದ್ದಳು) ಪಂಡಿತರನ್ನು (ಅವರು ಹಲವರನ್ನು ಮಾಟ ಮಾಡಿ ಕೊಂಡ ಮದ್ದುಗಳೊಡನೆ) ಹೂಣಿಟ್ಟರು

ಈಗ ಮನೆಯಲ್ಲಿ ರಂಗಪ್ಪ ಮತ್ತು ಲಕ್ಷ್ಮಿ ನೆರೆಹೊರೆಯವರು ಗುಜು ಗುಜು ಮಾತನಾಡುತ್ತಿರುವರ ಸುಳ್ಳೋ ಸತ್ಯವೋ ನಮಗೆ ತಿಳಿಯದು ಆದರೆ ಇದು ಮಾತ್ರ ಸತ್ಯ ರಂಗಪ್ಪ ಕೇರಿಗೆ ಹೋಗುವುದೇ ಇಲ್ಲ—ದುರಭ್ಯಾಸಗಳನ್ನು ಬಿಟ್ಟಿದಾನೆ ಹಿಂದಿನ ವಿವಾಹವಾಗಲು ಒಪ್ಪುವುದೇ ಇಲ್ಲ

Al Rights Reserved)

ಮ ಜಾ

Comfortable like an Aeroplane

Use our swadeshi Mosquit net f r health (mfort and soun l sleep as it you are in an Aeroplane Sample cuttin free More convenient if some advance sent with order

L	B	H	Price	Best
6 Fit	3½ Fit	3½ Fit	Rs 1/12	2/8
6 „	4	4	2 4	3/
6½ ,	4½	4½ ,	2/8	3 8
7 ,	5 „	5 ,	3/2	4/10
7½ ,	6 ,	6 „	4/4	5/12

G M Sharma, Post Box F 6706 Calcutta

ಕುಷ್ಠ ರೋಗ ಮತ್ತು ಫರಂಗಿ ರೋಗ ನಿವಾರಣೆಯಿಲ್ಲ; ದುಡ್ಡೂ ಇಲ್ಲ

ಎಷ್ಟು ದೀರ್ಘಕಾಲದ ರೋಗವೇ ಆಗಿರಲಿ ಯಾವ ಕಾರಣವೇ ಇರಲಿ ನೀವು ಮದ್ದು ಮಾಡಿ ಮಾಡಿ ದಣಿದಿರಿ ನಿಮ್ಮ ರೋಗಗಳನ್ನು ಇಂದ್ರಜಾಲದಂತೆ ಶಾಶ್ವತವಾಗಿ 4 ವಾರಗಳಲ್ಲಿ ಗುಣಪಡಿಸಲಾಗುತ್ತದೆ ಪೂರ್ಣ ಗುಣ ಗೇರಂಟಿ ಕೃಯು ರೋಗನಿವಾರಣೆಯಾದ ಮೇಲೆ ಕ್ರಯ ಮತ್ತು ಬಹುಮಾನ ಕೊಡಬೇಕು, ಬರೆಯಿರಿ.

Kamala Works,
Panchpota Bengal S B

C P S

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

I P No 16/35.

ಗೋವಿಂದ ಕುಡ್ವಾ, ಉಪೇಂದ್ರ ಕುಡ್ವರ ಮಗ ಮಂಗಳೂರು ಶಹಾರ—ಅರ್ಜಿದಾರ.

ಮತ್ತು

ರಾವ್ ಯಿಂಡ ರಾವ್ ಯಿಂಡ ಕೊ ಕೂಡಾ—ಕ್ರೆಡಿಟರ್ಸರು

ಸದ್ರಿ ಮೇಲ್ಕಂಡ ಅರ್ಜಿದಾರನು ತನಗೆ ದಿವಾಳಿಯೆಂತೆ ಸ್ಥಾಪಿಸಬೇಕೆಂತ ಅಪೇಕ್ಷಿಸಿ ಅರ್ಜಿ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿರುತ್ತಾನಾದ್ದರಿಂದ ಸದ್ರಿ ಅರ್ಜಿಯು ತಾ 6—6—35ಕ್ಕೆ ತನಿಖೆಗೆ ಇಟ್ಟಿದೆ ಆಕ್ಷೇಪ ಇದ್ದವರು ಸದ್ರಿ ಕೋರ್ಟಿನಲ್ಲಿ ಆ ದಿವಸ 11 ಘಂಟೆಗೆ ಖುದ್ದಾಗಿ ಯಾ ವಕೀಲದ್ವಾರವಾಗಲೀ ಹಾಜರಾಗಿ ಆಕ್ಷೇಪಣೆ ಕೊಡಬೇಕು ಇಲ್ಲವಾದರೆ ಕೋರ್ಟಿನವರು ಏಕಪಕ್ಷವಾಗಿ ತೀರ್ಮಾನಿಸುವರು ತಿಳಿದಿರುವುದು

G Narayana Rao,
Vakil for Petitioner

ಗುಪ್ತ ಮಹಾಮಂತ್ರ

ಅತ್ಯಂತ ಫಲಕಾರಿ

ಇದನ್ನು ಉಚ್ಚರಿಸಿದ ಮಾತ್ರದಲ್ಲಿ ಎಂತಹ ಕಷ್ಟ ಕೆಲಸವೂ ಸುಲಭವಾಗುವುದು ಸ್ತ್ರೀ ಪರೀಕ್ಷೆಯಲ್ಲಿ ವಿಜಯ, ಕೋರ್ಟು ವ್ಯವಹರಣೆಯಲ್ಲಿ ಗೆಲು, ನೋಕ್ರಿಯಲ್ಲಿ ಜಯ, ಪ್ರಗತಿ, ಮಕ್ಕಳ ಐಶ್ವರ್ಯವೆಲ್ಲ ಲಭ್ಯವಾಗುತ್ತದೆ ಇದು ನಿಮ್ಮನ್ನು ಅದೃಷ್ಟಶಾಲಿಗಳನ್ನಾಗಿ ಮಾಡುತ್ತದೆ

2 ರೂಪಾಯಿಗಳಷ್ಟು ವೆಚ್ಚವಾದ ಅಥವಾ ಸುಳ್ಳಾದರೆ, 50 ರೂಪಾಯಿ ಬಹುಮಾನ ಪಡೆಯಿರಿ

Prasidha Mantra Asram,
No 17 P O Katrisarı (Gaya)

C P S

"GUPTA MANTRA"

A reward of Rs 100

The objects which cannot be achieved by spending lacs of rupees may be had by repeating this Mantra seven times There is no necessit of undergoing any hardshid to make it effective It is effective without any preparation This is a "WASHIKARAN MANTRA" It will make you forunate give you service and advancement and bring you profit in trade A reward of Rs 100, if proved fallible Price including postage etc., Rs 2-7-0

Siddh Mantra Ashram,
KATRISARAI .(GAYA)

ಸ್ವದೇಶಾಭಿಮಾನಿಯ ವಾಚಕರಲ್ಲಿ ವಿನಂತಿ.

ಈ ಮೂರು ವರುಷಗಳ ಅವಧಿಯಲ್ಲಿ, ಜಿಲ್ಲಾ ಬೋರ್ಡಿನಿಂದ ನೇಮಕವಾದ ನೌಕರರ ವಿಚಾರ ತಮತಮಗೆ ತಿಳಿದ ಸಂಗತಿಗಳನ್ನು ನಮಗೆ ತಿಳಿಸಬೇಕೆಂದು ಕೋರುತ್ತೇವೆ.

ಬೇಕಾದ ವಿವರಗಳು -ಯಾರು ನೌಕರರು—ಅವರನ್ನು ಯಾವಾಗ ನೇಮಕ ಮಾಡಿದರು—ಅವರು ಯಾವ ಜಾತಿ, ಒಳಜಾತಿಯವರು ಜಿಲ್ಲಾ ಬೋರ್ಡಿನ ಸದಸ್ಯರಾರಿಗೂ ಅವರಿಗೂ ಸಂಬಂಧವಿದೆಯೋ?—ಅವರ ನೇಮಕವಾಗುವಾಗ ಅವರಿಗಿಂತ ಹೆಚ್ಚಿನ ಅಧಿಕಾರ, ಹಕ್ಕುಳ್ಳ ಜನರು ಅರ್ಜಿದಾರರು ಇದ್ದಾರೆಯೋ? ಈ ಎಲ್ಲ ಸಂಗತಿಗಳಲ್ಲಿ ತಮ್ಮ ಸತ್ಯ ವಿಚಾರವನ್ನು ದಯವಿಟ್ಟು ತಿಳಿಸಿರಿ ಇಷ್ಟೊಂದು ಕೆಲಸವನ್ನು ಡಿಸ್ಟ್ರಿಕ್ಟ್ ಬೋರ್ಡು ಮಾಡಿದ್ದರೆ ತುಂಬಾ ವಂದನೆಗಳು ಸಂ

ಕೂಡಲೇ ಬೇಕಾಗಿದ್ದಾರೆ.

ನಮ್ಮ ಕಾರ್ಯಾಲಯದ ಮುಂದಲಿಯ್ಲು ಸದಸ್ಯರಾಗಿ ಪತ್ರಿಕೆಯ ಕೆಲಸ ಮಾಡಲು ಕನ್ನಡ ಮತ್ತು ಇಂಗ್ಲೀಷು ಎರಡೂ ಭಾಷೆಗಳನ್ನು ಓದಲೂ ಬರೆಯಲೂ ಸ್ವಲ್ಪ ಸ್ವಲ್ಪ ಬಲ್ಲ ಉತ್ಸಾಹೀ ಕೆಲಸಗಾರರು, ತಿಂಗಳ ಸಂಬಳದ ಮೇಲೆ ಖಾಯಂ ಕೆಲಸಕ್ಕೆ ಬೇಕಾಗಿದ್ದಾರೆ.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು, ಅಥವಾ ಮೆನೇಜರರನ್ನು ಸ್ವತಃ ಕಾಣಬಹುದು ಉತ್ತರಕ್ಕಾಗಿ ಅರ್ಜಿಯೊಂದಿಗೆ ಅಂಚೆಕಾಗದ ಕಳುಹಿಸಬೇಕು.

ಮೆನೆಜರ್—"ಸತ್ಯ ಕತೆಗಳು"

ಬರೆವರ ಬಂಧು ಆಫೀಸು ಹಂಪನಕಟ್ಟೆ ಮಂಗಳೂರು.

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassan and Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purniah Chatram Road, Balepet,
BANGALORE CITY

Shiromani Narayanacharya
Choukhamba, Benares City

ಶಾಸ್ತ್ರಗಳೇ ಪುರಾಣಗಳು ಆರೋಗ್ಯರೇ ಅಥವಾ ಈಗಿನವರೇ, ರಾಜಮಹಾರಾಜರೇ [illegible] ಆರೋಗ್ಯವೇ ನಿಜವಾದ ಆರೋಗ್ಯ ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಸರ್ವಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ [illegible] ಕೀರ್ತಿ ಇವುಗಳೆಲ್ಲಾ ಆಗುವವು. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ [illegible] ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಅಕ್ಕಿ ಪ್ರಮಾಣದ ಕಂಠಸರ 1ಕ್ಕೆ ಆಣೆ 100ದ ರೂ. 25ರ ವರೆಗೆ. 108 ರುದ್ರಾಕ್ಷಿ [illegible] ಆಣೆ 300ದ ರೂ. [illegible] ವರೆಗೆ [illegible] ರುದ್ರಾಕ್ಷಿ 1ಕ್ಕೆ ರೂ 3ರಿಂದ ರೂ. 50ರ ವರೆಗೆ [illegible] 4–5–6–7–8 ಮುಖಗಳ [illegible] 1ಕ್ಕೆ [illegible] 100ದ ರೂಪಾಯಿ 10 ಮತ್ತು 9 10 11 [illegible] ಗಳಲ್ಲಿ [illegible] 1ಕ್ಕೆ ರೂ 200 [illegible] ವರೆಗೆ 12–13–14 ಮುಖದ [illegible] 1ಕ್ಕೆ [illegible] 100ರ ವರೆಗೆ. ಸಣ್ಣ ರುದ್ರಾಕ್ಷಿ [illegible] ಕ್ರಯ [illegible] ಕ್ರಯ [illegible] (ವಿವರಕ್ಕೆ ಕಟಲಾಗ್ ಬರೆದರೆ [illegible] 1 ವಿಶ್ವೇಶ್ವರ [illegible], 1 ಕಾಶೀ [illegible] 1 [illegible] ಜೊತೆನೆ 3 [illegible])

ಶಿರೋಮಣಿ ನಾರಾಯಣಾಚಾರ್ಯ
ಚೌಕಂಬಾ ಬನಾರಸ್ (ಯು.ಪಿ)

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.



ನೂರು ಫ್ಯಾಷನ್ ಮೂಟ್ [illegible] ವಾಚುಗಳು ಇವು ಹೊಳೆಸಿದಲ್ಲಿ ಬಂಗಾರ [illegible] ಬಹು [illegible] ಐದು ವರ್ಷಗಳ ಗ್ಯಾರಂಟಿ ಒಂದು ಉತ್ತಮವಾದ [illegible] ಸರಿಯಾದ ಗಂಟೆಯನ್ನು ತೋರಿಸುತ್ತ ೧೦ ವರ್ಷಗಳ ಗ್ಯಾರಂಟಿ ಒಂದು ಲಿವರ್ [illegible] ಗಡಿಯಾರ [illegible] ಬಂಗಾರದ ಪ್ಲೇಟ್ [illegible] ಫೌಂಟನ್ ಪೆನ್ ಈ ಅತ್ಯುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ ಕೊಡುವೆವು [illegible] ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ

ಶರ್ಮಾ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ [illegible] B A ಕಲ್ಕತ್ತಾ

ಡಾಕ್ಟರ ವಾಮನ ಗೋಪಾಳರವರ

ಏಟಿಡಾಯಿಡ್ ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ.
[illegible]
ಡಾ|| ಗೌತಮ ರಾವ್ ಕೇಶವರವರ
[illegible]

ಡಾಕ್ಟರ್ ಗೌತಮರಾವ್ ಕೇಶವ ಅಂಡ್ ಸನ್ಸ್, [illegible]
ಸಿಕ್ವೇರಾ – [illegible] ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ [illegible]

ಗುಣಬಾರದಿದ್ದರೆ ಹಣ ವಾಪಸು]

ಸುಪ್ರಸಿದ್ಧ ವೈದ್ಯರಾದ ಎಮ್ ಕೆ [illegible]

ಸಂತತಿ ಪ್ರತಿಬಂಧಕ ಚೂರ್ಣ (ರಜಿಸ್ಟರ್ಡ್)

[illegible] ಗರ್ಭಧಾರಣ [illegible] ಮೊದಲೇ [illegible] ಔಷಧ [illegible] ವೈದ್ಯ, ಎಲ್ ಸಿ ಪಿ ಎಸ್. [illegible] ಈ ಚೂರ್ಣದಿಂದ [illegible] ಗರ್ಭಧಾರಣವೂ ಆಗುವುದಿಲ್ಲ [illegible] ರೂ [illegible]

ವಿಳಾಸ.— ಸಂಜೀವಿನೀ ಔಷಧಾಲಯ [illegible], S M C

"ವಿಶ್ವಬಂಧು"ವಿಗೆ ಚಂದಾದಾರರಾಗಿರಿ.

೧ ವಿಶ್ವಬಂಧುವು ಜೈನಧರ್ಮದ ವಿಷಯಗಳನ್ನು ಸರ್ವಗ್ರಾಹ್ಯವಾಗ [illegible] ಯಲ್ಲಿ ಸುಲಭಶೈಲಿಯಲ್ಲಿ ಪ್ರಕಟ ಮಾಡುವನು ೨ 'ವಿಶ್ವಬಂಧು'ವು [illegible] ಧರ್ಮಪ್ರಚಾರಕನು ೩. 'ವಿಶ್ವಬಂಧು'ವು ಲೌಕಿಕ ಮತ್ತು ಪಾರಮಾರ್ಥಿಕ [illegible] ಗಳನ್ನು ಪ್ರಕಟ ಮಾಡುವನು ೪ ಕನ್ನಡ ನಾಡಿಸೇವೆಯೂ ಕನ್ನಡ ಸಾಹಿತ್ಯ [illegible] ವನೆಯೂ 'ವಿಶ್ವಬಂಧು'ವಿನ ಧ್ಯೇಯಗಳು ೫. ವಿದ್ಯಾಭ್ಯಾಸದ ನೂತನ [illegible] ಗಳನ್ನು 'ವಿಶ್ವಬಂಧು'ವು ಪ್ರಕಟಮಾಡುವನು ೬ ಒಟ್ಟಿನಲ್ಲಿ ಆರ್ಥಿಕ [illegible] ಧಾರ್ಮಿಕ, ರಾಜಕೀಯ, ಸಾಹಿತ್ಯಾತ್ಮಕ ವಿಷಯಗಳನ್ನೊಳಗೊಂಡು [illegible] ಸುಂದರನಾದ 'ವಿಶ್ವಬಂಧು'ವು ಸರ್ವರ ಆದರಣೆಗೂ ಪಾತ್ರನಾಗಿರುವನು.

ಅಂಚೆವೆಚ್ಚ ಸೇರಿ ವಾರ್ಷಿಕ ಚಂದಾ ರೂ. ೨–೧೪–೦ ಮಾತ್ರ.

"ವಿಶ್ವಬಂಧು" ಕಾರ್ಯಾಲಯ, ಎಂ ಎಲ್ ಜೈನವಿದ್ಯಾರ್ಥಿನಿಲಯ [illegible]

The Popular Insurance Company, Ltd.

Head Office:—MANGALORE, S India

The Pioneer Life Office of the West Coast.

Wanted influential District agents in Unrepresented areas.

A few Press opinions.

'INSURANCE HERALD,' CALCUTTA. This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country. If the Directors of this Comany can continue in the present rate of progress and can control the finances with wisdom and care, they would make history. From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds.

'THE ARTISAN,' TRIVANDRUM. We are glad to see from the Fourth Annual Report and Balance Sheet ~~of the Company that it~~ has been making steady and satisfactory progress considering its age and the fact of the economic depression prevailing throughout the country.

THE INDIAN INSURANCE, BOMBAY. Mangalore is noted for its enterprise, and the Popular Insurance Company Ltd., promoted by the local residents of that place, is steadily gaining ground. It is directed by influential people of Mangalore and managed by Mr. B Vittal Rao, who has developed in him a great deal of life insurance sense . .

ತೆಂಗಿನ ಮರದಲ್ಲಿ ಕುಳಿತಿದ್ದವನನ್ನು ಗುಂಡಿಕ್ಕಿ ಕೊಂದರು!

ಮುನಿಸಿಪಲ್ ಕೌನ್ಸಿಲರನ್ನು ಡಿಸ್ಟ್ರಿಕ್ಟ್ ಬೋರ್ಡಿನ ಸದಸ್ಯರು ಕೊಂದರೇ?

[ಸಾಂಬಾರ ವರ್ತಮಾನಗಳು.]

ಕೇವಲ ವಿಶ್ವಾಸ ಘಾತಕಳ!

ಡಿಲ್ಲಿಯ ಮಾಚೀಬ್ ಕಲನ್‌ನಿಂದ ಬಂದ ಸುದ್ದಿಯಿದು. ಸುರಾಜನಾರಾಯಣನೆಂಬ ಓ ಡಬ್ಲ್ಯು ಡ್ಡಿಯ ಶಿಕ್ಷಕನೊಬ್ಬನ ಮನೆಗೆ ಒಬ್ಬ ಯುವಕನು ಹೋಗಿ ಒಂದು ಪತ್ರವನ್ನು ಅವನ ಪತ್ನಿಗೆ ತೋರಿಸಿ ತನ್ನ ಸಂಬಂಧಿಕರ ವಿವಾಹಕ್ಕಾಗಿ ಆಭರಣಗಳನ್ನು ಕೊಡಬೇಕೆಂದು ಸುರಾಜನು ಹೇಳಿರುವನೆಂದ. ತಿಳಿಸಿದನು. ಸುರಾಜನ ಪತ್ನಿಯು ಸ್ವಲ್ಪ ಗಡಿಬಿಡಿ ಸ್ವಭಾವದವಳು ೩೫೦ ರೂಪಾಯಿ ಬೆಲೆ ಬಾಳುವ ಆಭರಣಗಳನ್ನು ತನ್ನ ಸೇವಕನ ಕೈಯಲ್ಲಿ ಕೊಟ್ಟು, ಚೀಟಿ ತಂದವನು ತೋರಿಸುವ ಸಂಬಂಧಿಕರಿಗೆ ಕೊಟ್ಟು ಬಾ ಎಂದಳು. ಆಗಂತುಕನೂ ಸೇವಕನೂ ಒಂದು ಮೋಟರಿನಲ್ಲಿ ಕುಳಿತು ಡಿಲ್ಲಿಯ ಗೇಟನ್ನು ದಾಟಿದರು. ನಿರ್ಜನ ಪ್ರದೇಶಕ್ಕೆ ಬರುತ್ತಲೇ ಕಾರು ನಿಂತಿತು. ಕೆಲಸದವನನ್ನು ಇಳಿಯ ಹೇಳಿದರು. ಅವನ ಕೈಯಲ್ಲಿದ್ದ ಆಭರಣಗಳನ್ನು ಆಗಂತುಕನು ಹಿಡಿದುಕೊಂಡನು. ಒಡನೆ ಕಾರು ನಡೆಯಿತು. ಆಗಂತುಕನು ಅದನ್ನು ಹತ್ತಿ ಪರಾರಿಯಾದನು.

ಸಹೋದರಿಯನ್ನೇ ವಿವಾಹವಾದ! ಫ್ರಾನ್ಸಿನಲ್ಲಿ ಪ್ರಥಮ ವಿವಾಹ'

ಗೆಟಿರ್ ಎಂಬ ತಂದೆಯೊಬ್ಬನು ಎರಡನೆಯ ವಿವಾಹವನ್ನು ಫ್ರಾನ್ಸಿನಲ್ಲಾದ ತನ್ನ ಪ್ರಥಮ ಪತ್ನಿಯಲ್ಲಿ ತನಗೆ ಜನಿಸಿದ ಪುತ್ರನೊಬ್ಬನಿರುವನೆಂದು ಪತ್ನಿಗಾಗಲಿ ಇತರರಿಗಾಗಲೀ ತಿಳಿಸದೆ ಆ ಮಗನನ್ನು ನೈಸ್ ಎಂಬಲ್ಲಿ ಶಾಲೆಗೆ ಹಾಕಿದ್ದ. ದ್ವಿತೀಯ ವಿವಾಹವನ್ನು ಆಗುವ ಮೊದಲೇ ಆದೇ ಪತ್ನಿಯಲ್ಲಿ ಗೆಟಿರನಿಗೊಬ್ಬಳು ಪುತ್ರಿಯು ಜನಿಸಿದ್ದಳು. ಆದ ೩ ಮಗುವು ಬದುಕಿರುವ ವಿಷಯವನ್ನು ಹೆಂಡತಿಯು ಗಂಡನಿಗೆ ತಿಳಿಸಲಿಲ್ಲ. ಆ ಕರುಣೆಯು ಒಸ್ಟರ್ ಎಂಬಲ್ಲಿ ಒಬ್ಬ ಕಲಿಯುತ್ತಿದ್ದಳು. ಒಂದು ದಿನ ಈ ತರುಣ ತರುಣಿಯರು ಪ್ರಣಯಪಾಶದೊಳಗೆ ಬಿದ್ದರು. ತರುಣನು ತರುಣಿಯನ್ನು ತಂದೆಯ ಬಳಿಗೆ ಒಯ್ದು ಅವಳ ವಿವರವನ್ನು ಕೇಳಲು, ಅವಳು ತನ್ನ ಸಹೋದರಿ ಎಂದು ತಿಳಿದುಬಂತು. ಇವರಿಬ್ಬರ ವಿವಾಹವು ಫ್ರಾನ್ಸಿನಲ್ಲಿ ನಿಷೇಧಗೊಳ್ಳದಿರುವುದರಿಂದ ಎಲ್ಲರೂ ಆಶ್ಚರ್ಯಚಕಿತರಾಗಿರುವರು.

ನೀನಲ್ಲದಿದ್ದರೆ ನಿನ್ನ ತಾಯಿ!

ನವೋರಿನಲ್ಲಿ ಬಂಗಾಳ ಕ್ರಾಂತಿಕಾರರ ನಿರ್ಬಂಧ ಶಾಸನದ ಮೇರೆಗೆ ಧನೇಶ ಚಕ್ರವರ್ತಿ ಎಂಬವನಿಗೆ "ನೀನು ಮನೆಬಿಟ್ಟು ಹೊರಗೆ ಹೋಗಬಾರದು." ಎಂಬ ಆಜ್ಞೆಯನ್ನು ಜಾರಿಗೊಳಿಸಲಿಕ್ಕೆಂದು ಪೋಲೀಸರು ಅವನ ಮನೆಗೆ ಹೋದರು. ಆದರೆ ಅವನು ಅಲ್ಲಿ ಇರದಿದ್ದುದನ್ನು ಕಂಡು ಅವರು ತಮ್ಮ ಆಜ್ಞೆಯನ್ನು ಧನೇಶನ ತಾಯಿಯ ಮೇಲೆ ಜಾರಿಮಾಡಿ ವಿಚಿತ್ರ ಕಾನೂನನ್ನು ಪ್ರಚಾರ ಮಾಡಿರುವರು.

(೩ನೇ ಪುಟದಿಂದ ಮುಂದುವರಿದುದು)

ವಿಚಾರಿಸಿಕೊಳ್ಳುವ ಸಮಯವು ಸನ್ನಿಹಿತವಾಗಿದೆ. ಆಸ್ಪತ್ರೆಗಳಲ್ಲಿ ರೋಗಿಗಳನ್ನು ಸ್ವೀಕರಿಸುವ ಮತ್ತು ತಿರಸ್ಕರಿಸುವ ಪ್ರಕ್ರಿಯು ಬಹು ಜಟಿಲವೂ ಭಯಂಕರವೂ ಆಗಿ ನಿಂತಿದೆ. ವಿಜಿಟಿಂಗ್ ಮೆಡಿಕಲ್ ಸ್ಟಾಫಿನವರು ಕಳುಹಿಸಿದ ರೋಗಿಗಳನ್ನು ಮೊದಲಾಗಿ ಆಸ್ಪತ್ರೆಯೊಳಗೆ ಪ್ರವೇಶಿಸಬಿಡುವ ರೂಢಿಯು ಹೆಚ್ಚುತ್ತಲಿದೆ. ಇದರಿಂದಾಗಿ ಸ್ಥಳೀಯ ಹೊರರೋಗಿಗಳಿಗೆ ಸ್ಥಳವಿಲ್ಲ. ರೋಗಿಗಳ ಸ್ವೀಕಾರವೂ ತಿರಸ್ಕಾರವೂ ವಿಜಿಟಿಂಗ್ ಮೆಡಿಕಲ್ ಸ್ಟಾಫಿನ ಕೈಯೊಳಗಾಗಿದೆ.—ಅವರು ರೋಗಿಗಳನ್ನು ಜಾಗ್ರತೆಯಿಂದ ಆರಿಸಿಕೊಳ್ಳುವುದಿಲ್ಲ. ಹಿಂದು ಮುಂದು ನೋಡದೆ ಧರ್ಮಾರ್ಥ ವೈದ್ಯಕೀಯ ಸಹಾಯವನ್ನೀಯುವ ಕ್ರಮವು ವೈದ್ಯವೃತ್ತಿಗೇ ಹಾನಿಯನ್ನು ತರುತ್ತದೆ. ನೇಶನಲ್ ಹೆಲ್ತ್ ಇನ್ಶೂರೆನ್ಸ್ ಸ್ಕೀಮ್ ಹೋಸ್ಪಿಟಲ್ ಕಂಟ್ರಿಬ್ಯೂಟರ್ ಸ್ಕೀಮ್ ಅಥವಾ ಹೊಸ್ಪಿಟಲ್ ಪ್ರೊವಿಡೆಂಟ್ ಸ್ಕೀಮುಗಳು ಇಂಗ್ಲಾಂಡಿನಲ್ಲಿರುವಂತೆ ಇಲ್ಲಿಯೂ ಇದ್ದರೆ ಈ ಬಾಧಕಗಳಿಂದ ವಿಮುಕ್ತರಾಗಿರಬಹುದು. ಆಸ್ಪತ್ರೆಗಳ ಆಡಳಿತದ ಕುರಿತು ಸಾವಧಾನ್ಯ ವೈದ್ಯರು ದೀರ್ಘವಾಗಿ ಆಲೋಚಿಸಬೇಕಾಗಿ ನಾವು ಆಶಿಸುತ್ತೇವೆ.

Journal of the Indian Medical Association.

ತೆಂಗಿನ ಮರದಲ್ಲಿ ಕುಳಿತಿದ್ದವನನ್ನು ಗುಂಡಿಕ್ಕಿ ಕೊಂದರು!

ಕುವಾಲಾ ಲಂಪುರ್ ಎಂದರೆ ಮಲೆಯಾ ಸ್ಟೇಟ್ಸ್‌ನಲ್ಲಿ ಇರುವ ಒಂದು ನಗರ. ಅಲ್ಲಿಂದ್ದ ವಿಮಾನ ಟಪ್ಪಾಲಿನ ಮೂಲಕ ಒಂದು ವಾರ್ತೆಯು ಕಟಿಪಿದೆ. ಕೊಂಚ ವಿಚಿತ್ರವಾದದ್ದೇ ಎನ್ನಬಹುದು. ಅಲ್ಲಿ ಅಚ್ಯುತ್ತನೆಂಬ್ಬ ಪುಂಡ, ಸಾರ್ವಜನಿಕರನ್ನು ಬಾಧಿಸುತ್ತಿದ್ದ. ಕುದುರೆಯ ಜೀನನ್ನು ಸಡಿಲ ಬಿಟ್ಟರೆ, ಅದು ವೇಗವಾಗಿ ಓಡುವಂತೆ, ಅಚ್ಯುತನನ್ನೂ ಸಡಿಲು ಬಿಟ್ಟಾಗ ಅವನ ಅತ್ಯಾಚಾರವು ಹೆಚ್ಚುತ್ತಾ ಹೋಯಿತು. ಇತ್ತಲಾಗೆ ತನ್ನೂರಿನ ಒಬ್ಬನಿಗೆ ಚೆನ್ನಾಗಿ ಹೊಡೆದು, ನೆಟ್ಟಗೆ ಓಡಿ, ಬಂದು ತೆಂಗಿನ ಮರವನ್ನು ಹತ್ತಿ ಅದರ ತುದಿಯಲ್ಲಿ ಕುಳಿತ. ಅತ್ತಿತ್ತ ಹೋಗುವ ಜನರಿಗೆ ಸಣ್ಣ ಸಣ್ಣ ಕಲ್ಲುಗಳ ಪೂಜೆಯನ್ನು ಮಾಡಲು ಮರೆಯಲಿಲ್ಲ. ಈ ಸುದ್ದಿಯು ಪೋಲೀಸ ಮಹಾಶಯರಿಗೆ ಮುಟ್ಟಿತು. ಇನ್ಸ್‌ಪೆಕ್ಟರ್ ನನ್‌ನವರು ಚೀಫ್ ಪೋಲೀಸ್ ಆಫೀಸರರಿಗೆ ಫೋನಿನಮೂಲಕ ತಿಳಿಸಲು ಅವರು ೬ ಜನರ ಪೋಲೀಸರನ್ನು ಅಲ್ಲಿಗೆ ಒಯ್ದು, ಒಂದು ಗುಂಡನ್ನು ಅವನ ತಲೆಯ ಮೇಲೆ ಹಾರಿಸಿ, ಇಳಿಯದಿದ್ದರೆ ಅವನ ಕಾಲಿಗೆ ಗುಂಡು ಹೊಡೆಯಿರಿ—ಕೆಳಗಿಳಿಯುವನು"—ಎಂದರು. ಅದೇ ಮೇರೆಗೆ ಪೋಲೀಸ ಫೌಜು ತೆಂಗಿನ ಮರದಡಿಯನ್ನು ಸಮೀಪಿಸಿ ಅಚ್ಯುತ್ತನು ಕೆಳಗಿಳಿಯಬೇಕೆಂದು ಹೇಳಿದರು. ಆದರೆ ಅಚ್ಯುತ್ತನಿಗೆ ತಾನು ನಾಶವಾಗುವುದಿಲ್ಲವೆಂಬ ಧೈರ್ಯ. "ಕೆಳಗಿಳಿಯುವುದಿಲ್ಲ" ಎಂದ. ಒಡನೆ ಒಂದು ಗುಂಡು ಅವನ ತಲೆಯನ್ನು ದಾಟಿ ಹಾರಿಹೋಯಿತು. ಅಚ್ಯುತ್ತನು ಬೆದರಿದಂತೆ ಕಾಣಲಿಲ್ಲ. ಒಡನೆ ಒಂದು ಗುಂಡನ್ನು ಅವನ ಮೈಮೇಲೆ ಹಾರಿಸಲಾಯಿತು. ಕೇಳಬೇಕೆ? ಗುಂಡು ಅವನ ದೇಹವನ್ನೇ ಸೇರಿತು. ಒಡನೆ ನೋವಿನಿಂದ ಅವನು ತೆಂಗಿನ ಮರದಿಂದ ಕೆಳಕ್ಕೆ ಹಾರಿ ಗಾಯಗೊಂಡು ಪ್ರಜ್ಞಾಹೀನನಾದನು. ಆಸ್ಪತ್ರೆಗೆ ಕೊಂಡೊಯ್ಯಲಾಗಿ, ಅದೇ ಅವನ ಪ್ರಾಣವನ್ನು ನುಂಗಿದ ಮಂದಿರವಾಯಿತು. ಈಗ ಪೋಲೀಸರ ಮೇಲೆ ದಾವೆ ನಡೆದಿದೆ. ಸ್ವಲ್ಪ ಅವಸರದಿಂದ ಕೆಲಸಮಾಡಿ ಒಂದು ಪವಿತ್ರ ಜೀವನನ್ನೇ ಕೆಡೆದರಲ್ಲಾ ಎಂಬ ಹಾಹಾಕಾರವು ಕೋರ್ಟಿನಲ್ಲಿ ವ್ಯಾಪಿಸಿರುತ್ತದೆ. ಮೃತನ ಆತ್ಮಕ್ಕೆ ಶಾಂತಿಯಿರಲಿ!

ಡಿಸ್ಟ್ರಿಕ್ಟ್ ಬೋರ್ಡು ಮೆಂಬರರ ಮೇಲೆ ದಾವೆ! ಜಾಮೀನು ಸಿಗಲಾರದು.

ಕೆಲವು ತಿಂಗಳುಗಳ ಹಿಂದೆ ಬೆಳ್ಳಾರಿಯ ಮುನಿಸಿಪಲ್ ಕೌನ್ಸಿಲರಾದ ಬಾಲಾಗೌಸ್ ಸಾಹೇಬರನ್ನು ಅವರ ತೋಟದಲ್ಲಿ ಯಾರೋ ಕೊಲೆಮಾಡಿದರಷ್ಟೆ. ಈಗ, ಅಪಾದಿತರೆಂದು ಅಲ್ಲಿಯ ಡಿಸ್ಟ್ರಿಕ್ಟ್‌ಬೋರ್ಡು ಮೆಂಬರರಾದ ಅಂಜನಪ್ಪ ಎಂಬವರನ್ನೂ ಮತ್ತು ಇಬ್ಬರನ್ನೂ ಸೆರೆಹಿಡಿದಿದ್ದಾರೆ. ಕಳೆದ ಬುಧವಾರ ಇವರನ್ನು ಜಾಮೀನು ಮುಚ್ಚಳಿಗೆಯ ಮೇಲೆ ಬಿಡಬೇಕೆಂದು ಪ್ರಾರ್ಥನೆಯಾದರೂ ಮೇಜಿಸ್ಟ್ರೇಟರು ಅಂತಹ ಪ್ರಾರ್ಥನೆಯನ್ನು ಮನ್ನಿಸಲಿಲ್ಲ. ದೊಡ್ಡ ದೊಡ್ಡವರೆಂಬವರು ದೊಡ್ಡ ದೊಡ್ಡ ಕೆಲಸಗಳನ್ನು ಮಾಡುವುದು ನ್ಯಾಯವೆ. ಸರಿ!

ಸನಾತನಿಗಳಿಗೆ ಬುದ್ಧಿ ಕಲಿಸಿದರು!

ನಾಸಿಕದ ಕಾಳರಾಮ ದೇವಸ್ಥಾನದ ರಥೋತ್ಸವವು ರಾಮನವಮಿಯ ದಿನ ಜರಗಬೇಕಿತ್ತು. ಆದರೆ ಅಲ್ಲಿಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು "ಹರಿಜನರಿಗೂ ಸನಾತನಿಗಳಿಗೂ ಮಾರಾಮಾರಿಯು ನಡೆಯುವ ಸಂಭವವು ನನಗೆ ತೋರುತ್ತಿರುವುದರಿಂದ ನೀವು ರಥೋತ್ಸವವನ್ನು ಜರಗಿಸಬಾರದು" ಎಂದು ಆಜ್ಞಾಪಿಸಿದರು. ಅವರ ಆಜ್ಞೆಯ ಅವಧಿಯು ನೆನ್ನೆ ಮುಗಿದ ಮರುದಿನವೇ ರಥವನ್ನು ಎಳೆಯಬೇಕೆಂದು ಸನಾತನಿಗಳು ನಿರ್ಧರಿಸಿ, "ಎಲ್ಲಾ ಸನಾತನಿಗಳೂ ಈ ರಥೋತ್ಸವದಲ್ಲಿ ಭಾಗವಹಿಸಬೇಕೆ"ಂದು ಜಾಹೀರಾತುಗಳನ್ನು ಹಂಚಿದರು ಕೆಳ. ಜಾತಿಯವರು ಆ ಮಹೋತ್ಸವದಲ್ಲಿ ಭಾಗವಹಿಸಬಾರದೆಂದರು. ಈ ಸುದ್ದಿಯು ಮೆಜಿಸ್ಟ್ರೇಟರಿಗೆ ತಲುಪಿತು. ಅವರು ಒಡನೆ ಸೆಕ್ಷನ್ 144ನ್ನು ಜಾರಿ ಮಾಡಿ ರಥವನ್ನು ಎಳೆಯಲೇ ಬಾರದೆಂದು ಪುನಃ ಸೂಚಿಸಿದರು. ಸವರ್ಣ ಹಿಂದೂಗಳಿಗೂ ಅಂತ್ಯಜರಿಗೂ ಮನಃಕ್ಲೇಶವು ಬೆಳೆದೋರಿದೆ.

ಸರ್ ಶಂಕರನ್ ನಾಯರರ ಗ್ರಂಥ

ಕಳೆದ ವರ್ಷ ತೀರಿಕೊಂಡ ಸರ್ ಶಂಕರನ್ ನಾಯರರು ತಾನು ಸಾಯುವ ಮೊದಲು "My Life and Times" ಎಂಬ ಗ್ರಂಥವೊಂದನ್ನು ಬರೆದಿಟ್ಟಿರುವರು. ಅದರಲ್ಲಿ ಅಧಿಕಾರಿಗಳಾಯ ಅನೇಕರ ಹಸ್ತಗಳಿವೆ ಈಗ ಹಿಂದೂದೇಶದ ಹಿತಚಿಂತಕರೆಂದು ಇರುವವರ ವಿರೋಧವಾಗಿಯೂ, ಸರಕಾರದ ವಿರೋಧವಾಗಿಯೂ ಅವರು ಟೀಕೆಗಳನ್ನು ಬರೆದಿರುವರು. ಈ ಪುಸ್ತಕವನ್ನು ಪ್ರಕಟಿಸಬೇಕೋ ಬೇಡವೋ ಎಂದು ದಿವಂಗತ ಮಗನು ಕಂಗೆಟ್ಟಿದ್ದಾನೆ. ಅನೇಕ ಯುರೋಪಿಯನ ಒಳಗುಟ್ಟನ್ನು ಅವರು ಆ ಪುಸ್ತಕದಲ್ಲಿ ಬರೆದಿರುತ್ತಾರಂತೆ. ಈ ಪುಸ್ತಕವು ಪ್ರಕಟವಾದರೆ ದೊಡ್ಡ ಗಡಿಬಿಡಿಯೇ ತಲೆದೋರಬಹುದೆಂದು ತಿಳಿಯಬಂದಿದೆ.

ಏನೋ ಇಂದ್ರಜಾಲವಂತೆ!

ಉತ್ತರ ಗಡಿನಾಡಿನ ಆಲಿಂಗರ್ ಎಂಬಲ್ಲಿ ಒಬ್ಬ ಫಕೀರನಿರುವನು. ಅಲ್ಲಿಯ ದರೋಡೆಗಾರರನ್ನು ಎಬ್ಬಿಸಲು ಇವನೇ ಕಾರಣವಾಗಿ ನಿಂತಿದ್ದಾನೆಂದು ಸಂಡೇ ಎಕ್ಸ್‌ಪ್ರೆಸ್ ಪತ್ರಿಕೆಯು ಹೇಳುತ್ತಿದೆ. ಈ ಫಕೀರನು ಮನೆಯೊಳಗೆ ಸುಖವಾಗಿದ್ದು ಏನೋ ಒಂದು ಇಂದ್ರಜಾಲವನ್ನು ಮಾಡುವನು—ನನ್ನ ವೈರಿಗಳ ಮನೆಗಳು ಬೆಂಕಿಬಿದ್ದಂತಾಗಿ ಸುಟ್ಟುಹೋಗಲಿ—ಎಂದು ಶಪಿಸುವನು. ಅವನು ಹೇಳಿದ ಒಂದೆರಡು ದಿನಗಳಲ್ಲಿ ಆ ಮನೆಗಳೆಲ್ಲ ನಾಶವಾಗುವವು. ಪೇಷಾವರದ ಮಹಾ ದೊಂಬಿಗಾರ ನೋಟ್ಬನು ಕೂಡಾ ಈ ವೃದ್ಧನ ಆಜ್ಞೆಗೆ ವಿಧೇಯನಾಗಿ ವರ್ತಿಸುತ್ತಾನೆ. ಈ ಮುದುಕನಿಗೆ ಒಟ್ಟು ೩೬ ಮಂದಿ ಪತ್ನಿಯರಿದ್ದಾರೆ. ಎಲ್ಲರನ್ನೂ ಬಲಾತ್ಕಾರದಿಂದಲೇ ಎಳೆದು ತಂದಿರುವನು. ಎಂತಹ ಕಠಿಣ ಸ್ತ್ರೀಯೂ ಆ ನೆಲದ ದಾಸಿಯಂತೆಯೇ ವರ್ತಿಸುವಳು.

ಗನಿಯೊಳಗೆ ಮುಷ್ಕರ

ಕಳೆದ ವರುಷ ಕೆಲವು ಕೆಲಸಗಾರರು ಗನಿಯೊಳಗೆ ಮುಷ್ಕರ ಹಿಡಿದು ಜಯಶೀಲರಾಗಿದ್ದರು. ಮೊನ್ನೆ ಜುಗೋಸ್ಲೋವಿಯಾದಲ್ಲಿ ಗನಿಯೊಂದರಲ್ಲಿ ೧೨೪ ಮಂದಿ ಕೆಲಸಗಾರರು ಮುಷ್ಕರ ಹಿಡಿದು ತಮ್ಮ ಸಂಬಳವನ್ನು ಹೆಚ್ಚಿಸದೆ ಮತ್ತು ಬಾಕಿಯುಳಿದ ಸಂಬಳವನ್ನು ಕೊಡದೆ ತಾವು ಮೇಲೆ ಬರಲಾರೆವು ಎಂದು ಹಟಹಿಡಿದರು. ೭ ದಿನಗಳ ತನಕ ಅವರು ಮೇಲೆ ಬರಲೇ ಇಲ್ಲ. ಕೊನೆಗೆ ಯಜಮಾನರು ಒಪ್ಪಿದರು. ೧೨೪ ಮಂದಿಯಲ್ಲಿ ೧೨ ಮಂದಿ ಪ್ರಜ್ಞಾಹೀನರಾಗಿದ್ದರು.

ವಿಚಿತ್ರ ಸ್ಮರಣ ಶಕ್ತಿ.

ಲೀಬೆಸ್‌ಡೆಸ್ ಹುಚ್ಚರ ಆಸ್ಪತ್ರೆಗೆ ಒಬ್ಬ ಹುಡುಗನನ್ನು ತಂದಿರುವರು. ಅವನ ರೋಗವನ್ನು ಗುಣಮಾಡಿದ ನಂತರ ಹಲವು ಡಾಕ್ಟರರು ಇವನ ಸ್ಮರಣಶಕ್ತಿಯನ್ನು ಪರೀಕ್ಷಿಸಿದರು. ೧೫೦೦ರ ಇಸವಿಯಿಂದ ೨೦೦೦ನೇ ವರುಷಗಳ ವರೆಗೆ ಆಯಾಯಾ ತಾರೀಖು ಯಾವ್ಯಾವ ದಿನಗಳಲ್ಲಿ ಬೀಳುತ್ತದೆಂದು ಅವನಿಗೆ ಪ್ರಶ್ನೆಯಿಟ್ಟರು. ೩೦ ಸೆಕೆಂಡುಗಳ ವರೆಗೆ ಅವನು ಮನಸಿನಲ್ಲೇ ಲೆಕ್ಕಮಾಡಿ ಸರಿಯಾದ ಉತ್ತರವನ್ನು ಬಾಯಿಯಲ್ಲೇ ಹೇಳಿಬಿಟ್ಟನು.

ಮಂತ್ರಿಯ ಸಹೋದರಿಗೆ ಗತಿಯಿಲ್ಲ

ವಿಧಿ ವಿಲಾಸನೋಡಿ! ಸೋವಿಯಟ್ ರಷ್ಯದ ವಿದೇಶೀಯ ಸಚಿವರಾದ ಮೆಕ್ಸಿಂ ಲಿಂಟ್ ವಿನೋಫರವರು ಪ್ರಿಟನಿನ ಸೈಮನರಂತೆ ಮಹಾ ಪದವಿಯನ್ನು ಹೊಂದಿದವರು. ಇವರ ಸಹೋದರಿ ಎಸ್ಥರ್ ಎಂಬವಳು ಲೋಡ್ಜ್ ಎಂಬಲ್ಲಿ ಮನೆಯ ಬಾಡಿಗೆಯನ್ನು ಹದಿನೆಂಟು ತಿಂಗಳುಗಳ ವರೆಗೆ ಕೊಡದೆ ಮನೆಯ ಧಣಿಯಿಂದ ಹೊರಗೆ ತಾಳಲ್ಪಟ್ಟಿಳು. ಅವಳ ಸಾಮಾನುಗಳನ್ನೆಲ್ಲಾ ಧಣಿಯು ಬೀದಿಗೆ ಬಿಸಾಡಿದ, "ನೀನು ಇಷ್ಟು ದಿನವಳ ಏಕೆ ಸಡಿಲು ಬಿಟ್ಟೆ?" ಎಂದು ಧಣಿಯೊಡನೆ ವಿಚಾರಿಸಿದಾಗ "ಅವಳ ಬಲಿಷ್ಠನಾದ ಅಣ್ಣನು ಕೊಡುತ್ತಾನೆಂದು ನಾನು ತಿಳಿದಿದ್ದೆ" ಎಂದನು.

ಇವನ ರಜತೋತ್ಸವವಾಗಬೇಕಾಗಿದೆ.

ರಾಜಕೋಟೆಯಲ್ಲಿ ಒಬ್ಬ ವಿದ್ಯಾರ್ಥಿಯಿರುವನು. ಇವನು ೧೯೧೦ರಲ್ಲಿ ತನ್ನ ೨೦ನೇ ವರುಷ ವಯಸ್ಸಿನಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕುಳಿತ. ಈಗ ೪೬ ವರುಷ ಪ್ರಾಯಸ್ಥನಾಗಿದ್ದಾನೆ. ಇನ್ನೂ ಮೆಟ್ರಿಕ್ಯುಲೇಶನನ್ನು ದಾಟಲು ಇವನಿಗಾಗಿರುವುದಿಲ್ಲ. ಹೇಗಾದರೂ ನಿಶ್ಚಿತ ಶಾಂತ ಮನಸ್ಸಿನಿಂದ, ದೃಢತೆಯಿಂದ ತನ್ನ ಸಾಧನೆಯಲ್ಲಿ ತಲ್ಲೀನನಾಗಿರುವನು. ೨೫ ವರುಷಗಳಲ್ಲಿ ಜಗತ್ತೇ ನೂತನ ಮಾರ್ಗಾನುಸರಣೆಮಾಡಲು ತೊಡಗಿದೆ—ವಿಮಾನ, ತಂತಿರಹಿತ ವಾರ್ತೆ, ಟೆಲಿವಿಶನ್ ಮೊದಲಾದ ಶೋಧಗಳಾಗಿವೆ. ಆದರೆ ಈ ರಾಜಕೋಟೆಯ ವಿದ್ಯಾರ್ಥಿಯು ಮಾತ್ರ ಒಂದೇ ತೆರನಾದ ಧೈರ್ಯದಿಂದ ಅಪಜಯದ ಹಾದಿಯಲ್ಲಿ ಮುಂದರಿಯುತ್ತಿರುವನು. ಇವನ ಸಿಲ್ವರ್ ಜುಬಿಲಿಯನ್ನಾಚರಿಸದರಾಗದೇ?

ನಿಧಿಗಳನ್ನು ಹುಡುಕುವ ಯಂತ್ರ.

ಮಿ|| ಡಬ್ಲ್ಯು. ಎಂ ಬೆತ್ರಿಟ್ ಎಂಬವರು ನಿಧಿಗಳನ್ನು ಕಂಡು ಹಿಡಿಯುವ ಒಂದು ಯಂತ್ರವನ್ನು ರಚಿಸಿದ್ದಾರೆ, Terrometer ಎಂದು ಇದರ ಹೆಸರು. ಇದರ ಸೂಚಕ ಶಕ್ತಿಯು ಒಂದು ಮುಳ್ಳು ತೋರಿಸುವ ವಿಸ್ತೀರ್ಣದಲ್ಲಿರುವ ಭೂಮಿಯಲ್ಲಿ ಎಲ್ಲೆಲ್ಲಿ ಚಿನ್ನವಿದೆ—ಎಲ್ಲೆಲ್ಲಿ ಕೋವಿದೆ—ಎಂದು ಈ ಮುಳ್ಳು ತೋರಿಸುವುದು. ಈ ಯಂತ್ರಸಹಾಯದಿಂದಾಗಿ ಹೇರಳ ದ್ರವ್ಯ ಸಂಪಾದನೆಯಾಗಲಿದೆಯೆಂದು ಊಹಿಸಲಾಗಿದೆ.

ನಿಧಿನಿಕ್ಷೇಪಗಳೆಲ್ಲಿವೆಯೆಂದು ತೋರಿಸಬಹುದು.

ಗ್ಲೌಸೆಸ್ಟರ್‌ನಲ್ಲಿ ಜೊಯ್ಸ್ ಪ್ರೋಸರ್ ಎಂಬ ಬಾಲಕಿಯೊಬ್ಬಳಿರುವಳು. ತನ್ನ ಮೂರನೇ ವರ್ಷದಲ್ಲಿರುವಾಗಲೇ ಇವಳು ತನ್ನ ಅಜ್ಜನು ಬಾವಿ ತೋಡಲು ಸಿದ್ಧಮಾಡುತ್ತಿದ್ದಾಗ ಅವನನ್ನು ತಡೆದು "ಅಜ್ಜಾ, ಇಲ್ಲಿ ನೀರಿಲ್ಲ. ಆಕೋ, ಅಲ್ಲಿದೆ" ಎಂದು ಹೇಳಿದಳು. ಆದರೆ ಅಜ್ಜನು ಅವಳ ತೊದಲ್ನುಡಿಯನ್ನು ಲೆಕ್ಕಿಸದೆ ಬಾವಿ ತೋಡಿದ. ಹುಡುಗಿಯೆಂದಂತೆ ಅಲ್ಲಿ ನೀರು ಸಿಗಲಿಲ್ಲ. ಅವಳು ಸೂಚಿಸಿದಲ್ಲಿ ಬಾವಿಯನ್ನಗೆಯಲು ವಿಪುಲವಾದ ನೀರು ಸಿಕ್ಕಿತು. ಇವಳನ್ನು ಲಂಡನಿಗೆ ಎಬ್ಬಿಗೆ ಕರೆದೊಯ್ದು ಅಲ್ಲಿಯ ನಿಕ್ಷೇಪವೆಲ್ಲಿದೆಯೆಂದು ಪ್ರಶ್ನಿಸಲು ಅದಿದ್ದ ಸ್ಥಳವನ್ನು ತೋರಿಸಿದಳು. ಅಗೆದಾಗ ಅದು ದೊರೆಯಿತು. ಇವಳ ಕಣ್ಣಿನಲ್ಲಿರುವ ಒಂದು ವಿಚಿತ್ರ ರಶ್ಮಿಯೇ ಈ ಶಕ್ತಿಯನ್ನವಳಿಗೆ ಕೊಟ್ಟಿತಂತೆ.

ಕಲ್ಲು ಹೃದಯ

ಎಂಬುದು ಇದೆ. ಹೃದಯದ ಮೇಲಿನ ಚರ್ಮದ ಮೇಲೆ ಅದರ ಒರಟುತನವು ಹೊಂದಿಕೊಂಡಿದೆಯೋ ತಿಳಿಯದು. ಡೈಲಿಮೈಲ್ ಪತ್ರಿಕೆಯು ಹೇಳುವಂತೆ ಬರ್ಮಿಂಗಾಮಿನ ಒಬ್ಬ ಹುಡುಗನ ಎದೆಯಲ್ಲಿ ಭಯಂಕರ ನೋವು ಇತ್ತು. ಎಂತೆಂತಹ ಔಷಧಿಯಿಂದಾಗಿಯೂ ಆ ನೋವು ಹೋಗಲಿಲ್ಲ. ಎಕ್ಸ್‌ರೇಯಿಂದ ಪರೀಕ್ಷಿಸಿದಾಗ ಅವನ ಹೃದಯದ ಹೊರಭಾಗವು ಪೂರ್ಣ ಕಲ್ಲಿನ ರೂಪಕ್ಕೆ ಬಂದಿದ್ದುದು ಕಂಡುಬಂತು. ಒಪರೇಶನ್ ಮಾಡಲಾಯಿತು. ಬಹು ಜಾಗ್ರತೆಯಿಂದ ಅವನ ಎದೆಯಿಂದ ಆ "ಕಲ್ಲ"ನ್ನು ತೆಗೆದರು.

ಫ್ರಾಂಕೋ ಸೋವಿಯಟ್ ಒಪ್ಪಂದ.

ಫ್ರಾಂಕೋ-ಸೋವಿಯಟ್ ಒಪ್ಪಂದವು ಈಗ ತಾನೇ ಎರಡು ರಾಷ್ಟ್ರಗಳ ಪ್ರತಿನಿಧಿಗಳಿಂದಲೂ ಸಹಿ ಹಾಕಲ್ಪಟ್ಟಿದೆ. ಈ ಒಪ್ಪಂದವು ಇನ್ನೂ ೫ ವರ್ಷಗಳ ವರೆಗೆ ಜಾರಿಯಲ್ಲಿರುವುದು. ಯೂರೋಪಿನ ರಾಷ್ಟ್ರವ್ಯಾವುದೂ ಈ ಎರಡು ರಾಷ್ಟ್ರಗಳಲ್ಲಿ ಅಂದರೆ ರಷ್ಯಾ, ಫ್ರಾನ್ಸು ಇವುಗಳಲ್ಲಿ ಯಾವುದನ್ನಾದರೂ ಎದುರಿಸಿದ್ದೇ ಆದರೆ ಅಗ್ಗೆ ಪರಸ್ಪರ ಸಹಾಯ ಮಾಡಬೇಕೆಂಬುದೇ ಈ ಒಪ್ಪಂದದ ಶರತ್ತು. ಇದನ್ನು ಹಿಂದಿನ ಒಪ್ಪಂದಗಳಿಗೆ ಅನ್ವಯಿಸದಂತೆ ಉಪಯೋಗಿಸತಕ್ಕದು.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು' ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವಿಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ—(ಸಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ- (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ



Distributors for South Kanara —

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ... 1

ಕಾವಣ ಶ. ಸ್ಥಾಪನೆ

Shah Company

Pearl & Sons

Atank Nigrah Pharmacy

Bangalore

ಆತಂಕನಿಗ್ರಹ ಫಾರ್ಮಸಿ,

ಬೆಂಗಳೂರು

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು ಸಂ ಸ್ವ.

Writing an Advertisement Advertisements make both a concious and sub concious appeal and should be beautiful sentimental or humorous to blatant or vulgar crisp in their appeals whether of wording or design not too highly coloured metaforically and with a reason given (wherever possible) that appeals to the practicable mind, a mere statement of the name of the article or place is insufficient

Get your advertisement written up by —**The Publicity Department, Swadeshabhimani Mangalore**

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ 1906)

ಕೆಳಗಿನ ಪ್ರಗತಿಸೂಚಕ ಪಟ್ಟಿಯು ಈ ಸಂಸ್ಥೆಯು ವರ್ಷಂಪ್ರತಿ ದೃಢವಾಗಿ ಬೆಳೆಯುತ್ತಿರುವುದಕ್ಕೆ ಸಾಕ್ಷಿಯಾಗಿದೆ ದಿ ಕೆನರಾ ಬ್ಯಾಂಕ್ ಲಿಮಿಟೆಡ್ ಇದರಲ್ಲಿ ಸಾರ್ವಜನಿಕರು ಇಟ್ಟಿರುವ ವಿಶ್ವಾಸಕ್ಕೂ ಸಂಸ್ಥೆಯ ಸೇವೆಗೂ ಇದೇ ದಾಖಲೆಯಾಗಿದೆ

19 ಆಫೀಸುಗಳಿರುವ ಹೆಸರಾದ ಬೇಂಕು

ನಮ್ಮ ಆಫೀಸುಗಳು:—

ಬೊಂಬಾಯಿ (ಫೋರ್ಟ್ ಮತ್ತು ಮಾಂಡ್ವಿ), ಹುಬ್ಬಳ್ಳಿ, ಮಂಗಳೂರು, ಕಲ್ಲಿಕೋಟೆ, ಕೊಚ್ಚಿ, ಎರ್ನಾಕುಲಂ, ಅಲ್ಲೆಪ್ಪಿ, ಬೆಂಗಳೂರು, ದಾವಣಗೆರೆ, ಚಿಕ್ಕಮಗಳೂರು ಇತ್ಯಾದಿ ಕಡೆಗಳಲ್ಲಿವೆ

ಪ್ರಗತಿಸೂಚಕ ಪಟ್ಟಿ.

ವಿಕ್ರೀತ ಭಂಡವಾಳ	ತೆತ್ತ ಭಂಡವಾಳ	ರಿಜರ್ವ್	ಡಿಪೋಜಿಟ್	ವ್ಯವಹಾರದಲ್ಲಿರುವ ಭಂಡವಾಳ
1916 2,25,000	1916 2,00,000	1916 89,000	1916 3,60,000	1916 6,83,000
1920 3,00,000	1920 3,00,000	1920 1,61,000	1920 8,99,000	1920 14,19,000
1924 3,00,000	1924 3,00,000	1924 2,62,000	1924 18,10,000	1924 24,69,000
1928 3,00,000	1928 3,00,000	1928 3,88,000	1928 37,42,000	1928 46,99,000
1932 6,00,000	1932 3,80,000	1932 4,31,000	1932 55,46,000	1932 65,62,000
1934 6,00,000	1934 3,81,000	1934 4,50,000	1934 58,62,000	1934 73,49,000

ಗಿರಾಕಿಗಳಿಗೆ ಎಲ್ಲಾ ತರದ ಸೌಕರ್ಯಗಳು

ಸುಲಭ ರೀತಿಯ ವ್ಯಾಪಾರ ನಿಬಂಧನೆಗಳು.

ಸ್ವದೇಶಾಭಿಮಾನಿಯ ವಿಚಾರತರಂಗ ವಿಭಾಗಕ್ಕೆ

ಉತ್ತರ ಮತ್ತು ಇದಕ್ಕೆ ಸಮಾಧಾನ.

(ಲೇಖಕರು ಎಚ್ ಗಣಪತಿ ರಾವ್, ಫಸ್ಟ್ ಗ್ರೇಡ್ ಟೀಚರ್, ಪುತ್ತೂರು)

ಪ್ರಶ್ನೆಗಳಿಗೆ ಉತ್ತರ—ಹಿಂದೂ ಸಮಾಜದ ಮಠಗಳು ಸಮಾಜದ ಅಧಿಕಾರದವುಗಳೇ-ಯಾಕೆಂದರೆ ಇವುಗಳು ಸಮಾಜದ ಜನರ ಅಪೇಕ್ಷೆ ವ ಅನುಮೋದನೆಯಂತೆ ಉಂಟಾದುವುಗಳು.ಮಠದ ಆಡಳಿತೆಯು ಮಠಾಧಿಪತಿಗಳ ಅಧಿಕಾರದವುಗಳು. ಯಾಕೆಂದರೆ ಸಮಾಜದವರು ಆಡಳ್ತೆ ಮಾಡುವುದಾದರೆ ಮಠದ ಉದ್ದೇಶಗಳು ನೆರವೇರಲಿಕ್ಕಿಲ್ಲ. ಪ್ರ. ೨. ಈ ಮಠಗಳು ಸಮಾಜದವರ ಏಳಿಗೆಗೆ ಮತ್ತು ಸನಾತನ ಧರ್ಮವನ್ನು ಕಾಪಾಡಲಿಕ್ಕೆ ಉಂಟಾದುವುಗಳು: ಯಾಕೆಂದರೆ ದೇವಸ್ಥಾನಗಳಿಂದಲೇ ಎಲ್ಲಾ ಕೆಲಸಗಳು ನೆರವೇರುವರೆ ಸಾಧ್ಯವಿಲ್ಲದುದರಿಂದ ಮಠಗಳು ಸ್ಥಾಪಿಸಿದ್ದು. ಪ್ರ ೩ ಶ್ರೀ ಸಂಸ್ಥಾನ ಕೈವಲ್ಯ ಮಠ, ಕಾಶೀಮಠ, ಗೋಕರ್ಣ ಮಠ, ಶೃಂಗೇರಿ ಮಠ, ಕುಂಭಕೋಣ ಮಠ, ಉತ್ತರಾದಿ ಮಠ, ಉಡುಪಿ ಅಷ್ಟ ಮಠಗಳು, ಎಡನೀರು ಮಠ, ಸುಬ್ರಮಣ್ಯ ಮಠ, ರಾಮಚಂದ್ರಾಪುರ ಮಠ,, ಕಣ್ವತೀರ್ಥ ಮಠ, ವೀರಶೈವ ಗುರುಪುರ ಮಠ, ಬೇಕಲ ಮಠ, ಕಾಡು ಮಠ, ಮತ್ತು ಮೂಡುಬಿದ್ರೆ ಮಠ, ಮತ್ತು ಕಾರ್ಕಳ ದಾನಸಾಲೆ ಮಠ ಪ್ರ. ೪ ಉಡುಪಿ ಅಷ್ಟಮಠಗಳು ಶ್ರೀಮಾನ್ ಮಧ್ವಾಚಾರ್ಯರು ಸ್ಥಾಪಿಸಿದೆಂಬುದು ಓದಿಬಲ್ಲೆ ಬಾಕಿ ಮಠಗಳ ಸ್ಥಾಪಕರು ಯಾರೆಂಬದು ನಾನು ಅರಿಯೆ ಆದರೆ ಶ್ರೀ ರಾಮಚಂದ್ರಾಪುರ ಮಠವು ಶ್ರೀ ಶೃಂಗೇರಿ ಜಗದ್ಗುರುಗಳು ಸ್ಥಾಪಿಸಿದೆಂತ ಕೇಳಿಬಲ್ಲೆ ಪ್ರ ೫ ಮಠಗಳ ಸ್ಥಾಪನೆಯು ಸನಾತನ ಧರ್ಮ ಪ್ರಚಾರಕ್ಕೆಂಬುದು ನಿರ್ವಿವಾದ ಯಾಕೆಂದರೆ ಆಯಾಯ ಸಮಾಜದ ಆಚಾರವಿಚಾರಗಳನ್ನು ಆಯಾಯಾ ಮಠದವರು ಪಾಲಿಸುತ್ತಾರೆ ಪ್ರ ೬ ಸನಾತನ ಧರ್ಮಪ್ರಚಾರವೂ ಸ್ಥಾಪಕರ ಉದ್ದೇಶವಾಗಿತ್ತು ಯಾಕೆಂದರೆ ಪ್ರತಿಯೊಂದೂ ಮಠವು ಈಗಲೂ ಆ ಕೆಲಸವನ್ನು ಹಚ್ಚಿಕೊಂಡು ಉಂಟು ಪ್ರ ೭ ಮಠಗಳು ಸದ್ಧರ್ಮವನ್ನು ಸಾರಲು ಹೊರಟಿದ್ದು ಪ್ರ ೮ ಆ ಕಾಲದಲ್ಲಿ ಸದ್ಧರ್ಮವನ್ನು ಸಾರುವ ಅಗತ್ಯವಿತ್ತು ವೇದೋಕ್ತ ಕಾಲದಿಂದ ಸಮಾಜವು ಮುಂದರಿಯುತ್ತಾ ಬಲಿಷ್ಟವಾಗುತ್ತಾ ಬಂದಂತೆ ಕುಂದುಕೊರತೆಗಳು ಕಾಣುತಿದ್ದುವು ಅವುಗಳು ತಿದ್ದುಪಡಿಯಾಗಿ ಸಮಾಜದ ಪ್ರತಿಷ್ಠೆಯು ನೆಲೆನಿಲ್ಲುವಂತೆ ಮಠಗಳ ಏರ್ಪಾಡು ಅಗತ್ಯವಾಯಿತು ಪ್ರ ೯. ಹೌದು. ಪ್ರ ೧೦ ಲೌಕಿಕ ವ್ಯವಹಾರದ ಸ್ವಾರ್ಥಪರತೆಯು ಇಲ್ಲದೆ ಸಮಾಜವನ್ನು ನಿಷ್ಪಕ್ಷಪಾತಿಯಾಗಿ ನಡೆಯಿಸಿಕೊಂಡು ಹೋಗುವ ವ್ಯಕ್ತಿಗಳು ಬೇರೆ ಕೋರದ್ದರಿಂದ ಸನ್ಯಾಸಿಗಳುಯೋಗ್ಯರೆಂದು ಹಿರಿಯರು ಕಂಡುಕೊಂಡದ್ದು ಪ್ರ ೧೧ ಗೃಹಸ್ಥರು ಲೌಕಿಕ ವ್ಯವಹಾರಗಳಲ್ಲಿ ಸ್ವಾರ್ಥಪರತೆ ಇಲ್ಲದೆ ಇರಲಾರರು ಎಂಬ ಗೃಹಿಕೆಯು ಆ ಕಾಲದಲ್ಲಿ ಇದ್ದ ಕಾರಣದಿಂದಲೂ ಸನ್ಯಾಸಿಗಳಿಗಿಂತ ಗೃಹಸ್ಥರು ಆ ಕಾಲದ ವಿದ್ಯೆಯಲ್ಲಿ ಹಿಂದುಳಿದವರಾದ ಕಾರಣದಿಂದಲೂ ಸನ್ಯಾಸಿಗಳು ಅತ್ಯುಕ್ತವೆಂದು ಸಮಾಜದವರು ಗ್ರಹಿಸಿದರು ಪ್ರ ೧೨ ಅಹಿಂಸಾ ಪರಮೋಧರ್ಮವೆಂಬ ತತ್ವವನ್ನು ಆ ಕಾಲದ ವಿದ್ಯೆಯಲ್ಲಿ ಪಾರಂಗತರಾಗಿ ಐಹಿಕ ಸುಖವನ್ನು ತ್ಯಜಿಸಿ ಪಾರಮಾರ್ಥಿಕ ಜ್ಞಾನವನ್ನು ಗಳಿಸಿದ ಜನರನ್ನು ಚುನಾಯಿಸಿ ಮಠಸ್ಥಾಪಕರು ಪಟ್ಟಕಟ್ಟಿದ್ದರು ಪ್ರ ೧೩ ಇದಕ್ಕೆ ಉತ್ತರವು ೧೨ನೇ ಪ್ರಶ್ನೆಯ ಉತ್ತರದಲ್ಲಿ ಅಡಕವಾಗಿದೆ ಪ್ರ ೧೪ ಮಠಸ್ಥಾಪಕರು ಇಚ್ಛಿಸಿ ಆರಿಸಿದ ವ ಪಟ್ಟಕಟ್ಟಿದ ಸನ್ಯಾಸಿಗಳ ಕರಕಮಲ ಸಂಜಾತರಾಗಿ ಮುಂದರಿಸಿ ಬಂದ ಶಿಷ್ಯರು ತಮ್ಮ ಪೂರ್ವಜರದಾರಿಯಲ್ಲೇ ಇರುವುದಾಗಿ ಪೂರ್ಣ ಹೇಳಲು ಸಾಧ್ಯವಿಲ್ಲ-ಅಂದರೆ ಹೆಚ್ಚಾದವರು ಪ್ರಾಚೀನ ಪದ್ಧತಿಯನ್ನೇ ಅನುಸರಿಸುತ್ತಾರೆಂಬುದು ಧೈರ್ಯವಾಗಿ ಹೇಳಬಹುದು ಪ್ರ ೧೫ ಸ್ವಾಮಿಗಳ ಪೂರ್ವಾಧಿಕಾರಿಗಳಿಗಿಂತ ಉತ್ಕೃಷ್ಟವಾದ ವಿದ್ಯೆಯು ಈಗಿನ ಶಿಷ್ಯರ ಕೂಡೆ ಉಂಟೆಂಬುದು ಹೇಳಲಾಗುವುದಿಲ್ಲ ಆದರೆ ನಿತ್ಯನೈಮಿತ್ತಿಕಗಳು ಮುಂಚಿನಂತೆಯೇ ನಡೆಯುತ್ತವೆ ದಾನಧರ್ಮಗಳು ಮುಂಚಿನಂತೆಯೇ ನಡೆಯುತ್ತವೆ. ಕೆಲವು ಮಟ್ಟಿಗೆ ವ್ಯಯವು ಅನಾವ್ಯಯವಾಗಿರಲೂಬಹುದು. ಪ್ರ. ೧೬. ಮಠಗಳಿಗೆ ಉತ್ತರಾಧಿಕಾರಿಗಳನ್ನು ಆರಿಸುವ ಅಧಿಕಾರವು ಪೂರ್ವಾಧಿಕಾರಿಗಳಿಗೇನೇ ಇರಬೇಕು. ಹಾಗಲ್ಲದೆ ಆರಿಸಲ್ಪಡುವ ಅಧಿಕಾರಿಯು ಸಮಾಜದ ಸ್ವಾರ್ಥಪರತೆಯು ಜನರಿಗೆ ಸಿಕ್ಕುವ ಸಂಭವ ಉಂಟು ಅದಲ್ಲದೆ ಪದ್ಧತಿಯು ಆದಿಯಲ್ಲಿ ಮಠಸ್ಥಾಪಕರು ಒಬ್ಬರೇ ಸನ್ಯಾಸಿಗಳನ್ನು ನೇಮಿಸಿದ ಕಾರಣ ಅದನ್ನೆ ಮುಂದರಿಸುವುದು ಯೋಗ್ಯ ಪ್ರ. ೧೭ ಸನ್ಯಾಸಿಗಳು ಚಿಕ್ಕ ವಯಸ್ಸಿನವರನ್ನು ಅಂಗೀಕರಿಸಿ ಅವರನ್ನು ತಮ್ಮ ಸಂದರ್ಶನೆಯಲ್ಲಿಟ್ಟು, ವಿದ್ಯೆಯನ್ನು ಕೊಡಿಸಿ, ಮಠದ ವ್ಯವಹಾರಗಳೇ ಚಿಕ್ಕಂದಿನಿಂದ ಮನಸ್ಸಿನಲ್ಲಿ ನಾಟಿಸಿ ಮಠದ ಗುರುವಿನ ಮೇಲೆ ವಾತ್ಸಲ್ಯವನ್ನು ಬೆಳೆಯಿಸಿ ಆಶ್ರಮವನ್ನು ಕೊಡುವುದು ಎಷ್ಟೋ ಶ್ರೇಯಸ್ಕರವು ಫಕ್ಕನೆ ಚಿಕ್ಕ ವಯಸ್ಸಿನ ಬಾಲಕರಿಗೆ ಆಶ್ರಮ ಕೊಡುವುದರಿಂದ ಮಠದ ಉದ್ದೇಶ್ಯವು ನೆರವೇರಲಿಕ್ಕಿಲ್ಲ—ಲೌಕಿಕ ವ್ಯವಹಾರಗಳಲ್ಲಿ ನುರಿತ ಯೌವನಸ್ಥರನ್ನು ಎಂದಿಗೂ ಪಟ್ಟಕ್ಕೆ ಕೂತುಕೊಳ್ಳಿಸಬಾರದು ಪ್ರ ೧೮ ಇಲ್ಲ ಯಾಕೆಂದರೆ ಅವರು ವಿದ್ಯಾವಂತರಾಗಿ ಧರ್ಮಶಾಸ್ತ್ರಗಳನ್ನು ಕಲಿಯದೆ ಸನಾತನ ಧರ್ಮವು ಸಂಗಲಾರದು ಪ್ರ ೧೯ ಬೇಕು ಇಲ್ಲವಾದರೆ ಸಮಾಜವನ್ನು ನಡೆಯಿಸುವ ಸಾಮರ್ಥ್ಯವೂ ಮಠಾಧಿಪತಿಗಳಿಗೆ ಬರಲಾರದು ಪ್ರ ೨೦ ಚಿಕ್ಕ ಪ್ರಾಯದ ಸನ್ಯಾಸಿಯರಿಗೆ ಆ ತರದ ಅನುಭವವು ಇರಲಾರದಾದರೂ ಚಿಕ್ಕ ವಯಸ್ಸಿನವರನ್ನು ಲೌಕಿಕ ವ್ಯವಹಾರಗಳ ಅನುಭವ ಕೊಟ್ಟು ತರಬೇತು ಮಾಡಬಹುದು ಪ್ರ ೨೧ ನುರಿತ ಗೃಹಸ್ಥ ಧರ್ಮಿಗಳು ಗುರುಮಠಗಳ ಪಟ್ಟಕ್ಕೆ ಯೋಗ್ಯರೆಂದು ಕೆಲವು ಸಮಾಜದವರು ಗ್ರಹಿಸಿದರೂ ಅವಿದ್ಯಾವಂತರಾಗಿ ಗೃಹಸ್ಥಾಶ್ರಮದಲ್ಲಿರುವವರಿಗೆ ರಿಗೆ ಸಮಾಜವನ್ನು ಮುಂದಟ್ಟುಮಾಡುವ ಸಾಮರ್ಥ್ಯವೂ ಇರಲಾರದು ಅವರು ಅನುಭವಿಸಿಬಂದ ನಡೆನುಡಿಗಳಲ್ಲಿ ಅವರ ಮನಸ್ಸು ಆಕರ್ಷಿಸಲ್ಪಡುವುದು ಪ್ರ ೨೨ ಶಾಸ್ತ್ರ ಪರಿಚಿತರಾದ ಗೃಹಸ್ಥಾಶ್ರಮಿಗಳು ಅಪೂರ್ವವಾಗಿ ಸಿಗುವರು. ಗೃಹಸ್ಥಾಶ್ರಮಿಗಳಿಂದ ಸನಾತನ ಧರ್ಮವೂ ಮುಂದರಿಸುವರೆ ಪೂರ್ಣ ಸಾಧ್ಯವಾಗಲಾರದು ಪ್ರ ೨೩ ಮಠದ ಸನ್ಯಾಸಿಯವರು ಅದಕ್ಕೆ ಸಂಬಂಧಿಸಿದ ಆಸ್ತಿಪಾಸ್ತಿಗಳ ಚಾಲಕರಲ್ಲದೇ ಹೆಚ್ಚಿನ ಹಕ್ಕೇನೂ ಇಲ್ಲದವರು ಉತ್ಪತ್ತಿಯನ್ನು ಮಾತ್ರ ಮನಗಂಡಂತೆ ವ್ಯಯಮಾಡಲಿಕ್ಕೆ ಬಲ್ಲವರು ಪ್ರ ೨೪ ಸನ್ಯಾಸವೂ ಸಂಪತ್ತಿನಿಂದ ದೂರವಾಗಬೇಕೆಂಬೋದಿಲ್ಲ—ಯಾಕೆಂದರೆ ಸಂಪತ್ತು ಮಠದ ದಾನಧರ್ಮಗಳಿಗೂ, ದೇವತಾರ್ಚನೆಗೂ, ನಿತ್ಯಾನೈಮಿತ್ತಿಕಗಳ ಖರ್ಚಿಗೂ ಅಗತ್ಯವಾದದ್ದು ಪ್ರಶ್ನೆ ೨೫ ಆಡಂಬರಗಳೂ, ಉತ್ಸವಗಳೂ, ಊಟಗಳೂ, ಹಬ್ಬಗಳೂ, ದಿಬ್ಬಣಗಳೂ ಸಮಾಜವನ್ನು ಆಕರ್ಷಿಸಿ ಮಠದ ಕಡೆಗೆ ಬಂದು ಸೇರುವಷ್ಟಕ್ಕೆ ಮಾತ್ರ ಅಗತ್ಯವಾದವುಗಳು. ಈ ರೀತಿ ಆಕರ್ಷಿಸಲ್ಪಟ್ಟ ಸಮಾಜವನ್ನು ಸನ್ಮಾರ್ಗಕ್ಕೆ ಎಳಕೊಂಡು ಹೋಗುವುದು ಮಠಾಧಿಪತಿಗಳ ಕರ್ತವ್ಯವು ಪ್ರ ೨೬ ಮಠಸ್ಥಾಪಕರಾದ ಮೂಲಗುರುಗಳು ಉತ್ಸವ ಸಮಾರಾಧನೆ ಮುಂತಾದ ಆಡಂಬರಗಳು ಅಗತ್ಯವೆಂದು ಕೊಂಡುಕೊಂಡು ತದ್ವಾರಾ ಸಮಾಜವನ್ನು ಆಕರ್ಷಿಸುವರೆ ಸಾಧಿಸಿದ ಕಾರಣ ಆ ಆಡಂಬರಗಳೆಲ್ಲಾ ಮುಂದರಿಸಿಕೊಂಡು ಬಂದಿವೆ ಸಂಪತ್ತು ಕಮ್ಮಿ ಇದ್ದಾಗ ಕಮ್ಮಿ ತರಗತಿಯಲ್ಲಿಯೂ ಸಂಪತ್ತು ವೃದ್ಧಿಗೊಳ್ಳುತ್ತಾ ಬಂದಂತೆ ಉನ್ನತ ತರಗತಿಯಲ್ಲಿಯೂ ಆಡಂಗಳು ನಡೆಯುತ್ತಾ ಬಂದಿವೆ ಪ್ರ ೨೭ ಆಡಂಬರದ ಪೂಜೆಗಳು ಈಗ ಉಂಟಾದುವುಗಳೆಲ್ಲಾ ಮುಂದುವರಿಸಿಕೊಂಡು ಬಂದವುಗಳು. ಪ್ರ ೨೮ ಸಮಾಜವೂ ವೃದ್ಧಿಗೊಳ್ಳುತ್ತಲೇ ಆಡಂಬರಗಳ ತರಗತಿಯು ಏರುತ್ತಾ ಬಂದದ್ದು ಇವುಗಳು ಏರಿದಂತೆಯೇ ಸಮಾಜವೂ ಏರುತ್ತಾ ಬಂದು ಅದು ಅತ್ಯಗತ್ಯವೆಂದು ಪರಿಣಮಿಸಿತು-ಪ್ರ. ೨೯. ಈ ಬದಲಾವಣೆಗಳನ್ನು ನಿರ್ಣಯಿಸುವ ಅಧಿಕಾರವೂ ಮಠಾಧಿಪತಿಗಳ ಪಾಲಿಗೆ ಸೇರಬೇಕು ಯಾಕೆಂದರೆ ಆಡಳ್ತೆ ಅಧಿಕಾರವೂ ಅವರದ್ದೇ ಆಗಿರುತ್ತದೆ. ಪ್ರಶ್ನೆ ೩೦ ಹಬ್ಬಹುಣ್ಣಿಮೆಗಳ ಪರವಾಗಿ ಆಗುವ ವ್ಯಯವು ದುರ್ವ್ಯಯವಲ್ಲ—ಮನುಷ್ಯವರ್ಗಕ್ಕೆ ಪೋಷಾಕು ಮುಂತಾದ ಸೌಕರ್ಯಗಳು ಹೇಗೆ ಅತ್ಯಗತ್ಯವೋ—ಮಠಗಳಿಗೆ ಹಬ್ಬ ಹುಣ್ಣಿಮೆ ಅತ್ಯಗತ್ಯವೊ- ಇಲ್ಲವಾದರೆ ಮಠಗಳ ತಿಳುವಳಿಕೆಯು ಸಮಾಜಕ್ಕೆ ಇರಲಾರದು ಪ್ರ ೩೧ ಸಂಪತ್ತಿನ ಪೂರ್ಣ ಸಂಖ್ಯೆಯು ಹಬ್ಬಹುಣ್ಣಿಮೆಗಳಿಗೆ ವ್ಯಯವಾಗುವುದಿಲ್ಲ ಉಳಿದ ಉತ್ಪತ್ತಿಯನ್ನು ಬೇರೆ ಕೆಲಸಗಳಿಗೆ ಉಪಯೋಗಿಸಬಹುದು ಮತ್ತು ಉಪಯೋಗಿಸಬೇಕು ಪ್ರ ೩೨ ಪೂಜೆ ಪರ್ಯಾಯಗಳು ಹೆಚ್ಚು ವೆಚ್ಚದಿಂದಲೂ—ಗಂಭೀರವಾಗಿಯೂ—ಮಾಡಲ್ಪಡದಿದ್ದರೆ ಸಮಾಜಕ್ಕೆ ಆಕರ್ಷಣೆ ಇಲ್ಲ ಆ ನೆವನದಿಂದ ಧರ್ಮತತ್ವಗಳಿಗೆ ಕೈಹಚ್ಚಲಿಕ್ಕೆ ಜನಗಳು ಕೂಡದೆ ನಿರ್ವಾಹವಿಲ್ಲ—ಎಂಬುದು ಹಿರಿಯರ ಗೃಹಿಕೆಯಾಗಿತ್ತು ಪ್ರ ೩೩ ಧರ್ಮಕ್ಕೆ ಭಕ್ತಿಯು ಅವಶ್ಯಕವೂ ವ ಮುಖ್ಯವೂ ಪ್ರಶ್ನೆ ೩೪ ಲೌಕಿಕ ಸಂಗತಿಗಳಿಗೆ ದ್ರವ್ಯ ವ್ಯಯಮಾಡಿದರೆ ಅದು ಭಕ್ತಿಯ ವ ಧರ್ಮದ ಸೋಪಾನವಾಗುವುದು ಪ್ರ ೩೫ ಮಠದ ಸಂಪತ್ತನ್ನು ಗುರುಗಳೇ ಆಡಳ್ತೆ ನೋಡಬೇಕು ದುರ್ವ್ಯಯಕ್ಕೆ ಎಡೆಯಾಗದಂತೆ ಸಮಾಜದ ಮೇಲ್ವಿಚಾರಣಿರಬೇಕು ಪ್ರ ೩೬ ಧರ್ಮನಿರತರಾದ ಗುರುಗಳು ಎಲ್ಲಾ ಲೌಕಿಕ ಕಾರ್ಯಗಳಲ್ಲಿ ಕೈಯಿಕ್ಕಬಾರದು ಮಠದ ಶ್ರೇಯೋಭಿವೃದ್ಧಿ, ಸಂಘಸಂತರ್ಪಣೆ ಪೂಜೆ ಪರ್ಯಾಯಗಳ ಮಟ್ಟಿನ ಕಾರ್ಯಗಳಲ್ಲಿ ಮನಗೊಂಡಿರಬೇಕು ಪ್ರ ೩೭ ಮಠಗಳ ಖರ್ಚಿಗೆ ತಕ್ಕ ಐಶ್ವರ್ಯವಿದ್ದಲ್ಲಿ ಇನ್ನೂ ದ್ರವ್ಯಾಭಿಲಾಷೆಯಿಂದ ದಿಗ್ವಿಜಯ ಮಾಡಿ ಹೆಚ್ಚಿಗೆ ದ್ರವ್ಯವನ್ನು ಶೇಖರಿಸುವುದು ಯುಕ್ತವಲ್ಲ—ಆದರೆ ವಿಶೇಷ ಕಾರ್ಯಗಳಿಗೆ ಶಿಷ್ಯವರ್ಗದವರನ್ನು ಕೇಳಿ ಅಭಿಪ್ರಾಯಪಡೆದು ವಿಶೇಷ ಚಂದಾ ಎತ್ತಬಹುದು ಪ್ರ ೩೮ ಕಾಣಿಕೆ ಕೊಡಲಾರದವನು ಶಕ್ತಿವಂತನಾದರೆ ಅಧರ್ಮಿಯೇ—ಆದರೆ ಮಿತವ್ಯಯವಾಗಿ ಗುರುಕಾಣಿಕೆ ಯಾವಾಗಲೂ ಸಲ್ಲತಕ್ಕದ್ದು ಪುಷ್ಪ ಕೊಡುವಲ್ಲಿ ಎಸಳಾದರೂ ಕೊಡಬೇಕು ಪ್ರ ೩೯ ಮಠವಿಲ್ಲದ ಜಾತಿಗಳು ಅನೇಕ ಇವೆ ಆದರೆ ಅನೇಕ ಜಾತಿಯವರು ಬೇರೆ ಸಮಾಜದ ಮಠಗಳ ಶಿಷ್ಯರಾಗಿ ವರ್ತಿಸುತ್ತಾರೆ ಪ್ರ ೪೦ ಮಠವಿಲ್ಲದ ಮತ್ತೂ ಮಠಕ್ಕೆ ಶಿಷ್ಯರಾಗದ ಜಾತಿಗಳಲ್ಲಿ ದುಷ್ಕರ್ಮಗಳಿಗೆ ತಡೆಯಿಲ್ಲ ತಡೆ ಉಂಟೆಂತ ಅವರು ಗ್ರಹಿಸುವುದಿಲ್ಲ—ಸದಾಚಾರಗಳ ಗೊಡವೆ ಅವರಿಗೆ ಇರುವುದಿಲ್ಲ—ಜಾತಿ ವಿಚ್ಛಿನ್ನ ಕೃತ್ಯಗಳಿಗೆ ಮಠವಿಲ್ಲದ ಜಾತಿಗಳು ಆದಿಯಲ್ಲಿ ಕೈಹಚ್ಚುತ್ತಾರೆ ಮಠವಿರುವ ಜಾತಿಗಳು ಪಾಶ್ಚಾತ್ಯ ವಿದ್ಯಾಭ್ಯಾಸದ ಪರಿಣಾಮವಾಗಿ ಕೊನೆಗೆ ಸೇರುತ್ತಾರೆ ಪ್ರ ೪೧. ಮಠವಿಲ್ಲದ ಜಾತಿಯವರು ಮಠಸಂಬಂಧವಾದ ಕಾರ್ಯಗಳಿಗೆ ಗ್ರಾಮಕೂಟ ಅಥವಾ ಕೂಡುಕಟ್ಟು ಎಂಬ ಸಂಘವನ್ನು ಆಶ್ರಯಿಸಿ ಅದರ ಅನುಜ್ಞೆಯಂತೆ ನಡಕೊಳ್ಳುತ್ತಾರೆ. ಪ್ರ ೪೨ ಮಠವಿರುವವರು ಮಠವಿಲ್ಲದವರ ಸಾಲಿನಲ್ಲಿ ವರ್ತಿಸಲಿಕ್ಕೆ ಬರುತ್ತದೆ. ಆದರೆ ಅದರ ಸಫಲತೆಯು ಉತ್ಕೃಷ್ಟವಾಗಿ ಬರಲಾರದು. ಪ್ರ. ೪೩. ಮಠವಿಲ್ಲದವರು ಮಠಕ್ಕೆ ಕಾಣಿಕೆ ಕೊಡುವ ಹಣವು ಉಳಿಯುವುದೇನೊ ನಿದ. ಆದರೆ ಗ್ರಾಮಗಳ ಮತ್ತೂ ಕೂಡುಕಟ್ಟುಗಳ ಕೂಟಗಳೂ ವ್ಯವಸ್ಥೆಪಡಿಸಲಿಕ್ಕೆ ಸ್ವಲ್ಪ ಹಣವೂ ವ್ಯಯಮಾಡುವುದು ಮಿಕ್ಕಾಂಶವೂ ತನ್ನ ತನ್ನ ಸ್ವೇಚ್ಛಾವಿಹಾರಗಳಿಗೆ ವ್ಯಯಮಾಡುವುದು. ಪ್ರ. ೪೪. ಈಗ ನ್ಯಾಯವಿಧಾಯಕ ಸಭೆಯು ಮುಂದೆ ಬಂದಿರುವ ಮದ್ರಾಸ ನಂಬ್ರ 24/1934ನೇ ಬಿಲ್ಲು ಯಾಜೆ ಮಸವಿದಾ ಆಕ್ಟು ತಂದ ರೀತಿಯಲ್ಲಿ ಅವಶ್ಯಕವಿಲ್ಲ. ಪ್ರ. ೪೫. ಈಗಿನ ಮಠಗಳು ತಮ್ಮ ಆರ್ಥಿಕ ಆಡಳ್ತೆಯನ್ನು ಎಲ್ಲವೂ ಸರಿಯಾಗಿ ಮಾಡುತ್ತಿವೆ ಎಂದು ಹೇಳಲಾಗುವುದಿಲ್ಲ. ಆದರೆ ಆಯಾಯಾ ಸಮಾಜಗಳಿಂದ ಸರಿಯಾದ ವ್ಯವಸ್ಥೆ ಪಡಿಸಲಿಕ್ಕೆ ಅಸಾಧ್ಯವಾದರೆ ಕಾನೂನು ನಿಬಂಧನೆಗಳ ಸಹಾಯವನ್ನು ಅಪೇಕ್ಷಿಸಬಹುದು ಪ್ರ ೪೬ ಮಠಗಳಿಗೆ ವಿವಿಧ ಉದ್ದೇಶಗಳನ್ನು ಇಚ್ಛಿಸಿಕೊಟ್ಟ ಉಂಬಳಿಗಳ ಉತ್ಪತ್ತಿಯು ಸರಿಯಾಗಿ ವಿನಿಯೋಗಿಸಲ್ಪಡುತ್ತದೆಯೋ ಎಂಬುದು ಚರ್ಚಾಸ್ಪದವಾದ್ದು. ಅದನ್ನು ಯಾರೂ ಶೋಧಿಸಿ ಯತ್ನಿಸಿದ್ದು ಕಾಣುವುದಿಲ್ಲ. ಪ್ರ ೪೭ ಉಂಬಳಿಗಳ ಉದ್ದೇಶ್ಯ ಉಳಿದಿದೆಯೋ ಎಂಬುದು ಹೇಳುವರೆ ಉಂಬಳಿಗಳ ಮೂಲ ಚರಿತ್ರೆಯನ್ನು ಕೇಳದೆ ಉತ್ತರಕೊಡುವರೆ ಸಾಧ್ಯವಿಲ್ಲ. ಪ್ರ ೪೮ ಉಂಬಳಿಗಳ ಉದ್ದೇಶವು ಉಳಿದರೂ ಉಳಿಯದಿದ್ದರೂ ಅವುಗಳ ಉತ್ಪತ್ತಿಯನ್ನು ಉದ್ದೇಶಗಳಿಗೆ ನ್ಯಾಯವಾಗಿ ವಿನಿಯೋಗಿಸುವ ಏರ್ಪಾಡು ಮಾಡಲೇಬೇಕು ಪ್ರ ೪೯ ಹೊಸ ಬೇಲಿ ನಂತೆ ಕಾರ್ಯನಿರ್ವಾಹಕನು ನೇಮಿಸಲ್ಪಟ್ಟರೆ ಅವನು ಮಠಾಧಿಪತಿಗಳ ಒಳಗೂ ಸಮಾಜದ ಒಳಗೂ ನಡೆಯಬೇಕಾದ ಮಧ್ಯೇದಾರನಾದರೆ ಎಲ್ಲವೂ ಸಮರ್ಪಕವಾಗಿ ನಡೆದೀತು ಇಲ್ಲವಾದರೆ ಅವನ ಕೃತ್ಯಗಳು ಸ್ವೇಚ್ಛಾವರ್ತನೆಯಾಗುವುವು—ಅವನು ಮಠಕ್ಕೆ ಸೇರದ ಸಮಾಜದವರಾದರೆ ಅನರ್ಥವೇ ಸಂಭವಿಸುವುದು ಪ್ರ ೫೦ ಕಾರ್ಯನಿರ್ವಾಹಕರು ಸ್ವೇಚ್ಛಾವರ್ತನೆಯವರಾದರೆ ಸಮಾಜಕ್ಕೆ ತೊಡಕೆಂಬುದು ಚರ್ಚಾಸ್ಪದವಲ್ಲದ ಮಾತು ಪ್ರ ೫೧ ಕಾರ್ಯನಿರ್ವಾಹಕನು ಸ್ವಾಮಿಯವರ ಕಾರ್ಯನಿರ್ವಾಹಕ್ಕೆ ತೊಡಕಲ್ಲದೆ ಮತ್ತೇನೂ ಅಲ್ಲ ಕಾರ್ಯಶೋಧಕನನ್ನು ನೇಮಿಸಿದರೆ ಮಠದ ಉದ್ದೇಶಗಳು ಸಫಲವಾಗುವುವು ಪ್ರ ೫೨ ಮಠಾಧಿಪತಿಗಳಿಗೆ ಧಾರ್ಮಿಕ ಸ್ವಾತಂತ್ರ್ಯವೂ ಅವರ ಮಠದ ಸಂಪತ್ತಿನ ಮಟ್ಟಿಗೆ ಆರ್ಥಿಕ ಸ್ವಾತಂತ್ರ್ಯವೂ ಇರಬೇಕು ಪ್ರ ೫೩ ಮಠಗಳನ್ನು ನಿರ್ನಾಮ ಮಾಡಿದರೆ ವರ್ಣಸಂಕರವು ಕಲಿಯುಗದ ಅಂತ್ಯಕ್ಕೆ ಇರುವುದನ್ನು ಸಮೀಪಿಸಿದಂತೆ ಆಗುವುದು ಅಲ್ಲದೆ ಸನಾತನ ಧರ್ಮಿಗಳಿಗೆ ಏನೂ ಆಶ್ರಯವಿಲ್ಲದಂತೆ ಪರಿಣಮಿಸುವುದು ಪ್ರ ೫೪ ಮಠಗಳು ನಿರ್ನಾಮವಾಗುವ ಸಂದರ್ಭದಲ್ಲಿ ಅವುಗಳ ಆರ್ಥಿಕ ಸಂಪತ್ತು ಆಯಾಯಾ ಸಮಾಜದ ದೇವಾಲಯಗಳಿಗೆ ಹಂಚೋಣವಾಗಬೇಕು ಸಮಾಜಕ್ಕೆ ಕೊಟ್ಟರೆ ಕಲಹಕಾರಕವಾದೀತು ಪ್ರ ೫೫ ಮಠಗಳು ನಿರ್ನಾಮವಾದರೆ ಮತಾಭಿಮಾನಿಗಳು ಆತಂಕಗಳನ್ನು ತಂದೊಡ್ಡುವರು—ಆತಂಕಗಳು ಸಲ್ಲದಿದ್ದರೆ ಅವರು ದೇವಾಲಯಗಳ ಆಶ್ರಯವನ್ನೇ ಬಯಸುವರು ಪ್ರ ೫೬ ಸಮಾಜವೂ ಕಾಲಕ್ಕೆ ಸರಿಯಾಗಿ ಕೋಲಕಟ್ಟಿದರೆ ಮಠಗಳು ನಿರ್ಜೀವವಾಗಲಾರವು ಅವುಗಳು ಎಲೆಗಳು ಉದುರುವ ಋತುಗಳ ಅರಳಿಮರಗಳಂತಿರುವುವು ವಿನಹಾ ವ್ಯಕ್ತಿಯನ್ನು ಹೊಂದಲಾರವು ಪ್ರಶ್ನೆ ೫೭ ಮಠಗಳೂ ಕೂಟಗಳೂ ಧರ್ಮವನ್ನು ರಕ್ಷಿಸುವರೆ ಸಿದ್ಧವಾಗಿವೆ ಸಮಾಜದವರ ಉತ್ತೇಜನವಿಲ್ಲದೆ ಜನಗಳು ಅವುಗಳನ್ನು ಮೂಲೆಪಾಲು ಮಾಡಿವೆ ಪ್ರ ೫೮. ಕಟ್ಟಲೆಯು ಧರ್ಮವಲ್ಲದೇ ಅಧರ್ಮವಲ್ಲ. ಪ್ರಶ್ನೆ ೫೯ ಕಟ್ಟಲೆ ಮುರಿಯುವವನಿಗೆ ದಂಡವಿಲ್ಲದಿದ್ದರೆ ಧರ್ಮವೂ ಮುಂದೆ ಸಾಗದು ಪ್ರಶ್ನೆ ೬೦. ಸತ್ಯ ಮುಂತಾದ ಅಕ್ರಮಗಳನ್ನು ಆಚರಿಸಿದವನಿಗೆ ಪೂರ್ವಕಾಲದಲ್ಲಿ ತಕ್ಕ ದಂಡನೆ ವಿಧಿಸಿಯದೆ. ಮಠಗಳ ಸಂಪರ್ಕವನ್ನು ದೂರಮಾಡಿ ವರ್ತಿಸುತ್ತ ಬಂದವರಿಗೆ ಮಠಗಳ ಹಿಡುವಳಿಯು ತಪ್ಪಿ ಹೋಗಿ ತಪ್ಪುಗಾರರು ನಿರ್ಭೀತರಾಗಿ ವರ್ತಿಸುತ್ತಾರೆ. ಪ್ರ ೬೧. ಮೇಲಿನ ಎಲ್ಲಾ ಪ್ರಶ್ನೆಗಳು ತಕ್ಕಮಟ್ಟಿಗೆ ಕ್ರಿಸ್ತೀಯರ ಗುರುಮಠಗಳಿಗೆ ಅನ್ವಯಿಸುತ್ತವೆ. ಕ್ರಿಸ್ತರಿಗೆ ಶುದ್ಧಿಮಟ್ಟಿಗೆ ಅನ್ವಯಿಸುತ್ತವೆ. ಸ್ನಾನಪಾನ ಮತ್ತು ವಿವಾಹ ಸಂಬಂಧಗಳ ಮಟ್ಟಿಗೆ ಸಂಪೂರ್ಣ ಅನ್ವಯಿಸುವದಿಲ್ಲ.

'ಅಗ್ರಗಣ್ಯ ಸಂಗೀತಜ್ಞರು ಅದರ ಪ್ರಶಂಸಾಗಾನವನ್ನು ಮಾಡಿದ್ದಾರೆ.

ಮುಸಿರಿ ಸುಬ್ರಹ್ಮಣ್ಯ ಐಯ್ಯರ್, 6 ಒಲಿವರ್ ರೋಡ್, ಮೈಲಾಪುರ ಮದ್ರಾಸು.

ತಾ. ೨-೫-'೩೪.

ಅನೇಕ ಸಮಯದಿಂದ ನನ್ನ ಕುಟುಂಬದವರೆಲ್ಲ 'ಕೇಶವರ್ಧಿನಿ'ಯನ್ನು ಬಿಡದೆ ಉಪಯೋಗಿಸುತ್ತಿರುವರೆಂದು ತಿಳಿಸಲು ಸಂತೋಷಿಸುತ್ತೇನೆ. ಉದುರುವ ಕೂದಲನ್ನು ತಡೆಯುವ ಅದರ ಶಕ್ತಿಯನ್ನು ಪೂರ್ಣವಾಗಿ ತಿಳಿದು, ಅಲ್ಲದೆ ಕೂದಲನ್ನು ಅದು ಬೆಳೆಯಿಸುವ ಅದರ ಗುಣವನ್ನು ಅರಿತು ಅವರು ಅದರ ಗುಣಗಾನವನ್ನು ಮಾಡಿ ಸ್ನೇಹಿತರಿಗೂ ಅದನ್ನು ಶಿಫಾರಸು ಮಾಡುತ್ತಾರೆ. ಕೇಶಗಳಿಗೂ, ಮೆದುಳಿಗೂ ಸಮರ್ಪಕವಾದ ಎಣ್ಣೆಯೊಂದು ಅಗತ್ಯವಿರುವವರು ಇದನ್ನುಪಯೋಗಿಸಬಹುದೆಂದು ನಾನು ಶಿಫಾರಸು ಮಾಡುತ್ತೇನೆ.

(ಸಹಿ) ಮುಸಿರಿ ಸುಬ್ರಹ್ಮಣ್ಯ ಅಯ್ಯರ್.

ಬೋಳು ತಲೆಯುವರಾಗಿರಬೇಡಿ ಅಥವಾ ತಲೆಕೂದಲು ಅಪರಿಪಕ್ವ ಸಮಯದಲ್ಲಿ ಬಿಳಿಯಾಗದಂತೆ ನೋಡಿ

ಬಾಟ್ಲಿ 1ಕ್ಕೆ ಆಣೆ 12. 'ಕೇಶವರ್ಧಿನಿ' ಪೇಕಿಂಗ್ ಮತ್ತು ಅಂಚೆವೆಚ್ಚ ಪ್ರತ್ಯೇಕ

ಪೇಟೆನ ವಿವರ ವ್ಯಾಪಾರಿಗಳಲ್ಲಾಗಲೀ ಅಥವಾ ಈ ವಿಳಾಸದಲ್ಲಾಗಲೀ ಸಿಗುವುದು —

South India Chemicals, 117 ROAD Mylapore Madras

ಕೆನರಾ ವಾಚ್ ವರ್ಕ್ಸ್, ಮಂಗಳೂರು.

ದಿನಂಪ್ರತಿ ನೂರಾರು ಗಿರಾಕಿಗಳು ಬಂದು ನಮ್ಮಲ್ಲಿರುವ ಹಲವು ಬಗೆಯ ಕೈಗಡಿಯಾರ್, ಗೋಡೆಯ ಗಡಿಯಾರ್, ಅಟೆದ ಸಾಮಾನು ಮೊದಲಾದುವುಗಳನ್ನು ಕೊಂಡು, ಸಂತೃಪ್ತಿ ಹೊಂದಿ ಸಂತೋಷದಿಂದ ಹೋಗುವ ವಿಷಯವೊಂದೇ ನಮ್ಮಲ್ಲಿನ ಸರಕುಗಳಿಗೆ ಜನರಿಂದ ದೊರೆತಿರುವ ಪ್ರಶಂಸೆ. ನೀವೂ ನಮ್ಮಲ್ಲಿಗೆ ಬರಬಹುದು. ತೃಪ್ತಿ ಹೊಂದಬಹುದು.—ಸುಲಭ ಬೆಲೆ ಪಡೆಯಬಹುದು

Old! *Famous!*

East & West Insurance Co., Limited.

Bonus Declared Rs. 15/ Per Thousand Per Annum

Insurance in Force About	Rs. 90 00 000
Annual Premium Income Over	Rs. 4 50 000
Life Fund Over	Rs. 7 00 000

Prompt Settlement of Claims

Low Rates of Premium and Various Attractive Plans.

Attractive and liberal agency contracts are offered to honest, influential gentlemen

Inquiries Solicited —

Messrs Padubidri Bros., *Chief Agents*, PADUBIDRI BOMBAY

OR

Head Office **East & West Buildings**, Apollo Street, Fort Bombay

1¼ CRORE

Karnatics know nothing of your products.— Advertise them in

Swadeshabhimani

the pioneer Weekly of the South Kanara District

For Advertisement rates apply

The Advertisement Manager, Swadeshabhimani, Mangalore

ಪ್ರಶಂಸೆ.

ಪ್ರಖ್ಯಾತ ಅಮೇರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ

ವಿ-ಮೊ-ಲ

VIM-O-LA

ಅಮೆರಿಕಾದ ಜೀವಸಾರ ವಸ್ತು.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ ಹೊಟ್ಟೆಯಲ್ಲಿ ಬೆಂಕಿನಂತೇಳುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಗೊಳಿಸುವ ಶಕ್ತಿವರ್ಧಕ ಪಾನೀಯ: ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ ಬಾಟ್ಲಿ 1ಕ್ಕೆ ರೂ. 1 4 0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟೋಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ

The Manager

The National Kanara News Agency,

Sir Pherozshah Metha Road Fort Bombay

ಲೇಡಿಸ್ ಬಾಂ

ಸ್ತ್ರೀಯರ ಜೀವನಾಧಾರ

ಸ್ತ್ರೀಯರು ಪುಷ್ಟರಾಗಿಯೂ ಕಾಂತಿಯುಕ್ತರಾಗಿಯೂ ಇರಬೇಕಾದರೆ, ಅವರ ಮುಟ್ಟುದೋಷ, ಆ ಸಮಯದಲ್ಲಿ ಕಂಡ ಬರುವ ಹೊಟ್ಟೆನೋವು, ಸೊಂಟ ಹಿಡಿತ, ಗಂಟುನೋವು, ಮೈಯಲ್ಲಿ ದದಿಕೆ ಬೀಳುವುದು, ಬಿಳೀ ಶೆರಗು, ಗರ್ಭಕೋಶದ ನೋವು, ಅಕ್ರಮ ರೀತಿಯಿಂದ ಮುಟ್ಟಾಗುವಿಕೆ ಬಂಜೆತನ, ಸಾಧಾರಣ ಕ್ಷಯವಿಕಾರ ಮತ್ತು ಅವರ ಅನೇಕ ತರದ ಗುಪ್ತರೋಗಗಳನ್ನು ನಿವಾರಿಸಲು ಇದರ ಒಂದೇ ಒಂದು ಶೀಸೆಯನ್ನು ಉಪಯೋಗಿಸಿದರೆ ಗುಣವನ್ನು ಕಾಣುವಿರಿ

ಉಪಯೋಗಿಸಿದವರ ಅಭಿಪ್ರಾಯ —

ರಾಮಕೃಷ್ಣ ಜೈನ್ ಬಿ ಎ ಲಾಹೋರ್ 'I found your Ladies Balm worth the money I spent on it'

ಯಾವ ತೆರದ ಔಷಧಿಯಿಂದಲೂ ಬಹಿಷ್ಟೆಯ. ಅನ್ನವನ್ನು ಹೋಗಲಾಡಿಸಲು ಅಸಮರ್ಥರೆಂದಾದರೆ ನಮ್ಮ ಲೇಡಿಸ್ ಬಾಮನ್ನು ಉಪಯೋಗಿಸಿರಿ ಒಂದು ತಿಂಗಳ ಔಷಧಿಯಿರುವ ಶೀಸೆ ೧ಕ್ಕೆ ರೂ ೩—೦—೦ ವಿ. ಪಿ. ಖರ್ಚು ೦—೬—೦

ತಯಾರಿಸುವವರು —ದಿ ಬಿಹಾರ್ ಕೆಮಿಕಲ್ ವರ್ಕ್ಸ್, ಬಾಗಲಪುರ.

ಏಜಂಟರು—ಷಹಾ ಕಂಪೆನಿ, ಗ ಕೋರ್ಟಿನ ಎದುರು ಮಂಗಳೂರು

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ.

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು

1924. ಪ್ರಗತಿ ಸೂಚನೆ 1934.

- ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

ಕೆಲಸದ ಫಲಿತಾಂಶ.		ಲೈಫ್ ಫಂಡ್
1925–	ರೂ 21,24,250.	500
1929–	ರೂ. 1,66,18,620.	9 32,000
1934–	ರೂ ,46,77,223.	49,08,771

ಕ್ಲೈಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ ಕಂಪೆನಿಯ ಆಸ್ತಿ–57,00,000ಕ್ಕೆ ಮೀರಿದೆ. 1933–34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ. ಲಾಭಹೊಂದಬೇಕಾಗಿದೆ ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ ಲಕ್ಷ್ಮಿಯಲ್ಲಿವೆ.

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co., Ltd., *Madras Branch*, No 6, Sankuram Chetty St., G. T MADRAS

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್, ಮದ್ರಾಸು ಶಾಖೆ, ನಂಬ್ರ 6, ಸಂಕುರಾಮ ಚೆಟ್ಟಿ ಬೀದಿ, ಜಿ. ಟಿ. ಮದ್ರಾಸು

The Canara Banking Corporation Udipi, Ltd.

Head office:—UDIPI, S. K. (Incorporated in British India) TEL.—'BANKING' **ESTD. 1906.**

Branches:—1. Udipi, 2. Coondapoor, 3. Car Street, angalore, 4. Shimoga, 5. Madras, 6. Bunder Mangalore, 7. Mercara.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟ ದೇಶೀಯ ಸಾರ್ವಜನಿಕ ಮೊದಲನೇ ಬೇಂಕು ಇದೇ ಆಗಿರುತ್ತದೆ.

ಅಧಿಕೃತ ವ ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಎತ್ತಿ ಬಂದ ಮೂಲಧನ	ರೂ! 3,50,000—0—0
ತೆತ್ತುಬಂದ ಮೂಲಧನ	2,58,805—0—0
ಕ್ಷೇಮನಿಧಿ ಮತ್ತು ಇತರ ಆಪದ್ಧನಗಳು	3,12,144—0—0

ಚಾಲ್ತಿ ಸೇವಿಂಗ್ಸ್ ಬೇಂಕ್, ಕಾಯಂ ವ ಅಲ್ಪ ಅವಧಿಯ ಠೇವಣಾತಿಗಳು ಸ್ವೀಕರಿಸಲ್ಪಡುವುವು! ಯೋಗ್ಯ ಜವಾಬ್ದಾರಿಯ ಮೇಲೆ ಸುಲಭ ದರದ ಬಡ್ಡಿಯಿಂದ ಸಾಲಗಳು ಕೊಡೋಣಾಗುವುವು! ವಿನಿಮಯ ಸೌಕರ್ಯವೇ ಪ್ರಾಮುಖ್ಯ ಲಕ್ಷಣ!!

ಬೊಂಬಾಯಿ, ಮದ್ರಾಸು, ಕರಾಚಿ, ಕಲ್ಕತ್ತಾ ಮೊದಲಾದ ಪ್ರಾಮುಖ್ಯ ಪಟ್ಟಣಗಳಿಗೆ ಹಣವನ್ನು ತಂತಿ ಮೂಲಕವಾಗಲೀ ಡಿಮಾಂಡ್ ಡ್ರಾಫ್ಟ್ ಮೂಲಕವಾಗಲೀ ಅತಿ ಸುಲಭ ವೆಚ್ಚದಿಂದ ಕಳುಹಿಸುವ ಸೌಕರ್ಯವು ನಮ್ಮಲ್ಲಿದೆ. ಬೇಂಕಿಗೆ ಸಂಬಂಧಪಟ್ಟ ಇತರ ಎಲ್ಲಾ ವಹಿವಾಟುಗಳೂ ನಡೆಸಲ್ಪಡುವುವು.

ಹೆಚ್ಚಿನ ಮಾಹಿತಿ ಬಗ್ಗೆ ನಮ್ಮ ಯಾವುದೇ ಆಫೀಸಿಗೆ ಬರೆಕೊಳ್ಳಿರಿ.

ಕೋರ್ಪರೇಶನ್ ಆಫೀಸು, ಉಡುಪಿ, 7-4-35. **M. Shrinivas Prabhu**, *Manager.*

Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪ್ಪೋವಿನ ಹುಳು ಕಡ್ಡಿಯ ಮುಲಾಮು.

ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪ್ಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪ್ಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ರಜತೋತ್ಸವ ವರ್ಷ. ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್ ಸ್ಥಾಪನೆ 1910) ರಜತೋತ್ಸವ ವರ್ಷ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಚೆಯರ್‌ಮೆನ್:—ಸರ್. ಲಲ್ಲೂಭಾಯಿ ಸಮಲ್ದಾಸ್, ಕೆಟಿ. ಸಿ. ಐ. ಇ. ಜೆ. ಪಿ.)

ಇದರ ದಕ್ಷಿಣ ಹಿಂದೂಸ್ಥಾನ ಮತ್ತು ದೇಶೀಯ ಸಂಸ್ಥೆಗಳ ಶಾಖಾ ಕಾರ್ಯದರ್ಶಿಗಳು; ಮುಂಬಾಯಿ ನಗರ ಮತ್ತು ಉಪನಗರಗಳ ಪ್ರಾಮುಖ್ಯ ಏಜಂಟರು.

ಪೋಲಿಸಿದಾರರು ಮತ್ತು ಏಜಂಟರುಗಳಿಗೆ ನಮ್ಮ ಸಂದೇಶ:—

ಕಳೆದ ಕಾಲು ಶತಮಾನಕ್ಕೆ ಮಿಕ್ಕಿದ ನಮ್ಮ ಜೀವವಿಮೆಯ ಪರಿಶ್ರಮ ಸೇವೆಯಲ್ಲಿ, ನಾವು ನಮ್ಮ ಪೋಲಿಸಿದಾರರ ಮತ್ತು ಏಜಂಟರ ಹಿತವನ್ನೇ ನಮ್ಮ ಧ್ಯೇಯವನ್ನಾಗಿ ಮುಂದಿಟ್ಟುಕೊಂಡು ಮುಂದರಿಯುತ್ತಾ ಬಂದಿರುವೆವು. ಅವರ ಕಷ್ಟಗಳೂ, ಆಶೆಗಳೂ ಮತ್ತು ಆಶಯಗಳೂ ನಮ್ಮವೆಂದೇ ಪರಿಗಣಿಸುತ್ತಾ ಬಂದಿರುವೆವು. ಹಿಂದೀ ಜೀವವಿಮಾ ಪ್ರಪಂಚದ ನಮ್ಮ ಅನುಭವ್ಯವೇ ನಮ್ಮ ಅನುಭೂತಪೂರ್ವವು. ಆದ ವಿಜಯದ ರಹಸ್ಯವು ಇದರಲ್ಲೇ ಅಡಕವಾಗಿದ್ದು, ನಾವು ನಮ್ಮ ವ್ಯವಹಾರದಲ್ಲಿ ಒಂದು ಕೋಟಿಯಷ್ಟು ಮೊಬಲಗಿನ ಪೋಲಿಸಿಗಳನ್ನು ಜ್ಯಾರಿಯಲ್ಲಿಟ್ಟುಕೊಳ್ಳುವಷ್ಟು ಸಮರ್ಥರನ್ನಾಗಿ ಮಾಡಿರುತ್ತದೆ. ಅತ್ಯಂತ ಅಭಿಮಾನಾಸ್ಪದವಾದ ನಿಮ್ಮ ಮಹತ್ವಾದ ಲಾಭವೆಂದರೆ—ಒಂದೆರಡು ಉದಾಹರಣೆಗಳಲ್ಲದೆ ಕಳೆದ 25 ವರ್ಷಗಳ ಅವಧಿಯಲ್ಲಿ ನಮ್ಮ ಪ್ರಧಾನ ಏಜಂಟರುಗಳಲ್ಲಿ ಒಬ್ಬರಾದರೂ ನಮ್ಮೊಡನಿರುವ ನಿಕಟಸಂಬಂಧವನ್ನು ಮುರಿದಿಕ್ಕಿರುವುದಿಲ್ಲ.

ಜೀವವಿಮಾ ವಿಕ್ರಯಕ್ರಮಗಳಲ್ಲಿ ಸಂಪೂರ್ಣ ತರಬೇತಿ ಕೊಡಲಾಗುತ್ತದೆ. ಚತುರರಾದ ಉತ್ಸಾಹೀ ತರುಣರ ಭಾವೀ ಕಲ್ಯಾಣವಾಗುತ್ತದೆ.

ನಮ್ಮ ಈ ಕೆಳಗಿನ ಯಾವುದಾದರೂ ಆಫೀಸುಗಳಿಗೆ ಬರೆಯಿರಿ ಅಥವಾ ಸ್ವತಹ ಬಂದು ಕಾಣಿರಿ:—

(1) ಇಸ್ಮಾಯಿಲ್ ಬಿಲ್ಡಿಂಗ್, ಲೋಹರ್‌ಚಾಲ್, ಮುಂಬ್ಯಾ ನಂ. 2. (2) ಪೋಸ್ಟ್ ಬಾಕ್ಸ್ 337, ಮೌಂಟ್‌ರೋಡ್ ಮದ್ರಾಸು. (3) ವಿಶ್ವೇಶ್ವರಪುರಂ, ಬೆಂಗಳೂರು ಸಿಟಿ. (4) ಹಜೂರ್ ರೋಡ್, ಕಲ್ಲಿಕೋಟೆ. (5) ರಥಬೀದಿ, ಮಂಗಳೂರು. (6) ಉಡುಪಿ, ದಕ್ಷಿಣ ಕನ್ನಡ

Karnataka Chemical and Pharmaceutical Works, Ltd., Udipi. (South India)

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ! ಕರ್ನಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ನಾಟಕ ಹೌಸ್ಹೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚು ಕಾಲ ಬಾಳುವುವು, ಖರ್ಚೂ ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ. ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ.

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)

ಕರ್ನಾಟಕ ಸ್ನೋ, ಕರ್ನಾಟಕ ಬ್ರಿಲ್ಲಿಂಟ್ಯಾನ್, ಅರೋರಾ ಕ್ರೀಮ್, ಕ್ರಿಮೋರ್ ಲಿಮೊನಿಸ್, ಕರ್ನಾಟಕ ರೋಸ ಪೌಡರ್. ಇದಲ್ಲದೆ ನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪೆತಿಕ್ ಔಷಧಗಳೂ, ಫೌಂಟನ್ ಪೇನು ಶಾಯಿಗಳೂ ಸಿದ್ಧವಾಗುವುವು.

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಪ್ಪ ಬಾಳಿಗ.

ಹೆಡ್ ಆಫೀಸು ಮತ್ತು ಕಾರಖಾನೆ:—ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೋ—(1) ಜೀವಕರಾ ಮೆನ್ಶನ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2

ಏಜಂಟ್ಸ್— (2) 1/70 ನ್ಯಾಷನಲ್ ನ್ಯಾಷನ ಬೀದಿ, ಜಾರ್ಜ್ ಟೌನ್. ಮದರಾಸು.

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

Edited, Printed & Published By A. S. Kamath at the Sharada Press, Car Street, Mangalore.

ವಾರ್ಷಿಕ ಚಂದಾ ೩ ರೂಪಾಯಿ. ಬಿಡಿ ಸಂಚಿಕೆ 1 ಆಣೆ ಟಪ್ಪಾಲು ಹಾಸಲು ಸೇರಿ ರೂ. 2-13-0.

For Quality Snuff
H. Rama Rao and Sons,
High Class Snuff Manufacturers
Mangalore, S. I
ASK FOR
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in THE BOMBAY LIFE
Madras Branch Secretaries
Kochikar Brothers,
Udipi, Mangalore, Bangalore, Madras Bombay and Calicut

ESTABLISHED 1906
(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಪುಸ್ತಕ ೨೯. ಮಂಗಳೂರು ತಾ. ೧೭ನೇ ಶುಕ್ರವಾರ ಮೇ ೧೯೩೫. (17-5 '35) ಸಂಚಿಕೆ ೨೦

ಕರ್ಣಾಟಕ ರಾಜಕೀಯ ಸಮ್ಮೇಳನ!

ಶ್ರೀ ರಾಜೇಂದ್ರ, ಶ್ರೀ ಪ್ರಕಾಶ ಮತ್ತು ಶ್ರೀ ಕೃಪಾಲನಿಯವರ ಆಗಮನ!

ಜಿಲ್ಲೆಯಲ್ಲೆಲ್ಲಾ ಮಹಾ ಆನಂದೋತ್ಸವ:

ಇದೇ ತಾ ೧೦ ೧೧ ೧೨ರ ಮೂರ ದಿನಗಳಲ್ಲೂ ನಗರದಲ್ಲೆಲ್ಲಾ ಮಹಾ ಆನಂದೋತ್ಸಾಹ! ಬಾಬುರಾಜೇಂದ್ರರೂ, ಶ್ರೀ ಪ್ರಕಾಶರೂ ಶ್ರೀ ಕೃಪಾಲನಿಯವರೂ ಕರ್ನಾಟಕ ಪ್ರಾಂತಿಕ ಪರಿಷತ್ತಿಗಾಗಿ ಬರುವರೆಂದು ಎಲ್ಲರೂ ಸಂತೋಷಭರಿತರಾಗಿದ್ದರು ಈ ಮೂರು ದಿನಗಳಲ್ಲೂ ಕರ್ನಾಟಕ ಪ್ರಾಂತಿಕ ಪರಿಷತ್ತು, ಮಹಿಳಾ ಪರಿಷತ್ತು, ಹಿಂದೀ ಪದವಿದಾನ ಸಮಾರಂಭ, ಸಮತಾಸಂಘಾದಿ ಸಭೆಗಳು ಜರಗಿ ನಗರವೆಲ್ಲಾ ನವಚೇತನದಿಂದ ತುಂಬಿಕೊಂಡಿತು ಪ್ರಾಂತಿಕ ಪರಿಷತ್ತಿಗೆ ನಮ್ಮ ಜಿಲ್ಲೆಯಿಂದಲೂ, ಕೊಡಗು, ಧಾರವಾಡ ಸಾಂಗಲಿ, ಬಳ್ಳಾರಿ, ಬೆಂಗಳೂರುಗಳಿಂದ ಅತಿಥಿಗಳು ಬಂದಿದ್ದರು ಶ್ರೀಮತಿ ಕಮಲಾದೇವಿ, ಶ್ರೀ ಮಲ್ಯರೇ ಮೊದಲಾದವರ ಸಾಹಸದಿಂದಲೂ ಸ್ವಯಂಸೇವಕರ ಸಹಕಾರದಿಂದಲೂ ಸಭಾ ಗೃಹವಾದ ಶ್ರೀರಾಮಕೃಷ್ಣ ಭವನವು ಶೃಂಗಾರಭರಿತವಾಗಿದ್ದಿತು

ಶ್ರೀ ಪ್ರಸಾದ, ಶ್ರೀ ಕೃಪಾಲನಿ ಮತ್ತು ಶ್ರೀ ಪ್ರಕಾಶರವರು ಮಂಗಳೂರಿಗೆ ತಲುಪುತ್ತಲೇ ಮೆರವಣಿಗೆಯಾಗಿ ಅನಂತರ ಸಭಾ ಮಂದಿರದಲ್ಲಿ ಸ್ವಾಗತ ನೀಡಲಾಯಿತು ಅನಂತರ ಶ್ರೀ ಎ ಬಿ ಶೆಟ್ಟರಿಂದಲೂ ಡಾ। ಮಲ್ಯರಿಂದಲೂ ಮಾನಪತ್ರಗಳು ಸಮರ್ಪಿತವಾದುವು ತದನಂತರ ಜಮನಾಲಾಲ್ ಬಜಾಜ ಸರೋಜಿನಿನಾಯುಡು, ನರಿಮನ್, ಭಗವಾನದಾಸ, ಮಾರ್ಗರೆಟ ಕಜಿನ್ಸ್, ದೇಶಪಾಂಡೆ ಸತ್ಯಮೂರ್ತಿ, ಕಾರ್ನಾಡು ಸದಾಶಿವರಾಯರು ಗಳೇ ಮೊದಲಾದವರ ಸಂದೇಶಗಳನ್ನು ಓದಿ ಹೇಳಲಾಯಿತು ಶ್ರೀಮತಿ ಕಮಲಾದೇವಿಯರಿಂದ ಸ್ವಾಗತಭಾಷಣವಾಯಿತು ಅವರು ಶ್ರೀ ಪ್ರಸಾದರೇ ಮೊದಲಾದ ಅತಿಥಿಗಳ ಪರಿಚಯವನ್ನು ಸಭೆಗೆ ಮಾಡಿಕೊಟ್ಟರು ಶ್ರೀ ಪ್ರಸಾದರು ಉತ್ತರವಾಗಿ ಮಾತನಾಡಿ ದೇಶದ ಮುಂದಿರುವ ಗುರಿಯೇನೆಂದು ವಿವರಪೂರ್ಣವಾಗಿ ತಿಳಿಸಿದರು.

ತಾ ೧೧ನೇ ದಿನ ಪ್ರಾತಃಕಾಲ ೭॥ ಘಂಟೆಗೆ ಪ್ರಸಾದರು ಮಹಿಳಾ ಪರಿಷತ್ತನ್ನು ಹರಸಿದರು [illegible] ಲಕೆ ನಗರಸಭೆಯನ್ನು ಸಂದರ್ಶಿಸಿ ಅಲ್ಲಿ ಮಾನಪತ್ರಗಳನ್ನು ಸ್ವೀಕರಿಸಿ ನಗರ ಸಭೆಗೆ ಅಭಿನಂದನೆಯನ್ನು ತಿಳಿಸಿದರು. ಶ್ರೀ ಪ್ರಕಾಶ ಶ್ರೀ ಕೃಪಾಲನಿಯವರೂ ಭಾಷಣ ಮಾಡಿದರು ಅಲ್ಲಿಂದ ಮೂವರು ಅತಿಥಿಗಳೂ [illegible] ಘಂಟೆಗೆ ಕೆನರಾ ಹೈಸ್ಕೂಲಿಗೆ ಹೋಗಿ ಶ್ರೀ ಎ ಶ್ರೀನಿವಾಸ ಪೈಗಳಿಂದ ಆದರಿಸಲ್ಪಟ್ಟು ಹಿಂದೀ ಮಾನಪತ್ರವನ್ನು ಸ್ವೀಕರಿಸಿ, ಸೇನಗುಪ್ತ ಮತ್ತು ಅನ್ಸಾರಿಯವರ ಭಾವಚಿತ್ರಗಳನ್ನು ಅನಾವರಣಮಾಡಿದರು

ಶ್ರೀ ಕೃಪಾಲನಿಯವರು ವಿದ್ಯಾರ್ಥಿಗಳಿಗೊಂದು ಸಂದೇಶವನ್ನು ಕೊಟ್ಟರು ಶ್ರೀ [illegible] ಎಂ ವಾರ್ತಾಪತ್ರಗಳಲ್ಲಿನ ವೃತ್ತಪತ್ರಿಗಳ ಗುಣಗಾನ ಮಾಡಿದರು.

ಅದೇ ದಿನ ೧ ಘಂಟೆಗೆ ಶ್ರೀ ಪ್ರಸಾದರೂ [illegible] ಕೃಪಾಲನಿಯವರೂ [illegible] ಳೂರಿಗೆ ತೆರಳಿದರು ಅವರು ಅತ್ತ ತೆರಳಿದ ಮೇಲೆ ಇಲ್ಲಿ ವಿಷಯನಿಯಾಮಕ ಸಮಿತಿಯ ಸಭೆಯು ಸಂಜೆ ೬ ಘಂಟೆಗೆ ನಡೆದು ಪ್ರಾಂತಿಕ ಮಹಾಸಭೆಯಲ್ಲಿ ಠರಾವುಗಳಾದಾಗ ಡಾ। ಹರ್ಡೀಕರರೇ ಮೊದಲಾದವರು ಭಾಷಣ ಮಾಡಿದರು

ತಾ ೧೨ನೇ ದಿನ ಬೆಳಗ್ಗೆ ಘಂಟೆ [illegible] ಅಧ್ಯಕ್ಷರ ಉಪಸಂಹಾರ ಭಾಷಣವಾಗಿ ಡಾ। ಹರ್ಡೀಕರ, ಸುಬ್ರಹ್ಮಣ್ಯಂ [illegible] ವರು ಎಲ್ಲರಿಗೂ [illegible] ಗಳನ್ನರ್ಪಿಸಿದರು. ಶ್ರೀಮತಿ ಕಮಲಾದೇವಿಯವರ [illegible] ಪರಿಷತ್ತಿನ [illegible] ಮುಗಿದಿದೆಯೆಂದು ಘೋಷಿಸಿದರು.

ಸ್ವೀಕೃತವಾದ ಮುಖ್ಯ ಠರಾವುಗಳು —
([illegible])

[illegible]

ಶ್ರೀ ಬಾಬೂರಾಜೇಂದ್ರ ಪ್ರಸಾದರೂ ಅವರ ಧರ್ಮಪತ್ನಿಯವರೂ

[illegible] ಹೊಸ ರಾಜ್ಯಘಟನ [illegible] ಪತ್ತು—ಸ್ವೀಕಾರ

೧೦ ಎಂ ಎನ್. ರಾಯ್, ಪಂಡಿತ [illegible] ಬಿಡುಗಡೆಯಾಗಬೇಕು—ಸ್ವೀಕಾರ

೧೧ [illegible] ಕೈಗಾರಿಕೆ ಮತ್ತು ಖಾದಿ [illegible]—ಸ್ವೀಕಾರ

೧೨ [illegible] ಪರದೇಶಗಳ [illegible] ಸಹಾನುಭೂತಿ—ಸ್ವೀಕಾರ.

೧೩ ಪ್ರತ್ಯೇಕ ಸಂಸ್ಥಾನಗಳನ್ನು ರದ್ದು ಮಾಡಬೇಕು—ಸ್ವೀಕಾರ.

೧೪ ಅವನ್ನು [illegible] ಬೇಕು—ಸ್ವೀಕಾರ

ಈ ಠರಾವುಗಳು ಬಹುಮಟ್ಟಿನ ವಾದವಿವಾದಗಳೊಡನೆ ಉಪಸೂಚನೆಗಳೊಡನೆ ಸ್ವೀಕೃತವಾದುವು ಇನ್ನೂ ಕೆಲವು ಠರಾವುಗಳು ಮಂಜೂರಾಗಿವೆ.

ಚಕ್ರ

(All Rights Reversed)

ಡಿಸ್ಟ್ರಿಕ್ಟ್‌ಬೋರ್ಡಿನ ಅದೃಷ್ಟಚಕ್ರ ತಿರುಗಿದೆಯೆನ್ನಿಲ್ಲವಾದರೆ ಅದರ ಕುರಿತು ಎಲ್ಲೆಲ್ಲೂ ಟೀಕಟಿಪ್ಪಣಿಗಳು ಹೊರಗ್ಗಾಗಬೇಕೆ? ಅದರ ಅಧಿಕಾರಿಗಳ ಅದೃಷ್ಟದೊಡನೆ ಅದರ ಆಡಳಿತದ ಅದೃಷ್ಟವೂ ಸಮ್ಮಿಳಿತವಾಗಿ ಕೊಂಡಿರುವಾಗ ಆಗದಿರುವುದು ಆಗುತ್ತದೆ. ಬೇಡವೆಂಬುದು ಬೇಕಾಗುತ್ತದೆ.

× × × × × ×

ಜಿಲ್ಲಾ ಬೋರ್ಡು ಎಲ್ಲಾ ಬಗೆಯಲ್ಲೂ ಸಮರ್ಪಕವಾಗಿ ಕೆಲಸಮಾಡಿಕೊಳ್ಳುತ್ತದೆಯೆಂದು ನಾವು ಭಾವಿಸೋಣ. ಆದರೆ ಅದರ ಕೈಯೊಳಗಿರುವ ಬೋರ್ಡು ಶಾಲೆಗಳು ಹಲವಕ್ಕೆ ಅದು ಸರಿಯಾಗಿ—ಕ್ಲಪ್ತ ಸಮಯಕ್ಕೆ ಸಂಬಳವನ್ನೇ ಕೊಡುವುದಿಲ್ಲವೆಂಬ ದೂರು ಎಲ್ಲೆಲ್ಲೂ ಕೇಳಿಸುತ್ತಿದೆ. ಮೊನ್ನೆ ಸಾಯ್ಸನು ಮೈದಾನಿನಲ್ಲಿ ವಿಹರಿಸಿಕೊಂಡು ಮುಂದಿನ ವಾರದ ಸಟ್ಟೆಕ್ಲಸ್ಸನ್ನು ಯೋಚಿಸುತ್ತಿರುವಾಗ, ಪರವೂರುಗಳಿಂದ ಬಂದ ಕೆಲವು ಬೋರ್ಡು ಶಾಲಾ ಉಪಾಧ್ಯಾಯರು ನಿಂತುಕೊಂಡು ಒಂದು ರೌಂಡ್‌ಟೇಬಲ್ ಪರಿಷತ್ತನ್ನು ನಡೆಸಿ ಜಿಲ್ಲಾ ಬೋರ್ಡಿಗೆ ಬಾಯ್ತುಂಬ ಭಕ್ತಿಯಿಂದ ಪೂಜೆಮಾಡುತ್ತಿದ್ದರು. "ನೀವೇನು ಕೊಡಿಯಾಲಕ್ಕೆ ಬಂದಿರಿ" ಎಂದು ರಾಮಭಟ್ಟರು ಕೇಳಿದರು. ಅದಕ್ಕೆ ಕೃಷ್ಣಭಟ್ಟರು—"ಏನಯ್ಯಾ ಇನ್ನೂ ಸಂಬಳ ಸಿಗಲಿಲ್ಲ—ಏನಾದರೂ ಸಂಬಳದ ವ್ಯವಸ್ಥೆ ಮಾಡುವೆನೆಂದು ಪ್ರೆಸಿಡೆಂಟರಲ್ಲಿಗೆ ಹೋದೆ—ಈ ಜಿಲ್ಲಾ ಬೋರ್ಡನ್ನು ಕೇಳುವವರಿಲ್ಲವಲ್ಲ" ಎಂದು ನೊಂದು ನುಡಿಯುತ್ತಿದ್ದರು.

× + × × × ×

ತಾಲೂಕು ಬೋರ್ಡುಗಳು ನಿರ್ನಾಮಗೊಂಡಾಗ ಬೋರ್ಡು ಶಾಲೆಗಳ ಉಪಾಧ್ಯಾಯರ ಅದೃಷ್ಟಚಕ್ರವು ಸುಧಾರಿತ ರೀತಿಯಿಂದ ತಿರುಗಲಾರಂಭಿಸುವುದೆಂದೂಹಿಸಿದ್ದೆವು. ಆದರೆ ಈಗ ಏನು? ಎಲ್ಲಿ ಹೋದರೂ ಬೆಲ್ಲದ ಕಾಯಿಸ ಪ್ರಾಥಮಿಕ ಶಾಲೆಗಳ ಅಧ್ಯಾಪಕರಿಗೆ ಸಂಬಳವು ಮುಟ್ಟುವುದಕ್ಕೆ ಇಂಗ್ಲೆಂಡನ್ನು ಕಾಲ್ನಡೆಯಿಂದಲೇ ತಲಪಬೇಕಾಗುವಷ್ಟು ಸಮಯವು ಬೇಕಾಗುತ್ತದೆ.

× × × × ×

ಮತ್ತಿಲ್ಲವೇ? ಅದು ಹೇಗೆ ಹೊರಗಣ ಪ್ರಪಂಚವನ್ನು ಕಣ್ಣನೇ ಕಂಡೀತು! ಅವರೆಲ್ಲೂ ಚೆಕ್ ಎಂದಾಗಿಬಿಟ್ಟರೆ ಮತ್ತೆ ಅದರ ಗತಿ ವರ್ಣನಾತೀತ! ಆ ಚೆಕ್‌ಗೆ ವಸ್ಖತು ಬೀಳಲು ಒಂದು ಯುಗ. ಅದು ಶಾಲೆಗೆ ಮುಟ್ಟಲು ಒಂದು ಯುಗ. ಅದರ ಮೊತ್ತವು ಶಾಲೆಗೆ ತಲಪುವುದಕ್ಕೆ ಒಂದು ಯುಗ. ಹೀಗೆ ಯುಗಯುಗಾಂತರಗಳಲ್ಲಿ ಸಂಬಳದ ದ್ರವ್ಯವು ಕೈಯಲ್ಲಿ ದೊರೆಯುತ್ತದೆ.

× × × × × ×

ಹೋಟೆಲಿನ ಅಂಗಡಿಗೆ ವಸ್ತ್ರದಂಗಡಿಗೆ ಫಂಡುಗಳಿಗೆ, ಬೇಂಕಿನ ಸಾಲಗಳಿಗೆ ಕೈಸಾಲಗಳಿಗೆ—ಎಲ್ಲಕ್ಕೂ ನಾಮ! ನಾರಾಯಣ ಭಟ್ಟರಿಗೆ ನಾರಾಯಣ ಭಟ್ಟರಿಂದ ಸಾಲತೆಗೆದು ಕೊಟ್ಟು, ಪಕ್ಷಿನಾರಾಯಣರಿಗೆ ಉತ್ತರಾಯಣರಿಂದ ತೆಗೆದುಕೊಟ್ಟು ಹೇಗೂ ಉಪಾಧ್ಯಾಯರುಗಳು ದಿನಹರಣ ಮಾಡುತ್ತಾರಲ್ಲ! ಈ ಸಾಲದ ವಹಿವಾಟಿನಲ್ಲಿ ಮಕ್ಕಳಿಗೆ ವಿದ್ಯೆ ಕಲಿಸುವ ಏಕಚಿತ್ತವೃತ್ತಿಗೆ ಎಡೆಯಲ್ಲಿ! ಯಾವಾಗ ನೋಡಿದರೂ ಸಾಲಗಾರರ ಬೈಗಳ—ಸಾಲಗಾರರ ದಿಟ್ಟತನದ ಚಕ್ರಗಳು ಮೆದುಳನ್ನು ಕರಗಿಸಿ ಸೊರಗಿಸಿ ತಿನ್ನುತ್ತವೆ.

× × × × × ×

"ನಾಳೆ ಸಂಬಳ ಬರುತ್ತದೆ, ಕೊಡುತ್ತೇನೆ" ಎಂದು ಸಾಲಪಡೆದರೆ ಡಿ. ಬೋರ್ಡಿನ ದಯೆಯಿಂದ ಆ ನಾಳೆಯು ಗಣಪತಿ ಮದುವೆಗೇ ಸೇರಿಹೋಗಿ ಸಾಲಪಡೆಕೊಂಡ ಉಪಾಧ್ಯಾಯರಿಗೇನೆ ಸುಲಭವಾಗಿ ಮದುವೆಯಾಗಿ ಬಿಡುತ್ತದೆ. ಜಯವಿರಲಿ ಈ ಡಿ. ಬೋರ್ಡಿಗೆ! ಜಯವಿರಲಿ ಈ ಉಪಾಧ್ಯಾಯರಿಗೆಲ್ಲ—ಅದರೊಡನೆ ಸಾಯ್ಸನಿಗೂ.

'ಸಾಯ್ಸ'.

ಅವನಿಗೆ ನಾನೇ ಮೊಲೆಯುಣ್ಣಿಸುತ್ತೇನೆ

ತನ್ನ ಮಗುವಿಗೆ ತಾನೇ ಮೊಲೆಯುಣ್ಣಿಸುವಂತೆ ಪ್ರತಿಯೊಬ್ಬ ತಾಯಿಯೂ ಸಿದ್ಧಳಿರಬೇಕು ಮಗುವಿನ ಆರೋಗ್ಯಪಾಲನೆಗೂ, ಅದು ಬಾಲರೋಗಗಳಿಗೆ ತುತ್ತಾಗದಂತೆಯೂ ಅದಕ್ಕೆ ಸ್ವಾಭಾವಿಕವಾಗಿ ಮೊಲೆಯುಣ್ಣಿಸಬೇಕು. ಎದೆಹಾಲು ನಿಮ್ಮ ಮಗುವಿಗೆ ಸಮರ್ಪಕವಾದ ಆಹಾರವಾಗಿದೆ. ಇದು ಮಗುವಿನ ಸೂಕ್ಷ್ಮ ಜೀರ್ಣಶಕ್ತಿಗೆ ತಕ್ಕುದಾದ ಆಹಾರವಾಗಿದೆ. ಮಗುವಿನ ಆರೋಗ್ಯಕರ ಬೆಳವಣಿಗೆಗೂ ವೃದ್ಧಿಗೂ ಸಾಧಕವಾದ ಪೌಷ್ಟಿಕ ಸಾರವು ಇದರಲ್ಲಿದೆ.

'ಓವಲ್ಟಿನ್' ಪಾನೀಯವನ್ನು ಮಗು ಜನಿಸುವ ಮೊದಲೂ, ಹುಟ್ಟಿ ಬೆಳೆಯುತ್ತಿರುವಾಗಲೂ ಅನುಕ್ರಮವಾಗಿ ಸೇವಿಸುತ್ತಾ ಇದ್ದರೆ, ಎದೆ ಹಾಲು ನಿಶ್ಚಿತವಾಗಿ ವೃದ್ಧಿಹೊಂದುತ್ತದೆ. ಅಲ್ಲದೆ ತಾಯಿಯ ಬಲ ಮತ್ತು ಚೈತನ್ಯವು ಕಾಪಾಡಲ್ಪಡುತ್ತದೆ. 'ಓವಲ್ಟಿನ್' ಎಂಬುದು ಪ್ರಕೃತಿಸಿದ್ಧ ಆಹಾರ. ಇದನ್ನು, ಬೆಳೆದ ಬಾರ್ಲಿ ಬೀಜ, ದನದ ಕೆನೆ ಹಾಲು ಮತ್ತು ಕೋಳಿಮೊಟ್ಟೆಗಳಿಂದ ತಯಾರಿಸಲಾಗುತ್ತದೆ. ಆರೋಗ್ಯ, ಶಕ್ತಿ ಮತ್ತು ಚೈತನ್ಯ ರಕ್ಷಣೆಗೆ ಇದು ಅತ್ಯಮೂಲ್ಯ ಪಾನಕ. ಪಡೆಯುವಾಗ ತಾಜಾ ಓವಲ್ಟಿನನ್ನೇ ಪಡೆಯಿರಿ. ನಕಲಿಗಳನ್ನು ತ್ಯಜಿಸಿರಿ.

ನಿಮ್ಮ ಚಹಾಕ್ಕೆ 'ಓವಲ್ಟಿನ್' ಸೇರಿಸಿರಿ—ಅದು ಆರೋಗ್ಯಕರ, ಬಲವರ್ಧಕ ಮತ್ತು ಶಕ್ತಿದಾಯಕ

ಓವಲ್‌ಟಿನ್
ಟೋನಿಕ್ ಆಹಾರ ಪಾನಕ.

OVALTINE

ತಾಯಂದಿರು ತಮ್ಮ ಮಕ್ಕಳಿಗೆ ಮೊಲೆಹಾಲನ್ನು ಕೊಟ್ಟು ಸಾಕುವಂತೆ ಸಹಕರಿಸುತ್ತದೆ

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ ದೊರೆಯುತ್ತದೆ.

ಏಜಂಟ್:—ಜೇಮ್ಸ್ ರೈಟ್ 8೯ಎ, ಕ್ಲೈವ್ ಸ್ಟ್ರೀಟ್ ಕಲ್ಕತ್ತಾ, ಮತ್ತು ಮುಂಬಾಯಿ ನ ದಿಲ್ಲಿ.

O.V.K.S.

Estd 1920] THE [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು.

ಠೇವಣಾತಿಗಳ ದರ.

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur,
Dated 10—4—1935

G. N. Lakshman Pai,
Secretary.

Your kind attention is solicited
TO THIS
SMALL ADVERTISEMENT
IN WHICH
some of our Most Attractive types
ARE DISPLAYED.
Get all your works to us and
be thoroughly satisfied
WITH OUR SERVICE.
SHARADA PRESS,
Car Street, MANGALORE.

ಪತ್ರಿಕಾ ಪ್ರಪಂಚ:

ಭಾರತೀಯ ಮದ್ಯಪಾಯಿಗಳು

ಐರ್ಲೆಂಡಿನಲ್ಲಿನ ಕೃಷೀವಲರಲ್ಲಿ ಸಹಕಾರ ಬುದ್ಧಿ.

International ಎಂಬ ಪತ್ರಿಕೆಯಲ್ಲಿ ಮಿ। ಲೋರೆನ್ಸ್ ಓ. ಬ್ರೈನ್ ಎಂಬ ಡಬ್ಲಿನ್ ನಿವಾಸಿಯು ಹೀಗೆ ಬರೆದಿದ್ದಾರೆ,—ಐರ್ಲೆಂಡಿನಲ್ಲಿ ರಾಜಕೀಯ ಆಂದೋಲನವೂ ಕೃಷಿಕರ ಚಳವಳವೂ ತಲೆದೋರಿ ದೇಶದ ಪ್ರಗತಿಗೆ ಬಾಧೆಯಾಗಿದೆ, ಅಲ್ಲಿಯ ಬೇಸಾಯಗಾರನು ಅಲ್ಲಿಯ ಭೂಮಿಯ ಯಜಮಾನನಾಗುತ್ತಿದ್ದಾನೆ, ತನ್ನ ಭೂಮಿಯನ್ನು ತಾನೇ ಉತ್ತು ಬಿತ್ತುತ್ತಾನೆ, ಕೃಷೀವಲರ ಒಗ್ಗಟ್ಟಿನ ತತ್ವವನ್ನು ಸಾರಲಾರಂಭಿಸಿದ್ದಾನೆ. ಹೀಗಿರುವಾಗ ಅವನ ಸ್ಥಿತಿಯು ಸುಧಾರಣೆ ಹೊಂದುವುದರಲ್ಲಿ ಸಂದೇಹವಿರುವುದಿಲ್ಲ. ಸರ್ ಹೊರೇಸ್ ಪ್ಲನ್‌ಕೆಟ್ ಎಂಬವರ ಪ್ರೇರೇಪಣೆಯಿಂದಾಗಿ ಸಹಕಾರಿ ಸಂಘಗಳು ಹೆಚ್ಚಿವೆ. ಐರ್ಲೆಂಡು ಜನರು [illegible]ಗಳನ್ನು ಒದಗಿಸುವ ದೇಶ. ಅವರು ಈ ವ್ಯಾಪಾರವನ್ನೇ ಅಲ್ಲಿ ವೃದ್ಧಿಗೊಳಿಸುತ್ತಿರುವರು. ಡೈರಿಯಿಂಗ್ ಸಹಕಾರ ಸಂಘವೊಂದು ಸ್ಥಾಪನೆ ಹೊಂದಿದ ಹತ್ತು ವರ್ಷಗಳೊಳಗೆ ೧,೩೪೪,೦೦೦ ಪವನುಗಳ ವ್ಯಾಪಾರವನ್ನು ಮಾಡಿತು. ಈಗ ಅಲ್ಲಿ [illegible] ಸಂಘಗಳು ಒಂದು ಸಭೆಯು ಕೆಲಸವನ್ನು ಒಟ್ಟು ಪಾಲುಗಾರರನ್ನಾಗಿ ಸ್ವೀಕರಿಸುತ್ತದೆ. ಪಾಲುಗಾರರು ಒಟ್ಟುಗೂಡಿ ಚುನಾಯಿಸಿದ ಸಮಿತಿಯಿಂದ ಕಂಪೆನಿಯ ಮೆನೇಜರನನ್ನು ಆರಿಸುತ್ತಾರೆ. ಇದೇ ರೀತಿಯಲ್ಲಿ ಸಹಕಾರೀ ಬೇಂಕುಗಳೂ ಸ್ಥಾಪನೆಗೊಂಡಿವೆ. ೧೯೦೭ರಲ್ಲಿ ೨೬೮ ಬೇಂಕುಗಳಿದ್ದವು. ಒಟ್ಟು ೧೪೬೦೦ ಸದಸ್ಯರಿದ್ದರು. ಒಟ್ಟು ೯೭,೬೦೦ ಪವನುಗಳು ಭಂಡವಾಳವಿತ್ತು. ಈಗ ಈ ಸಂಘಗಳು ಬಹಳವಾಗಿ ಉನ್ನತ ಸ್ಥಿತಿಗೇರಿವೆ. ಐರ್ಲೆಂಡಿನಲ್ಲಿ ಕೃಷೀವಲರ ಸಹಕಾರ ಸಂಘಗಳು ದಿನೇ ದಿನೇ ಹೆಚ್ಚುತ್ತಿವೆ. ಒಂದು ಸಂಘವು ವಸ್ತುಗಳ ಮಾರಾಟದ ವ್ಯಾಪಾರ ಮಾಡುತ್ತಿದೆ—ಒಂದು, ಯಂತ್ರ ಸಾಮಗ್ರಿಗಳ [illegible]. ಮತ್ತೆ ಕೆಲವು ವ್ಯಾಪಾರದ ಬೆಳವಣಿಗೆಯಲ್ಲಿ ನಿರತವಾಗಿವೆ. ಹೊಟ್ಟೆಯ [illegible] ಮೀನಿನ ವ್ಯಾಪಾರ—ಇವುಗಳೆಲ್ಲ ಸಹಕಾರೀ ಸಂಘಗಳ ಮೂಲಕ ನಡೆಸಲ್ಪಡುತ್ತಿವೆ.

ಭಾರತವರ್ಷ

ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿ.

ಕಾಂಗ್ರೆಸ್ ಪಕ್ಷದವರು ಲೆಜಿಸ್ಲೆಟಿವ್ ಅಸೆಂಬ್ಲಿ ಮುಂತಾದ ಶಾಸನ ಸಭೆಗಳಿಗೆ ಅಭ್ಯರ್ಥಿಗಳಾಗಿ ನಿಂತು, ಸಭೆಗಳಿಗೆ ಸೇರಿ ಮುಂದೆ ಸಾಧಿಸುವುದೇನು? ಈ ಪ್ರಶ್ನೆಗೆ ಉತ್ತರವನ್ನು ಈ ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯಲ್ಲಿ ಕಾಣಬೇಕು. [illegible] ತರುವಾಯ ಹೊಸದಾದ ಸಭೆಯು ನೆರೆಯಲು ಸಂಧಾನ ಪ್ರಯತ್ನವನ್ನು ಕೈಗೊಳ್ಳುವರಂತೆ. ಈ ಹೊಸ ಸಭೆಯು ಏತಕ್ಕೆ, ಎಂತಹುದು? ರಾಷ್ಟ್ರಬಂಧಕ್ಕೆ ಇಂಗ್ಲೆಂಡಿನಲ್ಲಿ 'ಕಾನ್‌ಸ್ಟಿಟ್ಯೂಷನ್' ಎಂದು ಹೇಳುವುದು ರೂಢಿ. ರಾಷ್ಟ್ರವೆಂಬ ವ್ಯವಸ್ಥೆಯು ಹೇಗಿರತಕ್ಕದೆಂದು ವಿಚಾರಮಾಡಿ ನಿರ್ಣಯಿಸತಕ್ಕ ಸಭೆಗೆ ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯೆನ್ನುವರು. ಅಂದರೆ ರಾಷ್ಟ್ರಬಂಧದ ರೂಪವನ್ನು ನೀತಿ ನಿಯಮಗಳನ್ನು ನಿರ್ದೇಶಮಾಡಿ ರಾಷ್ಟ್ರವನ್ನು ರೂಪಗೊಳಿಸುವ ಸಭೆ. ರಾಷ್ಟ್ರಗಳು ಕಲ್ಲೋಲವಾಗಿ ಸ್ವಾತಂತ್ರ್ಯ ಬರುವ ಪ್ರಯತ್ನದಲ್ಲಿ ಸಂಧಿಕಾಲಗಳಲ್ಲಿ ಕಾರ್ಯಸಾಧನೆ ಮಾಡತಕ್ಕದು ಸಾಧಾರಣವಾಗಿ ಇಂತಹ ಸಭೆಯೇ. ಕಾಂಗ್ರೆಸಿನವರು ಈಗಿರುವ ಶಾಸನಸಭೆಗಳೇ ಗುಂಪುಕೂಡಿದ ಮೇಲೆ ರಾಷ್ಟ್ರಕೃತ್ಯಗಳೂ ಸಂಧಾನವಾದ ಅಂಶಗಳನ್ನು ಲಕ್ಷಿಸದೆ ರಾಷ್ಟ್ರಬಂಧವನ್ನೇ ನಿರ್ಧರಿಸಿ ಸ್ಥಾಪಿಸುವ ಆಧಾರ ಸಭೆಯು ನೆರೆಯುವಂತೆ ಸಾಹಸಪಡತಕ್ಕವರು. ಈ ಗುರಿಯು ದೊಡ್ಡ ಗುರಿ, ಸುಲಭಸಾಧ್ಯವಾದುದಲ್ಲ. ಭಾರತ ರಾಷ್ಟ್ರಬಂಧವು ಸಂಯುಕ್ತಸ್ವರೂಪವಾಗಿರತಕ್ಕದೆಂಬುದು ಎಲ್ಲರ ನಿರ್ಣಯವಾಗಿದ್ದಂತೆ ಇದು ವರೆಗೂ ನಡೆದ ಚಕ್ರಗೋಷ್ಠಿಗಳ ಪರಿಣಾಮವಾಗಿ ಹುಟ್ಟಿರುವ ಶ್ವೇತ ಪತ್ರದಲ್ಲಿ ತೋರಿರುವ ರೂಪವು ಅನೇಕರಿಗೆ ಸಮಾಧಾನಕಾರಕವಲ್ಲ. ಕೋಮುವಾರು ಕಲಹ, ದೇಶೀಯ ಸಂಸ್ಥಾನಗಳ ಭವಿಷ್ಯಗಳಲ್ಲದೆ ಸೇಫ್ ಗಾರ್ಡ್ಸ್ ಎಂಬ ಪ್ರಬಲವಾದ ವಿಚಾರವೂ ಬೇರೆ ಇರುವುದು. ಇವುಗಳನ್ನು ಇತ್ಯರ್ಥ ಮಾಡಲು ಭಾರತೀಯರೇ ಯೋಗ್ಯರು ಮತ್ತು ದಕ್ಷರು ಎಂಬುದು ಕಾಂಗ್ರೆಸಿನವರ ವಾದ. ಇಂಗ್ಲೆಂಡಿನಲ್ಲಿ ಜೋಡ, ಲಾನ್ಸ್‌ಬರಿ ಮುಂತಾಗಿ ಹಲಕೆಲವರ ಅಭಿಪ್ರಾಯವೂ ಇದೆ. ಇದಕ್ಕೆ ಕಾನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿ ಸೇರಬೇಕೆಂಬುದು ಪ್ರಕೃತ ಕರ್ತವ್ಯವಾಗಿ ಕಾಂಗ್ರೆಸಿನವರಿಗೆ ತೋರಿದೆ.

ದೇಶೀಯ ವಿದ್ಯಾಶಾಲಾ ಪತ್ರಿಕಾ

ಕಲೆಯ ವ್ಯಾಸಂಗ

ವಿದ್ಯಾಶಾಲೆಗಳಲ್ಲಿ ಕಲೆಯ ವ್ಯಾಸಂಗ.

ಈಚೆಗೆ ನಮ್ಮ ಜನಾಂಗದಲ್ಲಿ ಕಲಾಭಿಮಾನವು ಬೆಳೆಯುತ್ತ ಬಂದು ಕಲೆಯ ಪ್ರಾಮುಖ್ಯತೆಯೂ ಜನಜೀವನಕ್ಕೂ ಕಲೆಗೂ ಇರುವ ನಿಕಟ ಸಂಬಂಧವೂ ಪ್ರಕಾಶಗೊಳ್ಳುತ್ತಿರುವುದು ಶುಭೋದಯವೆನ್ನಬಹುದು. ಜನಾಂಗವು ಕಲಾಭಿಮಾನಯುತರಾಗಲು ಅಸ್ತಿಭಾರವನ್ನು ಬಾಲ್ಯದಲ್ಲಿಯೇ ಹಾಕಬೇಕಾಗಿದೆ. ಅಂದರೆ ಮಕ್ಕಳಿಗೆ ಬಾಲ್ಯದಿಂದಲೂ ಅವರಲ್ಲಿರುವ ಕಲಾಕುಶಲತೆಗಳನ್ನು ಬೆಳಸುತ್ತ ಅದರ ಬೆಳವಣಿಗೆಗೆ ತಕ್ಕ ಪರಿಸ್ಥಿತಿಯನ್ನು ಕಲ್ಪಿಸಬೇಕು. ಮಕ್ಕಳ ತರಗತಿಯಲ್ಲಿ ನಡೆಯುವ ಸಣ್ಣಪುಟ್ಟ ಕೈಗೆಲಸಗಳೂ ಬಣ್ಣದ ಕೆಲಸವೂ ಚಿತ್ರ ಪಾಠವೂ ಈ ಭಾಗದಲ್ಲಿ ತುಂಬಾ ನೆರವಾಗುವುವು. ಆದರೆ ಈ ರೀತಿಯಲ್ಲಿ ಆರಂಭವಾದ ಕಲಾಭಿಮಾನವು ಬೆಳೆದು ಮುಂದೆ ಅಭಿವೃದ್ಧಿಗೆ ಬರಲು ಮಾಧ್ಯಮಿಕ ಶಾಲೆಗಳಲ್ಲಿಯೂ ಪ್ರೌಢ ಕಲಾಶಾಲೆಗಳಲ್ಲಿಯೂ ಸರಿಯಾದ ಅವಕಾಶ ಕಲ್ಪಿಸಬೇಕು. ಆ ಕ್ರಮವುಂಟು. ನಮ್ಮ ಹೈಸ್ಕೂಲುಗಳಲ್ಲಿ ಚಿತ್ರ ಕಲಾ ಬೋಧಕರಿರುವುದಲ್ಲದೆ ಚಿತ್ರಕಲೆಗೆ ಒಂದು ಸ್ಥಾನವು ದೊರೆತಿದೆ. ಪ್ರತಿ ಚಿತ್ರ, ನೆನಪಿನ ಚಿತ್ರ, ವಸ್ತು ಚಿತ್ರ, ರೇಖಾ ಚಿತ್ರ, ಶಾಸ್ತ್ರ ಎಂಬ ವಿಷಯಗಳಲ್ಲಿ ಪರೀಕ್ಷೆಯು ನಡೆಯುವುದು. ಆದರೂ ಇದರಿಂದ ತನ್ನ ಪ್ರತಿಭೆಯನ್ನು ಪ್ರಕಾಶಗೊಳಿಸಲು ಸಾಧ್ಯವಾಗಲಿಲ್ಲ. ಇದಕ್ಕೆ ನಾನಾ ಬಗೆಯ ಕಾರಣಗಳಿರಬಹುದು—ಅನೇಕ ಶಾಲೆಗಳಲ್ಲಿ ವಿಷಯ ಬೋಧನೆಗೆ ಬೇಕಾದ ಸಾಧನ ಸೌಕರ್ಯಗಳಿಲ್ಲದಿರಬಹುದು. ಮತ್ತೆ ಕೆಲವು ಕೆಲವು ಕಡೆಗಳಲ್ಲಿ ಪಾಠದ ಪುಸ್ತಕ ಕಾಲ, ಇಲ್ಲವೇ 'ಸರಿಯಾದ ಶಿಕ್ಷಕರು' ದೊರೆಯದಿರಬಹುದು. ಇಂದು ನಮ್ಮ ಸಂಸ್ಥಾನದ ಶಾಲೆಗಳಲ್ಲಿರುವ ಅನೇಕ ಶಿಕ್ಷಕರಿಗೆ ವಿದ್ಯಾಭ್ಯಾಸದಲ್ಲಿ ಕಲೆಯ ಸ್ಥಾನವಾವುದು, ಕಲೆಯನ್ನು ವಿದ್ಯಾವ್ಯಾಸಂಗದೊಡನೆ ಹೊಂದಿಸಿಕೊಳ್ಳುವ ಬಗೆಯೆಂತು ಎಂಬುದು ತಿಳಿಯದು. ಕೆಲವು ಕಲಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಈ ಶಿಕ್ಷಣ ವೃತ್ತಿಗೆ ಕೈ ಹಾಕಿರುವವರು ಪ್ರತಿಯೊಬ್ಬರೂ ಅವರವರಿಗೆ ತಿಳಿದ ಮಾರ್ಗದಲ್ಲಿ, ತಮಗೆ ಅಭಿರುಚಿಯಿರುವ ವಿಷಯದಲ್ಲಿ ಹೆಚ್ಚು ಉತ್ಸಾಹವನ್ನು ತೋರಿ ಬಾಕಿಯವರನ್ನು ತಾತ್ಸಾರ ಮಾಡುವ ಸಂಭವವುಂಟು. ಪೋಷಕರು ವಿದ್ಯಾರ್ಥಿಗಳಿಗೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಡದಿರುವುದು ಮತ್ತೊಂದು ದೊಡ್ಡ ತೊಂದರೆ. ಚಿತ್ರಕಲೆಗೆ ವರ್ಣ ಚಿತ್ರಗಳಿಗೆ ದುಡ್ಡು ವ್ಯಯ ಮಾಡುವುದೆಂದರೆ ಅನಾವಶ್ಯಕವಾದ ಖರ್ಚೆಂದು ಅನೇಕ ತಂದೆತಾಯಿಗಳು ನೆನಸುವರು. ಒಂದು ವೇಳೆ ಈ ಎಲ್ಲ ಕಷ್ಟಗಳನ್ನು ದಾಟಿ ಹಲಕೆಲವರು ತಮ್ಮ ಪ್ರತಿಭೆಯನ್ನು ತೋರುವುದಾದರೂ ಅಂತಹ ತರುಣರಿಗೆ ಕಲೆಯಲ್ಲಿ ಪ್ರೌಢ ಶಿಕ್ಷಣವಿತ್ತು ಅವರಿಗೂ ದೇಶಕ್ಕೂ ಪ್ರಯೋಜನವಾಗುವಂತೆ ಏರ್ಪಡಿಸುವ ವ್ಯವಸ್ಥೆಯು ನಮ್ಮಲ್ಲಿ ಇಲ್ಲ. ಕಲೆಯನ್ನಭ್ಯಸಿಸಲು ಬುದ್ಧಿಕುಶಲತೆಯು ಬೇಕು. ತರುಣರಲ್ಲಿರುವ ಸಹಜವಾದ ಅಭಿರುಚಿಯನ್ನು ಬೆಳೆಸಲು ಈಗಿನ ಕಲಾ ಶಿಕ್ಷಣ ಕ್ರಮವು ತೀರಾ ಸಾಲದು. ಅಲ್ಲದೆ ಇಲ್ಲಿ ಆರಂಭಿಸಿದ ಕಲಾ ವಿಭಾಗಗಳು ಮುಂದೆ ಅವರು ತೆಗೆದುಕೊಳ್ಳಬಹುದಾದ ಕಲಾವೃತ್ತಿಗೆ ಹೆಚ್ಚು ಸಹಾಯಕವಾಗಲಾರವು. ಈ ಎಲ್ಲಾ ತೊಂದರೆಗಳನ್ನೂ ಹೋಗಲಾಡಿಸಿ, ಈ ಕಲಾ ಶಿಕ್ಷಣದಿಂದ ಉತ್ತಮ ಫಲವಾಗಲು ಅನೇಕ ಬದಲಾವಣೆಗಳನ್ನು ಮಾಡಬೇಕಾಗುವುದು. ಅಲ್ಲದೆ ಶಾಲೆಗಳಲ್ಲಿ ಕಲಿತ ಕುಶಲ ಕಲೆಗಳನ್ನು ಅಷ್ಟು ವೃದ್ಧಿ ಮಾಡಿಕೊಳ್ಳಲು ಕಾಲೇಜುಗಳಲ್ಲಿಯೂ ಕಲೆಗೆ ಸ್ಥಾನವನ್ನಿತ್ತು ವಿಶ್ವವಿದ್ಯಾಲಯದಲ್ಲಿ ಕಲೆಗೊಂದು ಪೀಠವನ್ನೀಯಬೇಕು. ಇದರಿಂದ ಉತ್ತಮ ಪರಿಣಾಮವುಂಟಾಗುವುದರಲ್ಲಿ ಅಡ್ಡಿಯಿಲ್ಲ.

'ಕಲಾ'

ವಾಗ್ಮಿಯ ಕಲೆ

ವಾಗ್ಮಿಯ ಕಲೆಯ ಕುರಿತಾಗಿ ೧೯೦೮ರ Chamber's Journal ನಲ್ಲಿ ಒಂದು ಲೇಖನವು ಪ್ರಕಟವಾಗಿದ್ದು, ಇಂಗ್ಲಾಂಡಿನಲ್ಲಿ ೧೯ನೇ ಶತಮಾನದಲ್ಲಿ ವಾಗ್ಮಿಗಳ ಸಂಖ್ಯೆಯು ಕಡಿಮೆಯಾದುದರಿಂದ ಪ್ರತಿಪಾದಿಸಲ್ಪಟ್ಟಿದೆ. ವಿಕ್ಟೋರಿಯ ಮಹಾರಾಣಿಯ ಕಾಲದಲ್ಲಿ ಇಂಗ್ಲಾಂಡಿನವರ ಭಾಷೆಯ ಪ್ರಭುಗಳೇ ಇದ್ದರು. ಆಗಿನ ಕಾಲದಲ್ಲಿ ಬ್ರೈಟ್ ಮತ್ತು ಬೆಕನ್ಸ್‌ಫೀಲ್ಡ್‌ರವರು ಮಹಾಭಾಷಣಕಾರರಾಗಿದ್ದರು. ಎಸೆಂಬ್ಲಿಯಲ್ಲಿ ಗ್ಲೇಡ್‌ಸ್ಟನ್ ಮತ್ತು ಡೇನಿಯಲ್ ಒ ಕೋನೆಲ್‌ರವರು ವಾಗ್ಮಿಗಳೆಂದೆನಿಸಿಕೊಂಡಿದ್ದರು. ಭಾಷಣಕಾರರ ಸಂಖ್ಯೆಯು ಕಡಿಮೆಯಾಗುವುದಕ್ಕೆ ದೇಶದ ಶಾಂತತಾ ಪರಿಸ್ಥಿತಿಯೇ ಕಾರಣವಾಗಿದೆ. ಸ್ಫೂರ್ತಿಯ ಮತ್ತು ಕ್ಷೋಭಾಮಯ ವಾತಾವರಣದಲ್ಲಿ ವಾಗ್ಮಿಕಾರರ ಸಂಖ್ಯೆಯು ಹೆಚ್ಚುತ್ತದೆ ಎಂದು ಈ ಲೇಖನದಲ್ಲಿ ಸೂಚಿತವಾಗಿದೆ. "ಯಾವ ಮನುಷ್ಯನು ಸಾರ್ವಜನಿಕರೆದುರು ತನ್ನ ಭಾವನೆಗಳನ್ನು ಸ್ಪಷ್ಟ ರೀತಿಯಿಂದ ಸರ್ವಗ್ರಾಹ್ಯವಾಗುವಂತೆ ಉತ್ತಮ ಶೈಲಿಯಲ್ಲಿ ಇಡಬಲ್ಲನೋ ಅವನೇ ಶ್ರೇಷ್ಠ ವಾಗ್ಮಿಯೂ ಸಮಾಜದ ಧುರೀಣನೂ ಆಗುವನು" ಎಂಬುದರಲ್ಲಿ ಸಂದೇಹವೇ ಇರುವುದಿಲ್ಲ. ಈ ಲೇಖನದಲ್ಲಿ ವಾಗ್ಮಿತ್ವದ ಕುರಿತಾಗಿ ಅನೇಕ ಅಮೂಲ್ಯ ಸಲಹೆಗಳಿವೆ. ಸಾರ್ವಜನಿಕ ಭಾಷಣ ಮಾಡುವ ಕಲೆಯನ್ನು ಯಾವ ಗ್ರಂಥವೂ ಕಲಿಸಲಾರದು. ಯಾವ ಅನುಭವವೂ ಅದನ್ನು ತಿಳಿಸದು. ಸ್ವಾಭಾವಿಕವಾಗಿ ಕೊಡಲ್ಪಡುವ ಯಾವ ಪಾಠವೂ—ಅಭ್ಯಾಸವಿಲ್ಲದೆ—ಪ್ರಯೋಜನಕಾರಿಯಾಗದು. ಭಾಷಣಕಾರನು ಸತ್ಪರಿಣಾಮಕಾರಿ ಚಿತ್ರವೃತ್ತಿಯವನಾಗಿರಬೇಕು. ಹುರಿದುಂಬಿಸಲು ಶಕ್ತಿಯುಳ್ಳ ಹೃದಯವು ಅವನಲ್ಲಿರಬೇಕು" ಎಂದರೆ ಮಾತ್ರ ಅವನ ನುಡಿಗಳು ಜನರಲ್ಲಿ ಪರಿಣಾಮಕಾರಿಯಾಗುವುವು.

ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲೂ ಖಾಸಗಿ ಶಾಲೆಗಳೂ.

ನಮ್ಮ ಜಿಲ್ಲೆಯ ಖಾಸಗಿ ಹಾಯರ್ ಎಲಿಮೆಂಟರಿ ಶಾಲೆಗಳ ಉಪಕಾರಕ್ಕಾಗಿ ನಮ್ಮ ಜಿಲ್ಲಾ [illegible] ಧನಸಹಾಯವನ್ನು ೨-೩ ವರ್ಷಗಳಿಂದ ಮಾಡುತ್ತಿರುವರು. ಈ ಕ್ರಮವು ಪ್ರಾರಂಭವಾದಂದಿನಿಂದ ಸ್ವಲ್ಪ ಸಮಯದ ವರೆಗೆ ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿತ್ತು. ಇತ್ತೀಚೆಗೆ ಈ ಕ್ರಮದಲ್ಲಿ ಸ್ವಲ್ಪ ಕುಂದುಕೊರತೆಗಳು ತಲೆದೋರಿವೆ. ಇದಕ್ಕೆ ಕಾರಣವೇನೆಂದು ಸ್ಪಷ್ಟವಾಗಿ ಹೇಳಲು ಬರುವುದಿಲ್ಲ. ಆದರೂ ಈ ರೀತಿಯ ಧನಸಹಾಯದಲ್ಲಿ ಶಾಲಾ ಮೆನೇಜರುಗಳಿಗೆ ದೊರಕಬೇಕಾದ [illegible] ಉದ್ದೇಶವೇ ಹಾಳಾದಂತೆ ಭಾಸವಾಗುತ್ತದೆ. ಕೌನ್ಸಿಲಿನ ಸಭೆ ಜರಗಿ, ಗ್ರೇಂಟ್ ನಿಶ್ಚಿತವಾದ ಒಂದು ತಿಂಗಳ ನಂತರ ಬಿಲ್ಲುಗಳು ಹೇಗೂ ಮೆನೇಜರರ ಕೈ ಸೇರುವುವು. ಬಿಲ್ಲುಗಳನ್ನು ಮರಳಿ ಕೌನ್ಸಿಲು ಆಫೀಸಿಗೆ ರವಾನಿಸಿ ಕೊಟ್ಟು ಎಷ್ಟೋ ಸಮಯದ ನಂತರ ಚೆಕ್ಕುಗಳು ಬೆಳಕಿಗೆ ಬರುವುವು ಎಂಬ ಆಕ್ಷೇಪವು ಇತ್ತೀಚೆಗೆ ಕೇಳ ಬರುತ್ತಿದೆ. ಗ್ರೇಂಟ್ ಕೊಡುವಂತಹ ಜವಾಬ್ದಾರಿ ಕೆಲಸದಲ್ಲಿ ವಿಶೇಷ ಅವಸರವನ್ನು ಮಾಡಿದರೆ ಅಜಾಗ್ರತೆಯಿಂದ ತಪ್ಪುಗಳು ಬರಬಹುದೆಂಬುದೇನೋ ನಿಜವಾಗಿದ್ದರೂ ಅತಿ ಹೆಚ್ಚಿನ ವಿಳಂಬವಾಗದಂತೆ ಆದಷ್ಟು ತ್ವರಿತ ಬಿಲ್ಲುಗಳನ್ನೂ ಚೆಕ್ಕುಗಳನ್ನೂ ಸಂಬಂಧಪಟ್ಟ ಶಾಲೆಯವರಿಗೆ ರವಾನಿಸುವಂತೆ ಕೌನ್ಸಿಲಿನ ಮಾನ್ಯ ಪ್ರೆಸಿಡೆಂಟರು ಮಾಡುವಂತಾಗಿ ಸಂಬಂಧಿ[illegible] ಅಂತೆಯೇ ಎಲ್ಲಾ ಖಾಸಗಿ ಪ್ರಾಥಮಿಕ ಶಾಲೆಯವರಿಗೂ ವರ್ಷಾವಧಿ ಕೊಡತಕ್ಕ ಧನ ಸಹಾಯದ ಕುರಿತು ಈ ರೀತಿಯ ಅಪವಾದವು ಬಾರದಂತೆ ಪ್ರತಿ ವರ್ಷದ ಗ್ರೇಂಟು, ಸಭೆಯು ಜರಗಿದ ೧೫ ದಿನಗಳ ಒಳಗಾಗಿಯಾದರೂ ಗ್ರೇಂಟ್ ಬಟವಾಡೆಯ ವ್ಯವಸ್ಥೆಯನ್ನು ಮಾಡುವರಾಗಿಯೂ ನಾವು ನಿರೀಕ್ಷಿಸುತ್ತೇವೆ.

ಬಾಲಚಂದ್ರ

ಸುಶಿಕ್ಷಿತ ಭಾರತೀಯ ಮದ್ಯಪಾಯಿಗಳು.

Christian College Magazineನಲ್ಲಿ ೧೯೩೩ರಲ್ಲಿ ರೆವರೆಂಡ್ ಅಲೆಕ್ಸ್ ಪ್ರೋಫೆಟ್ (ಮದ್ರಾಸು ಕ್ರಿಶ್ಚನ್ ಕೋಲೇಜಿನ ಪ್ರೊಫೆಸರು) ಒಂದು ಲೇಖನವನ್ನು ಪ್ರಕಟಿಸಿದರು. ಅವರು ಸುಶಿಕ್ಷಿತ ಭಾರತೀಯರು ಕುಡಿತದ ಅಭ್ಯಾಸಕ್ಕೊಳಗಾಗಿರುವುದನ್ನು ಕಂಡು ಖೇದಗೊಂಡು ಹೀಗೆ ಬರೆಯುತ್ತಾರೆ—

ಮದ್ರಾಸು ನಗರದಲ್ಲಿ ಭಾರತೀಯರು ವಿದೇಶೀಯ ಮದ್ಯಗಳನ್ನು ಸೇವಿಸುವ ಅಭ್ಯಾಸವು ಹೆಚ್ಚುತ್ತಿರುವುದು ಮಾತ್ರ ಅಲ್ಲ. ಕಾಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಬಾರ್ ಎಂಬದನ್ನು [illegible] ಅನೇಕ ಸಲ [illegible]. ಅದರಲ್ಲಿರುವ ಯೂರೋಪಿಯನರ ಮತ್ತು ಭಾರತೀಯ ಸದಸ್ಯರ ಪ್ರಯೋಜನಾರ್ಥ ಅದನ್ನು ತೆರೆಯಲಾಯಿತು. ದಿವಾನ್ ಬಹದೂರ್ [illegible] ಅದನ್ನು ತೆರೆದು [illegible]. ಅದರ [illegible] ಈ ಸಂಸ್ಥೆಗೆ ಲಕ್ಷ್ಯವಿಲ್ಲದ ಕಾರಣ ಅವರ [illegible] ಸಾಧನೆಯು [illegible] ಮದ್ಯ ಸೇವನೆಯನ್ನು ಕಂಡು [illegible] ಮದ್ಯ ಅಭ್ಯಾಸದ ಬಗೆಗೆ [illegible] ಇದೆ [illegible] ಮದ್ಯಪಾನ ಇಷ್ಟೆಂದು [illegible]

[illegible]

ಸ್ವಭಾವತಃ, ಹಿಂದೂದೇಶದಲ್ಲಿನ ಯೂರೋಪಿಯನರೂ ಈ ಅಭ್ಯಾಸವನ್ನು ಬಿಡುತ್ತಿರುವಾಗ ನಾವು ಭಾರತೀಯರು ಈ ಅಭ್ಯಾಸಕ್ಕೆ ಬಲಿಬೀಳುತ್ತಿರುವುದು ಆಶ್ಚರ್ಯದ ಸಂಗತಿ—ಹೆಂಡವನ್ನು ಸೇವಿಸುವವರು ಮದ್ಯದ ಅಪಾಯಕರವನ್ನು ಜನರಿಗೆ ತಿಳಿಸಿ, ಸ್ಪಷ್ಟ ಮಾಡುವುದು ಅತ್ಯಗತ್ಯವಿದೆ. ಶಾಲೆಗಳೂ ಸರಕಾರವೂ ಸಾರ್ವಜನಿಕರೂ ಈ ಪ್ರಚಾರಕಾರ್ಯದಲ್ಲಿ ಭಾಗವಹಿಸಬೇಕಾದ್ದು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದ ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದ ಕಿಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಭಗರ್ಭ ಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಅಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ
ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು

ಒಂದು ತಿಂಗಳಲ್ಲಿ ಅಮೋಘವಾದ ಗುಣ, ಇದು ಜಾಡ್ಯವನ್ನು ಗುಣಪಡಿಸುವುದಲ್ಲದೆ ವ್ಯಾಧಿಯು ಬಾರದಂತೆ ತಡೆಮಾಡುವುದು.

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವೆ

ತಯಾರಿಸುವವರು: ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು
ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ
93, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಚಾಕುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕೋಲೆರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!
ಕ್ರಯ ಡಪ್ಪಿ 1ಕ್ಕೆ ರೂ 1—0—0

ಗುಹ್ಯರೋಗ ನಿವಾರಿಣೀ ತೈಲ
Anti-Venerael Oil
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ. ಕುಟುಂಬ ಪಾರಂಪರ್ಯದ ವ ತಗಲಿದ ರೋಗವು ಗುಣವಾಗುವುದು. ಸರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು.
8 ಔನ್ಸಿನ ಬಾಟ್ಲಿ 1ಕ್ಕೆ ರೂ 2—8—0.

ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು.

ಅರುಣೋದಯ.

ಇದರಲ್ಲಿ ಸುಪ್ರಸಿದ್ಧ ವಿದ್ವಾಂಸರ ವಿವಿಧ ವಿಷಯಗಳ ಮೇಲೆ ವಿಚಾರ ಪರಿಪ್ಕೃತ ಲೇಖಗಳು ಬರುವದಲ್ಲದೆ ದೇಶ ವಿದೇಶದ ಸುದ್ದಿ ಸಂಗತಿಗಳೂ ಬರುವುವು. ಅಲ್ಲದೆ ಮನೋಹರವಾದ ಕತೆ ಕವಿತೆಗಳೂ ಇರುವುವು. ಚಿತ್ರ ಪ್ರಪಂಚದೊಳಗಿನ ವಿಚಿತ್ರ ಸಂಗತಿಗಳೂ, ಶಾಸ್ತ್ರೀಯ ಶೋಧಗಳೂ ಪ್ರಕಟವಾಗುವುವು. ಇದು ಕರ್ನಾಟಕದಲ್ಲಿ ಇದರ ಪ್ರಚಾರವಿರುವುದರಿಂದ ಜಾಹೀರಾತುದಾರರಿಗೆ ಇದೊಂದು ಉತ್ತಮ ಸಾಧನ. ಅಲ್ಲಲ್ಲಿಗೆ ಏಜಂಟರು ಬೇಕು.

ವಾರ್ಷಿಕ ವರ್ಗಣಿ ರೂ. ೩—೮—೦.

ಮೆನೇಜರ್ - ಅರುಣೋದಯ. ಬೆಳಗಾಂವಿ

ಲಾಭಗಳು!

ಬಾಜಾಗಳು, ಗ್ರಾಮೋಫೋನುಗಳು, ಟೈಮ್ ಪೀಸುಗಳು ಗಡಿಯಾರಗಳು ಎಲೆಕ್ಟ್ರಿಕ್ ಟೈಪ್ ರೈಟರುಗಳು, ಸಂಗೀತ ಸಂಬಂಧ ವಸ್ತುಗಳು, ಬೀಜಗಳು, ಸು...ಗಳು, ಚಹಾ, ಸಂಗೀತ ಸಾಹಿತ್ಯ, ಕೆಮರಗಳು, ...ವಾದರಕ್ತಗಳು, ಹೇಟುಗಳು, ಸೂಸಿ ಪೆಟ್ಟಿಗೆಗಳೂ ಇವೆ. ಬೆಲೆ ಸುಲಭ ಮಾಲು ಉತ್ತಮ, ಕಮಿಶನ್ ಹೆಚ್ಚು ... ಲಾಗು ಧರ್ಮಾರ್ಥ ಇಂಗ್ಲೀಷಿನಲ್ಲಿ ಬರೆಯಿರಿ

General Trading Co,
(G) 185, Manicktolla St, Calcutta.
C P S

An Advertisement In

'Swadeshabhimani'

Means a sure fortune to you

Ask for Contract Rates.

The Swadeshabhimani office,
Car Street, Mangalore

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧ... ವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆ... ರಾಸಾಯನಿಕ ಔಷಧಿಗಳ ವಿಕ್ರಯದ ... ನ್ನಿಯ ಬಗ್ಗೆ ಯೋಗ್ಯರಾದ ಮತ್ತು ಹೆ... ಚಟುವಟಿಕೆಯ ಏಜಂಟರು ಬೇಕಾಗಿದೆ. ಕ... ಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು.

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂ...

ಚಿತ್ರಾಪುರ ಸಮಾಜ

ಋಗ್ವೇದೀ ಸಂಧ್ಯಾವಂದನೆ.

(ವೃಕ್ಷದರಿಗೆ_ಊರ್ಧ್ವಪುಂಡ್ರ_ಮುದ್ರಾಧಾರಣ ವಿ... ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎ...
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ,

ಬೆಲೆ ಆಣೆ 8.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡೆಕೊಳ್ಳು...ರಿಗೆ ಒಳ್ಳೆಯ ಡಿಸ್ಕೌಂಟು.)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳ...

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟ...
ಹೈಕೋರ್ಟ್ ಜಡ್ಜರುಗಳಿಂದಲೂ, ಕಾರದ ಮಂತ್ರಿಗಳಿಂದಲೂ, ಇತರ ಪ್ರಮ...ರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲಿ ಮಾಡಬೇಕು

ಹೊಸ ಕೆಟಲಾಗು ಧರ್ಮಾರ್ಥ
ವಿಳಾಸ -
The Scientific Gold Bangles Co, L...
Head Office -48, Byrag...
Str...
Post Box No 203, Mad...

ಉತ್ತಮ ತರದ ಮಡಚುವ ಮ... ಪೆಟ್ಟಿಗೆ ಕ್ಯಾಮರಾ.

ಹೊಸತಾಗಿ ಆರಂಭಿ... ದೊರೆಯುವ ಇತರ ಕ್ಯಾ...ಗಳಿಗಿಂತ ಬಾಳಿಕೆ ಬರುವಂ... ಮತ್ತು ಉತ್ತಮವಾದ ಫೋಟೋ ತೆಗೆಯುವುದನ್ನು... ಯುವವರಿಗೆ ಇದೊಂದು ಸುಸಂಧಿ. ಕ್ಯಾಮರಾ ... ೧ ಡಜನ್ ಪ್ರಿಂಟಿಂಗ್ ಪೇಪರ್, ೪ ಫಿಲ್ಮ... ಎ... ಜಲ್ಸ್ ಮತ್ತು ಚಿತ್ರಗಳನ್ನು ದೊಡ್ಡದು ಮಾ... ಅವಶ್ಯಕವಾದ ರಸಾಯನಿಕ ವಸ್ತುಗಳು, ಫೋಟೋ... ಯುವ ವಿಧಾನ ಶಿಕ್ಷಣಕೊಡುವ ಸಾಹಿತ್ಯ-ಇತ್ಯಾ... ವಾಗಿ ಕಳುಹಿಸಲಾಗುತ್ತದೆ ಬಲವಾದ ಲೆನ್ಸ್... ಸಾಮಾನ್ಯವಾದುದು ರೂ. ೩—೧೨—೦, ಉತ್ತ... ಮದು ೪—೧೨—೦ ಮಡಚುವ ಕ್ಯಾಮರಾ ರೂ... ಉತ್ತಮವಾದ್ದು ರೂ. ೭, ಸ್ಪೆಶಲ್ ರೂ. ೧೦, ... ಫಿಲ್ಮ ಬೇಕಾದರೆ ಡಜನ್ ೧ಕ್ಕೆ ೬ ಆಣೆ. ಎನ್ಲಾ... ಪ್ರಿಂಟಿನ ಸಂಪೂರ್ಣ ಸಾಮಗ್ರಿ ೧ ಶೀಸೆಗೆ ೪ ... ಫಿಕ್ಸಿಂಗ್ ಸಾಲ್ಟ್ ೧ ಡಬ್ಬಕ್ಕೆ ೨ ಆಣೆ, ಕ್ಯಾ... ಮತ್ತು ಪೋಸ್ಟೇಜು ಪ್ರತ್ಯೇಕ, ಮೂರು ಕ್ಯಾ... ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ...

ಭಾರತ ಯೂನಿಯನ್ ಟ್ರೇಡಿಂಗ್
ಪೋಸ್ಟ್ ಬಾಕ್ಸ್ ನಂಬ್ರ ೨೩೯೪ (ಎಸ್. ಎ.) ...

ಕಿರ್ಲೋಸ್ಕರ ಕೈ ಮತ್ತು ಪವರ್ ಪಂಪುಗಳು



ಬಾವಿಗಳಿಂದ ನೀರು ನೂಗೆಯುವುದಕ್ಕಾಗಿ,— ಎಷ್ಟು ಆಳದಿಂದಲೂ ನೀರನ್ನು ಎತ್ತಿ ಮೇಲೆ ಅಥವಾ ಬೇಕಾದಷ್ಟು ಎತ್ತರಕ್ಕೆ ತರುವುದಕ್ಕಾಗಿ

ಕೃಷಿಗಾಗಿ,
ಕಾರ್ಖಾನೆಗಳಿಗಾಗಿ,
ಮನೆಯ ಉಪಯೋಗಕ್ಕಾಗಿ,—

ಸಂತೃಪ್ತಿಕರ, ಬಾಳಿಕೆ ಬರುವ, ಸುಲಭಕರ ಉಪಯೋಗಕ್ಕಾಗಿ ಇದು ರಚಿಸಲ್ಪಟ್ಟಿದೆ.

ಇಡೀ ಹಿಂದೂಸ್ಥಾನದಲ್ಲಿ ನೂರಾರು ಜನರು ಉಪಯೋಗಿಸಿ ತೃಪ್ತಿಗೊಂಡರು

ವಿವರಕ್ಕೆ ಈ ಕೆಳಗಿನವರಿಗೆ ಬರೆಯಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ.

ಡಿಸ್ಟ್ರಿಬ್ಯೂಟರರು— ಪೆರ್ರಿ ಎಂಡ್ ಕೋ, ಲಿಮಿಟೆಡ್, ಮದ್ರಾಸು.

ಜಿಲ್ಲಾ ಬೋರ್ಡಿನ ಆರ್ಥಿಕ ಅವನತಿಯೂ.

ಈ ವಿಷಯವನ್ನು ಕುರಿತಾಗಿ ಸುಮಾರು ಒಂದು ತಿಂಗಳಿನ ಹಿಂದೆ 'ಸತ್ಯವಾದಿ'—ಎಂಬವರು ಅನಾಮಧೇಯರಾಗಿ ನಮ್ಮಲ್ಲಿಗೆ ದೀರ್ಘವಾದ ಒಂದು ಲೇಖನ ಕಳುಹಿಸಿದ್ದರು ಅದನ್ನು ಸಮೂಲವಾಗಿ ಇಲ್ಲಿ ನಮಗೆ ಕೊಡಲು ಅನುಕೂಲವಿಲ್ಲವಾದರೂ, ಅದು ಬೋರ್ಡಿನ ಮೇಲೂ, ಅದರ ಇತರ ಸದಸ್ಯರ ವ ನೌಕರರ ಮೇಲೂ ಹೊರಿಸಿರುವ ಆರೋಪಗಳನ್ನಿಷ್ಟೆ ಇಲ್ಲಿ ಕೊಡುತ್ತೇವೆ ಅವರ ಪತ್ರದ ಮೂಲಪ್ರತಿಯ ನಕಲನ್ನು ಶ್ರೀ। ಮೊಳಹಳ್ಳಿ ಶಿವರಾಯರವರು, ಜಿಲ್ಲಾಬೋರ್ಡು ಅಧ್ಯಕ್ಷರು, ಕಾರ್ಯದರ್ಶಿಯವರು—ಇವರಿಗೆ ಕಳುಹಿಸಿ, ಅವರ ಪ್ರತ್ಯುತ್ತರಗಳನ್ನು ಇದರ ಜತೆಗೆ ೯ನೇ ಪುಟದಲ್ಲಿ ಕೊಟ್ಟಿರುತ್ತೇವೆ

'ಸತ್ಯವಾದಿ ಯವರ ಪತ್ರದ ಸಾರಾಂಶ

ಬೋರ್ಡಿನ ಅವನತಿ ಮದ್ರಾಸ ಸರಕಾರದ ಧೋರಣೆಯಿಂದ ತುಸುಮಟ್ಟಿಗೆ, ಮತ್ತು ಬೋರ್ಡು ತನ್ನಿಂದಲೇ ಮಾಡಿಕೊಂಡಿತೆಂದು ತತ್ಸಂಬಂಧವಾಗಿ ಅವರಿಗೆ ಬಂದ ಸಂಶಯಗಳು ಹೀಗಿವೆ –

ಶ್ರೀ। ಬಾಳಿಗರು.

I. ೧ ಜಿಲ್ಲಾ ಬೋರ್ಡಿನ ಹೊಸ ವ್ಯಾಯಾಮ ಶಿಕ್ಷಕರಾದ ಬಿ ಎಂ ಬಾಳಿಗರು ಅದರ ಭತ್ತೆಯನ್ನು, ತಮ್ಮ ಸಂಚಾರಕ್ಕೆ ಪಡೆಯುತ್ತಿದ್ದಾರೇಕೆ? ೨ ಬೋರ್ಡು ವ್ಯಾಯಾಮ ಶಿಕ್ಷಣಕ್ಕೆ ಹೊಸತಾಗಿ ಇವರನ್ನು ಆಟ್ಟವುದೇಕೆ? ೩ ಇವರ ಲಾಠಿ ಲೆಜೀಮು ಶಿಕ್ಷಣದ ನೇಮುಕ್ಕೆ ಒಳಪಟ್ಟಿದೇ? ೪ ಉಳಿದ ವ್ಯಾಯಾಮ ಶಿಕ್ಷಕರಿಗಿಂತ ಇವರೊಂದೇನು ಹೆಚ್ಚು? ೫ ಲಾಠಿ ಲೆಜೀಮು ಸಿಲೆಬಸ್ಸಿನಲ್ಲಿದೆಯೇ? ೬ ಹಿಂದಿನ ವ್ಯಾಯಾಮವು ಸಾಲದೇ? ಅದೇ ಶ್ರೇಷ್ಠವಲ್ಲವೇ? ೭ ಅವರ ಈ ಎಲ್ಲಾ ಕೆಲಸಕ್ಕೆ (ಅಲ್ಲಿಯ ಪುತ್ತೂರಿನ) ಒಬ್ಬ ಬೋರ್ಡ ಮೆಂಬರರ ಸಹಾನುಭೂತಿಯೇ ಕಾರಣವಲ್ಲವೇ?

ಸಭೆಗಳು.

II ೧ ಹಿಂದೆ ಹೈಸ್ಕೂಲ ಉಪಾಧ್ಯಾಯರ ಮತ್ತು ಎ. ಪ್ರಿ ಉಪಾಧ್ಯಾಯ ಸಭೆಯೇಕೆ? ೨ ಅದಿಲ್ಲದೆ ಕೆಟ್ಟಿದ್ದೇನ? ೩ ಅದರಿಂದ ಮಾಸ್ತರರಿಗಿಷ್ಟು ಭತ್ತೆ, ಅಧ್ಯಕ್ಷರಿಗಿಷ್ಟು ಕಾಫಿ ಫಲಾಹಾರಕ್ಕೆ ದಾರಿಯಾಯಿತಲ್ಲ ೪ ಇತರ ಉಪಾಧ್ಯಾಯರಿಗೆ ಪೂರ್ಣ ಭತ್ತೆಯಿಲ್ಲದೆ, ಮುಖ್ಯ ಉಪಾಧ್ಯಾಯರಿಗೆ ಮಾತ್ರ ಆ ಭತ್ತೆಯೇಕೆ? ೫ ಅವರ ಮತ್ತು ಉಳಿದ ಮಾಸ್ತರರ ಸಂಬಳ ಕಡಿತದಲ್ಲೂ ಇದೇ ರೀತಿ ತಾರತಮ್ಯವೇಕೆ?

ವರ್ಗಾವರ್ಗಿ.

III ೧ ಇಷ್ಟೊಂದು ಹೈಸ್ಕೂಲು ಉಪಾಧ್ಯಾಯರ ವರ್ಗಾವರ್ಗಿ ಏಕೆ? ೨ ಉಪಾಧ್ಯಾಯರ ಸಂಬಳ ಕಡಿತದಿಂದ ಉಡುಪಿಯವರೊಬ್ಬರನ್ನು ಬೈಂದೂರಿಗೆ ವರ್ಗಾಯಿಸಬೇಕಾಯಿತು ಆಗ ಬೈಂದೂರಿನವರನ್ನು ಉಡುಪಿಗೆ ತಂದರೆ ಸಾಲದಿತ್ತೆ? ಹೀಗೆ ಮಾಡದೆ ಬೈಂದೂರಿನವರನ್ನು ಕುಂದಾಪುರಕ್ಕೆ, ಅಲ್ಲಿಯವರನ್ನು ಪುತ್ತೂರಿಗೆ, ಅಲ್ಲಿಯವರನ್ನು ಉಡುಪಿಗೆ ವರ್ಗಾಯಿಸಿದ್ದರಿಂದ ಎಷ್ಟು ಅನಾವಶ್ಯಕ ನಷ್ಟವಾಯಿತು? ೩ ಬೇಸಿಗೆ ರಜೆ ಮುಗಿಯಲು ಕುಂದಾಪುರಕ್ಕೆ ಹೋದವರು ಮನೆಗೆ, ಕುಂದಾಪುರದವರು ತಿರುಗಿ ಪುತ್ತೂರಿಗೂ ಹೋಗಬೇಡವೆ? ಈ ವರ್ಗಾವರ್ಗಿಯಿಂದ ಕುಂದಾಪುರ, ಉಡುಪಿಯಿಂದ ವರ್ಗಾಯಿಸಲ್ಪಟ್ಟವರ ಸುಖದುಃಖವನ್ನು ಯಾರಾದರೂ ಲಕ್ಷಿಸಿದರೆ! ೫. ಒಂದು ತಿಂಗಳಲ್ಲಿ ಮಾಡಿದ ವರ್ಗಾವರ್ಗಿ ಮರುತಿಂಗಳಿಗೆ ಕೆಲವು ಬಾರಿ, ಆರ್ಡರು ಹೊರಟ ತಕ್ಷಣವೇ ಅವು ರದ್ದಾಗುತ್ತಿರುವುದಲ್ಲ— ಇವು ಏಕೆ! ಇಂಥ ಅನಾವಶ್ಯಕ ವರ್ಗಾವರ್ಗಿಯಿಂದ ಯಾರಿಗೆ ಲಾಭ?

ನೇಮಕ

IV ೧ ಮೆಟ್ರಿಕು ಪಾಸಾದವರಿಂದ ನಿರ್ವಹಿಸಲಾದ ಹೆಡ್‌ಕ್ಲಾರ್ಕ ಕೆಲಸಕ್ಕೆ ಬಿ ಎ ಎಲ್ ಟಿ. ಯವರು ಬೇಕೆ? ೨ ಇದುವರೆಗೆ ಇವರಷ್ಟು ಕಲಿತ ಕ್ಲಾರ್ಕರಿಲ್ಲವೆಂದು ಇವರಿಗೆ ಸೆಕ್ರೆಟರಿ ಎಂಬ ಬಿರುದೆ? ೩ ತನಗಿಂತ ಅಧಿಕ ಸರ್ವಿಸಾದ ಎಲ್ ಟಿ ಯವರಿಗಿಂತ ಇವರಿಗೆ ಹೆಚ್ಚು ಸಂಬಳ ಸಲಿಸುತ್ತಿರುವುದು ಯಾವ ನ್ಯಾಯ? ೪ ಇವರ ಪ್ರಯಾಣದ ಭತ್ತೆಯ ಭಾರವೂ ಬೋರ್ಡಿಗೆ ಬೇಕೆ? ೫ ಇವರ ಹೆಚ್ಚಿನ ಅಧಿಕಾರದ ಜತೆಯಲ್ಲಿ, ಇವರ ಬಂಧುಗಳ ಇನ್ನೂರು ಮಾಡುವ ಭರವೂ ಸೇರಬೇಕೆ?

ಸರ್ಕಲಾರುಗಳು

V ೧ ಜಿಲ್ಲಾಬೋರ್ಡಿನ ಇಷ್ಟೊಂದು ಸರ್ಕಲಾರುಗಳಿಗೆ ಅರ್ಥವಿದೆಯೇ? ೨ ಬೋರ್ಡ್ ಆಫೀಸಿನಲ್ಲಿ—ಕ್ಲಾರ್ಕರು ಉಪಾಧ್ಯಾಯರು ಮೊದಲಾದ ಸರ್ವಿಸು, ವೇತನ ಇತ್ಯಾದಿ ವಿವರಗಳು ಇಲ್ಲವೇ? ಹೀಗಿದ್ದರೆ ಇಂಥವುಗಳನ್ನು ತಿಳಿಯಲು ತಿರುಗಿ ಶಾಲಾ ಆಫೀಸುಗಳನ್ನು ಕೇಳಿ, ಕಾಲಹರಣಮಾಡುವುದು ಯಾವ ನ್ಯಾಯ? ೩ ಜಿಲ್ಲಾಬೋರ್ಡು ಲೆಟರಹೆಡ್ಡುಗಳಿಗೆ ಅಷ್ಟು ಹಣ ಹಾಳುಮಾಡುವುದ ಏಕೆ? ೬ ಜಿ ಬೋರ್ಡ ನೌಕರ ಇನ್ಸೂರೆನ್ಸು ಕಂತುಗಳನ್ನು ಕಟ್ಟುವ ವಿಚಾರ ಬೋರ್ಡ ನೋಟೀಸು ದೊರೆತೂ, ಉದಾಸೀನತೆಯಿಂದ ಅದನ್ನು ಕಟ್ಟದೆ ಮೌನವಾಗಿ [illegible] ಪೋಲಿಸಿದಾರರು ಆ ಸಂಬಂಧವಾದ ದಂಡ ಹೊರ ಹಾಕುವುದು ನ್ಯಾಯವೆ? ೫ ಬೋರ್ಡು ಮೀಟಿಂಗುಗಳನ್ನು ಕರೆದು, ಮೀಟಿಂಗಿನ ಮುಂಚೆ ಅದನ್ನು ಕೆಂದ ಮ [illegible] ರದ್ದುಪಡಿಸಿ, ಮೆಂಬರರಿಗೆ, ಡಬ್ಬಲ್ ಭತ್ತೆಗೆ ಬೋರ್ಡು ಹಾನಿ ಮಾಡಿಕೊಟ್ಟದ್ದು ಉಂಟೆ?

ಶಾಲೆಗಳು

VI ೧ ಇಷ್ಟು ಹಾಯರ್ ಎಲಿಮೆಂಟರಿ ಶಾಲೆಗಳ ಏಕೆ? ೨ ಕೆಲವು ಶಾಲೆಗಳು ಕೆಲವು ಮೆಂಬರರ ತೃಪ್ತಿಗಾಗಿಯೇ ಆಗುವಂತಿದೆ ಪೂಜಾರಿಗೆ ಮೂಲ್ಕಿ ಹೈಸ್ಕೂಲು, ಶಮ್ನಡರಿಗೆ ಕಾಸರಗೋಡು ಶಾಲೆ, ಹುಡುಗಿಯರ ಹಾಯ ಶಾಲೆ, ಶ್ರೀಮತಿ ಪೂಂಜರಿಗೆ, ಶಂಕರ ನಾರಾಯಣದ ಶಾಲೆ, ಶ್ರೀ ಕೊಡಗಿಯವರಿಗಾಗಿ, ಮಲ್ಪೆ ಶಾಲೆ, ರಾ। ಆಚಾರ್ಯರಿಗೆ ಪುತ್ತೂರಲ್ಲಿ ಹಳ್ಳಿಗೊಂದರಂತೆ ಶ್ರೀ ಶಿವರಾಯರಿಗಾಗಿ ಶಾಲೆಗಳ ನಿರ್ಮಾಣವಾಗಿಲ್ಲವೆ? ೩ ಇವುಗಳಲ್ಲಿ ೬, ೭, ೮ ತರಗತಿಗಳಲ್ಲಿ ಸಾಕಷ್ಟು ಹಾಜರಿಯಾದರೂ ಇದೆಯೆ? ೪ ಎಲಿಮೆಂಟರಿ ಶಾಲೆಗಳಿಗೂ ಸೆಕೆಂಡರಿ ಗ್ರೇಡ್ ಮಾಸ್ತರರನ್ನು ಇರಿಸುವಷ್ಟು ದೊಡ್ಡಸಿಕೆ ನಮಗೆ ಇದೆಯೇ? ೫ ಪ್ರಾಥಮಿಕ ಶಿಕ್ಷಣಕ್ಕೆ ಬಿ ಎ ಯವರನ್ನು ಇರಿಸುವರೆ?

ಬೋರ್ಡಿನ ನೌಕರರಿಂದ.

VII ೧ ಹಾಳಾದ ಸೇತುವೆ, ಒಮ್ಮೆಗೆ ಗಟ್ಟಿ ಮಾಡದ ಸೇತುವೆಗಳು ಇಂಥವುಗಳಿಂದ ಬೋರ್ಡಿಗೆ ಎಷ್ಟು ನಷ್ಟವಾಗುತ್ತಲಿಲ್ಲ ೨ ಅಸಡ್ಡೆ, ಆಲಸ್ಯದಿಂದ—ಸಾಲುಮರ, ಸಂತೆ ಕಟ್ಟೆ ವುಗಳ ಏಲಂಗಳು ಎಷ್ಟು ಅಗ್ಗವಾಗಿ ಹೋಗಿ ಬೋರ್ಡಿನ ಆಯ ತಪ್ಪುತ್ತಲಿಲ್ಲ? ೩ ಪ್ರತಿ ತಾಲೂಕಿನ ೨—೩ ರೋಡು ಮೇಸ್ತ್ರಿಗಳೇಕೆ? ೪ ಮೇಸ್ತ್ರಿಗಳಿಲ್ಲದಾಗ ರಸ್ತೆಗಳು ಹೀಗೆ ನಿಕೃಷ್ಟವಾಗಿದ್ದುವೆ? ೫ ಪಂಚಾಯತ ಸ್ಥಾಪನೆಗೆ ಪಂಚಾಯತ ಆಫೀಸರರಿಲ್ಲವೆ? ೬ ಮೊಳಹಳ್ಳಿ ಶಿವರಾಯರು ಅದಕ್ಕಾಗಿ ಒಡುತ್ತಿರುವುದೇಕೆ? ೭ ಅವರಿಗೆ ಭತ್ತೆಯಿಂದ ಎಷ್ಟು ಹಣ ಹಾಳು? ೮ ಇದೂ ಸಾಲದೆ ಆ ಪಂಚಾಯತ ಆಫೀಸರರೇಕೆ? ೯ ಅಧ್ಯಕ್ಷರು ಸರ್ಕೀಟಿಗೆ ಹೊರಡುವಾಗ ಸೆಕ್ರೆಟರಿ, ಸದಸ್ಯರು ಇವರ ಪರಿವಾರವೇಕೆ? ೧೦ ಉಪಾಧ್ಯಾಯರ ಶಿಕ್ಷಣಶಿಬಿರಗಳ ಪರಿಷತ್ತುಗಳಿಂದ ಎಷ್ಟು ಹಣ ಹಾನಿಯಾಗುತ್ತಲಿಲ್ಲ? ೧೧ ಕಮಿಟಿ ಮೀಟಿಂಗುಗಳನ್ನು ಮುಂದರಿಸಿ ಎಷ್ಟು ಭತ್ತೆ ಹಣ ಹಾಳಾಗುತ್ತಲಿಲ್ಲ? ೧೨ ಶಾಲಾ—ಪುಸ್ತಕ, ಉಪಕರಣ, ಆಟದ ಒದವೆಗಳನ್ನು ಶಾಲೆಗಳು ಕಡಮೆ ಬೆಲೆಗೆ ತರಿಸುತ್ತಿರುವಾಗ ಬೋರ್ಡು ತಾನು ಸಪ್ಲೈ ಮಾಡುವ ಕಾರಣವೇನು? ೧೩ ಲೈಬ್ರೆರಿ, ಆಟಗಳಿಗೆ ಮಕ್ಕಳು ಹಣ ಕೊಡುತ್ತಿರಲೂ, ಅವರೇ ತಮಗೆ ಇಷ್ಟಕಂಡ ರೀತಿಯಲ್ಲಿ ಸಾಮಾನುಗಳನ್ನು ಅದಷ್ಟು ಕಡಮೆ ಬೆಲೆಗೆ ಪಡೆದರೆ ನಡುವೆ ಇತರರಿಗೆ ಕಮಿಷನು ಹೋಗದಿದ್ದೀತಲ್ಲ!

ಸತ್ಯವಾದಿ.

(ಇದು ಸತ್ಯವಾದಿಯ ಲೇಖನದಿಂದ ಹೊರಡುವ ಪ್ರಶ್ನೆಗಳೇ ಹೊರತು, ಅದರ ಮೂಲಪ್ರತಿಯಲ್ಲ. ಸಂ)

(೯ನೇ ಪುಟಕ್ಕೆ ಮುಂದರಿಸಲಾಗಿದೆ)

ಮೈಸೂರಿನ ಸಮಾಚಾರಗಳು.

ಬೆಂಗಳೂರು ಪತ್ರ.

ಬೆಂಗಳೂರು, ತಾ ೧೪—೫—೧೯೩೫

(ನಮ್ಮ ಸ್ವಂತ ಪ್ರತಿನಿಧಿಯಿಂದ)

ಮೈಸೂರಿನಲ್ಲಿ ಬಾಬುರಾಜೇಂದ್ರ ಪ್ರಸಾದರು

ಕಾಂಗ್ರೆಸ್ ಮಹಾಸಭೆಯ ಅಧ್ಯಕ್ಷರಾದ ಶ್ರೀಯುತ ಬಾಬುರಾಜೇಂದ್ರ ಪ್ರಸಾದರವರು ತಾ ೭ನೇ ದಿನ ಸಾಯಂಕಾಲ ಆಚಾರ್ಯ ಕೃಪಾಲನಿ ಮತ್ತು ಹುಕ್ಕೇರಿಕರ್ ಇವರೊಡನೆ ಬೆಂಗಳೂರಿಗೆ ದಯಮಾಡಿಸಿದರು ರೈಲ್ವೇ ಸ್ಟೇಷನಿನಲ್ಲಿ ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿಯವರೂ ಇನ್ನು ಕೆಲವು ಪ್ರಮುಖ ಮಹಾಜನರೂ ಅವರನ್ನು ಎದುರುಗೊಂಡು ಅವರಿಗೆ ಸುಖಾಗಮನವನ್ನು ಬಯಸಿದರು.

ಇಲ್ಲಿನ "ಯಂಗ್ ವರ್ಕರ್ಸ್" ಎಸೋಸಿಯೇಶನಿನ ಕೆಲವು ಯುವಕರ ಕಪ್ಪು ಬಾವುಟಗಳನ್ನು ಹಿಡಿದುಕೊಂಡು ಸ್ಟೇಷನಲ್ಲಿ ತಮ್ಮ ವಿರೋಧಭಾವವನ್ನು ಪ್ರದರ್ಶಿಸುತ್ತಿದ್ದರು ಶ್ರೀ। ಪ್ರಸಾದರವರಿಗೆ ಒಂದು ಬಿನ್ನವತ್ತಳೆಯನ್ನು ಸಮರ್ಪಿಸಬೇಕೆಂದು ಆ ಯುವಕ ಮಂಡಲಿಯವರು ಜಿಲ್ಲಾ ಕಾಂಗ್ರೆಸ್ ಸಮಿತಿಯವರಲ್ಲಿ ಅವಕಾಶ ಬೇಡಿದರೆಂದೂ, ಅವರು ಅವಕಾಶ ಕೊಡದಿರಲು ತಮ್ಮ ಅಸಮಾಧಾನವನ್ನು ಆ ರೀತಿ ಪ್ರದರ್ಶಿಸಿದರೆಂದೂ ತಿಳಿದು ಬಂದಿದೆ ಈ ಯುವಕರಿಗೆ ಪ್ರಸಾದರವರು ಏನು ಬುದ್ಧಿವಾದ ಹೇಳಿದರೋ ತಿಳಿಯಬಲ್ಲಿ

ಜಿಲ್ಲಾ ಕಾಂಗ್ರೆಸ್ ಸಮಿತಿಯವರ ಬಿನ್ನವತ್ತಳೆಗೆ ಉತ್ತರ ಕೊಡುತ್ತ ಶ್ರೀ ಪ್ರಸಾದರವರು ಹೀಗೆ ಹೇಳಿದರು ಬ್ರಿಟಿಷ್ ಇಂಡಿಯಕ್ಕೂ ನಿಮಗೂ ಭೇದವಿಲ್ಲ ನಮ್ಮೆಲ್ಲರ ಮತ, ಸಂಸ್ಕೃತಿ, ಭಾಷೆ ಇವೆಲ್ಲವೂ ಒಂದೇ ಹೀಗಿರುವಾಗ ನಾವು ಹೇಗೆ ಬೇರೆಯಾದೇವು, ಕಾಂಗ್ರೆಸ್ಸು ಸಂಸ್ಥಾನಗಳನ್ನು ಹೇಗೆ ತಾನೆ ಉಪೇಕ್ಷಿಸಲಾದೀತ? ದೇಶೀಯ ಸಂಸ್ಥಾನದ ಪ್ರಜೆಗಳಿಗೆ ಸಂಪೂರ್ಣ ಪ್ರಜಾ ಸ್ವಾತಂತ್ರ್ಯ ಕೊಡುವಂತೆ ಹಿಂದೆ ಕಾಂಗ್ರೆಸ್ಸು ಸಂಸ್ಥಾನಾಧೀಶ್ವರರನ್ನು ಬೇಡಿದೆ

ಆದರೆ ರಾಜಕೀಯ ವಿಚಾರಗಳಲಿ ಬ್ರಿಟಿಷ್ ಇಂಡಿಯಕ್ಕೂ ದೇಶೀಯ ಸಂಸ್ಥಾನಗಳಿಗೂ ವ್ಯತ್ಯಾಸವಿದೆ ದೇಶೀಯ ಸಂಸ್ಥಾನಗಳು ತಮ್ಮ ಹಿತವನ್ನು ತಾವೇ ಸ್ವತಃ ಸಾಧಿಸಿಕೊಳ್ಳಬೇಕು ಇದರಲ್ಲ ಹೊರಗಿನವರು ಎಷ್ಟು ಸಹಾಯ ಮಾಡಲಾದೀತ? ಇದ ದೇಶೀಯ ಸಂಸ್ಥಾನಗಳಿಗೆ ಮಾತ್ರ ಅನ್ವಯಿಸತಕ್ಕ ಮಾತಲ್ಲ ಬ್ರಿಟಿಷ್ ಇಂಡಿಯಾದ ಪ್ರಾಂತಗಳಿಗೂ ಅನ್ವಯಿಸುತ್ತದೆ ಆದರೂ, ಪ್ರತಿಫಲಾಪೇಕ್ಷೆಯಿಲ್ಲದೆ, ಒಬ್ಬರಿಗೊಬ್ಬರು ಸಹಾಯವನ್ನು ಮಾಡಬೇಕು. ಒಟ್ಟಿನಲ್ಲಿ ಇಷ್ಟು ಹೇಳಬಹುದು ಬ್ರಿಟಿಷ್ ಇಂಡಿಯ ದಲ್ಲಿ ನಮ್ಮ ಕಾರ್ಯ ಸಾಧಿಸಿತೆಂದರೆ, ದೇಶೀಯ ಸಂಸ್ಥಾನಗಳಲ್ಲಿ ಕೆಲಸ ಸುಲಭವಾಗುವುದು "

ಬಾಬುರಾಜೇಂದ್ರ ಪ್ರಸಾದರು ಬೆಂಗಳೂರಿಂದ ತಾ ೭ನೇ ದಿನ ಮಧ್ಯಾಹ್ನ ಮೈಸೂರಿಗೆ ಹೋಗುವಾಗ ಚೆನ್ನಪಟ್ಟಣದಲ್ಲಿ ಇಳಿದಿದ್ದರು ಅಲ್ಲಿ ಟೌನ್ ಹಾಲಿನಲ್ಲಿ ಶ್ರೀಮಾನ್ ಎ ವೆಂಕಟಪ್ಪ ಎಂ ಎಲ್ ಸಿ ಯವರು ಪ್ರಸಾದರವರಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಿ, ಹರಿಜನ ಹೊಸ್ಟೆಲಿನ ಕಟ್ಟಡದ ಅಸ್ತಿಭಾರವನ್ನು ಹಾಕುವಂತೆ ಪ್ರಾರ್ಥಿಸಿದರು ರಾಜೇಂದ್ರರು ಅಸ್ತಿಭಾರ ಶಿಲೆಯನ್ನು ಸ್ಥಾಪಿಸಿ, ಅದೇ ಸಾಯಂಕಾಲ ಮೈಸೂರಿಗೆ ಪ್ರಯಾಣ ಬೆಳಸಿದರು. ಅಲ್ಲಿ ರಂಗಾಚಾರ್ಲು ಮೆಮೋರಿಯಲ್ ಭವನದಲಿ ನಗರದ ಕಾಂಗ್ರೆಸ್ ಸಮಿತಿಯವರೂ ಮೈಸೂರ ಜಿಲ್ಲಾ ಕಾಂಗ್ರೆಸ್ ಸಮಿತಿಯವರೂ ಬಿನ್ನವತ್ತಳೆಗಳನ್ನು ಅರ್ಪಿಸಿದರು ರಾಜೇಂದ್ರ ಪ್ರಸಾದರವರು ಬಿನ್ನವತ್ತಳೆಗಳಿಗೆ ಹಿಂದೀಭಾಷೆಯಲ್ಲಿ ಉತ್ತರ ಕೊಡುತ್ತ ಹಿಂದೀ ಪ್ರಚಾರದ ವಿಷಯ ಒಂದಂಗ ಈ ರೀತಿ ಹೇಳಿದರು 'ಹಿಂದಿಯು ಇಂಡಿಯಾ ದೇಶದ ಸರ್ವಸಾಮಾನ್ಯ ಭಾಷೆಯಾಗಬೇಕು. ಕನ್ನಡಿಗರು ಎಲ್ಲೆಲ್ಲಿ ನೆಲಸಿದರೋ ಅಲ್ಲಿ ಕನ್ನಡ ಭಾಷೆಯ ಪ್ರಚಾರವನ್ನು ಅಭಿವೃದ್ಧಿ ಪಡಿಸಬೇಕು ಕನ್ನಡ ಭಾಷಾ ಪ್ರಚಾರಕ್ಕೆ ಹಿಂದಿ [illegible] ಅಡ್ಡಿಯಾಗಿ ಬಾರದು ಹಿಂದಿಯನ್ನು ಇಂಡಿಯಾ ದೇಶದ ಸರ್ವಸಾಮಾನ್ಯ ಭಾಷೆಯನ್ನಾಗಿ ಮಾಡುವ ದೃಷ್ಟಿಯಿಂದ ಮಾತ್ರ ಎಲ್ಲರೂ ಹಿಂದಿಯನ್ನು ಕಲಿಯಬೇಕಾಗಿದೆ [illegible] ರಾಜೇಂದ್ರ ಪ್ರಸಾದರು ತಾ [illegible] ನೇ [illegible] ಮೈಸೂರಿನಿಂದ ಹೊರಟು ಕೋಲಾರಕ್ಕೆ ಪ್ರಯಾಣ ಮಾಡಿದರು.

ಭುಲಾಭಾಯಿ ದೇಸಾಯಿಯವರ ಆಗಮನ

ಭುಲಾಭಾಯಿ ದೇಸಾಯಿ ಯವರು ತಾ ೭ನೇ ದಿನ ಬೆಂಗಳೂರಿಗೆ ದಯಮಾಡಿಸಿ ಅದೇ ದಿನ ಸಾಯಂಕಾಲ ಮೈಸೂರಿಗೆ ಪ್ರಯಾಣ ಮಾಡಿದರು [illegible] ಊಟಿಗೆ ಹೋಗಿ ಅಲ್ಲಿ [illegible] ಇರುವರೆಂದು ತಿಳಿದು ಬರುತ್ತದೆ

ಬಾಬುರಾಜೇಂದ್ರ ಪ್ರಸಾದರ ಚಿಕ್ಕಮಗಳೂರು ಸಂಚಾರ

ಮೇ ೩ ೬ನೇ ದಿನ ಅಖಿಲಭಾರತ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರು ತಮ್ಮ ಕಾರ್ಯದರ್ಶಿಗಳಾದ ಆಚಾರ್ಯ ಕೃಪಾಲನಿಯವರೊಡನೆ ಕಡೂರು ಜಿಲ್ಲಾ ಸಂಸ್ಥೆ ಅರ್ಪಿಸಿ ಮಾಡಿದ ಭಾಷಣದ ಸಾರಾಂಶ –

ನನಗೆ ತಾವೀಗ ಅರ್ಪಿಸಿದ ಮಾನಪತ್ರಗಳು ಮತ್ತು ಮರ್ಯಾದೆಗಳು ನನ್ನನ್ನು ಮಾನವ ಸಂಸ್ಥೆ ಅಧ್ಯಕ್ಷನನ್ನಾಗಿ ಮಾಡಿದ ವಿರೋಧ ಸಂಸ್ಥೆಗೆ ಹೊಂದಿತ ನನಗಿಲ್ಲ ಇಲ್ಲಿ ಇರುವಿಕೆಯು ಬಹಳ ಸ್ವಲ್ಪ ಕಾಲವಾದ್ದರಿಂದಲೂ, ನನಗೆ ಇನ್ನು ಅನೇಕ ಕಡೆಗಳ ಪ್ರವಾಸವಿರುವುದರಿಂದಲೂ, ತಾವು ಬಯಸುತ್ತಿರುವಂತೆ ನನಗೆ ತಾವುಗಳು ಪ್ರೋತ್ಸಾಹಿಸುತ್ತಾ ಮುಂದುವರಿದಿರುವ ವಾದೀ ಕೇಂದ್ರಕ್ಕೂ ಮತ್ತು ಇತರ ಕ್ಷೇತ್ರಗಳಿಗೂ ಭೇಟಿಯನ್ನೀಯಲು ಸಾಧ್ಯವಿಲ್ಲ ನನಗೆ ತಾವುಗಳು ಇತ್ತ ಆಹ್ವಾನವು ಸಂದರ್ಭೀಯ ವಾದುದು. ಆದರೆ ತಾವುಗಳು ಮುಖ್ಯವಾಗಿ ಈಗ ನಮ್ಮ ಮುಂದೆ ಇರುವ ಪರಿಸ್ಥಿಯಲ್ಲಿ ಕೈಕೊಳ್ಳಬೇಕಾಗಿದೆ. ಕಾರ್ಯಕ್ರಮಗಳೆನ್ನವೆಂದರೆ ಖಾದಿ, ಸ್ವದೇಶೀ, ಗ್ರಾಮೋದ್ಧಾರ, ಪುನರುಜ್ಜೀವನ ಮದ್ಯಪಾನನಿರೋಧ, ಅಸ್ಪೃಶ್ಯತಾನಿವಾರಣೆ ಮುಂತಾದುವುಗಳನ್ನು ಕೈಕೊಳ್ಳಲೇಬೇಕಾಗಿರುತ್ತದೆ.

LOOK SHARP! LOOK AHEAD!

Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S. S L C's and also for those who have not passed any University examination

Coaches students for the Specialised Banking Courses (C. A. I B & C. A. I I B) and also for Accountancy, Secretarial, and Insurance Courses (L A A, A C R A, F C R A, F I S A., A C I I, etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held

Ladies are also admitted

Enrol yourself NOW Classes are in full swing Expert tuition (Oral or Postal) by well qualified and experienced Lecturers

FEES VERY MODERATE

For further particulars apply to —

D R Murdeshwar,

Dip Econ, F R Econ, S (Lond.)

Principal

Ganapathy High School Street,

Mangalore.

WHITE LEPROSY

AND

LEUCODERMA

A few days application of this medicine cures WHITE LEPROSY and LEUCODERMA radically Get rid of this horrible disease by application of this medicine in spite of failure by hundreds of Hakims Doctors Kaviraja and advertisers Rs 500 rewarded if proved fallible Price Rs 2/

VAIDYARAJ AKHIL KISHORE RAM

P O KATRISARAI (GAYA)

ಶಿವರಾಮ ಕಾರಂತ ವಿರಚಿತ

ಗ್ನಾನ—

ಜ್ಞಾನದ ಮೇಲೆ ವ್ಯಂಗ ಟೀಕೆ

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ

ದಪ್ಪಗಿನ ಅಂಟಿಕ್ ಕಾಗದದಲ್ಲಿ ಮುದ್ರಣ

ಕ್ರೌನ್ ¼ ಆಕಾರದ 188 ಪುಟಗಳು

ಉತ್ತಮ ತರಗತಿಯ ಹಾಸ್ಯ

ಬೆಲೆ ರೂ. 1—4—0.

ಶಾರದಾ ಛಾಪಖಾನೆ,

ರಥಬೀದಿ ಮಂಗಳೂರು

ಇಲ್ಲಿಂದ ಪಡಕೊಳ್ಳಬಹುದು

ಕಣ್ಣಿನ ಹರಿ.

"ಐ—ಸೆನ್" ಎಂಬ ನೇತ್ರಭಾಸ್ಕರ—ಉ ಔಷಧವು ಕಣ್ಣುಹರಿ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ ಶಸ್ತ್ರಕ್ರಿಯೆಯು ಅವಶ್ಯವಿಲ್ಲ ಖಾತರಿ ಗುಣಲಾಭ, ಗುಣವಾಗದಿದ್ದರೆ ಹಣ ವಾಪಸ್ ಕ್ರಯ ರೂ 2

ಪತ್ರವ್ಯವಹಾರ ಇಂಗ್ಲೀಷಿನಲ್ಲಿ —

Hary yasram, Panchpota, Bengal

Swadeshabhimani

enjoys circulation in India and abroad

APPLY FOR ADVERTISEMENT RATES

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ ಆ
ರಾಶಿ ಅಕ್ಕಿ	4— 2	4— 5
ಮುಸ್ಕಿ	4— 4	4—10
ಗುಡ್ಡು	4— 0	4— 8
ಊರ ಅಪ್ಪಲ್ ಬೆಲ್ಲಗೆ	4— 8	4—12
ರಂಗೂನು ಬಿ. ಗೋ. ಗೆ	6—12	7— 4
ಎಲ್ಲೂರು ಬಿ. ಮು. ಗೆ	4— 4	4— 8
ಗೋಧಿ ಗೋಣಿ ಗೆ	0 — 0	0— 8
ತೊಗರಿ ಗೋಣಿ ಗೆ	8—12	9— 8
ಹುರುಳಿ ಗೋಣಿ ಗೆ	7— 6	8— 4
ಕಡಲೆ ಗೋಣಿ ಗೆ	8 — 0	10— 8
ತೊಗರಿಬೇಳೆ ಗೋಣಿ ಗೆ	10— 0	17 0
ಉದ್ದು ಗೋಣಿ ಗೆ	8— 0	8— 8
ಹೆಸರು ಗೋಣಿ ಗೆ	9— 0	9— 8
ಊರುಬೆಲ್ಲ ಖಂಡಿ ಗೆ	32— 8	35— 0
ಉಪ್ಪು ಗೋಣಿ ಗೆ	4—12	5— 0
ಕೊಬ್ರಿ ಖಂಡಿ ಗೆ	48 0	55— 0
ಕೊಬ್ರಿ ಹಿಂಡಿ ಖಂಡಿ ಗೆ	21 0	21— 8
ಎಳ್ಳಿಂಡಿ ಖಂಡಿ ಗೆ	37 8	40— 0
ಕೊಬ್ರಿ ಎಣ್ಣೆ ಮಣ ಗೆ	4— 4	7— 0
ಎಳ್ಳೆಣ್ಣೆ ಮಣ ಗೆ	5— 2	6— 0
ಕಡಲೆಎಣ್ಣೆ ಪಟ್ಟಿಗೆ ಗೆ	5— 7	5—7
ಮೋರಿಸ ಸಕ್ಕರೆ ಮು. ಗೆ	3—10	3—12
ಎಮಾಸು	5— 0	6— 4
ಸಾಸಿವೆ ಮುಡಿ ಗೆ	5 12	6— 0
[illegible] ಖ. ಗೆ	120 0	181 0
ಮೆಣಸು ಮುಡಿ ಗೆ	22— 0	27— 0
ಗೇರುಬೀಜ ಮು. ಗೆ	3— 8	4 — 0
[illegible] ಖಂಡಿ ಗೆ	40— 0	40— 8
[illegible] ಮು. ಗೆ	10— 0	10— 5
ತಾಮ್ರಪಾತ್ರಗಳು ಮು ಗೆ	11— 0	12— 0
ಚೀನಬೆಳ್ಳಿ ಸೇರು ಗೆ	14—12	15— 0
ಹಿತ್ತಾಳೆ ತಗಡು ಮು. ಗೆ	8— 12	9— 0
ಹವಸು ಗೆ	23— 4	23— 8
ಹುಣಸೆ ಹುಳಿ ಖಂಡಿ ಗೆ	20— 0	25— 8
ನೇಟಿವ್ ಕಾಫಿ ಖಂಡಿ ಗೆ	150— 0	165— 0
ಪ್ಲೇಟ್ ಕಾಫಿ ಖಂಡಿ ಗೆ	220— 0	235— 0
ಹಸಿ ಅಡಿಕೆ	95— 0	102— 0
ಕೊಸ ಅಡಿಕೆ	80— 0	90 — 0

"GUPTA MANTRA"

A reward of Rs 100

The objects, which cannot be achieved by spending lacs of rupees may be had by repeating this Mantra seven times There is no necessity of undergoing any hardship to make it effective It is effective without any preparation This is a 'WASHIKARAN MANTRA.' It will make you fortunate give you service and advancement and bring you profit in trade A reward of Rs 100, if proved fallible. Price including postage etc., Rs 2-7-0

Siddh Mantra Ashram,

KATRISARAI (GAYA)

Comfortable like an Aeroplane

Use our Swadeshi Mosquitonet for health, Comfort and sound sleep; as if you are in an Aeroplane Sample cutting free. More convenient if some advance sent with order

L.	B	H	Price	Best.
6 Ft	3½ Ft.	3½ Ft.	Rs 1/12	2/8
6 „	4 „	4 „	„ 2/4	3/-
6½ „	4½ „	4½ „	„ 2/8	3/8
7 „	5 „	5 „	3/2	4/10
7½ „	6 „	6 „	„ 4/4	5/12

G M Sharma, Post Box F 6706

Calcutta.

NEW ARRIVLAS.

Medicines.

Dr Schuessler's Twelve Tissue Remedies 5 gr bot. As 4/-

Homoeopathy Medicines 5 gr bot As 5/—

Sugar of Milk Dr Schwabe's original bot 1 lb Rs 2/

Haarlem Oil—a world renowned remedy As 8/ per phial

Dr Haele's New Curative Earth—Radium Cure Rs 4/-per lb

Dr Schwabe's other special remedies are always in stock

Please [illegible] us for your requirements

Kanarese Book a Family Guide to Biochemistry Re 1 -

„ Domestic Homoeopathy Rs 1 4/-

If you own these two Books you will be able to pick up treatment and administer Tissue & Homoeopathy Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes and prices from As 2 6

Delightful in [illegible] and charming in appearance Please try

Kirloskar Pumps

We are the Representatives for Kirloskar Brothers for their reliable Shallow well and Deep well Pumps Spring Cots Spring Couches etc, and stock —

Pipes and pipe fittings at cheap prices Coir Mats and Mattings

Steadler Pencils and Stationeries

We are the recognised agents for STEADLER'S all stationeries and shall be glad to serve you

Olympia Typwriter.

An up-to date Machine in Standard and portable sizes

For further particulars please write to —

Basel Mission Book & Tract Depository,

Mangalore, S K or Hubli S M

ರೇಶ್ಮೆಯಂತೆ, ನಯವಾದ ಮತ್ತು ಹೊಳಪಾದ ಕೇಶಧಾಮ

ದಿನಸಿಕ್ಕದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಷ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ

(ಮನೆಮುಗ್ಗ ಕರವಾದ ಸುಗಂಧವನ್ನುಳ್ಳದು)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ

ತಯಾರಿಸುವವರು— ಬೆಲೆ ಸೀಸೆ ಒಂದಕ್ಕೆ ರೂ 0—12—0.

ಆರ್ ಸಿ ಸೇನ್ ಎಂಡ್ ಕೋ.,

ಲಿಮಿಟೆಡ್, ಕಲ್ಕತ್ತ

ಏಜಂಟರು –

ಕುಂತಳ ಕೌಮುದಿ ತೈಲ,

ವೆನ್‌ಲೊಕ್ ಆಸ್ಪತ್ರೆ ಎದುರು, ಮಂಗಳೂರು.

ಮೆನೇಜರರ ನೋಟೀಸು

ಸ್ವದೇಶಾಭಿಮಾನಿಯ ಚಂದಾ ಅವಧಿ ಮುಗಿಯಿತೆಂದು ನೋಟೀಸು ಕೊಟ್ಟೊಡನೆ ಅಂತಹ ಚಂದಾದಾರರು ಮುಂದಿನ ವರ್ಷದ ಬಗ್ಗೆ ಚಂದಾ ಮೊಬಲಗನ್ನು ಕೂಡಲೇ ರವಾನಿಸಬೇಕು ಪತ್ರಿಕೆಯು ಮುಂದಕ್ಕೆ ಬೇಕೋ ಬೇಡವೋ ಎಂಬ ಬಗ್ಗೆ ನೋಟೀಸು ತಲಪಿದೊಡನೆ— ಅಗತ್ಯವಾಗಿ ತಿಳಿಸಬೇಕು

ಶಾಲಿವಾಹನ ಬ। ಶಕೆ ೧೮೫೭ನೆಯ ಭಾವ ಸಂವತ್ಸರದ ವೈಶಾಖ ಶು ೧೫ ಶನಿವಾರದಿಂದ ವೈಶಾಖ ಬ। ಶುಕ್ರವಾರದ ವರೆಗಿನ ಪಂಚಾಂಗ (೧೯೩೫ನೇಯ ವೃಷಭ ಮಾಸ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	[illegible]
18	ಶನಿ	೧೫	೨೬	ವಿಶಾಖಾ	೨೪	೪	*
19	ರವಿ	೧	೨೫	ಅನುರಾಧಾ	೨೫	೫	
20	ಸೋಮ	೨	೨೩	ಜ್ಯೇಷ್ಠಾ	೩೫	೬	
21	ಕುಜ	೩	೧೯	ಮೂಲಾ	೨೩	೭	
2.	ಬುಧ	೪	೧೫	ಪೂ. ಷಾಢ	೨೦	೮	
23	ಗುರು	೫	೧೦	ಉ. ಷಾಢ	೧೭	೯	
24	ಶುಕ್ರ	೬	೨೧	ಶ್ರವಣಾ	೧೩	೧೦	

ಪ್ರಪಂಚವ್ಯಾಪ್ತವಾದ ಆರ್ಥಿಕ ಸಂಕಷ್ಟಕ್ಕೆ ಕಾರಣಗಳು.

ಮಹಾಯುದ್ಧವು ಘಟಿಸಿ ಕೊನೆಗೊಂಡಂದಿನಿಂದ ಪ್ರಪಂಚವನ್ನು ಮಹಾ ಆರ್ಥಿಕ ದುರವಸ್ಥೆಯು ವ್ಯಾಪಿಸಿಕೊಂಡಿದೆ ಸಿರಿಸಂಪನ್ನರಾದ ಅಮೆರಿಕಾ ದೇಶಿಗರೇ ಕಂಗೆಟ್ಟು ಹೋಗಿರುವರೆಂದರೆ, ಹೊಟ್ಟೆಬಟ್ಟೆಗೆ ತತ್ತರಗೊಳ್ಳುವ ದುರದೃಷ್ಟಶಾಲಿಗಳಾದ ಭಾರತೀಯರ ದುರ್ಗತಿಯು ಪರಿಯು ವಿವರಿಸಲಶಕ್ಯವಾದುದು. ಅಂತಹ ಆರ್ಥಿಕ ರೋಗಕ್ಕೆ ಕಾರಣವೇನು? ಅದರ ಪರಿಣಾಮವೇನು—ಅದನ್ನು ಹೋಗಲಾಡಿಸುವ ವ್ಯವಸ್ಥೆ ಹೇಗೆಂದು ಈ ಲೇಖನದಲ್ಲಿ ಪ್ರತಿಪಾದಿಸಲ್ಪಟ್ಟಿದೆ ಪ್ರೊ| ಎಂ ಸೆನ್ ಎಂ ಎ. ಯವರು ಕೊಟ್ಟಿರುವ ಹಲವು ಸೂಚನೆಗಳು ಈ ಪ್ರತಿಪಾದನೆಗೆ ಆಧಾರಭೂತವಾಗಿವೆ.

ಆರ್ಥಿಕ ಸಂಕಷ್ಟ—೧೯೨೯ರಿಂದ ೧೯೩೨ರ ವರೆಗಿನ ಸ್ಥಿತಿ—ಯುದ್ಧದ ಪರಿಣಾಮ—೧೯೧೮ರಲ್ಲಿನ ಸ್ಥಿತಿ—ಗೋಲ್ಡ್ ಸ್ಟೇಂಡಾರ್ಡ್ ಎಂದರೇನು-ಅದನ್ನು ಇಂಗ್ಲಾಂಡು ಬಿಟ್ಟ ಫಲ-ಯುದ್ಧದ ಸಾಲಗಳು-ನಿವಾರಣೋಪಾಯಗಳು.

೧೯೧೪ರಲ್ಲಿ ಮಹಾಯುದ್ಧವು ಪ್ರಾರಂಭವಾಗುವ ಮೊದಲು ಯುರೋಪು, ಅಮೆರಿಕಾಗಳೂ ಏಶಿಯಾ ಖಂಡವೂ ತೃಪ್ತಿಕರ ಜೀವನವನ್ನು ನಡೆಸುತ್ತಿದ್ದುವು ಆಗಿನ ಜೀವನದ ಅಂತಸ್ತು ಎಲ್ಲಾ ದೇಶಗಳಲ್ಲಿಯೂ ಉನ್ನತವಾಗಿದ್ದಿತು. ಅಂತಹ ಶಾಂತಿಯ ಪರಮಾವಧಿಯಲ್ಲಿ ಮಹಾಯುದ್ಧವು ತಲೆದೋರಿತು. ಯುದ್ಧವು ಪ್ರಾರಂಭವಾದೊಡನೆ ಸಾಹಿತ್ಯ ಸಾಮಗ್ರಿಗಳ ಬೆಲೆಗಳು ಹೆಚ್ಚಿದುವು ಭಂಡವಾಳಗಾರರು ಹಣವನ್ನು ಶೇಖರಿಸಲು ಶಕ್ತರಾದರು ಕೈಗಾರಿಕೆಗಳಲ್ಲೂ ವ್ಯಾಪಾರಗಳಲ್ಲೂ ನೂತನ ಸ್ಫೂರ್ತಿಯು ತಲೆದೋರಿತು ಆದರೆ ಈ ಶುಭೋದಯ ಕಾಲವು ಹೆಚ್ಚು ಸಮಯ ನಿಲ್ಲಲಿಲ್ಲ ನಾಲ್ಕು ವರ್ಷಗಳಲ್ಲಿ ಜಗತ್ತು ಇಳಿಮುಖವಾಗಲು ತೊಡಗಿತು ಎಲ್ಲೆಲ್ಲೂ ದುಡ್ಡಿನಡಚಣೆಯು ತಲೆಯೆತ್ತಿತು. ಯುದ್ಧದ ನಾಲ್ಕು ವರ್ಷಗಳು ಮಹಾ ಅನಾಹತವನ್ನೇ ಉಂಟುಮಾಡಿಬಿಟ್ಟುವು

೧೯೨೨ರಿಂದ ಪ್ರಪಂಚವು ಮೆಲ್ಲಗೆ ಚೇತರಿಸಿಕೊಳ್ಳಲಾರಂಭಿಸಿತು ಯುದ್ಧದಲ್ಲಿ ಹತಾಶವಾಗಿ ಹೋಗಿದ್ದ ಜರ್ಮನಿಯು ಸಶಕ್ತವಾಗುತ್ತಾ ಬಂತೆಂದು ಹೇಳುವಾಗ ಅದರೊಡನೆ ಇತರ ರಾಷ್ಟ್ರಗಳೂ ಬಲಿಷ್ಠವಾದುವೆಂದು ಹೇಳುವುದನಗತ್ಯ ಯುದ್ಧವು ಮುಗಿದ ಹತ್ತು ವರ್ಷಗಳ ನಂತರ, ಜಗತ್ತಿನ ಸ್ಥಿತಿಯು ಸಿಂಹಾವಲೋಕನವನ್ನು ಮಾಡಿದಾಗ, ಯುರೋಪುಖಂಡದಲ್ಲಿ ೧೯೧೪ರ ಸುಸ್ಥಿತಿಯು ಸಂಪ್ರಾಪ್ತವಾಗಿದ್ದುದು ಕಂಡುಬಂತು ಘೋರ-ಯುದ್ಧವು ನಡೆದುಹೋದ ಇಷ್ಟು ಅಲ್ಪ ಸಮಯದಲ್ಲಿ ಇಂತಹ ಪುನರ್ಚೇತನವು ಸಂಘಟಿಸಿ ಬಂದೀತೆಂದು ಯಾರೂ ಭಾವಿಸಿದ್ದಿಲ್ಲ ಹತ್ತು ವರ್ಷಗಳು ಕಳೆಯುತ್ತಲೇ ಆರ್ಥಿಕ ದುರವಸ್ಥೆಯು ಪುನರ್ಜನ್ಮವನ್ನು ಹೊಂದಿತು ೧೯೨೯ರಿಂದ ಜಗತ್ತಿನ ವ್ಯಾಪಾರ ವ್ಯವಹಾರಗಳೆಲ್ಲ ಕಂಡಕಂಡಂತೆ ಅಧೋಮುಖವಾದುವು ಮಹಾ ಮಹಾ ಅರ್ಥಶಾಸ್ತ್ರಜ್ಞರನ್ನೂ ದಿಗಿಲುಗೊಳಿಸಿ ಈ ಮುಗ್ಗಟ್ಟು ಮುಂದರಿಯಿತು ಇದೇ "ಪ್ರಪಂಚದ ಆರ್ಥಿಕ ದುಃಸ್ಥಿತಿ" ಎಂಬ ನಾಮಧೇಯವನ್ನು ಹೊಂದಿತು ಇದು ಪ್ರಾಪಂಚಿಕ ದುಃಸ್ಥಿತಿ ಏಕೆ? ಇದರ ಹಾವಳಿಯು ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿನ ವಸ್ತುಬಡವೆ, ಬೆಳೆ, ಕೈಗಾರಿಕೆ, ಉದ್ಯೋಗ, ಅಂತರಾಷ್ಟ್ರೀಯ ವಾಣಿಜ್ಯ ಸಂಬಂಧ,ಮತ್ತು ದಾರಿದ್ರ್ಯದ ಮೇಲೆ ಪರಿಣಾಮಕಾರಿಯಾದುದರಿಂದ,೨ ಈ ಮುಗ್ಗಟ್ಟಿಗೆ ಪ್ರಾಪಂಚಿಕ ಕಾರಣವಿದೆ,೩ ಈ ರೋಗಕ್ಕೆ ರಾಷ್ಟ್ರೀಯ ಚಿಕಿತ್ಸೆಯು ಸಾಕಾಗಲಾರದು ಇದಕ್ಕೆ ಅಂತರಾಷ್ಟ್ರೀಯ ಚಿಕಿತ್ಸೆಯೇ ಅಗತ್ಯ ೪ ಈ ರೋಗಕ್ಕೆ ಕಾರಣವಾಗಿರುವುದು ಆರ್ಥಿಕ ಸಮಸ್ಯೆಯೊಂದಲ್ಲದೆ ಬೇರಾವ ರಾಜಕೀಯ ಸಾಮಾಜಿಕ ವಿಷಯಗಳಲ್ಲ—ಆದುದರಿಂದ ಈ ದುಃಸ್ಥಿತಿಗೆ ಜಗದ್ವ್ಯಾಪಕ ಸಂಕಷ್ಟವೆಂದೇ ಹೆಸರು ಕೊಡಬೇಕಾಗಿದೆ

ಸರಕುಗಳ ಬೆಲೆಯು ಥಟ್ಟನೆ ಇಳಿಯಿತು ಬೆಳೆ, ವ್ಯುತ್ಪತ್ತಿ, ಮೊದಲಾದ ಎಲ್ಲಾ ಸಾಮಗ್ರಿಗಳಿಗೆ ತಕ್ಕ ಕ್ರಯವು ಸಿಗಲಾರದಾಯಿತು ಬೆಲೆಯು ಬಿದ್ದೊಡನೆ ಅದನ್ನು ಅಧರಿಸಿಕೊಂಡಿರುವ ದೇಶಗಳೆಲ್ಲವೂ ನಷ್ಟವನ್ನನುಭವಿಸಬೇಕಾಯಿತು ಸಂಬಳ, ಕೂಲಿ, ಸಂಪಾದನೆಗಳು ಕಡಿಮೆಯಾಗಿ ಮಜೂರರ ಸ್ಥಿತಿಯು ಕೆಟ್ಟುಹೋಯಿತು ಮಿಲಿಯಗಟ್ಟಳೆ ಮಜೂರರು ಬಡವರಾದರು ಕೃಷಿಯ ಬೆಲೆಯು ಪರ್ಣನಾತೀತವಾಗಿ ಬಿದ್ದುಬಿಟ್ಟುದರಿಂದಾಗಿ ಕೃಷಿ ಪ್ರಧಾನವಾದ ಹಿಂದೂದೇಶವು ಬಹು ಆಘಾತಕ್ಕೊಳಗಾಯಿತು ಎಷ್ಟೋ ವ್ಯಾಪಾರಿಗಳು ದಿವಾಳಿಯಾದರು ಉದ್ಯೋಗಿಗಳೂ ಮಜೂರರೂ ತಮ್ಮ ಸಂಬಳದಲ್ಲಿ ಕಡಿತವನ್ನು ಅನುಭವಿಸಬೇಕಾಯಿತು ಇಂಟರ್‌ನೇಶನಲ್ ಲೇಬರ್ ಅಫೀಸಿನ ಡೈರೆಕ್ಟರರು ೧೯೩೨ರ ಪಂಚಪತ್ರಿನಲ್ಲಿ ತಿಳಿಸಿದಂತೆ ಜಗತ್ತಿನಲ್ಲಿ-ಒಟ್ಟು ಇಪ್ಪತ್ತರಿಂದ ಮೂವತ್ತು ಮಿಲಿಯ ಮಜೂರಿಗಾರರು ನಿರುದ್ಯೋಗಿಗಳಾದರು ಧನರಾಷ್ಟ್ರಗಳೆಂಬುವುಗಳಲ್ಲೇ ಒಟ್ಟು ೬೦ರಿಂದ ೭೦ ಮಿಲಿಯ ಮಜೂರಿಗಾರರು ದಾರಿದ್ರ್ಯಕ್ಕೊಳಗಾಗಿ ಬದುಕಿನ ಸಾಮರ್ಥ್ಯವನ್ನೇ ಕಳೆದುಕೊಂಡರು ೧೯೩೦ರಲ್ಲಿ ಶೇಕಡಾ ೧೯ರಷ್ಟು ವ್ಯಾಪಾರವು ಲೋಕದಲ್ಲಿ ಕಡಮೆಯಾಯಿತು ಮತ್ತೆರಡು ವರ್ಷಗಳಲ್ಲಿ ಇದು ಶೇಕಡಾ ೨೩ಕ್ಕೆ ಬಂದು ನಿಂತಿತು. ಜಗತ್ತಿನ ಸಮಷ್ಟಿಯ ಶಕ್ತಿಯು ಕುಂದುತ್ತಾ ಬಂದಹಾಗೆ ಅವರಲ್ಲಿ ಸರಕುಗಳ ತಯಾರಿಸುವಿಕೆಯ ಉತ್ಸಾಹವೂ ಅವುಗಳನ್ನು ಪಡೆಯುವ ಶಕ್ತಿಯೂ ಇಳಿದುಹೋಯಿತು. ಕೈಗಾರಿಕೆಗಳು ಕುಸಿದುಬಿದ್ದುವು ಲೋಕವೇ ನಿರಾಶಾಸ್ಥಿತಿಗೊಳಗಾಗಿ ಪರಿತಪಿಸುವ ಕಾಲವು ಸನ್ನಿಹಿತವಾಯಿತು ಸರಕುಗಳ ಕ್ರಯವು ತಗ್ಗುವಾಗ ದುಡ್ಡಿನ ಬೆಲೆ ಏರಿತು. ವ್ಯಾಪಾರಸ್ಥರ ಸಾಲವು ಹೆಚ್ಚಿತು ಸಾಲದಲ್ಲೇ ನಿರತರಾಗಿರುವ ರಾಷ್ಟ್ರಗಳು ಶೋಚನೀಯಾವಸ್ಥೆಗೊಳಗಾದವು ಸಾಲಗಳನ್ನು ತೀರಿಸುವುದಕ್ಕಾಗಿ ಬಡರಾಷ್ಟ್ರಗಳೆಲ್ಲ ತಮ್ಮ ಸರಕುಗಳನ್ನು ಸಿಕ್ಕಿದ ಅಲ್ಪ ಕ್ರಯಕ್ಕೆ ವಿಕ್ರಯಿಸಬೇಕಾಯಿತು ಪಡೆಯುವ ಶಕ್ತಿಯುಳ್ಳವರ ಆದಷ್ಟು ಕಡಿಮೆ ದರದಲ್ಲಿ ಕಡಮೆ ಸರಕನ್ನು ಪಡೆದರು ಅಂತರ್ರಾಷ್ಟ್ರೀಯವಾಗಿದ್ದ ಭಂಗಾರದ ಬೆಲೆಯ ನಿರ್ಣಯವನ್ನು ಅರ್ಧ ಪ್ರಪಂಚವೇ ತ್ಯಜಿಸಿಬಿಟ್ಟಿತು ಬ್ರಿಟನ್, ಬ್ರಿಟಿಷಸಾಮ್ರಾಜ್ಯ, ಸಂಯುಕ್ತ ಅಮೇರಿಕಗಳೂ ಈ ಬೆಲೆಯ ನಿರ್ಣಯವನ್ನು ಅಲ್ಲಗಳೆದುವು ಸರಕಾರಗಳು ಕಂಗೆಟ್ಟುವು ಅವುಗಳ ಲೆಕ್ಕಪಟ್ಟಿಗಳಲ್ಲೂ ನಷ್ಟವೇ ತಲೆದೋರಿತು ಅವುಗಳು ತಮ್ಮ ಆರ್ಥಿಕ ಸ್ಥಿತಿಯನ್ನು ಸಮದೂಗುವ ಯತ್ನದಲ್ಲಿ 'ತಮ್ಮನ್ನು ಹೊಂದಿರುವವರನ್ನು ಕಷ್ಟಕ್ಕೆ ಗುರಿಮಾಡಿದುವು ತಮ್ಮನ್ನು ತಾವು ಸಂರಕ್ಷಿಸಿಕೊಳ್ಳುವುದೇ ಎಲ್ಲರ ಕರ್ತವ್ಯವಾಗಿ ನಿಂತಿತು

೧೯೨೯ರ ಒಕ್ಟೋಬರ ತಿಂಗಳಲ್ಲಿ ನ್ಯೂಯೊರ್ಕ್ ಸ್ಟೋಕ್ ಎಕ್ಸ್‌ಚೇಂಜ್ ಬಿದ್ದುಬಿಟ್ಟಿತು ಅದರೊಡನೆ ಸರಕುಗಳ ಬೆಲೆಗಳು ಇಳಿದುವು ಕಚ್ಚಾಮಾಲುಗಳಿಗೆ ಕ್ರಯವೇ ಸಿಗದಂತಾಯಿತು ೧೯೩೦-೩೧ರ ದುಡ್ಡಿನಡಚಣೆಗೆ ಕೃಷಿ ಮತ್ತು ಕಚ್ಚಾಮಾಲುಗಳ ಉತ್ಪತ್ತಿಯುಲಪ್ಪಾದ ತಾರತಮ್ಯವೇ ಕಾರಣವಾಯಿತು. ಗೋಧಿ, ಕಾಫಿ, ಒಳ್ಳೆಮೆಣಸು, ಗೇರುಬೀಜ, ಅಕ್ಕಿ ಮೊದಲಾದ ಧಾನ್ಯಗಳ ಬೆಲೆಯೂ ಅರ್ಧಕ್ಕರ್ಧ ಇಳಿಯಿತು ಅಲ್ಲದೆ, ಮುಖ್ಯವಾಗಿ ಸಂಯುಕ್ತ ಅಮೆರಿಕಾದಿಂದ ಇತರ ಯುರೋಪಿಯ ದೇಶಗಳಿಗೆ ಸಾಲದ ರೂಪದಲ್ಲಿ ಬರುತ್ತಿದ್ದ ಭಂಡವಾಳವು ಬರಲಿಲ್ಲ ಸಾಲಗಳನ್ನು ಪಡೆಯುತ್ತಾ ತಮ್ಮ ಸ್ಥಿತಿಯನ್ನು ಸುಧಾರಿಸುತ್ತಿದ್ದ ದೇಶಗಳು ಇದರಿಂದಾಗಿ ಕಷ್ಟಕ್ಕೊಳಗಾದುವು. ೧೯೨೮ರಲ್ಲಿ ಈ ಕಷ್ಟವೇ ಪ್ರಧಾನವಾಗಿ ನಿಂತಿತು ತಮ್ಮ ಆಯವ್ಯಯಗಳನ್ನು ಸರಿದೂಗುವುದರಲ್ಲಿ ಅವರು ಕಂಗಾಲಾದರು ಸಾಲಗಾರ ದೇಶಗಳ ಕೃಷಿಗೆ ಬೆಲೆಯಿಲ್ಲದೆ, ಅವುಗಳ ಆಯವು ಕುಂದಿತು ಪರಿಣಾಮವಾಗಿ ಸಾಲವು ಹೆಚ್ಚಿತು ತಮ್ಮ ಸಾಲಗಳನ್ನು ತೀರಿಸುವ ಸಾಹಸದಲ್ಲಿ ಅವುಗಳು ಸ್ವದೇಶಗಳಲ್ಲಿ ಕಂದಾಯಗಳನ್ನು ಹೆಚ್ಚಿಸಿದುವು ಪರದೇಶಗಳೊಡನೆ ವಿನಿಮಯ ಮಾಡಿಕೊಳ್ಳುವುದಕ್ಕೆ ತೊಡಗಿದುವು ಈ ವರ್ತನೆಯಿಂದ ಆ ರಾಷ್ಟ್ರಗಳ ಉತ್ಪತ್ತಿಯ ಬೆಲೆಗಳು ಮತ್ತೂ ಇಳಿದುವು ಯಾವ ದೇಶಗಳು ತಮ್ಮ ಸರಕುಗಳನ್ನು ವಿದೇಶಗಳಿಗೆ ರಫ್ತುಮಾಡುವುದರಲ್ಲಿ ಆಧರಿಸಿಕೊಂಡಿದ್ದುವೋ ಅಂತಹ ರಾಷ್ಟ್ರಗಳು ತೀರ ದಾರಿದ್ರ್ಯಕ್ಕೊಳಗಾದುವು

೧೯೩೦ರ ಮಧ್ಯೆ ಇದ್ದಂತೆ ೧೯೩೧ರ ಮಧ್ಯೆಯೂ ಹಲವು ದೇಶಗಳ ಸ್ಥಿತಿಗಳು ಅಲ್ಪಸ್ವಲ್ಪವಾಗಿ ಸುಧಾರಿತವಾದುವು ಜರ್ಮನಿಗೆ ಸ್ವಲ್ಪ ಭಂಡವಾಳವು ಹೊರಗಿನಿಂದ ಬಂದಿತ ದುಡ್ಡು ಸ್ವಲ್ಪ ಅಗ್ಗವಾಯಿತು

೧೯೩೧ರಲ್ಲಿನ ಮೇ ತಿಂಗಳಲ್ಲಿ ದಡ್ಡಿನ ಮಾರ್ಕೆಟ ಕಷ್ಟಕ್ಕೊಳಗಾಗಿರಲಿಲ್ಲ ಆರ್ಥಿಕ ಮುಗ್ಗಟ್ಟಿನಿಂದ ಪೇಟೆ ಒರಪಷ್ಟು ಧೈರ್ಯವು ಎಲ್ಲರಿಗೂ ಕಂಡ ಬಂತ ಆಷ್ಟರಲ್ಲಿ ಒಸ್ಟ್ರಿಯಾದಲ್ಲಿನ ಕ್ರೆಡಿಟನ್ ಸ್ಟಾಲ್ಟ್ ಎಂಬ ಬ್ಯಾಂಕು ಅಪಾರವಾದ ನಷ್ಟಕ್ಕೊಳಗಾಯಿತು ವಿಯೆನ್ನಾದಿಂದ ಹರಿದ ಈ ವಾರ್ತೆಯು ಜಗತ್ತಿನ ದುಡ್ಡಿನ ಲೋಕವನ್ನೇ ದಿಗಿಲುಗೊಳಿಸಿತ ಹೀಗೊಡನೆ ಒಸ್ಟ್ರಿಯಾದ ಇತರ ಬ್ಯಾಂಕುಗಳೂ, ಪರದೇಶಗಳ ಬ್ಯಾಂಕುಗಳೂ ಅವುಗಳೊಡನೆ ಒಸ್ಟ್ರಿಯಾದ ಕೈಗಾರಿಕೆಯ ಸ್ತಂಭವೇ ಬಿದ್ದುಬಿಟ್ಟು ಪಶ್ಚಿಮ ಯುರೋಪಿನ ರಾಷ್ಟ್ರಗಳ ಹುಡಿಯಾಗುವುವೆಂದು ಕಲ್ಪಿಸಿಕೊಳ್ಳಲಾಯಿತ

ಬ್ರಿಟಿಷ ಬೇಂಕರರು ಕೆಲವರು ಜರ್ಮನಿಗೂ, ಕೇಂದ್ರ ಯುರೋಪಿಗೂ ಸಣ್ಣ ಸಣ್ಣ ವಾಯಿದೆಗಳ ಮೇಲೆ ಸಾಲಗಳನ್ನು ಕೊಟ್ಟಿದ್ದರು ಆದರೆ ಈ ದೇಶಗಳಿಗೆ ಅನ್ಯದೇಶಗಳ ಸಾಲದ ಹೊರೆಯು ಭಾರವಿದ್ದುದರಿಂದ ಈ ಅಲ್ಪಾವಧಿಯ ಸಾಲಗಳನ್ನು ತೀರಿಸಲು ಸಾಧ್ಯವಾಗಲಿಲ್ಲ ಜುಲಾಯಿ ೧೩ರಲ್ಲಿ ಮೆಕ್‌ಮಿಲನ್ ಕಮಿಟಿಯು ತನ್ನ ರಿಪೋರ್ಟೊಂದನ್ನು ಪ್ರಕಟಗೊಳಿಸಿ ಲಂಡನಿನ ಮೇಲಿರುವ ಅಲ್ಪಾವಧಿ ಸಾಲದ ಹೊರೆಯ ಅಪಾಯವನ್ನು ಸೂಚಿಸಿತು ಜುಲಾಯಿ ೩೧ರಲ್ಲಿ ಮೇ ಕಮಿಟಿಯು ಒಂದು ವರದಿಯನ್ನು ಪ್ರಕಟಿಸಿ ೧೨೦ ಮಿಲಿಯ ಪವನುಗಳ ವ್ಯತ್ಯಾಸವನ್ನು ತೋರಿಸಿತು ಅಗೋಸ್ತು ಆರಂಭದಲ್ಲಿ ಬೇಂಕ್ ಒಫ್ ಇಂಗ್ಲಾಂಡು, ಫ್ರಾನ್ಸ್ ಮತ್ತು ಅಮೆರಿಕಾ ಬೇಂಕುಗಳಿಂದ ೫೦ ಮಿಲಿಯ ಪೌಂಡುಗಳ ಸಾಲವನ್ನು ಪಡೆಯಿತು. ಅಗೋಸ್ತು ೨೮ರಲ್ಲಿ ಪುನಃ ೮೦ ಮಿಲಿಯ ಪವನುಗಳನ್ನು ಟ್ರಿಜರಿಯಿಂದ ಪಡೆಯಿತು

ಆದರೆ ಜನರು ತಮ್ಮ ದ್ರವ್ಯವನ್ನು ಬೇಂಕಿನಿಂದ ಹಿಂತೆಗೆಯುತ್ತಾ ಬಂದರು ಸಪ್ಟಂಬರ ೨೦ರ ವರೆಗೆ ಇದೇ ರೀತಿ ನಡೆಯಿತು ಸರಕಾರವು ದಿಗ್ಭ್ರಮೆಗೊಂಡು ಭಾರವಾದ ಕಂದಾಯ ಧೋರಣೆಗೆ ತೊಡಗಿತು ಸೈನಿಕರೇ ಮೊದಲಾದವರ ಸಂಬಳವನ್ನೂ ಕಡಿಯಿತು. ಇಷ್ಟರಲ್ಲಿ ಅಟ್ಲಾಂಟಿಕ್ ಫ್ಲೀಟಿನ ಸೈನಿಕರು ಸರಕಾರದ ವರ್ತನೆಯನ್ನು ಖಂಡಿಸಿದರು ಮತ್ತೆ ಮುಂದರಿಯಲಾಗಲಿಲ್ಲ ಬೇಂಕ್ ಒಫ್ ಇಂಗ್ಲಾಂಡು ಭಂಗಾರವನ್ನು ಮಾರುವ ಅಧಿಕಾರವನ್ನು ಸರಕಾರವು ತಾ ೨೧ನೇ ಸಪ್ಟಂಬರದಲ್ಲಿ ರದ್ದುಗೊಳಿಸಿತು

ಈ ವಿಶ್ವವ್ಯಾಪಕವಾದ ಆರ್ಥಿಕ ದುರವಸ್ಥೆಗೆ ವಿಧ ವಿಧದ ಕಾರಣಗಳಿವೆಯೆಂದು ಎಂಜಿಗ್, ಕಸೆಲ್ ಬ್ರೆವಿರಿಜ್, ಡಾ| ಗ್ರೆಗೊರಿ ಮೊದಲಾದ ಅರ್ಥಶಾಸ್ತ್ರಜ್ಞರು ಹೇಳುತ್ತಿರುವರು ಇವರ ಪ್ರತಿಪಾದನೆಯ ಮುಖ್ಯ ಸಾರಾಂಶವು ಹೀಗೆನ್ನಬಹುದು —

ಈಗಿನ ಮುಗ್ಗಟ್ಟಿಗೆ (೧) ವಾಣಿಜ್ಯ ಚಕ್ರದ ಶಿಥಿಲತೆ, (೨) ಯುದ್ಧದ ಪೂರ್ವದಲ್ಲಿನ ಸ್ಥಿತಿಗೆ ಮುಟ್ಟಬೇಕೆಂಬ ಜನರ ಹಾರೈಕೆ (೩) ಪ್ರಪಂಚಕ್ಕೆ ಅಗತ್ಯವಿರುವುದಕ್ಕಿಂತಲೂ ಹೆಚ್ಚಿನ ಸರಕುಗಳ ಉತ್ಪನ್ನ (೪) ಅವುಗಳನ್ನು ಖರ್ಚುಮಾಡಲು ಜನರ ಅಶಕ್ತತೆ (೫) ದುಡ್ಡಿನ ಚಲಾವಣೆಯು ಕುಂದುಕೊರತೆ (೬) ವ್ಯಾಪಾರಿಗಳ ಸ್ಪರ್ಧೆ, ಇವುಗಳೇ ಕಾರಣವೆಂದು ತಿಳಿದುಬರುತ್ತದೆ

ಮಹಾಯುದ್ಧದ ವೆಚ್ಚಕ್ಕಾಗಿ ಜರ್ಮನಿ, ಫ್ರಾನ್ಸ್ ಇಂಗ್ಲಾಂಡುಗಳ ಸಂಯುಕ್ತ ಅಮೆರಿಕಾದಿಂದ ಸಾಲವನ್ನು ಎತ್ತಿದ್ದುವು ಜರ್ಮನಿಯು ಫ್ರಾನ್ಸಿನಿಂದ ಸಾಲವನ್ನು ಪಡೆದಿದ್ದಿತು ಈ ಯುದ್ಧದ ಸಾಲವನ್ನು ಜರ್ಮನಿಯು ಅಮೇರಿಕಕ್ಕೆ ಸರಕುಗಳ ರೂಪದಿಂದ ಕಂತುಗಳಲ್ಲಿ ಕೊಡುತ್ತಿದ್ದಿತು ಆದರೆ, ತನ್ನಷ್ಟು, ಎಲ್ಲಾ ದೇಶಗಳೂ ಚಿನ್ನವನ್ನು ಶೇಖರಿಸಿಟ್ಟುಕೊಳ್ಳುವ ಸ್ಪರ್ಧೆಯಲ್ಲಿ ಚಿತ್ತವಿಟ್ಟುವು ಬ್ರಿಟನ, ಜರ್ಮನಿ, ಫ್ರಾನ್ಸ್ ಅಮೆರಿಕಾಗಳು ತಮ್ಮ ದೇಶದ ಚಿನ್ನವನ್ನು ಅಲ್ಲಲ್ಲೇ ಉಳಿಸಿಕೊಂಡುವು ಹೀಗಾಗ ಬಾಗ ಅಮೆರಿಕಾವು ತನಗೆ ಹೊರದೇಶಗಳಿಂದ ಬರಬೇಕಾಗಿದ್ದ ಸಾಲವನ್ನು ಸರಕುಗಳ ರೂಪದಿಂದ ಸ್ವೀಕರಿಸಲೊಪ್ಪಲಿಲ್ಲ ಇದರಿಂದಾಗಿ ಜರ್ಮನಿಯ ಸರಕುಗಳು ಜರ್ಮನಿಯಲ್ಲೇ ಉಳಿದುವು ಇಂಗ್ಲೆಂಡಿನ ಸರಕುಗಳು ಇಂಗ್ಲೆಂಡಿನಲ್ಲೇ ಉಳಿದವು ಜರ್ಮನಿಯು ಫ್ರಾನ್ಸ್ ಸರಕುಗಳನ್ನು ಸ್ವೀಕರಿಸದಾಯಿತು. ಈ ಸರಕುಗಳ ಪ್ರತಿ ಭಾರವಾದ ಸಂಕವನ್ನು ಕೊಡಬೇಕಾಗಿದ್ದುದರಿಂದ ಈ ದೇಶಗಳು ಸರಕನ್ನು ತಿರಸ್ಕರಿಸಿದುವು ಸಾಲ ಸಂದಾಯದ ಒತ್ತಾಯವಾಗುತ್ತಲೇ ಅಮೇರಿಕಾ ಮತ್ತು ಫ್ರಾನ್ಸ್‌ಗಳಲ್ಲಿ ಜಗತ್ತಿನ ಅರ್ಧಕ್ಕರ್ಧ ಭಂಗಾರವು ಶೇಖರಿತವಾದುವು ಈ ದೇಶಗಳು ತಮ್ಮ ಭಂಗಾರವನ್ನು ಹೊರಗೆ ಕಳುಹಿಸದೆ ಅದರ ಚಲಾವಣೆಯನ್ನೇ ತಡೆಯಿತು ಪರಿಣಾಮವಾಗಿ ಸರಕುಗಳ ಬೆಲೆಯು ಇಳಿಯಿತ ಹೀಗೆ, ಪ್ರಪಂಚದ ಅಗತ್ಯಕ್ಕೆ ಬೇಕಾದಷ್ಟು ಆಹಾರವಿದ್ದೂ ಕೂಡಾ ಬಡತನವು ತಲೆಯೆತ್ತಿತು ಅಮೆರಿಕಾವು ಜರ್ಮನಿಯನ್ನಾಗಲೀ ಜರ್ಮನಿಯು ಫ್ರಾನ್ಸನ್ನಾಗಲೀ, ಫ್ರಾನ್ಸು ಬ್ರಿಟನನ್ನಾಗಲೀ, ನಂಬಲಾರದಂತಾಯಿತು. ವ್ಯಾಪಾರಸ್ಥರಲ್ಲಿ ಒಬ್ಬರ ಮೇಲೆ ಇನ್ನೊಬ್ಬರಿಗಿದ್ದ ವಿಶ್ವಾಸದ ಅಡಿಗಲ್ಲು ಕೆಡವಿ ಹೋಯಿತು ಸಾಲಕೊಟ್ಟವರು ಸೋತರು ಸಾಲಪಡೆದವರು ಹತಾಶರಾದರು

ದೂರ ದೃಷ್ಟಿಯುತರಾದ ಅರ್ಥಶಾಸ್ತ್ರಜ್ಞರ ಅಭಿಪ್ರಾಯದಂತೆ ಅಂತರಾಷ್ಟ್ರೀಯ ಸಹಕಾರವಾಗಲೀ ಬೆಳೆಗಳ ಬೆಲೆಯ ಏರುವಿಕೆಗಳಾಗಲೀ ಥಟ್ಟನೆ ಜಗತ್ತನ್ನು ಪುನರ್ಚೇತರಿಸಲು ಸುಲಭವಾಗಿಲ್ಲವೆಂದು ಗೊತ್ತಾಗುತ್ತದೆ. ಈ ಮುಗ್ಗಟ್ಟು ಇನ್ನು ಕೆಲವು ಕಾಲದ ವರೆಗೆ ನೆಲೆಯೂರಿ ನಿಲ್ಲುವುದು ಸ್ವಾಭಾವಿಕವೆಂದೇ ವ್ಯಕ್ತಿಯೊಬ್ಬರ ಅಂಬೋಣವಿದೆ.

ನಮ್ಮ ಶಿಕ್ಷಣ.

ಶಿಕ್ಷಣ ವಿಷಯಕವಾಗಿ ತಲೆದೋರುತ್ತಿರುವ ಭಿನ್ನಾಭಿಪ್ರಾಯಗಳು ಎಲ್ಲೆಲ್ಲೂ ಮಹಾ ಆಂದೋಲನವನ್ನೇ ಸೃಷ್ಟಿಸಿವೆ. ಪ್ರಕೃತಾವಸ್ಥೆಯಲ್ಲಿ ನಾವು ಅನುಸರಿಸುತ್ತಿರುವ ಶಿಕ್ಷಣಕ್ರಮವು ನ್ಯೂನ್ಯಾತಿರೇಕಗಳಿಂದ ತುಂಬಿದೆ— ಎಂಬ ಭಾವನೆಯು ಬೇರೂರುತ್ತಲೇ ಬರುತ್ತಿದೆ. ಪ್ರತಿಯೊಬ್ಬ ವಿದ್ಯಾಭಿಮಾನಿಯೂ ಈ ಅಭಿಪ್ರಾಯವನ್ನು ಸಮರ್ಥಿಸುತ್ತಿರುವನೇ ಹೊರತು ಇದನ್ನು ಅಲ್ಲಗಳೆಯುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ, ನಾವು ನಮ್ಮಲ್ಲಿನ ಕುಂದುಕೊರತೆಗಳೇನೆಂದು ವಿಮರ್ಶಿಸಿಕೊಳ್ಳುವುದು ಅವಶ್ಯವಿದೆ. ನಮಗೆ ಬೇಕಾದುದನ್ನು ಸ್ವೀಕರಿಸಿ, ಬೇಡವಾದುದನ್ನು ತಿರಸ್ಕರಿಸಬೇಕಾಗಿದೆ. ಜಗದ್ವಂದ್ಯರೂ ದೇಶಹಿತಸಾಧಕರೂ ಆದ ಮಹಾತ್ಮಾಜಿಯವರು ಶಿಕ್ಷಣ ವಿಷಯವಾಗಿ ತಜ್ಞರೆಂದು ಬೇರೆ ಹೇಳಲವಶ್ಯವಿಲ್ಲ. ಅವರ ಸಲಹೆಗಳೆಲ್ಲ ಭಾರತೀಯರ ಹಿತದೃಷ್ಟಿಯಿಂದಲೇ ಹೊರಬರುವುವುಗಳಾದುದರಿಂದ ಅವರು ಈ ವಿಷಯವಾಗಿ ಏನು ಹೇಳುವರೆಂದು ಈ ಕೆಳಗಣ ಲೇಖನದಲ್ಲಿ—ಅವರು ೧೯೨೧ರ ಸಪ್ಟಂಬರ ೧ನೇ ತಾರೀಕಿನ 'ಯಂಗ್ ಇಂಡಿಯಾದಲ್ಲಿ' ಪ್ರಕಟಿಸಿದ ಲೇಖನವನ್ನು ಅನುವಾದಿಸಿ— ಕೊಡಲಾಗಿದೆ.

ಈಗೀಗ ಅನೇಕಾನೇಕ ವಿಚಿತ್ರ ವಿಷಯಗಳು ಸಂಘಟಿಸಿ ಬರುತ್ತಿರುವುದರಿಂದಲೂ, ರಾಷ್ಟ್ರೀಯ ಶಿಕ್ಷಣ ವಿಷಯಕವಾಗಿ ನನ್ನ ಅಭಿಮತವೇನೆಂದು ಸಾರ್ವಜನಿಕರು ತಿಳಿಯಲು ಬಯಸುತ್ತಿರುವರೆಂದು ತಿಳಿದುಬಂದುದರಿಂದಲೂ ನಾನು ಅವರ ಅವಗಾಹನೆಗಾಗಿ ನನ್ನ ಅಭಿಪ್ರಾಯಗಳನ್ನು ಸ್ಪಷ್ಟೀಕರಿಸಬೇಕಾಗಿದೆ. ನನ್ನ ಅಭಿಪ್ರಾಯದಂತೆ—ಈಗ ರೂಢಿಯಲ್ಲಿರುವ ಶಿಕ್ಷಣಕ್ರಮವು ಮೂರು ದೃಷ್ಟಿಕೋನಗಳಿಂದಲೂ ದೋಷಯುಕ್ತವೇ ಎಂದು ಹೇಳುವೆನು. ವಿದೇಶೀಯ ಸಂಪರ್ಕದಲ್ಲಿ ಅದು ಹೊಂದಿರುವ ಆಘಾತದ ವಿಷಯವಂತಿರಲಿ, ಆ ಮೂರು ದೃಷ್ಟಿಕೋನಗಳಾವುವೆಂದರೆ—ಈಗಿನ ಶಿಕ್ಷಣಕ್ರಮವು ದೇಶೀಯ ಸಂಸ್ಕೃತಿಯನ್ನು ಸಂಪೂರ್ಣವಾಗಿ ವಿಧ್ವಂಸಗೊಳಿಸಿ ಪರದೇಶೀಯ ಸಂಸ್ಕೃತಿಯ ಆಧಾರದ ಮೇಲೆಯೇ ಸ್ಥಾಪಿಸಲ್ಪಟ್ಟಿದೆ (೨) ಮಾನಸಿಕ ಮತ್ತು ದೈಹಿಕ ಸಂಸ್ಕೃತಿಯನ್ನು ಅದು ಅಲಕ್ಷಿಸಿ ಕೇವಲ ಬುದ್ಧಿಸಂಸ್ಕಾರದ ಒಂದೇ ವಿಷಯದ ಮೇಲೆ ಆಧರಿಸಿಕೊಂಡಿದೆ (೩) ನೈಜ ಶಿಕ್ಷಣವನ್ನು ಪರಭಾಷೆಯ ಮೂಲಕ ಪ್ರಚಾರಗೊಳಿಸುವುದು ದುಃಸಾಧ್ಯ.

ಈ ಮೂರು ದೋಷಗಳನ್ನು ವಿಮರ್ಶಿಸೋಣ. ಮಕ್ಕಳ ಶಿಕ್ಷಣದ ಪ್ರಾರಂಭಾವಸ್ಥೆಯಲ್ಲಿಯೇ ಅವರಿಗೆ ಹಲವು ಪಠ್ಯಪುಸ್ತಕಗಳು ದೊರೆತು ಅವರಿಗೆ ಗೃಹಸಂಬಂಧವಾದ ವಿಷಯಗಳಲ್ಲಿ ಯಾವ ಬೋಧನೆಯನ್ನೂ ಕೊಡಲು ನಾವು ಸಮರ್ಥರಾಗಿಲ್ಲ. ಆ ಮಕ್ಕಳು ಯಾವ ವಿಷಯಗಳಿಗೆ ಹೊಸಬರೋ ಅಂತಹ ವಿಷಯಗಳನ್ನೇ ಆ ಪಠ್ಯಪುಸ್ತಕಗಳು ಬೋಧಿಸುತ್ತವೆ. ಗೃಹಜೀವನದಲ್ಲಿ ಯಾವುದು ಹಿತಕರ ಯಾವುದು ಅಹಿತಕರವೆಂದು ವಿದ್ಯಾರ್ಥಿಯು ತಿಳಿದುಕೊಳ್ಳುವಷ್ಟು ವಿವೇಕವನ್ನು ಈ ಪಠ್ಯಪುಸ್ತಕಗಳು ಬೋಧಿಸುವುದಿಲ್ಲ. ತನ್ನ ಸುತ್ತುಮುತ್ತಲಿನ ವಾತಾವರಣವನ್ನು ಅವನು ಅಂತೆ ಅದರ ಮೇಲೆ ಅವನ ಅಭಿಮಾನವು ಹೆಚ್ಚುವಂತೆ ಈ ಪಠ್ಯಪುಸ್ತಕಗಳು ಯಾವ ರೀತಿಯಿಂದಲೂ ಸಹಾಯ ನೀಡುವುದಿಲ್ಲ. ವಿದ್ಯಾರ್ಥಿಯು ಮಾನಸಿಕತೆಯು ಬೆಳೆದಂತೆ ಅವನು ಸ್ವಜನರಿಂದ ದೂರವಾಗುತ್ತಾನೆಯೇ ಹೊರತು ಅವನಲ್ಲಿ ಪರಸ್ಪರ ಪ್ರೇಮದ ಉದಯವೇ ಆಗುವುದಿಲ್ಲ. ತನ್ನ ವಿದ್ಯಾಭ್ಯಾಸವನ್ನು ಅವನು ಪೂರ್ಣಗೊಳಿಸುವುದರೊಳಗೆ ಅವನು ತನ್ನ ಬಂಧುಬಾಂಧವರಿಗೂ ಅಪರಿಚಿತನಾಗುತ್ತಾನೆ. ಅವರ ಮೇಲೆ ಅವನಿಗೆ ಯಾವ ಮಮತೆಯೂ ಉಂಟಾಗುವುದಿಲ್ಲ. ಗೃಹಜೀವನದಲ್ಲಿ ಅವನಿಗೆ ಯಾವ ಆನಂದವೂ ರಸ್ಯವೂ ತೋರುವುದಿಲ್ಲ. ಗ್ರಾಮ್ಯಜೀವನವನ್ನು ಕಂಡು ಅವನು ಮೆಚ್ಚುವುದಿಲ್ಲ. ಹಳ್ಳಿಯ ಸೃಷ್ಟಿಸೌಂದರ್ಯಕ್ಕೆ ಅವನು ತೀರ ಕುರುಡನಾಗುತ್ತಾನೆ. ಸ್ವದೇಶದ ಸಂಸ್ಕೃತಿಯು ದುರ್ಬಲವೂ ಕ್ರೂರವೂ ಮತ್ತು ಮೂಢವೂ ಎಂದು ಅವನಿಗೆ ಭಾಸವಾಗುತ್ತದೆ. ಲೋಕವ್ಯವಹಾರಕ್ಕೆ ಅಗತ್ಯವಿರುವ ಸಂಪ್ರದಾಯಗಳೆಲ್ಲ ಅವನಿಗೆ ವ್ಯರ್ಥವೆಂದು ತೋರುತ್ತವೆ. ಈಗ ರೂಢಿಯಲ್ಲಿರುವ ಶಿಕ್ಷಣ ಕ್ರಮಾನುಸಾರವಾಗಿ ವಿದ್ಯೆ ಗಳಿಸಿದ ವಿದ್ಯಾರ್ಥಿಗಳಲ್ಲಿ ಎಲ್ಲರೂ ಇನ್ನೂ ಭ್ರಷ್ಟರಾಗದಿರಲು ಪುರಾತನ ಸಂಸ್ಕೃತಿಯೊಂದೇ ಮುಖ್ಯ ರಕ್ಷಣೆಯಾಗಿ ಪರಿಣಮಿಸಿರುತ್ತದೆ. ನನಗೆ ಸಾಧ್ಯವೆಂದಾಗುತ್ತಿದ್ದರೆ ಈಗ ಪ್ರಯೋಗದಲ್ಲಿರುವ ಪಠ್ಯಪುಸ್ತಕಗಳನ್ನೆಲ್ಲ ನಾಶಮಾಡಿ, ವಿದ್ಯಾರ್ಥಿಯ ಸಂಸ್ಕೃತಿಸಾಧನೆಗೆ ಯಾವ ಪಠ್ಯಪುಸ್ತಕಗಳು ಸಾಧಕವಾಗುವುವೋ, ಯಾವ ಪುಸ್ತಕಗಳನ್ನು ಓದಿ ಅವನಲ್ಲಿ ತನ್ನ ಸುತ್ತುಮುತ್ತಲಿನ ವಾತಾವರಣಗಳನ್ನು ತಿಳಿಯುವ ಆಕಾಂಕ್ಷೆಯುತ್ಪನ್ನವಾಗುವುದೋ ಅಂತಹ ಪುಸ್ತಕಗಳನ್ನೇ ಬರೆಸಿ, ಕಲಿಸುತ್ತಿದ್ದೆ.

ಎರಡನೆಯ ವಿಷಯ ಇತರ ದೇಶಗಳ ಸ್ಥಿತಿಗತಿಗಳೂ ಇಲ್ಲಿಯ ಸ್ಥಿತಿಗತಿಗಳೂ ಭಿನ್ನಭಿನ್ನವಾಗಿವೆ. ಹಿಂದೂದೇಶದಲ್ಲಿ ನೂರಕ್ಕೆ ೮೦ ಮಂದಿ ಕೃಷಿಕರು. ಪ್ರತಿ ನೂರಕ್ಕೆ ಹತ್ತು ಜನರು ಕೈಗಾರಿಕೆಗಳಿಂದಲೇ ಜೀವಿಸುತ್ತಿರುವವರು. ಹೀಗಿರುವಾಗ, ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕೆಲಸಗಳನ್ನು ಕಲಿಸಿಕೊಟ್ಟು, ಅವರು ತಮ್ಮ ಭಾವೀ ಜೀವನಕ್ಕೆ ಅರ್ಹರಾಗುವಂತೆ ವ್ಯವಸ್ಥೆಗೊಳಿಸದೆ, ಅವರಿಗೆ ಬರಿಯ ಪುಸ್ತಕಜ್ಞಾನವನ್ನೋ ಓದುಬರೆಹಗಳನ್ನೋ ಕೊಡುವುದು ಪಾಪಕರವಲ್ಲದೆ ಮತ್ತೇನು? ದಿನದ ಬಹುಭಾಗವನ್ನೆಲ್ಲಾ ನಾವು ದುಡಿಮೆಯಲ್ಲೇ ಕಳೆಯಬೇಕಾಗಿರುವುದರಿಂದ ನಮ್ಮ ಮಕ್ಕಳಿಗೆ ಅವರ ಶೈಶವಾವಸ್ಥೆಯಿಂದಲೂ ದೇಹಶ್ರಮಯುಕ್ತ ಕಾರ್ಯಗಳಲ್ಲಿ ಆಸಕ್ತಿಯು ಹೆಚ್ಚುವಂತೆ ನಾವು ಏರ್ಪಡಿಸಬೇಕು. ಶ್ರಮಯುಕ್ತ ಉದ್ಯೋಗವನ್ನು ಅಸಹ್ಯದೃಷ್ಟಿಯಿಂದ ಅವರು ನೋಡದಂತೆ ಪ್ರೇರೇಪಿಸುವ ಶಿಕ್ಷಣವು ಅವರಿಗೆ ದೊರೆಯಬಾರದು. ರೈತನ ಮಗನೊಬ್ಬನು ಶಾಲೆಗೆ ಹೋಗಿ ಅಲ್ಪಸ್ವಲ್ಪ ಓದುಬರೆಹಗಳನ್ನು ಕಲಿತೊಡನೆಯೇ ಸ್ವತಃ ಕೃಷಿ ಕೆಲಸಕ್ಕೆ ಅವನು ಅನುಪಯುಕ್ತನಾಗುತ್ತಿರುವುದಕ್ಕೆ ಕಾರಣವಾದರೂ ಏನು? ನಮ್ಮ ಹುಡುಗರು ಕಷ್ಟದಾಯಕ ಕೆಲಸಗಳಿಗೆ ಭಯಪಡುತ್ತಿರುವುದನ್ನೂ ಅವುಗಳನ್ನು ವಿರೋಧಿಸುವುದನ್ನೂ ನೋಡಿ ಅತ್ಯಂತ ದುಃಖಪಡಬೇಕಾಗಿದೆ. ಪಾಶ್ಚಿಮಾತ್ಯ ದೇಶಗಳಿಗೆ ನಮ್ಮ ವಿದ್ಯಾರ್ಥಿಗಳನ್ನು ಕಳುಹಿಸಬೇಕೆಂದಾದರೆ, ಅವರಿಗೆ ಇಲ್ಲಿ ಅಂತಹ ದೊಡ್ಡ ದೊಡ್ಡ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸವು ದೊರೆಯಬೇಕು. ಆದರೆ ಅಂತಹ ಘನಸಂಸ್ಥೆಗಳ ಸ್ಥಾಪನೆಗೆ ನಮ್ಮಲ್ಲಿ ಸಂಪತ್ತು ಇದೆಯೋ? ಶಿಕ್ಷಣಕ್ಕಾಗಿ ನಾವು ಈಗ ವ್ಯಯಿಸುತ್ತಿರುವ ದ್ರವ್ಯವು ಲಕ್ಷಾಂತರ ಹೆತ್ತವರಿಗೆ ತಲೆಭಾರವಾಗಿ ನಿಂತಿದೆ. ಶಿಕ್ಷಣವು ಸರ್ವಸಾಮಾನ್ಯವಾಗಬೇಕೆಂದಾದರೆ ಅದಕ್ಕೆ ವಿದ್ಯಾರ್ಥಿಗಳು ಯಾವ ವೆಚ್ಚವನ್ನೂ ಮಾಡದಂತಿರಬೇಕು. ಸಂಬಳವು ಮಾಫಿಯಾಗಬೇಕು. ಎಷ್ಟು ಪ್ರಬಲ ಸರಕಾರವಿದ್ದರೂ ನಮ್ಮ ದೇಶದಲ್ಲಿ ಸರ್ವಸಾಮಾನ್ಯ ವಿದ್ಯಾಪ್ರಚಾರವಾಗಬೇಕಾದರೆ ಅದು ೩೦೦ ಕೋಟಿ ರೂಪಾಯಿಗಳನ್ನು ಕೊಡಲು ಸಾಧ್ಯವಿಲ್ಲವೆಂದು ನನ್ನ ಭಾವನೆ.

ಇಂತಹ ಸ್ಥಿತಿಯಲ್ಲಿ ನಮ್ಮ ಮಕ್ಕಳು ತಂತಮ್ಮ ವಿದ್ಯಾಭ್ಯಾಸದ ವೆಚ್ಚಗಳನ್ನು ತಾವು ದುಡಿದು ಸಂಪಾದಿಸಿಯೇ ತೀರಬೇಕೆಂಬುದು ಸಿದ್ಧವಾದ ಮಾತು. ಅಂತಹ ಸಂಪಾದನೆಗೆ ನೂಲುವುದು ಮತ್ತು ನೇಯುವುದು ಇವೆರಡೇ ಸುಲಭ ಸಾಧನಗಳು. ನೂಲುವ ಒಂದೇ ಉದ್ಯೋಗವನ್ನಾಧರಿಸಬೇಕೆಂದು ನಾನು ಹೇಳಲಾರೆ—ಯಾವುದಾದರೂ ಲಾಭಕರವಾದ ಕಸಬನ್ನು ಹಿಡಿಯಬೇಕು. ಉಳಿದ ಕೊಡಿಗೆಗಳಿಗೆ ಸಂಬಂಧಪಟ್ಟಿರುವ ಉದ್ಯೋಗವನ್ನೇ ಭಾರತದ ಪ್ರತಿಯೊಂದು ಶಾಲೆಯಲ್ಲಿಯೂ ಲಾಭದಾಯಕವಾಗಿ ಕೈಕೊಳ್ಳಬಹುದು.

ನಮ್ಮಂತಹ ಬಡಜನಾಂಗಕ್ಕೆ ಕೈಕೆಲಸವು ಎರಡು ಬಗೆಗಳ ಪ್ರಯೋಜನಗಳನ್ನು ಒದಗಿಸಿಕೊಡುತ್ತದೆ. ವಿದ್ಯಾರ್ಥಿಯ ಶಿಕ್ಷಣಕ್ಕೆ ಬೇಕಾದ ದ್ರವ್ಯವನ್ನು ಅದು ಒದಗಿಸಿಕೊಡುತ್ತದೆ, ಅಲ್ಲದೆ ಅವನು ಪ್ರಾಯಸ್ಥನಾಗುವಾಗ ಅವನಿಗೆ ಅದೇ ಒಂದು ಪ್ರಧಾನ ಉದ್ಯೋಗವಾಗುತ್ತದೆ. ಇಂತಹ ಕ್ರಮವು ನಮ್ಮ ಮಕ್ಕಳನ್ನು ಸ್ವಾವಲಂಬಿಗಳನ್ನಾಗಿ ಮಾಡುತ್ತದೆ. ಕೈಕೆಲಸಗಳನ್ನು ತುಚ್ಛಭಾವದಿಂದ ನೋಡುವಷ್ಟು ಪಾಮರ ವಿಷಯವು ಮತ್ತೊಂದಿಲ್ಲ. ರಾಷ್ಟ್ರದ ಅಧೋಗತಿಗೆ ಇಂತಹ ಒಂದು ದುರ್ಗುಣವೇ ಸಾಕು.

ಮನೋಶಿಕ್ಷಣದ ವಿಷಯವಾಗಿ ಒಂದೇ ಮಾತಿನಲ್ಲಿ ಮುಗಿಸಬಹುದು. ಈ ಶಿಕ್ಷಣವನ್ನು ಪುಸ್ತಕಗಳ ಮೂಲಕ ಕೊಡಬಹುದು. ಜೀವಂತನಾದ ಗುರುವಿನ ಸಾನ್ನಿಧ್ಯದಿಂದ ಇದು ಸಾಧ್ಯ. ನಮ್ಮಲ್ಲಿ ಪ್ರಾಥಮಿಕ ಮಾಧ್ಯಮಿಕ ಶಾಲೆಗಳಲ್ಲಿ ಉಪಾಧ್ಯಾಯರಾಗಿರುವವರಾದರೂ ಯಾರು? ಅವರು ಶ್ರದ್ಧಾವಂತ ಸ್ತ್ರೀಪುರುಷರಾಗಿರುವರೇ? ಮಾನಸಿಕ ಶಿಕ್ಷಣದಲ್ಲಿ ಅವರೆಷ್ಟು ಮುಂದುವರಿದವರು? ಬಾಲಕಬಾಲಿಕೆಯರಲ್ಲಿ ಸ್ವಭಾವಜನ್ಯವಾಗಿ ಬಂದಿರುವ ಗುಣಗಳನ್ನು ಇವರು ತಿದ್ದುಪಡಿಮಾಡುವಷ್ಟು ಸಮರ್ಥರಿರುವರೇ? ನಮ್ಮಲ್ಲಿ ಅನೇಕ ಕುಂದುಕೊರತೆಗಳಿವೆ. ಕೆಳಗಣ ದರ್ಜೆಗಳಿಗೆ ನಾವು ಏನೂ ತಿಳಿಯದ ಉಪಾಧ್ಯಾಯರನ್ನು— ಅಲ್ಪಸಂಬಳದ ಮೇಲೆ— ನೇಮಿಸುತ್ತೇವೆ. ಇದರಿಂದಾಗಿ ನಮ್ಮ ವಿದ್ಯಾರ್ಥಿಗಳ ನೈತಿಕ ಗುಣವರ್ಧನೆಗೆ ಬಹು ತೊಡಕಾಗಿದೆ. ಆ ಉಪಾಧ್ಯಾಯರುಗಳಿಗೆ ತಮ್ಮ ಹೊಟ್ಟೆ ತುಂಬಿಸಿಕೊಳ್ಳುವಷ್ಟಾದರೂ ಕೂಲಿಯು ದೊರೆಯುತ್ತಿದೆಯೋ ಯೋಚಿಸಬೇಕಾಗಿದೆ. ದೇಶಭಕ್ತರನ್ನೂ ರಾಷ್ಟ್ರೀಯರನ್ನೂ ಪ್ರಾಥಮಿಕ ಶಾಲೆಗಳಲ್ಲಿ ಅಧ್ಯಾಪಕರನ್ನಾಗಿ ಆರಿಸುವುದೇ ಇಲ್ಲ. ಯಾವ ಉಪಾಯವೂ ಇಲ್ಲದೆ, ಕೊನೆಗೆ ಈ ವೃತ್ತಿಯನ್ನು ಹಿಡಿಯುವಷ್ಟು ಅಧೋಗತಿಯು ಈ ಉದ್ಯೋಗಕ್ಕೆ ಸನ್ನಿಹಿತವಾಗಿದೆ.

ಕೊನೆಯ ವಿಷಯ —ಭಾಷೆ. ಈ ವಿಷಯವಾಗಿ ನನ್ನ ಪುನರುಕ್ತಿಯ ಆವಶ್ಯಕತೆಯು ಇಲ್ಲವೆಂಬಂತೆ ನನ್ನ ಅಭಿಪ್ರಾಯಗಳು ಎಲ್ಲರಿಗೂ ಇಷ್ಟು ಕಾಲದಿಂದ ಮುಂದಿಟ್ಟಾಗಿರುತ್ತವೆ. ಅನ್ಯದೇಶಭಾಷೆಯು ಮನೋಗ್ಲಾನಿಯನ್ನೇ ಉಂಟುಮಾಡಿದೆಯೆಂದರೆ ಹೆಚ್ಚಲ್ಲ. ನಮ್ಮ ವಿದ್ಯಾರ್ಥಿಗಳು ತಲೆಭಾರವಾದ ಹೊರೆಯನ್ನು ಹೊತ್ತಿರುವರು. ಬಾಯಿಪಾಠಮಾಡುವ ಗಿಳಿಗಳೆಂದೂ ಅನುಕರಣೆಮಾಡುವ ಮಕ್ಕಳೆಂದೂ ನಾವು ಪರಿಗಣಿಸಿ ಅವರಿಗೆ ಆ ರೀತಿ ಶಿಕ್ಷಣವನ್ನೀಯುತ್ತಿದ್ದೇವೆ. ಅವರಿಂದ ಯಾವ ಸ್ವತಂತ್ರ ಅಭಿಪ್ರಾಯಗಳಾಗಲೀ ಸ್ವತಂತ್ರ ಕಾರ್ಯಾಸಕ್ತಿಯಾಗಲೀ ಹೊರಗೆ ಬರುವ ಶಿಕ್ಷಣವು ಅವರನ್ನು ತಮ್ಮ ಕುಟುಂಬಗಳಿಗಾಗಲೀ ಜನಸಾಮಾನ್ಯರಿಗಾಗಲೀ ಯಾವ ಜ್ಞಾನವನ್ನೂ ಶೋಧಿಸಿ ಕೊಡಲಾರದಂತಹ ಅಶಕ್ತರನ್ನಾಗಿ ಮಾಡಿಬಿಟ್ಟಿದೆ. ವಿದೇಶ ಭಾಷೆಯು ದೇಶಭಾಷೆಗಳ ಬೆಳವಣಿಗೆಗೆ ಪ್ರತಿಬಂಧಕವಾಗಿ ನಿಂತಿದೆ. ನಾನು ಸರ್ವಾಧಿಕಾರಿಯಾಗಿರುತ್ತಿದ್ದರೆ ಅನ್ಯ ದೇಶಭಾಷೆಗಳನ್ನು ಒಡನೆ ನಿಲ್ಲಿಸಿ, ನಮ್ಮ ಮಕ್ಕಳಿಗೆ ದೇಶಭಾಷೆಗಳಿಂದಲೇ ಪಾಠಗಳನ್ನು ಕಲಿಸಲು ಬಲವಂತಪಡಿಸುತ್ತಿದ್ದೆ. ಈ ಕ್ರಮವನ್ನು ಅನುಸರಿಸಲು ಸಿದ್ಧರಿಲ್ಲದ ಉಪಾಧ್ಯಾಯರನ್ನು ಮನೆಗೆ ಕಳುಹಿಸುವುದಕ್ಕೂ ನಾನು ಸಿದ್ಧನಾಗುತ್ತಿದ್ದೆ. ಪಠ್ಯಪುಸ್ತಕಗಳು ಹುಟ್ಟುವುದನ್ನು ಕಾಯುವವನು ನಾನಲ್ಲ. ಪರಿವರ್ತನೆಯನ್ನು ಮಾಡಿದರೆ ಅದರೊಡನೆ ಈ ಸಮಸ್ಯೆಯೂ ಬರುತ್ತದೆ. ಅತಿಶೀಘ್ರವಾಗಿ ಚಿಕಿತ್ಸೆಯನ್ನು ಮಾಡಬೇಕಾಗಿರುವ ಮಹಾದೋಷವಿದಾಗಿರುತ್ತದೆ. ನಾನು ಪರದೇಶ ಭಾಷೆಯನ್ನು ವಿರೋಧಿಸುವವನೆಂಬ ಭಾವನೆಯುಳ್ಳವರು ನನ್ನನ್ನು ನಿಂದಿಸುತ್ತಿದ್ದಾರೆ. ನಾನು ಅನ್ಯ ಸಂಸ್ಕೃತಿಗಳಿಗೆ ತೀರ ವಿರೋಧಿಯೆಂದೂ ಆಂಗ್ಲ ಭಾಷಾಭ್ಯಾಸಕ್ಕೆ ಶತ್ರುವೆಂದೂ ಹೇಳುವವರಿದ್ದಾರೆ. ಆಂಗ್ಲಭಾಷೆಯು ಅಂತರಾಷ್ಟ್ರೀಯ ವ್ಯಾಪಾರ ವ್ಯವಹಾರಕ್ಕೂ ರಾಜಕಾರ್ಯಕ್ಕೂ ಅತ್ಯವಶ್ಯಕವೆಂದು ನಾನು 'ಯಂಗ್ ಇಂಡಿಯಾ'ದಲ್ಲಿ ಪದೇ ಪದೇ ಹೇಳಿ, ನಮ್ಮಲ್ಲಿ ಕೆಲವರು ಅದರ ಜ್ಞಾನವನ್ನು ಪಡೆದುಕೊಳ್ಳಬೇಕಾಗಿ ಸೂಚಿಸುತ್ತಿರುವುದನ್ನು ಅನೇಕರು ಗಮನಿಸಿದ್ದಿರಬಹುದು. ಆಂಗ್ಲಭಾಷೆಯಲ್ಲಿ ವಿಶ್ವಸಾಹಿತ್ಯವಿದೆ. ಅಮೂಲ್ಯ ಭಾವಗಳಿವೆ. ಭಾಷಾಪ್ರೇಮಿಯಾದ ಯಾರಾದರೂ ಇಂಗ್ಲಿಷ್ ಭಾಷೆಯನ್ನು ಕಲಿಯಬಾರದೆಂದು ನಾನು ನಿರ್ಬಂಧಿಸಲಾರೆ. ಇಂಗ್ಲಿಷನ್ನು ನಮ್ಮವರು ಕಲಿಯಬೇಕು, ಅದರಲ್ಲಿನ ಅಮೂಲ್ಯ ಸಾಹಿತ್ಯದ ಅನುಭವವನ್ನು ನಮ್ಮವರಿಗೂ ಮಾಡಿಕೊಡಬೇಕೆಂದು ಪ್ರೋತ್ಸಾಹಿಸುವೆನು.

ನಾವು ಎಲ್ಲರನ್ನು ಬಿಟ್ಟು ದೂರದಿಂದಿರಬೇಕೆಂದೂ ನಾವು ಎಲ್ಲಾ ಜ್ಞಾನಾರ್ಜನೆಗೆ ತೊಡಕಾಗಿ ನಿಲ್ಲಬೇಕೆಂದೂ ನಾನು ಹೇಳಲಾರೆ. ಅಂತಹ ಭಾವನೆಗಳು ನನ್ನ ಮನಸ್ಸಿನಲ್ಲಿಲ್ಲವೇ ಇಲ್ಲ. ಆದರೆ ಇತರ ಸಂಸ್ಕೃತಿಗಳ ಗುಣದ ಅನುಭವವನ್ನು ಸ್ವಸಂಸ್ಕೃತಿಯ ಜ್ಞಾನಾನುಭವ ಮಾಡಿಕೊಂಡನಂತರವೇ ಮಾಡಿಕೊಳ್ಳಬೇಕಾಗಿದೆ. ಅದಕ್ಕಿಂತ ಮೊದಲು ಆಗಬಾರದು. ನಮ್ಮ ಸಂಸ್ಕೃತಿಯನ್ನು ನಾವು ಮರೆತಿದ್ದೇವೆ. ನಮಗೆ ಅದರ ಪರಿಚಯವೇ ಇಲ್ಲ. ಅದನ್ನು ಅಲಕ್ಷಿಸಬೇಕೆಂದೇ ನಮಗೆ ಶಿಕ್ಷಣ ದೊರೆಯುತ್ತಿದೆ. ನಾವು ಇಂತಹ ಅಭ್ಯಾಸದಿಂದ ಯಾವ ಪ್ರಯೋಜನವನ್ನೂ ಹೊಂದಲಾರೆವು. ನೋಡುವುದಕ್ಕೆ ಅಂದವೆಂದು ಕಂಡುಬಂದರೂ ಅದರಿಂದ ಕಾರ್ಯವಾಗಲಾರದು. ನನ್ನ ಮತವು ಅನ್ಯಮತ ದೂಷಣೆಗೆ ಇಂಬಿಸೀಯುವುದಿಲ್ಲ.

ಗುಪ್ತ ಮಹಾಮಂತ್ರ.

ಅತ್ಯಂತ ಫಲಕಾರಿ

ಇದನ್ನು ಉಚ್ಚರಿಸಿದ ಮಾತ್ರದಲ್ಲಿ ಎಂತಹ ಕಷ್ಟ ಕೆಲಸವೂ ಸುಲಭವಾಗುವುದು. ಸ್ತ್ರೀ, ಪರೀಕ್ಷೆಯಲ್ಲಿ ವಿಜಯ, ಕೋರ್ಟು ವ್ಯವಹರಣೆಯಲ್ಲಿ ಗೆಲು, ನೌಕರಿಯಲ್ಲಿ ಜಯ, ಪ್ರಗತಿ, ಮಕ್ಕಳ ಐಶ್ವರ್ಯವೆಲ್ಲ ಲಭ್ಯವಾಗುತ್ತವೆ. ಇದು ನಿಮ್ಮನ್ನು ಅದೃಷ್ಟಶಾಲಿಗಳನ್ನಾಗಿ ಮಾಡುತ್ತದೆ.

2 ರೂಪಾಯಿಗಳನ್ನು ಮೆಚ್ಚಮೂಡಿ, ಅಥವಾ ತಿರುಗಿಸಿ, 50 ರೂಪಾಯಿ ಬಹುಮಾನ ಪಡೆಯಿರಿ.

Prasidha Mantra Asram,
No. 17. P. O. Katrisari Gaya.

ಆಸ್ಪತ್ರೆಗಳ ಆಡಳಿತ.

ಆಸ್ಪತ್ರೆಗಳೆಂದರೆ ರೋಗಿಗಳಿಗೆ ಔಷಧಿಗಳನ್ನು ಕೊಟ್ಟು ಗುಣಮಾಡುವ ಚಿಕಿತ್ಸಾಲಯಗಳೆಂದು ಯಾರಿಗೂ ತಿಳಿದ ವಿಷಯ ರೋಗಿಯು ಆಸ್ಪತ್ರೆಯನ್ನು ಸೇರಿದೊಡನೆ ಬೆಚ್ಚಗಿನ ಹಾಸಿಗೆಯೂ, ರುಚಿಕರ ಆಹಾರ ಪದಾರ್ಥಗಳೂ ದೊರೆಯುವುವೆಂಬುದೇನೋ ಸಹಜ ಆದರೆ ಅವುಗಳು ರೋಗಿಗಳ ದೈಹಿಕ ರೋಗಗಳನ್ನು ಗುಣಪಡಿಸುವುದರೊಡನೆ ಅವರ ಮಾನಸಿಕ ಸಂತಾಪವನ್ನು ಗುಣಪಡಿಸುವಂತಾಗಬೇಕೆಂದು ನಮ್ಮಲ್ಲಿ ತಿಳಿದವರು ವಿರಳವೆಂದೇ ಕಂಡುಬರುತ್ತದೆ ರೋಗಿಯ ಹುಣ್ಣುಗಳನ್ನು ತೊಳೆಯುವ ವೇಳೆ, ಸರ್ಜನರ ಅಥವಾ ನರ್ಸ್‌ಗಳ ಅಡಿಯಾಳುಗಳಾಗಿ ಕೆಲಸ ಮಾಡುವವರು ತಮ್ಮ ಪಾಲಿನ ಅನಿವಾರ್ಯ ಕರ್ತವ್ಯವನ್ನು ಹೇಗೂ ನೆರವೇರಿಸಿ ಬಿಟ್ಟರಾಯಿತೆಂದು ಕಠೋರ ನುಡಿಗಳನ್ನಾಡಿ ರೋಗಿಗಳನ್ನು ಬೆದರಿಸುವುದೂ, ಅವರ ಹುಣ್ಣುಗಳನ್ನು ತೊಳೆಯುವಾಗಲೋ, ಅವರಿಗೆ ಔಷಧಿಗಳನ್ನು ಕುಡಿಸುವಾಗಲೋ, ನಿಷ್ಠುರ ವಾಕ್ಯಗಳನ್ನಾಡುವುದೂ ಖಂಡನೀಯವಿರುತ್ತದೆ ಇಂತಹ ದುರಭ್ಯಾಸವು ಆಸ್ಪತ್ರೆಗಳಲ್ಲಿ ನಿರಾತಂಕವಾಗಿ ನಡೆಯುತ್ತಿರುವುದರಿಂದ ಸರಕಾರವು ಪ್ರಜಾಹಿತವನ್ನೇ ಬಯಸುವಂತಾಗುವುದಕ್ಕಿಂತಲೂ ಅಹಿತವನ್ನೇ ಬಯಸಿದಂತಾಗುತ್ತದೆ ಚಿಕಿತ್ಸೆಗೆಂದು ಬಂದ ರೋಗಿಗಳನ್ನು ಕ್ರೂರದೃಷ್ಟಿಯಿಂದ ನೋಡುವ ಕೆಲಸಗಾರರನ್ನು ಮೆಡಿಕಲ್ ಡಿಪಾರ್ಟ್‌ಮೆಂಟಿನವರು ಇಟ್ಟುಕೊಳ್ಳುವುದೇ ತಪ್ಪು ನಮ್ಮ ಸಾರ್ವಜನಿಕ ಆಸ್ಪತ್ರೆಗಳೂ ಎಚ್ಚರದಿಂದಿರಬೇಕಾಗಿದೆ

ಇವರ ಸಹಾಯಕರಾರು?

ಕೇಂದ್ರ ಸಹಾಯ ಸಮಿತಿಯು ಅನಂತಪುರದಲ್ಲಿನ ಕ್ಷಾಮದ ವಿವರವನ್ನೊಳಗೊಂಡ ವರದಿಯನ್ನು ಪ್ರಕಟಿಸಿರುತ್ತದೆ '೫೦,೦೦೦ ಕೂಲಿಗಾರರು ಶಿಲೆಕಲ್ಲುಗಳನ್ನು ಒಡೆಯುವ ಕೆಲಸದಲ್ಲೋ, ಭೂಮಿಯನ್ನಗೆಯುವುದೇ ಮೊದಲಾದ ಕಷ್ಟಕರ ಕೆಲಸಗಳಲ್ಲೋ ದಿನ ಒಂದರ ಒಂದಾಣೆ ಮೂರು ಪೈಯಿಂದ ಒಂದಾಣೆ ಆರು ಪೈ ವರೆಗಣ ಕೂಲಿಯ ಮೇಲೆ ಕೆಲಸಮಾಡುತ್ತಿರುವರು ದಿನಕ್ಕೆ ೬೦೦೦ ಜನರನ್ನು ಸರಕಾರೀ ಛತ್ರಗಳಲ್ಲಿ ಆಹಾರವಿತ್ತು ರಕ್ಷಿಸಲಾಗುತ್ತಿದೆ–ಒಟ್ಟೆಬರೆಗಿಲ್ಲದ ಬಡವರ ಸಂಖ್ಯೆಯು ಹೆಚ್ಚುತ್ತಾ ಹೋಗುತ್ತಿದೆ ಹೃದಯಭೇದಕ ದೃಶ್ಯಗಳು ಕಂಡುಬರುತ್ತಿವೆ ಮಹಾ ಬರಗಾಲವೇ ಬಂದೊದಗಿದೆ ೪೨,೦೦೦ ಜನರು ಮಾನವನ್ನು ಕಾಪಾಡಿಕೊಳ್ಳುವಷ್ಟು ಮಾತ್ರ ಬಟ್ಟೆ ಹೊದೆದುಕೊಳ್ಳುವಷ್ಟು ದುರ್ಗತಿಗೀಡಾಗಿದ್ದಾರೆ. ಇವರಲ್ಲಿ, ಮೂರರಲ್ಲಿ ಒಂದಂಶದವರ ನಗ್ನಾವಸ್ಥೆಯಲ್ಲೇ ಇದ್ದಾರೆ' ಎಂದು ವರದಿಯು ಹೇಳುತ್ತಿರುವುದನ್ನು ಕೇಳುವಾಗ, ಇತರ ಪ್ರಾಂತ್ಯಗಳಲ್ಲಿರುವ ಕನ್ನಡಿಗರು ಮಾಡಬೇಕಾದ ಕರ್ತವ್ಯವಾದರೂ ಏನಾಗಿದೆ? ಈ ನಿರ್ಗತಿಕರ ಪಾಡನ್ನು ಕೇಳುವವರಾರು? ಅಂದು ಬಿಹಾರಿಗೆ ಸಾವಿರಾರು ರೂಪಾಯಿಗಳನ್ನು ಕಳುಹಿಸಿದ ಉದಾರಿಗಳೂ, ಸಿಲ್ವರ್ ಜುಬಿಲಿಗೆ ಸಂತೋಷಪೂರ್ವಕವಾಗಿ ದ್ರವ್ಯ ಸಹಾಯ ಮಾಡಿದ ಪುಣ್ಯವಂತರೂ ಈಗ ಒಂದಿಷ್ಟು ಯೋಚನೆಗೆ ತೊಡಗಿ ಬಡತನಕ್ಕೊಳಗಾದ ನಮ್ಮವರನ್ನು ರಕ್ಷಿಸುವುದು ಅಗತ್ಯವಲ್ಲವೇ? ಆಯಾಯಾ ಪ್ರಾಂತ್ಯದ ಮುಂದಾಳು ಕನ್ನಡಿಗರು ಈ ವಿಷಯವಾಗಿ ಯೋಚಿಸಿಕೊಂಡು ಸಹಾಯಧನವನ್ನು ಸ್ವಯಂಸೇವಕರ ಮೂಲಕ ಸಂಗ್ರಹಿಸುವುದರಲ್ಲಿ ಮನವಿಕ್ಕುವರೇ? ಸಿಲ್ವರ್ ಜುಬಿಲಿಯ ವೇಳೆ ಸಣ್ಣ ಸಣ್ಣ ಪತಾಕೆಗಳನ್ನು ಮಾರಿ ಬೀದಿಯ ಮನುಷ್ಯನೂ ಅದರ ಫಂಡಿಗೆ ಹಣವನ್ನೀಯುವಂತೆ ಏರ್ಪಡಿಸಿದ್ದರು ನಾವೂ ಇಂತಹ ಒಂದು ಕ್ರಮವನ್ನು ಕೈಲಿತ್ತಿಕೊಂಡು ಕೆಲಸಮಾಡಿದರಾಗದೇ? ಅಖಿಳ ಕರ್ನಾಟಕದ ಮುಂದಾಳುಗಳು ಈ ಅಗತ್ಯಪ್ರಸಂಗದಲ್ಲಿ ಸುಮ್ಮಗಿರರೆಂದು ನಂಬುವೆವು

ಇಟೆಲಿಯ ರಣಭೇರಿ.

ಇಟೆಲಿ ಮತ್ತು ಎಬ್ಸಿನೀಯಗಳ ಸ್ವಾಧೀನದಲ್ಲಿರುವ ಗಡಿನಾಡಿನಲ್ಲಿ ಇಟೆಲಿಯ ಸೈನಿಕನೊಬ್ಬನನ್ನು ಭಂಡಾಯಗಾರನೊಬ್ಬನು ಕೊಲೆಮಾಡಿದನೆಂಬ ಅಪರಾಧವನ್ನು ಆರೋಪಿಸಿಕೊಂಡು ಸೀನಿಯರ್ ಮುಸೋಲಿನಿಯವರು ಇಟೆಲಿಯಲ್ಲಿ ರಣಭೇರಿಯನ್ನು ಊದಿದ್ದಾರೆ ಪಂಚಾಯತ ಮಂಡಲವು ತೀರ್ಮಾನಿಸುವ ಕೆ ತಾನು ನಡೆದುಕೊಳ್ಳುವೆನೆಂದು ಎಬ್ಸಿನೀಯ ಪ್ರ ಹೇಳಿದ ಮೇಲೂ ಇಟೆಲಿಯು ಅದನ್ನು ಗದರಿಸುತ್ತಿದ್ದು ಅದು ರಾಜಿಗೆ ತಲೆ ಬಗಿಸಿದ ದರಿಂದ ಅದಕೆ ನ್ಯಾಯವನ್ನು ಹೊಂದುವ ಹಕ್ಕೇ ಇಲ್ಲವೆಂದು ಕೋಪೋದೀಪ್ತವಾಗಿದೆ ಪಂಚಾಯತು ವ ಡ ಲವೆಂದೆಣಿಸಿದ ಲೀಗ್ ಒಫ್ ನೇಶನ್ಸ್ ಕೂಡಾ ಎಬ್ಸಿನೀಯದ ವೇದಿಕೆಯನ್ನು ಅಂಗೀಕರಿಸಿಕೊಂಡು ಶೀಘ್ರವಾಗಿ ಶಾಂತಿಮಯ ತೀರ್ಮಾನ ಮಾಡುವ ಬದಲು ಅದೆಯಂತೆ ನಡೆಯುತ್ತಿದೆ ಜನಾಂಗ ಸಭೆಯಲ್ಲಿ ಎಬ್ಸಿನೀಯದ ಪರವಾದ ಪ್ರತಿಭಾಶಾಲಿ ಅಧಿಕಾರಿಗಳಿಲ್ಲ ಅದರ ಮೊರೆಯನ್ನು ಕೇಳುವವರೇ ಇಲ್ಲ ಧ ಕೆ ದರ್ಶವು ಬಡವನ ದೀನತೆಯನ್ನು ಮೆಟ್ಟಿನಡೆವಂತೆ ಇಟೆಲಿಯು ಎಬ್ಸಿನೀಯದ ಸೌಜನ್ಯವನ್ನು ಕ್ರೂರವಾದ ಪ್ರಯೋಜನಕ್ಕಿಟ್ಟಿದೆ ಈ ಕರುಣಾಜನಕ ಪರಿಸ್ಥಿತಿಗೆ ಜನಾಂಗ ಸಭೆಯಲ್ಲಿ ಇಟೆಲಿಗಿರುವ ಅಧಿಕಾರವೇ ಕಾರಣವೆಂದು ಊಹಿಸಲು ಬರುತ್ತದೆ ಎಬ್ಸಿನೀಯವು ಬೀಳುವ ನೋಟವನ್ನು ನೋಡಿ ಧನ್ಯರಾಗಬೇಕೆಂದು ದೃಢಗೊಂಡ ಯಾರೋ ಜನಾಂಗ ಸಭೆಯಲ್ಲಿದ್ದಂತಿದೆ ಸುಡು ವ ಕಿಡಿಯು ಕಾಡನ್ನೇ ಸುಡದಂತೆ ಎಚ್ಚರವಿರವುದು ಅಗತ್ಯ

ಒಂದು ಕ್ಷಮಾಪಣೆ

ಕಳೆದ ಸಂಚಿಕೆಯಲ್ಲಿಯ ''ನಮ್ಮೂರ ನಚ್ಚು'' ಎಂಬ ಲೇಖನದ ಮೂಲ ಪ್ರತಿಯನ್ನು U M Nayak ಎಂದರೆ ಕೆನರಾ ಹ್ಯಾಸ್ಕೂಲಿನಲ್ಲಿ ಮಾಸ್ತರರಾಗಿರುವ ಉಳ್ಳಾಲ ಮಂಜುನಾಥ ನಾಯ್ಕ ಎಂಬವರು ಸಹಿ ಇಟ್ಟು ಬರೆದು ಕೊಟ್ಟದ್ದಾಗಿರುತ್ತದೆ ತಾಜಾ ಸಂಪಾದಕರು ಇಲ್ಲದ ಸಮಯ ನೋಡಿ ಅಸಭ್ಯವೂ, ಅಸತ್ಯವೂ, ಅಸಂಬದ್ಧವೂ ಆದ ವಚನಗಳಿಂದ ತುಂಬಿರುವ "ಆ ಹರಟೆ"ಯನ್ನು ಪೂರ್ಣ ವಿಮರ್ಶಿಸದೆಯೂ, ಪರಿಣಾಮವನ್ನು ವಿಚಾರಿಸದೆಯೂ ಮುದ್ರಿಸಿ ಪ್ರಕಟಿಸಿದ ಅಕೃತ್ಯಕ್ಕೆ ಅತಿರೇಕ ವಿಷಾದ ಪಡುತ್ತೇವೆ. ಈಗ ನೋಡಿದ್ದಲ್ಲಿ ಖಾಸಗಿ ದ್ವೇಷವನ್ನು ಪೂರೈಸಲಿಕ್ಕೆ ಮಾತ್ರ ಇದನ್ನು ಬರೆದಂತೆ ಕಾಣುತ್ತದೆ ಇದು ನಮಗೆ ಆಗಲೆ ತಿಳಿದಿದ್ದರೆ 'ಬಹಳ ಕಾಲದಿಂದ ನಡೆಯುವ ನಮ್ಮ ಪತ್ರದಲ್ಲಿ ಇದಕ್ಕೆ ನಾವು ಎಷ್ಟು ಮಾತ್ರಕ್ಕೂ ಎಡೆಕೊಡುತ್ತಿದ್ದಿಲ್ಲ ಮಕ್ಕಳ ಶಿಕ್ಷಣವನ್ನು ಕೈಕೊಂಡ ಶಾಲಾ ಉಪಾಧ್ಯಾಯರೆ ಈ ರೀತಿ ವಚನಗಳಿಂದ ಖಾಸಗಿ ದ್ವೇಷ ಸಾಧನೆಯನ್ನು ಪತ್ರ ಮೂಲಕ ನೆರವೇರಿಸಲು ಪ್ರವರ್ತಿಸಿದ್ದು ನೋಡಿ ನಮಗೆ ಆಶ್ಚರ್ಯವಾಗುತ್ತಿದೆ

(ಇನೇ ಪುಟದಿಂದ ಮುಂದುವರಿದುದು)

ವೇಲಿನ ಪತ್ರವ್ಯವಹಾರಕ್ಕೆ ಶ್ರೀ ಮೊಳಹಳ್ಳಿ ಶಿವರಾಯರು ದಯಪಾಲಿಸಿದ ಪ್ರತ್ಯುತ್ತರ—

ಅಯ್ಯ,

ಜಿಲ್ಲಾ ಬೋರ್ಡಿನ ಅವನತಿಯ ಕುರಿತು "ಸತ್ಯವಾದಿ"ಯ ಟೀಕೆಯ ವಿಚಾರ—ನಿಮ್ಮ ಪತ್ರ ನಂಬ್ರ ೨೫೮ ತಾ ೨೩—೪ ೩೫.

ನೀವು "ಸತ್ಯವಾದಿ"ಯು ಮಾಡಿದ ಟೀಕೆಯ ಪ್ರತಿಯನ್ನು ನನಗೆ ಕಳುಹಿಸಿ ಆ ವಿಷಯ ನನ್ನ ಅಭಿಪ್ರಾಯವನ್ನು ಕೇಳಿದ್ದೀರಿ ಅಲ್ಲಿ ನನಗೆ ಸಂಬಂಧಿಸಿದ ವಿಚಾರಗಳನ್ನು ಇಷ್ಟೇ ಕ್ಲುಪ್ತ ಬರೆಯುತ್ತಿದ್ದೇನೆ

ನಿಮ್ಮ ಬಾತ್ಮಿದಾರರು—ಶ್ರೀ ಬಿ ಎಂ, ಬಾಳಿಗರಿಗೆ ವ್ಯಾಯಾಮ ಶಿಕ್ಷಕರ ನೌಕರಿ ದೊರಕಿದ್ದು ನನ್ನಿಂದಾಗಿ ಎಂತಲೂ ಆದರಿಂದ ಅವರ ಕಿಸೆ ತುಂಬಿ ಬೋರ್ಡಿನ ಹಣ ಖಾಲಿಯಾಯಿತೆಂದೂ ಅಂದಿರುತ್ತಾರೆ ನಾನು ಪುತ್ತೂರು ತಾಲೂಕು ಬೋರ್ಡು ಅಧ್ಯಕ್ಷನಾಗಿದ್ದಾಗ ಅವರು ಹಾಯರ್ ಎಲಿಮೆಂಟರಿ ಟ್ರೈಂಡು ಶಿಕ್ಷಕರಾಗಿ ಮೇಲಿನ ಉದ್ಯೋಗಕ್ಕೆ ನನ್ನ ಮೂಲಕ ಅರ್ಜಿಯನ್ನು ಕಳುಹಿಸಿದ್ದರು ಇದಕ್ಕೆ ನನ್ನ ಶಿಫಾರಸನ್ನು ಮಾಡಿದ್ದಲ್ಲದೆ ಇನ್ನಾವ ರೀತಿಯ ಸಹಾಯವನ್ನು ಅವರಿಗೆ ಮಾಡಿರಲಿಲ್ಲ ಅವರು ಪೈ ಎಂ ಸಿ ಎ ಯವರ ವ್ಯಾಯಾಮ ಶಿಕ್ಷಣದಲ್ಲಿ ತೇರ್ಗಡೆಯಾಗಿ ಹೊಸ ಬಗೆಯ ಶಾರೀರಿಕ ಶಿಕ್ಷಣದಲ್ಲಿ ಮುಂದಾಳಾಗಿ ಬಂದರೆ ಅವರ ಸೇವೆಯಿಂದ ಕುಂದಾಪುರಕ್ಕೆ ಲಾಭ ದೊರೆತಿತೆಂಬುದೇ ನನ್ನ ಅಭಿಪ್ರಾಯ ಅಲ್ಲಿನ ಹೈಸ್ಕೂಲಿಗಾಗಲಿ ಸುತ್ತಲಿನ ಇತರ ಹಾಯರ್ ಎಲಿಮೆಂಟರಿ ಶಾಲೆಗಳಿಗಾಗಲಿ ಹೊಸ ಬಗೆಯ ಶಾರೀರಿಕ ಶಿಕ್ಷಣದ ವ್ಯವಸ್ಥೆ ... ಅವರ ಶಾರೀರಿಕ ಸಾಧನೆಗಳು ಅಲ್ಲಿ ಜನಪ್ರಿಯವಾಗಿವೆ ಕುಂದಾಪುರದ ವ್ಯಾಯಾಮ ಶಿಕ್ಷಕರ ಕೆಲಸವನ್ನು ಖಾಲಿ ಇರಿಸುವುದರಿಂದ ಶಕ್ಯವಿದ್ದಿಲ್ಲವಷ್ಟೆ ಅವರ ಸೇವೆಯಿಂದ ಬೋರ್ಡಿಗೆ ತುಂಬ ಪ್ರಯೋಜನವೇ ಆಗಿರುತ್ತದೆ

ಬಾಳಿಗರು ಲೇಖಿಯ ಲಾಠಿ ಕಸರತ್ತುಗಳನ್ನು ಸ್ವಪ್ರಯತ್ನದಿಂದ—ಅಂದರೆ ಬೋರ್ಡಿನ ಸಹಾಯವಿಲ್ಲದೇನೆ ತೋರಿಸಿದರು ಸತ್ಯವಾದಿಯು ಅಂಬಿಗ ... ಶಿಕ್ಷಣ ... ಇದನ್ನು ಈ ವರೆಗೆ ವ್ಯಾಯಾಮ ಶಿಕ್ಷಣವೆಂದು ಒಪ್ಪಲಿಲ್ಲ ಆದರೆ ಹಾಗೆ ... ಪೈ ಎಂ ಸಿ ಎ ಯವರು ಲಾಠಿ ಮತ್ತು ... ಪ್ರದರ್ಶನ ... ಕಲಿತುಕೊಂಡರು ಆ ... ಅನೇಕ ಶಿಕ್ಷಕರು ... ಇದ್ದರು ... ಯಶಸ್ವಿಯಾದುದಲ್ಲದೆ ಈ ಎರಡು ಪದ್ಧತಿಯ ಶಿಕ್ಷಣಗಳನ್ನು ... ಸೇರಿಸಲೇಬೇಕೆಂದು ... ಬರೆದಿರುತ್ತಾರೆ

ನಿಮ್ಮ ಬಾತ್ಮಿದಾರರು—ಪುತ್ತೂರು ತಾಲೂಕಿನ ಹಲವು ಹಾಯರ್ ಎಲಿಮೆಂಟರಿ ಶಾಲೆಗಳು ನನ್ನ ದಾಕ್ಷಿಣ್ಯಕ್ಕಾಗಿ ತೆರೆದುವೆಂದೂ ಅವುಗಳಲ್ಲಿ ಮುಖ್ಯತಃ ಮೇಲಿನ ತರಗತಿಗಳಲ್ಲಿ ಹುಡುಗರು ಕಡಿಮೆಯೆಂಬ ಅಭಿಪ್ರಾಯಪಡುವಂತೆ ಕಾಣುತ್ತದೆ ಪುತ್ತೂರು ತಾಲೂಕಿನಲ್ಲಿರುವ ೧೧ ಹಾಯರ್ ಎಲಿಮೆಂಟರಿ ಶಾಲೆಗಳು (೧೦ ಹುಡುಗರ ಶಾಲೆ ೧ ಹುಡುಗಿಯರ ಶಾಲೆ) ತಾಲೂಕು ಬೋರ್ಡುಗಳು ನಿರ್ನಾಮವಾಗುವ ಮೊದಲೇ ಇದ್ದವು ಜಿಲ್ಲಾ ಬೋರ್ಡಿನ ಆಡಳಿತೆಗೆ ಬಂದಮೇಲೆ ಅಲ್ಲಿ ಒಂದೇ ಒಂದು ಹೆಚ್ಚಿಗೆ ಶಾಲೆ ತೆರೆದುದು ಇಲ್ಲ. ತೀರ ಹಿಳನಾಡಿನ, ಅಂದರೆ ಮಲೇರಿಯ ಪ್ರಾಂತದ ಹಳ್ಳಿಗಳಲ್ಲಿರುವ ಒಂದೆರಡು ಶಾಲೆಗಳ ಮೇಲು ತರಗತಿಗಳಲ್ಲಿ ಶಾಲೆಗಳ ಹಾಜರಿ ಕೊಂಚ ಕಡಿಮೆಯೆಂಬುದು ನಿಜ ಕಾರಣ ವಿವರಿಸಬೇಕಿಲ್ಲವಷ್ಟೆ ಈ ಶಾಲೆಗಳನ್ನು ಮುಚ್ಚಬೇಕೆಂದು ಯಾರೂ ಸೂಚಿಸಲಿಲ್ಲ, ಸೂಚನೆಯು ಸಿಕ್ಕುವ ಹಾಗಿರಲಿಲ್ಲ ಈ ಕಾರಣದಿಂದ ನಾನು ಹೇಗೆ ಅಪವಾದಕ್ಕೆ ಗುರಿಯೋ ತಿಳಿಯುವುದಿಲ್ಲ ಆದರೆ ಒಂದು ವಿಚಾರವನ್ನು ಇಲ್ಲಿ ಹೇಳಬಹುದೇನೆಂದರೆ— ಕರಾವಳಿಯಲ್ಲಿರುವ ಕೆಲವೊಂದು ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿರುವ ಹಾಜರಿಯ ದುರ್ಭಿಕ್ಷ ನಮ್ಮ ಶಾಲೆಗಳಲ್ಲಿಲ್ಲ

ಪಂಚಾಯತುಗಳ ವಿಚಾರ ಅಧ್ಯಕ್ಷರಿಗೆ ಸ್ವತಹ ಅದರ ಅನುಭವ ಕಡಿಮೆಯಾದ ನಿಮಿತ್ತ ಪಂಚಾಯತ ಕೆಲಸಕ್ಕೆ ಬೇಕಾದ ಪಂಚಾಯ್ತು ಉತ್ಸಾಹ, ಪರಿಶೀಲನೆಗಳು ಬೇಕೆಂಬುದರಿಂದ ಅದರಲ್ಲಿ ಪರಿಣತಿ ಇರುವ ಇನ್ಸ್‌ಪೆಕ್ಟರಿಗೆ ತಾತ್ಕಾಲಿಕವಾಗಿ ತಮ್ಮ ಅಧಿಕಾರವನ್ನು ಕೊಡಬೇಕಾಯಿತು ಗ್ರಾಮದ ಹಿತದ ದೃಷ್ಟಿಯಿಂದ ಅವರು ಈ ಕೆಲಸ ಮಾಡಿದರು ಈ ಅಧಿಕಾರವನ್ನು ಪಡೆದ ನಂತರ ಈ ಸಂದರ್ಭದಲ್ಲಿ ಜಿಲ್ಲಾ ಸಂಚಾರ ಮಾಡಿರುವುದು ನಿಜ ಆದರೆ ಅದಕ್ಕಾಗಿ ನಾನು ಭತ್ತೆ ಪಡೆಯಲೂ ಇಲ್ಲ ... ನನಗಿಲ್ಲ ನನ್ನ ಸಂಚಾರದಿಂದ ಬೋರ್ಡಿಗೆ ಬಂದ ಖರ್ಚು ... ಅದರಿಂದ, ಈ ... ದಿಂದ ಜಿಲ್ಲಾ ... ಅಧಿಕಾರದ ... ಕಾರಣ ... ತಿಳಿಯುತ್ತೇನೆ ... ಸಂಗ್ರಹದಿಂದ ... ತುಂಬಿ ... ಆಗಿದೆ

(ಸತ್ಯದ ಅನುವಾದ) ಎಂ ಶಿವರಾವ್, ಜಿಲ್ಲಾ ಬೋರ್ಡು ಸದಸ್ಯ

ಮೇಲಿನ ಪತ್ರವ್ಯವಹಾರದ ಕುರಿತು ಜಿಲ್ಲಾ ಬೋರ್ಡಿನ ಕಾರ್ಯದರ್ಶಿಯವರು ಸಲಿಸಿದ ಉತ್ತರ

ದ ಕ ಜಿಲ್ಲಾ ಬೋರ್ಡು ಆಫೀಸು, ಮಂಗಳೂರು ದ ಕ

ತಾ ೨೯ ಏಪ್ರಿಲ್ ೧೯೩೫

ಅಯ್ಯ,

"ಸತ್ಯವಾದಿ"ಯು ... ನಮ್ಮ ಅಭಿಪ್ರಾಯವನ್ನು ಕೇಳಿದ ... ಅಧ್ಯಕ್ಷರು ... ತಮ್ಮ ಅಭಿಪ್ರಾಯವನ್ನು ... ಸೂಚಿಸಿರುತ್ತಾರೆ "ಸತ್ಯವಾದಿ"ಯು ... ಟೀಕೆಗಳಿಂದಲೂ ... ಅದನ್ನು ಪ್ರಕಟಿಸುವುದೂ ಅವಶ್ಯ ಇತಿ ತಮ್ಮ

ಎನ್. ಸುಂದರರಾವ್ (ಸತ್ಯದ ಅನುವಾದ) ಕಾರ್ಯದರ್ಶಿ

ವಿ. ಸೂ ... ಟೀಕೆಗಳಿಂದಲೂ ... ಅವರ ಚರ್ಚಿಸುವ ... ನಮಗೆ ತಿಳಿಯದ ... ರಿಂದ ನಾವು ಮೇಲಿನ ಸಂದರ್ಭಕ್ಕೆ ... ಎಂದು ತಿಳಿಸಬೇಕಾಗಿದೆ ಸಂ

ರಾಮು—ಏನು, ಓದುವಿರೆತ್ತ?

ಜೋರ್ಜ್– ಸ್ವದೇಶಾಭಿಮಾನಿಯ ವಿಷಯ ಒಳಗೆ— ಮಾತಾಡಲು ಸಮಯವಿಲ್ಲ–ಪತ್ರ ಪ್ರತಿಗಳು ದೊರೆಯುವುದಿಲ್ಲ ಬೇಗನೇ ಒಂದು ಪ್ರತಿಯನ್ನು ಪಡೆದುಕೊಳ್ಳುವ ಬರುತ್ತೇನೆ–

ರಾಮ – ಬೇಗನೇ ಧಾವಿಸು–ನನಗೂ ಒಂದು ಪ್ರತಿಯನ್ನು ತಪ್ಪಿ ಇಗೋ ಒ ದಾಣೆ

'ಸ್ವದೇಶಾಭಿಮಾನಿ'ಯು

ಪ್ರಕಟವಾದ ಪ್ರತಿವಾರದಲ್ಲೂ ಈ ಗುಲ್ಲು ಅಖಿಲ ಕರ್ನಾಟಕದಲ್ಲಿ ಕೇಳುತ್ತದೆ ಸ್ವದೇಶಾಭಿಮಾ- ಯನ್ನು ಓದುವುದೆಂದರೆ ಜನರಿಗೆ ಅಷ್ಟು ಉತ್ಸಾಹ!-ಅಷ್ಟು ಆಶೆ -ಕಾರಣವೇನೆ ?- ಭಾಷಾಶೈಲಿ, ಚಿತ್ರಪಟಗಳು, ವರ್ತಮಾನ ಸಂಗ್ರಹಗಳು,-ಇವುಗಳೆಲ್ಲಿಲ್ಲ ಅದು ಅಗ್ರಗಣ್ಯವಾಗಿ ನಿಂತಿದೆ.

ಬಿಡಿ ಸಂಚಿಕೆ ಬೆಲೆ ಆಣೆ 1.

ಅನುಕ್ರಮಣಿಕೆ

ಪತ್ರ	೨
ಪತ್ರಿಕಾ ಪ್ರಪಂಚ	೩
ಜಿಲ್ಲಾ ಬೋರ್ಡು ಆರ್ಥಿಕ ಅವನತಿಯು	೫
ಆರ್ಥಿಕ ಸಂಕಷ್ಟಕ್ಕೆ ಕಾರಣಗಳು	೬
ನಮ್ಮ ಶಿಕ್ಷಣ	೮
ಅಗ್ರಲೇಖ	
ಸ್ಫುಟವಿಚಾರಗಳು	೯
ದಕ್ಷಿಣ ಕನ್ನಡವೂ ಮನಸ್ಸಿನ ಮಟ್ಟವೂ.	೧೦
ವರ್ತಮಾನ ಸಂಗ್ರಹ	೯
ಕರ್ನಾಟಕ ಸಾಹಿತ್ಯ ಪರಿಷತ್ತು	೧೩
ಮಂಗಳೂರು, ತಾಲೂಕುಗಳಿಂದ	೧೩
ವಿವಿಧ ಸಮಾಚಾರಗಳು	೧೬
ಮೈಸೂರು ರಾಜಧಾನಿಯಲ್ಲಿ ಹಿಂದೀ ಪ್ರಚಾರ.	೧೪

ಸ್ವದೇಶಾಭಿಮಾನಿ.

ತಾ ೧೭ನೇ ಶುಕ್ರವಾರ ಮೇ ೧೯೩೫

ಕಾಂಗ್ರೆಸ್ಸೂ ಜಿಲ್ಲಾಬೋರ್ಡೂ

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ಸು ಸಂಗಡದವರು ಮುಂದಿನ ಜಿಲ್ಲಾಬೋರ್ಡು ಚುನಾವಣೆಗೆ ತಮ್ಮ ಪ್ರತಿನಿಧಿಗಳನ್ನು ನಿಲ್ಲಿಸುವರೆಂದು ಕೇಳುತ್ತೇವೆ ಈ ಪ್ರಾಮುಖ್ಯ ನಿರ್ಧಾರವನ್ನು ಅವರು ಏಕೆ ಮಾಡಿದರು ಎಂದು ನಮಗಂತೂ ತಿಳಿಯದು ಈ ಕುರಿತು ಜನರ ವಿಚಾರಮಾಡಲು ಅವಶ್ಯವಿರುವ ಕೆಲವು ಪ್ರಶ್ನೆಗಳನ್ನು ಮಾತ್ರ ನಮ್ಮ ಮುಂದೆ ಇರಿಸಬೇಕಾಗಿದೆ

ಕಾಂಗ್ರೆಸ್ಸು ಮುಖ್ಯತಃ ಸರಕಾರದಿಂದ ದೂರವಾದ ಸಂಗತಿ ... ಎಸೆಂಬ್ಲಿಗಳಿಗೆ ಪ್ರತಿನಿಧಿಗಳನ್ನು ಕಳುಹಿಸುತ್ತಿರುವುದು ಸರಕಾರದ ನಿರ್ವಾಹವು ಈಗಿನ ಕ್ಷುದ್ರ ಸಂಸ್ಥೆಗಳಿಂದ ಆಗಲಾರದೆಂದು ತೋರಿಸಿ ಅವನ್ನು ದಿಗಿಲು ಕೆಡಿಸಿ ಸ್ವಾತಂತ್ರ್ಯಸ್ಥಾಪನೆ ಮಾಡುವ ನೆವದಿಂದ ಈ ಸಭೆಗಳ ಮುಂದಿರುವ—ಕಂದಾಯ, ಸುಂಕ ಟಾರಿಫ್ ತಡೆ ಸೈನ್ಯ ಅಂತರ್ರಾಷ್ಟ್ರ ಸಂಬಂಧ— ಇಂಥ ಪ್ರಶ್ನೆಗಳಿಂದ ಈ ಗುರಿಯನ್ನು ಸಾಧಿಸುವುದು ಅದಕ್ಕೆ ಶಕ್ಯವಿದೆ

ಆದರೆ ಜಿಲ್ಲಾ ಬೋರ್ಡಿನಲ್ಲಿ ಕಾಂಗ್ರೆಸು ಮುಖಂಡರು ಏನುಮಾಡಲು ಬರುತ್ತಾರೆ? ಕಾಂಗ್ರೆಸಿನ ಹೆಸರಿನಲ್ಲಿ ಬೋರ್ಡಿನಲ್ಲಿ ಇಂಥದೇ ಕೆಲಸಮಾಡುತ್ತೇವೆ ಎಂದು ಜನತೆಯ ಮುಂದಿರಿಸುವರೇನು? ಇಲ್ಲ—ಬೋರ್ಡು ನಡೆಯದಂತೆ ಮಾಡುವುದು ಅವರ ಗುರಿಯೆ? ಅಥವಾ ಅದರೊಡನೆ ಸಹಕರಿಸಿ ದೇಶಕ್ಕೆ ಹಿತ ಬಗೆಯುತ್ತೇವೆ—ಎಂಬುದು ಅವರ ಗುರಿಯೇ? ಹೀಗಿದ್ದರೆ—ಕಾಂಗ್ರೆಸಿನವರು ಇಂಥದೇ ಕೆಲಸಕ್ಕಾಗಿ ಬೋರ್ಡನ್ನು ಸೇರುತ್ತೇವೆ ಎಂದು ನಮಗೆ ಹೇಳಲಾರರೆ? ಅದನ್ನು ನಡೆಯಿಸಲು ಬೋರ್ಡಿನ ಸಂಘಟನೆ ಅನುಕೂಲವಾಗಿದೆಯೇ?

ಇಷ್ಟು ಸ್ಪಷ್ಟವಾದ ಬಳಿಕ ಬರುವ ಪ್ರಶ್ನೆಯೆಂದರೆ—ಯಾರನ್ನು ಪ್ರತಿನಿಧಿಗಳಾಗಿ ಆರಿಸುವಿರಿ? ನಾಲ್ಕಾಣೆ ಕೊಟ್ಟವರೆಲ್ಲರೂ ಕಾಂಗ್ರೆಸಿನ ಪ್ರತಿನಿಧಿಗಳು ಆಗಬಹುದು ಹಾಗೆ ಯಾರಾದರೂ ಮುಂದೆ ಬಂದು ತಾನು ಕಾಂಗ್ರೆಸಿನ ಪರವಾಗಿ ನಿಲ್ಲುತ್ತೇನೆ ಎಂದು ನಿಂತರೆ ನೀವು ಏನು ಮಾಡುವಿರಿ? ನಿಮ್ಮ ಪ್ರತಿನಿಧಿಗಳನ್ನು ಯಾರಿಂದ ಆರಿಸುವಿರಿ? ಹೀಗೆ ಆರಿಸಲು—ಮತದಾರರಲ್ಲಿ ನೇಕಡ ೧೦ರಷ್ಟು, ಕಾಂಗ್ರೆಸ್ಸು ಸದಸ್ಯರಾದರೂ ಇದ್ದಾರೆಯೇ? ಹಾಗೆ ಸಾಕಷ್ಟು ಸದಸ್ಯತನವಿಲ್ಲವಾದರೂ, ನೀವು—ನಿಮ್ಮ ಇಷ್ಟ ಬಂದವರನ್ನು ಇರಿಸಲು ಅದು ನಾಲ್ಕಾರು ಮುಂದಿಯ ರಾಜ್ಯವಾಗದೇನು?

ನಿಮ್ಮ ನಿರ್ಧಾರದಲ್ಲಿ—ಇಂಥವರು ಸದಸ್ಯರು ಆಗಬಹುದು ಎಂದು ಕಲ್ಪಿಸಿದ್ದೀರಾ? ಅವರು ನಿಸ್ವಾರ್ಥರು ಎಂದು ದೃಢಪಡಿಸುತ್ತೀರಾ? ಅವರಿಗೆ ಎಷ್ಟೋ ವಿದ್ಯಾಭ್ಯಾಸವಿದೆ? ನಿಮ್ಮ ಪ್ರತಿನಿಧಿಗಳು—ಈಗಿನ ಎಷ್ಟೋ ಜನ ಪ್ರತಿನಿಧಿಗಳಂತೆ ಕೇವಲ ಜಾತಿಪಕ್ಷಪಾತದಲ್ಲಿ ಮುಳುಗುವವರಲ್ಲವೆಂದು—ಧೈರ್ಯ ಕೊಡಬಲ್ಲಿರಾ? ನಮಗಂತು ಈಗಾಗಲೇ ಕಾಂಗ್ರೆಸ್ಸಿನ ಬೆನ್ನಿನ ಹಿಂದೆ ತಿರುಗುವವರಲ್ಲಿ ಇಂಥವರೇ ಕಾಣುತ್ತಾರೆ

ನೌಕರರ ನೇಮಕ, ಉಪಾಧ್ಯಾಯರ ವೇತನ, ಪಂಚಾಯತುಗಳ ಉಪಯುಕ್ತತೆ—ಇವುಗಳ ವಿಷಯ ನಿಮ್ಮ ಅಭಿಪ್ರಾಯ ರೂಪಿತವಾಗಿದೆಯೇ? ಬೋರ್ಡಿನ ಆಯವು ಕಡಿಮೆಯಾಗಿದೆಯಲ್ಲ—ನೀವು ಹೇಗೆ ಅದನ್ನು ಸರಿಪಡಿಸುತ್ತೀರಿ? ನಿಮ್ಮಲ್ಲಿ ಈಗಾಗಲೇ ಸ್ಥಾನಿಕ ಸಂಸ್ಥೆಗಳಲ್ಲಿ ಸದಸ್ಯರಾದವರು ಇದ್ದಾರೆಯೇ? ಕಾಂಗ್ರೆಸಿನ ಹೆಸರಿನಲ್ಲಿ ಅವರು ಏನು ಮಾಡಿದ್ದಾರೆ?

ಈ ವಿಚಾರವಾದ ಸ್ಪಷ್ಟವಾದ ಯೋಚನೆಯಿಲ್ಲದೆ—ಬೋರ್ಡಿಗೆ ಮೆಂಬರರನ್ನು ಕಾಂಗ್ರೆಸಿನ ಪರವಾಗಿ ನೂಕುವುದಾದರೆ, ಮೊದಲೇ ನಶಿಸುತ್ತಿರುವ ವರ್ಚಸ್ಸು ಪೂರ್ಣ ನೊಂದುವಂತಾದೀತು

ಜರ್ಮನಿಯ ಸಮರಸನ್ನಾಹ!

ಸಾರ್ವಜನಿಕರಿಗೆ ಪಾಠಕೊಡುತ್ತಿದೆ.

ಕೋನಿಗ್ಸ್‌ಬರ್ಗ ಮೇ ೩ ೮

ಜರ್ಮನಿಯಲ್ಲಿ ಸಾರ್ವಜನಿಕರಿಗೆ ಯುದ್ಧದ ಸೂಚನೆಯನ್ನು ಕೊಡುತ್ತಿದ್ದಾರೆ ವೈರಿಗಳು ಅಕಸ್ಮಾತ್ತಾಗಿ ದೇಶದ ಮೇಲೆ ಹಾರಿ ಬೊಂಬುಗಳನ್ನು ಎಸೆದರೆ ಏನ ಮಾಡಬೇಕೆಂದು ಸಾರ್ವತ್ರಿಕವಾಗಿ ತಿಳಿಸುತ್ತಿದ್ದಾರೆ ಈ ದಿನ ಬೆಳಗ್ಗೆ ಅಕಸ್ಮತ್ತಾಗಿ ಜರ್ಮನಿಯ ಕೆಲವು ವಿಮಾನಗಳು ಸಿರೆನ್ ನಗರದ ಮೇಲೆ ಹಾರಿ ಬೊಂಬನ್ನು ಎಸೆಯುವಂತೆ ನಟಿಸಿದುವು ಯುದ್ಧವನ್ನೇ ಮಾಡುವಂತೆ ತೋರಿತು ಇಡೀ ನಗರದ ಜನರು ದಿಕ್ಕಾಪಾಲಾಗ ಓಡಿ ಆಶ್ರಯ ಪಡೆದರು ಅರ್ಧ ತಾಸಿನ ಒಳಗೆ ಇದು ನಟನೆಯೆಂದು ತಿಳಿದು ಜನರು ಸಮಾಧಾನಗೊಂಡರು

ಸಾರ್ವಭೌಮರು ಹಿಟ್ಲರರನ್ನು ಅಭಿವಂದಿಸಿದರು.

ಬರ್ಲಿನ್ ಮೇ ೮

ಸಾರ್ವಭೌಮರಿಗೆ ಶುಭಸಂದೇಶವನ್ನು ಕಳುಹಿಸಿ ಅವರನ್ನು ಪ್ರಶಂಸಿಸಿದ ಹಿಟ್ಲರರಿಗೆ ಚಕ್ರವರ್ತಿಗಳು ಹೀಗೆ ಹೇಳಿದ್ದಾರೆ 'ಶಾಂತಿರಕ್ಷಣೆಗಾಗಿ ನಾನೂ ನನ್ನ ಸರಕಾರವೂ ಮಾಡುವ ಸಾಧನೆಗಾಗಿ ವಂದಿಸಿದುದಕ್ಕಾಗಿ ಆನಂದಗೊಂಡಿದ್ದೇನೆ ಶಾಂತಿಯೇ ನಮ್ಮ ಸರ್ವಸ್ವ ಈ ಸಾಹಸದಲ್ಲಿ ಜಗತ್ತು ನಮ್ಮೊಡನೆ ಸಹಕರಿಸುವುದೆಂದು ನಂಬಲಾಗಿದೆ

೨೦೦,೦೦೦ ಜನರು ಉಪವಾಸ ಬಿದ್ದಿರುವರು.

ಮೇ, ೮

ಇಲ್ಲಿ ನೋಯುಸ್‌ನ ಸ್ಪ್ರಿಂಗ್ ಫೀಲ್ಡ್‌ನಿಂದ ಬಂದ ವಾರ್ತೆ ಅಲ್ಲಿ ೨೦೦,೦೦೦ ಜನರು ಉಪವಾಸ ಬಿದ್ದು ಸಾಯುವಂತಾಗಿದೆ ಅಸಹನೀಯ ಬರಗಾಲವು ಸಂಪ್ರಾಪ್ತವಾಗಿದೆ ಸರಕಾರಕ್ಕೆ ಸಹಾಯಧನವನ್ನೂ, ಸಾಮಗ್ರಿಗಳನ್ನೂ ಒದಗಿಸಿಕೊಡಲು ಶಕ್ತಿಯಿಲ್ಲದಾಗಿದೆ ಅದು ಎಲ್ಲಾ ಸಹಾಯವನ್ನೂ ನಿಲ್ಲಿಸಿಬಿಟ್ಟಿರುತ್ತದೆ ಜನರು ದಂಗೆಯೆದ್ದು ಸಹಾಯವನ್ನು ಕೂಡಲೇ ನೀಡಬೇಕೆಂದು ಹೇಳುತ್ತಿದ್ದಾರೆ ಎಲ್ಲೆಲ್ಲೂ ಭಯವು ಕವಿದಿದೆ.

ರೈಲಿನಲ್ಲಿ ಗುಂಡುಹೊಡೆದು ಆತ್ಮಹತ್ಯೆ ಮಾಡಿಕೊಂಡರು.

ಮಿ॥ ಬಾಸ್ಕೆಟ್‌ನರವರ ಮರಣ.

ಸೇಲಮಿನಿಂದ ಬಂದುದು ಈ ವಾರ್ತೆ ಉದಕಮಂಡಲದಲ್ಲಿ ಮೋಟರ್ ವಾಹನಗಳ ಇನ್ಸ್‌ಪೆಕ್ಟರಾಗಿದ್ದ ಮಿ॥ ಬಾಸ್ಕೆಟ್ ಎಂಬವರು ಅಸಹನೀಯವಾದ ಹಣದಡಚಣೆಗೆ ಸಿಲುಕಿದ್ದರು. ಒಟ್ಟು ೩೦೦೦ ರೂಪಾಯಿಗಳ ಸಾಲವಾಗಿತ್ತು. ಮೊನ್ನೆ ಬೊಮ್ಮಿಡಿ ಯೆಂಬಲ್ಲಿ ಮೇಟ್ರಿನ್ ಎಕ್ಸ್‌ಪ್ರೆಸ್‌ನಲ್ಲಿ ತುಂಬಿದ ಗರ್ಭಿಣಿಯಾದ ತನ್ನ ಪತ್ನಿಯೊಡನೆ ಸಂಚರಿಸುತ್ತಿದ್ದರು ಒಳಿಯಲ್ಲಿ ಅವರ ತಾಯಿಯೂ ಮೊದಲಿನ ಹೆಂಡತಿಯ ಎರಡು ಮಕ್ಕಳೂ ಇದ್ದರು ರೈಲು ನಡೆಯುತ್ತಿರುವಾಗ ಬಾಸ್ಕೆಟರು ತನ್ನ ಪತ್ನಿಯು ಕುಳಿತ ಸ್ಥಾನಕ್ಕೆ ಬಂದು "ನೀನು ಸಾಯಲು ಸಿದ್ಧಳಿದ್ದೀಯೋ?" ಎಂದು ಪ್ರಶ್ನಿಸಿದರು ಅವಳು ಉತ್ತರವೀಯಲಿಲ್ಲ ಪದೇ ಪದೇ ಅದೇ ಪ್ರಶ್ನೆಯನ್ನು ಹಾಕುತ್ತ ಅವರು ಒಡನೆ ತನ್ನ ಜೇಬಿನಲ್ಲಿದ್ದ ಪಿಸ್ತೂಲನ್ನು ಹೊರಗೆ ತೆಗೆದು ತನ್ನ ಹಣೆಗೆ ಗುರಿಯಿಟ್ಟರು ಇದನ್ನು ಕಂಡ ಅವರ ಪತ್ನಿಯು ಚೀತ್ಕರಿಸಿದಳು ಅಷ್ಟರಲ್ಲಿ ಗುಂಡು ಧಡ್ಡನೆ ಹಾರಿತು ಬಾಸ್ಕೆಟರು ಘಾಯಗೊಂಡು ಮೃತರಾದರು ಕೆಲವರು ಕೂಡಿ ಅಲಾರ್ಮ್ ಸರಪಣಿಯನ್ನೆಳೆದು ರೈಲನ್ನು ನಿಲ್ಲಿಸಿದರು ನಿಮಿಷಾರ್ಧದಲ್ಲಿ ಬಾಸ್ಕೆಟರ ಪ್ರಾಣವು ಹಾರಿಹೋಗಿತ್ತು. ಶವವನ್ನು ತಿರುಪತ್ತೂರಿನಲ್ಲಿ ಭೂಗತವಮಾಡಿದರು.

ಕ್ಯೂಬಾದಲ್ಲಿ ದಂಗೆಯೆದ್ದಿದೆ!

ಮಾಜಿ ಕಾರ್ಯದರ್ಶಿಗಳ ಮರಣ

ಹವಾನಾ, ಮೇ ೮

ಕ್ಯೂಬಾ ಸರಕಾರದ ಸಮರ ಸಚಿವರಾಗಿದ್ದ ಸೀನಿಯರ್ ಅಂಟಾನಿಯೊ ಗ್ವಿಟೆರಾಸ್ ಎಂಬವರು ಆಶ್ಚರ್ಯಕರ ರೀತಿಯಿಂದ ಮರಣಹೊಂದಿದ್ದಾರೆ ೧೯೩೩ರ ಕ್ರಾಂತಿಯ ಪಿತೂರಿಯೊಂದರಲ್ಲಿ ಸೇರಿರುವರಿಂದ, ಇವರನ್ನು ಸರಕಾರದವರು ಸೆರೆಹಿಡಿಯುವ ಯತ್ನವನ್ನು ಮಾಡುತ್ತಿದ್ದರು ಇವರು ಮೋರಿಲ್ಲೋ ಕೋಟೆಯಲ್ಲಿ ಅಡಗಿದ್ದರು ಈಗ ಅವರು ಅಲ್ಲೇ ಮೃತರಾಗಿದ್ದಾರೆ.

ಕೊಮನ್ಸ್ ಸಭೆಯಲ್ಲಿ ಗಾಂಧಿಜೀಯವರನ್ನು ಹೊಗಳಿದರು.

ಲಂಡನ್, ಮೇ ೯

ಕೊಮನ್ಸ್ ಸಭೆಯಲ್ಲಿ ಲೋರ್ಡ್ ವುಲ್ಮರ್‌ರವರು ಭಾರತದೇಶದ ಮತಸಂಬಂಧ ಕಲಹದ ಸಂಬಂಧವಾದ ಸರಕಾರದ ಆಚರಣೆಯನ್ನು ಖಂಡಿಸಿದರು. ಹಿಂದೀಯರು ತಮ್ಮ ಅಂತಃಕಲಹಗಳನ್ನು ತಾವು ತೀರಿಸಿಕೊಳ್ಳಲು ಶಕ್ತರಾಗಿರುವುದಿಲ್ಲ ಅವರು ಸ್ವತಂತ್ರ ದೇಶಾಡಳಿತಕ್ಕೆ ಅನರ್ಹರು ಎನ್ನುತ್ತಾ 'ಮಹಾತ್ಮಾ ಗಾಂಧಿಯವರು ಅಸ್ಪೃಶ್ಯರ ಕೆಲವು ಉದ್ಧಾರಾರ್ಥ ಮಾಡುತ್ತಿರುವ ಸಾಹಸವು ಶ್ಲಾಘ್ಯವಾಗಿದೆ' ಎಂದರು

ಫ್ರಾಂಕೊ—ಸೊವಿಯಟ್ ಒಪ್ಪಂದ.

ಪೆರಿಸ್ ಮೇ ೬

ಫ್ರಾನ್ಸ್ ಮತ್ತು ಸೋವಿಯಟ್ ರಷ್ಯಾಗಳೊಳಗೆ ನಡೆದಿರುವ ಒಪ್ಪಂದದಲ್ಲಿ ಕೆಲವು ರಹಸ್ಯವಾದ ಶರ್ತಗಳಿವೆಯೆಂಬ ಆಲೋಚನೆಯು ತೀರಾ ಸುಳ್ಳೆಂದು ಪ್ರಕಟವಾಗಿದೆ ಸೋವಿಯಟ್ ಸರಕಾರಕ್ಕೆ ಫ್ರಾನ್ಸು ಸಾಲವನ್ನು ಕೊಡುವುದೆಂಬ ಸುದ್ದಿಯು ಸುಳ್ಳೆಂದು ತಿಳಿದುಬಂದಿದೆ

ಯೆಹೂದ್ಯರಿಗೆ ಪ್ರತ್ಯೇಕ ಪ್ರಾಂತ್ಯ.

ಮೊಸ್ಕೊ ಮೇ, ತಾ ೯.

ಸೋವಿಯಟ್ ರಷ್ಯಾದಲ್ಲಿ ಯೆಹೂದ್ಯರಿಗಾಗಿ ಒಂದು ಪ್ರತ್ಯೇಕ ಪ್ರಾಂತ್ಯರಚನೆಯಾಗಬೇಕೆಂದು ಸರಕಾರವು ಅಪ್ಪಣೆಕೊಟ್ಟಿದೆ ಬಿರೊ ಬಿಡ್‌ಜಾ ಎಂಬ ಪ್ರಾಂತ್ಯವನ್ನು ಅವರಿಗೆ ಕೊಡುವುದಾಗಿ ನಿರ್ಣಯವಾಗಿದೆ ಮುಂದಿನ ವರ್ಷದಲ್ಲಿ ಸುಮಾರು ೪೫೦೦೦ ಯೆಹೂದ್ಯರು ಈ ಪ್ರಾಂತ್ಯದಲ್ಲಿ ನೆಲೆಸುವರು

ಡ್ಯೂಕ್ ಒಫ್ ಮೆಂಚೆಸ್ಟರರನ್ನು ಶಿಕ್ಷಿಸಲಾಯಿತು

ಲಂಡನ್, ಮೇ, ೧೦.

ಡ್ಯೂಕ್ ಒಫ್ ಮೆಂಚೆಸ್ಟರರವರು ೩೫೦ ಪವನುಗಳನ್ನು ಮೋಸದಿಂದ ನುಂಗಿಹಾಕಲುದ್ಯುಕ್ತರಾದರೆಂಬ ಅಪಾದನೆಯ ಮೇಲೆ ಓಲ್ಡ್ ಬೈಲೀಕೋರ್ಟಿನಲ್ಲಿ ವಿಚಾರಣೆಗೊಳಗಾಗಿ ೯ ತಿಂಗಳ ಕಠಿಣ ಶಿಕ್ಷೆಗೊಳಗಾದರು ತಾಯಿಯು ಧರ್ಮಕಾರ್ಯಗಳಿಗೆಂದು ಕೊಟ್ಟ ನಗಗಳನ್ನು, ಕೊಟ್ಟ ಆಭರಣಗಳನ್ನೂ ಇವರು ತನ್ನ ಪತ್ನಿಗೆ ಕೊಟ್ಟು ಆಮೇಲೆ ಅವುಗಳನ್ನು ಮಾರಿಸಿದರು ಇದೇ ಅಪರಾಧವಾಯಿತು.

ಬ್ರಿಟನನ್ನು ಎಚ್ಚರಿಸಲಿಕ್ಕೆ

ಲಂಡನ್, ಮೇ ತಾ ೯,

ಬ್ರಿಟಿಷ ದ್ವೀಪಗಳ ಜನತೆಯನ್ನು ಅವರ ರಕ್ಷಣೆಗಾಗಿ ವೈಮಾನಿಕ ಹಾವಳಿಯಿಂದ ತಪ್ಪಿಸಿಕೊಳ್ಳಲು ಸೂಚನೆಕೊಡಬೇಕೆಂದೂ, ಈ ಬಗ್ಗೆ ಪ್ರಚಾರ ನಡೆಸಬೇಕೆಂದೂ ನಿರ್ಣಯಗಳಾಗಿವೆ ಯಾರಾದರೂ ದೇಶದ ಮೇಲೆ ಬೊಂಬೆಸೆದರೆ ಆಗ ತಾವೇನು ಮಾಡಿ ಹೇಗೆ ತಪ್ಪಿಸಿಕೊಳ್ಳಬೇಕೆಂಬ ಪಾಠವನ್ನು ಕೊಡಲಿರುವರು.

ಇಟೆಲಿಯು ಸಿಟ್ಟಿಗೆದ್ದಿತು!

ರೋಮ್, ತಾ ೧೦

ಎಬಿಸಿನಿಯಾ ಸರಕಾರಕ್ಕೆ ಬಾಹ್ಯರಾಷ್ಟ್ರಗಳ ಖಾಸಗಿ ಕಂಪೆನಿಗಳು ಶಸ್ತ್ರಾಸ್ತ್ರಗಳನ್ನು ಕಳುಹಿಸಿಕೊಡುತ್ತಿರುವುದರಿಂದ ತನಗೆ ಬಹು ದುಃಖವಿದೆಯೆಂದೂ ಇತರ ರಾಷ್ಟ್ರಗಳು ಎಬಿಸೀನಿಯಾದೊಡನೆ ಶಸ್ತ್ರಾಸ್ತ್ರಗಳ ಸಂಬಂಧವಾಗಿ ಇಟ್ಟುಕೊಳ್ಳುವ ವಿಷಯದಲ್ಲಿ ತನ್ನ ಒಡನೆ ಕೇಳಬೇಕೆಂದು ಇಟೆಲಿಯು ತಿಳಿಸಿದೆ

ಲಾವಲ್‌ರವರ ಕೊಲೆಗೆ ಯತ್ನ.

ಪಾರಿಸ್ ಮೇ ೧೧

ಫ್ರಾನ್ಸಿನ ಸಚಿವನಾಗಿರುವ ಲಾವಲ್‌ರವರನ್ನು ಕೊಲೆ ಮಾಡಬೇಕೆಂಬ ಪಿತೂರಿ ನಡೆಯುವ ಸಂಭವವಿದೆಯೆಂದ ಕೆಲವು ರಹಸ್ಯಗಳಿಂದ ತಿಳಿದುಬಂದುದರ ಫಲವಾಗಿ ಫ್ರೆಂಚ್ ಮತ್ತು ಪೋಲೆಂಡಿನ ಪೋಲೀಸರು ಒಂದಾಗಿ ರಕ್ಷಣೆಯ ಯತ್ನಗಳಲ್ಲಿ ಮಗ್ನರಾಗಿರುವರು

ಭಾರತೀಯ ಚಿತ್ರಗಾರನ ಪ್ರಶಂಸೆ.

ಲಂಡನ್ ಮೇ ೧೧

ಮುಂಬಯಿಯ ಚಿತ್ರಕಾರರಾದ ಫೈಜೀರಹಾಮಿನ್ ಎಂಬವರು ಲಂಡನ್ನಲ್ಲಿ ಪ್ರಶಂಸಿಸಲ್ಪಡುತ್ತಿದ್ದಾರೆ ಮೆಸರ್ಸ್ ರಾಲ್ಫಾಗಿ ಎಂಡ್ ಕಂಪೆನಿಯವರು ತಮ್ಮ ಅಂಗಡಿಯಲ್ಲಿ ಮೂರು ವರ್ಷಗಳಿಂದಲೂ ಇವರ ಚಿತ್ರಗಳನ್ನು ಪ್ರದರ್ಶಿಸುತ್ತಿದ್ದಾರೆ ಇವರು ಚಿತ್ರಿಸಿದ ಪರ್ವತಗಳ ದೃಶ್ಯಗಳು ಜನರ ಮೆಚ್ಚುಗೆಗೆ ಪಾತ್ರವಾದವು ಶಾಸ್ತ್ರೀಯದ ಚಿತ್ರವೊಂದು ಪೂರ್ಣವಾಗಿ ಶ್ಲಾಘ್ಯವೆಂದೆನಿಸಿದೆ.

ಇಂಗ್ಲೆಂಡಿನಿಂದ ಜಪಾನಿಗೆ ಹಾರಾಟ.

ಲಂಡನ್ ಮೇ ೧೩

ಜಪಾನಿನ ಪ್ರಖ್ಯಾತ ವೈಮಾನಿಕನಾದ ಕಟುಸಿಷ್ಟ ರಿಯೋನೋ ಎಂಬವನ ಹೆಸ್ಟನ್ ಎಂಬಲ್ಲಿಂದ ಈ ದಿನ ಬೆಳಗ್ಗೆ ೮ ಗಂಟೆಗೆ ಬ್ರುಸೆಲ್ಸ್ ವಿಯನ್ನಾ ಬೆಲ್ಗ್ರೇಡ್ ಇಸ್ತನ್‌ಬುಲ್ ಬಗ್ದಾದ್ ಕರಾಚಿ, ಕಲ್ಕತ್ತಾ, ರಂಗೂನು ಬ್ಯಾಂಕೋಕ್ ಮತ್ತು ಶಂಘ್ಯಾಯ ಮಾರ್ಗವಾಗಿ ಟೋಕಿಯೋಗೆ ಹಾರಿದನು ಇಂಗ್ಲೆಂಡು, ಜಪಾನುಗಳೊಳಗೆ ವೈಮಾನಿಕ ಪಥವೊಂದನ್ನು ಕಂಡುಹಿಡಿಯುವುದೇ ಈ ಹಾರಾಟದ ಉದ್ದೇಶ

ಶ್ರೀ॥ ಭೋಸರ ಸ್ಥಿತಿ

ಮೆಲ್ಲನೆ ಗುಣಮುಖರಾಗುತ್ತಿರುವರು.

ವಿಯೆನ್ನಾ, ಮೇ ೧೩

ಶ್ರೀ॥ ಸುಭಾಷ್‌ಚಂದ್ರ ಭೋಸರು ಉದರಚಿಕಿತ್ಸೆಯನ್ನು ಮಾಡಿಕೊಂಡ ಮೇಲೆ ನಿರೀಕ್ಷಿಸಿದಷ್ಟು ಸ್ವಸ್ಥರಾಗಿರುವುದಿಲ್ಲ ಅವರು ಕೆಲವು ಸಮಯದ ವರೆಗೆ ಆಸ್ಪತ್ರೆಯಲ್ಲಿರಬೇಕಾದೀತೆಂದು ಊಹಿಸಲ್ಪಟ್ಟಿದೆ

ಮಾರ್ಷಲ್ ಪಿಲ್ಸುಡ್‌ಸ್ಕಿಯವರ ಮರಣ!

ಪೋಲೆಂಡಿನ ನಷ್ಟ!

ವಾರ್ಸಾ, ಮೇ ೧೩

ಪೋಲೆಂಡಿನ ನಿರ್ಮಾಣಕರಾದ ಯೂರೋಪಿನ ಪ್ರಸಿದ್ಧ ವ್ಯಕ್ತಿ ಮಾರ್ಷಲ್ ಪಿಲ್ಸುಡ್‌ಸ್ಕಿ ಎಂಬವರು ಈ ದಿನ ರಾತ್ರಿ ೯-೪೫ಕ್ಕೆ ಕಾಲವಾದರು. ಇವರು ರಕ್ಷಿಸಿದ ದೇಶದ ಸ್ವರಣಾರ್ಥ ಸಮಾರಂಭವು ಜರಗುತ್ತಿರುವಾಗಲೆ ಅದೇ ದಿನ ಇವರು ದಿವಂಗತರಾದರು.

ಚುಟುಕು ವಾರ್ತೆ

ಕಲ್ಕತ್ತದಲ್ಲಿ ಎರಡು ಬೆಂಕಿಯ ಯಂತ್ರಗಳು ಡಿಕ್ಕಿ ಹೊಡೆದುಕೊಂಡು, ರೂಪಗೆಟ್ಟು ಹಾಳಾಗಿ, ಆರು ಮಂದಿ ಕೆಲಸಗಾರರು ಜಖಂಗೊಂಡಿರುವರು.

ಮದ್ರಾಸಿನ ಕೊಂಗ್ರೆಸ್ ಚಳವಳಿಯನ್ನು ಶ್ರೀ ಶ್ರೀನಿವಾಸ ಅಯ್ಯಂಗಾರರು ಕೈಬಿಟ್ಟು ನಡೆಸಬೇಕೆಂದು ನಿರ್ಣಯವಾಗಿದೆ

ವಿದರ್ಭದಲ್ಲಿ ತನ್ನ ಸಂಬಂಧಿಕನನ್ನು ಕೊಂದ ಬೂಂದಿತಗ್ರು ಎಂಬವನನ್ನು ಫಾಶಿಗೆ ಗುರಿಮಾಡಿರುವರು

ಅಲ್ಲಹಾಬಾದ್ ಮುನಿಸಿಪಲ್ ಚುನಾವಣೆಗೆ ಕೊಂಗ್ರೆಸ್ ಪಕ್ಷೀಯರು ನಿಂತಿರುವರು

ಕಾಶಿಯಲ್ಲಿ ಬೆಳ್ಳಿಯ ನಗಗಳನ್ನು ತೊಟ್ಟುಕೊಂಡಿದ್ದ ೬ ವರ್ಷ ಪ್ರಾಯದ ಬಾಲಕಿಯನ್ನೂ ಒಂದು ವರ್ಷದ ಮಗುವನ್ನೂ ಕೊಂದು ಶವಗಳನ್ನು ಕೆರೆಗೆ ಬಿಸಾಡಿರುವರು

ಲಾಹೋರಿನಲ್ಲಿ ಅತ್ತೆ ಸೊಸೆಯರೊಳಗೆ ಭೂಮಿಯ ವಿಷಯವಾಗಿ ವಿವಾದವೆದ್ದು ಅತ್ತೆಯು ಕೊಲೆಯಾಗಲ್ಪಟ್ಟಿರುವಳು

ಭಾರತದಲ್ಲಿ ಸಿಲ್ವರ್ ಜುಬಿಲಿಯು ಅತ್ಯಂತ ಯಶಸ್ವಿಯಾಗಿ ನಡೆದುದಕ್ಕಾಗಿ ತನ್ನ ಧನ್ಯವಾದಗಳೆಂದು ಸಾರ್ವಭೌಮರು ಸೂಚಿಸಿರುವರು.

ಲಾಹೋರಿನಲ್ಲಿ ಕಲ್ಲಿದ್ದಲ ಹುಡಿಯನ್ನು ಹೆಕ್ಕುತ್ತಿದ್ದ ಎಂಟು ವರ್ಷ ವಯಸ್ಸಿನ ಬಾಲಕಿಯ ಕೈಯಮೇಲೆ ರೈಲು ನಡೆದು ಕೈತುಂಡಾಗಿದೆ

ಮೇ ೧೪ನೇ ದಿನ ಮುಂಬಾಯಿಯ ಭೂಸ್ಥಿತಿ ಸೂಚಕ ಯಂತ್ರವು ತೋರಿಸಿದ ಮಂತೆ ೧೪೯೦ ಮೈಲುಗಳ ದೂರದಲ್ಲಿ ಸಣ್ಣ ಭೂಕಂಪವಾಗಿದೆಯೆಂದು ತಿಳಿದು ಬಂದಿದೆ

ಬರೆಲ್ಲಿಯಲ್ಲಿ ನ ತಂಬಾಕಿನ ಸಕ್ಕರೆಯ ಕಾರ್ಖಾನೆಯು ಸುಟ್ಟು ಬೂದಿಯಾಗಿದೆ ನಷ್ಟವು ಕಡಿಮೆಯಾಗಿರುವುದಿಲ್ಲ

ಭುವನೇಶ್ವರಿಯಲ್ಲಿ ಚಟನಿಯ ದಿನಾಚರಣೆಯ ದಿನದಲ್ಲಿ ಭಾಷಣಮಾಡುವಾಗ ಪಂಡಿತ ಲಕ್ಷ್ಮೀನಾರಾಯಣ ಮಿಶ್ರಾ ಎಂಬ ಕೊಂಗ್ರೆಸ ಧುರೀಣರನ್ನು ಸೆರೆಹಿಡಿದಿರುವರು

ಪಾಟಿಯಾಲ ಮಹಾರಾಜರ ಪುತ್ರಿಯನ್ನು ಝಬುವಾದ ಮಹಾರಾಜರ ಪುತ್ರನಿಗೆ ಕೊಟ್ಟು ವಿವಾಹವಾಗುವುದೆಂದು ನಿರ್ಣಯವಾಗಿದ್ದರೂ ಆ ವಿವಾಹವು ರದ್ದಾಗಿದೆ.

ಬಿಹಾರದ ಡಿಸ್ಟ್ರಿಕ್ಟ್ ಬೋರ್ಡ್ ಚೆಯರ್‌ಮನ್‌ರಾದ ಖುರ್ಶಿದಾಮರು ಮೋಟಾರು ಅಪಘಾತಕ್ಕೆ ಸಿಕ್ಕಿ ಅವರ ತೋಳು ಮುರಿದುಬಿಟ್ಟಿದೆ

ಆಗ್ರಾದಲ್ಲಿನ ಚಂದ್ರಾಪುರದಲ್ಲಿ ಭಿಖಾರಿ ಶಿವಲಾಲ್ ಎಂಬ ಮಾರ್ವಾಡಿಯನ್ನು ೩೪ ಮಂದಿ ಹೊಡೆದು ಕೊಂದು ಹಾಕಿ ಅವನಲ್ಲಿದ್ದುದನ್ನು ದೋಚಿಕೊಂಡರು

ಮೆ ತಾ ೧೧—೧೨ರಲ್ಲಿ ಕಲ್ಕತ್ತದಲ್ಲಿ ೧೧೦ ಡಿಗ್ರಿಗಳ ಉಷ್ಣವು ಎದ್ದು ಜನರು ತಾಪದಿಂದ ಬೆಂದರು

ರಂಗೂನಿನಲ್ಲಿ ೧೪೦೦ ಬೆಳ್ಳಿಯ ನಾಣ್ಯಗಳ ಪೆಟ್ಟಿಗೆಯಲ್ಲಿದ್ದ ಬಾವೀ ಎಂಬವನನ್ನೂ ಅವನ ಪತ್ನಿಯನ್ನೂ ದೋಚಿರುವರು

ಎಟ್ಟಾವಾ ಜಿಲ್ಲೆಯಲ್ಲಿ ಶಾರದಾ ಶಾಸನವನ್ನು ಮೀರಿ ವರ್ಷಕ್ಕೆ ಒಂದು ಸಾವಿರ ಬಾಲ್ಯವಿವಾಹಗಳು ಜರಗುತ್ತವೆಂದು ಜಿಲ್ಲಾ ಆರ್ಯ ಪರಿಷತ್ತಿನವರ ಹೇಳಿಕೆ

ನೈನಿತಾಲ್ ಮೇ ತಾ ೧೩

ಈ ದಿನ ಬೆಳಗ್ಗೆ ಕಠಗೋದಾಂ ಮತ್ತು ನೈನಿತಾಲದಲ್ಲಿ ಒಂದು ಭಯಂಕರ ಮೋಟಾರ್ ಅಪಘಾತವು ಸಂಭವಿಸಿತು. ಡ್ರೈವರನು ಎದುರಿನಿಂದ ಬರುವ ಲೋರಿಗೆ ಮಾರ್ಗವನ್ನು ಬಿಟ್ಟುಕೊಡುವುದಕ್ಕಾಗಿ ಕಾರನ್ನು ಎಡ ಬದಿಗೆ ತಿರುಗಿಸಲು, ಕಾರು ನೂರು ಗಜ ಆಳದ ಕಣಿವೆಗೆ ಬಿದ್ದು ಹುಡಿ ಹುಡಿಯಾಯಿತು ಅದರಲ್ಲಿದ್ದ ಅಲ್ಲಹಾಬಾದಿನ ಹೈಕೋರ್ಟಿನ ಜಸ್ಟಿಸ್ ಸರ್ ಚಾರ್ಲ್ಸ್ ಕಿಂಗಲರು ಆಗಲೇ ಮೃತರಾದರು ಡ್ರೈವರನು ಜಖಂಗೊಂಡಿರುವನು. ಎಲ್ಲೆಲ್ಲೂ ವ್ಯಸನ ಸೂಚನೆಯಾಗಿದೆ

ದೀನಬಂಧು ಎಂಡ್ರೂಸರು.

ಮುಂಬಾಯಿ ಮೇ ತಾ. ೧೦

"ನಾನು ಹಿಂದೂದೇಶಕ್ಕೆ ವಿಶಿಷ್ಟವಾದ ಉದ್ದೇಶವನ್ನಿಟ್ಟುಕೊಂಡೇ ಬಂದಿರುತ್ತೇನೆ. ನಾನು ರಾಜಕೀಯ ವಿಷಯವಾಗಿ ಯಾವ ಮಾತುಕತೆಗಳನ್ನು ನಡೆಸುವುದಕ್ಕೂ ಗಾಂಧಿಜೀಯವರ ಒಳಗೆ ಹೋಗುವುದಿಲ್ಲ. ಇಂಡಿಯಾ ಬಿಲ್ ಹಿಂದ ದೇಶಕ್ಕೆ ಎಷ್ಟು ಮಾತ್ರವೂ ಸ್ವೀಕಾರ ಯೋಗ್ಯವಾಗಿಲ್ಲ—ನಾನು ಪಂಡಿತ ಜವಾಹರಲಾಲರ ಬಿಡುಗಡೆಗೆ ಪ್ರಯತ್ನಿಸಿ ಸೋತುದು ಹೌದು—ಜನರಲ್ ಸ್ಮಟ್ಸರು ವೈಸರಾಯರಾಗಿ ನೇಮಕ ಹೊಂದುವ ಸ ದಿಯು ಪಶ್ಚಿಮ ದೇಶಗಳಲ್ಲಿ ಇಲ್ಲ. ಲಾರ್ಡ ಲಿನ್‌ಲಿತ್‌ಗೋ ಮತ್ತು ಲೋರ್ಡ್ ಲೊಧಿಯನರ ಹೆಸರುಗಳು ಮುಂದಿವೆ"ಯೆಂದು ಸಿ ಎಫ್ ಆಂಡ್ರೂಸರು ಪತ್ರಿಕಾಪ್ರತಿನಿಧಿಗಳಿಗೆ ತಿಳಿಸಿರುತ್ತಾರೆ.

ರೈಲ್ವೆಯ ಆಯ ಇಳಿಯಿತು.

ಸಿಮ್ಲಾ ಮೇ ೧-೧೦

ಏಪ್ರಿಲ ತಿಂಗಳಲ್ಲಿ ರೈಲ್ವೆಯ ಆಯವು ಕಾಲುಕೋಟಿಯಷ್ಟಕ್ಕೆ ಇಳಿದಿದೆ ವ್ಯಾಪಾರವು ಇಳಿಮುಖವಾದುದರಿಂದ ಯು ಕೆ ರೈಲ್ವೆಯ ಆದಾಯವು ಕಡಮೆಯಾಗಿದೆ

ಸಿಲ್ವರ್ ಜುಬಿಲಿ ಬಹಿಷ್ಕಾರ

ಸಾಹಿತ್ಯವನ್ನು ಹಂಚುವುದಕ್ಕಾಗಿ ಡಿಲ್ಲಿಯಲ್ಲಿ ಹಲವು ಕೊಂಗ್ರೆಸ್ ಕೆಲಸಗಾರರನ್ನು ಸೆರೆ ಹಿಡಿದಿದ್ದಾರೆ ಹಲವರ ಮನೆಗಳು ಜಡ್ತಿಗೊಳಗಾಗಿವೆ

ಪಂಡಿತ ಜವಾಹರಲಾಲರು.

ತಾ ೧೫ನೇ ದಿನ ಭೋವಾಲಿಗೆ ಪೋಲೀಸ್ ರಕ್ಷಣೆಯೊಂದಿಗೆ ಹೋಗಿ ಅಲ್ಲಿ ಸ್ಯಾನಟೋರಿಯಂನಲ್ಲಿ ತಾವಿಳಲ್ಲಿ ತೆರಳಿರುವ ತನ್ನ ಪತ್ನಿ ಕಮಲಾ ನೆಹರೂರವರನ್ನು ಕೊನೆಯ ಸಲಕ್ಕಾಗಿ ನೋಡಿ ಹಿಂದಿರುಗಿದರು

ಕಲ್ಕತ್ತಾ ಸ್ನೋಯರರ ಚುನಾವಣೆಯ ಕಾಲದಲ್ಲಿಯೇ ಮಿ ಸಂತ ಕುಮಾರರಾಯ್ ಚೌಧುರಿಯವರು ದಿವ್ಯುಟಿ ಮೇಯರಾಗಿ ಚುನಾಯಿತರಾದರು

ಅಗ್ರಾದಲ್ಲಿ ಸೀರಿನ ಸರಬರಾಜನ್ನು ಸರಿಯಾಗಿ ಮಾಡದ್ದಕ್ಕಾಗಿ ಮುನಿಸಿಪಾಲಿಟಿಯ ಚೆಯರ್‌ಮೇನರು ವಾಟರ್ ಸುಪರಿಂಟೆಂಡೆಂಟರಾದ ಜುಹೇಶ್ವರ ಭಟ್ಟರೆಂಬವರನ್ನು ಕೆಲಸದಿಂದ ತೆಗೆದಿದ್ದಾರೆ

ರಂಗೂನಿನಲ್ಲಿ ಬಿರುಗಾಳಿ.

ರಂಗೂನಿನಲ್ಲಿ ಭಯಂಕರ ಬಿರುಗಾಳಿಯು ಬೀಸಿ ಇಬ್ಬರು ಬರ್ಮೀಯ ಹುಡುಗಿಯರು ಒಂದು ಮರದಡಿಗೆ ಬಿದ್ದು ಮೃತರಾದರು ಒಂದು ಚಪ್ಪರವು ಬಿದ್ದು ಹಲವು ವಿದ್ಯಾರ್ಥಿಗಳು ಸುಚ್ಚುನೂರಾದರು ಒಬ್ಬ ರೈತನ ಮೇಲೆ ಒಂದು ಮರವು ಬಿದ್ದು ಅವನು ಗಾಯಗೊಂಡನು

ಇಂಜಿನಿಯರನಿಗೆ ಹೊಡೆತ

ಕೊಲಂಬೋದಲ್ಲಿ ನಾಲ್ಕು ಮಂದಿ ಕೂಲಿಗಳು ಒಂದಾಗಿ ಹಾರ್ಬರ ಎಂಜಿನಿಯರ್ಸ್ ಡಿಪಾರ್ಟ್‌ಮೆಂಟಿನಲ್ಲಿ ಎಂಜಿನಿಯರಾಗಿದ್ದ ಮಿ ಸ್ಮಿತ್ ಎಂಬವರಿಗೆ ಕಬ್ಬಿಣದ ಸರಳಿನಿಂದ ಹೊಡೆದು ಗಾಯಗೊಳಿಸುವರು ಅವರನ್ನು ಸೆರೆಹಿಡಿದಿದ್ದರು ಸ್ಮಿತರು ಸಿಂಗಾಶಾಸ್ಪತ್ರೆಯಲ್ಲಿರುವರು

ಲಂಡನಿನಲ್ಲಿ ಮಸೀದಿ

ಲಂಡನ್ ನಗರದಲ್ಲಿ ಅತಿ ಭವ್ಯವಾದ ಒಂದು ಮಸೀದಿಯನ್ನು ಕಟ್ಟುತ್ತಿದ್ದಾರೆ ಹೈದರಾಬಾದಿನ ನೈಜಾಮರು ಇದರ ಕೆಲಸಕ್ಕಾಗಿ ೬೦ ಸಾವಿರ ಪವನುಗಳನ್ನು ಕೊಟ್ಟಿರುವರು ಕೆಲಸವು ನಡೆಯುತ್ತಲಿದೆ

ಭೂಕಂದಾಯವು ಕಡಮೆಯಾಯಿತು

ಕಪ್ಪೂರ್ಥಲಾದಲ್ಲಿ ೧,೫೦,೦೦೦ ರೂಪಾಯಿಗಳ ರಿಯಾಯಿತಿಯನ್ನು ಭೂಕಂದಾಯದಲ್ಲಿ ತೋರಿಸಲಾಗಿದೆ 'ಯಾವಾಗಲೂ ಸರಕಾರವನ್ನೇ ಅವಲಂಬಿಸಿಕೊಂಡಿರಬಾರದು ಖರ್ಚು ಕಡಮೆಮಾಡಿ ನಿಮ್ಮನ್ನು ನೀವೇ ಸ್ಥಿರಗೊಳಿಸಬೇಕು' ಎಂದು ಚೀಫ್ ಮಿನಿಸ್ಟರರ ಹೇಳಿಕೆ

ಕಾರಿಗೆ ಬೆಂಕಿಕೊಟ್ಟರು

ಅಡೋನಿಯ ಪೋಲೀಸ್ ಸುಪರಿಂಟೆಂಡೆಂಟರಾದ ಶ್ರೀ ವಿ ಆರ ರ ಐರತ್ನಮರವರು ಕೊಲ್ಲೂರಿನಲ್ಲಿ ಕ್ಯಾಂಪ್ ಮಾಡುತ್ತಿದ್ದು ತನ್ನ ಮೋಟಾರನ್ನು ರಾತ್ರಿ ಹೊರಗಿಟ್ಟಿದ್ದರು ಬೆಳಗಾಗುತ್ತಲೇ ಅದು ಸುಟ್ಟು ಹೋಗಿದ್ದಿತು. ಬೆಂಕಿ ಕೊಟ್ಟವರ ಪತ್ತೆಯಾಗಿಲ್ಲ

ಕರಾಚಿಯ ಪೋಲೀಸರು ೧೩ ಜನ ಜೂಜುಕೋರರನ್ನು ದಸ್ತು ಮಾಡಿದರು ಇವರಲ್ಲಿ ಅನೇಕರು ಹಿಂದೆ ಇದೇ ಅಪರಾಧಕ್ಕಾಗಿ ಶಿಕ್ಷಿಸಲ್ಪಟ್ಟಿದ್ದರು

ಮುಂಬಾಯಿಯ ರಾಣಿ ಕಾಮ ಗಾರ್ಡನ ಸಮೀಪದಲ್ಲಿ ಒಬ್ಬನಿಗೆ ಪೋಲೀಸನೊಬ್ಬನು ಇರಿದು ಜಖಂಗೊಂಡನು

೫೦ ಮಂದಿ ಸ್ಮೃತಿತಪ್ಪಿ ಬಿದ್ದರು!
ಸಾರ್ವಭೌಮರನ್ನು ನೋಡುವ ಆತ್ಯಾತುರ!

ಸಾರ್ವಭೌಮರ ಸಿಲ್ವರ್ ಜುಬಿಲಿಯ ಅಂತ್ಯೋತ್ಸವದ ದಿನ ಅವರನ್ನು ಕಾಣುವ ಅತ್ಯಾತುರದಿಂದ ಸ್ತ್ರೀ ಪುರುಷರು ಮಾರ್ಗಗಳಲ್ಲಿ ನುಗ್ಗಿ ನುಚ್ಚುನೂರಾದರು ಒಟ್ಟು ೫೦ ಮಂದಿ ಸ್ಮೃತಿತಪ್ಪಿ ಕ್ವೀನ್ ವಿಕ್ಟೋರಿಯಾ ಎಂಬ್ಯುಲೆನ್ಸ್ ಸ್ಟೇಶನಿನಲ್ಲಿ ಚಿಕಿತ್ಸೆಹೊಂದಿದರು.

ಲಾವಲರು ಸ್ಟೆಲಿನರ ಭೇಟಿಮಾಡುವರು
ಫ್ರಾನ್ಸ್ ರಷ್ಯಾಗಳ ಸಂಧಾನ.

ಮೋಸ್ಕೊ ಮೇ ೧೩

ಫ್ರಾನ್ಸ ಮತ್ತು ರಷ್ಯಾಗಳೊಳಗಣ ಮೈತ್ರಿ ಸಂಪಾದನೆಯ ದೃಷ್ಟಿಯಿಂದ ಫ್ರಾನ್ಸಿನ ಸಚಿವರಾದ ಲಾವಲರು ರಷ್ಯಕ್ಕೆ ಹೋಗಿ ಅಲ್ಲಿಯ ಅಧಿಪತಿಗಳಾದ ಸ್ಟೆಲಿನರನ್ನು ಸಂದರ್ಶಿಸಲಿರುವರು. ಈ ಸಂಧಾನ ಯತ್ನ ಚಾರಿತ್ರಿಕವಾಗಿ ನಿಲ್ಲುವುದೆ ದು ಸೋವಿಯಟ್ ಜನರ ಮತ

ಭಾರತೀಯ ಕಲೆಯ ಪುನರುಜ್ಜೀವನ—ಸರ್ ಸಿ. ವಿ. ರಾಮನ್‌ರವರ ಭಾಷಣ

ದಿವಂಗತ ನಾಟಕ ಶಿರೋಮಣಿ ಎ ವಿ ವರದಾಚಾರ್ಯರ ಸ್ಮಾರಕಾರ್ಥವಾಗಿ ಏರ್ಪಡಿಸಿದ್ದ ಉತ್ಸವದ ಪ್ರಾರಂಭವನ್ನು ಸರ್ ಸಿ ವಿ ರಾಮನ್‌ರವರು ನೆರವೇರಿಸಿದರು ಆ ಸಂದರ್ಭದಲ್ಲಿ ಶ್ರೀ ರಾಮನ್‌ರವರು ಮಾಡಿದ ಆರಂಭ ಭಾಷಣದ ಸಾರಾಂಶವಿದು.

ನಮ್ಮ ದೇಶದಲ್ಲಿ ಪ್ರಾಚೀನ ಕಲಾಸಂಪತ್ತು ಬೇಕಾದಷ್ಟಿದೆ ಅಜಂತ ಗುಹೆಗಳ ಚಿತ್ರಚಿತ್ರಗಳು ಮಧುರಾ

ಸರ್ ಸಿ ವಿ ರಾಮನ್‌ರವರು

ತಿರುಚಿನಾಪಳ್ಳಿಗಳ ಶಿಲಾಶಿಲ್ಪ ವೈಭವ, ತಾಜಮಹಾಲ್ ಮತ್ತು ಗುಂಬಜ್‌ಗಳ ವಾಸ್ತುಶಿಲ್ಪ ವೈಖರಿ ಇವೆಲ್ಲಾ ಇವೆ ಕಾಳಿದಾಸ, ಭಾಸರಂಥ ಮಹಾಕವಿಗಳು ಸಂಸ್ಕೃತ ಸಾಹಿತ್ಯವನ್ನು ಅಮರವನ್ನಾಗಿ ಮಾಡಿದ್ದಾರೆ.

ಆ ಕಲಾಸಂಪತ್ತನ್ನು ನಾವು ವೃದ್ಧಿಪಡಿಸಿಕೊಂಡು ಹೋಗಬೇಕಾಗಿದೆ ಪ್ರತಿಭಾಶಾಲಿಗಳಾದ ಕಲಾಕೋವಿದರೂ ಕಲಾ ವಿಮರ್ಶಕರೂ ಅನೇಕ ಮಂದಿ ಹುಟ್ಟಬೇಕಾಗಿದೆ ಈಗ ಕೆಲವು ವರ್ಷಗಳಿಂದ ಸಮಸ್ತ ಭಾರತದಲ್ಲಿಯೂ ಕಲೆಯ ಪುನರುಜ್ಜೀವನಕ್ಕಾಗಿ ಪ್ರಯತ್ನಗಳು ನಡೆಯುತ್ತಿರುವುದು ನಿಜ. ಇದಕ್ಕೆ ಬಂಗಾಳದ ಚಿತ್ರಕಲಾಮಾರ್ಗ ಶಾಂತಿನಿಕೇತನ ಮತ್ತು ದಾಕ್ಷಿಣಾತ್ಯ ಸಂಗೀತದ ಅಭಿವೃದ್ಧಿ ಇವೇ ಉದಾಹರಣೆಗಳು

ನಮಗೆ ಬೇಕಾದಷ್ಟು ಪ್ರಾಚೀನ ಕಲಾಸಂಪತ್ತಿದೆ ಹಿಂದಿನ ವೈಭವವನ್ನು ನೆನೆಸಿಕೊಂಡು ಸುಖಪಡುತ್ತಾ ಕಾಲಕಳೆದರಾಗದು ಭವಿಷ್ಯದ ಕಡೆಗೂ ನಮ್ಮ ದೃಷ್ಟಿ ಹರಿಯಬೇಕು ಗತವೈಭವದಲ್ಲಿಯೇ ತೃಪ್ತರಾಗಿರುವುದು ವರ್ತಮಾನ ಕಾಲವನ್ನು ಹಳಿದಂತೆ. ಯಾವ ಜನಾಂಗವು ಹಿಂದಿನ ವೈಭವವನ್ನು ಮಾತ್ರ ಹಿಡಿದು ಮುಂದುವರಿಯದಿರುವುದೋ ಅದು ಅವನತಿಯನ್ನೈದುವುದು ಈ ದೃಷ್ಟಿಯಿಂದ, ಇಂಡಿಯಾ ದೇಶದಲ್ಲಿ ಈಗ ಅಲ್ಲಲ್ಲಿ ಕಂಡುಬರುತ್ತಿರುವ ಕಲಾಪುನರುಜ್ಜೀವನ ಪ್ರಯತ್ನಗಳು ಶುಭಚಿಹ್ನೆಗಳು

ವಜ್ರಗಳು! —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ್'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ 'ಎಕ್ಸ್‌ಟ್ರಾ ವ್ಹಾಹಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು

Part Proprietors of —

Sri Krishna Mills & Co
Bunder, Mangalore

Bhagavan Ganesh Pai & Co
Copper Sheet & Twist Merchants, Camp Bazar, Cannanore.

Representatives for the W C

M/s A & F Harvey
Cotton Spinners
Tuticorin, Madura &c.

Guardian Assurance Co, Ltd
(Incorporated in England)
Head Office 68, King William Street, London, E C 4

ಮಂಗಳೂರು

ಥಿಯೊಸೊಫಿಕಲ್ ಸೊಸೈಟಿಯು ಸ್ಥಾಪಕಾಚಾರ್ಯರಲ್ಲಿ ಒಬ್ಬರಾಗಿದ್ದ ಮೇಡಂ ಬ್ಲಾವಟ್ಸ್ಕಿಯವರ ಮರಣ ದಿನಾಚರಣೆಯನ್ನು ಇಲ್ಲಿಯ ಥಿಯೊಸೊಫಿಕಲ್ ಲೋಜಿನವರು ಇದೇ ತಾ. ೮ರಲ್ಲಿ, ಬಿಸೆಂಟ್ ಗರ್ಲ್ಸ ಸ್ಕೂಲಿನಲ್ಲಿ ಶ್ರೀ ಎಂ. ನರಸಿಂಗ ರಾವ್, ಇವರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಶ್ರೀ ಎಂ. ದಾಮೋದರ ಶೆಣೆಯವರು ಬ್ಲಾವಟ್ಸ್ಕಿಯವರ ಜೀವನಸಂದೇಶವನ್ನು ಓದಿದರು. ಈ ಸಂದರ್ಭದಲ್ಲಿ ಬಿಸೆಂಟ್ ಗರ್ಲ್ಸ ಸ್ಕೂಲಿನ ಬೋರ್ಡಿಂಗ್ ಹೌಸಿನ ಶಂಕುಸ್ಥಾಪನೆಯೂ ಆಯಿತು.

ದಕ್ಷಿಣ ಕನ್ನಡ ಜಿಲ್ಲಾ ಮರೆಯಾಳ ಬೋರ್ಡಿಯರ ತೃತೀಯ ಪರಿಷತ್ತು ಇದೇ ತಿಂಗಳ ತಾ. ೧೯ ಮತ್ತು ೨೦ರಲ್ಲಿ ನೀಲೇಶ್ವರ ರಾಜಾ ಹೈಸ್ಕೂಲಿನಲ್ಲಿ, ತಹಶೀಲ್ದಾರರಾದ ಮಾ। ರಾ। ಯು. ಕುಮಾರಯ್ಯ, ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಜರಗುವುದು. ಪರಿಷತ್ತಿನ ಆರಂಭೋತ್ಸವವನ್ನು ಶ್ರೀ ಎ. ಬಿ ಶೆಟ್ಟಿ ಇವರು ನೆರವೇರಿಸುವರು ಸ್ವಜಾತಿ ಬಾಂಧವರಿಗೆಲ್ಲರಿಗೂ ಸುಸ್ವಾಗತವಿದೆ.

ನಮ್ಮ ನಗರದ ಆರೋಗ್ಯ ವರದಿಯು ತಿಳಿಸುವಂತೆ ಇದೇ ೧೧-೫-೩೪ಕ್ಕೆ ಅಂತ್ಯವಾದ ವಾರದಲ್ಲಿ ೧೪ ಮರಣಗಳೂ ೮೪ ಜನನಗಳೂ ಆಗಿವೆಯೆಂದು ಗೊತ್ತಾಗಿದೆ. ವರದಿಯ ವಾರದಲ್ಲಿ ಸಿಡುಬು ರೋಗವು ಎಲ್ಲಿಯೂ ಇದ್ದಂತೆ ಕಂಡುಬರುವುದಿಲ್ಲವೆಂಬುದು ಸಂತೋಷಕರ ವಾರ್ತೆ. ಮಳೆಗಾಲವು ಸಮೀಪಿಸುತ್ತಿರುವುದೇ ಇದಕ್ಕೆ ಕಾರಣವಾಗಿರಬಹುದು

ಬಹು ಸಮಯದಿಂದ ಮಂಗಳೂರಿನ ಪಬ್ಲಿಕ್ ಪ್ರೊಸಿಕ್ಯೂಟರರಾಗಿದ್ದ ರಾವ್ ಸಾಹೇಬ್ ಎ. ಜೆ. ಲೋಬೋ ಇವರು ಮದ್ರಾಸಿನಿಂದ ಇಲ್ಲಿಗೆ ಬಂದವರು ಇದೇ ತಿಂಗಳ ತಾ. ೧೦ರಲ್ಲು ಕಾಲಾಧೀನರಾದರೆಂಬುದು ತಿಳಿಸಲು ವಿಷಾದಿಸುತ್ತೇವೆ.

ಇಲ್ಲಿಯ ಹಂಪನಕಟ್ಟೆಯಲ್ಲಿ ಹೊಸದಾಗಿ ಕಟ್ಟಿಸಲ್ಪಟ್ಟ ಫೆಲಿಕ್ಸ್ ಅಲ್ಬುಕರ್ಕರ ಕಟ್ಟೋಣದಲ್ಲಿಯ ಅಪ್ಪಣ್ಣ ಬ್ರದರ್ಸರ ಹಾರ್ಡವೇರ್ ಶಾಪಿಗೆ ಕಳೆದ ಶುಕ್ರವಾರ ರಾತ್ರಿ ಬೆಂಕಿ ಹಿಡಿದು, ಸಾಮಾನುಗಳೆಲ್ಲಾ ಉರಿಯುತ್ತಿರಲು, ಹೊರಗಣಿಂದ ಜನರು ಕಂಡು ಬೆಂಕಿಯನ್ನು ನಂದಿಸಿದರು ಸಾಧಾರಣ ೮೦೦ ರೂಪಾಯಿಗಳ ಹಾರ್ಡವೇರ್ ಪೆಟ್ಟಿಗೆ, ಕವಾಟುಗಳು ಸುಟ್ಟು ಹೋಗಿರುವುವೆಂದು ತಿಳಿದುಬರುತ್ತದೆ

ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರಾದ ಮಿ। ಇ. ಎಂ. ಗೋಪಾಲರವರು ಮೂರು ವಾರ ರಜೆಪಡೆದಿರುವರು. ಅವರ ಬದಲಿಗೆ ರಾವ್ ಬಹದ್ದೂರ್ ವೆಂಕಟರಾಮ ಅಯ್ಯರ್ ಇವರು ಬಂದಿರುವರು

ಶ್ರೀ ಕೆ. ಶೀನಶೆಟ್ಟಿ ಬಿ ಎ ಇವರು ಅಸಿಸ್ಟೆಂಟ್ ಪಂಚಾಯತ್ ಆಫೀಸರರಾಗಿ ನೇಮಕಹೊಂದಿರುವರೆಂದು ತಿಳಿದುಬರುತ್ತದೆ

ಕಳೆದ ತಾ. ೧೩ನೇ ಆದಿತ್ಯವಾರ ಸಂಜೆ ಘಂಟೆ ೫ಕ್ಕೆ ಇಲ್ಲಿಯ ಹಿಂದೀ ಪದವೀದಾನ ಸಮಾರಂಭವು ಪರಿಷತ್ತಿನ ಚಪ್ಪರದಲ್ಲಿ ಶ್ರೀಮತಿ ಕೃಷ್ಣಾಬಾಯಿ ಪಣಿಕರರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಶ್ರೀ ಪ್ರಕಾಶರು ಪದವೀಧರರನ್ನು ಅಭಿನಂದಿಸುವ ಭಾಷಣ ಮಾಡಿದರು

ಶ್ರೀ ಕೃಷ್ಣ ಸಿನೆಮದಲ್ಲಿ ಬೇಗನೇ ಈ ಕೆಳಗಣ ಉಜ್ವಲ ಚಿತ್ರಗಳನ್ನು ಪ್ರದರ್ಶಿಸಲಾಗುವುವೆಂದು ತಿಳಿದು ಬರುತ್ತದೆ 'ಮೈ ಮೇನ್,' 'ಲ್ಯೂರ್ ಓಫ್ ದಿ ಸಿಟಿ,' 'ನಾದಿರ್,' 'ತೀಫ್ ಆಫ್ ಇರಾಕ್' 'ಸವಾಜಿತೀ ಭುಲ್' ಈ ಚಿತ್ರಗಳನ್ನು ಕಂಪೆನಿಯ ಪ್ರೊಪ್ರೈಟರರು ತಿವಿದ್ದಾಗಿ ಮುಂಬಾಯಿಗೆ ಹೋಗಿ ಆರಿಸಿ ತಂದಿರುತ್ತಾರೆ, ಇಂತಹ ಚಿತ್ರಗಳು ಹಿಂದೆ ಇಲ್ಲಿಗೆ ಬಂದಿಲ್ಲವೆಂದು ಗೊತ್ತಾಗಿದೆ.

ಮಿಗಳಾದ ಪಿ ರಾಮುಣ್ಣಿ ಮೇನನ್, ಡಾ। ಎ ಎಫ್ ಕೋಹಿಲೊ, ರಾವ್ ಸಾಹೇಬ್ ಜೆ. ಜೆ. ಫೆರ್ನಾಂಡಿಸ್, ಜೆ. ಆರ್. ಬೊಳಾರ್. ಎ. ಪಿ ಗೋನ್ಸಾಲ್ವೀಸ್, ಎಸ್ ಕರ್ಡೋಸ್, ದಿವಾನ್ ಬಹದೂರ್ ಎಸ್ ಎಲ್ ಮತಾಯಸ್, ಪಿ. ಆರ್. ರಂಗನಾಥ ಪೂಂಜ, ಆ ಶ್ರೀನಿವಾಸ ಪೈ, ಡಾ। ವಿಠಲ್ ಶೆಟ್ಟಿ, ರೆ। ಫಾ। ಎ ಅರಬ್ರುಜ. ಎ. ಬಿ. ಶೆಟ್ಟಿ, ಕೆ ಅಚ್ಯುತರಾವ್, ಕೆಪ್ಟನ್ ಆರ್ ಟಿ. ಸುಬ್ರಹ್ಮಣ್ಯಂ, ಮಿರ್ ಅಮಿರುದ್ದೀನ್ ಸಾಹೇಬ್ ಬಹದೂರ್, ಪಿ. ಶಂಕರನಾರಾಯಣರಾವ್, ಎಸ್. ಪದ್ಮನಾಭ ಪ್ರಭು, ಎಚ್ ಜಿ. ಪರೇರ್ಸ್, ಹೆರ್ರಿ ಪಟೇಲ್ ಭುಜಂಗ ಬಲ್ಲಾಳ, ಆರ್. ಶಿವರಾವ್, ಪಿಲ್ಬರ್ ಸಲ್ಡಾನಾ ಎಮ್. ಎನ್. ಪ್ರಭು, ಮತ್ತು ಮಿಸೆಸ್ ಶ್ರೀಪಾ ಮತ್ತು ನಿಲ್ಲು ೧೫೩, ೧೩೫, ೧೫೩, ೫೩೫ ಮತ್ತು ೭೩೮ ಪೋಲಿಂಗು ಸ್ಟೇಷನ್‌ಗಳಿಗೆ ಸಾಮ್ರಾಜ್ಯದ ಚುನಾವಣೆಯ ಪ್ರತಿನಿಧಿಗಳು ನೇಮಕಗೊಳಿಸಲ್ಪಟ್ಟಿವೆ.

ಮಂಗಳೂರು ಉತ್ತರ ಭಾಗದ ಡಿ। ಪೋಲೀಸ್ ಅಧೀಕರಾದ ಮಿ। ಮಹಮ್ಮದ್ ಅಬ್ದುಲ್ ಕರೀಮ್ ಸಾಹೇಬ್ ಇವರಿಗೆ ಬೆಳ್ಳಾರಿಗೆ ವರ್ಗವಾಗಿ ಬದಲಿಗೆ ಶ್ರೀ ಇ. ವಿ. ಪದ್ಮನಾಭ ಶೆಟ್ಟಿಯವರು ಬರಲಿರುವರು.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನ ಗ್ರಾಮಗಳಲ್ಲಿ ಪಂಚಾಯತಿಗಳು ಸ್ಥಾಪಿತವಾಗಲು ಮಂಜೂರಾತಿಯಾಗಿದೆ. ಮಂಗಳೂರು ತಾಲೂಕು:—ಹಳೆಯಂಗಡಿ, ಮುಲ್ಕಿ, ಅತಿಕಾರಿ ಬೆಟ್ಟು, ಕಾವತಿತ್ತೂರು, ಬಳ್ಕುಂಜೆ, ಕೊಲ್ನಾಡು, ಅಡ್ಯ, ವ ಎಂಡ್ಕೂರು, ಕಿನ್ನಿಗೋಳಿ, ಕಾರ್ಕಳ ತಾಲೂಕು:—ಕಲ್ಯ ಮುಂಡ್ಕೂರು, ಕಡಂದಲೆ, ಕುಕ್ಕುಂದೂರು, ನಿಟ್ಟೆ, ವಾರಂಗ, ಮೂರನೆ (ಅಜೆಕಾರು), ಹಿರ್ಗಾ ಉಡುಪಿ ತಾಲೂಕು —ಮಲ್ಪೆ ಡು, ಭಲಿಮಾರು, ನಂದಿಕೂರು, ನದಿಸಾಲು (ಪಡುಬಿದ್ರಿ), ತೆಂಕ, ಬಡಗ್ರಾಮ, ಯಲ್ಲೂರು, ಬೆಳ್ಳೆ, ಮೂಳೂರು, ಪಡು ಉಳಿಯಾರು ಗುಳಿ, ಪಾಜಕ, ಪಾದೂರು, ಕಲ್ಯಾಣಪುರ, ಕುಂದಾಪುರ ತಾಲೂಕು:—ತೆಕ್ಕಟ್ಟೆ, ಕೋಟೇಶ್ವರ ಕುಂದಾಪುರ, ಬಸ್ರೂರು, ಸೀರೂರು, ಕೆಗ್ಗಲ್ಲು, ಬಿಜೂರು, ಉಪ್ಪುಂದ, ಪಡುವರಿ, ಶಿರೂರು, ಕಿರಿಮಂಜೇಶ್ವರ, ಬೈಂದೂರು.

ಇದೇ ತಾ ೨೯ನೇ ಶನಿವಾರ ಸಂಜೆ ಘಂಟೆ ೬-೩೦ಕ್ಕೆ ಇಲ್ಲಿಯ ಶ್ರೀ ಶಿವಭಕ್ತಿಯೋಗ ನಾಟಕ ಸಂಘದವರು ಕುದ್ರೋಳಿಯ ಶ್ರೀ ಗೋಕರ್ಣನಾಥ ಕ್ಷೇತ್ರದ ಪಠಾರದಲ್ಲಿ "ರಾಜಭಕ್ತಿ" ಎಂಬ ಐತಿಹಾಸಿಕ ನಾಟಕವನ್ನು ಅಭಿನಯಿಸುವರು.

ಇದೇ ತಿಂಗಳ ತಾ ೧೬ನೇ ದಿನ ಬೆಳಿಗ್ಗೆ ಪಡೀಲ್ ಎಂಬಲ್ಲಿ ಗಟ್ಟದಿಂದ ಮರಗಳನ್ನು ಸಾಗಿಸಿಕೊಂಡು ಬರುತ್ತಿದ್ದ ಎತ್ತಿನ ಗಾಡಿಯೊಂದು ಮಾರ್ಗದ ಬಳಿಯ ಸುಮಾರು ೩೦ ಅಡಿಗಳ ಆಳದಲ್ಲಿನ ಖಣಿಗೆ ಬಿದ್ದು ಗಾಡಿಯು ಪುಡಿಯಾಗಿದೆ. ಎತ್ತು ಬಹಳವಾಗಿ ಜಖಂಗೊಂಡಿದೆ ಗಾಡಿಯೊಡೆಯನು ತೂಕಡಿಸುತ್ತಿದ್ದವನ ದೀರ್ಘ ನಿದ್ರೆಯೇ ಇದಕ್ಕೆ ಕಾರಣವಂತೆ!

ಮೂಲ್ಕಿ:—ಕಳೆದ ರವಿವಾರ ಇಲ್ಲಿಗೆ ಸಮೀಪದ ಕೋಲಟ ಕಂಬಳದಲ್ಲಿ ಒಂದು ಆದರ್ಶವಿವಾಹವು ಜರಗಿತು ಮುಂಬಾಯಿ ಪ್ರೋಟೆಸ್ಟ ಆರ್ಯ ಸಮಾಜದ ಭೂತಪೂರ್ವ ಕಾರ್ಯದರ್ಶಿಯವರಾದ ಶ್ರೀ ವೀರಪ್ಪ ಕೋಟ್ಯಾನರು ವಕೀಲ ಮಂಗಳೂರು ಕೃಷ್ಣಪ್ಪ ತಿಂಗಳಾಯರ ಸೊಸೆ ಶ್ರೀಮತಿ ಶಾರಾದೇವಿಯೂ ವಧುವು ವರದಕ್ಷಿಣೆಯ ಪದ್ಧತಿಯು ಮೊಗವೀರರಲ್ಲಿ ಈಗ ವಿಶೇಷ ಪ್ರಚಾರಕ್ಕೆ ಬರುತ್ತಿರುವುದು ಶೋಚನೀಯವಾಗಿದೆ.

ಬೆಳ್ಮಣ್ಣು:—ಇದೇ ಕಳೆದ ೨-೫-೩೪ನೇ ಮಂಗಳವಾರ "ಶ್ರೀ ಸದಾನಂದ" ಸಾರ್ವಜನಿಕ ಧರ್ಮಾರ್ಥ ವಾಚನಾಲಯವು ಶ್ರೀ ಎಂ ಶಂಕರ ಹೆಗ್ಡೆ ಶಿರ್ವ, ಇವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು

ಬಂಟವಾಳ:—ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಬಾಬೂರಾಜೇಂದ್ರ ಪ್ರಸಾದರವರು ಇಲ್ಲಿಗೆ ತಾ. ೯ನೇ ಮಧ್ಯಾಹ್ನ ೧೨ ಘಂಟೆಗೆ ಬಂದು ತಲುಪಿದರು ಊಟ ಉಪಚಾರಗಳಾಗಿ ೩ ಗಂಟೆಗೆ ಶ್ರೀ ತಿರುಮಲ ವೆಂಕಟ್ರಮಣ ದೇವಸ್ಥಾನದ ಮುಂದುಗಡೆ ಸಭೆ ಜರಗಿತು. ಸಭೆಗೆ ಸಾವಿರಾರು ಗಂಡಸರು, ಹೆಂಗಸರು, ಮಕ್ಕಳು ಬಂದಿದ್ದರು. ಮಧ್ಯಾಹ್ನ ೧ ಗಂಟೆಗೆ ಕಮಲಾದೇವಿಯವರು ಶ್ರೀ ಪ್ರಕಾಶರನ್ನು ಕರೆದು ಕರಲಿಕ್ಕೆ ಬಂಟವಾಳ ದಾರಿಯಾಗಿ ಚಾರ್ಮಾಡಿ ಗಡಿಗೆ ಹೋದವರು ರಾತ್ರಿ ೧೦॥ ಗಂಟೆಗೆ ಬಂಟವಾಳಕ್ಕೆ ಬಂದು ದೇವಸ್ಥಾನದ ಬಳಿ ಸಣ್ಣ ಭಾಷಣ ಗೊಟ್ಟು ಮಂಗಳೂರಿಗೆ ತರಳಿದರು,

ಡಿ. ಬೋ ಪ್ರೆಸಿಡೆಂಟರಾದ ಶ್ರೀ ಎ. ಬಿ. ಶೆಟ್ಟಿ ಇಲ್ಲಿಗೆ ಬಂದು ಆಸ್ಪತ್ರೆ, ಬೋರ್ಡು ಶಾಲೆಯನ್ನು ಸಂದರ್ಶಿಸಿ, ಬೋರ್ಡ್ ಶಾಲೆಯ ಮಾಡನ್ನು ಮಳೆ ಬರುವ ಮೊದಲು ದುರುಸ್ತಿ ಮಾಡಿಸಬೇಕೆಂದು ಡಿ. ಬೋ, ಅಸಿಸ್ಟಾಂಟ ಇಂಜಿನಿಯರರಿಗೆ ಹೇಳಿ, ತೆರಳಿದರು

ಕಾರ್ಕಳ:—ತಾ ೯ನೇ ದಿನ ಸಂಜೆ ರಾಷ್ಟ್ರಸಭಾಪತಿಗಳಾದ ದೇಶಭಕ್ತ ಶ್ರೀ ಬಾಬೂರಾಜೇಂದ್ರ ಪ್ರಸಾದರು ಪುರಜನರ ಸಂಭ್ರಮದ ಸ್ವಾಗತವನ್ನು ಪಡೆದು ಶ್ರೀನಿವಾಸ ಆಶ್ರಮದಲ್ಲಿ ತಿಂದಿತೀರ್ಥಗಳ ಉಪಚಾರವನ್ನೂ, ಸ್ವರಾಜ್ಯ ಮೈದಾನಿನಲ್ಲಿ ನಡೆದ ದೊಡ್ಡ ಸಭೆಯಲ್ಲಿ ಸ್ಥಳೀಯ ಪಂಚಾಯತ ಬೋರ್ಡಿನ ಮಾನಪತ್ರವನ್ನು ಸ್ವೀಕರಿಸಿ, ರಾಷ್ಟ್ರಸಭೆಯ ಮಹತ್ವ, ಅದಕ್ಕೆ ಜನರು ಮಾಡಬೇಕಾದ ಸಹಾಯ, ಸ್ವರಾಜ್ಯ ಸಂಪಾದನೆಯಾಗಬೇಕಾದರೆ ಅವರು ಮಾಡಬೇಕಾದ ಕಾರ್ಯಗಳು ಮೊದಲಾದುವುಗಳ ಕುರಿತು ಇಂಗ್ಲೀಷಿನಲ್ಲಿ ಭಾಷಣವನ್ನು ಕೊಟ್ಟರು ಸದ್ರಿ ಭಾಷಣವನ್ನು ಶ್ರೀ ಎಸ್. ಕಿಲ್ಲೇರು ಕನ್ನಡಕ್ಕೆ ಭಾಷಾಂತರಿಸಿದರು, ಸಭಾ ನಂತರ ಪ್ರಸಾದರು ಉಡುಪಿಯ ಕಡೆ ಪ್ರಯಾಣಬೆಳೆಸಿದರು,

---

ತಾಲೂಕುಗಳಿಂದ.

ಉಡುಪಿ:—ಶನಿವಾರದಂದು ತಾ. ೯ನೇ ರಾತ್ರಿ ಸುಮಾರು ೮ ಗಂಟೆಗೆ ರಾಷ್ಟ್ರಸಭಾಪತಿಯವರಾದ ಶ್ರೀ। ಬಾಬುರಾಜೇಂದ್ರ ಪ್ರಸಾದರವರು ಶ್ರೀ। ಜೆ. ಬಿ. ಕೃಪಾಲಾನಿ ಮೊದಲಾದವರಂದೊಡಗೂಡಿ ಮಣಿಪಾಲಕ್ಕೆ ಕಾರ್ಕಳದಿಂದ ಚಿತ್ತೈಸಿದರು ಉಡುಪಿಯ ಪ್ರಮುಖ ಗೃಹಸ್ಥರೂ, ತಾಲೂಕು ಕಾಂಗ್ರೆಸ್ ಕಮಿಟಿಯವರೇ ಮೊದಲಾದವರು ಸ್ವಾಗತೀಕರಿಸಿದರು.

ತಾ ೧೦ನೇ ಬೆಳಿಗ್ಗೆ ಸುಮಾರು ೩॥ಗೆ ಶ್ರೀ। ರಾಜೇಂದ್ರ ಪ್ರಸಾದರು ಉಡುಪಿ ಕಲ್ಸಂಕದ ಬಳಿ ಬರಲು, ಅಲ್ಲಿ ಕಾದಿದ್ದ ಗೃಹಸ್ಥರು ಅವರನ್ನು ಸ್ವಾಗತೀಕರಿಸಿ, ವಾದ್ಯ ಬಿರುದಾವಳಿಗಳಿಂದ ಮೆರವಣಿಗೆ ಹೊರಡಿಸಿ ರಥಬೀದಿಗೆ ಬಂದು, ಶ್ರೀ ಪೇಜಾವರ ಮಠೀಯ ಶ್ರೀ ವ್ಯಾಸಭವನ ವಾಚನಮಂದಿರದ ಆರಂಭೋತ್ಸವವನ್ನು ಮಾಡಿದರು. ಸದ್ರಿ ವಾಚನ ಮಂದಿರವು ಉಪಯುಕ್ತಪತ್ರಿಕೆಗಳಿಂದಲ್ಲದೆ ಪುಸ್ತಕ ಭಂಡಾರದಿಂದಲೂ ಕೂಡಿರಬೇಕೆಂದರು ಶ್ರೀ। ಬಾಬುರಾಜೇಂದ್ರರ ಆರೋಗ್ಯವು ಅಷ್ಟು ಚೆನ್ನಾಗಿಲ್ಲದ್ದರಿಂದ ಮುಂದೆ ಮೆರವಣಿಗೆಯನ್ನು ರದ್ದುಗೊಳಿಸಿ, ಇದರ ಸೋಟಾಲು ತೆಂಕಪೇಟೆ, ಕೋಳದ ಪೇಟೆ, ಸ್ವದೇಶಿ ಭಂಡಾರದಿಂದಾಗಿ ಸಂತೆಕಟ್ಟೆಯ ಬಳಿಯ ಶ್ರೀ ರಾಮಕೃಷ್ಣ ಥಿಯೇಟರನ್ನು ಮುಟ್ಟಿರು ಅಲಂಕರಿಸಲಾಗಿದ್ದ ಥಿಯೇಟರಿನಲ್ಲಿ ತುಂಬ ಸ್ತ್ರೀಪುರುಷರು ನೆರೆದಿರಲು, ಊರ ಮಹಾಜನರ ಕಡೆಯಿಂದಲೂ ಹಿಂದೀ ಪ್ರೇಮಿಗಳಿಂದಲೂ ಮಾನಪತ್ರಗಳು ಅರ್ಪಿಸಲಾದುವು. ಅನಂತರ ಶ್ರೀಯುತ ಬಾಬುರಾಜೇಂದ್ರಪ್ರಸಾದರು ತನಗೆ ಮಹಾಜನರು ಉಪಚರಿಸಿ, ಸ್ವಾಗತವಿತ್ತು ಮಾನಪತ್ರಗಳಿಂದ ಮನ್ನಿಸಿದುದಕ್ಕಾಗಿ ಆಭಾರಸೂಚನೆ ಮಾಡಿದರು ಸ್ವದೇಶಿ ಸರಕುಗಳು ಅಷ್ಟು ತೃಪ್ತಿಕರವಾಗಿಲ್ಲದಿದ್ದರೂ ಪ್ರಿಯವಾದರೂ ಅವುಗಳನ್ನು ಕೊಂಡುಕೊಂಡು ಪ್ರೋತ್ಸಾಹಿಸಿದ್ದಲ್ಲಿ, ಮುಂದೆ ಶೀಘ್ರವಾಗಿ ಅವು ಉತ್ತಮವೂ ಅಗ್ಗವೂ ಆಗುವುದರಲ್ಲಿ ಸಂದೇಹವಿಲ್ಲ ಮಾತ್ರವಲ್ಲದೆ ಸ್ವರಾಜ್ಯ ಸಾಧನೆಗೆ ಇದರಿಂದ ಅತ್ಯಂತ ಅನುಕೂಲವಾಗುವುದು ಎಂದರು ತನ್ನ ಮಾತುಗಳು ನಿರರ್ಥಕ್ಯವಾಗಲಿಕ್ಕಿಲ್ಲ, ಮಹಾಜನರು ರಾಷ್ಟ್ರ ಸಭೆಗೆ ಹೆಚ್ಚೆಚ್ಚು ಬೆಂಬಲಕೊಡುವ ನಂಬುತ್ತೇನೆಂದರು ಸಭೆಯು ಮುಕ್ತಾಯವಾದೊಡನೆ ವಿಶೇಷ ಆಮಂತ್ರಣ ಬಂದ ಕಾರಣ, ಶ್ರೀಯುತರು ಶ್ರೀ ಕೃಷ್ಣದೇವಸ್ಥಾನವನ್ನು ಸಂದರ್ಶಿಸಿ, ಪರ್ಯಾಯ ಶ್ರೀ ಕಾಣಿಯೂರು ಮಠದ ಶ್ರೀ ಪಾದಂಗಳವರಿಂದ ಶ್ರೀ ದೇವರ ಪುಷ್ಪಮಾಲೆಯಿಂದ, ಗಂಧಾಕ್ಷತೆಗಳಿಂದ, ಆಧಿವಚನಗಳಿಂದ ಆಶೀರ್ವದಿಸಲ್ಪಟ್ಟರು

ಮೂಡಬಿದ್ರೆ:—ಇಲ್ಲಿನ ಸಾರ್ವಜನಿಕ ಧರ್ಮಾರ್ಥ ವಾಚನಾಲಯದ ೩ನೇ ವಾರ್ಷಿಕೋತ್ಸವವು ಇದೇ ೬ನೇ ದಿನ ಮಂಗಳೂರು ಗವರ್ನಮೆಂಟ್ ಕಾಲೇಜಿನ ಕನ್ನಡ ಪಂಡಿತರಾದ ಯು. ಸೀತಾರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ಜರಗಿತು. ಊರಪರವೂರ ಅನೇಕ ವಿದ್ವಾಂಸರು ದಯಮಾಡಿಸಿದ್ದರು ಮೂಲ್ಕಿಯ ಯೂನಿಯನ್ ಕ್ಲಬ್ಬಿನ ಕಾರ್ಯದರ್ಶಿಗಳೂ ಕಾರ್ಕಳದ ಸುಪ್ರಸಿದ್ಧ ವಕೀಲರಲ್ಲೋರ್ವರಾದ ವಾಸುದೇವರಾಯರೂ, ಕರಿಂಜೆ ಶಾಮರಾಯರೇ ಮೊದಲಾದವರು ಭಾಷಣಗಳನ್ನು ಮಾಡಿದರು ಅನಂತರ ಅಧ್ಯಕ್ಷ ಮಹಾಶಯರು ವಾಚನಾಲಯದ ಪ್ರಯೋಜನ ಜನರು ನಿತ್ಯ ವಾಚನಾಲಯಕ್ಕೆ ಹೋಗುವ ಆವಶ್ಯಕತೆ, ಜ್ಞಾನಾರ್ಜನೆ ಮಾಡಿಕೊಳ್ಳುವುದಕ್ಕೆ ವಾಚನಾಲಯಗಳು ಬಹಳ ಸಹಕಾರಿಯೆಂಬುದನ್ನು ಬಹಳ ಸುಲಲಿತವಾದ ಶೈಲಿಯಿಂದ ಭಾಷಣಕೊಟ್ಟುದುದಲ್ಲದೆ, ವಾಚನಾಲಯದ ಕಾರ್ಯಕರ್ತರಿಗೂ ತಕ್ಕ ಸಲಹೆಗಳನ್ನು ಕೊಟ್ಟು ಜನರನ್ನು ತಮ್ಮ ಭಾಷಣದಿಂದ ಸಂತೋಷಗೊಳಿಸಿದರು

ಶ್ರೀ ವೀರವಾಣೀ ವಿಲಾಸ ಜೈನಸಿದ್ಧಾಂತ ಭವನದ ವಾರ್ಷಿಕಾಧಿವೇಶನ ಸಮಾರಂಭವು ಇದೇ ಬರುವ ತಾ. ೬-೬-೩೪ನೇ ಗುರುವಾರ ಜರಗಲಿರುವುದು.

ಬೆಳ್ತಂಗಡಿ:—ನಮ್ಮ ಸಾರ್ವಭೌಮರ ರಜತೋತ್ಸವ ಸಮಾರಂಭವು ಇಲ್ಲಿಯ ಡಿಪ್ಯುಟಿ ತಹಶೀಲ್ದಾರರು ಪಂಚಾಯತ್ ಪ್ರೆಸಿಡೆಂಟ್ ಅಚ್ಚಿನಡ್ಕ ಸುಬ್ರಾಯರು, ಎಡೂರು ನರಸಿಂಹರಾಯರು, ಪಟೇಲ್ ನಾಗಪ್ಪಯ್ಯನವರು, ಪಡ ಪಟೇಲ್ ಜಿಂದಯ್ಯಶೆಟ್ಟಿಗಳು ಕೆಲ್ಲಗುತ್ತು ಸಾಂತಪ್ಪ ಪಾವಾಳರು, ಚಿನ್ನಪ್ಪಶೆಟ್ಟಿ, ದೇಜಪ್ಪ ಶೆಟ್ಟಿ ಮೊದಲಾದ ಅನೇಕ ಪ್ರಮುಖ ಸದ್ಗೃಹಸ್ಥರ ಸಹಾನುಭೂತಿಯಿಂದ ಇದೇ ತಾ, ೬ರಲ್ಲಿ ಅತಿ ವಿಜೃಂಭಣೆಯಿಂದ ಯಶಸ್ವಿಯಾಗಿ ನೆರವೇರಿತು

ಹೊಸದುರ್ಗ:—ಸಾರ್ವಭೌಮರ ರಜತೋತ್ಸವ ಸಮಾರಂಭ.— ಇಲ್ಲಿ ಇದೇ ತಾ. ೬ನೇ ಬೆಳಿಗ್ಗೆ ಗಂಟೆ ೭-೩೦ಕ್ಕೆ ಹೊಸದುರ್ಗ ಡಿ। ತಾ। ಕಚೇರಿಯ ಮುಂದೆ ಶೃಂಗರಿಸಲ್ಪಟ್ಟ ಚಪ್ಪರದಿಂದ ಊರಮಹನೀಯರಿಂದಲೂ ಶಾಲಾ ಮಕ್ಕಳಿಂದಲೂ ಕೂಡಿದ ಸುಮಾರು ೬೦೦೦ ಜನರ ಮೆರವಣಿಗೆಯು ಶೃಂಗರಿಸಲ್ಪಟ್ಟ ೬ ಆನೆಗಳ ಸಮೇತ ವಾದ್ಯಘೋಷದೊಡನೆ ಹೊರಟಿತು, ೨ ಆನೆಗಳ ಮೇಲೆ ಚಕ್ರವರ್ತಿ ಮತ್ತು ಚಕ್ರವರ್ತಿನಿಯವರ ಛಾಯಾ ಚಿತ್ರಗಳು ಅಲಂಕರಿಸಿ ಇಡಲ್ಪಟ್ಟಿದ್ದುವು. ರಾಜಮಾರ್ಗವು ಅಜಾನೂರು, ಕೋಟಿಚ್ಚೇರಿ ಮತ್ತು ಕಾಞಂಗಾಡು ಮುಂತಾದ ಕಡೆಗಳಲ್ಲಿ ಕಮಾನುಗಳಿಂದ ಅಲಂಕರಿಸಲ್ಪಟ್ಟಿದ್ದುವು

ಮಂಜೇಶ್ವರ:—ನಮ್ಮ ಚಕ್ರವರ್ತಿಗಳ 'ರಜತೋತ್ಸವ' ಸಮಾರಂಭವು ಇಲ್ಲಿಯ ಶ್ರೀ ಮದನಂತೇಶ್ವರ ಟೆಂಪಲ್ ಶಾಲೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಊರಿನ ಮಹನೀಯರನೇಕರು ಇದರಲ್ಲಿ ಭಾಗವಹಿಸಿದ್ದಲ್ಲದೆ, ವಿಶೇಷ ಧನಸಹಾಯ ಸಹಾ ಮಾಡಿದ್ದರು. ಇದೇ ತಾ. ೬ನೇ ದಿನ ಊರೆಲ್ಲವೂ ಭವ್ಯವಾದ ಕಳಸ ತೋರಣಗಳಿಂದ ಅಲಂಕರಿಸಲ್ಪಟ್ಟಿತು

ಶಿರ್ವ:—ಇದೇ ತಾ ೩ನೇ ಮಂಗಳವಾರ ಶ್ರೀ ದ. ಗ್ರ. ಮಾಲಾ ಕಾರ್ಯಾಲಯದಲ್ಲಿ ಅಭಿಮಾನಿ ಗೃಹಸ್ಥರ ತರುಣರ ಸಭೆಯು ನೆರೆಯಿತು. ಆದ್ಯ ಶ್ರೀ ಶಂಕರಾಚಾರ್ಯರ ಪುಣ್ಯ ದಿನಾಚರಣೆಯು ಭಯಭಕ್ತಿಯುಕ್ತವಾಗಿ ನೆರವೇರಿತು ಶ್ರೀ ಮತಸ್ಥಾಪಕರ ಜೀವನ ಚರಿತ್ರೆಯ ಉದ್ಘೋಷವಿತ್ತು ಶ್ರೀ ತಿಲಕ ರಚಿತ 'ಗೀತಾ ರಹಸ್ಯ'ದ ಕರ್ಮಕಾಂಡವನ್ನು ಓದಲಾಯಿತು

ಶಿರ್ವ ಹಿಂದೂ ಶಾಲೆಯ ಹದಿನೆರಡನೇ "ಮಕ್ಕಳ ಜಾತ್ರೆ"ಯೂ, ೩೨ನೇ "ಜಟಾರ್ಸಂಘ"ವೂ ಕಳೆದ ವಾರ ಯಶಸ್ವಿಯಾಗಿ ಜರಗಿಸಲ್ಪಟ್ಟಿತು

ಇಲ್ಲಿಯ ಮಟ್ಟಿಪಾಡಿ ಶಾಲೆಯಲ್ಲಿ ಗ್ರಾಮಸ್ಥರ ಸಭೆಯು ಜರಗಿತು ೮-೫-೩೪ನೇ ರಾತ್ರಿ ಭಜನೆಯು ಇತ್ತು 'ಗ್ರಾಮ-ಶಾಲೆಯ ಕುರಿತು ಎಂ. ಶಂಕರ ಹೆಗ್ಡೆಯವರು ಭಾಷಣವಿತ್ತು ಪ್ರತಿ ತಿಂಗಳಲ್ಲೂ ಗ್ರಾಮ ಸಂಘಟನಾ ಸಭೆಯು ಜರಗುವ ನಿರ್ಣಯವಾಯಿತು

ಗ್ರಾಮದ ಶಾಲೆಗಳೆಲ್ಲಲ್ಲಾ ಸಂಚರಿಸಿ, ಸಹಕಾರ ಸಂಘದ ವತಿಯಿಂದ ಬಡ ವಿದ್ಯಾರ್ಥಿಗಳಿಗೆ ಸ್ಲೇಟು ಪುಸ್ತಕಾದಿಗಳನ್ನು ಶ್ರೀ ಎಸ್ ಎಸ್ ಎಲ್ ರಾಯರು ಹಂಚಿದರು

ಆಭಾರ ಸ್ವೀಕಾರ.

ಧನಂಜಯ, ಮಾಸಪತ್ರಿಕೆ, ಧಾರವಾಡ, ವಾರ್ಷಿಕ ಚಂದಾ ರೂ. ೨-೮-೦,

ವಾಣಿಜ್ಯ, ಉದ್ಯಮ, ಅರ್ಥಶಾಸ್ತ್ರ ಬ್ಯಾಂಕಿಂಗ್ ಮತ್ತು ವಿಮೆ ಮೊದಲಾದ ವಿಷಯಗಳನ್ನು ಪ್ರತಿಪಾದಿಸುವ ಮಾಸಿಕವು ಕರ್ನಾಟಕದಲ್ಲಿರುವುದಾದರೆ ಅದು ಧನಂಜಯವೇ ಎರಡನೆಯ ವರ್ಷದ ೧-೨ನೆಯ ಸಂಚಿಕೆಯು ನಮಗೆ ಬಂದಿದೆ. ಸುಮಾರು ೩೦ ಉಜ್ವಲ ಲೇಖನಗಳಿಂದ ತುಂಬಿದೆ ೧೨೩ ಪುಟಗಳಲ್ಲಿ ಸ್ವದೇಶಿ ಕೈಗಾರಿಕೆಗಳ ವಿಷಯಕವಾದ ಲೇಖನಗಳೇ ಪುಸ್ತಕವು ಬಹು ಬೋಧಕವಾಗಿದೆ, ಇಂತಹ ಉಜ್ವಲ ಲೇಖನಗಳನ್ನು ಬರೆದು ಕೊಟ್ಟ ಇದರ ಪ್ರಖ್ಯಾತ ಲೇಖಕರೂ, ಈ ಲೇಖನಗಳನ್ನು ಸಂಪಾದಿಸಿದ ಸಂಪಾದಕಮಂಡಳಿಯೂ ಕನ್ನಡ ನಾಡಿಗೆ ಅಪಾರವಾದ ಉಪಕಾರವನ್ನು ಮಾಡಿರುತ್ತಾರೆ. ಇಂತಹ ಮಾಸಿಕಗಳು ದಿನೇ ದಿನೇ ಕನ್ನಡ ನಾಡಿನಲ್ಲಿ ಹೆಚ್ಚಿ ಕನ್ನಡನಾಡು ಬೆಳಗಲೆಂದು ಹಾರೈಸುತ್ತೇವೆ.

ಸಾರ್ವಜನಿಕ ಧರ್ಮಾರ್ಥ ವಾಚನಾಲಯ, ಮೂಡಬಿದ್ರೆ

ಇದರ ಮೂರನೇ ವಾರ್ಷಿಕ ವರದಿಯು ಕೈಸೇರಿರುತ್ತದೆ ಓದಿದ್ದಲ್ಲಿ, ಅದು ದಿನೇ ದಿನೇ ವೃದ್ಧಿಗೊಳ್ಳುತ್ತಿದೆಯೆಂದು ತಿಳಿದುಬಂದಿದೆ, ಒಂದೂರಿನ ಸಂಸ್ಕೃತಿಯು ಎಷ್ಟೆಂದು ಅದರಲ್ಲಿರುವ ವಿದ್ವಾಂಸರ ಸಂಖ್ಯೆಯಿಂದಲೇ ತಿಳಿಯುವುದು. ಅಂತಹ ವಿದ್ವಾಂಸರ ಸಂಖ್ಯೆಯನ್ನು ಹೆಚ್ಚಿಸಲು ಇಂತಹ ಧರ್ಮಾರ್ಥ ವಾಚನಾಲಯಗಳು ಅಗತ್ಯ. ಮೂಡಬಿದ್ರೆಯ ಈ ಸಂಸ್ಥೆಗೆ ಎಲ್ಲರ ಸಹಕಾರವು ದೊರೆತು ಅದು ನಾಡಿನ ಸೇವೆಯನ್ನು ನಿರಾತಂಕವಾಗಿ ಮಾಡಲೆಂದು ಕೋರುವೆವು

ಕರ್ಣಾಟಕ ಸಾಹಿತ್ಯ ಪರಿಷತ್ತು

ಎರಡನೆಯ ವಿಶೇಷ ಸಾಹಿತ್ಯೋತ್ಸವ

ತಾ ೨೫ನೆಯ ಎಪ್ರಿಲ್ ೧೯೩೪

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಭಾಷೆಯ ನವೀಕರಣ

ಈ ವಿಶೇಷ ಸಾಹಿತ್ಯೋತ್ಸವದ ಉದ್ದೇಶಗಳೇನೆಂಬುದನ್ನು ಕಳೆದ ಸಾರಿಯ ಭಾಷಣದಲ್ಲಿ ತಕ್ಕಮಟ್ಟಿಗೆ ವಿವರಿಸಿದ್ದಾಗಿದೆ ಸಂಗ್ರಹವಾಗಿ ಹೇಳಬೇಕಾದರೆ, ಈ ಉತ್ಸವವು ಕನ್ನಡ ಭಾಷೆಯ ನವೀಕರಣ ಪ್ರಯತ್ನದ ಒಂದು ರೂಪ. ಸಾಂಪ್ರತ ಲೋಕದ ಬಗೆಬಗೆಯ ವೃತ್ತಿ ಪ್ರವೃತ್ತಿಗೂ ವಿಚಾರವ್ಯವಹಾರಗಳಿಗೂ ಕನ್ನಡವು ಒದಗಿ ಬರುವಂತೆ ಮಾಡಬೇಕೆಂಬುದು ಪರಿಷತ್ತಿನ ಆಶಯ ಇದುವರೆಗೆ ನಮ್ಮ ಜನರಲ್ಲಿ ಸಾಹಿತ್ಯವೆಂದರೆ, ಅದು ಕೇವಲ ವಿದ್ವತ್ಪ್ರಪಂಚಕ್ಕೆ ಸೇರಿದ ಹವ್ಯಾಸ, ಅದಕ್ಕೂ ಸಾಮಾನ್ಯ ಲೋಕದ ಅನುದಿನದ ಜೀವನಕ್ಕೂ ಹೆಚ್ಚಾದ ಸಂಬಂಧವೇನೂ ಇಲ್ಲ, ಅದು ಪಾಂಡಿತ್ಯಕ್ಕೆ ಮಾತ್ರ ರುಚಿಸುವ ಒಂದು ಶಾಬ್ದಿಕ ಕ್ರೀಡೆ-ಎಂಬುದು ಸಾಮಾನ್ಯ ಭಾವನೆಯಾಗಿತ್ತು ಸಾಮಾನ್ಯ ಜನರಿಗೆ ಅರ್ಥವಾಗದ ಪದಸರಣಿಯಲ್ಲಿರುವ ಒಂದು ಕಥೆ, ಪುರಾಣ, ಅಥವಾ ಒಂದು ನಾಟಕ, ಅದಕ್ಕೆ ಸಂಬಂಧಪಟ್ಟ ವ್ಯಾಕರಣ, ಛಂದಸ್ಸು, ಅಲಂಕಾರ, ಇವುಗಳಿಂದ ಹೊರಟ ವ್ಯಾಖ್ಯಾನ, ಚರ್ಚೆ-ಇದಿಷ್ಟು ಮಾತ್ರವೇ ಸಾಹಿತ್ಯ ಎಂಬುದು ರೂಢಿಯಿಂದ ಬಂದ ತಿಳುವಳಿಕೆಯಾಗಿತ್ತು ಆದಕಾರಣ ಸಾಹಿತ್ಯ ಸಂಸ್ಥೆಯೆಂದರೆ ಅದು ಯಾರೋ ಕೆಲವರಿಂದ ಮಾತಿನ ಮಲ್ಲರ ಬೇಗುಲವೆಂದು ಬೀದಿಯ ಮನುಷ್ಯರಿಗೆ ತೋರುತ್ತಿತ್ತೇ ಹೊರತು ಅದು ತಮ್ಮ ಬದುಕಿಗೂ ಅವಶ್ಯವಾಗಿ ಬೇಕಾದ ಸಾಮಗ್ರಿಯೆಂದು ಅವರಿಗೆ ತೋರುತ್ತಿರಲಿಲ್ಲ. ಈ ಪರಿಷತ್ತು ಸಾಹಿತ್ಯವೆಂಬ ಮಾತಿಗೆ ಕೊಟ್ಟಿರುವ ಅರ್ಥವಾದರೋ, ಹೀಗೆ ಸಂಕುಚಿತವಾದದ್ದಲ್ಲವೆಂದು ಅದರ ನಿಬಂಧಾವಳಿಯ ಮೊದಲಲ್ಲಿರುವ ಉದ್ದೇಶ ವಿವರಣೆಯಿಂದಲೇ ಸ್ಪಷ್ಟಪಡುತ್ತದೆ ಪರಿಷತ್ತಿನ ದೃಷ್ಟಿಯಲ್ಲಿ ಸಾಹಿತ್ಯವೆಂಬುದು ಜನಜೀವನವನ್ನು ಉನ್ನತಿಗೆತ್ತುವುದಕ್ಕೆ ಅವಶ್ಯವಾಗಿರುವ ಆಯುಧ ದೇಶದಲ್ಲಿಯ ಎಲ್ಲ ಮತಗಳ, ಎಲ್ಲ ಜಾತಿಗಳ, ಎಲ್ಲ ವರ್ಗಗಳ ಮತ್ತು ಎಲ್ಲ ಕಸಬುಗಳ ಜನರಲ್ಲಿಯೂ ಜ್ಞಾನವನ್ನೂ ವಿವೇಕವನ್ನೂ ಬೆಳೆಸಿ, ಅವರ ಧ್ಯೇಯಗಳನ್ನು ಉನ್ನತಿಗೊಳಿಸಿ, ಅವರ ಲೌಕಿಕ ಯೋಗ್ಯತೆಯನ್ನು ಅಭಿವೃದ್ಧಿಪಡಿಸುವುದು ಸಾಹಿತ್ಯದ ಕರ್ತವ್ಯವೆಂದು ಪರಿಷತ್ತು ನಂಬಿದೆ ಈ ದೃಷ್ಟಿಯಿಂದ ನೋಡಿದರೆ ಕನ್ನಡ ಸಾಹಿತ್ಯದಲ್ಲಿ ಈಗ ಕೆಲವು ದೊಡ್ಡ ಕೊರತೆಗಳು ಎದ್ದು ಕಾಣಿಸುತ್ತಿವೆ ನಮ್ಮ ಇದುವರೆಗಿನ ಸಾಹಿತ್ಯದಲ್ಲಿ ಲೌಕಿಕ ಜೀವನಕ್ಕೆ ಸಂಬಂಧಪಟ್ಟ ತಿಳುವಳಿಕೆಯನ್ನು ಕೊಡುವ ಭಾಗವು ತೀರ ವಿರಳವಾಗಿದೆ ಅಂತರಂಗ ಪ್ರಪಂಚದ ವಿಚಾರಗಳು ಯಥೇಷ್ಟವಾಗಿವೆ, ಬಹಿರಂಗ ಪ್ರಪಂಚದ ವಿಚಾರಗಳು ಅತಿ ಸ್ವಲ್ಪವಾಗಿವೆ, ಭಾವರಾಗಗಳ ಧ್ವನಿ ಅವುಗಳಲ್ಲಿ ತೀವ್ರವಾಗಿ ಕೇಳಿಬರುತ್ತದೆ, ವಿಮರ್ಶೆ ಪರೀಕ್ಷೆಗಳ ಧ್ವನಿ ಅಷ್ಟು ಬಲವಾಗಿ ಕೇಳಬರುತ್ತಿಲ್ಲ ಭಕ್ತಿ, ಪ್ರೀತಿ, ವೈರಾಗ್ಯ-ಇವು ಮನುಷ್ಯನ ಉಪೇಕ್ಷೆಗೆ ಅರ್ಹವಾದವುಗಳೆಂದು ಯಾರೂ ಹೇಳಲಾರರು, ಆದರೆ ಅಷ್ಟರಿಂದಲೇ ಅವನ ಜೀವನವು ಸಾರ್ಥಕ ಮಾರ್ಗದಲ್ಲಿ ಸಾಗಲಾರದು, ಅವುಗಳ ಜೊತೆಗೆ ವಿಚಾರಶೀಲತೆ, ಕಾರ್ಯದಕ್ಷತೆ, ಕರ್ತವ್ಯೋತ್ಸಾಹ ಇವೂ ಸೇರಬೇಕು ಈ ಗುಣಗಳಿಗೆ ಪರಿಪೋಷಕವಾದದ್ದು ಪ್ರಕೃತಿವಿಜ್ಞಾನ ಮತ್ತು ಲೋಕವ್ಯವಹಾರ ಪರಿಜ್ಞಾನ ಈ ಎರಡು ವಿಷಯಗಳನ್ನು ಕುರಿತ ಸಾಹಿತ್ಯವನ್ನು ಬೆಳೆಸುವುದು ಕನ್ನಡದ ಅಭಿಮಾನಿಗಳಿಗೆ ಈಗ ಅವಶ್ಯ ಕರ್ತವ್ಯವಾಗಿದೆ. ಈ ಕರ್ತವ್ಯವನ್ನು ನೆರವೇರಿಸಲು ಸಾಧಕವೆಂದು ತೋರಿರುವ ಮಾರ್ಗಗಳಲ್ಲಿ ಈ ವಿಶೇಷ ಸಾಹಿತ್ಯೋತ್ಸವದ ಉಪನ್ಯಾಸ ಮಾಲೆ ಒಂದಾಗಿದೆ.

ಆಧುನಿಕ ವಿಚಾರಗಳು

ಆದುದರಿಂದಲೇ ಈ ಉಪನ್ಯಾಸಗಳನ್ನು ಆಧುನಿಕ ವಿಚಾರೋಪನ್ಯಾಸಗಳೆಂದು ಕರೆದಿದೆ. ಪ್ರಕೃತ ಪ್ರಪಂಚದ ವಾಸ್ತವಿಕಾಂಶಗಳ ವಿಶೇಷ ಮುಖ್ಯತೆಯನ್ನು ಪರಿಷತ್ತು ಹೇಗೆ ಮನಸಾರ ಅಂಗೀಕರಿಸಿದೆಯೆಂಬುದು ಕಳೆದ ಸಾರಿಯ ವಿಶೇಷೋಪನ್ಯಾಸಗಳ ವಿಷಯ ಪಟ್ಟಿಕೆಯಿಂದಲೂ ವ್ಯಕ್ತಪಡುತ್ತದೆ. ಪೂರ್ವಕಾಲದಲ್ಲಿ ಕಾವ್ಯ ಇತಿಹಾಸಗಳೂ ಮತಧರ್ಮ ಗ್ರಂಥಗಳೂ ಪ್ರಪಂಚದ ಸ್ಥಿತಿಯ ಮೇಲೆ ಎಷ್ಟು ಮಾತ್ರ ಪರಿಣಾಮವನ್ನು ಮಾಡುತ್ತಿದ್ದುವೋ ಅದಕ್ಕಿಂತ ಹೆಚ್ಚಾಗಿ ಈಗ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಮೊದಲಾದ ಪ್ರಕೃತಿ ವಿಜ್ಞಾನ ಶಾಖೆಗಳೂ ರಾಜ್ಯಶಾಸ್ತ್ರ ಅರ್ಥಶಾಸ್ತ್ರ ಮೊದಲಾದ ಸಮಾಜ ವಿಜ್ಞಾನ ಶಾಖೆಗಳೂ ಪ್ರಪಂಚದ ಸ್ಥಿತಿಗತಿಗಳನ್ನು ಮಾರ್ಪಡಿಸುತ್ತಿವೆ ನಮ್ಮ ಕಾಲವನ್ನು ವಿಜ್ಞಾನದ ಯುಗವೆಂದು ವ್ಯವಹರಿಸುವುದು ಎಲ್ಲರಿಗೂ ತಿಳಿದಿರುವ ಸಂಗತಿ ವಿಜ್ಞಾನದ ಮಹಿಮೆಯಿಂದ ಒದಗುತ್ತಿರುವುದು ನಮ್ಮ ಹೊರಗಿನ ಜೀವನದ ಪರಿಸ್ಥಿತಿಗಳು ಮಾತ್ರವೇ ಅಲ್ಲ, ಈ ಬಾಹ್ಯ [illegible] ಫಲಿತಾಂಶವಾಗಿಯೂ, ಅದಕ್ಕಿಂತ ಹೆಚ್ಚಾಗಿ ವಿಜ್ಞಾನ ಪ್ರಕ್ರಿಯೆಯಿಂದ ಬುದ್ಧಿಗೆ ಆಗುತ್ತಿರುವ [illegible] ಪ್ರೇರಕವಾದ ಶಿಕ್ಷಣದ ದೆಸೆಯಿಂದ ನಮ್ಮೆಲ್ಲರ ಅಂತರಂಗ ಜೀವನ ಸಹ ಒದಲಾವಣೆಯನ್ನು ಹೊಂದುತ್ತಿದೆ ಇಂಥ [illegible] ಕನ್ನಡಿಗರು ವಿಜ್ಞಾನದ [illegible] ಅದರ ಪ್ರಭಾವವೆ [illegible] ದುಕೊಳ್ಳುವುದು ಅವರ ಜೀವನಧರ್ಮಕ್ಕೆ ಸೇರಿದ ಒಂದು ಕರ್ತವ್ಯವಾಗಿರುತ್ತದೆ ಅವರಿಗೆ ಸಹಾಯವನ್ನೊದಗಿಸಬೇಕೆಂಬುದು ಪರಿಷತ್ತಿನ ಆಶೆ

ಈ ಉಪನ್ಯಾಸ ಮಾಲೆಯಿಂದ ಅಪೇಕ್ಷಿಸಬಹುದಾದ ಪ್ರಯೋಜನಗಳು ಅನೇಕ. ಮೊದಲನೆಯದಾಗಿ, ನಮ್ಮ ದೇಶದ ಭವಿಷ್ಯಕ್ಕೆ ಈಗ ಯಾರು ತಳಹದಿ ಕಟ್ಟುತ್ತಿದ್ದಾರೆಯೋ ಅಂಥ ಉಪಾಧ್ಯಾಯರು ಪ್ರಪಂಚವು ಈಗ ಬದುಕುತ್ತಿರುವ ಮತ್ತು ಬೆಳೆಯುತ್ತಿರುವ ರೀತಿಗಳನ್ನು ಅರಿತುಕೊಳ್ಳಬೇಕೆಂಬುದೇ ನಮ್ಮ ಮನೋಗತ ಅವರು ಚರಿತ್ರೆ, ಭೂಗೋಳ, ವಾಣಿಜ್ಯ, ವ್ಯವಸಾಯ ಮೊದಲಾದ ನಾನಾ ಲೌಕಿಕವ್ಯಾಪಾರ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸಬೇಕಾಗಿರುವುದಷ್ಟೆ? ಈ ನಾನಾ ವಿಷಯಗಳಿಗೂ ಪ್ರಪಂಚದ ಜೀವನಕ್ಕೂ ಇರತಕ್ಕ ಸಂಬಂಧ ಎಂಥಾದ್ದು? ಈ ವಿಷಯಗಳು ವಿಜ್ಞಾನದ ಅಭಿವೃದ್ಧಿಯಿಂದ ಹೇಗೆ ಹೇಗೆ ರೂಪಾಂತರಗಳನ್ನು ಹೊಂದುತ್ತಿವೆ?—ಎಂಬೀ ವಿವರಗಳನ್ನು ಅವರು ಚೆನ್ನಾಗಿ ಅರಿತುಕೊಂಡಿದ್ದ ಹೊರತು ಅವರ ಪಾಠವು ಎಷ್ಟು ಫಲಕಾರಿಯಾಗಬೇಕಾದದ್ದು ಯುಕ್ತವೋ ಅಷ್ಟು ಹೆಚ್ಚಾಗಿ ಫಲಕಾರಿಯಾಗಲಾರದು. ವಿದ್ಯಾರ್ಥಿಗೆ ಒಂದ [illegible] ತಿಳುವಳಿಕೆಯನ್ನು ಕೊಡಬೇಕಾದರೆ ಬೋಧಕನಲ್ಲಿ [illegible] [illegible] ಪುಸ್ತಕದಲ್ಲಿ ಎಷ್ಟು [illegible] [illegible] [illegible] [illegible]

[ಸಶೇಷ]

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter –

Modern Hindu Hotel,
Calicut, 17—6 – 1934

Dear Sir,

We wish to thank you for all that you did for us to make our stay at Mangalore comfortable It is extremely nice of you to have looked after us as you did.

Yours faithfully,
(Sd.) A. V. Ramaswami.

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

'ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
—ಮೂಡಿಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ಕಿರಾಯೊಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ

ಮಂಗಳೂರು.

[illegible] ಶ್ರೀ [illegible] ಎಂ. [illegible]

ಜಿಲ್ಲಾ ಕನ್ನಡ [illegible] ಇದೇ ತಿಂಗಳ ತಾ. ೧೮ ಮತ್ತು ೧೯ರಲ್ಲಿ [illegible] ರಾಜಾ [illegible] ಬಿ. ಎ. ಅವರ ಅಧ್ಯಕ್ಷತೆಯಲ್ಲಿ ಜರಗುವುದು. ಸಾಹಿತ್ಯಕ [illegible] ಶ್ರೀ ಎ. ಬಿ. ಶೆಟ್ಟಿ ಇವರು ನೆರವೇರಿಸುವರು. [illegible] ಬಾಂಧವರಿಗೆಲ್ಲ [illegible] ಸುಸ್ವಾಗತವಿದೆ.

ನಮ್ಮ ನಗರದ ಆರೋಗ್ಯ ವರದಿಯು ತಿಳಿಸುವಂತೆ ಇದೇ ೧೧-೫-೩೯ಕ್ಕೆ ಅಂತ್ಯವಾದ ವಾರದಲ್ಲಿ ೧೮ ಮರಣಗಳೂ ೪೦ ಜನನಗಳೂ ಆಗಿವೆಯೆಂದು ಗೊತ್ತಾಗಿದೆ. ಹಿಂದಿನ ವಾರದಲ್ಲಿ ಸಿಡುಬು ರೋಗದ ಎಲ್ಲಿಯೂ [illegible] ಕಂಡುಬರುವುದಿಲ್ಲವೆಂಬುದು ಸಂತೋಷಕರ ವಾರ್ತೆ. ಮಳೆಗಾಲವು ಸಮೀಪಿಸುತ್ತಿರುವುದೇ ಇದಕ್ಕೆ ಕಾರಣವಾಗಿರಬಹುದು.

ಬಹು ಕಾಲದಿಂದ ಮಂಗಳೂರಿನ ಪಬ್ಲಿಕ್ ಪ್ರಾಸಿಕ್ಯೂಟರರಾಗಿದ್ದ ಖಾನ್ ಸಾಹೇಬ್ ಎ. ಜೆ. ಲೋಬೋ ಇವರು ಮದ್ರಾಸಿನಿಂದ ಇಲ್ಲಿಗೆ ಬಂದವರು ಇದೇ ತಿಂಗಳ ತಾ. ೧೮ರಲ್ಲು ಕಾಲಾಧೀನರಾದರೆಂಬುದು ತಿಳಿಸಲು ವಿಷಾದಿಸುತ್ತೇವೆ.

ಇಲ್ಲಿಯ ಹಂಪನಕಟ್ಟೆಯಲ್ಲಿ ಹೊಸತಾಗಿ ಕಟ್ಟಿಸಲ್ಪಟ್ಟ ಫೌಂಟನ್ [illegible] ಕಾರ್ಪೋರೇಷನ್ [illegible] ಕಳೆದ ಶುಕ್ರವಾರ ರಾತ್ರಿ [illegible] ಸಾರ್ವಜನಿಕರೆಲ್ಲಾ [illegible] ನೋಡಿಹೋಗಿದರು. ಸಾಧಾರಣ ೪೦೦ ರೂಪಾಯಿಗಳ [illegible] ಸುತ್ತು [illegible] ತಿಳಿಯಬರುತ್ತದೆ.

[illegible] ಕಲೆಕ್ಟರರಾದ ಮಿ. ಇ. ಎಂ. [illegible] ರಜೆಯ ಮೇಲೆ ಹೋಗಲಿದ್ದಾರೆ. ಅವರ ಬದಲಿಗೆ [illegible] ಅಯ್ಯರ್ ಇವರು ಬಂದಿರುವರು.

ಶ್ರೀ ಕೆ. ಶೀನಶೆಟ್ಟಿ ಬಿ. ಎ. ಇವರು ಅಸಿಸ್ಟಾಂಟ್ ಪಂಚಾಯತ್ ಅಧಿಕಾರಿಯಾಗಿ ನೇಮಕಹೊಂದಿರುವ [illegible] ತಿಳಿಯಬರುತ್ತದೆ.

ಕಳೆದ ತಾ. ೧೧ನೇ ಆದಿತ್ಯವಾರ ಸಂಜೆ ಘಂಟೆ ೫ಕ್ಕೆ ಇಲ್ಲಿಯ ಹಿಂದಿ ಪದವೀದಾನ ಸಮಾರಂಭವು ಶರೀಕ್ಷಿನ [illegible] ಶ್ರೀಮತಿ ಕೃಷ್ಣಾಬಾಯಿ [illegible] ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ [illegible] ಪದವೀಧರರನ್ನು ಅಭಿನಂದಿಸುವ ಭಾಷಣ ಮಾಡಿದರು.

ಶ್ರೀ ಕೃಷ್ಣ ಸಿನಿಮದಲ್ಲಿ [illegible] ಉತ್ತಮ ಚಿತ್ರಗಳನ್ನು ಪ್ರದರ್ಶಿಸಲಾಗುವುದೆಂದು ತಿಳಿದುಬರುತ್ತದೆ. 'ಮೈ ಮ್ಯಾನ್,' 'ಟ್ವೆಲ್ವ್ ಓ ಕ್ಲಾಕ್', 'ದಾದಿರ್, 'ಸಿಟಿ ಆಫ್ ಜಾಯ್', [illegible] ಈ ಚಿತ್ರಗಳನ್ನು ಕಳೆದೆಯ [illegible] ಮುಂದಾಗಿ [illegible] ಇಂಥಹ ಚಿತ್ರಗಳು ಹಿಂದೆ ಇಲ್ಲಿಗೆ ಬಂದಿಲ್ಲವೆಂದು ಗೊತ್ತಾಗಿದೆ.

[illegible] ಕೆ. ರಾಮಯ್ಯ [illegible], ಡಾ. ಎ. ಎಸ್. [illegible] ಜೆ. ಆರ್. [illegible], ಎ. ಸಿ. [illegible] ಎಸ್. [illegible] ಬಹದೂರ್ ಎಸ್. ಎಲ್. [illegible] ಕೆ. ಆರ್. ರಂಗನಾಥ [illegible] ಎ. ಬಿ. ಶೆಟ್ಟಿ, ಕೆ. [illegible] ಆರ್. [illegible] ಸಾಹೇಬ್ [illegible] ಎಸ್. [illegible] ಶೆಟ್ಟಿ [illegible]

[illegible] ಸಂಚಾರವು [illegible]

ಮಂಗಳೂರು ಉತ್ತರ ಭಾಗದ ೩೦ [illegible] ಪಾರ್ಟಿ ಅಯ್ಯರ್ [illegible] ಶ್ರೀ ಇ. ವಿ. [illegible] ಬರೆದಿರುವರು.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನ ಗ್ರಾಮಗಳಲ್ಲಿ ಪಂಚಾಯತಿಗಳು [illegible] ಮಂಗಳೂರು ತಾಲೂಕು:— [illegible] ಮುಲ್ಕಿ, [illegible] ಕಲ್ಯಾಣಪುರ [illegible]:— ಮುಲ್ಲಾರು, ಶಿರಿಯಾರು, ಸಂದೀಪೂರು, [illegible] ಹಂಗ, [illegible] ಜಪ್ಪು, ಉಳಿಯಾರು, ಗುಲ್ಪ, [illegible] ಕಲ್ಯಾಣಪುರ, ಕುಂದಾಪುರ ತಾಲೂಕು:—ಕೆಳ್ಳ್ಳ, ಕೋಟೇಶ್ವರ, ಹಂಗಾರ್ಕಟ್ಟ, ಬಸ್ರೂರು, ಹೀರೂರು, ಕೆರೆಗಳ್ಳ, ಬೈಂದೂರು, ಉಪ್ಪುಂದ, [illegible], ಶಿರಿಯಾರು, [illegible], ಬೈಂದೂರು.

ಇದೇ ತಾ. ೨೫ನೇ ಶನಿವಾರ ಸಂಜೆ ಘಂಟೆ ೬-೩೦ಕ್ಕೆ ಇಲ್ಲಿಯ ಶ್ರೀ ಶಿವಭಕ್ತಿಯೋಗ ನಾಟಕ ಸಂಘದವರು ಕುದ್ರೋಳಿಯ ಶ್ರೀ ಗೋಕರ್ಣನಾಥ ಕ್ಷೇತ್ರದ ಪಠಾದಲ್ಲಿ "ರಾಜಭಕ್ತಿ" ಎಂಬ ಐತಿಹಾಸಿಕ ನಾಟಕವನ್ನು ಅಭಿನಯಿಸುವರು.

ಇದೇ ತಿಂಗಳ ತಾ. ೧೩ನೇ ದಿನ ಬೆಳಿಗ್ಗೆ ಪಡೀಲ್ ಎಂಬಲ್ಲಿ, ಗಟ್ಟದಿಂದ ಮರಗಳನ್ನು ಸಾಗಿಸಿಕೊಂಡು ಬರುತ್ತಿದ್ದ ಎತ್ತಿನ ಗಾಡಿಯೊಂದು ಮೂಗಗಳ ಬಳಿಯ ಸುಮಾರು ೩೦ ಅಡಿಗಳ ಆಳದಲ್ಲಿನ ಹೊಳೆಗೆ ಬಿದ್ದು, ಗಾಡಿಯು ಪುಡಿಯಾಗಿದೆ. ಎತ್ತು ಬಹಳವಾಗಿ ಗಾಯಗೊಂಡಿದೆ, ಗಾಡಿಯೊಡೆಯುತ್ತಿದ್ದವನ ನಿರ್ಲಕ್ಷ್ಯವೇ ಇದಕ್ಕೆ ಕಾರಣವಂತೆ!

ಮೂಲ್ಕಿ—ಕಳೆದ ರವಿವಾರ ಇಲ್ಲಿಗೆ ಸಮೀಪ ಕೊಳಚಿ ಕಂಬಳದಲ್ಲಿ ಒಂದು ಆದರ್ಶವಿವಾಹವು ಜರಗಿತು. ಮುಂಬಾಯಿ [illegible] ಅಧ್ಯ ಸಮಾಜದ [illegible] ಶ್ರೀ ವೀರಪ್ಪ ಕೋಟ್ಯಾನರು ವಧು ಮಂಗಳೂರು ಕೃಷ್ಣಪ್ಪ ತಿಂಗಳಾಯರ ಸೊಸೆ ಶ್ರೀಮತಿ ತಾರಾದೇವಿಯು ವಧುವು, ವರದಕ್ಷಿಣೆಯ ಪದ್ಧತಿಯು ಹೋಗದೆ [illegible] ವಿಶೇಷ ಪ್ರಚಾರಕ್ಕೆ ಬರುತ್ತಿರುವುದು ತೋಷಕರವಾಗಿದೆ.

ಬೆಳ್ಮಣ್ಣು:—ಇದೇ ಕಳೆದ ೭-೫-೩೯ನೇ ಮಂಗಳವಾರ "ಶ್ರೀ ಸದಾನಂದ" ಸಾರ್ವಜನಿಕ ಧರ್ಮಾರ್ಥ ವಾಚನಾಲಯವು ಶ್ರೀ ಎಂ. ಸಂಜಪ್ಪ ಹೆಗ್ಡೆ, ಶಿರ್ವ, ಇವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು.

ಬಂಟವಾಳ:—ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಬಾಬುರಾಜೇಂದ್ರ ಪ್ರಸಾದರವರು ಇಲ್ಲಿಗೆ ತಾ. ೯ನೇ ಮಧ್ಯಾಹ್ನ ೧೨ ಘಂಟೆಗೆ ಬಂದು ತಲುಪಿದರು. [illegible] ಗಂಟೆಗೆ ಶ್ರೀ ತಿರುಮಲ ವೆಂಕಟ್ರಮಣ ದೇವಸ್ಥಾನದ ಮುಂದುಗಡೆ ಸಭೆ ಜರಗಿತು. ಸಭೆಗೆ ಸಾವಿರಾರು ಗಂಡಸರು, ಹೆಂಗಸರು, ಮಕ್ಕಳು ಬಂದಿದ್ದರು. ಮಧ್ಯಾಹ್ನ ೧ ಗಂಟೆಗೆ ಕಮಲಾದೇವಿಯವರು ಶ್ರೀ ಪ್ರಸಾದರನ್ನು ಕರೆದು ತರಲಿಕ್ಕೆ ಬಂಟವಾಳ [illegible] ಯಾಗಿ ಬಾರ್ಮಾಕ [illegible] ಬಂಟವಾಳಕ್ಕೆ ಬಂದು ದೇವಸ್ಥಾನದ ಬಳಿ ಸಣ್ಣ ಭಾಷಣ ಗೈದು ಮುಂದಕ್ಕಾಗಿ ತೆರಳಿದರು.

ಡಿ. ಬೋರ್ಡ್ ಪ್ರೆಸಿಡೆಂಟರಾದ ಶ್ರೀ ಎ. ಬಿ. ಶೆಟ್ಟಿ ಇಲ್ಲಿಗೆ ಬಂದು ಆಸ್ಪತ್ರೆ, ಬೋರ್ಡು ಶಾಲೆಯನ್ನು ಸಂದರ್ಶಿಸಿ, ಬೋರ್ಡ್ ಶಾಲೆಯು [illegible] ಮಳೆ ಬರುವ ಮೊದಲು ಪೂರ್ತಿ ಮಾಡಿಸಬೇಕೆಂದು ಡಿ. ಬೋ. ಅಸಿಸ್ಟಾಂಟ್ ಇಂಜಿನಿಯರರಿಗೆ ಹೇಳಿ ತೆರಳಿದರು.

ಕಾರ್ಕಳ—ತಾ. ೯ನೇ ದಿನ ಸಂಜೆ ರಾಷ್ಟ್ರಪತಿಗಳಾದ ದೇಶರತ್ನ ಶ್ರೀ ಬಾಬುರಾಜೇಂದ್ರ ಪ್ರಸಾದರು ಪುರಜನರ ಸಂಭ್ರಮದ ಸ್ವಾಗತವನ್ನು ಪಡೆದು ಶ್ರೀ [illegible] ಅಭ್ರುದ್ರದಲ್ಲಿ ತಿಂಡಿತೀರ್ಥಗಳ [illegible] ಸ್ವರಾಜ್ಯ ಶ್ರೀಮಾನಿನಲ್ಲಿ ನಡೆದ ದೊಡ್ಡ ಸಭೆಯಲ್ಲಿ [illegible] ಸ್ವೀಕರಿಸಿ, ರಾಷ್ಟ್ರಸಭೆಯ ಮಹತ್ವ, ಅದಕ್ಕೆ ಜನರು ಮಾಡಬೇಕಾದ ಸಹಾಯ, ಸ್ವರಾಜ್ಯ ಸಂಪಾದನೆಯಾಗಬೇಕಾದರೆ ಜನರು ಮಾಡಬೇಕಾದ ಕಾರ್ಯಗಳು ಮೊದಲಾದವುಗಳ ಕುರಿತು ಹಿಂದೀಯಲ್ಲಿ ಭಾಷಣವನ್ನು ಕೊಟ್ಟರು. ಸದ್ರಿ ಭಾಷಣವನ್ನು ಶ್ರೀ ಎಸ್. [illegible] ಕನ್ನಡಕ್ಕೆ ಭಾಷಾಂತರಿಸಿದರು. ಸಭಾ ನಂತರ ಪ್ರಸಾದರು ಉಡುಪಿಯ ಕಡೆ ಪ್ರಯಾಣಬೆಳೆಸಿದರು.

ತಾಲೂಕುಗಳಿಂದ.

ಉಡುಪಿ:—ಇಲ್ಲಿ [illegible] ತಾ. ೯ನೇ ರಾತ್ರಿ ಸುಮಾರು ೮ ಗಂಟೆಗೆ ರಾಷ್ಟ್ರಪತಿಯವರಾದ ಶ್ರೀ ಬಾಬುರಾಜೇಂದ್ರ ಪ್ರಸಾದರು ಶ್ರೀ [illegible] [illegible] ಕಾರ್ಕಳದಿಂದ ಆಗಮಿಸಿದರು. ಉಡುಪಿಯ ಪ್ರಮುಖ ಗೃಹಸ್ಥರೂ, ತಾಲೂಕು ಕಾಂಗ್ರೆಸ್ ಕಮಿಟಿಯವರೇ ಮೊದಲಾದವರು ಸ್ವಾಗತಿಸಿದರು.

ತಾ. ೧೦ನೇ ಬೆಳಿಗ್ಗೆ ಸುಮಾರು ೭ಗೆ ಶ್ರೀ ರಾಜೇಂದ್ರ ಪ್ರಸಾದರು ಉಡುಪಿ ಕಲ್ಯಾಣದ ಬಳಿ ಬರಲು, ಅಲ್ಲಿ ಕಾದಿದ್ದ ಗೃಹಸ್ಥರು ಅವರನ್ನು ಸ್ವಾಗತಿಸಿದರು, ವಾದ್ಯ ಬಿರುದಾವಳಿಗಳಿಂದ ಮೆರವಣಿಗೆ ಹೊರಟು ರಥಬೀದಿಗೆ ಬಂದು, ಶ್ರೀ ಪೇಜಾವರ ಮಠೀಯ ಶ್ರೀ ವಿಶ್ವಾಧಿರಾಜ ಸ್ವಾಮಿಗಳವರು [illegible] ಅರಂಭೋತ್ಸವವನ್ನು ಮಾಡಿದರು. ಸದ್ರಿ ವಾಚನ ಮಂದಿರವು ಉಪಯುಕ್ತ ಪತ್ರಿಕೆಗಳಿಂದ ಕೂಡಿ ಪುಸ್ತಕ ಭಂಡಾರದಿಂದಲೂ ಕೂಡಿದಬೇಕೆಂದರು. ಶ್ರೀ ಬಾಬುರಾಜೇಂದ್ರರ ಆರೋಗ್ಯವು ಅಷ್ಟು ಚೆನ್ನಾಗಿಲ್ಲದ್ದರಿಂದ ಮುಂದಿನ ಮೆರವಣಿಗೆಯನ್ನು ರದ್ದುಗೊಳಿಸಿ, ಇವರ ರೋಟರಿಯು ತಂಗಿಹೆರು, [illegible] ಸ್ವದೇಶಿ ಭಂಡಾರದಿಂದಾಗಿ ಸಂತೆಕಟ್ಟೆಯ ಬಳಿಯ ಶ್ರೀ ರಾಮಕೃಷ್ಣ ಥಿಯೇಟರನ್ನು ಮುಟ್ಟಿತು. ಅಲಂಕರಿಸಲಾಗಿದ್ದ ಥಿಯೇಟರಿನಲ್ಲಿ ಕುಂಬ ಸ್ತ್ರೀಪುರುಷರು ನೆರೆದಿದ್ದರು, ಊರ ಮಹಾಜನರ ಕಡೆಯಿಂದಲೂ ಹಿಂದಿ ಪ್ರೇಮಿಗಳಿಂದಲೂ ಮಾನಪತ್ರಗಳು ಅರ್ಪಿಸಲಾದುವು. ಅನಂತರ ಶ್ರೀಯುತ ಬಾಬುರಾಜೇಂದ್ರಪ್ರಸಾದರು, ತನಗೆ ಮಹಾಜನರು ಉಪಕರಿಸಿ, ಸ್ವಾಗತವಿತ್ತು ಮಾನಪತ್ರಗಳಿಂದ ಮನ್ನಿಸಿದುದಕ್ಕಾಗಿ ಆಭಾರಮನ್ನಣೆ ಮಾಡಿದರು. ಸ್ವದೇಶಿ ವರಕುಗಳು ಅಷ್ಟು ಕೃತ್ರಿಮಕರವಾಗಿಲ್ಲದಿದ್ದರೂ ಪ್ರಿಯವಾದರೂ ಅವುಗಳನ್ನು ಕೊಂಡುಕೊಂಡು ಪ್ರೋತ್ಸಾಹಿಸಿದಲ್ಲಿ, ಮುಂದೆ ಶೀಘ್ರವಾಗಿ ಅವು ಉತ್ತಮವೂ ಅಗ್ಗವೂ ಆಗುವುದರಲ್ಲಿ ಸಂದೇಹವಿಲ್ಲ. ಮಾತ್ರವಲ್ಲದೆ ಸ್ವರಾಜ ಸಾಧನೆಗೆ ಇದರಿಂದ ಅತ್ಯಂತ ಅನುಕೂಲವಾಗುವುದು ಎಂದರು. ಕನ್ನ ಮಾತುಗಳು ನಿರ್ಲಕ್ಷ್ಯವಾಗಲಿಕ್ಕಿಲ್ಲ, ಮಹಾಜನರು ರಾಷ್ಟ್ರ ಸಭೆಗೆ ಹೆಚ್ಚು ಹೆಚ್ಚು ದೇಣಿಗೆಕೊಡುವ ನಂಬುತ್ತೇನೆಂದರು. ಸಭೆಯು ಮುಕ್ತಾಯವಾದೊಡನೆ ವಿಶೇಷ ಆಮಂತ್ರಣ ಬಂದ ಕಾರಣ, ಶ್ರೀಯುತರು ಶ್ರೀ ಕೃಷ್ಣದೇವಸ್ಥಾನವನ್ನು ಸಂದರ್ಶಿಸಿ, ಪರ್ಯಾಯ ಶ್ರೀ ಕಾಣ್ಯೂರು ಮಠದ ಶ್ರೀ ಪಾದಂಗಳವರಿಂದ ಶ್ರೀ ದೇವರ ಪುಷ್ಪಮಾಲೆಯಿಂದ, ಗಂಧಾಕ್ಷತೆಗಳಿಂದ, ಆದರದ ಗಳಿಂದ ಅತಿಥಿಯರಿಸಲ್ಪಟ್ಟರು.

ಮೂಡಬಿದ್ರೆ:—ಇಲ್ಲಿನ ಸಾರ್ವಜನಿಕ ಧರ್ಮಾರ್ಥ ವಾಚನಾಲಯದ ೩ನೇ ವಾರ್ಷಿಕೋತ್ಸವವು ಇದೇ ೭ನೇ ದಿನ ಮಂಗಳೂರು ಗವರ್ನಮೆಂಟ್ ಕಾಲೇಜಿನ ಕನ್ನಡ ಪಂಡಿತರಾದ ಮ. ಸೀತಾರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಅತಿ ವಿಜ್ರುಂಭಣೆಯಿಂದ ಜರಗಿತು. ಊರವರೂ ಅನೇಕ ವಿದ್ಯಾವಂತರು ದಯಮಾಡಿದ್ದರು. ಮೂಲ್ಕಿಯ ಯೂನಿಯನ್ ಬೋರ್ಡಿನ ಕಾರ್ಯದರ್ಶಿಗಳೂ ಕಾಲೇಜಿನ ಸುಪ್ರಸಿದ್ಧ ವಕೀಲರಲ್ಲೋರ್ವರಾದ ವಾಸುದೇವರಾಯರೂ, ಕರಂಜೆ ಶಾಮುರಾಯರೇ ಮೊದಲಾದವರು ಭಾಷಣಗಳನ್ನು ಮಾಡಿದರು. ಅನಂತರ ಅಧ್ಯಕ್ಷ ಮಹಾಶಯರು ವಾಚನಾಲಯದ ಪ್ರಯೋಜನ, ಜನರು ನಿತ್ಯ ವಾಚನಾಲಯಕ್ಕೆ ಹೋಗುವ ಆವಶ್ಯಕತೆ, ಜ್ಞಾನಾರ್ಜನೆ ಮಾಡಿಕೊಳ್ಳುವುದಕ್ಕೆ ವಾಚನಾಲಯಗಳು ಬಹಳ ಸಹಕಾರಿಯಾಗುವುದನ್ನು ಬಹಳ ಸುಂದರವಾದ ಶೈಲಿಯಿಂದ ಭಾಷಣಕೊಟ್ಟುದಲ್ಲದೆ, ವಾಚನಾಲಯದ ಕಾರ್ಯ ಕರ್ತರಿಗೂ ಕೆಲ್ಲ ಸಲಹೆಗಳನ್ನು ಕೊಟ್ಟು ಜನರನ್ನು ತಮ್ಮ ಭಾಷಣದಿಂದ ಸಂತೋಷಗೊಳಿಸಿದರು.

ಶ್ರೀ ವೀರಭಾಹೇ ಜಿನಾಶ ಪ್ರತಿಷ್ಠಾಂಗ ಭವನದ ವಾರ್ಷಿಕೋತ್ಸವವು ಸಮಾರಂಭವು ಇದೇ ಬರುವ ತಾ. ೩-೬-೩೯ನೇ ಗುರುವಾರ ಜರಗಲಿರುವುದು.

ಬೆಳ್ತಂಗಡಿ:—ನಮ್ಮ ಸಾರ್ವಜನಿಕರ ವಾಚನಾಲಯದ ಸಮಾರಂಭವು ಇಲ್ಲಿಯ [illegible] ಕಾರ್ಯದರ್ಶಿ [illegible] ಜರಗಿತು. [illegible] ಎಂಬವರು ಸಭೆಗೆ ಬಂದು [illegible] ಪ್ರಾರ್ಥನೆ ಮಾಡಿ [illegible] [illegible] ಕೆಲ್ಲ ಮಾತು [illegible] ದೇಶಕ್ಕೆ [illegible] ಕೆಲ್ಲ ಮಾತುಗಳಿಂದ [illegible]

ಹೊಸದುರ್ಗ—[illegible] ಸಮಾರಂಭ [illegible] ಇದೇ ತಾ. ೬ನೇ ಬೆಳಿಗ್ಗೆ [illegible] ೬-೩೦ಕ್ಕೆ [illegible] ಶೃಂಗರಿಸಲ್ಪಟ್ಟ ಪಲ್ಲಕ್ಕಿಯಿಂದ [illegible] ಸುಮಾರು ೬೦೦೦ ಜನರ ಮೆರವಣಿಗೆಯು ಶೃಂಗರಿಸಲ್ಪಟ್ಟ ೭ ಆನೆಗಳ ಸಮೇತ ವಾದ್ಯಘೋಷದೊಡನೆ ಹೊರಟಿತು. ೨ ಆನೆಗಳ ಮೇಲೆ [illegible] ಮತ್ತು [illegible] ಚಿತ್ರಗಳು ಅಲಂಕರಿಸಲ್ಪಟ್ಟಿದ್ದುವು. ರಾಜಮಾರ್ಗಗಳು [illegible] ಮತ್ತು [illegible] ಮುಂತಾದ [illegible] ಅಲಂಕರಿಸಲ್ಪಟ್ಟಿದ್ದುವು.

ಮಂಜೇಶ್ವರ—ನಮ್ಮ ಹಿಂದುಸ್ಥಾನದ ಶುದ್ಧ ಖಾದಿ ಸಮಾರಂಭವು ಇಲ್ಲಿಯ ಶ್ರೀ ಮದನಂತೇಶ್ವರ ಹೈಸ್ಕೂಲ್ ಶಾಲೆಯಲ್ಲಿ ಬಹು ವಿಜ್ರುಂಭಣೆಯಿಂದ ಜರಗಿತು. ಆದಿನ ಪುಷ್ಪಸೀಯರುಗಳು ಇದರಲ್ಲಿ ಭಾವವಹಿಸಿದ್ದರಲ್ಲದೆ, ವಿಶೇಷ ಧನಸಹಾಯ ಸಹಾ ಮಾಡಿದ್ದರು. ಇದೇ ತಾ. ೬ನೇ ದಿನ ಊರಲ್ಲೆಲ್ಲಾ ಭವ್ಯವಾದ ಕಲ್ಪತರು ತೋರಣಗಳಿಂದ ಅಲಂಕರಿಸಲ್ಪಟ್ಟಿತು.

ಶಿರ್ವ—ಇದೇ ತಾ. ೬ನೇ ಮಂಗಳವಾರ ಶ್ರೀ ವ. ರ. ಮಾಲಾ ಕಾರ್ಯಾಲಯದಲ್ಲಿ ಅಧಿಪನಾದ ಗೃಹಸ್ಥರ ಚಿತ್ರಸಾರ ಸಭೆಯು ನೆರೆಯಿತು. ಅಧ್ಯಕ್ಷ ಶ್ರೀ ಶಂಕರಾಚಾರ್ಯರ ಪುಣ್ಯ ದಿನಾಚರಣೆಯು ಭಯಭಕ್ತಿಯುಕ್ತವಾಗಿ ನೆರವೇರಿತು. ಶ್ರೀ ಪಂಚರತ್ನರ ಜೀವನ ಚರಿತ್ರೆಯು ಉಲ್ಲೇಖವಿತ್ತು. ಶ್ರೀ ಶಿವ ರಚಿತ 'ಗೀತಾರಹಸ್ಯ'ದ ಕರ್ಮಕಾಂಡವನ್ನು ಓದಲಾಯಿತು.

ಶಿರ್ವ ಹಿಂದೂ ಶಾಲೆಯ ಹದಿನೆರಡನೇ "ಮಕ್ಕಳ ಮೇಳ"ವೂ, ೬ನೇ "ಚರ್ಚಾಸಂಘ"ವೂ ಕಳೆದ ವಾರ ಯಶಸ್ವಿಯಾಗಿ ಜರಗಿಸಲ್ಪಟ್ಟಿತು.

ಇಲ್ಲಿಯ ಮುಟ್ಲಪಾಡಿ ಶಾಲೆಯಲ್ಲಿ ಗ್ರಾಮಸ್ಥರ ಸಭೆಯು ಜರಗಿತು, ೮-೫-೩೯ನೇ ರಾತ್ರಿ ಭಜನೆಯು ಇತ್ತು. 'ಗ್ರಾಮ-ಶಾಲೆಯ ಕುರಿತು ಎಂ. ಸಂಜಪ್ಪ ಹೆಗ್ಡೆಯವರು ಭಾಷಣವಿತ್ತು, ಪ್ರತಿ ತಿಂಗಳಲ್ಲೂ ಗ್ರಾಮ ಸಂಘಟನಾ ಸಭೆಯು ಜರಗುವ ನಿರ್ಣಯ ವಾಯಿತು.

ಗ್ರಾಮದ ಶಾಲೆಗಳಲ್ಲೆಲ್ಲಾ ಸಂತಸ, ಸಹಕಾರ ಸಂಘದ ಕಡೆಯಿಂದ ಬಡ ವಿದ್ಯಾರ್ಥಿಗಳಿಗೆ ಸ್ಲೇಟು ಪುಸ್ತಕಾದಿಗಳನ್ನು ಶ್ರೀ ಎಸ್. ಎಸ್. ಎನ್. ರಾಯರು ಹಂಚಿದರು.

ಆಭಾರ ಸ್ವೀಕಾರ.

ಧನಂಜಯ, ಮಾಸಪತ್ರಿಕೆ, ಧಾರವಾಡ, ವಾರ್ಷಿಕ ಚಂದಾ ರೂ. ೨-೪-೦.

ವಾಣಿಜ್ಯ, ಉದ್ಯಮ, ಅರ್ಥಶಾಸ್ತ್ರ ಬ್ಯಾಂಕಿಂಗ್ ಮತ್ತು ವಿಮೆ ಮೊದಲಾದ ವಿಷಯಗಳನ್ನು ಪ್ರತಿಪಾದಿಸುವ ಮಾಸಿಕವು ಕರ್ನಾಟಕದಲ್ಲಿರುವುದಾದರೆ ಅದು ಧನಂಜಯವೇ. ಎರಡನೆಯ ವರ್ಷದ ೧೦-೨೧ನೆಯ ಸಂಚಿಕೆಯು ನಮಗೆ ಬಂದಿದೆ. ಸುಮಾರು ೩೦ ಉತ್ತಮ ಲೇಖನಗಳಿಂದ ತುಂಬಿದೆ, ೧೨೫ ಪುಟಗಳಲ್ಲೂ ಸ್ವದೇಶಿ ಕೈಗಾರಿಕೆಗಳ ವಿಷಯಕವಾದ ಲೇಖನಗಳಿವೆ. ಪುಸ್ತಕವು ಬಹು ಶೋಭಿತವಾಗಿದೆ. ಇಂತಹ ಉತ್ತಮ ಲೇಖನಗಳನ್ನು ಬರೆದು ಕೊಟ್ಟ ಇವರ ಪ್ರಖ್ಯಾತ ಲೇಖಕರೂ, ಈ ಲೇಖನಗಳನ್ನು ಸಂಪಾದಿಸಿದ ಸಂಪಾದಕರುಗಳಿಂದಲೂ ಕನ್ನಡ ನಾಡಿಗೆ ಅಪಾರವಾದ ಉಪಕಾರವಾದಂತೆ ಮಾಡಿರುತ್ತಾರೆ. ಇಂತಹ ಮಾಸಿಕಗಳು ದಿನೇ ದಿನೇ ಕನ್ನಡ ನಾಡಿನಲ್ಲಿ ಹೆಚ್ಚು ಜನಪ್ರಿಯವಾಗಬೇಕೆಂದು ಹಾರೈಸುತ್ತೇವೆ.

ಸಾರ್ವಜನಿಕ ಧರ್ಮಾರ್ಥ ವಾಚನಾಲಯ, ಮೂಡಬಿದ್ರೆ.

ಇದರ ಮೂರನೇ ವಾರ್ಷಿಕ ವರದಿಯು ನಮಗೆ ಬಂದಿದೆ. ಓದಿದ್ದಲ್ಲಿ, ಇದು ದಿನೇ ದಿನೇ ವೃದ್ಧಿಗೊಳ್ಳುತ್ತಿರುವುದು ತಿಳಿಯುತ್ತದೆ. ಇಂತಹದ ಸಂಸ್ಥೆ [illegible] ಊರಿನ [illegible] ವಿದ್ಯಾವಂತರ ಸಂಖ್ಯೆ [illegible] ತಿಳಿಯುವುದು. [illegible]

[illegible]

ಕರ್ಣಾಟಕ ಸಾಹಿತ್ಯ ಪರಿಷತ್ತು

ಎರಡನೆಯ ವಿಶೇಷ ಸಾಹಿತ್ಯೋತ್ಸವ

ತಾ. ೩೦ನೆಯ ಎಪ್ರಿಲ್ ೧೯೩೫.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಭಾಷೆಯ ನವೀಕರಣ

ಈ ವಿಶೇಷ ಸಾಹಿತ್ಯೋತ್ಸವದ ಉದ್ದೇಶಗಳೇನೆಂಬುದನ್ನು ಕಳೆದ ಸಾರಿಯ ಭಾಷಣದಲ್ಲಿ ತಕ್ಕಮಟ್ಟಿಗೆ ವಿವರಿಸಿದ್ದಾಗಿದೆ. ಸಂಗ್ರಹವಾಗಿ ಹೇಳಬೇಕಾದರೆ, ಈ ಉತ್ಸವವು ಕನ್ನಡ ಭಾಷೆಯ ನವೀಕರಣ ಪ್ರಯತ್ನದ ಒಂದು ರೂಪ. ಸಾಂಪ್ರತ ಲೋಕದ ಬಗೆಬಗೆಯ ವೃತ್ತಿ ಪ್ರವೃತ್ತಿಗೂ ವಿಚಾರವ್ಯವಹಾರಗಳಿಗೂ ಕನ್ನಡವು ಒದಗಿ ಬರುವಂತೆ ಮಾಡಬೇಕೆಂಬುದು ಪರಿಷತ್ತಿನ ಆಶಯ. ಇದುವರೆಗೆ ನಮ್ಮ ಜನರಲ್ಲಿ ಸಾಹಿತ್ಯವೆಂದರೆ, ಅದು ಕೇವಲ ವಿದ್ವತ್ಪ್ರಪಂಚಕ್ಕೆ ಸೇರಿದ ಹವ್ಯಾಸ, ಅದಕ್ಕೂ ಸಾಮಾನ್ಯ ಲೋಕದ ಅನುದಿನದ ಜೀವನಕ್ಕೂ ಹೆಚ್ಚಾದ ಸಂಬಂಧವೇನೂ ಇಲ್ಲ, ಅದು ಪಾಂಡಿತ್ಯಕ್ಕೆ ಮಾತ್ರ ರುಚಿಸುವ ಒಂದು ಶಾಬ್ದಿಕ ಕ್ರೀಡೆ—ಎಂಬುದು ಸಾಮಾನ್ಯ ಭಾವನೆಯಾಗಿತ್ತು. ಸಾಮಾನ್ಯ ಜನರಿಗೆ ಅರ್ಥವಾಗದ ಪದಸರಣಿಯುಳ್ಳದ್ದಿರುವ ಒಂದು ಕಥೆ, ಪುರಾಣ, ಅಥವಾ ಒಂದು ನಾಟಕ, ಅದಕ್ಕೆ ಸಂಬಂಧಪಟ್ಟ ವ್ಯಾಕರಣ, ಛಂದಸ್ಸು, ಅಲಂಕಾರ, ಇವುಗಳಿಂದ ಹೊರಟ ವ್ಯಾಖ್ಯಾನ, ಚರ್ಚೆ—ಇದಿಷ್ಟು ಮಾತ್ರವೇ ಸಾಹಿತ್ಯ ಎಂಬುದು ರೂಢಿಯಿಂದ ಬಂದ ತಿಳುವಳಿಕೆಯಾಗಿತ್ತು. ಆದಕಾರಣ ಸಾಹಿತ್ಯ ಸಂಸ್ಥೆಯೆಂದರೆ ಅದು ಯಾರೋ ಕೆಲವರು ಮಂದಿ ಮಾತಿನ ಮಲ್ಲರ ದೇಗುಲವೆಂದು ಬೀದಿಯ ಮನುಷ್ಯರಿಗೆ ತೋರುತ್ತಿತ್ತೇ ಹೊರತು, ಅದು ತಮ್ಮ ಬದುಕಿಗೂ ಅವಶ್ಯವಾಗಿ ಬೇಕಾದ ಸಾಮಗ್ರಿಯೆಂದು ಅವರಿಗೆ ತೋರುತ್ತಿರಲಿಲ್ಲ. ಈ ಪರಿಷತ್ತು ಸಾಹಿತ್ಯವೆಂಬ ಮಾತಿಗೆ ಕೊಟ್ಟಿರುವ ಅರ್ಥವಾದರೋ, ಹೀಗೆ ಸಂಕುಚಿತವಾದದ್ದಲ್ಲವೆಂದು ಅದರ ನಿಬಂಧನಾವಳಿಯ ಮೊದಲಲ್ಲಿರುವ ಉದ್ದೇಶ ವಿವರಣೆಯಿಂದಲೇ ಸ್ಪಷ್ಟಪಡುತ್ತದೆ. ಪರಿಷತ್ತಿನ ದೃಷ್ಟಿಯಲ್ಲಿ ಸಾಹಿತ್ಯವೆಂಬುದು ಜನಜೀವನವನ್ನು ಉನ್ನತಿಗೆತ್ತುವುದಕ್ಕೆ ಅವಶ್ಯವಾಗಿರುವ ಆಯುಧ. ದೇಶದಲ್ಲಿಯ ಎಲ್ಲ ಮತಗಳ, ಎಲ್ಲ ಜಾತಿಗಳ, ಎಲ್ಲ ವರ್ಗಗಳ ಮತ್ತು ಎಲ್ಲ ಕಸಬುಗಳ ಜನರಲ್ಲಿಯೂ ಜ್ಞಾನವನ್ನೂ ವಿವೇಕವನ್ನೂ ಬೆಳಸಿ, ಅವರ ಧ್ಯೇಯಗಳನ್ನು ಉನ್ನತಿಗೊಳಿಸಿ, ಅವರ ಲೌಕಿಕ ಯೋಗ್ಯತೆಯನ್ನು ಅಭಿವೃದ್ಧಿಪಡಿಸುವುದು ಸಾಹಿತ್ಯದ ಕರ್ತವ್ಯವೆಂದು ಪರಿಷತ್ತು ನಂಬಿದೆ. ಈ ದೃಷ್ಟಿಯಿಂದ ನೋಡಿದರೆ ಕನ್ನಡ ಸಾಹಿತ್ಯದಲ್ಲಿ ಈಗ ಕೆಲವು ದೊಡ್ಡ ಕೊರತೆಗಳು ಎದ್ದು ಕಾಣಿಸುತ್ತಿವೆ. ನಮ್ಮ ಇದುವರೆಗಿನ ಸಾಹಿತ್ಯದಲ್ಲಿ ಲೌಕಿಕ ಜೀವನಕ್ಕೆ ಸಂಬಂಧಪಟ್ಟ ತಿಳುವಳಿಕೆಯನ್ನು ಕೊಡುವ ಭಾಗವು ತೀರ ವಿರಳವಾಗಿದೆ. ಅಂತರಂಗ ಪ್ರಪಂಚದ ವಿಚಾರಗಳು ಯಥೇಷ್ಟವಾಗಿವೆ, ಬಹಿರಂಗ ಪ್ರಪಂಚದ ವಿಚಾರಗಳು ಅತಿ ಸ್ವಲ್ಪವಾಗಿವೆ. ಭಾವರಾಗಗಳ ಧ್ವನಿ ಅವುಗಳಲ್ಲಿ ತೀವ್ರವಾಗಿ ಕೇಳಬರುತ್ತದೆ, ವಿಮರ್ಶೆ ಪರೀಕ್ಷೆಗಳ ಧ್ವನಿ ಅಷ್ಟು ಬಲವಾಗಿ ಕೇಳಬರುತ್ತಿಲ್ಲ. ಭಕ್ತಿ, ಪ್ರೀತಿ, ವೈರಾಗ್ಯ—ಇವು ಮನುಷ್ಯನ ಉಪೇಕ್ಷೆಗೆ ಅರ್ಹವಾದವುಗಳೆಂದು ಯಾರೂ ಹೇಳಲಾರರು. ಆದರೆ ಅಷ್ಟರಿಂದಲೇ ಅವನ ಜೀವನವು ಸಾರ್ಥಕವಾಗಲಾರದು, ಅವುಗಳ ಜೊತೆಗೆ ವಿಚಾರಶೀಲತೆ, ಕಾರ್ಯದಕ್ಷತೆ, ಕರ್ತವ್ಯೋತ್ಸಾಹ ಇವೂ ಸೇರಿರಬೇಕು. ಈ ಗುಣಗಳಿಗೆ ಪರಿಪೋಷಕವಾದದ್ದು ಪ್ರಕೃತಿವಿಜ್ಞಾನ ಮತ್ತು ಲೋಕವ್ಯವಸ್ಥಾ ಪರಿಜ್ಞಾನ. ಈ ಎರಡು ವಿಷಯಗಳನ್ನು ಕುರಿತ ಸಾಹಿತ್ಯವನ್ನು ಬೆಳಸುವುದು ಕನ್ನಡದ ಅಭಿಮಾನಿಗಳಿಗೆ ಈಗ ಅವಶ್ಯ ಕರ್ತವ್ಯವಾಗಿದೆ. ಈ ಕರ್ತವ್ಯವನ್ನು ನೆರವೇರಿಸಲು ಸಾಧಕವೆಂದು ತೋರಿರುವ ಮಾರ್ಗಗಳಲ್ಲಿ ಈ ವಿಶೇಷ ಸಾಹಿತ್ಯೋತ್ಸವದ ಉಪನ್ಯಾಸ ಮಾಲೆ ಒಂದಾಗಿದೆ.

ಆಧುನಿಕ ವಿಚಾರಗಳು

ಆದುದರಿಂದಲೇ ಈ ಉಪನ್ಯಾಸಗಳನ್ನು ಆಧುನಿಕ ವಿಚಾರೋಪನ್ಯಾಸಗಳೆಂದು ಕರೆದಿದೆ. ಪ್ರಕೃತ ಪ್ರಪಂಚದ ವಾಸ್ತವಿಕಾಂಶಗಳ ವಿಶೇಷ ಮುಖ್ಯತೆಯನ್ನು ಪರಿಷತ್ತು ಹೇಗೆ ಮನಸಾರ ಅಂಗೀಕರಿಸಿದೆಯೆಂಬುದು ಕಳೆದ ಸಾರಿಯ ವಿಶೇಷೋಪನ್ಯಾಸಗಳ ವಿಷಯ ಪಟ್ಟಿಕೆಯಿಂದಲೂ ವ್ಯಕ್ತಪಡುತ್ತದೆ. ಪೂರ್ವಕಾಲದಲ್ಲಿ ಕಾವ್ಯ ಇತಿಹಾಸಗಳೂ ಮತಧರ್ಮ ಗ್ರಂಥಗಳೂ ಪ್ರಪಂಚದ ಸ್ಥಿತಿಯ ಮೇಲೆ ಎಷ್ಟು ಮಾತ್ರ ಪರಿಣಾಮವನ್ನು ಮಾಡುತ್ತಿದ್ದುವೋ ಅದಕ್ಕಿಂತ ಹೆಚ್ಚಾಗಿ ಈಗ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಮೊದಲಾದ ಪ್ರಕೃತಿ ವಿಜ್ಞಾನ ಶಾಖೆಗಳೂ ರಾಜ್ಯಶಾಸ್ತ್ರ ಅರ್ಥಶಾಸ್ತ್ರ ಮೊದಲಾದ ಸಮಾಜ ವಿಜ್ಞಾನ ಶಾಖೆಗಳೂ ಪ್ರಪಂಚದ ಸ್ಥಿತಿಗತಿಗಳನ್ನು ಮಾರ್ಪಡಿಸುತ್ತಿವೆ. ನಮ್ಮ ಕಾಲವನ್ನು ವಿಜ್ಞಾನದ ಯುಗವೆಂದು ವ್ಯವಹರಿಸುವುದು ಎಲ್ಲರಿಗೂ ತಿಳಿದಿರುವ ಸಂಗತಿ. ವಿಜ್ಞಾನದ ಮಹಿಮೆಯಿಂದ ಬದಲಾಗುತ್ತಿರುವುದು ನಮ್ಮ ಹೊರಗಿನ ಜೀವನದ ಪರಿಸ್ಥಿತಿಗಳು ಮಾತ್ರವೇ ಅಲ್ಲ, ಈ ಬಾಹ್ಯ ವ್ಯತ್ಯಾಸಗಳ ಫಲಿತಾಂಶವಾಗಿಯೂ, ಅದಕ್ಕಿಂತ ಹೆಚ್ಚಾಗಿ ವಿಜ್ಞಾನ ಪ್ರಕ್ರಿಯೆಯಿಂದ ಬುದ್ಧಿಗೆ ಆಗುತ್ತಿರುವ ವಿಮರ್ಶನ ಪ್ರೇರಕವಾದ ಶಿಕ್ಷಣದಿಂದಲೂ ನಮ್ಮೆಲ್ಲರ ಅಂತರಂಗ ಜೀವನ ಸಹ ಬದಲಾವಣೆಯನ್ನು ಹೊಂದುತ್ತಿದೆ. ಇಂಥ ಕಾಲದಲ್ಲಿ ಕನ್ನಡಿಗರು ವಿಜ್ಞಾನದ ಸ್ವರೂಪವೆಂಥಾದ್ದು, ಅದರ ಪ್ರಭಾವವೆಂಥಾದ್ದು ಎಂಬುದನ್ನು ತಿಳಿದುಕೊಳ್ಳುವುದು ಅವರ ಜೀವನಧರ್ಮಕ್ಕೆ ಸೇರಿದ ಒಂದು ಕರ್ತವ್ಯವಾಗಿರುತ್ತದೆ. ಅದಕ್ಕೆ ಸಹಾಯವನ್ನೊದಗಿಸಬೇಕೆಂಬುದು ಪರಿಷತ್ತಿನ ಆಶೆ.

ಈ ಉಪನ್ಯಾಸ ಮಾಲೆಯಿಂದ ಅಪೇಕ್ಷಿಸಬಹುದಾದ ಪ್ರಯೋಜನಗಳು ಅನೇಕ. ಮೊದಲನೆಯದಾಗಿ, ನಮ್ಮ ದೇಶದ ಭವಿಷ್ಯಕ್ಕೆ ಈಗ ಯಾರು ತಳಹದಿ ಕಟ್ಟುತ್ತಿದ್ದಾರೆಯೋ ಅಂಥ ಉಪಾಧ್ಯಾಯರು ಪ್ರಪಂಚವು ಈಗ ಬದುಕುತ್ತಿರುವ ಮತ್ತು ಬೆಳೆಯುತ್ತಿರುವ ರೀತಿಗಳನ್ನು ಅರಿತುಕೊಳ್ಳಬೇಕೆಂಬುದೇ ನಮ್ಮ ಮನೋಗತ. ಅವರು ಚರಿತ್ರೆ, ಭೂಗೋಳ, ವಾಣಿಜ್ಯ, ವ್ಯವಸಾಯ ಮೊದಲಾದ ನಾನಾ ಲೋಕವ್ಯಾಪಾರ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸಬೇಕಾಗಿರುವುದಷ್ಟೆ? ಈ ನಾನಾ ವಿಷಯಗಳಿಗೂ ಪ್ರಪಂಚದ ಜೀವನಕ್ಕೂ ಇರತಕ್ಕ ಸಂಬಂಧ ಎಂಥಾದ್ದು? ಈ ವಿಷಯಗಳು ವಿಜ್ಞಾನದ ಅಭಿವೃದ್ಧಿಯಿಂದ ಹೇಗೆ ಹೇಗೆ ರೂಪಾಂತರಗಳನ್ನು ಹೊಂದುತ್ತಿವೆ?—ಎಂಬೀ ವಿವರಗಳನ್ನು ಅವರು ಚೆನ್ನಾಗಿ ಅರಿತುಕೊಂಡಿದ್ದ ಹೊರತು ಅವರ ಪಾಠವು ಎಷ್ಟು ಫಲಕಾರಿಯಾಗಬೇಕಾದದ್ದೋ ಅಷ್ಟು ಹೆಚ್ಚಾಗಿ ಫಲಕಾರಿಯಾಗಲಾರದು. ವಿದ್ಯಾರ್ಥಿಗೆ ಒಂದು ವಿಷಯದ ತಿಳುವಳಿಕೆಯನ್ನು ಕೊಡಬೇಕಾದರೆ ಬೋಧಕನಲ್ಲಿ ಅದರ ಹತ್ತರಷ್ಟು ತಿಳುವಳಿಕೆ ಇರಬೇಕು. ಗೊತ್ತಾದ ಪಠ್ಯಪುಸ್ತಕದಲ್ಲಿ ಎಷ್ಟು ಕೊಟ್ಟಿರುತ್ತದೆಯೋ ಅಷ್ಟನ್ನು ಮಾತ್ರವೇ ಅವನು ತಿಳಿದುಕೊಂಡಿದ್ದರೆ ಸಾಲದು. ಪಠ್ಯಪುಸ್ತಕವೆಂಬ ಸಣ್ಣ ಚಿತ್ರಕ್ಕೆ ಭಿತ್ತಿಯಂತೆ ಆಧಾರವಾಗಿರುವ ವಿಪುಲ ಶಾಸ್ತ್ರಭಾಗವನ್ನು ಅವನು ಕೂಡಿದ ಮಟ್ಟಿಗೂ ಪರಿಚಯ ಮಾಡಿಕೊಂಡಿರಬೇಕು. ಆ ಬಗೆಯ ವ್ಯಾಪ್ತವಾದ ಪರಿಜ್ಞಾನವನ್ನು ಸಾಧ್ಯವಾದಷ್ಟು ಒದಗಿಸಬೇಕೆಂಬುದು ಈ ಉಪನ್ಯಾಸಗಳ ಆಶಯ.

[ಸಶೇಷ]

The Canara Public Conveyance Company, Ltd., Mangalore.

WE TAKE UTMOST CARE OF PASSENGERS

Read the following letter –

Modern Hindu Hotel,
Calicut, 17—6—1934

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,
(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್, ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇರೂರಿಗೆ, ಕಡೂರಿಗೆ-
—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಮೈಸೂರು ರಾಜಧಾನಿಯ ಹಿಂದೀ ಪ್ರಚಾರ.

ಶ್ರೀ ಲಕ್ಷ್ಮೀಪತಿದೇವ ವಿದ್ಯಾರ್ಥಿಯವರು ಹೀಗೆ ಬರೆ ಯುತ್ತಾರೆ —

ನನ್ನ ಕರ್ನಾಟಕ ಪ್ರಾಂತೀಯ ಸಂಚಾರದಿಂದಾಗಿ ಈ ಸಲ ರಾಮರಾಜ್ಯವೆಂಬ ಹೆಸರನ್ನು ಹೇಳಿಸಿಕೊಳ್ಳುತ್ತಿರುವ ಮೈಸೂರು ರಾಜಧಾನಿಯನ್ನು ಸಂದರ್ಶಿಸುವ ಪ್ರಥಮ ಸುಯೋಗವು ನನಗೆ ಲಭಿಸಿತು. ಇದೇ ಕಳೆದ ತಿಂಗಳ ತಾ. ೨೬ಕ್ಕೆ ಹೋದವನು ಕಳೆದ ೨ನೇ ತಾರೀಕಿನ ವರೆಗೆ ಅಲ್ಲಿದ್ದು ಅಲ್ಲಿನ ಕೆಲವು ಸಾರ್ವಜನಿಕ ಕಾರ್ಯಕ್ರಮಗಳನ್ನು ನೋಡಿದೆನು. ಅವುಗಳಲ್ಲಿ ಅಲ್ಲಿಯ ಹಿಂದೀ ಪ್ರಚಾರ ಕಾರ್ಯವೇ ವಿಶೇಷ ಉಲ್ಲೇಖನೀಯವಾಗಿರುತ್ತದೆ ದಕ್ಷಿಣ ಕನ್ನಡ ಜಿಲ್ಲೆಯ ಹಿಂದೀ ಪ್ರಚಾರದ ಕ್ಷೇತ್ರದಲ್ಲಿಯ ಕಿಂಚಿತ್ ಸೇವೆ ಮಾಡುವ ಪುಣ್ಯವು ನನಗೂ ಕಳೆದ ನಾಲ್ಕೈದು ವರ್ಷಗಳಿಂದ ಲಭಿಸಿದುದರಿಂದ ಮೈಸೂರಿನ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಹಿಂದೀಪ್ರಚಾರದ ಕಾರ್ಯಕ್ರಮ ಮತ್ತು ಅದಕ್ಕೆ ಸಂಬಂಧಪಟ್ಟ ಸಂಸ್ಥೆ ಹಾಗೂ ಕಾರ್ಯಕರ್ತರ ನೀತಿ ನಿಪುಣತೆಗಳ ಕುರಿತು ನನ್ನ ಅನುಭವಕ್ಕೆ ಬಂದ ಒಂದೆರಡು ಅಭಿಪ್ರಾಯಗಳನ್ನು ವಾಚಕರ ಮುಂದಿಟ್ಟರೆ ಅಪ್ರಾಸಂಗಿಕವೆನಿಸಲಾರದು

ಮೈಸೂರು ರಾಜಧಾನಿಯಲ್ಲಿ ಹಿಂದೀ ಪ್ರಚಾರದ ಬಗ್ಗೆ ಸುವ್ಯವಸ್ಥಿತವಾದ ಒಂದು ಸಭೆ ಇದೆ 'ಹಿಂದೀಪ್ರಚಾರ ಸಭಾ ಮೈಸೂರು' ಎಂಬುದೇ ಇದರ ಹೆಸರು ಈ ಸಭೆಯು ಇಲ್ಲಿಯ ಸುಯೋಗ್ಯ ಹಿಂದೀಪ್ರೇಮಿಗಳ ಪೂರ್ಣ ಸಹಕಾರದಿಂದ ನಡೆಯುತ್ತಿದೆ ಮೈಸೂರು ಸಿಟಿಯಲ್ಲಿಯೇ ತುಂಬಾ ಕೇಂದ್ರಗಳಿದ್ದು ಗಂಡಸರಿಗೆ ಬೇರೆ ಹೆಂಗಸರಿಗೆ ಬೇರೆ ಈ ರೀತಿ ಕ್ಲಾಸುಗಳು ನಡೆಯುತ್ತಿವೆ ಅಲ್ಲಹಾಬಾದಿನ ಮಹಿಳಾ ವಿದ್ಯಾಪೀಠದಲ್ಲಿ ಎರಡು ವರ್ಷ ಇದ್ದು ಹಿಂದಿಯಲ್ಲಿ 'ವಿದುಷಿ' ಎಂಬ ಎಂಬ ಉತ್ತಮ ಉಪಾಧಿಯನ್ನು ಪಡೆದು ಹಿಂದೀ ಭಾಷೆಯಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಸಂಪಾದಿಸಿರುವ ಶ್ರೀಮತಿ ಇಂದಿರಾ ದೇವಿ ವಿದುಷಿ ಮತ್ತು ಮದ್ರಾಸಿನ ಹಿಂದೀ ಪ್ರಚಾರ ವಿದ್ಯಾಲಯದ ಸ್ನಾತಕರಾದ ಶ್ರೀ ಹಿರಣ್ಣಯ್ಯ ಹಿಂದೀ ಪ್ರಚಾರಕ, ಶ್ರೀಯುತ ಜಿ ಪಿ ವಿದ್ಯಾರ್ಥಿ ಇಂಟರ್ ಯುನಿವರ್ಸಿಟಿ ಬೋರ್ಡಿನ ಮೆನೇಜರ್ ಮೊದಲಾದವರ ಅತುಲ ಪರಿಶ್ರಮವು ಕರ್ನಾಟಕ ಪ್ರಾಂತ್ಯದಲ್ಲೇ ಮಾತ್ರವಲ್ಲ ಅಖಿಲ ಭಾರತವರ್ಷದ ಹಿಂದೀ ಕಾರ್ಯಕ್ಷೇತ್ರದಲ್ಲಿ ಪ್ರಶಂಸನೀಯವಾಗಿದೆ. ನಾನು ಮಂಗಳೂರಲ್ಲಿ ಅನುಭವ ಮಾಡಿದಂತೆ ಇಲ್ಲಿಯ ಕಾರ್ಯಕರ್ತರಲ್ಲಿ ಯಾವ ತರದ ಪಕ್ಷ ಭೇದಗಳೂ ಕಂಡುಬರುವುದಿಲ್ಲ ಇದು ಹೊರತು ಸಂಖ್ಯಾಪ್ರಮಾಣದ ಅಭಿವೃದ್ಧಿಗೆ ಮಾತ್ರ ಇಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಪರೀಕ್ಷೆಗೆ ಒಂದು ತಿಂಗಳು ಇರುವ ವರೆಗೆ ಮೈ ಅಲ್ಲಾಡಿಸುತ್ತಿದ್ದು ಕಡೆಗೆ ಎಲ್ಲಾ ಪಾಠಗಳನ್ನು ಒಂದೇ ಸಲ ಪರೀಕ್ಷಾರ್ಥಿಗಳ ಗಂಟಲಿಗೆ ಸುರಿಸುವಂತಹ ಪದ್ಧತಿಯು ಇಲ್ಲಿ ಕಂಡು ಬರುವುದಿಲ್ಲ. ಇನ್ನು ವಿಶೇಷತೆ—ಏನೆಂದರೆ ಆಸಿಗೊಂದರಂತೆ ಪ್ರಚಾರಕರನ್ನೂ ಸೇರಿಸದೆ ಅಧ್ಯಾಪಕನ ಕಾರ್ಯದಲ್ಲಿ ಒಳ್ಳೆಯ ಅನುಭವಶಾಲಿಗಳನ್ನೇ ಸೇರಿಸಿದ್ದಾರೆ ಪ್ರಕೃತ ಒಂದು ವಿದ್ಯಾಲಯ ಸ್ಥಾಪಿತವಾಗಿ ಅನುದಿನವೂ ಹಿಂದೀ ಕ್ಲಾಸುಗಳು ನಡೆಯುತ್ತಿವೆ ಪ್ರಾತಃಕಾಲ ೪। ಗಂಟೆಗೆ ಎಲ್ಲಾ ವಿದ್ಯಾರ್ಥಿಗಳು ಎದ್ದು ಮಹಾತ್ಮಾಜಿಯವರ ಕ್ರಮದ ಪ್ರಾರ್ಥನೆ ನಡೆಸುತ್ತಾರೆ ಆ ಮೇಲೆ ಗೀತಾಶ್ಲೋಕಗಳು ಕ.ಕ ಪಾಠಮಾಡಲ್ಪಡುತ್ತವೆ ಇದಾದ ಮೇಲೆ ಎಲ್ಲಾ ವಿದ್ಯಾರ್ಥಿಗಳಿಗೆ, ಜಿ ಪಿ. ವಿದ್ಯಾರ್ಥಿಯವರು ಮಹಾತ್ಮಾಗಾಂಧಿಯವರ ಆತ್ಮಕಥೆಯನ್ನು ಓದಿ ವಿವರಿಸುತ್ತಾರೆ ಕಡೆಗೆ ಒಂದು ಗಂಟೆ ಲ್ಯಾ ಕಲಿಸಲಾಗುತ್ತದೆ ಶ್ರೀಮಾನ್ ಟಿ ಕೃಷ್ಣಮೂರ್ತಿ M. A. B. B.S. C. ಯವರೇ ಈ ವಿದ್ಯಾಲಯದ ಅಧ್ಯಕ್ಷರು ಕೆ. ವಿ ಅಶ್ವತ್ಥನಾರಾಯಣ ರಾವ್, ಹಿರಣ್ಣಯ್ಯ ಇವರುಗಳ ಅಧ್ಯಾಪಕತನ ಮತ್ತು ಶ್ರೀಯುತ ಜಿ ಸಚ್ಚಿದಾನಂದರ ಕಾರ್ಯದರ್ಶಿತ್ವದಿಂದಲೂ ಈ ಎಲ್ಲಾ ಕಾರ್ಯಗಳೂ ಅತ್ಯುತ್ತಮ ರೀತಿಯಲ್ಲಿ ನಡೆಯುತ್ತಿವೆ ಇಂತಹ ದುಃಸ್ಸಂದರ್ಭವನ್ನು ಮಂಗಳೂರ ಹಿಂದೀ ಕಾರ್ಯಕರ್ತರು ಈ ರೀತಿಯಲ್ಲಿ ನಮ್ಮ ವಿದ್ಯಾರ್ಥಿ ವೃಂದಕ್ಕೆ ಒದಗಿಸಿಕೊಡುವುದರಲ್ಲಿ ಯತ್ನಿಸಲಿಲ್ಲವೆಂದರೆ ತಪ್ಪಾಗದು. ಮಂಗಳೂರಿಗಿಂತಲೂ ಮೈಸೂರು ರಾಜಧಾನಿಯಲ್ಲಿ ಮಹಿಳೆಯರು ವಿಶೇಷ ಉತ್ಸಾಹದಿಂದ ಹಿಂದೀಪ್ರಚಾರದಲ್ಲಿ ಭಾಗವಹಿಸುತ್ತಿದ್ದಾರೆಂಬುದನ್ನು ತಿಳಿಸಲು ನನಗೆ ತುಂಬಾ ಸಂತೋಷವಾಗುತ್ತದೆ ಇಲ್ಲಿಯ ಸಭೆಯು ಸರಕಾರದಿಂದ ರಿಜಿಸ್ಟ್ರಿಮಾಡಲ್ಪಟ್ಟಿದೆ ಮಾತ್ರವಲ್ಲದೆ ಮದ್ರಾಸಿನ ದಕ್ಷಿಣಭಾರತ ಹಿಂದೀ ಪ್ರಚಾರ ಸಭೆಗೂ ಸಂಬಂಧ ಬೆಳೆಸಿಕೊಂಡಿದೆ ಸುಯೋಗ್ಯವಾದ ವಾಚನಾಲಯವೊಂದಿದೆ ಉತ್ತರ ಹಿಂದೂಸ್ಥಾನದ ಪ್ರಸಿದ್ಧ ಹಿಂದೀ ಪತ್ರಿಕೆಗಳೆಲ್ಲವೂ ಬರುತ್ತಿವೆ ಮತ್ತು ಒಳ್ಳೆಯ ವ್ಯವಸ್ಥೆಯಿಂದ ಪತ್ರಿಕೆಗಳು ಎಲ್ಲವರಿಗೂ ಓದಲಿಕ್ಕೆ ದೊರೆಯುತ್ತಿವೆ ಪುಸ್ತಕಾಲಯದಲ್ಲಿ ೪೦೦ಕ್ಕಿಂತಲೂ ಮಿಕ್ಕಿದ ಹಿಂದೀ ಪುಸ್ತಕಗಳಿವೆ ಇಲ್ಲಿಯ ಪುಸ್ತಕಾಲಯ ಮತ್ತು ವಾಚನಾಲಯದ ವ್ಯವಸ್ಥೆಯಿಂದ ಮಂಗಳೂರ ಹಿಂದೀಪ್ರಚಾರದ ಕಾರ್ಯಕರ್ತರು ಉತ್ತಮವಾದ ಪಾಠಪಡೆಯಬಹುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದೀಪ್ರಚಾರದ ಬಗ್ಗೆ ಬಾಹ್ಯಾಡಂಬರದ ಚಳವಳವು ವಿಶೇಷವಾಗಿ ನಡೆಯುತ್ತಿದ್ದಾದರೂ ಸಭೆಯು ಇನ್ನೂ ಸ್ವಾವಲಂಬಿಯಾಗಿಲ್ಲ. ದಿನಕ್ಕೊಂಟುಸಲದಂತೆ ತನ್ನ ಧೋರಣೆಯನ್ನು ಪರಿವರ್ತಿಸುತ್ತಿದೆಯಾದರೂ ಇನ್ನೂ ಹೊರಗಿನ ಸಹಾಯಕ್ಕೇನೇ ಕೈನೀಡುತ್ತಾ ಇದೆ ವರಂತು ಮೈಸೂರ ಸಭೆಯು ಇಷ್ಟರಲ್ಲೇ ಸ್ವಾವಲಂಬನದಲ್ಲಿದ್ದ ಎಲ್ಲಾ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ ಒಂದೇ ಮಾತಿನಲ್ಲಿ ಹೇಳುವುದಾದರೆ ಪ್ರಕೃತದ ಧೋರಣೆಯಿಂದಲೇ ಮೈಸೂರ ಹಿಂದೀಪ್ರಚಾರ ಸಭೆಯು ಇನ್ನೂ ೫ ವರ್ಷ ಕಳೆಸಿದನ್ನು ಮುಂದೊತ್ತಿದರೆ ಈ ಸಂಸ್ಥೆಯೇ ಅಖಿಲಕರ್ನಾಟಕಕ್ಕೆ ಪ್ರಧಾನ ಸಂಸ್ಥೆಯಾಗುವುದರಲ್ಲಿ ಸಂದೇಹವಿಲ್ಲ ನಮ್ಮ ಜಿಲ್ಲೆಯ ಹಿಂದೀ ಕಾರ್ಯಕರ್ತರು ಒಮ್ಮೆ ಕರ್ನಾಟಕ ಪ್ರಾಂತ್ಯವನ್ನು ಸಂಚರಿಸಿ ಮುಖ್ಯವಾಗಿ ಮೈಸೂರ ಹಿಂದೀಪ್ರಚಾರ ಸಭೆಯ ಪ್ರತಿಯೊಂದು ಕಾರ್ಯಕ್ರಮದ ಅನುಭವ ಮಾಡಿಕೊಂಡು ಅದೇ ರೀತಿಯಲ್ಲಿ ದಕ್ಷಿಣ ಜಿಲ್ಲೆಯಲ್ಲಿಯೂ ಪ್ರಚಾರಕಾರ್ಯವನ್ನು ಒಂದು ನಿರ್ದಿಷ್ಟ ಧೋರಣೆಯಿಂದ ಮುಂದೊತ್ತಿದರೆ ಎಷ್ಟೋ ಮಂದಿ ಹಿಂದೀ ಪ್ರೇಮಿಗಳಿಗೆ ಹೆಚ್ಚಿನ ಪ್ರಯೋಜನ ಉಂಟಾಗುವುದರಲ್ಲಿ ಸಂದೇಹವಿಲ್ಲ ಮೈಸೂರು ಹಿಂದೀಪ್ರಚಾರ ಸಭೆಯ ಪ್ರತಿಯೊಂದು ವಿಭಾಗದ ಕಾರ್ಯಕರ್ತರು ವಿಶೇಷ ಧನ್ಯವಾದಕ್ಕೆ ಪಾತ್ರರೆಂಬುದನ್ನು ನಾನು ಮನಃಪೂರ್ವಕವಾಗಿ ಬರೆಯುತ್ತೇನೆ

ತಾ ೧೨—೫—೩೭ರಲ್ಲು ಜರಗಿದ ಬೋರ್ಡು ಶಾಲೆಗಳ ಉಪಾಧ್ಯಾಯರ ಸ್ಪೆಶ್ಯಲ್ ಸಭೆಯ ನಿರ್ಣಯಗಳು

ಈ ಸಭೆಯು ತಾ ೧೨—೫—೩೭ರಲ್ಲು ಅಪರಾಹ್ನ ಗಂಟೆ ೪ಕ್ಕೆ ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಮ ರಾ ರಾ ಉಳ್ಳಾಲ್ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಜರಗಿತು ಸಭೆಗೆ ಟ್ರೈನಿಂಗ್ ಶಾಲೆಯ ಹೆಡ್‌ಮಾಸ್ಟರ್ ಮ ರಾ ರಾ ಕೆ ಗೋಪಾಲರಾಯರೂ ರಾ ಕುರುಕಾಲ್ ಗಣಪ್ಪಯ್ಯ ಸೆಟ್ರೂ ದಯಮಾಡಿಸಿದ್ದರು ಕಾರ್ಕಳ ತಾಲೂ ೨ ವಿನಹಾ ಇತರ ಎಲ್ಲಾ ತಾಲೂಕುಗಳ ಬೋರ್ಡುಶಾಲೆಗಳ ಹಲಕೆಲವು ಉಪಾಧ್ಯಾಯರು ಹಾಜರಾಗಿದ್ದರು. ಸಭೆ ಜರಗಿಸಿದ ಉದ್ದೇಶವನ್ನು ಸಂಘದ ಕಾರ್ಯದರ್ಶಿಯವರು ವಿವರಿಸಿದ ಬಳಿಕ ಈ ಕೆಳಗಿನ ನಿರ್ಣಯಗಳು ಸರ್ವಸಮ್ಮತವಾಗಿ ಮಂಜೂರು ಮಾಡಲಾಯಿತು.

೧. ಕಳೆದ ವರ್ಷದ ಎಪ್ರಿಲ್ ತಿಂಗಳಲ್ಲಿ ಗವರ್ನಮೆಂಟಿನ ಹೊಸ ಸ್ಕೇಲನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಜಾರಿಗೆ ತರುವಾಗ್ಯೆ ಆ ಸ್ಕೇಲಿನ ಪ್ರಕಾರ ಆಯಾಯ ಗ್ರೇಡಿನವರಿಗೆ ಸಿಕ್ಕಬೇಕಾದ ಮಿನ್ನಿಮಮ್ ಸಂಬಳಕ್ಕಿಂತ ಜಾಸ್ತಿಯಾಗಿ ಆ ಮೊದಲೇ ಸಿಕ್ಕುತ್ತಿದ್ದ ಹೆಚ್ಚಿನ ಸಂಬಳವನ್ನು ಡಿಸ್ಟ್ರಿಕ್ಟ್ ಬೋರ್ಡು ಪರ್ಸನಲ್ ಎಲ್ಲೊವೆನ್ಸ್ ಆಗಿ ನಿರ್ಣಯಿಸಿತ್ತು ಆದರೆ ಅದನ್ನು ಪರ್ಸನಲ್ ಪೇ ಎಂಬುದಾಗಿ ಪರಿಗಣಿಸಬೇಕಾಗಿ ಡಿಸ್ಟ್ರಿಕ್ಟ್‌ಬೋರ್ಡನ್ನು ಕೇಳಿಕೊಳ್ಳುತ್ತದೆ

೨ ಪರ್ಸನಲ್ ಎಲ್ಲೊವೆನ್ಸ ಎಂಬುದಾಗಿ ೧೯೩೭ನೇ ಫೆಬ್ರವರಿ ವರೆಗೆ ಸಿಕ್ಕುತ್ತಿದ್ದ ಸಂಬಳವನ್ನು ಕಳೆದ ಮಾರ್ಚಿ ತಿಂಗಳಿನಿಂದ ಕೊಡದೆ ಬಿಗಿಹಿಡಿದಿರುವುದಕ್ಕೆ ಡಿ. ಬೋರ್ಡು ನಿರ್ಣಯವಾಗಲೀ, ಗವರ್ನಮೆಂಟು ಹುಕುಂ ಆಗಲೀ ಇಲ್ಲದಿರುವುದರಿಂದ ಸದರಿ ಪರ್ಸನಲ್ ಪೇಯನ್ನು ಕಳೆದ ವರುಷದಂತೆ ಮುಂದಕ್ಕೂ ಕೊಡಿಸಬೇಕಾಗಿ ಈ ಸಭೆಯು ಡಿಸ್ಟ್ರಿಕ್ಟ್ ಬೋರ್ಡನ್ನು ಕೇಳಿಕೊಳ್ಳುತ್ತದೆ

೩ ಲೋವರ್ ಗ್ರೇಡ್ ಟ್ರೈಂಡ್ ಉಪಾಧ್ಯಾಯರು ತಮ್ಮ ಸರ್ಟಿಫಿಕೇಟನ್ನು ಹಾಯರ್ ಗ್ರೇಡಾಗಿ ಮಾರ್ಪಡಿಸಿದ್ದಲ್ಲಿ ಅಂಥವರಿಗೆ ಗವರ್ನಮೆಂಟ್ ಆರ್ಡರು ಪ್ರಕಾರ ಸರ್ಟಿಫಿಕೇಟು ಮಾರ್ಪಡಿಸಿದ ತಾರೀಕಿನಿಂದ ಹಾಯರ್ ಗ್ರೇಡು ಸ್ಕೇಲನ್ನು ಕೊಡಿಸಬೇಕಾಗಿಯೂ ಹಾಗೆ ಕೊಡಿಸುವಾಗ್ಯೆ ಲೋವರ್ ಗ್ರೇಡಿನಲ್ಲಿ ಸಿಕ್ಕುತ್ತಿದ್ದ ಸಂಬಳವು ಹಾಯರ್ ಗ್ರೇಡಿನ ಮಿನಿಮಮ್ ಸಂಬಳಕ್ಕಿಂತ ಜಾಸ್ತಿ ಇರುವಲ್ಲಿ ಹಾಗೆ ಜಾಸ್ತಿ ಇದ್ದ ಸಂಬಳವನ್ನೇ ಕೊಡಿಸುವುದಲ್ಲದೆ, ಆ ಸಂಬಳದಿಂದಲೇ ಮುಂದಕ್ಕೆ ಹಾಯರ್‌ಗ್ರೇಡಿನ ಇನ್‌ಕ್ರಿಮೆಂಟನ್ನು ಕೂಡಿಸಬೇಕಾಗಿಯೂ ಡಿ ಬೋರ್ಡಿಗೆ ಬರಕೊಳ್ಳಬೇಕಾಗಿಯೂ ನಿರ್ಣಯಿಸಲ್ಪಾತು

೪ ಡಿಸ್ಟ್ರಿಕ್ಟ್ ಬೋರ್ಡು ಶಿಬಂದಿಯಲ್ಲಿ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರಿಗೆ ಮಾತ್ರ ಶೇಕಡಾ ೬।ರ ಕಡಿತ ಉಂಟಾದ್ದು ಬಹಳ ಶೋಚನೀಯವಾಗಿರುತ್ತದೆ ಹೀಗಿರುತ್ತಾ ಎಲಿಮೆಂಟರಿ ಎಡ್ಯುಕೇಶನ್ ಫಂಡಿನಲ್ಲಿ ತಿರಿಗೆ ಮೂವತ್ತಾರು ಸಾವಿರ ರೂಪ್ಯಾ ಕಡಮೆಯಾದ್ದನ್ನು ಗವರ್ನಮೆಂಟಿನವರು ಎಷ್ಟು ಮಾತ್ರಕ್ಕೂ ಕೊಡದ ಸಂದರ್ಭದಲ್ಲಿ ಆ ಕಡಮೆಯಾದ ಹಣದ ಕಡಿತವು ತಿರಿಗಿ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರ ಮೇಲೆ ಬೀಳಗೊಡಿಸದೆ ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಜನರಲ್ ಫಂಡಿನಿಂದ ಭರ್ತಿಮಾಡಿಕೊಳ್ಳಬೇಕಾಗಿ ಈ ಸಭೆಯು ಆಗ್ರಹಪೂರ್ವಕವಾಗಿ ಡಿಸ್ಟ್ರಿಕ್ಟ್ ಬೋರ್ಡನ್ನು ಪ್ರಾರ್ಥಿಸಿಕೊಳ್ಳುತ್ತದೆ

೫ ಈ ನಿರ್ಣಯಗಳನ್ನು ಡಿಸ್ಟ್ರಿಕ್ಟ್ ಬೋರ್ಡಿಗೂ, ಮೆ। ಡೈರೆಕ್ಟರವರಿಗೂ, ಗವರ್ನಮೆಂಟಿಗೂ ಕಳುಹಿಸಬೇಕಾಗಿಯೂ ಮತ್ತು ೧ನೆ, ೨ನೆ, ೩ನೆ ನಿರ್ಣಯಗಳಿಗೆ ಸಂಬಂಧಪಟ್ಟ ಉಪಾಧ್ಯಾಯರು ಪ್ರತ್ಯಪ್ರತ್ಯೇಕ ತಮ್ಮ ತಮ್ಮ ಮನವಿಗಳನ್ನು ಡಿ ಬೋರ್ಡು ಡೈರೆಕ್ಟರ್, ಮತ್ತು ಗವರ್ನಮೆಂಟಿಗೆ ಅಲಾಹಿದಾ ಬರಕೊಳ್ಳುವಂತೆ ತಿಳಿಸಬೇಕಾಗಿಯೂ ನಿರ್ಣಯಿಸಲಾಯಿತು

ಆದಿಕರ್ನಾಟಕಾಭಿವೃದ್ಧಿ ಸಂಘ, ಚನ್ನಪಟ್ಟಣ.

ಮಂಗಳೂರಿನಿಂದ ಪಂಡಿತ ಲಕ್ಷ್ಮೀದೇವ ವಿದ್ಯಾರ್ಥಿಯವರು ಚನ್ನಪಟ್ಟಣಕ್ಕೆ ಬಂದು ಒಂದು ವಾರ ಇದ್ದರು ತಾ ೫ನೇ ದಿನ ಇವರು ಬಂದ ಕೂಡಲೇ ಇಲ್ಲಿಯ ಹರಿಜನ ಸೇವಾಸಂಘದ ಸೆಕ್ರೆಟರಿಯವರು ಹರಿಜನ ಕೇರಿಗಳಿಗೆ ಕರೆದುಕೊಂಡು ಹೋಗಿದ್ದರು ಹರಿಜನರಿಗೆ ಬುದ್ಧಿವಾದಗಳನ್ನು ಹೇಳಿದರು ಅಲ್ಲದೆ ಚನ್ನಪಟ್ಟಣದಲ್ಲಿ ನೂತನವಾಗಿ ನಿರ್ಮಿಸಿರುವ ಬಾಹ್ಯಕಾಂತಿ ಮಂದಿರದಲ್ಲಿ 'ಶ್ರೀರಾಮ ಪಾದುಕಾ ಪಟ್ಟಾಭಿಷೇಕ'ವೆಂಬ ಹರಿಕಥೆಯನ್ನು ಅನೇಕ ಉಪಕಥೆಗಳೊಡನೆಯೂ ವಿವಿಧ ಧಾರ್ಮಿಕ ವಿಷಯಗಳೊಡನೆಯೂ ಮನೋರಂಜಕವಾಗಿ ಮಾಡಿದರು ಸ್ತ್ರೀ ಪುರುಷರಾದಿಯಾಗಿ ಸುಮಾರು ೫೦೦ ಮಂದಿಗೆ ಮೇಲ್ಪಟ್ಟು ಸೇರಿದ್ದು ಕಡೆಯ ತನಕವೂ ಶಾಂತವಾಗಿ ಕೇಳಿದರು. ಕಡೆಯಲ್ಲಿ ಅನೇಕ ವಿಷಯಗಳನ್ನು ತಿಳುಹಿಸಿದರು.

ಇದೇ ತಿಂಗಳ ತಾ ೧೧ನೇ ದಿನ ಸಂಜೆ ಟವನ್ ಕ್ಲಬ್ಬಿನಲ್ಲಿ ಅಡ್ವೊಕೇಟ್ ಆರ್. ರಂಗಯ್ಯ, ಬಿ ಎ ಎಲ್ ಬಿ ಇವರ ಅಧ್ಯಕ್ಷತೆಯಲ್ಲಿ 'ಹಿಂದೂ ಧರ್ಮವಿಚಾರ' ಎಂಬುದನ್ನು ಕುರಿತು ಭಾವಗರ್ಭಿತವಾದ ಭಾಷಣ ಮಾಡಿದರು ಅನೇಕ ಶಾಸ್ತ್ರೋಕ್ತ ಮತ್ತು ವೇದ ಮಂತ್ರಗಳಿಂದ, ಹಿಂದೂ ಧರ್ಮವು ಎಷ್ಟು ವಿಶಾಲವಾದದ್ದೆಂಬುದನ್ನು ನಿರೂಪಿಸಿದರು ಪಾಶ್ಚಿಮಾತ್ಯರ ನಾಗರಿಕತೆಯನ್ನೂ ಕುರಿತು ಮಾತನಾಡಿದರು ಬಾಲ್ಯವಿವಾಹ ಮತ್ತು ವಿಷಮವಿವಾಹದ ವಿಷಯವಾಗಿಯೂ ಅನೇಕ ಉದಾಹರಣೆಗಳಿಂದ ಹೇಳಿದರು ಅಧ್ಯಕ್ಷರು ಶ್ರೀ ವಿದ್ಯಾರ್ಥಿಯವರನ್ನು ಸಭಿಕರಿಗೆ ಚೆನ್ನಾಗಿ ಪರಿಚಯಮಾಡಲು ಸದ್ಧರ್ಮ ಗ್ರಂಥಮಾಲೆಯ ವಿವರಗಳನ್ನು ಹೇಳಿದರು ಹೈಸ್ಕೂಲ್ ಮಾಸ್ಟರ್ ಮೆ। ಸುಬ್ಬರಾಯ ಮೂರ್ತಿಗಳು ಬಿ ಕನ್ಯಾ ಶುಲ್ಕಗಳನ್ನು ಹೋಗಲಾಡಿಸಬೇಕೆಂದು ಹೇಳಿದರು ಶ್ರೀ ಆರ್ಯಮೂರ್ತಿಗಳು ವಿದ್ಯಾರ್ಥಿಯವರನ್ನು ಬಾಲ್ಯದಿಂದಲೂ ಬಲ್ಲೆನೆಂದು ಒಂದು ನೂತನ ವಸ್ತ್ರವನ್ನೂ ಒಂದು ಗ್ರಂಥವನ್ನೂ ಕೊಟ್ಟು ಪ್ರೋತ್ಸಾಹಪಡಿಸಿದರು ಶ್ರೀ। ಕೆ ಲಿಂಗಪ್ಪನವರು ವಿದ್ಯಾರ್ಥಿಯವರಿಗೆ ಬಹಳ ಸಹಾಯ ಮಾಡಿದರು ಈ ಸಮಯದಲ್ಲಿ ಅನೇಕ ಆಫೀಸರುಗಳೂ ಇತರ ದೊಡ್ಡ ಹುದ್ದೇದಾರರೂ ದಯಮಾಡಿಸಿದ್ದರು ಕೊನೆಗೆ ವಿದ್ಯಾರ್ಥಿಗಳಿಗೆ ವಂದಿಸಿ ಸಭೆಯನ್ನು ಮುಗಿಸಿದರು

ಸರ್ ಕೆ ಪುಟ್ಟಣ್ಣ ಶೆಟ್ಟರವರಿಗೆ ಸನ್ಮಾನ:

ಚಿಕ್ಕಮಗಳೂರಿನ ಇಂಡಿಯನ್ ಕಾಫಿ ಪ್ಲಾಂಟರ್ಸ್ ಎಸೋಸಿಯೇಶನ'ನವರು ಸರ್ ಕೆ ಪಿ ಪುಟ್ಟಣ್ಣ ಶೆಟ್ಟಿಯರಿಗೆ ಸನ್ಮಾನ ಪತ್ರವೊಂದನ್ನು ಒಪ್ಪಿಸುವ ಉದ್ದೇಶದಿಂದ ಚಿಕ್ಕಮಗಳೂರಿನ ಶ್ರೀ। ನರಸಿಂಹರಾಜ ಟೌನ್ ಹಾಲಿನಲ್ಲಿ ಸಭೆಸೇರಿದ್ದರು

ಸನ್ಮಾನ ಪತ್ರದಲ್ಲಿ, ಪುಟ್ಟಣ್ಣ ಶೆಟ್ಟರು ಮೈಸೂರು ಬ್ಯಾಂಕಿನ ಡೈರೆಕ್ಟರುಗಳ ಸಮಿತಿಯ ಅಧ್ಯಕ್ಷರಾಗಿದ್ದುಕೊಂಡು ಬಹಳ ದಕ್ಷತೆಯಿಂದ ಕಾರ್ಯ ನಡೆಸಿ ಕಷ್ಟಕಾಲದಲ್ಲಿ ಅನೇಕ ಸಂಸ್ಥೆಗಳಿಗೆ ಸಹಾಯಮಾಡಿರುವರೆಂದೂ, ಕಾಫಿ ಬೆಳೆಯುವವರಿಗೆ ಇದುವರೆಗೂ ಸಹಾಯಮಾಡಿರುವರಾದರೂ ಕಾಫಿ ಬೀಜದ ವ್ಯಾಪಾರವು—ಮುಖ್ಯವಾಗಿ ಪರದೇಶಗಳೊಡನೆ ಬಿದ್ದುಹೋಗಿರುವುದರಿಂದ ಇನ್ನು ಮುಂದೆ ಅವರಿಗೆ ವಿಶೇಷ ಸಹಾಯಮಾಡಬೇಕೆಂದೂ ಈ ವಿಷಯವನ್ನು ಸರಕಾರದವರ ಗಮನಕ್ಕೆ ತರುವುದರಲ್ಲಿ ಸಹಕರಿಸಬೇಕೆಂದೂ ಪ್ರಾರ್ಥಿಸಿಕೊಂಡಿದ್ದರು

ಕುಷ್ಠ ರೋಗ ಮತ್ತು ಫರಂಗಿ ರೋಗ ನಿವಾರಣೆಯಿಲ್ಲ; ದುಡ್ಡೂ ಇಲ್ಲ.

ಎಷ್ಟು ದೀರ್ಘಕಾಲದ ರೋಗವೇ ಆಗಿರಲಿ ಯಾವ ಕಾರಣವೇ ಇರಲಿ, ನೀವು ಮದ್ದು ಮಾಡಿ ಮಾಡಿ ದಣಿದಿರಿ ನಿಮ್ಮ ರೋಗಗಳನ್ನು ಇಂದ್ರಜಾಲದಂತೆ ಶಾಶ್ವತವಾಗಿ ೪ ವಾರಗಳಲ್ಲಿ ಗುಣಪಡಿಸಲಾಗುತ್ತದೆ ಪೂರ್ಣ ಗ್ಯಾರೆಂಟಿ ಕ್ರಯ. ರೋಗನಿವಾರಣೆಯಾದ ಮೇಲೆ ಕ್ರಯ ಮತ್ತು ಬಹುಮಾನ ಕೊಡಬೇಕು. ಬರೆಯಿರಿ.

Kamala Works,
Panchpota Bengal S. B.

C P S.

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Punniah Chatram Road, Balepet,
BANGALORE-CITY.

Shiromani Narayanacharya
Choukhamba Benares City

ಶಾಸ್ತ್ರಿಗಳೇ ಪೂರ್ವಿಕರು ಆರೋಗ್ಯರೇ ಅಥವಾ ಈಗಿನವರೇ, ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಸಜೀವಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಈ ಇವೆಲ್ಲಾ ಆಗುವು ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು

ಸಣ್ಣ ಅಕ್ಕಿ ಪ್ರಮಾಣದ ಕಂಠಸರ 1ಕ್ಕೆ ಬೆಲೆ 100ದ ರೂ. 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಬೆಲೆ 300ದ ರೂ 250 ವರೆಗೆ ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ 300ದ ರೂ. 500 ವರೆಗೆ ಮತ್ತು 3-4-5-6-7-8 ಮುಖಗಳ ಕಾಳು 1ಕ್ಕೆ ಬೆಲೆ 100ದ ರೂಪಾಯಿ 10. ಮತ್ತು 9-10-11 ಮುಖಗಳುಳ್ಳ ಕಾಳು 1ಕ್ಕೆ ರೂ 200ದ 300 ವರೆಗೆ 12-13-14 ಮುಖದ ಕಾಳು 1ಕ್ಕೆ ರೂಪಾಯಿ 500ದ 1000 ವರೆಗೆ ಸಣ್ಣ ರುದ್ರಾಕ್ಷಿ ಅವರೆಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು (ವಿವರಕ್ಕೆ ಕೆಟಲಾಗ್ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ 1 ಅಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ 1 ಕೆಟಲಾಗ ನೊಡನೆ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬೆನಾರಿಸ್ (ಕಾಶೀ)

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.



ಮೂರು ಕ್ಲಾಸ್ಸಿ ಮೂಟ್ ರಿಸ್ಟ್ ವಾಚುಗಳು ಇವು ನೋಳಪಿನಲ್ಲಿ ಬಂಗಾರಕ್ಕಿಂತಲೂ ಹೆಚ್ಚು ಬಹು ಗಮ್ಯವಾಗಿ ಐದು ವರ್ಷಗಳ ಗ್ಯಾರಂಟಿ, ಒಂದು ಉತ್ತಮವಾದ ಟೀ ಟ್ರೊ ಫೇಸ್ ಸರಿಯಾದ ಗಂಟೆಯನ್ನು ತೋರಿಸುತ್ತ ೧೦ ವರ್ಷಗಳ ಗ್ಯಾರಂಟಿ ಒಂದು ಲಿವರ್ ಪಾಕೆಟ್ ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವುದಿಲ್ಲ ಗ್ಯಾರಂಟಿ ೮ ವರ್ಷ ಆತಿ ಬೆಳಕುಳ್ಳ ಹಂಟಿಂಗ್ ಟಾರ್ಚ್ ಲೈಟ್ ಲೀಪ ಮತ್ತು ಬಂಗಾರದ ಪ್ಲೇಟ್ ಮಾಡಿದ ಹಾಕಿರುವ ಸ್ವರಾಜ್ಯ ಫೌಂಟನ್ ಪೆನ್ ಈ ಆತ್ಮುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ ಕೊಡುವೆವು ನಿಮಗೆ ಇಷ್ಟವಿದ್ದರೆ ಬೆಲೆಯು ವಾಪಾಸ್. ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ

ಶರ್ಮ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ 1097 S A ಕಲ್ಕತ್ತಾ

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಜ್ಡ್ ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ.
೪೫ ವರ್ಷದ ಅನುಭವ
ಉಪಯೋಗಿಸಿದವರೇ ಹೇಳಿದ್ದಾರೆ

ಡಾ|| ಗೌತಮ ರಾವ್ ಕೇಶವರವರ
ಫೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೪
ಸ್ಟೊಕಿಸ್ಟ— ಪಾ ಕಂಪೆನಿ, ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

ಗುಣವಾಗದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್ ಕೆ ಲಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆಕೆಯು ಆಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭ ಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಶುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು ಡಾಕ್ಟರ ಬಿ. ಎ. ವೈದ್ಯ, ಎಲ್ ಸಿ ಪಿ ಎಸ್. ಕೆಳವಾಡಿ ಇವರು ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ ೪-೦-೦. ವಿ. ಪಿ ಆಣೆ ೮.

ವಿಳಾಸ:—ಸಂಜೀವಿನೀ ಔಷಧಾಲಯ ಮು ಪೊ ವಿರಜಿ, S M C.

"ವಿಶ್ವಬಂಧು"ವಿಗೆ ಚಂದಾದಾರರಾಗಿರಿ.

೧ ವಿಶ್ವಬಂಧುವು ಜೈನಧರ್ಮದ ವಿಷಯಗಳನ್ನು ಸರ್ವಗ್ರಾಹ್ಯವಾಗುವ ರೀತಿಯಲ್ಲಿ ಸುಲಭಶೈಲಿಯಲ್ಲಿ ಪ್ರಕಟ ಮಾಡುವನು. ೨ 'ವಿಶ್ವಬಂಧು'ವು ಅಹಿಂಸಾ ಧರ್ಮಪ್ರಚಾರಕನು. ೩ 'ವಿಶ್ವಬಂಧು'ವು ಲೌಕಿಕ ಮತ್ತು ಪಾರಮಾರ್ಥಿಕ ವಿಷಯಗಳನ್ನು ಪ್ರಕಟ ಮಾಡುವನು. ೪ ಕನ್ನಡ ನುಡಿಸೇವೆಯೂ, ಕನ್ನಡ ಸಾಹಿತ್ಯ ಪ್ರಭಾವನೆಯೂ 'ವಿಶ್ವಬಂಧುವಿನ ಧ್ಯೇಯಗಳು. ೫ ವಿದ್ಯಾಭ್ಯಾಸದ ನೂತನ ರೀತಿ ನೀತಿಗಳನ್ನು 'ವಿಶ್ವಬಂಧು'ವು ಪ್ರಕಟಮಾಡುವನು. ೬ ಒಟ್ಟಿನಲ್ಲಿ ಆರ್ಥಿಕ, ನೈತಿಕ, ಧಾರ್ಮಿಕ, ರಾಜಕೀಯ, ಸಾಹಿತ್ಯಾತ್ಮಕ ವಿಷಯಗಳನ್ನೊಳಗೊಂಡು ಸರ್ವಾಂಗ ಸುಂದರವಾದ 'ವಿಶ್ವಬಂಧು'ವು ಸರ್ವರ ಆದರಣೆಗೂ ಪಾತ್ರನಾಗಿರುವನು.

ಅಂಚೆವೆಚ್ಚ ಸೇರಿ ವಾರ್ಷಿಕ ಚಂದಾ ರೂ. ೨-೧೪-೦ ಮಾತ್ರ.
"ವಿಶ್ವಬಂಧು" ಕಾರ್ಯಾಲಯ, ಎಂ ಎಲ್ ಜೈನವಿದ್ಯಾರ್ಥಿನಿಲಯ, ಮೈಸೂರು.

The Popular Insurance Company, Ltd.

Head Office:—MANGALORE, S. India

The Pioneer Life Office of the West Coast.

Wanted influential District agents in Unrepresented areas.

A few Press opinions.

'INSURANCE HERALD,' CALCUTTA This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country. If the Directors of this Comany can continue in the present rate of progress and can control the finances with wisdom and care, they would make history. From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds.

'THE ARTISAN,' TRIVANDRUM. We are glad to see from the Fourth Annual Report and Balance Sheet of the Company that it has been making steady and satisfactory progress considering its age and the fact of the economic depression prevailing throughout the country.

THE INDIAN INSURANCE, BOMBAY. Mangalore is noted for its enterprise, and the Popular Insurance Company Ltd., promoted by the local residents of that place is steadily gaining ground. It is directed by influential epople of Mangalore and managed by Mr. B. Vittal Rao, who has developed in him a great deal of life insurance sense . . .

ರಾತ್ರಿಯಲ್ಲಿ ಕಳ್ಳ, ಹಗಲಲ್ಲಿ ಸರಕಾರೀ ವಕೀಲ!

೨೦೦೦ ದನಕರುಗಳನ್ನು ಕೊಂದು ಬೂದಿಮಾಡಿದರು!

ಎಂತೆಂತಹ ವ್ಯಕ್ತಿಗಳಿರುವರು ಈ ಲೋಕದಲ್ಲಿ! ಇತ್ತೀಚೆಗೆ ಯುರೋಪ ಖಂಡವನ್ನೇ ತನ್ನ ಸಾಹಸದಿಂದ, ತನ್ನ ಬುದ್ಧಿಶಕ್ತಿಯಿಂದ ತಂಗೆಡಿಸಿದ ಬುಖಾರೆಸ್ಟ್ ನಲ್ಲಿಯ ಸರಕಾರೀ ವಕೀಲನ ಚರಿತ್ರೆಯು ಪ್ರಕಟವಾಗಿದೆ, ಲುಕಾ ಜೋರ್ಗಿಯೇಟ್ ಎಂಬುದು ಇವನ ಹೆಸರು. ಲಂಡನ್, ಪೆರಿಸ್, ಬ್ರುಸ್ಸೆಲ್ಸ್, ಬರ್ಲಿನ್‌ಗಳಲ್ಲಿ ಪದೇ ಪದೇ ಕಳ್ಳತನಗಳು ನಡೆದು ಮಿಲಿಯಗಟ್ಟಲೆ ದ್ರವ್ಯಾಪಹಾರವಾಗುತ್ತಿದ್ದಿತು. ಆದರೆ ಕಳ್ಳನಾರೆಂದು ಯಾರಿಗೂ ಕಂಡುಹಿಡಿಯಲಾಗಲಿಲ್ಲ. ಬುದ್ಧಿಶಾಲಿಗಳಾದ ಪತ್ತೇದಾರರು ಬುದ್ಧಿ ವೆಚ್ಚ ಮಾಡಿದರು ರಾತ್ರಿಂದಿವ ಸಾಹಸಪಟ್ಟರು. ಆದರೆ ಅವನು ಪಾಗಿನದಿಯಂತಲೇ ಈ ಕಳ್ಳನು ಪರಾರಿಯಾಗುತ್ತಿದ್ದ. ಕಳ್ಳತನದಿಂದ ನಷ್ಟಕ್ಕೊಳಗಾದ ಜನರು ಸರಕಾರೀ ವಕೀಲನಾದ ಲುಕಾನೊಡನೆ ಸಲಹೆಗಳನ್ನು ಕೇಳುತ್ತಿದ್ದರು. ಅವನು ಬಹು ವಿಚಕ್ಷಣತೆಯಿಂದ ಸೂಚನೆಗಳನ್ನು ಕೊಡುತ್ತಿದ್ದನು. ಹೀಗೆಯೇ ನಡೆಯುತ್ತಿತ್ತು. ಇತ್ತೀಚೆಗೆ ಬುಖಾರೆಸ್ಟ್‌ನಲ್ಲಿ ಒಂದು ದರೋಡೆ ನಡೆಯಿತು. ಲುಕನ ಸಲಹೆಗಳ ಮೇರೆಗೆ ಅಡಗಿ ಕೂತ ಕಾವಲುಗಾರರು ಕಳ್ಳನ ಮೇಲೆ ಬಿದ್ದು ಅವನನ್ನು ಹಿಡಿದರು. ಅವನ ಮುಸುಕನ್ನು ತೆಗೆದು ನೋಡುವುದೇನು? ಪಬ್ಲಿಕ ಪ್ರಾಸೆಕ್ಯುಟರನಾದ ಲೂಕಾನೇ ಅದ್ಭುತ ದರೋಡೆಗಾರನಾಗಿದ್ದ. ಇವನನ್ನು ಸೆರೆ ಹಿಡಿದು ವಿಚಾರಿಸಲಾಗಿ ತಾನು ತನ್ನ ಸಾಹಸಪ್ರಿಯತೆಯಿಂದಾಗಿಯೂ ಧನ ಪ್ರಾಪ್ತಿಯ ಲಾಲಸೆಯಿಂದಾಗಿಯೂ, ವಿಲಾಸಕ್ಕಾಗಿ ದ್ರವ್ಯವು ಸಾಕಾಗದಿದ್ದುದಕ್ಕಾಗಿಯೂ ಇಂತಹ ವೃತ್ತಿಗೆ ತೊಡಗಿದ್ದೆನೆಂದನು. ಇದರಲ್ಲಿ ತನ್ನನ್ನು ಯಾವ ಪೋಲೀಸನೂ ಹಿಡಿಯಲು ಶಕ್ತಿವಂತನಾಗಲಿಲ್ಲವಲ್ಲಾ ಎಂಬ ಒಂದೇ ಅಭಿಮಾನದಿಂದ ತಾನು ಈ ಕೃತ್ಯಗಳಿಗಿಳಿದೆನೆಂದನು. ಇವನ ಎಲ್ಲಾ ಗುಟ್ಟು ಹೊರಗಾಗಿರುವುದಿಲ್ಲ.

ಹೈದರಾಬಾದ್ ನಿಜಾಮರ ಐಶ್ವರ್ಯದ ಅದ್ಭುತ ಕಥೆ!

People ಪತ್ರಿಕೆಯಲ್ಲಿ ಹೈದರಾಬಾದ್ ನಿಜಾಮರ ಕುರಿತಾದ ಒಂದು ಅದ್ಭುತ ಕಥೆಯು ಪ್ರಕಟವಾಗಿದೆ. ಅವರೊಡನೆ ಅವರ ಗೃಹಜೀವನಕ್ರಮದ ಪ್ರಶಂಸೆಯೂ ಹೊರಗಾಗಿದೆ. ಕಥೆ ಹೀಗಿದೆ: ಹೈದರಾಬಾದಿನ ನಿಜಾಮರು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಅಲ್ಲದೆ ಜಗತ್ತಿನಲ್ಲೇ ಮಹದೈಶ್ವರ್ಯಯುತರು. ಅವರ ಸಂಪತ್ತು ಅಪಾರವಾದುದು. ಅವರ ಅರಮನೆಯ ಕೋಡಿಗಳಲ್ಲಿರುವ ಚಿನ್ನ, ವಜ್ರ, ವೈಢೂರ್ಯ ಮುತ್ತು ರತ್ನಗಳ ಬೆಲೆ ಕ್ರಯವು ಊಹಾನಾತೀತ. ಅವರು

ಸಂಸ್ಥಾನಕ್ಕಾಗಿಯೂ ದಾನಕ್ಕಾಗಿಯೂ ವೆಚ್ಚ ಮಾಡುವ ದ್ರವ್ಯವು ಅಪಾರವಾದುದು. ಇಷ್ಟು ಸಂಪತ್ತು ಇದ್ದರೂ ಅವರು ಉಣ್ಣೆಯ ಬಟ್ಟೆಗಳನ್ನು ಸ್ವಹಸ್ತದಿಂದಲೇ ತಯಾರಿಸಿ ವಿಕ್ರಯಿಸಿ ಬಂದ ಹಣದಿಂದ ದಿನಸರಿ ಮಾಡುವರು. ಅವರ ಸಂಪತ್ತಿನ ಕುರಿತು ಒಂದು ಕಥೆಯಿದೆ. ಅವರ ಸಂಸ್ಥಾನದಲ್ಲಿ ಒಂದು ದೊಡ್ಡ ಅರಣ್ಯವಿದೆಯಂತೆ. ಅದರಲ್ಲಿ ಅಲ್ಲಾವುದ್ದೀನನ ಗುಹೆಯಿದ್ದಂತೆ ನೈಜಾಮರು ಅರಿಸುವಷ್ಟು ವಜ್ರ ವೈಢೂರ್ಯಗಳೂ ಮಾಣಿಕ್ಯಗಳೂ ಇವೆಯಂತೆ. ಈ ಗುಹೆಯು ಇರುವ ವಿಷಯವು ಎಲ್ಲರಿಗೂ ತಿಳಿದಿದೆಯಾದರೂ ಅದಿರುವ ಸ್ಥಾನವು ಅವರ ಒಬ್ಬ ಮಿತ್ರನಿಗಲ್ಲದೆ ಬೇರಾರಿಗೂ ಜಗತ್ತಿನಲ್ಲೇ ತಿಳಿದಿಲ್ಲವಂತೆ. ಈ ಗುಹೆಯಲ್ಲಿನ ಐಶ್ವರ್ಯದಿಂದಾಗಿಯೇ ಅವರು ಸಂಸ್ಥಾನವನ್ನು ಅಷ್ಟೊಂದು ಸಂಪನ್ನತೆಯಿಂದ ಆಳುತ್ತಿರುವರು.

ದನ ಮೇಯಿಸುವ ಹುಡುಗ—ಬರೋಡದ ಗಾಯಕವಾಡ.

ಲಂಡನಿನ 'People' ಪತ್ರಿಕೆಯಲ್ಲಿ ಬರೋಡದ ಗಾಯಕವಾಡರವರ ಕುರಿತಾಗಿ ಒಂದು ಕಥೆಯು ಪ್ರಕಟ



ಬರೋಡದ ಗಾಯಕವಾಡರು

ವಾಗಿದೆ. ಈಗಿನ ಮಹಾರಾಜರು ಬಾಲ್ಯದಲ್ಲಿ ದನ ಮೇಯಿಸುತ್ತಿದ್ದರೆಂದೂ ಒಂದು ಹಾವಿನ ಉಪಕಾರದಿಂದ ಅವರು ಈ ಪದವಿಗೆ ಬಂದರೆಂದೂ ತಿಳಿಯಲಾಗಿದೆ. ಕತೆಯನ್ನು ಓದಿ. ಅರುವತ್ತು ವರುಷಗಳ ಹಿಂದಿನ ಕತೆಯಿದು. ಗೋಪಾಲ ಬಾಲನೊಬ್ಬನು ಬರೋಡದ ಹಳ್ಳಿಯೊಂದರ ಬಳಿಯಲ್ಲಿನ ಪ್ರದೇಶದಲ್ಲಿ ತನ್ನ ದನಗಳನ್ನು ಮೇಯಿಸಬಿಟ್ಟು, ಮಟಮಟ ಮಧ್ಯಾಹ್ನದ ಬಿಸಿಲ ಬೇಗೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಒಂದು ದೊಡ್ಡ ಮರದ ನೆರಳಲ್ಲಿ ಮಲಗಿ ನಿದ್ರಾಪರವಶನಾಗಿದ್ದನು. ಈ ವೇಳೆಯಲ್ಲಿ ಮೂವರು ವ್ಯಕ್ತಿಗಳು ಆ ಮಾರ್ಗವಾಗಿ ನಡೆಯುತ್ತಿದ್ದರು. ಮರದಡಿ ಮಲಗಿದ್ದ ಬಾಲಕನನ್ನು ಅವರು ಕಂಡರು. ಒದನೆ ಅವಕ್ಕಾದರು,—ಒಂದು ನಾಗರ ಹಾವು ಆ ಬಾಲಕನ ತಲೆಯ ಮೇಲೆ ತನ್ನ ಹೆಡೆಯನ್ನೆತ್ತಿ ಹಿಡಿದು ಕುಳಿತುಕೊಂಡಿತ್ತು. ಇದನ್ನು ಕಂಡ ಆ ಜನರಿಗೆ ಆದ ಆಶ್ಚರ್ಯವು ವರ್ಣನಾತೀತ. ಅವರು ಆ ಬಾಲಕನಾರೆಂದು ವಿವರವನು ತಿಳಿದುಕೊಂಡರು. ಅವನ ತಂದೆಯನ್ನು ಕಂಡು ಅವನನ್ನು ಬರೋಡದ ಮಹಾರಾಣಿಯವರಲ್ಲಿಗೆ ಕಳುಹಿಸಬೇಕೆಂದರು. ಅವರು ಸಂಸ್ಥಾನದ ಅಧಿಕಾರಿಗಳಾಗಿದ್ದರು. ಒಂದೆರಡು ದಿನಗಳೊಳಗೆ ಗೋಪಾಲನು ಸುಶೋಭಿತನಾಗಿ ಮಹಾರಾಣಿಯವರ ಅರಮನೆಗೆ ಕೊಂಡೊಯ್ಯಲ್ಪಟ್ಟನು. ಹುಡುಗನು ಅದೇನೊ ಹಬ್ಬದ ದಿನವೆಂದು ಭಾವಿಸಿ ಸಂತೋಷದಲ್ಲಿದ್ದನು. ಮಹಾರಾಣಿಯವರಿಗೆ ಪುತ್ರ ಸಂತಾನವಾಗಿರಲಿಲ್ಲ. ಸಿಂಹಾಸನಕ್ಕೆ ಯೋಗ್ಯನಾದ ದತ್ತಪುತ್ರನನ್ನಾರಿಸಬೇಕೆಂದಿದ್ದಾಗ ರಾಣಿಯ ಕಿವಿಗೆ ಈ ವಾರ್ತೆಯು ಬಿತ್ತು. ಅದೃಷ್ಟಲೀಲೆಯೇನು:—ಗೋಪಾಲನು ನರಪಾಲನಾಗಿಯೇ ಬಿಟ್ಟ!

೨೦೦೦ ದನಕರುಗಳನ್ನು ಸುಟ್ಟರು!

ಇಂಗ್ಲಾಂಡಿನ ಸ್ಟಾರ್ ಮಿನಿಸ್ಟರ್ ಮಾರ್ಕೆಟಿನಲ್ಲಿ ಸರಕಾರದ ಅಪ್ಪಣೆ ಮೇರೆಗೆ, ೨೦೦೦ ದನಕರುಗಳನ್ನು ಕೊಂದರು' ಕಾಲು ಮತ್ತು ಬಾಯಿ ಹುಣ್ಣಿನ ರೋಗವು ಹರಡದಂತೆ ಈ ಕೃತ್ಯವಂತೆ' ಹದಿನೈದು ಮೈಲುಗಳ ವಿಸ್ತೀರ್ಣದಲ್ಲಿರುವ ದನಕರುಗಳನ್ನು ಅವುಗಳ ಒಡೆಯರು ಹೊರಗೆ ಒಯ್ಯಬಾರದಾಗಿ ಕಟ್ಟಪ್ಪಣೆಯಾಯಿತು. ಒಂದು ಆಳವಾದ ಖನಿಯನ್ನು ಅಗೆದು, ಅದರಲ್ಲಿ ೫೦ ಟನ್ ಇದ್ದಲು ಮತ್ತು ೫೦ ಟನ್ ಕಟ್ಟಿಗೆ ಹಾಕಿ, ೪೦೦ ಗೆಲನ್ ಎಣ್ಣೆ ಹೊಯ್ದು, ಭಯಂಕರ ಅಗ್ನಿಕುಂಡವನ್ನು ಮಾಡಿದರು. ದನಕರುಗಳನ್ನು ವಿಶಾಲ ಪ್ರದೇಶಗಳಿಗಟ್ಟಿ,—ಅವುಗಳು ಮೇಯುತ್ತಿರುವಂತೆಯೇ—ಹಲವು ಕಟುಕರು ಖಡ್ಗಗಳಿಂದ ಅವುಗಳನ್ನು ತುಂಡರಿಸಿದರು. ದನಕರುಗಳ ಮೃತ ಶರೀರಗಳನ್ನು ಅಗ್ನಿನಾರಾಯಣನಿಗರ್ಪಿಸಿದರು!!!

ಕ್ಷಮಾಶೀಲ ಗಾಂಧಿಜೀ

ಮಹಾತ್ಮಾ ಗಾಂಧಿಯವರನ್ನು ಯೇಸುಕ್ರಿಸ್ತನಿಗೆ ಹೋಲಿಸಿದೊಡನೆ ಉದ್ರೇಕಗೊಳ್ಳುವ ಹಲವು ಸಂಕುಚಿತ ಬುದ್ಧಿಯವರಿರುವರು. ಇಂತವರು ಗಾಂಧೀಜಿಯವರ ಜೀವನ ಚರಿತ್ರೆಯನ್ನು ಎಳ್ಳಷ್ಟಾದರೂ ತಿಳಿದವರಲ್ಲವೆಂದು ಧೈರ್ಯದಿಂದ ಹೇಳಬಹುದು. ಗಾಂಧೀಜಿಯವರಲ್ಲಿರುವ ಕ್ಷಮಾಗುಣಸಂಪನ್ನತೆಯು ಎಷ್ಟೆಂದು ಸಾರುವ ಒಂದು ಘಟನೆಯಿದೆ. ತನ್ನನ್ನು ಸೆರೆಮನೆಯಲ್ಲಿಡಲು ಕಾರಣರಾದ ಸ್ಟೇಟ್ ಸೆಕ್ರೆಟರಿಯರಾದ ಸರ್ ಸಾಮುವೇಲ್ ಹೋರರು ಮೊನ್ನೆ ಅಸ್ವಸ್ಥರಾಗಿದ್ದಾಗ ಮಹಾತ್ಮರು ದುಃಖಗೊಂಡು, ಒಂದು ಪತ್ರವನ್ನು ಹೋರರಿಗೆ ಬರೆದು, ಹೋರರು ಶೀಘ್ರದಲ್ಲೇ ಗುಣಹೊಂದಲೆಂದು ಆಶಿಸುವೆನಾಗಿ ತಿಳಿಸಿದರು. ಎಂತಹ ವಿಕಸಿತಭಾವ! ಎಂತಹ ನಿರ್ಮಲ ಮನಸ್ಸು! ಅವರನ್ನು ತಮ್ಮ ದ್ವೇಷಿಗನೆಂದು ಪರಿಗಣಿಸುವವರು ವಿವೇಕಿಗಳಾಗಬೇಕಲ್ಲವೇ?

ಆಯುಷ್ಯಮಹಿಮೆ.

ಕ್ಯಾಲಿಸ್‌ನಲ್ಲಿ ಗುಸ್ತವ್ ಎಂಗೆಲ್ಸ್ ಎಂಬವನೊ...

ಗೊಂದು ಬೊಂಬು ಇಟ್ಟನೆಂಬ ಆರೋಪದ ಮೇಲೆ ಫಾಶಿ ಶಿಕ್ಷೆಗೆ ಗುರಿಯಾದನು. ನಿಶ್ಚಿತ ದಿನದಲ್ಲಿ ಅವನನ್ನು ಗಲ್ಲಿಗೇರಿಸಿದರು. ಗಲ್ಲಿಗೇರಿದವನು ಸತ್ತು ಅವನ ಶವವನ್ನು ಕೆಳಗಿಳಿಸುತ್ತಲೇ ಅಪರಾಧ ಮಾಡಿದ್ದ ಗುಸ್ತವನು ಅಲ್ಲವೆಂದೂ ಸತ್ತವನು ಜೇಮ್ಸ್ ಕ್ರಿಸ್ಟೀನ್ ಎಂಬವನೆಂದೂ ಕೈದಿಯೆಂದೂ ತಿಳಿದು ಬಂತು. ಹೀಗೆ ತಪ್ಪು ಫಾಶಿಗೇರಿಸಿದುದಕ್ಕಾಗಿ ಅಲ್ಲಿ ಮಹಾಕ್ಷೋಭೆಯಿದ್ದಿದೆ.

ವಿದ್ಯಾರ್ಥಿಗಳು ಕ್ಷೀಣರಾಗುತ್ತಿರುವುದು ಏಕೆ?

ಎಲ್ಲಾ ವಿದ್ಯಾರ್ಥಿಗಳಿಗೂ ಸಂಬಂಧಪಟ್ಟ ವಿಷಯವಿದು. ವಿಸರಕ್ತಿನ ವಿದ್ಯಾಶಾಲೆಯವರು ವಿದ್ಯಾರ್ಥಿಗಳು ದಿನೇ ದಿನೇ ಕ್ಷೀಣರಾಗುತ್ತಾ ಬರುವುದಕ್ಕೆ ಕಾರಣವೇನು? ಅವರು ಯಾವಾಗಲೂ ರೋಗಿಗಳಾಗಿಯೇ ಇರುವುದೇತರಿಂದ? ಎಂದು ವಿಚಾರಿಸಲು ವಿದ್ಯಾರ್ಥಿಗಳಿಗೆ ಭೋಜನಕ್ಕೂ ವಿಶ್ರಾಂತಿಗೂ ಸಮಯವು ಸಾಲದಿರುವುದೇ ಮುಖ್ಯ ಕಾರಣವೆಂದು ತಿಳಿದು ಬಂದಿದೆ. ಈಗ ಅವರು ಒಂದು ಸರ್ಕಲಾರನ್ನು ಹೊರಡಿಸಿ ಈಗಿನ ಶಾಲಾ ಸಮಯವನ್ನು ಬದಲಾಯಿಸಬೇಕೆಂದೂ, ಹಗಲು ಹೊತ್ತಿನ ಊಟವನ್ನು ಮಕ್ಕಳು ಹಸಿವಿಲ್ಲದಿದ್ದರೂ ಅವಸರವಸರವಾಗಿ ಮಾಡಿ ಶಾಲೆಗೆ ಓಡುತ್ತಿರುವುದರಿಂದ ಅವರ ದೇಹದ ಬೆಳವಣಿಗೆಯು ಆಗುವುದಿಲ್ಲವೆಂದೂ ಹೇಳಿರುವರು.

ಭಾರತೀಯರೊಡನೆ ವ್ಯವಹಾರ ನಡೆಸಬೇಡಿರಿ!

ಡರ್ಬಾನಿನಲ್ಲಿ ಅಲ್ಲಿಯ ಮಾಜಿ ನ್ಯಾಯಮಂತ್ರಿ ದಿವಂಗತ ಟೈಲ್‌ಮೇನ್ ಎಂಬವರು ಒಂದು ಭಾಷಣಮಾಡಿದ್ದರು. ಅದರ ಒಂದು ಚೂರು ಈಗ ಹೊರಗಾಗಿದೆ. ಅವರು ಹೇಳಿದ್ದು "ಬಿಳಿಯ ಜನರೇ ನೀವು ಇಂಡಿಯನ್ ಸ್ಟೋರ್‌ಗಳನ್ನು ಬಹಿಷ್ಕರಿಸಿ. ಭಾರತೀಯರಿಗೆ ಯಾವುದನ್ನೂ ವಿಕ್ರಯಿಸಬೇಡಿ. ಯುರೋಪಿಯನರಲ್ಲದವರೊಡನೆ ಇಂಡಿಯನರು ವ್ಯಾಪಾರ ವ್ಯವಹಾರ ನಡೆಸದಂತೆ ನಾನು ಶಾಸನವನ್ನು ತರುವೆನು. ಇಂದೀಯ ವ್ಯಾಪಾರಸ್ಥರು ದಿನೇ ದಿನೇ ಸಂಪನ್ನರಾಗುತ್ತಿರುವರು—ಏಕೆಂದರೆ ಅವರು ಈಗೀಗ ಬಿಳಿಯ ತರುಣಿಯರನ್ನು ಕೆಲಸಕ್ಕೆ ನೇಮಿಸುತ್ತಿರುವರು."

ಇಂತಹ ಬುದ್ಧಿ ಮೊದಲೇ ಬೇಡ!

ಕೈಮಾಡಿದ ತಪ್ಪಿಗೆ ಕೈಯನ್ನೇ ಶಿಕ್ಷಿಸಬೇಕು. ಬಾಯಿ ಮಾಡಿದ ತಪ್ಪಿಗೆ ಬಾಯಿಯನ್ನೇ ಶಿಕ್ಷಿಸಬೇಕು. ಪರರು ಶಿಕ್ಷಿಸುವುದಕ್ಕಿಂತ ನಾವು ನಾವೇ ಶಿಕ್ಷಿಸಿಕೊಂಡರೆ ಹಿತಕರ. ದಲೆಸ್ಸಗಂಜ್‌ನಿಂದ ಒಂದು ವಾರ್ತೆ. ಅಲ್ಲಿಯ ಜಮೀನ್ದಾರನ ಮಗ ಅಯೋಧ್ಯಾಪ್ರಸಾದ ಎಂಬ ವಿದ್ಯಾರ್ಥಿಯು ಮೆಟ್ರಿಕ್ಯುಲೇಶನಲ್ಲಿ ಅನುತ್ತೀರ್ಣನಾದ ದುಃಖಕ್ಕಾಗಿ ಒಂದು ಬಂದೂಕಿನಿಂದ ತನ್ನ ಮೆದುಳನ್ನೇ ಹಾರಿಸಿಕೊಂಡು ಪರಲೋಕದಲ್ಲಿ ಉತ್ತೀರ್ಣನಾಗಲು ಹೊರಟಿದ್ದಾನೆ. ಯಾವ ವಿದ್ಯಾರ್ಥಿಯೂ ಇವನನ್ನು ಅನುಸರಿಸದಿರಲಿ!

ಅವಳ ವೀರತೆ.

ಚೀನಾದಲ್ಲಿ ಮಿಸ್ ಯಾ ಟಿಂಗ್-ಪೋಂಗ್ ಎಂಬ ಇಪ್ಪತ್ತು ವರ್ಷ ಪ್ರಾಯದ ತರುಣಿಯಲ್ಲಿ ದೇಶಭಕ್ತಿಯು ಅತಿಶಯವಾಗಿ ಉದಯವಾಯಿತು. ಚೀನಾದ ಸೈನಿಕನೊಬ್ಬನನ್ನು ವಿವಾಹವಾಗಿದ್ದಳಾದರೂ ತಾನು ಪುರುಷಸ್ವಭಾವವನ್ನೂ ಪುರುಷ ಸದೃಶ ದೇಹ ಸ್ವರೂಪವನ್ನೂ ಹೊಂದುತ್ತಿರುವೆನಾದುದರಿಂದ ತಾನು ಇನ್ನು ಸ್ತ್ರೀಯಾಗಿರಲಾರೆನೆಂದು ಹೇಳಿ ಗಂಡನನ್ನು ಬಿಟ್ಟಳು. ಆ ಮೇಲೆ ಎಲ್ಲಿಯೋ ಹೋಗಿಬಿಟ್ಟಳು. ಇತ್ತೀಚೆಗೆ ಅವಳನ್ನು ಒಂದು ಚೀನಿಯ ಸೈನ್ಯದಲ್ಲಿ ಪುರುಷ ವೇಷದಲ್ಲಿ ಹಿಡಿದರು. ವಿಚಾರಿಸಲಾಗಿ ಜಪಾನೀಯರ ಮೇಲಿನ ಹಗೆಯನ್ನು ತೀರಿಸುವುದಕ್ಕಾಗಿ ತಾನು ಹೀಗೆ ಮಾಡಿದೆನೆಂದು ತಿಳಿಸಿದಳು.

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ - (ನಿಶ್ಶಕ್ತಿಗೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ-(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ-(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ-(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ-(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ-(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ



Distributors for South Kanara —

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!
ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ
ಗಳನ್ನು ಉಪಯೋಗಿಸಲಿಕ್ಕೆ
ಜೀವನದ ಐವತ್ತಾರು ವರುಷಗಳಿಂದ ... ದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ
ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.
ಆರೋಗ್ಯಕ್ಕೆ ಕವಚವು
32 ಮಾತ್ರೆಗಳ ಟಿನ್ನೊಂದಕ್ಕೆ ರೂ 1
ಪಟ್ಟಣ ... ಧರ್ಮಾರ್ಥ ಹಾಗೂ ...
ಕಾಮಶಾಸ್ತ್ರವನ್ನೋದಿರಿ
Agent Shah Company M...
Pearl & Sons M... R.
Atank Nigrah Pharmacy
Chickpet Bangalore
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ ಬೆಂಗಳೂರು

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

Writing an Advertisement Advertisements make both a concious and sub-concious appeal and should be beautiful sentimental or humorous (not blatant or vulgar, crisp in their appeals whether of wording or design not too highly coloured metaforically, and with a reason given wherever possible) that appeals to the practicable mind, a mere statement of the name of the article or place is insufficient

Get your advertisements written by —**The Publicity Department, Swadeshabhimani Mangalore**

KANNADA SAVINGS CERTIFICATES

Cashed even before maturity

TOAL YIELD RS 4-6-0 P. A.

Paid once half yearly at 3½% p a

with an additional 1¼ p a on maturity

If Left To Accumulate

Rs 100/- Will Amount to Rs 122—13—6.

Full Particulars from —

CANARA BANK LIMITED

ESTD 1906.

OFFICES AT:

Bombay—Fort, Bombay—Mandvi, Hubli, Calicut, Cochin, Ernakulam, Alleppey, Bangalore, Davangere, Chickmagalur, Mangalore—Bunder, Mangalore—City, Kasaragod, Puttur, Buntwal, Karkala, Udipi, Coondapoor & Gangoli.

Subscribed Capital	Paid up Capital	Reserves	Deposits	Working Capital
6,00,000	3,31,000	4,50,000	58,62,000	73,49,000

ನಮ್ಮ ಮುಂದಾಳುಗಳು

ಕರ್ನಾಟಕ ರಾಜಕೀಯ ಪರಿಷತ್ತು ಮುಗಿಯಿತು. ಪ್ರಥಮ ದಿನದ ಸಭೆಯು ಪ್ರೇಕ್ಷಕರ ದೃಷ್ಟಿಯಿಂದ, ನಿರಾಶಾಜನಕವಾಗಿತ್ತೆಂದೂ, ಮುಂದಿನ ಪ್ರವೇಶಧನವಿಲ್ಲದೆ ಬಿಡಬೇಕಾಯಿತೆಂದೂ ಕೇಳುತ್ತೇವೆ. ಮುಂದಾಳುಗಳ ಮೆರವಣಿಗೆಗೆ ವಾಲಂಟಿಯರು ಸಂಗಡ ಬಿಟ್ಟರೆ ಅನುಯಾಯಿಗಳ ಸಂಖ್ಯೆ ಬೆರಳೆಣಿಸುವಷ್ಟು. ಜನರು ರಾಜೇಂದ್ರ ಬಾಬುಗಳ ಗೌರವವನ್ನು ಸ್ಮರಿಸಿ ಅಲ್ಲಲ್ಲಿ ತಳಿರುತೋರಣ ಮಾಡಿದುದು ಸಂತೋಷವೆ—ಆದರೆ ಎಲ್ಲ ಚಿಹರೆಗಳು, ನಮ್ಮಲ್ಲಿನ ಕೆಲಸಗಾರರ ಮೇಲಿನ ಅವಿಶ್ವಾಸವನ್ನೊ, ರಾಜಕೀಯ ಧೋರಣೆಯ ಮೇಲಿನ ಉದಾಸೀನತೆಯನ್ನೊ ಸೂಚಿಸುವಂತಿದ್ದುವೆಂದರೆ ತಪ್ಪಾಗದು

\+ + + +

ಶ್ರೀಪ್ರಕಾಶರವರು ಪರಿಷತ್ತು ಮಂಜೂರು ಮಾಡಿದ ಠರಾವುಗಳನ್ನು ಕಾರ್ಯಕ್ಕೆ ತರುವುದರಲ್ಲಿ ಯತ್ನಿಸಬೇಕೆಂದು ಸೂಚಿಸಿದರು ಮುಖ್ಯ ಪರಿಷತ್ತುಗಳು ಮಾಡದಿರುವ ಕೆಲಸ ಅದೊಂದೇ ಎಂಬುದನ್ನು ಅವರೇಕೆ ತಿಳಿಯದೆ ಹೋದರೋ!

\+ + + +

ಜನರೊಡನೆ ಹೋಗಿ ಕೆಲಸಮಾಡಲು ಅವರು ಹೇಳಿದರು ಪಾಪ—ಜನರಿಗೇನೆ ನಿಮ್ಮ ಮುಂದಾಳುಗಳಿರುವಲ್ಲಿಗೆ ಹೋಗಿ ಎಂದಿದ್ದರೆ ಲೇಸಲ್ಲವೆ?

\+ + + +

ಪರಿಷತ್ತು ತಂದೆ ಮುಕ್ಕಾಲು ಮೂರು ವೀಸ ಠರಾವುಗಳು ಅಪಾಯಹೀನವಾದುವು ಸರಕಾರದ ಧೋರಣೆಯ ಖಂಡನೆ—ಅದನ್ನು ಮಾಡುತ್ತಲೇ ಇದ್ದುವಲ್ಲ ಇನ್ನೂ ಗ್ರಾಮಗಳ ಕೈಗಾರಿಕೆಯ ಠರಾವು ಸರಿ ಒಪ್ಪಿಗೆ—ಆದರೆ ನಿಶ್ಚಿತ ಮಾರ್ಗವನ್ನು ಹೇಳುವ ಸುಮುಹೂರ್ತ ಅದಕ್ಕಿನ್ನೂ ಬಂದಿಲ್ಲ

\+ + + +

ರಾಜೇಂದ್ರ ಪ್ರಸಾದರು ಪುತ್ತೂರಿಗೆ ಬಂದರು ಜನರಿಗೆ ಅವರನ್ನು ನೋಡುವ—ಅವರ ಮಾತುಗಳನ್ನು ಕೇಳುವ ಆತುರ ಆದರೆ ಸೇರಿದ ಜನಕ್ಕೆ ಬಾರುಡೆಯಿಲ್ಲವೆಂದು ಇತರ ಮುಂದಾಳುಗಳಿಗೆ ತಿಳಿಯದೇ? ಬಾಬುಗಳ ಉಪನ್ಯಾಸ ನಡೆದೇ ಇತ್ತು ಅವರ ಮಗ್ಗುಲಲ್ಲಿ ಶ್ರೀ ಕೃಪಾಲನಿ, ಕಮಲಾದೇವಿಯವರ ನಗು, ಸರಸ ಸಲ್ಲಾಪಗಳು ಭರದಿಂದ ನಡೆದಿದ್ದುವು ಮಾನ್ಯ ಅತಿಥಿಯನ್ನು ಕರೆದು, ಜನರ ಮುಂದೆ ಈ ರೀತಿ ವರ್ತಿಸುವುದನ್ನು ಕಂಡು ನೆರೆದ ಜನರ ಮನಸ್ಸಿನ ಮೇಲೆ ಏನು ಅಭಿಪ್ರಾಯವಾದೀತು? ಏನಾದರೂ ಚಿಂತೆಯಿಲ್ಲ ದೇವಿಯವರೂ, ಕೃಪಲಾನಿಯವರೂ ಅಖಂಡ ಧುರೀಣರೆಂದೇನೋ ತಿಳಿದರು ಬಾಬೂರವರ ಉಪನ್ಯಾಸ ಅರಣ್ಯರೋದನ

\+ + + +

ನವಯುಗವು ಕಳೆದ ಬಾರಿ ಶಾಲಾ ಉಪಾಧ್ಯಾಯರಿಗೆ ಒಂದು ಭಾರಿ ಭರವಸೆ ಕೊಟ್ಟಿದೆ ಸರಕಾರವು ಅವರ ಸಂಬಳದಲ್ಲಿ ಎರಡಾಣೆ (') ಕಡಿತ ಮಾಡಲು ಹೇಳಿತ್ತಾದರೂ ಬೋರ್ಡಿನವರು ದಯೆಯಿಂದ ಒಂದೇ ಆಣೆ ಮಾಡಿದರೆಂದು ಈ ಸುದ್ದಿ ನಮಗೆ ಹೊಸತು ಈ ಠರಾವು ಬರುವತನಕ, ಸರಕಾರ ನಮ್ಮ ಜಿಲ್ಲೆಗೆ ಹಾಗೆ ಸೂಚನೆ ಮಾಡಿಲ್ಲ, ಅನಂತರ ಮಾಡಿಸಿದ್ದರೋ ನಮಗೆ ತಿಳಿಯದು

\+ + + +

— ಬೋರ್ಡಿನ ಕಡಿತ ಎಂದರೆ ಬರಾಬರಿ. ರೂ ಇತರ ಮಾಸ್ತರರು ಚಿಂಕ್ಕೆ ಇಳಿದಿದ್ದಾರೆ. ಪಾಪ, ಹಿಂದಿನ ವೇತನ ಕೇಳಿದರೆ ಇನ್ನೂ ಕಷ್ಟ. ಬೋರ್ಡಿನ ಕಡಿತದ ಧೋರಣೆಯಲ್ಲಿ ಎಲೆವನ್ನೂ ಹೋಯಿತು, ಕಡಿತವೂ ಬಂದಿತು. ದರಿದ್ರ ಉಪಾಧ್ಯಾಯರಿಗೆ ಪರ್ಸನಲ್ ಎಲೆವೆನ್, ಪರ್ಸನಲ್ ಪೇ—ಪರಡೂ ಒಂದೇ ಅರ್ಥಕ್ಕೆ ಇಳಿಯಿತು.

\+ + + +

ಜಿ.ಬೋರ್ಡು ಉಪಾಧ್ಯಾಯರ ವ್ಯಾಯಾಮ ಶಿಕ್ಷಣಕ್ಕಾಗಿ ಹೊಸತೊಂದು ಶಿಕ್ಷಣಶಿಬಿರವನ್ನು ತೆರೆದಿದೆ. ಸುರತ ಶ್ರೀ! ಎಂಡ್ರೂಸರು ಈ ಕೆಲಸವನ್ನು ತೊಡಗಿದ್ದಾರೆ. ಉಪಾಧ್ಯಾಯರೆಲ್ಲರೂ ತಾವಾಗಿ ಉತ್ಸಾಹದಿಂದ ಬಂದವರು. ಬೋರ್ಡು ತನ್ನ ಖರ್ಚಿನಿಂದ ಅವರಿಗೆ ಊಟ ಉಪಚಾರದ ವ್ಯವಸ್ಥೆ ಮಾಡಿದೆ. ಇತ್ತ ಶಿಕ್ಷಣವೂ, ಮಕ್ಕಳಿಗೆ ಮುಂದೆ ಕಲಿಸಲು ಬಲು ಉಪಯೋಗಕರವಾದದೆಂದು ಉಪಾಧ್ಯಾಯರು ತಿಳಿಯುತ್ತಿದ್ದಾರೆ ಇಂಥ ಶಿಬಿರಗಳು ಆಗಿಂದಾಗ ಆಗುತ್ತಲಿರಲಿ ಇನ್ನು ಮುಂದೆ ಹಳ್ಳಿ ಪ್ರಾಂತಗಳಲ್ಲಿ ಅವುಗಳನ್ನು ನಡೆಯಿಸಿದರೆ, ವೆಚ್ಚದ ದೃಷ್ಟಿಯಿಂದ ಲಾಭವೇ ಸರಿ

ನಡೆದ ಕತೆಗಳು

True Stories

ಓದಿ ಮುಗಿಸುವ ಸಮಯ —೬ ನಿಮಿಷಗಳು.

All Rights Reserved.

ಕುಂಞ ಬೈಚೋರರ ಮದ್ದು

೩.

[ಸಮಾಜದಲ್ಲಿನ ಕುಂದುಕೊರತೆಗಳನ್ನು ಹೋಗಲಾಡಿಸುವುದೇ 'ನಡೆದ ಕತೆಗಳು' ಇವುಗಳ ಉದ್ದೇಶ ಘಟನೆಗಳನ್ನು ಸಂಯೋಜಿಸುವುದರಲ್ಲಿ ಮಾತ್ರ ಅನುಕೂಲ ಹಕ್ಕುಗಳನ್ನು ಉಪಯೋಗಿಸಿಕೊಳ್ಳಲಾಗಿದೆ ಘಟನೆಗಳೆಲ್ಲ ನಿಜವಾದುವುಗಳು. ಹೆಸರುಗಳನ್ನು ಕೆಲವೆಡೆಗಳಲ್ಲಿ ಮಾತ್ರ ಬದಲಾಯಿಸಲಾಗಿದೆ.]

ಬೋಳೂರಿನ ಸಂಜೀವ ಶೆಟ್ಟರ ಪ್ರೋತ್ಸಾಹದಿಂದ ಅಲ್ಲಿಯ 'ಹತ್ತು ಸಮಸ್ತರು' ಕಟೀಲು ದಶಾವತಾರ ಮೇಳದವರಿಂದ 'ಕೃಷ್ಣಾರ್ಜುನ ಕಾಳಗ'ವನ್ನು ಮೋಂಟ ಪೂಜಾರಿಗಳ ಗದ್ದೆಯಲ್ಲಿ ಶನಿವಾರ ದಿನ ಆಡಿಸಿದರು ಒಂದು ತಿಂಗಳ ಮುಂಚೆಯೇ ನೀಳ್ಯ ಕೊಟ್ಟಿದ್ದರಾ'ದುದರಿಂದ ಈ ಬಯಲಾಟದ ಸುದ್ದಿಯು ವಿಶೇಷ ಸುದ್ದಿಯಾಗಿ, ಸಾವಿರಾರು ಸ್ತ್ರೀಪುರುಷ ಬಾಲರಾದಿಗಳು ಕೂಡಿಬಂದಿದ್ದರು

ವಿಷ್ಣು ಭಾಗವತರು ಹಾಡುತ್ತಿದ್ದರು, ವೇಷಗಳು ಹಾರಿ, ಕುಣಿದು, ಅಭಿನಯಿಸುತ್ತಿದ್ದುವು ಆಟವು ಚೆನ್ನಾಗಿದ್ದಿಲ್ಲವಾದರೂ, ಟಿಕೇಟಿಗಾಗಿ ಹಣ ವೆಚ್ಚಮಾಡುವ ಅಗತ್ಯವಿಲ್ಲದಿದ್ದುದರಿಂದ ಅದನ್ನು ಅಧಮ ತರಗತಿಗೆ ಸೇರಿಸುವ ಹಕ್ಕು ಯಾರಿಗೂ ಇರಲಾರದಾಗಿತ್ತು,—ಆದರೂ ಭಾಗವತರ ಬಳಿ,—ಸ್ತ್ರೀಯರಿಗೆ ಎದುರಾಗಿ—ಮೂಲೆಯ ಬೆಂಚಿನಲ್ಲಿ ಕುಳಿತಿದ್ದ ದೂಮಪ್ಪನಿಗೆ ಏಕೋ ರುಚಿಸದಾಯಿತು ಬೀಡಿಯೊಂದನ್ನು ಹಚ್ಚಿಸಿ, ಬಾಯಲ್ಲಿಟ್ಟುಕೊಂಡು, ರುಮಾಲನ್ನು ತಲೆಗೆ ಕಟ್ಟಿಕೊಂಡು ಅಲ್ಲಿಂದೆದ್ದು ಮನೆಯತ್ತ ಕಡೆ ಹೊರಟ

ಗಾಢಾಂಧಕಾರ!—ಅದರಲ್ಲೂ ಮಧ್ಯರಾತ್ರಿಯು ಕಳೆದು ಅರ್ಧ ತಾಸು ಆಗಿದ್ದಿರಬಹುದು ಒಬ್ಬರ ಮುಖ ಒಬ್ಬರಿಗೆ ಕಾಣುತ್ತಿರಲಿಲ್ಲ ದೂಮಪ್ಪನು ಸದ್ದೆಗಣ್ಣನ್ನು ಹಿಡಿದುಕೊಂಡು ಮನೆಯತ್ತ ನಡೆಯುತ್ತಿದ್ದನು ನಡುದಾರಿಯಲ್ಲಿರುವ ಅಶ್ವತ್ಥದ ಕಟ್ಟೆಯ 'ಮಾಸ್ತಿ'ಯ ಕತೆಯನ್ನು ಕೇಳಿದ್ದ ಅವನ ಹೃದಯದಲ್ಲಿ ಭಯದ ವಿದ್ಯುತ್ತು ಪದೇ ಪದೇ ಹರಿಯುತ್ತಿದ್ದಿತಾದರೂ, ಧೈರ್ಯದಿಂದ ಮುನ್ನಡೆದ

ಒಂದು ನಿಮಿಷದಲ್ಲಿ ಅವನು ಕಟ್ಟೆಯನ್ನು ಹಾದು ಹೋಗುವವನಿದ್ದನು, ಅಷ್ಟರಲ್ಲಿ ಕಟ್ಟೆಯ ಸಣ್ಣ ಜಗುಲಿಯಲ್ಲಿ ಒಂದು ಸಣ್ಣ ಬೆಂಕಿಯೆದ್ದಿತು;— ಬೆಂಕಿ ಕಡ್ಡಿಯು ಸುಟ್ಟು ಥಕ್ಕನೆ ನೊಂದಿಕೊಂಡಂತೆ. ದೂಮಪ್ಪನು ತಕ್ಷಣವೇ ಕಂಗೆಟ್ಟನು. ಕುದಿಯುತ್ತಿದ್ದ ಎಣ್ಣೆಗೆ ನೀರು ಹೊಯ್ದಂತಾಯಿತು. ನಾಲ್ಕಾರು ಹೆಜ್ಜೆಗಳನ್ನಿಡುವಷ್ಟರಲ್ಲೇ ಅವನು ದೇಹಾಂತ ಬೆವತುಕೊಂಡ ಮತ್ತೆ ಎರಡು ನಿಮಿಷಗಳಲ್ಲಿ ಅವನು ಮನೆಯನ್ನು ತಲಪದಿರುತ್ತಿದ್ದರೆ, ಅವನನ್ನು ದಾರಿಯಲ್ಲಿಯೇ ಒಯ್ಯುವ ದುರವಸ್ಥೆಯೂ ಬರುವುದು ಸತ್ಯವಾಗಿತ್ತು!

ಮನೆಯ ಜಗಲಿಗೆ ಕಾಲಿಡುತ್ತಲೇ ಅವನು—"ಯಮುನ, ಯಮುನ" ಎಂದ. ಯಮುನೆ 'ಓ' ಎನ್ನುತ್ತ ಬಾಗಿಲು ತೆರೆದಳು. ಸೆರಗನ್ನು ಸರಿಗೊಳಿಸುತ್ತ ಬಾಗಿಲ ಬಳಿ ಬೆಳಕಿನಲ್ಲಿ ನಿಂತಳು ದೂಮಪ್ಪ 'ಹಿಡಿ ಹಿಡಿ' ಎಂದ ಅವಳು ಅವನ ತೋಳನ್ನು ಥಕ್ಕನೆ ಹಿಡಿದುಕೊಂಡಳು ದಿಗಿಲುಗೊಂಡು, ತನ್ನ ಚಾಪೆಯ ಮೇಲೆ ಅವನನ್ನು ಮಲಗಿಸಿದಳು

"ಈ ರಂಡೆ ರುಗ್ಮಿಣಿಯನ್ನು ಮದುವೆಯಾದಂದಿನಿಂದ ದೂಮಪ್ಪನಿಗೆ ಕಷ್ಟಗಳು ತಪ್ಪುತ್ತಲಿಲ್ಲ! ಎಲ್ಲಿ ಹೋದರೂ ಅನಾಹುತ! ಇವಳ ಮನೆ ಹಾಳಾಗ!!" ಎನ್ನುತ್ತ ಶಾಪದ ಮಳೆಯನ್ನೇ ಕರೆದುಕೊಂಡು, ದೂಮಪ್ಪನಿಗೆ ಉಪ್ಪು ಮೆಣಸುಗಳ ಆರತಿಯನ್ನು ಅವಸರದಿಂದೆತ್ತಿದ ಅವನ ತಾಯಿ ಮುಂಡ್ಯಕ್ಕ 'ಅವನಿಗೆ ಸೋಂಕಾಗಿದೆ ಈಗಲೇ ಪರಿಹಾರ ಮಾಡದಿದ್ದರೆ ನಿವಾರಣವೇ ಇಲ್ಲ' ಎಂದು ಹೇಳುತ್ತ, ಚಿಮಿಣಿಯೊಂದನ್ನು ಹಚ್ಚಿ ಇನ್ನೊಂದು ಹಿತ್ತಿಲಿನ ಕುಂಞ ಬೈಚೋರರ ಮನೆಗೆ ನಡೆದಳು

ಬೈಚೋರರು ಬಂದರು ದೂಮಪ್ಪನ ಕೈ, ಹಣೆಗಳನ್ನು ಮುಟ್ಟಿನೋಡಿದರು 'ಎಂದಾಯಿ?' ಎಂದರು ದೂಮಪ್ಪನು ಮಾತನಾಡಲಿಲ್ಲ ಎದೆಯಲ್ಲಿನ ಭಯವು ಅವನಿಗೆ ಮರಣಪ್ರಾಯವಾಗಿ ಕಂಡುಬರುತ್ತಿತ್ತು ಅವನು ಬಾಯನ್ನು ತೆರೆಯುತ್ತಿದ್ದಿಲ್ಲ ಮುಖವೂ ಕಣ್ಣುಗಳೂ ಬಿಳುಪೇರಿದ್ದುವು

ಬೈಚೋರರೆಂದರು—"ಇದ್ ಸಿಂಗಳ ಕುಟುಂಬ ಉಂಡಲ್ಲೆ—ಅದಿಂಡ ಭೂತ ಪೆತ್ತ್ ಡ್ಯುಂಡು 'ಇಪ್ಪವೇ ಕ್ರಿಯೆ ಆಕಡೊ!'"

ಬೈಚೋರರು ದೂಮಪ್ಪನ ಎಡಗಾಲಿಗೆ ವಸ್ತ್ರವನ್ನು ಸುತ್ತಿಸಿದರು ಅದರ ಮೇಲೆ ಚಿಮಿಣಿ ಎಣ್ಣೆ ಹೊಯ್ದು ಬೆಂಕಿ ಕೊಟ್ಟರು ರುಕ್ಮಿಣಿಯು ಭಯಭ್ರಾಂತಳಾದರೂ ಅತ್ತೆಗೆ ಹೆದರಿ ಸುಮ್ಮಗಾದಳು ಅತ್ತೆಯೂ ಬೈಚೋರರೂ ದೂಮಪ್ಪನಿಗೆ ಪ್ರಶ್ನೆಯಿಡುತ್ತಿದ್ದರು: "ಹೇಳು, ಬಾಯ್ಬಿಡು! ಯಾರು ನೀನು? ಯಾವ ಭೂತ, ಬಾಯ್ಬಿಡದಿದ್ದರೆ ಕಾಲನ್ನೇ ಸುಟ್ಟುಹಾಕುವೆವು!"

ದೂಮಪ್ಪನಿಗೆ ಬೆಂಕಿಯುರಿಯು ತಾಗುತ್ತಲೇ ಅರ್ಧ ಪ್ರಜ್ಞೆಯಿಂದ ಅವನು ಚಟ್ಟನೆ ಚೀರಿದ ಅರ್ಭಟಿಸಿದ! ಗೋಳಾಡಿದ! ನೆರೆಹೊರೆಯವರು ಗಲಾಟೆಯನ್ನು ಕೇಳಿ ಓಡಿಬಂದರು. ಐದೇ ಐದು ನಿಮಿಷಗಳಲ್ಲಿ ಅವನ ಕಾಲು ಸುಟ್ಟು, ಕೆಂಪಾಗಿ ಬಾತುಕೊಂಡಿತು

ಕೆಲವು ದಿನಗಳು ಕಳೆದುವು ಅವನ ಕಾಲು ಪೂರ್ಣ ಬೆಂದು, ಕೊಳೆಯಿತು ಕೊನೆಗೆ ಅವನನ್ನು ಆಸ್ಪತ್ರೆಗೊಯ್ದರು ಅಲ್ಲಿಯೂ ಗುಣವಾಗಲಿಲ್ಲ ನೋವು ವಿಪರೀತವಾಗಿ ದೂಮಪ್ಪನು ತೀರಿಕೊಂಡನು

ಈಗ, ವಿಚಾರಿಸಿದಾಗ ತಿಳಿದುಬರುವುದಾದರೂ ಏನು? ಬೀದಿಯಲ್ಲಿನ ಬೀಡಿ ಸಿಗರೇಟುಗಳ ತುಂಡುಗಳನ್ನು ರಾತ್ರಿಂದಿವ ಎಳೆಯುವ ಅಭ್ಯಾಸವುಳ್ಳ ವಾಸ್ಪೇವನೆಂಬೊಬ್ಬ ಹುಚ್ಚನು ಆ ಅಶ್ವತ್ಥ ಕಟ್ಟೆಯಲ್ಲಿ ವಾಸಮಾಡುತ್ತಿರುವನೆಂದು

ಮು. ಜಾ.

ಕರ್ಣಾಟಕ ಸಾಹಿತ್ಯ ಪರಿಷತ್ತು.

ಹಾರ್ಡಿಂಜ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು ಸಿಟಿ

ವಿಜ್ಞಾಪನಾ ಪತ್ರಿಕೆ

೧೯೩೬ನೇ ಇಸವಿ ಮೇ ತಿಂಗಳ ತಾ. ೨ನೇ ದಿನ, ಪರಿಷತ್ತಿನ ವಿಶೇಷ ಸಾಹಿತ್ಯೋತ್ಸವದ ಪರಿಸಮಾಪ್ತಿ ಕಾಲದಲ್ಲಿ ಶ್ರೀಮಾನ್ ಬಿ ಎಂ. ಶ್ರೀಕಂಠಯ್ಯ, ಎಂ ಎ , ಬಿ. ಎಲ್. ಇವರು ಪರಿಷತ್ತಿನ ನಿಧಿಗಾಗಿ ಒಂದು ಸಾವಿರ ರೂಪಾಯಿಗಳನ್ನು ಕೊಡುವುದಾಗಿ ವಾಗ್ದಾನ ಮಾಡಿ, ತಮ್ಮೊಳಿತ ಅಮೋಘ ರೀತಿಯಲ್ಲಿ ಪರಿಷತ್ತಿಗೆ ಉಪಕಾರ ಮಾಡಿದ್ದಾರೆ. ಪರಿಷತ್ತು ಯಥಾಶಕ್ತಿಯಾಗಿ ನಮ್ಮ ನಾಡಿನ ಮತ್ತು ನುಡಿಯ ಸೇವೆಯನ್ನು ಮಾಡುತ್ತಿರುವುದು ಮಹಾಜನರಿಗೆ ವಿದಿತವಾಗಿಯೇ ಇರಬಹುದು ಮಹಾಜನರ ಪ್ರೋತ್ಸಾಹ ಹೆಚ್ಚಿದಷ್ಟೂ ಪರಿಷತ್ತಿನ ಸೇವಾಸಾಮರ್ಥ್ಯವು ವೃದ್ಧಿಯಾಗುವುದು. ದ್ರವ್ಯಾಭಾವದ ಕೊರತೆಯಿಂದ ಕಾರ್ಪಣ್ಯಪಡುತ್ತಿರುವ ಪರಿಷತ್ತಿಗೆ ಪುಷ್ಕಳವಾದ ಶಾಶ್ವತ ನಿಧಿಯೊಂದು ಬೆಳೆದಲ್ಲದೆ ಭಾಷಾಸೇವೆಗೆ ಹೆಚ್ಚು ಅವಕಾಶವಿಲ್ಲ ಆದಕಾರಣ, ಪರಿಷತ್ತಿನಲ್ಲಿ ನಿಧಿಯೊಂದನ್ನು ಏರ್ಪಡಿಸಲು ಸಾಧಕವಾಗುವಂತೆ ಮೊಟ್ಟಮೊದಲನೆಯ ಮೂಲಮೊತ್ತವಾಗಿ ಒಂದು ಸಾವಿರ ರೂಪಾಯಿಗಳನ್ನು ದಾನಮಾಡಿರುವುದಕ್ಕಾಗಿ ಶ್ರೀಮಾನ್ ಬಿ ಎಂ ಶ್ರೀಕಂಠಯ್ಯನವರಿಗೆ ಪರಿಷತ್ತು ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸೂಚಿಸುತ್ತದೆ ವಿದ್ವನ್ಮಣಿಗಳೂ, ಭಾಷಾಭಿಮಾನಿಗಳೂ, ದೇಶಾಭಿಮಾನಿಗಳೂ, ಆದ ಈ ಮಹನೀಯರ ಪ್ರವೃತ್ತಿಯನ್ನನುಸರಿಸಿ ನಮ್ಮ ದೇಶಬಾಂಧವರು ಪರಿಷತ್ತಿನ ನಿಧಿಗೆ ಯಥಾಶಕ್ತಿಯಾಗಿ ಧನಸಹಾಯ ಮಾಡಿ ಕೀರ್ತಿಭಾಜನರಾಗಬೇಕೆಂದು ಬೇಡುತ್ತೇನೆ

ಸಿ. ಕೆ. ವೆಂಕಟರಾಮಯ್ಯ,

ಗೌರವ ಕಾರ್ಯದರ್ಶಿ

Wanted.

Two dealers for Udipi and Kasaragod Taluks for lubricating oils of the famous Silvertown Lubricants (India) Ltd, the Madras Presidency Agents of which are Messrs Best & Co, Ltd Silvertown Oils are the best in the market For further particulars Apply to -

The Silvertown Lubricants (India) Ltd.,

Opp City Press Mangalore

ಸ್ವಸ್ತಿಕಾ ಕೂದಲೆಣ್ಣೆ.

ಸಂಸ್ಕೃಸ್ತಿಕರವಾಗಿ ಆರು ಬಗೆಗಳ ಮನಮೋಹಕ ಪುಷ್ಪಸಮಾನ ಸುಗಂಧಗಳನ್ನೊಳಗೊಂಡಿದೆ ಸ್ವಸ್ತಿಕಾ ಕೂದಲೆಣ್ಣೆಯನ್ನು ಶುದ್ಧವಾದ 'ಸಸ್ಯಜನ್ಯ ಎಣ್ಣೆಯಿಂದ ತಯಾರಿಸಲಾಗಿದೆ ಇದರಲ್ಲಿ ಕಲ್ಲೆಣ್ಣೆಯನ್ನು—ಅನೇಕ ವ್ಯಾಪಾರಸ್ಥರು ಉಪಯೋಗಿಸುವಂತೆ-ಉಪಯೋಗಿಸಲಾಗಲಿಲ್ಲ. ಕೂದಲು ಬೆಳೆಯುವುದಕ್ಕೆ ಇದನ್ನು ಎಲ್ಲೆಲ್ಲೂ ಶಿಫಾರಸು ಮಾಡಲಾಗಿದೆ ಅವರಿನಷ್ಟ ವೇಳೆಯಲ್ಲಿ ತಲೆಯು ಬೋಳಾಗುವುದಿಲ್ಲ. ತಲೆವಾಸಿಯನ್ನು ಹೋಗಲಾಡಿಸುತ್ತದೆ. ಮೆದುಳಿಗೆ ತಂಪನ್ನೀಯುವ ಅತ್ಯಮೋಘ ಎಣ್ಣೆ.

ದಕ್ಷಿಣ ಕನ್ನಡ ಜಿಲ್ಲಾ ಏಜಂಟರು—ಎಸ್. ಎಸ್. ಪಿ. ನಾಯಕ್ ಎಂಡ್ ಕೊ., ಮಂಗಳೂರು. ಉತ್ತರ ಕನ್ನಡ ಏಜಂಟರು—ಎಸ್. ಎಸ್. ರಂಗ್ಯತೇಕ್ಕ, ಟಿ. ಅಂಕೋಲಾ ಹಳಿಯಾಳ

ಅಗ್ರಗಣ್ಯ ಸಂಗೀತಜ್ಞರು ಅದರ ಪ್ರಶಂಸಾಗಾನವನ್ನು ಮಾಡಿದ್ದಾರೆ.

ಮುಸಿರಿ ಸುಬ್ರಹ್ಮಣ್ಯ ಐಯ್ಯರ್,

6 ಒಲಿವರ್ ರೋಡ್,
ಮೈಲಾಪುರ ಮದ್ರಾಸು

ಅನೇಕ ಸಮಯದಿಂದ ನನ್ನ ಕುಟುಂಬದವರೆಲ್ಲ 'ಕೇಶವರ್ಧಿನಿ'ಯನ್ನು ಬಿಡದೆ ಉಪಯೋಗಿಸುತ್ತಿರುವರೆಂದು ತಿಳಿಸಲು ಸಂತೋಷಿಸುತ್ತೇನೆ. ಉದುರುವ ಕೂದಲನ್ನು ತಡೆಯುವ ಅದರ ಶಕ್ತಿಯನ್ನು ಪೂರ್ಣವಾಗಿ ತಿಳಿದು ಅಲ್ಲದೆ ಕೂದಲನ್ನು ಅದು ಬೆಳೆಯಿಸುವ ಅದರ ಗುಣವನ್ನು ಅರಿತು ಅವರು ಅದರ ಗುಣಗಾನವನ್ನು ಮಾಡಿ ಸ್ನೇಹಿತರಿಗೂ ಅದನ್ನು ಶಿಫಾರಸು ಮಾಡುತ್ತಾರೆ. ಕೇಶಗಳಿಗೂ ಮೆದುಳಿಗೂ ಸಮರ್ಪಕವಾದ ಎಣ್ಣೆಯೊಂದು ಅಗತ್ಯವಿರುವವರು ಇದನ್ನುಪಯೋಗಿಸಬಹುದೆಂದು ನಾನು ಶಿಫಾರಸು ಮಾಡುತ್ತೇನೆ

(ಸಹಿ) ಮುಸಿರಿ ಸುಬ್ರಹ್ಮಣ್ಯ ಅಯ್ಯರ್.

ದೋಳು ತಲೆಯವರಾಗಿರಬೇಡಿ ಅಥವಾ ತಲೆಕೂದಲು ಅಕಾಲಿಕ ಸಮಯದಲ್ಲಿ ಬಿಳುಪಾಗದಂತೆ ನೋಡಿ

ಬಾಟ್ಲಿ 1ಕ್ಕೆ ಆಣೆ 12. **'ಕೇಶವರ್ಧಿನಿ'** ಪೇಕಿಂಗ್ ಮತ್ತು ಅಂಚೆವೆಚ್ಚ ಪ್ರತ್ಯೇಕ

ಹೆಚ್ಚಿನ ವಿವರ ವ್ಯಾಪಾರಿಗಳಲ್ಲಿ [illegible] ವಿಳಾಸದಲ್ಲಾಗಲೀ ಸಿಗುವುದು —

South India Chemicals, 1/7 Road, Mylapore Madras

ನಮ್ಮ ಪ್ರತಿನಿಧಿಗಳು—ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

Kanara Watch Works, Mangalore.

Suppliers of standard Watches, Time pieces, Wrist watches, Clocks and various kinds of sporting materials etc, Quality and price unassailable Visit our Show Room and be satisfied

1¼ CRORE

Karnatics know nothing of your products— Advertise them in

Swadeshabhimani

the pioneer Weekly of the South Kanara District

For Advertisement rates apply to

The Advertisement Manager,
Swadeshabhimani
Mangalore

ಪ್ರಶಂಸೆ.

ಪ್ರಖ್ಯಾತ ಅಮೇರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ

ವಿ-ಮೊ-ಲ
VIM-O-LA

ಅಮೆರಿಕಾದ ಜೀವಸಾರ ವಸ್ತು.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ. ಹೊಟ್ಟೆಯಲ್ಲಿ ಬೆಂಡಿ ನಂತೇಳುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಿಗೊಳಿಸುವ ಶಕ್ತಿವರ್ಧಕ ಪಾನೀಯ: ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ. ಬಾಟ್ಲಿ 1 ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟೋಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ

The Manager
The National Kanara News Agency,
Sir Phirozshah Motha Road,
Fort Bombay

Old! *Famous!*

East & West Insurance Co., Limited

Bonus Declared Rs. 15/- Per Thousand Per Annum

Insurance in Force About	Rs. 90,00,000
Annual Premium Income Over	Rs. 4,50,000
Life Fund Over	Rs. [illegible]00,000

Prompt Settlement of Claims
Low Rates of Premium and Various Attractive Plans.

Attractive and liberal agency contracts are offered to honest, influential gentlemen

Inquiries Solicited —
Messrs Padubidri Bros ,
Chief Agents,
PADUBIDRI BOMBAY

or

Head Office
East & West Buildings,
Apollo Street, Fort Bombay

ಲೇಡಿಸ್ ಬಾಂ

ಸ್ತ್ರೀಯರ ಜೀವನಾಧಾರ

ಸ್ತ್ರೀಯರು ಪ್ರಸ್ತರಾಗಿಯೂ [illegible] ಅವರ ಮುಟ್ಟಿನ ದೋಷ, ಆ ಸಮಯದಲ್ಲಿ [illegible] ಬರುವ ಹೊಟ್ಟೆನೋವು, ಸೊಂಟ ಹಿಡಿತ, ಗಂಟುನೋವು, ಪ್ರಸವದ ಬಳಿಕ [illegible] ಗರ್ಭಕೋಶದ ನೋವು, ಅಕ್ರಮ ರೀತಿಯಿಂದ ಮುಟ್ಟಾಗುವಿಕೆ, [illegible] ಸಾಧಾರಣ ಕ್ಷಯ ವಿಕಾರ ಮತ್ತು ಇವರ ಅನೇಕ ತರದ ಗುಪ್ತರೋಗಗಳನ್ನು ನಿವಾರಿಸಲು ಇದರ ಒಂದೇ ಒಂದು ಶೀಸೆಯನ್ನು ಉಪಯೋಗಿಸಿದರೆ ಗುಣವನ್ನು ಕಾಣುವಿರಿ

ಉಪಯೋಗಿಸಿದವರ ಅಭಿಪ್ರಾಯ —

ರಾಮಕೃಷ್ಣ ಜೈನ್ ಬಿ ಎ ಲಾಹೋರ್ 'I found your Ladies Balm worth the money I spent on it '

ಯಾವ ತೆರದ ಔಷಧಿಯಿಂದಲೂ ಬಹುಕಷ್ಟದ [illegible] ಆಸಮರ್ಥರೆಂದಾದರೆ ನಮ್ಮ ಲೇಡಿಸ್ ಬಾಮನ್ನು ಉಪಯೋಗಿಸಿ [illegible] ಔಷಧಿಯಿರುವ ಶೀಸೆಗೆ ರೂ 2—0—0 [illegible]

ತಯಾರಿಸುವವರು — **ದಿ ಬಿಹಾರ್ ಕೆಮಿಕಲ್ ವರ್ಕ್ಸ್, ಬಾಗಲಪುರ.**

ಏಜಂಟರು—ಪ್ರಭಾ ಕಂಪೆನಿ, [illegible] ಮಂಗಳೂರು

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ.

ರಾಷ್ಟ್ರಧುರೀಣರಾದ ಲಾಲಾಲಜಪತರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

	ಕೆಲಸದ ಫಲಿತಾಂಶ.	ಲೈಫ್ ಫಂಡ್
1925–	ರೂ 21,24,250	500
1929–	ರೂ. 1,66,18,620	9,32,900
1934–	ರೂ 46,77,223.	49 08,771

ಕ್ಲೈಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ. ಕಂಪೆನಿಯ ಆಸ್ತಿ–57,00,000ಕ್ಕೆ ಮೀರಿದೆ. 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿ ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ. ಲಾಭಹೊಂದಬೇಕಾಗಿದೆ. ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ ಲಕ್ಷ್ಮಿಯಲ್ಲಿವೆ.

ಏಜಂಟರಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co., Ltd,
Madras Branch,
No 6, Sankuram Chetty St , G. T. MADRAS.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6, ಸಂಕುರಾಮ ಚೆಟ್ಟಿ ಬೀದಿ, ಜಿ. ಟಿ. ಮದ್ರಾಸು

The Canara Banking Corporation Udipi, Ltd.

Head office:—UDIPI, S K. (Incorporated in British India) Tel.-'BANKING' **ESTD. 1906.**

Branches:—1. Udipi, 2 Coondapoor, 3 Car Street, Mangalore, 4. Shimoga, 5. Madras, 6. Bunder Mangalore, 7. Mercara.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟ ದೇಶೀಯ ಸಾರ್ವಜನಿಕ ಮೊದಲನೇ ಬೇಂಕು ಇದೇ ಆಗಿರುತ್ತದೆ.

ಅಧಿಕೃತ ವ ಚಂದಾ ಪಾಕಲಿಕ್ಕೆ ಅರ್ಪಿಸಿದ ವ ಎತ್ತಿ ಬಂದ ಮೂಲಧನ	ರೂ! 3,60,000—0—0
ತೆತ್ತು ಬಂದ ಮೂಲಧನ	2,58,305—0—0
ಕ್ಷೇಮನಿಧಿ ಮತ್ತು ಇತರ ಆಪದ್ಧನಗಳು	3,12,144- 0—0

ಚಾಲ್ತಿ ಸೇವಿಂಗ್ಸ್ ಬೇಂಕ್, ಕಾಯಂ ವ ಅಲ್ಪ ಅವಧಿಯ ಠೇವಣಾತಿಗಳು ಸ್ವೀಕರಿಸಲ್ಪಡುವುವು ಯೋಗ್ಯ ಜವಾಬ್ದಾರಿಯ ಮೇಲೆ ಸುಲಭ ದರದ ಬಡ್ಡಿಯಿಂದ ಸಾಲಗಳು ಕೊಡೋಣಾಗುವುವು' ವಿನಿಮಯ ಸೌಕರ್ಯವೇ ಪ್ರಾಮುಖ್ಯ ಲಕ್ಷಣ!'

ಬೊಂಬಾಯಿ, ಮದ್ರಾಸು, ಕರಾಚಿ, ಕಲ್ಕತ್ತಾ ಮೊದಲಾದ ಪ್ರಾಮುಖ್ಯ ಪಟ್ಟಣಗಳಿಗೆ ಹಣವನ್ನು ತಂತಿ ಮೂಲಕವಾಗಲೀ ಡಿಮಾಂಡ್ ಡ್ರಾಫ್ಟ ಮೂಲಕವಾಗಲೀ ಅತಿ ಸುಲಭ ವೆಚ್ಚದಿಂದ ಕಳುಹಿಸುವ ಸೌಕರ್ಯವು ನಮ್ಮಲ್ಲಿದೆ ಬೇಂಕಿಗೆ ಸಂಬಂಧಪಟ್ಟ ಇತರ ಎಲ್ಲಾ ವಹಿವಾಟುಗಳೂ ನಡೆಸಲ್ಪಡುವುವು

ಹೆಚ್ಚಿನ ಮಾಹಿತಿ ಬಗ್ಗೆ ನಮ್ಮ ಯಾವುದೇ ಆಫೀಸಿಗೆ ಬರಕೊಳ್ಳಿರಿ.

ಕೋರ್ಪರೇಶನ್ ಆಫೀಸು, ಉಡುಪಿ, 7-4-35 **M. Shrinivas Prabhu**, *Manager*

Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ವ ತ್ತ ಕಂಪೆನಿಯ ಹುಳು ಕಡ್ಡಿಯ ಮುಲಾಮಿನ ಕಿಂಗ್ ಎಂಡ್ ಕ್ವೀನ್'' ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ರಜತೋತ್ಸವ ವರ್ಷ ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್ ಸ್ಥಾಪನೆ 1910 ರಜತೋತ್ಸವ ವರ್ಷ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಚೆಯರ್‌ಮೆನ್:— ಸರ್. ಲಲ್ಲೂಭಾಯಿ ಸಮಲ್ದಾಸ್, ಕೆಟಿ ಸಿ ಐ ಇ ಜೆ ಪಿ)

ಇದರ ದಕ್ಷಿಣ ಹಿಂದೂಸ್ಥಾನ ಮತ್ತು ದೇಶೀಯ ಸಂಸ್ಥೆಗಳ ಶಾಖಾ ಕಾರ್ಯದರ್ಶಿಗಳು, ಮುಂಬಾಯಿ ನಗರ ಮತ್ತು ಉಪನಗರಗಳ ಪ್ರಾ... ಖ್ಯ ಏಜಂಟರು

ಪೋಲಿಸಿದಾರರು ಮತ್ತು ಏಜಂಟರುಗಳಿಗೆ ನಮ್ಮ ಸಂದೇಶ —

ಕಳೆದ ಕಾಲು ಶತಮಾನಕ್ಕೆ ಮಿಕ್ಕಿದ ನಮ್ಮ ಜೀವವಿಮೆಯ ಪವಿತ್ರ ಸೇವೆಯಲ್ಲಿ ನಾವು ನಮ್ಮ ಪೋಲಿಸಿದಾರರ ಮತ್ತು ಏಜಂಟರ ಹಿತವನ್ನೇ ... ಮುಂದಿಟ್ಟುಕೊಂಡು ಮುಂದರಿಯುತ್ತಾ ಬಂದಿರುವೆವು ಅವರ ಕಷ್ಟಗಳೂ ಆಶೆಗಳೂ ಮತ್ತು ಆಶಯಗಳೂ ನಮ್ಮದೆಂದೇ ಪರಿಗಣಿಸುತ್ತಾ ಬಂದಿರುವೆವು ಹಿಂದೀ ಜೀವವಿಮಾ ಪ್ರಪಂಚದ ನಮ್ಮ ಅನುಲಕ್ಷ್ಯವೂ ಅನನುಭೂತಪೂರ್ವವೂ ಆದ ವಿಜಯದ ರಹಸ್ಯವು ಇದರಲ್ಲೇ ಅಡಕವಾಗಿದ್ದು ನಾವು ಗತ ... ವ್ಯವಹಾರದಲ್ಲಿ ಒಂದು ಕೋಟಿಯಷ್ಟು ಮೊಬಲಗಿನ ಪೋಲಿಸಿಗಳನ್ನು ... ಬರೆದಿರುತ್ತದೆ ಅತ್ಯಂತ ಅಭಿಮಾನಾಸ್ಪದವಾದ ನಮ್ಮ ಮಹತ್ವಾದ ಲಾಭವೆಂದರೆ—ಒಂದೆರಡು ಉದಾಹರಣೆಗಳಲ್ಲದೆ ಕಳೆದ 25 ವರ್ಷಗಳ ಅವಧಿಯಲ್ಲಿ ನಮ್ಮ ಶಾಖೆಯ ಏಜಂಟರುಗಳಲ್ಲಿ ಅಷ್ಟರಾದರೂ ನಮ್ಮೊಡನಿರುವ ನಿಕಟಸಂಬಂಧವನ್ನು ಬಿಡದಿದ್ದವರಿಲ್ಲ

ಜೀವವಿಮಾ ವಿಕ್ರಯಕ್ರಮಗಳಲ್ಲಿ ಸಂಪೂರ್ಣ ತರಬೇತಿ ಕೊಡಲಾಗುತ್ತದೆ ಚತುರರಾದ ಉತ್ಸಾಹೀ ತರುಣರ ಭಾವೀ ಕಲ್ಯಾಣವಾಗುತ್ತದೆ

ನಮ್ಮ ಈ ಕೆಳಗಿನ ಯಾವುದಾದರೂ ಆಫೀಸುಗಳಿಗೆ ಬರೆಯಿರಿ ಅಥವಾ ಸ್ವತಹ ಬಂದು ಕಾಣಿರಿ —

(1) ಇಸ್ಮಾಯಿಲ್ ಬಿಲ್ಡಿಂಗ್, ಲೋಹರ್ ಚಾಲ್ ಮುಂಬೈ ನಂ 2	(2) ಪೋಸ್ಟ್ ಬಾಕ್ಸ್ 337, ಮೌಂಟ್ ರೋಡ್ ಮದ್ರಾಸು	(3) ವಿಶ್ವೇಶ್ವರಪುರಂ, ಬೆಂಗಳೂರು ಸಿಟಿ	(4) ಹಜೂರ್ ರೋಡ್, ಕಲ್ಲಿಕೋಟೆ	(5) ರಥಬೀದಿ ಮಂಗಳೂರು	(6) ಉಡುಪಿ, ದಕ್ಷಿಣ ಕನ್ನಡ

Karnataka Chemical and Pharmaceutical Works, Ltd, Udipi (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ' ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್ಹೋಲ್ಡ್ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚು ಕಾಲ ಬಾಳುವುವು, ಖರ್ಚೂ ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ. ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ.

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಗ್ರಿಗಳು (Toilets)

ಕರ್ಣಾಟಕ ಸ್ನೋ ಕರ್ಣಾಟಕ ಬ್ರಿಲ್ಲಿಯಂಟೈನ್, ಅರೋರಾ ಕ್ರೀಮ್, ಕ್ರಿಮೊರ್ ಲಿಮೊನಿಸ್, ಕರ್ಣಾಟಕ ರೋಸ ಪೊಮೇಡ್ ಇದಲ್ಲದೆ ನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲೋಪತಿಕ್ ಔಷಧಗಳೂ, ಫೌಂಟನ್‌ಪೆನು ಶಾಯಿಗಳೂ ಸಿದ್ಧವಾಗುವುವು.

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಪ್ಪ ಬಾಳಿಗ.

ಹೆಡ್ ಆಫೀಸು ಮತ್ತು ಕಾರಖಾನೆ.—ಉಡುಪಿ, ದಕ್ಷಿಣ ಹಿಂದೂಸ್ಥಾನ.

ಏಜಂಟ್ಸ್— ವ್ಯಾಪಾರದ ಡಿಪೋ—(1) ದೇವಕರಣ ಮೆನ್ಸನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ 2
(2) 1/70 ನ್ಯಾಷನಲ್ ಹ್ಯಾಕನ ಬೀದಿ, ಪಾರ್ಕ್ ಟೌನ್ ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ., ಮಂಗಳೂರು.

Edited, Printed & Published By A. S. Kamath at the Sharada Press, Car Street, Mangalore

P
for Quality Snuff
H. Rama Rao and Sons.
HighClassSnuff Manufacturers
Mangalore S I
ASK FOR
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in the
THE BOMBAY LIFE
Managing Branch Secretaries
Kochikar Brothers,
Ltd. Mangalore Bangalore, Madras, Bombay and Calicut

ESTABLISHED 1906
(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ಪುಸ್ತಕ ೨೯ ಮಂಗಳೂರು ತಾ ೨೪ನೇ ಶುಕ್ರವಾರ ಮೇ ೧೯೩೫ (24-5 '35) ಸಂಚಿಕೆ ೨೧

ಜಗತ್ತಿನ ಅತಿ ದೊಡ್ಡ ವಿಮಾನವು ಧ್ವಂಸವಾಯಿತು!!

ಕಮಲಾ ನೆಹರುರವರ ಪ್ರವಾಸ

ಜವಾಹರಲಾಲರ ದುಃಖ

ಶ್ರೀಮತಿ ಕಮಲಾ ನೆಹರುವರವರು ಮೇ ೧೫ನೇ ದಿನ ಭೋವಾಲಿ ಸೆನಟೋರಿಯಂನಿಂದ ಮುಂಬಾಯಿಗೆ ಹೋದರು ಅವರೊಡನೆ ಅವರ ಪುತ್ರಿ ಮಿಸ್ ಇಂದಿರಾ ಮತ್ತು ಡಾ॥ ಅತ್ತಲರೂ ಇದ್ದರು ೨೩ನೇ ತಾರೀಕಿನ ದಿನ ಅವರು ಸ್ವಿಜರ್ಲೆಂಡಿಗೆ ಹೊರಡುವರು ಪಂಡಿತ ಜವಾಹರಲಾಲರು ಭೋವಾಲಿಸೆನಟೋರಿಯಂಗೆ ಆಲ್ಮೋರಾ ಜೈಲಿನಿಂದ ಬಂದು ಪತ್ನಿಯನ್ನು ಕಂಡು ಹಿಂತೆರಳಿದರು ಮೋತಿಲಾಲ ನೆಹರುಗಳ ಪತ್ನಿಯವರು ಈಗ ಸೆನಟೋರಿಯಂನಲ್ಲಿರುವರು ಕಮಲಾ ನೆಹರುವರು ಮುಂಬಾಯಿಯ ಬಂದರವನ್ನು ಬಿಡುವಾಗ ಹಲವು ಮಂದಿ ಕೊಂಗ್ರೆಸ್ ಪಕ್ಷೀಯರು ಅವರಿಗೆ ವಿದಾಯವನ್ನಿತ್ತು ಜಯಕಾರವನ್ನಿತ್ತಿದ್ದರು. ಶ್ರೀಮತಿಯವರಿಗೆ ಅವರು ಹೊರಡುವ ದಿನ ೧೦೫ ಡಿಗ್ರಿಗಳಷ್ಟು ಜ್ವರವಿತ್ತೆಂದು ತಿಳಿದು ಬಂದಿದ

೪೮ ಮರಣಗಳು!!

ಆಕಾಶದಲ್ಲಿ ಢಿಕ್ಕಿ ಬಡೆಯಿತು!!

ಮೊಸ್ಕೊ, ೮ ೫ ೩೫

ಮೊಸ್ಕೊ ವಿಮಾನ ನಿಲ್ದಾಣದಲ್ಲಿ ಹಾರಾಡುತ್ತಿದ್ದ ಜಗತ್ತಿನ ಅತಿ ದೊಡ್ಡ ವಿಮಾನವು ಇನ್ನೊಂದು ಸಣ್ಣ ವಿಮಾನಕ್ಕೆ ಆಕಸ್ಮಾತಾಗಿ ಢಿಕ್ಕಿ ಬಡೆದು ಒಂದು ಸಾವಿರ ಅಡಿಗಳಿಗಿಂತಲೂ ಮೇಲಿನಿಂದ ಕೆಳಗೆ ಬಿದ್ದು ಬಿಟ್ಟಿತು ಅದರೊಳಗಿದ್ದ ೪೮ ಮಂದಿ ಬಿದ್ದು ಮೃತರಾದರು ಮೃತರಾದವರಲ್ಲಿ ೧೧ ಮಂದಿ ವೈಮಾನಿಕರು ೩೬ ಮಂದಿ ಪ್ರಯಾಣಿಕರು 'ಗೋರ್ಕಿ'ಗೆ ತಗಲಿದ ಸಣ್ಣ ವಿಮಾನದ ಸಂಚಾಲಕನೂ ಮಡಿದವನು ಈ ಘಟನೆಯಾಗುವ ವೇಳೆ ಮೊಸ್ಕೊ ನಗರದ ಟೆಲಿಫೋನ್ ಲೈನು ಸರಿಯಾಗಿ ನಡೆಯುತ್ತಿದ್ದಿಲ್ಲವಾದದ್ದರಿಂದ ವರ್ತಮಾನದ ಪ್ರಸಾರವು ಥಕ್ಕನೆ ಆಗಲಿಲ್ಲ ವಿಮಾನದಲ್ಲಿ ಸೆಂಟ್ರಲ್ ಏರೋ ಡೈನೆಮಿಕ್ ಇನ್‌ಸ್ಟಿಟ್ಯೂಟ್‌ನ ಕಾರ್ಯಕರ್ತರು ಹಲವರಿದ್ದರು ವರ್ಕಿಂಗ್ ಮೆನ್ಸ್ ಇನ್‌ಸ್ಟಿಟ್ಯೂಟಿನ ಕೆಲವು ಸದಸ್ಯರು ಇದ್ದರು ಬಿದ್ದ ವಿಮಾನಕ್ಕೆ ಎಂಟು ದೊಡ್ಡ ಯಂತ್ರಗಳು ಇಪ್ಪತ್ತು ೫೬ ಮಂದಿಯನ್ನು ಹೊತ್ತು ಹಾರುವಷ್ಟು ಶಕ್ತಿಯು ಅದಕ್ಕಿತ್ತು ಈ ವಿಮಾನದೊಳಗೆ ವಾರ್ತಾಪತ್ರಿಕೆ ಮುದ್ರಿಸುವ ಯಂತ್ರವೂ ಒಂದು ಸಿನಿಮಾ ಮಂದಿರವೂ ಇದ್ದಿತು

> ದೇಶದ ಐಕ್ಯತೆಗಾಗಿಯೂ ದೇಶಿಗರ ಹಿತಕ್ಕಾಗಿಯೂ ನೀವು ನಿಮ್ಮ ಸರ್ವಶಕ್ತಿಯನ್ನು ಕಾರ್ಯಕ್ಕೆ ಹಚ್ಚಿದರೆ ನಿಮ್ಮ ವಾಸಸ್ಥಾನದಲ್ಲಿ ನೀವೇ ನಾಯಕರಾಗಿ ಬಾಳುವುದು ಎಷ್ಟಕ್ಕೂ ಸಶಕ್ಯವಾಗುತ್ತದೆ ನಿಮ್ಮ ಹೃದಯದ ಶಾಂತಿಯನ್ನು ಹೊಡೆತಟ್ಟುವ ಭಯವು ನಿಮ್ಮನ್ನು ಕೊಲ್ಲಬಾರದು ನಿಮ್ಮ ಆಂತರಿಕ ಶಕ್ತಿಯ ಅರಿವು ನಿಮಗಾಗಿ ನೀವು ದೇಶದ ಸೇವೆಗೆ ಮುಂದರಿಯಿರಿ
>
> ಭುಲಾಬಾಯಿ ದೇಸಾಯಿ—

ತಾಯಿಯನ್ನೂ ಪತ್ನಿಯನ್ನೂ ಕೊಂದವನ ಸೆರೆ!

ಒಂದು ವಾರದ ಪೋಲೀಸರ ಧೈರ್ಯ

ಜಬ್ಬಲಪುರದ ಮದರ ಕೊಟ್ರಿ ಎಂಬಲ್ಲಿ ನಬ್ಬೂಲಾಲ ಎಂಬವನೊಬ್ಬನು ೧೯೩೩ನೇ ಇಸವಿ ಒಕ್ಟೋಬರ ೧೯ರ ರಾತ್ರಿ ತನ್ನ ತಾಯಿಯನ್ನೂ ಪತ್ನಿಯನ್ನೂ ಕೊಂದು ಹಾಕಿ ಎತ್ತಲೋ ಪರಾರಿಯಾಗಿ ಬಿಟ್ಟನು ಕಳೆದ ೮ ತಿಂಗಳುಗಳಿಂದಲೂ ಅವನನ್ನು ಹುಡುಕುತ್ತಿದ್ದರು ಈ ಕೊಲೆಗಾರನು ಭೋಪಾಲ, ಗ್ವಾಲಿಯರ್ ಅಜ್ಮೀರ್, ಧೋಲಪುರಗಳಲ್ಲಿಗೆ ಹೋಗಿ ಅಲ್ಲಿ ಹೇಗೋ ದಿನಗಳನ್ನು ಕಳೆದು, ಕಳೆದ ವಾರ ಪುನಃ ಜಬ್ಬಲಪುರಕ್ಕೆ ಬಂದನು ಒಂದು ರಹಿಮಾಬಕ್ಷ ಎಂಬ ಸ್ನೇಹಿತನ ಮನೆಗೆ ಹೋದನು ಈ ವಾರ್ತೆಯು ಪೋಲೀಸರಿಗೆ ತಲಪಿದೊಡನೆ ಅವರ ಫೌಜೇ ಬಂದು ಬಿಟ್ಟಿತು ಮನೆಯ ಸುತ್ತಲೂ ಪರಿನಿಂತರು. ತನ್ನ ವಶವಾಗಬೇಕೆಂದರು ಆದರೆ ನಬ್ಬೂವು ಒಪ್ಪದೆ ಮನೆಯ ಮಾಳಿಗೆಯಿಂದ ಕೆಳಗೆ ಹಾರಿ ಓಡಿ ಹೋಗಲೆತ್ನಿಸಿದನು. ಆದರೆ ಅಧಿಕ ಸಂಖ್ಯೆಯಲ್ಲಿದ್ದ ಪೋಲೀಸರು ಅವನನ್ನು ಹಿಡಿದೇ ಬಿಟ್ಟರು ಬಲವಾದ ಕಾವಲಿನೊಡನೆ ಅವನನ್ನು ಸ್ಟೇಶನಿಗೊಯ್ದರು. ಮರುದಿನ ತನಿಖೆ ಮಾಡಲಾಗಿ, ಅವನು ಅಪರಾಧವನ್ನು ಒಪ್ಪಿಕೊಂಡನು.

Latest News.

ಮಹಾತ್ಮಾ ಗಾಂಧಿಯವರ ಆಗಮನ

ಮುಂಬಾಯಿ, ತಾ ೨೨

ಮಹಾತ್ಮಾ ಗಾಂಧಿಯವರು ಶ್ರೀಮತಿ ಕಸ್ತೂರಿಬಾಯಿ, ಶ್ರೀ ಮಹದೇವ ದೇಸಾಯಿ, ಶ್ರೀ ರಾಮದಾಸ ಗಾಂಧಿಗಳೊಡಗೂಡಿ ವಾರ್ಧಾದಿಂದ ಮುಂಬಾಯಿಗೆ ಈ ದಿನ ಬಂದರು ಅವರು ಶ್ರೀಮತಿ ಕಮಲಾ ನೆಹರುಗಳನ್ನು ಕಂಡು ಅವರಿಗೆ ವಿದಾಯವನ್ನಿತ್ತರು ಹಳ್ಳಿಗಳ ಉದ್ಧಾರಾರ್ಥ ದೇಶವು ಯತ್ನಿಸಬೇಕೆಂದು ಅವರು ಹೇಳಿದರು

೧೭೦೦ ವ್ಯಾಪಾರಿಗಳ ದಸ್ತಗಿರಿ

ಶಾಸನೋಲ್ಲಂಘನ ಮಾಡಿದ ಪರಿಣಾಮ

ಮೊಸ್ಕೊ ನಗರದಲ್ಲಿ ಕಳೆದ ವಾರ ಪೋಲೀಸರು ೧೭೦೦ ವರ್ತಕರನ್ನು ಸೆರೆ ಹಿಡಿದರು ಇವರೆಲ್ಲರೂ ವರುಷಕ್ಕೆ ೬೨೦೦ ಪೌಂಡುಗಳಷ್ಟು ಲಾಭವನ್ನು ಸಂಪಾದಿಸುತ್ತಿದ್ದರೆಂದು ಲೆಕ್ಕವಿಡಲಾಗಿದೆ ಕಾನೂನಿನ ಮೇರೆಗೆ ಒಬ್ಬ ವ್ಯಕ್ತಿಯು ೨೪೦೦ ಪೌಂಡುಗಳಿಗಿಂತ ಹೆಚ್ಚನ್ನು ತನ್ನ ಸ್ವಂತ ಹೊಣೆಯಲ್ಲಿ ಸಂಪಾದಿಸುವುದಾದರೆ ಅವನು ಕೋಪರೇಟಿವ್ ಸಂಘದ ಸದಸ್ಯನಾಗಬೇಕು ಈ ಕೈದಿಗಳು ಮಾತ್ರ ಯಾವ ಸಂಘದ ಸದಸ್ಯರಾಗದ ವ್ಯಾಪಾರವನ್ನು ನಡೆಸುತ್ತಿದ್ದರು. ಒಬ್ಬ ಟೈಲರನೂ ಒಬ್ಬ ಮೊಚ್ಚೆಗಾರನೂ ಬಹಳ ಲಾಭವನ್ನು ಗಳಿಸುತ್ತಿದ್ದರು ಇವರನ್ನು ಶಿಕ್ಷಿಸಬೇಕೆಂದಿರುವರು

(All Rights Reversed)

ಮುಂದೆಲ್ಲ, ನಮ್ಮ ಸಾಯ್ಬನು ರಾಜಕೀಯ ರಂಗದಲ್ಲೇ ದೃಷ್ಟಿಯನ್ನಿಟ್ಟರೆ, ಅವನು ಸ್ಥಾನಿಕ ವಿಷಯಗಳ ನೋಟ ಕಳ್ಕೊಳ್ಳಬೇಕೆಂದು ನಿರ್ಧರಿಸಿರುವನು. ಗಾಂಧಿಯುಗದ ರಾಜಕೀಯದಲ್ಲಿದ್ದಾಗ ಸಾಯ್ಬನಿಗೆ ಅನೇಕಾನೇಕ ವಿಷಯಗಳು ಗಮನಕ್ಕೆ ಬರುತ್ತಿದ್ದವು. ಆದರೆ, ಈಗ ಪೊಲಿಟಿಕ್ಸ್ ಡಲ್ ಆಗಿಬಿಟ್ಟಿದೆ. ಇನ್ನು ನಮ್ಮ ಮುಕ್ಕೋಣಾಲ್ಕರು ಮಿನಿಸ್ಟರು ಆಗಿಬಿಟ್ಟರೆ ಎಲ್ಲವೂ ತಂಪಾಗಿಬಿಡುವುದು ಸಹಜವಾಗಿದೆಯಷ್ಟೆ. ಈ ಸಲ ನಾನು ಕರ್ನಾಟಕ ಸಾಹಿತ್ಯ ವಿಷಯವಾಗಿ ಕೆಲವು ಮಾತುಗಳನ್ನಾಡಬೇಕೆಂದಿರುವೆ. ತಪ್ಪಿದರೆ ಕ್ಷಮೆ ಮಾಡ ಮಾಡಬೇಕು—ಬೇಡಬಾರದು!

× × × × × ×

ಈಗ ಎಷ್ಟು ಕನ್ನಡ ಪತ್ರಿಕೆಗಳು ಹೊರಡುತ್ತವೆಂದು ನಿಮ್ಮ ಭಾವನೆ? ಎಷ್ಟು ಮಾಸಪತ್ರಿಕೆಗಳು ಹುಟ್ಟುತ್ತವೆಂದು ನೀವು ಲೆಕ್ಕಹಾಕಿರುವಿರಿ? ನೀವು ನಿಜವಾದ ಕನ್ನಡ ಸಾಹಿತಿಗಳೆಂದಾದರೆ ನಿಮಗೆ ಅವುಗಳ ಲೆಕ್ಕವೇ ಸಿಗಲಾರದು. ನೀವು ಸಾಮಾನ್ಯ ಓದುಗರಾಗಿರುವುದಾದರೆ ಮಾತ್ರ ಅವುಗಳ ಸಂಖ್ಯೆಯಷ್ಟೆಂದು ತಿಳಿದು ಬರುವುದು!

× × × × × ×

ನಾನು ಹೀಗೆ ಹೇಳಿದನೆಂದು ಸಿಟ್ಟಾಗಬೇಡಿ! ಸಾಹಿತಿಗಳೆಂದು ಕರೆಸಿಕೊಳ್ಳುವ ಪುಣ್ಯಾತ್ಮರಾರೂ—ಸಾವಿರದಲ್ಲಿ ಹತ್ತು ಮಂದಿ ಕನ್ನಡವನ್ನು ಓದುವುದೇ ಇಲ್ಲ. ಇಂಗ್ಲಿಷ್ ಪತ್ರಿಕೆಗಳನ್ನು ಮಾತ್ರ ಅಗತ್ಯವಾಗಿ ದಿನಂಪ್ರತಿ ಪಡೆದುಕೊಳ್ಳುತ್ತಾರೆ.

× × × × × ×

ಒಂದು ಇಂಗ್ಲಿಷ್ ಪತ್ರಿಕೆಯನ್ನು ಕಂಕುಳಲ್ಲಿ ಹಿಡಿದುಕೊಂಡು ಬೆತ್ತವನ್ನು ಕೈಮೇಲೆ ಹಾಕಿಕೊಂಡು ನಡೆಯುವುದರಲ್ಲಿರುವ ಭೂಷಣ – ಗೌರವ—ಅಭಿಮಾನ —ಆನಂದ—ಉಲ್ಲಾಸ—ಉತ್ಸಾಹಗಳು ಎಷ್ಟೆಂದು ಅವರಿಗೇ ಗೊತ್ತು! ಆದರೆ, ಅದೇ ಅಡ್ಡಿಗೆ ನಾವು ಧರ್ಮಕ್ಕೆ (ಪುಕ್ಕಟೆ) ಎಂದು ಒಂದು ಕನ್ನಡ ಪತ್ರಿಕೆಯನ್ನು ಕೊಟ್ಟು ಹಿಡಿದುಕೊಂಡು ಹೋಗಿರೆಂದು ಬೇಡಿದರೆ “ಬೇಡವಯ್ಯಾ ನಮಗೆ;—ಅದು ನಮಗೆ ಕಾಸಾಗುತ್ತದೆ” ಎನ್ನುತ್ತಾರೆ. ಏನಿಲ್ಲದಿದ್ದರೂ “ಕ್ಲಬ್ಬಿನಲ್ಲಿ ಸಿಗುತ್ತದೆ” ಎನ್ನುತ್ತಾರೆ. ಕ್ಲಬ್ಬಿನಲ್ಲಿ ಕನ್ನಡ ಪತ್ರಿಕೆಯು ಗತಿ ಬೇರೆಯೇ ಇದೆ.

× × × × × ×

ಇಂಗ್ಲಿಷು ಬಲ್ಲವರಂತೂ ಕನ್ನಡ ಪತ್ರಿಕೆಗಳ ಕಡೆಗೆ ದೃಷ್ಟಿಯಿಟ್ಟು ನೋಡುವುದಿಲ್ಲವಷ್ಟೆ. ಸಂದರ್ಭವಶಾತ್ ಅವರಿಗೆ ಕನ್ನಡ ಮಾತನಾಡುವ ಅಗತ್ಯವು ಬಿದ್ದುಬಿಟ್ಟರೆ—ಅವರ ತುಟಿಗಳಿಂದ ಇಂಗ್ಲೀಷ್ ಶಬ್ದಗಳ ಪುಷ್ಪಗಳೇ ಉದುರುತ್ತವೆ. ಮಹಾಪ್ರಾಣವನ್ನು ಅಲ್ಪಪ್ರಾಣವನ್ನಾಗಿಯೂ, ಅಲ್ಪಪ್ರಾಣವನ್ನು ಮಹಾಪ್ರಾಣವನ್ನಾಗಿಯೂ ಬದಲಾಯಿಸಿ ಸಿಕ್ಕಾಬಟ್ಟೆ ಅವರು ಕನ್ನಡ ಮಾತನಾಡುವಾಗ ಸಾಯ್ಬನಂತಹ ಮಹಾ ಕವಿಗಳ ಕನ್ನಡ ಸಾಹಿತಿಗಳ ಮಹಾ ಪ್ರಾಣಕ್ಕೆ ಬರುತ್ತದೆಷ್ಟೆ—ಅದು ನಮಗೂ ನಿಮಗೂ ಗೊತ್ತು!

× × × × × ×

ಕನ್ನಡದ ಸೇವೆಯು ಬೆಂಗಳೂರಿನ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಮತ್ತು ಕೆಲವು ಚಿಕ್ಕ ಸಂಪಾದಕರಿಗೆ ಮೀಸಲಾಗಿಡಲ್ಪಟ್ಟಿದೆಂದು ಕನ್ನಡಿಗರನೇಕರ ಭಾವನೆ ಸ್ವಾಮಿ—ಇಂತಹವರಿಗೆ ಯಾವ ಟೈಟ್ಲ್ ಕೊಡಬೇಕೆಂದು ಸಿಲ್ವರ್ ಜುಬಿಲಿ ದಿನ ನಿರ್ಧರಿಸಲೇ ಬೇಕಿತ್ತು.

× × × × × ×

ನಮ್ಮವರು ಬೀಡಿ, ಸಿಗರೇಟು, ಕಾಫಿ ಬಾಗಳಿಗೆ ದಿನ ಒಂದಕ್ಕೆ ವೆಚ್ಚಮಾಡುವ ಹಣದಿಂದ ಒಂದು ಪತ್ರಿಕೆಗೆ ಒಂದು ವರ್ಷದ ಚಂದಾದವನ್ನು ಕಟ್ಟಬಹುದು. ಆದರೆ, ಅಂತಹ ಲಕ್ಷಣವುಳ್ಳ ಕೆಲವು ಮುಖಗಳನ್ನು ದಯವಿಟ್ಟು ತೋರಿಸಿರಿ!

× × × × × ×

ಇಂಗ್ಲೆಂಡು ಅಮೇರಿಕಾಗಳ ಒಂದೊಂದು ಪತ್ರಿಕೆಗೆ ಮಿಲಿಯಗಟ್ಟಲೆ ಓದುಗರಿರುವರಂತೆ. ನಮ್ಮ ಪತ್ರಿಕೆಗಳಿಗೊ—ಮಿಲಿಯಗಟ್ಟಲೆಯಲ್ಲಲ್ಲ! ಕೋಟಿಗಟ್ಟಲೆಯಲ್ಲಿ! ಎಂತಹ ಔದಾರ್ಯ ನಮ್ಮ ಕನ್ನಡಿಗರದ್ದು!

× × × × × ×

ನಮ್ಮ ಧನಿಕರು—ಕನ್ನಡ ತಿಳಿದವರು—ಸ್ವಲ್ಪ ಸ್ವಲ್ಪ ಹಣವನ್ನು ಕನ್ನಡದ ಸೇವೆಗಾಗಿ ಬಿಡುವ ಸುದಿನವು ಇನ್ನಾದರೂ ಪ್ರಾಪ್ತವಾಗದೇ? ಎಂದು ಸಾಯ್ಬನು ಬೇಡಿಕೊಳ್ಳುತ್ತಿರುವನು!

ಒಬ್ಬ ಸಾಹಿತಿಗಳು ಸ್ವಾಮಿ—ಪಾಪ! ಬಾರೀ ಸಾಹಿತಿಗಳು—ಕನ್ನಡದ ಸೇವೆಯನ್ನು ನಿರರ್ಗಳವಾಗಿ ಮಾಡಿದವರೆಂದರೆ ಅವರೊಬ್ಬರೆಂದು ಧೈರ್ಯದಿಂದ ಹೇಳಬಹುದು. ಆದರೆ, ಮಾಡಲೇನು? ಅವರೇ ಹೇಳುತ್ತಾರೆ—“ನಾನು ಯಾವ ಪತ್ರಿಕೆಗೂ ಬೆಲೆ ಕೊಟ್ಟು ಓದುವುದೇ ಇಲ್ಲ” ಎಂದು. ಎಂತಹ ಸಾಹಿತಿಗಳವರು! ಇಂತಹ ಸಾಹಿತಿಗಳು ಕನ್ನಡದಲ್ಲಿದ್ದುದರಿಂದಲ್ಲವೇ ನಮ್ಮ ಭಾಷಾಭಿವೃದ್ಧಿಯು ಹೀಗಾಗಿದೆ.

× × × × × ×

ಅನೇಕ ಲೇಖಕರಿರುತ್ತಾರೆ, ಅವರಿಗೆ ಬರೆಯುವುದೇ ಹುಚ್ಚು. ಆದರೆ, ತಾವು ಪ್ರಕಟಿಸುತ್ತಿರುವ ಪತ್ರಿಕೆಯ ಚಂದಾದಾರರಾಗಬೇಕೆಂದು ಅವರ ಮನಸ್ಸಿನಲ್ಲಿರುವುದಿಲ್ಲ. ಪ್ರತಿಕೋಪಿಯನ್ನು ಕಳುಹಿಸಿದರೆ ಮಾತ್ರ ಬಹು ಆನಂದಭರಿತರಾಗುತ್ತಾರೆ! ಎಂತಹ ಸಾಹಿತಿಗಳು!

× × × × × ×

ಕನ್ನಡ ಪತ್ರಿಕೆಗಳನ್ನು ಓದುವವರಾದರೂ ಯಾರು? ಸಾಮಾನ್ಯ ಜನರು! ಅ—ರ—ದ—ಪಗಳನ್ನು ಬಲ್ಲ ಕನ್ನಡಾಭಿಮಾನಿಗಳು! ಅವರಿಂದ್ದುದರಿಂದಲೇ ಕನ್ನಡವು ಉಳಿದಿದೆ! ಅವರಿಗೆ ಜಯವಾಗಲಿ!

'ಸಾಯ್ಬ'.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ—ಸ್ತ

ಆರೋಗ್ಯಕ್ಕೆ ಓವಲ್ಟಿನ್ ಎಂಬುದು ಅತ್ಯಮೋಘ ಪಾನಕವೆಂದು ಸರ್ವ ಜಗತ್ತೇ ಶಿಫಾರಸುಮಾಡುತ್ತದೆ. ನಿಮ್ಮ ಮನೆಯಲ್ಲಿ 'ಓವಲ್ಟಿನ್'ನನ್ನು ದಿನನಿತ್ಯದ ಪಾನಕವನ್ನಾಗಿ ಮಾಡಿರಿ. ನಿಮ್ಮ ಕುಟುಂಬದ ಪ್ರತಿ ಜೀಂಬರಿಗೆ ಅದರ ಅಸಮಾನವಾದ ದೇಹವರ್ಧಕ ಶಕ್ತಿಯ ಪ್ರಯೋಜನವು ದೊರೆಯಲಿ. ಸರಿಯಾದ ದೇಹಪೋಷಣೆಯಲ್ಲೇ ಆರೋಗ್ಯವು ಹೊಂದಿಕೊಂಡಿದೆಯೆಂಬುದು ತಿಳಿದಿರಲಿ. ದೇಹ, ನರ, ಮಿದುಳುಗಳನ್ನು ಸುಸ್ಥಿತಿಯಲ್ಲಿಡಬೇಕಾದರೆ 'ಓವಲ್ಟಿನ್' ಎಂಬ ಅನುಪಮ ಪಾನಕವೇ ಆವಶ್ಯ. 'ಓವಲ್ಟಿನ್' ರುಚಿಕರವಾಗಿದೆ. ನಿಮ್ಮ ಆಹಾರಕ್ಕೆ 'ಓವಲ್ಟಿನ್' ಸೇರಿಸಿರಿ—ಅದು ಆರೋಗ್ಯಕರ, ಬಲವರ್ಧಕ.

ನಿಮ್ಮ ಮನೆಯಲ್ಲಿ "ಓವಲ್ಟಿನ್"ನನ್ನು ಉಪಯೋಗಿಸಿದರೆ ನಿಮ್ಮ ಕುಟುಂಬಕ್ಕೆ ನೀವು ಅತ್ಯುತ್ಕೃಷ್ಟ ಆಹಾರವನ್ನೊದಗಿಸಿಕೊಟ್ಟಂತಾಗುತ್ತದೆ. ಇದನ್ನು ಪ್ರಕೃತಿಜನ್ಯ ವಸ್ತುಗಳಿಂದ ತಯಾರಿಸಲಾಗಿದೆ. ಬೆಳೆದ ಬಾರ್ಲಿ, ದನದ ಕೆನೆಹಾಲು ಮತ್ತು ವಿಶಿಷ್ಟವಾಗಿ ತಯಾರಿಸಿದ ಕೋಕೋಗಳಿಂದ ಇದು ಉತ್ಪನ್ನವಾಯಿತು. ದೇಹಾರೋಗ್ಯಕ್ಕಾಗಿ ಇದನ್ನು ಸರ್ವದಾ ಉಪಯೋಗಿಸಿರಿ. ಆರೋಗ್ಯ, ಶಕ್ತಿ, ಮತ್ತು ಚೈತನ್ಯಗಳನ್ನು ವೃದ್ಧಿಪಡಿಸಿಕೊಳ್ಳಿರಿ. ಯಾವಾಗಲೂ ತಾಜಾ "ಓವಲ್ಟಿನ್"ನನ್ನೇ ಪಡೆಯಿರಿ. ನಕಲಿಗಳನ್ನು ತಿರಸ್ಕರಿಸಿರಿ; ಅವು ಗುಣದಲ್ಲೂ ಕ್ರಯದಲ್ಲೂ ತಾಜಾ "ಓವಲ್ಟಿನ್"ಗೆ ಸಮಾನವಾಗವು.

ನಿಮ್ಮ ಆಹಾರಕ್ಕೆ 'ಓವಲ್ಟಿನ್' ಸೇರಿಸಿರಿ—ಅದು ಆರೋಗ್ಯಕರ, ಬಲವರ್ಧಕ ಮತ್ತು ಶಕ್ತಿದಾಯಕ.

"ಓವಲ್ಟಿನ್" ಟೋನಿಕ್, ಆಹಾರ, ಪಾನಕ.

OVALTINE

ಮಿದುಳು, ನರ, ದೇಹಗಳನ್ನು ರಚಿಸುತ್ತದೆ.

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ ದೊರೆಯುತ್ತದೆ.

ಏಜಂಟ್:—ಜೇಮ್ಸ್ ರೈಟ್, 85 ಎ. ಕ್ಲೈವ್ ಸ್ಟ್ರೀಟ್ ಕಲ್ಕತ್ತಾ, ಮತ್ತು ಮುಂಬಾಯಿ, ಮದ್ರಾಸು.

OV/309

Estd 1920] **THE** [1920ರಲ್ಲು ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರ್ಯಾಜ್ ಲಿಮಿಟೆಡ್,

ಪುತ್ತೂರು.

ಠೇವಣಾತಿಗಳ ದರ.

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ.

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರಕೊಳ್ಳುವುದು.

Puttur,
Dated 10—4—1935.

G. V. Lakshman Pai,
Secretary,

ಪತ್ರಿಕಾ ಪ್ರಪಂಚ

ನಿರುದ್ಯೋಗವೂ ಶಿಕ್ಷಿತ ಜನರೂ.

"The Educational Review"ನಲ್ಲಿ ಶ್ರೀ ಎಸ್. ಕೆ. ಸಿದ್ಧಾಂತ ಮತ್ತು ಶ್ರೀ ಆರ್. ಅರ್ ಕಣ್ಣಿರವರು ಸಂಯುಕ್ತ ಪ್ರಾಂತ್ಯದ ವಿದ್ಯಾವಂತರ ನಿರುದ್ಯೋಗಕಷ್ಟವನ್ನು ಹೇಗೆ ಹೋಗಲಾಡಿಸಬಹುದೆಂದು ಕೆಲವು ಸೂಚನೆಗಳನ್ನಿತ್ತಿದ್ದಾರೆ. ಈ ಸೂಚನೆಗಳು ಇತರ ಪ್ರಾಂತೀಯರಿಗೂ ಪ್ರಯೋಜನಕಾರಿಯಾಗಬಹುದಾದುದರಿಂದ ಅವನ್ನಿಲ್ಲಿ ಸೂಚಿಸಲಾಗಿದೆ.—

(೧) ಸೆಕ್ರೆಟರಿಗಳ ಕೋಲೇಜು ಒಂದು ಇದ್ದರೆ ನೂರಾರು ವಿದ್ಯಾವಂತರಿಗೆ ಪ್ರಾಂತ್ಯಗಳಲ್ಲಿ ಉದ್ಯೋಗಗಳು ದೊರೆಯುವುದು ಸುಲಭವಾಗಿದೆ. ಮುನಿಸಿಪಾಲಿಟಿಗಳ ಚೆಯರ್ಮನರು, ಡಿಸ್ಟ್ರಿಕ್ಟ್‌ಬೋರ್ಡಿನ ಅಧ್ಯಕ್ಷರು, ವಾಣಿಜ್ಯ ಧುರೀಣರು, ರಾಜಕೀಯವಾದಿಗಳು, ನ್ಯಾಯವಿಧಾಯಕ ಸಭೆಗಳ ಸದಸ್ಯರು, ಇವರಿಗೆಲ್ಲ ಸೆಕ್ರೆಟರಿಗಳು ಅಗತ್ಯವಿರುತ್ತದೆ. ಸೆಕ್ರೆಟರಿಯಾಗುವವನು ಉತ್ತಮ ವಿದ್ವಾಂಸನಾಗಿರಬೇಕು. ಪ್ರಚಲಿತ ರಾಜಕೀಯ ವಿಷಯಗಳ ಮೇಲಣ ಸಾಹಿತ್ಯ, ಅರ್ಥಶಾಸ್ತ್ರ, ವ್ಯಾಪಾರೀ ಪ್ರಕಟಿತ, ಕೈಗಾರಿಕಾ ವಿಷಯಗಳ ಕುರಿತಾದ ಅನುಭವವು ಅವನಿಗೆ ಅಗತ್ಯವಿದೆ. ಸೆಕ್ರೆಟರಿಗೆ ಕೋರ್ಟ್‌ಹೇಂಡ್ ಗೊತ್ತಿರತಕ್ಕದು. ಪ್ರಾಮುಖ್ಯ ವಿಷಯಗಳನ್ನೊಳಗೊಂಡ ರಿಪೋರ್ಟುಗಳ ನಕಲುಗಳನ್ನು ತೆಗೆಯಬೇಕಾಗುತ್ತದೆ. ಸಾಧಾರಣವಾದ ಲೆಕ್ಕಪತ್ರಗಳನ್ನಿಡಲು ಅವನಿಗೆ ತಿಳಿದಿರಬೇಕು. ಇಂತಹ ಅರ್ಹತೆಗಳುಳ್ಳ ವಿದ್ಯಾವಂತರಿಗೆ ಉದ್ಯೋಗಗಳು ಲಭಿಸುವುದು ಸುಲಭವಿದೆ.

(೨) ಪತ್ರಿಕಾವ್ಯವಸಾಯ: ಸಾಹಿತ್ಯ ಜ್ಞಾನಾಭಿವೃದ್ಧಿಯಲ್ಲಿ ಅಭಿರುಚಿಯಿರುವವರಿಗೆ ಪ್ರಾಂತಿಕಭಾಷೆಗಳಲ್ಲಿ ಪ್ರತಿಕಾವ್ಯವಸಾಯಕ್ಕೆ ಕೈಹಾಕುವುದರಿಂದ ಪ್ರಯೋಜನವಿದೆ. ಈ ಉದ್ಯೋಗಕ್ಕೆ ತೊಡಗುವವರು ಹೆಚ್ಚಿನ ವಿದ್ವಾಂಸರಾಗಿರಬೇಕು. ಪ್ರಾಥಮಿಕ ವಿದ್ಯಾಭಿವೃದ್ಧಿಗೆ ಈಗಿನ ದಿನಗಳಲ್ಲಿ ಹಲವು ಸೌಕರ್ಯಗಳಿರುವುದರಿಂದ ದೇಶೀಯ ಭಾಷೆಗಳಲ್ಲಿ ಪತ್ರಿಕಾವ್ಯವಸಾಯವನ್ನು ಮಾಡಬಹುದು.

(೩) ಸಿನೆಮಾ ಕೈಗಾರಿಕೆ. ಸಿನೆಮಾದಲ್ಲಿರುವ ಅನರ್ಥಗಳನ್ನು ನಾವು ಎಷ್ಟು ಉಪೇಕ್ಷಿಸಿದರೂ ಸಾಮಾನ್ಯ ಜನತೆಯು ಅದರ ಪ್ರಭಾವಕ್ಕೆ ಸಿಕ್ಕಿ ಅಗ್ಗದಲ್ಲಿ ವಿನೋದಿಸುತ್ತಿರುವುದು ಕಂಡುಬರುತ್ತದೆ. ವಿದ್ಯಾವಂತರು ಈ ಕಸಬಿಗೆ ಕೈಹಾಕಿ ಅದರಲ್ಲಿನ ಕಲೆಯನ್ನರಿತು ಅದರ ಇನ್ನಿತರ ಭಿನ್ನಭಿನ್ನ ಕೈಗಾರಿಕೆಗಳನ್ನೂ ಕಲಿಯಬಹುದು.

(೪) ವಸ್ತ್ರಗಳನ್ನು ತಯಾರಿಸುವುದು. ವಸ್ತ್ರಗಳನ್ನು ಹೊಲಿಯುವ ಕೈಗಾರಿಕೆಯು ಕಳೆದ ಹತ್ತು ವರುಷಗಳಲ್ಲಿ ಹೆಚ್ಚಿನ ಬದಲಾವಣೆಗಳನ್ನು ಹೊಂದಿದೆ. ವಿದ್ಯಾವಂತರು ಈ ಉದ್ಯಮಕ್ಕೆ ತೊಡಗಬಹುದು.

(೫) ವೈಮಾನಿಕ ಸಾಹಸ. ಇನ್ನು ಹತ್ತು ವರ್ಷಗಳಲ್ಲಿ ವಿಮಾನಸೌಕರ್ಯಗಳು ಹೆಚ್ಚಿ ಆ ಸಂಬಂಧವಾದ ಕೈಗಾರಿಕೆಯು ಅಭಿವೃದ್ಧಿಯಾಗುವುದು ನಿಜವಾಗಿದೆ. ಭಾರತೀಯ ವಿದ್ಯಾವಂತರು ವಿಮಾನಸಂಚಾರದಲ್ಲಾಗಲಿ ಯಂತ್ರಸಂಬಂಧ ಕೆಲಸದಲ್ಲಾಗಲಿ, ವಯರ್‌ಲೆಸ್ ಕೆಲಸದಲ್ಲಾಗಲಿ ಮುಂದರಿಯದಿದ್ದರೆ ಯುರೋಪಿಯನರು ಈ ಉದ್ಯಮಕ್ಕೆ ತೊಡಗುವುದು ಸಂಭವನೀಯವಿದೆ.

೬. ಬ್ರೋಡ್‌ಕಾಸ್ಟಿಂಗ್ ಸ್ಟೇಷನುಗಳು.—ವಯರ್‌ಲೆಸ್ ಬ್ರೋಡ್‌ಕಾಸ್ಟಿಂಗ್ ಉದ್ಯಮದಲ್ಲಿ ಶಿಕ್ಷಿತ ವರ್ಗದವರಿಗೆ ಉದ್ಯೋಗಗಳು ದೊರೆಯುವ ಹೆಚ್ಚಿನ ಸೌಕರ್ಯಗಳಿವೆ. ಯುನಿವರ್ಸಿಟಿಗಳಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕಾಗಿ ಇಂಡಿಯಾ ಸರಕಾರದೊಡನೆ ಕೇಳಿಕೊಳ್ಳಬೇಕು.

೭. ಸಾಮಗ್ರಿಗಳ ವಿಕ್ರಯ.—ಪ್ರಕೃತದಲ್ಲಿ ಕೈಗಾರಿಕೆ ಸಂಸ್ಥೆಗಳನ್ನು ನಡೆಸುವವರು ವಸ್ತುಗಳ ಉತ್ಪತ್ತಿ, ಧನದಾಳಿ ವಿನಿಯೋಗ ಮತ್ತು ಸಾಮಗ್ರಿಗಳ ವಿಕ್ರಯ ಈ ಮೂರು ವಿಷಯಗಳು ಒಂದು ವ್ಯಾಪಾರದ ಮುಖ್ಯಾಂಗಗಳೆಂದು ತಿಳಿಯಬೇಕು. ವಸ್ತುಗಳನ್ನು ವಿಕ್ರಯಿಸುವ ವಿಷಯದಲ್ಲಿ ನಮ್ಮ ವಿದ್ಯಾವಂತರು ಮುಂದೊತ್ತಬೇಕು.

ನವಯುಗದಲ್ಲಿ ಪ್ರಾಚೀನ ಪದ್ಧತಿಯ ಪ್ರವಾಸಿ.

ಹಟಿ [ಉಗಿ] ಶಕ್ತಿಯ ಶೋಧನೆಯನ್ನು ಮಾಡುವುದಕ್ಕೆ ಮುಂಚೆ ಯುರೋಪಿನಿಂದ ಹಿಂದೂಸ್ಥಾನಕ್ಕೆ ಬರಲು ಎರಡೆರಡು ವರ್ಷಗಳಾಗುತ್ತಿದ್ದುವೆಂದು ನಾವು ಇತಿಹಾಸದಲ್ಲಿ ಓದುವೆವು. ಈಗ ೧೦, ೧೫ ದಿನಗಳಲ್ಲಿ ನಾವು ಸುಖವಾಗಿ ಯುರೋಪಿನಿಂದ ಹಿಂದೂದೇಶಕ್ಕೆ ಬಂದು ಸೇರುವೆವು. ಆದರೆ ಯಂತ್ರಯುಗದ ಸಾಧನಗಳನ್ನು ಉಪಯೋಗಿಸದೆ ಪ್ರಾಚೀನ ಕಾಲದ ಸಾಮಾನ್ಯ ದೋಣಿಯನ್ನೇ ಉಪಯೋಗಿಸಿ ಸಮುದ್ರದಲ್ಲಿ ಕಷ್ಟಕರವೂ ದೀರ್ಘವೂ ಆದ ಪ್ರವಾಸವನ್ನು ಮಾಡುವ ಹುಚ್ಚು ಒಬ್ಬ ಜರ್ಮನ್ ತರುಣನಿಗೆ ಹತ್ತಿತು. ಅವನು ತನ್ನ ರಬ್ಬರ್ ದೋಣಿಯಲ್ಲಿ ಪ್ರವಾಸ ಮಾಡುತ್ತಾ ಮಾಡುತ್ತಾ ಈಗ ಮುಂಬಾಯಿಗೆ ಬಂದು ಸೇರಿದನು. ಮುಂಬಾಯಿಯ ತೀರ ಪ್ರದೇಶದಲ್ಲಿ ಕೆಲವು ಜನ ಬೆಸ್ತರು [illegible] ಕೆಲಸ ಮಾಡುತ್ತಿದ್ದಾಗ ಒಂದು ಬೆಳಿಯ ಪದಾರ್ಥವು ಸಮುದ್ರದ ಮೇಲೆ ದೂರದಲ್ಲಿ ಕಾಣಲಾರಂಭಿಸಿತು. ಸ್ವಲ್ಪ ಹೊತ್ತಿನಲ್ಲಿ ಒಬ್ಬ ಬಿಳಿಯ ಸಾಹೇಬನು ತನ್ನ ದೋಣಿಯನ್ನು ತೆಗೆದುಕೊಂಡು ದಡಕ್ಕೆ ಬಂದನು. ಅವನು ಬಂದ ಕೂಡಲೇ ತನ್ನ ದೋಣಿಯನ್ನು [illegible] ಬೆಸ್ತರಿಗೆ ಇದರ ಅರ್ಥವಾಗಲಿಲ್ಲ. [illegible] ಜರ್ಮನಿಯ ಒಬ್ಬ [illegible] ಆಸ್ಟ್ರೇಲಿಯಾಕ್ಕೆ ಹೋಗುತ್ತಾ ದಾರಿಯಲ್ಲಿ [illegible] ಮುಂಬಾಯಿಯಲ್ಲಿ ಇಳಿದ [illegible] ಬಳಿಕ ಮುಂಬಾಯಿ [illegible] ಈ ವಿಚಿತ್ರ ಪ್ರವಾಸಿಗೆ ಸ್ವಾಗತಸತ್ಕಾರಗಳನ್ನಿತ್ತರು. ಈ ಜಾಲಪೀನ [illegible] ಅವನ ರಬ್ಬರ್ ದೋಣಿಯು ಬಹಳ ಸಣ್ಣದು. ಒಬ್ಬನೇ ಮನುಷ್ಯನು ಕುಳಿತುಕೊಳ್ಳಬಹುದು. ಅದರ ಬೆಲೆ ೨೦೦ ರೂಪಾಯಿ. ಜರ್ಮನಿಯಲ್ಲಿ [illegible] ಇಂಥ ರಬ್ಬರ್ ದೋಣಿಗಳು [illegible] ದೋಣಿಗಳ ಮೂಲಕ ಈ ದೋಣಿಯನ್ನು ನಡೆಸಬಹುದು. ಒಂದು ದೊಡ್ಡ [illegible] ಈ ದೋಣಿಯು ಮುಳುಗುವುದು. ಅದರ ಸುದೈವದಿಂದ ಸ್ಟೇಷನ ಪ್ರವಾಸದಲ್ಲಿ ಇಂತಹ ಪ್ರಸಂಗವು ಬಂದಿಲ್ಲ. ಈ ನೌಕೆಯು ಎಷ್ಟುವೊ ಜನರ ದೋಣಿಯಂತಿರುವುದು. ಸ್ಟೇಷನು [illegible] ಕಳ್ಳಿ [illegible] ಯಲ್ಲಿ ಕಂಟಕಿಗೆ ಬಂದು ಸೇರಿದನು. ಈ ವೇಗದಿಂದ ಅವನು ಇನ್ನು ೨ ವರ್ಷಗಳಲ್ಲಿ ಆಸ್ಟ್ರೇಲಿಯಾಕ್ಕೆ ಸೇರುವೆನೆಂದು ನಂಬಿರುವನು. ಈ ವಿಚಿತ್ರವಾದ ಪ್ರವಾಸದಲ್ಲಿ ಅನೇಕ ಆಶ್ಚರ್ಯಕರವೂ ಭಯಂಕರವೂ ಆದ ಅನುಭವಗಳು ಅವನಿಗೆ ಉಂಟಾಗಿರುವುವು. ಅರಬೀ ಸಮುದ್ರದಲ್ಲಿ ಇವನು ತನ್ನ ದೋಣಿಯಲ್ಲಿ ಪ್ರವಾಸ ಮಾಡುವಾಗ ಈ ಸಾಹಸಿಗನನ್ನು ಬೆಸ್ತರು ಕಂಡು ಬೆದರಿದರು. ಯಾವನೋ ಮಂತ್ರಿಕನೋ ರಾಕ್ಷಸನೋ ನೀರಿನಿಂದೆದ್ದು ಬಂದಿರುವನೆಂದು ಅವರು ಭಾವಿಸಿದರು. ಪಾರ್ಶಿಯಾದಲ್ಲಿ (ಪರ್ಶಿಯಾ) ಯಲ್ಲಿ ಸಮುದ್ರಕಳ್ಳರು ಈ ಬಾಲವೀರನ ಮೇಲೆ ಗುಂಡುಗಳನ್ನು ಹಾರಿಸಿದರು. ಆದರೆ ಸುದೈವದಿಂದ ಇವನೂ ಇವನ ದೋಣಿಯೂ ಸುರಕ್ಷಿತವಾಗಿಯೇ ಉಳಿಯುವಂತಾಯಿತು. ಇಂಥ ಸಂದರ್ಭಗಳು ಬಂದಾಗ ಈ ನೌಕೆಯು ಕೆಲಹೊತ್ತು ನೀರಿನ ಕೆಳಗೆ ಅಲೆಯುವುದು, ಕೆಲಹೊತ್ತು ಗಾಳಿಯ ಮೇಲಕ್ಕೆ ಹಾರುವುದು. ಈ ಕಾರಣದಿಂದ ಸುಲತಾನಪುರದಂಬಲ್ಲಿ ಎರಡು ದಿನಗಳ ವರೆಗೆ ಈ ಪ್ರಾಣಿಯನ್ನು ಕೈದಿನಲ್ಲಿಡಲಾಗಿತ್ತು. ಮತ್ತು ಅವನ ನೌಕೆಯನ್ನು ಜಪ್ತಿ ಮಾಡಿದ್ದರು. ಇಂಥ ಸಂಕಟಗಳು ಒದಗಿದಾಗ್ಯೂ ಈ ಸಾಹಸಿಗನಾದ ವೀರನು ತನ್ನ ಪ್ರವಾಸಕಾರ್ಯವನ್ನು ಮುಂದರಿಸಬೇಕೆಂದಿರುವನು. ಇಂತಹನಿಗೆ 'ನಿನ್ನ ಮಾರ್ಗವು ಸುಖಕರವಾಗಲಿ' (ಶುಭಾಸ್ತೇ ಪಂಥಾನಃ ಸಂತು) ಎಂದು ಆಶ್ಚರ್ಯದಿಂದ ಆಶೀರ್ವದಿಸಬೇಕೆನಿಸುವುದಿಲ್ಲವೇ!

Bombay Chronicle

ಕ್ಷಯರೋಗವು ಗುಣವಾಗತಕ್ಕ ವ್ಯಾಧಿಯೋ?

ರಾವ್ ಬಹದ್ದೂರ್ ಡಾಕ್ಟರ್ ಎಂ. ಕೇಶವಪೈ ಬಿ. ಎ., ಎಂ. ಡಿ., ಸುಪರಿಂಟೆಂಡೆಂಟ್ ಕ್ಷಯರೋಗದ ಆಸ್ಪತ್ರೆ, ಮದ್ರಾಸು, ಇವರು ಆರೋಗ್ಯಚಂದ್ರಿಕೆಯಲ್ಲಿ ಹೀಗೆ ಬರೆದಿದ್ದಾರೆ—"ಈ ಮೇಲಿನ ಪ್ರಶ್ನೆಯ ಉತ್ತರವು ಕಳೆದ ಐವತ್ತು ವರ್ಷಗಳಿಂದೀಚೆಗೆ ಬಹಳ ಮಟ್ಟಿಗೆ ಮಾರ್ಪಟ್ಟಿದೆ. ೧೮೮೨ನೆಯ ವರ್ಷದಲ್ಲಿ ರಾಬರ್ಟ್ ಕೋಚ್ ಎಂಬವರು ಕ್ಷಯರೋಗದ ಕ್ರಿಮಿಗಳನ್ನು ಕಂಡುಹಿಡಿಯುವುದಕ್ಕೆ ಮೊದಲು, ಈ ಕ್ಷಯರೋಗ ಎಂಬುದು ಬಹಳ ಅಪಾಯಕರವೆಂದೂ ಇದು ಮರಣದಲ್ಲಿಯೇ ಪರ್ಯವಸಾನವಾಗುವುದು ನಿಶ್ಚಯವೆಂದೂ ಅಭಿಪ್ರಾಯವಿದ್ದಿತು. ಅಲ್ಲದೆ ಆ ರೋಗವಿದ್ದ ಕೆಲವರು ಅದರಿಂದ ಗುಣಹೊಂದಿ ಚೇತರಿಸಿಕೊಂಡ ಕೆಲವು ಸಂದರ್ಭಗಳಲ್ಲಿ ಈ ಕ್ಷಯರೋಗದ ಬೀಜಗಳನ್ನು ದೂರಮಾಡಿ! ಆಗ ನೀವು ಆ ರೋಗದಿಂದ ತಪ್ಪಿಸಿಕೊಳ್ಳುವಿರಿ. ಗರ್ಭಗಳಲ್ಲಿಯೂ ಕೂಡ ಅದು ಗುಣವಾದುದರಿಂದಲೇ ಅದು ಕ್ಷಯರೋಗವಲ್ಲವೆಂಬ ಅಭಿಪ್ರಾಯವನ್ನೂ ಹೊರಡಿಸುತ್ತಿದ್ದರು. ಆದರೆ ಇತ್ತೀಚೆಗೆ ಈ ಕ್ಷಯರೋಗದ ಕ್ರಿಮಿಗಳನ್ನು [illegible] ಅನೇಕ ವರ್ಷಗಳ ವರೆಗೆ [illegible] ಆ ಭಾಗಗಳಿಂದ ಆಸ್ಪತ್ರೆಗಳಲ್ಲಿ ಕ್ಷಯರೋಗದ [illegible] ಮತ್ತು ವಯಸ್ಸು [illegible] ಈ ಕೆಳಗೆ ಕಂಡ ಕೆಲವು ಸಂಗತಿಗಳು ಕಂಡುಬಂದಿವೆ. [illegible] ಕ್ಷಯರೋಗದ ಚಿಹ್ನೆಗಳೊಂದೂ ಕಾಣದಿದ್ದರೂ ಅವರ ಮರಣಕ್ಕೆ ಬೇರೆ [illegible] ಗ್ರಂಥಿಗಳು [illegible] ಈ ಕ್ಷಯರೋಗದ [illegible] ಸಮಾನವಾದ [illegible] ಅದರಿಂದೀಚೆಗೆ ಇನ್ನೂ ಸೂಕ್ಷ್ಮವಾದ ಶರೀರಶಾಸ್ತ್ರ ಯಂತ್ರಗಳ [illegible] ಶೋಧನ ಮಾಡಿದುದರಲ್ಲಿ ಪಟ್ಟಣ ನಾಗರಿಕ ದೇಶಗಳಲ್ಲಿಯೂ ಇರುವ ಮನುಷ್ಯರಲ್ಲಿ ಹೆಚ್ಚು ಜನಗಳ ಶರೀರದಲ್ಲಿ ಈ ಕ್ಷಯರೋಗದ ಕ್ರಿಮಿಗಳ ಸಂಬಂಧವು ಇದ್ದಿರುವುದನ್ನು ಕಾಣಬಹುದೆಂದೂ ಹಾಗಿದ್ದರೂ ಕೆಲವರ ದೇಹದಲ್ಲಿ ಮಾತ್ರವೇ ಆ ರೋಗದ ಪ್ರಾಬಲ್ಯವು ಕಾಣುವುದೆಂದೂ ತಿಳಿದುಬಂದಿತು.

ಅದರಿಂದೀಚೆಗೆ ವೈದ್ಯಶಾಸ್ತ್ರಜ್ಞರ ಮತ್ತು ಕ್ರಿಮಿಶಾಸ್ತ್ರಜ್ಞರ ಅನುಭವಗಳನ್ನೆಲ್ಲಾ ಒಟ್ಟುಗೂಡಿಸಿ ನೋಡಲು ನಮ್ಮ ಜೀವಂತರಾಗಿರುವ ಸಾವಿರ ಜನರಲ್ಲಿ ೯೦೦ ಜನರಿಗೆ ಕಡಿಮೆಯಿಲ್ಲದೆ ದೇಹದಲ್ಲಿ ಕ್ಷಯರೋಗ ಕ್ರಿಮಿಗಳ ಸಂಬಂಧವುಳ್ಳವರಾಗಿಯೇ ಇರುವರೆಂದೂ ಆ ಸಂಬಂಧವು ಅವರ ಶೈಶವದಲ್ಲಿಯೋ ಅಥವಾ ಅಂದಿನಿಂದೀಚೆಗೆ ಎಳ್ಳಿದಲ್ಲಿಯೇ ಆರಂಭಿಸಿರಬೇಕೆಂದೂ ಸ್ಪಷ್ಟವಾಗಿ ತಿಳಿದುಬಂತು. ಮತ್ತು ಸಾವಿರಕ್ಕೆ ಎಪ್ಪತ್ತರಿಂದ ಅರವತ್ತು ಜನಗಳಿಗೆ ಮಾತ್ರವೇ ಕ್ಷಯರೋಗದಿಂದಾಗಲೀ ಅಥವಾ ಗಂಡಮಾಲೆಯಿಂದಾಗಲೀ ಕಷ್ಟಪಡುವುದಾಗಿಯೂ ಹೀಗಿದ್ದಾಗ್ಯೂ ಸಾವಿರಕ್ಕೆ ಮೂರರಿಂದ ಐದರ ವರೆಗೆ ಮಾತ್ರವೇ ಸಾಲಿಯಾಸ ಈ ಕ್ಷಯರೋಗದಿಂದ ಸಾಯುತ್ತಿರುವುದಾಗಿಯೂ ತಿಳಿದುಬಂದಿದೆ.

ಆರಂಭದಲ್ಲಿಯೇ, ಈ ರೋಗಲಕ್ಷಣವನ್ನು ಕಂಡುಹಿಡಿದು, ಸಕಾಲದಲ್ಲಿ ಎಚ್ಚರಿಕೆಯನ್ನು ತೆಗೆದುಕೊಂಡು ಆಗಲೇ ಬೇಕಾದ ತಕ್ಕ ಚಿಕಿತ್ಸೆಯನ್ನು ಮಾಡಿದ ಪಕ್ಷದಲ್ಲಿ, ಸಾವಿರಕ್ಕೆ ಮೂರರಿಂದ ಐದರ ವರೆಗಿದ್ದ ಮರಣಸಂಖ್ಯೆಯನ್ನು ಇನ್ನೂ ಕಗ್ಗಿಸಿ ಸಾವಿರಕ್ಕೆ ಒಂದಕ್ಕಿಂತಲೂ ಕಡಮೆಯಾಗಿಯೇ ಮಾಡಬಹುದು.

ಉದಯಶಂಕರ.

International Literary Exchange New York ಇದರಲ್ಲಿ ಶ್ರೀ ವಸಂತಕುಮಾರ [illegible] ಇವರು ಬರೆದ ಲೇಖನವನ್ನಾಧಾರವಾಗಿ ತೆಗೆದುಕೊಂಡು ಕಲಾ ಪತ್ರಿಕೆಯಲ್ಲಿ ಶ್ರೀ ಎಸ್. ಹೊಸಕೋಟೆ, ಬಿ. ಎ. ಮತ್ತು ಶ್ರೀ ಆರ್. ಕೆ. ಕರಕನಾಂಬಿ, ಬಿ. ಎಸ್. ಸಿ. ಇವರು ಒಂದು ಲೇಖನವನ್ನು ಬರೆದಿರುವರು. ಉದಯಶಂಕರನ ವ್ಯಕ್ತಿಪರಿಚಯ ಮತ್ತು ಅವನ ಕಲೆಯನ್ನರಿತು ಅವರು ಹೀಗೆ ಬರೆದಿದ್ದಾರೆ— ಉದಯಶಂಕರನು ಬಾಲ್ಯದಿಂದಲೂ ಕಲೆಯಲ್ಲಿ ಅತಿಯಾದ ಪ್ರೇಮವನ್ನೂ ಉತ್ಸಾಹವನ್ನೂ ವ್ಯಕ್ತಗೊಳಿಸುತ್ತಿದ್ದನು. ಮನೆತನದ ಕಲಾಕೌಶಲ್ಯವು ಮಕ್ಕಳಲ್ಲಿ ಅಂಕುರಿಸುವುದೆಂಬ ನಿಯಮವೂ ಇದಕ್ಕೆ ಸಹಾಯವಾಗಿರಬಹುದು. ಇವನಿಗೆ ಸಂಗೀತವೆಂದರೆ ಪ್ರಾಣ. ತನ್ನ ಮನೆಯಲ್ಲಿ ಹಾಡಿದ ಸುಪ್ರಸಿದ್ಧ ಸಂಗೀತಗಾರರ ಗೀತೆಗಳ ಪ್ರತಿಗನುಸರಿಸಿ ತನ್ನ [illegible] ವುದರಿಂದ ಉಂಟಾಗುತ್ತಿದ್ದ ಸಂತೋಷವು ಮತ್ತಾವುದರಿಂದಲೂ ಉಂಟಾಗುತ್ತಿರಲಿಲ್ಲ. ಉದಯಶಂಕರನ ಈ ಬಗೆಯ ಕಲಾಭಿಮಾನದ ಸುವಾರ್ತೆಯು ಮಹಾರಾಜರ ಕಿವಿಗೂ ಬಿದ್ದಿತು. ಕಲಾಭಿಮಾನಿಯಾದ ಉದಯಪುರದ ಮಹಾರಾಜರು ತನ್ನ ಮಿತ್ರನೂ ವಿಶ್ವಾಸಪಾತ್ರನೂ ಆದ ಶ್ಯಾಮಶಂಕರನ ಮಗನಲ್ಲಿ ಹೆಚ್ಚು ವಾತ್ಸಲ್ಯವನ್ನು ತೋರಿ ಅವನ ಕಲಾಭ್ಯುದಯದಲ್ಲಿ ಹೆಚ್ಚು ಉತ್ಸಾಹವನ್ನು ತೋರುತ್ತಾ ಬಂದರು. ಉದಯಶಂಕರನು ಚಿಕ್ಕಂದಿನಲ್ಲಿಯೇ ಅನೇಕ [illegible] ಕೌಶಲವನ್ನಾರ್ಜಿಸಿದ್ದಲ್ಲದೆ ನರ್ತನೆಯ ನೈಪುಣ್ಯದಲ್ಲಿಯೂ ಸುಗ್ಗಿಯ ಕುಣಿತ ಮತ್ತು ದೇವರ [illegible] ವಿಶೇಷವಾದ ಆಸಕ್ತಿಯನ್ನು ತೋರುತ್ತಿದ್ದನು. [illegible] ಸಂಗೀತನೃತ್ಯದಲ್ಲಿ ಮಾತ್ರ ಉತ್ಸಾಹವನ್ನು ತೋರಿ [illegible] ಎಚ್ಚರಿಕೆಯಿಂದ ನೋಡಿ ನೃತ್ಯಸಂಬಂಧವಾದ ಅನೇಕ ವಿಷಯಗಳನ್ನು ಕಂಡನು. [illegible] ಲಂಡನ್ನಿನ ರಾಯಲ್ ಕಾಲೇಜ್ ಆಫ್ ಆರ್ಟ್ಸ್ ಎಂಬ ಕಲಾಶಾಲೆಗೆ [illegible] ಕಲೆಯು [illegible] ವಿಶೇಷ ಪ್ರಾವೀಣ್ಯವನ್ನು ಪಡೆದು [illegible] ಉದಯಶಂಕರನು ಪಾಶ್ಚಾತ್ಯ [illegible] ಭಾರತೀಯ ಚಿತ್ರಕಲೆ Painting [illegible] ಅನೇಕ ಪರಿಶೋಧನೆಗಳನ್ನು ಮಾಡಿ ಅದರ ಅಭಿವೃದ್ಧಿಗೆ ಬದ್ಧಕಂಕಣನಾದನು. ಆಗಲೇ ಈತನ ಭಾರತೀಯ ಪ್ರಾಚೀನ ನೃತ್ಯಕಲೆಯಲ್ಲಿ ಹೆಚ್ಚು [illegible] ಪ್ರಾಚೀನ ಶಿಲ್ಪಕಲೆಯಿಂದಲೂ ವರ್ಣಚಿತ್ರಗಳಿಂದಲೂ [illegible] ಸಂಗ್ರಹಿಸಿದನಲ್ಲದೆ [illegible] ಗ್ರಂಥಗಳಲ್ಲಿಯೂ [illegible] ಅನೇಕ [illegible] ನೃತ್ಯದ [illegible] ವನ್ನು ಕಂಡುಹಿಡಿದನು. ಅಜಂತದ ಗುಹೆಯೊಳಗಿನ ಸುಪ್ರಸಿದ್ಧ ಮೂರ್ತಿ [illegible] ಗಳನ್ನು ಪ್ರತಿಚಿತ್ರವೆತ್ತುತ್ತಿದ್ದಾಗ ೨೦೦೦ ವರ್ಷಗಳ ಹಿಂದೆ [illegible] ಚಿತ್ರಿಸಲ್ಪಟ್ಟ ಆಗಿನ ಕಾಲದ ನಾಟ್ಯಕಥನಯ ಚಿತ್ರಗಳನ್ನು ಯಥಾವತ್ತಾಗಿ ತನ್ನ ವರ್ಣಚಿತ್ರಗಳಲ್ಲಿ ನಕಲುಮಾಡಿದನು. ಉತ್ಕೃಷ್ಟ ಕಲೆಯಾದ ನೃತ್ಯದ ಇಂತಹ ಅವನತಿಯ ಸ್ಥಿತಿಯನ್ನರಿತು ಉದಯಶಂಕರನು [illegible] ಯುರೋಪು [illegible] ರಾಜ್ಯಗಳಲ್ಲಿ ಇಸಡೋರ ಡಂಕನ್‌ರವರು ಗ್ರೀಕಿನ ಸಾಂಸ್ಕೃತಿಕ ಪದ್ಧತಿಗಳನ್ನು ಅಮೇರಿಕಾದಲ್ಲಿ ಪುನರುಜ್ಜೀವನಗೊಳಿಸಿ ಗ್ರೀಕಿಗೆ ಮತ್ತು ಕೊಡುವವರಿಗೆ ಆ ನೃತ್ಯಕ್ಕೂ ಇದೇ ಗತಿಯು ಬಂದಿತ್ತೆಂದು ತಿಳಿದಿದ್ದನು. ಅಂದರೆ ಇಸಡೋರ ಡಂಕನ್ ರವರೇ ಗ್ರೀಕನೃತ್ಯದ ಪುನರ್ಜನನಕ್ಕೆ ಮೂಲಸ್ಥಾನದಲ್ಲಿರುವರು.

ಲೋಧ್ರ

ಮುಟ್ಟಿನವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,

ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಅಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ ಡಿ. ಗೋಪಾಲಾಚಾರ್ಲುರವರ

ಜೀವಾಮೃತವನ್ನು ಸೇವಿಸಿ

ಆರೋಗ್ಯಲಾಭವನ್ನು ಹೊಂದಿರಿ.

ನಿಮ್ಮಲ್ಲಿ ಚೈತನ್ಯವಿಲ್ಲವೋ, ಅಸುಖಿಯಾಗಿದ್ದೀರೋ, ದೇಹವು ಕಂಪಿಸುತ್ತಿದೆಯೋ ನಿರಾಶಾಸ್ಥಿತಿಯಲ್ಲಿ, ದುಃಖದಲ್ಲಿರುವಿರೋ—ಹಾಗಿದ್ದರೆ ನಿಮಗೆ ಪರಿಣಾಮಕಾರಿಯಾಗುವ ಒಳ್ಳೆಯ ಟೋನಿಕ್ ಬೇಕು. ಪಂಡಿತ ಡಿ. ಗೋಪಾಲಾಚಾರ್ಲುರವರ ಪೂರ್ಣ ಆರೋಗ್ಯದಾಯಕವಾದ ಜೀವಾಮೃತವನ್ನು ಸೇವಿಸಿರಿ. ನಿಮ್ಮ ಕೆಮಿಸ್ಟರಿಂದ ಒಂದು ಬಾಟ್ಲಿಯನ್ನು ಪಡೆಯಿರಿ. ಅನುಪಾನಪತ್ರದಂತೆ ಅದನ್ನು ಸೇವಿಸಿ ಆಶ್ಚರ್ಯಕರ ರೀತಿಯಿಂದ ಕಾಂತಿಯೂ ಆರೋಗ್ಯವೂ ಲಭಿಸುವುದನ್ನು ಕಾಣಿರಿ. ಒಂದು ಡೋಜು ಕುಡಿದಾಗಲೇ ನಿಮಗದರ ಮಹತ್ವವು ತಿಳಿದುಬರುವುದು. ಜೀವಾಮೃತವು ಬಲವನ್ನು ಹೆಚ್ಚಿಸುತ್ತದೆ. ರಕ್ತವನ್ನು ಹೆಚ್ಚಿಸುತ್ತದೆ. ನರಯೋಗಿಗಳ ಅಣುಗಳನ್ನು ಪೋಷಿಸುತ್ತದೆ. ಜೀವನದ ಆನಂದವೇ ಹಸ್ತಗತವಾಗುತ್ತದೆ. ಪ್ರಾಯ, ಪುಂಸ್ತ್ರೀಭೇದ, ಕಾಲಗಳ ಭೇದಾಭೇದವೇ ಇಲ್ಲ.

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ಮಾರಲ್ಪಡುತ್ತದೆ.

ತಯಾರಿಸುವವರು ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕುಷ್ಠ ರೋಗ ಮತ್ತು ಫರಂಗಿ ರೋಗ

ನಿವಾರಣೆಯಿಲ್ಲ, ದುಡ್ಡೂ ಇಲ್ಲ.

ಎಷ್ಟು ದೀರ್ಘಕಾಲದ ರೋಗವೇ ಆಗಿರಲಿ ಯಾವ ಕಾರಣವೇ ಇರಲಿ, ನೀವು ಶುದ್ಧ ಮಾಡಿ ಮಾಡಿ ದಣಿದಿರಿ. ನಿಮ್ಮ ರೋಗಗಳನ್ನು ಇಂದ್ರಜಾಲದಂತೆ ಶಾಶ್ವತವಾಗಿ 4 ವಾರಗಳಲ್ಲಿ ಗುಣಪಡಿಸಲಾಗುತ್ತದೆ. ಪೂರ್ಣ ಗುಣ ಗೀರಂಟಿ. ಕ್ರಯ ರೋಗನಿವಾರಣೆಯಾದ ಮೇಲೆ ಕ್ರಯ ಮತ್ತು ಬಹುಮಾನ ಕೊಡಬೇಕು. ಬರೆಯಿರಿ.

Kamala Works,
Panchpota Bengal S B.

C. P. S

ಲಾಭಗಳು!

ವಾಚುಗಳು, ರಿಸ್ಟ್‌ವಾಚುಗಳು, ಟೈಮ್‌ಪೀಸುಗಳು, ಗಡಿಯಾರಗಳು, ರಿಪೇರಿಮಾಡಿದ ಟೈಪ್‌ರೈಟರುಗಳು, ಸಂತತಿ ಪ್ರತಿಬಂಧಕ ವಸ್ತುಗಳು, ಬೀಜಗಳು, ಸಸಿಗಳು, ಚಿತ್ರ, ಸಂಗೀತ ಸಾಹಿತ್ಯ, ಕೆಮರಗಳು, ಚರ್ಮದ ಪಾದರಕ್ಷೆಗಳು, ಹೇಟುಗಳು, ನುಸಿಪರದೆಗಳೂ ಇವೆ. ಬೆಲೆ ಸುಲಭ. ಹೆಚ್ಚು ಉತ್ತಮ ಕಮಿಶನ್ ಜಾಸ್ತಿ. ಕೆಟಲಾಗು ಧರ್ಮಾರ್ಥ, ಇಂಗ್ಲೀಷಿನಲ್ಲಿ ಬರೆಯಿರಿ.

General Trading Co,
(G) 185, Manicktolla St, Calcutta

C P S

ಚಾತುಕುಟ್ಟಿ ವೈದ್ಯರ

ವಿಷೂಚಿಕಾ ಸಂಹಾರಿ
Vishuchika Samhari
(PILCO)

ಕಾಲರಕ್ಕೆ ದಿವ್ಯೌಷಧ. ಉಪಯೋಗಿಸಿದರೆ ಗುಣ ಖಾತ್ರಿ.
ಕ್ರಯ ಡಬ್ಬಿ 1ಕ್ಕೆ ರೂ 1-0-0

ಗುಹ್ಯರೋಗ ನಿವಾರಿಣೀ ತೈಲ
Anti-Venerael Oil
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ. ಕುಟುಂಬ ಶಾರೀರವನ್ನು ಕದಲಿದ ರೋಗವು ಗುಣವಾಗುವುದು. ನಿರೋಗಿಗಳು ಪುಷ್ಟಿಯ ಬುದ್ಧಿಗಾಗಿ ಮುಲಾಮಿನ ಮದ್ದಿನಂತೆ ತೆಗೆದುಕೊಳ್ಳಬಹುದು.
8 ಔನ್ಸಿನ ಬಾಟ್ಲ 1ಕ್ಕೆ ರೂ 2-8-0

ಕೆ ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ

ಬಾಲ್ ಸಿ. ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು

An Advertisement In

'Swadeshabhimani'

Means a sure fortune to you

Ask for Contract Rates

The Swadeshabhimani office,
Car Street, Mangalore

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹಳ್ಳಿಯ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು.

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾಪುರ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ,

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು



ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ
The Scientific Gold Bangles Co, Ltd.,
Head Office 43 Byragimatam Street,
Post Box No 203 Madras.

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ



ಹೊಸತಾಗಿ ಆಮದಾದುದು. ದೊರೆಯುವ ಇತರ ಕ್ಯಾಮರಗಳಿಗಿಂತ ಬಾಳಿಕೆ ಬರುವಂಥದು ಮತ್ತು ಉತ್ತಮವಾದುದು. ಫೋಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ. ಕ್ಯಾಮರಾ ಸಂಗಡ 1 ಡಜನ್ ಪ್ರಿಂಟಿಂಗ್ ಪೇಪರ್ ... ಫಿಲ್ಮ್ ಎಕ್ಸ್‌ಪೋಜರ್ಸ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಅವಶ್ಯಕವಾದ ರಸಾಯನಿಕ ವಸ್ತುಗಳು, ಫೋಟೋ ತೆಗೆಯುವ ವಿಧಾನ, ಶಿಕ್ಷಣಕೊಡುವ ಸಾಹಿತ್ಯ—ಇವು ಉಚಿತವಾಗಿ ಕಳುಹಿಸಲಾಗುತ್ತದೆ. ಬಲವಾದ ಲೆನ್ಸ್. ಬೆಲೆ ಸಾಮಾನ್ಯವಾದುದು ರೂ ...-...-0, ಉತ್ತಮವಾದುದು ...-...-0. ಮಡಚುವ ಕ್ಯಾಮರಾ ರೂ. ..., ಉತ್ತಮವಾದ್ದು ರೂ. ... ಸ್ಪೆಶಲ್ ರೂ. ..., ಪೆಟ್ಟಿಗೆ ಫಿಲ್ಮ್ ಬೇಕಾದರೆ ಡಜನ್ 1ಕ್ಕೆ ... ಆಣೆ. ಎನ್‌ಲಾರ್ಜ್‌ಮೆಂಟಿನ ಸಾಧನ ಸಾಮಗ್ರಿ ... ಶೀಸೆಗೆ ... ಆಣೆ, ಫಿಕ್ಸಿಂಗ್ ಸಾಲ್ಟ್ 1 ಡಬ್ಬಿಗೆ ... ಆಣೆ, ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ. ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ.

ಭಾರತ ಯೂನಿಯನ್ ಟ್ರೇಡಿಂಗ್ ಕಂ.
ಪೋಸ್ಟ್‌ಬಾಕ್ಸ್ ನಂಬ್ರ ... (ಎಸ್. ಎ.) ಕಲ್ಕತ್ತಾ.

ಕಿರ್ಲೋಸ್ಕರ ಕೈ ಮತ್ತು ಪವರ್ ಪಂಪುಗಳು



ಬಾವಿಗಳಿಂದ ನೀರು ಮೊಗೆಯುವುದಕ್ಕಾಗಿ,—ಎಷ್ಟು ಆಳದಿಂದಲೂ ನೀರನ್ನು ಎತ್ತಿ ಮೇಲೆ ಅಥವಾ ಬೇಕಾದಷ್ಟು ಎತ್ತರಕ್ಕೆ ತರುವುದಕ್ಕಾಗಿ

ಕೃಷಿಗಾಗಿ,

ಕಾರ್ಖಾನೆಗಳಿಗಾಗಿ,

ಮನೆಯ ಉಪಯೋಗಕ್ಕಾಗಿ,—

ಸಂತೃಪ್ತಿಕರ, ಬಾಳಿಕೆ ಬರುವ, ಸುಲಭಕರ ಉಪಯೋಗಕ್ಕಾಗಿ ಇದು ರಚಿಸಲ್ಪಟ್ಟಿದೆ.

ಇಡೀ ಹಿಂದೂಸ್ಥಾನದಲ್ಲಿ ನೂರಾರು ಜನರು ಉಪಯೋಗಿಸಿ ತೃಪ್ತಿಗೊಂಡರು.

ವಿವರಕ್ಕೆ ಈ ಕೆಳಗಿನವರಿಗೆ ಬರೆಯಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ.

ಡಿಸ್ಟ್ರಿಬ್ಯೂಟರರು—ಹೆರ್ರಿ ಎಂಡ್ ಕೋ, ಲಿಮಿಟೆಡ್, ಮದ್ರಾಸು.

ಮೈಸೂರು, ಬೆಂಗಳೂರು, ಕೋಲಾರ ಮತ್ತು ತುಮಕೂರು ವಾರ್ತೆಗಳು.

(ನಮ್ಮ ಸ್ವಂತ ಪ್ರತಿನಿಧಿಗಳಿಂದ.)

ಮೈಸೂರಿನಲ್ಲಿ ಶ್ರೀ ಪ್ರಕಾಶರವರು

ಬಾಬು ಶ್ರೀ: ಪ್ರಕಾಶರವರೂ ಡಾ। ಹರ್ಡೀಕರವರೂ ತಮ್ಮ ಸಹಚರ ಮಿತ್ರರೊಡನೆ ಮಡಿಕೇರಿಯಿಂದ ಮೈಸೂರಿಗೆ ಮೇ ೧೪ನೆಯ ತಾರೀಕಿನ ದಿನ ದಯಮಾಡಿಸಿದರು. ತಾ. ೧೫ನೇ ದಿನ ಪ್ರಾತಃಕಾಲ ಶ್ರೀ ಪ್ರಕಾಶರವರು ಹಿಂದೀ ಪ್ರೇಮಿಗಳ ಸಭೆಗೆ ಭೇಟಿ ಕೊಟ್ಟರು. ಸಭೆಯ ಪರವಾಗಿ ಹಿಂದೀ ಪ್ರಚಾರಕರಾದ ಶ್ರೀ ಹಿರಣ್ಮಯಜೀಯವರು ಪ್ರಕಾಶರವರಿಗೆ ಬಿನ್ನವತ್ತಳೆಯನ್ನರ್ಪಿಸಿದರು. ಪ್ರಕಾಶರವರು ಬಿನ್ನವತ್ತಳೆಗೆ ಉತ್ತರಕೊಡುವ ಅವಸರದಲ್ಲಿ ದಕ್ಷಿಣ ಭಾರತಜನರು ಹಿಂದೀ ಕಲಿಯುವ ಅವಶ್ಯಕತೆಯನ್ನು ಕುರಿತು ಹೀಗೆ ಹೇಳಿದರು:-

"ಮಹಾತ್ಮಾ ಗಾಂಧಿಯವರು ಹಿಂದೂ ದೇಶಕ್ಕೆಲ್ಲ ಒಂದು ರಾಷ್ಟ್ರಭಾಷೆ ಅಗತ್ಯವೆಂಬುದನ್ನು ಅರಿತುಕೊಂಡು ಹಿಂದೀ ಭಾಷೆಯನ್ನು ರಾಷ್ಟ್ರಭಾಷೆಯಾಗಿ ಪರಿಗಣಿಸಿದ್ದಾರೆ ಹಿಂದೂಸ್ಥಾನವು ಒಂದಾಗಬೇಕೆಂದರೆ ರಾಷ್ಟ್ರಭಾಷೆ ಬೇಕು. ಹಿಂದಿಯು ರಾಷ್ಟ್ರಭಾಷೆಯೆಂಬ ದೃಷ್ಟಿಯಿಂದ ಅದನ್ನು ಕಲಿಯಬೇಕೇ ವಿನಃ ಅದರ ಸಾಹಿತ್ಯಕ್ಕಾಗಿ ಅಲ್ಲ."

ಶ್ರೀ। ಪ್ರಕಾಶರವರೂ ಇತರರೂ ಬೆಂಗಳೂರಿಗೆ ತಾ. ೧೬ನೇ ರಾತ್ರಿ ದಯಮಾಡಿಸಿದರು ತಾ. ೧೭ನೇ ಸಾಯಂಕಾಲ ದೇಶೀಯ ವಿದ್ಯಾಶಾಲೆಯಲ್ಲಿ ಒಂದು ಸಾರ್ವಜನಿಕ ಸಭೆ ಸೇರಿತ್ತು. ಆಗ ಶ್ರೀ ಪ್ರಕಾಶರವರಿಗೆ ಒಂದು ಬಿನ್ನವತ್ತಳೆಯನ್ನರ್ಪಿಸಲಾಯಿತು. ಶ್ರೀ ಪ್ರಕಾಶರವರು ಅದಕ್ಕೆ ಉತ್ತರ ಕೊಡುವ ಸಂದರ್ಭದಲ್ಲಿ ಹಿಂದೀ ಭಾಷೆಯ ಪ್ರಾಮುಖ್ಯತೆಯನ್ನೂ ಅದನ್ನು ಭಾರತೀಯರು ಏಕೆ ಕಲಿಯಬೇಕೆಂಬುದನ್ನೂ, ಅದಕ್ಕೂ ಪ್ರಾಂತ್ಯ ಭಾಷೆಗಳಿಗೂ ಇರುವ ಸಂಬಂಧವನ್ನೂ ವಿವರವಾಗಿ ತಿಳಿಸಿ ಹೇಳುವ ಅವಸರದಲ್ಲಿ ಹೀಗೆ ನುಡಿದರು —

"ಹಿಂದೀ ಭಾಷೆಯ ಪ್ರಚಾರದಿಂದ ಕನ್ನಡದ ಅಭಿವೃದ್ಧಿಗೆ ಹಾನಿ ತಟ್ಟುವುದಾದರೆ ಆ ರೀತಿಯ ಹಿಂದೀ ಪ್ರಚಾರಕ್ಕೆ ನನ್ನ ಸಮ್ಮತಿಯಿಲ್ಲ. ಇಂಡಿಯಾ ದೇಶದ ಪ್ರಾಂತೀಯ ಭಾಷೆಗಳೆಲ್ಲವೂ ಪ್ರೌಢಿಮೆಯುಳ್ಳವು ಮತ್ತು ಪುರಾತನವಾದುವು ಅವಕ್ಕೆ ಹಾನಿ ತಟ್ಟದಂತೆ ಹಿಂದೀ ಪ್ರಚಾರ ಮಾಡಬೇಕು. ಆದರೆ ಹಿಂದೂಸ್ಥಾನವು ಒಂದು ರಾಷ್ಟ್ರವೆನಿಸಿಕೊಳ್ಳಬೇಕಾದರೆ ಅದಕ್ಕೆ ಒಂದು ರಾಷ್ಟ್ರಭಾಷೆ ಅಗತ್ಯ. ಆ ರಾಷ್ಟ್ರಭಾಷೆ ಹಿಂದಿಯಲ್ಲದೆ ಬೇರೆ ಇನ್ನು ಯಾವ ಭಾಷೆಯೂ ಆಗಲಾರದು. ಏಕೆಂದರೆ ಸದ್ಯದಲ್ಲಿ ಹಿಂದೂಸ್ಥಾನದಲ್ಲಿ ಹೆಚ್ಚು ಪ್ರಚುರದಲ್ಲಿರುವ ಭಾಷೆಯೆಂದರೆ ಹಿಂದೀ ಭಾಷೆ"

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವು ಬರುವ ಜೂನ್ ೧೨ನೆಯ ತಾರೀಕಿನ ದಿನ ರಾಜಧಾನಿಯಲ್ಲಿ ನಡೆಯುವುದು. ಆ ಪ್ರಯುಕ್ತ ಈಗಾಗಲೇ ನಗರ ಶೃಂಗಾರಕ್ಕೆ ಪ್ರಾರಂಭವಾಗಿದೆ. ಆ ಕಾಲದಲ್ಲಿ ಒಂದು ಸ್ವದೇಶೀ ವಸ್ತುಪ್ರದರ್ಶನವು ನಡೆಯುವುದು. ಪ್ರದರ್ಶನಕ್ಕಾಗಿ ಶ್ರೀಮನ್ಮಹಾರಾಜರವರು ಒಂದು ನೂರು ರೂಪಾಯಿಗಳ ದಾನ ಮಾಡಿರುವರೆಂದು ತಿಳಿಸಲು ಸಂತೋಷಿಸುತ್ತೇವೆ.

ಶ್ರೀಮಾನ್ ರಾಜಸೇವಾಸಕ್ತ ಆರ್. ರಂಗರಾವ್. ಬಿ. ಎ. ಬಿ ಎಲ್ ಇವರು ವಿಶ್ರಾಂತಿ ಹೊಂದುವರು.

ಮೈಸೂರು ಸರಕಾರದ "ಚೀಫ್ ಸೆಕ್ರೆಟರಿ"ಗಳಾಗಿದ್ದ ಮ। ರಂಗರಾಯರು ಇದೇ ತಿಂಗಳ ತಾ. ೨೧ರಿಂದ ಎರಡು ತಿಂಗಳ ರಜೆ ಪಡೆದು ಕೆಲಸದಿಂದ ವಿಶ್ರಾಂತಿ ಹೊಂದುವರು.

ಶ್ರೀಮಾನ್ ರಂಗರಾಯರವರು ಸರಕಾರದಲ್ಲಿ ಗುಮಾಸ್ತರಾಗಿ ಕೆಲಸಕ್ಕೆ ಸೇರಿ ತಮ್ಮ ಸ್ವಸಾಮರ್ಥ್ಯದಿಂದ ಉನ್ನತ ಪದವಿಗೇರಿದವರು. ಇದರಿಂದಲೇ ಅವರು ಎಷ್ಟು ಕಾರ್ಯದಕ್ಷರೆಂಬುದು ವ್ಯಕ್ತವಾಗುತ್ತದೆ.

ಶ್ರೀಮಾನ್ ರಂಗರಾಯರವರ ಸ್ಥಾನಕ್ಕೆ ಶ್ರೀ। ಕೆ. ವಿ. ಅನಂತರಾಮನ್, ಬಿ. ಎ. ಇವರು ನೇಮಕವಾಗಲಿರುವರು. ಸದ್ಯದಲ್ಲಿಯೇ, ಪೋಲೀಸು ಇನ್ಸ್‌ಪೆಕ್ಟರ್ ಜನರಲರಾದ ಮಿ। ಎಫ್. ಎ. ಹ್ಯಾಮಿಲ್‌ಟನ್‌ರವರೂ ಕೆಲಸದಿಂದ ನಿವೃತ್ತರಾಗಲಿರುವರು. ಆಗ ಆ ಸ್ಥಾನಕ್ಕೆ ಮ। ಕೆ. ವಿ ಅನಂತರಾಮನ್‌ರವರು ನಿರ್ಗಾಯಿಸಲ್ಪಡುವರೆಂದೂ ಅವರ ಸ್ಥಳಕ್ಕೆ ಮ। ಎ ವಿ ರಾಮನಾಥನ್‌ರವರು ಚೀಫ್ ಸೆಕ್ರೆಟರಿಗಳಾಗಿ ನೇಮಕವಾಗುವರೆಂದೂ ತಿಳಿದು ಬರುತ್ತದೆ.

ಬೆಂಗಳೂರು–ಹರಿಹರ ರೈಲ್ವೆ

ಬೆಂಗಳೂರು ಹರಿಹರ ರೈಲ್ವೆ ಮಾರ್ಗವು ಮೈಸೂರಿಗೆ ಸೇರಿದ್ದಾದರೂ ಎಂ ಎಸ್ ಎಂ ರೈಲ್ವೆ ಕಂಪೆನಿಯವರ ಅಧಿಕಾರಕ್ಕೆ ಒಳಪಟ್ಟಿರುವುದು ಸರಿಯಷ್ಟೆ. ಆ ಕಂಪೆನಿಯವರ ಗುತ್ತಿಗೆಯ ಮಾಯಿದೆಯು ೧೯೩೭ನೆಯ ಡಿಸೆಂಬರ್ ತಿಂಗಳ ಆಖೈರಿಗೆ ಮುಗಿಯುವುದಾಗಿದೆ. ೧೯೩೮ನೇ ಜನವರಿಯಿಂದ ಈ ರೈಲುಮಾರ್ಗದ ಆಡಳಿತದ ಅಧಿಕಾರವನ್ನು ಮೈಸೂರು ಸರಕಾರದವರು ವಹಿಸಿಕೊಳ್ಳಬೇಕೆಂದು ನಿಶ್ಚಯಿಸಿರುವುದಾಗಿ ತಿಳಿದು ಬರುತ್ತದೆ.

ಈ ರೈಲುಮಾರ್ಗದಲ್ಲಿ ಉತ್ಪತ್ತಿಯು ಚೆನ್ನಾಗಿಯೇ ಇದೆ. ಇದನ್ನು ವಹಿಸಿಕೊಳ್ಳುವುದರಿಂದ ಮೈಸೂರು ಸರಕಾರಕ್ಕೆ ನಷ್ಟವಾಗುವ ಸಂಭವ ಕಡಿಮೆ. ರೈಲ್ವೆ ಇಲಾಖೆಯಲ್ಲಿ ಈಗಿರುವ ಸಿಬ್ಬಂದಿಗಳಿಂದಲೇ ಕೆಲಸ ನಡೆಸಬಹುದು. ಬೇಕಾದರೆ ಸಿಬ್ಬಂದಿಯನ್ನು ಸ್ವಲ್ಪ ಮಾತ್ರ ಹೆಚ್ಚಿಸಿಕೊಳ್ಳಬಹುದು. ಆದುದರಿಂದ ಮೈಸೂರು ಸರಕಾರದವರು ನಷ್ಟದ ಶಂಕೆಯಿಲ್ಲದ ಬೆಂಗಳೂರು–ಹರಿಹರ ರೈಲುಮಾರ್ಗವನ್ನು ವಹಿಸಿಕೊಳ್ಳುವರೆಂದು ನಿರೀಕ್ಷಿಸಲಾಗಿದೆ.

ಶ್ರೀರಂಗ ಪಟ್ಟಣದ ಕಾವೇರಿ ನದಿಯಲ್ಲಿ ಮೂರು ಹೆಣಗಳು.

ಶ್ರೀರಂಗ ಪಟ್ಟಣದ ಕಾವೇರೀ ನದಿಯ ಸ್ನಾನಘಟ್ಟದಲ್ಲಿ ತಾ ೧೮ನೇ ಸಾಯಂಕಾಲ ಮೂರು ಹೆಣಗಳು ಒಟ್ಟಿಗೆ ತೇಲುತಿದ್ದುದನ್ನು ಕೆಲವರು ಕಂಡು ಪೋಲೀಸರಿಗೆ ತಿಳಿಸಿದರು. ಪೋಲೀಸಿನವರು ಬಂದು ಹೆಣಗಳನ್ನು ತೆಗಿಸಿ ಪರೀಕ್ಷಿಸಲಾಗಿ ಮೂವರೂ ಹೆಂಗಸರೆಂದು ತಿಳಿಯಬಂದಿದೆ. ಸತ್ತವರಲ್ಲಿ ಇಬ್ಬರು ವಯಸ್ಸಾದವರೆಂದೂ, ಒಬ್ಬಳು ಹುಡುಗಿಯೆಂದೂ ಗೊತ್ತಾಗಿದೆ.

ಮೈಸೂರು ರಿಪ್ರೆಸೆಂಟೇಟಿವ್ ಎಸೆಂಬ್ಲಿ

ರಿಪ್ರೆಸೆಂಟೇಟಿವ್ ಎಸೆಂಬ್ಲಿಯ "ಬಜೆಟ್" ಅಧಿವೇಶನವು ಮುಂದಿನ ತಿಂಗಳ ತಾ ೧೩ಕ್ಕೆ ಪ್ರಾರಂಭವಾಗುವುದು.

ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್

ಲೆಜಿಸ್ಲೇಟಿವ್ ಕೌನ್ಸಿಲಿನ "ಬಜೆಟ್" ಅಧಿವೇಶನವು ಬರುವ ಜೂನ್ ತಿಂಗಳ ತಾ ೨೪ನೇ ದಿನ ಪ್ರಾರಂಭವಾಗುವುದು.

"ವಿಮಾ-ವಾಣಿಜ್ಯ"

ಸದ್ಯದಲ್ಲಿಯೇ ಮೇಲಿನ ಹೆಸರುಳ್ಳ ಕನ್ನಡ ಮಾಸ ಪತ್ರಿಕೆಯು ಬೆಂಗಳೂರಿನಲ್ಲಿ ಹೊರಡುವುದಾಗಿದೆ. ಅದರಲ್ಲಿ ಜೀವವಿಮೆ, ಬೇಂಕಿಂಗ್, ಲೇವಾದೇವಿ, ವಾಣಿಜ್ಯ, ಚಲಾವಣೆ, ಇವೇ ಮೊದಲಾದ ಆರ್ಥಿಕ ಮತ್ತು ಉದ್ಯೋಗ ವಿಷಯಗಳನ್ನು ಕುರಿತ ಲೇಖನಗಳಿಗೆ ಅವಕಾಶವಿದೆ. ಈ ಪತ್ರಿಕೆಯು ಬೆಂಗಳೂರಿನ ಇನ್ಶೂರೆನ್ಸ್ ಕಂಪೆನಿಯ ಜನರಲ್ ಮೇನೇಜರರಾದ ಶ್ರೀಮಾನ್ ಜೆ. ವಿ ದೊಡ್ಡವೀರಣ್ಣನವರ ಸಂಪಾದಕತ್ವದಲ್ಲಿ ಹೊರಡುವುದಾಗ್ಗಿದೆ. ಇದು ಶುಭಚಿಹ್ನೆಯೇ ಸರಿ, ಕನ್ನಡದಲ್ಲಿ ಸಾಹಿತ್ಯಕ್ಕೆ ಸಂಬಂಧಪಟ್ಟ ಮಾಸಪತ್ರಿಕೆಗಳೇ ಹೆಚ್ಚು.

ಈಗ ನಮ್ಮ ದೇಶದ ಜೀವನವು ಬಹು ಮಟ್ಟಿಗೆ ವ್ಯತ್ಯಾಸ ಹೊಂದಿ ಬಹುಮುಖವಾಗುತ್ತಿದೆ. ನಮ್ಮ ಜನರು ಹೊಸ ಹೊಸ ಉದ್ಯಮಗಳನ್ನು ಕೈಕೊಳ್ಳುತ್ತಿದ್ದಾರೆ. ನವನಾಗರಿಕತೆಯ ದೇಶಗಳಲ್ಲಿರುವ ಜೀವನೋದ್ಯೋಗಗಳು ನಮ್ಮ ದೇಶದಲ್ಲಿಯೂ ಅಭಿವೃದ್ಧಿಗೆ ಬರುತ್ತಿದೆ. ಇವೆಲ್ಲವೂ ಅತ್ಯುತ್ತಮ ಸ್ಥಿತಿಗೆ ಬರಬೇಕಾದರೆ ಈ ಹೊಸ ಉದ್ಯಮಗಳ, ಈ ಹೊಸ ಉದ್ಯೋಗಗಳ ಆ ಹೊಸ ಕೈಗಾರಿಕೆಗಳ ಈ ಹೊಸ ಬಗೆಯ ವ್ಯಾಪಾರದ ಈ ಹೊಸ ಜೀವನದ ತಿಳುವಳಿಕೆಯು ಸಾಮಾನ್ಯ ಜನರಿಗೂ ಇರಬೇಕಾದುದು ಅತ್ಯಾವಶ್ಯಕ. ಸಾಮಾನ್ಯ ಜನರಿಗೆ ಈ ತಿಳುವಳಿಕೆ ಚೆನ್ನಾಗಿ ಇದ್ದ ಹೊರತೂ ಅವರ ಸಹಾನುಭೂತಿಯೂ ಸಹಕಾರವೂ ಹೊಸ ಹೊಸ ಉದ್ಯಮಗಳಿಗೆ ದೊರೆಯಲಾರದು. ಈ ದೃಷ್ಟಿಯಿಂದ 'ವಿಮಾ-ವಾಣಿಜ್ಯ'ದಂಥಾ ಪತ್ರಿಕೆಗೆ ಎಷ್ಟು ಆವಶ್ಯಕತೆ ಇದೆಯೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ. "ಮೈಸೂರು ಸಹಕಾರ ಪತ್ರಿಕೆ", 'ಅರ್ಥಸಾಧಕ ಪತ್ರಿಕೆ', 'ಮೈಸೂರು ವ್ಯವಸಾಯ ಸಂಶೋಧಕ ಪತ್ರಿಕೆ' ಈ ಪತ್ರಿಕೆಗಳು ತಮ್ಮ ಕ್ಷೇತ್ರದಲ್ಲಿ ತಕ್ಕ ಮಟ್ಟಿಗೆ ಕೆಲಸ ಮಾಡುತ್ತಿವೆ. ಪ್ರಕೃತ ಪತ್ರಿಕೆಯು 'ವಿಮಾ- ವಾಣಿಜ್ಯ' ಪ್ರಪಂಚದಲ್ಲಿ ಯಶಸ್ವಿಯಾಗಿ ಕೆಲಸ ಮಾಡಿ ತನ್ಮೂಲಕ ಕನ್ನಡ ಭಾಷಾ ಸೇವೆಯನ್ನು ಮಾಡುವಂತಾಗಲಿ ಎಂದು ಹಾರೈಸುತ್ತೇವೆ.

ಮೈಸೂರು

ಪುಟ್ಟಾಚಾರಿ ಎಂಬುವನು ಇದ್ದಿಲು ವ್ಯಾಪಾರಿ ತಿಮ್ಮಯ್ಯನೆಂಬಾತನ ಜೇಬಿನಿಂದ ಹಣದ ಚೀಲವನ್ನು ಕದ್ದನೆಂಬ ಅಪಾದನೆಯ ಮೇಲೆ ಅವನನ್ನು ಪೋಲೀಸರು ಬಂಧಿಸಿ ನ್ಯಾಯಕ್ಕಾಗಿ ಹೂಡಿದರು. ೯ ತಿಂಗಳ ಕಠಿಣ ಶಿಕ್ಷೆಯು ವಿಧಿತವಾಯಿತು. ಬಿಡುಗಡೆಯಾದ ನಂತರ ೩ ವರ್ಷಗಳ ಕಾಲ ತನ್ನ ವಾಸಸ್ಥಾನವನ್ನು ಪೋಲೀಸರ ತಿಳುವಳಿಕೆಯಿಲ್ಲದೆ ಬಿಟ್ಟು ಕದಲಕೂಡದೆಂದೂ ವಿಧಿಸಲಾಗಿದೆ. ಇವನಿಗೆ ಇದು ೬ನೆಯ ಬಾರಿ ಶಿಕ್ಷೆ.

ಚಾಮುಂಡಿ ಬಡಾವಣೆಗೆ ಸೇರಿದ ಕಿಲ್ಲಾರಿ ಬೀದಿಯಲ್ಲಿ ಮಸ್ತಾನ್ ಸಾಬ್ ಎಂಬವನು ಅಕ್ರಮ ಗಾಂಜಾ ಮಾರಾಟಮಾಡುತ್ತಾನೆಂಬ ಅನುಮಾನದ ಮೇಲೆ ಅಬ್ಕಾರಿ ಶಾಖೆಯವರು ಅವನ ಮನೆಯನ್ನು ಶೋಧಿಸಿದರು. ಗಾಂಜಾ ಸಿಕ್ಕಿತು. ಮೊಕದ್ದಮೆಯಾಯಿತು. ಮಸ್ತಾನ್ ಸಾಬ್‌ರಿಗೆ ೧೦ ರೂಪಾಯಿ ದಂಡ ಇಲ್ಲವೆ ಒಂದು ವಾರ ಕಠಿಣ ಶಿಕ್ಷೆಯನ್ನು ವಿಧಿಸಲಾಯಿತು.

ಚಾಮರಾಜ ನಗರದ ತಾಲ್ಲೂಕು ಕುದೇರು ಹೋಬಳಿ ಎಲಕ್ಯಾರು ಎಂಬಲ್ಲಿ ಪುಟ್ಟಬಸಪ್ಪನೆಂಬಾತನು ತನ್ನ ಹೊಲಕ್ಕೆ ಬಹಿರ್ಭೂಮಿಗೆ ಹೋಗುತ್ತಿದ್ದಾಗ ಬಳಿಯ ಪೊದೆಯಿಂದ ಒಂದು ಚಿರತೆಯು ಇವನ ಮೇಲೆ ಹಾರಿತು. ಧೈರ್ಯಗೆಡದೆ ಇವನು ಅದರ ತಲೆಯಲ್ಲಿ ಕಂಕುಳಲ್ಲಿ ಅಮುಕಿ ಹಿಡಿದುಕೊಂಡು ಸಹಾಯಕ್ಕೆ ಕೂಗಿಕೊಂಡು ಚಿರತೆಯು ಅವನನ್ನೂ ಕಡಿದು, ಬಂದವರಲ್ಲಿ ಒಬ್ಬನನ್ನು ಕಡಿಯಿತು. ಬಂದವನು ಅಲ್ಲೇ ಸತ್ತ. ಚಿರತೆಯನ್ನು ಮಿಕ್ಕವರು ಕೊಂದರು. ಪುಟ್ಟಬಸಪ್ಪನು ಆಸ್ಪತ್ರೆಯಲ್ಲಿ ಸತ್ತ.

ಶ್ರೀಮಾನ್ ಮಹಾರಾಜರವರ ವರ್ಧಂತ್ಯುತ್ಸವದ ಸಮಯದಲ್ಲಿ ಲಲಿತಕಲಾ ಪ್ರದರ್ಶನವೊಂದನ್ನು ಶ್ರೀ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಜೂನ್ ೫ನೇ ತಾರೀಕಿನಿಂದ ತಾ. ೧೫ರವರೆ ತೆರೆಯಲು ಏರ್ಪಾಡಾಗಿದೆ.

ಕೃಷ್ಣರಾಜೇಂದ್ರ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದ ೨೫ ವಯಸ್ಸಿನ ಕೃಷ್ಣಸಿಂಗ್ ಎಂಬಾತನ ಮೃತದೇಹವು ಕುಕ್ಕರಹಳ್ಳಿಯ ಕೆರೆಯಲ್ಲಿ ತೇಲುತ್ತಿತ್ತು. ಅಕಸ್ಮಾತ್ ಮರಣವೋ, ಆತ್ಮಹತ್ಯವೋ ನಿರ್ಧಾರವಾಗಿಲ್ಲ. ಎರಡು ಮೂರು ದಿನಗಳಿಂದಲೂ ಮೃತನ ಪತ್ತೆಯೇ ಇರಲಿಲ್ಲವಂತೆ.

ಕಾಶಿಯ ಕಾಂಗ್ರೆಸ್ ನಾಯಕರಾದ ಶ್ರೀಪ್ರಕಾಶರು ತಾ. ೧೪ನೆಯ ಸಂಜೆ ಮೈಸೂರಿಗೆ ಬಂದರು. ಸಾರ್ವಜನಿಕ ಸಭೆ ನಡೆಯಿತು. ಅಲ್ಲಿ ಶ್ರೀಪ್ರಕಾಶರು ಅಮೋಘವಾದ ಭಾಷಣ ಮಾಡಿದರು. ತಾ. ೧೬ನೆಯ ದಿನ ಬೆಂಗಳೂರಿಗೆ ಪ್ರಯಾಣಮಾಡಿದರು.

ಕೋಲಾರ

ಊರಿಗಾಮಿನಲ್ಲಿ ಪೆರುಮಾಳ್ ಮತ್ತು ಆರೋಗ್ಯಂ ಎಂಬಿಬ್ಬರು ಸಿರುದ್ಯೋಗಿಗಳು ೫ ತೊಲೆ 'ಸ್ಪಂಜ್' ಚಿನ್ನವನ್ನು ಕದ್ದುದಕ್ಕಾಗಿ ಪೋಲೀಸರು ಅವರನ್ನು ಸೆರೆಹಿಡಿದಿರುವರು. ವಿಚಾರಣೆ ನಡೆಯುತ್ತಿದೆ.

ತುಮಕೂರು

ಕೆಲವು ದಿನಗಳ ಹಿಂದೆ ತುಮಕೂರಿನಲ್ಲಿ ಮೂರು ಗಂಟೆಯ ಸಮಯ ಪ್ರಚಂಡ ಮಾರುತವೆದ್ದು, ಮರವೊಂದು ಮುರಿದುಬಿದ್ದು ಎರಡು ಮನೆಗಳು ನಿರ್ನಾಮವಾದುವು. ಇನ್ನೂ ಅನೇಕ ಮನೆಗಳ ಚಾವಣಿ ಹಾರಿ ಹೋಗುವುದು, ಗೋಡೆ ಬೀಳುವುದು ಇತ್ಯಾದಿ ಹಾವಳಿಯಾಗಿದೆ.

ಪೊನ್ನಂಪೇಟೆ ಮತ್ತು ಮಡಿಕೇರಿಯ ಬೆಂಚು ಕೋರ್ಟುಗಳ ಅವಧಿಯನ್ನು ಈಗಿನ ಸದಸ್ಯರುಗಳೊಡನೆ ಕಳೆದ ಏಪ್ರಿಲಿನಿಂದ ಐದು ವರ್ಷಗಳ ವರೆಗೆ ಚೀಫ್ ಕಮಿಷನರವರು ಮುಂದರಿಸಿದ್ದಾರೆ.

ಕಮಿಶನರ್ ಹಾಕಿ ಪಂದ್ಯಾಟದಲ್ಲಿ ಮಡಿಕೇರಿ ಹೈಸ್ಕೂಲು ಎ ಟೀಮಿನವರೂ ಬೆಂಗಳೂರು ಚಾಂಪಿಯನ್ ಟೀಮಿನವರೂ ಫೈನಲ್ಲಿಗೆ ಬಿ ತಾ ೮, ೯, ೧೦ ಈ ಮೂರು ದಿನಗಳ ಆಟ ನಡೆದೂ ಡ್ರಾ ಆಗಿದೆ.

ಮೂರ್ನಾಡಿನಲ್ಲಿ ನಡೆದ ರಾ. ಸಾ. ಬಿಟ್ಟಂಡ ಚಂಗಪ್ಪನವರ ಬೇಡ್‌ಮಿಂಟನ್ ಪಂಧ್ಯಾಟದ ಬಟ್ಟಲನ್ನು ಮೂರ್ನಾಡು ಪಬ್ಲಿಕ್ ಎ ಟೀಮಿನವರು ಮೂರ್ನಾಡು ಶಾಲಾ ಟೀಮನ್ನು ಫೈನಲ್ಸಿನಲ್ಲಿ ಸೋಲಿಸಿ ಬಟ್ಟಲನ್ನು ಪಡೆದರೆಂದು ತಿಳಿಯುತ್ತೇವೆ.

ಸುಂಟಿಕೊಪ್ಪಲಿನ ಸಬ್ ಅಸಿಸ್ಟಾಂಟ್ ಸರ್ಜನರಾದ ಮೆ। ಕಡೇಮಾಡ ಕರುಂಬಯ್ಯನವರು ರಿಟಯರಾಗುವರೆಂದೂ ಇದಕ್ಕಾಗಿ ೧॥ ತಿಂಗಳು ರಜೆಯಲ್ಲಿ ತಾ. ೧೫ರಿಂದಲೇ ನಿವೃತ್ತರಾಗುವರೆಂದೂ ಇವರ ಬದಲಿಗೆ ಸದ್ಯಕ್ಕೆ ಮೆ। ಬಿ ಕೆ ಸುಬ್ಬಯ್ಯನವರು ಹೋಗುವರೆಂದೂ ತಿಳಿದುಬರುತ್ತದೆ.

ಮೇ ತಾ. ೧೮ನೇ ಶುಕ್ರವಾರ ಬೆಳಿಗ್ಗೆ ೧೧ ಘಂಟೆಗೆ ಮಡಿಕೇರಿಯಲ್ಲಿ ನಡೆದ ಚೀಫ್ ಕಮಿಷನರವರ ದರ್ಬಾರಿನಲ್ಲಿ ರಾವುಬಹದ್ದೂರ್ ಅಪ್ಪಾರಂಡ ಚಂಗಪ್ಪನವರಿಗೆ ಸನ್ನದು ಮತ್ತು ಬ್ಯಾಜನ್ನು ಚೀಫ್ ಕಮಿಷನರವರು ಕೊಟ್ಟಿರುವರು. ಅಲ್ಲದೆ ೧೯ ಸರಕಾರಿ ಉದ್ಯೋಗಸ್ಥರಿಗೂ ಮತ್ತು ೭ ಮಂದಿ ಬೇರೆ ಜನರಿಗೂ ಸ್ವಾರ್ಣಭೌಮರ ರಜತೋತ್ಸವ ಪದಕಗಳು ಸಹ ಕೊಡಲ್ಪಟ್ಟವು.

LOOK SHARP! LOOK AHEAD!

Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S. S. L C's and also for those who have not passed any University examination.

Coaches students for the Specialised Banking Courses (C A. I. B. & C. A. I I. B) and also for Accountancy; Secretarial, and Insurance Courses (L. A A., A C R A, F C. R. A., F. I S A., A. C I I, etc)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held

Ladies are also admitted

Enrol yourself NOW Classes are in full swing Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to:—

D R Murdeshwar,
Dip Econ, F R Econ, S (Lond)
Principal
Ganapathy High School Street,
Mangalore

WHITE LEPROSY
AND
LEUCODERMA

A few day's application of this medicine cures WHITE LEPROSY and LEUCODERMA radically Get rid of this horrible disease by application of this medicine inspite of failure by hundreds of Hakims Doctors Kavirajas and advertisers Rs 500 rewrded if proved fallible Price Rs 2/

VAIDYARAJ AKHIL KISHORE RAM
P O Katrisarai (Gaya)

ಕಣ್ಣಿನ ಪರೆ

"ಐ–ಸನ್" ಎಂಬ ನೇತ್ರಭಾಸ್ಕರ–ಈ ಔಷಧವು ಕಣ್ಣುಪರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಅವಶ್ಯವಿಲ್ಲ ಖಂಡಿತ ಗುಣದಾಯಕ ಗುಣವಾಗದಿದ್ದರೆ ಹಣ ವಾಪಸ್ ಕ್ರಯ ರೂ 2

ಪತ್ರವ್ಯವಹಾರ ಇಂಗ್ಲೀಷಿನಲ್ಲಿ —

Hary yasram, Panchpota, Bengal

ಗುಪ್ತ ಮಹಾಮಂತ್ರ.

ಅತ್ಯಂತ ಫಲಕಾರಿ

ಇದನ್ನು ಉಚ್ಚರಿಸಿದ ಮಾತ್ರದಲ್ಲಿ ಎಂತಹ ಕಷ್ಟ ಕೆಲಸವೂ ಸುಲಭವಾಗುವುದು. ಸ್ತ್ರೀ, ಪರೀಕ್ಷೆಯಲ್ಲಿ ವಿಜಯ, ಕೋರ್ಟು ವ್ಯವಹರಣೆಯಲ್ಲಿ ಗೆಲುವು, ನೌಕರಿಯಲ್ಲಿ ಜಯ, ಪ್ರಗತಿ, ಮಕ್ಕಳ ಐಶ್ವರ್ಯವೆಲ್ಲ ಲಭ್ಯವಾಗುತ್ತದೆ ಇದು ನಿಮ್ಮನ್ನು ಅದೃಷ್ಟಶಾಲಿಗಳನ್ನಾಗಿ ಮಾಡುತ್ತದೆ

2 ರೂಪಾಯಿಗಳನ್ನು ಕಳುಹಿಸಿ, ಅಥವಾ ವಿ.ಪಿ.ಯಿಂದ, 50 ರೂಪಾಯಿ ಬಹುಮಾನ ಪಡೆಯಿರಿ

Praudha Mantra Asram,
No 17 P O Katrisari Gaya

C P S

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಅ	ರೂ. ಅ
ರಾಶಿ ಅಕ್ಕಿ	4— 2	4— 5
ಮಸ್ಸಿ	4— 4	4—10
ಗುಡ್ಡು	4— 0	4— 6
ಊರ ಅಪ್ಪಲ್ ಬೆಳ್ತಿಗೆ	4— 8	4—12
ರಂಗೂನು ಬೆ. ಗೋ. ಅಕ್ಕಿ	6—12	7— 4
ಎಲ್ಲೂರು ಬೆ ಮು ಅಕ್ಕಿ	4— 4	4— 8
ಗೋಧಿ ಗೋಣಿ ಅಕ್ಕಿ	10— 0	10— 8
ತೊಗರಿ ಗೋಣಿ ಅಕ್ಕಿ	8—12	9— 8
ಹುರುಳಿ ಗೋಣಿ ಅಕ್ಕಿ	7— 8	8— 4
ಕಡಲೆ ಗೋಣಿ ಅಕ್ಕಿ	8 — 0	10— 8
ತೊಗರಿಬೇಳೆ ಗೋಣಿ ಅಕ್ಕಿ	10— 0	17— 0
ಉದ್ದು ಗೋಣಿ ಅಕ್ಕಿ	8— 0	8— 8
ಹೆಸರು ಗೋಣಿ ಅಕ್ಕಿ	9— 0	9— 8
ಊರುಬೆಲ್ಲ ಖಂಡಿ ಅಕ್ಕಿ	32— 8	35 — 0
ಉಪ್ಪು ಗೋಣಿ ಅಕ್ಕಿ	4—12	5— 0
ಕೊಬ್ರಿ ಖಂಡಿ ಅಕ್ಕಿ	48— 0	55— 0
ಕೊಬ್ರಿ ಹಿಂಡಿ ಖಂಡಿ ಅಕ್ಕಿ	21— 0	21— 8
ಎಳ್ಳಿಂಡಿ ಖಂಡಿ ಅಕ್ಕಿ	37— 8	40— 0
ಕೊಬ್ರಿ ಎಣ್ಣೆ ಮಣ ಅಕ್ಕಿ	4— 4	5— 0
ಎಳ್ಳೆಣ್ಣೆ ಮಣ ಅಕ್ಕಿ	5— 2	6— 0
ಚಿಮಿಣಿಎಣ್ಣೆ ಪೆಟ್ಟಿಗೆ ಅಕ್ಕಿ	5— 7	5—7
ಮೋರಿಸ ಸಕ್ಕರೆ ಮ. ಅಕ್ಕಿ	3—10	3—12
ಹುಣಸು	5— 0	6— 4
ಸಾಸಿವೆ ಮುಡಿ ಅಕ್ಕಿ	5 —12	6— 0
ಕಾಳುಮೆಣಸು ಖ ಅಕ್ಕಿ	120— 0	130 0
ಮೆಂತ್ಯ ಮಣ ಅಕ್ಕಿ	22— 0	27— 0
ಜೀರುಜೀಜ ಮ. ಅಕ್ಕಿ	3— 8	4 — 0
ಕಚ್ಚಿಣ ಖಂಡಿ ಅಕ್ಕಿ	40— 0	40— 8
ಕಾಂಪ್ಲಿತಗಡು ಮ. ಅಕ್ಕಿ	10— 0	10 — 5
ಕಾಂಪ್ಲಿಪಾತ್ರೆಗಳು ಮ. ಅಕ್ಕಿ	11— 0	12— 0
ಬೀಡಿಬೆಳ್ಳಿ ಸೇರು ಅಕ್ಕಿ	14—12	15— 0
ಹಿತ್ತಾಳೆ ತಗಡು ಮ. ಅಕ್ಕಿ	8— 12	9— 0
ಶವನು ಅಕ್ಕಿ	23— 4	23— 8
ಹುಣಿಸೆ ಹುಳಿ ಖಂಡಿ ಅಕ್ಕಿ	20— 0	25— 8
ನೇಟಿವ್ ಕಾಫಿ ಖಂಡಿ ಅಕ್ಕಿ	150— 0	165— 0
ಫ್ಲಂಟೇಶ ಕಾಫಿ ಖಂಡಿ ಅಕ್ಕಿ	220— 0	235— 0
ಹಳೆ ಅಡಿಕೆ	95— 0	102— 0
ಹೊಸ ಅಡಿಕೆ	80— 0	90 — 0

ಶಾಲಿವಾಹನ ಬ. ಶಕ ೧೮೫೭ನೆಯ ಭಾವ ಸಂವತ್ಸರದ ವೈಶಾಖ ಬ ೮ ಶನಿವಾರದಿಂದ ವೈಶಾಖ ಬ ೧೪ ಶುಕ್ರವಾರದ ವರೆಗಿನ ಪಂಚಾಂಗ (ಗ್ರೀಷ್ಮ ಋತು ವೃಷಭ ಮಾಸ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
25	ಶನಿ	೮	೩೬	ಧನಿಷ್ಠಾ	೯	೧೦	*
26	ರವಿ	೯	೪೬	ಶತಭಿಷಾ	೫	೧೩	
27	ಸೋಮ	೧೦	೪೦	ಪೂ. ಭಾದ್ರ	೧	೧೪	
28	ಕುಜ	೧೧	೪೫	ರೇವತೀ	೫೪	೧೪	
29	ಬುಧ	೧೨	೪೨	ಅಶ್ವಿನೀ	೫೧	೧೫	
30	ಗುರು	೧೩	೩೬	ಭರಣೀ	೫೦	೧೬	
31	ಶುಕ್ರ	೧೪	೩೫	ಕೃತ್ತಿಕಾ	೪೯	೧೭	

"GUPTA MANTRA"

A reward of Rs 100

The objects, which cannot be achieved by spending lacs of rupees may be had by repeating this Mantra seven times There is no necessity of undergoing any hardship to make it effective It is effective without any preparation This is a "WASHIKARAN MANTRA" It will make you fortunate give you service and advancement and bring you profit in trade A reward of Rs 100, if proved fallible. Price including postage etc, Rs 2-7-0

Siddh Mantra Ashram,
Katrisarai (Gaya)

Comfortable like an Aeroplane

Use our swadeshi Mosquitonet for health, Comfort and sound sleep; as if you are in an Aeroplane Sample cutting free. More convenient if some advance sent with order.

L	B	H	Price.	Best.
6 Fit	3½ Fit	3½ Fit	Rs. 1/12	2/8
6 „	4 „	4 „	„ 2/4	3/-
6½ „	4½ „	4½ „	„ 2/8	3/8
7 „	5 „	5 „	„ 3/2	4/10
7½ „	6 „	6 „	„ 4/4	5/12

G M Sharma, Post Box F 6706
Calcutta.

NEW ARRIVLAS.

Medicines.

Dr Schuessl rs Twelve Tissue Remedies 5 gr bot As 4/-
Homœopathy Me icines 5 gr bot As 5/—
Sugar f Mill Dr Schwabe s original bot 1 lb. Rs 2/-
Hamlet Oil a w rld renowned remedy As 8/-per phial
Dr Hicks New Curative Earth-Radium Cure Rs 4/-per lb
Dr Schwabe s other special remedies are always in stock
Pl as dt f j t ju emcile
kan rose B k a Family Guide t Biochemistry Re 1/-
D mestic H m e pathy Is 1 4/-
It y st these tw B s y u will be able to pick up treatment and al f m te l ssue & H m pathy Medicines successfully without consulting th ers

German Toilet Soaps, Shaving sticks and Washing and Bleaching powders.

Toilet s ps t suit all tastes and prices from As 2/6
Delightful i n m harming n ppearance. Please try

Kirloskar Pumps

We are the Rep esentatives f r Kirloskar Brothers for their reliable Shallow well and Deep well Pumps Spring Cots, Spring Couches etc, and stock—
Pipes and pi ttings t cheap prices Co r Mats and Mattings
Steadler Pencils and Stati neries
We are the e gi sed agents f r STEADLER S all stationeries and sh ll be gla t serve you

Olympia Typwriter.

Al i l M el Standard and portable sizes
F Ful i l ls t l —

B sel Mission Book & Tract Depository
Mangal re, S K or Hubli, S M

ರೇಶ್ಮೆಯಂತೆ, ನುಣುಪಾದ ಮತ್ತು
ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶತೈಲದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.
(ಮನಸ್ಸಂಗ್ರಹಕರವಾದ ಸುಗಂಧವನ್ನುಳ್ಳದು)
ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತದೆ.
ತಯಾರಿಸುವವರು — ಬೆಲೆ ಒಂದು ಬುದ್ದಿಗೆ ರೂ.0—12—0.
ಆರ್. ಸಿ. ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.
ಏಜಂಟರು —
ಕುಂತಳ ಕೌಮುದಿ ತೈಲ,
ವೆನ್‌ಲೊಕ್ ಆಸ್ಪತ್ರೆ ಎದುರು, ಮಂಗಳೂರು.

ಮೆನೇಜರರ ನೋಟೀಸು.

ಸ್ವದೇಶಾಭಿಮಾನಿಯ ಚಂದಾ ಅವಧಿ ಮುಗಿಯಿತೆಂದು ನೋಟೀಸು ಕೊಟ್ಟಿರುವ ಅಂತಹ ಚಂದಾದಾರರು ಮುಂದಿನ ವರ್ಷದ ಬಗ್ಗೆ ಚಂದಾ ಮೊಬಲಗನ್ನು ಕೂಡಲೇ ರವಾನಿಸಬೇಕು. ಪತ್ರಿಕೆಯು ಮುಂದಕ್ಕೆ ಬೇಕೋ ಬೇಡವೋ ಎಂಬ ಬಗ್ಗೆ ನೋಟೀಸು ತಲಪಿದೊಡನೆ— ಅಗತ್ಯವಾಗಿ ತಿಳಿಸಬೇಕು.

ಚಿಕ್ಕ ದೊಡ್ಡವರು. ದೊಡ್ಡ ಚಿಕ್ಕವರು.

ಲೇಖಕರು.—ಶ್ರೀ ಶಿವರಾಮ ಕಾರಂತರು.

ವಿಲೆವಾರಿ ವಾಸುದೇವಯ್ಯ.

ವಾಸುದೇವಯ್ಯನ ಹೆಸರು ತಿಳಿಯದವರಿಲ್ಲ. ನಮ್ಮ ಊರಿನಲ್ಲಿ ಅವನೆಂದರೆ ಸರ್ವೆಕಲ್ಲಿನಿಂದ ತೊಡಗಿ, ಹೊಲೆಯನ ಗುಡಿಸಲಿನ ತನಕವೂ ತಿಳಿದಿದೆ. ಅವನನ್ನು ಒಬ್ಬೊಬ್ಬರು ಒಂದೊಂದು ರೀತಿಯಿಂದ ಕಾಣುವರು. ತೀರ ಬಡವರ ಕಣ್ಣಿಗೆ ಅವನೊಂದು ತರವಾಗಿ ಕಾಣಿಸುವನು. ಅವನ ಕೋಕಿನ ಉಡುಗೆ, ಸಿಲ್ಕಿನ ಶರ್ಟು, ಕ್ರಾಪಿನ ತಲೆ, ಕೈಯ ಬೆತ್ತ—ಕಂಡರೆ ಅವನು ಅಸಾಮಾನ್ಯ ಶ್ರೀಮಂತನಿರಬೇಕು ಎಂದು ಕಾಣಿಸುವುದು. ಎಷ್ಟು ಸಾರಿ ಅವನು ದೊರೆಯ ಹಾಗೆ ಅರ್ಧ ಇಜಾರು, ಅರ್ಧ ಶರ್ಟು, ಇದೀ ಮರಿಗೆ ಟೋಪಿ ಹಾಕಿ, ಗದ್ದೆ ಅಂಚಿನಲ್ಲಿ ನಿಂತು, ಕೂಲಿಗಳಿಂದ ಕಳೆಮುಳ್ಳನ್ನು ಅಗೆಯಿಸುವುದನ್ನೂ, ಕಾಡಿನಿಂದ ಕಟ್ಟಿಗೆ ತೆಗೆಯಿಸುವುದನ್ನೂ ಕಂಡರೆ ಅವನು ಆಫೀಸರನೆಂಬುದು ನಿಶ್ಚಯ. ನಮ್ಮ ಹಳ್ಳಿಯವರಿಗೆಲ್ಲಾ ಅವನಾರೆಂದು ತಿಳಿದಿದ್ದರೂ, ನೆರೆಹಳ್ಳಿಯವರಿಗೆ ಅವನ ವಿಷಯ ತಿಳಿಯದು. ಕೆಲವರು ಅವನನ್ನು ಅಬಕಾರಿ ಆಫೀಸರನೆಂದು ತಿಳಿದಿದ್ದಾರೆ. ಕೆಲವರ ಪಾಲಿಗೆ ಅವನು ಫಾರೆಸ್ಟ್ ಆಫೀಸರನು.

ಸ್ವಂತ ಊರಿನಲ್ಲೇ—ಅವನ ಅವತಾರ ನೂರು. ಉದ್ಯೋಗ ಸಾವಿರ. ಶ್ರೀಮಂತರು ಯಾರಾದರೂ ಹೊರನೆ ಹೋಗುವುದಾದರೆ ವಾಸುದೇವಯ್ಯನನ್ನು ಬಿಟ್ಟು ಹೋಗುವ ಹಾಗಿಲ್ಲ. ನಾಟಕ ಕಂಪೆನಿಯವರು ಊರಿಗೆ ಬಂದರೆ ವಾಸುದೇವಯ್ಯ ಇಲ್ಲದೆ ಕಳೆಯದು. ರಜಾ ಸಮಯಕ್ಕೆ, ಊರಿಗೆ ವಕೀಲರು ಬಂದರೆ, ಕಲೆಕ್ಟರರು (ಅದರ ಕೆಳಗಿನ ತರಗತಿಯವರಲ್ಲ) ಊರಿಗೆ ಬಂದರೆ ಅವನೇ ಬೇಕು. ಎಂಥಾ ಇಂಗ್ಲಿಷು ಕಲೆಕ್ಟರರಾದರೂ ಸರಿಯೇ—ಊರಿಗೆ ಬಂದರೆ ಸಾಕು. ವಾಸುದೇವಯ್ಯನು, ಮೊದಲನೆ ಮುಹೂರ್ತಕ್ಕೆನೆ, ಒಂದು ನಿಂಬೆಹಣ್ಣು ಹಿಡಿದು ಅವರನ್ನು ಇಂಗ್ಲೀಷಿನಲ್ಲಿ ಮಾತನಾಡಿಸಿ ದೋಸ್ತಿ ಸಹ ಮಾಡಿಕೊಳ್ಳುತ್ತಾನೆ. ಮುಂದೆ ಅವರೆಲ್ಲರೂ ನಮ್ಮ ಊರಿಗೆ ಸರ್ಕೀಟಿಗೆ ಬರುವುದಿದ್ದರೆ ಸಾಕು. ವಾಸುದೇವಯ್ಯನನ್ನು ಕಾವಾಗಿ ಹೇಳಿಕಳುಹಿಸುತ್ತಾರೆ. ಅಂಥಾ ಜನ ವಾಸುದೇವಯ್ಯ ಎಂದರೆ, ಊರಿನ ಎಲ್ಲರೂ ಅವನನ್ನು ಹೇಗೆ ನೋಡಿಯಾರು? ಅವನನ್ನು ಕಂಡು ಅಸೂಯೆ ಪಡುವವರೂ ಸಹ—ಅವನ ಮೇಲೆ ಕತ್ತಿ ಕಟ್ಟಲು ಸಿದ್ಧವಿಲ್ಲ. ಎಲ್ಲಾದರೂ ಮುಲಾಮತಿ ಮಾಡಿಹಾಕಿಯಾನಲಾ ಕಲೆಕ್ಟರರ ಕಿವಿಚುಚ್ಚಿಯಾನಲ್ಲ—ಎಂದು ಅಂಜಿಕೆ.

ನಿಜಕ್ಕೂ ಕೇಳುತ್ತೀರಾ—ವಾಸುದೇವಯ್ಯ ಅಪಾಯಕರ ಜೀವಿಯೇ ಅಲ್ಲ. ಅವನನ್ನು ಲಕ್ಷ್ಮೀ ದೇವಿಗೂ ಹೋಲಿಸಲು ಸಾಧ್ಯವಿಲ್ಲ. ತುಂಬಾ ಮಾತನಾಡಬೇಕು ಅವನಿಗೆ. ಇಡೀ ದಿವಸ ಒಂದಲ್ಲ ಒಂದು ವಿಲೆವಾರಿ ನಡೆಯುತ್ತಿರಬೇಕು. ಅವನು ಮಾತುಗಾರ. ಮಾತುಭಾರ ಜನರೊಡನೆಯೇ ಅವನ ಸಂಪರ್ಕ. ಬರಿಯ ಲಾಟ್ ಫೋಟ್ ಜನರೊಡನೆ ಸಮಯ ಕಳೆಯುವವನಲ್ಲ ಅವನು.

ಊರಿಗೆ ಕಲೆಕ್ಟರರು ಬಂದರೆ ಸರಿ, ಯಾರನ್ನಾದರೂ ಹಿಡಿದು ಅವರಿಗೆ ಸರಬರಾಯ ಮಾಡಿಸುವನು. ಆದರಿಂದ ತಹಶಿಲ್ದಾರರೂ ಸಹ ವಾಸುದೇವಯ್ಯನನ್ನು ತಮ್ಮ ಜನವೆಂದೇ ತಿಳಿಯುತ್ತಾರೆ. ಊರಿಗೆ ರಜಾಸಮಯಕ್ಕೆ ವಕೀಲರು ಬಂದರೆ—ಸರಿ, ಒಂದು ತಿಂಗಳಿದ್ದರೂ, ಅವರಿಗೆ ಸಂತರ್ಪಣೆ ಮಾಡಿಸುತ್ತಾನೆ. ವಕೀಲರನ್ನು ಊರಿನ ಪ್ರತಿಯೊಂದು ಮನೆಯ ಗುಡಿಸಲಿನೊಳಗೆ ಹೊಕ್ಕಿಸಿಬಿಡುತ್ತಾನೆ. ಆ ವಕೀಲರ ಹೆಸರನ್ನು ಕೇಳಿದವರಾದರೂ ಚಿಂತೆಯಿಲ್ಲ—ವಾಸುದೇವಯ್ಯನ ಬಾಯಿಗೆ ಮೆಚ್ಚಿ, ಸಕ್ಕರೆ ಪಾನಕ, ಕೂಡಲೆ ಕಾಫಿ, ಅನಂತರ ಎಳನೀರು ಕೊಡಿಸುತ್ತಾರೆ. ಅರ್ಧ ಘಂಟೆ ಜಾಸ್ತಿ ನಿಂತರೆ ಔತಣವನ್ನೂ ಅಲ್ಲೇ ಮಾಡಿಸಿ ಬಿಡುತ್ತಾನೆ. ಶ್ರಾದ್ಧದ ದಿವಸ ಪಡೆ ಮಾಡಲು ಹಿಂದುಮುಂದು ನೋಡುವವರು ಆ ದಿವಸ ಹೋಳಿಗೆ ಮಾಡಲು ಸಿದ್ಧರು. ಊಟವಾಗಿ ಎಲ್ಲರೂ ಹೋದಾಯಿತೆಂದರೆ ಮನೆಯವರು 'ಈ ಅನಿಷ್ಟ ನಮ್ಮಲ್ಲಿಗೆ ಯಾರಾರನ್ನೆಲ್ಲ ತರುತ್ತದಪ್ಪ' ಎಂದು ಹೇಳುತ್ತಾರೆ.

ಒಂದು ದಿವಸ ವಾಸುದೇವಯ್ಯ ನನ್ನ ಮಿತ್ರರ ಮನೆಗೆ ಬಂದಿದ್ದನು. ಮಾತುಮಾತಾಗಿ ಮದುವೆ ಪ್ರಸ್ತಾಪ ಬಂದಿತು. "ಛೀ, ಮದುವೆಗೆ ಅಷ್ಟು ಯೋಚನೆಯೇ? ಇವತ್ತಿಗೆ ನಾಲ್ಕು ದಿನವದಲ್ಲಿ ನಿಮ್ಮ ಹುಡುಗನಿಗೆ ಚೆನ್ನದಂಥಾ ಹುಡುಗಿ ಸಂಪಾದಿಸುತ್ತೇನೆ. ತರಹವಾರು ಜನರಿದ್ದಾರೆ, ರೆಡಿ. ನಿಮ್ಮ ಮಗನಿಗೇ—ಎಷ್ಟು ಪ್ರಾಯದ್ದು ಬೇಕು? ೮ ವರುಷದಿಂದ ೧೮ ವರುಷದ ವರೆಗೆ. ಏನೂ ಆಸ್ತಿ ಇಲ್ಲದ ಪಾಪ್ರಿಯಿಂದ ಹಿಡಿದು ಸಾವಿರ ರೂಪಾಯಿ ಕಂಡಾಯ ಕೊಡುವ ಮಾವನ ವರೆಗೆ. ಓದು ಬಾರದ ಮುಕ್ಕಮ್ಮನನ್ನು ತೊಡಗಿ ಬಿ. ಎ. ಕಲಿತ ಚೆನ್ನಾಮ್ಮನ ತನಕ ರೆಡಿ—ಎಂದನು. ಅಂದುದಷ್ಟೇ ಅಲ್ಲ, ಇಡೀ ಕೆಟಲಾಗನ್ನೇ ಬಿಡಿಸಿದನು. "ಯಾವುದಾಗಬಹುದು, ಹೇಳಿ, ಈ ವಾರದಲ್ಲೇ ಮದುವೆ ಝಡಿ ಹಾರಿಸಿಬಿಡುವ" ಎಂದನು. ನನ್ನ ಮಿತ್ರರು ಎದ್ದು "ನನಗಿರುವುದು ಹುಡುಗನ ಚಿಂತೆಯಲ್ಲ, ಹಿರೆಮಗಳ ಚಿಂತೆ—ಪಯಸಾಯಿತು" ಎಂದರು. ಕೂಡಲೆ ವಾಸುದೇವಯ್ಯ "ವಿಲೆವಾರಿ ಸಡಿಸುವ. ಎಷ್ಟು ಜನ ಅಳಿಯಂದಿರು ಬೇಕು?" ಎಂದು ಒಂದು ಬಾರಿ ಕೆಟಲಾಗನ್ನು ಬಿಡಿಸಿದನು. "ಯಾಕೆ, ಡಬ್ಬಲು ಮದುವೆ ಮಾಡಿಬಿಡುವ. ಅಲ್ಲಿಯ ಹುಡುಗಿ ನಿಮ್ಮ ಮಗನಿಗೆ, ನಿಮ್ಮ ಹುಡುಗಿ ಅವರ ಮಗನಿಗೆ. ಸಾಟಿ ವ್ಯಾಪಾರ. ಖರ್ಚು ಸಲೀಸಾಯಿತು" ಎಂದುಬಿಟ್ಟರು.

ಇಂಥ ಒಂದು ನೂರ ಮದುವೆ ಮಾಡಿಸಲು ವಾಸುದೇವಯ್ಯ ರೆಡಿ. ಒಮ್ಮೆ ಪುಟ್ಟ ಗಳಿಗೆಯಲ್ಲಿ ನಿಂಟಸ್ತಿಕೆ ಮುರಿಯಿತೆಂದರೆ ಕೂಡಲೇ ಇನ್ನೊಂದು ಹುಡುಗನನ್ನೋ, ಹುಡುಗಿಯನ್ನೋ ನಿಂತ ಮಟ್ಟಿಗೇನೇ ತರಿಸಲು ಸಿದ್ಧ. ಅವನ ಬಾಯಿಯಲ್ಲಿ ಅರಸರು ಅಂಥರಾದದ್ದುಂಟು, ಆ ಥರ ಅರಸರಾದದ್ದುಂಟು.

ಇಷ್ಟು ಗಲಾಟೆಯೆಬ್ಬಿಸಿದರೂ ಸ್ವತಃ ಅವನಲ್ಲಿ ಒಂದು ಕಾಸಿಲ್ಲ. ಬಲು ದರ್ಬಾರಿಯಿಂದ ಜೀವನ ಹೋಗಬೇಕು. ಸಿಗರೇಟು ವಿನಹ ಅಗ್ಗದ ಬೀಡಿಯನ್ನು ಸೇದಿದವನೇ ಅಲ್ಲ. ಒಂದು ದಿವಸವಾದರೂ ಮೊಸರೂಟವಿಲ್ಲದೆ ಅವನಿಗೆ ಕಳೆಯದು. ಊರಿನ ಯಾವ ಮದುವೆ ಮನೆಯಲ್ಲೂ ಅವನಿದ್ದಾನೆ. ಎಲ್ಲರ ಸ್ವರಕ್ಕಿಂತಲೂ ಅವನ ಸ್ವರ ಮೇಲು. ಮೊದಲಾಗಿ ಯಜಮಾನರ ಬಳಿಗೆ ಹೋಗಿ "ಬಂದಿದ್ದೇನೆ—ಏನು ಕೆಲಸ ಹೇಳಿ ರೆಡಿ." "ಆಗಲಿ ಮಹಾರಾಯ" ಎಂದು ಯಜಮಾನರು ಹೇಳಿದರೆ ಅಷ್ಟಕ್ಕೆ ಬಿಡಲಾರ. "ಏನಾಗಬೇಕು ಹೇಳಿ. ಮೊಸರಿಗೆ ಏನು ಏರ್ಪಾಡಾಯಿತು? ಮೊಸರಿಲ್ಲದೆ ಬೊಜ್ಜದ ಊಟವೇ ಅದು? ಎನ್ನುತ್ತಾನೆ. ಬಡವರಿಗೆ ಮೊಸರು ಎಲ್ಲಿ ಸಿಕ್ಕುವುದು ಈ ದಿವಸದಲ್ಲಿ" ಎಂದರೆ ಯಾರನ್ನಾದರೂ ಬೆದರಿಸಿ, ಊರಿಗೆ ಕಲೆಕ್ಟರರಾದರೂ ಬರುತ್ತಾರೆ ಎಂದು ಹೇಳಿ, ಮೊಸರನ್ನು ತರಿಸದೆ ಇರಲಾರ. ಮೊಸರಿಲ್ಲದೆ ಅವನ ಊಟವೇ ಆಗಲಾರದು.

ಒಂದು ದಿವಸ ವಕೀಲ ರಂಗರಾಯರ ಮಗಳಿಗೇನೆ ಮದುವೆ. ವಾಸುದೇವಯ್ಯನು ಮಂಗಳೂರು ವಕೀಲ ವೆಂಕಟರಮಣಯ್ಯನವರ ಕಡೆಯ ರಾಯಭಾರಿ. ಎಲ್ಲಾ ವಿಲೆವಾರಿಗೂ ಅವನೇ ಎಂಬುದು ನಿಶ್ಚಯವಾಗಿತ್ತು. ಮದುವೆ ದಿನ ಉಭಯ ಬೀಗರೂ ವಕೀಲರು. ನಡುವೆ ವಿಲೆವಾರಿ ವಾಸುದೇವಯ್ಯ. ಏರ್ಪಾಡು ವ್ಯವಸ್ಥೆ, ಗದ್ದಲ ಕೇಳಬೇಕೇ? ಮದುವೆಯ ಮಧ್ಯಾಹ್ನ ಧಾರೆಯಾಯಿತು. ವಾಸುದೇವಯ್ಯ ಪಾಕಶಾಲೆಯಲ್ಲಿ ನಿಂತು—"ಛೀ, ಕೇಸರಿ ಇಲ್ಲದ ಮೇಲೆ ಪರಮಾನ್ನವೇ ಕೆಟ್ಟಿತಯ್ಯಾ" ಎಂದು ಬೊಬ್ಬೆ ಹೊಡೆಯುತ್ತಾನೆ. ಅವನ ಮಗ್ಗುಲ ಕಡೆಯಿಂದ ಯಾರೋ ತಮ್ಮಷ್ಟಕ್ಕೆ "ಹೌದೇ ರಾಮಯ್ಯ, ಊರಿಗೆ ಬಂದ ವಕೀಲ ಲಕ್ಷ್ಮೀಪತಿರಾಯರು ಈ ಮದುವೆಗೆ ಬರಲಿಲ್ಲ ಎಂದರೇನು?" ಎನ್ನುತ್ತಿದ್ದರು. ಲಕ್ಷ್ಮೀಪತಿರಾಯರು ಮದ್ರಾಸು ಹೈಕೋರ್ಟಿನ ವಕೀಲರು. ಅಸಾಮಾನ್ಯ ಕೀರ್ತಿ ಅವರದು. ಅವರ ಹೆಸರು ಕೇಳಿದ್ದೇ ತಡ ವಾಸುದೇವಯ್ಯನಿಗೆ 'ಕೇಸರಿ' ಮರವೆಯಾಯಿತು. ಹೊರಕ್ಕೆ ಬಂದನು. ಹೊರಗೊಂದು ಸ್ವಾಕಲಿತ್ತು. ಕೂಡಲೇ ಎಂ. ಲಕ್ಷ್ಮೀಪತಿರಾಯರ ಮನೆಗೆಂದು ಹೊರಟೇಬಿಟ್ಟನು.

ಆ ದಿನ ಸಂಜೆ ನಾನು ಆಕಸ್ಮಾತ್ ಸುಬ್ರಹ್ಮಣ್ಯದ ಕಡೆಗೆ ಹೋಗಿದ್ದೆ. ದೇವಸ್ಥಾನದ ಮುಂದಿನ ರಸ್ತೆಯಲ್ಲಿ ವಾಸುದೇವಯ್ಯನ ಭೇಟಿಯಾಯಿತು. "ಏನು ವಾಸ್ದೇವಯ್ಯ, ವೆಂಕಟರಮಣಯ್ಯನವರ ಮದುವೆ ಗದ್ದಲ ಬಿಟ್ಟ ಯಾಕೆ?" ಎಂದೆ. ಅದಕ್ಕವನು ಅದು ಸರಿಯೇ "ಏನು ಮಾಡಲಿ, ಡಿ. ಎಫ್. ಓ. ದೊರೆಗಳು ನಾನಿಲ್ಲದೆ ನಿರ್ವಾಹವಿಲ್ಲವೆಂದು ಕಾರಿನಲ್ಲಿ ಹಾಕಿಕೊಂಡು ಇಲ್ಲಿಗೆ ಕರೆತಂದರು. ಈಗ ಅವರೊಟ್ಟಿಗೆ ಶಿರಾಡಿಗೆ ಹೋದರೂ ಹೋಗಬೇಕು. ಊಟವಿಲ್ಲ, ಮಣ್ಣಿಲ್ಲ. ಅವರಿಗೂ ಊಟ ಆಗಿಲ್ಲ. ಮೊಸರಿಗೆ ನಂಜಣ್ಣ ಗೌಡರಲ್ಲಿಗೆ ಹೇಳಿಕಳುಹಿಸಿದ್ದೇನೆ" ಎಂದನು. ಹಾಗೆ ಮಾತಾಡುತ್ತಾ ನಾವು ಕುಳ್ಕುಂದದ ಬಯಲಿಗೆ ಬಂದೆವು. ವಾಸುದೇವಯ್ಯನಿಗೆ ದೊರೆಗಳ ನೆನಪಾಗಿ, ತಿರುಗಿ ಸುಬ್ರಮಣ್ಯಕ್ಕೆ ಹೋದನು—ಅಥವಾ ಹೋಗಿರಬೇಕು.

(೧೪ನೇ ಪುಟದಿಂದ ಮುಂದುವರಿದುದು)

೮ ಉದಾರ ಪ್ರೇಮ, ವಿಮಲ ಭ್ರಾತೃತಾ ಭಾವ ಮತ್ತು ಪಾರಸ್ಪರಿಕ ಸಹಯೋಗಗಳು ಜಾತೀಯ ಉನ್ನತಿಗೆ ಪ್ರಧಾನ ಸಹಾಯಕಗಳಾಗಿರುವುವು. ಈ ದಿನಗಳಲ್ಲಿ ಅಖಿಲ ಬ್ರಹ್ಮಾಂಡದಲ್ಲಿ ಕಂಡುಬರುವ ಜಾತಿ—ಜಾತಿಗಳೊಳಗಿನ ಸಂಘರ್ಷಣೆ ಪ್ರತಿದ್ವಂದಿತೆಯ್ಯನಗ್ನ ನೃತ್ಯ, ಗೌರ—ಕೃಷ್ಣ ವರ್ಣಗಳೊಳಗಿನ ಭೇದಭಾವ, ಪ್ರತಿಹಿಂಸೆ ಮತ್ತು ಅತ್ಯಾಚಾರ ಮಾಡುವ ಇಚ್ಛೆ—ಇವುಗಳೆಲ್ಲವೂ ಮನುಷ್ಯ ಸಮಾಜದ ದುರ್ಗತಿಯ ಚಿಹ್ನೆಗಳಾಗಿವೆ. ಏಕಮಾತ್ರ ಸತ್ಯವೂ, ಸುಂದರವೂ ಆದ ಮಂಗಲಕಾಮನೆಯೇ ಈ ಎಲ್ಲ ದುರ್ಗತಿಯ ಚಿಹ್ನೆಗಳನ್ನು ದೂರಮಾಡಬಲ್ಲುದು.

೯ ವಿಧಾತನಿಂದ ಸೃಷ್ಟಿ ಮಾಡಲ್ಪಟ್ಟ ಸಮಸ್ತ ಜೀವಿಗಳ ಕಲ್ಯಾಣ ಮಾಡುವವನ ಮೇಲೆಯೇ ಜಗತ್ತಿನ ಸಹಾನುಭೂತಿಯು ಇರುತ್ತದೆ. ಮಾನವ ಸಮಾಜವನ್ನು ಸ್ವಲ್ಪವಾದರೂ ಉನ್ನತಾವಸ್ಥೆಗೆ ತರಲಿಕ್ಕೆ ಪ್ರಯತ್ನಿಸುವವನೇ ಜಗತ್ತಿನ ಪ್ರೇಮ ಮತ್ತು ಶ್ರದ್ಧೆಗೆ ಪಾತ್ರನಾಗುತ್ತಾನೆ. ಈ ಮಾನವ ಹಿತೈಷಿಗಳು ಮಾನವ ಹಿತಸಾಧನೆಗಾಗಿ ಕೈಕೊಂಡ ಉಪಾಯಗಳು ಪರಸ್ಪರ ವಿರೋಧವಾಗಿರ ಪುವೆಂದು ಒಮ್ಮೊಮ್ಮೆ ತೋರಿದರೂ ವಾಸ್ತವಿಕವಾಗಿ ಹಾಗಿರ ವುದಿಲ್ಲವೆಂದು ತಿಳಿಯಬೇಕು. ಅಥವಾ ಮನುಷ್ಯರ ಸ್ವಭಾವವು ಭಿನ್ನ ಭಿನ್ನವಾಗಿ ತೋರುವಂತೆ ಅವರ ಕಾರ್ಯಪ್ರಣಾಲಿಯೂ ಬೇರೆ ಬೇರೆಯಾಗಿರುವುದೆಂದು ತಿಳಿಯಬಹುದು. ಈ ವೈವಿಧ್ಯದಲ್ಲಿ ಏಕತೆಯ ಸೂತ್ರವು ಅಡಕವಾಗಿದೆ. ಆದುದರಿಂದ ಉಪರೋಕ್ತ ಸಂಘದ ಸದಸ್ಯರಾಗುವವರ —

೧ ಮದ್ಯಪಾನ ಮಾಡಕೂಡದು.

೨ ಬೀಡಿ ಚುಟ್ಟಿ ಸಿಗರೇಟು ಮೊದಲಾದ ಅಮಲು ಪದಾರ್ಥಗಳನ್ನು ಸೇವಿಸಕೂಡದು.

೩ ಮಾಂಸ ಮೊದಲಾದ ಉತ್ತೇಜಕ ಪದಾರ್ಥಗಳನ್ನು ತಿನ್ನಕೂಡದು.

೪ ಪ್ರತಿದಿನವೂ ಕಾಲಕ್ಕೆ ಸರಿಯಾಗಿ ಸ್ನಾನ ಮಾಡಬೇಕು. ಅನಾನುಕೂಲವಿದ್ದಾಗ ಕೈಕಾಲು ಮುಖ ಮೊದಲಾದ ಅಂಗೋಪಾಂಗಗಳನ್ನಾದರೂ ತೊಳೆದು ಒರಸಿಟ್ಟುಕೊಳ್ಳಬೇಕು.

೫ ಒಮ್ಮೆ ಹವೆಯಲ್ಲಿ ಸಂಚಾರ ... ಒಳ್ಳೆಯವನ್ನು ಕೊಟ್ಟು ಅದಷ್ಟು ... ಕಳೆಯಬೇಕು.

೬ ಸ್ವಾಸ್ಥ್ಯರಕ್ಷಣೆಗೆ ಅವಶ್ಯಕವಾದಷ್ಟು ವ್ಯಾಯಾಮವನ್ನು ಪ್ರತಿದಿನವೂ ಮಾಡಬೇಕು.

೭ ವಿಧಾತನು ಈ ಜಗತ್ತಿನಲ್ಲಿ ... ಸೃಷ್ಟಿ ಮಾಡಿಟ್ಟಿದ್ದಾನೆ. ಅದರ ಉಪಯೋಗ ಮಾಡುವುದೂ ಅದರ ಮರ್ಮವನ್ನು ತಿಳಿದು ಪ್ರಕೃತಿ ಮಾತೆ ... ಅಗತ್ಯ ... ಗಳಿಂದ ಕೂಡಿದವನಾಗಿ ... ಕಳೆಯಬೇಕು.

೮ ಪ್ರತಿದಿನವೂ ... ಉಪಯುಕ್ತವಾದ —ಅದರ ಕೆಲಸವಾದ—ವಿಷಯದ ಅಧ್ಯಯನ ಮಾಡುತ್ತ ತನ್ನ ಬುದ್ಧಿಶಕ್ತಿಯನ್ನು ಬೆಳೆಸಬೇಕು.

೯ ಮಾನಸಿಕ ಮತ್ತು ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಬೇಕು. ... ಮಾನಸಿಕ ... ಆಧ್ಯಾತ್ಮಿಕ ಬಲ ... ಕೊಟ್ಟು ಮನಸ್ಸಿನ ... ಮಾನಸಿಕ ಶಕ್ತಿಗಳ ಉನ್ನತಿ ಮಾಡಿಕೊಳ್ಳಬೇಕು. ಪ್ರತಿದಿನವೂ ಪ್ರೇಮ, ಸಹಿಷ್ಣುತೆ, ಧೃಢತೆ, ಉದಾರತೆ, ಗಾಂಭೀರ್ಯ, ... ಮೊದಲಾದ ಗುಣಗಳ ... ಪ್ರತಿದಿನದ ಜೀವನದಲ್ಲಿ ಉಪರೋಕ್ತ ಗುಣಗಳ ಕಾರ್ಯರೂಪದಲ್ಲಿ ... ಬೇಕು. ತನ್ನ ಉನ್ನತಿ ಸಾಧನೆ ... ವಿಘ್ನ ಪರಂಪರೆಗಳನ್ನು ಆತ್ಮದ ಮನದ ... ಸಾಧಿಸಬೇಕು. ಹಾಗೆ ಮಾಡದೆ ಮಾನಸಿಕ ಆಧ್ಯಾತ್ಮಿಕ ಉನ್ನತಿಯಾಗದೆಂದು ತಿಳಿಯಬೇಕು.

ಇಂಥ ಉಪಾಯಗಳಿಂದ ದೀರ್ಘಾಯುರಾರೋಗ್ಯ ಭಾಗ್ಯಾದಿಗಳು ಲಭಿಸಲಾರವೆಂದು ಹೇಳುವವರಿದ್ದಾರೆಯೇ? ಅಂಥವರು ಮೇಲೆ ಬರೆದ ಪ್ರಕಾರ ನಡೆದು ತಮ್ಮ ಅನುಭವವನ್ನು ಹೇಳಲಿ.

ಶ್ರೀನಿವಾಸ ಶೆಟ್ಟಿ.

'ನೋಬೆಲ್ ಪ್ರಾಜ್' ಎಂದರೇನು?

['ನೋಬೆಲ್ ಪ್ರಾಜ್'ನ ಚರಿತ್ರೆ,—ಅಥವಾ ಆ ಬಹುಮಾನದ ಅರ್ಥ,—ಅದನ್ನು ಯಾರು, ಏಕೆ, ಎಲ್ಲಿ ಸ್ಥಾಪಿಸಿದರು—ಇವೇ ಮೊದಲಾದ ವಿಷಯಗಳು ವಿದ್ಯಾವಂತರೆಂಬವರಲ್ಲೂ ಹಲವರಿಗೆ ತಿಳಿದಿಲ್ಲ. ಇಂತಹ ಬಹುಮಾನವನ್ನು ಜಗತ್ತಿಗರ್ಪಿಸಿ ತನ್ನ ವಿದ್ಯಾಭಿಮಾನವನ್ನು ವ್ಯಕ್ತಗೊಳಿಸಿದ ಮಹಾಪುರುಷನಾರೆಂದೂ, ಅವನ ಜೀವನದ ಉದ್ದೇಶಗಳೇನೆಂದೂ ಈ ಲೇಖನದಲ್ಲಿ ಸೂಚಿಸಲಾಗಿದೆ]

ಸ್ವೀಡನಿನಲ್ಲಿ ಆಲ್ಫ್ರೆಡ್ ಬರ್ನಾರ್ಡ್ ನೊಬೆಲ್ ಎಂಬ ಮಹಾ ವಾಣಿಜ್ಯಪಟು. ಸಿಕ್ಕಿದ್ದೆಲ್ಲ ವ್ಯಾಪಾರ ವಹಿವಾಟುಗಳಿಗೆ ಹರಿದು ಹೋಗುತ್ತಿತ್ತಾದರೂ, ಅವನಿಗೆ ಅಮರಕೀರ್ತಿಯನ್ನು ಗಳಿಸಬೇಕೆಂಬ ಮಹಾಕಾಂಕ್ಷೆಯಿತ್ತು. ಸಂಶೋಧನೆಯಲ್ಲಿ ತಲ್ಲೀನನಾಗಿರುವುದೆಂದರೆ ಅವನಿಗೆ ಪ್ರಾಣ. ಒಂದಲ್ಲ ಒಂದು ಬಗೆಯ ಶೋಧನೆಯಲ್ಲೇ ಇದ್ದು, ಸಾಹಸಪೂರ್ಣವಾಗಿ, ಕೆಲಸ ಮಾಡಿ, ಅದನ್ನು ಪೂರ್ಣಗೊಳಿಸುವನು. ಆತ್ಮನಿರ್ಧಾರವು ನೋಬೆಲನ ಹೃದಯದಲ್ಲೊಂದು ವಿಚಿತ್ರ ಜ್ಯೋತಿ. ತನ್ನ ಕಾರ್ಯಸಾಧನೆಯಲ್ಲಿ ಎಂತಹ ವಿಘ್ನಗಳು ಬಂದರೂ ಅವನಿಗೆ ವ್ಯಾಕುಲವಾಗುವುದೇ ಇಲ್ಲ,—ಮಾತ್ರ ಅದು ಪೂರ್ಣವಾಗಬೇಕು ಒಂದು ನಿರ್ಧಾರವನ್ನು ಮಾಡಿದನೆಂದರೆ, ಅದನ್ನು ಕಲ್ಪನೆಯ ಗಾಳಿಯಲ್ಲೇ ಹಾರಿಬಿಡುವಂತೆ ಬಿಟ್ಟುಬಿಡುವವನು ಅವನಲ್ಲ. ಸಾಧನೆಯೊಂದು ಬಿಟ್ಟರೆ ತೀರಿತು,—ಅವನಿಗೆ ರಾತ್ರೆ ನಿದ್ದೆಯೂ ಇಲ್ಲ. ಆ ಕೆಲಸವು ಸಂಪೂರ್ಣಿಸಿಬಿಟ್ಟಿತೆಂದರೆ ಸುಖವಾಗಿ ನಿದ್ರಿಸಿಬಿಡುವನು. ಧೈರ್ಯವೆಂಬುದೂ ಅವನಲ್ಲಿಷ್ಟ ಅಪ್ರತಿಮ ಗುಣ. ಎಂತಹ ಸಂದಿಗ್ಧತೆಯಲ್ಲೂ ಅವನು ಅಧೈರ್ಯಗೊಳ್ಳುವುದೇ ಕಡಮೆ. ಇಂತಹ ಉದ್ಯಮಶೀಲತೆ, ಕರ್ತವ್ಯದಕ್ಷತೆ, ಶ್ರದ್ಧೆಗಳೇ ಅವನ ಬಾಗಿಲಿಗೆ ಲಕ್ಷ್ಮಿಯನ್ನು ಕರೆದೊಯ್ದಿತು. ೫೦ ವರ್ಷ ಪ್ರಾಯವಾಗುವುದರೊಳಗೆ ಅವನು ಆ ದೇಶದಲ್ಲಿನ ಕೋಟ್ಯಾಧಿಪತಿಯಾದನು.

ಬಂಡೆಕಲ್ಲುಗಳನ್ನು ಕೊಡಲಿ ಮತ್ತು ಕತ್ತಿಗಳಿಂದ ಒಡೆಯುತ್ತಿದ್ದ ಆಗಿನ ಜನರ ಸಂಕಷ್ಟಗಳನ್ನು ಅವನು ಲಕ್ಷಿಸಿ, ಅದರ ನಿವಾರಣೆಗಾಗಿ ಸಾಧಿಸತೊಡಗಿದನು. ಕೊಂಚ ಸಮಯದೊಳಗೆ ತೋಟೆಗಳನ್ನು ಕಂಡುಹಿಡಿದನು. Dynamite ಎಂಬುದನ್ನು ಕಂಡುಹಿಡಿದ ಕೀರ್ತಿಯು ಅವನ ಪಾಲಿಗೇ ಸಲ್ಲುತ್ತದೆ. ಇಂದು ಕೆರೆಭಾವಿಗಳನ್ನೋ, ನದಿ ಸೇತುವೆಗಳನ್ನೋ ತೋಡುವಾಗ ಬಂಡೆಕಲ್ಲುಗಳು ಸಿಕ್ಕಿಬಿಟ್ಟರೆ, ಅವುಗಳನ್ನು ವಿಧ್ವಂಸಮಾಡಿಬಿಡುವ ಶಕ್ತಿಯುಳ್ಳ ತೋಟೆಯನ್ನು ನಾವು ಉಪಯೋಗಿಸುತ್ತೇವೆ. ಇವುಗಳ ಜನ್ಮವು ನೋಬೆಲ್‌ನಿಂದಲೇ ಆಯಿತು.

ಆಗಿನ ಕಾಲದಲ್ಲಿ ನೋಬೆಲನಷ್ಟು ಘನ ಇಂಜಿನಿಯರನೂ ಸಂಶೋಧಕನೂ ಇರಲಿಲ್ಲ. ಇಂತಹ ವ್ಯಕ್ತಿಯಿಂದಲೇ ಅವನು ಅಷ್ಟು ಅಷ್ಟೈಶ್ವರ್ಯವನ್ನು ಸಂಪಾದಿಸಿದನು.

೧೮೩೩ರಲ್ಲಿ ಜನಿಸಿದ ಅವನು ಐವತ್ತು ವರ್ಷಗಳೊಳಗೆ ಜಗತ್ತಿನಲ್ಲೇ ಕೀರ್ತಿಶಾಲಿಯಾಗಿಬಿಟ್ಟನು. ಅವನನ್ನು ಆದರಿಸದ ನೃಪತಿಗಳೇ ಇರಲಿಲ್ಲ. ಅವನ ಸಹಾಯವನ್ನು ಪಡೆಯದ ಬಡವರಿಲ್ಲ. ವಿಶ್ವದಲ್ಲಿ ಶಾಂತಿಯು ನೆಲೆಸಬೇಕು, ಅದು ನೆಲೆಸಬೇಕಾದರೆ ಜಗತ್ತಿನಲ್ಲಿ ವಿದ್ವಾಂಸರ ಸಂಖ್ಯೆಯು ಹೆಚ್ಚಬೇಕು, ಅಂತಹ ವಿದ್ಯಾಭಿವೃದ್ಧಿಯಾಗಬೇಕಾದರೆ ಅದಕ್ಕೆ ತಕ್ಕ ಪ್ರೋತ್ಸಾಹಬೇಕು, ಆ ಪ್ರೋತ್ಸಾಹವು ತನ್ನಂತಹ ಸಿರಿಸಂಪನ್ನರಿಂದಲೇ ಒದಗಿಬರಬೇಕು—ಎಂದು ತಿಳಿದಿದ್ದ ನೋಬೆಲನು ಒಂದು ವೀಲುನಾಮೆಯನ್ನು ಮಾಡಿದನು.

೧೮೯೬ರಲ್ಲಿ ತಾನು ಕಾಲವಾಗುವುದಕ್ಕೆ ಮೊದಲು ತನ್ನ ಆಸ್ತಿಯಿಂದ ೨೭,೦೦೦,೦೦೦ ರೂಪಾಯಿಗಳ ಒಂದು ನಿಧಿಯನ್ನು ಪ್ರತ್ಯೇಕಿಸಿಟ್ಟು, ಈ ನಿಧಿಯಿಂದ ಹುಟ್ಟಿಬರುವ ಆದಾಯದಿಂದ ಒಂದೊಂದಕ್ಕೆ ೧,೨೦,೦೦೦ ರೂಪಾಯಿಗಳು ಬೆಲೆಬಾಳುವ ೫ ಬಹುಮಾನಗಳನ್ನು ಜಗತ್ತಿನ ವಿದ್ವಾಂಸರಿಗೆ ಕೊಡಬೇಕೆಂದು ಬರೆದಿಟ್ಟ. ಭೌತಿಕಶಾಸ್ತ್ರ, ರಸಾಯನಶಾಸ್ತ್ರ, ಶರೀರಶಾಸ್ತ್ರ ಅಥವಾ ವೈದ್ಯಶಾಸ್ತ್ರ, ಸಾಹಿತ್ಯ ಸೃಷ್ಟಿ ಮತ್ತು ಶಾಂತಿರಕ್ಷಣೆಗಳಲ್ಲಿ ಯಾರು ಹೆಚ್ಚಿನ ಪ್ರತಿಭೆ, ನೈಪುಣ್ಯಗಳನ್ನು ತೋರುವರೋ, ಅವರಿಗೆ ಈ ಬಹುಮಾನಗಳು ಸಲ್ಲುತ್ತಾ ಬರಬೇಕೆಂದನು. ಈ ಬಹುಮಾನವಿತರಣೆಗೆ ಆಧಾರವಾಗಿ ಹಲವು ರೀತಿನೀತಿಗಳಿರುವುವು.

ಶಾಂತಿರಕ್ಷಣೆ: ಯಾರು ವಿವಿಧ ರಾಷ್ಟ್ರಗಳೊಳಗೆ ಪರಸ್ಪರ ಪ್ರೇಮ, ಸೌಹಾರ್ದಗಳನ್ನು ಹೆಚ್ಚಿಸಲು ಯತ್ನಿಸುವನೋ, ಯಾರು ಶಸ್ತ್ರಾಸ್ತ್ರ ಸೇನೆಗಳನ್ನು ಕಡಮೆಮಾಡುವುದಕ್ಕಾಗಿ ಸಾಧಿಸುವನೋ ಅವನಿಗೆ ಈ ಬಹುಮಾನವು ಸಲ್ಲತಕ್ಕದು. ನೋಬೆಲ್ ಬಹುಮಾನಗಳನ್ನು ಹೊಂದಲು ಎಲ್ಲಾ ಜಾತಿಮತಗಳವರೂ, ಅರ್ಹರು. ಸ್ತ್ರೀಪುರುಷರೆಂಬ ಭೇದವೂ ಅವರೊಳಗಿರುವುದಿಲ್ಲ. ಅವರ ಅರ್ಹತೆಯನ್ನೇ ತಾನು ಲಕ್ಷಿಸುವೆನಲ್ಲದೆ ಅವರ ಜಾತಿನೀತಿಗಳನ್ನಲ್ಲ ಎಂದು ನೋಬೆಲ್ ಮಹಾಶಯನು ತನ್ನ ಮರಣಶಾಸನದಲ್ಲಿ ನಿರೂಪಿಸಿರುವನು.

ಸರ್. ಆರ್ಥರ್ ಹೆಂಡರ್ಸನ್‌ರವರು.

ಭೌತಿಕಶಾಸ್ತ್ರ, ರಸಾಯನಶಾಸ್ತ್ರ, ಶರೀರಶಾಸ್ತ್ರ, ಸಾಹಿತ್ಯ, ಶಾಂತಿವರ್ಧನೆಗಳೆಂಬೀ ಐದು ವಿಷಗಳಿಗಿರುವ ಐದು ಬಹುಮಾನಗಳಲ್ಲಿ ನಾಲ್ಕು ಬಹುಮಾನಗಳನ್ನು ಜಗತ್ತಿನ ಮಹಾಪಂಡಿತೋತ್ತಮರೆಂದೆಣಿಸುವವರು, ಸವಾರನ್ನು ಮೋದನೆಯಾದನಂತರವೇ ಬಹುಮಾನಿಸುವರು. ಇವರ ಮುಂದಲಕ್ಕೆ ಬರುವ ಮನವಿಗಳನ್ನು ಇವರು ಕೂಲಂಕಷವಾಗಿ ಸಂಶೋಧಿಸಿ ಆ ವಿಷಯಕವಾದ ಪೂರ್ಣಾನುಭವವನ್ನು ಮೊದಲ ಪಡೆದು ನಿರ್ಧರಿಸುವರು. ಎಲ್ಲಾ ವಿಷಯಗಳಲ್ಲಿ ಅರ್ಹರೆಂದಾದರೆ ಅವುಗಳನ್ನು ಕೊಡುವರು. ಐದನೆಯ ವಿಷಯವಾದ ಶಾಂತಿಪಾಲನೆಯ ಬಹುಮಾನವು ಮಾತ್ರ ಈ ಮಂಡಲದವರಿಂದ ಕೊಡಲ್ಪಡುವುದಿಲ್ಲ. ಇದರ ವಿತರಣೆಯ ಕೆಲಸವು ನಾರ್ವೆ ದೇಶದ ಪ್ರಜಾಪ್ರತಿನಿಧಿ ಸಭೆಗೇನೆ ಇರುವುದು. ಜಗತ್ತಿನಲ್ಲಿ ಯಾರು ಅದಕ್ಕರ್ಹರೆಂದು ಅವರು ವರ್ಷಂಪ್ರತಿ ವಿಚಾರಣೆ ಮಾಡುವರು. ರಾಜನೀತಿಜ್ಞರ ಶಿಫಾರಸುಗಳನ್ನು ಸ್ವೀಕರಿಸುವರು. ಆ ಮೇಲೆ, ಯೋಗ್ಯತಾನುಸಾರವಾಗಿ ಹಂಚುವರು. ಒಂದೇ ವಿಭಾಗಕ್ಕೆ ಎರಡು ಜನರು ಅರ್ಹರೆಂದು ಸಂಶೋಧನಾಮಂಡಲದವರು ತೀರ್ಮಾನಿಸಿದರೆಂದರೆ—ಆ ಬಹುಮಾನವು ಎರಡು

ಡಾ। ರವೀಂದ್ರನಾಥ ಠಾಕೂರರವರು

ವಿಭಾಗಗಳಾಗಿ ಹಂಚಲ್ಪಡುವುವು. ಆದರೆ ಹೆಚ್ಚಾಗಿ ಇಂತಹ ಸಮಾನ ಯೋಗ್ಯತೆಯುಳ್ಳ ಇಬ್ಬರು ಈ ಬಹುಮಾನಕ್ಕೆ ಒದಗಿಬರುವುದು ಕಷ್ಟವಾಗುತ್ತದೆ.

ನೋಬೆಲ್ ಸಂಸ್ಥೆಯು ೧೯೦೧ರಲ್ಲಿ ಸ್ಥಾಪಿತವಾಯಿತು. ಇಂದಿನವರೆಗೆ ಇಬ್ಬರು ಸ್ತ್ರೀಯರಿಗೆ ಈ ಬಹುಮಾನಗಳು ದೊರಕಿವೆ. ಜೀವನದಲ್ಲಿ ಎಷ್ಟು ಸಲವೂ ಒಬ್ಬನು ಅದನ್ನು ಪಡೆಯಲು ಯೋಗ್ಯತೆಯುಳ್ಳವನಿರಬಹುದು. ೧೯೦೩ರಲ್ಲಿಯೂ ೧೯೧೧ರಲ್ಲಿಯೂ ಮೇಡಂ ಕ್ಯೂರಿ ಎಂಬವಳಿಗೆ ಎರಡು ಸಲ ಬಹುಮಾನಗಳು ದೊರೆತುವು. ಇದಕ್ಕೆ ಅವಳ ಸಂಶೋಧನೆಯ ಸಾಹಸವೇ ಕಾರಣ. ರೇಡಿಯಂನ ಕುರಿತು ಅಗಾಧಶೋಧೆ ಮಾಡಿಯೂ, ಆ ಲೋಹದ ವೈದ್ಯಕೀಯ ಪ್ರಯೋಜನಗಳನ್ನು ಕಂಡುಹಿಡಿದೂ ಅವಳು ಎರಡು ಬಹುಮಾನಗಳನ್ನು ಪಡೆಯಲು ಶಕ್ತಳಾದಳು.

ಈ ಬಹುಮಾನಗಳನ್ನು ಪಡೆಯುವವರ ಅಂತರಂಗ ಜೀವನವು ಹೇಗಿದ್ದರೂ ಸಂಸ್ಥೆಯು ಅದನ್ನು ಗಣನೆಗೆ ತರುವುದಿಲ್ಲ. ತಮ್ಮ ಆದರ್ಶಗಳಿಗೆ ಸರಿಬಿದ್ದರಾಯಿತು. ಅವರು ಗಣಿಸುವುದು ಅಷ್ಟನ್ನು ಮಾತ್ರ.

ಕಳೆದ ವರ್ಷದಲ್ಲಿ ಸಾಹಿತ್ಯ ವಿಭಾಗಕ್ಕೆ ಮೀಸಲಾಗಿಡಲ್ಪಟ್ಟಿದ್ದ ಬಹುಮಾನವು ಇಟಲಿಯ ಪಿರಾಂಡಿಲೆ ಎಂಬವನಿಗೆ ಕೊಡಲ್ಪಟ್ಟಿತು. ಶಾಂತಿಸಾಧನೆಯ ಬಹುಮಾನವು ಇಂಗ್ಲೆಂಡಿನ ಮಜೂರ ಮುಖಂಡರಾದ ಸರ್ ಆರ್ಥರ್ ಹೆಂಡರ್ಸನರಿಗೆ ಕೊಡಲ್ಪಟ್ಟಿತು.

ನೋಬೆಲ್ ಬಹುಮಾನವು ಭಾರತೀಯರಲ್ಲಿ ಡಾ। ರವೀಂದ್ರನಾಥ ಠಾಕೂರರಿಗೂ, ಸರ್ ಸಿ. ವಿ. ರಾಮನ್‌ರವರಿಗೂ ಸಿಕ್ಕಿವೆ. ರವೀಂದ್ರರ 'ಗೀತಾಂಜಲಿ' ಎಂಬ ಕವಿತಾಗುಚ್ಛವು ಅವರಿಗೆ ಈ ಬಹುಮಾನವನ್ನು ತಂದಿತು. ರಾಮನ್‌ರವರು ಪ್ರಕಾಶದ ಸಂಬಂಧವಾದ ಸಂಶೋಧನೆ ನಡೆಸಿ ಜಗತ್ತಿಗೆ ನೂತನ ಜ್ಞಾನವನ್ನು ಕೊಟ್ಟುದಕ್ಕಾಗಿಯೂ ಅದಕ್ಕೆ ಪಾತ್ರರಾದರು. ಶಾಂತಿಸಾಧನೆಗಾಗಿ ಮಹಾತ್ಮಾಜಿಯವರಿಗೆ ಈ ನೋಬೆಲ್ ಪಾರಿತೋಷಕವು ಸಿಗುವುದೆಂದು ಹಲವು ಸಲ ಗುಲ್ಲೆದ್ದಿತು. ಆದರೂ ಅದು ಅವರ ತಾತ್ಕಾಲಿಕರಿಂದಾಗಿಯೋ ಅವರಿಗೆ ಬಂದಿಲ್ಲವೆಂದು ಗೊತ್ತಾಗಿದೆ.

ಈ ಬಹುಮಾನಗಳು ದಿವಂಗತ ನೋಬೆಲ್‌ನ ನಿಧನದ ವಾರ್ಷಿಕೋತ್ಸವದ ದಿನ ನೋರ್ವೆ ದೇಶದ ಮುಖ್ಯ ನಗರಿಯಾದ ಆಸ್ಲೋ ಎಂಬಲ್ಲಿ ಕೊಡಲ್ಪಡುವುವು. ಬಹುಮಾನಪಾತ್ರರು ತಾವಾಗಿಯೇ ಅಲ್ಲಿಗೆ ಹೋಗಿ ಅದನ್ನು ಪಡೆಯಬೇಕು. ಅಲ್ಲಿ ಆ ಮೊಬಲಗಿಗೆ ಒಂದು ಚೆಕ್ಕನ್ನೂ, ಬಹುಮಾನಿತನಾದ ಬಗ್ಗೆ ಒಂದು ಸನ್ನದನ್ನೂ, ನೋಬೆಲ ಚಿತ್ರವುಳ್ಳ ಒಂದು ಸ್ವರ್ಣಪದಕವನ್ನೂ ಕೊಡಲಾಗುವುದು.

ಭಾರತೀಯ ಯುವಕರು ಉಚ್ಚ ಆದರ್ಶಗಳನ್ನಿಟ್ಟುಕೊಂಡು ನೋಬೆಲ್ ಪ್ರಾಜ್‌ಗಳನ್ನು ಪಡೆಯುವಂತೆ ಯತ್ನಿಸುವುದರಿಂದ ದೇಶದ ಗೌರವವು ಹೆಚ್ಚುವಂತಾಗುವುದೆಂಬುದರಲ್ಲಿ ಸಂದೇಹವಿಲ್ಲ. ಸರ್ವ ಬಗೆಯ ಶಾಸ್ತ್ರಗಳಲ್ಲೂ ಭಾರತೀಯರು ಮುಂದರಿದು ಜಗತ್ತಿಗೆ ನವಜ್ಯೋತಿಯನ್ನು ಕೊಟ್ಟು ಸಕಲರಿಗೂ ನಮ್ಮ ವಿದ್ವತ್ತನ್ನು ತೋರಿಸಬೇಕಾಗಿದೆ. ಇಂದಿನವರ ಜೀವನಧ್ಯೇಯಗಳನ್ನು ಸಂಶೋಧಿಸಿದರೆ, ಇಂತಹ ಅನುಪಮ ಆದರ್ಶಗಳನ್ನು ಮುಂದಿಟ್ಟುಕೊಂಡು ಕ್ರಿಯಾಸಕ್ತರಾಗಿರುವವರು ನಮ್ಮಲ್ಲಿ ಹೆಚ್ಚಿಗಿಲ್ಲವೆಂದೇ ತಿಳಿಯಬಹುದು. ಜಗತ್ತಿನ ಐದನೇ ಒಂದಂಶ ಜನರು ತಮ್ಮ ದೇಶದಲ್ಲಿರುವರೆಂದಾಗ ವರ್ಷಕ್ಕೆ ಒಂದು ಬಹುಮಾನವಾದರೂ ನಮ್ಮ ದೇಶಕ್ಕೆ ಸಲ್ಲುವುದು ಅಗತ್ಯವಿದೆ. ಆದರೆ ಅದು ಸಲ್ಲುತ್ತದೆಯೇ? ಹೀಗಿರುವಾಗ ನಮ್ಮ ವಿದ್ವತ್ತಿಯ ಮಾನವು ಎಷ್ಟೆಂದು ನಾವೇ ಅಳೆಯಬಹುದಲ್ಲವೇ? ನಮ್ಮವರು ಸಾಧಿಸಿದರೆ ಈ ವಿಷಯದಲ್ಲಿ ಮುಂದರಿಯುವರೆಂಬುದಕ್ಕೆ ಯಾವ ಅಡ್ಡಿಯೂ ಇರಲಾರದು.

ನಮ್ಮ ನಾಡಿನಲ್ಲಿ ಹೊಸ ಹೊಸ ಶೋಧೆಗಳ ನಡೆಯಬೇಕು. ಆ ಶೋಧೆಗಳ ಫಲಾಫಲಗಳೇನೆಂದು ವಿದ್ವಾಂಸರು ತಿಳಿಯುವಂತೆ ಮಾಡಬೇಕು. ಅಂತಹ ವಿದ್ವಾಂಸರು ಆ ಶೋಧಗಳನ್ನು ನೋಬೆಲ್ ಬಹುಮಾನ ಮಂಡಲಕ್ಕೆ ಶಿಫಾರಸು ಮಾಡಿ ಅದರ ಯೋಗ್ಯತೆಗಳನ್ನು ತಿಳಿಸಬೇಕು.

ಆದರೆ ನಮ್ಮವರಲ್ಲಿ ಇಂತಹ ಅಭ್ಯಾಸವು ಇನ್ನೂ ಕಲಿತಿರುವುದಿಲ್ಲ. ಒಂದು ಸಂಶೋಧನೆಯನ್ನು ಯಾರಾದರೂ ಅವಿದ್ಯಾವಂತನೋ ಬಡವನೋ ಮಾಡಿದನೆಂದರೆ ಅದಕ್ಕೆ ತಕ್ಕ ಪ್ರೋತ್ಸಾಹವೇ ದೊರೆಯುವುದಿಲ್ಲ. ಆ ಶೋಧನೆಯ ಘನತೆಯು ಅವನ ಬಡತನದಿಂದ ರಸಾತಳಕ್ಕೆ ದೂಡಲ್ಪಡುತ್ತದೆ. ಸರಕಾರವು ಕೂಡಾ ಅಂತಹ ಸಂಶೋಧಕರನ್ನು ಪ್ರೋತ್ಸಾಹಿಸುವುದು ಕಡಮೆ. ನಮ್ಮ ಜನರಲ್ಲಿ ಇಂತಹ ವೈಜ್ಞಾನಿಕ ಮನೋಭಾವವು ಎಂದು ಉದಯವಾಗುವುದೋ!

ಸರ್. ಸಿ. ವಿ. ರಾಮನ್‌ರವರು.

ಬಾಹ್ಯ ಪ್ರಪಂಚ ಪರಿಚಯ.

[ಜಗತ್ತಿನ ಎಲ್ಲಾ ರಾಷ್ಟ್ರಗಳ ವಿವರಗಳನ್ನು ಈ ಪುಟದಲ್ಲಿ ಕ್ರಮಶಃ ಸಂಕ್ಷಿಪ್ತವಾಗಿ ಪ್ರಕಟಿಸುತ್ತ ಬಂದು, ನಮ್ಮ ವಾಚಕರಿಗೆ ಬಾಹ್ಯಪ್ರಪಂಚದ ಪರಿಚಯವನ್ನು ಮಾಡಿಕೊಡಬೇಕೆಂದು ನಿರ್ಣಯಿಸಲಾಗಿದೆ–ಸಂ]

ಜಪಾನ್

ಜಪಾನ್ ದೇಶವು ಏಶಿಯಾ ಖಂಡದ ಪೂರ್ವ ಕರಾವಳಿಯಲ್ಲಿ ದ್ವೀಪಗಳ ಸಾಲಿನ ರೂಪದಲ್ಲಿದೆ. ಮೂರು ಸಾವಿರ ಮೈಲುಗಳ ವರೆಗೂ ಈ ದೇಶವು ಉದ್ದಕ್ಕೂ ಹರಡಿಕೊಂಡಿದೆ. ಮಧ್ಯೆ ಇದನ್ನು ಚೀನಾ ಸಮುದ್ರವು ವಿಭಾಗಿಸಿರುತ್ತದೆ. ನಾಲ್ಕು ದೊಡ್ಡ ದೊಡ್ಡ ದ್ವೀಪಗಳಿವೆ. ಅಲ್ಲದೆ ಸುಮಾರು ೪೦೦೦ ಸಣ್ಣ ಸಣ್ಣ ದ್ವೀಪಗಳೂ ಇವೆ. ಇವುಗಳಲ್ಲಿ ೫೫೦ ದ್ವೀಪಗಳಲ್ಲಿ ಜನರು ವಾಸಿಸುತ್ತಾರೆ

ಜಪಾನಿನ ಸೌಂದರ್ಯ

ಜಪಾನ್ ದೇಶವು ಸೌಂದರ್ಯದಲ್ಲಿ ಅತ್ಯಂತ ಖ್ಯಾತಿ ಹೊಂದಿರುತ್ತದೆ ಪ್ರಪಂಚದಲ್ಲಿನ ಹಲವು ಸುಂದರ ದೇಶಗಳಲ್ಲಿ ಈ ದೇಶವೂ ಒಂದು. ಗುಡ್ಡ ಬೆಟ್ಟಗಳು, ನದಿ ಸರೋವರಗಳು ತರತರದ ಗಿಡ ಮರಗಳು ದೇಶದ ಸೊಬಗನ್ನು ಹೆಚ್ಚಿಸುತ್ತವೆ ಟೋಕಿಯೋ ಎಂಬುದು ಪ್ರಧಾನನಗರ ಇದರ ಸೌಂದರ್ಯವು ಇತಿಹಾಸ ಪ್ರಸಿದ್ಧವಾಗಿದೆ ಜೂನ್ ತಿಂಗಳಲ್ಲಿ ಅಲ್ಲಿ ಪುಷ್ಪಗಳು ಅರಳುವ ಕಾಲ, ಆ ಸಮಯದಲ್ಲಿ ಹೆಚ್ಚಿನ ಸ್ತ್ರೀಯರಿಗೆ ಪುಷ್ಪಸಂಗ್ರಹ ಮಾಡುವುದೊಂದೇ ಹುಚ್ಚು ಜಪಾನ್ ದೇಶದವರು ಮೆಚ್ಚುವಷ್ಟು ಬಣ್ಣಗಳನ್ನು ಇನ್ನಾವ ದೇಶಿಗರೂ ಮೆಚ್ಚುವುದಿಲ್ಲ

ಜಪಾನಿನಲ್ಲಿ ಭೂಕಂಪ

ಜಪಾನು ಅಷ್ಟು ಸೌಂದರ್ಯಮಯವಾಗಿದ್ದರೂ ಅಲ್ಲಿಯ ಜ್ವಾಲಾಮುಖಿಗಳ ಹಾವಳಿಯು ತಪ್ಪುವುದಿಲ್ಲ. ದಿನಕ್ಕೆ ನಾಲ್ಕು ಸಲ ಅಲ್ಲಿ ಸಣ್ಣ ದೊಡ್ಡ ಭೂಕಂಪಗಳಾಗುತ್ತವೆ ಅಲ್ಲಿ ೫೦ ಸಜೀವ ಜ್ವಾಲಾಮುಖಿಗಳಿವೆ ದೊಡ್ಡ ಭೂಕಂಪವಾದೊಡನೆ ಅಲ್ಲಿಯ ಜನರು ಮಹಾ ಸಂಕಷ್ಟಕ್ಕೊಳಗಾಗುತ್ತಾರೆ ಇದರೊಡನೆ ಪರ್ವತಗಳ ಸರೋವರಗಳಲ್ಲಿ ನೆರೆಯಿದ್ದು ಆ ನೆರೆಯು ಪ್ರದೇಶವನ್ನು ಆವರಿಸಿ ಸ್ಥಿರ ವಸ್ತುಗಳನ್ನು ನಾಶಗೊಳಿಸುತ್ತದೆ ಇಷ್ಟಿದ್ದರೂ ಕೈಗಾರಿಕೆಗಳಲ್ಲಿ ಜಗತ್ತಿನಲ್ಲಿ ಅಗ್ರಗಣ್ಯವಾಗಿ ನಿಂತಿರುವ ದೇಶಗಳಲ್ಲಿ ಜಪಾನೂ ಒಂದಾಗಿರುತ್ತದೆ

ಜಪಾನಿನ ಪ್ರಾಚೀನತೆ

ಐದನೇ ಶತಮಾನದ ಆದಿಯಲ್ಲಿ ಜಪಾನ್ ದೇಶದ ಅಸ್ತಿತ್ವದ ಕುರಿತು ಬಾಹ್ಯಲೋಕಕ್ಕೆ ತಿಳಿದಿತ್ತಾದರೂ ಜಪಾನಿಯರು ಮಾತ್ರ ತಮ್ಮ ವಂಶವು ಕ್ರಿ. ಪೂ. ೬೬೦ರಲ್ಲಿ ಜಿಮ್ಮು ಎಂಬವನಿಂದ ಉದ್ಭವಿಸಿತೆಂದೂ ಜಿಮ್ಮು ಎಂಬ ಸಾರ್ವಭೌಮನು ಸೂರ್ಯದೇವನ ವಂಶಜನೆಂದೂ ಹೇಳುತ್ತಿರುವರು ಭೂಲೋಕದಲ್ಲಿರುವ ಉದ್ಯಾನದಿಂದ ಜಪಾನನ್ನು ಆಳಲು ಸೂರ್ಯನೇ ಅವನ ಮೊಮ್ಮಗನನ್ನು ಧರೆಗೆ ಕಳುಹಿಸಿದನೆಂದೂ ಜಪಾನಿನ ಚಕ್ರವರ್ತಿಗಳೆಲ್ಲ ಸೂರ್ಯನ ವಂಶಸ್ಥರೆಂದೂ ಹೇಳಿಕೆಯಿದೆ ಸೂರ್ಯವಂಶಜರು ಸುಮಾರು ೧೩೦೦ ವರ್ಷಗಳ ವರೆಗೆ ಸರ್ವಾಧಿಕಾರಿಗಳಾಗಿ ಆಳಿದರು ಆ ಮೇಲೆ ೮ನೇ ಶತಮಾನದಿಂದ ೨೦ನೇ ಶತಮಾನದ ವರೆಗೆ ಅಲ್ಲಿ ಮಂತ್ರಿಮಂಡಳವು ಬಲವಾಯಿತು.

ಕ್ಯೋಟೋ ನಗರ.

ಜಪಾನಿನ ಪ್ರಾಚೀನ ಪ್ರಧಾನ ನಗರವು ಕ್ಯೋಟೋ ಎಂಬುದು. ಈ ನಗರದಲ್ಲಿ ಒಟ್ಟು ೧೨೦೦ ದೇವಸ್ಥಾನಗಳಿವೆ ಇವುಗಳಲ್ಲಿ ಅತಿ ಪ್ರಸಿದ್ಧವಾದ ಯಸಾಕಾ ಪಗೋಡವು ೩೦೦೦ ವರ್ಷಗಳ ಹಿಂದೆ ರಚಿಸಲ್ಪಟ್ಟು ನಗರದ ಮಧ್ಯೆಯಿದೆ ಇದರ ೫ನೇ ಮಾಳಿಗೆಯನ್ನು ಹತ್ತಿ ಸುತ್ತಲೂ ನೋಡಿದರೆ ನಗರವು ನಮ್ಮ ಅಡಿಯಲ್ಲೇ ಇದ್ದಂತೆ ತೋರುವುದು

ಬುದ್ಧನ ವಿಗ್ರಹ.

ಕಮಕುರಾ ಎಂಬಲ್ಲಿ ೪೭ ಅಡಿಗಳಷ್ಟು ಎತ್ತರದ ಹಿತ್ತಾಳೆಯ ಬುದ್ಧನ ವಿಗ್ರಹವಿದೆ ಇದರ ಬಳಿ ಒಬ್ಬ ಮನುಷ್ಯನು ನಿಂತರೆ ದೂರದಿಂದ ಕಣ್ಣಿಗೇ ಕಾಣಲೊಲ್ಲನು ಈ ವಿಗ್ರಹವು ಚೀನಾದೇಶದಿಂದ ತೇಲಿಕೊಂಡು ಇಲ್ಲಿಗೆ ಬಂತೆಂದು ಪ್ರತೀತಿ. ಈ ವಿಗ್ರಹವು ೧೨೫೨ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿತು ೧೯೨೩ರಲ್ಲಿ ಯೊಕೋಹಾಮಾದಲ್ಲಿ ಭಯಂಕರ ಭೂಕಂಪವುಂಟಾಯಿತಾದರೂ, ೧೨ ಮೈಲುಗಳ ದೂರದಲ್ಲಿದ್ದ ಈ ಮೂರ್ತಿಯು ಯಾವ ವಿಧದಿಂದಲೂ ಹಾಳಾಗಲಿಲ್ಲ

ಜಪಾನಿನ ಪ್ರಗತಿ.

ಜಪಾನನ್ನು ಸರ್ವಾಧಿಕಾರಿಗಳೇ ಆಳುತ್ತ ಬರುತ್ತಿದ್ದರು. ೧೮೬೮ರಲ್ಲಿ ಮಾತ್ರ ಅಲ್ಲಿ ಚಕ್ರವರ್ತಿ ಅಥವಾ ಮಿಕಡೊ ಎಂಬವನನ್ನು ಆರಿಸಿದರು. ಈ ಚಕ್ರವರ್ತಿಗಳೂ ಜನರೂ ಶಿಂಟೋಯಿಸಮ್ ಎಂಬ ತಮ್ಮ ಮತವನ್ನು ಅನುಸರಿಸುತ್ತಾ ಬರುತ್ತಿದ್ದರು ಆಗ ಇವರು ಪ್ರಕೃತಿಯನ್ನೇ ದೇವರೆನ್ನುತ್ತಿದ್ದರು. ೬ನೇ ಶತಮಾನದಲ್ಲಿ ಚೀನಾದೇಶದಿಂದ ಬೌದ್ಧಮತವು ಇಲ್ಲಿಗೆ ಬಂತು. ಚಕ್ರವರ್ತಿಯೂ ಜನರೂ ಬೌದ್ಧ ಮತಾವಲಂಬಿಗಳಾದರು. ಜಪಾನ [illegible]

ಜಪಾನಿಗೆ ಯೂರೋಪಿನ ಸಂಪರ್ಕ

೧೫೪೨ರಲ್ಲಿ ಯೂರೋಪಿಯನರು ಪ್ರಥಮವಾಗಿ ಜಪಾನನ್ನು ನೋಡಿದರು. ಅದರ ನಂತರ ಪೋರ್ತುಗೀಸರು ಜಪಾನರೊಡನೆ ವ್ಯಾಪಾರ ನಡೆಸಲುಪಕ್ರಮಿಸಿದರು. ಅವರನ್ನು ಹಿಂಬಾಲಿಸಿ–ಸ್ಪೈನ್ ದೇಶಸ್ಥರು ಬಂದರು ಈ ಜನಾಂಗದವರನ್ನೆಲ್ಲ ಜಪಾನೀಯರು ಆಗ ಸ್ವಾಗತೀಕರಿಸಿ ಅವರೊಡನೆ ವ್ಯಾಪಾರ ಸಂಪರ್ಕವನ್ನು ಬೆಳಸಿಕೊಂಡರು. ಕ್ರಿಶ್ಚನ್ ಮಿಶನರಿಗಳೂ ಇಲ್ಲಿಗೆ ಬಂದು ಅನೇಕರನ್ನು ತಮ್ಮ ಮತಾನುಯಾಯಿಗಳನ್ನಾಗಿ ಮಾಡಿಕೊಂಡರು. ಪರಿಸ್ಥಿತಿಯು ಪರಮಾವಧಿಯಲ್ಲಿ ಜಪಾನರು ಕಣ್ತೆರೆದರು. ಮತ್ತೊಂದು ಶತಮಾನವು ಕಳೆಯುತ್ತಲೇ ಕ್ರಿಶ್ಚನ್ ಮಿಶನರಿಗಳನ್ನೂ ವಿದೇಶಿಯರನ್ನೂ ಜಪಾನಿನಿಂದ ಓಡಿಸಿಯೇ ಬಿಟ್ಟರು

ಬಹಿಷ್ಕಾರ.

೧೬೩೮ರ ಶಾಸನದನ್ವಯ ಯಾವ ಯೂರೋಪಿಯಾನ ಜನಾಂಗದವರೂ ಜಪಾನಿಗೆ ಬರಬಾರದೆಂದು ಕಟ್ಟಪ್ಪಣೆಯಾಯಿತು. ಜಪಾನೀಯರು ಕೂಡಾ ಯೂರೋಪಿಗೆ ಹೋಗಬಾರದೆಂದು ನಿರ್ಬಂಧಿಸಿದರು. ಅನಂತರ ಎರಡು ಶತಮಾನಗಳ ವರೆಗೆ ಜಪಾನು ಪ್ರಪಂಚದಿಂದ ದೂರವಾಗಿಯೇ ನಿಂತಿತು. ಜನರಿಗೆ ವಿದೇಶೀಯ ವಿಷಯಗಳ ತಿಳಿವು ಇಲ್ಲದೆ ಅವರು ಇದ್ದುದರಲ್ಲೇ ತೃಪ್ತಿಗೊಂಡು [illegible]. ಆಗ ದೊಡ್ಡ ದೊಡ್ಡ ನಾವೆಗಳನ್ನು [illegible] ವಾಣಿಜ್ಯ ಸಂಬಂಧವಾದ ಯಾವ ಸಾಹಸಕ್ಕೂ ಜಪಾನು ಕೈಹಾಕಲಿಲ್ಲ [illegible], ಬಣ್ಣ [illegible] ಗಳ ಸಣ್ಣ ಸಣ್ಣ [illegible] ಕೈಗಾರಿಕೆ [illegible] ನಡೆಯುತ್ತಿದ್ದವು [illegible] ಅದ್ಭುತವಾಗಿವೆ

೧೯ನೇ ಶತಮಾನದಲ್ಲಿ—

೧೯ನೇ ಶತಮಾನದ ನಡುವಿನ ವರ್ಷಗಳಲ್ಲಿ ಜಪಾನಿನಲ್ಲಿ [illegible] ಅಮೇರಿಕವು ದೊಡ್ಡ ದೊಡ್ಡ ನಾವೆ [illegible] ಜಪಾನಿಗೆ ಕಳುಹಿಸಿ [illegible] ರಾಷ್ಟ್ರಗಳೂ ಪರಸ್ಪರ ಹಿತದೃಷ್ಟಿಯಿಂದ ವ್ಯಾಪಾರ [illegible] ಅದಕ್ಕೆ ಜಪಾನು [illegible] ೧೮೫೪ರಲ್ಲಿ ವಿದೇಶೀಯ ವ್ಯಾಪಾರ ವ್ಯವಹಾರಕ್ಕಾಗಿ ೩ ಬಂದರುಗಳನ್ನು ಜಪಾನಿನಲ್ಲಿ ತೆರೆಯಲಾಯಿತು.

ಪರಿಣಾಮವೇನು?

ಈ ಬಾಹ್ಯ ಜಗತ್ತಿನ ಸಂಬಂಧವನ್ನು ಮಾಡಿಕೊಂಡೊಡನೆ ಜಪಾನಿನಲ್ಲಿ ತಲೆದೋರಿದ ಪರಿಣಾಮವು ಐತಿಹಾಸಿಕವಾಯಿತು. ದೇಶವು ಪುನರ್ರಚಿಸಲ್ಪಟ್ಟಿತು ಮಳೆಗಾಲದ ಹುಲ್ಲು ಬೆಳೆಯುವಂತೆ ಜಪಾನಿನಲ್ಲಿ ಕೈಗಾರಿಕೆ ಸಂಸ್ಥೆಗಳು ಜನಿಸಿದುವು ವಿದೇಶೀಯ ಸಂಪರ್ಕದ ಬೆಲೆಯು ಅವರಿಗೆ ತಿಳಿಯಿತು. ಜಪಾನ್ ಆಡಳಿತಗಾರರು ವಿದೇಶಗಳ ವಾಣಿಜ್ಯ ಕೋವಿದರಿಗೆ ಹೇರಳ ದ್ರವ್ಯವನ್ನು ಕೊಟ್ಟು, ಅವರನ್ನು ದೇಶಕ್ಕೆ ಬರಮಾಡಿಸಿ ಅವರು ಕೈಗಾರಿಕೆಗಳ ವಿಷಯವಾಗಿ ತಮ್ಮ ಜನರಿಗೆ ಅನುಭವವನ್ನೀಯುವಂತೆ ಏರ್ಪಡಿಸಿಕೊಂಡರು. ದೇಶದಲ್ಲಿ ಸಾವಿರಾರು ಪ್ರಾಥಮಿಕ ಶಾಲೆಗಳು ಸಂಸ್ಥಾಪಿತವಾದುವು. ಜನರು ವಿದ್ಯಾವಂತರಾದರು. ಅವರ ವಿದ್ಯೆಯನ್ನನುಸರಿಸಿ ಟೋಕಿಯೋ, ಕ್ಯೋಟೋ, ಟೊಹೊಕು, ಕ್ಯೂಶು ಮತ್ತು ಹೊಕ್ಕಾಯಿಡೊ ವಿಶ್ವವಿದ್ಯಾಲಯಗಳು ತೆರೆಯಲ್ಪಟ್ಟವೆ

ಉತ್ಕರ್ಷ ಕಾಲ.

೧೮೬೮ರಲ್ಲಿ ಈ ಪ್ರಗತಿಗಾರಂಭವಾಯಿತು. ೬೦ ವರ್ಷಗಳ ಕಳೆಯುವುದರೊಳಗೆ ಜಪಾನು ಭೂಲೋಕದಲ್ಲಿ ಅತ್ಯುನ್ನತ ದೇಶಗಳಲ್ಲೊಂದಾಯಿತು. ಇಪ್ಪತ್ತನೇ ಶತಮಾನಾರಂಭದಲ್ಲಿ ಅಲ್ಲಿ ಸಣ್ಣ ಸಣ್ಣ ಕಾರ್ಖಾನೆಗಳು ಮಾತ್ರ ಇದ್ದುವು ಈಗ ಅಲ್ಲಿ ದೊಡ್ಡ ದೊಡ್ಡ ಫ್ಯಾಕ್ಟರಿಗಳಿವೆ [illegible] ಗಳ ಫ್ಯಾಕ್ಟರಿಗಳು ಈಗ ವ್ಯಾಪಾರವನ್ನು ಹೆಚ್ಚಿಸಲು ಸಾಧಕವಾಗಿದೆ

ಕೈಗಾರಿಕೆಯ ಬೆಳವಣಿಗೆ.

ಈಗ [illegible] ಕಾರ್ಖಾನೆಗಳ ಸ್ಥಾಪಿತವಾಗಿದೆ [illegible] ಜಪಾನಿನ [illegible] ಕೈಗಾರಿಕೆಗಳು [illegible] ಜಪಾನಿನ [illegible] ಗಳನ್ನು [illegible] ನಡೆದುವು [illegible] ಜಪಾನಿನ [illegible] ಮಾಡಿದರು. [illegible] ಈಗ ಜಪಾನಿನ [illegible] ಮಾತ್ರ ಈ [illegible] ವಿದೇಶೀಯ [illegible]

KANNADA SAVINGS CERTIFICATES

Cashed even Before maturity

Available in denominations of Rs. 10 and above

TOTAL YIELD RS 4-6-0 P. A.

Paid once half yearly at $3\frac{1}{8}$% p. a.

With an additional $1\frac{1}{4}$% p. a. on maturity

If Left To Accumulate

RS. 100 – Will Amount to RS. 122–13–6

Full Particulars from.—

CANARA BANK LTD.,

Estd. 1906.

OFFICES AT:

Bombay—Fort, Bombay—Mandvi, Hubli, Calicut, Cochin, Ernakulam, Alleppey, Bangalore, Davangere, Chickmagalur, Mangalore—Bunder, Mangalore—City, Kasaragod, Puttur, Buntwal, Karkala, Udipi, Coondapoor & Gangoli.

Subscribed Capital	Paid up Capital	Reserves	Deposits	Working Capital
6,00,000	3,31,000	4,50,000	58,62,000	73,49,000

ಅನುಕ್ರಮಣಿಕೆ.

ಜಗತ್ತಿನ ಅತಿ ದೊಡ್ಡ ವಿಮಾನವು ಧ್ವಂಸವಾಯಿತು.

ಚಿತ್ರ	೨
ಪತ್ರಿಕಾಪ್ರಪಂಚ	೩
ಕರ್ನಾಟಕ ವರ್ತಮಾನ	೫
ವಿಟವಾರಿ ವಾಸುದೇವಯ್ಯ	೭
ನೋಬೆಲ್ ಪ್ರೈಜ್ ಎಂದರೇನು?	೮
ಅಗ್ರಲೇಖ	
ಪ್ರಾರ್ಥನೆಯ ಅರ್ಥ	೧೮
ಸ್ಫುಟವಿಚಾರಗಳು	೯
ನಮ್ಮ ಜಿಲ್ಲೆಯ ಕೃಷಿ	೧೦
ವರ್ತಮಾನ ಸಂಗ್ರಹ	
ಕರ್ನಾಟಕ ಸಾಹಿತ್ಯ ಪರಿಷತ್ತು	೧೪
ಮಂಗಳೂರು, ತಾಲೂಕುಗಳಿಂದ	೧೩
ವಿವಿಧ ಸಮಾಚಾರಗಳು	೧೬
ಮದ್ದು ಇಲ್ಲದ ರೋಗ	೧೬

ಸ್ವದೇಶಾಭಿಮಾನಿ

ತಾ ೨೪ನೇ ಶುಕ್ರವಾರ ಮೇ ೧೯೩೫

ನಮ್ಮ ಜಿಲ್ಲೆಯ ಕೃಷಿ

ನಾಲ್ಕಾರು ವರುಷಗಳಿಂದ ಧಾನ್ಯ,ಅಡಿಕೆ ಮೊದಲಾದುವುಗಳ ಬೆಲೆಯು ತಗ್ಗಿ ನಮ್ಮ ಜಿಲ್ಲೆಯ ರೈತರ ಸ್ಥಿತಿಯು ಹೀನಾವಸ್ಥೆಗೆ ಬಂದಿದೆ ದಿನೇ ದಿನೇ ಅವರ ಬಡತನವು ಹೆಚ್ಚುತ್ತಿದೆಯಾದರೂ ಅದನ್ನು ನಿವಾರಿಸುವ ವಿಚಾರದಲ್ಲಿ ಸರಕಾರದವರ ಗಮನವು ಹರಿಯುತ್ತಿದ್ದಂತೆ ಕಾಣುವುದಿಲ್ಲ ತೀರ್ವೆ ಏರಿಸುವ ವಿಚಾರದಲ್ಲಿ ಅವರು ವಹಿಸಿದಷ್ಟೇ ಪರಿಶ್ರಮವನ್ನು ರೈತರ ಬಡತನ ನಿವಾರಣೆಯ ವಿಷಯದಲ್ಲಿ ಮಾಡಿದ್ದರೆ ಲೇಸಿತ್ತು ರೈತರ ಅವನತಿಯು ನಾನಾ ಕಾರಣಗಳಿಂದ ಉಂಟಾಗಿದೆ

ರೈತನ ಸಾಲ ಸಾಧಾರಣವಾಗಿ ನಮ್ಮ ಜಿಲ್ಲೆಯಲ್ಲಿ ರೈತನ ಸಾಲವು ತಲೆಯೊಂದಕ್ಕೆ ೫೦-೬೦ ರೂಪಾಯಿಗಳಿಗೆ ಕಡಿಮೆಯಾಗಿಲ್ಲ ಅವನ ಆಯವು ರೂ ೩೫ ಕ್ಕಿಂತ ಮಿಕ್ಕಿಲ್ಲ ಇವುಗಳ ನಡುವೆ ಅವನು ಸಂಸಾರ ಮಾಡಿಕೊಂಡಿರುವುದು ತೀರ ಕಷ್ಟದ ಸಂಗತಿಯು

ಕಂದಾಯ-ತೀರ್ವೆ ಹಿಂದಿನದನ್ನೆ ಕೊಡಲು ಈಗಿನ ಧಾರಣೆಗಳಲ್ಲಿ ಪೂರೈಸದಿರುವಾಗ, ಏರಿಸಿದ ತೀರ್ವೆಯನ್ನು ಕೊಡಲು ಅವನು ಅಶಕ್ತನೆಂಬುದು ಸರ್ವವಿದಿತವು

ರೈತನನ್ನು ಹಳ್ಳಕ್ಕೆ ಸೆಳೆಯುವ ಈ ಸೆಳೆತಗಳು ಬಲವಾಗಿರುತ್ತ ಅವನ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸುವ ಯಾವ ಯತ್ನವೂ ನಡೆದಿಲ್ಲ ನಮ್ಮ ಜಿಲ್ಲೆಯಲ್ಲಿ ಬೆಟ್ಟದ ಪ್ರಾಂತದ ಜನರಿಗೆ ಸಾಮಾನ್ಯವಾಗಿ ಅಡಿಕೆ, ಮೆಣಸಿನ ಕಾಳು ಗೇರುಬೀಜದಂಥ ವ್ಯಾಪಾರಿ ಬೆಳೆಗಳಿವೆ ಆದರೆ ಕರಾವಳಿಯ ರೈತರಲ್ಲಿ ಹೆಚ್ಚಿನವರು ತಮ್ಮ ಅನ್ನಕ್ಕೆ ಬೇಕಾದ ಭತ್ತ, ಕಾಯಿ, ಉದ್ದು ಮೊದಲಾದುವನ್ನು ಬೆಳೆಯುವವರು ವ್ಯಾಪಾರೀ ಬೆಳೆಗಳು ಅವರಿಗೆ ಇಲ್ಲ ದಕ್ಷಿಣದವರಂತೆ ಹತ್ತಿ, ನೆಲಗಡಲೆಯಂಥ ವ್ಯಾಪಾರಿ ಬೆಳೆಗಳ ಅನುಕೂಲತೆಯೂ ಅವರಿಗಿಲ್ಲ ಈಗಿನ ದಿನಗಳಲ್ಲಿ ಗೇರುಬೀಜವು ಒಂದು ಅನಾಯಾಸದ ವ್ಯಾಪಾರಿ ಬೆಳೆಯಾಗಿದೆ ಇದರ ಪ್ರಚಾರವನ್ನೆ ಇನ್ನೂ ತೀವ್ರವಾಗಿ ಮಾಡುತ್ತಿರುವುದು ಒಂದು ಅವಶ್ಯದ ಪ್ರಶ್ನೆ. ಆದರೆ ಕರಾವಳಿಯ ಜನರಿಗೆ ಭಾಗಾಯತು, ಗುಡ್ಡಗಳಿಲ್ಲದ ರೈತರಿಗೆ ಉತ್ಪತ್ತಿಕಾರಕವಾದ ಎರಡನೆ ಬೆಳೆಯು ಯಾವುದು, ಕಾನನ್ನುವ ಕಾಳನ್ನು ಮಾರಿ ಅವನು ಜೀವಿಸುವಂತಿಲ್ಲ ಆದುದರಿಂದ ನಮ್ಮಲ್ಲಿನ ಕೃಷಿ ಇಲಾಖೆಯವರು ಪರಿಶ್ರಮ ಪಟ್ಟು, ಎರಡನೆ ಬೆಳೆಗೆ ಅನುಕೂಲವಾಗುವಂತೆಯೇ, ಬೆಟ್ಟ ಗದ್ದೆಗಳಲ್ಲಿ ಬೆಳೆಯುವಂತೆಯೂ ಎರಡನೆಯ ವ್ಯಾಪಾರಿ ಬೆಳೆಯನ್ನು ಪ್ರಚಾರಕ್ಕೆ ತರುವುದು ಅವಶ್ಯ ಮೈಸೂರು ಪ್ರಾಂತದವರು ಸೋಯಾ, ನೆಲಗಡಲೆ ಮುಂತಾದುವುಗಳ ಪ್ರಚಾರಮಾಡಿದಂತೆ ನಮ್ಮ ಜಿಲ್ಲೆಯ ಕೃಷಿ ಇಲಾಖೆಯವರು ಇಂತಹ ವಿದೇಶದ ಗಿರಾಕಿಯಿರುವ ಯಾವುದಾದರೂ ಎರಡನೆ ಪೈರನ್ನು ಶೋಧಿಸಿ ಪ್ರಚಾರದಲ್ಲಿ ತರುವುದು ಅತ್ಯಾವಶ್ಯಕವು

ಮುಖ್ಯ ಬೆಳೆಯಾದ ಭತ್ತದ ಬೆಳೆಗೆ ಸಹಕಾರಿಯಾಗುವಂತೆ ಈ ಎರಡನೆಯ ಬೆಳೆಯು ಇರಬೇಕು ಮಗ್ಗುಲಿಗೆ ಸುಧಾರಿಸಿದ ರೀತಿಯಲ್ಲಿ ಕೋಳಿ ಸಾಕಣೆಯೇ ಇನ್ನಿತರ ಉಪವೃತ್ತಿಗಳ ಹಾದಿಯನ್ನು ತೋರಬೇಕು ಇತ್ತ ಮುಖ್ಯವಾದ ಭತ್ತದ ಬೆಳೆಯ ವಿಚಾರದಲಿ ನಾವಿನ್ನೂ ಅನಾಗರಿಕ ಯುಗದಲ್ಲೇ ಇದ್ದೇವೆ ರೈತನು ಧಣಿಗೆ ಕೊಡುವ ಗೇಣಿ ಹೆಚ್ಚಿದೆಯೇ ವಿನಹ, ಹೊಲದ ಫಸಲು ಹೆಚ್ಚಿ ಬರುವುದಿಲ್ಲ ಉತ್ತಮ ನೇಗಿಲು, ಉತ್ತಮ ಬೀಜ ಉತ್ತಮ ಗೊಬ್ಬರ—ಇವುಗಳ ಪ್ರಚಾರ ನಡೆದಿಲ್ಲ ನಮ್ಮಲ್ಲಿನ ಕೃಷಿ ಇಲಾಖೆಯವರು ಈ ವಿಷಯದಲ್ಲಿ ಮಾಡುತ್ತಿರುವ ಪ್ರಯತ್ನ ಏನೂ ಸಾಲದೆಂಬುದ ಸ್ಪಷ್ಟವೇ ಸರಿ

ಅದರ ಕಾರಣವಿಷ್ಟೆ, ಅವರು ಬಾಯಿಯಿಂದ ಮಾಡುವ ಉಪದೇಶಕ್ಕೆ ಕಿಸೆ ಬರಿದಾದ ರೈತನಿಗೆ ಅನುಕೂಲವಾಗಿಲ್ಲ ಅವರ ಯತ್ನವು ಫಲಕಾರಿಯಾಗಲು ಸರಕಾರವು ಈ ಇಲಾಖೆಯ ಮೂಲಕ ಇನ್ನೂ ಹೆಚ್ಚಿನ ಕೆಲಸಕ್ಕೆ ಸಿದ್ಧವಾಗಬೇಕ ಕೆಲವು ಬಡರೈತರ ಹೊಲದ ಮೇಲೂ ತನಿಖೆಯನ್ನು ತಾವು ನಡೆಯಿಸಿ, ಅವರ ಹೊಲದ ಹಿಂದಿನ ಉತ್ಪತ್ತಿಯ ಸರಾಸರಿಯನ್ನು ನಿರ್ಣಯಿಸಿ ಅಷ್ಟರ ಭರವಸೆಯನ್ನು ರೈತರಿಗೆ ಕೊಡಬೇಕು ಅನಂತರ ಅವರಿಗೆ ಎರವಾಗಿ ನೇಗಿಲು, ಬೀಜ, ಹೊಸ ಗೊಬ್ಬರ ಕೊಟ್ಟು, ಅವರು ಸುಧಾರಿತ ರೀತಿಯಿಂದ ಸಾಗುವಳಿ ಮಾಡುವಂತೆ ಮಾಡಬೇಕ ಈ ಕ್ರಮದಿಂದ ಹೆಚ್ಚು ಬರಲೇಬೇಕಾದ ಫಸಲಿನಿಂದ—ಅವರ ಸಾಲವನ್ನು ತೀರಿಸಬೇಕ. ಈ ಹೊಸ ಕ್ರಮದಿಂದ ತಮಗೆ ಹೆಚ್ಚಿನ ಉತ್ಪನ್ನ ಇದೆಯೆಂಬುದು ಖಂಡಿತವಾದರೆ ಆಗ ಅವರು-ಸುಧಾರಿಸಿದ ರೀತಿಯಲ್ಲಿ ಕೃಷಿಮಾಡಲು ಸಿದ್ಧರಾಗುವರು ಅದಕ್ಕೆ ಬೇಕಾಗುವ ಅಧಿಕ ವ್ಯಯಕ್ಕೂ, ಈ ಇಲಾಖೆಯವರು ಕೆಲವು ಕಾಲ ಬೆಂಬಲ ಕೊಟ್ಟು ಅವರಿಗೆ ಪೈರು ಬಂದ ಬಳಿಕ ಅದನ್ನು ಮರಳಿ ಪಡೆಯಬೇಕು

ಅಲ್ಲಲ್ಲಿ ಇಂಥ ಸುಧಾರಣೆಯ ಕ್ಷೇತ್ರಗಳನ್ನು ಮಾಡಿ, ತೀರ ಬಡರೈತನೂ, ಸುಧಾರಿತ ಕೃಷಿಯ ಹಾದಿ ಹಿಡಿಯುವಂತೆ ಮಾಡುವತನಕ ನಮಗ ಉಪಯೋಗವಿಲ್ಲ ಈಗ ಇಲಾಖೆಯವರು ನಡೆಯಿಸುತ್ತಿರುವ ರೋದನ ಅರಣ್ಯರೋದನವೇ ಸರಿ ವಿಶ್ವಾಸ, ಹಣ ಎರಡೂ ಇರುವ ಕೆಲವರು ಸಾಹಸಿಗಳು ಮಾತ್ರ ಅದರಿಂದ ಉಪಯೋಗಪಡೆಯುವರು ನಿಜ. ಆದರೆ ಪಡೆಯದವರ ಸಂಖ್ಯೆ ಸಾವಿರಕ್ಕೆ ೯೯೮ ಇರುವಾಗ ಅಂಥವರ ಸಲುವಾಗಿ, ಶ್ರಮ ವಹಿಸದಿದ್ದರೆ ರೈತನಿಗೆ ಮುಂದಿನ ಗತಿಯಿದೆಯೇ?

ವೈಮಾನಿಕ ವಿಜ್ಞಾನಕ್ಕೆ ಆಘಾತ!

ಮೊನ್ನೆ ಮೊಸ್ಕೊವಿನ ವಿಮಾನ ನಿಲ್ದಾಣದಲ್ಲಿ 'ಮೆಕ್ಸಿಂ ಗೋರ್ಕಿ' ಎಂಬ, ಜಗತ್ತಿನಲ್ಲೇ ಅತೀ-ದೊಡ್ಡ ವಿಮಾನವು ಬಿದ್ದು ಧ್ವಂಸವಾಯಿತೆಂದು ಕೇಳಿ ವಿಜ್ಞಾನಪ್ರಿಯರಾದರೂ ದುಃಖಿಸಲೇ ಬೇಕಾಗಿದೆ R 101 ಎಂಬ ವಿಮಾನವು ಪ್ರಪಂಚದಲ್ಲಿ ಅತ್ಯಂತ ದೊಡ್ಡದೆಂದು ಕೀರ್ತಿ ಘಳಿಸಿದ ಅಲ್ಪಾವಧಿಯಲ್ಲೇ ಬಿದ್ದು, ಸುಟ್ಟು ಭಸ್ಮವಾಗಿ ಪ್ರಪಂಚಕ್ಕೆ ಹೊಸ ಪಾಠವನ್ನು ಕೊಟ್ಟಿದ್ದಿತು ಅಂತಹ ಅಪಘಡಗಳ ಉದಾಹರಣೆಗಳನ್ನು ಕಂಡ ಮೇಲಾದರೂ ಈ ವಿಜ್ಞಾನಿಗಳು ಜಾಗ್ರತಾವಸ್ಥೆಯಿಂದ ಕೆಲಸ ಮಾಡಬೇಕಾಗುವ ಆವಶ್ಯಕತೆಯಿದೆ ಮೊಸ್ಕಿನ ವಿಮಾನವು ನಿರ್ಮಾಣವಾದುದನ್ನು ಕಂಡಾಗ ವೈಮಾನಿಕರಿಗೆ ಹಿಂದಿನ ಘಟನೆಗಳು ಸ್ಮೃತಿಪಟದಲ್ಲುಳಿಯುವುದಿಲವೋ ಎಂಬ ಭಯವು ಸ್ವಾಭಾವಿಕವಾಗಿ ತಲೆದೋರುತ್ತದೆ ಈ ವಿಮಾನವು ಇನ್ನೊಂದು ಸಣ್ಣ ವಿಮಾನಕ್ಕೆ ಢಿಕ್ಕಿಹೊಡೆದುದರಿಂದ ಹೀಗಾಯಿತೆಂದು ವಾರ್ತೆಯಿದೆ ಹೀಗಿದ್ದರೂ ವಿಮಾನವನ್ನು ಚಲಿಸುತ್ತಿದ್ದವರ ಜವಾಬ್ದಾರಿಕೆಯು ಕಡಿಮೆಯಾಗವುದಿಲ್ಲ ದೂರದಿಂದ ಇನ್ನೊಂದು ವಿಮಾನವು ಬರುತ್ತದೆಂದೊಡನೆ ವಿಮಾನ ನಡೆಸುವವನ ಹೊಣೆಯೂ ಜಾಗ್ರತೆಯೂ ಹೆಚ್ಚಬೇಕಾಗಿದೆ ಯಂತ್ರಯುಗವು ಮಾನವನ ಸದುಪಯೋಗಗಳನ್ನು ಹೆಚ್ಚಿಸಲು ಸಾಧನಗಳಾಗಿರಬೇಕೆಂದು ವಾದಿಸುವವರೊಡನೆ ಚರ್ಚಿಸುವ ಅಗತ್ಯವಿಲ್ಲವಾದರೂ ಅವರು ಈ ಯಂತ್ರಯುಗವು ಜನಾಂಗಕ್ಕೆ ಹಾನಿಕರವಾಗಿ ಪರಿಣಮಿಸುತ್ತಿರುವುದನ್ನು ಸಿಲ್ಲಿಸುವುದು ಅಧ್ಯಕರ್ತವ್ಯವಿದೆ ಅಪಘಡಗಳಾಗುವುದು ಅಸ್ವಾಭಾವಿಕವಲ್ಲ ಆದರೆ ಅಂತಹ ಅಪಘಡಗಳಾಗದಂತೆ ವ್ಯವಸ್ಥೆ ಮಾಡದಿರುವುದು ಅಸ್ವಾಭಾವಿಕ ಅದರೊಡನೆ ವೈಮಾನಿಕರು ಅಮುಲುಬೋರರಾಗಿರದಂತೆಯೂ ಓಡಿ ಚುಟ್ಟಾಗಳನ್ನು ಸೇದುವ ಅಭ್ಯಾಸವಿಲ್ಲದವರಾಗಿಯೂ ಇರುವಂತೆ ವ್ಯವಸ್ಥೆಮಾಡಿದರೆ ಇಂತಹ ಅನಾಹುತಗಳು ಎಷ್ಟೋ ಕಡಮೆಯಾಗಬಹುದು

ವಿ ಜೆ. ಪಟೇಲರಿಗೆ ಅವಮಾನಪಡಿಸಿದಂತೆ!

ದಿವಂಗತ ವಿ ಜೆ ಪಟೇಲರು ದೇಶಹಿತಸಾಧಕ ಕಾರ್ಯಗಳಿಗಾಗಿ ಅದರಲ್ಲೂ ಭಾರತದ ಸ್ಥಿತಿಗತಿಗಳನ್ನು ವಿದೇಶಗಳಲ್ಲಿ ಪ್ರಚುರಗೊಳಿಸುವುದಕ್ಕಾಗಿ—ಒಂದು ಲಕ್ಷ ರೂಪಾಯಿಗಳನ್ನು ವೀಲಿನಲ್ಲಿ ಪ್ರತ್ಯೇಕಿಸಿಟ್ಟು ಆ ಹಣಕ್ಕೆ ಶ್ರೀ| ಸುಭಾಷ್ಚಂದ್ರ ಬೋಸರನ್ನು ವಾರಿಸ್ದಾರನ್ನಾಗಿ ಮಾಡಿದ್ದರು ಈ ಮೊತ್ತವನ್ನು ಸುಭಾಷ್ಚಂದ್ರ ಬೋಸರಿಗೆ ಪ್ರಚಾರಕಾರ್ಯಾರ್ಥ ಕೊಡಬೇಕು ಎಂದು ಅವರು ವೀಲಿನಲ್ಲಿ ಸೂಚಿಸಿದ್ದರು ಅಲ್ಲದೆ ತನ್ನ ಸಂಪತ್ತಿಗೆ ಇಬ್ಬರು ಟ್ರಸ್ಟಿಗಳನ್ನೂ ನೇಮಿಸಿದ್ದರು ಇತ್ತೀಚೆಗೆ ಬೋಸರು ಈ ಟ್ರಸ್ಟಿಗಳೊಡನೆ, ತನಗೆ ಪಟೇಲರು ನಿಯಮಿಸಲಾಗಿಟ್ಟಿದ್ದ ಒಂದು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದರು ಆದರೆ ಆ ಟ್ರಸ್ಟಿಗಳು 'ನೀವು ಮಾಡಲಿರುವ ಕೆಲಸವೇನು? ಅದರ ವಿವರ ಮತ್ತು ಅದರಲ್ಲಿರುವ ಕಾರ್ಯಕರ್ತರ ಪಟ್ಟಿಯನ್ನು ಕೊಡಿ' ಎಂದು ಕೇಳಿದರು ಬೋಸರು ಉತ್ತರವಾಗಿ ಬರೆದು 'ಆ ವಿವರವನ್ನು ನೀವು ಕೇಳುವುದು ಅಗತ್ಯವಿಲ್ಲ' ಎಂದರು 'ನಾವು ಟ್ರಸ್ಟಿಶಿಪ್ ಶಾಸನದನ್ವಯ ಈ ರೀತಿ ಕೇಳುತ್ತಿದ್ದೇವೆ' ಎಂದು ಟ್ರಸ್ಟಿಗಳ ಹೇಳಿಕೆ ವಾರ್ತೆಯು ಬಂದಿರುವಂತೆ ಈ ವಿಷಯವು ಕೋರ್ಟಿಗೂ ಹೋಗಲಿದೆಯೆಂದು ತಿಳಿದುಬಂದಿದೆ. ಆ ಮೊತ್ತವು ಸಾರ್ವಜನಿಕ ದ್ರವ್ಯವಾದುದರಿಂದ ಎರಡು ಮಾತುಗಳನ್ನಾದರೂ ಆಡಬೇಕಾಗಿದೆ ವಿ ಜೆ ಪಟೇಲರು ನೇಮಿಸಿರುವ ಟ್ರಸ್ಟಿಗಳು ದೇಶಿಗರು ಅವರ ವಾರಿಸ್ದಾರರೂ ದೇಶದ ಪ್ರಖ್ಯಾತ ತರುಣರು ಟ್ರಸ್ಟಿಶಿಪ್ ಮೇರೆಗೆ ತಾವು ಬೋಸರ ಕಾರ್ಯಕಲಾಪಗಳ ವಿವರವೇನೆಂದು ತಾವು ಕೇಳುತ್ತೇವೆನ್ನುವವರು ತುಸು ವಿಚಾರಿಸಿದರೆ, ಶ್ರೀ| ಪಟೇಲರ ಸಂಪತ್ತಿಗೆ ನಿಜವಾಗಿಯೂ ಯಾರು ಅಧಿಕಾರಿಗಳು ಎಂದು ತಿಳಿದುಬರಬಹುದು ಶ್ರೀ| ವಲ್ಲಭಭಾಯಿ ಪಟೇಲರು ದಿವಂಗತ ಪಟೇಲರ ಯಾವತ್ತೂ ವ್ಯವಹಾರಗಳಲ್ಲಿ ಸಣ್ಣ ಧ್ವನಿಯನ್ನಾದರೂ ಎತ್ತಲು ಅಧಿಕಾರವುಳ್ಳವರು ಅಂತಹ ಪ್ರತಿಭಾಶಾಲಿ ವ್ಯಕ್ತಿಯೊಡನೆ ವಿಚಾರಿಸಿಕೊಂಡು ಟ್ರಸ್ಟಿಗಳು ಆ ಮೊತ್ತದ ವ್ಯವಸ್ಥೆಯನ್ನು ಬೇಕಾದಂತೆ ಮಾಡಬಹುದು ಅಲ್ಲದೆ ವಹಾತ್ಮಾಜೀಯವರೂ ಇರುತ್ತಾರೆ ಸಾರ್ವಜನಿಕ ಕಾರ್ಯವನ್ನೇ ಉದ್ದೇಶಿಸಿ ಪಟೇಲರು ಆ ದ್ರವ್ಯವನ್ನು ಟ್ರಸ್ಟಿಗಳ ವಶವಿಟ್ಟಿರುವಾಗ ಈ ಟ್ರಸ್ಟಿಗಳು ಸಾರ್ವಜನಿಕರಲ್ಲಿ ಕೆಲವರನ್ನಾದರೂ ವಿಚಾರಿಸಿಕೊಳ್ಳಬಹುದಿತ್ತು ಅಲ್ಲದೆ ಶ್ರೀ| ಬೋಸರು ಕೂಡಾ ಬಿಸಿಬಿಸಿ ನುಡಿಗಳನ್ನಾಡಿ ಪತ್ರ ಬರೆದು ಶಾಂತಿಯನ್ನು ಮರೆತು ಉದ್ವಿಗ್ನರಾಗಿರುವುದೂ ಚರ್ಚಾಸ್ಪದವೇ ಸರಿ ಉಭಯ ಪಕ್ಷೀಯರೂ ಸಮಾಧಾನಗೊಂಡು, ವಿಚಾರಣಾ ಮಂಡಲವನ್ನು ರಚಿಸಿ, ವಿಷಯವನ್ನು ಇತ್ಯರ್ಥಿಸಿಕೊಳ್ಳುವ ಬದಲಿಗೆ ಕೋರ್ಟು ಪ್ರಾರಂಭವಾದೊಡನೆ ದಾವಾ ದಾಖಲುಮಾಡುವ, ಅಧಿಪ್ರಸಂಗಕ್ಕೆ ಕೈಯಿಡುವುದು ದೇಶದ್ರೋಹವಾಗಿದೆ ಶ್ರೀ| ಪಟೇಲರ ಈ ದ್ರವ್ಯವನ್ನು ಕೋರ್ಟಿಗರ್ಪಿಸುವುದಕ್ಕಾಗಿ ಬಿಟ್ಟುಹೋದುದಲ್ಲ ಸಾಯುವ ಆ ನಿಮಿಷದಲಿ ದೇಶವನ್ನು ಸ್ಮರಿಸಿ, ಅದರ ಸ್ವಾತಂತ್ರ್ಯದಲ್ಲೇ ಲೀನರಾಗಿ ಅವರಿರಾದರು. ದೇಶದ ಏಳ್ಗೆಗಬೇಕೆಂದು ಮನಃಪೂರ್ವಕವಾಗಿ ಆಶಿಸಿ ಅವರು ಈ ದಾನವನ್ನು ಮಾಡಿರುವರು ಅಂತಹ ದಿವ್ಯ ದ್ರವ್ಯವನ್ನು ಈ ಹಟಸಾಧಕರು ನ್ಯಾಯದ ನೆಪದಿಂದ ಕೋರ್ಟಿಗರ್ಪಿಸಲು ಸಿದ್ಧರಾದುದು ತೀರ ಹೆಡ್ಡತನ ಈ ವಿಷಯವು ದೇಶದ ಗಮನಕ್ಕೆ ಹೋಗಿ ಪ್ರಚಂಡ ಚಳವಳಿವು ಸಾಗಿ, ದಿವಂಗತ ಪಟೇಲರ ಸದುದ್ದೇಶವು ನೆರವೇರಲೆಂದು ಹಾರೈಸುವ

ಡಾ| ಠಾಕೂರರಿಗೆ ಹೋರರ ಸಂದೇಶ.

ಡಾ| ರವೀಂದ್ರನಾಥ ಠಾಕೂರರ ೭೫ನೇ ವಾರ್ಷಿಕೋತ್ಸವದ ದಿನ ಅವರನ್ನು ಅಭಿನಂದಿಸಿ ಸೆಕ್ರಿಟರಿ ಒಫ್ ಸ್ಟೇಟ್‍ಫೋರ್ ಇಂಡಿಯಾ (ಸರ್ ಸಾಮುವೇಲ್ ಹೋರರು) ಒಂದು ಸಂದೇಶವನ್ನು ಕಳುಹಿಸಿ 'ಪೂರ್ವ ಪಶ್ಚಿಮಗಳು ಒಂದನ್ನೊಂದು ತಿಳಿಯುವುದು ಅಗತ್ಯ ಹಾಗೆ ತಿಳಿಯಲು ಇಂಗ್ಲೀಷು ಉತ್ತಮ ಸಾಧನ ಇಂಗ್ಲೀಷನ್ನು ಅಭ್ಯಸಿಸಿ ನೀವು ವಿಶ್ವಕವಿ ನಿಮ್ಮ ರಾಷ್ಟ್ರದ ಖ್ಯಾತಿಗೂ ಕಾರಣರಾಗಿರುವಿರಿ. ನಿಮ್ಮ ಇಂಗ್ಲಿಷನ್ನು ಕಲಿಯುವ ಸುಯೋಗವು ನನಗಿರಲಿ' ಎಂದಿರುವರು ಎಂತಹ ಭಾಷಾಪ್ರೇಮ! ೩೦೦ ಮಿಲಿಯ ಭಾರತೀಯರಲ್ಲಿ ಹಲಕೆಲವರು ಇಂಗ್ಲಿಷು ಕಲಿತು, ಇಂಗ್ಲಿಷಿನಲಿ ಗದ್ಯಪದ್ಯಗಳನ್ನು ಬರೆದೊಡನೆ ಪೂರ್ವಪಶ್ಚಿಮಗಳು ಒಂದಾಗುವುವೆಂದು ತಿಳಿಯುವ ಸರ್ ಸಾಮುವೇಲ್ ಹೋರರ ಮತವು ಎಂದೂ ಗ್ರಾಹ್ಯವಾಗಿಲ್ಲ.

ಚುಟುಕು ವಾರ್ತೆ

ತಿರುಚಿನಾಪಳ್ಳಿಯಲ್ಲಿ ಗಾಡಿಗಾರರ ಮುಷ್ಕರದಾಗಿ ಅವರೆಲ್ಲರೊಬ್ಬನು ಬೆಂಚ್ ಮೇಜಿಸ್ಟ್ರೇಟಿಂಗೆ ಹೊಡೆದನೆಂದು ತಿಳಿದುಬರುತ್ತದೆ.

ಕೊಲೊಂಬೋದಲ್ಲಿ ಸ್ಮಿತ್ ಎಂಬ ಇಂಜಿನಿಯರರಿಗೆ ಕೂಲಿಯಾಳುಗಳು ಹೊಡೆದುದರಿಂದ ಅವನು ಮೃತನಾದನು.

ಲಕ್ನೋ ತೋಟಗಳ ಸಂಘದ ಸೆಕ್ರೆಟರಿಗಳಾದ ಸನ್ಯಾಲ್, ಶರ್ಮ, ಅಚಾರ್ಯರ್ ಎಂಬ ಮೂವರನ್ನು ಕೈದುಮಾಡಿರುವರು

ದಾದೂವಿನಲ್ಲಿ ಒಂದು ಭಯಂಕರ ಬಿರುಗಾಳಿಯು ಬೀಸಿ, ಮನೆಯ ಮಾಡುಗಳು ಆಕಾಶದಲ್ಲಿ ಹಾರಿ ಹಲವು ಮೈಲುಗಳ ದೂರಕ್ಕೆ ಸೆಯಲ್ಪಟ್ಟಿವೆ

ಕರಾಚಿಯಲ್ಲಿ ಇಬ್ಬರು ವಿವಾಹಿತ ಸ್ತ್ರೀಯರನ್ನು ಕದ್ದೊಯ್ಯುವುದಕ್ಕಾಗಿ ೧೧ ಮಂದಿ ಮಹಮ್ಮದೀಯರನ್ನು ಸೆರೆಹಿಡಿದಿದ್ದಾರೆ

ಮದ್ರಾಸಿನ ಚಿದಂಬರಾನಂದರವರ ಪತ್ನಿಯು, ತನ್ನ ಮಗನ ಶವದಹನದ ವೇಳೆ ಚಿತೆಗೆ ಹಾರಿ ಸುಟ್ಟು ಸತ್ತಳು

ಮುಕ್ಕಾಳಿಗೆ ಎರಡು ಸಲ ಕಾಲ್ನಡೆಯಿಂದಲೇ ಹೋಗಿ ಬಂದ ಒಬ್ಬ ಮುಸಲ್ಮಾನನು ಕರಾಚಿಯಲ್ಲಿಳಿದಿರುವನು

ಜಬ್ಬಲಪುರದಲ್ಲಿ ೪೦ ಮಂದಿ ದರೋಡೆಗಾರರು ಒಂದು ಮನೆಯೊಳಗೆ ನುಗ್ಗಿ ಸಿಕ್ಕಿದ ಹಣವನ್ನು ದೋಚಿಕೊಂಡು ಹೋಗಿ ಒಬ್ಬ ಹುಡುಗನನ್ನು ಜಖಂಗೊಳಿಸಿರುವರು

ಲಕ್ನೋವಿನಲ್ಲಿ ನರ್ತನ ಮಂಡಳಿಯೊಂದ ಬೇಟೆಯಾಟಿಗೆ ಪ್ರಾರಂಭಿಸಿ ನರ್ತಕಿಯೊಂದಿಗೆ ಪೈಲ್ವಾನ ಕೈಕ್ಕೊಳಗಾದರು

ಅಮೃತಸರದ ಕತ್ರಿರ್ ಸಿಂಗ್‌ನಲ್ಲಿ ಒಂದ ಬೆಂಕಿಯೆದ್ದು ಹಲವು ಕಟ್ಟಡಗಳು ಸುಟ್ಟು ೧೦ ೦೦೦ ರೂಪಾಯಿಗಳ ನಷ್ಟವುಂಟಾದಂತು

ಮುಂಬಾಯಿಯಲ್ಲಿ ಆರು ಮಂದಿ ಒಟ್ಟಾಗಿ ಒಬ್ಬನ ಥೈಲಿಯನ್ನು ಲಪಟಾಯಿಸಿ ಓಡಿ, ಕೊನೆಗೆ ಸೆರೆಹಿಡಿಯಲ್ಪಟ್ಟರು

ಎಲ್ಲೂರಿನಲ್ಲಿ ಬೆಂಕಿಯೆದ್ದು ಕಡೇಪಳ್ಳಿಗುಡೆಂ ಎಂಬ ಹಳ್ಳಿಯು ಭಸ್ಮವಾಗಿ ೨೦ ೦೦೦ ರೂಪಾಯಿಗಳಷ್ಟು ನಷ್ಟವುಂಟಾಗಿದೆ

ಅಳ್ವಾರ್ ಮಹಾರಾಜನು ಸಂಸ್ಥಾನಕ್ಕೆ ಒರವಾಗಿ ಲೊಲ್ಲೆವು ಎಂದು ಇಂಡಿಯಾ ಸರಕಾರದ ಹೇಳಿಕೆ

ಹಣ್ಣುಹಂಪಲುಗಳ ವಿಕ್ರಯದ ಮೇಲೆ ಲೈಸೆನ್ಸ್ ಫೀಸನ್ನು ಹೆಚ್ಚಿಸಬೇಕೆಂದು ಮುಂಬಾಯಿಯಲ್ಲಿ ತೀರ್ಮಾನವಾದೊಡನೆಯೇ ಅದರ ವ್ಯಾಪಾರಿಗಾರರೆಲ್ಲ ಮುಷ್ಕರ ತೊಟ್ಟರು ಎಲ್ಲಿ ಹುಡುಕಿದರೂ ಹಣ್ಣುಹಂಪಲು ಕಾಣಸಿಕ್ಕಲಿಲ್ಲ

ಸಂಯುಕ್ತ ಪ್ರಾಂತ್ಯದಲ್ಲಿ ಜುಬಿಲಿಯ ನಿಧಿಯು ೭,೬೩,೧೯೮ ರೂಪಾಯಿಗಳಷ್ಟಾಗಿದೆ

ಟಾಲ್ಬರ್ ಎಂಬವನು ಇಂಗ್ಲಾಂಡಿನಿಂದ ಹಿಂದೂದೇಶಕ್ಕೆ ಕಾಲ್ನಡೆಯಿಂದಲೇ ಒಂದು ಗಡಿಯಾರದಲ್ಲಿ ತನ್ನ ಅನುಭವವನ್ನು ಹೇಳಿದನು

ಲಾಹೋರಿನಲ್ಲಿಯ ದೆಪ್ಯುಟಿ ಕಮಿಷನರರ ಕೆಲಸಗಾರನ ಪತ್ನಿಯೊಬ್ಬಳು ಪುರುಷ ವೇಷಧಾರಿಯಾಗಿ ಗಂಡನ ಆಭರಣಗಳನ್ನೆತ್ತಿ ದಾರಿನಡೆಯುತ್ತಿರುವಾಗ, ಪೋಲೀಸರಿಂದ ಸೆರೆಹಿಡಿಯಲ್ಪಟ್ಟಳು

ಉದಕಮಂಡಲದಲ್ಲಿ ಕಲೆಕ್ಟರರ ಪರಿಷತ್ತು ಮದ್ರಾಸ್ ಗವರ್ನರರ ಅಧ್ಯಕ್ಷತೆಯಲ್ಲಿ ಜರಗುತ್ತಿದೆ

ಹಿಂದೂಮುಸಲ್ಮಾನರ ಬಿಲ್ಲಿನ ಕುರಿತಾಗಿ ಉದಕಮಂಡಲದಲ್ಲಿ ಸಿಲೆಕ್ಟ್ ಕಮಿಟಿಯು ಆಲೋಚಿಸುತ್ತಿದೆ ಮಾಂಗನೂರಿನ ಡಿ. ಆರ್ ಆಚಾರ್ಯರನ್ನು ಕಂಡು ವಿಚಾರಿಸಿಕೊಂಡರು

ಶ್ರೀಮತಿ ಕಮಲಾ ನೆಹರುರವರು ದೇಹಾರೋಗ್ಯ ಸಂಪಾದನೆಗಾಗಿ ಯೂರೋಪಿಗೆ ಕಳೆದ ವಾರ ಹೊರಟು ಹೋದರು.

ಗಾಂಧೀಜಿಯವರು ಬೋರಸದಿಗೆ ಹೋಗಿ ಅಲ್ಲಿಯ ಪ್ಲೇಗ್ ಹಾವಳಿಯನ್ನು ತಿಳಿದುಕೊಂಡುಬರಲು ಹೊರಡಲಿರುವರು

ಈ ವಾರದ ತಂತಿ ವಾರ್ತೆಗಳು:

400 ಚೀನೀಯರ ಮರಣ!

ಸಿಂಗಪೂರ್, ಮೇ ೧೫.

ಸಿನಾಫೂ ಎಂಬಲ್ಲಿ ೪೦೦ ಮಂದಿ ಚೀನೀಯರು ಒಂದು ನೆರೆಗೆ ಹಠಾತ್ತಾಗಿ ೪೦ ನಿಮಿಷಗಳೊಳಗೆ ಮೃತ್ಯುವಶರಾದರು.

ಮಾರ್ಟಿನ್ ಇನ್ಸಲ್ ಸಿಕ್ಕಿಬಿದ್ದ

ಒಟ್ಟಾವಾ, ಮೇ ೧೧

ಸಾಮುವೇಲ್ ಇನ್ಸಲ್ ಎಂಬ ಬಿಲಿಯಾಧಿಪತಿಯ ಸಹೋದರನಾದ ಮಾರ್ಟಿನ್ ಇನ್ಸಲ್ ಎಂಬವನು ತನ್ನ ಮೇಲಿನ ವಾರಂಟನ್ನು ಸ್ವೀಕರಿಸಿ ಚಿಕಾಗೋ ಕೋರ್ಟಿನಲ್ಲಿ ೧೧,೦೦೦ ಡಾಲ್ಲರುಗಳ ಭದ್ರತೆಯ ಮೇಲೆ ಬಂಧಿಸಲ್ಪಟ್ಟಿರುವನು ಒಂದು ಚೀಲವನ್ನು ಮೋಸಗೊಳಿಸಿದ ತಕ್ಷೀರು ಅವನ ಮೇಲೆ ಸ್ಥಾಪಿತವಾಗಿದೆ

ಫ್ರಾನ್ಸ್ ರಷ್ಯಾಗಳ ಒಗ್ಗಟ್ಟು.

ಮೊಸ್ಕೊ, ಮೇ ೧೬.

ಎಂ ಲಾವಲರೂ ಸ್ಟೇಲಿನರೂ ಪರಸ್ಪರ ನಡೆಸಿ ಒಂದು ಐತಿಹಾಸಿಕ ಒಪ್ಪಂದವನ್ನು ಮಾಡಿಕೊಂಡಿರುವರು. ಅದರ ವಿವರವು ಹೊರಗಾಗಿರುವುದಿಲ್ಲ.

ಪೆರಿಸ್‌ನಲ್ಲಿ ಯುದ್ಧದ ಭ್ರಾಂತಿ ಕಲ್ಪನೆಯ ವೈರಿಗಳು.

ಪೆರಿಸ್, ಮೇ ೧೪

ಪೆರಿಸ್ ನಗರದಲ್ಲಿ ಸೈನಿಕರು ಯುದ್ಧಸನ್ನದ್ಧರಾಗುತ್ತಿರುವರು ಮೂನ್ನೂರು ಸೈನಿಕರು ಪಟ್ಟಣದಲ್ಲೆಲ್ಲ ಓಡ್ಯಾಡಿ ಅವಿತುಕೊಂಡು ಆಕಾಶದಲ್ಲಿ ಹಾರುತ್ತಿದ್ದ ವಿಮಾನಗಳಿಂದ ಬೀಳುವ ಅನಪಾಯಕರ ಬಾಂಬುಗಳಿಂದ ತಪ್ಪಿಸಿಕೊಂಡು, ವೈರಿಗಳು ನಗರವನ್ನು ಪ್ರವೇಶಿಸಿದರೆ ಹೇಗೆ ಎದುರಿಸಬೇಕೆಂದು ಕಲಿಸಲಿತರು

ಶ್ರೀಮತಿ ಕಮಲಾದೇವಿಯವರು.
ಅಸ್ಸಾಂ ಸೋಶಿಯಲಿಸ್ಟ್ ಪರಿಷತ್ತಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು

ಮದ್ರಾಸು ಪ್ರಾಂತೀಯ ಕಾಂಗ್ರೆಸ್ಸಿನ ಹೊಸ ಅಧ್ಯಕ್ಷರಾದ
ಶ್ರೀ। ಸತ್ಯಮೂರ್ತಿಯವರು.

'ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದು'

ಆಫ್ರಿಕದಲ್ಲಿ ಚಟ್ಟಿಗಳ ಹಾವಳಿ ಬಹು ಹೆಚ್ಚು ಅವುಗಳನ್ನು ನಾಶಮಾಡಲು ಸಾವಿರಾರು ರೂಪಾಯಿಗಳು ಖರ್ಚಾಗಿರುವುವು ಆದರೂ ಹಾವಳಿಯೇನೂ ಕಡಿಮೆಯಾಗಲಿಲ್ಲ ಈಗ ಹೊಸತಾಗಿ ಒಂದು ವಿಷವನ್ನು ಕಂಡು ಹಿಡಿದಿದ್ದಾರೆ ಇದರ ಸಹಾಯದಿಂದ ಮೂರು ವರ್ಷಗಳಲ್ಲಿ ಚಟ್ಟಿಗಳ ಹೆಸರಿಲ್ಲದಂತೆ ಮಾಡಬಹುದು.

ವಿದೇಶೀ ವ್ಯಾಪಾರ ಬಿದ್ದು ಹೋಗಿದೆ

ಪ್ಯಾರಿಸ್ ಮೇ ೧೬

ಫ್ರಾನ್ಸಿನ ವಿದೇಶೀ ವ್ಯಾಪಾರವು ಕಳೆದ ೪ ತಿಂಗಳಿಂದ ಬಹಳ ಬಿದ್ದು ಹೋಗಿದೆ ಫ್ರಾನ್ಸಿಗೆ ಆಮದಾದ ಸಾಮಾನುಗಳ ಬೆಲೆ ೧೯೦೦೦೦೦೦ ಪೌಂಡು ರಫ್ತಾದ ಸಾಮಾನುಗಳ ಬೆಲೆ ೭೫೦೦೦೦೦೦ ಪೌಂಡುಗಳ

ಕೋಟ್ಯಾಧಿಕಾರಿಣಿಯ ದಾಂಪತ್ಯ ವಿಚ್ಛೇದನ.

ಅಮೇರಿಕಾ, ಮೇ ೧೦

ಫುಲ ವರ್ಷಗಳಲ್ಲಿ ಕೋಟ್ಯಾಂತರ ಡಾಲರಿನ ಆಸ್ತಿಯನ್ನು ಪಡೆದಿರುವ ಬಾರ್ಬರಾ ಹಟ್ಟನ್ ಎಂಬಾಕೆಯು ತನ್ನ ವಿವಾಹಿತ ಪತಿಯಾದ ಪ್ರಿನ್ಸ್ ಅಲೆಕ್ಸಿಸ್ ಡಿವಾನಿ ಎಂಬಾತನನ್ನು ಕೋರ್ಟಿನ ಮುಖಾಂತರ ಬಿಟ್ಟುಬಿಟ್ಟಳು. ಇದರ ದಾಂಪತ್ಯ ವಿಚ್ಛೇದನದ ಅರ್ಜಿಯ ಮೇಲೆ ಕೋರ್ಟಿನಲ್ಲಿ ಕೆಲವು ನಿಮಿಷಗಳು ಮಾತ್ರ ಗುಪ್ತ ವಿಚಾರಣೆಯಾಗಿ, ಆಕೆಯ ಅಭೀಷ್ಟವು ನೆರವೇರಿತು, ತನ್ನ ಗಂಡನು ತನ್ನೊಡನೆ ಬಹಳ ಕ್ರೂರ ರೀತಿಯಿಂದ ವರ್ತಿಸುತ್ತಿದ್ದನೆಂಬುದೇ ಆಕೆಯ ವಾದವಾಗಿ ಅದಕ್ಕೆ ಪ್ರಿನ್ಸ್ ಅಲೆಕ್ಸಿಸನ ವಿವಾದವು ಒಪ್ಪಲಿಲ್ಲ ತಾನು ಹಾಗೆ ಕ್ರೂರರೀತಿಯಲ್ಲಿ ವರ್ತಿಸಲಿಲ್ಲವೆಂದು ಅವನು ಹೇಳಿದನು. ಈಗ ಆಕೆಯು ಒಬ್ಬ ಡೇನಿಷ್ ನೋಬಲ್ಲನನ್ನು ಮದುವೆಯಾಗುವುದಾಗಿ ತಿಳಿಸಿದ್ದಾಳೆ.

೬೦೦ ಲಕ್ಷ ಡಾಲರುಗಳ ಸಾಲ

ಒಟ್ಟಾವಾ ಮೇ ೨೬

ಕೆನಡಾ ಸರಕಾರವು ೬೦೦ ಲಕ್ಷ ಡಾಲರುಗಳ ಸಾಲವನ್ನು ಎತ್ತಲು ನಿರ್ಧರಿಸಿ ಸಾಲವನ್ನು ಎತ್ತುವ ದಿವಸವೇ ೬೦೦ ಲಕ್ಷಕ್ಕಿಂತಲೂ ಹೆಚ್ಚಾಗಿ ಅರ್ಜಿಗಳು ಬಂದವು ಕೇಳಿದ್ದಕ್ಕಿಂತ ಹೆಚ್ಚಾಗಿಯೇ ದೊರೆತುಬಂತು ಆದರೆ ೬೦೦ ಲಕ್ಷವನ್ನು ತೆಗೆದುಕೊಂಡು ಉಳಿದ ಹಣವನ್ನು ಹಿಂದಕ್ಕೆ ಕೊಟ್ಟುಬಿಟ್ಟರು

ಫ್ರಾನ್ಸಿನಲ್ಲಿ ಹಡಗಿನ ಕೆಲಸಗಾರರ ಮುಷ್ಕರ.

ಪ್ಯಾರಿಸ್ ಮೇ ೧೯.

ಫ್ರಾನ್ಸಿನಲ್ಲಿ ೧೦ ಸಾವಿರ ಜನ ಹಡಗಿನ ಕೆಲಸಗಾರರು ಮುಷ್ಕರ ಹಿಡಿದಿದ್ದಾರೆ. ಮುಷ್ಕರ ಪತ್ರಿಕೆಗಳಾದ ಎಂ ಫ್ಲಾಂಡಿನ್‌ರವರು ಯಾವುದಾದರೂ ಒಪ್ಪಂದವನ್ನು ತರಬೇಕೆಂದು ಬಹಳ ಪ್ರಯತ್ನ ನಡೆಸುತ್ತಿದ್ದಾರೆ ಆದರೂ ನಾಳೆ ಹೊರಡಬೇಕಾಗಿರುವ ಧಿ ಪ್ಲೇನ್ ಮುಂತಾದ ಹಡಗುಗಳು ಹೊರಡುವಷ್ಟರ ಅಲ್ಲವೇನೋ ಗೊತ್ತಿಲ್ಲ ಮುಷ್ಕರವು ಹಡಗಿನ ಕೆಲಸಗಾರರ ಯೂನಿಯನ್ನಿನಿಂದ ಕರೆಯಲ್ಪಟ್ಟದ್ದಲ್ಲ ಅದರೂ ೧೦ ಸಾವಿರ ಜನರು ಮುಷ್ಕರ ಹಿಡಿದಿದ್ದಾರೆ ಈ ಕೆಲಸಗಾರರಿಗೆ ವರ್ಷಕ್ಕೆ ೧೫ ದಿನಗಳ ರಜಾ ಬೇಕೆಂದೂ ವಯಸ್ಸಾದ ಮೇಲೆ ಪೆನ್ಷನ್ ಬೇಕೆಂತಲೂ ಕೇಳುತ್ತಿದ್ದಾರೆ ಈ ಮುಷ್ಕರಗಾರರ ನಿಜವಾದ ಭಾವನೆ ಫ್ರಾನ್ಸಿನಲ್ಲೆಲ್ಲ ಮುಷ್ಕರ ಹಿಡಿಯಬೇಕೆಂದು. ಮುನಿದ ಮಾಡಿಕೊಳ್ಳಲಾಗಿದೆ

೩೬ ವಿದ್ಯಾಧಿಕಾರಿಗಳ ರಾಜೀನಾಮೆ.

ಟರ್ಕಿ, ಮೇ ೧೬

ವಿದ್ಯಾ ಇಲಾಖೆಯನ್ನು ಸಂಪೂರ್ಣವಾಗಿ ಸರಕಾರವೇ ತನ್ನ ಅಧೀನಕ್ಕೆ ತೆಗೆದುಕೊಳ್ಳಲು ನಿರ್ಧರಿಸಿದುದರಿಂದ ವಿದ್ಯಾ ಇಲಾಖೆಯ ೩೬ ಮಂದಿ ಅಧಿಕಾರಿಗಳು ರಾಜೀನಾಮೆ ಕೊಟ್ಟಿದ್ದಾರೆ ಇವರಲ್ಲಿ ೫ ಜನರು ಮಾಜಿ ಮಂತ್ರಿಗಳು ಇಬ್ಬರು ನ್ಯಾಯಾಧೀಶರು ಅನೇಕ ಸೈನ್ಯಾಧಿಕಾರಿಗಳೂ ಕೆಲವು ಪ್ರೊಫೆಸರುಗಳೂ ಇರುವರು

ಫ್ರೆಂಚ್ ಮುನಿಸಿಪಾಲಿಟಿಗಳಲ್ಲಿ ಕಮ್ಯೂನಿಸ್ಟರಿಗೆ ಜಯ.

ಪ್ಯಾರಿಸ್, ಮೇ ೧೫.

ಫ್ರಾನ್ಸಿನ ಮುನಿಸಿಪಲ್ ಚುನಾವಣೆಗಳಲ್ಲಿ ಕಮ್ಯೂನಿಸ್ಟರು ಅಭೂತಪೂರ್ವವಾಗಿ ವಿಜಯ ಪಡೆದಿದ್ದಾರೆ. ಪ್ಯಾರಿಸ್ ಮುನಿಸಿಪಲ್ ಕೌನ್ಸಿಲಿನಲ್ಲಿ ಮೊದಲು ಒಬ್ಬರೇ ಕಮ್ಯೂನಿಸ್ಟ್ ಸದಸ್ಯರಿದ್ದರು ಈಗ ೬ ಜನರು ಚುನಾಯಿತರಾಗಿದ್ದಾರೆ. ಇತರ ಮುನಿಸಿಪಾಲಿಟಿಗಳಲ್ಲಿ ಅವರಿಗೆ ಬಹುಮತ ಸಿಕ್ಕಿದೆ, ೯ ಮುನಿಸಿಪಾಲಿಟಿಗಳಲ್ಲಿ ಅವರ ಸಂಖ್ಯೆಯು ಕಡಿಮೆಯಾಗದೆ ಗೆದ್ದಿದ್ದಾರೆ.

ಕಳೆದ ವಾರಗುಂಟೂರಿನಲ್ಲಿ ೧೧೪ ಡಿಗ್ರಿ ಉಷ್ಣತೆ ಕಂಡಿತು

ವಜ್ರಗಳು! —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ

ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ ' ಎಕ್ಸ್‌ಟ್ರಾ ವ್ಹಾಹಿಟ್'' ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

Part Proprietors of —
Sri Krishna Mills/ & Co
Oil Manufacturers
Bunder, Mangalore.

Bhagavan Ganesh Pai & Co
Copper Sheet & Twist
Merchants, Camp Bazar,
Cannanore.

Representatives for the W.C.
M/s. A. & F. Harvey
Cotton Spinners,
Tuticorin, Madura &c.

Guardian Assurance Co., Ltd
(Incorporated in England)
Head Office. 68, King
William Street,
London, E. C. 4.

ನೂರಾರು ಮೊಟ್ಟೆಗಳನ್ನಿಡಲಿದ್ದ ಪುರುಷನು ಸ್ವರ್ಗಸ್ಥನಾದನು!

ಆಶ್ಚರ್ಯಕರ ಸುದ್ದಿಯಿದು! ಬಂಕುರಾ ಆಸ್ಪತ್ರೆಯಲ್ಲಿ ಒಂದು ಅದ್ಭುತ ವಿಷಯವು ಪ್ರಕಟವಾಗಿದೆ. ಅಲ್ಲಿಯ ನಾಗರಿಕನೊಬ್ಬನು ಬಹು ತರವಾದ ಉದರನೋವನ್ನು ಹೋಗಲಾಡಿಸುವುದಕ್ಕಾಗಿ ಬಂಕುರಾ ಆಸ್ಪತ್ರೆಗೆ ಬಂದನು. ತನ್ನ ಹೊಟ್ಟೆಯ ಮೇಲೆ ಶಸ್ತ್ರಕ್ರಿಯೆಯನ್ನು ನಡೆಸಲೇಬೇಕೆಂದನು. ಒಪರೇಶನ್ ನಡೆಸಿದರು. ಹೊಟ್ಟೆಯನ್ನು ತಿವಿದು ಪರೀಕ್ಷಿಸಿದಾಗ, ಅಲ್ಲಿ ಮೊಟ್ಟೆಯಂತಿರುವ ನೂರಾರು ಉಂಡೆಗಳು ಅವನ ಹೊಟ್ಟೆಯಲ್ಲಿ ಕಂಡುಬಂದುವು. ಅವುಗಳು ಮೊಟ್ಟೆಗಳಂತೆಯೇ ಇದ್ದುವು. ಆ ಮೊಟ್ಟೆಗಳನ್ನೆಲ್ಲ ತೆಗೆದು ವಸ್ತು ಸಂಶೋಧನಾಲಯದಲ್ಲಿಟ್ಟಿರುವರು. ಅವುಗಳನ್ನು ನೋಡುವುದಕ್ಕಾಗಿ ಸಾವಿರಾರು ಜನರು ಅತ್ತ ತೆರಳುತ್ತಿರುವರು. ಮಾತ್ರ, ದುಃಖಕರ ವಿಷಯವೆಂದರೆ— ಆ ಮೊಟ್ಟೆಗಳ ತಂದೆಯು, ಶಸ್ತ್ರಕ್ರಿಯೆಯು ನಡೆದೊಡನೆ ಸ್ವರ್ಗವಾಸಿಯಾದನು. ವಿಚಿತ್ರ ದೇಹಪ್ರಕೃತಿಯಿಂದಾಗಿ ಈ ಮೊಟ್ಟೆಗಳು ಉಂಟಾಗಿರಬಹುದೆಂದು ಊಹೆ.

ಕುಂಭಕೋಣಮಿಗೆ ಅಪಶಕುನವೋ? ರಥದ ಗೋಪುರವು ಬಿದ್ದಿತು!

ವೈಕಾಖ ಉತ್ಸವದ ದಿನ ಕುಂಭಕೋಣದ ಶ್ರೀ ಸಾರಂಗಪಾಣಿ ದೇವಸ್ಥಾನದ ದೊಡ್ಡ ರಥವನ್ನು ಮಹಾ ವಿಜೃಂಭಣೆಯಿಂದ ಎಳೆದರು. ರಥವು ಅಯ್ಯಂಗಾರ್ ಮಾರ್ಗಕ್ಕೆ ಬರುತ್ತಲೇ ಮಾರ್ಗದಲ್ಲಿ [illegible] ಒಂದು ಚಪ್ಪರಕ್ಕೆ ರಥದ ಗೋಪುರವು ತಗಲಿ ಅದು ಮುರಿದು ಕೆಳಗೆ ಬಿತ್ತು. ದೈವವಶಾತ್ ಯಾರೂ ಜಖಂಗೊಳ್ಳಲಿಲ್ಲ. ಉತ್ಸವದಲ್ಲಿ ಭಾಗವಹಿಸಿದವರೆಲ್ಲರೂ ಹಾಹಾಕಾರವನ್ನೇ ಎಬ್ಬಿಸಿಬಿಟ್ಟರು. ಪಂಡಿತ ತಾತಾಚಾರ್ಯ ಎಂಬವರು ಎದುರು ಬಂದು ರಥವನ್ನು ಮುಂದಕ್ಕೆ ಎಳೆಯಲಾಗದೆಂದರು. ಅಪಶಕುನವಾಗಿದೆಯಾದುದರಿಂದ ಗೋಪುರವಿಲ್ಲದೆ ರಥವನ್ನು ಎಳೆಯಬಾರದೆಂದರು. ಬಹು ಹೊತ್ತು ತರ್ಕ ವಿತರ್ಕಗಳಾದ ಮೇಲೆ ಕೆಲವು ಅವರ್ಣ ಹಿಂದೂಗಳನ್ನು ರಥದ ಮೇಲೆ ಹತ್ತಿಸಿ, ಅದರ ಗೋಪುರವನ್ನು ಸಜ್ಜುಗೊಳಿಸಲಾಯಿತು. ಒಡನೆ ಸನಾತನಿಗಳು ಬೊಬ್ಬಿಡಲಾರಂಭಿಸಿದರು. ಮೂರ್ತಿಯು ರಥದೊಳಗೆಯೇ ಇರುವಾಗ ಶೂದ್ರರು ರಥವನ್ನು ಹತ್ತಿದುದು ಮಹಾ ತಪ್ಪೆಂದು ನಿರ್ಣಯವಾಯಿತು. ಅಷ್ಟರಲ್ಲಿ ರಂಗಸ್ವಾಮಿ ಅಯ್ಯಂಗಾರ್ಯರೆಂಬವರು ಬಂದು ರಥವನ್ನೆಳೆಯಿರೆಂದರು. ರಥವು ಮುನ್ನಡೆಯಿತು. ಕೆಲವು ಗಜಗಳಷ್ಟು ದೂರ ಹೋಗುತ್ತಲೇ ಒಂದು ಕಡೆಯಲ್ಲಿ ರಥವು ಕೆಡವಿ ಬೀಳುವಂತಾಯಿತು. ಈ ಅಪಶಕುನಗಳೆಲ್ಲ ಕುಂಭಕೋಣ ನಗರಕ್ಕೆ ದೊಡ್ಡ ಅನಾಹುತವನ್ನು ತಂದೊಡ್ಡುವುವೆಂದು ಜನರು ಗುಜುಗುಟ್ಟುತ್ತಿರುವರು.

ಅಪ್ರಾಯಸ್ಥ ವಿದ್ಯಾರ್ಥಿನಿಯೊಡನೆ ಅಧ್ಯಾಪಕರೇ ಪರಾರಿಯಾಗಿರುವರು!

ಶಾಲಾಧ್ಯಾಪಕರ ಮೇಲೆ ಆರೋಪ ಹೊರಿಸುವುದು ತಪ್ಪೆಂದಾದರೂ, ಕರಾಚಿಯಿಂದ ಮೇ ತಾ ೧೭ರಲ್ಲಿ ಒಂದು ವಾರ್ತೆಯು ಕಲಕಿದೆ. ನವಾಬ ಷಹದಲ್ಲಿ ಒಬ್ಬ ಮುಸ್ಲಿಂ ಉಪಾಧ್ಯಾಯನು ಒಬ್ಬ ಅಪ್ರಾಯಸ್ಥ ವಿದ್ಯಾರ್ಥಿನಿಯೊಡನೆ ಪರಾರಿಯಾಗಿರುವನೆಂದೂ, ಹುಡುಗಿಯ ತಂದೆಯು ಪೋಲೀಸರಿಗೆ ತಿಳಿಸಿರುವನೆಂದೂ ಗೊತ್ತಾಗಿದೆ.

ಅದ್ಭುತ ವಾರ್ತೆ.

ಆದಿ ಶಂಕರಾಚಾರ್ಯರ ವಿಗ್ರಹದ ಪಾದದಡಿಯಿಂದ ನೀರು ಹರಿಯುತ್ತಿದೆ!

ಪಟ್ಟಣದಲ್ಲೆಲ್ಲಾ ಕೋಲಾಹಲ!

ನಾಸಿಕದ ಶೃಂಗೇರಿ ಶ್ರೀ ಜಗದ್ಗುರು ಶಂಕರಾಚಾರ್ಯರ ಮಠದಲ್ಲಿ ಒಂದು ವೈಚಿತ್ರ್ಯವು ನಡೆದಿದೆ. ಪಂಚವಟಿಯ ಆದಿ ಶಂಕರಾಚಾರ್ಯರ ಒಂದು ಕಲ್ಲಿನ ವಿಗ್ರಹವನ್ನು ಎರಡು ವಾರಗಳ ಹಿಂದೆ ಅಲ್ಲಿ ಅಭಿಷೇಕ ಮಾಡಿ ಪ್ರತಿಷ್ಠೆ ಮಾಡಿದರು. ಪೂಜಾದಿಗಳು ನಡೆದ ಮೇಲೆ ಗುಡಿಗೆ ಬಾಗಿಲು ಹಾಕಿ ಪೂಜಾರಿಯು ಹೋದನು. ಮರುದಿನ ಬಂದು ನೋಡಲು ಮೂರ್ತಿಯ ಪಾದದಡಿ ನೀರು ನಿಂತುದು ಕಂಡುಬಂತು. ಆವನು, ಆ ನೀರು ಎಲ್ಲಿಂದ ಬಂತೆಂದು ತಿಳಿಯಲಾರದಾದನು— ಗುಡಿಸಿ ತೆಗೆದನು. ಮರುದಿನ ಪುನಃ ಹಾಗೆಯೇ ನೀರು ವಿಗ್ರಹದ ಸುತ್ತಲೂ ಒಡ್ಡಿಬಂದಿತು. ವಿಚಾರಿಸಲಾಗಿ ಮೂರ್ತಿಯ ಪಾದದಡಿಯಿಂದ ಅತ್ಯದ್ಭುತಕರ ರೀತಿಯಿಂದ ನೀರು ಹನಿಹನಿಗಳಾಗಿ ಒಸರುತ್ತಿದ್ದುದು ಕಂಡುಬಂತು. ಅಲ್ಲಿಯ ಹಿಂದೂಗಳಿಗೆ ಈ ವಾರ್ತೆಯು ತಿಳಿದಂದಿನಿಂದ ಆ ನೀರನ್ನು ಕುಡಿಯುವುದಕ್ಕಾಗಿ ಸಾವಿರಾರು ಜನರು ಅತ್ತ ತೆರಳುತ್ತಿರುವರು. ರಾತ್ರಿಂದಿವ ಆ ದೇವಸ್ಥಾನವು ಮಹಾ ಜಾತ್ರೆಯ ಸ್ಥಳವಾಗಿ ಪರಿಣಮಿಸಿರುತ್ತದೆ.

ದಿವಂಗತ ವಿಟ್ಠಲಭಾಯಿ ಪಟೇಲರ ವೀಲಿನ ಮೇಲೆ

ದಿವಂಗತ ವಿ ಜೆ ಪಟೇಲರು ತಾವು ಸಾಯುವಾಗ ತನ್ನ ಆಸ್ತಿಯಿಂದ ೧ ಲಕ್ಷ ರೂಪಾಯಿಗಳನ್ನು ರಾಜಕೀಯ ವಿಷಯಕ್ಕಾಗಿ, ಅದನ್ನು ಭಾರತದ ಸಂಬಂಧ ಮಾಡ ಪ್ರಚಾರ ಕಾರ್ಯವನ್ನು ವಿದೇಶಗಳಲ್ಲಿ

ದಿವಂಗತ ವಿ ಜೆ ಪಟೇಲರು.

ಮಾಡಲು ಶ್ರೀ ಸುಭಾಷ್ಚಂದ್ರ ಬೋಸರಿಗೆ ಕೊಡಬೇಕು." ಎಂದು ವೀಲು ಬರೆದು ಮೃತರಾಗಿದ್ದರಷ್ಟೆ. ದಿವಂಗತರು ತಾನು ಸಾಯುವ ಮೊದಲು ಡಾ। ಪುರುಷೋತ್ತಮ ಪಟೇಲ ಮತ್ತು ಗೋವರ್ಧನದಾಸ್ ಎಂಬವರನ್ನು ಟ್ರಸ್ಟಿಗಳನ್ನಾಗಿ ನೇಮಿಸಿದ್ದರು. ಹಣದ ಕುರಿತಾಗಿ ಈಗ ಚರ್ಚೆಯೆದ್ದಿದೆ.

ಸುಭಾಷ್ಚಂದ್ರ ಭೋಸರು ವೀಲಿನ ಪ್ರಕಾರವಾಗಿ ಆ ಹಣವನ್ನು ತನಗೆ ಕೊಡಬೇಕೆಂದು ಕೇಳಿದಾಗ, ಟ್ರಸ್ಟಿಗಳು—"ನೀವು ಮಾಡುವ ಪ್ರಚಾರ ಕಾರ್ಯದ ವಿವರವನ್ನು, ಅದರಲ್ಲಿರುವ ಸದಸ್ಯರ ಹೆಸರುಗಳನ್ನು ಕೊಡಿರಿ" ಎಂದು ಕೇಳಿದರು. ಟ್ರಸ್ಟು ಶಾಸನದ ಮೇರೆಗೆ ಈ ವಿವರವು ಅಗತ್ಯವಿದೆಯೆಂದೂ, ತಾವು ಹಣದ ಭದ್ರತೆಗಾಗಿ ಈ ವಿವರವನ್ನು ಕೇಳುತ್ತಿರುವೆವೆಂದೂ ಟ್ರಸ್ಟಿಗಳು ಹೇಳಿದರು. ಅಲ್ಲದೆ ತಾವು ಭೋಸರ ಮುಂದಿನ ಕಾರ್ಯಕ್ರಮದಲ್ಲಿ ಕೈಹಾಕುವುದಿಲ್ಲವೆಂದೂ ತಿಳಿಸಿದರು. ಆದರೆ ಶ್ರೀ ಭೋಸರ ವಕೀಲರು— "ಅಂತಹ ವಿವರದ ಅಗತ್ಯವಿಲ್ಲ. ಆ ಹಣವನ್ನು ಭೋಸರು ತಮ್ಮ ಇಚ್ಛಾನುಸಾರವಾಗಿ ವಿನಿಯೋಗಿಸಬಹುದು. ಆದುದರಿಂದ ಸಮಿತಿಯ ವಿವರವಾಗಲೀ ಹೆಸರಾಗಲೀ ಅಗತ್ಯವಿಲ್ಲ" ಎಂದು ತಿಳಿಸಿರುವರು.

ಈ ವಿಷಯವು ಕೋರ್ಟಿಗೂ ಹೋಗುವಂತಿದೆಯೆಂದು ತಿಳಿದುಬಂದಿದೆ.

ಪ್ರಾಣಕ್ಕೆ ಬಂದ ವಿನೋದ.

ಟೆಂಡೋ ರಹಿಮ್‌ಖಾನ್ ಎಂಬಲ್ಲಿನ ವಿವಾಹದ ಚಪ್ಪರದೊಳಗೆ ಚಿಮನ್‌ದಾಸ್ ಎಂಬವನು ಶಾಮಲಾಲ್ ಎಂಬವನ ಕೈಯಲ್ಲಿದ್ದ ಪಿಸ್ತೂಲನ್ನು ವಿನೋದಕ್ಕಾಗಿ ಒತ್ತಿಬಿಡಲು ಅದರೊಳಗಿದ್ದ ಗುಂಡು ಹಾರಿ ಹೋಗಿ ಶಾಮ್‌ಲಾಲನು ಮೃತನಾದನು. ನಗುನಗುತ್ತಿದ್ದ ವಿವಾಹ ಕರ್ತರು ಅತ್ತು ಮದುವೆಯನ್ನು ಮುಗಿಸಿದರು.

ಗಂಡನೊಡನೆ ಸಹಗಮನಕ್ಕೊಪ್ಪಲಿಲ್ಲ! ಅವಳನ್ನು ಕೊಂದು ತಾನೂ ಹತನಾದನು.

ಹೈದರಾಬಾದಿನಲ್ಲಿ ರಾವ್ ಸಾಹೇಬ ಎಂಬವನು ನಾರಾಯಣರಾವ್ ಎಂಬವನನ್ನು ಗುಂಡಿಕ್ಕಿ ಕೊಂದು, ತಾನು ಮನೆಗೆ ಹೋಗಿ ಒಂದು ದೊಡ್ಡ ಅಗ್ನಿಕುಂಡವನ್ನು ರಚಿಸಿ, ತನ್ನ ಪತ್ನಿಯೊಡನೆ "ನೀನೂ ಈ ಅಗ್ನಿಕುಂಡಕ್ಕೆ ಹಾರು" ಎಂದನು. ಪತ್ನಿಯು ಒಪ್ಪಿಕೊಂಡರೂ ಹಾರುವ ಸಮಯವು ಬರಲು ಅಪ್ಪದಿದ್ದಳು. ಒಡನೆ ರಾವ್ ಸಾಹೇಬನು ಅವಳನ್ನು ಗುಂಡಿಕ್ಕಿ ಕೊಂದು, ಶವವನ್ನು ಬೆಂಕಿಯಲ್ಲಿ ಹಾಕಿ ತಾನೂ ಹಾರಿಬಿಟ್ಟನ. ಪೋಲೀಸರು ವಿಚಾರಿಸುತ್ತಿರುವರು.

ಅನ್ಯಾಯ ಮಾಡಿದುದಕ್ಕಾಗಿ ಮಗಳನ್ನೇ ಕೊಂದನು!

ಲಾಹೋರಿನ ನವೀಜಂಗ್ ಎಂಬಲ್ಲಿ ಒಬ್ಬನು, ತನ್ನ ಮಗಳು ಒಬ್ಬನೊಡನೆ ಪ್ರಣಯವನ್ನು ಬೆಳೆಸಿಕೊಂಡಿದ್ದುದಕ್ಕಾಗಿ ಅವಳನ್ನು ಒಂದು ಕೊಡಲಿಯಿಂದ ಹೊಡೆದು ಕೊಂದನು. ಶವವನ್ನು ಹೇಗಾದರೂ ಮರೆಯಿಂದ ಹೂಣಿಡಲು ಸಹಾಯ ಮಾಡೆಂದು ನೆರೆಹೊರೆಯವನೊಡನೆ ಬೇಡಿದಾಗ, ನೆರೆಹೊರೆಯವನು ಅದಕ್ಕೆ ಒಪ್ಪಿ, ನೆಟ್ಟಗೆ ಪೋಲೀಸ್ ಸ್ಟೇಷನಿಗೆ ಹೋಗಿ ಘಟನೆಯನ್ನು ಪೋಲೀಸರಿಗೆ ತಿಳಿಸಿದನು. ಪೋಲೀಸರು ಕೊಡಲಿಯನ್ನು ವಶಪಡಿಸಿ ಕೊಲೆಗಾರನನ್ನು ಸೆರೆಹಿಡಿದಿರುವರು. ಶವವನ್ನು ಪರೀಕ್ಷಾರ್ಥವಾಗಿ ಕಳುಹಿಸಿರುವರು.

ನೂರು ವರ್ಷಗಳಾದ ಮೇಲೆ—

ಏನೆಲ್ಲ ನಡೆಯಲಿರುತ್ತದೆಂದು ಅಮೇರಿಕದ ಕೆಮಿಕಲ ಸೊಸೈಟಿಯ ಚೆಯರ್ಮನರಾದ ಟಾಮಸ್ ಮಿಡ್ಗ್ಲಿ ಎಂಬವರು (೨೦೩೪ರ ಇಸವಿಯಲ್ಲಿ) ಪ್ರಪಂಚವು ಹೇಗಾಗುವುದೆಂದು ವರ್ಣಿಸಿರುವರು. ಬೇಗಾಗುತ್ತಲೆ ಕೆಲಸಗಾರನನ್ನು ಎಬ್ಬರಿಸಿ ಕರ್ತವ್ಯ ಸೂಚಿಸುವಂತಹ ಯಂತ್ರ ಸಾಧನೆಗಳು ಎಲ್ಲಾ ಬಳಕೆಯಲ್ಲಿರುತ್ತವೆ. ನಿದ್ರೆಗೆ ಮುಂಚೆ ಒಂದು ಬಗೆಯ ಮಾತ್ರೆಗಳನ್ನು ತೆಗೆದುಕೊಂಡರೆ, ಸುಖನಿದ್ರೆಯೂ ಒಳ್ಳೆಯ ಸ್ವಪ್ನಗಳೂ ಬೀಳುವುವು.

ಹಾಸಿಗೆಯ ಬಟ್ಟೆಬರೆಯು ಹೊಸ ತರದ ನೂಲಿನಿಂದ ಸಿದ್ಧವಾಗಿ ಕೆಲವು ತೊಲೆಗಳಷ್ಟು ಮಾತ್ರ ಭಾರವಾಗುವುದು. ಆಗಸರಿಗೆ ಬಟ್ಟೆ ಒಗೆಯುವ ಖರ್ಚು ಬಾರದು. ಅಗ್ಗದ ಬಟ್ಟೆಗಳನ್ನು ಹಾಕಿಕೊಂಡಿದ್ದು ಬೆಳಗಾಗುತ್ತಲೇ ಅವುಗಳನ್ನು ಕಸದ ಗುಡ್ಡೆಗೆ ಬಿಸಾಡುವರು. ದ್ರವರೂಪದ ಒಂದು ವಸ್ತುವಿನಿಂದ ಮುಖ ಪ್ರಕ್ಷಾಳನ ಆಗುವುದು. ಬ್ರಷ್ ಮೊದಲಾದವುಗಳ ಪ್ರಯೋಗವಿರುವುದಿಲ್ಲ. ಕ್ಷೌರಕ್ಕಾಗಿ ಒಂದು ಬಗೆಯ ರೋಮಗಳನ್ನು ಹೋಗಲಾಡಿಸುವ ಪುಡಿ ಮತ್ತು ಅಂಟುಗಳು ಉಪಯೋಗಕ್ಕೆ ಬೀಳುವುವು. ಚರ್ಮಕ್ಕೆ ಅಂಟಿಕೊಂಡಿರುವ ಮಂದವಾದ ಅಥವಾ ತೆಳುವಾದ ಉಡುಪುಗಳು ಬೇಸಗೆ ಚಳಿಗಾಲದಲ್ಲಿ ಬಳಕೆಯಲ್ಲಿರುವುವು. ಆಹಾರ ವಸ್ತುಗಳು ಅಜೀರ್ಣಕಾರಿಗಳಾಗಿರುವುದಿಲ್ಲ. ಕೋಳಿಗಳ ಜಾತಿಯು ಬಹು ಮಟ್ಟಿಗೆ ಅಭಿವೃದ್ಧಿಯಾಗಿ ಹಕ್ಕಿಗಳು ಫುಟ್‌ಬೋಲ್‌ನಷ್ಟು ದಪ್ಪನಾಗುವುವು. ಕೋಳಿಗಳ ಬೆಳವಣಿಗೆಗೆ ಬೆಟ್ಟಗಳಂತೆ ಏನದೊಡ್ಡ ಹಂದಿಗಳಷ್ಟು ಗಾತ್ರವಾಗಿ ಬೆಳೆಯುವುವು. ದಿನವಹಿ ಎರಡು ಗಂಟೆಗಿಂತ ಹೆಚ್ಚಿಗೆ ಯಾರೂ ಕೆಲಸ ಮಾಡುವುದಿಲ್ಲ. ಉಳಿದ ದಿನವನ್ನು ಗೃಹಗಳಿಗೂ ನಕ್ಷತ್ರಗಳಿಗೂ ಹೋಗಿಬರಲು ಕಳೆಯುವರು. ಶಾಸ್ತ್ರಜ್ಞರು ಮಂಗಳಗ್ರಹದಲ್ಲಿ ನೀರೂ ಶುಕ್ರಗ್ರಹದಲ್ಲಿ ಇಲ್ಲಿನಂತಹ ವಾಯುಮಂಡಲವೂ ದೊರೆಯುವಂತೆ ಮಾಡುವರ" [illegible]

ಸಾಲಕೊಟ್ಟು ಪ್ರಾಣಬಿಟ್ಟ.

ಕೆವಟ್ಟಿಯ ವಿಟಂಕುರುಚಿ ಎಂಬಲ್ಲಿ ಧರ್ಮಾ ಎಂಬ ಒಡ್ಡಿಸಂಗ್ರಹಕಾರನು ೩೦೦ ರೂಪಾಯಿಗಳ ಸಾಲವನ್ನು ಬಾಡ್ಡರಿಯ ನಂಬಿಕೆಯ ಮೇಲೆ ದೀವಾನ ಎಂಬವನಿಗೆ ೧೪ ದಿನಗಳ ವಾಯಿದೆಯ ಮೇಲೆ ಸಾಲವಾಗಿ ಕೊಟ್ಟಿದ್ದನು. ಆದರೆ ದುರ್ದೈವವಶಾತ್ ಸಾಲಪಡೆದವನು ಆರ್ಥಿಕ ದುರವಸ್ಥೆಗೊಳಗಾದ. ಧರ್ಮನು ಅನೇಕ ಸಾರಿ ಅವನೊಡನೆ ಹಣವನ್ನು ಕೇಳಿದ. ಆದರೆ ಅದು ಸಿಗಲಿಲ್ಲ. ಕೊನೆಗೆ ಧರ್ಮನು ನೆಟ್ಟಗೆ ದೀವಾನನ ಮನೆಗೆ ಹೋದ,—ಹಣವನ್ನು ಕೇಳುತ್ತಾ ಕೇಳುತ್ತಾ ತಾನೇ ಪ್ರಾಣತ್ಯಾಗ ಮಾಡಿಬಿಟ್ಟನು. ಈ ವಾರ್ತೆಯು ಹಲವರ ನಂಬಿಕೆಯ ಹೊರಗೆ ನಿಲ್ಲುವುದಾದರೂ—ಇಲ್ಲಿ, ಯುನೈಟೆಡ್ ಪ್ರೆಸ್ ವಾರ್ತಾದಾಯಕನು ಪ್ರಕಟಿಸಿದಂತೆ,—ಹಿಂದೂಸ್ಥಾನ ಟೈಮ್ಸಿನಿಂದ ತೆಗೆದುಕೊಟ್ಟಿರುತ್ತೇನೆ. ಶವಪರೀಕ್ಷೆಯು ನಡೆಯುತ್ತಿದೆಯೆಂಬುದು ಅನಂತರದ ವಾರ್ತೆ.

ನೊಬೆಲ್ ಬಹುಮಾನಕ್ಕರ್ಹನಾದ ಕೈದಿ!

ಮತ್ತೊಂದು ವೈಚಿತ್ರ್ಯ! ಕೈದಿಗೆ ನೋಬೆಲ್ ಬಹುಮಾನವು ದೊರೆಯುವುದೆಂದರೆ ವಿಚಿತ್ರವಲ್ಲದೆ ಮತ್ತೇನು? ಆದರೂ ಅದು ಅವನಿಗೇ ಸೇರಬೇಕೆಂದು ನೋಬೆಲ್ ಬಹುಮಾನ ಸಮಿತಿಯವರಲ್ಲಿ ಹಲವರು ಶಿಫಾರಸು ಮಾಡಿರುತ್ತಾರೆ! ಶಾಂತಿ ಪಾಲನೆಗಾಗಿ ಪ್ರತ್ಯೇಕಿಸಿಡಲ್ಪಟ್ಟ ಪಾರಿತೋಷಕವು ಜರ್ಮನಿಯ ವಾಚಿ ಬಂದೀಖಾನೆಯಲ್ಲಿರುವ ಕಾರ್ಲ್‌ವೊನ್ ಒಸಿಟ್‌ಕಿ ಎಂಬವನಿಗೆ ಈ ವರ್ಷ ಕೊಡಬೇಕೆಂದು ಹಲವರು ಹೇಳಿರುವರು. ಇವನು ಜಗತ್ತಿನ ಶಾಂತಿಪಾಲನೆಗಾಗಿ ಬಹಳವಾಗಿ ಸಾಹಸಗೈದಿರುವನೆಂದೂ ತನ್ನ ಶಕ್ತಿಯನ್ನು ಮೀರಿ ಕಷ್ಟಪಟ್ಟು ಅದಕ್ಕಾಗಿ ದುಡಿದವನೆಂದೂ ತಿಳಿದು ಬಂದಿದೆ. ಇನ್ನು ಕೆಲವರ ಅನುಮೋದನೆಯೂ ದೊರೆತ ಒಡನೆ ಈ ನೋಬೆಲ್ ಬಹುಮಾನವು ಅವನಿಗೆ ಸೇರುವುದು!

ಭಕ್ತಳೊಬ್ಬಳ ವಿಚಿತ್ರ ಕಥೆ!

ಕುಂಭಕೋಣದಿಂದ ಬಂದ ವಾರ್ತೆಯೊಂದರಿಂದ ಅಲ್ಲಿಯ ಶ್ರೀಮತಿ ಅಮ್ಮಳು ಎಂಬ ೩೦ ವಯಸ್ಸಿನ ತರುಣಿಯು ದೈವಿಕ ಶಕ್ತಿಗೊಳಗಾಗಿ ದೇವರ ಭಜನೆಗೆ ತೊಡಗಿರುವಳೆಂದು ತಿಳಿದುಬರುತ್ತದೆ. ಇವಳು ತನ್ನ ೧೫ ವಯಸ್ಸಿನಲ್ಲಿ ವಿಧವೆಯಾದಳು. ಅನೇಕ ಸ್ವಾಮಿಗಳಿಂದ ಹಣ್ಣುಹಂಪಲುಗಳನ್ನೇ ತಿನ್ನುತ್ತಿದ್ದು, ದೈವಚಿಂತನೆಯಲ್ಲೇ ಕಾಲಕಳೆಯುತ್ತಿದ್ದಳು. ಕೊನೆಗೆ ನರಸಿಂಹ ಜಯಂತಿಯನ್ನು ನೆರವೇರಿಸಿದ ಅವಳು ಅಕಸ್ಮಾತ್ತಾಗಿ ವಿರಾಗಿನಿಯಾದಳು. ಅವಳ ವಿರಕ್ತಿಯು ಜನರ ಮನವನ್ನಾಕರ್ಷಿಸಿತು. ಅವಳು ಒಡನೆ ಮನೆಯನ್ನು ಬಿಟ್ಟು ಹೊರಗೆ ನಡೆದಳು. ತಂದೆತಾಯಿಗಳು ಏನೇನು ಹೇಳಿದರೂ ಅವಳು ಒಪ್ಪದೆ ತಾನು ಭಗವಂತನನ್ನು ನೋಡಲು ಹೋಗುವೆನೆಂದೂ, ತನ್ನನ್ನು ತಡೆಯಬಾರದೆಂದೂ ಹೇಳಿದಳು. ಪಂಡರಪುರದ ಹಾದಿಯನ್ನು ಹಿಡಿದಿರುವಳು.

ಮೃತ ಶಿಶುವಿನ ಕಣ್ಣನ್ನು ಇನ್ನೊಬ್ಬನಿಗೆ ಕೊಟ್ಟರು!

ಕಣ್ಣಿನ ಪರೆ—ಕೋರ್ನಿಯಾ—ವಿಕೃತವಾಗಿ ಬಿಟ್ಟರೆ ಆ ಜನರು ಅಂಧರಾಗುತ್ತಾರೆ. ಕಣ್ಣಿನ ಗುಡ್ಡೆಗಳೊಳಗೆ ಪ್ರಕಾಶವು ಹೋಗಲಾರದೆ ಕಣ್ಣು ಜನ್ಮಾಂತ್ಯದವರೆಗೆ ಕಾಣಿಸುವುದಿಲ್ಲ. ಡಾ। ರಾಮೊನ್ ಕಾಸ್ಟ್ರೊವಿಜೋ ಎಂಬವರು ಮೂಸ್ ಹಟ್ಟಿನ್ ಎಂಬಲ್ಲಿ ಫ್ರೆಡೊರಿಕ್ ಕ್ಲಾರ್ಕ್ ಎಂಬವರ ನೇತ್ರ ಚಿಕಿತ್ಸೆಗೆ ತೊಡಗಿದರು— ಆದರೆ ಅವರ ಕಣ್ಣುಗಳು ಪ್ರಯೋಜನಕಾರಿಯಾಗುವಂತೆ ಅವರಿಗೆ ಕಂಡುಬರಲಿಲ್ಲ. ರೋಗಿಯ ನೇತ್ರಗಳಿಗೆ ಒಳ್ಳೆಯ ಕೋರ್ನಿಯಾದ ಅಗತ್ಯವಿತ್ತು. ಆ ಡಾಕ್ಟರರು ಆಲೋಚನೆಯಲ್ಲಿದ್ದಾಗ ಅವರ ಆಸ್ಪತ್ರೆಯಲ್ಲಿ ಒಂದು ಮಗುವು ಹುಟ್ಟುವಾಗಲೇ ಸತ್ತುಹೋಯಿತು. ~~ಅವರು ಒಡನೆ ಆ ಮಗುವಿನ ಎರಡು ಕಣ್ಣುಗಳ ಪರೆ~~ ಗಳನ್ನು ಕೂಡಲೆ ತೆಗೆದು ಅವುಗಳನ್ನು ಫ್ರೆಡೊರಿಕರ ನೇತ್ರಗಳಿಗೆ ಇಟ್ಟು ಚಿಕಿತ್ಸೆ ನಡೆಸಿದರು. ಈಗೀಗ ಫ್ರೆಡೊರಿಕರಿಗೆ ದೃಷ್ಟಿ ಬಂದಿದೆ.

ಕರ್ಣಾಟಕ ಸಾಹಿತ್ಯ ಪರಿಷತ್ತು

ಎರಡನೆಯ ವಿಶೇಷ ಸಾಹಿತ್ಯೋತ್ಸವ.

ತಾ ೨೫ನೆಯ ಏಪ್ರಿಲ್ ೧೯೩೫

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಆದರೆ ಪರಿಷತ್ತಿನ ಗಮನದಲ್ಲಿರುವವರು ಉಪಾಧ್ಯಾಯರು ಮಾತ್ರವೇ ಅಲ್ಲ. ಯಾರು ಯಾರು ಜ್ಞಾನಪ್ರಸಾರದಲ್ಲಿ ಆಸಕ್ತರಾಗಿರುವರೋ, ಯಾರ್ಯಾರಿಗೆ ವಿದ್ಯಾಪ್ರಚಾರದಲ್ಲಿ ಶ್ರದ್ಧೆಯುಂಟೋ, ಅಂಥವರೆಲ್ಲರಿಗೂ ಈ ಉಪನ್ಯಾಸಗಳು ಇಷ್ಟವಾದಾವೆಂಬುದು ಪರಿಷತ್ತಿನ ನಿರೀಕ್ಷಣೆ. ನಿಜವಾಗಿ ಈ ಉಪನ್ಯಾಸ ವಿಷಯಗಳು ಪ್ರತಿಯೊಬ್ಬ ಪ್ರಬುದ್ಧನಾದ ಪ್ರಜೆಗೂ ಇರಬೇಕಾದ ಜ್ಞಾನದ ಅಂಗಗಳು. ತನ್ನ ದೇಶದ ವಿಷಯದಲ್ಲಿ ತನಗಿರುವ ಕರ್ತವ್ಯವೇನೆಂಬುದನ್ನರಿತುಕೊಂಡು ಸಾರ್ವಜನಿಕ ಹಿತಕ್ಕೆ ಅನುಕೂಲವಾಗುವಂತೆ ಬದುಕಬೇಕೆಂಬ ಪ್ರತಿಯೊಬ್ಬನೂ ಇಂಥಾ ವಿಜ್ಞಾನ ವಿದ್ಯೆಯನ್ನು ಸಂಪಾದಿಸಿಕೊಳ್ಳುವುದು ಆವಶ್ಯಕ. ಕತಾಸಿ ಜವಾಬ್ದಾರಿಯುಳ್ಳ ಸಾರ್ವಜನಿಕ ಸ್ಥಾನಗಳಲ್ಲಿ ಕುಳಿತಿರುವವರಿಗೆ ಇಂಥ ಲೋಕವಿಜ್ಞಾನವಿಲ್ಲದಿದ್ದರೆ ಅವರ ಧರ್ಮವು ಪರಿಪೂರ್ಣವಾಗಸಾಗಲಾರದು. ನಮ್ಮ ಮ್ಯುನಿಸಿಪಾಲಿಟಿ, ಡಿಸ್ಟ್ರಿಕ್ಟ್ ಬೋರ್ಡ್, ಮುಂತಾದ ಪ್ರಾದೇಶಿಕ ಸಂಸ್ಥೆಗಳ ಸದಸ್ಯರೂ, ಪ್ರಜಾಪ್ರತಿನಿಧಿ ಸಭೆ ಮುಂತಾದ ಸಂಸ್ಥಾನಿಕ ಸಂಸ್ಥೆಗಳ ಸದಸ್ಯರೂ, ಪ್ರಕೃತಿ ವಿಜ್ಞಾನ ಸಮಾಜ ವಿಜ್ಞಾನಗಳ ಪರಿಚಯವನ್ನು ಸಂಪಾದಿಸಲು ಸ್ವಲ್ಪ ಕಾಲವನ್ನು ವಿನಿಯೋಗಿಸಿದರೆ, ಅದ ಅವರಿಗೆ ಎಷ್ಟುಯೋ ಜಕವಾಗಲಾರದೆಂದೂ, ಅದರಿಂದ ದೇಶಕ್ಕೆ ಉಪಕಾರವೇ ಆದೀತೆಂದೂ ನಾನು ಭಾವಿಸಿದ್ದೇನೆ. ನಮ್ಮ ದೇಶೋದ್ಧಾರಕರ ಸಾಹಿತ್ಯ ವಿಜ್ಞಾನಗಳು ತಮಗೆ ಅನುಪಯೋಗವೆಂದು ತಿಳಿದುಕೊಂಡಿಲ್ಲವೆಂಬುದಾಗಿ ನಾವು ನಂಬಿ. ವಿಜ್ಞಾನ ವಿವೇಕಗಳಿಲ್ಲದೆ ಪ್ರಜಾಧರ್ಮದ ಆಚರಣೆ ಸಾಂಗವಾಗಲಾರದು.

ಕನ್ನಡ ಭಾಷೆಗೂ ಈ ಉಪನ್ಯಾಸ ಮಾಲೆಯಿಂದ ಆಗಬಹುದಾಗ ಉಪಕಾರ ಬಂದಿದೆ. ಇಂಥ ವಿಷಯಗಳು ಕನ್ನಡಕ್ಕೆ ಹೊಸವು. ಅವುಗಳಿಗೆ ತಕ್ಕ ಶಬ್ದಸಾಮಗ್ರಿ ಕನ್ನಡದಲ್ಲಿ ಸಿದ್ಧವಾಗಿಲ್ಲ. ನಮ್ಮ ವಾಡಿಕೆಯ ಮಾತಿನ ರೀತಿ ಈ ಗಹನ ವಿಷಯಗಳಿಗೆ ಹೊಂದತಕ್ಕದ್ದಲ್ಲ. ಈ ವಿಷಯಗಳು ತೊಡಕುಳ್ಳವು. ಅವುಗಳ ಸಿಕ್ಕುಗಳನ್ನೆಲ್ಲ ಕನ್ನಡದಲ್ಲಿ ಬಿಡಿಸಿ ತೋರಿಸುವುದು ಕಷ್ಟದ ಕೆಲಸ. ಹೀಗಿದ್ದರೂ ಈ ಕೆಲಸವನ್ನು ಎಂದಾದರೊಂದು ದಿನ ಕೈಗೆ ತೆಗೆದುಕೊಂಡಲ್ಲದೆ ನಮ್ಮ ಭಾಷೆಯೂ ನಮ್ಮ ಜನವೂ ಮೇಲಕ್ಕೇರುವ ಆಶೆ ಇಲ್ಲ. ಯಾರು ಇಂದೇ ಧೈರ್ಯಮಾಡಿ ಈ ಕಾರ್ಯಕ್ಕೆ ತೊಡಗುವರೋ ಅವರು ಮಾರ್ಗಕರ್ತರೆಂಬ ಯಶಸ್ಸಿಗೆ ಅರ್ಹರಾಗುವರು. ಅವರೇ ನಮ್ಮ ಹಳೆಯ ಭಾಷೆಯನ್ನು ಈ ಹೊಸ ಹೊಸ ವಿಷಯಗಳಿಗೆ ಪಳಗಿಸಿಕೊಡತಕ್ಕವರು. ಅವರ ಉಪಯೋಗದ ಮೂಲಕ ಭಾಷೆ ಬೆಳೆದು, ಹೊಸ ಶಬ್ದಸಂಪತ್ತನ್ನು ಗಳಿಸಿ ಬಲಿಷ್ಠವಾಗುವುದು. ಜಟಿಲವೂ ಸೂಕ್ಷ್ಮವೂ ಆದ ವಿಷಯಗಳಿಗೆ ಅವಕಾಶವನ್ನು ಭಾಷೆಗೆ ತಪ್ಪಿದರೆ, ಅದ ವ್ಯಾಯಾಮ ಹೀನನಾದ ಮನುಷ್ಯನಂತೆ ದುರ್ಬಲವಾಗಿ ಕ್ಷಯಿಸುವುದು. ಕನ್ನಡ ಮಾತುಗಳನ್ನು ಬಗೆಬಗೆಯ ಪ್ರಸಂಗಗಳಿಗೆ ಹಚ್ಚಿ ತೀಡಬೇಕು. ವಾದವಿವಾದಗಳಲ್ಲಿ ನಡೆಯಿಸಬೇಕು. ಅನ್ಯಭಾಷಾ ಪದಗಳ ಸಂಪರ್ಕ ಸಂಘರ್ಷಗಳಿಗೆ ಅವನ್ನು ಸಿಕ್ಕಿಸಬೇಕು. ವಿಭಿನ್ನ ಶಬ್ದಗಳ ಹೊರೆಯನ್ನು ಅವುಗಳ ಮೇಲೆ ಹೊರಿಸಬೇಕು. ಹೀಗೆ ನಮ್ಮ ಭಾಷೆಯ ಶರೀರಕ್ಕೆ ಸಾಧನ ಮಾಡಿಸದಲ್ಲದೆ ಅದಕ್ಕೆ ಶಕ್ತಿಯೂ ಲಾಘವವೂ ಉಂಟಾಗದು. ಈ ಬಗೆಯ ವ್ಯಾಯಾಮಕ್ಕೆ ಕನ್ನಡವು ಅರ್ಹವಾಗಿದೆಯೆಂಬುದು ನಮ್ಮ ಕಳೆದ ವರ್ಷದ ಈ ಅನುಭವದಿಂದ ಸಿದ್ಧವಾಗಿದೆ. ವರ್ಷ ಅದು ಮತ್ತಷ್ಟು ಸ್ಪಷ್ಟವಾದೀತೆಂಬ ನಂಬಿಕೆ ನನಗೆ ಸಂಪೂರ್ಣವಾಗಿದೆ.

ವಿದ್ಯಾಭ್ಯಾಸ ಕ್ರಮದಲ್ಲಿ ಕನ್ನಡ

ಈ ಸಂದರ್ಭದಲ್ಲಿ ನಾನು ವಿಜ್ಞಾಪಿಸಬೇಕಾಗಿರುವ ಸಂತೋಷದ ಸಂಗತಿಯೊಂದು ಇದೆ. ಕಳೆದ ವರ್ಷ ಈ ಸಂದರ್ಭದಲ್ಲಿ ಮಾತನಾಡಿದಾಗ ನಾನು ಈ ರೀತಿ ವಿಜ್ಞಾಪನೆ ಮಾಡಿದೆ –

"ನಮ್ಮ ದೇಶದಲ್ಲಿ ಈಗ ರೂಢಿಯಲ್ಲಿರುವ ವಿದ್ಯಾಭ್ಯಾಸ ಕ್ರಮದಲ್ಲಿ ಇಂಗ್ಲೀಷು ಭಾಷೆಗಿರುವ ಪ್ರಾಧಾನ್ಯದ ಕಾರಣದಿಂದ ವಿದ್ಯಾರ್ಥಿಗಳಿಗೆ ಆಯುಸ್ಸಿನ ವ್ಯರ್ಥವ್ಯಯವೂ ಶಕ್ತಿಯ ವ್ಯರ್ಥವ್ಯಯವೂ ಅತಿಯಾಗಿ ಆಗುತ್ತಿವೆ. ನಮ್ಮ ವಿದ್ಯಾರ್ಥಿಗಳಿಗೆ ಈಗಿರುವ ಕಷ್ಟವು ಎರಡು ಬಗೆಯದು. ಒಂದು ವಿಷಯ ನವೀನತೆಯಿಂದ ಆಗಿರುವುದು. ಇನ್ನೊಂದು ಭಾಷಾನವೀನತೆಯಿಂದ ಆಗಿರುವುದು. ಅವರು ಹೊಸ ವಿಷಯವನ್ನು ತಿಳಿದುಕೊಳ್ಳುವುದಕ್ಕಾಗಿ ಹೊಸ ಭಾಷೆಯನ್ನು ಕಲಿತುಕೊಳ್ಳಬೇಕಾಗಿದೆ. ಆದರೆ ಈ ಹೊಸ ಭಾಷೆಯನ್ನು ಕಲಿತುಕೊಳ್ಳುವುದಕ್ಕೆ ಬೇಕಾಗಿರುವ ಕಾಲವನ್ನೂ ಶಕ್ತಿಯನ್ನೂ ಗಳಲ್ಲಿ, ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಬೇಕಾದ ಕಾಲವೂ ಶಕ್ತಿಯೂ [illegible] ವದ ತಾಗಿದೆ. ಜ್ಞಾನಕ್ಕೆ ಕೊಡಬೇಕಾದ ಗಮನವನ್ನು ಈಗ ಅವರ ಜ್ಞಾನದ ಹೊ[illegible] ಕಗೆ ಕೊಡಬೇಕಾಗಿ [illegible] ಬೇಕಾದ ಗವ ನವನ್ನು ಕಂಟಕ್ಕೆ ಸಲ್ಲಿಸಬೇಕಾಗಿದೆ. ಇದು ವರೆಗೂ ನಮ್ಮ ದೇಶದಲ್ಲಿ ಈ ಕಷ್ಟವು [illegible] ಆಗಿತ್ತು. ಈಗಲಾದರೋ ಇಂಗ್ಲೀಷು ಭಾಷೆಯೊಳಗಿನ [illegible] ನಮ್ಮ ಭಾಷೆಯಲ್ಲಿಯೇ [illegible] ಪರೋಕ್ಷ ಭಾಷೆಗಳಲ್ಲಿಯ ಸಂಗತಿ [illegible] ವಿಷಯಗಳನ್ನು ಶೀಘ್ರ [illegible] ದಲ್ಲಿ ರೂಪಾಂತರಗೊಳಿಸಿ ಕೊಡಲು ವಿದ್ವಾಂಸರು ಈಗ ಸಿದ್ಧರಾಗುತ್ತಲಿದ್ದಾರೆ. ಆಧುನಿಕ ವಿಜ್ಞಾನ ಶಾಸ್ತ್ರಗಳನ್ನೂ ಸಮಾಜ ಶಾಸ್ತ್ರಗಳನ್ನೂ ಕನ್ನಡದಲ್ಲಿ ಪ್ರತಿಪಾದಿಸಿ ಹೇಳುವುದು ಈಗ ಸಾಧ್ಯವೆಂದು ಸಾಕ್ಷಾತ್ತಾಗಿ ತೋರುತ್ತಿದೆ. ನಮ್ಮ ವಿದ್ಯಾರ್ಥಿಗಳ ಮೇಲಿರುವ ಇಂಗ್ಲೀಷಿನ ಹೊರೆಯನ್ನು ಇಳಿಸಲು ಈಗ ಸಕಾಲವಾಗಿದೆ"

ಈ ಅರ್ಥದ ಅರಿಕೆಗಳನ್ನು ನಮ್ಮ ಸರಕಾರದವರು ಆಲಿಸಿ, ಸಂಸ್ಥಾನದ ಹೈಸ್ಕೂಲುಗಳಲ್ಲಿ ಕನ್ನಡ ವಿದ್ಯಾರ್ಥಿಗಳಿಗೆ ಚರಿತ್ರೆ, ಭೂಗೋಳ, ಗಣಿತಗಳನ್ನು ಕನ್ನಡದಲ್ಲಿಯೇ ಬೋಧಿಸಬೇಕೆಂದು ಆಜ್ಞೆ ದಯಪಾಲಿಸಿದ್ದಾರೆ. ಇದು ಪರಿಷತ್ತಿಗೆ ಅತ್ಯಂತ ತೃಪ್ತಿಕರವಾದ [illegible] ಸಂಗತಿಯಾಗಿದೆ. ಇನ್ನು ಸ್ವಲ್ಪ [illegible] ದಲ್ಲಿಯೇ ವಿಜ್ಞಾನಶಾಸ್ತ್ರ [illegible] ಭಾಷೇತರ ವಿಷಯಗಳನ್ನು [illegible] ಕನ್ನಡದಲ್ಲಿಯೇ [illegible]

[illegible]

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter –

Modern Hindu Hotel,
Calicut, 17—6—1934

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,
(Sd) A. V. Ramaswami.

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ
ಅಲ್ಲದೆ
ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ
ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!
ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು
ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ
ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ – ಶಿವಮೊಗ್ಗಕ್ಕೆ, ಬೇಲೂರಿಗೆ, ಸಕಲೇಶಪುರಕ್ಕೆ [illegible]
ಮೂಡಗೆರೆಗೆ [illegible]ಕ್ಕೆ
– ಮಂಗಳೂರಿಗೆ ಮೂಡಬಿದ್ರೆಗೆ, ಕಾರ್ಕಳ, [illegible]ರಿಗೆ, ಮೂಲ್ಕಿಗೆ,
– ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ

ನಡೆದ ಕತೆಗಳು.

True Stories

ಓದಿ ಮುಗಿಸುವ ಸಮಯ,—೩ ನಿಮಿಷಗಳು

All Rights Reserved

[ಸಮಾಜದಲ್ಲಿನ ಕುಂದುಕೊರತೆಗಳನ್ನು ಹೋಗ ಲಾಡಿಸುವುದೇ 'ನಡೆದ ಕತೆಗಳು' ಇವುಗಳ ಉದ್ದೇಶ. ಘಟನೆಗಳನ್ನು ಸಂಯೋಜಿಸುವುದರಲ್ಲಿ ಮಾತ್ರ ಅನುಕೂಲ ಪಕ್ಕಾಗಳನ್ನು ಉಪಯೋಗಿಸಿಕೊಳ್ಳಲಾಗಿದೆ ಘಟನೆಗಳೆಲ್ಲ ನಿಜವಾದುವುಗಳು ಹೆಸರುಗಳನ್ನು ಕೆಲ ವರೆಗಳಲ್ಲಿ ಮಾತ್ರ ಬದಲಾಯಿಸಲಾಗಿದೆ

೩.

ಮದ್ದು ಇಲ್ಲದ ರೋಗ.

[ದುರಭ್ಯಾಸಕ್ಕೀಡಾದ ನರಸಿಂಹ-ಹೆತ್ತವರ ಪ್ರೇಮ ಅಲಕ್ಷ್ಯ-ಪುರುಷೋತ್ತಮ ಭಟ್ಟರ ಜ್ಯೋತಿಷ್ಯ-ಕುಲದೇವತೆಯ ಮೇಲೆ ಆರೋಪ-ನರಸಿಂಹನ ಮರಣ.]

ಬೋಳಾರ ಕಡವಿನ ಬಳಿ ನರಸಿಂಹನ ಮನೆ ಉಡುಪಿಯ ಬೋರ್ಡ್ ಶಾಲೆಯಲ್ಲಿ ಕಲಿತಾದ ಮೇಲೆ ಮಂಗಳೂರಿಗೆ ಬಂದು ಕೆಲಸವನ್ನು ಹುಡುಕುವ ಯೋಚನೆಯಲ್ಲೇ ಇದ್ದ ಆದರೆ ಯೋಚನೆಯು ಸಾಧನೆಗಿಂತ ಅಧಮವಾದುದರಿಂದ ಕೆಲಸವು ಸಿಗಲಿಲ್ಲ. ಹಾಗೆಯೇ ದಿನಗಳನ್ನು ಕಳೆಯುತ್ತಿದ್ದ

ಇಪ್ಪತ್ತನಾಲ್ಕು ವರ್ಷ ಪ್ರಾಯದ ಯುವಕನಾಗಿದ್ದರೂ ಮೂವತ್ತೆರಡು ವರ್ಷ ವಯಸ್ಸಾದವನಂತೆ ಅವನ ಮುಖವು ಕಳೆಗುಂದಿತ್ತು ಕಣ್ಣುಗಳು ಗುಂಡಿಗಿಳಿದು ಕೊಂಡಿದ್ದುವು ದೇಹವು ಕ್ಷೀಣವಾಗಿತ್ತು ಗುಂಡಿನಂತಿದ್ದ ಇವನು ಹೀಗೆ ಕೃಶನಾಗುತ್ತ ಬರಲು ಕಾರಣವೇನೆಂದು ಯಾರಿಗೂ ತಿಳಿಯದಾಯಿತು

ಕೆಲಸವಿಲ್ಲದ ಖಾಲಿದಿನಗಳೆಂದು ಸುಮ್ಮನಿರಲಾಗುತ್ತದೆಯೇ? ನೆರೆಮನೆಯ ಲಕ್ಷ್ಮಣ ಭಂಡಾರಿಗಳ ಮಗ ಕೃಷ್ಣ ಭಂಡಾರಿಯ ಸ್ನೇಹವನ್ನು ಬೆಳೆಸಿದ ಕೃಷ್ಣನು ಸಿಕ್ಕಸಿಕ್ಕ 'ದುಷ್ಟ ಹುಡುಗರೊ'ಂದಿಗ ಸೇರಿ ಹಾಳಾಗುತ್ತಿರುವನೆಂದು ಅವನ ತಂದೆಯು ಅವನನ್ನು ಶಾಲೆಗೆ ಹೋಗಗೊಡದೆ — ಐನೇ ತರಗತಿಯಲ್ಲೇ ಮನೆಯಲ್ಲಿರಿಸಿದ್ದರು. ನರಸಿಂಹನೊಡನೆ ಕಾಲಕಳೆಯಲು ಅವನಿಗೆ ಅನುಕೂಲವೇ ಆಯಿತು'

ಕೃಷ್ಣನು ಸಾಧಾರಣ ೧೪ ವರ್ಷ ಪ್ರಾಯದ ಬಾಲಕ ಅವನನ್ನು ನೋಡಿದೊಡನೆ ಸುಂದರ ದ್ರೂಪಿ ಬಾಲಕಿಯೊಬ್ಬಳನ್ನು ಕಂಡಂತಾಗುವುದು

ನರಸಿಂಹನಿಗೆ ಕೃಷ್ಣನ ಸ್ನೇಹವಾದೊಡನೆ ಪೇಟೆಯ ಕೆಲವು ಹುಡುಗರು ಏನೇನೋ ಗುಣ ಗುಟ್ಟಲಾರಂಭಿಸಿದರು ಕೆಲವು ಹಿರಿಯರಂತೂ ಈ ಕಲ್ಪನಾತೀತ ವಿಷಯವನ್ನು ಕೇಳಿ ದಂಗುಬಡೆದಂತಾದರು ಈ ಅಸ್ವಾಭಾವಿಕ ಮೈತ್ರಿಯನ್ನು ಕಂಡು ಬೆರಗಾದರು

ಯಾವುದು ನಿರ್ಜನ ಪ್ರದೇಶವೋ ಅಲ್ಲಿ ನರಸಿಂಹ-ಕೃಷ್ಣರ ವಿಹಾರ ಎಲ್ಲಿ ಆಟ ಆಯನಗಳೋ ಅಲ್ಲಿ ಇವರಿಬ್ಬರೂ ತಮ್ಮ ಕಣ್ಣಿನಿಂದ ಹೇಗಾದರೂ ಮಾಡಿ ತಪ್ಪಿಸಿಕೊಂಡು ಹೋಗುವ ಈ ಹುಡುಗರನ್ನು ಹೆತ್ತವರು ಮಾಡುವುದಾದರೂ ಏನು?

ಒಂದು ದಿನ ಬೆಳಗ್ಗೆ ನರಸಿಂಹ ಚಾಪೆಯಿಂದೆದ್ದವನೇ ಮುಖ ತೊಳೆಯಲು ಬಚ್ಚಲು ಕೊಟ್ಟಿಗೆಗೆ ಹೋದ ಚೆಂಬನ್ನು ಕೈಯ್ಯಲ್ಲೆತ್ತುತ್ತಲೇ ಅವನಿಗೆ ಸ್ಮೃತಿತಪ್ಪಿದಂತೆ ಬೋಧೆಯಾಯಿತು 'ಅಮ್ಮಾ' ಎಂದು ಬೊಬ್ಬಿಡುತ್ತ ಬಿದ್ದುಬಿಟ್ಟನು. ಕೂಗಿಕೊಂಡುದನ್ನು ಕೇಳಿ ಓಡಿ ಬಂದ ತಾಯಿ, ತಂದೆ, ನೆರೆಹೊರೆಯವರು ಅವನನ್ನು ಮನೆಯೊಳಗೊಯ್ದು ಉಪಚರಿಸಿದರು

ಪುರುಷೋತ್ತಮ ಭಟ್ಟರು ಲಕ್ಷ್ಮಣ ಭಂಡಾರಿಗಳ ಪರಮಮಿತ್ರರು ಅಲ್ಲದೆ ಅವರ ಸಂಸ್ಥಾನವೈದ್ಯರು ಲಕ್ಷ್ಮಣ ಭಂಡಾರಿಗಳು ಕೂಡಲೇ ಭಟ್ಟರಲ್ಲಿಗೆ ಹೋಗಿ ಮಗನು ಮೂರ್ಛೆತಪ್ಪಿ ಬಿದ್ದ ವಿಷಯವನ್ನು ತಿಳಿಸಿದರು. ಭಟ್ಟರು ತಕ್ಷಣವೇ ಭಂಡಾರಿಗಳ ಮನೆಗೆ ಬಂದು ನರಸಿಂಹನನ್ನು ಕಂಡರು ಅವನ ಮೋರೆಯೂ ಹೆಣದ ಮೋರೆಯೂ ಬೇರೆಯೆಂದು ಅವರಿಗೆ ತೋರಲಿಲ್ಲ. ಒಡನೆ, ಕಾಲುಮಣೆಯೊಂದನ್ನು ತರಿಸಿ, ಕುಳಿತು, ಅಕ್ಕಿಯನ್ನು ನೆಲದ ಮೇಲೆ ಹಾಕಿ, ಗುಣಿಸಿ ನೋಡಿದರು ಹೇಳಿದರು-'ಭಂಡಾರಿಗಳೇ, ಇದು ನಿಮ್ಮ ಕುಲಭೂತದ ಬಾಧೆ. ಕಳೆದ ವರ್ಷ ನಿಮ್ಮ ಪತ್ನಿಯ ಗರ್ಭಕ್ಕೆ ತೊಂದರೆಕೊಟ್ಟ ಕೆಟ್ಟ ಭೂತ ವಿಧಿ ಪರಿಹಾರ ಮಾಡಲೇಬೇಕು'

ಪರಿಹಾರಕ್ರಿಯೆಯು ೧೨೫ ರೂಪಾಯಿಗಳ ವೆಚ್ಚದ ಮೇಲೆ ನಡೆಯಿತು ಆದರೆ ನರಸಿಂಹನು ಹಾಸಿಗೆಯನ್ನು ಬಿಡಲಿಲ್ಲ ದಿನೇ ದಿನೇ ಕೃಶನಾಗಿ, ತೀರ ಅಸ್ಥಿಪಂಜರನಾಗಿ.— ಆರು ತಿಂಗಳುಗಳ ನಂತರ ಕಾಲವಾದನು ಭೂತವು ಕ್ಷಯರೋಗದಿಂದ ತಮ್ಮ ಮಗನನ್ನು ಮೃತ್ಯುವಶಪಡಿಸಿದುದಕ್ಕಾಗಿ ಹೆತ್ತವರು ದುಃಖಿಸಿ ಸುಣ್ಣವಾದರು

ಕೃಷ್ಣನ ಬಾಯ್ಬಿಡಿಸಿದ ಕೆಲವು ಸತ್ಯಾನ್ವೇಷಿಗಳು ಮಾತ್ರ ನರಸಿಂಹನ ಮರಣಕ್ಕೆ ಅವನ ದುರಭ್ಯಾಸವೇ ಕಾರಣವೆಂದೂ, ಆ ದುರಭ್ಯಾಸಕ್ಕೆ ಕೃಷ್ಣನೇ ಕಾರಣನೆಂದೂ, ಇಂತಹ ದುರಭ್ಯಾಸವೂ ಲೋಕದಲ್ಲಿರುವುದೆಂದು ತಿಳಿದವರೂ ಜನಾಂಗವೂ ಧೈರ್ಯಗೊಂಡು ಏಕೆ ನಿವಾರಣೋಪಾಯಗಳನ್ನು ಕಲ್ಪಿಸಲಾರರೋ ಎಂದು ಹೇಳುತ್ತಿರುವರು ಮ. ಚಾ.

ನೈಸರ್ಗಿಕ ಉಪಾಯಗಳಿಂದ ಸ್ವಾಸ್ಥ್ಯರಕ್ಷಣೆ.

ಅರ್ವಾಚೀನ ಭಾರತೀಯರ ಆಯುಃಪ್ರಮಾಣವು ೨೦-೨೫ ವರ್ಷಗಳಷ್ಟಾಗಿರುವುದೆಂದು ವಿದ್ವಾಂಸರು ಲೆಕ್ಕ ಹಾಕಿರುವರಾದರೂ, ಹಿಂದೆಂದೂ ಹೀಗಿರಲಿಲ್ಲವೆಂದೂ ಪ್ರಾಚೀನ ಇತಿಹಾಸದಿಂದ ತಿಳಿಯಬರುವುದು ಸಮಃ ಸಾಧಾರಣವಾಗಿ ನಮ್ಮ ಪೂರ್ವಜರು ೮೦ ವ ನೂರು ವರುಷಗಳ ವರೆಗೆ ಬದುಕಿದ್ದರೆ, ಮಾತ್ರವಲ್ಲದೆ ಅದಕ್ಕೆ ಮಿಕ್ಕಿ ದೀರ್ಘಾಯುಗಳಾಗಿದ್ದ ಪ್ರಾಚೀನ ಭಾರತೀಯರ ಜೀವನದ ಉಲ್ಲೇಖವು ಕೂಡ ನಮ್ಮ ಪುರಾಣ ಇತಿಹಾಸ ಗ್ರಂಥಗಳಲ್ಲಿ ಆದುದು ಕಂಡುಬರುತ್ತದೆ ಆಗಿನ ಭಾರತವಾಸಿಗಳ ಜೀವನದ ತುಲನಾತ್ಮಕ ವಿಚಾರ ಮಾಡಿದ್ದಾದರೆ, ಪ್ರಾಚೀನರು ದೀರ್ಘಾಯುಗಳಾಗಿರಲಿಕ್ಕೆ ಅವರೂ ಸಾದಾಜೀವಿಗಳೂ ಉಚ್ಚ ವಿಚಾರಿಗಳೂ ಆಗಿದ್ದುದು ಮತ್ತು ನೈಸರ್ಗಿಕ ಉಪಾಯಗಳಿಂದ ತಮ್ಮ ಶರೀರಾರೋಗ್ಯವನ್ನು ಕಾಪಾಡಿಕೊಂಡು ಬಂದುದು-ಇವೆರಡೇ ಕಾರಣಗಳಾಗಿದ್ದುವೆಂದು ಗೊತ್ತಾದೀತು ಪಾಶ್ಚಾತ್ಯ ಸಭ್ಯತೆಯ ಮೋಹಜಾಲಕ್ಕೆ ಸಿಲುಕಿಕೊಂಡ ಈಗಿನ ಭಾರತೀಯರು,-ಬಡವರು ಮೊದಲುಗೊಂಡು ಶ್ರೀಮಂತರ ವರೆಗಿನ ಎಲ್ಲ ಸ್ತ್ರೀಪುರುಷರು-ಇಂದ್ರಿಯ ಸುಖವನ್ನೇ ಪರಮ ಸುಖವೆಂಬ ಭ್ರಮೆಗೊಳಪಟ್ಟು, ಜೀವನದ ಆವಶ್ಯಕತೆಗಳನ್ನು ಹೆಚ್ಚಿಸಿಕೊಳ್ಳುತ್ತ ಭೋಗ ವಿಲಾಸಿಗಳಾಗಿ ದೇಹಸ್ವಾಸ್ಥ್ಯವನ್ನು ಕಳಕೊಂಡು ಅಕಾಲಮೃತ್ಯುವಿಗೆ ತುತ್ತಾಗುತ್ತಿರುವರೆಂದು ಕೆಲವರ ಅಭಿಮತವಿರುತ್ತದೆ ಹೀಗಾದ್ದರಿಂದ ಸಮಾಜ ಮತ್ತು ರಾಷ್ಟ್ರ ಸಂಘಟನೆಯು ಶಿಥಿಲವಾಗಿ, ದೇಶವು ಪಾರತಂತ್ರ್ಯದ ಕಷ್ಟಗಳನ್ನು ಕೂಡ ಅನುಭವಿಸಬೇಕಾಗಿ ಬಂದಿರುವುದೆಂದು ಅವರು ಹೇಳುತ್ತಾರೆ ಶರೀರಾರೋಗ್ಯವಿಲ್ಲದಿದ್ದರೆ ಮನೋಶಕ್ತಿ ಬೆಳೆಯುವುದಾಗಲೀ ಆತ್ಮವಿಕಾಸವಾಗುವುದಾಗಲೀ ಅಸಾಧ್ಯ ಆದುದರಿಂದ ನೈಸರ್ಗಿಕ ಉಪಾಯಗಳಿಂದ ಸ್ವಾಸ್ಥ್ಯ ರಕ್ಷಣೆ ಮಾಡುವುದನ್ನೇ ವಾಸ್ತವಿಕ ಸುಖದ ಸವಿಯನ್ನುಣ್ಣುವ ಒಂದೇ ಒಂದು ಮಾರ್ಗವೆಂದು ಮಹಾತ್ಮಾಜಿಯವರು ಕೂಡ ಹೇಳಿದ್ದಾರೆ

ಪಾಶ್ಚಾತ್ಯ ಸಭ್ಯತೆಯಲ್ಲೇ ಬೆಳೆದುಬಂದ ಪಾಶ್ಚಿಮಾತ್ಯರು ಕೂಡ ಈಗೀಗ ತಮ್ಮ ಜೀವನದ ಹುರುಳನ್ನು ತಿಳಿಯಲಾರಂಭಿಸಿದ್ದಾರೆ ಅವರು ತಮ್ಮ ಸ್ವಾಸ್ಥ್ಯ ರಕ್ಷಣೆಗಾಗಿ ಹೊಸ ಹೊಸ ಉಪಾಯಗಳನ್ನು ಕಂಡುಕೊಳ್ಳಲಾರಂಭಿಸಿದ್ದಾರೆ ವಿಚಾರಶೀಲರಾದವರು ಪ್ರಾಚೀನ ಭಾರತೀಯರ ಜೀವನಾದರ್ಶವೇ ಸ್ವಾಸ್ಥ್ಯ ರಕ್ಷಣೆಯ ಸುಲಭ ಮಾರ್ಗವೆಂದು ಕೂಗಿ ಕೂಗಿ ಹೇಳಲಾರಂಭಿಸಿರುವರು, ಮಾತ್ರವಲ್ಲ, ಅವರ ಸಾದಾ ಜೀವನ, ಉಚ್ಚ ವಿಚಾರಗಳ ಪ್ರಚಾರಕ್ಕಾಗಿ ಹಗಲಿರುಳು ದುಡಿಯಲಾರಂಭಿಸಿದ್ದಾರೆ ಸ್ವಾಸ್ಥ್ಯ ರಕ್ಷಣೆ ಮಾಡುವ ಬೇರೆ ಬೇರೆ ಪ್ರಾಕೃತಿಕ ವಿಧಾನಗಳ ಆವಿಷ್ಕಾರಗಳೂ ಆಗಿವೆ ಆದರೆ ನಾವು ಮಾತ್ರ ಹಿರಿಯರ ಅನುಭೂತ ಜ್ಞಾನವನ್ನು ಕಾಲಡಿಯ ಕಸಕ್ಕಿಂತಲೂ ತುಚ್ಛವೆಂದು ತಿಳಿದು ಪಾಶ್ಚಾತ್ಯ ಸಭ್ಯತೆಯವರ ಪ್ರಸಾದವೆನ್ನಿಸುವ ಭೋಗವಿಲಾಸಮಯ ಜೀವನವನ್ನೇ ಆದರ್ಶಜೀವನವೆಂಬ ಭ್ರಮೆಯನ್ನು ಕಟ್ಟಿಕೊಂಡಿದ್ದೇವೆ

ಯುರೋಪದಲ್ಲಿ ಪ್ಯಾರೀಸ ನಗರವು ಭೋಗವಿಲಾಸಗಳ ಒಂದು ದೊಡ್ಡ ಕೇಂದ್ರ ಅಲ್ಲಿಯೇ ನೈಸರ್ಗಿಕ ಉಪಾಯಗಳಿಂದ ಸ್ವಾಸ್ಥ್ಯರಕ್ಷಣೆ ಮಾಡಿಕೊಳ್ಳಬೇಕೆನ್ನುವ ಒಂದು ಸಂಘವು ಪ್ರಬಲ ಪ್ರಚಾರಕಾರ್ಯವನ್ನು ಕೈಗೊಂಡಿರುವುದೆಂದರೆ, ಆ ನೈಸರ್ಗಿಕ ಉಪಾಯಗಳ ಉಪಯೋಗತೆಯಾದರೂ ಎಷ್ಟಿರಬೇಡ? ಅದು ಹೇಳುವುದೇನೆಂದರೆ —

೧ ವರ್ತಮಾನಕಾಲದ ಮಾನವ ಸಮಾಜವು ಅನಾರೋಗ್ಯದ ಮೂಲಕ ಅನುಭವಿಸುವ ಎಲ್ಲ ಯಾತನೆಗಳನ್ನು ಪ್ರಾಕೃತಿಕ ಉಪಾಯಗಳ ಅವಲಂಬನದಿಂದ ದೂರಮಾಡಬಹುದು ಸ್ವಾಭಾವಿಕ ಜೀವನಕ್ರಮವನ್ನನುಸರಿಸುವುದರಿಂದ ಮನುಷ್ಯನಜೀವನವು ಸರ್ವಾಂಗಸುಂದರವಾಗಬಹುದು ೨ ವ್ಯಕ್ತಿಯ ಸರ್ವಾಂಗ ಸುಂದರ ಜೀವನವು ಸಮಷ್ಟಿಜೀವನವನ್ನು ನಿಯಂತ್ರಿತಗೊಳಿಸುವುದು ಸಮಷ್ಟಿಯ ನಿಯಂತ್ರಿತ ಜೀವನದಿಂದ ಸಮಾಜದ ಜೀವನವು ಸುಂದರವಾಗುವುದು ಆದುದರಿಂದ ಪ್ರತ್ಯೇಕ ಒಬ್ಬ ಮನುಷ್ಯನೂ ತನ್ನ ಶಾರೀರಿಕ ಮಾನಸಿಕ ಆಧ್ಯಾತ್ಮಿಕ ಜೀವನವನ್ನು ಸುಂದರಗೊಳಿಸಿ ಸಮಾಜ ಮತ್ತು ದೇಶದ ಜೀವನವನ್ನು ಸುಂದರವಾಗಿ ಮಾಡಬಹುದು ೩ ಅವರವರ ಕಲ್ಯಾಣಕ್ಕಾಗಿ ಮಾತ್ರ ಮನುಷ್ಯರು ತಮ್ಮ ಸರ್ವಾಂಗ ಉನ್ನತಿಯನ್ನು ಸಾಧಿಸಬೇಕಾಗಿರುವುದಷ್ಟೇ ಅಲ್ಲ, ಜಾತಿಯ ಭಾವೀ ಉತ್ಕೃಷ್ಟಕ್ಕಾಗಿಯೂ ಅವರು ತಮ್ಮ ಜೀವನವನ್ನು ಸರ್ವಾಂಗ ಸುಂದರವಾಗಿಡಬೇಕಾಗಿದೆ ೪ ಮನುಷ್ಯನು ತನ್ನ ಜೀವನವನ್ನು ಸುಂದರವನ್ನಾಗಿಡಲು ಪ್ರಯತ್ನಿಸಿದಷ್ಟು ಹೆಚ್ಚಾಗಿ ಅವನು ಸುಖಿಯಾಗುವನು ೫ ತನ್ನ ಜೀವನವನ್ನು ಸುಂದರವಾಗಿಡಲಿಕ್ಕೂ ತಾನು ಸುಖಿಯಾಗಿರಲಿಕ್ಕೂ ಪ್ರತಿಯೊಬ್ಬನು ಪ್ರಕೃತಿಯ ಎಲ್ಲ ವಿಷಯಗಳ ಅಧ್ಯಯನ ಮಾಡಬೇಕು, ಮತ್ತು ಆ ನಿಯಮಗಳಂತೆ ತನ್ನ ಜೀವನಯಾತನೆ ಮಾಡಬೇಕು ೬ ಮನುಷ್ಯನ ಹೃದಯದಲ್ಲಿ ಜಾಗೃತವಾಗಿರಬೇಕಾದ ಪರಹಿತ ಸಾಧನಾಬುದ್ಧಿಯು ಅವನ ಚಾರಿತ್ರ್ಯದ ಮೇಲೂ ತನ್ನ ಸತ್ಪ್ರಭಾವವನ್ನು ಹಾಕುತ್ತದೆ ಆದುದರಿಂದ ಮನುಷ್ಯನು ಯಾವಾಗಲೂ ಇತರರ ಕಲ್ಯಾಣ ಕಾಮನೆ ಮಾಡುತ್ತಲೂ ಇರಬೇಕು ೭ ಮಾನವ ಸಮಾಜದ ಕ್ರಮೋನ್ನತಿಯಾಗುವುದು ನಿಶ್ಚಯ. ಆದುದರಿಂದ ಕುರೂಪ, ಅಸತ್ಯ, ಪಾಪ, ತಾತ್ಕಾರ ಸ್ವಾರ್ಥಪರತೆ ಇವುಗಳ ಮೇಲೆ ಸೌಂದರ್ಯ, ಸತ್ಯ, ಪುಣ್ಯ, ಮಂಗಲಕಾಮನೆಗಳ ವಿಜಯವಾಗುವುದು

(೭ನೇ ಪುಟಕ್ಕೆ ಮುಂದುವರಿದುದು)

ಈ ಬಟ್ಟಲಲ್ಲಿ ಇಲ್ಲ

\+ + +

ಹುಸೆನ್ —"ಹೌದೋ ಮಹಮ್ಮದ್, ನೀನು ಯಾರೊಡನೆಯೂ ಮಾತನಾಡುವುದಿಲ್ಲವೇಕೆ? ಮೌನವಾಗಿದ್ದು ಏನು ಫಲ?

ಮಹಮ್ಮದ್ —"ನನಗೆ ಒಬ್ಬನೇ ಮಿತ್ರನಿರುವುದು-ಅವನನ್ನೂ ಕೂಡಾ ನಾನು ಮೆಚ್ಚುವುದಿಲ್ಲ

ನಗಬಾರದು.

[ನಮ್ಮ ವಾಚಕರ ಭಿನ್ನಾಭಿರುಚಿಗಳನ್ನು ಲಕ್ಷಿಸಿ ಈ ವಾರದಿಂದ 'ನಗಬಾರದು' ಎಂಬ ತುಂಡು ಹಾಸ್ಯಗಳ ಕಲಂ ಒಂದನ್ನು ತೆರೆದಿರುತ್ತೇವೆ ಬೋಧಪ್ರದವೂ ಚಿಕ್ಕವೂ ಆದ ಹಾಸ್ಯಗಳನ್ನು ನಮ್ಮ ವಾಚಕರು ನಮಗೆ ಕಳುಹಿಸಿದ್ದಲ್ಲಿ ಯೋಗ್ಯತಾನುಸಾರವಾಗಿ ಅವುಗಳನ್ನು ಬೆಳಕಿಗೆ ತರಲಾಗುವುದು.] ಸಂ.

ಒಬ್ಬ ಸಣ್ಣ ಹುಡುಗನು —(ಮದ್ದಿನ ಅಂಗಡಿಯೊಂದಕ್ಕೆ ಹೋಗಿ)—"ನೋವು ನಿವಾರಣೆಗಾಗಿ ನೀವು ಮದ್ದನ್ನು ಇಟ್ಟುಕೊಂಡಿದ್ದೀರಾ" ಎಂದನು

ವೈದ್ಯ.—ನೋವು ಎಲ್ಲಿದೆ? ತೋರಿಸು.

ಹುಡುಗ -ಅದು ಬಂದಿರುವುದಿಲ್ಲ. ನನ್ನ ತಂದೆಯವರು ನನ್ನ ಶಾಲಾ ರಿಪೋರ್ಟನ್ನು ಓದುತ್ತಿದ್ದಾರೆ ಮಾತ್ರ

\+ + +

ರೈಲ್ವೆ ಸ್ಟೇಷನಿನಿಂದ ಮನೆಗೆ ಬಂದ ಅತಿಥಿಯು ಮನೆಯ ಕೆಲಸದ ಹುಡುಗನನ್ನು ಕುರಿತು — 'ಆ ಪೆಟ್ಟಿಗೆಯನ್ನಲ್ಲಿಡು ನಿನ್ನ ಹೆಸರೇನು?'

ಕೆಲಸದ ಹುಡುಗ -(ಅತ್ತಿತ್ತನೋಡಿ)ರಾಯರೇ, ನನ್ನ ಹೆಸರು ಕೃಷ್ಣ, ಆದರೆ ಕಾಫಿಗೆ ಕಾಸು ಕೊಟ್ಟರೆ ಹೆಚ್ಚು ಕೆಲಸ ಮಾಡುವವನೆಂದು ನನ್ನನ್ನು 'ಕಾಫಿ ಕೃಷ್ಣ'ನೆಂದು ಕರೆಯುತ್ತಾರೆ"

\+ + +

ಉಪಾಧ್ಯಾಯ -ಲಕ್ಷ್ಮಣ, ಈ ಭೂಲೋಕದಲ್ಲಿನ ಏಳು ವಿಚಿತ್ರಗಳಾವುವು?

ಲಕ್ಷ್ಮಣ -ಥಕ್ಕನೆ ಎದ್ದು "ಸರ್, ತಾಯಿ ಹೇಳುತ್ತಾಳೆ, ನಾನು ಮತ್ತು ನನ್ನ ಆರು ಮಂದಿ ಸಹೋದರರೆಂದು"

\+ + +

ಅಜ್ಜ -ಅಪ್ಪು, ಆ ಬೆಕ್ಕಿನ ಬಾಲ ಹಿಡಿದು ಎಳೆಯಬೇಡಾ, ಅದು ಕಚ್ಚುವುದು

ಮೊಮ್ಮಗ -(ಬೆಕ್ಕಿನಬಾಲವನ್ನು ಎಳೆಯುತ್ತಾ) "ಇದರ ಬಾಲಕ್ಕೆ ಹಲ್ಲಿಲ್ಲ ಅಜ್ಜ, ನೋಡು

\+ + +

ತುಂಟ ಹುಡುಗ ಅಪ್ಪಾ, ನಾನೂ ನೀನೂ ಈ ಭೂಗೋಳಶಾಸ್ತ್ರವಾಗುವ ಮೊದಲೇ ಹುಟ್ಟುತ್ತಿದ್ದರೆ ಒಳ್ಳೆಯದಿತ್ತಲ್ಲ?

ತಂದೆ "ಯಾಕೋ ರಂಗ?

ರಂಗ -ಶಾಲೆಯಲ್ಲಿ ನನಗೆ ಭೂಗೋಳ ಕಲಿಯುವ ಕೆಲಸವೇ ಉಳಿಯುತ್ತಿತ್ತು'

\+ + +

ಉಪಾಧ್ಯಾಯರು ನಿನ್ನ ತಾಯಿಗೆ ನೀನು ಪರವೂರಿನಿಂದ ಪತ್ರ ಬರೆಯುವುದಾದರೆ ಹೇಗೆ ಬರೆಯುವೆಯೆಂದು ಒಂದು ನಕಲು ಮಾಡಿಕೊಂಡು ಬರಲು ನಿನ್ನೆ ಹೇಳಿದ್ದೆನಲ್ಲಾ? ಬರೆದಿದ್ದೀಯೆ?

ಚಿಕ್ಕ ಹುಡುಗ —(ಥಟ್ಟನೆಬೆಂಚಿನಿಂದೆದ್ದು) ಸರ್, ನನ್ನ ಅಮ್ಮಗೆ ಕನ್ನಡ ಬರುವುದಿಲ್ಲ ಅದಕ್ಕಾಗಿ ಅದನ್ನು ಬರೆಯಲೇ ಇಲ್ಲ, ಮತ್ತು ನಾನು ಪರವೂರಿಗೆ ಹೋಗುವುದೇ ಇಲ್ಲವೆಂದು ಖಂಡಿತ ಮಾಡಿದ್ದೇನೆ

\+ + +

ರಘು—"ಅಣ್ಣಾ ಬೀಡಿ ಎಳೆಯುತ್ತೀಯಾ? ನೋಡು, ಅಪ್ಪನೊಡನೆ ಹೇಳುತ್ತೇನೆ.

ಅಣ್ಣ —"ನೀನು ಹೇಳುವುದಾದರೆ ಹೇಳು-ನನಗೇನು? ನಾನು ಇದನ್ನು ಅಪ್ಪನ ಕೋಟಿನಿಂದಲೇ ತೆಗೆದೆ ಗೊತ್ತಾಯಿತೇ? ತ್ರಯಕ್ಕೆ ತರಲಿಲ್ಲ!

\+ + +

ಮೊನ್ನೆ ಮದುವೆಯಾದ ಹೆಂಡತಿ.-ಗಂಡನೊಡನೆ "ಪ್ರಿಯಾ, ಪಾಯಸಕ್ಕೆ ಉಪ್ಪು ಹೆಚ್ಚಾಯಿತಲ್ಲವೇ?

ಪ್ರೀತಿಯ ಗಂಡ.—ಉಪ್ಪು ಹೆಚ್ಚಾಗಲಿಲ್ಲ ಪ್ರಿಯೆ -ನಿನ್ನಾಣೆ, ಉಪ್ಪಿನಷ್ಟು ಪಾಯಸ ಮಾತ್ರ

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassan and Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purniah Chatram Road, Balepet
BANGALORE CITY

Shiromani Narayanacharya
Choukhamba Benares City

ಶಾಸ್ತ್ರಗಳೇ ಪೂರ್ವಿಕರು ಆರೋಗ್ಯರೇ ಅಥವಾ ಋಗಿಸವರೇ, ದೀರ್ಘಾಯುಷ್ಯನವರೇ ಪೂರ್ವಿಕರ ಆರೋಗ್ಯವೇ ಸಹಜವಾದ ಆರೋಗ್ಯ ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಸಹಿಷ್ಣು ಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಮತ್ತು ಶೀತ, ಇವುಗಳೆಲ್ಲಾ ಆಗುವು ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು

ಸಣ್ಣ ಅಕ್ಕಿ ಪ್ರಮಾಣದ ಕಂಠೀಸರ 1ಕ್ಕೆ ಆಣೆ 1ರಿಂದ ರೂ 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ 25ರ ವರೆಗೆ, ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ 3ರಿಂದ ರೂ 10ರ ವರೆಗೆ ಮತ್ತು 3–4–5–6–7–8 ಮುಖಗಳ ಕಾಳು 1ಕ್ಕೆ ಆಣೆ 4ರಿಂದ ರೂಪಾಯಿ 10 ಮತ್ತು 9–10–11 ಮುಖಗಳುಳ್ಳ ಕಾಳು 1ಕ್ಕೆ ರೂ 20ರಿಂದ 30ರ ವರೆಗೆ 12 13–14 ಮುಖದ ಕಾಳು 1ಕ್ಕೆ ರೂಪಾಯಿ 5ರಿಂದ 100ರ ವರೆಗೆ ಸಣ್ಣ ರುದ್ರಾಕ್ಷಿ ಅವರೆಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ ದೊಡ್ಡ ರುದ್ರಾಕ್ಷಿ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ 1 ಕೆಟಲಾಗ ಸೊಡನೆ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬೆನಾರಿಸ್ (ಕಾಶೀ)

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.



ನೂರು ಫ್ಯಾನ್ಸಿ ಮೂಟ್ ರಿಸ್ಟ್ ವಾಚುಗಳ ಇವು ಹೊಳಪಿನಲಿ ಬಂಗಾರಕ್ಕಿಂತಲೂ ಹೆಚ್ಚು ಬಣ್ಣವುಳ್ಳವಾಗಿವೆ ಐದು ವರ್ಷಗಳ ಗ್ಯಾರಂಟಿ ಒಂದು ಉತ್ತಮವಾದ ಟೈಂಪೀಸ್ ಸರಿಯಾದ ಗಂಟೆಯನ್ನು ತೋರಿಸುತ್ತೆ ೧೦ ವರ್ಷಗಳ ಗ್ಯಾರಂಟಿ ಒಂದು ಲಿವರ್ ಪಾಕೆಟ್ ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವುದಿಲ್ಲ ಗ್ಯಾರಂಟಿ ೮ ವರ್ಷ ಅತಿ ಬೆಲೆಯುಳ್ಳ ಹಂಟಿಂಗ್ ಟೈಪ್ ಲೀವರ್ ವಾಚು ಬಂಗಾರದ ಪ್ಲೇಟ್ ಮೊಳೆ ಹಾಕಿರುವ ಸ್ಟ್ರಾಂಗು ಫೌಂಟನ್ ಪೆನ್ ಈ ಅತ್ಯುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ ಕೊಡುವೆವು ನಿಮಗೆ ಇಷ್ಟವಿಲ್ಲದಿದ್ದರೆ ಬೆಲೆಯು ವಾಪಾಸ್ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ

ಶರ್ಮ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ ೨೪೧೨ S 1 ಕಲ್ಕತ್ತಾ

ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಜ್ಡ ಸಾರ್ಸಪರಿಲಾ ಕೆಟ್ಟ ರಕ್ತಕ್ಕೆ ಪರಮೌಷಧ. ೪೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾ॥ ಗೌತಮ ರಾವ್ ಕೇಶವರವರ
ಫೋಸ್ಫರಸ್ ಗುಳಿಗೆಗಳು ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಫಾರ್ಬಸ್ ಮುಂಬಾಯಿ 4
ಸ್ಟಾಕಿಸ್ಟ— ಪಾಠಕ್ ಕಂಪನಿ ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಾಜಪೂತ ಇವರ

ಸಂತತಿ ಪ್ರತಿಬಂಧಕ-ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟ ಡಾಕ್ಟರ ಪಿ. ಎ ವೈದ್ಯ, ಎಲ್ ಸಿ ಪಿ ಎಸ್ ಕೆಳವಾಪಮಾಡಿದರು. ಆದರೆ ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ ೮–೦–೦ ವಿ ಪಿ ಆಣೆ ೮

ವಿಳಾಸ—ಸಂಜೀವಿನೀ ಔಷಧಾಲಯ ಮು ಪೊ ಮಿರಜ, S M C

ಕೈನಿಂಗ್ ವಾಚ್ ವರ್ಕ್ಸ್, ಮಂಗಳೂರು

ದಿನಂಪ್ರತಿ ನೂರಾರು ಗಿರಾಕಿಗಳು ಬಂದು ನಮ್ಮಲ್ಲಿರುವ ಹಲವು ಬಗೆಯ ಕೈಗಡಿಯಾರ, ಗೋಡೆಯ ಗಡಿಯಾರ ಆದಿದ ಸಾಮಾನು ಮೊದಲಾದುವುಗಳನ್ನು ಪಡೆದು, ಸಂತೃಪ್ತಿ ಹೊಂದಿ ಸಂತೋಷದಿಂದ ಹೋಗುವ ವಿಷಯವೊಂದೇ ನಮ್ಮಲ್ಲಿನ ಸರಕುಗಳಿಗೆ ಜನರಿಂದ ದೊರೆತಿರುವ ಪ್ರಶಂಸೆ ನೀವೂ ನಮ್ಮಲ್ಲಿಗೆ ಬರಬಹುದು, ತೃಪ್ತಿ ಹೊಂದಬಹುದು ಮೆಚ್ಚಿದರೆ ಪಡೆಯಬಹುದು

The Popular Insurance Company, Ltd.

Head Office:—MANGALORE, S. India

The Pioneer Life Office of the West Coast.

Wanted influential District agents in Unrepresented areas

A few Press opinions.

'INSURANCE HERALD,' CALCUTTA. This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country. If the Directors of this Comany can continue in the present rate of progress and can control the finances with wisdom and care, they would make history. From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds.

'THE ARTISAN,' TRIVANDRUM We are glad to see from the Fourth Annual Report and Balance Sheet of the Company that it has been making steady and satisfactory progress considering its age and the fact of the economic depression prevailing throughout the country.

THE INDIAN INSURANCE, BOMBAY. Mangalore is noted for its enterprise, and the Popular Insurance Company Ltd, promoted by the local residents of that place, is steadily gaining ground It is directed by influential people of Mangalore and managed by Mr B. Vittal Rao, who has developed in him a great deal of life insurance sense . ....

ಮಂಗಳೂರು.

ನಮ್ಮ ಜಿಲ್ಲೆಯವರಾದ ಮತ್ತು ಮದ್ರಾಸಿನಲ್ಲಿ ವೈದ್ಯಕೀಯ ವೃತ್ತಿಯಲ್ಲಿ ತುಂಬಾ ಕೀರ್ತಿ ಪಡೆದಿರುವ ಡಾ। ಯು. ಎಲ್. ನಾರಾಯಣರಾಯರೂ ಮತ್ತು ಡಾ। ಕೆ. ರಾಮರಾಯರೂ ಪಾಶ್ಚಾತ್ಯ ದೇಶಗಳಲ್ಲಿ ನೂತನವಾಗಿ ಕಂಡುಹಿಡಿಯಲ್ಪಟ್ಟ ವೈದ್ಯಕೀಯ ಅನುಭವಗಳನ್ನು ಕಲಿತುಕೊಂಡು ಬರುವುದಕ್ಕಾಗಿ ಪ್ರವಾಸ ಬೆಳೆಸಿರುವರು.

ಬ್ಯಾಂಕ್ ಒಫ್ ಮಂಗಳೂರು ಇದರ ಹೊಸತೊಂದು ಕಚೇರಿಯು ಕೇರುಬೀದಿಯಲ್ಲಿ ನೊನ್ನೆ ಶನಿವಾರ ಸಾಯಂಕಾಲ ತೆರೆಯಲ್ಪಟ್ಟಿತು. ಶ್ರೀ ಎಂ. ನರಸಿಂಗರಾವ್ ಬಿ ಎ ಎಂ. ಎಲ್ ಇವರು ಆ ದಿನದ ಸಭಾಧ್ಯಕ್ಷರಾಗಿದ್ದರು.

ದ. ಕ. ಜಿಲ್ಲಾ ಸರ್ಜನರಾದ ಮಾ। ರಾ। ರಾ। ಕೆಯ್ಯೂರ ಮನೋಹರರವರು ತಮ್ಮ ಪ್ರಥಮ ಪುತ್ರಿಯ ವಿವಾಹವು ನಡೆಯುವುದು ಅವಳ ಜಾತಕದ ಆಧಾರದಿಂದ ಯಾವಾಗ ಎಂಬ ಸಂಗತಿಯನ್ನು ಊರಿನ ಮತ್ತು ಪರಊರಿನ ಜ್ಯೋತಿಷ್ಯರನ್ನು ತರಿಸಿ ವಿಚಾರಮಾಡಿ ಪ್ರತಿಯೊಬ್ಬ ಜ್ಯೋತಿಷಿಕನಿಂದಲೂ ಬರವಣಿಗೆ ಮೂಲಕವಾಗಿ ಅವರ ಅಭಿಪ್ರಾಯಗಳನ್ನು ತೆಗೆದುಕೊಂಡದ್ದಲ್ಲದೆ ಅದರಲ್ಲಿ ಯಾರು ಜಯಶೀಲರಾಗುವರೋ ಅವರಿಗೆ ಒಂದು ನೂರು ರೂಪಾಯಿಗಳ ಬಹುಮಾನವನ್ನು ಕೊಡುವುದಾಗಿ ನಿಶ್ಚಯಿಸಿದ್ದರು. ಅದರೆ ೧೯೩೮ನೇ ಇಸವಿಗೆ ಬೇರೆ ಎಲ್ಲರ ವಾಯಿದೆಯು ದಾಟಿಹೋದರೂ ಬ್ರಹ್ಮಶ್ರೀ ಪಣಂಬೂರು ಗುಡ್ಡೆ ಗಣಪತಿ ಜೋಶಿಯವರು ಮಾತ್ರ ೧೯೩೮ನೇ ಇಸವಿ ಮೇಷಮಾಸವೇ ಸಂಪೂರ್ಣ ವಿವಾಹಕಾಲವೆಂದು ಬರೆದುಕೊಟ್ಟ ಪ್ರಕಾರ ತಾ ೮-೫-೩೮ಕ್ಕೆ ವಿವಾಹವು ನಡೆದು ಅವರ ಮರುದಿವಸ ಟೀಪಾರ್ಟಿಯ ಸಮಯದಲ್ಲಿ ಗಣಪತಿ ಜೋಶಿಯವರಿಗೆ ನಿಶ್ಚಯಿಸಿದ ಮೇರೆಗೆ ರೂ ೧೦೦ರ ಬಹುಮಾನವನ್ನು ಕೂಡಿದ ಸಭೆಯ ಸಮುಂದೆ ಕೊಟ್ಟಿರುವರು.

ನಮ್ಮ ನಗರ ಸಭೆಯು ಕಳೆದ ತಾ ೧೬ನೆಯ ಶುಕ್ರವಾರ ನಗರ ಸಭಾಮಂದಿರದಲ್ಲಿ ಸೇರಿತು. ಮಾ। ರಾ। ರಾ। ರಾವ್‌ಬಹದ್ದೂರ್ ಎನ್. ಎಸ್ ಸುವರ್ಣ ಅವರ್ಗಳ್‌ರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಮೊದಲು ಅಧ್ಯಕ್ಷರು ಮ್ಯುನಿಸಿಪಾಲಿಟಿಯ ಸದಸ್ಯರಾಗಿ ೨೫ ವರ್ಷ ಕೆಲಸಮಾಡಿದ ದಿವಂಗತ ರಾವ್ ಸಾಹೇಬ್ ಎ ಜೆ. ಲೋಬೋರವರ ನಿಧನದ ಬಗ್ಗೆ ಸಂತಾಪಸೂಚಕವಾದ ಒಂದು ಠರಾವನ್ನು ತಂದರು. ಎಲ್ಲಾ ಸದಸ್ಯರೂ ನಿಂತುಕೊಂಡು ಠರಾವನ್ನು ಮಂಜೂರುಮಾಡಿದರು

ನಂದಿಗುಡ್ಡೆಯ ಬಾವಿಯಲ್ಲಿರುವ ಕಲ್ಲುಗಳನ್ನು ತೆಗೆದುಹಾಕುವ ಅಗತ್ಯದ ವಿಷಯದಲ್ಲಿ ಶ್ರೀ ಶ್ರೀಕರು ಒಂದು ಠರಾವು ತಂದರು ಅದು ಮಾನ್ಯವಾಯಿತು.

ಮಂಗಳೂರು ಮ್ಯುನಿಸಿಪಾಲಿಟಿಯು "ಸಿವಿಕ್ಸ್ ಸರ್ವೇ ರಿಪೋರ್ಟ್"ನ ಅರ್ಧ ಡಜನ್ ಪ್ರತಿಗಳನ್ನು ಮುನಿಸಿಪಲ್ ಲೈಬ್ರೆರಿಯಲ್ಲಿಡಬೇಕೆಂದೂ, ನಗರದ ವಿದ್ಯಾ ಸಂಸ್ಥೆಗಳಿಗೆ ಒಂದೊಂದು ಪ್ರತಿಯನ್ನು ಕೊಡಬೇಕೆಂದೂ, ಪ್ರತಿಯೊಂದು ಪ್ರತಿಯ ಕ್ರಯವನ್ನು ೮ ಅಣೆಗೆ ಇಳಿಸಬೇಕೆಂದೂ ನಿರ್ಧಾರವಾಯಿತು

ಕಳೆದ ಸನದ ೬ ವಾರಂಟ್ ಆಫೀಸರರಿಗೂ ಟ್ಯಾಕ್ಸ್ ಇನ್ಸ್‌ಪೆಕ್ಟರರಿಗೂ ಕೌನ್ಸಿಲಿನವರು ಮಂಜೂರು ಮಾಡಿದ್ದ ಸ್ಪೆಶಲ್ ಎಲೌನ್ಸನ್ನು ಕೊಡಬೇಕಾಗಿ ತಿಳಿಸಿದ್ದರು. ಅದು ಮಂಜೂರಾಯಿತು.

ತಾ ೨೬ರ ನಂತರ ಶ್ರೀ ಕೃಷ್ಣ ಸಿನೆಮಾದಲ್ಲಿ "ಲ್ಯೂರ್ ಒಫ್ ದಿ ಸಿಟಿ" ಎಂಬ ಚಲಚಿತ್ರವನ್ನು ಪ್ರದರ್ಶಿಸಲಾಗುವುದು. ಮಿಸ್ ಸಬಿತಾದೇವಿ, ಮಾ। ಕೆ ಸಿ. ಡೇ ಮೊದಲಾದ ಪ್ರಸಿದ್ಧ ಅಭಿನಯಗಾರರು ಇದರಲ್ಲಿ ಪಾತ್ರ ವಹಿಸಿರುವರು ಸಬಿತಾದೇವಿಯ ಮನಮೋಹಕ ರೂಪವು ನಗರವನ್ನೇ ಆಕರ್ಷಿಸಿ ಬಿಟ್ಟ ಕಥೆ

ಶ್ರೀ ಶಿವಭಕ್ತಿ ಯೋಗ ಸಂಘದವರು ತಾ. ೨೫ನೇ ಶನಿವಾರ ಸಂಜೆ ೬-೩೦ಕ್ಕೆ ಶ್ರೀ ಗೋಕರ್ಣನಾಥ ದೇವಸ್ಥಾನದ ಪಠಾರದಲ್ಲಿ ರಾಜಭಕ್ತಿ ಎಂಬ ನಾಟಕದ ಬದಲು ವಿವಿಧ ವಿನೋದಾವಳಿಗಳನ್ನು ಪ್ರದರ್ಶಿಸುವರೆಂದು ತಿಳಿಸುತ್ತಾರೆ.

ತಾಲೂಕುಗಳಿಂದ.

ಹೆಗ್ಗುಂಜೆ:— ಸ್ಥಳೀಯ ದುರ್ಗಾ ಪರಮೇಶ್ವರೀ ಶಾಲೆಯಲ್ಲಿ, ಇದೇ ಕಳೆದ ತಾ ೧೫ರಲ್ಲಿ, ಬ್ರಹ್ಮಾವರ ಕೇಂದ್ರದ ಹಿಂದೀ ಪ್ರಚಾರಕರಾದ ಶ್ರೀ ಕಟೀಲ್ ಗಣಪತಿಶರ್ಮರು, ಊರಿನ ಹಲವು ಯುವಕರ ಅಪೇಕ್ಷೆ ಮೇರೆಗೆ ಹಿಂದೀ ಕ್ಲಾಸೊಂದನ್ನು ತೆರೆದಿರುವರು

ಕಲ್ಲಡ್ಕ:— ನಿಶ್ಚಯದಂತೆ ತಾ ೧೯-೫-೩೮ನೇ ದಿನ ದಿ ಮುಸ್ಲಿಂ ಜಮಾತ್ ಐಕ್ಯ ಸಂಘದ ಪಂಚಮ ವಾರ್ಷಿಕೋತ್ಸವವು ಜನಾಬ್ ಮಹಮ್ಮದ್ ಶರೀಫ್ ಸಾಹೇಬರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು ಜನಾಬ್ ಎ ಮೂಸಬ್ಬ ಸಾಹೇಬ್, ವಕೀಲ್; ಜನಾಬ್ ಎಂ. ಶಂಶುಮಿಯ್ಯಾ ಸಾಹೇಬ, ಮುನ್ಸಿಪಲ್ ಕೌನ್ಸಿಲರ್, ಮಂಗಳೂರು ಇವರುಗಳ ಮತ್ತು ಇನ್ನೂ ಹಲವು ಮಹನೀಯರುಗಳ ಭಾಷಣಗಳಾದ್ವುವು. ಐಕ್ಯ ಸಂಘದ ಮುಖ್ಯ ಸ್ಥಾಪನೆಗಳಾದ "ಜುಮ್ಮಾ ಮಸಜೀದಿ" ಮತ್ತು ಮದ್ರಾಸಿನ ಕಟ್ಟಡದ ಬಗ್ಗೆ ಸರ್ಕಾರದ ಸಹಾಯಸಹಕಾರ ಬೇಕೆಂದು ಮುಂತಾಗಿ ಠರಾವುಗಳು ಪಾಸಾಗಿ, ಫೋಟೋದಿಂದಾಗಿ ಸದ್ರಿ ಮಹಾಸಭೆಯು ಸ್ವಾಗತಾಧ್ಯಕ್ಷರ ಕೃತಜ್ಞತಾ ಪ್ರಕಟಣೆಯೊಂದಿಗೆ ಅಗಲಿತು.

ಸೋಮೇಶ್ವರ:— ದಕ್ಷಿಣ ಕನ್ನಡ ಜಿಲ್ಲಾ ಮಲಿಯಾಳ ಬೋವಿಯರ ತೃತೀಯ ಪರಿಷತ್ತು ಇದೇ ತಿಂಗಳ ಕಳೆದ ೧೫ನೇ ತಾರೀಕಿನ ದಿನ ಮಧ್ಯಾಹ್ನದ ಮೇಲೆ ಸೋಮೇಶ್ವರ ರಾಜಾ ಹೈಸ್ಕೂಲಿನ ಭವ್ಯವಾದ ಮಂದಿರದಲ್ಲಿ ಬಹು ವಿಜೃಂಭಣೆಯಿಂದ ಪ್ರಾರಂಭಿಸಿತು ಶಾಲಾ ಮಂದಿರವು ತಳಿರುತೋರಣಗಳಿಂದಲೂ ಪತಾಕೆಗಳಿಂದಲೂ ಶೃಂಗರಿಸಲ್ಪಟ್ಟು ಬಹು ಮನೋಹರವಾಗಿತ್ತು ಮದ್ರಾಸು ನ್ಯಾಯವಿಧಾಯಕ ಸಭೆಯ ಮೆಂಬರರೂ ಡಿಸ್ಟ್ರಿಕ್ಟ್‌ಬೋರ್ಡಿನ ಅಧ್ಯಕ್ಷರೂ ಆದ ಶ್ರೀಯುತ ಎ ಬಿ. ಶೆಟ್ಟಿ ಅವರ್ಗಳ್ ಮತ್ತು ಪರಿಷತ್ತಿನ ಅಧ್ಯಕ್ಷರಾದ ಶ್ರೀಯುತ ಯು. ಕುಮಾರಯ್ಯ ಅವರ್ಗಳ್ ಬಿ. ಎ (ತಹಶಿಲ್ದಾರರು) ಇವರನ್ನು ಅನೇಕ ಕಡೆಗಳ ಪ್ರತಿನಿಧಿಗಳೊಂದಿಗೆ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀಯುತ ಬಸಪ್ಪನವರೂ ಸದರಿ ಸಮಿತಿಯ ಸದಸ್ಯರೂ ಎದುರುಗೊಂಡು ಅತ್ಯಾದರದಿಂದ ಸ್ವಾಗತಿಸಿದ ಮೇಲೆ ಶ್ರೀಯುತ ಎ ಬಿ ಶೆಟ್ಟಿ ಅವರ್ಗಳ್‌ರವರು ಪರಿಷತ್ತಿನ ಆರಂಭೋತ್ಸವವನ್ನು ನೆರವೇರಿಸಿದರು. ದೇವರ ಪ್ರಾರ್ಥನೆಯಾದ ತರುವಾಯ ಸ್ವಾಗತ ಸಮಿತಿಯ ಅಧ್ಯಕ್ಷರು ಎಲ್ಲಾ ಕಡೆಗಳಿಂದಲೂ ಪರಿಷತ್ತಿನ ಯಶಸ್ಸನ್ನು ಬಯಸಿ ಬರೆಯಲ್ಪಟ್ಟು ಬಂದಿರುವ ಪತ್ರಗಳನ್ನೂ ಟೆಲಿಗ್ರಾಫ್‌ಗಳನ್ನೂ ಓದಿದ ಮೇಲೆ ಸಂಕ್ಷೇಪವಾದ ಭಾಷಣವನ್ನು ಮಾಡಿದರು. ಆ ಮೇಲೆ ಶ್ರೀಯುತ ಎ ಬಿ. ಶೆಟ್ಟಿ ಅವರ್ಗಳ್‌ರವರು ತನ್ನ ಸುರಸವಾದ ಭಾಷಣದಿಂದಲೂ ಉಪದೇಶಗಳಿಂದಲೂ ಸಭಿಕರನ್ನು ಸಂತೋಷಗೊಳಿಸಿದರು ಬಡಮಕ್ಕಳ ವಿದ್ಯಾಫಂಡಿಗಾಗಿ ಅಲ್ಲಿಯೇ ೧೦ ರೂಪಾಯಿಗಳ ದಾನವನ್ನಿತ್ತರು ಶಾಲೆಯ ಮನೇಜರರಾದ ರವಿವರ್ಮರಾಜರವರೂ ಚಿತ್ತೈಯಿಸಿದ್ದರು. ಶ್ರೀಯುತ ಎ. ಬಿ. ಶೆಟ್ಟಿ ಅವರ್ಗಳ್‌ರವರಿಗೆ ಧನ್ಯವಾದಗಳನ್ನರ್ಪಿಸಿದ ನಂತರ ಭಾವಚಿತ್ರವು ತೆಗೆಯಲಾಗಿ ಫಲಾಹಾರವಾದ ಮೇಲೆ ಪುನಃ ಪರಿಷತ್ತಿನ ಕಾರ್ಯವು ಆರಂಭವಾಯಿತು. ಕಾರ್ಯನಿರ್ವಾಹಕ ಸಮಿತಿಯ ಕಾರ್ಯದರ್ಶಿಯವರಾದ ಶ್ರೀಯುತ ಯು. ಪರಮೇಶ್ವರನವರು ಸದರಿ ಸಮಿತಿಯ ವರದಿಯನ್ನು ಓದಿದ ತರುವಾಯ ಅಧ್ಯಕ್ಷರ ಜನಾಂಗದ ಮೇಲ್ಮೆಯ ವಿಷಯಗಳನ್ನೊಳಗೊಂಡ ರಸವತ್ತಾದ ಪ್ರಥಮ ಭಾಷಣವಾಗಿ ಸಭೆಯ ಕಾರ್ಯವು ಕೊನೆಗೊಂಡ ಮೇಲೆ, ಭೋಜನವಾಗಿ ರಾತ್ರಿ ೯ ಘಂಟೆಗೆ ಮಲಿಯಾಳ ಭಾಷೆಯಲ್ಲಿ ಉಷಾನಿರುದ್ಧನೆಂಬ ನಾಟಕವನ್ನು ಯುವಕರು ಚಲೋದಿಯಾಗಿ ಅಭಿನಯಿಸಿದರು. ೧೬ನೆಯ ತಾರೀಕಿನ ದಿನ ಬೆಳಿಗ್ಗೆ ಫಲಾಹಾರವಾದ ಮೇಲೆ ೮ ಘಂಟೆಗೆ ಪರಿಷತ್ತಿನ ಕಾರ್ಯವು ತೊಡಗಿ ಮಧ್ಯಾಹ್ನ ೧ ಘಂಟೆಗೆ ಎಲ್ಲವೂ ಸುಸೂತ್ರವಾಗಿ ಮುಗಿಯಿತು. ಬಡಮಕ್ಕಳಿಗೆ ವಿದ್ಯಾಫಂಡಿನ ರಚನೆಯಾಯಿತು ಅಧ್ಯಕ್ಷರಿಂದ ೧೦ ರೂಪಾಯಿ, ಮಾ। ರಾ। ರಾ। ರವಿವರ್ಮರಾಜರು, ಬಿ ಎ, ಬಿ ಎಲ್, ಇವರಿಂದ ೫ ರೂ, ಮಾ। ರಾ। ರಾ। ರಾಘವನ್ ನಂಬಿಯಾರ್ ಬಿ. ಎ. ಇವರಿಂದ ೫ ರೂ ವಿದ್ಯಾಫಂಡಿಗೆ ದೊರೆತುದಲ್ಲದೆ, ಅನೇಕ ಮಂದಿ ಉದಾರಹೃದಯರು ಅಲ್ಲಿಯೇ ೩ ರೂ, ೨ ರೂ, ೧ ರೂ. ಈ ರೀತಿಯಲ್ಲಿ ವಾಗ್ದಾನವನ್ನಿತ್ತುದರಿಂದ ವಿದ್ಯಾಫಂಡಿಗೆ ಸುಮಾರು ೧೬೦ ರೂಗಳ ಸಹಾಯವು ದೊರೆಯಿತು ಅಧ್ಯಕ್ಷರ ದ್ವಿತೀಯ ಭಾಷಣವಾದ ನಂತರ ಸ್ವಾಗತ ಸಮಿತಿಯ ಅಧ್ಯಕ್ಷರು ಸೋಮೇಶ್ವರದ ರಾಜರಿಗೂ ಪರಿಷತ್ತಿಗಾಗಿ ಸಹಾಯ ಮಾಡಿದವರೆಲ್ಲರಿಗೂ ಪ್ರತಿನಿಧಿಗಳಿಗೂ ಅಧ್ಯಕ್ಷರಿಗೂ ಧನ್ಯವಾದಗಳನ್ನರ್ಪಿಸಿದ ಮೇಲೆ ಸಭೆಯ ಕಾರ್ಯವು ಕೊನೆಗೊಂಡಿತು

ಕಾರ್ಕಳ:— ತಾಲೂಕ ಕಾಂಗ್ರೆಸ್ ಕಮಿಟಿಯ ಚುನಾವಣೆಗಳಾಗಿ ಶ್ರೀಯುತರುಗಳಾದ ಜಾರ್ಕಳ ನಾಗಪ್ಪ ಹೆಗ್ಡೆಯವರು ಅಧ್ಯಕ್ಷರಾಗಿಯೂ ವಕೀಲ ಕೆ ಲಕ್ಷ್ಮಣ ಕುಡ್ವ ಮತ್ತು ಎಂ ಎಸ್ ಅಧಿಕಾರಿಗಳು ಕಾರ್ಯದರ್ಶಿಯವರಾಗಿಯೂ ಆರಿಸಿ ಬಂದಿದ್ದಾರೆ ಕಾಂಗ್ರೆಸ್ ಮೆಂಬರರನ್ನು ಕೂಡಿಸುವ ಕೆಲಸವು ಭರದಿಂದ ಸಾಗುತ್ತಿದ್ದು ಈಗಾಗಲೇ ಸುಮಾರು ೨೫೦ ಮಂದಿ ಹೆಸರನ್ನು ಕೊಟ್ಟಿದ್ದಾರೆ, ಜೂನ್ ೧೫ರ ಒಳಗೆ ೨೦೦೦ ಮಂದಿಯನ್ನು ಕೂಡಿಸುವ ಕಾರ್ಯಕ್ರಮವನ್ನಿಟ್ಟುಕೊಂಡಿದ್ದಾರೆ.

ತಾ ೧೫-೫-೩೮ರ ದಿನ [illegible] ಸ್ವರಾಜ್ಯ ಸ್ವಯಮಾಸನದಲ್ಲಿ ವಕೀಲ ಸಿ ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ನಡೆದು ಕೆ ಗಣಪತಿ ಶೆಣೈಯವರು ಸೂಚಿಸಿ ಎಂ ಎಸ್ ಅಧಿಕಾರಿಗಳು ಅನುಮೋದಿಸಿ ಕೆ ಎಲ್ ಕುಡ್ವರು ಸಮರ್ಥಿಸಿ ಮಂಡಿಸಿದ ಪ್ರಕಾರ ಬಂಗಾಳದ ಯುವಕರನ್ನು ಸ್ವಾತಂತ್ರ್ಯ ಕೈದಿಗಳನ್ನಾಗಿ ಮಾಡಿದ ಸರಕಾರದ ವರ್ತನೆಯನ್ನು ಖಂಡಿಸಿ ಅವರನ್ನು ಕೂಡಲೇ ಬಿಡುಗಡೆಮಾಡಬೇಕು ಅಥವಾ ವಿಚಾರಣೆಗೆ ಗುರಿಪಡಿಸಬೇಕೆಂದು ಕೇಳುವ ನಿರ್ಣಯವಾಯಿತು. ಆ ಕೈದಿಗಳ ಕುಟುಂಬಗಳೊಡನೆ ಸಹಾನುಭೂತಿಯನ್ನು ತೋರಿಸಿ ಧನಸಹಾಯಮಾಡುವ ಕೆಲಸವು ನಡೆಯುವುದಾಗಿ ತಿಳಿಯುತ್ತದೆ.

ಉಡುಪಿ:— ಸ್ಥಳೀಯ ಜಿಮ್ಖಾನಾ ಕಮಿಟಿಯಿಂದ ನಡೆಸಲ್ಪಡುವ ಪಂದ್ಯಾಟಗಳಲ್ಲಿ ಟೆನ್ನಿಸ್ ಡಬಲ್ಸ್ ಶ್ರೀಗಳಾದ ನಾಗಪ್ಪ ಮತ್ತು ಪ್ರಭಾಕರರವರೂ, ಟೆನ್ನಿಸ್ ಸಿಂಗಲ್ಸ್ ಮಿ. ಆರ್. ಎಂ. ಆಂದ್ರಾದೆಯವರೂ, ಬ್ಯಾಡ್‌ಮಿಂಟನ್ ಉಪಾಧ್ಯಾಯ ರಾಯರವರೂ, ಫುಟ್‌ಬಾಲ್ ಕರೊನೇಶನ್ ಕಪ್ ಕುಂದಾಪುರ ಟೌನ್ ಇಲೆವನ್ ಮತ್ತು ಅಂತರ ಶಾಲೆಗಳೊಳಗೆ ನಡೆದ ಸ್ಪರ್ಧೆಯಿಂದ ಕಪ್ಪನ್ನು ಆರು ತಿಂಗಳ ಮಟ್ಟಿಗೆ ಕುಂದಾಪುರ ಮತ್ತು ಉಡುಪಿ ಬೋರ್ಡ್ ಶಾಲೆಗಳವರೂ ಜಯಶೀಲರಾಗಿರುತ್ತಾರೆ. ಜಯಶೀಲರಾಗಿರುವ ಎಲ್ಲಾ ಟೀಮುಗಳನ್ನೂ ಅಭಿನಂದಿಸುವಾಗ ಸ್ಥಳೀಯ ಕ್ರಿಶ್ಚನ್ ಹೈಸ್ಕೂಲಿಗೆ ಯಾವುದೇ ಆಗಲಿ ಪಂದ್ಯಾಟದಲ್ಲಿ ಕಪ್ಪು ದೊರೆಯದಿದ್ದರೂ ಮುಂದಿನ ವರ್ಷವಾದರೂ ಯಶಸ್ಸು ಸಿಗಲೆಂದು ಹಾರೈಸಲಾಗುತ್ತದೆ.

ಇಲ್ಲಿನ ಶ್ರೀಮತಿ ಬಿ ಮುಕ್ತಾಬಾಯಿಯು ಈ ವರ್ಷದ ಮದ್ರಾಸು ಯುನಿವರ್ಸಿಟಿಯ ವೈದ್ಯಕೀಯ ಪರೀಕ್ಷೆಯಲ್ಲಿ ಎಮ್ ಬಿ., ಬಿ ಎಸ್ ಹೊಂದಿರುತ್ತಾರೆ ಹಿಂದೂ ಮಹಿಳೆಯರಲ್ಲಿ ಈ ಪರೀಕ್ಷೆಯನ್ನು ಕೊಟ್ಟ ಮಹಿಳೆಯರಲ್ಲಿ ಇವರೇ ಪ್ರಾಯಶಃ ಪ್ರಥಮರಾಗಿರುತ್ತಾರೆ ಇವರನ್ನು ಶ್ರೀದೇವರು ಹರಸಲಿ!

'ನವಯುಗ' ಸಂಪಾದಕರಾದ ಶ್ರೀ ಕೆ. ಕೆ. ಶೆಟ್ಟರವರಿಂದ ನವೀನವಾಗಿ ರಚಿಸಲ್ಪಟ್ಟ ಯೋಗಿಯೋ ಭೋಗಿಯೋ ಎಂಬ ಕನ್ನಡ ಸಂಗೀತ ಸಾಮಾಜಿಕ ನಾಟಕವನ್ನು ಇಲ್ಲಿನ ಹಲವು ವಿದ್ಯಾವಂತ ಸ್ತ್ರೀಪುರುಷರು ಸ್ಥಳೀಯ ತಿರಿಯರ ಪ್ರಸಂಗದ ಸಹಾಯಾರ್ಥವಾಗಿ ಇದೇ ತಾ ೧೪ನೇ ರಾತ್ರಿ ಶ್ರೀರಾಮಕೃಷ್ಣ ಥಿಯೇಟರಿನಲ್ಲಿ ಯಶಸ್ವಿಯಾಗಿ ಆಡಿ ತೋರಿಸಿರುವರು.

ಇದೇ ತಾ ೨೦ನೇ ವೈ ಬ. ತ್ರಯಿ ಸೋಮವಾರ ಇಲ್ಲಿನ ಶ್ರೀ ೬ ಮ. ದೇವಳದಲ್ಲಿ ವಾಡಿಕೆಯಂತೆ ಪ್ರತಿಷ್ಠಾ ದಿನದ ಮಹೋತ್ಸವ ಸಂತರ್ಪಣೆಯು ಸಾಂಗವಾಗಿ ನೆರವೇರಿತು

ಮೂಡುಬಿದ್ರಿ:— ತಾ ೧೪-೫-೩೮ನೇ ಮಂಗಳವಾರ ಇಲ್ಲಿಯ ಸತ್ಯನಾರಾಯಣ ದೇವಸ್ಥಾನದ ಪಠಾರದಲ್ಲಿ ಸ್ತ್ರೀಯರಿಗಾಗಿ ಒಂದು ವಾಚನಾಲಯವು ಸ್ಥಾಪಿಸಲ್ಪಟ್ಟಿತು. ಅನೇಕ ಊರ ಮಹನೀಯರು ಇಂದಿನ ಸಭೆಗೆ ದಯಮಾಡಿಸಿದ್ದರು ಕರಿಂಜೆ ಶ್ಯಾಮರಾಯರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದಲ್ಲದೆ ಸ್ಥಳವನ್ನೂ ಒದಗಿಸಿಕೊಟ್ಟುದಕ್ಕೆ ತುಂಬಾ ಮಹಿಳೆಯರ ಧನ್ಯವಾದಗಳು.

ಕೆಲವೇ ಸಮಯದಲ್ಲೇ ಈ ವಾಚನಾಲಯವನ್ನು ಕಳೆದ ಮೂರು ವರ್ಷಗಳಿಂದ ನಡೆದು ಬರುತ್ತಿರುವ ಸಾರ್ವಜನಿಕ ಧರ್ಮಾರ್ಥ ವಾಚನಾಲಯದ ಒಂದು ಶಾಖೆಯನ್ನಾಗಿ ಮಾಡಿಕೊಳ್ಳಲಿರುವರು.

ಸ್ಥಳೀಕ ಶ್ರೀ ಕೃಷ್ಣ ಸಿನೇಮದಲ್ಲಿ ಇದೇ ಮೇ ತಾ 23ರಿಂದ ಪ್ರದರ್ಶಿಸಲ್ಪಡುತ್ತಿರುವ ಜವಾಹಿರ್ ಮೂವಿಟೋನ್ ಇವರ
— 'ತೀಫ್ ಒಫ್ ಇರಾಕ್' —
ಎಂಬ ಹಿಂದೀ ಮಾತನಾಡುವ ಚಿತ್ರದಿಂದೊಂದು ದೃಶ್ಯ.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು   ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವಿಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ

Distributors for South Kanara —

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ

ಜೀವನದ ಜಯಶೀಲತೆಯ ವಿಷಯವನ್ನೇ ಲಕ್ಷಿಸಿ ದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಾರೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಅಪ್ರತಿಮ

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಡಬ್ಬಿ ರೂ 1

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಚಿತ್ರಾಲು ... ನಮ್ಮ

ಕಾಮಶಾಸ್ತ್ರವನ್ನೋದಿರಿ

Shah Company M ... Pearl & Sons M ...

Atank Nigrah Pharmacy
Chickpet Bangalore
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ ಬೆಂಗಳೂರು

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇವರಿಂದ ಶಿಫಾರಸು ಮಾಡಲ್ಪಟ್ಟ ಪುಸ್ತಕಗಳು

ಸಾಮಾನ್ಯ ವಿಜ್ಞಾನ   ಅಜ್ಜಿ ಕಥೆಗಳು (ಸಚಿತ್ರ)

ಚರಿತ್ರೆ ಮತ್ತು ಕಥೆಗಳು	ರೂ	ಆ	ಪೈ	ಸಾಮಾನ್ಯ ವಿಜ್ಞಾನ	ರೂ	ಆ	ಪೈ	ಅಜ್ಜಿ ಕಥೆಗಳು
								[illegible]
								[illegible]
ನಾಲ್ಕನೇ ದರ್ಜೆ	0	6	0					[illegible]
ಮೂರನೇ ,,	0	4	6	ಎರಡನೇ ದರ್ಜೆ	[illegible]	[illegible]	[illegible]	[illegible]
ಎರಡನೇ ,,	0	4	0					[illegible]
ಸಮಾಜಶಾಸ್ತ್ರ				ಮೂರನೆ	0	3	0	[illegible]
ಐದನೇ ದರ್ಜೆ	0	8	0					ಗುಡ ಗಡು ... ದೇವರು
ನಾಲ್ಕನೇ ,,	0	8	0	ನಾಲ್ಕನೇ ,,	0	5	0	ಒಡ್ಡನ ...
ಮೂರನೇ ,,	0	2	6					
				ಐದನೇ	0	6	0	(ಇವುಗಳ ಕ್ರಯ 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೋಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ' ಕ್ರಯ ರೂ 1

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿ ಪುಸ್ತಕಗಳು ಇತರ ಪುಸ್ತಕಗಳು ಒಳ್ಳೊಳ್ಳೆ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ—

ಶಾರದಾ ಛಾಪಖಾನೆ, ಮಂಗಳೂರು.

ಶಿವರಾಮ ಕಾರಂತ ವಿರಚಿತ

ಗ್ನಾನ

ಜ್ಞಾನದ ಮೇಲೆ ವ್ಯಂಗ ಟೀಕೆ.

ಈಗ ಗ್ರಂಥರೂಪದಲ್ಲಿ

ಸಿದ್ಧವಾಗಿದೆ

ದಪ್ಪಗಿನ ಅಂಟಿಕ್ ಕಾಗದದಲ್ಲಿ

ಅಂದವಾಗಿ ಮುದ್ರಿಸಲ್ಪಟ್ಟಿದೆ.

ಕ್ರೌನ್ ಆಕಾರದ ೧೮೩ ಪುಟಗಳು.

ಉತ್ತಮ ತರದ ಹಾಸ್ಯ.

ಬೆಲೆ 1-4-0

ಶಾರದಾ ಛಾಪಖಾನೆ, ಮಂಗಳೂರು.

ಇವರಿಂದ ಪಡೆಯಬಹುದು.

ಪ್ರಾರ್ಥನೆಯ ಅರ್ಥ

[ಪ್ರಾರ್ಥನೆ, ಭಕ್ತಿ ಮತ್ತು ಪ್ರೇಮಗಳ ಅರ್ಥವನ್ನು ಪೂರ್ಣವಾಗಿ ತಿಳಿದು ಆಚರಿಸುವ ಮಂದಿಯಿಕ್ಕೆಂದು ನಾವು ನಾವೇ ತರ್ಕಿಸಿಕೊಂಡರೆ ತಕ್ಕ ಉತ್ತರವು ಸಿಗಬಹುದು. ಲೋಕಪೂಜ್ಯ ಗಾಂಧೀಜಿಯವರು ಈ "ಪ್ರಾರ್ಥನೆಯ ಅರ್ಥ"ವೇನೆಂದು] ತಿಳಿಸಿರುವ ಈ ಲೇಖನವನ್ನು ಅನುವಾದಿಸಿ ಇಲ್ಲಿ ಕೊಡಲಾಗಿದೆ. ಇದನ್ನು ಓದಿದ ಮೇಲಾದರೂ ಹಲವರಿಗೆ 'ಪ್ರಾರ್ಥನೆ'ಯ ನೈಜಾರ್ಥವು ತಿಳಿದುಬರದಿರದು.]

ಪ್ರಾರ್ಥನೆಯಲ್ಲಿ ಉತ್ಕೃಷ್ಟ ಪ್ರಾರ್ಥನೆ ಯಾವುದು? ಅದರ ಸ್ವರೂಪವು ಹೇಗಿರಬೇಕು? ಯಾವ್ಯಾವ ಸೂತ್ರಗಳನ್ನೊಳಗೊಂಡಿರಬೇಕು? ಪ್ರಾರ್ಥನೆಗಾಗಿ ನಾವು ಎಷ್ಟು ಸಮಯವನ್ನು ವಿನಿಯೋಗಿಸಬಹುದು? ಇವೇ ಮೊದಲಾದ ಪ್ರಶ್ನೆಗಳನ್ನು ನನ್ನ ಸನ್ಮಿತ್ರರೊಬ್ಬರು ನನಗೆ ಇಟ್ಟಿರುತ್ತಾರೆ. ಪ್ರಾರ್ಥನೆಯೆಂದರೇನೆಂದು ತಾನೇ ಕೆಲವು ಸೂಚನೆಗಳನ್ನಿತ್ತು ಅವರು ಹೀಗೆಂದಿರುತ್ತಾರೆ:–ಸನ್ಮಾರ್ಗ ಪ್ರವರ್ತಕರಾಗಿರುವುದೇ ಒಂದು ಉತ್ಕೃಷ್ಟ ಪ್ರಾರ್ಥನೆ. ಯಾರು ಎಲ್ಲರೊಡನೆಯೂ ನ್ಯಾಯಪರನಾಗಿಯೂ ಸತ್ಯಸಂಧನಾಗಿಯೂ ವರ್ತಿಸುತ್ತಾನೆಯೋ, ಅವನು, ಬೇರೆ ಪ್ರಾರ್ಥನೆಯನ್ನು ಮಾಡಬೇಕೆಂಬ ಆವಶ್ಯಕತೆಯಿರುವುದಿಲ್ಲ. ಪ್ರಾರ್ಥನೆಯೆಂಬುದಕ್ಕೆ ತಾವು ಯಾವ ಅರ್ಥವನ್ನಿತ್ತಿರುವಿರೆಂದು ತಿಳಿಯದೆ ಅನೇಕರು—ನೂರರಲ್ಲಿ ೯೯ ಮಂದಿಯೆನ್ನಬಹುದು—ಸಂಧ್ಯಾವಂದನೆಯೇ ಮೊದಲಾದ ಆಚಾರ ವಿಚಾರಗಳಲ್ಲಿ ತಮ್ಮ ಅಮೂಲ್ಯ ಸಮಯವನ್ನು ವ್ಯಯ ಮಾಡುತ್ತಿದ್ದಾರೆ. ನಮ್ಮ ಪ್ರಾರ್ಥನೆಯು ನಮ್ಮ ನುಡಿಯಲ್ಲಿ ವ್ಯಕ್ತಗೊಂಡಿರಬೇಕು; ಅಂತಹ ಪ್ರಾರ್ಥನೆಯಿಂದ ಆತ್ಮವು ಶುದ್ಧವಾಗುವುದು. ಒಂದು ನಿಮಿಷ ಕಾಲ ಮನಃಪೂರ್ವಕವಾಗಿ ಪ್ರಾರ್ಥನೆ ಮಾಡಿದರೆ ಸಾಕು. ಭಗವಂತನಿಗೆ ಮೊರೆಯಿಟ್ಟು "ನಾನು ಇನ್ನು ಎಂದಿಗೂ ತಪ್ಪು ಮಾಡಲಾರೆ" ನೆಂದು ಹೇಳುವ ಪ್ರಾರ್ಥನೆಗೆ ಎಷ್ಟು ಸಮಯವು ಬೇಕು?"

ದೈನ್ಯಭಾವದಿಂದ, ನಮ್ರರಾಗಿ ಭಗವಂತನೊಡನೆ "ನಮ್ಮ ಅಭೀಷ್ಟವನ್ನು ಕರುಣಿಸೆಂದು ಬೇಡಿಕೊಳ್ಳುವುದೇ 'ಪ್ರಾರ್ಥನೆ'ಯೆಂದೆನಿಸಲ್ಪಡುವುದು. ದೇವರನ್ನುದ್ದೇಶಿಸಿ ಭಕ್ತಿಮಯರಾಗಿ ಮಾಡುವ ಕೆಲಸಗಳು 'ಪ್ರಾರ್ಥನೆ'ಯೇ ಸರಿ. ಮೇಲಿನ ಪ್ರಶ್ನೆಯನ್ನು ಇಟ್ಟ ನನ್ನ ಮಿತ್ರರ ಅರ್ಥವನ್ನು 'ಪ್ರಾರ್ಥನೆ'ಯೆನ್ನುವುದಕ್ಕಿಂತಲೂ 'ಪೂಜೆ' ಎಂದು ಕರೆಯಬಹುದು. ಹಿಂದೂ, ಮುಸಲ್ಮಾನ, ಕ್ರೈಸ್ತ, ಯೆಹೂದ್ಯರು ತಮ್ಮ ಪ್ರಾರ್ಥನೆಯ ಕಾಲದಲ್ಲಿ ಮಾಡುವುದಾದರೂ ಏನನ್ನು? ದೇವರೊಡನೆ ಐಕ್ಯರೆನಿಸಿಕೊಳ್ಳಬೇಕು ಎಂಬುದಾಗಿಯೇ ಅವರು ಪ್ರಾರ್ಥಿಸುವರಲ್ಲದೆ ಮತ್ತೆ ಬೇರೆಯಲ್ಲ. ಅವರ ಪ್ರಾರ್ಥನೆಯಲ್ಲಡಕವಾಗಿರುವ ಮುಖ್ಯೋದ್ದೇಶವೇ ಇದಾಗಿರುತ್ತದೆ. ಇಂತಹ ಅವರ ಸಾಹಸದಲ್ಲಿ ಅವರ ಮನೋಸ್ಥಿತಿಗೆ ಯೋಗ್ಯ ಬೆಲೆಯನ್ನೀಯಬೇಕಲ್ಲದೆ ಅವರ ನುಡಿಗಳಿಗಲ್ಲ. ನಮ್ಮ ಪೂರ್ವಜರು ರಚಿಸಿಟ್ಟಿರುವ ಮಂತ್ರಾವಳಿಗಳನ್ನು ನಮ್ಮ ನಿತ್ಯದ ಭಾಷೆಗೆ ಬದಲಾಯಿಸಿಕೊಂಡರೆ ಆ ಮಂತ್ರಗಳಲ್ಲಿರುವ ಮೂಲಸತ್ವವು ಕೆಡುವುದು ನಿಜ. ಗಾಯತ್ರಿ ಮಂತ್ರವನ್ನು ನಾವು ನಮ್ಮ ಮನೆಮಾತಿಗನುಸಾರವಾಗಿ ಪರಿವರ್ತಿಸಿಕೊಂಡರೆ ಅದರಲ್ಲಡಕವಾಗಿರುವ ಅಮೂಲ್ಯ ಸಾರವು ಮಾಯವಾಗುವುದು. 'ರಾಮ' ಶಬ್ದೋಚ್ಚಾರಣೆಯ ಮಾತ್ರದಲ್ಲಿ ಎಷ್ಟೋ ಹಿಂದುಗಳ ಮನಸ್ಸಿನಲ್ಲಿ ಒಂದು ಬಗೆಯ ಭಕ್ತಿಯು ಶಾಂತಿಯು ಮೂಡಿದಂತಾಗುವುದು. ಆದರೆ ಅವರೆದುರು 'ದೇವರು' ಎಂಬ ಶಬ್ದವನ್ನುಚ್ಚರಿಸಿದ್ದಲ್ಲಿ ಆ ಶಬ್ದಾರ್ಥವು ಮಾತ್ರ ಅವರ ಮನದಲ್ಲಿ ಮೂಡಿ ಮಾಯವಾಗುವುದಲ್ಲದೆ ಅವರಲ್ಲಿ ಭಕ್ತಿಯ ಭಾವವು ಮೂಡಿ ಬರಲಾರದು. ಆ ಶಬ್ದವು ಅನ್ಯ ಪರಿಣಾಮವನ್ನುಂಟುಮಾಡುವುದಿಲ್ಲ. ಶಬ್ದದಲ್ಲಿ ಅರ್ಥವಡಗಿರುತ್ತದೆ. ಯಾವ ಪವಿತ್ರ ವಸ್ತುವಿಗೆ ಶಬ್ದವನ್ನುಪಯೋಗಿಸುತ್ತೇವೋ ಆ ಶಬ್ದಕ್ಕೆ ಅಂತಹ ಪಾವಿತ್ರ್ಯವು ಬರುತ್ತದೆ. ಶಬ್ದದ ಸಂಬಂಧವನ್ನು ಆ ಪವಿತ್ರ ವಸ್ತುವಿಗೆ ನಾವು ಕೊಟ್ಟು ಅದನ್ನು ಬಹುಕಾಲದಿಂದಲೂ ಉಪಯೋಗಿಸಿಕೊಂಡು ಬಂದುದರಿಂದಲೇ ಆ ಶಬ್ದವು ಒಂದು ಶಕ್ತಿಯನ್ನು ಸಂಪಾದಿಸಿರುತ್ತದೆ. ಆದುದರಿಂದ ಸಂಸ್ಕೃತ ಮಂತ್ರಗಳನ್ನು ನಮ್ಮ ನುಡಿಯ ಭಾಷೆಗೆ ಪರಿವರ್ತಿಸಿಕೊಳ್ಳಬೇಕೆಂಬ ವಾದವು ಅನುಮೋದನಾರ್ಹವಾಗಿಲ್ಲ. ಆದರೆ, ನಾವು ಉಚ್ಚರಿಸುವ ಮಂತ್ರದ ನಿಜವಾದ ಅರ್ಥವನ್ನು ಗ್ರಹಿಸಿದ ನಂತರವೇ ಅದನ್ನು ಹೇಳಬೇಕೆಂಬುದು ನ್ಯಾಯಬದ್ಧವಾಗಿರುತ್ತದೆ.

ಪೂಜೆ ಪುರಸ್ಕಾರಾದಿಗಳ ಕಾಲದ ವಿನಿಯೋಗದ ವಿಚಾರವಾಗಿ ಯಾವ ವಿಧದ ನಿರ್ಣಯವನ್ನು ಮಾಡಲು ಸಾಧ್ಯವೆಂದು ನಾನು ಹೇಳಲಾರೆ. ಪೂಜಕರ ಮನೋಪರಿಸ್ಥಿತಿಯನ್ನನುಸರಿಸಿ ಈ ವಿಷಯವಿದೆ. ಪೂಜೆಯ ಕಾಲವು ಮಾನವನಿಗೆ ಅತೀ ಅಮೂಲ್ಯವಾದುದು. ಭಗವಂತನ ಆಜ್ಞಾನುಸಾರವಲ್ಲವೂ ವರ್ತಿಸುವುವೆಂದೂ, ಆತನ ಅಪ್ಪಣೆಯಿಲ್ಲದೆ ಒಂದು ಕಡ್ಡಿಯು ಕೂಡಾ ಅಲುಗಾಡದೆಂದೂ ನಾವು ಆತನ ಪೂರ್ಣ ಅಧಿಕಾರಕ್ಕೊಳಗಾಗಿರುವೆವೆಂದೂ, ಕುಂಬಾರನು ತನ್ನ ಮಣ್ಣಿನಿಂದ ತನಗೆ ಬೇಕಾದಂತೆ ಗಡಿಗೆಗಳನ್ನು ತಯಾರಿಸುವಂತೆ ಭಗವಂತನು ನಮ್ಮನ್ನು ತನ್ನ ಇಚ್ಛಾನುಸಾರವಾದ ಕಾರ್ಯಗಳಿಗೆ ನೇಮಿಸುವನೆಂದೂ, ನಮ್ಮ ಶಕ್ತಿಯು ಅಲ್ಪವಾಗಿರುವುದೆಂದೂ ನಾವು ಕಂಡುಕೊಳ್ಳುವುದಕ್ಕಾಗಿಯೇ ಪೂಜೆಯೆಂಬುದನ್ನು ಮನುಷ್ಯನು ನಿರ್ಣಯಿಸಿಕೊಂಡಿರುತ್ತಾನೆ. ಪೂಜೆಯ ವೇಳೆ ನಾವು ನಮ್ಮ ಮುಮುಕ್ಷುಮಾರ್ಗವೇನೆಂದು ಚಿಂತಿಸಿ, ದೇವರೊಡನೆ ನಮ್ಮ ತಪ್ಪನ್ನು ಒಪ್ಪಿಕೊಂಡು, ಅವನು ಮುಂದಕ್ಕೆ ನಮ್ಮಿಂದ ಅಂತಹ ತಪ್ಪುಗಳಾಗದಂತೆ ವಿವೇಕವನ್ನೂ ಆತ್ಮಬಲವನ್ನೂ ಕೊಟ್ಟು ಪಾಲಿಸಬೇಕೆಂದೂ ನಾವು ಬೇಡುತ್ತೇವೆ. ಇಷ್ಟನ್ನು ಮಾಡಲು ಕೆಲವರಿಗೆ ಒಂದು ನಿಮಿಷವು ಸಾಕಾಗಿರಬಹುದು. ಕೆಲವರಿಗೆ ಒಂದು ದಿನವಾದರೂ ಸಾಕಾಗದಿರಬಹುದು.

ಭಗವಂತನ ಸಾಕ್ಷಾತ್ಕಾರಕ್ಕೆ ಪಾತ್ರರಾಗಿರುವವರಿಗೆ ಸೇವೆಯೇ ಒಂದು ಮಹಾಪೂಜೆಯಾಗಿರುತ್ತದೆ. ಅವರ ಜೀವನವೆಲ್ಲ ಒಂದು ಘನತರ ಪೂಜೆಯೇ ಆಗಿದೆ.

ಸ್ವಾರ್ಥಿಗಳಾದವರು ಎಷ್ಟು ಹೊತ್ತು ಪೂಜೆಮಾಡಿದರೂ ಸಾಲದು. ತಾವು ಪರಿಶುದ್ಧಾತ್ಮರಾಗಬೇಕೆಂಬ ಭಾವನೆಯು ಅವರ ಹೃದಯಾಂತರಾಳದಲ್ಲಿ ಮೂಡಿ, ಅವರ ಸಾಧನೆಯಲ್ಲಿ ಅವರಲ್ಲಿ ತಕ್ಕ ಸಹಿಷ್ಣುತೆಯೂ, ನಿರ್ಧಾರವೂ ತಲೆದೋರಿದರೆ ಅವರು ದೇವರ ಸಾನ್ನಿಧ್ಯವಾಗುವ ವರೆಗೂ ತಮ್ಮ ಪೂಜೆಯನ್ನು ನಿಲ್ಲಿಸಲಾರರು.

ನಾವು ಸಾಮಾನ್ಯ ಮನುಷ್ಯರು. ಆದುದರಿಂದ ಈ ಎರಡು ವಿಪರೀತ ಪಕ್ಷಗಳ ನಡುವೆ ನಮಗೊಂದು ಹಾದಿಯು ಅವಶ್ಯ. ನಮ್ಮ ಎಲ್ಲಾ ಕಾರ್ಯಕಲಾಪಗಳೂ ದೇವರಿಗರ್ಪಿತವಾದ ಸೇವೆಯೆಂದು ಪರಿಗಣಿಸಲ್ಪಡುವಂತಹ ಪವಿತ್ರ ಜೀವನವನ್ನು ನಾವು ನಡೆಸುವುದಿಲ್ಲ. ನಮ್ಮ ಕೆಲಸಗಳು ನಿಸ್ವಾರ್ಥಮಯವಾಗಿರುವುದಿಲ್ಲ. ಇದಕ್ಕಾಗಿಯೇ ಪ್ರಾರ್ಥನೆ.

ಈಗಿನ ದಿನಗಳಲ್ಲಿ ಪೂಜೆಯು ನಿಜವಾದ ಮಹತ್ವಿಕೆಯನ್ನು ಹೋಗಿ ಅದೀಗ ಶುಷ್ಕ ಆಚಾರವಾಗಿ ನಿಂತಿದೆ. ಪೂಜಕರು ತಕ್ಕ ಭಯಭಕ್ತಿಗಳಿಂದಿದ್ದರೆ ಮಾತ್ರ ಈ ಪೂಜೆಗಳಿಂದ ಫಲವಿದೆ. ನಮ್ಮ ಆಶೆಗಳನ್ನು ನೆರವೇರಿಸೆಂದು ನಾವು ಈಶನೊಡನೆ ಪ್ರಾರ್ಥಿಸುವಾಗ ನಮ್ಮ ನಿತ್ಯದ ಭಾಷೆಯಲ್ಲೇ ಪ್ರಾರ್ಥಿಸಬಹುದು. ನಾವು ಸದಾ ನ್ಯಾಯವಾದ ಮಾರ್ಗದಲ್ಲೇ ನಡೆಯುವಂತೆ ಮನಸ್ಸು ಕೊಡು ಎಂದು ದೇವರೊಡನೆ ಪ್ರಾರ್ಥಿಸುವುದಕ್ಕಿಂತ ದೊಡ್ಡ ಪ್ರಾರ್ಥನೆಯೇ ಇರದು.

ಇಟೆಲಿ ಅಬಿಸೀನಿಯ.

ಈ ಎರಡು ದೇಶಗಳೊಳಗೆ ಅನೇಕವರ್ಷಗಳಿಂದ ಮನಃಕ್ಲೇಶವಿದ್ವೇಷ ಇರುತ್ತದೆ. ಅಬಿಸೀನಿಯಾದವರ ನೆರೆಯ ಪ್ರಾಂತ್ಯವು ಇಟೆಲಿಗೆ ಸೇರಿದೆ. ಅಬಿಸೀನಿಯಾದಲ್ಲಿ ಗುಲಾಮವ್ಯಾಪಾರವು ಇನ್ನೂ ನಡೆಯುತ್ತಿದೆ. ಕೆಲವು ವರ್ಷಗಳ ಹಿಂದೆ ಅಬಿಸೀನಿಯಾದವರು ಪಡೆದ ಒಂದು ಗೆಲವಿನಲ್ಲಿ ಅವರಿಗೆ ಅನುಕೂಲವಾದ ಕರಾರು ಆಗಿದ್ದಿತು. ಇದು ಇಟೆಲಿಯವರ ಮನಸ್ಸಿಗೆ ಶಾಂತಿಯನ್ನು ತರುತ್ತಿರಲಿಲ್ಲ. ಹೀಗಿರುವಲ್ಲಿ ಅಬಿಸೀನಿಯದವರು ಕೆಲವು ತಿಂಗಳುಗಳಿಂದ ಸರಹದ್ದು ಪ್ರಾಂತ್ಯಗಳಲ್ಲಿ ಇಟೆಲಿ ಪ್ರಜೆಗಳಿಗೆ ಹಿಂಸೆಕೊಡುತ್ತಾ ಬಂದರು. ಕಾಗದ ಪತ್ರಗಳಿಂದ ಎರಡು ಪಕ್ಷದವರಿಗೂ ಸಮಾಧಾನವಾಗಲಿಲ್ಲ.

The Canara Banking Corporation Udipi Limited.

NOTICE

ಈ ಕೆಳಗೆ ನಮೂದಿಸಿದವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:–

ನಾವು ಸ್ವದೇಶಾಭಿಮಾನಿಯ ತಾರೀಕು 29–3–'35ನೇ ಸಂಚಿಕೆಯಲ್ಲಿ ಪ್ರಕಟಿಸಿದ ನೋಟೀಸಿಗೆ ಅನುಗುಣವಾಗಿ ನಿಮ್ಮ ನಗಗಳನ್ನು ತಾ. 10–5–35ನೇ ಶುಕ್ರವಾರ ಮಧ್ಯಾಹ್ನ 2 ಘಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿ ಬಂದ ಐವೇಜನ್ನು ನಿಮ್ಮ ನಿಮ್ಮ ಸಾಲಗಳಿಗೆ ವಜಾ ಮಾಡಿ ಬಾಕಿ ಉಳಿದ ಹಣವನ್ನು ನಿಮ್ಮ ನಿಮ್ಮ ಅಮಾನತು ಲೆಖ್ಖಕ್ಕೆ (Suspense) ಜಮಾ ಮಾಡಿಕೊಂಡಿರುತ್ತೇವೆ. ಹಾಗೆ ಅಮಾನತು ಲೆಖ್ಖಕ್ಕೆ ಜಮಾ ಮಾಡಿಕೊಂಡ ಐವೇಜಿಗೆ ಬಡ್ಡಿ ಸಿಗಲಾರದಾದುದರಿಂದ ನೀವು ಕ್ರಮ ಪ್ರಕಾರ ಬೇಂಕಿಗೆ ರಶೀದಿ ಕೊಟ್ಟು ಸದ್ರಿ ಐವೇಜನ್ನು ಪಡೆಯಬೇಕು.

ಸಾಲದ ನಂಬ್ರ 764/32. ಸಾಲಗಾರನ ಹೆಸರು ಮತ್ತು ಎಡ್ರೆಸ್ ಬಿ. ಅಣ್ಣು ಶೆಟ್ಟಿ, ಎಲ್ಲು ಶೆಟ್ಟಿ ಅಳಿಯ. C/o ಬೊಮ್ಮು ಶೆಟ್ಟಿ, ಗಿರಿಯ ಶೆಟ್ಟಿ ಅಳಿಯ, ಮೂಡಬೆಟ್ಟು, ಮೂಡನಿಡಂಬೂರು. ಅಮಾನತು ಲೆಖ್ಖಕ್ಕೆ ಇಟ್ಟ ಮೊಬಲಗು ರೂ. 28–13–2.

ಸಾಲದ ನಂಬ್ರ 177/33. ಸಾಲಗಾರನ ಹೆಸರು ಮತ್ತು ಎಡ್ರೆಸ್ ಕಲ್ಯಾಡಿ ಚಂದು ಮರಕಾಲ, ಅಣ್ಣು ಮರಕಾಲನ ಅಳಿಯ, ಕಲ್ಯಾಡಿ, ಪೋಸ್ಟು ಮಲ್ಪೆ. ಅಮಾನತು ಲೆಖ್ಖಕ್ಕೆ ಇಟ್ಟ ಮೊಬಲಗು ರೂ. 18–12–9.

ಸಾಲದ ನಂಬ್ರ 427/33 ಸಾಲಗಾರನ ಹೆಸರು ಮತ್ತು ಎಡ್ರೆಸ್— ಮೂಡುಕುದ್ರು ಗಂಗಾಧರ ನಾರ್ಣಪ್ಪಯ್ಯ, ಮರಿಯಪ್ಪಯ್ಯನ ಮಗ, ಜಮೀನುದಾರ, ಮೂಡುಕುದ್ರು, ಪೋಸ್ಟು ಕಲ್ಯಾಣಪುರ. ಅಮಾನತು ಲೆಖ್ಖಕ್ಕೆ ಇಟ್ಟ ಮೊಬಲಗು ರೂ. 4–1–10.

ಸಾಲದ ನಂಬ್ರ 550/33. ಸಾಲಗಾರನ ಹೆಸರು ಮತ್ತು ಎಡ್ರೆಸ್–ಕೊಡವೂರು ಗುರುವ ಮರಕಾಲ, ಪದ್ದು ಮರಕಾಲನ ಮಗ, ಬೇಂಗ್ರೆ, ಪೋಸ್ಟ್ ಮಲ್ಪೆ. ಅಮಾನತು ಲೆಖ್ಖಕ್ಕೆ ಇಟ್ಟ ಮೊಬಲಗು ರೂ. 23–15–1.

ಸಾಲದ ನಂಬ್ರ 580/34. ಸಾಲಗಾರನ ಹೆಸರು ಮತ್ತು ಎಡ್ರೆಸ್ ಉಗ್ಗೆಲ್ ಬೆಟ್ಟು ದೊಂಬ ಪೂಜಾರಿ, ಬೋಳ ಪೂಜಾರಿ ಅಳಿಯ, ರೈತ, ಉಪ್ಪೂರು ಗ್ರಾಮದ ಉಗ್ಗೆಲ್ ಬೆಟ್ಟು, ಪೋಸ್ಟು ಕಲ್ಯಾಣಪುರ. ಅಮಾನತು ಲೆಖ್ಖಕ್ಕೆ ಇಟ್ಟ ಮೊಬಲಗು ರೂ. 17–6–5.

ಸಾಲದ ನಂಬ್ರ 611/34. ಸಾಲಗಾರನ ಹೆಸರು ಮತ್ತು ಎಡ್ರೆಸ್ ಕೆ. ಅನಂತ ಮರಕಾಲ, ಜಟ್ಟ ಮರಕಾಲ ಅಳಿಯ, ಕೊಡವೂರು ಗ್ರಾಮದ ಚೆನ್ನಂಗಡಿ, ಪೋಸ್ಟು ಮಲ್ಪೆ. ಅಮಾನತು ಲೆಖ್ಖಕ್ಕೆ ಇಟ್ಟ ಮೊಬಲಗು ರೂಪಾಯಿ 28–5–2.

ಬೇಂಕಿನ ಆಫೀಸು
ಉಡುಪಿ,
17–6–1935

S. Ganesh Rao,
Agent.

ಅಗ್ರಗಣ್ಯ ಸಂಗೀತಜ್ಞರು ಅದರ ಪ್ರಶಂಸಾಗಾನವನ್ನು ಮಾಡಿದ್ದಾರೆ.

ಮುಸಿರಿ ಸುಬ್ರಹ್ಮಣ್ಯ ಐಯ್ಯರ್,

6 ಒಲಿವರ್ ರೋಡ್,
ಮೈಲಾಪುರ ಮದ್ರಾಸು

ಅನೇಕ ಸಮಯದಿಂದ ನನ್ನ ಕುಟುಂಬದವರೆಲ್ಲ 'ಕೇಶವರ್ಧಿನಿ'ಯನ್ನು ಬಿಡದೆ ಉಪಯೋಗಿಸುತ್ತಿರುವರೆಂದು ತಿಳಿಸಲು ಸಂತೋಷಿಸುತ್ತೇನೆ. ಉದುರುವ ಕೂದಲನ್ನು ತಡೆಯುವ ಅದರ ಶಕ್ತಿಯನ್ನು ಪೂರ್ಣವಾಗಿ ತಿಳಿದ್ದ, ಅಲ್ಲದೆ ಕೂದಲನ್ನು ಅದು ಬೆಳೆಯಿಸುವ ಅದರ ಗುಣವನ್ನು ಅರಿತು ಅವರು ಅದರ ಗುಣಗಾನವನ್ನು ಮಾಡಿ ಸ್ನೇಹಿತರಿಗೂ ಅದನ್ನು ಶಿಫಾರಸು ಮಾಡುತ್ತಾರೆ.
ಕೇಶಗಳಿಗೂ ಮೆದುಳಿಗೂ ಸಮರ್ಪಕವಾದ ಎಣ್ಣೆಯೊಂದು ಅಗತ್ಯವಿರುವವರು ಇದನ್ನುಪಯೋಗಿಸಬಹುದೆಂದು ನಾನು ಶಿಫಾರಸು ಮಾಡುತ್ತೇನೆ.
(ಸಹಿ) ಮುಸಿರಿ ಸುಬ್ರಹ್ಮಣ್ಯ ಅಯ್ಯರ್.

ಕೂದಲು ಉದುರುವದರಿಂದ ತಲೆಯು ಬೋಳಾಗಿರಬೇಡಿ ಅಥವಾ ತಲೆಕೂದಲು ಅಕಾಲ ಸಮಯದಲ್ಲಿ ಬಿಳಿಯಾಗದಂತೆ ನೋಡಿ

ಬಾಟ್ಲಿ 1ಕ್ಕೆ ಆಣೆ 12. **'ಕೇಶವರ್ಧಿನಿ'** ಪೇಕಿಂಗ್ ಮತ್ತು ಅಂಚೆವೆಚ್ಚ ಪ್ರತ್ಯೇಕ

ಹೆಚ್ಚಿನ ವಿವರ ವ್ಯಾಪಾರಿಗಳಲ್ಲಾಗಲೀ ಅಥವಾ ಈ ವಿಳಾಸದಲ್ಲಾಗಲೀ ಸಿಗುವುದು —

South India Chemicals, Lz Road Mylapore Madras

ನಮ್ಮ ಪ್ರವರ್ತಕರು—ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

Old! *Famous!*

East & West Insurance Co., Limited.

Bonus Declard Rs 15/- Per Thousand Per Annum

Insurance in Force About	Rs 90,00 000
Annual Premium Income Over	Rs 4,50 000
Life Fund Over	Rs 7,00 000

Prompt Settlement of Claims

Low Rates of Premium and Various Attractive Plans.

Attractive and liberal agency contracts are offered to honest influential gentlemen

Inquiries Solicited —

Messrs Padubidri Bros, *Chief Agents* PADUBIDRI BOMBAY

OR

Head Office East & West Buildings Apollo Street, Fort Bombay

$1\frac{1}{4}$ CRORE

Karnatics know nothing of your products — Advertise them in

Swadeshabhimani

the pioneer Weekly of the South Kanara District

For Advertisement rates apply :

The Advertisement Manager, Swadeshabhimani Mangalore

ಪ್ರಶಂಸೆ.

ಪ್ರಖ್ಯಾತ ಅಮೆರಿಕನ ಡಾಕ್ಟರರು ಪ್ರಶಂಸಿಸಿರುತ್ತಾರೆ

ವಿ—ಮೊ—ಲ

VIM O-LA

ಅಮೆರಿಕಾದ ಜೀವಸಾರ ವಸ್ತು.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ ಹೊಟ್ಟೆಯಲ್ಲಿ ಬಂದು ನಂತೇಲುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಗೊಳಿಸುವ ಶಕ್ತಿವರ್ಧಕ ಪಾನೀಯ ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ ಬಾಟ್ಲಿ 1ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟೊಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ ಇಲ್ಲಿಗೆ ಬರೆಯಿರಿ

The Manager
The National Kanara News Agency,
Sir Phirozsha Metha Road
Fort Bombay

Invitation.

For all kinds of printing please come to
THE SHARADA PRESS
CAR STREET
MANGALORE S K

ಲೇಡಿಸ್ ಬಾಂ

ಸ್ತ್ರೀಯರ ಜೀವನಾಧಾರ

ಸ್ತ್ರೀಯರು ಪುಷ್ಪರಾಗಿಯೂ ಕಾಂತಿಯುಕ್ತರಾಗಿಯೂ ಇರಬೇಕೆಂದರೆ ಅವರ ಮುಟ್ಟಿನ ದೋಷ ಆ ಸಮಯದಲ್ಲಿ ಬರುವ ಹೊಟ್ಟೆನೋವು ಸೊಂಟ ಹಿಡಿಗಂಟು ನೋವು, ಮೈಯಲ್ಲಿ ದಡಿಕೆ ಬೀಳುವುದು, ಬಿಳೀ ಸೆರಗು ಗರ್ಭಕೋಶದ ನೋವು ಅಕಾಲ ರೀತಿಯಿಂದ ಮುಟ್ಟಾಗುವ ಬಿಳಿ, ಸಂಘಾರಣ ಸ್ತ್ರೀ ವಿಕಾರ ಮತ್ತು ಅವರ ಅನೇಕ ತರದ ಗುಪ್ತರೋಗಗಳನ್ನು ನಿವಾರಿಸಲು ಇದರ ಒಂದೇ ಒಂದು ಶೀಸೆಯನ್ನು ಉಪಯೋಗಿಸಿದರೆ ಗುಣವನ್ನು ಕಾಣಿರಿ.

ಉಪಯೋಗಿಸಿದವರ ಅಭಿಪ್ರಾಯ —

ರಾಮಕೃಷ್ಣ ಜೈನ್ ಬಿ ಎ ಲಾಹೋರ್ 'I found your Ladies Balm worth the money I spent on it'

ಯಾವ ತೆರದ ಔಷಧಿಯಿಂದಲೂ ಬಹಿಷ್ಟೆಯ ಬೇನೆ ನಿವಾರಿಸಲಾಗದ ಹೆಂಗಳೆಯರು ಅಸಮರ್ಥರೆಂದಾದರೆ ನಮ್ಮ ಲೇಡಿಸ್ ಬಾಮನ್ನು ಉಪಯೋಗಿಸಿರಿ. ಒಂದು ತಿಂಗಳ ಔಷಧಿಯಿರುವ ಶೀಸೆಗೆ ರೂ ೩—೦—೦ ವಿ ಪಿ ಖರ್ಚು ೦—೮—೦

ತಯಾರಿಸುವವರು — **ದಿ. ಬಿಹಾರ್ ಕೆಮಿಕಲ್ ವರ್ಕ್ಸ್, ಬಾಗಲಪುರ**

ಏಜಂಟರು—ಷಹಾ ಕಂಪೆನಿ, ಗವರ್ನಮೆಂಟ್ ಕೋಲೇಜು ಎದುರು ಮಂಗಳೂರು.

The Laxmi Insurance Company Ltd, Lahore.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

	ಕೆಲಸದ ಫಲಿತಾಂಶ.	ಲೈಫ್ ಫಂಡ್
1925—	ರೂ 21,24,250	500
1929—	ರೂ 1,66,18,620	9,32 900
1934—	ರೂ 46 77 223	49 06,771

ಕ್ಲೆಯಿಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ ಕಂಪೆನಿಯ ಆಸ್ತಿ—57,00,000ಕ್ಕೆ ಮೀರಿದೆ. 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ ಲಾಭಹೊಂದಬೇಕಾಗಿದೆ ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ ಲಕ್ಷ್ಮಿಯಲ್ಲಿವೆ

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxmi Insurance Co, Ltd,
Madras Branch,
No 6, Sankuram Chetty St, G T MADRAS

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6 ಸಂಕುರಾಮ ಚೆಟ್ಟಿ ಬೀದಿ, ಜಿ. ಟಿ ಮದ್ರಾಸು

The Canara Banking Corporation Udipi, Ltd.

Head office:—UDIPI, S. K. (Incorporated in British India) Tel:-BANKING **ESTD. 1906.**

Branches:—1. Udipi, 2. Coondapoor, 3. Car Street, Mangalore, 4. Shimoga, 5. Madras, 6. Bunder Mangalore, 7. Mercara.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟ ದೇಶೀಯ ಸಾರ್ವಜನಿಕ ಮೊದಲನೇ ಬೇಂಕು ಇದೇ ಆಗಿರುತ್ತದೆ.

ಅಧಿಕೃತ ವ ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಎತ್ತಿ ಬಂದ ಮೂಲಧನ	ರೂ. 3,50,000—0—0
ತೆತ್ತು ಬಂದ ಮೂಲಧನ	2,64,315—0—0
ಕ್ಷೇಮನಿಧಿ ಮತ್ತು ಇತರ ಆಪದ್ಧನಗಳು	3,16,947- 0—0

ಚಾಲ್ತಿ ಸೇವಿಂಗ್ಸ್ ಬೇಂಕ್, ಕಾಯಂ ವ ಅಲ್ಪ ಅವಧಿಯ ರೇವಣಾತಿಗಳು ಸ್ವೀಕರಿಸಲ್ಪಡುವುವು. ಯೋಗ್ಯ ಜವಾಬ್ದಾರಿಯ ಮೇಲೆ ಸುಲಭ ದರದ ಬಡ್ಡಿಯಿಂದ ಸಾಲಗಳು ಕೊಡೋಣಾಗುವುವು. ವಿನಿಮಯ ಸೌಕರ್ಯವೇ ಪ್ರಾಮುಖ್ಯ ಲಕ್ಷಣ!

ಬೊಂಬಾಯಿ, ಮದ್ರಾಸು, ಕರಾಚಿ, ಕಲ್ಕತ್ತಾ ಮೊದಲಾದ ಪ್ರಾಮುಖ್ಯ ಪಟ್ಟಣಗಳಿಗೆ ಹಣವನ್ನು ತಂತಿ ಮೂಲಕವಾಗಲೀ ಡಿಮಾಂಡ್ ಡ್ರಾಫ್ಟ್ ಮೂಲಕವಾಗಲೀ ಅತಿ ಸುಲಭ ವೆಚ್ಚದಿಂದ ಕಳುಹಿಸುವ ಸೌಕರ್ಯವು ನಮ್ಮಲ್ಲಿದೆ. ಬೇಂಕಿಗೆ ಸಂಬಂಧಪಟ್ಟ ಇತರ ಎಲ್ಲಾ ವಹಿವಾಟುಗಳೂ ನಡೆಸಲ್ಪಡುವುವು

ಹೆಚ್ಚಿನ ಮಾಹಿತಿ ಬಗ್ಗೆ ನಮ್ಮ ಯಾವುದೇ ಆಫೀಸಿಗೆ ಬರಕೊಳ್ಳಿರಿ.

ಕೋರ್ಪರೇಶನ್ ಆಫೀಸು, ಉಡುಪಿ, 16-5-35.

M. Shrinivas Prabhu,
Manager

Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು.

ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಪೇಕ್ಷಿಸುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

THE BOMBAY LIFE ASSURANCE CO., LTD.

Head Office —**BOMBAY.**

Notice to Policyholders:

NOTICE is hereby given that the Twentyfifth Annual General Meeting of the participating Policyholders such as have insured with profits for atleast Rs. 2,000/- entitled to vote under Article 88 will be held at the Company's Registered Office, Bombay Life Building, 45-47, Churchgate Street, Fort, Bombay, at 2-30 P. M. (S. T.) on Wednesday the 29th May 1935 for the purpose of electing a Director and an Auditor for the current year

By order of the Board of Directors,

Bombay, 10th May 1935.

(*Sd/*) **Jyotendra L. Mehta,** *Manager*

Karnataka Chemical and Pharmaceutical Works, Ltd., Udipi. (South India)

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ. ಕರ್ನಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್ಹೋಲ್ಡ್ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚು ಕಾಲ ಬಾಳುವುವು, ಖರ್ಚೂ ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ. ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ.

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)

ಕರ್ನಾಟಕ ಸ್ನೋ, ಕರ್ನಾಟಕ ಬ್ರಿಲ್ಲಿಂಟ್ಯಾನ್, ಆರೋರಾ ಕ್ರೀಮ್, ಕ್ರಿಮೋರ್ ಲಿಮೊನಿಸ್, ಕರ್ನಾಟಕ ರೋಜ ಪೊಮೇಡ್. ಇದಲ್ಲದೆನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್ ಪೇನು ಶಾಯಿಗಳೂ ಸಿದ್ಧವಾಗುವುವು.

ಮೆನೇಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಪ್ಪ ಪೈ ಬಾಳಿಗ.

ಹೆಡ್ ಆಫೀಸು ಮತ್ತು ಕಾರಖಾನೆ:—ಉಡುಪಿ, ದಕ್ಷಿಣ ಹಿಂದೂಸ್ಥಾನ.

ಏಜಂಟ್ಸ್— ವ್ಯಾಪಾರದ ಡಿಪೋ:—(1) ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ, ನಂ. 2
(2) 1/70 ನ್ಯಾಪಿಯರ್ ಪಾರ್ಕ ಬೀದಿ, ಜಾರ್ಜ ಟೌನ್ ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ., ಮಂಗಳೂರು.

Edited, Printed & Published By A. S. Kamath at the Sharada Press, Car Street, Mangalore.

?
for Quality Snuff
H. Rama Rao and Sons.
High Class Snuff Manufacturers
Mangalore S I
ASK FOR
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in the
THE BOMBAY LIFE
Mad as Branch Secretaries
Kochikar Brothers,
Mangalore Bangalore Madras Bombay

ESTABLISHED 1906
(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟನಾಗುವ ವಾರಪತ್ರಿಕೆ

ಪುಸ್ತಕ ೨೯ | ಮಂಗಳೂರು ತಾ. ೩೧ನೇ ಶುಕ್ರವಾರ ಮೇ ೧೯೩೫ (31 5 '35) | ಸಂಚಿಕೆ ೨೨

ಇಂಗ್ಲಾಂಡು ೧೫೦೦೦ ವಿಮಾನಗಳನ್ನು ರಚಿಸಲಿದೆ!

ತನ್ನ ಪ್ರವಾಸದ ಕುರಿತು

ಬಾಬುರಾಜೇಂದ್ರ ಪ್ರಸಾದರ ಆನಂದ

ಶ್ರೀ। ಬಾಬುರಾಜೇಂದ್ರ ಪ್ರಸಾದರು ತನ್ನ ದಕ್ಷಿಣ ಹಿಂದೂಸ್ಥಾನದ ಪ್ರವಾಸದ ಕುರಿತು ಪಾಟ್ನಾದಲ್ಲಿ ತನ್ನ ಆನಂದವನ್ನು ಸೂಚಿಸಿ "ನನಗೆ ಜನರಿತ್ತ ಸ್ವಾಗತವನ್ನೂ ಜನರಿಗೆ ಕೊಂಗ್ರೆಸ್ಸಿನ ಮೇಲಿರುವ ವಿಶ್ವಾಸವನ್ನೂ ಲಕ್ಷಿಸುವಾಗ ಜನರಿಗೆ ಸ್ವಾತಂತ್ರ್ಯದ ಅರ್ಥವು ಪೂರ್ಣವಾಗಿ ತಿಳಿದಿದೆಯೆಂದು ಹೇಳಬಹುದಾಗುತ್ತದೆ ಅಲ್ಲಿನ ಹವಾಗುಣವೂ ನನಗ ಅನುಕೂಲವಾಗಿತ್ತೆನ್ನಬಹುದು" ಎಂದು ಮುಂತಾಗಿ ಹೇಳಿದರು.

೧೦೦ ಮನೆಗಳು ಧ್ವಂಸವಾದುವು!

ನಟೋರಿನಲ್ಲಿ ಪ್ರಚಂಡ ಬಿರುಗಾಳಿಯು ಬೀಸಿತು ಐದು ಜನರು ಸಾವಿರಾರು ಅಡಿಗಳಷ್ಟು ಎತ್ತರಕ್ಕೆ ಎಸೆಯಲ್ಪಟ್ಟು ಮೃತ್ಯುವಶರಾದರು ನೂರಕ್ಕಿಂತಲೂ ಹೆಚ್ಚು ಮನೆಗಳು ನೆಲಸಮವಾದುವು ತಂತಿ ಮತ್ತು ಟೆಲಿಫೋನು ಕೆಲವು ಹೊತ್ತು ನಡೆಯಲಿಲ್ಲ



ಶ್ರೀ ಬಾಬುರಾಜೇಂದ್ರ ಪ್ರಸಾದರು

ಮುಂದಿನ ಯುದ್ಧದ ನೆರಳು!

೪೦೦೦ ವೈಮಾನಿಕರನ್ನು ತರಬೇತುಗೊಳಿಸಲಿರುವರು!!

ಮೇ ತಾ ೨೨ರಲ್ಲಿ ಲಂಡನಿನಿಂದ ಬಂದ ವಾರ್ತೆಯಿದು ಹೌಸ್ ಒಫ್ ಲೋರ್ಡ್ಸ್‌ನಲ್ಲಿ ಲೋರ್ಡ್ ಲಂಡನ್ ಡೆರಿಯವರು ಭಾಷಣ ಮಾಡುತ್ತಾ, ಬ್ರಿಟನಿನಲ್ಲಿ ೨೭೦೦ ಅನುಭವಿಕರಾದ ವೈಮಾನಿಕರು ಇರುತ್ತಾರೆಂದೂ, ಅಲ್ಲದೆ ೪೦೦ ವೈಮಾನಿಕರನ್ನು ತರಬೇತುಗೊಳಿಸಲಾಗುತ್ತಿದೆಯೆಂದೂ ತಿಳಿಸಿದರು ೧೨೦೦ ವೈಮಾನಿಕರನ್ನು ರಿಜರ್ವ್ ಆಗಿ ಇಡಲಾಗಿದೆಯೆಂದೂ ಅವರು ಹೇಳಿರುವರು. ಸದ್ಯ ಬ್ರಿಟನಿನಲ್ಲಿ ೫೮೦ ಯುದ್ಧ ವಿಮಾನಗಳಿವೆ ೧೯೩೭ರ ಮಾರ್ಚ ೩೧ರೊಳಗೆ ಈ ಸಂಖ್ಯೆಯನ್ನು ೧೫೦೦ಕ್ಕೆ ಏರಿಸಲಿರುವರು ವಿಮಾನ ರಚನೆಯು ಕೆಲಸವು ಅಲ್ಲಿ ಭರದಿಂದ ನಡೆಯುತ್ತಲಿದೆ ೨೨೫೦೦ ಅಧಿಕಾರಿಗಳನ್ನೂ ಹೆಚ್ಚಿಸಲಿದ್ದೇವೆ ಎಂದೂ ಲಂಡನ್‌ಡೆರಿಯವರು ತಿಳಿಸಿರುವರು ಈ ವಾರ್ತೆಯು ಯುರೋಪು ಖಂಡದಲ್ಲೆಲ್ಲ ವಿಶೇಷವಾದ ಉದ್ವೇಗಕ್ಕೆ ಕಾರಣವಾಗಿದೆ ಇದು ಮುಂದಿನ ಯುದ್ಧದ ನೆರಳು ಎಂದು ಎಲ್ಲೆಲ್ಲೂ ತರ್ಕಿಸಿಕೊಳ್ಳುತ್ತಿದ್ದಾರೆ.

---

೩೪ ಹುಲಿಗಳನ್ನು ಕೊಂದ

ಧೈರ್ಯಶಾಲಿ ಯುವರಾಜ!

ಹೈದರಾಬಾದಿನ ಪ್ರಿನ್ಸ್ ಅಜಂಜಾ ಬಹದ್ದೂರರವರು ೬ ವಾರಗಳ ತನಕ ಹೈದರಾಬಾದಿನ ವಾರಂಗಲ ಕಾಡಿನಲ್ಲಿ ಬೇಟೆಯಾಡಿ ೩೪ ಹುಲಿಗಳನ್ನೂ ೨ ಕರಡಿಗಳನ್ನೂ, ೪ ಮೊಸಳೆಗಳನ್ನೂ ಕೊಂದಿರುವರು

ಕೇಂದ್ರಪ್ರಾಂತ್ಯದ ಸರಕಾರೀ ಕಟ್ಟಡಗಳು ಭಸ್ಮವಾದುವು!

ಹತ್ತು ಲಕ್ಷ ರೂಪಾಯಿಗಳ ನಷ್ಟ

ನಾಗಪುರದಲ್ಲಿ ಸೆಂಟ್ರಲ್ ಪ್ರಾವಿನ್ಸಸ್ ಗವರ್ನಮೆಂಟ್ ಸೆಕ್ರೆಟೆರಿಯೆಟ್ ಕಟ್ಟಡಗಳು ತಾ ೨೪ನೇ ದಿನ ಬೆಂಕಿಯಿಂದ ಸುಟ್ಟುಹೋದುವು ಪ್ರಾತಃಕಾಲ ಸುಮಾರು ೨ ಗಂಟೆಗೆ ಈ ಬೆಂಕಿಯು ಗಾಳಿಯ ಬಲದಿಂದ ಸುತ್ತಮುತ್ತಲೂ ಹರಡಿತು ಒಂದನೇ ಮಾಳಿಗೆಯಲ್ಲಿದ್ದ ರಿಕಾರ್ಡುಗಳೆಲ್ಲ ನಷ್ಟವಾಗಿವೆ ಬೆಂಕಿಯ ಕಾರಣವು ತಿಳಿದುಬಂದಿರುವುದಿಲ್ಲ ಒಟ್ಟು ಹತ್ತು ಲಕ್ಷ ರೂಪಾಯಿಗಳ ನಷ್ಟವು ಸಂಭವಿಸಿದೆ ಎಂದು ಅಂದಾಜು ಮಾಡಿದ್ದಾರೆ ಸರಕಾರವು ವಿಚಾರಣೆ ಮಾಡುತ್ತಲಿದೆ ಇಷ್ಟು ಭಯಂಕರವಾದ ಬೆಂಕಿಯ ಅನಾಹುತವು ನಾಗಪುರದಲ್ಲಿ ಇದೇ ಮೊದಲನೆ ಸಾರಿ ತಲೆದೋರಿದುದು.

ಚಕ್ರ

(All Rights Reversed)

ಕರ್ನಾಟಕ ಸಾಹಿತ್ಯ ಪರಿಷನ್ಮಂದಿರವೊಂದು ಬೆಂಗಳೂರಿನಲ್ಲಿದೆ ಸ್ವಾಮಿ—ಅದರ ಪ್ರಯೋಜನಗಳೇನೆಂದು ನಮ್ಮಂತಹ ಪಾಲಿಪೋಲಿ ಜನರಿಗೆ ತಿಳಿದೇ ಇಲ್ಲ.

× × × × × ×

ಸಾಹಿತ್ಯೋತ್ಸವವಂತೆ, ಸಾಹಿತ್ಯ ಪ್ರದರ್ಶನವಂತೆ,—ಹೀಗೆ ಹಲವು ಕಾರ್ಯಕ್ರಮಗಳು ವರ್ಷಂಪ್ರತಿ ಅಲ್ಲಿ ನಡೆಯುತ್ತಲಿವೆ ಅಲ್ಲಿ ಜರಗುವ ವಿಚಾರಗಳೆಲ್ಲ ಅಖಿಳ ಕರ್ನಾಟಕದ ಉದ್ಧಾರದ ಒಂದೇ ಉದ್ದೇಶದಿಂದ ಜರಗಿಬರುತ್ತವೆಯಾದರೂ, ಬೆಂಗಳೂರಿನವರಿಗೂ, ಮೈಸೂರಿನವರಿಗೂ, ಕೆಲವು ಕವಿಗಳಿಗೂ, ಗಮಕಿಗಳಿಗೂ, ವಿದ್ವಾಂಸರಿಗೂ ಅಲ್ಲದೆ, ಬೇರಾರಿಗೂ ಎಷ್ಟು ಫಲವು ಅದರಿಂದ ದೊರಕಿದೆಯೆಂದು ನನಗೆ ತಿಳಿಯಲಾರದು (ನನ್ನ ತಪ್ಪಿರಲಿಕ್ಕೂ ಸಾಕು)

× × × × × ×

ಮುಖ್ಯ ಈ ಪರಿಷತ್ತಿಗೆ—Academyಗೆ ದುಡ್ಡಿನ ಅಭಾವವಂತೆ ದುಡ್ಡಿನ ಕಷ್ಟವಲ್ಲದೆ ಮತ್ತೇನು? ಜನಸಾಧಾರಣರ ಬೆಂಬಲವಿಲ್ಲದ ಸಂಸ್ಥೆಯು ಫಲಿಸಿ ಫಲಬಿಡುವುದಾದರೂ ಹೇಗೆ?

× × × × × ×

ಕನ್ನಡ ಭಾಷೆಯು ಬೆಳೆಯಬೇಕಾದರೆ ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಊರೂರು ತಿರುಗ ಬೇಕಾದರೆ ಬೇಕು ಎಲ್ಲೆಲ್ಲಿ ವಿದ್ಯಾವಂತರಿರುವರೋ—ಕನ್ನಡಿಗರಿರುವರೋ—ಅವರನ್ನು ಸಂದರ್ಶಿಸಿ ಅವರನ್ನು ಸಾಹಿತ್ಯ ಪರಿಷತ್ಪತ್ರಿಕೆಯ ಚಂದಾದಾರರನ್ನಾಗಿ ಮಾಡಬೇಕು ಪ್ರತಿಯೊಬ್ಬರೂ ಒಂದು ಕನ್ನಡ ಪತ್ರಿಕೆಯನ್ನಾದರೂ ದುಡ್ಡು ಕೊಟ್ಟು ತರಿಸುವಂತೆ ಮಾಡಬೇಕು ಹೋದಹೋದಲ್ಲಿ ಪರಿಷತ್ತಿನ ಶಾಖೋಪಶಾಖೆಗಳನ್ನು ತೆರೆಯಬೇಕು ದುಡ್ಡು ಕೂಡಿಸಬೇಕು

× × × × × ×

ಎಲ್ಲಕ್ಕೂ ಬೇಕಾದುದು ದುಡ್ಡು ಸುಮ್ಮಗೆ ಬೇಡಿದರೆ ಯಾರೂ ಕೊಡಲಾರರು ಶ್ರೀ ಬಿ ಎಂ ಶ್ರೀಕಂಠಯ್ಯನಂತಹವರು ಕೇಳದೆ ಕೇಳದೆ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟರೆಂದು ಬೇರಾರೂ ಕೊಡಲಾರರೆ. ಏಕೆ? ಶ್ರೀಮಂತರಾದ ಘಟ್ಟಪ್ಪನವರೋ ಮಾಸ್ತಿಯವರೋ ಕೊಟ್ಟಿದ್ದರಲ್ಲವೇ ಇತರರೂ ಕೊಡುವುದಿ?

× × × × × ×

ಸಾಹಿತ್ಯ ಪರಿಷತ್ಪತ್ರಿಕೆಗೆ ೫೦೦ ಚಂದಾದಾರರನ್ನು ಕೂಡಾ ಮಾಡಲಾಗದ ಪರಿಷತ್ತಿನವರಿಂದ ಬೇರೆ ಏನನ್ನು ನಿರೀಕ್ಷಿಸಬಹುದು? ನೀವೇ ಹೇಳಿ! (ಅಂದರೆ ನೀವು ಏನೂ ಕೆಲಸ ಮಾಡುವುದಿಲ್ಲ ಎಂಬ ಅರ್ಥವಲ್ಲ—ನಿಮ್ಮ ಕೆಲಸ ಸಾಲದು—ಎಂದು) ತಿಳಿಯಿತೇ?

× × × × × ×

ನಮ್ಮ ನಾಡು ಕನ್ನಡ ನಾಡು, ನಮ್ಮ ನುಡಿ ಕನ್ನಡ ನುಡಿ, ನಮ್ಮ ಸಂಸ್ಥೆ ಕ ಸಾ ಪರಿಷತ್ತು ಎಂದು ಜನರಿಗೆಲ್ಲಾ ಮುಂದಟ್ಟಾಗುವಂತೆ ಚಳವಳ ಸಹಿತವಾದ ಕೆಲಸ ಮಾಡಿದರೆ ಪ್ರಯೋಜನವಿದೆ—ಇಲ್ಲದೆ ಹೋದರೆ ಕೆಲವು ಜನ ಕವಿಗಳ—ಬರಹಗಾರರ ಆಸ್ತಿಯಾಗಿಯೇ ಪರಿಷತ್ತು ಉಳಿದುಬಿಡುವುದು

× × × × × ×

ಮುಖ್ಯವಾಗಿ ಸಾ. ಪರಿಷತ್ತಿನ ಶಾಖೆಗಳಾಗಬೇಕು ಆ ಶಾಖೆಗಳು ಸಮ್ಮೇಳನಗಳನ್ನು ಜರಗಿಸಿ ಸಾಮಾನ್ಯ ಜನರನ್ನಾಕರ್ಷಿಸಬೇಕು ಇದೇ ಅಗತ್ಯ

× × × × × ×

ಸಾಹಿತ್ಯ ಪರಿಷತ್ತುಗಳೆಂಬುವುಗಳು ಜರಗುತ್ತವೆ—ಅಲ್ಲಿ ನಡೆಯುವುದೇನು? ತನ್ನ ಕವಿತೆಯಲ್ಲಡಗಿರುವ ಪ್ರೌಢಿಮೆಯನ್ನು ತೋರಿಸಬೇಕೆಂದು ಒಬ್ಬ ತನ್ನ ವಾಗ್ವೈಖರಿಯನ್ನು ಪ್ರದರ್ಶಿಸಬೇಕೆಂದು ಇನ್ನೊಬ್ಬ ತನ್ನ ವಿದ್ವತ್ತನ್ನು ಬಿತ್ತಬೇಕೆಂದು ಮತ್ತೊಬ್ಬ ಪರಿಷತ್ತಿನ ಮುಖ್ಯೋದ್ದೇಶಗಳನ್ನು ಮರೆತೂ, ಕಾಲವನ್ನು ವ್ಯರ್ಥ ಕಳೆದೂ ಬಂದವರು ಹಿಂದೆ ಹೋಗುತ್ತಾರೆ ಏನು ಫಲವಾಯಿತು?

× × × × × ×

ಕೆಲವು ಕವಿಗಳ, ಸ್ವಾಮಿ, ಅವರಿಗೆಲ್ಲ ದಮ್ಮಯ್ಯ ನಾಥರ ತಲೆ! ಎಂತಹ ಕವಿತೆ! ಎಂತಹ ಅರ್ಥವೆಂದು ಅವರಿಗೇ ಗೊತ್ತು ಹೊರತು, ಅದನ್ನು ಓದುವ ಸಾಮಾನ್ಯರಿಗೆ ಅದರ ಅರ್ಥವೇ ಆಗುವಂತಿಲ್ಲ

× × × × × ×

ನೋಟೀಸು

ಕಾರ್ಕಳ ಡಿ. ಮುನ್ಸೀಫ್ ಕೋರ್ಟಿನಲ್ಲಿ

REP 1821/1934. (O. S. 737/30)

ಚಂದಪ್ಪ ಸೆಟ್ಟಿ—ಅರ್ಜಿದಾರ.

ಮತ್ತು

ಶಾಂತಿರಾಜ ಹೆಗ್ಡೆ ಯಾನೆ ಮಲ್ಲ ಸಹಾ ಎದ್ರಿರು.

ಇವರೊಳಗೆ

ಕಾರ್ಕಳ ತಾಲೂಕು ಮಾಳ ಗ್ರಾಮದ ಕೊಡಂಗೆ ಎಂಬಲ್ಲಿರುವ ಪದ್ಮಯ್ಯ ಹೆಗ್ಡೇರ ಅಳಿಯ ಶಾಂತಿರಾಜ ಹೆಗ್ಡೆ ಯಾನೆ ಮಲ್ಲ 1, ಈತನ ತಂಗಿ, ವ ತಮ್ಮ ಕಾರ್ಕಳ ತಾಲೂಕು ನೂರಾಳ್ಬೆಟ್ಟು ಗ್ರಾಮದ ಗುಮ್ಮಗುತ್ತು ಎಂಬಲ್ಲಿರುವ ಗುಣವತಿ 2 ಮತ್ತು ಅನಂತರಾಜ 3 ಕೂಡಾ ಮೂರು ಜನರಿಗೆ ವ ಇತರ ಸಮಸ್ತರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—ಅರ್ಜಿದಾರನು ವಾದಿಯಾಗಿ ನಿಮ್ಮ ಮೇಲೆ ಪಡೆದ ಈ ಕೋರ್ಟು ಕ್ರಮ ನಂಬ್ರ 737/30 ನೇ ಡಿಕ್ರಿ ಸಮಾಧಾನದ ಬಗ್ಗೆ ನಡಿಸಿದ ಮೇಲ್ಕಂಡ ಅಮಲ್‌ಜ್ಯಾರಿಯಲ್ಲಿ ಕಾರ್ಕಳ ತಾಲೂಕು ಮಾಳ ಗ್ರಾಮದ ಪಟ್ಟಾ ನಂಬ್ರ 87—38ಕ್ಕೆ ಒಪ್ಪಿದ ಬಾಬ್ತು ಮತ್ತು ಸರ್ವೆ ನಂಬ್ರ 185/1—2ನೇ ಸ್ಥಳ ಸಹಾ ಆಸ್ತಿಗಳಲ್ಲಿ ನಿಮಗಿರುವ ಯಾವತ್ತೂ ಹಕ್ಕುಗಳನ್ನು ಏಲಂಗೆ ತಂದಿರುತ್ತಾನಾಗಿಯೂ, ಸದ್ರಿ ಆಸ್ತಿಗಳು ಈ ಕೋರ್ಟು ಬಹಿರಂಗವಾದ ಹರಾಜಿನಲ್ಲಿ ಇದೇ ತಾ 17—6—35ರಲ್ಲಿ ಏಲಂ ಮಾಡಲ್ಪಡುವುದಾಗಿಯೂ ಈ ಮೂಲಕ ತಿಳಿಸೋಣಾಗಿದೆ

ಕಾರ್ಕಳ 11—4—35 — K. Sadasiv Bhat, Counsel for Ptr

ನೋಟೀಸು

ದಿ ಕೆನರಾ ಬ್ಯಾಂಕ್ ಲಿಮಿಟೆಡ್ ಪುತ್ತೂರು

ಈ ಕೆಳಗೆ ಹೆಸರ ಕಾಣಿಸಿರುವ ವ್ಯಕ್ತಿಯು ಈ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಅದರ ಮೇಲಣ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಬಾಕಿ ಮಾಡಿದುದರಿಂದ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ಅವರು ಮೃತಪಟ್ಟುದರಿಂದ ವಾಪಸು ಬಂದಿರುವುದರಿಂದಲೂ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸದ್ರಿಯವರಿಂದ ಬೇಂಕಿಗೆ ಸಲ್ಲತಕ್ಕ ಸಾಲದ ಅಸಲು, ಬಡ್ಡಿ ರಿಜಿಸ್ಟ್ರಿ ನೋಟೀಸು ಖರ್ಚು ವ ಈ ನೋಟೀಸು ಖರ್ಚು ಸಹ ಕೂಡಿಸಿ ತಾ ೮—6 35ರೊಳಗೆ ತಂದುಕೊಟ್ಟು ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಬಾಕಿಯಿಟ್ಟಲ್ಲಿ ಈಡಿಟ್ಟ ನಗಗಳನ್ನು ತಾ 15—6—35ನೇ ಶುಕ್ರವಾರ ಮಧ್ಯಾಹ್ನ ಘಂಟೆ 2ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

Loan No 160 94 Subbanna Bannunthaya S o Vasudeva Bannunthaya, Punacha Village Vittal Post Rs 30

Canara Bank Ltd } A Venkat Rao,
Puttur 23 5 35 } Agent

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು ಸಂ ಸ್ವ.

ಕನ್ನಡಿಗರಲ್ಲಿ ಹೆಚ್ಚಿನವರು ಮೂಢರೆಂಬ ಅಭಿಪ್ರಾಯ ವನ್ನಿಟ್ಟು—ಅವರನ್ನು ವಿದ್ವಾಂಸರನ್ನಾಗಿ ಮಾಡುವ ಉದ್ದೇಶವೇ ಈ ಕವಿಗಳಲ್ಲಿಲ್ಲ! ಇವರಿಗೊಂದು ಪ್ರತ್ಯೇಕ ಬರುದನ್ನೇ ಕೊಡಬೇಕಾಗಿದೆ! ಈ ಟೈಟಲನ್ನು ಯೋಚಿಸಿ ತಿಳಿಸುವೆನು.

'ಸಾಯ್ಬ'.

ವಜ್ರಗಳು! —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ್'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಯಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

Part Proprietors of —
Sri Krishna Mills & Co
Oil Manufacturers
Bunder, Mangalore
Bhagavan Ganesh Pai & Co
Copper Sheet & Twist Merchants Camp Bazar Cannanore

Representatives for the W C
M/s A & F Harvey
Cotton Spinners, Tuticorin Madura &c
Guardian Assurance Co, Ltd
(Incorporated in England)
Head Office 68, King William Street, London, E C 4.

Estd 1920] **THE** [1920ರಲ್ಲಿ ಸ್ಥಾಪಿತವಾದದ್ದು.

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು

ಠೇವಣಾತಿಗಳ ದರ

ನಿರಖು ಠೇವಣಾತಿಗಳು.—3 ತಿಂಗಳಿಗೆ ಶೇಕಡಾ 5ರಂತೆ 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರ ತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರ ತೆ

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರ ತೆ

ಯೋಗ್ಯ ಜವಾಬುದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು

ಬೇಂಕಿನ ಇತರ ಎಲ್ಲಾ ನಮೂನೆ ವ್ಯವಹಾರಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುತ್ತದು

Puttur
Dated 10—4—1935 } **G N Lakshman Pai,** *Secretary*

ರಾಮು—'ಏನು, ಓಡುವರಿತ್ತ?'

ಜೋಜ್—'ಸ್ವದೇಶಾಭಿಮಾನಿಯ ಏಜಂಟರ ಬಳಿಗೆ—ಮಾತಾಡಲು ಸಮಯವಿಲ್ಲ—ಮತ್ತೆ ಪ್ರತಿಗಳು ದೊರೆಯುವುದಿಲ್ಲ. ಬೇಗನೇ ಒಂದು ಪ್ರತಿಯನ್ನು ಪಡೆದುಕೊಂಡು ಬರುತ್ತೇನೆ—

ರಾಮು—'ಬೇಗನೇ ಧಾವಿಸಿರಿ—ನನಗೂ ಒಂದು ಪ್ರತಿಯನ್ನು ತನ್ನಿ ಇಗೋ ಇಲ್ಲಿ ಒಂದಾಣೆ'.

'ಸ್ವದೇಶಾಭಿಮಾನಿ'ಯು

ಪ್ರಕಟವಾದ ಪ್ರತಿವಾರದಲ್ಲೂ ಈ ಗುಲ್ಲು ಅಖಿಲ ಕರ್ನಾಟಕದಲ್ಲಿ ಕೇಳುತ್ತದೆ. ಸ್ವದೇಶಾಭಿಮಾನಿಯನ್ನು ಓದುವುದೆಂದರೆ ಜನರಿಗೆ ಅಷ್ಟು ಉತ್ಸಾಹ—ಅಷ್ಟು ಆಶೆ—ಕಾರಣವೇನು?—ಭಾವಾತ್ಮಕ, ಚಿತ್ರಪಟಗಳು, ವರ್ತಮಾನ ಸಂಗ್ರಹಗಳು,—ಇವುಗಳಲ್ಲೆಲ್ಲಾ ಅದು ಅಗ್ರಗಣ್ಯವಾಗಿ ನಿಂತಿದೆ

ಬಿಡಿ ಸಂಚಿಕೆ ಬೆಲೆ,ಆಣೆ 1.

ಪತ್ರಿಕಾ ಪ್ರಪಂಚ

ಚಲಚಿತ್ರಗಳಲ್ಲಿನ ರೂಪ.

'Twentieth Century Pictures' ಕಂಪೆನಿಯ ಪ್ರಧಾನ ವ್ಯವಸ್ಥಾಪಕನಾದ ಡೆರಿಲ್ ಜನುಕ್ ಎಂಬವನು ಅಭಿನೇತೃ ಅಭಿನೇತ್ರಿಯರ ರೂಪಕುಶಲತೆಗಳ ಪ್ರಾಮುಖ್ಯತೆಯ ವಿಚಾರವಾಗಿ ತನ್ನ ಅಭಿಪ್ರಾಯವನ್ನು ಹೀಗೆಂದು ಹೇಳಿದ್ದಾನೆ. ರೂಪವೆಂದರೆ ಅದು ಹೆಚ್ಚಾಗಿ ಅನ್ವಯಿಸುವುದು ಸ್ತ್ರೀಯ ರೂಪಿಗೆ ಮಾತ್ರ. ಅವರಿಗೆ ರೂಪವಿದ್ದೇ ತೀರಬೇಕು. ಗಂಡಸರು ರೂಪವಿಲ್ಲದಿದ್ದಾಗ್ಯೂ ಒಂದುವೇಳೆ ನಿರ್ವಹಿಸಲು ಸಾಧ್ಯವಿದೆ. ಬರಿಯ ರೂಪವಿದ್ದರೆ ಅದಕ್ಕೆ ಬೆಲೆಯೂ ಕಡಮೆ. ಬರಿಯ ಬುದ್ಧಿಕುಶಲತೆಯಿದ್ದರೂ ಸಾಲದು; ರೂಪ ಕುಶಲತೆಗೆ ಹೆಚ್ಚು ಬೆಲೆ. ಅದರೆ ರೂಪ ಕುಶಲತೆಗಳೂ ಒಬ್ಬನಲ್ಲಿದ್ದರೆ ಅಲ್ಲಿಗೆ ಅಪಾರ ಬೆಲೆಯಿದೆ— ರೂಪ ದಿನಕ್ಕೆ ೮ ಡಾಲರು ಕುಶಲತೆ ದಿನಕ್ಕೆ ೧೦೦ ಡಾಲರು ರೂಪ ಮತ್ತು ಕುಶಲತೆ ದಿನಕ್ಕೆ ೧೦೦೦ ಡಾಲರು. ಬುದ್ಧಿಕುಶಲತೆಗಳಿಲ್ಲದ ಇರುವ ಎಂತಹ ಅತಿಶಯ ರೂಪವತಿಯೇ ಆಗಲಿ, ಅವಳಿಗೆ ವಾರಕ್ಕೆ ೫೦ ಡಾಲರುಗಳಿಗಿಂತ ಹೆಚ್ಚಿಗೆ ಸಂಬಳವು ದೊರೆಯಲಾರದು. ಅಂತಹ ರೂಪವತಿಯರು ನಮ್ಮ ಚಲಚ್ಚಿತ್ರದ ಸಂಗೀತದ ಮೇಳಗಾತಿಯರು ಅಸಂಖ್ಯಾತರಾಗಿದ್ದಾರೆ. ಅವರಲ್ಲಿ ಬುದ್ಧಿಕುಶಲತೆಯುಳ್ಳವರು ಎಲ್ಲೋ ಅಪರೂಪ. ಅಂತಹವರು ಮೇಳಗಾತಿಯರ ಪಂಗಡದಿಂದ ಅಭಿನೇತ್ರಿಯರ ಪಂಗಡಕ್ಕೆ ಹತ್ತಿದ್ದಾರೆ. ಅಂತಹವರು ಮೇಳಗಳಲ್ಲಿ ಬಹು ಕಾಲವಿರಲಾರರು. ಜೋನ್ ಕ್ರಾಫೋರ್ಡಳೂ ಮೊದಲಿನಲ್ಲಿ ಮೇಳಗಾತಿಯಾಗಿದ್ದಳು.

ಭಾರತಕ್ಕೊಂದು ರಾಷ್ಟ್ರಭಾಷೆ

The New Review ನಲ್ಲಿ ಮಿ. ಪೌಲ ಡಂಟ್ (?) ಎಂಬವರು ಮೇಲಿನ ವಿಷಯವಾಗಿ ಬರೆದು ಉರ್ದು ಅಥವಾ ಹಿಂದೀಯು ಭಾರತದ ರಾಷ್ಟ್ರಭಾಷೆಯಾಗುವುದೆಂದು ಸೂಚಿಸಿರುವರು. ಅವರನ್ನುವುದೇನೆಂದರೆ ಸಂಸ್ಕೃತ ಉರ್ದು ಮತ್ತು ಹಿಂದೀ ಭಾಷೆಗಳು ಹಿಂದೂದೇಶದಲ್ಲಿ ರಾಷ್ಟ್ರಭಾಷೆಗಳಾಗಲರ್ಹವಾದುವುಗಳು. ಒಬ್ಬನು ತನ್ನ ಭಾಷೆಯನ್ನು ಇತರ ಮತಸ್ಥರು ಇರುವ ದೇಶಗಳವರ ಭಾಷೆಗಳನ್ನು ಸಮ ಹೋಲಿಸುತ್ತಾ ಹೋದರೆ ಎಲ್ಲಾ ಭಾಷೆಗಳೂ ತನ್ನ ಭಾಷೆಯೊಡನೆ ಸ್ವಲ್ಪ ಸ್ವಲ್ಪ ಸಂಬಂಧವಿರುವುದು ಕಂಡುಬರುತ್ತದೆ. ಈ ಸಂಪರ್ಕವು ಹಲವು ರೀತಿಯಿಂದ ಬರುತ್ತದೆ. ಅದರಲ್ಲೂ ಅದಕ್ಕೆ ಸಂಸ್ಕೃತವು ಹೆಚ್ಚಿನ ಮಟ್ಟಿಗೆ ಕಾರಣವಾಗಿ ನಿಂತಿದೆ. ಜರ್ಮನ್ ಭಾಷೆಗೆ ಲೇಟಿನ್ ಯಾವ ಕಾಲದಲ್ಲಿ ಸೇರಿಕೊಂಡಿತೋ ಆಗಿನ ಕಾಲದಿಂದಲೂ ಈ ಸಂಸ್ಕೃತ ಭಾಷೆಯು ಉತ್ತರ ದಕ್ಷಿಣ ದೇಶಗಳಲ್ಲಿ ಸ್ಥಾಪಿಸಿಕೊಂಡಿರುತ್ತದೆ. ಯಾವ ಭಾಷೆಯಲ್ಲಿ ನೋಡಿದರೂ, ಸಂಸ್ಕೃತ ಶಬ್ದವು ಒಂದಲ್ಲ ಒಂದು ರೂಪದಲ್ಲಿ ಅಡಗಿಕೊಂಡಿರುವುದು ಕಂಡುಬರುತ್ತದೆ. ಮತಸಂಬಂಧವಾದ ಗ್ರಂಥಗಳಲ್ಲಂತೂ ಈ ಭಾಷೆಯ ಹಲವು ಶಬ್ದಗಳು ಸೇರಿಕೊಂಡಿವೆ. ಅಂದಿನ ಕಾಲದಲ್ಲಿ ಹಿಂದೂಮತವು ವ್ಯಾಪ್ತವಾಗಿದ್ದುದರಿಂದಲೇ ಇಂತಹ ವಿಚಿತ್ರಭೇದಕ್ಕೆ ಕಾರಣವಾಗಿದೆ. ಉರ್ದು ಭಾಷೆಯೂ ಭಾರತೀಯ ಮುಸಲ್ಮಾನರ ಪ್ರಯೋಗದಲ್ಲಿರುತ್ತದೆ. ಆದುದರಿಂದ ಹೆಚ್ಚಿನ ಭಾಷೆಗಳಲ್ಲಿ ಉರ್ದು ಕೂಡಾ ಸೇರಿಕೊಂಡಿದೆಯೆಂದು ಗೊತ್ತಾಗುತ್ತದೆ. ಇಂಗ್ಲೀಷಿನಲ್ಲಿ ಆಂಗ್ಲೋಸೆಕ್ಸನ್ ಮತ್ತು ಲೆಟಿನ್‌ನ ನೆರಳು ಇದ್ದಂತೆ ಭಾರತದ ಭಾಷೆಗಳಲ್ಲಿ ಈ ಉರ್ದು ಕೂಡಾ ತನ್ನ ಪ್ರತಿಭೆಯನ್ನು ತೋರಿಸುತ್ತದೆ. ಉತ್ತರ ದೇಶದಲ್ಲಿ ಅಧಿಕಸಂಖ್ಯಾತರ ಭಾಷೆಯಾದ ಹಿಂದೀಯು ಇನ್ನೊಂದು ದೊಡ್ಡ ಭಾಷೆ. ಒಂದೊಂದು ಭಾಷೆಯ ಪ್ರಾಧಾನ್ಯವನ್ನು ಹಿಡಿದೆತ್ತಿ ಚರ್ಚಿಸುವ ಅಗತ್ಯವಿಲ್ಲವಾದರೂ ಕಾಲಾನುಕಾಲದಲ್ಲಿ ಹಿಂದೀಯೇ ರಾಷ್ಟ್ರದ ಭಾಷೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ.

ಭಾರತೀಯ ಮಹಿಳೆಯರೂ ಸಹಕಾರವೂ

The Indian Ladies' Magazine ನಲ್ಲಿ ಒಂದು ವಿಮರ್ಶಾತ್ಮಕ ಲೇಖನದಲ್ಲಿ ಹೀಗೆಂದು ಹೇಳಿದೆ— ಸಹಕಾರ ತತ್ವಗಳು ನಮ್ಮ ಮಹಿಳೆಯರೊಳಗೆ ವಿಶಾಲವಾಗಿ ಹರಡಬೇಕಾಗಿದೆ. ಇಲ್ಲಿ ಸ್ತ್ರೀಯರ ಸಹಕಾರ ವಿಚಾರವೆಂದರೆ ಬಲು ನಿರ್ಬಲವೇ ಸರಿ. ಪಂಜಾಬಿನಲ್ಲಿ ಈ ಸಹಕಾರ ತತ್ವಗಳನ್ನು ಸ್ತ್ರೀಯರೊಳಗೆ ಬಹುವಾಗಿ ಪ್ರಚಾರಮಾಡುತ್ತಾರೆ. ೧೯೩೦ರಲ್ಲಿ ಅಲ್ಲಿ ೧೩೦ ಸಹಕಾರ ಸಂಘಗಳಿದ್ದುವು. ಇವುಗಳಲ್ಲಿ ಒಟ್ಟು ೩೦೦೦ ಸದಸ್ಯರಿದ್ದರು. ಅಂತಹ ಪ್ರಬಲ ಚಳವಳವನ್ನು ನಡೆಯಿಸಿದ ಪಂಜಾಬಿನಲ್ಲೇ ಇಷ್ಟು ನಿಕೃಷ್ಟ ಸಂಖ್ಯೆ! ಬಂಗಾಳದಲ್ಲಿ ಒಟ್ಟು ೬ ಸಂಘಗಳಿವೆ; ಸಂಯುಕ್ತ ಪ್ರಾಂತ್ಯದಲ್ಲೂ ಅಷ್ಟೇ. ಮುಂಬಯಿಯಲ್ಲಿ ಬರೀ ಮೂರು ಸಂಘಗಳಿವೆ. ಇಷ್ಟರಿಂದ ಸಹಕಾರದ ಕೆಲಸಗಳನ್ನು ವಿಮರ್ಶಿಸುವಾಗ ಮಧ್ಯಮ ತರಗತಿಯ ಸ್ತ್ರೀಯರು ಮಾತ್ರ ಇವುಗಳಲ್ಲಿ ಸೇರಿರುವರೆಂದು ಗೋಚರಿಸುವುದು. ಈ ಸಂಸ್ಥೆಗಳನ್ನು ಕೂಲಿಕಾರರ ಮಧ್ಯೆ ಪ್ರಚಾರಗೊಳಿಸುವುದು ಅಗತ್ಯ ವಿಷಯವಾಗಿರುತ್ತದೆ. ಆದರೆ ಸ್ತ್ರೀಯರ ಅಜ್ಞಾನವೂ ಅವಿದ್ಯೆಯೂ ಕೀಳುಮೇಲುಗಳೆಂಬ ಭೇದಭಾವವೂ ಪರದೆಯ ನಿರ್ಬಂಧವೂ ಈ ತತ್ವಗಳ ಪ್ರಚಾರಕ್ಕೆ ಸಹಕಾರಿಯಾಗಿ ನಿಂತಿರುವುದಿಲ್ಲ. ಈ ಕಷ್ಟಗಳನ್ನು ನಿವಾರಿಸಿ ಮುಂದರಿಯುವುದೇ ಕಷ್ಟವಾಗಿ ನಿಂತಿದೆ. ಈ ತತ್ವಪ್ರಚಾರಕ್ಕೆ ಸಾಕಷ್ಟು ಜನರು ಇಲ್ಲದಿರುವುದು ಒಂದು ಕಾರಣ. ಸಹಕಾರ ಸಂಘಗಳು ಹೆಚ್ಚಬೇಕಾದರೆ ಉತ್ಸಾಹೀ ಆದರ್ಶವಾದಿಗಳು ಬೇಕು. ಸೆಕ್ರೆಟರಿಗಳೋ ಕೋಶಾಧಿಕಾರಿಗಳೋ ಅಗತ್ಯ. ಇಂಗ್ಲಾಂಡಿನಲ್ಲಿ ಈ ವಿಷಯಕವಾದ ಕೆಲಸಗಳನ್ನು ಮಹಿಳಾ ಸಹಕಾರೀ ಸಂಘಗಳು ಕೈಕೊಳ್ಳುತ್ತವೆ. ಈ ಸಂಸ್ಥೆಯೂ ಅಮೇರಿಕ (?) ಮಹಿಳೆಯರ ಉನ್ನತಿಗಾಗಿ ಚಳವಳಿಸಿ ದೇಶದಲ್ಲಿ ನೆಮ್ಮದಿಯನ್ನುಂಟುಮಾಡಲು ಸಹಾಯಕವಾಗುತ್ತಿದೆ. ಈ ಗಿಲ್ಡಿಗೆ ೧೩೦೦ ಶಾಖೆಗಳಿವೆ. ಒಟ್ಟು ೬೩ ೦೦೦ ಸದಸ್ಯರಿರುತ್ತಾರೆ. ಸ್ತ್ರೀಯರ ವಿದ್ಯಾಭ್ಯಾಸ, ಶಿಶುಪಾಲನೆ, ದಾಂಪತ್ಯರಕ್ಷಣೆ, ಆರೋಗ್ಯರಕ್ಷಣೆ ಮೊದಲಾದ ಹಲವು ವಿಷಯಗಳ ಕುರಿತು ಇದು ಶಿಕ್ಷಣವನ್ನು ಕೊಡುತ್ತದೆ. ಈ ಗಿಲ್ಡು ಅಂತರ್ರಾಷ್ಟ್ರೀಯವಾಗಿ ಪ್ರಚಾರಗೊಂಡಿದೆ. ಆಸ್ಟ್ರಿಯಾ, ಬೆಲ್ಜಿಯಂ, ಫ್ರಾನ್ಸ್, ಇಂಗ್ಲೆಂಡ್, ಹೊಲ್ಲೆಂಡ್, ಐರ್ಲೆಂಡ್, ನೋರ್ವೆ, ಸ್ಕಾಟ್ಲೆಂಡ್, ಸ್ವೀಡನ್ ಮತ್ತು ಸ್ವಿಜರ್ಲೆಂಡಿನಲ್ಲಿ ಇದು ಸ್ಥಾಪನೆಗೊಂಡಿದೆ. ಜರ್ಮನಿ, ಜೆಕೋಸ್ಲೋವಾಕಿಯಾಗಳಲ್ಲಿ ಇತರ ಸಮಿತಿಗಳಿವೆ. ಇಂತಹ ಸಂಸ್ಥೆಯನ್ನು ಸ್ಥಾಪಿಸುವುದಕ್ಕಾಗಿ ಅಖಿಲಭಾರತ ಸ್ತ್ರೀಯರ ಪರಿಷತ್ತಿನಲ್ಲಿ ನಿರ್ಣಯವಾಗಬೇಕು.

ಸಸ್ಯವರ್ಗದ ಅಂತಃಕರಣ

ಪ್ರಖ್ಯಾತ ಭಾರತೀಯ ಶಾಸ್ತ್ರಜ್ಞರಾದ ಸರ್ ಜಗದೀಶಚಂದ್ರಬೋಸರು, ಸಸ್ಯವರ್ಗವು ಸಜೀವವಾಗಿರುವುದೆಂದು ಕಂಡುಹಿಡಿದವರು. ಅವುಗಳ ಸಂಬಂಧವಾಗಿ ಕಳೆದ ಹಲವು ವರ್ಷಗಳಿಂದ ಅನೇಕ ಶೋಧನೆಗಳನ್ನು ಅವರು ಮಾಡುತ್ತಿರುವರು ಎಂಬುದು ಸರ್ವವಿದಿತ ವಿಷಯವಾಗಿರುತ್ತದೆ. ಪದಾರ್ಥವಿಜ್ಞಾನ ಶಾಸ್ತ್ರದ ಪರಿಶೋಧನೆ ಮಾಡುವಾಗ ಅವರ ಚಿತ್ತವು ಹೀಗೆ ಸಸ್ಯವರ್ಗದ ಕಡೆಗೆ ಹರಿಯಿತೆಂಬ ಕುರಿತು ಅವರು ಹೀಗೆ ಹೇಳುತ್ತಾರೆ: "೩೫ ವರ್ಷಗಳ ಹಿಂದೆ ನಾನು ವಿದ್ಯುತ್ತಿನ ವಿಷಯವಾಗಿ ಕೆಲವು ಶೋಧನೆಗಳನ್ನು ನಡೆಸುತ್ತಿದ್ದೆ. ಆ ಶೋಧನೆಗಾಗಿ ನಾನು ಹಲವು ವಸ್ತುಗಳನ್ನು ಕೈಗೆತೆಗೆದುಕೊಂಡಿದ್ದೆನು. ಅವುಗಳಲ್ಲಿ ಕೆಲವು ವನಸ್ಪತಿಗಳೂ ಇದ್ದುವು. ಈ ವನಸ್ಪತಿಗಳ ಮೇಲೆ ನಾನು ಶೋಧನೆಯನ್ನು ಮಾಡುತ್ತಿದ್ದಾಗ ಅವುಗಳ ಮೇಲಿರುವ ವಿದ್ಯುತ್ ಶಕ್ತಿಯು ಕಡಮೆಯಾಗುತ್ತಾ ಬಂದ ಹಾಗೆ ನನಗೆ ಕಂಡುಬಂತು. ಮನುಷ್ಯನು ಕೆಲಸಮಾಡಿದ ಮೇಲೆ ಆಯಾಸಗೊಳ್ಳುವನು. ಅದರಂತೆಯೇ ವನಸ್ಪತಿಗಳಿಗೂ ಆಯಾಸಗೊಂಡಿರಬೇಕೆಂದು ನಾನು ತಿಳಿದು ಅವುಗಳಿಗೆ ಕೆಲವು ಉತ್ತೇಜಕ ರಾಸಾಯನಿಕ ದ್ರವ್ಯಗಳನ್ನು ಕೊಟ್ಟ ಮೇಲೆ ಅವುಗಳ ವಿದ್ಯುತ್ ಶಕ್ತಿಯು ಮೊದಲಿನ ಪರಿಣಾಮಕ್ಕೆ ಬಂದಂತೆ ತಿಳಿಯಿತು. ವಿಷದ್ರವ್ಯಗಳನ್ನು ನಾನು ಅವುಗಳೊಡನೆ ಹಾಕಿದೆ— ಆಗ ವಿದ್ಯುತ್ತಿನ ಪರಿಣಾಮವು ಇವುಗಳ ಮೇಲೆ ಆದಂತೆ ಕಾಣಲಿಲ್ಲ. ಆ ವಿಷವು ವನಸ್ಪತಿಗಳ ಪ್ರಾಣವನ್ನೇ ಹಿಂಡಿತೆಂದು ನಾನು ತಿಳಿಯಬೇಕಾಯಿತು. ೧೯೦೦ನೆಯ ವರ್ಷದಲ್ಲಿ ಪೇರಿಸ್ ನಗರದಲ್ಲಿ ನೆರೆದಿದ್ದ ಅಂತರ್ರಾಷ್ಟ್ರೀಯ ವಿಜ್ಞಾನಪರಿಷತ್ತಿನಲ್ಲಿ ನಾನು ಭಾಗವಹಿಸಲು ಹೋಗಿದ್ದೆ. ಅಕಸ್ಮಾತ್ತಾಗಿ ನಾನು ಇಂಗ್ಲೆಂಡಿನಲ್ಲಿ ಅಸ್ವಸ್ಥನಾಗಿ ಬಿದ್ದುಬಿಟ್ಟೆ. ಹಾಸಿಗೆ ಬಿಟ್ಟು ಏಳಲಿಕ್ಕೆ ನನಗಾಗಲಿಲ್ಲ. ನಾನು ಮಲಗಿದ್ದ ಕೋಣೆಯಿಂದ ನನಗೆ ಹೊರಗಡೆಯಲ್ಲೊಂದು ಮರವು ಕಂಡುಬಂತು. ನಾನು ಆ ಮರವನ್ನೇ ಅನೇಕ ಹೊತ್ತು ನೋಡುತ್ತಾ ಮಲಗಿದೆ. ಕೆಲವು ದಿನಗಳು ಕಳೆದುವು, ಕೊನೆಗೆ ಒಂದು ದಿನ, ನನ್ನ ಮನಸ್ಸಿಗೊಂದು ಹೊಸ ವಿಚಾರವು ಹೊಳೆಯಿತು. ಪ್ರಾಣಿ ಜೀವನವೂ ವನಸ್ಪತಿ ಜೀವನವೂ ಬೇರೆಬೇರೆಯಾಗಿಲ್ಲವೆಂದು ನಾನು ಯೋಚಿಸಿಕೊಂಡೆ. ಅಂದಿನಿಂದ ನಾನು ಬೇರೆ ಶೋಧನೆಗಳಿಗೆ ತೊಡಗಿದೆ. ಅಂತಹ ಶೋಧನೆಗಳಲ್ಲಿ ನನಗೆ ಜಯವೂ ದೊರಕಿದೆ. ಈ ಪ್ರಯೋಗಗಳಿಗೆ ನಾನು ಸೂಕ್ಷ್ಮ ಯಂತ್ರಗಳನ್ನು ರಚಿಸಿರುತ್ತೇನೆ. ಮೂಲವಸ್ತುಗಳ ೩೦೦೦ದಷ್ಟು ದೊಡ್ಡ ಆಕಾರವನ್ನು ತೋರುವ ಸೂಕ್ಷ್ಮದರ್ಶಕ ಯಂತ್ರವು ಒಂದು ಶಾಸ್ತ್ರೀಯ ಚಮತ್ಕಾರವೆಂದೇ ಗಣಿಸಲ್ಪಟ್ಟಿತು. ನನ್ನ ಯಂತ್ರದ ಮೂಲಕ ನೋಡಿದರೆ ಮೂಲವಸ್ತುವು ೧,೦೦ ೦೦೦ದಷ್ಟು ದೊಡ್ಡ ಆಕಾರದಲ್ಲಿ ಕಾಣುವುದು. ಸಸ್ಯವರ್ಗಗಳಲ್ಲಿ ಪ್ರಾಣವಿಲ್ಲವೆಂದು ಇದುವರೆಗೆ ಅಭಿಪ್ರಾಯವಾಗಿತ್ತು. ಯಾರೂ ಅದರ ಕಡೆಗೆ ಲಕ್ಷ್ಯಕೊಡದಿದ್ದುದೇ ಅದಕ್ಕೆ ಕಾರಣ. ಯಾವ ವಸ್ತುವನ್ನೇ ಆಗಲಿ ನಾವು ಅದರ ಗುಣ ಧರ್ಮ ಮತ್ತು ಪ್ರಯೋಜನಗಳ ಸೂಕ್ಷ್ಮಾವಲೋಕನವನ್ನು ಮಾಡಿದರೆ ಹಿತವಿದೆ.

The Scholar

ನೇಯ್ಗೆಯ ಉದ್ಯೋಗಕ್ಕೆ ಸಂರಕ್ಷಣೆ.

ಶ್ರೀ ಟೇಂಗ್ಸೆ ಗೋವಿಂದರಾಯರು, ಎಲ್. ಎಲ್. ಬಿ. ಇವರು "ಜಯಕರ್ನಾಟಕ"ದಲ್ಲಿ ಮೇಲಿನ ವಿಷಯವಾಗಿ ಒಂದು ಲೇಖನವನ್ನು ಬರೆದು ಹೀಗೆ ಪ್ರತಿಪಾದಿಸಿರುತ್ತಾರೆ. "ನೇಯ್ಗೆಯ ಉದ್ಯೋಗವು ಹಿಂದೂಸ್ಥಾನದ ಮುಖ್ಯ ಉದ್ಯೋಗಗಳಲ್ಲೊಂದಾಗಿದೆ. ಅದರ ಬೆಳವಣಿಗೆಗಾಗಿ ಐದು ವರ್ಷಗಳ ವರೆಗೆ ಸಂರಕ್ಷಣವನ್ನು ಕೊಡುವ ಕಾಯಿದೆಯು ಮೊನ್ನೆ ಮೊನ್ನೆ ಪಾಸಾಯಿತು. ಜಪಾನ ಹಾಗೂ ಲಂಕಾಶೈರ್‌ಗಳ ಕೂಡ ಮಾಡಿಕೊಂಡ ಒಪ್ಪಂದದ ಶರತ್ತುಗಳಿಗೆ ಮೂರ್ತರೂಪವನ್ನು ಕೊಡುವುದು ಇದರ ಮುಖ್ಯ ಅಂಗವಾಗಿತ್ತು. ಈ ಉದ್ಯೋಗಕ್ಕೆ ಸಂರಕ್ಷಣೆಯು ಅವಶ್ಯಕವೋ? ಅದನ್ನು ಕೊಡುವುದು ಹಿತಕರವಾದುದೋ? ಪರದೇಶಗಳ ಕೂಡ ಮಾಡಿಕೊಂಡ ಒಪ್ಪಂದಗಳು ಸದ್ಯಸ್ಥಿತಿಯಲ್ಲಿ ಯೋಗ್ಯವಾಗಿವೆಯೋ? ಈ ಪ್ರಶ್ನೆಗಳನ್ನು ಸಾಮಾನ್ಯ ಜನತೆಯ ಹಿತದೃಷ್ಟಿಯಿಂದ ಚರ್ಚಿಸುವುದು ಅಗತ್ಯವಿದೆ. ೧೯೩೧-೩೨ರಲ್ಲಿಯೂ ೩೪೦ ಮಿಲಿಯ ಗಜ ಹುಟ್ಟುಮಾಲಿದ್ದು ಪರದೇಶದಿಂದ ೭೭೬ ಮಿಲ್ಲಿಯ ಗಜ ಅರಿವೆ ದೇಶದಲ್ಲಿ ಬಂತೆಂದ ಮೇಲೆ ಉದ್ಯೋಗವನ್ನು ಬೆಳೆಯುವ ಅಗತ್ಯವಿದೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಜಪಾನದ ಅರಿವೆ ಪೇಟೆಯಲ್ಲಿ ಅಗ್ಗವಾಗಿ ಮಾರುತ್ತಿರಲು ಅದರೊಡನೆ ಹೋರಾಡುವಂತೆ ಬುದ್ಧಿಯನ್ನು ಹುಟ್ಟಿಸುವುದು ಗಿರಣಿಗಳ ಸದ್ಯಸ್ಥಿತಿಯಲ್ಲಿ ಅಸಾಧ್ಯವಾದುದೆಂಬುದು ನಿರ್ವಿವಾದವಾದುದೆ. ಈ ಯೋಗ್ಯತೆ ಅವಕ್ಕೆ ಬರಬೇಕಾದರೆ ಸಂರಕ್ಷಣೆ ಬೇಕು. ಸಂಘಟನೆ ಬೇಕು.

ಶಾಂತಿಯ ಸಮಸ್ಯೆ

ಮಿ. ಸಿಡ್ನಿ ಎಸ್ಸರ್ ಎಂಬವರು 'The Inquirer' ಎಂಬ ಪತ್ರಿಕೆಯಲ್ಲಿ ಮೇಲಿನ ವಿಷಯದ ಕುರಿತು ಹೀಗೆ ಬರೆದಿದ್ದಾರೆ—"ಸೈನ್ಯಗಳನ್ನು ಹೆಚ್ಚಿಸುವುದರಲ್ಲಿ ನಾವು ನಿಮಗ್ನರಾಗಿದ್ದೇವೆಂದರೆ— ನಾವು ಯುದ್ಧವನ್ನು ಯುದ್ಧದಿಂದಲೇ ಕೊನೆಗಾಣಿಸಬೇಕೆಂಬ ನಿರ್ಧಾರದಿಂದಿರುವೆವೆಂಬುದು ಸ್ವಯಂವ್ಯಕ್ತ. ಈ ಕ್ರಮವನ್ನು ಹಿಂದೊಮ್ಮೆ ಪ್ರಯೋಗದಲ್ಲಿಟ್ಟಿದೆಯೆಂದು ನಾವು ತಿಳಿದಿರತಕ್ಕದು. ೧೯೧೪ರಲ್ಲಿ ಜರ್ಮನಿಯ ಸೈನ್ಯವನ್ನು ತೆಗೆದುಹಾಕುವುದಕ್ಕೆ ಸೈನ್ಯಗಳೇ ಪ್ರಯುಕ್ತಪಟ್ಟುವು. ಈ ಕೆಲಸವು ಜಯವನ್ನು ತಂದಿತೆಂದು ಹೇಳಲಾಗುವುದಿಲ್ಲ. ಸೈನ್ಯಗಳ ಜಯವು ಪೂರ್ಣವಾದುದಾಯಿತು. ಜರ್ಮನರ ಶಕ್ತಿಯು ಪೂರ್ಣವಾಗಿ ನಾಶವಾಯಿತು; ಆದರೆ ಅಂದು ಮುರಿದಿಕ್ಕಿದೆವು ಎಂದು ಪರಿಗಣಿಸಲ್ಪಟ್ಟ ಆ ಸೈನ್ಯಶಕ್ತಿಯು ಪುನಃ ಪ್ರವರ್ಧಮಾನ ಸ್ಥಿತಿಯಲ್ಲಿದೆ. ಜಪಾನು ಚೀನದ ಮೇಲೆ ಪುನಃ ದಾಳಿ ನಡೆಸಿತೆನ್ನೋಣ. ಆಗ ನಾವು ಜಪಾನಿನ ಶಕ್ತಿಯನ್ನು ಮುರಿಯುವುದಕ್ಕಾಗಿ ಹೊಂಚಹಾಕಬೇಕೆಂದು ಭಾವಿಸೋಣ; ನಾವು ಯಾವ ರೀತಿಯಿಂದಲಾದರೂ ಆ ರಾಷ್ಟ್ರದ ಸಾಮ್ರಾಜ್ಯತೃಷ್ಣೆಯನ್ನು ನಿರ್ಬಂಧಿಸಲು ಸಾಧ್ಯವಿದೆಯೇ? ಸೈನ್ಯದಿಂದ ಸಾಧ್ಯವಿಲ್ಲವೆಂದೇ ನನ್ನ ಮತವಿದೆ. ಶಸ್ತ್ರಧಾರಿಯ ಶಾಂತಿಸ್ಥಾಪನೆಗೆ ಅಗತ್ಯವಿರುವ ಸಾಧನವಾಗಿಲ್ಲ. ನಮ್ಮ ವಿರೋಧಿಯಾಗಿ ನಿಂತಿರುವ ಒಂದು ದೇಶವನ್ನು ನಾವು ಬಲಾತ್ಕಾರದಿಂದ ಹೆದೆಮುರಿ ಕಟ್ಟಲು ಸಾಧ್ಯವಾಗಲಾರದು. ನಮಗೆ ಉಳಿದಿರುವುದು ಒಂದೇ ದಾರಿ. ಯಾವ ಕಡೆಯಿಂದ ಸಮರಶಕ್ತಿಯು ಬರುತ್ತದೋ ಆ ಕಡೆಯನ್ನೇ ಮುಚ್ಚಿಬಿಡಬೇಕು. ಜಪಾನು ಅಪರಾಧ ಮಾಡುತ್ತಿದೆಯೆಂದು ನಾವು ತಿಳಿಯುತ್ತಿದ್ದೇವೆ. ಆದರೆ ನಾವು ಹಿಂದೂದೇಶದಲ್ಲಿ ಯಾವ ಅನ್ಯಾಯವನ್ನು ಮಾಡುತ್ತೇವೆಂದು ಏಕೆ ಲಕ್ಷಿಸುವುದಿಲ್ಲ? ಜಪಾನು ಮಂಚೂರಿಯವನ್ನು ಶಸ್ತ್ರಾಸ್ತ್ರಗಳ ಬಲದಿಂದ ಜಯಿಸಲು ಹೊರಟಂತೆ ನಾವು ಹಿಂದೂದೇಶವನ್ನು ಮಿಲಿಟರಿಯ ಬಲದಿಂದ ಜಯಿಸಲು ಹೊರಟಿರುವುದಿಲ್ಲವೆಂಬುದೇನೋ ಹೌದು— ಆ ದೇಶವು ನಮ್ಮ ಮುಷ್ಟಿಯೊಳಗಿರುವುದರಿಂದ ಅಂತಹ ಪ್ರಸಂಗವು ಅಗತ್ಯವೆಂದು ನಮಗೆ ಕಂಡುಬಂದಿರುವುದಿಲ್ಲ. ಆದರೆ ನಮಗೆ ಅಲ್ಲಿ ದೊರೆತಿರುವ ಅಧಿಕಾರವನ್ನು ನಾವು ಇಟ್ಟುಕೊಳ್ಳಲು ಸಾಧಿಸುತ್ತಿದ್ದೇವೆ (ಈಗಿನ ರಾಜ್ಯಾಂಗರಚನೆಯಲ್ಲಿ ನಮಗೆ ಪೂರ್ಣ ಅಧಿಕಾರವು ದೊರೆಯಲಿದೆ) ಅಲ್ಲದೆ ನಾವು ಸಾಮ್ರಾಜ್ಯವನ್ನು ವಿಸ್ತರಿಸುವ ಕೆಲಸದಲ್ಲಿ ಮಗ್ನರಾಗಿರುವುದಿಲ್ಲ. ಹಾಗೂ ಹೀಗೂ ಈ ಎರಡು ವಿಚಾರಗಳೂ ಒಂದೇ ಆಗಿವೆ. ಈ ಸೂತ್ರದ ಮೇಲೆಯೇ ಯುದ್ಧವು ಆಧರಿಸಿ ನಿಂತಿದೆ. ಅಧಿಕಾರಕ್ಕಾಗಿ ರಾಷ್ಟ್ರಗಳು ಹಣಾಹಣಿ ಹೊಡೆದಾಡಿದೊಡನೆ ಅಲ್ಲಿ ಯುದ್ಧದ ಪತನವಾಗುತ್ತದೆ. ಶಸ್ತ್ರಗಳನ್ನು ಕಂಡು ಮೆಚ್ಚಿಯೋ ಅಥವಾ ಯುದ್ಧದ ಮೇಲಿನ ಪ್ರೇಮವುಳ್ಳವರಾಗಿಯೋ ನಾವು ಯುದ್ಧ ಮಾಡುವುದಿಲ್ಲ— ನಮಗೆ ಅಧಿಕಾರವು ಬೇಕಾಗಿದೆ— ನಮ್ಮ ದಾಳಿಯನ್ನು ಸ್ಥಾಪಿಸುವ ಇತರ ಜನಾಂಗಗಳ ಅದೃಷ್ಟವನ್ನಾಳುವ ಜಗತ್ತಿನ ಇತರ ರಾಷ್ಟ್ರಗಳ ಅಧಿಕಾರ ಪ್ರವಾಹವನ್ನು ಬದಗಿಸಿಕೊಳ್ಳುವ ಆಸೆಯೇ ಎಲ್ಲಕ್ಕೂ ಮೂಲ. ರಾಷ್ಟ್ರಗಳ ಶಸ್ತ್ರಾಸ್ತ್ರಗಳನ್ನು ಕಡಿಮೆಯೊಡ್ಡುವುದರಿಂದಾಗಲಿ ಅಥವಾ ಅಹಂಕಾರವಾದ ರಾಷ್ಟ್ರಗಳ ಅಭಿಲಾಷೆಯನ್ನು ನಿರ್ಬಂಧಿಸುವುದರಲ್ಲಿ ಸ್ವತಂತ್ರವಾದ ರಾಷ್ಟ್ರಗಳನ್ನು ಒಂದುಗೂಡಿಸುವುದರಿಂದಾಗಲೀ ಯುದ್ಧವನ್ನು ನಿವಾರಿಸಿಕೊಳ್ಳುವುದು ಅಸಾಧ್ಯ. ಶಾಂತಿಸ್ಥಾಪನೆಯ ಕೆಲಸವು ಬಹು ಕಷ್ಟತರವಾದುದು. ಯುದ್ಧವನ್ನು ನಿಲ್ಲಿಸುವುದರಿಂದ ಜಗತ್ತಿನಲ್ಲಿ ಅದೊಂದು ಮಹಾ ರಚನಾಬದ್ಧ, ಸೃಷ್ಟಿಬದ್ಧ, ಕ್ರಾಂತಿಬದ್ಧ ಸಾಧನೆಯಾಗಿದೆ. ಈ ವಿಷಯದಲ್ಲಿ ನಾವು ಮಾದರಿಯಾದ ಉದಾಹರಣೆಯನ್ನು ಕೊಡುವುದೇ ಮಹಾ ಸೇವೆಯಾಗಿದೆ. ಯುದ್ಧವನ್ನು ಪರಿಹರಿಸುವುದಕ್ಕೂ ರಾಷ್ಟ್ರೀಯ ಅಧಿಕಾರದ ಅಭಿಲಾಷೆಯನ್ನು ಕೈಬಿಡುವುದೂ ಸಾಮಾನ್ಯ ಜನಾಂಗದ ಹಿತದೃಷ್ಟಿಯಿಂದ ರಾಷ್ಟ್ರದ ಕ್ರಿಯಾಸಕ್ತರಾಗುವುದೂ, ವಿಶ್ವಸಹೋದರತ್ವಕ್ಕೆ ಕೈಯೊಡ್ಡಿ, ಸಮೋದ್ದೇಶದಿಂದ ಕೂಡಿನಡೆಯುವವರನ್ನು ಹೊಂದಿಕೊಂಡು ರಚನಾಬದ್ಧ ಕಾರ್ಯಸಾಧಕರಾಗುವುದೂ ಇವೇ ಮಾದರಿಯ ಉದಾಹರಣೆಗಳಾಗಿವೆ.

ಬ್ರಿಟಿಷ ಶಿಕ್ಷಣವು ಅಪ್ರಯೋಜನಕಾರಿ.

'Sunday Express' ನಲ್ಲಿ ಮಿ. ಪಂಬ್ರೋಕ್ ಸ್ಟಿವನ್ಸ್‌ರವರು ಬ್ರಿಟಿಷ ಶಿಕ್ಷಣದ ಕುರಿತು ಹೀಗೆ ಬರೆದಿದ್ದಾರೆ: "೧೪ ವರ್ಷದ ಹುಡುಗರಿಗೆ ನಿಮ್ಮ ಡೆಸ್ಕು ಹಾಕಿರಿ. ನಾನು ನನ್ನ ಮಗನನ್ನು ಇಂಗ್ಲಿಷ ಶಾಲೆಗೆ ಕಳುಹಿಸಲಾರೆನು. ನನ್ನ ಮಗನು ನನ್ನಂತೆ ತನ್ನ ಅಮೂಲ್ಯ ಸಮಯವನ್ನು ಈ ಅನರ್ಥಕಾರೀ ಆಂಗ್ಲ ವಿದ್ಯಾಪ್ರಸಂಗದ ಹಟದಲ್ಲಿ ಕಳೆಯಬಾರದೆಂದೇ ನನ್ನ ಮತ. ಅಂತಹ ವಿದ್ಯಾರ್ಜನೆಯು ಅವನಿಗೆ ಅಗತ್ಯವಿರುವುದಿಲ್ಲ. ಆಂಗ್ಲ ವಿದ್ಯೆಯು ಒಡತನದ ಒಂದಿಷ್ಟು ವಾಸನೆಯನ್ನು ವಿದ್ಯಾರ್ಥಿಗಳಿಗೆ ಕೊಡುವುದಿಲ್ಲ. ಮೇಲಾಗಿ, ವಿದ್ಯಾರ್ಥಿಗಳ ಸ್ವತಂತ್ರತೆಯು ಕೆಟ್ಟುಹೋಗುತ್ತದೆ. ಸಾರ್ವಜನಿಕ ಜೀವನವು ಹೇಗಿರುವುದೆಂದು ನಮ್ಮ ವಿದ್ಯಾರ್ಥಿಗಳಿಗೆ ತಿಳಿದಿಲ್ಲ. ಹೊರಜಗತ್ತಿನಲ್ಲಿ ಜನರು ಸುಖವನ್ನೇ ಬಯಸುತ್ತಾರೆ, ಅವರಿಗೆ ಜನಜೀವನದ ಹಾಸವೇ ಸಿಗುವುದಿಲ್ಲ. ಎಲ್ಲಾ ವಿಲಾಸಪ್ರಿಯತೆ. ಇಂತಹ ವಿದ್ಯೆಯಿಂದಾಗಿ ನನಗಾಗಿರುವ ಹಾನಿಯು ಅಷ್ಟಿಷ್ಟಲ್ಲ. ಎಲ್ಲೆಲ್ಲಿ ಹೋದರೂ ನಾನೇ ಧನವಂತನೆಂದು ನನ್ನ ಭಾವನೆ. ಪ್ರೇಮಕ್ಕಿಂತ ಹೆಚ್ಚು ದ್ವೇಷವನ್ನೇ ನಾನು ಗಳಿಸುತ್ತಿದ್ದೇನೆ. ಇಂತಹ ವಿದ್ಯಾರ್ಜನೆಯನ್ನು ಬುದ್ಧಿವಂತರು ಎಂದೂ ಮಾಡಲಾರರು."

ಲೋಧ್ರ

ಶುಕ್ರನವಳ್ಳಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಭರ್ಗಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ ರೂ 8 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಅವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀವಾಮೃತವನ್ನು ಸೇವಿಸಿ

ಆರೋಗ್ಯಲಾಭವನ್ನು ಹೊಂದಿರಿ.

ನಿಮ್ಮಲ್ಲಿ ಚೈತನ್ಯವಿಲ್ಲವೋ, ಅಸುಖಿಯಾಗಿದ್ದೀರೋ, ದೇಹವು ಕಂಪಿಸುತ್ತಿದೆಯೋ, ನಿರಾಶಾಸ್ಥಿತಿಯಲ್ಲಿ, ದುಃಖದಲ್ಲಿರುವಿರೋ—ಹಾಗಿದ್ದರೆ ನಿಮಗೆ ಪರಿಣಾಮಕಾರಿಯಾಗುವ ಒಳ್ಳೆಯ ಟೋನಿಕ್ ಬೇಕು ಪಂಡಿತ ಡಿ ಗೋಪಾಲಾಚಾರ್ಲುರವರ ಪೂರ್ಣ ಆರೋಗ್ಯದಾಯಕವಾದ ಜೀವಾಮೃತವನ್ನು ಸೇವಿಸಿರಿ ನಿಮ್ಮ ಕೆಮಿಸ್ಟರಿಂದ ಒಂದು ಬಾಟ್ಲಿಯನ್ನು ಪಡೆಯಿರಿ ಆ ಪಾನಪತ್ರದಂತೆ ಅದನ್ನು ಸೇವಿಸಿ ಆಶ್ಚರ್ಯಕರ ರೀತಿಯಿಂದ ಶಾಂತಿಯೂ ಆರೋಗ್ಯವೂ ಲಭಿಸುವುದನ್ನು ಕಾಣಿರಿ ಒಂದು ಡೋಜು ಕುಡಿದಾಗಲೇ ನಿಮಗದರ ಮಹತ್ವವು ತಿಳಿದುಬರುವುದು. ಜೀವಾಮೃತವು ಬಲವನ್ನು ಹೆಚ್ಚಿಸುತ್ತದೆ ರಕ್ತವನ್ನು ಹೆಚ್ಚಿಸುತ್ತದೆ ನರಯೋಗಿಗಳ ಅಣುಗಳನ್ನು ಪೋಷಿಸುತ್ತವೆ ಜೀವನದ ಆನಂದವೇ ಹಸ್ತಗತವಾಗುತ್ತದೆ ಪ್ರಾಯ, ಪುಂಸ್ತ್ರೀಭೇದ, ಕಾಲಗಳ ಭೇದಾಭೇದವೇ ಇಲ

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ದೊರಲುತ್ತದೆ.

ತಯಾರಿಸುವವರು ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಚಾತುಕುಟ್ಟಿ ವೈದ್ಯರ

ವಿಷೂಚಿಕಾ ಸಂಹಾರಿ

Vishuchika Samhari

(PILCO)

ಕಾಲರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!

ಕ್ರಯ ಡಬ್ಬಿ 1ಕ್ಕೆ ರೂ 1—0—0

ಗುಹ್ಯರೋಗ ನಿವಾರಿಣೀ ತೈಲ

Anti-Venereal Oil

(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ ಕುಟುಂಬ ಪಾರಂಪರ್ಯದ ವ ತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು

6 ಔನ್ಸಿನ ಬಾಟ್ಲಿ 1ಕ್ಕೆ ರೂ 2—8—0.

ಕೆ ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು

An Advertisement In

'Swadeshabhimani'

Means a sure fortune to you

Ask for Contract Rates.

The Swadeshabhimani office,
Car Street, Mangalore

ಕುಷ್ಠ ರೋಗ ಮತ್ತು ಫರಂಗಿ ರೋಗ ನಿವಾರಣೆಯಿಲ್ಲ, ಮದ್ದೂ ಇಲ್ಲ.

ಎಷ್ಟು ದೀರ್ಘಕಾಲದ ರೋಗವೇ ಆಗಿರಲಿ! ಯಾವ ಕಾರಣವೇ ಇರಲಿ, ನೀವು ಮದ್ದು ಮಾಡಿ ಮಾಡಿ ದಣಿದಿರಿ ನಿಮ್ಮ ರೋಗಗಳನ್ನು ಇಂದ್ರಜಾಲದಂತೆ ಶಾಶ್ವತವಾಗಿ 4 ವಾರಗಳಲ್ಲಿ ಗುಣಗೊಳಿಸಲಾಗುತ್ತದೆ ಪೂರ್ಣಗುಣ ಗ್ಯಾರಂಟಿ ಕ್ರಯ ರೋಗನಿವಾರಣೆಯಾದ ಮೇಲೆ ಕ್ರಯ ಮತ್ತು ಬಹುಮಾನ ಕೊಡಬೇಕು ಬರೆಯಿರಿ

Kamala Works,
Panchpota Bengal S B.

C P S

ಲಾಭಗಳು!

ವಾಚುಗಳು, ರಿಸ್ಟ್‌ವಾಚುಗಳು, ಟೈಮ್‌ಪೀಸುಗಳು ಗಡಿಯಾರಗಳು ರಿಪೇರಿಮಾಡಿದ ಟೈಪ್‌ರೈಟರುಗಳು ಸಂತತಿ ಪ್ರತಿಬಂಧಕ ವಸ್ತುಗಳು ಬೀಜಗಳು, ಸಸಿಗಳು ಛಪಾ ಸಂಗೀತ ಸಾಹಿತ್ಯ ಕೆಮರಗಳು ಚರ್ಮದ ಪಾದರಕ್ಷೆಗಳು ಹೇಟುಗಳು, ನುಸಿಪರದೆಗಳೂ ಇವೆ ಬೆಲೆ ಸುಲಭ ಮಾಲು ಉತ್ತಮ ಕಮಿಶನ್ ಹೆಚ್ಚು ಕೆಟಲಾಗು ಧರ್ಮಾರ್ಥ ಇಂಗ್ಲೀಷಿನಲ್ಲಿ ಬರೆಯಿರಿ

General Trading Co
(G) 185, Manicktolla St Calcutta

C P S

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾಕೃತಿ ಸಮೇತ

ಋಗ್ವೇದೀ ಸಂಧ್ಯಾವಂದನೆ

(ವೈಷ್ಣವರಿಗೆ–ಊರ್ಧ್ವಪುಂಡ್ರ–ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ–ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ , ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ,

ಬೆಲೆ ಆಣೆ 8.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— **ಶಾರದಾ ಛಾಪಖಾನೆ,**
ರಥಬೀದಿ, ಮಂಗಳೂರು,

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ -
The Scientific Gold Bangles Co., Ltd.
Head Office -43, Byragimatam Street,
Post Box No 203, Madras

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ



ಹೊಸತಾಗಿ ಆಮದಾದುದು. ದೊರೆಯುವ ಇತರ ಕ್ಯಾಮರಗಳಿಗಿಂತ ಬಾಳಿಕೆ ಬರುವಂಥದು ಮತ್ತು ಉತ್ತಮವಾದುದು ಫೊಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ. ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್, ೪ ಫಿಲ್ಮ್ ಎಕ್ಸ್‌ಪೋಜರ್ಸ್ ಮತ್ತು ಚಿತ್ರಗಳನ್ನು ಡೆವಲಪ್ ಮಾಡಲು ಆವಶ್ಯಕವಾದ ರಸಾಯನಿಕ ವಸ್ತುಗಳು, ಫೋಟೊ ತೆಗೆಯುವ ವಿಧಾನ, ಶಿಕ್ಷಣಕೊಡುವ ಸಾಹಿತ್ಯ-ಇವು ಉಚಿತವಾಗಿ ಕಳುಹಿಸಲಾಗುತ್ತದೆ ಬಲವಾದ ಲೆನ್ಸ್, ಬೆಲೆ ಸಾಮಾನ್ಯವಾದುದು ರೂ. ೩—೧೨—೦ ಉತ್ತಮವಾದುದು ೩—೧೨—೦ ಮಡಚುವ ಕ್ಯಾಮರಾ ರೂ ೫ ಉತ್ತಮವಾದ್ದು ರೂ, ೬ ಸ್ಪೆಶಲ್ ರೂ. ೧೪ ಹೆಚ್ಚಿನ ಫಿಲ್ಮ್ ಬೇಕಾದರೆ ಡಜನ್ ಗೆ ೬ ಆಣೆ ಎನ್‌ಲಾರ್ಜ್‌ಮೆಂಟಿನ ಸಾಧನ ಸಾಮಗ್ರಿ ೧ ಶೀಸೆಗೆ ೪ ಆಣೆ ಟ್ರಿಮ್ಮಿಂಗ್ ಸಾಲ್ಟ್ ೧ ಡಬ್ಬಿಗೆ ೨ ಆಣೆ, ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ, ಮೂರು ಕ್ಯಾಮರ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ

ಭಾರತ ಯೂನಿಯನ್ ಟ್ರೇಡಿಂಗ್ ಕೋ
ಪೋಸ್ಟ್‌ಬಾಕ್ಸ್ ನಂಬ್ರ ೨೪೯೯, (ಎಸ್ ಎ) ಕಲ್ಕತ್ತಾ

ಕಿರ್ಲೋಸ್ಕರ ಕೈ ಮತ್ತು ಪವರ್ ಪಂಪುಗಳು

ಬಾವಿಗಳಿಂದ ನೀರು ಮೊಗೆಯುವುದಕ್ಕಾಗಿ,– ಎಷ್ಟು ಆಳದಿಂದಲೂ ನೀರನ್ನು ಎತ್ತಿ ಮೇಲೆ ಅಥವಾ ಬೇಕಾದಷ್ಟು ಎತ್ತರಕ್ಕೆ ತರುವುದಕ್ಕಾಗಿ

ಕೃಷಿಗಾಗಿ,

ಕಾರ್ಖಾನೆಗಳಿಗಾಗಿ,

ಮನೆಯ ಉಪಯೋಗಕ್ಕಾಗಿ,—

ಸಂತೃಪ್ತಿಕರ, ಬಾಳಿಕೆ ಬರುವ, ಸುಲಭಕರ ಉಪಯೋಗಕ್ಕಾಗಿ ಇದು ರಚಿಸಲ್ಪಟ್ಟಿದೆ

ಇಡೀ ಹಿಂದೂಸ್ಥಾನದಲ್ಲಿ ನೂರಾರು ಜನರು ಉಪಯೋಗಿಸಿ ತೃಪ್ತಿಗೊಂಡರು.

ವಿವರಕ್ಕೆ ಈ ಕೆಳಗಿನವರಿಗೆ ಬರೆಯಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ.

ಡಿಸ್ಟ್ರಿಬ್ಯೂಟರರು—ಪೆರ್ರಿ ಎಂಡ್ ಕೋ, ಲಿಮಿಟೆಡ್, ಮದ್ರಾಸು.



ಪುಸ್ತಕ ವಿಮರ್ಶೆ.

[ಈ ಒಂದು ಭಾಗದಲ್ಲಿ, ನಮಗೆ ವಾರಂಪ್ರತಿ ಬರುವ ಸಾಹಿತ್ಯಗಳನ್ನು ಒಂದೊಂದಾಗಿ ವಿಮರ್ಶಿಸ ಬೇಕೆಂದಿರುತ್ತೇವೆ. ಪ್ರಕಾಶಕರೂ, ಲೇಖಕರೂ ತಂತಮ್ಮ ಕೃತಿಗಳನ್ನು ನಮ್ಮ ವಿಮರ್ಶೆಗೆ ಕಳುಹಿಸಿಕೊಡಬಹುದು.]

ಕಲೋಪಾಸಕ

ಬರೆದವರು ವಿನಾಯಕ, ಪ್ರಕಾಶಕರು ಗೋವಿಂದ ವೆಂಕಟೇಶ ಚುಳಕಿ ಸಾಧನಕೇರಿ, ಧಾರವಾಡ. ಬೆಲೆ. ರೂ ೧-೦-೦

'ಕಲೋಪಾಸಕ ಮತ್ತು ಇತರ ನೀಳ್ಗವಿತೆಗಳು' ಎಂದು ಇದಕ್ಕೆ ಹೆಸರುಕೊಟ್ಟಿರುವರು ಶ್ರೀ ದ ರಾ. ಬೇಂದ್ರೆಯವರು ಇದಕ್ಕೆ ಪ್ರಸ್ತಾವನೆಯನ್ನು ಬರೆದಿರುವರು ಮಹಾಶ್ವೇತ, ತೀರದ ದಾರಿ, ಪತನ, ಸೆಳವು, ಕಲೋಪಾಸಕ ತಾಯಮ್ಮನ ಸಮಾಧಿ ಎಂಬ ಆರು ಕವಿತೆಗಳು ಇದರಲ್ಲಿವೆ ಪ್ರತಿಯೊಂದು ಕವಿತೆಯ ಆರಂಭದಲ್ಲಿ 'ಮೊದಲು ಮಾತು' ಬರೆದು ಆ ಕವಿತೆಯ ಹುಟ್ಟಿಗೆ ಕಾರಣವೇನೆಂದು ಕೂಲಂಕಷವಾಗಿ ಪರಿಚಯಮಾಡಿಕೊಟ್ಟಿರುವರು

ವಿನಾಯಕರೆಂಬ ಅನಾಮಧೇಯರು ಕರ್ನಾಟಕ ಧುರೀಣ, ಕಾನಡಾ ವೃತ್ತ ಮೊದಲಾದ ಪತ್ರಿಕೆಗಳಲ್ಲೂ, ಜಯಕರ್ನಾಟಕ ಮೊದಲಾದ ಮಾಸಿಕ ಪತ್ರಿಕೆಗಳಲ್ಲೂ ಪ್ರಕಟಿಸುತ್ತಿದ್ದ ಕವಿತೆಗಳನ್ನು ಕನ್ನಡಿಗರು ಇಷ್ಟರಲ್ಲೇ ಓದಿ ಆನಂದಿಸಿರುವರು. ಈ ಅನಾಮಧೇಯರಾದ ಪ್ರೊ। ವಿ ಕೃ ಗೋಕಾಕರು ಇದೀಗ ತನ್ನ ಕೃತಿಗಳಲ್ಲಿ ಕೆಲವನ್ನು ಆರಿಸಿ ಧಾರವಾಡದ ಸಾಹಿತ್ಯ ಪ್ರಕಟನ ಮಂದಿರದವರಿಗೆ ಪ್ರಕಾಶನಕ್ಕಾಗಿ ಕೊಟ್ಟಿರುವರು (ಈ ಪ್ರಕಟನಕಾರರು ಇದರ ಮೊದಲು ಶ್ರೀ ಶ್ರೀರಂಗ ಇವರ 'ಹರಿಜನ್ವಾರ' ಶ್ರೀ ರಮಾಕಾಂತ ಇವರ 'ಕಲಿ' ಎಂಬೆರಡು ಕೃತಿಗಳನ್ನು ಪ್ರಕಟಪಡಿಸಿರುವರು ಇದೀಗ ಅವರ ಮೂರನೆಯ ಪ್ರಕಟನೆ)

ಲೇಖಕರು ಈ ಪುಸ್ತಕದಲ್ಲಿನ ಕವಿತೆಗಳನ್ನು 'ನೀಳ್ಗವಿತೆ'ಗಳೆಂದು ಕರೆದಿದ್ದಾರೆ. ಪ್ರತಿಯೊಂದು ಕವಿತೆಯೂ ಒಂದು ಸ್ವತಂತ್ರವಾದ ಭಾವನೆಯ ಸತ್ತ್ವ ಬೆಳೆದು ಬಂದ ದೇಹವೆನ್ನಬಹುದು ... ಪ್ರಧಾನವಾಗಿ ಈ ಭಾವನೆಯನ್ನು ಎರಕಹೊಯಿಸಿದರೆ ಕವಿತೆಯು ಒಂದು ನೈತಿಕ ಗೀತೆಯಾಗುವುದು ಆದರೆ ಭಾವನೆಯು ಸ್ವತಂತ್ರವಾಗುಳಿದರೂ ಅದು ಮನಸ್ಸಿನಲ್ಲಿ ಹೆಚ್ಚಾಗಿ ಬಿಂಬಿಸುವಂತೆ ಮಾಡಲು ಅನೇಕ ಹಾದಿಗಳಿವೆ ಭಾವನೆಯನ್ನು ಸರಳವಾಗಿ (ಅಲಂಕಾರಯುಕ್ತವಾಗಿದ್ದರೂ) ನಿರೂಪಿಸದೆ ಅದನ್ನು ಒಂದು ಕಥೆಯೊಳಗಿಂದ ಹಾಯಿಸಿ ತರಬಹುದು, ದೃಶ್ಯರೂಪವಾಗಿ ಅದನ್ನು ಚಿತ್ರಿಸಬಹುದು, ಇಲ್ಲವೆ ಅದಕ್ಕೆ ವಿಚಾರಗಳ ಬೆಂಬಲವನ್ನು ಕೊಡಬಹುದು ಇದರಲ್ಲಿಯ ಯಾವ ರೀತಿಯನ್ನು ಅನುಸರಿಸಿದರೂ ಕವಿತೆಯು ನೀಳ್ಗವಿತೆಯಾಗುವುದು ಎಂದು ಅವರೇ ತಿಳಿಸಿದ್ದಾರೆ

ಮಹಾಶ್ವೇತೆಯಲ್ಲಿ ನಾಟಕದ ನೆರಳಿದೆ ಕಥೆಯು ವಿಚಾರ ಪರಿಪ್ಲುತವಾಗಿದೆ ಮಹಾಶ್ವೇತೆಯು ಹಂಸನೆಂಬ ಗಂಧರ್ವನ ಹಾಗು ಗೌರಿ ಎಂಬ ಅಪ್ಸರಿಯ ಮಗಳು, ಕಾದಂಬರಿಯು ಚಿತ್ರರಥನೆಂಬ ಗಂಧರ್ವ ರಾಜನ ಕುವರಿ ಪುಂಡರೀಕ ಚಂದ್ರಾಪೀಡರು ಇವರ ಪತಿಗಳು—ಇವರು ಮಾನವರಾದರೂ ದೇವಾಂಶವಿದ್ದವರು ಇವರ ಕಥೆಯು ಕವಿತಾರೂಪದಿಂದ ಬಹಳ ರಸವತ್ತಾಗಿ ಚಿತ್ರಿಸಲ್ಪಟ್ಟಿದೆ 'ಸೆಳವು' 'ತೀರದ ದಾರಿ' 'ತಾಯಮ್ಮನ ಸಮಾಧಿ' 'ಕಲೋಪಾಸಕ' ಇವೆಲ್ಲವುಗಳಲ್ಲಿ ಕವಿಗಳು ತಮ್ಮ ಕವಿತಾ ಪ್ರೌಢಿಮೆಯನ್ನು ಚೆನ್ನಾಗಿ ತೋರಿಸಿರುವರು 'Good people all of every sort, give ear unto my song ಎಂದು ಗೋಲ್ಡ್‌ಸ್ಮಿತನು ಕವಿತೆಯನ್ನು ಬರೆದಂತೆ ಶ್ರೀ। ಗೋಕಾಕರು ಕಲೋಪಾಸಕರಾಗಿ ''ಬಾಳ್ವೆಯ ಐತಿಹ್ಯವನು ಕೇಳಿರೈ'' ಎಂದು ಓದುಗರನ್ನು ಆಹ್ವಾನಿಸಿರುವರು

ಶ್ರೀ ಗೋಕಾಕರ ಈ ಆರು ನೀಳ್ಗವಿತೆಗಳೂ ಭಾವಭರಿತವಾಗಿವೆ ಓದುಗರ ಜಿಜ್ಞಾಸೆಯನ್ನು ಹೊಡೆದೆಬ್ಬಿಸುವಷ್ಟು ಮಧುರವೂ ರಸಪೂರ್ಣವೂ ಆದ ಶೈಲಿಯಿದೆ ಅಂತೂ ಅವರ ಈ ಕೃತಿಯು ಕನ್ನಡ ಸಾಹಿತ್ಯಕ್ಕೆ ಭೂಷಣಪ್ರಾಯವಾಗಿ ನಿಲ್ಲುವುದರಲ್ಲಿ ಸಂದೇಹವಿಲ್ಲ

ಮ ಜಾ

ಮೈಸೂರಿನ ಸಮಾಚಾರಗಳು.

ಬೆಂಗಳೂರು ಪತ್ರ

(ನಮ್ಮ ಸ್ವಂತ ಪ್ರತಿನಿಧಿಯಿಂದ)

ಬೆಂಗಳೂರು, ತಾ. ೨೮-೫-೧೯೩೪.

ಮೈಸೂರು ಚಿನ್ನದ ಗಣಿಗಳು

ಉರಿಗಾಂ ಚಿನ್ನದ ಗಣಿಯ ಮ್ಯಾನೇಜಿಂಗ್ ಏಜಂಟ್ಸರವರಾದ ಮೆಸರ್ಸ್ ಜಾನ್ ಟೆಯಿಲರ್ ಕಂಪೆನಿಯವರಿಗೆ ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಚಿನ್ನ ತೆಗೆಯುವ ಸಾಧ್ಯಾಸಾಧ್ಯತೆಗಳನ್ನು ಪರೀಕ್ಷಿಸಿಕೊಳ್ಳುವುದಕ್ಕಾಗಿ ಮೈಸೂರು ಸರಕಾರದವರು ಅನುಮತಿ ಕೊಟ್ಟಿರುತ್ತಾರೆ ಈ ಅನುಮತಿ ಒಂದು ವರ್ಷ ಕಾಲ ಅಲ್ಲಿನ ಗಣಿಗಳನ್ನು ಪರೀಕ್ಷಿಸುವುದಕ್ಕೆ ಅವರಿಗೆ ಅಧಿಕಾರ ಕೊಡುತ್ತದೆ ತೆಗೆಯಬಹುದಾದ ಚಿನ್ನವನ್ನು ಅವರು ಮಾರುವುದಾಗಲಿ, ಹೊರಗಡೆಗೆ ಕಳುಹಿಸುವುದಾಗಲಿ ಕೂಡದು

ಮೈಸೂರು ಕಾಫಿ

ಇದುವರೆಗೂ ಮೈಸೂರು ಸೀಮೆಯಲ್ಲಿ ಬೆಳೆದ ಕಾಫಿಬೀಜವನ್ನು ಚೊಕ್ಕ ಮಾಡುವುದಕ್ಕಾಗಿ ಮಂಗಳೂರಿಗೆ ಕಳುಹಿಸುತ್ತಿತ್ತು ಕಾಫಿಯನ್ನು ಚೊಕ್ಕಮಾಡುವ ಕಾರ್ಖಾನೆಯೊಂದನ್ನು (Curing factory) ಮೈಸೂರು ದೇಶದಲ್ಲಿಯೇ ಸ್ಥಾಪಿಸಬೇಕೆಂದು ಏರ್ಪಾಟು ನಡೆಯುತ್ತಿದೆ ಈ ಸಂಬಂಧವಾಗಿ ಕೊಡಗು ದೇಶದ ಕಾಫಿ ಪ್ಲಾಂಟರ್ ಮಿ। ಮಾರ್ಗ್ಯಾನ್ (Morgan)ರವರು ಮೈಸೂರು ಸಂಸ್ಥಾನದ ದಿವಾನರವರೊಡನೆ ಮಾತುಕಥೆಗಳನ್ನು ನಡೆಸಿದ್ದಾರೆ ಆ ಕಾರ್ಖಾನೆಯೊಂದು ಸ್ಥಾಪಿತವಾದ ಮೇಲೆ ಮಾರ್ಗ್ಯಾನರವರೇ ಅದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವರೆಂದೂ, ಮೈಸೂರು ಸರ್ಕಾರದವರು ಕಾರ್ಖಾನೆಗೆ ಬೇಕಾದ ಸಹಾಯ ಸಂಪತ್ತನ್ನೂ ಒದಗಿಸಿಕೊಡುವರೆಂದೂ ತಿಳಿದುಬಂದಿದೆ

ಮೈಸೂರು ಮುಸ್ಲಿಮ್ ಕೊನ್ಫರೆನ್ಸ್.

ಮೇ ತಾ ೧೮ನೇ ಶನಿವಾರ ಸಾಯಂಕಾಲ ಮೈಸೂರಿನ ಪ್ರಮುಖ ಮುಸಲ್ಮಾನ ಪ್ರಜೆಗಳು ಸಭೆ ಸೇರಿ, ಮೈಸೂರು ಸಂಸ್ಥಾನದ ಮುಸಲ್ಮಾನರ ಸಮ್ಮೇಳನದ ಐದನೆಯ ಅಧಿವೇಶನವನ್ನು ಮೈಸೂರಿನಲ್ಲಿ, ಶ್ರೀ ಮನ್ಮಹಾರಾಜರವರ ವರ್ಧಂತ್ಯುತ್ಸವದ ಸಂದರ್ಭದಲ್ಲಿ, ನೆರವೇರಿಸಬೇಕೆಂದು ನಿಶ್ಚಯಿಸಿದ್ದಾರೆ ಅದಕ್ಕಾಗಿ ಒಂದು ಸ್ವಾಗತಮಂಡಲಿಯೂ ಏರ್ಪಟ್ಟಿದೆ ಅಡ್ವೊಕೇಟರೂ ಮ್ಯುನಿಸಿಪಲ್ ಕೌನ್ಸಿಲರವರೂ ಆದ ಮಿ। ಮಹಮ್ಮದ್ ವಲ್ಲಿಯುಲ್ಲ, ಬಿ ಎ, ಎಲ್‌ಎಲ್ ಬಿ, ಅವರು ಆ ದಿನದ ಸಭಾಧ್ಯಕ್ಷರಾಗಿದ್ದರು ಮ್ಯುನಿಸಿಪಲ್ ಕೌನ್ಸಿಲರವರೂ ಗೌರವ ಮ್ಯಾಜಿಸ್ಟ್ರೇಟರೂ ಆದ ಮಿ। ಮಹಮ್ಮದ್ ಹುಸೇನ್ ಅಲಿಯವರು ಸ್ವಾಗತ ಮಂಡಲಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು ಮೈಸೂರು ಪೌರಸಭೆಯ ಉಪಾಧ್ಯಕ್ಷರಾದ ಮಿ ಮಹಮ್ಮದ್ ಸೇಟರವರನ್ನು ಸಮ್ಮೇಳನಾಧ್ಯಕ್ಷರಾಗಿ ಆರಿಸಬೇಕೆಂದು ಸಭೆ ಸೂಚಿಸಿದೆ.

ಮೈಸೂರು ರೈಲ್ವೆ ಬಡಾವಣೆ

ಈಗ ಶಿವಮೊಗ್ಗೆಯಿಂದ ಆನಂದಪುರದ ವರೆಗಿರುವ ರೈಲು ಎಲ್ಲಿಯೋ ನಡ ಕಾಡಿನಲ್ಲಿ ನಿಲ್ಲುತ್ತದೆ ಅದನ್ನು ಸಾಗರದ ವರೆಗೂ ಹೆಚ್ಚಿಸಬೇಕೆಂದು ಸರಕಾರದವರು ನಿಶ್ಚಯಿಸಿರುತ್ತಾರೆ

ಶ್ರೀಮಾನ್ ಕೆ. ಮ್ಯಾಥನ್‌ರವರು ನಿವೃತ್ತರಾಗುವರೇ?

ಪ್ರಥಮ ಸಚಿವರಾದ ಮ್ಯಾಥನ್ ಸಾಹೇಬರು ಈಗ 'ಎಕ್ಸ್‌ಟೆನ್‌ಷನ್ ಪೀರಿಯಡ್' ಅನುಭವಿಸಿದ್ದು, ಬರುವ ಅಕ್ಟೋಬರ್ ತಿಂಗಳ ಪ್ರಾರಂಭಕ್ಕೆ ನಿವೃತ್ತಿಹೊಂದಬೇಕಾಗಿದೆ ಅವರಿಗೆ ಇನ್ನೂ ಒಂದು ವರ್ಷ ಎಕ್ಸ್‌ಟೆನ್‌ಷನ್ ಕೊಡಲಾಗುವುದೆಂದು ಕೆಲವರು ಊಹಿಸುತ್ತಾರೆ ಅವರು ಬರುವ ಅಕ್ಟೋಬರಿಗೇ ನಿವೃತ್ತರಾಗುವರೆಂದೂ, ಅವರ ಜಾಗಕ್ಕೆ ಈಗ ರೆವಿನ್ಯೂ ಕಮಿಷನರಾಗಿರುವ ಶ್ರೀಮಾನ್ ಎನ್ ಮಾಧವರಾಯರು ಪ್ರಥಮ ಸಚಿವರಾಗುವರೆಂದೂ ಬಲವಾದ ಸುದ್ದಿಯಿದೆ ಯಾವ ಇತ್ಯರ್ಥಕ್ಕೂ ಅಕ್ಟೋಬರ್ ತಿಂಗಳನ್ನೇ ಕಾಯಬೇಕಾಗಿದೆ

ವಿಧವಾ ವಿವಾಹ—ಶುದ್ಧಿ ಕಾರ್ಯ

ಮೈಸೂರಿನ ಜಾನ್ ಒಹದಸ್ಥರ್ ... ಪದ್ಮಿನಿ ... ಶ್ರೀ ಎಲ್ಸಾಜಿಯವರ ಶುದ್ಧಿ ಮಹೋತ್ಸವವು ಬೆಂಗಳೂರಿನಲ್ಲಿ ಅಡ್ವೊಕೇಟ್ ಶ್ರೀಮಾನ್ ಕೆ ಶಿವಪ್ಪನವರ ಮನೆಯಲ್ಲಿ ನಡೆಯಿತು ಆರ್ಯಸಮಾಜದ ಧರ್ಮದೇವ ವಿದ್ಯಾವಾಚಸ್ಪತಿಯವರ ಶುದ್ಧಿಕಾರ್ಯವನ್ನು ನೆರವೇರಿಸಿ ಎಲ್ಸಾಜಿಯವರಿಗೆ ಜಯದೇವಿ ಎಂದು ನಾಮಕರಣ ಮಾಡಿದರು ಶುದ್ಧಿ ಹೊಂದಿದ ಎಲ್ಸಾಜಿಯವರಿಗೆ ಮೈಸೂರಿನ ಪ್ರಸಿದ್ಧ ಫೋಟೋಗ್ರಾಫರ್ ಎ ವಿ ವರದಾಚಾರ್ಯರವರ ವಿಧವೆಯಾದ ಪುತ್ರಿ ಶ್ರೀಮತಿ ... ನವರನ್ನು ಕೊಟ್ಟು ಶಾಸ್ತ್ರೋಕ್ತವಾಗಿ ವಿವಾಹವಾಯಿತು

ವಿಧವೆಯರ ಮರುಮದುವೆಯಲ್ಲಿ ಮದುವೆಗಳನ್ನು ನಡೆಸುವುದಕ್ಕಿಂತಲೂ ಈ ರೀತಿ ಬಹಿರಂಗವಾಗಿ ತಾವು ವರಿಸಿದವರನ್ನು ಅಥವಾ ತಮ್ಮನ್ನು ವರಿಸಬಂದವರನ್ನು ವಿವಾಹವಾಗುವುದು ತಮಗೂ ಸಮಾಜಕ್ಕೂ ಎಷ್ಟೋ ಶ್ರೇಯಸ್ಕರ

ಹರಿಜನರ ಸಮ್ಮೇಳನ-ಹರಿಜನೋದ್ಧಾರ.

ತಾ ೧೯-೫-೧೯೩೪ರಲ್ಲಿ ಚಿತ್ರದುರ್ಗದ ತಾಲೂಕಿನ ದೊಡ್ಡ ಸಿದ್ದವ್ವನಹಳ್ಳಿ ಮತ್ತು ಸುತ್ತಮುತ್ತಲಿನ ಇತರ ಗ್ರಾಮಗಳ ಹರಿಜನರ ಸಭೆಯು ಮೇಲೆ ಹೇಳಿದ ಗ್ರಾಮದಲ್ಲಿ ಸೇರಿತು ಲೆಜಿಸ್ಲೇಟಿವ್ ಕೌನ್ಸಿಲಿನ ಸದಸ್ಯರೂ ಮೈಸೂರ್ ಸಂಸ್ಥಾನದ ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳೂ ಆದ ಬ್ರಹ್ಮಚಾರಿ ರಾಮಚಂದ್ರರವರು ಸಭೆಯ ಅಧ್ಯಕ್ಷರಾಗಿದ್ದರು ಸಭೆಗೆ ಸುಮಾರು ೫೦೦ ಮಂದಿಗೆ ಮಿಕ್ಕ ಹರಿಜನರೂ ಅನೇಕ ಸವರ್ಣ ಹಿಂದೂಗಳೂ ಬಂದಿದ್ದರು

ಪ್ರಾರ್ಥನೆಯಾದ ನಂತರ ರಾಮಚಂದ್ರರವರು ಭಾಷಣಮಾಡಿ, ಹರಿಜನರನ್ನು ಸೌಹಾರ್ದದಿಂದಲೂ ಸೋದರಭಾವದಿಂದಲೂ ಕಂಡುಕೊಳ್ಳುವಂತೆ ಗ್ರಾಮದ ಸವರ್ಣ ಹಿಂದೂಗಳನ್ನು ಪ್ರಾರ್ಥಿಸಿಕೊಂಡರು.

ಅನಂತರ ಮಹದಿ ತಿಪ್ಪರುದ್ರಯ್ಯನವರೂ (ಒಬ್ಬ ಲಿಂಗಾಯತರು) ಕೆಲಮಂದಿ ಹರಿಜನರೂ ಅಲ್ಲಿನ ಸವರ್ಣ ಹಿಂದೂಗಳಿಂದ ಹರಿಜನರಿಗೆ ಬಾಧೆಯಾಗುತ್ತಿರುವ ಅಂಶವನ್ನು ಗಮನಕ್ಕೆ ತಂದರು. ತಾ. ೮-೫-೧೯೩೪ರಲ್ಲಿ ಹಿಂದೂಗಳು ಹರಿಜನರ ಕೇರಿಗಳಿಗೆ ನುಗ್ಗಿ ಅವರನ್ನು ಹೊಡೆದು ಗಾಯಪಡಿಸಿದ ಸಂಗತಿಯನ್ನು ವಿವರಿಸಿದರು.

ಕೊನೆಯಲ್ಲಿ ಬ್ರಹ್ಮಚಾರಿ ರಾಮಚಂದ್ರರವರ ಉಪಸಂಹಾರ ಭಾಷಣ ಮಾಡುತ್ತ, ಹರಿಜನರ ಕಷ್ಟನಿಷ್ಠುರಗಳನ್ನೂ ಶ್ರೀಮನ್ಮಹಾರಾಜರವರ ಸರಕಾರಕ್ಕೆ ಅರಿಕೆಮಾಡಿಕೊಳ್ಳಲಾಗುವುದೆಂದೂ ಶ್ರೀಮನ್ಮಹಾರಾಜರವರು ನ್ಯಾಯದೃಷ್ಟಿಯಿಂದ ಹರಿಜನರಿಗೆ ಸಹಾಯವೀಯುವರೆಂದೂ ಭರವಸೆಯಿತ್ತು, ಹರಿಜನರು ಎಂಬನಂತೆ ಇತರ ಕೋಮಿನವರೊಡನೆ ಸೌಹಾರ್ದಭಾವದಿಂದ ವರ್ತಿಸುತ್ತ ಬರಬೇಕೆಂದು ಪ್ರಾರ್ಥಿಸಿಕೊಂಡರು.

ಅದೇ ದಿನ ರಾತ್ರಿ ಬ್ರಹ್ಮಚಾರಿ ರಾಮಚಂದ್ರರವರು ಚಿತ್ರದುರ್ಗದಲ್ಲಿ ಲಿಂಗಾಯತರುಗಳಾದ ಶ್ರೀ ಮುರುಘರಾಜೇಂದ್ರಸ್ವಾಮಿಗಳನ್ನು ಸಂದರ್ಶಿಸಿ, ದೊಡ್ಡ ಸಿದ್ದವ್ವನಹಳ್ಳಿ ಮುಂತಾದ ಸ್ಥಳಗಳಲ್ಲಿ ಸವರ್ಣಹಿಂದೂಗಳಿಂದ ಹರಿಜನರಿಗೆ ಆಗಿರುವ ತೊಂದರೆಗಳನ್ನೂ ವಿವರಿಸಿದರು

ಶ್ರೀ ಸ್ವಾಮಿಗಳವರು ಹರಿಜನರ ವಿಷಯದಲ್ಲಿ ಸಹಾನುಭೂತಿಯನ್ನು ವ್ಯಕ್ತಪಡಿಸಿ, ಹರಿಜನೋದ್ಧಾರ ಕಾರ್ಯದಲ್ಲಿ ತಮ್ಮಿಂದ ಸಾಧ್ಯವಾದಷ್ಟು ಸಹಾಯ ಮಾಡುವುದಾಗಿ ಭರವಸೆಯಿತ್ತು, ಹರಿಜನೋದ್ಧಾರಕ್ಕಾಗಿ ದುಡಿಯುತ್ತಿರುವವರನ್ನು ಆಶೀರ್ವದಿಸಿದರು ಈ ಸ್ವಾಮಿಗಳ ಮೇಲ್ಪಂಕ್ತಿಯು ಅನುಸರಣೀಯವಾದುದು.

ಮೈಸೂರು ಆಯುರ್ವೇದ ಆಸ್ಪತ್ರೆ (ವೈದ್ಯಶಾಲೆ)ಯ ಭವನ.

ಮೇಲೆ ಕಂಡ ಆಸ್ಪತ್ರೆಗೆ ಕಟ್ಟಡವಿರಲಿಲ್ಲ. ಅದನ್ನು ಕಟ್ಟುವುದಕ್ಕೆ ಸಾರ್ವಜನಿಕರನ್ನು ಸಹಾಯ ಬೇಡಲಾಯಿತು ಕಟ್ಟಡದ ಅಂದಾಜು ಸುಮಾರು ರೂ ೨೪,೦೦೦ ಎಂದೆ ಕಾಣಿಸಿರುವ ಪ್ರಕಾರ ಕೆಲವು ಉದಾರಿಗಳಿಂದ ಮಹಾಶಯರು ಸಹಾಯಮಾಡಿರುವುದಾಗಿ ತಿಳಿದುಬರುತ್ತದೆ —ಅಂಬಲೆ ಶ್ರೀ ಸುಬ್ರಹ್ಮಣ್ಯ ಅಯ್ಯರ್ ಅವರು ೬೦೦೦ ರೂ, ಮಿ। ಜೆ ಲಕ್ಷ್ಮಣಾಚಾರ್ಯರು ೬೦೦ ರೂ ಮಿ। ಎಸ್ ವಿಠಲರಾಯರು ೨,೫೦೦ ರೂ, ಮಿ ಎಚ್ ರಾಮಯ್ಯನವರು ೩,೦೦೦ ಡಾ। ಬಿ ಎಸ್ ಸಿದ್ದಪ್ಪನವರು ೩ ೦೦೦ ರೂ ಈ ಮಹನೀಯರನ್ನು ಅವರ ಔದಾರ್ಯಕ್ಕಾಗಿ ಅಭಿನಂದಿಸಬೇಕಾಗಿದೆ

ಭಗಿನೀ ಸೇವಾಸಮಾಜದ ಕಟ್ಟಡ.

ಮೇಲೆ ಕಂಡ ಕಟ್ಟಡದ ಸಹಾಯಾರ್ಥವಾಗಿ ಶ್ರೀಮನ್ಮಹಾರಾಜರವರು ಐತ್ಯದಾರವಾದ ಎಂಟು ಸಾವಿರ ರೂಪಾಯಿಗಳ ದಾನ ಮಾಡಿರುವರೆಂದು ತಿಳಿಸಲು ಹರ್ಷಿಸುತ್ತೇವೆ ಮಹಾಸ್ವಾಮಿಯವರ ಔದಾರ್ಯವು ಸರ್ವಥಾ ಒಂದಲ್ಲ ಒಂದು ರೀತಿಯಲ್ಲಿ ಪ್ರಕಾಶಗೊಳ್ಳುತ್ತಲೇ ಇದೆ

ಮೈಸೂರು ಸ್ವದೇಶೀ ವಸ್ತುಪ್ರದರ್ಶನ.

ಈ ವಸ್ತು ಪ್ರದರ್ಶನವು ಮೈಸೂರಿನಲ್ಲಿ ವರ್ಧಂತ್ಯುತ್ಸವದ ಸಂದರ್ಭದಲ್ಲಿ ನಡೆಯುವುದಾಗಿ ಹೋದ ವಾರ ತಿಳಿಸಿದೆ ಪ್ರದರ್ಶನವು ಶ್ರೀಕೃಷ್ಣರಾಜೇಂದ್ರ ಧರ್ಮಶಾಲೆಯಲ್ಲಿ ಜೂನ್ ತಾ ೮ಕ್ಕೆ ಪ್ರಾರಂಭವಾಗುವುದು ಈ ಪ್ರದರ್ಶನದಲ್ಲಿ ಮಿಲ್ಲಿನಿಂದ ತಯಾರಾದ ಹತ್ತಿ ಸರಕುಗಳಿಗೆ ಸಹಾಯವಿಲ್ಲ; ಹೋದ ವರ್ಷ ಅವಕಾಶವಿತ್ತು—ಎಂದು ತಿಳಿದುಬರುತ್ತದೆ.

ಈ ಪ್ರದರ್ಶನದ ಪ್ರಾರಂಭೋತ್ಸವವನ್ನು ಶ್ರೀಯುತ ಭುಲಾಭಾಯಿ ದೇಸಾಯಿಯವರು ನಡೆಸುವರು.

LOOK SHARP! LOOK AHEAD!

Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy; Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

Ladies are also admitted.

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to:—

D. R. Murdeshwar,
Dip. Econ, F. R. Econ; S. (Lond.)
Principal.
Ganapathy High School Street,
Mangalore.

WHITE LEPROSY AND LEUCODERMA

A few day's application of this medicine cures WHITE LEPROSY and LEUCODERMA radically. Get rid of this horrible disease by application of this medicine inspite of failure by hundreds of Hakims Doctors, Kavirajas and advertisers. Rs. 500 rewarded if proved fallible. Price Rs 2/-.

VAIDYARAJ AKHIL KISHORE RAM
P O KATHISARAI, (GAYA.)

ಕಣ್ಣಿನ ಪರೆ.

"ಖ—ಸರ್" ಎಂಬ ನೇತ್ರಭಸ್ಮ—ಈ ಔಷಧವು ಕಣ್ಣುಪರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಅವಶ್ಯವಿಲ್ಲ. ಖಾತರಿ ಗುಣದಾಯಕ, ಗುಣವಾಗದಿದ್ದರೆ ಹಣ ವಾಪಸ್. ಕ್ರಯ ರೂ. 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ:—

Hary yasram, Panchpota, Bengal

ಗುಪ್ತ ಮಹಾಮಂತ್ರ.

ಅತ್ಯಂತ ಫಲಕಾರಿ

ಇದನ್ನು ಉಚ್ಚರಿಸಿದ ಮಾತ್ರದಲ್ಲಿ ಎಂಥಹ ಕಷ್ಟ ಕೆಲಸವೂ ಸುಲಭವಾಗುವುದು. ಸ್ತ್ರೀ, ಪರೀಕ್ಷೆಯಲ್ಲಿ ವಿಜಯ, ಕೋರ್ಟು ವ್ಯವಹರಣೆಯಲ್ಲಿ ಗೆಲುವು, ನೌಕರಿಯಲ್ಲಿ ಜಯ, ಪ್ರಗತಿ, ಮುಕ್ಕಳ ಐಶ್ವರ್ಯವೆಲ್ಲ ಲಭ್ಯವಾಗುತ್ತವೆ. ಇದು ನಿಮ್ಮನ್ನು ಅಧೃಷ್ಟಶಾಲಿಗಳನ್ನಾಗಿ ಮಾಡುತ್ತದೆ.

2 ರೂಪಾಯಿಗಳನ್ನು ವಚ್ಚಮಾಡಿ; ಅಥವಾ ಪರೀಕ್ಷಿಸಿ, 50 ರೂಪಾಯಿ ಬಹುಮಾನ ಪಡೆಯಿರಿ

Prasidha Mantra Asram,
No. 17, P. O. Katrisari Gaya.

O. P. 8

ಮಂಗಳೂರಿನ ಪೇಟೆಧಾರಣೆ.

ಸಾಮುಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ ..	4— 2	4— 6
ಮುಕ್ತಿ ...	4— 4	4—10
ಗುಡ್ಡ ...	4— 2	4— 6
ಊರ ಅವ್ವಲ್ ಬೆಳ್ತಿಗೆ	4— 8	4—12
ರಂಗೂನು ಬೆ. ಗೋ. ಗಟ್ಟಿ ..	6—12	7— 4
ಎಲ್ಲೂರು ಬೆ. ಮು. ಗಟ್ಟಿ .	4— 4	4— 8
ಗೋದಿ ಗೋಣಿ ಗಟ್ಟಿ	10— 0	12— 8
ತೊಗರಿ ಗೋಣಿ ಗಟ್ಟಿ ..	10 —8	11— 0
ಹುರುಳಿ ಗೋಣಿ ಗಟ್ಟಿ ...	7— 8	8— 0
ಕಡಲೆ ಗೋಣಿ ಗಟ್ಟಿ	8 — 0	10— 8
ಕೊಗರಿಬೇಳೆ ಗೋಣಿ ಗಟ್ಟಿ	10— 0	17— 0
ಉದ್ದು ಗೋಣಿ ಗಟ್ಟಿ	8— 0	8— 8
ಹೆಸರು ಗೋಣಿ ಗಟ್ಟಿ ..	9— 0	9— 8
ಉರುಬೆಲ್ಲ ಖಂಡಿ ಗಟ್ಟಿ ..	35— 0	37— 8
ಉಪ್ಪು ಗೋಣಿ ಗಟ್ಟಿ ...	4—12	5— 2
ಕೊಬ್ಬರಿ ಖಂಡಿ ಗಟ್ಟಿ .	48— 0	55— 0
ಕೊಬ್ಬರಿ ಹಿಂಡಿ ಖಂಡಿ ಗಟ್ಟಿ...	20— 0	20— 8
ಎಳ್ಳಿಂದ ಖಂಡಿ ಗಟ್ಟಿ .	37— 8	40— 0
ಕೊಬ್ಬರಿ ಎಣ್ಣೆ ಮಣ ಗಟ್ಟಿ	4— 0	6— 0
ಎಳ್ಳೆಣ್ಣೆ ಮಣ ಗಟ್ಟಿ ..	5— 2	6— 0
ಮಾರಿಶಸ್ ಸಕ್ಕರೆ ಗಟ್ಟಿ..	5— 7	5—7
ದೋರಿಸ್ ಸಕ್ಕರೆ ಮು. ಗಟ್ಟಿ..	3—10	3—12
ಮೆಣಸು ...	5— 0	6— 4
ಸಾಸಿವೆ ಮುಡಿ ಗಟ್ಟಿ .	5 —12	6— 0
ಕಾಳುಮೆಣಸು ಖ. ಗಟ್ಟಿ ...	130— 0	180— 0
ಯೇಲಕ್ಕಿ ಮಣ ಗಟ್ಟಿ .	22— 0	27— 0
ಗೇರುಬೀಜ ಮು. ಗಟ್ಟಿ ..	4— 6	4 — 8
ಕಬ್ಬಿಣ ಖಂಡಿ ಗಟ್ಟಿ ...	40— 0	40— 8
ತಾಂಬ್ರಹಗರು ಮು. ಗಟ್ಟಿ...	9— 15	10— 0
ತಾಂಬ್ರಪಾತ್ರಗಳು ಮು. ಗಟ್ಟಿ	11— 0	12— 0
ಬೀಡಿಬೆಳ್ಳಿ ಸೇರು ಗಟ್ಟಿ ...	14—12	15— 0
ಹಿತ್ತಾಳೆ ತಗಡು ಮು. ಗಟ್ಟಿ...	8— 12	9— 0
ಹುಣಸು ಗಟ್ಟಿ ...	28— 4	23— 8
ಹುಣಸೆ ಹುಳಿ ಖಂಡಿ ಗಟ್ಟಿ	20— 0	25— 8
ನೇಟಿವ್ ಕಾಫಿ ಖಂಡಿ ಗಟ್ಟಿ	150— 0	165— 0
ಪ್ಲಾಂಟೇಶನ್ ಕಾಫಿ ಖಂಡಿ ಗಟ್ಟಿ..	230— 0	235— 0
ಹಳೆ ಅಡಕೆ .	90— 0	95— 0
ಹೊಸ ಅಡಕೆ ..	75— 0	85 — 0

ಶಾಲಿವಾಹನ ೧೮೫೭ ಶಕ ಗಳಿಸಿಯ ಭಾವ ಸಂವತ್ಸರದ ಜ್ಯೇಷ್ಠ ಬ.೧೦ ಶನಿವಾರದಿಂದ ಜ್ಯೇಷ್ಠ ಶು.೨ ಗುರುವಾರದ ವರೆಗಿನ ಪಂಚಾಂಗ. (ಗ್ರಹಣೀಯ ವೃಷಭ ಬೇಸಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
1	ಶನಿ	೯೦	೩೧	ರೋಹಿಣೀ	೫೦	೧೪	
2	ರವಿ	೧	೩೧	ಮೃಗಶಿರಾ	೫೪	೧೯	
3	ಸೋಮ	೨	೩೩	ಆರ್ದ್ರಾ	೫೫	೨೦	
4	ಮಂಗಳ	೪	೩೪	ಪುನರ್ವಸು	೫೯	೨೧	
5	ಬುಧ	೪	೩೭	ಪುಷ್ಯಾ	೬೦	೨೨	
6	ಗುರು	೫	೪೧	ಪುಷ್ಯಾ	೪	೨೪	
7	ಶುಕ್ರ	೬	೪೫	ಆಶ್ಲೇಷಾ	೧೦	೨೪	

"GUPTA MANTRA".

A reward of Rs 100.

The objects, which cannot be achieved by spending lacs of rupees may be had by repeating this Mantra seven times. There is no necessity of undergoing any hardshid to make it effective. It is effective without any preparation. This is a "WASHIKARAN MANTRA." It will make you forunate give you service and advancement and bring you profit in trade. A reward of Rs. 100, if proved fallible. Price including postage etc., Rs. 2-7-0.

Siddh Mantra Ashram,
KATRISARAI...(GAYA.)

Comfortable like an Aeroplane.

Use our swadeshi Mosquitonet for health, Comfort and sound sleep; as if you are in an Aeroplane. Sample cutting free. More convenient if some advance sent with order.

L.	B.	H.	Price.	Best.
6 Fit.	3½ Fit.	3½ Fit.	Rs. 1/12	2/8
6 „	4 „	4 „	„ 2/4	3/-
6½ „	4½ „	4½ „	„ 2/8	3/8
7 „	5 „	5 „	„ 3/2	4/10
7½ „	6 „	6 „	„ 4/4	5/12

G. N. Sharma, Post Box F 6706.
Calcutta

NEW ARRIVLAS.

Medicines.

Dr. Schuessler's Twelve Tissue Remedies 5 gr. bot. As. 4/-
Homoeopathy Medicines 5 gr. bot. As. 5/—
Sugar of Milk Dr Schwabe's original bot. 1 lb Rs. 2/-
Haarlem Oil—a world-renowned remedy As. 8/-per phial.
Dr. Haele's New Curative Earth—Radium Cure Rs. 4/-per lb.
Dr. Schwabe's other special remedies are always in stock
Please consult us for your requirements.
Kanarese Book a Family Guide to Biochemistry Re. 1/-
„ Domestic Homoeopathy Rs 1-4/-

If you own these two Books you will be able to pick up treatment and administer Tissue & Homoeopathy Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes and prices from As. 2/6
Delightful in aroma, charming in appearance. Please try

Kirloskar Pumps.

We are the Representatives for Kirloskar Brothers for their reliable Shallow-well and Deep-well Pumps, Spring Cots, Spring Couches etc., and stock—

Pipes and pipe fittings at cheap prices. Coir Mats and Mattings

Steadler Pencils and Stationeries

We are the recognised agents for STEADLER'S all stationeries and shall be glad to serve you.

Olympia Typwriter.

An up-to-date Machine in Standard and portable sizes.

For Futher particular, please write to:—

Basel Mission Book & Tract Depository,
Mangalore, S. K. or Hubli, S M.

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಷ್ಷಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಚಾಗರೂಕತೆಯಿಂದ ತಿಕ್ಕಿರಿ.

(ಮನಸ್ಸಿಗೆ ಹಿತಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಬೆಲೆ ಶೀಸೆ ಒಂದಕ್ಕೆ ರೂ.0—12—0.

ಆರ್. ಸಿ. ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.

ಏಜಂಟರು:—
ಕುಂತಳ ಕೌಮುದಿ ತೈಲ,
ವೆನ್‌ಲಾಕ್ ಆಸ್ಪತ್ರೆ ಎದುರು, ಮಂಗಳೂರು.

ಮೆನೇಜರರ ನೋಟೀಸು.

ಸ್ವದೇಶಾಭಿಮಾನಿಯ ಚಂದಾ ಅವಧಿ ಮುಗಿಯಿತೆಂದು ನೋಟೀಸು ಕೊಟ್ಟಿದ್ದವರಿ ಅಂತಹ ಚಂದಾದಾರರು ಮುಂದಿನ ವರ್ಷದ ಬಗ್ಗೆ ಚಂದಾ ಮೊಬಲಗನ್ನು ಕೂಡಲೇ ರವಾನಿಸಬೇಕು. ಪತ್ರಿಕೆಯು ಮುಂದಕ್ಕೆ ಬೇಕೋ ಬೇಡವೋ ಎಂಬ ಬಗ್ಗೆ ನೋಟೀಸು ತಲಪಿದೊಡನೆ— ಅಗತ್ಯವಾಗಿ ತಿಳಿಸಬೇಕು.

ದಾವಣಗೆರೆಯಲ್ಲಿ ಸ್ತ್ರೀಯ ಘೋರ ಕೊಲೆ!

ಗಂಡನೇ ಕೊಲೆಮಾಡಿದನೆಂದು ಹೇಳಲಾಗಿದೆ

೫ ತಿಂಗಳ ಗರ್ಭಿಣಿ ಯುವತಿ

(ಕಾಯಿನಾಡು ಬಾತ್ಮೀದಾರರು ಹೀಗೆ ಬರೆದಿದ್ದಾರೆ)

ದಾವಣಗೆರೆ ಮೇ ೨೪

ನಿನ್ನೆ ದಿನ ಸೂರ್ಯೋದಯವಾದೊಡನೆ ಕಾಯಿ ಪೇಟೆಯ ಒಂದು ಮನೆಯಲ್ಲಿ ಭಯಂಕರವಾದ ದೃಶ್ಯವೊಂದು ಕಾಣಬಂದಿತು ಈ ದೃಶ್ಯವನ್ನು ನೋಡಿ ಅನೇಕರು ಭಯಭ್ರಾಂತಿಯಿಂದ ಚಕಿತರಾದರು ಈ ಭಯಂಕರ ದೃಶ್ಯವೆಂದರೆ ಒಬ್ಬ ಯೌವನೆಯಾದ ತರುಣಿಯ ಕೊಲೆ ಕೊಲೆಯಾಗಿರುವ ತರುಣಿಯು ೫ ತಿಂಗಳು ಗರ್ಭಿಣಿಯಂತೆ ಈ ಕೊಲೆಯ ವಿವರವು ಹೀಗಿದೆ –

ಕಾಯಿ ಪೇಟೆಯಲ್ಲಿ ಮ|| ರಾ|| ಅಂದನೂರು ಮಲಶೆಟ್ಟಪ್ಪ ಎಂಬಾತನಿಗೆ ಒಬ್ಬ ತಂಗಿಯೂ, ಇಬ್ಬರು ಗಂಡು ಮಕ್ಕಳೂ ಇರುವರು ಈ ಇಬ್ಬರು ಮಕ್ಕಳಲ್ಲಿ ಚಿಕ್ಕವನು ಮೆಟ್ರಿಕ್ಯುಲೇಷನ್ ತರಗತಿಯಲ್ಲಿ ಓದುತ್ತಿರುವನು ಹಿರಿಯವನಿಗೆ ಲಗ್ನವನ್ನು ಮಾಡಬೇಕೆಂದು ಎಷ್ಟೋ ವಿಧವಾಗಿ ಪ್ರಯತ್ನಿಸಿದರೂ ಅವನಿಗೆ ಯಾರೂ ಹೆಣ್ಣನ್ನು ಕೊಡಲೇ ಇಲ್ಲ ಆದರೆ ದುರ್ದೈವವಶಾತ್ ಧನಕ್ಕೆ ಆಶೆಪಟ್ಟು ೧೫೦ ರೂಪಾಯಿಗಳ ತೆರವನ್ನು ಈ ಹುಡುಗನ ತಂದೆಯಿಂದ ಪಡೆದ ರಾಮಗಿರಿಯವರಿಬ್ಬರು ತಮ್ಮ ಮಗಳನ್ನು ಈತನಿಗೆ ಕೊಟ್ಟು ಲಗ್ನ ಮಾಡಿದರಂತೆ ಲಗ್ನವಾದ ನಂತರ ಗಂಡನ ಮನೆಗೆ ಬಂದ ಈ ಹೆಣ್ಣು ಮಗಳ ತೌರು ಮನೆಗೆ ಹೋಗಿಯೇ ಇಲ್ಲವಂತೆ ಒಂದೊಂದು ಸಾರಿ ತೌರು ಮನೆಯವರು ಕರೆಯಲು ಬಂದಾಗ ಈ ಹುಡುಗಿಯೇ ೧೫೦ ರೂಪಾಯಿಗಳಿಗೆ ನನ್ನನ್ನು ನೀವು ಮಾರಿಕೊಂಡು ಬಿಟ್ಟಿರುವಿರಾದುದರಿಂದ ನನ್ನ ಮೇಲೆ ನಿಮ್ಮ ಅಧಿಕಾರವಿಲ್ಲವೆಂದೂ, ಆ ಕಾರಣದಿಂದಲೇ ಗಂಡನ ನ ನಿಮವರು ತೌರು ಮನೆಗೆ ತನ್ನನ್ನು ಕಳುಹಿಸುವುದಿಲ್ಲವೆಂದೂ ಆ ಹುಡುಗಿಯು ತನ್ನ ತೌರುಮನೆಯವರಿಗೆ ತಿಳುಹಿಸಿದ್ದಳಂತೆ

ಗಂಡನ ಮನೆಯಲ್ಲಿ ಈ ಹುಡುಗಿಯ ಮಾವನ ತಂಗಿಯೊಬ್ಬಳಿದ್ದಾಳೆ ಅವಳೂ ಈ ಹುಡುಗಿಯ ಗಂಡನೂ ಸ್ನೇಹಕೊಂಡು ಈಕೆಯನ್ನು ಅಗಾಗ್ಗೆ ಬಹಳವಾಗಿ ಹಿಂಸಿಸುತ್ತಿದ್ದರೆಂದು ವದಂತಿಯಿದೆ ಈ ಹಿಂಸೆಯನ್ನೆಲ್ಲಾ ಸಹಿಸಿಕೊಂಡು ಹೋಗುತ್ತಿದ್ದಳು ಇದಲ್ಲದೆ ಈ ಹುಡುಗಿಯ ಮಾವನಾಗಲೀ, ಗಂಡನ ತಮ್ಮನಾಗಲೀ ಮನೆಯಲ್ಲಿ ಇದ್ದರೆ ಈ ವ್ಯಾಜ್ಯಕ್ಕೆ ಅಸ್ಪದ ಕೊಡದೆ ಜಗಳವನ್ನು ನಿಲ್ಲಿಸುತ್ತಿದ್ದರು ಹೀಗಿರುವಾಗ ಮೊನ್ನೆ ದಿನ ಈ ಹುಡುಗಿಯ ಮಾವನು ಸಂತೆಗೋಸ್ಕರ ಪರಸ್ಥಳಕ್ಕೆ ಹೋಗಿದ್ದರು ತಮ್ಮನು ಮನೆಯಲ್ಲಿರದೆ ಎಲ್ಲಿಗೋ ಹೋಗಿದ್ದನಂತೆ ಈ ಸಮಯವನ್ನು ಸಾಧಿಸಿ ಮನೆಯಲ್ಲಿದ್ದ ಮುದುಕಿಯೂ, ಈ ಹುಡುಗಿಯ ಗಂಡನೂ ಪ್ರಿಂಚಿನ ಒಳಗವನ್ನು ಕಳೆದಿದ್ದಾಳೆಂಬ ನೆಪದಿಂದ ಮೊನ್ನೆ ಮಧ್ಯಾಹ್ನ ಚೆನ್ನಾಗಿ ದೊಣ್ಣೆಯಿಂದ ಹೊಡೆದರಂತೆ ಪಕ್ಕದ ಮನೆಯವರು ಓಡಿ ಬಂದು ಬಿಡಿಸಿದರಂತೆ ರಾತ್ರಿಯವರೆಗೂ ಸುಮ್ಮನಿದ್ದು ನಡುರಾತ್ರಿಯ ಸಮಯದಲ್ಲಿ ಗಂಡನು ಈ ಹುಡುಗಿಯನ್ನು ಭಯಂಕರವಾಗಿ ಹೊಡೆಯಲು ಆರಂಭಿಸಿದನಂತೆ ಅದರಲ್ಲೂ ಕೈಯಿಂದ ಹೊಡೆಯದೆ ಹಾರೆಕೋಲು ಗುದ್ದಲಿಯ ಹಿಡಿ, ಒಡಿಗೆ ನೊದಲಾದುವುಗಳಿಂದ ದನಗಳಿಗಿಂತಲೂ ಕಡೆಯಾಗಿ ಯದ್ವಾತದ್ವಾ ಹೊಡೆದನೆಂತಲೂ, ಈ ಹೊಡೆತಗಳಿಂದ ಹುಡುಗಿಯ ಕುಂಡ, ಕೈ ಕಾಲುಗಳು ಮುರಿದಿರುವವುವೆಂದೂ, ಮೈತುಂಬಾ ಭಯಂಕರವಾದ ವ್ರಣಗಳಾಗಿರುವವೆಂದೂ, ಹುಡುಗಿಯ ಮೈ, ಕೈಗಳೆಲ್ಲಾ ಈ ಹೊಡೆತಗಳಿಂದ ಅಜ್ಜಿಬಜ್ಜಿಯಾಗಿರುವವೆಂದೂ, ಇದರಿಂದಲೇ ಹುಡುಗಿಯು ಮೃತಪಟ್ಟಳೆಂದೂ ಮಾತನಾಡಿಕೊಳ್ಳುತ್ತಾರೆ

ನಿನ್ನೆ ದಿನ ಪೋಲೀಸಿನವರು ಬಂದು ಜುಸ್ತುವಾರಿಯನ್ನು ನೋಡಿಕೊಳ್ಳುತ್ತಿರುವರು ನಿನ್ನೆ ಅನೇಕರ ಹೇಳಿಕೆಯನ್ನು ತೆಗೆದುಕೊಂಡಿರುವರು ಅನೇಕರು ಹುಡುಗಿಯನ್ನು ಗಂಡನೇ ಕೊಲೆಮಾಡಿರುವನೆಂದು ಹೇಳಿಕೆ ಕೊಟ್ಟಿರುವರಂತೆ ಗಂಡನೇ ತಾನು ಕೊಲೆಮಾಡಿದ್ದುದಾಗಿ ಒಪ್ಪಿಕೊಂಡಿರುವನೆಂದೂ ವರ್ತಮಾನವಿದೆ. ಇನ್ನು ಕೆಲವರು ಹೇಳುವುದರಲ್ಲಿ ಹುಡುಗಿಯು ಮಹಡಿಯ ಮೇಲಿನಿಂದ ಬಿದ್ದಳೆಂದೂ ಯಾರೂ ನೋಡದೆ ಮೃತಪಟ್ಟಿರುವಳೆಂದೂ ಮನೆಯವರು ಹೇಳುತ್ತಿರುವರಂತೆ ನಿಜವಾದ ವಿದ್ಯಮಾನವನ್ನು ಪೋಲೀಸಿನವರು ತನಿಖೆ ಮಾಡುತ್ತಲಿರುವರು ಈ ದಿನ ಶವವನ್ನು ಪೋಸ್ಟ್‌ಮಾರ್ಟಂಗಾಗಿ ದವಾಖಾನೆಗೆ ಸಾಗಿಸಿದರು.

ಹುಡುಗಿಯು ಲೋವರ್ ಸೆಕೆಂಡರಿಯವರೆಗೂ ಓದಿದಳೆಂದೂ, ಮಹಾ ಗುಣಾಢ್ಯಳೆಂದೂ, ಪತಿವ್ರತೆಯೆಂದೂ, ಸಂಪನ್ನೆಯೆಂದೂ ಊರೆಲ್ಲಾ ಮರುಗುತ್ತಲಿದೆ ಸಾಯುವಾಗ ೫ ತಿಂಗಳು ಗರ್ಭಿಣಿಯಾಗಿದ್ದಳು

ಚಿಕ್ಕದೊಡ್ಡವರು-ದೊಡ್ಡ ಚಿಕ್ಕವರು.

ಲೇಖಕರು:—ಶ್ರೀ|| ಶಿವರಾಮ ಕಾರಂತರು,

ಮ|| ರಾ|| ರಾ|| ಮಾನಪ್ಪನವರು

ಮಾನಪ್ಪ ಎಂಬುದು ಬಲು ದೊಡ್ಡ ಹೆಸರು. ಇನ್ನು ಅದನ್ನು ಮ ರಾ. ರಾ ಬೆನ್ನು ಹತ್ತುವಾಗ ಅದರ ಅಂತಸ್ತು ಒಂದಕ್ಕೆ ಹತ್ತಾಯಿತೆಂದೇ ಲೆಕ್ಕ ಆದರೆ ಮಾನಪ್ಪನವರ ಅಂತಸ್ತು ಅವರ ಅಳತೆ ಪಟ್ಟಿಯಿಂದ ಸೊನ್ನೆಯೆಂದರೂ ತಪ್ಪಿಲ್ಲ ಮಾನಪ್ಪನವರ ವೈಶಿಷ್ಟ್ಯವೇನಾದರೂ ಇದ್ದರೆ ಅವರ ಸ್ವಪ್ರತಿಷ್ಠೆಯಲ್ಲಿ. ಪ್ರತಿಷ್ಠೆ ಮನುಷ್ಯನಿಂದ ಇಲ್ಲದ ಅನ್ಯಾಯವನ್ನು ಮಾಡಿಸಿ, ಅದನ್ನು ಕಾಯುತ್ತದೆ ಎನ್ನುತ್ತಾರೆ ಆದರೆ ಪ್ರತಿಷ್ಠೆ ವಜಾ ಆದರೂ ಅದೇ ಸಂಕಷ್ಟ ಎನ್ನಲು ಮಾನಪ್ಪನವರು ಸಾಕ್ಷಿ

ಮಾನಪ್ಪನವರ ಪರಿಚಯ ನನಗೆ ಬಲು ಹಿಂದಿನಿಂದ ಇತ್ತು ಅವರು ಸಾಲೆಗೆ ಹೋಗುವುದನ್ನು ಬಿಟ್ಟು ಇಂದಿಗೆ ಹಲವು ವರ್ಷಗಳಾದುವು ಅವರು ಸಾಲೆ ಹುಡುಗರಾಗಿದ್ದಾಗಲೂ ನಾನು ಕಂಡಿದ್ದೆ ಈಗಲೂ ಕಾಣುತ್ತೇನೆ. ಅವರ ಅಳತೆಯಲ್ಲಿ ಇನ್ನೂ ವ್ಯತ್ಯಾಸವಾಗಿಲ್ಲ ದುರ್ಬಿನು ಹಿಡಿದು ನೋಡಿದರೆ ಮುಖದ ಮೇಲೆ ಮೀಸೆಯಿದೆ ಎಂದೂ ಅವರು ಬೆಳೆದಿದ್ದಾರೆ ಎಂದೂ ತಿಳಿಯಬೇಕು ಶರೀರ ಬಲದಲ್ಲಿ ಅವರು ಸ್ಯಾಂಡೋ ಎಂದರೂ ಚಿಂತೆಯಿಲ್ಲ ಸ್ಯಾಂಡೋ ಜನರಿಗೆ ಮಾಂಸ ಖಂಡ ಜಾಸ್ತಿ ಇವರ ಶರೀರದಲ್ಲಿ ಮಾಂಸವೇಕೆ, ಮೂಳೆ ಕೂಡ ಇಲ್ಲ ಮೂಳೆ ಇಲ್ಲವೆಂದರೂ ಎವರೆಸ್ಟ್ ಪರ್ವತ ಏರಲಿಕ್ಕೂ ಅವರು ಸಿದ್ಧರೇ

ಮಾನಪ್ಪನವರ ಜತೆಯಲ್ಲಿ ಎಂದು ನೂರು ಬಾರಿ ನಾನು ಪರ್ವತವೇರಲು ಹೋಗಿದ್ದೆ ನಮ್ಮ ಜತೆಯಲ್ಲಿ ಇನ್ನೂ ಹಲವು ಗೆಳೆಯರಿದ್ದರು ಮಾನಪ್ಪನವರಿಗೆ ಅ ದರಲ್ಲಿ ಉತ್ಸಾಹ ತಾವು ಹೊರಟರೆ ಸನ್ಯಾಸಿಯಂತೆ ಹೊರಟರು ಬಟ್ಟೆ ಬರೆ, ಹಾಸುಗೆ, ಹಂಚಿ ಯಾವ ಕಳಿಂಪೂ ಇಲ್ಲ ಆದರೆ ಪರ್ವತ ಮುಗಿಸುವಾಗ ಅವರ ಬೆನ್ನ ಮೇಲೆ ತಲೆಯ ಮೇಲೆ, ಹೆಗಲ ಮೇಲೆ ಹತ್ತು ಜನರ ಸಂಸಾರ ಕೂತಿರುತ್ತದೆ ಹೊರಡುವಾಗ ಅತ್ತಿತ್ತ ನೋಡಿದರು ಯಾರ ಕೈಯಲ್ಲಿ ಅತಿದೊಡ್ಡ ಮೂಟೆಯಿದೆಯೋ ಅದನ್ನು ತಾನು ಹೊತ್ತರು ತಮ್ಮಲ್ಲಿರುವ ಸೀರಿನ ಸೀಸೆಯನ್ನೇ ಅವರಿಗೆ ಕೊಟ್ಟರು ಬೆಟ್ಟ ಏರಲು ತೊಡಗಿದೆವು ನೀವು ತಾಸಿಗೆ ಕಾಲು ಮೈಲಿನಂತೆ ನಡೆಯಿರಿ, ಅರು ಮೈಲಿನಂತೆ ನಡೆಯಿರಿ—ಮಾನಪ್ಪನವರು ನಿಮಗಿಂತ ಆರು ಫರ್ಲಾಂಗು ಹಿಂದೆ ಇರುತ್ತಾರೆ ಅದಕ್ಕೆ ಹಿ ದಿಲ್ಲ ನೀವು ಹೊರಟು ಒಂದು ಫರ್ಲಾಂಗು ಸಾಗಿಲ್ಲವಾದರೂ—ಮಾನಪ್ಪನವರು ಸರಿಯಾಗಿ ಆರು ಫರ್ಲಾಂಗು ಹಿಂದೆಯೇ ಇರುತ್ತಾರೆ ಅವರಿಗೆ ಯಾರನ್ನು ಮಾತನಾಡಿಸುವುದಾದರೂ ಸರಿಯೆ—ಬೆನ್ನಿನ ಹಿಂದೆ ನಿಂತು ಮಾತನಾಡಿಸುತ್ತಾರೆ ಅವರ ಮುಖ ನೋಡಿ ನೀವು ಜವಾಬು ಕೊಡುವಂಥ ಪ್ರಸಂಗಗಳನ್ನು ಅವರು ಕಲ್ಪಿಸುವುದೇ ಇಲ್ಲ

ಸರಣಿ ಬೆಟ್ಟ ಎಲ್ಲಿಟ್ಟೊ ಹೋದೆ ನಮ್ಮ ಬೆಟ್ಟದ ಪಯಣ ಹೊರಟೆವು ಮಾನಪ್ಪನವರು ಸ್ಥಿರಪ್ರಜ್ಞನಂತೆ-ಚಳಿ ಬಿಸಿಲೆನ್ನದೆ, ಎರುತಗ್ಗೆನ್ನದೆ ನಡೆಯುತ್ತಾರೆ ದಾರಿಯಲ್ಲಿ ಅವರಂತೆ ಹಿಂದೆ ಬಿದ್ದವರು, ಅಥವಾ ಮುಂದೆ ಹೋಗದವರು ಇದ್ದರೆ ಅವರನ್ನು ಕಂಡು ಕನಿಕರಪಡುತ್ತಾರೆ ಅವರನ್ನು ಒತ್ತಾಯಪಡಿಸಿ, ಅವರ ಗಂಟನ್ನು ತಾವೂ ಹೊರುತ್ತಾರೆ. ಹೀಗಾಗಿ ಬೆಟ್ಟದ ತುದಿಗೆ ಬರುವಾಗ ಅವರು ಶುದ್ಧ ಹೇಸರಕತ್ತೆಯಾಗಿರುತ್ತಾರೆ ಇತ್ತ ಬಿಸಿಲಿನ ಬೇಗೆಯಿಂದ ಎಲ್ಲರೂ ಬಳಲಿ ಬೆಂಡಾದರೆ, ಇವರು ಏನಾದರೆಂದು ಬಾಯಿ ಬಿಡುವುದಿಲ್ಲ ಅವರು ಕೈಯ ನೀರಿನ ಸೀಸೆ ಇತರರಿಂದ ಬರಿದಾಗುತ್ತದೆ "ಅವರಿಗಿ ತನಗೆ ನೀರು ಬೇಕು"-ಎಂದು ಕೇಳರು. ಉಳಿದವರು ಇವರನ್ನು ವಿಚಾರಿಸುವುದು ಕಡಿಮೆ, ನಿಮ್ಮ ಪ್ರಯಾಣ ಮುಗಿಯಿತು ಕೆಲವು

ಕಾಲ ಸಂದಿತು ಎಂದು ತಿಳಿಯಿರಿ ಒಂದು ದಿವಸ ನೀವು "ಮಾನಪ್ಪನವರೇ, ನಮ್ಮ ಕಳೆದ ವರ್ಷದ ಪ್ರಯಾಣ ಹೇಗೆ? ನನಗೆ ಆಯಾಸವಾಗಿ, ಕಂಗಾಲಾದ ಇಂಥ ಬಾಯಾರಿಕೆ"-ಎಂದರೆ ಅವರು ಪ್ರತಿಯಾಗಿ "ಹೌದು ಬಹಳ ಬಿಸಲು ಬಾಯಾರಿಕೆಯುತ್ತು ಆ ದಿನಸ" ಎನ್ನುವರು. ಅದರಿಂದ ಹಿಂದಿನ ವರುಷ ಅವರು ಬೆಟ್ಟವೇರುವಾಗ ಅವರಿಗೆ ಬಾಯಾರಿಕೆಯಾಯಿತು ಎಂದು ನೀವು ತಿಳಿಯುತ್ತೀರಿ ಆ ವರುಷದ, ಆ ದಿನಸದ ಅವರ ಶರೀರ, ಇಲ್ಲವೆ, ಆತ್ಮದ ಸಂಕಟ ನಿಮಗೆ ಆಗಲೇ ತಿಳಿಯುವುದೆಂಬುದು ಅಸಾಧ್ಯ

ಮಾನಪ್ಪನವರಿಗೆ ಎಲ್ಲರನ್ನು ನೋಡಿದರೂ ಅದರ ನನ್ನನ್ನು ನೋಡಿದರೆ ಅತಿ ನನ್ನನ್ನು ಪ್ರತ್ಯಕ್ಷ ಒಬ್ಬ ಋಷಿಯೋ, ಕಾಳಿದಾಸನೋ, ಅಥವಾ ಅದಕ್ಕೂ ದೊಡ್ಡ ಇನ್ನೊಬ್ಬನೇ ಆಗಿ ಅವರು ತಿಳಿದುಬಿಟ್ಟಿದ್ದಾರೆ ಅದನ್ನು ಉಚ್ಚಲು ಯಾರಿಂದಲೂ ಸಾಧ್ಯವಿಲ್ಲ ಆದ ದರಿಂದ ನನ್ನೆದುರಿಗೆ, ಬೆನ್ನಿಗೆ ಹೊಗಳುವುದು ಅವರ ಸ್ವಭಾವ ಅವರ ಹೊಗಳುವ ಭರದಲ್ಲಿ ಎಲ್ಲಿ ಯಾರಿದ್ದರಿಗೆ ಹೊಗಳಬೇಕು ಎಂಬುದನ್ನು ಅವರು ತಿಳಿದಿಲ್ಲ ಅವರ ಹೊಗಳಿಕೆಗೆ ವಿಶೇಷ ಕಾರಣ ಬೇಕೆಂದು ತಿಳಿಯಬೇಡಿ ಕಾರಣವನ್ನೆಲ್ಲಾ ಅವರ ಅಭಿಮಾನವೇ ಮಾಡುತ್ತದೆ ಅವರು ಹೊಗಳುತ್ತಾರೆ ಕೆಲವು ಸಾರಿ ನನ್ನನ್ನು ಕಂಡರೆ ಹಲ್ಲು ಕಡಿಯುವವರೆದುರಿಗೂ ಹೊಗಳಿದ್ದಾರೆ ಅವರು ರೇಗಿ ಸಿಟ್ಟುಗೊಂಡು ನನ್ನನ್ನು ತೆಗಳಿದರೆ, ನನಗೆ ಆಗುವ ವ್ಯಥೆಗಿಂತ ಅವರ ಸಂಕಟ ಹೆಚ್ಚು ಹೀಗೆಂದ ಮೇಲಾದರೂ ಹಾಗೆ ಮಾಡದ ಪ್ರವೃತ್ತಿ ಬಿಟ್ಟಾರೇ? ಅದೂ ಇಲ್ಲ ಆ ಧನರ ಮಾ ಜೆಸ್ಟೋ ಹೊಗಳ, ನನ್ನ ಬಗ್ಗೆ ವೈರಿಗಳ ಕೇಳಿ ಕೊರಗುವುದು ಅವರ ಸ್ವಭಾವ

ಇತರರಿಗೆ ಮರ್ಯಾದೆ ಕಾಣಿಸುವುದರಲ್ಲಿ ಅವರು ಮೇಲು ಜನಸಿಲ್ಲ ಸಾಧಾರಣ ಇಂಥ ಸ ಭಾವನಾದರೂ ನೀವು ಒಂದೇ ಸರಿಯ ತ್ತಾರೆ ಆ ಮನುಷ್ಯ ಎಲ್ಲಾದರೂ ಭಗವದ್ಗೀತೆ ಓದುವವನೋ ಕಸ್ತೂರಿಗನೋ ಓದ ಕಿಂದ ಬಿಟ್ಟರೆ ಅವನ ಸರಸ ಗುರುವೆಂದು ತಿಳಿಯುವುದಕ್ಕೂ ಸಿದ್ಧ ಆಗಾಗ ನನ್ನ ಜತೆಯಲ್ಲಿ ಅವರು ಬರುವುದು ಓ ನಾನು ಅವರನ್ನು ಏರ ಹೇಳುವುದುಂಟು ಆದರೆ ನಾನು ಹೋಗ ಬೇಕಾದ ಅವರ ಕಾಣಿಸುವ ದೊಡ್ಡ ಮನುಷ್ಯರೊಬ್ಬರು ಬಂದುಬಿಟ್ಟರೆ-ಇಂತಹ ದೂರದೇ ಸರಿ ದಾರಿಯಿಂದರೆ ಮನೆಗೆ ಹೋಗುವ ಹಾಗೆ ಇಲ್ಲ ಇಂದು ಬೆಳಗೆ ಬಂದರೆ ನಾಳೆಯಾದರೂ ಅಲ್ಲೇ ಎಂತರ ಆದರೆ ತಾನು ಬಿದ್ದಿರ ಕಾಣಿದ್ದೇನೆ ಎಂದು ಎಷ್ಟುಬಿಡುವವರಲ್ಲ ಅ ದ ದಾಕ್ಷಿಣ್ಯದ ಮ ದ್ದೆ

ನನಗಿಂತ ಸಹಾಯ ಮಾಡುವ ಆತುರ ಅವರಿಗೆ ಅವರದು ತಪ್ಪಿಂದ ಆಗುವುದನ್ನು ಆಗದುದನ್ನು ಸಹ ಮಾಡುತ್ತಾರೆ ಹಣಕಾಸಿನ ವಿಚಾರದಲ್ಲೂ ತುಂಬ ಮ ಣುಗಿ ನರಳಿ, ತಮ್ಮಿಂದ ಕಡಮೆ ನರಳುವವರಿಗೂ ನೆರವಾಗಿದ್ದಾರೆ ಅದರೊಂದು ವಿಚಾರ ಅವರಲ್ಲಿ ಎಲ್ಲಾ ಕೆಲಸ ಹೇಳಿದ ರಾಗದು ಒಮ್ಮೆ ನಾನು 'ಮಾನಪ್ಪನವರೇ ನಾಳೆ ನಮ್ಮ ಮನೆಗೆ ಮಧ್ಯಾಹ್ನ ಬಂದುಬಿಡಿ ಒ ದ ಊಟಕ್ಕದ ಕಲಸವಿದೆ' ಎಂದೆ ಮರುದಿನದಲ್ಲಿ ಆದರ ಮರುದಿನವೂ ಅವರ ಸವಾರಿ ಬರಲಿಲ್ಲ ಕಾರಣ, ನನಗೆ ಮೇರಿಯ ಪಂದ ತಿಳಿಯಿತು ಅವರಿಗೆ ಆ ದಿವಸ ಬೇರೆ ಹಿರಿಯರ ಕೆಲಸವಿತ್ತಂತೆ ಅದು ಅವರಿಗೂ ತಿಳಿದಿತ್ತು ಬರಲು ಸಾಧ್ಯವಿಲ್ಲ ಎನ್ನಲು ದಾಕ್ಷಿಣ್ಯ ಬಿಡದೆ ಹಾಗೂ ಹೇಳದೆ ಬರಲಿಲ್ಲ ಅ ದ ಬೈಸಿಕೊಳ್ಳುವ ವಿಚಿತ್ರ ಜೀವನವು ಅವರಲ್ಲಿ ನಾವು ಕೇಳ ವಂಥ ಪ್ರಶ್ನೆಗಳಿಗೆ, ಅವರ ಸ್ಥಿತಿಗತಿ ತಿಳಿದ ನಾವು ಉತ್ತರಿಸದರೆ ಸ್ವೇಮ ಅವರನ್ನು ಕೇಳಿಯೇ ಉಪಯೋಗವಿಲ್ಲ ಇಂಥ ಅವಧೂತ ಮಾರ್ಗ ಮಾನಪ್ಪನವರದು

ನೋಟೀಸು

The Canara Bank Ltd, Karkala

ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಕಾರ್ಕಳ

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗನ್ನಾಗಲೀ, ಅದರ ಬಡ್ಡಿಯನ್ನಾಗಲೀ ನಾವು ಮಿಸೆಗೆ ಕೊಡದೆ ಇರುವುದರಿಂದ ಅವರಿಗೆ ಬಿಟ್ಟ ರಿಜಿಸ್ಟ್ರಿ ಅವರು ಇಲ್ಲವಾಗಿ ಹಿಂತಿರುಗಿ ಬಂದುದರಿಂದ ಈದಾ, ಇದೇ ಬರುವ ತಾರೀಖು 22-6-'35ನೇ ಶನಿವಾರ ದಿನ ಮಧ್ಯಾಹ್ನ ಘಂಟೆ 12ಕ್ಕೆ ಸರಿಯಾಗಿ ಸದರಿ ಬ್ಯಾಂಕಿನ ಆಫೀಸಿನಲ್ಲಿ ಅವರು ಅಡವಿಟ್ಟ ನಗಗಳನ್ನು ಬಹಿರಂಗವಾಗಿ ಏಲಂ ಮಾಡಿ ಹುಟ್ಟಿ ಬಂದ ಐವೇಜನ್ನು ಬೇಂಕಿಗೆ ಸಲ್ಲತಕ್ಕ ಸಾಲಗಳಿಗೆ ವಜಾ ಮಾಡೋಣಾದೀತು.

ಲೋನು ನಂಬ್ರ 205/33 (ಹೆಸರು) ಪಿ ಕೃಷ್ಣ ಭಟ್ಟ, ಸಾಲದ ಮೊಬಲಗು ರೂ. 40/-

Office of the Bank, Karkala, } C. Manjunath Kamath,

ಕೃಷಿ ಮತ್ತು ರಸಾಯನಿಕ ಉದ್ಯೋಗಗಳು.

ನಮ್ಮ ದಿನನಿತ್ಯದ ಉಪಯೋಗಕ್ಕೆ ಬೇಕಾಗುವ ಸಣ್ಣ ಸಣ್ಣ ಸಾಮಾನುಗಳನ್ನೂ, ಅಲ್ಪ ಬೆಲೆಯ ವಸ್ತುಗಳನ್ನೂ ವಿದೇಶೀಯರು ಸಿದ್ಧಪಡಿಸಿ ನಮಗೆ ಕೊಡುತ್ತಾರೆ. ಆದರೆ ಆ ವಸ್ತುಗಳು ಹೇಗೆ ಸಿದ್ಧವಾದುವು—ಅವುಗಳನ್ನು ನಾವು ತಯಾರಿಸಬಹುದೋ?—ಎಂಬ ಕುರಿತಾಗಿ ನಾವು ವಿವೇಚಿಸಿಕೊಳ್ಳುವುದು ಕಡಮೆ, ನಮ್ಮಂಗೆ ಕುರ್ಚಿ ಮೇಜುಗಳು ಬೇಕು—ಲೇಖನಿಯು ಬೇಕು. ಸಮಯಕ್ಕೆ ಹಾಜರಾಗಿ ಸಮಯಕ್ಕೆ ಹೊರಡುವ ಆಫೀಸು ಬೇಕು. ನಮ್ಮ ಯುವಕರ ಸುಖದ ಆರ್ಥವು ಹೀಗಿದೆ. ಇಂತಹ ಪರಿಸ್ಥಿತಿಯಲ್ಲಿ ಭಾರತದಲ್ಲಿ ನಿರುದ್ಯೋಗವು ಹೆಚ್ಚುವುದು ಅಸಂಭವವಾಗಿಲ್ಲ. ನಾವೀಗ ಸಣ್ಣ ಸಣ್ಣ ಕೈಗಾರಿಕೆಗಳಿಗೆ ಶರಣು ಹೋಗಬೇಕಾಗಿದೆ. ಕೆಲವು ಸಣ್ಣ ಸಣ್ಣ ಕೈಗಾರಿಕೆಗಳನ್ನು ಕುರಿತು ಶ್ರೀ ಎಂ. ಸಿ. ತಮ್ಮಿನಕಟ್ಟಿ, ಎಂ. ಎಸ್. ಸಿ. ಪಿ. ಎಚ್. ಡಿ. ಕರ್ನಾಟಕ ಕೆಮಿಕಲ್, ಗದಗ ಇವರ ಸ್ಥಾಪಕರು ಇವರ ಲೇಖನವನ್ನಾಧರಿಸಿ ಈ ಲೇಖನವನ್ನು ಬರೆಯಲಾಗಿದೆ.

ಜನಾಂಗದ ಬೆಳವಣಿಗೆಯಲ್ಲಿ ವಿಜ್ಞಾನ (Science) ರಸಾಯನ ಶಾಸ್ತ್ರ (Chemistry) ಇವೆರಡರ ಮಹತ್ವವೆಷ್ಟಿರುವುದೆಂಬುದು ಕಳೆದ ಮಹಾಯುದ್ಧದಲ್ಲಲ್ಲದೆ, ಇನ್ನಾವಾಗಲೂ ಇಷ್ಟರ ವರೆಗೆ ಯಾವ ಜನಾಂಗಕ್ಕೂ ತಿಳಿದಿರಲಿಲ್ಲ. ಮಹಾಯುದ್ಧದ ವೇಳೆ ರಸಾಯನದ ಜ್ಞಾನ ಮತ್ತು ಅದರ ಉಪಯೋಗವೇನೆಂದು ಹುಡುಕಿ ಹೆಚ್ಚಿಸಿಕೊಳ್ಳುವ ಆವಶ್ಯಕತೆಯು ಹೆಚ್ಚಿ, ಆ ವಿಷಯಗಳ ವರ್ಧನೆಗೊಂದು ಸಂದರ್ಭವೊದಗಿತು. ಮಹಾಯುದ್ಧವು ೧೯೧೫ ಅಥವಾ ಬಹಳ ಶೀಘ್ರವಾಗಿ—ಅಂದರೆ— ೧೯೧೬ರಲ್ಲಿ ನಿಲ್ಲಬಹುದಾದ ಪರಿಸ್ಥಿತಿಯಲ್ಲಿತ್ತು. ಆದರೆ ಜರ್ಮನಿಯ ರಸಾಯನಜ್ಞರು ತಮ್ಮ ರಾಸಾಯನಿಕ ಶೋಧನೆಗಳಿಂದ ಜರ್ಮನಿಗೆ ಅಪಜಯವು ಬರಬಾರದೆಂದು ನಿರ್ಧರಿಸಿ, ಹಲವು ರಾಸಾಯನಿಕ ಶೋಧಗಳನ್ನು ನಡೆಸಿ, ಯುದ್ಧದಲ್ಲಿ ಅವುಗಳ ಪ್ರಯೋಜನವನ್ನು ಮಾಡಿಕೊಳ್ಳಲು ತೊಡಗಿದರು. ಮಹಾಯುದ್ಧವು ಮತ್ತೂ ಮುಂದರಿಯಿತು.

ಈ ಯುದ್ಧದ ಸಮಯದಲ್ಲಿ ಎಲ್ಲಾ ಜನಾಂಗಗಳು ತಮ್ಮ ದಿನನಿತ್ಯದ ಉಪಯೋಗಕ್ಕೆ ಬೇಕಾಗುವ ಸರಕುಗಳನ್ನು ತಾವೇ, ತಮ್ಮ ನಾಡಿನಲ್ಲಿ ಸಿದ್ಧಮಾಡಿಕೊಳ್ಳುವುದರ ಪ್ರಾಮುಖ್ಯತೆಯನ್ನು ಕಂಡುಕೊಂಡುವು. ಇಂಗ್ಲಾಂಡು, ಅಮೆರಿಕಾ, ಮತ್ತು ಜಪಾನ ದೇಶದವರು ಮಹಾಯುದ್ಧದ ನಂತರ ತಮ್ಮ ರಾಸಾಯನಿಕ ಉದ್ಯೋಗಗಳನ್ನು ಬಹುವಿಧದಿಂದ ವೃದ್ಧಿಸಿಕೊಂಡರು. ಆದರೆ ಹಿಂದೀಯರು ಮಾತ್ರ ತಮ್ಮ ರಾಸಾಯನಿಕ ಉದ್ಯೋಗಗಳನ್ನು ವೃದ್ಧಿಮಾಡಿಕೊಳ್ಳುವ ಆ ಸುಸಂದರ್ಭವನ್ನು ಕಳೆದುಕೊಂಡರು. ಮಹಾಯುದ್ಧದ ಸಮಯದಲ್ಲಿ ತಲೆಯೆತ್ತಿದ ಹಲವು ಉದ್ಯೋಗಗಳು ಹುಟ್ಟಿದಂತೆ ಅವಸಾನ ಹೊಂದಿದುವು. ಅವುಗಳಲ್ಲಿ ಕೆಲವು ಉದ್ಯೋಗಗಳೇನೋ ಅಲ್ಪ ಜೀವದಿಂದಿದ್ದು ಕಷ್ಟದಿಂದ ಉಳಿದಿವೆ.

ಹಿಂದೂದೇಶವು ಕೃಷಿ ಪ್ರಧಾನ ದೇಶವೆಂದು ಎಲ್ಲರಿಗೂ ತಿಳಿದ ವಿಷಯ. ಅದುದರಿಂದ ಹಳ್ಳಿಗಳಿಗೆ ಸಂಬಂಧಿಸಿರುವ ಸಣ್ಣ ಸಣ್ಣ ಉದ್ಯೋಗಗಳು ಪ್ರೋತ್ಸಾಹಿಸಲ್ಪಟ್ಟರೆ ಬಹು ಬೇಗನೆ ದೇಶೋನ್ನತಿಯಾಗುವುದೆಂದು ಊಹಿಸಬಹುದಾಗುತ್ತದೆ. ೧೯೧೬-೧೮ರಲ್ಲಿ ಜರಗಿದ ಹಿಂದೀಯ ಔದ್ಯೋಗಿಕ ಕಮಿಷನಿನವರು ಹೀಗೆ ಹೇಳಿದ್ದಾರೆ—"ಈ ವರದಿಯನ್ನು ಸಾಮಾನ್ಯ ದೃಷ್ಟಿಯಿಂದವಲೋಕಿಸಿದ್ದಲ್ಲಿ ಭಾರತೀಯ ಉದ್ಯೋಗಗಳ ಈಗಿನ ಮತ್ತು ಮುಂದಿನ ಸ್ಥಿತಿಯು ಬಹುಮಟ್ಟಿಗೆ ಹಳ್ಳಿಗಳ ಸರಕುಗಳ ಮೇಲೆಯೇ ಆಧರಿಸಿಕೊಂಡು ನಿಲ್ಲುವುವು ಎಂದು ಕಂಡುಬರುವುದು."

ಈಗೀಗ ರೈತರು ಅಧೋಗತಿಗಿಳಿಯುತ್ತಿದ್ದಾರೆ. ಅವರನ್ನು ಉದ್ಧರಿಸದ ವಿನಹಾ ಯಾರ ಉದ್ಧಾರವೂ ಆಗಲು ಸಾಧ್ಯವಿರುವುದಿಲ್ಲ. ಈ ವಿಷಯವು ಸರಕಾರಕ್ಕೂ ಕೊಂಗ್ರೆಸ್ಸಿಗೂ ತಿಳಿದಿದೆ.

ಹತ್ತಿ—ಅದರಿಂದ ಹುಟ್ಟುವ ಪದಾರ್ಥಗಳು.—ಸಂಯುಕ್ತ ಅಮೆರಿಕದ ನಂತರ ವಿಪುಲ ಹತ್ತಿ ಬೆಳೆಯುವ ದೇಶವೆಂದರೆ ಹಿಂದೂದೇಶ ಅದರಲ್ಲೂ ಕರ್ನಾಟಕವು ಪ್ರಾಮುಖ್ಯವಾದುದು. ಕರ್ನಾಟಕ ದೇಶದಲ್ಲಿ ಹತ್ತಿಯಿಂದ ಹಲವು ಬಗೆಯ ಪ್ರಯೋಜನಗಳನ್ನು ಮಾಡಿಕೊಳ್ಳಬಹುದು. ಹತ್ತಿಯಲ್ಲಿ ಅದರ ಕಾಯಿ ಮುಖ್ಯ—ಹತ್ತಿ ಮತ್ತು ಬೀಜಗಳು ಬಹು ಬೆಲೆಯುಳ್ಳ ವಸ್ತುಗಳು. ಹತ್ತಿಯೊಂದೇ ಬಹು ಬೆಲೆಯುಳ್ಳ ವಸ್ತುವೆಂದು ನಾವು ಭಾವಿಸಕೂಡದು. ಹತ್ತಿಯ ಬೀಜಕ್ಕೆ ನಾವು ಗಮನವನ್ನೇ ಕೊಡುವುದಿಲ್ಲ. ಅದಕ್ಕೆ ಹತ್ತಿಗಿಂತ ಹೆಚ್ಚಿನ ಬೆಲೆಯಿದೆಯೆಂದು ನಮಗೆ ತಿಳಿಯದು. ಅದುದರಿಂದಲೇ ರಸಾಯನ ಶಾಸ್ತ್ರಜ್ಞನು ಹತ್ತಿಯ ಬೀಜಗಳಿಗೆ ಹೆಚ್ಚು ಬೆಲೆಯನ್ನೀಯುವನು. ರಸಾಯನಜ್ಞನು ಹತ್ತಿಯ ಬೀಜದ ಪ್ರಯೋಜನವನ್ನು ಕಂಡು ಹಿಡಿಯುವ ಮೊದಲು ಅಮೆರಿಕಾದಲ್ಲಿ ಅದನ್ನು ಬಿಸಾಡುತ್ತಿದ್ದರು ಅಥವಾ ಅನವಶ್ಯಕವೆಂದು ಸುಟ್ಟುಹಾಕುತ್ತಿದ್ದರು.

ರಸಾಯನ ದೃಷ್ಟಿಯಿಂದ ಪರೀಕ್ಷಿಸಿ ನೋಡಿದ್ದಲ್ಲಿ ಹತ್ತಿಯ ಬೀಜದಲ್ಲಿ ನಯವಾದ ಎಳೆಯು ಅಂಟಿಕೊಂಡಿರುವುದು ಕಂಡುಬರುತ್ತದೆ. ಇವುಗಳನ್ನು ಯಂತ್ರದಿಂದ ತೆಗೆದು ಹಲವು ಸಾಮಾನುಗಳಿಗೆ ಉಪಯೋಗಿಸಿಕೊಳ್ಳುವರು. ಹೆಚ್ಚಾಗಿ ಕೃತ್ರಿಮ ಚರ್ಮ, ದೀಪ, ಮೇಣದ ಬತ್ತಿ, ಬರೆಯುವ ಕಾಗದ, ಕೃತ್ರಿಮ ರೇಶ್ಮೆ, ಸ್ಫೋಟಕ ದ್ರವ್ಯ, ಸೆಲ್ಯುಲೊಯಿಡ್ ಮೊದಲಾದುವುಗಳ ಸಿದ್ಧತೆಯಲ್ಲಿ ಈ ಎಳೆಗಳನ್ನುಪಯೋಗಿಸಿಕೊಳ್ಳುತ್ತಾರೆ. ಒಂದು ಟನ್ ಹತ್ತಿಯಲ್ಲಿ ೨೫ ಪೌಂಡು ಎಳೆಗಳು ದೊರೆಯುತ್ತವೆ. ಒಂದು ಟನ್ ಹತ್ತಿಯ ಕಾಳನ್ನು ಒಡೆದರೆ ೧೨೦೦ ಪೌಂಡುಗಳಷ್ಟು ಎಣ್ಣೆಯುಳ್ಳ ಹಿಟ್ಟಿನ ರೂಪದ ತಿರುಳೂ, ೮೦೦ರಿಂದ ೯೦೦ ಪೌಂಡುಗಳ ವರೆಗೆ ಸೊಪ್ಪೆಯೂ ಸಿಗುವುದು. ಈ ಸೊಪ್ಪೆಯನ್ನು ದನಗಳಿಗೆ ಆಹಾರವಾಗಿಯೂ ಸ್ಫೋಟಕ ದ್ರವ್ಯಗಳಿಗೂ ಉಪಯೋಗಿಸುವರು. ಆ ತಿರುಳಿನ ರೂಪದ ಹಿಂಡಿಯನ್ನು ತೆಗೆದರೆ ಅದರಿಂದ ಕೆಂಬಣ್ಣದ ಎಣ್ಣೆಯೂ ಹಿಟ್ಟಿನಂತಹ ಹಿಂಡಿಯೂ ದೊರೆಯುವುದು. ಈ ಹಿಂಡಿಯು ದನಕರುಗಳಿಗೆ ಬಹಳ ಉತ್ತಮ ಆಹಾರವಾಗಬಲ್ಲುದು. ಆ ಎಣ್ಣೆಯಲ್ಲಿಯ ಬಣ್ಣವನ್ನೂ ವಾಸನೆಯನ್ನೂ ತೆಗೆದು ಹಲವು ಬಗೆಯಿಂದ ಶುದ್ಧಗೊಳಿಸಿ ಈ ಎಣ್ಣೆಯನ್ನು ಅಮೇರಿಕದಲ್ಲಿ ಭೋಜನಕ್ಕೆ ಉಪಯೋಗಿಸುವರು. ಶೀತ ಪ್ರದೇಶಗಳಲ್ಲಿ ಈ ಹತ್ತಿಯ ಕಾಳುಗಳ ಎಣ್ಣೆಯನ್ನೇ ರಸಾಯನ ರೀತ್ಯಾ ಗಟ್ಟಿಮಾಡಿ ಬೆಣ್ಣೆ ಮುಂತಾದುವುಗಳ ಬದಲಿಗೆ ಉಪಯೋಗಿಸುವರು. ಇದರ ಎರಡನೆ ತರಗತಿಯ ಎಣ್ಣೆಯನ್ನು ಬಟ್ಟೆಗೆ ಉಪಯೋಗಿಸುವ ಸಬಕಾರ, ಗ್ಲಿಸರಿನ್, ಮೇಣದ ಬತ್ತಿ, ಕೃತ್ರಿಮ ಚರ್ಮ ಮೊದಲಾದುವುಗಳ ತಯಾರಿಗಾಗಿ ಉಪಯೋಗಿಸುತ್ತಾರೆ. ಹತ್ತಿಯ ಕಾಳನ್ನು ಒಡೆಯುವ ಮತ್ತು ಅವುಗಳಿಂದ ಹಲವು ಬಗೆಯ ಪದಾರ್ಥಗಳನ್ನು ತಯಾರಿಸುವ ಕ್ರಮವು ದಕ್ಷಿಣ ಅಮೇರಿಕದಲ್ಲಿದೆ. ಇಂತಹ ಕಾರ್ಖಾನೆಯು ಈ ದೇಶದಲ್ಲಿಲ್ಲ. ೩೦-೩೫ ವರ್ಷಗಳ ಹಿಂದೆ ಹತ್ತಿಯ ಕಾಳುಗಳ ಎಣ್ಣೆ ತೆಗೆಯುವ ಯಂತ್ರಗಳು ಬಂದರೂ ಅವು ಬದುಕಿ ಉಳಿಯಲಿಲ್ಲ.

ಕಾಳಿನ ಎಣ್ಣೆ

ಇತ್ತೀಚಿನ ವರೆಗೂ ನಾವು ಅನೇಕ ಎಣ್ಣೆಯ ಕಾಳುಗಳನ್ನು ಪರದೇಶಗಳಿಗೆ ರವಾನಿಸುತ್ತಿದ್ದೆವು. ಆದರೆ ಹತ್ತು ಹದಿನೈದು ವರ್ಷಗಳಿಂದ ಕಾಳುಗಳಿಂದ ಎಣ್ಣೆ ತೆಗೆಯುವ ಕೈಗಾರಿಕೆಯು ನಮ್ಮ ದೇಶದಲ್ಲಿ ವಿಶೇಷವಾಗಿ ವೃದ್ಧಿಗೊಳ್ಳುತ್ತಿದೆ. ಕರ್ನಾಟಕದ ಪ್ರಾಂತ್ಯದಲ್ಲಿಯೂ ಇಂತಹ ಗಿರಣಿಗಳಿವೆ. ನೆಲಗಡಲೆಯ ಕಾಳುಗಳನ್ನು ಒಡೆಯುವಂತೆ ಜೌಡ್ಲ ಕಾಳು, ಅಗಸೆಯ ಕಾಳು, ಎಳ್ಳು ಕಾಳುಗಳನ್ನು ಒಡೆದು ಎಣ್ಣೆ ತೆಗೆಯುವ ಯಂತ್ರಗಳು ನಮ್ಮ ದೇಶದಲ್ಲಿ ಕಳೆದ ಹತ್ತು ಹದಿನೈದು ವರ್ಷಗಳಿಂದ ಹುಟ್ಟಿವೆ. ಇವುಗಳ ಉಪಯೋಗವು ಎಲ್ಲರಿಗೂ ತಿಳಿದಿದೆ. ನಮ್ಮಲ್ಲಿಯ ಜೌಡ್ಲ ಕಾಳು ದೊಡ್ಡ ದೊಡ್ಡ ಪ್ರಮಾಣದಲ್ಲಿ ಪರದೇಶಗಳಿಗೆ ಹೋಗಿ ಅಲ್ಲಿ ಅದರಿಂದ ಯಂತ್ರಗಳಿಗುಪಯೋಗಿಸುವ ಎಣ್ಣೆಯನ್ನು ತಯಾರಿಸುತ್ತಿದ್ದರು. ಮುಂಬಯಿಯ ಒಂದೆರಡು ಕಾರ್ಖಾನೆಗಳು ಜೌಡ್ಲ ಕಾಳುಗಳನ್ನು ಒಡೆದು, ಅವುಗಳಿಂದ ಎಣ್ಣೆ ತೆಗೆದು ಎಣ್ಣೆಯನ್ನು ಶುದ್ಧಗೊಳಿಸಿ ಪರದೇಶಗಳಿಗೆ ಕಳುಹಿಸುತ್ತಾರೆ. ನೆಲಗಡಲೆಯು ಯುರೋಪಿಗೆ ಬಹಳವಾಗಿ ರವಾನಿಸಲ್ಪಡುತ್ತದೆ. ಅಲ್ಲಿ ಅದರ ಎಣ್ಣೆಯಿಂದ ಹಲವು ಬಗೆಯ ಗಟ್ಟಿ ಎಣ್ಣೆಗಳನ್ನು ತಯಾರಿಸುತ್ತಾರೆ. ಇತ್ತೀಚೆ ಮುಂಬಾಯಿಯಲ್ಲಿಯೂ ಇಂತಹ ಎರಡು ಕಾರ್ಖಾನೆಗಳು ಸ್ಥಾಪಿಸಲ್ಪಟ್ಟಿವೆ.

ಪರಿಮಳ ದ್ರವ್ಯಗಳು ಮತ್ತು ಔಷಧಿಗಳು

ಹಳ್ಳಿಯ ಕೈಗಾರಿಕೆಗಳಿಗೂ ಔಷಧ ಮತ್ತು ಸುಗಂಧ ದ್ರವ್ಯಗಳಿಗೂ ಇರುವ ಸಾಮೀಪ್ಯ ಬಾಂಧವ್ಯವು ಹಲವರಿಗೆ ತಿಳಿದಿಲ್ಲ. ಸುಗಂಧ ದ್ರವ್ಯಗಳನ್ನೂ ಔಷಧಿಗಳನ್ನೂ ತಯಾರಿಸುವುದಕ್ಕೆ ವನಸ್ಪತಿಗಳು ಅವಶ್ಯ. ಈ ವನಸ್ಪತಿಗಳನ್ನು ರೈತರು ತಮ್ಮ ಭೂಮಿಗಳಲ್ಲಿ ಬೆಳೆಸಬಹುದು. ಹಿಂದೂದೇಶದಲ್ಲಿ ಆಹಾರಕ್ಕೆ ಬೇಕಾಗುವ ದವಸಧಾನ್ಯಗಳನ್ನು ಬೆಳೆಸುವ ಭೂಮಿಗಳೇ ಹೆಚ್ಚು ಹೊರತು ಗಿಡಮೂಲಿಕೆಗಳನ್ನು ಬೆಳೆಯಿಸುವ ಭೂಮಿಗಳೇ ಕಡಮೆ. ಉತ್ತರ ಹಿಂದೂದೇಶದ ಕನೋಜ, ಲಕ್ನೋ ಪ್ರಾಂತ್ಯಗಳಲ್ಲಿ ಈ ಕೃಷಿಯು ನಡೆಯುತ್ತಿದೆ. ಜರ್ಮನಿ, ಫ್ರಾನ್ಸ್, ಇಟಲಿ, ಹೊಲ್ಲೆಂಡ್, ಜಪಾನ ಮತ್ತು ಅಮೆರಿಕಾಗಳಲ್ಲಿ ಈ ಕೃಷಿಯು ಹೆಚ್ಚಿದೆ. ಅಲ್ಲಿ ಬೆಳೆದ ವನಸ್ಪತಿಗಳಿಂದ ಲವೆಂಡರ್, ಮಲ್ಲಿಗೆ ಮೊದಲಾದ ಸುಗಂಧ ದ್ರವ್ಯಗಳನ್ನು ತಯಾರಿಸಿ ವಿಶೇಷ ಬೆಲೆಗೆ ವಿಕ್ರಯಿಸುತ್ತಾರೆ. ಅಲ್ಲಿ ಸಾವಿರಾರು ಎಕ್ರೆ ಭೂಮಿಯಲ್ಲಿ ಈ ವನಸ್ಪತಿಗಳ ಸಾಗುವಳಿಯು ನಡೆಯುತ್ತದೆ. ಹಿಂದೂದೇಶದಲ್ಲಿ ಇಂತಹ ಸಸ್ಯಾದಿಗಳನ್ನು ಬೆಳೆಯಿಸುವುದರಿಂದ ಹೆಚ್ಚಿನ ಪ್ರಯೋಜನವಿದೆ. ಸಿಲೋನಿನಿಂದಲೂ ಜಾವಾದಿಂದಲೂ ಸಾವಿರಾರು ರೂಪಾಯಿ ಬೆಲೆಬಾಳುವ ಸಂಬೆಯ ಎಣ್ಣೆಗೆ ಸುಗಂಧ ದ್ರವ್ಯಗಳಿಗಾಗಿಯೂ ಲಕ್ಷಗಟ್ಟಲೆಯಾಗಿ ಹಣವನ್ನು ವ್ಯಯಿಸುತ್ತೇವೆ. ಮೆಂಥಾಲ್, ಪೆಪ್ಪರ್‌ಮಿಂಟುಗಳು ನಮ್ಮ ದೇಶಕ್ಕೆ ಬಂದು ನಮ್ಮ ದುಡ್ಡು ನೀರಾಗಿ ಹೋಗುತ್ತದೆ. ಜಂಜಿಬಾರಿನಿಂದ ಲವಂಗವು ಪ್ರತಿ ವರ್ಷ ಹಿಂದೂದೇಶಕ್ಕೆ ಬರುತ್ತದೆ. ನಮ್ಮ ದೇಶದ ಪಶ್ಚಿಮ ಕರಾವಳಿಯಲ್ಲಿನ ಅರಣ್ಯಗಳಲ್ಲಿ ಬೆಳೆಯುವ ಹಲವು ವನಸ್ಪತಿಗಳನ್ನು ನಾವು ಕಾಯ್ದುಕೊಂಡು ಉಪಯೋಗಿಸಿದರೆ ಬಹು ಲಾಭಕರವಿದೆ. ಕರ್ನಾಟಕ ಪ್ರಾಂತ್ಯದಲ್ಲಿ ಲಿಂಬೆಹಣ್ಣು ವಿಪುಲವಾಗಿ ದೊರೆಯುತ್ತದೆ. ಆದರೆ ಅದರ ಬೆಳೆಯನ್ನು ಲಾಭದಾಯಕವಾಗಿ ಮಾಡಿಕೊಳ್ಳಲು ನಮಗೆ ಸಾಧ್ಯವಾಗುವುದಿಲ್ಲ. ಇದರಿಂದ ಎಣ್ಣೆ ತೆಗೆಯುವ ಒಂದು ಕಾರ್ಖಾನೆಯನ್ನು ಭಾರತ ದೇಶದಲ್ಲಿ ಸ್ಥಾಪಿಸುವುದು ಕಷ್ಟವೇ ಅಗಿಲ್ಲ.

ಹಣ್ಣುಗಳ ರಕ್ಷಣೆ

ಅಂಜೂರದ ಹಣ್ಣು, ದ್ರಾಕ್ಷೆ ಹಣ್ಣು ಮೊದಲಾದ ಹಣ್ಣುಗಳನ್ನು ಒಣಗಿಸಿ ಅಥವಾ ಸಕ್ಕರೆಯ ಪಾಕದಲ್ಲಿ ಹಾಕಿಡುವ ಪದ್ಧತಿಯು ನಮ್ಮಲ್ಲಿ ಹೆಚ್ಚಾಗಿ ಇದೆ. ಆದರೆ ಅವುಗಳನ್ನು ಆಧುನಿಕ ರೀತಿಯಿಂದ ಕಾಯ್ದಿಡಲು ನಮ್ಮವರಿಗೆ ತಿಳಿದಿಲ್ಲ. ನಮ್ಮಲ್ಲಿ, ಒಂದೊಂದು ವಿಶಿಷ್ಟ ಸಮಯದಲ್ಲಿ ಬೆಳೆಯುವ ಹಣ್ಣು ಹಂಪಲುಗಳಿಗೆ ದೊರೆಯಬೇಕಾದ ವಿಶಿಷ್ಟ ಬೆಲೆಗಳತ್ತ ಕಡೆ ನಮ್ಮ ಗಮನವಿಲ್ಲ. ಇತ್ತೀಚೆಗೆ ಮುಂಬಾಯಿ ಸರಕಾರದವರು ಯುರೋಪಿಗೆ ಮಾವಿನ ಹಣ್ಣುಗಳನ್ನು ರವಾನಿಸಲಾರಂಭಿಸಿದ್ದಾರೆ. ಆದರೆ ಈ ವ್ಯಾಪಾರವು ದೊಡ್ಡ ಪ್ರಮಾಣದಲ್ಲಿ ನಡೆಯುವುದಿಲ್ಲ. ಪಶ್ಚಿಮ ಕರಾವಳಿಯಲ್ಲಿ ಕೆಲವು ಕಡೆ ಮಾವಿನ ಹಣ್ಣುಗಳನ್ನು ಕಾಯ್ದಿಡುವ ಕಾರ್ಖಾನೆಗಳು ಸ್ಥಾಪನೆಗೊಂಡಿವೆ. ಅವು ಎಷ್ಟರ ವರೆಗೆ ವ್ಯಾಪಾರದಲ್ಲಿ ಮುಂದೊತ್ತುವವೆಯೆಂದು ಹೇಳಬರುವುದಿಲ್ಲ. ನಾವು ದೊಡ್ಡ ಪ್ರಮಾಣದಿಂದ ಹಣ್ಣುಗಳನ್ನು ಕಾಯ್ದಿಡುವ ಕಾರ್ಖಾನೆಗಳನ್ನು ತೆರೆಯುವ ಬದಲಿಗೆ ಅಮೆರಿಕಾನರಂತೆ ಸಣ್ಣ ಪ್ರಮಾಣಗಳಲ್ಲಿ ಈ ಕೆಲಸವನ್ನು ಮಾಡಿದರೆ ಲಾಭವಿದೆ.

ಹಾಲು ಅದರ ಉಪಯೋಗ

ಕೇವಲ ಕೃಷಿಯ ಮೇಲೆಯೇ ಅವಲಂಬಿಸಿರುವ ನಮ್ಮ ದೇಶದಲ್ಲಿ ಹೈನಿನ ಉದ್ಯೋಗಕ್ಕೆ ಮನಸ್ಸು ಕೊಟ್ಟರೆ ಲೇಸು. ಈ ಕೈಗಾರಿಕೆಯು ಬೇಕಾದಷ್ಟು ವೃದ್ಧಿಯನ್ನು ಹೊಂದಿರುವುದಿಲ್ಲ. ಈಗಿನ ದಿನಗಳಲ್ಲಿ ನಮ್ಮ ಎಷ್ಟೋ ಮಕ್ಕಳಿಗೆ ಕುಡಿಯಲು ಹಾಲು ಸಿಗುವುದಿಲ್ಲ. ಹಾಗೆಂದು ನಮ್ಮ ದೇಶದ ಹಲವೆಡೆಗಳಲ್ಲಿ ಹೈನು ವಿಪುಲವಾಗಿ ಹಾಳಾಗುತ್ತಿದೆ. ಅದು ಬೇಗನೆ ಕೆಡುವ ಪದಾರ್ಥವಾದುದರಿಂದ ಅದನ್ನು ಕಾಯ್ದಿಡಲು ಏನಾದರೂ ಹಂಚಿಕೆ ಮಾಡಬೇಕು. ಅಮೆರಿಕಾ, ಡೆನ್ಮಾರ್ಕ್ ಮೊದಲಾದ ಕೆಲವು ದೇಶಗಳಲ್ಲಿ ಹಾಲಿನಿಂದ ಹಲವು ಬಗೆಯ ಭೋಜ ವಸ್ತುಗಳನ್ನು ತಯಾರಿಸುತ್ತಾರೆ. ಹಾಲನ್ನು ಕಡೆದು, ಬೆಣ್ಣೆ ತೆಗೆದು ಯಂತ್ರದ ಸಹಾಯದಿಂದ ಒಣಗಿಸಿ ಅದರ ಪುಡಿಯನ್ನು, ಮಕ್ಕಳಿಗೆ ಆಹಾರವಾಗಿ ಕೊಡುವ ವಸ್ತುಗಳೊಡನೆ ಸೇರಿಸುತ್ತಾರೆ. ಕೆಲವರು ಹಾಲನ್ನು ಕಡೆದು, ಬೆಣ್ಣೆ ತೆಗೆದು ಮಜ್ಜಿಗೆಯನ್ನು ತಯಾರಿಸುವರು. ಈ ನೀರ ಮಜ್ಜಿಗೆಯಿಂದಲೇ 'ಲ್ಯಾಕ್ಟೋಜ' ಎಂಬ ಸಾರವನ್ನು ತೆಗೆಯುವರು. ಈ ಸಾರವನ್ನು ಔಷಧ ಮತ್ತು ಆಹಾರ ಪದಾರ್ಥಗಳಿಗೆ ಉಪಯೋಗಿಸುತ್ತಾರೆ.

ನಾವು ನಮ್ಮ ದೇಶದ (Raw materials) ಹಸಿ ಸರಕುಗಳಿಂದ ನಮಗೆ ಬೇಕಾದ ಸರಕುಗಳನ್ನು ತಯಾರಿಸಿಕೊಳ್ಳುವಷ್ಟು ಸಮರ್ಥರಾಗಬೇಕು. ಜಪಾನರು ನಮ್ಮ ದೇಶದಿಂದ ಹತ್ತಿಯನ್ನು ಕೊಂಡು ಅದರಿಂದ ನಾನಾ ಬಗೆಯ ಬಟ್ಟೆಬರೆಗಳನ್ನು ಸಿದ್ಧಮಾಡಿ, ನಮ್ಮ ದೇಶಿಗರು ವಿಕ್ರಯಿಸುವುದಕ್ಕಿಂತಲೂ ಅಗ್ಗವಾಗಿ ವಿಕ್ರಯಿಸುತ್ತಾರೆ. ಅವರ ಸರಕಿನ ಮೇಲೆ ಹೇರಳವಾದ ಸುಂಕವನ್ನು ಹಾಕಲಾಗಿದೆಯಾದರೂ ಅವರು ಆ ಸುಂಕವನ್ನು ತೆತ್ತು, ಎಲ್ಲಾ ವೆಚ್ಚವನ್ನು ಮಾಡಿ, ತಮ್ಮ ಸರಕುಗಳನ್ನು ನಮಗಿಂತ ಅಗ್ಗವಾಗಿ ಮಾರುತ್ತಿರುವುದು ನಮಗೆ ಗೋಚರಿಸುತ್ತದೆ. ಹಿಂದೀಯ ಭಂಡವಾಳಿಗರು ಈ ಕಡೆ ಸ್ವಲ್ಪ ಗಮನವಿತ್ತರೆ, ನಾವು ಕೂಡಾ ನಮ್ಮ ಹತ್ತಿಯಿಂದ ಅಗ್ಗವಾದ ವಸ್ತ್ರಗಳನ್ನು ತಯಾರಿಸುವುದು ಕಷ್ಟವಾಗದು.

ಬಾಹ್ಯ ಪ್ರಪಂಚ ಪರಿಚಯ.

[ಜಗತ್ತಿನ ಎಲ್ಲಾ ರಾಷ್ಟ್ರಗಳ ವಿವರಗಳನ್ನು ಈ ಪುಟದಲ್ಲಿ ಕ್ರಮಶಃ ಸಂಕ್ಷಿಪ್ತವಾಗಿ ಪ್ರಕಟಿಸುತ್ತ ಬಂದು, ನಮ್ಮ ವಾಚಕರಿಗೆ ಬಾಹ್ಯಪ್ರಪಂಚದ ಪರಿಚಯವನ್ನು ಮಾಡಿಕೊಡಬೇಕೆಂದು ನಿರ್ಣಯಿಸಲಾಗಿದೆ-ಸಂ]

ಜಪಾನಿನ ಪೂರ್ವ ನಿವಾಸಿಗಳು.

ಜಪಾನಿನ ಪೂರ್ವ ನಿವಾಸಿಕರನ್ನು ಐನು ಎಂದು ಕರೆಯುತ್ತಿದ್ದರು. ಈ ಐನು ವಂಶಸ್ಥರು ಹಲವು ಶತಮಾನಗಳ ವರೆಗೆ ಜಪಾನಿನ ದ್ವೀಪಗಳಲ್ಲಿ ವಾಸಿಸುತ್ತಿದ್ದರು. ಆದರೆ ಕೊರಿಯಾ ಮೊದಲಾದ ದ್ವೀಪಗಳಲ್ಲಿನ ಬಲಿಷ್ಠ ಜಪಾನೀಯರು ಬಂದೊಡನೆ ಅವರು ಹೊಕ್ಕೈಡೊ ಕುರೈಲ್ ಮೊದಲಾದ ಸಣ್ಣ ಸಣ್ಣ ದ್ವೀಪಗಳಿಗೆ ಹೋದರು. ಈ ವಂಶಸ್ಥರು ಈಗಲೂ ಜಪಾನಿನ ಸುತ್ತುಮುತ್ತಲಿರುವ ಸಣ್ಣ ಸಣ್ಣ ದ್ವೀಪಗಳಲ್ಲಿ ವಾಸಿಸುತ್ತಿದ್ದು, ತಮ್ಮ ಪೂರ್ವಿಕರು ಜಪಾನಿನ ಆಳ್ವಿಕೆಯನ್ನು ಮಾಡುತ್ತಿದ್ದ ಚರಿತ್ರೆಯನ್ನು ಹೇಳುತ್ತಿರುವರು

ಜಪಾನಿನ ಈಗಿನ ಜನರು.

ಜಪಾನಿನ ಈಗಿನ ಜನರು ಬೆಳ್ಳಗಿರುತ್ತಾರೆ. ಇವರ ಕಣ್ಣುಗಳ ಹುಬ್ಬುಗಳೂ ಹೆಚ್ಚಾಗಿ ಕಾಣುವುದೇ ಇಲ್ಲ ಮುಖವು ಉರುಟಾಗಿರುತ್ತದೆ ಕೈಕಾಲುಗಳು ಉದ್ದವಾಗಿರುವುದಿಲ್ಲ ಇವರು ಮಂಗೋಲಿಯಾದಿಂದಲೋ ಕೊರಿಯಾದಿಂದಲೋ ಜಪಾನಿಗೆ ಬಂದರೆಂದು ಇತಿಹಾಸವು ಹೇಳುತ್ತದೆ ಈ ಜನರು ಸದಾ ಶ್ರಮಸಾಹಸಿಗಳೇ ಜಪಾನಿಯರ ಒಂದು ವಿಶಿಷ್ಟಗುಣವೆಂದರೆ ಅವರು ಸದಾ ಉದ್ಯೋಗವಶರಾಗಿಯೇ ಇರುವರು ಔದಾಸೀನ್ಯವೆಂಬುದು ಅವರಿಗೆ ತಿಳಿಯದ ಗುಣ ಬಡತನ ಅಥವಾ ಶ್ರೀಮಂತಿಕೆಗಳನ್ನು ಅವರು ಗಣಿಸುವವರೇ ಅಲ್ಲ

ಕಲಾಭಿಮಾನಿಗಳು

ಜಪಾನಿಯರು ಕಲಾಭಿಮಾನಿಗಳು ಅವರು ಬಣ್ಣಗಳನ್ನು ಮೆಚ್ಚುವಷ್ಟು ಯಾವ ಜನಾಂಗಿಕರೂ ಮೆಚ್ಚುವುದಿಲ್ಲ ಅವರು ಸೌಂದರ್ಯೋಪಾಸಕರೂ ಅಹುದು ಅವರ ಪ್ರತಿಯೊಂದು ಕೆಲಸದಲ್ಲೂ ಅವರ ಸೌಂದರ್ಯಪ್ರಿಯತೆಯು ಒಡೆದುಕಾಣುತ್ತದೆ ಅವರ ಶ್ರಮಸಹಿಷ್ಣುತೆಯು ಅವರನ್ನು ಎಂತಹ ಅಸಾಧ್ಯ ವಿಷಯವನ್ನೂ ಸಾಧ್ಯವಾಗಿ ಮಾಡುತ್ತದೆ ವಿಧೇಯತೆ ಮತ್ತು ಭಕ್ತಿ ಎಂಬವುಗಳು ಅವರ ಮತ್ತೆರಡು ಲಕ್ಷಣೀಯವಾದ ಗುಣಗಳು ಜಪಾನನ್ನು "ಗೃಹಸ್ಥರ ಭೂಮಿ" ಎಂದು ಕರೆಯುವುದು ಅವರ ಅತಿಥಿಸತ್ಕಾರದ ಗುಣಕ್ಕಾಗಿ

ಅವರ ಕ್ರಮನಿಯಮಗಳು.

ಜಪಾನಿಗಳ ಮನೆಮಂದಿರಗಳು ಸುಂದರವಾಗಿಯೇ ಕಟ್ಟಲ್ಪಡುತ್ತವೆ ಕಟ್ಟಡಗಳಿಗೆ ಮಣ್ಣನ್ನುಪಯೋಗಿಸುವ ಕ್ರಮವು ಅವರಲ್ಲಿ ಕಡಮೆ ಎಲ್ಲವೂ ಕಾಗದದ ಕೆಲಸ ಗೋಡೆಗಳನ್ನೂ ದಪ್ಪ ಕಾಗದಗಳಿಂದಲೇ ರಚಿಸುತ್ತಾರೆ ಮನೆಯ ಮಾಡುಗಳನ್ನು ಮಾತ್ರ ಗಟ್ಟಿಯಾಗಿ ಕಟ್ಟುತ್ತಾರೆ ಅವರ ಕೋಣೆಗಳ ಬಾಗಿಲುಗಳೆಲ್ಲ ಆಧುನಿಕ ಕ್ರಮಗಳಿಂದ ರಚಿಸಲ್ಪಡುತ್ತವೆ ಕುರ್ಚಿಮೇಜುಗಳ ಉಪಯೋಗವು ಅವರಲ್ಲಿ ಕಡಿಮೆ ಅವರಲ್ಲಿ ಶ್ರೀಮಂತರೂ ಬಡವರೂ ನೆಲದ ಮೇಲಿನ ಹಾಸಿಗೆಯಲ್ಲೇ ಕುಳಿತುಕೊಳ್ಳುವ ಕ್ರಮ

ಜಪಾನಿಗಳ ಉಡುಗೆತೊಡಿಗೆಗಳು.

ಜಪಾನ್ ಸ್ತ್ರೀಯರ ಉಡಿಗೆತೊಡಿಗೆಗಳೆಂದರೆ ಗಾದೆಯ ವಿಷಯವಾಗಿದೆ ಕಿಮೊನೋ ಎಂಬ ಅಂಗವನ್ನವರು ಧರಿಸುತ್ತಾರೆ ಈ ಅಂಗವು ವಿವಿಧ ವರ್ಣಗಳಿಂದ ಶೋಭಿಸುತ್ತಿದ್ದರೇನೇ ಅದನ್ನು ಧರಿಸಿದವರಿಗೆ ಗೌರವವೆಂದು ಜಪಾನ್ ಸ್ತ್ರೀಯರ ಕಲ್ಪನೆ ಅಲ್ಲಿಯ ಪುರುಷರು ಹೆಚ್ಚಾಗಿ ಯುರೋಪಿಯನ್ ಉಡಿಗೆತೊಡಿಗೆಗಳನ್ನು ತೊಡಲಾರಂಭಿಸಿರುವರು ಮನೆಯಿಂದ ಹೊರಗೆ ಹೋಗುವಾಗ ಯುರೋಪಿಯನ್ ಉಡಿಗೆ ಅವರು ಮನೆಗೆ ಹಿಂತಿರುಗಿದೊಡನೆ ಅವುಗಳನ್ನು ತೆಗೆದಿಟ್ಟು ಹಿಂದೀಯ ಉಡಿಗೆತೊಡಿಗೆಗಳನ್ನು ಧರಿಸುವರು. ಮನೆಯನ್ನು ಹೊಗುವ ಮೊದಲು ಪಾದರಕ್ಷೆಗಳನ್ನು ಹೊರಗೆ ತೆಗೆದಿಡುತ್ತಾರೆ

ಜಪಾನಿನ ಈಗಿನ ಮಹಿಳೆಯರು

ಜಪಾನಿನ ಸ್ತ್ರೀಯರು ಪುರುಷರ ಗುಲಾಮರೆಂಬ ಭಾವನೆಯು ಪ್ರಾಚೀನ ಕಾಲದಲ್ಲಿತ್ತು ಆದರೆ, ಈಗೀಗ ಅವರು ಹೆಚ್ಚಿನ ಮಟ್ಟಿಗೆ ಸ್ವಾತಂತ್ರ್ಯವನ್ನು ವಹಿಸಿಕೊಂಡಿರುವರು ಈಗ ಸ್ತ್ರೀಯರು ಕೂಡಾ ಪುರುಷರಷ್ಟೇ ದೇಹಶ್ರಮದಿಂದ ಕೆಲಸವನ್ನು ಮಾಡಿ ಅವರಷ್ಟೇ ಸಂಪಾದನೆಯನ್ನು ಮಾಡುತ್ತಿದ್ದಾರೆ ಪ್ರತಿಯೊಂದು ಉದ್ಯೋಗದಲ್ಲೂ ಜಪಾನ್ ಸ್ತ್ರೀಯರಿರುತ್ತಾರೆ ಜಪಾನ್ ತರುಣಿಯರು ಅನೇಕಾನೇಕ ಖಚೇರಿಗಳಲ್ಲೋ ವ್ಯಾಪಾರೀ ಸಂಸ್ಥೆಗಳಲ್ಲೋ ಕರಣಿಕರಾಗಿಯೋ ದಲ್ಲಾಲಿಗಳಾಗಿಯೋ ಇರುತ್ತಾರೆ

ಗೊಂಬೆಗಳ ಕೈಗಾರಿಕೆ

ಗೊಂಬೆಗಳನ್ನು ತಯಾರಿಸುವ ಕೈಗಾರಿಕೆಯು ಜಪಾನಿನಲ್ಲಿ ಎಲ್ಲೆಲ್ಲೂ ಹರಡಿಕೊಂಡಿದೆ ಜನತೆಯ ಮನಸ್ಸನ್ನಾಕರ್ಷಿಸುವ ಅಲ್ಪ ಬೆಲೆಯ ವಸ್ತುಒಡವೆಗಳನ್ನು ತಯಾರಿಸಿ ಹೇರಳ ದ್ರವ್ಯ ಸಂಪಾದನೆ ಮಾಡಿದವರು ಅಲ್ಲಿರುತ್ತಾರೆ ಜಪಾನನ್ನು 'ಮಕ್ಕಳ ಸ್ವರ್ಗ' ಎಂದು ಕರೆಯುವುದೂ ಉಂಟು ಮಾರ್ಚಿ 3ನೇ ದಿನ ಅಲ್ಲಿ ಹುಡುಗಿಯರ ಹಬ್ಬ ಆ ದಿನ ಗೊಂಬೆಗಳ ವಿವಾಹವೋ ಗೊಂಬೆಗಳ ಆಟವೋ ನಡೆಯುತ್ತವೆ ಮೇ 6ನೇ ದಿನ ಅಲ್ಲಿ ಹುಡುಗರ ಹಬ್ಬ ಆ ದಿನದಲ್ಲಿ ಗೊಂಬೆಗಳ ವ್ಯಾಪಾರವು ಅಲ್ಲಿ ಎಲ್ಲೆಲ್ಲಿಯೂ ನಡೆಯುತ್ತದೆ

ಪೆಜಿಯಾಮಾ.

ಫೆಜಿಯಾಮಾ ಎಂಬ ಜ್ವಾಲಾಮುಖಿಯ ಶಿಖರವು ಅಲ್ಲಿ ಪರಮಪವಿತ್ರವೆಂದು ಪರಿಗಣಿಸಲ್ಪಟ್ಟಿದೆ ವರ್ಷಂಪ್ರತಿ ಅಲ್ಲಿಯ ಜನರು ಈ ಜ್ವಾಲಾಮುಖಿಯ ಶಿಖರವನ್ನೇರಿ, ಅಲ್ಲಿಯ ದೇವತೆಗಳನ್ನಾರಾಧಿಸುತ್ತಾರೆ ಜಗತ್ತಿನಲ್ಲೇ ಅತಿ ಸುಂದರವಾದ ಪರ್ವತವೆಂದು ಈ ಜ್ವಾಲಾಮುಖಿಯ ಶಿಖರವು ಪ್ರಸಿದ್ಧವಾಗಿದೆ ಟೋಕಿಯೋದಿಂದ 80 ಮೈಲುಗಳ ದೂರದಲ್ಲಿ ಸರೋವರಗಳ ಮಧ್ಯೆಯೂ ವನಗಳ ನಡುವೆಯೂ ಈ ಶಿಖರವು ನಿಂತಿದೆ ಈ ಜ್ವಾಲಾಮುಖಿಯು ಈಗ ಶಾಂತವಾಗಿದೆ

ಹೂಗಿಡಗಳ ವ್ಯಾಪಾರ.

ಜಪಾನಿನಲ್ಲಿ ನಿರುದ್ಯೋಗಿಗಳೇ ಇಲ್ಲವೆನ್ನಬಹುದು ಸಣ್ಣ ಮಕ್ಕಳಿಂದ ಮೊದಲ್ಗೊಂಡು ಮುದುಕರ ವರೆಗಿನವರೂ ಮನೆಕಸಬುಗಳನ್ನು ಕಲಿತುಕೊಂಡಿರುತ್ತಾರೆ ಸಣ್ಣ ಮಕ್ಕಳು ಬಣ್ಣಬಣ್ಣದ ಹೂಗಿಡಗಳನ್ನು ಸಣ್ಣ ಸಣ್ಣ ಪಾತ್ರೆಗಳಲ್ಲಿ ನೆಟ್ಟು, ಅವುಗಳನ್ನು ಶ್ರೀಮಂತರ ಮನೆಮಂದಿರಗಳ ಶೃಂಗಾರಾರ್ಥ ವಿಕ್ರಯಿಸುತ್ತಾರೆ ದೊಡ್ಡವರು ಗೂಡುದೀಪಗಳನ್ನೋ, ಬಣ್ಣದ ಕಾಗದಗಳ ದ್ವೀಪಗಳನ್ನೋ ರಚಿಸುತ್ತಾರೆ ದೊಡ್ಡವರು ಕೃಷಿಕೈಗಾರಿಕೆಯನ್ನನುಸರಿಸುತ್ತಾರೆ ಉಳುವ ಸಾಮಗ್ರಿಗಳು ಆಧುನಿಕವಲ್ಲ-ಹಳೆಯ ಕ್ರಮದವುಗಳೇ

ಅಕ್ಕಿ—ಚಾ

ಜಪಾನಿನಲ್ಲಿ ಎಲ್ಲೆಲ್ಲೂ ಅಕ್ಕಿಯ ಸಾಗುವಳಿಯು ನಡೆಯುತ್ತದೆ ಅಕ್ಕಿಯು ಪರದೇಶಗಳಿಗೆ ರಫ್ತಾಗುತ್ತದೆಯಾದರೂ ಅವರು ಬಳಸುವ ಚಹಾವು ಪರದೇಶಗಳಿಗೆ ಹೋಗುವುದಿಲ್ಲ ಚಹಾದ ಬೆಳೆಯು ಅಲ್ಲಿ ಇತ್ತೀಚೆಗೆ ಹೆಚ್ಚುತ್ತಿದೆ ಎಷ್ಟು ಚಹಾ ಬೆಳೆದರೂ ಅಲ್ಲಿಯವರು ಚಹಾವನ್ನೇ ಕುಡಿಯುವ ಅಭ್ಯಾಸವುಳ್ಳವರಾದುದರಿಂದ, ಅವರಿಗೆ ಚಹಾವನ್ನು ಪರದೇಶಗಳಿಗೆ ಕಳುಹಿಸಲು ಸಾಧ್ಯವಾಗುವುದಿಲ್ಲ ಶ್ರೀಮಂತರ ಹೆಂಗಸರು ಕೂಡಾ ಅಲ್ಲಿ ಚಹಾ ತೋಟಗಳನ್ನು ಮಾಡಿಕೊಂಡು ತಮ್ಮ ಸ್ವಂತ ಸಂಪಾದನೆಯನ್ನು ಮಾಡುತ್ತಿರುವರು

ಜಪಾನರ ಆಹಾರ

ಜಪಾನರು ಅಕ್ಕಿ, ಗೋಧಿ, ರಾಗಿ ಜೋಳ ಮೊದಲಾದುವುಗಳನ್ನು ತಿನ್ನುತ್ತಾರೆ ಯಾವ ಆಹಾರವೇ ಇರಲಿ,-ಅವರಿಗೆ ಮೀನು ಎಂದರೆ ಪ್ರಾಣ ಮೀನು ಇಲ್ಲದ ಊಟವು ಅಲ್ಲಿ ಕಡಮೆಯೆನ್ನಬಹುದು 1923ರಲ್ಲಿ ಟೋಕಿಯೋದಲ್ಲಿ ಭೂಕಂಪವಾಗಿ ಅಲ್ಲಿನ ದೊಡ್ಡ ಮೀನಿನ ಮಾರ್ಕೆಟು ನಾಶವಾಯಿತು. ಆದರೆ 17 ದಿನಗಳೊಳಗೆ ಪುನಃ ಅದಕ್ಕಿಂತಲೂ ದೊಡ್ಡ ಮೀನಿನ ಮಾರ್ಕೆಟು ಅಲ್ಲಿ ರಚಿಸಲ್ಪಟ್ಟಿತು ಅಲ್ಲಿಯ ನದಿ, ಸರೋವರ—ಮತ್ತು ಸಮುದ್ರಗಳಲ್ಲಿ ಅವರಿಗೆ ಬೇಕಾದ ಮೀನು ಸಾಕಷ್ಟು ಸಿಗುತ್ತದೆ

ಮೀನು ಹಿಡಿಯುವ ಕ್ರಮ

ಜಪಾನರ ಮೇಧಾಶಕ್ತಿಯು ಅದ್ವಿತೀಯವಾದುದು ಅಲ್ಲಿಯ ಬೆಸ್ತರು ಮೀನು ಹಿಡಿಯಲು ಹೊಸ ಕ್ರಮವನ್ನೇ ಕಂಡುಹಿಡಿದಿರುವರು. ಒಂದು ಕುಕ್ಕೆಯಲ್ಲಿ ಒಂದು ನೀರುಕೋಳಿಯನ್ನು ಕುಳ್ಳಿರಿಸುವರು ಆ ಕುಕ್ಕೆಯನ್ನು ನೀರಲ್ಲಿಟ್ಟು ಅದರೊಳಗೆ ವಿದ್ಯುತ್ತಿನ ಮೂಲಕ ಒಂದು ಪ್ರಕಾಶವನ್ನು ಮಾಡುವರು ಒಡನೆ ಮೀನುಗಳು ಕುಕ್ಕೆಯನ್ನು ಪ್ರವೇಶಿಸುವುವು ಈ ಪಕ್ಷಿಯು ಒಂದೊಂದೇ ಮೀನನ್ನು ನೀರಿನಿಂದೆತ್ತಿ ಮೇಲಕ್ಕೆ ಕೊಡುವುದು ಅದನ್ನು ಬೆಸ್ತರು ತೆಗೆದು ಸಂಗ್ರಹಿಸುವರು ಆ ಪಕ್ಷಿಯು ಮೀನುಗಳನ್ನು ನುಂಗಿಬಿಡದಂತೆ ಅದರ ಕೊರಳಿಗೆ ಸರಪಣಿಗಳನ್ನು ಕಟ್ಟುವರು

ಬೆನ್ನ ಮೇಲೆ ಮಕ್ಕಳು.

ನಾವು ಮಕ್ಕಳನ್ನು ಕಂಕುಳಲ್ಲಿರಿಸುವವು ಆದರೆ ಜಪಾನೀಯರು ಅವರ ಮಕ್ಕಳನ್ನು ತಮ್ಮ ಬೆನ್ನ ಮೇಲೆಯೇ ಹಾಕಿಕೊಳ್ಳುವರು ಮಗುವನ್ನು ಹೊರುವ ತಾಯಿ ಮೊದಲು ಒಂದು ದೊಡ್ಡ ವಸ್ತ್ರವನ್ನು ತನ್ನ ಎದೆಯ ಮೇಲಿಂದೆ ಳೆದ ಬೆನ್ನಿಗ ಕಟ್ಟಿಕೊಳ್ಳವಳು ಆ ಗಂಟಿನ ಎಡೆಯೊಳಗೆ ಮಗುವಿನ ಕಾಲುಗಳನ್ನು ತೂರಿಸಿ ಅದನ್ನು ಕಟ್ಟಿರಿಸುವಳು ಹೀಗೆ ಮಾಡಿ ತನ್ನ ಎರಡು ಕೈಗಳನ್ನು ಇತರ ಸಣ್ಣ ಸಣ್ಣ ಕೈಗಾರಿಕೆಗಳಿಗೆ ಉಪಯೋಗಿಸುವಳು

ಕೊನೆಯ ಮಾತು

ಈ ಎರಡು ವಾರಗಳಲ್ಲಿ ನಮ್ಮ ವಾಚಕರಿಗೆ ಜಪಾನಿನ ಕುರಿತು ಕೆಲವು ವಿಷಯಗಳನ್ನು ತಿಳಿಸಿದ್ದಾಯಿತು ಬರುವ ವಾರದಿಂದ ಮೊದಲ್ಗೊಂಡು ನಾವು ಹಂಗೇರಿಯಾಕ್ಕೆ ಹೋಗಿ ಅಲ್ಲಿಯ ಸ್ಥಿತಿಗತಿಗಳನ್ನು ತಿಳಿದುಕೊಳ್ಳೋಣ— ನಿರೀಕ್ಷಿಸಿರಿ

KANNADA SAVINGS CERTIFICATES

Cashed even before maturity

available in denominations of Rs 10/ and above

TOTAL YIELD RS 4-6-0% P. A

Paid once half yearly at 3½% p a.

with an additional 1¼% p a. on maturity

If Left To Accumulate

RS. 100/- Will Amount to RS. 122-13-6

Full Particulars from.—

CANARA BANK LTD.,

Estd 1906.

OFFICES AT

Bombay-Fort, Bombay-Mandvi, Hubli, Calicut, Cochin, Ernakulam, Alleppey, Bangalore, Davangere, Chickmagalur, Mangalore-Bunder, Mangalore-City, Kasaragod, Puttur, Buntwal, Karkala, Udipi, Coondapoor & Gangoli.

Subscribed Capital	Paid up Capital	Reserves	Deposits	Working Capital
6,00,000	3,31,000	4,50,000	58,62,000	73,49,000

ಅನುಕ್ರಮಣಿಕೆ.

ಇಂಗ್ಲಂಡಿನ ೧೫೦೦ ವಿಮಾನಗಳನ್ನು ಬೇಗನೇ ಕಟ್ಟಿಸಲಿದೆ ೧
ಅಸ್ತ್ರ . . . ೨
ಪತ್ರಿಕಾಪ್ರಪಂಚ . . . ೩
ಕರ್ನಾಟಕ ವರ್ತಮಾನ, ೫
ಮ| ರಾ| ರಾ| ವಸನಪ್ಪನವರು . . ೬
ಕೃಷಿ ಮತ್ತು ರಸಾಯನಿಕ ಉದ್ಯೋಗಗಳು, ೮
ಅಗ್ರಲೇಖ
ಟಿಪ್ಪಣಿಗಳು ೧೮
ಸ್ಫುಟವಿಚಾರಗಳು . ೯
ನಾಟಕಗಳಿಗೆ ಏನು ಬೇಕು? . . ೧೦
ವರ್ತಮಾನ ಸಂಗ್ರಹ
ಪ್ರಧಾನ ಮಂತ್ರಿಯವರು ರಾಜೀನಾಮೆ ಕೊಡುವುದು ನಿಜ, ... ೧೩
ಮಂಗಳೂರು, ತಾಲೂಕುಗಳಿಂದ ೧೨
ವಿವಿಧ ಸಮಾಚಾರಗಳು, . ೧೬
"ಕೃಷ್ಣ ಪ್ರಕಾಶ"ದ ಮದುವೆ ೧೪

ಸ್ವದೇಶಾಭಿಮಾನಿ

ತಾ. ೩೧ನೇ ಶುಕ್ರವಾರ ಮೇ ೧೯೩೫

ನಾಟಕಗಳಿಗೆ ಏನು ಬೇಕು?

ಮಂಗಳೂರು, ರಸಿಕರ ನಾಡೆಂದು ಬಲು ಪ್ರಸಿದ್ಧವಾಗಿದೆ. ನಮ್ಮಲ್ಲಿ ಸುಶಿಕ್ಷಿತರ ಸಂಖ್ಯೆಯು ಅಧಿಕ. ಹಲವು ಆಂಗ್ಲ ನಾಟಕ ಗ್ರಂಥಗಳನ್ನು ಓದುವವರಿದ್ದಾರೆ. ಕಲಾ ವಿಮರ್ಶೆ ಮಾಡಬಲ್ಲವರಿದ್ದಾರೆ. ಅಂಥವರು ನಾಟಕಗಳಲ್ಲಿ ವಾಟರ್ಗಳನ್ನು ಮಾಡುತ್ತಾರೆ. ಮಂಗಳೂರಿನಲ್ಲಿ ಎಮೆಚೂರ್ ನಾಟಕಗಳು ಏಳೆಂಟಾದರೂ ಇವೆ. ಕೆಲವರು ಅದರಿಂದ ನಷ್ಟಪಟ್ಟರೂ, ಕೆಲವರು ಲಾಭಗೊಂಡಿದ್ದಾರೆ. ಈ ಬಾರಿ, ಅಂದರೆ ಸದ್ಯಕ್ಕೇನೆ ನಮ್ಮ ಊರಿಗೆ ವಯಸ್ಸಾಗಿರುವ ನಾಟಕ ಮಂಡಲವೊಂದು ಬಂದಿರುತ್ತದೆ. ಅವರು 'ತಮ್ಮನ್ನು ಹೇಗಾದರೂ ಮಾಡಿ ಊರಿಗೆ ಸಾಗಿಸಿ' ಎಂದು ಸಾರ್ವಜನಿಕ ವಿನಂತಿಯನ್ನು ಮಾಡಿರುವುದನ್ನು ಕಂಡು ಈ ಲೇಖನವನ್ನು ಬರೆಯಲು ತೊಡಗಿದ್ದೇವೆ.

ನಾಟಕವನ್ನು ನಾವು ಎರಡು ಪ್ರಮುಖ ದೃಷ್ಟಿಯಿಂದ ನೋಡಬಹುದು. ಒಂದು ಕೇವಲ ಕಲಾದೃಷ್ಟಿಯಿಂದ, ಇನ್ನೊಂದು ಕೇವಲ ವ್ಯಾಪಾರಿ ದೃಷ್ಟಿಯಿಂದ. ವ್ಯವಸಾಯಿಗಳು ಈ ದೃಷ್ಟಿಯಿಂದ ನಾಟಕ ನೋಡುವುದು ಸರಿಯೇ. ಇದೇ ದೃಷ್ಟಿಯಿಂದ ಹಿಂದೆ ಮಂಗಳೂರಿನಲ್ಲಿ ಒಂದೊಂದು ನಾಟಕಕ್ಕೆ ಸಾವಿರ, ಎರಡು ಸಾವಿರ ರೂಪಾಯಿಗಳ ತನಕವೂ ಸುರಿದ ನಾಗರಿಕರು ನಮ್ಮವರು. ಆದರೆ ಈಗ ಅಂಥ ದಿವಸಗಳನ್ನು ಕಾಣುವುದಿಲ್ಲ. ಇಂದೇನು ಆಗಿದೆ? ನಾವು ಸುಧಾರಿಸಿದ್ದೇವೆಯೆ? ಇದೇ ಕಠಿಣದ ಪ್ರಶ್ನೆ. ವ್ಯವಸಾಯದವರ ದೃಷ್ಟಿಯಿಂದ ಈ ಪ್ರಶ್ನೆಯನ್ನು ಹೀಗೆ ಕೇಳಬಹುದು 'ನಾಟಕಗಳಿಗೆ ಏನು ಬೇಕು?' ಎಂದು.

ಒಂದು ಕಾಲದಲ್ಲಿ ನಾಟಕವೆಂದರೆ ಸಂಗೀತ ಮಾಲಿಕೆ. ಅದಕ್ಕೆ ನಡುವೆ ನಾಲ್ಕಾರು ಗದ್ಯದ ಪದಗಳನ್ನು ಸೇರಿಸಿದರೆ ಮುಗಿಯಿತು. ಅಂಥ ನಾಟಕಗಳನ್ನು ಕಂಡು ಜನರು 'ಅಬ್ಬಾ, ಏನು ಸಂಗೀತ'ವೆಂದರು. ಈಗ ಅವರ ಮುಂದೆ ಗದ್ಯಾತ್ಮಕವಾದ ನಾಟಕವಾಡಿರಿ. ಆಗ ಅವರು 'ಬರೇ ಪ್ರೋಸು ಯಾರಿಗೆ ಬೇಕು?' ಎನ್ನುತ್ತಾರೆ. ಅವರೇ ಜನರು ಅರ್ಥವಾಗದ ಮರಾಠಿ ಭಾಷೆಯಲ್ಲಿ ದೀನನಾಥನ ಕಂಪೆನಿಯವರು ಬಂದರೆ 'ಎಂಥ ಗದ್ಯ'—ಎಂದು ಹೊಗಳಿ ಹಣ ಸುರಿಯುತ್ತಾರೆ. ಇತ್ತ—ಸದಾರಮೆ, ಪ್ರಭಾಮಣಿ, ಲಂಕಾದಹನದಂಥ ನಾಟಕವನ್ನು ಬೈಯುವವರು ಹೋಗಿ ನೋಡುವ ಜನರೇ ಅದನ್ನೇ ನಿಂದಿಸುತ್ತಾರೆ. ಇದೆಲ್ಲ ನಮ್ಮ ಸುಶಿಕ್ಷಿತರ ಹಾಡು. ಎಷ್ಟು ಉತ್ತಮ ಐರೋಪ್ಯ ನಾಟಕಗಳನ್ನು ಓದಿದರೂ, ರಂಗಭೂಮಿಯ ಮೇಲೆ ಅವರಿಗೆ ಸದಾರಮೆಗಿಂತ ಹೆಚ್ಚಿನ ನಾಟ್ಯ ರುಚಿ ಸದು. ಅವರೇ ಜನರು—ನಮ್ಮಲ್ಲಿ ಸದಾರಮೆ ನಾಟಕ ಕಂಡು—ಸಾಮಾಜಿಕ ನಾಟಕವಿಲ್ಲವೇ? ಎಂದು ಕೇಳುತ್ತಾರೆ. ಸಾಮಾಜಿಕ ನಾಟಕ ನಾಟಕವೆಂದೊಡನೆ ಅವೂ ರಂಗಭೂಮಿಗೆ ಬರುತ್ತವೆ. ನಿಮಿಷಕ್ಕೆ 'ಹತ್ತು ಬಾರಿ ದೇಶಸೇವೆ ಮಾಡುವ ನಾಟಕಗಳು ಬರುತ್ತವೆ. ಅವನ್ನು ನೋಡಿ ಚಪ್ಪಾಳೆ ಹೊಡೆಯುತ್ತಾರೆ. ನಾಳೆ ತಿರುಗಿ ಆ ನಾಟಕ ಆಡಿದರೆ ಜನರೇ ಇಲ್ಲ. ಕೃಷ್ಣಲೀಲೆಗೆ ಹೋಗುವ ಜನರೂ ಸಮಾಜಿಕ ನಾಟಕಕ್ಕೆ ಇಲ್ಲ. 'ನಮಗೆ ಸೀದಾ ನಾಟಕ ಬೇಕು, ನಿಮ್ಮ ಟ್ರಾನ್ಸ್ಲೇಶನ್ ಬೇಡ'—ಅನ್ನುತ್ತೀರಾ? ಸೀದಾ ನಾಟಕ ಆಡಿದರೂ ನಿಮಗೆ ಹಣವಿಲ್ಲ.

ಇನ್ನು ಕೆಲವರ ಸೂಚನೆ ಹೀಗೆ: 'ರಂಗಭೂಮಿಯಲ್ಲಿ ಸ್ತ್ರೀ ಭೂಮಿಕೆಯು ಸ್ತ್ರೀಯರಿಂದಲೇ ನಡೆಸಲ್ಪಡಬೇಕು' ಎನ್ನುತ್ತಾರೆ. ಇದು ಕಲಾದೃಷ್ಟಿಯಿಂದ ಸಮಂಜಸವು. ಆದರೆ ವಿಮರ್ಶಕರು ಇದನ್ನು ಅದೇ ದೃಷ್ಟಿಯಿಂದ ಕಾಣುತ್ತಾರೆನ್ನಲು ಬಾರದು. ನಮ್ಮಲ್ಲಿನ ಪತ್ರಿಕೆಗಳಲ್ಲಿ ಬರುತ್ತಿರುವ ನೂರಾರು ನಾಟಕ ವಿಮರ್ಶೆಗಳನ್ನು ಕಂಡು 'ಅಂಥ ಕಲಾದೃಷ್ಟಿ' ಇಲ್ಲವೆಂದು ಸ್ಪಷ್ಟ ಹೇಳಬಹುದು. ನಮ್ಮಲ್ಲಿನ ವಿಮರ್ಶಕರಿಗೆ ಸ್ವಂತ ಅಭಿರುಚಿಯೇ ಕಲಾದೃಷ್ಟಿಯಾಗಿದೆ. ನಮ್ಮ ಅಳತೆಕೋಲಿನಿಂದ ಇನ್ನೊಬ್ಬನ ಕಲೆಯನ್ನು ಹೊಗಳಲು ಬರುವುದಿಲ್ಲ—ಎಂಬುದನ್ನು ನಮ್ಮ ವಿಮರ್ಶಕರು ತಿಳಿಯಬೇಕು. ಕಲಾವಿದನು ಯಾವ ಕಲಾಪಂಥದವನು ಎಂದು ತಿಳಿದು ಮಾಡುವ ವಿಮರ್ಶೆಯಿಂದ ಮಾತ್ರ ಉಪಯೋಗ.

ಇತ್ತ ಹೆಂಗುಸರು ರಂಗಭೂಮಿಯ ಮೇಲೆ ಬಂದರೆ ಕಾಸಾಗುತ್ತದೆ ಎಂಬ ಭಾವ ಬೇರೆ. ಬಟ್ಟೆಯ ಮೇಲೆ ಜಿಗುಪ್ಸೆಯಿರುವ ನಾರಿಯರಿದ್ದಾರೆ. ಸಿನೆಮಾಕ್ಕೆ ಜನರು ಬರುವರೆಂದಂತೆ ಆ ಮಾತು. ನಮ್ಮಲ್ಲಿನ ಜನಜೀವನದಲ್ಲಿ ಬಂದಿರುವ ಕೊರತೆಯೆಂದರೆ 'ತಮಗೇನು ಬೇಕು—ಎಂಬುದೇ' ತಿಳಿಯದಿರುವುದು. ತಮಗೆ ರುಚಿಸದ್ದನ್ನು ಅವರು ಹೇಳಬಲ್ಲರು. ಏನು ರುಚಿಸುತ್ತದೆ ಎಂದು ಹೇಳಲಾರರು. ಉಳಿದವರು ಅದನ್ನೆ ತಿಳಿಯುವುದೆಂತು? ಹೀಗಾಗಿ ಅವರಿಗೆ ರುಚಿಸುವುದನ್ನೇ ನಿರ್ಮಿಸುವುದೂ ಕಷ್ಟ. ಯಾವ ಪಂಥದ ನಾಟಕಗಳೇ ಆಗಲಿ, ಜನರು ಯೋಚನೆಗೆ ತೊಡಗಿದ ಮೇಲೆ ಬದುಕಲು—ಒಂದು ವಿಮರ್ಶಾ ಪದ್ಧತಿಯು ಸೃಷ್ಟಿಯಾಗಬೇಕು. ಜನರ ಮನಸ್ಸನ್ನು ಅಳೆಯುವವರೂ ನಮಗೆ ಬೇಕು. ಇತ್ತ ಅವರ ಮನಸ್ಸಿಗೆ ಯೋಗ್ಯ ಶಿಕ್ಷಣ ಕೊಡುವವರೂ ಬೇಕು. ನಾಟಕಗಳಲ್ಲಿ ಎಂಥವು ಹೇಗಿರಬಹುದು, ಎಲ್ಲಿ ಯಾವ ನಾಟಕ ಬೇಕು, ಯಾವ ನಾಟಕಕ್ಕೆ ಸಂಗೀತ ಬೇಕು, ಹೇಗಿರಬೇಕು. ಯಾವುದಕ್ಕೆ ಅದು ಇರಬಾರದು—ವಿಷಯ ಹೇಗೆ—ಎಂಬ ಎಲ್ಲಾ ವಿಚಾರಗಳನ್ನು ಜನರ ಮುಂದೆ ಇರಿಸಿ, ಅದರಂತೆ ಪ್ರಯೋಗ ಮಾಡಿ ತೋರಿಸಿ ಜನರನ್ನು ಹಾದಿಗೆ ತರಬೇಕು. ಕಾರಣ—ಸಮುದಾಯಕ್ಕೆ ಮನಸ್ಸೂ ಇಲ್ಲ, ಬುದ್ಧಿಯೂ ಇಲ್ಲ. ಅದರ ಒಲವು ಬೊಗಳಿದವನ ಕಡೆಗೆ. ಸಮುದಾಯವು ಸುಧಾರಿಸಲಿಲ್ಲವೆಂದರೆ, ನಮ್ಮ ವಿಮರ್ಶಕರು ಸಮುದಾಯದಿಂದೆದ್ದು ಇನ್ನೂ ವಿಚಾರ ಮಾಡಿಲ್ಲ. ನಾಲ್ಕಾಣೆ ಕೊಟ್ಟು ಎರಡು ನಾಟಕ ನೋಡಿದವನೂ, ಒಂದೇ ಒಂದು ನಾಟಕ ಓದಿದವನೂ ಸಹ ಪತ್ರಿಕೆಯಲ್ಲಿ ನಾಟ್ಯಕಲೆಯ ವಿಮರ್ಶಕನಾಗಬಲ್ಲನಾದರೆ—ನಾಟಕದ ಅಭಿವೃದ್ಧಿ ಸಾಧ್ಯವಿಲ್ಲ.

ಇಂಥ ಪರಿಸ್ಥಿತಿಯಲ್ಲಿ ಕಲಾವಿದರಾದ ಎಮೆಚೂರರೂ ಉಂಟಾಗುವಂತಿಲ್ಲ. ವ್ಯವಸಾಯಿಗಳಿಗೆ ಮತ್ತಷ್ಟು ಕಷ್ಟ. ಜನರಿಗೆ ಇಂಥದನ್ನು ಕೊಡಬೇಕೆಂದು ಅವರು ತಿಳಿಯರು. ಜನರು ತಮಗೆ ಇಂಥದು ಬೇಕೆಂದು ಹೇಳುವ ಸ್ಥಿತಿಯಲ್ಲಿಲ್ಲ. ಇತ್ತ, ಅವರು ಕೊಟ್ಟದನ್ನು ಕೊಳ್ಳುವ ಕಾಲವು ಸಂದಿದೆ. ಆದರೆ ಅವರಿಂದ ಬೇಕಾದುದನ್ನು ಮಾಡಿಸುವ ಕಾಲ ಬಂದಿಲ್ಲ. ಇಂದಿಗೆ ನಮ್ಮ ಮನೇ ಜೀವನದ "ಕೊಮ"

ಗೌರವವು ಕಡಮೆಯಾಗುತ್ತಿತ್ತೇ?

ಪಂಡಿತ ಜವಾಹರಲಾಲರ ಪತ್ನಿ ಸೌ| ಕಮಲಾ ನೆಹರುರವರು ಮೊನ್ನೆ ಮುಂಬಾಯಿಯಿಂದ ಸ್ವಿಜರ್ಲೆಂಡಿಗೆ—ಆರೋಗ್ಯ ಸಂಪಾದನೆಗಾಗಿ—ಹೊರಟು ಹೋದರು. ಅವರು ಅತ್ತ ತೆರಳುವಾಗ ಅವರ ದೇಹಪ್ರಕೃತಿಯು ಬಹು ಮಟ್ಟಿಗೆ ಕೆಟ್ಟಿತ್ತೆಂದೂ, ಅವರು ಖಿನ್ನಮನಸ್ಕರಾಗಿಯೇ ಹೊರಟರೆಂದೂ ತಿಳಿದುಬಂದಿದೆ. ಅವರು ಅತ್ತ ಹೋಗುವಾಗ, ಇತ್ತ ಪಂಡಿತ ಜವಾಹರಲಾಲರನ್ನು ಬಿಡುಗಡೆ ಮಾಡಲಿರುತ್ತಾರೋ ಎಂಬ ಪ್ರಶ್ನೆಯು ಎದ್ದಿತು. ಅದಕ್ಕುತ್ತರವಾಗಿ ಸರಕಾರವು 'ನಾಸ್ತಿ'ಯೆಂದೇ ಹೇಳಿತೆಂದೂ ಪ್ರಕಟವಾಗಿದೆ. ಪಂಡಿತ ಜವಾಹರಲಾಲರ ಪರಿಸ್ಥಿತಿಯಂತೂ ವಿಷಾದಪೂರ್ಣವಾದುದು. ದೇಶದಲ್ಲಿ ನವಸುಧಾರಣೆಯು ಪದಾರ್ಪಣ ಮಾಡಲಿರುವ ಈ ಸಂದಿಗ್ಧ ಸಮಯದಲ್ಲಿ ಅವರಂತಹ ಪ್ರತಿಭಾಶಾಲಿಗಳ ಅಗತ್ಯವು ಅಪ್ಪಿಷ್ಟೆಂದು ಹೇಳತೀರದು. ಅಂತಹವರು ಸೆರೆಮನೆಯಲ್ಲೇ ಕೊಳೆಯಬೇಕಾಗಿ ಬಂದಿದೆ. ಅವರ ಅಪರಾಧವು ಯಾವುದೇ ಆಗಿದ್ದಿರಲಿ, ಅವರ ಧರ್ಮಪತ್ನಿಯು ಸ್ವಾಸ್ಥ್ಯಗೊಳಗಾಗಿ ವಿದೇಶಕ್ಕೆ ತೆರಳಿದ ಈ ಸಮಯದಲ್ಲಾದರೂ ಜವಾಹರಲಾಲರನ್ನು ಬಿಡುಗಡೆ ಮಾಡಿ ಅವರು ತನ್ನ ಪತ್ನಿಯ ಶುಶ್ರೂಷೆಗಳಲ್ಲಿ ನಿರತರಾಗುವಂತೆ ಮಾಡುತ್ತಿದ್ದರೆ ಸರಕಾರದ ಗೌರವವು ಎಂದೂ ಕಡಮೆಯಾಗುತ್ತಿದ್ದಿಲ್ಲ. ಶಿಕ್ಷೆಯು ಶಾಸನಬದ್ಧವಾಗಿದೆಯಾದರೂ, ಶಿಕ್ಷಿಸುವವರು ಮಾನವರಾಗಿರುವಾಗ ಮಾನವಸಮಾನ ದಯಾಭಾವವನ್ನು ತೋರಿಸುವುದು ಪ್ರಕೃತಿ ಲಕ್ಷಣವಾಗಿದೆ. ಸರಕಾರವು ಜವಾಹರಲಾಲರನ್ನು ಇನ್ನೂ ಬಿಡುಗಡೆ ಮಾಡದಿರುವುದರಿಂದ ಪ್ರಯೋಜನಕ್ಕಿಂತ ಅಪ್ರಯೋಜನವೇ ಹೆಚ್ಚೆಂದು ಹೇಳಲಡೆಯಿದೆ.

ಕರ್ನಾಟಕ ನಾಟಕಗಳ ಅಧೋಗತಿ

ಕನ್ನಡ ನಾಡಿನಲ್ಲಿ ನಾಟಕ ಮಂಡಲಿಗಳಿರುವುದೇ ಕೆಲವು. ಜೀವಂತ ಇರುವವುಗಳೂ ಕೂಡಾ ಇಂದೋ ನಾಳೆಯೋ ಎಂಬ ಸ್ಥಿತಿಯಲ್ಲಿವೆ. ಗುಬ್ಬಿ ಶ್ರೀ ಚೆನ್ನಬಸವೇಶ್ವರ ನಾಟಕ ಮಂಡಲಿಯೊಂದು ಹೆಚ್ಚಿನ ಮಟ್ಟಿಗೆ ಜನರ ಆದರಕ್ಕೂ ಮೆಚ್ಚುಗೆಗೂ ಪಾತ್ರವಾಗಿ ಅಲ್ಪ ಸ್ವಲ್ಪ ಉತ್ತೇಜನದಿಂದ ನಡೆಯುತ್ತಿದೆಯೆಂಬುದು ಕನ್ನಡನಾಡಿಗೊಂದು ಭೂಷಣಪ್ರಾಯ ವಿಷಯ. ಕನ್ನಡ ನಾಡಿನಲ್ಲಿ—ಅಲ್ಲಲ್ಲಿ—ಹರಡಿರುವ ಕಂಪೆನಿಗಳ ಸ್ಥಿತಿಗತಿಗಳ ವಿಮರ್ಶೆಯು ಹಾಗಿರಲಿ. ಮಂಗಳೂರಿಗೆ ಮೊನ್ನೆ ಬಂದಿರುವ ಗದಗ ಶ್ರೀ ದತ್ತಾತ್ರೇಯ ನಾಟಕ ಮಂಡಲಿಯ ಗತಿಯೇನೆಂದು ನಾವು ತಿಳಿಯಲಪೇಕ್ಷಿಸಿದರೆ, ಅವರ ಗತಿಯೂ ಚೆನ್ನಾಗಿಲ್ಲವೆಂದೇ ಗೊತ್ತಾಗುವುದು. ಮೊನ್ನೆ ಅವರು ಒಂದು ಪ್ರಕಟಣೆಯನ್ನು ಹೊರಡಿಸಿ, ಮಂಗಳೂರಿನಲ್ಲಿ ತಮಗೆ ಪ್ರೋತ್ಸಾಹವು ಏನೂ ದೊರೆಯಲಿಲ್ಲವೆಂದೂ, ತನ್ನ ಪ್ರಯಾಣದ ವೆಚ್ಚವೂ ಕೂಡ ಹುಟ್ಟಿ ಬರುವುದಿಲ್ಲವೆಂದೂ ಜನರಿಗೆ ತಿಳಿಸಿದ್ದಾರೆ. ನಿಜವಾಗಿಯೂ ದುಃಖಕರ ಪರಿಸ್ಥಿತಿ. ಗದಗ ನಾಟಕ ಮಂಡಲದವರ ಅಭಿನಯಗಾರರೇನೋ ನಾಟಕ ಕಲೆಯನ್ನು ಏನೂ ಅರಿಯದವರಲ್ಲ. ಹಿಂದಿನ ದಿನಗಳಲ್ಲಿ ಎಷ್ಟೋ ಕೀರ್ತಿಯನ್ನು ಪಡೆಸಿದವರು. ಅಂತಹ ನಾಟಕ ಮಂಡಲಿಯು ಜನರ ಪ್ರೋತ್ಸಾಹಕ್ಕೆ ಪಾತ್ರವಾಗದೆ, ಭಗ್ನಮನೋರಥವಾಗಿ ಹಿಂತೆರಳುವುದಿದು ನಮಗೆ ಎಷ್ಟಕ್ಕೂ ಸಂತೋಷಕರ ವಿಷಯವಾಗಿಲ್ಲ. ಕನ್ನಡನಾಡಿನ ಜನರ ನಾಟಕ ಕಲೆಯ ಅಭಿರುಚಿಯನ್ನು ಕೆಡಿಸಲು ಎಮೆಚ್ಯೂರ್ ನಾಟಕ ಮಂಡಲಿಗಳು ಹಲವು ಹೆಚ್ಚಿನ ಮಟ್ಟಿಗೆ ಕಾರಣೀಭೂತವಾಗಿವೆಯೆಂದು ಹೇಳುವುದರಲ್ಲಿ ನಮಗೆ ಧೈರ್ಯವು ಹೆಚ್ಚು. ಎಮೆಚ್ಯೂರ್ಸರು ಸಾರ್ವಜನಿಕರನ್ನು ಹಲವು ಸಲ ಮೋಸಗೊಳಿಸಿ, ಅಪಹಾಸ್ಯಕರವಾಗಿ ನಾಟಕಗಳನ್ನಭಿನಯಿಸಿ, ಸಾರ್ವಜನಿಕರ ಕಲಾಭಿರುಚಿಗೆ ಮಣ್ಣೆರಚಿರುತ್ತಾರೆ. ಈ ಕಾರಣದಿಂದಾಗಿಯೇ ಜನರಿಗೆ ನಾಟಕಗಳನ್ನು ನೋಡುವ ಆವಶ್ಯಕತೆಯೇ ಕಾಣುವುದಿಲ್ಲ. ಎರಡನೆಯದಾಗಿ, ವಾಗ್ಪಟಚಿತ್ರಗಳ ಜನನವೂ ಈ ನಾಟಕಕಲೆಯ ಅವನತಿಗೆ ಕಾರಣವಾಗಿದೆ. ಎರಡಾಣೆಗಳನ್ನೋ ನಾಲ್ಕಾಣೆಗಳನ್ನೋ ಕೊಟ್ಟರೆ, ಸಂಜೆ, ಅನುಕೂಲ ಸಮಯದಲ್ಲಿ ಪ್ರಾರಂಭಗೊಂಡು, ಅನುಕೂಲ ಸಮಯದಲ್ಲಿ ಅಂತ್ಯವಾಗುವ, ತೀರ ಸ್ವಾಭಾವಿಕ ನಾಟಕಗಳನ್ನು ಜನರು ಕಾಣುವುದನ್ನು ಬಿಟ್ಟು, ದುಡ್ಡು ಕೊಟ್ಟು ರಾತ್ರಿಯಿಡೀ ನಿದ್ದೆಗೆಟ್ಟು ನಾಟಕಗಳನ್ನು ನೋಡಿ ಬಳಲುವುದು ಸ್ವಾಭಾವಿಕವಿಲ್ಲ. ಚಲಚ್ಚಿತ್ರಗಳ ರೂಪವತಿಯರನ್ನೂ, ನರ್ತನಗಳನ್ನೂ ನೋಡಿ ಗಾನಗಳನ್ನು ಕೇಳಿ ಸಿಗುವ ಆನಂದಕ್ಕೂ, ಪಾತ್ರಗಳು ಹಳೆಯ ರೂಢಿಗನುಸಾರವಾದ ಪಾತ್ರಗಳನ್ನು ಧರಿಸಿಕೊಂಡು ಅಭಿನಯಗಾರರೆಂದು ಹೇಳಿಸಿಕೊಂಡು ಇಲ್ಲದ ತಪ್ಪು ತಡೆಗಳನ್ನು ಮಾಡಿಕೊಂಡು ಮಾಡುವ ನಾಟಕವನ್ನು ನೋಡಿ ಸಿಗುವ ಸಂತೋಷಕ್ಕೂ ಎಷ್ಟೋ ವ್ಯತ್ಯಾಸವಿದೆ. ಜನರ ಇಂತಹ ಕಲಾಪ್ರಿಯತೆ, ಸುಖಾಭಿಲಾಷೆಗಳು ನಾಟಕಕಲೆಗೆ ವಿಘಾತುಕಪ್ರಾಯವಾಗಿ ನಿಂತಿವೆ.

ಶಾರದಾ ಶಾಸನದ ಗತಿ

'ಶಾರದಾ ಏಕ್ಟ್' ಎಂಬುದು ಶಾಸನವಾಗಿ ಬಂದ ಮೇಲೆ ಬಾಲ್ಯವಿವಾಹಗಳ ಸದ್ದಡಗುವುದೆಂದು ಹಲವರ ನಿರೀಕ್ಷೆಯಿತ್ತಾದರೂ—ಈ ಶಾಸನವು ಸಾಕಷ್ಟು ಪ್ರಚಾರಕ್ಕೆ ಬಾರದ್ದರಿಂದಲೋ—ಅದನ್ನು ಇಚ್ಛಾನುಸಾರ ಉಲ್ಲಂಘಿಸಬೇಕೆಂದು ಪಂಥಗಟ್ಟಿರುವುದರಿಂದಲೋ, ಎಲ್ಲೆಲ್ಲೂ ಬಾಲ್ಯವಿವಾಹಗಳು ನಡೆಯುತ್ತಲೇ ಇರುವುದು ಕಂಡುಬರುತ್ತದೆ. ಅಶಿಕ್ಷಿತ ವರ್ಗದಲ್ಲಿ ವರ್ಷಂಪ್ರತಿ ನೂರಾರು ವಿವಾಹಗಳು ನಡೆದು ಹೋಗುತ್ತಿವೆ. ಹಳ್ಳಿಪಳ್ಳಿಗಳಲ್ಲಿ ಈ ಶಾಸನದ ವಾಸನೆಯು ಕೂಡಾ ಇಲ್ಲದೆ ಏಳನೇ ಶತಮಾನದಲ್ಲಿನ ಅಂಧಾಚಾರ ವಿಚಾರಗಳು ಜನರಿಂದ ಅನುಸರಿಸಲ್ಪಡುತ್ತಿವೆ. ಎಟ್ಟಾವಾ ಜಿಲ್ಲೆಯಲ್ಲಿ ವರ್ಷಕ್ಕೆ ಸಾವಿರ ಬಾಲ್ಯ ವಿವಾಹಗಳು ನಡೆಯುತ್ತಿವೆಯೆಂದು ಜಿಲ್ಲಾ ಆರ್ಯ ಪರಿಷತ್ತಿನವರ ಅವಗಾಹನೆಗೆ ಬಂದು, ಈಗ ಅವರು ಎಚ್ಚರವಾಗಿದ್ದಾರೆ. ಇದೇ ರೀತಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಸರಕಾರದ ಶಾಸನವನ್ನು ಉಲ್ಲಂಘಿಸುವವರ ಸಂಖ್ಯೆಯು ಕಡಮೆಯಾಗಿಲ್ಲ. ಆಯಾಯಾ ಗ್ರಾಮದ ಪಟೇಲರನ್ನೂ ಗುರಿಕಾರರನ್ನೂ ಎಚ್ಚರಗೊಳಿಸಿ ಇತ್ತೀಚೆಗೆ ನಡೆದಿರುವ ವಿವಾಹಗಳ ಪಟ್ಟಿಯೊಂದನ್ನು ಸರಕಾರವು ತಯಾರಿಸಿ ಶೋಧಿಸಿದರೆ, ಶಾಸನೋಲ್ಲಂಘನೆಯ ನೂರಾರು ನಿದರ್ಶನಗಳು ಕಂಡುಬರುವುದು ನಿಶ್ಚಯವಿದೆ. ತನ್ನ ಅಧಿಕಾರವನ್ನು ತಾನು ಪ್ರತಿಷ್ಠೆಯಿಂದ ಕಾಪಾಡಿಕೊಳ್ಳದ ಸರಕಾರವು ಅಪವಾದಕ್ಕೆ ಸಿಗುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಒಂದೋ, / ಆ ಶಾಸನವೇ ಹೋಗಬೇಕು ~~ಒಂದೋ—ಅದನ್ನು—ಹಿಂದೂದೇಶವು—ಮನ್ನಿ~~ ನಡೆಯಬೇಕು! ಇಂತಹ ಧೋರಣೆಯೇ ಸರಕಾರದ್ದಾಗಿರಬೇಕು.

ಚುಟುಕು ವಾರ್ತೆ

ಮುಂಬಯಿಯ ಗವರ್ನರರು ಸಹಕ್ರಮವಾಗಿ ವೈಸ ರಾಯರನ್ನು ಕಾಣಲು ಹೊರಟುಹೋದರು

ಮಂಗಳೂರಿನ ಸೋಷಿಯಲಿಸ್ಟರ ತಂಡವುಗಳು ಕಾಂಗ್ರೆಸ್ಸಿಗೆ ಸಂಬಂಧವಿಲ್ಲವೆಂದು ರಾಜೇಂದ್ರಪ್ರಸಾದರು ಮುಂಬಯಿಯಲ್ಲಿ ಹೇಳಿದರು

ಲಾಹೋರಿನಲ್ಲಿ ಧರ್ಮದೇವಿಯೆಂಬವಳನ್ನು ಕದ್ದೊಯ್ದು ಮುಸಲ್ಮಾನ ಮತಕ್ಕೆ ಸೇರಿಸಿದ ಮುಸ್ಲಿಮನಿಗೆ ೩ ವರ್ಷಗಳ ಕಠಿಣ ಸಜೆಯು ವಿಧಿಸಲ್ಪಟ್ಟಿದೆ

ಡಾ। ಚಾರ್ಲ್ಸ್ ವಾರೆನ್ ಎಂಬವರ ಅಧಿನಾಯಕತ್ವದಲ್ಲಿ ೧೯೩೬ರ ಎವರೆಸ್ಟ್ ಪರ್ವತಾರೋಹಕರ ಪಡೆಯು ಡಾರ್ಜಿಲಿಂಗಿಗೆ ಬಂದಿದೆ.

ಶ್ರೀ। ಸುಭಾಷ್ಚಂದ್ರಬೋಸರು ವಿಯನ್ನಾದಲ್ಲಿ ಗುಣ ಹೊಂದುತ್ತಿರುವರು

ಶ್ರೀ। ವಿ. ಶ್ರೀನಿವಾಸಶಾಸ್ತ್ರಿಗಳವರು ಪೂನೆಯಲ್ಲಿ ಅಸ್ವಸ್ಥರಾಗಿರುವರು.

ಮುದ್ರಣಾಲಯ ಶಾಸನವನ್ನು ಮುಂದರಿಯದಂತೆ ಬಾರದಾಗಿ ಕಲ್ಕತ್ತದಲ್ಲಿ ಇಂಡಿಯನ್ ಜರ್ನಲಿಸ್ಟರ ಸಂಘವು ಅರಿಕೆ ಮಾಡಿಕೊಂಡಿದೆ

ಪ್ರಧಾನ ಮಂತ್ರಿ ಮೆಕ್ಡೋನಾಲ್ಡರು "ಹಿಂದೂದೇಶದ ಜಾಗೃತಿ" ಎಂಬ ಗ್ರಂಥವನ್ನು ಬರೆದಿರುವರು

ಮಧ್ಯಪ್ರಾಂತ್ಯದ [illegible] ಎಂಬಲ್ಲಿ ಒಂದು ದೊಡ್ಡ ಹಾವು ಸ್ತ್ರೀಯೊಬ್ಬಳನ್ನು ಕಚ್ಚಿದಾಗ, ಅವಳ ಮೊಲೆಹಾಲನ್ನು ಕುಡಿದು, ಹೊರಟು ಹೋಯಿತು

ಮುಂಬಯಿಯಲ್ಲಿ ಶ್ರೀ। ಎಚ್. ವಿ. [illegible] ಅಧ್ಯಕ್ಷತೆಯಲ್ಲಿ ಎಂಪ್ಲೋಯರ್ಸ್ ಫೆಡರೇಶನ್ ಆಫ್ ಇಂಡಿಯಾ ಎಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟಿದೆ

ಮೈಸೂರಿನ ಕಾರ್ಯಕಾರೀ ಮಂಡಳಿಯ ಸದಸ್ಯರಾದ ಚೌಧುರಿ ಮಹಮ್ಮದ್ ಅಲಿಯವರು [illegible] ರೈಲ್ವೇ ಸೀಟು ದಾಖಲೆಯಲ್ಲಿ ರೈಲ್ವೇ ಅಧಿಕಾರಿಗಳಿಂದ ಬೇರೆಯವರಿಗೆ ಕೊಡಲ್ಪಟ್ಟು, ಸರಕಾರವು ವಿಚಾರಿಸ ತೊಡಗಿದೆ.

ಕೊಯಮತ್ತೂರಿನ ಜಿಲ್ಲಾ ರಾಜಕೀಯ ಪರಿಷತ್ತು ಶ್ರೀ। [illegible] ದೇಸಾಯಿಯವರ ಅಧ್ಯಕ್ಷತೆಯಲ್ಲಿ ಜರಗಲಿರುವುದು

ಸಿಲ್ವರ್ ಜುಬಿಲಿ ಫೋಟೋಗಳ ವಿಕ್ರಯವು ಸಂಸ್ಥಾನದವರಿಂದಾಗಿಲ್ಲವೆಂದು ಸಿಮ್ಲಾದಲ್ಲಿ ವರದಿ.

ಸಿಂಧ ದೇಶದಲ್ಲಿ ಕಲೆಕ್ಟರರುಗಳು ಒಂದಾಗಿ ಗ್ರಾಮೋದ್ಧಾರ ಕೆಲಸಕ್ಕೆ ಹೇಗೆ ತೊಡಗಬೇಕೆಂದು ಯೋಚಿಸುತ್ತಿದ್ದಾರೆ

ಅಲ್ಲಹಾಬಾದಿನಲ್ಲಿ ರಾಧಾ ಎಂಬವಳ ಅನ್ನಿಗಾಗಿ ಅವಳನ್ನು ಕೊಂದ ಮುನ್ನಿ ಲಾಲಾ ಮತ್ತು ಅವನ ಒಬ್ಬ ಮಗನಿಗೆ ಶಿಕ್ಷೆಯಾಗಿದೆ.

ಮದ್ರಾಸಿನ ಮೀನಂಬಾಕಮ್ ವಿಮಾನ ನಿಲ್ದಾಣದಲ್ಲಿ ರಾತ್ರಿಯಲ್ಲೂ ವಿಮಾನಗಳು ಸಂಚರಿಸುವಂತೆ ವಿದ್ಯುತ್ ಪ್ರವಾಹವನ್ನು ಹರಿಸುವರು.

ದಿಲ್ಲಿಯ ಪ್ರಾಣಿಪ್ರದರ್ಶನಾಲಯದಿಂದ ೪ ವರುಷ ಪ್ರಾಯದ ಮಗುವೊಂದನ್ನು ಯಾರೋ ಕದ್ದೊಯ್ದಿರುವರು.

ಮುಂಬಯಿಯ ಪೋಲಿಸ್ ಕಾಪಿ ಕಾರ್ಖಾನೆಯವರು ಸಿಲ್ವರ್ ಜುಬಿಲಿ ಗೌರವಾರ್ಥ ಕಮ್ಮಿ ಎಲ್ಲಾ ಕೆಲಸಗಾರರಿಗೆ ೧೫ ದಿನಗಳ ಸಂಬಳವನ್ನು ದಾನ ಮಾಡಿದರು

ಕರಾಚಿಯ ರುಸ್ತುಂ ಎಂಬ ಹಳ್ಳಿಯಲ್ಲಿ ಪೋಲಿಸರು ಕಳ್ಳಬಟ್ಟಿ ಸಾರಾಯಿ ಕಾರ್ಖಾನೆಯೊಂದನ್ನು ಕಂಡುಹಿಡಿದರು, ಇಲ್ಲಿ ಕಳ್ಳತನದಿಂದ ಸಾರಾಯಿ ತಯಾರಿಸುತ್ತಿದ್ದರು.

ಶ್ರೀ। ಸತ್ಯಮೂರ್ತಿಯವರು ಅಣ್ಣಾಮಲೈ ಯುನಿವರ್ಸಿಟಿಯ ವೈಸ್ ಚಾನ್ಸಲರಾಗಲಿರುವರೆಂದು ಅಂಗ್ಲ ಪತ್ರಿಕೆಯೊಂದರ ಹೇಳಿಕೆ.

ಲೋರ್ಡ್ ಲಿನ್‌ಲಿತ್‌ಗೋ ಅಥವಾ ಸರ್ ಮಾಲ್ಕಂ ಹೈಲಿಯವರು ಇಂಡಿಯದ ವೈಸರಾಯರಾಗುವರಾಗಿ ನವಂತಿಯದೆ.

ಈ ವಾರದ ತಂತಿ ವಾರ್ತೆಗಳು:

ಜಪಾನರಿಗೂ ಚೀನಿಯರಿಗೂ ಜಗಳ.

ಶಾಂಗ್ಹೈ, ಮೇ. ೨೩

ಚೀನಾದಲ್ಲಿರುವ "ಡಿಮಿಲಿಟ್ರೈಸ್ಡ್" ಸೈನ್ಯವಿಲ್ಲದ ಭಾಗದಲ್ಲಿ ಜಪಾನೀಯರಿಗೂ ಚೀನೀಯರಿಗೂ ಯುದ್ಧವು ನಡೆಯಿತು. ೩೦೦ ಜನ ಚೀನೀಯರು ಈ ಕದನದಲ್ಲಿ ಮರಣಹೊಂದಿದರು. ಜೆಹಾಲ್‌ನಿಂದ ಜಪಾನ್ ಸೈನ್ಯವು ಬಂದಿತು. ಸಿದ್ಧವಾಗಿಲ್ಲದ ೪೦೦ ಚೀನಾ ಸೈನಿಕರು ಇದ್ದರು. ಈ ಎರಡು ತಂಗಡಗಳಿಗೂ ಯುದ್ಧವು ನಡೆಯಿತು. ಜಪಾನೀಯರು ಒಟ್ಟು ೬ ಜನರು ಮಾತ್ರ ಹತರಾದರು. ೩ ಮಂದಿಗೆ ಘಾಯವಾಗಿದೆ. ಈ ಕದನಕ್ಕೆ ಕಾರಣವನ್ನು ಹೀಗೆಂದು ತಿಳಿಸುತ್ತಾರೆ. ಏರಿಗುಳಾ ಎಂಬ ಪ್ರದೇಶದಲ್ಲಿ ಜಪಾನಿಯರಿಗೆ ವಿರುದ್ಧವಾಗಿ ಚಳವಳಿಯು ನಡೆಯುತ್ತಿತ್ತು. ಆ ಚಳವಳಿಯನ್ನು ಚೀನಾ ಸರಕಾರೀ ಅಧಿಕಾರಿಗಳು ಕೊನೆಗಾಣಿಸಲು ಪ್ರಯತ್ನಿಸಲಿಲ್ಲ. ಇದೇ ಕಾರಣವು ಕದನಕ್ಕೆ ಎಂದು ಚೀನಾ ಅಧಿಕಾರಿಗಳು ಹೀಗೆಂದು ಪ್ರಕಟಿಸಿರುತ್ತಾರೆ.

ಲೋರೆನ್ಸರ ದೋಣಿಯಲ್ಲಿ ದರೋಡೆಗಾರರು.

ಶಾಂಗ್ಹೈ ಮೇ ೨೦

ಲಂಡನ್ನಿನಲ್ಲಿ ಅಪಘಾತದಿಂದ ಮೃತರಾದ ಅರಬ್ಬೀಯಾದ ಲೋರೆನ್ಸರವರ ತಾಯಿಯಾದ ಮಿಸೆಸ್ ಲೋರೆನ್ಸ್ ಇವರು ಚೀನಾದ ಚೆಂಗ್ಟು ಎಂಬಲ್ಲಿ [illegible] ಕಳೆದ ತಿಂಗಳ ೩೦ನೇ ದಿನ ಚೆಂಗ್ಟುವಿನಿಂದ ಬಿಟ್ಟು ಹೊರಟು ಹೋಗಿದ್ದ ವೇಳೆ [illegible] ಇವರು ಒಬ್ಬರು ತಮ್ಮ [illegible] ಇಂಗ್ಲಾಂಡಿಗೆ [illegible] ಇವರು ಯಾಂಗ್ಸಿ ನದಿಯಲ್ಲಿ ಒಂದು ದೋಣಿಯಲ್ಲಿ ಹೋಗುತ್ತಿದ್ದಾಗ ಕೆಲವು ದರೋಡೆಗಾರರು ಇವರ ದೋಣಿಯನ್ನು ಹತ್ತಿ [illegible] ಸ್ವಲ್ಪ ದೋಚಿಕೊಂಡು ಓಡಿದರು. ಮಿಸೆಸ್ ಲೋರೆನ್ಸರಿಗೆ ಘಾಯಗಳಾಗಿವೆ. ಇವರನ್ನು ಆಸ್ಪತ್ರೆಗೊಯ್ಯಲಾಗಿದೆ. ತನ್ನ ಪುತ್ರ ಲೋರೆನ್ಸರವರ ಮರಣದಿಂದ ವಾರ್ತೆಯು ಇವರಿಗೆ ತಿಳಿದಿಲ್ಲವೆಂದ ವರ್ತಮಾನ.

'ವ್ಯಾಕ್ಸಿಂಗಾಲ್ಪಿ ಅಪಘಾತಕ್ಕಾಗಿ ವ್ಯಸನ

ನ್ಯೂಯಾರ್ಕ್ ಮೇ ೯೯

"ವ್ಯಾಕ್ಸಿಂಗಾಲ್ಪಿ ಎಂಬ ವಿಮಾನದ ಅಪಘಾತದಿಂದ [illegible] ಜನರು ಮರಣಹೊಂದಿದರಷ್ಟೆ. ಈ ೪೦ ಜನ ರಶಿಯಾ [illegible] ನ್ಯೂಯಾರ್ಕ್ ಸರ್ಕಾರದ [illegible] ಈ ೯೮ ಜನರ ಆತ್ಮಕ್ಕಾಗಿ ಬಹಳ ವಿಷಾದವನ್ನು ಸೂಚಿಸುತ್ತಿದೆ. [illegible] ಜನರು ಸ್ಮಶಾನಕ್ಕೆ ನಡೆದರು.

ಅಮೇರಿಕಕ್ಕೆ ಹೊರಗಣ ಬೆಳ್ಳಿನಾಣ್ಯಗಳು ಬರಬಾರದು.

ವಾಷಿಂಗ್ಟನ್, ಮೇ. ೨೧

ಸಂಯುಕ್ತ ಅಮೇರಿಕಾ ಸಂಸ್ಥಾನಕ್ಕೆ ಬೆಳ್ಳಿನಾಣ್ಯಗಳನ್ನು ತರಕೂಡದೆಂದು ಸಂಯುಕ್ತ ಸಂಸ್ಥಾನದ ಸರಕಾರದ ಮಂತ್ರಿಯಾದ ಮಾರ್ಗೆನ್‌ತೋವರು ಆಜ್ಞೆ ಯಿತ್ತಿದ್ದಾರೆ. ಈ ಆಜ್ಞೆಯ ಆಶಯವೇನೆಂದರೆ— ಬೆಳ್ಳಿಯ ಬೆಲೆಯು ಏರುವಿಕೆಯಿಂದ ಬೆಳ್ಳಿನಾಣ್ಯಗಳಲ್ಲಿರುವ ಬೆಳ್ಳಿಯು ಬೆಲೆಯು ನಾಣ್ಯಕ್ಕಿಂತಲೂ ಹೆಚ್ಚಾಗುವುದು. ಇಂತಹ ದುಃಸ್ಥಿತಿಯೊದಗಿದ ರಾಷ್ಟ್ರಗಳೊಡನೆ ಸಹಕರಿಸಿ ಅವುಗಳಿಗೆ ಸಹಾಯಮಾಡಬೇಕೆಂಬುದೇ ಈ ಆಜ್ಞೆಯ ಆಶಯವೆಂದು ಟ್ರೆಜರಿಯು ವಿವರಿಸಿರುತ್ತದೆ.

ಲಾರೆನ್ಸರ ಮರಣಕ್ಕಾಗಿ ಚಕ್ರವರ್ತಿಗಳ ಶೋಕ

ಲಂಡನ್, ಮೇ. ೨೧

ಅರೇಬಿಯದ ಲಾರೆನ್ಸರವರು ಮರಣಹೊಂದಿರುವುದರಿಂದ ಬ್ರಿಟನ್ನಿನ ರಾಜರು ಒಂದು ವಿಷಾದಸೂಚಕ ಸಂದೇಶವನ್ನು ಲಾರೆನ್ಸರವರ ಸಹೋದರರಿಗೆ ಕಳುಹಿಸಿದರು. ಲಾರೆನ್ಸರವರ ಮರಣವು ಬಹಳ ವಿಷಾದಕರವಿದೆ. ಇವರ ಹೆಸರು ಇತಿಹಾಸದಲ್ಲಿ ನಿಲ್ಲುವುದು. ದೇಶಕ್ಕಾಗಿ ಇವರು ಮಾಡಿರುವ ಸೇವೆಯನ್ನೂ ನಾವು ಮರೆಯಲಾಗುವುದಿಲ್ಲ. ಇನ್ನೂ ಅವರಿಂದ ಸೇವೆಯು ಸಲ್ಲಬೇಕಾಗಿರುವಲ್ಲಿ ಇಷ್ಟು ಬೇಗನೇ ಅವರಿಗೆ ಮರಣ ಸಂಭವಿಸಿದುದು ವಿಷಾದಕರವಾಗಿದೆ" ಎಂದು [illegible] ಸಿರುವರು

ಜರ್ಮನಿಯ ಮಂತ್ರಿಯ ಆಸ್ತಿಗೆ ಮುಟ್ಟುಗೋಲು!

ಬರ್ಲಿನ್ ಮೇ ೨೩

ಜರ್ಮನಿಯ [illegible] ಮಂತ್ರಿಗಳ [illegible] ಪೋಲೀಸ್ [illegible] ಗ್ರಾಡೆಲಿಂಕ್ ಎಂಬವರು ಜರ್ಮನಿಯ [illegible] ಕಳ್ಳತನ ಮಾಡಿದ್ದ ರೆಂದು ಸರಕಾರವು ಪ್ರಕಟಿಸಿರುತ್ತದೆ. ಇವರ ಆಸ್ತಿ ಪಾಸ್ತಿಗಳನ್ನೆಲ್ಲ ಸರಕಾರವೇ ವಶಪಡಿಸಿಕೊಂಡಿದೆ

ಭೂಪತ ಉಪದೇಶ

ಕಥಿಯಾವಾಡಿನ ಪ್ರಖ್ಯಾತ ದರೋಡೆಗಾರ ಭೂಪತ ಎಂಬವನ [illegible] ಆತನ [illegible] ಅವನು ಅದರಿಂದ ಎಲ್ಲರೂ [illegible] ತಪ್ಪಿಸಿಕೊಂಡು [illegible] ನ್ಯಾಯಾಲಯದಲ್ಲಿ [illegible] ಅವನು [illegible] ಕೊಟ್ಟು [illegible] ದರೋಡೆ ಮಾಡಿ [illegible] ನೀವು ನನ್ನ [illegible] ಕೇಳದಿದ್ದರೆ [illegible] ಎಂದಿತು. ಆದ್ದರಿಂದ ನ್ಯಾಯಾಲಯದಲ್ಲಿ ಆತನು ಆ ಪಾಪ ಕಾರ್ಯಗಳನ್ನು ತಿಳಿದು ಪಶ್ಚಾತ್ತಾಪಪಟ್ಟನು. ಅವರ ದೇಹಕ್ಕೆ ಬೇರೆ ರೀತಿ ಶಿಕ್ಷೆ ಕೊಡುವುದನ್ನು ಬಿಟ್ಟು ಅವನಿಗೆ ಜಯವೇ ದೊರೆಯಿತು

ದಿಲ್ಲಿಯಲ್ಲಿ ಮೆದುಳು ರೋಗದಿಂದ ೧೯ ಜನರು ಮೃತರಾದರು

ಕರಾಚಿಯಲ್ಲಿ ಕಳ್ಳ ನಾಣ್ಯಗಳ ತಯಾರಿಯಲ್ಲಿ [illegible] ಇಬ್ಬರನ್ನು ಹಿಡಿದಿರುವರು

'ಚಂದ್ರಗುಪ್ತ' ಚಲಚ್ಚಿತ್ರದ ಇನ್ನೊಂದು ದೃಶ್ಯ.
ಈ ಚಿತ್ರದಲ್ಲಿ ಕೇ ಸಿ ಡೇ (ಅಂಧ ಗಾಯಕ) ಇವನು ಅಭಿನಯಿಸುವನು.

ಫ್ರೆಂಚ್ ಸರಕಾರವು ಹೋಗುವುದೇ?

ಪ್ಯಾರಿಸ್, ಮೇ. ೨೩.

ಫ್ರಾಂಕಿನ ಬೆಲೆ ಇಳಿಯುವ ಕಾಲದಿಂದಲೂ ಕಳೆದ ಹೋಗಿದ್ದ ಹಣದ ತೊಂದರೆಯು ಫ್ರಾನ್ಸಿಗೆ ಈಗ ಸನ್ನಿಹಿತವಾಗಿರುತ್ತದೆ. ಈ ಸ್ಥಿತಿಯ ತೊಂದರೆಯಿರುವ ಸಮಯದಲ್ಲಿಯೇ ಸರಕಾರವು ರಾಜಿನಾಮೆಯನ್ನು ಕೊಡಲಿರುವುದೆಂದು ವರ್ತಮಾನ ಹರಡಿರುತ್ತದೆ. ಫ್ಲಾಂಡಿನ್ನರ ಅನಾರೋಗ್ಯವು ಸರಕಾರಕ್ಕೆ ಅಡಚಣೆಯನ್ನು ತಂದಿಕ್ಕಿದೆ. ಮನೆಯಲ್ಲಿಯೇ ರಾಜಕಾರ್ಯಗಳಿಗೆ ಚಿತ್ತವಿಡುವಷ್ಟು ಶಕ್ತಿವಂತರಾಗಿರುವ ಅವರು ಏನು ಮಾಡಲಿರುವರೋ ತಿಳಿಯದು. ಈ ಸಮಯದಲ್ಲಿ ಉತ್ತರವಾಗಿ ಸ್ಥಾನ ಬಿಡಬೇಕೆಂದು ಮಂತ್ರಾಲೋಚನೆಯು ನಡೆಯುತ್ತದೆ. ಅಧ್ಯಕ್ಷರು ಮತ್ತು ಮಂತ್ರಿಯವರನ್ನು ಸಂದರ್ಶಿಸಿರುವರು

ಹಿಟ್ಲರರ ಭಾಷಣ

ಬರ್ಲಿನ್, ಮೇ. ೧೧.

ಅಂತರ್‍ರಾಷ್ಟ್ರೀಯ ಸಮಸ್ಯೆಗಳ ಕುರಿತು ಜರ್ಮನಿಯ ನೀತಿಯೇನೆಂಬ ಕುರಿತು ಈ ದಿನ ಪ್ರಖ್ಯಾತನಾದ ಸಭೆಯಲ್ಲಿ ಹೆರ್ ಹಿಟ್ಲರರು ಅರ್ಥಗರ್ಭಿತವಾದ ಭಾಷಣ ವನ್ನು ಮಾಡಿದರು. ಹಿಟ್ಲರರು ಹೇಳಿದ್ದುವುದೇನೆಂದರೆ "ಎಪ್ರಿಲ್ ೧೭ನೇ ತಾರೀಕಿನ ದಿನ ಜಿನೇವಾ ತೀರ್ಮಾನ ವನ್ನು ಜರ್ಮನಿಯು [illegible] ಎಲ್ಲಾ ರಾಷ್ಟ್ರಗಳಿಗೂ ನ್ಯಾಯವಾದ ರೀತಿಯಲ್ಲಿ [illegible] ತೋರಿಸದೆ [illegible] ಶರ್ತಗಳನ್ನು [illegible] ಜರ್ಮನಿಯು [illegible] ಬರುವುದೆಂದು

ಸರ್ವಥಾ ತಿಳಿಯಕೂಡದು. ಅದೇ ಕಾರಣದಿಂದ ಜರ್ಮನ್ ಸರಕಾರವು ಸ್ವಪ್ರೇರಣೆಯಿಂದ ಕೇಳುತ್ತಿರುವುದು [illegible] ಶಸ್ತ್ರ [illegible] ಜರ್ಮನಿಯು [illegible] ಸ್ವಾತಂತ್ರ್ಯ [illegible] ಸ್ವಸ್ಥವಿರಬೇಕೆಂದು. [illegible] ಜರ್ಮನಿಯ ಕೇಳಿಕೆ [illegible] ಅಂತರ್‍ರಾಷ್ಟ್ರೀಯ [illegible] ಎಲ್ಲಾ [illegible] ಜರ್ಮನಿಯು [illegible] ಸರಕಾರವು [illegible] ಜರ್ಮನಿಯು [illegible] ಆಸ್ಟ್ರಿಯದ [illegible] ಈಗಿನ ಸರಕಾರವು [illegible] ಜರ್ಮನಿಯು [illegible] ಜರ್ಮನಿಯು ಮನಸ್ಸು ಕೊಟ್ಟಿಲ್ಲ

ಹೊಸ ನಾಟಕ.

ಮಂಗಳೂರಿನ ಕನ್ನಡ ಸಂಘ (ಸಭಾ (ಏವೆ ಚಾರಿಟಿ) ಇವರು ಜೂನ್ ೨ನೇ ತಾರೀಕಿನ ದಿನ [illegible] ಅಧ್ಯಕ್ಷತೆಯಲ್ಲಿ "ಆತ್ಮಶಕ್ತಿ [illegible] ಅಥವಾ [illegible]" ಎಂಬ ನಾಟಕವನ್ನು ಅಭಿನಯಿಸುವರು. [illegible] ಕನ್ನಡಿಗರು [illegible] ನಾಟಕವನ್ನು [illegible] ಕೋರಿರುತ್ತಾರೆ.

ಅನುಕ್ರಮಣಿಕೆ.

ಇಂಗ್ಲೆಂಡು ೧೯೩೦ ವಿಮಾನಗಳನ್ನು ಬೇಗನೇ
ಕಟ್ಟಿಸಲಿದೆ ೧
ಚಿತ್ರ ೩
ಚಿತ್ರಶಾಸ್ತ್ರ ಸಂಚಿ ೪
ಕರ್ನಾಟಕ ವರ್ತಮಾನ, ೫
ಮ॥ ರಾ॥ ರಾ॥ ವಾಸಪ್ಪನವರು ೬
ಕೃಷಿ ಮತ್ತು ರಸಾಯನಿಕ ಉದ್ಯೋಗಗಳು, ೮
ಅಗ್ರಲೇಖ
ಸೋಟಗಳು ೧೮
ಸ್ಫುಟವಿಚಾರಗಳು ೯
ನಾಟಕಗಳಿಗೆ ಏನು ಬೇಕು? ೧೦
ವರ್ತಮಾನ ಸಂಗ್ರಹ
ಪ್ರಧಾನ ಮಂತ್ರಿಯವರು ರಾಜಿನಾಮೆ ಕೊಡುವುದು
ಸಿಮ ೧೪
ಮಂಗಳೂರು, ತಾಲೂಕುಗಳಿಂದ ೧೨
ವಿವಿಧ ಸಮಾಚಾರಗಳು ೧೬
ಆಕ್ಕರು ಪ್ರಕಾರ್ದ ಮದುವೆ ೧೮

ಸ್ವದೇಶಾಭಿಮಾನಿ

ತಾ ೩೧ನೇ ಶುಕ್ರವಾರ ಮೇ ೧೯೩೫

ನಾಟಕಗಳಿಗೆ ಏನು ಬೇಕು?

ಮಂಗಳೂರು, ರಸಿಕರ ನಾಡೆಂದು ಬಲು ಪ್ರಸಿದ್ಧವಾಗಿದೆ ನಮ್ಮಲ್ಲಿ ಸುಶಿಕ್ಷಿತರ ಸಂಖ್ಯೆಯು ಅಧಿಕ ಹಲವು ಆಂಗ್ಲ ನಾಟಕ ಗ್ರಂಥಗಳನ್ನು ಓದುವವರಿದ್ದಾರೆ ಕಲಾ ವಿಮರ್ಶೆ ಮಾಡಬಲ್ಲವರಿದ್ದಾರೆ ಅಂಥವರು ನಾಟಕಗಳಲ್ಲಿ ಪಾರ್ಟುಗಳನ್ನು ಮಾಡುತ್ತಾರೆ ಮಂಗಳೂರಿನಲ್ಲಿ ಎಷ್ಟೋ ನಾಟಕಗಳು ಏಳೆಂಟಾದರೂ ಇವೆ ಕೆಲವರು ಅದರಿಂದ ನಷ್ಟಪಟ್ಟರೂ, ಕೆಲವರು ಲಾಭಗೊಂಡಿದ್ದಾರೆ ಈ ಬಾರಿ ಅಂದರೆ ಇದ್ದಕ್ಕಿದ್ದಂತೆ ನಮ್ಮ ಊರಿಗೆ ವಯಸ್ಸಾದ ನಾಟಕ ಮಂಡಲವೊಂದು ಬಂದಿರುತ್ತದೆ ಅವರು 'ತಮ್ಮನ್ನು ಹೇಗಾದರೂ ಮಾಡಿ ಊರಿಗೆ ಸಾಗಿಸಿ ಎಂದು ಸಾರ್ವಜನಿಕ ವಿನಂತಿಯನ್ನು ಮಾಡಿರುವುದನ್ನು ಕಂಡು ಈ ಲೇಖನವನ್ನು ಬರೆಯಲು ತೊಡಗಿದ್ದೇವೆ

ನಾಟಕವನ್ನು ನಾವು ಎರಡು ಪ್ರಮುಖ ದೃಷ್ಟಿಯಿಂದ ನೋಡಬಹುದು ಒಂದು ಕೇವಲ ಕಲಾದೃಷ್ಟಿಯಿಂದ, ಇನ್ನೊಂದು ಕೇವಲ ವ್ಯಾಪಾರಿ ದೃಷ್ಟಿಯಿಂದ ವ್ಯವಸ್ಥಾಪಕರುಗಳು ಈ ದೃಷ್ಟಿಯಿಂದ ನಾಟಕ ನೋಡುವುದು ಸರಿಯೇ ಇದೇ ದೃಷ್ಟಿಯಿಂದ ಹಿಂದೆ ಮಂಗಳೂರಿನಲ್ಲಿ ಒಂದೊಂದು ನಾಟಕಕ್ಕೆ ಸಾವಿರ, ಎರಡು ಸಾವಿರ ರೂಪಾಯಿಗಳ ಕನಕವೂ ಸುರಿದ ನಾಗರಿಕರು ನಮ್ಮವರು ಆದರೆ ಈಗ ಅಂಥ ದಿವಸಗಳನ್ನು ಕಾಣುವುದಿಲ್ಲ ಇಂದೇನು ಆಗಿದೆ? ನಾವು ಸುಧಾರಿಸಿದ್ದೇವೆಯೆ? ಇದೇ ಕಠಿಣದ ಪ್ರಶ್ನೆ ವ್ಯವಸಾಯದವರ ದೃಷ್ಟಿಯಿಂದ ಈ ಪ್ರಶ್ನೆಯನ್ನು ಹೀಗೆ ಕೇಳಬಹುದು 'ನಾಟಕಗಳಿಗೆ ಏನು ಬೇಕು? ಎಂದು

ಒಂದು ಕಾಲದಲ್ಲಿ ನಾಟಕವೆಂದರೆ ಸಂಗೀತ ಮಾಲಿಕೆ ಅದಕ್ಕೆ ನಡುವೆ ನಾಲ್ಕಾರು ಗದ್ಯದ ಪದಗಳನ್ನು ಸೇರಿಸಿದರೆ ಮುಗಿಯಿತು ಅಂಥ ನಾಟಕಗಳನ್ನು ಕಂಡು ಜನರು 'ಅಬ್ಬಾ, ಏನು ಸಂಗೀತ ವೆಂದರು ಈಗ ಅವರ ಮುಂದೆ ಗದ್ಯಕೃತವಾದ ನಾಟಕವಾದರೆ ಆಗ ಅವರು 'ಬರೇ ಪ್ರೋಸು ಯಾರಿಗೆ ಬೇಕು? ಎನ್ನುತ್ತಾರೆ ಅವರೇ ಜನರು ಅರ್ಥವಾಗದ ಮರಾಠಿ ಭಾಷೆಯಲ್ಲಿ ದೀನನಾಥನ ಕಂಪೆನಿಯವರು ಬಂದರೆ 'ಎಂಥ ಗದ್ಯ'–ಎಂದು ಹೊಗಳಿ ಹಣ ಸುರಿಯುತ್ತಾರೆ ಇತ್ತ–ಸದಾರಮೆ, ಪ್ರಭಾಮಣಿ, ಲಂಕಾದಹನದಂಥ ನಾಟಕವನ್ನು ಪ್ರಿಯವಾಗಿ ನೋಡುವವರು ಹೋಗಿ ನೋಡುವ ಜನರೇ ಅದನ್ನೇ ನಿಂದಿಸುತ್ತಾರೆ ಇದೆಲ್ಲ ನಮ್ಮ ಸುಶಿಕ್ಷಿತರ ಹಾಡು ಎಷ್ಟು ಉತ್ತಮ ಐರೋಪ್ಯ ನಾಟಕಗಳನ್ನು ಓದಿದರೂ ರಂಗಭೂಮಿಯ ಮೇಲೆ ಅವರಿಗೆ ಸದಾರಮೆಗಿಂತ ಹೆಚ್ಚಿನ ನಾಟ್ಯ ರುಚಿ ಸಹ ಅವರೇ ಜನರು–ನಮ್ಮಲ್ಲಿ ಸದಾರಮೆ ನಾಟಕ ಕಂಡು–ಸಾಮಾಜಿಕ ನಾಟಕವಿಲ್ಲವೇ? ಎಂದು ಕೇಳುತ್ತಾರೆ ಸಾಮಾಜಿಕ ನಾಟಕ ನಾಟಕವೆಂದೊಡನೆ ಅವೂ ರಂಗಭೂಮಿಗೆ ಬರುತ್ತವೆ ನಿಮಿಷಕ್ಕೆ ಹತ್ತು ಬಾರಿ ದೇಶಸೇವೆ ಮಾಡುವ ನಾಟಕಗಳು ಬರುತ್ತವೆ. ಅವನ್ನು ನೋಡಿ ಚಪ್ಪಾಳೆ ಹೊಡೆಯುತ್ತಾರೆ ನಾಳೆ ತಿರುಗಿ ಆ ನಾಟಕ ಆಡಿದರೆ ಜನರೇ ಇಲ್ಲ ಕೃಷ್ಣಲೀಲೆಗೆ ಹೋಗುವ ಜನರೂ ಸಮಾಜಿಕ ನಾಟಕಕ್ಕೆ ಇಲ್ಲ 'ನಮಗೆ ಸೀದಾ ನಾಟಕ ಬೇಕು, ನಿಮ್ಮ ಟ್ರಾನ್ಸುಪರು ಬೇಡ'–ಅನ್ನುತ್ತೀರಾ? ಸೀದಾ ನಾಟಕ ಆಡಿದರೂ ನಿಮಗೆ ಹಣವಿಲ್ಲ

ಇನ್ನು ಕೆಲವರ ಸೂಚನೆ ಹೀಗೆ. 'ರಂಗಭೂಮಿಯಲ್ಲಿ ಸ್ತ್ರೀ ಭೂಮಿಕೆಯು ಸ್ತ್ರೀಯರಿಂದಲೇ ನಡೆಸಲ್ಪಡಬೇಕು' ಎನ್ನುತ್ತಾರೆ. ಇದು ಕಲಾದೃಷ್ಟಿಯಿಂದ ಸಮಂಜಸವು ಆದರೆ ವಿಮರ್ಶಕರು ಇದನ್ನು ಅದೇ ದೃಷ್ಟಿಯಿಂದ ಕಾಣುತ್ತಾರೆನ್ನಲು ಬಾರದು ನಮ್ಮಲ್ಲಿನ ಪತ್ರಿಕೆಗಳಲ್ಲಿ ಬರುತ್ತಿರುವ ನೂರಾರು ನಾಟಕ ವಿಮರ್ಶೆಗಳನ್ನು ಕಂಡು 'ಅಂಥ ಕಲಾದೃಷ್ಟಿ' ಇಲ್ಲವೆಂದು ಸ್ಪಷ್ಟ ಹೇಳಬಹುದು ನಮ್ಮಲ್ಲಿನ ವಿಮರ್ಶಕರಿಗೆ ಸ್ವಂತ ಅಭಿರುಚಿಯೇ ಕಲಾದೃಷ್ಟಿಯಾಗಿದೆ ನಮ್ಮ ಆಳತೆಕೋಲಿನಿಂದ ಇನ್ನೊಬ್ಬನ ಕಲೆಯನ್ನು ತೂಗಲು ಬರುವುದಿಲ್ಲ–ಎಂಬುದನ್ನು ನಮ್ಮ ವಿಮರ್ಶಕರು ತಿಳಿಯಬೇಕು ಕಲಾವಿದನು ಯಾವ ಕಲಾ ಪಂಥದವನು ಎಂದು ತಿಳಿದು ಮಾಡುವ ವಿಮರ್ಶೆಯಿಂದ ಮಾತ್ರ ಉಪಯೋಗ

ಇತ್ತ ಹೆಂಗುಸರು ರಂಗಭೂಮಿಯ ಮೇಲೆ ಬಂದರೆ ಕಾಸಾಗುತ್ತದೆ ಎಂಬ ಭಾವ ಬೇರೆ ಬಟ್ಟೆಯ ಮೇಲೆ ಜಿಗುಪ್ಸೆಯಿರುವ ನಾರಿಯರಿದ್ದಾರೆ ಸಿನೆಮಾಕ್ಕೆ ಜನರು ಬರುವರೆಂದಂತೆ ಆ ಮಾತು ನಮ್ಮಲ್ಲಿನ ಜನಜೀವನದಲ್ಲಿ ಬಂದಿರುವ ಕೊರತೆಯೆಂದರೆ 'ತಮಗೇನು ಬೇಕು–ಎಂಬುದೇ ತಿಳಿಯದಿರುವುದು ತಮಗೆ ರುಚಿಸದ್ದನ್ನು ಅವರು ಹೇಳಬಲ್ಲರು ಏನು ರುಚಿಸುತ್ತದೆ ಎಂದು ಹೇಳಲಾರರು ಅದನ್ನು ತಿಳಿಯುವುದೆಂತು"

ಹೀಗಾಗಿ ಅವರಿಗೆ ರುಚಿಸುವುದನ್ನೇ ನಿರ್ಮಿಸುವುದೂ ಕಷ್ಟ ಬೇರೆ ಪಂಥದ ನಾಟಕಗಳೇ ಆಗಲಿ, ಜನರು ಯೋಚನೆಗೆ ತೊಡಗಿದ ಮೇಲೆ ಬದುಕಲು–ಒಂದು ವಿಮರ್ಶಾ ಪದ್ಧತಿಯು ಸೃಷ್ಟಿಯಾಗಬೇಕು ಜನರ ಮನಸ್ಸನ್ನು ಆಳುವವರೂ ನಮಗೆ ಬೇಕು ಇತ್ತ ಅವರ ಮನಸ್ಸಿಗೆ ಯೋಗ್ಯ ಶಿಕ್ಷಣ ಕೊಡುವವರೂ ಬೇಕು ನಾಟಕಗಳಲ್ಲಿ ಎಂಥವು ಹೇಗಿರಬಹುದು, ಎಲ್ಲಿ ಯಾವ ನಾಟಕ ಬೇಕು, ಯಾವ ನಾಟಕಕ್ಕೆ ಸಂಗೀತ ಬೇಕು, ಹೇಗಿರಬೇಕು, ಯಾವುದಕ್ಕೆ ಅದು ಇರಬಾರದು–ವಿಷಯ ಹೇಗೆ–ಎಂಬ ಎಲ್ಲಾ ವಿಚಾರಗಳನ್ನು ಜನರ ಮುಂದೆ ಇರಿಸಿ, ಅದರಂತೆ ಪ್ರಯೋಗ ಮಾಡಿ ತೋರಿಸಿ, ಜನರನ್ನು ಹಾದಿಗೆ ತರಬೇಕು ಕಾರಣ–ಸಮುದಾಯಕ್ಕೆ ಮನಸ್ಸೂ ಇಲ್ಲ ಬುದ್ಧಿಯೂ ಇಲ್ಲ ಅದರ ಒಲವು ಜೊಗಳಿದವನ ಕಡೆಗೆ ಸಮುದಾಯವು ಪ್ರಧಾರಿಸಲಿಲ್ಲವೆಂದರೆ, ನಮ್ಮ ವಿಮರ್ಶಕರು ಸಮುದಾಯದಿಂದೆದ್ದು ಇನ್ನೂ ವಿಚಾರ ಮಾಡಿಲ್ಲ ನಾಲ್ಕಾಣೆ ಕೊಟ್ಟು ಎರಡು ನಾಟಕ ನೋಡಿದವನೂ, ಒಂದೇ ಒಂದು ನಾಟಕ ಓದದವನೂ ಸಹ ಪತ್ರಿಕೆಯಲ್ಲಿ ನಾಟ್ಯಕಲೆಯ ವಿಮರ್ಶಕನಾಗಬಲ್ಲನಾದರೆ–ನಾಟಕದ ಅಭಿವೃದ್ಧಿ ಸಾಧ್ಯವಿಲ್ಲ

ಇಂಥ ಪರಿಸ್ಥಿತಿಯಲ್ಲಿ ಕಲಾವಿದರಾದ ಎಮ್ಮೆಟೂರರೂ ಉಂಟಾಗುವಂತಿಲ್ಲ ವ್ಯವಸಾಯಿಗಳಿಗೆ ಮತ್ತಷ್ಟು ಕಷ್ಟ ಜನರಿಗೆ ಇಂಥದನ್ನು ಕೊಡಬೇಕೆಂದು ಅವರು ತಿಳಿಯರು ಜನರು ತಮಗೆ ಇಂಥದು ಬೇಕೆಂದು ಹೇಳುವ ಸ್ಥಿತಿಯಲ್ಲಿಲ್ಲ ಇತ್ತ, ಅವರು ಕೊಟ್ಟದನ್ನು ಕೊಳ್ಳುವ ಕಾಲವು ಸಂದಿದೆ ಆದರೆ ಅವರಿಂದ ಬೇಕಾದುದನ್ನು ಮಾಡಿಸುವ ಕಾಲ ಬಂದಿಲ್ಲ ಇಂದೀಗ ನಮ್ಮ ಮನೇ ಜೀವನದ "ಕೊಮು"



ಗೌರವವು ಕಡಮೆಯಾಗುತ್ತಿತ್ತೇ?

ಪಂಡಿತ ಜವಾಹರಲಾಲರ ಪತ್ನಿ ಸೌ॥ ಕಮಲಾ ನೆಹರುರವರು ಮೊನ್ನೆ ಮುಂಬಾಯಿಯಿಂದ ಸ್ವಿಜರ್‌ಲೆಂಡಿಗೆ–ಆರೋಗ್ಯ ಸಂಪಾದನೆಗಾಗಿ–ಹೊರಟು ಹೋದರು ಅವರು ಅತ್ತ ತೆರಳುವಾಗ ಅವರ ದೇಹಪ್ರಕೃತಿಯು ಬಹು ಮಟ್ಟಿಗೆ ಕೆಟ್ಟಿತ್ತೆಂದೂ, ಅವರು ಖಿನ್ನಮನಸ್ಕರಾಗಿಯೇ ಹೊರಟರೆಂದೂ ತಿಳಿದುಬಂದಿದೆ ಅವರು ಅತ್ತ ಹೋಗುವಾಗ, ಇತ್ತ ಪಂಡಿತ ಜವಾಹರಲಾಲರನ್ನು ಬಿಡುಗಡೆ ಮಾಡಲಿರುತ್ತಾರೋ ಎಂಬ ಪ್ರಶ್ನೆಯು ಎದ್ದಿತು ಅದಕ್ಕುತ್ತರವಾಗಿ ಸರಕಾರವು 'ನಾಸ್ತಿ'ಯೆಂದೇ ಹೇಳಿತೆಂದೂ ಪ್ರಕಟವಾಗಿದೆ ಪಂಡಿತ ಜವಾಹರಲಾಲರ ಪರಿಸ್ಥಿತಿಯಂತೂ ವಿಷಾದಪೂರ್ಣವಾದುದು ದೇಶದಲ್ಲಿ ನವಸುಧಾರಣೆಯು ಪದಾರ್ಪಣ ಮಾಡಲಿರುವ ಈ ಸಂದಿಗ್ಧ ಸಮಯದಲ್ಲಿ ಅವರಂತಹ ಪ್ರತಿಭಾಶಾಲಿಗಳ ಅಗತ್ಯವು ಅತ್ಯಿಷ್ಟವೆಂದು ಹೇಳತೀರದು ಅ ತಹವರು ಸೆರೆಮನೆಯಲ್ಲೇ ಕೊಳೆಯಬೇಕಾಗಿ ಬಂದಿದೆ ಅವರ ಅಪರಾಧವು ಯಾವುದೇ ಆಗಿದ್ದರಲಿ, ಅವರ ಧರ್ಮಪತ್ನಿಯು ಅನಾರೋಗ್ಯಸ್ಥಿತಿಗೊಳಗಾಗಿ ವಿದೇಶಕ್ಕೆ ತೆರಳಿದ ಈ ಸಮಯದಲ್ಲಾದರೂ ಜವಾಹರಲಾಲರನ್ನು ಬಿಡುಗಡೆ ಮಾಡಿ ಅವರು ತನ್ನ ಪತ್ನಿಯ ಶುಶ್ರೂಷೆಗಳಲ್ಲಿ ನಿರತರಾಗುವಂತೆ ಮಾಡುತ್ತಿದ್ದರೆ ಸರಕಾರದ ಗೌರವವು ಎಂದೂ ಕಡಮೆಯಾಗುತ್ತಿದ್ದಿಲ್ಲ ಶಿಕ್ಷೆಯು ಶಾಸನಬದ್ಧವಾಗಿದೆಯಾದರೂ, ಶಿಕ್ಷಿಸುವವರು ಮಾನವರಾಗಿರುವಾಗ ಮಾನವಸಮಾನ ದಯಾಭಾವವನ್ನು ತೋರಿಸುವುದು ಪ್ರಕೃತಿ ಲಕ್ಷಣವಾಗಿದೆ ಸರಕಾರವು ಜವಾಹರಲಾಲರನ್ನು ಇನ್ನೂ ಬಿಡುಗಡೆ ಮಾಡದಿರುವುದರಿಂದ ಪ್ರಯೋಜನಕ್ಕಿಂತ ಅಪ್ರಯೋಜನವೇ ಹೆಚ್ಚೆಂದು ಹೇಳಲಡೆಯಿದೆ

ಕರ್ನಾಟಕ ನಾಟಕಗಳ ಅಧೋಗತಿ

ಕನ್ನಡ ನಾಡಿನಲ್ಲಿ ನಾಟಕ ಮಂಡಲಿಗಳಿರುವುದೇ ಕೆಲವು ಜೀವಂತ ಇರುವವುಗಳೂ ಕೂಡಾ ಇಂದೋ ನಾಳೆಯೋ ಎಂಬ ಸ್ಥಿತಿಯಲ್ಲಿವೆ ಗುಬ್ಬಿ ಶ್ರೀ ಚೆನ್ನಬಸವೇಶ್ವರ ನಾಟಕ ಮಂಡಲಿಯೊಂದು ಹೆಚ್ಚಿನ ಮಟ್ಟಿಗೆ ಜನರ ಆದರಕ್ಕೂ ಮೆಚ್ಚುಗೆಗೂ ಪಾತ್ರವಾಗಿ ಅಲ್ಪ ಸ್ವಲ್ಪ ಉತ್ತೇಜನದಿಂದ ನಡೆಯುತ್ತಿದೆಯೆಂಬುದು ಕನ್ನಡನಾಡಿಗೊಂದು ಭೂಷಣಪ್ರಾಯ ವಿಷಯ ಕನ್ನಡ ನಾಡಿನಲ್ಲಿ–ಅಲ್ಲಲ್ಲಿ–ಹರಡಿರುವ ಕಂಪೆನಿಗಳ ಸ್ಥಿತಿಗತಿಗಳ ವಿಮರ್ಶೆಯು ಹಾಗಿರಲಿ ಮಂಗಳೂರಿಗೆ ಮೊನ್ನೆ ಬಂದಿರುವ ಗದಗ ಶ್ರೀ ದತ್ತಾತ್ರೇಯ ನಾಟಕ ಮಂಡಲಿಯ ಗತಿಯೇನೆಂದು ನಾವು ತಿಳಿಯಲಪೇಕ್ಷಿಸಿದರೆ, ಅದರ ಗತಿಯೂ ಚೆನ್ನಾಗಿಲ್ಲವೆಂದೇ ಗೊತ್ತಾಗುವುದು ಮೊನ್ನೆ ಅವರು ಒಂದು ಪ್ರಕಟಣೆಯನ್ನು ಹೊರಡಿಸಿ, ಮಂಗಳೂರಿನಲ್ಲಿ ತಮಗೆ ಪ್ರೋತ್ಸಾಹವು ಏನೂ ದೊರೆಯಲಿಲ್ಲವೆಂದೂ, ತಮ್ಮ ಪ್ರಯಾಣದ ವೆಚ್ಚವೂ ಕೂಡ ಹುಟ್ಟಿ ಬರುವುದಿಲ್ಲವೆಂದೂ ಜನರಿಗೆ ತಿಳಿಸಿದ್ದಾರೆ ನಿಜವಾಗಿಯೂ ದುಃಖಕರ ಪರಿಸ್ಥಿತಿ. ಗದಗ ನಾಟಕ ಮಂಡಲದವರ ಅಭಿನಯಗಾರರೇನೋ ನಾಟಕ ಕಲೆಯನ್ನು ಏನೂ ಅರಿಯದವರಲ್ಲ ಹಿಂದಿನ ದಿನಗಳಲ್ಲಿ ಎಷ್ಟೋ ಕೀರ್ತಿಯನ್ನು ಘಳಿಸಿದವರು ಅಂತಹ ನಾಟಕ ಮಂಡಲಿಯು ಜನರ ಪ್ರೋತ್ಸಾಹಕ್ಕೆ ಪಾತ್ರವಾಗದೆ, ಭಗ್ನಮನೋರಥವಾಗಿ ಹಿಂತೆರಳುವುದಿದು ನಮಗೆ ಎಷ್ಟಕ್ಕೂ ಸಂತೋಷಕರ ವಿಷಯವಾಗಿಲ್ಲ ಕನ್ನಡನಾಡಿನ ಜನರ ನಾಟಕ ಕಲೆಯ ಅಭಿರುಚಿಯನ್ನು ಕೆಡಿಸಲು ಏನು ಚಕ್ಕರ್, ನಾಟಕ ಮಂಡಲಿಗಳು ಹಲವು ಹೆಚ್ಚಿನ ಮಟ್ಟಿಗೆ ಕಾರಣೀಭೂತವಾಗಿವೆಯೆಂದು ಹೇಳುವುದರಲ್ಲಿ ನಮಗೆ ಧೈರ್ಯವು ಹೆಚ್ಚು. ಎವೆ ಚಕ್ಕರ್ಗಳು ಸಾರ್ವಜನಿಕರನ್ನು ಹಲವು ಸೋಗುಗಳಿಂದ ಮೋಸಗೊಳಿಸಿ, ಅಪಹಾಸ್ಯಕರವಾಗಿ ನಾಟಕಗಳನ್ನಭಿನಯಿಸಿ, ಸಾರ್ವಜನಿಕರ ಕಲಾರುಚಿಗೆ ಮಣ್ಣೆರಚಿರುತ್ತಾರೆ ಈ ಕಾರಣದಿಂದಾಗಿಯೇ ಜನರಿಗೆ ನಾಟಕಗಳನ್ನು ನೋಡುವ ಆವಶ್ಯಕತೆಯೇ ಕಾಣುವುದಿಲ್ಲ ಎರಡನೆಯದಾಗಿ, ವಾಗ್ಚಲಚಿತ್ರಗಳ ಜನನವು ಈ ನಾಟಕಕಲೆಯ ಅವನತಿಗೆ ಕಾರಣವಾಗಿದೆ ಎರಡಾಣೆಗಳನ್ನೋ–ನಾಲ್ಕಾಣೆಗಳನ್ನೋ ಕೊಟ್ಟರೆ, ಸಂಜೆ, ಅನುಕೂಲ ಸಮಯದಲ್ಲಿ ಪ್ರಾರಂಭಗೊಂಡು, ಅನುಕೂಲ ಸಮಯದಲ್ಲಿ ಅಂತ್ಯವಾಗುವ, ತೀರ ಸ್ವಾಭಾವಿಕ ನಾಟಕಗಳನ್ನು ಜನರು ಕಾಣುವುದನ್ನು ಬಿಟ್ಟು, ದುಡ್ಡು ಕೊಟ್ಟು ರಾತ್ರಿಯಿಡೀ ನಿದ್ದೆಗೆಟ್ಟು ನಾಟಕಗಳನ್ನು ನೋಡಿ ಬಳಲುವುದು ಸ್ವಾಭಾವಿಕವಿಲ್ಲ ಚಲಚ್ಚಿತ್ರಗಳ ರೂಪವತಿಯರನ್ನೂ, ನರ್ತನಗಳನ್ನೂ ನೋಡಿ ಗಾನಗಳನ್ನು ಕೇಳಿ ಸಿಗುವ ಆನಂದಕ್ಕೂ, ಪಾತ್ರಗಳು ಹಳೆಯ ರೂಢಿಗನುಸಾರವಾದ ಪಾತ್ರಗಳನ್ನು ಧರಿಸಿಕೊಂಡು ಅಭಿನಯಗಾರರೆಂದು ಹೇಳಿಸಿಕೊಂಡು ಇಲ್ಲದ ತಪ್ಪು ಕಡೆಗಳನ್ನು ಮಾಡಿಕೊಂಡು ಮಾಡುವ ನಾಟಕವನ್ನು ನೋಡಿ ಸಿಗುವ ಸಂತೋಷಕ್ಕೂ ಎಷ್ಟೋ ವ್ಯತ್ಯಾಸವಿದೆ ಜನರ ಇಂತಹ ಕಲಾಪ್ರಿಯತೆ, ಸುಖಾಭಿಲಾಷೆಗಳು ನಾಟಕಕಲೆಗೆ ವಿಘಾತುಕಪ್ರಾಯವಾಗಿ ನಿಂತಿವೆ

ಶಾರದಾ ಶಾಸನದ ಗತಿ

ಶಾರದಾ ಏಕ್ಟ್' ಎಂಬುದು ಶಾಸನವಾಗಿ ಬಂದ ಮೇಲೆ ಬಾಲ್ಯವಿವಾಹಗಳ ಸದ್ದಡಗುವುದೆಂದು ಹಲವರ ನಿರೀಕ್ಷೆಯಿತ್ತಾದರೂ–ಈ ಶಾಸನವು ಸಾಕಷ್ಟು ಪ್ರಚಾರಕ್ಕೆ ಬಾರದಿದ್ದುದರಿಂದಲೋ–ಅದನ್ನು ಇಚ್ಛಾನುಸಾರ ಉಲ್ಲಂಘಿಸಬೇಕೆಂದು ಪಂಥಗಟ್ಟಿರುವುದರಿಂದಲೋ, ಎಲ್ಲೆಲ್ಲೂ ಬಾಲ್ಯವಿವಾಹಗಳು ನಡೆಯುತ್ತಲೇ ಇರುವುದು ಕಂಡುಬರುತ್ತದೆ ಅಶಿಕ್ಷಿತ ವರ್ಗದಲ್ಲಿ ವರ್ಷಂಪ್ರತಿ ನೂರಾರು ವಿವಾಹಗಳು ನಡೆದು ಹೋಗುತ್ತಿವ ಹಳ್ಳಿಪಳ್ಳಿಗಳಲ್ಲಿ ಈ ಶಾಸನದ ವಾಸನೆಯು ಕೂಡಾ ಇಲ್ಲದೆ ಏಳನೇ ಶತಮಾನದಲ್ಲಿನ ಅಂಧಾಚಾರ ವಿಚಾರಗಳು ಜನರಿಂದ ಅನುಸರಿಸಲ್ಪಡುತ್ತಿವೆ ಎಟ್ಟಾವಾ ಜಿಲ್ಲೆಯಲ್ಲಿ ವರ್ಷಕ್ಕೆ ಸಾವಿರ ಬಾಲ್ಯ ವಿವಾಹಗಳು ನಡೆಯುತ್ತಿವೆಯೆಂದು ಜಿಲ್ಲಾ ಆರ್ಯ ಪರಿಷತ್ತಿನವರ ಅವಗಾಹನೆಗೆ ಬಂದು, ಈಗ ಅವರು ಎಚ್ಚರವಾಗಿದ್ದಾರೆ ಇದೇ ರೀತಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಸರಕಾರದ ಶಾಸನವನ್ನು ಉಲ್ಲಂಘಿಸುವವರ ಸಂಖ್ಯೆಯು ಕಡಮೆಯಾಗಿಲ್ಲ ಆಯಾಯಾ ಗ್ರಾಮದ ಪಟೇಲರನ್ನೂ ಗುರಿಕಾರರನ್ನೂ ಎಚ್ಚರಗೊಳಿಸಿ ಇತ್ತೀಚೆಗೆ ನಡೆದಿರುವ ವಿವಾಹಗಳ ಪಟ್ಟಿಯೊಂದನ್ನು ಸರಕಾರವು ತಯಾರಿಸಿ ಶೋಧಿಸಿದರೆ, ಶಾಸನೋಲ್ಲಂಘನೆಯ ನೂರಾರು ನಿದರ್ಶನಗಳು ಕಂಡುಬರುವುದು ನಿಶ್ಚಯವಿದೆ. ತನ್ನ ಅಧಿಕಾರವನ್ನು ತಾನು ಪ್ರತಿಷ್ಠೆಯಿಂದ ಕಾಪಾಡಿಕೊಳ್ಳದ ಸರಕಾರವು ಅಪವಾದಕ್ಕೆ ಸಿಗುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಒಂದೋ, ಆ ಶಾಸನವೇ ಹೋಗಬೇಕು; ಒಂದೋ ಅದನ್ನು ಹಿಂದೂದೇಶವು ಮನ್ನಿಸಿ ನಡೆಯಬೇಕು! ಇಂತಹ ಧೋರಣೆಯೇ ಸರಕಾರದ್ದಾಗಿರಬೇಕು

ಚುಟುಕು ವಾರ್ತೆ

ಮುಂಬಾಯಿಯ ಗವರ್ನರರು ಸಹಕುಟುಂಬರಾಗಿ ವೈಶ ರಾಜ್ಯಗಳನ್ನು ಸಂದರ್ಶಿಸಲು ಹೊರಟುಹೋದರು

... ಸೋಷಿಯಲಿಸ್ಟರ ಕಲಾಪಗಳು ಕಾಂಗ್ರೆಸ್ಸಿಗೆ ಸಂಬಂಧಿಸಿಲ್ಲವೆಂದು ರಾಜೇಂದ್ರಪ್ರಸಾದರು ಮುಂಬಾಯಿಯಲ್ಲಿ ಹೇಳಿದರು.

ಲಾರ್ಕಾನಾದಲ್ಲಿ ಧರ್ಮದೇವಿ ಎಂಬವಳನ್ನು ಕದ್ದೊಯ್ದು ಮುಸಲ್ಮಾನ ಮತಕ್ಕೆ ಸೇರಿಸಿದ ಮುಸ್ಲಿಮನಿಗೆ ೭ ವರ್ಷಗಳ ಕಠಿಣ ಸಜೆಯು ವಿಧಿಸಲ್ಪಟ್ಟಿದೆ

ಡಾ। ಚಾರ್ಲ್ಸ್ ವಾರೆನ್ ಎಂಬವರ ಅಧಿನಾಯಕತ್ವದಲ್ಲಿ ೧೯೩೬ರ ಎವರೆಸ್ಟ್ ಪರ್ವತಾರೋಹಕರ ಪಡೆಯು ಡಾರ್ಜಿಲಿಂಗಿಗೆ ಬಂದಿದೆ.

ಶ್ರೀ ಸುಭಾಷ್ಚಂದ್ರಬೋಸರು ವಿಯೆನ್ನಾದಲ್ಲಿ ಗುಣ ಹೊಂದುತ್ತಿರುವರು.

ಶ್ರೀ ವಿ. ಶ್ರೀನಿವಾಸಶಾಸ್ತ್ರಿಗಳವರು ಪೂನೆಯಲ್ಲಿ ಅಸ್ವಸ್ಥರಾಗಿರುವರು.

ಮುದ್ರಣಾಲಯ ಶಾಸನವನ್ನು ಮುಂದರಿಯಬಾರದಾಗಿ ಕಲ್ಕತ್ತದಲ್ಲಿ ಇಂಡಿಯನ್ ಜರ್ನಲಿಸ್ಟರ ಸಂಘವು ಅರಿಕೆ ಮಾಡಿಕೊಂಡಿದೆ

ಪ್ರಧಾನ ಮಂತ್ರಿ ಮೆಕ್ಡೊನಾಲ್ಡರು "ಹಿಂದೂದೇಶದ ಜಾಗೃತಿ" ಎಂಬ ಗ್ರಂಥವನ್ನು ಬರೆದಿರುವರು

ಮಧುಭಾನಿಯ ಅಸೋಪಾವ್ರು ಎಂಬಲ್ಲಿ ಒಂದು ದೊಡ್ಡ ಹಾವು ಸ್ತ್ರೀಯೊಬ್ಬಳನ್ನು ಕಡಿಯಿತು. ಅವಳ ಮೊಲೆಹಾಲನ್ನು ಕುಡಿದು, ಹೊರಟು ಹೋಯಿತು.

ಮುಂಬಾಯಿಯಲ್ಲಿ ಶ್ರೀ ಎಚ್. ಪಿ ಮೋದಿ ಇವರ ಅಧ್ಯಕ್ಷತೆಯಲ್ಲಿ ಎಂಪ್ಲೋಯರ್ಸ್ ಫೆಡರೇಶನ್ ಆಫ್ ಇಂಡಿಯಾ ಎಂಬ ಸಂಸ್ಥೆಯು ಸ್ಥಾಪಿತವಾಗಿದೆ.

ವೈಸರಾಯರ ಕಾರ್ಯಕಾರೀ ಮಂಡಳಿಯ ಸದಸ್ಯರಾದ ಚೌಧುರಿ ಜಫರುಲ್ಲಾರವರು ರಿಜರ್ವ್ ಮಾಡಿಟ್ಟ ರೈಲ್ವೇ ಸೀಟು ಲಾಹೋರಿನಲ್ಲಿ ರೈಲ್ವೇ ಅಧಿಕಾರಿಗಳಿಂದ ಬೇರೆಯವರಿಗೆ ಕೊಡಲ್ಪಟ್ಟು, ಸರಕಾರವು ವಿಚಾರಿಸುವಂತಾಗಿದೆ.

ಕೊಯಂಬತ್ತೂರಿನ ಜಿಲ್ಲಾ ರಾಜಕೀಯ ಪರಿಷತ್ತು ಶ್ರೀ ಭುಲಾಭಾಯಿ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಜರಗಲಿರುವುದು

ಸಿಲ್ವರ್ ಜುಬಿಲಿ ಪೋಸ್ಟಲ್ ಸ್ಟಾಂಪ್‌ಗಳ ವಿಕ್ರಯವು ಸಂತೃಪ್ತಿಕರವಾಗಿಲ್ಲವೆಂದು ಸಿಮ್ಲಾದಲ್ಲಿ ಕರೆಕರೆ.

ಸಿಂಧ್ ದೇಶದಲ್ಲಿ ಕಲೆಕ್ಟರರುಗಳು ಒಂದಾಗಿ ಗ್ರಾಮೋದ್ಧಾರ ಕೆಲಸಕ್ಕೆ ಹೇಗೆ ತೊಡಗಬೇಕೆಂದು ಯೋಚಿಸುತ್ತಿದ್ದಾರೆ

ಅಲ್ಲಹಾಬಾದಿನಲ್ಲಿ ರಾಧಾ ಎಂಬವಳ ಆಸ್ತಿಗಾಗಿ ಅವಳನ್ನು ಕೊಂದ ಮುಸ್ಲಿ ಶಾಗಾ ಮತ್ತು ಅವನ ಒಬ್ಬ ಮಗನಿಗೆ ಶಿಕ್ಷೆಯಾಗಿದೆ.

ಮದ್ರಾಸಿನ ಮೀನಂಬಾಕಮ್ ವಿಮಾನ ನಿಲ್ದಾಣದಲ್ಲಿ ರಾತ್ರಿಯಲ್ಲಿ ವಿಮಾನಗಳು ಸಂಚರಿಸುವಂತೆ ವಿದ್ಯುತ್ ಪ್ರವಾಹವನ್ನು ಹಾಯಿಸುವರು.

ಡಿಲ್ಲಿಯ ಪ್ರಾಣಿಪ್ರದರ್ಶನಾಲಯದಿಂದ ೮ ವರುಷ ಪ್ರಾಯದ ಮಗುವೊಂದನ್ನು ಯಾರೋ ಕದ್ದೊಯ್ದಿರುವರು.

ಮುಂಬಾಯಿಯ ಪೋಲ್ಸನ್ ಕಾಫಿ ಕಾರ್ಖಾನೆಯವರು ಸಿಲ್ವರ್ ಜುಬಿಲಿಯ ಗೌರವಾರ್ಥ ತಮ್ಮ ಎಲ್ಲಾ ಕೆಲಸಗಾರರಿಗೆ ೧೫ ದಿನಗಳ ಸಂಬಳವನ್ನು ದಾನ ಮಾಡಿದರು

ಕರಾಚಿಯ ರುಸ್ತುಂ ಎಂಬ ಹಳ್ಳಿಯಲ್ಲಿ ಪೋಲಿಸರು ಕಳ್ಳಬಟ್ಟಿಯ ದೊಡ್ಡ ಕಾರ್ಖಾನೆಯೊಂದನ್ನು ಕಂಡುಹಿಡಿದಿರುವರು. ಇಲ್ಲಿ ಕಳ್ಳತನದಿಂದ ಶರಾಬು ತಯಾರಿಸುತ್ತಿದ್ದರು.

ಶ್ರೀ ಸತ್ಯಮೂರ್ತಿಯವರು ಅಣ್ಣಾಮಲೆ ಯುನಿವರ್ಸಿಟಿಯ ವೈಸ್ ಚೆನ್ಸಲರಾಗಲಿರುವರೆಂದು ಆಂಗ್ಲಪತ್ರಿಕೆಯೊಂದರ ಹೇಳಿಕೆ.

ಲೋರ್ಡ್ ಲಿನ್‌ಲಿತ್ ಗೋ ಅಥವಾ ಸರ್ ಮಾಲ್ಕಂ ಹೈಲಿಯವರು ಇಂಡಿಯದ ವೈಸರಾಯರಾಗುವರಾಗಿ ವದಂತಿಯಿದೆ.

ಈ ವಾರದ ತಂತಿ ವಾರ್ತೆಗಳು:

ಜಪಾನರಿಗೂ ಚೀನಿಯರಿಗೂ ಜಗಳ.

ಶಂಗೈ, ಮೇ, ೨೬

ಚೀನಾದಲ್ಲಿರುವ "ಡಿಮಿಲಿಟರೈಸ್ಡ್" ಸೈನ್ಯವಿಲ್ಲದ ಭಾಗದಲ್ಲಿ ಜಪಾನೀಯರಿಗೂ ಚೀನಿಯರಿಗೂ ಯುದ್ಧವು ನಡೆಯಿತು. ೩೦೦ ಜನ ಚೀನೀಯರು ಈ ಕದನದಲ್ಲಿ ಮರಣಹೊಂದಿದರು ಟೀಹಾಲ್‌ನಿಂದ ಜಪಾನ್ ಸೈನ್ಯವು ಬಂದಿತು. ಸಿದ್ಧವಾಗಿಲ್ಲದೆ ೪೦೦ ಚೀನಾ ಸೈನಿಕರು ಇದ್ದರು. ಈ ಎರಡು ಪಂಗಡಗಳಿಗೂ ಯುದ್ಧವು ನಡೆಯಿತು. ಜಪಾನೀಯರು ಒಟ್ಟು ೬ ಜನರು ಮಾತ್ರ ಹತರಾದರು. ೩ ಮಂದಿಗೆ ಘಾಯವಾಗಿದೆ ಈ ಕದನಕ್ಕೆ ಕಾರಣವನ್ನು ಹೀಗೆಂದು ತಿಳಿಸುತ್ತಾರೆ ಏರಿಗುಲಾ ಎಂಬ ಪ್ರದೇಶದಲ್ಲಿ ಜಪಾನಿಯರಿಗೆ ವಿರುದ್ಧವಾಗಿ ಚಳವಳಿಯು ನಡೆಯುತ್ತಿತ್ತು ಆ ಚಳವಳವನ್ನು ಚೀನಾ ಸರಕಾರೀ ಅಧಿಕಾರಿಗಳು ಕೊನೆಗಾಣಿಸಲು ಪ್ರಯತ್ನಿಸಲಿಲ್ಲ ಇದೇ ಕಾರಣವು ಕದನಕ್ಕೆ ಚೀನಾ ಅಧಿಕಾರಿಗಳು ಹೀಗೆಂದು ಪ್ರಕಟಿಸಿರುತ್ತಾರೆ.

ಲೋರೆನ್ಸರ ದೋಣಿಯಲ್ಲಿ ದರೋಡೆಗಾರರು.

ಶಂಗೈ ಮೇ ೨೦

ಲಂಡನ್ನಿನಲ್ಲಿ ಅಪಘಾತದಿಂದ ಮೃತರಾದ ಅರಬ್ಬೀಯಾದ ಲೋರೆನ್ಸರವರ ತಾಯಿಯಾದ ಮಿಸೆಸ್ ಲಾರೆನ್ಸ್ ಇವರು ಚೀನಾದ ಚೆಂಗಟೂ ಎಂಬಲ್ಲಿ ವಾಸವಾಗಿದ್ದರು. ಕಳೆದ ತಿಂಗಳ ೨೨ ನೇ ದಿನ ಚೆಂಗಟೂವನು ಬಿಟ್ಟು ಹೊರಟು ಹೋಗಿದ್ದ ವಿದೇಶೀ ಜನರಲ್ಲಿ ಇವರೂ ಒಬ್ಬರು ತಮ್ಮ ಜ್ಯೇಷ್ಠ ಪುತ್ರರೊಡನೆ ಇಂಗ್ಲಾಂಡಿಗೆ ಬರುತ್ತಿದ್ದರು. ಇವರು ಯಾಂಗಟ್ಸಿ ನದಿಯಲ್ಲಿ ಒಂದು ದೋಣಿಯಲ್ಲಿ ಹೋಗುತ್ತಿದ್ದಾಗ ಕೆಲವು ದರೋಡೆಗಾರರು ಇವರ ದೋಣಿಯನ್ನು ಹತ್ತಿ ಸಾಮಾನುಗಳೆಲ್ಲಾ ದೋಚಿಕೊಂಡು ಓಡಿದರು ಮಿಸೆಸ್ ಲಾರೆನ್ಸರವರಿಗೆ ಘಾಯಗಳಾಗಿವೆ ಇವರನ್ನು ಕೂಡಲೇ ಆಸ್ಪತ್ರೆಗೊಯ್ಯಲಾಗಿದೆ. ತನ್ನ ಪುತ್ರ ಲಾರೆನ್ಸರವರು ಮರಣಹೊಂದಿದ ವಾರ್ತೆಯು ಇವರಿಗೆ ತಿಳಿದಿಲ್ಲವೆಂದು ವಾರ್ತೆಯಿದೆ.

'ಮ್ಯಾಕ್ಸಿಂಗಾರ್ಕಿ' ಅಪಘಾತಕ್ಕಾಗಿ ವ್ಯಸನ

ಮಾಸ್ಕೋ ಮೇ ೨೬

"ಮ್ಯಾಕ್ಸಿಂಗಾರ್ಕಿ" ಎಂಬ ವಿಮಾನದ ಅಪಘಾತದಲ್ಲಿ ೪೮ ಜನರು ಮರಣಹೊಂದಿದರಷ್ಟೆ ಈ ೪೮ ಜನರನ್ನು ಈ ದಿನ ಸಮಾಧಿ ಮಾಡಲಾಯಿತು ಮಾಸ್ಕೋ ನಗರವಾಸ್ತವ್ಯರು ಈ ೪೮ ಜನರ ಅಕಾಲ ಮರಣಕ್ಕಾಗಿ ಬಹಳ ವಿಷಾದವನ್ನು ಸೂಚಿಸುತ್ತಿದೆ ೫೦,೦೦೦ ಜನರು ಸ್ಮಶಾನಕ್ಕೆ ನಡೆದರು.

ಅಮೇರಿಕಕ್ಕೆ ಹೊರಗಣ ಬೆಳ್ಳಿನಾಣ್ಯಗಳು ಬರಬಾರದು.

ವಾಷಿಂಗ್‌ಟನ್, ಮೇ ೨೧

ಸಂಯುಕ್ತ ಅಮೇರಿಕಾ ಸಂಸ್ಥಾನಕ್ಕೆ ಬೆಳ್ಳಿನಾಣ್ಯಗಳನ್ನು ತರಕೂಡದೆಂದು ಸಂಯುಕ್ತ ಸಂಸ್ಥಾನದ ಖಜಾನೆ ಶಾಖೆಯ ಮಂತ್ರಿಯಾದ ಮಾರ್ಗೆಂತೋರವರು ಆಜ್ಞೆ ಯಿತ್ತಿದ್ದಾರೆ. ಈ ಆಜ್ಞೆಯ ಆಶಯವೇನೆಂದರೆ– ಬೆಳ್ಳಿಯ ಬೆಲೆಯ ಏರುಪೇರಿಯಿಂದ ಬೆಳ್ಳಿನಾಣ್ಯಗಳಲ್ಲಿರುವ ಬೆಳ್ಳಿಯ ಬೆಲೆಯು ನಾಣ್ಯಕ್ಕಿಂತಲೂ ಹೆಚ್ಚಾಗುವುದು ಇಂತಹ ದುಃಸ್ಥಿತಿಯೊದಗಿದ ರಾಷ್ಟ್ರಗಳೊಡನೆ ಸಹಕರಿಸಿ, ಅವುಗಳಿಗೆ ಸಹಾಯಮಾಡಬೇಕೆಂಬುದೇ ಈ ಆಜ್ಞೆಯ ಆಶಯವೆಂದು ಟ್ರೆಜರಿಯು ವಿವರಿಸಿರುತ್ತದೆ.

ಲಾರೆನ್ಸರ ಮರಣಕ್ಕಾಗಿ ಚಕ್ರವರ್ತಿಗಳ ಶೋಕ

ಲಂಡನ್, ಮೇ, ೨೧

ಅರೇಬಿಯದ ಲಾರೆನ್ಸರವರು ಮರಣಹೊಂದಿರುವುದರಿಂದ ಬ್ರಿಟನ್ನಿನ ರಾಜರು ಒಂದು ವಿಷಾದಸೂಚಕ ಸಂದೇಶವನ್ನು ಲಾರೆನ್ಸರವರ ಸಹೋದರರಿಗೆ ಕಳುಹಿಸಿದರು "ಲಾರೆನ್ಸರವರ ಮರಣವು ಬಹಳ ವಿಷಾದಕರವಿದೆ ಇವರ ಹೆಸರು ಇತಿಹಾಸದಲ್ಲಿ ನಿಲ್ಲುವುದು. ದೇಶಕ್ಕಾಗಿ ಇವರು ಮಾಡಿರುವ ಸೇವೆಯನ್ನೂ ನಾವು ಮರೆಯಲಾಗುವುದಿಲ್ಲ ಇನ್ನೂ ಅವರಿಂದ ಸೇವೆಯು ಸಲ್ಲಬೇಕಾಗಿರುವಲ್ಲಿ ಇಷ್ಟು ಬೇಗನೇ ಅವರಿಗೆ ಮರಣ ಸಂಭವಿಸಿದುದು ವಿಷಾದಕರವಾದುದು" ಎಂದು ತಿಳಿಸಿರುವರು

ಜರ್ಮನಿಯ ಮಂತ್ರಿಯ ಆಸ್ತಿಗೆ ಮುಟ್ಟುಗೋಲು!

ಬರ್ಲಿನ್, ಮೇ, ೨೬

ಜರ್ಮನಿಯ ಮಾಜಿ ಮಂತ್ರಿಗಳೂ ಬರ್ಲಿನಿನ ಪೋಲೀಸ್ ಪ್ರೆಸಿಡೆಂಟರೂ ಆಗಿದ್ದ ಡಾ॥ ಗ್ರಾಜೆಸಿಂಕಿ ಎಂಬವರು ಜರ್ಮನಿಯ ನಿವಾಸಿಗಳ ಹಕ್ಕಿಗೆ ಬಾಧ್ಯರಲ್ಲವೆಂದು ಸರಕಾರವು ಪ್ರಕಟಿಸಿರುತ್ತದೆ ಇವರ ಆಸ್ತಿಪಾಸ್ತಿಗಳನ್ನೆಲ್ಲ ಸರಕಾರವೇ ವಶೀಕರಿಸಿಕೊಂಡಿದೆ.

ಭೂತದ ಉಪದೇಶ.

ಹಜಾರಿಬಾಗಿನ ಮಹಮ್ಮದ್ 'ಇಷಾಕ್' ಎಂಬವನು ಜೋಳೋಭ ಕ್ರಿಮಿನಲ್ ಮೊಕದ್ದಮೆಯು ಸಿವಿಲ್ ಕೋರ್ಟಿನಲ್ಲಿತ್ತು ಅವನ ಆದುದರಿಂದ ಅವನು ಯೋಚನೆಗೊಳಗಾಗಿ ಆಲೋಚಿಸಿಕೊಂಡನು ಒಂದು ದಿನ ರಾತ್ರಿ ಅವನಿಗೊಂದು ಕನಸು ಬಿದ್ದಿತು ... ಅಲ್ಲಿ ... ಪ್ರಸಿದ್ಧ ... ಭೂತವು ಅವನ ಕನಸಿನಲ್ಲಿ ... ಮಹಮ್ಮದನಿಗೆ "ನೀನು ... ಕೇಳು ... ನೋಡು ಅವುಗಳನ್ನು ... ನಿನಗೆ ಜಯವು ... " ಎಂದಿತು. ಅದೇ ಮೇರೆಗೆ ಅವನು ಆ ... ತೆಗೆದು ... ಅವರ ಹೇಳಿಕೆ ಮೇರೆಗೆ ಅವನು ಆ ... ಮೊಕದ್ದಮೆಯಲ್ಲಿ ಅವನಿಗೆ ಜಯವೇ ದೊರೆಯಿತು

ಡಿಲ್ಲಿಯಲ್ಲಿ ಸಿಡುಬು ರೋಗದಿಂದ ೧೪ ಜನರು ಮೃತರಾದರು

ಕರಾಚಿಯಲ್ಲಿ ರಕ್ಷ ನಾಣ್ಯಗಳ ತಯಾರಿಯಲ್ಲಿ ನಿರತರಾಗಿದ್ದ ಇಬ್ಬರನ್ನು ಸೆರೆಹಿಡಿದಿರುವರು.

ಫ್ರೆಂಚ್ ಸರಕಾರವು ಹೋಗುವುದೇ?

ಪೆರಿಸ್, ಮೇ ೨೬

ಪಾಯಿನ್‌ಕೇರಿ ಎಂಬವರ ಕಾಲದಿಂದಲೂ ಕಲಿದೋರದಿದ್ದ ಹಣದ ತೊಂದರೆಯು ಫ್ರಾನ್ಸಿಗೆ ಈಗ ಸನ್ನಿಹಿತವಾಗಿರುತ್ತದೆ ಈ ಸಂದಿಗ್ಧತೆಯು ತಲೆದೋರಿದ ಸಮಯದಲ್ಲಿಯೇ ಸರಕಾರವು ರಾಜಿನಾಮೆಯನ್ನು ಕೊಡಲಿರುವುದೆಂಬ ವಾರ್ತೆಯೂ ಹರಡಿರುತ್ತದೆ. ಫ್ಲಾಂಡಿನ್ನರ ಅನಾರೋಗ್ಯವು ಸರಕಾರಕ್ಕೆ ಅಡಚಣೆಯನ್ನು ತಂದಿಕ್ಕಿದೆ. ಮನೆಯಲ್ಲಿಯೇ ರಾಜಕಾರ್ಯಗಳಿಗೆ ಚಿತ್ತವಿಡುವಷ್ಟು ಶಕ್ತಿವಂತರಾಗಿರುವ ಅವರು ಏನು ಮಾಡಲಿರುವರೋ ತಿಳಿಯದು ಈ ಸಮಯದಲ್ಲಿ ಉತ್ತರಾಧಿಕಾರಿಗೆ ಸ್ಥಾನ ಬಿಡಬೇಕೆಂದು ಮಂತ್ರಾಲೋಚನೆಯು ನಡೆಯುತ್ತದೆ ಅಧ್ಯಕ್ಷರು ಮುಖ್ಯ ಮಂತ್ರಿಯವರನ್ನು ಸಂದರ್ಶಿಸಿರುವರು

ಹಿಟ್ಲರರ ಭಾಷಣ.

ಬರ್ಲಿನ್, ಮೇ, ೨೧.

ಅಂತರ್ರಾಷ್ಟ್ರೀಯ ಸಮಸ್ಯೆಗಳ ಕುರಿತು ಜರ್ಮನಿಯ ನೀತಿಯೇನೆಂಬ ಕುರಿತು ಈ ದಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಹರ್ ಹಿಟ್ಲರರು ಅರ್ಥಗರ್ಭಿತವಾದ ಭಾಷಣವನ್ನು ಮಾಡಿದರು ಹಿಟ್ಲರರು ಹೇಳಿರುವುದೇನೆಂದರೆ "ಎಪ್ರಿಲ್ ೧೭ನೇ ತಾರೀಕಿನ ದಿನ ಜಿನೇವಾ ತೀರ್ಮಾನವನ್ನು ಜರ್ಮನಿಯು ನಿರಾಕರಿಸುತ್ತದೆ ಎಲ್ಲಾ ರಾಷ್ಟ್ರಗಳಿಗೂ ನ್ಯಾಯವಾದ ರೀತಿಯಲ್ಲಿ ಸಮಾನಭಾವವನ್ನು ತೋರಿಸದೆ ಜರ್ಮನಿಗೆ ಹೊಸ ಹೊಸ ಶರ್ತಗಳನ್ನು ಹಾಕಿದರೆ ಜರ್ಮನಿಯು ಲೀಗಿಗೆ ಬರುವುದೆಂದು

ಸರ್ವಥಾ ತಿಳಿಯಕೂಡದು ಇದೇ ಕಾರಣದಿಂದ ಜರ್ಮನ್ ಸರಕಾರವು ಸ್ವಷ್ಟರೀತಿಯಿಂದ ಹೇಳುತ್ತಿರುವುದೇನೆಂದರೆ –ಯುದ್ಧದಲ್ಲಿ ಸೋತ ಮತ್ತು ಗೆದ್ದ ರಾಷ್ಟ್ರಗಳಿಗಾಗಿ ... ಬೇರೆ ಶರ್ತಗಳನ್ನೊಳಗೊಂಡ ವರ್ಸಾಯಿ ಸಂಧಿಯ ವಿಷಮ ರೀತಿಯಿಂದ ಸ್ವತಂತ್ರಪಡಿಸಬೇಕೆಂದು ಒತ್ತಾಯಪಡಿಸುತ್ತದೆ ಜನಾಂಗ ಸಂಘವು ಎಲ್ಲರನ್ನೂ ಸಮಾನಭಾವದಿಂದಲೇ ಕಾಣಬೇಕೆಂದು ಜರ್ಮನಿಯ ಹೇಳಿಕೆ ಅಂತರಾಷ್ಟ್ರೀಯ ಜೀವನದ ಎಲ್ಲಾ ಅಂಗಗಳಲ್ಲೂ ಈ ಎಲ್ಲಾ ಹಕ್ಕುಗಳಿಗೂ ಈ ಸಮತೆಯು ಬೇಕೇ ಬೇಕು ಜರ್ಮನಿಯ ಅಧಿಕಾರಗಳನ್ನು ತೃಪ್ತಿಗೊಳಿಸುವಂತಹ ಯಾವುದೇ ಒಪ್ಪಂದಕ್ಕಾದರೂ ಜರ್ಮನಿಯು ಸಹಿ ಹಾಕಲಾರದು ಅದರ ಪರಿಣಾಮವಾಗಿ ಪ್ರಾಪ್ತಗೊಂಡಿರುವ ಒಪ್ಪಂದಗಳನ್ನು ಮಾತ್ರ ಅಕ್ಷರಶಃ ನಡೆಸಲು ಸಿದ್ಧವಾಗಿದೆ. ಆ ಒಪ್ಪಂದವು ಈಗಿನ ಸರಕಾರವು ಬರುವುದಕ್ಕೆ ಮೊದಲೇ ಆಗಿದ್ದರೂ ಸರಿ—ಅದನ್ನು ಜರ್ಮನಿಯು ಪಾಲಿಸುವುದು ಲೊಕಾರ್ನೋ ಸಂಧಿಗೆ ಇತರ ದೇಶಗಳು ಗೌರವಿಸುತ್ತಿರುವುದಾದರೆ, ಜರ್ಮನಿಯು ಮನ್ನಣೆ ಕೊಟ್ಟೀತು.

ತೀರ ಹೊಸ ನಾಟಕ.

ಮುಂಬಾಯಿಯ ಕನ್ನಡ ಸಂಗೀತ ಸಭಾ (ಎಮೆಚೂರ್ಸ್) ಇವರು ಜೂನ್ ೭ನೇ ತಾರೀಕಿನ ದಿನ ರಾತ್ರಿ ಕೌಂಸ್ ಜಿ ... ಹಾಲಿನಲ್ಲಿ ಶ್ರೀ ನಾರಾಯಣ ಬಿ ಎಂ ... ರವರ ಅಧ್ಯಕ್ಷತೆಯಲ್ಲಿ 'ಆದ್ವಿತೀಯ ವೀರಭದ್ರ—ಅಥವಾ ಕೊಟಿಚೆನ್ನಯ್ಯರು' ಎಂಬ ನಾಟಕವನ್ನು ಅಭಿನಯಿಸಲಿರುವರು. ಮುಂಬಾಯಿಯ ಕನ್ನಡಿಗರೆಲ್ಲರೂ ತಮಗೆ ಸಹಕಾರವನ್ನು ನೀಡಬೇಕಾಗಿ ನಾಟಕ ... ಕೋರುತ್ತಾರೆ.



'ಚಂದ್ರಗುಪ್ತ' ಚಲಚ್ಚಿತ್ರದ ಇನ್ನೊಂದು ದೃಶ್ಯ.
ಈ ಚಿತ್ರದಲ್ಲಿ ಕೇ. ಸಿ ದೇ (ಅಂಧ ಗಾಯಕ) ಇವರು ಅಭಿನಯಿಸುವನು.

ಕಾಲು ಇಲ್ಲದ ಗಂಡನು ಕಾಲಿಗೆ ಬುದ್ಧಿ ಹೇಳಿದನು!

ತಂಜಾವೂರಿನ ರುಕ್ಮಿಣಿ ಎಂಬ ಒಬ್ಬ ಹುಡುಗಿ, ತನ್ನ ಬಾಲ್ಯದಲ್ಲಿ ಭಿಕ್ಷುಕನೊಬ್ಬನನ್ನವಮಾನಪಡಿಸಿದ್ದಳಂತೆ. ಆ ಭಿಕ್ಷುಕನು 'ನಿನಗೆ ಕಾಲಿಲ್ಲದ ಗಂಡನು ಸಿಗಲಿ' ಎಂದು ಶಪಿಸಿದ್ದನಂತೆ ಈ ಸಮಾಚಾರವನ್ನು ಆವಳು ತಂದೆತಾಯಿಗಳಿಗೆ ತಿಳಿಸಿದಳು ಆದರೆ, ಅವರು ಆ ಶಾಪವನ್ನು ಗಣ್ಯಕ್ಕೆ ತರಲಿಲ್ಲ. ಆ ಭಿಕ್ಷುಕನಿಗೆ ಬೈದು ಕಳುಹಿಸಿದ್ದರು. ಇತ್ತೀಚೆಗೆ ರುಕ್ಮಿಣಿಗೆ ಮದುವೆಯೆಂದು ನಿಶ್ಚೈಸಲ್ಪಟ್ಟಿತು. ವರನು ಸುಂದರನೇ. ಸಿರಿವಂತನೂ ಆಗಿದ್ದನು. ವಿವಾಹ ಕಾರ್ಯವು ಪ್ರಾರಂಭವಾಯಿತು ಎಲ್ಲಾ ಮುಗಿದು ವಧುವು ವರನ ಕಾಲಿಗೆ ಗಂಧಲೇಪನ ಮಾಡುವ ಕ್ರಮವು ಉಳಿದಿತ್ತು. ವರನು ವಧುವಿನದುರು ನಿಂತಿದ್ದನು ವಧುವು ಗಂಧವನ್ನು ಹಿಡಿದುಕೊಂಡು ನಿಂತಿದ್ದಳು ಜನರು ವಧೂವರರಿಗೆ ಪರಿಹಾಸ್ಯಮಾಡುತಿದ್ದರೆಂದು ಬೇರೆ ಹೇಳುವುದನವಶ್ಯ. ವರನು ಪಾದರಕ್ಷೆಯನ್ನು ಧರಿಸಿಕೊಂಡಿದ್ದನು ಅದನ್ನಿಟ್ಟುಕೊಂಡೇ ಗಂಧಲೇಪನವನ್ನು ಮಾಡುವುದೆಂದು ಬಗೆದಿದ್ದನು ಆದರೆ ಆಚಾರ್ಯರು ಅದು ಕೂಡದೆಂದರು. ಪಾದರಕ್ಷೆಯನ್ನು ತೆಗೆಯಲಾಯಿತು. ವರನು ಕತ್ತಾಬಿಕ್ಕಿಯಾದನು ಕಾಲನ್ನು ಅಡಗಿಸಿಕೊಳ್ಳಲು ಯತ್ನಿಸಿದನು ನೋಡುವುದೇನು? ಅವನಿಗೆ ನಿಜವಾದ ಕಾಲುಗಳಿರಲಿಲ್ಲ ಮರದ ಕಾಲುಗಳು! ಮದುವೆಯ ಮಂಟಪವು ರಣರಂಗವಾಯಿತು ಈ ಗಲಾಟೆಯ ಮಧ್ಯೆ ವರನೂ ಅವನ ಸಂಗಾತಿಗಳೂ ಕಾಲಿಗೆ ಬುದ್ಧಿ ಹೇಳಿದರು

ನೀರುಳ್ಳಿ ಕೊಯ್ಯುವಾಗ ನಿಮ್ಮ ಕಣ್ಣಿನಲ್ಲಿ ನೀರು ಏಕೆ ಸುರಿಯುತ್ತದೆ?

ಕೇಳಿ ನಮ್ಮ ಕಣ್ಣಿನಲ್ಲಿ ಯಾವಾಗಲೂ ಒಂದು ವಿಧವಾದ ದ್ರವವು ಉತ್ಪತ್ತಿಯಾಗುತ್ತಲೇ ಇರುತ್ತದೆ ಇದನ್ನೇ ನಾವು ಕಣ್ಣೀರು ಎನ್ನುವುದು ಕಣ್ಣುಗುಡ್ಡೆಗಳನ್ನು ಶುಭ್ರವಾಗಿಡಲು ಈ ನೀರು ಬಹು ಸಹಕಾರಿಯಾಗಿದೆ ನಾವು ಕಣ್ಣುಗಳನ್ನು ಮಿಟುಕಿಸುವಾಗ ಅವುಗಳ ಮೇಲ್ಭಾಗದಲ್ಲಿ ಉತ್ಪತ್ತಿಯಾಗುವ ನೀರ ಕೆಳಭಾಗಕ್ಕೆ ತರಲ್ಪಡುವುದು ಆಗ ಕಣ್ಣುಗುಡ್ಡೆಯ ಮೇಲಿರುವ ಕಶ್ಮಲಗಳು ನೀರಿನೊಡನೆ ಬರುವುವು ಅಕಸ್ಮಾತ್ತಾಗಿ ಕಣ್ಣೀರಿನ ಉತ್ಪತ್ತಿಯು ಹೆಚ್ಚಾದಲ್ಲಿ ಹೆಚ್ಚಿನ ನೀರು ಹೊರಗೆ ಹೋಗುವುದು ನೀರುಳ್ಳಿಯನ್ನು ಕೊಯ್ಯುವಾಗ ಅದರಲ್ಲಿರುವ ಒಂದು ಖಾರವಾದ ತತ್ವವು ಗಾಳಿಯ ಮೂಲಕ ಕಣ್ಣಿಗೆ ಸೇರಿ, ಅದರ ಗ್ರಂಥಿಗಳಿಗೆ ತಗಲುತ್ತದೆ ಆದುದರಿಂದಲೇ ಕಣ್ಣಿನಿಂದ ನೀರು ಹೊರಗೆ ಹರಿಯುವುದು

ಯಜ್ಞಗಳಲ್ಲಿ ಎಷ್ಟು ವಿಧ?

—ಎಂದು ನಮ್ಮ ಹಿರಿಯರಿಗೆ ತಿಳಿದಿತ್ತು ಆದರೆ ನಮಗೆ ತಿಳಿದಿಲ್ಲ ನಮ್ಮ ಈ ಕಾಲದಲ್ಲಿನ ಯಜ್ಞವೆಂದರೆ—ಸಿಗರೇಟು ಯಜ್ಞ—ಕಾಫಿಯಜ್ಞ—ಇವೇ ಮೊದಲಾದುವು ಸಿಗರೇಟ್ ಯಜ್ಞದ ಒಂದು ವಿವರವನ್ನಿಲ್ಲಿ ತಿಳಿಸುತ್ತೇವೆ. ಇಂಗ್ಲೆಂಡಿನಲ್ಲಿ ವರ್ಷಂಪ್ರತಿ ೫ ಕೋಟಿ ಇಪತ್ತೆಂಟು ಲಕ್ಷದ ಸಿಗರೇಟುಗಳ ಯಜ್ಞವು ನಡೆಯುತ್ತದೆಂದು ಲೆಕ್ಕವಾಗಿದೆ ಇಷ್ಟು ಸಿಗರೇಟುಗಳಲ್ಲಿ ೪,೦೦೦,೦೦೦,೦೦೦ ಸಿಗರೇಟುಗಳ ಕೊಲೆಯು ಅಲ್ಲಿಯ ಸ್ತ್ರೀಯರಿಂದಲೇ ನಡೆಯುತ್ತದೆಂದು ಮತ್ತೊಂದು ಲೆಕ್ಕ! ಜನರನ್ನು ಕೆಡಿಸುವ ಸಿಗರೇಟನ್ನು ಜನರೇ ಸುಟ್ಟು ಬಿಡುವುದು ನಿಜವಾಗಿಯೂ ಶ್ರೇಯಸ್ಕರವೇ!

ಬರೀ ಸಾಧು.

ತಿರುಪತಿಗೆ ಮೊನ್ನೆ ಇಬ್ಬರು ಸ್ತ್ರೀಯರು ಯಾತ್ರಾರ್ಥ ಹೋಗಿದ್ದರು ಒಂದು ಛತ್ರದಲ್ಲಿ ಉಳಿದುಕೊಂಡಿದ್ದರು ಕತ್ತಲಾಗುವಾಗ ಒಬ್ಬ ಸಾಧುವು ಅವರ ಬಳಿಗೆ ಬಂದ ಮಾತುಕತೆ ನಡೆಸುತ್ತಾ, ತನ್ನ ಚೀಲದಿಂದ ಒಂದಿಷ್ಟು ಸಕ್ಕರೆಯನ್ನು ತೆಗೆದು ಪ್ರಸಾದವೆಂದು ನಂಬಿಸಿ ಆ ಸ್ತ್ರೀಯರಿಗಿತ್ತ ತಿಂದು ಅರೆಗಳಿಗೆ ದಾಟಿದೆ ಕಾದರೆ ಪಾಪದ ಸ್ತ್ರೀಯರಿಬ್ಬರೂ ಮೂರ್ಛೆಹೊಂದಿದರು ಸ್ವಲ್ಪ ಹೊತ್ತಿನ ಮೇಲೆ ಅವರಲ್ಲೊಬ್ಬಳು ಮೆಲ್ಲನೆ ಚೇತರಿಸಿಕೊಂಡು ಬೊಬ್ಬಿಟ್ಟಳು ಒಬ್ಬಳು ಏಳಲೇ ಇಲ್ಲ ಗೋಷಾ ಆಸ್ಪತ್ರೆಗೆ ಅವರಿಬ್ಬರನ್ನೂ ಒಯ್ದರು ವಿಷಪ್ರಯೋಗವಾಯಿತೆಂದೇ ನಿರ್ಣಯಿಸಿದರು. ಸಾಧುವು ಮಾತ್ರ ಸಿಕ್ಕಿರುವುದಿಲ್ಲ

ತಪ್ಪೋ ಸರಿಯೋ?

ಬ್ರಾಹ್ಮಣತ್ಯಾಗ ಮಾಡುವುದು ತಪ್ಪೋ ಸರಿಯೋ? ತಪ್ಪು ಎಂದು ಹೇಳುವವರು ಹಲವರಿದ್ದಾರೆ ಏಕೆ? ಎಂದು ಪ್ರಶ್ನಿಸಿದರೆ 'ಜನಸಂಖ್ಯೆ ಹೆಚ್ಚಬೇಕು' ಎಂದು ಅವರು ಹೇಳುವರು ಸೀಲೋನಿನ ಬಾಟ್ಟಿಕೋಲಾ ಕೋರ್ಟಿನಲ್ಲಿ ಒಬ್ಬಳು ಸ್ತ್ರೀಯನ್ನು ತಂದರು. ಅವಳು ಮೊನ್ನೆ ಬಾವಿಗೆ ಹಾರಲು ಯತ್ನಿಸಿದಳೆಂಬುದೇ ಅವಳ ಮೇಲಿನ ಆಪಾದನೆ "ಹೌದು ನಾನು ಹಾರಿದುದು ಹೌದು ಏಕೆಂದು ತಿಳಿದಿರಿ? ನನ್ನ ಗಂಡನು ನನ್ನನ್ನು ಬಹು ಕ್ರೂರರೀತಿಯಿಂದ ಶಿಕ್ಷಿಸುತ್ತಿರುವನು ಅವನ ಕೈಯಿಂದ ಸಾಯುವುದಕ್ಕೆ—ಅವನಿಗೆ ಭಯವೆಂದರೇನೆಂದು ತಿಳಿಸಲಿಕ್ಕೆ—ನಾನು ಹೀಗೆ ಮಾಡಿದೆನು—" ಎಂದಳು ಕೋರ್ಟಿನವರು "ಇನ್ನು ಹಾಗೆ ಮಾಡಬೇಡ" ಎಂದು ಅವಳಿಗೂ ಅವಳ ಗಂಡನಿಗೂ ಹೇಳಿ ಬಿಟ್ಟುಬಿಟ್ಟರು.

ನೀರಿನ ಮೇಲೆ ನಡೆಯಬಹುದು.

ಶ್ರೀ ಜೆ ಕ್ರಿಸ್ತನು ನೀರಿನ ಮೇಲೆ ನಡೆದಿದ್ದಾನೆ ಎಂದು ಬೈಬಲ್ ಗ್ರಂಥವು ಹೇಳಿದರೆ ಅದನ್ನು ನಂಬುವವರು ಹೆಚ್ಚಾಗಿಲ್ಲ. ಆದರೆ ಅದು ನಡೆಯಬಹುದೆಂದು ತಿಳಿಸುವ ಒಂದು ವರ್ತಮಾನವಾಗ ತಿಳಿದುಬಂದಿದೆ ಜರ್ಮನ ಶಾಸ್ತ್ರಜ್ಞನೊಬ್ಬನು ಭೂಮಿಯ ಮೇಲೆ ಜನರು ನಡೆಯುವಂತೆ ನೀರಿನ ಮೇಲೆ ನಡೆಯಲು ಸಾಧಕವಾದ ಒಂದು ವಿಚಿತ್ರ ಬೂಟಿಸನ್ನು ಸಿದ್ಧಗೊಳಿಸಿರುವನು. ಒಂದು ಬಗೆಯ ಲೋಹದಿಂದ ಈ ಪಾದರಕ್ಷೆಯನ್ನು ತಯಾರಿಸಿದೆನೆಂದು ಅವನು ಹೇಳುತ್ತಿರುವನು ಈ ಬೂಟೀಸಿಗೆ ಇರುವ ಎರಡು ಕೋಲುಗಳನ್ನು ನಡೆಯುವವನು ಕೈಯಲ್ಲಿ ಹಿಡಿದುಕೊಂಡು ನಡೆಯಬಹುದು ಈ ಸಾಧನವನ್ನು ಕಂಡುಹಿಡಿದವನ ಹೆಸರು ಫ್ರೆಡರಿಕ್ ವಾಲ್ತೇರ್ ಎಂದು ನೆನಪಿರಲಿ!

ಸಂಸಾರಿಗಳೆಲ್ಲ ಹೀಗಿದ್ದರೆ ಹಿತವಲ್ಲವೇ?

"ಸಂಸಾರವು ಬಹು ಕಷ್ಟ ಬಹು ಭಾರ ಇದರಿಂದ ವಿಮುಕ್ತರಾಗುವುದು ಎಂದೋ" ಎಂದು ನಮ್ಮಲ್ಲಿ ಹಲವರು ಮರುಗುತ್ತಿರಬಹುದು ಅಂತಹವರು ಈ ವಿಚಿತ್ರ ಸಂಗತಿಯನ್ನು ಓದಿದ ಮೇಲಾದರೂ ಈ ಸ್ಥಿತಿಯನ್ನು ಆಶಿಸಲಿ ಪ್ರಶ್ಯಿಯ ಎಂಬಲ್ಲಿ ಮೇಗರ್ ಎಂಬ ಸುಂದರಿಯೊಬ್ಬಳಿರುವಳು ಕಳೆದ ೩೩ ತಿಂಗಳುಗಳಿಂದ ಇವಳು ನಿದ್ರೆಯನ್ನೇ ಮಾಡುತ್ತಿದ್ದಾಳೆ ಇಷ್ಟರ ತನಕ ಅವಳಿಗೆ ಎಚ್ಚರವಾಗಲಿಲ್ಲ ಅನೇಕ ಸಾವಿರ ಹವನುಗಳನ್ನು ವೆಚ್ಚ ಮಾಡಿ ಅವಳನ್ನು ಎಚ್ಚರಿಸಬೇಕೆಂದು ವೈದ್ಯರು ಪ್ರಯತ್ನಿಸಿದರೂ ನೀರಿನ ಮೇಲಿನ ಹೋಮದಂತಾಯಿತು ಸಂಸಾರಿಗಳೆಲ್ಲ ಹೀಗೆ ನಿದ್ದೆ ಮಾಡಿದರೆ ಕಷ್ಟಗಳು ತಪ್ಪುವುದು ಖಂಡಿತ!

ಕಲ್ಲೇರಿಯಲ್ಲಿ ಹಾವಿನ ಉಪಟಳ! ಜನರು ಮನೆಬಿಟ್ಟು ಓಡಿದರು!

ಕಲ್ಲೇರಿಯಲ್ಲಿ ಒಬ್ಬ ತೀಯರ ಬಾಲಕನಿಗೊಂದು ಹಾವು ಕಡಿಯಿತು ಹಾವನ್ನು ಎಷ್ಟು ಹುಡುಕಿದರೂ ಅದು ಕಾಣಸಿಗಲಿಲ್ಲ. ಕೆಲವು ತಾಸುಗಳಲ್ಲೇ ಬಾಲಕನು ಮೃತ್ಯುವಶನಾದನು ಮರುದಿನ ಅದೇ ಹಾವು ಮತ್ತೊಬ್ಬ ಬಾಲಕರಿಗೆ ಕಚ್ಚಿತು ಅವನೂ ಮೃತನಾದರು ಆ ಹಾವು ಒಂದು ಮನೆಯನ್ನು ಹೊಕ್ಕಿತು ಕಳೆದ ಎರಡು ದಿನಗಳಿಂದ ಆ ಮನೆಯವರು ಭಯಗೊಂಡು ಮನೆಯನ್ನು ಸೇರಲಿಲ್ಲ ಇದೇ ಹಾವು ಕೆಲವು ಸಮಯದ ಮೊದಲು ಮೃತಬಾಲಕನೊಬ್ಬನ ಮಾವನಿಗೂ ಕಡಿದಿದ್ದಿತು ಒಬ್ಬ ಮಂತ್ರಗಾರನನ್ನು ಕರೆತಂದು ಪ್ರಶ್ನೆಹಾಕಲು ಆ ಹಾವು ಮತ್ತೊಬ್ಬನಿಗೆ ಕಡಿಯಲಿದೆಯೆಂದೂ, ಅದನ್ನ ಮರಣವಾಗದೆ ಆ ಹಾವು ಸಾಯದೆಂದೂ ಅವನು ಹೇಳಿರುವನು ಅಲ್ಲೀಗ ಬಹು ಕೋಲಾಹಲವಿದ್ದಿದೆ ಪೋಲೀಸರು ಹೋಗುವರೇ?

ಗಂಡನೊಂದಿಗೆ ಹೋಗಲಿಷ್ಟವಿಲ್ಲ.

ಗಂಡನೊಂದಿಗೆ ಹೋಗಲು ಇಷ್ಟವಿಲ್ಲದ ಹುಡುಗಿಯರು ಈಗಿನ ಲೋಕದಲ್ಲಿ ಹೆಚ್ಚುತ್ತಿರುವರು. ಮರೋಲಾ ಗ್ರಾಮದಲ್ಲಿ ದೀಬಿಯಾ ಎಂಬವಳು ತನ್ನ ಕುಟುಂಬಿಕನೊಬ್ಬನ ಮನೆಯಲ್ಲಿದ್ದಳು ಅವಳ ಪತಿಯು ಅವಳನ್ನು ಮನೆಗೆ ಕರೆದೊಯ್ಯಲು ಬಂದನು ಆದರೆ ಪತ್ನಿಯು ಹೊರಡಲೊಡಂಬಡಲಿಲ್ಲ ಗಂಡನು ಮರುದಿನ ಪುನಃ ಬಂದು ಒತ್ತಾಯಪಡಿಸಿದ ಆದರೆ ಅವಳು ಸಮ್ಮತಿಸಲಿಲ್ಲ ಗಂಡನಿಗೆ ಸಿಟ್ಟೇರಿತು ಅವಳನ್ನು ಕೊಂದಿಕ್ಕಿದ ಅವನನ್ನು ಸೆರೆಹಿಡಿದಿರುವರು

---

30 ಮಕ್ಕಳ ತಂದೆ—125 ವರ್ಷ ಪ್ರಾಯ.

ಕಾಬೂಲಿನಿಂದ ಬಂದ ವಾರ್ತೆ ಅಲ್ಲಿಯ ಹೆರಾತ್‍ನಲ್ಲಿ ಅಬ್ದುಲ್ "ಸೂಲ್ ಖಾನ್" ಎಂಬವನು ೧೨೫ನೇ ಜನ್ಮ ದಿನವನ್ನು ಮೊನ್ನೆ ಆಚರಿಸಿದನು ಅವನು ತನ್ನ ಜೀವಮಾನದಲ್ಲಿ ಒಟ್ಟು ಮೂವರನ್ನು ವಿವಾಹವಾದನು ಅವನಿಗೆ ಒಟ್ಟು ೩೦ ಮಂದಿ ಮಕ್ಕಳಿರುವರು ಅವನೂ ಆರೋಗ್ಯವಾಗಿಯೇ ಇರುವನು ಯೌವನಸ್ಥನ ಹಾಗೆ ಚುರುಕಾಗಿದ್ದಾನೆ ಇವನು ಕನ್ನಡಕವನ್ನು ಇಷ್ಟರವರೆಗೂ ಉಪಯೋಗಿಸಿದ್ದೇ ಇಲ್ಲ

ಆಧುನಿಕ ಸಾಧು.

ಸಾಧುಗಳಲ್ಲಿ ಎರಡು ವಿಧ ಪ್ರಾಚೀನ ಮತ್ತು ಆಧುನಿಕ ಸಾಧುಗಳೆಂದು ಪ್ರಾಚೀನ ಸಾಧುಗಳೆಂದರೆ ಕಾವಿಯನ್ನು ಧರಿಸಿ ವಿರಕ್ತರಾಗಿರುವವರು. ಆಧುನಿಕ ಸಾಧುಗಳೆಂದರೆ ಸುಖವಿಲಾಸ ಮಗ್ನರಾಗಿ ದೇವರನ್ನು ನೋಡಬೇಕೆಂದಿರುವವರು ಪೆಲ್ಟಾನಿನ ಗಿಡು ಬಂದರ್ ಎಂಬಲ್ಲಿ—ಇಂಡಸ್ ನದಿಯ ತೀರದಲ್ಲಿ ಅಂತಹ ಸಾಧುವೊಬ್ಬನ ಒಂದು ಆಶ್ರಮವಿದೆ ವಿದ್ಯುದ್ದೀಪ ರೇಡಿಯೋ ಗ್ರಾಮಫೋನ್ ಮೊದಲಾದ ಎಲ್ಲಾ ಆಧುನಿಕ ಸುಖ ಸಾಮಗ್ರಿಗಳು ಅಲ್ಲಿವೆ ಅಲ್ಲೊಬ್ಬ ಸಾಧು ತನ್ನ ಆಶ್ರಮದಲ್ಲಿ ಸುಖ ವಿಲಾಸ ಸಾಹಿತ್ಯಗಳನ್ನು ಹೆಚ್ಚಿಸುತ್ತಿರುವುದಲ್ಲದೆ ಒಂದು ದೋಣಿಯನ್ನು ರಚಿಸಿ ನದಿಯಲ್ಲಿ ವಿಹರಿಸುತ್ತಿರುವನು ಆ ದೋಣಿಯು ಕೂಡಾ ಆಧುನಿಕ ಉಪಕರಣಗಳಿಂದಲಂಕೃತವಾಗಿದೆ ಸಾಧುವಿನ ಸುಖ ಎಲ್ಲಾ ಗುಣನಡತೆಗಳು ಶ್ಲಾಘ್ಯವಾಗಿಯೇ ಇವೆ ಪ್ರಾರ್ಥನೆ ಮಾಡಿ ಮಾಡಿ ದಣಿದನೆಂದರೆ ರೇಡಿಯೋ ಸೆಟ್ಟನ್ನು ಈಚೆಗೆ ತಿರುಗಿಸಿ ಆನಂದಿಸುವನು ದೇವರು ಬೇಗನೇ ಕಾಣಿಸಿಕೊಳ್ಳಬಹುದೆಂದು ನಮ್ಮ ಊಹೆ

ಸೆಂಡೋವಿನ ಅದ್ಭುತ ಶಕ್ತಿ

ಇಲ್ಲಿಯಲ್ಲಿ ಇದ್ದಾಲನೆಂದರೆ ಬಹು ಪ್ರಖ್ಯಾತನಾದ ಸೆಂಡೋ ಅವನ ಸ್ನಾಯು ಅವನ ಎದೆ ಮತ್ತು ಕೈಕಾಲುಗಳು ಸೆಂಡೋನ ಶ್ಲಾಘನೆಗೆ ಪೂರ್ಣವಾಗಿ ಪಾತ್ರವಾಗಿದ್ದುವು ಮೊನ್ನೆ ಅವನ ಮಿತ್ರನೊಬ್ಬನೊಡನೆ ಅವನು ಬಹಿರಂಗವಾಗಿ ದ್ವಂದ್ವಯುದ್ಧ ಹೂಡಿದನು ಇಪ್ಪತ್ತು ನಿಮಿಷಗಳ ವರೆಗೆ ಕಾದಾಟವು ನಡೆಯಲು ಪ್ರತಿಸ್ಪರ್ಧಿಯು ಇದ್ದಾಲನನ್ನು ಕೆಡವಿಬಿಟ್ಟನು! ಇದ್ದಾಲನು ಧರೆಗೊರಗಿದನು ಆಶ್ಚರ್ಯದಲ್ಲೊಂದು ಶ್ರಯ ಇದ್ದಾಲನು ಬಿದ್ದಲ್ಲಿಂದ ಪುನಃ ಏಳಲೇ ಇಲ್ಲ ಯಾವುದೋ ದೇಹಾಂತರ ರೋಗದ ಬಾಧೆಯಿಂದ ಅವನು ಮೃತನಾದನೆಂದು ಶಸ್ತ್ರಕ್ರಿಯೆ ನಡೆಸಿದ ಮೇಲೆ ತಿಳಿದುಬಂತು.

ಮಿಸ್. ಸಬಿತಾದೇವಿ.

ಸ್ಥಳೀಯ ಶ್ರೀ ಕೃಷ್ಣ ಸಿನೇಮಾದಲ್ಲಿ ಬೇಗನೇ ಪ್ರದರ್ಶಿಸಲ್ಪಡಲಿರುವ, ಈಸ್ಟ್ ಇಂಡಿಯಾ ಫಿಲ್ಮ್ ಕಂಪೆನಿಯವರ "ಚಂದ್ರಗುಪ್ತ" ಎಂಬ ಹಿಂದೀ ಮಾತಾಡುವ ಚಲಚ್ಚಿತ್ರದಿಂದೊಂದು ದೃಶ್ಯ

ಪ್ರಧಾನ ಮಂತ್ರಿಯವರು
ರಾಜೀನಾಮೆ ಕೊಡು ವ್ರದು ನಿಜ!

ಮಿ। ರಾಮ್ಸೆ ಮೆಕ್ಡೊನಾಲ್ಡರು ನೇತ್ರ ವ್ಯಾಧಿಯು ಗುಣವಾಗಿಲ್ಲವಾದುದರಿಂದ—ಅವರ ವೈದ್ಯರ ಹೇಳಿಕೆ ಮೇರೆಗೆ—ಅವರು ಬರುವ ತಿಂಗಳಿಂದ ಮೊದಲುಗೊಂಡು ತನ ಪ್ರಧಾನ ಮಂತ್ರಿಯು ಪದವಿಗೆ ರಾಜೀನಾಮೆ ಕೊಡುವುದು ನಿಶ್ಚಯವೆಂದು ತಿಳಿದು ಬಂದಿದೆ ಅವರ ನಂತರ ಮಿ। ಬಾಲ್ಡ್ವಿನ್ನರು ಅವರ ಸ್ಥಾನವನ್ನು ಹೊಂದುವರು ಮಿ। ಮೆಕ್ಡೊನಾಲ್ಡರು ಕೌನ್ಸಿಲಿನ ಲೋರ್ಡ್ ಪ್ರೆಸಿಡೆಂಟರಾಗುವರು ಬೇಗನೇ ಜನರಲ್ ಇಲೆಕ್ಷನ್ ನಡೆಯಲಿದೆಯಾದುದರಿಂದ ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಹೆಚ್ಚಿನ ಬದಲಾವಣೆಗಳಾಗಲಿವೆ. ಮಂತ್ರಿಮಂಡಲದ ಅಧಿನಾಯಕರಾಗಿ ಯಾರು ಚುನಾಯಿತರಾಗುವರೆಂದು ಊಹಿಸಲು ಸಾಧ್ಯವಾಗಿಲ್ಲ ಸರ್ ಜೋನ್ ಸೈಮನರಾಗಲೀ ಮಿ। ಅಂತೋನಿ ಏಡನರಾಗಲೀ, ಅಧಿಕಾರಕ್ಕೆ ಬರುವಂತಿದೆ ಸರ್ ಜೋನ್ ಸೈಮನರನ್ನು ಹೋಮ್ ಸೆಕ್ರೆಟರಿಗಳಾಗಿ ನೇಮಕಮಾಡುವುದು ಶಕ್ಯವೆಂದೂಹಿಸಿದ್ದಾರೆ

ತಾ ೨೩ರಲ್ಲಿ ಇಂಡಿಯಾ ಬಿಲ್ಲು ಹೌಸ್ ಒಫ್ ಕೊಮನ್ಸ್ ಸಭೆಯಲ್ಲಿ ವಿಮರ್ಶೆಗೆ ಬಂದಿತು ಸರ್ ಸ್ಯಾಮುವೇಲ್ ಹೋರರು ಅಧ್ಯಕ್ಷರಾಗಿದ್ದರು ಅವರು ಸ್ತ್ರೀಯರನ್ನು ಅಧಿಕಾರಕ್ಕೆ ನೇಮಿಸುವ ಕುರಿತು ಮಾತನಾಡುತ್ತಾ—"ಅವರು ಸ್ತ್ರೀಯರೆಂಬ ಮಾತ್ರಕ್ಕೆ ಅವರಿಗೆ ಅಧಿಕಾರದ ಯೋಗ್ಯತೆಯಿಲ್ಲವೆಂದಾಗಬಾರದು" ಎಂದರು

ಹಿಂದೀಯರಾದ ನಾವು ಹೇಗೆ ಮೋಸಹೊಂದುವೆವು!

ಓದಿರಿ — ದೀನರಾದ ನಮ್ಮ (ಹಿಂದೀಯರ) ಅಜ್ಞಾನವನ್ನು ವಿದೇಶೀ ಕಾರ್ಖಾನೆದಾರರು ಹೇಗೆ ಸದುಪಯೋಗ ಪಡಿಸಿಕೊಳ್ಳುವರೆಂಬುದನ್ನು ತಿಳಿದುಕೊಳ್ಳಲು— ಓದಿರಿ ಇದನ್ನು!—

ನೆಲಗಡಲೆ ಎಣ್ಣೆಯು ಬಾದಾಮಿ ಎಣ್ಣೆಯಾಗಿದೆಯೆಂದು ಗೊತ್ತೇ?

ನಮ್ಮ ದೇಶದಲ್ಲಿ "ಶುದ್ಧ ಲೂಕಾ ಬಾದಾಮಿ ಎಣ್ಣೆ" ಎಂಬ ಹೆಸರಲ್ಲಿ ಮಾರಾಟಮಾಡಲ್ಪಡುತ್ತಿರುವ ಎಣ್ಣೆಯು ಬಾದಾಮಿ ಎಣ್ಣೆಯಲ್ಲ; ನಮ್ಮ ದೇಶದಿಂದಲೇ ಒಯ್ದು ನೆಲಗಡಲೆಯಿಂದ ತೆಗೆದ ಶುದ್ಧ ನೆಲಗಡಲೆ ಎಣ್ಣೆಯಾಗಿದೆ ("ಇಂಡಿಜಿನಸ್ ಡ್ರಗ್ಸ್ ಒಫ್ ಇಂಡಿಯಾ" ಇದರ ಪುಟ 59ನ್ನು ನೋಡಿ)

ವನಸ್ಪತಿ ತೈಲವಲ್ಲ – ಮೀನಿನ ತೈಲ! ತಿಳಿಯಿತೇ?

"ಇಂಪೀರಿಯಲ್ ಕೌನ್ಸಿಲ್ ಒಫ್ ಅಗ್ರಿಕಲ್ಚರಲ್ ರಿಸರ್ಚ್" ಇದರ "ಇಂಡಿಯನ್ ಓಯಿಲ್ ಕ್ರಶ್ಶಿಂಗ್ ಇಂಡಸ್ಟ್ರಿ ಕಮಿಟಿ"ಯ ತೃತೀಯ ಸಭೆಯಲ್ಲಿ, ಪ್ರಕೃತ ಪರದೇಶದಿಂದ "Edible Hardened Oil" (ಆಹಾರಕ್ಕುಪಯೋಗಿಸಬಹುದಾದ ತೈಲ) ಎಂಬ ಚೀಟನ್ನು ಹಚ್ಚಿಸಿ, ಪರದೇಶಗಳಿಂದ ಮತ್ಸ್ಯತೈಲವನ್ನು ಹಿಂದೂದೇಶಕ್ಕೆ ಆಮದು ಮಾಡಿ "ಸಸ್ಯತೈಲ"ವೆಂಬುದಾಗಿ ಮಾರಾಟಮಾಡುತ್ತಿರುವರೆಂದು ಬಯಲಾಯಿತು ಆದರೆ,—

ಸತ್ತ ಹೆಗ್ಗಣಗಳ, ಬೆಕ್ಕುಗಳ, ನಾಯಿಗಳ ಮತ್ತು ದನ ಇತ್ಯಾದಿಗಳ ಕೊಬ್ಬಿನಿಂದಾಗುವ ಸಾಬೂನುಗಳು'—

ಇವುಗಳಿಗೆ ಸರಿಗಟ್ಟುವಂತಹುದು ಮತ್ತಾವುದಿದೆ? ಯುರೋಪಿನಲ್ಲಿ ಮೃಗಗಳ ಕೊಬ್ಬನ್ನೂ ಮೀನು ಎಣ್ಣೆಯನ್ನೂ ಆಹಾರಕ್ಕಾಗಿ ಉಪಯೋಗಿಸುತ್ತಿರುವಲ್ಲಿ ಸಾಬೂನುತಯಾರಿಯಲ್ಲಿ ಉಪಯೋಗಿಸುವ ಹೆಚ್ಚಿನ ಕೊಬ್ಬುಗಳು ಸತ್ತ ಮೃಗಗಳ ಶರೀರಗಳಿಂದಲೂ, ವಧಾಖಾನೆಗಳಿಂದಲೂ, ರಸ್ತೆಗಳ 'ಕಚರಾ'ದಿಂದಲೂ, ಒಮ್ಮೊಮ್ಮೆ ನರದೇಹಗಳಿಂದಲೂ ದೊರಕಿಸಿಕೊಂಡಂಥವುಗಳಾಗಿವೆ (ಸರ್ ಎಫ್ ಎ ಟಾಲ್ಬೊಟರವರ "ವಿಲ್ಲಿಯನ್ಸ್ ಫ್ರೊಮ್ ಪೇಸ್ಟ್" ಎಂಬ ಗ್ರಂಥವನ್ನೋದಿರಿ)

ಗೊಡ್ರೆಜ್ ವನಸ್ಪತಿ ಸುಗಂಧಸಾಬೂನುಗಳ

ವಿಷಯವಾಗಿ, ಅದನ್ನುಪಯೋಗಿಸುವ ಪ್ರಸಿದ್ಧಪುರುಷರೇನು ಹೇಳುವರೋ ಓದಿರಿ --

ಕವಿರವೀಂದ್ರ:—"ಗೊಡ್ರೆಜ್ ಸಾಬೂನುಗಳಿಗಿಂತ ಉತ್ತಮವಾದ ವಿದೇಶೀ ಸಾಬೂನುಗಳನ್ನು ನಾನು ಕಂಡಿಲ್ಲ ಇನ್ನು ಮುಂದೆ ಗೊಡ್ರೆಜ್ ಸಾಬೂನುಗಳನ್ನ ಉಪಯೋಗಿಸಲು ನಿರ್ಧರಿಸಿದ್ದೇನೆ

ಕೆಲ ವರ್ಷಗಳ ಹಿಂದೆ **ಡಾ। ಅನ್ನಿಬಿಸೆಂಟರು** ತಮ್ಮ "ನ್ಯೂ ಇಂಡಿಯಾ"ದ ಪತ್ರಿಕೆಯಲ್ಲಿ, ಗೊಡ್ರೆಜ್ ಸಾಬೂನುಗಳು ಪ್ರಪಂಚದಲ್ಲಿ ಅತ್ಯುತ್ಕೃಷ್ಟವೆಂದು ಪ್ರಶಂಸಿಸಿದ್ದರು

ರಾಷ್ಟ್ರೀಯ ಮಹಾಸಭೆಯ ಮಾಜಿ ಅಧ್ಯಕ್ಷರಾದ ಡಾ। ಅನ್ಸಾರಿಯವರು— ಗೊಡ್ರೆಜ್ ಸಾಬೂನುಗಳ ವಿಷಯವಾಗಿ ಹೇಳುವರು — ಗೊಡ್ರೆಜ್ ಸಾಬೂನುಗಳ ಉತ್ತಮ ಗುಣಗಳನ್ನು [illegible] ನನಗೆ ಆನಂದವಾಗುತ್ತದೆ ನಾನು ಅವುಗಳನ್ನು ಕಳೆದ [illegible] ವರ್ಷಗಳ ದಿಂದ ಉಪಯೋಗಿಸುತ್ತಿದ್ದು, [illegible] ಉತ್ತಮ ಸಾಬೂನುಗಳಿಗಿಂತಲೂ ಉತ್ಕೃಷ್ಟವೆಂಬುದನ್ನು ಮನಗಂಡಿದ್ದೇನೆ ಅವುಗಳು ಹಿಂದೂದೇಶದಲ್ಲಿ [illegible] ಆಗುತ್ತಿರುವುದಕ್ಕೂ ಅವುಗಳ ಉತ್ಕೃಷ್ಟತೆಯ ದೆಸೆಯಿಂದಲೇ ಹಿಂದೀಯರೆಲ್ಲ ಅವುಗಳನ್ನು ಉಪಯೋಗಿಸಬೇಕ [illegible]

ಗೊಡ್ರೆಜ್ ಗಂಧದ ಸಾಬೂನು ಮತ್ತು ಶೇವಿಂಗ್ ಸ್ಟಿಕ್ — ಇವುಗಳನ್ನು ಉಪಯೋಗಿಸಿರಿ.

ಸೋಲ್ ಏಜಂಟರು:

ನಾದಿರ ಷಾ ಪ್ರಿಂಟರ್ ಎಂಡ್ ಕೊ, [illegible] ಬ್ರೋಡ್ವೇ, ಮದರಾಸು.

ಹೆಡ್ ಆಫೀಸು: [illegible] ಇತರ ಶಾಖೆಗಳು— ಕಲ್ಕತ್ತಾ, [illegible] ಮತ್ತು ಕರಾಚಿ

ವಿ. ಸೂ: ಗೊಡ್ರೆಜ್‌ರವರ ಹೆಸರಲ್ಲಿ ಮಾರಾಟವಾಗುತ್ತಿರುವ ಬಾರ್ ಸೋಪ್ ಮತ್ತು ಇತರ [illegible] ಸಾಬೂನುಗಳಲ್ಲಿ ಗೊಡ್ರೆಜರವರಿಗೆ ಸಂಬಂಧವಿಲ್ಲ

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter -

Modern Hindu Hotel,
Calicut, 17—6—1934

Dear Sir,

We wish to thank you for all that you did for us to make our stay at Mangalore comfortable It is extremely nice of you to have looked after us as you did.

Yours faithfully,
(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು–ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ — ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ-
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ನಡೆದ ಕತೆಗಳು.

True Stories.

ಓದಿ ಮುಗಿಸುವ ಸಮಯ,—೪ ನಿಮಿಷಗಳು

All Rights Reserved.

[ಸಮಾಜದಲ್ಲಿನ ಕುಂದುಕೊರತೆಗಳನ್ನು ತೋರಿಸುವುದೇ 'ನಡೆದ ಕತೆಗಳು' ಇವುಗಳ ಉದ್ದೇಶ. ಘಟನೆಗಳನ್ನು ಸಂಯೋಜಿಸುವುದರಲ್ಲಿ ಮಾತ್ರ ಅನುಕೂಲ ಹಕ್ಕುಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಘಟನೆಗಳೆಲ್ಲ ನಿಜವಾದುವುಗಳು. ಹೆಸರುಗಳನ್ನು ಕೆಲವೆಡೆಗಳಲ್ಲಿ ಮಾತ್ರ ಬದಲಾಯಿಸಲಾಗಿದೆ

"ಕ್ರಮಪ್ರಕಾರ"ದ ಮದುವೆ.

ಕದ್ರಿಯ ವಕೀಲ ಮಸ್ಕರೇಂಜಸರ ಬಂಗಲಿಯ ಬಳಿ ಒಂದು ವರ್ಗದ ಭೂಮಿಯಲ್ಲಿ ಸದಿಲು ರಾಮಣ್ಣನವರು ಅಂದವಾದ ಮನೆ ಗಟ್ಟಿ ತನ್ನ ಹೆಂಡತಿ ಮತ್ತು ಒಬ್ಬಳೇ ಮಗಳೊಡನೆ ಸಂಸಾರ ನಡೆಸುತ್ತಿದ್ದರು

ರಾಮಣ್ಣನವರೆಂದರೆ ಅಷ್ಟು ವರಾರದ ನ್ಯಾಯಕರು ಕುಟುಂಬದ ನ್ಯಾಯತೀರ್ಮಾನ, ಆಸ್ತಿಪಾಸ್ತಿಗಳ ವಿಕ್ರಯ, ಕೋರ್ಟು ಕಚೇರಿಗಳ ವ್ಯವಹಾರಗಳೇ ಮೊದಲಾದುವುಗಳಲ್ಲಿ ಅವರ ಧುರೀಣತೆ ಇಲ್ಲದಿಲ್ಲ ಮಾತಿನ ಜಾಲದಲ್ಲಿ ಮಾತುಮಲ್ಲರನ್ನೂ ಸಿಲುಕಿಸಿ ಸೋಲಿಸುವ ಶಕ್ತಿ ಅವರದು ಯಾವುದೇ ದುರ್ಘಟ ವಿಷಯವಿರಲಿ,—ಅದರ ಅಂತರ್ಬಾಹ್ಯ ವಿಷಯಗಳು ಅವರಿಗೆ ಪೂರ್ಣ ಅರಿದು,—ಹಾಗೆಂದು ತೋರಿಸಲು ಹಿಂಜರಿಯರು

ಏನೋ ಪೂರ್ವಜನ್ಮದ ಕರ್ಮಾನುಸಾರವಾಗಿ ಅವರಿಗೆ ಅಸಹನೀಯ ಬಡತನವು ಸಂಪ್ರಾಪ್ತವಾಯಿತು ಬಡತನಕ್ಕೆ ಕಲ್ಪನೆಯ ಶಕ್ತಿ ಹೆಚ್ಚಲ್ಲವೇ?—ಅವರ ಬಡತನವು ಹೆಚ್ಚಿದಂತೆ ಅವರ ಭಯವೂ ವಿಪರೀತವಾಯಿತು ಹೆಚ್ಚಿನ ಮಟ್ಟಿಗೆ ಕಲ್ಪಿತ ಭಯ ಮಗಳಿಗೆ ಗಂಡನು ಸಿಗದೇ ಹೋದರೇ? ನಾನು ಈಗಲೇ ಮೃತನಾದರೇ?—ಇವೇ ಮೊದಲಾದ ಭಯಗಳು ಅವರನ್ನು ತಿನ್ನಲಾರಂಭಿಸಿದುವು ನಿಮಿಷಕ್ಕೊಮ್ಮೆ ಅವರ ಚಿತ್ತವೃತ್ತಿಯು ಬದಲಾಗುತ್ತಿತ್ತು ಒಮ್ಮೊಮ್ಮೆ ವಿಪರೀತ ಭಯವಾಗಿ ಬಿಟ್ಟರೆ—'ಒಮ್ಮೆ ಈ ಹುಡುಗಿಯು ಹೊರಗೆ ಹೋಗುತ್ತಿದ್ದರೆ ಯಾವ ಭಯವೂ ಇದ್ದಿಲ್ಲ' ಎನ್ನುತ್ತಿದ್ದರು

ಒಂದು ದಿನ ಬೆಳಗ್ಗೆ ಇಬ್ಬರು ಅವರ ಮನೆಗೆ ಬಂದರು. ಅತಿಥಿಸತ್ಕಾರವನ್ನು ನಡೆಸಿ ಆದ ಮೇಲೆ ರಾಮಣ್ಣನವರು ಏನು ಬಂದಿರಿ?' ಎಂದು ವಿಚಾರಿಸಲು, ಬಂದವರಲ್ಲೊಬ್ಬರು ತನ್ನ ಮಗ ಸಂಜೀವನಿಗೆ ಹೆಣ್ಣು ಬೇಕೆಂದು ಕೇಳಿದರು ರಾಮಣ್ಣನವರು "ಆಗಬಹುದು" ಎಂದರು ಬಹು ಹೊತ್ತು ಮಾತುಕತೆಯಾದ ಮೇಲೆ ಸಂಜೀವನು ಬರಿಯ ೫೦ ರೂಪಾಯಿಗಳ ವೆಚ್ಚದಲ್ಲಿ ವಿವಾಹವಾಗಲಿರುವನೆಂದೂ ಸಮಾಜದ ರೂಢಿಗಳನ್ನು ಪಾಲಿಸಲು ಸಿದ್ಧನಿಲ್ಲವೆಂದೂ ಅವರು ಹೇಳಿದರು ತನ್ನ ಮಗನಿಗೆ ವರದಕ್ಷಿಣೆ ಬೇಡ, ಉಡುಗೊರೆ ಬೇಡ, ಹುಡುಗಿಗೆ ಚಿನ್ನ ಬೇಡ, ಎಂಬಿವುಗಳು ಸಂಜೀವನ ಕೇಳಿಕೆಗಳೆಂದರು ಯಾರೂ ಜರಗಿಸದ ಕ್ರಮದಲ್ಲಿ—ಸುಧಾರಣೆಯ ದೃಷ್ಟಿಯಿಂದ ವಿವಾಹವಾಗಬೇಕೆಂದು ಸಂಜೀವನ ಅಭಿಪ್ರಾಯವಾಗಿತ್ತು, ಅಂತಹ ಸುಧಾರಣೆಗಳನ್ನನುಸರಿಸುವಷ್ಟು ವಿದ್ಯೆಯೂ ಅವನಿಗಿತ್ತು ವಾಲ್ಕಾರ್ಟು ಆಫೀಸಿನಲ್ಲಿ ಅಷ್ಟು ಉನ್ನತ ಉದ್ಯೋಗವೂ ಅವನಿಗಿತ್ತು

ನೆಂಟಸ್ತಿಕೆಯು ಆರಂಭದಲ್ಲಿ ಆದ ಆನಂದವು ರಾಮಣ್ಣನವರಿಗೆ ಅಂತ್ಯದಲ್ಲಿ ಆಗಲಿಲ್ಲ 'ಇದೇನು ಬ್ರಹ್ಮಸಮಾಜದ ಮದುವೆಯೋ?' ಎಂದು ಪ್ರಶ್ನಿಸಿಕೊಂಡು ಬಂದವರಿಗೆ 'ಯೋಚಿಸಿ ಹೇಳುವೆ'ನೆಂದು ಹೇಳಿದರು. ಅತಿಥಿಗಳು ಹಿಂತೆರಳಿದರು.

ನಗಭಾರದ್ದು.

ರಾಮು.—"ಅಪ್ಪಾ, ನಾನು ಪರೀಕ್ಷೆಯಲ್ಲಿ ಪಾಸಾದರೆ ನೀವು ನನಗೆ ಐದು ರೂಪಾಯಿಗಳನ್ನು ಕೊಡುವೆನೆಂದು ಭಾಷೆ ಕೊಟ್ಟಿದ್ದೀರಲ್ಲ. ಆ ಐದು ರೂಪಾಯಿಗಳು ನಷ್ಟವಾಗದಂತೆ ಮಾಡಿದರೆ ನನಗೆ ಅವುಗಳಿಂದ ಒಂದು ರೂಪಾಯಿಯನ್ನು ಈಗಲೇ ಕೊಡುವಿರಾ?

ರಾಮನ ತಂದೆ —(ಅವಸರದಿಂದ) ಕೊಡುತ್ತೇನೆ

ರಾಮು.—'ಅಪ್ಪಾ, ನಾನು ಪರೀಕ್ಷೆಯಲ್ಲಿ ಫೈಲ್ ಆಗಿದ್ದೇನೆ ನಿಮ್ಮ ೫ ರೂಪಾಯಿ ಉಳಿಯಿತು ಒಂದು ರೂಪಾಯಿಯನ್ನು ಈಗಲೇ ಕೊಡಿರಿ.

\+ \+ \+ \+

ಗುರು —"ರಾಮಾ, ಮೊನ್ನೆ ಜನರು ಸಿಲ್ವರ್ ಜುಬಿಲಿಯನ್ನು ಏಕೆ ಆಚರಿಸಿದರು ಗೊತ್ತೇ?"

ಶಿಷ್ಯ —(ಥಕ್ಕನೆ ಎದ್ದು ನಿಂತು) ಸಾರ್ ನನಗೆ ಗೊತ್ತುಂಟು!

ಗುರು.—'ಏಕೆ, ಹೇಳು' '

ಶಿಷ್ಯ —ಜನರಿಗೆ ಕೆಲಸವಿಲ್ಲದುದಕ್ಕೆ'

\+ \+ \+ \+

ರಾಮಪ್ಪ —'ನಿಮ್ಮ ಆಕಳು ಎಷ್ಟು ಕುಡ್ತೆ ಹಾಲು ಕೊಡುತ್ತದೆ?

ಕೃಷ್ಣಪ್ಪ —'ಎಳೇ ಕುಡುತೆ'

ರಾಮಪ್ಪ (ಆಶ್ಚರ್ಯದಿಂದ) ಐದು ಒಂದೂವರೆ ಕುತ್ತಿ ಕೊಡುತ್ತದೆಂದು ಮೊನ್ನೆ ಹೇಳಿದೆಯಲ್ಲ

ಕೃಷ್ಣಪ್ಪ —'ಹಾಗಲ್ಲ ನಾನ ಹೇಳಿದ್ದ ನಿಮಗೆ ತಿಳಿಯಲಿಲ್ಲ ನಾವು ಮಾರುವುದು ಒಂದೂವರೆ ಕುತ್ತಿ '

\+ \+ \+ \+

ಉಪಾಧ್ಯಾಯರು—ಕ್ಲಾಸಿಗೆ ಬಂದು ಭೂವಿಯ ಪಠವನ್ನು ಗೋಡೆಗೆ ತೂಗಹಾಕಿದರು ಕ್ಲಾಸಿನ ಅತಿ ಬಡ್ಡ ಹುಡುಗನಿಗೆ 'ನಾರಾಯಣ, ನಾನು ನಿನ್ನೆ ಪಾಠವನ್ನು ಎಲ್ಲಿ ನಿಲ್ಲಿಸಿದ್ದು, ನೆನಪಿರುವುದೋ?

ನಾರಾಯಣ —(ಯೋಚಿಸುತ್ತ) ಅಲ್ಲಿಬ್ಬಿ ಸಮುದ್ರದಲ್ಲಿ ಸಾರ್ ಆ ವೇಳೆ ಹೆಡ್ ಮಾಸ್ತರ ಬಂದರು

\+ \+ \+

ಗುರು —(ಶಿಷ್ಯ ಪೋರನ ಕಿವಿ ಹಿಡಿದೆತ್ತಿ) 'ನಿನ್ನ ಹಾಗೆ ನಾನಿರುವಾಗ ಎಲ್ಲಾ ಪಾಠಗಳನ್ನು ಸರಿಯಾಗಿ ಕಲಿಯುತ್ತಿದ್ದೆ

ಪೋರ —(ನೋವನ್ನು ಸಹಿಸುತ್ತಾ) ಆಗ ನಿಮಗೆ ಒಳ್ಳೇ ಉಪಾಧ್ಯಾಯರಿದ್ದರು ಸಾರ್

\+ \+ \+ \+

ಮೋಟರಿನ ಮ್ಹಾಲಕನು ಹಿಂದಿನ ಸೀಟಿನಲ್ಲಿ ಕುಳಿತುಕೊಂಡಿದ್ದನು ಮೋಟಾರು ಹೋಗುತ್ತಿತ್ತು ಲೋಭಿಯಾದ ಮ್ಹಾಲಕನು 'ಹೌದೋ ಲಕ್ಷ್ಮಣ', ಈ ಮೋಟಾರು ಎಲ್ಲಿಯಾದರೂ ಬಿದ್ದುಬಿಟ್ಟರೆ ಏನಾದೀತೋ?'

ಲಕ್ಷ್ಮಣ —ನನ್ನ ಹೆಂಡತಿ ಮಕ್ಕಳಿಗೆ ಗತಿಯಿಲ್ಲ ಸ್ವಾಮಿ'

'ನಮ್ಮ ಕೈಯಲ್ಲಿ ದಮ್ಮಿಲ್ಲದ ವೇಳೆ ಇಂತಹ ನೆಂಟಸ್ತಿಕೆಯನ್ನು ದೇವರೇ ತಂದನು. ಕೂಡಲೇ ಒಪ್ಪಿಗೆ ಕೊಡಿರಿ '

'ಹೌದದು ನಿನಗೆ ತಲೆ ಸರಿಯಿಲ್ಲ ಅವರು ಬ್ರಹ್ಮಸಮಾಜದವರು ಯಾರು ಹೆಣ್ಣು ಕೊಟ್ಟಾರು' ಊರಿನವರು ಏನೆಂದಾರು?'

'ಹೇಳುವುದೇನು? ನಿಮ್ಮ ಹುಡುಗಿಯನ್ನು ಹೊರಗೆ ಹಾಕುವುದಕ್ಕೆ ನಾನ್ನೂರು ಐನ್ನೂರು ರೂಪಾಯಿಗಳನ್ನು ಕಟ್ಟಿಟ್ಟಿರುವಿರಾ? ಅಥವಾ ಬೇರೆಯವರು ಕಟ್ಟಿಟ್ಟಿರುವರೇ'

'ಹೋಗು ಹೋಗು ಮನೆಯಿದೆ, ಆಸ್ತಿಯಿದೆ ಅವುಗಳನ್ನು ಮಾರಿ ಮಗಳಿಗೆ ಕ್ರಮಪ್ರಕಾರದ ಮದುವೆ ಮಾಡುವೆನು '

ಹೀಗೆಂದು ಕಮಲಮ್ಮಳಿಗೂ ರಾಮಣ್ಣನವರಿಗೂ ಮಾತುಕತೆ ನಡೆದು, ಕೊನೆಗೆ ರಾಮಣ್ಣನವರೇ ಗೆದ್ದರು

ಈ ನೆಂಟಸ್ತಿಕೆ ಬಂದ ಮಗದೊಂದು ವಾರದಲ್ಲಿ ರಾಮಣ್ಣನವರ ಮಗಳಿಗೆ ಇನ್ನೊಂದು 'ಮಾತು' ಬಂತು ದೊಡ್ಡ ಕುಲದವರು ಹುಡುಗ ವಿದ್ಯಾವಂತನಲ್ಲ ರೂಪವಂತನಲ್ಲ ತುಂಬಾ ಆಸ್ತಿಯಿದೆ

ಗಲ್ಲಿಗೇರಿಸಿದವನ ಆತ್ಮಕಥೆ!

ಭಾಷಣಮಾಡುವುದಕ್ಕಾಗಿ ಸಂಚಾರ.

ಮಿಸಿಸಿಪಿಯಿಂದ ಫ್ರೀಪ್ರೆಸ್ ಜರ್ನಲಿಗೆ ವಿಮಾನದ ಮೂಲಕ ಒಂದು ವಾರ್ತೆಯು ಬಂದಿದೆ:-

ಗಳಿಕ್ಕಿಳರಲ್ಲಿ ೪೦ ವರ್ಷಗಳ ಹಿಂದೆ ಮಿಸಿಸಿಪಿಯಲ್ಲಿ 'ಬಿಳಿ ಟೊಪ್ಪಿ'ಗಳ ಚಳವಳವು ಸಾಗುತ್ತಿತ್ತು ಈ ಚಳವಳದ ಕುರಿತಾಗಿ ಸಾಕ್ಷ್ಯವನ್ನು ವಿಲ್ ಪರ್ವಿಸ್ ಎಂಬವನು ಕೋರ್ಟಿನಲ್ಲಿ ಕೊಟ್ಟನು ಒಂದೆರಡು ದಿವಸಗಳು ಕಳೆಯುತ್ತಲೇ ಒಂದು ದಿನ ಕತ್ತಲೆಯಲ್ಲಿ ಗಾಡಿಯನ್ನು ಹೊಡೆದುಕೊಂಡು ಅವನು ಬರುತ್ತಿದ್ದಾಗ ಅವನನ್ನು ಕೆಲವರು ಕೂಡಿ ಹೊಡೆದರು ಈ ಹೋರಾಟದಲ್ಲಿ ಜಗಳಕ್ಕಾಗಿ ಬಂದವರಲ್ಲೊಬ್ಬ ಆಕಸ್ಮಿಕವಾಗಿ ಅವರ ಸಂಗಡದವರಲ್ಲೊಬ್ಬನ ಕೈಯಿಂದಲೇ ಮಡಿದುಬಿದ್ದನು ಪರ್ವಿಸನನ್ನು ಸೆರೆಹಿಡಿದರು ತಾನು ಕೊಲೆಗಾರನಲ್ಲವೆಂದು ಅವನು ಎಷ್ಟೆಷ್ಟು ಹೇಳಿದರೂ ಅಧಿಕಾರಿಗಳು ಆಲಿಸಲಿಲ್ಲ ಅವನನ್ನು ಗಲ್ಲಿಗೇರಿಸಲು ಸಿದ್ಧತೆಯಾಯಿತು

ಸಾರ್ವಜನಿಕರೆದುರು ಫಾಶಿಯ ಕಂಭವನ್ನು ನಟ್ಟಿದ್ದರು ಸಾವಿರಾರು ಜನರು ಈ ದೃಶ್ಯವನ್ನು ನೋಡಲು ನೆರೆದು ಬಂದಿದ್ದರು ಪರ್ವಿಸನನ್ನು ತಂದು ಅವನ ಕತ್ತಿಗೆ ಉರುಳು ಹಾಕಿ ಅಧಿಕಾರಿಗಳೆದುರ ಕಂಭದ ಮೇಲೆ ಲಿದು. ಕೆಳಗೆಸೆದುಬಿಟ್ಟರು ಅವನು ಹೆಂಡಕ್ಕೆ ಬಿದ್ದುಬಿಟ್ಟನು ಆದರೆ, ದೈವವಶಾತ್ ಉರುಳು ಸಡಿಲಾಗಿ ಹೋಗಿ, ಅವನ ಕತ್ತು ಹಿಸುಕಲ್ಪಡಲಿಲ್ಲ ಹೊಂಡಕ್ಕೆ ಬಿದ್ದ ಪೆಟ್ಟು ಮಾತ್ರ ಅವನಿಗಾಯಿತು ಅವನ ಶವವನ್ನು ಮೇಲೆತ್ತಲು ಹೋದ ಕೆಲಸಗಾರರ ಅವನ ಜೀವಿರುವುದನ್ನು ಅಧಿಕಾರಿಗಳಿಗೆ ತಿಳಿಸಿದ- ಅವನನ್ನು ಪುನಃ ಕಂಭಕ್ಕೇರಿಸಬೇಕೆಂದ ಅಧಿಕಾರಿಗಳು ನಿರ್ಣಯಿಸಿದರು ಆದರೆ ಜನರು ಬಿಡಲಾಗದೆಂದರು ಒಂದೇ ತಪ್ಪಿಗೆ ಒಬ್ಬನನ್ನು ಎರಡು ಸಲ ಶಿಕ್ಷಿಸುವ ಕಾನೂನು ಇಲ್ಲವೆಂದು ಬಿಟ್ಟರು ಪರಿಣಾಮವಾಗಿ ಪರ್ವಿಸನನ್ನು ಸೆರೆಯಲ್ಲಿಡಲಾಯಿತು ಗವರ್ನರರ ಕಚೇರಿಯ ಅಪ್ಪಣೆಯನ್ನು ನಿರೀಕ್ಷಿಸುತ್ತಾ ಅವನ ಹಲವು ಸಮಯವನ್ನು ಬಂಧೀಖಾನೆಯಲ್ಲಿ ಕಳೆದನು ಆ ವೇಳೆ ಅವನಿಗೆ ಅಸಹನೀಯವಾಯಿತು ಕಾರಾಗಾರದಿಂದ ತಲೆತಪ್ಪಿಸಿಕೊಂಡನು ಹೊಸ ಗವರ್ನರರು ಬರುವ ತನಕ ಅವನ ಪತ್ತೆಯೇ ಸಿಗಲಾರದಾಯಿತು. ಹೊಸ ಗವರ್ನರರು ಬಂದರು ಪರ್ವಿಸನು ತನ್ನ ಮಿತ್ರರನ್ನು ಅವರ ಬಳಿಗೆ ಕಳುಹಿಸಿ ತನ್ನನ್ನು ಜೀವಾಂತ್ಯ ಪರದೇಶಕ್ಕೆ ಅಟ್ಟುವುದಾದರೆ ತಾನು ಅಧಿಕಾರಿಗಳಿಗೆ ಶರಣು ಬರುವೆನೆಂದು ಅವನು ತಿಳಿಸಿದನು ಆದರೆ ಗವರ್ನರರು ಒಪ್ಪಲಿಲ್ಲ ಪರ್ವಿಸನನ್ನು ಹಿಡಿದು ಪುನಃ ಕೆಲವು ವರ್ಷಗಳ ಕಾಲ ಸೆರೆಯಲ್ಲಿಟ್ಟರು

ಒಂದು ದಿನ ಕೊಲೆ ಮಾಡಿದವನು ತನ್ನ ಮರಣಾವಸ್ಥೆಯಲ್ಲಿ ನಡೆದ ಕಥೆಯನ್ನು ಹೇಳಿದನು. ಅಂದು ಕೊಂದುದು ತಾನೇ ಎಂದು ಒಪ್ಪಿಕೊಂಡನು ಒಡನೆ ಪರ್ವಿಸನ ಬಿಡುಗಡೆಯಾಯಿತು. ಅವನು ಸರಕಾರದ ಮೇಲೆ ದಾವೆ ಹೂಡಿ ಹೇರಳ ದ್ರವ್ಯವನ್ನು ಪರಿಹಾರವಾಗಿ ಪಡೆದನು. ಈಗ ಪರ್ವೀಸ್ ಎಂಬಲ್ಲಿ ತಾನು ಗದ್ದೆಯುಳುತ್ತಿರುವನು. ತನ್ನ ಅನುಭವವನ್ನು ಲೋಕಕ್ಕರುಹಬೇಕೆಂದು ಅವನು ಲೋಕಸಂಚಾರಕ್ಕೆ ತೊಡಗಲಿರುವನು.

ಹೇಳಬೇಕೇ?—ರಾಮಣ್ಣನವರು ತನ್ನ ಮನೆಯನ್ನೂ, ಹಿತ್ತಿಲನ್ನೂ ಅಡವು ಹಾಕಿದರ ೯೦೦ ರೂಪಾಯಿಗಳನ್ನು ವೆಚ್ಚಮಾಡಿ ವಿವಾಹವನ್ನು ನೆರವೇರಿಸಿದರು

ವಾದ್ಯಘೋಷಗಳೇನ? ಸಿದಿಪ ದ್ದಗಳೇನು? ಹುಡುಗನಿಗೆ ಉಡುಗೊರೆಯೇನು? ನೆಂಟರಿಷ್ಟರನ್ನು ಗಾಡಿಗಳಲ್ಲಿ ಸಾಲು ಸಾಲು ಕುಳ್ಳಿರಿಸಿ ದಿಬ್ಬಣ ಹೋದದೇನ? ಎಲ್ಲವೂ ಕ್ರಮಪ್ರಕಾರವೇ! ಸಂಪ್ರದಾಯ ರೀತಿಗನುಸಾರವಾಗಿ ನಡೆಯಿತೆನ್ನಿ

ಈ ಮದುವೆಯು ಕಳೆದ ವರ್ಷ ನಡೆದುದು ಈಗ ರಾಮಣ್ಣನವರು ಹೊಸ್ಪೇಟೆಯ ಬೀದಿಯ ಬಳಿ ಒಂದು ಅಂಗಡಿಯನ್ನು ಮಾಡಿಕೊಂಡು, ಅದನ್ನೇ ತನ್ನ ಮನೆಯೆಂದು ಭಾವಿಸಿ, ಅಡವಿನ ಆಸ್ತಿಯಿಂದ ಹುಟ್ಟಿ ಬಂದ ಸಾಲವನ್ನು ತೀರಿಸುತ್ತಿರುವರು

'ನನ್ನ ಪ್ರೀತಿಯ ಮಗಳು ಎಂದು ನನ್ನ ಮನೆಯಿಂದ ಹೊರಗಾದಳೋ, ಅಂದೇ ನನಗೆ ದಾರಿದ್ರ್ಯ ಹಿಡಿದಿದೆ' ಎಂದು ಅವರ ಹೇಳಿಕೆ

ಮ. ಜಾ.

ಪ್ರೇಮ ವಿದ್ಯಾಪೀಠ ಪತ್ರಿಕೋದ್ಯಮ ಶಾಲೆ

ಪಂಡಿತ ತಾರಾನಾಥರ ಉಪನ್ಯಾಸ.

ಪ್ರೇಮ ವಿದ್ಯಾಪೀಠದಲ್ಲಿ ಪತ್ರಿಕೋದ್ಯಮ ಶಾಲೆಯೊಂದು ಸ್ಥಾಪಿಸಲ್ಪಟ್ಟಿದೆ ಎಂಬ ಸಂಗತಿಯು ಇಷ್ಟರೊಳಗೆ ಕನ್ನಡಿಗರನೇಕರಿಗೆ ತಿಳಿದ ವಿಷಯವೇ ಆಗಿರಬೇಕು ಅದರ ಹೆಸರಿನಲ್ಲಿ ಇಷ್ಟರ ವರೆಗೆ ಅನೇಕ ಪತ್ರಿಕೆಗಳಲ್ಲಿ ಎಷ್ಟೋ ಲೇಖಗಳು ಪ್ರಕಟವಾಗಿವೆ ಈ ಶಾಖೆಯಲ್ಲಿ ಮೊನ್ನೆ ಪಂಡಿತ ತಾರಾನಾಥರು ಒಂದು ಉಪನ್ಯಾಸವನ್ನು ಕೊಟ್ಟರು. ಅದರ ಸಾರಾಂಶವಿಷ್ಟು —

'ಯಾವ ಜನಾಂಗವೇ ಆಗಿರಲಿ, ಎಚ್ಚೆತ್ತು ನವಜೀವನದ ಹಾದಿಯನ್ನೇ ತುಳಿಯಬೇಕಾದರೆ ಅದರ ತಲೆಯಲ್ಲಿ ಮೊದಲು ಹೊಸ ವಿಚಾರಗಳನ್ನು ತುಂಬಬೇಕು. ಹೊಸ ಧ್ಯೇಯವನ್ನು ಮುಂದಿಡಬೇಕು. ಇದಕ್ಕಾಗಿ ತಕ್ಕ ವಾತಾವರಣವನ್ನುಂಟುಮಾಡುವುದು ಇಂದಿನ ಮುಂದಾಳುಗಳ ಮೊದಲ ಕರ್ತವ್ಯ

ಈ ಕೆಲಸವನ್ನು ಹೇಗೆ ಮಾಡಬೇಕು? ಹೊಸ ವಿಚಾರಗಳಿಗೆ ಜನಜೀವನದಲ್ಲಿ ಪ್ರವೇಶ ಸಿಕ್ಕಬೇಕಾದರೆ ಅದು ಹೇಗಾಗಬೇಕು? ಅವನ್ನು ಓದಿ ಮತ್ತು ಕೇಳಿ ಅಲ್ಲವೆ? ಓದು ಅಂದರೆ ಹೇಗೆ? ಓದಿಸಲಿಕ್ಕೆ ಶಾಲೆಗಳನ್ನು ತೆರೆದೋ? ಅಲ್ಲ, ಅವು ಎಳೆಯರಿಗೆ ಯುವಕರಿಗೆ ಬೇಕಾದ ಸಂಸ್ಥೆಗಳು ಆದರೆ ಈ ಸಂಸ್ಥೆಗಳಲ್ಲಿ ಓದಿಸುವರು ಏನು ಸಪ್ಪೆದ ಹಿಂಬದಿಯೇ ಅಲ್ಲವೆ? ಅವರ ಕಣ್ಣಿಗೆ ನವಜೀವನದ ಹೊಳವು ಸಿಕ್ಕಿಲ್ಲವೆಂದರೆ ಅವರಾದರೂ ಏನು ಕಲಿಸಿಯಾರು? ತಾವು ನಡೆದ ಹಾದಿಯೇ ತಾನೆ? ಅದು ಇಂದಿನ ಸಮಸ್ಯೆಗಳನ್ನು ಬಿಡಿಸಬಲ್ಲುದೋ? ಇಂದಿನ ಜನಾಂಗವನ್ನು ಹುರಿದುಂಬಿಸಬಲ್ಲುದೋ? ಹಾಗಿದ್ದರೆ ಆ ಇಂದಿನ ವಿಚಾರಗಳೂ ನಮಗೆ ಬೇಕು. ನಮಗೆ ಭೂತದ ದ್ವೇಷವಿಲ್ಲ ವರ್ತಮಾನದ ಮೋಹವಿಲ್ಲ, ನವಜೀವನ ಒಂದರಲ್ಲಿಯೇ ಪ್ರೇಮವಿರುವುದ ಅದನ್ನು ಪೂರೈಸಲಿಕ್ಕೆ ಅನುಕೂಲವಾದರೆ ನಮಗೆ ದೇಶಕಾಲ ಪರಿಸ್ಥಿತಿಗಳ ವಿಚಾರವೇ ಆಗಲಿ, ಬೇಕೇಬೇಕು ಎಂತಹ ಶಾಸ್ತ್ರವೇ ಆಗಲಿ, ಗ್ರಂಥವೇ ಆಗಲಿ, ನಮಗೆ ಬೇಕು ನವಜೀವನಕ್ಕೆ ಪಥ್ಯವಾದ ಯಾವ ಆಹಾರವೇ ಆಗಲಿ ಅದು ನಮಗೆ ಬೇಕು ಅದನ್ನು ಉಂಡು ಅರಗಿಸಿ ಅದರಿಂದುಂಟಾದ ನವಚೈತನ್ಯವನ್ನು ಅದರ ವಿವಿಧ ವಿಚಾರ ವಾಕ್ಯಗಳನ್ನು ಹತ್ತುಕಡೆ ಹಬ್ಬಿಸುವುದು ನಮ್ಮ ಧರ್ಮ ಮೊಟ್ಟಮೊದಲು ಚಿಕ್ಕವರ ವಿದ್ಯಾವಂತಿಕೆಯ ರುಚಿಯ ತಳಾದ ಹಿರಿಯರಲ್ಲಿಯೇ ಈ ನವಚೈತನ್ಯವನ್ನು ಊದಬೇಕಾಗಿದೆ. ಅವರ ವೃತ್ತಿ ಪ್ರವೃತ್ತಿಗಳನ್ನು ಮಾರ್ಪಡಿಸುವುದೇ ಮೊದಲ ಕರ್ತವ್ಯ ಅವು ಮಾರ್ಪಟ್ಟಂತೆಲ್ಲ ಕಿರಿಯರೂ ಮಾರ್ಪಡುವರು ಆಗ ಹಿರಿಯರಿಗೆ ತಮ್ಮ ಮಕ್ಕಳ ಹುಮ್ಮಸ್ಸಿನ ಅರ್ಥವಾಗುವುದು ಕಿರಿಯರಿಗೆ ಅವರ ಸಾವಕಾಶ ದರ್ಶನವಾಗುವುದು ಹಾಗಾಗಿ ಹಿರಿಕಿರಿಯರ ಮನಸ್ತಾಪಗಳಿಗೆ ಈಗಿರುವ ಅವಕಾಶವು ಮಾಯವಾಗಿ ಸಮಾಜ ಪುರುಷನು ಹೃಷ್ಟಪುಷ್ಟನಾಗುವನು ಈ ವಾತಾವರಣವನ್ನುಂಟುಮಾಡುವ ಉಪಾಯವೇನು?'

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY

Shiromani Narayanacharya

Choukhamba Benares City



ಶಾಸ್ತ್ರಿಗಳೇ ಪೂರ್ವಿಕರು ಆರೋಗ್ಯರೇ ಅಥವಾ ಈಗಿನವರೇ, ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ [illegible] ಧರಿಸಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಸಹಿಷ್ಣುತಾಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ [illegible] ಇವುಗಳೆಲ್ಲಾ ಆಗುವುವು. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಅಡ್ಕೆ ಪ್ರಮಾಣದ ಕಂಠಿಸರ 1ಕ್ಕೆ ಅಣೆ 10ರಿಂದ ರೂ 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಅಣೆ 8ರಿಂದ ರೂ 25ರ ವರೆಗೆ ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ 3ರಿಂದ ರೂ. 50ರ ವರೆಗೆ. ಮುಕ್ಕ 2–4 5–6–7–8 ಮುಖಗಳ ಕಾಳು 1ಕ್ಕೆ ಅಣೆ 4ರಿಂದ ರೂಪಾ 10 ಮತ್ತು 9–10–11 ಮುಖಗಳುಳ್ಳ ಕಾಳು 1ಕ್ಕೆ ರೂ 2ರಿಂದ 30ರ ವರೆಗೆ 12–13–14 ಮುಖದ ಕಾಳು 1ಕ್ಕೆ ರೂಪಾ 5ರಿಂದ 100ರ ವರೆಗೆ ಸಣ್ಣ ರುದ್ರಾಕ್ಷೀ ಅವರೆಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ ದೊಡ್ಡ ರುದ್ರಾಕ್ಷೀ ಆಗಳಿಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮವಾಗಿ ಕಳುಹಿಸುತ್ತೇವೆ 1 ಅಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ 1 ಕೆಟಲಾಗಿ ಜೊತೆ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ ಬೆನಾರಿಸ್ (ಕಾಶೀ)

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.

ಮೂರು ಫ್ಯಾಷನ್ ರಿಸ್ಟ್ ವಾಚ್‌ಗಳು ಇವು ಹೊಳಪಿನಲ್ಲಿ ಬಂಗಾರಕ್ಕಿಂತಲೂ ಹೆಚ್ಚು ಬಹು ರಮ್ಯವಾಗಿವೆ ಐದು ವರ್ಷಗಳ ಗ್ಯಾರಂಟಿ ಒಂದು ಉತ್ತಮವಾದ ಟೇಬಲ್ ಪೀಸ್ ಸರಿಯಾದ ಗಂಟೆಯನ್ನು ತೋರಿಸುತ್ತ 10 ವರ್ಷಗಳ ಗ್ಯಾರಂಟಿ ಒಂದು ಲಿವರ್ ಪಾಕೆಟ್ ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವುದಿಲ್ಲ ಗ್ಯಾರಂಟಿ ೫ ವರ್ಷ ಅತಿ ಬೆಲೆಯುಳ್ಳ ಹಂಟಿಂಗ್ ಟಾರ್ಚ್ ಲೈಟ್ [illegible] ಬಂಗಾರದ ಪ್ಲೇಟ್ ಮಾಡಿದ ಸ್ವಾರಾಜ್ಯ ಫೌಂಟನ್ ಪೆನ್ ಈ ಅತ್ಯುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ ಕೊಡುವೆವು. ನಿಮಗೆ ಇಷ್ಟವಿಲ್ಲದಿದ್ದರೆ ಬೆಲೆಯು ವಾಪಾಸ್ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ

ಶರ್ಮಾ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ 11513 S A ಕಲ್ಕತ್ತಾ

ಡಾಕ್ಟರ ವಾಮನ ಗೋಪಾಳರವರ

ಐಹಿಡಾಯಿಜ್ಡ್
ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ
೬೦ ವರ್ಷದ ಅನುಭವ
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್
ಕೇಶವರವರ
ಫೊಸ್ಫರಸ್ ಗುಳಿಗೆಗಳು
[illegible]

ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ 4
ಸ್ಟೋಕಿಸ್ಟ್— [illegible] ಕಂಪೆನಿ ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

ಗುಣಬಾರದಿದ್ದರೆ ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಾಜಸ್ತೋಕ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆರೋಗ್ಯ ಅಶಕ್ತವಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು [illegible] ಶರೀರಕ್ಕೆ ಏನೂ ಅಪಾಯವಾಗದೆ [illegible] ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಶುರುವಾಗುವುದಿಲ್ಲ ಮೊದಲೇ [illegible] ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು ದಾಳ್ಕರ ಜಿ. ಎ. ವೈದ್ಯ, ಎಲ್ ಸಿ ಪಿ ಎಸ್ ಕೆಳವಾಡಿಗಾಹಿದು ಕಾರೇ ಈ ಚೂರ್ಣದಿಂದ ಯಾವ ತರದ ಅಪಾಯವಾಗದು. ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ತಪ್ಪ ಕಿಮ್ಮತ್ತು ರೂ ೪–೦–೦ ವಿ ಪಿ ಅಣೆ ೮.

ವಿಳಾಸ—ಸಂಜೀವಿನೀ ಔಷಧಾಲಯ ಮು ಪೊ ವಿಂಚೂ, S M C

ಕೆನರಾ ವಾಚ್ ವರ್ಕ್ಸ್, ಮಂಗಳೂರು

ದಿನಂಪ್ರತಿ ನೂರಾರು ಗಿರಾಕಿಗಳು ಬಂದು ನಮ್ಮಲ್ಲಿರುವ ಹಲವು ಬಗೆಯ ಕೈಗಡಿಯಾರ ಗೋಡೆಯ ಗಡಿಯಾರ ಆಟದ ಸಾಮಾನು ಮೊದಲಾದುವುಗಳನ್ನು ಪಡೆದು ಸಂತೃಪ್ತಿ ಹೊಂದಿ ಸಂತೋಷದಿಂದ ಹೋಗುವ ವಿಷಯವೆ ಒದೇ ನಮ್ಮಲ್ಲಿನ ಸರಕುಗಳ ಉತ್ತಮತೆಗೆ ಸಾಕ್ಷಿ. [illegible] ನಮ್ಮಲ್ಲಿಗೆ ಬರಬಹುದು—ತೃಪ್ತಿ ಹೊಂದಬಹುದು ಹೊಟ್ಟದನ್ನ ಪಡೆಯಬಹುದು

The Popular Insurance Company, Ltd.

Head Office:—MANGALORE, S India

The Pioneer Life Office of the West Coast.

Wanted influential District agents in Unrepresented areas.

A few Press opinions.

INSURANCE HERALD, CALCUTTA This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country. If the Directors of this Comany can continue in the present rate of progress and can control the finances with wisdom and care, they would make history. From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds.

'THE ARTISAN,' TRIVANDRUM We are glad to see from the Fourth Annual Report and Balance Sheet of the Company that it has been making steady and satisfactory progress considering its age and the fact of the economic depression prevailing throughout the country.

THE INDIAN INSURANCE, BOMBAY Mangalore is noted for its enterprise and the Popular Insurance Company Ltd, promoted by the local residents of that place, is steadily gaining ground It is directed by influential epople of Mangalore and managed by Mr B. Vittal Rao, who has developed in him a great deal of life insurance sense

ಮಂಗಳೂರು.

ಮಂಗಳೂರು ಆರ್ಯಸಮಾಜ ಮಂದಿರದಲ್ಲಿ ಕಳೆದ ಶುಕ್ರವಾರ ಎ. ರೋಜ್ ಬಪ್ಟಿಸ್ಟ ಎಂಬ ಒಬ್ಬ ರೋಮನ್ ಕೆಥೊಲಿಕ್ ಸ್ತ್ರೀಯು ಶುದ್ಧಿ ಸಂಸ್ಕಾರವು ಜರಗಿ ಭಾಗ್ಯವತಿದೇವಿ ಎಂದು ನಾಮಕರಣವೂ ಗಾಯತ್ರಿ ಮಂತ್ರೋಪದೇಶವೂ ಕೊಡೋಣವಾಯಿತು. ಈಕೆಯು ಮಂಗಳೂರು ರೋಮನ್ ಕೆಥೊಲಿಕರ ಒಂದು ಶ್ರೀಮಂತ ಕುಟುಂಬಕ್ಕೆ ಸೇರಿದವಳಾಗಿದ್ದು, ಬೆಂಗಳೂರಲ್ಲಿ ಒಂದು ಸರಕಾರಿ ಉದ್ಯೋಗದಲ್ಲಿದ್ದಳು. ನಿನ್ನೆ ಸಾಯಂಕಾಲ ಇವರನ್ನು ದಕ್ಷಿಣ ಕೊಡಗಿನ ಜಮೀನ್‌ದಾರರಾದ ಶ್ರೀಯುತ ಟಿ. ಪಿ. ಮುರ್ಗೇಶಂ ಪಿಳ್ಳೆಯವರಿಗೆ ಕೊಟ್ಟು ವೈದಿಕ ವಿಧಿಪ್ರಕಾರ ಪಾಣಿಗ್ರಹಣ ಸಂಸ್ಕಾರ ಮಾಡಲಾಯಿತು. ವಧುವಿನ ಕಡೆಯಿಂದ ಶ್ರೀಯುತ ಮೋಹನಪ್ಪ ತಿಂಗಳಾಯರೂ ವರನ ಕಡೆಯಿಂದ ಶ್ರೀಯುತ ಲಕ್ಷ್ಮಣ ನಾಯ್ಕರೂ ಪೌರೋಹಿತ್ಯವನ್ನು ನಡೆಸಿದರು.

ಇಲ್ಲಿಯ ಕ್ರಸೆಂಟ್ ಕ್ಲಬ್ಬಿನ ವರ್ಷವರ್ಧಂತಿಯು ಬದರಿಯಾ ಹಾಲಿನಲ್ಲಿ ಖಾನ್ ಬಹದ್ದೂರ್ ಎಂ. ಕಮ್ಲಾದ ಎಂ. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ನೆರವೇರಿತು. ಫಲಾಹಾರ ಸತ್ಕಾರ, ಕ್ಲಬ್ಬಿನ ವರದಿಯ ವಾಚನ, ನೆರೆದ ಹಲವು ಪ್ರಮುಖರ ಭಾಷಣ, ಆಡಳಿತ ಮಂಡಲದ ಚುನಾವಣೆ ಇವೆಲ್ಲ ನಡೆದ ಬಳಿಕ ಅಧ್ಯಕ್ಷರು ಕ್ಲಬ್ಬಿನ ಜೀವನದ ಕುರಿತು ಭಾಷಣ ಮಾಡಿದರು.

ಇಲ್ಲಿಗೆ ಇದೇ ವಾರ ದಯಮಾಡಿಸಲಿರುವ ಶ್ರೀಮತಿ ಕುಮಾರಿ ಮಣಿಬೆನ್ ಕಾರಾ, ಶ್ರೀಗಳಾದ ಎಸ್. ಎ. ಬ್ರೆಲ್ವಿ ಮತ್ತೂ ಎಂ. ಆರ್. ಮಸಾನಿ ಇವರಿಗೆ ಇದೇ ತಾ ೩೧ನೇ ಶುಕ್ರವಾರ ಸಂಜೆ ೫ ಗಂಟೆಗೆ ಧಾರೇಶ್ವರ ಗಾರ್ಡನ್ಸ್‌ನಲ್ಲಿ ಶ್ರೀಮತಿ ಕಮಲಾ ದೇವಿಯವರು ಒಂದು ಎಟ್ ಹೋಮ್ ಪಾರ್ಟಿಯನ್ನು ಕೊಟ್ಟು ಸತ್ಕರಿಸಲಿರುವರು.

ಶ್ರೀಮತಿ ಕಮಲಾ ದೇವಿಯವರು ಕಾಂಗ್ರೆಸಿಗೆ ಮೆಂಬರರನ್ನು ಸೇರಿಸಲು ಕುಂದಾಪುರದಲ್ಲಿ ಸಂಚರಿಸಿ ಬಳಿಕ ಉಡುಪಿ ಕಾರ್ಕಳಕ್ಕೆ ಹೋಗುವರೆಂದು ತಿಳಿದುಬರುತ್ತದೆ.

ಮೈಸೂರು ಆಸ್ಥಾನದ ವಿದ್ವಾನ್ ವೈಣಿಕಶಿಖಾಮಣಿ ಶ್ರೀ ಸುಬ್ಬಣ್ಣನವರು ಉಡುಪಿ ಶ್ರೀ ಕೃಷ್ಣ ದರ್ಶನಕ್ಕಾಗಿ ದಯಮಾಡಿಸಿದವರು ಮಂಗಳೂರಿಗೆ ಬಂದು ಮೈಸೂರಿಗೆ ತೆರಳಿರುವರು.

ನಮ್ಮ ಮುನಿಸಿಪಲ್ ಆಫೀಸಿನ ಹೆಚ್ಚಿಗೆಯಾಗಿ ೩ ಮಂದಿ ಕ್ಲಾರ್ಕರ, ಮು॥ ಪುಸ್ತಕಾಲಯಕ್ಕಾಗಿ ಒಬ್ಬ ಲೈಬ್ರೇರಿಯನರ ಮಂಜೂರಾತಿಯಾಗಿದೆ. ಇದಕ್ಕೆ ಸುಮಾರು ೨೦೦ ಅರ್ಜಿಗಳು ಬಂದಿವೆ.

ಮದ್ರಾಸಿನ 'ಯುನೈಟೆಡ್' ಇಂಡಿಯಾ ಲೈಫ್ ಎಶ್ಯೂರೆನ್ಸ್ ಕೋ. ಲಿಮಿಟೆಡ್ ಎಂಬ ಜೀವ ವಿಮಾ ಸಂಸ್ಥೆಯ ಉಡುಪಿ ಶಾಖೆಯ ಆಫೀಸ್ ಒಂದು ಕೊಡಿಯಾಲ ಬೈಲಿನಲ್ಲಿ ಸ್ಥಾಪಿತವಾಗಿದೆ.

ಸದ್ಯದಲ್ಲೇ ನಮ್ಮ ಸಂಸ್ಥಾನದ ಲಾ ಮೆಂಬರರಾದ ರಾಯ್ ಬಹದ್ದೂರ್ ಕೆ. ವಿ. ರೆಡ್ಡಿಯವರು ಇಲ್ಲಿನ ರಿಜರ್ವ್ ಕಾಡುಗಳ ಸಂದರ್ಶನಕ್ಕಾಗಿ ಬರುವರೆಂದು ಪ್ರಕಟವಾಗಿದೆ.

ದ. ಕ. ಜಿಲ್ಲಾ ಸ್ವದೇಶಿ ಪ್ರಚಾರ ಸಭೆಯ ಮಹಾಸಭೆಯೊಂದು ತಾ ೫—೬ ೩೫ನೆಯ ಬುಧವಾರ ಸಾಯಂಕಾಲ ಗಂಟೆ ೫-೩೦ಕ್ಕೆ ಗಣಪತಿ ದೇವಸ್ಥಾನದ ಬಳಿ ಇರುವ ಕಾಂಗ್ರೆಸು ಕಚೇರಿಯಲ್ಲಿ ಕೂಡುವುದು.

ಸಭೆಯ ಸಂಬಂಧವಾದ ಅನೇಕ ಪ್ರಾಮುಖ್ಯ ವಿಷಯಗಳನ್ನು ಚರ್ಚಿಸಲಿಕ್ಕಿರುವುದರಿಂದ ಎಲ್ಲಾ ಮೆಂಬರರೂ ಪೋಷಕರೂ, ಸಹಾಯರೂ ಮತ್ತಿತರ ಹಿತೈಷಿಗಳೂ ತಪ್ಪದೆ ಬರಬೇಕಾಗಿ ವಿನಂತಿ ಎಂದು ಯು. (ಸೂರಪ್ಪಯ್ಯ) ಕಾರ್ಯದರ್ಶಿ ಇವರು ತಿಳಿಸುತ್ತಾರೆ.

ಕಳೆದ ಶನಿವಾರ ಮಧ್ಯಾಹ್ನ ಮಂಗಳೂರಿನ ಒಬ್ಬ ಗೃಹಸ್ಥರಿಗೆ ಪಂಪವೆಲ್ಲಿಯ ಫೆಲಿಕ್ಸ್ ಪೈ ಬಿಲ್ಡಿಂಗ್ಸಿನ ಬಳಿ ಚಿನ್ನದ ಕೈಗಳ ಗೊಂಚಲು ಒಂದು ಸಿಕ್ಕಿರುತ್ತದೆ. ಅದರಲ್ಲಿ ಮೋಟಿನ ಸ್ಪಿಚ್ ಕೀ ಪೆಟ್ಟಿಗೆಯ ಬೀಗದ ಕೈ ಮೊದಲಾದುವುಗಳಿವೆ. ಅದರ ಮಾಲಿಕರು ನಮ್ಮ ಆಫೀಸಿನಲ್ಲಿ ಬಂದು ಕೇಳಿದ್ದಲ್ಲಿ ಅದನ್ನು ಅವರಿಗೆ ಕೊಡಲಾಗುವುದು.

(ಸಂಪಾದಕ)

ಕದ್ರಿಯ ಸಮೀಪದ ಒಂದು ಮಗುವಿನ ಶವವು ಸಿಕ್ಕಿತು. ಯಾರಾದರೋ ಹೆತ್ತು ಅದನ್ನು ಕೊಂದು ಅಲ್ಲಿ ಎಸೆದಿರಬೇಕೆಂದು ಊಹಿಸಲ್ಪಟ್ಟಿದೆ. ಪೋಲೀಸು

ತಾಲೂಕುಗಳಿಂದ.

ಉಡುಪಿ—ಇಲ್ಲಿಯ ಕಿರಿಯರ ಪ್ರಪಂಚದ ಸಹಾಯಾರ್ಥವಾಗಿ ಉಡುಪಿಯ ನಾಗರಿಕ ವಿದ್ಯಾವಂತ ಸ್ತ್ರೀಪುರುಷರು ಇದೇ ತಾ. ೧೯ನೇ ಶನಿವಾರ ರಾತ್ರಿ ೯ ಗಂಟೆಗೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ 'ಯೋಗಿಯೋ ಭೋಗಿಯೋ' ಎಂಬ ಆತ್ಯಾಧುನಿಕ ಸಾಮಾಜಿಕ ನಾಟಕವನ್ನು ಅತಿ ಪ್ರೇಕ್ಷಣೀಯವಾಗಿ ಅಭಿನಯಿಸಿದರು. ಜನಸ್ತೋಮವು ವಿಪರೀತವಿದ್ದು, ಟಿಕೇಟುಗಳು ದೊರೆಯದೆ ಬಹು ಮಂದಿ ಖಿನ್ನವದನರಾಗಿ ವಾಪಾಸು ಹೋಗಬೇಕಾದ ಪ್ರಸಂಗ ಬಂದಿತ್ತು. ಶ್ರೀ ಯುಸ್. ಯು. ಪಣಿಯಾಡಿಯವರು 'ಯೋಗಾನಂದ' ಎಂಬ ಸನ್ಯಾಸಿಯ ಪಾತ್ರವನ್ನು ವಹಿಸಿದ್ದರು. ರಂಗಭೂಮಿಯಲ್ಲಿ ಎಲ್ಲಾ ಸ್ತ್ರೀ ಪಾತ್ರಗಳನ್ನು ಸ್ತ್ರೀಯರೇ ವಹಿಸಿದುದು ಇದೇ ಮೊದಲನೆ ಬಾರಿ.

ಉಡುಪಿಗೆ ಮುನಿಸಿಪಾಲಿಟಿಯನ್ನು ಹೂಡುವ ವಿಚಾರದಲ್ಲಿ ಜನತೆಯ ಕಡೆಯಿಂದ ಮಾನ್ಯ ಸರಕಾರಕ್ಕೆ ಅರ್ಜಿಗಳು ತಯಾರಿಸಲ್ಪಟ್ಟಿವೆ. ಈಗಣ ಆರ್ಥಿಕ ಅವನತಿಯ ಕಾಲದಲ್ಲಿ ಉಡುಪಿಯ ಜನಸಂಖ್ಯೆಯ ಬಾಹುಳ್ಯತೆಯ ದೆಸೆಯಿಂದಲೇ ಎಂಬಂತೆ ಉಡುಪಿಯಲ್ಲಿ ಯಾವುದಾದರೊಂದು ಕೈಗಾರಿಕೆ ಕಾರ್ಖಾನೆಗಳಿಲ್ಲದಿರಲು, ಇಲ್ಲಿಗೆ ರೈಲ್ವೆಯೂ ಇಲ್ಲದಿರಲು ಸ್ವಂತ ಬಂದರೂ ಇಲ್ಲದಿರಲು ಇದು ನೊಡುವಿನಂತೆ ವ್ಯಾಪಾರ ಪಟ್ಟಣವೂ ಇಲ್ಲದಿರಲು ಇಲ್ಲಿನ ಬಹುಮಂದಿ ಕೃಷಿ ಮತ್ತು ಕೂಲಿ ಕೆಲಸ ಇಲ್ಲವೆ ಉಡುಪಿಯ ಪುರಕ್ಕೆ ಹೆಸರುಗೊಂಡಿದೆಯೋ ಆ ಮಠಗಳು ಮತ್ತು ದೇವಸ್ಥಾನಗಳ ಭಜನೆಗಳಲಿ ಸೇವಾವೃತ್ತಿಯವರಾಗಲಿ ಆಗಿದ್ದುದರಿಂದಲೂ, ಅನೇಕರು ಬಡವರಿಗೆ ಪ್ರತ್ಯೇಕವಾಗಿ ದರಖಾಸ್ತು ಮಾಡಲಾದ ಸ್ಥಳಗಳಲ್ಲಿ ಮನೆಗಳನ್ನು ಕಟ್ಟಿ ಯಾ ಇತರ ಕಾರಣಗಳಿಂದ ಸಾಲಗಳಿಂದ ಕಷ್ಟಕ್ಕೀಡಾಗಿರಲು ಯಾವದೇ ಯಾಗಲಿ ಹೆಚ್ಚಿನ ತೆರಿಗೆ ಕೊಡಲಾರದ ಕಂಗಾಲು ಸ್ಥಿತಿಯಲ್ಲಿರುವ ಜನರ ಮೇಲೆ ಮುನಿಸಿಪಾಲಿಟಿಯನ್ನು, ಜನಹಿತವನ್ನು ಬಯಸುವಂಥವರು ದಯಾಳು ಸರಕಾರವು ಹೂಡುವ ಯೋಜನೆಯನ್ನು ಬಿಟ್ಟುಬಿಡಬೇಕಾಗಿಯೂ ಉಡುಪಿಗೆ ಸೆಲ್ಫ್ ಗವರ್ನಮೆಂಟ್ ಪದ್ಧತಿಯ ಸಂಸ್ಥೆಯೊಂದು ಇರಲೇಬೇಕೆಂಬುದಾಗಿ ಸರಕಾರದ ಧೋರಣೆಯಿದ್ದಲ್ಲಿ ಕಡಮೆ ಖರ್ಚಿನಿಂದ ನಿರ್ವಹಿಸಲಾಗುವ ಪಂಚಾಯತ ಬೋರ್ಡನ್ನಾದರೂ ಸ್ಥಾಪಿಸಬಹುದು ಎಂಬುದಾಗಿ ಸರಕಾರಕ್ಕೆ ಪ್ರಾರ್ಥಿಸಿಕೊಳ್ಳಲಾಗಿದೆ. ನಕಲುಗಳನ್ನು (೧) ಸೆಕ್ರೆಟರಿ ಲೋಕಲ್ ಸೆಲ್ಫ್ ಗವರ್ನಮೆಂಟ್ ಮದ್ರಾಸು, (೨) ಇನ್ಸ್‌ಪೆಕ್ಟರ್ ಆಫ್ ಮುನಿಸಿಪಾಲಿಟೀಸ್ ಎಂಡ್ ಲೋಕಲ್ ಬೋರ್ಡ್ಸ್ ಮದ್ರಾಸು, (೩) ಜಿಲ್ಲಾ ಕಲೆಕ್ಟರ್, (೪) ಜಿಲ್ಲಾ ಪಂಚಾಯತ್ ಆಫೀಸರ್ (೫) ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್ ಇವರಿಗೆಲ್ಲಾ ಕಳುಹಿಸುವುದಿದೆ. ಮಾನ್ಯ ಹಾಗೂ ದಯಾಳು ಸರಕಾರವು ಉಡುಪಿಯ ಬಡನಿವಾಸಿಗಳ ಮೇಲೆ ದಯೆ ತೋರಿಸಿಯಾರೆಂದು ಹಾರೈಸಲಾಗುತ್ತದೆ.

ಪ್ರೊ ಎಲ್. ಎಸ್ ರಾವ್ ಇವರು ಇಲ್ಲಿನ ಶ್ರೀ ರಾಮಕೃಷ್ಣಾ ಥಿಯೇಟರಿನಲ್ಲಿ ತಮ್ಮ ವಿಚಿತ್ರ ಪ್ರದರ್ಶನಗಳ ದೇಖಾವೆಗಳನ್ನು ಜನಮನ ಬೆರಗುಗೊಳ್ಳುವಂತೆ ಮಾಡಿ ತೋರಿಸಿದರು. ಇವರು ಸಾಮುದ್ರಿಕಾ ಶಾಸ್ತ್ರದಲ್ಲಿ ತುಂಬಾ ಬಲ್ಲವರಾಗಿರುತ್ತಾರೆ.

ಹಿಂದೂ ಮಠಗಳ ಬಿಲ್ಲಿನ ಬಗ್ಗೆ ಸಾಕ್ಷ್ಯವನ್ನೀಯಲು ಇಲ್ಲಿಂದ ಶ್ರೀಗಳಾದ ಎಮ್. ರಾಮಕೃಷ್ಣರಾವ್ ಬಿ. ಎ. ಬಿ. ಎಲ್. ವಕೀಲರೂ, ಎ. ಲಕ್ಷ್ಮೀನಾರಾಯಣರಾವ್ ಬಿ. ಎ., ಬಿ. ಎಲ್., ವಕೀಲರೂ ಕೆ. ಲಕ್ಷ್ಮೀನಾರಾಯಣರಾವ್ ಬಿ. ಎ., ಬಿ. ಎಲ್., ವಕೀಲರೂ ನೀಲಗಿರಿಗೆ ಹೋಗಿರುತ್ತಾರೆ.

ಪುತ್ತೂರು:— ಇಲ್ಲಿಯ ಕೆದಿಲ ಪಂಚಾಯತ ಬೋರ್ಡು ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತ್ಯುತ್ಸವವು ಕಳೆದ ತಾ. ೧೮—೫—೩೫ನೇ ಶನಿವಾರ

ನಮ್ಮ ವೈದ್ಯಕೀಯ ಪರಿಶೋಧನೆಗಾಗಿ ಕೊಂಡುಹೋಗಿರುವರು. ಈ ಸಂದರ್ಭದಲ್ಲಿ ಮಗುವನ್ನು ಹೆತ್ತ ಸ್ತ್ರೀಯನ್ನು ದಸ್ತಗಿರಿಮಾಡುವುದಾಗಿಯೂ ತಿಳಿದುಬರುತ್ತದೆ.

ಹಿಂದೂ ಮಠಗಳ ವಿಷಯವಾಗಿ ಹಿಂದೂ ಸಮಾಜದ ಅಭಿಪ್ರಾಯವನ್ನು ಸಿಲೆಕ್ಟ್ ಕಮಿಟಿಯವರ ಮುಂದಿರಿಸಲು ಹೋಗಿದ್ದ ಶ್ರೀ ಕೆ. ಆರ್. ಆಚಾರ್ಯರು ಉದಕಮಂಡಲದಿಂದ ಕಳೆದ ೨೩ ೨೪ರಲ್ಲಿ ಮಂಗಳೂರಿಗೆ ಹಿಂತಿರುಗಿದರು.

ಸಾಯಂಕಾಲ ಗಂಟೆ ೫-೩೦ಕ್ಕೆ ಶ್ರೀಮಾನ್ ಬಡೆಕ್ಕಿಲ ಶಂಕರನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ಜರಗಿತು. ಶಾಲಾ ಬಾಲಕರು ಶ್ರೀ ಶಿವರಾಮಕಾರಂತರಿಂದ ವಿರಚಿತವಾದ "ಹಿರಿಯಕ್ಕನ ಚಾಳಿ" ಎಂಬ ನಾಟಕವನ್ನು ಚಲೋ ರೀತಿಯಿಂದ ಅಭಿನಯಿಸಿದರು.

ಕುಂದಾಪುರ:—ಕಾಂಗ್ರೆಸ್ ಸಭೆಗೆ ಸದಸ್ಯರು ತಮ್ಮ ತಾಲೂಕಿನಲ್ಲಿ ರಾಷ್ಟ್ರಸಭೆಗೆ ಸದಸ್ಯರನ್ನು ಸೇರಿಸುವ ಕೆಲಸವು ನಡೆಯುತ್ತಿರುವುದು. ಆಗಲೇ ಅನೇಕರು ಸದಸ್ಯರಾಗಿ ಸೇರಿರುವರೆಂದು ತಿಳಿದುಬಂದಿದೆ.

ಕಟಪಾಡಿ:— ಕೀ. ಶೇ. ಪಿ. ಶ್ರೀನಿವಾಸ ನಾಯಕರ ಅಪರಕ್ರಿಯೆಗಳನ್ನು ಅವರ ಮಗಂದಿರು ಸಾಂಗವಾಗಿ ಶ್ರದ್ಧಾ ಭಕ್ತಿಪೂರ್ವಕವಾಗಿ ನೆರವೇರಿಸಿದರು. ಮೃತರ ಹನ್ನೆರಡನೆಯ ದಿನ ಬಡಬಗ್ಗರಿಗೆ ಅಕ್ಕಿ, ಎಣ್ಣೆ ಮೊದಲಾದುವನ್ನು ಪಂಕ್ತಿ ಭೇದವಿಲ್ಲದೆ ಹಂಚಲಾಯಿತು. ಮರುದಿನ ತಾ ೨೫ರಲ್ಲಿ ಗೌಡಸಾರಸ್ವತ ಸಮಾಜದವರಿಗೆ ಮಾತ್ರವಲ್ಲದೆ ಶಿವಳ್ಳಿ ಬ್ರಾಹ್ಮಣರಿಗೂ ನಾಡವರ್ಗದವರಿಗೂ ವೈಕುಂಠ ಸಮಾರಾಧನೆಯ ಭೋಜನದ ಪ್ರತ್ಯೇಕ ವ್ಯವಸ್ಥೆಯನ್ನು ಸಹ ಮಾಡಿದ್ದರು.

ಕಾಸರಗೋಡು:—ಸ್ಥಳೀಯ 'ಶ್ರೀ ಕೃಷ್ಣ ಕೀರ್ತನಾ ಮಂದಿರ'ದಲ್ಲಿ ಪಾರಂಪ್ರತಿ ಆಚರಿಸಿ ಬರತಕ್ಕ ಏಕಾದಶಿ ಕೀರ್ತನೆಯು ಎಂದಿನಂತೆ ತಾ ೧೪ಕ್ಕೆ ನೆರವೇರಲು ಆ ದಿನ ಶ್ರೀ ಶ್ರೀನಿವಾಸ ಕಾಮತರು ಒಂದು ಭಕ್ತಿರಸ ಪ್ರಧಾನವಾದ ಕೆಲವು ಅಭಂಗಗಳನ್ನು ಹಾಡಿದುದಲ್ಲದೆ ಭಜನೆ ಕೀರ್ತನೆ, ಎಂದರೇನು? ಕಲಿಯುಗದಲ್ಲಿ ಮಾನವನ ಮುಕ್ತಿಪಥವನ್ನು ಸಾಧಿಸುವ ಸಾಧನವಾವುದು? ಎಂಬುದರ ಕುರಿತು ಭಕ್ತಿವಿಜಯ'ದಿಂದ ಕೆಲವು ಭಾಗಗಳನ್ನು ಎತ್ತಿಹಿಡಿದು ಇತ್ತ ಹೃದಯಂಗಮವಾದ ಭಾಷಣವು ಕೂಡಿದ ಆಬಾಲ ವೃದ್ಧ ಸ್ತ್ರೀ ಪುರುಷರನ್ನು ಭಕ್ತಿಪರವಶರನ್ನಾಗಿ ಮಾಡಿತು.

ಮೂಲ್ಕಿ:—ಇಲ್ಲಿಯ ಶ್ರೀ ಯು ಕೃಷ್ಣರಾಯರು ರಿಜಿಸ್ಟ್ರ ಆಫೀಸಿಗೆ ಹೋಗುವ ರಸ್ತೆಯಲ್ಲಿ ನೂತನವಾಗಿ ಕಟ್ಟಿಸಿದ ಭವ್ಯವಾದ ಕಟ್ಟಡದಲ್ಲಿ ಕಾಪಿಹೋಟೆಲ್ ರೆಸ್ಟೋರೆಂಟನ್ನು ತೆರೆಯುವ ಸಮಾರಂಭವು ಇದೇ ಕಳೆದ ತಾ ೧೩—೫—೩೫ನೇ ಸೋಮವಾರ ಅಪರಾಹ್ನ ಘಂಟೆ ೫ಕ್ಕೆ ಶ್ರೀ ಡಾಕ್ಟರ್ ಯಂ ಎಸ್ ಪ್ರಭು ಯಂ ಬಿ ಬಿ ಯಸ್ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಸ್ಥಳೀಯ ಶ್ರೀ ದ ಗೋಪಾಲ ಧರ್ಮಾರ್ಥ ರಾತ್ರಿ ಶಾಲೆಯ ೫ ವರ್ಷದ ವರ್ಧಂತ್ಯುತ್ಸವವು ಇದೇ ಕಳೆದ ತಾ. ೧೬ ೫ ೩೫ನೇ ಗುರುವಾರ ಸಾಯಂಕಾಲ ಘಂಟೆ ೬ಕ್ಕೆ ಮನೋಹರವಾ ಸದನದಲ್ಲಿ ಜರಗಿತು. ಶಾಲಾ ಮಂದಿರವು ಒಳಗೂ ಹೊರಗೂ ತಳಿರುತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ಮನೋಹರವಾಗಿ ಶೃಂಗರಿಸಲ್ಪಟ್ಟಿತು. ಸಾಯಂಕಾಲ ೫ ಘಂಟೆಗೆ ಶಾಲೆ ಆಡಳಿತಗಾರರು, ಅಧ್ಯಾಪಕರು, ಮಕ್ಕಳು ನಿಯೋಜಿತ ಅಧ್ಯಕ್ಷ ಮಹಾಶಯರಿಂದೊಡಗೂಡಿರಲು ಗ್ರೂಪ್ ಫೊಟೋ ತೆಗೆಯಲ್ಪಟ್ಟಿತು. ಘಂಟೆ ೬ಕ್ಕೆ ಸಭಾಕಾರ್ಯವು ಆರಂಭವಾಯಿತು. ಊರಿನ ಅನೇಕ ಪ್ರಮುಖರೂ, ಅಧಿಕಾರಿಗಳೂ ಶಾಲಾ ಅಧ್ಯಾಪಕರೂ ಬಹುಮಂದಿ ನೆರೆದಿದ್ದರು. ದ ಕ ಜಿಲ್ಲಾ ಬೋರ್ಡಿನ ಸದಸ್ಯರೂ ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲಿನ ಮೆಂಬರರೂ ಆಗಿರುವ ಮ॥ ರಾ॥ ರಾ॥ ಯಂ ರಾಮಕೃಷ್ಣ ಪೂಂಜ ಅವರ್ಗಳವರು ಸಭಾಧ್ಯಕ್ಷರಾಗಬೇಕೆಂದು ಶ್ರೀ ಯಂ ಪಿ ದೇವರಾವ್ ಬಿ ಎ. ಎಲ್ ಟಿ ಯವರು ಸೂಚಿಸಿ, ಶ್ರೀ ಡಾಕ್ಟರ್ ಯಂ ಉಮೇಶರಾವ್, ಎಲ್ ಎಮ್ ಎಂಡ್ ಎಸ್. ರವರು ಅನುಮೋದಿಸಲು ರಾ॥ ಪೂಂಜರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಇಲ್ಲಿಯ ಸಬ್ ರಿಜಿಸ್ಟ್ರಾರ್ ರಾ॥ ಬಿ ರಾಮಕೃಷ್ಣರಾವ್, ಬಿ ಎ. ರವರು ಸಭಾಧ್ಯಕ್ಷರಿಗೆ ಪುಷ್ಪಹಾರ ಹಾಕಿದರು. ಶಾಲಾ ವಿದ್ಯಾರ್ಥಿಗಳಿಬ್ಬರು ಶ್ರೀ ದೇವತಾ ಪ್ರಾರ್ಥನೆಯನ್ನು ಮಾಡಿದರು. ಇನ್ನೊಬ್ಬ ವಿದ್ಯಾರ್ಥಿಯು ಸೊಗಸಾಗಿ ಸ್ವಾಗತ ಗೀತೆಯನ್ನು ಹಾಡಿದನು. ಅನಂತರ ಶಾಲೆಯ ಮುಖ್ಯ ಉಪಾಧ್ಯಾಯರು ಶ್ರೀ ಬಿ. ಭೋಜರಾಯರು ೩೪—೩೫ನೇ ವರ್ಷದ ಶಾಲಾ ವರದಿಯನ್ನು ಓದಿ ಹೇಳಿ ಸಭಿಕರಿಗೆ ಅರ್ಪಿಸಿದರು. ಅನಂತರ ಶ್ರೀ ಯಂ ಪಿ ದೇವರಾಯರು ಕನ್ನಡದಲ್ಲಿಯೂ, ಹಿಂದೀ ಪ್ರಚಾರಕ ಶ್ರೀ ವಿ ಆರ್ ಉದ್ಯಾವರ್ ಬಿ. ಎ. ರವರು ಹಿಂದಿಯಲ್ಲಿಯೂ ಭಾಷಣಮಾಡಿದರು.

ಕಿನ್ನಿಗೋಳಿ:—ಇದೇ ತಾ. ೧೬—೫—೩೫ರಲ್ಲಿ ಮಂಗಳೂರು ರೆವಿನ್ಯೂ ಡಿವಿಜನಲ್ ಆಫೀಸರರು ಇಲ್ಲಿಗೆ ಬಂದು ಎಲ್. ಎಫ್. ಬಂಗ್ಲೆಯಲ್ಲಿ ಕ್ಯಾಂಪ್ ಮಾಡಿ ತಾ ೨೩ ೫—೩೫ರಲ್ಲು ಹಿಂತಿರುಗಿ ಹೋಗಿದ್ದಾರೆ. ಅವರು ಇಲ್ಲಿ ಇದ್ದಾಗ್ಯೆ ಅನೇಕ ಕ್ರಿಮಿನಲ್ ಮೊಕದ್ದಮೆಗಳನ್ನು ತೀರ್ಮಾನಿಸಿದರು.

ಅಸಿಸ್ಟೆಂಟ್ ಪಂಚಾಯತ ಆಫೀಸರರಾದ ಕೆ. ಶಿವಶೆಟ್ಟಿ ಬಿ ಎ. ಯವರು ಕಳೆದ ವಾರ ಇಲ್ಲಿಗೆ ಆಗಮಿಸಿ ಜೂನ್ ತಿಂಗಳ ಆದಿಯಲ್ಲಿ ಇಲ್ಲಿಯ ಪಂಚಾಯತ ಇಲೆಕ್ಷನ್ ಮಾಡುವುದಾಗಿ ತಿಳಿಸಿ ಹೋಗಿರುತ್ತಾರೆ.

ಮಳೆ ಬಾರದೆ ನೀರಿನ ಅಭಾವವು ತುಂಬಾ ಆಗಿದೆ. ಇಲ್ಲಿಂದ ಸುಮಾರು ೩ ಮೈಲು ದೂರದಿಂದ ನೀರು ತರಬೇಕಾಗುತ್ತದೆ. (ಇಲ್ಲಿಂದ ಸುಮಾರು ಒಂದು ಮೈಲು ದೂರ ಮೂರುಕಾವೇರಿ ಎಂಬಲ್ಲಿ ವರುಷಂಪ್ರತಿ ಜರಗತಕ್ಕ ಮಾರಿಪೂಜೆಯು ಈ ವರ್ಷ ಇದೇ ತಾರೀಖು ೨೫—೫—೩೫ರಲ್ಲಿ ಬಹುವಿಜೃಂಭಣೆಯಿಂದ ನಡೆಯಿತು.)

ಕಾರ್ಕಳ:—ಶ್ರೀ ಶ್ರೀನಿವಾಸ ಆಶ್ರಮವಾದ ಶ್ರೀಮತ್ ಭುವನೇಂದ್ರ ಸಂಸ್ಕೃತ ಮಹಾವಿದ್ಯಾಲಯವು ಕಿವೆ ಕಾಲದ ರಜೆ ನಂತರ ಇದೇ ಬರುವ ಜೂನ್ ತಾ ೧೦ಕ್ಕೆ ಪುನಃ ತೆರೆಯಲ್ಪಡುವುದು. ಮಹಾವಿದ್ಯಾಲಯದಲ್ಲಿ ಮದ್ರಾಸು ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಆಯುರ್ವೇದ ಜ್ಯೋತಿಷ್ಯ ಮತ್ತು ಸಾಹಿತ್ಯ ಈ ಶಾಖೆಗಳಲ್ಲಿ ಧರ್ಮಾರ್ಥವಾಗಿ ಶಿಕ್ಷಣವು ದೊರೆಯುವುದು. ನಿರ್ಗತಿಕ ಯೋಗ್ಯ ಹುಡುಗರಿಗೆ ಭೋಜನ ಚಿಕಿತ್ಸೆಗೆ ಏರ್ಪಾಡು ಕೂಡಾ ಆಶ್ರಮದ ಕಡೆಯಿಂದಲೇ ನಡೆಯುವುದು.

ಸಂಸ್ಕೃತ ತಿಳಿಯದವರಿಗೆ ಕೂಡಾ ಸಂಸ್ಕೃತವನ್ನು ಹೇಳಿಕೊಡುವ ಪ್ರತ್ಯೇಕ ಪ್ರಾವೇಶಿಕ ವರ್ಗವು ಇರುವುದು.

ಮಹಾವಿದ್ಯಾಲಯಕ್ಕೆ ಸೇರಲು ಇಚ್ಛಿಸುವವರು ಹೆಚ್ಚಿನ ಅನುಭವದ ಬಗ್ಗೆ ಆಶ್ರಮದ ಸುಪರಿಂಟೆಂಡೆಂಟರಿಗೆ ಬರೆಕೊಳ್ಳುವುದು.

ಶಿರ್ವ ದ. ಕ

ಶ್ರೀ ದತ್ತಾತ್ರೇಯ ಗ್ರಂಥಮಾಲೆಯವತಿಯಿಂದ ತಾ. ೨೪, ೨೫ ೨೬ರಲ್ಲಿ ಶಿರ್ವದಲ್ಲಿ ವಸಂತ ವ್ಯಾಖ್ಯಾನಮಾಲಾ ಸಭೆಗಳು ಜರುಗಿದವು. ತಾ. ೨೪ನೇ ಶುಕ್ರವಾರ ಅಪರಾಹ್ನ ಘಂಟೆಗೆ ಇದರ ಆರಂಭೋತ್ಸವವು ಕರ್ನಾಟಕ ನಾಟ್ಯಾಲಂಕಾರ ಅಭಿನಯ ಕೇಸರಿಗಳೂ ಆದ ಶ್ರೀಮಾನ್ ಗರುಡ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಶಿರ್ವದ ಸುತ್ತಮುತ್ತಲಿನಲ್ಲಿ ತಲೆದೋರಿರುವ ಸಿಡುಬಿನ ಹಾವಳಿಯಿಂದ ಮಿತವಾಗಿ ಜನಸಂಖ್ಯೆಯು ಕಳೆಗಿದ್ದರೂ ಸೇರಿದವರಲ್ಲಿ ಬಹುಮಂದಿ ಉತ್ಸಾಹಿ ಕೆಲಸಗಾರರಿಂದ ತರುಣರಿದ್ದರು. ಶ್ರೀ ವಿಠಲ ಹೆಗ್ಡೆಯು ಅಧ್ಯಕ್ಷರ ಪರಿಚಯವನ್ನು ಮಾಡಿಕೊಟ್ಟ ತರುವಾಯ ಗ್ರಂಥಮಾಲೆಯ ಸಂಪಾದಕರಾದ ಶ್ರೀಯುತ ಕಲ್ಕುರ ತನ್ನ ಆತ್ಮನಿವೇದನೆಯಲ್ಲಿ ಗ್ರಂಥಮಾಲೆಯು ಆರಂಭವಾದಂದಿನಿಂದ ಅಂದಿನ ವರೆಗೆ ಮಾಡಿದ ಕಾರ್ಯಕಲಾಪಗಳನ್ನು ವಿವರವಾಗಿ ಹೇಳಿ ಶ್ರೀ ದತ್ತಾತ್ರೇಯ ಗ್ರಂಥಮಾಲೆಯ ಜನ್ಮದಾತರೇ ತನ್ನ ಪೂಜ್ಯ ಗುರುವರ್ಯರಾದ ಗರುಡ ಸದಾಶಿವರಾಯರೆಂದು ತಿಳಿಸಿ ತಮ್ಮೊಳಗಿರುವ ಗುರುಶಿಷ್ಯ ಸಂಬಂಧವನ್ನು ವ್ಯಕ್ತಪಡಿಸಿದರು. ತರುವಾಯ ಅಂದಿನ ಭಾಷಣದ ವಿಷಯವಾದ 'ಮತಮತಾಂತರಗಳೂ ಧರ್ಮವೂ' ಇದರ ಕುರಿತು ಶ್ರೀ ನಳಾದ ವಿಠಲ ಹೆಗ್ಡೆ, ಸೂಡ ವಾಸುದೇವ ಜೋಶಿ ಕುತ್ಯಾರು ಮಹಾಬಲ ಸೆಟ್ಟಿ, ನಾರಾಯಣ ಕಲ್ಕುರ ಕುತ್ಯಾರು ದಾಟ ಸೆಟ್ಟಿ ಮೊದಲಾದವರ ಭಾಷಣಗಳು ಮುಗಿದ ಮೇಲೆ ಅಧ್ಯಕ್ಷರು ತನ್ನ ಹಿತಸೂಚಕವಾದ ಅನುಭವಯುಕ್ತವಾದ ಗಂಭೀರವಾಣಿಯಿಂದ ವಿಷಯವನ್ನು ಸ್ಪಷ್ಟಮಾಡಿ ವರ್ಣಿಸಿ ಆಚಾರವನ್ನು ಧರ್ಮವೆಂದು ಭ್ರಮಿಸಬಾರದೆಂದೂ ಆಚಾರವು ಕಾಲಮಾನಕ್ಕನುಸರಿಸಿ ವ್ಯತ್ಯಾಸಗೊಂಡು ಮತಾಂಧತೆಯನ್ನು ಹೆಚ್ಚಿಸುವುದೆಂದೂ ಆ ಧರ್ಮವು ತ್ರಿಕಾಲಾಬಾಧಿತವೆಂದೂ ಶಾಶ್ವತವಾದುದೆಂದೂ ಮನವಮುಟ್ಟುವಂತೆ ತಿಳಿಸಿ ಸಭೆಯ ಸಂಶಯವನ್ನು ನಿವಾರಿಸಿದರು.

ಕೊನೆಯದಾಗಿ ಅಧ್ಯಕ್ಷರು ತನ್ನ ಶಿಷ್ಯರಿಗೆ ಹಿತೋಕ್ತಿಯ ಸಲಹೆಗಳನ್ನು ಸೂಚಿಸಿ ಶ್ರೀ ದತ್ತಾತ್ರೇಯ ಗ್ರಂಥಮಾಲೆಯ ವಾರ್ಷಿಕೋತ್ಸವವನ್ನು, ಆ ಸಂದರ್ಭದಲ್ಲಿ ಆಡಬೇಕೆಂದಿದ್ದ ನಾಟಕವನ್ನು ಮುಂದಿನ ಹಿತದ ದೃಷ್ಟಿಯಿಂದ ಮುಂದರಿಸಿ ಇಡುವಂತೆ ತಾನೇ ಅಪ್ಪಣೆಕೊಟ್ಟಿರುವೆನೆಂದೂ ಸಕಾರಣವಾಗಿ ಸ್ಪಷ್ಟಪಡಿಸಿದರು. ಅವಸರದಿಂದ ಕೆಲಸಗಳನ್ನು ಮಾಡಿ ಕೆಡಿಸಿ ಅಪಯಶವನ್ನು ಸಂಪಾದಿಸುವುದಕ್ಕಿಂತ ಕ್ರಮವಾಗಿ ಮುಂದರಿಯುತ್ತಿ ಜಾಗ್ರತೆಯಿಂದ ಕೆಲಸ ಮಾಡುವುದು ಉತ್ತಮವೆಂದೂ ತನ್ನ ಸಲಹೆಯಿಂದ ಗ್ರಂಥಮಾಲೆಯ ಸಂಪಾದಕರಾದ ತನ್ನ ಶಿಷ್ಯರಿಗೆ ಎಚ್ಚರಿಸಿದರು. ಆ ಬಳಿಕ ಸಭೆಯು ಸಭಾ ಸತ್ಕಾರ, ಧನ್ಯವಾದ, ಪತ್ರಪುಷ್ಪ ಇತ್ಯಾದಿಗಳು ಮುಗಿದ ತರುವಾಯ ವಿಸರ್ಜ ಮಾಡಿತು.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು — ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಗ್ಧಿಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.



Distributors for South Kanara —

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**ಗಳನ್ನು ಉಪಯೋಗಿಸಲಿಕ್ಕೆ

ಜೀವನದ ಜಯಶೀಲತೆಯು, ಪಿನಾಯನ್ನೇರಿ ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಟಿನ್ನೊಂದಕ್ಕೆ ರೂ. 1

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಿಪ್ಪಾಲು ಹಾಸಲು ವಿನತ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

Agent —Shah Company MANGALORE
Pearl & Sons MANGALORE

Atank Nigrah Pharmacy
Chickpet, Bangalore
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್ ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು

ಸಾಮಾನ್ಯ ವಿಜ್ಞಾನ — ಅಜ್ಜ ಕಥೆಗಳು (ಸಚಿತ್ರ.)

ಚರಿತ್ರೆ ಮತ್ತು ಕಥೆಗಳು.	ರೂ ಆ ಪೈ	ಸಾಮಾನ್ಯ ವಿಜ್ಞಾನ.	ರೂ ಆ ಪೈ
ನಾಲ್ಕನೇ ದರ್ಜೆ	0 6 0		
ಮೂರನೇ ,,	0 4 6	ಎರಡನೇ ದರ್ಜೆ	0 4
ಎರಡನೇ ,,	0 4 0		
ಸಮಾಜಶಾಸ್ತ್ರ		ಮೂರನೇ	[illegible]
ಐದನೇ ದರ್ಜೆ	0 8 0		
ನಾಲ್ಕನೇ ,,	0 8 0	ನಾಲ್ಕನೇ ,,	0 5 0
ಮೂರನೇ ,,	0 2 6		
		ಐದನೇ	0 6 0

(ಇವುಗಳ ಕ್ರಯ 1ಕ್ಕೆ 0 0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ' ಕ್ರಯ ರೂ 1

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳ, ರಸೀದಿ ಪುಸ್ತಕಗಳ ಇತರ ಪುಸ್ತಕಗಳ ಒಳ್ಳೆಯ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸ ಬೇಕಾದರೆ—

ಶಾರದಾ ಛಾಪಖಾನೆ, ಮಂಗಳೂರು.

ಶಿವರಾಮ ಕಾರಂತ ವಿರಚಿತ

ಗ್ನಾನ

ಜ್ಞಾನದ ಮೇಲೆ ವ್ಯಂಗ ಟೀಕೆ.

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ

ದಪ್ಪಗಿನ ಆಂಟಿಕ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ.

ಕ್ರೌನ್ ಆಕಾರದ ೧೪೩ ಪುಟಗಳು.

ಉತ್ತಮ ತರದ ಹಾಸ್ಯ.

ಬೆಲೆ 1-4-0

ಶಾರದಾ ಛಾಪಖಾನೆ, ಮಂಗಳೂರು.

ಇವರಿಂದ ಪಡೆಯಬಹುದು.

NOTE..., S
ನೋಟಗಳು.

(ಬರೆದು ಬಂದುದು)

ಹಿಂದಿನ ತಾಲೂಕು ಬೋರ್ಡು ಶಿಬ್ಬಂದಿಗಳಲ್ಲಿ ಕೆಲವರನ್ನು ಕಡಿತ ಮಾಡುವ ಪ್ರಸಂಗವು ಬಂದಿತು ಒಬ್ಬಿಬ್ಬರ ಸರ್ವಿಸು ಕಡಮೆಯಾಗಿ ಹಿಂದುಳಿದರು ಆದರೆ ಅವರಿಗಿಂತ ಸರ್ವಿಸು ಸೊನ್ನೆಯಾದ ಹಂಗಾಮಿಯಾದರೂ ಈ ಮೊದಲೊಮ್ಮೆ ಬೋರ್ಡಿನವರಿಂದ ಡಿಸ್ಮಿಸ್ ಆದವರೂ ಉಳಿದುಕೊಂಡರು. ವ್ಯಕ್ತಿ ಪಕ್ಷಪಾತವು ಪ್ರಗತಿಹೊಂದಬೇಕು

\+ + + +

ನಮ್ಮಲ್ಲಿನ ಸಮಾಜ ಸಮತಾವಾದಿಗಳು, ಸ್ತ್ರೀಪುರುಷ ಸಮತೆಯನ್ನು ಕಲ್ಪಿಸುವ ಸಲುವಾಗಿ ತುಂಬಾ ಪರಿಶ್ರಮ ವಹಿಸುತ್ತಿರುವರಂತೆ ಸಂತೋಷ.

\+ + + +

ಮಡಿಕೇರಿಯ ಬಳಿ ಒಂದು ರಾಜಕೀಯ ಪರಿಷತ್ತಾಯಿತು ನಮ್ಮ ಮುಂದಾಳುಗಳು ಕೆಲವರು ಅಲ್ಲಿಗೆ ಹೋಗಬೇಕಿತ್ತು ಕೊನೆಗೆ ಆ ಹಾದಿಯಾಗಿ ಹೋದರೂ, ತಮ್ಮ ಅನಾವಶ್ಯಕವಾದ ಸಮಯವನ್ನು ಹೆಡ್ಡು ಜನರ ಪರಿಷತ್ತಿಗೆ ವಿನಿಯೋಗಿಸಬಾರದೆಂದು ನೇರಾಗಿ ಮೈಸೂರಿಗೆ ಹೋದರು ರಾಷ್ಟ್ರಸೇವೆಯ ಮೇಲೆ ಎಂಥ ಪ್ರೇಮ

\+ + + +

ಹಿಂದಿನ ವಾರ್ತೆಯಂತೆ ನಮ್ಮವರಲ್ಲೊಬ್ಬರು ರಾಜೇಂದ್ರ ಬಾಬುಗಳೊಡನೆ ಸಂಚರಿಸಿ, ಅವರ ಉಪನ್ಯಾಸವನ್ನು ಕನ್ನಡಿಸಿ ಜಿಲ್ಲೆಯವರಿಗೆ ತುಂಬಾ ಉಪಕಾರ ಮಾಡಿದ್ದಾರೆ ಅವರ ಅನುವಾದದ ಭರದಲ್ಲಿ-ಮೂಲ ಉಪನ್ಯಾಸಕರ ಆಶಯ ಅರ್ಥಗಳೆರಡೂ 'ಕದ್ದಾ ಬದ್ಲಿ' ಯಾಯಿತಷ್ಟೆ ಬುಲ್ ವರ್ಕನ್ನು ಎತ್ತಿನ ಗಾಡಿಯಾಗಿ ಓಡಿಸಿಬಿಟ್ಟರು ಆದರೊಂದು-ರಾಜೇಂದ್ರ ಬಾಬುಗಳಿಗೆ ಕನ್ನಡ ಗೊತ್ತಿಲ್ಲ ಹಳ್ಳಿಯ ಜನರಿಗೆ ಬಾಬುಗಳ ಉಪನ್ಯಾಸವಾದರೂ ಸರಿಯೇ ನಮ್ಮವರೊಬ್ಬರ ಅರ್ಥವಾದರೂ ಸರಿಯೇ

\+ - +

ಜಿಲ್ಲಾ ಬೋರ್ಡಿನ ಮೇಲಿಂದ ಒಂದು ಉಪದೇಶ ಬಂದಿದೆಯಂತೆ ಇನ್ನು ಮುಂದಿನ ನೌಕರಿ ನೇಮಕಗಳು ಹಿಂದುಳಿದವರಿಗೆ ಜಾಸ್ತಿಯಾಗಿ ಸಲಬೇಕೆಂದು ಅವರ ಉಪದೇಶವಾಗಿದೆ ಹಿಂದುಳಿದವರೆಂದರೆ—ರು ಎಂಬುದು ಇನ್ನು ಮುಂದೆ ತಿಳಿದೀತು

\+ + + +

ಮೊನ್ನೆ ದಿವಸ ಗವರ್ನಮೆಂಟು ಕೊಲೇಜಿನಲ್ಲಿ ಶ್ರೀ। ಬಂಡ್ಯೋಪಾಧ್ಯಾಯರಿಂದ ತರಬೇತಿಯಾದ ಉಪಾಧ್ಯಾಯರ ವ್ಯಾಯಾಮ ಪ್ರದರ್ಶನವಾಯಿತು ಅವರು ಒಂದೆರಡು ದಿನ ಇಲ್ಲವೆ ರ್ ಬಗಳ ಅಭ್ಯಾಸ ಪಡೆದಿದ್ದಾರೆ ಅವರ ಪ್ರದರ್ಶನ ನೋಡಲು ಜನರಾದರೂ ಬರುತ್ತಿದ್ದರು

\+ + +

ಇನ್ನು ಪ್ರದರ್ಶನದ ವಿಚಾರ—ಈ ಹೊಸ ಬಗೆಯ ಯಜ್ಞಗಳು ಆಗಾಗ ನಡೆಯಬೇಕು ಆದರೆ ಇಷ್ಟು ಕಡಮೆ ದಿವಸಗಳ ಶಿಕ್ಷಣವು ಕೆಲಸಕ್ಕೆ ಬಾರದು ವಿದ್ಯಾರ್ಥಿಗಳ ಶರೀರ ಚಲನೆಯ ನ್ಯೂನಾತಿರಿಕ್ತಗಳ ಕಡೆಗೆ ಗಮನ ಕೊಡಲು ಬರುವಂತಿಲ್ಲ ಬೋರ್ಡಿನ ಈ ಆರಂಭಕ್ಕೂ, ಶಿಕ್ಷಕರ ಉತ್ಸಾಹಕ್ಕೂ ಇನ್ನೂ ಹೆಚ್ಚಿನ ಯಶವು ಸಿಗುತ್ತ ಬರಲಿ

\+ + + +

ಕಲಾರಾಜ್ಯದಲ್ಲಿ ನವೀನ ಕ್ರಾಂತಿಯೊಂದು ಉಂಟಾಗಲಿದೆಯೆಂಬುದು ಸಂತೋಷ ಕರ್ನಾಟಕ ನಾಟಕ ಕೇಸರಿ, ವಿಶಾರದ ಪ್ರವೀಣ, ಇತ್ಯಾದಿ ಬಿರುದಾಂಕಿತರಾದ ಗುಬ್ಬಿ ವೀರಣ್ಣನವರ 'ಸದಾರಮೆ'ಯು ಟಾಕಿಯಾಗುವುದರಲ್ಲಿದೆ ಉಳಿದ ನಾಟಕ ಕಂಪೆನಿಯವರು ತಮ್ಮಲ್ಲಿನ ಯುವತೀ ವಿಜಯ, ಅವಂತಿ, ಸುಂದರಿ ಪರಿಣಾಮ, ಪ್ರಭಾವತಿ ದರ್ಬಾರು—ಎಂಬ ಹೊಸ ನಾಟಕಗಳನ್ನು ಟಾಕಿ ಮಾಡಿದರೆ ಕಲಾದೇವಿಯ 'ತಲೆ-ಸಿದಂತಾದರೂ ಆದೀತು

\+ + + +

ಶ್ರೀ। ಮುತ್ತಯ್ಯ ಭಾಗವತರ ಪ್ರಥಮ ಫಿಲ್ಮನ್ನು 'ಹಿಂದೂ' ಪತ್ರಿಕೆಯಂಥ ಪತ್ರಿಕೆಯೇ ಅಟ್ಟಕ್ಕೇರಿಸಿರಲು, ನಮ್ಮ ಸದಾರಮೆಯ ಗುಣಗಾನವು ಇನ್ನು ಪತ್ರಿಕೆಗಳಲ್ಲಿ ತುಂಬಲು ಆಶ್ಚರ್ಯವಿಲ್ಲ

\+ + + +

ಜಿಲ್ಲಾ ಬೋರ್ಡು ಬೈಂದೂರಿನಿಂದ ಕೊಲ್ಲೂರಿಗೆ ಹೋಗುವ ಹಾದಿಯಲಿರುವ ಎರಡು ಹಳ್ಳಿಗಳಿಗೆ ಸೇತು ರಚಿಸಲು ನಿರ್ಧರಿಸಿದ್ದಾರೆ ನಮ್ಮ ಎಂಜಿನಿಯರರು ಚುರುಕಾಗಿ ಕೆಲಸ ಮಾಡಿದರೆ ಆ ಕಡೆಯ ಜನರಿಗೆ ಇನ್ನಿಲ್ಲದ ಕೆಲಸಮಾಡಿದಂತಾದೀತು

\+ + + +

ಪೆಟ್ರೋಲು ಸುಂಕದಿಂದ ದೊರೆಯುವ ಮುನಾಫೆಯಲ್ಲಿ ಸರಕಾರವು-ಅಂತಪ್ರಾಂತಿಕ ರಸ್ತೆಗಳ ಅಭಿವೃದ್ಧಿಗೆ ಗ್ರ್ಯಾಂಟ ಕೊಡುವ ವಾಡಿಕೆಯಿದೆಯಂತೆ ಅದರ ಲಾಭವನ್ನು ನಮ್ಮ ಬೋರ್ಡು ಪಡೆದರೆ ಪಾಸಿಯಲ್ಲವೆ ಇತ್ತ ಮುಂಬಾಯಿ ಪ್ರಾಂತ ಅಂತದ್ದೇ ಸೂರಗಳನ್ನು ಕೂಡಿಸುವ ಹಾದಿಗಳಾದರೂ ಮೇಲೆ ಬರಬಹುದು ಆದರೆ ಎಸ್ಟಿಮೇಟ ತಯಾರಿಸಲು ಎಂಜಿನಿಯರು ಸಾಲದೆ ಈ ಯಂಗವೆಲ್ಲ ಕಣ್ಣಗಿರಬೇಕಾದೀತೋ ಏನೋ

\+ + + +

ಶ್ರೀ ಕಾರ್ಕಳ ಕಾಂಗ್ರೆಸ್ಸಿನ ಅಧ್ಯಕ್ಷರು ಜಬಲಿಗೂ ಮಂತಿಗೆ ಕೊಟ್ಟರಂತೆ ಕಾಂಗ್ರೆಸು ರಕ್ಷೇಪವೆತ್ತಿತಂತೆ ಕೊನೆಗೆ ಹಾವು ಸಾಯಬಾರದು ಕೋಲು ಮುರಿಯಬಾರದ ಎಂಬ ನ್ಯಾಯಕ್ಕೆ ಸರಿಯಾಗಿ ಮತಿಗೆ ಕೊಟ್ಟವರ ಅಧ್ಯಕ್ಷರಲ್ಲಿ ಅವರ ಪತ್ರಿಕೆಯ ಜನರು ತಿಳಿದರೆ-ಈ ಉಭಯ ಸಂಕಟ ತ್ರೀತೆ ದು ಯೋಚಿಸಿದ್ದಾರೆ ಇದ ರಾಜತಂತ್ರ

ಜಿಲ್ಲಾ ಕೊಂಗ್ರೆಸ್ ಕಮಿಟಿ

ಮತ್ತು

ದೇಶಭಕ್ತ ಗಂಗಾಧರ ರಾವ್ ದೇಶಪಾಂಡೆಯವರೊಳಗೆ ವಿವಾದವೆದ್ದಿದೆ!!!

ಮಂಗಳೂರಿನ ಕರ್ನಾಟಕ ರಾಜಕೀಯ ಪರಿಷತ್ತು ನಡೆದ ಕೆಲವು ದಿನಗಳಲ್ಲಿ 'ಸಂಯುಕ್ತ ಕರ್ನಾಟಕ'ದಲ್ಲಿ ದೇಶಭಕ್ತ ಗಂಗಾಧರ ರಾಯರು ತಮ್ಮ ಅಭಿಪ್ರಾಯವನ್ನು ಹೀಗೆಂದು ಪ್ರಕಟಿಸಿರುವರು -

'ಜಬಲಪುರದಿಂದ ಮರಳಿ ಬಂದಾಗಿನಿಂದ ನನ್ನ ಆರೋಗ್ಯವು ಸರಿಯಾಗಿಲ್ಲವಾದುದರಿಂದ ಮಂಗಳೂರಿನ ಪರಿಷತ್ತಿಗೆ ಹೋಗುವುದು ನನಗೆ ಅವಶ್ಯಕವಾಗಲಿಲ್ಲ ಅಲ್ಲಿ ಪಾಸಾದ ಗೊತ್ತುವಳಿಗಳ ಸಮಗ್ರವೃತ್ತಾಂತವೂ ನನಗೆ ಗೊತ್ತಾಗಿಲ್ಲ ಆದರೆ ವೃತ್ತಪತ್ರಗಳಲ್ಲಿ ಇದುವರೆಗೆ ಪ್ರಸಿದ್ಧವಾಗಿರುವ ರಿಪೋರ್ಟುಗಳನ್ನು ನೋಡಿದರೆ ಮಂಗಳೂರಲ್ಲಿ ಪಾಸಾದ ಕೆಲವು ಗೊತ್ತುವಳಿಗಳು ವಿಶೇಷತಃ ಸಂಸ್ಥಾನಗಳನ್ನು ಕಿತ್ತುಹಾಕುವಿಕೆ, ಯುದ್ಧ ವಿರೋಧಕ ಆಂದೋಲನ ಹೂಡುವಿಕೆ, ಭಾವೀ ರಾಜ್ಯಘಟನೆಯನ್ನು ತಿದ್ದುವಿಕೆ ಇವೇ ಮುಂತಾದ ಗೊತ್ತುವಳಿಗಳು ಅನವಶ್ಯಕವೂ ಅಪ್ರಾಸಂಗಿಕವೂ ಕಾಂಗ್ರೆಸ್ಸಿನ ಸದ್ಯದ ಧೋರಣಕ್ಕೆ ವಿಸಂಗತವೂ ಆಗಿವೆಯೆಂದ ಹೇಳದಿರಲಾರೆನು ಪ್ರಾಂತಿಕ ಪರಿಷತ್ತು ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಘಟಕವೇನೂ ಅಲ್ಲ ಆದುದರಿಂದ ಅಲ್ಲಾಗುವ ನಿರ್ಣಯಗಳ ಪ್ರಾಂತಿಕ ಕಮಿಟಿಗೆ ಬಂಧನಕರವಾಗುವುದಿಲ್ಲ ಮೇಲಾಗಿ, ಮಂಗಳೂರಿನ ಪರಿಷತ್ತು ಪ್ರಾತಿನಿಧಿಕವಾಗಿತ್ತೆಂದೂ ಹೇಳಲಿಕ್ಕೆ ಬರುವಂತಿಲ್ಲ ಕೆಲವು ಜಿಲ್ಲೆಗಳ ಪ್ರತಿನಿಧಿಗಳಂತೂ ಅಲ್ಲಿ ಹೋಗಿಯೇ ಇದ್ದಿಲ್ಲ ಮಂಗಳೂರಿನ ಹೊರತು ಬೇರೆ ಯಾವ ಜಿಲ್ಲೆಯ ಪ್ರಾತಿನಿಧ್ಯವೂ ಅಲ್ಲಿ ತಕ್ಕ ಪ್ರಮಾಣದಲ್ಲಿ ಇದ್ದಿಲ್ಲ ಮಂಗಳೂರಿನಲ್ಲಾದ ಗೊತ್ತುವಳಿಗಳ ವಿಷಯಕ್ಕೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಲ್ಲಿ ಯಥಾಕಾಲಕ್ಕೆ ಚರ್ಚೆಯಾಗಬಹುದು. ಈ ಪ್ರಾಂತ್ಯದಲ್ಲಿರುವ ಕಾಂಗ್ರೆಸ್ಸಿನ ಅಧಿಕೃತ ಸಂಸ್ಥೆಯ ಭಾವೀ ಧೋರಣವೂ ಆಗ ನಿಶ್ಚಯಿಸಲ್ಪಡಬಹುದು''

ಅವರ ಈ ಅಭಿಪ್ರಾಯಕ್ಕೆ ಉತ್ತರವಾಗಿ ದಕ್ಷಿಣ ಕನ್ನಡ ಜಿಲ್ಲಾ ಕೊಂಗ್ರೆಸ್ ಕಮಿಟಿ ಮಂಗಳೂರು, ಇವರು ನಮಗೆ ತಾರೀಕು ೨೨-೫-೩೫ನೇ ದಿನ ಇಂಗ್ಲಿಷಿನಲ್ಲಿ ಬರೆದು ಕಳುಹಿಸಿದ ಒಂದು ಪತ್ರದಲ್ಲಿ ಹೀಗೆ ತಿಳಿಸಿದ್ದಾರೆ -

'ತಾ ೧೪-೫-೩೫ನೆಯ ತನ್ನ ಪತ್ರದಲ್ಲಿ ಶ್ರೀ। ಗಂಗಾಧರ ದೇಶಪಾಂಡೆಯವರು, ಕರ್ನಾಟಕ ಪ್ರಾಂತಿಕ ರಾಜಕೀಯ ಪರಿಷತ್ತಿನ ಕುರಿತು ಕೆಲವು ಅಭಿಪ್ರಾಯಗಳನ್ನು ಸೂಚಿಸಿರುತ್ತಾರೆ ಅವರಂತಹ ಅನುಭವಶಾಲಿ ಧುರೀಣರು ಠರಾವುಗಳ ಮೂಲಶಬ್ದಗಳನ್ನು ಪಡೆಯಲು ಯತ್ನಿಸದೆ ಅವುಗಳ ಮೇಲೆ ತನ್ನ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿರುವುದು ಖೇದಕರವಿದೆ ಈ ಠರಾವುಗಳು ಕೊಂಗ್ರೆಸ್ಸಿನ ಕಾರ್ಯಕಾರಿ ಮಂಡಳಿಯ ಈಗಣ ಧೋರಣಕ್ಕೆ ವಿರೋಧವೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ ರಾಜಕೀಯ ವಿಚಾರಪರರಾದ ಜನರ ಆಗಾಗಿನ ಅಭಿಪ್ರಾಯ ಪರಿವರ್ತನೆಯನ್ನು ತೋರಿಸಿಕೊಡುವುದು ಪರಿಷತ್ತಿನ ಕರ್ತವ್ಯವಾಗಿದೆ ಅಂತಹ ಭೇದಗಳನ್ನು ತೋರಿಸಿಕೊಟ್ಟುದನ್ನು ಸ್ವೀಕರಿಸಿದುದರಿಂದಾಗಿಯೇ ಕೊಂಗ್ರೆಸ್ಸು ಈಗಿನ ಸ್ಥಿತಿಗೆ—ಪ್ರಾತಿನಿಧಿಕ ರಾಜಕೀಯ ಸಂಸ್ಥೆಯ ರೂಪಕ್ಕೆ—ಬಂದಿದೆ ಠರಾವುಗಳ ಕುರಿತಾಗಿ ಶ್ರೀ ಗಂಗಾಧರ ರಾಯರು ತನ್ನ ವೈಯಕ್ತಿಕ ಅಭಿಪ್ರಾಯಗಳನ್ನು ಸ್ಪಷ್ಟೀಕರಿಸುವ ಅವರ ಹಕ್ಕನ್ನು ಯಾರೂ ಅಲ್ಲವೆನ್ನುವುದಿಲ್ಲ ಆದರೆ ಕೊಂಗ್ರೆಸ್ಸಿನ ರಚನೆಯಲ್ಲಿ ಆಗಬೇಕಾದ ಕೆಲವು ಬದಲಾವಣೆಗಳನ್ನು ಸೂಚಿಸಿದುದು ಅವರ ಅಭಿಪ್ರಾಯದ ಮೇರೆಗೆ-ಅನುಚಿತ ಮತ್ತು ಅಕಾಲಪ್ರಾಪ್ತವಾದುದು ಆಶ್ಚರ್ಯಕರ ಬದಲಾವಣೆಯನ್ನು ಸೂಚಿಸಿರುವುದು ಒಂದೇ ಒಂದು ವಿಷಯವಾಗಿ ದೇಹಶ್ರಮದ ಕ್ರಮವನ್ನು ದೇಹಶ್ರಮ ಮಾಡುವ ಕೆಲಸಗಾರರಿಗೆ ಅನ್ವಯಿಸಬಾರದೆಂದು ಕೊಂಗ್ರೆಸ್ಸಿನ ಎಕ್ಸಿಕ್ಯೂಟಿವ್‌ಗೆ ಸದಸ್ಯನಾಗಿ ಆರಿಸಲ್ಪಡಬೇಕಾದರೆ ಒಬ್ಬ ದೇಹಶ್ರಮ ಮಾಡುವ ಕೆಲಸಗಾರನು ೮ ಗಂಟೆ ಹೆಚ್ಚಿಗೆ ಕೆಲಸ ಮಾಡಬೇಕೆಂದ ನಿರೀಕ್ಷಿಸಿದುದು ಬಹು ಕ್ರೂರವಾಗಿದೆ ಕೊಂಗ್ರೆಸ್ಸಿನ ಕಾರ್ಯಕಾರೀ ಮಂಡಲಿಯನ್ನು ಶ್ರೀಮಂತರೂ ಮಧ್ಯಮ ವರ್ಗದವರೂ ಆಕ್ರಮಿಸಿಕೊಂಡಿರಬೇಕೆಂದೂ, ಶ್ರಮಜೀವಿ ವರ್ಗದವರು ಹೊರಗೆಯೇ ಇರಬೇಕೆಂದೂ ಶ್ರೀ। ಗಂಗಾಧರ ರಾಯರ ಯೋಚನೆಯಿದ್ದಂತೆ ತೋರುತ್ತದೆ ಹಾಗಿದ್ದರೆ ನಮ್ಮ ಕೆಲವು ಧುರೀಣರೆಂಬವರು ಇನ್ನೂ ಯಾವ ಭಾವನೆಯಲ್ಲಿರುವರೆಂದು ತಿಳಿಯಲು ಒಂದು ಸಂದರ್ಭವನ್ನೊದಗಿಸಿ ಕೊಟ್ಟುದಕ್ಕಾಗಿ ಪರಿಷತ್ತು ಅಭಿನಂದನಾರ್ಹವಾಗಿದೆ ಈ ಟೀಕೆಯು ಠರಾವುಗಳ ಸರಿಯಾದ ಶಬ್ದಗಳನ್ನರಿಯದೆ, ಅಕಾಲಪ್ರಾಪ್ತವಾಗಿ ಹೊರಟಿರುವುದೊಂದೇ ನಮ್ಮ ಸಮಾಧಾನಕ್ಕೆ ಕಾರಣವಾಗಿರುತ್ತದೆ. ಎಷ್ಟು ದೊಡ್ಡ ವ್ಯಕ್ತಿಯೇ ಇರಲಿ, ಪ್ರಾಂತಿಕ ಪರಿಷತ್ತಿನಿಂದ ಭಿನ್ನಾಭಿಪ್ರಾಯವನ್ನುಳ್ಳವನೆಂದೊಡನೆ ಅವನು ಅಂತಹ ಅಭಿಪ್ರಾಯಗಳು ಕೊಂಗ್ರೆಸ್ಸಿನ ಅಥವಾ ಪ್ರಾಂತ್ಯದ ಅಭಿಪ್ರಾಯಗಳಲ್ಲವೆಂದು ಹೇಳಬಹುದೆಂದೆಣಿಸಿಕೊಳ್ಳುವುದು ತೀರ ಭ್ರಮೆಯಾಗಿದೆ ಕಲ್ಪನೆಗೆ ಅಸ್ಪಷ್ಟದ ನೆಪವು ಸಾಧಾರವಾಗಿಲ್ಲ ಅಥವಾ ಪರಿಷತ್ತಿನಿಂದ ದೂರವಿರುವವರಿಗೂ ಅದೊಂದು ನೆಪವಾಗುವುದಿಲ್ಲ '

Canara Bank, Limited.

Bunder-Mangalore

ಕೆನರಾ ಬೇಂಕ್ ಲಿಮಿಟೆಡ್,

ಬಂದರ್, ಮಂಗಳೂರು

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದರು ಸದರಿ ಬ್ಯಾಂಕಿನಿಂದ ಆಭರಣಗಳ ಆಧಿನ ಮೇಲೆ ಪಡೆದ ಮೊಬಲಗ ವ್ಯಾದೆಗೆ ಕೊಡದೆ ಇದ್ದುದರಿಂದ ಸದರಿಯವರಿಗೆ ತಾ 2-5 85ರಲ್ಲು ಕೊಟ್ಟ ರಿಜಿಸ್ಟ್ರಿ ನೋಟೀಸು ಈ ವರೆಗೆ ಜಾರಿಯಾಗದೆ ವಾಪಾಸು ಬಂದುದರಿಂದ ಸದರಿಯವರ ಇಡಿಟ್ಟ ನಗಗಳನ್ನು ತಾರೀಕು 26-೬-85ನೇ ಮಂಗಳವಾರ ಮಧ್ಯಾಹ್ನ ಘಂಟೆ 2ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವವು

ಹೆಸರು Thakkar Purushotham Kalhange Esq. Residing in Chacklar's Street Mangalore

ಅಡವಿಟ್ಟ ತಾ 16-2-1984

ಸಾಲದ ಮೊಬಲಗು ರೂ 175-0 0

ಏಲಮಿಗೆ ನಿಶ್ಚಯಿಸಿದ ತಾರೀಕು ವರೆಗೆ ಬಡ್ಡಿ ಸಮೇತ ರೂ 192—5—0

ಬೇಂಕಿನ ಆಫೀಸ 31-5-1935 | K Venkat Rao, ಏಜಂಟ್

ವಸ್ತ್ರಗಳು ಬಿಳಿ—ಒಗೆಯಲು ಸುಲಭ

ಸಾಮಾನ್ಯ ಮನೆಯ ಉಪಯೋಗಕ್ಕೂ ಸಿಲ್ಕು ಉಣ್ಣೆಗಳನ್ನು ತೊಳೆಯುವುದಕ್ಕೂ ಸ್ವಸ್ತಿಕಾ ಸುಪರ್‌ಫೈನ್ ಸಾಬೂನಿಗಿಂತ ಉತ್ತಮವಾದುದು ಬೇರೆ ಇಲ್ಲ ವಸ್ತ್ರದ ನೇಯ್ಗೆಯನ್ನಾಗಲೀ, ಕೈಯನ್ನಾಗಲೀ ಅದು ಕೆಡಿಸುವುದಿಲ್ಲ ಸನ್ನಜನ್ನ ಎಣ್ಣೆಗಳಿಂದಲೇ ಇದನ್ನು ತಯಾರಿಸಲಾಗಿದೆ

ಸ್ವಸ್ತಿಕಾ ಸುಪರ್‌ಫೈನ್ ಸಾಬೂನು.

ದಕ್ಷಿಣ ಕನ್ನಡ ಜಿಲ್ಲಾ ಏಜಂಟರು—ಎಸ್. ಎನ್. ವಿನಾಯಕ್ ಎಂಡ್ ಕೋ, ಮಂಗಳೂರು. ಉತ್ತರ ಕನ್ನಡ ಏಜಂಟರು—ಎಸ್ ಎಸ್. ರಂಗ್ಸೇಟ್, ೬೬ ಆಫೀಸು ಹಳಿಯಾಳ್.

ಅಗ್ರಗಣ್ಯ ಸಂಗೀತಜ್ಞರು ಅದರ ಪ್ರಶಂಸಾಗಾನವನ್ನ ಮಾಡಿದ್ದಾರೆ.

ಮುಸಿರಿ ಸುಬ್ರಹ್ಮಣ್ಯ ಐಯ್ಯರ್, 6 ಒಲಿವರ್ ರೋಡ್, ಮೈಲಾಪುರ ಮದ್ರಾಸು

ಅನೇಕ ಸಮಯದಿಂದ ನನ್ನ ಕುಟುಂಬದವರೆಲ್ಲ 'ಕೇಶವರ್ಧಿನಿ'ಯನ್ನು ಬಿಡದೆ ಉಪಯೋಗಿಸುತ್ತಿರುವರೆಂದು ತಿಳಿಸಲು ಸಂತೋಷಿಸುತ್ತೇನೆ, ಉದುರುವ ಕೂದಲನ್ನು ತಡೆಯುವ ಅದರ ಶಕ್ತಿಯನ್ನು ಪೂರ್ಣವಾಗಿ ತಿಳಿದು, ಅಲ್ಲದೆ ಕೂದಲನ್ನು ಅದು ಬೆಳೆಯಿಸುವ ಅದರ ಗುಣವನ್ನು ಅರಿತು ಅದರ ಅದರ ಗುಣಗಾನವನ್ನು ಮಾಡಿ ಸ್ನೇಹಿತರಿಗೂ ಅದನ್ನು ಶಿಫಾರಸು ಮಾಡುತ್ತಾರೆ

ಕೇಶಗಳಿಗೂ, ಮೆದುಳಿಗೂ ಸಮರ್ಪಕವಾದ ಎಣ್ಣೆಯೊಂದು ಅಗತ್ಯವಿರುವವರು ಇದನ್ನುಪಯೋಗಿಸಬಹುದೆಂದು ನಾನು ಶಿಫಾರಸು ಮಾಡುತ್ತೇನೆ

(ಸಹಿ) ಮುಸಿರಿ ಸುಬ್ರಹ್ಮಣ್ಯ ಅಯ್ಯರ್.

ಬೋಳು ತಲೆಯವರಾಗಿರಬೇಡಿ ಅಥವಾ ತಲೆಕೂದಲು ಅಪಕ್ವ ಸಮಯದಲ್ಲಿ ಬಿಳಿದಾಗದಂತೆ ನೋಡಿ

ಬಾಟ್ಲಿ 1 ಕ್ಕೆ ಆಣೆ 12. 'ಕೇಶವರ್ಧಿನಿ' ಪೇಕಿಂಗ್ ಮತ್ತು ಅಂಚೆವೆಚ್ಚ ಪ್ರತ್ಯೇಕ

ಜೆಟ್ಟಿನ ವಿವರ ವ್ಯಾಪಾರಿಗಳಲ್ಲಾಗಲೀ ಅಥವಾ ಈ ವಿಳಾಸದಲ್ಲಾಗಲೀ ಸಿಗುವುದು —

South India Chemicals, 11/7 ... Mylapore Madras

ನಮ್ಮ ಪ್ರವರ್ತಕರು—ಬೊಸ್ಟ್ಯಾನ್ ಸ್ಟೋರ್ಸ್ ರಥಬೀದಿ ಮಂಗಳೂರು

Old! Famous!

East & West Insurance Co., Limited.

Bonus Declared Rs 15/- Per Thousand Per Annum

Insurance in Force About	Rs 90,00,000
Annual Premium Income Over	Rs 4,50 000
Life Fund Over	Rs 7,00 000

Prompt Settlement of Claims

Low Rates of Premium and Various Attractive Plans.

Attractive and liberal agency contracts are offered to honest, influential gentlemen

Inquiries Solicited.—

Messrs Padubidri Bros, *Chief Agents* Padubidri BOMBAY

OR

Head Office East & West Buildings, Apollo Street, Fort Bombay

ಪ್ರಶಂಸೆ.

ಪ್ರಖ್ಯಾತ ಅಮೆರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ

ವಿ-ಮೊ-ಲ

VIM-O-LA

ಅಮೆರಿಕಾದ ಜೀವಸಾರ ವಸ್ತು.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಸಲ ಕಾರೀ ಔಷಧಿ ಹೊಟ್ಟೆಯಲ್ಲಿ ಚಿಂತಿಸಂತೇಳುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಿಗೊಳಿಸುವ ಶಕ್ತಿವರ್ಧಕ ಪಾನೀಯ. ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ. ಬಾಟ್ಲಿ 1 ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟೋಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ

Vimola Depot'

... ...

American Herbal Products Co.,

Sole ... ...

The Manager

The National Kanara News Agency,

Sir Pherozsha Mehta Road

Fort Bombay

1¼ CRORE

Karnatics

now nothing

of your

products.—

Advertise them

in

Swadeshabhimani

the pioneer

Weekly of the

South Kanara District

For Advertisement rates apply to

The Advertisement Manager,

Swadeshabhimani,

Mangalore

Invitation.

For all kind of printing please come to

The Sharada Press

... Street

Mangalore S. K.

ಲೇಡಿಸ್ ಬಾಂ

ಸ್ತ್ರೀಯರ ಜೀವನಾಧಾರ

[illegible] ಗರ್ಭಕೋಶದ [illegible] ಸಾಧಾರಣ ಕ್ರಯವಿರುವ ಮತ್ತು ಅವರ ಅನೇಕ ತರದ ಗುಪ್ತರೋಗಗಳನ್ನು [illegible] ಗುಣವನ್ನು [illegible]

ಉಪಯೋಗಿಸಿದವರ ಅಭಿಪ್ರಾಯ —

[illegible] "I found your Ladies Balm worth the money I spent on it."

[illegible]

ತಯಾರಿಸುವವರು.—ದಿ ಬಿಹಾರ್ ಕೆಮಿಕಲ್ ವರ್ಕ್ಸ್, ಬಾಗಲಪುರ.

ಏಜಂಟರು —ಷಹಾ ಕಂಪೆನಿ, [illegible]

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ.

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು.

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

	ಕೆಲಸದ ಫಲಿತಾಂಶ.	ಲೈಫ್ ಫಂಡ್
1925—	ರೂ 21,24 250	500
1929—	ರೂ 1,66,18 620	9,32 900
1934—	ರೂ 46,77 323	19 08 771

ಕ್ಲೈಮನ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ ಕಂಪೆನಿಯ ಆಸ್ತಿ—57,00,000ಕ್ಕೆ ಮೀರಿದೆ. 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ ಲಾಭಹೊಂದಬೇಕಾಗಿದೆ ಜೀವವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ ಲಕ್ಷ್ಮಿಯಲ್ಲಿವೆ.

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co, Ltd, *Madras Branch,* No. 6, Sunkuram Chetty St, G T MADRAS

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್, ಮದ್ರಾಸು ಶಾಖೆ, ನಂಬ್ರ 6 ಸಂಕುರಾಮ ಚೆಟ್ಟಿ ಬೀದಿ, ಜಿ. ಟಿ. ಮದ್ರಾಸು

The Canara Banking Corporation Udipi, Ltd.

Head office:—UDIPI, S. K. (Incorporated in British India) Tel.—'BANKING' **ESTD. 1906.**

Branches:—1. Udipi, 2 Coondapoor, 3 Car Street, Mangalore, 4 Shimoga, 5. Madras, 6. Bunder Mangalore, 7. Mercara

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟ ದೇಶೀಯ ಸಾರ್ವಜನಿಕ ಮೊದಲನೇ ಬೇಂಕು ಇದೇ ಆಗಿರುತ್ತದೆ

ಅಧಿಕೃತ ಮ ಚಂದಾ ಹಾಕ್ಕಲಿಕ್ಕೆ ಅರ್ಪಿಸಿದ ವ ಎತ್ತಿ ಬಂದ ಮೂಲಧನ	ರೂ 3,50,000—0—0
ತೆತ್ತು ಬಂದ ಮೂಲಧನ	2,64,815—0—0
ಕ್ಷೇಮನಿಧಿ ಮತ್ತು ಇತರ ಆಪದ್ಧನಗಳು	3,16,947 0—0

ಚಾಲ್ತಿ ಸೇವಿಂಗ್ಸ್ ಬೇಂಕ್, ಕಾಯಂ ವ ಅಲ್ಪ ಅವಧಿಯ ಠೇವಣಾತಿಗಳು ಸ್ವೀಕರಿಸಲ್ಪಡುವುವು' ಯೋಗ್ಯ ಜವಾಬ್ದಾರಿಯ ಮೇಲೆ ಸುಲಭ ದರದ ಬಡ್ಡಿಯಿಂದ ಸಾಲಗಳು ಕೊಡೋಣಾಗುವುವು ವಿನಿಮಯ ಸೌಕರ್ಯವೇ ಪ್ರಾಮುಖ್ಯ ಲಕ್ಷಣ !

ಬೊಂಬಾಯಿ, ಮದ್ರಾಸು, ಕರಾಚಿ, ಕಲ್ಕತ್ತಾ ಮೊದಲಾದ ಪ್ರಾಮುಖ್ಯ ಪಟ್ಟಣಗಳಿಗೆ ಹಣವನ್ನು ತಂತಿ ಮೂಲಕವಾಗಲೀ ಡಿಮಾಂಡ್ ಡ್ರಾಫ್ಟ ಮೂಲಕವಾಗಲೀ ಅತಿ ಸುಲಭ ವೆಚ್ಚದಿಂದ ಕಳುಹಿಸುವ ಸೌಕರ್ಯವು ನಮ್ಮಲ್ಲಿದೆ ಬೇಂಕಿಗೆ ಸಂಬಂಧಪಟ್ಟ ಇತರ ಎಲ್ಲಾ ವಹಿವಾಟುಗಳೂ ನಡಸಲ್ಪಡುವುವು

ಹೆಚ್ಚಿನ ಮಾಹಿತಿ ಬಗ್ಗೆ ನಮ್ಮ ಯಾವುದೇ ಆಫೀಸಿಗೆ ಬರಕೊಳ್ಳಿರಿ

ಕೋರ್ಪರೇಶನ್ ಆಫೀಸು, ಉಡುಪಿ, 16-5-35

M. Shrinivas Prabhu,
Manager

Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು ಇಲ್ಲಿಯವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ 'ಕಿಂಗ್ ಎಂಡ್ ಕ್ವೀನ್' ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಕಾರಣದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಆ ಕಂಪೆನಿಯಲ್ಲಿ ದೊರೆಯುವುದು

THE BOMBAY LIFE ASSURANCE CO., LTD.

Head Office—BOMBAY.

Notice to Policyholders:

NOTICE is hereby given that the Twentyfifth Annual General Meeting of the participating Policyholders such as have insured with profits for atleast Rs. 2,000 - entitled to vote under article 88 will be held at the Company's Registered Office Bombay Life Building, 45-47, Churchgate Street, Fort, Bombay, at 2-30 P. M. (S. T.) on Wednesday the 29th May 1935 for the purpose of electing a Director and an Auditor for the current year.

By order of the Board of Directors,

Bombay, 10th May 1935 (*Sd/*) **Jyotendra L. Mehta,** *Manager*

Karnataka Chemical and Pharmaceutical Works, Ltd., Udipi (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್ಹೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು, ಖರ್ಚು ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ. ಸಿಲಿಕೇಟು ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ.

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)

ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲಿಂಟ್ಯಾನ್, ಆರೋರಾ ಕ್ರೀಮ್ ಕ್ರಿಮೋರ್ ಲಿಮೋನಿಸ್ ಕರ್ಣಾಟಕ ರೋಸ ಪೊಮೇಡ್ ಇದಲ್ಲದೆನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್ ಪೇನು ಶಾಯಿಗಳೂ ಸಿದ್ಧವಾಗುವುವು

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಣ್ಣಪ್ಪ ಬಾಳಿಗ

ಹೆಡ್ ಆಫೀಸು ಮತ್ತು ಕಾರಖಾನೆ—ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೊ—(1) ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ 2

ಏಜಂಟ್ಸ್—(2) 1/70 ನ್ಯಾನಪ್ಪ ನ್ಯಾಕನ ಬೀದಿ, ಪಾರ್ಕ್ ಟೌನ್ ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

Edited, Printed & Published By A. S. Kamath at the Sharada Press, Car Street, Mangalore.

for Quality Snuff
H. Rama Rao and Sons,
High Class Snuff Manufacturers
Mangalore, S I
ASK FOR -
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in THE BOMBAY LIFE
Madras Branch Secretaries
Kochikar Brothers,
Udipi Mangalore Bangalore Madras, Bombay and Calicut

ESTABLISHED 1906

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟನಾಗುವ ವಾರಪತ್ರಿಕೆ.

ಪುಸ್ತಕ ೨೯. ಮಂಗಳೂರು ತಾ. ೭ನೇ ಶುಕ್ರವಾರ ಜೂನ್ ೧೯೩೫. (7—6—'35) ಸಂಚಿಕೆ ೨೪

ಕ್ವೆಟ್ಟಾದಲ್ಲಿ ಭೀಕರ ಭೂಕಂಪ! ೨೬೦೦೦ ಜನರ ಮರಣ!

ಬಲೂಚಿಸ್ಥಾನವು ಸ್ಮಶಾನ ಭೂಮಿಯಾಗಿದೆ!

ಭರತವರ್ಷಕ್ಕೆ ಇನ್ನೊಂದು ಆಘಾತ ತಟ್ಟಿತು!!

ಸಿಮ್ಲಾ ಜೂನ್ ೩ ೧

'ಕ್ವೆಟ್ಟಾವು ಪೂರ್ಣವಾಗಿ ಧ್ವಂಸವಾಯಿತು' ಭಯಂಕರ ವರ್ತಮಾನಗಳ [illegible] ತಂತಿರಹಿತ ವಾರ್ತೆಯು ಕ್ವೆಟ್ಟಾದಿಂದ ಸಿಮ್ಲಾ ಮತ್ತು ಲಾಹೋರುಗಳಿಗೆ ಕಳುಹಿಸಲ್ಪಟ್ಟಿವೆ. ಶುಕ್ರವಾರ ರಾತ್ರೆ ಘಂಟೆ ೩ಕ್ಕೆ ಎರಡು ಸಲ ಭೂಮಿಯು ಕಂಪಿಸಿತು. [illegible] ಜನರು ಮಡಿದರು. R A F ನ 43 ಮಂದಿ ವೈಮಾನಿಕರು ಮರಣಾಗತರಾದರು. ಕ್ವೆಟ್ಟಾದ ರೈಲ್ವೇ ಸ್ಟೇಶನು ಎಲ್ಲಿದೆಯೆಂದು ತಿಳಿದುಬರುವುದಿಲ್ಲ. ಕಟ್ಟಡವು ಧ್ವಂಸವಾಗಿದೆ. ಮಸ್ಟಂಗ್ ಎಂಬಲ್ಲಿ ಇರಲ್ಲಿ ೪ ಪಾಲು ಜನರು ಜೀವಕಳಕೊಂಡರು. ಬಾಕಿ ಉಳಿದವರು ಊರು ಬಿಟ್ಟು ಓಡುತ್ತಿರುವರು.

ಕರಾಚಿ ಜೂನ್ ೧

ಕ್ವೆಟ್ಟಾವು ಭರತವರ್ಷದ ಪೂರ್ವದುದ್ಯಾನ. ಅಲ್ಲಿಂದ ಫಲವತ್ತಾದ ಹಣ್ಣು ಹಂಪಲುಗಳು ದೇಶದೊಳಗೆ ಬರುತ್ತವೆ. ವೆಸ್ಟರ್ನ್ ಕಮಾಂಡಿನವರ ಮುಖ್ಯ ವೈಮಾನಿಕ ನಿಲ್ದಾಣವು ಇಲ್ಲಿದೆ. ಮೂರು ಬ್ರಿಟಿಷ ಮತ್ತು ಎರಡು ಹಿಂದೀಯ ರೆಜಿಮೆಂಟುಗಳು ಇಲ್ಲಿವೆ. ಕರಾಚಿಯಿಂದ ೫೩೦ ಮೈಲುಗಳ ದೂರದಲ್ಲಿ ಈ ನಗರವಿದೆ. ಲಾಹೋರಿನಿಂದ ೭೭೭ ಮೈಲುಗಳಷ್ಟು ದೂರದಲ್ಲಿದೆ. ಕ್ವೆಟ್ಟಾದ ಜನಸಂಖ್ಯೆ ೩೪೯೮೨, ಕಂಟೋನ್ ಮೆಂಟಿನಲ್ಲಿ ೨೧,೩೩೩ ಜನರಿರುವರು.

ಭೂಕಂಪದ ಅನುಭವವು ಕ್ವೆಟ್ಟಾ ನಗರಕ್ಕೆ ಹೊಸತಲ್ಲ. ಕೆಲವು ವೇಳೆ ಸಣ್ಣ ಕಂಪನಗಳು ಅಲ್ಲಿಗೆ ಆಗುತ್ತಿದ್ದುವು.

ಕ್ವೆಟ್ಟಾವು ಒಂದಾನೊಂದು ದಿನ ಭೂಕಂಪಕ್ಕೆ ತುತ್ತಾಗುವುದೆಂದು ಭೂಗರ್ಭಶಾಸ್ತ್ರಜ್ಞರು ಭವಿಷ್ಯ ಹೇಳಿದ್ದರು.

ಭೂಕಂಪವು ಆಗುವ ಎರಡು ದಿನಗಳ ಮೊದಲು ಕ್ವೆಟ್ಟಾದ [illegible] ಪ್ರವಾಸಿಕರು ಇಲ್ಲಿಯ ಹವೆಯು ಬಹು ಶೀತವಾಗಿದೆ ಎಂದು ತಿಳಿಸಿದ್ದರು.

ಭೂಕಂಪವು ಆಗುವ ಎರಡು ದಿನಗಳ ಮೊದಲು ಕ್ವೆಟ್ಟಾದ ಪಕ್ಷಿಗಳು ನಗರವನ್ನು ಬಿಟ್ಟು ಸಿಂಧ್ ಪ್ರಾಂತ್ಯಕ್ಕೆ ಗುಂಪು ಗುಂಪಾಗಿ ಹಾರಿ ಹೋದುವು.

ಜಕಾರ್ನಾ, ಶಿಖಾಪುರ, ಸುಕ್ಕೂರು, ನತೋಡೇರೋ ಮತ್ತು ಸಿಂಧ್ ಪ್ರಾಂತ್ಯದ ಇತರ ಕಡೆಗಳಲ್ಲಿಯೂ ಭಯಂಕರ ಕಂಪನಗಳು ಆದುವು.

ತಾ ೧ನೇ ರಾತ್ರೆ ೩ ಘಂಟೆಗೆ ಭೂಮಿಯು ಒಮ್ಮೆ ಕಂಪಿಸಿ ೩ ನಿಮಿಷಗಳ ತನಕ ನಡುಗಿತು. ಆದಾದ ಕೆಲವು ನಿಮಿಷಗಳಲ್ಲಿ ಪುನಃ ಮೂರು ನಿಮಿಷಗಳ ತನಕ ಕಠಿಣವಾಗಿ ಕಂಪಿಸಿತು.

ಕ್ವೆಟ್ಟಾ ರೈಲ್ವೇ ಸ್ಟೇಶನು ಕಾಣುವುದಿಲ್ಲ. ೧೨ ಮೈಲುಗಳಷ್ಟು ರೈಲು ಕಂಬಿಯೂ ದೃಗ್ಗೋಚರವಾಗುವುದಿಲ್ಲ.

೫೦೦ ಮಂದಿ ಸಿವಿಲ್ ಆಫೀಸರರಾದರೂ ಸತ್ತಿರಬೇಕೆಂಬ ಲೆಕ್ಕವಾಗಿದೆ. ಈ ವಿಚಾರವನ್ನು ತಂತಿ ಮೂಲಕ ಸೆಕ್ರೆಟರಿ ಒಫ್ ಸ್ಟೇಟರಿಗೆ ತಿಳಿಸಲಾಗಿದೆ.

ಚಕ್ರವರ್ತಿಯವರು ಸಂತಾಪಸೂಚಕ ತಂತಿಯನ್ನು ಬಿಟ್ಟು, ಭೂಕಂಪದ ಮುಂದಿನ ವಿವರವನ್ನು ತನಗೆ ತಿಳಿಸಬೇಕೆಂದು ಕೇಳಿಕೊಂಡಿದ್ದಾರೆ.

ಲಂಡನ್, ಮುಂಬಾಯಿ, ಕರಾಚಿ, ಕಲ್ಕತ್ತಾ ಮೊದಲಾದ ಭೂಸ್ಥಿತಿಸ್ಥಾಪಕ ಯಂತ್ರಗಳು ಸಿಂಧ್ ಪ್ರಾಂತ್ಯದಲ್ಲಿ ನಡೆದ ಭೂಕಂಪವನ್ನು ಗುರುತಿಸಿದುವು.

ಜೂನ್ ೨

೨೦,೦೦೦ ಜನರು ಮೃತರಾದರೆಂದೂ, ೫೦,೦೦೦ ಜನರು ಗಾಯಗೊಂಡರೆಂದೂ ಇಂದಿನ ಲೆಕ್ಕ. ಬಲೂಚಿಸ್ಥಾನವೆಲ್ಲ ಸ್ಮಶಾನ ಭೂಮಿಯಂತಾಗಿದೆ. ಈ ದಿನ ಮಧ್ಯಾಹ್ನ ೩ ಗಂಟೆಯ ಸಮಯದಲ್ಲಿ ಭೂಮಿಯು ಮತ್ತೊಮ್ಮೆ ಕಂಪಿಸಿತು. ೪೫ ಸೆಕೆಂಡುಗಳ ತನಕ ಈ ಕಂಪನವಿತ್ತು. ಎಲ್ಲೆಲ್ಲೂ ಧೂಳಿ ಆವರಿಸಿಕೊಂಡಿತ್ತು. ಕೋಲಾಪುರದ ಸುರಂಗವು ಬಿದ್ದಿದೆಯೆಂದು ಸುದ್ದಿಯಿದೆ. ಇದು ಹೌದಾದರೆ ಕ್ವೆಟ್ಟಾದಿಂದ ಜನರನ್ನು ಪರದೇಶಗಳಿಗೆ ಸಾಗಿಸುವುದು ಅಸಾಧ್ಯವಾಗುವುದು.

ಕ್ವೆಟ್ಟಾ ನಗರದಲ್ಲಿ ಮಾರ್ಷಲ್ ಲೋ ಜಾರಿಯಾಗಿದೆ. ೨೦,೦೦೦ ಶವಗಳ ಮಣ್ಣು ದಿನ್ನೆಗಳಡಿಯಲ್ಲಿರಬಹುದೆಂದು ಊಹಿಸಲಾಗಿದೆ. ಇಷ್ಟರ ತನಕ ಹುಗಿಟ್ಟ ಶವಗಳ ಹಲವು ಸಾವಿರದ ಸಂಖ್ಯೆಗೆ ಏರಿದ್ದವು. ೧೦,೦೦೦ ಜನರು ರಕ್ಷಿತರಾಗಿದ್ದರೆ ೪೦೦೦ ಜನರು ಜಖಂಗೊಂಡಿರುವರು. ಸಿವಿಲ ಪೇಟೆಯಲ್ಲಿ ಎಲ್ಲಾ ಕಟ್ಟಡಗಳ ಕೆಡವಿ ಬಿದ್ದಿವೆ. ಗವರ್ನಮೆಂಟ್ ಹೌಸ್ ಉಳಿದಿದೆ. ಆದರೆ ಅದರಲ್ಲಿ ವಾಸಿಸಲು ಸಾಧ್ಯವಿಲ್ಲ. ಇಗರ್ಜಿಯೂ ಕ್ಲಬ್ಬೂ ಬಿದ್ದಿವೆ. ೨೭ ವಿಮಾನಗಳಲ್ಲಿ ೬ ವಿಮಾನಗಳು ಪ್ರಯೋಜನಕಾರಿಯಾಗಬಹುದು. R A F ಪಾಳೆಯವು ನಾಶವಾಗಿದೆ. ಕಲಟ್ ಮತ್ತು ಮಾಸ್ಟಂಗ್‌ಗಳು ಪೂರ್ಣ ನಾಶವಾಗಿವೆ. ಕಂದಹಾರ್ ಸುರಕ್ಷಿತವಾಗಿದೆ. ೨೪ ತಾಸುಗಳಲ್ಲಿ ೩೫೦೦ ಜನರಿಗೆ ಇಂಡಿಯನ್ ಮಿಲಿಟರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಸಲಾಯಿತು.

ಸಹಾಯಸಮಿತಿಗಳು, ವೈದ್ಯರು, ರೈಲುಗಳು, ವಿಮಾನಗಳು, ಸ್ವಯಂಸೇವಕರು, ನರ್ಸುಗಳು ಎಲ್ಲವೂ ಸಿದ್ಧವಾಗಿದ್ದು ಕೆಲಸ ನಡೆಯುತ್ತಿದೆ.

ಜನರಲ್ ಆಸ್ಪತ್ರೆಯಲ್ಲಿದ್ದ ೩೦೦ ರೋಗಿಗಳಲ್ಲಿ ೨೦೦ ರೋಗಿಗಳು ಮೃತರಾದರು.

೬೦ ಪೋಸ್ಟಲ್ ಕ್ಲಾರ್ಕರಲ್ಲಿ ನಾಲ್ವರು ಮಾತ್ರ ಕೆಲಸಕ್ಕೆ ಹಾಜರಾಗಿರುವರು. ಪೋಸ್ಟಲ್ ಕ್ಲಾರ್ಕರು ಡೇರೆಗಳನ್ನು ಹಾಕಿ ಕೆಲಸಮಾಡುತ್ತಿರುವರು. ಸೈನಿಕರು ಅವರಿಗೆ ಆಹಾರಗಳನ್ನು ಒದಗಿಸಿಕೊಡುತ್ತಿರುವರು.

೧೨೦ ಮಂದಿ ಯುರೋಪಿಯನರು ಜೀವ ಕೊಂಡರು. ೨೦೦ ಮಂದಿ ಜಖಂಗೊಂಡರು. ನವಾಬ್ ಸರ್ ಶಾಮ್ ಷಹಾರವರು ಮೃತರಾಗಿರುವರು.

ಗವರ್ನರ್ ದಿಂದ ಸಹಾಯ ಸಮಿತಿಗಳು ಕ್ವೆಟ್ಟಾಕ್ಕೆ ತೆರಳಿವೆ. ಕಾಬೂಲಿನಲ್ಲಿ ಭೂಕಂಪವು ಆಗಿರುವುದಿಲ್ಲ.

ತಂದೆತಾಯಿಗಳಿಲ್ಲದ ಮಕ್ಕಳ ಸಂಖ್ಯೆ ಮುರಿಗಳಿಲ್ಲದ ತಂದೆತಾಯಿಗಳು, ಗಂಡರಿಲ್ಲದ ಸ್ತ್ರೀಯರು, ಪತ್ನಿಗಳಿಲ್ಲದ ಪುರುಷರು ಬಲೂಚಿಸ್ಥಾನದಲ್ಲಿ ಅಸಂಖ್ಯ.

ಕುಟುಂಬಗಳೆಲ್ಲವೂ ನಾಶಹೊಂದಿದುವು?

ಮುಂಬಯಿ ಜೂನ್ ೬

ಡೈಲಿ ಎಕ್ಸ್‌ಪ್ರೆಸ್ ಪತ್ರಿಕೆಯು ಹೀಗೆ ಬರೆಯುತ್ತದೆ.

ಸಿಂಧ್ ಕ್ವೆಟ್ಟಾಗಳಲ್ಲಿ [illegible] ಪ್ರಾಂತ್ಯದವರು [illegible] ಪತ್ರ ಬರೆದ ತಮ್ಮವರ ವಿಚಾರವನ್ನು ಕೇಳುತ್ತಿರುವರು. ಕರಾಚಿ, ಕ್ವೆಟ್ಟಾ, ಸಿಮ್ಲಾ ಮತ್ತಿತರ ಸ್ಥಳಗಳಿಗೆ ತಾವು ಕಳುಹಿಸಿದ ತಂತಿಗಳಿಗೆ ಯಾವ ಉತ್ತರವೂ ಬಂದಿರುವುದಿಲ್ಲವೆಂದೂ, ಇದರ ಕಾರಣವು ತಮಗೆ ತಿಳಿದು ಬರುವುದಿಲ್ಲವೆಂದೂ ಹೇಳುತ್ತಿರುವರು. ಮುಸಾಜಾನ್ ಎಂಬವರು ನಮ್ಮ ಬಳಿಗೆ ಬಂದು ಕ್ವೆಟ್ಟಾದಲ್ಲಿನ ತನ್ನ ಕುಟುಂಬವರ ಗತಿಯೇನಾಯಿತೆಂದು ತಮಗೆ ತಿಳಿದುಬಂದಿಲ್ಲವಾಗಿಯೂ, ಇಡೀ ಕುಟುಂಬದಲ್ಲಿ ೨೫ ಮಂದಿಯಿದ್ದು, ಅವರ ಸ್ಥಿತಿಗತಿಯೇನೆಂಬ ಬಗ್ಗೆ ಬಿಟ್ಟ ತಂತಿಗೆ ಉತ್ತರವೇ ಬಂದಿಲ್ಲವೆಂದೂ ತಿಳಿಸಿರುವರು. ಇವರ ಬಾಡಿದ ಮುಖ, ನಿರಾಶಾಪರಿಸ್ಥಿತಿಗಳನ್ನು ಕಂಡವರ ಎದೆ ಬಿರಿಯುವಂತಿದೆ. ಇವರ ಮುಖದಲ್ಲಿ ದುಃಖವು ಮೂರ್ತಿಮತ್ತಾಗಿ ನಿಂತಿದೆ.

ಚಕ್ರ

(All Rights Reversed)

ನಾನು ಕಳೆದ ಎರಡು ವಾರಗಳಿಂದ ಕನ್ನಡ ಸಾಹಿತ್ಯ ಸಾಮ್ರಾಜ್ಯಕ್ಕೆ ಕಾಲಿಟ್ಟುದೇ ತಡ,-ಹಲವು ಸಾಹಿತಿಗಳು ಹಲವು ವಿಧವಾಗಿ ಆಡಿಕೊಳ್ಳಲಾರಂಭಿಸಿರುವರು.

× × × × × ×

ಒಬ್ಬ ಸಾಹಿತಿಗಳು "ಸಾಯ್ಬರವರು ಸಾಹಿತ್ಯ ವಿಚಾರವನ್ನೆತ್ತಿ ಬರೆಯುವುದು ಅಗತ್ಯವಿದೆ. ಈ ಬಗ್ಗೆ ಒಂದು ಅಂಕಣವೇ ಬೇಕಾಗಿದೆ" ಎಂದು ಸೂಚಿಸಿರುವರು. ಅಯ್ಯಾ ಸಾಹಿತಿಗಳೇ, ತಮ್ಮ ಸೂಚನೆಯು ಅಮೂಲ್ಯವಾದುದೆಂದು ನಾನು ಬೇರೆ ಹೇಳುವುದೇನವಶ್ಯ. ತಾವು ಕನ್ನಡ ಪತ್ರಿಕೆಗಳನ್ನು ಓದಿ ಕೂಡಾ ನೋಡುವುದಿಲ್ಲವಂತೆ! ಅದೇಕೆ ಮಹಾಸ್ವಾಮಿ?

× × × × × ×

ಕನ್ನಡದಲ್ಲಿ ಸಾಹಿತಿಗಳೆಂಬವರು ಬಹಳ. ಅದರೆ "ಪ್ರಿಯರೇ ಒಂದು ಲೇಖನವನ್ನು ಬರೆದುಕೊಡಿರಿ" ಎಂದು ರಿಪ್ಲೈ ಕಾರ್ಡು ಹಾಕಿದರೂ ಕೂಡ ಅವರು ರಿಪ್ಲೈಯನ್ನಾಗಲೀ ಕಾರ್ಡನ್ನಾಗಲೀ ಕಳುಹಿಸುವುದೇ ಇಲ್ಲ. ಬದಲಿಗೆ ಆ ರಿಪ್ಲೈ ಕಾರ್ಡಿನಲ್ಲಿ ಬರೆಯಲ್ಪಟ್ಟ ವಿಳಾಸದ ಮೇಲೆ ಒಂದು ಬಿಳಿಯ ಕಾಗದ ಹಚ್ಚಿ, ಅದರ ಮೇಲೆ ತನ್ನ ಮಿತ್ರರ ಹೆಸರನ್ನು ಬರೆದು ತಮ್ಮ ಸ್ವಂತ ಉಪಯೋಗಕ್ಕೆ ಅದನ್ನು ಹಾಕಿಕೊಳ್ಳುತ್ತಾರೆ—ಏನು ಮಾಡುವುದು? ಅರ್ಥಿಕ ದುರವಸ್ಥೆ!

× × × × × ×

ನಮ್ಮೂರಿನಲ್ಲಿ ಮೊನ್ನೆ ಜನ್ಮಿಸಿದ ಒಂದು ಮಾಸಿಕ ಪತ್ರಿಕೆಯು ತನ್ನ ೪ನೇ ಸಂಚಿಕೆಯೊಂದಿಗೇ ಪ್ರಾಣ ಬಿಟ್ಟಿತೆಂದು ಸುದ್ದಿಯು ಹರಡಿದೆ! ಕರ್ನಾಟಕ ಮಾತೆಗೆ ಜಯವಾಗಲಿ!

× × × × × ×

"ನಿಮ್ಮ ಪತ್ರಿಕೆಯು ರುಚಿಕರವಾಗಿಲ್ಲ. ನಾವು ಚಂದಾದಾರರಾಗುವುದಿಲ್ಲ" ಎಂದು ಓದುಗರ ಮಾತು! "ನೀವು ಚಂದಾಹಣವನ್ನು ಇನ್ನೂ ಕೊಟ್ಟಿಲ್ಲ. ಅದಕ್ಕೆ ರುಚಿಯನ್ನು ತರಲು ಆದುದರಿಂದ ಕಷ್ಟವಾಗಿದೆ" ಎಂದು ಸಂಪಾದಕರ ಉತ್ತರ! ಯಾರು ತಪ್ಪು? ಯಾರು ಸರಿ!

× × × × × ×

ಕನ್ನಡದಲ್ಲಿ 'ಕನ್ನಡ ಕುವರ'ರು ಕಡಮೆಯಿಲ್ಲವಾದರೂ, ಇವರು ಬಾಡಿಗೆಯ ವೃತ್ತಪತ್ರಿಕೆಗಳನ್ನೇ ಓದುವರು ಹೊರತು, ತಾವಾಗಿ ದುಡ್ಡು ಕೊಟ್ಟು ಓದುವುದು ಕಡಮೆ. ಇವರ ಬಾಯಲ್ಲಿ ಯಾವಾಗಲೂ "ಸಿರಿಗನ್ನಡಂಗೆಲ್ಗೆ" ಎಂಬ ಮಂತ್ರವಿರುತ್ತದೆ

× + × × × ×

ಕನ್ನಡವು ಬೆಳೆಯಬೇಕು, ಕನ್ನಡವು ಬಾಳಬೇಕು, ಎಂದು ಎಲ್ಲೆಡೆಗಳಲ್ಲಿಯೂ ಹಾರೈಕೆಯುಂಟು. ಆದರೆ ಕನ್ನಡದ ತವರೂರಾದ ಮೈಸೂರಿಗೆ ಮಂಗಳೂರವರು ಹೋದರೆ, ಬಾಳಿ ಬೆಳೆಯುವ ಗೋಜು ಯಾರಿಗೂ ಬೇಡವಾಗುತ್ತದೆ. ಮೈಸೂರವರು ಮಂಗಳೂರಿಗೆ ಬಂದೊಡನೆ ನಮ್ಮ ಬೆಳೆದು ಬಾಳಬೇಂಕೆಂಬಾಶೆಯು ಸ್ವಸ್ಥವಾಗಿ ನಿದ್ರಿಸುತ್ತದೆ.

× × × × × ×

"ಕನ್ನಡದಲ್ಲಿ ಸುಧಾರಣೆಗಳು" ಎಂಬ ಭಾಷಣವನ್ನು ಮೊನ್ನೆ ಸಂಜೆಯವರು ಮೊನ್ನೆ ರಾಯಚೂರಿನಲ್ಲಿ ಕೊಟ್ಟರು. ಎಷ್ಟು ಸುಧಾರಣೆಗಳಾದುವಯ್ಯಾ! ಬೆರಳು ಮಡಚು!

× + × × × ×

ಒಂದೊಂದು ಪ್ರಾಂತ್ಯದ ಭಾಷೆಯು ಒಂದೊಂದು ರೀತಿ. ಮಂಗಳೂರಲ್ಲಿ 'ಹೋಗುತ್ತೇನೆ' ಎಂದರೆ ಬೆಂಗಳೂರಲ್ಲಿ 'ಹೋಗ್ತೀನಿ' ಎಂದು. ಉತ್ತರ ಕರ್ನಾಟಕದಲ್ಲಿ 'ಹೋಗ್ತೇನ' ಎಂಬ ಭೇದಗಳು ಒಂದೊಂದು ಕಲ್ಪದಲ್ಲಿ ಇರುವುದು ಕಂಡುಬರುತ್ತದೆ.

× × × × × ×

ಮಂಗಳೂರವರು ಕರಾವು ಮಾಡಿಕೊಂಡರೆ ಉತ್ತರ ಕರ್ನಾಟಕದವರು ಬಯ್ಯುತ್ತಾರೆ; ಉತ್ತರ ಕರ್ನಾಟಕದವರು ಕರಾವು ಮಾಡಿಕೊಂಡರೆ ಮಂಗಳೂರವರು ಟೀಕಿಸುತ್ತಾರೆ. ಮೈಸೂರವರಂತೂ "ತಾವೇ ಪರಿಶುದ್ಧ ಕನ್ನಡಿಗರು" ಎನ್ನುತ್ತಾರೆ.

+ × × × × ×

ಇಂತಹ ಭೇದಗಳಿದ್ದರೂ, ನಮ್ಮ ಭಾಷೆಯು ಬೆಳೆಯಬೇಕಂತೆ. ಕರ್ನಾಟಕ ಏಕೀಕರಣವಾಗಬೇಕಂತೆ. ಆಶ್ಚರ್ಯ!

× × × × ×

ಕನ್ನಡದಲ್ಲಿ ಹಲಕೆಲವು ಮುದ್ರಣಾಲಯಗಳಿವೆ ಸ್ವಾಮಿ. ಇವುಗಳು ಕನ್ನಡಕ್ಕೆ ಉಪಕಾರಕ್ಕಿಂತ ಅಪಕಾರವನ್ನೇ ಮಾಡಿವೆಯೆಂದು ನನ್ನ ಅಂಬೋಣ.

× × × × × ×

ಬಹಳ ಉತ್ಸಾಹೀ ಕನ್ನಡಿಗರು. ಮಾತ್ರ, ಅವರು ಮುದ್ರಿಸಿದುದನ್ನು ಓದಬೇಕಾದರೆ ಪ್ರತ್ಯೇಕ ಕನ್ನಡಕಗಳೇ ಬೇಕಾಗಿವೆ. ಈ ಮುದ್ರಾಲಯಗಳು ಮುದ್ರಿಸುವ ಪತ್ರಿಕೆಗಳನ್ನು ಓದುವವರಾರೋ ನನಗೆ ತಿಳಿಯದು. ಇಂತಹ ಮುದ್ರಕರು ಕನ್ನಡದ ಸೇವೆಯನ್ನು ಮಾಡಿದಂತಾಗುವುದಿಲ್ಲವೆಂದೇ ನನ್ನ ಮತ.

× × × × × ×

"ಕನ್ನಡದಲ್ಲಿ ನವೀಕರಣ"ವೆಂದು ಶ್ರೀ ಡಿ. ವಿ. ಗುಂಡಪ್ಪನವರು ಮಾಡಿದ ಭಾಷಣವನ್ನು ಈ ಮುದ್ರಕರು ಎಂದೂ ಓದಬಾರದು!

× × × × × ×

ಅಲ್ಲ, ಹೇಳಿದೆನೆಂದು ಸಿಟ್ಟಾಗಬೇಡಿ! ಸಿಟ್ಟು ಬಂದರೆ ನಾನೇನು ಮಾಡಲಿ?

× × × × × ×

ನಾನೂ ಸಿಟ್ಟುಗೊಂಡು ಕನ್ನಡದ ಅವಸ್ಥೆಯನ್ನು ಪೂರ್ಣವಾಗಿ ಅಂಧ್ರರಿಗೆ ತಿಳಿಸುವ ವ್ಯವಸ್ಥೆಯನ್ನೇ ಮಾಡುವೆನು!

'ಸಾಯ್ಬ'.



ಅಸ್ವಸ್ಥದಲ್ಲಿ ಬಿದ್ದು ನರಳುತ್ತಿರುವವರು 'ಓವಲ್ಟಿನ್'ನಲ್ಲಿರುವ ಚೈತನ್ಯದಾಯಕವೂ ಆರೋಗ್ಯದಾಯಕವೂ ಆದ ಗುಣಗಳನ್ನು ಕಂಡು ಸಂತೋಷಗೊಳ್ಳುವರು. ಕುಂದಿದ ಅಜೀರ್ಣತೆಗೂ ಕ್ಷೀಣತಪ್ಪಿದ ಹಸಿವಿಗೂ 'ಓವಲ್ಟಿನ್' ಅತ್ಯುತ್ಕೃಷ್ಟ ಪಾನಕ.

'ಓವಲ್ಟಿನ್' ನರಗಳನ್ನು ಪುಷ್ಟೀಕರಿಸುತ್ತದೆ. ರಕ್ತವನ್ನು ವೃದ್ಧಿಗೊಳಿಸುತ್ತದೆ, ನಿದ್ರೆಯನ್ನುತ್ಪನ್ನಮಾಡುತ್ತದೆ, ರೋಗವನ್ನು ಓಡಿಸಿ ದೇಹಾರೋಗ್ಯವನ್ನು ವೃದ್ಧಿಸುತ್ತದೆ,—ಇದೇ ದೇಹವನ್ನು ಬೆಳೆಯಿಸಿ ಬಲಪಡಿಸುತ್ತದೆ. ಅಸ್ವಸ್ಥದಲ್ಲಿರುವವರ ಕೋಣೆಗೆ 'ಓವಲ್ಟಿನ್' ಹೊಕ್ಕೊಡನೆ ಶೀಘ್ರ ಗುಣಲಾಭವಾಗುತ್ತದೆ.

'ಓವಲ್ಟಿನ್' ಎಂಬುದು ದೇಹ ಪೋಷಣೆಗೆ ಅನುಪಮ ಪಾನಕ. ಆರೋಗ್ಯವನ್ನೂ ಶಕ್ತಿಯನ್ನೂ ದೇಹದಲ್ಲಿ ತುಂಬಿಸುತ್ತದೆ. ಬೆಳೆದ ಬಾರ್ಲಿ, ದನದ ಕೆನೆಹಾಲು, ಗೋವಿ—ಇವೇ ಮೊದಲಾದ ಪ್ರಕೃತಿಸಿದ್ಧ ವಸ್ತುಗಳಿಂದ ತಯಾರಿಸಲ್ಪಟ್ಟುದು.

ನಿಮ್ಮ ಚಹಾಕ್ಕೆ 'ಓವಲ್ಟಿನ್' ಸೇರಿಸಿರಿ—ಅದು ಆರೋಗ್ಯಕರ, ಬಲವರ್ಧಕ ಮತ್ತು ಶಕ್ತಿದಾಯಕ.

'ಓವಲ್‌ಟಿನ್'

ಮಿದುಳು, ನರ, ದೇಹಗಳನ್ನು ರಚಿಸುತ್ತದೆ.

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ,

ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ ದೊರೆಯುತ್ತದೆ.

ಏಜಂಟ್:—ಜೇಮ್ಸ್ ರೈಟ್, 85ಎ, ಕ್ಲೈವ್ ಸ್ಟ್ರೀಟ್, ಕಲ್ಕತ್ತಾ, ಮತ್ತು ಮುಂಬಾಯಿ, ಮದ್ರಾಸ.

DA.317

Estd 1920] THE [1920ರಲ್ಲಿ ಸ್ಥಾಪಿತವಾದದ್ದು.

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು.

ಠೇವಣಾತಿಗಳ ದರ.

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ.

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ಕ್ಲಿಪ್ತದ … ಗುವವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು.

Puttur, Dated 10—4—1935.

G. N. Lakshman Pai,
Secretary.

ಪತ್ರಿಕಾ ಪ್ರಪಂಚ

ಪರೀಕ್ಷಾ ಫಲಿತಾಂಶಗಳು

ಇದು ಪರೀಕ್ಷಾ ಫಲಿತಾಂಶಗಳು ಪ್ರಕಟವಾಗುವ ಕಾಲ. "ಪರೀಕ್ಷೆಗಳಲ್ಲಿ ತೇರ್ಗಡೆಹೊಂದುವುದರಿಂದ ಮಾತ್ರವೇ ಏನೂ ಪುರುಷಾರ್ಥಸಾಧನೆಯಾದಂತೆ ಆಗಲಿಲ್ಲ—ಮಾತ್ರವಲ್ಲ, ಆ ತೇರ್ಗಡೆಯು ಒಮ್ಮೆಗೇ ಜೀವನೋಪಾಯವನ್ನು ಪಡೆಯಲು ಸಾಧಕವಾಗಲಾರದು" ಎಂಬ ವಿಚಾರವು ಸ್ಪಷ್ಟವಾಗಿ ತಿಳಿದಿದ್ದರೂ ಸಹ, ಅನೇಕ ಬಾಲಕರೂ ಯುವಕರೂ ಅಂತಹ ಪರೀಕ್ಷೆಗಳಲ್ಲಿ ತಾವು ತೇರ್ಗಡೆಯಾಗದಿದ್ದುದನ್ನು ತಿಳಿದು ಚಿತ್ತಸ್ವಾಸ್ಥ್ಯವನ್ನು ಕಳೆದುಕೊಂಡು, ಬಾವಿಗೆ ಬೀಳುವುದರಿಂದಲೋ ನೇಣುಹಾಕಿಕೊಳ್ಳುವುದರಿಂದಲೋ ಆತ್ಮಹತ್ಯ ಮಾಡಿಕೊಳ್ಳುವ ವಿಷಾದ ಪ್ರಸಂಗಗಳು ಅಲ್ಲಲ್ಲಿ ನಡೆಯುತ್ತಿರುವುದು ಸಕಲರಿಗೂ ತಿಳಿದ ಅಂಶವಾಗಿದೆ. ಈ ಸಂದರ್ಭದಲ್ಲಿ ಉಪಾಧ್ಯಾಯರೂ, ಬಾಲಕರ ಮಾತಾಪಿತೃಗಳೂ ಆಪ್ತೇಷ್ಟರೂ, ಅವರಿಗೆ ತೇರ್ಗಡೆಯಾಗಲಿಲ್ಲವೆಂದು ತಾವಾಗಲೀ ಅಥವಾ ಬೇರೆಯ ಇತರ ಬಾಲಕರಾಗಲೀ ಹಂಗಿಸದಂತೆ ಜಾಗರೂಕರಾಗಿರತಕ್ಕದ್ದು ಮಾತ್ರವಲ್ಲದೆ, ಅದರಿಂದ ನಿರುತ್ಸಾಹಗೊಳ್ಳದೆ ಮತ್ತೊಮ್ಮೆ ಪ್ರಯತ್ನಿಸಿ ಜಯಶೀಲರಾಗಬೇಕೆಂದು ಪ್ರೋತ್ಸಾಹಕರ ವಾಕ್ಯಗಳಿಂದ ಉತ್ತೇಜನಗೊಳಿಸಬೇಕು. ಹಲವು ಅಪಜಯಗಳನ್ನು ದಾಟಿಕೊಂಡೇ ತಮ್ಮ ಜೀವಮಾನದಲ್ಲಿ ಮಹತ್ಕಾರ್ಯಗಳನ್ನು ಸಾಧಿಸಿದ ಮಹಾಪುರುಷರ ಜೀವಿತೋದಾಹರಣೆಗಳನ್ನು ಅವರಿಗೆ ಕೊಟ್ಟು ಅವರ ಚಿತ್ತಚಾಂಚಲ್ಯವನ್ನೂ ಹೃದಯದೌರ್ಬಲ್ಯವನ್ನೂ ಹೋಗಗೊಳಿಸಿ ಅವರಲ್ಲಿ ಧೈರ್ಯಸಾಹಸಗಳನ್ನು ಇಮ್ಮಡಿಗೊಳಿಸಬೇಕು. ಅವರು ಲೇಶಮಾತ್ರವೂ ಅಪಮಾನವೆಂದು ಭಾವಿಸದೆ ಸಪ್ರೋತ್ಸಾಹದಿಂದ ಮುಂದರಿಯುವಂತೆ ಹುರಿದುಂಬಿಸಬೇಕು.

ಕನ್ನಡ ಪತ್ರಿಕೆಗಳು

ಸುಬೋಧ

ನಾಟಕ ಕಲೆ

ಶ್ರೀ ಎಂ. ಎಸ್. ರಾಮಶಾಸ್ತ್ರಿ ಇವರು ರಂಗಭೂಮಿಯಲ್ಲಿ "ನಾಟಕ ಕಲೆ ಅದರ ಅವನತಿಗೆ ಕಾರಣಗಳು ಮತ್ತು ನಿವಾರಣೋಪಾಯಗಳು" ಎಂಬ ಶೀರ್ಷಿಕೆಯುಳ್ಳ ಲೇಖನವೊಂದನ್ನು ಬರೆದು ಹೀಗೆ ತಿಳಿಸಿದ್ದಾರೆ: "ನಮ್ಮ ನಾಡಿನಲ್ಲಿ ನಾಟಕ ಕಲೆಯು ದಿನದಿನಕ್ಕೂ ಅವನತಿ ಹೊಂದುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ನಮ್ಮ ದೇಶದ ನಾಟಕ ಕಲೆಯು ಅತಿ ಪ್ರಾಚೀನವಾದುದು. ಈ ನಾಟಕ ವೃಕ್ಷವು ಹುಟ್ಟಿ ಬೆಳೆದು ರೆಂಬೆಗಳನ್ನು ನಾನಾ ದಿಕ್ಕುಗಳಲ್ಲಿ ಪ್ರಸರಿಸಿ ಹೂಹಣ್ಣುಗಳಿಂದ ಕಂಗೊಳಿಸಿತು. ಇದಕ್ಕೆ ಕಾರಣಗಳು ನಮ್ಮ ಪೂರ್ವಿಕರ ಕಲೆಯಲ್ಲಿನ ಅಗಾಧಪ್ರೇಮ, ಆ ಕಲೆಯನ್ನು ವೃದ್ಧಿಗೊಳಿಸಲು ಅವರಿಗಿದ್ದ ಅನಿರ್ವಚನೀಯವಾದ ಉತ್ಸಾಹ, ಆ ಕಲೆಯು ಪ್ರವರ್ಧಮಾನಕ್ಕೆ ಬಂದುದರ ಸುಖಸಂತೋಷಗಳನ್ನು ಅನುಭವಿಸಬೇಕೆಂಬ ಮಹದಾಕಾಂಕ್ಷೆ, ಎಲ್ಲಕ್ಕಿಂತಲೂ ಮಿಗಿಲಾಗಿ ಅವರಿಗಿದ್ದ ಪರಸ್ಪರ ಸೌಹಾರ್ದ, ಆತ್ಮವಿಶ್ವಾಸ ಮತ್ತು ಮನೋದಾರ್ಢ್ಯಗಳು. ಇದುದರಿಂದಲೇ ಕಾಳಿದಾಸ ಭವಭೂತಿಗಳಂತಹ ಜಗನ್ಮಾನನೀಯ ಕವಿಪುಂಗವರ ಹೆಸರುಗಳು ನಮ್ಮ ಹೃದಯದಲ್ಲಿ ಸ್ಥಿರವಾದ ಸ್ಥಾನವನ್ನು ಹೊಂದಿವೆ. ಭೋಜ-ವಿಕ್ರಮಾದಿತ್ಯರಂತಹ ಕಲಾಪೋಷಕರ (Patrons) ಹೆಸರುಗಳು ನಾಟಕ ಪ್ರಪಂಚದಲ್ಲಿ ತಾಂಡವಾಡುತ್ತಿವೆ. ಇಷ್ಟು ಪುರಾತನ ಕಾಲದ ಸ್ಥಿತಿಯೇಕೆ? ಈ ಒಂಭತ್ತು ಹತ್ತು ವರ್ಷಗಳ ಹಿಂದಿನ ನಾಟಕಗಳಿಗಿದ್ದ, ನಟರಿಗಿದ್ದ ಸ್ಥಾನವು ಈಗಿನ ನಾಟಕಗಳಿಗಿದೆಯೋ? ನಟರಿಗಿದೆಯೋ? ಆ ಸ್ಥಾನವನ್ನು ನಾವು ಪುನಃ ಹೊಂದಬೇಕಾಗಿದ್ದರೆ ನಮ್ಮಲ್ಲಿ ಮತ್ತೊಬ್ಬ ವರದಾಚಾರ್ಯರ ಜನ್ಮವಾಗಬೇಕು. ಕಳೆದ ನಾಲ್ಕೈದು ವರ್ಷಗಳಿಂದಲಂತೂ ನಮ್ಮಲ್ಲಿ ನಾಟಕ ಪ್ರಪಂಚದಲ್ಲಿ—ಅದರಲ್ಲೂ ಬೆಂಗಳೂರು ಮದ್ರಾಸುಗಳಲ್ಲಿ ಬಲವಾದ ಮೋಸದ ಮುಸುಕೊಂದು ಆವರಿಸುತ್ತಾ ಬಂದಿದೆ."

ವೃತ್ತಪತ್ರ ವ್ಯವಸಾಯದ ಸಮಸ್ಯೆಗಳು.

ಕಲ್ಕತ್ತದ ಶ್ರೀ ಮೃಣಾಲಕಾಂತಿ ಘೋಷರೆಂಬವರು ಹಿಂದೀ ವೃತ್ತಪತ್ರ ವ್ಯವಸಾಯ ಸಮಿತಿಯ ಅಧ್ಯಕ್ಷರು. ಅವರ ಭಾಷಣದ ಸಾರಾಂಶವು ಪ್ರಕಟವಾಗಿದೆ "ಜಯಕರ್ನಾಟಕ"ದಲ್ಲಿ. "ಬೇರೆ ದೇಶಗಳಂತೆ ವೃತ್ತಪತ್ರೋದ್ಯೋಗದ ಶಿಕ್ಷಣವನ್ನು ತಮ್ಮ ಅಭ್ಯಾಸಕ್ರಮದಲ್ಲಿಯೂ ಸೇರಿಸಬೇಕೆಂದು ಹಿಂದೀ ವಿಶ್ವವಿದ್ಯಾಲಯಗಳು ಇತ್ತೀಚೆ ಮನಸ್ಸುಮಾಡಿವೆ. ಮೂರು ವಿದ್ಯಾನಿಲಯಗಳು ಈ ಬಗ್ಗೆ ವಿಶೇಷ ಆಸ್ಥೆ ವಹಿಸಿದಂತೆ ತೋರುತ್ತದೆ. ಈ ಉದ್ಯೋಗವು ಹಬ್ಬಲು ಇಲ್ಲಿ ವಿಪುಲವಾದ ಅವಕಾಶವಿದೆಯಲ್ಲದೆ ಹಲವು ಸುಶಿಕ್ಷಿತ ತರುಣರು ಇದರಲ್ಲಿ ದುಡಿಯಲು ಸಿದ್ಧರಿದ್ದಾರೆ. "ನಿರುದ್ಯೋಗ"ವಂತೂ ಇದೀಗ ಎಲ್ಲರಿಗೂ ಸಮಾನಮಹತ್ವದ ಪ್ರಶ್ನೆಯಾಗಿದೆ. ಹಿಂದೂಸ್ಥಾನದಂತೆ ಯೂರೋಪದಲ್ಲಿಯೂ ಅದು ಅಷ್ಟೇ ತೀವ್ರ ಸ್ವರೂಪವನ್ನು ತಾಳಿದೆ. ಆದರೆ ಪಾಶ್ಚಾತ್ಯ ದೇಶಗಳಲ್ಲಿ ಬೇರೆ ಉದ್ಯೋಗಗಳಲ್ಲಿ ಕೆಲಸಗೇಡಿತನವು ಬೆಳೆದಷ್ಟು ಇದರಲ್ಲಿ ಖಂಡಿತ ಇಲ್ಲ. "ಅಂತರ್ರಾಷ್ಟ್ರೀಯ ಕೂಲಿಕಾರರ ಕಾರ್ಯಾಲಯ"ದವರು ಈ ಬಗ್ಗೆ ಕೆಲವು ಅಂಕಿ ಬದ್ಧ ಕೋಷ್ಟಕಗಳನ್ನು ಪ್ರಸಿದ್ಧಪಡಿಸಿದ್ದಾರೆ. ಅವುಗಳಿಂದ ಈ ಉದ್ಯೋಗದಲ್ಲಿಯ ನಿರುದ್ಯೋಗಿಗಳ ಪ್ರಮಾಣವು ೧೦೦ಕ್ಕೆ ೧–೨ರಷ್ಟು ಅತ್ಯಲ್ಪವಾಗಿದ್ದುದು ಕಂಡುಬರುತ್ತದೆ. ಇನ್ನೊಂದು ಗಮನೀಯಾಂಶವೆಂದರೆ ಅಲ್ಲಿ ವೃತ್ತಪತ್ರ ವ್ಯವಸಾಯದಲ್ಲಿ ಪ್ರತ್ಯಕ್ಷ ಶಿಕ್ಷಣಕೊಡುವ ನೂರಾರು ಶಾಲೆಗಳಿದ್ದು ವಿಶ್ವವಿದ್ಯಾಲಯಗಳಲ್ಲಿ ಸ್ವತಂತ್ರ ವಿಷಯವೆಂದು ಅದಕ್ಕೆ ಸ್ಥಾನಕೊಡಲಾಗಿದೆ. ಹೀಗಿದ್ದರೂ ಎಂದರೆ ಪ್ರತಿ ವರ್ಷ ನೂರಾರು ಹೊಸ ಹೊಸ ವೃತ್ತಪತ್ರಿಕೆಗಳು ಹುಟ್ಟುತ್ತಿದ್ದರೂ ಈ ವ್ಯವಸಾಯದಲ್ಲಿ ನಿರುದ್ಯೋಗದ ಪ್ರಶ್ನೆ ಬೆಳೆದಿಲ್ಲ. ಯೂರೋಪದಲ್ಲಿ ಅಥವ ಅಮೇರಿಕಾದಲ್ಲಿ ಚೆನ್ನಾಗಿ ತರಬೇತಾದ ಅಥವಾ ಒಳ್ಳೆಯ ಯೋಗ್ಯತೆಯುಳ್ಳ ಸಂಪಾದಕರು ಕೆಲಸವಿಲ್ಲದೆ ಅಲೆಯುವ ಸಂದರ್ಭಗಳೇ ವಿರಳ. ನಮ್ಮಲ್ಲಿಯಾದರೋ ಯೋಗ್ಯ ಜನರು ದೊರೆಯುವುದೇ ಕಷ್ಟ, ಅಂಥ ಜನರಿಗೆ ಕೆಲಸ ದೊರೆಯುವುದು ಕಠಿನವಲ್ಲ.

ಕಣ್ಣಿನ ರಕ್ಷಣೆ

ಆಯುರ್ವೇದ ವಿದ್ವಾನ್ ಎಚ್. ಟಿ. ರಾಮಚಂದ್ರಾಚಾರ್ಯರವರು ಭಾರತಿಯಲ್ಲಿ ಪ್ರಕಟಿಸಿದ ಲೇಖನದ ಒಂದು ಭಾಗದಲ್ಲಿ ಹೀಗೆಂದಿದ್ದಾರೆ: "ನಾವು ಪ್ರತಿನಿತ್ಯ ನಡೆದುಕೊಳ್ಳುವ ಕ್ರಮಗಳನ್ನು ಸಂದರ್ಭೋಚಿತವಾದ ಆರೋಗ್ಯನಿಯಮಗಳನ್ನು ಅನುಸರಿಸುತ್ತಿದ್ದರೆ ಕಣ್ಣನ್ನು ಭದ್ರತೆಯಾಗಿರಿಸುವ ಸಾಧನವಾಗಿ ಅದನ್ನೇ ಹೇಳಬಹುದು. ಪ್ರಾತಃಕಾಲದಲ್ಲಿ ಬೇಗನೆ ಎದ್ದು ಮುಖವನ್ನು ತೊಳೆದುಕೊಳ್ಳುವ ಕ್ರಮ ಹಿಡಿಯಬೇಕು. ಕಣ್ಣಿನ ಮೂಲೆಗಳಲ್ಲಿ ಸಿಕ್ಕಿರುವ ಕಶ್ಮಲವು ಇದರಿಂದ ದೂರವಾಗುತ್ತದೆ. ಅಲ್ಲದೆ ಸ್ವಲ್ಪ [illegible] ಉರಿಯುತ್ತಿರುವ ಕಣ್ಣುಗಳಿಗೆ ತಂಪಾಗುತ್ತದೆ. ಪ್ರಾತಃಕಾಲ ಸ್ನಾನವನ್ನಂತೂ ಮಾಡುತ್ತಾ ಬಂದರೆ ಕಣ್ಣುಗಳಿಗೆ ಬಹಳ ಉಪಕಾರವಾಗುತ್ತದೆ. ತಲೆಗೆ ತಣ್ಣೀರು ಸ್ನಾನವೇ ಹಿತ. ಪಾದಗಳಿಗೂ ಕಣ್ಣುಗಳಿಗೂ ಮುಖ್ಯ ಸಂಬಂಧವಿದೆ. ಆದುದರಿಂದ ಪಾದಗಳನ್ನು ತೊಳೆದು ತಂಪಾಗಿರಿಸಿದರೆ ಅದು ಕಣ್ಣುಗಳಿಗೆ ಸುಖಕರವಾಗಿ ಪರಿಣಮಿಸುವುದು. ದೂರದಿಂದ ನಡೆದು ಬಂದು, ರಾತ್ರಿಕಾಲಕ್ಕೆ ಮನೆಯನ್ನು ಸೇರಿದವನು ಪಾದಗಳನ್ನು ತೊಳೆಯದೆ ಹಾಗೆಯೇ ಮಲಗಿದ್ದರೆ, ಬೆಳಿಗ್ಗೆ ಏಳುವಾಗ ಆತನ ಕಣ್ಣುಗಳನ್ನು ಬಿಡಿಸುವುದೇ ಕಷ್ಟವೂ ಉರಿಯೂ ಉಂಟಾಗುತ್ತದೆ. ಇದು ಸಾಮಾನ್ಯವಾಗಿ ಸರ್ವರಿಗೂ ಅನುಭವವಿರುವ ವಿಷಯವೇ ಆಗಿದೆ. ಬರೀ ಕಾಲುಗಳಿಂದ ನಡೆಯುವುದಕ್ಕಿಂತಲೂ ಪಾದರಕ್ಷೆಗಳನ್ನು ಉಪಯೋಗಿಸುತ್ತಿದ್ದರೆ ಕಣ್ಣುಗಳಿಗೆ ತುಂಬಾ ಗುಣವುಂಟು. ಅಭ್ಯಂಗ ಮಾಡುವಾಗಲೂ ಪಾದದ ಮೇಲು ಭಾಗಕ್ಕೆ ಎಣ್ಣೆಯನ್ನು ಹಚ್ಚಿ ಚೆನ್ನಾಗಿ ತಿಕ್ಕಿ ಸ್ನಾನ ಮಾಡುವುದೊಳ್ಳೇದು."

ಜನಜೀವನವೂ ಸಾಹಿತ್ಯವೂ.

ವಿಶ್ವಕರ್ಣಾಟಕ ಸಾಹಿತ್ಯ ಸಂಚಿಕೆಯಲ್ಲಿ ಹೀಗಿದೆ—"ಕೇರಳ ಸಾಹಿತ್ಯ ಪರಿಷತ್ತಿನ ಮೂರನೆಯ ಅಧಿವೇಶನವು ಕಲ್ಲಿಕೋಟೆಯಲ್ಲಿ ನಡೆಯಿತು. ಸಿ. ಕುಟ್ಟನ್ ನಾಯರ್ ಅಗ್ರಾಸನವನ್ನು ವಹಿಸಿದ್ದರು. ಶ್ರೀಮತಿಯವರು ತಮ್ಮ ಅಧ್ಯಕ್ಷಭಾಷಣದಲ್ಲಿ "ಜನಜೀವನಕ್ಕೂ ಸಾಹಿತ್ಯಕ್ಕೂ ನಿಕಟಸಂಬಂಧವಿದೆ. ಜನಜೀವನವನ್ನು ಚಿತ್ರಿಸುವುದೇ ಉತ್ತಮ ಸಾಹಿತ್ಯ. ಸಾಹಿತ್ಯದ ನಿಜವಾದ ಧ್ಯೇಯವೇನೆಂಬುದರ ವಿಚಾರವಾಗಿ ಭಿನ್ನಾಭಿಪ್ರಾಯಗಳಿವೆ. ಕಲೆಯು ಕಲೆಗಾಗಿ ಜೀವಿಸಿದೆಯೆಂದು ಕೆಲವರು ಸಾಧಿಸುತ್ತಾರೆ. ಮನುಷ್ಯನು ಕಲೋಪಾಸಕ. ಅವನಲ್ಲಿರುವ ಕಲಾ ಜೀವನದ ಪ್ರಬೋಧನೆಗಾಗಿ ಸಾಹಿತ್ಯವು ದುಡಿಯುತ್ತಿದೆಯೆಂದು ಮತ್ತೊಂದು ಪಂಗಡದವರು ವಾದಿಸುತ್ತಾರೆ. ನನ್ನ ಅನುಭವದಲ್ಲಿ ಎರಡನೆಯ ವಾದವೇ ನಿಜವಾಗಿ ತೋರುತ್ತದೆ."

ಬಾಲಕರೂ ಹೊಗೆಸೇದುವ ಅಭ್ಯಾಸವೂ

ಸಣ್ಣ ಸಣ್ಣ ಬಾಲಕರು ಬೀಡಿಸಿಗರೇಟುಗಳನ್ನು ಸೇದಲಾರಂಭಿಸುವುದರ ಭಯಂಕರ ಪರಿಣಾಮವೇನೆಂಬುದನ್ನು ನಾವು ಪದೇ ಪದೇ ತಿಳಿಸುತ್ತಾ ಇದ್ದೇವೆ. ಈ ವಿಷಯವು ಹೌಸ್ ಆಫ್ ಕಾಮನ್ಸ್ ಸಭೆಯಲ್ಲೂ ಇತರ ಕಡೆಗಳಲ್ಲೂ ಚರ್ಚೆಗೆ ಬಂದಿದೆ. ಚರ್ಚೆಯೇನೋ ಉತ್ತಮವೇ ಸರಿ. ಈಗಿನ ದಿನಗಳಲ್ಲಿ ಚರ್ಚೆಗೇನೂ ಕಡಮೆಯಿಲ್ಲ. ಆದರೆ ನಾವು ಸರಿದಾರಿಯನ್ನು ಬಿಟ್ಟು ವಕ್ರಪಥವನ್ನು ಹಿಡಿಯುತ್ತಿದ್ದೇವೆಂದು ಭಯಪಡುತ್ತಿರಬೇಕಾಗಿದೆ. ಚಿಕ್ಕವರ ಜವಾಬ್ದಾರಿಕೆಯನ್ನು ದುರ್ಬಲಗೊಳಿಸುವ ಶಾಸನವು ಅಪಾಯಕರ. ಆದರೆ ಹೆತ್ತವರು ತಮ್ಮ ಮಕ್ಕಳ ಪೂರ್ಣ ಜವಾಬ್ದಾರಿಕೆಯನ್ನು ತೆಗೆದುಕೊಳ್ಳಲು ಅಶಕ್ತರೆಂದಾದರೆ, ತನ್ನ ದೇಶದ ಜನರನ್ನು ರಕ್ಷಿಸುವುದಕ್ಕಾಗಿ ಸರಕಾರವು ವ್ಯವಸ್ಥೆ ಮಾಡುವುದು ನ್ಯಾಯವಾದ. ತಮ್ಮ ಜವಾಬ್ದಾರಿಕೆಯನ್ನು ಹೆತ್ತವರು ಅಪಾಯದಿಂದ ತಪ್ಪಿಸಲು ಸಿದ್ಧರಿರುವುದಿಲ್ಲವಾದರೆ ಆ ಕೆಲಸವನ್ನು ಅವರಿಗಿಂತಲೂ ಮೇಲಿನ ಅಧಿಕಾರಿಗಳು ನಿರ್ವಹಿಸಬೇಕಾಗಿದೆ. [illegible] ದವರು ಹೇಳುವುದೇನೆಂದರೆ —

ಇಂಗ್ಲಿಷ್ ಪತ್ರಿಕೆಗಳು.

"೧೮ ವರ್ಷ ವಯಸ್ಸಾಗದ ಯಾವನು ಬೀಡಿಸಿಗರೇಟು ಚುಟ್ಟಾಗಳನ್ನು ಸೇದುತ್ತಿರುವನೋ ಹೊಗೆಸೊಪ್ಪು ಅಥವಾ ಮೊದಲಾದ ಮಾದಕ ಪದಾರ್ಥಗಳನ್ನು [illegible] ವೇಳೆ ವೈದ್ಯನು ಹೇಳಿದ ಹೊರತು ಉಪಯೋಗಿಸುತ್ತಿರುವನೋ ಅವನ ಮೇಲೆ ಕ್ರಿಮಿನಲ್ ಅಪರಾಧವನ್ನು ಹೂಡಬೇಕು. ಅಂತಹವನಿಗೆ ಹತ್ತು ರೂಪಾಯಿಗಳನ್ನು ಮೀರದ ದಂಡ ಅಥವಾ ೧೫ ದಿನಗಳ ಕಾಲ ಸಾದಾ [illegible] ಅಥವಾ ಈ ಎರಡು ಶಿಕ್ಷೆಗಳನ್ನೂ ಕೊಡಬೇಕು."

Punjab Educational Journal

ಸಂಸ್ಕೃತ ಶಿಕ್ಷಣದ ಅವಶ್ಯಕತೆ

ನಮ್ಮ ದೇಶದಲ್ಲಿ ಈಗ ಬೌದ್ಧಿಕ ಅವನತಿಯು ಕಂಡುಬರುತ್ತಿದೆ. ಪರಕೀಯ ಸಂಸ್ಕೃತಿಯನ್ನು ಸ್ವೀಕರಿಸುವುದರಿಂದ ನಮ್ಮ ಮಂದಿಯಲ್ಲಿರುವ ವಿಶಿಷ್ಟ [illegible] ಪ್ರವಾಹವು [illegible] ಹೋಗುತ್ತಿರುವುದು ದುರ್ದೈವದ ಸಂಗತಿ. ಇಂದು ನಮ್ಮಲ್ಲಿ ಸಾಂಸ್ಕೃತಿಕ ದಾರಿದ್ರ್ಯವು ಬೆಳೆಯುತ್ತಿದೆ. ಆದ್ದರಿಂದ ರಾಷ್ಟ್ರಗುಣವನ್ನು [illegible] ಸಂಸ್ಕಾರ ರಕ್ಷಣೆಯ ಕಾರ್ಯವನ್ನು [illegible] ಮೊದಲು ಕೈಕೊಳ್ಳಬೇಕಾಗಿದೆ. [illegible] ಅಂಗದಲ್ಲಿ ವಂಶಪರಂಪರಾಗತವಾಗಿ ಬಂದಿರುವ ವಿಶೇಷ ಗುಣವು ಅಭಿವೃದ್ಧಿಗೊಳ್ಳುವಂತೆ ಅದಕ್ಕೆ ಪ್ರಾಚೀನ ಪರಂಪರೆಯ ಶಿಕ್ಷಣವನ್ನು ಕೊಡಬೇಕಾಗಿದೆ. ಹಿಂದೂದೇಶದ ಎಲ್ಲಾ ಪ್ರಾಚೀನ ಸಂಸ್ಕೃತಿ ವಿಚಾರಗಳು ಸಂಸ್ಕೃತಭಾಷೆಯ ಅಮೂಲ್ಯವಾದ ಭಾಂಡಾರದಲ್ಲಿ ಅಡಗಿರುವುವು. ಆದುದರಿಂದಲೇ ನಮ್ಮ ನಷ್ಟದ ಮತ್ತು ಸಂಸ್ಕೃತಿಯ ಪುನರ್ಘಟನೆಯುಂಟಾಗಬೇಕಾದರೆ ಸಂಸ್ಕೃತ ಭಾಷೆಯ ಅಭ್ಯಾಸವು ಅತ್ಯಾವಶ್ಯಕವಾಗಿರುವುದು. ಹಿಂದೂದೇಶದ ಅನೇಕ ಪ್ರಮುಖ ಭಾಷೆಗಳು ಸಂಸ್ಕೃತದಿಂದಲೇ ಹುಟ್ಟಿರುವುವು. ಸಮಗ್ರ ಪ್ರಾಚೀನ ಜ್ಞಾನವೂ ವೇದಾಂತವೂ ಸಂಸ್ಕೃತದಲ್ಲಿ ಇರುವುದರಿಂದ ಅನೇಕ ಭಾಷೆಗಳಿಗೆ ಈ ಭಾಷೆಯಿಂದ ಸ್ಫೂರ್ತಿಯು ದೊರೆತಿದೆ. ಈ ದೃಷ್ಟಿಯಿಂದ ಭಾರತೀಯ ಪ್ರಾಂತ್ಯಗಳ [illegible] ಅದರ ಉಪಯೋಗವಾಗುವಂತೆ. ಹಿಂದೂ ದೇಶದಲ್ಲಿ ಜನಸಾಮಾನ್ಯರೆಲ್ಲರೂ ಸ್ಫೂರ್ತಿ ಮತ್ತು ಉಪದೇಶವನ್ನು ಪಡೆಯುವಂಥಾದ್ದು ಆ ವೇದ ಪುರಾಣಗಳಿಂದ. ಸುಶಿಕ್ಷಿತರಾದ ಅಲ್ಪ ಸಂಖ್ಯಾಕ ಜನರು ಮಾತ್ರ ಪಾಶ್ಚಾತ್ಯ ಗ್ರಂಥಕಾರರ ಅನುಯಾಯಿಯಾಗಿರುವುದು. ಸಾಮಾನ್ಯರು ಮತ್ತು ಸುಶಿಕ್ಷಿತರಂತೆಯೇ ಮನೆಗಳಲ್ಲಿ ಸ್ತ್ರೀ ಮತ್ತು 'ಸ್ಮೃತಿಕಾರರುಗಳು' ಬೇರೆ ಬೇರೆ ಆಗಿರುವುದು. ಆದುದರಿಂದ ನಮ್ಮ ಸಮಾಜದ ಕಟ್ಟಿನಲ್ಲಿಯೂ ಶಿಥಿಲತೆಯು ಕಂಡುಬರುತ್ತದೆ. ನಿಜವಾಗಿ ಸಂಸ್ಕೃತ ಭಾಷೆಯು ಶಾಂತವಾದ ಆಧ್ಯಾತ್ಮಿಕ ಸಂಸ್ಕೃತಿಯನ್ನು ಜಗತ್ತಿಗೆ ಬೋಧಿಸಿದರೆ ಈ ಕಾಲದ ಎಷ್ಟೋ ಪ್ರಶ್ನೆಗಳನ್ನು ಸಾಮೋಪಚಾರದಿಂದ ಬಿಡಿಸುವ ಮಾರ್ಗವು ದೊರೆಯುವುದರಲ್ಲಿ ಸಂಶಯವಿಲ್ಲ. ನಮ್ಮ ಹಿಂದೂಸ್ಥಾನದ ವಿದ್ಯಾಲಯಗಳಲ್ಲಿ ಸಂಸ್ಕೃತ ಭಾಷೆಯ ಸ್ವಂತ ವ್ಯಾಸಂಗಕ್ಕಾಗಿ ವಿದೇಶೀಯ ವಿದ್ವಾಂಸರಿಗೆ ಅನುಕೂಲತೆಯನ್ನುಂಟುಮಾಡಿಕೊಡಬೇಕು. ಆದರೆ ಈಗಿನ ಪರಿಸ್ಥಿತಿಯು ವಿರೋಧವಾಗಿದೆ, ನಮ್ಮ ವಿದ್ಯಾರ್ಥಿಗಳು ನಮ್ಮ ದೇಶೀಯ ಸಂಸ್ಕೃತಿಯನ್ನು ಅಧ್ಯಯನ ಮಾಡಲು ಪರದೇಶದ ಯುನಿವರ್ಸಿಟಿಗಳ ಕಡೆಗೆ ಓಡಿ ಹೋಗಬೇಕಾಗಿದೆ. ಅಧ್ಯಾಪಕರ ಶಿಕ್ಷಣಕ್ಕೆ ಪೂರ್ಣವಾಗಿ ದೇಶೀಯ ಸ್ವರೂಪವನ್ನು ಕೊಡುವುದರಿಂದ ಪರರಾಷ್ಟ್ರದೊಂದಿಗೆ ಸಮಾನವೆನಿಸದಿದ್ದರೂ, ಕೊನೆಗೆ ಶಿಕ್ಷಣರೂಪದಿಂದಲಾದರೂ ಹಿಂದೂಸ್ಥಾನವು ತಲೆಯೆತ್ತಿ ನಿಲ್ಲಬೇಕು.

'The Aryan Path'

ಕಾಗದ ಬರೆಯುವ ಕಲೆ.

ಸ್ವಾರಸ್ಯವಾದ ಲೇಖನದಿಂದ ಪ್ರಯೋಜನವೇನು? ಉತ್ತಮ ಶೈಲಿಯ ಪತ್ರದ ಕುರಿತಾಗಿ ಒಬ್ಬನು ಹೀಗೆಂದಿರುವನು "ಅದರಲ್ಲಿ ಜನಗಳ ಗೊಂದಲವಿಲ್ಲ, ದಿಗ್ಭ್ರಮಾತಿಶಯವೂ ಇಲ್ಲ, ಸತ್ಯ ಶೋಧನೆಯ [illegible] ಏನೂ ಕಾಣದಿರುವುದು [illegible] ಇಲ್ಲದಿದ್ದರೂ [illegible] ವಿಷಯಗಳಿರುವುವು. ಪ್ರೇಮದ ನೆಲೆ ಕಂಡುಬಾರದಿದ್ದರೂ ಅದರಲ್ಲಿಯೂ ಕಥೆಯು ಇರುವುದು." ಪತ್ರವೆಂದರೆ ಕಾಗದದ ಮೇಲೆ [illegible] ಸತ್ಯಪೂರ್ಣವಾದ ಪ್ರಿಯವು. ಆದ ಸಂಭಾಷಣೆ ಪತ್ರವನ್ನು ಬರೆಯುವವನು ತನ್ನ ಪ್ರೀತಿಯ ಮಿತ್ರನ ಕೊಠಡಿಗೆ ಹೋಗಿ ಸಮೀಪವರ್ತಿಯಾಗಿ, ಅವನೊಂದಿಗೆ ತನ್ನ ಮನಸ್ಸಿನಲ್ಲಿರುವುದನ್ನು ಹೇಳಿಕೊಳ್ಳುವನು. [illegible] ಎಂಬವನು ಪತ್ನಿಗೆ ಬರೆದ ಪತ್ರವನ್ನು ನೋಡಬಹುದು — "ನಾನು ನಿಮಗೆ ಪತ್ರವನ್ನು ಬರೆಯುವುದಕ್ಕೆ ಕುಳಿತಾಗ [illegible] ನಾನು ನಿಮ್ಮ ಬಳಿಯೇ [illegible] ಭಾಸವಾಗುತ್ತದೆ. ಕಿಟಕಿಯಿಂದ ಹೊರಬಿದ್ದು ಅಂದಿನ ವೇಗದಿಂದ ಒಂದು ಪಕ್ಷಿಯಂತೆ ನಾನು ಹಾರಾಡಲಾರಂಭಿಸುವೆನು. [illegible] ಬೆಟ್ಟಗುಡ್ಡಗಳ ಮೇಲೆ ಸೂರ್ಯಕಿರಣಗಳನ್ನು ಬಾಣದ ವೇಗದಿಂದ ಭೇದಿಸುತ್ತ ನಿಮ್ಮ ಮನೆಯ ಕಿಟಕಿಯ ಬಳಿಯಿಂದ "ಈಗ ಸರಿಯಾಗಿದೆಯೋ" ಎಂದು ಕೇಳುವೆ.

Indian Review

ಹಿಂದೀ ರಾಷ್ಟ್ರೀಯತೆಯ ಕುರಿತು ಅಮೇರಿಕಾನರ ಅಭಿಪ್ರಾಯ

"ಹಿಂದೂದೇಶದಲ್ಲಿ ನೂತನ ರಾಷ್ಟ್ರೀಯ ಚಳವಳಿ [illegible] ಕುರಿತು [illegible] Atlantic Monthly" [illegible] ಪತ್ರಿಕೆಯಲ್ಲಿ ಬರೆದ [illegible] —"ಹಿಂದೀ [illegible] ಸ್ವತಂತ್ರ [illegible] ದೇಶ [illegible] ಅವರಿಗೆ [illegible] ಸಂಸ್ಕೃತಿ [illegible] ಬೇಕೆ? ಈ ಪ್ರಶ್ನೆಗಳಿಗೆ ಅನೇಕ [illegible] "ಕರ್ಮವು [illegible] ಅಗತ್ಯವೇನೋ [illegible] ತಮ್ಮ ದೇಶದಲ್ಲಿ [illegible] ಈ ವಿಷಯ [illegible] ಇನ್ನೊಂದು [illegible] ಬ್ರಿಟಿಷ್ [illegible] ತನ್ನ ಸ್ವಂತ [illegible] ಶೃಂಗಾರಗಳನ್ನು [illegible] ಬಂಗಾಲದ ಜಾಡ್ ವೆಲ್ಲಿಂಗ್ ಟನ್ ಎಂಬವನ [illegible] ಅನಗತ್ಯವೆಂದು [illegible] ಬೆಳ್ಳಿಯನ್ನು [illegible] ಇದನ್ನು [illegible] ಅಲ್ಲದೆ [illegible] ಆದರೆ ಸರಕಾರವು ಅಂತಹ ಬೆಳ್ಳಿಯನ್ನು ಆಗ್ರಹದಿಂದ ಇಟ್ಟುಕೊಳ್ಳುವ [illegible] ಜನತೆಗೆ ಬೇಕಾದ ಅಧಿಕಾರ ಎಲ್ಲಿಂದ ಬರಬೇಕು? ಇಂಗ್ಲೆಂಡಿಗೆ [illegible] ವನ್ನು [illegible] ಇನ್ನೊಂದು [illegible] ಆದರೆ ಹಿಂದೂದೇಶವು ತನ್ನ ರಕ್ಷಣೆಯನ್ನು ತಾನು ಮಾಡಿಕೊಳ್ಳಲಾರದು [illegible] ಈ ಬಗೆಯಾದ ಉಪಾಯಗಳನ್ನು [illegible] ಸಾಧ್ಯ? ಈ ಉತ್ತರದ [illegible] ಸಮಾಲೋಚನೆಗೆ [illegible] ಮುಖ್ಯ ತಾತ್ಪರ್ಯವೆಂದರೆ ಹಿಂದೂದೇಶದ ಜನರಿಗೆ ತಮ್ಮ ದೇಶದ ಆಡಳಿತದಲ್ಲಿ ಯಾವ ಅಧಿಕಾರವೂ ಇರುವುದಿಲ್ಲ. ಹೀಗಿರುವುದರಿಂದ ಅವರು ತಮ್ಮ ಇಚ್ಛಾನುಸಾರ ಯಾವುದನ್ನೂ ನಡೆಸಲಾರರು. ಅನ್ಯಾಯವಾದ ಶಾಸನಗಳಿಂದ ತಮ್ಮ ರಕ್ಷಣೆ ಹೊಂದಲು ಅವರಿಗೆ ಅವಕಾಶವಿಲ್ಲ. ತಮ್ಮ ಪ್ರಗತಿಗಾಗಿ ಇರುವ ವಿಚಾರಗಳನ್ನು ಮಂಡಿಸಿಕೊಳ್ಳಲು ಅವಕಾಶವಿಲ್ಲ. ಪ್ರೇಮ ಮತ್ತು ಸಹಾನುಭೂತಿಗಳನ್ನು ಸರಕಾರಕ್ಕೆ ತೋರಿಸದೆ ದೂರವಿರುವ ದೇಶವು ಹಿಂದೂದೇಶದಂತೆ ಇನ್ನೊಂದಿಲ್ಲ. ಲಾರ್ಡ್ ರಿಪ್ಪನರ ಕಾಲದಿಂದ ಈ ಪರಿಸ್ಥಿತಿಯು ತಲೆದೋರಿದೆ. ಲಾರ್ಡ್ ಕರ್ಜನರ ಕಾಲದಲ್ಲಿ ಇದು ವಿಷಮತೆಯನ್ನು ಹೊಂದಿತು."

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದ ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಭರ್ಗಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ವಿಚಸ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾಯುತ ಸಮೇತ

ಋಗ್ವೇದೀ ಸಂಧ್ಯಾವಂದನೆ

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ,

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಅವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ
ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು

ಒಂದು ತಿಂಗಳಲ್ಲಿ ಅಮೋಘವಾದ ಗುಣ, ಇದು ಜಾಡ್ಯವನ್ನು ಗುಣಪಡಿಸವುದಲ್ಲದೆ ವ್ಯಾಧಿಯು ಬಾರದಂತೆ ತಡೆಮಾಡುವುದು

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವೆ

ತಯಾರಿಸುವವರು ಆಯುರ್ವೇದಾಶ್ರಮ, ಪೋ. ಬೋಕ್ಸ್ 387, ಮದರಾಸು
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕೊಲೆರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ
ಕ್ರಯ ಸೀಸೆ 1ಕ್ಕೆ ರೂ 1—0—0

ಗುಹ್ಯರೋಗ ನಿವಾರಿಣೀ ತೈಲ
Anti-Veneraei Oil
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ ಲಕ್ಷಣ ತಿಂಗಳಿಯ ವ ತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು
8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ 3—8—0.

ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ
ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು

ಹೊಸ ಕೆಟಲಾಗು ಧರ್ಮಾರ್ಥ.
ವಿಳಾಸ
The Scientific Gold Bangles Co., Ltd.,
Head Office —43, Byragimutam Street,
Post Box No 208, Madras.

ಮನೆಯಲ್ಲಿನ ಉಪಯೋಗಕ್ಕೂ, ಸಣ್ಣ ತೋಟಗಳನ್ನುಳುವುದಕ್ಕೂ

ಕಿರ್ಲೋಸ್ಕರ
ಹೌಸ್ ಸಿಸ್ಟಮ್ ಪಂಪು.

ನಿಮಗೆ ಪೂರ್ಣ ಸಂತೃಪ್ತಿಯು ನೀಯುತ್ತದೆ

ಒಂದು ಗುಂಡಿಯನ್ನೊತ್ತಿದರೆ ಸರಿ; ಪಂಪು ತನ್ನಷ್ಟಕ್ಕೆ ನಡೆಯುತ್ತದೆ.

ಎಲ್ಲಿಂದಾದರೂ, ½ ಇಂಚು ಪೈಪಿನ ಮೂಲಕ ನೀರನ್ನು ಒದಗಿಸಿ ಕೊಡುತ್ತದೆ.



¼ B H. P. ವಿದ್ಯುತ್ ಮೋಟರಿನೊಂದಿಗೆ ಪೂರ್ಣವಾಗಿರುತ್ತದೆ.

ವಿವರಕ್ಕೆ ಈ ಕೆಳಗಿನವರಿಗೆ ಬರೆಯಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ. ಸತಾರಾ.

ಡಿಸ್ಟ್ರಿಬ್ಯೂಟರರು—ಪೆರ್ರಿ ಎಂಡ್ ಕೋ, ಲಿಮಿಟೆಡ್, ಮದ್ರಾಸು

An Advertisement in
'Swadeshabhimani'
Means a sure fortune to you
Ask for Contract Rates
The Swadeshabhimani office,
Car Street, Mangalore

ಕುಷ್ಠ ರೋಗ ಮತ್ತು ಫರಂಗಿ ರೋಗ

ಇತರ ಎಷ್ಟು ದೀರ್ಘಕಾಲದ ರೋಗವೇ ಆಗಿರಲಿ ಯಾವ ಕಾರಣವೇ ಇರಲಿ, ನೀವು ಮದ್ದು ಮಾಡಿ ಮಾಡಿ ದಣಿದಿರಿ ನಿಮ್ಮ ರೋಗಗಳನ್ನು ಇಂದ್ರಜಾಲದಂತೆ ಶಾಶ್ವತವಾಗಿ 4 ವಾರಗಳಲ್ಲಿ ಗುಣಪಡಿಸಲಾಗುತ್ತದೆ ಪೂರ್ಣ ಗುಣ ಗ್ಯಾರಂಟಿ

ವಿವರಕ್ಕೆ ಬರೆಯಿರಿ.

Kamala Works,
Panchpota Bengal S B
C P S

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ.

ಹೊಸತಾಗಿ ಆಮದಾದುದು ದೊರೆಯುವ ಇತರ ಕ್ಯಾಮರಗಳಿಗಿಂತ ಬಾಳಿಕೆ ಬರುವಂಥದು ಮತ್ತು ಉತ್ತಮವಾದುದು. ಫೋಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ. ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್ ೬ ಫಿಲ್ಮ್ ಎಕ್ಸ್‌ಪೋಜರ್ಸ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಅವಶ್ಯಕವಾದ ರಸಾಯನಿಕ ವಸ್ತುಗಳು, ಫೋಟೋ ತೆಗೆಯುವ ವಿಧಾನ, ಶಿಕ್ಷಣಕೊಡುವ ಸಾಹಿತ್ಯ—ಇವು ಉಚಿತವಾಗಿ ಕಳುಹಿಸಲಾಗುತ್ತದೆ ಬಲವಾದ ಲೆನ್ಸ್. ಬೆಲೆ ಸಾಮಾನ್ಯವಾದುದು ರೂ. ೩—೧೨—೦, ಉತ್ತಮವಾದುದು ೬—೧೨—೦ ಮಡಚುವ ಕ್ಯಾಮರಾ ರೂ ೫. ಉತ್ತಮವಾದ್ದು ರೂ ೭ ಸ್ಪೆಶಲ್ ರೂ. ೧೦, ಹೆಚ್ಚಿಗೆ ಫಿಲ್ಮ್ ಬೇಕಾದರೆ ಡಜನ್ ೧ಕ್ಕೆ ೩ ಆಣೆ. ಎನ್‌ಲಾರ್ಜ್‌ಮೆಂಟಿನ ಸಾಧನಾ ಸಾಮಗ್ರಿ ೧ ಶೀಸೆಗೆ ೪ ಆಣೆ, ಫಿಕ್ಸಿಂಗ್ ಸಾಲ್ಟ್ ೧ ಡಬ್ಬಿಕ್ಕೆ ೩ ಆಣೆ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ. ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ

ಭಾರತ ಯೂನಿಯನ್ ಟ್ರೇಡಿಂಗ್ ಕಂ.
ಪೋಸ್ಟ್‌ಬಾಕ್ಸ್ ನಂಬ್ರ ೨೪೯ (ಎಸ್ ಎ) ಕಲ್ಕತ್ತ.

ಪುಸ್ತಕ ವಿಮರ್ಶೆ.

[ಈ ಒಂದು ಭಾಗದಲ್ಲಿ ಸದಾಗ ಪ್ರಾರಂಭ್ರತಿ ಬರುವ ಸಾಹಿತ್ಯಗಳನ್ನು ಒಂದೊಂದಾಗಿ ವಿಮರ್ಶಿಸ ಬೇಕೆಂದಿರುತ್ತೇವೆ ಪ್ರಕಾಶಕರೂ, ಲೇಖಕರೂ ತಂತಮ್ಮ ಕೃತಿಗಳನ್ನು ನಮ್ಮ ವಿಮರ್ಶೆಗಾಗಿ ಕಳುಹಿಸಿಕೊಡ ಬಹುದು]

ಹ-ರಿ-ಜ-ನ್ವಾ-ರ.

ಸಾಮಾಜಿಕ ನಾಟಕ, ಲೇಖಕರು ಶ್ರೀರಂಗ ಬೆಲೆ ಸಾದಾ ಪ್ರತಿಗೆ ೦-೧೨-೦ ಕ್ಯಾಲಿಕೊ ೧-೦-೦ ಪ್ರಕಾಶಕರು ಗೋವಿಂದ ವೆಂಕಟೇಶ ಚುಳಕಿ ಸಾಧನಕೇರಿ, ಧಾರವಾಡ

ಶ್ರೀರಂಗರ ಹ-ರಿ-ಜ-ನ್ವಾರವು ಪ್ರಕಟವಾದ ಸ್ವಲ್ಪ ಸಮಯದಲ್ಲಿ ಧಾರವಾಡದ ವೈಷ್ಣವ ತಂಡಗಳು ಉದ್ರೇಕಗೊಂಡು, ಹರಿಜನ್ವಾರದ ಕಡೆ ಸಾರ್ವಜನಿಕರ ಲಕ್ಷ್ಯವು ಹರಿದದ್ದುದನ್ನು ನಾವು ಕೇಳಿದ್ದೆವು-ಎಂದಾಗ ಈ ನಾಟಕವು, ಸಾಮಾಜಿಕ ನ್ಯೂನತೆಗಳನ್ನು ಹೋಗಲಾಡಿಸುವ ಉದ್ದೇಶದಿಂದಲೇ ಬರೆಯಲ್ಪಟ್ಟುದೆಂದೂ, ಈ ಸಾಹಸದಲ್ಲಿ ಲೇಖಕರು ಸತ್ಯನಿರೂಪಣೆ ಮಾಡಹೋಗಿ ಟೀಕೆಗೆ ಗುರಿಯಾಗಿರುವರೆಂದೂ ವ್ಯಕ್ತವಾಗುವುದು 'ಇಂದು ಬ್ರಾಹ್ಮಣರೆಂದು (ಇಲ್ಲವೆ ಈ ಪ್ರಸಂಗದಲ್ಲಿ ವೈಷ್ಣವರೆಂದು) ಜನಿವಾರದ ಆಣೆ ಮಾಡುವವರು ಮೊದಲು ಆ ಜನಿವಾರದ ನಡುವೆ ಹುದುಗಿದ ಹೃದಯವನ್ನು ಪರೀಕ್ಷಿಸಿಕೊಳ್ಳಬೇಕು, ತಮ್ಮಲ್ಲಿ ಬ್ರಾಹ್ಮಣ್ಯದ ಯೋಗ್ಯತೆ ಇದ್ದಲ್ಲಿ ಮಾತ್ರ-ಇರುವ ವರೆಗೆ ಮಾತ್ರ-ಬ್ರಾಹ್ಮಣ್ಯದ ವಿಷಯವಾಗಿ ಮಾತನಾಡಲು ಅಧಿಕಾರ ಈ ನಾಟಕದಲ್ಲಿಯ ತಾತ್ಯಾಚಾರಿಗೆ ಶ್ರೀನುದಾನಂದ ತೀರ್ಥರ ಹೆಸರನ್ನು ನಾಲಗೆಯಿಂದ ನುಡಿಯಲು ಕೂಡಾ ಯೋಗ್ಯತೆ ಇಲ್ಲ, ವಸಂತನಂತಹವರಿಗೆ ಟೀಕಾಚಾರ್ಯರನ್ನು ಮೀರಬೇಕೆಂಬ ಆಕಾಂಕ್ಷೆ ಮಾತ್ರ ಇದೆ ದೊಡ್ಡರಾಯರಿಗೆ ತಿಳಿವಳಿಕೆ ಬೇಕು, ತತ್ವಬೇಡ, ಶ್ಯಾಮನಿಗೆ ಆತ್ಮವಿಶ್ವಾಸವಿಲ್ಲ, ಯಮುನೆಗೆ ಧೈರ್ಯವಿಲ್ಲ-ಆದರೆ ಕೇವಲ ಹೃದಯದ ಕಳಕಳಿಯುಳ್ಳ ವೇಣುಕ್ಕನೊಬ್ಬಳೇ ಕೊನೆಗೆ ಗಾಯಗೊಂಡ ಹೊಲೆಯರ ಕೂಸನ್ನು ಹಿಡಿದೆತ್ತುವಳು ಇದೇ ಧರ್ಮದ ರಹಸ್ಯವಲ್ಲವೇ? ಇನ್ನು ಪರಮಾತ್ಮನು ಹೃದಯದಲ್ಲಿಲ್ಲದಿರಲು ಆ ಹೃದಯಕ್ಕೆ ಹೊಲಸಾಗಿ ಅಂಟಿಕೊಳ್ಳುವ ಜನಿವಾರದಂತಹ ಬಾಹ್ಯ ಚಿಹ್ನೆಗಳ ಉಪಯೋಗವೇನು?' ಎಂಬ ಲೇಖಕರ ನುಡಿಯಿಂದಲೇ ಅವರ ಉದ್ದೇಶವು ವ್ಯಕ್ತವಾಗುವುದು ಧರ್ಮ ಧರ್ಮವೆಂದು ಬೊಬ್ಬಿಡುವ ಧಾರ್ಮಿಕ ವ್ಯಕ್ತಿಗಳು ಕೆಲವರ ಅಂತರ್ಜೀವನದ ಚಿತ್ರಣವು ಈ ನಾಟಕದಲ್ಲಿ ಪ್ರಶಂಸನೀಯವಾಗಿ ಮಾಡಲ್ಪಟ್ಟಿದೆ. ಉತ್ತಮ ಕುಲದವರೆಂಬವರು ಅಸ್ಪೃಶ್ಯರಾದ-ಗುಣಾಢ್ಯರಾದ-ಯಮುನೆಗಿತ್ತ ಬಾಧೆಯು ವಾಚಕರ ಸಹಾನುಭೂತಿಯನ್ನು ಅವಳ ಕಡೆ ಎಳೆಯುತ್ತದೆ ತಾತ್ಯಾಚಾರಿಗಳ ಅಂಧಶ್ರದ್ಧೆಯು ಅವರನ್ನೇ ಜನರ ಅಪಹಾಸ್ಯಕ್ಕೆ ಗುರಿಮಾಡುವಂತೆ ಸ್ಪಷ್ಟೀಕರಿಸಲ್ಪಟ್ಟಿದೆ ವಸಂತ, ಅಂತಪ್ಪ ದೊಡ್ಡ ರಾಯರು ಮೊದಲಾದ ಎಲ್ಲಾ ಪಾತ್ರಗಳ ಸ್ವಭಾವ ಚಿತ್ರವು ಸರ್ವಗ್ರಾಹ್ಯವಾಗುವಂತೆ ಮಾಡಲ್ಪಟ್ಟಿದೆ ನಾಟಕದ ಭಾಷೆಯು ಸಾಹಿತ್ಯಕವಲ್ಲದೆ ಗ್ರಾಮ್ಯ ಭಾಷೆಯೇ ಆಗಿರುವುದರಿಂದ ನಾಟಕವು ಸಾಮಾನ್ಯರಿಗೂ ಅರ್ಥವಾಗುವಂತಿದೆ ಈ ನಾಟಕವು ಜನಜೀವನಕ್ಕೆ ವಿಕಾಸವಾದವನ್ನು ಅನಾಯಾಸವಾಗಿ ಬೋಧಿಸುವುದೆಂಬುದರಲ್ಲಿ ಸಂದೇಹವೇ ಇಲ್ಲ ಈ ನಾಟಕ ಕರ್ತರಾದ ಶ್ರೀರಂಗರು ಕನ್ನಡನಾಡಿನ ಅಭಿವಂದನೆಗೆ ಪಾತ್ರರಾಗಿರುತ್ತಾರೆ ಇವರಿಂದ ಇದೇ ರೀತಿಯ ಇನ್ನೂ ಅನೇಕ ಗ್ರಂಥಗಳು ಹೊರಗೆ ಬರಲೆಂದು ಹಾರೈಸುವೆವು

ಮು. ಜಾ

ಮೈಸೂರಿನ ಸಮಾಚಾರಗಳು.

ಬೆಂಗಳೂರು ಪತ್ರ
(ನಮ್ಮ ಸ್ವಂತ ಪ್ರತಿನಿಧಿಯಿಂದ)
ಬೆಂಗಳೂರು, ತಾ. ೪-೬-೧೯೩೪.

ಮೈಸೂರಿನ ಶ್ಯಾನುಭೋಗರ ಮುಂದಿನ ಪಾಡು.

ಈಗ ಮೈಸೂರು ದೇಶದಲ್ಲಿ ಶ್ಯಾನುಭೋಗ (ಕರಣಿಕ) ತನವು ವಂಶ ಪಾರಂಪರ್ಯವಾದುದು. ತಂದೆಯು ಶ್ಯಾನುಭೋಗನಾಗಿದ್ದು ಅವನು ಸತ್ತರೆ ಆ ವೃತ್ತಿ ಮಗನಿಗೆ ಹೋಗುತ್ತದೆ, ಮಗನಿಗೆ ಆ ಕೆಲಸ ನೋಡಲು ಇಷ್ಟವಿಲ್ಲದಿದ್ದರೆ ತನ್ನ ಪರವಾಗಿ ಬೇರೆಯವರನ್ನು ಆ ಕೆಲಸಕ್ಕೆ ನೇಮಿಸಿಕೊಳ್ಳಬಹುದು

ಮೈಸೂರು ಸರಕಾರದವರು ಈ ವೃತ್ತಿಯನ್ನು ಇನ್ನು ಮೇಲೆ ವಂಶ ಪಾರಂಪರ್ಯವಾಗಿ ಇರದಂತೆ ಮಾಡಬೇಕೆಂದು ಪರ್ಯಾಲೋಚಿಸುತ್ತಿದ್ದಾರೆ ಈ ಸಂಬಂಧವಾಗಿ ಇನ್ನು ಕೆಲವು ದಿವಸಗಳಲ್ಲಿಯೇ ಸರಕಾರದ ಹುಕುಮು ಹೊರಡುವುದಾಗಿ ವರ್ತಮಾನ

ಈ ವಿಚಾರ ಬಹಳ ಕಾಲದಿಂದಲೂ ಲೆಜಿಸ್ಲೇಟಿವ್ ಕೌನ್ಸಿಲಿನ ಮುಂದೆ ಬರುತ್ತಿದ್ದಿತು ಈ ವಿಷಯವಾಗಿ, ಸರಕಾರದ ಪರವಾಗಿ, ಶ್ರೀ ಕೆ ಮ್ಯಾಥನ್ ಸಾಹೇಬರು ಒಂದುಕಡೆ ಈ ರೀತಿ ಅಪ್ಪಣೆಕೊಡಿಸಿದ್ದಾರೆ

'ಸಾರ್ವಜನಿಕ ಹುದ್ದೆಗಳನ್ನು ಎಂದೆಂದೂ ವಂಶಪಾರಂಪರ್ಯವಾಗಿ ಇರಲವಕಾಶ ಕೊಡಲು ಸರಕಾರಕ್ಕೆ ಇಷ್ಟವಿಲ್ಲ ಶ್ಯಾನುಭೋಗ ಹುದ್ದೆಯಲ್ಲಿ ಈಗ ಇರುವ ವಂಶ ಪಾರಂಪರ್ಯ ಲಕ್ಷಣವನ್ನು ಆದಷ್ಟು ಬೇಗ ತೆಗೆಯಬೇಕೆಂದು ಸರಕಾರದ ಯೋಚನೆ. ಇದೇ ನೀತಿಯು ಹಳ್ಳಿಗಳ ಇತರ ಪಟೇಲ ತಳವಾರ ಮುಂತಾದವರ ಹುದ್ದೆಗಳಿಗೂ ಅನ್ವಯಿಸುತ್ತದೆ. ಈ ಪ್ರತಿಯೊಂದು ಹುದ್ದೆಯಲ್ಲಿಯೂ ಯಾವುದನ್ನು ಈಗಿರುವ ಸ್ಥಿತಿಯಿಂದ ಬದಲಾಯಿಸಬೇಕೆಂಬುದನ್ನು ನಿರ್ಧರಿಸುವುದರಲ್ಲಿ, ಬದಲಾವಣೆಯಾಗಬೇಕಾಗಿರುವ ಆವಶ್ಯಕತೆ ಅದರಿಂದಾಗುವ ಅನುಕೂಲ ಅನಾನುಕೂಲಗಳನ್ನು, ಪರಿಶೀಲಿಸಿ ಕೆಲಸ ನಡೆಸಬೇಕಾಗಿದೆ'

ನೂತನ ಸರ್ಕಾರಿ ಹೈಸ್ಕೂಲು.

ಇದುವರೆಗೂ ಲಂಡನ್ ಮಿಷನ್ ಹೈಸ್ಕೂಲು ಇದ್ದ ಕಟ್ಟಡದಲ್ಲಿ 'ಗವರ್ನಮೆಂಟ್ ಸೆಂಟ್ರಲ್ ಹೈಸ್ಕೂಲು, ಬೆಂಗಳೂರು' ಎಂಬ ಹೊಸ ಹೈಸ್ಕೂಲನ್ನು ಇದೇ ಜೂನ್ ೭ನೆಯ ತಾರೀಕಿನಿಂದ ಪ್ರಾರಂಭಿಸಿ ನಡೆಸಲಾಗುವುದೆಂದು ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರು ಪ್ರಕಟಪಡಿಸಿದ್ದಾರೆ ಇದುವರೆಗೆ ಇದ್ದ ಲಂಡನ್ ಮಿಷನ್ ಹೈಸ್ಕೂಲು ಈ ಮೊದಲೇ ವೆಸ್ಲಿಯನ್ ಮಿಷನ್ ಹೈಸ್ಕೂಲಿನೊಡನೆ ಸಮ್ಮೇಳನವಾಗಿ, ಅದರ ಜತೆಗೆ ಸೇರಿಹೋಯಿತು.

ಸರ್. ಮಿರ್ಜಾ ಎಂ. ಇಸ್ಮಾಯಿಲರವರು.

ಮೈಸೂರು ದಿವಾನರವರಾದ ಸರ್ ಮಿರ್ಜಾ ಎಂ ಇಸ್ಮಾಯಿಲ್‌ರವರು ಕಲ್ಕತ್ತೆಯಲ್ಲಿ ನಡೆಯಲಿರುವ ಶ್ರೀ ರಾಮಕೃಷ್ಣ ಪರಮಹಂಸರ ಶತಸಾಂವತ್ಸರಿಕ ಉತ್ಸವದ ಉಪಾಧ್ಯಕ್ಷರಾಗಲು ಸಮ್ಮತಿಸಿರುವರೆಂದು ವರ್ತಮಾನ

ಕಳವು.

ಮೊನ್ನೆ ಶುಕ್ರವಾರ ಯಾರೋ ಕೆಲವರು ಮೈಸೂರು ಲಕ್ಷ್ಮೀಪುರದಲ್ಲಿರುವ ಶ್ರೀಮತಿ ಕೆ ಡಿ ರುಕ್ಮಿಣಿಯಮ್ಮ (ಮಹರಾಣಿ ಕಾಲೇಜಿನ ರಿ ಸುಪರಿಂಟೆಂಡೆಂಟರವರು) ನವರ ಮನೆಗೆ ನುಗ್ಗಿ ಸುಮಾರು ೧,೬೦೦ ರೂಪಾಯಿ ಬೆಲೆಬಾಳುವ ಒಡವೆ ವಸ್ತುಗಳನ್ನು ಅಪಹರಿಸಿಕೊಂಡು ಹೋಗಿರುವರೆಂದು ತಿಳಿದುಬಂದಿದೆ ಪೋಲೀಸಿನವರು ಪತ್ತೆ ನಡೆಸುತ್ತಿದ್ದಾರೆ

ಬಾಬು ರಾಜೇಂದ್ರ ಪ್ರಸಾದರು ತಾ ೩ನೇ ದಿನ ಹೀಗೆಂದು ಅರಿಕೆಮಾಡಿಕೊಂಡಿರುವರು —

"ಬಿಹಾರಿನಲ್ಲಿ ೧೬ ತಿಂಗಳುಗಳ ಹಿಂದೆ ನಡೆದ ಭೂಕಂಪದಿಂದುಂಟಾದ ಅನುಭವವು ಚಿತ್ತದಲ್ಲಿ ಪ್ರತ್ಯಕ್ಷವಾಗಿರುವಾಗಲೇ ಮೊನ್ನೆ ಆದಾದ ಕ್ವೆಟ್ಟಾದ ವಿವರವನ್ನು ಓದಿ ಬಿಹಾರಿನಲ್ಲಾದ ಭೂಕಂಪದಂತಹ ಇನ್ನೊಂದು ಅನಾಹುತವನ್ನು ಎದುರಿಸಲು ಸಿದ್ಧನಾದೆ ವಿವರಗಳು ಪೂರ್ಣವಿಲ್ಲದಿದ್ದರೂ, ಅತಿ ಕಠೋರತರ ಘಟನೆಗಳಾದವೆಂದು ಹೇಳುವುದರಲ್ಲಿ ಸಂದೇಹವಿಲ್ಲ ಈಗೀಗ ಬರುತ್ತಿರುವ ವಾರ್ತೆಗಳಿಂದಾಗಿ ನನ್ನ ಭಯಂಕರ ಸಂದೇಹಗಳು ಪೂರ್ಣಗೊಂಡಿವೆ ಪ್ರಕೃತಿಯ ಸಿಟ್ಟಿಗೆ ತುತ್ತಾದ ನನ್ನ ಭ್ರಾತೃ ಭಗಿನಿಯರ ಸಂಕಷ್ಟಕ್ಕಾಗಿ ನನ್ನ ಹೃದಯಪೂರ್ವಕ ಸಹಾನುಭೂತಿಯಿದೆ. ಕಾಂಗ್ರೆಸ್ಸಿನ ಪರವಾಗಿ ನಾನು ಅಲ್ಲಿಯವರಿಗೆ ಸಹಾನುಭೂತಿಯನ್ನು ಈ ಮೂಲಕ ಕಳುಹಿಸುವೆನು. ಅಲ್ಲಿಯ ನಗರಗಳನ್ನು ಪುನರ್ರಚಿಸಲು ಜನರಿಗೆ ಸಹಾಯವೊದಗಿಸುವ ಸಾಹಸದ ಕಾರ್ಯವು ನನಗೆ ವೇದ್ಯವಿದೆ ಕ್ವೆಟ್ಟಾದ ವಾರ್ತೆಯು ಇನ್ನೂ ಬಂದಿಲ್ಲ ಅದರ ಅದೃಷ್ಟವೇನಾಯಿತೆಂದು ತಿಳಿದುಬರುವುದಿಲ್ಲ ಸೃಷ್ಟಿಕರ್ತನು ಕರುಣಾಮಯನಾಗಿರಲೆಂದು ಮಾತ್ರ ಆಶಿಸುವೆನು ಇಂತಹ ವಿಷಮಕಾಲದಲ್ಲಿ ಆನರ್ಥವೂ ಕ್ರೂರವೂ ಆದ ಈ ಸಂಕಷ್ಟನಿವಾರಣೆಗಾಗಿ ಸಹಾಯಮಾಡುವುದು ಪ್ರತಿಯೊಬ್ಬನ ಕರ್ತವ್ಯ ಎಲ್ಲಾ ಸೌಕರ್ಯಗಳಿರುವ ಸರಕಾರವೂ ಕೂಡಾ ಏಕಹಸ್ತದಿಂದ ಕೆಲಸಮಾಡಲಾರದು. ಅನಧಿಕಾರೀ ಸಹಾಯವನ್ನು ಶೀಘ್ರವಾಗಿ ಕೊಡಬೇಕಾಗಿದೆ ಕಾಂಗ್ರೆಸ್‌ನವರಿಗೆ ಆ ಪ್ರಾಂತ್ಯವು ಪರಿಚಯವಾದುದಲ್ಲ ಆದರೆ ಒಂದು ಸಂಗಡದವರು ಅತ್ತ ತೆರಳಿ ಕಾರ್ಯೋನ್ಮುಖರಾಗುವುದು ಕಷ್ಟವಾಗಿಲ್ಲ ದೇಶವು ಸಂತೋಷದಿಂದ ಸಹಕರಿಸುವುದಾಗಿ ಆಶಿಸುತ್ತೇನೆ"

ಮೈಸೂರು ಸ್ವದೇಶೀ ವಸ್ತುಪ್ರದರ್ಶನ.

ಶ್ರೀ ಮನ್ಮಹಾರಾಜರವರ ವರ್ಧಂತ್ಯುತ್ಸವದ ಸಂದರ್ಭದಲ್ಲಿ ನಡೆಯುವ ಈ ಪ್ರದರ್ಶನಕ್ಕೆ ಪ್ರದರ್ಶನಕಾರರು ಹೊರಗಿನಿಂದ ಸಾಮಾನುಗಳನ್ನು ಸಾಗಿಸಿಕೊಂಡು ಬರಲು ಅನುಕೂಲಿಸಲು ಮೈಸೂರು ರೈಲ್ವೆಯವರು ರಿಯಾಯಿತಿ ದರಗಳನ್ನು ಕಲ್ಪಿಸಿಕೊಟ್ಟಿರುತ್ತಾರೆ, ಅದರಂತೆಯೇ ಎಂ ಎಸ್. ಎಂ ರೈಲ್ವೆಯವರೂ ಕೂಡ ಪ್ರದರ್ಶನಕಾರರಿಗೆ ರಿಯಾಯಿತಿ ತೋರಿಸುವವರಾಗಿದ್ದಾರೆಂದು ಕೇಳಿ ಸಂತೋಷವನ್ನು ಸೂಚಿಸುತ್ತೇವೆ.

ಬೆಂಗಳೂರು ಹವಾ.

ತಮ್ಮ ಕಡೆಯ ಬಿಸಿಲು ತಾಳಲಾರದೆ ಆಂಧ್ರರೂ ಮದರಾಸು ಕಡೆಯವರೂ ಬೆಂಗಳೂರು ತಂಪನ್ನು ಅನುಭವಿಸಲು ಬರುತ್ತಲೇ ಇದ್ದಾರೆ.

ಆದರೆ ಬೆಂಗಳೂರು ಬೇಸಗೆಯಲ್ಲಿ ಈ ವರ್ಷ ಅವರಿಗೆ ಅಷ್ಟು ತಂಪು ಒದಗಿಸುವಂತಿಲ್ಲ.

ಬರಬೇಕಾದ ಮಳೆ ಸಾಕಷ್ಟು ಬಾರದೆ ಬೆಂಗಳೂರಲ್ಲಿ ಸೆಕೆಯು ದಿನದಿನಕ್ಕೆ ಹೆಚ್ಚುತ್ತಿ

ಶಾಂತಿ ಸಾಗರ.

[ವಿಷಯ ವೈವಿಧ್ಯದಲ್ಲಿ ಸ್ವದೇಶಾಭಿಮಾನಿಯು, ಇನ್ನೊಂದು ಹೆಜ್ಜೆ ಮುಂದಿಡಬೇಕೆಂಬ ಉದ್ದೇಶದಿಂದ ಈ ವಾರ ಮೊದಲ್ಗೊಂಡು "ಶಾಂತಿ ಸಾಗರ"ವೆಂಬ ಈ ವಿಭಾಗವನ್ನು ತೆರೆದಿರುತ್ತೇವೆ. ತಾತ್ವಿಕ ವಿಚಾರಪರರಾದ ಸಾಂಸಾರಿಕರಿಗೆ ಇವುಗಳಿಂದ ಅಲ್ಪವಾದರೂ ಪ್ರಯೋಜನವಾದಿತೆಂದಾದರೆ ನಾವು ಧನ್ಯರು ಇವುಗಳನ್ನು ಜಗತ್ತಿನ ಮಹಾತತ್ವೇತ್ತರರ ವಾಣಿಗಳನ್ನಾಧರಿಸಿ ಬರೆಯಲಾಗಿದೆ]

೧ ಧ್ಯಾನಪರವಶರಾಗಿರಿ. ಎದೆಯ ಧನಿಯು ಅದಕ್ಕಾಗಿ ಮೊರೆಯಿಡಲಿ ಅದರ ಮೊರೆಯನ್ನು ತೃಪ್ತಿಗೊಳಿಸುವಷ್ಟು ಧ್ಯಾನಿಸಿರಿ

೨ ರಾತ್ರಿ ನಿದ್ರಿಸ ಹೋಗುವ ಮೊದಲು ನೀವು ಆ ದಿನ ಎಷ್ಟೆಲ್ಲ ಸತ್ಕಾರ್ಯಗಳನ್ನೂ ಏನೆಲ್ಲ ದುಷ್ಕಾರ್ಯಗಳನ್ನೂ ಮಾಡಿರುವಿರೆಂದು ವಿಮರ್ಶಿಸಿಕೊಳ್ಳಿರಿ

೩ ಶ್ರೀಮಂತರು ಬಾಗಿಲ ಬಳಿ ಕಾವಲುಗಾರರನ್ನಿಟ್ಟು ಮನೆಯ ಭದ್ರತೆಯ ವ್ಯವಸ್ಥೆ ಮಾಡುವರು ಮನಸ್ಸೆಂಬುದು ಮನುಷ್ಯನ ಕಾವಲುಗಾರ ಮನಸ್ಸು ಎಷ್ಟು ಗಟ್ಟಿಯಾದರೆ ಅಷ್ಟು ಒಳ್ಳೆಯದು

೪ ಸಮಯವು ಓಡುತ್ತದೆ ಒಂದು ನಿಮಿಷವನ್ನಾದರೂ ವೃಥಾ ಕಳೆಯಬೇಡಿ ನೀವು ಹಲಕೆಲವು ವರ್ಷಗಳ ವರೆಗೆ ಉತ್ಸಾಹದಿಂದ ಕೆಲಸ ಮಾಡಲು ಸಮರ್ಥರು ಆ ಮೇಲೆ ದೇಹದಲ್ಲೂ ಮನಸ್ಸಿನಲ್ಲೂ ದುರ್ಬಲರಾಗಿ ನೀವು ಸೋತುಹೋಗುವಿರಿ ಆದುದರಿಂದ ಈಗಲೇ ಎಚ್ಚರಾಗಿರಿ

೫ ನೀವು ನಿಮಗಾಗಿ ಕೆಲಸ ಮಾಡಬೇಡಿರಿ ದೇವರಿಗಾಗಿ ಕೆಲಸ ಮಾಡಿರಿ ಆತನಿಗಾಗಿ ಅರ್ಪಿಸಲ್ಪಟ್ಟ ಕೆಲಸದಿಂದ ನಿಮಗೆ ಜಯವೇ ದೊರೆಯುವುದು

೬ ಮನಸ್ಸು ಸರಿಯಾಗಿ ತರಬೇತು ಹೊಂದದಿದ್ದರೆ ಅದರ ಮೂಲಕ ಅನೇಕ ಸಂಕಟಗಳು ಮನಸ್ಸಿಗೆ ಒದಗಿಬರುತ್ತವೆ ನಿರ್ದಿಷ್ಟ ಗುರಿಯಿಲ್ಲದೆ ಅಲೆಯುವುದರಿಂದಾಗಿ ಜೀವನವೇ ವ್ಯರ್ಥವಾಗುತ್ತದೆ

೭ ಆನೆಯನ್ನು ಪಳಗಿಸುವ ಸಮಯದಲ್ಲಿ ಅದನ್ನು ಯಾವ ರೀತಿಗೂ ತರಲು ಸಾಧ್ಯವಾಗಿರುತ್ತದೆ ಅದು ಬಲಿತ ಮೇಲೆ ಅದನ್ನು ಪಳಗಿಸಲು ಯಾವುದೂ ಸಾಧ್ಯವಾಗದ ನಿಮ್ಮ ಮನಸ್ಸು ಎಳೆತನದಲ್ಲಿರುವಾಗಲೇ ಅದನ್ನು ನೀತಿಮಾರ್ಗದಲ್ಲಿ ನಡೆಯಿಸಿರಿ

೮ ಮನುಷ್ಯನಿಗೆ ಬೇಕಾಗಿರುವುದು ಸುಖ ಅದನ್ನು ಹೊಂದುವುದಕ್ಕಾಗಿ ಅವನು ಎಷ್ಟು ಹೆಣಗಾಡುತ್ತಿರುವನು ಏನೆಲ್ಲ ಉಪಾಯಗಳನ್ನು ಹೂಡುತ್ತಿರುವನು ಆದರೆ ಅವನಿಗೆ ಸುಖವುಂಟೇ? ಶಾಂತಿಯುಂಟೇ? ಅವನು ಕಂಗೆಟ್ಟು ದಿನಹರಣ ಮಾಡುತ್ತಾನೆ ಇಂತಹವನಿಂದ ಜಗತ್ತಿಗೆ ಯಾವ ಪ್ರಯೋಜನವೂ ಸಿಗಲಾರದು ಸುಖವು ಬೇಕಾದಾದರೆ ತ್ಯಾಗಬುದ್ಧಿಯವನಾಗಬೇಕು

೯ ನೀವು ಲೋಕ ವ್ಯವಹಾರದಲ್ಲಿ ಎಷ್ಟು ಚಿತ್ತವಿಡುವಿರೋ, ಅಷ್ಟು ನಿಮಗೆ ಕಷ್ಟಗಳೂ ಹೆಚ್ಚುವುವು

೧೦ ಜೀವನದ ಉದ್ದೇಶವನ್ನು ಮರೆಯಬೇಡಿ. ತಿನ್ನುವುದು, ಕುಡಿಯುವುದು, ಮಲಗುವುದರಲ್ಲೇ ಸಮಯವನ್ನು ಹಾಳುಮಾಡಿ ಮೂಕಪ್ರಾಣಿ ಸಮಾನರಾಗಿರಲು ನಮಗೆ ಈ ಜನ್ಮವು ಬಂದುದಲ್ಲ,-ದೇವರನ್ನು ನೆನೆದು ಸುಖಿಗಳಾಗಿರಿ

LOOK SHARP! LOOK AHEAD!

Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy; Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

Ladies are also admitted.

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to:—

D. R. Murdeshwar,

Dip. Econ; F. R. Econ; S. (Lond.)

Principal.

Ganapathy High School Street,

Mangalore.

Comfortable like an Aeroplane.

Use our swadeshi Mosquitonet for health, Comfort and sound sleep; as if you are in an Aeroplane. Sample cutting free. More convenient if some advance sent with order.

L.	B.	H.	Price.	Best.
6 Ft.	3½ Ft.	3½ Ft.	Rs. 1/12	2/8
6 „	4 „	4 „	„ 2/4	3/-
6½ „	4½ „	4½ „	„ 2/8	3/8
7 „	5 „	5 „	„ 3/2	4/10
7½ „	6 „	6 „	„ 4/4	5/12

G. M. Sharma, Post Box F 6706.

Calcutta

ಕಣ್ಣಿನ ಪರಿ.

"ಐ— ಸಸ್" ಎಂಬ ನೇತ್ರಭಾಸ್ಕರ—ಈ ಔಷಧವು ಕಣ್ಣುಪರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರ ವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಅವಶ್ಯವಿಲ್ಲ. ಖಾತರಿ ಗುಣದಾಥ. ಗುಣವಾಗದಿದ್ದರೆ ಹಣ ಪರತ್. ಕ್ರಯ ರೂ. 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ:—

Hary yasram, Panchpota, Bengal.

ಕರ್ನಾಟಕದೊಳಗಿನ ಯಾವತ್ತೂ ವೈದ್ಯರಿಗೆ ವಿನಂತಿ:

ಕಳೆದ ೨೪ ವರ್ಷಗಳಲ್ಲಿ ಆಯುರ್ವೇದೋದ್ಧಾರ ಕಾರ್ಯಕ್ಕಾಗಿ ಎಲ್ಲಾ ಪ್ರಾಂತಗಳಲ್ಲಿಯೂ ಅಖಿಲ ಭಾರತೀಯ ವೈದ್ಯ-ಸಮ್ಮೇಲನಗಳು ಆಗಿ ಹೋಗಿರುತ್ತವೆ. ಈ ಸಮ್ಮೇಲನಗಳಿಗೆ ಆಯಾ ಪ್ರಾಂತದವರು ಅಧ್ವಿತೀಯ ಪಂಡಿತರನ್ನು ಉಭಯ ಶಾಸ್ತ್ರಗಳಲ್ಲಿ ನಿಪುಣರಾದವರನ್ನು ಸಭಾಪತಿಗಳನ್ನಾಗಿ ಆರಿಸಿಕೊಂಡಿದ್ದರೆಂಬುದು ಸರ್ವಶ್ರುತವಾಗಿರುತ್ತದೆ. ಈ ವೈದ್ಯ ಸಮ್ಮೇಲನಗಳಿಗೆ ಕೆಲವೊಂದು ಪ್ರಾಂತದ ಒಂದೊಂದು ವ್ಯಕ್ತಿಗೆ ಎರಡೆರಡು ಸಾರಿಯಂತೆ ಸಭಾಪತಿಯ ಮಾನವು ದೊರೆಕಿದುದು ಭೂಷಣಾಸ್ಪದವಾಗಿದ್ದರೂ ಕರ್ನಾಟಕ ಪ್ರಾಂತ್ಯದವರನ್ನು ಮರೆತುದು ಗರ್ಹಣೀಯವಾಗಿರುತ್ತದೆಂದು ಹೇಳಬಹುದು. ಈಗ ೧೯೩೫ನೇ ದಶಂಬರ ತಿಂಗಳಲ್ಲಿ ಮದರಾಸು ಪಟ್ಟಣದಲ್ಲಿ ನಡೆಯುವ ಅಖಿಲ ಭಾರತೀಯ ೨೫ನೇ ಆಯುರ್ವೇದ ವೈದ್ಯ ಸಮ್ಮೇಲನದ ಅಧ್ಯಕ್ಷಪದವಿಯು ಕರ್ನಾಟಕಕ್ಕೆ ಸಲ್ಲತಕ್ಕದ್ದೆಂದು ಧೈರ್ಯದಿಂದ ಹೇಳಬಹುದು. ಏಕೆಂದರೆ ಉಭಯ ಶಾಸ್ತ್ರ ನಿಪುಣರಾದ ಅನೇಕ ಜನ ಕರ್ನಾಟಕಸ್ಥ ಪಂಡಿತರಲ್ಲಿ ಬೆಂಗಳೂರಿನ ಡಾಕ್ಟರ್ ಯಂ. ಆರ್. ಸಾಮಿಯವರು ಅಗ್ರಗಣ್ಯರಾಗಿ ಒಪ್ಪುತ್ತಿರುವರು. ಡಾಕ್ಟರ ಸಾಮಿಯವರು ಜಾಫ್ನಾ ಆಯುರ್ವೇದಿಕ್ ಕೊಲೀಜಿನ ವ್ಯವಸ್ಥಾಪಕರೂ ಪ್ರಿನ್ಸಿಪಾಲರೂ ಆಗಿದ್ದರು. ಎಂ. ಡಿ., ಪಿ. ಎಚ್. ಡಿ., ಡಿ. ಪಿ. ಎಚ್. ಇತ್ಯಾದಿ ಅನೇಕ ಪಾಶ್ಚಿಮಾತ್ಯ ಪದವಿಗಳಿಂದ ವಿಭೂಷಿತರಾಗಿದ್ದಾರೆ. ಆಯುರ್ವೇದ ಶಾಸ್ತ್ರದಲ್ಲಿಯು, ಕವಿರತ್ನ, ಕವಿರಂಜನ, ಆಯುರ್ವೇದಭೂಷಣ ಮೊದಲಾದ ಪೌರ್ವಾತ್ಯ ವೈದ್ಯಕೀಯ ಪದವಿಗಳಿಂದಲೂ ಸಮಲಂಕೃತರೂ ಆಗಿದ್ದಾರೆ. ಇವರು ಪರಮ ಕಾರುಣಿಕ ಮೈತ್ರೀಕರಣವುಳ್ಳವರು. ಹುಬ್ಬಳ್ಳಿಯಲ್ಲಿ ನಡೆದ ೭ನೇ ವೈದ್ಯ ಸಮ್ಮೇಲನದ ಪ್ರದರ್ಶನೋದ್ಘಾಟನೆ ಸಮಯದಲ್ಲಿ ಇವರು ಮಾಡಿದ ಭಾಷಣವು ಶಾಸ್ತ್ರ ಪಾಂಡಿತ್ಯದ ಹಾಗೂ ಸಮಯೋಚಿತವಾದದ್ದೆಂದು ವಿದ್ವಾಂಸರು ತಿಳಿದೂಗಿದ್ದಾರೆ. ಆದುದರಿಂದ ಯಾವತ್ತೂ ವೈದ್ಯಬಾಂಧವರು ಇವರನ್ನೆ ಸಭಾಪತಿಗಳನ್ನಾಗಿ ಆರಿಸುವ ಯೋಚನೆಯನ್ನು ಈಗಿನಿಂದಲೆ ಪ್ರಾರಂಭಿಸಬೇಕೆಂದು ಪ್ರಾರ್ಥಿಸುತ್ತೇನೆ.

ದಾಮೋದರ, ಅನಂತ, ಹಲಸಿಕರ, ವೈದ್ಯ

ಹುಬ್ಬಳ್ಳಿ.

ಮಂಗಳೂರಿನ ಪೇಟೆಧಾರಣೆ.

ಸಾಮುಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ದಾಶಿ ಅಕ್ಕಿ ...	4— 0	4— 5
ಮಸ್ಕತಿ ...	4— 4	4—10
ಗುಡ್ಡು ...	4— 2	4— 6
ಊರ ಅವ್ವಲ್ ಬೆಳ್ತಿಗೆ ...	4— 8	4—12
ರಂಗೂನು ಬಿ. ಗೋ. ೧ಕ್ಕೆ ...	6—12	7— 4
ಎಲ್ಲೂರು ಬೆ. ಮೂ. ೧ಕ್ಕೆ ...	4— 4	4— 8
ಗೋಧಿ ಗೋಣಿ ೧ಕ್ಕೆ ...	10— 0	12— 8
ತೊಗರಿ ಗೋಣಿ ೧ಕ್ಕೆ ...	10 —8	11— 0
ಹುರುಳಿ ಗೋಣಿ ೧ಕ್ಕೆ ...	7— 8	7 —12
ಕಡಲೆ ಗೋಣಿ ೧ಕ್ಕೆ ...	8 — 0	10— 8
ತೊಗರಿಬೇಳೆ ಗೋಣಿ ೧ಕ್ಕೆ ...	10— 0	17— 0
ಉದ್ದು ಗೋಣಿ ೧ಕ್ಕೆ ...	8— 0	8— 8
ಹೆಸರು ಗೋಣಿ ೧ಕ್ಕೆ ...	9— 0	9— 8
ಬೂರುಬೆಲ್ಲ ಖಂಡಿ ೧ಕ್ಕೆ ...	35— 0	37— 8
ಉಪ್ಪು ಗೋಣಿ ೧ಕ್ಕೆ ...	4—12	5— 2
ಕೊಬ್ರಿ ಖಂಡಿ ೧ಕ್ಕೆ ...	48— 0	55— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ...	20— 0	19— 0
ಎಳ್ಳಿಂಡಿ ಖಂಡಿ ೧ಕ್ಕೆ ...	36— 4	37— 8
ಕೊಬ್ರಿ ಎಣ್ಣೆ ಮಣ ೧ಕ್ಕೆ ...	3—14	4 — 14
ಎಳ್ಳೆಣ್ಣೆ ಮಣ ೧ಕ್ಕೆ ...	5— 2	6— 0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	5— 7	5— 9
ಮೋರಿಸ ಸಕ್ಕರೆ ಮ. ೧ಕ್ಕೆ ...	3—18	3—12
ಮೆಣಸು ...	5— 0	6— 4
ಸಾಸಿವೆ ಮುಡಿ ೧ಕ್ಕೆ ...	5 —12	6— 0
ಕಾಳುಮೆಣಸು ಖ. ೧ಕ್ಕೆ ...	120— 0	180— 0
ಯೇಲಕ್ಕಿ ಮಣ ೧ಕ್ಕೆ ...	22— 0	27— 0
ಗೇರುಬೀಜ ಮು. ೧ಕ್ಕೆ ...	4— 8	4 —10
ಕಬ್ಬಿಣ ಖಂಡಿ ೧ಕ್ಕೆ ...	40— 0	40— 8
ತಾಂಬ್ರತಗಡು ಮ. ೧ಕ್ಕೆ ...	9— 15	10— 0
ತಾಂಬ್ರಪಾತ್ರಗಳು ಮ. ೧ಕ್ಕೆ ...	11— 0	12— 0
ಚೀನಿಬೆಳ್ಳಿ ಸೇರು ೧ಕ್ಕೆ ...	14—12	15— 0
ಹಿತ್ತಾಳೆ ತಗಡು ಮ. ೧ಕ್ಕೆ ...	8— 12	9— 0
ಹವಳು ೧ಕ್ಕೆ ...	28— 4	23— 8
ಹುಣಸೆ ಹುಳಿ ಖಂಡಿ ೧ಕ್ಕೆ ...	20— 0	25— 8
ನೇಟಿವ್ ಕಾಫಿ ಖಂಡಿ ೧ಕ್ಕೆ ...	165— 0	175— 0
ಘಟ್ಟದ ಕಾಫಿ ಖಂಡಿ ೧ಕ್ಕೆ ...	220— 0	230— 0
ಹಳೆ ಅಡಿಕೆ ...	90— 0	95— 0
ಹೊಸ ಅಡಿಕೆ ...	75— 0	85 — 0

ಶಾಲಿವಾಹನ ಬಃ ಶಕ ೧೮೫೭ನೆಯ ಭಾವ ಸಂವತ್ಸರದ ಜ್ಯೇಷ್ಠ ಶು। ೭ ಶನಿವಾರದಿಂದ ಜ್ಯೇಷ್ಠ ಶು। ೧೩ ಗುರುವಾರದ ವರೆಗಿನ ಪಂಚಾಂಗ. (೧೯೩೫ನೇಯು ವೃಷಭ ಚೇಶಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ದಿನಮಾನ	ವಿಶೇಷ
8	ಶನಿ	೭	೪೦	ಮಘಾ	೧೭	೨೫	*
9	ರವಿ	೮	೪೫	ಹುಬ್ಬಾ	೨೩	೨೬	
10	ಸೋಮ	೯	೪೯	ಉತ್ತರಾ	೨೯	೨೭	
11	ಕುಜ	೧೦	೨೪	ಹಸ್ತಾ	೩೪	೨೮	
12	ಬುಧ	೧೧	೫೫	ಚಿತ್ರಾ	೩೯	೨೯	
13	ಗುರು	೧೩	೫೭	ಸ್ವಾತೀ	೪೩	೩೦	
14	ಶುಕ್ರ	೧೪	೫೬	ವಿಶಾಖಾ	೪೪	೩೧	

NEW ARRIVLAS.

Medicines.

Dr. Schuessler's Twelve Tissue Remedies 5 gr. bot. As. 4/-
Homoeopathy Medicines 5 gr. bot. As. 5/—
Sugar of Milk Dr. Schwabe's original bot. 1 lb Rs. 2/-
Haarlem Oil—a world-renowned remedy As. 8/-per phial.
Dr. Haele's New Curative Earth—Radium Cure Rs. 4/-per lb.

Dr. Schwabe's other special remedies are always in stock

Please consult us for your requirements.

Kanarese Book a Family Guide to Biochemistry Re. 1/-
„ Domestic Homoeopathy Rs. 1-4/-

If you own these two Books you will be able to pick up treatment and administer Tissue & Homoeopathy Medicines successfully without consulting others.

German Toilet Soaps, Shaving sticks and Washing and Bleaching powders.

Toilet soaps to suit all tastes, and prices from As. 2/6
Delightful in aroma, charming in appearance. Please try.

Kirloskar Pumps.

We are the Rep esentatives for Kirloskar Brothers for their reliable Shallow-well and Deep-well Pumps, Spring Cots, Spring Couches etc., and stock—

Pipes and pipe fittings at cheap prices. Coir Mats and Mattings

Steadler Pencils and Stationeries

We are the recognised agents for STEADLER'S all stationeries and shall be glad to serve you.

Olympia Typwriter.

An up-to-date Machine in Standard and portable sizes.

For Futher particulars please write to:—

Basel Mission Book & Tract Depository,

Mangalore, S. K. or Hubli, S. M.

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ



ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮುಗ್ಧಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ. 0—12—0.

ಆರ್. ಸಿ. ಸೇನ್ ಎಂಡ್ ಕೋ.,

ಲಿಮಿಟೆಡ್, ಕಲ್ಕತ್ತ.

ಏಜಂಟರು:—

ಕುಂತಳ ಕೌಮುದಿ ತೈಲ,

ವೆನ್ಲಾಕ್ ಆಸ್ಪತ್ರೆ ಎದುರು, ಮಂಗಳೂರು.

ಮೆನೇಜರರ ನೋಟೀಸು.

ಸ್ವದೇಶಾಭಿಮಾನಿಯ ಚಂದಾ ಅವಧಿ ಮುಗಿಯಿತೆಂದು ನೋಟೀಸು ಕೊಟ್ಟೊಡನೆ ಅಂತಹ ಚಂದಾದಾರರು ಮುಂದಿನ ವರ್ಷದ ಬಗ್ಗೆ ಚಂದಾ ಮೊಬಲಗನ್ನು ಕೂಡಲೇ ರವಾನಿಸಬೇಕು. ಪತ್ರಿಕೆಯು ಮುಂದಕ್ಕೆ ಬೇಕೋ ಬೇಡವೋ ಎಂಬ ಬಗ್ಗೆ ನೋಟೀಸು ತಲಪಿದೊಡನೆ— ಅಗತ್ಯವಾಗಿ ತಿಳಿಸಬೇಕು.

ಚಿಕ್ಕದೊಡ್ಡವರು-ದೊಡ್ಡ ಚಿಕ್ಕವರು.

ಲೇಖಕರು – ಶ್ರೀ ಶಿವರಾಮ ಕಾರಂತರು

೩. ಮುಸಲ್ ಮಾಧು

ಮಾಧುವಿನ ಜೀವನದ ಅವಸ್ಥಾಕ್ರಮಗಳನ್ನು ಕುರಿತು ಏನೋ ಬರೆಯಬೇಕೆಂದು ಹಂಬಲ. ಮಾಧುವನ್ನು ನಾನು ಚಿಕ್ಕದೊಡ್ಡವರ, ಇಲ್ಲವೆ ದೊಡ್ಡ ಚಿಕ್ಕವರ ಸಾಲಿಗೆ ಸೇರಿಸುವುದು ತುಸು ಅಸಮಂಜಸವಾಗಬಹುದು ಕಾರಣ ಅವನ ಜೀವನದ ಪಾಕ ಒಂದೇ ಹದದಲ್ಲಿ ನಿಲ್ಲಲೇ ಇಲ್ಲ. ಹಿಂದೆ ಚಿಕ್ಕದೊಡ್ಡವನಾಗಿ, ಅನಂತರ ದೊಡ್ಡ ಚಿಕ್ಕವನಾಗಿ ಈಗ ಇನ್ನೇನೋ ಆಗಿದ್ದಾನೆ. ಅಂತು ಸಮಾಜದಲ್ಲಿ ಅನೇಕ ಆಕರ್ಷಕ ಚಿತ್ರಗಳಲ್ಲಿ ಅವನದ್ದೊಂದು. ಮಾಧು ನಮ್ಮ ಗೆಳೆಯ. ಒಂದೇ ದೊಡ್ಡಿಗೆ ಪಾಠ ಹೇಳಲು ಹೋದ ಆಸಾಮಿಗಳು ನಾವು. ಏನೋ ನಮ್ಮ ನಮ್ಮ ತರಗತಿಗಳಲ್ಲಿ ಇಷ್ಟು ವ್ಯತ್ಯಾಸವಾದುದರಿಂದ ಶಾಲೆಯ ನಾಲ್ಕೈದು ತಾಸುಗಳನ್ನು ಬಿಟ್ಟರೆ ಉಳಿದ ಸಮಯ ಜತೆಯಲ್ಲಿ ಇರುತ್ತಿದ್ದೆವು. ನಾವು—ಎಂದರೆ ನಾನು ಮತ್ತು ನನ್ನ ಗೆಳೆಯರು. ಮಾಧುವಿಗೆ ಗೆಳೆಯರು ಒಬ್ಬಿಬ್ಬರಲ್ಲ. ಎಲ್ಲರಿಗೂ ಬೇಕಾದವನು ಅವನಾಗಿದ್ದ. ಅವನನ್ನು ಕಂಡರೆ ಒಂದು ರೀತಿಯ ಆದರ. ಅವನಿಗೆ ಆಗ ಅವನ ಪ್ರಾಯ ೧೬ ವರುಷ. ಕಾಯ—ಒಂದು ಟನ್. ಆದರಿಂದಲೇ ನಮಗೆ ಅವನಲ್ಲಿ ಗೌರವ. ಅವನ ಮೈಯ ಮಾಂಸ ಖಂಡಗಳನ್ನು ಕಂಡು ಪೂಜಿಸುತ್ತಿದ್ದವರು ನಾವು. ಮುಸಲ್ (= ಒತ್ತು ಲೋಪ) ಮಾಧು ಎಂದು ಕರೆಯುತ್ತಿದ್ದೆ. ನಮ್ಮಿಂದಾಗದ ಶಾರೀರಕ ಕೈಲುವಾನಗಿಂಗೆ ಅವನನ್ನು ನೂಕುತ್ತಿದ್ದೆವು ನಾವು. ಹೆಚ್ಚೇನು? ಅವನ ಮೈಯಲ್ಲಿ ಮಾತ್ರವಲ್ಲ ಹೊಟ್ಟೆ ತಲೆಬುರುಡೆ ಎಲ್ಲಾ ಸ್ನಾಯುಖಂಡದಿಂದಲೇ ತುಂಬಿತ್ತು.

ಮಾಧುವಿಗೆ ಆಯಾಸವೆಂಬುದಿಲ್ಲ, ಕಷ್ಟವೆಂಬುದಿಲ್ಲ, ಆಲಸ್ಯ ಎಂಬುದಿಲ್ಲ. ಅವನ ಒಂದು ದಿವಸದ ಕಾರ್ಯಕ್ರಮ ಕೇಳಿದರೆ ನಿಮಗೆ ಆಶ್ಚರ್ಯವಾದೀತು. ಬೆಳಿಗ್ಗೆ ಆರು ಘಂಟೆಗೆ ಎದ್ದನಂದರೆ, ಅಲ್ಲಿಂದ ಅವನ ಕಾಲು ಸಂಜೆಯ ತನಕ ನಿಂತಲ್ಲಿ ನಿಲ್ಲುವ ಹಾಗಿಲ್ಲ. ಬೆಳಗ್ಗಿನ ಸ್ನಾನಕ್ಕೆ ಕೆರೆಗೆ ಹೋದರೆ ೬ರಿಂದ ೯ರ ತನಕ ನೀರಿನ ಮೇಲೆಯೋ ನೆಲಕ್ಕಾಮು. ಸ್ನಾನ ಮುಗಿಸಿ ಮನೆಗೆ ಬಂದರೆ ಗಂಜಿ ಊಟ. ಊಟದ ಅಳತೆ ಚೇರ ಅಳತೆಯೋ. ಚಿಕ್ಕ ಊಟ ಮಾಡಿಯೇ ಅವನಿಗೆ ತಿಳಿಯದು. ಗಂಜಿ ಊಟವಾಗಿ ಶಾಲೆಗೆ ಹೋಗುತ್ತ ಒಮ್ಮೆ ಕಾಫಿ ಹೊಟೇಲನ್ನು ಸೇರುವುದು ಅವನ ಪದ್ಧತಿ. ಅಲ್ಲಿ ಅರ್ಧ ಡಜನು ಇಡ್ಲಿ ಸೇರಿಸಿಕೊಂಡು ಮುಂದಿನ ಮೊಕ್ಕಾಂ ಅಂದರೆ ಶಾಲೆ.

ಶಾಲೆ ಪಾಠಗಳ ವಿಷಯ ಅವನನ್ನು ಕೇಳುವುದೂ ಒಂದೇ, ಅವನ ಮನೆಯ ಕಂಭವನ್ನು ಮಾತನಾಡಿಸುವುದೂ ಒಂದೇ, ಆದರೂ ಕ್ರಮವಾಗಿ ಪಾಸಾಗುತ್ತ ಬಂದು ಹದಿನಾರನೇ ವಯಸ್ಸಿಗೆ IV ಫಾರ್ಮಿನಲ್ಲಿ ಕಾಲಿರಿಸಿದನು. ಶಾಲೆಯಲ್ಲಿ ಪಾಠವಾಗುತ್ತಿರುವಾಗ—ಒಮ್ಮೆ ಯಾರೋ ಪಿಸು ಮಾತಿನಲ್ಲಿ—'ಅರೇ ಅದೇನು ಪೇಟೆಯಲ್ಲಿ ಗದ್ದಲ' ಎಂದರು. ಮರುಕ್ಷಣ ಮುಸಲ್ ಮಾಧುವು ಅಲ್ಲಿಂದ ಕಾಣೆ. ಶಾಲೆ ಮುಗಿಯುವ ಹೊತ್ತಿಗೆ ಮೈಯಲ್ಲಿ ಮಸಿಮಾಡಿಕೊಂಡು ಮರಳಿಬಂದನು. ನಮಗೆಲ್ಲಾ ಆತುರ "ಏನು ಮಾಧು?, ಏನು ಮಾಧು?" ಎಂದು ಕೇಳಿದೆವು. "ಅಲ್ಲಿ, ಹೊಳೆಯಾಚೆ ಪಟೇಲರ ಮನೆಗೆ ಬೆಂಕಿ ಬಿದ್ದುದಲ್ಲವೇ? ಎಂಥಾ ಗಮ್ಮತ್ತಿನ ಬೆಂಕಿ ಗೊತ್ತೇ? ನೂರು ಜನರು ನೋಡುತ್ತ ನಿಂತಿದ್ದರು. ಒಳ್ಳೇ ಮಕ್ಕಳು. ಹೋಗಿ ನಾಲ್ಕು ಚಡಾಯಿಸಿ ಅವರಿಂದ ನೀರು ಹೊರಿಸಿ, ನೊಂದಿಸಿ ಬಂದೆ" ನಾನೆಂದೆ "ಏನು? ಯಾರಾದರೂ ಜಲಾಸಾದರೇ" "ಅದು ಮಾತ್ರ ಆಗಲಿಲ್ಲ" "ಮನೆ ಒಳ ಅಂಗಣದಲ್ಲಿ ಆ ಮುದಿ ಪಟೇಲ ಬೊಬ್ಬೆ ಹೊಡೆಯುತ್ತಿದ್ದ. ಆದರೂ ಅವನನ್ನು ತಪ್ಪಿಸುವವರು ಯಾರು ಬೇಕು? ಮಾಡು ಹತ್ತಿ, ಒಳಗೆ ಹಾರಿ, ಬಾಗಿಲು ಮುರಿದು ಆ ಮುದುಕನನ್ನು ಬಚಾವು ಮಾಡಿದೆ. ಆ ಮುದಿ ಎಂಥ ಮಣ್ಣಿಗೆ ಬದುಕುವುದು? ನನ್ನಪ್ಪಯ್ಯನಿಗೆ ನೂರ ರೂಪಾಯಿ ಠಕಾಯಿಸಿದೆ. ಹೋಗಲಿ ಸತ್ತುಕೊಳ್ಳಲಿ ಎಂದು ತಪ್ಪಿಸಿದೆ"

ಯಾವ ಮುದುಕ?

"ಅರೇ ಆ ದಿವಸ ಆದಿತ್ಯವಾರ ರಾತ್ರಿ ಜನನ ಸೌತೆಹಿತ್ತಿಲಿನ ಬೇಲಿ ಹಾರಿ, ಚಪಾಯಿಸಿದೆವಲ್ಲ' ಆ ದಿವಸ ನೂರು ರೂಪಾಯಿಯಲ್ಲಿ ಒಂದು ನಾಲ್ಕಾಣೆ ಕಾಸು ಬಂದಿತು."

ಇಷ್ಟೆಲ್ಲ ಪುರಾಣವನ್ನು ಉಪಾಧ್ಯಾಯರು ಕೇಳುತ್ತಲೇ ಇದ್ದರು. ಅವರಿಗೆ ನಗು ಬಂದಿತು. 'ಹೋಗು—ಸ್ನಾನ ಮಾಡಿ ಬಾ'—ಎಂದರವರು. 'ಸ್ನಾನವಾದರೂ ಬೇಡ, ಆ ಹೊಟೆಲಿಗೆ ಹೋಗಿ ನಾಲ್ಕು ಬಿಸ್ಕುಟಂಬೊಡೆ ದಬಾಯಿಸಬೇಕು"—ಎಂದು ಓಡಿದನು. ಸಂಜೆ ಆಡುವಾಗ ಬಿಸ್ಕುಟು ಅಂಬೋಡೆ ಇತಿಹಾಸವನ್ನು ನಮಗೆ ಹೇಳಿದನು. ಅವನಿಗೆ ಮೂಳೆ ಪೈ ಹೊಟೆಲೆಂದರೆ ಪ್ರಾಣ. ಅಲ್ಲಿಗೆ ಹೋಗುವಾಗ ಬಿಸಿ ಬಿಸಿ ಅಂಬೋಡೆ ಕಾಯಿಸುತ್ತಿದ್ದರು. ಇವನಿಗೂ ಹಸಿವಾಗಿತ್ತು. ಮತ್ತೇನು? ಮಾಡಿದ ೫೩ ಅಂಬೊಡೆಗಳು ಮುಸಲ್ ಮಾಧುವಿನಿಂದ ಯಜ್ಞವಾದುವು.

ಇನ್ನೊಂದು ರಾತ್ರಿ ಊಟವಾಗಿ ಬೆಳದಿಂಗಳಲ್ಲಿ ನಾವು ಊರ ಮೈದಾನಿಗೆ ಸಂಚಾರಕ್ಕೆ ಬಂದಿದ್ದೆವು. ಅಲ್ಲಿಗೆ ದೂರದಿಂದ ನಮ್ಮ ರಾಮಯ್ಯ ಮಾಸ್ತರರು ಬಂದರು. ರಾಮಯ್ಯ ಮಾಸ್ತರರಿಗೆ ನಾವೆಲ್ಲ ಬೇಕಾದವರು. ಹೀಗಾಗಿ "ಓಹೋ ಮಾಸ್ತರರ ಸವಾರಿ ಎಲ್ಲಿಗೆ?" ಎಂದು ಕೇಳಿದೆವು. ಮಾಸ್ತರರು "ಛೇ", ಮಳೆಗಾಲ ಬಂದಿತು. ಕಟ್ಟಿಗೆಯಿಲ್ಲದೆ ಒದ್ದಾಡುತ್ತೇನೆ' ಎಂದರು. ಕೂಡಲೆ ಮಾಧುವಿನ ಬುರುಡೆಯ ಮಾಂಸಖಂಡ ಕೆಲಸ ಮಾಡತೊಡಗಿತು. ಬೆಳಗಾಗುವುದರೊಳಗೆ ಒಂದು ಗಾಡಿ ಕಟ್ಟಿಗೆಯನ್ನು ನಿಮ್ಮ ಅಂಗಳದಲ್ಲಿ ಸುರಿದರಾಯಿತಲ್ಲ-ಎಂದನು.

ನಮ್ಮೂರಿನಿಂದ ಮೂರು ಮೈಲಿಗೆ ಒಂದು ಸರಕಾರಿ ಮೈದಾನು. ಅಲ್ಲಿ ಹದಿನೈದು ದಿವಸದ ಹಿಂದೆ ಶಿವರಾತ್ರಿಯ ಗಾಳಿಗೆ ಒಂದು ಧೂಪದ ಮರವು ಮುರಿದಿತ್ತು. ಅದನು ಕಂಡ ನೆನಪು ಮಾಧುವಿಗೆ. "ಹೋಗಿ ತರುವ—" ಎಂದನು. ನಾವೂ ಹೊರಟೆವು. ಹಾದಿಯಲ್ಲಿ ಹೋಗುತ್ತಾ ಯಾರದೊ ಗಾಡಿಯನ್ನು ರಸ್ತೆಯ ಬಳಿ ಬಿಟ್ಟು ಹೋಗಿದ್ದರು. ಗಾಡಿ ಕಂಡು ನಾನು 'ಅರೇ ಗಾಡಿ ರೆಡಿಯಾಯಿತು, ಎತ್ತು ಮಾತ್ರ' ಹೀಗೆಂದದ್ದೆ ತಡ ಗಾಡಿಗೆ ಮಾಧು ಕೈಕೊಟ್ಟನು. "ಯಾರ ಗಾಡಿ?" ಎಂದು ನಾವು ಕೇಳಿದೆವು. ಅದು ನನ್ನ ಅಮ್ಮನದೆಯ ಗಾಡಿಯಲ್ಲವೇ?

"ಅಲ್ಲದಿದ್ದರೆ?"

ಅಲ್ಲದಿದ್ದರೇನು ನಾವು ಗಾಡಿಯನ್ನು ತಿನ್ನುತ್ತೇವೆಯೆ?

ಸರಿ ಗಾಡಿಗೆ ಅವನೇ ಎತ್ತು. ನಾವೂ ಅದನ್ನು ತಳ್ಳಿದುದೂ ಉಂಟು, ಎಳೆದುದೂ ಉಂಟು. ಸರಿ [illegible] ಪಂಟೆ ರಾತ್ರಿಗೆ ಗಾಡಿಯನ್ನು ಅಲ್ಲಿಗೆ ಒಯ್ದಿದ್ದೆವು. ಎಲ್ಲ ನಿರಾಶೆ, ಮರವು ಅಲ್ಲಿರಲಿಲ್ಲ. "ಎಂಥಾ ವ್ಯಾಪಾರ ನಿನ್ನದ? ಎಲ್ಲಿ ನೋಡಿದ್ದೆ ಮರವನ್ನು? ಎಲ್ಲಿಗೆ ಬಂದಿದ್ದೆ?" ಎಂದು ನಗಲಿ ಮಾಡಿದೆವು ಮಾಧುವನ್ನು. ಅವನಿಗೆ ಸಿಟ್ಟು ಬಂದಿತು. ಒಬ್ಬನೇ ಗಾಡಿಯನ್ನು ಎಳೆದುಕೊಂಡು ಮುಂದರಿದು ಹೋದನು. ನಾವೂ ಹೊರಟೆವು. "ಯಾರೂ ಬೇಡ ಬರುವುದು" ಎಂದನು. ನಾವು ನೋಡುವಾ ಎಂದು ಅದೇ ಹಾದಿಯ ಬಳಿ ಹಿಂಬಾಲಿಸುತ್ತ ಕಳೆದೆವು. ಎರಡು ತಾಸಿನ ಅವಧಿಯಲ್ಲಿ ಗಾಡಿಯಲ್ಲಿ ಒಡೆದ ಕಟ್ಟಿಗೆಯನ್ನು ತುಂಬಿಸಿಕೊಂಡು ಮಾಧು ಸವಾರಿ ಉಸಿರ ಬಿಡುತ್ತ ಬಂದನು. "ಎಲ್ಲಿಂದ ಕದ್ದೆ ಮಹರಾಯ?" ಎಂದೆವು ನಾವು—ಮಾಧುವು ಉಸಿರು ಬಿಡಲಿಲ್ಲ. "ಬನ್ನಿ, ಬಿಡುವ" ಎಂದನು.

ಒಂದೇ ಓಟ. ಮೂರು ಮೈಲಿನದು. ನಮ್ಮ ರಾಮಯ್ಯ ಮಾಸ್ತರರ ಅಂಗಣದಲ್ಲಿ ನಾವು ರಾತ್ರೆ ಸುದ್ದಿ ಹೇಳದೆ ಅಲ್ಲಿ ಕಟ್ಟಿಗೆಯನ್ನು ಇರಿಸಿದೆವು. ಅಲ್ಲಿಗೇ ಮುಗಿಯಲಿಲ್ಲ ಪೀಡೆ. ಗಾಡಿಯನ್ನು ಮರಳಿ ಅಲ್ಲಿ ಇರಿಸಬೇಡವೆ? ಅಷ್ಟು ಮಾಡಿ ಬರುವಾಗ ನಮ್ಮ ಅವನ ಹೆಣಗಳು ಹಣ್ಣಾಗಿ ಹೋಗಿದ್ದುವು. ಬೆಳಗಿನ ಝಾವ "ಥೂತ್, ಹಾಳು ಹಸಿವಾಗುತ್ತದೆ. ಮಾಸ್ತರರನ್ನು ಎಬ್ಬಿಸಿ ಇಷ್ಟು ಅವಲಕ್ಕಿ ಕೇಳುವ" ಎಂದನು. ಕೊನೆಗೆ ಬೇಡವೆಂದು ಅವನಿಗೆ ತೋರಿತು. ಊರಿನ ಕೆರೆಗೆ ಹೋದೆವು. ಮುಂಜಾನೆಯ ಸ್ನಾನ. ಮಾಧು ಸ್ನಾನ ಬಿಟ್ಟು ಮಗ್ಗುಲಿನ ಸೌತೆ ಹಿತ್ತಿಲನ್ನು ನುಗ್ಗಿ, ನಾಲ್ಕು ಸೌತೆಕಾಯಿಗಳನ್ನು ಜಾರಿಸಿ ತಂದನು. ತಿಂದಾಯಿತು, ಸ್ನಾನವಾಯಿತು.

ಮರುದಿನ ಸಂಜೆ ಕಟ್ಟಿಗೆಯ ಇತಿಹಾಸವನ್ನು ಹೇಳಿದನು. "ಕಟ್ಟಿಗೆ ಎಲ್ಲಿಂದೆಂದು ಗೊತ್ತಾಗಲಿಲ್ಲವೆ? ನಿನ್ನೆ ಹೇಳಿಯಲ್ಲವೆ, ಎಲ್ಲಾ ಭಿಕನಾಸಿಗಳು ಸೇರಿ, ಮೇಲು ದೇವಸ್ಥಾನದ ಹತ್ತಿರ ಹೋಳಿ ಮಾಡಲು ಕಟ್ಟಿಗೆ ಹಾಕಿ ಹೋಗಿದ್ದರು. ಅವರು ಬರುವುದರೊಳಗಾಗಿ ಸಫೇತು ಮಾಡಿದೆ. ದೇವರಿಗೆ ಅದೆಲ್ಲಾ ತೋಕು ಯಾಕೆ? ರಾಮಯ್ಯ ಮಾಸ್ತರರಿಗೆ ಒಂದು ತಿಂಗಳಿಗಾದರೂ ಸಾಕು"—ಎಂದನು. ನಮಗೆಲ್ಲಾ ನಮ್ಮ ಹೊಟ್ಟೆ ಹುಣ್ಣಾಯಿತು.

\+ \+ \+ × \+ \+

ಇಂತಹ ವಿಚಿತ್ರ ಚಿತ್ರಗಳಿಂದ ತುಂಬಿದ ಮಾಧುವಿನ ಜೀವನ ಪ್ರಥಮ ಅಂಕ ಖಾಡಾ ಖಾಡಿ ಜೀವನ. ಅವನದು ನಮ್ಮ ಎಮೆಚೂರು ನಾಟಕ ಮಂಡಳದ ಮೆಂಬರನು. ಅವನೊಬ್ಬ. ಅವನಿಗೆ ಒಂದೊಂದು ಪಾರ್ಟನ್ನು ಕೊಡುತ್ತಿದ್ದೆವು. ಅವನಿಲ್ಲದಿದ್ದರೆ ನಮ್ಮ ಸ್ಟೇಜನ್ನು ಕಟ್ಟುವವರು ಯಾರು? ಹೀಗೆ ಕೆಲವು ದಿವಸ ಕಳೆಯಿತು. ಒಂದು ದಿವಸ ಅವನಿಗೊಂದು ರಾಜಪಾರ್ಟನ್ನು ಕೊಟ್ಟು ಕೆಟ್ಟಿತು. ಎಲ್ಲರೂ ಅವನ ಪಾರ್ಟು ಭರ್ಜರಿಯಾಗಿತ್ತು ಎಂದರು. ಅಂದಿನಿಂದ ಯಾಕೋ ತಿಳಿಯದು ಮುಸಲ್ ಮಾಧುವಿನ ಬಣ್ಣ ಬೇರಾಯಿತು. ಅವನು ಅಕ್ಬರ ಪಾಧು ಎನಿಸಿದನು. 'ತನಗೆ ಮಿದುಳಿದೆ' ಎಂದು ಅವನಿಗೆ ಅನುಭವವಾಯಿತೋ ಏನೋ. ಅಂದಿನಿಂದ ಉಬ್ಬಿಸಿದರೂ ಒಂದೇ ಅಟ್ಟಕ್ಕೇರಿಸಿದರೂ ಒಂದೇ—ಕೆಲಸ ಮಾಡಲು ಆಲಸ್ಯ. ಅಷ್ಟೇನೇ ಹಾಗೆ ಕೆಲಸ ಮಾಡುವುದು ಪ್ರತಿಷ್ಠೆಗೆ ಕಡಿಮೆಯೆಂದು ತಿಳಿದನು.

ಈಗ ಎಷ್ಟೋ ವರ್ಷವಾಯಿತು. ಮಾಧುವು ಜೀವನದ ಮೂರನೆಯ ಅಂಕಕ್ಕೆ ಕಾಲಿರಿಸಿದ್ದಾನೆ. ಆ ಟನ್ನು ಶರೀರವೂ ಇಲ್ಲ, ಕಲ್ಲನ್ನು ಕರಗಿಸುವ ತಾಕತ್ತೂ ಇಲ್ಲ, ಎದೆಗಾರಿಕೆಯೂ ಇಲ್ಲ. ಮೊದಲು ಸುಳ್ಳು ಹೇಳುವುದೆಂದರೆ ಹೇಡಿತನ—ಎಂದು ತಿಳಿಯುತ್ತಿದ್ದವನು ಈಗ ಅದು ನಿಜವಾದ ಜಾಣತನದ ಲಕ್ಷಣ ಎಂದು ತಿಳಿಯತೊಡಗಿದ್ದಾನೆ. ಜೀವನ ಇತಿಹಾಸ, ರಂಗು—ಅದೂ ಬದಲಿಸಿದೆ. ಕೇಳಿದ್ದಕ್ಕೆಲ್ಲಾ ವೈರಾಗ್ಯ ಹೇಳುತ್ತಾನೆ. ಏನು ಮಾಡಿದರೇನು ಸಾಯುವ ಶರೀರಕ್ಕೆ? ಎಂದು. ಬಾಲ್ಯದ ಗೆಳೆಯರಾದ ನಾವು, ಸಾರ್ವಜನಿಕ [illegible] ಅವನಿಗೊಂದು ಖಾಲಿ ಹಚ್ಚಡ ಹೊದೆಯಿಸ ಪುದೊಂದು ಉಳಿದಿದೆ.

ಇನ್ನೂ ಮಾಧುವಿನ ಈಗಣ ಪ್ರೇತಶರೀರವನ್ನು ಕಂಡರೂ, ಯಾಕೆ ಇದೇ ಉಬ್ಬಿನ [illegible] ಬರಕೂಡದ? [illegible] ಅವನ ಜೀವನದ ಪರಿವರ್ತನೆ [illegible] ಅವನಿಗೂ [illegible] ನಷ್ಟವೆಂದು ತೋರ [illegible]—ಆದರೆ ಆ [illegible] ಉತ್ಕೃಷ್ಟತಾರ [illegible] ಈ [illegible] ನಷ್ಟ ಸರಿ.

ವರದಕ್ಷಿಣೆಗಾಗಿ ಕೊಲೆ

ಹಿಂದೂಸಮಾಜವು ತನ್ನ ಪ್ರತಿಷ್ಠೆಯ ಕಾರ್ಯವನ್ನು ಧರ್ಮ ಮತ್ತು ಸಂಸ್ಕೃತದ ಹೆಸರಿನಲ್ಲೇ ಮಾಡುತ್ತಾ ಬಂದಿದೆ. ಪ್ರಕೃತದ ಹಿಂದೂಗಳ ಶಾಸ್ತ್ರಗಳಲ್ಲಿ ಯಾವುವೂ ಸಾಧಕಬಾಧಕಗಳ ಸೂಕ್ಷ್ಮವಿಚಾರವನ್ನು ಜನರು ಮಾಡುವುದಿಲ್ಲ. ಮಾನವ ಸಮಾಜಕ್ಕೆ ಪ್ರಯೋಜನಕಾರಿಯಾದ ಶಾಸ್ತ್ರಗಳೆಲ್ಲವನ್ನು ಈಗಿನವರೆಲ್ಲರೂ [illegible] ಇದೇ ಸಮಾಜಕ್ಕೆ ಹಾನಿಕಾರವಾದ ಪದ್ಧತಿಗಳನ್ನು [illegible] ದೇವರ ಮತ್ತು ಧರ್ಮದ ಹೆಸರಲಿ [illegible] ಬಲಿ, ಇತರ ವ್ಯಾಪಾರ [illegible] ದ ಪದ್ಧತಿಗಳ [illegible] ನಮ್ಮಲ್ಲಿ [illegible] ಇವುಗಳ [illegible] ವಿವಾಹ ಪದ್ಧತಿಯು [illegible] ವ್ಯಾಪಾರದ [illegible] ವಧೂವರರನ್ನು ಒಂದು [illegible] ಇದು [illegible] ಹಿಂದೂ ಶಾಸ್ತ್ರ [illegible] ಗಳಿಂದಲೇ ಪ್ರಾರಂಭಿಸಲ್ಪಟ್ಟ ಪದ್ಧತಿ. ಇಂಥ ಪದ್ಧತಿಗಳೇ ಹಿಂದೂ ಸಮಾಜದಲ್ಲಿ ಅನೇಕ ಕನ್ಯೆಯರ ಜೀವನವನ್ನು ಕಡಿಸಿಬಿಟ್ಟಿತು. ಬೋಧಯನ ಧರ್ಮಸೂತ್ರ ವಿವಾಹಕಾಲದಲ್ಲಿ ವಧುವಿನ ಅಥವಾ ವರನ ಕಡೆಯಿಂದ ಯಾವ ವಿಧದ ಶುಲ್ಕವನ್ನಾಗಲೀ ತೆಗೆದುಕೊಳ್ಳಕೂಡದೆಂದು [illegible] ತ್ತದೆ. ಎಲೈ ಸಂಪ್ರದಾಯವಾದಿಗಳೇ, ನಮ್ಮ ಶಾಸ್ತ್ರಗಳು ಏನು ಹೇಳುತ್ತವೆಂಬುದನ್ನು ಇನ್ನಾದರೂ ನೋಡಿರಿ. ಇನ್ನಾದರೂ ಈ ದುಷ್ಟಪದ್ಧತಿಯಿಂದ ಕನ್ಯೆಯನ್ನು ಬದುಕಿಸಿ. ಇಲ್ಲವಾದರೆ ಇದರಿಂದುಂಟಾಗುವ ಭಯಂಕರ ಪರಿಣಾಮವನ್ನು ಪ್ರತ್ಯಕ್ಷ ತಿಳಿಯಿರಿ.

ಲಾಹೋರಿನಲ್ಲಿ ಇದೇ ಕಳೆದ ಫೆಬ್ರವರಿ ತಿಂಗಳ ೨೭ನೇ ತಾರೀಕಿನ ದಿನ ಹದಿನೆಂಟು ವರ್ಷ ಪ್ರಾಯದ ಒಬ್ಬ ಯುವತಿಯು ದೇಹಾಂತವಾಯಿತು. ಆಕೆಯ ಮೃತದೇಹವನ್ನು ಶ್ಮಶಾನಕ್ಕೊಯ್ಯಲು, ಸಂಬಂಧಿಕರು ಮನೆಯಿಂದ ಹೊರಕ್ಕೆ ತರುವಾಗ ಆಕಸ್ಮಾತ್ತಾಗಿ ಪೋಲೀಸರು ಬಂದು ಶವವನ್ನು ಸ್ವಾಧೀನಪಡಿಸಿಕೊಂಡದ್ದಲ್ಲದೆ ಮೃತ ಯುವತಿಯ ಅತ್ತೆ, ಪತಿ ಮತ್ತು ಪತಿಯ ಇಬ್ಬರ ಸಹೋದರರನ್ನು ಕೈದುಮಾಡಿದರು. ತನ್ನಿಖೆ ನಡೆಸಿದಲ್ಲಿ, ಆ ಯುವತಿಯು ವಿವಾಹವಾಗಿ ಗಂಡನ ಮನೆಗೆ ಬರುವಾಗ ಮಾವನು ಕೇಳಿದಷ್ಟು ವರದಕ್ಷಿಣೆಯನ್ನು ತಂದಿಲ್ಲವೆಂದೂ ಅದಕ್ಕಾಗಿ ಮಾವನ ಮನೆಯವರು ಆಕೆಯನ್ನು ಬಹು ವಿಧವಾಗಿ ಪೀಡಿಸುತ್ತಿದ್ದರೆಂದೂ ಕೊನೆಗೆ ಫೆಬ್ರವರಿ ೨೭ನೇ ತಾರೀಕಿನ ರಾತ್ರಿ ಯುವತಿಯನ್ನು ಕತ್ತು ಹಿಸುಕಿ ಕೊಂದುಹಾಕಿದರೆಂದೂ ತಿಳಿದುಬಂತು.

ಸಂಯುಕ್ತ ಅಮೇರಿಕಾದಲ್ಲಿ.

ಹಿಂದೀಯ ಸ್ವಾತಂತ್ರ್ಯಕ್ಕಾಗಿ ಹೆಣಗಾಡುವ

ಧೀರರ ಪರಿಚಯ

ನಂಬ್ರ ೧.

[ನಮ್ಮ ಜಿಲ್ಲೆಯವರಾಗಿದ್ದು, ಅಮೇರಿಕಾದಲ್ಲಿ ಸುಮಾರು ೧೨ ವರ್ಷಗಳ ವರೆಗೆ ವಾಸಿಸುತ್ತಿದ್ದು, ಅಲ್ಲಿಯ ಜನರ ಆಂತರಿಕ, ಬಾಹ್ಯ ಪರಿಸ್ಥಿತಿಗಳ ಪೂರ್ಣ ಜ್ಞಾನಾರ್ಜನೆಯನ್ನು ಮಾಡಿಕೊಂಡು, ಮುಂಬಾಯಿಗೆ ಹಿಂತಿರುಗಿರುವ ಪ್ರೊ॥ ಪಿ. ಗಣೇಶರಾವ್, ಇವರು ಇಂಗ್ಲಿಷಿನಲ್ಲಿ ಬರೆದು ಕಳುಹಿಸಿರುವ ಲೇಖನದ ಅನುವಾದವಿದು. ಇಂತಹ ಲೇಖನಗಳು ನಮ್ಮ ಸಂಚಿಕೆಯಲ್ಲಿ ಮುಂದಕ್ಕೆ ಆಗಿಂದಾಗ್ಗೆ ಪ್ರಕಟವಾಗಲಿರುವುವು.]

ಪ್ರತಿಯೊಬ್ಬ ಹಿಂದೀಯನು,—ಅವನ ಜೀವನದ ಅಂಶವು ಯಾವುದೇ ಇರಲಿ,—ಅವನು ಸ್ವದೇಶದಿಂದ ಹೊರಗೆ ಕಾಲಿಟ್ಟೊಡನೆ ಹೇಗೋ ಏನೋ—ಹೊರದೇಶದಲ್ಲಿ ಭಾರತೀಯ ಪ್ರತಿನಿಧಿಯಾಗಿಯೇ ಪರಿವರ್ತಿತನಾಗುತ್ತಾನೆ. ಸ್ವತಂತ್ರ ದೇಶಗಳಲ್ಲಿನ ಸ್ವತಂತ್ರ ವಾತಾವರಣದಲ್ಲಿ ವಾಸಿಸುತ್ತಿರುವಾಗ, ಸಭಾಮಂದಿರ, ವೇದಿಕೆ, ಮತ್ತು ಪತ್ರಗಳ ಮೂಲಕ ತನ್ನ ದೇಶವು ಅನ್ಯರಿಂದ ಜರಿಯಲ್ಪಡುವುದನ್ನು ಕಂಡು ಅವನಿಗೆ ಇಲ್ಲದ ದುಃಖವು ಉಂಟಾಗುತ್ತದೆ. ಅಗೌರವಯುಕ್ತ ದೂರು ದೂಷಣೆಗಳು ತನ್ನ ದೇಶದ ಮೇಲೆ ಹೊರಿಸಲ್ಪಡುತ್ತಿರುವುದನ್ನು ಕಂಡು ಅವನು ವ್ಯಾಕುಲಿತನಾಗುತ್ತಾನೆ. ತಿಳಿದೂ ತಿಳಿಯದೆಯೂ ಮಾಡಿದ ತಪ್ಪುಗಳನ್ನು ಭಾರತೀಯರು ಮಾಡಿದ್ದರೂ, ಆ ವಿಷಯವನ್ನು ಲೆಕ್ಕಿಸದೆ, ವಿದೇಶೀಯರು ಭರತದೇಶವನ್ನು ಹೃದಯಪೂರ್ವಕವಾಗಿ ಖಂಡಿಸುತ್ತಿರುವುದನ್ನು ಕಂಡು ಅವನು ಚಿಂತಾಕ್ರಾಂತನಾಗುತ್ತಾನೆ ಅವನ ಅಂತರ್ಯದಲ್ಲಿ ಸ್ವಾಭಿಮಾನವೂ, ರಾಷ್ಟ್ರಾಭಿಮಾನವೂ ದಂಗೆಯೆಬ್ಬಿಸುತ್ತವೆ ಅಂತಹ ದಂಗೆಯ ಫಲವಾಗಿ ಅನೇಕ ಧೀರ ದೇಶಬಾಂಧವರು ಭಾರತೀಯ ಸ್ವಾತಂತ್ರ್ಯದ ವಿಷಯವನ್ನು ಕೈಕೊಂಡು ಮುನ್ನಡೆದಿರುವರು ಅವರು ತಮ್ಮ ಧನದ ಭ್ರಾಂತಿಯನ್ನೂ, ಖ್ಯಾತಿಯ ಹುಚ್ಚನ್ನೂ ಭಾರತೀಯರ ಉದ್ಧಾರದ ಒಂದೇ ಒಂದು ಕಾರಣಕ್ಕಾಗಿ ತ್ಯಾಗ ಮಾಡಿರುವರು

ಇಂತಹ ವೀರರ ಸ್ವಾರ್ಥತ್ಯಾಗವೂ, ಸ್ವಯಂಸೇವಾತತ್ಪರತೆಯೂ ಅನೇಕ ಉದಾತ್ತ ಭಾವುಕರಾದ ಅಮೇರಿಕಾನರ ಹೃದಯದಲ್ಲಿ ಸ್ವಾತಂತ್ರ್ಯದ ಸೋದರರನ್ನು ಉರಿಸಿ, ಅವರು ಯಾವ ವೇತನವೂ ಇಲ್ಲದೆ ಭಾರತೀಯರ ಉದ್ಧಾರಾರ್ಥ ಸ್ವೇಚ್ಛೆಯಿಂದ ಮುಂಬರಿದು ತಮ್ಮ ಒಂದು ಸಣ್ಣ ಸೈನ್ಯವನ್ನೇ ರಚಿಸಿಕೊಳ್ಳುವಂತೆ ಪ್ರೇರೇಪಿಸಿಬಿಟ್ಟಿದೆ

ಸರ್ವ ಸಾಮಾನ್ಯರಾದ ಅಮೇರಿಕನರಿಗೆ ಹಿಂದೀದೇಶವೆಂದರೆ—ಈಗಲೂ—ಒಂದು ಅಗಾಧ ದೇಶವೆಂಬ ಭಾವನೆಯಿದೆ ಕೆಲವರೋ ಭಾರತವರ್ಷವು ಆಧ್ಯಾತ್ಮಿಕ ವಿಚಾರಾಕ್ರಾಂತ ದೇಶವೆಂದು ತಿಳಿದಿರುವರ ಕೆಲವರ ಈ ಪ್ರೇಮವು ಅಂಧಶ್ರದ್ಧೆಯ ಧಾರ್ಮಿಕ ವ್ಯಕ್ತಿಗಳಿಂದಲೇ ತುಂಬಿದೆಯೆಂದು ನೆನಸುತ್ತಿರುವರು

೧೮೯೩ರಲ್ಲಿ ಚಿಕಾಗೋ ಪಟ್ಟಣದಲ್ಲಿ ಜರಗಿದ ಜಗತ್ತಿನ ಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಭಾಷಣ ಮಾಡಿದ ಆ ಚಿರಸ್ಮರಣೀಯ ದಿನ ಮೊದಲ್ಗೊಂಡು ಅನೇಕ ಅಮೇರಿಕನರಿಗೆ ಭಾರತ ದೇಶವು ಒಂದು ಪ್ರಮುಖರ ಅಧ್ಯಯನ ಭೂಮಿಯಾಗಿ ಪರಿಣಮಿಸಿರುತ್ತದೆ ಸ್ವಾಮಿಯವರ ಆತ್ಮವಿಹ್ವಲಗೊಳಿಸಿದ ಭಾಷಣಗಳಿಂದಾಗಿಯೂ ವಿಶಾಲ ಸಂಚಾರದಿಂದಾಗಿಯೂ ಹಲವು ವೇದಾಂತ ಸಂಘಗಳು ಅಲ್ಲಿಯ ಮುಖ್ಯ ಮುಖ್ಯ ನಗರಗಳಲ್ಲಿ ತಲೆದೋರಿವೆ ಸ್ವಾಮಿಯವರು ಅಲ್ಲಿಂದ ಹಿಂದಿರುಗಿದ ನಂತರವೂ ಅವರ ಅಪ್ತ ಶಿಷ್ಯರಲ್ಲನೇಕರು ವೇದಾಂತ ತತ್ವ ಪ್ರಚಾರದ ಕಾರ್ಯದಲ್ಲಿ ತಮ್ಮ ಉತ್ಸಾಹವನ್ನು ವರ್ಧಿಸಿಕೊಂಡೇ ಬರುತ್ತಿರುವರು

ಅದ್ಭುತವೂ ಅನಿರೀಕ್ಷಿತವೂ ಆದ ಕೆಲವು ಶಕ್ತಿಗಳು ಕಾರ್ಯೋನ್ಮುಖವಾಗಿವೆ ಬೋರ್ ಯುದ್ಧದಲ್ಲಿ ಧೈರ್ಯೋತ್ಸಾಹದಿಂದ ಎದೆಯೆತ್ತಿ ಹೋರಾಡಿದ ಒಂದೆರಡು ಸಾವಿರ—ಅಥವಾ ಹೆಚ್ಚು—ಮಂದಿ ಪಂಜಾಬಿ ಸೈನಿಕರು ನೂತನ ಸಾಹಸಗಳಿಗೆ ಕೈಯಿಕ್ಕಿ ಈ ಶತಮಾನದ ಆದಿಯಲ್ಲಿ ಕೆಲಿಫೋರ್ನಿಯಾದ ತೇಜೋಮಯ ಫಲವತ್ತಾದ ಭೂಮಿಯಲ್ಲಿ ನೆಲೆಸಿಕೊಂಡಿರುವರು ಅವಿದ್ಯಾವಂತರಾಗಿದ್ದರೂ, ಕೇವಲ ಅಶಿಕ್ಷಿತರಾಗಿದ್ದರೂ ಅವರು ಅಹಂಕಾರಯುತರೂ, ಜಾತ್ಯಾಭಿಮಾನಿಗಳೂ, ನಮ್ಮ ಪೂರ್ವಿಕರ ಆಚಾರ ವಿಚಾರಗಳನ್ನು ಮನಮುಟ್ಟಿ ಕಾಯ್ದುಕೊಳ್ಳುವರೆಂದೂ ಅವರಿಂದು ಕಂಡುಬಂದಿದೆ.

ನೂತನ ಮಾರ್ಗಾನುಸರಣೆಯಲ್ಲಿ ತಲ್ಲೀನರಾಗಿರುವ ಈ ಪರದೇಶಿಗಳು ತಮ್ಮ ಹಳೆಯ ಕ್ರಮನಿಯಮಗಳು ಉಡಿಗೆ ತೊಡಿಗೆ, ಮತ್ತು ಅಭ್ಯಾಸಗಳನ್ನು ಅನುಸರಿಸಿಕೊಂಡು ಬಂದು ನಗೆಗೀಡಾಗುತ್ತಿದ್ದರು ಆದರೆ ಅವರ ಆತ್ಮಗೌರವ, ಅವರ ವಿಶ್ವಾಸಪ್ರಿಯತೆ ಅವರ ಕಲಿತೆ, ಅವರ ಮಿತವ್ಯಯಗಳು ಅನ್ಯದೇಶಸ್ಥರ ಮನಸ್ಸನ್ನಾಕರ್ಷಿಸಿವೆ ಈ ಸಿಪಾಯಿಗಳಲ್ಲಿ ಹಲವರ ತಂತಮ್ಮ ಬುದ್ಧಿಚಾತುರ್ಯಗಳನುಸಾರವಾಗಿ ತಮ್ಮ ವರ್ಗದವರ ಮುಖಂಡರಾದರು ತಮ್ಮ ಸಾಮಾಜಿಕ ಧಾರ್ಮಿಕ ರಾಜಕೀಯ ವ್ಯವಹಾರಗಳಲ್ಲಿ ವಿಶಿಷ್ಟ ಪಥಗಳನ್ನನುಸರಿಸಿ [illegible] ಅವರ ಪ್ರಖ್ಯಾತ ಕೊಮಗಾಟಾ ಮಾರು ಘಟನೆಯನ್ನು ತಂದೊಡ್ಡುವಷ್ಟು ಶಕ್ತರಾದರು

ಡಾ॥ ಎನ್. ಎಸ್. ಹರ್ಡೀಕರರು.

ತಮ್ಮ ಜನ್ಮಭೂಮಿಯನ್ನು ಬಿಟ್ಟು ಸಾವಿರಾರು ಮೈಲು ಭೂಮಿ ಮತ್ತು ಜಲಧಿಯ ದೂರದಲ್ಲಿರುವವರಾದರೂ, ಅವರ ತಮ್ಮ ಹಳೆಯ ಬೀಡಾದ ಹಿಂದೂಸ್ಥಾನವನ್ನು ಒಂದಿನಕ್ಕಾಗಿಯಾದರೂ ಮರೆಯದೆ, ಸ್ವತಂತ್ರ ಭಾರತದ ಉದಯವನ್ನು ಎದುರು ನೋಡುತ್ತಿದ್ದರು.

ಬಂಗಾಲವಿಭಜನೆಯೂ, ಅದನ್ನನುಸರಿಸಿಕೊಂಡು ಬಂದ ಅಸಂತೃಪ್ತಿಯೂ ಪ್ರಸ್ತುತಿಯಲ್ಲಿದ್ದ ಹಿಂದೂ ಯುವಕರ ಎದೆಯನ್ನು ಸೀಳು ಮಾಡಿ ಅವರನ್ನು ಕ್ರಾಂತಿಕಾರರನ್ನಾಗಿ ಮಾಡಿತು ಏನೊಂದೂ ತಿಳಿಯದ, ಚತುರರೂ ದೇಶಪ್ರಿಯರೂ ಆದ ಯುವಕರಿಗೆ ಮನೆಯಲ್ಲಿನ ಜೀವನವು ಅಸಹನೀಯವಾಯಿತು ಅವರು ಆಶ್ರಯವನ್ನು ಪಡೆಯುವುದಕ್ಕಾಗಿ ತಮ್ಮ ನಾಡಿನ ಗಡಿಯನ್ನೇ ದಾಟಿ ವಿದೇಶಗಳಲ್ಲಿದ್ದರು ರಾಷ್ಟ್ರಭಕ್ತಿ ಮತ್ತು ನ್ಯಾಯಪರತೆಯ ಆದರ್ಶಗಳಿಂದ ಪ್ರೇರೇಪಿಸಲ್ಪಟ್ಟವರಾಗಿ ಅನೇಕರು ಅಮೇರಿಕಾನರ ಆಶ್ರಯವನ್ನು ಕೋರಿದರು,—ಸ್ವಾತಂತ್ರ್ಯಪ್ರಿಯರಾದ ಅಮೇರಿಕಾನರು ತಮ್ಮ ಮೇಲೆ ಸಹಾನುಭೂತಿಯನ್ನು ತೋರಿ, ತಮ್ಮನ್ನು ತಮ್ಮ ಭೂಮಿಯ ಸ್ವಾತಂತ್ರ್ಯ ಸಾಧನೆಯಲ್ಲಿ ಪ್ರೋತ್ಸಾಹಿಸುವರೆಂದು ಊಹಿಸಿಕೊಂಡರು ಹೀಗೆ ಅಮೇರಿಕಾಕ್ಕೆ ಭಾರತೀಯ ಸ್ವಾತಂತ್ರ್ಯಾಕ್ರಾಂತ ಹೃದಯದೀಪವನ್ನು ಕೊಂಡೊಯ್ದವರಲ್ಲಿ ಡಾ॥ ತಾರಕನಾಥ ದಾಸ, ಡಾ॥ ಎನ್ ಎಸ್ ಹರ್ಡೀಕರ್, ಲಾಲಾ ಲಜಪತ ರೈ, ಡಾ॥ ಸುಧೀಂದ್ರ, ಶ್ರೀ॥ ನಿಹಾಲ್ ಸಿಂಘ್, ಶ್ರೀ॥ ಶೈಲೇಂದ್ರ ಘೋಸ್ ಡಾ॥ ಬರ್ಕತುಲ್ಲಾ ಖಾನ್ ಇವರೇ ಮೊದಲಿನ ಪರಿಚಯಸ್ಥರು ಆಗ ಅವರು ಹೆಚ್ಚಿನ ಮಟ್ಟಿಗೆ ಯುವಕರೇ ಆಗಿದ್ದು, ತಮ್ಮ ಜೀವನೋಪಾಯಕ್ಕಾಗಿಯೂ, ವಿದ್ಯಾರ್ಜನೆಗಾಗಿಯೂ ಮಹಾ ಹೋರಾಟವನ್ನು ಹೂಡಿಕೊಂಡಿದ್ದರಾದರೂ, ಅವರು ಒಂದು ನಿಮಿಷವಾದರೂ ತಮ್ಮ ಆದರ್ಶಗಳನ್ನು ದುರ್ಲಕ್ಷಿಸದೆ, ಭಾರತಕ್ಕೆ ಸಂಬಂಧಿಸಿದ ಪೂರ್ಣ ವಿಚಾರಗಳನ್ನು ಅಲ್ಲಿಯವರಿಗೆ ತಿಳಿಸಲು ಸಾಧನೆಗೈದರು

ಶ್ರೀ ದಾಸರದ್ದು—ದಪ್ಪನಾದ ಶರೀರ ಬೆಳೆದ ಸ್ನಾಯು, ದುಂಡಗಾದ ಮುಖಭಾವ ಆರೋಗ್ಯ ಚಿಹ್ನೆಯನ್ನು ತೋರುವ ಕೆಂಪಗಿನ ಮುಖವರ್ಣ ಸಣ್ಣ ಸಣ್ಣ ಕಣ್ಣುಗಳು ವಿಶಾಲ ವಕ್ಷಸ್ಥಲ, ಸಮನಾದ ಬಾಹುಗಳು ನಗಮೊಗ, ಸ್ಪಷ್ಟವಾಕ್ಯ ಸಾರ್ವಜನಿಕ ವೇದಿಕೆಯಲ್ಲಿ ಅವರ ನೇತ್ರಗಳ ಮಿಂಚುವುವು—ಅರ್ಗಳವಾಗಿ ಹರಿಯುವ ಅವರ ವಾಗ್ವೃಷ್ಟಿಯು ಪ್ರತಿಧ್ವನಿಯನ್ನೆಬ್ಬಿಸುವುದು, ಮುಷ್ಟಿ ಹಿಡಿದ ಅವರ ಕೈಯು ಅಲ್ಲಾಡುವುದು, ಸಮಸ್ತ ಶ್ರೋತೃವೃಂದವು ಅವರ ಭಾಷೆಯ ಮಂತ್ರಜಾಲಕ್ಕೊಳಗಾಗಿ ಬಿಡುವುದು ಅವರು ಅವಿರತವಾದ ತಹ ಸ್ವರಭಾರ ಉತ್ಸಾಹದಿಂದ ನುಡಿವವರು ಅವರ ಕಿರಿಯೇ ಭಾಷಾ ವೈಶಿಷ್ಟ್ಯದಿಂದ ನುಡಿಯವರು ಶಬ್ದಸಂಪತ್ತಿ ಅಘಾಧ ಅವರಲ್ಲಿ ಅವರ ಭಾಷಣವನ್ನು ಸಿದ್ಧಪಡಿಸಿಕೊಂಡು ಹೋಗುವುದಿಲ್ಲ ಅನಗತ್ಯವಾದ ವಿವರದಿಂದ ಅವರು ಶ್ರೋತೃವೃಂದವನ್ನು ದಣಿಸುವುದಿಲ್ಲ ಅವರು ತಮ್ಮ ಭಾಷಣವಿಷಯವನ್ನು ಸಂಕ್ಷಿಪ್ತವಾಗಿಯೂ, ಏಕೋದ್ದೇಶಪರವಾಗಿಯೂ ಮತ್ತು ವಿವಾದಾತ್ಮಕವಾಗಿಯೂ ನಿರೂಪಿಸುತ್ತಾರೆ ಅವರು ಲೋಕ ಶಾಂತಿಸ್ಥಾಪನೆಯನ್ನು ಎತ್ತಿ ಹಿಡಿದ ಕಾರಣ ಅಂತರಾಷ್ಟ್ರೀಯ ಐಕ್ಯಮತ್ಯಕ್ಕಾಗಿ ಹೆಣಗಾಡಿದವರು ಅಫೀಮು ವಿಕ್ರಯಗಾರರ ಪಂಗಡವನ್ನು ಕಂಡೊಡನೆ ಶ್ರೀ ದಾಸರು ಉದ್ರೇಕಗೊಳ್ಳುವರು ಈ ವ್ಯಾಪಾರಸ್ಥರ ವಿರೋಧವಾಗಿ ಅವರು ಅಮೇರಿಕಾದಲ್ಲೂ ಯುರೋಪಿನಲ್ಲೂ ಅವಿಶ್ರಾಂತ ಚಳವಳನ್ನೇ ಹೂಡಿದ್ದಾರೆ ಅಫೀಮು ವಿಷಯಕವಾದ ಜ್ಞಾನದಲ್ಲಿ ಶ್ರೀ॥ ದಾಸರು ಪೂರ್ಣ ಅನುಭವಿಕರೆಂದು ಜನಾಂಗ ಸಭೆಯು ಕೂಡಾ ತೀರ್ಮಾನಿಸಿಂದಿದೆ ಈ ಮಹಾ ಸಂಸ್ಥೆಯು ಶ್ರೀಯುತರ ಅಭಿಪ್ರಾಯಗಳನ್ನು ಹೆಚ್ಚಾದ ಲಕ್ಷ್ಯವನ್ನಿತ್ತು ಪರಾಮರ್ಶಿಸಿಕೊಳ್ಳುತ್ತದೆ. ಜರ್ಮನಿ, ಟರ್ಕಿ, ಫ್ರಾನ್ಸ್, ರಷ್ಯ, ಇಟಲಿ, ಮತ್ತಿತರ ಯುರೋಪ್ಯ ದೇಶಗಳಲ್ಲಿ ಅವರು ಪ್ರವಾಸಗೈದಿರುವುದರಿಂದಲೂ ಏಶಿಯಾಟಿಕ್ ದೇಶಗಳ ಪರಿಸ್ಥಿತಿಗಳನ್ನು ಸವಿಮರ್ಶನವಾಗಿ ಅವರು ತಿಳಿದುಕೊಂಡಿರುವುದರಿಂದಲೂ ಅವರು ಪ್ರಾಪಂಚಿಕ ರಾಜಕೀಯ ವ್ಯವಹಾರದಲ್ಲಿ ಅಂತರ್ರಾಷ್ಟ್ರೀಯ ವ್ಯಕ್ತಿಗಳಾಗಿ ನಿಂತಿರುವರು. ಅವರ ಉದಾತ್ತವೂ ಉಜ್ವಲವೂ ಆದ 'ಇಂಡಿಯಾ ಇನ್ ವರ್ಲ್ಡ್ ಪೊಲಿಟಿಕ್ಸ್' ಎಂಬ ಗ್ರಂಥವು ಹಿಂದೂದೇಶದಲ್ಲಿನ ನಿಷೇಧ ಗ್ರಂಥಗಳ ಸಾಲಿಗೆ ಸೇರಿರುತ್ತದೆ. ಈ ಗ್ರಂಥದಲ್ಲಿ ಅತ್ಯಮೂಲ್ಯ ಜ್ಞಾನಭಂಡಾರವೂ, ಸಲಹೆಗಳೂ ಇವೆ ಒಂದಾನೊಂದು ದಿನದಲ್ಲಿ ಸ್ವತಂತ್ರವಾಗುವ ರಾಷ್ಟ್ರವು ದೇಶಭ್ರಷ್ಟರಾಗಿರುವ ಈ ವೀರಪುತ್ರರನ್ನು ಸ್ವಾಗತೀಕರಿಸಿಕೊಳ್ಳದಿರಲಾರದು. ಹಿಂದೂಸ್ಥಾನೀ ಸೇವಾದಳದ ಡಾ॥ ಎನ್. ಎಸ್ ಹರ್ಡೀಕರರು ಹುಬ್ಬಳ್ಳಿಯವರು ಇವರು ಕನ್ನಡಿಗರಾಗಿರುತ್ತಾರೆ. ಅಮೇರಿಕಾದಲ್ಲಿ ಭಾರತದೇಶದ ಪರವಾಗಿ ದಂಭರಹಿತರಾಗಿಯೂ, ವಿನಮ್ರರಾಗಿಯೂ, ಮೌನರಾಗಿಯೂ ಕೆಲಸ ಮಾಡಿದವರಲ್ಲೊಬ್ಬರು. ಅವರು ಹಿಂದು ಮುಂದು ನೋಡಲಿಲ್ಲ. ಲಾಲಾಜಿಯವರಿಗೆ ಕೆಲವು ಸಹೋದ್ಯೋಗಿಗಳ ಅವಶ್ಯಕತೆಯಿದ್ದಿತೆಂದು ತಿಳಿದು ಬಂದೊಡನೆ, ಡಾ॥ ಹರ್ಡೀಕರರು ಆನಂದದಿಂದ ಅವರನ್ನು ಸೇರಿಕೊಂಡು ನ್ಯೂಯೋರ್ಕಿನಲ್ಲಿ 'ಹಿಂದೂಸ್ಥಾನ್ ಎಸೋಸಿಯೇಶನ್ ಆಫ್ ಅಮೇರಿಕಾ' ಎಂಬ ಸಂಸ್ಥೆಯ ಕಾರ್ಯದರ್ಶಿಗಳಾಗಿ ಕಾಯಕಷ್ಟದಿಂದ ಕೆಲಸಮಾಡಿದರು ತಮ್ಮ ಸಂಘಕ್ಕೆ ಸದಸ್ಯರನ್ನು ಸಂಪಾದಿಸಿಕೊಳ್ಳಲು ಲಾಲಾಜಿಯವರು ವಿಸ್ತಾರ ಸಂಚಾರವನ್ನು ಕೈಕೊಂಡಾಗ ಡಾ॥ ಹರ್ಡೀಕರರು ತಮ್ಮ ಸಾಹಸದಿಂದ ಅನೇಕ ಪ್ರಮುಖ ಅಮೇರಿಕಾನರನ್ನು ತಮ್ಮ ಸಂಸ್ಥೆಗೆ ಸದಸ್ಯರನ್ನಾಗಿ ಸೇರಿಸಿಕೊಂಡರು ಇವರು 'ದಿ ಫ್ರೆಂಡ್ಸ್ ಆಫ್ ಫ್ರೀಡಂ ಫೋರ್ ಆಯರ್ಲೆಂಡ್' ಎಂಬ ಸಂಘದೊಡನೆ ಸೇರಿದುದರಿಂದ ಏಕವಿಷಯಕ್ಕಾಗಿ, ಏಕಸಂಕಲ್ಪಪರಿಹಾರಾರ್ಥವಾಗಿ ಕೌಶಲ್ಯದಿಂದ ಕೈ ಕೈ ಹಿಡಿದುಕೊಂಡಂತಾಯಿತು ಈಗಿನ ಸಂಯುಕ್ತ ಅಮೇರಿಕಾದ ಬೆನ್ನೆಲುಬಿನಂತೆ ಐರಿಷ್ ಜನರೇ ಇರುವರು ಜನಸಂಖ್ಯೆಯಲ್ಲಿ ಬಹು ಸಂಖ್ಯಾಕರು ಇವರೇ ಆಗಿರುತ್ತಾರೆ ಈ ಜನರ ಮಧ್ಯೆ ಘನವಾದ ಸಮಾಜಿಕರನ್ನೂ, ಪತ್ರಕರನ್ನೂ ಸರಕಾರೀ ನೌಕರರನ್ನೂ ಮೆಂಬರರನ್ನಾಗಿ ಸಂಪಾದಿಸಿಕೊಳ್ಳುವುದೇ ಅಲ್ಲದೆ ಅಮೇರಿಕನ ಸಾರ್ವಜನಿಕರ ಬೆಂಬಲವನ್ನು ದೊರಕಿಸಿಕೊಡುತ್ತಿದ್ದೇ ಸರಿ

ಇವರ ಸಹಾಯದಿಂದಾಗಿ ಭಾರತೀಯರ ತಳವಳ ವಿಚಾರವು ಆರ್ಥಿಕ ಮತ್ತು ನೈತಿಕ ಬೆಂಬಲವನ್ನು ಹೊಂದಿತು ಡಾ॥ ಹರ್ಡೀಕರರ ಬಹುಮುಖವಾದ ಕಾರ್ಯಕಲಾಪಗಳಲ್ಲಿ ಅನುಭವಿಕರಾದರು ಅವರ ಮೇಲೆ ವಿಶ್ವಾಸವೂ ಹುಟ್ಟಿತು ಕಾಲಕ್ರಮೇಣ ೧೯೨೦ರಲ್ಲಿ ಲಾಲಾಜಿಯವರು ಅಮೇರಿಕಾವನ್ನು ಬಿಟ್ಟು ಸ್ವದೇಶಕ್ಕೆ ಹಿಂದಿರುಗಿದಾಗ ಡಾ॥ ಹರ್ಡೀಕರರು, ಎಲ್ಲಾ ಹೊಣೆಗಾರಿಕೆಯನ್ನು ತಾನೇ ವಹಿಸಿಕೊಳ್ಳಬೇಕಾಗಿ ಬಂತು.

ಉತ್ಸಾಹಶಾಲಿಗಳೂ, ಕಾರ್ಯದುರಂಧರರೂ ದೈವವಶಾತ್—ಕಡಿಮೆಯಾಗಲಿಲ್ಲ ಶ್ರೀ॥ ಶೈಲೇಂದ್ರ ಘೋಷ್ ಶ್ರೀ॥ ಬಜಪೈ, ಶ್ರೀ॥ ಮಿತ್ರ, ಶ್ರೀ ಹರಿಗೋವಿಲ್ ಇನ್ನಿತರ ಎಷ್ಟೋ ಭಾರತೀಯರು ಅಮೇರಿಕಾದಲ್ಲಿ ಭಾರತೀಯ ಕಲೆ, ಸಂಗೀತ ಮತ್ತು ತತ್ವ ಪ್ರಚಾರಕ್ಕೆ ತೊಡಗಿದರು ತಾವು ಸ್ವತಃವಾಗಿ ಕಲಾಭಿಜ್ಞರಾಗಿಯೂ ಅಥವಾ ಕಲಾವಿಮರ್ಶಕರಾಗಿಯೂ ಅವರು ತಮ್ಮ ಲೇಖನಿಯ ಮೂಲಕ ಅವಿಶ್ರಾಂತವಾಗಿ ಕೆಲಸಮಾಡಿ ಅಮೇರಿಕಾದ ಸಾರ್ವಜನಿಕರಿಗೆ ಹಿಂದೂಸ್ಥಾನದ ಶಕ್ತಿಯ ಮತ್ತು ಚಿತ್ರಣ ಕಲೆಗಳ ಕುರಿತಾಗಿ ತಿಳಿಯಪಡಿಸಿದರು

ಮೊನ್ನೆ ತಾನೇ ಮುಂಬಾಯಿಗೆ ಬಂದ ಶ್ರೀ॥ ಹರಿ ಗೋವಿಲರು ನಾಗರಲಿಪಿಗಳ ಒಂದು ನೂತನ ಲಿನೋಟೈಪ್ ಯಂತ್ರವನ್ನು ಸಂಶೋಧಿಸಿರುವರೆಂದು ಪ್ರಶಂಸಿಸಲ್ಪಡುತ್ತಿದ್ದಾರೆ ಅವರ ಈ ಸಾಹಸದಿಂದ ರಾಷ್ಟ್ರೀಯ ಭಾಷೆಯೊಂದನ್ನು ನಮ್ಮ ಜನಸಮೂಹದ ಮಧ್ಯೆ ಪ್ರಚಾರಮಾಡಲು ಸುಲಭವಾದಂತಾಯಿತು ಶ್ರೀ॥ ಗೋವಿಲರು ಅಮೇರಿಕಾದಲ್ಲಿ ವಾಸಿಸುತ್ತಿದ್ದು ಇಂತಹ ಒಂದು ಯಂತ್ರವನ್ನು ಕಂಡುಹಿಡಿದಿರುವರೆಂದರೆ,ಅವರು ಭಾರತದೇಶದ ಪರವಾಗಿ ಎಷ್ಟೊಂದು ಯೋಚನಾಸಕ್ತರಾಗಿರುವರೆಂಬುದು ವಿದಿತವಾಗುವುದು.

ಅಸಂಖ್ಯ ಶವಗಳ ಕರಾಳ ಭೂಮಿ!

ಕ್ವೆಟ್ಟಾ ನಗರವು ಹಾಳುನೆಲವಾಗಿದೆ!

ಭೂಮಿಯು ದಿನಂಪ್ರತಿ ನಡುಗುತ್ತಿದೆ!

ಸಿಮ್ಲಾ, ಜೂನ್, ೩

ತಾ ೨ನೇ ದಿನ ಇಡೀ ಭೂಮಿಯು ಆಗಾಗ ಕಂಪಿಸುತ್ತಿತ್ತು. ಹೆಚ್ಚಿನ ಅನಾಹುತಗಳು ನಡೆದಿರುವುದಿಲ್ಲ

ಕ್ವೆಟ್ಟಾದಲ್ಲಿ ಒಟ್ಟು ೨೬,೦೦೦ ಜನರು ಮರಣಹೊಂದಿರುವರೆಂದು ಅಧಿಕಾರಿಗಳು ಲೆಕ್ಕವಿಟ್ಟಿರುತ್ತಾರೆ ಅಲ್ಲಿರುವ ೪೦,೦೦೦ ಜನರಲ್ಲಿ ಉಳಿದವರು ಅಲ್ಪ ಮಂದಿ ಕಡನೆ. ಎಂದರೆ ೨೦,೦೦೦ ಶವಗಳು ಕಟ್ಟಡಗಳಡಿಯಲ್ಲೋ ಗೋಡೆಗಳಡಿಯಲ್ಲೋ ಇವೆಯೆಂದು ಲೆಕ್ಕವಿಟ್ಟಿರುತ್ತಾರೆ ಇಷ್ಟರ ತನಕ ೫೦೦೦ ಹಿಂದೀಯರ ದೇಹಗಳನ್ನು ಹೂಣಿಡಲಾಯಿತು ಕೆಲವರನ್ನು ರಾಶಿರಾಶಿಯಾಗಿ ಸುಡಲಾಯಿತು ಸಮೀಪವಿರುವ ಹಳ್ಳಿಗಳಲ್ಲಿನ ಶೇಕಡಾ ೬೦ ಜನರು ನಾಶಹೊಂದಿರುವರು ೩೦೦೦ ಬ್ರಿಟಿಷರಿಗೂ ೩೦,೦೦೦ ಹಿಂದೀಯರಿಗೂ ಆಹಾರವನ್ನು ಒದಗಿಸಲಾಗುತ್ತಿದೆ ಕ್ವೆಟ್ಟಾದಿಂದ ೩೫೦೦ ಜನರನ್ನು ಪರದೇಶಗಳಿಗೆ ಕಳುಹಿಸಲಾಯಿತು ಅಧಿಕಾರಿಗಳೂ ಜನರೂ ಸಹಾಯವನ್ನೊದಗಿಸುತ್ತಿರುವರು

ಕೊಲಾಬಾಪುರ ಸುರಂಗವು ಬಿದ್ದಿರುವ ವಾರ್ತೆಯು ಆಧಾರವಾದುದಲ್ಲವೆಂದು ತಿಳಿದು ಬಂದಿದೆ ರೈಲ್ವೆಯೋನೋ ಹಾಳಾಗಿಹೋಗಿತ್ತು ಅದನ್ನು ಸಜ್ಜುಗೊಳಿಸಲಾಗಿದೆ ಹಿಂದೀಯರ ಬಜಾರುಗಳನ್ನು ಸ್ಫೋಟಕಮದ್ದುಗಳಿಂದ ಒಡೆದು ಧೂಳೀಕರಿಸಬೇಕೆಂದು ಅಧಿಕಾರಿಗಳು ಯೋಚಿಸಿರುವರೆಂಬ ವಾರ್ತೆಯು ಸುಳ್ಳೆಂದು ತಿಳಿದುಬಂದಿದೆ

ಬೆಂಕಿಯನ್ನು ನಂದಿಸುವುದಕ್ಕಾಗಿ ಪ್ರತ್ಯೇಕ ಏರ್ಪಾಡುಗಳಾಗಲಿವೆ ಅಮೂಲ್ಯ ವಸ್ತುಗಳನ್ನು ಅಗೆದು ತೆಗೆಯುವ ಕೆಲಸವು ನಾಳೆ ಪ್ರಾರಂಭವಾಗುವುದು ಹಳ್ಳಿಗಳಿಗೆ ಪ್ರತ್ಯಪ್ರತ್ಯೇಕವಾಗಿ ಆಹಾರಸಾಮಗ್ರಿಗಳನ್ನು ಕಳುಹಿಸಲಾಗುತ್ತದೆ

ಆಸ್ಪತ್ರೆಯಲ್ಲಿರುವವರ ವಿವರ ಬ್ರಿಟಿಷರು ೬೯ ಸ್ತ್ರೀಯರು ೬೩ ಮಕ್ಕಳು ೩ ಹಿಂದೀಯರು ೩೨೫೦

ಕಲ್ಕತ್ತಾ ಜೂನ್, ೪

ಮೌಲಾನಾ ಅಬ್ದುಲ್ ಕಲಂ ಅಜಾದರು ಕಲ್ಕತ್ತೆಯ ಹಲ್ಲಿಡೇಪಾರ್ಕಿನಲ್ಲಿ ಒಂದು ಸಭೆ ಜರಗಿಸಿ, ಕ್ವೆಟ್ಟಾದಲ್ಲಿನ ಜನರಿಗೆ ಸಹಾಯವನ್ನೀಯಬೇಕಾಗಿ ಪ್ರಾರ್ಥಿಸಿಕೊಂಡರು ಅದಂಜೀ, ಹಾಜೀ ದಾವೂದ್ ಎಂಬವರು ೫೦೦೦ ರೂಪಾಯಿಗಳನ್ನು ಸಹಾಯಧನವಾಗಿ ಕೊಟ್ಟಿರುವರೆಂದೂ, ಮೆಮನ್ ಸಮಿತಿಯವರು ಸಹಾಯ ಸಮಿತಿಯನ್ನು ಏರ್ಪಡಿಸಿರುವರೆಂದೂ ತಿಳಿದುಬಂದಿದೆ.

ಲಂಡನಿನಲ್ಲಿ ಭೂಕಂಪದ ಪ್ರಸಂಗ

ಲಂಡನ್, ಜೂನ್ ೩

ಹೌಸ್ ಒಫ್ ಕೊಮನ್ಸ್ ಸಭೆಯಲ್ಲಿ ಈ ದಿನ ಮಧ್ಯಾಹ್ನ ಸರ್ ಸಾಮುವೇಲ್ ಹೋರರು ಒಂದು ಪ್ರಕಟಣೆಯನ್ನು ಮಾಡಿದರು ಕ್ವೆಟ್ಟಾದ ಭೀಕರ ಭೂಕಂಪದಿಂದಾಗಿ ಕಠೋರ ಸಂಕಷ್ಟಕ್ಕೀಡಾದ ಜನರಲ್ಲಿ ತಮಗೆ ಪೂರ್ಣ ಸಹಾನುಭೂತಿಯಿದೆಯೆಂದು ಅವರು ತಿಳಿಸಿದರು. ಮೇಜರ್ ಅಟ್ಲಿಯವರು 'ಅಲ್ಲಿ ಹಲವರು ಕಾಣೆಯಾಗಿರುವರಂತೆ, ಅವರನ್ನು ಮಣ್ಣಿನಡಿ ಹುಡುಕುವ ವ್ಯವಸ್ಥೆ ಮಾಡಬಾರದೇ?' ಎಂದರು ಹೋರರು "ಅಗತ್ಯವಾಗಿ ಮಾಡಬೇಕು ಜೀವವಿರುವವರನ್ನು ಹುಡುಕಿ ತೆಗೆಯುವ ಕೆಲಸವನ್ನು ನಿಲ್ಲಿಸಬಾರದು" ಎಂದು ಹೇಳಿದರು

ಸಿಮ್ಲಾ, ಜೂನ್ ೫

ಕ್ವೆಟ್ಟಾದಲ್ಲಿ ಭೂಮಿಯು ಪದೇ ಪದೇ ಮೆಲ್ಲ ಮೆಲ್ಲನೆ ನಡುಗುತ್ತಲಿದೆ ಜನರಾರೂ ಮನೆಯೊಳಗೆ ಮಲಗಲು ಧೈರ್ಯಗೊಳ್ಳುವುದಿಲ್ಲ ಬಿದ್ದುಳಿದ ಕಟ್ಟಡಗಳ ಭಾಗಗಳು ಸಣ್ಣ ಸಣ್ಣ ಕಂಪನಗಳಿಂದಾಗಿ ಕೆಳಗುದುರುತ್ತಿವೆ ದುರ್ವಾಸನೆ ಏಳಲಾರಂಭವಾಗಿದೆ ಮಣ್ಣಿನಡಿಯಲ್ಲಿರುವ ಶವಗಳನ್ನು ಹೆಕ್ಕುವ ಯತ್ನವು ಅಷ್ಟು ಭರದಿಂದ ನಡೆಯುವುದಿಲ್ಲ ಜೀವಂತವಾಗಿರುವವರನ್ನು ರಕ್ಷಿಸುವ ಏರ್ಪಾಡನ್ನು ಮಿಲಿಟರಿಯವರು ಮಾಡುತ್ತಲಿದ್ದರು ನಾಲ್ಕು ದಿನಗಳು ದಾಟಿ ಹೋದುದರಿಂದ ಮಣ್ಣಿನಡಿಯಲ್ಲಿ ಜೀವದಿಂದಿರುವ ಜನರು ಬದುಕಿ ಉಳಿಯುವ ಆಶೆಯಿಲ್ಲದಿರುವುದರಿಂದ ಮಣ್ಣನ್ನಗೆಯುವ ಕೆಲಸವು ನಿಲ್ಲಿಸಲ್ಪಟ್ಟಿದೆ ದಖಂಗೊಂಡವರ ಸಂಖ್ಯೆಯು ಆಸ್ಪತ್ರೆಗಳಲ್ಲಿ ತುಂಬುತ್ತಾ ಇದೆ ಆಸ್ಪತ್ರೆಗಳನ್ನು ಢೇರೆಗಳೊಳಗೆ ತೆರೆದಿರುವರು

ಮಿಲಿಟರಿಯವರು ಯಾರನ್ನೂ ನಗರದೊಳಗೆ ಪ್ರವೇಶಿಸಲು ಬಿಡುವುದಿಲ್ಲ ಅಲ್ಲಲ್ಲಿ ಕೆಲವು ದರೋಡೆಗಳೂ ನಡೆದಿವೆ ಕೆಲವರನ್ನು ಕೈದು ಕೂಡ ಮಾಡಲಾಗಿದೆ ಜೀವರಕ್ಷಿಟ್ಟುಗೊಂಡಿರುವನಾದರೂ ಜನರ ದ್ರವ್ಯಾದಿಯ ಊಹಿಸಾತರವೂ ಕಡಮೆಯಾಗಲಿಲ್ಲ ಕತ್ತಲಾಗುತ್ತಲೇ ಪುಂಡರು ನಿರ್ಜನವಾದ ಭಯಂಕರ ಹಾಳು ಮಂದಿರಗಳನ್ನು ಹೊಕ್ಕು ಸಿಕ್ಕಿದದನ್ನು ಎತ್ತಿಕೊಂಡು ಹೋಗುತ್ತಿರುವರು ಸಹಾಯದಾನಮಾಡುವ ಕರ್ತವ್ಯದೊಡನೆ ಮಿಲಿಟರಿಯವರಿಗೆ ದಸ್ತಗಿರಿಯ ಕೆಲಸವೂ ಇದೆ

ಶ್ರೀ| ಕೃಪಾಲಾನಿಯವರೂ ಶ್ರೀ| ಜಮ್ನಾದಾಸ ಮೆಹ್ತಾರವರೂ ಕಾಂಗ್ರೆಸ್ ಕೆಲಸಗಾರರೊಡನೆ ಕ್ವೆಟ್ಟಾ ನಗರವನ್ನು ಪ್ರವೇಶಿಸಿ ಕೆಲಸಮಾಡಬೇಕೆಂದಿದ್ದಾಗ, ಮಿಲಿಟರಿಯವರು ಅವರನ್ನು ಒಳಗೆ ಬಿಡಲು ಸಮ್ಮತಿಸಲಿಲ್ಲ ಈ ಸಂಬಂಧವಾಗಿ ಶ್ರೀ| ಕೃಪಾಲಾನಿಯವರು ಮಹಾತ್ಮಾ ಗಾಂಧಿಯವರಿಗೊಂದು ತಂತಿಬಿಟ್ಟು ಸೂಚಿಸಿರುವರು ಸೆಕ್ರೆಟರಿ ಒಫ್ ಸ್ಟೇಟ್ ಇವರಿಗೂ ವೈಸರಾಯರಿಗೂ ತಂತಿಯ ಮೂಲಕ ಅರಿಕೆಮಾಡಬೇಕಾಗಿ ಅವರು ಕೇಳಿಕೊಂಡಿರುವರು ಬಲೂಚಿಸ್ಥಾನದ ಹಲವೆಡೆಗಳಲ್ಲಿ ಅಧಿಕಾರಿಗಳ ಈ ವರ್ತನೆಯನ್ನು ಖಂಡಿಸಿ ಅವರ ಉದಾರಹೃದಯ ರಾಗಬೇಕಾಗಿ ಪ್ರಾರ್ಥಿಸಿಕೊಳ್ಳಲಾಗಿದೆ

ಸಾರ್ವಜನಿಕರ ಹಿತದೃಷ್ಟಿಯಿಂದಲೇ ತಾವು ಕ್ವೆಟ್ಟಾಕ್ಕೆ ಇತರ ಜನರನ್ನು ಪ್ರವೇಶಿಸ ಬಿಡುವುದಿಲ್ಲವೆಂದು ಇಂಡಿಯಾ ಸರಕಾರವು ಪ್ರಕಟಿಸಿರುತ್ತದೆ ಭೂಕಂಪವಾದ ಪ್ರದೇಶದಲ್ಲಿ ..ನ ತುಟ್ಟಿಯು ತಲೆಯೆತ್ತಿದೆ ಒಂದೆಡೆಯಿಂದ ರೋಗಬಾಧೆ, ಒಂದೆಡೆಯಿಂದ ಮಳೆಯ ಭಯ ಇನ್ನೊಂದೆಡೆಯಿಂದ ಆಗಲೋ ಮತ್ತೋ ಭೂಮಿಯು ನಡುಗಬಹುದೆಂಬ ಭೀತಿಯು ಜನರ ಮಾನಸಿಕ ಶಾಂತಿಯನ್ನು ಸೂರೆಗೊಂಡಿವೆ ಕ್ವೆಟ್ಟಾದ ಹಾಳೆ ಕಟ್ಟಡಗಳನ್ನು ಎಣ್ಣೆ ಕೊಟ್ಟು ಸುಡಬೇಕೆಂದು ಅಧಿಕಾರಿಗಳ ನಿರ್ಣಯಿಸಿದ್ದಾರೆಂಬ ವಾರ್ತೆಯು ಅಲ್ಲಿ ಹರಡಿದೊಡನೆ ಜನರೆಲ್ಲರೂ ಒಂದಾಗಿ ಅದು ಕೂಡದೆಂದರು ಈ ಪ್ರತಿಭಟನೆಯ ದೆಸೆಯಿಂದಾಗಿ ಸರಕಾರವು ತನ್ನ ಅಂತಹ ಅಭಿಪ್ರಾಯವನ್ನು ತ್ಯಜಿಸಿರುತ್ತದೆಂದು ತಿಳಿದುಬಂದಿದೆ

ಸಹಾಯಕರೂ, ಸಹಾಯ ಸಮಿತಿಗಳೂ ದಿನೇ ದಿನೇ ಕ್ವೆಟ್ಟಾಕ್ಕೆ ಬರುವಂತಾಗಿದೆ ವೈಸರಾಯರ ರಿಲೀಫ್ ಫಂಡಿನಲ್ಲಿ ೫೦,೦೦೦ ರೂಪಾಯಿಗಳು ಕೂಡಿರುವುವು ಆಶ್ರಿತ ರಾಜರುಗಳಿಗೆ ವೈಸರಾಯರು ಪ್ರತ್ಯೇಕ ಮನವಿಗಳನ್ನು ಮಾಡಿರುವರು

ಲೋರ್ಡ್ ಎರ್ಸ್ಕಿನರ ನಿವೇದನೆ

ಊಟಕಮಂಡ, ಜೂನ್ ೪

ಕ್ವೆಟ್ಟಾದ ಜನರ ಸಹಾಯಾರ್ಥವಾಗಿ ವೈಸರಾಯರು ಮಾಡಿದ ಸಾರ್ವಜನಿಕ ಅರಿಕೆಯನ್ನು ಸಮರ್ಥಿಸಿ ಮದರಾಸು ಗವರ್ನರರಾದ ಲೋರ್ಡ್ ಎರ್ಸ್ಕಿನರು ಈ ರೀತಿ ನಿವೇದಿಸಿರುತ್ತಾರೆ

ಅಲ್ಪಾವಧಿಯೊಳಗೆ ಎರಡನೆಯ ಸಲವಾಗಿ ಉತ್ತರ ಹಿಂದೂಸ್ಥಾನವು ಭೂಕಂಪದ ಅನಾಹುತಕ್ಕೊಳಗಾಯಿತು ಬಿಹಾರ್ ಭೂಕಂಪವಾದಾಗ ಅಲ್ಲಿಯ ಜನರ ಸಹಾಯಾರ್ಥವಾಗಿ ವೈಸರಾಯರು ಧನಸಹಾಯವನ್ನು ಕೇಳಿದೊಡನೆ ಮದ್ರಾಸಿನ ಸಾರ್ವಜನಿಕರು ಮನಃಪೂರ್ವಕವಾಗಿ ಮುಂದೆಬಂದು ಸಹಕರಿಸಿದರು ಈಗ ಕ್ವೆಟ್ಟಾದಲ್ಲಿನ ಈ ಅನಾಹುತದ ವೇಳೆಯಲ್ಲಿ ಅವರು ಅಂದಿನಂತೆ ಮುಂದೆಬಂದು ಸಹಾಯವನ್ನೀಯುವರಾಗಿ ನಂಬಿದ್ದೇನೆ ಸಿಲ್ವರ್ ಜುಬಿಲಿ ಫಂಡಿಗೆ ಶ್ಲಾಘನೀಯ ಸಹಾಯವು ದೊರಕಿದೆ ಈಗ, ಸಂಕಟಸಿಯೂ ಪುನಃ ಸಹಾಯವನ್ನು ಕಾಂಕ್ಷಿಸುತ್ತದೆ ವೈಸರಾಯರು ನಿನ್ನೆ ಅರಿಕೆಮಾಡಿಕೊಂಡಿರುವ ಸಹಾಯನಿಧಿಗೆ ಮದ್ರಾಸಿನವರು ಕೊಡುಗೈಯಿಂದ ಸಹಾಯ ಮಾಡಿ ಮದ್ರಾಸಿನ ಅನ್ವರ್ಥನಾಮವನ್ನು ಉಳಿಸಿಕೊಳ್ಳುವರಾಗಿ ಆಶಿಸುತ್ತೇನೆ

ಎರ್ಸ್ಕಿನ್

KANNADA SAVINGS CERTIFICATES

Cashed even before maturity

available in denominations of Rs 10/ and above

TOTAL YIELD RS 4-6-0% P. A

Paid once half yearly at 3½% p. a.

with an additional 1¼% p. a. on maturity

If Left To Accumulate

RS. 100/- Will Amount to RS. 122-13-6

Full Particulars from —

CANARA BANK LTD.,

Estd 1906

OFFICES AT

Bombay—Fort, Bombay—Mandvi, Hubli, Calicut, Cochin, Ernakulam, Alleppey, Bangalore, Davangere, Chickmagalur, Mangalore—Bunder, Mangalore—City, Kasaragod, Puttur, Buntwal, Karkala, Udipi, Coondapoor & Gangoli.

Subscribed Capital	Paid up Capital	Reserves	Deposits	Working Capital
6,00,000	3,31,000	4,50,000	58,62,000	73,49,000

ಅನುಕ್ರಮಣಿಕೆ.

ಕ್ವೆಟ್ಟಾದಲ್ಲಿ ಭೀಕರ ಭೂಕಂಪ	೧
ಚಿತ್ರ	೨
ಪತ್ರಿಕಾಪ್ರಪಂಚ	೩
ಕರ್ನಾಟಕ ವರ್ತಮಾನ,	೫
ಮಸಲ್ ಪಾದ್ರು,	೭
ಅಗ್ರಲೇಖ	
ನೋಟಗಳು	೧೮
ಸ್ಫುಟವಿಚಾರಗಳು	೯
ಅಸ್ತ್ರ ವ್ಯಾಪಾರ	೧೦
ವರ್ತಮಾನ ಸಂಗ್ರಹ	
ಮಂಗಳೂರು, ತಾಲೂಕುಗಳಿಂದ	೧೩
ವಿವಿಧ ಸಮಾಚಾರಗಳು	೧೬
ಮೂಲ್ಕಿಯಲ್ಲಿ ಹರಿಜನರ ಮೇಲೆ ನಿರ್ಬಂಧ	೧೪
ನಡೆದ ಕತೆಗಳು	೧೮

ಸ್ವದೇಶಾಭಿಮಾನಿ

ತಾ ೭ನೇ ಶುಕ್ರವಾರ ಜೂನ್, ೧೯೩೫

ಅಸ್ತ್ರಗಳ ವ್ಯಾಪಾರ

ಪ್ರಪಂಚದ ನೂರಾರು ಜಟಿಲ ಸಮಸ್ಯೆಗಳಲ್ಲಿ ಅಸ್ತ್ರಗಳ ವ್ಯಾಪಾರವು ಒಂದು ತೀರ ಜಟಿಲವಾದ ಪ್ರಶ್ನೆಯಾಗಿದೆ ಇದರ ಕಡೆಗೆ ದೇಶಗಳು ನೋಡುವ ದೃಷ್ಟಿಯು ಇನ್ನಷ್ಟು ವಿಚಿತ್ರವಾಗಿದೆ ಪೆರಗುವೆ, ಬೊಲಿವಿಯಾ ಸಮರದ ವಿಚಾರವಾಗಿ ನಾವು ನಿತ್ಯವೂ ಕೇಳುತ್ತಿದ್ದೇವೆ ಸಣ್ಣ ರಾಜ್ಯಗಳಾದರೂ ಎಂದೋ ತೊಡಗಿದ ಅವರ ಕಾಳಗಗಳು ಇನ್ನೂ ಮುಗಿದಿಲ್ಲ ಇತ್ತ ಎಬಿಸೀನಿಯಾದ ಮೇಲೆ ಇಟಲಿಯು ಕೋಪಿಸಿದ ಕಥೆಯು ಇಂದಿನದೇ ಅದರ ಇತ್ಯರ್ಥ ಇನ್ನೂ ಆಗಿಲ್ಲ ಒಂದು ಕಡೆ, ಇಲ್ಲದ್ದಕ್ಕೂ ಕಾಳಗಗಳ ಸನ್ನಾಹ ನಡೆಯುತ್ತಿದೆ ಜರ್ಮನಿಯು ಶಸ್ತ್ರ ಸಮಾನತೆಗೆ ಹೋರಾಡುತ್ತದೆ ಎಲ್ಲರಿಗೂ ಯುದ್ಧ ಸಿದ್ಧತೆಯು ವ್ಯಯವು ಒಟ್ಟಿನ ಕೊರಳಿಗೆ ಕಲ್ಲೆಂದು ಕಂಡರೂ ಒಬ್ಬರ ಭೀತಿಯಿಂದ ಇನ್ನೊಬ್ಬರು ಶಸ್ತ್ರಪ್ರಮಾಣವನ್ನು ತಗ್ಗಿಸುವಂತಿಲ್ಲ ಅದೇ ವಾಯುಯಿಂದ ಜರ್ಮನಿ, ಇಂಗ್ಲಾಂಡು, ಇಟಲಿಯಂಥ ರಾಜ್ಯಗಳು ಶಸ್ತ್ರಪ್ರಮಾಣವನ್ನು ತಗ್ಗಿಸುವ ಸಲುವಾಗಿ ಯೋಚನೆಯನ್ನು ನಡೆಯಿಸುತ್ತಿವೆ ಇವುಗಳು ಜಯವಾದಂತೆ ಕಂಡುಬರುವುದಿಲ್ಲ ಇದರ ಗುಟ್ಟೇನು? ವಿವಿಧ ರಾಜ್ಯಗಳ ರಾಜತಂತ್ರ ಧುರೀಣರು ಶಾಂತಿಸ್ಥಾಪನೆಗೆ ಸಿದ್ಧರಿಲ್ಲವೇ? ಇದ್ದರೆ ಈ ಎಲ್ಲ ಸಾಹಸಗಳು ವ್ಯರ್ಥವಾಗುತ್ತಿವೆಯೇಕೆ?

ಮೊನ್ನೆ ಮೊನ್ನೆ ಬ್ರಿಟಿಷ ಸರಕಾರವು ತಮ್ಮ ದೇಶದ ಖಾಸಗಿ ಯುದ್ಧೋಪಕರಣ ತಯಾರಿ, ಮತ್ತು ವ್ಯಾಪಾರಗಳ ವಿಚಾರವಾಗಿ ಒಂದು ವಿಚಾರಣಾ ಸಮಿತಿಯನ್ನು ಏರ್ಪಡಿಸಿತು ಸಮಿತಿಯ ಕಾರುಭಾರುಗಳನ್ನು ಕಟ್ಟುಪಾಡುಗಳಿಂದ ತುಂಬಿದ್ದರು ಅದಕ್ಕೆ ವಿಶೇಷವಾದ ವಿಚಾರ ಸ್ವಾತಂತ್ರ್ಯವನ್ನು ಕೊಟ್ಟಿಲ್ಲವಾದರೂ ಅದು ತನ್ನ ಕೆಲಸವನ್ನು ಇಷ್ಟರಲ್ಲಿ ತೀರ್ಮಾನವಿಲ್ಲದೆ ಮುಂದರಿಸಿದೆ ಎಂದು ತಿಳಿದು ಬರುವುದು ಅಂದರೆ—ವಿಚಾರಣೆಯ ಫಲಿತವನ್ನು ಬಹಿರಂಗಪಡಿಸುವುದಾಗಲಿ, ಒಳಕ್ಕೆ ತರುವುದಾಗಲಿ, ಸಮಿತಿಯನ್ನು ನೇಮಿಸಿದ ಸರಕಾರಕ್ಕೇನೆ ಬೇಡವಾಗಿದೆಯೆಂಬುದು ಸ್ಪಷ್ಟವಾಯಿತು.

ಆ ಸಮಿತಿಯ ಮುಂದೆ ಸಾಕ್ಷಿಯಾಗಿ ಹೋಗಿದ್ದ ಮಿ। ಹೆರ್ರಿ ಪಾಲಿಟ್ ಎಂಬವರು ತಮ್ಮ ಅಭಿಪ್ರಾಯವನ್ನು ಕೊಡುವಾಗ, ಇದರ ಗುಟ್ಟನ್ನು ರಟ್ಟುಪಡಿಸಿದರು ಬ್ರಿಟನಿನ ಅಸ್ತ್ರ ವ್ಯಾಪಾರ ಮತ್ತು ಇದಕ್ಕೇ ಅನುಕೂಲದ ಇತರ ಕೈಗಾರಿಕೆಗಳು ದಿನೇ ದಿನೇ ವ್ಯಾಪಾರವನ್ನು ಹೆಚ್ಚಿಸುತ್ತಿವೆ ಜಗತ್ತಿನ ಯುದ್ಧೋಪಕರಣ ವ್ಯಾಪಾರಿಗಳಲ್ಲಿ ಶಾಂತಿಗೆ ಬಾಯಿಬಿಡುವ ಬ್ರಿಟನಿನವರೂ ಒಬ್ಬರು ಆದರೆ ೧೯೩೩—೧೯೩೪ರ ತನಕ ಅದು ನಡೆಯಿಸಿದ ವ್ಯಾಪಾರವು ಮಾತ್ರ ವಿಶೇಷವಾಗಿದೆ ಅಂಥ ಕೆಲವು ಸಂಖ್ಯೆಗಳನ್ನು ನೋಡಿ –

ಚೀನಕ್ಕೆ ಮಾರಿದ ಅಸ್ತ್ರಗಳು —೧೯೩೦ರಲ್ಲಿ ೧೬,೭೦೦, ೧೯೩೧ರಲ್ಲಿ—೨೪,೬೦೦, ೧೯೩೩ರಲ್ಲಿ ೭,೩೦೦, ೧೯೩೩ರಲ್ಲಿ—೨,೨೩,೦೦೦

ಜಪಾನಿಗೆ —೧೯೩೦ರಲ್ಲಿ ೯೪,೨೦೦, ೧೯೩೧ರಲ್ಲಿ ೧,೭೩,೭೦೦, ೧೯೩೨ರಲ್ಲಿ ೨,೧೬,೦೦೦

ಅದರಂತೆ ಪ್ರತಿವರುಷವೂ ಹೆಚ್ಚು ಹೆಚ್ಚಾಗಿ ಜರ್ಮನಿ, ಪೋಲೆಂಡು ಮೊದಲಾದ ದೇಶಗಳಿಗೆ ಬ್ರಿಟನು ಅಸ್ತ್ರಗಳನ್ನು ಮಾರಿದೆ ಎಬಿಸಿನಿಯಾಕ್ಕೆ ವಿಕ್ರಯಿಸಿದೆ ಇಷ್ಟು ಲಾಭಕರವಾದ ಉದ್ಯೋಗವು ಇನ್ನೊಂದಿಲ್ಲ ಇಂಗ್ಲೆಂಡಿನ ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ ಆಗಲಿ, ಪ್ರಸಿದ್ಧ ವಿಕರ್ಸ್ ಆರ್ಮ್ಸ್ಟ್ರಾಂಗ್ ಕಂಪೆನಿಯಾಗಲಿ— ಖಾಸಗಿ ಸಂಸ್ಥೆಗಳೇ ಅದರಂತೆ ಜರ್ಮನಿಯು ಕ್ರುಪ್ ಮೊದಲಾದ ಕಂಪೆನಿಗಳಿವೆ

ಇದರ ಪಾಲುಗಾರರು ಯಾರೆಂಬುದನ್ನು ಮಾತ್ರ ತಿಳಿಯಹೋದರೆ ಒಳಗಟ್ಟು ತಿಳಿಯುವುದು ಇಂಗ್ಲೆಂಡಿನ ಹೋಮ್ ಸೆಕ್ರೆಟರಿಗಳು ಆರ್ಮ್ಸ್ಟ್ರಾಂಗ್ ಕಂಪೆನಿಯ ಪಾಲುಗಾರರು ನೆವಿಲ್ ಚೆಂಬರ್‌ಲೇನರ ಕೆಮಿಕಲ್ ಇಂಡಸ್ಟ್ರೀಸಿನಲ್ಲಿ ೫ ಳಗಳ ಪಾಲು ಪಡೆದಿದ್ದಾರೆ ರಾಜಕುಮಾರ ಆರ್ಥರವರಿಗೆ ವಿಕರ್ಸಿನಲ್ಲಿ ೩ ೦೦೦ ಪಾಲುಗಳಿವೆ ಸ್ಯೆ ಎಂಡ್ರ್ಯೂಸ್ ಜಬಿಶಪರಿಗೆ ಕೆಮಿಕಲ್ ಇಂಡಸ್ಟ್ರೀಸಿನಲಿ ೨ ೧೦೦ ಪಾಲುಗಳಿವೆ ರಾಜತಂತ್ರ ಧುರೀಣರೂ, ದೇಶದ ಮುಂದಾಳುಗಳೂ ಇಂಥ ವ್ಯಾಪಾರ ನಡೆಯಿಸುವವರು ಹೀಗಿದ್ದರೆ ಶಾಂತಿಯು ಯಾರಿಗೆ ಬೇಕು ?

ಸಣ್ಣಸಣ್ಣ ಪಂಗಡಗಳು ಕೂಗಿದರೆ ಹೊರಗಿನ ದಸಣ್ಣ ಬಳಿಯ ವ್ಯವಸ್ಥೆಯಲ್ಲದೆ ಬೇರೆಯಿಲ್ಲ ಹಿಟ್ಲರನ ಯುದ್ಧೋಪಕರಣದ ದೃಷ್ಟಿಯಿಂದಲೇ ಒಬ್ಬ ಪ್ರಸಿದ್ಧ ಉದ್ಯೋಗಮಂಡಲದ ಯಜಮಾನನೂ ಯಹೂದಿಯವನಾದರೂ ಅವನ ತಂಟೆಗೆ ಹೋಗದೆ ಕುಳಿತಿದ್ದಾನೆ

ದೇಶದಲಾಗುವ ಅಸ್ತ್ರಗಳು ವಿಕ್ರಯ ತಯಾರಿಗಳಿಗೆ, ಜನಾಭಿಪ್ರಾಯದ ಭೀತಿಯಾಗಲಿ ಹಿಡಿತವಾಗಲಿ ಇಲ್ಲದ ಮೇಲೆ ಶಸ್ತ್ರ ಸನ್ಯಾಸದ ಸಂಧಾನಗಳು ಫಲಕಾರಿಯಾಗುವುದೆಂತು?

ಬಲುಚಿಸ್ಥಾನದ ದೌರ್ಭಾಗ್ಯ

ಕ್ವೆಟಾವು ಅದರ ಸರಹದ್ದಿನ ನಗರಗಳೂ ಭೂಕಂಪಕ್ಕೆ ತುತ್ತಾದ ವಾರ್ತೆಯು ಬಿಹಾರದ ವ್ಯಥೆಯನ್ನು ಮೀರಿಸುವುದು ಕ್ವೆಟಾ ನಗರ ಒಂದರಲ್ಲೇ ೨೦ ಸಾವಿರಕ್ಕೂ ಮಿಕ್ಕಿ ಜನರು ಮಡಿದರೆಂದರೆ, ಉಳಿದವರಿಗೆ ಯಾವ ನಿವಾರಣೆಯೂ ಇಲ್ಲವೆಂದೇ ಅರ್ಥ ಅಲ್ಲಿ ಮಡಿದವರ ಸಂಖ್ಯೆಯಿಂದ ನಗರವನ್ನೆ ತಾತ್ಕಾಲಿಕ ಮುಚ್ಚಿಡುವ ಏರ್ಪಾಡು ಮಾಡಿರುತ್ತಾರೆ ಇದರಿಂದ ಅವಶೇಷಗಳ ಬಾಯಿಗೆ ಬಿದ್ದೂ ಉಸಿರು ಹಿಡಿದಿರಬಹುದಾದವರಿಗೆ ಯಾವ ಉದ್ಧಾರಕ ದಾರಿಯೂ ಕಾಣುವುದಿಲ್ಲ ಇತ್ತ ಆಸುಪಾಸಿನ ಹಲವು ನಗರಗಳ ಹುಟ್ಟೆ ಅಡಗಿದೆ ಇಂಥ ಪರಿಸ್ಥಿತಿಯಲ್ಲಿ ಸರಕಾರವೂ, ಜನರೂ ಹಿಂದು ಮುಂದೆ ನೋಡದೆ ಕರುಣೆಯನ್ನು ತೋರಬೇಕಾಗಿದೆ ನಮ್ಮ ಜಿಲ್ಲೆಯವರಾದರೂ ಇಂಥ ಆಪತ್ತಿನ ಕಾಲದಲ್ಲಿ ನೆರವಾಗದಿರರು ಎಂದು ಆಶಿಸಬೇಡವೇ?

ನಾವು ಹರಿಜನ ಸೇವೆಯನ್ನು ಹೇಗೆ ಮಾಡುತ್ತಿದ್ದೇವೆ?

ಎಂದು ನಾವು ನಾವೇ ವಿಚಾರಿಸಿಕೊಂಡರೆ ನಾವು ಹರಿಜನ ಸೇವೆಯನ್ನು ಒಂದಿಷ್ಟಾದರೂ ಮನಃಪೂರ್ವಕವಾಗಿ ಮಾಡುವುದಿಲ್ಲವೆಂದೂ, ನಮ್ಮ ಅಂತರ್ಯವು ಇನ್ನೂ ಪರಿವರ್ತನೆ ಹೊಂದಲಿಲ್ಲವೆಂದೂ ನಮಗೆ ಕಂಡುಬರದಿರಲಾರದು ಹರಿಜನ ಸಂಘವಿದೆ ಆ ಸಂಘದವರು ತಮ್ಮಿಂದ ಕೂಡಿದಷ್ಟು ಮಟ್ಟಿನ ಕರ್ತವ್ಯ ದಕ್ಷತೆಯಿಂದಲೂ ಉತ್ಸಾಹದಿಂದಲೂ ಕೆಲಸ ಮಾಡುತ್ತಾರೆ, ಆದರೆ ಸಾರ್ವಜನಿಕರಾದ ನಾವು ಅವರೊಡನೆ ಸಹಕರಿಸಿ ನಡೆದುಕೊಳ್ಳುತ್ತೇವೆಯೋ? ಎಂದೂ ಇಲ್ಲ ಮೂಲ್ಕಿಯ ಕೊಪರೇಟಿವ್ ಸಂಘವೊಂದರಲ್ಲಿ ಸದಸ್ಯರಾಗಿದ್ದ ಹರಿಜನರು ಕೆಲವರಿಗೆ,—ಆ ಸಂಘವು ಸ್ಥಳ ಬದಲಾವಣೆ ಮಾಡಿಕೊಂಡಂದಿನಿಂದ ಸಾಲಗಳೇ ಸಿಗುವುದಿಲ್ಲವೆಂದೂ, ಬೇಂಕಿಗೆ ಪ್ರವೇಶವೇ ಇಲ್ಲವೆಂದೂ ತಿಳಿದುಬಂದಿದೆ ಮೊದಲೊಮ್ಮೆ ಈ ಹರಿಜನರನ್ನು ತಮ್ಮ ಪಾಲುಗಾರರಾಗಿ ನೇಮಿಸಿಕೊಂಡುದೇಕೆ? ಈಗ ಅವರನ್ನು ದೂರವಿಟ್ಟುದೇಕೆ? ಬಡವರೂ, ನಿಶ್ಶಕ್ತರೂ, ಮೂಖರೂ ಎಂದಾದೊಡನೆ ಸವರ್ಣ ಹಿಂದೂಗಳು ಹರಿಜನರನ್ನು ಹೇಗೆ ಬೇಕೋ ಹಾಗೆ ರಕ್ಷಿಸಬಹುದು—ಅಥವಾ ಶಿಕ್ಷಿಸಬಹುದು—ಎಂಬ ನಿಯಮ ವಿದೆಯೇ? ಹಲವು ಬ್ರಾಹ್ಮಣರಿಗೆ ಅಹಿತವೆಂದ ತೋರುವುದೆಂದು ನಾವು ನಮ್ಮ ಸಿದ್ಧಾಂತಗಳನ್ನೂ ಕರ್ತವ್ಯವನ್ನೂ ಮರೆತು ಮೂಢರಾಗುವುದೇ? ಹರಿಜನ ಸೇವೆ ಹರಿಜನ ಸೇವೆಯೆಂದು ನಾವು ಅರ್ಭಟಿಸುವುದೊಂದೇ ಕಂಡುಬರುತ್ತದೆ ಹೊರತು ಹರಿಜನರನ್ನು ಸಾರ್ವಜನಿಕ ಮಂದಿರಗಳಿಗಾಗಲೀ, ಸಾರ್ವಜನಿಕ ಭೋಜನಗಳಿಗಾಗಲೀ ಆಮಂತ್ರಿಸಿ ಅವರೊಂದಿಗೆ ಕೂಡಿ ನಡೆಯುವುದು ಎಲ್ಲಿಯೂ ಕಾಣುವುದಿಲ್ಲ ಗಾಂಧಿಜಿಯವರಾಗಲೀ ಪ್ರಸಾದರಾಗಲೀ, ಅಥವಾ ಇನ್ನಿತರ ಮುಖಂಡರಾಗಲೀ ಇಲ್ಲಿಗೆ ಬಂದ ಬಿಟ್ಟರೆ ಅವರ ದರ್ಶನಲಾಭವನ್ನು ಹೊಂದಿ ತಾವು ಮಹಾ ರಾಷ್ಟ್ರೀಯರೆಂದು ತೋರಿಸಿ ಮೆರೆಯುವ ನಮ್ಮಲ್ಲಿನ ಕೆಲವು ಮುಂದಾಳೀನನ್ನವರು?

ನಮ್ಮ ದೌರ್ಬಲ್ಯಕ್ಕೆ ಕಾರಣವೇನು?

ಹೊರದೇಶಗಳಲ್ಲಿನ ಸಂಸ್ಥೆಗಳನ್ನು ಟೀಕಿಸುವುದರ ಬದಲಿಗೆ ನಾವು ನಮ್ಮೊಳಗಣ ಸಾರ್ವಜನಿಕ ಸೇವಾಬದ್ಧವಾದ ಹಲವು ಸಂಸ್ಥೆಗಳ ಚಲನವಲನಗಳನ್ನು ನಾವು ವಿಮರ್ಶಿಸುತ್ತಾ ಹೋದರೆ ಈ ಸಂಸ್ಥೆಗಳೆಲ್ಲ ಒಂದು ವಿಲಕ್ಷಣವಾದ ದೌರ್ಬಲ್ಯದಿಂದ ನರಳುತ್ತಿರುವುದು ಕಂಡುಬರುತ್ತದೆ ಯಾವ ಸಂಸ್ಥೆಯ ಅಂತರ್ಯವನ್ನು ಕಂಡರೂ ಅದರಲ್ಲಿ ಲಕ್ಷಣೀಯ ನ್ಯೂನ್ಯತೆಗಳು ಗೋಚರಿಸುತ್ತವೆ ಒಂದೇ ಸಂಸ್ಥೆಯ ಹಲವು ಸದಸ್ಯರೊಳಗೆ ಭೇದಬುದ್ಧಿ, ಪಕ್ಷಪಾತ, ಪರಸ್ಪರ ದೂಷಣೆ, ಪರಸ್ಪರ ವೈಷಮ್ಯ ಸಂಸ್ಥೆಯು ಸಾಂಗವಾಗಿ ನಡೆಯುತ್ತಿದೆಯೆಂದಾದರೂ ಅದರ ಆಡಳಿತ ನೋಡುವ ವ್ಯಕ್ತಿಗಳ ವೈಯಕ್ತಿಕ ಜೀವನವು ನಿಂದ್ಯವಾಗಿರುತ್ತದೆ ಅಂತೂ ಪ್ರತಿಯೊಂದು ಸಾರ್ವಜನಿಕ ಸಂಸ್ಥೆಯು ಅದರ ಮೇಲ್ವಿಚಾರಕರ, ಅಥವಾ ಸದಸ್ಯರ ವೈಯಕ್ತಿಕ ಜೀವನಕ್ರಮದ ದೆಸೆಯಿಂದಾಗಿ ಅಪೇಕ್ಷಿತ ಉದ್ದೇಶಗಳನ್ನು ಹಿಡಿದುಕೊಂಡು ಮುಂದರಿಯಲು ಸಾಧ್ಯವಾಗುವುದಿಲ್ಲ ಈ ಕುಂದುಕೊರತೆಯು ನಮ್ಮ ಅಖಿಳಭಾರತ ಕೊಂಗ್ರೆಸ್ ಕಮಿಟಿಯಿಂದ ಮೊದಲ್ಗೊಂಡು ಪ್ರತಿಯೊಂದು ಸಣ್ಣ ರಾಷ್ಟ್ರೀಯ ಸಂಸ್ಥೆಯಲ್ಲೂ ಗೋಚರಿಸುತ್ತದೆ. ಇಂತಹ ಕುಂದುಕೊರತೆಯಿದೆಯೆಂದು ಎಲ್ಲರಿಗೂ ತಿಳಿದಿದೆಯಾದರೂ, ಅದನ್ನು ಬಾಯ್ಬಿಟ್ಟು ಹೇಳುವವರು ವಿರಳ ಕಂಡವರು ಕಂಡಂತೆ ಹೇಳದೇನೇ ನಮ್ಮವರು ಮನಬಂದಂತೆ ಆಚರಿಸುತ್ತಿದ್ದಾರೆ ಅಂತೂ, ನಾವು ಹೇಳುವುದೇನೆಂದರೆ,— ಸಾರ್ವಜನಿಕ ಕೆಲಸಗಾರರು ಪವಿತ್ರಜೀವನವನ್ನು ನಡೆಸಬೇಕು ಅವರು ಎಷ್ಟು ಪವಿತ್ರರಾಗುವರೋ ಅಷ್ಟೇ ಪಾವಿತ್ರ್ಯವು ಅವರ ಸಂಪರ್ಕಕ್ಕೂ ಬರುವುದು ಅವರು ಎಷ್ಟು ಅಧಮರಾಗಿ ನಡೆಯುವರೋ ಅಷ್ಟೇ ಅಧಮತೆಯು ಅವರ ಸಂಸ್ಥೆಗೆ ತಟ್ಟುವುದು ವೈಯಕ್ತಿಕ ಪಾವಿತ್ರ್ಯವೇ ಸಮಷ್ಟಿಯ ಹಿತವಾಗಿರುತ್ತದೆ

ಈ ವಿವಾದವೇಕೆ?

ಮಂಗಳೂರಲ್ಲಿ ಮೊನ್ನೆ ನಡೆದ ಕರ್ನಾಟಕ ಪ್ರಾಂತಿಕ ರಾಜಕೀಯ ಪರಿಷತ್ತಿನ ಠರಾವುಗಳನ್ನು ವಿಮರ್ಶಿಸಿ ದೇಶಭಕ್ತ ಗಂಗಾಧರರಾವು ದೇಶಪಾಂಡೆಯವರು 'ಸಂಯುಕ್ತ ಕರ್ನಾಟಕ'ದಲ್ಲಿ ಪ್ರಕಟಿಸಿದ ತನ್ನ ಅಭಿಪ್ರಾಯಗಳನ್ನೂ, ಆ ಅಭಿಪ್ರಾಯಗಳಿಗೆ ದ ಕ ಜಿಲ್ಲಾ ಕೊಂಗ್ರೆಸ್ ಕಮಿಟಿಯವರು ಪ್ರಕಟಿಸಿದ ಉತ್ತರವನ್ನೂ ಕಳೆದ ಸಂಚಿಕೆಯಲ್ಲಿ ಪ್ರಕಟಪಡಿಸಲಾಗಿದೆ ಇವುಗಳಿಂದ ತಿಳಿದು ಬರುವುದಾದರೂ ಏನು? ಶ್ರೀ ದೇಶಪಾಂಡೆಯವರು ಪರಿಷತ್ತಿಗೆ ತಕ್ಕ ಬೆಲೆಯನ್ನೇ ಕೊಡಲಿಲ್ಲ— ಈ ಪರಿಷತ್ತು ಮಂಜೂರು ಮಾಡಿಕೊಂಡ ಠರಾವುಗಳೆಲ್ಲ ಅಪ್ರಾಸಂಗಿಕ—ಅನುಪಯುಕ್ತ ಅನುಚಿತ—ಅಕಾಲ ಪ್ರಾಪ್ತವಾದುವುಗಳೆಂದು ಅವರ ವಾದ ಅಲ್ಲದೆ ಈ ಪರಿಷತ್ತು ಅಖಿಲ ಕರ್ನಾಟಕದ ಪ್ರಾತಿನಿಧ್ಯವನ್ನು ಹೊಂದಲಿಲ್ಲವೆಂದೂ ಅವರು ಹೇಳಿರುವರು ಇಂತಹ ಧುರೀಣರು—ಅದರಲ್ಲೂ ಕನ್ನಡ ನಾಡಿನ ಮುಂದಾಳುಗಳು—ಹೀಗೆ ಟೀಕಿಸಿರುವುದು ನಿಜವಾಗಿಯೂ ನಮ್ಮವರಿಗೆ ಚಡಿಯೇಟು ಬಿದ್ದಂತೆ ಶ್ರೀ। ದೇಶಪಾಂಡೆಯವರು ಠರಾವಿನ ಮೂಲ ಶಬ್ದಗಳನ್ನರಿಯದೆ ಹೀಗೆ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿರುವುದು ಅಪ್ರಾಸಂಗಿಕವೆಂದ ಕೊಂಗ್ರೆಸ್ ಕಮಿಟಿಯವರ ಹೇಳಿಕೆ ಪರಿಷತ್ತು ಪ್ರಾತಿನಿಧಿಕವಾಗಿರುವುದಿಲ್ಲವೆಂದು ದೇಶಪಾಂಡೆಯವರು ಹೇಳಿದುದಕ್ಕೆ ಕಮಿಟಿಯವರ ಯಾವ ಉತ್ತರವೂ ಇಲ್ಲ ತಮ್ಮ ಉತ್ತರದಲ್ಲಿ ಅವರು ಈ ವಿಷಯವನ್ನು ಉಲ್ಲೇಖಿಸಿ ಬರೆಯಬಹುದಿತ್ತು ಶ್ರೀ। ಗಂಗಾಧರರಾಯರಂತೆಯೇ ಇತರ ಪ್ರತಿನಿಧಿಗಳೂ ಅಸ್ವಸ್ಥದ ನೆಪದಿಂದಲೋ, ಇತರ ನೆಪದಿಂದಲೋ ಪರಿಷತ್ತಿಗೆ ಬರದಿರಬಾರದೇಕೆ ಎಂದು ಒಂದು ಪ್ರಶ್ನೆಯುದಬಹುದಿತ್ತು ಪ್ರಾಂತಿಕ ಕಮಿಟಿಗಳಲ್ಲಾದ ನಿರ್ಣಯಗಳು ಕೊಂಗ್ರೆಸ್ ಕಮಿಟಿಗೆ ಸಂಬಂಧಿಸಿದವುಗಳಲ್ಲ ಎಂಬ ಶ್ರೀ। ದೇಶಪಾಂಡೆಯವರ ಮಾತಿನಲ್ಲಿ ಸತ್ಯಾಂಶ ಅಡಗಿದೆಯಾದರೂ ಅವುಗಳಿಂದಾಗಿ ಪ್ರಾಂತಿಕ ರಾಜಕೀಯ ವಾದಿಗಳ ಮನೋಪರಿಸ್ಥಿತಿಯು ಹೇಗಿದೆಯೆಂದು ತಿಳಿಸಲು ಸಾಧ್ಯವಾಯಿತೆಂದು ಜಿಲ್ಲಾ ಕಮಿಟಿಯವರು ಹೇಳುವುದೂ ತಪ್ಪಾಗಿಲ್ಲ ಅಂತೂ, ಇಂತೂ ಮಂಗಳೂರಿನವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಈ ಪರಿಷತ್ತು ಸಾಧಕವಾಯಿತೆಂಬುದರಲ್ಲಿ ಎರಡು ಮಾತಿರದು. ಮಂಗಳೂರವರು ಹಾಗೆ ಮಾಡಿರುವುದು ತಪ್ಪು ಎಂದೂ ಹೇಳಲಾಗದು

ಮಂಗಳೂರು.

ಇದೇ ಕಳೆದ ತಾ ೭-೫-೩೫ನೇ ದಿವಸ ನೆರೆದ ಅದ್ವೈತ ಸಮಿತಿಯ ೯ನೇ ಮಹಾಸಭೆಯ ೩ನೇ ಪ್ರಸ್ತಾಪನೆಯ ಮೇರೆಗೆ ಮಿ। ಬಿ। ಆ। ಎಮ್. ಕೃಷ್ಣರಾವ್, ಅವರ್ಗಳ್‌ರವರು ೧೯೩೫-೩೬-೩೭ನೇ ವರ್ಷಗಳಿಗೆ ಸಮಿತಿಯ ಗೌರವಕಾರ್ಯದರ್ಶಿಯಾಗಿ ಚುನಾಯಿಸಲ್ಪಟ್ಟಿರುವುದರಿಂದ ಈ ಮೊದಲು ಪೆಂಟಲೆಂಡ್‌ಪೇಟೆಯಲ್ಲಿದ್ದ ಅ। ಸ। ಯ। ಕಾರ್ಯಾಲಯದ ಎದರೆ ಶ್ರೀ। ಎಸ್. ವಿ. ಶಾಸ್ತ್ರಿಗಳವರ ಭೇಷಜಾಶ್ರಮದ ಹತ್ತಿರ ಇರುವ ಪ್ರಕೃತದ ಕಾರ್ಯದರ್ಶಿಗಳ ಮನೆಗೆ ಒಯ್ಯಲ್ಪಟ್ಟಿರುವುದು. ಇನ್ನುಮುಂದೆ ಸಮಿತಿಗೆ ಸಂಬಂಧಪಟ್ಟ ಸಕಲ ವ್ಯವಹಾರಗಳನ್ನು ಮುಖಮಿಳಾಸಕ್ಕೆ (ಎಡ್ರೆಸ್) ಕಳುಹಿಸತಕ್ಕದ್ದು ಎಂದು ಐ. ಕೆ. ಓ. ಶರ್ಮರವರು ತಿಳಿಸುತ್ತಾರೆ.

ಶಿವಭಕ್ತಿಯೋಗ ಸಂಘ—ಇದೇ ತಾ ೯ನೇ ಆದಿತ್ಯವಾರ ಪ್ರಾತಃಕಾಲ ಗಂಟೆ ೮-೩೦ಕ್ಕೆ ಕಾಡೂರಿನ ಶ್ರೀ ಶಿವಭಕ್ತಿಯೋಗ ಸಂಘದಲ್ಲಿ ಶ್ರೀಯುತ ನಾರಾಯಣ ಕಿಲ್ಲೆಯವರು "ಇಂದಿನ ಯುವಕರ ಕರ್ತವ್ಯ" ಎಂಬುವರ ಕುರಿತು ಭಾಷಣಕೊಡಲಿರುವರು. ಸರ್ವರಿಗೂ ಸುಸ್ವಾಗತವಿದೆ.

ಬೊಕ್ಕಪಟ್ಣ ಮುನ್ಸಿಪಲ್ ಆಸ್ಪತ್ರೆಯ ಡಾಕ್ಟರಾಗಿದ್ದ ಐ. ಕೆ. ಓ. ಶರ್ಮ ಎಮ್. ಎ. ಇವರಿಗೆ ಬೋಳೂರ ಮುನ್ಸಿಪಲ್ ಆಸ್ಪತ್ರೆಗೆ ವರ್ಗವಾದುದರಿಂದ ಕೊಡಿಯಾಲಬೈಲ್ ಪಶ್ಚಿಮ ವಾರ್ಡಿನ ನಿವಾಸಿಕರು ತಾರೀಖು ೩೧-೫-೩೫ನೇ ಬೆಳಗ್ಗೆ ಗಂಟೆ ೭-೩೦ಕ್ಕೆ ಬೊಕ್ಕಪಟ್ಣ ಶಾಲೆಯಲ್ಲಿ ಮುನ್ಸಿಪಲ್ ಕೌನ್ಸಿಲರಾದ ಜಾರಪ್ಪ ಪ್ರಕ್ರನ್‌ರವರ ಅಧ್ಯಕ್ಷತೆಯಲ್ಲಿ ವಿದಾಯ ಸಭೆಯೊಂದನ್ನೇರ್ಪಡಿಸಿ, ಡಾಕ್ಟರರನ್ನು ಮಾನಪತ್ರ ಪುಷ್ಪಹಾರ ಫಲಾಹಾರಗಳಿಂದ ಸತ್ಕರಿಸಿ ಬೀಳ್ಕೊಟ್ಟರು.

ಮಂಗಳೂರು ಗವರ್ನಮೆಂಟ್ ಹಾ. ಎ. ಟ್ರೈನಿಂಗ್ ಶಾಲೆಯ ಉಪಾಧ್ಯಾಯರಾದ ರಾಜೀಶ್ರೀ ರಾಮಯ್ಯ ನಾಯ್ಕ ಬಿ. ಎ. ಇವರನ್ನು ಬಳ್ಳಾರಿ ಅತ್ತಕಡೆಗೆ ಶಾಲಾ ಡಿಪ್ಯುಟಿ ಇನ್‌ಸ್ಪೆಕ್ಟರಾಗಿ ವರ್ಗಾಯಿಸಿರುತ್ತಾರೆ. ಕಾರ್ಕಳ ರೇಂಜಿನಲ್ಲಿ ಶಾಲಾ ಡಿಪ್ಯುಟಿ ಇನ್‌ಸ್ಪೆಕ್ಟರಾಗಿ ರಜೆಯ ಮೇಲೆ ಇದ್ದ ಶ್ರೀಯುತ ವೆಂಕಟಪ್ಪಯ್ಯನವರನ್ನು ಬಳ್ಳಾರಿ ಜಿಲ್ಲೆಯಲ್ಲಿ ಹರಪನಹಳ್ಳಿ [illegible] ವರ್ಗಾಯಿಸಿರುತ್ತಾರೆ.

ಜಿಲ್ಲಾ ಹರಿಜನ ಸಂಘದ ಸಭೆಯು ಇದೇ ಬರುವ ತಾ ೯-೬-೩೫ರಲ್ಲಿ ಬಿ. ಸಿ. ಎಮ್. ಮಂದಿರದಲ್ಲಿ ಸಾಯಂಕಾಲ ೫ ಘಂಟೆಗೆ ಸೇರುವುದು. ಎಲ್ಲಾ ಸದಸ್ಯರೂ ಬರಬೇಕಾಗಿ ಪ್ರಾರ್ಥಿಸಲ್ಪಟ್ಟಿದ್ದಾರೆ.

ದೇಶಭಕ್ತರೂ ಸುಪ್ರಸಿದ್ಧ ಧುರೀಣರೂ ಆಗಿರುವ ಶ್ರೀ ಸಯ್ಯದ್ ಅಬ್ದುಲ್ಲಾ ಬ್ರೆಲ್ವಿ (ಬೊಂಬೈ ಕ್ರಾನಿಕಲ್ ಪತ್ರಿಕೆಯ ಸಂಪಾದಕರು) ಶ್ರೀ ಕೇಶ ತಯಾಬ್ಜಿ ಮತ್ತು ಶ್ರೀಮತಿ ಮಣಿಬೆನ್‌ಕಾರ—ಇವರುಗಳು ಕಲ್ಲಿಕೋಟೆಯ ಕೇರಳ ಪ್ರಾಂತಿಕ ರಾಜಕೀಯ ಪರಿಷತ್ತಿನಲ್ಲಿ ಭಾಗವಹಿಸಿ ಮಂಗಳೂರಿಗೆ ಕಳೆದ ತಾ ೩ರಲ್ಲಿ ಬಂದರು. ಅದೇ ದಿವಸ ಸಾಯಂಕಾಲ ಮೈದಾನಿನಲ್ಲಿ ಸಾರ್ವಜನಿಕ ಸಭೆಯೊಂದು ಸೇರಿತು. ಪ್ರಸಿದ್ಧ ವಕೀಲರೂ ರಾಷ್ಟ್ರಧುರೀಣರೂ ಆದ ಶ್ರೀ। ಜೆ. ಎ. ಸಾಲ್ಡಾನ್ಹರು ಅಂದಿನ ಅಧ್ಯಕ್ಷರಾಗಿದ್ದರು. ಮಂಗಳೂರಿನ ಪುರಜನರೂ ರಾಷ್ಟ್ರಪಕ್ಷದವರೂ ಬಂದಿದ್ದರು.

ಇದೇ ಜೂನ್ ತಾ ೧ಕ್ಕೆ ಅಂತ್ಯವಾಗುವ ಮಂಗಳೂರು ಮುನಿಸಿಪಾಲಿಟಿಯ ಆರೋಗ್ಯ ಖಾತೆಯ ವರದಿಯಿಂದ ತಿಳಿದುಬರುವಂತೆ ಈ ವಾರದಲ್ಲಿ ೧೩ ಮರಣಗಳೂ, ೪೪ ಜನನಗಳೂ ಆಗಿವೆ. ಮರಣಗಳ ಪೈಕಿ ೨ ನ್ಯುಮೋನಿಯಾದಿಂದ, ೨ ಕ್ಷಯರೋಗದಿಂದ, ೯ ಇತರ ರೋಗಗಳಿಂದ. ಸಿಡುಬುರೋಗದಿಂದ ಹೊಗೆ ಬಜಾರಿನಲ್ಲಿ ಒಂದು ಮರಣವೂ, ಬೋಳಾರ ಕಡವು ರಸ್ತೆಯಲ್ಲಿ ೨ ಮರಣಗಳೂ ಆಗಿವೆ.

ಮಂಜೇಶ್ವರ ಪದ್ಮನಾಭ ಭಟ್ಟರ ಪುತ್ರಿ ಶ್ರೀಮತಿ ರಮಾಬಾಯಿಯವರು ಮದ್ರಾಸು ವಿಶ್ವವಿದ್ಯಾಲಯದ ವಿದ್ವಾನ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವರು.

ಇದೇ ತಾ. ೧ರಲ್ಲಿ ಶ್ರೀ। ಎಂ. ಎನ್. ಭಂಡಾರಿಗಳು ಪೋಲೀಸ್ ಆಫೀಸು ಮ್ಯಾನೇಜರರ ಚಾರ್ಜನ್ನು ವಹಿಸಿರುವರು.

ಮಂಗಳೂರು ಮುನಿಸಿಪಾಲಿಟಿಯ ಚೆಯರ್‌ಮೇನರಾದ ಡಾ। ಪಿಟ್ಟಿಲ್ ಶೆಟ್ಟರಿಗೆ ಚಕ್ರವರ್ತಿಯವರ ಜನ್ಮದಿನೋತ್ಸವದ ದಿನ "ರಾವ್ ಬಹದ್ದೂರ್" ಎಂಬ ಬಿರುದು ದಯಪಾಲಿಸಲ್ಪಟ್ಟಿದೆ.

ಜಿಲ್ಲಾ ಕಲೆಕ್ಟರರಾದ ಮಿ। ಇ. ಎಮ್. ಗೋನರು ರಜೆ ಮುಗಿದು ತಾ ೪ನೇ ದಿನ ಚಾರ್ಜು ವಹಿಸಿರುವರು. ಅವರ ಬದಲಿಗಿದ್ದ ರಾವ್ ಬಹದ್ದೂರ್ ಎ. ವೆಂಕಟರಾಮ್ ಅಯ್ಯರರು ಮಲಬಾರಿಗೆ ಹೋದರು.

ಮುನಿಸಿಪಲ್ ಕೌನ್ಸಿಲಿನ ಒಂದು ಸಭೆಯು ತಾರೀಖು ೧೦ನೇ ದಿನ ಸಂಜೆ ೫-೩೦ಕ್ಕೆ ಅವರ ಕಚೇರಿಯಲ್ಲಿ ಜರಗಲಿರುವುದು.

ಮುಂಬಾಯಿಯ ಕೊಂಗ್ರೆಸ್ ಕೆಲಸಗಾರರಾದ ಶ್ರೀಮತಿ ಮಣಿಬೆನ್ ಕಾರಾ, ಸೇಟ್ ತಯಾಬ್ಜಿ ಮತ್ತು ಬೊಂಬೈ ಕ್ರಾನಿಕಲಿನ ಸಂಪಾದಕರಾದ ಮಿ। ಎಸ್. ಎ. ಬ್ರೆಲ್ವಿಯವರ ಸನ್ಮಾನಾರ್ಥವಾಗಿ ಶ್ರೀಮತಿ ಕಮಲಾದೇವಿಯವರು ಒಂದು "ಅಟ್ ಹೋಮ್"ನ್ನು ತಾ ೩ರಲ್ಲಿ ಜರಗಿಸಿದರು.

ಗಾಣಿಗ ಸಮಾಜದವರಲ್ಲಿ ಪ್ರಥಮರಾಗಿ ಲಂಡನ್‌ನಲ್ಲಿ ತನ್ನ ಎಫ್. ಆರ್. ಸಿ. ಎಸ್. ಪದವಿಯನ್ನು ಪಡೆದು ಮಂಗಳೂರಿಗೆ ಹಿಂದಿರುಗಿದ ಮೂಲ್ಕಿ ಗೋಪಾಲಕೃಷ್ಣಯ್ಯರವರ ಸನ್ಮಾನಾರ್ಥವಾಗಿ ಇದೇ ತಾ ೨ರಲ್ಲಿ ಪಾಂಡೇಶ್ವರ ಮುನಿಸಿಪಲ್ ಶಾಲಾ ಕಟ್ಟಡದಲ್ಲಿ ರಾವ್ ಬಹದ್ದೂರ್ ಎನ್. ಎಸ್. ಸುವರ್ಣರವರ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದರು.

ಸುಮಾರು ೭ ವರ್ಷಗಳಿಂದ ಬೋಳೂರು ಮುನಿಸಿಪಾಲಿಟಿ ಆಯುರ್ವೇದ ಧರ್ಮಾಸ್ಪತ್ರೆಯಲ್ಲಿ ಡಾಕ್ಟರರಾಗಿದ್ದ ಶ್ರೀ। ಐ. ಕೆ. ಓ. ಶರ್ಮ ಇವರು ಇದೇ ತಿಂಗಳ ೩ [illegible]ಂದ ಬೆಪ್ಪು ಮುನಿಸಿಪಲ್ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟಿರುವ ನಿಮಿತ್ತ ಇಷ್ಟರ ತನಕ ಪೆಂಟ್ಲೆಂಡ್‌ಪೇಟೆಯಲ್ಲಿದ್ದ ಅವರ ನಿವಾಸಗೃಹವನ್ನು ಬೋಳಾರ ವಿಠೋಬಾ ದೇವಸ್ಥಾನದ ಹತ್ತಿರ [illegible] ಮಾರ್ಪಡಿಸಿಕೊಂಡಿರುವರು. ಆದುದರಿಂದ ಮುಂದಕ್ಕೆ ಅವರನ್ನು ನೋಡಬೇಕೆಂದಿರುವವರು ಬೆಪ್ಪು [illegible] ಆಸ್ಪತ್ರೆಯಲ್ಲಿ ಅಥವಾ ಅವರ ನಿವಾಸಗೃಹದಲ್ಲಿ ಬಂದು ನೋಡಬಹುದು.

ಜೋಧಪುರದಲ್ಲಿ ಅಸಿಸ್ಟೆಂಟ್ ಎಂಜಿನಿಯರಾಗಿರುವ ರಾ। ಮಣ್ಣಿಗೆ ಆನಂದರಾಯ ಪತ್ನಿ ಸೌ। ವರದಾಬಾಯಿಯವರು ಭಾಷಾ ವಿಷಯವಾಗಿ ಸಂಸ್ಕೃತವನ್ನು ತೆಗೆದುಕೊಂಡು ಮದ್ರಾಸ್ ಯುನಿವರ್ಸಿಟಿಯ ಬಿ. ಎ. ಪರೀಕ್ಷೆಯಲ್ಲಿ ಈ ವರ್ಷ ತೇರ್ಗಡೆ ಹೊಂದಿರುವರು. ಈಕೆಯು ಇಲ್ಲಿಯ ಎಡ್ವೋಕೇಟು ರಾ। ಬೈಂದೂರು ಆನಂದರಾಯರ ತಂಗಿಯಾಗಿದ್ದು ಮಂಗಳೂರಿನವರೇ ಎಂಬುದು ತುಂಬಾ ಸಂತೋಷ.

ಶ್ರೀ। ಎ. ಬಿ. ಶೆಟ್ರ ಪುತ್ರಿ ಶ್ರೀಮತಿ ಸುಶೀಲಾ ಚೌಟ ಡಾ। ಬಿ. ರಾಮಣ್ಣಶೆಟ್ರ ಪುತ್ರಿ ಶ್ರೀಮತಿ ಕೇಮಲತಾ ಎಸ್. ಶೆಟ್ಟಿ ಮತ್ತು ಶ್ರೀ ಸರಾಫ್ ರಾಮಯ್ಯಶೆಟ್ರ ಪುತ್ರಿ ಶ್ರೀಮತಿ ಪದ್ಮಾವತಿ ಇವರು ಬಿ. ಎ. ಪರೀಕ್ಷೆಯಲ್ಲಿ ಪಾಸಾಗಿರುವರೆಂದು ತಿಳಿದುಬರುತ್ತದೆ. ಶ್ರೀಮತಿ ಸುಶೀಲಾ ಎನ್. ಚೌಟ ಇವರು ಇಂಗ್ಲೀಷಿನಲ್ಲಿ ಸೆಕೆಂಡ್ ಕ್ಲಾಸ್ ಮತ್ತು ಫ್ರೆಂಚಿನಲ್ಲಿ ಫಸ್ಟ್ ಕ್ಲಾಸ್. ಶ್ರೀಮತಿ ಹೇಮಲತಾ ಎಸ್. ಶೆಟ್ಟಿ ಇವರು ಇಂಗ್ಲಿಷಿನಲ್ಲಿ ಸೆಕೆಂಡ್ ಕ್ಲಾಸ್, ಫ್ರೆಂಚಿನಲ್ಲಿ ಫಸ್ಟ್ ಕ್ಲಾಸ್ ಮತ್ತು ಚರಿತ್ರೆಯಲ್ಲಿ ಸೆಕೆಂಡ್ ಕ್ಲಾಸ್ ಪಾಸಾಗಿರುವರು.

ಪುತ್ತೂರು ತಾಲೂಕಿನ ವಿಟ್ಲದ ಅರಸರಾದ ಶ್ರೀ ಲಕ್ಷ್ಮೀನಾಥ ಸ್ವಾಮಿ ಜಿಯವರಿಗೆ ರಾವ್ ಸಾಹೇಬ್ ಬಿರುದು ಸಿಕ್ಕಿರುವುದು.

ಪೆರಡಾಲ:—ಇಲ್ಲಿಯ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ಸಂಸ್ಕೃತ ಮತ್ತು ಕನ್ನಡ ಉಭಯ ಭಾಷೆಗಳಲ್ಲಿ ಪ್ರೌಢ ಶಿಕ್ಷಣವನ್ನು ಹೊಂದಿದ ಶ್ರೀಯುತ ಕೆಯ್ಯೂರ ಶಿಂಘಣ್ಣ ರೈ ಇವರು ತಮ್ಮ ಎಳೇ ವಯಸ್ಸಿನಲ್ಲಿಯೇ ಮದ್ರಾಸು ಯುನಿವರ್ಸಿಟಿಯ ವಿದ್ವಾನ್ (ಸಂಸ್ಕೃತ ಮತ್ತು ಕನ್ನಡ) ಪರೀಕ್ಷೆಯಲ್ಲಿ ಉತ್ತಮ ತರಗತಿಯಲ್ಲಿ ಉತ್ತೀರ್ಣರಾಗಿರುವರೆಂದು ತಿಳಿಸಲು ತುಂಬಾ ಸಂತೋಷವೆನಿಸುತ್ತದೆ. ಬಂಟರ ಯಾನೆ ನಾಡವ ಸಮಾಜದಲ್ಲಿ ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಲ್ಲಿ ಇವರೊಬ್ಬರೇ!

ಕುಂದಾಪುರ:—ಈ ತಾಲೂಕಿನ ಹಳ್ಳಾಡಿ ಹರ್ಕಾಡಿ ಬೋರ್ಡು ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವವು ಕುಂದಾಪುರ ರೇಂಜಿನ ಶಾಲೆಗಳ ಡಿಪ್ಯುಟಿ ಇನ್ಸಪೆಕ್ಟರರಾದ ಎಚ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ "ಚಂದ್ರಹಾಸ" ನಾಟಕದೊಂದಿಗೆ ವಿಜೃಂಭಣೆಯಿಂದ ಜರಗಿತು.

ತಾಲೂಕುಗಳಿಂದ.

ಕಾರ್ಕಳ—ಸ್ವಸಮಾಜದ ಏಳಿಗೆಗಾಗಿ ಅವಿಶ್ರಾಂತವಾಗಿ ಶ್ರಮಿಸುತ್ತಿರುವ ಶ್ರೀ ಪದ್ಮಸಾಲಿವೈಶ್ಯ ಸಮಾಜ ಸೇವಾ ಯುವಕಸಂಘದ ಪುಸ್ತಕಭಂಡಾರಕ್ಕೆ ನೆಲ್ಲಿಕಾರು ಪೇಟೆಯ ಅಧ್ಯಾಪಕರೂ, ಸುಪ್ರಸಿದ್ಧ ಲೇಖಕ ಮತ್ತು ಪ್ರಕಾಶಕರೂ ಆದ ಶ್ರೀಯುತ ಎಸ್. ಎಸ್. ಶೈನಿಯವರು ಈಗಾಗಲೇ ಹಲವು ಉಪಯುಕ್ತ ಪುಸ್ತಕಗಳನ್ನಿತ್ತು ಅಲ್ಲದೆ ಇನ್ನೂ ವಾಗ್ದತ್ತವಿತ್ತು ಪ್ರೋತ್ಸಾಹಿಸಿರುವರು. ಶ್ರೀಯುತರ ಈ ತರದ ಆದರ್ಶ ಔದಾರ್ಯ ತತ್ಪರತೆಗಳಿಗಾಗಿ ಸೇವಾಸಂಘದ ಪರವಾಗಿ ಸಂಘದ ಕಾರ್ಯದರ್ಶಿಯವರು ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಈ ಮೂಲಕ ಅರ್ಪಿಸಿರುತ್ತಾರೆ.

ಅಖಿಲ ಭಾರತ ರಾಷ್ಟ್ರಸಭೆಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರು ಅಪ್ಪಣೆಕೊಡಿಸಿದಂತೆ ಇಲ್ಲಿಯೂ ತಾ ೧೯-೫-೩೫ರ ದಿನ ಸಾಯಂಕಾಲ ಸ್ವರಾಜ್ಯಸ್ಮೃದಾನಿನಲ್ಲಿ ವಕೀಲ ಪಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯಾಗಿ, ಅದರಲ್ಲಿ ಸಾರ್ವಜನಿಕರ ಪರವಾಗಿ ಶ್ರೀ ಕೆ. ಗಣಪತಿ ಶೆಣೈಯವರು, ಕಾರ್ಕಳ ತಾಲೂಕು ಕಾಂಗ್ರೆಸ್ ಕಮಿಟಿಯ ಪರವಾಗಿ ಶ್ರೀಗಳಾದ ಕೆ. [illegible] ಮತ್ತು ಎಮ್. ಎಸ್. ಅಧಿಕಾರಿಗಳೂ ಸೂಚಿಸಿ ಅನುಮೋದಿಸಿ ಸಮರ್ಥಿಸಿದಂತೆ ಯಾವ ತರದ ವಿಚಾರಣೆಯೂ ಇಲ್ಲದೆ ನೂರಾರು ಮಂದಿ ಬಂಗಾಳದ ತರುಣರನ್ನು ಸ್ಥಾನಬದ್ಧ ಕೈದಿಗಳನ್ನಾಗಿ ಮಾಡಿದ ಸರಕಾರ ವರ್ತನೆಯನ್ನು ಖಂಡಿಸಿ ಕೈದಿಗಳ ಕುಟುಂಬದೊಡನೆ ಸಹಾನುಭೂತಿಯನ್ನು ತೋರಿಸುವ ಮತ್ತು ಆ ಕೈದಿಗಳನ್ನು ಕೂಡಲೇ ಬಿಡುಗಡೆಮಾಡಬೇಕು ಅಥವಾ ಬಹಿರಂಗ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕೆಂದು ಕೇಳುವ ನಿರ್ಣಯವು ಸರ್ವಾನುಮತದಿಂದ ಸ್ವೀಕರಿಸಲಾಯಿತು.

ಇದೇ ಜೂನ್ ತಿಂಗಳ ತಾ ೧೫ರ [illegible] ಕಾರ್ಕಳ ತಾಲೂಕಿನಲ್ಲಿ [illegible] ಕಾಂಗ್ರೆಸ್ [illegible] ಸದಸ್ಯರನ್ನು ಸೇರಿಸುವ ಕಾರ್ಯವು [illegible] ಯಿಂದ ನಡೆಯುತ್ತಿದೆ [illegible] ಸಾಹಸಪಡುತ್ತಿರುವರು.

ಶಿರ್ವ—ಇಲ್ಲಿಯ ಶ್ರೀ [illegible] ಗ್ರಂಥಮಾಲೆಯ ವಾರ್ಷಿಕೋತ್ಸವವು ಶ್ರೀ ದತ್ತಾತ್ರೇಯ [illegible] ಸಂಘದವರು ಅಡಿಸಿಟ್ಟಿರುವ "ವಿಷಮ ವಿವಾಹ" ಎಂಬ ನಾಟಕವು [illegible] ಮುಂದೆ [illegible].

ಉಡುಪಿ—[illegible] ಸಂತೋಷ ಕೂಟವು ತಾರೀಖು [illegible]ನೇ ಆದಿತ್ಯವಾರ ಸಂಜೆ ೬ ಗಂಟೆಗೆ ತಮ್ಮ [illegible] ಹೂದೋಟದಲ್ಲಿ ಸೇರಿತು. ಡಾಕ್ಟರ್ ವಾಧವ್ಯ ಎಮ್. ಬಿ. ಬಿ. ಎಸ್. ಇವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. [illegible] ಕಾರ್ಯದರ್ಶಿಗಳಾದ ಶ್ರೀ ಹೊನ್ನಯ್ಯ ಶೆಟ್ಟರು ಇಂದಿನ ಕೂಟವನ್ನು ಕರೆದುದರ ಉದ್ದೇಶವನ್ನೂ [illegible] ಉಚ್ಚ ಧ್ಯೇಯಗಳೇನೆಂಬುದನ್ನೂ ಸುಂದರವಾಗಿ ವಿವರಿಸಿ ನೆರೆದ [illegible] ಯೋಗಿಯೋ? ಭೋಗಿಯೋ? ನಾಟಕದಲ್ಲಿ ಪಾತ್ರವಹಿಸಿದ ಸ್ತ್ರೀಪುರುಷರಿಗೆ ಧನ್ಯವಾದವನ್ನಿತ್ತು ಉಪಕಾರ ಸ್ಮರಣೆ ಮಾಡಿದರು. ಅದಾಗಿ [illegible] ಶ್ರೀನಿವಾಸರಾವ ಎಸ್. ಯು. ಪಣಿಯಾಡಿ ಕೆ. ಎಸ್. ಕಾರಂತರೇ ನೊದಲಾದವರ [illegible] ಪ್ರಪಂಚದ ಕಾರ್ಯದಕ್ಷತೆಯನ್ನು ಪ್ರಶಂಸಿಸಿ ಮಾತನಾಡಿದರು. ನಾಟಕದಲ್ಲಿ ಸುಶೋಭಿತವಾ ಸುಂದರಿ ಮತ್ತು ಮಾನಕ್ಷಿ ಪಾತ್ರಗಳನ್ನು ಮಾಡಿದ ಅಂಗನೆಯರಿಗೆ ಸೀರೆಗಳು ಪಾರಿತೋಷಕವಾಗಿ ಅಧ್ಯಕ್ಷರಿಂದ ಕೊಡಲ್ಪಟ್ಟವು. ಯೋಗಾನಂದನ ಪಾತ್ರವನ್ನು [illegible] ವಹಿಸಿದ ಶ್ರೀ। ಯು. ಎಸ್. ಭಟ್ಟರು [illegible] ನಾಲ್ಕು ಮಾತುಗಳನ್ನಾಡಿದ ಬಳಿಕ ಅಧ್ಯಕ್ಷರ ಸಮಾಲೋಚಿತ ಭಾಷಣವಾಯಿತು.

ಉಡುಪಿಗೆ ಮ್ಯುನಿಸಿಪಾಲಿಟಿ ಬೇಡ ಎಂಬ ಮನವಿಯೊಂದು ೫೦೦ಕ್ಕೆ ಮೇಲ್ಪಟ್ಟ ಪಟ್ಟಣಿಗರ ಸಹಿಗಳೊಡನೆ ಕೂಡಿ ತಯಾರಾಗಿದೆ. ಇದರ ನಕಲುಗಳನ್ನು ಮಾನ್ಯ ಮದ್ರಾಸ್ ಸರಕಾರಕ್ಕೂ, ಲೋಕಲ್‌ಬೋರ್ಡ್ ಇನ್ಸ್ಪೆಕ್ಟರಿಗೂ, ಜಿಲ್ಲಾ ಕಲೆಕ್ಟರರಿಗೂ, ಜಿಲ್ಲಾ ಪಂಚಾಯತು ಆಫೀಸರರಿಗೂ, ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟರಿಗೂ ಕಳುಹಿಸುವ ಏರ್ಪಾಡು ಸಹ ಮಾಡಲಾಗಿದೆ.

ಹಿಂದೂ-ಮುಸಗಳ ಮಸೂದೆಯ ಕುರಿತು ಪ್ರಾಯ್ಪೊ ಸಾಕ್ಷ್ಯವನ್ನೀಯಲು ಉದಕಮಂಡಲಕ್ಕೆ ಹೋಗಿ ಹಿಂತಿರುಗಿದ ಶ್ರೀ। ವಕೀಲ್ ರಾಮಕೃಷ್ಣರಾಯರು ಈ ಮಸೂದೆಗೆ ೯೯ ಶೇಕಡಾ [illegible] ವಿರುದ್ಧವಿದೆಯೆಂದೇ ಅಭಿಪ್ರಾಯಪಡುತ್ತಾರೆ.

ಶ್ರೀಯುತ ಪಾಂಗಾಳ ಮಂಜುನಾಥ ನಾಯ್ಕರೂ ಅವರ ಸಹೋದರರೂ ಅವರ ಸ್ವರ್ಗಸ್ಥರಾದ ತೀರ್ಥರೂಪರ ಹೆಸರಲ್ಲಿ ಜಿ. ಹ. ಸಂಘಕ್ಕೆ ರೂ ೧೦೦ ದಾನವಿತ್ತು ಮತ್ತು ಅವರ ಸ್ಮರಣಾರ್ಥವಾಗಿ ಹತ್ತು ವರ್ಷಗಳ ತನಕ ಪ್ರತಿವರ್ಷ ಅಕ್ಕಿ ಮುಡಿ ೧೦ರಂತೆ ಕೊಟ್ಟುಕೊಂಡು ಬರುವುದಾಗಿ ಭಾಷೆಕೊಟ್ಟಿರುವರು. ಆ ಪೈಕಿ ರೂಪಾಯಿ ೧೦೦ನ್ನು ಸಂಘವು ನಿಶ್ಚಯಿಸಬಹುದಾದ ಯಾವುದಾದರೊಂದು ಬೇಂಕಿನಲ್ಲಿಟ್ಟು ಶ್ರೀ ವೆಂಕಟ್ರಮಣಸ್ವಾಮಿ ಹಾಯರ್ ಎಲಿಮೆಂಟರಿ ಶಾಲೆ (ಕಟಪಾಡಿ)ಯಲ್ಲಿ ಕಲಿಯುವ ಹರಿಜನ ಮಕ್ಕಳ ಅಭಿವೃದ್ಧಿಗಾಗಿ ಸ್ವರ್ಗಸ್ಥರ ಹೆಸರಲ್ಲಿ ಕೊಡಬೇಕಾಗಿಯೂ ಅಕ್ಕಿಯನ್ನು ಜಿಲ್ಲೆಯಲ್ಲಿರುವ ಹರಿಜನರ ಉದ್ಧಾರಕ್ಕಾಗಿ ಉಪಯೋಗಿಸಬೇಕಾಗಿಯೂ ಕೇಳಿಕೊಂಡಿರುವರು. ಅಂತಹ ಶ್ರೀಯುತರುಗಳ ಈ ತರದ ದಾನವು ಸ್ತುತ್ಯವೇ ಸರಿ. ಅದಕ್ಕಾಗಿ ಅವರನ್ನು ಸಂಘದ ಕಡೆಯಿಂದ ಅಭಿನಂದಿಸುತ್ತೇನೆ ಎಂದು ಜಿ. ಹ. ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಬೇಸಗೆಯ ರಜೆ [illegible] ಮುಚ್ಚಲಾಗಿದ್ದ ಸ್ಕೂಲು ಕಾಲೇಜುಗಳು ಇದೇ ತಾ ೪ಕ್ಕೆ ತೆರೆಯಲ್ಪಟ್ಟವು. ಪರೀಕ್ಷಾ ಫಲಿತಾಂಶಗಳು [illegible] ಪ್ರಕಟಿಸಲ್ಪಟ್ಟು [illegible] ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುವರು.

ಮಳೆಯ ಅಭಾವದಿಂದ ಇಲ್ಲೂ ನೀರಿನ ಕುಟ್ಟಿಯು ವಿಪರೀತವಾಗುತ್ತಿದೆ.

ಕಾಂಗ್ರೆಸು ಸದಸ್ಯರನ್ನು [illegible] ಉಡುಪಿಯ ಅಜ್ಜರಕಾಡಿನಲ್ಲಿ ಭರದಿಂದ ಸಾಗುತ್ತಿದೆ.

ಮೂಲ್ಕಿ—[illegible]

ಇಲ್ಲಿಯ [illegible] ಮೂಲ್ಕಿ [illegible]

ಕಾಸರಗೋಡು—[illegible] ಜೋಸೆಫ್ ಎಲಿಮೆಂಟರಿ ಶಾಲೆಯ ನೂತನ ಶಾಲಾಪ್ರವೇಶ ಮತ್ತು ಶಾಲಾವರ್ಧಂತಿ ಸಮಾರಂಭವು ತಾ ೨೫-೫-೩೫ರಲ್ಲಿ ಘನಹೊಂದಿದ ಬಿಷೋಪರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು.

ಅನುಕ್ರಮಣಿಕೆ.

ಕ್ವೆಟ್ಟಾದಲ್ಲಿ ಭೀಕರ ಭೂಕಂಪ ೧
ಚಿತ್ರ ೨
ಪತ್ರಿಕಾಪ್ರಪಂಚ ೪
ಕರ್ನಾಟಕ ವರ್ತಮಾನ ೫
ಮುಸಲ್ ಮೂಧ್ಯ ೬
ಅಗ್ರಲೇಖ
ನೋಟಗಳು ೧೮
ಸ್ಫುಟವಿಚಾರಗಳು ೯
ಅಸ್ತ್ರ ವ್ಯಾಪಾರ ೧೦
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ೧೩
ವಿವಿಧ ಸಮಾಚಾರಗಳು ೧೬
ಮೂಲ್ಕಿಯಲ್ಲಿ ಹರಿಜನರ ಮೇಲೆ ನಿರ್ಬಂಧ ೧೭
ನಡೆದ ಕತೆಗಳು ೧೮

ಸ್ವದೇಶಾಭಿಮಾನಿ

ತಾ ೭ನೇ ಶುಕ್ರವಾರ ಜೂನ್, ೧೯೩೫

ಅಸ್ತ್ರಗಳ ವ್ಯಾಪಾರ

ಪ್ರಪಂಚದ ನೂರಾರು ಜಟಿಲ ಸಮಸ್ಯೆಗಳಲ್ಲಿ ಅಸ್ತ್ರಗಳ ವ್ಯಾಪಾರವು ಒಂದು ತೀರ ಜಟಿಲವಾದ ಪ್ರಶ್ನೆಯಾಗಿದೆ ಇದರ ಕಡೆಗೆ ದೇಶಗಳು ನೋಡುವ ದೃಷ್ಟಿಯು ಇನ್ನಷ್ಟು ವಿಚಿತ್ರವಾಗಿದೆ ಪರಗುವೆ, ಬೊಲಿವಿಯಾ ಸಮರದ ವಿಚಾರವಾಗಿ ನಾವು ಸಿಕ್ಕವೂ ಕೇಳುತ್ತಿದ್ದೇವೆ ಸಣ್ಣ ರಾಜ್ಯಗಳಾದರೂ ಎಂದೋ ತೊಡಗಿಸಿದ ಅವರ ಕಾಳಗಗಳ ಇನ್ನೂ ಮುಗಿದಿಲ ಇತ್ತ ಅಬಿಸೀನಿಯದ ಮೇಲೆ ಇಟೆಲಿಯು ಕೋಪಿಸಿದ ಕಥೆಯು ಇಂದಿನದೇ ಅದರ ಇತ್ಯರ್ಥ ಇನ್ನೂ ಆಗಿಲ್ಲ ಒಂದು ಕಡೆ, ಇನ್ನಿಲ್ಲದಸ್ತು ಕಾಳಗಗಳ ಸನ್ನಾಹ ನಡೆಯುತ್ತಿವೆ ಜರ್ಮನಿಯು ಶಸ್ತ್ರ ಸಮಾನತೆಗೆ ಹೋರಾಡುತ್ತದೆ ಎಲ್ಲರಿಗೂ ಯುದ್ಧ ಸಿದ್ಧತೆಯು ವ್ಯಯವು ಒಡೆಟಿನ ಕೊರಳಿಗೆ ಕಲ್ಲೆಂದು ಕಂಡರೂ ಒಬ್ಬರ ಭೀತಿಯಿಂದ ಇನ್ನೊಬ್ಬರು ಶಸ್ತ್ರಪ್ರಮಾಣವನ್ನು ತಗ್ಗಿಸುವಂತಿಲ್ಲ ಅದೇ ಬಾಯಿಯಿಂದ ಜರ್ಮನಿ, ಇಂಗ್ಲಾಂಡು, ಇಟೆಲಿಯಂಥ ರಾಜ್ಯಗಳು ಶಸ್ತ್ರಪ್ರಮಾಣವನ್ನು ತಗ್ಗಿಸುವ ಸಲುವಾಗಿ ಯೋಚನೆಯನ್ನು ನಡೆಯಿಸುತ್ತಿವೆ ಇವುಗಳು ಜಯವಾದಂತೆ ಕಂಡುಬರುವುದಿಲ್ಲ ಇದರ ಗುಟ್ಟೇನು? ವಿವಿಧ ರಾಜ್ಯಗಳ ರಾಜತಂತ್ರ ಧುರೀಣರು ಶಾಂತಿಸ್ಥಾಪನೆಗೆ ಸಿದ್ಧರಿಲ್ಲವೇ? ಇದ್ದರೆ ಈ ಎಲ್ಲ ಸಾಹಸಗಳು ವ್ಯರ್ಥವಾಗುತ್ತಿವೆಯೇಕೆ?

ಮೊನ್ನೆ ಮೊನ್ನೆ ಬ್ರಿಟಿಷ ಸರಕಾರವು ತಮ್ಮ ದೇಶದ ಖಾಸಗಿ ಯುದ್ಧೋಪಕರಣ ತಯಾರಿ, ಮತ್ತು ವ್ಯಾಪಾರಗಳ ವಿಚಾರವಾಗಿ ಒಂದು ವಿಚಾರಣಾ ಸಮಿತಿಯನ್ನು ಏರ್ಪಡಿಸಿತು ಸಮಿತಿಯು ಕಾರುಭಾರುಗಳನ್ನು ಕಟ್ಟು ನಿಟ್ಟುಗಳಿಂದ ತುಂಬಿದ್ದರು ಅದಕ್ಕೆ ವಿಶೇಷವಾದ ವಿಚಾರ ಸ್ವಾತಂತ್ರ್ಯವನ್ನು ಕೊಟ್ಟಿಲ್ಲವಾದರೂ ಅದು ತನ್ನ ಕೆಲಸವನ್ನು ಇಷ್ಟರಲ್ಲೇ ತೀರ್ಮಾನವಿಲ್ಲದೆ ಮುಂದರಿಸಿದೆ ಎಂದು ತಿಳಿದು ಬರುವುದು ಅಂದರೆ—ವಿಚಾರಣೆಯ ಫಲಿತವನ್ನು ಬಹಿರಂಗಪಡಿಸುವುದಾಗಲಿ, ಒಳಕ್ಕೆ ತರುವುದಾಗಲಿ, ಸಮಿತಿಯನ್ನು ನೇಮಿಸಿದ ಸರಕಾರಕ್ಕೇನೆ ಬೇಡವಾಗಿದೆಯೆಂಬುದು ಸ್ಪಷ್ಟವಾಯಿತು

ಆ ಸಮಿತಿಯ ಮುಂದೆ ಸಾಕ್ಷಿಯಾಗಿ ಹೋಗಿದ್ದ ಮಿ। ಹೆರ್ರಿ ಪಾಲಿಟ್ ಎಂಬವರು ತಮ್ಮ ಅಭಿಪ್ರಾಯವನ್ನು ಕೊಡುವಾಗ್ಯ, ಇದರ ಗುಟ್ಟನ್ನು ರಟ್ಟುಪಡಿಸಿದರು ಬ್ರಿಟನಿನ ಅಸ್ತ್ರ ವ್ಯಾಪಾರ ಮತ್ತು ಇದಕ್ಕೇ ಅನುಕೂಲದ ಇತರ ಕೈಗಾರಿಕೆಗಳು ದಿನೇ ದಿನೇ ವ್ಯಾಪಾರವನ್ನು ಹೆಚ್ಚಿಸುತ್ತಿವೆ. ಜಗತ್ತಿನ ಯುದ್ಧೋಪಕರಣ ವ್ಯಾಪಾರಿಗಳಲ್ಲಿ ಶಾಂತಿಗೆ ಬಾಯಿಬಿಡುವ ಬ್ರಿಟನಿನವರೂ ಒಬ್ಬರು ಆದರೆ ೧೯೩೩—೧೯೩೪ರ ತನಕ ಅದು ನಡೆಯಿಸಿದ ವ್ಯಾಪಾರವು ಮಾತ್ರ ವಿಶೇಷವಾಗಿದೆ ಅಂಥ ಕೆಲವು ಸಂಖ್ಯೆಗಳನ್ನು ನೋಡಿ –

ಚೀನಕ್ಕೆ ಮಾರಿದ ಅಸ್ತ್ರಗಳು —೧೯೩೦ರಲ್ಲಿ ೧೬,೭೦೦; ೧೯೩೧ರಲ್ಲಿ—೨೪,೬೦೦; ೧೯೩೨ರಲ್ಲಿ ೭,೩೦೦, ೧೯೩೩ರಲ್ಲಿ—೨,೨೩,೦೦೦

ಜಪಾನಿಗೆ—೧೯೩೦ರಲ್ಲಿ ೯೮,೨೦೦, ೧೯೩೧ರಲ್ಲಿ ೧,೭೩,೭೦೦, ೧೯೩೨ರಲ್ಲಿ ೨,೧೬,೦೦೦

ಅದರಂತೆ ಪ್ರತಿವರುಷವೂ ಹೆಚ್ಚು ಹೆಚ್ಚಾಗಿ ಜರ್ಮನಿ, ಪೋಲೆಂಡು ಮೊದಲಾದ ದೇಶಗಳಿಗೆ ಬ್ರಿಟನು ಅಸ್ತ್ರಗಳನ್ನು ಮಾರಿದೆ ಎಬಿಸಿನಿಯಾಕ್ಕೆ ವಿಕ್ರಯಿಸಿದೆ ಇಷ್ಟು ಲಾಭಕರವಾದ ಉದ್ಯೋಗವು ಇನ್ನೊಂದಿಲ್ಲ ಇಂಗ್ಲೆಂಡಿನ ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ ಆಗಲಿ, ಪ್ರಸಿದ್ಧ ವಿಕರ್‍ಸ್ ಆರ್ಮ್ಸ್ಟ್ರಾಂಗ್ ಕಂಪೆನಿಯಾಗಲಿ— ಖಾಸಗಿ ಸಂಸ್ಥೆಗಳೇ ಅದರಂತೆ ಜರ್ಮನಿಯ ಕ್ರುಪ್ ಮೊದಲಾದ ಕಂಪೆನಿಗಳಿವೆ

ಇದರ ಪಾಲುಗಾರರು ಯಾರೆಂಬುದನ್ನು ಮಾತ್ರ ತಿಳಿಯಹೋದರೆ ಒಳಗುಟ್ಟು ತಿಳಿಯುವುದು ಇಂಗ್ಲೆಂಡಿನ ಹೋಮ್ ಸೆಕ್ರೆಟರಿಗಳು ಆರ್ಮ್ಸ್ಟ್ರಾಂಗ್ ಕಂಪೆನಿಯ ಪಾಲುಗಾರರು ನೆವಿಲ್ ಚೆಂಬರ್‌ಲೇನರು ಕೆಮಿಕಲ್ ಇಂಡಸ್ಟ್ರೀಸಿನಲ್ಲಿ ೫,೧೮೮ ಪಾಲು ಪಡೆದಿದ್ದಾರೆ ರಾಜಕುಮಾರ ಅರ್ಥರವರಿಗೆ ವಿಕರ್‍ಸಿನಲ್ಲಿ ೩,೦೦೦ ಪಾಲುಗಳಿವೆ ಸೈ ಎಂಡ್ರೂಸ್‌ದ ಬಿಶಪರಿಗೆ ಕೆಮಿಕಲ್ ಇಂಡಸ್ಟ್ರೀಸಿನಲ್ಲಿ ೨,೧೦೦ ಪಾಲುಗಳಿವೆ ರಾಜತಂತ್ರ ಧುರೀಣರೂ, ದೇಶದ ಮುಂದಾಳುಗಳೂ ಇಂಥ ವ್ಯಾಪಾರ ನಡಯಿಸುವವರು ಹೀಗಿದ್ದರೆ ಶಾಂತಿಯು ಯಾರಿಗೆ ಬೇಕು?

ಸಾಮಾನ್ಯ ಪ್ರಜೆಗಳು ಕೂಗಿದರೆ, ಹೊರಗಿನಿಂದ ಸುಣ್ಣ ಬಳಿಯುವ ವ್ಯವಸ್ಥೆಯಲ್ಲದೆ ಬೇರೆಯಲ್ಲ ಹಿಟ್ಲರನು ಯುದ್ಧೋಪಕರಣದ ದೃಷ್ಟಿಯಿಂದಲೇ ಒಬ್ಬ ಪ್ರಸಿದ್ಧ ಉದ್ಯೋಗ ಮಂಡಲದ ಯಜಮಾನನ ಯಹೂದಿಯವನಾದರೂ ಅವರ ತಂಟೆಗೆ ಹೋಗದೆ ಕುಳಿತಿದ್ದಾನೆ

ದೇಶದಲ್ಲಾಗುವ ಅಸ್ತ್ರಗಳು ವಿಕ್ರಯ ತಯಾರಿಗಳಿಗೆ, ಜನಾಭಿಪ್ರಾಯದ ಭೀತಿಯಾಗಲಿ ಹಿಡಿತವಾಗಲಿ ಇಲ್ಲದ ಮೇಲೆ ಶಸ್ತ್ರ ಸನ್ಯಾಸದ ಸಂಧಾನಗಳು ಫಲಕಾರಿಯಾಗುವುದೆಂತು?

ಬಲೂಚಿಸ್ತಾನದ ದೌರ್ಭಾಗ್ಯ

ಕ್ವೆಟ್ಟಾವು ಅದರ ಸರಹದ್ದಿನ ನಗರಗಳೂ ಭೂಕಂಪಕ್ಕೆ ತುತ್ತಾದ ವಾರ್ತೆಯು ಬಿಹಾರದ ವ್ಯಥೆಯನ್ನು ಮೀರಿಸುವುದು ಕ್ವೆಟ್ಟಾ ನಗರ ಒಂದರಲ್ಲೇ ೨೦ ಸಾವಿರಕ್ಕೂ ಮಿಕ್ಕಿ ಜನರು ಮಡಿದರೆಂದರೆ, ಉಳಿದವರಿಗೆ ಋಷಿನ ನಿವಾರಣೆಯೂ ಇಲ್ಲವೆಂದೇ ಅರ್ಥ ಅಲ್ಲಿ ಮಡಿದವರ ಸಂಖ್ಯೆಯಿಂದ, ನಗರವನ್ನೆ ತಾತ್ಕಾಲಿಕ ಮುಚ್ಚಿಡುವ ಏರ್ಪಾಡು ಮಾಡಿರುತ್ತಾರೆ ಇದರಿಂದ, ಅವಶೇಷಗಳ ಬಾಯಿಗೆ ಬಿದ್ದೂ ಉಸಿರು ಹಿಡಿದಿರಬಹುದಾದವರಿಗೆ ಯಾವ ಉದ್ಧಾರಕ ದಾರಿಯೂ ಕಾಣುವುದಿಲ್ಲ ಇತ್ತ ಆಸುಪಾಸಿನ ಹಲವು ನಗರಗಳ ಹುಟ್ಟೆ ಅಡಗಿದೆ. ಇಂಥ ಪರಿಸ್ಥಿತಿಯಲ್ಲಿ ಸರಕಾರವೂ, ಜನರೂ ಹಿಂದು ಮುಂದೆ ನೋಡದೆ ಕರುಣೆಯನ್ನು ತೋರಬೇಕಾಗಿದೆ ನಮ್ಮ ಜಿಲ್ಲೆಯವರಾದರೂ ಇಂಥ ಆಪತ್ತಿನ ಕಾಲದಲ್ಲಿ ನೆರವಾಗದಿರರು ಎಂದು ಆಶಿಸಬೇಡವೇ?

ನಾವು ಹರಿಜನ ಸೇವೆಯನ್ನು ಹೇಗೆ ಮಾಡುತ್ತಿದ್ದೇವೆ?

ಎಂದು ನಾವು ನಾವೇ ವಿಚಾರಿಸಿಕೊಂಡರೆ ನಾವು ಹರಿಜನ ಸೇವೆಯನ್ನು ಒಂದಿಷ್ಟಾದರೂ ಮನಃಪೂರ್ವಕವಾಗಿ ಮಾಡುವುದಿಲ್ಲವೆಂದೂ, ನಮ್ಮ ಅಂತರ್ಯವು ಇನ್ನೂ ಪರಿವರ್ತನೆ ಹೊಂದಲಿಲ್ಲವೆಂದೂ ನಮಗೆ ಕಂಡುಬರದಿರಲಾರದು ಹರಿಜನ ಸಂಘವಿದೆ ಆ ಸಂಘದವರು ತಮ್ಮಿಂದ ಕೂಡಿದಷ್ಟು ಮಟ್ಟಿನ ಕರ್ತವ್ಯ ದಕ್ಷತೆಯಿಂದಲೂ ಉತ್ಸಾಹದಿಂದಲೂ ಕೆಲಸ ಮಾಡುತ್ತಾರೆ,- ಆದರೆ ಸಾರ್ವಜನಿಕರಾದ ನಾವು ಅವರೊಡನೆ ಸಹಕರಿಸಿ ನಡೆದುಕೊಳ್ಳುತ್ತೇವೆಯೋ? ಎಂದೂ ಇಲ್ಲ ಮೂಲ್ಕಿಯ ಕೊಆಪರೇಟಿವ್ ಸಂಘವೊಂದರಲ್ಲಿ ಸದಸ್ಯರಾಗಿದ್ದ ಹರಿಜನರು ಕೆಲವರಿಗೆ,—ಆ ಸಂಘವು ಸ್ಥಳ ಬದಲಾವಣೆ ಮಾಡಿಕೊಂಡಂದಿನಿಂದ ಸಾಲಗಳೇ ಸಿಗುವುದಿಲ್ಲವೆಂದೂ ಬೇಂಕಿಗೆ ಪ್ರವೇಶವೇ ಇಲ್ಲವೆಂದೂ ತಿಳಿದುಬಂದಿದೆ ಮೊದಲೊಮ್ಮೆ ಈ ಹರಿಜನರನ್ನು ತಮ್ಮ ಪಾಲುಗಾರರಾಗಿ ನೇಮಿಸಿಕೊಂಡುದೇಕೆ? ಈಗ ಅವರನ್ನು ದೂರವಿಟ್ಟುದೇಕೆ? ಬಡವರೂ, ನಿಶ್ಶಕ್ತರೂ ಮೂಕರೂ ಎಂದಾದೊಡನೆ ಸವರ್ಣ ಹಿಂದೂಗಳು ಹರಿಜನರನ್ನು ಹೇಗೆ ಬೇಕೋ ಹಾಗೆ ರಕ್ಷಿಸಬಹುದು–ಅಥವಾ ಶಿಕ್ಷಿಸಬಹುದು–ಎಂಬ ನಿಯಮವಿದೆಯೇ? ಹಲವು ಬ್ರಾಹ್ಮಣರಿಗೆ ಅಹಿತವೆಂದು ತೋರುವುದೆಂದು ನಾವು ನಮ್ಮ ನಿರ್ಧಾರಗಳನ್ನೂ ಕರ್ತವ್ಯವನ್ನೂ ಮರೆತು ಮೂಢರಾಗುವುದೇ? 'ಹರಿಜನ ಸೇವೆ ಹರಿಜನ ಸೇವೆ'ಯೆಂದು ನಾವು ಆರ್ಭಟಿಸುವುದೊಂದೇ ಕಂಡುಬರುತ್ತದೆ ಹೊರತು, ಹರಿಜನರನ್ನು ಸಾರ್ವಜನಿಕ ಮಂದಿರಗಳಿಗಾಗಲೀ, ಸಾರ್ವಜನಿಕ ಭೋಜನಗಳಿಗಾಗಲೀ ಆಮಂತ್ರಿಸಿ ಅವರೊಂದಿಗೆ ಕೂಡಿ ನಡೆಯುವುದು ಎಲ್ಲಿಯೂ ಕಾಣುವುದಿಲ್ಲ ಗಾಂಧಿಜಿಯವರಾಗಲೀ, ಪ್ರಸಾದರಾಗಲೀ ಅಥವಾ ಇನ್ನಿತರ ಮುಖಂಡರಾಗಲೀ ಇಲ್ಲಿಗೆ ಬಂದು ಬಿಟ್ಟರೆ ಅವರ ದರ್ಶನಲಾಭವನ್ನು ಹೊಂದಿ, ನಾವು ಮಹಾ ರಾಷ್ಟ್ರೀಯರೆಂದು ತೋರಿಸಿ, ಮೆರೆಯುವ ನಮ್ಮಲ್ಲಿನ ಕೆಲವು ಮುಂದಾಳೀನೆನ್ನುವರು?

ನಮ್ಮ ದೌರ್ಬಲ್ಯಕ್ಕೆ ಕಾರಣವೇನು?

ಹೊರದೇಶಗಳಲ್ಲಿನ ಸಂಸ್ಥೆಗಳನ್ನು ಟೀಕಿಸುವುದರ ಬದಲಿಗೆ ನಾವು ನಮ್ಮೊಳಗಣ ಸಾರ್ವಜನಿಕ ಸೇವಾಬದ್ಧವಾದ ಹಲವು ಸಂಸ್ಥೆಗಳ ಚಲನವಲನಗಳನ್ನು ನಾವು ವಿಮರ್ಶಿಸುತ್ತಾ ಹೋದರೆ ಈ ಸಂಸ್ಥೆಗಳೆಲ್ಲ ಒಂದು ವಿಲಕ್ಷಣವಾದ ದೌರ್ಬಲ್ಯದಿಂದ ನರಳುತ್ತಿರುವುದು ಕಂಡುಬರುತ್ತದೆ ಯಾವ ಸಂಸ್ಥೆಯ ಅಂತರ್ಯವನ್ನು ಕಂಡರೂ ಅದರಲ್ಲಿ ಲಕ್ಷಣೀಯ ನ್ಯೂನ್ಯತೆಗಳು ಗೋಚರಿಸುತ್ತವೆ ಒಂದೇ ಸಂಘದ ಹಲವು ಸದಸ್ಯರೊಳಗೆ ಭೇದಬುದ್ಧಿ, ಪಕ್ಷಪಾತ, ಪರಸ್ಪರ ದೂಷಣೆ, ಪರಸ್ಪರ ವೈಷಮ್ಯ ಸಂಸ್ಥೆಯು ಸಾಂಗವಾಗಿ ನಡೆಯುತ್ತಿದೆಯೆಂದಾದರೂ ಅದರ ಆಡಳಿತ ನೋಡುವ ವ್ಯಕ್ತಿಗಳ ವೈಯುಕ್ತಿಕ ಜೀವನವು ನಿಂದ್ಯವಾಗಿರುತ್ತದೆ. ಅಂತೂ ಪ್ರತಿಯೊಂದು ಸಾರ್ವಜನಿಕ ಸಂಸ್ಥೆಯು ಅದರ ಮೇಲ್ವಿಚಾರಕರ, ಅಥವಾ ಸದಸ್ಯರ ವೈಯುಕ್ತಿಕ ಜೀವನಕ್ರಮದ ದೆಸೆಯಿಂದಾಗಿ ಅಪೇಕ್ಷಿತ ಉದ್ದೇಶಗಳನ್ನು ಹಿಡಿದುಕೊಂಡು ಮುಂದರಿಯಲು ಸಾಧ್ಯವಾಗುವುದಿಲ್ಲ. ಈ ಕುಂದುಕೊರತೆಯು ನಮ್ಮ ಅಖಿಲಭಾರತ ಕೊಂಗ್ರೆಸ್ ಕಮಿಟಿಯಿಂದ ಮೊದಲ್ಗೊಂಡು ಪ್ರತಿಯೊಂದು ಸಣ್ಣ ರಾಷ್ಟ್ರೀಯ ಸಂಸ್ಥೆಯಲ್ಲೂ ಗೋಚರಿಸುತ್ತದೆ. ಇಂತಹ ಕುಂದುಕೊರತೆಯಿದೆಯೆಂದು ಎಲ್ಲರಿಗೂ ತಿಳಿದಿದೆಯಾದರೂ, ಅದನ್ನು ಬಾಯ್ಬಿಟ್ಟು ಹೇಳುವವರು ವಿರಳ ಕಂಡವರು ಕಂಡಂತೆ ಹೇಳದೇನೇ ನಮ್ಮವರು ಮನಬಂದಂತೆ ಆಚರಿಸುತ್ತಿದ್ದಾರೆ ಅಂತೂ, ನಾವು ಹೇಳುವುದೇನೆಂದರೆ,– ಸಾರ್ವಜನಿಕ ಕೆಲಸಗಾರರು ಪವಿತ್ರಜೀವನವನ್ನು ನಡೆಸಬೇಕು ಅವರು ಎಷ್ಟು ಪವಿತ್ರರಾಗುವರೋ ಅಷ್ಟೇ ಪಾವಿತ್ರ್ಯವು ಅವರ ಸಂಘಕ್ಕೂ ಬರುವುದು ಅವರು ಎಷ್ಟು ಅಧಮರಾಗಿ ನಡೆಯುವರೋ ಅಷ್ಟೇ ಅಧಮತೆಯು ಅವರ ಸಂಸ್ಥೆಗೆ ತಟ್ಟುವುದು ವೈಯಕ್ತಿಕ ಪಾವಿತ್ರ್ಯವೇ ಸಮಷ್ಟಿಯ ಹಿತವಾಗಿರುತ್ತದೆ

ಈ ವಿವಾದವೇಕೆ?

ಮಂಗಳೂರಲ್ಲಿ ಮೊನ್ನೆ ನಡೆದ ಕರ್ಣಾಟಕ ಪ್ರಾಂತಿಕ ರಾಜಕೀಯ ಪರಿಷತ್ತಿನ ಠರಾವುಗಳನ್ನು ವಿಮರ್ಶಿಸಿ ದೇಶಭಕ್ತ ಗಂಗಾಧರರಾವು ದೇಶಪಾಂಡೆಯವರು 'ಸಂಯುಕ್ತ ಕರ್ನಾಟಕ'ದಲ್ಲಿ ಪ್ರಕಟಿಸಿದ ತನ್ನ ಅಭಿಪ್ರಾಯಗಳನ್ನೂ, ಆ ಅಭಿಪ್ರಾಯಗಳಿಗೆ ದ. ಕ. ಜಿಲ್ಲಾ ಕೊಂಗ್ರೆಸ್ ಕಮಿಟಿಯವರು ಪ್ರಕಟಿಸಿದ ಉತ್ತರವನ್ನೂ ಕಳೆದ ಸಂಚಿಕೆಯಲ್ಲಿ ಪ್ರಕಟಪಡಿಸಲಾಗಿದೆ ಇವುಗಳಿಂದ ತಿಳಿದು ಬರುವುದಾದರೂ ಏನು? ಶ್ರೀ। ದೇಶಪಾಂಡೆಯವರು ಪರಿಷತ್ತಿಗೆ ತಕ್ಕ ಬೆಲೆಯನ್ನೇ ಕೊಡಲಿಲ್ಲ– ಈ ಪರಿಷತ್ತು ಮಂಜೂರು ಮಾಡಿಕೊಂಡ ಠರಾವುಗಳೆಲ್ಲ ಅಪ್ರಾಸಂಗಿಕ— ಅನುಪಯುಕ್ತ ಅನುಚಿತ—ಅಕಾಲ ಪ್ರಾಪ್ತವಾದುವುಗಳೆಂದು ಅವರ ವಾದ ಅಲ್ಲದೆ ಈ ಪರಿಷತ್ತು ಅಖಿಲ ಕರ್ನಾಟಕದ ಪ್ರಾತಿನಿಧ್ಯವನ್ನು ಹೊಂದಲಿಲ್ಲವೆಂದೂ ಅವರು ಹೇಳಿರುವರು. ಇಂತಹ ಧುರೀಣರು––ಅದರಲ್ಲೂ ಕನ್ನಡ ನಾಡಿನ ಮುಂದಾಳುಗಳು—ಹೀಗೆ ಟೀಕಿಸಿರುವುದು ನಿಜವಾಗಿಯೂ ನಮ್ಮವರಿಗೆ ಪೆಡಿಯೇಟು ಬಿದ್ದಂತೆ' ಶ್ರೀ। ದೇಶಪಾಂಡೆಯವರು ಠರಾವಿನ ಮೂಲ ಶಬ್ದಗಳನ್ನರಿಯದೆ ಹೀಗೆ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿರುವುದು ಅಪ್ರಾಸಂಗಿಕವೆಂದು. ಕೊಂಗ್ರೆಸ್ ಕಮಿಟಿಯವರ ಹೇಳಿಕೆ ಪರಿಷತ್ತು ಪ್ರಾತಿನಿಧಿಕವಾಗಿರುವುದಿಲ್ಲವೆಂದು ದೇಶಪಾಂಡೆಯವರ ಹೇಳಿದುದಕ್ಕೆ ಕಮಿಟಿಯವರ ಯಾವ ಉತ್ತರವೂ ಇಲ್ಲ ತಮ್ಮ ಉತ್ತರದಲ್ಲಿ ಅವರು ಈ ವಿಷಯವನ್ನು ಉಲ್ಲೇಖಿಸಿ ಬರೆಯಬಹುದಿತ್ತು ಶ್ರೀ। ಗಂಗಾಧರರಾಯರಂತೆಯೇ ಇತರ ಪ್ರತಿನಿಧಿಗಳೂ ಅಸ್ವಸ್ಥದ ನೆಪದಿಂದಲೋ, ಇತರ ನೆಪದಿಂದಲೋ ಪರಿಷತ್ತಿಗೆ ಬರದಿರಬಾರದೇಕೆ ಎಂದು ಒಂದ ಪ್ರಶ್ನೆಯು ಏಳಬಹುದಿತ್ತು ಪ್ರಾಂತಿಕ ಕಮಿಟಿಗಳಲ್ಲಾದ ನಿರ್ಣಯಗಳು ಕೊಂಗ್ರೆಸ್ ಕಮಿಟಿಗೆ ಸಂಬಂಧಿಸಿದವುಗಳಲ್ಲ ಎಂಬ ಶ್ರೀ। ದೇಶಪಾಂಡೆಯವರ ಮಾತಿನಲ್ಲಿ ಸತ್ಯಾಂಶ ಅಡಗಿದೆಯಾದರೂ ಅವುಗಳಿಂದಾಗಿ ಪ್ರಾಂತಿಕ ರಾಜಕೀಯ ವ್ಯಾಪಿಗಳ ಮನೋಪರಿಸ್ಥಿತಿಯು ಹೇಗಿದೆಯೆಂದು ತಿಳಿಸಲು ಸಾಧ್ಯವಾಯಿತೆಂದು ಜಿಲ್ಲಾ ಕಮಿಟಿಯವರು ಹೇಳುವುದೂ ತಪ್ಪಾಗಿಲ್ಲ ಅಂತೂ, ಇಂತೂ ಮಂಗಳೂರಿನವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಈ ಪರಿಷತ್ತು ಸಾಧಕವಾಯಿತೆಂಬುದರಲ್ಲಿ ಎರಡು ಮಾತಿರದು. ಮಂಗಳೂರಿನವರು ಹಾಗೆ ಮಾಡಿರುವುದು ತಪ್ಪು ಎಂದೂ ಹೇಳಲಾಗುವುದಿಲ್ಲ

ಮಂಗಳೂರು.

ಇದೇ ಕಳೆದ ತಾ ೭—೫—೩೯ನೇ ದಿವಸ ಸೇರಿದ ಅದ್ವೈತ ಸಮಿತಿಯ ೯ನೇ ಮಹಾಸಭೆಯ ೩ನೇ ಪ್ರಸ್ತಾಪನೆಯ ಮೇರೆಗೆ ಮ| ರಾ| ರಾ| ಎಮ್. ಕೃಷ್ಣರಾವ್, ಅಡ್ವರ್‌ಟೈಸರ್‌ರವರು ೧೯೩೫—೩೬—೩೭ನೇ ವರ್ಷಗಳಿಗೆ ಸಮಿತಿಯ ಗೌರವಕಾರ್ಯದರ್ಶಿಯಾಗಿ ಚುನಾಯಿಸಲ್ಪಟ್ಟಿರುವುದರಿಂದ ಈ ಮೊದಲು ಪೆಂಟಿಲೆಂಡ್‌ಪೇಟೆಯಲ್ಲಿದ್ದ ಅ| ಸ| ಯ| ಕಾರ್ಯಾಲಯದ ಕಛೇರಿ ಶ್ರೀ| ಎಮ್. ವಿ. ಶಾಸ್ತ್ರಿಗಳವರ ಭೇಷಜಾಶ್ರಮದ ಹತ್ತಿರ ಇರುವ ಪ್ರಕೃತದ ಕಾರ್ಯದರ್ಶಿಗಳ ಮನೆಗೆ ಒಯ್ಯಲ್ಪಟ್ಟಿರುವುದು ಇನ್ನುಮುಂದೆ ಸಮಿತಿಗೆ ಸಂಬಂಧಪಟ್ಟ ಸಕಲ ವ್ಯವಹಾರಗಳನ್ನು ಮುಖವಿಳಾಸಕ್ಕೆ (ಎಡ್ರೆಸ್) ಕಳುಹಿಸತಕ್ಕದ್ದು ಎಂದು ಐ ಕೆ ಪಿ ಶರ್ಮರವರು ತಿಳಿಸುತ್ತಾರೆ.

ಶಿವಭಕ್ತಿಯೋಗ ಸಂಘ—ಇದೇ ತಾ. ೯ನೇ ಆದಿತ್ಯವಾರ ಪ್ರಾತಃಕಾಲ ಗಂಟೆ ೮—೩೦ಕ್ಕೆ ಕುದ್ರೋಳಿಯ ಶ್ರೀ ಶಿವಭಕ್ತಿಯೋಗ ಸಂಘದಲ್ಲಿ ಶ್ರೀಯುತ ನಾರಾಯಣ ಕಿಲ್ಲೆಯವರು "ಇಂದಿನ ಯುವಕರ ಕರ್ತವ್ಯ" ಎಂಬುದರ ಕುರಿತು ಭಾಷಣಕೊಡಲಿರುವರು ಸರ್ವರಿಗೂ ಸುಸ್ವಾಗತವಿದೆ

ಬೊಕ್ಕಪಟ್ಣ ಮುನ್ಸಿಪಲ್ ಆಸ್ಪತ್ರೆಯ ಡಾಕ್ಟರರಾಗಿದ್ದ ಐ ಕೆ ಪಿ ಶರ್ಮ ಎಮ್ ಎ ಸಿ ಇವರಿಗೆ ಬೋಳೂರ ಮುನ್ಸಿಪಲ್ ಆಸ್ಪತ್ರೆಗೆ ವರ್ಗವಾದುದರಿಂದ ಕೊಡಿಯಾಲಬೈಲ್ ಪಶ್ಚಿಮ ವಾರ್ಡಿನ ನಿವಾಸಿಗಳು ತಾರೀಕು ೩೧—೫—೩೯ನೇ ಬೆಳಿಗ್ಗೆ ಗಂಟೆ ೭ ೩೦ಕ್ಕೆ ಬೊಕ್ಕಪಟ್ಣ ಶಾಲೆಯಲ್ಲಿ ಮುನ್ಸಿಪಲ್ ಕೌನ್ಸಿಲರಾದ ಜಾರಪ್ಪ ಪುತ್ರನ್‌ರವರ ಅಧ್ಯಕ್ಷತೆಯಲ್ಲಿ ವಿದಾಯ ಸಭೆಯೊಂದನ್ನೇರ್ಪಡಿಸಿ, ಡಾಕ್ಟರರನ್ನು ಮಾನಪತ್ರ ಪುಷ್ಪಹಾರ ಫಲಾಹಾರಗಳಿಂದ ಸತ್ಕರಿಸಿ ಬೀಳ್ಕೊಟ್ಟರು.

ಮಂಗಳೂರು ಗವರ್ನಮೆಂಟ್ ಹಾ ಎ. ಟ್ರೈನಿಂಗ್ ಶಾಲೆಯ ಉಪಾಧ್ಯಾಯರಾದ ರಾಜಶ್ರೀ ರಾಮಯ ನಾಯ್ಕ ಬಿ ಎ ಇವರನ್ನು ಬಳ್ಳಾರಿ ಅತ್ತಕಡೆಗೆ ರೇಂಜ್ ಡೆಪ್ಯುಟಿ ಇನ್ಸ್‌ಪೆಕ್ಟರರಾಗಿ ವರ್ಗಾಯಿಸಿರುತ್ತಾರೆ ಕಾರ್ಕಳ ರೇಂಜಿನಲ್ಲಿ ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರರಾಗಿ ರಜೆಯ ಮೇಲೆ ಇದ್ದ ಶ್ರೀಯುತ ವೆಂಕಟ್ರಾಯಮಲ್ಯರನ್ನು ಬಳ್ಳಾರಿ ಜಿಲ್ಲೆಯಲ್ಲಿ ಹಡಪನಹಳ್ಳಿ ಎಂಬಲ್ಲಿಗೆ ವರ್ಗಾಯಿಸಿರುತ್ತಾರೆ

ಜಿಲ್ಲಾ ಹರಿಜನ ಸಂಘದ ಸಭೆಯು ಇದೇ ಬರುವ ತಾ ೯—೬—೩೯ರಲ್ಲಿ ಡಿ ಪಿ ಎಮ ಛತ್ರದಲ್ಲಿ ಸಾಯಂಕಾಲ ೫ ಘಂಟೆಗೆ ಸೇರುವುದು ಎಲ್ಲಾ ಸದಸ್ಯರೂ ಬರಬೇಕಾಗಿ ಪ್ರಾರ್ಥಿಸಲ್ಪಟ್ಟಿದ್ದಾರೆ

ದೇಶಭಕ್ತರೂ ಸುಪ್ರಸಿದ್ಧ ಧುರೀಣರೂ ಆಗಿರುವ ಶ್ರೀ ಸಯ್ಯದ್ ಅಬ್ದುಲ್ಲಾ ಬ್ರೆಲ್ವಿ (ಬೊಂಬೈ ಕ್ರಾನಿಕಲ್ ಪತ್ರಿಕೆಯ ಸಂಪಾದಕರು) ಶ್ರೀ| ಶೇಕ್ ತಯಾಬ್ಜಿ ಮತ್ತು ಶ್ರೀಮತಿ ಮಣಿಬೆನ್ ಕಾರ—ಇವರುಗಳು ಕಲ್ಲಿಕೋಟೆಯ ಕೇರಳ ಪ್ರಾಂತಿಕ ರಾಜಕೀಯ ಪರಿಷತ್ತಿನಲ್ಲಿ ಭಾಗವಹಿಸಿ ಮಂಗಳೂರಿಗೆ ಕಳೆದ ತಾ ೩ರಲ್ಲಿ ಬಂದರು ಅದೇ ದಿವಸ ಸಾಯಂಕಾಲ ಮೈದಾನಿನಲ್ಲಿ ಸಾರ್ವಜನಿಕ ಸಭೆಯೊಂದು ಸೇರಿತು ಪ್ರಸಿದ್ಧ ವಕೀಲರೂ ರಾಷ್ಟ್ರಧುರೀಣರೂ ಆದ ಶ್ರೀ| ಜೆ ಎ ಸಾಲ್ಡಾನ್ಹರು ಅಂದಿನ ಅಧ್ಯಕ್ಷರಾಗಿದ್ದರು. ಮಂಗಳೂರಿನ ಪುರಜನರೂ ರಾಷ್ಟ್ರಪಕ್ಷದವರೂ ಬಂದಿದ್ದರು

ಇದೇ ಜೂನ್ ತಾ ೧೫ಕ್ಕೆ ಅಂತ್ಯವಾಗುವ ಮಂಗಳೂರು ಮುನಿಸಿಪಾಲಿಟಿಯ ಆರೋಗ್ಯ ಖಾತೆಯ ವರದಿಯಿಂದ ತಿಳಿದುಬರುವಂತೆ ಈ ವಾರದಲ್ಲಿ ೧೩ ಮರಣಗಳೂ, ೪೪ ಜನನಗಳೂ ಆಗಿವೆ ಮರಣಗಳ ಪೈಕಿ ೨ ನ್ಯುಮೋನಿಯಾದಿಂದ, ೨ ಕ್ಷಯರೋಗದಿಂದ, ೯ ಇತರ ರೋಗಗಳಿಂದ. ಸಿಡುಬುರೋಗದಿಂದ ಹೊಯ್ಗೆ ಬಜಾರಿನಲ್ಲಿ ಒಂದು ಮರಣವೂ, ಬೋಳಾರ ಕಡವು ರಸ್ತೆಯಲ್ಲಿ ೨ ಮರಣಗಳೂ ಆಗಿವೆ.

ಮುಂಡೇಶ್ವರ ಪದ್ಮನಾಭ ಭಟ್ಟರ ಪುತ್ರಿ ಶ್ರೀಮತಿ ರಮಾಬಾಯಿಯವರು ಮದ್ರಾಸು ವಿಶ್ವವಿದ್ಯಾಲಯದ ವಿದ್ವಾನ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವರು

ಇದೇ ತಾ ೧ರಲ್ಲಿ ಶ್ರೀ| ಎಂ ಎನ್ ಭಂಡಾರಿಗಳು ಪೋಲೀಸ್ ಆಫೀಸು ಮ್ಯಾನೇಜರರ ಚಾರ್ಜನ್ನು ವಹಿಸಿರುವರು.

ಮಂಗಳೂರು ಮುನಿಸಿಪಾಲಿಟಿಯ ಚೆಯರ್‌ಮೇನರಾದ ಡಾ| ವಿಟ್ಠಲ್ ಶೆಟ್ಟರಿಗೆ ಛಕ್ರವರ್ತಿಯವರ ಜನ್ಮದಿನೋತ್ಸವದ ದಿನ "ರಾವ್ ಬಹದ್ದೂರ್" ಎಂಬ ಬಿರುದು ದಯಪಾಲಿಸಲ್ಪಟ್ಟಿದೆ.

ಜಿಲ್ಲಾ ಕಲೆಕ್ಟರರಾದ ಮಿ| ಇ. ಎಮ್. ಗೋವರು ರಜೆ ಮುಗಿದು ತಾ ೪ನೇ ದಿನ ಚಾರ್ಜು ವಹಿಸಿರುವರು, ಅವರ ಬದಲಿಗಿದ್ದ ರಾವ್ ಬಹದ್ದೂರ್ ಎ ವೆಂಕಟರಾಮ್ ಅಯ್ಯರರು ಮಲಬಾರಿಗೆ ಹೋದರು.

ಮುನಿಸಿಪಲ್ ಕೌನ್ಸಿಲಿನ ಒಂದು ಸಭೆಯು ತಾರೀಕು ೧೦ನೇ ದಿನ ಸಂಜೆ ೫-೩೦ಕ್ಕೆ ಅದರ ಕಚೇರಿಯಲ್ಲಿ ಜರಗಲಿರುವುದು

ಮುಂಬಾಯಿಯ ಕೊಂಗ್ರೆಸ್ ಕೆಲಸಗಾರರಾದ ಶ್ರೀಮತಿ ಮಣಿಬೆನ್ ಕಾರಾ, ಸೇಟ್ ತಯಾಬ್ಜಿ ಮತ್ತು ಬೊಂಬೈ ಕ್ರಾನಿಕಲಿನ ಸಂಪಾದಕರಾದ ಮಿ| ಎಸ್ ಎ ಬ್ರೆಲ್ವಿಯವರ ಸನ್ಮಾನಾರ್ಥವಾಗಿ ಶ್ರೀಮತಿ ಕಮಲಾದೇವಿಯವರು ಒಂದು "ಅಟ್ ಹೋಮ್"ನ್ನು ತಾ ೪ರಲ್ಲಿ ಜರಗಿಸಿದರು.

ಗಾಣಿಗ ಸಮಾಜದವರಲ್ಲಿ ಪ್ರಥಮರಾಗಿ ಲಂಡನ್‌ನಲ್ಲಿ ತನ್ನ ಎಫ್ ಆರ್ ಸಿ ಎಸ್ ಪದವಿಯನ್ನು ಪಡೆದು ಮಂಗಳೂರಿಗೆ ಹಿಂದಿರುಗಿದ ಮೂರ್ತಿ ಗೋಪಾಲ ಕೃಷ್ಣಯ್ಯರವರ ಸನ್ಮಾನಾರ್ಥವಾಗಿ ಇದೇ ತಾ. ೩ರಲ್ಲಿ ಪಾಂಡೇಶ್ವರ ಮುನಿಸಿಪಲ್ ಶಾಲಾ ಕಟ್ಟಡದಲ್ಲಿ ರಾವ್ ಬಹದ್ದೂರ್ ಎನ್ ಎನ್ ಸುವರ್ಣರವರ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದರು

ಸುಮಾರು ೭ ವರ್ಷಗಳಿಂದ ಬೋಳೂರು ಮುನಿಸಿಪಾಲಿಟಿ ಆಯುರ್ವೇದ ಧರ್ಮಾಸ್ಪತ್ರೆಯಲ್ಲಿ ಡಾಕ್ಟರರಾಗಿದ್ದ ಶ್ರೀ| ಐ ಕೆ ಪಿ ಶರ್ಮ ಇವರು ಇದೇ ತಿಂಗಳ ತಾ. ೧ರಿಂದ ಬೆಪ್ಪು ಮುನಿಸಿಪಲ್ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟಿರುವ ನಿಮಿತ್ತ—ಇಷ್ಟರ ತನಕ ಪೆಂಟ್ಲೆಂಡ್‌ಪೇಟೆಯಲ್ಲಿದ್ದ ಅವರ ನಿವಾಸಗೃಹವನ್ನು ಬೋಳಾರ ಮಾರಿಗುಡಿಯ ದಕ್ಷಿಣಕ್ಕಿರುವ ಬಾವಿಕಟ್ಟೆಯ ಹತ್ತಿರಕ್ಕೆ ವರ್ಗಾಯಿಸಿಕೊಂಡಿರುವರು ಆದುದರಿಂದ ಮುಂದಕ್ಕೆ ಅವರನ್ನು ನೋಡಲಪೇಕ್ಷಿಸುವವರು ಬೆಪ್ಪು ಮುನ್ಸಿಪಲ್ ಆಸ್ಪತ್ರೆಯಲ್ಲಿ ಅಥವಾ ಅವರ ನಿವಾಸಗೃಹದಲ್ಲಿ ಬಂದು ನೋಡಬಹುದು

ಜೋಧಪುರದಲ್ಲಿ ಅಸಿಸ್ಟಾಂಟ್ ಇಂಜಿನೀಯರರಾಗಿರುವ ರಾ| ಮುಕ್ಕೆಗೆ ಆನಂದರಾಯರ ಪತ್ನಿ ಸೌ| ವರದಾಬಾಯಿಯವರು ಭಾಷಾ ವಿಷಯವಾಗಿ ಸಂಸ್ಕೃತವನ್ನು ತೆಗೆದುಕೊಂಡು ಮದ್ರಾಸ್ ಯುನಿವರ್ಸಿಟಿಯ ಬಿ ಎ ಪರೀಕ್ಷೆಯಲ್ಲಿ ಈ ಸಾರೆ ತೇರ್ಗಡೆ ಹೊಂದಿರುವರು, ಈಕೆಯು ಇಲ್ಲಿಯ ಎಡ್ವೋಕೇಟ್ ರಾ| ಬೈಂದೂರು ಆನಂದರಾಯರ ತಂಗಿಯಾಗಿದ್ದು ಮಂಗಳೂರಿನವರೇ ಎಂಬುದು ತುಂಬಾ ಸಂತೋಷ

ಶ್ರೀ ಎ ಬಿ ಶೆಟ್ರ ಪುತ್ರಿ ಶ್ರೀಮತಿ ಸುಶೀಲ ಎನ್ ಚೌಟ ಡಾ| ಬಿ ರಾಮಪ್ಪಶೆಟ್ರ ಪುತ್ರಿ ಶ್ರೀಮತಿ ಹೇಮಲತಾ ಎಸ್ ಶೆಟ್ಟಿ ಮತ್ತು ಶ್ರೀ| ಸರಾಫ್ ರಾಮಯ ಶೆಟ್ರ ಪುತ್ರಿ ಶ್ರೀಮತಿ ಪದ್ಮಾವತಿ ಇವರು ಬಿ ಎ ಪರೀಕ್ಷೆಯಲ್ಲಿ ಪಾಸಾಗಿರುವರೆಂದು ತಿಳಿದುಬರುತ್ತದೆ ಶ್ರೀಮತಿ ಸುಶೀಲ ಎನ್ ಚೌಟ ಇವರು ಇಂಗ್ಲೀಷಿನಲ್ಲಿ ಸೆಕೆಂಡ್ ಕ್ಲಾಸ್ ಮತ್ತು ಫ್ರೆಂಚಿನಲ್ಲಿ ಫಸ್ಟ್ ಕ್ಲಾಸ್, ಶ್ರೀಮತಿ ಹೇಮಲತಾ ಎಸ್ ಶೆಟ್ಟಿ ಇವರು ಇಂಗ್ಲೀಷಿನಲ್ಲಿ ಸೆಕೆಂಡ್ ಕ್ಲಾಸ್, ಫ್ರೆಂಚಿನಲ್ಲಿ ಫಸ್ಟ್‌ಕ್ಲಾಸ್ ಮತ್ತು ಚರಿತ್ರೆಯಲ್ಲಿ ಸೆಕೆಂಡ್ ಕ್ಲಾಸ್ ಪಾಸಾಗಿರುವರು

ಪುತ್ತೂರು ತಾಲೂಕಿನ ವಿಟ್ಲದ ಅರಸರಾದ ಶ್ರೀ ಲಕ್ಷ್ಮೀನಾಥ ಸ್ವಾಮಿಜಿಯವರಿಗೆ ರಾವ್ ಸಾಹೇಬ್ ಬಿರುದು ಸಿಕ್ಕಿರುವುದು

ಪೆರಡಾಲ:—ಇಲ್ಲಿಯ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ಸಂಸ್ಕೃತ ಮತ್ತು ಕನ್ನಡ ಉಭಯ ಭಾಷೆಗಳಲ್ಲಿ ಪ್ರೌಢ ಶಿಕ್ಷಣವನ್ನು ಹೊಂದಿದ ಶ್ರೀಯುತ ಕಯ್ಯಾರ ಕಿಂಞಣ್ಣ ರೈ ಇವರು ತಮ್ಮ ಎಳೇ ವಯಸ್ಸಿನಲ್ಲಿಯೇ ಮದ್ರಾಸು ಯುನಿವರ್ಸಿಟಿಯ ವಿದ್ವಾನ್ (ಸಂಸ್ಕೃತ ಮತ್ತು ಕನ್ನಡ) ಪರೀಕ್ಷೆಯಲ್ಲಿ ಉತ್ತಮ ತರಗತಿಯಲ್ಲಿ ಉತ್ತೀರ್ಣರಾಗಿರುವರೆಂದು ತಿಳಿಸಲು ತುಂಬಾ ಸಂತೋಷವೆನಿಸುತ್ತದೆ. ಬಂಟರ ಯಾನೆ ನಾಡವ ಸಮಾಜದಲ್ಲಿ ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಲ್ಲಿ ಇವರೊಬ್ಬರೇ!

ಕುಂದಾಪುರ:— ಈ ತಾಲೂಕಿನ ಹಳ್ಳಾಡಿ ಹರ್ಕಾಡಿ ಬೋರ್ಡು ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವವು ಕುಂದಾಪುರ ರೇಂಜಿನ ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರರಾದ ಎಚ್ ಸಂಜೀವರಾಯರ ಅಧ್ಯಕ್ಷತೆಯಲ್ಲಿ "ಚಂದ್ರಹಾಸ" ನಾಟಕದೊಂದಿಗೆ ವಿಜೃಂಭಣೆಯಿಂದ ಜರಗಿತು.

ತಾಲೂಕುಗಳಿಂದ.

ಕಾರ್ಕಳ—ಸ್ವಸಮಾಜದ ಏಳಿಗೆಗಾಗಿ ಅವಿಶ್ರಾಂತವಾಗಿ ಶ್ರಮಿಸುತ್ತಿರುವ ಶ್ರೀ ಪದ್ಮಶಾಲಿನೈಕ್ಯ ಸಮಾಜ ಸೇವಾ ಯುವಕಸಂಘದ ಪುಸ್ತಕಭಂಡಾರಕ್ಕೆ ನೆಲ್ಲಿಕಾರು ಪೇಟೆಯ ಅಧ್ಯಾಪಕರೂ ಸುಪ್ರಸಿದ್ಧ ಲೇಖಕ ಮತ್ತು ಪ್ರಕಾಶಕರೂ ಆದ ಶ್ರೀಯುತ ಎಸ್. ಎಸ್ ಜೈನಿಯವರು ಈಗಾಗಲೇ ಹಲವು ಉಪಯುಕ್ತ ಪುಸ್ತಕಗಳನ್ನಿತ್ತು ಅಲ್ಲದೆ ಇನ್ನೂ ವಾಗ್ದತ್ತವಿತ್ತು ಪ್ರೋತ್ಸಾಹಿಸಿರುವರು. ಶ್ರೀಯುತರ ಈ ತರದ ಆದರ್ಶ ಔದಾರ್ಯ ಕಷ್ಟರತೆಗಳಿಗಾಗಿ ಸೇವಾಸಂಘದ ಪರವಾಗಿ ಸಂಘದ ಕಾರ್ಯದರ್ಶಿಯವರು ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಈ ಮೂಲಕ ಅರ್ಪಿಸುತ್ತಾರೆ.

ಅಖಿಲ ಭಾರತ ರಾಷ್ಟ್ರಸಭೆಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರು ಅಪ್ಪಣೆಕೊಡಿಸಿದಂತೆ ಇಲ್ಲಿಯೂ ತಾ ೧೯—೫—೩೯ರ ದಿನ ಸಾಯಂಕಾಲ ಸ್ವರಾಜ್ಯಮೈದಾನಿನಲ್ಲಿ ವಕೀಲ ಪಿ ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯಾಗಿ, ಅದರಲ್ಲಿ ಸಾರ್ವಜನಿಕರ ಪರವಾಗಿ ಶ್ರೀ| ಕೆ ಗಣಪತಿ ಶೆಣೈಯವರೂ ಕಾರ್ಕಳ ತಾಲೂಕು ಕಾಂಗ್ರೆಸ್ ಕಮಿಟಿಯ ಪರವಾಗಿ ಶ್ರೀಗಳಾದ ಕೆ ಲಕ್ಷ್ಮಣ ಕುಡ್ವ ಮತ್ತು ಎಮ್ ಎಸ್ ಅಧಿಕಾರಿಗಳೂ ಸೂಚಿಸಿ ಅನುಮೋದಿಸಿ ಸಮರ್ಥಿಸಿದಂತೆ ಯಾವ ತರದ ವಿಚಾರಣೆಯೂ ಇಲ್ಲದೆ ನೂರಾರು ಮಂದಿ ಬಂಗಾಳದ ತರುಣರನ್ನು ಸ್ಥಾನಬದ್ಧ ಕೈದಿಗಳನ್ನಾಗಿ ಮಾಡಿದ ಸರಕಾರದ ವರ್ತನೆಯನ್ನು ಖಂಡಿಸಿ ಕೈದಿಗಳ ಕುಟುಂಬದೊಡನೆ ಸಹಾನುಭೂತಿಯನ್ನು ತೋರಿಸುವ ಮತ್ತು ಆ ಕೈದಿಗಳನ್ನು ಕೂಡಲೇ ಬಿಡುಗಡೆಮಾಡಬೇಕು ಅಥವಾ ವಿಚಾರಣೆಗೆ ಗುರಿಪಡಿಸಬೇಕೆಂದು ಕೇಳುವ ನಿರ್ಣಯವು ಸರ್ವಾನುಮತದಿಂದ ಮಂಜೂರಾಯಿತು.

ಇದೇ ಜೂನ್ ತಿಂಗಳ ತಾ ೧೫ರ ಒಳಗಾಗಿ ಕಾರ್ಕಳ ತಾಲೂಕಿನಲ್ಲಿ ಕನಿಷ್ಟಪಕ್ಷ ೨೦೦೦ ಮಂದಿಯಾದರೂ ಕಾಂಗ್ರೆಸ ಮೆಂಬರರಾಗಬೇಕೆಂಬ ನಿಯಮವಾಗಿರುವುದರಿಂದ ಸದಸ್ಯರನ್ನು ಸೇರಿಸುವ ಕಾರ್ಯವು ತೀವ್ರಗತಿಯಿಂದ ನಡೆಯುತ್ತಲಿದೆ ಸ್ವಯಂಸೇವಕರು ತುಂಬಾ ಸಾಹಸಪಡುತ್ತಿರುವರು.

ಶಿರ್ವ—ಇಲ್ಲಿಯ ಶ್ರೀ ದತ್ತಾತ್ರೇಯ ಗ್ರಂಥಮಾಲೆಯ ವಾರ್ಷಿಕೋತ್ಸವವೂ ಶ್ರೀ ದತ್ತಾತ್ರೇಯ ನಾಟಕ ಸಂಘದವರು ಆಡಲಿಚ್ಛಿಸಿದ "ವಿಷಮ ವಿವಾಹ" ಎಂಬ ನಾಟಕವೂ ಕಾರಣಾಂತರಗಳಿಂದ ಆಗೋಸ್ತು ತಿಂಗಳಿಗೆ ಮುಂದರಿಸಲ್ಪಟ್ಟಿರುವುದು

ಉಡುಪಿ— ಕಿರಿಯರ ಪ್ರಪಂಚದ ಸಂತೋಷಕೂಟವು ತಾರೀಕು ೨೯—೩—೩೯ನೇ ಶನಿವಾರ ಸಂಜೆ ೬ ಗಂಟೆಗೆ ಮುಕುಂದ ಭಾಷಾಮನೆಯ ಹೊರ ಅಂಗಣದಲ್ಲಿ ಸೇರಿತು ಡಾಕ್ಟರ್ ಮಾಧವಪೈ ಎಮ್ ಬಿ ಬಿ ಎಸ್. ಇವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು ಕಿರಿಯರ ಪ್ರಪಂಚದ ಕಾರ್ಯದರ್ಶಿಯವರಾದ ಶ್ರೀ| ಹೊನ್ನಯ್ಯ ಶೆಟ್ಟರು ಇಂದಿನ ಕೂಟವನ್ನು ಕರೆದುದರ ಉದ್ದೇಶವನ್ನೂ ಕಿರಿಯರ ಪ್ರಪಂಚದ ಉಚ್ಚ ಧ್ಯೇಯಗಳೇನೆಂಬುದನ್ನೂ ಸುರಸವಾಗಿ ವಿವರಿಸಿ ಹೇಳಿ ಯೋಗಿಯೋ? ಭೋಗಿಯೋ? ನಾಟಕದಲ್ಲಿ ಪಾತ್ರವಹಿಸಿದ ಸ್ತ್ರೀಪುರುಷರಿಗೆ ಧನ್ಯವಾದಗಳನ್ನಿತ್ತು ಉಪಕಾರಸ್ಮರಣೆಮಾಡಿದರು ಆದಾಗಿ ಹಾಜರಿದ್ದ ಶ್ರೀಗಳಾದ ಕೊರ್ಡೆಲ್ ಶ್ರೀನಿವಾಸರಾವ್, ಎಸ್ ಯು ಪಣಿಯಾಡಿ ಕೆ ಎಸ್ ಕಾರಂತರೇ ಮೊದಲಾದವರು ಕಿರಿಯರ ಪ್ರಪಂಚದ ಕಾರ್ಯದಕ್ಷತೆಯನ್ನು ಪ್ರಶಂಸಿ ಮಾತನಾಡಿದರು. ನಾಟಕದಲ್ಲಿ ಸುಲೋಚನಾ ಸುಂದರಿ ಮತ್ತು ಮೀನಾಕ್ಷಿ ಪಾತ್ರಗಳನ್ನು ವಹಿಸಿದ [illegible]ಯರಿಗೆ ಸೀರೆಗಳು ಪಾರಿತೋಷಕವಾಗಿ ಅಧ್ಯಕ್ಷರಿಂದ ಕೊಡಲ್ಪಟ್ಟವು ಯೋಗಾನಂದನ ಪಲ್ಲಾಲ್ ಸುಬ್ರಹ್ಮಣ್ಯನ ಪಾತ್ರವಹಿಸಿದ ಶ್ರೀ| ಯು ಎಸ್ ಭಟ್ಟರು ಸ್ತ್ರೀಯರ ಪರವಾಗಿ ನಾಲ್ಕು ಮಾತುಗಳನ್ನಾಡಿದ ಬಳಿಕ ಅಧ್ಯಕ್ಷರ ಕಾಲೋಚಿತ ಭಾಷಣವಾಯಿತು

ಉಡುಪಿಗೆ ಮ್ಯುನಿಸಿಪಾಲಿಟಿ ಬೇಡ ಎಂಬ ಮನವಿಯೊಂದು ೫೦೦ಕ್ಕೆ ಮೇಲ್ಪಟ್ಟ ಪಟ್ಟಣಿಗರ ಸಹಿಗಳೊಡನೆ ಕೂಡಿ ತಯಾರಾಗಿದೆ. ಇದರ ನಕಲುಗಳನ್ನು ಮಾನ್ಯ ಮದ್ರಾಸ್ ಸರಕಾರಕ್ಕೂ ಲೋಕಲ್‌ಬೋರ್ಡ ಇನ್ಸ್‌ಪೆಕ್ಟರಿಗೂ, ಜಿಲ್ಲಾ ಕಲೆಕ್ಟರರಿಗೂ ಜಿಲ್ಲಾ ಪಂಚಾಯತ ಆಫೀಸರರಿಗೂ ಡಿಸ್ಟ್ರಿಕ್ಟ್‌ಬೋರ್ಡ ಪ್ರೆಸಿಡೆಂಟರಿಗೂ ಕಳುಹಿಸುವ ಏರ್ಪಾಡು ಸಹ ಮಾಡಲಾಗಿದೆ.

ಹಿಂದೂ ಮತಗಳ ಮಸೂದೆಯ ಕುರಿತು ಡಾಕ್ಟರ್ ಸಾಕ್ಷ್ಯವನ್ನೀಯಲು ಉಪಮಂಡಲಕ್ಕೆ ಹೋಗಿ ಹಿಂತಿರುಗಿದ ಶ್ರೀ| ವಕೀಲ್ ರಾಮಕೃಷ್ಣರಾಯರು ಈ ಮಸೂದೆಗೆ [illegible]ರಿಗೆ ವಿರುದ್ಧವಿದೆಯೆಂದೇ ಅಭಿಪ್ರಾಯಪಡುತ್ತಾರೆ

ಶ್ರೀಯುತ ಪಾಂಗಾಳ ಮಂಜುನಾಥ ನಾಯ್ಕರೂ ಅವರ ಸಹೋದರರೂ ಅವರ ಸ್ವರ್ಗಸ್ಥರಾದ ತೀರ್ಥರೂಪರ ಹೆಸರಲ್ಲಿ ಜಿ. ಹ ಸಂಘಕ್ಕೆ ರೂ ೧೦೦ ದಾನವಿತ್ತು, ಮತ್ತು ಅವರ ಸ್ಮರಣಾರ್ಥವಾಗಿ ಹತ್ತು ವರ್ಷಗಳ ತನಕ ಪ್ರತಿವರ್ಷ ಅಕ್ಕಿ ಮುಡಿ ೧೦ರಂತೆ ಕೊಟ್ಟುಕೊಂಡು ಬರುವುದಾಗಿ ಭಾಷೆಕೊಟ್ಟಿರುವರು ಆ ಪೈಕಿ ರೂಪಾಯಿ ೧೦೦ನ್ನು ಸಂಘವು ನಿಶ್ಚಯಿಸಬಹುದಾದ ಯಾವುದಾದರೊಂದು ಬೇಂಕಿನಲ್ಲಿಟ್ಟು ಶ್ರೀ ವೆಂಕಟ್ರಮಣಸ್ವಾಮಿ ಹಾಯರ್ ಎಲಿಮೆಂಟರಿ ಶಾಲೆ (ಕಟಪಾಡಿ) ಯಲ್ಲಿ ಕಲಿಯುವ ಹರಿಜನ ಮಕ್ಕಳ ಅಭಿವೃದ್ಧಿಗಾಗಿ ಸ್ವರ್ಗಸ್ಥರ ಹೆಸರಲ್ಲಿ ಕೊಡಬೇಕಾಗಿಯೂ, ಅಕ್ಕಿಯನ್ನು ಜಿಲ್ಲೆಯಲ್ಲಿರುವ ಹರಿಜನರ ಉದ್ಧಾರಕ್ಕಾಗಿ ಉಪಯೋಗಿಸಬೇಕಾಗಿಯೂ ಕೇಳಿಕೊಂಡಿರುವರು ಅಂತೂ ಶ್ರೀಯುತರುಗಳ ಈ ತರದ ದಾನವು ಸ್ತುತ್ಯವೇ ಸರಿ ಆದಕ್ಕಾಗಿ ಅವರನ್ನು ಸಂಘದ ಕಡೆಯಿಂದ ಅಭಿನಂದಿಸುತ್ತೇವೆ ಎಂದು ಜಿ ಹ ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ

ಬೇಸಗೆಯ ರಜೆಯ ಕಾರಣ ಮುಚ್ಚಲಾಗಿದ್ದ ಕೋರ್ಟು ಶಾಲೆಗಳೂ ಇದೇ ತಾ ೪ಕ್ಕೆ ತೆರೆಯಲಾಗಿದೆ ಪರೀಕ್ಷಾ ಫಲಿತಾಂಶಗಳು ಉತ್ತಮ ರೀತಿಯಲ್ಲಿ ನಿಶ್ಚಯಿಸಲಾಗಿರುತ್ತಾ ಹೆಚ್ಚಿನಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುವರು

ಮಳೆಯ ಅಭಾವದಿಂದ ಇಲ್ಲಿ ಸೆಖೆಯ ಹೆಚ್ಚಿಗೆಯು ವಿಪರೀತವಾಗುತ್ತಿದೆ

ಕಾಂಗ್ರೆಸು ಸದಸ್ಯರನ್ನು ಸೇರಿಸುವ ಕೆಲಸ ಉಡುಪಿಯ ಆಜುಬಾಜಿನಲ್ಲಿ ಭರದಿಂದ ಸಾಗುತ್ತಿದೆ

ಮೂಲ್ಕಿ—ಕಳೆದ ತಿಂಗಳಲ್ಲಿ ಇಲ್ಲಿಯ ಎಕ್ಸೈಸ್ ಸಬ್ ಇನ್ಸ್‌ಪೆಕ್ಟರರಾದ ಮ| ರಾ ಎಸ್ ಕೆ ದಾಮೋದರನ್ ಇವರು ಇಲ್ಲಿಯ ಸಮೀಪ [illegible] ಗ್ರಾಮದ [illegible]ದಲ್ಲಿ ಹಿಡಿದ ಕಳ್ಳಭಟ್ಟಿಯ ಕೇಸ್ [illegible] ಮಂಗಳೂರ ಸಬ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ತಾ ೧—೬—೩೯ನೇ ದಿವಸ ತನಿಖೆ ನಡೆದು ಅಪರಾಧಿಗೆ ೬ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರಾಗಿ ತಿಳಿದುಬರುತ್ತದೆ ಈ ಅಪರಾಧಿಯು ಈ ಕಳ್ಳಭಟ್ಟಿಯಲ್ಲಿ ನಿಪುಣನು, ಇತ್ತೀಚೆಗೆ ಸುಮಾರು ಏಳು ಎಂಟು ವರ್ಷಗಳಿಂದ ಇಲ್ಲಿಗೆ ವರ್ಗವಾಗಿ ಬಂದ ಅಧಿಕಾರಿಗಳು ಯಾರೂ ಸದರಿಯವನ ಸ್ಥಳಕ್ಕೆ ಹೋಗದೆ ಅವನ ಕಳ್ಳಭಟ್ಟಿಯನ್ನು ಪತ್ತೆ ಹಿಡಿಯದೆ ಹೋದರೂ ಈಗಿನ ಸಬ್ ಇನ್ಸ್‌ಪೆಕ್ಟರರು ಮತ್ತು ಅವರ ಕಾನ್ಸ್ಟೇಬಲು ಬಹು ಪ್ರಯಾಸಪಟ್ಟು ಬಹು ಧೈರ್ಯದಿಂದ ಈ ತೋಡಮು ಎಂಬ ಕ್ರಿಸ್ತ್ಯನರ ಪ್ರದೇಶಕ್ಕೆ ಒಳಹೊಕ್ಕು ಈ ಕಳ್ಳಭಟ್ಟಿಯನ್ನು ಪತ್ತೆಹಿಡಿದು ಈ ಅಪರಾಧಿಗೆ ಶಿಕ್ಷೆಗೆ ಗುರಿಪಡಿಸಿದ್ದು ಬಹು ಶ್ಲಾಘನೀಯವಾದದ್ದು ಇವರು ಮುಲ್ಕಿಯಲ್ಲಿ ಅಬಕಾರಿ ರೂಲ್ಸಿಗೆ ವಿರೋಧವಾಗಿ ಮತ್ತು ತಮ್ಮ ಇಷ್ಟಾನುಸಾರವಾಗಿ ಬಹು ಕಾಲದಿಂದ ನಡೆಯುವ ಕೆಲವು ವ್ಯಕ್ತಿಗಳನ್ನು ತಕ್ಕುದಾದ ಶಿಕ್ಷೆಗೆ ಗುರಿಪಡಿಸಿದರು ಎಂಬುದಾಗಿ ಕೂಡ ತಿಳಿದುಬರುತ್ತದೆ

ಇಲ್ಲಿಯ ಸುಪ್ರಸಿದ್ಧರಾದ ಮೂಲ್ಕಿ ಕೋಟ್ಯಪ್ಪ ಪೂಜಾರಿ ಮತ್ತು ಅವರ ಮಗ ತ್ಯಾಂಪಣ್ಣ ಕರ್ಕೇರರು ಇದೇ ಸಬ್ ಇನ್ಸ್‌ಪೆಕ್ಟರ್ ಶ್ರೀ| ಎಸ ಕೆ ದಾಮೋದರರ ಮೇಲೆ ಸುಳ್ಳು ಅರ್ಜಿಯನ್ನು ಹಾಕಿ ನಿಷ್ಕಾರಣವಾದ ಅಪರಾಧಕ್ಕೆ ಗುರಿಪಡಿಸಿದ್ದ ಬಾಬಿನಲ್ಲಿ ಇಲಾಖೆಯಲ್ಲಿ ನಾಲ್ಕು ಐದು ತಿಂಗಳು ತನಿಖೆ ನಡೆದು, ಇವರು ತನ್ನ ಆಪಾದನೆಯನ್ನು ರುಜುಪಡಿಸಲು ಸಮರ್ಥರಿಲ್ಲದೆ ಹೋದ್ದರಿಂದ ಇವರು ಅಬಕಾರಿ ಲೈಸೆನ್ಸನ್ನು ಪಡೆಯಲು ಯೋಗ್ಯರಲ್ಲವೆಂಬುದಾಗಿಯೂ ಮತ್ತು ಇನ್ನು ಮುಂದಿನ ಏಲಮುಗಳಿಗೆ ನಿಲ್ಲಕೂಡದೆಂಬುದಾಗಿಯೂ ನಿರ್ಣಯಿಸಿ, ಅವರಿಬ್ಬರನ್ನು ಜಿಲ್ಲಾ ಕಲೆಕ್ಟರರು ಡಿಬಾರ್ ಮಾಡಿರುವರಾಗಿಯೂ ತಿಳಿದುಬಂದಿದೆ.

ಕಾಸರಗೋಡು—ಕಲ್ನಾಡ [illegible] ಬೋರ್ಡ್ ಎಲಿಮೆಂಟರಿ ಶಾಲೆಯ ನೂತನ ಶಾಲಾಪ್ರವೇಶ ಮತ್ತು ಶಾಲಾವರ್ಧಂತಿ ಸಮಾರಂಭವು ತಾ. ೨೯—೫—೩೯ರಲ್ಲಿ ಧನಹೊಂದಿದ [illegible] ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು.

ಚುಟುಕು ವಾರ್ತೆ

ಅಸ್ಸಾಂಗೋಪು ವಿಶ್ವವಿದ್ಯಾಲಯವಾಗಬೇಕೆಂದು ಕೌನ್ಸಿಲ್‌ನಲ್ಲಿ ಠರಾವಾಗಿದೆ.

ನೀಲಟೂನಲ್ಲಿ ಕೊಂಗ್ರೆಸ್ ಕರಪತ್ರಗಳನ್ನು ಹಂಚಿದ ಪಕಡದಾಖುಲು ಎಂಬವನನ್ನು ಸೆರೆಹಿಡಿದಿದ್ದಾರೆ

ಅಲಹಾಬಾದಿನಲ್ಲಿಯ ಮಜೂರರ ಮುಷ್ಕರದ ಫಲವಾಗಿ ಕೆಲವು ಕೈದುಗಳಾಗಿವೆ.

ತಿರ್ಚಿನಾಪಳ್ಳಿಯಲ್ಲಿ ಕಾರ್ಯನಿರತರಾಗಿದ್ದ ಸುಂದರ ರಾಮ ಅಯ್ಯರ್ ಎಂಬ ಸ್ಟೇಶನ್‌ಮಾಸ್ತರರು ಆಕಸ್ಮಿಕವಾಗಿ ಮೃತರಾದರು

ನಾಗಪುರದ ಎಂಪ್ರೆಸ್ ಮಿಲ್ಲಿನ ೩೦೦ ಕೆಲಸಗಾರರು ಮುಷ್ಕರ ಹಿಡಿದಿರುವರು

ಡಿಲ್ಲಿಯಲ್ಲಿ ಸಟ್ಟಾ ಆಡುವುದಕ್ಕಾಗಿ ೨೯ ಜನರ ಕೈದುಗಳಾಗಿವೆ

೧೮೯೮ರಿಂದ ೧೯೩೦ರ ವರೆಗೆ ಪ್ರಿವಿಕೌನ್ಸಿಲಿನ ಕರ ನೀಕರಾಗಿದ್ದ ಸರ್ ಆಲಮೆರಿಕ್ ಫಿಟ್ಸ್‌ರಾಯ್ ಎಂಬವರು ಕಾಲವಾದರು,

ತಾ ೩೧ನೇ ದಿನ ಮಹಾತ್ಮರು ಸಬರ್ಮತಿ ಜೈಲಿನಲ್ಲಿ ಗಫರ್ ಖಾನರನ್ನು ಸಂದರ್ಶಿಸಿದರು

ಕ್ವೆಟ್ಟಾದಲ್ಲಿ ಒಂದು ಮಣ್ಣು ದಿನ್ನೆಯಡಿಯಿಂದ ಒಂದು ಸಣ್ಣ ಕೈಯು ಹೊರಗೆ ಚಾಚುತ್ತಿತ್ತು. ದಿನ್ನೆಯ್ನಗೆಯಲು ಒಂದು ಮಗುವು ಅಳುತ್ತಿದ್ದಿತು

ಯಜಮಾನನ ತುಪಾಕಿಯೊಡನೆ ಆಡಿದ ಸಿದ್ದಾಪ ಕೆಲಸಗಾರನೊಬ್ಬನ ಕೈಯಿಂದ ಗುಂಡು ಹಾರಿ ಮತ್ತೊಬ್ಬ ಕೆಲಸದವನು ತೀರಿಕೊಂಡನು

ಲಾಹೋರಿನ ಅಗ್ನಿನಾಶಕ ಯಂತ್ರವನ್ನು ಪಟ್ಟಣದ ಮುನಸಿಪಾಲಿಟಿಯಿಂದ ಕದಿಯಲಾಯಿತು ಅಲ್ಲಿ ಹೋದಾಗ ಎಲ್ಲವೂ ಶಾಂತವಾಗಿತ್ತು.

ನದಿಯಾದಿನಲ್ಲಿ ಪಿ ಜಿ ಪಟೀಲರ ಸ್ಮರಣಾರ್ಥ ಹಣ ಗಿಸುವ ಒಂದು ಪ್ರೈಸ್ಕೂಲನ್ನು ಗಾಂಧಿಜಿಯವರು ತೆರೆದರು.

ಡಿಲ್ಲಿಯ ಲಾಲಾ ಲಕ್ಷ್ಮೀಚಂದರು ಸಕುಟುಂಬಿಕರಾಗಿ ಸಿನಿಮಾ ನೋಡಿ ಹಿಂದೆ ಬಂದಾಗ ಅವರ ಮನೆಯೆಲ್ಲಾ ಲೂಟಿಯಾಗಿದ್ದಿತು

ಸುಳ್ಳು ಬೋಂಡುಗಳನ್ನು ನಿಶ್ಚಯಿಸಿದ ವೆನಿಡಿಕ್ ಎಂಡ್ ಕೋ ಎಂಬ ವ್ಯಾಪಾರಿ ಸಂಸ್ಥೆಯ ಮೆನೆಜಿಂಗ್ ಡೈರೆಕ್ಟರರಿಗೆ ೩ ತಿಂಗಳ ಶಿಕ್ಷೆ ವಿಧಿಸಲಾಗಿದೆ.

ಜಸ್ಟಿಸ್ ಪಾರ್ಟಿಯವರ ನೇತೃತ್ವದಿಂದ ಮದ್ರಾಸಿನಲ್ಲಿ "ಎಡುಕಲೈ" ಎಂಬ ಪಕ್ಷ ಪತ್ರಿಕೆಯು ಹೊರಟಿದೆ

ತಿನ್ನವೆಲ್ಲಿ ಜಿಂಗಲ್ಪಟ್ಟು ದೇವಾಲಯ, ಪೊಡಕ್ಕುಲು, ಮಸಲೀಪಟಣ ಗುಂಟೂರುಗಳಲ್ಲಿ ವಿಶೇಷ ಕಿಚ್ಚಿಯ ಪರಿಣಾಮವಾಗಿ ಎದ್ದ ಊರಿನಿಂದ ಮುಖ ಮಾಡಿದ ಅನೇಕ ಮನೆಗಳು ಭಸ್ಮವಾದವು

ಮದ್ರಾಸಿನ ಮುರಲಿ ಮಾರ್ಗದ ಬಳಿ ನಾಗಯ್ಯ ಕೆಂಟವನ ನೀರಿಗೆ ಬೆಂಕಿ ತಗಲಿ ಸುಟ್ಟು ತೀರಿಕೊಂಡಳು

ಬೆನಾರೆಸ್ ಕ್ಲಬ್ ಸದಸ್ಯರು ಬರಂಗಾಲಲ್ಲಿ ಕೈಲಾಸ ಪರ್ವತವನ್ನು ಹತ್ತಲಿರುವರು

ಮದ್ರಾಸಿನಲ್ಲಿ ಸೈಕಲ್ ಟೀಕ್ಸನ್ನು ಕಡಮೆ ಮಾಡುವ ಚಳವಳಿಯು ಪ್ರಾರಂಭವಾಗಿದೆ

ಮುಂಬಾಯಿ.

ತಾ ೧೨—೫—೩೫ರಲ್ಲಿ ಜರಗಿದ ಮುಂಬಾಯಿ ನೊಗವೀರ ವ್ಯವಸ್ಥಾಪಕ ಮಂಡಳಿಯ ವಾರ್ಷಿಕ ಮಹಾಸಭೆಯಲ್ಲಿ ಮಂಜೂರಾದ (ಪ್ರಸ್ತು) ಠರಾವುಕ್ಕ ಗಾರರ್ಥ, ಸಂಬಂಧದ ಹೊಸ ಕ್ರಮನಿಬಂಧನೆಗಳನ್ನು ಪೈಢೀಕರಿಸುವುದಕ್ಕಾಗಿ ಇದೇ ಜೂನ್ ತಿಂಗಳ ತಾ ೯ನೇ ರವಿವಾರ ಅಪರಾಹ್ನ ೩ ಘಂಟೆ ಅಕ್ಕೆ ನಂಬ್ರು ೧೯೩ನೇ ಬೋರಿ ರಸ್ತೆಯಲ್ಲಿರುವ ಮೊಗವೀರ ರಾತ್ರಿ ಶಾಲಾ ಮಂದಿರದಲ್ಲಿ ಮಂಡಲಿಯ ಅಧ್ಯಕ್ಷರಾದ ಶ್ರೀಯುತ ಯು. ರಾಮರಾಯರ ಅಧ್ಯಕ್ಷತೆಯಲ್ಲಿ ಒಂದು ವಿಶೇಷ ಮಹಾ ಸಭೆಯನ್ನು ಜರಗಿಸಲು ನಿಶ್ಚೈಸಿರುವುದರಿಂದ ಸರ್ವ ಮೆಂಬರರೂ ಆ ದಿನ ತಪ್ಪದೆ ಹಾಜರಾಗಬೇಕಾಗಿ ಅಪೇಕ್ಷಿಸುತ್ತೇವೆಯೆಂದು ಮೊಗವೀರ ವ್ಯವಸ್ಥಾಪಕ ಮಂಡಳಿಯ ಕಾರ್ಯದರ್ಶಿಯವರು ಕೋರುತ್ತಾರೆ.

ಈ ವಾರದ ತಂತಿ ವಾರ್ತೆಗಳು:

ಕರೆನ್ಸಿಯನ್ನು ಸಾಗಿಸದುದಕ್ಕಾಗಿ ಶಿಕ್ಷೆ!

ಬರ್ಲಿನ್, ಮೇ, ೨೯

ಜರ್ಮನಿಯಿಂದ ಹೊರಗೆ ಕರೆನ್ಸಿಯನ್ನು ತೆರಿಗೆ ಕೊಡದೆ ಸಾಗಿಸಿದರೆಂದು ಫಾದರ್ ಎಷಿಕಾಸ್ ಎಂಬವರಿಗೆ ೧೫ ವರ್ಷಗಳ ಕಠಿಣ ಸಜೆಯಾಗಿದೆ. ೫ ವರ್ಷಗಳ ವರೆಗೆ ಸಿವಿಲ್ ಹಕ್ಕುಬಾಧ್ಯತೆಗಳು ಇವರಿಗಿಲ್ಲ. ೩,೫೦,೦೦೦ ಮಾರ್ಕುಗಳ ಜುಲ್ಮಾನೆಯೂ ಆಗಿದೆ. ಕೆಥೋಲಿಕ್ ಕ್ವಾಂಟಸ್ ಸೊಸೈಟಿಯ ಪಾಲುಗಳನ್ನು ವಶೀಕರಿಸಿದ್ದಾರೆ.

ರಾಜಾ ಸರ್ ಅಣ್ಣಾಮಲೈ ಚೆಟ್ಟಿಯಾರರು ತನ್ನ ಯುರೋಪ್ ಪ್ರವಾಸವನ್ನು ಮುಗಿಸಿ ನೊನ್ನೆ ಸ್ವದೇಶಕ್ಕೆ ಹಿಂದಿರುಗಿದರು

ನಟನಟಿಯರ ದಾಂಪತ್ಯ ವಿಚ್ಛೇದನ

ಲೊಸ್ ಎಂಜಲ್ಸ್

ಪ್ರಸಿದ್ಧ ಸಿನೆಮಾ ನಟನಾದ ಬ್ಯಾರಿಮೂರನ ಪತ್ನಿಯಾದ ಮಿಸ್ ಡೊಲೋರೆಸ್ ಕೌಸ್ಟೆಲ್ಲೋ ಎಂಬವರು ದಾಂಪತ್ಯ ವಿಚ್ಛೇದನಕ್ಕಾಗಿ ಅರ್ಜಿಹಾಕಿರುವರು. ಗಂಡನು ತನ್ನನ್ನು ಕ್ರೂರವಾಗಿ ಓಡಿಸುತ್ತಿರುವನೆಂದೂ ಅವಳ ಜೀವಕ ತನ್ನ ಎರಡು ಮಕ್ಕಳನ್ನು ತನಗೆ ಕೊಡಬೇಕಾಗಿ ಕೇಳಿಕೊಂಡಿರುತ್ತಾಳೆ

ತಾಜಾಮಹಾಲಿನ ಹೆಸರು ಹೋಯಿತು.

ಲಂಡನ್, ಜೂನ್, ೧.

ಜಯಪುರ ಸಂಸ್ಥಾನದ ಮಹಾರಾಜರು ಜಯಪುರದಲ್ಲಿ, ಶಿಲ್ಪಕಲೆಯಲ್ಲಿ, ತಾಜಮಹಾಲಿಗಿಂತ ಅದ್ವಿತೀಯವಾದ ಸೌಂದರ್ಯವನ್ನುಳ್ಳ ಮಹಲೊಂದನ್ನು ಕಟ್ಟಿಸುತ್ತಿದ್ದಾರೆ. ಇದರ ಹೆಸರು "ಮಾಯಾ ಪ್ರಸಾದ್" ವೆಂದು ಈ ಮಹಾಲಿಗೆ ೧೦೦೦ ಪ್ರವೇಶದ್ವಾರಗಳಿವೆ ೩೫೦ ಕಿಟಕಿಗಳಿವೆ. ಮಹಲಿನಲ್ಲಿಯ ಸ್ವಯಂಪಾಕಗೃಹದಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಆಹಾರವು ಸಿದ್ಧವಾಗುವ ವ್ಯವಸ್ಥೆಯುಂಟು. ಮಹಾರಾಜರು ಈಗ ಲಂಡನಿನಲ್ಲಿದ್ದು, ಈ ಮಹಾಲಿಗೆ ಬೇಕಾಗುವ ಅಮೂಲ್ಯ ವಸ್ತುಗಳನ್ನು ಸಂಗ್ರಹಿಸುತ್ತಿದ್ದಾರೆ

ಸಪ್ರೂರವರು ಮಂತ್ರಿ ಪದವಿಯನ್ನು ಸ್ವೀಕರಿಸುವುದಿಲ್ಲ.

ಲಂಡನ್, ಮೇ ೩೧

ರೂಟರ್ ಪ್ರತಿನಿಧಿಯು ಸರ್ ತೇಜ ಬಹದ್ದೂರ್ ಸಪ್ರೂರವರನ್ನು ಸಂದರ್ಶಿಸಿ, ವೃತ್ತಪತ್ರಿಕೆಯಲ್ಲಿ ಪ್ರಕಟವಾದಂತೆ ಸಪ್ರೂರವರು ಹಿಂದೂಸ್ಥಾನದ ಪ್ರಥಮ ಮುಖ್ಯ ಮಂತ್ರಿಯಾಗುವರೇ ಎಂದು ಕೇಳಿದರು. ಅದಕ್ಕೆ ಸಪ್ರೂರವರು. ಸರ್ವಥಾ ಇಲ್ಲ ಎಂದರು. "ಮತ್ತು ನಾನು ಶಾಸನ ಸಭೆಯ ಚುನಾವಣೆಗೂ ನಿಲ್ಲುವುದಿಲ್ಲ. ಅಥವಾ ನೇಮಿಸುವಿಕೆಯನ್ನು ಕೂಡಾ ಹಾಕುವುದಿಲ್ಲ" ಎಂದರು.

ಫ್ರಾಂಕೋ-ಸೋವಿಯಟ್ ಒಪ್ಪಂದದ ಮೇಲೆ ಜರ್ಮನಿಯ ವಿಮರ್ಶೆ

ಬೆರ್ಲಿನ್ ಜೂನ್ ೧

ರಷ್ಯಕ್ಕೂ ಫ್ರಾನ್ಸಿಗೂ ಆದ ಒಪ್ಪಂದವು ಲಾಕಾರ್ನೋ ಟ್ರೀಟಿ ಒಪ್ಪಂದಕ್ಕೆ ಸಂಪೂರ್ಣ ವಿರೋಧವಾಗಿರುವುದೆಂದು ಜರ್ಮನ್ ಸರಕಾರವು ತೀರ್ಮಾನಿಸಿರುತ್ತದೆ ಈ ತೀರ್ಮಾನವನ್ನು ಜರ್ಮನಿಯ ರಾಯಭಾರಿಯಾದ ಕ್ವಿಡಾರ್ಸೆಯವರು ಫ್ರೆಂಚ್ ಸರಕಾರಕ್ಕೆ ಒಪ್ಪಿಸಿರುತ್ತಾರೆ ಜರ್ಮನಿಯ ಹೇಳಿಕೆಯನ್ನು ಫ್ರೆಂಚ್ ಅಧಿಕಾರ ವರ್ಗದಲ್ಲಿ ನಿರಾಕರಿಸಿರುತ್ತಾರೆ. ಫ್ರೆಂಚ್ ಅಧಿಕಾರವರ್ಗದ ವಾದವೇನೆಂದರೆ—ಫ್ರಾಂಕೋ-ಸೋವಿಯಟ್ ಒಪ್ಪಂದವು ಲೋಕಾರ್ನೊ ಒಪ್ಪಂದದಿಂದ ಬೇರೆಯಾಗಿಲ್ಲ' ಎಂದು

ವಜ್ರಗಳು! —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ'ಸಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ 'ಎಕ್ಸ್‌ಟ್ರಾ ವ್ಹಾಹಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

Part Proprietors of —
Sri Krishna Mills & Co
Oil Manufacturers
Bunder, Mangalore

Bhagavan Ganesh Pai & Co
Copper Sheet & Twist
Merchants, Camp Bazar,
Cannanore

Representatives for the W. C.
M/s. A. & F Harvey
Cotton Spinners,
Tuticorin, Madura &c.
Guardian Assurance Co., Ltd.
(Incorporated in England)
Head Office: 66, King
William Street,
London, E. C. 4.

ಲಿಬರಲ್‌ರ ಸಹಕಾರ.

ಹಿಂದೇಶಾಂಗನೀತಿಯ ವಿಷಯ ತಾರೀಕು ೨೦ರಲ್ಲಿ ಕೊಮನ್ಸ್ ಸಭೆಯಲ್ಲಿ ವಿವಾದವು ನಡೆಯಿತು. ಮಿ ಹರ್ಬರ್ಟ್ ಸಾಮುವೇಲ್‌ರವರು ಮಾತನಾಡುತ್ತಾ "ವಿರೋಧ ಪಂಗಡದ ಲಿಬರಲ್ಲುಗಳು ವಿಮಾನಸೈನ್ಯವನ್ನು ಹೆಚ್ಚಿಸುವದಕ್ಕೆ ತೀರಾ ವಿರೋಧವಾಗಿರುವರು. ಆದರೆ ಈಗಿನ ಪರಿಸ್ಥಿತಿಯಲ್ಲಿ ವಿಮಾನಗಳ ಅಭ್ಯಾಸವನ್ನು ಹೊಂದದಿದ್ದರೆ ಸರಕಾರವು ತನ್ನ ಕರ್ತವ್ಯವನ್ನು ನೆರವೇರಿಸಿದರಾಗುವುದಿಲ್ಲ. ಇತರ ಯುರೋಪ್ಯ ರಾಷ್ಟ್ರಗಳು ಸೈನ್ಯಗಳನ್ನು ಹೆಚ್ಚಿಸುತ್ತಿರುವಾಗ, ನಮ್ಮ ದೇಶವು ಸುಮ್ಮನಿರುವುದು ತೀರಾ ಅಸಹನೀಯ. ಎಲ್ಲಾ ರಾಷ್ಟ್ರಗಳು ಕೂಡಾ ಸಮಾನತೆಯ ಮೇಲೆ ವಿಮಾನಸೈನ್ಯವನ್ನು ಹೊಂದಬೇಕೆಂದು ಒಟ್ಟರದು ಹೇಳಿರುವುದು ನ್ಯಾಯವಾದುದು" ಎಂದರು.

ಇಟಲಿ ಅಬಿಸೀನಿಯಾಗಳ ಅಂತಃಕಲಹ.

ಲಂಡನ್, ಮೇ ೩೧.

ಕೊಮನ್ಸ್ ಸಭೆಯಲ್ಲಿ ಮಿ ಲಾನ್ಸ್‌ಬರಿಯವರು ಇಟಲಿ ಅಬಿಸೀನಿಯಾ ಗಲಭೆಯ ಸಂಬಂಧವಾಗಿ ಮಿ ಎಡೆನ್ ಇವರನ್ನು ಪ್ರಸಂಶಿಸಿ ಭಾಷಣಮಾಡಿದರು ಮಿ ಎಡೆನ್‌ರವರು ಅದಕ್ಕಾಗಿ ವಂದನೆಯನ್ನರ್ಪಿಸಿ, ಉತ್ತರವಾಗಿ ಭಾಷಣಮಾಡುತ್ತಾ ಜಿನೇವದಲ್ಲಿ ನಡೆದ ಕಾರ್ಯಕಲಾಪಗಳ ವಿವರಗಳನ್ನು ತಿಳಿಸಿದರು ಲೀಗ್ ಕೌನ್ಸಿಲಿನಲ್ಲಾದ ಠರಾವು ಜ್ಯಾರಿಗೆ ಬಂದಿದೆಯೋ ಇಲ್ಲವೋ ಎಂಬುದನ್ನು ಲೀಗ್ ಕೌನ್ಸಿಲು ಪರಿಶೀಲಿಸಲು ಸದ್ಯದಲ್ಲಿಯೇ ಸೇರುವುದೆಂದೂ ಹಾಗೆ ನಡೆಯದಿದ್ದಲ್ಲಿ ಕೌನ್ಸಿಲು ಸರಿಯಾದ ಕಾರ್ಯಕ್ರಮವನ್ನು ಕೈಕೊಳ್ಳುವುದೆಂದೂ ತಿಳಿಸಿದರು ಇಟಲಿ ಅಬಿಸೀನಿಯಾ ಸ್ನೇಹ ಸೌಹಾರ್ದಕ್ಕೆ ಈ ಘಟನೆಯು ಧ್ರುವಮುಖ್ಯವಿದೆಯೆಂದು ಊಹಿಸಲ್ಪಟ್ಟಿದೆ

2000 ಜನರಿಗೆ ಮನೆಯೇ ಇಲ್ಲ! ಬೆಂಕಿಯ ಅನಾಹುತ!

ಎಟ್ಟಾರು, ಜೂನ್ ೧

ಎಟ್ಟಾರಿನ ದೆಂಡುಲೂರು ಎಂಬಲ್ಲಿ ಬೆಂಕಿಯಿದ್ದು ೩೫೦ ಮನೆಗಳಿದ್ದ ಸುಂದರ ಗ್ರಾಮವು ಸುಟ್ಟುಹೋಗಿ ೨ ಸಾವಿರ ಜನರಿಗೆ ಮನೆಯೇ ಇಲ್ಲದಂತಾಗಿದೆ ಅಕ್ಕಿ ದವಸಧಾನ್ಯಗಳು ಪೂರ್ಣವಾಗಿ ಭಸ್ಮೀಕೃತವಾದವು ಏಡಿಪಕ ವೆಂಕಟ್ರಾಮಯ್ಯನೆಂಬ ಬ್ರಾಹ್ಮಣರೊಬ್ಬರು ಅವರ ಭಾವನೆಂಟರೊಬ್ಬರೊಡನೆ ಬೆಂಕಿಗಾಹುತಿಯಾದರು ಒಬ್ಬ ಕೂಲಿಯ ಕೆಲಸಗಾರನೂ ಸುಟ್ಟು ಹೋಗಿರುವನು

ಗಿರಣಿಕೆಲಸಗಾರರ ಮುಷ್ಕರ

ನಾಗಪುರ, ಜೂನ್ ೪

ಇಲ್ಲಿಯ ಎಂಪ್ರೆಸ್ ಮಿಲ್ಲಿನಲ್ಲಿ ಕಳೆದ ಕೆಲವು ದಿನಗಳಿಂದ ಮುಷ್ಕರವು ನಡೆದಿರುವದ ಪರಿಣಾಮವಾಗಿ ಅಡಕೆತದಾರರು ಮಿಲ್ಲನ್ನು ಮುಚ್ಚಿರುವರು. ೧೫೦೦ ಮಂದಿ ಕೆಲಸಗಾರರು ಕೆಲಸವಿಲ್ಲದೆ ತಿರುಗಾಡುವಂತಾಗಿದೆ. ಆಲ ಕೆಲಸಗಾರರು ಮಿಲ್ಲಿನ ಗೇಟಿನೆದುರು ಸತ್ಯಾಗ್ರಹವನ್ನಾಚರಿಸುತ್ತಿದ್ದಾರೆ

ಇಂಡಿಯಾ ಬಿಲ್ಲು.

ಕೋಲಂಬಿಯ, ಜೂನ್ ೪

ಇನ್ನು ಕೆಲವು ತಿಂಗಳೊಳಗೆ ಇಂಡಿಯಾಬಿಲ್ಲು ಶಾಸನವಾಗಲಿರುವುದರಿಂದ ಕೊಂಗ್ರೆಸ್ಸಿನವರು ಶಕ್ತ ಚಳವಳಿಯನ್ನು ಹೂಡಿ ಮುಂದಿನ ಕೌನ್ಸಿಲು ಚುನಾವಣೆಗೆ ಸಿದ್ಧರಾಗಿರಬೇಕೆಂದು ಡಾ ಟಿ. ಪ್ರಕಾಶಂ ಇವರು ಭಾಷಣ ಮಾಡಿದರು.

40 ತಾಸುಗಳ ವಾರ.

ಜಿನೇವಾ, ಜೂನ್, ೪,

ಇಂಟರ್ನೇಶನಲ್ ಲೇಬರ್ ಕೊನ್ಫರೆನ್ಸಿನ ವ್ಯಾಲಿ ಕರು ವಾರಕ್ಕೆ ೪೦ ತಾಸುಗಳ ವಾರವನ್ನು ಜ್ಯಾರಿಗೆ ತರಲು ನಿರ್ಧರಿಸಿಲ್ಲವೆಂದೂ, ತಮ್ಮ ಪ್ರತಿನಿಧಿಗಳು ಆ ಕುರಿತಾದ ಚರ್ಚೆಯಲ್ಲಿ ಭಾಗವಹಿಸಬಾರದೆಂದೂ ಜಿನೇವದ ತಮ್ಮ ಸದಸ್ಯರುಗಳಿಗೆ ತಂತಿ ಕಳುಹಿರುವರು. ಅಮೇರಿಕಾ ಮತ್ತು ಇಟಲಿಯವರು ಮಾತ್ರ ಈ ಸಲಹೆಗಳನ್ನು ಲಕ್ಷಿಸುವುದಿಲ್ಲವೆಂದಿರುವರು

ಶ್ರೀ ಶೃಂಗೇರಿ ಜಹಗೀರಿಯ ಮಂಗಳ ವೈಭವ

ಕಳೆದ ಒಂದು ತಿಂಗಳಿಂದ ಈಚೆಗೆ ಶ್ರೀ ಜಗದ್ಗುರು ಚಂದ್ರಶೇಖರ ಭಾರತಿ ಸ್ವಾಮಿಗಳವರಿಗೆ ದೇಹಾಲಸ್ಯವೆಂದೂ, ಚಿತ್ತಭ್ರಮಣೆಯುಂಟಾಗಿದೆಯೆಂದೂ, ಯಾರೂ ಶ್ರೀಗಳವರ ದರ್ಶನ ಮಾಡಲು ಅವಕಾಶವಿಲ್ಲವೆಂದೂ ಒಂದು ವಾರ್ತೆಯು ಊರೆಲ್ಲಾ ಹಬ್ಬಿ ಶಿಷ್ಯ ಮಂಡಲಿಯವರಲ್ಲಿ ಒಂದು ತೆರನಾದ ವ್ಯಾಕುಲವುಂಟಾಗಿತ್ತು.

ಕಾರಣ. ಶ್ರೀ ಶ್ರೀಗಳವರು ಶ್ರೀಮಠದ ನೌಕರರುಗಳ ವಿಷಯದಲ್ಲಿಯೂ ಆಡಳಿತಗಳ ವಿಷಯದಲ್ಲಿಯೂ, ಮೇಲ್ವಿಚಾರಣೆ ಮಾಡುತ್ತಾ ಕೆಲವು ಬದಲಾವಣೆಗಳನ್ನು ಮಾಡಬೇಕೆಂದು ಇಲ್ಲಿಯ ತತ್ಕಾಲಿಕ ಸರ್ವಾಧಿಕಾರಿಗಳಿಗೆ ಅಪ್ಪಣೆ ಮಾಡಿದುದಾಗಿಯೂ, ಸದರಿ ಸರ್ವಾಧಿಕಾರಿಗಳವರು, ಶ್ರೀ ಶ್ರೀಗಳವರು ಖುದ್ದು ಅಪ್ಪಣೆ ಕೊಟ್ಟ ಮೇರೆ ಹುಕುಂ ಜಾರಿ ಮಾಡುತ್ತಿರುವುದಾಗಿಯೂ ಈ ಕೆಳಗೆ ಕಂಡಂತೆ ವರ್ಗಾವರ್ಗಗಳನ್ನು ಮಾಡಿರುವುದಾಗಿಯೂ ತಿಳಿದು ಬರುತ್ತದೆ

ವರ್ಗಾವರ್ಗಗಳು

೧ ಶ್ರೀ ಸನ್ನಿಧಾನದ ಅಂಗರಕ್ಷಕ ಪದವಿಗೆ ಶ್ರೀ ಶಾಸ್ತ್ರಿಗಳವರಿಂದ ನೇಮಕ ಮಾಡಲಾಗಿದ್ದ ಶ್ರೀ ಶಾಮಾ ಜೋಯಿಸರವರಿಗೆ ಇತ್ತಾಯದ ನಿವೃತ್ತಿಯನ್ನೂ ದಯಪಾಲಿಸಿದರು. ೨ ಶ್ರೀ ಶಾಸ್ತ್ರಿಗಳವರು ನೇಮಕ ಮಾಡಲಾಗಿದ್ದ ಮುಜರಾಯಿ ಪೇಷ್ಕಾರರನ್ನೂ ಸಂಸ್ಕೃತ ಪಾಠಶಾಲೆಯ ಮುಖ್ಯ ಅಧ್ಯಾಪಕರನ್ನಾಗಿಯೂ ನೇಮಿಸಿದರು ೩. ಹಿಂದಿನ ಮುಖ್ಯ ಅಧ್ಯಾಪಕರುಗಳಿಗೆ ವಿಶ್ರಾಂತಿಯ ಸುಖವನ್ನೂ ದಯಪಾಲಿಸಿದರು ೪ ಇಲ್ಲಿಯ ಶಾರದಾ ಬೇಂಕಿನ ಏಜಂಟ್ ಕುಮಾರರಾದ ಶ್ರೀ ಶೇಷಾದ್ರಿಯವರನ್ನು ಮುಜರಾಯಿ ಪೇಷ್ಕಾರ ಪದವಿಗೆ ನೇಮಕ ಮಾಡಿದರು. ಇನ್ನೂ ಅನೇಕ ಸಣ್ಣ ಸಣ್ಣ ಬದಲಾವಣೆಗಳು ಮಾಡಲಾಗಿವೆ ಎಂದು ತಿಳಿಯಬರುತ್ತದೆ

ಹಿಂದೀಯರಾದ ನಾವು ಹೇಗೆ ಮೋಸಹೊಂದುವೆವು!

ಓದಿರಿ – ದೀನರಾದ ನಮ್ಮ (ಹಿಂದೀಯರ) ಅಜ್ಞಾನವನ್ನು ವಿದೇಶೀ ಕಾರ್ಖಾನೆದಾರರು ಹೇಗೆ ಸದುಪಯೋಗ ಪಡಿಸಿಕೊಳ್ಳುವರೆಂಬುದನ್ನು ತಿಳಿದುಕೊಳ್ಳಲು– ಓದಿರಿ ಇದನ್ನು!—

ನೆಲಗಡಲೆ ಎಣ್ಣೆಯು ಬಾದಾಮಿ ಎಣ್ಣೆಯಾಗಿದೆಯೆಂದು ಗೊತ್ತೇ?

ನಮ್ಮ ದೇಶದಲ್ಲಿ "ಶುದ್ಧ ಲೂಕಾ ಬಾದಾಮಿ ಎಣ್ಣೆ" ಎಂಬ ಹೆಸರಲ್ಲಿ ಮಾರಾಟಮಾಡಲ್ಪಡುತ್ತಿರುವ ಎಣ್ಣೆಯು ಬಾದಾಮಿ ಎಣ್ಣೆಯಲ್ಲ, ನಮ್ಮ ದೇಶದಿಂದಲೇ ಒಯ್ದು ನೆಲಗಡಲೆಯಿಂದ ತೆಗೆದ ಶುದ್ಧ ನೆಲಗಡಲೆ ಎಣ್ಣೆಯಾಗಿದೆ. ("ಇಂಡಿಜಿನಸ್ ಡ್ರಗ್ ಒಫ್ ಇಂಡಿಯಾ" ಇದರ ಪುಟ ೫೪ನ್ನು ನೋಡಿ)

ವನಸ್ಪತಿ ತೈಲವಲ್ಲ – ಮೀನಿನ ತೈಲ! ತಿಳಿಯಿತೇ?

"ಇಂಪೀರಿಯಲ್ ಕೌನ್ಸಿಲ್ ಒಫ್ ಅಗ್ರಿಕಲ್ಚರಲ್ ರಿಸರ್ಚ್" ಇದರ "ಇಂಡಿಯನ್ ಓಯಿಲ್ ಕ್ರಶ್ಶಿಂಗ್ ಇಂಡಸ್ಟ್ರಿ ಕಮಿಟಿ"ಯ ತೃತೀಯ ಸಭೆಯಲ್ಲಿ, ಪ್ರಕೃತ ಪರದೇಶದಿಂದ "Edible Hardened Oil" (ಆಹಾರಕ್ಕುಪಯೋಗಿಸಬಹುದಾದ ತೈಲ) ಎಂಬ ಚೀಟನ್ನು ಹಚ್ಚಿಸಿ, ಪರದೇಶಗಳಿಂದ ಮತ್ಸ್ಯತೈಲವನ್ನು ಹಿಂದೂದೇಶಕ್ಕೆ ಆಮದು ಮಾಡಿ "ಸಸ್ಯತೈಲ" ವೆಂಬುದಾಗಿ ಮಾರಾಟಮಾಡುತ್ತಿರುವರೆಂದು ಬಯಲಾಯಿತು. ಆದರೆ,—

ಸತ್ತ ಹೆಗ್ಗಣಗಳ, ಬೆಕ್ಕುಗಳ, ನಾಯಿಗಳ ಮತ್ತು ದನ ಇತ್ಯಾದಿಗಳ ಕೊಬ್ಬಿನಿಂದಾಗುವ ಸಾಬೂನುಗಳು —

ಇವುಗಳಿಗೆ ಸರಿಗಟ್ಟುವಂತಹುದು ಮತ್ತಾವುದಿದೆ? ಯುರೋಪಿನಲ್ಲಿ ಮೃಗಗಳ ಕೊಬ್ಬನ್ನೂ ಮೀನು ಎಣ್ಣೆಯನ್ನೂ ಆಹಾರಕ್ಕಾಗಿ ಉಪಯೋಗಿಸುತ್ತಿರುವಲ್ಲಿ ಸಾಬೂನುತಯಾರಿಯಲ್ಲಿ ಉಪಯೋಗಿಸುವ ಹೆಚ್ಚಿನ ಕೊಬ್ಬುಗಳು ಸತ್ತ ಮೃಗಗಳ ಶರೀರಗಳಿಂದಲೂ, ವಧಾಖಾನೆಗಳಿಂದಲೂ, ರಸ್ತೆಗಳ 'ಕಚರಾ'ದಿಂದಲೂ, ಒಮ್ಮೊಮ್ಮೆ ನರದೇಹಗಳಿಂದಲೂ ದೊರಕಿಸಿಕೊಂಡಂಥವುಗಳಾಗಿವೆ (ಸರ್ ಎಫ್ ಎ ಟಾಲ್ಬೊಟರವರ "ಮಿಲ್ಲಿಯನ್ಸ್ ಫ್ರಾಮ್ ವೇಸ್ಟ್" ಎಂಬ ಗ್ರಂಥವನ್ನೋದಿರಿ)

ಗೊಡ್ರೆಜ್ ವನಸ್ಪತಿ ಸುಗಂಧಸಾಬೂನುಗಳ

ವಿಷಯವಾಗಿ, ಅದನ್ನುಪಯೋಗಿಸುವ ಪ್ರಸಿದ್ಧಪುರುಷರೇನು ಹೇಳುವರೋ ಓದಿರಿ —

ಕವೀಂದ್ರ ರವೀಂದ್ರ: — "ಗೊಡ್ರೆಜ್ ಸಾಬೂನುಗಳಿಗಿಂತ ಉತ್ತಮವಾದ ವಿದೇಶೀ ಸಾಬೂನುಗಳನ್ನು ನಾನು ಕಂಡಿಲ್ಲ ಇನ್ನು ಮುಂದೆ ಗೊಡ್ರೆಜ್ ಸಾಬೂನುಗಳನ್ನೆ ಉಪಯೋಗಿಸಲು ನಿರ್ಧರಿಸಿದ್ದೇನೆ "

ಕೆಲ ವರ್ಷಗಳ ಹಿಂದೆ **ಡಾ| ಅನ್ನಿಬಿಸೆಂಟರು** ತಮ್ಮ "ನ್ಯೂ ಇಂಡಿಯಾ"ದ ಪತ್ರಿಕೆಯಲ್ಲಿ, ಗೊಡ್ರೆಜ್ ಸಾಬೂನುಗಳು ಪ್ರಪಂಚದಲ್ಲಿ ಅತ್ಯುತ್ಕೃಷ್ಟವೆಂದು ಪ್ರಶಂಸಿಸಿದ್ದರು

ರಾಷ್ಟ್ರೀಯ ಮಹಾಸಭೆಯ ಮಾಜಿ ಅಧ್ಯಕ್ಷರಾದ ಡಾ| ಅನ್ಸಾರಿಯವರು — ಗೊಡ್ರೆಜ್ ಸಾಬೂನುಗಳ ವಿಷಯವಾಗಿ ಹೇಳುವರು —"ಗೊಡ್ರೆಜ್ ಸಾಬೂನುಗಳ ಉತ್ತಮ ಗುಣಗಳನ್ನು ಗುರುತಿಸಲು ನನಗೆ ಅತ್ಯಾನಂದವಾಗುತ್ತದೆ ನಾನ ಅವುಗಳನ್ನು ಕಳೆದ ೨ ವರ್ಷಗಳಿಂದಲೂ ಉಪಯೋಗಿಸುತ್ತಿದ್ದು, ಯುರೋಪಿನ ಯಾವ ಉತ್ತಮ ಸಾಬೂನುಗಳಿಗಿಂತಲೂ ಉತ್ಕೃಷ್ಟವೆಂಬುದನ್ನು ಮನಗಂಡಿದ್ದೇನೆ ಅವುಗಳು ಹಿಂದೂದೇಶದಲ್ಲಿ ಸಿದ್ಧವಾಗುತ್ತಿರುವುದಕ್ಕೂ ಅವುಗಳ ಉತ್ಕೃಷ್ಟತೆಯ ದೆಸೆಯಿಂದಲೂ ಹಿಂದೀಯರೆಲ್ಲ ಅವುಗಳನ್ನೇ ಉಪಯೋಗಿಸಬೇಕೆಂದು ನನ್ನ ಸಲಹೆ."

ಗೊಡ್ರೆಜ್ ಗಂಧದ ಸಾಬೂನು ಮತ್ತು ಶೇವಿಂಗ್ ಸ್ಟಿಕ್ } ಇವುಗಳನ್ನು ಉಪಯೋಗಿಸಿರಿ.

ಸೋಲ್ ಏಜಂಟರು:

ನಾದಿರ ಷಾ ಪ್ರಿಂಟರ್ ಎಂಡ್ ಕೊ, 165, ಬ್ರೋಡ್ವೇ, ಮದರಾಸು.

ಹೆಡ್ ಆಫೀಸು: ಮುಂಬಯಿ ಇತರ ಶಾಖೆಗಳು – ಕಲ್ಕತ್ತಾ, ಲಾಹೋರ್ ಮತ್ತು ಕರಾಚಿ

ವಿ. ಸೂ: ಗೊಡ್ರೆಜ್‌ರವರ ಹೆಸರಲ್ಲಿ ಮಾರಾಟವಾಗುತ್ತಿರುವ ಪಾರ್ಸೋಪ್ ಮತ್ತು ಇತರ (ಬಟ್ಟೆಯೊಗೆಯುವ) ಸಾಬೂನುಗಳಲ್ಲಿ ಗೋದ್ರೆಜರವರಿಗೆ ಸಂಬಂಧವಿಲ್ಲ

ಉತ್ತಮ ಬಾಳುವಿಕೆಯ ಮತ್ತು ಅಗ್ಗವಾದ ಮೋಟರ ಬಸ್ಸು ವ ಕಾರುಗಳ ಉಪಯೋಗದ ಸಾಮಾನುಗಳು.

Motor Accessories of Approved Manufacture Always in Stock.

Exide Batteries Uncharged	Rs. 20 – 0 – 0.
Fully Charged	Rs 24 – 0 – 0.
Genuine Lockheed Hydraulic Brake fluid Quart tins factory Sealed	Rs 2 – 8 – 0
Genuine Lockheed „ locally filled	Rs. 2 – 0 – 0.

All Hydraulic Brake parts held in stock and available at Bombay Prices less 5% discount.

Chevrolet Springs of approved American Make available at less than Bombay Prices.

Brake liners, Automobile lamp bulbs, Bronze bushings & bars, Bolts and Nuts of S. A. E. threads, Special tools, Drilling Machines, Spanner sets of all types

An Enquiry with us will save you money

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಕೊಡಿಯಾಲಬೈಲು, ಮಂಗಳೂರು.

The Canara Public Conveyance Co., Ltd., Kodialbail Mangalore.

ಜಪಾನಿನ ಅಭ್ಯುದಯ.

ಶ್ರೀ ಎಸ್. ಜಿ. ಶಾಸ್ತ್ರಿಯವರ ಅಭಿಪ್ರಾಯಗಳು.

ತಾಯುನಾಡಿನ ವಿಶೇಷ ಪ್ರತಿನಿಧಿಗಳು ಜಪಾನಿನಿಂದ ಈಗ ತಾನೇ ಹಿಂತಿರುಗಿದ ಶ್ರೀ ಎಸ್. ಜಿ. ಶಾಸ್ತ್ರಿಯವರೊಡನೆ ಜಪಾನಿನ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿದರು. ಅಲ್ಲಿನ ಜನಗಳ ದೇಶಾಭಿಮಾನ, ಕೈಗಾರಿಕೆಗಳ ಅಭಿವೃದ್ಧಿ ವಿದ್ಯಾಪ್ರಚಾರ, ಪತ್ರಿಕಾ ವ್ಯವಸಾಯ ಮುಂತಾದುವುಗಳ ಬಗ್ಗೆ ಶ್ರೀ ಶಾಸ್ತ್ರಿಯವರು ಅನೇಕ ವಿಷಯಗಳನ್ನು ತಿಳಿಸಿದರು ಅವರು ಹೇಳಿದ ಕೆಲವು ಮುಖ್ಯ ವಿಷಯಗಳನ್ನು ಇಲ್ಲಿ ಕೊಡಲಾಗಿದೆ

ಜಪಾನೀಯರು ಅತ್ಯಂತ ದೇಶಾಭಿಮಾನಿಗಳು ತಾವು ಹುಟ್ಟಿರುವುದು ಜಪಾನಿಗೆ, ಬಾಳುವುದು ಜಪಾನಿಗೆ, ಕೆಲಸ ಮಾಡುವುದು ಜಪಾನಿಗೆ, ಸಾಯಬೇಕಾದುದು ಜಪಾನಿಗೆ ಎಂಬ ಭಾವನೆಯು ಸಾರ್ವತ್ರಿಕವಾಗಿದೆ ಜಪಾನೀಯರು ಬಹಳ ವ್ಯವಹಾರ ಕುಶಲರು ಅವರಿಗೆ ಧರ್ಮಬುದ್ಧಿಯಿದೆ ದೈವಭೀತಿಯಿದೆ ಅವರ ಧರ್ಮವು ಜೀವನದೊಂದಿಗೆ ಬೆರೆತಿದೆ ನಮ್ಮ ಭಾರತೀಯರ ಹಾಗೆ ಧರ್ಮದ ಮೇಲು ಹೊದ್ದಿಕೆಯನ್ನು ಅವರು ಹೊದೆಯುವುದಿಲ್ಲ ಅವರ ನಡೆನುಡಿಗಳಲ್ಲಿ ಧರ್ಮವು ಬೆರೆತು ಹೋಗಿರುವುದು. ಈಶ್ವರನು ಜಪಾನನ್ನು ಒಂದು ವಿಶೇಷ ಉದ್ದೇಶಕ್ಕಾಗಿ ಸೃಷ್ಟಿಸಿದ್ದಾನೆ ಆ ಉದ್ದೇಶವನ್ನು ಪ್ರತಿಯೊಬ್ಬ ಜಪಾನಿಯನೂ ಸಾರ್ಥಕಗೊಳಿಸಬೇಕೆಂಬುದು ಪ್ರತಿಯೊಬ್ಬ ಜಪಾನೀಯನ ಮನಸ್ಸಿನಲ್ಲಿಯೂ ಇರುವುದು

'ಜಪಾನಿನಲ್ಲಿ ವಿದ್ಯಾಭ್ಯಾಸಕ್ಕೆ ಬಹಳ ಮುಖ್ಯವಾದ ಗಮನವನ್ನು ಕೊಡುತ್ತಾರೆ ಪ್ರಾಥಮಿಕ ವಿದ್ಯಾಭ್ಯಾಸದಿಂದ ಹಿಡಿದು ವಿಶ್ವವಿದ್ಯಾಲಯದ ಉನ್ನತ ವಿದ್ಯಾಭ್ಯಾಸದವರೆಗೂ ಸರ್ವವೂ ಸಮರ್ಪಕವಾಗಿದೆ ಜಪಾನಿನ ಅತ್ಯಂತ ಮೇಧಾವಿಗಳೂ ಪ್ರಾಜ್ಞರೂ ಆದವರು ಉಪಾಧ್ಯಾಯ ವೃತ್ತಿಯನ್ನು ಅವಲಂಬಿಸಿ, ಜನಾಂಗಕ್ಕೆ ಅಡಿಪಾಯವಾದ ಮಕ್ಕಳ ಶಿಕ್ಷಣದಲ್ಲಿ ತೊಡಗಿರುತ್ತಾರೆ ಜಪಾನಿನ ಪ್ರೈಮರಿ ಶಾಲೆಗಳಲ್ಲಿ ಅತ್ಯುನ್ನತ ಪದವೀಧರರು ಪಾಠ ಹೇಳುತ್ತಾರೆ ಅಲ್ಲಿನ ವಿದ್ಯಾಭ್ಯಾಸ ಪದ್ಧತಿಯು ಜಪಾನಿನ ಪರಿಸ್ಥಿತಿಗೆ ಅನುಗುಣವಾಗಿದೆ ಟೆಕ್ನಿಕಲ್ ವಿದ್ಯಾಭ್ಯಾಸಕ್ಕೆ ಮುಖ್ಯವಾದ ಗಮನಕೊಡುತ್ತಾರೆ

'ಜಪಾನಿನ ಕೈಗಾರಿಕೆಗಳು ಆಶ್ಚರ್ಯದಾಯಕವಾಗಿವೆ ಪ್ರಪಂಚದ ಮಾರ್ಕೆಟುಗಳನ್ನೆಲ್ಲಾ ತಮ್ಮ ಕೈಗಾರಿಕೆಗಳಿಂದ ತುಂಬಬೇಕೆಂಬುದು ಅವರ ಆಕಾಂಕ್ಷೆ ಅಲ್ಲಿಯ ಕೈಗಾರಿಕೆಯ ಮುಂಚೂಣಿಯಲ್ಲಿ ಒಗ್ಗಟ್ಟಿದೆ ಪರಸ್ಪರ ಸ್ಪರ್ಧೆಯಿದ್ದರೂ ಹೊರದೇಶಗಳ ವಿಷಯಕ್ಕೆ ಒಗ್ಗಟ್ಟನ್ನು ಪ್ರದರ್ಶಿಸುತ್ತಾರೆ ಮೋಟಾರ್ ಕಾರುಗಳು ಮುಂತಾದುವುಗಳ ಕೈಗಾರಿಕೆಯು ಬಹಳ ಮುಂದರಿಯುತ್ತಿದೆ ಅಲ್ಲಿನ ಸರಕಾರದವರು ಕೂಡ ಕೈಗಾರಿಕೆಗಳ ವಿಷಯದಲ್ಲಿ ಅತ್ಯಂತ ಆಸಕ್ತಿ ವಹಿಸುತ್ತಿದ್ದಾರೆ

'ಜಪಾನಿನವರ ಅಂತರ್ರಾಷ್ಟ್ರೀಯ ಜ್ಞಾನವು ಅಸಾಧಾರಣವಾದುದು. ಪ್ರತಿಯೊಬ್ಬ ಸಾಧಾರಣ ಪ್ರಜೆಯೂ ಯುರೋಪ್, ಅಮೆರಿಕಾ, ರಷ್ಯಾ ಮುಂತಾದುವುಗಳಲ್ಲಿ ನಡೆಯುವ ವಿದ್ಯಮಾನಗಳನ್ನು ಪ್ರತಿದಿನವೂ ಬಹಳ ಕುತೂಹಲದಿಂದ ವಿಮರ್ಶಿಸುತ್ತಾರೆ. ಅಲ್ಲಿನ ವರ್ತಮಾನ ಪತ್ರಗಳು ಆಶ್ಚರ್ಯಕರವಾಗಿವೆ. ಅತ್ಯಂತ ನವೀನ ಮುದ್ರಣ ವಿಧಾನಗಳು ಜಾರಿಯಲ್ಲಿವೆ. ಸಮಾಚಾರಗಳು ಟೆಲಿಫೋನ್ ಮೂಲಕ ಪ್ರಪಂಚದ ಇನ್ನೊಂದು ಮೂಲೆಯಿಂದ ಬರುತ್ತಿವೆ. ಅಲ್ಲಿನ ಅತ್ಯಂತ ಪ್ರಚಾರದ ಪತ್ರಿಕೆಯು ೨೦ ಲಕ್ಷ

'ನಮ್ಮ ಯುವಕರು ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡ್ ಮುಂತಾದ ಪಾಶ್ಚಾತ್ಯ ದೇಶಗಳಿಗೆ ಹೋಗುವಂತೆಯೇ ಇತ್ತ ಜಪಾನಿಗೂ ಹೋದರೆ ಬಹಳ ವಿಷಯಗಳನ್ನು ಕಲಿಯಬಹುದು ಜಪಾನು ಯುರೋಪಿನ ಯಾವ ದೇಶಗಳಿಗೂ ಈಗ ಹಿಂದೆ ಬಿದ್ದಿಲ್ಲ ವಯಸ್ಕರೂ ಕೂಡ, ಜಪಾನನ್ನು ನೋಡಿಕೊಂಡು ಬಂದರೆ ಬಹಳ ಪ್ರಯೋಜನವಾಗುವುದು ಅನೇಕ ಸಂಗತಿಗಳನ್ನು ತಿಳಿದುಕೊಳ್ಳಬಹುದು.

ಅನೇಕ ವಿಷಯಗಳಲ್ಲಿ ಜಪಾನಿಗೂ ಮೈಸೂರಿಗೂ ಹೋಲಿಕೆಯಿದೆ

'ನಮ್ಮ ಸರಕಾರವು ಪ್ರಜೆಗಳ ಕೈಗಾರಿಕೆ ಮುಂತಾದುವುಗಳನ್ನು ಅಭಿವೃದ್ಧಿಗೊಳಿಸಲು ಜಪಾನಿನ ಸರಕಾರದಂತೆಯೇ ಆತುರರಾಗಿದ್ದಾರೆ ಆದರೆ ನಮ್ಮ ಜನಗಳು ಮುಂದೆ ಬರಬೇಕು ಜಪಾನಿಯರಲ್ಲಿ ಕಂಡುಬರುವ ರಾಷ್ಟ್ರ ರಚನಾ ಗುಣಗಳು ನಮ್ಮಲ್ಲಿ ಮೂಡಿ ಬೆಳೆಯಬೇಕು

ಶ್ರೀ ಶಾಸ್ತ್ರಿಯವರ ವಶ ಜಪಾನಿನ ವಿಷಯವಾಗಿ ಇನ್ನೂ ಬಹಳ ಸರಕುಗಳಿವೆ ಅವನ್ನೆಲ್ಲಾ ಸೇರಿಸಿ ಅವರು ಕೆಲವು ಉಪನ್ಯಾಸಗಳನ್ನಿತ್ತರೆ ಅನೇಕರಿಗೆ ಉಪಯುಕ್ತವಾಗುವುದು

ಮೂಲ್ಕಿಯಲ್ಲಿ ಹರಿಜನರ ಮೇಲೆ ನಿರ್ಬಂಧ!

'ಮೂಲ್ಕಿ ಕೊ ಒಪರೇಟಿವ್ ಟೌನ್ ಬ್ಯಾಂಕ್ ಇದರಲ್ಲಿ ೩೦೦ಕ್ಕೆ ಮಿಕ್ಕಿ ಸದಸ್ಯರು ೧ರು. ಇವರಲ್ಲಿ ಹರಿಜನ ಮೆಂಬರರು ೩೧ ಬೀಲು ೨ ಪ್ರಂಡ ೩ ಕೈಯ ಈ ಈ ಬ್ಯಾಂಕಿನ ಮೂಲಧನವು ೩೦,೦೦೦ರೂಪಾಯಿ ಸಾಧಾರಣ ೮ ವರ್ಷಗಳಿಂದ ಈ ಹರಿಜನರು ಇದರ ಕಾಯಂ ಮೆಂಬರರು ಸಾಲ ಕೂಡ ಪ್ರತಿವರ್ಷ ಪಡೆಯುತ್ತಿದ್ದರು ಬೇಂಕಿನ ಕ್ರಮ ನಿಬಂಧನೆಗಳಿಗೆ ವಿರೋಧವಾಗಿ ನಡೆಯುತ್ತಿದ್ದಿಲ್ಲ ಇವರಿಗೆ ರಿಜಿಸ್ಟ್ರಿ ನೋಟೀಸು ಕೂಡಾ ಕೊಡುವ ಆವಶ್ಯಕತೆಯು ಬೀಳಲಿಲ್ಲ ಈ ಬೇಂಕ್ ಮೊದಲಿದ್ದುದು ಸಿದ್ದಣ್ಣ ಶೆಟ್ರ ಜವಳಿ ಅಂಗಡಿ ಮಾಳಿಗೆಯಲ್ಲಿ ಆಗ ಹರಿಜನರು ಈ ಬ್ಯಾಂಕಿಗೆ ಪ್ರವೇಶಿಸುತ್ತಿದ್ದರು ಈಗ ಈ ಬೇಂಕು ಇಲ್ಲಿಯ ತ್ರಾಜಾ ಮಹಾಲಿನ ಮಾಳಿಗೆಯಲ್ಲಿದೆ ಎಂದಿನಂತೆ ಈ ಹರಿಜನರು ಸಾಲಕ್ಕಾಗಿ ಅರ್ಜಿಮಾಡಿದರು ಅವರ ಅರ್ಜಿಗಳನ್ನೂ ಕೈಮೊಹರನ್ನೂ ಬೇಂಕಿನವರು ಸ್ವೀಕರಿಸಿದರು ಮಾತ್ರ ಅವರು ಬೇಂಕಿನ ಮಾಳಿಗೆಗೆ ಬರಬಾರದೆಂದು ಆಜ್ಞಾಪಿಸಲಾಯಿತು. ಅವರು ಬೀದಿ ಬೀದಿಗಳಲ್ಲಿ ಅಲೆದಾಡಬೇಕಾಯಿತು. ಒಬ್ಬ ಡೈರೆಕ್ಟರರ ಮೂಲಕ ಅಧ್ಯಕ್ಷರೊಡನೆ 'ಹರಿಜನ ಸದಸ್ಯರು ಒಳಗೆ ಬರಲು ಆಕ್ಷೇಪವಿದೆಯೇ?' ಎಂದು ಕೇಳಿಸಲಾಯಿತು. ಅವರು ಉತ್ತರವಾಗಿ 'ಹೌದು' ಎಂದರು. ಈ ವಿಚಾರವನ್ನು ಡೈರೆಕ್ಟರ್ಸ್ ಬೋರ್ಡು ಸಭೆಯಲ್ಲಿ ಇಡಲಾಯಿತು. ಬಹುಮತದಿಂದ ಹರಿಜನರು ಹಾಗೆ ಒಳಗ ಬರಕೂಡದೆಂದೂ ಅವಶ್ಯವಿದ್ದಲ್ಲಿ ಕ್ಲಾರ್ಕರು ಕೆಳಗೆ ಹೋಗಿ ಅವರೊಡನೆ ಮಾತನಾಡಬಹುದೆಂದೂ ರಠಾವು ಮಂಜೂರಾಯಿತು. ಆ ಹರಿಜನರ ಸಾಲದ ಅರ್ಜಿಗಳನ್ನು ತಿರಸ್ಕರಿಸಿದರು ಈ ಸಂಗತಿಯನ್ನು ಡೈರೆಕ್ಟರರಾದ ಶ್ರೀ ಸಿದ್ದ ಶೆಟ್ರು ಡಿಪ್ಯುಟಿ ರಿಜಿಸ್ಟ್ರಾರಿಗೆ ತಿಳಿಸಿದರು ಅವರು ಪಬ್ಲಿಕ್ ಆಫೀಸರರಾದುದರಿಂದ ಹರಿಜನರಿಗೆ ಯಾವ ಆತಂಕವನ್ನೂ ಉಂಟುಮಾಡದೆ ಅವರನ್ನು ಒಳಗೆ ಬಿಡಬೇಕೆಂದು ಹುಕುಂ ಕೊಟ್ಟರು ಈ ಮಧ್ಯೆ ಹರಿಜನ ಸದಸ್ಯರು ತಮ್ಮ ಸಾಲದ ಅರ್ಜಿಗಳನ್ನು ಪುನರಾಲೋಚನೆ ಮಾಡಿಕೊಳ್ಳಬೇಕಾಗಿ ಪ್ರಾರ್ಥಿಸಿದರು ೧ನೇ ತಾರೀಕಿನ ದಿನ ಡೈರೆಕ್ಟರರ ಸಭೆಯಲ್ಲಿ ಅವರ ಅರ್ಜಿಯನ್ನಿಟ್ಟರು ಹುಕುಮನ್ನು ರಿಕಾರ್ಡು ಮಾಡಿದರು ಅರ್ಜಿಯನ್ನು ಪುನರಾಲೋಚನೆ ಮಾಡಲು ಸಾಧ್ಯವಿಲ್ಲೆಂದರು. ಅವರ ಪಾಲು ಧಂಡವಾಳವನ್ನು ಅವರವರಿಗೆ ಹಿಂದೆ ಕೊಡಬೇಕೆಂದೂ ರಠಾವು ಮಂಜೂರಾಯಿತು' ಎಂದು ತಿಳಿಸಿ ನಮಗೊಂದು ಪತ್ರ ತಲಪಿದೆ. ಸಂಬಂಧಪಟ್ಟವರು ವಿಚಾರಿಸುವರಾಗಿ ಕೋರಿಕೆ (ಸಂ.)

[ಇಲ್ಲಿಯ ಉರ್ವ ಇಗರ್ಜಿಯ ಗುರುಗಳಾದ ಫಾದರ್ ಲಾಯನ್ಸ್‌ರವರು ಇಗರ್ಜಿಯ ಬಾವಿಯಿಂದ ಯಾರೂ ನೀರು ತೆಗೆಯಬಾರದಾಗಿ, ಕೈಲಾಟಿಗೆ ಬೀಗಹಾಕಿರುವರಾಗಿಯೂ, ಸುತ್ತುಮುತ್ತಲಿನ ನೀರಿನ ಅಭಾವದಿಂದ ಜನರು ಸಂಕಷ್ಟಪಡುತ್ತಿರುವಾಗ, ಯಥೇಷ್ಟ ನೀರು ಇರುವ ಈ ಬಾವಿಯಿಂದ ಯಾರೂ ನೀರು ತೆಗೆಯಬಾರದೆಂದು ಆತಂಕಿಸಿರುವುದು ಅತ್ಯಂತ ಖೇದಕರ ವಿಷಯವಿರುವುದಾಗಿಯೂ, ಈ ಬಗ್ಗೆ ಸಂಬಂಧಪಟ್ಟವರು ಜನರ ಮೇಲೆ ಕರುಣೆಯಿಟ್ಟು, ಗುರುಗಳಿಗೆ ಸರಿದಾರಿಯನ್ನು ಬೋಧಿಸಿ ಬಡವರನ್ನು ರಕ್ಷಿಸಬೇಕಾಗಿಯೂ ಕೇಳಿಕೊಂಡು ಒಂದು ಪತ್ರವು ನಮಗೆ ಬಂದಿರುತ್ತದೆ ಅದನ್ನಿಲ್ಲಿ ಪ್ರಕಟಿಸಲಿಲ್ಲ ಈ ಬಗ್ಗೆ ಸಂಬಂಧಪಟ್ಟವರು ವಿಚಾರಿಸಿ ಸತ್ಯಾಸತ್ಯತೆಗಳನ್ನು ತಿಳಿಯುವರಾಗಿ ಕೋರುತ್ತೇವೆ ಸಂಪಾದಕ]

---

6 ವರ್ಷಗಳ ವರೆಗೆ ಕಟಿವಾತವಿತ್ತು.

ಗುಣಮಾಡುವುದಕ್ಕಾಗಿ ಸಣ್ಣ ಸಂಪತ್ತನ್ನೇ ವ್ಯಯಿಸಲಾಯಿತು!

ಕ್ರುಶೆನ್ 'ಮಾನವರಿಗೊಂದು ವರ'ವೆಂದು ಹೇಳಿರುತ್ತಾರೆ

ಈ ಮನುಷ್ಯನ 6 ವರ್ಷಗಳ ವರೆಗೆ ಕಟಿವಾತದಿಂದ ಬಾಧಿಸಲ್ಪಟ್ಟಿದ್ದನು ಹಲವು ಔಷಧಿಗಳಿಗಾಗಿ ಚಿಕ್ಕ ಸಂಪತ್ತನ್ನೇ ವ್ಯಯಿಸಿದ ನಂತರ ಇವನು ಕ್ರುಶೆನ್ ಲವಣವನ್ನುಪಯೋಗಿಸಲಾರಂಭಿಸಿದನು ಮೂರು ವಾರಗಳೊಳಗೆ ಇವನು ನೂತನ ವ್ಯಕ್ತಿಯಾದನು ಇವನೀಗ ಹೀಗೆ ಅಭಿವಂದನೆ ಮಾಡುತ್ತಿರುವನು –

"6 ವರ್ಷಗಳ ವರೆಗೆ ನಾನು ಕಟಿವಾತ ಮತ್ತು ವಾತಗಳಿಂದ ಸಂಕಷ್ಟಪಡುತ್ತಿದ್ದೆನು ನಾನು ಔಷಧಿಗಳಿಗಾಗಿ ಸಣ್ಣ ಸಂಪತ್ತನ್ನೇ ವಿನಿಯೋಗಿಸಿದೆನು— ನಿರರ್ಥಕವಾಯಿತು ಕ್ರುಶೆನ್ ಲವಣವನ್ನು ಉಪಯೋಗಿಸೆಂದು ನನಗೆ ಹೇಳಲಾಯಿತು ಇಷ್ಟು ಅಗ್ಗವಾದ ಔಷಧಿಯು ಪರಿಣಾಮಕಾರಿಯಾದೀತೋ ಎಂಬ ನನ್ನ ಶಂಕೆಯು ಹೋದುದು ಇತ್ತೀಚೆಗೆ ಈಗ, ಮೂರು ವಾರಗಳ ಔಷಧಿ ಸೇವನೆಯಿಂದ ನಾನು ಹೊಸ ವ್ಯಕ್ತಿಯಾಗಿರುತ್ತೇನೆಂದು ಭಾಸವಾಗುತ್ತಲಿದೆ ಈಗ ನೋವಿನ ಬದಲಿಗೆ ಆನಂದದಿಂದಿದ್ದೇನೆ ಹಲವು ವರ್ಷಗಳಿಂದ ನಿದ್ರಿಸದಿರುವಂತೆ ನಿದ್ರಿಸುತ್ತಿದ್ದೇನೆ. ಮಾನವ ಕುಲಕ್ಕೆ ವರವನ್ನಾಗಿ ಈ ಔಷಧಿಯನ್ನು ತಯಾರಿಸಿದ ರಾಸಾಯನಿಕರಿಗೆ ನಾನು ನನ್ನ ಅಭಿವಂದನೆಗಳನ್ನು ಸಮರ್ಪಿಸುತ್ತೇನೆ

ಆರ್ ಟಿ



ಕಟಿವಾತ, ಸಂಧಿವಾತ ಮತ್ತು ವಾತವಾಯುಗಳು ಮೂತ್ರಕಲ್ಮಶವು ರಕ್ತದಲ್ಲಿ ಸಮ್ಮಿಳಿತವಾಗುವುದರಿಂದಾಗಿ ತಲೆಯೆತ್ತುತ್ತವೆ ಈ ವ್ರಣಗಳ ತೀಕ್ಷ್ಣತೆಯನ್ನು ಕ್ರುಶೆನ್ ಲವಣವು ಹೇಗೆ ಹೊಡೆದೋಡಿಸುತ್ತದೆಂಬುದನ್ನು ನೀವು ಪರಿಶೀಲಿಸುವಿರಾದರೆ, ಈ ಸಶಾಸ್ತ್ರೀಯ ಔಷಧಿಯು ಕಟಿವಾತವನ್ನು ಖಚಿತವಾಗಿಯೂ ನಿವಾರಿಸಬಹುದೆಂದು ಅಭಿಪ್ರಾಯಪಡುವಿರಿ

ಎಲ್ಲಾ ಕೆಮಿಸ್ಟರರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ ಕ್ರುಶೆನ್ ಸೋಲ್ಟ್ ದೊರೆಯುತ್ತದೆ.

ಶ್ರೀಮತಿ ಉಡುಪಿ ಲಕ್ಷ್ಮಿಬಾಯಿ

ಇವರ ಸುಮನೋಹರವಾದ ಗ್ರಾಮಫೋನ್ ಹಾಡು ಕೇಳದವರೇ ವಿರಳ.
ಆದರೆ ಅವರೇ ಪ್ರತ್ಯಕ್ಷ ಹಾಡುವುದನ್ನು ಕೇಳಿ ಆನಂದಿಸದವರೂ ವಿರಳ.
ಅವರೇ ಸ್ವತಃ ಇದೇ ತಾ 8ನೇ ಶನಿವಾರ ಸಂಜೆ
ಘಂಟೆ 6ರಿಂದ 9ರ ವರೆಗೆ
ಮಂಗಳೂರಿನ ಗಣಪತಿ ಹೈಸ್ಕೂಲಿನಲ್ಲಿ

ಸಂಗೀತ ಕಚೇರಿ ನಡೆಸುವರು.

ಟಿಕೇಟು ದರ. ರೂ 2, 1, ಆಣೆ 8 ಮತ್ತು 4.

WANTED

Energetic, Active and Influential men to work as organisers and Agents on very attractive terms in areas mentioned below—

1 Mysore, Hassan and Kadur districts
2. Coorg, South Canara, Shimoga and Chitaldrug districts
3 Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY

Shiromani Narayanacharya
Choukhamba Benares City

ಶಾಸ್ತ್ರಗಳೇ ಪೂರ್ವಿಕರು ಆರೋಗ್ಯರೇ ಅಥವಾ ಈಗಿನವರೇ, ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಸಹೋದರ ಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ... ಇವುಗಳೆಲ್ಲಾ ಆಗುವುವು ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಅರ್ಧ ಪ್ರಮಾಣದ ... 1ಕ್ಕೆ ಅಣೆ 100ದ ರೂ 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಅಣೆ 2ರಿಂದ ರೂ 5ರ ವರೆಗೆ ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ 300ರ ... 500ರ ವರೆಗೆ ಮತ್ತು ... 5-6-... 8 ಮುಖಗಳ ... 1ಕ್ಕೆ ಅಣೆ 400ರ ... 10-11 ಮುಖಗಳುಳ್ಳ ... 1ಕ್ಕೆ ರೂ 200ರ ... 300 ವರೆಗೆ 12 ... 14 ಮುಖದ ... 1ಕ್ಕೆ ರೂಪಾಯಿ 500ರ 1000 ವರೆಗೆ ...

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ ಬನಾರಸ್ (ಕಾಶಿ)

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ

... ಬಂಗಾರಕ್ಕಿಂತಲೂ ... ಗ್ಯಾರಂಟಿ ... ಉತ್ತಮವಾದ ... ಪಾಕೆಟ್ ಗಡಿಯಾರ ... ಗ್ಯಾರಂಟಿ ... ಬಂಗಾರದ ಪ್ಲೇಟ್ ... ಫೌಂಟನ್ ಪೆನ್ ಈ ಉತ್ಕೃಷ್ಟವು ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ ಕೊಡುವೆವು ... ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ.

ಶರ್ಮಾ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ ... S A ಕಲ್ಕತ್ತಾ

ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಡ್ ಸಾರ್ಸಪರಿಲ.
ಕೆಟ್ಟ ರಕ್ತಕ್ಕೆ ಪರಮೌಷಧ
... ವರ್ಷದ ಅನುಭವ
ಉಪಯೋಗಿಸಿದವರೇ ಹೇಳಿದ್ದಾರೆ
ಡಾ॥ ಗೌತಮ ರಾವ್ ಕೇಶವರವರ
ಫಾಸ್ಫರಸ್ ಗುಳಿಗೆಗಳು
...
ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್ ... ಮುಂಬಾಯಿ ...
... ಬೆಂಗಳೂರು
...

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಮ್ ... ಅವರ

ಸಂತಾನ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

... (Kannada text largely illegible) ...

ವಿಳಾಸ — ಸಂಜೀವಿನೀ ಔಷಧಾಲಯ ... S M C

Kanara Watch Works, Mangalore.
Suppliers of Standard W... Pocket ... Wrist ... various kinds of ... Quality and price ... Show Room and be satisfied.

The Popular Insurance Company, Ltd.

Head Office —MANGALORE, S India
The Pioneer Life Office of the West Coast.

A FEW PRESS OPINIONS

Established as recently as 1929 the Popular Insurance Co Ltd has already made considerable progress having at the end of 1934 a total business of over Rs 10 lakhs in force with a premium income of over Rs 32 000 The Life Fund of the Company stood at the same date at over Rs 50,000 The expenses of the office are moderate and mortality experience extremely favourable During the year 1934, the Company completed business of over Rs 5 40,000 with a premium income of over Rs 26 000 The first quinquennial valuation of the Company is in progress and the report of the Actuary is expected to be placed before the Directors of the Company before the end of May 1935 From the steady progress of the Company during the last five years and the economical and efficient management of its affairs it is not too much to hope that the valuation will disclose a very sound position

Indian Finance Review Calcutta

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್ — ಮಂಗಳೂರು — ... ವಿಮಾ ಕಂಪೆನಿಯವರು ... ಪ್ರಾಸ್ಪೆಕ್ಟಸ್ಸನ್ನು ಆಹ್ಲಾದದಿಂದ ಸ್ವೀಕರಿಸುತ್ತೇವೆ ... ಈ ಕಂಪೆನಿಯು ದಿನೇ ದಿನೇ ಅಭಿವೃದ್ಧಿ ಹೊಂದಿ ... ನಮ್ಮ ದೇಶದಿಂದ ... ಶಕ್ತಿಯುಳ್ಳದಾಗಲೆಂದು ಹಾರೈಕೆ

ರಾಷ್ಟ್ರಬಂಧು.

ಮಂಗಳೂರಿನಲ್ಲಿ ಸ್ಥಾಪಿತವಾಗಿರುವ ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿಯು ವರ್ಷ ವರ್ಷ ಊರ್ಜಿತಸ್ಥಿತಿಗೆ ಬರುತ್ತಿರುವುದು ಶ್ಲಾಘನೀಯವಾದ ವಿಚಾರ ಈ ಕಂಪೆನಿಯು ಸ್ಥಾಪಿತವಾದುದು ಐದು ವರ್ಷಗಳ ಹಿಂದೆ, ಅಂದಿನಿಂದ ಜೀವವಿಮೆ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಹೆಸರುವಾಸಿ ಪಡೆಯುತ್ತಲೇ ಇದೆ × × × × × ಈ ಕಂಪೆನಿಯ ಐದನೆ ವಾರ್ಷಿಕ ವರದಿಯು ತೃಪ್ತಿಕರವಾಗಿದೆ. ಕರ್ಣಾಟಕದ ಈ ಕಂಪೆನಿಯು ವರ್ಷ ವರ್ಷ ಅಭಿವೃದ್ಧಿ ಹೊಂದಲೆಂಬುದೇ ನಮ್ಮ ಹಾರೈಕೆ

ಪ್ರಜಾಮತ, ಮದರಾಸು.

Wanted Influential Agents in unrepresented areas on liberal terms.

ಸತ್ಕಾರ್ಯಕ್ಕೆ ದೇವರೇ ಹಣವನ್ನೊದಗಿಸಿಕೊಟ್ಟ ಕಥೆ!!

ಭೂಕಂಪದ ಅಪಶಕುನ.

ಮೊನ್ನೆ ಡಿಲ್ಲಿಯವರೂ, ಮೀರತ್ತಿನವರೂ ರಾತ್ರಿ ಆಕಾಶದಲ್ಲಿ ಒಂದು ವಿಚಿತ್ರ ನಕ್ಷತ್ರವನ್ನು ಕಂಡರು. ಕಳೆದ ವರ್ಷವೂ ಇದೇ ಸಮಯದಲ್ಲಿ ಅವರು ಈ ನಕ್ಷತ್ರವನ್ನು ಕಂಡಿದ್ದರು. ಮೊನ್ನೆ ಮಂಗಳವಾರ ಈ ಉಲ್ಕೆಯೊಂದು ಉತ್ತರಪೂರ್ವ ದಿಕ್ಕಿನಲ್ಲಿ ಮಿಂಚಿ ಹಾರಿತು. ಇಪ್ಪತ್ತು ನಿಮಿಷಗಳ ವರೆಗೆ ಒಂದು ವಿಚಿತ್ರ ನೀಲವರ್ಣದ ಆಕಾಶವನ್ನು ಕವಿದುಕೊಂಡಿತು. ಜ್ಯೋತಿಷ್ಯರು ಇದರಿಂದ ಅಪಶಕುನವನ್ನೇ ನಿರೀಕ್ಷಿಸು ತ್ತಿದ್ದರು. ಮಂಗಳವಾರ ಇಂತಹ ನಕ್ಷತ್ರವು ಕಂಡು ಬಂದುದರಿಂದ ಸಂಗ್ರಾಮವು ಕಲಿದೋರುವುದೆಂದೂ ಮಹಾ ಅನಾಹುತವು ನಡೆಯುವುದೆಂದೂ ಜೋಯಿಸ್ಯರು ತಿಳಿಸಿದರು (ಉಲ್ಕೆಯು ತೋರಿಬಂದ ಮರುದಿನ ಕ್ವೆಟ್ಟಾ ದಲ್ಲಿ ಭೂಕಂಪವಾಯಿತು)

ಸತ್ಕಾರ್ಯಕ್ಕೆ ದೇವರ ಸಹಾಯವಿದೆ.

ಎಂಬ ಹಿರಿಯರ ವಾಕ್ಯವನ್ನು ನೀವು ಕೇಳಿರಬಹುದು. ಹಿರಿಯರ ಮಾತಿನ ಮರ್ಯಾದೆಯನ್ನುಳಿಸುವುದಕ್ಕಾಗಿ ಇದೊಂದು ವೈಚಿತ್ರ್ಯವು ನಡೆದಿದೆ. ಫರಿದಾಬಾದಿನಲ್ಲಿ ಗುರುದ್ವಾರವನ್ನು ಕಟ್ಟುವುದಕ್ಕಾಗಿ ಪಂಚಾಂಗವನ್ನು ಅಗೆಯುತ್ತಿದ್ದರು. ಸುಮಾರು ೫೦ ಅಡಿಗಳಷ್ಟು ಅಗೆಯುತ್ತಿದ್ದಾಗ ಕೂಲಿಗಾರರಿಗೊಂದು ಕೊಪ್ಪರಿಗೆಯು ದೊರೆಯಿತು. ಅನೇಕ ಅಮೂಲ್ಯ ಆಭರಣಗಳೂ ಕೆಲವು ಭಂಗಾರದ ನಾಣ್ಯಗಳೂ ಅದರಲ್ಲಿದ್ದುವು. ಗುರುದ್ವಾರದ ವೆಚ್ಚಕ್ಕಾಗಿ ಚಡಪಡಿಸುತ್ತಿದ್ದ ರಚನಾಸಮಿತಿಯವರಿಗೆ ಈ ಐಶ್ವರ್ಯವು ದೊರೆತುದರಿಂದ ಮಹದಾನಂದವಾಗಿದೆ. ದುಡ್ಡಿನ ತಾಪತ್ರಯಕ್ಕೆ ಸಿಕ್ಕಿರುವ ತನ್ನನ್ನು ಶ್ರೀ ಗುರುವೇ ರಕ್ಷಿಸಿದನೆಂದು ಅವರು ಹೇಳುತ್ತಿರುವರು.

ಹುಚ್ಚುತನವೆಂದರೇನು?

ಅಪಾಯಕಾರಿಯಾಗಿ ವರ್ತಿಸುವುದು ಎಂದಿರಿಸಿದರೆ ಈ ಜಗತ್ತಿನಲ್ಲಿ ಹುಚ್ಚರಿದೇ? ಜರ್ಮನಿಯ ಕೆಲವು ಯಂತ್ರಶಾಸ್ತ್ರಜ್ಞರಿಗೊಂದು ವಿಚಿತ್ರ ಹುಚ್ಚು ಹಿಡಿದಿದೆ. ವೇಗದ ಹುಚ್ಚು ಎಂದು ನೀವು ಇದಕ್ಕೆ ಹೆಸರಿಡಬಹುದು. ೪೦,೦೦೦ ಬವನುಗಳಷ್ಟು ವೆಚ್ಚಮಾಡಿ ಒಂದು ಮೋಟರನ್ನು ಸಿದ್ಧಪಡಿಸಿ, ಸೋಟರು ಭೂಮಿಯ ಮೇಲೆ ಎಷ್ಟು ವೇಗದಿಂದ ಓಡುವುದೆಂದು ಲೆಕ್ಕ ಹಾಕಿರುವರಂತೆ. ಈ ಹಣವನ್ನು ಭೂಕಂಪದಲ್ಲಿ ಒಳಬಿದ್ದ ಜನರಿಗಾದರೂ ದಾನಮಾಡಿಕೊಡಬಾರದೇ?

ಇನ್ಷೂರೆನ್ಸಿನ ಪ್ರಯೋಜನ

"ಜೀವವಿಮೆಯನ್ನಿಡಿರಯ್ಯಾ" ಎಂದು ಯಾರಾದರೊಬ್ಬ ವಿಮಾ ಏಜಂಟರು ಹೇಳಿದರೆ ನೀವು ನಿಮ್ಮ ಎರಡು ಕಿವಿಗಳನ್ನೂ ಮುಚ್ಚಿಕೊಳ್ಳುವುದು ನಿಜ. ಆದರೆ ಜೀವವಿಮೆಯ ಪ್ರಯೋಜನವೇನೆಂದು ನಿಮಗೆ ತಿಳಿದಿರುವುದಿಲ್ಲ. ಲಂಡನಿನಲ್ಲಿ ಒಬ್ಬ ಸಿನೆಮಾ ನಟಿಯು ತನ್ನ ಕಾಲುಗಳನ್ನು ೧ ಲಕ್ಷ ಪವನುಗಳಿಗೆ ವಿಮಾ ಎತ್ತಿದ್ದಳು. ಮೊನ್ನೆ ಅವಳು ಒಂದು ಟೆಕ್ಕಿನ ಬಾಟಲನ್ನು ಅಕಸ್ಮಾತ್ ತುಳಿದುಬಿಟ್ಟಳು. ಚೆಕ್ಕು ಉರಿದದ್ದು ಅವಳ ಕಾಲಿಗೆ ಪರಚಿತು. ಈಗ ಈ ನಟಿಯು ಆ ಟೆಕ್ಕಿನ ಯಜಮಾನನ ಮೇಲೆ ೩೫,೦೦೦ ರೂಪಾಯಿಗಳ ನಷ್ಟಕ್ಕೆ ದಾವೆ ಹೂಡಿರುವಳು.

ಶ್ರೀಮಂತ ಭಿಕ್ಷುಕ.

ಎಲ್ಲರೂ ಭಿಕ್ಷುಕರೆಂಬ ನಾಮಕ್ಕರ್ಹರೇನಲ್ಲ. ಒಬ್ಬನ ಉಡಿಗೆತೊಡಿಗೆಗಳು ಅವನಿಗೆ ಭಿಕ್ಷುಕನೆಂಬ ಅಭಿದಾನವನ್ನೇ ಕೊಡಬಹುದು. ಆದರೆ ಅವನಲ್ಲಿ ತುಂಬಾ ಐಶ್ವರ್ಯವಿದ್ದರೆ ಆ ಹೆಸರು ಅವನಿಗೆ ಸಲ್ಲುವುದಿಲ್ಲ. ಎಂಥೆಂತಹ ಭಿಕ್ಷುಕರಿರುವರು ನೋಡಿ! ವೇಲೆಸ್ ಎಂಬಲ್ಲಿ ಒಬ್ಬ ಭಿಕ್ಷುಕನನ್ನು ಪೋಲೀಸರು ಹಿಡಿದರು. ಅವನ ಸೊಂಟದಲ್ಲಿ ಶೋಧನೆ ನಡೆಸಿದಾಗ ೩೦ ಇಡೀ ಪವನುಗಳು ದೊರೆತುವು. ಈ ಪವನುಗಳನ್ನು ಕೂಟಿಗೆ ತೆಗೆದು ಪೋಲೀಸರು ಕ್ರಯಬಾಳುವ ಉಡಿಗೆ ತೊಡಿಗೆಗಳನ್ನು ಪಡೆದು, ಆ ಭಿಕ್ಷುಕನನ್ನು ಶೃಂಗರಿಸಿ, ನನ್ನ ಸೈಕಲಿನಲ್ಲಿ ಪ್ರಥಮ ದರಗತಿಯಲ್ಲಿ ಕುಳ್ಳಿರಿಸಿ ನನ್ನ ಸೆಟ್ಟಿಗೆ ಅವನ ಮನೆಗೆ ಕಳುಹಿಸಿದರು.

ದಾಹವಿಲ್ಲದ ಮನುಷ್ಯ.

ಬಾಯಾರಿಕೆಯೇ ಇಲ್ಲದ ಜನರು ಈ ಲೋಕದಲ್ಲಿಲ್ಲವೆಂದು ಯಾರಾದರೂ ಹೇಳಿದರೆ "ಹೌದೆಂದು" ನೀವು ಹೇಳಬಹುದು. ಆ ವಿಷಯವು ಸುಳ್ಳೆಂದು ಹೇಳುವ ನಾವು ಮಾತ್ರ ತಪ್ಪಲಾರೆವು. ಸಿಟ್ಲಿಂಗ ಎಂಬಲ್ಲಿ ಯೂಸುಫ್ ಕೋಜಿರ್ ಎಂಬೊಬ್ಬ ವೃದ್ಧನು ಮೊನ್ನೆ ಪ್ರಾಣಬಿಟ್ಟನು. ಸಾಯುವಾಗ ಇವನಿಗೆ ೧೨೬ ವರುಷ ಪ್ರಾಯ. ಸಾಯುವುದಕ್ಕೆ ೫೫ ವರ್ಷಗಳ ಮೊದಲು ಇವನು ನೀರನ್ನು ಕುಡಿಯುವ ಅಭ್ಯಾಸವನ್ನೇ ನಿಲ್ಲಿಸಿದ್ದನಂತೆ. ಅಂದಿನಿಂದ ಒಂದು ಗುಟುಕು ನೀರನ್ನಾದರೂ ಕುಡಿಯಲಿಲ್ಲವಂತೆ. ಇವನ ನಾಲ್ಕನೇ ಮಗನು ಇವನ ೧೦೨ನೇ ವಯಸ್ಸಿನಲ್ಲಿ ಜನ್ಮಿಸಿದನು!

ಪೆಟ್ಟಿಗೆಯೊಳಗಣ ಪೋಲೀಸ.

ಇನ್ನು ಮುಂದೆ ನಮಗೆ ಪೋಲೀಸರ ಪೆಟ್ಟಿನ ಆಗತ್ಯವು ಬೀಳಲಾರದು. ತ್ರಿಜೂರಿಗಳನ್ನು ಕಾಯುವವರಂತೂ ಬೇಡವೇ ಬೇಡ! ಮೊನ್ನೆ ಇಂದೋರಿನಲ್ಲಿ ವಸ್ತುಪ್ರದರ್ಶನವೊಂದು ಜರಗಿತು. ಒಬ್ಬ ಕಬ್ಬಿಣದ ಕೆಲಸಗಾರನು ಒಂದು ತ್ರಿಜೂರಿಯನ್ನು ಪ್ರದರ್ಶಿಸಿದನು. ಈ ಪೆಟ್ಟಿಗೆಯಿಂದ ಯಾರು ಹಣವನ್ನು ತೆಗೆಯತ್ತಾರೋ ಅವರ ಗುರುತನ್ನು ಈ ಪೆಟ್ಟಿಗೆಯು ತನ್ನೊಳಗಣ ಯಂತ್ರದಲ್ಲಿ ಮಾಡಿಕೊಳ್ಳುವುದು. ಯಾವ ಕಳ್ಳನೇ ಇರಲಿ; ಹೇಗೆ ತಪ್ಪಿಸಿ ಬಾಗಿಲು ತೆರೆದರೂ ಅವನ ಪೂರ್ಣ ಪ್ರತಿಬಿಂಬವು ಈ ಪೆಟ್ಟಿಗೆಯೊಳಗೆ ಸದ್ದಿಲ್ಲದೆ ಸಿಕ್ಕಿಬೀಳುತ್ತದೆ.

ಮದುವೆಯ ಹುಚ್ಚು

ಎಷ್ಟೋ ಜನರಿಗಿದೆ. ಈ ವರ್ಷ ಒಂದು ಮದುವೆಯಾಗಿ, ಮರುವರ್ಷ ಆ ಪತ್ನಿಯನ್ನು ಬಿಟ್ಟು, ಮಗದೊಂದು ವರ್ಷ ಮತ್ತೊಂದು ವಿವಾಹವಾಗುವವರಿದ್ದಾರೆ. ಮುಲ್ತಾನಿನಲ್ಲಿ ಒಬ್ಬಳನ್ನು ಹಿಡಿದಿರುವರು. ಇವಳ ಕತೆ ಹೀಗಿದೆ:—ಒಂದು ಕಡೆಯಲ್ಲಿ ವಿವಾಹವಾಗುವಳು. ಸ್ವಲ್ಪ ದಿನಗಳ ವರೆಗೆ ಗಂಡನೊಡನಿದ್ದು ನಗನಾಣ್ಯಗಳನ್ನೆತ್ತಿಕೊಂಡು ತನ್ನ ಸಂಗಾತಿಗಳೊಡನೆ ಪರಾರಿಯಾಗುವಳು. ಹೀಗೆ ಇವಳು ನಾಲ್ಕು ವಿವಾಹಗಳನ್ನಾಗಿ ಪರಾರಿಯಾದಳು. ಐದನೇ ಸಲ ಇವಳನ್ನೂ ಇವಳ ಸಂಗಾತಿಗಳನ್ನೂ ಸೆರೆಹಿಡಿದಿರುವರು.

ನಾವು ರಜೆ ಪಡೆಯಬಹುದು!

ಮನುಷ್ಯರಿಂದ ನಮ್ಮ ಕೆಲಸವನ್ನು ನಿರ್ಜೀವ ವಸ್ತುಗಳು ಮಾಡಲಾರಂಭಿಸಿದರೆ ನಾವು ರಜೆ ಪಡೆಯದೆ ಮಾಡುವುದಾದರೂ ಏನು? ಮಾರ್ಟಿನ್ ಶೀರರ್ ಎಂಬ ಮುದುಕನೊಬ್ಬನು ಒಂದು ಗಡಿಯಾರವನ್ನು ರಚಿಸಿರುವನು. ಈ ಗಡಿಯಾರವು ನಾವು ಕೇಳುವ ಪ್ರಶ್ನೆಗಳಿಗೆ ಸದುತ್ತರಗಳನ್ನೀಯುತ್ತದೆ. ಬೇರೊಂದು ಪದಗಳನ್ನು ಬಹು ಇಂಪಾಗಿ ಹಾಡುತ್ತದೆ. ೫೦೦೦ ಬಿಡಿ ತುಂಡುಗಳಿಂದ ಇದು ರಚಿಸಲ್ಪಟ್ಟಿದೆಯಂತೆ. ೧೦ ೦೦೦ ಪವನು ಬೆಲೆ ಇದೆ. ಎಲ್ಲಾ ಪ್ರಮುಖ ದೇಶಗಳಲ್ಲಿನ ಸರಿಯಾದ ವೇಳೆಯನ್ನಿದು ತೋರಿಸುತ್ತದೆ. ಈ ಮುದುಕನಿಗೆ ಬೇರೆ ಕೆಲಸವೇನು?

ಆದರ್ಶ ಅಧ್ಯಾಪಕ.

ಉಪಾಧ್ಯಾಯರು ಆದರ್ಶಗುಣ ಸಂಪನ್ನರಿರಬೇಕೆಂದು ಯಾರಾದರೂ ಹೇಳುವರು. ಆದರೆ ಆ ಹೇಳಿಕೆಯು ಸತ್ಯವಾಗುವುದು ಇದೆಯೋ? ತಿರುನೆಲ್ವೇಲಿ ಗ್ರಾಮದ ಬೋರ್ಡು ಶಾಲೋಪಾಧ್ಯಾಯರಾಗಿದ್ದ ಶ್ರೀ ಸಿ. ವಿ. ಕೃಷ್ಣಮೂರ್ತಿರಾವ್ ಎಂಬವರು ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ ಶೇಷಾದ್ರಿ ಅಯ್ಯಂಗಾರ್ ಎಂಬವರ ಮುಖದ ಮೇಲೆ ರಮ್ಯ ಹಸ್ತಕವನ್ನೆಸೆದು ಬೈದಿರುವರೆಂದೂ ಆ ಅಧ್ಯಾಪಕರಿಗೆ ಎರಡು ವಾರಗಳ ಸಜೆಯಾಯಿತೆಂದೂ ತಿಳಿದುಬಂದಿದೆ. ಆದರ್ಶ ಅಧ್ಯಾಪಕರಲ್ಲದೆ ಮತ್ತೇನು?

ಅಹಿಂಸಾ ಪರಮೋಧರ್ಮ

ಯುಗೋಸ್ಲೋವಿಯಾದ ಒಂದು ಹಳ್ಳಿಯಲ್ಲಿ ತೋಳಗಳು ಮಹಾ ಉಪದ್ರವವನ್ನು ಜನರಿಗೆ ಕೊಡುತ್ತಿದ್ದುವು. ಕುರಿಗಳ ಮಂದೆಯ ಮೇಲೆ ಬಿದ್ದು ಹಾನಿಯನ್ನುಂಟುಮಾಡುತ್ತಿದ್ದುವು. ಮೊನ್ನೆ ಒಂದು ತೋಳವು ಮಂದೆಯ ಮೇಲೆ ಬಿತ್ತು. ಹಳಬರು ಒಟ್ಟುಗೂಡಿ ತೋಳವನ್ನು ಹಿಡಿದರು. ಕೊಲ್ಲಬೇಕೆಂದಿದ್ದಾಗ ಒಬ್ಬನಿಗೆ ಜ್ಞಾನೋದಯವಾಯಿತು. "ನೀವದನ್ನು ಕೊಲ್ಲುವುದು ಬೇಡ. ಅದರ ಕುತ್ತಿಗೆಗೆ ದೊಡ್ಡದೊಂದು ಗಂಟೆಯನ್ನು ಕಟ್ಟಿರಿ" ಎಂದನು. ಅದೇ ಮೇರೆಗೆ, ಸರಪಣಿ ಹಾಕಿ ಅದರ ಕುತ್ತಿಗೆಗೊಂದು ಗಂಟೆಯನ್ನು ಕಟ್ಟಿ ಅದನ್ನು ಬಿಟ್ಟುಬಿಟ್ಟರು. ಈಗ ಎಲ್ಲಿ ಗಂಟೆಯ ಶಬ್ದವಾಗುತ್ತದೋ ಅಲ್ಲಿ ತೋಳಗಳಿವೆಯೆಂದು ಜನರಿಗೆ ತಿಳಿದು ಎಚ್ಚರದಿಂದಿರುತ್ತಾರೆ!

ವಿಚಿತ್ರ ಭೂಮಿ.

ಬಲೂಚಿಸ್ಥಾನವೆಂದರೆ ಮೊನ್ನೆ ಭೂಕಂಪವಾದ ದೇಶ. ಅಲ್ಲಿರುವ ಒಂದು ವಿಚಿತ್ರ ಪರ್ವತದ ಸುದ್ದಿ ಕೇಳಿ:— "ಕೋಹಿ ತಫ‌ತನ್" ಎಂಬ ದೊಡ್ಡ ಪರ್ವತವಿದೆ. ಈ ಪರ್ವತದ ಸುತ್ತಲೂ ನೂರು ಮೈಲು ವಿಸ್ತೀರ್ಣದಲ್ಲಿ ಯಾವ ಗಿಡಮರಗಳೂ, ಯಾವ ಪ್ರಾಣಿಪಕ್ಷಿಗಳೂ ಜೀವಿಸುವುದಿಲ್ಲ. ಅಲ್ಲಿಯ ಭೂಮಿಯಿಂದ ಒಂದು ವಿಚಿತ್ರ ಅಗ್ನಿಕಾರಕ ದ್ರವವು ಹೊರಗೆ ಬರುತ್ತಿರುವುದರಿಂದ ಹೀಗಂತೆ. ಸರಕಾರವು ತನ್ನ ಸೈನ್ಯವನ್ನು ಅಲ್ಲಿ ಹಲವು ಸಲ ಕಳಿಸಿತಾದರೂ ಈ ದ್ರವವು ಅವರನ್ನು ಸೋಲಿಸಿ ಬಿಟ್ಟಿತು.

ನಮ್ಮ ಹಿರಿಯರು.

—ಯಾರೆಂದು ನಮಗೆ ಗೊತ್ತೆ? ಇಲ್ಲ! ನಮ್ಮ ಅಜ್ಜನ ಅಜ್ಜನ ಪರಿಚಯವು ನಮಗಿಲ್ಲ. ಆದರೆ ೩೦,೦೦೦ ವರ್ಷಗಳ ಹಿಂದೆ ನಮ್ಮ ಅಜ್ಜಂದಿರಿದ್ದರೆಂದು ತೋರಿಸುವುದಕ್ಕಾಗಿ ಒಂದು ಸಂಗತಿ ನಡೆದಿದೆ. ಕೇಂಬ್ರಿಜಿನ ಮಿಸ್ ಡೊರೊತಿ ಗಾರೋಡ್ ಎಂಬವಳು ಪ್ಯಾಲೆಸ್ತೈನ್ ಮೌಂಟ್ ಕೆಮೆಲ್ ಎಂಬಲ್ಲಿ ಒಂದು ಅಸ್ಥಿಪಂಜರವನ್ನು ಕಂಡುಹಿಡಿದಿರುವಳು. ಇದು ೩೦ ಸಾವಿರ ವರ್ಷಗಳ ಹಿಂದೆ ಜೀವಿಸಿದ್ದ ಮನುಷ್ಯನ ಎಲುಬುಗಳಂತೆ! ಮನುಷ್ಯನಂತೆಯೇ ಇದ್ದಾನೆ! ನಾವು ಮೊದಲು ಕೋತಿಗಳಂತಿದ್ದೆವೆನ್ನುವವರು ತಪ್ಪೋ? ಸರಿಯೋ?

ನಮ್ಮವರ ಭಾಗ್ಯ.

ನಮ್ಮವರಲ್ಲಿ ವೈದ್ಯ ವೃತ್ತಿಯನ್ನು ಕಲಿಯುವವರು ಮುಂದಕ್ಕೆ ಉಪವಾಸಬೀಳುವುದು ಆಗತ್ಯವಿಲ್ಲ. ವೈದ್ಯರನ್ನು ಕರೆಯ ತ್ತಲೇ ಇರಲಿ ಏಕೆ ಗೊತ್ತೇ? ಹೈದರಾಬಾದಿನಲ್ಲಿ ಒಂದು ವಿಚಿತ್ರ ರೋಗವು ಹರಡಿದೆ. ಒಂದೆರಡು ದಿನಗಳ ವರೆಗೆ ಜ್ವರವು ಬರುತ್ತದೆ. ಆ ಮೇಲೆ ರೋಗಿಯ ತಲೆಯು ಫುಟ್ ಬೋಲಿನ ಹಾಗೆ ದೊಡ್ಡದಾಗುತ್ತದೆ. ಆ ಮೇಲೆ ಕಿವಿಗಳ ಗಡ್ಡೆಗಳಲ್ಲಿ ಎರಡು ದೊಡ್ಡ ಗುಡ್ಡೆಗಳು ಕಲೆಯುತ್ತವೆ. ಮೂಗಿನಿಂದ ರಕ್ತವು ಹೊರಗೆ ಬರುವುದು. ಎಂತಹ ರೋಗವೋ ಯಾರಿಗೂ ಗೊತ್ತಿಲ್ಲ. ಅಂತೂ ನಮ್ಮ ವೈದ್ಯರ ಪುಣ್ಯವೆನ್ನಿ!

ಅನುಕೂಲಶಾಸ್ತ್ರ

ಶಾಸ್ತ್ರಗಳಲ್ಲಿ "ಅನುಕೂಲಶಾಸ್ತ್ರ"ವೆಂಬುದಕ್ಕೆ ಮನುಧರ್ಮಶಾಸ್ತ್ರಕ್ಕಿಂತಲೂ ಹೆಚ್ಚು ಬೆಲೆ. ಅನುಕೂಲ ಶಾಸ್ತ್ರದ ಪ್ರಯೋಜನವಿದು: ಪಶ್ಚಿಮ ಹಾರ್ಟ್ಲಪೂಲೆಂಬಲ್ಲಿ ಅನ್‌ಫೊನ್ಸ್ ಅಲ್ಲಿಸನ್ ಎಂಬವನೊಬ್ಬನಿರುವನು. ಅಜನ್ಮಬಾಗಿ ಇವನ ಕೈಗಳು ನಿಷ್ಪ್ರಯೋಜಕವಾಗಿವೆ. ಆದರೆ ಕೈಯಲ್ಲಿ ಮಾಡಬೇಕಾದ ಕೆಲಸಗಳನ್ನೆಲ್ಲ ಇವನು ಬಾಯಿಯಲ್ಲೇ ಮಾಡುತ್ತಾನೆ. ಸೂಜಿಗೆ ನೂಲು ಹಾಕುವುದು, ಬರೆಯುವುದು, ಅಡಿಗೆಮಾಡುವುದು ಮುಂತಾದ ಎಲ್ಲಾ ಕೆಲಸಗಳನ್ನು ಇವನು ಬಾಯಿಯಲ್ಲೇ ಮಾಡುತ್ತಾನೆ!

ಸೂರ್ಯನೇ ಅಡಿಗೆ ಮಾಡುವನು!

ಆಶ್ಚರ್ಯಕರವಲ್ಲವೇ? ಸೂರ್ಯನೇ ಅಡುಗೆ ಮಾಡುವುದು ಸಾಧ್ಯವೇ? ಅಮೆರಿಕದ ಸ್ಮಿತ್ಸೋನಿಯನ್ ಸಂಘದ ಡಾ. ಸಿ. ಜಿ. ಎಬ್ಬಟ್ ಎಂಬವರೊಬ್ಬರು ಒಂದು ಅಡಿಗೆಪಾತ್ರೆಯನ್ನು ರಚಿಸಿರುವರು. ಸೂರ್ಯನು ಮೂಡಿದೊಡನೆ ಆ ಪಾತ್ರೆಯನ್ನು ಅವನೆದುರು—ರಶ್ಮಿಗೆ ಎದುರಾಗಿ ಇಟ್ಟರೆ ಸಂಜೆಯವರೆಗೆ ಅಡಿಗೆ ಬೇಯುತ್ತದೆ. ಊಟವನ್ನು ಮಾತ್ರ ನಾವೇ ಮಾಡಬೇಕು.

ಎಸ್. ಎಸ್. ಎಲ್. ಸಿ.

ಸರೀಕ್ಷೆಗೆ ಆಂಧ್ರಪ್ರಾಂತ್ಯ ಮತ್ತು ಮದ್ರಾಸ್ ಪ್ರಾಂತ್ಯದಲ್ಲಿ ೩೬,೦೦೦ ವಿದ್ಯಾರ್ಥಿಗಳ ಸಂಖ್ಯೆ ನೋಡಿ—೧೫,೪೯೫. ಹಿಂದಿನ ವರ್ಷಕ್ಕಿಂತ ೩೦೦ ಮಂದಿ ಹೆಚ್ಚು! ಒಟ್ಟು ಪಾಸಾದವರು ೬೫೫೩. ಮೊದಲನೇ ಸಲ ಬೋರ್ಡಿನವರು ಈ ಸಂಖ್ಯೆಯನ್ನು ೬೬೩೦ಕ್ಕೆ ತಂದು ನಿಲ್ಲಿಸಿದರು. ಮದ್ರಾಸು ಸಂಸ್ಥಾನದಲ್ಲಿ ಕೇವಲ ೪೦೦ರಷ್ಟು ಜನರು ಪಾಸಾಗಿದ್ದಾರೆ.

ಬಾಲಕರಾದರೂ-ಕಳ್ಳರು!

ಈಗಿನ ಸಣ್ಣ ಸಣ್ಣ ಹುಡುಗರಿಗೂ ಕಳ್ಳತನವೆಂದರೇನೆಂದು ತಿಳಿದಿದೆ. ಸಿನೆಮಾವನ್ನು ನೋಡಿ ಹುಡುಗರು ಹೀಗಾದರೆಂದು ಹೇಳುವವರಿದ್ದಾರೆ. ಪೂನಾದ ಜನಸ್ಥಾನದಲ್ಲಿ ಕಡಪಾದ ಪಾರ್ಕಿನಲ್ಲಿ ಕಳ್ಳರ ಗುಂಪು ಒಂದನ್ನು ಪೋಲೀಸರು ಹಿಡಿದಿದ್ದಾರೆ. ಈ ಗುಂಪಿನವರೆಲ್ಲಾ ೧೨ ವರ್ಷ ಪ್ರಾಯ ದಾಟದ ಹುಡುಗರೇ ಆಗಿರುವರು. ಕೊರಲ ಎಂಬ ಇವರ ಮುಖಂಡನಿಗೂ ೧೨ ವರ್ಷ ಪ್ರಾಯ. ಇವರನ್ನು ಜಾಮೀನಿನ ಮೇಲೆ ಬಿಟ್ಟಿರುವರಿನ್ನು!

ಜ್ವರವು ನೆತ್ತಿಗಡರಿದರೆ ಏನಾಗುತ್ತದೆ?

"ಮನುಷ್ಯನು ಅನಿಚ್ಛೆಯಿಂದ ಸಾಯುತ್ತಾನೆ"ಂದ ನೀವು ಹೇಳಬಹುದು. ಆದರೆ "ಅವನು ಬೇರೆಯವರನ್ನು ಕೊಂದಿದ್ದಾನೆ" ಎಂದು ಹೇಳುವಷ್ಟು ಧೈರ್ಯ ಈ ನಾತಿಯಲ್ಲಿಗ ನಮಗಿದೆ. ಗುಜರಾತಿನಲ್ಲಿ ಒಬ್ಬ ನೇಕಾರ. ಕೆಲವು ದಿನಗಳ ತನಕ ಅವನಿಗೆ ವಿಪರೀತ ಜ್ವರವು ಬಂತು. ಐದನೇ ದಿನ ವಿಪರೀತ ಜ್ವರವು ಬಂದು ಸ್ವರ್ಗಲೋಕವನ್ನೇ ಅವನು ಸೇರುವುದು ನಿಜವೆಂದು ಎಲ್ಲರೂ ಭಾವಿಸಿದರು. ಆದರೆ ಅದೇ ದಿನ ಮಧ್ಯಾಹ್ನ ಅವನು ತಟ್ಟನೆ ಎದ್ದು ಒಂದು ಕತ್ತಿಯನ್ನು ಹಿಡಿದುಕೊಂಡು ಹೊರಗೆ ಓಡಿ ಇಬ್ಬರನ್ನು ಜಖಂಗೊಳಿಸಿದನು. ಪುನಃ ಹಾಗೆಯೇ ಹಾಸಿಗೆ ಹಿಡಿದು ಮಲಗಿದನು.

ನಿರುದ್ಯೋಗಿಗಳಿಗಾಗಿ—

ಜೀವನೋಪಾಯಗಳನ್ನು ಕಲ್ಪಿಸಬೇಕೆಂದು ಅಮೇರಿಕದ ಸಂಯುಕ್ತ ಸಂಸ್ಥಾನಗಳ ಸರಕಾರದವರು ಅಧ್ಯಕ್ಷರ ವಶ ೧೦೦ ಕೋಟಿ ಪವನುಗಳನ್ನು ಕೊಟ್ಟಿರುವರು. ಈ ಬೆಂಬಲಗಳನ್ನು ಯಾವ ರೀತಿಯಿಂದ ಉಪಯೋಗಿಸಬೇಕೆಂದು ನಿರ್ಧಾರವಾಗಿರುವುದಿಲ್ಲ. ಇಲ್ಲಿನ ಎಂಬ ಜಿಲ್ಲೆಯಲ್ಲಿ ೯ ಲಕ್ಷ ಜನರು ಉಪವಾಸ ಮಾಡುತ್ತಿದ್ದಾರೆ. ಈ ಜಿಲ್ಲೆಯವರು ಈ ನಿಧಿಗೆ ತಮ್ಮ ಮೊತ್ತವನ್ನು ಕೊಡದಿರುವುದರಿಂದ ಅವರಿಗೆ ಈ ನಿಧಿ ಸಹಾಯವು ಸಿಗಲಾರದು.

ಸಂಪಾದಕರ ತಲಬು.

ಸಂಯುಕ್ತ ಅಮೇರಿಕಾದಷ್ಟು ಐಶ್ವರ್ಯಭರಿತವಾದ ರಾಜ್ಯವಿನ್ನೊಂದಿಲ್ಲ. ಅಲ್ಲಿನ ಅಧ್ಯಕ್ಷರು ಪ್ರಜೆಗಳಿಂದ ಚುನಾಯಿಸಲ್ಪಟ್ಟು ೫ ವರ್ಷಗಳ ಕಾಲ ರಾಜ್ಯಭಾರ ಮಾಡುವರು. ಇವರಿಗೆ ವರ್ಷಂಪ್ರತಿ ೭೫,೦೦೦ ಡೊಲ್ಲರು ತಲಬು ಇದೆ. ಖಾಸಗಿ ಸರ್ವೀಸಿನಲ್ಲಿ ಇದಕ್ಕಿಂತ ಹೆಚ್ಚಿನ ಸಂಬಳವನ್ನು ಪಡೆಯುವವರು ಆ ದೇಶದಲ್ಲಿ ೧೦೦ ಮಂದಿಗಿಂತ ಹೆಚ್ಚಾಗಿರುವರು. ಬೆತ್ಲೆಹೆಮ್ ಸ್ಟೀಲ್ ಕಂಪೆನಿಯ ಮುಖಂಡರು ೧೬,೪,೫೦೦ ಡೊಲ್ಲರುಗಳನ್ನೂ, ಅದೇ ಕಂಪೆನಿಯ ವೈಸ್ ಪ್ರೆಸಿಡೆಂಟರು ೧,೪೧೬ ಡೊಲ್ಲರುಗಳನ್ನೂ, ವಿಲಿಯಂ ಮಾರ್ಕ ಎಂಬ ಗ್ರಂಥಪ್ರಕಾರಕರೊಬ್ಬರು ೧೩,೫೦೦ ಡೊಲ್ಲರುಗಳನ್ನೂ, ಸೆಟರ್‌ಡೇ ಈವ್ನಿಂಗ್ ಪೋಸ್ಟು ಪತ್ರಿಕೆಯ ಸಂಪಾದಕರಾದ ಜೋರ್ಜ್ ಹೋರೆಸ್ ಲಾರಿಮಾರ್ ಎಂಬವರು ೧ ಲಕ್ಷ ಡಾಲ್ಲರುಗಳನ್ನು ವರ್ಷಂಪ್ರತಿ ತಮ್ಮ ತಲಬಾಗಿ ಪಡೆಯುತ್ತಿದ್ದಾರೆ. ಡಾಲ್ಲರಿನ ಬೆಲೆ ೩ ರೂಪಾಯಿ.

ಸೆಕ್ರೆಟರಿ ಓಫ್ ಸ್ಟೇಟರ ಮೇಲೊಂದು ದಾವೆ.

ಕಲ್ಕತ್ತೆಯ ಸರಕಾರೀ ಮುದ್ರಣಾಲಯದ ಪರೀಕ್ಷಕ ದಾಸನೆಂಬ ದೊಡ್ಡಹುದ್ದೆದಾರನು ಸೆಕ್ರೆಟರಿ ಓಫ್ ಸ್ಟೇಟರ ಮೇಲೊಂದು ದಾವೆ ತಂದು ತಾನು ಕೆಲಸದಿಂದ ನಿವೃತ್ತನಾದುದರಿಂದ ೩೩೯೦ ರೂಪಾಯಿಗಳ ಪರಿಹಾರ ದ್ರವ್ಯವನ್ನು ಕೊಡಬೇಕೆಂದು ಕೇಳಿ ವಿಜಯಿಯಾದನು.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ–(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ–(ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ–(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ–(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ–(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ

Distributors for South Kanara –

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ ಆತಂಕನಿಗ್ರಹ ಪಿಲ್ಸ್‌ಗಳನ್ನು ಉಪಯೋಗಿಸಲಿಕ್ಕೆ

ಜೀವನದ ಆಯಾಸ … ದಲ್ಲಿ … ಉಪಯೋಗಿಸುತ್ತಿದ್ದಾರೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಟಿನ್ನಿನ ಡಬ್ಬಿಗೆ ರೂ 1

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ … ನಮ್ಮ

ಕಾಮಶಾಸ್ತ್ರವನ್ನೋದಿರಿ

–Shah Company M… Pearl & Sons, Ma…

Atank Nigrah Pharmacy
Chickpet Bangalore

ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್ ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು

ಸಾಮಾನ್ಯ ವಿಜ್ಞಾನ.

ಚರಿತ್ರೆ ಮತ್ತು ಕಥೆಗಳು.	ರೂ	ಆ	ಪೈ	ಸಾಮಾನ್ಯ ವಿಜ್ಞಾನ	ರೂ	ಆ	ಪೈ
ನಾಲ್ಕನೇ ದರ್ಜೆ	0	6	0				
ಮೂರನೇ ,,	0	4	6	ಎರಡನೇ ದರ್ಜೆ	0	3	0
ಎರಡನೇ ,,	0	4	0				
ಸಮಾಜಶಾಸ್ತ್ರ.				ಮೂರನೇ ,,	0	3	0
ಐದನೇ ದರ್ಜೆ	0	8	0				
ನಾಲ್ಕನೇ ,,	0	3	0	ನಾಲ್ಕನೇ ,,	0	5	0
ಮೂರನೇ ,,	0	2	6				
				ಐದನೇ ,,	0	6	0

ಅಜ್ಜಿ ಕಥೆಗಳು (ಸಚಿತ್ರ.)

ಮೂರು ಕರಡಿಗಳು.
ಹೇನು ಸತ್ತ ಕಾಗೆ ಎಡವಾಯಿತು
ಬೆಣ್ಣಸಿನ ಕಾಳಪ್ಪ
ಜಗಳಗಂಟಿ ಪುಡ್ಡಿ
ಇಲಿಗಳ ಭಕ್ತ ಧ್ಯೇ
ಅಂಗಳ ದ್ವೇಗ
ಗುಡುಗುಡು ಗುಮ್ಮಟ ದೇವರು
ಒಡ್ಡನ ಓಟ
(ಇವುಗಳ ಕ್ರಯ 1ಕ್ಕೆ 0–0–9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿ ಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ಶಿವರಾಮ ಕಾರಂತ ವಿರಚಿತ

ಗ್ನಾನ

ಜ್ಞಾನದ ಮೇಲೆ ವ್ಯಂಗ ಟೀಕೆ.

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ

ದಪ್ಪಗಿನ ಆಂಟಿಕ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ.

ಕ್ರೌನ್ ¼ ಆಕಾರದ ೧೮೩ ಪುಟಗಳು.

ಉತ್ತಮ ತರದ ಹಾಸ್ಯ.

ಬೆಲೆ 1–4–0

ಶಾರದಾ ಛಾಪಖಾನೆ, ಮಂಗಳೂರು.

ಇವರಿಂದ ಪಡೆಯಬಹುದು.

ನಡೆದ ಕತೆಗಳು.

True Stories

ಎ ಮುಗಿಸುವ ಸೆಟುಯ ...ಳ ನಿಯಮಗಳು

All Rights Reserved.

[ಸಮಾಜದಲ್ಲಿನ ಕುಂದುಕೊರತೆಗಳನ್ನು ಹೊಗೆ ...ಸುವುದೇ 'ನಡೆದ ಕತೆಗಳು' ಇವುಗಳ ಉದ್ದೇಶ. ...ಗಳನ್ನು ಸಂಯೋಜಿಸುವುದರಲ್ಲಿ ಮಾತ್ರ ಅನು... ಹಕ್ಕುಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ...ಗಳೆಲ್ಲ ನಿಜವಾದುವುಗಳು ಹೆಸರುಗಳನ್ನು ಕೆಲ ...ಗಳಲ್ಲಿ ಮಾತ್ರ ಬದಲಾಯಿಸಲಾಗಿದೆ

ಅನುರೂಪ ವರ.

ಉರ್ವದ ಶೇಸು ಹೆಂಗಸಿಗೆ ಜಾನಕಿಯೊಬ್ಬಳೇ ಮಗಳು ಒಬ್ಬಳೇ ಮಗಳೆಂದು ಶೇಸುವು ಮಗಳನ್ನು ಮುದ್ದುಮುದ್ದಾಗಿ ಸಾಕಿ ಸಲಹಿ ಬೆಳೆಸಿದಳು ದಣಿವಿನ ಕೆಲಸವನ್ನು ಮಾಡದ,—ಮುಂದಕ್ಕೆ ದೊಡ್ಡ ಮನೆಯ ರಾಣಿಯಾಗುವೆನೆಂಬ ಅದೊಂದೇ ಕಲ್ಪನೆಯಲ್ಲಿದ್ದ,—ಅದರಲ್ಲೂ, ತನ್ನಂತಹ ರೂಪವತಿಯರು ಉರ್ವದಲ್ಲೇ ಇಲ್ಲವೆಂದು ಭಾವಿಸಿಕೊಂಡಿದ್ದ ಜಾನಕಿಯು ಮದುವೆಗೆ ಸಿದ್ಧಳಾದಳು

ಮಗಳಿಗೆ ಅನುರೂಪ ಗಂಡನೊಬ್ಬನನ್ನು ತರಬೇಕೆಂದು ಶೇಸುವಿನ ಆಕಾಂಕ್ಷೆ ಈ ಆಶೆಯು ಅವಳ ಹೃದಯದಲ್ಲಿ ನಲಿದಾಡುತ್ತಿದ್ದುದು ಇಂದಲ್ಲ, ಹಲವು ವರ್ಷಗಳಿಂದಲೂ ಅವಳು ತನ್ನ ಮಗಳ ಗಂಡನಾರೋ ಎಂದು ಕನವರಿಸುತ್ತಿದ್ದಳು

ಮೂಲ್ಕಿ ದಾಸಪ್ಪನವರ ಮಗ ಸುಂದರನಿಗೆ ಜಾನಕಿಯನ್ನು ಕೇಳಿದರು ಆದರೆ ಗಂಡನು ಸ್ವಲ್ಪ ಕಪ್ಪಾಗಿದ್ದುದರಿಂದ ಶೇಸುವು ಒಡಂಬಡಲಿಲ್ಲ ಬೋಳಾರ ತಿಮ್ಮಪ್ಪನವರ ಮಗ ನಾರ್ಣನವರ ಅಳಿಯ ಅರಸಪ್ಪನಿಗೆ ಅವಳನ್ನು ಕೇಳಲಾಯಿತು ಹುಡುಗಿಯನ್ನು ಸಾಕಿ ಸಲಹುವಷ್ಟು ತ್ರಾಣವು ಅವನಲ್ಲಿಲ್ಲವೆಂದು ಶೇಸುವು ನೆಂಟಸ್ತಿಕೆಯನ್ನು ನಿರಾಕರಿಸಿದಳು ಹಂಪನಕಟ್ಟೆ ಕುಕ್ರಪ್ಪನವರ ಮೊಮ್ಮಗ ಆನಂದನಿಗೆ ಜಾನಕಿಯನ್ನು ಕೇಳಿದರು ಸರ್ವಗುಣಸಂಪನ್ನನಾಗಿದ್ದರೂ ಅವನ ತಾಯಿಯು, ಏನೋ ಕೆಟ್ಟ ಕ್ರಿಯೆಗಿಳಿದು ಕೀಳಿದಳೆಂಬ ಭೇದದಿಂದ ಆ ಮಾತೂ ಮುರಿದುಬಿದ್ದಿತು 'ಹುಡುಗ ಚಂದವಿರಬೇಕು ನನ್ನ ಮಗಳಿಗೆ ಒಂದು ಹಿಡಿ ಅನ್ನ ಕೊಡುವವನಾಗಬೇಕು' ಎಂಬುದೇ ಶೇಸುವಿನ ಹೇಳಿಕೆ

ಯಾವ ನೆಂಟಸ್ತಿಕೆಯೂ ಬರಲಿ—ಅದು ಬಂದೊಡನೆ ಶೇಸುವು ಆ ಹುಡುಗನ, ಕುಟುಂಬಿಕರ,—ತಂದೆ ತಾಯಿಗಳ,—ವಿಚಾರಗಳನ್ನು ಸವಿವರವಾಗಿ ತಿಳಿಯುವ ವ್ಯವಸ್ಥೆ ಮಾಡುವಳು ನೆಂಟರಾಗಿ ಬಂದವರ ನೆರೆಹೊರೆಗೆ ಹೋಗಿ ಅವರಭಿಪ್ರಾಯಗಳನ್ನು ತಿಳಿಯುತ್ತಿದ್ದಳು ಆ ವಿಷಯಕ್ಕಾಗಿ ಎಷ್ಟಾದರೂ ವೆಚ್ಚ ಮಾಡುತ್ತಿದ್ದಳು ಹುಡುಗನ ತಂದೆಯು ಒಮ್ಮೆಯಾದರೂ ಶರಾಯಿ ಕುಡಿದವನೆಂದಿದ್ದರೆ, ಅವನ ಹಿಂದೆ ಏನಾದರೂ ಕತೆಯಿದ್ದರೆ, ಹುಡುಗನ ತಾಯಿಯು ಸ್ವಲ್ಪ ಜೋರಿನವಳಾಗಿದ್ದರೆ, ಹುಡುಗನ ಕುಟುಂಬಿಕರಾರಾದರೂ ಪರವೂರಿನಲ್ಲಿದ್ದು ಅಡ್ಡದಾರಿಗೆ ಸರಿದಿದ್ದರೆ, ಹುಡುಗ ಹಿಂದಿಷ್ಟು ಕಪ್ಪಗಿದ್ದರೆ, ಅವನ ದೃಷ್ಟಿಯು ಸ್ವಲ್ಪ ವಕ್ರವಿದ್ದರೆ, ಅವನು ಮೊದಲು ಇತರ ನೆಂಟಸ್ತಿಕೆಯನ್ನಾಶಿಸಿದ್ದರೆ, ಹಾಗೂ ಹೀಗೂ, ತನ್ನ ಮಗಳ ಗಂಡನ ಕಡೆಯಿಂದ ಯಾವ ನಿಂದೆ, ಅಪವಾದಗಳು ಬರುವುದೆಂದಿದ್ದರೆ, ಅಂತಹ ಸಂಬಂಧಗಳಿಗೆ ಶೇಸುವು ಎಂದೂ ಸಮ್ಮತಿಸುತ್ತಿದ್ದಿಲ್ಲ. 'ನನ್ನ ಮಗಳಿಗೆ ಅನುರೂಪ ವರನೇ ಅಲ್ಲ'ವೆಂದು ಸ್ಪಷ್ಟವಾಗಿ ತಿಳಿಸಿಬಿಡುತ್ತಿದ್ದಳು (ಶೇಸುವು ಎರಡನೆಯ ವಿವಾಹವಾಗಿ ಪತಿಯನ್ನು ಬಿಟ್ಟು, ತಾಯಿಯ ಸಣ್ಣ ಆಸ್ತಿಯ ಒಡತಿಯಾಗಿರುವವಳು)

ಮೊನ್ನೆ ತಲ್ಲೇರಿಯಿಂದ ಸುಂದರನೆಂಬೊಬ್ಬ ಯುವಕನು ಒಬ್ಬ ಸಂಗಾತಿಯೊಡನೆ ಶೇಸುವಿನ ಮನೆಗೆ ಬಂದನು ಶೇಸುವಿನ ಸಂಗಾತಿಯ ಮೂಲಕ ಜಾನಕಿಯನ್ನು ತನಗೆ ಕೊಡಬೇಕೆಂದು ಕೇಳಿದ. ಶೇಸುವು ವಿಚಾರಿಸಿದಳು. 'ಸುಂದರನವರಿಗೆ ತಲ್ಲೇರಿಯಲ್ಲಿ ೮೦ ರೂಪಾಯಿ ಸಂಬಳದ ಉದ್ಯೋಗವಿದೆ ಅಲ್ಲಿಯ ಶ್ರೀಕೃಷ್ಣಾ ವೀವಿಂಗ್ ಫೆಕ್ಟರಿಯಲ್ಲಿ ಸುಪರಿಂಟೆಂಡೆಂಟರು. ಇವರು ಇಲ್ಲಿಯ ಸಬ್‌ಇನ್ಸ್‌ಪೆಕ್ಟರ್ ಕಾಳಪ್ಪನವರ ಭಾವನೆಂಟರಿರುವರು' ಎಂದು ಅವನ ಸಂಗಾತಿಯು ತಿಳಿಸಿದನು.

ಶೇಸುವು ವಿಚಾರಿಸಿದಳು ಸ್ವಜಾತಿಯವರೊಡನೆ ಕೇಳಿಕೊಂಡಳು. "ಹುಡುಗ ರೂಪವಂತನಾಗಿದ್ದಾನೆ ಬೂಟ್ಸು ಹಾಕಿದ್ದಾನೆ ಮೀಸೆ ಇಟ್ಟಿಲ್ಲ ಬೊಂಬಾಯಿಯವರಂತಿದ್ದಾನೆ ಸುಂದರ ಶರೀರ ಹುಡುಗಿಗ ಬೇಕಾದಂತೆಯೇ ಇದ್ದಾನೆ" ಎಂದು ಹಲವರೊಡನೆ ಮೆಚ್ಚಿಸಿದಳು ಆದರೆ ಅವನ ವಿಚಾರವಾಗಿ ಅವನ ಕೆಲವು ಯುವಕ ಮಿತ್ರರಲ್ಲದೆ ಬೇರಾರೂ ಏನನ್ನೂ ಹೇಳಲು ಸಮರ್ಥರಾಗಲಿಲ್ಲ

ಶೇಸುವಿಗೆ ಹುಡುಗನನ್ನು ಬಿಡಲು ಮನಸ್ಸಿರಲಿಲ್ಲ ಅವನು ಸಬ್‌ಇನ್ಸ್‌ಪೆಕ್ಟರ್ ಕಾಳಪ್ಪನ ಭಾವನೆಂಟನೆಂದು ತಿಳಿದುಬಂದುದರಿಂದಂತೂ ಅವಳು ಸುಂದರನಿಗೆ ಜಾನಕಿಯನ್ನು ಕೊಡುವುದು ನಿಶ್ಚಯವೆಂದು ಭಾವಿಸಿ ಮಾತುಕೊಟ್ಟಳು ಮದುವೆಯನ್ನು ಅತಿ ವಿಜೃಂಭಣೆಯಿಂದ ಜರಗಿಸಿದಳು

೮೦೦ ರೂಪಾಯಿಗಳ ವರದಕ್ಷಿಣೆ ಹುಡುಗಿಗೆ ೬೦೦ ರೂಪಾಯಿಗಳ ಆಭರಣಗಳು ಸುಂದರನಿಗೆ ಆನಂದವಾಯಿತು

ಮದುವೆಯು ಜರಗಿ ಹದಿನಾರು ದಿನಗಳು ಕಳೆದಿದ್ದುವಷ್ಟೆ—೧೭ನೇ ದಿನ ತಲ್ಲೇರಿಯಿಂದ ಸಾವಿತ್ರಿ ಅಮ್ಮಾಳ್ ಎಂಬ ಮಳಿಯಾಳಿ ತರುಣಿಯೊಬ್ಬಳು ಸುಂದರನ ಬಾಡಿಗೆಯ ಬಂಗಲೆಯಲ್ಲಿಳಿದಳು ಹೆಚ್ಚೇನು? 'ನಿನಗೆ ಹುಟ್ಟಿದ ಆ ಮಗುವನ್ನೂ ನನ್ನನ್ನೂ ಎಂದೂ ಬಿಡಲು ಸಾಧ್ಯವಿಲ್ಲ" ಎಂದು ಸಾವಿತ್ರಿ ಅಮ್ಮಾಳ ನಿರ್ಧಾರಪೂರ್ವಕ ನುಡಿ

ಈಗ ಜಾನಕಿಯು ಶೇಸುವಿನ ಮನೆಯಲ್ಲೇ ಇದ್ದಾಳೆ ಸುಂದರನೂ ಸಾವಿತ್ರಿಯೂ ತಲ್ಲೇರಿಗೆ ಹೋಗಿರುವರು 'ತಲ್ಲೇರಿಗೆ ನಿಮ್ಮ ಹುಡುಗಿಯನ್ನು ಕಳುಹಿಸಿದರೆ, ಅವಳನ್ನು ಜೀವದಲ್ಲಿಡುವುದಿಲ್ಲ'ವೆಂದು ಸಾವಿತ್ರಿಯಮ್ಮಳ ಅಣ್ಣನ ಪತ್ರವು ಮೊನ್ನೆ ತಲಪಿದೆ

ಬೋರ್ಡು ಮೂಲಶಾಲಾ ಅಧ್ಯಾಪಕರ ಸಂಘ, ಉಡುಪಿ ತಾಲೂಕು.

ಕಳೆದ ತಿಂಗಳ ತಾ ೧೩—೫—೩೫ನೇ ದಿನ ಈ ಸಂಘದ ಆಡಳಿತೆ ಮಂಡಳಿಯ ಸಾಮಾನ್ಯ ಸಭೆಯು ಸಂಘದ ಅಧ್ಯಕ್ಷರಾದ ಡಾಕ್ಟರ್ ಪಿ ಜಿ, ಆಚಾರ್ಯರ ನೇತೃತ್ವದಲ್ಲಿ ಜರಗಿ, ಈ ಕೆಳಗಣ ಠರಾವುಗಳು ಪಾಸಾದುವು —

೧ ತಾಲೂಕು ಬೋರ್ಡಿನ ಮಾಜಿ ಪ್ರೆಸಿಡೆಂಟರಾದ ಮ ರಾ ರಾ ಎಚ್ ರಾಮಯ ಶೆಟ್ರು (ತಾ ೨೭ ೪—೩೫ರಲ್ಲಿ) ಸ್ವರ್ಗಸ್ಥರಾದುದಕ್ಕಾಗಿ ಈ ಕಮಿಟಿಯು ವಿಷಾದಪೂರ್ವಕದ ತನ್ನ ಸಂತಾಪವನ್ನು ರಿಕಾರ್ಡು ಮಾಡುತ್ತದೆ ಈ ಸಂತಾಪಸೂಚಕ ಠರಾವನ್ನು ಅವರ ಕುಟುಂಬದವರಿಗೆ ಕಳುಹಿಸಬೇಕಾಗಿ ನಿರ್ಣಯಿಸಲಾಯಿತು ೨ ಕೆಲವು ಮಂದಿ ಸದಸ್ಯರ ಮತ್ತು ಸಂಘದ ಹಿತಚಿಂತಕರಾದ ಮಹನೀಯರ ಸೂಚನೆಯಂತೆ ಈ ಮಂಡಲಿಯ ನೇತೃತ್ವದಲ್ಲಿ ಜರಗಲಿರುವ ವಿದ್ಯಾವಸ್ತುಪ್ರದರ್ಶನ ಸಮಾರಂಭವನ್ನು ಇದೇ ಬರುವ ಸಪ್ಟಂಬರ ತಿಂಗಳಲ್ಲಿ ಜರಗಿಸಲು ಮುಂದರಿಸಲಾಯಿತು ೩ ತಿದ್ದುಪಡಿಯ ಸಂಬಳದ ದರದ ಪರಿಮಿತಿಗಿಂತ ಹೆಚ್ಚಿಗೆ ಸಂಬಳ ಹೊಂದುತಿದ್ದ ಬೋರ್ಡು ಮೂಲ ಶಾಲಾ ಉಪಾಧ್ಯಾಯರಿಗೆ ಆ ಹಣವನ್ನು ಪರ್ಸನಲ್ ಪೇ 'Persanal Pay" ಯಾಗಿಯಾದರೂ ಕೊಡಬೇಕೆಂದು ಬೋರ್ಡಿನವರನ್ನು ಕೇಳಿಕೊಳ್ಳಬೇಕಾಗಿ ನಿರ್ಣಯಿಸಲಾಯಿತು ಈ ಠರಾವಿನ ನಕಲನ್ನು ಮೂಲಾಧ್ಯಾಪಕರ ಜಿಲ್ಲಾ ಸಂಘದ ಕಾರ್ಯದರ್ಶಿಯರಿಗೆ ಕಳುಹಿಸಬಹುದಾಗಿ ಮಂಜೂರು ಮಾಡಲಾಯಿತು ೪. ಬೋರ್ಡು ಬಾಲಕಿಯರ ಶಾಲೆಯ ಕಂಡಕ್ಟೆಸರ ಹುದ್ದೆಯನ್ನು ಬೋರ್ಡಿನವರು ತೆಗೆದುಹಾಕಿದುದರಿಂದುಂಟಾದ ತೊಂದರೆಗಾಗಿ ಬಾಲಕಿಯರ ಶಾಲೆಗಳ ಮುಖ್ಯೋಪಾಧ್ಯಾಯಿನಿಯರು ದಿವಸದ ಸ್ವಲ್ಪ ಸಮಯದಲ್ಲಿಯಾದರೂ ಶಾಲಾ ಕೆಲಸ ಮಾಡಲಿಕ್ಕಾಗಿ ಸೇವಕಿಯರನ್ನು ನೇಮಿಸಿಕೊಳ್ಳುವಂತೆ, ಅವರಿಗೆ ಕೊಡುವ ಸಂಬಳವನ್ನು ಖರ್ಚಿನ ಹಣಕ್ಕೆ ಕೂಡಿಸಿ ತಿಂಗಳಿಗೆ ೨ ರೂಪಾಯಿಯನ್ನು ಆದರೂ ಕೊಡಿಸುವಂತೆ ಬೋರ್ಡಿನವರನ್ನು ಕೇಳಿಕೊಳ್ಳಬೇಕಾಗಿ ನಿರ್ಣಯಿಸಲಾಯಿತು ೫ ಈ ಸಂಘದ ನಿಯಮಗಳನ್ನೂ ನಿಬಂಧನೆಗಳನ್ನೂ ಆಲೋಚಿಸುವುದಕ್ಕಾಗಿಯೂ ಮಂಜೂರು ಮಾಡುವುದಕ್ಕಾಗಿಯೂ ಬೋರ್ಡಿನವರ ಮುಂದೆ ಇಡಬೇಕೆಂದು ಪ್ರೆಸಿಡೆಂಟರವರನ್ನು ಕೇಳಿಕೊಳ್ಳಬೇಕಾಗಿ ನಿರ್ಣಯಿಸಲಾಯಿತು.

ನಗಬಾರದು.

ಕೃಷ್ಣಪ್ಪ —ಹನುಮಂತರಾಯರೆ, ಯಾವಾಗ ಬರೋಣವಾಯ್ತು?

ಹನುಮಂತರಾವ್.—ನನ್ನ ಹೆಸರು ನಿಮಗೆ ಹೇಗೆ ತಿಳಿಯಿತಪ್ಪಾ?

ಕೃಷ್ಣಪ್ಪ—ತಮ್ಮ ಮುಖವನ್ನು ನೋಡಿ ತಿಳಿದುಕೊಂಡೆನು.

\+ + + +

ನಾಗಪ್ಪ—ಇದೇನ್ರಿ, ಕಾಂಗ್ರೆಸ್‌ನವರಾಗಿದ್ದು ಪರದೇಶದ ಸಿಗರೇಟ್ ಸೇದುವಿರಿ.

ಕಾಂಗ್ರೆಸ್‌ವಾಲಾ—ಇದು ಪರದೇಶ ವಸ್ತು ಎಂದು ತಿಳಿದೇ ಬೆಂಕಿಹಚ್ಚಿ ಸುಡುತ್ತಿದ್ದೇನೆ.

\+ + + +

ತಂದೆ—ಪಕ್ಕದ ಮನೆ ಸುಬ್ರಾಯರ ಮಗಳ ಕೆನ್ನೆಯ ಯಾಕೋ ಕಚ್ಚಿದೆ?

ಮಗ—ನೀನು ಅಮ್ಮನ ಕೆನ್ನೆಯನ್ನು ಯಾಕೆ ಕಚ್ಚಿದೆ?

\+ + + +

ಹೆಂಡತಿ—ಇದೇನ್ರಿ, ಕನ್ನಡಕವನ್ನು ಹಾಕಿಕೊಂಡು ನಿದ್ರಿಸುತ್ತೀರಿ

ಗಂಡ—ಸುಮ್ಮನಿರೆ! ಸ್ವಪ್ನ ಚೆನ್ನಾಗಿ ಕಾಣಲೆಂದು ಹಾಕಿಕೊಂಡಿದ್ದೇನೆ

\+ + + +

ಮಾಸ್ಟರ್ ನಾಳೆ ನಮ್ಮ ಚಕ್ರವರ್ತಿಯ ಜನ್ಮದಿನವು ಶಾಲೆಗೆ ರಜೆ

ವಿದ್ಯಾರ್ಥಿಗಳು—ತಮ್ಮ ಜನ್ಮದಿನ ಯಾವಾಗ ಸಾರ್?

ಮಾಸ್ಟರ್—ಯಾಕೊ?

ವಿದ್ಯಾರ್ಥಿ—ಆ ದಿನವೂ ರಜೆ ಸಿಕ್ಕುವುದಲ್ಲವೇ?

\+ + + +

ಪ್ರೆಸ್ ಮ್ಯಾನೆಜರ್—ಕೆಲಸಕ್ಕೆ ಸರಿಯಾದ ಟೈಮಿಗೆ ಏಕೆ ಬರುವುದಿಲ್ಲವೋ?

ಆಳು—ನೀವು ಕೆಲಸದ ಸಮಯದಲ್ಲಿ ಗಡಿಯಾರವನ್ನು ನೋಡಬೇಡೆಂದು ಹೇಳಿದ್ದೀರಿ ನನಗೆ ಗಡಿಯಾರವನ್ನು ನೋಡುವ ಅಭ್ಯಾಸವು ಮನೆಯಲ್ಲಿಯೂ ತಪ್ಪಿದೆ

\+ + + +

ಯಜಮಾನ—ಸೇಟ್‌ಗೆ, ನಾನು ಮುಂಬಯಿಗೆ ವ್ಯಾಪಾರಕ್ಕಾಗಿ ಹೋಗಿರುವುದಾಗಿ ಹೇಳೆಂದೆನಲ್ಲವೇ?

ಆಳು—ಹೌದು ಅವರು ತಾವು ಯಾವಾಗ ತಿರಿಗಿ ಬರುವಿರೆಂದು ಕೇಳಿದರು

ಯಜಮಾನ:—ಅದಕ್ಕೆ ಏನು ಹೇಳಿದಿ?

ಆಳು:—ರಾತ್ರಿ ಊಟಕ್ಕೆ ಮುಂಚೆ ಬರುವಿರಲ್ಲವೆಂದು ಹೇಳಿದೆ.

\+ + + +

ಜಡ್ಜ್.—ದೊಡ್ಡ ಮನುಷ್ಯರ ಬೂಟ್ಸನ್ನು, ನಾಯಿ ಕಚ್ಚಿ ಹಾಳು ಮಾಡಿದರೆ, ನಾಯಿಯ ಯಜಮಾನರಿಗೆ 'ಲಾ' ಪ್ರಕಾರ ಯಾವ ಶಿಕ್ಷೆ ವಿಧಿಸಬಹುದು?

ಲಾಯರು.—ಲಾ ಪ್ರಕಾರ ೧೦ ರೂಪಾಯಿ ಜುಲ್ಮಾನೆ ಹಾಕಬಹುದು

ಜಡ್ಜ್.—ಹಾಗಾದರೆ, ನಿಮ್ಮ ನಾಯಿಯು ನನ್ನ ಬೂಟ್ಸನ್ನು ಕಚ್ಚಿ ಹಾಳು ಮಾಡಿದೆ, ಆದುದರಿಂದ ನಿಮಗೆ ೧೦ ರೂಪಾಯಿ ಜುಲ್ಮಾನೆ ಹಾಕಿದೆ

ಲಾಯರು—ಈ ಕೇಸಿಗೆ ನನ್ನ ಆಲೋಚನೆ ಕೇಳಿದ್ದಕ್ಕೆ ನನ್ನ ಕನ್‌ಸಲ್ಟ್ ಫೀ ರೂಪಾಯಿ ೫೦ರಲ್ಲಿ ಜುಲ್ಮಾನೆ ಕಳೆದು ಉಳಿದ ರೂಪಾಯಿಗಳನ್ನು ದಯಪಾಲಿಸಿ ಮಹಾಸ್ವಾಮಿ

\+ + + +

ಸಿನೆಮಾ ಮೇನೇಜರ್—ಇದೇನಯ್ಯಾ! ನೀನು ಅರ್ಧ ಟಿಕೇಟ್ ತಂದಿದ್ದೀಯಾ?

ಪ್ರೇಕ್ಷಕ—ನನಗೆ ಒಂದೇ ಕಣ್ಣು ಇದೆ ಸಾರ್

\+ + + +

ರಾಮು—ಜೋಯಿಸರೆ, ಮಳೆ ಯಾಕೆ ಸರಿಯಾಗಿ ಬಾರದಿದೆ?

ಜೋಯಿಸರು—ಸಿಲ್ವರ್ ಜುಬ್ಲಿಯ ಜ್ವಾಕಾರ್ಥ ಸ್ವಲ್ಪ ತಡೆದು ಬರಬೇಕೆಂದಿದೆ

\+ + +

ಸಿನೆಮಾ ಪ್ರೇಕ್ಷಕರಲ್ಲಿ ಒಬ್ಬ—(ತನ್ನ ಪಕ್ಕದಲ್ಲಿದ್ದ ಮಿತ್ರನ ಕುರಿತು) ಅಲ್ಲಿ ಕುಳಿತಿರುವ ಆ ಸಿಲ್ಕು ಸೀರೆ ಹೆಂಗಸು ಎಷ್ಟು ಚೆನ್ನಾಗಿದ್ದಾಳೆ ನೋಡೊ' ನನ್ನ ಮನಸ್ಸೆಲ್ಲಾ ಅವಳ ಮೇಲೆಯೇ ಇದೆ

ಸೋಮು—ಆ ಕೆಂಪು ಸೀರೆಯವಳೇನೊ?

ಪ್ರೇಕ್ಷಕ—ಹೌದು

ಸೋಮು—ಮಹಾರಾಯ, ಅವಳು ನನ್ನ ಹೆಂಡತಿಯು

ಪ್ರೇಕ್ಷಕ:—(ಡಂಗು ಬಡೆದು, ತವಕದಿಂದ) 'ಕೆಂಪು ಸೀರೆ ಅಲ್ಲ, ಅಲ್ಲ ಅವರ ಪಕ್ಕದಲ್ಲಿರುವ ಆ ಕರೀ ಸೀರೆಯವಳು

ಸೋಮು—ಅವಳು ನನ್ನ ಅಕ್ಕ

ಎಂ. ಕೆ ಎಸ್‌ರವರಿಂದ ಸಂಗ್ರಹಿಸಿದುದು

ವಿದ್ಯಾ ವಸ್ತುಪ್ರದರ್ಶನ

ಉಡುಪಿ ತಾಲೂಕಿನ ಬೋರ್ಡು ಮೂಲಶಾಲಾ ಅಧ್ಯಾಪಕರ ಸಂಘದ ನೇತೃತ್ವದಲ್ಲಿ ಇದೇ ಮೇ ತಿಂಗಳ ಅಂತ್ಯದೊಳಗೆ ಜರಗಬೇಕೆಂದಿದ್ದ 'ವಿದ್ಯಾ ವಸ್ತುಪ್ರದರ್ಶನ'ದ ಸಮಾರಂಭವನ್ನು ಇದೇ ಬರುವ ಸಪ್ಟಂಬರ ತಿಂಗಳಿಗೆ ಮುಂದರಿಸಬೇಕಾಗಿ ಸಂಘದ ಕೆಲವು ಮೆಂಬರರೂ, ಸಂಘದ ಹಿತಚಿಂತಕರಾದ ಇತರ ಮಹನೀಯರೂ ಕೊಟ್ಟ ಸೂಚನೆಯನ್ನು ತಾ ೧೧—೫—೧೯೩೫ನೇ ದಿನ ಜರಗಿದ ಸಭೆಯಲ್ಲಿ ಸಂಘದ ಆಡಳಿತೆ ಮಂಡಲಿಯವರು ಯೋಚಿಸಿದರು ಸೂಚನೆಯು ಸಕಾರಣವಾದುದರಿಂದ ಈ ತಿಂಗಳಲ್ಲಿ ಜರಗಿಸಬೇಕಾದ ವಸ್ತುಪ್ರದರ್ಶನವನ್ನು ಇದೇ ಬರುವ ಸಪ್ಟಂಬ್ರ ತಿಂಗಳಲ್ಲಿ ಜರಗಿಸಬೇಕೆಂದು ಸರ್ವಸಮ್ಮತಿಯಿಂದ ನಿರ್ಣಯಿಸಿ ಪ್ರದರ್ಶನದ ಸಮಾರಂಭವನ್ನು ಸಪ್ಟಂಬರ ತಿಂಗಳಿಗೆ ಮುಂದರಿಸಲಾಗಿಯದೆ ಈ ಮೊದಲು ಕೊಟ್ಟ ಸೂಚನೆಯಂತೆ ಎಲ್ಲಾ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ವಿದ್ಯಾಸಂಬಂಧದ ಎಲ್ಲಾ ತರದ ವಸ್ತುಗಳನ್ನೂ ಮತ್ತು ಚಟುವಟಿಕೆಗಳನ್ನೂ ಅತಿ ಉತ್ಸುಕತೆಯಿಂದ ತಯಾರಿಸಿ ಇದೇ ಬರುವ ಆಗೋಸ್ತು ತಿಂಗಳ ಅಂತ್ಯದೊಳಗೆ ಉಡುಪಿ ಬೋರ್ಡು ಎಲಿಮೆಂಟರಿ ಮೈನ್ ಶಾಲಾ ಮುಖ್ಯೋಪಾಧ್ಯಾಯರಿಗೆ ರವಾನಿಸಬೇಕಾಗಿ ತಿರಿಗಿ ಆಸ್ಥಾದರದಿಂದ ಕೇಳಿಕೊಳ್ಳಲಾಗುತ್ತದೆ ಇತರ ವಿವರಗಳನ್ನು ಸಂಘದ ಕಾರ್ಯದರ್ಶಿಗಳಿಂದ ತಿಳಿದುಕೊಳ್ಳಬಹುದು.

ಅಗ್ರಗಣ್ಯ ಸಂಗೀತಜ್ಞರು ಅದರ ಪ್ರಶಂಸಾಗಾನವನ್ನು ಮಾಡಿದ್ದಾರೆ.

ಮುಸಿರಿ ಸುಬ್ರಹ್ಮಣ್ಯ ಐಯ್ಯರ್, 6 ಒಲಿವರ್ ರೋಡ್, ಮೈಲಾಪುರ ಮದ್ರಾಸು.

ಅನೇಕ ಸಮಯದಿಂದ ನನ್ನ ಕುಟುಂಬದವರೆಲ್ಲ 'ಕೇಶವರ್ಧಿನಿ'ಯನ್ನು ಬಿಡದೆ ಉಪಯೋಗಿಸುತ್ತಿರುವರೆಂದು ತಿಳಿಸಲು ಸಂತೋಷಿಸುತ್ತೇನೆ. ಉದುರುವ ಕೂದಲನ್ನು ತಡೆಯುವ ಅದರ ಶಕ್ತಿಯನ್ನು ಪೂರ್ಣವಾಗಿ ತಿಳಿದು, ಅಲ್ಲದೆ ಕೂದಲನ್ನು ಅದು ಬೆಳೆಯಿಸುವ ಅದರ ಗುಣವನ್ನು ಅರಿತು ಅವರು ಅದರ ಗುಣಗಾನವನ್ನು ಮಾಡಿ ಸ್ನೇಹಿತರಿಗೂ ಅದನ್ನು ಶಿಫಾರಸು ಮಾಡುತ್ತಾರೆ. ಕೇಶಗಳಿಗೂ ಮೆದುಳಿಗೂ ಸಮರ್ಪಕವಾದ ಎಣ್ಣೆಯೊಂದು ಅಗತ್ಯವಿರುವವರು ಇದನ್ನುಪಯೋಗಿಸಬಹುದೆಂದು ನಾನು ಶಿಫಾರಸು ಮಾಡುತ್ತೇನೆ.

(ಸಹಿ) ಮುಸಿರಿ ಸುಬ್ರಹ್ಮಣ್ಯ ಅಯ್ಯರ್.

ಬೋಳು ತಲೆಯವನಾಗಬೇಡಿ ಅಥವಾ ತಲೆಕೂದಲು ಅಕಾಲಿಕ ಸಮಯದಲ್ಲಿ ಬಿಳಿಯಾಗದಂತೆ ನೋಡಿ

ಬಾಟ್ಲಿ 1ಕ್ಕೆ ಆಣೆ 12. **'ಕೇಶವರ್ಧಿನಿ'** ಪೇಕಿಂಗ್ ಮತ್ತು ಅಂಚೆವೆಚ್ಚ ಪ್ರತ್ಯೇಕ

ಪೆಟ್ಟಿನ ವಿವರ ವ್ಯಾಪಾರಿಗಳಲ್ಲಾಗಲೀ ಅಥವಾ ಈ ವಿಳಾಸದಲ್ಲಾಗಲೀ ಸಿಗುವುದು —

South India Chemicals, LU/ ROAD Mylapore Madras

ನಮ್ಮ ಪ್ರವರ್ತಕರು—ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

Old! *Famous!*

East & West Insurance Co., Limited.

Bonus Declared Rs 15/- Per Thousand Per Annum

Insurance in Force About	Rs 90,00,000
Annual Premium Income Over	Rs 4,50 000
Life Fund Over	Rs 7,00,000

Prompt Settlement of Claims
Low Rates of Premium and Various Attractive Plans.

Attractive and liberal agency contracts are offered to honest influential gentlemen

Inquiries Solicited—
Messrs Padubidri Bros, *Chief Agents* PADUBIDRI BOMBAY
or
Head Office East & West Buildings, Apollo Street, Fort Bombay

'ಜ್ಯೋತಿ'

ಸಚಿತ್ರ ಕನ್ನಡ ಮಾಸಪತ್ರಿಕೆ.

ಸಂಪಾದಕರು—ಕೆ ಹೈದರ್

ಸುರಸವಾದ ಕಥೆ, ಕವನಗಳು, ವಿಚಾರ ಪರಿಪ್ಲುತ ಲೇಖನಗಳು.
ಕಮನೀಯವಾದ ಚಿತ್ರಗಳು'

ವಾರ್ಷಿಕ ಚಂದಾ ರೂ ೧—೮—೦
ಬಿಡಿಸಂಚಿಕೆ ರೂ. ೦—೨—೦.
ಜ್ಯಾಹೀರಾತ ದಾರರಿಗೆ ಅತ್ಯುತ್ತಮ ಮಾಧ್ಯಮ

$1\frac{1}{4}$ CRORE

Karnatics know nothing of your products,— Advertise them in

Swadeshabhimani

the pioneer Weekly of the South Kanara District

For advertisement rates apply

The Advertisement Manager,
Swadeshabhimani
Mangalore

ಪ್ರಶಂಸೆ.

ಪ್ರಖ್ಯಾತ ಅಮೆರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ

ವಿ—ಮೊ—ಲ

VIM-O-LA

ಅಮೆರಿಕಾದ ಜೀವಸಾರ ವಸ್ತು.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ ಹೊಟ್ಟೆಯಲ್ಲಿ ಚೆಂಡಿನಂತೇಳುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಗೊಳಿಸುವ ಶಕ್ತಿವರ್ಧಕ ಪಾನೀಯ ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ. ಬಾಟ್ಲಿ 1ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ ಸ್ಟಾಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ

"Vimola Depot'

Manufactured by

American Herbal Products Co.,
Sole representative above medicern
The Manager
The National Kanara News Agency,
Sir Phirozsha Metha Road,
Fort Bombay.

ಲೇಡಿಸ್ ಬಾಂ

ಸ್ತ್ರೀಯರ ಜೀವನಾಧಾರ

ಸ್ತ್ರೀಯರು ಪುಷ್ಟರಾಗಿಯೂ ಕಾಂತಿಯುಕ್ತರಾಗಿಯೂ ಇರಬೇಕಾದರೆ ಅವರ ಮುಟ್ಟುದೋಷ, ಆ ಸಮಯದಲ್ಲಿ ಕಂಡುಬರುವ ಹೊಟ್ಟೆನೋವು ಸೊಂಟ ಹಿಡಿತ ಗಂಟುನೋವು, ಮೈಯಲ್ಲಿ ದಡಿಕೆ ಬೀಳುವುದು, ಬಿಳೀ ಶೆರಗ ಗರ್ಭಕೋಶದ ನೋವು, ಅಕ್ರಮ ರೀತಿಯಿಂದ ಮುಟ್ಟಾಗುವಿಕೆ, ಬಂಜೆತನ, ಸಾಧಾರಣ ಸ್ತ್ರೀ ವಿಕಾರ ಮತ್ತು ಅವರ ಅನೇಕ ತರದ ಗುಪ್ತರೋಗಗಳನ್ನು ನಿವಾರಿಸಲು ಇದರ ಒಂದೇ ಒಂದು ಶೀಸೆಯನ್ನು ಉಪಯೋಗಿಸಿದರೆ ಗುಣವನ್ನು ಕಾಣುವಿರಿ

ಉಪಯೋಗಿಸಿದವರ ಅಭಿಪ್ರಾಯ.—

ರಾಮಕೃಷ್ಣ ಜೈನ್ ಬಿ ಎ ಲಾಹೋರ್ "I found your Ladies Balm worth the money I spent on it"

ಯಾವ ತೆರದ ಔಷಧಿಯಿಂದಲೂ ಬಹಿಷ್ಟೆಯು ಆಕದ ನನ್ನ ಹೆಂಗಸು ... ಅಸಮರ್ಥರೆಂದಾದರೆ ನಮ್ಮ ಲೇಡಿಸ್ ಬಾಮನ್ನು ಉಪಯೋಗಿಸಿರಿ ಒಂದು ತಿಂಗಳ ಔಷಧಿಯಿರುವ ಶೀಸೆ 1ಕ್ಕೆ ರೂ ೩—೦—೦ ವಿ ಪಿ ಖರ್ಚು ೦—೮—೦

ತಯಾರಿಸುವವರು—**ದಿ. ಬಿಹಾರ್ ಕೆಮಿಕಲ್ ವರ್ಕ್ಸ್, ಬಾಗಲಪುರ.**

ಏಜಂಟರು—ಷಹಾ ಕಂಪೆನಿ, ಗ ಕೋಲೇಜ ಎದುರ ಮಂಗಳೂರು.

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ.

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು.

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

ಕೆಲಸದ ಫಲಿತಾಂಶ.		ಲೈಫ್ ಫಂಡ್
1925—	ರೂ 21,24,250	500
1929—	ರೂ 1 66,18 620	9,32,900.
1934—	ರೂ 46 77 223	49 08,771.

ಕ್ಲೈಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ ಕಂಪೆನಿಯ ಆಸ್ತಿ—57,00,000ಕ್ಕೆ ಮೀರಿದೆ. 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ ಲಾಭಹೊಂದಬೇಕಾಗಿದೆ ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ 'ಲಕ್ಷ್ಮಿ'ಯಲ್ಲಿವೆ.

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co, Ltd.,
Madras Branch,
No 6, Sankuram Chetty St, G T MADRAS

ದಿ ಲಕ್ಷ್ಮಿ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6, ಸಂಕುರಾಮ ಚೆಟ್ಟಿ ಬೀದಿ, ಜಿ. ಟಿ ಮದ್ರಾಸು

The Canara Banking Corporation Udipi, Ltd.

Head office:—UDIPI, S. K. (Incorporated in British India) Tel.'BANKING' —**ESTD. 1906.**

Branches:—1. Udipi, 2 Goondapoor, 3. Car Street, Mangalore, 4 Shimoga, 5 Madras, 6. Bunder Mangalore, 7. Mercara.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟ ದೇಶೀಯ ಸಾರ್ವಜನಿಕ ಮೊದಲನೇ ಬೇಂಕು ಇದೇ ಆಗಿರುತ್ತದೆ.

ಅಧಿಕೃತ ವ ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಎತ್ತಿ ಬಂದ ಮೂಲಧನ	ರೂ 3,50,000—0—0
ತೆತ್ತು ಬಂದ ಮೂಲಧನ	2,64,315—0—0
ಕ್ಷೇಮನಿಧಿ ಮತ್ತು ಇತರ ಅಪದ್ಧನಗಳು	3,16,947—0—0

ಚಾಲ್ತಿ ಸೇವಿಂಗ್ಸ್ ಬೇಂಕ್, ಕಾಯಂ ವ ಅಲ್ಪ ಅವಧಿಯ ಠೇವಣಾತಿಗಳು ಸ್ವೀಕರಿಸಲ್ಪಡುವುವು' ಯೋಗ್ಯ ಜವಾಬ್ದಾರಿಯ ಮೇಲೆ ಸುಲಭ ದರದ ಬಡ್ಡಿಯಿಂದ ಸಾಲಗಳು ಕೊಡೋಣಾಗುವುವು। ವಿನಿಮಯ ಸೌಕರ್ಯವೇ ಪ್ರಾಮುಖ್ಯ ಲಕ್ಷಣ।

ಬೊಂಬಾಯಿ, ಮದ್ರಾಸು, ಕರಾಚಿ, ಕಲ್ಕತ್ತಾ ಮೊದಲಾದ ಪ್ರಾಮುಖ್ಯ ಪಟ್ಟಣಗಳಿಗೆ ಹಣವನ್ನು ತಂತಿ ಮೂಲಕವಾಗಲೀ ದಿವಾಂಡ್ ಡ್ರೆಫ್ಟ್ ಮೂಲಕವಾಗಲೀ ಅತಿ ಸುಲಭ ವೆಚ್ಚದಿಂದ ಕಳುಹಿಸುವ ಸೌಕರ್ಯವು ನಮ್ಮಲ್ಲಿದೆ ಬೇಂಕಿಗೆ ಸಂಬಂಧಪಟ್ಟ ಇತರ ಎಲ್ಲಾ ವಹಿವಾಟುಗಳೂ ನಡೆಸಲ್ಪಡುವುವು

ಹೆಚ್ಚಿನ ಮಾಹಿತಿ ಬಗ್ಗೆ ನಮ್ಮ ಯಾವುದೇ ಆಫೀಸಿಗೆ ಬರೆಕೊಳ್ಳಿರಿ.

ಕೋರ್ಪರೇಶನ್ ಆಫೀಸು, ಉಡುಪಿ, 16-5-35

M. Shrinivas Prabhu,
Manager

Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.
ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು
ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು
ಕಡ್ಡಿಯ ಮುಲಾಮಿನ 'ಕಿಂಗ್ ಎಂಡ್ ಕ್ವೀನ್' ಎಂಬ ವ್ಯಾಪಾರದ
ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಂಕೆಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಈ ಕಂಪೆನಿಯಲ್ಲಿ ದೊರೆಯುವುದು

ರಜತೋತ್ಸವ ವರ್ಷ. ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್ ಸ್ಥಾಪನೆ 1910) ರಜತೋತ್ಸವ ವರ್ಷ.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಚೆಯರ್‌ಮೆನ್:—ಸರ್ ಲಲ್ಲೂಭಾಯಿ ಸಮಲ್ದಾಸ್, ಕೆಟಿ ಸಿ ಐ ಇ ಜೆ ..)

ಇದರ ದಕ್ಷಿಣ ಹಿಂದುಸ್ಥಾನ ವ ತ. ದೇಶೀಯ ಸಂಸ್ಥೆಗಳ ಶಾಖಾ ಕಾರ್ಯದರ್ಶಿಗಳು ಮುಂಬಾಯಿ ನಗರ ಮತ್ತು ಉಪನಗರಗಳ ಪ್ರಾಮುಖ್ಯ ಏಜಂಟರು

ಪೋಲಿಸಿದಾರರು ಮತ್ತು ಏಜಂಟರುಗಳಿಗೆ ನಮ್ಮ ಸಂದೇಶ —

ಕಳೆದ ಕಾಲು ಶತಮಾನಕ್ಕೆ ಮಿಕ್ಕಿದ ನಮ್ಮ ಜೀವವಿಮೆಯ ಪವಿತ್ರವ ಸೇವೆಯಲ್ಲಿ ನಾವು ನಮ್ಮ ಪೋಲಿಸಿದಾರರ ಮತ್ತು ಏಜಂಟರ ಹಿತವನ್ನೇ ನಮ್ಮ ಧ್ಯೇಯವನ್ನಾಗಿ ಮಾಡಿಟ್ಟುಕೊಂಡು ಮುಂದರಿಯುತ್ತಾ ಬಂದಿರುವೆವು ಅವರ ಕಷ್ಟಗಳೂ ಆಶೆಗಳೂ ಮತ್ತು ಆಶಯಗಳೂ ನಮ್ಮದೆಂದೇ ಪರಿಗಣಿಸುತ್ತಾ ಬಂದಿರುವೆವು ಹಿಂದೀ ಜೀವವಿಮಾ ಪ್ರಪಂಚದ ನಮ್ಮ ಅನುಲಕ್ಷ್ಯಣೀಯವೂ ಅನುಭೂತಪೂರ್ವವೂ ಆದ ವಿಜಯದ ರಹಸ್ಯವು ಇದರಲ್ಲೇ ಅಡಕವಾಗಿದ್ದು ನಾವು ನಮ್ಮ ವ್ಯವಹಾರದಲ್ಲಿ ಒಂದು ಕೋಟಿಯಷ್ಟು ಮೊಬಲಗಿನ ಪೋಲಿಸಿಗಳನ್ನು ಜ್ಯಾರಿಯಲ್ಲಿಟ್ಟುಕೊಳ್ಳುವಷ್ಟು ಸಮರ್ಥರನ್ನಾಗಿ ಮಾಡಿರುತ್ತದೆ ಅತ್ಯಂತ ಅಭಿಮಾನಾಸ್ಪದವಾದ ನಮ್ಮ ಮಹತ್ವಾದ ಲಾಭವೆಂದರೆ—ಒಂದೆರಡು ಉದಾಹರಣೆಗಳಲ್ಲದೆ ಕಳೆದ 25 ವರ್ಷಗಳ ಅವಧಿಯಲ್ಲೂ ನಮ್ಮ ಶತಾಧಿಕ ಏಜಂಟರುಗಳಲ್ಲಿ ಒಬ್ಬರಾದರೂ ನಮ್ಮೊಡನಿರುವ ನಿಕಟಸಂಬಂಧವನ್ನು ಮುರಿದಿಕ್ಕಿರುವುದಿಲ್ಲ

ಜೀವವಿಮಾ ವಿಕ್ರಯಕ್ರಮಗಳಲ್ಲಿ ಸಂಪೂರ್ಣ ತರಬೇತಿ ಕೊಡಲಾಗುತ್ತದೆ ಚತುರರಾದ ಉತ್ಸಾಹೀ ತರುಣರ ಭಾವೀ ಕಲ್ಯಾಣವಾಗುತ್ತದೆ

ನಮ್ಮ ಈ ಕೆಳಗಿನ ಯಾವುದಾದರೂ ಆಫೀಸುಗಳಿಗೆ ಬರೆಯಿರಿ ಅಥವಾ ಸ್ವತಹ ಬಂದು ಕಾಣಿರಿ —

(1) ಇಸ್ಮಾಯಿಲ್ ಬಿಲ್ಡಿಂಗ್, ಲೋಹರ್ ಚಾಲ್, ಮುಂಬಯಿ ನಂ 2 (2) ಪೋಸ್ಟ್ ಬಾಕ್ಸ್ 387, ಮೌಂಟ್ ರೋಡ್ ಮದ್ರಾಸು (3) ವಿಶ್ವೇಶ್ವರಪುರಂ, ಬೆಂಗಳೂರು ಸಿಟಿ (4) ಹಜೂರ್ ರೋಡ್, ಕಲ್ಲಿಕೋಟೆ (5) ರಥಬೀದಿ, ಮಂಗಳೂರು (6) ಉಡುಪಿ, ದಕ್ಷಿಣ ಕನ್ನಡ

Karnataka Chemical and Pharmaceutical Works, Ltd., Udipi. (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್ಹೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು, ಖರ್ಚು ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ.

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)

ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲೆಂಟೈನ್, ಆರೋರಾ ಕ್ರೀಮ್, ಕ್ರಿಪೊರ್ ಲಿಪೊಸಿಸ್, ಕರ್ಣಾಟಕ ರೋಸ ಪೊಮೇಡ್. ಇದಲ್ಲದೆನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲೋಪೆತಿಕ್ ಔಷಧಗಳೂ, ಫೌಂಟನ್ ಪೇನು ಶಾಯಿಗಳೂ ಸಿದ್ಧವಾಗುವುವು.

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಜ್ಜಪ್ಪ ಬಾಳಿಗೆ

ಹೆಡ್ ಆಫೀಸು ಮತ್ತು ಕಾರಖಾನೆ —ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೊ —(1) ದೇವಕರಣ ಮೆನ್ಶನ್ಸ್, 46 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2

ಏಜಂಟ್ಸ್— (2) 1/70 ನ್ಯಾನಪ್ಪ ನ್ಯಾಕನ ಬೀದಿ, ಜಾರ್ಜ್ ಟೌನ್ ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ., ಮಂಗಳೂರು.

Edited, Printed & Published By A. S. Kamath at the Sharada Press, Car Street, Mangalore.

For Quality Snuff
H. Rama Rao and Sons.
High Class Snuff Manufacturers
Mangalore, S I
ASK FOR -
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY
Buy a policy in THE BOMBAY LIFE
Madras Branch, Secretaries
Kochikar Brothers,
Udipi Mangalore Bangalore Madras, Bombay and Calicut

ESTABLISHED 1906
(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟನಾಗುವ ವಾರಪತ್ರಿಕೆ.

ಪುಸ್ತಕ ೨೮. ಮಂಗಳೂರು ತಾ. ೧೪ನೇ ಶುಕ್ರವಾರ ಜೂನ್ ೧೯೩೫ (14-6-'35) ಸಂಚಿಕೆ ೨೪

ಬಲೂಚಿಸ್ಥಾನದಲ್ಲಿ ದಿನಂಪ್ರತಿ ಭೂಕಂಪವಾಗುತ್ತಿದೆ!

೬೦,೦೦೦ ಜನರಾದರೂ ಮೃತ್ಯುವಶರಾಗಿರಲಾರರೇ?

ಪ್ರಾಂತ್ಯದ ಪುನರ್ರಚನೆಗೆ ೧೦ ಕೋಟಿ ರೂಪಾಯಿಗಳು ಬೇಕಾಗುವುವು'

ಮುಂಬಾಯಿ ಜೂನ್ ೧೧

ಬಲೂಚಿಸ್ಥಾನದಲ್ಲಿ ದಿನಂಪ್ರತಿಯೆ ಒತ್ತೆ ಭೂಮಿಯು ಕಂಪಿಸ ತೊಡಗಿ [illegible] ಬಂದ ವಾರ್ತೆಯಿಂದ [illegible] ಸಂಬಂಧಿತವಾಗಿ [illegible] ತಿಳಿದುಬಂದಿದೆಯಾದರೂ [illegible] ಇನ್ನೂ ೨೦,೦೦೦ಕ್ಕೆ [illegible] ವರೆ [illegible] ದೊಡ್ಡ ದೊಡ್ಡ ಕಟ್ಟಡ [illegible] ಗಳಿಗಿಯಲ್ಲಿ ಸಿಲುಕಿರುವವರನ್ನು ಹೊರಗೆತೆಗೆಯಲಾಗದ ಅಸಾಮರ್ಥ್ಯವು ಬಂದೊದಗಿದೆಯಾದುದರಿಂದ [illegible] ಜನರು ಅಲ್ಲಲ್ಲಿಯ ಕಟ್ಟಡಗಳಡಿಯಲ್ಲಿ ಸಿಕ್ಕಿರುವುದು ಸಂಭವನೀಯವೆಂದು ಊಹಿಸಲಾಗಿದೆ ಭೂಕಂಪವು ರಾತ್ರಿ ಹೊತ್ತು ನಡೆದ [illegible] ಗಾಢನಿದ್ರಾವಶರಾಗಿರುವ ಪ್ರಾಂತ್ಯದಲ್ಲಿ— ಈಗ ಲೆಕ್ಕಕ್ಕೆ ಸಿಕ್ಕಿರುವುದಕ್ಕಿಂತ ಹೆಚ್ಚು ಜನರು ಸತ್ತಿರುವುದು ಖಚಿತವೆಂದು ಹೇಳುವವರಿದ್ದಾರೆ

ಮುಂಬಾಯಿ ಜೂನ್ ತಾ ೧೧

ಕ್ವೆಟ್ಟಾ, ಕಲಟ್, ಮಾಸ್ತುಂಗ್ ಮೊದಲಾದ ನಗರಗಳನ್ನೂ, ಇಡೀ ಪ್ರಾಂತ್ಯವನ್ನೂ ಪುನರ್ರಚಿಸುವುದಕ್ಕೆ ಸರಕಾರವು ೧೦ ಕೋಟಿ ರೂಪಾಯಿಗಳನ್ನಾದರೂ ವೆಚ್ಚಮಾಡಬೇಕಾದ ಅವಶ್ಯಕತೆಯಿದೆ ಇಂಡಿಯಾ ಸರಕಾರವು ಇಷ್ಟೊಂದು ಹೇರಳ ದ್ರವ್ಯವನ್ನು ವೆಚ್ಚಮಾಡುವುದಾದರೂ ಎಲ್ಲಿಂದ? ಹೀಗಿರುವಾಗ ಈ ಪ್ರಾಂತ್ಯವು ಇನ್ನು ಸದ್ಯಕ್ಕೆ ಜನರ ವಾಸಕ್ಕೆ ಪ್ರಯೋಜನಕಾರಿಯಾಗುವಂತಿಲ್ಲವೆಂಬ ಮಾತು ಸಕಾರಣಯುಕ್ತವಾದುದು

ವಾರ್ಧಾದಲ್ಲಿದ್ದು, ಭೂಕಂಪದಿಂದ ನೊಂದವರ ಸೇವೆಯನ್ನು ಹೇಗೆ ಮಾಡಬೇಕೆಂದು ಸಹಾಯ ಸಮಿತಿಗಳಿಗೆ ಬೋಧಿಸುತ್ತಿರುವ ಮಹಾತ್ಮಾಜೀಯವರು.

ಮುಂಬಾಯಿ ಜೂನ್ ತಾ ೧೧

ಬಾಬು ರಾಜೇಂದ್ರ ಪ್ರಸಾದರು ತನ್ನ ಮುಂಬಾಯಿ ಸಂಸ್ಥಾನದ ಸಂಚಾರ ಕಾರ್ಯಕ್ರಮವನ್ನು ರದ್ದುಗೊಳಿಸಿರುತ್ತಾರೆ ವಾರ್ಧಾಕ್ಕೆ ತೆರಳಿ ಕ್ವೆಟ್ಟಾದಲ್ಲಿ ಸಹಾಯಸಮಿತಿಗಳು ಹೇಗೆ ಕಾರ್ಯನಿರ್ವಹಣ ಮಾಡಬೇಕೆಂದು ಮಹಾತ್ಮರೊಡನೆ ವಿಚಾರಿಸಿಕೊಳ್ಳಲಿರುವರು ಸಹಾಯ ಮಾಡಲಿಚ್ಛಿಸುವ ದೇಶಿಗರೆಲ್ಲರಿಗೂ ಕ್ವೆಟ್ಟಾ ನಗರದೊಳಗೆ ಪ್ರವೇಶವನ್ನು ಕೊಡಬೇಕೆಂದು ಮಹಾತ್ಮರು ವೈಸರಾಯರೊಡನೆ ಕೇಳಿಕೊಳ್ಳಲಿರುವರು ಮಹಾತ್ಮರ ಸಲಹೆಗಳ ಮೇರೆಗೆ ಕೊಂಗ್ರೆಸ್ಸಿನ ಸಹಾಯಸಮಿತಿಗಳು ಕೆಲಸ ಮಾಡುವುವು

ಕರಾಚಿ, ಜೂನ್ ತಾ. ೧೧

ಕರಾಚಿಯಲ್ಲಿ ಡಾ। ಚಿತ್ತೋರಾಮ್ (ಸಿಂಧ್ ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷರು) ಕ್ವೆಟ್ಟಾದ ಜನರಿಗೆ ಸಹಾಯವನ್ನೀಯಬೇಕೆಂದು ಮನವಿಗಳನ್ನು ಹೊರಡಿಸಿರುವರು. ಇಪ್ಪತ್ತರ ತನಕ ತಮ್ಮ ಹಸ್ತಗತವಾಗಿರುವ ಸಹಾಯ [illegible] ಕೇಂದ್ರ [illegible] ತಿಳಿಸಿರುವರು.

ಕರಾಚಿ ಜೂನ್ ತಾ ೧೧

[illegible] ಕೊಂಗ್ರೆಸ್ [illegible] ಜನರಿಗೆ [illegible] ಹೊಸ್ಪಿಟಲ್ [illegible] ಜನ ರೋಗಿಗಳಿಗೂ [illegible] ಚಿಕಿತ್ಸೆ [illegible] ಇದನ್ನು [illegible] ಧನವೂ ಇದೆ

Latest News.

[illegible]

ಕಾಶ್ಮೀರದ ಶಂಕರಾಚಾರ್ಯ ತಕ್ತ್ ಹಿಲ್ ಎಂಬ ಪರ್ವತವು ಒಡೆದು ಹೋಗಿರುವುದರಿಂದ ಅಲ್ಲಿ ಬೇಗನೇ ಭೂಕಂಪವಾಗಲಿರುವುದೆಂದು ಒಂದು ಪತ್ರಿಕೆಯು ಪ್ರಕಟಿಸಿದ ವರ್ತಮಾನವಾಗಿ ಅಲ್ಲಿಯ ಜನರು ದಿಗಿಲುಗೊಂಡಿರುವರು ಸರಕಾರವು ಒಂದು ಪ್ರಕಟಣೆಯನ್ನು ಮಾಡಿ ಅಂತಹ ಊಹನೆಯು ಅಸಂಗತವಾದುದೆಂದು ತಿಳಿಸಿರುತ್ತದೆ

ಚಕ್ರ

(All Rights Reserved)

ಈ ದೇಶವೆಲ್ಲ "ಡೋಂಗಿ ಬಜಾರ್" ಕಾಣಿರಯ್ಯಾ! ಇದಕ್ಕೆ "ಡೋಂಗಿ ಬಜಾರ್" ಎಂಬ ಹೆಸರನ್ನೇ ಬ್ರಿಟಿಷರು ಕೆಲವರು ಕೂಡ ಇಟ್ಟರೆ ಏನೂ ಅಭ್ಯಂತರ ಇಲ್ಲ! ಹಿಂದೂಸ್ಥಾನ, ಭಾರತವರ್ಷ, ಮಾತೃಭೂಮಿ, ಎಂದು ಈ ನೆಲವನ್ನು ನಾನಾ ರೀತಿ—ಪ್ರೇಮಪುರಸ್ಸರ ಶಬ್ದಗಳನ್ನು ಒಟ್ಟುಗೂಡಿಸಿ—ಕರೆಯುವ ಪುಣ್ಯಾತ್ಮರ ಬಾಯಿಗೆ ಬೀಗ ಹಾಕಿ, ಇದಕ್ಕೆ "ಡೋಂಗಿ ಬಜಾರ್" ಎಂದು ಹೆಸರಿಟ್ಟರೆ ಶ್ರೇಯಸ್ಸಿದೆಯೆಂದು ನಾನು ಒತ್ತಿ ಒತ್ತಿ ಹೇಳುತ್ತೇನೆ. ಹೀಗೆ ನಾನು ಹೇಳಿದೊಡನೆ ಉದ್ರೇಕಗೊಂಡು "ನಮ್ಮ ಮಾತೆಗೆ ದ್ರೋಹವೆನ್ನೆಸಗಿದ ಸಾಯ್ಬನೇ ಸಾಯು ಬಾ!" ಎಂದು ಹಲ್ಲಿರಿದು ನನ್ನನ್ನು ದ್ವಂದ್ವಯುದ್ಧಕ್ಕೆ ಕರೆಯುವವರು ಕಡಮೆಯಿಲ್ಲ. ಈ ಡೋಂಗಿ ಬಜಾರುಗಳಲ್ಲಿ ವಾಸಿಸುವವರಲ್ಲಿ ಇವರೂ ಹಲವರು!

× × × × × ×

ಮಹಾತ್ಮಾ ಗಾಂಧಿಯವರು ಮಂಗಳೂರಿಗೆ ಬರುತ್ತಾರೆಂದು ಸುದ್ದಿಯಾದುದೇ ಸರಿ—ಸ್ವದೇಶೀ ಸ್ಟೋರು ಗಳಲ್ಲಿ ಖದ್ದರ್ ವಸ್ತ್ರಕ್ಕೂ, ಖಾದಿ ಟೋಪಿಗಳಿಗೂ ಬಹಳ ಗಿರಾಕಿ! ಕಬಾಟಿನ ಬಾಗಿಲು ತೆರೆಯುವಷ್ಟು ಪುರುಸೊತ್ತಿದ್ದಿಲ್ಲ

× × × × × ×

ಎಷ್ಟೋ ಜನರ ಹೃದಯಕಮಲವು ಪ್ರಫುಲ್ಲಿತವಾಯಿತು—ಆನಂದದಿಂದ ಪುಳಕಿತವಾಯಿತು. ಹರಿಜನರನ್ನು ನೋಡಿದೊಡನೆ ಒಮ್ಮೆ ನುಂಗಿಬಿಡುತ್ತೇವೆಂದು ಕ್ರೋಧವನ್ನು ಪ್ರದರ್ಶಿಸಿದವರು ನವಬ್ರಹ್ಮರ್ಷಿಗಳು! ಹರಿಜನರನ್ನು ತಮ್ಮ ಮನೆಮಂದಿರಗಳಿಗೆ ಬರಮಾಡಿ ಅವರಿಗೆ ಬಟ್ಟಲು ತುಂಬಾ ಅನ್ನ ಹಾಕಿ, ಅವರಿಗೆ ಉಡಿಗೆ ತೊಡಿಗೆ, ಹಣಕಾಸುಗಳನ್ನು ಕೊಟ್ಟು ಧನ್ಯರಾದವರೂ ನಮ್ಮಲ್ಲನೇಕರು! ಮಹಾತ್ಮರು ಈ ಬಜಾರಿನಲ್ಲಿದ್ದಷ್ಟು ಕಾಲ ಇಂತಹ ಉತ್ಸಾಹ! ಆವೇಶ!

× × × × × ×

ಮಹಾತ್ಮಾ ಗಾಂಧಿಯವರು ಅತ್ತ ತಿರುಗಿದಾದೇ ತಡ! ಹರಿಜನ ಪ್ರೇಮಿಗಳೆಂಬ ನಮ್ಮವರ ಬಾವಿಯಲ್ಲಿನ ನೀರು ಒಣಗಿಯೇ ಹೋಯಿತು. ಅವರ ಹೃದಯಸರೋವರದಲ್ಲಿ ನಲಿದಾಡುತ್ತಿದ್ದ ಉತ್ಸಾಹದ ಮೀನುಗಳು ಸತ್ತೇ ಹೋದುವು. ಅವುಗಳ ಶವಗಳನ್ನು ತಿನ್ನುವವರೂ ಕೂಡಾ ಇಲ್ಲದೆ ಹೋಗುವಂತಾಯಿತು

× × × × × ×

ಉದಾಹರಣೆಗಳಲ್ಲಿ ಎರಡು ಜಾತಿ. ಒಂದನೇಯದ್ದು ಜೀವಂತ ಉದಾಹರಣೆ, ಎರಡನೇಯದ್ದು ಮೃತ ಉದಾಹರಣೆ. ಜೀವಂತ ಉದಾಹರಣೆಯೊಂದನ್ನು ಮಾತ್ರ ತೆಗೆದುಕೊಂಡರೆ—ಮೂಲ್ಕಿಯಲ್ಲಿ ಕೆಲವು ಹರಿಜನರಿಗೆ ಒದಗಿದ ಸಂಕಷ್ಟವೇನೆಂದು ಕಳೆದ ಸಂಚಿಕೆಯಿಂದ ನಿಮಗೆ ತಿಳಿದುಬರಬಹುದು

× + × × × ×

ಭಾಷಣದಲ್ಲಿ ಹರಿಜನಪ್ರೇಮಿಗಳು! ಮನೆಯಲ್ಲಿ ಹರಿಜನ ದ್ವೇಷಿಗಳು! ಬಾಯಿಯಲ್ಲಿ ಹರಿಜನ ಸೇವಕರು. ಕಾರ್ಯದಲ್ಲಿ ಹರಿಜನವೈರಿಗಳು!—ಇಂತಹ ವಿಚಿತ್ರ ಬುದ್ಧಿ ಮನಸ್ಕರೂ ನಮ್ಮ ಈ ಬಜಾರಿನಲ್ಲಿರುವಾಗ ನಮಗೆ ಸ್ವರಾಜ್ಯವಾದರೂ ಹೇಗೆ ಸಿಗಬೇಕು?

× × × × × ×

ಸ್ವದೇಶಿ ಸ್ವದೇಶಿ ಎಂದು ಬೊಬ್ಬಿಡುತ್ತಾರಲ್ಲ ಅವರಲ್ಲೂ ಇಂತಹವರೇ ಹೆಚ್ಚು! ತಾವು ಖ್ಯಾರ್ ಖದ್ದರ್ಕ್ರಿಟ್ಸ್! ಹೆಂಡತಿಗೆ ಓಲ್ ಬ್ರಿಟಿಷ್ ವಸ್ತ್ರಗಳು!

× × × × × ×

ನಮ್ಮ ಸಾಯ್ಬನು ಒಬ್ಬ ಬ್ರಾಹ್ಮಣ ಹರಿಜನಬಂಧುವನ್ನು ಪ್ರಶ್ನಿಸಿದ—"ನಿಮ್ಮ ಹೆಂಗಸರು ಹರಿಜನರನ್ನು ಮನೆಯಂಗಳಕ್ಕೆ ಆಹ್ವಾನಿಸುವರೇ?" ಭಟ್ಟರ ಮುಖದಲ್ಲಿ ಕೋಪೋದ್ರೇಕವು ತುಂಬಿ ಒಡನೆ ಮಿಂಚು ಬಂತು! "ನಾವು ಗಂಡಸರು ಮಾತ್ರ ಹೀಗೆ, ಹೆಂಗಸರು ಅಷ್ಟು ಭಾವವಿಕಸಿತರಾಗಿಲ್ಲ" ಎಂದರು! ಶಹಭಾಸ್!

× × × × + ×

"ನೀವು ಮಾಡಿದ್ದು ತಪ್ಪು" ಎಂದು ಮಾತ್ರ ಯಾರೂ ಹೇಳಬಾರದು! ಕಂಡದ್ದನ್ನು ಕಂಡಂತೆ ಹೇಳಿದರೆ ಕೆಂಡದಂತಹ ಕೋಪಬರುತ್ತದೆ. ಹೇಳಿದರೆ ಸಾಯ್ಬನಿಗೂ ಅವನ ಕುಟುಂಬಿಕರಿಗೂ ಎಲ್ಲರಿಗೂ ಬೈದುಬಿಡುವಷ್ಟು ಜಾಣರೂ ಇರುತ್ತಾರೆ! ಹಾಗಿದ್ದರೂ, ಇಲ್ಲಿ ಭೂಕಂಪ ಮಾತ್ರ ಆಗಬಾರದು ದೇವರೇ!—ಆದರೂ, ಸಾಯ್ಬನು ಮೈದಾನಿನಲ್ಲಿರುವಾಗ ಆಗಲಿ!

'ಸಾಯ್ಬು'.

ಮಕ್ಕಳನ್ನು ಬಲಿಷ್ಠರನ್ನಾಗಿಯೂ ಆರೋಗ್ಯಕಾಯರನ್ನಾಗಿಯೂ ಮಾಡುವುದಕ್ಕೆ ಅವರಿಗೆ 'ಓವಲ್ಟಿನ್'ನನ್ನು ದಿನನಿತ್ಯದ ಪಾನೀಯವನ್ನಾಗಿ ಕೊಡುವುದೊಂದಲ್ಲದೆ ಬೇರೆ ನಿಶ್ಚಿತದಾರಿಯಿಲ್ಲ. 'ಓವಲ್ಟಿನ್'ನಲ್ಲಿ ಪ್ರಕೃತಿಸಿದ್ಧವಾಗಿರುವ ದೇಹವರ್ಧಕ ಆಹಾರ ಸಾರವಿದೆ. ಇದು ಮಕ್ಕಳ ಆರೋಗ್ಯ, ಶಕ್ತಿ, ಮೇಧಾಶಕ್ತಿ, ಸ್ನಾಯುಶಕ್ತಿ, ದೇಹಶಕ್ತಿಗಳಿಗೆ ಬೇಕಾದ ಪೋಷಣಾಸಾರಗಳನ್ನೊದಗಿಸಿಕೊಡುತ್ತದೆ. 'ಓವಲ್ಟಿನ್'ನ ಸೇವನೆಯಿಂದರೆ ದೇಹದಾರ್ಢ್ಯಕ್ಕೆ ಪಂಚಾಂಗ ವಿಟ್ಟಂತೆ.

'ಓವಲ್ಟಿನ್'ನನ್ನು ಎಲ್ಲಾ ಪ್ರಾಯದ ಮಕ್ಕಳೂ ಮೆಚ್ಚುತ್ತಾರೆ. ಅದರ ರುಚಿಕರವಾದ ಪರಿಮಳವನ್ನು ಅವರು ಆಸ್ವಾದಿಸಲಾಶಿಸುತ್ತಾರೆ. ತಮ್ಮ ಮಕ್ಕಳಿಗೆ ಇದನ್ನು ಕೊಡುವ ತಾಯಂದಿರು ಇದರ ಸತ್ಪರಿಣಾಮವನ್ನು ಕಂಡುಕೊಳ್ಳುವರು. ಮಸುಳೆಗಳಿಗೆ ಧಾರಾಳ ಚೇತನವಿತ್ತು ದಿನೇ ದಿನೇ ಅವರನ್ನು ಬಳೆಸಿ ರಾತ್ರೆ ಸಿದ್ಧಗೊಳಿಸುತ್ತದೆ.

ನಿಮ್ಮ ಚಹಕ್ಕೆ 'ಓವಲ್ಟಿನ್' ಸೇರಿಸಿರಿ,—ಅದು ಆರೋಗ್ಯಕರ ಬಲವರ್ಧಕ ಮತ್ತು ಶಕ್ತಿದಾಯಕ.

"ಓವಲ್ಟಿನ್"

ಮಿದುಳು, ನರ, ದೇಹಗಳನ್ನು ರಚಿಸುತ್ತದೆ.

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ದೊರೆಯುತ್ತದೆ

ಏಜಂಟ್—ಜೇಮ್ಸ್ ರೈಟ್ 8ಏ ಏಷನ್‌ಸ್ಟ್ರೀಟ್ ಕಲ್ಕತ್ತಾ ಮತ್ತು ಮುಂಬಾಯಿ, ಮದ್ರಾಸು

OV/325

ನೋಟೀಸು

ಕಾರ್ಕಳ ದಿ ಮುನ್ಸಿಫ್ ಕೋರ್ಟಿನಲ್ಲಿ

REP 1821 1934 (O S 787/30)

ಚಂದಪ್ಪ ಸೆಟ್ಟಿ ಅರ್ಜಿದಾರ ಮತ್ತು ಶಾಂತಿರಾಜ ಹೆಗ್ಗೆಯಾನೆ ಮಲ ಸಹಾ ಎದ್ರಿರುವವರೊಳಗೆ

ಕಾರ್ಕಳ ತಾಲೂಕ ಮಾಳ ಗ್ರಾಮದ ಕೊಡಂಗೆ ಎಂಬಲ್ಲಿರುವ ಪದ್ಮಪ್ಪ ಹೆಗ್ಡೇರ ಅಳಿಯ ಶಾಂತಿರಾಜ ಹೆಗ್ಗೆ ಯಾನೆ ಮಲ್ಲ 1, ಈತನ ತಂಗಿ, ಮ ತಮ್ಮ ಕಾರ್ಕಳ ತಾಲೂಕು ನೂರಾಳ್ಬೆಟ್ಟು ಗ್ರಾಮದ ಗುತ್ತುಗುತ್ತು ಎಂಬಲ್ಲಿರುವ ಗುಣವತಿ 2 ಮತ್ತು ಆನ ತರಾಜ 3 ಕೂಡಾ ಮೂರು ಜನರಿಗೆ ಮ ಇತರ ಸವ ಸ್ತರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ—ಅರ್ಜಿದಾರನು ವಾದಿಯಾಗಿ ನಿಮ್ಮ ಮೇಲೆ ಪಡೆದ ಈ ಕೋರ್ಟಿನ ಕ್ರಮನಂಬ್ರ 787/30 ನೇ ಡಿಕ್ರಿ ಸಮಾಧಾನದ ಬಗ್ಗೆ ನಡಿಸಿದ ಮೇಲ್ಕಂಡ ಅಮಲ್‌ಜ್ಯಾರಿಯಲ್ಲಿ ಕಾರ್ಕಳ ತಾಲೂಕು ಮಾಳ ಗ್ರಾಮದ ಪಟ್ಟಾ ನಂಬ್ರ 87—88ಕ್ಕೆ ಒಪ್ಪಿದ ಬಾಬ್ತು, ಮತ್ತು ಸರ್ವೆ ನಂಬ್ರ 185/1—2ನೇ ಸ್ಥಳ ಸಹಾ ಆಸ್ತಿಗಳಲ್ಲಿ ತಂದಿರುತ್ತಾ ಯಾವತ್ತೂ ಹಕ್ಕುಗಳನ್ನು ಏಲಂಗೆ ನಿಮಗಿರುವನಾಗಿಯೂ, ಸದ್ರಿ ಆಸ್ತಿಗಳು ಈ ಕೋರ್ಟಿನ ಬಹಿರಂಗವಾದ ಹರಾಜಿನಲ್ಲಿ ಇದೇ ತಾ. 17—6—35ರಲ್ಲಿ ಏಲಂ ಮಾಡಲ್ಪಡುವುದಾಗಿಯೂ ಈ ಮೂಲಕ ತಿಳಿಸೋಣವಾಗಿದೆ

ಕಾರ್ಕಳ, 11-4-35. — K. Sadasiv Bhat, Counsel for Ptr.

Lsted 1920] THE [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು

ಠೇವಣಾತಿಗಳ ದರ

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು.

Puttur, Dated 10—4—1935. — G. N. Lakshman Pai, *Secretary.*

ಸಾಹಿತ್ಯ ಸಂಗ್ರಹ.

ಕನ್ನಡ ಪ್ರಚಾರ ಮತ್ತು ಪ್ರಸಾರ.

'ಅಖಂಡಕರ್ನಾಟಕ' ಮಾಸಪತ್ರಿಕೆಯ "ವಿಚಾರವೇದಿಕೆ"ಯಲ್ಲಿ ಈ ಶಿರೋಲೇಖನದಿಂದ ಹೀಗೆ ಬರೆದಿದ್ದಾರೆ— 'ಹಿಂದೀ–ಕನ್ನಡ ವಾದದಿಂದ ಒಂದು ಮಾತು ನಿಷ್ಪನ್ನವಾಗುತ್ತದೆ. ಅದು ಹಿಂದೀ ಪ್ರಚಾರಕರ ಚಟುವಟಿಕೆ— ಕಾರ್ಯಕ್ಷಮತೆ. ಆದರೆ ಕನ್ನಡ ಪತ್ರಿಕೆಗಳು ಹೀಗೆ ಚಳವಳಿಯ ಗುಟ್ಟು ಗೊತ್ತಿದೆ, ಅಲ್ಪವೇತನದ ಮೇಲೆ ಪ್ರಚಾರಕರಾಗಿ ದುಡಿಯುವವರು ಅವರಿಗೆ ಹಲವರು ಸಿಕ್ಕುತ್ತಾರೆ. ಹೆಣ್ಣುಮಕ್ಕಳಲ್ಲಿ ಕೂಡ ಹಿಂದೀ ಪರೀಕ್ಷೆಗಳಿಗೆ ವ್ಯಾಸಂಗಮಾಡುವವರು ಸಾಕಷ್ಟು ದೊರೆತ್ತಾರೆ. ಹೆಣ್ಣುಮಕ್ಕಳ ವರೆಗೂ ಹೋದ ಚಳವಳಿಯು ಮುಟ್ಟುವೆಯೋ! ಅದು ಯಶಸ್ವಿಯಾಗಿದೆಯೆಂದೇ ಹೇಳಬೇಕು. ಇನ್ನು ಕನ್ನಡದಲ್ಲಿ ಲೇಖನಕಲೆಯಲ್ಲಿ ಚೆನ್ನಾಗಿ ಪರಿಶ್ರಮವುಳ್ಳ ಮಹಿಳಾಮಣಿಗಳು ಬಹಳ ಕಡಿಮೆ ಇದ್ದರೂ ಅವರೇಕೆ ಬೆಳಕಿಗೆ ಬರಲೊಲ್ಲರು! ಪರ್ದಾಪದ್ಧತಿಯ ಪ್ರಭಾವವೇನೋ!—ಏನೇ ಇರಲಿ, ಪ್ರತಿಫಲಾಪೇಕ್ಷೆಯುಳ್ಳದೆ ಹಿಂದಿಗಾಗಿ ಕೆಲಸಮಾಡುವ ಸಾರ್ವಜನಿಕರು ಬಹುಮಂದಿ ಆ ಚಳವಳಿಗೆ ಸಿಕ್ಕಿದ್ದರೆ, ಅದಕ್ಕೆ ವಿರುದ್ಧ ನಮ್ಮ ಕನ್ನಡ ಬಗ್ಗೆ ಹೀಗಿದ್ದರೂ ಕನ್ನಡದ ಪ್ರಚಾರ ಪ್ರಸಾರವಾಗುವುದಕ್ಕೆಂಬುದರ ಕುರಿತು [illegible] ಏಕವಾಕ್ಯತೆಯೂ ಕಂಡುಬರುತ್ತದೆ. ಆ ಬಗ್ಗೆ ಕೆಲವು ಸೂಚನೆಗಳನ್ನು ಮಾಡುವುದು ಅಪ್ರಸಕ್ತವಾಗಲಾರದು. (೧) ಸಾಹಿತ್ಯ ನಿರ್ಮಾಣಕ್ಕೂ ಸಾಹಿತ್ಯ ಪ್ರಚಾರಕ್ಕೂ ಸ್ವಲ್ಪ ಬಿಡುತ್ತದೆಂಬುದನ್ನು ನಮ್ಮ ಸಾಹಿತಿಗಳು ಗಮನಿಸಬೇಕು. ಅವರು ತಮ್ಮ ಪ್ರೀತಿಯ ಸಾಹಿತ್ಯವನ್ನು ಹುಟ್ಟಿಸಲಿ, ಅದರ ಜತೆಗೆ ಕನ್ನಡ ಸಾಹಿತ್ಯದ ಪರಿಚಯವು ಹಳ್ಳಿಗರಿಗೂ ಹೆಣ್ಣುಮಕ್ಕಳಿಗೂ ಆಗುವಷ್ಟು ಚಾತುರ್ಯದಿಂದ ಕೆಲಸ ನಡೆಸಲಿ. ಗಮಕಿಗಳಾದರೂ ಈ ಕಾರ್ಯದಲ್ಲಿ ಬಹಳ ಸಹಾಯ ಮಾಡಬಲ್ಲರು. (೨) ಹಳ್ಳಿಯ ಉಪಾಧ್ಯಾಯರನ್ನೂ ಹಳ್ಳಿಯ ಶಾಲೆಗಳನ್ನೂ ಮೇಲಣ ಕಾರ್ಯಸಾಧನೆಗಾಗಿ ಎಳೆಕೊಳ್ಳಬೇಕೆಂದು ಸಮ್ಮೇಳನದ ಅಧ್ಯಕ್ಷರು ಮಾಡಿದ ಸೂಚನೆಯನ್ನು ನಾವೆಲ್ಲರೂ ಗಮನಿಸುವುದು ಅತ್ಯವಶ್ಯಕ. (೩) ಜಿಲ್ಲೆಜಿಲ್ಲೆಗೆ ಸಾಹಿತ್ಯಸಮ್ಮೇಲನಗಳಾಗಬೇಕು. ಸಾಹಿತ್ಯಪ್ರಚಾರವು ಸಾಮಾನ್ಯರಲ್ಲಿಯೂ ಆಗುವಂತೆ ಅವುಗಳ ಕಾರ್ಯಕ್ರಮಗಳಿರಬೇಕು. ಅಷ್ಟು ವೈವಿಧ್ಯಪೂರ್ಣವೂ ಮನೋರಂಜಕವೂ ಅವುಗಳಾಗಬೇಕು. ಹಳ್ಳಿಯ ಉಪಾಧ್ಯಾಯರು ಅವುಗಳಲ್ಲಿ ಆಸ್ಥೆ ವಹಿಸುವಂತೆ ನೋಡಿಕೊಳ್ಳಬೇಕು. ಆಯಾ ಜಿಲ್ಲೆಯವರು ಒಂದು ಸಮ್ಮೇಲನ ಮುಗಿಸಿ ಮಲಗದೆ, ಇಡಿಯ ವರ್ಷ ಅಖಂಡವಾಗಿ ವಿವಿಧ ಸಾಹಿತ್ಯ ವಿಷಯಕ ಚಟುವಟಿಕೆಗಳನ್ನು ನಡೆಸಬೇಕು. (೪) ಸಾಹಿತ್ಯ ಪರಿಷತ್ತು ಕಾರ್ಯಕ್ಷಮವಾಗಿ, ಅಖಂಡಕರ್ನಾಟಕ ಸಾಹಿತ್ಯವಿಷಯಕ ಯೋಗಕ್ಷೇಮವನ್ನು ನೋಡಿಕೊಳ್ಳಬೇಕು. (೫) "ಕನ್ನಡ—ಕನ್ನಡ"ವೆಂದು ಗೊತ್ತುಗುರಿಯುಲ್ಲದ ಚಳವಳಿ ಮಾಡುವವರು, ವಿವಿಧ ಅಧಿಪತ್ಯಗಳಲ್ಲಿ ಕನ್ನಡಕ್ಕಿರುವ ತೊಡಕುಗಳು ಕನ್ನಡ ನಿಘಂಟು—ಕನ್ನಡ ಭಾಷಾಸವಿಕರಣ—ಕನ್ನಡ ಪರಿಭಾಷೆ—ಕರ್ನಾಟಕ ಏಕೀಕರಣ ಈ ಮೊದಲಾದ ಪ್ರಶ್ನೆಗಳನ್ನು ಆಸ್ಥೆಯಿಂದ ಅಭ್ಯಸಿಸಿ, ಅವನ್ನು ಬಿಡಿಸಲು ವ್ಯವಸ್ಥಿತವಾಗಿ ಪ್ರಯತ್ನಿಸಬೇಕು. ಸಂಘಟನೆಯಿಂದಲೆ ನಾವು ಬದುಕಬಲ್ಲೆವೆಂಬುದನ್ನು ನೆನೆಯೋಣ. ಸಂಘಟನೆಯಿಂದಲೆ ಆಂಧ್ರ—ಮಹಾರಾಷ್ಟ್ರೀಯರು ಮುಂದಾದರೂ—ನಾವೂ ಮುಂದಾಗುವೆವು.

ಅಭಿನಯ.

ಅಭಿನಯಕಲೆಯಲ್ಲಿ ಸುಪ್ರಸಿದ್ಧರಾದ ಶ್ರೀ ವರದಲಕ್ಷ್ಮಿಯಮ್ಮನವರೊಡನೆ ಮಾಡಿದ ಸಂಭಾಷಣದ ಆಧಾರದ ಮೇಲೆ 'ಕಲಾ' ಮಾಸಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಒಂದು ಭಾಗದಲ್ಲಿ ಹೀಗಿದೆ—"ನಮ್ಮ ದೇಶದಲ್ಲಿ ನಿಜವಾದ ಅಭಿನಯ ಕಲೆಯು ಕಣ್ಮರೆಯಾಗುತ್ತದೇ ಎಂಬ ಕಳವಳವುಂಟಾಗಿದೆ. ಅನೇಕ ಬಗೆಯ ಮಾರ್ಪಾಟುಹೊಂದಿದ ಸಾಮಾನ್ಯ ನರ್ತನವು ಅಲ್ಲಲ್ಲಿ ಕಂಡುಬರುತ್ತಿದ್ದರೂ ನಿಜವಾದ ಭಾರತ ಶಾಸ್ತ್ರ ಮತ್ತು ಅಭಿನಯಶಾಸ್ತ್ರವನ್ನರಿತು ಮಾಡುವ ಅಭಿನಯಗಳು ಅಪೂರ್ವವಾಗಿವೆ. ಕೆಲವು ವರುಷಗಳ ಹಿಂದೆ ಅಭಿನಯಕ್ಕೆ ಪೂರ್ಣ ಗೌರವವಿದ್ದಿತು. ರಾಜಾಸ್ಥಾನದಲ್ಲಿಯೂ ದೇವಾಲಯಗಳಲ್ಲಿಯೂ ನೃತ್ಯಶಾಸ್ತ್ರೀಯವಾದ ಅಭಿನಯ ನಡೆದು ಆ ಕಲೆಯ ಉಪಾಸಕರಿಗೆ ಉತ್ತಮವಾದ ಮರ್ಯಾದೆಯು ದೊರೆಯುತ್ತಿದ್ದಿತು. ಆದರೆ, ಇಂದು ಅದು ಮರೆಯಾಗುತ್ತಿದೆ. ಈ ಕಲೆಯ ತತ್ವವನ್ನರಿತು ಸುಪ್ರಸಿದ್ಧರಾಗಿದ್ದವರು ಕೆಲವರು ಈಗಲೂ ಜೀವಂತರಿರುವರು. ಬೆಂಗಳೂರು ಚಂದ್ರವದನಮ್ಮ, ಬೆಂಗಳೂರು ನಾಗರತ್ನ, ಮೈಸೂರು ಜಟ್ಟಿ ತಾಯಮ್ಮ ಮೊದಲಾದವರು ನನ್ನೊಡನೆಯೇ ವ್ಯಾಸಂಗ ಮಾಡಿದವರು. ಕುಡೂರು ರಂಗಸಾನಿ ಎಂಬವರೂ ಈ ಕಲೆಯಲ್ಲಿ ಸುಪ್ರಸಿದ್ಧರಾಗಿದ್ದರು. ನಾವೆಲ್ಲ ಸೀಡಾಮಂಗಲದ ಕಿರು ವೆಂಕಟಾಚಾರ್ಯರಲ್ಲಿ ಅಭಿನಯ ಕಲಿತವರು. ಇವರಲ್ಲಿ ಈಗಲೂ ಕೆಲವರು ಜೀವಂತವಿರುವರು. ನಾನು ನನ್ನ ೧೩ನೇಯ ವಯಸ್ಸಿನಲ್ಲಿಯೇ ಈ ಕಲೆಯನ್ನು ಕಲಿಯಲು ಆರಂಭಿಸಿದೆನು. ನಮ್ಮ ಗುರುಗಳಾದ ಕಿರು ವೆಂಗಟಾಚಾರ್ಯರು ನಮ್ಮ ಮೈಸೂರು ಆಸ್ಥಾನದಲ್ಲಿ ಮಹಾ ವಿದ್ವಾಂಸರಾಗಿದ್ದರು. ಇವರು ಭರತಶಾಸ್ತ್ರದ ಪ್ರಕರಣ ಮುಂತಾದ ಭರತಶಾಸ್ತ್ರ ಅಭಿನಯ ಶಾಸ್ತ್ರ ಸಂಬಂಧಗ್ರಂಥಗಳನ್ನು ರಚಿಸಿರುವರು. ನಾನು ನಾಲ್ಕೈದು ವರುಷ ವ್ಯಾಸಂಗ ಮಾಡಿದ ಮೇಲೆ ಆಳಿದ ಮಹಾಸ್ವಾಮಿಯವರಾದ ಚಾಮರಾಜೇಂದ್ರ ಒಡೆಯರ್ ಇವರ ಸಮ್ಮುಖದಲ್ಲಿ ಕೆಲವು ಅಭಿನಯ ಕಛೇರಿಗಳು ನಡೆದು ಅವರಿಂದ ಉತ್ತಮ ಸನ್ಮಾನಪಡೆದೆನು. ಶೃಂಗೇರಿ ಶ್ರೀ ಶೃಂಗೇರಿ ಜಗದ್ಗುರುಗಳ ಮತ್ತು ಶಾರದಾಪ್ರಸನ್ನರವರ ಸಮ್ಮುಖದಲ್ಲಿಯೂ ಅಭಿನಯ ನಡೆದು ಗುರುಗಳ ಹರಕೆ ದೊರೆಯಿತು. ನಂತರ ಸಂಸ್ಕೃತ ವ್ಯಾಸಂಗಕ್ಕಾರಂಭಮಾಡಿದೆನು. ಇದರಿಂದ ನನಗೆ ನಿಜವಾಗಿಯೂ ತುಂಬಾ ಸಹಾಯವು ದೊರೆಯಿತು. ಈ ಅಭಿನಯವು ಸುಮ್ಮನೆ ನೋಡಿ ಕಲಿಯುವ ವಿದ್ಯೆಯಲ್ಲ. ಗಾನದ ಅನುಭವ ಮಾಡಿಕೊಂಡು ಅಂತರ್ಯದಿಂದ ಹೊರಹೊರಡುವ ಭಾವಪ್ರದರ್ಶನವೇ ಅಭಿನಯ. ಅಭಿನಯವು ಉತ್ಕೃಷ್ಟವಾಗಿರಲು ಸಂಗೀತದಲ್ಲಿಯೂ ಸಂಸ್ಕೃತದಲ್ಲಿಯೂ ಚೆನ್ನಾದ ಜ್ಞಾನವಿರಬೇಕಾಗುವುದು. ಇಷ್ಟು ಮಾತ್ರವಲ್ಲದೆ, ಉತ್ತಮವಾದ ಶಿಕ್ಷೆಯೂ ಅಭ್ಯಾಸವೂ ಅತಿ ಮಿತವಾದ ಆಸಕ್ತಿಯೂ ಅಗತ್ಯ. ಉತ್ತಮ ರೂಪೂ, ಅಂದವಾದ ಮುಖಭಂಗಿಯೂ ಅಭಿನಯಕ್ಕೆ ಹೆಚ್ಚು ಕಳೆಕಟ್ಟಿಸುವುದು."

ಒಗಟುಗಳು

ಕರ್ನಾಟಕ ಸಂಸ್ಕೃತಿ ಎಂಬ ಶಿರೋನಾಮೆಯಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾದ ಲೇಖನದಲ್ಲಿ 'ಒಗಟುಗಳು' ಎಂಬ ಭಾಗದಲ್ಲಿ ಹೀಗಿದೆ— "ಗಾದೆಗಳಂತೆಯೇ ಒಗಟುಗಳು ಸರ್ವವ್ಯಾಪಿಯಾಗಿವೆ. ಆದರೆ ಗಾದೆಗಳಂತೆ ಇವು ದೈನಂದಿನ ವ್ಯವಹಾರದಲ್ಲಿ ಬೆರೆತುಹೋಗಿವೆಯೆಂದು ಹೇಳಲಾಗುವುದಿಲ್ಲ. ಗಾದೆಗಳು ಊಟಉಪಚಾರಗಳಂತೆ ಬಾಳಿನಲ್ಲಿ ಬೆರೆತಿದ್ದರೆ ಒಗಟುಗಳು ಅವುಗಳಂತೆ ಜೀವನದಲ್ಲಿ ಒಂದು ಸ್ಥಾನವನ್ನು ಪಡೆದಿವೆಯೆನ್ನಬಹುದು. ಸುಖ ದುಃಖಗಳಲ್ಲೆಲ್ಲ ಗಾದೆಗಳು ಬರುತ್ತವೆ, ಆದರೆ ಒಗಟುಗಳು ಬರುವುದಕ್ಕೆ ಮನಃಪ್ರಸಾದವು ಬೇಕು. ಹೇಳುವವನಿಗೂ ಕೇಳುವವನಿಗೂ ವಿನೋದಪ್ರಿಯತೆಯೂ, ರಸಿಕತೆಯೂ ಬೇಕು. ಜೊತೆಗೆ ಪ್ರಕಟವಾಗಿರುವುದನ್ನು ವಿಕಟವಾಗಿ ಮುಚ್ಚಿಟ್ಟು ಹುಡುಕಿನೋಡು ಎಂಬ ಆಟವಾಡುವ ಮನೋಭಾವವು ಬೇಕು.

ಮನುಷ್ಯನ ಮನಸ್ಸು ಗಿಡದಂತೆ ಬೇರೆ ಬೇರೆ ಅವಸ್ಥೆಗಳಲ್ಲಿ ಬೇರೆ ಬೇರೆ ಸಾಂಸ್ಕೃತಿಕ ಘಟ್ಟಗಳನ್ನು ತೋರುವುದುಂಟು. ಆದರೂ ಜೀವನಕ್ಕೆ ಸಹಜವಾದ ಚಿತ್ತಾನಂದವೂ ಎಲ್ಲಾ ಘಟ್ಟಗಳಲ್ಲಿಯೂ ಅಂಶಾಂಶವಾಗಿಯಾದರೂ ವ್ಯಕ್ತವಾಗುತ್ತದೆ. ಈ ಅಂಶಗಳೇ ಪೂರ್ಣವಾಗಿ ಕಳೆಗೊಂಡಾಗ ತಾಂತ್ರಿಕ (Mystic) ರಸಿಕ (Emotional) ಭಾವಗಳಾಗುವುವು. ಈ ಭಾವಬೀಜಗಳು ಕಾಲಕರ್ಮಗಳ ತುಯ್ದಾಟದಲ್ಲಿ ಸಿಕ್ಕಿ ಅನೇಕ ಪ್ರಕಟವಾಗುವುವು. ಅಂತಹ ಸಂದರ್ಭದಲ್ಲಿ ಮನಸ್ಸು ಸೃಷ್ಟಿಗೈವ ಹಂಬಲದಿಂದ ಮುಂಬರಿದು ಕಾವ್ಯಸೃಷ್ಟಿಗೆ ಕೈಯಿಕ್ಕುವುದು. ತಂತಿಯ "ಕಣ್ಣಿಗೆ ಕಾಣುವುದಿಲ್ಲ ಕಾಣದುದರ ಒಂದೊಂದು ಗುರುತು" ಎನ್ನುತ್ತ ಅಂತರ್ಮುಖಿಯಾಗಿ ಒಳನುಗ್ಗಿ ರಹಸ್ಯವನ್ನು ಭೇದಿಸಲು ಯತ್ನಿಸುವನು. ರಸಿಕನು ಈ ಪ್ರಯತ್ನಗಳ ಬಾಯಲ್ಲಿ ಫಲವನ್ನೂ, ಒಳಗೆ ಕಂಡುದನ್ನು ಮುತ್ತಿ ಹೊರಗೆ ಹುಡುಕುತ್ತ, ಹುಡುಕುವುದನ್ನು ಬಾಯಲ್ಲಿ ಹೇಳುತ್ತ, ಹೇಳಿ ಕೇಳಿ ನಲಿಯುತ್ತ, ಬಹಿರ್ಮುಖಿಯಾಗುವನು. ಈ ಅಂತರ್ಮುಖಿಯು ಹೊರಟೆಡೆಯಲ್ಲಿ ಬಹಿರ್ಮುಖಿಯು ಒಂದೆಡೆಯೂ ಒಂದೇ ಆಗಿ ಈ ಎರಡೂ ಒಂದೆಡೆ ಸೇರಿ ಅದೇ ಒಂದು ಆಟವಾಗುವುದು. ಇಲ್ಲಿ ಅಂತರ್ಮುಖಿಯ ನೆರೆತವು ಹೆಚ್ಚಾಗಿದ್ದು ಬಹಿರ್ಮುಖಿಯ ತುಯ್ದಾಟವು ಕಾಲದಿದ್ದರೆ ಆಗ ಅದ ಶಬ್ದಮಯ ಸೃಷ್ಟಿಯು "ಒಗಟು" ಆಗುವುದು. ಹಾಗಿಲ್ಲದೆ ಬಹಿರ್ಮುಖಿಯ ಪ್ರಭಾವವು ಬಲವಾಗಿದ್ದು ಅಂತರ್ಮುಖಿಯು ಯಥಾ ಯಥಾ ಇದ್ದರೆ ಅದು ಕಾವ್ಯವಾಗುವುದು. ಜ್ಞಾನಿಗಳ ಕಾವ್ಯವು ಮಂತ್ರೋಪನಿಷತ್ತುಗಳಾಗುವುದೂ, ಭಾವವು ಒಲಿಯದೆ ಭಾಷೆಯು ಒಲಿದವರ ಕಾವ್ಯವು ಜನಪ್ರಿಯವಾದ ಕಾವ್ಯಗಳಾಗುವುದೂ ಹೀಗೆಯೇ! ಒಟ್ಟಿನಲ್ಲಿ ಹುಡುಗಿಯರು ಕವಡೆಯ ಆಟದ ಕೊನೆಯಲ್ಲಿ ತಾವು ಗೆದ್ದ ಕವಡೆಗಳನ್ನು ಮುಚ್ಚಿಟ್ಟು ಸೋತವರನ್ನು ಹುಡುಕಿರೆನ್ನುವಂತೆ ಆವರಣ ವಿಕ್ಷೇಪಗಳ ಪ್ರಭಾವಕ್ಕೆ ಸಿಕ್ಕಿದರೂ ನಡೆಯುತ್ತಿರುವ ಮನಸ್ಸು ಮಕ್ಕಳೊಡನೆ "ಕೋಟೆ" ಆಟವಾಡುವ ಹಿರಿಯರಂತೆ ಇತರರೊಡನೆ ಒಂದು ಕಣ್ಣಾಮುಚ್ಚಾಲೆಯನ್ನು ಆಡುವುದು. ಆ ಕಣ್ಣಾಮುಚ್ಚಾಲೆಯ ಕಾವ್ಯಸ್ವರೂಪವೇ ಒಗಟು.

ಮುಸ್ಲಿಮರೂ ಸಂಸ್ಕೃತ ಸಾಹಿತ್ಯವೂ.

The Calcutta Review ನಲ್ಲಿ ಪಿ. ಎಸ್. ಚೆಡ್ ಸಿದ್ದಿಖ್‌ರವರು ಒಂದು ಲೇಖನವನ್ನು ಪ್ರಕಟಿಸಿ ಅಕ್ಬರ್ ಬಾದಶಹನ ಕಾಲದಿಂದಲೂ ಮುಸ್ಲಿಮರು ಸಂಸ್ಕೃತವನ್ನು ಪರ್ಶಿಯನ್ ಮತ್ತು ಅರೇಬಿಕ್ ಭಾಷೆಗಳಿಗೆ ತರ್ಜುಮೆ ಮಾಡಿ ಹಿಂದೂಶಾಸ್ತ್ರಗಳನ್ನು ಪಾಶ್ಚಾತ್ಯದೇಶಗಳಿಗೆ ಹೇಗೆ ಪ್ರಚಾರಮಾಡಿದರೆಂದು ತಿಳಿಸಿರುವರು. ಅವರು ಹೀಗೆನ್ನುತ್ತಾರೆ— ಇಂಗ್ಲಿಷ್ ಪತ್ರಿಕೆ. ಅಕ್ಬರ ಬಾದಶಹನು ಸ್ವೇಚ್ಛೆಯಿಂದಲೂ ರಾಜಕೀಯದೃಷ್ಟಿಯಿಂದಲೂ ಸಂಸ್ಕೃತಭಾಷೆಯ ಜ್ಞಾನವನ್ನು ಮುಸ್ಲಿಮರಿಗೆ ಮಾಡಿಕೊಡಬೇಕೆಂದು ನಿರ್ಧರಿಸಿ, ಪ್ರಿಯವಾದ ಸಂಸ್ಕೃತ ಸಾಹಿತ್ಯಗಳನ್ನು ಅನುವಾದಿಸುವ ಒಂದು ಶಾಖೆಯನ್ನೇ ತನ್ನ ದಿವಾನಖಾನೆಯಲ್ಲಿ ತೆರೆದನು. ಅವನು ಪ್ರಥಮದಲ್ಲಿ ಮಹಾಭಾರತವನ್ನು ಪರ್ಶಿಯನ್ ಭಾಷೆಗೆ ಅನುವಾದಿಸಲು ಅಪ್ಪಣೆಯಿತ್ತನು. ಈ ವೀರ ಕಾವ್ಯದ ಅರ್ಥವಿವರಣೆಗಾಗಿ ಅವನು ಪ್ರಖ್ಯಾತ ಪಂಡಿತರನ್ನು ನೇಮಿಸಿದನು. ನಕೀಬ್ ಖಾನ್ ಎಂಬವನನ್ನು ಮುಖ್ಯ ತರ್ಜುಮೆಗಾರನನ್ನಾಗಿ ಆರಿಸಿದನು. ಮಹಾಭಾರತದ ರೂಪಾಂತರ ಕೆಲಸವು ಮೂರು ದಿನಗಳ ತನಕ ನಡೆಯಿತು. ಅಕ್ಬರಲ್ಲಿ ಅಲ್ ಬದಾಯುನೀ ಎಂಬ ಪ್ರಖ್ಯಾತ ಕವಿಯು ನಕೀಬ್ ಖಾನನೊಡನೆ ಸೇರಿಕೊಳ್ಳುವಂತೆ ಮಾಡಿದರು. ನಾಲ್ಕು ತಿಂಗಳುಗಳ ತನಕ ಈ ಕೆಲಸವು ನಡೆದು ಎಂಟರಲ್ಲಿ ಒಂದಂಶ ಕೆಲಸವು ತೀರಿತು. ಆ ಮೇಲೆ ಉಳಿದುದನ್ನು ಎರಡು ಭಾಗಗಳನ್ನಾಗಿ ಮಾಡಿದರು. ಒಂದು ಭಾಗವನ್ನು ನಕೀಬ್ ಖಾನನು ಹಾಜೀ ಮಹಮ್ಮದ್ ಸುಲ್ತಾನನ ಸಹಾಯದಿಂದ ಅನುವಾದಿಸಬೇಕು; ಇನ್ನೊಂದು ಭಾಗವನ್ನು ಮುಲ್ಲಾ ಶೆರಿ ಎಂಬವನು ಅನುವಾದಿಸಬೇಕೆಂದು ನಿರ್ಣಯಿಸಲ್ಪಟ್ಟಿತು. ಈ ಕೃತಿಯ ಪೋಲ್ಕಿಚಾರಕನನ್ನಾಗಿ ಮುಲ್ಲಾ ಶೈರಿಯನ್ನು ನೇಮಕಮಾಡಲಾಯಿತು. ಈ ಕೃತಿಯ ಮೂರನೇ ಒಂದಂಶವು ಅಂತ್ಯವಾಗುತ್ತಿದ್ದಾಗ ಹಾಜಿ ಮಹಮ್ಮದ್ ಸುಲ್ತಾನನು ಈ ಗ್ರಂಥವನ್ನು ಪೂರ್ಣವಾಗಿ ಪರಿಶೋಧಿಸಿ ನೋಡಬೇಕೆಂದು ಅಪ್ಪಣೆ ಕೊಡಲಾಯಿತು. ಹೀಗೆ ಹಿಂದೂಗಳ ಮಹಾಕಾವ್ಯದ ಅನುವಾದವು ಪರ್ಶಿಯನ್ ಭಾಷೆಯಲ್ಲಾಯಿತು. ಈ ಗ್ರಂಥಕ್ಕೆ "ರಜಮ್ ನಾಮೇ" ಎಂದು ಹೆಸರಿಟ್ಟರು. ಆ ಮೇಲೆ ಇದರ ನಕಲನ್ನಿತ್ತು ಸಚಿತ್ರಗೊಳಿಸಿ ಪ್ರಕಟಿಸಲಾಯಿತು. ಹೀಗೆ, ಮಹಾ ಕುಶಲಮತಿಯುಳ್ಳ ಸಮ್ರಾಟನ ಆಶ್ರಯದಿಂದಲೂ, ಅವನ ಮಂಡಲದ ವಿಚಕ್ಷಣರ ಪರಿಶೋಧನೆಯಿಂದಲೂ, ಪಂಡಿತರ ಸಹಕಾರದಿಂದಲೂ, ಅಬ್ದುಲ್ ಫದ್ಲ್, ಫೈಜಿ, ನಕೀಬ್ ಖಾನ್, ಹಾಜಿ ಮಹಮ್ಮದ್ ಸುಲ್ತಾನ್, ಮುಲ್ಲಾ ಇಬ್ರಾಹಿಮ್ ಮತ್ತು ಮುಲ್ಲಾ ಅಬ್ದುಲ್ ಖ್ವಾದಿರ್ ಮೊದಲಾದ ಪ್ರಖ್ಯಾತ ಶಾಸ್ತ್ರಜ್ಞರ ಸಹಾಯದಿಂದಲೂ, ಮಹಾಭಾರತ, ರಾಮಾಯಣ, ಭಗವದ್ಗೀತೆ, ಅಥರ್ವವೇದ, ಯೋಗವಸಿಷ್ಠ, ಮಹೇಶಮಹಾನಂದ, ಹರಿವಂಶ ಮೃಗಗಳ ಕತೆಗಳು, ಮುಕ್ತಿಕರ ಹಿಂದೂಗ್ರಂಥಗಳೂ ಪರ್ಶಿಯನ್ ಭಾಷೆಗೆ ಅನುವಾದಿಸಲ್ಪಟ್ಟವು. ಪರ್ಶಿಯನ್ ಭಾಷಾಜ್ಞಾನಿಗಳಾದ ಸಂಸ್ಕೃತ ಪಂಡಿತರು ಈ ಕೃತಿಗಳನ್ನು ವಿಮರ್ಶಿಸಿ, ದೋಷಗಳನ್ನು ನೀಗಿಸಿ ನೂತನ ಗ್ರಂಥಗಳನ್ನು ಪ್ರಕಾಶಿಸಿದರು. ೧೬೨೨ರಲ್ಲಿ ಗಿರಿಧರದಾಸನು ರಾಮಾಯಣವನ್ನು ನವೀನ ರೀತಿಯಿಂದ ತರ್ಜುಮೆ ಮಾಡಿದನು. ಅದೇ ಶತಮಾನಾಂತ್ಯದಲ್ಲಿ ದೇವಿದಾಸ ಕೈಶ್ತ್‌ನೆಂಬವನು ರಾಮಾಯಣವನ್ನು ಸ್ವತಂತ್ರನಾಗಿ ಅನುವಾದಿಸಿದನೆಂದು ತಿಳಿದುಬರುತ್ತದೆ. ದಾರಾ ಶುಕೋನ ಹಿಂದೂ ಮಿತ್ರನೊಬ್ಬನು ಯೋಗವಸಿಷ್ಠವನ್ನು ನೂತನವಾಗಿ ಅನುವಾದಿಸಿದನು. (೧೩ನೇ ಪುಟಕ್ಕೆ ಮುಂದರಿಯುವುದು.)

ಪ್ರಾಚೀನಭಾರತದಲ್ಲಿ ಶಿಕ್ಷಣ ಪದ್ಧತಿ.

ಸುಪ್ರಸಿದ್ಧ ಭಾರತ ಇತಿಹಾಸಜ್ಞರಾದ ಡಾ। ರಾಧಾಕುಮುದ ಮುಕರ್ಜಿಯವರು ಈ ರೀತಿಯಾಗಿ ಬರೆದಿರುವರು. "ಪ್ರಾಚೀನ ಕಾಲದಲ್ಲಿ ವ್ಯಕ್ತಿಶಃ ಪ್ರತಿಯೊಬ್ಬ ವಿದ್ಯಾರ್ಥಿಯ ಮೇಲ್ವಿಚಾರಣೆಯನ್ನು ವಿದ್ಯಾಭ್ಯಾಸ ಮಾಡಿಸುವುದು ಶಿಕ್ಷಕರ ಅಗತ್ಯವಾದ ಕರ್ತವ್ಯಧರ್ಮವೆಂಬಂತೆ ತಿಳಿವಳಿಕೆಯಿದ್ದಿತು. ಎಲ್ಲರಿಗೂ ಯಂತ್ರದಂತೆ ಕೃತ್ರಿಮ ಮತ್ತು ಸಾಮುದಾಯಿಕ ಶಿಕ್ಷಣವನ್ನು ಕೊಡುವ ಈಗಿನ ಪಾಠಶಾಲಾ ಪದ್ಧತಿಯು ಆ ಕಾಲದಲ್ಲಿ ಇರಲಿಲ್ಲ. ಅಸ್ವಸ್ಥರಿಗೆ ಅನೇಕ ಬಗೆಯ ರೋಗಿಗಳು ಬಂದರು ಅವರಲ್ಲಿ ಪ್ರತಿಯೊಬ್ಬರ ಶುಶ್ರೂಷೆಯನ್ನು ಡಾಕ್ಟರರು ಬೇರೆ ಕ್ರಮದಿಂದಲೇ ಮಾಡಲೇಬೇಕಾಗುವುದು. ಏಕೆಂದರೆ ಪ್ರತಿಯೊಬ್ಬ ರೋಗಿಯ ವೇದನೆಯು ವಿವಿಧವಾಗಿರುವುದು. ಶರೀರದ ವಿಚಾರದಲ್ಲಿಯೇ ಈ ರೀತಿ ವಿವಿಧ ಉಪಚಾರಗಳು ಬೇಕಾಗಿರುವಾಗ ಮನಸ್ಸು ಮತ್ತು ಬುದ್ಧಿಯ ವಿಚಾರದಲ್ಲಿ ಎಷ್ಟು ವೈವಿಧ್ಯವಿರಬೇಕೆಂಬುದನ್ನು ಯೋಚಿಸಬೇಡವೇ? ಈ ಕಾರಣದಿಂದ ಪ್ರತಿಯೊಬ್ಬ ವಿದ್ಯಾರ್ಥಿಗೂ ಸ್ವತಂತ್ರವಾದ ವೈಯಕ್ತಿಕ ಶಿಕ್ಷಣವನ್ನು ಕೊಡುವ ರೀತಿಯಲ್ಲಿ ಪ್ರಾಚೀನ ಭಾರತದ ಪಾಠಶಾಲಾ ಕ್ರಮವು ಏರ್ಪಟ್ಟಿತ್ತು. ಚಿಕ್ಕ ಚಿಕ್ಕ ಗೃಹವಿದ್ಯಾಲಯಗಳೂ ವಿಶೇಷವಾಗಿ ಅರಣ್ಯದಲ್ಲಿರುವ ಪ್ರಶಾಂತ ಆಶ್ರಮಗಳೂ ಆ ಕಾಲದ ವಿದ್ಯಾಮಂದಿರಗಳಾಗಿದ್ದುವು. ಪ್ರಕೃತಿಯಲ್ಲಿ ಪ್ರಾಚೀನಕಾಲದ ಸಮಗ್ರಸಂಸ್ಕೃತಿಯೂ ಅರಣ್ಯದ ಶಾಂತಿಮಯ ಆಶ್ರಯಗಳಿಂದಲೇ ನಿರ್ಮಾಣವಾದುದೆಂದು ಡಾ। ಠಾಗೂರ ಹೇಳಿರುವರು. ಹೀಗಿದ್ದರೂ ಅರ್ವಾಚೀನ ಪದ್ಧತಿಯಂತೆ ದೊಡ್ಡ ಸಂಘ ರೂಪದ ಶಿಕ್ಷಣದ ಪ್ರಯೋಗವನ್ನು ಭಾರತವರ್ಷವು ಮಾಡಲಿಲ್ಲವೆಂದು ತಿಳಿಯಬಾರದು. ನಳಂದ (ನಾಲಂದ) ವಿದ್ಯಾಪೀಠವು ಇದಕ್ಕೆ ಉತ್ತಮವಾದ ದೃಷ್ಟಾಂತವಾಗಿರುವುದು. ಅರ್ವಾಚೀನ ವಿದ್ಯಾಲಯದ ದೋಷಗಳೆಲ್ಲವೂ ಇಲ್ಲದೆ ಅವುಗಳ ಗುಣಗಳೆಲ್ಲ ಆ ವಿದ್ಯಾಲಯದಲ್ಲಿದ್ದುವು. ಈ ವಿದ್ಯಾಪೀಠದಲ್ಲಿ ಸೇರಬೇಕಾದರೆ ಬಹಳ ಕಷ್ಟತರವಾದ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾಗಿತ್ತು. ಆ ಪ್ರವೇಶಪರೀಕ್ಷೆಯಲ್ಲಿ ಉತ್ತೀರ್ಣರಾಗದೆ ವಿದ್ಯಾಪೀಠದಲ್ಲಿ ಪ್ರವೇಶಕ್ಕೆ ಅವಕಾಶವಿರಲಿಲ್ಲ. ಪ್ರತಿ ವರ್ಷವೂ ನೂರಾರು ವಿದ್ಯಾರ್ಥಿಗಳು ಅನುತ್ತೀರ್ಣರಾಗಿ ಪ್ರವೇಶ ದೊರೆಯದೆ ಹಿಂತಿರುಗುತ್ತಿದ್ದರು. ಆದಾಗ್ಯೂ ಆ ವಿದ್ಯಾಪೀಠದಲ್ಲಿ ಒಟ್ಟು ಹತ್ತು ಸಾವಿರ ಜನ ವಿದ್ಯಾರ್ಥಿಗಳಿದ್ದರು ಎಂದು ಅಲ್ಲಿ ಶಿಕ್ಷಣವನ್ನು ಹೊಂದಿದ ಹ್ಯೂ ಎನ್ ತ್ಸಂಗ್ ಎಂಬ ಚೀನದ ಪ್ರವಾಸಿಯೊಬ್ಬನು ಬರೆದಿಟ್ಟಿರುವನು. ಅಲ್ಲಿ ಒಟ್ಟು ೧೫೧೦ ಜನ ಅಧ್ಯಾಪಕರಿದ್ದರು. ಏಕಕಾಲ ಸುಮಾರು ನೂರು ವರ್ಗಗಳಲ್ಲಿ ನೂರು ವ್ಯಾಖ್ಯಾನಗಳು ಆ ವಿದ್ಯಾಪೀಠದ ಭವ್ಯ ಭವನದ ಮಂದಿರದಲ್ಲಿ ನಡೆಯುತ್ತಿದ್ದುವು. ಆ ವಿದ್ಯಾಪೀಠದ ವೆಚ್ಚಕ್ಕಾಗಿ ೧೦೦ ಗ್ರಾಮಗಳನ್ನು ಇನಾಮಾಗಿ ಕೊಟ್ಟಿದ್ದರು. ಮತ್ತೆ ಧನಿಕರನೇಕರು ಉದಾರವಾಗಿ ಸಹಾಯಮಾಡುತ್ತಿದ್ದರು. ಅಷ್ಟು ಜನ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಎಲ್ಲ ವೆಚ್ಚ ಎಂದರೆ ಊಟ ಉಪಚಾರ, ವಸ್ತ್ರಭೂಷಣಗಳೂ ಔಷಧೋಪಚಾರಗಳಾದಿಯಾಗಿ ಎಲ್ಲವೂ ಆ ಹಣದಿಂದ ನಡೆಯುತ್ತಿದ್ದುವು. ಆಗ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಧ್ಯೇಯವು ಸಂಸ್ಕೃತವೃತ್ತಿಯಾಗಿದ್ದು ವಿದ್ಯಾರ್ಜನೆ ಮತ್ತು ತಪಶ್ಚರ್ಯೆಯನ್ನು ಮಾಡುವುದಾಗಿತ್ತು. ವಿದ್ಯೆಯನ್ನು ಕಲಿತು ವಿಕಸಿತಜೀವನದಲ್ಲಿ ಸಮೃದ್ಧಿ ಮತ್ತು ಸ್ವೇಚ್ಛಾಚಾರವನ್ನು ಹೊಂದುವುದಾಗಿರಲಿಲ್ಲ.

Prabuddha Bharatha

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲಿ ನೋವು, ಆಕ್ರಮ ತರದ ಮುಟ್ಟು, ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ.   ರೂ. 8 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯು ರಾಸಾಯನಿಕ ಔಷಧಿಗಳ ವಿಕ್ರಯದ ವಹಿವಾಟಿನ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾಹುತಿ ಸಮೇತ

ಋಗ್ವೇದೀ ಸಂಧ್ಯಾವಂದನೆ

(ವೈಷ್ಣವರಿಗೆ_ಊರ್ಧ್ವಪುಂಡ್ರ_ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ಲಿಖಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ,

ಬೆಲೆ ಆಣೆ 3.

80, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು,

ಅವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ

ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನ ಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ
ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು

ಒಂದು ತಿಂಗಳಲ್ಲಿ ಅಮೋಘವಾದ ಗುಣ; ಇದು ಜಾಡ್ಯವನ್ನು ಗುಣಪಡಿಸವುದಲ್ಲದೆ ವ್ಯಾಧಿಯು ಬಾರದಂತೆ ತಡೆಮಾಡುವುದು

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವೆ

ತಯಾರಿಸುವವರು ಆಯುರ್ವೇದಾಶ್ರಮ ಪೋ. ಬಾಕ್ಸ್ 287, ಮದರಾಸು

ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರರು —ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಜಾತಂಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕಾಲರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!
ಕ್ರಯ ಡಬ್ಬಿ 1ಕ್ಕೆ ರೂ 1—0—0

ಗುಹ್ಯರೋಗ ನಿವಾರಿಣೀ ತೈಲ
Anti-Venerael Oil
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ ಕುಟುಂಬ ಪಾರಂಪರ್ಯದ ವ ತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು

8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ 2—8—0

/ ಕೆ ವಿ, ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು.

ಸ್ಟೈಂಟಿಫಿಕ್
ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು

S.G.B.C.

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ -
TheScientificGold Bangles Co , Ltd.,
Head Office -43, Byragimatam Street,
Post Box No 203, Madras.

An Advertisement in

'Swadeshabhimani'

Means a sure fortune to you

Ask for Contract Rates.

The Swadeshabhimani office,
Car Street, Mangalore

ಮನೆಯಲ್ಲಿನ ಉಪಯೋಗಕ್ಕೂ, ಸಣ್ಣ ತೋಟಗಳನ್ನುಳುವುದಕ್ಕೂ

ಕಿರ್ಲೋಸ್ಕರ
ಹೌಸ್ ಸಿಸ್ಟಮ್ ಪಂಪು.

ನಿಮಗೆ ಪೂರ್ಣ ಸಂತೃಪ್ತಿಯು ನೀಯುತ್ತದೆ

ಒಂದು ಗುಂಡಿಯನ್ನೊತ್ತಿದರೆ ಸರಿ; ಪಂಪು ತನ್ನಷ್ಟಕ್ಕೆ ನಡೆಯುತ್ತದೆ.

ಎಲ್ಲಿಂದಾದರೂ ½ ಇಂಚು ಪೈಪಿನ ಮೂಲಕ ನೀರನ್ನು ಒದಗಿಸಿ ಕೊಡುತ್ತದೆ.



¼ B H P ವಿದ್ಯುತ್ ಮೋಟರಿನೊಂದಿಗೆ ಪೂರ್ಣವಾಗಿರುತ್ತದೆ

ವಿವರಕ್ಕೆ ಈ ಕೆಳಗಿನವರಿಗೆ ಬರೆಯಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್ ಕಿರ್ಲೋಸ್ಕರವಾಡಿ. ಸತಾರಾ

ಡಿಸ್ಟ್ರಿಬ್ಯೂಟರರ—ಪೆರ್ರಿ ಎಂಡ್ ಕೋ, ಲಿಮಿಟೆಡ್, ಮದ್ರಾಸು.

ಕುಷ್ಠ ರೋಗ ಮತ್ತು ಫರಂಗಿ ರೋಗ

ಇತರ ಎಷ್ಟು ದೀರ್ಘಕಾಲದ ರೋಗವೇ ಆಗಿರಲಿ, ಯಾವ ಕಾರಣವೇ ಇರಲಿ, ನೀವು ಮದ್ದು ಮಾಡಿ ಮಾಡಿ ದಣಿದಿರಿ ನಿಮ್ಮ ರೋಗಗಳನ್ನು ಇಂದ್ರಜಾಲದಂತೆ ಶಾಶ್ವತವಾಗಿ 4 ವಾರಗಳಲ್ಲಿ ಗುಣಪಡಿಸಲಾಗುತ್ತದೆ ಪೂರ್ಣ ಗುಣ ಗೇರಂಟಿ.

ವಿವರಕ್ಕೆ ಬರೆಯಿರಿ.

Kamala Works,
Panchpota Bengal S B
C P S

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ.

ಹೊಸತಾಗಿ ಆಮದಾದುದು ದೊರೆಯುವ ಇತರ ಕ್ಯಾಮರಗಳಿಗಿಂತ ಬಾಳಿಕೆ ಬರುವಂಥದು ಮತ್ತು ಉತ್ತಮವಾದುದು, ಫೋಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್, ೪ ಫಿಲ್ಮ್ ಎಕ್ಸ್‌ಪೋಜರ್ಸ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಆವಶ್ಯಕವಾದ ರಸಾಯನಿಕ ವಸ್ತುಗಳು, ಫೋಟೋ ತೆಗೆಯುವ ವಿಧಾನ, ಶಿಕ್ಷಣ ಕೊಡುವ ಸಾಹಿತ್ಯ—ಇವು ಉಚಿತವಾಗಿ ಕಳುಹಿಸಲಾಗುತ್ತದೆ. ಬೆಲೆ ಸಾಧಾರಣವಾದುದು ರೂ. ೩—೧೨—೦, ಉತ್ತಮವಾದುದು ೩—೧೨—೦ ಮಡಚುವ ಕ್ಯಾಮರಾ ರೂ. ೫, ಉತ್ತಮವಾದ್ದು ರೂ. ೭ ಸ್ಪೆಶಲ್ ರೂ. ೧೦, ಹೆಚ್ಚಿಗೆ ಫಿಲ್ಮ್ ಬೇಕಾದರೆ ಡಜನ್ ೧ಕ್ಕೆ ೬ ಆಣೆ ಎನ್‌ಲಾರ್ಜ್‌ಮೆಂಟಿನ ಸಾಧನಾ ಸಾಮಗ್ರಿ ೧ ಶೀಸೆಗೆ ೪ ಆಣೆ, ಫಿಕ್ಸಿಂಗ್ ಸಾಲ್ಟ್ ೧ ಡಬ್ಬಿಕ್ಕೆ ೨ ಆಣೆ, ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ, ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ.

ಭಾರತ ಯೂನಿಯನ್ ಟ್ರೇಡಿಂಗ್ ಕಂ.
ಪೋಸ್ಟ್‌ಬಾಕ್ಸ್ ನಂಬ್ರ ೨೩೯೪ (ಎಸ್. ಎ.) ಕಲ್ಕತ್ತಾ

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

ಪುಸ್ತಕ ವಿಮರ್ಶೆ.

[ಈ ಒಂದು ಭಾಗದಲ್ಲಿ ನಮಗೆ ಬಾರಂಭ್ರಾ ಬರುವ ಸಾಹಿತ್ಯಗಳನ್ನು ಒಂದೊಂದಾಗಿ ವಿಮರ್ಶಿಸ ಬೇಕೆಂದಿರುತ್ತೇವೆ ಪ್ರಕಾಶಕರೂ, ಲೇಖಕರೂ ತಂತಮ್ಮ ಕೃತಿಗಳನ್ನು ನಮ್ಮ ವಿಮರ್ಶೆಗಾಗಿ ಕಳುಹಿಸಿಕೊಡ ಬಹುದು]

'ಮಿತ್ಯ ನಾರಾಯಣ ಕತೆ', ಲೇಖಕರು: ಶ್ರೀ. ಎ. ಎನ್ ಶೀನಪ್ಪ ಹೆಗ್ಡೆ; ಪ್ರಕಾಶಕರು: ಶ್ರೀ ಎಸ್. ಯು. ಪಣಿಯಾಡಿ, ತುಳುನಾಡ್ ಛಾಪಖಾನೆ, ಉಡುಪಿ; ಬೆಲೆ ೮ ಆಣೆಗಳು.

ಕ್ರೌನ್ ಅಷ್ಟಾಕಾರದ ೧೧೫ ಪುಟಗಳಿರುವ ಸುಂದರ ಗ್ರಂಥ ಮುದ್ರಣವೂ ಅಚ್ಚುಕಟ್ಟು ವಿಕೆಯೂ ಚೆನ್ನಾಗಿದೆ ಶ್ರೀ ನಾರಾಯಣ ಕಿಲ್ಲೆಯವರು ಸೆರೆಯೊಳಗೆ ತನ್ನ ಸಂಗಾತಿಯಾದ ಇದರ ಲೇಖಕರಿಗೆ ಹೇಳಿದ ಈ ಕತೆಯನ್ನು ಈ ಗ್ರಂಥದರೂಪಕ್ಕೆ ತಂದಿರುತ್ತಾರೆ ಇದಕ್ಕಾಗಿ ಇದರ ಪ್ರಕಾಶಕರಾದ ಶ್ರೀ ಪಣಿಯಾಡಿಯವರನ್ನು ಶ್ಲಾಘಿಸಿದಷ್ಟು ಕಡಮೆಯೇ

ಭಾರತಭೂಮಿಯಲ್ಲಿ ಈಗ ಒಂದೆಡೆಯಿಂದ ಹಿಂದೀಯರಿಗೂ ಬ್ರಿಟಿಷರಿಗೂ ಅಂತಃ ಕಲಹ, ಒಂದೆಡೆ ಮತಸಂಬಂಧ ಕಲಹ, ಒಂದೆಡೆ ಭಾಷಾವಾರು ಕಲಹ

ದಕ್ಷಿಣಕನ್ನಡದಲ್ಲಿ ಶ್ರೀ. ಎಸ್. ಯು. ಪಣಿಯಾಡಿಗಳವರ ಧುರೀಣತೆಯಲ್ಲಿ ತುಳುವರ ಚಳವಳವೊಂದು ತಲೆಯೆತ್ತಿದೆ ಕನ್ನಡಕ್ಕಿರುವ ಸ್ವಾಮುಖ್ಯತೆಯು ತುಳುವಿಗೂ ಲಭಿಸಬೇಕು,—ದಕ್ಷಿಣಕನ್ನಡಿಗರಂತೂ ತುಳುವನ್ನೇ ಮಾತೃಭಾಷೆಯನ್ನಾಗಿ ಮಾಡಿಕೊಂಡು ಬರಬೇಕು—ಎಂದು ಈ ಚಳವಳಗಾರರು ಆಶಿಸುವಂತೆ ತೋರುತ್ತಿದೆ ಇವರ ಉದ್ದೇಶವು ಶ್ಲಾಘ್ಯವಿರುವುದಾದರೂ ಕಾರ್ಯಕಾರಿಯಾಗಿ, ತುಳುವು ಎಷ್ಟರವರೆಗೆ ಪ್ರಾಬಲ್ಯದಲ್ಲಿ ನಿಲ್ಲುವುದೆಂದು ಹೇಳಲಸಾಧ್ಯ ದಕ್ಷಿಣ ಕನ್ನಡಿಗರಿಗೆ ಹೆಚ್ಚಾಗಿ ತುಳು ಭಾಷೆಯು ಬರುತ್ತದ ತುಳುಭಾಷೆಯ ಪ್ರಚಾರವು ಇಲ್ಲಿ ಕಷ್ಟವಾಗಲಾರದು—ಎಂದು ಭಾವಿಸುವುದು ಸಂಭವನೀಯವಾದರೂ, ತುಳು ಗ್ರಂಥಗಳ ಪ್ರಕಾಶಕರು ಯಶಸ್ವಿಗಳಾಗಲು ಬಹಳ ಕಷ್ಟವಿದೆ ತುಳು ಭಾಷೆಯಲ್ಲಿ ಪ್ರಕಟವಾಗಬೇಕಾದ ಗ್ರಂಥಗಳನ್ನು ಕನ್ನಡ ಲಿಪಿಗಳಲ್ಲೇ ಬರೆಯಬೇಕಾಗಿರುವುದರಿಂದ ಕನ್ನಡವನ್ನು ಓದಲಾಗದವರಿಗೆ ಈ ತುಳು ಗ್ರಂಥಗಳ ಪ್ರಯೋಜನವು ಹೆಚ್ಚಾಗಿ ದೊರೆಯಲಾರದು

ಈ ತುಳುವ ಚಳವಳಿಗಾರರು—ತಮ್ಮ ಪ್ರಕೃತದ ಸಾಹಸದಲ್ಲಿ—ಹಲಕೆಲವು ಕನ್ನಡಿಗರಿಗೆ ತುಳುಭಾಷೆಯ ಸೊಬಗು, ಅದರಲ್ಲಿರುವ ಕಾವ್ಯಶಕ್ತಿ, ವರ್ಣನಾಶಕ್ತಿಗಳನ್ನು ತಿಳಿಯಪಡಿಸಲು ಶಕ್ತರಾಗುವರೇ ಹೊರತು, ಇವರ ಗ್ರಂಥಗಳು ಹಳ್ಳಿ ಹಳ್ಳಿಗಳಲ್ಲಿಯೂ ಓದಲ್ಪಡುವಂತೆ ಮಾಡಲು ಕಷ್ಟವಾಗಿದೆ ಹಳ್ಳಿಗಳಲ್ಲಿ ಕನ್ನಡ ತಿಳಿದವರು ವಿರಳ ಅದರಲ್ಲೂ, ಈ ಕನ್ನಡ ಮಿಶ್ರಿತ ಕ್ಲಿಷ್ಟ ತುಳುಭಾಷೆಯ ಗ್ರಂಥಗಳನ್ನು ಆ ಹಳ್ಳಿಗರು ಓದುವರೆಂತೋ ತಿಳಿಯದು ತುಳುವರಾಗಿದ್ದು, ಕನ್ನಡ ಭಾಷೆಯಲ್ಲಿ ಪತ್ರಿಕಾ ವ್ಯವಸಾಯಕ್ಕೆ ಕೈಹಾಕಿದವರಿಗೂ ಕೂಡಾ ಈ ಗ್ರಂಥ ವಾಚನದ ಕೆಲಸವು ಪ್ರಯಾಸಕರವಾಗಿ ಭಾಸವಾಗುತ್ತದೆ. ಹೀಗಿರುವಾಗ, ಅಲ್ಪ ಸ್ವಲ್ಪ ಕನ್ನಡ ಬಲ್ಲವರು 'ಇಂತಹ ಗ್ರಂಥಗಳನ್ನು ಹೇಗೆ ಓದುವರೋ ತಿಳಿಯಲಾರೆವು ಅವರು ಇಂತಹ ಗ್ರಂಥಗಳನ್ನು ಕನ್ನಡ ತಿಳಿದವರಿಂದ ಓದಿಸಿ, ಕೇಳಿ ಆನಂದಿಸಬೇಕಾಗಿದೆಯಲ್ಲದೆ ಮತ್ತೆ ಬೇರೆಯಿಲ್ಲ.

ಮಿತ್ಯ ನಾರಾಯಣ ಕತೆಯು ಸ್ವಾರಸ್ಯದುಯವಾಗಿ ಬರೆಯಲ್ಪಟ್ಟಿದೆಯೆಂಬುದರಲ್ಲಿ ಎರಡು ಮಾತಿಲ್ಲ. ಭಾಷೆಯಲ್ಲಿರುವ ಮಾಧುರ್ಯ, ಶೃಂಗಾರವರ್ಣನೆ, ಸೃಷ್ಟಿಸೌಂದರ್ಯ ವಿವರ, ಗ್ರಾಮ್ಯ ವಸ್ತುಒಡವೆಗಳ ವಿವರ,ಗ್ರಾಮ್ಯಜೀವನದಚಿತ್ರಣ—ಇವೆಲ್ಲ ಬಹು ಚಿತ್ತಾಕರ್ಷವಾಗಿ ಮಾಡಲ್ಪಟ್ಟಿವೆ

ಈ ಗ್ರಂಥವನ್ನು ಓದುವವರು ಹಳ್ಳಿಗರಿಗೆ ಹೋಗುವ ಅಗತ್ಯವಿಲ್ಲ. ಹಳ್ಳಿಗರು ಯಾವ ರೀತಿಯ ಮನೋಭಾವದಿಂದ ಜೀವನವನ್ನು ನಡೆಸುತ್ತಿರುವರು, ಅಲ್ಲಿಯ ಜನರ ಸ್ವಭಾವ ಚಿತ್ರವು ಹೇಗಿದೆ—ಮೊದಲಾದ ವಿಷಯಗಳನ್ನರಿಯಬೇಕೆಂದಾದರೆ ಈ ಗ್ರಂಥವನ್ನೊಮ್ಮೆ ಅವಲೋಕಿಸಬೇಕಾಗಿದೆ ಇದು ಪುರಾಣಕತೆಯಾಗಿರುವುದಾದರೂ, ಶ್ರೀ ನಾರಾಯಣ ದೇವರನ್ನೇ ಮೋಸಗೊಳಿಸಿದ ಅಂದಿನ ನಾರಾಯಣ ಭಟ್ಟರು ಇಂದೂ ಆಧುನಿಕ ಜಗತ್ತಿನಲ್ಲಿರುವರೆಂಬುದು ನಿರ್ವಿವಾದ

ರವೀಂದ್ರನಾಥ ಠಾಕೂರರು ಬಂಗಾಳಿಯಲ್ಲಿ ಬರೆದ 'ಗೀತಾಂಜಲಿ'ಯು ಇಂಗ್ಲಿಷಿಗೆ ಭಾಷಾಂತರಿಸಲ್ಪಟ್ಟುದರಿಂದಲೇ 'ಗೀತಾಂಜಲಿ'ಯ ಮಹಿಮೆಯು ಬಾಹ್ಯ ಜಗತ್ತಿಗೆ ತಿಳಿದುಬಂತು ಇಂಗ್ಲಿಷಿನ ಬೆಂಬಲವಿಲ್ಲದಿದ್ದರೆ ಠಾಕೂರರ ಹೆಸರು ಬಂಗಾಳದಿಂದ ಹೊರಗೆ ಹೋಗುತ್ತಿದ್ದಿಲ್ಲ ಅಂತಹ ಇಂಗ್ಲಿಷಿನ ಸಹಾಯವು ಈ ತುಳುಭಾಷೆಗೂ ದೊರೆತು, ಅಂದರೆ ತುಳುಭಾಷೆಯ ಗದ್ಯಪದ್ಯಗಳನ್ನು ಇದ್ದಕ್ಕಿದ್ದ ಹಾಗೆ ಇಂಗ್ಲಿಷಿಗೆ ಭಾಷಾಂತರಿಸುವ ತುಳುವ ಭಾಷಾಭಿಮಾನಿಯೊಬ್ಬನು ತುಳುನಾಡಿಗೆ ದೊರೆತ ಸುದಿನದಲ್ಲಿ, ತುಳುವಿನಲ್ಲಿರುವ ಜನಪದ ಸಾಹಿತ್ಯದ ಸಂಗ್ರಹಕ್ಕಾಗಲಿ, ಗದ್ಯಪದ್ಯಗಳಿಗಾಗಲೀ ನೋಬೆಲ್ ಪಾರಿತೋಷಕವು ಸಿಕ್ಕಿ, ತುಳುವಿನ ಕೀರ್ತಿಯು ಪ್ರಪಂಚದಲ್ಲಿ ವ್ಯಾಪಿಸಿಕೊಳ್ಳುವುದು. ನಿಶ್ಚಯವಾಗಿದೆ ಶ್ರೀ ಕಿಲ್ಲೆ, ಶ್ರೀ ಶೀನಪ್ಪ ಹೆಗ್ಗಡೆ, ಶ್ರೀ ಪಣಿಯಾಡಿಗಳು ತಮ್ಮ ಇಂತಹ ಕೃತಿಗಳನ್ನು ಇಂಗ್ಲಿಷಿನಲ್ಲಿ ಭಾಷಾಂತರಿಸುವ ವ್ಯವಸ್ಥೆ ಮಾಡಿ, ಸರ್ ವಿಲಿಯಂ ರೋಥೆನ್‌ಸ್ಟೀನ್, ಸ್ಟೋಫರ್ಡ್ ಬ್ರೂಕ್ ಮೊದಲಾದ ಪ್ರತಿಭಾಶಾಲಿ ಆಂಗ್ಲೇಯರ ಸಹಾಯವನ್ನು ಪಡೆಯುವಂತೆ ಮಾಡಿ, ತುಳುವರ ಪ್ರೌಢಿಮೆಯನ್ನೂ

ಮೈಸೂರಿನ ಸಮಾಚಾರಗಳು.

ಬೆಂಗಳೂರು ಪತ್ರ

(ನಮ್ಮ ಸ್ವಂತ ಪ್ರತಿನಿಧಿಯಿಂದ)

ಬೆಂಗಳೂರು, ತಾ. ೧೧—೬—೧೯೩೫.

ಶಿವಮೊಗ್ಗೆಯಲ್ಲಿ ಸಕ್ಕರೆ ಕಾರ್ಖಾನೆ

ಈ ಸಂಬಂಧವಾಗಿ ಏರ್ಪಟ್ಟಿರುವ ಸಮಿತಿಯು ಮೇ ತಾ ೨೧ನೇ ದಿನ ದಿ. ಕಮಿಷನರರ ಆಫೀಸಿನಲ್ಲಿ ಸೇರಿತು ರೆವಿನ್ಯೂ ಕಮಿಷನರರಾದ ಮಿ। ಎನ್. ಮಾಧವರಾಯರವರು ಅಧ್ಯಕ್ಷರಾಗಿದ್ದರು ಮಂಡ್ಯಹಳ್ಳಿ ದೊರೆಯುವಂತಹ ಉತ್ತಮತರಗತಿಯ ಕಬ್ಬಿನ ಪೈರು ಶಿವಮೊಗ್ಗದ ಸುತ್ತಮುತ್ತ ದೊರೆಯುವುದಾದ್ದರಿಂದಲೂ ಶಿವಮೊಗ್ಗೆಯಲ್ಲಿ ಸಕ್ಕರೆಯ ಮಾರಾಟಕ್ಕೆ ತಕ್ಕ ಅನುಕೂಲತೆಗಳಿರುವುದರಿಂದಲೂ ಅಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವುದು ಸುಲಭಸಾಧ್ಯವೆಂದೂ ಉಚಿತವೆಂದೂ ಸಮಿತಿಯು ಅಭಿಪ್ರಾಯಪಟ್ಟಿರುತ್ತದೆ ಈ ಕಾರ್ಯೋದ್ಯಮಕ್ಕೆ ಬೇಕಾದ ಹಣಕಾಸಿನ ವಿಚಾರವನ್ನು ಸಮಿತಿಯು ಇನ್ನೊಂದು ಅಧಿವೇಶನದಲ್ಲಿ ಪರ್ಯಾಲೋಚನೆಗೆ ತೆಗೆದುಕೊಳ್ಳುವುದು ಅಂತೂ ಕಾರ್ಖಾನೆ ಸ್ಥಾಪಿಸುವುದರಲ್ಲಿ ಸಂದೇಹವಿಲ್ಲವೆಂದು ಎಲ್ಲರ ನಂಬಿಕೆ— ನಮ್ಮ ನಂಬಿಕೆಯೂ ಸಹ

ದಿವಾನ ಸಾಹೇಬರ ಸಂಚಾರ

ಚಿಂತಾಮಣಿಯಲ್ಲಿ ದಿವಾನ ಸಾಹೇಬರು ಪೌರಭವನ ಮತ್ತು ಆಸ್ಪತ್ರೆ ಕಟ್ಟಡಗಳ ಶಂಕುಸ್ಥಾಪನೋತ್ಸವ.

ತಾ ೫ನೇ ದಿನ ಕೋಲಾರ ಡಿಸ್ಟ್ರಿಕ್ಟಿನ ಚಿಂತಾಮಣಿ ತಾಲೂಕು ವಿಶೇಷ ವೈಭವವನ್ನು ಕಂಡಿತು ಮೈಸೂರಿನ ಸಚಿವ ಶ್ರೇಷ್ಠರಾದ ಸರ್ ಮಿರ್ಜಾ ಎಂ. ಇಸ್ಮೆಯಿಲ್‌ರವರು ಐದು ಕಟ್ಟಡಗಳ ಅಸ್ತಿಭಾರ ಶಿಲೆಗಳನ್ನು ಸಂಸ್ಥಾಪಿಸಿದರು.

ಮೊದಲನೆಯದು ಪೌರಭವನ ಚಿಂತಾಮಣಿಯ ಪೌರಸಭೆಯವರು ೧೫,೦೦೦ ರೂಗಳನ್ನು ಮುಟ್ಟಿಸಿ ಪೌರಭವನವನ್ನು ಕಟ್ಟಿಸುವವರಾಗಿದ್ದಾರೆ

ಎರಡನೆಯದು ಚಿಂತಾಮಣಿಯ ಕೋಆಪರೇಟಿವ್ ಸೊಸೈಟಿಯ ಕಟ್ಟಡ

ಉಳಿದ ಮೂರು ಕಟ್ಟಡಗಳು ಇವು ಹೆಂಗಿಯ ಆಸ್ಪತ್ರೆ, ಗಂಡಸರ ಆಸ್ಪತ್ರೆ ಮತ್ತು ಶಸ್ತ್ರಚಿಕಿತ್ಸಾಲಯ ಈ ಕಟ್ಟಡಗಳನ್ನು ಕಟ್ಟುವುದಕ್ಕಾಗಿ ಅಲ್ಲಿನ ಕೊಮರಲ ವಿ. ಗೋಪಾಲಯ್ಯ ಶೆಟ್ಟರೂ ಅವರ ತಮ್ಮಂದಿರಾದ ಮಿ। ಆರ್. ಬಿ ಸಿದ್ದಬಸವರದಯ್ಯನವರೂ ಮತ್ತು ಮಿ। ರಾಮಸ್ವಾಮಿ ಶೆಟ್ಟರೂ ಉದಾರವಾದ ದ್ರವ್ಯಸಹಾಯ ಮಾಡಿರುತ್ತಾರೆ ಈ ಮಹನೀಯರ ಔದಾರ್ಯವು ಸ್ತುತ್ಯವಾದುದು

ಚಿಂತಾಮಣಿಯ ಪೌರಸಭೆಯವರು ಪಟ್ಟಣದ ಬಡಾವಣೆಯೊಂದನ್ನು ನಿರ್ಮಿಸಬೇಕೆಂದೂ ಅದಕ್ಕೆ ಶ್ರೀಮದ್ಯುವರಾಜರವರ ಹೆಸರಿಡುವುದಕ್ಕೆ ಅನುಮತಿ ದೊರಕಿಸಬೇಕೆಂದೂ ದಿವಾನ ಸಾಹೇಬರವರನ್ನು ಬೇಡಿಕೊಳ್ಳಲಾಗಿ, ದಿವಾನರು ಈ ವಿಚಾರದಲ್ಲಿ ತಮ್ಮ ಮೆಚ್ಚಿಕೆಯನ್ನು ವ್ಯಕ್ತಪಡಿಸಿ ಪೌರಸಭೆಯವರ ಅಪೇಕ್ಷೆಯನ್ನು ಯುವರಾಜರ ಗಮನಕ್ಕೆ ತಂದು ಶಿಫಾರಸು ಮಾಡುವುದಾಗಿ ಭರವಸೆಯಿತ್ತರು

ಮುಂಚೇನ ಹಳ್ಳಿಯಲ್ಲಿ.

ತಾ ೫—೬—೧೯೩೫

ಸರ್ ಮಿರ್ಜಾ ಇಸ್ಮೆಯಿಲ್‌ರವರು ಚಿಂತಾಮಣಿಯಿಂದ **ಮುಂಚೇನ ಹಳ್ಳಿಯಲ್ಲಿ** ಒಂದು ಆಸ್ಪತ್ರೆಯನ್ನು District Board Rural Dispensary ಪ್ರಾರಂಭೋತ್ಸವವನ್ನು ನೆರವೇರಿಸುವ ಪ್ರಯುಕ್ತ ಅಲ್ಲಿಗೆ ಸಾಯಂಕಾಲ ೫ ಗಂಟೆಗೆ ದಯಮಾಡಿಸಿದರು ಅವರು ಬರುವಾಗ ದಾರಿಯಲ್ಲಿ ಶಿಡ್ಲಘಟ್ಟ ಮತ್ತು ಚಿಕ್ಕ ಬಳ್ಳಾಪುರದ ಪೌರಸಭೆಯವರು ಅವರಿಗೆ ಬಿನ್ನವತ್ತಳೆಗಳನ್ನರ್ಪಿಸಿದರು.

ಮುಂಚೇನ ಹಳ್ಳಿಯಲ್ಲಿ ಅವರು ಆಸ್ಪತ್ರೆಯ ಪ್ರಾರಂಭೋತ್ಸವವನ್ನು ನೆರವೇರಿಸುವ ಸಂದರ್ಭದಲ್ಲಿ ಕೋಲಾರ ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರವರಾದ ಶ್ರೀಮಾನ್ ಕೆ ಚೆಂಗಲರಾಯರೆಡ್ಡಿ, ಬಿ ಎಲ್ ಸಿ ಅವರು ಬೋರ್ಡಿನ ಪರವಾಗಿ ದಿವಾನ ಸಾಹೇಬರವರಿಗೆ ಒಂದು ಬಿನ್ನವತ್ತಳೆಯನ್ನರ್ಪಿಸಿದರು.

ಬಿನ್ನವತ್ತಳೆಯಲ್ಲಿ ಬೋರ್ಡಿನವರು ದಿವಾನ ಸಾಹೇಬರನ್ನು ಕೆಲವು ಉಪಕಾರಗಳನ್ನರ್ಪಿಸಬೇಕೆಂದು ಕೇಳಿಕೊಂಡಿದ್ದರು.

ಕೋಲಾರ ಡಿಸ್ಟ್ರಿಕ್ಟಿನಲ್ಲಿ ಇತರ ಕಡೆಗಳಿಗಿಂತ ಭೂಕಂದಾಯವು ಹೆಚ್ಚಾಗಿದ್ದು ರೈತರು ಬಹಳ ಕಷ್ಟಪಡುತ್ತಿರುವುದರಿಂದ ಭೂಕಂದಾಯವನ್ನು ಆದಷ್ಟು ಕಡಮೆ ಮಾಡಬೇಕೆಂದೂ, ಡಿಸ್ಟ್ರಿಕ್ಟ್ ಬೋರ್ಡಿಗೂ, ಗ್ರಾಮಪಂಚಾಯತಿಗಳಿಗೂ ನಿಕಟಸಂಬಂಧವನ್ನು ಕಲ್ಪಿಸುವುದಕ್ಕೆ ಅವಕಾಶವನ್ನುಂಟುಮಾಡಿ ಕೊಡಬೇಕೆಂದೂ ಪ್ರಾರ್ಥಿಸಿಕೊಂಡಿದ್ದರು

ದಿವಾನರು ಈ ವಿಚಾರಗಳನ್ನೆಲ್ಲ ಉತ್ತರ ಕೊಡುತ್ತ—ಗ್ರಾಮಪಂಚಾಯತಿಗಳು ಇನ್ನೂ ಶೈಶವಾವಸ್ಥೆಯಲ್ಲಿರುವುವೆಂದೂ ಆದ್ದರಿಂದ ಅವು ಇನ್ನು ಕೆಲವು ಕಾಲ ಡೆ. ಕಮಿಷನರ ಅಧಿಕಾರಕ್ಕೆ ಒಳಪಟ್ಟಿರುವುದು ಮೇಲೆಂದೂ

(೧೦ನೇ ಪುಟಕ್ಕೆ ಮುಂದುವರಿದಿದೆ)

ಶಾಂತಿ ಸಾಗರ.

ನೀನೇ ಬಹು ಜಾಣನೆಂದು ತಿಳಿದುಕೊಳ್ಳಬೇಡ ತಾನೇ ಬಹು ಜಾಣನೆಂದು ತಿಳಿದುಕೊಳ್ಳುತ್ತದೆ ಆದರೆ ಅದು ತನ್ನ ವುದು ಕಸನನ್ನು ವಿಶೇಷ ಜಾಣರಾದವರು ಈ ಜಗತ್ತಿನಲ್ಲಿ ಕಾಲಕ್ರಮೇಣ ವಂಚಕರಾಗುತ್ತಾರೆ

\+ + + +

ಸಮುದ್ರ ತಳದಲ್ಲಿರುವ ಮುತ್ತುಗಳನ್ನು ಹೆಕ್ಕಬೇಕೆಂದು ಒಂದು ಸಲ ಮುಳುಗಿದೊಡನೆ ಅದು ಸಿಗಲಾರದು ಮತ್ತೂ ಮತ್ತೂ ಯತ್ನಿಸಿದರೆ ಕಾರ್ಯವು ಕೈಗೂಡುವುದು ದೇವರನ್ನು ಕಾಣುವ ವಿಷಯವೂ ಹಾಗೆಯೇ

\+ + + +

ದೊಡ್ಡ ಮನುಷ್ಯನನ್ನು ಕಾಣಲು ಹೋದಾಗ, ಮೊದಲು ಪಹರೆಯವರನ್ನು ಕಂಡೇ ಒಳಗೆ ಹೋಗಬೇಕು. ಹಾಗೆ ದೇವರನ್ನು ಕಾಣಲು ಸಂಸಾರದಲ್ಲಿ ಹೋಗುವಾಗ ಪ್ರಪಂಚದಲ್ಲಿನ ಬಾಧೆಗಳನ್ನು ಸಹಿಸಿಯೇ ತೀರಬೇಕು

\+ + + +

ಉಸಿರುಗಟ್ಟಿ ಕೂಗುವ ಮಗುವನ್ನು ತಾಯಿಯು ಒಡನೆ ಎತ್ತಿಕೊಳ್ಳುತ್ತಾಳೆ ಹಾಗೆ ಅನನ್ಯಭಕ್ತಿಯಿಂದ ಪ್ರಾರ್ಥಿಸಿದರೆ ಭಗವಂತನು ಕ್ಷಿಪ್ರದಲ್ಲೇ ಕಾಣಸಿಗುತ್ತಾನೆ

\+ + + +

ನೀವು ಹಣ್ಣನ್ನು ತಿನ್ನಲಿಕ್ಕೆ ಮಾವಿನ ತೋಟಕ್ಕೆ ಇಳಿದಿರುವಿರಿ ಮರದಲ್ಲಿ ಎಷ್ಟು ರೆಂಬೆಗಳು, ಎಷ್ಟು ಎಲೆಗಳು ಎಂದು ಲೆಕ್ಕವಿಡುವ ಕೆಲಸ ಬೇಕೆ? ಹಣ್ಣನ್ನು ತಿಂದು ತೃಪ್ತರಾಗಿ ನೀವು ಭಗವಂತನನ್ನು ಕಾಣುವುದಕ್ಕಾಗಿ ಈ ಜನ್ಮವನ್ನೆತ್ತಿರುವಿರಿ ಅವನನ್ನು ಕಾಣುವ ಹಂಬಲ ಬಿಟ್ಟು ಮತ್ತೇಕೆ ಅನ್ಯ ಹಾದಿಗಿಳಿದಿರುವಿರೇಕೆ?

\+ + + +

ಆತನನ್ನು ನೀವು ಯಾವ ರೂಪದಿಂದ ಬಯಸಿದರೂ ಪ್ರತ್ಯಕ್ಷನಹುದು ಯಾವ ರೂಪವನ್ನು ಧ್ಯಾನಿಸುವಿರೋ ಆ ರೂಪವು ಎಲ್ಲ ಕಾಮಿತಾರ್ಥವನ್ನೀಯುವುದು

\+ + + +

ಸಂಸಾರದಲ್ಲಿ ವಾಸಿಸುವಾಗ, ಪ್ರಯಾಸದ ಜೀವನದಲ್ಲಿಯೂ ಭಕ್ತಿಭಾವಗಳು ಹೃದಯದಲ್ಲಿದ್ದರೆ ಶಾಂತ ಮನಸ್ಸಾಗಲು ... ಇದಕ್ಕಾಗಿ ಅಭ್ಯಾಸಪೂರ್ವಕವಾದ ಸಾಧನಸಾಧನೆಯು ಬೇಕು ಮನಸ್ಸನ್ನು ಚದುರಹೋಗದಂತೆ ಮನಸ್ಸು ನಿಮ್ಮದಾಗಿದ್ದರೆ ಅವರ್ಣನೀಯ ಆನಂದವಾಗುವುದು.

\+ + + +

ಭಕ್ತಿಯು ಚಿತ್ತವನ್ನು ಶಾಂತಗೊಳಿಸುವುದು ಶಾಂತಚಿತ್ತವು ಸನ್ಮಾರ್ಗಪ್ರವರ್ತಕವಾಗುವುದು. ಸನ್ಮಾರ್ಗ ಪ್ರವರ್ತನೆಯಿಂದ ಇಹದಲ್ಲಿ ಯಶಸ್ಸುಂಟಾಗುವುದು

\+ + + +

ಭಕ್ತಿಯಿಂದ ಆರೋಗ್ಯಕ್ಕೂ ಹಿತವಿದೆ. ರೋಗಿಗಳೂ ಭಕ್ತಿಯನ್ನಭ್ಯಸಿಸುತ್ತಾ ಇದ್ದರೆ ರೋಗವು ಶೀಘ್ರವಾಗಿ ಗುಣವಾಗುವುದು, ವರ್ಣನಾತೀತ ಸುಖವಾಗುವುದು.

ವಿದ್ಯುಚ್ಛಕ್ತಿಯನ್ನು ಜೋಡಿದೇಶಗಳಿಗೇಕೆ ಪೋಷಿಸಬಾರದು?

[ಸ್ವೀಕಾರ: ಸುಬೋಧ, ಸದ್ಬೋಧ, ಜಯಕರ್ನಾಟಕ, Progressive India, ರಂಗಭೂಮಿ, ಸಮಾಜ, ದತ್ತಾತ್ರೇಯ ಗ್ರಂಥಮಾಲೆಯ 'ಯಾತ್ರಾ ತಪ್ಪ'—ಮಾಸಪತ್ರಿಕೆಗಳು ಪ್ರಬುದ್ಧ ಕರ್ನಾಟಕ—ಕಾರ್ಮಿನ ಸಂಚಿಕೆ]

ಅಲ್ಲಿಯೂ ಅತ್ತೆಮ್ಮನ ಅಬ್ಬರವೇ?

ಲೇಖಕ:—ಪಂಡಿತ ತಾರಾನಾಥ, ತುಂಗಭದ್ರಾ

ಕ್ವೆಟ್ಟಾದಲ್ಲಿ ದೊನ್ನೆಯೇ ಜನಧನನಷ್ಟದ ಅಪಾರ ಹಾನಿಯು ಈಗ ಜಗತ್ತಿಗೆಲ್ಲ ತಿಳಿದ ವಿಷಯವೇ ಆಗಿದೆ. ಭೂದೇವಿಯ ಬಲ ಪ್ರದರ್ಶನದಿಂದ ಆ ಭಾಗದೆಲ್ಲಾ ನಾಶವಾಗಿ ಹೋಗಿದೆ. ಸುಮಾರು ೫೦,೦೦೦ ಜನರು ಸತ್ತಿರಬಹುದು ಎಂದು ತಿಳಿದವರು ಹೇಳುತ್ತಿದ್ದಾರೆ. ಈಗಾಗಲೇ ಸಾವಿರಾರು ಹೆಣಗಳನ್ನು ಮಣ್ಣಿನ ರಾಶಿರಾಶಿಗಳಿಂದ ಅಗೆದು ಎತ್ತಿ ಹಾಕಿದ್ದಾಯಿತು. ಅಗೆಯುವಾಗ ಹಲವರು ಜೀವಂತರಾಗಿಯೂ ಹೊರಬಿದ್ದುದುಂಟು. ಇನ್ನೂ ಜೀವಂತರಾಗಿಯೇ ಹಲಕೆಲವರು ಇರಬಹುದು—ಎಂದು ಅನೇಕರ ಭಾವನೆ ಇದೆ. ಇಂಥ ಸತ್ಕಾರ್ಯದ ಅನುಭವದಿಂದ ತುಂಬಿದ ಬಾಬುರಾಜೇಂದ್ರ ಪ್ರಸಾದರ ಮತವೂ ಹಾಗೆಯೇ ಇದೆ.

ಆದರೆ ಅಂಥವರು ಇನ್ನೆಷ್ಟು ದಿನ ಹಾಗೆಯೇ ಬದುಕಿದ್ದಾರು? ಬಿದ್ದ ಕೊಂಪೆಗಳನ್ನು ಎತ್ತಿ ಹಾಕಲಿಕ್ಕೆ ಸಾಕಷ್ಟು ಜನರಿದ್ದು, ಹೂತುಬಿದ್ದವರನ್ನು ಬೇಗನೇ ಅಗೆದು ಹಾಕಿದರಲ್ಲವೇ ಅಂಥ ಊಹೆಗೆ ತಕ್ಕ ಫಲವೂ ದೊರೆಯುವುದು? ಸರ್ ಸಾಮುವೇಲ್ ಹೋರರಂತೂ ತಮ್ಮ ವಿಷಾದವನ್ನೇನೋ ಪ್ರಕಟಿಸಿಬಿಟ್ಟರು ಆದರೆ ಅದಕ್ಕೆ ತಕ್ಕ ಕಾರ್ಯವೂ ಬೇಡವೇ? ಅದು ಹೇಗಿದೆ?

ಅಂಥ ದೊಡ್ಡ ಭೂಕಂಪದಿಂದ ಹಾಳಾಗಿ ಬಿದ್ದ ಸ್ಥಳದ ವಿಸ್ತೀರ್ಣ ಎಂದರೆ ೧೩೦ ಮೈಲು ಉದ್ದ ೨೦ ಮೈಲು ಅಗಲ ಅಷ್ಟು ವಿಶಾಲವಾದ ಪ್ರದೇಶವನ್ನು ಅಗೆದು ಹಾಕಲಿಕ್ಕೆ ೬೦೦೦ ಮಂದಿ ಕೂಲಿಗಳು ಸಾಕೇ? ಅಲ್ಲಿ ಯಜಮಾನಿಕೆ ಮಾಡುವ ಅಧಿಕಾರಿಗಳು ನೇಮಿಸಿದವರ ಸಂಖ್ಯೆಯೇನೋ ಸಧ್ಯಕ್ಕೆ ಅಷ್ಟೇ! ಸಾಕೋ ಅಷ್ಟು?

ಅದರ ೧೦ರಷ್ಟು ಸಂಖ್ಯೆಯಿದ್ದರೂ ಹೆಚ್ಚಾಗದು! ಆ ಸಂಖ್ಯೆಗೆ ಕೊರತೆವೆಲ್ಲಿದೆ ಮತ್ತೆ? ಆ ಸ್ಥಳದ ಅಧಿಕಾರವರ್ಗಕ್ಕೆ ಇನ್ನು ಹೆಚ್ಚಿನ ಸಂಖ್ಯೆಯನ್ನು ನೇಮಿಸುವುದು ಸಾಧ್ಯವಲ್ಲವಂತೆ! ಇರಲಿ, ಬೇಕಾದಷ್ಟು ನಮ್ಮ ಜನ ಧೈರ್ಯ ತ್ಯಾಗಗಳಿಂದ ಅದನ್ನು ಪೂರೈಸಲಿಕ್ಕೆ ಸಿದ್ಧರೇ ಆಗಿಲ್ಲವೇ?

ಕಾಂಗ್ರೆಸ್ ಸೆಕ್ರೆಟರಿಗಳಿಂದ ಆಚಾರ್ಯ ಕೃಪಲಾನಿ ಮತ್ತು ಜಯರಾಮದಾಸ ದೌಲತರಾಮರು ಅಲ್ಲಿಗೆ ಹೋಗಿದ್ದಾರೆ. ಬಾಬೂ ರಾಜೇಂದ್ರ ಪ್ರಸಾದರು ಅವರನ್ನಲ್ಲಿಗೆ ಬೇಕಾದ ಸೇವೆಗಾಗಿಯೇ ಕಳುಹಿಸಿದ್ದಾರೆ. ಕರಾಚಿಯ 'ಮೆಯರ್' ಆಗಿದ್ದ ಜಮಷೆಡ್ ಎನ್. ಆರ್. ಮೆಹತಾರವರೂ ಅಲ್ಲಿದ್ದಾರೆ. ಸಾಧು ವಾಸ್ವಾನಿಯವರೂ ಅಲ್ಲಿದ್ದಾರೆ. ಇವರೆಲ್ಲರಿಗೂ ಬೆಂಬಲರಾಗಿ ದುಡಿಯಲಿಕ್ಕೆ ಸಾವಿರಾರು ಯುವಕ-ಯುವತಿಯರು ಸಿದ್ಧರೇ ಆಗಿದ್ದಾರೆ. ಆದರೆ ಇವರಿಗೆ ಆ ಪ್ರದೇಶಕ್ಕೆ ಪ್ರವೇಶವೇ ಇಲ್ಲ. ಇವರ ಹೃದಯವು ಆ ಊರೊಳಗೆ ಇದ್ದರೂ ಇವರ ಘಟವೇನೋ ಊರ ಹೊರಗಿದ್ದೇ ತೀರಬೇಕು! ಇದೇಕೆ?

ಅಲ್ಲಿಯ ಕೆಲಸವನ್ನೆಲ್ಲಾ ಬರೇ ಸೈನ್ಯದ ಇಲಾಖೆಗೆ ಒಪ್ಪಿಸಿಕೊಟ್ಟಿದ್ದಾರೆ. ಅದಕ್ಕೆ ಸೇರಿದವರು ಮನಸಾರೇ ದುಡಿಯುತ್ತಲೇ ಇದ್ದಾರೆಂಬುದು ನಿಜವಾದ ಮಾತು. ಆದರೂ ಅವರು ಸಾಕಷ್ಟು ಮಾಡಲಾರರು. ಅವರ ಸಂಖ್ಯೆ ಬಹಳ ಕಡಿಮೆ. ಅವರ ಕೈಗಳನ್ನು ಸ್ವತಂತ್ರ ಸೇವಕ ವರ್ಗದಿಂದ ಸರಕಾರವು ಏತಕ್ಕೆ ಬಲಪಡಿಸಬಾರದು?

ಈಗ ಆ ಪ್ರದೇಶವೆಲ್ಲ 'ಮಾರ್ಷಲ್ ಲೋ'ಗೆ ಒಳಪಟ್ಟುಕೊಂಡಿದೆ. ಹೊರಗಿನವರಿಗೆ ಸರಳವಾಗಿ ಒಳಗೆ ಹೋಗಲಿಕ್ಕೆ ಅವಕಾಶವಿಲ್ಲ. ಒಳಗೆ ಹೋಗಲಿಚ್ಛಿಸುವವರು ಮಿಲಿಟರಿಯಿಂದಾಗಲೀ, ದೊಡ್ಡ ರೈಲ್ವೆ ಹುದ್ದೆದಾರರಿಂದಾಗಲೀ ಅನುಮತಿಯನ್ನು ಪಡೆದುಕೊಳ್ಳಬೇಕು. ಆದರೆ ಕ್ವೆಟ್ಟಾದ ಅಧಿಕಾರಿಗಳು ತಮಗೆ ಜನರು ಬೇಕು ಎಂದು ಬರೆಯುವ ತನಕ ಇವರು ಅನುಮತಿಕೊಡುವುದೇ ಇಲ್ಲ. ಅಂತೂ ಇಂತೂ ಕೊನೆಯ ಅಧಿಕಾರ ಕ್ವೆಟ್ಟಾದ ಸೇನಾಧಿಕಾರಿಗಳದೇ! ಇದಕ್ಕೆ ಕಾರಣವೇನು?

ಬಿಹಾರದಲ್ಲಿ ಸರಕಾರವೂ, ಸ್ವಯಂಸೇವಕ ವರ್ಗವೂ ಕೂಡಿಯೇ ದುಡಿದು ದೊಡ್ಡ ಉಪಕಾರ ಮಾಡಿ ಚಿರಸ್ಮರಣೀಯರಾಗಲಿಲ್ಲವೇ? ಅಂದ ಮೇಲೆ ಸರಕಾರಕ್ಕೆ ಇಂಥ ಹಾಳು ಹಟ ಈಗೇತಕ್ಕೆ?

ಕ್ವೆಟ್ಟಾದ ಸ್ಥಾನಮಹಿಮೆಯೋ? ಯಾರಿಗೆ ಗೊತ್ತು! ಅದೇನೂ ಇರಲಿ—ದಯೆಯಿಂದ ಸರಗದ ಅಧಿಕಾರಿ ವರ್ಗದ ಮಾನವ್ಯವೇ ಈಗ ದಫ್ನಕಟ್ಟಿದೆಯೆಂದು ಹೇಳಬೇಕಾಗುತ್ತದಲ್ಲವೇ?

ಹೊಸ ಮತ್ತು ಹಳೆಯ ಬ್ರಿಟಿಷ ಮಂತ್ರಿಮಂಡಲ

	ಹಳೆಯದು	ಹೊಸತು
ಪ್ರಧಾನ ಮಂತ್ರಿ	ಮೆಕ್ಡೊನಾಲ್ಡರು	ಬಾಲ್ಡ್ವಿನ್ನರು
ಲೋ. ಪ್ರೆಸಿಡೆಂಟ್ ಒಫ್ ಕೌನ್ಸಿಲ್	ಬಾಲ್ಡ್ವಿನ್ನರು	ಮೆಕ್ಡೊನಾಲ್ಡರು
ಚೆನ್ಸಲರ್ ಒಫ್ ಎಕ್ಸ್‌ಚೆಕ್ಕರ್	ಚೆಂಬರ್ಲೈನರು	ಚೆಂಬರ್ಲೈನರು
ಗೃಹಮಂತ್ರಿ	ಸರ್. ಜಿ. ಗಿಲ್ಮೋರ್	ಸರ್ ಜೋನ್ ಸೈಮನ್
ಲೋರ್ಡ್ ಹೈ ಚೆನ್ಸಲರ್	ವೈಕೌಂಟ್ ಸೇಂಕಿ	ಲೋರ್ಡ್ ಹೈಲ್‌ಶೇಮ್
ಸೆಕ್ರೆಟರಿ ಫೋರ್ ವಾರ್	ವೈಕೌಂಟ್ ಹೈಲ್‌ಶೇಮ್	ಲೋರ್ಡ್ ಹೆಲಿಫೆಕ್ಸ್
ವಿದೇಶೀಯ ಮಂತ್ರಿಗಳು	ಸರ್. ಜೋನ್‌ಸೈಮನ್	ಸರ್ ಸಾಮುವೇಲ್ ಹೋರ್
ಸೆ. ಒಫ್ ಸ್ಟೇಟ್ ಫೋರ್ ಇಂಡಿಯಾ	ಸರ್. ಸಾ. ಹೋರ್	ಮಾರ್ಕ್ವಿಸ್ ಒಫ್ ಜೆಟ್‌ಲೇಂಡ್
ಡೊಮಿನಿಯನ್ಸ್‌ಳಿಗೆ	ಜೆ ಎಚ್ ಥೋಮಸ್	ಜೆ ಎಚ್. ಥೋಮಸ್
ಕೊಲೊನಿಗಳಿಗೆ	ಸರ್. ಪಿ. ಕನ್ಲಿಫ್ ಲಿಸ್ಟರ್	ಮೆಕ್ಡೊನಾಲ್ಡರು
ಎಜ್ಯುಕೇಶನ್	ಲೋರ್ಡ್ ಹೆಲಿಫೆಕ್ಸ್	ಒ. ಸ್ಟೇನ್ಲಿ
ಎಗ್ರಿಕಲ್ಚರ್–	ಡಬ್ಲ್ಯು. ಇಲಿಯಟ್	ಡಬ್ಲ್ಯು. ಇಲಿಯಟ್
ಲೇಬರ್–	ಒ. ಸ್ಟೇನ್ಲಿ	ಮಿ. ಇ. ಬ್ರೌನ್
ಪೋಸ್ಟ್ ಮಾಸ್ಟರ್ ಜನರಲರು–	ಸರ್. ಕಿಂಗ್ಸ್ಲಿ ವುಡ್	ಮೇಜರ್ ಟ್ರಯನ್
ಲೋರ್ಡ್ ಪ್ರಿವಿಸೀಲ್–	ಅಂತೋನಿ ಏಡನ್	ಲೋರ್ಡ್ ಲಂಡನ್‌ಡೆರಿ
ಲೀಗ್ ಒಫ್ ನೇಶನ್ಸ್ ಕೆಲಸಗಳಿಗೆ–ಏಡನರು		
ವಿಮಾನಗಳಿಗೆ–	ಲೋರ್ಡ್ ಲಂಡನ್‌ಡೆರಿ	ಸರ್. ಪಿ. ಕನ್ಲಿಫ್ ಲಿಸ್ಟರ್
ಆರೋಗ್ಯಕ್ಕೆ–	ಸರ್ ಹಿಲ್ಟನ್‌ಯಂಗ್	ಕಿಂಗ್ಸ್ಲಿ ವುಡ್
ಬೋರ್ಡ್ ಒಫ್ ಟ್ರೇಡ್	ರುನ್ಸಿಮಾನ್	ರುನ್ಸಿಮಾನ್

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ರಾಶಿ ಅಕ್ಕಿ ...	4— 0	4— 5
ಮುಸ್ರಿ ...	4— 4	4—10
ಗುಜ್ಜು ..	4— 2	4— 6
ಊರ ಅಕ್ಕಲ್ ಬೆಳ್ತಿಗೆ ..	4— 8	4—12
ರಂಗೂನು ಬೆ. ಗೋ. ೧ಕ್ಕೆ...	6—12	7— 4
ಎಲ್ಲೂರು ಬೆ. ಮು. ೧ಕ್ಕೆ...	4— 4	4— 8
ಗೋದಿ ಗೋಣಿ ೧ಕ್ಕೆ .	10— 0	12— 8
ತೊಗರಿ ಗೋಣಿ ೧ಕ್ಕೆ	10 —8	11— 0
ಹುರುಳಿ ಗೋಣಿ ೧ಕ್ಕೆ ...	7— 8	7 —12
ಕಡಲೆ ಗೋಣಿ ೧ಕ್ಕೆ	8 — 0	10— 8
ತೊಗರಿಬೇಳೆ ಗೋಣಿ ೧ಕ್ಕೆ	10— 0	17— 0
ಉದ್ದು ಗೋಣಿ ೧ಕ್ಕೆ .	8— 0	8— 8
ಹೆಸರು ಗೋಣಿ ೧ಕ್ಕೆ .	9— 0	9— 8
ಬೂರುಬೆಲ್ಲ ಖಂಡಿ ೧ಕ್ಕೆ .	35— 0	37— 8
ಉಪ್ಪು ಗೋಣಿ ೧ಕ್ಕೆ ...	4—12	5— 2
ಕೊಬ್ರಿ ಖಂಡಿ ೧ಕ್ಕೆ .	48— 0	55— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ...	20— 0	19— 0
ಎಳ್ಳಿಂಡಿ ಖಂಡಿ ೧ಕ್ಕೆ ..	38—12	36— 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ .	8—14	4— 14
ಎಳ್ಳೆಣ್ಣೆ ಮುಡಿ ೧ಕ್ಕೆ .	5— 2	6— 0
ಹರಳೆಣ್ಣೆ ಕಳ್ಸಿಗೆ ೧ಕ್ಕೆ...	5— 7	5—7
ದೋಣಿ ಸಕ್ಕರೆ ಮು. ೧ಕ್ಕೆ .	3—10	3—12
ಮೆಣಸು ...	5— 0	6— 4
ಸಾಸಿವೆ ಮುಡಿ ೧ಕ್ಕೆ ...	5 —12	6— 0
ಬಾಳುಮೆಣಸು ಖ. ೧ಕ್ಕೆ ...	120— 0	130— 0
ಮೆಂತ್ಯ ಮುಡಿ ೧ಕ್ಕೆ ...	23— 0	30— 0
ಗೇರುಬೀಜ ಮು. ೧ಕ್ಕೆ .	4— 8	4 —10
ಕಚ್ಚಿಲ ಖಂಡಿ ೧ಕ್ಕೆ	39— 0	39— 8
[illegible] ಮು. ೧ಕ್ಕೆ ..	9— 10	9— 12
[illegible] ಮು. ೧ಕ್ಕೆ	11— 0	12— 0
ಜೀರಿಗೆ ಸೇರು ೧ಕ್ಕೆ ...	14—12	15— 0
[illegible] ಮು. ೧ಕ್ಕೆ...	8— 12	9— 0
ಹುಣಸೆ ೧ಕ್ಕೆ ...	28— 4	23— 8
[illegible] ಖಂಡಿ ೧ಕ್ಕೆ	20— 0	25— 8
[illegible] ಖಂಡಿ ೧ಕ್ಕೆ	165— 0	175— 0
[illegible] ಖಂಡಿ ೧ಕ್ಕೆ...	220— 0	230— 0
[illegible] ...	22— 0	24— 0
[illegible] ...	27— 0	30 — 0

LOOK SHARP! LOOK AHEAD!

Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. B.) and also for Accountancy; Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

Ladies are also admitted.

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to:—

D. R. Murdeshwar,

Dip. Econ, F. R. Econ; S. (Lond.)

Principal.

Ganapathy High School Street,

Mangalore.

Comfortable like an Aeroplane.

Use our swadeshi Mosquitonet for health, Comfort and sound sleep; as if you are in an Aeroplane. Sample cutting free. More convenient if some advance sent with order.

L.	B.	H	Price.	Best.
6 Ft.	3½ Ft.	3½ Ft.	Rs. 1/12	2/8
6 „	4 „	4 „	„ 2/4	3/-
6½ „	4½ „	4½ „	„ 2/8	3/8
7 „	5 „	5 „	„ 3/2	4/10
7½ „	6 „	6 „	„ 4/4	5/12

G. M Sharma, Post Box F 6706

Calcutta

ಕಣ್ಣಿನ ಪರೆ.

"ಪಿ–ಸನ್" ಎಂಬ (ನೇತ್ರಭಾಸ್ಕರ–) [illegible] ಕಣ್ಣುಪರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು [illegible] ಬೇಗನೆಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಅವಶ್ಯವಿಲ್ಲ. [illegible] ಗುಣವಾಗದಿದ್ದರೆ ಹಣ ವಾಪಸ್ ಕ್ರಯ ರೂ. 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ:—

Hary yasram, Panchpota, Bengal

ಶಾಲಿವಾಹನ ಶಕ ೧೮೫೭ನೆಯ ಭಾವ ಸಂವತ್ಸರದ ಜ್ಯೇಷ್ಠ ಶು। ೧೪ ಶನಿವಾರದಿಂದ ಜ್ಯೇಷ್ಠ ಬ। ೫ ಶುಕ್ರವಾರದ ವರೆಗಿನ ಪಂಚಾಂಗ. (೧೯೩೫ನೇಯ ಮಿಥುನ ಜೂನ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಗ್ರಹಸಂಚಾರ	ವಿಶೇಷ
15	ಶನಿ	೧೪	೩೫	ಅನುರಾಧಾ	೪೫	೧	
16	ರವಿ	೧೫	೩೨	ಜ್ಯೇಷ್ಠಾ	೪೪	೨	
17	ಸೋಮ	೧	೪೯	ಮೂಲಾ	೪೩	೩	
18	ಮಂಗಳ	೨	೪೪	ಪೂ. ಷಾ.	೪೦	೪	
19	ಬುಧ	೩	೩೯	ಉ. ಷಾ	೩೭	೫	
20	ಗುರು	೪	೩೪	ಶ್ರವಣ	೩೩	೬	
21	ಶುಕ್ರ	೫	೨೯	ಧನಿಷ್ಠಾ	೨೯	೭	

ಚಿಕ್ಕದೊಡ್ಡವರು-ದೊಡ್ಡ ಚಿಕ್ಕವರು.

ಲೇಖಕರು-ಶ್ರೀ ಶಿವರಾಮ ಕಾರಂತರು.

ಆಶಾವಾದಿ ಅಣ್ಣಪ್ಪಯ್ಯ

ಅಣ್ಣಪ್ಪಯ್ಯನಿಗೆ ನೋಡು ನೋಡುತ್ತಿರುವಂತೆಯೇ, ಅರುವತ್ತರ ಮೇಲೆ ಆರು ವರ್ಷ ಕಳೆಯಿತು. ಅಣ್ಣಪ್ಪಯ್ಯನಿಗೆ ವಯಸ್ಸಾಯಿತು, ಮುದಿತನ ಬಂದಿತು-ಎಂದು ನಾವೆಲ್ಲ ಅಂದರೂ, ಅವರ ಯೋಚನೆಯಂತೆ ಅವರು ಕನಿಷ್ಠ ಇನ್ನು ಮೂವತ್ತು ವರುಷವಾದರೂ ಬದುಕುತ್ತಾರಂತೆ. ಅವರ ಧೈರ್ಯವೆಂದರೆ ಅವರ ಆರೋಗ್ಯದಲ್ಲಿ. ಆರೋಗ್ಯ ಬಿಡಿ-ಅದೃಷ್ಟ ಇದ್ದ ಹಾಗೆ ಆಗುತ್ತದಂತೆ. ಅವರ ತಲೆಗೂದಲು ಉದುರದೆ ಉಳಿದ ಮಟ್ಟಿಗೆ ಬೆಳ್ಳಂಬೆಳ್ಳಿಯಂತಿದೆ- ಹಲ್ಲು-ಮೂರರಲ್ಲಿ ಒಂದಂಶವು ಶಿಲ್ಕು ಉಳಿದಿದೆಯಷ್ಟೆ. ಆದರೂ ಅವರಿಗೆ ಧೈರ್ಯ: ತಾನು ಇನ್ನೊಂದು ಮೂವತ್ತು ವರುಷವಾದರೂ ಬದುಕಿ ಉಳಿದೇನು ಎಂದು. ಬದುಕಿ ಮೆರೆಯುವ ಆಸೆ ಅವರಿಗೂ ಇಲ್ಲ. ಇದ್ದು ಮಾಡುವುದೇನು?-ಎಂದು ಅವರೇ ಅನ್ನುತ್ತಾರೆ. ಆದರೆ ಕರ್ಮ-ಅವರ ಜಾತಕದಲ್ಲಿ ಸರಿಯಾಗಿ ೧೦೦ ವರುಷ ಆಯುಷ್ಯ ಬರೆದಿದೆಯಂತೆ. ಹೀಗೆ ಬ್ರಹ್ಮನು ಖುದ್ದಾಗಿ ಅವರ ಹಣೆಯ ಮೇಲೆ ಬರೆದಿರುವಾಗ ಬಂದ ಆಯುಷ್ಯ ಅನುಭವಿಸದೆ ಉಂಟೇ? ಏನಾಗುವುದೋ ಆಗಲಿ-ಎನ್ನುವುದು ಅವರ ಸ್ವಭಾವ.

ವಯಸ್ಸಾದ ಅಣ್ಣಪ್ಪಯ್ಯನವರೊಡನೆ ನನಗೆ ಪರಿಚಯವಿದ್ದರೂ ಸಲಿಗೆಯಿಲ್ಲ. ನಾನು ಅವರೊಡನೆ ಮಾತನಾಡುವುದನ್ನು ಕಡಿಮೆ ಮಾಡಿಲ್ಲ. ಆದರೆ ನನ್ನ ವಿಚಾರ ಅವರಿಗೆ ತಿಳಿದುದು ಕಡಿಮೆ-ಅವರ ವಿಚಾರ ನನಗೂ ಅಷ್ಟೇನೆ ತಿಳಿದಿರಬಹುದು.

* * * *

ಅವರ ವಿಷಯ ನನಗೆ ತಿಳಿದಿರುವುದೆಂದರೆ ಅವರ ಮಗ ರಾಮು ವಿಚಾರ. ರಾಮು ಮತ್ತು ನಾನು ಸಹಪಾಠಿಗಳು, ಅಂದರೆ-ಜತೆಯಲ್ಲಿ ಓದಿದವರು. ಓದಿ ಪಾಸಾದವನಲ್ಲ. ಪಾಸು ಅಂದರೆ-ಅದೃಷ್ಟ ಎಂದು ಅಣ್ಣಪ್ಪಯ್ಯ ಒಮ್ಮೆ ಹೇಳಿದ್ದರು. ಅದು ಅಣ್ಣಪ್ಪ V ಫೋರ್ಮ್ ಫೈಲಾದಾಗ. ಪರೀಕ್ಷೆಗೆ ಹದಿನೈದು ದಿವಸದ ಮೊದಲು ನಾನು ಅವರಲ್ಲಿಗೆ ಹೋಗಿದ್ದೆ. ಅವರಿಗೆ ಮಾತನಾಡಲು ಜನರು ಸಿಕ್ಕಿದರೆ ಸಾಕು. ನನ್ನನ್ನು ಕಂಡು "ಯಾರು, ಏನೆ ರಾಮುವನ್ನು ನೋಡಲಿಕ್ಕೆ ಬಂದೆಯಾ. ಅವನು ಅಜ್ಜಿಯ ಮನೆಗೆ ಹೋಗಿದ್ದಾನೆ"-ಎಂದರು.

"ಹಾಗಾದರೆ ರಾಮು ಇಲ್ಲವೇ?"

"ಹುಡುಗಾ, (ನಾನು), ನಿನಗೆ ನಮ್ಮ ರಾಮು ವಿಚಾರ ಗೊತ್ತಿದೆಯಲ್ಲ. ಚೆನ್ನಾಗಿಲ್ಲವೇ ಅವನು? ನೋಡು ಅವನ ವಿದ್ಯಾರೇಖೆಯಂತೆ ಒಂದು ಅಂಗುಲ ದಪ್ಪವಾಗಿ ಬಿದ್ದದೆ. ಆಯುಷ್ಯರೇಖೆ ನನಗಿಂತ ಬಲವಾಗಿದೆ. ಅವನು ಕ್ಲಾಸಿನಲ್ಲಿ ಹುಷಾರಿಲ್ಲವೇ?"

"ಇದ್ದಾನಪ್ಪ! ಏನೋ ಲೆಕ್ಕದಲ್ಲಿ, "

"ಇಲ್ಲ ಲೆಕ್ಕಪಕ್ಕದಲ್ಲೆಲ್ಲ ಅವನು ಹುಶಾರು ಇರಬೇಕು. ಏನೋ ನೋಡು, ರಾಮಚಂದ್ರನ ಪೂಜೆ ಮಾಡುವವನು ನಾನು. ದೇವರು ಅನುಗ್ರಹಿಸಿದ್ದಾನೆ. ಅವನು ಈ ವರುಷ ಪಾಸಾಗಿ, ಒಂದು ಮೆಟ್ರಿಕ್ಕು ಆದರೆ, ಮುಂದೆ ಒಂದು ಬಿ ಎ ಮಾಡಿಸಬೇಕೆಂದಿದೆ. ದೇವರು ನಡೆಯಿಸುತ್ತಾನೆ."

"ನನಗೆ, ಸಮಯವಾಯಿತು, ಹೋಗಲೇ?"

"ನಿಲ್ಲು, ಏನು ಪ್ರಸಂಗ ತಲೆಕೆಳಗೆ ಆಗುತ್ತದೆ. ನಮ್ಮ ರಾಮುವಿಗೆ ಒಂದು ಮದುವೆ ಮಾಡಿಸುವ ಎಂದಿದ್ದೇನೆ. ನಮ್ಮ ಕೆಳಗಿನ ಮನೆಯವರ ಮಗಳು ಜಾತಕವೂ ಕೂಡಿ ಬರುತ್ತದೆ. ಹುಡುಗಿಯೆಂದರೆ ಪ್ರತ್ಯಕ್ಷ ಲಕ್ಷ್ಮೀ ದೇವಿ"-ಏನೋ ದೇವರು ಅದೇ ಹುಡುಗಿಯನ್ನು ಅವನ ಹಣೆಯ ಮೇಲೆ ಬರೆದ ಹಾಗೆ ಕಾಣುತ್ತದೆ ಎಂದರು.

ಅಷ್ಟರಲ್ಲಿ ಅವರ ಮಡದಿ ನಾಗಮ್ಮ ಬಂದಳು. ಬಂದವಳೇ "ಇವತ್ತು ಸುಬ್ಬಕ್ಕ ಬಂದು, ತಮ್ಮ ಮಗಳ ಮದುವೆಗೆ ಬರಬೇಕು ಎಂದು ಹೇಳಿಹೋದಳು"

ಆ ಮೇಲೆ ನನಗೆ ತಿಳಿಯಿತು; ಇವರ ಮಗನಿಗೆಂದು ಎಣಿಸಿದ ಲಕ್ಷ್ಮೀ ದೇವಿಗೇನೆ ಈ ಲಗ್ನ ನಿಶ್ಚಯವಾದದ್ದು.

* * * *

ಇನ್ನೊಮ್ಮೆ ನಾನು ರಜೆಯಲ್ಲಿ ಅವರ ಮನೆಗೆ ರಾಮುವಿನ ಜತೆಯಲ್ಲೇ ಹೋಗಿದ್ದೆ. ಅದೇ ವರುಷ ರಾಮುವು V ಫಾರ್ಮಿನಲ್ಲಿ ನಾಪಾಸಾದುದು. ರಾಮುವಿನ ವಿಷಯ ನನಗೆ ಚೆನ್ನಾಗಿ ಗೊತ್ತು. ರಾಮುವಿಗೆ ಪುಸ್ತಕವೆಂದರೆ ಬೇಸರ; ಶ್ರಮವೆಂದರೆ ಆಗದು. ಸುಖವಾಗಿ, ಬೆವರು ಸುರಿಯದೆ ತೂಕಡಿಕೆಯಲ್ಲಿ ದಿವಸ ಹೋಗಬೇಕು. ಆದರೂ ಅವನ ಹಸ್ತಮುದ್ರಿಕೆಯಾಗಲಿ, ಜಾತಕವಾಗಲಿ ಒಳ್ಳೇ ಸರಸ್ವತೀ ಪುತ್ರತ್ವವನ್ನು ಸೂಚಿಸುತ್ತದೆ. "ನಮ್ಮ ಮಗನು ಕಡಿಮೆ ಕಡಿಮೆ ಬಿ. ಎ. ಬಿ. ಎಲ್ ಆಗಬೇಕು, ಇದೇನೋ ದುರದೃಷ್ಟ. ಎಲ್ಲಿಯೋ ಒಂದು ಕೆಟ್ಟ ಘಳಿಗೆ ಬಂದು ಸುಳಿದಿರಬೇಕು."

* * * *

ಈಗ ರಾಮು V ನಾಪಾಸಾಗಿ ಐದು ವರುಷಗಳಾದುವು. ಅಣ್ಣಪ್ಪಯ್ಯನ ಮನೆಯೆಲ್ಲವೂ ಕತ್ತಲಾಗಿದೆ. ಅವರ ಮಗನು, ಇದ್ದ ಒಬ್ಬನೇ ರಾಮುವು, ಗತಿಸಿ ಇಂದಿಗೆ ಎರಡು ವರುಷವಾಯಿತು. ಅವರ ಮಡದಿಯು ಯಾರೊಡನೆಯೂ ಮಾತನಾಡುವುದಿಲ್ಲ. ನಾನೆಲ್ಲಾದರೂ ಅವರ ಮನೆಗೆ ಹೋದರೆ ಹಿಂದಿನ ಸ್ಮರಣೆಯಿಂದ ನನ್ನನ್ನೆ "ರಾಮು, ಬಾ" ಎಂದು ಮಾತನಾಡಿಸುತ್ತಾಳೆ. ನಾನು ಅಣ್ಣಪ್ಪಯ್ಯನವರ ಬಳಿಗೆ ಹೋದರೆ ಅವರ ರೀತಿಯೇ ಬೇರೆ. ಇದು ತನಕ ಮಡಿದ ಹುಡುಗನ ವಿಷಯ ಅವರು ಮಾತನಾಡಲಿಲ್ಲ. ಏನಾದರೂ ವಿಷಯ ಮಾತನಾಡುತ್ತಾರೆ. ಸ್ವತಃ ಅವರಿಗೇನೆ ಜಾತಕ ನೋಡಲು ಬರುತ್ತದೆ. ಒಮ್ಮೆ ನನ್ನ ಜಾತಕವನ್ನು ತರಿಸಿಕೊಂಡು "ಬೇಷ್, ನಮ್ಮ ರಾಮುವಿನ ಜಾತಕದಂತಿದೆ" ಎಂದರು.

ನನ್ನ ಎದೆ ಧಸಕ್ಕೆಂದಿತು.

ಅವರ ಮಡದಿ ನಾಗಮ್ಮ ಬಳಿಯಲ್ಲಿ ನಿಂತವರು "ಅಯ್ಯೊ ನಿಮ್ಮ ಜಾತಕ ನೋಡುವುದು ಸಾಕು! ನಮ್ಮ ಹಣೆಯ ಮೇಲೆ ಮಣ್ಣು ಬರೆದಿತ್ತು-ಜಾತಕ ಹಿಡಿದು ಮಣ್ಣು ಚೆನ್ನವೆಂದಿರಿ-"ಎಂದಳು.

ಅಣ್ಣಪ್ಪಯ್ಯನಿಗೆ ನಗು ಬಂದಿತು, ಕೊನೆಗೆ ಹೆಂಡತಿ ಮೊರೆಯ ಅಳುವನ್ನು ಕಂಡ "ಮಗೂ, ಅವಳಿಗೆ ಇಷ್ಟು ವಯಸ್ಸಾದರೂ ಬುದ್ಧಿಯಿಲ್ಲ. ರಾಮುವಿಗಾಗಿ ಅಳುತ್ತಾಳೆ. ಯಾರು ಚಿರವಂತೆ, ಅವಳ ಹಣೆಯಲ್ಲಿ ಪುತ್ರ ವಿಯೋಗ ವಿಧಿತವಾಗಿ ಇದೆ. ಸಾಯುವ ತನಕ ಬರೆದದ್ದೆ ತಪ್ಪಿಸುವರುಂಟೆ?"

ಹೆಂಡತಿ, ಗತಿಸಿದ ಮಗನಿಗಾಗಿ ಅಳುತ್ತಾಳೆ. ಇವರು ಕನಸಿನ ಸ್ವರ್ಗ ಕಂಡು ಆಶೆ ತೋರಿಸುತ್ತಾರೆ.

\+ \+ \+ \+ \+

ಬಹಳ ಸಮಯ ಕಳೆಯಿತು. ಮಳೆಗಾಲ ದಾರುಣವಾಗಿ ಊರಿನ ಅಗೆ ಅಡಿಗಳೆಲ್ಲಾ ಕರಟಿಹೋಗಿವೆ. ಎಲ್ಲಿ ರೈತರೂ ಸೀರಿಗಾಗಿ ಹಾತೊರೆಯುತ್ತಿದ್ದಾರೆ. ಅಣ್ಣಪ್ಪಯ್ಯನವರ ಮನೆ ಜಗುಲಿಯ ಮೇಲೆ ಅವರು ಕುಳಿತಿದ್ದರು. ಅಲ್ಲಿಗೆ ಅವರ ಒಕ್ಕಲು ಬಂದು ಸ್ವಾಮಿ, "ಜನದೆಯೇ ... ಸುಟ್ಟುಧ್ವಂಸವಾಯಿತು. ಇನ್ನೂ ಈ ವರ್ಷ ... ರಾಯಿತು."-ಎಂದನು, ಅಣ್ಣಪ್ಪಯ್ಯನು-ನಿನಗೆ ಮರುಳೇ, ಈ ವರುಷ ಚಂದ್ರನು ಬಲವಾಗಿದ್ದಾನೆ. ಯುಗಾದಿ ಫಲದಲ್ಲಿ ಹೇಳಿದೆ. ಇನ್ನಿಲ್ಲದಂಥ ಬೆಳೆಯಿದೆಯೆಂದು.

ಅನಂತರ ನನಗೆ ತಿಳಿದ ವಿಷಯವೆಂದರೆ-ಬಂದುದು ಬರಗಾಲವೆಂದು. ಅಣ್ಣಪ್ಪಯ್ಯನವರೇ ಎಷ್ಟೊ ಬಡಬಗ್ಗರಿಗೆ ಒಂದು ದಿವಸ ಗಂಜಿ ಮಾಡಿಸಿ, ಅದಕ್ಕೆ ಬೆಲ್ಲ ಸೇರಿಸಿ ಬಡಿಸಿ ಸಂತೋಷ ಪಡಿಸಿದ್ದರು.

ಅವರ ಜೀವನವೆಂದರೆ ದುಃಖದ ಬುಗ್ಗೆಯೆಂದು ನನಗೆ ತೋರುತಿತ್ತು. ಆದರೆ ಅಣ್ಣಪ್ಪಯ್ಯನವರ ಬಾಯಿಂದ ಈ ತನಕ "ನಿರಾಶೆ"ಯ ಮಾತನ್ನು ನಾನು ಕೇಳಿಲ್ಲ. ಹಿಂದಿನ ಉದಾಹರಣೆಗಳನ್ನೆತ್ತಿ ಹಿಡಿದು ಅವರೊಡನೆ ವಾದಿಸಿದರೆ "ನಿನಗೆ ಮರುಳು, ಅದೆಲ್ಲ ಹಾಗಿಯಿತೆಂದು ಇದೂ ಹಾಗಾಗುತ್ತದೆಯೇ?" ಅನ್ನುವರು.

ಅದು ಏಕೆ ಹಾಗಾಯಿತು?

"ಆಯಿತಪ್ಪ ಅವನ ಇಚ್ಛೆಯಲ್ಲವೆ ಮುಖ್ಯ-"ಆದರೆ ಜಗತ್ತನ್ನು ಸರಿಯಾಗಿ ನಡೆಯಿಸದಿದ್ದರೆ ಅವನ ಮಾನವೇ ಅಲ್ಲದೆ ಹೋಗುವುದು" ಎನ್ನುತಿದ್ದರು.

(೧೪ನೇ ಪುಟದಿಂದ ಮುಂದುವರಿದುದು)

ವರ್ಧಂತ್ಯುತ್ಸವ.

ಮದರಾಸ ಸರಕಾರದ ಸಚಿವ ಶ್ರೇಷ್ಠರಾದ ಬೊಬ್ಬಿಲಿ ರಾಜರವರು, ಕೊಲಂಕದ ರಾಜರು ಮತ್ತು ವೆಲ್ಲಿಂಗಿರಿ ಗೌಡರು ವರ್ಧಂತ್ಯುತ್ಸವಕ್ಕೆ ಮಹಾರಾಜರ ಅತಿಥಿಗಳಾಗಿ ದಯಮಾಡಿಸಿದ್ದಾರೆ.

ಮೈಸೂರಿನಲ್ಲಿ ಝಾಡಮಾಲಿಗಳ ಮುಷ್ಕರ.

ಮೈಸೂರಿನಲ್ಲಿ ಸುಮಾರು ೫೦೦ ಮಂದಿ ಝಾಡಮಾಲಿಗಳು ಮುಷ್ಕರ ಹಿಡಿದಿದ್ದಾರೆ. ಈಗ ಅವರಿಗಿರುವ ತಿಂಗಳ ಸಂಬಳವನ್ನು ರೂ ... ರಿಂದ ... ಕ್ಕೆ ಬಡತಿ ಮಾಡಬೇಕೆಂದೂ, ಹೆಂಗಸರು ಗರ್ಭಿಣಿಯರಾದರೆ ಕೊಡುತ್ತಿರುವ ರಜವನ್ನು ... ದಿವಸಗಳಿಂದ ಒಂದು ತಿಂಗಳಿಗೆ ಏರಿಸಬೇಕೆಂದೂ ಝಾಡಮಾಲಿಗಳು ಬೇಡಿಕೊಂಡರು. ಪೌರಸಭೆಯವರು ಈ ಬೇಡಿಕೆಗಳನ್ನು ಸಲ್ಲಿಸಲು ಒಪ್ಪಲಿಲ್ಲ. ಝಾಡಮಾಲಿಗಳನ್ನು ಕೆಲಸದ ಮೇಲೆ ಕರೆತರಲು ಪ್ರಯತ್ನ ಪಡುತ್ತಿದ್ದಾರೆ.

[ಈಗಿನ ಪತ್ರವಾನ ಪೌರಸಭೆಯವರ ಈ ವಿಚಾರವನ್ನು ತರ್ಕಿಸುವುದಕ್ಕಾಗಿ ಸಭೆಸೇರಿ ನಿರ್ಣಯಕ್ಕೆ ಬಂದಿದ್ದಾರೆಂದೂ ಝಾಡಮಾಲಿಗಳು ಮುಷ್ಕರವನ್ನು ನಿಲ್ಲಿಸಿ ಕೆಲಸದ ಮೇಲೆ ಬಂದಿರುವರೆಂದೂ ತಿಳಿದುಬಂದಿದೆ]

C 3   No. 730

INDIAN POSTS AND TELEGRAPHS DEPARTMENT

Received here at 18 H 15 M

MADRAS 23 FEB

O ND BOMBAY CD 23 25 PICTURES MADRAS

= HEARTILY WISH FIRST ANNIVERSARY EPOCH SUCCESS STOP AMRITMANTHAN ENTERING TWENTIETH MEMORABLE WEEK BOMBAY TRUST MADRAS WILL REPEAT EVENT = BABURAO & JAYANTILAL

This form must accompany any inquiry respecting this Telegram.

Karim Bux Bros., Printers, Calcutta— B 97— 1 10 33—40 000 Bks.

ಶ್ರೀ ಕೃಷ್ಣ ಸಿನೆಮದಲ್ಲಿ ತಾ. ೧೫ರಿಂದ ಪ್ರದರ್ಶಿಸಲ್ಪಡಲಿರುವ

'ಅಮೃತಮಂಥನ'ವೆಂಬ

ಪ್ರಭಾತ ಕಂಪೆನಿಯ ವಾಗ್ಚಲಚಿತ್ರವು ಕಳೆದ ೩೮ ವಾರಗಳಿಂದಲೂ ಮುಂಬಾಯಿಯಲ್ಲಿ ಪ್ರದರ್ಶಿಸಲ್ಪಡುತ್ತಿದೆ. ದೇಖಾವೆಯು ಪ್ರಾರಂಭವಾದ ೨೦ನೇ ವಾರದಲ್ಲಿ ಕಂಪೆನಿಗೆ ಕಳುಹಲ್ಪಟ್ಟ ತಂತಿಯ ಯಧಾನಕಲು ಇದಾಗಿರುತ್ತದೆ.

ಇದರಲ್ಲಿ ನಳಿನಿ ತರ್ಕಡ್, ಶಾಂತ ಆಪ್ಟೆ, ಸುರೇಶ ಬಾಬು, ಚಂದ್ರಮೋಹನ್, ಬಿ. ಮನೀ ಇವರೇ ಮೊದಲಾದ ಪ್ರಸಿದ್ಧ ನಟರು ಅಭಿನಯಿಸಿರುವರು

ಸಂಯುಕ್ತ ಅಮೆರಿಕಾದಲ್ಲಿ ಹಿಂದೀಯರ ಸ್ವಾತಂತ್ರ್ಯಕ್ಕಾಗಿ ಹೆಣಗಾಡುವ ಧೀರರ ಪರಿಚಯ

ಸಂಪ್ರ ೨

[ನಮ್ಮ ಜಿಲ್ಲೆಯವರಾಗಿದ್ದು, ಅಮೆರಿಕಾದಲ್ಲಿ ಸುಮಾರು ೧೨ ವರ್ಷಗಳ ವರೆಗೆ ವಾಸಿಸುತ್ತಿದ್ದು, ಅಲ್ಲಿಯ ಜನರ ಆಂತರಿಕ, ಬಾಹ್ಯ ಪರಿಸ್ಥಿತಿಗಳ ಪೂರ್ಣ ಜ್ಞಾನಾರ್ಜನೆಯನ್ನು ಮಾಡಿಕೊಂಡು ಮುಂಬಾಯಿಗೆ ಹಿಂತಿರುಗಿರುವ ಪ್ರೊ| ಪಿ. ಗಣೇಶರಾವ್, ಇವರು ಇಂಗ್ಲಿಷಿನಲ್ಲಿ ಬರೆದು ಕಳುಹಿಸಿರುವ ಲೇಖನದ ಅನುವಾದವಿದು. ಇಂತಹ ಲೇಖನಗಳು ನಮ್ಮ ಸಂಚಿಕೆಯಲ್ಲಿ ಮುಂದಕ್ಕೆ ಆಗಿಂದಾಗ್ಗೆ ಪ್ರಕಟವಾಗಲಿರುವುವು.]

ತಮ್ಮ ಸಾಹಸದಲ್ಲಿ ದಣಿಯದೆ, ತಮ್ಮ ಲೇಖನಿಯ ಅನುಪಮ ಶಕ್ತಿಯನ್ನು ಬಳಸಿದರೆ ಡಾ| ಸುಧೀಂದ್ರ ಬೋಸರೂ, ಶ್ರೀ| ನೀಹಾಲ್ ಸಿಂಗರೂ ಕಳೆದ ೨೦ ವರ್ಷಗಳಿಂದ ಹಿಂದೀಯ ಮತ್ತು ಅಮೆರಿಕಾ ಸಾಹಿತ್ಯ ಪ್ರಪಂಚದಲ್ಲಿ ನಿರರ್ಗಳವಾದ ಸೇವೆಯನ್ನು ಮಾಡಿರುವರು. ಅಮೆರಿಕಾನರ ಜೀವನಕ್ರಮ, ಆಚಾರವಿಚಾರಗಳನ್ನು ಅವರು ಪರಿಸಿ ಅವುಗಳ ಸಾಧಕ ಬಾಧಕಗಳನ್ನು ಭಾರತವರ್ಷಕ್ಕೆ ತಿಳಿಸಿದರು. ಭಾರತವರ್ಷದ ಸಂಸ್ಕೃತಿ, ನಾಗರಿಕತೆಗಳ ವಿವರವನ್ನು ನಿಷ್ಪಕ್ಷಪಾತರಾಗಿ ಅವರು ಅಮೆರಿಕಾನರಿಗೆ ತಿಳಿಸಿದರು ಹಿಂದೂಸ್ಥಾನ ಮತ್ತು ಅಮೆರಿಕಾಗಳ ಪರಸ್ಪರ ಸಂಪರ್ಕಕ್ಕೆ ಕಾರಣೀಭೂತರಾದರು

ಅಯೊವಾದಲ್ಲಿನ ಯುನಿವರ್ಸಿಟಿಯಲ್ಲಿ ಓರಿಯಂಟಲ್ ಪೊಲಿಟಿಕ್ಸಿನ ಮಹಾ ಆಚಾರ್ಯರಾಗಿರುವ ಡಾ| ಬೋಸರು ಅಮೆರಿಕಾದ ಅರ್ಥಶಾಸ್ತ್ರಜ್ಞರ, ರಾಜನೀತಿಜ್ಞರ ಮತ್ತು ಯುವಕ ಜನಾಂಗದ ಲಕ್ಷ್ಯವು ಬಹುಮಟ್ಟಿಗೆ ಹಿಂದೂದೇಶದತ್ತಕಡೆ ಹರಿಯುವಂತೆ ಮಾಡಿದರು ಜಗತ್ತಿನ ಪ್ರಮುಖ ರಾಜನೀತಿಜ್ಞರ, ಸರ್ವಾಧಿಕಾರಿಗಳ, ನರಪತಿಗಳ, ಧುರೀಣರ ಅಂತಃರಾಷ್ಟ್ರೀಯ ಖ್ಯಾತಿವಂತರ ಪೂರ್ಣ ಪರಿಚಯವುಳ್ಳ ಶ್ರೀ| ನಿಹಾಲ್ ಸಿಂಗರು ಆಂಗ್ಲ ಭಾಷಾ ಪಂಡಿತ್ಯಾಸಿಗಳಾದವರ ಸಮಕ್ಷಮ ಹಿಂದೂದೇಶದ ಸ್ಥಿತಿಗತಿ, ಆಶೆ ಅಭಿಲಾಷೆಗಳೇನೆಂದು ತನ್ನ ಅದ್ವಿತೀಯ ಶೈಲಿಯಿಂದ ವಿವರಿಸಿ ತಿಳಿಸಿ ವ ಹೋಪಕಾರವನ್ನೆಸಗಿರುವರ

ಇನ್ನು ಮುಸ್ಲಿ ಮಹಮ್ಮದ್ ಸಿದ್ದಿಕ್ ರವರು ಇವರು ಅಹ್ಮದಿಯಾ ಚಳವಳಿಕರ್ತರು ಪರ್ಶಿಯನ್, ಉರ್ದು, ಅರಬ್ಬಿಯ ಭಾಷಾಭ್ಯಾಸಿಗಳು ಕೊರಾನನ್ನು ಚೆನ್ನಾಗಿ ಬಲ್ಲವರು. ಸುಮಾರ್ಗದರ್ಶಕ ಅಧ್ಯಾತ್ಮಶಾಸ್ತ್ರವನ್ನೂ ಅರಿತವರು ಇವರು ಅಮೆರಿಕಾದಲ್ಲಿ ಇಸ್ಲಾಂ ಮತವನ್ನು ಪ್ರಚಾರಮಾಡುವುದರಲ್ಲಿ ನಿಸ್ಸೀಮರಾಗಿರುವರು ಈಗ ಪ್ರಾಯಸ್ಥರಾಗಿರುವರಾದರೂ ಇವರ ಕಾರುಣ್ಯಸಮಾನವಾದ ದೇಹಾ[illegible]ದ ಇವರು ಮಧ್ಯ ಮತ್ತು ದಕ್ಷಿಣಾಮೇರಿಕದಲ್ಲಿ ಒಹ ವ ಂದಿ ಅನುಯಾಯಿಗಳನ್ನು ಸಂಪಾದಿಸಿಕೊಂಡಿರುತ್ತಾರೆ ಇವರ ಪರಿಶ್ರಮ ಫಲವಾಗಿ ಕೈಗಾರಿಕೆಯ ಕೇಂದ್ರವಾದ ಅಮೆರಿಕಾದ ಜನನಿಬಿಡ ಭೂಮಿಯಲ್ಲಿ ಸಣ್ಣ ಸಣ್ಣ ಮಸೀದಿಗಳು ದೃಗ್ಗೋಚರವಾಗುತ್ತವೆ

ಅಮೆರಿಕಾದ ದೊಡ್ಡ ದೊಡ್ಡ ನಗರಗಳಲ್ಲಿ ವೇದಾಂತ ಪ್ರಚಾರದಲ್ಲಾಸಕ್ತರಾದ ಸುಮಾರು ಆರು ಜನ ಸ್ವಾಮಿಗಳಲ್ಲದೆ, ಅಲ್ಲಿ ಸಾಧಾರಣ ಇಪ್ಪತ್ತು ಮಂದಿ ಸ್ವತಂತ್ರ ಪ್ರಚಾರಕರೂ, ವಾಗ್ಮಿಗಳೂ, ಮಾನಸ ಶಾಸ್ತ್ರಜ್ಞರೂ, ನಿಗೂಢಶಾಸ್ತ್ರಜ್ಞರೂ ಇರುವರು ಇವರು ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ಪ್ರವಾಸ ಬೆಳೆಸಿ ಜೀವನ ನಡೆಸುತ್ತಿರುವರು ಇವರಲ್ಲಿ ಹಲವರು ಸಾಧುಗಳಂತೆ ಕಾವಿ ಕಾಷಾಯವನ್ನೇ ಧರಿಸುವರು ಕೆಲವರು ಆಧುನಿಕ ರೀತ್ಯಾ ಪೋಷಾಕುಗಳನ್ನು ಧರಿಸುವರು

ಸ್ವಾಮಿ ಯೋಗಾನಂದರೆಂಬವರು ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದವರು. ಬೆನ್ನಿಗೆ ಇಳಿದಿರುವ ತಲೆಗೂದಲು, ಸೌಮ್ಯ ಮುಖಪ್ರಭಾವ, ಯೋಗಿಗಳಿಗನುಗುಣವಾದ ನಿಲುವಂಗಿ—ಇಷ್ಟೇ ಇವರ ರೂಪವಿವರ ಇವರು ಸಾವಿರಾರು ಅಮೆರಿಕಾನರ ಗೌರವಕ್ಕೆ ಪಾತ್ರರಾಗಿರುವರು, ಎಷ್ಟೋ ಜನ ಶಿಷ್ಯರು ಇವರಿಗಿರುವರು ಇವರ ಅನುಯಾಯಿಗಳಾಗಿ ಗ್ರಂಥಕರ್ತರು, ವಿಜ್ಞಾನಿಗಳು, ವೈದ್ಯರು, ದೇಹಶಾಸ್ತ್ರಜ್ಞರು, ಸಂಗೀತಜ್ಞರು, ನರ್ತಕರು, ಬೇಂಕರರು, ಕೈಗಾರಿಕೆಗಳ ಧುರೀಣರು ಇವರೇ ಮೊದಲಾದವರು ಇರುವರು

'ಯೋಗೋಡಾ' ಎಂಬ ಇವರ ಆಧುನಿಕ ಕಾಲ ಯೋಗ್ಯವಾದ ಸಶಾಸ್ತ್ರೀಯ ಯೋಗಪ್ರಚಾರದಿಂದಾಗಿ ಇವರಿಗೆ ಮಧ್ಯಮ ತರಗತಿಯವರ ಬೆಂಬಲವೂ ಇದೆ ಒಂದು ಮಾಸಪತ್ರಿಕೆಯೂ ಇದೆ ಗ್ರಂಥಾಲಯ, ಆಫೀಸು ಕಟ್ಟಡಗಳು ಇವೆಲ್ಲ ಸೆನ್‌ಫ್ರಾನ್ಸಿಸ್ಕೋವಿನ ಒಂದು ರಮ್ಯ ಸ್ಥಳದಲ್ಲಿವೆ ಮೊದಲು ಸಿಂಧ್ಯವೆಂದು ತಿಳಿಯಲ್ಪಟ್ಟಿದ್ದ ಯೋಗಾಭ್ಯಾಸಗಳೂ, ಧರ್ಮಶಾಸ್ತ್ರಗಳೂ ಇವರ ಅನುಪಮ ಸ್ಪಷ್ಟೀಕರಣ ಶಕ್ತಿಯಿಂದಾಗಿ ಅಮೆರಿಕಾದಲ್ಲಿ ಗೌರವನೀಯ ಶಾಸ್ತ್ರಗಳಾಗಿಬಿಟ್ಟಿವೆ ಹಿಂದೂಗಳು ಅನುಸರಿಸುವ ಶಾಸ್ತ್ರಗಳೆಲ್ಲ ಅಂಧವೂ, ಹಾಸ್ಯಾಸ್ಪದವೂ ಎಂದು ಅಂದು ತಿಳಿದಿದ್ದ ಅಮೆರಿಕಾನರಿಗೆ ಇಂದು ಹಿಂದೂದೇಶದ ನೈಜ ಮಹಾತ್ಮೆಯು ವ್ಯಕ್ತವಾಗಿದೆ

ಸಮಾಧಿಸ್ಥರಾದ ಯೋಗಿ ರಾಮರವರ ವಿಚಾರ ತೆಳ್ಳಗಿನ ಶರೀರ, ಕೋಮಲ ವದನ ಬೋಳು ತಲೆ ಇವರು ತನ್ನ ಯೋಗಾಸನಗಳನ್ನು ಅಲ್ಲಿಯ ಜನರಿಗೆ ಪ್ರದರ್ಶಿಸಿ, ಅವುಗಳಿಂದ ಮನುಷ್ಯನ ಶರೀರಕ್ಕಾಗವ ಹಿತಗಳೇನೆಂದು ತಿಳಿಸಿರುವರು ಇವರು ತನ್ನ ಅಸಮರ್ಪಕ ಆಂಗ್ಲಭಾಷೆಯಿಂದ ಯೋಗಧ್ಯಾನಾದಿ ಗುಹ್ಯಜ್ಞಾನಗಳ ಮೇಲೆ ಉಪನ್ಯಾಸಗಳನ್ನು ಕೊಡುತ್ತಿದ್ದರು ತನ್ನ ಶಿಷ್ಯವೃಂದಕ್ಕೆ ಶಾಂತಿ, ಸಮಾಧಾನ ನೈರ್ಮಲ್ಯಗಳ ಕುರಿತು ಉಪದೇಶಕೊಡುತ್ತಿದ್ದರು.

ಡಾ| ಖಿಂಡ್ ರವರದ್ದು ಶುದ್ಧವಾದ ಗದ್ಯ, ವರ್ಣಸಹಿತವಾದ ನುಡಿಗಾರು ಸರಳವೂ ಮಧುರವೂ ಆದ ಭಾಷೆ, ನ್ಯಾಯಪೂರ್ಣ ಚರ್ಚೆ, ಸಕಾರಣಯುಕ್ತ ವಾಗ್ಧೋರಣೆ, ಇಂತಹ ಅಮೌಲ್ಯ ಗುಣಗಳು ಅವರ ಶಕ್ತಿಯೆಷ್ಟೆಂದು ಅವರ ಹಿಂಬಾಲಕರಿಗೆ ಖಚಿತಪಡಿಸಿವೆ ಸ್ವಾಮಿ ಯೋಗಾನಂದರಂತೆ ಇವರೂ ಕೂಡಾ ಒಳ್ಳೆಯ ವಾಚಾಳಿಗಳು, ಮಾನಸಶಾಸ್ತ್ರದಲ್ಲಿ ಕಾರ್ಯಕ್ಷಮರು ತನ್ನ ಸಂಗಾತಿಗಳ ಮನವನ್ನಾಕರ್ಷಿಸುವ ಶಕ್ತಿಯಿರುವವರು ಅಮೆರಿಕಾದಲ್ಲಿ ಇವರ ಆತ್ಮವಿಕಾಸ ಶಾಸ್ತ್ರವನ್ನು ಕಲಿಯುವ ನೂರಾರ ಶಿಷ್ಯರು ಇರುತ್ತಾರೆ

ಅಮೆರಿಕಾ ದೇಶದಲ್ಲಿ ತನ್ನ ಕಲೆ, ಕವಿತೆ ಮತ್ತು ಸಾಹಿತ್ಯಜ್ಞಾನಕ್ಕಾಗಿ ಶ್ರೀ| ಧನಗೋಪಾಲ ಮುಖರ್ಜಿಯವರು ಬಹು ಖ್ಯಾತಿವಂತರಾಗಿರುವರು ಯುವಕರ ಮಧ್ಯೆ, ಸ್ತ್ರೀಯರ ನಡುವೆ, ಇಗರ್ಜಿಗಳಲ್ಲಿ, ಕೊಲೇಜುಗಳಲ್ಲಿ, ವಿದ್ಯಾನಿಲಯಗಳಲ್ಲಿ, ಸೊಸೈಟಿಗಳಲ್ಲಿ ಕ್ಲಬ್‌ಗಳಲ್ಲಿ ಭಾಷಣಮಾಡುವ ಇವರ ಭಾರತವರ್ಷದಲ್ಲಿನ ಸೂರ್ಯಾಸ್ತಮ, ನಕ್ಷತ್ರ ಮಂಡಲ, ನೀರವ ರಾತ್ರಿ ಮೊದಲಾದ ಪ್ರಕೃತಿಯ ವಿವಿಧ ಸ್ವರೂಪಗಳನ್ನು ಇವರು ಕವಿಸಮಾನ ಭಾವಸಹಿತರಾಗಿ, ಸ್ಫೂರ್ತಿಮಯವಾಗಿ ವಿವರಿಸುವರು ಪೂರ್ಣ ಚಂದ್ರನ ಅತುಲ ಸೊಬಗು, ಮಧ್ಯಾಹ್ನದ ಬಿಸಿಲ ಬೇಗೆಯನ್ನು ತಪ್ಪಿಸಿ ಮರಗಳಡಿಯಲ್ಲಿ ವಿಶ್ರಾಂತಿ ಪಡೆಯುವ ದನ, ನೆರಳಿನಲ್ಲಿ ನಿಂತುಕೊಂಡು ರೆಕ್ಕೆಗಳನ್ನು ಹಾರಿಸಿ ನೆಗೆಯುವ ನವಿಲು, ತನ್ನ ಸೀರೆಯಲ್ಲಿ ತನ್ನ ಹಸುಳೆಯನ್ನು ಕಟ್ಟಿಕೊಂಡು ನಡೆಯುವ ಸ್ತ್ರೀ, ಮಧ್ಯಾಹ್ನದ ಮೌನವನ್ನು ಭೇದಿಸುವ ಕಮ್ಮಾರನ ಕೈಕೆಲಸ, ಮಹಾರಾಜರುಗಳ ವಿಲಾಸ, ಬಡವನ ಮುರಿ ಹುಲ್ಲಿನ ಗುಡಿಸಲು, ಕಟ ಕಟ ಎಂದು ನಡೆಯುವ ಎತ್ತಿನ ಗಾಡಿ, ಮತ್ತು ಆಧುನಿಕ ವಾಹನಗಳಾವುದೂ ಅವರ ದೃಷ್ಟಿಯಿಂದ ತಪ್ಪಿಸಿಕೊಳ್ಳುವುದಿಲ್ಲ ಹಳೆಯದಾಗಲಿ, ಹೊಸತಾಗಲಿ, ಪುರಾಣಕಾಲದ್ದಾಗಲಿ, ಆಧುನಿಕಯಾಗದ್ದಾಗಲೀ, ಸಜೀವ ವಸ್ತುವಾಗಲೀ, ನಿರ್ಜೀವ ವಸ್ತುವಾಗಲೀ, ಕಾಲ್ಪನಿಕ ಶಕ್ತಿಯುತರಾದ ಶ್ರೀ| ಮುಖರ್ಜಿಯವರು ಅವುಗಳನ್ನು ಎತ್ತಿ ಹಿಡಿದು ವರ್ಣಿಸಿ, ಅವು ನಿಮ್ಮ ಕಣ್ಮುಂದೆ ಜೀವಂತವಾಗಿರುವಂತೆ ಮಾಡುವರು ಇವರ ಭಾಷಣವು ಭಾವಭರಿತವಾಗಿರುವಂತೆ ಅರ್ಥಗರ್ಭಿತವಾಗಿಯೂ ನೀತಿಯುತವಾಗಿಯೂ ಇದೆ ಮನುಷ್ಯನು ವಿಶ್ವವ್ಯಾಪಕ ಶಕ್ತಿಯಿಂದುತ್ಪನ್ನನಾದವನು. ಕಾಲ, ದೇಶ, ಭಾಷೆಗಳೆಲ್ಲ ಅದನ್ನು ವಿಚ್ಛೇದಿಸಲು ನಿರ್ಮಿಸಲ್ಪಟ್ಟ ನಿರ್ಬಂಧಗಳು ಎಂದೇ ಅವರ ಜೀವನತತ್ವ ಧನಗೋಪಾಲ ಮುಖರ್ಜಿಯವರು ಮಿಸ್ ಮೇಯೋಳ 'ಮದರ್ ಇಂಡಿಯಾ' ಗ್ರಂಥಕ್ಕೆ ಉತ್ತರವಾಗಿ 'ಸನ್ ಒಫ್ ಮದರ್ ಇಂಡಿಯಾ ಅನ್ಸರ್ಸ್' ಎಂಬ ಗ್ರಂಥವನ್ನು ಕಾಲೋಚಿತವಾಗಿ ಪ್ರಕಟಿಸಿದರು

ನಮ್ಮವರ ದುಡಿಮೆಯು ನಿಷ್ಫಲವಾಗಲಿಲ್ಲ ಇವರು ವಿವಿಧ ಕಾರ್ಯಕ್ಷೇತ್ರಗಳಲ್ಲಿ ಶ್ರಮಪಟ್ಟುದರಿಂದಾಗಿ ಸ್ವಾತಂತ್ರ್ಯ ಪ್ರಿಯರಾದ ಅಮೆರಿಕಾನರು ಹಿಂದೂದೇಶದ ಕುರಿತಾಗಿ ಸತ್ಯ ವಿಷಯಗಳನ್ನು ತಿಳಿದುಕೊಳ್ಳುವಂತಾಗಿದೆ

ಡಾ| ಜೆ ಟಿ ಸಂಡರ್‌ಲೇಂಡ್ ("ಇಂಡಿಯಾ ಇನ್ ಬೋಂಡೇಜ್" ಎಂಬ ಸಿಷಿದ್ಧ ಗ್ರಂಥದ ಲೇಖಕರು) ರೆವರೆಂಡ್ ಡಾ| ಜೋನ್ ಹೇಂಡೆಲ್ (ಯುನಿಟೇರಿಯನ್ ಚರ್ಚ್ ನ್ಯೂಯೋರ್ಕ್ ಇದರ ಮುಖ್ಯಸ್ಥರು) ಅಮೆರಿಕಾದ ಯೆಹೂದ್ಯರ ಧುರೀಣರಾದ ರಬೀ ಸ್ಟೀವನ್ ಕೆ ವೈಸ್‌ರವರು, ಡಾ| ಸೆನೆಟರ್ ಕೋಪ್‌ಲೇಂಡ್, ನ್ಯೂಯೋರ್ಕಿನ ಗವರ್ನರ್ ಸ್ಮಿತರು, ಚಿಕಾಗೋವಿನ ಮೇಯರ ತೋಮ್ಸನ್—ಹೀಗೆ ಪ್ರತಿಯೊಬ್ಬ ರಾಷ್ಟ್ರಪುಂಗವರೂ, ಅವರೊಡನೆ ಸಾರ್ವಜನಿಕ ಮತವೂ ಹಿಂದೂದೇಶದ ಸ್ವಾತಂತ್ರ್ಯ ಸಂಗ್ರಹದಲ್ಲಿ ಭಾಗವಹಿಸಲು ಬಂದಿರುವರು

ಮಿಸ್ಸಿ ಪಿ ಹೋಲ್ ಎಂಬ ಕೆಲಿಫೋರ್ಸಿಯಾ ನಿವಾಸಿಯು ಭಾರತವರ್ಷದ ಚಳವಳವನ್ನು ಎತ್ತಿ ಹಿಡಿದಿರುವವರಲ್ಲೊಬ್ಬರಾಗಿರುವರು ಇವರು ಮಹಾತತ್ವಶಾಲಿಗಳು, ವಿದ್ಯಾಭಿಮಾನಿಗಳು, ಮತ್ತು ಸಮಾಜ ಸುಧಾರಕರು ಇವರಿಗೆ ಗಾಂಧಿಜೀಯವರೆಂದರೆ ನಿಸ್ಸೀಮ ಪ್ರೇಮ ಅವರ ಅಹಿಂಸಾತ್ಮಕ ಚಳವಳದೆಂದರೆ ಅನನ್ಯ ಭಕ್ತಿ ಇವರು ಹಿಂದೂದೇಶೋದ್ಧಾರದ ದೃಷ್ಟಿಯಿಂದ ದಿತಂಪ್ರತಿ ಆರರಿಂದ ಏಳು ಸಾವಿರ ಜನರ ಸಭೆಗಳಲ್ಲಿ ಭಾಷಣ ಕೊಟ್ಟು ರಾಜಕೀಯ, ಸಾಮಾಜಿಕ, ಶೈಕ್ಷಣಿಕ ವಿಚಾರಗಳ ಕುರಿತಾಗಿಯೂ, ತತ್ವ ಸುಧಾರಣೆಗಳ ಕುರಿತಾಗಿಯೂ ಭಾಷಣ ಮಾಡುತ್ತಿದ್ದಾರೆ "ರಾಜಕೀಯದಲ್ಲಿನ ಸಂತಗಾಂಧಿ" "ಭಾರತ ಭೂಮಿ—ನಾಗರಿಕತೆಯ ತೊಟ್ಟಿಲು" ಮೊದಲಾದುವು ಇವರು ಆರಿಸುವ ಪ್ರಿಯಕರ ಭಾಷಣ ವಿಷಯಗಳು.

ಬಡವರ—ದೀನರ—ದರಿದ್ರರ ಉನ್ನತಿಗಾಗಿ ಟೊಂಕಕಟ್ಟಿರುವ ಈ ಆತ್ಮಗಳೆಲ್ಲ ಪವಿತ್ರವಾದುವುಗಳೆಂದು ಬೇರೆ ಹೇಳಬೇಕೆ?

ಹಿಂದೂದೇಶದ ಕಲೆಯ ಪುನರುದ್ಧಾರ ಕಾರ್ಯವನ್ನು ಕೈಗೊಂಡು ಸಂಯುಕ್ತ ಅಮೆರಿಕಾಕ್ಕೆ ಆಗಾಗ್ಗೆ ಬಂದ ಕವಿವರ್ಯ ರವೀಂದ್ರನಾಥ ಠಾಕೂರರ ಮತ್ತು ಕವಿಯಿತ್ರಿ ಸರೋಜಿನಿ ನಾಯುಡುರವರ ವಿಷಯವಾಗಿ ಹೆಚ್ಚು ಹೇಳಬೇಕಾದುದಿಲ್ಲ ಇವರ ಆಗಮನದಿಂದಂತೂ ಅಮೆರಿಕಾನರಿಗೆ ಹಿಂದೂದೇಶದ ವಿದ್ವತ್ತಿನ ಸ್ವರೂಪವೇನೆಂದು ತಿಳಿಯಿತು ಅದರಲ್ಲೂ ದಿವಂಗತ ಅನ್ನಿಬಿಸೆಂಟರು ಅಧ್ಯಾತ್ಮ ಜ್ಞಾನವನ್ನು ಬೋಧಿಸಿಕೊಂಡು, ಶ್ರೀ| ಕೃಷ್ಣಮೂರ್ತಿಯವರು ಭಕ್ತಿಮಾರ್ಗ ಬೋಧನೆಯನ್ನು ಮಾಡಿಕೊಂಡು ಬಂದುದರಿಂದ ಬಹು ಪ್ರಯೋಜನವುಂಟಾಗಿದೆ ಇವರೆಲ್ಲರ ಆಗಮನದಿಂದಾಗಿ ಅಮೆರಿಕಾನರ ಪ್ರೇಮವು ಹಿಂದೂದೇಶದ ಕಡೆಗೆ ಆಕರ್ಷಿತವಾಗಲು ಸಾಧ್ಯವಾಯಿತು ಬಿಸೆಂಟರವರೂ ಸರೋಜಿನಿ ದೇವಿಯವರೂ ಅಲ್ಲದೆ ಇನ್ನಿತರ ಸ್ತ್ರೀಸಂಕುಲವೂ ಇಲ್ಲಿಗೆ ಬಂದುದರಿಂದ ಇಲ್ಲಿಯ ಜನರಿಗೆ ಭಾರತೀಯ ಮಹಿಳೆಯರ ಕುರಿತಾಗಿ ಇದ್ದ ತಪ್ಪು ತಿಳುವಳಿಕೆಗಳನ್ನು ಮೂಲೋತ್ಪಾಟನಗೊಳಿಸಲು ಸಾಧ್ಯವಾಯಿತು ಸಮಾಜದ ಸೇವೆಯಲ್ಲೂ, ಬಡವರ ಸೇವೆಯಲ್ಲೂ ತನ್ನ ಆತ್ಮಸಮರ್ಪಣೆ ಮಾಡಲು ಸಿದ್ಧರಾಗಿರುವ ಮಿಸ್ ಜೇನ್ ಅಡ್ಡಮ್ಸ್ ಎಂಬವರು ಅಮೆರಿಕಾಕ್ಕೆ ಆಗಮಿಸುವ ಭಾರತೀಯ ಮಹಿಳೆಯರನ್ನು ಸ್ವಾಗತೀಕರಿಸುವುದರಲ್ಲಿ ಪ್ರಥಮರು

ಕಳೆದ ನಾಲ್ಕೈದು ವರ್ಷಗಳಿಂದ ಅಮೆರಿಕಾಕ್ಕೆ ಶ್ರೀ| ವಿ ಜೆ ಪಟೇಲ್, ಮಿ| ಶೌಕತಾಲಿ, ಶ್ರೀ| ಹರೀಂದ್ರನಾಥ ಚಟ್ಟೋಪಾಧ್ಯಾಯ, ಶ್ರೀ| ಶ್ರೀನಿವಾಸ ಶಾಸ್ತ್ರಿ, ಶ್ರೀ| ನಟರಾಜನ್, ಬರೋಡದ ಗಾಯಕವಾಡ, ಆಗಾಖಾನ್ ಮತ್ತು ಇತರ ಸಂಚಾರಕರು ಬಂದುದರಿಂದ ಆಯಾಯಾ ಜನರ ರಾಜಕೀಯ ಭಾವನೆಗಳೂ ಅಭಿಪ್ರಾಯಗಳೂ ಏನೆಂದು ಇಲ್ಲಿಯವರು ತಿಳಿದುಕೊಳ್ಳುವಂತಾಗಿದೆ

ಅನೇಕ ವಿದ್ಯಾನಿಲಯಗಳಲ್ಲಿ ಕಾಳಿದಾಸನ ಶಾಕುಂತಲವನ್ನೂ, ಇಂದಿನ ಭಾರತೀಯ ಕಾಳಿದಾಸರಾದ ರವೀಂದ್ರನಾಥರ ನಾಟಕಗಳನ್ನೂ ಅಸಂಖ್ಯ ಪ್ರೇಕ್ಷಕರ ಮುಂದೆ ಹಿಂದೀಯ ವಿದ್ಯಾರ್ಥಿಗಳು ಅಭಿನಯಿಸುತ್ತಾರೆ. ವೈ ಎಂ ಸಿ ಎ ಗಳಲ್ಲಿ, ವಿದೇಶೀಯ ವಿದ್ಯಾರ್ಥಿಗಳ ಸಮಾಜಗಳಲ್ಲಿ, ಮಿಶನರಿ ಪರಿಷತ್ತುಗಳಲ್ಲಿ, ರವಿವಾರದ ಭಾಷಣಗಳಲ್ಲಿ, ಧ್ವನಿವಾಹಕಗಳ ಮೂಲಕ ಹಿಂದೀಯ ಯುವಕರು ಅಮೆರಿಕಾದಲ್ಲಿ ಕೆಲಸ ಮಾಡಿ ಹಿಂದೂದೇಶವು ಸ್ವಾತಂತ್ರ್ಯ ಸಂಪಾದನೆಯ ಯತ್ನದಲ್ಲಿ ಮಗ್ನರಾಗಿರುವ ವಿಚಾರವನ್ನು ಅಲ್ಲಿಯವರಿಗೆ ತಿಳಿಸಿ ಅವರ ಸಹಾನುಭೂತಿಯನ್ನು ಇತ್ತ ಕಡೆ ತಿರುಗಿಸುತ್ತಿದ್ದಾರೆ. ತಮ್ಮ ಕರ್ತವ್ಯವನ್ನು ನೆರವೇರಿಸುವುದರಲ್ಲಿ ಲೀನರಾಗಿರುವೆವೆಂಬುದನ್ನು ವ್ಯಕ್ತಗೊಳಿಸುತ್ತಾರೆ.

ಇನ್ನು "ಲೈಟ್ ಒಫ್ ಏಶಿಯಾ" "ನೂರ್ ಜಹಾನ್" ಮೊದಲಾದ ಚಲಚ್ಚಿತ್ರ ಪ್ರದರ್ಶನಗಳಿಂದಲೂ ಭಾರತೀಯ ವರ್ತಕರ ವಸ್ತುಪ್ರದರ್ಶನಗಳಲ್ಲಿಡುವ ವಿವಿಧ ಸಿಲ್ಕು, ಉಣ್ಣೆ ಮೊದಲಾದ ವಸ್ತುಗಳೂ ಅಮೆರಿಕಾನರ ಮೆಚ್ಚುಗೆಗೆ ಪಾತ್ರವಾಗಿ ಭಾರತೀಯರ ಕೀರ್ತಿಯು ವ್ಯಾಪಿಸಿಕೊಳ್ಳಲು ಸಾಧ್ಯವಾಗಿದೆ.

(೧೩ನೇ ಪುಟಕ್ಕೆ ಮುಂದುವರಿಯುದೆ)

ಭೂಕಂಪವು ೪೦,೦೦೦ ಪ್ರಾಣಗಳ ಆಹುತಿ ಪಡೆಯಿತು!

ಕೊಂಪೆಗಳಡಿಯಲ್ಲಿ ಇನ್ನೆಷ್ಟು ಶವಗಳಿವೆಯೋ!!

ಬಲೂಚಿಸ್ಥಾನವು ಭೂತಪ್ರೇತಗಳ ರುದ್ರಭೂಮಿಯಾಗಿದೆ!

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ವಾರ್ತೆಗಳ ಹಿಂದೆ, ಈ ವಾರ ಬಲೂಚಿಸ್ಥಾನದಿಂದ ಭೀಕರ ವಾರ್ತೆಗಳೇ ಬರುತ್ತಿವೆ. ಗಲಭೆಯು ಕೊನೆಗೊಂಡಿರುವುದರಿಂದ ನೊಂದ ಜನರೂ ಅಧಿಕಾರಿಗಳೂ ಮನಃಸ್ವಸ್ಥದಿಂದ ಕೆಲಸಮಾಡಲು ತೊಡಗಿರುವರು. ಅಧಿಕೃತ ಪಕ್ಷದಿಂದ ಬಂದ ವಾರ್ತೆಯಿಂದ ತಿಳಿದುಬರುವುದೇನೆಂದರೆ—ಬಲೂಚಿಸ್ಥಾನದ ಭೂಕಂಪವು ೧೩೦ ಮೈಲುಗಳಷ್ಟು ವಿಸ್ತೀರ್ಣದಲ್ಲಿ ಪರಿಣಮಿತವಾಯಿತು. ಕಲಟ್, ಮಾಸ್ಟುಂಗ್ ಎಂಬ ನಗರಗಳೆರಡು ಪೂರ್ಣವಾಗಿ ಧ್ವಂಸವಾಗಿವೆಯೆಂಬ ವಾರ್ತೆಯು ನಿಜವೆಂದು ತಿಳಿದುಬಂದಿದೆ. ಕ್ವೆಟ್ಟಾ ಸಬ್ ಡಿವಿಜನಿನಲ್ಲಿ ಕಡಿಮೆಯೆಂದರೆ ೧೦೦ ಗ್ರಾಮಗಳಾದರೂ ನಾಶವಾಗಿವೆ. ಗ್ರಾಮಾಂತರಗಳಲ್ಲಿ ೧೨,೦೦೦ದಿಂದ



ಬಲೂಚಿಸ್ಥಾನಕ್ಕೆ ಸಹಾಯವನ್ನೊದಗಿಸುತ್ತಿರುವ

ಶ್ರೀ॥ ಎಫ್. ಕೆ. ನರಿಮನ್ನರು.

೧೫,೦೦೦ದ ವರೆಗೆ ಮರಣಗಳಾಗಿವೆಯೆಂದು ಲೆಕ್ಕವಿಟ್ಟಿರುತ್ತಾರೆ. ೧೫,೦೦೦ ನಿರ್ಗತಿಕರು ಗ್ರಾಮಗಳಲ್ಲಿರುವರೆಂದೂ ತಿಳಿದುಬಂದಿದೆ. ಎಲ್ಲೆಲ್ಲಿ ಭೂಕಂಪವಾಗಿದೆಯೋ ಅಲ್ಲಿಂದೆಲ್ಲಾ ಜನರು ಗುಂಪುಗುಂಪಾಗಿ ಪರದೇಶಗಳಿಗೆ ತೆರಳುತ್ತಿರುವರು. ಆಸ್ತಿಪಾಸ್ತಿ ಭೂಮಿ ಬದುಕುಗಳೆಲ್ಲಾ ಅಲ್ಲಲ್ಲೇ ಬಿಟ್ಟುಬಿಡಲ್ಪಟ್ಟಿವೆ. ಆಹಾರವಿಲ್ಲದೆ ಸತ್ತ ನಾಯಿಗಳು ಅಸಂಖ್ಯ. ತಮಗೆ ಸರಿಯಾದ ಆಹಾರವಿಲ್ಲದಿರುವ ಜನರು ನಾಯಿಗಳನ್ನಾದರೂ ಹೇಗೆ ಸಾಕಿಸಲಹಿಯಾರು? ಎಲ್ಲೆಲ್ಲೂ ದುರ್ವಾಸನೆಯು ಹಬ್ಬಿದೆ. ಮಿಲಿಟರಿಯವರು ಮೂಗಿಗೆ ವಸ್ತ್ರವನ್ನು ಸುತ್ತಿಕೊಂಡು ಪಟ್ಟಣದಲ್ಲಿ ಕಾವಲುನೋಡುತ್ತಿರುವರು!

ಬಾಬೂರಾಜೇಂದ್ರ ಪ್ರಸಾದರು ಬಿಹಾರಿನ ಸೆಂಟ್ರಲ್ ರಿಲೀಫ್ ಕಮಿಟಿಯ ಪಾಟ್ನಾದ ಖಚೇರಿಗೆ ತಂತಿಬಿಟ್ಟು, ಎಲ್ಲಾ ಮೋಟರ್ ಕಾರುಗಳನ್ನೂ, ಲೋರಿಗಳನ್ನೂ ಇತರ ಸಾಮಗ್ರಿಗಳೊಂದಿಗೆ ಸಿದ್ಧಪಡಿಸಿಡಬೇಕೆಂದು ತಿಳಿಸಿರುವರು. ಅವರ ಪ್ರಕೃತದ ಕಾರ್ಯಕ್ರಮವನ್ನು ಅವರು ಬೇಗನೇ ರದ್ದುಪಡಿಸಿಕೊಂಡು ಮುಂಬಾಯಿ, ಪಂಜಾಬು, ಕರಾಚಿ, ಬಿಹಾರುಗಳಲ್ಲಿನ ಸಹಾಯಸಮಿತಿಗಳನ್ನೊಡಗೂಡಿ ಬಲೂಚಿಸ್ಥಾನಕ್ಕೆ ತೆರಳಲಿರುವರು. ಬಿಹಾರಿನಲ್ಲಿ ನಡೆದ ಭೂಕಂಪದ ವೇಳೆ ಕೆಲಸ ಮಾಡಿ ಪ್ರಮುಟ್ಟಿನ ಪೂರ್ಣ ಅನುಭವಿಕರಾದ ಪ್ರಸಾದರು ಅತ್ತ ಹೋದರೆ ಅಲಿನ ಜನರಿಗೆ ಹೆಚ್ಚಿನ ಆಶ್ರಯವು ಸುಲಭವಾಗಿ ಸಿಗಬಹುದೆಂದು ಭರವಸೆ ಪಡಲಾಗಿದೆ.

ಜೂನ್, ೭,

ಈ ದಿನವೂ ಇಲ್ಲಿ ಭೂಕಂಪವಾಗುತ್ತಿದೆ. ಈ ದಿನ ಪ್ರಾತಃಕಾಲ ೯ ಘಂಟೆಗೆ ಒಮ್ಮೆ ಭೂಮಿಯು ನಡುಗಿತು. ಅದರೊಡನೆ ಭಯಂಕರ ಶಬ್ದವೂ ಕೇಳಿಬಂತು. ಇದೇ ಮಧ್ಯಾಹ್ನ ೧ ಗಂಟೆಗೂ ಇದೇ ರೀತಿಯ ಕಂಪನವಾಯಿತು. ಅದರೊಡನೆ ಶಬ್ದವೂ ಆಯಿತು. ಜನರೆಲ್ಲರೂ ಕಂಗೆಟ್ಟು ಓಡಿದರು. ಬಿದ್ದುಳಿದಿದ್ದ ಅನೇಕ ಕಟ್ಟಡಗಳ ಗೋಡೆ, ಇಟ್ಟಿಗೆ, ಮಾಡುಗಳು ಬಿದ್ದುವು. ಈ ದಿನ ಬೆಳಿಗ್ಗೆ ೪ ಘಂಟೆಗೆ ಭೀಕರವಾಗಿ ಭೂಮಿಯು ಕಂಪಿಸಿತು. ಡೇರೆಗಳಲ್ಲಿದ್ದ ಜನರು ದಿಗಿಲುಗೊಂಡು ಎಚ್ಚೆತ್ತರು.

ಕಲಟ್ ನಗರದಲ್ಲಿ ಸಂಕಷ್ಟಕ್ಕೊಳಗಾದ ಜನರಿಗೆ ಕ್ವೆಟ್ಟಾದ ಮಿಲಿಟರಿಯವರು ವೈದ್ಯಕೀಯ ಸಹಾಯವನ್ನೊದಗಿಸುವುದಕ್ಕಾಗಿ ಹಲವು ಲಾರಿಗಳಲ್ಲಿ ಹೋಗಿರುವರು. ಸೈನ್ಯಾಧಿಪತಿಗಳ ಪತ್ನಿಯರು ಕೆಲವರು ಕ್ವೆಟ್ಟಾದ ಸ್ತ್ರೀಯರಿಗೆ ಸಹಾಯಮಾಡುವುದಕ್ಕಾಗಿ ಹೋಗಿರುವರು. ಇಂಟೆಲಿಜೆನ್ಸ್ ಆಫೀಸರರಾದ ಕೆಪ್ಟನ್ ವಿಲ್ಲಿಸನ್‌ರವರ ಪತ್ನಿ ಮಿಸೆಸ್ ವಿಲ್ಲಿಸನ್‌ರವರು ಕ್ವೆಟ್ಟಾದಲ್ಲಿ ಅನೇಕ ಸ್ತ್ರೀಯರಿಗೆ ಸಹಾಯಮಾಡುತ್ತಿರುವರು. ವಯರ್‌ಲೆಸ್ ಯಂತ್ರವನ್ನು ಕ್ವೆಟ್ಟಾದಿಂದ ಕಲಟ್‌ಗೆ ತೆಗೆದುಕೊಂಡು ಹೋಗಿ ವಾರ್ತೆಗಳನ್ನು ವಿಸ್ತಾರವಾಗಿ ಹರಡುತ್ತಿರುವರು.

ಶಿಬಾಪುರಗಳಲ್ಲಿ ಸತ್ತಿರುವ ಜನಸಂಖ್ಯೆಯು ಅಪರಿಮಿತವೆಂದು ತಿಳಿದುಬಂದಿದೆ. ಡೇರಾ ಘೂಜಿಖಾನ್‌ನಲ್ಲಿ ಶಿಬಾಪುರದಷ್ಟು ಹೆಚ್ಚು ಮರಣಗಳಾಗಿರುವುದಿಲ್ಲ. ಇಲ್ಲಿನ ೪೦೦೦ ಜನರಲ್ಲಿ ೨,೫೦೦ ಜನರು ಮೃತರಾದರೆಂದು ತಿಳಿದುಬರುತ್ತದೆ. ಉಳಿದಿರುವ ೧,೫೦೦ ಜನರಲ್ಲಿ ಅನೇಕರ ಪತ್ತೆಯೇ ಸಿಕ್ಕಿರುವುದಿಲ್ಲ. ಕೆಲವರು ಕೊಂಪೆಗಳಡಿಯಲ್ಲಿರಬಹುದೆಂದೂ ಊಹಿಸಲ್ಪಟ್ಟಿದೆ. ಒಟ್ಟು ನೂರು ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವರು. ಮೃತರಾದವರಲ್ಲಿ ಹೆಚ್ಚಿನವರು ಬೋರಾ ಮತಸ್ಥರು. ಇವರಲ್ಲಿ ಅನೇಕರು ಕ್ವೆಟ್ಟಾದ ಶ್ರೀಮಂತ ಭೂಸ್ವಾಮಿಗಳು. ಇವರಿಗೆ ಎರಡು ಕೋಟಿ ರೂಪಾಯಿಗಳ ನಷ್ಟವು ಸಂಭವಿಸಿರಬಹುದೆಂದು ತಿಳಿದುಬಂದಿದೆ.



ಕ್ವೆಟ್ಟಾದಲ್ಲಿನ ಜನರಿಗೆ ಸಹಾಯ ಮಾಡುತ್ತಿರುವ ಶ್ರೀ॥ ಜಯರಾಮದಾಸ ದೌಲತ್‌ರಾಮರು

ಕ್ವೆಟ್ಟಾದ ಅನೇಕ ಪರ್ವತಗಳು ತುಂಡುತುಂಡಾಗಿ ಸಮತಳಕ್ಕುರುಳಿವೆ. ಸಾವಿರಾರು ಟನ್ ಭಾರವುಳ್ಳ ಪರ್ವತದ ಭಾಗಗಳು ಕೆಳಗೆ ನದಿಗಳಿಗೆ ಬಿದ್ದು, ನದಿಯ ಪ್ರವಾಹವು ರೂಪಾಂತರಗೊಂಡಿದೆ.

ಚಿಲ್ಟನ್ ಶಿಖರ ಎಂಬ ಪರ್ವತವು ಕುಸಿದುಬಿದ್ದಿರುವುದನ್ನು ನೋಡಿದರೆ ಭಯವೂ ಆಶ್ಚರ್ಯವೂ ಉಂಟಾಗುತ್ತದೆ. ಇದರಿಂದಾಗಿ ಮರಣಗಳು ಸಂಭವಿಸಿರುವುದಿಲ್ಲ.

ಕ್ವೆಟ್ಟಾದಲ್ಲಿರುವ ವೆಸ್ಟರ್ನ್ ಕಮಾಂಡಿನ ಖಚೇರಿಗಳನ್ನು ಕೂಡಲೇ ಕರಾಚಿಗೆ ವರ್ಗಾಯಿಸಬೇಕೆಂದು ತೀರ್ಮಾನಿಸಿದ್ದಾರೆ. ತಾ. ೧೬ನೇ ಆದಿತ್ಯವಾರ ಕಮಾಂಡ್ ಹೆಡ್‌ಕ್ವಾರ್ಟರ್ಸ್‌ನ ನೌಕರರು ಕರಾಚಿಗೆ ತೆರಳುವರು.

ಹಿಂದೂ ಪತ್ರಿಕಾ ಪ್ರತಿನಿಧಿಯು ಹೀಗೆಂದು ತಿಳಿಸುತ್ತಾನೆ—ಕಪ್ಟನ್ ಎ. ಸಿ. ವಿಲ್ಲಿಸನ್ (ವೆಸ್ಟರ್ನ್ ಕಮಾಂಡಿನ ಆಫೀಸರ್-ಇನ್-ಚಾರ್ಜ್) ರವರು ನನ್ನನ್ನು ಕೃಪೆಯಿಟ್ಟು ಕ್ವೆಟ್ಟಾ ನಗರದಲ್ಲಿ ತಿರುಗಾಡಿಸಿದರು. ನೋಡುವುದೇನು?—ಎಲ್ಲಾ ಕಟ್ಟಡಗಳೂ ನೆಲಸಮವಾಗಿದ್ದುವು. ದುರ್ವಾಸನೆಯು ಅಸಹನೀಯವಾಗಿರುತ್ತದೆ. ಬ್ರೌನ್ ಜಿಮ್ನಾಸಿಯದ ಕ್ರಿಕೆಟ್ ಗ್ರೌಂಡಿನಲ್ಲಿ ಕಟ್ಟಿಗೆಯರಾಶಿಯೂ, ಮಸಿಯ ರಾಶಿಯೂ ಅಲ್ಲಲ್ಲಿ ಕಂಡುಬಂತು. ಜನರು ಶವಗಳನ್ನು ಸಿಕ್ಕಾಪಟ್ಟೆ ದಹನಮಾಡಿದ ಸ್ಥಳಗಳಿವು. ಇಲ್ಲಿಯ ಗವರ್ನರ್ ಜನರಲರ ಏಜಂಟರ ಬಂಗ್ಲೆಯು ಅವರ್ಣನೀಯವಾಗಿ ಕುಸಿದುಬಿದ್ದಿದೆ. ಇಲ್ಲಿಯ ಸಿವಿಲ್ ಆಸ್ಪತ್ರೆಯು ಧ್ವಂಸವಾಗಿ ಬಿದ್ದಿದೆ. ಕಟ್ಟಡವಿಡೀ ಕೆಳಗೆ ಬಿದ್ದು, ಬೆಲೆಬಾಳುವ ಔಷಧಿಗಳೂ ಸಾಮಗ್ರಿಗಳೂ ಬಾಟ್ಲಿಗಳೂ ಇನ್ನಿತರ ಅನವೊಲ್ಯ ವಸ್ತುಗಳೂ ಕ್ಷೇತ್ರವಾಗಿ ಹಾಳಾಗಿವೆ. ಕೊಂಪೆಯಡಿಯಲ್ಲಿ ಅನೇಕ ಶವಗಳಿರುವುವೆಂದೂ ತಿಳಿದು ಬಂದಿದೆ. ಮಿಲಿಟರಿಯವರು ಮೊದಲು ಬಂದ ಈ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದವರ, ನಂತರ ಅಸ್ವಸ್ಥರಾಗಿದ್ದ ಜನರನ್ನು ರಕ್ಷಿಸುವ ಕೆಲಸವು ಸಫಲಕಾರಿಯಾಗಲಿಲ್ಲ.

ಈ ಭೂಕಂಪದಿಂದುಂಟಾಗಿರುವ ನಷ್ಟವನ್ನು ಪರಿಗಣಿಸುವಾಗ ಇಂಡಿಯಾ ಸರಕಾರವು ಕೆಲವು ಕೋಟಿ ರೂಪಾಯಿಗಳನ್ನೇ ಈ ಪ್ರದೇಶದ ಪುನರ್ನಿರ್ಮಾಣಕ್ಕಾಗಿ ವೆಚ್ಚಮಾಡಬೇಕಾಗುತ್ತದೆ. ಸಿವಿಲ್ ಖಾತೆಯಲ್ಲಿ ೬೦ ಲಕ್ಷ ರೂಪಾಯಿಗಳ ನಷ್ಟವಾಗಿದೆಯೆಂದು ಹೇಳುತ್ತಿದ್ದಾರೆ. ರೈಲ್ವೆ ಇಲಾಖೆಯವರು ೭೦ ಲಕ್ಷ ರೂಪಾಯಿಗಳ ನಷ್ಟವು ಸಂಭವಿಸಿರುತ್ತದೆಂದು ಲೆಕ್ಕಹಾಕಿದ್ದಾರೆ. ಮಿಲಿಟರಿಯವರೂ ವಿಮಾನಖಾತೆಯವರೂ ತಮ್ಮ ನಷ್ಟದ ಅಂದಾಜುಪಟ್ಟಿಯನ್ನು ಕೊಟ್ಟಿಲ್ಲವಾದರೂ ಅವರ ನಷ್ಟವೂ ಸಿವಿಲ್ ಖಾತೆಗಿಂತ ಕಡಿಮೆಯಾಗಲಾರದೆಂದು ಊಹಿಸಲಡ್ಡಿಯಿಲ್ಲ.

ನೀರಿನಲ್ಲಿ ಮುಳುಗಿ ಇಬ್ಬರು ಬಾಲಕರ ಮರಣ

ಬೆಂಗಳೂರು, ಜೂನ್ ೧೦

ನ ಮಹಾರಾಜ ಪಾರ್ಕಿನ ಕೆರೆಯಲ್ಲಿ ಈ ದಿನ ಮಧ್ಯಾಹ್ನ ೪ ಗಂಟೆಯ ಸಮಯದಲ್ಲಿ ಒಂದು ಅನಾಹುತವು ಸಂಭವಿಸಿತು. ಈಜಾಡುತ್ತಿದ್ದ ಇಬ್ಬರು ಬಾಲಕರು ನೀರಿನಲ್ಲಿ ಮುಳುಗಿ ಸತ್ತರು.

KANNADA SAVINGS CERTIFICATES

Cashed even before maturity

available in denominations of Rs 10/ and above

TOTAL YIELD RS 4-6-0 P. A.

Paid once-half yearly at 3½% p a

with an additional 1½% p. a on maturity

If Left To Accumulate

RS. 100/- Will Amount to RS. 122-13-6

Full Particulars from —

CANARA BANK LTD.,

Estd 1906

OFFICES AT

Bombay—Fort, Bombay—Mandvi, Hubli, Calicut, Cochin, Ernakulam, Alleppey, Bangalore, Davangere, Chickmagalur, Mangalore—Bunder, Mangalore—City, Kasaragod, Puttur, Buntwal, Karkala, Udipi, Coondapoor & Gangoli.

Subscribed Capital	Paid up Capital	Reserves	Deposits	Working Capital
6,00,000	3,31,000	4,50,000	58,62,000	73,49,000

ಅನುಕ್ರಮಣಿಕೆ.

ಪತ್ರ	೩
ಸಾಹಿತ್ಯ ಸಂಗ್ರಹ	೪
ಕರ್ನಾಟಕ ವರ್ತಮಾನ.	೫
ಅತಾವಾದಿ ಆತ್ಮಹತ್ಯೆ	೬
ಸಂಯುಕ್ತ ಅಮೇರಿಕಾದಲ್ಲಿ ಹಿಂದೀಯ ಸ್ವಾತಂತ್ರ್ಯ	೭
ತ್ಯಾಗ ಹೊಣಗಾಡುವ ಧೀರರ ಪರಿಚಯ.	೮
ಅಗ್ರಲೇಖ	
ಸ್ಫುಟವಿಚಾರಗಳು	೧೦
ಬ್ರಿಟಿಷ ಮಂತ್ರಿಮಂಡಲದ ಪುನರ್ರಚನೆ	೧೦
ವರ್ತಮಾನ ಸಂಗ್ರಹ	
ಮಂಗಳೂರು, ತಾಲೂಕುಗಳಿಂದ	೧೩
ತೋಟದ ವ್ಯವಸಾಯ	೧೪
ವಿವಿಧ ಸಮಾಚಾರಗಳು	೧೬
ಸ್ವರ್ಣಭೂಮಿಯ ದಾರಿದ್ರ್ಯ	೧೭
ನಡೆದ ಕತೆಗಳು.	೧೮

ಸ್ವದೇಶಾಭಿಮಾನಿ.

ತಾ ೧೪ನೇ ಶುಕ್ರವಾರ ಜೂನ್ ೧೯೩೫

ಬ್ರಿಟಿಷ ಮಂತ್ರಿಮಂಡಲದ ಪುನರ್ರಚನೆ

೧೯೨೯ರಲ್ಲಿ ಸಾರ್ವಜನಿಕ ಚುನಾವಣೆಯು ನಡೆದು, ಮಿ| ಸ್ಟೆನ್ಲಿ ಬಾಲ್ಡ್ವಿನ್ನರ ಮಂತ್ರಿಮಂಡಲವು ೧೯೨೯ರಲ್ಲಿ ಬಿದ್ದು ಮಿ| ರಾಮ್ಸೆ ಮೆಕ್ಡೊನಾಲ್ಡರು ಪ್ರಧಾನ ಮಂತ್ರಿಯಾಗಿ ಚುನಾಯಿತರಾದರು ಇವರ ಆಡಳಿತದಲ್ಲಿ ಹಲವು ಲಕ್ಷಣೀಯ ವಿದ್ಯಮಾನಗಳು ಸಂಭವಿಸಿ ಹೋದುವಾದರೂ, ೧೯೩೧ರಲ್ಲಿ ತಲೆದೋರಿದ ಆರ್ಥಿಕ ಸಂಕಷ್ಟವೇ ಗಮನೀಯ ವಿಷಯವಾಗಿ ನಿಂತಿತು ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಇವರು ೧೯೩೧ರ ಆಗೋಸ್ತು ತಿಂಗಳಲ್ಲಿ "ನೇಶನಲ್" ಸರಕಾರವನ್ನು ಸ್ಥಾಪಿಸಿಕೊಂಡು ಅದನ್ನು ಸ್ವಾಧೀನವಿಡುತ್ತಾ ಬಂದರು ಹೇಗೂ, ಸುಮಾರು ಆರು ವರುಷಗಳು ಕಳೆಯುತ್ತಾ ಬಂದುವು ತನ್ಮಧ್ಯೆ ಇಂಗ್ಲಾಂಡಿನಲ್ಲಿ ಕನ್ಸರ್ವೇಟಿವರೂ, ಲಿಬರಲರೂ ಮತ್ತು ಲೇಬರ್ ಪಂಗಡಿಗರೂ ಪ್ರಬಲರಾಗಿ, ಮೆಕ್ಡೊನಾಲ್ಡರ ಧೋರಣೆಯನ್ನು ಕಂಡಕಂಡಲ್ಲಿ ಖಂಡಿಸುತ್ತಾ ಬಂದರು ಎಲ್ಲಕ್ಕಿಂತಲೂ ಮೆಕ್ಡೊನಾಲ್ಡರು ಭರತಖಂಡದ ಸ್ವಾತಂತ್ರ್ಯ ಚಳವಳಿಯನ್ನು ನೆಚ್ಚಿ ನುಡಿದಂದಿನಿಂದ(ರೌಂಡ್ ಟೇಬಲ್ ಪರಿಷತ್ತಿನ ವೇಳೆ) ಅವರ ಅದೃಷ್ಟ ಚಕ್ರವು ಅವರಿಗೆ ಬೆನ್ನು ಹಾಕಿಯೇ ನಿಂತಿತು ಇಂದೋ ನಾಳೆಯೋ ಸ್ಥಾನಚ್ಯುತರಾಗುವರೆಂದಿದ್ದ ಅವರು, ಇದೇ ತಾ ೭ರಲ್ಲಿ ತನ್ನ ಪದವಿಗೆ ರಾಜಿನಾಮೆ ಕೊಡುವಂತೆಯೇ ಆಯಿತು

ಈಗ ನೂತನ ಮಂತ್ರಿಮಂಡಲವು ರಚಿಸಲ್ಪಟ್ಟಿದೆ ಕನ್ಸರ್ವೇಟಿವ ಧುರೀಣರಲ್ಲೊಬ್ಬರಾದ ಸ್ಟೆನ್ಲಿ ಬಾಲ್ಡ್ವಿನ್ನರು ಪ್ರಧಾನ ಮಂತ್ರಿಯರಾಗಿಯೂ, ಸರ್ ಜೋನ್ ಸೈಮನರು ಗೃಹಮಂತ್ರಿಗಳಾಗಿಯೂ, ಸರ್ ಸಾಮುವೇಲ್ ಹೋರರು ವಿದೇಶೀಯ ಸಚಿವರಾಗಿಯೂ, ಮಾರ್ಕ್ವಿಸ್ ಆಫ್ ಜೆಟ್ಲೇಂಡರವರು ಭಾರತ ಸಚಿವರಾಗಿಯೂ ನೇಮಕಗೊಂಡಿರುತ್ತಾರೆ ಅಲ್ಲದೆ, ಇನ್ನೂ ಕೆಲವು ವಿಶೇಷ ಬದಲಾವಣೆಗಳು ಆಗಿವೆ.

ಒಂದು ಕಡೆಯಿಂದ 'ಇಂಡಿಯಾ ಬಿಲ್ಲು' ಶಾಸನವಾಗಿ ಬೇಗನೇ ಭರತಖಂಡಕ್ಕೆ ಹಜ್ಜೆಯಿಡಲಿದೆ,-ಇನ್ನೊಂದು ಕಡೆಯಿಂದ ಸಮರ ದುಂದುಭಿಯು ಮೊಳಗುತ್ತಿದೆ. ಇಂತಹ ಸಂದಿಗ್ಧತೆಯಲ್ಲಿ ಈ ಪುನರ್ರಚನಾಕಾರ್ಯವು ಅತ್ಯವಸರದಿಂದ ಮುಂದೊತ್ತಿ ನಡೆದುದನ್ನು ನೋಡುವಾಗ, ಅಂತರ್ರಾಷ್ಟ್ರೀಯ ವ್ಯವಹಾರಜ್ಞರ ಮನದಲ್ಲಿ ಏನೇನೋ ಸಂದೇಹಗಳು ತೋರಿಬರುತ್ತಿವೆ. 'ಬ್ರಿಟಿಷರು ಯಾವುದೋ ಒಂದು ಮಹದ್ವಿಚಾರವನ್ನು ಉದ್ದೇಶಿಸಿಯೇ ಇಂತಹ ಬದಲಾವಣೆಯನ್ನು ಮಾಡಿಕೊಂಡಿರುವರು'-ಎಂಬ ಮಾತು ಎಲ್ಲೆಲ್ಲೂ ಕೇಳಿಬರುತ್ತಿದೆ

ಅದು ಹೇಗೂ ಇರಲಿ ಮಂತ್ರಿಮಂಡಲದ ಈ ಪರಿವರ್ತನೆಯಿಂದ ಭಾರತಕ್ಕೆ ಯಾವ ಪ್ರಯೋಜನವೂ ಇರುವುದಿಲ್ಲ. ಮೆಕ್ಡೊನಾಲ್ಡರ ರಾಜ್ಯಭಾರದಲ್ಲೂ ಭಾರತಕ್ಕೆ ಆದ ಹಿತವೆಷ್ಟೆಂದು ನಮಗೆ ತಿಳಿಯಲಾರದು ಬಾಯಿಮಾತಿನಿಂದ ಅವರು ಭರತಖಂಡದ ಆಶಯಗಳನ್ನು ಹೊಗಳುತ್ತಿದ್ದರಾದರೂ, ಕಾರ್ಯಕಾರಿಯಾಗಿ ನಮಗೆ ಯಾವ ಶ್ರೇಯಸ್ಸನ್ನೂ ಉಂಟುಮಾಡಲು ಅವರು ಸಮರ್ಥರಾಗಲಿಲ್ಲ ಅವರ ದೌರ್ಬಲ್ಯವು ಅಷ್ಟರವರೆಗಿತ್ತು ಇಂತಹ ಅಧಿಕಾರಿಗಳಿಂದ ನಮಗಾಗುವುದಾದರೂ ಏನು?

ಇನ್ನು ಭಾರತಸಚಿವರಾಗಿ ಮಾರ್ಕ್ವಿಸ್ ಆಫ್ ಜೆಟ್ಲೇಂಡರು ಬಂದಿರುತ್ತಾರೆ ಸರ್ ಸಾಮುವೇಲ್ ಹೋರರಿಗಿಂತ ಇವರೇನೂ ಹೆಚ್ಚಿನವರಲ್ಲ ಇವರಿಗೆ ಭಾರತೀಯರ ಆಕಾಂಕ್ಷೆಗಳ ಮೇಲೆ ಎಷ್ಟು ಸಹಾನುಭೂತಿಯಿದೆಯೆಂದು ತಿಳಿಯಬೇಕೆಂದಾದರೆ ಇವರು ೧೯೧೭ರಲ್ಲಿ ಬಂಗಾಳದ ಗವರ್ನರರಾಗಿ ಆಳಿದ ದಿನಗಳ ಸ್ಮರಣೆಯನ್ನು ಮಾಡಿದರೆ ಸಾಕಾಗುತ್ತದೆ "ಹಿಂದೂದೇಶದ ಸೇವೆಯನ್ನು ಮಾಡುವ ಭಾಗ್ಯವು ನನಗೆ ಲಭಿಸಿರುತ್ತದೆ ನೂತನ ರಾಜ್ಯಾಂಗವನ್ನು ಮುಂದೊತ್ತುವ ಹೊಣೆಗಾರಿಕೆಯೂ ನನ್ನ ಮೇಲಿದೆ " ಎಂದು ಮೊದಲಾಗಿ ಹೇಳಿ ಇವರು ಭಾರತಕ್ಕೊಂದು ಮನವಿಯನ್ನು ಮಾಡಿಕೊಂಡಿರುತ್ತಾರೆ ನವಸುಧಾರಣೆಯನ್ನು ಎತ್ತಿ ಹಿಡಿದ ಧೀಮಂತರಲ್ಲಿ ಇವರೊಬ್ಬರು ಅಂತಹ ಇವರೇ ಈಗ ರಾಜ್ಯಾಂಗದಾನ ಮಾಡುವ ಪುಣ್ಯಕಾರ್ಯಕ್ಕೆ ಭಾಗಿಗಳಾಗಿರುತ್ತಾರೆ ಇವರ ಆಳ್ವಿಕೆಯಲ್ಲೂ ಭಾರತ ವರ್ಷವು ಯಾವ ಉದ್ಧಾರವನ್ನೂ ಹೊಂದುವಂತಿಲ್ಲವೆಂಬುದು ವ್ಯಕ್ತವಾಗಿರುತ್ತದೆ

ಬ್ರಿಟಿಷ ಮಂತ್ರಿಮಂಡಲದಲ್ಲಿ ಬದಲಾವಣೆಯುಂಟಾದುದರ ಪರಿಣಾಮವು ಹಿಂದೂದೇಶದಲ್ಲಿ ತೋರಿಬರುವುದಕ್ಕಿಂತಲೂ ಯುರೋಪು ಖಂಡದಲ್ಲಿ ತೋರಿಬರುವುದು ವಾಸ್ತವವಾಗಿದೆ ಸರ್ ಫಿಲಿಪ್ ಕನ್ಲಿಫ್ ಲಿಸ್ಟರ್ ರವರು ವಿಮಾನಸಚಿವರಾಗಿಯೂ ಲೋರ್ಡ್ ಹೆಲಿಫೆಕ್ಸರು ಸಮರಖಚೇರಿಯ ಸಚಿವರಾಗಿಯೂ, ಲೋರ್ಡ್ ಲಂಡನ್‌ಡೆರಿಯವರು ಗವರ್ನಮೆಂಟ್ ಲೀಡರ್ ಆಗಿಯೂ ನೇಮಕ ಹೊಂದಿರುವುದನ್ನು ನೋಡುವಾಗ, ಬ್ರಿಟನಿನಲ್ಲಿ ಶಸ್ತ್ರಸನ್ಯಾಸಚಳವಳಿವು ಇನ್ನು ಎಷ್ಟಕ್ಕೂ ಮುಂದರಿಯದೆ, ಬ್ರಿಟನು ಸರ್ವತೋಮುಖವಾಗಿ ಎಚ್ಚೆತ್ತು, ಇನ್ನೊಂದು ಯುದ್ಧವನ್ನು ಪ್ರತಿಭಟಿಸಿ ನಿಲ್ಲುವುದು ತೀರ ಸಂಭವನೀಯವೆಂದು ಭಾಸವಾಗುತ್ತದೆ 'ನೇಶನಲ್' ಎಂಬ ಎದೆಚೀಟನ್ನು ನಾಮಮಾತ್ರ ಹಿಡಿದುಕೊಂಡು, "ನಮ್ಮ ಅರಸ, ನಮ್ಮ ದೇಶ' ವೆಂದು ಹೇಳಿ ಟೋರಿಗಳು ಮೆರೆಯುವುದು ನಿಜವೆಂದು ತೋರುತ್ತದೆ ಅಂತೂ, ಮೆಕ್ಡೊನಾಲ್ಡರು ತನ್ನ ನಿರ್ಗಮನ ಕಾಲದಲ್ಲಿ ಸೂಚಿಸಿದಂತೆ "ಬ್ರಿಟನಿನ ಶಕ್ತಿಯು ಕುಂದದೆ ಅದರ ಇಂದಿನ ಧೋರಣೆಯು ಮುಂದೆಯೂ ನಿರಾತಂಕವಾಗಿ ಪರಿಪಾಲಿಸಲ್ಪಡುವುದು "

ಕ್ವೆಟ್ಟಾಕ್ಕೆ ತಮ್ಮಿಂದೇನಾಗಬಹುದು?

ಎಂದು ತಾವು ತಾವೇ ತರ್ಕಿಸಿಕೊಳ್ಳುವ ಸಂದಿಗ್ಧ ಕಾಲವು ಸನ್ನಿಹಿತವಾಗಿರುತ್ತದೆ ೪೦,೦೦೦ ಜನರು ಕ್ರಿಮಿಕೀಟಗಳೋಪಾದಿಯಲ್ಲಿ, ಮನುಷ್ಯನ ಒಂದೇ ಒಂದು ತುಳಿತದಿಂದ ಸಾವಿರಾರು ಇರುವೆಗಳು ಸಾಯುವಂತೆ-ಸತ್ತುಬಿದ್ದಿರುವ ಈ ಸಂದರ್ಭದಲ್ಲಿ ಪ್ರತಿಯೊಬ್ಬ ಮಾನವನೂ ತನ್ನ ಮಾನವ ಧರ್ಮಾನುಸಾರವಾಗಿ, ಮನವನ್ನು ಕರಗಿಸಿಕೊಂಡು, ತನ್ನ ಸಹಸಂತಾಪವನ್ನು ಸೂಚಿಸಿ, ನೊಂದ ಜನತೆಗೆ ಕೂಡಿದಷ್ಟು ಸಹಾಯವನ್ನೀಯುವುದು ಪರಮಕರ್ತವ್ಯವಿದೆ ಇಂದು ಕ್ವೆಟ್ಟಾದವರ ಗತಿಯು ಹೀಗಾಯಿತು! ನಾಳೆ ನಮ್ಮ ಗತಿಯೆಂತೋ ಯಾರು ಬಲ್ಲ? ಪ್ರಕೃತಿಯ ಮುನಿಸಿಗೆ ಅವರಿವರೆಂಬ ಭೇದವಿಲ್ಲ ಅದು ಯಾವ ಸಮಯದಲ್ಲಿ ನಮ್ಮನ್ನೂ ಕ್ಲೇಶಪ್ರವಾಹದಲ್ಲಿ ಕೊಚ್ಚಿಕೊಂಡು ಹೋದೀತೆಂದು ಹೇಳಲು ಸಾಧ್ಯವಿಲ್ಲ ಸೇವೆಯೇ ಮನುಷ್ಯನ ಚರಮ ಮೋಕ್ಷ ಸೇವೆಮಾಡುವ ಸಂದರ್ಭಗಳು ಒದಗುವುದೇ ಅಪರೂಪ ಹೀಗಿರುವಾಗ ನಮ್ಮವರು ಕ್ವೆಟ್ಟಾದ ಜನರಿಗೆ, ತಮ್ಮ ಸ್ಥಿತಿಗತಿಗಳಿಗನುಸಾರವಾಗಿ ಸಹಾಯವೀಯುವುದು ಅಗತ್ಯವಿದೆ ನಮ್ಮ ಜಿಲ್ಲಾ ಕಲೆಕ್ಟರರಾದ ಮಿ| ಇ ಎಂ ಗೋನ್‌ರವರು ನಿನ್ನೆಯ ದರ್ಬಾರಿನಲ್ಲಿ ಕ್ವೆಟ್ಟಾ ಭೂಕಂಪದ ಕುರಿತಾಗಿ ಯೋಚಿಸಿಕೊಂಡರು ಸಹಾಯನಿಧಿಯ ಸಂಗ್ರಹವು ಹೇಗಾಗಬೇಕೆಂದು ತೀರ್ಮಾನಿಸಿಕೊಂಡರು ಅವರ ಈ ಉದ್ಯಮದಲ್ಲಿ ನಮ್ಮ ಜಿಲ್ಲೆಯು ಸಹಕರಿಸಿ ನಡೆಯಲೆಂದು ಆಶಿಸುವೆವು

ಎಕ್ಸೈಜ್ ಖಾತೆಯು ಸಮರ್ಪಕವಾಗಿ ಕೆಲಸ ಮಾಡುತ್ತಿದೆಯೇ?

ತೋರಿಕೆಯ ಮಟ್ಟಿಗೆ, ಈ ಪ್ರಶ್ನೆಗೆ 'ಹೌದು' ಎಂಬ ಉತ್ತರವೇ ಸಿಗಬಹುದು ಅಂತಹ ಉತ್ತರವನ್ನು ಒಮ್ಮೆಗೇ ಖಂಡಿಸಲು ಬರುವುದಿಲ್ಲವಾದರೂ, ನಮ್ಮ ತಿಳುವಳಿಕೆಗೆ ಬಂದ ಮಟ್ಟಿಗೆ ನಾವು ಈ ವಿಚಾರವಾಗಿ ಚರ್ಚಿಸುವುದು ಯೋಗ್ಯವಾಗಿದೆ ನಮ್ಮ ಜಿಲ್ಲೆಯಲ್ಲಿ, ಅದರಲ್ಲೂ, ಜಿಲ್ಲೆಯ ಕೇಂದ್ರ ಪಟ್ಟಣವಾದ ಮಂಗಳೂರಲ್ಲಿ ಎಕ್ಸೈಜ್ ಖಾತೆಯು ವಿಚಾರಶೀಲದೃಷ್ಟಿಯಿಂದ ಕಾರ್ಯವನ್ನು ನಿರ್ವಹಿಸುತ್ತಿದೆಯೋ ಎಂದು ಕೇಳಿದರೆ, ನಮ್ಮ ಕಣ್ಣೆದುರಿನಲ್ಲಿ ಹಲವು ಸೋಡಾ ಫೆಕ್ಟರಿಗಳಲ್ಲೋ, ಅಂಗಡಿಗಳಲ್ಲೋ, ಮನೆಗಳಲ್ಲೋ ಗೋಪ್ಯವಾಗಿ ಶರಾಬನ್ನು ವಿಕ್ರಯಿಸುವುದನ್ನು ನೋಡುವ ನಾವು ಎಕ್ಸೈಜ್ ಕಾನೂನು ಸಮರ್ಪಕವಾಗಿ ಜ್ಯಾರಿಯಲ್ಲಿರುವುದಿಲ್ಲವೆಂದು ಹೇಳಬಹುದು ನಮ್ಮ ಹೇಳಿಕೆಯ ಸತ್ಯತೆಯನ್ನು ತಿಳಿಯಬೇಕೆಂದಾದರೆ ಎಕ್ಸೈಜ್ ಪೋಲೀಸರು ಗುಪ್ತ ವೇಷಧಾರಿಗಳಾಗಿ ಕೆಲವು ಸೋಡಾ ಶಾಪುಗಳನ್ನೋ, ಸಂಶಯ ತೋರಿದ ಅಂಗಡಿ ಮತ್ತು ಮನೆಗಳನ್ನೋ ಜಡ್ತಿಗೆಳೆದರೆ ಎಲ್ಲವೂ ಬಯಲಾಗುವುದು ಇದೀಗ ಮಳೆಗಾಲವಾದುದರಿಂದ ಸೋಡಾ ಶೋಪುಗಳಲ್ಲಿ ಸೋಡಾ ವ್ಯಾಪಾರವು ಹೆಚ್ಚಿಗೆ ನಡೆಯುವುದಿಲ್ಲ ಆದರೂ ಆ ಶೋಪುಗಳಲ್ಲಿ ವ್ಯಾಪಾರವು ಬಿಡುವಿಲ್ಲದೆ ನಡೆಯುತ್ತಿರುವುದನ್ನು ಕಾಣಬಹುದು ಪಟ್ಟಣದ ನಡುವೆ, ಅಧಿಕಾರಿಗಳ ಹಿಂದು ಮುಂದಿನಲ್ಲಿ ಜನರು ರಹಸ್ಯವಾಗಿ ಶರಾಬು ವಿಕ್ರಯಿಸುವ ನಿದರ್ಶನಗಳೂ ಇರಬಹುದು ಇಂತಹ ಗುಪ್ತ ವ್ಯಾಪಾರದಿಂದ ಶರಾಬಿನ ಗುತ್ತೆದಾರರಿಗೇನೂ ಬಾಧಕವಾಗುವುದಿಲ್ಲವಾದರೂ, ಸರಕಾರವು ತನ್ನ ಶಾಸನದ ಪ್ರತಿಷ್ಠೆಯನ್ನು ರಕ್ಷಿಸಿಕೊಳ್ಳಲಿಕ್ಕಾದರೂ ಎಚ್ಚರದಿಂದಿರುವುದು ನ್ಯಾಯವಾಗಿಲ್ಲವೇ?

ದಕ್ಷಿಣ ಕನ್ನಡದಲ್ಲಿ ವಾಗ್ಪಲ ಚಿತ್ರದ ಸಿದ್ಧತೆ.

ಗದಗ ನಾಟಕ ಮಂಡಲಿಯ ವ್ಯವಸ್ಥಾಪಕರಾದ ಶ್ರೀ| ಗರೂಡ ಸದಾಶಿವರಾಯರು ಕೆಲವು ವಾರಗಳ ಹಿಂದೆ ಒಂದು ಪ್ರಕಟಣೆಯನ್ನು ಮಾಡಿ,ನಮ್ಮ ಜಿಲ್ಲೆಯಲ್ಲಿ ಕನ್ನಡ ವಾಗ್ಪಲ ಚಿತ್ರ ಕಂಪೆನಿಯೊಂದನ್ನು ಸ್ಥಾಪಿಸುವ ವಿಚಾರವನ್ನು ಚರ್ಚಿಸಿದ್ದರು ಅವರ ಲೇಖನಗಳ ಪ್ರಕಟಣೆಯ ನಂತರ ಅವರ ಇಂಗಿತವು ಎಷ್ಟರವರೆಗೆ ಕೈಗೂಡಿತೆಂದು ನಮಗೆ ತಿಳಿದು ಬಂದಿರುವುದಿಲ್ಲವಾದರೂ, ಈ ವಿಷಯವನ್ನು ಸಮಾಲೋಚಿಸುವುದು ನಮ್ಮ ಕರ್ತವ್ಯವಿದೆ ಶ್ರೀ| ಸದಾಶಿವರಾಯರ ಉದ್ದೇಶವು ಪ್ರೋತ್ಸಾಹಾರ್ಹವಾದುದೆಂಬುದರಲ್ಲಿ ಭಿನ್ನಾಭಿಪ್ರಾಯವಿರಲಾರದು. ಆದರೆ ದಕ್ಷಿಣ ಕನ್ನಡದಲ್ಲಿ ಇಂತಹ ಒಂದು ಸಾಧನೆಯು ಸಫಲವಾಗಬಹುದೋ ಎಂಬ ಶಂಕೆಯು ಮಾತ್ರ ನಮ್ಮನ್ನು ಬಿಟ್ಟಿಲ್ಲ ದಕ್ಷಿಣ ಕನ್ನಡದ ಸೃಷ್ಟಿ ಸೌಂದರ್ಯ, ಚಲಚಿತ್ರಗಳಿಗ ಗತ್ಯವಿರುವ ಪ್ರಕೃತಿ ದೃಶ್ಯ, ಮೊದಲಾದ ಎಲ್ಲಾ ಸೌಕರ್ಯಗಳು ನಮಗೆ ಪ್ರಕೃತಿಜನ್ಯವಾಗಿ ಇವೆ-ಎಂದು ಹೇಳುವುದು ಸಹಜವಾದುದು. ಆದರೆ ಈ ಕಲೋಪಾಸಕರಾಗಲು ಮುಂದೆ ಬರುವವರು ನಮ್ಮಲ್ಲಿರುವರೇ? ಎಂಬ ಪ್ರಶ್ನೆಯು ಗಮನೀಯವಾಗಿದೆ ರೂಪವಂತರೇನೋ ನಮ್ಮಲ್ಲಿರ ಬಹುದು ಅಲ್ಲದೆ ಅವರು ವಿದ್ಯಾವಂತರಾಗಿಯೂ ಇರಬಹುದು ಆದರೆ ಅವರನ್ನು ಈ ಉದ್ಯಮಕ್ಕಾಕರ್ಷಿಸುವಷ್ಟು ಯೋಗ್ಯ ಸಂಬಳವನ್ನು ಕೊಡಲು ಕಂಪೆನಿಯು ಸಮರ್ಥವಾಗಬಲ್ಲುದೇ? ನಮ್ಮ ಜಿಲ್ಲೆಯವರದ್ದೇ ಒಂದು ಚಲಚ್ಚಿತ್ರ ಕಂಪೆನಿಯನ್ನು ಸ್ಥಾಪಿಸಬೇಕೆಂದಿರುವಾಗ, ನಮ್ಮಲ್ಲಿ ಅಷ್ಟು ಅನುಭವಶಾಲಿಗಳಾದ ಆರ್ಟ್ ಡೈರೆಕ್ಟರರೂ, ಬಿಂಬಗ್ರಾಹಕ ಕಲಾಭಿಜ್ಞರೂ, ಶಬ್ದ ಗ್ರಾಹಕಯಂತ್ರ ಚಾಲಕರೂ ಯಾರಿರುತ್ತಾರೆ? ಈ ಸಾಹಸಕ್ಕಿಳಿಯಬೇಕೆಂಬ ನಮ್ಮ ಅರ್ಹತೆಯು ವ್ಯಕ್ತವಾಗಿಯೇ? ಒಂದು ವೇಳೆ ನಾವು ಬಹುಪ್ರಯಾಸದಿಂದ ವಾಗ್ಪಲ ಚಿತ್ರಗಳನ್ನು ಸಿದ್ಧಗೊಳಿಸಿದೆವೆಂದು ಭಾವಿಸೋಣ,-ಅವುಗಳನ್ನು ಪರದೇಶಗಳ ಸಂತೆಯಲ್ಲಿಡುವ ವ್ಯವಸ್ಥೆ ಹೇಗೆ? ಮೈಸೂರಿನವರು ನಮ್ಮನ್ನು ಪ್ರೋತ್ಸಾಹಿಸಿಯಾರೇ? ಉತ್ತರಕನ್ನಡಿಗರಿಗೆ ನಮ್ಮ ಕಲೆಯು ರುಚಿಸೀತೇ? ಈ ವಿಷಯಗಳನ್ನೆಲ್ಲ ನಾವು ಪರ್ಯಾಲೋಚಿಸಿಕೊಂಡೇ-ಒಂದು ಸಮಿತಿಯಲ್ಲಿ ಈ ಚರ್ಚೆಯು ನಡೆದು ನಿರ್ಣಯಗಳಾದ ಮೇಲೆಯೇ-ಈ ಉದ್ಯಮಕ್ಕೆ ಕೈಯಿಕ್ಕುವುದು ಆಗತ್ಯವಾಗಿದೆ

ಆ ಕೈಗೋ, ಈ ಕೈಗೋ?

ದಿವಂಗತ ವಿ ಜೆ ಪಟೇಲರು ದೇಶಕ್ಕೆಂದು ಪ್ರತ್ಯೇಕಿಸಿಟ್ಟಿರುವ ಒಂದು ಲಕ್ಷ ರೂಪಾಯಿಯ ಸಂಬಂಧವಾಗಿ ಪಟೇಲರ ಟ್ರಸ್ಟಿಗಳಿಗೂ, ಅದನ್ನು-ವೀಲಿನ ಅಪೇಕ್ಷೆಯನುಸಾರ-ಪಡೆಯಲರ್ಹರಾಗಿರುವ ಶ್ರೀ| ಸುಭಾಷ್ಚಂದ್ರ ಬೋಸರಿಗೂ ವಿವಾದವೆದ್ದಿರುವ ವಿಷಯವು ಮೊದಲೇ ಪ್ರಕಟವಾಯಿತಷ್ಟೆ ಈಗ, ಆ ವಾರ್ತೆಯ ಬೆನ್ನು ಹಿಡಿದುಕೊಂಡು ಇನ್ನೊಂದು ವಾರ್ತೆಯು ಬಂದಿರುತ್ತದೆ: ಶ್ರೀ| ಸುಭಾಷ್ಚಂದ್ರ ಬೋಸರ ಕೈಗೆ ಆ ಒಂದು ಲಕ್ಷ ರೂಪಾಯಿ ಹೋಗುವುದಾದರೆ ಅದನ್ನು ಸರಕಾರವು ವಶೀಕರಿಸಿಕೊಳ್ಳುವುದು ಸಂಭವನೀಯವೆಂದು ತಿಳಿದು ಬಂದಿದೆ. ಸರಕಾರವು ಈ ವಿವಾದದ ಪ್ರವಾಹವು ಎತ್ತ ಹರಿಯುವುದೆಂದು ಕಣ್ಣಿಟ್ಟು ನೋಡುತ್ತಾ ಇದೆಯಾಗಿ ಪತ್ರಿಕಾ ಪ್ರತಿನಿಧಿಗಳು ತಿಳಿಸುತ್ತಾರೆ. ಇದು ಹೌದಾದರೆ, ದೇಶವು ಈ ವಿಚಾರವಾಗಿ ವಿಚಾರಿಸಿಕೊಳ್ಳುವುದು ಅಗತ್ಯವಿದೆ ಇಷ್ಟೊಂದು ದೊಡ್ಡ ಮೊತ್ತವನ್ನು ಸುಭಾಷ್ಚಂದ್ರರ ಕೈಲಿರಿಸುವುದು ಅಪೇಕ್ಷಣೀಯವಲ್ಲ-ಅದರಿಂದ ಪ್ರಯೋಜನಕ್ಕಿಂತ ಅಪ್ರಯೋಜನವೇ ಹೆಚ್ಚು ಎಂದು ಸರಕಾರವು ತಿಳಿದಿದೆಯಂತೆ. ಸರಕಾರವು ಹೀಗೆ ವಾದಿಸುವುದರಲ್ಲಿ ತಿರುಳಿದೆಯೋ? ನ್ಯಾಯವಿದೆಯೋ?

ಮಂಗಳೂರು.

ಮಂಗಳೂರು ಅಂಜುಮಾನ್ ಹಿದಾಯತುಲ್ ಇಸ್ಲಾಂ ಸಂಘವು ಇದೇ ಕಳೆದ ತಾ ೧೬–೪–೩೫ನೇಯದರಲ್ಲಿ ಸೊಸೈಟಿ ರಿಜಿಸ್ಟ್ರೇಶನ್ ಆಕ್ಟು xxi of 1860ನೇಗೆ ಅನುಗುಣವಾಗಿ ರಿಜಿಸ್ಟ್ರು ಮಾಡಲ್ಪಟ್ಟಿರುತ್ತದೆ ಮತ್ತು ಈ ಕಳೆದ ಮೇ ತಿಂಗಳ ಅಖೈರು ವರೆಗೆ ಬೇಂಕಿನಲ್ಲಿ ಒಟ್ಟು ರೂಪಾಯಿ ೬೭೬–೨–೯ ಜಮೆಯಿರುತ್ತದೆ. ಈಗ ಸದ್ಯ ಸಂಘಕ್ಕೆ ೬೫ ಜನ ಮೆಂಬರರಿರುತ್ತಾರೆ. ಆದಕಾರಣ ಈ ಸಂಘದ ಏಳಿಗೆಯ ಕಾರ್ಯವನ್ನು ಪ್ರೋತ್ಸಾಹಿಸಿ ಈ ವರೆಗೆ ಧನ ಸಹಾಯಮಾಡಿದ ಮಹನೀಯರಿಗೆ ಸಂಘದ ಕಡೆಯಿಂದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕಳೆದ ವರುಷ ೨ ಜನ ವಿದ್ಯಾರ್ಥಿಗಳಿಗೆ ವೇತನಗಳನ್ನೂ, ಅತಿ ಬಡವರಾದ ಅನೇಕ ಎಲಿಮೆಂಟರಿ ಶಾಲಾ ಬಡವಿದ್ಯಾರ್ಥಿಗಳಿಗೆ ಸ್ಲೇಟು ಪುಸ್ತಕಗಳನ್ನೂ ಉಡುಪುಗಳನ್ನೂ ಕೊಡುವ ಬಗ್ಗೆ ಈ ಸಂಘವು ರೂ. ೧೩೬–೧೧–೫ ಖರ್ಚು ಮಾಡಿರುತ್ತದೆ ಇನ್ನು ಮುಂದೆ ಈ ಸಂಘವನ್ನು ಪುಷ್ಟೀಕರಿಸುವ ಕಾರ್ಯದಲ್ಲಿ ನಮ್ಮನ್ನು ಪ್ರೋತ್ಸಾಹಿಸಿ ಇದರ ಪುಣ್ಯಫಲಕ್ಕೆ ಸಹಭಾಗಿಗಳಾಗಬೇಕಾಗಿ ಸರ್ವ ಜನರ ಕೂಡೆ ಕಾರ್ಯದರ್ಶಿಯವರ ವಿನಂತಿಯುಂಟು.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಸದಸ್ಯರ ಒಂದು ಸಾಮಾನ್ಯ ಸಭೆಯು ತಾ ೨೨ನೇ ಜೂನ್ ಶನಿವಾರ ಬೆಳಗ್ಗೆ ೧೦ ಘಂಟೆಗೆ ಅದರ ಆಫೀಸಿನಲ್ಲಿ ಜರಗಲಿರುವುದು.

ಇದೇ ೧೩ನೇ ತಾರೀಕಿನ ದಿನ ಗವರ್ನಮೆಂಟ್ ಕಾಲೇಜಿನಲ್ಲಿ ಜಿಲ್ಲಾ ಕಲೆಕ್ಟರರವರ ಅಧ್ಯಕ್ಷತೆಯಲ್ಲೊಂದು ದರ್ಬಾರು ನಡೆದು ಜುಬಿಲಿ ಪಾರಿತೋಷಕಗಳ ವಿತರಣೆಯೂ, ಟೌನ್ ಹಾಲಿನಿಂದ ಶೇಖರಿಸಲಾದ ೧೬,೦೦೦ ರೂಪಾಯಿಗಳನ್ನು ಹೇಗೆ ವಿನಿಯೋಗಿಸಬೇಕೆಂಬ ಬಗ್ಗೆ ಆಲೋಚನೆಯೂ, ಮತ್ತು ಕ್ವೆಟ್ಟಾ ಭೂಕಂಪದಿಂದ ನೊಂದವರಿಗೆ ಹೇಗೆ ಸಹಾಯಕೊಡಬೇಕೆಂಬ ಬಗ್ಗೆ ನಿರ್ಣಯಗಳೂ ಆದುವು.

ಇದೇ ಜೂನ್ ತಾ. ೮ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯಖಾತೆಯ ವರದಿಯಿಂದ ತಿಳಿದುಬರುವಂತೆ, ಈ ವಾರದಲ್ಲಿ ಒಟ್ಟು ೨೪ ಮರಣಗಳೂ ೪೯ ಜನನಗಳೂ ಆಗಿವೆ ಮರಣಗಳಲ್ಲಿ ೨ ಕ್ಷಯರೋಗದಿಂದ, ೩ ನಿಮೋನಿಯಾದಿಂದ ಈ ವಾರದಲ್ಲಿ ಸಿಡುಬಿನ ಹಾವಳಿಯು ಎಲ್ಲಿಯೂ ಕಂಡುಬರುತ್ತಿಲ್ಲ.

ಸೂಚನೆ–ಜಿಲ್ಲಾ ಬೋರ್ಡಿನ ಸಭೆಯು ಇಂಥ ದಿನ ಜರಗುವುದೆಂದು ಡಿಸ್ಟ್ರಿಕ್ಟ ಬೋರ್ಡು ಸ್ವದೇಶಾಭಿಮಾನಿಗೆ ತಿಳಿಸಿಲ್ಲವೆಂದು ತಾ ೩–೫–೩೫ರಲ್ಲಿ 'ನಮ್ಮ ಮುಂದಾಳುಗಳು' ಎಂಬ ವಿಭಾಗದಲ್ಲಿ ಪ್ರಕಟಿಸಿದ್ದೆವು ಈಗ ವಿಚಾರಿಸಲಾಗಿ, ಡಿ ಬೋರ್ಡಿನ ಪತ್ರವು ನಮ್ಮ ಆಫೀಸಿಗೆ ಸ್ವಲ್ಪ ಸಮಯದಲ್ಲಿ ಬಂದಿತ್ತೆಂದೂ, ಅಚಾತುರ್ಯದಿಂದ ಅದು ಸಂಪಾದಕರಿಗೆ ಕಾಣಸಿಗಲಿಲ್ಲವೆಂದೂ ತಿಳಿಸಬಯಸುತ್ತೇವೆ. ಸಂಪಾದಕ

ನಮ್ಮ ಜಿಲ್ಲೆಯವರಾಗಿದ್ದು ಇಂಡಿಯಾ ಸರಕಾರದ ಬಜೆಟ್ ಆಫೀಸರರಾದ ಶ್ರೀಯುತ ಕೋಡಿಕಲ್ ಸಂಜೀವರಾಯರಿಗೆ ಸಿ. ಐ. ಇ ಬಿರುದು ದೊರೆತಿರುತ್ತದೆ.

ಶ್ರೀ ಕೃಷ್ಣ ಸಿನೇಮಾದಲ್ಲಿ ಇದೇ ತಾ. ೧೫ರಿಂದ ಪ್ರಖ್ಯಾತ ಪ್ರಭಾತ ಫಿಲ್ಮ್ ಕಂಪೆನಿಯವರ "ಅಮೃತ ಮಂಥನ" ಎಂಬ ಪ್ರಖ್ಯಾತ ವಾಗ್ಚಲಚಿತ್ರವು ಪ್ರದರ್ಶಿಸಲ್ಪಡುವುದು. ಈ ಚಿತ್ರವು 'ಮುಂಬಾಯಿಯಲ್ಲಿ ೪೮ ವಾರಗಳಿಂದಲೂ ಪ್ರದರ್ಶಿಸಲ್ಪಡುತ್ತಿದೆ

ನಮ್ಮ ನಗರ ಸಭಾಧ್ಯಕ್ಷರಾದ ಡಾ। ವಿಟ್ಠಲ ಶೆಟ್ಟಿಯವರಿಗೆ ಸಾರ್ವಭೌಮರ ವರ್ಧಂತ್ಯುತ್ಸವದ ಸಂದರ್ಭದಲ್ಲಿ "ರಾವ್ ಬಹದ್ದೂರ್" ಬಿರುದು ದೊರೆತಿದೆಯೆಂದು ಪ್ರಕಟಿಸಿದ್ದೆವಷ್ಟೆ! ಜವಾಬ್ದಾರಿ ಪಕ್ಷದಿಂದ ನಮಗೆ ತಿಳಿದುಬರುವಂತೆ,–ಡಾ। ಶೆಟ್ಟರು ತಾನು ಆ ಬಿರುದನ್ನು ಸ್ವೀಕರಿಸಲು ಸಿದ್ಧನಿಲ್ಲವೆಂದಿರುವರೆಂದೂ, ಆ ಸಂಬಂಧವಾಗಿ ಅಧಿಕಾರಿಗಳಿಗೆ ಪತ್ರ ಬರೆದಿರುವರೆಂದೂ ತಿಳಿದುಬಂದಿದೆ.

ದಕ್ಷಿಣ ಕನ್ನಡ ಜಿಲ್ಲಾ ಬಿಲ್ಲವರ ಯೂನಿಯನ್, ಅಂದರೆ, ಶ್ರೀ ಗೋಕರ್ಣನಾಥ ದೇವಸ್ಥಾನದ ಆಡಳಿತ ಸಭೆಯವರು ನಿರ್ಧರಿಸಿದಂತೆ, ಇದೇ ತಾ. ೨೩–೬–೩೫ನೇ ರವಿವಾರ ೪ ಘಂಟೆಗೆ ಕುದ್ರೋಳಿಯ ಸದ್ರಿ ದೇವಸ್ಥಾನದಲ್ಲಿ ಜಾತಿಗ್ರಹಸ್ತರ ಮಹಾ ಸಭೆಯೊಂದನ್ನು ಜರಗಿಸಿ ತಾ. ೨೧–೪–'೩೫ ಮತ್ತು ತಾ. ೫–೫–'೩೫ನೇ ದಿನ ದೇವಸ್ಥಾನದಲ್ಲಿ ನಡೆದ ವಿವಾಹಗಳ ಸಂದರ್ಭದಲ್ಲಿ ಆ ವಿವಾಹಗಳಿಗೆ ಸಂಬಂಧಪಟ್ಟವರು ಚರ್ಚಾಸ್ಪದ ರೀತಿಯಿಂದ ವರ್ತಿಸಿದುದನ್ನೂ ಈ ಸಂಬಂಧವಾಗಿ ಕಾರ್ಯದರ್ಶಿಯವರು ಆಡಳಿತ ಸಭೆಗೆ ಕೊಟ್ಟ ರಾಜೀನಾಮೆಯನ್ನೂ ಪರ್ಯಾಲೋಚಿಸಬೇಕೆಂದಿರುವರು ಸ್ವಜಾತಿ ಬಾಂಧವರೆಲ್ಲರೂ ಆ ದಿನ ಕ್ಲಪ್ತಕಾಲಕ್ಕೆ ದೇವಸ್ಥಾನದಲ್ಲಿ ಹಾಜರಾಗಿ ಸಭಾಕಾರ್ಯವನ್ನು ಸಾಂಗವಾಗಿ ನೆರವೇರಿಸಿಕೊಡಬೇಕಾಗಿ ಉಪಾಧ್ಯಕ್ಷರಾದ ಶ್ರೀ। ಬಿ ಜಾರಪ್ಪನವರು ತಿಳಿಸುತ್ತಾರೆ

ಲೇಡೀಸ್ ಕ್ಲಬ್ಬಿನವರು ನಡೆಸಿದ ಕ್ಯಾರೋಮ್, ಬೆಡ್ಮಿಂಟನ್ ಮತ್ತು ಟೆನ್ನಿಸ್ ಟೂರ್ನಮೆಂಟಿನಲ್ಲಿ ಗೆದ್ದವರಿಗೆ ಇನಾಮು ಕೊಡುವ ಸಮಾರಂಭವು ಕಳೆದ ತಿಂಗಳ ತಾ ೨೯ರಲ್ಲಿ ಮಿಸೆಸ್ ಎ ಬಿ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು

ಕಳೆದ ಸೋಮವಾರ ಇಲ್ಲಿಯ ಗೋಕರ್ಣನಾಥ ದೇವಸ್ಥಾನದ ಕೆರೆಗೆ ಸುಮಾರು ೨೮ ವರ್ಷದವನೊಬ್ಬನು ಸ್ನಾನಕ್ಕೆ ಹೋದವನು ನೀರಲ್ಲಿ ಮುಳುಗಿ ಮೃತಪಟ್ಟನು.

ಈ ದಿನ ಸಂಜೆ ಘಂಟೆ ೪–೩೦ಕ್ಕೆ ಇಲ್ಲಿಯ ಗಣಪತಿ ಹೈಸ್ಕೂಲಿನಲ್ಲಿ ಡಾ। ಹಮೀದ್ ಅಲಿ ಸಾಹೇಬ್ (ಲೆಕ್ಚರರ್, ಲೋ ಕಾಲೇಜ್ ಮುಂಬಾಯಿ) ಇವರ ಅಧ್ಯಕ್ಷತೆಯಲ್ಲಿ ಪೈಗಂಬರರ ದಿನಾಚರಣೆಯು ನಡೆಯಲಿರುವುದು

ಬಂಟರ ಯಾನೆ ನಾಡವರ ಸಂಘದ ಮಹಾಸಭೆಯು ಇದೇ ಜೂನ್ ತಾ ೩೦ನೇ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ನಡೆಯಲಿರುವುದು ತಾ ೨೯ನೇ ಶನಿವಾರ ಸಂಜೆ ಗಂಟೆ ೫ಕ್ಕೆ ಬಡ ವಿದ್ಯಾರ್ಥಿ ಫಂಡಿನ್ನೀಯುವರ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಆಡಳಿತ ಕಮಿಟಿ ಸಭೆಯು ನೆರೆಯುವುದು

ಕಳೆದ ಗುರುವಾರ ಸಂಜೆ ಮಂಗಳೂರು ಕಾಂಗ್ರೆಸ್ ಕಛೇರಿ ಆಫೀಸಿನಲ್ಲಿ ಸ್ವದೇಶೀ ಪ್ರಚಾರ ಸಭೆಯು ಡಾ। ಆಡಪ್ಪನ ಅಧ್ಯಕ್ಷತೆಯಲ್ಲಿ ನಡೆದು, ಸಭೆಯನ್ನು ಕೂಡಿಸಲಾಗಬಾರದೆಂದೂ, ಹೆಚ್ಚು ಸದಸ್ಯರನ್ನು ಸೇರಿಸಿ ನಡೆಸಬೇಕೆಂದೂ ನಿರ್ಧಾರವಾಯಿತು

ತಾಲೂಕುಗಳಿಂದ.

ಬೆಳ್ತಂಗಡಿ:—ಇದೇ ತಾ ೭ರಲ್ಲಿ ರಾತ್ರಿ ಘಂಟೆ ೭–೩೦ಕ್ಕೆ ಬೆಳ್ತಂಗಡಿ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಮಂಗಳೂರಿನ ಸದ್ಧರ್ಮ ಪ್ರಚಾರಕ ಗ್ರಂಥ ಮಾಲೆಯ ಸಂಪಾದಕರೂ ಹಿಂದೂಧರ್ಮೋಪದೇಶಕರೂ ಆಗಿರುವ ಶ್ರೀ। ಬಿ ಲಕ್ಷ್ಮೀದೇವ ವಿದ್ಯಾರ್ಥಿಯವರು "ರಾಮರಾಜ್ಯ ನಿಯೋಗ" ಎಂಬ ಹರಿಕಥೆಯನ್ನು ಸುಶ್ರಾವ್ಯವಾದ ಗಾನಗಳಿಂದಲೂ, ವೇದಾದಿ ಶಾಸ್ತ್ರಾಧಾರಗಳಿಂದಲೂ ವಿವರಿಸಿದರು. ಸಭೆಗೆ ಇಲ್ಲಿಯ ಪ್ರಮುಖ ಅಧಿಕಾರಿಗಳೆಲ್ಲರೂ ಬಿತ್ತ್ಯಸಿದ್ದರು ಇಲ್ಲಿಯ ದಿಪ್ಯೂಟಿ ತಹಶೀಲ್ದಾರರವರು ವಿದ್ಯಾರ್ಥಿಯವರಿಗೂ ಸಭಿಕರಿಗೂ ಧನ್ಯವಾದವನ್ನು ಸಮರ್ಪಿಸಿ, ಸಭಿಕರಿಂದ ಸಂಗ್ರಹವಾದ ದ್ರವ್ಯವನ್ನು ಗ್ರಂಥಮಾಲೆಯ ಸಹಾಯಾರ್ಥ ವಿದ್ಯಾರ್ಥಿಯವರಿಗೆ ಅರ್ಪಿಸಿದರು ಮರುದಿನ ಪ್ರಾತಃಕಾಲ ವಿದ್ಯಾರ್ಥಿಯವರು ಕಡೂರು ಕಡೆಗೆ ಪ್ರಯಾಣಬೆಳೆಸಿರುವರು.

ಬಂಟ್ವಾಳ:—ಇಲ್ಲಿಯ ಮಿಡ್‌ವೈಫಿಗೆ ಕಾರ್ಕಳಕ್ಕೂ, ಕಾರ್ಕಳ ಮಿಡ್‌ವೈಫಿಗೆ ಇಲ್ಲಿಗೂ ವರ್ಗವಾಗಿರುತ್ತದೆ

ಇಲ್ಲಿಯ ಟೆಂಪಲ್ ಹೈಸ್ಕೂಲಿನಿಂದ ಎಸ್ ಎಸ್ ಎಲ್ ಸಿ ಪರೀಕ್ಷೆಗೆ ಕಳುಹಿಸಲ್ಪಟ್ಟ ೧೯ ಮಂದಿಯಲ್ಲಿ ೧೧ ಮಂದಿ ಪಾಸಾಗಿರುವರು

ಇಲ್ಲಿಯ ಎಮೆಚ್ಯೂರ್ ನಾಟಕ ಮಂಡಲಿಯವರು ಎಸ್ ವಿ ಎಸ್ ಹೈಸ್ಕೂಲಿನ ಸಹಾಯಾರ್ಥವಾಗಿ ಸಾಧಾರಣ ಒಂದು ಸಾವಿರ ರೂಪಾಯಿಗಳಷ್ಟು ಹಣವನ್ನು ಶೇಖರಿಸಿರುವರೆಂದು ತಿಳಿದುಬರುತ್ತದೆ

ಪಾಣೆಮಂಗಳೂರು–ಇಲ್ಲಿಯ ಎಸ್ ವಿ ಎಸ್ ಶಾಲೆಯನ್ನು ಹಾಯರ್ ಎಲಿಮೆಂಟರಿ ಶಾಲೆಯಾಗಿ ಮಾಡುವರು

ಕಿನ್ನಿಗೋಳಿ:—ಕಳೆದ ವಾರ ಶ್ರೀಮತಿ ಕಮಲಾದೇವಿಯವರು ತನ್ನ ಅನುಯಾಯಿಗಳೊಡನೆ ಇಲ್ಲಿಗೆ ಬಂದಿದ್ದು ಕೊಂಗ್ರೆಸ್ಸಿಗೆ ಹಣ್ಣಿನ ಮೆಂಬರನ್ನು ಸೇರಿಸಿ ನಂತರ ಮೂಲ್ಕಿ ಕಡೆಯಿಂದ ಮೊದಲಾದ ಕಡೆಗಳಿಗೆ ಹೋಗಿ ಅಲ್ಲಿಂದ ಮುಲ್ಕಿಗಾಗಿ ಉಡುಪಿಯತ್ತ ತೆರಳಿದ್ದಾರೆ.

ಕೆಲವು ದಿವಸಗಳಿಂದ ಇಲ್ಲಿ ಹುಲಿಗಳ ಬಾಧೆಯು ಪ್ರಾರಂಭವಾಗಿದೆ

ಇಲ್ಲಿ ನೀರಿನ ಅಭಾವವು ಹೆಚ್ಚಾಗಿದ್ದರೂ ಹೆಗಡೆ? ರಾ ಸಮ್ಮೇಳನದ ಮಲ್ಯರು ತೋಡಿದ ಬಾವಿಯಲ್ಲಿ ಹೆಚ್ಚಿನ ನೀರು ದೊರೆತುದರಿಂದಲೂ ಅವರ ಉದಾರದಾನದಿಂದ ಪೇಟೆಯವರೆಲ್ಲರೂ ಪ್ರಕೃತದ ಕಷ್ಟದಿಂದ ನಿವೃತ್ತರಾಗಿದ್ದಾರೆ ಇವರ ಈ ಪುಣ್ಯ ಕೆಲಸಕ್ಕೆ ಪೇಟೆಯವರೆಲ್ಲರೂ ಚಿರಋಣಿಗಳಾಗಿರುತ್ತಾರೆ

ಉಡುಪಿ:—ಕ್ವೆಟ್ಟಾ ಭೂಕಂಪ ಸಹಾಯಕ ನಿಧಿ ಸ್ಥಳೀಯ ಬಾರ್ ಎಸೋಸಿಯೇಶನಿಂದ ಪ್ರಾರಂಭವಾಗಿದೆ ನಮ್ಮೂರ ಊರ ಪ್ರಮುಖ ರಾಗಲಿ ಪ್ರಮುಖ ಗೃಹಸ್ಥರಾಗಲಿ ಈ ಬಗ್ಗೆ ಕಟಿಬದ್ಧರಾಗಿದ್ದು, ಮ। ರಾ। ಎಂ. ವಿಠ್ಠಲ ಕಾಮತ್ ಬಿ ಎ ಬಿ. ಎಲ್. ವಕೀಲ್ ಇವರ ತೀವ್ರ ಯೋಚನೆಯಿಂದ ಸ್ವಲ್ಪವಾದರೂ ತಾತ್ಕಾಲಿಕ ಸಹಾಯವನ್ನು ಒದಗಿಸಲಿದ್ದಾರೆ ಸ್ತುತ್ಯಾರ್ಹ

ಇದೇ ಮಾರ್ಚಿನಲ್ಲಿ ನಡೆದ ಎಸ್. ಎಸ್ ಎಲ್ ಸಿ ಪರೀಕ್ಷೆಯ ಫಲಿತಾಂಶವಾಗಿ, ಸ್ಥಳೀಯ ಕ್ರಿಶ್ಚನ್ ಹೈಸ್ಕೂಲಿನಲ್ಲಿ ೫೮ರಲ್ಲಿ ೪೨, ಬೋರ್ಡ ಹೈಸ್ಕೂಲಿನಲ್ಲಿ ೪೭ರಲ್ಲಿ ೨೧, ಸೈಂಟ್ ಸಿಸಿಲಿಯಾ ಗರ್ಲ್ಸ್ ಹೈಸ್ಕೂಲಿನಲ್ಲಿ ೯ರಲ್ಲಿ ೭ ವಿದ್ಯಾರ್ಥಿಗಳು ಯೂನಿವರ್ಸಿಟಿ ವಿದ್ಯಾಭ್ಯಾಸಕ್ಕೆ ಅರ್ಹರೆಂದು ಪ್ರಕಟಿಸಲಾಗಿದೆ

ಈಗಣ ಸಂದಿಗ್ಧ ಹಾಗೂ ಆರ್ಥಿಕ ಅವನತಿಯ ಕಾಲದಲ್ಲಿ ಉಡುಪಿಗೆ ಪ್ರತ್ಯೇಕವಾಗಿ ಸಂಬಂಧಿಸಿರುವ ಹಲವು ಕಾರಣಗಳಿಂದಾಗಿ ಸರಕಾರವು ಇಲ್ಲಿಗೆ ಮುನಿಸಿಪಾಲಿಟಿಯನ್ನು ಹೇರಿಸುವುದು ಅನಗತ್ಯವೂ ಬೇಡವೆಂದೂ ೩೦೦ಕ್ಕೆ ಮೇಲ್ಪಟ್ಟ ಸಹಿಗಳಿಂದ ಮನವಿಯೊಂದು ಸಿದ್ಧವಾಗಿದ್ದು ಇಂದು ನಾಳೆ ಅದನ್ನು ಆಯಾಯ ಕಡೆಗಳಿಗೆ ಕಳುಹಿಸಲಿರುವರು. ಅಲ್ಲದೆ ಇದೇ ತಾ. ೮ನೇ ಸಾಯಂಕಾಲ ೬ ೩೦ಕ್ಕೆ ಸ್ಥಳೀಯ ವಿಕ್ಟೋರಿಯಾ ಯೂನಿಯನ್ ಕ್ಲಬ್ಬಿನಲ್ಲಿ ಮ। ರಾ। ಆರೂರು ಲಕ್ಷ್ಮೀನಾರಾಯಣರಾವ್ ಬಿ. ಎ ಬಿ. ಎಲ್ ಎಡ್ವೋಕೇಟ್ ಇವರ ಅಧ್ಯಕ್ಷತೆಯಲ್ಲಿ ಊರ ಜನರ ಮಹಾ ಸಭೆ ಸೇರಿತು

ಈ ಕುರಿತಾಗಿ ಒಂದು ಡೆಪ್ಯುಟೇಶನ್ ಮದ್ರಾಸು ಸರಕಾರದ ಮುಖ್ಯ ಮಂತ್ರಿಗಳೊಡನೆ ಉಡುಪಿನ ಮುನಿಸಿಪಾಲಿಟಿಯು ಬೇಡವೆಂಬದಾಗಿ ಹೇಳಬೇಕಾಗಿಯೂ, ಈ ಡೆಪ್ಯುಟೇಶನಿನ ಮೆಂಬರುಗಳಲ್ಲಿ ಬದಲಾವಣೆ ಮಾಡಲಿಕ್ಕೆ ಅಥವಾ ಹೆಚ್ಚಿಗೆ ಸೇರಿಸಿಕೊಳ್ಳಲಿಕ್ಕೆ ಅಧಿಕಾರ ಕೊಟ್ಟು ಸರ್ವಾನುಮತದಿಂದ ನಿರ್ಣಯವಾಯಿತು.

ನಮ್ಮ ಜಿಲ್ಲೆಯಲ್ಲಿ ಹಲವು ಕಡೆಗಳಿಂದ ವಾಗ್ಚಲಚಿತ್ರ ಸಂಘವೊಂದು ಸ್ಥಾಪಿತವಾಗಬೇಕು ಮುಂತಾಗಿ ಸೂಚನೆಗಳು ಬರುತ್ತಲಿರುವಾಗಲೇ, ಇಲ್ಲಿಯ ಪ್ರಮುಖ ವಕೀಲರೂ ಜಮೀನ್ದಾರರೂ ಆಗಿರುವ ರಾ। ಕೊಡ್ಲಿಕಾರ ರಮಾನಾಥಪೈಗಳ ಪುತ್ರರಾದ ಶ್ರೀ। ಕೆ. ಗೋಪಾಲಪೈಯವರು ಸಿನೆಮಾ ಕೈಗಾರಿಕೆಯನ್ನು ಅಭ್ಯಸಿಸುವರೇ ಬೊಂಬಾಯಿಗೆ ಹೋಗಿರುತ್ತಾರೆ ಬೊಂಬಾಯಿಯಲ್ಲಿ ವ್ಯವಸಾಯ ಮಾಡಿಕೊಂಡು, ಅತ್ಯಾಧುನಿಕ ರೀತಿಯ ಅನುಭವ ಪಡೆಯಲಿಕ್ಕಾಗಿ ಇವರು ವಿಲಾಯತಿ ಅಮೇರಿಕಾಗಳಿಗೂ ಹೋಗುವವರಿದ್ದಾರೆ ಮೇಲಣ ಕೈಗಾರಿಕೆಯಲ್ಲಿ ಸಿದ್ಧಿಯುವದನ್ನು ಅಭಿಮಾನಿಗಳು ಪ್ರೋತ್ಸಾಹಿಸಿ, ನಮ್ಮ ಜಿಲ್ಲೆಯಲ್ಲೂ ಹೊಸ ವಿಧಾನದ ನವೀನ ಕೈಗಾರಿಕೆಗಳನ್ನು ಸ್ಥಾಪಿಸುವುದರಲ್ಲಿ ಉತ್ಸುಕರಾಗಲೆಂದು ನಮ್ಮ ಹಾರೈಕೆ

ಸ್ಥಳೀಯ ರಾಮಕೃಷ್ಣ ಥಿಯೇಟರಿನಲ್ಲಿ ಇದೇ ಜೂನ್ ತಾ ೪ರಲ್ಲಿ ಶ್ರೀ। ಅನಂತಪದ್ಮನಾಭ ಕೃಪಾಪೋಷಿತ ಎಮೆಚ್ಯೂರ್ಸ್ ಉಡುಪಿ ಇವರು "ಪತಿಭಕ್ತಿ" ಎಂಬ ನಾಟಕವನ್ನು ಅಭಿನಯಿಸಿದರು.

ಬಿಲ್ಲವರ ಎಸೋಸಿಯೇಶನ್,

ಮುಂಬಾಯಿ

ಇದು ಬಿಲ್ಲವರ ಜಾತಿಯ ಬಡವಿದ್ಯಾರ್ಥಿಗಳಿಗೆ ಮಾಸಿಕ ವಿದ್ಯಾರ್ಥಿವೇತನವನ್ನು ಕೊಡುವುದು ವೇತನಗಳನ್ನಪೇಕ್ಷಿಸುವ ವಿದ್ಯಾರ್ಥಿಗಳು ಇದೇ ತಿಂಗಳ ತಾ. ೩೦ರ ಒಳಗೆ ಈ ಕೆಳಗಿನ ವಿಳಾಸಕ್ಕೆ ದರಖಾಸ್ತು ಮಾಡಿಕೊಂಡಲ್ಲಿ ಅರ್ಹರಾದವರಿಗೆ ವೇತನವನ್ನು ಕೊಡಲಾಗುವುದು. ಆದರೆ ವೇತನವನ್ನಪೇಕ್ಷಿಸುವವರು ಅರ್ಜಿಯೊಂದಿಗೆ ಅವರವರ ಕಳೆದ ಪರೀಕ್ಷೆಯ ಮಾರ್ಕಿನ ಪಟ್ಟಿಯನ್ನೂ ಶಾಲಾ ಹೆಡ್ಮಾಸ್ತರರ ಅಥವಾ ಮೇಲಧಿಕಾರಿಗಳ ಶಿಫಾರಸು ಪತ್ರವನ್ನೂ ಸದ್ರಿಯವನು ವೇತನವನ್ನು ಪಡೆಯಲರ್ಹನೆಂದು ದರ್ಜೆ ಎರಡನೇ ಕ್ಲಾಸಿನ ಮೆಜಿಸ್ಟ್ರೇಟ ಅಥವಾ ಪ್ರಸಿದ್ಧ ವಕೀಲರ ಪತ್ರವನ್ನೂ ಕಳಿಸಬೇಕಲ್ಲದೆ ಈ ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ತಪ್ಪದೆ ಕಳುಹಿಸತಕ್ಕದ್ದು.

(೧) ಕಲಿಯುತ್ತಿದ್ದ ದರ್ಜೆ (ಕ್ಲಾಸು) ಮತ್ತು ಶಾಲೆಯ ಹೆಸರು (೨) ಫೀಸು ಸಂಬಳ ಮತ್ತು ಪುಸ್ತಕಗಳ ಕ್ರಯದ ಪಟ್ಟಿ (೩) ತಂದೆಯ ಅಥವಾ ಪೋಷಕರ ಹೆಸರು ಮತ್ತು ವಿಳಾಸ (೪) ಕಲಿಯುವ ಮತ್ತು ವಿದ್ಯಾರ್ಜನೆಯ ಉದ್ದೇಶ (೫) ಇತರ ಸಂಬಂಧಿಕರ ಹೆಸರು ಕಲಿಯುವ ಇತ್ಯಾದಿಗಳ ವಿವರ

ಮಂಜುನಾಥ ಬಿ ಅಮೀನ್,

ಆನರರಿ ಜನರಲ್ ಕಾರ್ಯದರ್ಶಿ

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಸ್ಮಾಲ್ ಸಂಖ್ಯೆ 33 1935 ೯ । I A 193೦

ಅನಂತ ಪೈಲ್ವ—ವಾದಿ

ಲಕ್ಷ್ಮೀಬಾಯಿ–ಪ್ರತಿವಾದಿ

ಸದರಿ ಪ್ರತಿವಾದಿಳು ವಾದಿಗೆ ತಾರೀಕು 17 1-1932ರಲ್ಲಿ ರೂ 800ಕ್ಕೆ ಬರೆಸಿಕೊಟ್ಟ ಡಿಮಾಂಡ್ ನೋಟಿನ ಹಣಕ್ಕೆ ವಾದಿಯು ದಾಖಲುಮಾಡಿದ ದಾವೆ ಮತ್ತು ವಾದಿಯ ಜಪ್ತಿ ಬಗ್ಗೆ ದಾಖಲುಮಾಡಿದ ಅರ್ಜಿ ಸಹಾ ತಾ 4–7–1935ಕ್ಕೆ ತನಿಖೆಗೆ ಇಡೋಣಾಗಿದೆ. ಆ ಕುರಿತು ಆಕ್ಷೇಪಗಳಿದ್ದರೆ ಸದರಿ ತಾರೀಕಿನ ದಿವಸ ಹಗಲು 10 ಘಂಟೆಗೆ ಕೋರ್ಟು ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳಲಿಕ್ಕೆ ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಕುಂದಾಪುರ, 11-6-35

K. Vittaldas Shenai,
Advocate for Petr.

ಜಿಲ್ಲೆಯ ಹೈಸ್ಕೂಲುಗಳಲ್ಲಿನ ಎಸ್. ಎಸ್ ಎಲ್ ಸಿ. ಪರೀಕ್ಷೆಯ ಫಲಿತಾಂಶಗಳು

ಶಾಲೆ	ಕುಳಿತವರು	ಉತ್ತೀರ್ಣರಾದವರು	ಶೇಕಡಾ
ಗವರ್ನಮೆಂಟ್ ಹೈಸ್ಕೂಲ್ ಫೊರ್ ಗರ್ಲ್ಸ್	೬	೫	೮೪
ಸೈಂಟ್ ಎಲೋಶಿಯಸ್ ಕಾಲೇಜ್	೧೦೭	೬೬	೬೧
ಬೋರ್ಡ ಹೈಸ್ಕೂಲ್, ಪುತ್ತೂರು	೪೦	೨೧	೬೦
,, ,, ಕುಂದಾಪುರ	೨೯	೨೦	೬೯
,, ,, ಕಾಸರಗೋಡು	೪೦	೨೦	೬೭
,, ,, ಕಾರ್ಕಳ	೪೬	೩೧	೬೦
ಬಿ. ಇ. ಎಂ. ಹೈಸ್ಕೂಲ್, ಮಂಗಳೂರು	೨೬	೧೬	೬೨
ಕೆನರಾ ಹೈಸ್ಕೂಲ್, ಮಂಗಳೂರು	೧೦೭	೬೪	೫೯
ಟೆಂಪಲ್ ಹೈಸ್ಕೂಲ್, ಬಂಟ್ವಾಳ	೧೯	೧೧	೫೮
ರಾಜಾ ಹೈಸ್ಕೂಲ್, ನೀಲೇಶ್ವರ	೨೧	೧೨	೫೭
ಬೋರ್ಡ ಹೈಸ್ಕೂಲ್, ಉಡುಪಿ	೪೭	೨೧	೫೭
ಮಿಲಾಗ್ರಿಸ್ ಹೈಸ್ಕೂಲ್, ಕಲ್ಯಾಣಪುರ	೪೦	೧೭	೫೭
ಸೈಂಟ್ ಎಗ್ನೆಸ್ ಹೈಸ್ಕೂಲ್, ಮಂಗಳೂರು	೯೮	೨೫	೫೨
ಕ್ರಿಶ್ಚಿಯನ್ ,, ,, ಉಡುಪಿ	೫೮	೪೨	೫೫
ಗಣಪತಿ ,, ,, ಮಂಗಳೂರು	೫೨	೨೫	೪೮
ಗವರ್ನಮೆಂಟ್ ಕಾಲೇಜು, ಮಂಗಳೂರು	೪೯	೧೪	೪೪

ಭೋಪಾಲ ನವಾಬರ ಉದಾರ ದಾನ.

ಮಹಾತ್ಮರು ಇಂತಹ ಪುಣ್ಯಕಾರ್ಯಗಳಿಗೆ ಕೈಯು ಸ್ವತಃ ಬಹಳ ಅಪರೂಪವಾಗಿ. ಅದೇಕೋ ಬಲ್ಲಿರಾ? ಭೋಪಾಲದ ನವಾಬರು ಸರ್ ಮಹಮ್ಮದ್ ಇಕ್ಬಾಲ್ ಎಂಬ ಪ್ರಖ್ಯಾತ ಗ್ರಂಥಕರ್ತರಿಗೆ ಮರಣಾಂತ್ಯ ವರೆಗೆ ವರುಷಕ್ಕೆ ೫೦೦ ರೂಪಾಯಿಗಳ ಪೆನ್ಶನನ್ನು ತನ್ನ ಸ್ವಂತ ಜೇಬಿನಿಂದಲೇ ಕೊಡುತ್ತೇನೆಂದು ಬರೆವಿರುವರು. "ಕೊರಾನಿನ ಪಠನೆಗೊಂದು ಟೀಕೆ"ಯನ್ನು ಇಕ್ಬಾಲರು ಬರೆಯುವುದಕ್ಕಾಗಿ ಈ ಬಹುಮಾನವಂತೆ.

ಈ ವಾರದ ತಂತಿ ವಾರ್ತೆಗಳು:

ಕ್ವೆಟ್ಟಾದಲ್ಲಿ ಭೂಕಂಪವಾಗುವುದೆಂದು ೫ ವರುಷಗಳ ಹಿಂದೆ ಭವಿಷ್ಯ ಹೇಳಿದ್ದರು.

ಮುಂಬಾಯಿ ಜೂನ್ ೬

ಕ್ವೆಟ್ಟಾದಲ್ಲಿ ಭೂಕಂಪವಾಗುವುದೆಂದು ೫ ವರುಷಗಳ ಹಿಂದೆಯೇ ಒಬ್ಬ ಜ್ಯೋತಿಷ್ಯಗಾರನು ಭವಿಷ್ಯ ಹೇಳಿದ್ದನು. ಆ ಜ್ಯೋತಿಷ್ಯಗಾರನೇ ತನ್ನ ಭವಿಷ್ಯನ್ನುಡಿಯು ಸತ್ಯವಾಗಿ ಪರಿಣಮಿಸಿರುವುದನ್ನು ಕಂಡಿರುವನು ಇವನು ಪೇಷಾವರದ ಎಕ್ಸ್‌ಪ್ರೆಸ್ ರೈಲಿನಲ್ಲಿ ಜಹಂಗೆಬಂದಿರುವನು

ಅಲ್ಲಾ ಭಕ್ಷನೆಂದು ಇವನ ಹೆಸರು ಇವನು ಚಿತ್ರಗಾರ, ಲಕ್ನೊ ನಿವಾಸಿ ಕೆಲಸಕ್ಕಾಗಿ ಕ್ವೆಟ್ಟಾಕ್ಕೆ ಹೋಗಿದ್ದ ಭೂಕಂಪವಾದ ದಿನ ರಾತ್ರಿ ಇವನಿಗೆ ಭಯಂಕರ ಶಬ್ದವು ಕೇಳಿಸಿತು ಇಟ್ಟಿಗೆಗಳೂ, ಗಾರೆ ಮತ್ತು ಮನೆಯ ಮಾಡುಗಳೂ ಇವನ ಮೇಲೆ ಬಿದ್ದುವು ಕೊಂಪೆಯಡಿಯಲ್ಲಿ ಹೂತುಹೋಗಿಬಿಟ್ಟನು ಹೇಗೂ ಮೂರು ಅವುಗಳಡಿಯಿಂದ ಹೊರಗೆ ಬಂದನು. ಅಲ್ಲಾ ಭಕ್ಷನ ಭವಿಷ್ಯನ್ನುಡಿಯ ಸತ್ಯತೆಯನ್ನು ಕಂಡುಹಿಡಿಯುವುದಕ್ಕಾಗಿ ಒಬ್ಬ ಅಧಿಕಾರಿಯು ಅದನನ್ನು ತನ್ನ ಮನೆಯಲ್ಲಿಯೇ ಇರಿಸಿಕೊಂಡಿದ್ದನು. ಭೂಕಂಪದಲ್ಲಿ ಈ ಅಧಿಕಾರಿಯೂ ಬದುಕಿ ಉಳಿದಿರುವನು ಅವನ ಮನೆಯವರು ಮೃತರಾದರು

೪೭ ವರುಷಗಳಲ್ಲಿ ಮೆಟ್ರಿಕ್ಯುಲೇಶನ್ ನಲ್ಲಿ ಪಾಸಾದರು!

ರಾಜಕೋಟೆ, ಜೂನ್ ೬

ಅನ್ರೇಲಿಯ ಒಬ್ಬ ಮಹಾರಾಷ್ಟ್ರ ಗೃಹಸ್ಥರು ತನ್ನ ೪೭ನೇ ವಯಸ್ಸಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕುಳಿತರು ಅವರು ಇದುವರೆಗೆ ಎರಡನೇ ಸಲ ಪರೀಕ್ಷೆಗೆ ಕುಳಿತರು ತನ್ನ ೨೭ನೇ ವಯಸ್ಸಿನಲ್ಲಿ ಇವರು ಪ್ರಥಮ ಸಲ ಈ ಪರೀಕ್ಷೆಗೆ ಕುಳಿತು ಫೈಲ್ ಆದರು ಆ ಮೇಲೆ ಬರೋಡಾ ಸಂಸ್ಥಾನದಲ್ಲಿ ಕೆಲಸಕ್ಕೆ ಸೇರಿದರು ತನ್ನ ಹುದ್ದೆಯಲ್ಲಿ ಹೆಚ್ಚಿನ ಸಂಬಳವು ಸಿಗಬೇಕೆಂಬ ಆಶೆಯಿಂದ ಇವರು ಪುನಃ ಈ ಪರೀಕ್ಷೆಗೆ ಕುಳಿತರು ಆದರೆ ದುರ್ದೈವವಶಾತ್ ನಿರುತ್ತೀರ್ಣರಾದರ ದಿನಕ್ಕೆ ೮ರಿಂದ ೧೦ ತಾಸುಗಳ ವರೆಗೆ ಅಭ್ಯಾಸಂಗ ನಡೆಸಿದರೂ ಇವರು ಪಾಸಾಗುವ ಯೋಗವು ಲಭಿಸಲ್ಲ ಬರುವ ವರುಷವೂ ಈ ಪರೀಕ್ಷೆಗೆ ಕುಳಿತುಕೊಳ್ಳಲಿರುವರು

ಜುಲೈ ಬಳಿ ಉಬೀಸವೆಲ್ಲ ಎಂಬ ನದಿಯ ದಡದ ಮೇಲೆ ಇನ್ನೊಂದು ಇಟಲಿ—ಅಬಿಸೀನಿಯಾ ಸರಹದ್ದಿನ ಗಲಭೆಯು ತಲೆಯೆತ್ತಿದೆ. ಇಟಲಿಯ ಸೋಮಾಲಿಲ್ಯಾಂಡಿನವರಿಗೂ ಅಬಿಸೀನಿಯಾದವರಿಗೂ ಗಲಭೆಯಾಗಿ ಅನೇಕ ಮರಣವೂ ಘಾಯಗಳೂ ಆಗಿವೆ.

ಹೊಸ ಪ್ರಧಾನ ಮಂತ್ರಿ ಸ್ಟೇನಿ ಬಾಲ್ಡ್‌ವಿನ್ನರು

ಆತ್ಮಹತ್ಯೆಮಾಡುವ ಇನ್ನೊಂದು ವಿಧಾನ.

ಆತ್ಮಹತ್ಯೆ ಮಾಡಿಕೊಳ್ಳುವ ವಿಧಾನಗಳೆಷ್ಟೆಂದು ನಮ್ಮ ವಾಚಕರು ಕೇಳಿ ತಿಳಿದಿದ್ದೀರಷ್ಟೆ ನೀರಿಗೆ ಹಾರುವುದು, ನೇಣು ಹಾಕಿಕೊಳ್ಳುವುದು ಗುಂಡು ಹೊಡೆದುಕೊಳ್ಳುವುದು ಇತ್ಯಾದಿ ಇತ್ಯಾದಿ ಇನ್ನೊಂದು ಹೊಸ ಕ್ರಮವು ಬಂದಿದೆ ಲಂಡನಿನಲ್ಲಿ ಮಿಸ್ ವಿಲ್ಲಿಸೆಂಟ್ ಎಸ್ಟೋಲಿಡ್ ಎಂಬ ೪೪ ವರುಷ ಪ್ರಾಯದ ಸ್ತ್ರೀಯು ಮೊನ್ನೆ ಕಾಟೋಲಿಕ್ ಎಂಬದನ್ನು ಕುಡಿದು ತನ್ನ ದೇಹಕ್ಕೆ ಅಗ್ನಿಶಾಮಕ ದ್ರಾವಕವನ್ನು ತಲೆಯಿಂದ ಕಾಲಿನವರೆಗೆ ತೊಯ್ಯುವಂತೆ ಚಿಮುಕಿಸಿಕೊಂಡು ಹೊರಗೆ ನಡೆಯುತ್ತ ಅರ್ಥ ಮೈಲನ್ನು ದಾಟಿ ೧೦೦೦ ಅಡಿಗಳ ಮೇಲಿರುವ ಒಂದು ಘಟ್ಟಕ್ಕೆ ಹತ್ತಿ ಅಲ್ಲಿ ದಾರಿಯಲ್ಲಿ ಪ್ರಾಣಬಿಟ್ಟಳು ಅವಳು ಹಿಡಿದುಕೊಂಡ ಹೋದ ವಿಷಪೂರಿತ ಬಾಟ್ಲಿಗಳು ದಾರಿಯಲ್ಲಿ ದೊರೆತಿವೆ ಅವಳು ಆತ್ಮಹತ್ಯೆಗೆ ಕಾರಣವನ್ನು ಹೇಳಿ ಬರೆದಿಟ್ಟಿದ್ದ ಎರಡು ಪತ್ರಗಳೂ ದೊರೆತಿವೆ ಹೊಸ ನಮೂನೆಯ ಆತ್ಮಹತ್ಯೆಯಲ್ಲವೇ?



ಯುದ್ಧ ಸಚಿವರಾಗಿ ನೇಮಕ ಹೊಂದಿದ
ಲೋರ್ಡ್ ಹೆಲಿಫೆಕ್ಸರು

೧ ಲಕ್ಷ ೪೦ ಸಾವಿರ ರೂಪಾಯಿಗಳ ನಷ್ಟ

ಬೆಜವಾಡ ಜೂನ ೬

ಇಲ್ಲಿ ಭಯಂಕರ ಬೆಂಕಿಯ ಅನಾಹುತವುಂಟಾಗಿ ೧,೪೦,೦೦೦ ರೂಪಾಯಿಗಳ ನಷ್ಟವು ಸಂಭವಿಸಿದೆ ಬೆಂಕಿಯು ಮಧ್ಯಾಹ್ನ ಹನುಮಾನ್ ಪೇಟೆಯಲ್ಲಿ ತಲೆಯೆತ್ತಿತು ಅನೇಕ ದೊಡ್ಡ ದೊಡ್ಡ ಕಟ್ಟಡಗಳು ಭಸ್ಮವಾದುವು. ಎಣ್ಣೆಯ ಕಾರ್ಖಾನೆಯು ಸುಟ್ಟು ಹೋಯಿತು ವಿಶೇಷ ಉಷ್ಣದಿಂದಾಗಿ ಈ ಬೆಂಕಿಯೆದ್ದಿತೆಂದು ಹೇಳಲಾಗಿದೆ.

ಕಾಂಗ್ರೆಸ್ ಮುಖಂಡರಲ್ಲೊಬ್ಬರಾಗಿದ್ದ ಮದ್ರಾಸ ಸಂಸ್ಥಾನದ ಮಂತ್ರಿಮಂಡಲದಲ್ಲಿ ಉದ್ಯೋಗವನ್ನು ಸ್ವೀಕರಿಸಲು ಸಿದ್ಧವಿದ್ದೇನೆಂದು ಹೇಳಿದ
ಶ್ರೀ ಎಸ್. ಸತ್ಯಮೂರ್ತಿಯವರು.

ಕಾಂಗ್ರೆಸ್ಸಿಗೆ ಪುನಃ ಸೇರಿಕೊಳ್ಳಲಿರುವ
ಮೌಲಾನಾ ಶೌಕತಾಲಿಯವರು

ಇಟಲಿ ಅಬಿಸೀನಿಯ ಗಳೊಳಗೆ ಪುನಃ ಕಲಹ!

ರೋಮ ಜೂನ್ ೪

ಇಟಲಿ ಅಬಿಸೀನಿಯಾ ಗಲಭೆಯು ಕಲಿದೇರಿ ಅದರ ತೀರ್ಮಾನಕ್ಕಾಗಿ ಕಮಿಟಿಯು ಏರ್ಪಟ್ಟು ಅದರ ಕಾರ್ಯಕ್ರಮವು ಮುಂದರಿಯುತ್ತಿರುವಾಗಲೇ ಉಲ್

ನಿವೃತ್ತ ಬ್ರಿಟಿಷ ಪ್ರಧಾನ ಮಂತ್ರಿ
ರಾಮ್ಸೆ ಮೆಕ್ಡೋನಾಲ್ಡರು

ಫ್ರಾನ್ಸಿನ ಆರ್ಥಿಕ ವ್ಯವಸ್ಥೆ

ಲಾವಾಲ ರವರ ಸರಕಾರವು ಫ್ರಾನ್ಸಿನ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಉದ್ದೇಶವನ್ನಿಟ್ಟುಕೊಂಡಿದೆ ಪಾರ್ಲಿಮೆಂಟಿನಲ್ಲೂ ಸರಕಾರವು ತನ್ನ ಆಲೋಚನೆಗಳನ್ನು ಮುಂದಿಡುವುದು ಪ್ರಜೆಗಳು ಈಗೀಗ ವಿಶ್ವಾಸವಿಡುವವರಾಗುತ್ತಿರುವರು ಸರಕಾರವು ಸಾರ್ವಜನಿಕ ಸಾಲಗಳನ್ನು ಎತ್ತದೆ ಕರೆನ್ಸಿಯನ್ನು ಸ್ಥಿರವಾಗಿ ಇಡುವ ನಿರ್ಧಾರವನ್ನು ಮಾಡಿರುತ್ತದೆ ಫ್ರಾನ್ಸಿನಿಂದ ಭಂಗಾರವು ಈಗ ಹೊರಗೆ ಹೋಗುವುದಿಲ್ಲ

ದಿ ಕೆನರಾ ವಿದ್ಯಾದಾಯಿನೀ ಪ್ರೈವ್ಹೆಟ್ ಸ್ಕೂಲ, ಮನೋಹರದಾಸ್ ಸ್ಟ್ರೀಟ್, ಬೊಂಬಾಯಿ

ಈ ಶಾಲೆಯು ಸುಟಿಕಾಲದ ನಿಮಿತ್ತ ಕಳೆದ ತಿಂಗಳಿನ ೩೦ ೧೦ರಿಂದ ಮುಚ್ಚಲ್ಪಟ್ಟು ಸದ್ಯ ಜೂನ್ ೩ ಇದೇ ತಿಂಗಳ ೩ನೇ ತಾರೀಖಿಗೆ ತೆರೆಯಲ್ಪಟ್ಟಿರುತ್ತದೆ ಶಾಲೆಯು ಸಾಯಂಕಾಲ ೬ ೩೦ರಿಂದ ೯ ೩೦ ಗಂಟೆಯ ವರೆಗೆ ನಡೆಸಲ್ಪಡುತ್ತದೆ ಈ ಶಾಲೆಗೆ ಬರುವ ಹುಡುಗರು ಜಾತಿಭೇದವಿಲ್ಲದೆ ಸೇರಬಹುದು ಆದರಾದರೂ ಯೋಗ್ಯ ಶಿಕ್ಷಣವನ್ನು ಮುಖ್ಯವಾಗಿ ಕಲಿಸಲಾಗುವುದು ಸದ್ರಿ ಶಾಲೆಗೆ ಬಂದು ವಿದ್ಯಾಲಾಭವನ್ನು ಪಡೆಲಿಕ್ಕೆ ಯಾರಿಗೆ ಅಪೇಕ್ಷೆ ಇದೆಯೋ ಅಂಥವರು ಸದ್ರಿ ಶಾಲೆಯ ಕಾರ್ಯದರ್ಶಿಯವರನ್ನು ನೋಡಬಹುದು.

ಮೈಸೂರಿನ ಶ್ರೀಮನ್ಮಹಾರಾಜರವರು.
ಇವರ 51ನೇ ಜನ್ಮದಿನೋತ್ಸವವು ಮೈಸೂರು ಸಂಸ್ಥಾನದಲ್ಲಿ ತಾ. ೧೬ರಲ್ಲಿ ಅತಿ ವಿಜೃಂಭಣೆಯಿಂದ ಜರಗಿತು

ವಜ್ರಗಳು! —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ' ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ
ವಜ್ರಗಳು ಯಾವಾಗಲೂ ಸಿಗುತ್ತವೆ

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ
'ಎಕ್ಸ್ಟ್ರಾ ವ್ಹಾಯಿಟ್' ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ
ಬಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,
ಸಾವಕಾರ ಮಹಾಲ್, ರಥಬೀದಿ ಮಂಗಳೂರು
(ಸನ್ 1858ರಲ್ಲಿ ಸ್ಥಾಪಿತವಾದದ್ದು)
ನೂಲು ಮತ್ತು ಜವುಳಿ ವ್ಯಾಪಾರಸ್ಥರು.

Part Proprietors of —
Sri Krishna Mills & Co
Oil Manufacturers
Bunder, Mangalore
Bhagavan Ganesh Pai & Co
Copper Sheet & Twist
Merchants, Camp Bazar,
Cannanore

Representatives for the W.C.
M/s A & F Harvey
Cotton Spinners,
Tuticorin, Madura &c.
Guardian Assurance Co., Ltd.
(Incorporated in England)
Head Office 68, King
William Street,
London, E. C 4.

ತೋಟದ ವ್ಯವಸಾಯ

ಪ್ರಪಂಚದಲ್ಲಿ ಮಾನವರು ಜೀವನೋಪಾಯಕ್ಕಾಗಿ ತಮ್ಮ ಪ್ರಕೃತಿಗನುಸಾರವಾಗಿ ಒಂದೊಂದು ವಿಧದ ವೃತ್ತಿಯನ್ನು ಅವಲಂಬಿಸಿರುವರು. ಅಂತಹ ವೃತ್ತಿಗಳು ಹಲವು ತರನಾಗಿರುವುವು. ಅವುಗಳಲ್ಲಿ ವ್ಯಾಪಾರ, ಭೂವ್ಯವಸಾಯ ಮುಂತಾದುವುಗಳು ಉತ್ತಮ ಫಲಕಾರಿಗಳು, ಏಕೆಂದರೆ, ಈ ವೃತ್ತಿಗಳನ್ನವಲಂಬಿಸಿದವರಿಗೆ ಸ್ವಾತಂತ್ರ್ಯ, ಸೌಖ್ಯವೂ, ಧನಧಾನ್ಯ ಸಂಪದಗಳೂ ಅಭಿವೃದ್ಧಿಯಾಗುವುವಲ್ಲದೆ, ಇಂತಹ ಜನರು ಹೆಚ್ಚಾಗಿರುವ ದೇಶಗಳಿಗೂ ಮೇಲ್ಮೆಯುಂಟಾಗುವುದು. ಪ್ರಕೃತ, ಭೂವ್ಯವಸಾಯಕ್ಕೆ ಸೇರಿದ ಫಲಪುಷ್ಪಗಳ ಮತ್ತು ಕಾಯಿಪಲ್ಯಗಳ ವ್ಯವಸಾಯವನ್ನು ಕುರಿತು ವಿಚಾರಿಸಿದರೆ— ತೋಟದ ವ್ಯವಸಾಯದಿಂದ ಆಸ್ಟ್ರೇಲಿಯಾ ಮತ್ತು ಕೆಲಿಫೋರ್ನಿಯಾ ದೇಶದವರು ಕೋಟೀಶ್ವರರಾಗಿರುವರು. ಯುರೋಪ್ ಮತ್ತು ಅಮೇರಿಕಾ ಖಂಡಗಳವರು ತೋಟಗಳನ್ನು ಮಾಡಿ ಅವುಗಳಲ್ಲಿ ಕಾಯಿಪಲ್ಯ, ಫಲಪುಷ್ಪ ಮುಂತಾದುವುಗಳನ್ನು ಬೆಳೆಯಿಸಿ, ಅವುಗಳನ್ನು ತಮ್ಮ ದೇಶಗಳಲ್ಲಿ ವಿಕ್ರಯಿಸಿ, ಲಾಭ ಸಂಪಾದಿಸುವುದು ಮಾತ್ರವಲ್ಲದೆ, ಅವುಗಳ ಬೀಜಗಳನ್ನು ತೆಗೆದು ದೇಶಾಂತರಗಳಿಗೆ ಕಳುಹಿಸಿ, ಆ ಮೂಲಕವೂ ಧನಾರ್ಜನೆ ಮಾಡುತ್ತಿರುವರು. ನಮ್ಮ ದೇಶದಲ್ಲಾದರೋ, ಈ ವಿಧವಾದ ಬೆಳೆಗೆ ಸ್ವಲ್ಪವಾದರೂ ಗಮನಕೊಡುವುದಿಲ್ಲ. ಆದರೆ ಬೊಂಬಾಯಿ, ಮದ್ರಾಸು, ಕಲ್ಕತ್ತಾ ಮುಂತಾದ ಕೆಲವು ಪ್ರದೇಶಗಳಲ್ಲಿಯೂ, ಒಳದೇಶದ ಕೆಲವು ಕಡೆಗಳಲ್ಲಿಯೂ ಅಲ್ಪಸ್ವಲ್ಪ ಜನರು ತೋಟದ ವ್ಯವಸಾಯಕ್ಕೂ ಉದ್ಯಾನ ರಚನೆಗೂ ಗಮನಕೊಟ್ಟು ಐಶ್ವರ್ಯವಂತರಾಗುತ್ತಿರುವರು. ನಮ್ಮಲ್ಲಿ ಅದಕೆ ತೆಂಗು ಮತ್ತು ಕಬ್ಬು-ಇವುಗಳ ತೋಟವನ್ನು ಮಾತ್ರ ತೋಟವೆಂದು ತಿಳಿದಿರುವವರೇ ಹೆಚ್ಚು. ಇದು ಅತ್ಯಂತ ಶೋಚನೀಯ.

ನಮ್ಮ ದೇಶದಲ್ಲಿ ತೋಟದ ವ್ಯವಸಾಯಕ್ಕಿರುವಷ್ಟು ಅನುಕೂಲವಾದ ಮಣ್ಣು, ಹವೆ, ಮಳೆ, ನೀರು-ಇವುಗಳು ಮತ್ತೊಂದು ಕಡೆಯಲ್ಲಿಲ್ಲ. ಹಣ್ಣುಗಳಲ್ಲಿ-ಸೇಬು, ಕಿತ್ತಳೆ, ಹಾಳಿಂಬೆ, ಅಂಜೂರ, ದ್ರಾಕ್ಷೆ, ಪಿಚ್ಚೀಸು, ಮಾವು, ಹಲಸು, ಚಕ್ಕೋತ, ಲೀಚಿ, ಸಪೋಟಿಲ, ಮಾದವಳ—ಇವುಗಳನ್ನೂ, ದೇಶೀಯ ಕಾಯಿಪಲ್ಯಗಳಲ್ಲಿ ಒಡನೆ, ಬೆಂಡೆ, ಗೋರಿ, ಹೀರೆ, ಸೋರೆ, ಕುಂಬಳ ಸವುತೆ, ಹಾಗಲ, ನುಗ್ಗೆ, ಇವುಗಳನ್ನೂ, ಇಂಗ್ಲಿಷ್ ತರಕಾರಿಗಳಲ್ಲಿ-ಕೋಸು, ನವುಲುಕೋಲು, ಟೊಮೆಟೋ, ಕಾಲಿಫ್ಲವರ್, ಗಾಜರು, ಮ್ಯಾರಬ್—ಇವುಗಳನ್ನೂ, ಪುಷ್ಪಗಳಲ್ಲಿ ಗುಲಾಬಿ, ಸಂಪಗೆ, ಸೇವಂತಿಗೆ, ಮಲ್ಲಿಗೆ ಇವುಗಳನ್ನೂ ಯಥೇಷ್ಟವಾಗಿ,—ಎಂದರೆ ಈ ದೇಶಕ್ಕೆ ತಕ್ಕಷ್ಟು ಮಾತ್ರವಲ್ಲದೆ,-ಹೊರದೇಶಕ್ಕೆ ಕಳುಹಿಸಲಾಗುವಷ್ಟು ಬೆಳೆಯಲು ವಿಶೇಷ ಅನುಕೂಲತೆಗಳಿವೆ. ಒಬ್ಬೊಬ್ಬ ರೈತನು ಒಂದು ಅಥವಾ ಅರ್ಧ ಎಕರೆಯಷ್ಟು ಭೂಮಿಯನ್ನು ತೋಟದ ವ್ಯವಸಾಯಕ್ಕೆ ಉಪಯೋಗಿಸಿಕೊಂಡು ಮೇಲೆ ಹೇಳಿದ ಫಲಪುಷ್ಪ ಮೊದಲಾದುವುಗಳನ್ನು ಬೆಳೆಸಿದರೆ ನೂರಾರು ರೂಪಾಯಿಗಳನ್ನು ಸಂಪಾದಿಸಬಹುದು.

ಗ್ರಾಮಾಂತರಗಳಲ್ಲಿ [illegible] ದೊಡ್ಡ ತರದ ಹಣ್ಣಿನ ಫಲಗಳ ಬೆಳೆಗೆ ಗಮನಕೊಡುವವರಿಲ್ಲ. ಒಂದು ವೇಳೆ ಎಲ್ಲಿಯಾದರೂ ಒಂದೆರಡು ಹಣ್ಣಿನ ಗಿಡಗಳನ್ನು ಬೆಳೆಯಿಸಿಕೊಂಡಿದ್ದರೆ, ಅವುಗಳಿಗೆ ಸಾಕಷ್ಟು ಗೊಬ್ಬರವನ್ನು, ನೀರನ್ನು ಕಾಲಕಾಲಕ್ಕೆ ಹಾಕಿ [illegible] ಔದಾಸೀನ್ಯವನ್ನು ತೋರಿಸುವುದರಿಂದ ಹೆಸರಿಗೆ ಮಾತ್ರ ಗಿಡಗಳಿರುವುವೇ ಹೊರತು ಫಲವು ಒಂದಾದರೂ ಕಾಣಿಸುವುದಿಲ್ಲ. ಅಲ್ಲಲ್ಲಿ ಕೆಲವು ಮಾವಿನ ತೋಟಗಳೂ ಇವೆ. ಆದರೆ ಅವುಗಳಲ್ಲಿ ಗಿಡಗಳನ್ನು ನಾಟಿದಾಗ ಮಾತ್ರ ಗೊಬ್ಬರದ ಮುಖದರ್ಶನವಾದಂತೆ ತೋರುವುದು. ಅಂತಹ ಗಿಡಗಳಿಗೆ ಗಾಳಿ, ಮಳೆ, ಬಿಸಿಲು-ಇವುಗಳೇ ಗೊಬ್ಬರವನ್ನು ಒದಗಿಸಬೇಕಾಗುವುದು. ಕೆಲವು ಕಡೆಗಳಲ್ಲಿ ಗಿಡಗಳನ್ನು ಫಲವತ್ತಲ್ಲದ ಭೂಮಿಯಲ್ಲಿ ನೆಡುವುದರಿಂದಾಗಿಯೂ, ಸಾಲುಗಳು ಒತ್ತಾಗಿರುವುದರಿಂದಲೂ ಗೊಬ್ಬರವೂ ನೀರೂ ಸಾಕಷ್ಟು ಇಲ್ಲದಿರುವುದರಿಂದಲೂ ಫಲವನ್ನು ಕಾಣಿಸುವುದು ದುರ್ಲಭವಾಗಿರುವುದು. ತೆಂಗಿನ ಮತ್ತು ಬಾಳೆಯ ತೋಟಗಳಲ್ಲಿ ಮಾತ್ರ ತಕ್ಕಮಟ್ಟಿಗೆ ವ್ಯವಸಾಯವು ನಡೆಯುತ್ತದೆ. ಈ ತೋಟಗಳಲ್ಲಿಯೂ ಸಿಂಪಿ, ಪೇರಳೆ ಮುಂತಾದ ಗಿಡಗಳನ್ನು ನೆಟ್ಟು ಅವಕ್ಕೇ ಪ್ರತ್ಯೇಕವಾದ ವ್ಯವಸಾಯ ಮಾಡಬೇಕೆಂಬ ಅಗತ್ಯವಿಲ್ಲದೆ ಸುಲಭವಾಗಿ ಫಲಗಳನ್ನು ಬೆಳೆಯಿಸಿ, ಸಂತೆಗಳಲ್ಲಿ ವಿಕ್ರಯಿಸಬಹುದು. ಇದು ಸುಲಭ ಕಸಬು ಆಗಿರುತ್ತದೆ.

ಹಿಂದೂದೇಶದ ಕೊಬ್ಬರಿಯ ವ್ಯಾಪಾರ

ಭಾರತ ವರ್ಷದಿಂದ ಜರ್ಮನಿ ಮತ್ತು ಆಸ್ಟ್ರಿಯಾ ದೇಶಗಳಿಗೆ ವರ್ಷಂಪ್ರತಿ ಬಹಳ [illegible] ಕೊಬ್ಬರಿ [illegible] ಸಾಗಿ ಹೋಗುತ್ತದೆ. ಅಲ್ಲಿಯವರು ಅದರಿಂದ [illegible] ಎಣ್ಣೆಯನ್ನು ಹಿಂಡಿಯನ್ನು ಸಿದ್ಧಪಡಿಸಿ ನಾನಾ ದೇಶಗಳಿಗೆ ಕಳುಹಿಸುತ್ತಾರೆ. ಈಚೀಚೆ ಸಿಲೋನ್‌ನಲ್ಲಿ [illegible] ಕೊಬ್ಬರಿಯಿಂದ ಎಣ್ಣೆಯನ್ನು ತೆಗೆಯುತ್ತಿರುವರು. [illegible] ಯನ್ನು ಇನ್ನೂ ಚೆನ್ನಾಗಿ [illegible] ವಿಸ್ತರಿಸುವ ಪ್ರಯತ್ನವನ್ನು [illegible] ಜರ್ಮನಿಯವರು ಈ ಎಣ್ಣೆಯಿಂದ [illegible] ವಿಧವಾದ [illegible] ಯನ್ನು ತಯಾರಿಸಿ ಅದನ್ನು ಸಣ್ಣಸಣ್ಣ ಎಣ್ಣೆಯೊಂದು ನಂಬಿಸಿ ಪರದೇಶಗಳಿಗೆ ರವಾನಿಸುತ್ತಾರೆ. ಈ ಎಣ್ಣೆಯಿಂದ ಅವರು ಬಗೆಬಗೆಯ ತೈಲಗಳನ್ನೂ ಮುಲಾಮುಗಳನ್ನೂ, ಔಷಧಗಳನ್ನೂ, ಸಾಬೂನನ್ನೂ, ಮೇಣದ ಬತ್ತಿಯನ್ನೂ ಸಿದ್ಧಮಾಡುತ್ತಾರೆ. ಜರ್ಮನಿ-ಆಸ್ಟ್ರಿಯಾ ದೇಶಗಳವರು ೧೯೧೩ರಲ್ಲಿ ೧,೫೩,೬೧೧ ಟನ್ ಎಂದರೆ ಒಂದೂವರೆ ಕೋಟಿ ಮಣಗಳಷ್ಟು ಕೊಬ್ಬರಿಯನ್ನು ಹಿಂದೂದೇಶದಿಂದ ತರಿಸಿಕೊಂಡರು. ಉತ್ಸಾಹಶಾಲಿಗಳಾದ ಅವರು ಅಷ್ಟು ಕೊಬ್ಬರಿಯನ್ನೂ ರೂಪಾಂತರಗೊಳಿಸಿ, ಬೇರೆ ಬೇರೆ ಪದಾರ್ಥಗಳನ್ನು ಸಿದ್ಧಗೊಳಿಸಿ, ಅವುಗಳನ್ನು ಪರದೇಶಗಳಿಗೆ ರವಾನಿಸಿ ದ್ರವ್ಯಾರ್ಜನೆಮಾಡುತ್ತಿದ್ದಾರೆ. ಒಂದು ರೂಪಾಯಿಯಲ್ಲಿ ನಾಲ್ಕು ರೂಪಾಯಿಗಳ ಲಾಭವನ್ನು ಪಡೆಯುತ್ತಿದ್ದಾರೆ. ಪ್ರತಿಯೊಂದ ವಸ್ತುವೂ ಅಮೂಲ್ಯವಾದುದು. ಈ ವಿಷಯವನ್ನು ತಿಳಿದು ಭಾರತೀಯರು ಎಚ್ಚರವಾದರೆ ಹಿತವಿದೆ.

(೬ನೇ ಪುಟದಿಂದ ಮುಂದುವರಿದುದು)

ವೈದ್ಯವೃತ್ತಿ ಯಂತ್ರವೃತ್ತಿ, ವ್ಯಾಪಾರ ವೃತ್ತಿ, ಶಿಕ್ಷಣ ವೃತ್ತಿ ಮೊದಲಾದ ಯಾವ ತರಗತಿಗಳಲ್ಲಿರುವ ಹಿಂದೀಯರೂ ಅಮೇರಿಕಾದಲ್ಲಿ ಭಾರತದ ಸನ್ಮಾನವನ್ನು ಬೆಳಗಲು ಯತ್ನಿಸದಿರುವುದಿಲ್ಲ. ಅವರ [illegible] ಒಂದು ರೀತಿ [illegible] ಈ ಹಂಚಿಕೆಯಲ್ಲೇ ಇರುವರು.

ಉದಯಶಂಕರರಿಗೆ ಇತ್ತೀಚೆಗೆ ದೊರೆತ ಸ್ವಾಗತ ಪತ್ರ, ಸ್ವಾಸ್ಥ್ಯಕರಿಗೆ ಇಲ್ಲಿ ದೊರೆತ ಪ್ರೋತ್ಸಾಹಗಳನ್ನೆಲ್ಲ ನೋಡಿದಾಗ ಅಮೇರಿಕಾನರ ಕ್ರಮೇಣ [illegible] ಆಗುತ್ತಾರೆಂದು ಹೇಳಬಹುದು. ಅಮೇರಿಕಾದಲ್ಲಿ ಹುಟ್ಟಿರುವ ಹಿಂದೂ [illegible] ಭಾವನೆಗಳು, ಜನನ, ಜೀವನ [illegible] ಗಳ ಕುರಿತಾಗಿ ಗುಡಿ [illegible] ಹರಡಿರುವ ಅಭಿಪ್ರಾಯಗಳ-ಇವುಗಳನ್ನು [illegible] ಲಿಸಿದಾಗ ಹಿಂದೂ [illegible] ಗಳಿಗೆ ಸ್ವಾತಂತ್ರ್ಯ [illegible] ಪರಿಪಾಲನೆ [illegible] ಗಳಿವೆಯೆಂದು ತಿಳಿದು ಬರುವುದು.

ಸಕಲೇಶಪುರದ ಕಡೆಗೆ ಹೋಗುವ ಪ್ರಯಾಣಿಕರಿಗೆ

ಹೊಸ ಸೌಕರ್ಯ.

ಮಂಗಳೂರಿನಿಂದ ಹತ್ತು ಘಂಟೆಗೆ ಸಕಲೇಶಪುರಕ್ಕೂ, ಸಕಲೇಶಪುರದಿಂದ 12 ಘಂಟೆಗೆ ಮಂಗಳೂರಿಗೂ, ಹೊರಡುವ ನೂತನವಾದ ಒಂದು ಸರ್ವೀಸು ಇತ್ತೀಚೆಗೇನೇ ಪ್ರಾರಂಭವಾಗಿರುತ್ತದೆ.

ಇದರಿಂದ ಉಡುಪಿ, ಮೂಲ್ಕಿ, ಕಾರ್ಕಳ, ಮೂಡಬಿದ್ರೆ, ಕಿನ್ನಿಗೋಳಿ ಮೊದಲಾದ ಕಡೆಗಳಿಂದ ಬೆಳಿಗ್ಗೆ ಹೊರಟು ಆದೇ ದಿನ ಮಧ್ಯಾಹ್ನ ಘಂಟೆ ೪॥ಗೆ ಸಕಲೇಶಪುರಕ್ಕೆ ಹೋಗಲಿಕ್ಕೆ ಅನುಕೂಲವಾಗಿರುತ್ತದೆ. ಮಂಗಳೂರು, ಬಂಟವಾಳ, ಪುತ್ತೂರು, ಮೊದಲಾದ ಸ್ಥಳಗಳಿಂದ ಮಧ್ಯಾಹ್ನದ ಊಟ ತೀರಿಸಿ ಹೊರಡಲು ಅನುಕೂಲವಾಗಿರುತ್ತದೆ.

ಅಲ್ಲದೆ,

ಸಕಲೇಶಪುರದಿಂದ ಅದೇ ದಿನ ಬೇಲೂರು, ಚಿಕ್ಕಮಗಳೂರು, ಮೂಡುಗೆರೆಗೂ ಹಾಸನಕ್ಕೆಹೋಗಿ ರೈಲು ಹತ್ತಿ ಮೈಸೂರಿಗೂ ಹೋಗಲು ಈ ಸಮಯವು ಬಹಳ ಅನುಕೂಲವಿದೆ

ಹಾಗೆಯೇ,

ಚಿಕ್ಕಮಗಳೂರು, ಬೇಲೂರು, ಮೂಡಿಗೆರ, ಹಾನಬಾಳ, ಚಂಗಡಹಳ್ಳಿ, ಶುಕ್ರವಾರ ಸಂತೆ ಮೊದಲಾದ ಸ್ಥಳಗಳಿಂದ ಬೆಳಿಗ್ಗೆ ಹೊರಟೂ, ಹಾಸನದಿಂದ ಊಟ ತೀರಿಸಿಯೂ, ಮಂಗಳೂರು, ಪುತ್ತೂರು, ಬಂಟವಾಳ ಇತ್ಯಾದಿ ಸ್ಥಳಗಳಿಗೆ ಅದೇ ದಿನ ಸಾಯಂಕಾಲ ತಲಪಲು ಅತೀ ಅನುಕೂಲವಾಗಿದೆ

The Canara Public Conveyance Co., Ltd., Kodialbail Mangalore.

The Sakaleshwar Motor service Ltd., Saklaspur.

ಸುವರ್ಣಭೂಮಿಯ ದಾರಿದ್ರ್ಯ

[ಕೆಳಗಣ ಲೇಖನದಲ್ಲಿ ಹಿಂದೂದೇಶದ ದಾರಿದ್ರ್ಯದ ವಿವರವೊಂದನ್ನು ಸಂಖ್ಯಾ ಪ್ರಮಾಣವಾಗಿ ಮಾಡಿಕೊಟ್ಟಿದೆ. ಜುಂದುಪ್ಪೆಯುಮಾಡುವ ನಮ್ಮವರು ಕಣ್ತೆರೆಯಲಾರರೆ?]

ಹಿಂದೂದೇಶವು ಅದರಲ್ಲಿರುವ ಅತುಲ ಸಂಪತ್ತಿನ ಒಂದೇ ಒಂದು ಕಾರಣದಿಂದಾಗಿ "ಸುವರ್ಣಭೂಮಿ"ಯೆಂದು ಕರೆಯಲ್ಪಡುತ್ತಿದ್ದ ಅದೊಂದು ಕಾಲವಿತ್ತು ಭಾರತವರ್ಷವು ತನ್ನ ಐಶ್ವರ್ಯದಿಂದ ಮೆರೆದು ಅನ್ಯ ದೇಶಿಗರ ಅಸೂಯೆಗೊಳಗಾಗಿದ್ದ ದಿನವಿತ್ತು ಹದಿನೆಂಟು ಲಕ್ಷ ಚದರ ಮೈಲುಗಳಷ್ಟು ವಿಸ್ತಾರವಾದ ಈ ಭರತಖಂಡವು ಸೃಷ್ಟಿ ಸೌಂದರ್ಯದ ಮೂರ್ತಸ್ಥಾನವಾಗಿ, ಗಂಗಾ, ಯಮುನಾ ಬ್ರಹ್ಮಪುತ್ರ, ಗೋದಾವರಿ, ಕಾವೇರಿ ಮೊದಲಾದ ಮಹಾನದಿಗಳಿಂದಲೂ, ಹಿಮಾಲಯ, ವಿಂಧ್ಯ, ಮೊದಲಾದ ಉನ್ನತ ಪರ್ವತ ಶ್ರೇಣಿಗಳಿಂದಲೂ, ದಟ್ಟವಾದ ಕಾಡುಗಳಿಂದಲೂ, ಫಲವತ್ತಾದ ಭೂಪ್ರದೇಶಗಳಿಂದಲೂ, ಅಮೌಲ್ಯ ಖನಿಗಳಿಂದಲೂ ತುಂಬಿರುವ ಅತ್ಯುನ್ನತ ದೇಶ ಹಿಂದೂದೇಶದಲ್ಲಿ ಬೆಳೆಯದ ಧಾನ್ಯವಿಲ್ಲ, ದೊರೆಯದ ಖನಿಜವಿಲ್ಲ ಸಕಲ ಜಗತ್ತಿನ ನೇಕಡಾ ೪೦ರಷ್ಟು ಭತ್ತವು ಭರತಖಂಡದಲ್ಲಿ ಬೆಳೆಯುತ್ತದೆ ಇಲ್ಲಿ ಬೆಳೆಯುವಷ್ಟು ಚಹಾಸೊಪ್ಪು ಬೇರಾವ ದೇಶದಲ್ಲೂ ಬೆಳೆಯುವುದಿಲ್ಲ ಸಣಬು ಇಲ್ಲಿಯಲ್ಲದೆ ಬೇರೆಲ್ಲಿಯೂ ಬೆಳೆಯುವುದಿಲ್ಲ ರಬ್ಬರ್ ಕಾಫಿ ಎಣ್ಣೆಯ ಬೀಜಗಳು, ತೆಂಗು ಮೊದಲಾದ ಎಲ್ಲಾ ಬೆಳೆಗಳಿಗೂ ಹಿಂದೂದೇಶವು ಮಾತೃಸ್ಥಾನ 'ಭೂಗರ್ಭ ಖನಿಜಗಳು ನಮ್ಮ ದೇಶಕ್ಕೆ ಸಾಕಾಗಿ ಮಿಗುವಷ್ಟಿದೆ' ಎಂದು ೧೯೧೮ರಲ್ಲಿ ನೇಮಿಸಲ್ಪಟ್ಟ ಇಂಡಸ್ಟ್ರಿಯಲ್ ಕಮಿಶನಿನ ವರದಿಯಿಂದ ತಿಳಿದುಬರುತ್ತದೆ ನಮ್ಮ ದೇಶದ ಸೌಕರ್ಯಕ್ಕೆ ಬೇಕಾಗುವಷ್ಟು ವಿದ್ಯುತ್ ಶಕ್ತಿಯನ್ನು ಸಂಪಾದಿಸಿಕೊಳ್ಳುವಷ್ಟು ಸೌಕ್ಯಗಳಿಗೆ ಆದರೇನು ಇಂತಹ ಶ್ರೀಮಂತ ಸಂಪದ್ಭರಿತ ದೇಶ ಇಂದು ಬಡತನದ ಬೀಡಾಗಿಬಿಟ್ಟಿದೆ ದಾರಿದ್ರ್ಯದ ತಾಯಿನಾಡಾಗಿ ಹೋಗಿದೆ ಈ ಫಲಭರಿತ ಭೂಮಿಯಲ್ಲಿ ದಿನಂಪ್ರತಿ ೬ ಕೋಟಿ ಜನರು ಹೊಟ್ಟೆಗಿಲ್ಲದೆ ಉಪವಾಸವಿರುತ್ತಾರೆಂದು ವಿಲಿಯಂ ಡಿಗ್ಬಿ ಎಂಬ ಇಂಗ್ಲೀಷ್ ಗ್ರಂಥಕಾರನು ಬರೆದಿರುತ್ತಾನೆ 'ಈಗಿನ ಸ್ಥಿತಿಯಲ್ಲಿ ಹಿಂದೂದೇಶದಲ್ಲಿನ ಐಶ್ವರ್ಯವಂತರ ಸಂಪತ್ತೆಲ್ಲವನ್ನೂ ತರಿದು ಹಂಚಿದರೂ ಇಲ್ಲಿ ಪ್ರತಿಯೊಬ್ಬನಿಗೆ ಸಾಕಷ್ಟು ಹಿಟ್ಟೂ ಬಟ್ಟೆಯೂ ದೊರೆಯಲಾರದು' ಎಂದು ಮೋರ್ಲೆಂಡ್ ಎಂಬ ಚರಿತ್ರಕಾರನು ತಿಳಿಸುತ್ತಾನೆ ನಮ್ಮ ಪ್ರಕೃತದ ಬಡತನವು ಅದೆಷ್ಟೆಂದು ನಮಗೇನೆ ತಿಳಿಯುವುದಿಲ್ಲ ಆ ವಿಚಾರವಾಗಿ ನಾವು ಸ್ವಲ್ಪವಾದರೂ ಗಮನವನ್ನು ಕೊಡುವುದಿಲ್ಲ ಇಂಡಿಯಾ ಸರಕಾರದವರು ನಡೆಸಿದ ವಿಚಾರಣೆಗಳ ಫಲಿತಾಂಶವಾಗಿ ಹಿಂದೀಯನ ಸರಾಸರಿ ವಾರ್ಷಿಕ ವರಮಾನವು ಎಷ್ಟಿತ್ತೆಂದು ಈ ಕೆಳಗಣ ವಿವರದಿಂದ ತಿಳಿದುಬರಬಹುದು

ಬೇರಿಂಗ್ ಮತ್ತು ಬಾರ್ಬರ್—೧೮೮೧ರಲ್ಲಿ ರೂ ೨೭
ಲೋರ್ಡ್ ಕರ್ಜನ್, ೧೯೦೧ರಲ್ಲಿ ರೂ ೩೦
ಪ್ರೊಫೆಸರ್ ಷಾ, ೧೯೨೧ರಲ್ಲಿ ರೂ ೭೪
ಸೈಮನ್ ಸಮಿತಿ, ೧೯೩೦ರಲ್ಲಿ ರೂ ೧೧೬

ಈ ವರಮಾನಗಣನೆಯಲ್ಲಿ ಶ್ರೀಮಂತರಾಜರ ಉತ್ಪನ್ನವನ್ನೂ ಸೇರಿಸಿರುತ್ತದೆ ಹೈದರಾಬಾದ್, ಬರೋಡ, ಪಟಿಯಾಲಾ ಜಯಪುರ, ಜೋಧಪುರಗಳ ಮಹಾರಾಜರ ಐಶ್ವರ್ಯವನ್ನು ಸೇರಿಸಿದರೂ ನಮ್ಮ ವಾರ್ಷಿಕ ವರಮಾನವು ಇಷ್ಟು ಕನಿಷ್ಠ ಸಂಖ್ಯೆಯಲ್ಲಿ ನಿಲ್ಲುತ್ತದೆ ಈ ಸಂಖ್ಯೆಯನ್ನು ಪರಿಶೀಲಿಸಿ ಹಿಂದೀಯರ ಸರಾಸರಿ ವರಮಾನವು ಹೆಚ್ಚುತ್ತಾ ಇದೆಯೆಂದು ಹೇಳಲಿಕ್ಕಾಗುವುದಿಲ್ಲ ಏಕೆಂದರೆ ಈ ಖಾನೆಸುಮಾರಿಯನ್ನು ಎತ್ತಿದಾಗ ಇದ್ದ ಕಾಲದ ಪರಿಸ್ಥಿತಿ ಆಗ ಹಣಕ್ಕಿದ್ದ ಬೆಲೆ ಇವುಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ವರಮಾನವನ್ನೂ ಇತರ ದೇಶೀಯರ ವರಮಾನವನ್ನೂ ಗಣನೆಗೆ ತಂದರೆ, ಅಮೆರಿಕಾ ದೇಶದವರ ಸರಾಸರಿ ವಾರ್ಷಿಕ ವರಮಾನವು ೧೦೮೦ ರೂಪಾಯಿಗಳಷ್ಟೂ, ಗ್ರೇಟ್ ಬ್ರಿಟನಿನವರದ್ದು ೮೧೦ ರೂಪಾಯಿಗಳಷ್ಟೂ, ಜರ್ಮನಿಯವರದ್ದು ೪೫೯ ರೂಪಾಯಿಗಳಷ್ಟೂ ಇದೆಯೆಂದು ತಿಳಿದುಬರುತ್ತದೆ ನಮ್ಮ ದಾರಿದ್ರ್ಯಕ್ಕೆ ಬೇರೆ ಸಾಕ್ಷಿಯು ಬೇಕೆ? ಇದು ನಿಜವಾಗಿಯೂ ಸ್ವರ್ಣಭೂಮಿಯೇ? ಬಾಬು ಬಂಕಿಮ ಚಂದ್ರರು ಹಾಡಿದ ಗಾನದ ಸ್ವರ್ಣಭೂಮಿಯೇ? ಹೆಂಡ್‌ಮನ್ ಎಂಬ ಗ್ರಂಥಕಾರನು ಹೀಗೆ ಬರೆಯುತ್ತಾನೆ—'ಹಿಂದೀಯರ ದಾರಿದ್ರ್ಯವು ದಿನೇ ದಿನೇ ಹೆಚ್ಚುತ್ತಿದೆ, ತೆರಿಗೆಯು ಅಸಹನೀಯವಾಗುತ್ತಿದೆ'

ಜನರನ್ನು ಬಡತನವು ಆವರಿಸಿಬಿಟ್ಟಿರುವುದರಿಂದ ಅವರಿಗೆ ಸರಿಯಾಗಿ ಆಹಾರಗಳು ದೊರೆಯುವುದಿಲ್ಲ ಹಾಗೆ ಸಮರ್ಪಕ ಆಹಾರವು ಸಿಗದೆ ಜನರು ರೋಗಗ್ರಸ್ತರಾಗುತ್ತಾರೆ ನಿಮೋನಿಯಾ, ಇನ್‌ಫ್ಲುಯೆಂಜಾ, ಸಿಡುಬು, ಪ್ಲೇಗು ಮೊದಲಾದ ಅಂಟು ರೋಗಗಳಿಗೆ ತುತ್ತಾಗಿ ಸಾಯುತ್ತಾರೆ ಹಿಂದೀಯರ ಮರಣ ಸಂಖ್ಯೆಯು ಹೆಚ್ಚುತ್ತಿರಲು ಬಡತನವೇ ಮೂಲ ಕಾರಣವಾಗಿದೆಯೆಂದು ಸರಕಾರೀ ಆರೋಗ್ಯ ಖಾತೆಗಳೇ ತಿಳಿಸುತ್ತವೆ ಈ ಸಂಖ್ಯೆಯನ್ನು ಪರಿಶೀಲಿಸಿರಿ

ಮರಣಕ್ಕೆ ಕಾರಣ	ವರ್ಷ	ಮೃತರ ಸಂಖ್ಯೆ
ಕ್ಷಾಮ	೧೮೭೫–೧೯೦೦	೨,೬೭,೪೦,೦೦೦
ಪ್ಲೇಗು	೧೯೦೧–೧೯೨೦	೫೯,೨೨,೮೯೫
ಮಲೇರಿಯಾ	೧೯೦೧–೧೯೩೧	೧,೮೩,೬೧,೧೭೭
ಇನ್‌ಫ್ಲುಯೆಂಜಾ	೧೯೧೮–೧೯೧೯	೮೪,೧೯,೬೯೪

ಪ್ರತಿವರ್ಷವೂ ಎಷ್ಟು ಹಿಂದೀಯರು ಈ ಜಾಡ್ಯಗಳಿಗೆ ತುತ್ತಾಗುವುದಿಲ್ಲ? ಈ ಮರಣಗಳನ್ನು ತಡೆಯಲು ಆರೋಗ್ಯ ಖಾತೆಗಳು ಪ್ರಯತ್ನಿಸುತ್ತಿವೆಯಾದರೂ ಒಮ್ಮೆ ರೋಗಗ್ರಸ್ತರಾದವರನ್ನು ಗುಣಪಡಿಸಲು ಶಕ್ತರಾಗುವಷ್ಟು ಹಣವಾದರೂ ಎಲ್ಲಿಂದ ಬರಬೇಕು

ಇನ್ನು, ಬದುಕಿಳಿದವರಿಗೆ ಸುಖವುಂಟೆ? ಅವರ ಆಯುಷ್ಯವೂ ಅತ್ಯಲ್ಪ ಹಿಂದೂದೇಶದಲ್ಲಿ ಬದುಕಿ ಬಾಳುವವರ ಆಯುಸ್ಸು ಸರಾಸರಿ ೨೩ ವರ್ಷಗಳು ಆಂಗ್ಲೇಯರ ಸರಾಸರಿ ಆಯುಸ್ಸು ೫೫ ವರ್ಷಗಳು ಜರ್ಮನಿಯವರದ್ದು ೪೭ ವರ್ಷಗಳು

ಈಗ ೫೦—೬೦—೭೦ ವರ್ಷಗಳ ವರೆಗೆ ಬಾಳಿ ಬದುಕಿದವರು ನಿಜವಾಗಿಯೂ ಮಹಾದೃಢಕಾಯರೇ ಸರಿ ನಮ್ಮ ದಾರಿದ್ರ್ಯವು ನಮ್ಮ ಆಯುಸ್ಸನ್ನು ನುಂಗುತ್ತಿದೆ! ಮಾಡುವುದಾದರೂ ಏನು? ಮರಣವನ್ನು ನಿರೀಕ್ಷಿಸಿಯೇ ಕುಳಿತಿರಬೇಕು

(೫ನೇ ಪುಟದಿಂದ ಮುಂದುವರಿದುದು)

ಸೂಚಿಸಿದರು, ಭೂಕಂದಾಯವನ್ನು ಕಡಮೆ ಮಾಡುವ ವಿಚಾರದಲ್ಲಿ ಸರಕಾರದವರು ಕೋಲಾರ ಡಿಸ್ಟ್ರಿಕ್ಟಿನ ಅನೇಕ ತಾಲೂಕುಗಳಿಗೆ ಕಂದಾಯದ ರಿಯಾಯಿತಿಯನ್ನು ತೋರಿಸಿದೆಯೆಂದೂ ಆವಶ್ಯಕ ಬಿದ್ದಂತೆ ಮುಂದೆ ತೋರಿಸಲಾಗುವುದೆಂದೂ ಭರವಸೆಯಿತ್ತರು

ಬಿನ್ನವತ್ತಳೆಯು ದಿವಾನ ಸಾಹೇಬರು ಮೈಸೂರಿಗೆ ಕೀರ್ತಿ ತರುವುದಕ್ಕೂ, ಮೈಸೂರಿನ ಸಂಪತ್ತನ್ನು ಹೆಚ್ಚಿಸುವುದಕ್ಕೂ ಮೈಸೂರು ರಾಜ್ಯದ ಹಕ್ಕುಬಾಧ್ಯತೆಗಳನ್ನು ಕಾಯುವುದಕ್ಕೂ ಮಾಡುತ್ತಿರುವ ಪ್ರಯತ್ನಗಳಿಗಾಗಿ ಅವರನ್ನು ಪ್ರಶಂಸಿಸಿ ಅವರ ಆಡಳಿತದಿಂದ ಮೈಸೂರು ದೇಶಕ್ಕೆ ಇನ್ನೂ ಇಮ್ಮಡಿ ಪ್ರಯೋಜನವಾಗಲೆಂದು ಹಾರೈಸಿತು

ದಿವಾನ ಸಾಹೇಬರು ಕೊನೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರನ್ನು ಅವರ ಆದರ—ವಿಶ್ವಾಸಗಳಿಗಾಗಿ ವಂದಿಸಿ, ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಾಗಿ ಮಾಡುತ್ತಿರುವ ಅನೇಕ ಉಪಕಾರ ಕಾರ್ಯಗಳಿಗಾಗಿ ಶ್ರೀ। ಚೆಂಗಲರಾಯ ರೆಡ್ಡಿಯವರನ್ನು ಅಭಿನಂದಿಸಿ, ತಾವು ತೆರೆದ ವೈದ್ಯಶಾಲೆಯು ಸುತ್ತಮುತ್ತಿನ ಜನಗಳಿಗೆ ಅತ್ಯಂತ ಪ್ರಯೋಜನಕರವಾಗಲೆಂದು ಹಾರೈಸಿದರು

ಸಂಸ್ಕೃತ ಕಾಲೇಜಿನ ಹೊಸ ಕಟ್ಟಡದ ಪ್ರಾರಂಭೋತ್ಸವ.

ಬೆಂಗಳೂರಿನ ಶ್ರೀ। ಚಾಮರಾಜೇಂದ್ರ ಸಂಸ್ಕೃತ ವೇದ ಮಹಾಪಾಠಶಾಲೆಯು ಇದುವರೆಗೂ ಕೋಟೆಯಲ್ಲಿರುವ ಟಿಪ್ಪುಸುಲ್ತಾನರ ಅರಮನೆಯಲ್ಲಿತ್ತು ಅದರ ಹೊಸ ಕಟ್ಟಡದ ಪ್ರಾರಂಭೋತ್ಸವವು ಇದೇ ತಿಂಗಳ ತಾ ೫ನೇ ಬುಧವಾರ ಪ್ರಾತಃಕಾಲ ೮॥ ಗಂಟೆಗೆ ನೆರವೇರಿತು ಅನೇಕ ಮಂದಿ ದೊಡ್ಡ ಮನುಷ್ಯರುಗಳು ಉತ್ಸವಕ್ಕೆ ಬಂದಿದ್ದರು ಈ ಹೊಸ ಕಟ್ಟಡವು ಹಾರ್ಡಿಂಜರು ರಸ್ತೆಯಲ್ಲಿ ಸಾಹಿತ್ಯ ಪರಿಷನ್ಮಂದಿರದ ಎದುರಿನಲ್ಲಿ ಕಟ್ಟಲ್ಪಟ್ಟಿದೆ

ಪೌರಸಭಾಧ್ಯಕ್ಷರಿಗೆ ಗೌರವ.

ಬೆಂಗಳೂರು ಪೌರಸಭೆಯ ಅಧಿವೇಶನವು ಇದೇ ಜೂನ್ ತಾ ೮ನೇಗೆ ಸೇರಿತ್ತು ಪೌರಸಭೆಯ ಅಧ್ಯಕ್ಷರಾದ ರಾವ್ ಬಹದ್ದೂರ್ ಶ್ರೀಮಾನ್ ಬಿ ಕೆ ಗರುಡಾಚಾರ್ಯರವರು ಬೆಂಗಳೂರು ಪಟ್ಟಣವನ್ನು ನಾನಾ ರೀತಿಯಲ್ಲಿ ಅಭಿವೃದ್ಧಿಗೊಳಿಸುವುದಕ್ಕಾಗಿ ಮಾಡಿರುವ ಅವರ ಅಮೋಘ ಸೇವೆಯನ್ನು ಮೆಚ್ಚಿ ಗೌರವಪುರಸ್ಸರವಾಗಿ ಅವರ ತೈಲ ಭಾವಚಿತ್ರವೊಂದನ್ನು ಪೌರಸಭಾಭವನದಲ್ಲಿ ಇಡತಕ್ಕದ್ದೆಂದು ಅಧಿವೇಶನವು ತೀರ್ಮಾನಿಸಿತು ಚಿತ್ರಕ್ಕಾಗಿ ೪೦೦ ರೂಪಾಯಿಗಳನ್ನು ಮಂಜೂರು ಮಾಡಿತು

ಹರಿಜನ ಸಮ್ಮೇಳನ

ಮೈಸೂರಿನಲ್ಲಿ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದ ಸಂದರ್ಭದಲ್ಲಿ ಹರಿಜನ ಸಮ್ಮೇಳನವೊಂದು ನಡೆಯಲು ತಕ್ಕ ಏರ್ಪಾಡುಗಳು ನಡೆಯುತ್ತಿವೆ ಬ್ರಿಜ್‌ಲಾಲ್ ನೆಹರೂರವರ ಪತ್ನಿಯವರು ಸಮ್ಮೇಳನಕ್ಕೆ ಬರುವವರಾಗಿದ್ದಾರೆಂದು ಸುದ್ದಿ

ಸರ್. ಅಕ್ಬರ್ ಹೈದರಿಯವರು ಕನ್ನಂಬಾಡಿಯನ್ನು ಕೊಂಡಾಡಿದರು.

ಸರ್ ಅಕ್ಬರ್ ಹೈದರಿಯವರು ಕೆಲವು ದಿವಸಗಳ ಹಿಂದೆ ಮೈಸೂರಿಗೆ ದಯಮಾಡಿಸಿದ್ದರು ಅವರು ಮೈಸೂರು ಮ್ಯುನಿಸಿಪಲ್ ಕೌನ್ಸಿಲಿನ ಅಧ್ಯಕ್ಷರವರಾದ ಶ್ರೀಮಾನ್ ಎಂ ಎ ಶ್ರೀನಿವಾಸನ್‌ರವರ ಜೊತೆಯಲ್ಲಿ ಶ್ರೀರಂಗಪಟ್ಟಣವನ್ನೂ ಕನ್ನಂಬಾಡಿ (ಕೃಷ್ಣರಾಜಸಾಗರ)ಯನ್ನೂ ನೋಡಿಕೊಂಡು ಬರಲು ಹೋಗಿದ್ದರು ಹೈದರಿಯವರು ಕನ್ನಂಬಾಡಿಯನ್ನು, ನೋಡಿ ಅಲ್ಲಿನ ವಿಸಿಟರ್ಸ್ ಬುಕ್ಕ (Visitors' Book)ನಲ್ಲಿ ಹೀಗೆ ಬರೆದಿದ್ದಾರೆ ಭೂಮಿಯ ಮೇಲೆ ಸ್ವರ್ಗವಿರುವುದಾದರೆ ಅದು ಇಲ್ಲಿದೆ'

ಬಿರುದುಗಳು.

ಚಕ್ರವರ್ತಿ ಸಾರ್ವಭೌಮರವರ ವರ್ಧಂತ್ಯುತ್ಸವದ ಸಂಬಂಧವಾಗಿ ಸಾರ್ವಭೌಮ ಸರಕಾರದವರು ಶ್ರೀಮನ್ಮಹಾರಾಜರವರ ಹುಜೂರು ಸೆಕ್ರೆಟರಿಯವರಾದ ರಾಜಸಭಾಭೂಷಣ ಶ್ರೀ। ಬಿ ತಂಬೂಚೆಟ್ಟಿಯವರಿಗೆ ಓ ಬಿ ಇ, ಎಂಬ ಬಿರುದನ್ನೂ ನಿವೃತ್ತಸಚಿವ ರಾಜಸಭಾಭೂಷಣ ಶ್ರೀ। ಕೆ ಆರ್ ಶ್ರೀನಿವಾಸಯ್ಯಂಗಾರ್ಯರವರಿಗೆ ದಿವಾನ್ ಬಹದ್ದೂರ್ ಎಂಬ ಬಿರುದನ್ನೂ ದಯಪಾಲಿಸಿದ್ದಾರೆ

ಸ್ವದೇಶೀ ವಸ್ತುಪ್ರದರ್ಶನ.

ಇದೇ ತಿಂಗಳ ತಾ ೮ನೆಯ ಪ್ರಾತಃಕಾಲ ಶ್ರೀಕೃಷ್ಣರಾಜೇಂದ್ರ ಧರ್ಮಶಾಲೆಯಲ್ಲಿ ಏರ್ಪಾಡಾಗಿರುವ ಮೂರನೆಯ ಸ್ವದೇಶೀ ವಸ್ತುಪ್ರದರ್ಶನವನ್ನು ಶ್ರೀ। ಭುಲಾಭಾಯಿ ದೇಸಾಯಿಯವರು ನೆರವೇರಿಸಿ ಸ್ಫೂರ್ತಿದಾಯಕವಾದ ಭಾಷಣಮಾಡಿದರು

(೬ನೇ ಪುಟಕ್ಕೆ ಮುಂದುವರಿಸಿದೆ)

NEW ARRIVALS.

Medicines.

Dr Schuessler's Twelve Tissue Remedies 5 gr bot As 4/
Homoeopathy Medicines 5 gr bot As 5/—
Sugar of Milk Dr Schwabe's original bot 1 lb Rs 2/
Haarlem Oil—a world renowned remedy As 8/ per phial
Dr Haele's New Curative Earth—Radium Cure Rs 4/-per lb
Dr Schwabe's other special remedies are always in stock
Please consult us for your requirements
Kanarese Book a Family Guide to Biochemistry Re 1/-
" Domestic Homoeopathy Rs 1-4/-
If you own these two Books you will be able to pick up treatment and administer Tissue & Homoeopathy Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes and prices from As 2/6
Delightful in aroma, charming in appearance. Please try

Kirloskar Pumps.

We are the Representatives for Kirloskar Brothers for their reliable Shallow-well and Deep-well Pumps, Spring Cots, Spring Couches etc, and stock—
Pipes and pipe fittings at cheap prices Coir Mats and Mattings

Steadler Pencils and Stationeries

We are the recognised agents for STEADLER'S all stationeries and shall be glad to serve you.

Olympia Typwriter.

An up-to-date Machine in Standard and portable sizes.
For Futher particulars please write to—

Basel Mission Book & Tract Depository,
Mangalore, S. K. or Hubli, S M.

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purniah Chatram Road, Balepet,
BANGALORE CITY

Shiromani Narayanacharya
Choukhamba Benares City

ಶಾಸ್ತ್ರಗಳೇ ಪೂರ್ವಿಕರು ಆರೋಗ್ಯರೇ ಅಥವಾ ಈಗಿನವರೇ, ರಾಮಜ್ಞಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಸಹನಾಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಈ ಎಲ್ಲಾ ಕೀರ್ತಿ ಇವುಗಳೆಲ್ಲಾ ಆಗುವುವು. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುತ್ತದೆ.

ಸಣ್ಣ ಅರ್ಧ ಪ್ರಮಾಣದ ಕಂಠಿಸರ 1ಕ್ಕೆ ಅಣೆ 10ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಅಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 60ರ ವರೆಗೆ ಮತ್ತು 3-4-5-6-7-8 ಮುಖಗಳ ಕಾಳು 1ಕ್ಕೆ ಅಣೆ 4ರಿಂದ ರೂಪಾಯಿ 10 ಮತ್ತು 9-10-11 ಮುಖಗಳುಳ್ಳ ಕಾಳು 1ಕ್ಕೆ ರೂ. 20ರ 30ರ ವರೆಗೆ 12-13-14 ಮುಖದ ಕಾಳು 1ಕ್ಕೆ ರೂಪಾಯಿ 50ರಿಂದ 100ರ ವರೆಗೆ ಸಣ್ಣ ರುದ್ರಾಕ್ಷಿ ಅವರೆಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ಅಂಗಕ್ಕಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು (ವಿವರಕ್ಕೆ ಕೆಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ 1 ಅಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕೆಟಲಾಗಿ ನೊಡನೆ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬೆನಾರಿಸ್ (ಕಾಶೀ)

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.



ಮೂರು ಫ್ಯಾಷನ್ ಮೂಟ್ ರಿಸ್ಟ್ ವಾಚುಗಳು ಅವು ನೋಟದಲ್ಲಿ ಬಂಗಾರಕ್ಕಿಂತಲೂ ಹೆಚ್ಚು ಬಹು ರಮ್ಯವಾಗಿವೆ ಐದು ವರ್ಷಗಳ ಗ್ಯಾರಂಟಿ ಒಂದು ಉತ್ತಮವಾದ ಟೈಂಪೀಸ್ ಸರಿಯಾದ ಗಂಟೆಯನ್ನು ತೋರಿಸುತ್ತೆ 10 ವರ್ಷಗಳ ಗ್ಯಾರಂಟಿ ಒಂದು ಲಿವರ್ ಪಾಕೆಟ್ ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವುದಿಲ್ಲ ಗ್ಯಾರಂಟಿ ೮ ವರ್ಷ, ಆರಿ ಬೆಳಕುಳ್ಳ ಹಂಟಿಂಗ್ ಟಾರ್ಚ್ ಲೈಟ್ ದೀಪ ಮತ್ತು ಬಂಗಾರದ ಪ್ಲೇಟ್ ಮುಳ್ಳು ಹಾಕಿರುವ ಸ್ವರಾಜ್ಯ ಫೌಂಟನ್ ಪೆನ್ ಈ ಅತ್ಯುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ ಕೊಡುವೆವು. ನಿಮಗೆ ಇಷ್ಟವಿಲ್ಲದಿದ್ದರೆ ಬೆಲೆಯು ವಾಪಾಸ್ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ

ಶರ್ಮಾ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ 11403 S A ಕಲ್ಕತ್ತಾ

ಡಾಕ್ಟರ ವಾಮನ ಗೋಪಾಳರವರ



ಐಟಿಹಾಸಿಕ ಸಾರಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ.
೫೫ ವರ್ಷದ ಅನುಭವ
ಉಪಯೋಗಿಸಿದವರೇ
ಹೇಳಿದ್ದಾರೆ

ಡಾ॥ ಗೌತಮ ರಾವ್ ಕೇಶವರವರ
ಫೋಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ 4.
ಸ್ಟಾಕಿಸ್ಟ್ — ಪಾ ಕಂಪೆನಿ, ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮತ್ತು ಸರ್ಟಿಫಿಕೇಟು ಡಾಕ್ಟರ ಜಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೊಡಮಾಡಿರುವರು. ಆದರೆ ಈ ಚೂರ್ಣದಿಂದ ಯಾವ ತರದ ಅಪಾಯವಾಗದು. ಗರ್ಭಧಾರಣವೂ ಆಗುವುದಿಲ್ಲ. ಚೂರ್ಣ ಗುಣಬಾರದಿದ್ದಲ್ಲಿ ಕಿಮ್ಮತ್ತು ರೂ ೪-೦-೦ ವಿ. ಪಿ. ಅಂಚೆ

ವಿಳಾಸ — ಸಂಜೀವಿನೀ ಔಷಧಾಲಯ ಮು॥ ಪೋ॥ ಮಿರಜ, S M C

Kanara Watch Works, Mangalore.

Suppliers of standard Watches, Time pieces, Wrist watches, Clocks and various kinds of sporting materials etc., Quality and price unassailable Visit our Show Room and be satisfied.

The Popular Insurance Company, Ltd.

Head Office:—MANGALORE, S. India

The Pioneer Life Office of the West Coast.

A FEW PRESS OPINIONS.

Established as recently as 1929, the Popular Insurance Co. Ltd., has already made considerable progress having at the end of 1934 a total business of over Rs 10 lakhs in force with a premium income of over Rs 52,000. The Life Fund of the Company stood at the same date at over Rs. 50,000. The expenses of the office are moderate and mortality experience extremely favourable. During the year 1934, the Company completed business of over Rs. 5,40,000 with a premium income of over Rs. 26,000. The first quinquennial valuation of the Company is in progress and the report of the Actuary expected to be placed before the Directors of the Company before the end of May 1935. From the steady progress of the Company during the last five years and the economical and efficient management of its affairs, it is not too much to hope that the valuation will disclose a very sound position.

Insurance & Finance Review, Calcutta.

ದಿ ಪೋಪ್ಯುಲರ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್ — ಮಂಗಳೂರು — ದೇಶೀಯ ವಿಮಾ ಕಂಪೆನಿಯವರು ಕಳುಹಿಸಿರುವ ವರದಿಯನ್ನು, ಲೆಕ್ಕ ಪತ್ರ ವಿವರದ ಪಟ್ಟಿಯನ್ನೂ ನೂತನವಾದ ಪ್ರಾಸ್ಪೆಕ್ಟಸನ್ನೂ ಆತ್ಯಾದರದಿಂದ ಸ್ವೀಕರಿಸುತ್ತೇವೆ. ಸ್ಥಾಪಿತವಾಗಿ ಐದು ವರ್ಷಗಳೊಳಗಾಗಿಯೇ ಈ ಕಂಪೆನಿಯು ಬಹಳ ವಹಿವಾಟುಗಳನ್ನು ನಡೆಸಿರುವುದು ಸಂತೋಷಕರವಾದ ಸಂಗತಿ. ವಿಮಾ ನಿಧಿಯು ಐವತ್ತು ಸಾವಿರಕ್ಕಿಂತಲೂ ಮಿಕ್ಕಿದೆ. ಇದರಿಂದಲೇ ಕಂಪೆನಿಯು ಎಷ್ಟು ಚೆನ್ನಾಗಿ ಕೆಲಸಮಾಡುತ್ತಿದೆಯೆಂಬುದು ಗೊತ್ತಾಗುವುದು. ಪಶ್ಚಿಮ ಕರಾವಳಿಯಲ್ಲಿ ಸ್ಥಾಪಿತವಾದುದು ಇದೊಂದೇ ವಿಮಾ ಕಂಪೆನಿ. ಇಷ್ಟು ದಕ್ಷತೆಯಿಂದ ನಡೆಸಿಕೊಂಡು ಬರುವ ಕಂಪೆನಿಯ ಸಂಚಾಲಕರಿಗೆ ಧನ್ಯವಾದಗಳನ್ನರ್ಪಿಸಬೇಕು. ಈ ಕಂಪೆನಿಯು ದಿನೇ ದಿನೇ ಅಭಿವೃದ್ಧಿ ಹೊಂದಿ ಭರತಖಂಡದಲ್ಲಿ ಒಂದು ಪ್ರಧಾನ ಸ್ಥಾನವನ್ನು ಹೊಂದಿ ನಮ್ಮ ದೇಶದಿಂದ ಹೊರಕ್ಕೆ ವಿದೇಶಕ್ಕೆ ಹೋಗತಕ್ಕ ನಿಧಿಯನ್ನು ತಡೆ ನಿಲ್ಲಿಸುವರೆ ಶಕ್ತಿಯುಳ್ಳದಾಗಲೆಂದು ಹಾರೈಕೆ.

ರಾಷ್ಟ್ರಬಂಧು.

ಮಂಗಳೂರಿನಲ್ಲಿ ಸ್ಥಾಪಿತವಾಗಿರುವ ದಿ ಪೋಪ್ಯುಲರ್ ಇನ್ಸೂರೆನ್ಸ್ ಕಂಪೆನಿಯು ವರ್ಷ ವರ್ಷ ಉಚ್ಛ್ರಾಯಸ್ಥಿತಿಗೆ ಬರುತ್ತಿರುವುದು ಶ್ಲಾಘನೀಯವಾದ ವಿಚಾರ ಈ ಕಂಪೆನಿಯು ಸ್ಥಾಪಿತವಾದುದು ಐದು ವರ್ಷಗಳ ಹಿಂದೆ; ಅಂದಿನಿಂದ ಜೀವವಿಮಾ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಹೆಸರುವಾಸಿ ಪಡೆಯುತ್ತಲೇ ಇದೆ × × × × × ಈ ಕಂಪೆನಿಯ ಐದನೆ ವಾರ್ಷಿಕ ವರದಿಯು ತೃಪ್ತಿಕರವಾಗಿದೆ. ಕರ್ನಾಟಕದ ಈ ಕಂಪೆನಿಯು ವರ್ಷ ವರ್ಷ ಅಭಿವೃದ್ಧಿ ಹೊಂದಲೆಂಬುದೇ ನಮ್ಮ ಹಾರೈಕೆ

'ಪ್ರಜಾಮತ,' ಮದರಾಸು.

Wanted Influential Agents in unrepresented areas on liberal terms.

ಖಾದಿಯನ್ನುಟ್ಟ ನಗರ ಸಭಾಧ್ಯಕ್ಷರು ಕೋರ್ಟಿನಿಂದ ಹೊರಗಾದರು!

ಬೆಂಗಳೂರಿನ ಸಬ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಸಿಲ್ವರ್ ಜುಬಿಲಿಗೆ ಅತಂಕ ಮಾಡಿದ ಕೆಲವರ ನ್ಯಾಯವಿಚಾರಣೆಯಾಗುತ್ತಿತ್ತು. ಅಷ್ಟರಲ್ಲಿ ಅಲ್ಲಿಯ ನಗರ ಸಭಾಧ್ಯಕ್ಷರಾದ ಡಾ। ಎಂ. ಕೆ. ಶಾಂಭಶಿವಂ ಅವರು ಒಂದು ಶರ್ಟನ್ನೂ ಒಂದು ಶಾಲನ್ನೂ ಧರಿಸಿಕೊಂಡು ಹೋಗಿ ಬಾರಿನ ಬೆಂಚಿನ ಮೇಲೆ ಕುಳಿತರು. ಅದನ್ನು ಕಂಡು ನ್ಯಾಯಾಧೀಶರು 'ನೀವಾರು?' ಎಂದರು "ನಾನು ಡಾ। ಶಾಂಭಶಿವಂ" ಎಂದರು ಡಾಕ್ಟರರು. "ನೀವು ತಲೆಗೆ ಟೊಪ್ಪಿಯನ್ನಿಡಬೇಕು ಅಥವಾ ಸೂಟ್ ಹಾಕಿಕೊಂಡು ಬರಬೇಕು" ಎಂದರು ನ್ಯಾಯಾಧೀಶರು. "ಇದು ನನ್ನ ನಿತ್ಯದ ಉಡಿಗೆ" ಎಂದರು ಡಾಕ್ಟರರು. "ಆದರೆ ಕೋರ್ಟಿನ ಕ್ರಮವನ್ನು ಪಾಲಿಸಬೇಕು" ಎಂದರು ನ್ಯಾಯಾಧೀಶರು. "ನಾನು ಹೊರಗೆ ಹೋಗುವೆನು" ಎಂದು ಡಾಕ್ಟರರು ಹೊರಗೆ ಹೋದರು.

ಮಹಮ್ಮದ್ ನಿಸ್ಸಾರನು ಸಾಯಲಿಲ್ಲ!

ಬಹು ವಿಚಿತ್ರ ವಾರ್ತೆಯಿದು! ಹಿಂದೂದೇಶದ ಕ್ರಿಕೆಟ್ ಆಟಗಾರರಲ್ಲಿ ಹೆಸರುವಾಸಿಯಾಗಿ, ಬಿರುಸಾಗಿ ಚೆಂಡೆಸೆಯುವುದರಲ್ಲಿ ಖ್ಯಾತನಾದ ಮಹಮ್ಮದ್ ನಿಸ್ಸಾರನು ಕ್ವೆಟ್ಟಾದ ಭೂಕಂಪಕ್ಕೆ ತುತ್ತಾದನೆಂಬ ವಾರ್ತೆಯು ದೇಶವಿದೇಶಗಳ ಎಲ್ಲಾ ಪತ್ರಿಕೆಗಳ 'ಆಟದ ಸುದ್ದಿ'ಯಾಗಿ ಸಚಿತ್ರವಾಗಿ ಪ್ರಕಟವಾಯಿತು. ಅವನ ಮರಣವಾರ್ತೆಯನ್ನರುಹದ ಪತ್ರಿಕೆಯೇ ಇಲ್ಲವಾಯಿತು. ಅವನ ಜೀವನಚರಿತ್ರೆ, ಅವನ ಗುಣಗಾನ ಎಲ್ಲವೂ ಪ್ರಕಟವಾಗಿದ್ದುವು. ಈಗ ಬಂದ ವಾರ್ತೆಯಿಂದಾಗಿ, ಮುಂಬಾಯಿಯ ಇಸ್ಲಾಂ ಜಿಮ್ಖಾನಕ್ಕೆ ಲಾಹೋರಿನಿಂದ ಒಂದು ತಂತಿಯು ಮಹಮ್ಮದ ನಿಸ್ಸಾರನಿಂದ ಬಂದಿದೆ. "ನಾನು ಇಲ್ಲಿ ಜೀವಂತನಾಗಿ ಫೂಟ್‌ಬೋಲ್ ಆಡುತ್ತಿದ್ದೇನೆ. ನಾನು ಕ್ವೆಟ್ಟಾಕ್ಕೆ ಹೋಗಿದುದಿಲ್ಲ" ಎಂದು ತಿಳಿಸಿರುವನು. ಮೃತನು ಮಹಮ್ಮದ ನಿಸ್ಸಾರನೆಂಬ ಇನ್ನೊಬ್ಬ ಕ್ರಿಕೆಟ್ ಆಟಗಾರನೆಂದು ತಿಳಿದುಬಂದಿದೆ. ಫ್ರೀ ಪ್ರೆಸ್ಸಿನವರು ಸಂತೋಷ ಸೂಚನೆಯನ್ನು ಮಾಡಿದ್ದಾರೆ. ನಾವೂ ಆನಂದಿಸುವ!

ಧರ್ಮಾಚಾರಿಗಳಿಗೂ ಈ ಬುದ್ಧಿಯೇ?

ದೇವರನ್ನು ನಂಬುವ ಕಥೋಲಿಕರಿಂದ ಧರ್ಮಗುರುಗಳ ಅವನತಿಯ ಯುಗವೋ ಇದೋ! ಎಲ್ಲೆಲ್ಲಿ ನೋಡಿದರೂ ಹಲವು ದೇವಸ್ಥಾನ ಮತ್ತು ಇಗರ್ಜಿಗಳ ಧರ್ಮಗುರುಗಳು ನ್ಯಾಯವನ್ನು ಮರೆತು ಆಚರಿಸುತ್ತಿರುವರೆಂದು ತೋರಿಬರುತ್ತದೆ. ಮುಂಬಾಯಿಯ ಕುರ್ಲಾದ ನಿವಾಸಿಗಳಾದ ರೆವರೆಂಡ್ ಫಾದರ್ ಫ್ರಾನ್ಸಿಸ್ ಎಲ್ ಫೆರ್ನಾಂಡಿಸರವರು ಕೆಲವು ಸ್ವದೇಶಿ ಗೃಹಸ್ಥರ ಮೇಲೆ ಸಿಟ್ಟಾಗಿದ್ದು, ಇಗರ್ಜಿಯನ್ನೇ ಮುಚ್ಚಿಬಿಟ್ಟು ಮನೆಗೆ ತೆರಳಿದರಂತೆ! ಅವರ ಗೃಹದ ಜಗಲಿಯಲ್ಲಿ ೧೩ ಶವಗಳನ್ನು ಇಗರ್ಜಿಯಲ್ಲಿ ಹೂಣಲಾಯಿತಂತೆ! ಪಾಪ! ಭೂಗತವಾದ ಆ ಪುಣ್ಯ ಜೀವಿಗಳಿಗೆ ಧರ್ಮಗುರುಗಳ ಪವಿತ್ರೋದಕವನ್ನೂ ಬಿಡಲಿಲ್ಲವಂತೆ! ಈಗ ವಿಶ್ವಾಸಿಗಳು ಕೋರ್ಟಿಗೆ ಹೋಗಿ ಆ ಜನರ ಮೇಲೆ ಮೊಕದ್ದಮೆ ಹೂಡಿರುವರು. ಯೋಗಿಗಳಿಗೂ ಕೋರ್ಟು ಬೇಕಾಗಿರುವ ಕಾಲವಿದು! ಧರ್ಮಾಚಾರಿಗಳಿಗೂ ಈ ಬುದ್ಧಿಯೆ!

ಎರಡು ಸೇರು ಬಟಾಟೆಗಾಗಿ—

ಒಬ್ಬ ಗುಣವಂತ ಮಾವನೇ ವಧಿಸಲ್ಪಟ್ಟನೆಂದರೆ, ಕಣ್ಣೀರು ಸುರಿಸದ ಮನುಷ್ಯನಾರು? ಯಾರೂ ಇರಲಾರರು—ಖಂಡಿತ! ಲಕ್ನೋವಿನಲ್ಲಿಯ ಒಂದು ಸಣ್ಣ ಗ್ರಾಮದಲ್ಲಿ ಗಂಡಹೆಂಡಿರೊಳಗೆ ನಿತ್ಯದ ಕಲಹಕ್ಕಾರಂಭವಾಯಿತು. ಆ ದಿನ ಎರಡು ಸೇರು ಬಟಾಟೆಯ ಕುರಿತಾಗಿ ವಾದವಿವಾದಗಳಾದುವು,—ಹೆಂಡತಿಯು ಹೊಡೆಯಲಿಲ್ಲವಾದರೂ ಗಂಡನು ಹೊಡೆದಿರಬೇಕೆಂದು ನಾವು ಊಹಿಸುವುದು ಒಳ್ಳೆಯದು. ಬಹುಹೊತ್ತು ಈ ಕಾಳಗವು ನಡೆಯುತ್ತಿದ್ದಾಗ ಹೆಂಡತಿಯ ತಂದೆ—ಗಂಡನ ಮಾವ—ಬಂದ. ಬಿಡಿಸಿದನು. ಅಳಿಯನಿಗೆ ಸಿಟ್ಟೇರಿತು. ಒಂದು ಸಣ್ಣ ದೊಣ್ಣೆಯೊಂದನ್ನು ಮೆಲ್ಲನೆ ಎತ್ತಿ, ಅದರಿಂದ ಬಲವಾದ ಪೆಟ್ಟೊಂದನ್ನು ಮೆಲ್ಲನೆ ಮಾವನ ತಲೆಗೆ ಕೊಟ್ಟನು. ಮಾವನವರು ನೆಟ್ಟಗೆ ಪರಲೋಕಕ್ಕೆ! ಈಗ ಪೋಲೀಸು ಪೌಜು ಒಂದು ಅಳಿಯನನ್ನು ಸೆರೆಹಿಡಿದಿದೆ!

ಅರ್ಜಿ ಮಾಡಿರುತ್ತಾರೆ—

ಯಾಕೆಂದು ಗೊತ್ತೇ? ಲಕ್ನೋವಿನಲ್ಲಿ ಜರಗಲಿರುವ ಇಂಡಿಯನ್ ನೇಶನಲ್ ಕೊಂಗ್ರೆಸ್ಸಿನ ಅಧಿವೇಶನದ ಕೆಲಸವು ಲಕ್ನೋವಿನಲ್ಲಿ ಈಗಲೇ ಪ್ರಾರಂಭವಾಗಿದೆ! ಅಲ್ಲಿನ ವಿಕ್ಟೋರಿಯಾ ಪಾರ್ಕನ್ನು ಅಧಿವೇಶನ ಸಮಾರಂಭರಂಗದನ್ನಾಗಿ ಆರಿಸಿ, ಅದನ್ನುಪಯೋಗಿಸಲು ತಮಗೆ ಅಪ್ಪಣೆ ಕೊಡಬೇಕೆಂದು ಕೊಂಗ್ರೆಸ್ಸಿನವರು ಅರ್ಜಿಮಾಡಿರುತ್ತಾರೆ. ಅಪ್ಪಣೆ ಸಿಗಬಹುದೆಂದು ಕೆಲವರ ಆಶೆ. ಆದರೆ ಕೆಲವು ಜನರು ಮಾತ್ರ ಸರಕಾರವು ನಾಸ್ತಿಯೆಂದು ಹೇಳಲಿದೆಯಾಗಿ ಊಹಿಸಿರುತ್ತಾರೆ. ಈ ಕೊಂಗ್ರೆಸ್ ಅಧಿವೇಶನದ ಕಾರ್ಯಕಾರಿ ಸಮಿತಿಗಳನ್ನೇರ್ಪಡಿಸಿ ಪತ್ರವ್ಯವಹಾರ ನಡೆಸಲಾರಂಭಿಸಿರುವವರು ಅಧ್ಯಕ್ಷರಾರೆಂದು ತಿಳಿದುಬಂದಿರುವುದಿಲ್ಲ.

ಹೊಸ ಸೆಕ್ರೆಟರಿ ಒಫ್ ಸ್ಟೇಟರು ಬಂದಿರುತ್ತಾರೆ.

ಮೊನ್ನೆ ಲಂಡನಿನಲ್ಲಿ ಬ್ರಿಟಿಷ ಮಂತ್ರಿಮಂಡಲವು ಬದಲಾಯಿತು. ಪ್ರಧಾನಮಂತ್ರಿಯವರಾಗಿದ್ದ ಮೆಕ್ಡೊನಾಲ್ಡರ ಬದಲಿಗೆ ಮಿ। ಸ್ಟಾನ್ಲಿ ಬಾಲ್ಡ್‌ವಿನ್ನರು ಬಂದಿರುವರು. ಇಷ್ಟರ ತನಕ ಹಿಂದೂದೇಶಕ್ಕೆ ಸೆಕ್ರೆಟರಿ ಒಫ್ ಸ್ಟೇಟರಾಗಿ ಸರ್ ಸಾಮುವೇಲ್ ಹೋರರಿದ್ದರು. ಈಗ ಇವರ ಬದಲಿಗೆ ಮಾರ್ಕ್ವಿಸ್ ಒಫ್ ಜೆಟ್‌ಲೇಂಡರು ನೇಮಿಸಲ್ಪಟ್ಟಿರುವರು. ಇವರು ಒಂದು ಮನವಿ ಮಾಡುತ್ತಾ "ನನಗೆ ಆರ್ಯಭೂಮಿಯ ಸೇವೆಯ ಪುಣ್ಯ ಕೆಲಸವು ಲಭ್ಯವಾಗಿದೆ. ನವರಾಜ್ಯರಚನೆಯಾಗಿದೆ. ಅದನ್ನು ವೈಸರಾಯರ ಸಹಾಯದಿಂದ ನಾನು ಮುಂದರಿಸಲಿದ್ದೇನೆ. ಅದನ್ನು ತಿದ್ದುವ ಅಥವಾ ಪುನರ್ರಚಿಸುವ ಕೆಲಸವು ನನ್ನದಲ್ಲ. ನನ್ನ ಅಕ್ಕರೆಯಲ್ಲಿ ಸೌಮ್ಯ ಸೂತ್ರಗಳೇ ಹೊರಗಾಗುವುವು. ನನ್ನ ಕೆಲಸವು ಭಾರವಾದುದಾದರೂ ನನಗೆ ಭಾರತೀಯರ ಸಹಾಯವು ದೊರೆಕೀತೆಂದು ಆಶಿಸುತ್ತೇನೆ" ಎಂದಿರುವರು. ಸಹಾಯವೇಕಯ್ಯಾ? ನಾವಾಗಿ ಸಹಾಯವನ್ನು ನೀಡದಿದ್ದರೆ ಬಲವಾಗಿ ಬಲಾತ್ಕಾರದಿಂದ ಪಡೆಯಲು ಸಮರ್ಥರಲ್ಲವೇ?

ಕೈಕೈ ಹಿಡಿದು ಪ್ರಾಣತ್ಯಾಗ ಮಾಡಿದ ವೀರ ತರುಣಿಯರು!

ಜೂನ್ ೩೦ ರಲ್ಲಿ ಬಂದ ವಾರ್ತೆಯೊಂದು ಕೊಯಂಬತ್ತೂರಿನ ಬಳಿ ಕನ್ನರ್ಪಾಳಯಂ ಎಂಬ ಗ್ರಾಮದಲ್ಲಿ ಇಬ್ಬರು ತರುಣಿಯರ ಶವಗಳು ಒಂದು ಬಾವಿಯಲ್ಲಿ ಕಾಣಸಿಕ್ಕಿವೆ. ಎರಡು ಶವಗಳೂ ಒಂದೇ ಹಗ್ಗದಿಂದ ಬಿಗಿಯಲ್ಪಟ್ಟಿವೆ. ಈ ಇಬ್ಬರು ತರುಣಿಯರಿಗೂ ಕಳೆದ ವರುಷ ವಿವಾಹವಾಗಿದ್ದಿತು. ಒಬ್ಬಳಿಗೆ ೧೮ ವರುಷ ಪ್ರಾಯ—ಇವಳ ಗಂಡನಿಗೆ ೭೫ ವರ್ಷ. ಮತ್ತೊಬ್ಬಳಿಗೆ ೨೦ ವರ್ಷ ಪ್ರಾಯ—ಮಾತ್ರ, ಅವಳಿಗೆ ಗಂಡನ ಮೇಲೆ ಮಮತೆಯಿದ್ದಿಲ್ಲ. ಈ ತರುಣಿಯರಿಬ್ಬರೂ ಮೊನ್ನೆ ಒಂದಾಗಿ ತಮ್ಮ ಇಂತಹ ಸಂಕಷ್ಟಮಯ ಜೀವನವು ಅಗತ್ಯವಿಲ್ಲವೆಂದು ಬಾವಿಗೆ ಹಾರಿ ಪ್ರಾಣತ್ಯಾಗ ಮಾಡಿದರು. ಮೆಟ್ಟುಪಾಳಯಂ ಪೋಲೀಸರು ವಿಚಾರಿಸುತ್ತಿರುವರು.

ಕಷ್ಟದಮೇಲೊಂದು ಕಷ್ಟ!

ಮನುಷ್ಯನಿಗೆ ಕಷ್ಟಗಳು ಬಂದರೆ ಒತ್ತಿಯಾಗಿ ಬರುವುದಿಲ್ಲ. ಬಂದರೆ ಜೋಡಿ ಜೋಡಿಯಾಗಿ! ಹಾಗೆಯೇ ನಮ್ಮ ದೇಶಕ್ಕೂ ಜೋಡಿ ಜೋಡಿ ಕಷ್ಟಗಳು ಬರುತ್ತಿವೆ! ಗುಂಟೂರಿನಲ್ಲಿ ಬೆಂಕಿಯ ಅನಾಹುತ. ಎಲ್ಲಿ ನೋಡಿದರೂ ಗುಡಿಸಲುಗಳು ಸುಡುತ್ತಿವೆ. ಕಳೆದ ವಾರ ಅಲ್ಲಿ ಮುಖ್ಯ ಕಸ್ಬೆಯ ಮನೆಗಳು ಹೇಗೆ ಸುಡುತ್ತಿರುವುವೆಂದು ತಿಳಿದುಬರಲಿಲ್ಲ. ರಾತ್ರಿ ಇಡೀ ನಗರವಾಸಿಗಳು ನೀರನ್ನು ಹಿಡಿದುಕೊಂಡು ಎಚ್ಚರವಿರಬೇಕಾಯಿತು. ಯಾರೋ ಬೆಂಕಿ ಹಚ್ಚುತ್ತಿರುವರೆಂಬ ವಾರ್ತೆಯೂ ಹರಡಿದ್ದಿತು. ಯುವಕರು ರಾತ್ರಿಂದಿವ ಬೀದಿಗಳಲ್ಲಿ ಕಾವಲುನೋಡಿದರು. ಮಳೆಯ ಹನಿ ಹನಿಯಾಗಿ ಬಂದಮೇಲೆ ಜನರು ಶಾಂತರಾಗಿ ಹಾಸಿಗೆ ಹಿಡಿದು ಮಲಗಿದರು.

ಪ್ರಕೃತಿಗೆ ಹೀಗೇಕೆ ಸಿಟ್ಟೋ ತಿಳಿಯದು!

ಪ್ರಕೃತಿಯು ಮನುಷ್ಯರ ಮೇಲೆ ಮುನಿದಿದ್ದಿದೆಯೆಂದು ಭೂಕಂಪದಿಂದಂತೂ ವ್ಯಕ್ತವಾಗಿರುವುದಷ್ಟೆ! ಸಿಡಿಲಿಂದು, ಗಾಳಿಮಳೆಗಳಿಗೂ ಮನುಷ್ಯರ ಮೇಲೆ ಹಗೆ ಸಾಧಿಸುವ ಕಾಲವಾಗಿಯೂ ಕಷ್ಟಕಾಲ! ಬಳ್ಳಾರಿಯ ಎಡಿಗ ರಾಮಯ್ಯ ಎಂಬವರ ಮನೆಗೆ ಸಿಡಿಲು ಬಡಿದ. ಮನೆಯವರೆಲ್ಲರೂ ಅರ್ಧ ತಾಸಿನ ವರೆಗೆ ದಿಙ್ಮೂಢರಾದರು. ಆರು ದನಗಳು ಕೂಡಲೇ ಸತ್ತುಬಿದ್ದುವು. ಮನೆಯು ಹಾಗೆಯೇ ಇದೆ.

ಮಕ್ಕಳನ್ನು ಹಾಕಿ ತಾನೂ ಹಾರಿದಳು!

ಮೆಟ್ಟುಪಾಳಯದಿಂದ ಇನ್ನೊಂದು ವಾರ್ತೆ. ಮಹಾಲಿ ಎಂಬ ಹರಿಜನ ಸ್ತ್ರೀಯೊಬ್ಬಳು, ಗಂಡನ ಮೇಲಿನ ಸಿಟ್ಟಿನಿಂದ, ಬೇರೆ ಬಾವಿಗೆ ತನ್ನ ಎರಡು ವರ್ಷ ಪ್ರಾಯದ ಒಂದು ಗಂಡು ಮಗುವನ್ನೂ, ಏಳು ವರ್ಷ ಪ್ರಾಯದ ಹೆಣ್ಣು ಮಗುವೊಂದನ್ನೂ ಹಾಕಿ ತಾನೂ ಹಾರಿದಳು. ಆದರೆ ಮಧುರಾಯನು ಆ ಸಮಯದಲ್ಲಿ ಗೈರುಹಾಜರಿ! ನೆರೆಹೊರೆಯವನೊಬ್ಬನು ಬಾವಿಗೆ ಹಾರಿ ಸ್ತ್ರೀಯನ್ನೂ ಮಗನನ್ನೂ ರಕ್ಷಿಸಿದನು. ಹೆಣ್ಣು ಮಗುವು ಮಾತ್ರ ಕಾಲನ ವಶವಾಯಿತು! ಅವಳ ಗಂಡನಿಗೆ ಆಯುಷ್ಯವು ಹೆಚ್ಚಿತು.

ದಿ ಸೌತ್ ಇಂಡಿಯಾ ಕೊ-ಒಪರೇಟಿವ್ ಇನ್‌ಶೂರೆನ್ಸ್ ಸೊಸೈಟಿ,

ಲಿಮಿಟಡ್.

ಮುಖ್ಯ ಕಚೇರಿ—ಮದ್ರಾಸು.

ಪೋಸ್ಟು ಬಾಕ್ಸ್ ನಂಬ್ರ 182

ಜೀವವಿಮೆಯ ಉತ್ಕೃಷ್ಟ ಪ್ರಯೋಜನಗಳನ್ನೆಲ್ಲ ಕೊಡುತ್ತದೆ

'ರಿಜಿಸ್ಟ್ರಾರ್ ಒಫ್ ಕೊ ಒಪರೇಟಿವ್ ಸೊಸೈಟೀಸ್' ಇವರ ಮೂಲಕ, ಸರಕಾರದಿಂದ ಆಡಳಿತೆಯ ಮೇಲ್ವಿಚಾರವೂ ಲೆಕ್ಕದ ಪರಿಶೋಧನೆಯೂ ನಡೆಯುತ್ತದೆ

ಪ್ರೀಮಿಯಂ ದರಗಳು ಬಲು ಕಡಿಮೆ. ಪಾಲಿಸಿಯ ಶರತಗಳು ಆತ್ಯಾಕರ್ಷಕ.

100ರಿಂದ 5000 ರೂಪಾಯಿ ವರೆಗಿನ ಪಾಲಿಸಿಗಳು ಸ್ವೀಕರಿಸಲ್ಪಡುತ್ತವೆ

ಕಡಿಮೆ ಖರ್ಚಿನಿಂದ ಹೆಚ್ಚು ಲಾಭ

ಬೇಕಾಗಿದ್ದಾರೆ.

ದಕ್ಷಿಣ ಕನ್ನಡ, ಕೊಡಗು, ಮೈಸೂರು ಸಂಸ್ಥಾನಗಳಲ್ಲಿ ಇದರ ಪ್ರತಿನಿಧಿಗಳಾಗುವ ಏಜಂಟರು ಬೇಕು

ಆಯಾ ವಿಭಾಗಗಳಿಂದ ಅರ್ಜಿ ಮಾಡುವವರು ಹೆಚ್ಚಿನ ಮಾಹಿತಿಯ ಬಗ್ಗೆ ಕೆಳಗಿನ ಲೋಕಲ್ ಬೋರ್ಡುಗಳಿಗೆ ಬರೆದುಕೊಳ್ಳಬಹುದು

(1) ಸೆಕ್ರೆಟರಿ, ಸೌತ್ ಕೆನರಾ ಸೆಂಟ್ರಲ್ ಕೊ-ಒಪರೇಟಿವ್ ಬ್ಯಾಂಕ್, ಲಿಮಿಟೆಡ್, ಮಂಗಳೂರು.

(2) ಕನ್ವೀನರ್, ಕೂರ್ಗ ಲೋಕಲ್‌ಬೋರ್ಡ್ ಒಫ್ ದಿ ಸೌತ್ ಇಂಡಿಯಾ ಕೊ ಒಪರೇಟಿವ್ ಇನ್ಶೂರೆನ್ಸ್ ಸೊಸೈಟಿ C/o ಕೂರ್ಗ ಕೊ-ಒಪರೇಟಿವ್ ಸೆಂಟ್ರಲ್‌ಬ್ಯಾಂಕ್, ಲಿಮಿಟೆಡ್ ಮಡಿಕೇರಿ, ಕೊಡಗು.

(3) ವೈ ಶ್ರೀನಿವಾಸಯ್ಯ, ಕನ್ವೀನರ್ ಮತ್ತು ಗೌರವ ಕಾರ್ಯದರ್ಶಿ, ಫೆಡರೇಲ್ ಕೊ ಒಪರೇಟಿವ್ ಯೂನಿಯನ್ ಒಫ್ ಮೈಸೂರು ಸಿಟಿ, ಮೈಸೂರು.

(೩ನೇ ಪುಟದಿಂದ ಮುಂದರಿಸಿದ್ದು.)

೧೬ನೇ ಶತಮಾನದ ವರೆಗೆ ಅಥರ್ವವೇದದ ಪರ್ಶಿಯನ್ ರೂಪಾಂತರವಾದುದು ಕಂಡುಬರಲಿಲ್ಲ. ಅಕ್ಬರನ ಕಾಲದಲ್ಲಿ ತರ್ಜುಮೆಮಾಡಲ್ಪಟ್ಟ ಅಥರ್ವವೇದ ಬಹು ದೋಷಯುಕ್ತವಾಗಿದ್ದು, ಅದು ರಚನೆಯೊಡನೆಯೇ ಮೃತಿಯನ್ನೂ ಹೊಂದಿತು. ಜನರು ಅದನ್ನು ಪೂರ್ಣವಾಗಿ ಮರೆತುಬಿಟ್ಟರು. ಅನೇಕ ಸಂಸ್ಕೃತಕೃತಿಗಳ ತರ್ಜುಮೆ ಕೆಲಸಕ್ಕಾರಂಭಿಸಿದ ಸುಭರಾಜಕುವರ ದಾರಾ ಶುಕೋವನೇ ಈ ಕೆಲಸಕ್ಕೂ ತೊಡಗಿದನು. ಅವನು ಬನಾರಸ್‌ನ ಮಹಾ ಮಹಾ ಪಂಡಿತರನ್ನು ಬರಮಾಡಿಕೊಂಡು ವೇದಗಳನ್ನು ಪರ್ಶಿಯನ್ ಭಾಷೆಗೆ ತರ್ಜುಮೆ ಮಾಡಿಕೊಳ್ಳುವ ವ್ಯವಸ್ಥೆಮಾಡಿದನು. ಈ ಕೆಲಸವನ್ನು ೧೬೫೭ರಲ್ಲಿ ಅವನು ಕೊನೆಗಾಣಿಸಿದನು. ೧೯ನೇ ಶತಮಾನದವರೆಗೂ ಸಂಸ್ಕೃತ ಗ್ರಂಥಗಳನ್ನು ಪರ್ಶಿಯನ್ ಭಾಷೆಗೆ ಅನುವಾದಿಸುವ ಕೆಲಸವು ನಡೆಯುತ್ತಾ ಇತ್ತು. ಪರ್ಶಿಯಾನ್ ಭಾಷೆಗೆ ಸಂಸ್ಕೃತ ಗ್ರಂಥಗಳ ಅನುವಾದವು ನಡೆಯುತ್ತಿದ್ದಾಗಲೇ ಇಸ್ಲಾಂ ಸಾಹಿತ್ಯದಲ್ಲಿ ಹಿಂದೂಭಾವನೆಗಳು ಸಮ್ಮಿಶ್ರವಾಗಲಾರಂಭವಾಯಿತು. ಫೈಜಿಯ ನಲದಮನ್ ರಾಮ ಮತ್ತು ಸೀತೆಯ ಕಥೆಗಳನ್ನು ಮಸೀಹೀಗಳೂ ನೂರಾತುಲ್-ಮುಖ್ಲತ್‌ನ್ನೂ ಅಬ್ದುಲ್ ರಹಿಮಾನ್ ಚಿಸ್ತಿಯ ಮರೂ ಅಲ್ಲದೆ, ತುಫಾತುಲ್-ಹಿಂದ್ ಎಂಬುದನ್ನು ಮಿರ್ಜಾ ಖಮ್ರಲ್‌ದಿನ್ ಎಂಬವರೂ ಬರೆದರು. ಇವೆಲ್ಲ ಮೇಲಿನ ರೀತಿಯ ಗ್ರಂಥಗಳು. ಇವುಗಳಲ್ಲಿ ತುಫಾತುಲ್-ಹಿಂದ್ ಗ್ರಂಥವು ಆಲಮಗೀರನ ಕಾಲದಲ್ಲಿ ಅವನ ಮೊಮ್ಮಗ ಜಹಂದರಶಹಾನ ಉಪಯೋಗಾರ್ಥವಾಗಿ ಬರೆಯಲಾಯಿತು. ಇದನ್ನು ಕುರಾಲ್ ಟಾಪ್ ಬಾನ್‌ನ ಹೆಸರಿನ ಮೇರೆಗೆ ಬರೆಸಲಾಯಿತು. ಹಿಂದೂಸಂಸ್ಕೃತಿಯ ಕುರಿತಾಗಿಯೇ ಇದರಲ್ಲಿ ಉಲ್ಲೇಖಿಸಲಾಗಿದೆ. ಈ ಗ್ರಂಥವನ್ನು ಹೀಗೆ ಏಳು ಭಾಗಗಳನ್ನಾಗಿ ಮಾಡಲಾಗಿದೆ. ಮುನ್ನುಡಿ—ಹಿಂದೂ ಲಿಪಿಯಲ್ಲಿ ಪ್ರಥಮ ಪರಿಚ್ಛೇದದಲ್ಲಿ ಹಿಂದೂ ಛಂದಸ್ಸುಶಾಸ್ತ್ರ, ಪರಿಚ್ಛೇದ ೨ ಹಿಂದೂ ಮಾತ್ರೆಗಳು, ೩ ಹಿಂದೂ ಅಲಂಕಾರಗಳು, ೪ ಹಿಂದೂ ಪ್ರೇಮಶಾಸ್ತ್ರ, ೫ ಹಿಂದೂ ಸಂಗೀತಶಾಸ್ತ್ರ, ೬ ಹಿಂದೂ ಸ್ತ್ರೀಪುರುಷ ಶಾಸ್ತ್ರ, ೭ ಹಿಂದೂ ಅಂಗಲಕ್ಷಣಶಾಸ್ತ್ರ.

ಹೀಗೆ ಸಂಸ್ಕೃತವನ್ನು ಅರಬಿ ಮತ್ತು ಪರ್ಶಿಯಾನ್ ಭಾಷೆಗಳಿಗೆ ಪರಿವರ್ತಿಸುದರಿಂದ ಮುಸಲ್ಮಾನರಿಗೆ ವಿಷಯ ಸಂಗ್ರಹಕ್ಕೊಂದು ಆಶ್ರಯವು ದೊರೆಯಿತಲ್ಲದೆ ಪೂರ್ವದೇಶ ಸಂಚಾರಿಗಳಾಗಿ ಬಂದ ಯುರೋಪ್ಯರನೇಕರಿಗೆ ಸಂಸ್ಕೃತದ ಪರಿಚಯವಾಗತೊಡಗಿತು. ಆ ಗ್ರಂಥಗಳ ಪಠನೆಯಿಂದಾಗಿ ಆ ಯುರೋಪ್ಯರಿಗೆ ಸಂಸ್ಕೃತದ ಮಹತ್ವವೇನೆಂದು ತಿಳಿದುಬಂತು. ಅದನ್ನು ಕಲಿಯಬೇಕೆಂಬ ಆಶೆಯು ಅವರಲ್ಲಿ ಉತ್ಪನ್ನವಾಯಿತು. ಕಲಿಲಾ ಮತ್ತು ದಿಮ್ನ ಗ್ರಂಥಗಳು ಹಿಬ್ರು, ಸಿರಿಯಾ, ಗ್ರೀಕ್, ಲ್ಯಾಟಿನ್, ಸ್ಪೇನಿಶ್, ಇಟಾಲಿಯನ್, ಸ್ಲೆವೊನಿಕ್, ಟರ್ಕಿಶ್, ಜರ್ಮನ್, ಇಂಗ್ಲಿಷ್, ಡೇನಿಶ್, ಡಚ್ ಮತ್ತು ಫ್ರೆಂಚ್ ಭಾಷೆಗಳಿಗೆ ಪರಿವರ್ತನೆಯಾಗಲು ಆ ಗ್ರಂಥದ ಅರಬೀ ಅನುವಾದವೇ ಮೂಲಕಾರಣ. ಈ ಪರಿವರ್ತನೆಯನ್ನು ಇಸ್ಮಲ್ ಮಾರ್ಕ್ಸ್ ಎಂಬವನು ಮಾಡಿದನು. ೧೮ನೇ ಶತಮಾನದ ವರೆಗೆ ಆ ಗ್ರಂಥದ ಮೂಲವಾದ ಸಂಸ್ಕೃತಗ್ರಂಥವನ್ನು ಯುರೋಪ್ಯರು ಅರಿಯಲಿಲ್ಲ. ಸಂಸ್ಕೃತವನ್ನು ಲ್ಯಾಟಿನ್ ಭಾಷೆಗೆ ಪರಿವರ್ತಿಸಿದ ದಾರಾನಿಂದಾಗಿಯೇ ಭಾರತೀಯ ತತ್ವಶಾಸ್ತ್ರ ಕುರಿತು ಮಹಾ ಯುರೋಪ್ಯನೊಬ್ಬನು ಪ್ರಶಂಸನೀಯವಾಗಿ ನುಡಿದುದು. ಸ್ಕೊಪೆನ್‌ಹರ್ ಎಂಬವನು "ಇಡಿ ಜಗತ್ತಿನಲ್ಲಿ ಉಪನಿಷತ್ತಿನ ಪಠನೆಯಿಂದ ದೊರೆಯುವಷ್ಟು ಪ್ರಯೋಜನವೂ ಭಾವವಿಕಾಸಪರತ್ವವೂ ಬೇರಾವ ಗ್ರಂಥಪಠನೆಯಿಂದಲೂ ದೊರೆಯದು" ಎಂದು ಹೇಳಿರುವನು. ಇವನು ಉಪನಿಷತ್ತನ್ನು ಸಂಸ್ಕೃತದಲ್ಲಿ ಓದಿರಲಿಲ್ಲ. ಲ್ಯಾಟಿನ್ ಭಾಷೆಯಲ್ಲಿ ಒಕ್ವೆಟಿಲ್ ಡ ಪೆರ್ರೊನ್ ಎಂಬವನು ಬರೆದ ಲ್ಯಾಟಿನ್ ಗ್ರಂಥವನ್ನು ಓದಿಯೇ ಹೇಳಿದನು. ಪರ್ಶಿಯಾನ್ ಭಾಷೆಯ ದಾರಾಶುಕೋ (ಆಲಮಗೀರನ ಸಹೋದರ)ನ ಕಾಲದಲ್ಲಿ ಪ್ರಕಟವಾದ ಉಪನಿಷತ್ತೇ ಈ ಲ್ಯಾಟಿನ್ ಭಾಷಾ ಪರಿವರ್ತನೆಗೆ ಆಧಾರಭೂತವಾದ ಗ್ರಂಥವಾಗಿತ್ತು.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು। ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವಿಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ–(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ್ಯ–(ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ್ಯ–(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ–(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ–(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ ಹೆಚ್ಚಿನ ಮಾಹಿತಿಗೂ ಕಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ



Distributors for South Kanara —

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!

ಆತಂಕನಿಗ್ರಹ ಮಾತ್ರೆ ಗಳನ್ನು ಉಪಯೋಗಿಸಲಿಕ್ಕೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ

ಆರೋಗ್ಯಕ್ಕೆ ಕವಚವು

32 ...

ಕಾಮಶಾಸ್ತ್ರವನ್ನೋದಿರಿ

Atank Nigrah Pharmacy
Chickpet, Bangalore
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ ಬೆಂಗಳೂರು

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್ ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು

ಸಾಮಾನ್ಯ ವಿಜ್ಞಾನ

ಚರಿತ್ರೆ ಮತ್ತು ಕಥೆಗಳು.

	ರೂ	ಆ	ಪೈ
ನಾಲ್ಕನೇ ದರ್ಜೆ	0	6	0
ಮೂರನೇ ,,	0	4	6
ಎರಡನೇ ,,	0	4	0
ಸಮಾಜಶಾಸ್ತ್ರ.			
ಐದನೇ ದರ್ಜೆ	0	8	0
ನಾಲ್ಕನೇ ,,	0	8	0
ಮೂರನೇ ,,	0	2	6

ಸಾಮಾನ್ಯ ವಿಜ್ಞಾನ.

	ರೂ	ಆ	ಪೈ
ಎರಡನೇ ದರ್ಜೆ	0	1	0
ಮೂರನೇ	0	3	0
ನಾಲ್ಕನೇ ,,	0	5	0
ಐದನೇ ,,	0	6	0

ಅಜ್ಜಿ ಕಥೆಗಳು (ಸಚಿತ್ರ)

ಮೂರ ಕರಡಿಗಳು
ಜೇನು ಸತ್ತ ಕಾಗೆ ಬದುಕಿತು
ವೆಣ್ಣನ ಕಾಳಪ್ಪ
ಅಗಸ ವ ಡ್ಡ
ಇಲಿಗಳ ಧಕ್ಕ ಧ್ವೆ
ಅಂಗಳ ದ ಗ್ಗ
ಗುಡುಗುಡು ಗುಮ್ಮಟ ದೇವರು
ಒಡ್ಡನ ಓಟ
(ಇವುಗಳ ಕ್ರಯ 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ ಅಥವಾ 'ಸಮಾಜಶಾಸ್ತ್ರ'– ಕ್ರಯ ರೂ 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿ ಪುಸ್ತಕಗಳು, ಇತರ ಪುಸ್ತಕಗಳು ಒಳ್ಳೆಯ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,–

ಶಾರದಾ ಛಾಪಖಾನೆ, ಮಂಗಳೂರು.

ಶಿವರಾಮ ಕಾರಂತ ವಿರಚಿತ

ಗ್ನಾನ

ಜ್ಞಾನದ ಮೇಲೆ ವ್ಯಂಗ ಟೀಕೆ.

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ

ದಪ್ಪಗಿನ ಅಂಟಿಕ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ

ಕ್ರೌನ್ 1 ಆಕಾರದ ೧೪೩ ಪುಟಗಳು.

ಉತ್ತಮ ತರದ ಹಾಸ್ಯ

ಬೆಲೆ 1 4 0

ಶಾರದಾ ಛಾಪಖಾನೆ, ಮಂಗಳೂರು.

ಇವರಿಂದ ಪಡೆಯಬಹುದು

ನಡೆದ ಕತೆಗಳು.

True Stories

ಒದಿ ಮುಗಿಸುವ ಸಮಯ—೪ ನಿಮಿಷಗಳು

All Rights Reserved

[ಸಮಾಜದಲ್ಲಿನ ಕುಂದುಕೊರತೆಗಳನ್ನು ಹೋಗಲಾಡಿಸುವುದೇ 'ನಡೆದ ಕತೆಗಳು' ಇವುಗಳ ಉದ್ದೇಶ. ಕತೆಗಳೆಲ್ಲ ನಿಜವಾದುವುಗಳು. ಅವುಗಳನ್ನು ಸಂಯೋಜಿಸುವುದರಲ್ಲಿ ಮಾತ್ರ ಅನುಕೂಲ ಹಣ್ಣುಗಳನ್ನು ಉಪಯೋಗಿಸಿಕೊಳ್ಳಲಾಗಿದೆ ಹೆಸರುಗಳನ್ನು ಕೆಲವೆಡೆಗಳಲ್ಲಿ ಮಾತ್ರ ಬದಲಾಯಿಸಲಾಗಿದೆ.

ಅವನ (?) ಪತ್ನಿ.

(ಇದೇ ಎಪ್ರಿಲ್ ತಿಂಗಳಲ್ಲಿ ನಡೆದ ಕತೆ)

೬.

ಬಜಪೆಯ ರಾಮಣ್ಣ ಶೆಟ್ರ ಒಕ್ಕಲಿನಲ್ಲಿ ರಾಮಕ್ಕನ ಮನೆ, ಸಣ್ಣದಾಗಿದ್ದರೂ ಅದು ಸುಂದರವಾಗಿತ್ತು

ಸಂಜೆ ೫ ತಾಸು ಕಳೆದಿರಬಹುದು,–ಆ ಹೊತ್ತಿನಲ್ಲಿ ರಾಮಕ್ಕಳ ಮಗಳು ಸೌಭಾಗ್ಯವತಿ ಕಮಲಮ್ಮಳು ತನ್ನ ಕೋಣೆಯ ಕಿಟಕಿಯ ದಂಡೆಯ ಮೇಲೆ ತನ್ನ ಎಡಗಾಲನ್ನು ಎತ್ತಿ ಇಟ್ಟು, ಗಲ್ಲದ ಅಡಿಗೆ ಎಡಗೈಯನ್ನು ಆಧಾರವಾಗಿಟ್ಟು, ನೆಟ್ಟದೃಷ್ಟಿಯನ್ನು ಕಿಟಕಿಯ ಹೊರಗಿಟ್ಟು, ಏನೋ ಮಹದ್ಯೋಚನೆಯಲ್ಲಿ ನಿಮಗ್ನಳಾಗಿದ್ದಳು ಅವಳ ಹೃದಯವು ಒಮ್ಮೆ ಪಟಪಟನೆ ಹಾರುತ್ತಿತ್ತು ಒಮ್ಮೆ ಧೈರ್ಯದ ಶಕ್ತಿಯು ಅವಳ ನರನಾಡಿಗಳೊಳಗೆ ಸುಯ್ಯನೆ ಸುಳಿದು ಹರಿಯುತ್ತಿತ್ತು "ಬಂದುದು ಬರಲಿ, ಎದುರಿಸುವೆನು" ಎಂದು ಅವಳ ಹೃದಯದಲ್ಲೊಂದು ವಾಣಿಯು ಒಮ್ಮೊಮ್ಮೆ ನುಡಿಯುತ್ತಿತ್ತು ಮರುಘಳಿಗೆಯಲ್ಲಿ "ನೆರೆಹೊರೆಯವರು ಏನೆಂದಾರು?" ಎಂಬ ಚಿಂತನೆಯು ಪುನಃ ಅವಳ ಎದೆಯನ್ನು ಕಟ್ಟುತ್ತಿತ್ತು ಅವಳ ಈ ಮನೋಪರಿವರ್ತನೆಗಳನ್ನು ಅವಳ ಸುಂದರ ವದನವು ಗುರುತಿಸುತ್ತಿತ್ತು

ಕಮಲಮ್ಮಳಿಗೆ ವಿವಾಹವಾಗಿದ್ದಿಲ್ಲ ಎಷ್ಟೋ ಕಡೆಗಳಿಂದ ಮಾತು ಬಂದಿದ್ದರೂ ಅವುಗಳಲ್ಲಿ ಯಾವುದೂ ಸರಿಬೀಳದೆ, ಅವಳು ಕಳೆದ ಮೂರು ವರ್ಷಗಳಿಂದ ಗಂಡನನ್ನು ಕಾಣಬಂತಾಯಿತು

ಅತ್ತಾವರದ ಪಕಿರಣ್ಣನವರ ಮಗ ರಾಮಪ್ಪನಿಗಾಗಿ ಅವನ ಕಡೆಯವರು 'ಹೆಣ್ಣು ಹುಡುಕು'ತ್ತಿದ್ದರು, ಸಂದರ್ಭವಶಾತ್, ಕಮಲಮ್ಮಳನ್ನು ಅವನಿಗೆ ಜೋಡಿ ಹಾಕುವ ಪ್ರಶ್ನೆಯು ಬಂತು, ಮರುದಿನವೇ ಅವನ ತಾಯಿ ಸೀತುವೂ ಅವಳ ಅಕ್ಕ ಪೂವಪ್ಪೆಯೂ ಬಜಪೆಗೆ ಬಸ್ಸಿನ ಮೂಲಕ ಹೋಗಿ ಹುಡುಗಿಯನ್ನು ಕಂಡರು ಕಮಲಮ್ಮಳನ್ನು ಕಂಡು ಸೀತಕ್ಕಳಿಗೆ ಆನಂದವಾಯಿತು, ಮೋರೆಯಷ್ಟೆ ಸೌಂದರ್ಯವು ಕಮಲಮ್ಮನ ಅಂಗಾಂಗಗಳಲ್ಲಿ ಇತ್ತಾದುದರಿಂದ ತನ್ನ ಮಗನಿಗೆ ಯೋಗ್ಯ ಪತ್ನಿಯಿವಳು ಎಂದು ನಿರ್ಧರಿಸಿಕೊಂಡಳು

ವಿವಾಹವು ನೆರವೇರಿತು,–ಬಹು ವಿಜೃಂಭಣೆಯಿಂದ ನೆರವೇರಿತು ಅತ್ತಾವರ,ಮಂಗಾರ ಬೋಳಾರ, ಬೋಳೂರು, ಬೊಕ್ಕಪಟ್ಣಗಳ ಜಾತಿಬಾಂಧವರಿದ್ದು ಮದುವೆಯು ನೆರವೇರಿತು

ಮದುವೆಯಾಗಿ ೩೮ ದಿನಗಳು ಕಳೆದಿದ್ದುವು ಒಂದು ದಿನ ರಾತ್ರಿ ಕಮಲಮ್ಮಳಿಗೆ ಗಂಡನ ಮನೆಯಲ್ಲಿ ಉದರಶೂಲೆಯು ತಲೆದೋರಿತು ಅರಸಪ್ಪ ಪಂಡಿತರು ಬಂದು ಮದ್ದು ಕೊಟ್ಟರು, ನೋವು ನಿಲ್ಲಲಿಲ್ಲ ತ್ಯಾಂಪು ಪಂಡಿತರು ಮದ್ದು ಕೊಟ್ಟರು, ಆದರೂ ನೋವು ನಿಲ್ಲಲಿಲ್ಲ ಅದೆಂತಹ ರೋಗವೆಂದು ಕೂಡ ಕಂಡುಹಿಡಿಯಲಾಗದ ಅವರು ಆ ರೋಗಕ್ಕೆ 'ಗುಲ್ಮವಾಯು' ಎಂದು ಹೆಸರಿಟ್ಟು ಹೊರಟು ಹೋದರು,

ಕಮಲಮ್ಮಳ ಸ್ಥಿತಿಯು ವಿಷಮತೆಯನ್ನು ಮುಟ್ಟಿತು. ತನ್ನನ್ನು ಆಸ್ಪತ್ರೆಗಾದರೂ ಒಯ್ಯಿರೆಂದಳು. ಅವಳ ಕಷ್ಟವನ್ನು ಕಂಡು ಸಹಿಸದೆ ಅವಳನ್ನು ಆಸ್ಪತ್ರೆಗೊಯ್ದರು.

ಲೇಡಿ ಸರ್ಜನಳು ಕಮಲಮ್ಮಳನ್ನು ಪರೀಕ್ಷಿಸಿದಳು. "ಇವಳನ್ನು ಹೆರಿಗೆಯ ಕೋಣೆಯಲ್ಲಿ ಹಾಕಿರಿ" ಎಂದಳು. ರಾಮಪ್ಪನಿಗೂ, ಅವನ ಇನ್ನಿತರ ಸಂಬಂಧಿಕರಿಗೂ ಅತ್ಯಾಶ್ಚರ್ಯವಾಯಿತು. ಮೋರೆ ಮೋರೆ ನೋಡಿಕೊಂಡರು!

ಲೇಡಿ ಸರ್ಜನಳು ಒಂದೇ ಒಂದು ಇಂಜಕ್ಷನ್ ಕೊಟ್ಟಳು. ನೋಡುವುದೇನು? ಅರೆತಾಸಿನೊಳಗೆ ಗಂಡು ಮಗುವೊಂದು ಭೂಮಿಯನ್ನು ಕಂಡಿತು

ಈಗ,

ರಾಮಪ್ಪನು, ಆಸ್ಪತ್ರೆಯಲ್ಲಿರುವ ಕಮಲಮ್ಮಳಿಗೆ ಈ ರೀತಿ ರಜಿಸ್ಟ್ರಿ ಕಾಗದ ಬಟ್ಟಿರುವನು.–

"ಮದುವೆಯಾಗದೆ ಮೊದಲು ನಾನು ನಿನ್ನನ್ನು ಕಂಡಿರಲಿಲ್ಲ, ನೀನು ನನ್ನನ್ನು ಕಂಡಿರಲಿಲ್ಲ ನಮ್ಮ ಹಿರಿಯರೇ ನಮ್ಮ ಸಂಬಂಧವನ್ನು ಮಾಡಿದರು ಮದುವೆಯು ಮಾರ್ಚಿ ತಾ ೨ನೇ ದಿನ ನಡೆಯಿತು ನೀನು ಇದೇ ಎಪ್ರಿಲ್ ೧೦ನೇ ತಾರೀಖಿನ ದಿನ ಆಸ್ಪತ್ರೆಯಲ್ಲಿ ಗಂಡು ಮಗುವನ್ನು ಹೆತ್ತಿರುವೆ ನಾನು ಕೇವಲ ಯುವಕ 'ಗುಲ್ಮವಾಯು' ಎಂದು ಹೇಳಿ ನನ್ನನ್ನು ನಂಬಿಸಿ, ನೀನು ಇಷ್ಟು ದಿನಗಳನ್ನು ಕಳೆದಿರುವೆ ಮುಂದಕ್ಕೆ ನಾನು ನಿನ್ನ ಗಂಡನಲ್ಲ ನೀನು ನನ್ನ ಹೆಂಡತಿಯಲ್ಲ ನನಗೂ ನಿನಗೂ ಯಾವ ಸಂಬಂಧವೂ ಇಲ್ಲ"

ತಿಳಿದಿರಲಿ ಇಂತಿ

ರಾಮಪ್ಪ

ವಾಚಕ ಮಹಾಶಯರೆ, ಅತ್ತ ನೋಡಿರಿ! ಕತ್ತಲೆಯ ಕೋಣೆಯಲ್ಲಿ ಒಂದು ಪೆಟ್ಟಿಗೆಗೆ ಒರಗಿ ಕುಳಿತಿರುವ ರಾಮಪ್ಪನನ್ನು' ದುಃಖ ಮತ್ತು ನಾಚಿಕೆಗೊಳಗಾಗಿರುವ ಅವನ ಮೋರೆಯನ್ನು, ಕಮಲಳು ತನ್ನ ಹೊಟ್ಟೆನೋವಿನ ಕುರಿತು ತನಗೆ ಹೇಳಿದ ಕಲ್ಪಿತ ಕಥೆ, ಮದುವೆಯ ದಿನ ಅವನಿಗೆ ಅನಾಮಧೇಯರೊಬ್ಬರಿಂದ ಬಂದ ಒಂದು ಪತ್ರದಲ್ಲಡಕವಾಗಿದ್ದ ಸತ್ಯನಿರೂಪಣೆ, ಇಲ್ಲದ ಹಣವನ್ನು ಉಂಟುಮಾಡಿ, ಮದುವೆಯಾಗಿ, ಸಾಲಕ್ಕೊಳಗಾದ ತನ್ನ ದುಃಸ್ಥಿತಿಗಳನ್ನು ಅವನು ವಿಮರ್ಶಿಸುತ್ತಿರುವನು

ಮ ಜಾ.

ಕ್ವೆಟ್ಟಾಕ್ಕೆ ಯಾರೂ ಕಾಲಿಡಬಾರದು!

ಸಹಾಯಸಮಿಗಳು ಹೋಗಬಾರದು!

ರಾಜೇಂದ್ರ ಪ್ರಸಾದರಿಗೂ ಹೋಗಲವಕಾಶವಿಲ್ಲ?

ಕ್ವೆಟ್ಟಾ ಭೂಕಂಪವಾದೊಡನೆ ಅಖಿಳ ಹಿಂದೂಸ್ಥಾನದಿಂದಲೂ ಸಹಾಯ ಸಮಿತಿಗಳು ಅತ್ತ ತೆರಳಲು ಸಿದ್ಧವಾದುವು. ಶ್ರೀ ಕೃಪಲಾನಿ ಮತ್ತು ಜಯರಾಮ್‌ದಾಸ್ ದೌಲತ್ ರಾಮರವರು ಒಡನೆ ಅಲ್ಲಿಗೆ ಹೋದರು ಆದರೆ ನಗರವನ್ನು ಪ್ರವೇಶಿಸಲು ಮಿಲಿಟರಿಯವರು ಬಿಡಲಿಲ್ಲ ತಾವು ಸಹಾಯ ಸಮಿತಿಗಳನ್ನೇ ಏರ್ಪಡಿಸಿಕೊಂಡು ಬಂದಿರುತ್ತೇವೆಂದು ತಿಳಿಸಿದರೂ ಮಿಲಿಟರಿಯವರು ಕೃಪಲಾನಿಯವರೇ ಮೊದಲಾದವರನ್ನು ಒಳಗೆ ಪ್ರವೇಶಿಸಬಿಡಲಿಲ್ಲ. ಶ್ರೀ ಕೃಪಲಾನಿಯವರ ಮಹಾತ್ಮರಿಗೂ ರಾಜೇಂದ್ರ ಪ್ರಸಾದರಿಗೂ ತಂತಿ ಬಿಟ್ಟು ಕೂಡಲೇ ವೈಸರಾಯರಿಗೆ ಮೊರೆಯಿಟ್ಟು ಸಹಾಯಸಮಿತಿಗಳು ನಗರವನ್ನು ಪ್ರವೇಶಿಸುವಂತೆ ಏರ್ಪಡಿಸಬೇಕೆಂದು ಕೇಳಿಕೊಂಡರು. ಅದೇ ಮೇರೆಗೆ ರಾಜೇಂದ್ರರು ವೈಸರಾಯರೊಡನೆ ಕೇಳಿಕೊಂಡರು ವೈಸರಾಯರು ಉತ್ತರವಾಗಿ ತಂತಿಕೊಟ್ಟು, 'ಕ್ವೆಟ್ಟಾದಲ್ಲಿ ರೋಗಗಳು ಹಬ್ಬುವ ಸಂದರ್ಭವಿದೆ ಅಲ್ಲಿ ಈಗ ಹೆಚ್ಚಿನ ಜನರಿಲ್ಲ ಇರುವವರನ್ನು ಪರದೇಶಗಳಿಗೆ ಕಳುಹಿಸಲಾಗಿದೆ. ಆದುದರಿಂದ ಹೊರಗಿನವರು ಯಾರೂ ಕ್ವೆಟ್ಟಾವನ್ನು ಪ್ರವೇಶಿಸುವ ಅಗತ್ಯವಿಲ್ಲ' ಎಂದು ತಿಳಿಸಿದರು.

ಸಿಂಧ್ ದೇಶದ ಕಮಿಶನರರು ಒಂದು ಕರಾರುಯನ್ನು ಮುಂಬಾಯಿಯ ಮೇಯರರಿಗೆ ಕೊಟ್ಟು ಕರಾಚಿಗೆ ಸಹಾಯಸಮಿತಿಗಳು ಕಳುಹಿಸಲ್ಪಡುವುದು ಅಗತ್ಯವಿಲ್ಲವೆಂದು ತಿಳಿಸಿದ್ದಾರೆ. ಈ ವಾರ್ತೆಯು ಎಲ್ಲೆಲ್ಲೂ ಹರಡಿ ಗೊಂದಲವೇಳಲು ಕಾರಣವಾಗಿದೆ.

ಕ್ವೆಟ್ಟಾದ ಬಾಗಿಲಲ್ಲಿ ಸಹಾಯಸಮಿತಿಗಳು ಸಿದ್ಧವಾಗಿ ನಿಂತಿವೆ ಆದರೆ ಅವುಗಳು ಒಳಗೆ ಪ್ರವೇಶಿಸಕೂಡದೆಂದು ಆಜ್ಞೆಯು ಇರುತ್ತದೆ

ಘಾಯಗೊಂಡವರನ್ನು ಎಲ್ಲಿ ಸಂರಕ್ಷಿಸುತ್ತಿದ್ದಾರೆಂಬ ಬಗ್ಗೆ ಯಾವ ವಾರ್ತೆಯೂ ಸಿಗದಿರುವುದರಿಂದ ಮುಂಬಾಯಿಯಲ್ಲಿ ರಾಜೇಂದ್ರ ಪ್ರಸಾದರ ನೇತೃತ್ವದಲ್ಲಿರುವ ಸಹಾಯಸಮಿತಿಗಳು ಕಂಗೆಟ್ಟುಹೋಗಿವೆ.

ಕ್ವೆಟ್ಟಾದಲ್ಲಿ ವಿಚಾರಿಸುತ್ತಿರುವ ಪತ್ರಿಕಾ ಪ್ರತಿನಿಧಿಗಳು ತಿಳಿಸಿರುವುದೇನೆಂದರೆ–ಬಿಹಾರಿನ ಭೂಕಂಪದ ಸಮಯದಲ್ಲಿ ಹಲಕೆಲವರು ಸತ್ತರಾದರೂ, ಉಳಿದಿಷ್ಟ ಹೆಚ್ಚಿನವರು ಗೋಡೆ ಮಣ್ಣು ಕಟ್ಟಡಗಳಡಿಯವರಲ್ಲಿದ್ದವರನ್ನು ರಕ್ಷಿಸುವಷ್ಟು ಶಕ್ತರಾಗಿದ್ದರು ಆದರೆ ಕ್ವೆಟ್ಟಾದ ಭೂಕಂಪದಲ್ಲಿ ೪೦,೦೦೦ ಜನರು ಮೃತರಾದರೆಂದಿರುವಾಗ ಬರೀ ೬೦೦ ಕೂಲಿಗಳನ್ನು ಪರವೂರುಗಳಿಂದ ತರಿಸಿ ಕೆಲಸ ನಡೆಸುವುದು ಎಷ್ಟಕ್ಕೂ ಸಾಲದು ಮಣ್ಣನಡಿಯಲ್ಲಿ ಎಷ್ಟೋ ಜನರು ಅಸಹಾಯಪರರಾಗಿ ಇನ್ನೂ ಇರಬಹುದು ಅವರನ್ನು ಬದುಕಿಸುವ ವ್ಯವಸ್ಥೆಯನ್ನು ಮಿಲಿಟರಿಯವರೂ ಸರಕಾರವೂ ಕೂಡಲೇ ಮಾಡಬೇಕಾಗಿದೆ ಮಿಲಿಟರಿಯವರು ಎಲ್ಲಾ ಜನರನ್ನು ರಕ್ಷಿಸಿದ್ದಾರೆಂದು ಹೇಳುವಂತಿದೆ ಅನೇಕ ಕಡೆಗಳಲ್ಲಿ ಕಟ್ಟಡಗಳು ಬಿದ್ದಂತೆಯೇ ಇರುವಾಗ, ಅವುಗಳಡಿಯಲ್ಲಿ ಜನರಿರುವುದಿಲ್ಲವೆಂದು ಸೈನಿಕರಾಗಲೀ ಸರಕಾರವಾಗಲೀ ಹೇಗೆ ಭರವಸೆ ಕೊಟ್ಟೀತು?

ಇಂತಹ ಪರಿಸ್ಥಿತಿಯಲ್ಲಿ ದೇಶೀಯರ ಸಹಾಯಸಮಿತಿಯು ಒಡನೆ ರಚಿಸಲ್ಪಟ್ಟು ಕ್ವೆಟ್ಟಾದಿಂದ ಹೊರಗೆ ಬಂದಿರುವ ನಿರ್ಗತಿಕರಿಗೆ ಸಹಾಯ ನೀಯಬೇಕೆಂದು ಬಾಬು ರಾಜೇಂದ್ರ ಪ್ರಸಾದರು ನಿರ್ಣಯಿಸಿರುವರು ಮುಂಬಾಯಿ, ಕರಾಚಿ, ಸಿಂಧ್, ಪಂಜಾಬುಗಳ ಮುಖಂಡರನ್ನು ಸಂದರ್ಶಿಸಿ ಈ ಬಗ್ಗೆ ವ್ಯವಸ್ಥೆ ಮಾಡುತ್ತಿರುವರು ಮುಂಬಾಯಿ, ಕೊಂಗ್ರೆಸ್ ಸಮಿತಿಯೂ ಈ ಬಗ್ಗೆ ಕೆಲಸ ಮಾಡುತ್ತದೆ

ಔಷಧದ ಮೂಲಿಕೆಗಳು

ಅನ್ಯದೇಶಗಳವರ ಔಷಧ ಶಾಲೆಗಳಿಗೆ ಅಗತ್ಯವಿದ್ದ ಗಿಡಮೂಲಿಕೆಗಳನ್ನು ಇನ್ನುವರೆಗೂ ಜರ್ಮನಿ ಮತ್ತು ಆಸ್ಟ್ರಿಯಾಗಳು ವಿಶೇಷವಾಗಿ ಒದಗಿಸುತ್ತಿದ್ದುವು ಮಹಾಯುದ್ಧದ ನಂತರ ಈ ವ್ಯಾಪಾರವು ನಿಂತು ಹೋಗಿದೆ ಆದುದರಿಂದ ಪ್ರಕೃತದಲ್ಲಿ ಇಂತಹ ಮೂಲಿಕೆಗಳ ಪೈರನ್ನು ಬೆಳೆಯಿಸಿ ವ್ಯಾಪಾರ ಮಾಡುವವರಿಗೆ ವಿಶೇಷವಾದ ಲಾಭವಿದೆಯೆಂದು ಕಾಣಿಸಿ, ಇಂಗ್ಲೆಂಡಿನ ವ್ಯವಸಾಯ ಮಂಡಲಿಯವರು ಒಂದು ಚಿಕ್ಕ ಪತ್ರಿಕೆಯನ್ನು ಪ್ರಚುರಪಡಿಸಿರುವರು ದತ್ತೂರಿ (ಉನ್ಮತ್ತ) ಸೋಪು, ಸಬ್ಬಸಿಗೆ, ನಾಗದಾಳಿ, (ಸದಾಪು) ಕರಿಜೀರಿಗೆ, ಕಾಡು ಹೊಗೆಸೊಪ್ಪು, ಮೊದಲಾದ ಔಷಧದ ದಿನಸುಗಳನ್ನು ಬೆಳೆಯಿಸಿ ವಿಕ್ರಯಗಾರರೂ, ವ್ಯವಸಾಯಗಾರರೂ ಒಟ್ಟಾಗಿ ವ್ಯಾಪಾರ ಮಾಡಬೇಕೆಂದು ತಿಳಿಸಿರುವರು ಕೆಲಸವಿಲ್ಲವೆಂದು ಚಿಂತಿಸುವವರೂ ಹಣ ಸಂಪಾದಿಸಲಿಷ್ಟವುಳ್ಳವರೂ ಈ ವಿಷಯಕ್ಕೆ ಗಮನವಿತ್ತು, ಅಂತಹ ಮೂಲಿಕೆಗಳನ್ನು ಕೂಡಿಹಾಕುವುದೂ ಅಥವಾ ಹೊಸದಾಗಿ ಅವುಗಳನ್ನು ಬೆಳೆಯಿಸುವುದೂ ಲಾಭಕರವಾಗಿದೆ.

ನಗಬಾರದು.

ಉಪಾಧ್ಯಾಯ:–ಸಂಜೀವ, ಇಲ್ಲಿ ಬಾ.(ಸಂಜೀವನು ಬರುವನು)

ಉಪಾಧ್ಯಾಯ.—ನೆಟ್ಟಗೆ ನಿಲ್ಲು. (ನಿಲ್ಲುವನು) ಎರಡು ಕೈಗಳನ್ನೂ ಪಕ್ಕಕ್ಕೆ ಚಾಚು. ಈಗ ನಿನ್ನ ಬಲಗೈಯತ್ತ ಇರುವ ದಿಕ್ಕು ಯಾವುದು?

ಸಂಜೀವ:—ಉತ್ತರ ಸರ್.

ಉಪಾಧ್ಯಾಯ:–ನಿನ್ನ ಎಡಗೈಯ ದಿಕ್ಕಿನಲ್ಲಿ ಇರುವುದೇನು?

ಸಂಜೀವ –ಗೋಡೆಯ ಮೇಲೆ ಒಂದು ಚಿತ್ರ ಸರ್!

\+ + + +

ಉಪಾಧ್ಯಾಯ —ಅರಬ್ಬಿ ದೇಶವು ಹಿಂದೂ ದೇಶದ ಯಾವ ದಿಕ್ಕಿನಲ್ಲಿದೆ?

ಒಬ್ಬ ಹುಡುಗನು ಥಕ್ಕನೇ ಎದ್ದು.—ಮೇಪಿನಲ್ಲಿ ನೋಡಿರಿ ಸರ್!

\+ + + +

ತಂದೆ –ರಘೂ, ಲೆಕ್ಕಗಳನ್ನು ನಾನು ಮಾಡಿಕೊಟ್ಟದೆಂದು ಉಪಾಧ್ಯಾಯರಿಗೆ ತಿಳಿಯಿತೇ?

ಮಗ –ಹೌದಪ್ಪಾ, 'ಇಬ್ಬರು ಕೂಡಿದುದರಿಂದಲೇ ಲೆಕ್ಕಗಳೆಲ್ಲ ತಪ್ಪಾಗಿವೆ' ಎಂದರು.

\+ + + +

ಉಪಾಧ್ಯಾಯ —ಸರ್ವೋತ್ತಮ, ನೀನು ಸರ್ವೋತ್ತಮನೆಂದಿದ್ದರೂ ಶಾಲೆಗೆ ಬರುವಾಗ ತಡವಾಗಿಯೇ ಬರುತ್ತೀ! ನೀನು ಸರ್ವರಲ್ಲಿ ಅಧಮ!

ಸರ್ವೋತ್ತಮ –ಸರ್, ನಾನು ಶಾಲೆಗೆ ನನ್ನ ಸಮಯದಲ್ಲಿ ಬರುತ್ತಿದ್ದೇನೆ ಸರ್ ಶಾಲೆಯ ಪಿಯೋನ್ ಮಾತ್ರ ಘಂಟೆಯನ್ನು ನಾನು ಬರುವ ಮೊದಲೇ ಹೊಡೆಯುತ್ತಾನೆ ಆದುದರಿಂದ ನಾನು ಸರ್ವೋತ್ತಮನೇ!

\+ + + +

ಪೋಸ್ಟ್‌ಮಾಸ್ಟರ್:–ಈ ಕಾಗದವು ಒಂದು ತೊಲೆ ಭಾರವಿದೆ ಇದಕ್ಕೆ ಇನ್ನೊಂದು ಮುಕ್ಕಾಲಿನ ಚೀಟು ಬೇಕು

ಹಳ್ಳಿಯವ –ಆ ಚೀಟನ್ನು ಹಚ್ಚಿದರೆ ಅದು ಇನ್ನಷ್ಟು ಹೆಚ್ಚು ಭಾರವಾಗದೆ? ಹೆಡ್ಡರಂತೆ ಹೇಳಬೇಡಿ ಸ್ವಾಮಿ

\+ + + +

ಉಪಾಧ್ಯಾಯ –ನಿನ್ನ ತಂದೆಗೆ ನಿನ್ನ ತಾಯಿಯು ಪತ್ರ ಬರೆಯುವಾಗ ಅವಳು ಏನೆಂದು ಬರೆಯಬೇಕು?

ಹುಡುಗ –ಸರ್, ನನ್ನ ತಾಯಿಯು ನನ್ನ ತಂದೆಯವರೊಡನೆ ಮಾತನಾಡದೆ ನಾಲ್ಕು ವರ್ಷಗಳಾದುವು ಅವರು ಪತ್ರ ಬರೆದಾರೇ!

\+ + + +

'ನೀವು ಹಾಲಿಗೆ ನೀರನ್ನು ಏಕೆ ಬೆರಸುವುದು?'

'ನಾವು ಹಾಲಿಗೆ ನೀರನ್ನು ಬೆರಸುವುದಿಲ್ಲ' ನೀರನ್ನು ಹಾಲಿಗೆ ಬೆರಸುವುದು

\+ + +

ಉಪಾಧ್ಯಾಯ —ರಂಗ, ಭೂಮಿಯು ತಿರುಗುತ್ತಿರುವುದೇಕೆ?

ರಂಗ–(ಆಕಳಿಸುತ್ತ ಎದ್ದು ನಿಂತು) ನಿದ್ದೆ ಇಲ್ಲ ಸರ್'

\+ + + +

ನ್ಯಾಯಾಧೀಶ —'ಕೈದಿಯೇ, ನೀನು ಆ ಕೋಳಿಯನ್ನು ಕದಿಯಲಿಲ್ಲವೆನ್ನುತ್ತಿ! ನೋಡಿದವರು ಆರು ಮಂದಿ ಇದ್ದಾರೆ.'

ಕೈದಿ –ನೋಡದವರು ಆರುನೂರು ಮಂದಿ ಇದ್ದಾರೆ ಸ್ವಾಮಿ, ಬಿಡಿ'

\+ + + +

'ನಿನ್ನ ಮಗನ ಕೋಲೇಜ್ ವಿದ್ಯಾಭ್ಯಾಸದಿಂದ ನಿನಗೆ ಏನಾದರೂ ಪ್ರಯೋಜನವಾಗಿದೆಯೋ!'

'ನನ್ನ ಹೆಂಡತಿ ಈಗ ನನ್ನ ಮಗನನ್ನು ಹೊಗಳುವುದನ್ನು ಬಿಟ್ಟುಬಿಟ್ಟಿದ್ದಾಳೆ'

[ಸ್ವಕಪೋಲ ಕಲ್ಪಿತ ಹಾಸ್ಯಗಳನ್ನು ಕಳುಹಿಸುವವರಿಗೆ ಯೋಗ್ಯ ಬಹುಮಾನಗಳನ್ನು ಕೊಡಲಾಗುವುದು.]

ಅಗ್ರಗಣ್ಯ ಸಂಗೀತಜ್ಞರು ಅದರ ಪ್ರಶಂಸಾಗಾನವನ್ನು ಮಾಡಿದ್ದಾರೆ.

ಮುಸಿರಿ ಸುಬ್ರಹ್ಮಣ್ಯ ಐಯ್ಯರ್,

6 ಒಲಿವರ್ ರೋಡ್,
ಮೈಲಾಪುರ ಮದ್ರಾಸು.

ಅನೇಕ ಸಮಯದಿಂದ ನನ್ನ ಕುಟುಂಬದವರೆಲ್ಲ 'ಕೇಶವರ್ಧಿನಿ'ಯನ್ನು ಬಿಡದೆ ಉಪಯೋಗಿಸುತ್ತಿರುವರೆಂದು ತಿಳಿಸಲು ಸಂತೋಷಿಸುತ್ತೇನೆ. ಉದುರುವ ಕೂದಲನ್ನು ತಡೆಯುವ ಅದರ ಶಕ್ತಿಯನ್ನು ಪೂರ್ಣವಾಗಿ ತಿಳಿದು, ಅಲ್ಲದೆ ಕೂದಲನ್ನು ಅದು ಬೆಳೆಯಿಸುವ ಅದರ ಗುಣವನ್ನು ಅರಿತು ಅವರು ಅದರ ಗುಣಗಾನವನ್ನು ಮಾಡಿ ಸ್ನೇಹಿತರಿಗೂ ಅದನ್ನು ಶಿಫಾರಸು ಮಾಡುತ್ತಾರೆ. ಕೇಶಗಳಿಗೂ ಮೆದುಳಿಗೂ ಸಮರ್ಪಕವಾದ ಎಣ್ಣೆಯೊಂದು ಅಗತ್ಯವಿರುವವರು ಇದನ್ನು ಪ್ರಯೋಗಿಸಬಹುದೆಂದು ನಾನು ಶಿಫಾರಸು ಮಾಡುತ್ತೇನೆ.

(ಸಹಿ) ಮುಸಿರಿ ಸುಬ್ರಹ್ಮಣ್ಯ ಅಯ್ಯರ್.

ಬೋಳು ತಲೆಯವರಾಗಿರಬೇಡಿ ಅಥವಾ ತಲೆಕೂದಲು ಅಪರಿಪಕ್ವ ಸಮಯದಲ್ಲಿ ಬೆಳ್ಳಗಾಗದಂತೆ ನೋಡಿ

ಬಾಟ್ಲಿ 1ಕ್ಕೆ ಆಣೆ 12. **'ಕೇಶವರ್ಧಿನಿ'** ಪೇಕಿಂಗ್ ಮತ್ತು ಅಂಚೆವೆಚ್ಚ ಪ್ರತ್ಯೇಕ

ಪೇಟೆಯ ಎಲ್ಲ ವ್ಯಾಪಾರಿಗಳಲ್ಲಾಗಲೀ ಅಥವಾ ಈ ವಿಳಾಸದಲ್ಲಾಗಲೀ ಸಿಗುವುದು —

South India Chemicals, LU / ROAD Mylapore Madras

ಮಂಗಳೂರಿನ ಏಜಂಟರು—ಪೊಪ್ಯುಲರ್ ಸ್ಟೋರ್ಸ್, ರಥಬೀದಿ ಮಂಗಳೂರು

Old! Famous!

East & West Insurance Co., Limited.

Bonus Declard Rs 15/- Per Thousand Per Annum

Insurance in Force About	Rs 90,00,000
Annual Premium Income Over	Rs 4,50 000
Life Fund Over	Rs 7,00,000

Prompt Settlement of Claims
Low Rates of Premium and Various Attractive Plans.

Attractive and liberal agency contracts are offered to honest influential gentlemen

Inquiries Solicited —
Messrs Padubidri Bros, *Chief Agents*, PADUBIDRI BOMBAY

OR

Head Office
East & West Buildings, Apollo Street, Fort Bombay

'ಜ್ಯೋತಿ'

ಸಚಿತ್ರ ಕನ್ನಡ ಮಾಸಪತ್ರಿಕೆ.

ಸಂಪಾದಕರು —ಕೆ ಶ್ರೀಧರ್

ಸುರಸವಾದ ಕಥೆ, ಕವನಗಳು, ವಿಚಾರ ಪರಿಪ್ಲುತ ಲೇಖನಗಳು
ಕಮನೀಯವಾದ ಚಿತ್ರಗಳು

ವಾರ್ಷಿಕ ಚಂದಾ ರೂ ೧—೮—೦
ಬಿಡಿಸಂಚಿಕೆ ರೂ. ೦—೨—೦.
ವ್ಯಾಪಾರಸ್ಥರಿಗೆ ಅತ್ಯುತ್ತಮ ಸಾಧನ

1¼ CRORE

Karnatics know nothing of your products — Advertise them in

Swadeshabhimani

the pioneer Weekly of the South Kanara District

For Advertisement rates apply to

The Advertisement Manager,
Swadeshabhimani,
Mangalore

ಪ್ರಶಂಸೆ.

ಪ್ರಖ್ಯಾತ ಅಮೆರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ

ವಿ—ಮೊ—ಲ

VIM-O-LA

ಅಮೆರಿಕಾದ ಜೀವಸಾರ ವಸ್ತು.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ ಹೊಟ್ಟೆಯಲ್ಲಿ ಚೆಂಡಿನಂತೇಳುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ ನರಗಳನ್ನು ಪುಷ್ಟಗೊಳಿಸುವ ಶಕ್ತಿವರ್ಧಕ ಪಾನೀಯ. ಕೂಡಲೇ ಒಂದು ಬಾಟ್ಲಿಯನ್ನು ಪ್ರಯೋಗಿಸಿರಿ. ಬಾಟ್ಲಿ 1ಕ್ಕೆ ರೂ. 1 4-0 ಪೆಕಿಂಗ್ ಚಾರ್ಜು ಪ್ರತ್ಯೇಕ ಸ್ಟೋಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ ಇಲ್ಲಿಗೆ ಬರೆಯಿರಿ

'Vimola Depot'

Manufactured by

American Herbal Products Co.,
Sole representatives for above medicine

The National Kanara News Agency,
Sir Phirozsha Metha Road
Fort Bombay

ಲೇಡಿಸ್ ಬಾಂ

ಸ್ತ್ರೀಯರ ಜೀವನಾಧಾರ

ಸ್ತ್ರೀಯರು ವೃದ್ಧರಾಗಿಯೂ ... ಇರಲೇಕಾದರೆ ಅವರ ಮುಟ್ಟಿದೋಷ, ಆ ಸಮಯದಲಿ ... ಹೊಟ್ಟೆ ... ಗಂಟುನೋವು, ಸೈಯಲ್ಲಿ ... ನೋವು ... ಮತ್ತು ಅವರ ಅನೇಕ ತರದ ಗುಪ್ತರೋಗಗಳನ್ನು ... ಇದರ ಒಂದು ಶೀಸೆಯನ್ನು ಉಪಯೋಗಿಸಿದರೆ ಗುಣವನ್ನು ಕಾಣುವಿರಿ

ಉಪಯೋಗಿಸಿದವರ ಅಭಿಪ್ರಾಯ —

ರಾಮಕೃಷ್ಣ ಜೈನ್ ಬಿ ಎ ಲಾಹೋರ್ 'I find your Ladies Balm worth the money I spent on it'

ಯಾವ ತರದ ಔಷಧಿಗಳಿಂದಲೂ ... ಅಸಮರ್ಥರೆಂದಾದರೆ ನಮ್ಮ ಲೇಡಿಸ್ ಬಾಮನ್ನು ಉಪಯೋಗಿಸಿ ... ಔಷಧಿಯಿರುವ ಶೀಸೆಗಳಿಗೆ ರೂ ೩—೦—೦ ...

ತಯಾರಿಸುವವರ —**ದಿ ಬಿಹಾರ ಕೆಮಿಕಲ್ ವರ್ಕ್ಸ್, ಬಾಗಲಪುರ.**

ಏಜಂಟರು—ಪಪ್ಪೂ ಕಂಪೆನಿ, ... ಮಂಗಳೂರು.

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ

ರಾಷ್ಟ್ರಧುರೀಣರಾದ ಲಾಲಾಲಜಪತ್ತರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು.

1924 ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

ಕೆಲಸದ ಫಲಿತಾಂಶ.		ಲೈಫ್ ಫಂಡ್
1925—	ರೂ 21,24 250	500
1929—	ರೂ 1,66,18,620	9,32,900
1934—	ರೂ 46,77,223	49 08,771.

ಕ್ಲೈಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ ಕಂಪೆನಿಯ ಆಸ್ತಿ—57,00,000ಕ್ಕೆ ಮೀರಿದೆ. 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ. ಲಾಭಹೊಂದಬೇಕಾಗಿದೆ. / ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ ಲಕ್ಷ್ಮಿಯಲ್ಲಿವೆ

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co., Ltd,
Madras Branch,
No 6, Sankuram Chetty St., G. T. MADRAS

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6, ಸಂಕುರಾಮ ಚೆಟ್ಟಿ ಬೀದಿ, ಜಿ. ಟಿ. ಮದ್ರಾಸು

The Canara Banking Corporation Udipi, Ltd.

Head office:—UDIPI, S. K. (Incorporated in British India) Tr.—'BANKING' **ESTD. 1906.**

Branches:—1 Udipi, 2. Coondapoor, 3 Car Street, Mangalore, 4 Shimoga, 5. Madras, 6 Bunder Mangalore, 7 Mercara.

Progressive Statement from 1919—1935

Year	Subscribed Capital	Paid up Capital	Reserve and other Funds	Deposits	Investments on Govt Securities	Total Working Capital
1919	Rs 24,500	Rs. 22970	Rs 7,140	Rs 21,942	—	Rs 61,197
1923	,, 1,54,400	,, 1,04,861	,, 29,149	, 3,47,284	Rs. 25,700	,, 5,88,275
1927	,, 2,25,000	, 1,99,280	,, 83,000	,, 10 89,261	1,86,984	,, 14,81,690
1931	,, 2,25,000	, 2,25,000	,, 204,641	,, 19,53,492	, 3,80 788	,, 25,07 888
1934	,, 2,25,000	,, 2,25,000	,, 260,958	, 24,95,829	,, 6,51,559	, 31,62,454
31 5 35	,, 3,50,000	,, 2,64,375	,, 316,995	, 24,63 948	,, 6,77,059	,, 36 01,625

ಕೋರ್ಪರೇಶನ್ ಆಫೀಸು, ಉಡುಪಿ, 6-6 35

M. Shrinivas Prabhu,
Manager

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯು ಮುಲಾಮು ಇಲ್ಲಿಯ ವರೆಗಿನ ನಮ್ಮ ಪಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ 'ಕಿಂಗ್ ಎಂಡ್ ಕ್ವೀನ್' ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಪೇಕ್ಷೆಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ರಜತೋತ್ಸವ ವರ್ಷ — ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್ ಸ್ಥಾಪನೆ 1910) — ರಜತೋತ್ಸವ ವರ್ಷ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಚೆಯರ್‌ಮೆನ್:- ಸರ್ ಲಲ್ಲೂಭಾಯಿ ಸಮಲ್ದಾಸ್, ಕೆಟಿ ಸಿ ಐ ಇ ಜೆ ಪಿ)

ಇದರ ದಕ್ಷಿಣ ಹಿಂದುಸ್ಥಾನ ಪತ್ತು ದೇಶಿಯ ಸಂಸ್ಥೆಗಳ ಶಾಖಾ ಕಾರ್ಯದರ್ಶಿಗಳ ನ ಬೆಂಗಳೂರು ನಗರ ಮತ್ತು ಉಪನಗರಗಳ ಪ್ರಾಮುಖ್ಯ ಏಜಂಟರು

ಪೋಲಿಸಿದಾರರು ಮತ್ತು ಏಜಂಟರುಗಳಿಗೆ ನಮ್ಮ ಸಂದೇಶ —

ಕಳೆದ ಕಾಲು ಶತಮಾನದಲ್ಲಿ ... ಸಂಸ್ಥೆಯ ಸೇವೆಯಲ್ಲಿ ನಮ್ಮ ಪೋಲಿಸಿದಾರರ ಮತ್ತು ಏಜಂಟರ ಹಿತವನ್ನೇ ಧ್ಯೇಯವನ್ನಾಗಿ ಮಾಡಿಟ್ಟುಕೊಂಡು ಬಂದಿರುವೆವು ... ಅವರ ಕಷ್ಟಗಳು ಬೇಗೆಗಳು ಮತ್ತು ಆಶಯಗಳೂ ನಮ್ಮದೆಂದೇ ಪರಿಗಣಿಸುತ್ತಾ ಬಂದಿರುವೆವು. ಹಿಂದೀ ಜೀವವಿಮಾ ಪ್ರಪಂಚದ ನಮ್ಮ ಅನುಭವವೂ ಅನುಭೂತಿಪೂರ್ವಕವೂ ಆದ ಪಿಡಿಯಿಂದ ... ನಮ್ಮ ವ್ಯವಹಾರದಲ್ಲಿ ಒಂದು ಕೋಟಿಯಷ್ಟು ಮೊಬಲಗಿನ ಪೋಲಿಸಿಗಳನ್ನು ಜ್ಯಾರಿಯಲ್ಲಿಟ್ಟುಕೊಳ್ಳುವಷ್ಟು ಸಮರ್ಥರನ್ನಾಗಿ ಮಾಡಿರುತ್ತದೆ ... ನಮ್ಮ ಮಹತ್ವದ ... ಉದಾಹರಣೆಗಳೆಂದರೆ ಕಳೆದ ೨೫ ವರ್ಷಗಳ ಅವಧಿಯಲ್ಲಿ ನಮ್ಮ ಶತಾಧಿಕ ಏಜಂಟರುಗಳಲ್ಲಿ ಒಬ್ಬರಾದರೂ ಸಮ್ಮೊಡನೆ ಸಂಬಂಧವನ್ನು ಮುರಿದಿರುವುದಿಲ್ಲ

ಜೀವವಿಮಾ ವಿಕ್ರಯಕ್ರಮಗಳಲ್ಲಿ ಸಂಪೂರ್ಣ ತರಬೇತಿ ಕೊಡಲಾಗುತ್ತದೆ ಚತುರರಾದ ಉತ್ಸಾಹೀ ತರುಣರ ಭಾವೀ ಕಲ್ಯಾಣವಾಗುತ್ತದೆ

ನಮ್ಮ ಈ ಕೆಳಗಿನ ಯಾವುದಾದರೂ ಆಫೀಸುಗಳಿಗೆ ಬರೆಯಿರಿ ಅಥವಾ ಸ್ವತಃ ಬಂದು ಕಾಣಿರಿ

(1) ಇಸ್ಮಾಯಿಲ ಬಿಲ್ಡಿಂಗ್, ಲೋಹರ್ ಚಾಲ್, ಮುಂಬ್ಯಾನಂ 2 (2) ಪೋಸ್ಟ್ ಬಾಕ್ಸ್ 337, ಮೌಂಟ್ ರೋಡ್ ಮದ್ರಾಸು (3) ವಿಶ್ವೇಶ್ವರಪುರಂ, ಬೆಂಗಳೂರು ಸಿಟಿ (4) ಹುಜೂರ್ ರೋಡ್, ಕಲ್ಲಿಕೋಟೆ (5) ರಥಬೀದಿ, ಮಂಗಳೂರು (6) ಉಡುಪಿ, ದಕ್ಷಿಣ ಕನ್ನಡ

Karnataka Chemical and Pharmaceutical Works, Ltd, Udipi (South India)

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ ಕರ್ನಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ನಾಟಕ ಹೌಸ್ಹೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು, ಖರ್ಚು ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ.

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)

ಕರ್ನಾಟಕ ಸ್ನೋ, ಕರ್ನಾಟಕ ಬ್ರಿಲ್ಲಿಂಟ್ಯಾನ್, ಅರ್ಗೋರಾ ಕ್ರೀಮ್, ಕ್ರಿಮೊರ್ ಲಿಮೊಸಿನ್, ಕರ್ನಾಟಕ ರೋಸ ಪೊಮೇಡ್.

ಇದಲ್ಲದೆ ನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್‌ಪೇನು ಶಾಯಿಗಳೂ ಸಿದ್ಧವಾಗುವುವು.

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಪ್ಪಿಪ್ಪ ಬಾಳಿಗ.

ಹೆಡ್ ಆಫೀಸು ಮತ್ತು ಕಾರಖಾನೆ —ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೊ —(1) ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2

ಏಜಂಟ್ಸ್— (2) 1/70 ನ್ಯಾಪಪ್ಪ ನ್ಯಾಕನ ಬೀದಿ, ಜಾರ್ಜ್ ಟೌನ್ ಮದರಾಸು.

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

Edited, Printed & Published By A. S. Kamath at the Sharada Press, Car Street, Mangalore.

ವಾರ್ಷಿಕ ಚಂದಾ 3 ರೂಪಾಯಿ. ಬಿಡಿ ಸಂಚಿಕೆ 1 ಆಣೆ. ಟಪ್ಪಾಲು ಹಾಸಲು ಸೇರಿ ರೂ. 3-12-0.

for Quality Snuff
H. Rama Rao and Sons.
High Class Snuff Manufacturers
Mangalore S 1
ASK FOR —
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in THE BOMBAY LIFE
Kochikar Brothers

ESTABLISHED 1906
(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ಪುಸ್ತಕ ೨೯ ಮಂಗಳೂರು ತಾ. ೨೧ನೇ ಶುಕ್ರವಾರ ಜೂನ ೧೯೩೫ (21-6-'35) ಸಂಚಿಕೆ ೨೫

ಮೈಸೂರಿನ ಶ್ರೀಮನ್ಮಹಾರಾಜರವರ ೫೨ನೇ ಜನ್ಮದಿನೋತ್ಸವವು ತಾ. ೧೮ರಲ್ಲಿ ಜರಗಿತು.


ಮೈಸೂರು ಶ್ರೀಮನ್ಮಹಾರಾಜರವರ ಅರಮನೆಯ ಮುಂಭಾಗ


ಶ್ರೀಮನ್ಮಹಾರಾಜರವರ ರಾಜಶಕಟ


ಮೈಸೂರು ಅರಮನೆಯೊಳಗಿನ ಸಭಾಮಂದಿರ, ರಚನಾಕೌಶಲ್ಯ ನೋಡಿ.

ಮೆರವಣಿಗೆ; ಆನೆಯ ಮೇಲೆ ಅಂಬಾರಿಯಲ್ಲಿ ಶ್ರೀಮನ್ಮಹಾರಾಜರವರು ಕುಳಿತಿರುವರು.

ಚಕ್ರ

(All Rights Reversed)

—ಅಯ್ಯಾ, "ಸ್ವದೇಶಾಭಿಮಾನಿ" ಸಂಪಾದಕರೇ, ನಿಮ್ಮ "ಸಾಯ್ಬ"ನವರು ಇತ್ತೀಚೆಗೆ ಪದ ಹೇಳುವ ಅಭ್ಯಾಸವನ್ನು ಬಿಟ್ಟುಬಿಟ್ಟುದರಿಂದ ಈ ಮಳೆಗಾಲದಲ್ಲಿ ಅವರ ಪದಗಳನ್ನು ಬಾಯಿಪಾಠ ಕಲಿಯುವ ಸುಯೋಗವು ತಪ್ಪಿ ಹೋದಂತಾಗಿದೆಯಲ್ಲ? ಅವರೇಕೆ ಹೀಗೆ ಮಾಡಿದರು!" ಎಂದು ಪ್ರಿಯ ವಾಚಕರಲ್ಲೊಬ್ಬರು ಸಂಪಾದಕರಿಗೆ ಪತ್ರ ಬರೆದಿರುತ್ತಾರಂತೆ. ಏನು ಮಾಡಲಿ? ದೊಡ್ಡ ಪರೀಕ್ಷೆಯಲ್ಲೇ ಬಿದ್ದಿರುವೆನು. ಉರ್ವದಲ್ಲಿ ಬಿಕ್ಕರಿಕೊಟ್ಟರು ಬಡ ಶಾಲಾ ಮಕ್ಕಳ ಅರ್ಧ ಸಂಬಳದ ಅರ್ಜಿ ಫಾರಂಗೆ ದಸ್ಕತು ಹಾಕುತ್ತದಿಲ್ಲವೆಂದು ಖಡಾಖಡಿಯಾಗಿ ಹೇಳಿ ತಿರಸ್ಕರಿಸಿದಾಗ, ನಾನು ವಾಚಕರ ಈ ರಿಕ್ವೆಸ್ಟನ್ನು ತಿರಸ್ಕರಿಸದೆ,—ಇಗೊಳ್ಳಿ ಪದಾಹೇಳ್ತೇನೆ.

ಚಕ್ರದ ಮಹಿಮೆಯು ತೋರಿತು!
ಜೋರರ ಮಹಿಮೆಯು ಹೋಯಿತು!
ಮಂತ್ರಿಯ ತಂತ್ರವು ಹಾರಿತು!
ತಂತ್ರಿಯ ಮಂತ್ರವು ಜಾರಿತು!
ಇಂಡಿಯಾ ಬಿಲ್ಲು ಅರ್ಬಿತು!
ಬಿಲ್ಲಿಗೆ ಬಾಣ ಸೇರಿತು!

× × × × × ×

ಇನ್ನು ಇಂಡಿಯಾ ಬಿಲ್ಲು ಎಂಬುದು ಈ ದೇಶಕ್ಕೆ ಬಂದು ಯಾರ್‍ಯಾರ ಮೇಲೆ ಎಷ್ಟೆಷ್ಟು ಟ್ಯಾಕ್ಸ್ ಹೊಂಸುತ್ತದೋ, ಯಾರ್‍ಯಾರ ಅಸ್ತಿ ಯಾರ್‍ಯಾರಿಗೆ ಹೋಗುತ್ತದೋ ನೋಡೋಣ!

× × × × × ×

ಈ ಇಂಡಿಯಾ ಬಿಲ್ಲು ನಮ್ಮ ದೇಶದ ಕಾನೂನಾಗಿ ಬಂದು ಬಿಟ್ಟರೆ ಕೊಂಗ್ರೆಸ್ಸಿನವರ ಗತಿ ಹೇಗಾಗುತ್ತದೋ ದೇವರೇ ಬಲ್ಲ! ಕೊಂಗ್ರೆಸ್ಸಿನ ಅನುಯಾಯಿಗಳೇ! ಬೇಗನೇ ಸಿದ್ಧರಾಗಿರಿ! ನಿಮ್ಮ ಬಿಳಿ ಟೊಪ್ಪಿಗೊಂದು ಬ್ರಿಟಿಷ್ ಪತಾಕೆಯನ್ನು ಹಚ್ಚಿಸಿ, ಸರಕಾರದಡಿಯಲ್ಲಿ ಒಂದೊಂದು ಉದ್ಯೋಗವನ್ನು ಲಭಿಸಿಕೊಳ್ಳಲು ಅರ್ಜಿ ಮಾಡಿ,—ಶ್ರೀ ಸತ್ಯಮೂರ್ತಿಯವರ ಹಿಂಬಾಲಕರಾಗಿರಿ!

× × × × + ×

ನಮ್ಮ ಬಾಧೆಯು ಎಷ್ಟರವರೆಗೆ ಹೆಚ್ಚಾಗಿದೆಯೆಂದರೆ —ನಿಮ್ಮನ್ನು ಈ ಕೆಲ ಸರಕಾರದವರು ಕೈಬಿಟ್ಟು ಕ್ರೂರತೆ ಸಹ ಕೂಡಾ ಬಿಡಲಿಲ್ಲ! ನೋಡಿ ನಿಮ್ಮ ಗತಿ! ದೇಶಕ್ಕಾಗಿ ಕೆಲಸ ಮಾಡಿದವರ ಗತಿಯೇ ಹೀಗೆ! ಇ ಪಡಿ ಗಾಂಧಿಯ ಅವಸ್ಥೆ ನೋಡಿ! ತಿಂಗಳಿಗೆ ೩೦೦ ಪವನುಗಳ ಸಂಪಾದನೆಯನ್ನು ಬಿಟ್ಟು, ರಾಜಮಹೇಂದ್ರಿಯಲ್ಲಿ ದಿನಹರಿಜ ಮಾಡುವುದನ್ನು ಬಿಟ್ಟು ಬಟ್ಟೆಬರೆಗಳಿಲ್ಲದೆ ಅನ್ನಾಹಾರಗಳಿಲ್ಲದೆ, ದೇಹವನ್ನು ದಂಡಿಸಿ, ಸುಖಕ್ಕೆ ತಿಲಾಂಜಲಿಯನ್ನಿತ್ತು, ದಿನಹರಿಜ ಮಾಡುವ ಅವರ ಗತಿ ನೋಡಿ! ಗಾಂಧಿಯವರೂ ಕೂಡಾ ಕೈಟ್ಟಾಕ್ಕೆ ಹೋಗಬಾರದು ಎಂದು ಸರಕಾರದ ಅಪ್ಪಣೆಯಿದೆಯಂತೆ!

× × × × × ×

ಮುಂದಕ್ಕೆ ನಡೆಯಲಿರುವ ಚುನಾವಣೆಗಳಲ್ಲಿ ಕ್ವೆಟ್ಟಾದವರು ಈ ಕೊಂಗ್ರೆಸ್ಸಿನವರನ್ನೇ ಶಾಸನ ಸಭೆಗಳಿಗೆ ಚುನಾಯಿಸಬಾರದೆಂದೂ, ಅಲ್ಲಿಯ ಜನರಿಗೆ ಕೊಂಗ್ರೆಸ್ಸಿನವರ ಪರಿಚಯವಾಗಬಾರದೆಂದೂ ಭೂಕಂಪದ ವೇಳೆ ಕೊಂಗ್ರೆಸಿನವರು ಕ್ವೆಟ್ಟಕ್ಕೆ ಕಾಲಿಡಬಾರದೆಂದು ಸರಕಾರವು ಉಪಾಯಮಾಡಿರುತ್ತದೆಂದು ಕೆಲವು ಪತ್ರಿಕೆಗಳು ಹೇಳುತ್ತಿವೆ. ಇದು ಸತ್ಯವೆಂದು ನಾನು ನಂಬಲಾರೆ! ಒಂದು ವೇಳೆ ನಂಬಿದರೂ ಸಾಯ್ಬ ಅದನ್ನು 'ಕೇರ್' ಮಾಡಲಾರ! ಕ್ವೆಟ್ಟಾದವರಂತೆ ನಾವೂ ಎಂದಾದರೊಮ್ಮೆಯ ಮಹಾ ಭೂಕಂಪಕ್ಕೊಳಗಾಗಬೇಕೆಂದಿರುವಾಗ—ಯಾಕಯ್ಯಾ ನಾವು ಈ ವಿಚಾರಗಳನ್ನು 'ಕೇರ್' ಮಾಡಬೇಕು? ಸರಕಾರದವರು ತಮ್ಮ ನೋಕರರಿಗೆ ಸಂಬಳ ಕೊಡುತ್ತಾರೆ, ಕೊಂಗ್ರೆಸ್ಸಿನವರು ತಮ್ಮ ಸಮಿತಿಯ ಕೆಲವರಿಗೆ ಸಂಬಳ ಕೊಡುತ್ತಾರೆ! ನಮಗೆ ಅನ್ನ ಹಾಕುವವರಾದರೂ ಯಾರು? ನಮ್ಮ ಹೊಟ್ಟೆಗೆ ನಮ್ಮ ಕೈ ಕಾಲುಗಳೇ ಗತಿ!

× × × × × ×

ಮೆಕ್ಡೋನಾಲ್ಡರ ಚಕ್ರವು ತಿರುಗಿತು, ಪಾಪ! ಪ್ರಧಾನ ಮಂತ್ರಿ ಪದವಿಯನ್ನು ಬಿಟ್ಟುಬಿಡಬೇಕಾಯಿತು! ನಮ್ಮ ಹೋರ್ ಸಾಹೇಬರು ವಿದೇಶೀಯ ಸಚಿವರಾಗಿ ನೇಮಕ ಹೊಂದಿರುವರು. ಅವರಿಗೆ ಯೋಗ್ಯವಾದ ಉದ್ಯೋಗವೇ ಲಭಿಸಿತಲ್ಲ! ತನ್ನ ಬುದ್ಧಿವಂತಿಕೆಯನ್ನು ಹಿಂದೂ ದೇಶದವರಿಗೆ ತೋರಿಸಿದಂತೆ ಇತರರು, ಇನ್ನು ಪರದೇಶಿಗರಿಗೆ ತೋರಿಸುವ ಕಾಲವು ಬಂದುದಕ್ಕೆ ಹೋರರಿಗೆ ನನ್ನ ವಂದನೆಗಳು!

'ಸಾಯ್ಬ'.

ರಾತ್ರಿ ಮಲಗಲು ಹೋಗುವ ಮೊದಲು ಒಂದು ಕಪ್ 'ಓವಲ್ಟಿನ್' ಸೇವಿಸಿದಿರೆಂದರೆ, ನಿಮಗೆ ಸುಖವಾದ - ಸ್ವಸ್ಥವಾದ ನಿದ್ರೆಯು ಲಭಿಸುವುದು. ಈ ನಿದ್ರೆಯು ನಿಮ್ಮ ಸ್ನಾಯುಗಳನ್ನು ಶಾಂತಗೊಳಿಸಿ, ಅದಕ್ಕೆ ಹೊಸ ಚೇತನದ ಬಲವನ್ನೀಯುವುದು. 'ಓವಲ್ಟಿನ್' ಬಳಲಿದ ದೇಹವನ್ನೂ ಮನಸ್ಸನ್ನೂ ಪುನರ್‍ರಚಿಸುತ್ತದೆ. ಬೆಳಗ್ಗೆ ಏಳುವಾಗ ನೀವು ನೂತನ ಚೇತನವುಳ್ಳವರಾಗುವಿರಿ.

ಓವಲ್ಟಿನ್ ಪೂರ್ಣವಾಗಿ ಶುದ್ಧವಾದ ಪೋಷಣೆಯ ವಸ್ತು. ಪ್ರಕೃತಿಸಿದ್ಧವಾದ ಬೆಳೆದ ಬಾರ್ಲಿ, ದನದ ಕೆನೆಹಾಲು ವಿಶಿಷ್ಟವಾದ ಕೋಳಿಮೊಟ್ಟೆಗಳಿಂದ ತಯಾರಾಗಿದೆ. ಟೋನಿಕ್ ಆಹಾರವೂ, ಪಾನಕವೂ ಆದ ಇದನ್ನು ಬಿಡದೆ ಸೇವಿಸುತ್ತಾ ಬಂದಲ್ಲಿ ದೇಹಕ್ಕೆ ಶಕ್ತಿ ಬಲಗಳನ್ನು ಕೊಡುತ್ತದೆ.

ನಿಮ್ಮ ಚಹಾಕ್ಕೆ 'ಓವಲ್ಟಿನ್' ಸೇರಿಸಿರಿ—ಅದು ಆರೋಗ್ಯಕರ, ಬಲವರ್ಧಕ, ಮತ್ತು ಶಕ್ತಿದಾಯಕ.

ಓವಲ್ಟಿನ್

ಟೋನಿಕ್ ಆಹಾರ ಪಾನಕ - ಶಾಂತಮಯ ಸುಖನಿದ್ರೆಯನ್ನುಂಟುಮಾಡುತ್ತದೆ.

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ದೊರೆಯುತ್ತದೆ.

ಏಜಂಟ್ —ಜೇಮ್ಸ್‌ರೈಟ್, 65 ಎ. ರಿಪನ್‌ಸ್ಟ್ರೀಟ್ ಕಲ್ಕತ್ತಾ, ಮತ್ತು ಮುಂಬಾಯಿ ಮತ್ತು ಮದ್ರಾಸು.

OV/339

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಾಯಿ.

ಈ ಮೇಲಿನ ಮಂಡಳಿಯ ೧೯ನೇ ಇಸವಿಯ ವರ್ಷಾವಧಿ ಮಹಾಸಭೆಯು ಇದೇ ಮೇ ತಾ ೧೨ರಲ್ಲಿ ಇದರ ಅಧ್ಯಕ್ಷರಾದ ಶ್ರೀ ಬಿ. ಎ ಕರ್ಕೇರರ ಅಧ್ಯಕ್ಷತೆಯಲ್ಲಿ ಮೊಗವೀರ ಶಾಲಾ ಮಂದಿರದಲ್ಲಿ ಜರಗಿತು. ದೇವತಾ ಪ್ರಾರ್ಥನೆಯಾದ ಬಳಿಕ ದಿವಂಗತರಾದ ಸಂಘದ ಸೆಂಬರರ ಕುರಿತು ದುಃಖಸಂತಾಪ ಠರಾವನ್ನು ಸಮರ್ಥಿಸಲಾಯಿತು. ಕಾರ್ಯನಿರ್ವಾಹಕ ಕಮಿಟಿಯವರಿಂದ ತಯಾರಿತವಾದ ೧೯ನೇ ಇಸವಿಯ ವರದಿಯನ್ನು ಸರ್ವಾನುಮತದಿಂದ ಸ್ವೀಕರಿಸಲಾಯಿತು. ಹೊಸತಾಗಿ ತಯಾರಿಸಿದ ಪಾರುಪತ್ಯಗಾರರ (ಟ್ರಸ್ಟಿಗಳ) "ಕ್ರಮನಿಬಂಧನೆ" ಮತ್ತು ಬದಲಾವಣೆಯ ಹೊಸ ಕ್ರಮನಿಬಂಧನೆಯು ಬಹುಮತದಿಂದ ಪಾಸಾಯಿತು. ಮುಂದಿನ ವರ್ಷಕ್ಕೆ (೧೯೩೫/೩೬) ಓಟು ಮೂಲಕ ಆರಿಸಲ್ಪಟ್ಟ ಕಾರ್ಯನಿರ್ವಾಹಕ ಸಭೆಯವರನ್ನು ಮತ್ತು ಲೆಕ್ಕಪರಿಶೋಧಕರನ್ನು ಸರ್ವಾನುಮತದಿಂದ ಒಪ್ಪಿಕೊಳ್ಳ (confirmed) ಲಾಯಿತಲ್ಲದೆ ಮಂಡಳಿಯು ಸ್ಥಾಪಿತವಾದಂದಿನಿಂದ ಕೊಡಲ್ಪಟ್ಟ ಮತ್ತು ಮರುಪಾವತಿಯಾದ ವಿದ್ಯಾರ್ಥಿವೇತನದ ಪಟ್ಟಿಯೊಂದನ್ನು ಪ್ರತಿ ವರ್ಷದ ವರದಿಯಲ್ಲಿ ಆಯಾಯ ವರ್ಷದ ವಿದ್ಯಾರ್ಥಿವೇತನದ ಪಟ್ಟಿಯೊಂದಿಗೆ ಕಾಣಿಸತಕ್ಕದೆಂದು ಠರಾವು ಬಹುಮತದಿಂದ ಅಂಗೀಕರಿಸಲ್ಪಟ್ಟಿತು. ನೆರೆದ ಸಭಿಕರ ಪೈಕಿ ಮಂಡಳಿಯ ಅಭಿವೃದ್ಧಿಯ ಕುರಿತು ಹಲವರು ಹಲವು ಯೋಗ್ಯ ಸೂಚನೆಗಳನ್ನಿತ್ತರು. ಸಭಾಧ್ಯಕ್ಷರ ಹುರುಪಿನ ಭಾಷಣವಾದ ಬಳಿಕ ಸಭೆಯು ಮಂಗಳಾಚರಣೆಯೊಂದಿಗೆ ಕೊನೆಗೊಂಡಿತು.

Estd 1920] THE [1920ರಲ್ಲಿ ಸ್ಥಾಪಿತವಾದದ್ದು.

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರ್ರೈಜ್ ಲಿಮಿಟೆಡ್,

ಪುತ್ತೂರು.

ಠೇವಣಾತಿಗಳ ದರ-

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ.

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು.

Puttur,
Dated 10—4—1935.

G. N. Lakshman Pai,
Secretary.

ಸಾಹಿತ್ಯ ಸಂಗ್ರಹ.

ಗ್ರಾಮೋದ್ಯೋಗ ಸಂಘದ ಗುಟ್ಟು.

ಶ್ರೀ ರಂಗನಾಥ ದಿವಾಕರ ಎಂ ಎ, ಎಲ್, ಎಲ್. ಬಿ. ಇವರು ಮೇಲಿನ ವಿಷಯವಾಗಿ 'ಧನಂಜಯ'ದಲ್ಲಿ ಬರೆದ ಲೇಖನವೊಂದರಲ್ಲಿ ಅರ್ಥವತ್ತಾಗಿ ಹೀಗೆ ತಿಳಿಸಿದ್ದಾರೆ:—ಹಳ್ಳಿಯ ದುಡ್ಡು ಹಳ್ಳಿಯಲ್ಲಿರಬೇಕು, ಹಳ್ಳಿಗರಲ್ಲಿ ಬಂಡವಲುಗಾರಿಕೆಯು ಬೆಳೆಯಬಾರದು, ಅವರಲ್ಲಿ ಪರಸ್ಪರ ಸಹಾಯ ಸ್ವಾವಲಂಬನ, ಸ್ವದೇಶಿತತ್ವ ಇವು ನೆಲೆಗೊಳ್ಳಬೇಕು. ಇದೇ ಈ ಗ್ರಾಮೋದ್ಯೋಗ ಸಂಘದ ಉದ್ದೇಶವಿರುವುದು. ಸದ್ಯಕ್ಕೆ ಹಳ್ಳಿಯಿಂದ ದುಡ್ಡು ಹೊರಗೆ ಹರಿದುಹೋಗುತ್ತಿರುವುದು. ಸಣ್ಣ ಪುಟ್ಟ ಗಿರಣಿಗಳ ಮೂಲಕ ನೂರಾರು ಜನರು ನಿರುದ್ಯೋಗಿಗಳೂ ಪರಾವಲಂಬಿಗಳೂ ಆಗುತ್ತಿರುವರು. ಈಗ ೬೦೦ ವರ್ಷಗಳಲ್ಲಿಯೆ ಹಿಟ್ಟಿನ ಮತ್ತು ಭತ್ತದ ಗಿರಣಿಗಳು ಎಲ್ಲ ಹಳ್ಳಿಗಳಲ್ಲಿ

ಕನ್ನಡ ಪತ್ರಿಕೆಗಳು. ವ್ಯಾಪಿಸಿವೆ. ಅವುಗಳ ಮೂಲಕ ಕುಟ್ಟುವವರು, ಬೀಸುವವರು ನಿರುದ್ಯೋಗಿಗಳಾಗಿ ಕೂಡಬೇಕಾಗಿದೆ— ಇನ್ನಾವುದೊಂದು ಹಣ ಹುಟ್ಟಿಸುವ ಉದ್ಯೋಗವು ಅವರಿಗೆ ದೊರೆತಿದ್ದರೆ ಮಾತು ಬೇರೆ ಹಾಗೆ ಅಗಿಲ್ಲ ಅವರು ಇದ್ದ ಬಿದ್ದ ಅಲ್ಪ ಸ್ವಲ್ಪ ಭೂಮಿಯನ್ನು ಮಾಡಿಕೊಳ್ಳುತ್ತ ಹಳ್ಳಿಯಲ್ಲಿಯೇ ಇರಬೇಕಾಗಿದೆ ಅದರ ಇದುವರೆಗೆ ಅವರ ಮನೆಜನರು ಮಾಡುತ್ತಿದ್ದ ಕುಟ್ಟುವ ಬೀಸುವ ಕೆಲಸಗಳು ನಿಂತುಹೋಗಿವೆ. ಅಷ್ಟೇ ಅಲ್ಲ ತಮ್ಮ ಜೋಳಕಾಳುಗಳನ್ನು ಬೀಸಬೇಕಾದರೆ ಹಣ ಕೊಡಬೇಕಾಗುತ್ತಿದೆ. ಹೀಗೆ ಹಳ್ಳಿಗಳ ಆರ್ಥಿಕ ಪರಿಸ್ಥಿತಿಯು ಅತಿಶಯವಾಗಿ ಕೆಟ್ಟುಹೋಗಿದೆ

ನಮ್ಮ ಪ್ರಾಚೀನ ಕಾವ್ಯಸಾಹಿತ್ಯದ ಸ್ವರೂಪ

"ನಮ್ಮ ಪ್ರಾಚೀನ ಕಾವ್ಯ ವಾಙ್ಮಯ (ಸಾಹಿತ್ಯ)ವೂ ಆಧುನಿಕ ಕಾವ್ಯ ವಾಙ್ಮಯವೂ" ಎಂಬ ಶೀರ್ಷಿಕೆಯಿಂದ ಮ॥ ಪಂಡಿತ ಮಹಾದೇವ ಪ್ರಭಾಕರ ಪೂಜಾರರವರು ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಬರೆದು "ನಮ್ಮ ಪ್ರಾಚೀನ ಕಾವ್ಯಸಾಹಿತ್ಯದ ಸ್ವರೂಪ"ವೆಂಬ ಭಾಗದಲ್ಲಿ ಹೀಗೆಂದು ಸರಸವಾಗಿ ಪ್ರತಿಪಾದಿಸಿರುತ್ತಾರೆ: "ಸಾಹಿತ್ಯವು ನಾಡಿನ ಪ್ರಕೃತಿಗೆ ಅನುರೂಪವಾಗಿರುವುದು. ನಮ್ಮ ಪ್ರಾಚೀನ ಸಂಸ್ಕೃತ ಕಾವ್ಯಸಾಹಿತ್ಯವೂ ಕನ್ನಡ ಕಾವ್ಯ ಸಾಹಿತ್ಯವೂ ಇಂಗ್ಲಂಡ್ ಮುಂತಾದ ಪರದೇಶಗಳ ಸಾಹಿತ್ಯಕ್ಕಿಂತ ಬೇರೆ ತರದವುವಾಗಿರುವುದಕ್ಕೆ ಭರತ ಖಂಡದ ಜನತೆಯ ಪ್ರಕೃತಿಯೇ ಕಾರಣವು. ಭರತ ಖಂಡವು ಬೇರೆ ದೇಶಗಳಿಗಿಂತ ಹಲವು ವಿಷಯಗಳಲ್ಲಿ ಭಿನ್ನವಾಗಿದೆ. ಇತರ ದೇಶಗಳಲ್ಲಿ ನಾಗರಿಕತೆಯು ಪಟ್ಟಣದಿಂದ ಹಳ್ಳಿಗೆ ಸಾಗಿತು, ಭರತಖಂಡದಲ್ಲಿ ಅಡವಿಯಿಂದ ಊರಿಗೆ ಸಾಗಿತು. ವಸ್ತ್ರಾಲಂಕಾರ ಐಶ್ವರ್ಯಗಳಿಗೆ ಗೌರವವು ಪರದೇಶಗಳಲ್ಲಿ ಉಂಟು, ದಿಗಂಬರತೆ ಭಿಕ್ಷಾವೃತ್ತಿಗಳಿಗೆ ಭರತಖಂಡದಲ್ಲಿಯೇ ಗೌರವವು; "ಕೌಪೀನವಂತಃ ಖಲು ಭಾಗ್ಯವಂತಃ" ಎಂದು ಹೇಳುವವರು ನಾವೇ! ಇತರ ದೇಶಗಳಲ್ಲಿ ಆಹಾರವಿಹಾರಗಳು ಆಚಾರಾಧೀನವಾಗಿವೆ, ನಮ್ಮ ದೇಶದಲ್ಲಿ ಶಾಸ್ತ್ರಾಧೀನವಾಗಿವೆ ಪರದೇಶಗಳಲ್ಲಿ ಧರ್ಮವನ್ನು ಬಾರದ ಕಲ್ಲೊಂದು ದಿನವಾದರೂ ಆಚರಿಸಿರೆಂದು ಒತ್ತಿ ಹೇಳಬೇಕಾಗುವುದು, ನಮ್ಮ ದೇಶದಲ್ಲಿ "ಅಯ್ಯಾ, ಸನ್ಯಾಸಿಯಾಗಬೇಡ, ಪ್ರಪಂಚದಲ್ಲಿದ್ದುಕೊಂಡೂ ಪರಮಾರ್ಥವನ್ನು ಸಾಧಿಸಬಹುದು" ಎಂದು ಹೇಳಬೇಕಾಯಿತು ಮಗನು ಶ್ರಮಣನನ್ನು ಕಂಡರೆ ಎಲ್ಲಿ ಸಂಸಾರವನ್ನು ತೊರೆದು ಹೋದಾನೋ ಎಂದು ಸಹದೇವಿ ಎಂಬ ರಾಣಿಯು ಅರಮನೆಗೆ ಬರುತ್ತಿದ್ದ ಶ್ರಮಣನನ್ನು ದೂರಕ್ಕೆ ಅಟ್ಟಿದಳೆಂದು "ಪಂಪರಾಮಾಯಣ"ದಲ್ಲಿದೆ. ಜನಜೀವನದಲ್ಲಿ ಇಂತಹ ಹಲವು ಭೇದಗಳು ಇರುವುದರಿಂದಲೇ ದೇಶದೇಶಗಳ ಸಾಹಿತ್ಯಗಳಲ್ಲಿಯೂ ಭೇದವು ಕಾಣಬರುವುದು. ಇತರ ದೇಶಗಳು ಕಥಾಂಶವನ್ನು ಹೆಚ್ಚಾಗಿ ಪ್ರೀತಿಸುವವು. ಆದಕಾರಣ ಆ ದೇಶಗಳಲ್ಲಿ ಕಥೆ ಕಾದಂಬರಿ, (ನಾವೆಲು), ಇತಿಹಾಸ, ಜೀವನಚರಿತೆ ಮೊದಲಾದ ಕಥಾಂಶಪ್ರಧಾನವಾದ ಸಾಹಿತ್ಯವು ರಚಿತವಾಗಿ ಜಾಗರೂಕತೆಯಿಂದ ಕಾದಿಡಲ್ಪಡುತ್ತ ಬಂದಿದೆ, ಆದರೆ ಭಾರತೀಯರಿಗೆ ಕೇವಲ ಕಥೆಯಲ್ಲಿ ಆಸಕ್ತಿ ಕಡಿಮೆ! ಅಂತೆಯೇ ನಮ್ಮ ದೇಶದ ಪ್ರಾಚೀನ ಸಾಹಿತ್ಯ ಕರುವಿನ ಇತಿಹಾಸಾದಿ ಶಾಖೆಗಳು ಸೊರಗಿವೆ. ಮಹಾಭಾರತ ರಾಮಾಯಣಗಳನ್ನು ಇತಿಹಾಸಗಳೆಂದು ಹೇಳುತ್ತಿದ್ದರೂ ಅವುಗಳಲ್ಲಿ ಇತಿಹಾಸಾಂಶಗಳಿಗಿಂತ ಬೇರೆ ವಿಷಯಗಳೇ ಹೆಚ್ಚಾಗಿ ತುಂಬಿವೆ. ಇತಿಹಾಸವು ಆ ಬೇರೆ ವಿಷಯಗಳ ಮರೆಯಲ್ಲಿ ಹುದುಗಿಕೊಂಡು ಕುಳಿತಿವೆ; ತರತರದ ವರ್ಣನೆಗಳು, ಧರ್ಮತತ್ವ ನಿರೂಪಣ, ಧರ್ಮಸೂಕ್ಷ್ಮಗಳ ಚರ್ಚೆ, ನೀತಿವಿಚಾರ, ಆನುಷಂಗಿಕ ಸಂದರ್ಭಗಳು ಮೊದಲಾದುವುಗಳಿಂದ ಅಲ್ಲಿ ಕಥಾಪ್ರವಾಹವು ಕ್ಷಣಕ್ಷಣಕ್ಕೆ ವಿಚ್ಛಿನ್ನವಾಗುತ್ತಿದ್ದರೂ ಪ್ರಶಾಂತವಾದ ಭರತಖಂಡದಲ್ಲಿ ಸ್ವಲ್ಪವೂ ಚಾಂಚಲ್ಯವಿಲ್ಲ. ಭಗವದ್ಗೀತೆಯ ಮಹತ್ವವು ಬಹಳವೆಂಬುದೇನೋ ನಿಜವೇ ಆದರೆ ಉಭಯ ಸೇನೆಗಳು ಯುದ್ಧಕ್ಕೆ ಸಜ್ಜಾಗಿ ನಿಂತಾಗ, ರಣವಾದ್ಯಗಳು ಘೋರಗರೆದು ಮೊಳಗುತ್ತಿರುವಾಗ ಆ ಹನ್ನೆರಡು ಅಧ್ಯಾಯಗಳಿಂದ ಯುಕ್ತವಾದ—ತತ್ವಜ್ಞಾನದ ಸಮಗ್ರವಿಚಾರವುಳ್ಳ ಆ ಮಹಾಗ್ರಂಥವನ್ನು ಕಥೆಯಲ್ಲಿ ಅಭಿನಿವೇಶವಿಲ್ಲದ ಭರತಖಂಡವಲ್ಲದೆ ಇನ್ನಾವ ದೇಶವು ತಾನೇ ತಾಳ್ಮೆಯಿಂದ ಕೇಳಿಕೊಂಡೀತು? ಅರಣ್ಯಕಾಂಡದಲ್ಲಿ ಸೀತಾಪಹಾರವು ನಡೆದ ಬಳಿಕ ಮುಖ್ಯ ಕಥೆಯನ್ನು ಕಿಷ್ಕಿಂಧಾಕಾಂಡ ಸುಂದರಕಾಂಡಗಳೆಂಬ ಎರಡು ದೊಡ್ಡ ಕಾಂಡಗಳು ತಡೆದು ಹಿಡಿದಿವೆ. ಆದರೆ ಸೋಜಿಗದ ವಿಷಯವೆಂದರೆ ಕಿಷ್ಕಿಂಧಾ ಕಾಂಡ ಸುಂದರ ಕಾಂಡಗಳು ನಮಗೆ ಅತಿಶಯ ಸುಂದರವಾಗಿ ತೋರುತ್ತಿವೆ! ವರ್ಣನೆಗಳು, ತತ್ವನಿರೂಪಣಗಳೂ ಕರ್ಮನಿರೂಪಣವೂ ನಡೆದರೆ ಇವೇ ಸಾಗಲಿ ಎಂದು ಹೇಳುವೆವಲ್ಲದೆ ಕಥೆಯ ಕೊನೆಯನ್ನು ಕೇಳಬೇಕೆಂಬ ಕುತೂಹಲವನ್ನು ತೋರ್ಪಡಿಸುವುದಿಲ್ಲ ಅಂತೆಯೆ ವ್ಯಕ್ತಿಗೂ ವ್ಯಕ್ತಿಯ ಚರಿತ್ರೆಗೂ ನಾವು ಅಷ್ಟೊಂದು ಗಮನಕೊಡುವುದಿಲ್ಲ ಭಾರತ ಯುದ್ಧವು ಮುಗಿಯುವ ವರೆಗಿನ ಅರ್ಜುನನ ಪೌರುಷ ಪ್ರಪಂಚಕ್ಕೆ ಬೆರಗಾದ ನಾವು ಕೃಷ್ಣನಿರ್ಯಾಣದ ತರುವಾಯ ಅದೇ ಅರ್ಜುನನು ಕೃಷ್ಣನ ಸ್ತ್ರೀಯರನ್ನು ದ್ವಾರಕೆಯಿಂದ ಕರೆತರುವಾಗ ಕೀಳು ಬೇಡರಿಂದ ಸೋಲನ್ನು ಪಟ್ಟು ಗಾಂಡೀವವನ್ನೆತ್ತಲಾರದೆ ಸೋತುಹೋದನೆಂಬುದನ್ನು ನಾವು ಅಷ್ಟೊಂದು ವಿಚಿತ್ರವೆಂದೆಣಿಸುವುದಿಲ್ಲ ಭಾರತ ಯುದ್ಧದ ಮಹಾಪ್ರಳಯವನ್ನು ನಡೆಸಿದ ಭೀಮಸೇನನು ಸ್ವರ್ಗಾರೋಹಣ ಕಾಲದಲ್ಲಿ ತ್ರಿವಿಷ್ಟಪದಮಾರ್ಗದಲ್ಲಿ ಅತಿ ಸ್ವಲ್ಪದೂರ ನಡೆದು ಬಿದ್ದು ಅಸುವನ್ನು ನೀಗಬೇಕಾಯಿತೆಂಬುದನ್ನು ಓದುವಾಗ ವ್ಯಕ್ತಿಗತ ಮಹತ್ವಕ್ಕೆ ಚ್ಯುತಿಯುಂಟಾಯಿತೆಂಬುದನ್ನೇನಾದರೂ ನಾವು ಗಮನಿಸುವೆವೋ? ಎಲ್ಲಿ ಕಥೆಯ ಕಾವನು ವಿರಕ್ತನೋ ಅಲ್ಲಿ ಪಠ್ಯಾರನೂ ಅನಾಸಕ್ತನು ಕಥೆಯೂ ಶ್ರೋತಾರನ ಕುತೂಹಲ ಪೂರ್ತಿಗಾಗಿಯೇ ಹೊರಡುವುದಿಲ್ಲ ಮಹಾಭಾರತ ರಾಮಾಯಣಗಳ ಕಾಲದಿಂದಲೂ ಮನುಷ್ಯ ಚರಿತ್ರವನ್ನು ಚಿತ್ರಿಸುವುದರಲ್ಲಿ ನಮ್ಮ ಪ್ರಾಚೀನ ಸಾಹಿತ್ಯದ ಬಲವು ಕಾಣಬರುವುದಿಲ್ಲ ತತ್ವವಿಚಾರ, ರಸಾಲಂಕಾರ, ವರ್ಣನಾವೈಖರಿ ಇವುಗಳಲ್ಲಿಯೇ ನಮ್ಮ ಪ್ರಾಚೀನ ಸಾಹಿತ್ಯಕಾರರು ಮಗ್ನರಾದರು."

ವಿಜ್ಞಾನದ ಬೆಳವಣಿಗೆ-ಪರಿಣಾಮವಾದ.

ಶ್ರೀ ಜಿ. ಹನುಮಂತರಾವ್, ಇವರು "ಪ್ರಬುದ್ಧ ಕರ್ನಾಟಕ"ದಲ್ಲಿ ಮೇಲಣ ವಿಷಯಕವಾಗಿ ಸೋದಾಹರಣವಾಗಿ ಚರ್ಚಿಸುತ್ತಾ ಹೀಗೆಂದಿರುವರು "ನ್ಯೂಟನ್ನಿನ ಗುರುತ್ವಾಕರ್ಷಣ ನಿಯಮವು ಆಧುನಿಕ ವಿಜ್ಞಾನದ ಮೊದಲನೆಯ ದಿಗ್ವಿಜಯವಾದರೆ, ಡಾರ್ವಿನ್ನಿನ ಪರಿಣಾಮವಾದವು ಅದರ ಎರಡನೆಯ ದಿಗ್ವಿಜಯವೆಂದು ಹೇಳಬಹುದು ಇದು ವಿಶ್ವದ ವಿಚಾರವಾಗಿ ನಮ್ಮ ದೃಷ್ಟಿಯನ್ನು ಗುರುತ್ವಾಕರ್ಷಣ ನಿಯಮಕ್ಕಿಂತಲೂ ಬಹುವಾಗಿ ವಿಸ್ತಾರಮಾಡಿದೆ ಎಂದರೆ ಭೌತಶಾಸ್ತ್ರಜ್ಞರಿಗೆ ಕೋಪ ಬರಬಹುದು ಆದರೆ ಏನು ಮಾಡುವುದು ವಾಸ್ತವವಾಗಿ ಅದು ಇರುವುದೇ ಹಾಗೆ ಗುರುತ್ವಾಕರ್ಷಣ ನಿಯಮವು ಬರಿಯ ಭೌತ ಪ್ರಪಂಚಕ್ಕೆ ಮಾತ್ರ ಅನ್ವಯಿಸತಕ್ಕ ನಿಯಮ, ಪರಿಣಾಮವಾದವಾದರೋ ಭೌತ ಪ್ರಪಂಚದಿಂದ ಹಿಡಿದು ಅಧ್ಯಾತ್ಮ ಪ್ರಪಂಚದ ವರೆಗಿನ ಅನುಭವ ಸಾಮ್ರಾಜ್ಯಕ್ಕೆಲ್ಲ ಅನ್ವಯಿಸುವುದಾಗಿದೆ. ಈ ವಾದವು ಕಾಲದ ಎಲ್ಲೆಯನ್ನು ಎಷ್ಟು ಮಟ್ಟಿಗೆ ವಿಸ್ತರಿಸಿದೆ ಎಂದರೆ, ಇದರ ದೃಷ್ಟಿಯಲ್ಲಿ ಕೋಟ್ಯಂತರ ವರ್ಷಗಳಿಂದ ತನ್ನ ಬೆಳಕನ್ನು ಬೀರುತ್ತಿರುವ ಸೂರ್ಯನನ್ನು ಅದರ ವೃದ್ಧಪಿತಾಮಹರೊಡನೆ ಹೋಲಿಸಿದರೆ, ಈ ಸೂರ್ಯನು ಇನ್ನೂ ಈಗ ಕಣ್ಣುಬಿಡುತ್ತಿರುವ ಮಗುವಿನಂತಿದೆ; ಒಂದು ಕಾಲದಲ್ಲಿ ಸೃಷ್ಟಿಯಾಯಿತೆಂದು ಕ್ರೈಸ್ತರು ಎಣಿಸಿದ್ದ ಈ ವಿಶ್ವವು ಕೊನೆಮೊದಲಿಲ್ಲದೆ ಅನಂತವಾಗಿ ಬೆಳೆಯುತ್ತಿರುವ ವಿಶ್ವವಾಗಿ ಪರಿಣಮಿಸಿದೆ. ವಿಜ್ಞಾನಪ್ರಪಂಚವನ್ನೆಲ್ಲಾ ಆವರಿಸಿರುವ ಈ ಮಹಾವಾದವು ವಿಶೇಷವಾಗಿ ಬೆಳೆದು ಪುಷ್ಟಿಹೊಂದಿರುದು ಜೀವಶಾಸ್ತ್ರದಲ್ಲಿ

ಆಧುನಿಕ ಜೀವಶಾಸ್ತ್ರಕ್ಕೆ ಅಸ್ತಿಭಾರ ಹಾಕಿದವನು ಹಾರ್ವೆ. ಜೀವಶಾಸ್ತ್ರದ ವಿಷಯಗಳನ್ನು ಪ್ರಾಯೋಗಿಕವಾಗಿ ಪರೀಕ್ಷಿಸಲು ಮೊದಲುಮಾಡಿದವನು ಇವನೇ ಹಾರ್ವೆಗಿಂತ ಬಹು ಹಿಂದೆಯೇ ಕೆಲವು ಜೀವಶಾಸ್ತ್ರಜ್ಞರು ರಕ್ತವು ಚಲಿಸುತ್ತದೆ ಎಂದು ಹೇಳಿದ್ದರು ಇದನ್ನು ಯಥಾರ್ಥವಾಗಿ ತೋರಿಸಿದುದೇ ಹಾರ್ವೆ ಮಾಡಿದ ದೊಡ್ಡ ಕೆಲಸ ಬದುಕಿದ ಕಪ್ಪೆಗಳನ್ನು ಕೊಯ್ದು ಅವುಗಳ ಶರೀರದಲ್ಲಿ ರಕ್ತವು ಚಲಿಸುವುದು ಎಂಬುದನ್ನು ತೋರಿಸಿದುದಲ್ಲದೆ, ಈ ಚಲನವು ನಡೆಯುವುದಕ್ಕೆ ಹೃದಯದ ಸಂಕೋಚ—ವಿಕಾಸಶಕ್ತಿಯೇ ಕಾರಣ ಎಂಬುದನ್ನೂ ವಿಶದಪಡಿಸಿದನು ಇವನು ಕಂಡುಹಿಡಿದುದು ಒಂದು ಸಣ್ಣ ವಿಷಯವಾದರೂ, ಇದರ ಪರಿಣಾಮವು ಮಹತ್ತರವಾದುದು ಇವನು ಮಾಡಿದ ಕೆಲಸದಿಂದ ಜೀವಿಗಳ ಶರೀರದ ರಚನೆಯೂ ಅದರ ಕೆಲಸ ಕಾರ್ಯಗಳೂ ಪ್ರಯೋಗಕಾರಣ ಜ್ಞಾನದ ಆವರಣದಲ್ಲಿ ಒಳಬರುವಾದ ವಿಷಯಗಳೆಂಬುದು ವ್ಯಕ್ತವಾಯಿತು. ಇದರಿಂದ ಜೀವರಚನೆಯನ್ನು ಜೀವಿಗಳ ದರ್ಶನೆಯನ್ನೂ ಅವುಗಳ ಹುಟ್ಟು ಬೆಳವಣಿಗೆಗಳನ್ನೂ ವೈಜ್ಞಾನಿಕರು ಪ್ರಾಯೋಗಿಕ ವಿಚಾರಮಾಡಬೇಕೆಂಬ ಆಸಕ್ತಿ ಹುಟ್ಟಿತು"

ಕಾದಂಬರಿಯ ಭವಿಷ್ಯತ್ತೇನು?

ಸುಪ್ರಸಿದ್ಧ ಜೋನ್ ಗಾಲ್ಸ್‌ವರ್ದಿಯವರು ತನ್ನ ಇತ್ತೀಚಿನಲ್ಲಿ "F ir Novelists in Profile" ಎಂಬ ವಿಚಾರವಾಗಿ ಬರೆದ ಲೇಖನದ ಒಂದಂಶವನ್ನು The Modern Thinker ಎಂಬ ಪತ್ರಿಕೆಯು ಪ್ರಕಟಿಸಿತ್ತದೆ ಈ ಲೇಖನದಲ್ಲಿ ಗಾಲ್ಸ್‌ವರ್ದಿಯವರು ಕಾದಂಬರಿಯ ಭವಿಷ್ಯತ್ತೇನೆಂದು ಹೀಗೆ ಸೂಚಿಸಿರುತ್ತಾರೆ —

"ಕಾದಂಬರಿಕಾರನ ಎದುರು ಬೀಳುವ ಪ್ರಶ್ನೆಯೊಂದರೆ ಕಾದಂಬರಿಯ ಭವಿಷ್ಯತ್ತೇನು? ಇದಕ್ಕುತ್ತರಿಸುವವರಿಲ್ಲ. ಕಾದಂಬರಿಯು ಯಾವ ಬಗೆಯ ರಚನೆಯನ್ನಾಗಲೀ ಆರ್ಥಿಕ ಉನ್ನತಿಯನ್ನಾಗಲೀ ಹೊಂದಿಕೊಂಡಿರುವುದಿಲ್ಲ. ಕಾದಂಬರಿಯು ನೈಗಟ್ಟು ಮತ್ತು ನೀತಿಗಳನ್ನು ದುರ್ಲಕ್ಷಿಸುವ ಅವಘಡವನ್ನು ಸಮೀಪಿಸುವುದರಲ್ಲೇ ಅಥವಾ ಸಮೀಪಿಸದಿರುವುದರಲ್ಲೇ ಕಾದಂಬರಿಯ ಭವಿಷ್ಯತ್ತು ಹೊಂದಿಕೊಂಡಿದೆ ಈ ವಿಶಿಷ್ಟ ಗುಣಗಳನ್ನರಿತಿರುವ ಕಾದಂಬರಿಕಾರರು ಹತ್ತು ವರ್ಷಗಳಿಗೊಮ್ಮೆಯಾದರೂ ಪ್ರಜಾಸಂಖ್ಯೆಯ ಪ್ರಮಾಣವನ್ನು ಹೊಂದಿಕೊಂಡು ಇರಬೇಕು. ಹಿಂದಿನ ದಿನಗಳನ್ನು ಗಣ್ಯಕ್ಕೆ ತಂದರೆ, ಇಂತಹ ಕಾದಂಬರಿಕಾರರು ಹಿಂದೆ ಸಾಕಷ್ಟು ಇರಲಿಲ್ಲ

ಇಂಗ್ಲಿಷ್ ಪತ್ರಿಕೆಗಳು. ಬಂದೇ ತಿಳಿದುಬರುವುದು ಪ್ರಕೃತ ಸ್ಥಿತಿಯನ್ನು ವಿಮರ್ಶಿಸಿಕೊಂಡರೂ ಕಾದಂಬರಿಯ ಭವಿಷ್ಯತ್ತಿನ ವಿಷಯಗೆ ನಮಗೆ ಅಸಂತೃಪ್ತಿಯೇ ಉಂಟಾಗಬಹುದು. ಕಾದಂಬರಿಯ ಅಂಗೋಪಾಂಗಗಳಿಗೆ ಪರ್ಯಾಯವಾಗಿ ಈಗ ಯಾವುದೊಂದು ವಿಷಯವಿದೆ, ಪ್ರಕಟಣೆಯಿಂದಲೂ ಕಣ್ಣುಕುಕ್ಕುವಷ್ಟರ ಪ್ರಚಾರದಿಂದಲೂ ವಿಶಿಷ್ಟ ಪಥಾನುಸರಣೆಯಿಂದಲೂ ವೈಯಕ್ತಿಕ ಆಕಾಂಕ್ಷೆಯನ್ನೂ ಕೆಳಗೆ ಕೆಡು ಹಾಕಲಾಗುತ್ತದೆ, ಬುದ್ಧಿಕೌಶಲ್ಯವು ದೊಡ್ಡ ದೇಹವನ್ನೂ ನೆಲಸಮಮಾಡುತ್ತದೆ ಸೊಬಗೂ ಆಕರ್ಷಣವೂ ಅಷ್ಟೊಂದು ಅಭಾಯದಲ್ಲಿರುವುದಿಲ್ಲ ಆದರೂ, ಅದು ಕೂಡಾ ನೆಮ್ಮದಿಯಿಂದಿರುವುದಿಲ್ಲ— ಅಂತೂ ಕಾದಂಬರಿಯು ಸುಖವಾಗಿ ಬಾಳುವುದೇ ಕಷ್ಟವಾಗಿದೆ"

ಕ್ರೈಸ್ತ ಧರ್ಮವೂ ಚೀನಾದ ಆರ್ಥಿಕ ಜೀವನವೂ

ಕ್ರೈಸ್ತಮತವು ಚೀನದ ಆರ್ಥಿಕ ಜೀವನದಲ್ಲಿ ಯಾವ್ಯಾವ ಪರಿಣಾಮವನ್ನುಂಟುಮಾಡಿದೆಯೆಂದು ಫ್ರಾಂಕ್ ರೋಲಿಸನ್ ಎಂಬವರು 'World Unity' ಎಂಬ ಪತ್ರಿಕೆಯಲ್ಲಿ ಹೀಗೆ ಬರೆದಿರುವರು—ಕಳೆದ ೨೫ ವರ್ಷಗಳಿಂದ ಚೀನದ ಆರ್ಥಿಕ ಜೀವನದ ಮೇಲೆ ಕ್ರೈಸ್ತ ಮತವು ವಿಶೇಷ ಪರಿಣಾಮವನ್ನು ತಂದೊಡ್ಡಿರುತ್ತದೆ. ಈ ಅವಧಿಯಲ್ಲಿ ಕ್ರೈಸ್ತ ಮತಸ್ಥರು ಚೀನಾದಲ್ಲಿ ವಿಶೇಷ ಭಂಡವಾಳವನ್ನು ಹಾಕಿರುವರು. ಇದರ ಪರಿಣಾಮವಾಗಿ ಅಲ್ಲಿ ಕ್ರೈಸ್ತರ ಸಂಸ್ಥೆಗಳು ಹೆಚ್ಚುತ್ತಿವೆ ಇವುಗಳ ಉನ್ನತಿಯು ಚೀನದಲ್ಲಿ ಕ್ರೈಸ್ತರ ಆರ್ಥಿಕಸ್ಥಿತಿ ಸುಧಾರಣೆಯಲ್ಲೂ ಸಂಖ್ಯಾಭಿವೃದ್ಧಿಯಲ್ಲೂ ಪರಿಣಮಿಸಿವಾಗಿದೆ ಈ ಮತಸ್ಥರು ಹಾಕಿದ ಭಂಡವಾಳವೆಷ್ಟೆಂದು ತಿಳಿದುಬಂದಿಲ್ಲ ಕೆಲವು ವರ್ಷಗಳ ಹಿಂದೆ ಚೀನಾದಲ್ಲಿ ವಾರ್ಷಿಕವಾಗಿ ೧೦ ೦೦೦ ೦೦೦ ಡಾಲರುಗಳನ್ನು ಭಂಡವಾಳವನ್ನಾಗಿ ಉಪಯೋಗಿಸಿದರೆಂದು ತಿಳಿದುಬಂದಿದೆ

ಆಕಾಶದಲ್ಲಿನ ಸಂಚಾರ ಕ್ರಮ.

ಪ್ರೊ॥ ಪಿಕಾರ್ಡ್ ಎಂಬವರು ಬಹು ಸಾಹಸವಂತರು, ಶಾಂತಚಿತ್ತ ವೃತ್ತಿಯವರು, ನಿರಂತರ ಕಾರ್ಯಪ್ರಿಯರೂ ಆದ ಇವರು ಅನೇಕ ವರ್ಷಗಳಿಂದ ಬ್ರಸೆಲ್ಸ್ ವಿಶ್ವವಿದ್ಯಾಲಯದಲ್ಲಿ ಶಾಸ್ತ್ರಶೋಧನೆಯನ್ನು ಮಾಡುತ್ತಿರುವರು ಆಕಾಶದಲ್ಲಿ ಗಾಳಿಯು ಮುಗಿಯುವ ಭಾಗಕ್ಕೆ ಹಾರಿ ಅಲ್ಲಿ ಸೂರ್ಯಪ್ರಕಾಶದ ದೃಷ್ಟಿಕರಣ ಮಾಡಬೇಕೆಂದು ಇವರ ಆಸೆ ಸುಮಾರು ನಾಲ್ಕು ವರ್ಷಗಳ ಹಿಂದೆ ಇವರು ವಿಮಾನದಲ್ಲಿ ೧೦ ಮೈಲು ಮೇಲಕ್ಕೆ ಹೋಗಿದ್ದರು ಆವಾಗಲೂ ಪೃಥ್ವಿಯ ಮೇಲೆ ಬೀಳುವ ಪ್ರಕಾಶದ ರಹಸ್ಯವನ್ನು ಕಂಡುಹಿಡಿಯುವುದು ಅಸಾಧ್ಯವೆಂದು ಅವರಿಗೆ ಕಂಡುಬಂತು. ಏಕೆಂದರೆ ಆ ಅಂತರದಲ್ಲಿ ಪೃಥ್ವಿಯಲ್ಲಿ ಕಂಡುಬಂದಿರುವ ಬೇರೆ ಚಮತ್ಕಾರವು ಕಂಡುಬರುವುದು ಇದರಿಂದ ಅದಕ್ಕಿಂತಲೂ ಹೆಚ್ಚು ಮೇಲೆ ಹೋಗಿ ನೋಡದ ಹೊರತು ಆ ಸಮಸ್ಯೆಯನ್ನು ಬಿಡಿಸಲಾಗುವುದಿಲ್ಲವೆಂದರಿತು ಅವರು ಈಗ ೨೦ ಮೈಲು ಎತ್ತರಕ್ಕೆ ಹಾರಲು ನಿಶ್ಚೈಸಿರುವರು. ಈ ಕೆಲಸಕ್ಕೆ ಬಹು ಮಟ್ಟ ಸುಸಜ್ಜಿತವಾದ ವಿಮಾನವು ಬೇಕಾಗುವುದು ಬರ ದಿನ ಅದನ್ನು ಈಗ ತಯಾರಿಸುತ್ತಿರುವರು. ಆ ವಿಮಾನವು ಒಂದು ದೊಡ್ಡ ಪ್ರಯೋಗಶಾಲೆಯೇ ಆಗಿರುವುದು ಪಿಕಾರ್ಡರು ಅದನ್ನು ಈಗ ತಯಾರಿಸುತ್ತಿರುವರು. ಆ ವಿಮಾನವು ಒಂದು ದೊಡ್ಡ ಪ್ರಯೋಗಶಾಲೆಯೇ ಆಗಿರುವುದು. ಪಿಕಾರ್ಡರವರು ಮೇಲೆ ಹೋದಂತೆ ಆಕಾಶದ ಬಣ್ಣವು ಬದಲಾಯಿಸುತ್ತಾ ಹೋಗುವುದು ಸಾಧಾರಣ ನೀಲಿ, ಬೂದು, ಅಚ್ಚ ನೀಲಿ, ನೀಲಿಮಿಶ್ರಿತ ಊದಿಬಣ್ಣ—ಹೀಗೆ ಬಣ್ಣಗಳು ಬದಲಾಯಿಸುತ್ತಾ ಹೋಗುವುವು. ಹನ್ನೆರಡು ಮೈಲು ಮೇಲಕ್ಕೆ ಹೋದ ಬಳಿಕ ಆಕಾಶದ ಬಣ್ಣವು ಅಚ್ಚ ನೇರಳೆ ಬಣ್ಣದ್ದಾಗಿ ಕಾಣುವುದು ಸೂರ್ಯನು ಉರಿಯುವ ಬಿಳಿಯ ಗುಂಡಿನಮುದ್ದೆಯಾಗಿ ಕಾಣಲಾರಂಭಿಸಿ, ಕಣ್ಣುಗಳು ಕೂಡಾ ಹೋಗಬಹುದು. ಚಂದ್ರ ಮತ್ತು ನಕ್ಷತ್ರಗಳು ಸ್ವಚ್ಛವಾಗಿ ಕಾಣುವುವು. ೨೦ ಮೈಲು ಎತ್ತರಕ್ಕೆ ಹೋದನಂತರ ಪೃಥ್ವಿಯು ಒಂದು ದೊಡ್ಡ ಗೋಳದಂತೆ ಕಾಣಿಸಲಾರಂಭಿಸುವುದು. ಈ ಶಾಸ್ತ್ರಜ್ಞರ ಅಭಿಪ್ರಾಯದ ಮೇರೆಗೆ ಒಂದು ಬಗೆಯ ಕಿರಣವು ಸಮಗ್ರವಿಶ್ವವನ್ನು ವ್ಯಾಪಿಸಿಕೊಂಡಿರುವುವು, ಅದಕ್ಕೆ "ವಿಶ್ವಕಿರಣ"ವೆಂದೂ ಅಥವಾ (Cosmic rays) ಎಂದೂ ಹೇಳುವರು ಅಷ್ಟು ಎತ್ತರಕ್ಕೆ ಹೋದ ಬಳಿಕ ಈ ಕಿರಣಗಳ ನಿಜವಾದ ಸ್ವರೂಪವು ತಿಳಿದುಬರುವುದು ಅದು ತಿಳಿದುಬಂತೆಂದರೆ ಮುಂದಕ್ಕೆ ಜಗತ್ತಿನಲ್ಲಿ ಜೀವಿಗಳು ಹೇಗೆ ಉತ್ಪನ್ನವಾದುವು ಎಂದು ಕಂಡುಹಿಡಿಯಬಹುದಂತೆ ಪ್ರೊ॥ ಪಿಕಾರ್ಡರ ಶೋಧನೆಯು ಯಶಸ್ವಿಯಾದರೆ ವೈಜ್ಞಾನಿಕ ಪ್ರಪಂಚದಲ್ಲಿ ಈ ವರೆಗೆ ನಡೆಯದಿರುವ ಕ್ರಾಂತಿಯು ಸಂಭವಿಸಲು ಅವಕಾಶವಿದೆ.

Sunday Express.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್
ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲಿ ನೋವು, ಅಕ್ರಮ ತೆರದ ಮುತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ ರೂ. 8 ಮತ್ತು 1—10—0

ಕೇಸರಿ ಕುಟೀರಂ
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಅವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀವಾಮೃತವನ್ನು ಸೇವಿಸಿ

ಆರೋಗ್ಯಲ್ಲಾಭವನ್ನು ಹೊಂದಿರಿ.

ನಿಮ್ಮಲ್ಲಿ ಚೈತನ್ಯವಿಲ್ಲವೋ ಅಸುಖಿಯಾಗಿದ್ದೀರೋ, ದೇಹವು ಕಂಪಿಸುತ್ತಿದೆಯೋ ನಿರಾಶಾಸ್ಥಿತಿಯಲ್ಲಿ, ದುಃಖದಲ್ಲಿರುವಿರೋ—ಹಾಗಿದ್ದರೆ ನಿಮಗೆ ಪರಿಣಾಮಕಾರಿಯಾಗುವ ಒಳ್ಳೆಯ ಟೋನಿಕ್ ಬೇಕು ಪಂಡಿತ ಡಿ ಗೋಪಾಲಾಚಾರ್ಲುರವರ ಪೂರ್ಣ ಆರೋಗ್ಯದಾಯಕವಾದ ಜೀವಾಮೃತವನ್ನು ಸೇವಿಸಿರಿ ನಿಮ್ಮ ಕೆಮಿಸ್ಟರಿಂದ ಒಂದು ಬಾಟ್ಲಿಯನ್ನು ಪಡೆಯಿರಿ ಅನುಪಾನಪತ್ರದಂತೆ ಅದನ್ನು ಸೇವಿಸಿ ಆಶ್ಚರ್ಯಕರ ರೀತಿಯಿಂದ ಕಾಂತಿಯೂ ಆರೋಗ್ಯವೂ ಲಭಿಸುವುದನ್ನು ಕಾಣಿರಿ ಒಂದು ಡೋಜು ಕುಡಿದಾಗಲೇ ನಿಮಗದರ ಮಹತ್ವವು ತಿಳಿದುಬರುವುದು ಜೀವಾಮೃತವು ಬಲವನ್ನು ಹೆಚ್ಚಿಸುತ್ತದೆ ರಕ್ತವನ್ನು ಹೆಚ್ಚಿಸುತ್ತದೆ ನರಯೋಗಗಳ ಅಣುಗಳನ್ನು ಪೋಷಿಸುತ್ತದೆ ಜೀವನದ ಆನಂದವೇ ಹಸ್ತಗತವಾಗುತ್ತದೆ ವಾಯು ಪುಂಸ್ತ್ರೀಭೇದ ಕಾಲಗಳ ಭೇದಾಭೇದವೇ ಇಲ್ಲ

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ದೊರೆಯುತ್ತದೆ

ತಯಾರಿಸುವವರು ಆಯುರ್ವೇದಾಶ್ರಮ, ಪೋ ಬೋಕ್ಸ್ 287, ಮದರಾಸು
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು —ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, ೬೫, ಚಿಕ್ಕಪೇಟೆ, ಬೆಂಗಳೂರು ಸಿಟಿ

ಮನೆಯಲ್ಲಿನ ಉಪಯೋಗಕ್ಕೂ, ಸಣ್ಣ ತೋಟಗಳನ್ನುಳುವುದಕ್ಕೂ

ಕಿರ್ಲೋಸ್ಕರ
ಹೌಸ್ ಸಿಸ್ಟಮ್ ಪಂಪು.

ನಿಮಗೆ ಪೂರ್ಣ ಸಂತೃಪ್ತಿಯನ್ನೀಯುತ್ತದೆ

ಒಂದು ಗುಂಡಿಯನ್ನೊತ್ತಿದರೆ ಸರಿ,
ಪುಂಪು ತನ್ನಷ್ಟಕ್ಕೆ ನಡೆಯುತ್ತದೆ.

ಎಲ್ಲಿಂದಾದರೂ, ¾ ಇಂಚು ಪೈಪಿನ ಮೂಲಕ ನೀರನ್ನು ಒದಗಿಸಿಕೊಡುತ್ತದೆ.

¼ B H. P ವಿದ್ಯುತ್ ಮೋಟರಿನೊಂದಿಗೆ ಪೂರ್ಣವಾಗಿರುತ್ತದೆ



ವಿವರಕ್ಕೆ ಈ ಕೆಳಗಿನವರಿಗೆ ಬರೆಯಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ. ಸತಾರಾ

ಡಿಸ್ಟ್ರಿಬ್ಯೂಟರರು—ಪೆರ್ರಿ ಎಂಡ್ ಕೋ ಲಿಮಿಟೆಡ್, ಮದ್ರಾಸು

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕಾಲರಕ್ಕೆ ದಿವ್ಯೌಷಧ! ಉಪಯೋಗಿಸಿದ ಗುಣ ಖಾತ್ರಿ
ಸೀಸೆ ಡಜ್ಜ 1ಕ್ಕೆ ರೂ 1—0—0

ಗುಹ್ಯರೋಗ ನಿವಾರಿಣೀ ತೈಲ
Anti-Veneraei Oil
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧ ಕುಟುಂಬ ಪರಂಪರೆಯಿಂದ ವ ತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು
8 ಔನ್ಸಿನ ಬಾಟ್ಲಿ 1ಕ್ಕೆ ರೂ 2—8—0.

ಕೆ ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು

An Advertisement in
'Swadeshabhimani'

Means a sure fortune to you

Ask for Contract Rates

The Swadeshabhimani office,
Car Street, Mangalore

ಕುಷ್ಠ ರೋಗ ಮತ್ತು ಫರಂಗಿ ರೋಗ

ಇತರ ಎಷ್ಟು ದೀರ್ಘಕಾಲದ ರೋಗವೇ ಆಗಿರಲಿ ಯಾವ ಕಾರಣವೇ ಇರಲಿ ನೀವು ಮದ್ದು ಮಾಡಿ ಮಾಡಿ ದಣಿದಿರಿ ನಿಮ್ಮ ರೋಗಗಳನ್ನು ಇಂಜೆಕ್ಷನಿಲ್ಲದಂತೆ ಶಾಶ್ವತವಾಗಿ 4 ವಾರಗಳಲ್ಲಿ ಗುಣಪಡಿಸಲಾಗುತ್ತದೆ ಪೂರ್ಣ ಗುಣ ಗ್ಯಾರಂಟಿ

ವಿವರಕ್ಕೆ ಬರೆಯಿರಿ.

Kamala Works,
Panchpota Bengal S B.

C P S

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು.

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು

ಚಿತ್ರಾಕೃತಿ ಸಮೇತ

ಋಗ್ವೇದೀ ಸಂಧ್ಯಾವಂದನೆ

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ ಎ, ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ

ಬೆಲೆ ಆಣೆ 8.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟವೆ)

ಹೈಕೋರ್ಟ ಜಡ್ಜರುಗಳಿಂದಲೂ ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟವೆ

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು



ಹೊಸ ಕೆಟಲಾಗು ಧರ್ಮಾರ್ಥ

ವಿಳಾಸ

TheScientificGold Bangles Co Ltd.,
Head Office -43, Byragimadam Street,
Post Box No 203, Madras.

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ.

ಹೊಸತಾಗಿ ಆವಿಷ್ಕಾರವಾದುದು ದೊರೆಯುವ ಇತರ ಕ್ಯಾಮರಗಳಿಗಿಂತ ಬಾಳಿಕೆ ಬರುವಂಥದು ಮತ್ತು ಉತ್ತಮವಾದುದು ಫೋಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ. ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್, ೪ ಫಿಲ್ಮ್ ಎಕ್ಸ್‌ಪೋಜರ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಅವಶ್ಯಕವಾದ ರಸಾಯನಿಕ ವಸ್ತುಗಳು, ಫೋಟೋ ತೆಗೆಯುವ ವಿಧಾನ, ಶಿಕ್ಷಣಕೊಡುವ ಸಾಹಿತ್ಯ—ಇವು ಉಚಿತವಾಗಿ ಕಳುಹಿಸಲಾಗುತ್ತದೆ ಬಲವಾದ ಲೆನ್ಸ್ ಬೆಲೆ ಸಾಮಾನ್ಯವಾದುದು ರೂ. ೩—೧೨—೦, ಉತ್ತಮವಾದುದು ೪—೧೨—೦, ಮಡಚುವ ಕ್ಯಾಮರಾ ರೂ ೫, ಉತ್ತಮವಾದ್ದು ರೂ. ೭ ಸ್ಪೆಶ್ಯಲ್ ರೂ. ೧೦, ಪೆಟ್ಟಿಗೆ ಫಿಲ್ಮ್ ಬೇಕಾದರೆ ಡಜನ್ ೧ಕ್ಕೆ ೬ ಆಣೆ. ಎನ್‌ಲಾರ್ಜ್‌ಮೆಂಟಿನ ಸಾಧನ ಸಾಮಗ್ರಿ ೧ ಶೀಸೆಗೆ ೪ ಆಣೆ, ಫಿಕ್ಸಿಂಗ್ ಸಾಲ್ಟ್ ೧ ಡಬ್ಬಿಗೆ ೬ ಆಣೆ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ. ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ.

ಭಾರತ ಯೂನಿಯನ್ ಟ್ರೇಡಿಂಗ್ ಕಂ.
ಪೋಸ್ಟ್‌ಬಾಕ್ಸ್ ನಂಬ್ರ [illegible] ಎ) ಕಲ್ಕತ್ತ

ಪುಸ್ತಕ ವಿಮರ್ಶೆ.

[ಈ ಬಗೆಯ ಭಾಗದಲ್ಲಿ ನಮಗೆ ಬಾರಂಭದಿ ಬರುವ ಸಾಹಿತ್ಯಗಳನ್ನು ಒಂದೊಂದಾಗಿ ವಿಮರ್ಶಿಸ ಬೇಕೆಂದಿರುತ್ತೇವೆ ಪ್ರಕಾಶಕರೂ, ಲೇಖಕರೂ ತಂತಮ್ಮ ಕೃತಿಗಳನ್ನು ನಮ್ಮ ವಿಮರ್ಶೆಗಾಗಿ ಕಳುಹಿಸಿಕೊಡ ಬಹುದು]

ಪ್ರೇಮಾಹುತಿ.

ಲೇಖಕರು, ಶ್ರೀ ಟಿ. ವಿ ರಾವ್, ಬಳ್ಳಾರಿ. ಮುದ್ರಕರು: ಶ್ರೀ ಶಿವಾನಂದ ಮುದ್ರಣಾಲಯ, ಬಳ್ಳಾರಿ.

ಇದೊಂದು ಸಾಮಾಜಿಕ ಕಥೆ ವಾಸುದೇವನೆಂಬ ಕಥಾನಾಯಕನ ಆತ್ಮಪ್ರೇಮ ಪ್ರಭಾವವೆಷ್ಟೆಂದು ತೋರಿಸಿ, ಇಂತಹ ಪ್ರೇಮವೇ ಪವಿತ್ರ ಪ್ರೇಮವೆಂದು ವೇದ್ಯಗೊಳಿಸಲು ಲೇಖಕರು ಈ ಕಥೆಯಲ್ಲಿ ಪ್ರಯತ್ನಿಸಿರುತ್ತಾರೆ ಕಥಾವಸ್ತುವು ಚೆನ್ನಾಗಿದೆ ಘಟನೆಗಳ ಸಂಯೋಜನಾಕಾರ್ಯವೂ ಯುಕ್ತಿಯಾಗಿ ನಡೆದಿದೆ ಬಳ್ಳಾರಿಯ ತ್ತಕಡೆ ವಾಡಿಕೆಯಲಿರುವ ಶಬ್ದಪ್ರಯೋಗವು ಹೆಚ್ಚಾಗಿ ನಡೆದಿದೆ ಯಾದರೂ, ಅದನ್ನು ತಪ್ಪೆನ್ನಲಾಗುವುದಿಲ್ಲ, ಮುನ್ನುಡಿಯಲ್ಲಿ ಮೈಸೂರು ಆಸ್ಥಾನ ವಿದ್ವಾನ್ ವೈ ನಾಗೇಶ ಶಾಸ್ತ್ರಿಗಳು ತಿಳಿಸಿರುವಂತೆ ಮಾತುಗಳಲ್ಲಿ ನೈಸರ್ಗಿಕವಾದ ಸೊಬಗಿದೆ ಶೈಲಿಯಲ್ಲಿ ಸರಳತೆಯಿದೆ ಅಲ್ಲಲ್ಲಿ ರಸೋದಯವಾಗುವ ಸನ್ನಿವೇಶಗಳೂ ಬಂದಿರುತ್ತವೆ. ಕಥೆಯ ಚರಮ ಉದ್ದೇಶವು ಹೆಚ್ಚಿನ ಮಟ್ಟಿಗೆ ನೆರವೇರುವಂತೆ ಲೇಖಕರು ಯತ್ನಿಸಿದ್ದಾರೆ

ಮೈಸೂರಿನ ಕನ್ನಡಿಗರೂ, ದಕ್ಷಿಣ ಕನ್ನಡಿಗರೂ, ಉತ್ತರ ಕನ್ನಡಿಗರೂ ಈಗೀಗ ಕನ್ನಡ ವಾಙ್ಮಯ ಸೇವೆಯಲ್ಲಿ ಹೆಚ್ಚು ಹೆಚ್ಚಾಗಿ ತಲ್ಲೀನರಾಗುತ್ತಿರುವಾಗ, ವಿಜಯನಗರದತ್ತ ಕಡೆಯ ಕನ್ನಡಿಗರು ತಮ್ಮ ಸಾಮರ್ಥ್ಯವನ್ನು ಈ ರೀತಿಯಿಂದ ತೋರಿಸುತ್ತಿರುವುದು ಆನಂದ ಪ್ರದ ವಿಷಯ ಶ್ರೀ ವೇದವ್ಯಾಸರಂತಹ ಉತ್ಸಾಹೀ ಬರಹಗಾರರು ಅತ್ತ ಹೆಚ್ಚಿದಷ್ಟು ಕನ್ನಡನಾಡಿಗೊಂದು ಭೂಷಣ ಈ ಲೇಖಕರನ್ನು ಅವರ ಪರಿಶ್ರಮಕ್ಕಾಗಿ ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ ಅಲ್ಲದೆ ಸರ್ವ ಕನ್ನಡಿಗರೂ ಇವರನ್ನು ಪ್ರೋತ್ಸಾಹಿಸಬೇಕಾಗಿ ಕೇಳಿಕೊಳ್ಳುತ್ತೇವೆ

ಈ ಪುಸ್ತಕದ ಮುದ್ರಣದ ಕುರಿತಾಗಿ ಎರಡು ಮಾತು ಹೇಳದಿರಲಾಗುವುದಿಲ್ಲ ಆಧುನಿಕ ಕಾಲದಲ್ಲಿ ಪ್ರಕಾಶಕರನ್ನೂ ಲೇಖಕರನ್ನೂ ಬದುಕಿಸಿ ಉಳಿಸುವ ಕಲೆಯೊಂದಿರುವುದಾದರೆ ಅದು ಮುದ್ರಣಕಲೆ ಯಾವ ಗ್ರಂಥವು ಸುಂದರವಾಗಿ, ಆಕರ್ಷಕವಾಗಿ ಮುದ್ರಿತವಾಗುವುದೋ, ಯಾವ ಗ್ರಂಥದ ಅಚ್ಚುಕಟ್ಟುವಿಕೆಯು ಚೆನ್ನಾಗಿರುತ್ತದೋ ಅಂತಹ ಗ್ರಂಥವು ವಾಚಕರಲೋಕದಲ್ಲಿ ಅದಷ್ಟು ಶೀಘ್ರವಾಗಿ ಪ್ರಚಾರವಾಗುವುದು. ಗ್ರಂಥದಲ್ಲಿ ಏನಿದೆಯೆಂದು ತಿಳಿಯುವ ಮೊದಲು ಓದುಗರು ಗ್ರಂಥದ ಬಾಹ್ಯರೂಪವನ್ನು ವಿಮರ್ಶಿಸುವರು ಅನೇಕರು ಪುಸ್ತಕದ ಸೌಂದರ್ಯಕ್ಕಾಗಿಯೇ ಅದನ್ನು ಪಡೆಯುವುದೂ ಉಂಟು ಮಂಗಳೂರು, ಬೆಂಗಳೂರು, ಮೈಸೂರುಗಳಲ್ಲಿ ಪ್ರಕಾಶಕರೂ ಲೇಖಕರೂ ದಿನೇ ದಿನೇ ಹೆಚ್ಚುತ್ತಿರಲು ಈ ಪ್ರಾಂತ್ಯಗಳ ಮುದ್ರಣಕಲೆಯ ಉತ್ಕರ್ಷವೇ ಬಹುಮಟ್ಟಿಗೆ ಕಾರಣೀಭೂತವಾಗಿದೆಯೆಂದರೂ ಸಲ್ಲುವುದು 'ಪ್ರೇಮಾಹುತಿ'ಯು ಮುದ್ರಿತವಾದ ಮುದ್ರಣಶಾಲೆಯಲ್ಲಿ ಸುಂದರ ಅಕ್ಷರ ಗಳಿವೆಯಾದರೂ, ಉತ್ತಮ ಯಂತ್ರವಿದೆಯಾದರೂ, ಅವರು ಈ ಗ್ರಂಥದ ನಿರ್ಮಾಣದಲ್ಲಿ ಹೆಚ್ಚು ಲಕ್ಷ್ಯವಿಟ್ಟಂತೆ ಕಾಣುವುದಿಲ್ಲ 'ಯೋಗಕ್ಷೇಮವನ್ನು ಸರಿ'—'ಬರಿಯಲೆಣಿಸಲಿಲ್ಲ' 'ಬೇಡಿ ದೊಡನೆಯೇ' 'ಬೇಸರ ವಿಲ್ಲದೇ' 'ಎಚ್ಚರಿಕೆ ಯಾಯ್ತು' 'ತಿದಿಕೆ ಯಿಂದ' 'ದರ್ಶನ ವಾದರೂ' 'ಕಾಣು ತಲಿದೆ' ಹೀಗೆ,

ಮೈಸೂರಿನ ಸಮಾಚಾರಗಳು.

ಬೆಂಗಳೂರು ಪತ್ರ

(ನಮ್ಮ ಸ್ವಂತ ಪ್ರತಿನಿಧಿಯಿಂದ)

ಬೆಂಗಳೂರು, ತಾ. ೧೮-೬-೧೯೩೫.

ಮೈಸೂರು ಪ್ರಜಾ ಪ್ರತಿನಿಧಿ ಸಭೆ. ಬಜೆಟ್ ಅಧಿವೇಶನ

ದಿವಾನ ಸಾಹೇಬರ ಪ್ರಾರಂಭ ಭಾಷಣ

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಬಜೆಟು ಅಧಿವೇಶನವು ಇದೇ ತಿಂಗಳ ತಾ ೧೩ನೇ ಮಧ್ಯಾಹ್ನ ೧೨ ಘಂಟೆಗೆ ಜಗನ್ಮೋಹನ ಅರಮನೆಯ ಸಭಾಮಂಟಪದಲ್ಲಿ ಪ್ರಾರಂಭವಾಯಿತು ದಿವಾನರವರಾದ ಸರ್ ಮಿರ್ಜಾ ಎಂ ಇಸ್ಮಾಯಿಲ್‌ರವರು ಅಧ್ಯಕ್ಷರಾಗಿದ್ದರು ಶ್ರೀ ಭುಲಾಭಾಯಿ ದೇಸಾಯಿ, ಮೈಸೂರು ರೆಸಿಡೆಂಟರವರಾದ ಪ್ಲಾಡನ್, ಮದರಾಸು ಗವರ್ನರರಾಗಿದ್ದ ಸರ್ ಮಹಮ್ಮದ್ ಉಸ್ಮಾನ್, ಮದರಾಸು ಹೈಕೋರ್ಟು ಜಡ್ಜರವರಾದ ಜಸ್ಟಿಸ್ ವೇಪರಾವೆ ಇವರುಗಳೇ ಮೊದಲಾಗಿ ಅನೇಕ ಮಂದಿ ದೊಡ್ಡ ಮನುಷ್ಯರುಗಳ ಸಭೆಗೆ ಪ್ರೇಕ್ಷಕರಾಗಿ ದಯಮಾಡಿಸಿದ್ದರು

ದಿವಾನರ ಭಾಷಣ

ಪ್ರಾರಂಭದಲಿ ದಿವಾನರವರ ಮಾಡಿದ ಭಾಷಣವು ಅವರ ದೃಷ್ಟಿವೈಶಾಲ್ಯವನ್ನು ವಿಶಾಲ ಹೃದಯವನ್ನೂ ಚೆನ್ನಾಗಿ ವ್ಯಕ್ತಪಡಿಸಿರುತ್ತದೆ ಅವರ ಕರ್ತವ್ಯ ಕ್ಷೇತ್ರವು ಮೈಸೂರಿನ ಕಡೆಗಿದ್ದರೂ ಅವರ ಹಿತಚಿಂತನೆ ಸಮಸ್ತ ಭಾರತದ ಕಡೆಗೂ ಅಪ್ಪೇಕೆ ಸಮಸ್ತ ಭಾರತದ ಕಡೆಗೂ ಹರಿಯುತ್ತಿದೆ

ಕ್ವೆಟ್ಟಾ ಭೂಕಂಪ

ಅವರ ಭಾಷಣವು ಮೊದಲಾಗುವುದ ಕ್ವೆಟ್ಟಾ ಭೂಕಂಪದ ವಿಷಾದ ಸಂಗತಿಯನ್ನು ಕುರಿತ ಆ ವಿಷಯವನ್ನು ಪ್ರಸ್ತಾಪಿಸಿ ಅವರು ಹೀಗೆ ಮಾತನಾಡಿದ್ದಾರೆ

"ಬಟ್ಟ ಭರತಖಂಡವೇ ಅಭೂತಪೂರ್ವವಾದ ಘೋರ ಮಹ ವಿಪತ್ತಿನ ವರ್ತಮಾನವನ್ನು ಕೇಳಿ ಸ ತಲ್ಲಣಗೊಂಡಿರುವ ಸಮಯದಲ್ಲಿ ನಾವು ಸಭೆ ಸೇರಿದ್ದೇವೆ ಈ ಭೂಕಂಪದ ದೆಸೆಯಿಂದ ಕಷ್ಟಗಳಿಗೆ ಗುರಿಯಾಗಿರುವವರಲ್ಲಿ ಅಥವಾ ಭೂಕಂಪಕ್ಕೆ ತುತ್ತಾದವರಲ್ಲಿ ಬೊಂಬಾಯಿ ಅಥವಾ ಪಂಜಾಬು ಪ್ರಾಂತ್ಯದವರಿಗಿದ್ದಷ್ಟು ಮಂದಿ ಬಂಧುಮಿತ್ರರು ನಮಗಿಲ್ಲದಿರಬಹುದು ಆದಾಗ್ಯೂ ನಾವುಗಳೆಲ್ಲರೂ ಒಬ್ಬಳೇ ಭಾರತ ಮಾತೆಯ ಮಕ್ಕಳಾಗಿ ಒಂದೇ ಜನಾಂಗಕ್ಕೆ ಸೇರಿದವರೆಂಬ ಭಾವನೆಯನ್ನಿಟ್ಟುಕೊಂಡು ಭೂಕಂಪದಿಂದ ಕಷ್ಟಕ್ಕೆ ಗುರಿಯಾಗಿರುವ ನಮ್ಮ ಸೋದರ ಸೋದರಿಯರಿಗೆ ಸಹಾನುಭೂತಿಯನ್ನು ತೋರಿಸೋಣ"

ಇಂಡಿಯಾ ಬಿಲ್ಲು

ದಿವಾನರು ಭಾಷಣದಲ್ಲಿ 'ಇಂಡಿಯಾ ಬಿಲ್ಲ'ನ್ನು ಕುರಿತು ದೀರ್ಘವಾಗಿ ಪ್ರಸ್ತಾಪಿಸಿದ್ದಾರೆ ಅದರಲ್ಲಿ ಅವರು ತಮ್ಮ ಅಭಿಪ್ರಾಯವನ್ನು ಹೊರಗೆಡಹಿದ್ದಾರೆ ಈ ವಿಷಯವು ಸಮಸ್ತ ಭಾರತಕ್ಕೂ ಸಂಬಂಧಿಸಿದ್ದುದರಿಂದ ಅವರು ಹೇಳಿರುವ ಕೆಲವು ವಾಕ್ಯಗಳನ್ನು ಎತ್ತಿ ಬರೆದರೆ ಅನುಚಿತವಾಗಿರಲಾರದು "ಇಂಡಿಯಾ ಬಿಲ್ಲು "ಇಷ್ಟರಲ್ಲಿಯೇ ಕಾನೂನಾಗಿ ಪರಿಣಮಿಸುತ್ತದೆಂಬುದರಲ್ಲಿ ಸಂದೇಹವಿಲ್ಲ ಅದು ಕಾನೂನಾಗಿ ಪರಿಣಮಿಸಿದರೆ, ಬ್ರಿಟಿಷ ಪಾರ್ಲಿಮೆಂಟಿನವರು ಸಾಧಿಸಿರುವ ದೊಡ್ಡ ಕೆಲಸಗಳಲ್ಲಿ ಅತ್ಯಂತ ಮುಖ್ಯವಾದುವುಗಳ ಗುಂಪಿಗೇ ಅದು ಸೇರುವುದಾಗಿದೆ ಪಾರ್ಲಿಮೆಂಟಿನವರು ಕೈಕೊಂಡ ಇತರ ಯಾವ ಏರ್ಪಾಡಿನ ವಿಷಯದಲ್ಲಿಯೂ ಇದರ ವಿಷಯದಲಿ ಒದಗಿದಷ್ಟು ಪ್ರಬಲವಾದ ಮತ್ತು ಕಟುವಾದ ವಿರೋಧವು ಎಂದೂ ಒದಗಿರಲಿಲ್ಲ ಅಲ್ಲದೆ ಈ ಮಸೂದೆಯನ್ನು ಆಕ್ಷೇಪಿಸಿದಷ್ಟು ಒಹುಮಂದಿಗಳು ... ಬಹು ಮುಖ್ಯವಾದ ಕಾರಣಗಳೂ ಮತ್ತಾವ ಮಸೂದೆಯ ವಿಚಾರದಲ್ಲಿಯೂ ಇರಲಿಲ್ಲ ಮಸೂದೆಯಲ್ಲಿರುವ ಮುಖ್ಯ ವಿಚಾರಗಳಲ್ಲಿ ಕೆಲವನ್ನು ಕುರಿತ ನಾನು ಮೊದಲೇ ಹೇಳಿದ್ದೇನೆ ಆದಾಗ್ಯೂ ಈಗ ಬರುವ ಕಾನೂನನ್ನು ಅಂಗೀಕರಿಸಿ ಕೆಲಸ ನಡೆಸಬೇಕೇ ಅಥವಾ ಅದನ್ನು ತಿರಸ್ಕರಿಸಬೇಕೇ ಅಥವಾ ಅದನ್ನು ಸ್ಥಿರವಾದ ... ಬಹಿಷ್ಕರಿಸಬೇಕೇ ... ಪ್ರಶ್ನೆಯು ಹುಟ್ಟಿದರೆ ಅದಕ್ಕೆ ನನ್ನದು ಒಂದೇ ಉತ್ತರ ಈ ಮಸೂದೆಯ ಪ್ರಕಾರ ದೊರೆಯುವ ಸುಧಾರಣೆಗಳನ್ನು ಅಗತ್ಯವಾಗಿ ಅಂಗೀಕರಿಸಿ ಅವಕ್ಕನುಸಾರವಾಗಿ ಕೆಲಸ ನಡೆಸಬೇಕೆಂಬುದು ... ನಿರ್ದಿಷ್ಟವಾಗಿ ಕೊಡುವ ಉತ್ತರ ಈಗಿನ ಮಸೂದೆ ಅನೇಕ ಬಗೆಗಳಲ್ಲಿ ಅತೃಪ್ತಿಕರವಾಗಿದೆ ... ಭರತಖಂಡದಲ್ಲಿ ಏರ್ಪಡಿಸಬೇಕೆಂದಿರುವ ಆಡಳಿತ ವ್ಯವಸ್ಥೆಯು ... ಸಂಕೀರ್ಣವಾಗಿದೆ ಅದರ ಪ್ರಕಾರ ಕೆಲಸ ನಡೆಸುವುದು ಬಹಳ ಕಷ್ಟವಾಗುತ್ತದೆ ಇದೆಲ್ಲ ನಿಜ ಹೀಗಿದ್ದೂ ಕೂಡ, ಈಗಿನ ಹೊಸ ಏರ್ಪಾಡನ್ನು ಅಂಗೀಕರಿಸಿ ಅದರಂತೆ ಕೆಲಸ ಮಾಡುವುದೇ ಯುಕ್ತವೆಂದು ನನಗೆ ತೋರುತ್ತದೆ ಏಕೆಂದರೆ ಅದರಲ್ಲಿ ಕಂಡುಬರುವಂಥ ದೋಷಗಳು ನ್ಯೂನತೆಗಳೂ ಬಹುಮಟ್ಟಿಗೆ ಅಸಿ ವಾರ್ಯವಾದುವುಗಳು. ಮುಂದೆ ಏರ್ಪಾಡು ವ ಆಡಳಿತ ಶಿಸ್ತು ಸುಗಮವಾಗಿ ಆಚರಣೆಗೆ ಬಂದು ಬರುವುದೆಂದು ನಾನು ನಿಸ್ಸಂದೇಹವಾಗಿ ನಂಬಿದ್ದೇನೆ ಭಾರತೀಯರಿಗೆ ತಮ್ಮ ಮಾತೃಭೂಮಿಯ ಸೇವೆಗೆ ಅದರಿಂದ ದೊಡ್ಡ ಅವಕಾಶವು ದೊರೆಯುವುದೆಂಬ ವಿಚಾರದಲ್ಲಿಯೂ ನನ್ನ ಮನಸ್ಸಿಗೆ ಸಂದೇಹವಿಲ್ಲ"

ಇಂಡಿಯಾ ಬಿಲ್ಲನ್ನು ಕುರಿತು ಪ್ರಸ್ತಾಪಿಸುತ್ತ ದಿವಾನರು ಸರ್ ಸಾಮುವೆಲ್ ಹೋರರವರ ಮೇಧಾಶಕ್ತಿಯನ್ನೂ ಬುದ್ಧಿಶಕ್ತಿಯನ್ನೂ ಬಹಳವಾಗಿ ಕೊಂಡಾಡಿದರು

ಮೈಸೂರಿನ ಆಯವ್ಯಯ

ದಿವಾನರ ಭಾಷಣದ ಉಳಿದ ಭಾಗವೆಲ್ಲ ಮೈಸೂರಿನ ಆಯವ್ಯಯಕ್ಕೆ ಸಂಬಂಧಿಸಿದ್ದು ದಿವಾನರು ಹುಟ್ಟುವಳಿಯ ಬಾಬನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ ೧ ದೈವದತ್ತವಾದುವು, ೨ ವಾಣಿಜ್ಯ ಉದ್ಯಮಗಳು, ೩ ಪ್ರಜಾವರ್ಗದಿಂದ ಬರತಕ್ಕ ತೆರಿಗೆಗಳ ಮೊಬಲಗುಗಳು ಮೈಸೂರಿಗೆ ದೈವದತ್ತವಾದುವು ಗಣಿಗಳು ಈ ಗಣಿಗಳಿಂದ, ಮುಖ್ಯವಾಗಿ ಚಿನ್ನದ ಗಣಿಯಿಂದ ಎಂದಿಗಿಂತ ಹೆಚ್ಚು ವರಮಾನ ಬಂದಿದೆ ವಾಣಿಜ್ಯ ಉದ್ಯಮಗಳು ಈ ಮುಂದೆ ಕಾಣಿಸಿರುವ ಕಾರ್ಯಾಲಯ-ಕಾರ್ಖಾನೆಗಳನ್ನು ಅವಲಂಬಿಸಿದೆ

೧ ಶ್ರೀಕೃಷ್ಣರಾಜೇಂದ್ರ, ಹೈಡ್ರೋ ಎಲೆಕ್ಟ್ರಿಕ್ ಮತ್ತು ನೀರಾವರಿಯ ಕೆಲಸಗಳು; ೨. ಮೈಸೂರು ರೈಲ್ವೆ, ೩. ಮೈಸೂರು ಐರನ್ ವರ್ಕ್ಸ್, ೪ ಸಕ್ಕರೆ ಕಾರ್ಖಾನೆ, ೫ ಗಂಧದ ಎಣ್ಣೆಯ ಕಾರ್ಖಾನೆ, ೬ ಪೋರ್ಸಿಲೇನ್ ಫ್ಯಾಕ್ಟರಿ, ೭ ರೇಷ್ಮೆ ಕೈಗಾರಿಕೆ ಮತ್ತು ಇತರ ಚಿಲ್ಲರೆ ಉದ್ಯಮಗಳು ದಿವಾನರು ಈ ಒಂದೊಂದು ಉದ್ಯಮವನ್ನು ತೆಗೆದುಕೊಂಡು ಅವುಗಳಿಂದ ಮೈಸೂರಿಗಾಗುವ ಲಾಭನಷ್ಟಗಳನ್ನು ಚರ್ಚಿಸಿದ್ದಾರೆ ಅನಂತರ ಖರ್ಚಿನ ಬಾಬುಗಳೆಲ್ಲವನ್ನೂ ಪರಿಶೀಲಿಸಿದ್ದಾರೆ ಕೊನೆಯಲ್ಲಿ ಮೈಸೂರಿನ ಆಯವ್ಯಯ ಸ್ಥಿತಿಯನ್ನು ಹೀಗೆ ಸಂಗ್ರಹಿಸಿದ್ದಾರೆ 'ಒಟ್ಟಿನಲ್ಲಿ ೧೯೩೪-೩೫ನೆಯ ಸಾಲಿನ ಆಯವ್ಯಯದ ಲೆಕ್ಕಗಳನ್ನು ಆವೈರಾಗಿ ಪರಿಶೀಲಿಸಿ ನೋಡಿದುದರಲ್ಲಿ ಹುಟ್ಟುವಳಿಯು ವೆಚ್ಚಕ್ಕಿಂತಲೂ ೫ ಲಕ್ಷ ರೂಪಾಯಿಗಳಷ್ಟು ಕಡಮೆ ಬೀಳಬಹುದೆಂದು ತೋರಬಂದಿದೆ ೧೯೩೫-೩೬ನೆಯ ಸಾಲಿನ ಅಂದಾಜಿನಲ್ಲಿ ಆ ವರ್ಷದ ವೆಚ್ಚಕ್ಕಿಂತಲೂ ಹುಟ್ಟುವಳಿಯು ಸ್ವಲ್ಪಮಟ್ಟಿಗೆ ಹೆಚ್ಚಾಗಿದ್ದು ಸುಮಾರು ೧ ೦೬ ಲಕ್ಷ ರೂಪಾಯಿಗಳಷ್ಟು ಹಣವು ಉಳಿತಾಯವಾಗಬಹುದೆಂದು ನಿರೀಕ್ಷಿಸಲಾಗಿದೆ'

ಒಟ್ಟಿನಲ್ಲಿ ಹೀಗೆ ಸಮತೂಗಿ ಉಳಿತಾಯವಾಗಲಿರುವುದ ಶುಭಚಿಹ್ನೆಯೇ ಸರಿ ಕನಸು ನನಸಾಗುವುದನ್ನು ಕಾದುನೋಡಬೇಕು

ಹರಿಜನ ಸಮ್ಮೇಳನ.

ಇದೇ ತಿಂಗಳ ತಾ ೧೬ನೆಯ ಭಾನುವಾರ ಪ್ರಾತಃಕಾಲ ಮೈಸೂರಿನಲ್ಲಿ ರಂಗಾಚಾರ್ಲುರವರ ಮೆಮೋರಿಯಲ್ ಭವನ (ಟೌನ್ ಹಾಲ್)ದಲ್ಲಿ ಹರಿಜನ ಸಮ್ಮೇಳನವು ಸೇರಿತ್ತು ಶ್ರೀಮತಿ ರಾಮೇಶ್ವರಿ ನೆಹರು (ಶ್ರೀ ಬ್ರಿಜ್‌ಲಾಲ್ ನೆಹರು ಅವರ ಪತ್ನಿ) ಅವರ ಅಧ್ಯಕ್ಷತೆಯನ್ನು ವಹಿಸಿದ್ದರು

ಸರ್ ಎಂ ಮಿರ್ಜಾ ಎಂ ಇಸ್ಮಾಯಿಲ್‌ರವರು ಸಮ್ಮೇಳನವು ಯಶಸ್ವಿಯಾಗಿ ಜರಗಲೆಂದೂ ಸಂಸ್ಥಾನದ ಹಿಂದುಳಿದ ವರ್ಗ (Depressed Class)ದವರ ಸ್ಥಿತಿಯನ್ನು ಉತ್ತಮಗೊಳಿಸಲು ಕೈಕೊಂಡ ಎಲ್ಲಾ ಪ್ರಯತ್ನಗಳಿಗೂ ಮಹಾರಾಜರವರ ಸರ್ಕಾರವು ತನ್ನ ನೆರವೀಯುವುದೆಂದೂ ತಿಳಿಸಿ ಒಂದು ಸಂದೇಶಪತ್ರವನ್ನು ಬರೆದಿದ್ದರು.

ಅಧ್ಯಕ್ಷರಾಗಿದ್ದ ಶ್ರೀಮತಿ ರಾಮೇಶ್ವರಿ ಯವರು ಇಂಗ್ಲೀಷಿನಲ್ಲಿ ಸ್ಫೂರ್ತಿದಾಯಕವಾದ ಭಾಷಣ ಮಾಡಿ, ಸಂಸ್ಥಾನದ ಪ್ರಜೆಗಳೆಲ್ಲರೂ ಹರಿಜನರ ಸಾಂಸ್ಕೃತಿಕ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಪ್ರಯತ್ನಪಡಬೇಕೆಂದು ಮನಮುಟ್ಟುವಂತೆ ಮಾತಾಡಿದರು.

ಮೈಸೂರು ರೈಲ್ವೆ

ಮೈಸೂರು ಸರಕಾರದವರು ಚಾಮರಾಜ ನಗರದಿಂದ ಸತ್ಯಮಂಗಲಕ್ಕೆ ರೈಲ್ವೆ ಲೈನನ್ನು ಬಡಾಯಿಸಬೇಕೆಂದು ಉದ್ದೇಶಿಸಿದ್ದಾರೆ ಈ ವಿಚಾರವಾಗಿ ಸಾಧ್ಯಾಸಾಧ್ಯತೆಗಳನ್ನು ಪರೀಕ್ಷಿಸುವುದಕ್ಕಾಗಿ ಇಂಡಿಯಾ ರೈಲ್ವೆ ಬೋರ್ಡಿನ ಅಧ್ಯಕ್ಷರವರು ಬರುವ ತಿಂಗಳಲ್ಲಿ ಮೈಸೂರಿಗೆ ಬರಬಹುದು.

ಬೆಂಗಳೂರು ಹರಿಹರ ರೈಲ್ವೆಯ ಆಡಳಿತವನ್ನು ಮೈಸೂರು ಸರಕಾರದವರು ೧೯೩೬ನೇ ಇಸವಿಯಲ್ಲಿ ತೆಗೆದುಕೊಳ್ಳುವರೆಂದು ಈ ಮೊದಲೇ ತಿಳಿಸಿದೆ ಎಂ. ಎಸ್ ಎಂ. ರೈಲ್ವೆಯವರು ಅದು ಸದ್ಯಕ್ಕೆ ಸಾಧ್ಯವಿಲ್ಲವೆಂದು ತಿಳಿಸಿರುವರಂತೆ ಒಂದು ಪಂಚಾಯತಿಯನ್ನು ನಿಯಮಿಸಿ ಈ ವಿಷಯವನ್ನು ನಿರ್ಧರಿಸುವಂತೆ ಇಂಡಿಯಾ ಸರಕಾರವನ್ನು ಮೈಸೂರು ಸರಕಾರವು ಬೇಡಲಿರುವುದೆಂದು ವರ್ತಮಾನ.

(೧೧ನೇ ಪುಟಕ್ಕೆ ಮುಂದುವರಿಯುವುದು)

ಹರಿಜನ

ಜಗತ್ತಿನಲ್ಲಿ ಅತ್ಯುತ್ಕೃಷ್ಟವಾದ ತತ್ವವನ್ನೊಳಗೊಂಡಿರುವ ಹಿಂದೂಮತವು ತನ್ನಲ್ಲಿರುವ ಅಸ್ಪೃಶ್ಯತೆಯೆಂಬ ಅದೊಂದು ದೊಡ್ಡ ಕಳಂಕದಿಂದ ಪಾರಾಗುವಂತೆ ಪ್ರಚಂಡ ಚಳವಳವನ್ನು ಹೂಡಿರುವ ಮಹಾತ್ಮಾ ಗಾಂಧಿಯವರು ಅಂಥ ಅಸ್ಪೃಶ್ಯತಾ ನಿವಾರಣೆಯ ಕುರಿತು ಆಗ್ರಹದಿಂದ ಬೋಧಿಸುತ್ತಾ, ಇಡೀ ದೇಶದಲ್ಲಿ ಸಂಚಾರವನ್ನು ಕೈಕೊಂಡಿದ್ದು ತಾ. ೨೪-೨-'೩೪ರಲ್ಲಿ ನಮ್ಮ ಜಿಲ್ಲೆಯನ್ನು ಕೂಡಾ ಸಂದರ್ಶಿಸಿದ್ದರು. ಆ ಸಮಯದಲ್ಲಿ ಅವರಿಂದ ಸ್ಥಾಪಿತವಾಗಿದ್ದ ಹರಿಜನ ಫಂಡಿಗೆ ರೂ. ೧೨೧೯೪/-ರ ಐವೇಜು ನಮ್ಮ ಜಿಲ್ಲೆಯಿಂದಲೇ ದೊರಕಿತ್ತು ಅದ್ದರಿಂದ ನಮ್ಮ ಜಿಲ್ಲೆಯು ಕೈಕೊಳ್ಳಬಹುದಾದ ಹರಿಜನೋದ್ಧಾರ ಕಾರ್ಯಕ್ಕೆ ಆ ಐವೇಜಿನಿಂದ ಸೇಕಡಾ ೭೫ರಷ್ಟು ಸಿಕ್ಕುವುದಾದರೂ ನಿಶ್ಚಯವಾಗಿತ್ತು ಹಾಗಾಗಿ ಅಖಿಳ ಹಿಂದೂಸ್ಥಾನದ ಹರಿಜನ ಸೇವಾಸಂಘದ ಅಧೀನತೆಯಲ್ಲಿ ಕರ್ನಾಟಕ ಬೋರ್ಡಿನ ಶಾಖೆಯಾಗಿ ಈ ನಮ್ಮ ಸಂಘದವರು ಒಪ್ಪಿರುವ ಒಂದು ಸ್ಕೀಮನ್ನು ತಯಾರಿಸಿ, ಅದಕ್ಕೆ ಸರಿಯಾಗಿ ತನ್ನ ಕೆಲಸವನ್ನು ಈ ಸಂಘವು ಪ್ರಾರಂಭಿಸಿರುತ್ತದೆ. ಆ ಸ್ಕೀಮಿನ ಮೇರೆಗೆ ಒಂದು ಹರಿಜನ ವಿದ್ಯಾರ್ಥಿ ಭವನ, ಒಂದು ರಾತ್ರಿ ಶಾಲೆ, ಒಂದು ಕಮ್ಮಾರ ಶಾಲೆ, ಒಂದು ಹೊಲಿಗೆ ಶಾಲೆ, ಒಂದು ಬಾವಿ, ಕೆಲವು ಭಜನಾ ಮಂದಿರಗಳು, ಹಳ್ಳಿಗಳಲ್ಲಿರುವ ಹರಿಜನ ಮಕ್ಕಳಿಗೆ ಬಟ್ಟೆ, ಸ್ಲೇಟು ಮತ್ತು ಪುಸ್ತಕ, ಯೋಗ್ಯ ತರದ ಬೇರೆ ಕೆಲವು ಸಹಾಯ ಮೊದಲಾದವುಗಳನ್ನು ಒದಗಿಸಿಕೊಡುವುದು ಮತ್ತು ಪ್ರಚಾರ ಕಾರ್ಯ ಮಾಡುವುದು ಇವೇ ಮುಖ್ಯ ಕೆಲಸಗಳಾಗಿರುತ್ತವೆ

ಮಂಗಳೂರಲ್ಲಿರುವ ಡಿ ಸಿ ಮಿಶನಿನಲ್ಲಿ ಹೊಲಿಗೆಯ ಶಾಲೆಯೂ ಕೊಡಿಯಾಲ್‌ಬೈಲಿನಲ್ಲಿ ರಾತ್ರಿಶಾಲೆಯೂ, ಕೆಲವು ಕಡೆಗಳಲ್ಲಿ ಭಜನಾ ಮಂದಿರಗಳೂ ನಡೆಯುತ್ತಿವೆ ಹಳ್ಳಿಗಳಲ್ಲಿರುವ ಶಾಲೆಗಳಲ್ಲಿ ಹರಿಜನ ಮಕ್ಕಳಿಗೆ ಬಟ್ಟೆಗಳನ್ನು ಕೊಡುವುದು, ಅಲ್ಲಲ್ಲಿ ಅವರಿಗೆ ಮಧ್ಯಾಹ್ನದ ಊಟ ಕೊಡುವುದಕ್ಕೆ ಪುರಾಣ ವಾಚನದ ಮೂಲಕ ಧನಸಂಗ್ರಹ ಮಾಡುವುದು, ಇತರ ಸಹಾಯಗಳನ್ನು ಕೊಡುವುದು ಮತ್ತು ಪ್ರಚಾರ ಮಾಡುವುದು—ಹೀಗೆಲ್ಲಾ ಕೆಲಸಗಳು ಬೇರೆ ಬೇರೆ ಕಡೆಗಳಲ್ಲಿ ಆಗುತ್ತಿವೆ ಆದರೂ ಶಾಶ್ವತವಾಗಿ ಇರತಕ್ಕದಾದ ಕೆಲಸಗಳಲ್ಲಿ ಅತ್ಯಗತ್ಯವೆಂದು ತೋರಿಬರುವ ವಿದ್ಯಾರ್ಥಿಗಳ ಭವನವನ್ನು ಮಾತ್ರ ಈ ವರೆಗೂ ಎಲ್ಲಿಯೂ ತೆರೆಯಲು ಸಾಧ್ಯವಾಗಲಿಲ್ಲ ಉಡುಪಿಯಲ್ಲಿ ಪ್ರಯತ್ನಿಸಿ ನೋಡಿದಲ್ಲಿ ಸ್ಥಳೀಕ ಪ್ರೋತ್ಸಾಹವು ಸಾಕಷ್ಟು ದೊರಕಲಿಲ್ಲ ಕಾರ್ಕಳದವರು ರೂ ೧,೦೦೦ ಮತ್ತು ಎರಡು ಎಕ್ರೆ ಸ್ಥಳ ಕೂಡಾ ಕೊಟ್ಟು ನಡೆಸುವುದಾಗಿ ಒಪ್ಪಿದುದರಿಂದ, ಆ ಕೆಲಸವನ್ನು ಒಮ್ಮೆ ಅವರಿಗೆ ಬಿಟ್ಟುಕೊಡುವ ಹಾಗಿದ್ದರೂ ಕಡೆಗೆ ಅವರಿಂದಲೂ ಆಗದೆ ಹೋಯ್ತು ಪುತ್ತೂರಲ್ಲಿಯೂ ಸ್ವಲ್ಪ ಪ್ರಯತ್ನ ಮಾಡಿ ನೋಡಿದಲ್ಲಿ ಸಾಕಷ್ಟು ಧೈರ್ಯವು ದೊರೆಯದೆ ಹೋಯಿತು.

ಪುತ್ತೂರು, ಬಂಟವಾಳ, ಮಂಗಳೂರು, ಮುಲ್ಕಿ, ಕಟಪಾಡಿ, ಉಡುಪಿ, ಕುಂದಾಪುರ ಮೊದಲಾದ ಸ್ಥಳಗಳಲ್ಲಿ ಹರಿಜನನಿಧಿಗೆ ಹೆಚ್ಚಿನ ಧನ ಸಹಾಯವು ಸಿಕ್ಕಿರುವುದರಿಂದ ಆ ಪ್ರಾಂತ್ಯದವರು ಇಂತಹ ಭವನವನ್ನು ಸ್ಥಾಪಿಸಲು ಮನಸ್ಸು ಮಾಡುವುದು ನ್ಯಾಯ ಮತ್ತು ಯೋಗ್ಯವಿರುತ್ತದೆ ಆದುದರಿಂದ ಈ ಕೆಲಸವು ಬೇರೆ ಎಲ್ಲಿಯೂ ಆಗದೆ ಹೋದಲ್ಲಿ, ಮೂಲ್ಕಿಯಲ್ಲಾದರೂ ಒಂದು ಭವನವನ್ನು ತೆರೆಯುವುದಾಗಿ ಆಲೋಚಿಸಿರುತ್ತದೆ ಈ ತರದ ಮಾದರಿಯ ಕೆಲಸಕ್ಕೆ ಮನಃಪೂರ್ವಕವಾಗಿ ಕೈಹಾಕುವ ಮನಸ್ಸು ಬೇರೆಯವರಿಗೆ ಇದ್ದರೆ ಬೇಗನೆ ತಿಳಿಸಬೇಕಾಗಿ ಈ ಮೂಲಕ ಅಪೇಕ್ಷಿಸುತ್ತೇವೆ

ಯಸ್. ಎಸ್. ಕಿಲ್ಲೆ,
ಕಾರ್ಯದರ್ಶಿ,
ಜಿಲ್ಲಾ ಹರಿಜನ ಸೇವಕ ಸಂಘ.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

I. P. No 21/'35.

ಶ್ರೀನಿವಾಸ ಭಟ್ಟ, ನರಸಿಂಹ ಭಟ್ಟರ ಮಗ ಮಂಗಳೂರು ತಾಲ್ಲೂಕು ಉಳ್ಳಾಲ ಗ್ರಾಮದಲ್ಲಿರುವವ—ಅರ್ಜಿದಾರ.

And

The Universal Mutual aid & Poor Houses Association Ltd, by its Managing Liquidator Mr. C V. Nagaraja Sastri and another—Respondents.

ಮೇಲ್ಕಾಣಿಸಿದ ಅರ್ಜಿದಾರನು ತನ್ನನ್ನು ದಿವಾಳಿಯೆಂತ ನೇಮಿಸಬೇಕಾಗಿ ವಗೈರೆ ಕಾಣಿಸಿ ಅರ್ಜಿ ದಾಖ್ಲು ಮಾಡಿರುತ್ತಾನೆ ಸದ್ರಿ ಅರ್ಜಿಯು ತನಿಖೆ ಬಗ್ಗೆ ತಾ 25-6-'35ಕ್ಕೆ ಇಟ್ಟಿರುತ್ತದೆ ಆಕ್ಷೇಪ ಉಳ್ಳವರು ತಮ್ಮ ಆಕ್ಷೇಪಗಳನ್ನು ಸದ್ರಿ ತಾರೀಕಿಗೆ ಈ ಕೋರ್ಟಿನ ಮುಂದೆ ಖುದ್ದಾಗಿಯಾಗಲೀ ವ ವಕೀಲರ ಮೂಲಕವಾಗಿಯಾಗಲೀ ಹಾಜರು ಪಡಿಸತಕ್ಕದ್ದು ತಪ್ಪಿದರೆ ಸಿಮ್ಮನ್ನು ಶಿವಾಯಿಮಾಡಿ ಅರ್ಜಿಯನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು ತಿಳಿದಿರಲಿ

ಮಂಗಳೂರು 17 6 35 } B Ananth Rao, ಅರ್ಜಿದಾರನ ಕಡೆ ಎಡ್ವಕೇಟು

Shiromani Narayanacharya

Choukhamba Benares City

OUR CUSTOMER
THIS MAN

THIS MAN
WISHES HE HAD

ಶಾಸ್ತ್ರೀಯ ಪೂರ್ವಿಕರು ಆರೋಗ್ಯರೇ ಅಥವಾ ಈಗಿನವರೇ, ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತ ಇದ್ದರು ಅದರಿಂದ ಏನು ಫಲ ಅದನ್ನು ಧರಿಸಿದರೆ ಅಜೀರ್ಣದಿಕ್ಕೆ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವುವು ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಅಧ್ವ ಪ್ರಮಾಣದ ಕಂಠಿಸರ 1ಕ್ಕೆ ಆಣೆ 10ರಿಂದ ರೂ 2೯ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ 25ರ ವರೆಗೆ ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ 3ರಿಂದ ರೂ 50ರ ವರೆಗೆ ಮತ್ತು ೩-4-5-6-7-8 ಮುಖಗಳ ಕಾಳು 1ಕ್ಕೆ ಆಣೆ 4ರಿಂದ ರೂಪಾಯಿ 10. ಮತ್ತು 9-10-11 ಮುಖಗಳುಳ್ಳ ಕಾಳು 1ಕ್ಕೆ ರೂ 10ರ 30ರ ವರೆಗೆ 12-13-14 ಮುಖದ ಕಾಳು 1ಕ್ಕೆ ರೂಪಾಯಿ 4ರಿಂದ 100ರ ವರೆಗೆ ಸಣ್ಣ ರುದ್ರಾಕ್ಷೀ ಅಪರೆಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ ದೊಡ್ಡ ರುದ್ರಾಕ್ಷೀ ಅದಕ್ಕಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮದಾಗಿ ಕಳುಹಿಸುತ್ತೇವೆ 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ 1 ಕಾಶಿ ಚಿತ್ರಂಬರ ಕೆಟಲಾಗಿನೊಡನೆ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ

ಚೌಖಂಬಾ, ಬನಾರಸ್ (ಕಾಶೀ)

Wanted.

A private teacher. Apply with particulars stating the minimum pay required

"K G"

C/o The Editor, Swadeshabhimani, Mangalore.

WANTED.

A young Brahmin virgin widow, to marry a young Brahmin bachelor Apply with particulars

"K G"

C/o The Editor, Swadeshabhimani, Mangalore

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ ಆ
ರಾಶಿ ಅಕ್ಕಿ	3—15	4— 4
ಮಕ್ಕಿ	4— 4	4—10
ಗುಡ್ಡು	4— 2	4— 6
ಊರ ಅವ್ಲಲ್ ಬೆಳ್ತಿಗೆ	4— 8	4—12
ರಂಗೂನು ಬೆ. ಗೋ ೧ಕ್ಕೆ	6—12	7— 4
ಎಲ್ಲೂರು ಬೆ ಮು ೧ಕ್ಕೆ	4— 4	4— 8
ಗೋದಿ ಗೋಣಿ ೧ಕ್ಕೆ	10— 0	12— 8
ತೊಗರಿ ಗೋಣಿ ೧ಕ್ಕೆ	10—8	11— 0
ಹುರುಳಿ ಗೋಣಿ ೧ಕ್ಕೆ	7— 6	7 —12
ಕಡಲೆ ಗೋಣಿ ೧ಕ್ಕೆ	8 — 0	10— 8
ಕೊಗಂಬೇಳೆ ಗೋಣಿ ೧ಕ್ಕೆ	10— 0	17— 0
ಉದ್ದು ಗೋಣಿ ೧ಕ್ಕೆ	8— 0	8 — 8
ಹೆಸರು ಗೋಣಿ ೧ಕ್ಕೆ	9— 4	9—12
ಊರುಬೆಲ್ಲ ಖಂಡಿ ೧ಕ್ಕೆ	35— 0	37— 8
ಉಪ್ಪು ಗೋಣಿ ೧ಕ್ಕೆ	4—12	5— 2
ಕೊಪ್ರಿ ಖಂಡಿ ೧ಕ್ಕೆ	48— 0	55— 0
ಕೊಪ್ರಿ ಹಿಂಡಿ ಖಂಡಿ ೧ಕ್ಕೆ	19— 0	20— 0
ಎಳ್ಳಿಂಡಿ ಖಂಡಿ ೧ಕ್ಕೆ	38—12	35— 0
ಕೊಪ್ರಿ ಎಣ್ಣೆ ಮಣ ೧ಕ್ಕೆ	4—	4 — 14
ಎಳ್ಳೆಣ್ಣೆ ಮಣ ೧ಕ್ಕೆ	5— 2	6— 0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ	5— 7	5—7
ದೋಂಪ ಸಕ್ಕರೆ ಮ ೧ಕ್ಕೆ	3—12	3—1೪
ಮೆಣಸು	5— 0	6— 4
ಸಾಸಿವೆ ಮುಡಿ ೧ಕ್ಕೆ	5 —12	6— 0
ಕಾಳುಮೆಣಸು ಖ. ೧ಕ್ಕೆ	120— 0	130— ?
ಮೆಂತ್ಯ ಮಣ ೧ಕ್ಕೆ	23— 0	30— 0
ಜೀರುಜೀಜ ಮು ೧ಕ್ಕೆ	4 —12	4 —11
ಕಪ್ಪು ಖಂಡಿ ೧ಕ್ಕೆ	30— 0	39— 8
ತಾರಂಬ್ರಕಗಡು ಮ ೧ಕ್ಕೆ	9— 10	9— 12
ತಾಂಬ್ರಪಾತ್ರಗಳು ಮ ೧ಕ್ಕೆ	11— 0	12— 0
ಚೀನಿಬೆಳ್ಳಿ ಸೇರು ೧ಕ್ಕೆ	14—12	15— 0
ಹಿತ್ತಾಳೆ ತಗಡು ಮ ೧ಕ್ಕೆ	8— 12	9— 0
ಕವನು ೧ಕ್ಕೆ	22— 8	23— 0
ಹುಣಸೆ ಹುಳಿ ಖಂಡಿ ೧ಕ್ಕೆ	20— 0	25— 8
ನೇಟಿವ್ ಕಾಫಿ ಖಂಡಿ ೧ಕ್ಕೆ	165— 0	175— 0
ಫಬೇರಿ ಕಾಫಿ ಖಂಡಿ ೧ಕ್ಕೆ	220— 0	230— 0
ಮಡಿಕೇರಿ ಏಲಕ್ಕಿ	21— 0	24— 0
ಸಕಲೇಶಪುರ ಏಲಕ್ಕಿ	27 0	30 0

LOOK SHARP! LOOK AHEAD

Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S. S L. C's and also for those who have not passed any University examination

Coaches students for the Specialised Banking Courses (C. A. I. B. & C. A. I. I. B) and also for Accountancy, Secretarial, and Insurance Courses (L A A, A C R A, F C. R. A., F I S A, A C I I etc)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

Ladies are also admitted.

Enrol yourself NOW Classes are in full swing Expert tuition (Oral or Postal) by well qualified and experienced Lecturers

FEES VERY MODERATE

For further particulars apply to —

D R Murdeshwar,

Dip Econ, F R Econ, S (Lond.)

Principal

Ganapathy High School Street,

Mangalore.

Comfortable like an Aeroplane



Use our swadeshi Mosquitonet for health, comfort and sound sleep, as if you are in an Aeroplane Sample cutting free More convenient if some advance sent with order

L	B	H	Price	Best
6 Fit	3½ Fit	3½ Fit	Rs 1, 12	2/-
6 „	4 „	4 „	„ 2 4	3/-
6½ „	4½ „	4½	„ 2 8	3/6
7 „	5 „	5 „	„ 3/2	4 10
7½ „	6 „	6 „	„ 4, 4	5 12

G M Sharma, Post Box E 6706

Calcutta

ಕಣ್ಣಿನ ಪರೆ

"ಐ — ಕನ್" ಎಂಬ ನೇತ್ರಭಾಸ್ಕರ—ಈ ಔಷಧವು ಕಣ್ಣಿನ ಪರೆ ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಆವಶ್ಯವಿಲ್ಲ ಖಾತರಿ ಗುಣಲಾಭ ಗುಣವಾಗದಿದ್ದರೆ ಹಣ ವಾಪಸ್ ಕ್ರಯ ರೂ 2

ಪತ್ರವ್ಯವಹಾರ ಇಂಗ್ಲೀಷಿನಲ್ಲಿ —

Hary yasram, Panchpota, Bengal

ಶಾಲಿವಾಹನ ಶಕ ೧೮೫೭ನೆಯ ಭಾವ ಸಂವತ್ಸರದ ಜ್ಯೇಷ್ಠ ಬ ೬ ಶನಿವಾರದಿಂದ ಜ್ಯೇಷ್ಠ ಬ ೧೩ ಶುಕ್ರವಾರದ ವರೇಗಿನ ಪಂಚಾಂಗ. (೧೯೩೫ನೇಯ ಮಿಥುನ ಕಾರ್ತೆಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಇಂಗ್ಲೀಷು ತಾರೀಖು	ವಿಶೇಷ
22	ಶನಿ	೬	೨೪	ಶತಭಿಷಾ	೨೫	೮	
23	ರವಿ	೭	೧೬	ಪೂ. ಭಾ	೨೨	೯	
24	ಸೋಮ	೮	೧೦	ಉ. ಭಾ.	೧೮	೧೦	
25	ಮಂಗಳ	೯	೪	ರೇವತಿ	೧೪	೧೧	
26	ಬುಧ	೧೦		ಅಶ್ವಿನಿ	೧೨	೧೨	
27	ಗುರು	೧೨	೫೭	ಭರಣಿ	೧೦	೧೩	
28	ಶುಕ್ರ	೧೩	೫೦	ಕೃತ್ತಿಕಾ	೯	೧೪	

ಕ್ವೆಟ್ಟಾಕ್ಕೆ ಯಾರೂ ಕಾಲಿಡಬಾರದೆಂಬ ನಿರ್ಬಂಧದ ಗೂಢಾರ್ಥವೇನು?

ಮಹಾತ್ಮಾಜೀಯವರೂ ಅತ್ತ ಹೋಗಬಾರದೆಂಬ ಅಪ್ಪಣೆಯೇ?

ಇದರಲ್ಲೇನೋ ರಾಜಕೀಯ ರಹಸ್ಯವಡಗಿರುತ್ತದೆ?

ಕ್ವೆಟ್ಟಾ ನಿರ್ಬಂಧದ ಖಂಡನೆ

ಕ್ವೆಟ್ಟಾ ಭೂಕಂಪವಾದೊಡನೆ ಅಲ್ಲಿಯ ಸರಕಾರವು ಮಾರ್ಷಲ್ ಲೋವನ್ನು ಜ್ಯಾರಿಮಾಡಿ, ಯಾರೂ ಕ್ವೆಟ್ಟಾಕ್ಕೆ ಬರಬಾರದೆಂದು ನಿರ್ಬಂಧ ಹಾಕಿತು ಇದರಿಂದಾಗಿ ಅನಧಿಕಾರೀ ಸಹಾಯ ಸಮಿತಿಗಳಾವುವೂ ಕ್ವೆಟ್ಟಾಕ್ಕೆ ಪ್ರವೇಶಿಸಲಾಗಲಿಲ್ಲ ನೊಂದ ಜನತೆಗೆ ಮಿಲಿಟರಿಯವರೇ ತಮ್ಮಿಂದ ಕೂಡಿದಷ್ಟು ಸಹಾಯವನ್ನೊದಗಿಸಿಕೊಟ್ಟರು. ಆದರೆ ಅವರ ಸಹಾಯವು ಜನರಿಗೆ ಎಷ್ಟಕ್ಕೂ ಸಾಲದೆಂದು ಎಲ್ಲೆಲ್ಲೂ ಜನರು ಮೊರೆಯಿಟ್ಟರು ಆದರೆ ಸರಕಾರವು ತನ್ನ ವರ್ತನೆಯನ್ನು ಸಮರ್ಥಿಸಿ ಪ್ರಕಟಣೆಗಳನ್ನು ಹೊರಡಿಸಿತು ಮಹಾತ್ಮಾ ಗಾಂಧಿಯವರೇ ಮೊದಲಾದವರ ಮನವಿಗಳು ವೈಸರಾಯರಿಗೆ ಹೋಗಿ 'ಕ್ವೆಟ್ಟಾದಲ್ಲಿನ ಜನರಿಗೆ ನಾವು ಸಹಾಯಕೊಡುವಂತೆ ಏರ್ಪಡಿಸಬೇಕು' ಎಂದು ತಿಳಿಸಿದರು ಉತ್ತರವಾಗಿ ವೈಸರಾಯರು 'ಸದ್ಯಕ್ಕೆ ಮಿಲಿಟರಿಯವರೇ ಸಹಾಯ ಮಾಡುತ್ತಿರುವರು ಕ್ವೆಟ್ಟಾದ ಜನರಿಗೆ ಸಹಾಯವನ್ನೊದಗಿಸುವ ಸರ್ವ ಸೌಕರ್ಯವೂ ಸರಕಾರಕ್ಕಿದೆ' ಎಂದು ತಿಳಿಸಲಾಯಿತು ಆದರೆ ಜನರ ಊಹನಾನುಸಾರ ಸರಕಾರವು ಕ್ವೆಟ್ಟಾದ ಜನರಿಗೆ ಸಹಾಯವನ್ನೀಯುವ ಸರ್ವಸೌಕರ್ಯಗಳು ಇಲ್ಲವೆಂದು ತಿಳಿದುಬಂದಿದೆ ಸರಕಾರದ ಈ ಕಾನೂನನ್ನು ಮುಂಬಾಯಿ, ಕರಾಚಿ ಮೊದಲಾದ ಕಡೆ ಖಂಡಿಸಲಾಯಿತು

ರಹಸ್ಯವೇನು?

ಸರಕಾರದ ಈ ರೀತಿಯ ಶಾಸನದಲ್ಲಿ ಏನೋ ಗೂಢಾರ್ಥವು ಅಡಗಿರುತ್ತದೆಂದು ಊಹಿಸಲಾಗಿದೆ ಬಲೂಚಿಸ್ಥಾನದಲ್ಲಿ ಕಾಂಗ್ರೆಸ್ಸಿನವರ ವರ್ಚಸ್ಸು ಮುರಿಯುವಂತೆಯೂ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ಸಿನವರಿಗೆ ಬಲೂಚಿಸ್ಥಾನದವರ ಸಹಾನುಭೂತಿಯು ದೊರೆಯದಂತೆಯೂ ಈ ಹಂಚಿಕೆಯನ್ನು ಮಾಡಲಾಗಿದೆಯೆಂದು ಕೆಲವು ಪತ್ರಿಕೆಗಳು ಅಭಿಪ್ರಾಯಪಡುತ್ತಿವೆ ಇನ್ನೂ ಕೆಲವು ದಿನಗಳ ತನಕ ಯಾರನ್ನೂ ಕ್ವೆಟ್ಟಾಕ್ಕೆ ಪ್ರವೇಶಿಸಬಿಡಬಾರದೆಂದು ಸರಕಾರವು ನಿರ್ಣಯಿಸಿರುತ್ತದೆಂದು ಫ್ರೀಪ್ರೆಸ್ ವಾರ್ತಾದಾಯಕನು ತಿಳಿಸುತ್ತಾನೆ

ಯಾರೂ ಸಮಾಧಾನಗೊಂಡಿಲ್ಲ.

ಸರಕಾರವು ಈ ತೆರನಾಗಿ ನಿರ್ಬಂಧವನ್ನಿಟ್ಟುದರಿಂದ ಸಿಮ್ಲಾದ ಕೆಲವು ಅಧಿಕಾರಿಗಳಿಗೂ ಕೂಡಾ ಸಮಾಧಾನವಿರುವುದಿಲ್ಲವಾಗಿಯೂ, ಅನಧಿಕಾರೀ ಸಹಾಯಸಮಿತಿಗಳು ಕ್ವೆಟ್ಟಾಕ್ಕೆ ಹೋಗಿ ಅಧಿಕಾರಿಗಳಿಗೆ ಸಹಾಯವನ್ನೊದಗಿಸುತ್ತಿದ್ದರೆ ಕೆಲಸವು ಸುಲಭವಾಗಿ, ಶೀಘ್ರವಾಗಿ ಮುಗಿಯುತ್ತಿತ್ತೆಂದು ಹೇಳುವವರೂ ಇರುತ್ತಾರೆ

ಬಿಹಾರಿನ ಪಾಠ

ಬಿಹಾರಿನಲ್ಲಾದ ಭೂಕಂಪದ ವೇಳೆ ಕಾಂಗ್ರೆಸ್ಸಿನವರು ಮುಂದಾಗಿ ಹೋಗಿ ಜನರಿಗೆ ಸಹಾಯವಿತ್ತುದರಿಂದಾಗಿ ಅಲ್ಲಿ ಕಾಂಗ್ರೆಸ್ಸಿನ ವರ್ಚಸ್ಸು ಅನಿರೀಕ್ಷಿತವಾಗಿ ಹರಡಿಕೊಂಡಿತೆಂದೂ, ಸರಕಾರಕ್ಕೆ ಯಾವ ರೀತಿಯ ಪ್ರಶಂಸೆ ಅಲ್ಲಿ ದೊರೆಯಲಿಲ್ಲವೆಂದೂ, ಅಂತಹ ಪಾಠವನ್ನು ಕಲಿತ ಸರಕಾರವು ಕ್ವೆಟ್ಟಾದಲ್ಲಿ ಕಾಂಗ್ರೆಸ್ಸಿನವರಿಗೆ ಸೇವೆಯ ಯಾವ ಅಧಿಕಾರವನ್ನೂ ಕೊಡಲಿಲ್ಲವೆಂದೂ ವಿಷಯ ವಿಮರ್ಶಕಾರರು ಅಭಿಪ್ರಾಯಪಡುತ್ತಿರುವರೆಂದು ತಿಳಿದುಬಂದಿದೆ.

ತನ್ನ ತಪ್ಪು ತಿಳಿದಿದೆ.

ಸರಕಾರದ ಈ ಆಚರಣೆಯು ಅನೇಕ ನಿಷ್ಪಕ್ಷಪಾತಿಗಳಿಂದಲೂ ಪ್ರಶಂಸಿಸಲ್ಪಡಲಿಲ್ಲವಾದುದರಿಂದ ಇಂಡಿಯಾ ಸರಕಾರವು ತನ್ನ ತಪ್ಪನ್ನು ತಿಳಿದಿದೆಯೆಂದೂ, ಆದರೆ ಒಂದೇ ಸವನೆ ವಿಪರೀತವಾಗಿ ಮುಂದರಿದಿರುವುದರಿಂದ ಈಗ ಏನನ್ನೂ ಮಾಡಲುಪಾಯವಿಲ್ಲದೆ ಸರಕಾರವು ಕಂಗೆಟ್ಟಿದೆಯೆಂದೂ ಮತ್ತೊಂದು ವಾರ್ತೆ

ಸರಕಾರದ ಹೇಳಿಕೆಯೇನು?

ಸರಕಾರವು ಮಾತ್ರ ತನ್ನ ಆಚರಣೆಯನ್ನು ಪುನಃ ಅನುಮೋದಿಸಿ ಸೂಚೀಪತ್ರಿಕೆಗಳನ್ನು ಪ್ರಕಟಿಸುತ್ತಿದೆ ಸಾರ್ವಜನಿಕ ಆರೋಗ್ಯ ರಕ್ಷಣೆಯ ದೃಷ್ಟಿಯಿಂದಲೇ ತಾನು ಹೀಗೆ ಮಾಡಿದೆನೆಂದು ಅದು ಹೇಳುತ್ತಿದೆ ಅಲ್ಲದೆ ಕ್ವೆಟ್ಟಾದಲ್ಲಿ ಮಾರ್ಷಲ್ ಲೋ ಜ್ಯಾರಿಯಾಗಿರುವುದರಿಂದ ಅನಧಿಕಾರೀ ಸಹಾಯಸಭೆಗಳು ಕ್ವೆಟ್ಟಾಕ್ಕೆ ತೆರಳುವುದು ಅಸಮಂಜಸವೆಂದು ಹೇಳಲಾಗಿದೆ ಕೆಲವು ರಾಜನೀತಿಜ್ಞರ ಅಭಿಮತದಂತೆ ಕ್ವೆಟ್ಟಾದಲ್ಲಿ ಮಾರ್ಷಲ್ ಲೋ ಜ್ಯಾರಿಮಾಡುವ ಅಗತ್ಯವೇ ಇಲ್ಲವೆಂದ ತಿಳಿದುಬರುತ್ತದೆ ಒಂದೆರಡು ಕಡೆಗಳಲ್ಲಲ್ಲದೆ ಕ್ವೆಟ್ಟಾದಲ್ಲಿ ಬೇರೆ ಎಲ್ಲಿಯಾದರೂ ಕಳ್ಳತನವು ನಡೆಯಲಿಲ್ಲ- ನಡೆಯುವ ಸಂಭವವೂ ಇದ್ದಿಲ್ಲ- ಹಾಗಿರುವಾಗ ಏಕಪ್ರಕಾರವಾಗಿ ಸರಕಾರವು ಮಾರ್ಷಲ್ ಲೋವನ್ನು ಜ್ಯಾರಿಮಾಡುವುದಾದರೂ ಏಕೆ?—ಎಂದು ಪ್ರಶ್ನಿಸುತ್ತಿದ್ದಾರೆ ಈ ನಿರ್ಬಂಧವು ಕ್ವೆಟ್ಟಾದಲ್ಲಿ ಪ್ರಕಟವಾದೊಡನೆ ಅನಧಿಕಾರೀ ವರ್ಗದಿಂದ ವೈಸರಾಯರ ಭೂಕಂಪ ನಿಧಿಗೆ ಹೋಗುವ ಧನವೂ ಕಡಮೆಯಾಯಿತೆಂದೂ ತಿಳಿದುಬಂದಿದೆಯಾಗಿ ಫ್ರೀಪ್ರೆಸ್ ಹೇಳುತ್ತಿದೆ

ಆಸ್ತಿವಂತರಿಗೆ ಪ್ರವೇಶ.

ಕ್ವೆಟ್ಟಾದಲ್ಲಿ ಹೇರಳ ಆಸ್ತಿಯುಳ್ಳ, ನಷ್ಟಕ್ಕೊಳಗಾದವರು ತಮ್ಮ ಆಸ್ತಿಪಾಸ್ತಿಗಳನ್ನು ತಮ್ಮ ಹೊಣೆಗಾರಿಕೆಯ ಮೇಲೆ ನೋಡಿಕೊಂಡು ಬರಬಹುದೆಂದು ಸರಕಾರವು ಪ್ರಕಟಿಸಿರುತ್ತದೆ ಒಂದೊಂದು ಸಲಕ್ಕೆ ಮೂರು ಜನರನ್ನು ಒಳಗೆ ಬಿಡುತ್ತಿರುವರು. ಹೊಸಬರನ್ನು ಎಷ್ಟು ಮಾತ್ರಕ್ಕೂ ಒಳಗೆ ಬಿಡಲಾಗುವುದಿಲ್ಲ. ೮೦೦ ಜನ ಸೈನಿಕರು ರಾತ್ರಿ ಹಗಲು ಕ್ವೆಟ್ಟಾ ನಗರವನ್ನು ಕಾವಲುನೋಡುತ್ತಿರುವರು ಕ್ವೆಟ್ಟಾದ ಸುತ್ತಲೂ ಸಂಗೆಯ ಬೇಲಿಯನ್ನು ಹಾಕಿರುತ್ತಾರೆ

ಅಂಟುರೋಗಗಳ ಭಯ

ಅಂಟುರೋಗಗಳು ಹರಡುವ ಭಯವು ಕ್ವೆಟ್ಟಾದಲ್ಲಿ ಹೆಚ್ಚಿಗಿದೆ ಆದುದರಿಂದ ಪಬ್ಲಿಕ್ ಹೆಲ್ತ್ ಕಮಿಶನರರು ಬಂದು ನೋಡಿ, ಶಿಫಾರಸು ಮಾಡದ ವಿನಹಾ ಕಂಪೆಗಳನ್ನು ಅಗೆಯುವ ಕೆಲಸವನ್ನು ಸರಕಾರವು ಪ್ರಾರಂಭಿಸುವುದಿಲ್ಲ ಹೆಲ್ತ್ ಕಮಿಶನರರು ವಿಚಾರಣೆಗಾರಂಭಿಸಿರುತ್ತಾರೆ

ಎಲ್ಲಾ ಕೆಲಸವೂ ಸರಕಾರದ ಮೇಲ್ವಿಚಾರಣೆಯಿಂದ.

ಮಣ್ಣನ್ನು ಅಗೆದು ತೆಗೆಯುವ ಮತ್ತು ಆಸ್ತಿಪಾಸ್ತಿಗಳನ್ನು ವ್ಯವಸ್ಥೆಯಿಂದಿಡುವ ಎಲ್ಲಾ ಕೆಲಸಗಳನ್ನು ಸರಕಾರವು ತನ್ನ ಮೇಲ್ವಿಚಾರಣೆಯಿಂದಲೇ ಮಾಡಿಸಲಿದೆ ಆ ಬಗ್ಗೆ ಕೆಲಸಗಾರರನ್ನು ತಾನೇ ನೇಮಿಸಲಿದೆ ವಸ್ತುಗಳ ಯಜಮಾನರಿಗೆ ಅವುಗಳನ್ನು ತಲಪಿಸುವ ವ್ಯವಸ್ಥೆಯನ್ನು ಸರಕಾರವೇ ಮಾಡುವುದು

ದ್ರವ್ಯಸಂಗ್ರಹ.

ಕ್ವೆಟ್ಟಾ ಭೂಕಂಪದ ಪರಿಹಾರ ಕಾರ್ಯಕ್ಕಾಗಿ ಹಣವನ್ನು ಶೇಖರಿಸಲು ಒಂದು ಅಧಿಕಾರೇತರ ಸಮಿತಿಯು ಸೇರಿಸಲ್ಪಟ್ಟಿದೆ. ಭುಲಾಭಾಯಿ ದೇಸಾಯಿಯವರು ಈ ಸಮಿತಿಗೆ ಅಧ್ಯಕ್ಷರು ಕೆ ಎಂ. ಮುನ್ಶಿ ಮತ್ತು ಇತರ ಮೂವರು ಉಪಾಧ್ಯಕ್ಷರುಗಳು, ಎಸ್. ಕೆ. ಪಾಟೀಲ್ ಮತ್ತು ನಾಗಿನ್‌ದಾಸ್ ಮಾಸ್ತರ್ ಇವರು ಕಾರ್ಯದರ್ಶಿಗಳು, ಮಥುರಾದಾಸ್ ತ್ರಿಕಂಜಿಯವರು ಕೋಶಾಧಿಕಾರಿಗಳು

ಪ್ರಸಾದರ ಸಹಾಯ.

ಬಾಬುರಾಜೇಂದ್ರ ಪ್ರಸಾದರೊಡನೆ ಸಲಹೆಗಳನ್ನು ಕೇಳಿಯೇ ಈ ಸಮಿತಿಯನ್ನೇರ್ಪಡಿಸಲಾಗಿರುತ್ತದೆ ಶೇಖರಿಸಲ್ಪಟ್ಟ ನಿಧಿಯನ್ನು ಯಾವುದಾದರೂ ಅಧಿಕಾರೇತರ ಸಂಸ್ಥೆಗೆ ಕೊಡಬೇಕೆಂದು ನಿರ್ಧರಿಸಲಾಗಿದೆ. ಕಾಂಗ್ರೆಸ್ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರು ಕರಾಚಿಯಲ್ಲಿಯ ಸ್ನೇಹಿತರೊಡನೆ ಸಮಾಲೋಚನೆ ನಡೆಸಿ ಕರಾಚಿ ಮತ್ತು ಇತರ ಸ್ಥಳಗಳ ಪರಿಸ್ಥಿತಿಯನ್ನು ಪರಿಶೀಲಿಸಿ ಯಾವ ಅಧಿಕಾರೇತರ ಸಂಸ್ಥೆಗೆ ಈ ನಿಧಿಯನ್ನು ಕೊಡಬೇಕೆಂಬುದಾಗಿ ನಿರ್ಧರಿಸಿರುವರು.

ತಾ [illegible]ರಲ್ಲಿ ಬಂದ ವಾರ್ತಾನುಸಾರವಾಗಿ ಕ್ವೆಟ್ಟಾದಲ್ಲಿನ ಎಲ್ಲ ಬ್ರಿಟಿಷ ಮಹಿಳೆಯರನ್ನೂ ಅವರ ಮಕ್ಕಳನ್ನೂ ಹೊರದೇಶಗಳಿಗೆ ಕಳಹಿಸಲಾಗಿದೆಯೆಂದು ತಿಳಿದುಬಂದಿದೆ. ಹೆಚ್ಚಿನವರು ಲಾಹೋರಿನಲ್ಲಿರುವರು ಪಂಜಾಬಿನಲ್ಲಿ [illegible],[illegible] ಕ್ವೆಟ್ಟಾ ನಿವಾಸಿಗಳು ಇಳಿದಿರುವರು ಇವರಲ್ಲಿ [illegible] ಜನರು ಗಾಯಗೊಂಡವರು ಲಾಹೋರಿನ ಚಿಕಿತ್ಸಾಲಯಗಳಲ್ಲಿ ಇವರ ಚಿಕಿತ್ಸೆಯು ನಡೆಯುತ್ತದೆ ಕ್ವೆಟ್ಟಾದ ಅಧಿಕಾರಿಗಳು ಈ ಪಟ್ಟಿಯನ್ನು ಪ್ರಕಟಿಸಿರುವರು [illegible]

ಆಸ್ತಿಗಳ ಭದ್ರತೆ

ಆಸ್ತಿಗಳ ಭದ್ರತೆಯನ್ನು ಕ್ವೆಟ್ಟಾದಲ್ಲಿ ಸರಕಾರವು ಮಾಡುತ್ತದೆ ಆಸ್ತಿಪಾಸ್ತಿಗಳವರ ಪೈಕಿ ಡೆಪ್ಯುಟಿ ಕಮಿಶನರರಿಗೆ ಅರ್ಜಿ ಮಾಡಿದರೆ, ಆ ಆಸ್ತಿಗಳನ್ನು ಅವುಗಳ ಯಜಮಾನರಿಗೆ ಬಿಟ್ಟುಕೊಡುವ ವ್ಯವಸ್ಥೆಯನ್ನು ಮಾಡಿದ್ದಾರೆ

ವರ್ಗಾಯಿಸಿದರು.

ಕ್ವೆಟ್ಟಾದಲ್ಲಿದ್ದ ವೆಸ್ಟರ್ನ್ ಕಮಾಂಡ್ ಹೆಡ್ ಕ್ವಾರ್ಟರ್ಸನ್ನು ಕರಾಚಿಗೆ ವರ್ಗಾಯಿಸಿರುವರು ಆಫೀಸುಗಳ ಸಾಮಗ್ರಿಗಳನ್ನು ಸ್ಪೆಶಲ್ ರೈಲುಗಳಲ್ಲಿ ಹಾಕಿ ಕರಾಚಿಗೆ ತಂದಿರುವರು ೮೦ ಜನ ಸರಕಾರಿ ನೌಕರರೂ ಕರಾಚಿಗೆ ವರ್ಗಾಯಿಸಲ್ಪಟ್ಟಿರುವರು ಸೈನಿಕರೆಲ್ಲ ಕ್ವೆಟ್ಟಾದಲ್ಲೇ ಇದ್ದಾರೆ ನಗರದ ಕಾವಲು ನೋಡುವುದಕ್ಕಾಗಿ ಅವರನ್ನು ಅಲ್ಲಿಯೇ ಇರಿಸಲಾಗಿದೆ

ಕ್ವೆಟ್ಟಾದಲ್ಲಿ ಸಂಕಷ್ಟಕ್ಕೀಡಾದ ಆಂಗ್ಲೇಯರನ್ನು ಅವರವರ ಊರಿಗೆ ತಲಪಿಸುವುದಕ್ಕಾಗಿ 'ಕಾಸ್ಟಿಲ್ಲಿಯೋ' ಎಂಬ ಸ್ಟೀಮರನ್ನು ಇಂಗ್ಲಾಂಡಿನಿಂದ ಕಳುಹಿಸಲಾಗಿದೆ ಈ ಸ್ಟೀಮರಿನಲ್ಲಿ ಹೆಚ್ಚಿನ ಐರೋಪ್ಯರೆಲ್ಲಾ ಸ್ವದೇಶಾಭಿಮುಖವಾಗಿ ಹೋದರು. ಕ್ವೆಟ್ಟಾದ ನೇಪಿಯರ್ ಬರೆಕ್ಸನಲ್ಲಿ ೨೦೦ ಡೇರೆಗಳನ್ನು ಹಾಕಲಾಗಿದೆ ಅವುಗಳಲ್ಲಿ ಬ್ರಿಟಿಷ ಆಸ್ತಿಯುಗಳನ್ನು ಸಂರಕ್ಷಿಸಲಾಗುತ್ತಿದೆ.

ಸದ್ಯದಲ್ಲಿ ಶ್ರೀ ಕೃಷ್ಣ ಸಿನೆಮ ಮಂದಿರದಲ್ಲಿ ಪ್ರದರ್ಶಿಸಲ್ಪಡಲಿರುವ
ನಾದಿರ ಚಲಚ್ಚಿತ್ರದ ಒಂದು ದೃಶ್ಯ
ಇದರಲ್ಲಿ ಮಾಧುರಿ, ಬಿಲ್ಲಿಮೋರಿಯ ಇವರು ಅಭಿನಯಿಸಿರುವರು

"ಜರ್ಮನಿಯು ಶಾಂತಿಯನ್ನೇ ಕಾಂಕ್ಷಿಸುವುದು"

ಹರ್ ಹಿಟ್ಲರರೇ ಸ್ಪಷ್ಟೀಕರಿಸಿದರು.

[ಜರ್ಮನಿಯ ಶಾಸನಸಭೆಯಲ್ಲಿ ಹರ್ ಹಿಟ್ಲರರು ಒಂದು ವಿಚಾರಪರಿಪೂರ್ಣ ಭಾಷಣವನ್ನು ಇತ್ತೀಚೆಗೆ ಮಾಡಿದರು. ಅವರು ಐರೋಪ್ಯ ರಾಷ್ಟ್ರಗಳ ಪ್ರಕೃತದ ಪರಿಸ್ಥಿತಿ, ಅವುಗಳ ರಾಜ್ಯತೃಷೆ, ಜರ್ಮನಿಯ ಸಂಕಷ್ಟ ಆದರ ಇಂದಿನ ಆಕಾಂಕ್ಷೆ-ಮೊದಲಾದ ವಿಷಯಗಳನ್ನೆತ್ತಿ ಈ ಭಾಷಣದಲ್ಲಿ ಪ್ರತಿಪಾದಿಸಿರುತ್ತಾರೆ. ಅವರ ಈ ಭಾಷಣವು ಸಮಸ್ತ ಯುರೋಪು ಖಂಡವನ್ನೇ ದಂಗುಬಡೆದಿರುತ್ತದೆ. ಅಂತಹ ಭಾಷಣದ ಮುಖ್ಯಾಂಶಗಳನ್ನು ಎತ್ತಿ, ಅನುವಾದಿಸಿ, ಇಲ್ಲಿ ಕೊಡಲಾಗಿದೆ.]

"ಪ್ರಜಾ ಪ್ರತಿನಿಧಿಗಳು, ಜರ್ಮನಿಯ ಶಾಸನಸಭೆಯ ಸದಸ್ಯರು, ಮತ್ತು ಶಾಸನ ಸಭೆಯ ಅಧ್ಯಕ್ಷರಾದ ಗೋರಿಂಗರು, ಶಾಸನ ಸಭೆಯ ಸಲಹೆಯ ಮೇರೆಗೆ ಈ ಅಧಿವೇಶನವನ್ನು ಜರಗಿಸಿ, ಜರ್ಮನ್ ರಾಷ್ಟ್ರದ ಪ್ರತಿನಿಧಿಯಾದ ನಾನು ಪ್ರಕೃತ ಪರಿಸ್ಥಿತಿಯಲ್ಲಿ ಜರ್ಮನಿಯ ನಡತೆಯು ಹೇಗಿರುವುದೆಂದು ಲೋಕ ವಿಶ್ರುತಗೊಳಿಸಬೇಕೆಂದು ಬಗೆದಿರುವರು. ಆದುದರಿಂದ ನಾನು ನಿಮ್ಮೊಡನೆಯೂ ಜರ್ಮನ್ ರಾಷ್ಟ್ರದೊಡನೆಯೂ ಇಂದು ನುಡಿಯುತ್ತಿದ್ದೇನೆ.

ಅದರೊಡನೆ, ನಮ್ಮ ಆಚಾರವಿಚಾರಗಳೇನೆಂದು ತಿಳಿಯಲು ಕುತೂಹಲಿಗಳಾಗಿರುವ ಬಾಹ್ಯಪ್ರಪಂಚದವರೊಡನೆಯೂ, ನಮ್ಮ ನಡವಳಿಕೆಯನ್ನು ಹೊಂದಿಕೊಂಡಿರುವವರೊಡನೆಯೂ ಮಾತನಾಡುತ್ತೇನೆ.

ಇಲ್ಲಿ ಭಾಷಣಮಾಡುವುದು ಸರ್ವವಿಧದಿಂದಲೂ ಅಗತ್ಯ. ಏಕೆಂದರೆ ಇಲ್ಲಿ ನಿಂತು ನಾವು ನಮ್ಮ ಮುಂದಿರುವ ಅಪಾಯಗಳೇನೆಂದು ತಿಳಿದುಕೊಳ್ಳಬಹುದು ಇಬ್ಬರೊಳಗೆ ನಡೆಯುವ ಮಾತುಕತೆಗಳ ವಿವರವು ಹೊರಗಣ ಪ್ರಪಂಚಕ್ಕೆ ಪೂರ್ಣವಾಗಿ ತಿಳಿಯಲು ಅನುಕೂಲವಾಗಿಲ್ಲ ಹಾಗಿರುವಾಗ ಎಲ್ಲವನ್ನೂ ಬಿಚ್ಚಿ ಇಲ್ಲಿಯೇ ನುಡಿಯುವುದು ಲೇಸು ಹೀಗೆ ನುಡಿಯುವುದರಿಂದ ಬಹಳ ಪ್ರಯೋಜನವಿದೆ ನನಗೆ ಮನಃಪೂರ್ವಕವಾಗಿ ನುಡಿಯಲು ಸೌಲಭ್ಯವಿದೆಯಲ್ಲದೆ, ಸರ್ವ ಸ್ವಾತಂತ್ರ್ಯವನ್ನು ವಹಿಸಿ ಮುಚ್ಚುಮರೆಯಿಲ್ಲದೆ ಮಾತನಾಡಲು ಅಧಿಕಾರವೂ ಇದೆ ಜರ್ಮನ್ ರಾಷ್ಟ್ರವು ನನ್ನಿಂದ ಇದನ್ನೇ ಅಪೇಕ್ಷಿಸಿರುತ್ತದೆ ನಾನು ಅದನ್ನು ಮಾಡುತ್ತೇನೆ.

ಜರ್ಮನಿಯು ತಮಗೆ ನ್ಯಾಯಪರವೆಂದು ಕಾಣುವ ಸೂತ್ರಗಳನ್ನನುಸರಿಸದೆ ವಿಭಿನ್ನವಾಗಿಯೇ ನಿಲ್ಲುತ್ತದೆಂದು ಆಂಗ್ಲೋ—ಸೆಕ್ಸನ್ ದೇಶಸ್ಥರು ಹೆಚ್ಚಾಗಿ ವಾದಿಸುವುದನ್ನು ನಾನು ಅನೇಕ ಸಲ ಕೇಳಿರುತ್ತೇನೆ ಈ ವಾದವು ತಪ್ಪು

ಪ್ರಜಾಪ್ರಭುತ್ವದ ನ್ಯಾಯನೀತಿಗಳನ್ನನುಸರಿಸಿರುವ ರಾಜ್ಯಾಂಗವು ಜರ್ಮನಿಗೂ ಇದೆ ನಾಜೀ ಸಂಸ್ಥಾನಾಂತರ್ಗತವಾದ ಜರ್ಮನ್ ಸರಕಾರವನ್ನು ಜರ್ಮನ್ ಜನರೇ ಅಧಿಕಾರಕ್ಕೆ ತಂದರು ಅದು ಜರ್ಮನಿಯ ಜನರಿಗೆ ಹೊಣೆಯಾಗಿದೆ ಯಾವ ದೇಶವಲ್ಲೇ ಆಗಲಿ, ಪ್ರತಿನಿಧಿಗೆ ಎಷ್ಟು ವೋಟುಗಳು ಸಿಗಬೇಕೆಂಬುದನ್ನು ಅದು ಗಣಿಸುವುದಿಲ್ಲ ೨೦,೦೦೦ ವೋಟುಗಳು ಒಬ್ಬ ಪ್ರತಿನಿಧಿಗೆ ಸಿಗಬೇಕೆಂದು ಭಾವಿಸುವ ದೇಶಗಳೂ ಇವೆ ಬೇರೆ ದೇಶಗಳಲ್ಲಿ ೧೦,೦೦೦ ವೋಟುಗಳು ಸಾಕು ೫೦೦೦ ವೋಟುಗಳನ್ನು ಸ್ವೀಕರಿಸುವ ದೇಶವೂ ಇದೆ ಕೆಲವು ಕಡೆಗಳಲ್ಲಿ ೬೦,೦೦೦ಕ್ಕಿಂತಲೂ ಹೆಚ್ಚು ವೋಟುಗಳು ಬೇಕಾಗಿರುತ್ತವೆ

ಜರ್ಮನಿಯ ಜನರು ೩೮,೦೦೦,೦೦೦ ವೋಟುಗಳನ್ನು ಕೊಟ್ಟು ತಮ್ಮ ಪ್ರತಿನಿಧಿಯನ್ನಾಗಿ ಒಬ್ಬನೇ ಒಬ್ಬ ಪ್ರತಿನಿಧಿಯನ್ನು ಆರಿಸಿರುತ್ತಾರೆ ಇತರ ರಾಷ್ಟ್ರಗಳಿಗೂ ನಮಗೂ ಇರುವ ವ್ಯತ್ಯಾಸಗಳು ಇಷ್ಟೇ ಅನ್ಯ ದೇಶದ ಆ ರಾಷ್ಟ್ರಕ್ಕೆ ಅದರ ಪಾರ್ಲಿಮೆಂಟು ಹೇಗೆ ಹೊಣೆಯೋ, ಹಾಗೆಯೇ ನಾನು ಜರ್ಮನಿಯ ಜನರಿಗೆ ಹೊಣೆಯಾಗಿ ನಿಂತಿರುತ್ತೇನೆ ನಾನು ಆಚರಿಸುತ್ತೇನೆ, ಅದು ನನಗೆ ಸಲಹೆಯನ್ನು ಕೊಡುತ್ತಿದೆ ಇಂತಹ ಪರಿಸ್ಥಿತಿಯಲ್ಲಿ ಇಂದಿನ ನನ್ನ ಭಾಷಣದಲ್ಲಿ ಸ್ಪಷ್ಟತೆಯನ್ನು ಜರ್ಮನರು ನಿರೀಕ್ಷಿಸುವುದು ಸ್ವಭಾವವಿದೆ ಜರ್ಮನಿ ದೇಶವು ಹೊರಗಣ ಲೋಕಕ್ಕೂ ತನಗೂ ಸಂಬಂಧಿಸಿರುವ ಸಮಸ್ಯೆಗಳನ್ನು ಬಹಿರಂಗವಾಗಿ ವಿಚಾರಿಸಿ ನಿರ್ಣಯಿಸಬೇಕಾಗಿ ಬಂದಿದೆ

ಸಮಸ್ತ ಜರ್ಮನಿಯ ಏಕಮುಖಂಡನಾಗಿ, ಅದರ ಚೆನ್ಸಲರನಾಗಿ, ಮಹತ್ತರವಾದ ನಿರ್ಧಾರಗಳನ್ನು ಮಾಡಿ, ಅದರ ಹೊಣೆಗಾರಿಕೆಯನ್ನು ದೇಶದೊಡನೆ ವಹಿಸಲು ಈ ಸಂದರ್ಭವು ದೊರೆತುದನ್ನು ನೋಡಿ ನನಗೆ ಅತ್ಯಂತ ಆನಂದವಾಗುತ್ತದೆ.

ಜರ್ಮನರ ಆರ್ಥಿಕ ಸಂಕಷ್ಟಗಳು ಮತ್ತು ಜರ್ಮನಿಯು ಜಗತ್ತಿನ ದೃಷ್ಟಿಯಿಂದ ಹೊಂದಿದ ಅವನತಿಯನ್ನು ಪರಿಗಣಿಸಿದ ಪ್ರತಿಯೊಬ್ಬ ಜರ್ಮನನು ತನ್ನ ರಾಷ್ಟ್ರವು ಶಿರಸಾವಹಿಸಿದ ಶರ್ತಗಳನ್ನು ಪರಿಪಾಲಿಸಬೇಕೋ ಬೇಡವೋ ಎಂದು ಚಿಂತಿಸಲಾರಂಭಿಸಿರುವನು

ಆರ್ಥಿಕ ಸ್ವಾವಲಂಬನೆಗಾಗಿ ಸಾಧಿಸುತ್ತಿರುವುದು ಕೇವಲ ಭ್ರಮಾತ್ಮಕ ವರ್ತನೆಯೆಂದು ವಿಕಾಸವಾದಿಗಳು ಹೇಳಬಹುದು ಆರ್ಥಿಕ ದೃಷ್ಟಿಯಿಂದವಲೋಕಿಸಿದರೆ ಬೇಸಾಯದ ಭೂಮಿಗಳನ್ನು ಕೈಗಾರಿಕೆಯ ಸ್ಥಾನಗಳನ್ನಾಗಿ ಮಾರ್ಪಡಿಸುವುದೂ, ಜನನಿಬಿಡವಾಗಿರುವ ಕೈಗಾರಿಕೆಯ ಸಂಸ್ಥಾನಗಳ ಮೇಲೆ ಪ್ರಾಚೀನ ಪದ್ಧತಿಗಳನ್ನು ಹೊರಿಸುವುದೂ ತಪ್ಪೇನೋ ಸರಿ

ಇಂತಹ ಧೋರಣೆಯಿಂದ ಯುರೋಪು ಖಂಡಕ್ಕೇನೇ ಒಂದಲ್ಲ ಒಂದು ದಿನ ಹಾನಿಯು ಸಂಭವಿಸುವುದು ಘನವಾದ ಆರ್ಥಿಕ ಸಮಸ್ಯೆಯ ದೃಷ್ಟಿಯಿಂದವಲೋಕಿಸುವಾಗ ಅಸಮಂಜಸವೆಂದು ಕಂಡುಬರುವುದಾದರೂ, ಈ ಧೋರಣೆಯನ್ನು ಬದಲಾಯಿಸಲು ಜರ್ಮನಿಯ ಅಧಿಕಾರದಲ್ಲಿರುವುದಿಲ್ಲ

ನಿರುದ್ಯೋಗ ನಿವಾರಣಾ ಕಾರ್ಯರಂಗದಲ್ಲಿ, ನಮ್ಮ ಸರಕುಗಳಿಗೆ ಯೋಗ್ಯ ಕೇಂದ್ರಗಳನ್ನು ಕಂಡುಹಿಡಿಯುವುದರಲ್ಲೂ, ಅವುಗಳ ಕ್ರಯವನ್ನು ನಿರ್ದೇಶಿಸಿಡುವುದರಲ್ಲೂ ನಮಗೆ ಕಳೆದ ಎರಡು ವರ್ಷಗಳಿಂದ ದೊರೆತ ಫಲವು ಕೆಲವು ವರ್ಷಗಳ ಹಿಂದೆ ಊಹನಾತೀತವಾಗಿದ್ದಿತು

ನನ್ನ ಜಯಕ್ಕೆ ನಮ್ಮ ರಾಷ್ಟ್ರವು ತನ್ನ ಪೂರ್ಣ ಚೈತನ್ಯವನ್ನರ್ಪಿಸಿದುದೇ ಮುಖ್ಯ ಕಾರಣ ಒಂದು ವಿಷಯದಲ್ಲಿ ನಮಗೆ ಜಯ ದೊರೆಯಬೇಕೆಂದಾದರೆ ಆ ಜಯವು ಎರಡು ವಿಷಯಗಳನ್ನಾಧರಿಸಿದತಕ್ಕದು ಒಂದ — ಆಯಾಯಾ ಕಾಲದಲ್ಲಿ ನೆಲೆಸಿರುವ ಶಾಂತಿ,— ಇನ್ನೊಂದು— ನಮಗೆ ದೊರೆಯುವ ಸಮಯ

ಜರ್ಮನಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಘಟಿಸಿ ಹೋದ ಕ್ರಾಂತಿಯು ಸಾಮಾನ್ಯ ಮನುಷ್ಯನಿಗೆ ಊಹನಾತೀತವಾದುದು ಈ ಕ್ರಾಂತಿಯ ಜನನದಲ್ಲಿ ಹಿಂದಿನ ವಿರೋಧಿಗಳ ಕರುಣೆಯೂ ಇಲ್ಲವೆಂದೆನ್ನಲಾಗುವುದಿಲ್ಲ ಈ ಸಹಾನುಭೂತಿಯು ದೌರ್ಬಲ್ಯಜನ್ಯವಾಗಿ ವಾಗಿ ಬಂದಿರಲಿಲ್ಲ, ಅಧಿಕಾರ ಮತ್ತು ಮೇಲ್ತನದ ನಿಶ್ಚಲ ಮನೋವೃತ್ತಿಯೇ ಈ ಸಹಾನುಭೂತಿಗೆ ಕಾರಣವಾಗಿದೆ.

ಹೀಗಿರುವುದರಿಂದ ಈಗಿನ ಜರ್ಮನಿಯನ್ನು ಆಗಿನ ಜರ್ಮನಿಯನ್ನೂ ಸರಿದೂಗಲು ಸಾಧ್ಯವಿಲ್ಲ ಈಗಿನದರ ಆದರ್ಶವು ಇದರ ಆಚರಣೆಯಂತೆ ನೂತನವೂ ನ್ಯಾಯಪೂರ್ಣವೂ ಆಗಿದೆ. ಇಂದಿನ ಜರ್ಮನಿಯೂ ಶಾಂತಿಯನ್ನಾಕಾಂಕ್ಷಿಸಿ ನಿಂತಿರುವುದು ಅದರ ನಿರ್ಬಲತೆಯಿಂದಾಗಲೀ ಅಥವಾ ಹೇಡಿತನದಿಂದಾಗಲೀ ಅಲ್ಲ. ರಾಷ್ಟ್ರೀಯ ಸಮತಾವಾದದ ಮಹತ್ವವನ್ನರಿತಿರುವ ವಿಶ್ವಾಸಬಲದಿಂದ. ಜರ್ಮನಿಗೆ ಪ್ರತಿದ್ವಂದ್ವಿಯಾಗಿರುವ ಇನ್ನೊಂದು ಜನಾಂಗವು ಅನರ್ಹವಾದ ಉದ್ದೇಶ ಸಾಫಲ್ಯಕ್ಕಾಗಿ ಹೆಣಗಾಡಿ, ಒಂದೆಡೆಯಿಂದ ತನ್ನ ಆಂತರಿಕ ಶಕ್ತಿಯನ್ನು ಕಳೆದುಕೊಳ್ಳುವುದನ್ನು ಜರ್ಮನಿಯು ನೋಡಿಯೇ ಈ ಸೂತ್ರವನ್ನವಲಂಬಿಸಿರುತ್ತದೆ ರಾಷ್ಟ್ರೀಯ ಐಕ್ಯಮತ್ಯವೆಂಬುದು ಅಸಾಧ್ಯವೆಂದು ಅದಕ್ಕೆ ತಿಳಿದಿದೆ

ಅನ್ಯರಾಷ್ಟ್ರವನ್ನು ಜಯಿಸುವ ಉದ್ದೇಶದಿಂದ ನಡೆಯುವ ಪ್ರತಿಯೊಂದು ಯುದ್ಧವೂ ಇಂದಲ್ಲದಿದ್ದರೆ ನಾಳೆ ವಿಜಯಿಯನ್ನು ಪರಿವರ್ತಿಸಿ, ಅವನನ್ನು ದುರ್ಬಲನನ್ನಾಗಿ ಮಾಡಿ, ಸೋತವರ ಶರಣುಹೋಗಿಸುತ್ತದೆಂದು ನಮ್ಮ ರಾಷ್ಟ್ರೀಯ ತತ್ವವಾಗಿರುತ್ತದೆ

ಆದರೆ ಯುರೋಪಿನ ಜನಾಂಗವು— ರಾಷ್ಟ್ರೀಯ ವಿಚಾರಗಳ ಪೂರ್ಣಜ್ಞಾನವಿದ್ದೂ, ರಾಷ್ಟ್ರೀಯ ಧ್ಯೇಯದ ಸಮರ್ಥನೆಯ ಕಾರ್ಯದಲ್ಲಿ 'ಲಿಪ್ತವಾಗಿ ಕುಳಿತಿರಲಾರರೆಂದೂ ನಾವು ತಿಳಿದಿದ್ದೇವೆ

ಜರ್ಮನಿಯ ಸರ್ವಾಧಿಕಾರಿಯಾದ ಹರ್ ಹಿಟ್ಲರರು

ಕಳೆದ ೧೫೦ ವರ್ಷಗಳಲ್ಲಿ ಸಾಕಷ್ಟು ಸಾಕ್ಷ್ಯವೂ ಎಚ್ಚರವೂ ನಮಗೆ ದೊರಕಿರುತ್ತದೆ. ಮುಂದಿನ ಯುದ್ಧಗಳಲ್ಲಿ ಯುರೋಪಿನ ಸಂಸ್ಥಾನಗಳಿಗೆ ಕೆಲವು ಗಡಿಪ್ರಾಂತ್ಯಗಳಲ್ಲದೆ, ಅವುಗಳು ಮಾಡುವ ವೆಚ್ಚಕ್ಕೆ ತಕ್ಕುದಾದ ಯಾವ ಪ್ರಯೋಜನವೂ ಲಭಿಸಲಾರದು. ಆಶಾತುರರಾಗಿ ಯುದ್ಧಕ್ಕೆ ಸಿದ್ಧರಾದರೆ, ಕೆಲವರ ವೈಯಕ್ತಿಕ ಅಭಿಲಾಷೆಗಳು ಪೂರ್ತಿಗೊಂಡಂತಾಗಬಹುದು. ಆದರೆ ಜನತೆಗೆ ಈ ಯುದ್ಧಗಳು ಮಹಾ ಹೊರೆಯನ್ನೇ ತಂದೊಡ್ಡುವುವು ಅವರ ಸಂಕಷ್ಟಗಳು ಹೆಚ್ಚುವುವು.

ರಾಷ್ಟ್ರೀಯ ಪರಿಣಾಮಕ್ಕೆಂದೇ ಯುರೋಪು ಖಂಡದಲ್ಲಿ ರಕ್ತದ ಹೊನಲು ಹರಿಯುತ್ತದೆ. ಫ್ರಾನ್ಸು ಕೊನೆಯ ವರೆಗೆ ಫ್ರಾನ್ಸು ಆಗಿಯೇ ನಿಂತಿತು. ಜರ್ಮನಿಯು ಜರ್ಮನಿಯೇ ಆಯಿತು. ಪೋಲೆಂಡು ಪೋಲೆಂಡೇ ಆಯಿತು. ಇಟಲಿಯು ಇಟಲಿಯೇ ಆಯಿತು. ರಾಜ್ಯತೃಷೆಯು ಮಾತ್ರ ಸರ್ವತೋಮುಖವಾಗಿ ಮುಂದರಿಯುತ್ತ, ರಾಜಕೀಯ ದೃಷ್ಟಿಯನ್ನಿಟ್ಟುಕೊಂಡು ಯುದ್ಧವು ಹೂಡಲ್ಪಟ್ಟರೂ, ಜನರನ್ನು ಕಷ್ಟಕ್ಕೆ ಗುರಿಮಾಡಿದುದೊಂದಲ್ಲದೆ ಬೇರಾವ ವಿಧದಿಂದಲೂ ಫಲಕಾರಿಯಾಗಲಾರದು. ಇದರ ಬದಲಿಗೆ ಈ ಸಂಸ್ಥಾನಗಳು ಸತ್ಕಾರ್ಯಕ್ಕಾಗಿ ಅಲ್ಪವಾದರೂ ಕೆಲಸ ಮಾಡುತ್ತಿದ್ದರೆ ಶಾಶ್ವತವೂ ಶ್ರೇಯಸ್ಕರವೂ ಆದ ಫಲವು ಲಭಿಸುವುದರಲ್ಲಿ ಸಂದೇಹವಿದ್ದಿಲ್ಲ.

ರಾಷ್ಟ್ರೀಯ ಸಮತಾವಾದವನ್ನು ಪೂರ್ಣವಾಗಿ ಅನುಮೋದಿಸುವ ನನ್ನ ಮತದಂತೆ— ಪ್ರತಿಯೊಂದು ಯುದ್ಧದಲ್ಲೂ ಶ್ರೇಷ್ಠರಲ್ಲಿ ಶ್ರೇಷ್ಠರೇ ಹಾನಿಯನ್ನು ಹೊಂದಬೇಕಾಗುತ್ತದೆ ಯುರೋಪು ಖಂಡದಲ್ಲಿ ಶಾಂತಭೂಮಿಯೇ ಇಲ್ಲ. ಪ್ರತಿಯೊಂದು ಯುದ್ಧವೂ ರಾಷ್ಟ್ರದ ಜನಸಂಖ್ಯೆಯನ್ನು ವೃದ್ಧಿಗೊಳಿಸುವುದರಲ್ಲೂ, ಯುರೋಪು ಖಂಡದ ಸಂಕಷ್ಟವನ್ನು ಹೆಚ್ಚಿಸುವುದರಲ್ಲೂ ಪರಿಣಾಮಕಾರಿಯಾಗುವುದು ಈ ಯುದ್ಧಾತುರರಾದ ರಾಷ್ಟ್ರಗಳವರು ಈ ಫಲವನ್ನೇ ನಿರೀಕ್ಷಿಸುವರಾದರೆ ಅವರು ತಮ್ಮ ಅಭೀಷ್ಟವನ್ನು ಶಾಂತವರವಾಗಿಯೂ ಸುಲಭಕಾರಿಯಾಗಿಯೂ ಇರುವ ಬೇರೆ ವಿಧಾನಗಳಿಂದ ಪೂರೈಸಿಕೊಳ್ಳಬಹುದು,- ಯುದ್ಧವೇ ಅಗತ್ಯವಿಲ್ಲ. ಯುದ್ಧದಲ್ಲಿ ಜಯಿಸಿ ಜನಸಂಖ್ಯೆಯನ್ನು ಹೆಚ್ಚಿಸುವ ಧೋರಣೆಯ ಬದಲಿಗೆ ಕ್ರಮಪ್ರಕಾರವಾದ ಸಾಮಾಜಿಕ ಕ್ರಮನಿಯಮಗಳನ್ನು ಪ್ರಕಟಗೊಳಿಸಿ, ಅನುಸರಿಸಿ ಬಂದರೆ ಕೆಲವು ವರ್ಷಗಳಲ್ಲಿ ಸ್ವರಾಷ್ಟ್ರದಲ್ಲೇ ಜನನಗಳು ಹೆಚ್ಚಿ, ರಾಷ್ಟ್ರದ ಜನಸಂಖ್ಯೆಯು ಅಧಿಕವಾಗಬಹುದು

ರಾಷ್ಟ್ರೀಯ ಸಮತಾವಾದದಲ್ಲಿ ನಂಬಿಕೆಯನ್ನಿಟ್ಟಿರುವ ಜರ್ಮನಿಯು ತನ್ನ ಆಂತರಿಕ ತಾತ್ವಿಕ ದೃಷ್ಟಿಯಿಂದ ಶಾಂತಿಯನ್ನು ಅಪೇಕ್ಷಿಸುತ್ತದೆ ಯುರೋಪಿನ ಸಂಕಷ್ಟವು ಯುದ್ಧಗಳಿಂದ ಎಷ್ಟು ಮಾತ್ರಕ್ಕೂ ನಿರ್ಮೂಲವಾಗಲಾರದೆಂದೂ, ಬದಲಿಗೆ, ಅವುಗಳಿಂದಾಗಿ ಜನರ ಸಂಕಷ್ಟವು ವೃದ್ಧಿಗೊಳ್ಳುವುದೆಂದೂ ನಾವು ತಿಳಿದವರಾಗಿದ್ದೇವೆ

ಆಧುನಿಕ ಜರ್ಮನಿಯು ತನ್ನ ಆಂತರ್ಯದಲ್ಲಿನ ಘಾಯಕ್ಕೆ ಚಿಕಿತ್ಸೆ ನಡೆಸುವ ಸಾಹಸದಲ್ಲಿ ಈಗ ತೊಡಗಿದೆ ನಮ್ಮ ಭೌತಿಕ ಅಭಿವೃದ್ಧಿಯ ಕೆಲಸವು ಇನ್ನು ಇಪ್ಪತ್ತು ವರ್ಷಗಳಿಗೆ ಮುಗಿಯಲಾರದು ಆದರ್ಶಪ್ರಾಯವಾದ ಸಂಪ್ರದಾಯಗಳನ್ನು ಪ್ರಚಾರಗೊಳಿಸುವ ಕಾರ್ಯವು ಇನ್ನು ಐವತ್ತು ಅಥವಾ ನೂರು ವರ್ಷಗಳೊಳಗೆ ಕೊನೆಗಾಣಲಾರದು

ಚಳವಳನನ್ನು ಸಂಸ್ಥಾಪಿಸಿಯೇ ನಾನು ರಾಷ್ಟ್ರೀಯ ಸಮತಾವಾದದ ಕ್ರಾಂತಿಯನ್ನು ಜನನಕ್ಕೆ ತಂದಿರುವೆನು ಆದರೆ ನಮ್ಮ ಕಾಲದಲ್ಲಿ ಈ ಕ್ರಾಂತಿಯ ಪ್ರಥಮಭಾಗವೇ ತೋರಬರಬಹುದೆಂದು ನಾವು ತಿಳಿದವರಾಗಿದ್ದೇವೆ ಆದುದರಿಂದ ನಮಗೆ ಶಾಂತಿಯಲ್ಲದೆ ಮತ್ತೇನು ಬೇಕಾಗಿದೆ? ನಮ್ಮ ಧುರೀಣರು ಮಾತ್ರ ಶಾಂತಿಯನ್ನಪೇಕ್ಷಿಸುವುದಲ್ಲ, ನಮ್ಮ ಜನರೂ ಅದನ್ನೇ ಆಶಿಸುತ್ತಿರುವರು ತಮಗೆ ಯುದ್ಧವು ಬೇಕೆಂದು ಅವರು ಎಂದೂ ಹೇಳಿರುವುದಿಲ್ಲ

ಜರ್ಮನಿಗೆ ಈಗ ಶಾಂತಿಯೇ ಅಗತ್ಯ- ಅದಕ್ಕೆ ಬೇಕಾದುದು ಅದೊಂದೇ ಆದರೆ ಈ ಹೇಳಿಕೆಯು ಬರಿಯ ಬಾಯಿಮಾತು ಎಂದೂ, ಹಲವರು ಒಟ್ಟಾಗಿ ಮಾಡಿದ ಒಪ್ಪಂದಕ್ಕೆ ಸಹಿಹಾಕಿದರೆ ಮಾತ್ರ ನಮ್ಮ ನುಡಿಯ ಸತ್ಯತೆಯು ತಿಳಿದುಬರುವುದೆಂದೂ ಬ್ರಿಟಿಷ ರಾಜನೀತಿಜ್ಞರು ಹೇಳುವುದಾದರೆ, ಮಿ॥ ಏಡನರಿಗೆ ನಾನು ನಮ್ಮೆಲ್ಲಾ ಬರಿಯ ಮಾತೆಂದೇ ಪುನಃ ಹೇಳಬೇಕಾಗುತ್ತದೆ. ಸಂದಿಗ್ಧ ಕಾಲದಲ್ಲಿ ತಾನು ಹೇಗೆ ಆಚರಿಸಬೇಕೆಂದು ಮನಸ್ಸಿನಲ್ಲಿ ನಿರ್ಧರಿಸಿಕೊಂಡು, ತೋರಿಕೆಯ ಮಟ್ಟಿಗೆ ಒಪ್ಪಂದಗಳಿಗೆ ಸಹಿಹಾಕುವುದು ಸುಲಭ. ಆದರೆ ಯುದ್ಧವನ್ನು ಖಂಡಿಸುವ ಸತ್ಯತೆಯನ್ನು ಬಹಿರಂಗವಾಗಿ ಪ್ರಕಟಗೊಳಿಸುವುದೇ ಕಷ್ಟ.

(ಬರುವ ಸಂಚಿಕೆಯಲ್ಲಿ ಕೊನೆಗೊಳ್ಳುವುದು)

ಬಾಹ್ಯ ಪ್ರಪಂಚ ಪರಿಚಯ.

[ಜಗತ್ತಿನ ಎಲ್ಲಾ ರಾಷ್ಟ್ರಗಳ ವಿವರಗಳನ್ನು ಈ ಪುಟದಲ್ಲಿ ಕ್ರಮಶಃ ಸಂಕ್ಷಿಪ್ತವಾಗಿ ಪ್ರಕಟಿಸುತ್ತ ಬಂದು, ನಮ್ಮ ವಾಚಕರಿಗೆ ಬಾಹ್ಯಪ್ರಪಂಚದ ಪರಿಚಯವನ್ನು ಮಾಡಿಕೊಡಬೇಕೆಂದು ನಿರ್ಣಯಿಸಲಾಗಿದೆ-ಸಂ]

ಹಂಗೇರಿ.

ಆಡಳಿತೆ.

ಹಂಗೇರಿಯವು ಯೂರೋಪಿನ ಬಹು ಪ್ರಾಚೀನ ದೇಶ. ಮಹಾಯುದ್ಧವು ಕಳೆದ ಮೇಲೆ ಈ ದೇಶವು ಒಸ್ಟ್ರಿಯಾ ದೇಶದಿಂದ ವಿಭಿನ್ನವಾಯಿತು. ಅದಕ್ಕಿಂತ ಮೊದಲು ಒಸ್ಟ್ರಿಯಾ ಮತ್ತು ಹಂಗೇರಿಯಾ ದೇಶಗಳಿಗೆ ಒಬ್ಬನೇ ಚಕ್ರಾಧಿಪತಿಯಿದ್ದನು. ಅವನು ಎರಡು ದೇಶಗಳನ್ನೂ ತನ್ನಿಚ್ಛಾನುಸಾರವಾಗಿ ಆಳುತ್ತಿದ್ದನು. ಈ ರಾಜ್ಯಭಾರ ಕ್ರಮವು ಹಂಗೇರಿಯಾನರಿಗೆ ಸರಿದೋರಲಿಲ್ಲ. ಒಸ್ಟ್ರಿಯಾನರು ತಮ್ಮ ಸ್ವಾತಂತ್ರ್ಯವನ್ನು ಸರ್ವ ವಿಧದಿಂದಲೂ ಮುರಿದಿಕ್ಕುತ್ತಾ ಬಂದುದನ್ನು ಕಂಡು ಅವರಿಗೆ ಸಹಿಸಲಾಗಲಿಲ್ಲ. ಒಸ್ಟ್ರಿಯಾದ ಗೊಡವೆಯೇ ಬೇಡವೆಂದು ಅವರು ಚಳವಳಿಸಲಾರಂಭಿಸಿದರು, ತಮ್ಮದೇ ಆದ ಶಾಸನಸಭೆಗಳನ್ನೇರ್ಪಡಿಸಿಕೊಂಡು ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಇವರ ಚಳವಳಿವು ಸಾಗುತ್ತ ಇದ್ದಂತೆ ಹಂಗೇರಿಯಾದ ಪ್ರಾಮುಖ್ಯ ವ್ಯಾಪಾರ ಕೇಂದ್ರವು ಒಸ್ಟ್ರಿಯಾದ ವಶಕ್ಕೆ ಹೋಯಿತು

ಸ್ವಭಾವ.

ಹಂಗೇರಿಯನರು ವಿನಮ್ರಸ್ವಭಾವದವರು ದರ್ಪವೆಂಬುದು ಅವರಲಿಲ್ಲ ಅವರ ಈ ಗುಣದಿಂದಾಗಿಯೇ ಅವರು ಒಸ್ಟ್ರಿಯಾನರ ಅಡಿಯಾಳುಗಳಾಗಿ ಬಾಳಬೇಕಾಯಿತು ಹಂಗೇರಿಯನರ ಆಚಾರವಿಚಾರಗಳಲ್ಲ ಪ್ರಾಚ್ಯರಂತೆಯೇ ಒಬ್ಬ ಹಿಂದೂವು ಹಂಗೇರಿಯಾಕ್ಕೆ ಹೋದರೆ, ಅವನಿಗೆ ತಾನು ಅನ್ಯದೇಶಕ್ಕೆ ಬಂದಿರುವೆನೆಂದು ಭಾಸವಾಗಲಾರದು ಪೂರ್ವ ದೇಶದ ಸಂಪ್ರದಾಯಗಳನ್ನು ಪಾಲಿಸುತ್ತ ಬರುವವರಲ್ಲಿ ಹಂಗೇರಿಯನರೇ ಮೊದಲಿಗರು

ಹಂಗೇರಿಯದ ಪ್ರಾಚೀನತೆ.

ಹಂಗೇರಿಯದ ಸಹಸ್ರ ವಾರ್ಷಿಕೋತ್ಸವವು ೧೮೯೬ರಲ್ಲಿ ಜರಗಿತು—ಎಂದಾಗ ಈ ದೇಶವು ಎಷ್ಟು ಪುರಾತನವಾದುದೆಂದು ತಿಳಿಯಬಹುದು ಈ ದೇಶದಲ್ಲಿ ಹಲವು ಜನಾಂಗಗಳು ಬಾಳಿ ಅಳಿದು ಹೋದುವು ೧೧ನೇ ಶತಮಾನದಲ್ಲಿ ಸ್ಟೀಫನ್ ಎಂಬವನು ಹಂಗೇರಿಯಾದ ಅರಸನಾಗಿ, ಬಹುಪಕ್ಷ ಬಲಾತ್ಕಾರದಿಂದಲೇ ಹಂಗೇರಿಯಾನರನ್ನು ಕ್ರೈಸ್ತಮತಕ್ಕೆ ಸೇರಿಸಿದನು ಪೋಪ್ ಸಿಲ್‌ವೆಸ್ಟರ್ II ಸ್ಟಿವನ್ನಿಗೆ 'ಎಪೋಸ್ಟೊಲಿಕ್ ಕಿಂಗ್' ಎಂಬ ಬಿರುದನ್ನು ಕೊಟ್ಟು ಸಂಸ್ಥಾನವನ್ನು ಏಕೀಕರಿಸಿದನು.

ಅರಸರು.

ಇವನ ನಂತರ ಕಿಂಗ್ ಎಡಿಸಲಾಸ್ I ಎಂಬವನು ಅರಸನಾದನು ಇವನನ್ನು 'ಸೈಂಟ್' ಎಂಬ ಅಭಿದಾನದಿಂದ ಕರೆದರು ಇವನ ನಂತರ ಮತಾಯಸನೆಂಬವನು ರಾಜನಾದನು ಇವನ ಆಳ್ವಿಕೆಯು ಬಹು ಶ್ಲಾಘ್ಯವಾಗಿತ್ತು, ಕಿಂಗ್ ಸೊಲೊಮೋನನಂತೆ ಇವನು ಬಹು ಉತ್ಕೃಷ್ಟರೀತಿಯಿಂದ ರಾಜ್ಯಭಾರಮಾಡಿದನು ಇವನ ಕಾಲದಲ್ಲಿ ಹಂಗೇರಿಯಾದಲ್ಲಿ ನೂತನ ಅರಮನೆಗಳ ರಚನೆಯಾಯಿತು ಇವನ ತಂದೆಯಾದ ಜೋನ್ ಹನ್ಯಾಡಿ ಎಂಬವನು ಕೇಂದ್ರ ಯೂರೋಪನ್ನು ತುರ್ಕರ ಧಾಳಿಯಿಂದ ರಕ್ಷಿಸಿದನು.

ಬುಡಾಪೆಸ್ಟ್

ಹಂಗೇರಿಯಾದ ಪ್ರಧಾನನಗರ ಬುಡಾಪೆಸ್ಟ್. ಡಾನುಬ್ ನದಿಯ ಎಡ ಕರಾವಳಿಯಲ್ಲಿರುವುದು ಪೆಸ್ಟ್ ಎಂಬ ಮುಖ್ಯ ನಗರ, ಬುಡಾ ಎಂಬ ನಗರವು ಆ ನದಿಯ ಬಲದಡದಲ್ಲಿರುವುದು. ೧೮೭೩ರಲ್ಲಿ ಈ ಎರಡು ನಗರಗಳನ್ನು ಏಕೀಭವಿಸಲಾಯಿತು. ಎಡ ಮತ್ತು ಬಲ ಪಾರ್ಶ್ವಗಳಲ್ಲಿರುವ ಎರಡು ನಗರಗಳನ್ನು ೬ ದೊಡ್ಡ ದೊಡ್ಡ ಸಂಕಗಳಿಂದ ಸಂಯೋಜಿಸಲಾಯಿತು. 'ಸಸ್‌ಪೆನ್ಶನ್ ಬ್ರಿಜ್' ಎಂಬುದು ಯೂರೋಪಿನಲ್ಲೇ ಅತಿ ದೊಡ್ಡ ಸಂಕವಾಗಿರುತ್ತದೆ ಬುಡಾ ಮತ್ತು ಪೆಸ್ಟ್ ಎಂಬ ಎರಡು ನಗರಗಳು ಆಧುನಿಕವಾದ ಉಪ್ಪರಿಗೆ ಸುಂದರ ಕಟ್ಟಡಗಳಿಂದಲೂ ಮಾರ್ಗಗಳಿಂದಲೂ ಸುಶೋಭಿತವಾಗಿರುತ್ತವೆ

ಬುಡಾ.

ಬುಡಾನಗರವನ್ನು ೧೫೪೧ರಲ್ಲಿ ತುರ್ಕರು ವಶೀಕರಿಸಿಕೊಂಡರು ಅವರು ೧೫೦ ವರ್ಷಗಳ ವರೆಗೆ ಅಲ್ಲಿ ರಾಜ್ಯಭಾರ ನಡೆಸಿದರು. ಕ್ರಮೇಣ ಹಂಗೇರಿಯನರು ಒಟ್ಟಾಗಿ ಕ್ರಾಂತಿಯನ್ನೆಬ್ಬಿಸಿ ಜಯಶೀಲರಾದರು

ಹಂಗೇರಿಯನರ ಎಚ್ಚರ.

೧೮೩೩ರಲ್ಲಿ ಹಂಗೇರಿಯ ವರು ಒಸ್ಟ್ರಿಯಾಗಳ ರಾಜ್ಯಭಾರವನ್ನು ಒಕ್ಕರಿಸಿ ದಲ್ಲಿ ಹಂಗೇರಿಯನರಿಗೆ ತಮ್ಮ ದುಃಸ್ಥಿತಿಯ ಅರಿವಾಯಿತು ಹಂಗೇರಿಯದ ಹಲವು ವಾಜ್ಯಗಳಿದ್ದರು. ತಮ್ಮ ದೇಶವನ್ನು ಒಸ್ಟ್ರಿಯಾದ ಹಿಡಿತದೊಳಗಿಂದ ತಪ್ಪಿಸಬೇಕೆಂದು ಸಂಘಟಿಸಿದರು. ಆ ಯತ್ನದಲ್ಲಿ ತಂತಮ್ಮ ಸ್ವಾರ್ಥವನ್ನು ತಾವೇ ರಚಿಸಿದರು.

ಹಂಗೇರಿಯದ ರಾಣಿ.

೧೮೪೮ರ ಸಪ್ಟಂಬರ ೧೧ರಲ್ಲಿ ಹಂಗೇರಿಯಾ ಪಾರ್ಲಿಮೆಂಟಿನ ಎರಡು ಸಭೆಗಳನ್ನು ಒಟ್ಟುಗೂಡಿಸಲಾಯಿತು. ಈ ಸಭೆಯು ಈಗ ಪ್ರೆಸಿಸ್ ಲಾವಾ ಎಂದು ಕರೆಯಲ್ಪಡುವ ಕ್ಷೇತ್ರದಲ್ಲಿ ಜರಗಿತು. ಆಗಿನ ರಾಣಿಯಾಗಿದ್ದ ಮರಿಯಾ ತೆರೆಸಳು ಸಭಾಧ್ಯಕ್ಷಸ್ಥಾನವನ್ನು ಗಂಭೀರ ಮುಖಮುದ್ರೆಯುಳ್ಳವಳಾಗಿ ಸ್ವೀಕರಿಸಿ "ಒಸ್ಟ್ರಿಯಾದಲ್ಲಿ ಧಾಳಿ ನಡಸಬೇಕೆಂದು ಫ್ರೆಂಚರು ನಿರ್ಧರಿಸಿರುವರು. ಆದುದರಿಂದ ಪ್ರತಿಯೊಬ್ಬ ಹಂಗೇರಿಯನನೂ ಕತ್ತಿಕಟ್ಟಿ, ಒಸ್ಟ್ರಿಯಾದ ಸ್ವಾತಂತ್ರ್ಯಕ್ಕಾಗಿ ಹೆಣಗಾಡಬೇಕು—ನಮ್ಮಲ್ಲಿ ಶೌರ್ಯವಿದೆ—ಸಾಮರ್ಥ್ಯವಿದೆ" ಎಂದು ಗುಡುಗುಟ್ಟಿದಳು. ಅಷ್ಟರತನಕವೂ ಒಸ್ಟ್ರಿಯಾನರನ್ನು ದ್ವೇಷಿಸುತ್ತಿದ್ದ ಹಂಗೇರಿಯಾನರು ರಾಣಿಯ ಮನವೋಹಕವೂ, ಕರುಣಾರ್ದ್ರವೂ ಆದ ಪ್ರಚಂಡ ಭಾಷಣವನ್ನು ಕೇಳಿ ಮನದಲ್ಲೇ ಮರುಗಿಕೊಂಡರು ಎಂದೂ ನೆನಸದ ಕರ್ತವ್ಯವನ್ನು ಪಾಲಿಸುವ ಇಂತಹ ಪ್ರಸಂಗವು ಎಂದೂ ಬರಲಾರದೆಂದು ಭಾವಿಸಿದ್ದ ಅವರು ರಾಣಿಯ ಮಾತಿನ ಮಂತ್ರಕ್ಕೆ ಸಿಲುಕಿ—ಒಡನೆ, ಮಹಾರಾಜ್ಞಿಯವರೇ, ನಮ್ಮ ಪ್ರಾಣಗಳೆಲ್ಲ ತಮ್ಮ ಅಧೀನ" ಎಂದು ಹೇಳಿದರಂತೆ. ಅಷ್ಟು ರಸಪೂರ್ಣವಾಗಿ ನುಡಿಯುವ ರಾಣಿಯು ಹಂಗೇರಿಯಾದಲ್ಲಿದ್ದಳಂತೆ ಈ ರಾಣಿಯ ಚರಿತ್ರೆಯು ಹಂಗೇರಿಯಾದಲ್ಲೂ ಒಸ್ಟ್ರಿಯಾದಲ್ಲೂ ವೀರಕಥೆಯಾಗಿ ಪರಿಣಮಿಸಿದೆ

ಸಂಯೋಜನೆ

ಮರಿಯಾ ತೆರೆಸಳ ಆಳ್ವಿಕೆಯ ಕಾಲದಲ್ಲಿ ಬುಡಾ ಮತ್ತು ಪೆಸ್ಟ್ ನಗರಗಳನ್ನು ದೊಡ್ಡ ಸಂಕದಿಂದ ಸಂಯೋಜಿಸಲಾಯಿತು ಅದರ ತನಕ ಈ ಎರಡು ನಗರಗಳೂ ಒಂದನ್ನೊಂದು ದ್ವೇಷಿಸುತ್ತಾ ಇದ್ದುವು ೧೮೭೩ರಲ್ಲಿ ಈ ಎರಡು ನಗರಗಳೂ ಒಂದಾದುವು. ಮತ್ತೆ ಇಪ್ಪತ್ತೈದು ವರ್ಷಗಳು ಕಳೆದ ತರುವಾಯ ಬುಡಾಪೆಸ್ಟ್ 'ರಾಣಿಯ ಜೂಬಿಲಿ' ಹಿರಿದಾಗಿ ಜರುಗಿ ನಮ್ಮ ದಮ್ಮ ನಗರ ಸ್ಥಾಪನೆಯಾಯಿತು.

ವಿಲಾಸಮಂದಿರಗಳು.

ಹಂಗೇರಿಯಾದಲ್ಲಿ ಒಪೆರಾ ಮತ್ತು ಸಿನಿಮಾ ಥಿಯೇಟರ್ ಎಂಬ ವಿನೋದಮಂದಿರಗಳಿವೆ ಅಲ್ಲಿಯವರ ಅಭಿನಯದ ಉತ್ಕೃಷ್ಟತೆ ಉನ್ನತವಾಗಿಯೇ ಇದೆ ನಗರದಲ್ಲಿ ೧೬ ಅಲ್ಲಿ ಸಂಗೀತ ಮಂದಿರಗಳೂ ೩೩ ಸಿನೆಮಾ ಮಂದಿರಗಳೂ ಇವೆ ಅಲ್ಲದೆ ದೊಡ್ಡ ದೊಡ್ಡ ವಸ್ತುಪ್ರದರ್ಶನಾಲಯಗಳಿವೆ ನ್ಯಾಶನಲ್ ಮ್ಯೂಜಿಯಮ್ಮಿನ ಲೈಬ್ರರಿಯೊಂದು ಇಡೀ ಯೂರೋಪು ಖಂಡದಲ್ಲೇ ಅತಿ ದೊಡ್ಡದೆಂದು ಖ್ಯಾತಿಯಿದೆ

ವಾರ್ತೆಗಳ ಪ್ರಸಾರ

ಜಗತ್ತಿನಲ್ಲಿ ಪತ್ರಿಕೆಗಳಿಲ್ಲದೆ ವಾರ್ತೆಗಳನ್ನು ಪ್ರಚಾರಗೊಳಿಸುವ ಒಂದು ಕ್ರಮವಿದೆಯಾದರೆ ಅದು ಬುಡಾಪೆಸ್ಟ್‌ನಲ್ಲಿದೆ. ಟೆಲಿಫೋನಿನ ಮೂಲಕ ನಗರದ ಮುಖ್ಯ ವಾರ್ತೆಗಳನ್ನು ಚಂದಾದಾರರಿಗೆ ರವಾನಿಸಲಾಗುವುದು. ವಾರ್ತೆಗಳು ಸಿಗದಿದ್ದರೆ ಚಂದಾದಾರರಿಗೆ ಕಥೆಗಳನ್ನು ಹೇಳಲಾಗುತ್ತದೆ.

ಆತಿಥಿಸತ್ಕಾರ.

ಅತಿಥಿಸತ್ಕಾರದ ಪೂರ್ಣ ಜ್ಞಾನವು ಹಂಗೇರಿಯನ ಪ್ರತಿಯೊಂದು ಹಸುಳೆಗೂ ತಿಳಿದಿದೆ. ಅತಿಥಿಗಳನ್ನು ಎಲ್ಲಾ ರೀತಿಯಿಂದಲೂ ಸಂತೋಷಪಡಿಸುವುದೇ ಅವರ ಅಭ್ಯಾಸ. ಅತಿಥಿಸತ್ಕಾರದ ಭರದಲ್ಲಿ ಅತಿಥಿಗಳ ಗಾಡಿಗಳ ಚಕ್ರಗಳನ್ನೇ ಕಳಚಿ ತೆಗೆದು, ತಮ್ಮ ಅತಿಥಿಗಳನ್ನು ಮನೆಯಲ್ಲಿ ಮತ್ತು ಕೆಲವು ದಿನಗಳ ವರೆಗೆ ಉಳ್ಳಿರಿಸುವಷ್ಟು ಆತುರವು ಅವರಲ್ಲಿರುತ್ತದೆ ಶಿಷ್ಟಸಂಪ್ರದಾಯವನ್ನು ಮರೆಯದೆ ಆಚರಿಸುವುದೇ ಹಂಗೇರಿಯಾನ ವಿಶಿಷ್ಟ ಗುಣ.

ಹಂಗೇರಿಯದ ಆರ್ಥಿಕಸ್ಥಿತಿ

ಹಂಗೇರಿಯಾದಲ್ಲಿ ಶ್ರೀಮಂತರಿಗಿಂತ ಬಡವರೆ ಹೆಚ್ಚು ಆಜನ್ಮ ಹಂಗೇರಿಯಾನ ನಾದವನು ಹೆಚ್ಚಿನ ಮಟ್ಟಿಗೆ ಬಡವನೇ ಆಗಿರುತ್ತಾನೆ ನಗರಗಳಲ್ಲಿ ಸಂಚರಿಸಿದರೆ ಅಲ್ಲಿಯ ಜನರ ದಾರಿದ್ರ್ಯವು ಎಷ್ಟೆಂದು ವ್ಯಕ್ತವಾಗುವುದು. ಪಟ್ಟಣಗಳ ಜೊತೆಗೆ ಗ್ರಾಮಗಳಲ್ಲಿ ಅಷ್ಟು ಬಡತನವು ಗೋಚರಿಸುವುದಿಲ್ಲ ಅನಾಗರಿಕರಾದರೂ, ಹಳ್ಳಿಯ ಜನರ ಜೀವನ ಕ್ರಮವು ಅಷ್ಟೊಂದು ಕಠಿಣವಲ್ಲ, ಅಲ್ಲದೆ ಹಳ್ಳಿಗರಲ್ಲಿ ಅಹಂಭಾವವು ಇರುವುದು ಕಂಡುಬರುತ್ತದೆ ಹೆಚ್ಚಿನ ಹಳ್ಳಿಗರು ತಮ್ಮ ಕೊರಳಲ್ಲಿ ಒಂದೊಂದು ಪಿಳ್ಳಿಯನ್ನು ತೂಗಹಾಕುತ್ತಾರೆ ಅದರಲ್ಲಿ ಎಂದಿಗೂ, ಎಂದೆಂದಿಗೂ ಒಗದಿರುವ ಒಂದು ವಾಕ್ಯವು ಬರೆದಿರುತ್ತದೆ ಕೆಲವು ಪಿಳ್ಳಿಗಳಲ್ಲಿ "ನಾನು ಒಂದೇ ದೇವರು, ಒಂದೇ ಧರ್ಮ ಹಂಗೇರಿಯದ ಪ್ರಸರುವ ಪ್ರಾರದ ಒಂದೇ ದಿನವನ್ನು ನಂಬುತ್ತೇನೆ" ಎಂಬುದಾಗಿ ಬರೆದಿರುತ್ತದೆ ಹಂಗೇರಿಯದ ಪಟ್ಟಣಗಳನ್ನು ವಿಮೋಚಿಸಲು ಕ್ರಾಂತಿಯು ಗೊಂದಲಕ್ಕೀಡಾದರೂ ಆ ಚಳವಳಿವು ಅಲ್ಲಿಯವರ ಸತ್ವರಿಣಾಮವನ್ನೂ ತಂದೊಡ್ಡಿರುವುದಿಲ್ಲ

KANNADA SAVINGS CERTIFICATES
Cashed even Before maturity
available in denominations of Rs. 10/ and above
TOTAL YIELD RS 4-6-0% P. A.
Paid once half yearly at 3¼% p. a.
with an additional 1¼% p. a. on maturity
If Left To Accumulate
RS. 100/- Will Amount to RS. 122-13-6
Full Particulars from:—
CANARA BANK LTD.,
Estd. 1906.
OFFICES AT:
Bombay—Fort, Bombay—Mandvi, Hubli, Calicut, Cochin, Ernakulam, Alleppey, Bangalore, Davangere, Chickmagalur, Mangalore—Bunder, Mangalore—City, Kasaragod, Puttur, Buntwal, Karkala, Udipi, Coondapoor & Gangoli.

Subscribed Capital	Paid up Capital	Reserves	Deposits	Working Capital
6,00,000	3,31,000	4,50,000	58,62,000	73,49,000

ಅನುಕ್ರಮಣಿಕೆ

ಕಥೆ ೩
ಸಾಹಿತ್ಯ ಸಂಗ್ರಹ ೪
ಕರ್ನಾಟಕ ವರ್ತಮಾನ ೫
ಸ್ತ್ರೀಯರಿಗೆ ಯಾರೂ ಕೈಹಿಡಿಯಬಾರದೆಂಬ ನಿರ್ಬಂಧದ ಗೂಢಾರ್ಥವೇನು? ೬
ಜರ್ಮನಿಯು ಶಾಂತಿಯನ್ನೇ ಕಾಂಕ್ಷಿಸುವುದು ೮
ಅಗ್ರಲೇಖ
ಸ್ಫುಟವಿಚಾರಗಳು ೧೦
'ಮೈನಾರಿಟಿ'ಗಳ ಸಮಸ್ಯೆ ೧೦
ವರ್ತಮಾನ ಸಂಗ್ರಹ
ಮಂಗಳೂರು ತಾಲೂಕುಗಳಿಂದ ೧೩
ಖಾಸಗಿ ಶಾಲೆಗಳ ಉಪಾಧ್ಯಾಯರ ದೂರು ೧೪
ವಿವಿಧ ಸಮಾಚಾರಗಳು ೧೬

ಸ್ವದೇಶಾಭಿಮಾನಿ

ತಾ ೨೧ನೇ ಶುಕ್ರವಾರ ಜೂನ್ ೧೯೩೫

'ಮೈನಾರಿಟಿ'ಗಳ ಸಮಸ್ಯೆ.

(ಅಲ್ಪ ಸಂಖ್ಯಾಕರು.)

ಜನಸಂಖ್ಯೆಯಲ್ಲಿ ಕಡಿಮೆಯಾಗಿರುವ ಸಮಾಜಗಳವರ ಅಹೋಂದು ಬಗೆಯ ಸಮಸ್ಯೆಯು, 'ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದು' ಎನ್ನುವ ಹಾಗೆ, ಗಂಭೀರವಾದ ಸ್ವರದಿಂದ ಆಗಾಗ ಜನತೆಯ ಮುಂದೆ ಗರ್ಜಿಸುವುದಿದೆ. ಕೆಲ ವರ್ಷಗಳ ಹಿಂದೆ ಈ ಸ್ವರವೇ ಇದ್ದಿಲ್ಲ. ಪ್ರಾತಿನಿಧ್ಯ, ಚುನಾವಣೆಗಳಿಂದ ಆರಂಭವಾಗಿ ನೇಮಕ, ಜಾತಿವಾರು ಅಧಿಕಾರದಾನ ಇತ್ಯಾದಿಗಳ ಮೂಲಕ ಬೆಳೆದು ಮುಂದೆ ಬರಲಿರುವ ಹೊಸ ಸುಧಾರಣೆಗಳ ಶಾಸನವನ್ನು ಬರೆಯತೊಡಗಿದಂದಿನಿಂದ ಇದೊಂದು ವಿಕಾರಸ್ವರೂಪವನ್ನು ತಳೆದಿದೆ. ಕಳೆದ ವಾರ, ಆಂಧ್ರಪ್ರಾಂತಿಕ ಪರಿಷತ್ತಿನಲ್ಲಿ ಶ್ರೀ ಎಮ್. ಸಿ. ರಾಜರವರೂ, ಬೆಂಗಳೂರಿನ ಆಂಗ್ಲೋ ಇಂಡಿಯಾನರ ಸಭೆಯಲ್ಲಿ ಮಿ. ಎ. ಎಚ್. ಬವರ್ ರವರೂ ಈ ವಿಷಯವಾಗಿ ಭಾಷಣ ಮಾಡುವಾಗ, ಎರಡು ಪರಸ್ಪರವಿರುದ್ಧಗಳಾದ ಸೂಚನೆಗಳನ್ನು ಹೊರಗೆಡವಿದರು. ಶ್ರೀ ರಾಜರು,–'ನಾವೆಲ್ಲ ದುರ್ಬಲರು, ಕಡಿಮೆ ಜನರು, ನಮ್ಮ ನಮ್ಮ ಸಮಾಜಗಳನ್ನು ಸಂರಕ್ಷಿಸಲು ಉಪಾಯಮಾಡಿಕೊಳ್ಳುವೆವಾದರೆ, ಅದರಿಂದ ದೇಶದಲ್ಲಿನ ಇತರ ಎಲ್ಲ ಸಮಾಜಗಳಿಗೆ ವಿರುದ್ಧವಾಗಿ ವ್ಯವಸ್ಥೆಮಾಡಿಕೊಳ್ಳುತ್ತಿದ್ದೇವೆ ಎಂದು ಕೆಲವರು ಎಣಿಸಿರುವುದನ್ನು ನಾನೀಗ ಖಂಡಿತವಾಗಿಯೂ ಅದು ತಪ್ಪು, ಅನ್ಯಾಯ, ಅಸಂಬದ್ಧವೆಂದೇ ಸಾರಬೇಕಾಗಿದೆ' ಎಂದರು. ಮಿ. ಬವರರು –"ಅಲ್ಪಸಂಖ್ಯಾಕರ ಕೈಯಲ್ಲಿ ಒಂದೇ ರಕ್ಷಣೋಪಾಯವಿದೆ, ಅವರೆಲ್ಲರೂ ಒಂದಾಗಿ, ಬಹು ಸಂಖ್ಯಾಕರನ್ನು ಎದುರಾಡಬೇಕು" ಎಂದರು. ದೇಶದ ಹಿತವನ್ನು ಕಡೆಗಣಿಸಿ, ತಮ್ಮ ಏಳಿಗೆಯನ್ನೆ ಮಾತ್ರ ಸಾಧಿಸಬೇಕಾಗಿ ಇವರಿನ್ನಲಿಲ್ಲ, ಎಷ್ಟೋ ವೇಳೆ, ಚಿಕ್ಕ ಚಿಕ್ಕ ಸಮಾಜಗಳು ಒಂದುಗೂಡಿ ತಮ್ಮ ಪ್ರತಿನಿಧಿಗಳ ಮೂಲಕ (ರೌಂಡ್ ಟೇಬಲ್ ಸಭೆಯಲ್ಲಾದಂತೆ) ಸ್ವಹಿತವನ್ನು ಸಾಧಿಸಿದ್ದೂ ಇದೆ. ಆದರೂ, ಅಲ್ಪಸಂಖ್ಯಾಕರು ಒಂದು ಸಂಕೋಲೆಯಂತೆ, ಹಲವು ಗೊಣಸುಗಳು ಸೇರಿ ಬಹು ಸಂಖ್ಯಾಕರನ್ನು ಬಂಧಿಸಿ ಬಾಧಿಸಿ ತಾವೇ ಮೆರೆದಾಡಬೇಕೆನ್ನುವ ಹವ್ಯಾಸಕ್ಕೆ ಒಲಿಬೀಳುವುದು ರಾಜಕೀಯ ವಿಚಾರದಲ್ಲಾಗಲಿ, ದೇಶಹಿತದ ಅಥವಾ ಜನಾಂಗದ ಏಳಿಗೆಯ ದೃಷ್ಟಿಯಿಂದಾಗಲಿ, ಒಳ್ಳೆತಲ್ಲವೆಂದು, ಅಲ್ಪಸಂಖ್ಯಾಕರ ಪ್ರಾತಿನಿಧ್ಯವನ್ನು ವಹಿಸುವ ಪತ್ರಿಕೆಗಳೇ ಅಧಿಕಾರವಾಣಿಯಿಂದ ಹೇಳುತ್ತಿವೆ. ಅದರಲ್ಲಿ, ಅಧಿಕಾರ ಬಲವುಳ್ಳವರ ಹಾಗೂ ದುರ್ಬಲರ ನಡುವೆ, ರಕ್ತಸಂಬಂಧದಿಂದ ಉಭಯರ ಹಿತವನ್ನು ಸಾಧಿಸಲು ಚೇತನವುಳ್ಳ, ಆಂಗ್ಲೋ ಇಂಡಿಯನರು, ಇಂತಹ ಕಾರ್ಯಕ್ರಮವನ್ನು ಅಂಗೀಕರಿಸುವುದು ಶುದ್ಧ ತಪ್ಪೇ ಆಗುವುದು. ಬಹು ಸಂಖ್ಯಾಕರು, ತಾವು ರಾಷ್ಟ್ರಹಿತ ಸಾಧಿಸುವ ರಾಷ್ಟ್ರೀಯ ಪಕ್ಷದವರೆಂದು ರಾಷ್ಟ್ರೀಯ ಧೋರಣೆ ಎಂಬುದನ್ನೆ ಅನುಸರಿಸಿರುವರು. ಅಲ್ಪ ಸಂಖ್ಯಾಕರಾದರೂ ಈ ರಾಷ್ಟ್ರಕ್ಕೆ ಸೇರಿದವರು ಹೊರತು, ಅವರು ಮತ್ತೊಂದು ಪ್ರತ್ಯೇಕ ಭೂಭಾಗಕ್ಕೆ ಸೇರಿದವರೇನೂ ಅಲ್ಲವಷ್ಟೆ. ಅವರು, ಈ ರಾಷ್ಟ್ರೀಯ ಧೋರಣೆ ಎಂದು ರಾಷ್ಟ್ರೀಯ ಪಕ್ಷದವರು ಅನುಸರಿಸುವ ಯಾವ ಕಾರ್ಯಕ್ರಮವಿದೆಯೋ ಅದು ದೇಶದ ಎಂದರೆ ಇಡೀ ಜನಾಂಗದ ಹಿತಕ್ಕಾಗಿಯೇ ಸಾಧನೆಯಲ್ಲೂ ಸಿದ್ಧಿಯಲ್ಲೂ ಪರಿಣಮಿಸುವಂತೆ ಏಕೆ ಒತ್ತಾಯ ಪಡಿಸಬಾರದು? ಅಲ್ಪ ಸಂಖ್ಯಾಕರ ಸಲುವಾಗಿ ಈಗ ತೊಡಿಸಿರುವ ರಕ್ಷಾಕವಚಗಳನ್ನು, ಇವು ಚಿರಗಾಲಕ್ಕೂ ಎಂಬಂತೆ, ಶಾಸನಪೂರ್ವಕ ಇವರಿಗೇ ಇರುವಂತೆ ಆಗಬಹುದಾದರೂ, ಇವನ್ನು ಮೆಲ್ಲಮೆಲ್ಲನೆ ಸಡಿಲಿಸಿ, ಕಿತ್ತೊಗೆಯುವ ಹಾಗೆ ಅಲ್ಪ ಸಂಖ್ಯಾಕರೂ ಬಹು ಸಂಖ್ಯಾಕರೂ ಒಂದಾಗಿ ಪ್ರಯತ್ನಿಸಬಾರದೇಕೆ? ಈ ಪರಿಸ್ಥಿತಿಯು ಉಂಟಾಗಬೇಕಾದರೆ, ಇತ್ತಂಡದಲ್ಲೂ ಪರಸ್ಪರವಾದ ವಿಶ್ವಾಸವೂ ಸಹಾನುಭೂತಿಯೂ ಭೂತದಯೆಯೂ ಇರಲೇ ಬೇಕು. "ಒಬ್ಬರು ಮತ್ತೊಬ್ಬರಿಗೆ ಅನುಕೂಲವಾಗಿ ನಡೆಯಲು ಕಲಿತುಕೊಳ್ಳುವಷ್ಟಕ್ಕೆ ಸಹಕಾರವು ಹೆಚ್ಚುವಷ್ಟಕ್ಕೆ, ಈ ರಕ್ಷಾಕವಚಗಳು ಸಡಿಲಾಗಿ ಕಳಚಿ ಬಿದ್ದು ಹೋಗುವುವು' ಎಂದು ಶ್ರೀ ರಾಜರು ಹೇಳುವುದರಲ್ಲಿ ವಿವೇಕವುಂಟು. ಇದಕ್ಕಾಗಿ ಮೈನಾರಿಟಿಗಳೊಡನೆ ಒಪ್ಪಂದದಿಂದ ಚಿಕ್ಕಾಸಿನ ಉಪಕಾರವಾಗಲಾರದು, ಸಹಕಾರವಾಗಲಿ ಮೈತ್ರಿಯಾಗಲಿ ಬೆಳೆಯಲಾರದ ಮಾತ್ರವಲ್ಲ ಇದ್ದ ರಕ್ಷಾಕವಚಗಳಿಗೆ ಇದು ವಜ್ರಲೇಪವನ್ನೇ ಬಳಿಯುವುದು.

ಸನಾತನಿಗಳಿಗೂ ಸುಧಾರಕರಿಗೂ ವಿರುದ್ಧ ಭಾವನೆಗಳ ದೆಸೆಯಿಂದಾಗಿ, ವಾದ ಕಲಹಗಳ ಹೆಚ್ಚಬಹುದು, ದ್ವೇಷ ಕ್ರೋಧಾದಿಗಳು ಅಧಿಕವಾಗಬಹುದು. ಆದರೆ, ಇವರಿಬ್ಬರೊಳಗೆ ಒಂದು ಬಗೆಯ ತಿಳುವಳಿಕೆಯುಂಟಾಗಿ, ಕಾರ್ಯಕ್ಷೇತ್ರದಲ್ಲಿ ಇಬ್ಬರೂ ಕಲೆತು ಒಂದೇ ಧ್ಯೇಯದಿಂದ ದುಡಿದರೇ ಸರ್ವರಿಗೂ ಕ್ಷೇಮವೆಂದು ಒಪ್ಪಂದವಾಗಲೂ, ಈ ದ್ವೇಷ ಕ್ರೋಧಾದಿಗಳಿಂದಾಗುವ ಸಂಘರ್ಷಣಗಳೇ, ಮುಂದೆ ಇಬ್ಬರಲ್ಲೂ ಅರಿವು ಉಂಟಾದಾಗ, ಕಾರಣವಾಗದೆ ಇರವು.

ನಿನ್ನೆಯ ತನಕ 'ಹೀಗೆ' ಇರುತ್ತಿದ್ದೆವು ಎಂಬುದನ್ನು ಮರೆತು, ನಾಳೆಯಿಂದ 'ಹೀಗೆ ಇರುವುದ ಅಗತ್ಯ'ವೆಂದು ಇತ್ತಂಡಗಳೂ ತಿಳಿದುಕೊಳ್ಳುವ ವರೆಗೆ ರಕ್ಷಾಕವಚಗಳು ಅಗತ್ಯವಾಗುವುವು. ರಾಜಕೀಯ ಚಳವಳಿಯೆಂಬುದೇ ನಮ್ಮ ಜೀವನದ ಆದರ್ಶವಾಗಿಲ್ಲ, ಆದರ್ಶವೇ ಬೇರೆ, ಅದನ್ನು ಮುಟ್ಟುವ ಉಪಾಯ ಮಾತ್ರ ಇದು. ದುರ್ಬಲರ ದೌರ್ಬಲ್ಯವೇ ಸುಬಲರ ಮುನ್ನಡಿಗೆ ಮುಖ್ಯವಾದ ಆತಂಕವು. ದುರ್ಬಲರೆಲ್ಲರೂ ಒಂದಾಗಿ ಸಬಲರನ್ನು ಆತಂಕಿಸುವುದರಿಂದ, ಇವೆರಡು ಪಂಗಡಗಳೂ ಮುಂದರಿಯದೆ ಹಿಂಜರಿದೋ ಇದ್ದಲ್ಲಿಯೋ ಬಿದ್ದುಕೊಂಡೋ ಶತಮಾನಗಳನ್ನು ಕಳೆಯಬೇಕಾಗವುದು. ಆಯಾ ಸಂದರ್ಭದಲ್ಲಿ ಪ್ರತಿ ಸಮಾಜವೂ ತನ್ನ ಪ್ರತಿನಿಧಿಗಳ ಮೂಲಕ ತನ್ನ ಮನದ ಆಕಾಂಕ್ಷೆಯನ್ನು ಜನತೆಯ ಮುಂದೆ ಇಡಲೇ ಬೇಕಾಗಿರುವುದು ಅವರ ಕರ್ತವ್ಯ ಹಾಗೆಂದು, ಯುಗಾಂತ್ಯದ ವರೆಗೂ ತನ್ನ ಗಂಟೆಯನ್ನೆ ಬಾರಿಸಿ, ಅದರ ಸ್ವರವೇ ಜೀವಕೋಟಿಯನ್ನು ಶಿವುಡಾಗಿಸಲೆನ್ನುವ ಮೂಢತ್ವವು ಯಾವುದೊಂದು ದೇಶದ ರಾಷ್ಟ್ರೀಯ ಭಾವಕ್ಕಾಗಲಿ ನಾಗರಿಕ ಭಾವಕ್ಕಾಗಲಿ ಯಾವ ಶ್ರೇಯಸ್ಸನ್ನೂ ತರಲಾರದು.

ಭೋರರ ಭಾಷಣ.

ಇಂಡಿಯಾ ಸರಕಾರದ ವಾಣಿಜ್ಯ ಶಾಖಾ ಮಂತ್ರಿಗಳಾಗಿದ್ದ ಸರ್ ಜೋಸೆಫ್ ಭೋರರವರು, ಜಿನೇವಾದಲ್ಲಿ ಕಳೆದ ವಾರ ಮಾಡಿದ ಭಾಷಣದಿಂದ ಸರಕಾರಪಕ್ಷವೇ ಚಕಿತವಾಗಿದೆ! "ಭಾರತವರ್ಷದ ಇತರ ಪ್ರತಿನಿಧಿಗಳ ಭಾಷಣಗಳಿಂದ ಕೆಲವು ತಪ್ಪು ಅಭಿಪ್ರಾಯಗಳನ್ನು ಈ ಸಭೆಯವರು ಮಾಡಿಕೊಳ್ಳಕೂಡದಾಗಿ" ಇವರು ಮುಂದಾಗಿ ಸೂಚಿಸಿಕೊಂಡು, ಸರಿಯಾದ ಅಭಿಪ್ರಾಯಗಳೊಡನೆ ಕೆಲವು ತಪ್ಪು ಅಭಿಪ್ರಾಯಗಳನ್ನೇ ಸಭೆಯ ಮುಂದಿಟ್ಟುಕೊಂಡರು' ನಮ್ಮಲ್ಲಿನ ಕೈಗಾರಿಕೆಗೆ, ಅನ್ಯ ದೇಶೀಯರ ಕೈಗಾರಿಕೆಯಿಂದ, ಅಲ್ಲಿನ ಸರಕು ಇಲ್ಲಿ ಸುಲಭಬೆಲೆಗೆ ಸುರಿದು ರಾಶಿಯಾಗಿ ಹಾನಿಯುಂಟಾಗುವ ವಿದ್ಯಮಾನಗಳಾವುವೂ ಇಲ್ಲವೇ ಇಲ್ಲ ಅಂತೆ. ಎಲ್ಲಿಂದ ಮೂಟೆಗಟ್ಟಲೆಯಾಗಿ ನಮ್ಮ ಬಂದರುಗಳಲ್ಲಿ ಜಮೆಯಾಗುವುದೆಂಬುದನ್ನು ನಾವು ಹೇಳುವ ಅಗತ್ಯವೇ ಇಲ್ಲದಂತೆ, ಸಕ್ಕರೆ, ಅಕ್ಕಿ, ಗೋಧಿ, ಮೊದಲಾದುವನ್ನು ಕುರಿತಾಗಿ ಸರಕಾರಕ್ಕೆ ತಲಪಿದ ಅತಿ ದೀರ್ಘವೂ ಹೇರಳವೂ ಆಗಿರುವ ಹೇಳಿಕೆಗಳೂ ಬಿನ್ನವಗಳೂ ಸಾಕ್ಷಿಯಾಗಿಲ್ಲವೆ? ಜಗತ್ತಿನ ಯಾವ ಪ್ರಾಂತ್ಯದಲ್ಲಾದರೂ ಬೇಡವಾಗಿರುವ ಮತ್ತು ಅಲ್ಲಿನ ನಾಣ್ಯದ ಬೆಲೆ ಇಳಿದಿರುವ ಕಾರಣದಿಂದ ಅವರವರ ಹಡಗುಗಳಲ್ಲಿ ಇತ್ತ ಸಾಗಿಸಲಾಗುವ ಸರಕು ಮತ್ತೆಲ್ಲಿಗೂ ಹೋಗದೆ, ಯಾವ ಆಕರ್ಷಣ ಶಕ್ತಿಯ ದೆಸೆಯಿಂದಾಗಿ ಇಲ್ಲೇ ಬಂದು ಬೆಟ್ಟವಾಗಿ ಬಿದ್ದಿರುವುದು ಎಂಬ ವಿಷಯವನ್ನು ಮಂತ್ರಿಗಳೇ ತಿಳಿಯಹೇಳಬಾರದೆ?

ನಮ್ಮ ರೈತರಿಗೆ—

ಕೈಗಾರಿಕೆಯ ಉತ್ಪನ್ನಗಳಲ್ಲಿ ಬೇಕಾದದೆಲ್ಲವೂ ಅತಿ ಸುಲಭ ಕ್ರಯಕ್ಕೆ ಸಿಗುವ ಹಾಗೆ ವಿದ್ಯಮಾನಗಳನ್ನು ಹೂಡಿ ತಂದಾಗುತ್ತಿದೆಯಂತೆ. ಇದೂ ಸರ್ ಭೋರರು ಜಿನೇವಾಸಭೆಗೆ ಮಾಡಿರುವ ಭಾಷಣದಲ್ಲಿನ ಮಾತು. ಸರ್ ಭೋರರು ಇಷ್ಟು ಸುಲಭವಾಗಿ ಸರಬರಾಜು ಮಾಡುವ ಉದ್ಯೋಗದಲ್ಲಿದ್ದರೆಂದು ಈಗ ತಾನೆ ಗೊತ್ತು! ಸರಕಾರದ ಕಂದಾಯವು ಹೆಚ್ಚುವ ಹಾಗೆ ಬೇರೆ ಸದುಪಾಯವಿಲ್ಲದೆ, ಹೊರದೇಶಗಳಿಂದ ಬರುವ ಸಾಮಾನಿನ ಮೇಲೆ ಸುಂಕ ಹೇರಿಸಿದ ಮಾತ್ರಕ್ಕೆ, ಎಂದರೆ ಅನ್ಯದೇಶದ ಒಡವೆಗಳ ಬೆಲೆ ಅಷ್ಟು ಮಟ್ಟಿಗೆ ಸುಂಕದ ದೆಸೆಯಿಂದ ಏರುವಂತಾದ ಮಾತ್ರಕ್ಕೆ, ಅಂತಹ ಸಾಮಾನು ದೇಶೀಯರಿಗೆ (ರೈತರಿಗೆ) ಅತಿ ಸುಲಭ ಬೆಲೆಗೆ ಸಿಗುವಂತೆ ಸರಕಾರವು (ವಾಣಿಜ್ಯ ಇಲಾಖಾಮಂತ್ರಿಗಳ ಅನುಮೋದನೆಯಿಂದ) ಉಪಕಾರಮಾಡಿದಂತಾಯಿತೆ? ಕಾಫಿ ಕುಡಿದರೆ ಹಾನಿಯೆಂದು, ಪರಪೂರಿನ ಹಾಲಿನ ಮೇಲೆ ಸುಂಕ ಹೆಚ್ಚಿಸಿದರೆ, ಊರಲ್ಲಿ ದೊರೆವ ಹಾಲಿನ ಬೆಲೆಯನ್ನೂ ಊರಗೊಲ್ಲರು ಹೆಚ್ಚಿಸುವರು, ಹೋಟೆಲ್ಲಿ ಕಾಫಿ ನೀರುನೀರಾಗಿಯೇ ಹಿಂದಣ ಅಥವಾ ಇನ್ನೂ ಹೆಚ್ಚಿನ ಬೆಲೆಗೆ ಮಾತ್ರ ಸಿಗುವುದು. ಈ ಚಿಕ್ಕ ಸಾಮ್ಯದಿಂದ, ಕೀರ ನಿರಕ್ಷರರೂ ಏನನ್ನು ಅರಿತುಕೊಳ್ಳಬಹುದು? ಜಿನೇವಾದಲ್ಲಿ ಸೇರಿದ ಸಭೆಯಲ್ಲಿ ಭಾರತವರ್ಷದಿಂದ ತೆರಳಿದ ಮಿಕ್ಕ ಪ್ರತಿನಿಧಿಗಳು ಹೇಳಿರುವ ಅಭಿಪ್ರಾಯಗಳಲ್ಲಿರುವ ತಪ್ಪು ತಿದ್ದಲು, ಇಷ್ಟು ತಪ್ಪಾಗಿ ಹೇಳಬೇಕಾಯಿತೆ? ತಪ್ಪು, ತಪ್ಪು.

ಮತ್ತೂ ಒಂದು ಭಾಷಣ.

ಕುಂಭಕೋಣ ನಗರದಲ್ಲಿ ಕಾಂಗ್ರೆಸ್ ಸದಸ್ಯರ ಒಂದು ಸಭೆ ಸೇರಿದಾಗ,–'ಸ್ವರಾಜ್ಯ ಸಿಗಲಿ. ಆಗ ಖಾದಿಯನ್ನು ಯಾರು ಉಡುವುದಿಲ್ಲವೊ ಅದು ಬಲು ದೊರಗಾಗಿದೆ ಎಂದು ಆಕ್ಷೇಪವೆತ್ತಿ ಗೊಣಗುವರೋ ಅಂತಹರು ಗೋಣೀಚೀಲಗಳನ್ನು ಉಡಬೇಕೆಂದೂ ಒಂದು ಶಾಸನವು ಉಂಟಾಗಬಹುದು' ಎಂದೂ ಒಬ್ಬ 'ಲೋಕನಾಯಕರು' ಸ್ಫೂರ್ತಿದಾಯಕವಾದ ಭಾಷಣ ಮಾಡಿದರೆಂದು ಪ್ರಕಟವಾಗಿದೆ. ಈ ಶಾಸನಕ್ಕೆ ಒಳಪಟ್ಟು ಗೋಣೀಚೀಲ ಧರಿಸುವ ದಂಡನೆಗೆ ಗುರಿಯಾಗುವವರಿಂದ, ಈಗ ಖಾದಿ ಧರಿಸುವವರು ಮಾಡುವ ಉಪಕಾರಕ್ಕಿಂತ ಅಧಿಕವಾದ ಉಪಕಾರವು ದೇಶಕ್ಕೆ ಉಂಟಾಗದೆ ಇರದು. ಅವರೀಗ ಅಂದು ಪುಣ್ಯಜೀವಿಗಳಾಗುವರು. ಮಣಕ್ಕೆ ೬ ರೂಪಾಯಿ ಬೆಲೆಯಿದ್ದ ಗೋಣೀನಾರು ಈಗ ಒಂದೂವರೆ ರೂಪಾಯಿಗೂ ಇಳಿದು ಬಂಗಾಳ (ಅದೊಂದೇ ಪ್ರಾಂತ್ಯದಲ್ಲಿ ಇಡೀ ಭೂಲೋಕಕ್ಕೆ ನಾರನ್ನೊದಗಿಸುವ ಭಾಗ್ಯವಿದೆ)ದ ಬೇಸಾಯಗಳು ಬರಗಾಲದ ಸಂಕಷ್ಟಗಳನ್ನೆ ಅನುಭವಿಸುತ್ತಿದ್ದಾರೆ. ಖಾದಿ ದೊರಗೆನ್ನುವವರು ಗೋಣೀಧರಿಸುವಾಗ ನಾರಿನ ಬೆಲೆ ಪವನಿನ ಬೆಲೆಯಷ್ಟಾಗಿ, ಬಂಗಾಳದ ಮಣ್ಣೆಲ್ಲ ಹೊನ್ನಾಗಬಹುದಲ್ಲವೆ? ಆದರೂ ಒಂದು ಸಂದೇಹವಿದೆ. ಖಾದಿಯನ್ನು ಉಡದವರಿಗೆ ಈ ದಂಡನೆಯೂ ಇಲ್ಲ, ಪುಣ್ಯವೂ ಇಲ್ಲ, ಖಾದಿಯನ್ನು 'ದೊರಗು' ಎನ್ನುವವರಿಗೆ ಮಾತ್ರ. ಆದುದರಿಂದ ಜಾಣರು ಗಿರಣಿಗಳಲ್ಲಾಗುವ ನುಣುಪಾದ ಹತ್ತೀಬಟ್ಟೆಯನ್ನು ಖಾದಿಯಾಗಿ ಧರಿಸಿ, ಅದು ಎಂದೂ ದೊರಗಲ್ಲ ಎಂದರೆ, ನಮ್ಮ 'ಲೋಕನಾಯಕ' ಭಾಷಣಕರ್ತರು ಅವರನ್ನು ಗೋಣೀಚೀಲದಲ್ಲಿ ಸುತ್ತುವ ದಂಡನೆಗೆ ಒಳಪಡಿಸಲಾರರಲ್ಲ'

ಶಿಕ್ಷಣ ಪ್ರಚಾರಕ್ಕಾಗಿ ಹೊಸ ಬೋರ್ಡ್.

ಸೆಂಟ್ರಲ್ ಎಡ್ವೈಸರಿ ಬೋರ್ಡ್ ಒಫ್ ಎಡ್ಯುಕೇಶನ್ ಎಂಬ ಗಂಭೀರವಾದ ಹೆಸರಿನ ಒಂದು ಕೇಂದ್ರ ಸಮಿತಿಯನ್ನು ಸರಕಾರವು ನೇಮಿಸಿರುವುದು. ಇದರಲ್ಲಿ ವಿದ್ಯಾಂಗದ ಮಂತ್ರಿ (ಮೆಂಬರರು) ಯವರು ಅಧ್ಯಕ್ಷರು. ಎಡ್ಯುಕೇಶನಲ್ ಕಮಿಶನರರು, ಒಬ್ಬ ಮಹಿಳೆ ಕೂಡಿ ಮೂರು ಸರಕಾರವೇ ನೇಮಿಸುವ ಸದಸ್ಯರು, ಕೌನ್ಸಿಲ್ ಒಫ್ ಸ್ಟೇಟಿನಿಂದ ನೇಮಕ ಹೊಂದುವ ಒಬ್ಬರು, ಎಸೆಂಬ್ಲಿಯಿಂದ ಇಬ್ಬರು, ಇಂಟರ್ ಯೂನಿವರ್ಸಿಟಿ ಬೋರ್ಡಿನಿಂದ ಮೂವರು, ಪ್ರತಿಯೊಂದು ಪ್ರಾಂತಿಕ ಸರಕಾರದ ವಿದ್ಯಾ ಇಲಾಖಾ ಮಂತ್ರಿಗಳು ಅಥವಾ ಡೈರೆಕ್ಟರರು,—ಇಷ್ಟೂ ಸೇರಿ ಈ ಸಮಿತಿ. ಈ ಸಮಿತಿಯು ಕೊಡಬಹುದಾದ ಸೂಚನೆಗಳನ್ನು ಸರಕಾರವು ಅಂಗೀಕರಿಸಬೇಕೆಂಬುದೇನೂ ಇಲ್ಲ. ಆದರೂ ಇಷ್ಟು ಅಧಿಕಾರದಿಂದ ಅನುಭವದಿಂದ ವಿಚಕ್ಷಣರೇ ಅಭಿಪ್ರಾಯ ಹೇಳುವಾಗ ಸರಕಾರಗಳು ಕಿವಿಗೊಡದೆ ಇರಲಾರವೆಂದೂ ನಂಬಲಾಗಿದೆ. ೧೫೦ ವರ್ಷಗಳಿಂ ನಮ್ಮ ದೇಶದಲ್ಲಿ ನಡೆದ ಶಿಕ್ಷಣಪ್ರಗತಿಯು ೧೫ ವರ್ಷಗಳಲ್ಲಿ ಇತರ (ರಷ್ಯ, ಜಾಪಾನ್, ಜರ್ಮನಿ) ದೇಶಗಳಲ್ಲಿ ನಡೆದ ಪ್ರಗತಿಯೊಡನೆ ಹೋಲಿಸಿ ತಪ್ಪಾರದು! ಎಂಬ ಪ್ರಶ್ನೆಗೂ, 'ಹೇಗೆ ತಿದ್ದುವುದು?' ಎಂಬ ಪ್ರಶ್ನೆಗೂ ಈ ಸಮಿತಿಯು ಸರಿಯಾದ ವಿಚಾರದಿಂದ ಉತ್ತರ ಕೊಡುವಂತಾದರೆ, ಸಮಿತಿಯು ಇತರರಿಗೆ ಎಂದೂ ದೊರೆಯಲಾರದ ಕೀರ್ತಿಯನ್ನು ಸಂಪಾದಿಸುವುದರಲ್ಲಿ ಸಂದೇಹವಿಲ್ಲ.

ಮಂಗಳೂರು.

ಇದೇ ವಾರದಿಂದ ಸ್ಥಳೀಯ ಕೆನರಾ ಹೈಸ್ಕೂಲ್, ವನಿತಾ ಸಭಾ ಮತ್ತು ಕಾಂಗ್ರೆಸ್ ಹೌಸಿನಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಹಿಂದೀ ವರ್ಗಗಳು ಪ್ರಾರಂಭವಾಗುವುವು. ಕೆನರಾ ಹೈಸ್ಕೂಲಿನಲ್ಲಿ ಪ್ರಥಮ ಮತ್ತು ಮಧ್ಯಮ ವರ್ಗಗಳು ನಡೆಸಲ್ಪಡುವುವು.

ಕರ್ನಾಟಕ ಪ್ರಾಂತಿಕ ಪರಿಷತ್ತಿನ ಸ್ವಾಗತ ಸಮಿತಿಯ ಮುಂದರಿಸಿದ ಸಭೆಯು ಇದೇ ತಿಂಗಳ ತಾ ೨೩ನೇ ಶನಿವಾರ ಸಂಜೆ ೫ ಘಂಟೆಗೆ ಪುನಃ ಮಂಗಳೂರು ಕಾಂಗ್ರೆಸ್ ಹೌಸಿನಲ್ಲಿ ಕೂಡಲಿದೆ. ಸ್ವಾಗತ ಸಮಿತಿಯ ಎಲ್ಲಾ ಸದಸ್ಯರೂ ಬರಬೇಕಾಗಿ ಪ್ರಧಾನ ಕಾರ್ಯದರ್ಶಿಯವರು ಅಪೇಕ್ಷಿಸುತ್ತಾರೆ.

ದಕ್ಷಿಣ ಕನ್ನಡ ಜಿಲ್ಲಾ ಸ್ವದೇಶಿ ಪ್ರಚಾರಕ ಸಭೆಯ ಒಂದು ಸಭೆಯು ತಾ. ೨೫–೬–೪೬ನೇ ಮಂಗಳವಾರ ಸಂಜೆ ೫॥ಕ್ಕೆ ಮಂಗಳೂರು "ಕಾಂಗ್ರೆಸ್ ಹೌಸ್"ನಲ್ಲಿ ಕೂಡಲಿದೆ. ಕಾರ್ಯನಿರ್ವಾಹಕ ಸಮಿತಿಯ ಸದಸ್ಯರ ಚುನಾವಣೆಯೂ ಈ ಸಭೆಯಲ್ಲಿ ನಡೆಯಲಿದೆ. ಎಲ್ಲಾ ಸದಸ್ಯರುಗಳೂ ಸಭೆಗೆ ಬರಬೇಕಾಗಿ ಕಾರ್ಯದರ್ಶಿಯವರು ಅಪೇಕ್ಷಿಸುತ್ತಾರೆ

ಶ್ರೀಯುತ ಮಾಂಗಾಳ ಮಂಜುನಾಥ ನಾಯ್ಕರೂ ಅವರ ಸಹೋದರರೂ, ಅವರ ಸ್ವರ್ಗಸ್ಥರಾದ ತೀರ್ಥರೂಪರ ಹೆಸರಲ್ಲಿ ರೂ ೨೦೦/– ದಾನವಿತ್ತಿರುವರು ಮತ್ತು ಅವರ ಸ್ಮರಣಾರ್ಥವಾಗಿ ಹತ್ತು ವರ್ಷಗಳ ತನಕ ಪ್ರತಿ ವರ್ಷ ಅಕ್ಕಿ ಮುಡಿ ಹತ್ತರಂತೆ ಕೊಟ್ಟುಕೊಂಡುಬರುವುದಾಗಿ ಭಾಷೆ ಕೊಟ್ಟಿರುವರು. ಆ ಸ್ಥಿತಿ ರೂ ೧೧೦ನ್ನು ಸಂಘವು ನಿಶ್ಚಯಿಸಬಹುದಾದ ಯಾವುದಾದರೊಂದು ಬೇಂಕಿನಲ್ಲಿಟ್ಟು, (ಶ್ರೀ ವೆಂಕಟ್ರಮಣ ಸ್ವಾಮಿ ಹಾಯರ್ ಎಲಿಮೆಂಟರಿ ಶಾಲೆ ಕಟ್ಟಡದ)ಯಲ್ಲಿ ಕಲಿಯುವ ಹರಿಜನ ಮಕ್ಕಳ ಅಭಿವೃದ್ಧಿಗಾಗಿ ಸ್ವರ್ಗಸ್ಥರ ಹೆಸರಲ್ಲಿ ಕೊಡಬೇಕಾಗಿಯೂ, ಅಕ್ಕಿಯನ್ನು ಜಿಲ್ಲೆಯಲ್ಲಿರುವ ಹರಿಜನರ ಉದ್ಧಾರಕ್ಕಾಗಿ ಉಪಯೋಗಿಸಬೇಕಾಗಿಯೂ ಕೇಳಿಕೊಂಡಿರುವರು. ಅಂತಹ ಶ್ರೀಯುತರುಗಳ ಈ ಉದಾರದಾನವು ಸ್ತುತ್ಯವೇ ಸರಿ. ಅದಕ್ಕಾಗಿ ಅವರನ್ನು ಸಂಘದ ಕಡೆಯಿಂದ ಅಭಿನಂದಿಸುತ್ತೇನೆ ಎಂದು ಎಸ್ ಎಸ್ ಕಿಲ್ಲೆಯವರು ತಿಳಿಸುತ್ತಾರೆ.

ತಾ ೯–೬–೪೬ನೇ ಆದಿತ್ಯವಾರ ೫ ಘಂಟೆಗೆ ಮಂಗಳೂರಿನಲ್ಲಿರುವ ಡಿ. ಕೆ. ಹರಿಜನ ಹೋಂನಲ್ಲಿ ಜಿಲ್ಲಾ ಹರಿಜನ ಸೇವಾ ಸಂಘವು ಹಿಂದೆ ಪ್ರಕಟಿಸಿದಂತೆಯೇ ಶ್ರೀಯುತ ಎಂ ಆರ್ ಪೂಂಜರ ಅಧ್ಯಕ್ಷತೆಯಲ್ಲಿ ಕೂಡಿತ್ತು.

ದಿವಂಗತ ನಾಗಪ್ಪ ನಾಯ್ಕರ ಹೆಸರಲ್ಲಿ ಅವರ ಮಕ್ಕಳು ರೂ. ೧೦೦ ಸಂಘಕ್ಕೆ ಕೊಟ್ಟು ೧೦ ವರ್ಷಗಳ ತನಕ ವರ್ಷಂಪ್ರತಿ ೧೦ ಮುಡಿ ಅಕ್ಕಿಯಂತೆ ಕೊಡುವುದಾಗಿ ವಾಗ್ದಾನ ಮಾಡಿರುವ ಉಪಕಾರಸ್ಮರಣೆಯನ್ನು ಮಾಡಿ, ಸದ್ರಿ ರೂ ೧೧೦ನ್ನು ಅಧ್ಯಕ್ಷರು ಮೂಲ್ಕಿ ಬೇಂಕಿನಲ್ಲಿ ಇಟ್ಟದ್ದು ಅಂಗೀಕೃತವಾಯಿತು.

ಕಸಬೇಯಿಯುವವರ ಮತ್ತು ತೋಟಿಗಳ ಏಳಿಗೆಗಾಗಿ ಕೆಲಸ ಮಾಡುವಂತೆ ಸ್ಥಳೀಕ ಮುನಿಸಿಪಾಲಿಟಿ ಮತ್ತು ಬೋರ್ಡುಗಳಿಗೆ ಕೇಂದ್ರ ಸರಕಾರದಿಂದ ಬಂದಿರುವ ವಿನಂತಿಪತ್ರವನ್ನು ತಿಳಿಸುವ ನಿರ್ಧಾರವಾಯಿತು

ಸ್ಥಳೀಕ ಮುನಿಸಿಪಾಲಿಟಿ ಮತ್ತು ಡಿ ಬೋರ್ಡುಗಳು ಎಲ್ಲಾ ಸಾರ್ವಜನಿಕ ಸಂಸ್ಥೆ, ಬಾವಿ, ಧರ್ಮಶಾಲೆ ನಾಟಕಾದಿಗಳ ಬಳಿಯಲ್ಲಿ ಎಲ್ಲರಿಗೂ ಪ್ರವೇಶವಿದೆಯೆಂಬ ಬೋರ್ಡುಗಳನ್ನು ಹಾಕಿಸುವಂತೆ ಕೇಳಿಕೊಳ್ಳಬೇಕೆಂದು ನಿರ್ಣಯವಾಯಿತು

ಕೆನರಾ ಹೈಸ್ಕೂಲು ಮತ್ತು ಗಣಪತಿ ಹೈಸ್ಕೂಲುಗಳಿಗೆ ಹೋಗುವ ಇಬ್ಬರು ಹುಡುಗರಿಗೆ ಸಹಾಯ ಕೊಡುವುದಾಗಿಯೂ ನಿಶ್ಚಯವಾಯಿತು.

ಕಾರ್ಯದರ್ಶಿಯವರು ಮಂಗಳೂರಿನಲ್ಲಿ ಇರುವಾಗ ಬೆಳಿಗ್ಗೆ ೯ ಗಂಟೆಯಿಂದ ೧೧ ಗಂಟೆಯ ತನಕ ಆಫೀಸಿನಲ್ಲಿಯೇ ಇರಬೇಕೆಂದು ತಿಳಿಸಲಾಯಿತು

ವಿದ್ಯಾರ್ಥಿಭವನವನ್ನು ತೆರೆಯುವ ವಿಷಯದಲ್ಲಿ ಸ್ಥಳೀಕ ಪತ್ರಿಕೆಗಳಲ್ಲೆಲ್ಲಾ ಪ್ರಕಟಿಸಿ ಮತ್ತೆ ಕೂಡಾ ಯಾರೂ ಮುಂದೆ ಬಾರದೆ ಹೋದಲ್ಲಿ, ಮುಲ್ಕಿಯಲ್ಲೇ ತೆರೆಯುವುದರ ಕುರಿತು ಆಲೋಚಿಸುವುದೆಂದಾಯಿತು.

ಮುಲ್ಕಿ ಟೌನ್ ಕೋ ಒಪರೇಟಿವ್ ಬೇಂಕಿನವರು ಹರಿಜನ ಮೆಂಬರರನ್ನು ತೆಗೆದುಹಾಕಿದುದು ಸರಿಯಲ್ಲವೆಂದು ಬಲವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಆ ವಿಷಯದಲ್ಲಿ ಅವರಿಗೂ ಮೇಲಧಿಕಾರಿಗಳಿಗೂ ಬರೆಯಬೇಕೆಂದಾಯಿತು.

ಟೌನ್ ಹೋಲಿನ ಕುರಿತು ತಾ ೧೪ರ ದರ್ಬಾರ್ ಸಭೆಯ ಚರ್ಚೆಯಲ್ಲಿ ಆ ವಂತಿಗೆಯ ರೂ. ೮೬ ಸಾವಿರವನ್ನು ಹೇಗೆ ಉಪಯೋಗಿಸುವುದೆಂದು ಕಲೆಕ್ಟರರು, ಕಾನೂನಿನ ಪ್ರಕಾರ ಶ್ರೀ ಎಂ. ಎಸ್. ಪ್ರಭುಗಳ ಅಭಿಪ್ರಾಯವನ್ನು ಕೇಳಿದರು, ಶ್ರೀ ವಿಟ್ಠಲ ಶೆಟ್ಟರು ಈ ಹಣವನ್ನು ನಗರ ಸಭಾಮಂದಿರಕ್ಕೇ ಉಪಯೋಗಿಸಿ ನಗರ ಸಭೆಯವರು ಕಟ್ಟಡಕ್ಕಾಗಿ ಕೊಡುವ ಸುಮಾರು ೧೦೦೦೦ ರೂಪಾಯಿಗಳನ್ನೂ ಸೇರಿಸಿ, ಆ ಮೇಲೆ ಇನ್ನಷ್ಟು ಕೂಡಿಸಿ, ನಗರ ಸಭಾ ಭವನ, ನಗರಸಭೆಯ ಕಛೇರಿಗಳನ್ನೂ ನಡೆಸುವ ಒಂದು ದೊಡ್ಡ ಕಟ್ಟಡವನ್ನು ಕಟ್ಟಿಸುವುದು ಪ್ರಶಸ್ತ ಎಂದರು ಶ್ರೀ ಜೆ. ಎ ಸಾಲ್ಡಾನರು ಸಮರ್ಥಿಸಿದರು, ಹಿಂದೆ ನಗರಸಭೆ, ಸರಿಯಾದ ಯೋಜನೆ ತಯಾರಿಸದ ಕಾರಣ, ಸರಕಾರವು ಈ ಮುಂದಿನ ರಚನೆಗೆ ಪ್ರೋತ್ಸಾಹ ಕೊಡಲಿಲ್ಲ, ಮುಂದೆ ಹಾಗಾಗಬಾರದೆಂದೂ ಹೇಳಿದರು, ಶ್ರೀಗಳಾದ ಮಹಾಬಲ ಹೆಗ್ಡೆ ಮತ್ತು ರಂಗನಾಥ ಪೂಂಜರದೂ ಇದೇ ಅಭಿಪ್ರಾಯ. ಕೊನೆಗೆ ಈ ಕುರಿತು ಕಲೆಕ್ಟರರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯು ನೇಮಕವಾಯಿತು

ಮಂಗಳೂರಿನ ನಿವಾಸಿಗಳಾದ ಶ್ರೀಮತಿ ಪದ್ಮಾವತಿ ವಿಠೋಬರಾವ್ ಇವರು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾ ಮದ್ರಾಸು, ಇದರ ಕಳೆದ ರಾಷ್ಟ್ರ ಭಾಷಾ ವಿಶಾರದ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವರು

ಈ ಸಲದ ಬ್ರಿಟಿಷ್ ಸ್ಪೀಡ್ ಸ್ಪರ್ಧೆಯಲ್ಲಿ ಮಂಗಳೂರಿನ ಮಿಸ್ ಲೂಸಿ ಕ್ರೀಸ್ತ ಇವರಿಗೆ ನೂರು ಪೌಂಡುಗಳು ದೊರಕಿವೆಯೆಂದು ತಿಳಿದುಬರುತ್ತದೆ.

ಹೊಸ ಸುಧಾರಣೆಗಳ ಮೇರೆಗೆ ಹಿಟ್ಟರ ಪಟ್ಟಿಯನ್ನು ತಯಾರಿಸಲು ಬೆಳ್ತಂಗಡಿ ಡಿ ತಹಶೀಲ್ದಾರರಾದ ಶ್ರೀ ಬಿ ಗಣೇಶ ಬಿ ಎ, ಇವರು ನೇಮಿಸಲ್ಪಟ್ಟಿರುವರು. ಇವರ ಸ್ಥಾನಕ್ಕೆ ಉಗ್ರಾಣ ಆಫೀಸಿನ ಹೆಡ್ ಕ್ಲಾರ್ಕ್ ಶ್ರೀ ಪಿ ಎಸ್ ತಿಮ್ಮಪ್ಪ ಶೆಟ್ಟಿ ಬಿ ಎ ಇವರು ನೇಮಿಸಲ್ಪಟ್ಟಿರುವರೆಂದು ತಿಳಿದುಬರುತ್ತದೆ

ನಗರದಲ್ಲಿ ವಿದ್ಯುದ್ದೀಪಗಳನ್ನು ಉರಿಸುವ ಸಮಯ ಜೂನ್ ೧೬ರಿಂದ ಆಗೋಸ್ತು ೩೧ರ ವರೆಗೆ— ಸಂಜೆ ಘಂಟೆ ೭ರಿಂದ ರಾತ್ರಿ ೧೨ ತನಕ, ಬೆಳಗಿನ ಝಾವ ಘಂಟೆ ೫ರಿಂದ ೬ರ ವರೆಗೆ

ಇದೇ ತಾ, ೨೩ನೇ ಆದಿತ್ಯವಾರ ಮಂಗಳೂರು ೩ಟಿ ಆರ್ಯ ಸಮಾಜ ಮಂದಿರದಲ್ಲಿ ಬೆಳಗ್ಗೆ ಗಂಟೆ ೯ಕ್ಕೆ ಸಭೆಯಾಗಿ ಶ್ರೀ ಎ ಬಾಲಕೃಷ್ಣ ನಾಯ್ಕರು ಭಾಷಣಮಾಡಲಿರುವರು. ಸರ್ವರಿಗೂ ಸ್ವಾಗತ

ಇದೇ, ಕಳೆದ ತಾ ೧೦ರಲ್ಲಿ ನಡೆದ ನಗರ ಸಭೆಯಲ್ಲಿ ಚೆಯರ್ಮೇನರಾದ ಡಾ। ಪಿ. ಶೆಟ್ಟಿ ಸೂಚನೆ ಮೇರೆಗೆ ಕ್ವೆಟ್ಟಾ ಭೂಕಂಪ ನಿಧಿಗೆ ರೂ ೨೫೦ ಕೊಡಲಾಯಿತು. ಗಡಗ ಕಂಪೆನಿಯ ದುಸ್ಥಿತಿಯ ನಿಮಿತ್ತ ಅದರ ಮೇಲಿನ ಎಂಟರ ಟೈನ್‌ಮೆಂಟ್ ಟೇಕ್ಸನ್ನು ನಾಟಕವೊಂದರ ೮ ರಂತೆ ಇಳಿಸಲಾಯಿತು. ರೂ ೫೦ ೦೦೦ ಸಾಲ ಪಡೆದರೂ ನೆಹ್ರೂಸ್ಟ್ರೀಟ್ ಮಾರ್ಕೆಟನ್ನು ಸರಿಪಡಿಸಬೇಕೆಂದು ಶ್ರೀ ರಂಗರಾಯರು ಸೂಚಿಸಿದರು. ಕೋರ್ಟ್ ರಸ್ತೆ ಮಾರ್ಗವಾಗಿ ಬಸ್ ಚಲಾವಣೆ ಮಾಡಬಾರದಂತೆ ಮಾಡಬೇಕೆಂದು ಕೋರ್ಟ್ ರಸ್ತೆಯವರು ಮಾಡಿದ ಅರ್ಜಿಯೂ ಮಾನ್ಯವಾಗಲಿಲ್ಲ.

ಬಂಟರ ಯಾನೆ ನಾಡವ ಸಮಾಜದ ಶ್ರೀಮಂತ ಮನೆತನಗಳಲ್ಲೊಂದಾದ ಕಾಸರಗೋಡಿನ ಒಂಬತ್ತು ಚಿಕ್ಕಪ್ಪ ನಾಯ್ಕರು ಕಳೆದ ವಾರ ವ್ಯಾಧಿಯಿಂದ ಮೃತರಾದುದು ವಿಷಾದಕರವಿದೆ. ಇವರು ಕಾಸರಗೋಡು ತಾಲೂಕಿನ ವೃದ್ಧ ಪಿತಾಮಹರಲ್ಲೊಬ್ಬರಾಗಿದ್ದು, ಬಂಟರ ಯಾನೆ ನಾಡವರ ಸಂಘಕ್ಕೆ ರೂ ೧೫೦೦ ಸಹಾಯ ಮಾಡಿದವರಾಗಿರುವರು

ಇಲ್ಲಿಯ ಹಿಂದೂ ಕ್ರಿಕೆಟ್ ಕ್ಲಬ್ಬಿನ ಮಹಾಸಭೆಯೊಂದು, ಇದೇ ತಾ. ೧೬ರಲ್ಲು ಶ್ರೀರಾಮಕೃಷ್ಣ ಟೆನ್ನಿಂಗ್ ಹೋಮಿನಲ್ಲಿ ಡಾ। ರಾಮಚಂದ್ರರ ಅಧ್ಯಕ್ಷತೆಯಲ್ಲಿ ನಡೆದು ೧೯೪೫–೪೬ನೇ ವರ್ಷಕ್ಕೆ ಡಾ। ರಾಮ ಬಾಳಿಗರು ಅಧ್ಯಕ್ಷರಾಗಿಯೂ, ಡಾ। ಕೆ. ಮಾಧವ ನಾಯ್ಕರು ಉಪಾಧ್ಯಕ್ಷರಾಗಿಯೂ, ಸರ್ವಸಮ್ಮತದಿಂದ ಆರಿಸಲ್ಪಟ್ಟರು, ಶ್ರೀ ಎಂ ಲಕ್ಷ್ಮಣ ಪೈಗಳು ಗೌರವ ಕಾರ್ಯದರ್ಶಿಗಳಾಗಿಯೂ, ಶ್ರೀ ಕೆ ಉಗ್ಗಪ್ಪಶೆಟ್ಟಿ ಕೆಪ್ಟನರಾಗಿಯೂ, ಶ್ರೀ ಡಾ। ಯು. ಎಸ್. ನಾಯ್ಕರು ಸಹಾಯಕ ಕಾರ್ಯದರ್ಶಿಯವರಾಗಿಯೂ ಒಮ್ಮತದಿಂದ ಚುನಾಯಿಸಲ್ಪಟ್ಟರು. ಕೊನೆಗೆ ಡಾ। ಬಿ ರಾಮ ಬಾಳಿಗರು, ಕ್ಲಬ್ಬಿನ ಸದಸ್ಯರು ಸಾಕಷ್ಟು ಉತ್ಸಾಹ ತೋರಿಸಿದರೆ, ತಾನು ಕ್ಲಬ್ಬನ್ನು ಚೆನ್ನಾಗಿ ನಡೆಸುವಂತೆ ಪ್ರಯತ್ನಿಸುವೆನೆಂದು ಆಶ್ವಾಸನೆಯಿತ್ತರು.

ತಾಲೂಕುಗಳಿಂದ.

ಕಾಸರಗೋಡು:—ದನಿಷ್ಕಾಶ್ರಮ ಸಂಸ್ಕೃತ ಶಾಲೆಯ ಸ್ಥಾಪಕರೂ, ಧನ್ವಂತರಿ ವೈದ್ಯ ಶಾಲೆಯ ವ್ಯಾಪಕರೂ ಆದ ಪಾಣಾಜೆ ವೈದ್ಯ ಶಂಕರನಾರಾಯಣ ಭಟ್ಟರು ಕಳೆದ ತಾ, ೬–೬–೪೬ನೇ ಗುರುವಾರ ಎರಡು ಘಂಟೆ ಸಮಯಕ್ಕೆ ವಿಟ್ಲದಿಂದ ಉಕ್ಕಿನಡ್ಕಕ್ಕೆ ಮಹಾಲಕ್ಷ್ಮಿ ಬಸ್ಸಿನಲ್ಲಿ ಬಂದು ಇಳಿಯುವಾಗ ಅಕಸ್ಮಾತ್ ಬಿದ್ದು ಜಖಂಗೊಂಡರಲ್ಲದೆ, ಎಡದ ಕೈಯ ಮಣಿಕಟ್ಟಿನ ಮೇಲೆ ಮೋಟಾರು ಬಸ್ಸಿನ ಚಕ್ರಗಳು ಹೋಗಿ ಜಖಂ ಆಗಿದೆ. ಕೂಡಲೇ ಕಾಸರಗೋಡು ಸರಕಾರಿ ಡಾಕ್ಟರರ ಯೋಗ್ಯ ಪ್ರಥಮ ಚಿಕಿತ್ಸೆಯಿಂದ ಕಾಸರಗೋಡಿಗೆ ತರಲ್ಪಟ್ಟು, ಸರಕಾರಿ ಆಸ್ಪತ್ರೆಯಲ್ಲಿಯೂ, ನರಸಿಂಗ್ ಹೋಮಿನಲ್ಲಿಯೂ ಚಿಕಿತ್ಸೆ ನಡೆಸಿ ಗುಣಹೊಂದದೆ ರಾ। ಕೆ. ೩ ರಾಘವೇಂದ್ರರಾಯರ ಅಭಿಪ್ರಾಯದಂತೆ ಇದೇ ತಾರೀಕು ೧೩ಕ್ಕೆ ಮಂಗಳೂರು ವೆನ್‌ಲಾಕ್ ಆಸ್ಪತ್ರೆಗೆ ತರಲ್ಪಟ್ಟರು ಈಗ ಮಂಗಳೂರಿನಲ್ಲಿ ತಕ್ಕ ಚಿಕಿತ್ಸೆಹೊಂದುತ್ತಿರುವರು ಕೈಯೊಂದರ ಆಶೆಯಿಲ್ಲದಿದ್ದರೂ, ಬೇರೇನೂ ಅಪಾಯವಿಲ್ಲವೆಂದು ಡಾಕ್ಟರರ ಅಭಿಪ್ರಾಯ

ಸಂಪಾಜೆ:—ಕಳೆದ ತಾ, ೨೫–೫–೪೬ರಲ್ಲಿ ಸಂಪಾಜೆ ಶಾಲೆಯಲ್ಲಿ ಪುತ್ತೂರಿನವಳಾದ ನಾಲ್ಕು ವರ್ಷ ಪ್ರಾಯದ ಬಾಲಕಿ ಕುಮಾರಿ ಭೂದೇವಿಯು ಸತೀ ಅನುಸೂಯಾ" ಎಂಬ ಹರಿಕೀರ್ತನೆಯನ್ನು ಕಿಕ್ಕಿರಿದು ನೆರೆದ ಸಭಿಕರ ಮೆಚ್ಚುಗೆಗೆ ಪಾತ್ರವಾಗುವಂತೆ ಪ್ರಸಂಗಿಸಿದಳು

ಸಂಪಾಜೆ ಗ್ರಾಮದಲ್ಲಿ ಮೂರು ನಾಲ್ಕು ತಿಂಗಳುಗಳಿಂದೀಚೆಗೆ ವಿಶೇಷ ಉಪದ್ರವವನ್ನು ಕೊಡುತ್ತಾ, ೫೦–೬೦ ದನಗಳನ್ನು ಕೊಂದು ತಿಂದ ಪಟ್ಟೆಹುಲಿ ಜೊತೆ ಎಂದೂ ಮತ್ತು ಅದರ ಮೂರಳ ಪ್ರತಿ ಎರಡು ಮರಿಗಳನ್ನು ನಾತ್ರ ಸಂಪಾಜೆ ಗ್ರಾಮಸ್ಥರಿಂದ ಕಿಟ್ಟಪ್ಪ ವ ಕಿಟ್ಟ ಕಾರಪ್ಪ ಎಂಬಿಬ್ಬರು ಇದೇ ತಾ ೬ರಲ್ಲಿ ಗುಂಡು ಹೊಡೆದು ಕೊಂದಿರುತ್ತಾರೆಂದೂ. ಇದರ ಪ್ರತಿ ಗಂಡು ಸರಿಗೆ ಅಲ್ಲದ ಹಾ ೧೩ರಲ್ಲಿ ತಪ್ಪಿಸಿ ನ ಸದ್ರಿ ದೂಲಮನೆಯ ತಾ ೧ ಬಹಳ ಗುತ್ತಿನ ಗೆಣ್ಣೆಪ್ಪ ಹುಲಿಯನ್ನು ಕೊಂದಿರುತ್ತಾನೆ. ಒಟ್ಟಿನ ಸದ್ರಿ ದಿನವೇ ಕೊರಗು ಸಂಪಾಜೆ ಪಟೇಲರಾದ ಶ್ರೀ ಸಣ್ಣಯ್ಯಗೌಡರು "ಕರಿಂಪುಲ್ಲಿ" ಎಂದು ಕರೆಯಲ್ಪಡುವ ಹುಲಿಯನ್ನು ಕೊಂದುದು ಕೇಳಿ ಆನಂದಕರ ಸಂಗತಿ.

ಕಲ್ಲಡ್ಕ:—ಇಲ್ಲಿನ ನವಜೀವನ ಸಂಘ"ದ ದ್ವಿತೀಯ ವಾರ್ಷಿಕೋತ್ಸವವು ಇದೇ ತಾ ೭ರಲ್ಲಿ ಮೊಹಿಯುದ್ದೀನ್ ಮುಸ್ಲಿಂ ಶಾಲಾ ಆವರಣದಲ್ಲಿ ರಾ ಅಬ್ದುಲ್ ಖಾದರ್ ಅಧ್ಯಕ್ಷತೆಯಲ್ಲಿ ಜರಗಿತು

ಕಾರ್ಕಳ:—ಈ ತಾಲೂಕಿನಲ್ಲಿ ೩೦೦೦ಕ್ಕೂ ಮೇಲ್ಪಟ್ಟು ಕಾಂಗ್ರೆಸ್ ಸದಸ್ಯರಾಗಿರುವುದನ್ನು ತಿಳಿಸಲು ಸಂತೋಷವಾಗುತ್ತದೆ ಶ್ರೀ ಎಂ. ಬಿ. ಅಧಿಕಾರಿಗಳ ನೇತೃತ್ವದಲ್ಲಿ ಶ್ರೀಗಳಾದ ನಾರಾಯಣ ಜೋಷಿ, ರಾಮರಾಯ ಪುರಾಣಿಕ, ಪಟೇಲ ಎ ಕೆ ಗೋವಿಂದ ರಾವ್ ಮೊದಲಾದ ಸ್ವಯಂಸೇವಕರು ಹಗಲಿರುಳು ಎಂಬಂತೆ ಕೆಲಸ ಮಾಡಿದ ಫಲವಾಗಿ ಇಷ್ಟಾದರೂ ಸಾಧ್ಯವಾಯಿತು ಇದೇ ಸಂಖ್ಯೆಗೆ ಈ ತಾಲೂಕಿನ ಕೆಲವು ಹಳ್ಳಿಗಳಿಗೆ ಹೋಗಿ ಶ್ರೀಮತಿ ಕಮಲಾದೇವಿಯವರು ಸೇರಿಸಿದ ಕಾಂಗ್ರೆಸ್ ಸದಸ್ಯರನ್ನು ಕೂಡಿಸಿದರೆ ಈ ತಾಲೂಕಿನ ಒಟ್ಟು ಕಾಂಗ್ರೆಸ್ ಸದಸ್ಯರ ಸಂಖ್ಯೆಯು ೩೦೦೦ಕ್ಕೂ ಮಿಗುವುದು.

ಸ್ಥಳೀಯ ಬೋರ್ಡ್ ಹೈಸ್ಕೂಲಿನಿಂದ ಯಸ್ ಯಸ್ ಎಲ್ ಸಿ ಪರೀಕ್ಷೆಗೆ ಕೂತುಕೊಂಡ ೬೫ ಮಂದಿಗಳಲ್ಲಿ ೨೧ ಮಂದಿ ಉತ್ತೀರ್ಣರಾಗಿರುವರು ಈ ತರಗತಿಯಲ್ಲಿ ಓದುತ್ತಿದ್ದ ಎಲ್ಲಾ ವಿದ್ಯಾರ್ಥಿಗಳನ್ನೂ ಪರೀಕ್ಷೆಗೆ ಹೋಗಬಿಟ್ಟಿರುವುದರಿಂದ ಕಾರಣದಿಂದ ಈ ಫಲಿತಾಂಶವು ತೃಪ್ತಿಕರವಾಗಿದೆಯೆನ್ನಬೇಕು

ಶ್ರೀ ವೆಂಕಟರಮಣ ಹಾಯರ್ ಎಲಿಮೆಂಟರಿ ಶಾಲಾ ಎಂಟನೇ ತರಗತಿಯ ಇಬ್ಬರು ವಿದ್ಯಾರ್ಥಿಗಳು ೮ ತರಗತಿಯ ಇ ಯಸ್ ಎಲ್ ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರು

ಬೆಳ್ತಂಗಡಿ:—ಇಲ್ಲಿ ಸುಮಾರು ಎರಡು ವರ್ಷಗಳಿಂದ ಡಿಪ್ಯುಟಿ ತಹಶೀಲ್ದಾರಾಗಿದ್ದ ಶ್ರೀ ಬಿ ಗಣೇಶ ಇವರು ಈ ಅಲ್ಪ ಕಾಲದಲ್ಲಿ ನಮ್ಮ ಬಹಳ ನಾಡಿನ ಬೆಳ್ತಂಗಡಿಯ ಜನರ ಆದರಕ್ಕೆ ಪಾತ್ರರಾಗಿ, ಇಲ್ಲಿಯ ... ಬೆಳ್ಳ ಸಂಸ್ಥೆಯಾದ ಬೆಳ್ತಂಗಡಿ ಕ್ಲಬ್ಬನ್ನು ಜೀರ್ಣೋದ್ಧಾರ ಮಾಡಿದ ಸಂಗತಿಯು ಜನಜನಿತವಿಷಯವು. ಮೊನ್ನೆ ತಾನೇ ಇವರನ್ನು ಜಿಲ್ಲಾ ಇಲೆಕ್ಷನ್ ಆಫೀಸರರಾಗಿ ವರ್ಗಾಯಿಸಿದ ಸಂಗತಿಯು ಕುಂಬಾಸಂತೋಷಕರ. ಇದೇ ತಾ, ೧೬ರಲ್ಲಿ ಸಂಜೆ ೬ ಘಂಟೆಗೆ ಶ್ರೀ ಡಾಕ್ಟರ್ ಶೇಷಭಟ್ಟರವರ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರಕೂಟವು ಕ್ಲಬ್ ಕಟ್ಟಡದಲ್ಲಿ ಜರಗಿತು ಈ ವೇಳೆಯಲ್ಲಿ ದಯಮಾಡಿಸಿದ್ದ ಎಲ್ಲಾ ಮಹನೀಯರಿಗೂ ಇವರನ್ನಗಲುವುದು ಬಹಳ ದುಸ್ತರವೆನಿಸಿತು, ಇವರ ಸ್ಥಾನಕ್ಕೆ ಬಂದಿರುವ ಶ್ರೀ ಪಿ ಎಸ್ ತಿಮ್ಮಪ್ಪ ಶೆಟ್ಟರು ತನ್ನ ವಿಶಾಲ ಹೃದಯವನ್ನು ಬಿಚ್ಚಿ ಸಭಿಕರ ಪ್ರೇಮಾದರಕ್ಕೆ ಇಂಬುಗೊಟ್ಟು ಶ್ರೀ ಗಣೇಶರಂತೆಯೇ ತನ್ನಿಂದಾದಷ್ಟು ಯಾವತ್ತೂ ಸಂಸ್ಥೆಗಳಿಗೂ ಸಹಾಯ ಮಾಡಲು ಸಿದ್ಧನಿರುವೆನೆಂದು ಹೇಳಿ ತನ್ನ ಸ್ಥಾನವನ್ನು ಸ್ವೀಕರಿಸಿದರು, ಶ್ರೀ ಗಣೇಶರವರಿಗೂ ಸಭಿಕರಿಗೂ ಹರ್ಷವಾಗುವಂತೆ ಎಲ್ಲರನ್ನೂ ಮಾನ್ಯ ಅಧ್ಯಕ್ಷ ಮಹಾಶಯರು ಹರಸಿ ಸಭೆಯನ್ನು ಯಥಾರೀತಿ ಪೂರೈಸಿದರು

ಬ್ರಹ್ಮಾವರ:—ಇಲ್ಲಿಂದ ವರ್ಗವಾದ ಮಿಡ್‌ವೈಫಿಗೆ ಕಠಿಣ ಅಸ್ವಸ್ಥವಿದ್ದು ಮಂಗಳೂರು ಹೆಂಗಸರ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವುದರಿಂದಲೂ, ಕಾರಣಾಂತರದಿಂದ ಇಲ್ಲಿಗೆ ವರ್ಗಾಯಿಸಲ್ಪಟ್ಟ ಮಿಡ್‌ವೈಫ್ ೩ ತಿಂಗಳ ರಜೆಗೆ ಬರೆದಿರುವುದರಿಂದಲೂ ಕಾರ್ಕಳ ಮತ್ತು ಬಂಟ್ವಾಳ ಈ ಎರಡು ಊರುಗಳಿಗೂ ಮಿಡ್‌ವೈಫ್‌ಗಳೇ ಇಲ್ಲದಂತಾಯಿತು ಆದುದರಿಂದ ಡಿ। ಬೋ। ಪ್ರೆಸಿಡೆಂಟರು ಇಲ್ಲಿಗೊಬ್ಬಳು ಮಿಡ್‌ವೈಫನ್ನು ಕಳುಹಿಸಬೇಕಾದ ಅವಶ್ಯಕತೆಯಿದೆ.

ಇಲ್ಲಿಂದ ಪಾಲ್ಘಾಟಿಗೆ ವರ್ಗವಾಗಿ ಹೋಗುವ ಎಕ್ಸೈಜ್ ಇನ್ಸ್‌ಪೆಕ್ಟರ್ ರಾ। ನಾರಾಯಣರಾಯರಿಗೆ ಸತ್ಕಾರಕೂಟಗಳು ನಡೆಯುತ್ತಲಿವೆ

ಕಿನ್ನಿಗೋಳಿ:—ತಾ. ೧೮–೬–೪೬ರಲ್ಲಿ ಅಸಿಸ್ಟೆಂಟ್ ಪಂಚಾಯತ್ ಆಫೀಸರರಾದ ಕೆ ಶೀನಶೆಟ್ಟಿ ಬಿ ಎ ಇವರು ಇಲ್ಲಿಗೆ ಬಂದು ಇಲ್ಲಿನ ಪಂಚಾಯ್ತಿ ಇಲೆಕ್ಷನ್ ಬಗ್ಗೆ ತಾ ೩–೭–೪೬ರ ದಿನವನ್ನು ಗೊತ್ತುಮಾಡಿ, ಪೋಲಿಂಗ್ ಸ್ಟೇಷನುಗಳನ್ನು ಬಹಿರಂಗವಾದ ಸ್ಥಳಗಳಲ್ಲಿ ಆರಿಸಿಹೋಗಿರುತ್ತಾರೆ

ಇಲ್ಲಿಯ ಪಂಚಾಯತ್ ಬೋರ್ಡಿಗೆ ೧೪ ಜನ ಮೆಂಬರರಿರುತ್ತಾರೆ. ಅವರ ಪೈಕಿ ೩ ಸೀಟು ಕ್ರಿಸ್ತೀಯರಿಗೆ ಒಂದು ಸೀಟು ಆದಿದ್ರಾವಿಡರಿಗೆ ರಿಜರ್ವ ಎಂದೂ ತಿಳಿಸಿರುತ್ತಾರೆ

ಇಲ್ಲಿ ಪಂಚಾಯತ ಕೋರ್ಟು ಪ್ರೆಸಿಡೆಂಟ ಸ್ಥಾನಕ್ಕೆ ರಾಜೀನಾಮೆಯಿತ್ತ ಶ್ರೀ ಶ್ರೀಧರ ಶೆಟ್ಟಿ ಸ್ಥಾನಕ್ಕೆ ಇದೇ ತಾ ೩ರಲ್ಲಿ ಹೊಸ ಇಲೆಕ್ಷನ್ ನಡೆಯಲಿರುವುದು

ಇಲ್ಲಿಯ ರೋ। ಕೆಥೋಲಿಕ್ ಮತದ ಅಲೆಕ್ಸ್ ಲೋಬೋ ಎಂಬವನು ಇತ್ತೀಚೆಗೆ ತಾನು ಬೊಂಬಾಯಿಗೆ ಹೋಗುವೆನಾಗಿ ಹೇಳಿ ಇಲ್ಲಿಂದ ಹೋಗಿ ಉಡುಪಿಯಲ್ಲಿ ನೆಲಸಿ ಇಲ್ಲಿಯೇ ವಾಸಿಸುತ್ತಿದ್ದ ಗುಲಾಂ ಬ್ಯಾರಿ ಎಂಬ ಮಹಮ್ಮದೀಯನ ಮಗಳನ್ನು ಮದುವೆಯಾಗಿ ಮಹಮ್ಮದೀಯ ಮತಕ್ಕೆ ಸೇರಿರುತ್ತಾನೆ ಈಗ ಈ ದಂಪತಿಗಳಿಬ್ಬರೂ ಸುರತ್ಕಲ್ಲಿನ ಸಮೀಪ ಮುಕ್ಕ ಎಂಬಲ್ಲಿರುತ್ತಾರೆ

ಮೊಂಡ್ಕೂರು:—ಮುಂಡ್ಕೂರು ಪೇಟೆಯ ಬಳಿ ಮಾರ್ಗದ ಬಳಿಯಲ್ಲಿದ್ದ ಒಂದು ಸಂಕವು ಹಾಳಾಗಿ ವರ್ಷ ಒಂದೂವರೆ ಕಳೆದರೂ ಡಿಸ್ಟ್ರಿಕ್ಟ್ ಬೋರ್ಡಿನವರು ಏನೊಂದೂ ಸಿಗಾ ತೆಗೆದುಕೊಳ್ಳದಿರುವುದರಿಂದ, ಈ ವರ್ಷ ಸದ್ರಿ ಸಂಕವು ಸಂಪೂರ್ಣ ನಾಶವಾಗಿದೆ, ಇದರಿಂದ ಪ್ರಯಾಣಕ್ಕೆ ಹೆಚ್ಚಿನ ತೊಂದರೆಯುಂಟಾಗಿದೆ ಬೋರ್ಡಿನವರು ಇನ್ನಾದರೂ ದುರುಸ್ತಿಪಡಿಸಿಯಾರೆಂದು ಭರವಸೆ

ಉಡುಪಿ:—ಶ್ರೀ ಬಿ. ರಾಮಕೃಷ್ಣಾಚಾರ್, ಬಿ. ಎ ಹಾಗೂ ರಾಷ್ಟ್ರ ಭಾಷಾ ವಿಶಾರದರ ನೇತೃತ್ವದಲ್ಲಿ ಇಲ್ಲೀ ಹಿಂದೀ ವ್ಯಾಸಂಗವು ಜರಗುತ್ತಲಿದೆ, ಹಿಂದೆ ಎರಡೆರಡು ಸಲವು ಜಿಲ್ಲಾ ಸಂಘದ ಪತಿಯಿಂದ ಹಿಂದೀ ಪ್ರಚಾರದ ವಿರ್ವಾಹ ಮಾಡಲಾಗಿತ್ತಾದರೂ, ಜಿಲ್ಲಾ ಸಂಘಗಳೊಳಗಿನ ಭೇದಗಳಿಂದಾಗಿ ಅಸ್ತವ್ಯಸ್ತವಾಗಿ ಹೋಗಿತ್ತು. ಈಗ್ಗೆ ಮಂಗಳೂರಲ್ಲಿ ಈಚೆಗೊಂದು ಜಿಲ್ಲಾ ಪ್ರಚಾರಕ ಸಂಘವು ಸಂಘಟಿತವಾಗಿದ್ದರೂ, ಇಲ್ಲಿ ಅದರ ಸುಳಿವೇ ಇಲ್ಲದಿರಲು, ಶ್ರೀ ಆಚಾರ್ಯರು ಹಿಂದೀ ಪ್ರೇಮದಿಂದ ಸ್ವಯಂ ಈ ಸಲ ಮಾಡಿದ ವಿರ್ವಾಹ ಸ್ತುತ್ಯಾರ್ಹವಾಗಿದೆ.

ರಾ। ಎಂ. ವಿಟ್ಠಲ ಕಾಮತ್, ಬಿ ಎ, ಬಿ. ಎಲ್. ವಕೀಲ್, ಇವರು ಊರ ಗೃಹಸ್ಥರಿಂದಲೂ ಕ್ವೆಟ್ಟಾ ಭೂಕಂಪ ಸಹಾಯಕ ನಿಧಿಯನ್ನು ಸಂಗ್ರಹಿಸುತ್ತಲಿದ್ದಾರೆ.

ಚುಟುಕು ವಾರ್ತೆ

ಇಂಡಿಯಾ ಸರಕಾರಕ್ಕೆ ಎಪ್ರಿಲ್ ತಿಂಗಳಲ್ಲಿ ಕಸ್ಟಮ್ಸ್ ಖಾತೆಯಿಂದ ೪೫೮ ಲಕ್ಷ ರೂಪಾಯಿಗಳು ದೊರಕಿತುವು, ಮೇಯಲ್ಲಿ ೪೮೩ ಲಕ್ಷ ರೂಪಾಯಿ ದೊರೆತುವು

ವೈಸರಾಯರ ರಿಲೀಫ್ ಫಂಡಿನಲ್ಲಿ ಒಟ್ಟು ೧೩೦೯೩೫೫ ರೂಪಾಯಿಗಳು ಜಮೆಯಾಗಿವೆ

ಸ್ಪೈನಲ್ಲಿ ಮಂತ್ರಿಮಂಡಲದೆದುರು ಒಂದು ಸ್ಫೋಟನವಾಗಿ ೧೫ ಮಂದಿ ಆಸ್ಪತ್ರೆಪಾಲಾದರು

ಮುಂಬಯಿಯಲ್ಲಿ ಜೂಗಾರಾಟದ ದುರಭ್ಯಾಸವು ಪ್ಲೇಗಿಗಿಂತಲೂ ಭಯಂಕರವಾಗಿ ಹರಡಿದೆಯೆಂದು ಪುಹಾತ್ಮರು ಹೇಳುತ್ತಾರೆ

ಮೈಸೂರಿನ ಮಹಾರಾಜರು ಕ್ವೆಟ್ಟಾ ಭೂಕಂಪ ನಿಧಿಗೆ ರೂ ೧೦,೦೦೦ವನ್ನು ಕೊಟ್ಟಿರುವರು

ಜಬ್ಬಲಪುರದ ಕಾಂಗ್ರೆಸ್ ಸಮಿತಿಯವರು ೧೦,೦೦೦ ಜನರನ್ನು ಕಾಂಗ್ರೆಸ್ಸಿನ ಸದಸ್ಯರನ್ನಾಗಿ ಮಾಡಿರುವರು

ಸಾರ್ವಭೌಮರ ೬೦ ಅಡಿ ಎತ್ತರವುಳ್ಳ ಪ್ರತಿಮೆಯೊಂದನ್ನು ಮಹಾಂ ಜ್ಞಯವರು ಪಡೆದುಕೊಂಡಿರುವರು.

ತಿನ್ನೆವೆಲ್ಲಿಯ ನಲ್ಲೂರು ಸ್ಟೇಶನಿನಲ್ಲಿ ರೈಲೂ ಮೋಟಾರೂ ಢಿಕ್ಕಿಹೊಡೆದುಕೊಂಡು ಕೆಲವರು ಘಾಯಗೊಂಡಿರುವರು

ಕೊಯಂಬುತ್ತೂರಿನಲ್ಲಿ ಒಂದು ಭಾವಿಯನ್ನು ಅಗೆಯುವಾಗ ಒಂದು ಶಿಲೆಕಲ್ಲು ಸಿಕ್ಕಿದೆ ಅದರ ಮೇಲೆ ಸಂಸ್ಕೃತ ಭಾಷೆಯಿಂದ ಶಾಸನವನ್ನು ಬರೆದಿರುವುದು ಗೋಚರಿಸಿದೆ

ವಿರುಧುನಗರ ಮುನಿಸಿಪಾಲಿಟಿಯವರ ಸಿಬ್ಬಂದಿಯ ಮತ್ತು ಮುನಿಸಿಪಲ್ ಶಾಲೆಗಳ ಉಪಾಧ್ಯಾಯರ ಸಂಬಳದಲ್ಲಿ ಶೇಕಡಾ ೧೦ರಷ್ಟು ಕಡಿತವನ್ನು ಮಾಡಿಕೊಳ್ಳಬೇಕಾಗಿ ನಿರ್ಣಯಿಸಿರುವರು

ಫ್ರೆಂಚ್ ಮಂತ್ರಿಮಂಡಲದ ರಾಜೀನಾಮೆಯಿಂದಾಗಿ ಮುಂಗಾರಾಯಿಂದ ಚಿನ್ನದ ರಫ್ತು ಕಳೆದ ವಾರ ನಡೆಯಲಿಲ್ಲ

ಸರ್ವರ ಒಂದೂಗಳ ಬ ಧಿಂಯಿಂದಾಗಿ ಸೇಲಮ್ ನಲ್ಲಿ ರಾಮನಾಡರ್ ಎಂಬವನು ಸ್ವುಸ್ಥಿಂ ಮುಕಾವ ಲಂಚನೆ ಮಾಡಿದನು

ಜಬ್ಬಲಪುರದಲ್ಲಿ ಕಾಲರಾವು ಕೆಲೆಯುತ್ತಿ ಅನೇಕ ಮರಣಗಳಾದುವು

ಜಬ್ಬಲಪುರದ ಮುನಿಸಿಪಾಲಿಟಿಯಲ್ಲಿರುವ ಕಮಿಶನರರೊಬ್ಬರು ತನ್ನ ಆಸ್ತಿಯ ಮೇಲಣ ತೆರಿಗೆಯನ್ನು ಕೊಡದಿದ್ದುದರಿಂದ ಕೋಲಾಹಲವು ನಡೆದಿದೆ.

ಕಾನೂನನ್ನುಲ್ಲಂಘಿಸಿ ಕಾಡನ್ನು ಕಡಿದರೆಂದು ಸ್ಪೆಂಡಿಂಗ್ ಥಿಂಗರಿಂದ ಕಂಪೆನಿಯವರಿಗೆ ಕಾಶ್ಮೀರ ಸರಕಾರವು ೭ ೫೫ ಲಕ್ಷ ರೂಪಾಯಿಯ ದಂಡ ವಿಧಿಸಿತ್ತು. ಈಗ ಅದನ್ನು ೧ ೫೦ ೦೦೦ಕ್ಕೆ ಇಳಿಸಿದರು

ಕೊಲಂಬಿಯದಲ್ಲಿ ರೈಲು ಓಡುತ್ತಿದ್ದಾಗ ಮಧ್ಯವಯಸ್ಕನೊಬ್ಬನು ಕಂಬಿಯ ಒಳಗೆ ಹಾರಿ ಪ್ರಾಣತ್ಯಾಗಮಾಡಿದನು.

ಧೂಳು ಮಿಶ್ರವಾದ ಒಂದು ಭಯಂಕರ ಬಿರುಗಾಳಿಯು ಸಿಂಧ್ ಪ್ರಾಂತ್ಯವನ್ನು ದಾಟಿ ಓಡಿತು.

ಲಂಡನಿನಲ್ಲಿ ರಾತ್ರಿಹೊತ್ತು ಎರಡು ರೈಲುಗಳು ಢಿಕ್ಕಿಬಡೆದು ೧೪ ಜನರು ಮರಣಹೊಂದಿದರು

ಅಲ್ಲಹಾಬಾದಿನಲ್ಲಿ ದಿಬ್ಬಣಿಗರ ಒಂದು ಲಾರಿಯು ಮರಕ್ಕೆ ತಗಲಿ ೪ ಜನರು ಮರಣಹೊಂದಿದರು ೨೧ ಮಂದಿ ಜಖಂಗೊಂಡಿರುವರು.

ಅಹಮ್ಮದಾಬಾದಿನ ಪೇಟೆಯಲ್ಲಿ ಬೆಂಕಿಯಿಂದ್ದು ೫೦,೦೦೦ ರೂಪಾಯಿಗಳ ನಷ್ಟವಾಗಿದೆ

ಅಣ್ಣಾಮಲೆ ವಿಶ್ವವಿದ್ಯಾಲಯಕ್ಕೆ ವೈಸ್ ಚೆನ್ಸಲರಾಗಿ ರೈಟ್ ಆನರೆಬಲ್ ಶ್ರೀನಿವಾಸ ಶಾಸ್ತ್ರಿಗಳನ್ನು ಆರಿಸಲಾಗಿದೆ

ಕಚ್ ಸಂಸ್ಥಾನದಿಂದ ಸಿಂಧ್ ಪ್ರಾಂತ್ಯಕ್ಕೆ ಸುಂಕ ಕೊಡದೆ ಬೆಳ್ಳಿಯನ್ನು ಸಾಗಿಸುತ್ತಿದ್ದ ಇಬ್ಬರು ಬನಿಯಾಗಳಿಗೆ ೪೧ ಮತ್ತು ೧೬ ಸಾವಿರ ರೂಪಾಯಿಗಳ ದಂಡವಾಗಿದೆ

ಪಂಡಿತ ಜವಾಹರಲಾಲರ ಸಹೋದರಿ ಮಿಸೆಸ್ ಆರ್ ಎಸ್ ಪಂಡಿತರವರು ಅಲ್ಲಹಾಬಾದಿನಲ್ಲಿ ಕಾರಿನ ಅಪಘಾತಕ್ಕೆ ಸಿಕ್ಕಿ ಬದುಕಿ ಉಳಿದರು

ಶ್ರೀಮತಿ ಕಮಲಾ ನೆಹರೂರವರು ಚಿಕಿತ್ಸೆಗಾಗಿ ಬರ್ಲಿನಿಗೆ ಹೋಗಿರುವರು

ಸರದಾರ ಪಟೇಲರು ಕಾಮಾಲೆ ರೋಗದಿಂದ ಮುಂಬಾಯಿಯಲ್ಲಿದ್ದು ಚಿಕಿತ್ಸೆಹೊಂದುತ್ತಿದ್ದಾರೆ

ಕ್ವೆಟ್ಟಾದ ಜನರಿಗೆ ಅಮೇರಿಕಾದಿಂದಲೂ ಸಹಾಯ ಬರಲಿದೆ ಪ್ರಸಾದರು ಅಲ್ಲಿಯ ಹರಿದಾಸ್ ಮುಜುಂದಾರ್ ಎಂಬವರನ್ನು ನೇಮಿಸಿರುವರು

ಎರವಾಡಾ ಜೈಲಿನಲ್ಲಿ ಮುದ್ರಾಲಯದ ಮೆನೇಜರರಾಗಿದ್ದ ಶ್ರೀ ಎಂ ವಿ ಜೋಶಿಯೆಂಬವರು ಕಾಲಾಧೀನರಾದರು

ಕ್ವೆಟ್ಟಾಕ್ಕೆ ದಕ್ಷಿಣ ಆಫ್ರಿಕದಿಂದ ೧೦೩೦ ಪೌಂಡುಗಳು ಬಂದಿವೆ

ಮಂಧಾರದಲ್ಲಿ ಒಂದು ಎತ್ತಿನ ಗಾಡಿಗೆ ಮೋಟರು ಢಿಕ್ಕಿಹೊಡೆದು ಗಾಡಿಯಲ್ಲಿದ್ದ ೫ ಜನರು ಮೃತರಾದರು

ಈ ವಾರದ ತಂತಿ ವಾರ್ತೆಗಳು:

ಹೆಣ್ಣಿಗಿಂತ ನಾಯಿಯು ಮೇಲೆ—

ಅವನಿಗೆ ಹೆಚ್ಚು ಮಮತೆ! ರಾತ್ರಿಯಲ್ಲಿ ನಾಯಿಯನ್ನು ತನ್ನ ಹಾಸಿಗೆಯಲ್ಲಿ ಮಲಗಿಸಿಕೊಳ್ಳುತ್ತಿದ್ದನು. ಅದಕ್ಕಾಗಿ ವರ್ಸಲಿ ಕೋರ್ಟಿಗೆ ಒಬ್ಬ ತರುಣಿಯು ಮೊಕದ್ದಮೆಯನ್ನು ತಂದು ತನಗೆ ವಿವಾಹವಿಚ್ಛೇದ ಮಾಡಬೇಕೆಂದು ಬೇಡಿಕೊಂಡಳು ಜೂರಿಯು ದೀರ್ಘಾಲೋಚನೆ ಮಾಡಿ "ಇದು ಚಿಲ್ಲರೆ ಸಂಗತಿ—ಇದನ್ನು ಕೋರ್ಟು ತೀರ್ಮಾನಿಸಲು "ಶಕ್ತವಾಗಿಲ್ಲ ಗಂಡ ಹೆಂಡಿರು, ನೀವೇ ತೀರ್ಮಾನಿಸಿರಿ" ಎಂದು ಅರ್ಜಿಯನ್ನು ತೆಗೆದುಹಾಕಿದರು.

ಸ್ಟೀಮರುಗಳನ್ನೇ ಒಯ್ದುಬಿಟ್ಟರು.

ಹಾಂಕಾಂಗ್ ಜೂನ್, ೧೬.

ಕ್ವಾನ್‌ಟಿನ್‌ನ ಬೋಯಾಟಾಗ್ರಿಸ್ ಕೋಟೆಯ ಬಳಿ ಹೈಚಿಹ್ವೈಸಿನ ಎಂಬ ಹಡಗುಗಳು ಓಡುವುದರಲ್ಲಿದ್ದಾಗ ಗಲಭೆಯೆದ್ದಿತು ಆ ಹಡಗುಗಳ ಮೇಲೆ ಗುಂಡಿಸೆಯಲ್ಪಿಸಿದರೂ ಅವುಗಳನ್ನು ತಡೆಯಲಾಗಲಿಲ್ಲ ಆ ಹಡಗುಗಳು ಎಲ್ಲಿವೆಯೆಂದು ತಿಳಿದುಬಂದಿರುವುದಿಲ್ಲ ಹಾಂಕಾಂಗಿಗೆ ಅವುಗಳು ಬರಬಹುದೆಂಬ ಊಹನೆಯಿದೆ ಈ ಹಡಗುಗಳ ಕೆಲಸಗಾರರು ಸಂಬಳವು ಸಾಕಾಗುವುದಿಲ್ಲವೆಂದು ಒಮ್ಮೆ ಮುಷ್ಕರಹಿಡಿದಿದ್ದರು

'ನ್ಯೂಡೀಲ್' ತಿರಸ್ಕರಿಸಲ್ಪಟ್ಟಿತು

ಲಂಡನ್ ಜೂನ್ ೧೩

ಲ್ಲೊಯ್ಡ್ ಜಾರ್ಜರವರು ಬ್ರಿಟನ್ನಿನ ನಿರುದ್ಯೋಗತೆಯನ್ನು ನಿವಾರಿಸುವುದಕ್ಕಾಗಿ "ನ್ಯೂಡೀಲ್" ಕ್ರಮವನ್ನು ಪಾರ್ಲಿಮೆಂಟಿಗೆ ಶಿಫಾರಸುಮಾಡಿದರು ಪಾರ್ಲಿಮೆಂಟು ಅದನ್ನು ಪರ್ಯಾಲೋಚಿಸಿ ಇವು ಕಾರ್ಯಕಾರಿ ಸಲಹೆಗಳಲ್ಲವೆಂದು ತಿರಸ್ಕರಿಸಿರುತ್ತದೆ

ಕೆಥೋಲಿಕರ ಗಲಭೆ

ಎಡಿನ್‌ಬರೋವಿನಲ್ಲಿಯ ಉಷಾರ್‌ಹೋಲ್‌ನಲ್ಲಿ ಗಲಭೆಯೊಂದು ನಡೆಯಿತು ಅಲ್ಲಿ ಒಂದು ಮಹೋತ್ಸವವು ಜರಗುತ್ತಿದ್ದಿತು ಆಸ್ಟ್ರೇಲಿಯದ ಮುಖ್ಯಮಂತ್ರಿಗಳಾದ ಲಯನ್‌ಸರವರು ರೋಮನ್ ಕೆಥೋಲಿಕರೆಂದು ಅನೇಕರು ಬೊಬ್ಬಿಟ್ಟರು ಲಾರ್ಡ್ ಪ್ರೊವೋಸ್ಟರವರು ಜನರ ಪರವಾಗಿ ಮಂತ್ರಿಗಳೊಡನೆ ಕ್ಷಮೆಯನ್ನು ಬೇಡಿದರು

ಹರ್ ಟಾರ್ಗ್ಲರ್ ಇವರ ಬಿಡುಗಡೆ

ಬರ್ಲಿನ್, ಜೂನ್ ೧೬

ಜರ್ಮನಿಯ ಶಾಸನ ಸಭೆಗೆ ಬೆಂಕಿ ಕೊಟ್ಟ ಸಂಬಂಧವಾಗಿ ಹರ್ ಅರ್ನೆಸ್ಟ್ ಟಾರ್ಗ್ಲರ್ ಇವರು ಮೊಕದ್ದಮೆಗೊಳಗಾಗಿದ್ದರು. ಇವರು ಕಮ್ಯೂನಿಸ್ಟ ಪಂಗಡವನ್ನು ಬಿಟ್ಟುದಕ್ಕಾಗಿ ಈಗ ಇವರು ಬಿಡುಗಡೆಹೊಂದಿರುವರು

ಸಬ್ ಇನ್ಸಪೆಕ್ಟರರ ಕೊಲೆ

ಕಲ್ಕತ್ತಾ, ಜೂನ್ ೧೬.

ಫರೀದಪುರದ ಗೋಲುಂಡೋ ಪೋಲೀಸ್ ಸ್ಟೇಶನಿನ ಮುಸ್ಲಿಂ ಸಬ್ ಇನ್ಸಪೆಕ್ಟರ್ ಸೈಯದ್ ಅಸಾರುದ್ದೀನ್ ಎಂಬವನು ಡ್ಯೂಟಿಯಲ್ಲಿರುವಾಗ್ಗ ಕೊಲೆ ಮಾಡಲ್ಪಟ್ಟರು. ವನು ಕ್ರಾಂತಿಕಾರರ ಪತ್ತೆಹಚ್ಚುವುದೇ ಇವನ ಮುಖ್ಯ ಸಾಹಸವಾಗಿದ್ದಿತು

ಲಂಡನ್ ಮೇಯರರ ಸಹಾಯ ಧನ!

ಲಂಡನ್, ಜೂನ್ ೩ ೧೫

ಲಂಡನಿನ ಲಾರ್ಡ ಮೇಯರರು ಸ್ಥಾಪಿಸಿರುವ ಭೂಕಂಪ ನಿಧಿಗೆ ಬೇಂಕ್ ಆಫ್ ಇಂಗ್ಲಾಂಡಿನಿಂದ ಒಂದು ಸಾವಿರ ಪವನುಗಳೂ, ಷಿಲ್ ಮೊಂಗರ್ಸ್ ಕಂಪೆನಿಯಿಂದ ೫೦೦ ಪವನುಗಳೂ, ಫೆಸಿಫಿಕ್ ಮತ್ತು ಪೂರ್ವದೇಶಗಳಿಂದ ೧೦೫ ಪವನುಗಳೂ ರವಾನಿಸಲ್ಪಟ್ಟಿವೆ.

ಒಂದು ದಿನದಲ್ಲಿ ಇಂಗ್ಲಾಂಡಿನಿಂದ ಆಫ್ರಿಕಾಕ್ಕೆ ತಲುಪಿ ಹಿಂದೆ ಹಾರಿದರು!

ಲಂಡನ್, ಜೂನ್ ೧೬

ಕೆಪ್ಟನ್ ಪರ್ಸಿವಲ್ ಎಂಬ ವೈಮಾನಿಕರು ಒಂದೇ ಒಂದು ದಿನದೊಳಗೆ ಇಂಗ್ಲಾಂಡಿನಿಂದ ಸಣ್ಣ ವಿಮಾನದ ಮೂಲಕ ಆಫ್ರಿಕಕ್ಕೆ ಹಾರಿ ಹೋಗಿ, ಅಲ್ಲಿಂದ ಅದೇ ದಿನ ಹಿಂತಿರುಗಿದರು ಸಣ್ಣ ಯಂತ್ರದ ಪ್ರಭಾವವನ್ನು ಪ್ರಚಾರಗೊಳಿಸುವುದಕ್ಕಾಗಿ ಅವರು ಹೀಗೆ ಮಾಡಿದರು

ಅಬ್ದುಲ್ ಗಫರ್‌ಖಾನರ ಪರಿಸ್ಥಿತಿ

ಕೋಹಾಟ್, ಗಡಿನಾಡು ೩೧ ೧೮

ಗಡಿನಾಡಿನ ಪ್ರಾಂತಿಕ ಸಮಿತಿಯ ಅಧ್ಯಕ್ಷರಿಗೆ ಖಾನ್ ಅಬ್ದುಲ್ ಗಫರ್‌ಖಾನರು ಮೇ ೩೧ ೧೮ರಲ್ಲಿ ಸಬರ್ಮತಿ ಜೈಲಿನಿಂದ ಬರೆದ ಒಂದು ಪತ್ರವು ಇದೇ ಜೂನ್ ೧೬ಕ್ಕೆ ವಿಳಾಸದಾರರಿಗೆ ತಲುಪಿತು ಅದರಲ್ಲಿ ಖಾನರು "ಇಲ್ಲಿಗೆ ಬಂದಂದಿನಿಂದ ನಾನು ಸ್ವಸ್ಥನಾಗಿಲ್ಲ ಪಂಜಾಬಿನ ಜೈಲಿಗೆ ಹೋದರೆ ಸ್ವಸ್ಥನಾಬೇಕೆಂದು ಭಾವಿಸಿ ಸರಕಾರಗಳಿಗೆ ಬರೆದೆ ಆದರೆ ಅವುಗಳು ಸುಮ್ಮಗಿವೆ ದೇವರ ಇಚ್ಛೆಯಿದ್ದಂತಾಗಲಿ ಎಲ್ಲವೂ ನಮ್ಮ ಒಳ್ಳೇಯದಕ್ಕೇ ಆಗುತ್ತವೆ ಅದನ್ನು ನಾವು ತಿಳಿಯಲಾರೆವಷ್ಟೆ" ಎಂದು ತಿಳಿಸಿರುವರು

ಇಂಗ್ಲೆಂಡ್—ಜರ್ಮನಿ.

ಲಂಡನ್ ಜೂನ್, ೧೯

ಆಂಗ್ಲೋ—ಜರ್ಮನ್ ಮಾತುಕತೆಗಳು ನಡೆದಂದಿನಿಂದ ಫ್ರಾನ್ಸಿನಲ್ಲಿಯ ರಾಜಕೀಯ ಪಕ್ಷದಲ್ಲಿ ಶಾಂತಿಯಿಲ್ಲ ಆಂಗ್ಲೋ—ಜರ್ಮನ್ ಮಾತುಕತೆಗಳನ್ನು ಫ್ರಾನ್ಸಿನಲ್ಲಿ ಟೀಕಿಸಲಾಗುತ್ತಿದೆ ಜರ್ಮನಿಯ ಜಯವು ಶಾಶ್ವತವಾದುದಲ್ಲವೆಂದೇ ಫ್ರಾನ್ಸಿನ ಹೇಳಿಕೆ

ವಜ್ರಗಳು! —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಹಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಷೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು

(ಸನ್ 1958ರಲ್ಲಿ ಸ್ಥಾಪಿತವಾದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

Part Proprietors f —

Sri Krishna Mills & Co
Oil Manufacturers
Bunder, Mangalore

Bhagavan Ganesh Pai & Co
Copper Sheet & Twist
Merchants, Camp Bazar,
Cannanore

Representatives for the W C.

M/s A & F Harvey
Cotton Spinners,
Tuticorin, Madura &c.

Guardian Assurance Co., Ltd
(Incorporated in England)
Head Office. 68, King
William Street,
London, E. C. 4.

ಎಚ್ಚರಿಕೆ!

ಶಾರದಾ ಭಾವಖಾನೆಯಲ್ಲಿ ಪ್ರಕಟವಾಗುವ ಶ್ರೀ ಎಂ ಗಣಪತಿರಾವ್ ಐಗಳರ ಪಠ್ಯಪುಸ್ತಕಗಳು ಪ್ರಾಕಟಪಟ್ಟಿಗನುಸಾರವಾಗಿಲ್ಲವೆಂದು ಕೆಲವು ಪ್ರಕಾಶಕರು ಸುಳ್ಳು ಹೇಳಿ ನಮ್ಮ ಗಿರಾಕಿಗಳನ್ನು ಹಳ್ಳಿಯ ಕೆಲವು ಕಡೆಗಳಲ್ಲಿ ವಂಚಿಸುತ್ತಿರುವರಾಗಿ ನಮಗೆ ತಿಳಿದುಬಂದಿದೆ. ಆದುದರಿಂದ ನಾವು ನಮ್ಮ ಎಲ್ಲಾ ಗಿರಾಕಿಗಳಿಗೆ ತಿಳಿಸುವುದೇನೆಂದರೆ—ಐಗಳರ ಪಠ್ಯಪುಸ್ತಕಗಳು ಪಾಠಪಟ್ಟಿಗನುಸಾರವಾಗಿಯೇ ಶಾಲಾ ಮಕ್ಕಳಿಗೆ ಯೋಗ್ಯವಾಗುವಂತೆಯೇ ಬರೆಯಲ್ಪಡುತ್ತವೆ ಅವರ ಪುಸ್ತಕಗಳ ಪ್ರಶಸ್ತಿಗೆ ಅವರ ಇಪ್ಪತ್ತು ವರ್ಷಗಳ ಅನುಭವವೇ ಸಾಕ್ಷಿ. ನಮ್ಮ ಗಿರಾಕಿಗಳು ಮೋಸಹೋಗದೆ ನಮ್ಮನ್ನು ಮುಂಚಿನಂತೆಯೇ ಪ್ರೋತ್ಸಾಹಿಸಬೇಕಾಗಿ ಈ ಮೂಲಕ ಕೇಳಿಕೊಳ್ಳಲಾಗಿದೆ.

ಮೆನೇಜರ್,
ಶಾರದಾ ಭಾವಖಾನೆ,
ಮಂಗಳೂರು.

ಖಾಸಗಿ ಶಾಲೆಗಳ

ಉಪಾಧ್ಯಾಯರ ದೂರು

ಜಿಲ್ಲಾಬೋರ್ಡು, ಮುನಿಸಿಪಾಲಿಟಿ ಮೊದಲಾದ ಸ್ಥಳೀಯ ಸಂಸ್ಥೆಗಳು ತಮ್ಮ ಆಡಳಿತಕ್ಕೆ ಒಳಪಟ್ಟ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುವ ಲೋವರ್, ಹಾಯರ್ ಮತ್ತು ಸೆಕೆಂಡರಿ ಉಪಾಧ್ಯಾಯರಿಗೆ ಕ್ರಮವಾಗಿ ೧೫ ೧ ೨೦, ೨೦–೧–೩೦, ಮತ್ತು ೨೫–೧–೩೫ರ ಸ್ಕೇಲಿನ ಪ್ರಕಾರ ಸಂಬಳವನ್ನು ಕೊಡಲೇಬೇಕೆಂಬ ನಿರ್ಬಂಧ ಹಾಕಿದುದಕ್ಕಾಗಿ ಆ ಉಪಾಧ್ಯಾಯರು ಮದ್ರಾಸು ಸರಕಾರಕ್ಕೆ ಕೃತಜ್ಞರಾಗಿರಬೇಕಾಗಿದೆ ಈ ಸುಧಾರಣೆಯಿಂದ ಶಿಕ್ಷಣ ಕ್ಷೇತ್ರದಲ್ಲಿ ಅಗತ್ಯವಾಗಿಯೂ ಶುಭಪರಿಣಾಮಗಳಾಗುವುವು.

ಆದರೆ ಖಾಸಗಿ ಶಾಲೆಗಳಲ್ಲಿ ಕೆಲಸ ಮಾಡುವ ಉಪಾಧ್ಯಾಯರ ಸ್ಥಿತಿಯೇನಾಗಿರುವುದು? ಈ ಶಾಲೆಗಳ ಲೋವರ್, ಹಾಯರ್ ಮತ್ತು ಸೆಕೆಂಡರಿ ಗ್ರೇಡಿನ ಉಪಾಧ್ಯಾಯರಿಗೆ ಪ್ರಾಯಶಃ ಅವರಿಗೆ ಸರಕಾರದಿಂದ ದೊರೆಯುವ ಗ್ರೇಂಟು ಅಂದರೆ ಅನುಕ್ರಮವಾಗಿ ೧೦, ೧೨, ೧೫ ರೂಪಾಯಿಗಳು ಮಾತ್ರ ಕೊಡಲ್ಪಡುತ್ತವೆ ಮೆನೇಜ್ಮೆಂಟಿನವರು ತಮ್ಮ ಶಾಲೆಗಳನ್ನು ಹಣಮಾಡುವ ವಿದ್ಯೆಯನ್ನಾಗಿಟ್ಟುಕೊಂಡಿರುವಲ್ಲಿ ಈ ಉಪಾಧ್ಯಾಯರಿಗೆ ಇದಕ್ಕಿಂತ ಕಡಿಮೆ ಸಂಬಳ ದೊರೆಯುವುದುಂಟು ಅಪರೂಪವಾಗಿ ಕೆಲವು ಶಾಲೆಗಳಲಿ ಮಾತ್ರ ಇದಕ್ಕಿಂತ ಸ್ವಲ್ಪ ಹೆಚ್ಚಿಗೆ ದೊರೆಯುತ್ತಲಿರಬಹುದು

ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಖಾಸಗಿ ಶಾಲೆಗಳ ಉಪಾಧ್ಯಾಯರು ಶ್ರಮಪಟ್ಟು ಕೆಲಸ ಮಾಡಿದ್ದಾರೆ ಈ ಸಂಸ್ಥಾನದ ಪ್ರಾಥಮಿಕ ಶಿಕ್ಷಣ ಪ್ರಚಾರಕಾರ್ಯದಲ್ಲಿ ಅವರ ಬಹು ಮುಖ್ಯವಾದ ಮತ್ತು ಉತ್ಕೃಷ್ಟ ಪಾಲು ಇದೆ ಹೇಗೂ ಅವರ ಕೆಲಸವು ಬೇರೆ ಉಪಾಧ್ಯಾಯರ ಕೆಲಸಕ್ಕಿಂತ ಕಡಿಮೆ ತರದ್ದಾಗಿರುವುದಿಲ್ಲ. ಆದರೆ ಒಂದೇ ಹಳ್ಳಿಯಲ್ಲಿ ಅಥವಾ ಹತ್ತಿರಹತ್ತಿರದ ಎರಡು ಹಳ್ಳಿಗಳಲ್ಲಿರುವ ಒಂದು ಬೋರ್ಡು ಶಾಲೆಯಲ್ಲಿ ಕೆಲಸ ಮಾಡುವ ಹಾಯರ ಗ್ರೇಡು ಉಪಾಧ್ಯಾಯನಿಗೆ ತಿಂಗಳಿಗೆ ೩೦ ರೂಪಾಯಿ ಸಂಬಳ ದೊರೆಯುವುದಾದರೆ ಇನ್ನೊಂದು ಖಾಸಗಿ ಶಾಲೆಯಲ್ಲಿ ಕೆಲಸ ಮಾಡುವ ಅದೇ ಯೋಗ್ಯತೆ ಮತ್ತು ಅಷ್ಟೇ ಸರ್ವಿಸ್ ಇರುವ ಮತ್ತೊಬ್ಬ ಉಪಾಧ್ಯಾಯನಿಗೆ ತಿಂಗಳಿಗೆ ದೊರೆಯುವುದು ೧೨ ರೂಪಾಯಿ ಮಾತ್ರ! ಅದಕ್ಕಿಂತ ಹೆಚ್ಚಿಗೆ ಎಂದಾದರೂ ದೊರೆಯುವುದೆಂಬ ಭರವಸೆ ಕೂಡಾ ಅವನಿಗಿರುವುದಿಲ್ಲ ಇಂಥ ಪರಿಸ್ಥಿತಿಯಲ್ಲಿ ಎಲ್ಲರ ಸಹಾನುಭೂತಿಯು ಖಾಸಗಿ ಶಾಲೆಗಳ ಉಪಾಧ್ಯಾಯರ ಮೇಲಿರಬೇಕಾದ್ದು ಸಹಜವಾಗಿದೆ

ಹೀಗೆ ಖಾಸಗಿ ಶಾಲೆಗಳ ಉಪಾಧ್ಯಾಯರನ್ನು ಪಕ್ಷಪಾತದಿಂದ ನಡೆಸಿಕೊಂಡ ರೀತಿ, ಕಡಮೆ ಸಂಬಳದ ಸಂಬಂಧ ಅವರೊಳಗಿರುವ ತೀವ್ರ ಅಸಮಾಧಾನ—ಈ ಕಾರಣಗಳಿಂದ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಕಡಮೆಯಾಗಿ, ಕಸರು ಬೆಳೆದು, ಪ್ರಾಥಮಿಕ ಶಿಕ್ಷಣ ಪ್ರಚಾರದ ಪ್ರಗತಿಯು ಕುಗ್ಗಿದರೆ ಯಾರೂ ಆಶ್ಚರ್ಯಪಡಬೇಕಾದ್ದಿಲ್ಲ ಹಾಗಾಗುವುದು ಸ್ವಾಭಾವಿಕವಾಗಿದೆ

ಖಾಸಗಿ ಶಾಲೆಗಳಿಗೆ ಹೊಸ ಸ್ಕೇಲಿನ ಪ್ರಕಾರ ಗ್ರೇಂಟ್ ಹಂಚುವ ಆಲೋಚನೆ ಸರಕಾರಕ್ಕಿರುವುದೆಂದೂ ಅದ ಸಿದ್ಧದಲ್ಲಿಯೇ ಆ ಸಂಬಂಧ ಹೊಸ ಕಾನೂನುಗಳನ್ನು ದಯಪಾಲಿಸಲಿಕ್ಕಿರುವುದಾಗಿಯೂ ತಿಳಿಯುತ್ತಿದೆ ಖಾಸಗಿ ಶಾಲೆಗಳ ಉಪಾಧ್ಯಾಯರನ್ನು ಪಕ್ಷಪಾತದಿಂದ ನಡೆಸುವುದರಿಂದಲೂ ಸಂಬಳದ ಸಂಬಂಧ ಅವರೊಳಗೆ ಅಸಮಾಧಾನವುಂಟಾಗುವುದರಿಂದಲೂ ಪ್ರಾಥಮಿಕ ಶಿಕ್ಷಣ ಪ್ರಚಾರಕ್ಕಾಗುವ ಮಹತ್ತರವಾದ ಹಾನಿಗಳನ್ನು ಮನಗಂಡು ಸರಕಾರವು ಬೇರೆ (ಬೋರ್ಡು) ಶಾಲೆಗಳ ಉಪಾಧ್ಯಾಯರಿಗೆ ಸಲ್ಲುತ್ತಿರುವಷ್ಟೇ ಸಂಬಳ ಖಾಸಗಿ ಶಾಲೆಗಳ ಉಪಾಧ್ಯಾಯರಿಗೆ ದೊರೆಯುವ ರೀತಿಯಲ್ಲಿಯೂ, ಸಮಾಜದಲ್ಲಿ ಬೇರೆ ಶಾಲೆಗಳ ಮತ್ತು ಖಾಸಗಿ ಶಾಲೆಗಳ ಉಪಾಧ್ಯಾಯರ ಸ್ಥಾನಮಾನಗಳು ಏಕಪ್ರಕಾರವಾಗಿರುವ ರೀತಿಯಲ್ಲಿಯೂ ಹೊಸ ಸ್ಕೇಲಿನಂತೆ ಹೆಚ್ಚಿಗೆ ಗ್ರೇಂಟು ಕೊಡಿಸುವುದಾಗಿ ನಂಬುತ್ತೇವೆ

ಇದೇ ಪ್ರಸಂಗದಲ್ಲಿ ಇನ್ನೊಂದು ಮಾತನ್ನು ಬರೆಯಬಯಸುತ್ತೇವೆ ಅದೇನೆಂದರೆ-ಖಾಸಗಿ ಶಾಲೆಗಳ ಮೆನೇಜರುಗಳೂ ಆ ಶಾಲೆಗಳ ಉಪಾಧ್ಯಾಯರೂ ಕೈಕೈ ಕೊಟ್ಟು ಪರಸ್ಪರ ಸಹಕಾರ ಬುದ್ಧಿಯಿಂದ ಕೆಲಸ ಮಾಡಿ ಪ್ರಬಲ ಆಂದೋಲನದ ಮೂಲಕ, ಯೋಗ್ಯತೆ ಮತ್ತು ಸರ್ವಿಸಿಗನುಸರಿಸಿ ಎಲ್ಲ ಉಪಾಧ್ಯಾಯರ ಸಂಬಳ, ಸ್ಥಾನ, ಮಾನ ಮೊದಲಾದವು ಏಕಪ್ರಕಾರವಾಗಿರಬೇಕಾದ ವಾಂಛಿತ ಫಲಸಾಧನೆಯಾಗುವ ತನಕ ಭಗೀರಥ ಪ್ರಯತ್ನಗಳನ್ನು ಮಾಡಬೇಕಾದ ಸಮಯವೀಗ ಬಂದಿದೆ ಅದಕ್ಕಾಗಿ ಅವರು ಈಗಿನಿಂದಲೇ ಕಾರ್ಯತತ್ಪರರಾಗಬೇಕು ಅಲ್ಲವಾದರೆ ಅವರ ಅಸ್ತಿತ್ವಕ್ಕೆ ಹಾನಿಯಾಗುವ ದಿನಗಳು ದೂರದಲ್ಲಿ ಉಳಿಯಲಾರವು

ಕಟಪಾಡಿ ಶ್ರೀನಿವಾಸ ಶೆಣೈ, ಕಾರ್ಕಳ

'ಶೃಂಗೇರಿ ಜಹಗೀರಿಯ ಮಂಗಳ ವೈಭವ'

ಶೃಂಗೇರಿ ಶ್ರೀ ಜಗದ್ಗುರು ಚಂದ್ರಶೇಖರ ಭಾರತೀ ಸ್ವಾಮಿಗಳವರು ಇತ್ತೀಚೆಗೆ ತಮ್ಮ ಸರ್ವ ಸ್ವಾತಂತ್ರ್ಯಾಧಿಕಾರವನ್ನು ನಡೆಸಿಕೊಂಡಿರುತ್ತಾರೆ ... ಅಭಿವೃದ್ಧಿ ... ಗಳ ... ಹೇಳತೀರದು ... ಶ್ರೀ ಶ್ರೀಗಳವರ ... ಗಳಿಲ್ಲದೆ ... ಶ್ರೀ ... ಬೆಟ್ಟದ ಶ್ರೀ ಮಲ್ಲಿಕಾರ್ಜುನ ದೇವಾಲಯದಲ್ಲಿ ... ರುದ್ರ ... ವನ್ನು ಕಳೆದ ಒಂದು ತಿಂಗಳಿಂದ ... ಮಾಡಿಸುತ್ತಿದ್ದುದು ಸರಿಯಷ್ಟೆ ಇಷ್ಟೇ ಅಲ್ಲದೇ ಕಳೆದ ಏಕಾದಶಿ ದಿವಸ (೧೨–೬–೩೫) ಶ್ರೀ ಶ್ರೀಗಳವರೇ ಖುದ್ದು ಬೆಟ್ಟದ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ದೇವಸ್ಥಾನಕ್ಕೆ ದಯಮಾಡಿಸಿ 'ಶತರುದ್ರಾಭಿಷೇಕ'ವನ್ನು ಮಾಡಿದರು ಆ ದಿವಸ ಲಾಗಾಯ್ತು ಮಳೆಯು ಪ್ರಾರಂಭವಾಗಿರುತ್ತದೆ ಬಿಸಿಲೆಂಬುವುದು ಇಲ್ಲವೇ ಇಲ್ಲ ಒಂದು ವಾರದ ಹಿಂದೆ 'ಪ್ರಜೆಗಳೆಲ್ಲರೂ ಮುಂದಿನ ಜೀವನಕ್ಕೆ ಬಹಳ ತೊಂದರೆಯೆಂದು ತವಕಪಡುತ್ತಲಿದ್ದರು

ಶ್ರೀ ಮಠದ ಸಾವಿರಾರು ಖಂಡುಗ ಭತ್ತವನ್ನು ಇದುವರೆವಿಗೂ ವಿಷಸಿಗೆ ಕೊಟ್ಟು ಅಕ್ಕಿ ಮಾಡಿಸುತ್ತಿದ್ದರು ಶ್ರೀ ಶ್ರೀಗಳವರ ಸನ್ನಿಧಾನಕ್ಕೆ ಈ ವಿಷಯವು ತಿಳಿದು ಬಂದು ಪೂರ್ವಕಾಲದ ಪದ್ಧತಿಯಂತೆ ಕೊಟ್ಟುಕುಟ್ಟಿಸುವ ಪದ್ಧತಿಯನ್ನು ಪುನರುಜ್ಜೀವನಗೊಳಿಸಬೇಕೆಂತಲೂ ಹೀಗೆ ಮಾಡುವುದರಿಂದ ಅನೇಕ ಕೂಲಿಗಾರರುಗಳಿಗೆ ಜೀವನಕ್ಕೆ ಸಹಾಯಮಾಡಿದಂತಾಗುವುದೆಂದೂ ನಮ್ಮ ಪೂರ್ವ ಪದ್ಧತಿಯನ್ನೇ ಅನುಸರಿಸುವುದುತ್ತಮವೆಂದೂ ಖುದ್ದು ಶ್ರೀ ಶ್ರೀಗಳವರೇ ಅತ್ತ ದಯಪಾಲಿಸುವರಾಗಿ ಕೇಳಿ ತಿಳಿಯಬರುತ್ತದೆ ಅಲ್ಲದೆ ಇದೇ ಜಹಗೀರಿಯಲ್ಲಿ ಹೊಸದಾಗಿ ಕಳೆದ ಪಂಚಮಿ ದಿವಸ 'ವಿವೇಕ ಸಂವರ್ಧಿನಿ ಪಾಠಶಾಲಾ' ಎಂಬ ಧರ್ಮ ಪಾಠಶಾಲೆಯೊಂದನ್ನು ಶ್ರೀ ಶ್ರೀಗಳವರೇ ಧರ್ಮೋದ್ಧಾರಕಸ್ವಾಮಿಗಳ್ ನಿರ್ಮಿಸಲು ಅಪ್ಪಣೆ ಮಾಡಿ ಆ ದಿವಸ ಶ್ರೀ ಶಾರದಾಂಬಾ, ಶ್ರೀ ಜಗದ್ಗುರು ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳವರ ಮತ್ತು ಶ್ರೀ ಜಗದ್ಗುರು ಉಗ್ರನರಸಿಂಹ ಭಾರತೀ ಸ್ವಾಮಿಗಳವರ ಭಾವಚಿತ್ರಗಳೊಡನೆ ಮೆರವಣಿಗೆಯಲ್ಲಿ ಒರುದು ... ಗಳೊಡನೆ ಹೊಸದಾಗಿ ಕಟ್ಟಲ್ಪಡುತ್ತಿರುವ ... ದಲ್ಲಿ ವೇದೋಕ್ತವಾಗಿ ಪಾಠಶಾಲೆಯ ಪ್ರಾರಂಭೋತ್ಸವವನ್ನು ನಡೆಸಿದರು

ಸಕಲೇಶಪುರದ ಕಡೆಗೆ ಹೋಗುವ ಪ್ರಯಾಣಿಕರಿಗೆ

ಹೊಸ ಸೌಕರ್ಯ.

ಮಂಗಳೂರಿನಿಂದ 10 ಘಂಟೆಗೆ ಸಕಲೇಶಪುರಕ್ಕೂ, ಸಕಲೇಶಪುರದಿಂದ 12 ಘಂಟೆಗೆ ಮಂಗಳೂರಿಗೂ, ಹೊರಡುವ ನೂತನವಾದ ಒಂದು ಸರ್ವೀಸು ಇತ್ತೀಚೆಗೇನೇ ಪ್ರಾರಂಭವಾಗಿರುತ್ತದೆ.

ಇದರಿಂದ ಉಡುಪಿ, ಮೂಲ್ಕಿ, ಕಾರ್ಕಳ, ಮೂಡಬಿದ್ರೆ, ಕಿನ್ನಿಗೋಳಿ ಮೊದಲಾದ ಕಡೆಗಳಿಂದ ಬೆಳಿಗ್ಗೆ ಹೊರಟು ಅದೇ ದಿನ ಮಧ್ಯಾಹ್ನ ಘಂಟೆ 4½ಗೆ ಸಕಲೇಶಪುರಕ್ಕೆ ಹೋಗಲಿಕ್ಕೆ ಅನುಕೂಲವಾಗಿರುತ್ತದೆ ಮಂಗಳೂರು, ಬಂಟವಾಳ, ಪುತ್ತೂರು ಮೊದಲಾದ ಸ್ಥಳಗಳಿಂದ ಮಧ್ಯಾಹ್ನದ ಊಟ ತೀರಿಸಿ ಹೊರಡಲು ಅನುಕೂಲವಾಗಿರುತ್ತದೆ

ಅಲ್ಲದೆ,

ಸಕಲೇಶಪುರದಿಂದ ಅದೇ ದಿನ ಬೇಲೂರು, ಚಿಕ್ಕಮಗಳೂರು, ಮೂಡುಗೆರೆಗೂ, ಹಾಸನಕ್ಕೆಹೋಗಿ ರೈಲು ಹತ್ತಿ ಮೈಸೂರಿಗೂ ಹೋಗಲು ಈ ಸಮಯವು ಬಹಳ ಅನುಕೂಲವಿದೆ

ಹಾಗೆಯೇ,

ಚಿಕ್ಕಮಗಳೂರು, ಬೇಲೂರು, ಮೂಡಿಗೆರೆ, ಹಾನಬಾಳ, ಚಂಗಡಹಳ್ಳಿ, ಶುಕ್ರವಾರ ಸಂತೆ ಮೊದಲಾದ ಸ್ಥಳಗಳಿಂದ ಬೆಳಿಗ್ಗೆ ಹೊರಟೂ, ಹಾಸನದಿಂದ ಊಟ ತೀರಿಸಿಯೂ, ಮಂಗಳೂರು, ಪುತ್ತೂರು, ಬಂಟವಾಳ ಇತ್ಯಾದಿ ಸ್ಥಳಗಳಿಗೆ ಅದೇ ದಿನ ಸಾಯಂಕಾಲ ತಲಪಲು ಅತೀ ಅನುಕೂಲವಾಗಿದೆ

The Canara Public Conveyance Co., Ltd., Kodialbail Mangalore.

Shri Sakaleshwara Motor Service Ltd., Saklaspur.

ಅಜ್ಜಂಪುರ ಖಾದಿಕೇಂದ್ರ.

ಖಾದಿಕೇಂದ್ರದ ವಾರ್ಷಿಕೋತ್ಸವ.

ಅಜ್ಜಂಪುರ, ತಾ. ೯-೬-೩೫.

ಈ ದಿನ ವಂಗೀಯ ಸುಪ್ರಸಿದ್ಧ ರಸಾಯನ ಶಾಸ್ತ್ರಕೋವಿದರೆನಿಸಿದ ಆಚಾರ್ಯ ಪ್ರಫುಲ್ಲ ಚಂದ್ರರಾಯ್‌ರವರ ಶುಭಾಶೀರ್ವಾದದಿಂದ ಕಡೂರು ಜಿಲ್ಲಾಬೋರ್ಡಿನ ಆಶ್ರಯದಲ್ಲಿ ತೆರಿಯಲ್ಪಟ್ಟ ಅಜ್ಜಂಪುರದ ಖಾದೀ ಕೇಂದ್ರದ ದ್ವಿತೀಯ ವಾರ್ಷಿಕೋತ್ಸವವು ಜಿಲ್ಲಾಧಿಕಾರಿಗಳಾದ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಕಾರ್ಯಕ್ರಮವು ಮಧ್ಯಾಹ್ನ ಎರಡು ಗಂಟೆಗೆ ಸರಿಯಾಗಿ ದೇವತಾ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು ಅನೇಕ ಹಳ್ಳಿಗಳಿಂದ ನೂಲುವವರು ತಮ್ಮ ರಾಟಿಗಳೊಂದಿಗೆ ಬಂದು ನೂಲುವ ಪಂದ್ಯದಲ್ಲಿ ಭಾಗಿಗಳಾಗಿದ್ದರು. ಶ್ರೀ| ರಾಜಗೋಪಾಲರವರ 'ಸುದರ್ಶನ' ಚರಕದಲ್ಲಿ ದಾರವನ್ನು ತೆಗೆದು ತೋರಿಸಿ ಅದರ ಅನೇಕ ವೈಶಿಷ್ಟ್ಯಗಳನ್ನು ವಿವರಿಸಿದರು. ಖಾದಿ ಸಮಿತಿಯ ಸ್ವಾಗತಾಧ್ಯಕ್ಷರಾದ ಶ್ರೀ| ಶೆಟ್ರ ಶಿದ್ಧಪ್ಪನವರು ಎಲ್ಲರಿಗೂ ಸ್ವಾಗತವನ್ನು ಬಯಸಿ ಜಿಲ್ಲಾಬೋರ್ಡಿನವರನ್ನು ಕೊಂಡಾಡಿ ಸರಕಾರದವರೂ ಸಹ ಈ ಗ್ರಾಮಪುನರುಜ್ಜೀವನ ಕಾಯಕ್ಕೆ ಬೇಕಾದ ಸಹಾಯ ಮಾಡಬೇಕಾದ್ದು ಅವರ ಕರ್ತವ್ಯವೆಂದರು ಕೇಂದ್ರದ ಸ್ಥಾಪನೆಗೆ ತ್ರಿಕರಣಪೂರ್ವಕವಾಗಿ ದುಡಿದ ಶ್ರೀ ಹೊಸಕೊಪ್ಪ ಕೃಷ್ಣರಾಯರನ್ನು ಇಂಥಾ ಸಮಯದಲ್ಲಿ ನೆನಸಬೇಕಾದ್ದು ಯುಕ್ತವೆಂದು ತಿಳಿಸಿ ಕೂತರು

ಖಾದಿ ಸಮಿತಿಯ ಚಾಲಕರಾದ ಶ್ರೀ| ಕೆ ಟಿ ಸತ್ಯನಾರಾಯಣ ಶೆಟ್ರು ಎದ್ದು ಕೇಂದ್ರದ ವರದಿಯನ್ನೋದಿ ಕೇಂದಕ್ಕಿರುವ ಆರ್ಥಿಕ ಮುಗ್ಗಟ್ಟು ಈಗ ಅದಕ್ಕೆ ಬೇಕಾಗಿರುವ ಸಹಾಯ ಇವುಗಳನ್ನು ತಿಳಿಸಿ ಇಂತಹ ಸಾಮಾಜಿಕ ಹಾಗೂ ರಾಷ್ಟ್ರೀಯ ಕಾರ್ಯಕ್ಕೆ ಜಿಲ್ಲಾ ಬೋರ್ಡಿನವರು ಇನ್ನೂ ಹೆಚ್ಚಾದ ಸಹಾಯಕೊಡಬೇಕೆಂದು ಕೇಳಿದರು

ಅನಂತರ ಜಿಲ್ಲಾಬೋರ್ಡು ಅಧ್ಯಕ್ಷರಾದ ಶ್ರೀ ಬಾಗಮನೆ ದೇವ ಗೌಡರಿದ್ದು ಜಿಲ್ಲಾ ಬೋರ್ಡು ಈ ಸಂಸ್ಥೆಗೆ ತನ್ನಿಂದಾದಷ್ಟು ಸಹಾಯಮಾಡಲು ಸಿದ್ಧವಿದೆಯೆಂದೂ ಆದರೆ ಕೇಂದ್ರದ ಭಂಡವಾಳ ಹೆಚ್ಚಿಸಲು ಕಾರ್ಯವನ್ನು ವಿಸ್ತಾರಗೊಳಿಸಲು ಸರಕಾರದ ಕೈಗಾರಿಕೆ ಶಾಖೆಯವರ ಸಹಾಯ ಕೇಳಿಕೊಳ್ಳಬೇಕೆಂತಲೂ ಈ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಯವರ ಸಹಾಯ ಕೇಳಿಕೊಳ್ಳಬೇಕೆಂತಲೂ ಸಾರ್ವಜನಿಕ ಸಮಿತಿಯೊಂದರ ನೇತೃತ್ವದಲ್ಲಿ ಲಾಟರಿ (Raffle)ಯೊಂದನ್ನು ಏರ್ಪಡಿಸುವುದರ ಮೂಲಕ ಅಭಿವೃದ್ಧಿಪಡಿಸಬೇಕೆಂತಲೂ ತಿಳಿಸಿದರು

ಆ ಮೇಲೆ ಅಖಿಲಭಾರತ ಚರಕಾ ಸಂಘದ ಕರ್ನಾಟಕ ಶಾಖೆಯ ಕಾರ್ಯದರ್ಶಿಯವರಾದ ಶ್ರೀ ಕೌಜಲಗಿ ಹನುಮಂತ ರಾಯರು (ಇವರ ಪರಿಚಯವನ್ನು ಸಭಿಕರಿಗೆ ಶ್ರೀ ಕೆ ಟಿ. ಸತ್ಯನಾರಾಯಣ ಶೆಟ್ರು ಮಾಡಿಕೊಟ್ಟರು) ಖಾದಿ ಪ್ರಚಾರ, ಅದರಿಂದ ದೇಶಕ್ಕಾಗುವ ಲಾಭ ಮುಂತಾದುವನ್ನು ವಿವರಿಸಿ ಶ್ರೀ ರಾಜಗೋಪಾಲರ ಸುದರ್ಶನ ಚರಕವು ಎಲ್ಲಾ ಕಡೆಗೂ ಪ್ರಚಾರವಾಗಲು ಸರಕಾರದವರು ನಾಲ್ಕಾರು ಸಾವಿರ ರುಪಾಯಿ ಬಂಡವಾಳದಿಂದ ಪರದೇಶಗಳ ಸುಪ್ರಸಿದ್ಧ ಸಿಂಗರ್ ಮುಂತಾದ ಕಂಪೆನಿಗಳವರಂತೆ ಕಂತುಗಳ ಮೂಲಕ ಹಳ್ಳಿಗಳಿಗೆ ಚರಕಗಳನ್ನೊದಗಿಸುವ ಸಂಘವೊಂದನ್ನು ಸ್ಥಾಪಿಸಿ, ತನ್ಮೂಲಕ ಅರೆಹೊಟ್ಟೆ ತಿನ್ನುತ್ತಿರುವ ರೈತರ ಕೈಗಾರಿಕೆಯನ್ನುದ್ಧರಿಸಿ, ಅನೇಕ ವಿಚಾರಗಳಲ್ಲಿ "ಮಾದರಿ ರಾಜ್ಯ" ವೆನಿಸಿಕೊಂಡಿರುವುದನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂದರು ಖಾದಿ ಹುಟ್ಟುವಳಿಯ ವಿಚಾರದಲ್ಲಿ ತಮ್ಮ ಕೆಲವು ಸಲಹೆಗಳನ್ನಿತ್ತು ಖಾದಿ ಧರಿಸುವ ಮೂಲಕ ರಾಷ್ಟ್ರಕಾರ್ಯಕ್ಕೆ ನೆರವಾಗಬೇಕೆಂದರು. ಕೇಂದ್ರದ ನೇಕಾರ ನೂಲುಕಾರರನ್ನು ಕುರಿತು ತಮ್ಮ ಕೈಯಿಂದಲೇ ತೆಗೆದ ದಾರದಿಂದ ಆದ ಬಟ್ಟೆಯನ್ನು ಎಲ್ಲರೂ ಧರಿಸಬೇಕೆಂತಲೂ ಹಾಗಿಲ್ಲದಪಕ್ಷದಲ್ಲಿ ತಮ್ಮ ಮನೆಯ ರೊಟ್ಟಿಯನ್ನು ಮಾರಿ ಹೊರಗಿನ ಬ್ರೆಡ್ ಬಿಸ್ಕಿಟ್‌ಗಳನ್ನುಪಯೋಗಿಸಿದಂತಾಗುವದೆಂದೂ ತಿಳಿಸಿದರು.

ಅನಂತರ ಪಂಡಿತ ಲಕ್ಷ್ಮಣದೇವ ವಿದ್ಯಾರ್ಥಿಯವರು ಹಿಂದೀ ಭಾಷೆಯಿಂದಾಗುವ ಉಪಕಾರ, ಅದರ ಶೈಲಿ ಸಾಹಿತ್ಯ ಸರಳತೆಗಳನ್ನು ಕುರಿತು ಉಪನ್ಯಾಸ ಮಾಡಿದರು ಕಡೆಗೆ ಅಧ್ಯಕ್ಷ ಶ್ರೀ| ಮಾಸ್ತಿಯವರೆದ್ದು ಅವರ ಸರಳ ಗಂಭೀರ ಭಾಷೆಯಲ್ಲಿ ಅಂದಿನ ಉತ್ಸವಕ್ಕೆ ತಮ್ಮನ್ನು ಅಧ್ಯಕ್ಷರನ್ನಾಗಿ ಆರಿಸಿದ್ದರಿಂದ ಖಾದಿ ಸಮಿತಿಯವರಿಗೆ ತಮ್ಮ ಕೃತಜ್ಞತೆಗಳನ್ನು ಅರ್ಪಿಸಿದರು. ಖಾದಿಯ ಮೇಲಿನ ತಮ್ಮ ವಿಶ್ವಾಸವನ್ನು ತಿಳಿಸಿ ಖಾದಿಯು ಅರೆಹೊಟ್ಟೆ ಊಟ ಮಾಡುತ್ತಿರುವ ದರಿದ್ರ ನಾರಾಯಣನ ಸೇವೆಯನ್ನು ಮಾಡಲೋಸ್ಕರವಾಗಿಯೇ ಜನ್ಮವೆತ್ತಿರುವದೆಂದೂ, ಹಿಂದೂದೇಶದ ರೈತರ ಉಪವೃತ್ತಿಯೆಣಿಸಿ, ಅವರ ಒಪ್ಪೊತ್ತಿನ ಗಂಜಿಗೆ ಮಾರ್ಗವಾಗಿರುವ ಖಾದಿಯನ್ನು ಎಲ್ಲರೂ ಧರಿಸುವದರಿಂದ ದೇಶಸೇವೆ ಈಶಸೇವೆಮಾಡಿದಂತಾಗುವದೆಂದೂ, ಹೇಳಿದರ ಅಜ್ಜಂಪುರದ ಖಾದಿ ಕೇಂದ್ರದ ಅಭಿವೃದ್ಧಿಯನ್ನು ಕುರಿತು, ಅದಕ್ಕಾಗಿ ಯಾವಾಗಲೂ ತಮ್ಮ ಹೃತ್ಪೂರ್ವಕವಾದ ಸಹಾಯವೀಯುವದಾಗಿ ಭರವಸೆಯಿತ್ತರು ಹಿಂದೀ ಪ್ರಚಾರವನ್ನು ಕುರಿತು, ರಾಷ್ಟ್ರವೆಲ್ಲ ಐಕ್ಯತೆಯಿಂದಿರಲು ಒಂದು ಸಾರ್ವಜನಿಕ ಭಾಷೆಯು ಅವಶ್ಯಕವೆಂದೂ, ಆದರೆ ನಮ್ಮ ಕರ್ನಾಟಕದಲ್ಲಿ ಕನ್ನಡ ಮಾತಾಪ್ರೇಮವೆಯೇ ಅಲ್ಪವಾಗಿರುವುದರಿಂದ, ಕನ್ನಡಿಗರೆಲ್ಲರೂ, ಕನ್ನಡವನ್ನಭಿವೃದ್ಧಿಪಡಿಸಬೇಕೆಂದೂ, ಅದು ಅವರ ಕರ್ತವ್ಯವೆಂದೂ ಹೇಳಿದರು ಮಾಸ್ತಿಯವರ ಭಾಷಣವು ಜನತೆಯ ಮನದಲ್ಲೊಡೆದು ಮೂಡುವಂತಿತ್ತು ಮನದ ಉತ್ಸಾಹವನ್ನು ಉಕ್ಕಿಸುವಂತಿತ್ತು

ಕೊನೆಯಲ್ಲಿ ಖಾದಿಸಮಿತಿಯ ಚಾಲಕರಾದ ಶ್ರೀ| ಕೆ ಟಿ. ಟಿ ಸತ್ಯನಾರಾಯಣ ಶೆಟ್ರು ವಾರ್ಷಿಕೋತ್ಸವವು ಯಶಸ್ವಿಯಾಗುವಂತೆ ಬಯಸಿ ಸಂದೇಶಗಳನ್ನು ಕಳುಹಿಸಿದ ಕೆಲವು ಮಹನೀಯರುಗಳ ಹೆಸರುಗಳನ್ನು ಸಭೆಗೆ ತಿಳಿಸಿದರು. (ಅವರಲ್ಲಿ ಪ್ರಾಮುಖ್ಯರಾದವರು ಶ್ರೀಮಾನ್ ಮಹಾರಾಜರ ಆಪ್ತ ಕಾರ್ಯದರ್ಶಿಗಳಾದ ಸರ್ ಟಾಡ್ ಹಂಟರವರು, ಶ್ರೀ ಹೊಸಕೊಪ್ಪ ಕೃಷ್ಣರಾಯರು ಮುಂತಾದ ಮಹನೀಯರು) ಕಡೆಗೆ ಎಲ್ಲರಿಗೂ ಉಪಹಾರವಾಯಿತು. ಉಪಹಾರದ ನಂತರ ೬ ಗಂಟೆಗೆ ಮಾಸ್ತಿಯವರೆದುರಿನಲ್ಲಿ ಇದೇ ಊರಿನ ಬಾಲಚಮೂಹಗಳು ತಮ್ಮ ಆಟ, ವಿನೋದಾದಿಗಳನ್ನು ತೋರಿಸಿದರು. ರಾಷ್ಟ್ರೀಯ ಜಯಕಾರ, ಶ್ರೀಮಾನ್ ಮಹಾರಾಜರ ಶ್ರೇಯಃಪ್ರಾರ್ಥನೆಯಾಗಿ ಅಧ್ಯಕ್ಷರ ಶ್ರೇಯಸ್ಸನ್ನು ಕೋರಿದ ಮೇಲೆ ಇಂದಿನ ಮಹಾ ಸಮಾರಂಭವು ಮುಕ್ತಾಯವಾಯಿತು.

(೫ನೇ ಪುಟದಿಂದ ಮುಂದುವರಿದುದು)

ಕ್ವೆಟ್ಟಾ ಭೂಕಂಪ–ಪೌರಸಭೆಯ ಸಹಾಯ

ಕ್ವೆಟ್ಟಾ ಭೂಕಂಪ ನಿಧಿಗೆ ಬೆಂಗಳೂರು ಪೌರಸಭೆಯವರು ೧೦೦೦ ರೂ.ಗಳ ದ್ರವ್ಯ ಸಹಾಯ ಮಾಡಿದ್ದಾರೆ

ಅಲ್ಲದೆ, ಪೌರಸಭೆಯವರು ಮಹಾಜನರಿಂದಲೂ ಹಣಕೂಡಿಸಿ ಕಳುಹಿಸಿಕೊಡಲು ಪ್ರಯತ್ನಪಡುತ್ತಿದ್ದಾರೆ ಅದಕ್ಕಾಗಿ ಒಂದು ಪ್ರಾರ್ಥನೆಯನ್ನು ಪ್ರಸಿದ್ಧಿಸಿದ್ದಾರೆ

ವಿಶ್ವಕರ್ನಾಟಕ ಪತ್ರಿಕೆಯವರು ಒಂದು ನಿಧಿಯನ್ನು ಕೂಡಿಸಿ ಕಳುಹಿಸುವ ಉದ್ದೇಶವನ್ನು ತೊಟ್ಟಿದ್ದಾರೆ

ಮೈಸೂರು ಸರಕಾರದವರು ಕ್ವೆಟ್ಟಾ ಭೂಕಂಪದ ಪೈಸರಾಯರ ನಿಧಿಗೆ ೨೫,೦೦೦ ರೂಪಾಯಿಗಳನ್ನು ಕೊಡಲು ನಿರ್ಧರಿಸಿರುವರೆಂದು ವದಂತಿ ಮೈಸೂರು ಟಿದಾರ್ಯದಲ್ಲಿಯೂ ಮಾದರಿಯಾಗಲಿ'

ನಾದಿರ ಚಲಚ್ಚಿತ್ರದ ಇನ್ನೊಂದು ದೃಶ್ಯ.

ಆತ್ಮಹತ್ಯೆ

ಬೆಂಗಳೂರು ಚಾಮರಾಜ ಪೇಟೆಯಲ್ಲಿ ಸುಮಾರು ೨೫ ವರ್ಷ ವಯಸ್ಸಿನ ಯುವಕನೊಬ್ಬನು ತಾ ೧೨ನೇ ದಿನ ಮಧ್ಯಾಹ್ನ ನೇಣು ಹಾಕಿಕೊಂಡು ಸತ್ತಿರುತ್ತಾನೆ ಆತನ ಹೆಸರು ಸೀತಾರಾಮಯ್ಯ ಬಸವನಗುಡಿಯ ಸಾಕಮ್ಮನೆಂಬಾಕೆಗೂ ಈತನಿಗೂ ಇದ್ದ ಮನಸ್ತಾಪವೇ ಈ ಆತ್ಮಹತ್ಯೆಗೆ ಕಾರಣವೆಂದು ತಿಳಿದುಬರುತ್ತದೆ. ಪೋಲೀಸರು ತನಿಖೆ ನಡಸುತ್ತಿದ್ದಾರೆ.

ಆಕಸ್ಮಿಕ ಮರಣ

ಬೆಂಗಳೂರು ಮಹಾರಾಜಾ ಮಿಲ್ಲಿನ ಬಳಿಯಿರುವ ಕೆರೆಯಲ್ಲಿ ಈಜಲು ಬಾರದ ಇಬ್ಬರು ಹುಡುಗರು ಆಡುತ್ತಿದ್ದರು. ಕಾಲು ಜಾರಿ ಬಿದ್ದು ನೀರಲ್ಲಿ ಮುಳುಗಿ, ಇಬ್ಬರೂ ಮಡಿದರು

ನೋಟೀಸು.

ಕಾಸರಗೋಡು–ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O P No 69/1935

ಅಬ್ದುಲ್ಲ ರಹಿಮಾನೆ, ಕಡ್ಪರ ಮುಹಮ್ಮದೆ ಮಗ, ಕಾಸರಗೋಡು ತಾಲ್ಲೂಕು ಕಾಂಞಂಗಾಡು ಗ್ರಾಮದ ಕಡ್ಪರದಲ್ಲಿರುವವ–ಅರ್ಜಿದಾರ.

ಮತ್ತು

1. ಮರಿಯಮ್ಮ, ಕಡ್ಪರ ಮುಹಮ್ಮದೆ ಹೆಂಡ್ತಿ.

2 ಇಬ್ರಾಹಿನೆ, 3 ಐಸಮ್ಮ, ಸದ್ರಿ ಕಡ್ಪರ ಮುಹಮ್ಮದೆಗೆ ೧ನೇ ರಿಸ್ಪಾಂಡೆಂಟಳಲ್ಲಿ ಹುಟ್ಟಿದ ಮಕ್ಕಳು—ಕಾಸರಗೋಡುತಾಲ್ಲೂಕು ಕಾಂಞಂಗಾಡು ಗ್ರಾಮದ ಕಡ್ಪರದಲ್ಲಿರುವವರು—ರಿಸ್ಪಾಂಡೆಂಟರು

ಇವರೊಳಗೆ–

ಅರ್ಜಿದಾರ ಮತ್ತು 2, 3ನೇ ರಿಸ್ಪಾಂಡೆಂಟರ ತಂದೆ, 1ನೇ ರಿಸ್ಪಾಂಡೆಂಟಳ ಗಂಡ ಮೃತಪಟ್ಟ ಕಡ್ಪರ ಮುಹಮ್ಮದೆ ಎಂಬವನು ಕಾಸರಗೋಡು ಕೆನರಾ ಬ್ಯಾಂಕಿನಲ್ಲಿ Loan No 1053/1933ನೇಗೆ ರೂ 40-0-0ಕ್ಕೆ ಅಡವು ಇಟ್ಟ ಚಿನ್ನದ ನಗಗಳನ್ನು ವಾಪಾಸು ಪಡಿಯುವರೆ ಅರ್ಜಿದಾರನ ಹೆಸರಲ್ಲಿ ವಾರಿಸ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರನು ದಾಖ್ಲುಮಾಡಿದ ಮೇಲ್ಕಂಡ ಅರ್ಜಿಯು ತಾ 28 6-1935ಕ್ಕೆ ತಸ್ಕಿಗೆ ಇಟ್ಟಿರುವುದರಿಂದ ಆ ಕುರಿತ ಆಕ್ಷೇಪವುಳ್ಳವರು ಸದರಿ ದಿವಸ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಹರಿಸಬಹುದೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ

ಕಾಸರಗೋಡು 18-6-35 } **C M. Kamath,** *Vakil for Petitioner*

ಕುಷ್ಠರೋಗ ಮತ್ತು ವಾತರೋಗ ನೊಂದು ಕಂಗೆಟ್ಟು ಹೋಗಿರುವವರಿಗೆ

ಮೂಲಿಕೆಯ ಔಷಧಿಗಳಿಂದ ಆಶ್ಚರ್ಯಕರವಾಗಿ ಪೂರ್ಣಗುಣವಾಗುತ್ತದೆ. ಅದ್ಭುತಕರ ಪಿವಾರಣೆ ಉಂಡಿತ

Yeshajalay, Chandanpur
Khulna, Bengal (A W)

WANTED

Qualified part-time sewing mistresses for Board Secondary Schools from 1st July 1935 on Rs. 10 per mensem The applications should reach the undersigned on or before the 5th July 1935

A B Shetty,
President, District Board, S. K
Mangalore, 15—6—1935

ಕೆನರಾ ವಾಚ್ ವರ್ಕ್ಸ್, ಮಂಗಳೂರು.

ದಿನಂಪ್ರತಿ ನೂರಾರು ಗಿರಾಕಿಗಳು ಬಂದು ನಮ್ಮಲ್ಲಿರುವ ಹಲವು ಬಗೆಯ ಕೈಗಡಿಯಾರ ಗೋಡೆಯ ಗಡಿಯಾರ, ಆಟದ ಸಾಮಾನು ಮೊದಲಾದುವುಗಳನ್ನು ಪಡೆದು, ಸಂತೃಪ್ತಿ ಹೊಂದಿ ಸಂತೋಷದಿಂದ ಹೋಗುವ ವಿಷಯವೊಂದೇ ನಮ್ಮಲ್ಲಿನ ಸರಕುಗಳಿಗೆ ಜನರಿಂದ ದೊರೆತಿರುವ ಪ್ರಶಂಸೆ. ನೀವೂ ನಮ್ಮಲ್ಲಿಗೆ ಬರಬಹುದು_ತೃಪ್ತಿ ಹೊಂದಬಹುದು-ಮೆಚ್ಚಿದರೆ ಪಡೆಯಬಹುದು

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassan and Kadur districts.
2. Coorg, South Canara, Shimoga and Chitaldrug districts
3. Tumkur, Kolar, Bangalore and civil and Military Stations, Bangalore Cantonment

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY

ಡಾಕ್ಟರ ವಾಮನ ಗೋಪಾಳರವರ

ಐಹಿಡಾಯಿಜ್ನ
ಸಾರ್ಸಪೆರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ.
[illegible] ವರ್ಷದ [illegible]
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್
ಕೇಶವರಾವರ
ಫೊಸ್ಫರಸ್ ಗುಳಿಗೆಗಳು.
[illegible]

ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, [illegible], ಮುಂಬಾಯಿ ೨.
[illegible] ಮಂಗಳೂರು
[illegible]

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ



[illegible]

ಕರ್ಮ ಬ್ರದರ್ಸ್ ಅಂಡ್ ಕಂಪೆನಿ,
[illegible]

[ಗುಣಬಾರದಿದ್ದರೆ ಹಣ ವಾಪಾಸು]

[illegible]

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

[illegible]

[illegible] S M C.

NEW ARRIVALS.

Medicines.

Dr Schuessler's Twelve Tissue Remedies ... per bot ... As 1/-
Homoeopathy Medicines ... per bot ... As 6/-
Sugar of Milk Dr Schwabe's ... 1lb Rs 2
Haarlem Oil a world renowned remedy ... As ... per phial
Dr Haole's New Curative Firth—Radium Cure Rs 4 per B
Dr Schwabe's other special remedies are always in stock
Please call us for ...

Kanarese Books Family ... Chemistry Re 1-
... Domestic Homoeopathy Rs 1-4

If you own these two Books you will be able to pick up treatment and administer Tissue & Homoeopathic Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes and prices from As 2 to ... Delightful in aroma, harming in ... Please try

Kirloskar Pumps.

We are the Representatives for Kirloskar Brothers for their reliable Shallow well and Deep well Pumps, ... etc and stock—

Pipes and pipe fittings at cheap prices Coir Mats and Mattings

Steadler Pencils and Stationeries

We are the recognised agents for STEADLER'S ... stationeries and shall be glad to serve you

Olympia Typwriter.

An up-to date Machine in Standard and portable sizes
For Futher particulars please write to—

Basel Mission Book & Tract Depository,
Mangalore, S K ... Hubli, S M

The Popular Insurance Company, Ltd.

Head Office:—MANGALORE, S India

The Pioneer Life Office of the West Coast.

A FEW PRESS OPINIONS

Established as recently as 1929, the Popular Insurance Co Ltd, has already made considerable progress having at the end of 1934 a total business of over Rs. 10 lakhs in force with a premium income of over Rs. 52,000. The Life Fund of the Company stood at the same date at over Rs. 50,000. The expenses of the office are moderate and mortality experience extremely favourable. During the year 1934 the Company completed business of over Rs. 5,40,000 with a premium income of over Rs 26,000. The first quinquennial valuation of the Company is in progress and the report of the Actuary expected to be placed before the Directors of the Company before the end of May 1935. From the steady progress of the Company during the last five years and the economical and efficient management of its affairs, it is not too much to hope that the valuation will disclose a very sound position.

Insurance & Finance Review, Calcutta.

[illegible]

ರಾಷ್ಟ್ರಬಂಧು.

[illegible] x x x x x [illegible]

'ಪ್ರಜಾಮತ,' ಮದರಾಸು.

Wanted Influential Agents in unrepresented areas on liberal terms.

ಮಚಲೀಪಟಾಮಿನಲ್ಲಿ ೨೨ ಕೊಂಬೆಗಳಿರುವ ತಾಳೆಯ ಮರವಿದೆ!!!

ನಿಮ್ಮ ತಾಳೆಯ ಮರಕ್ಕೆ ಎಷ್ಟು ಕೊಂಬೆ?—ಒಂದೇ! ಆದರೆ ಇಪ್ಪತ್ತೆರಡು ಕೊಂಬೆಗಳಿರುವ ತಾಳೆಯ ಮರವಿದೆಯೆಂಬ ವಾರ್ತೆಯೂ ಅದರೊಡನೆ ಅದರ ಭಾವಚಿತ್ರವೂ ಬಂದಿವೆ. ಮಚಲೀಪಟಾಮಿನ—ನಜ್ವೀಡ್ ಮಾರ್ಗದ ಮೂವತ್ತೊಂಭತ್ತನೇ ಮೈಲುಕಲ್ಲಿನ ಬಳಿ-ನಜ್ವೀಡ್ ರೈಲ್ವೇಸ್ಟೇಷನಿನಿಂದ ಒಂದೂವರೆ ಮೈಲು ದೂರದಲ್ಲಿ—ಈ ವಿಚಿತ್ರ ತಾಳೆಮರವು ಇದೆ. ಅಖಿಲ ಹಿಂದೂ ದೇಶದಲ್ಲಿ ಇಂತಹ ಮರವು ಇದೊಂದೇ ಆಗಿದೆಯೆಂಬ ಊಹನೆಯಿದೆ. ಇದರ ಭಾವಚಿತ್ರಗಳು ಪರದೇಶಗಳಿಗೆ ಹೋಗುತ್ತಿವೆ. 'ವಿಚಿತ್ರ ಲೋಕವಲ್ಲವೇ ಇದು!' ಈ ಮರವು ಬಹು ಎತ್ತರಕ್ಕೆ ಬೆಳೆದಿದೆ.

ದೀರ್ಘಕಾಲ ಬದುಕಬೇಕಾದರೆ—

ಒಂದು ಸೋಜಿಗೋದಾಹರಣೆ. ಮನುಷ್ಯನ ಗ್ರಂಥಿಗಳಿಗೆ ಕಸಿಕಟ್ಟಬಹುದಂತೆ! ಡಾ। ಸರ್ಜ್ ವರನೋಫ್ ಎಂಬವರು ಕೆಲವು ಶೋಧೆಗಳನ್ನು ನಡೆಸಿ ಮುದುಕರನ್ನು ಯೌವನಸ್ಥರನ್ನಾಗಿ ಮಾಡಬಹುದೆಂದು ಕಂಡುಹಿಡಿದಿದ್ದಾರೆ. ಇವರು ಕೆಲವು ಸ್ತ್ರೀಯರ ಗ್ರಂಥಿಗಳಿಗೆ ಕಸಿ ಮಾಡಿದುದರಿಂದ ಅವರು ೬೦ ವರ್ಷ ದಾಟಿದವರಾಗಿದ್ದರೂ ಮೂರೇ ಮೂರು ವರ್ಷಗಳಲ್ಲಿ ಯೌವನೆಯರಾಗಿರುವರೆಂದು ಇವರ ಹೇಳಿಕೆ. ಗ್ರಂಥಿಯನ್ನು ಕಸಿಮಾಡಿಕೊಂಡ ಸ್ತ್ರೀಪುರುಷರ ಸೌಂದರ್ಯವು ಹೆಚ್ಚುವುದು, ಅವರ ನೇತ್ರಗಳು ಶೋಭಾಯಮಾನವಾಗುವುವು. ಅವರಲ್ಲಿ ಚೈತನ್ಯವು ತುಂಬುವುದು. ಅವರ ಬುದ್ಧಿಶಕ್ತಿಯು ವೃದ್ಧಿಯಾಗುವುದು. ಅವರ ದೇಹಶಕ್ತಿಯು ಹೆಚ್ಚುವುದು ಎಂದು ಈ ಶೋಧನಕಾರರ ಮತ. ಈ ಸಂಶೋಧಕರಿಗೆ ಈಗ ೬೫ ವರ್ಷ ಪ್ರಾಯ. ೨೧ ವರ್ಷ ಪ್ರಾಯದ ಸುಂದರಿಯೊಡನೆ ಸಂಸಾರ ನಡೆಸುತ್ತಿರುವರು.

"ಸ್ತ್ರೀಯರು ಪುರುಷರಾಗುತ್ತಾರೆ"—

"ಪುರುಷರು ಸ್ತ್ರೀಯರಾಗುತ್ತಾರೆ" ಎಂಬ ಮಾತನ್ನು ಈಗಿನ ಕಾಲದಲ್ಲಿ ನಾವು ಕೇಳುತ್ತಿದ್ದೇವೆ. ಈ ಮಾತು ವ್ಯಕ್ತವಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಸ್ತ್ರೀಯರು ಪುರುಷರಂತೆ ಸ್ವಾತಂತ್ರ್ಯಪ್ರಿಯರಾಗಿ ಅದು ಸಕಲ ಜಗತ್ತಿನಲ್ಲಿ ಹೆಚ್ಚಾಗುತ್ತಿರುವುದನ್ನು ಪ್ರತಿ ದೇಶದಲ್ಲೂ ನಾವು ನೋಡುತ್ತಿದ್ದೇವೆ. ಆದರೆ, ಸ್ತ್ರೀಯರು ನಿಜವಾಗಿಯೂ ಪುರುಷರ ರೂಪವನ್ನೇ ತಾಳುವ ಕಥೆಯನ್ನು ಕೇಳಿಲ್ಲ. ಈ ಕಥೆಯನ್ನೋದಿ. ಕನ್ನಿಂಗ್‌ಹೇವ್ ಎಂಬವರು ಚೀನಾದ ಟೀನ್‌ಸ್ಟೀನ್ ಎಂಬಲ್ಲಿನ ೨೦ ವರ್ಷ ಪ್ರಾಯದ ತರುಣಿಯ ಎರಡು ಭಾವಚಿತ್ರಗಳನ್ನು ಒದಗಿಸಿಕೊಂಡಿರುತ್ತಾರೆ. ಈ ತರುಣಿಯು ಮೊದಲು ತರುಣಿಯಾಗಿದ್ದರೂ ಈಗ ಅವಳ ರೂಪವಿದೇ ಬೇರೆಯಾಗಿದೆ. ಪೂರ್ಣ ಗಂಡಸಿನಂತಾಗಿರುವಳು. ಅವಳ ಮುಖಲಕ್ಷಣವು ಯುವಕನಂತೆಯೇ ಆಗಿದೆ! ಅವಳ ಹಿಂದಿನ ಮತ್ತು ಇಂದಿನ ಚಿತ್ರಗಳನ್ನು ಪರಿಶೋಲಿಸಿದರೆ ಅದೇ ಗುರುತೇ ಸಿಗುವುದಿಲ್ಲ. ಪ್ರಕೃತಿಯ ಆಟವೆಂತಹುದೋ ಏನೋ!!!

ಬಾಲವಿರುವ ಮನುಷ್ಯ—

ಯಾರಾದರೂ ಇರುವುದಾದರೆ... ಡಾರ್ವಿನ್ನನು ಹೇಳುವಂತೆ, ನಾವೆಲ್ಲರೂ ಮಂಗಗಳ ವಂಶಜರು ಎಂದು ಹೇಳಿಕೊಳ್ಳಬಹುದಿತ್ತು. ಆದರೆ ಬಾಲವಿರುವ ಜನರು ಕಾಣುವುದಿಲ್ಲ. (ಬಾಲವನ್ನಡಗಿಸುವವರಿರುವರೋ ಏನೋ—ಅವರು ವಿಜ್ಞಾನವನ್ನೇ ಮೋಸಗೊಳಿಸಿದಂತಾಗುವುದು) ಆದರೆ, ದುರ್ಗೇಶವಡಾಕ್ ಬಜಾರಿನ ಒಂದು ಮನೆಯಲ್ಲಿ ಒಂದು ಮಗುವು ಬೆಳೆಯುತ್ತಾ ಇದೆ. ಮಂಗಕ್ಕಿರುವಂತೆ ಈ ಮಗುವಿಗೂ ಹಿಂದಿನಿಂದ ಮೂರು ಇಂಚು ಉದ್ದದ ಸಣ್ಣ ಬಾಲ ವಿದೆ. ಇದನ್ನು ನೋಡಲು ನೂರಾರು ಜನರು ಹೋಗುತ್ತಿರುವರು. ದೇವರ ದಯೆಯಿಂದ ಈ ಬಾಲವು ಬೇಗನೇ ಬಿದ್ದುಬಿಟ್ಟರೆ, ಮನುಷ್ಯನು ಕೋತಿಯ ವಂಶಜನೆಂದಿರುವ ಮಹಾ ಆರೋಪವು ಬಿದ್ದುಹೋಗಬಹುದು. ಪ್ರತಿಯೊಬ್ಬ ಭಾರತೀಯನೂ ಪ್ರಾರ್ಥಿಸಲಿ!

"ಪ್ರಕೃತಿಯ ಗುಟ್ಟೇನು?"—

—ಎಂದು ಕಂಡು ಹಿಡಿಯಲು ನಮಗೆ ಸಾಧ್ಯವೇ ಆಗುವುದಿಲ್ಲ. "ಯಾವ ದಿನ ಮನುಷ್ಯನು ಪ್ರಕೃತಿಯ ರಹಸ್ಯವನ್ನು ಕಂಡುಹಿಡಿದನೋ ಅವನಿಗೆ ಅಂದಿನಿಂದ ಅವನಿಗೆ ಮರಣವಿಲ್ಲ"ವೆಂದು ಒಬ್ಬ ಮಹಾತ್ಮನು ಹೇಳಿರುವನಂತೆ. ಅಂತಹ ಗುಟ್ಟನ್ನು ಕಂಡುಹಿಡಿಯಲಾಗದಿದ್ದುದರಿಂದಲೇ ಪ್ರಪಂಚದಲ್ಲಿನ ಭೂಕಂಪದಿಂದ ಜನರು ಸಾಯಬೇಕಾಯಿತು. ಈ ಪ್ರಕೃತಿಯ ಆಟದ ಕಥೆಯನ್ನು ಕೇಳಿ—ಈಜಿಪ್ಟ್ ದೇಶದಲ್ಲಿ ಒಂದು ಸಣ್ಣ ಗುಡಿಸಲಲ್ಲಿ ಕೋಳಿಯೊಂದು ಮೊಟ್ಟೆಯೊಡೆಯಿತು. ಕೆಲವು ಮರಿಗಳು ಹೊರಗಾದುವು. ನೋಡುವುದೇನು!—ಒಂದು ಮರಿಗೆ ನಾಲ್ಕು ಕಾಲುಗಳು! ನೋಡಿದವರ ತಲೆಗೆ ಸಿಡಿಲು ಬಡಿದಂತಾಯಿತು. ಪ್ರಾಣಿಶಾಸ್ತ್ರಜ್ಞರು ಬಂದು ಪರಿಶೋಧಿಸಿದರು. ಯಾವ ಕಾರಣದಿಂದ ಇದಕ್ಕೆ ನಾಲ್ಕು ಕಾಲುಗಳು ಬಂದುವೆಂದು ತಿಳಿಯಲಾರದಾದರು! ದೇಹವೆಲ್ಲಾ ಒಂದೇ; ಕಾಲುಗಳು ಮಾತ್ರ ೪! ಎಂತಹ ಆಶ್ಚರ್ಯ!

"ಯೇಸು ಕ್ರಿಸ್ತನ ಕಟಾಕ್ಷವು ಈಗಲೂ ನಡೆಯುತ್ತದೆ"—

ಎಂದು ನಾವು ಹೇಳಿದೊಡನೆ, "ಅದೆಂತಹ ಕಟಾಕ್ಷ?"—ಎನ್ನುತ್ತಾ ಕಣ್ತೆರೆದು ಆಶ್ಚರ್ಯವನ್ನು ಸೂಚಿಸಿ, ಆ ವಾಕ್ಯವನ್ನು ಹೇಳಿದುದಕ್ಕಾಗಿ ನಮ್ಮ ಮೇಲೆ ಉಂಟಾಗುವ ಅಭಿಮಾನಗಳೂ ಕಡಿಮೆಯಿರಲಾರದು. ಆದರೆ, ಸತ್ಯಸಂಗತಿಯನ್ನು ಮುಚ್ಚುಮರೆಯಿಲ್ಲದೆ ಹೇಳುವ ಕರ್ತವ್ಯವನ್ನು ನಮಗೆ ಈ ವಾರ್ತೆಯು ಕೊಟ್ಟಿರುತ್ತದೆ. ಜಾಂಕ್ ಸ್ಟೆಡ್ ಎಂಬಲ್ಲಿನ ದಿ ಲಿಟ್ಲ್ ಫ್ಲವರ್ ಕಾಟೇಜ್ ಎಂಬುದರಲ್ಲಿ ಮಿಸೆಸ್ ಮೇರಿ ಎಫ್. ಕೊನ್ನರ್ಸ್ ಎಂಬವಳಿರುವಳು. ಫೆಬ್ರವರಿ ೨೨ನೇ ದಿನ ಇವಳು ರಾತ್ರಿ ನಿದ್ರಿಸಿದ್ದಾಗ ಇವಳಿಗೊಂದು ಕನಸು ಕಂಡಿತು. ತಾನೊಂದು ಗುಡ್ಡದ ಮಾರ್ಗವಾಗಿ ನಡೆದುಹೋಗೆ ಆ ಗುಡ್ಡದ ತುದಿಯಲ್ಲಿದ್ದ ಕ್ರಿಸ್ತನನ್ನು ಕಂಡ ಹಾಗೆಯೂ ಕ್ರಿಸ್ತನೊಡನೆ ತಾನು ಅತನ ಸಂಕಷ್ಟಗಳ ಕುರಿತಾಗಿ ವಿಚಾರಿಸಿದ ಹಾಗೆಯೂ, ಆದಕ್ಕೆ ಉತ್ತರವಾಗಿ ಅತನು ತನ್ನ ಕೈಗಳನ್ನೂ ತನ್ನ ಮೈಯನ್ನು ಮುಟ್ಟಿದ ಹಾಗೆಯೂ ಅವಳಿಗೆ ಕನಸಾಯಿತು. ಒಡನೆ ಎಚ್ಚರಿದಳು. ನೋಡಲಾಗಿ, ಅವಳ ಎರಡು ಕಾಲುಗಳಲ್ಲೂ ಎರಡು ಕೈಗಳ ತಟ್ಟಿನಲ್ಲಿಯೂ ಒಂದೊಂದು ದೊಡ್ಡ ದೊಡ್ಡ ಗಾಯಗಳು ಕಂಡುಬಂದುವು. ಅವಳ ಹಣೆಯಲ್ಲೂ ಒಂದು ಕೆಂಪಗಿನ ಗಾಯವಿದ್ದಿತು. ಇವಳ ಭಾವಚಿತ್ರವು ಬಂದಿದೆ. ಅದರಲ್ಲಿ ಆ ೪ ಕೈಕಾಲುಗಳಲ್ಲಿನ ಗಾಯಗಳೂ ಸ್ಪಷ್ಟವಾಗಿ ತೋರುತ್ತಿವೆ. ವಿಶ್ವಕೋಶವೊಂದರಲ್ಲಿ ಇಂತಹ ೯೦ ಘಟನೆಗಳನ್ನು ಉದಾಹರಿಸಿರುವರು.

ತಾಜ್ ಮಹಲಿನ ನಕಲನ್ನು—

ಎತ್ತಿ ಅದರ ಸರಿಸಾಟಿಗೆ ನಿಲ್ಲುವ ಇನ್ನೊಂದು ತಾಜ್ ಮಹಾಲನ್ನು ಅಮೇರಿಕಾದಲ್ಲಿ ರಚಿಸುವ ಏರ್ಪಾಡಾಗಿದೆಯೆಂಬ ಆಶ್ಚರ್ಯಕರ ವಾರ್ತೆಯು ಬಂದಿದೆ. ಈ ವಾರ್ತೆಯನ್ನು ಕೇಳಿ ಯಾರೂ ಮತ್ಸರಗೊಳ್ಳಬಾರದು. ಕಾರಣ, ಹೆಚ್ಚಿನಮಟ್ಟಿಗೆ ವೆಚ್ಚವಾಗುವ ಹಣವು ನಮ್ಮ ದೇಶದಲ್ಲೇ ಉಳಿಯುವುದು. ಹಿಂದೆ ಡೋರಿಸ್ ಡ್ಯೂಕ್ ಎಂಬ ಹೆಸರಿನಲ್ಲಿದ್ದು ಈಗ ಮಿಸೆಸ್ ಜೇಮ್ಸ್ ಕ್ರೊಮ್‌ವೆಲ್ ಎಂದು ಕರೆಯಲ್ಪಡುವ ಆ ಅಮೇರಿಕಾದ ಮಹಿಳೆಯು ಗಂಡನೊಡನೆ ಇತ್ತೀಚೆಗೆ ಹಿಂದೂದೇಶಕ್ಕೆ ಬಂದಿದ್ದು ಗಾಂಧೀಜಿಯವರನ್ನು ಕಂಡು, ತಾಜ್‌ಮಹಾಲನ್ನು ಬೆಳದಿಂಗಳಲ್ಲಿ ನೋಡಿ ಆನಂದತುಂದಿಲಳಾಗಿ ನಮ್ಮ ತಾಜ್‌ಮಹಾಲಿನ ತಾಜಾ ನಕಲನ್ನು ಎತ್ತಿ, ಅಮೇರಿಕಾದಲ್ಲಿ ಇದರಂತೆಯೇ ಒಂದು ಮಹಾಲನ್ನು ರಚಿಸಬೇಕೆಂದು ನಿರ್ಧರಿಸಿರುವಳು. ಇವಳು ಜೊಗೆಸ್ಪೂರ್ ವ್ಯಾಪಾರದ ಮುಖಿಯಾಧಿಪತಿಯ ಪತ್ನಿ. ಆಗತ್ಯವಿರುವ ಕಂಟ್ರಾಕ್ಟರರನ್ನೂ, ನಕಾಶೆಯನ್ನೂ, ಸಾಮಗ್ರಿಗಳನ್ನೂ ಒದಗಿಸಿಕೊಳ್ಳುವುದರಲ್ಲಿ ಅವಳೀಗ ನಿರತಳಾಗಿರುವಳು.

"ನಾವು ಕೋತಿಯ ರಾಜ್ಯಕ್ಕೆ ಹೋಗುತ್ತಿದ್ದೇವೆ"—

ಎಂದು ಯಾವನಾದರೂ ಸಂಶೋಧಕನು ನಿಮ್ಮೊಡನೆ ಹೇಳಿದರೆ ನಿಮಗೆ ಸಿಟ್ಟೇರಬಹುದು. ಆ ಮಾತಿನ ಅರ್ಥವೂ ನಿಮಗಾಗಲಾರದು. ಕೋತಿರಾಜ್ಯಾಭಿಮುಖನಾಗಿ ಹೋಗುತ್ತಿರುವ ಮನುಷ್ಯನ ಕಥೆಯನ್ನು ಇಲ್ಲಿ ಕೇಳಿ. ಕೆಲಿಫೋರ್ನಿಯಾದಲ್ಲಿನ ಅಜುಸಾ ಎಂಬಲ್ಲಿ ಜೋರ್ಜ್ ಬೋರ್‌ಲೆಟ್ ಎಂಬವನೊಬ್ಬನಿರುವನು. ಇವನು ಕಳೆದ ಒಂದು ವರ್ಷದಿಂದ ೪ ಇಂಚುಗಳಷ್ಟು ಗಿಡ್ಡನಾಗಿದ್ದಾನೆ. ಇವನ ಶಿರಸ್ಸು ಮುಜ್ಜುವಿನ ಶಿರಸ್ಸಿನಂತೆ ಅಗಲವಾಗಿದೆ. ಕಣ್ಣಿನ ಲಕ್ಷಣವೂ ಕೋತಿಯ ಕಣ್ಣಿನ ಲಕ್ಷಣವನ್ನು ಬಿಟ್ಟಿಲ್ಲ. ಇವನ ದೇಹವು ಕುಗ್ಗಿಹೋಗಿರುವುದರಿಂದಾಗಿ ಇವನ ಮುಂಗೈಯು ಇವನ ತೊಡೆಗೆ ತಾಗುತ್ತಿದೆ. ಮನುಷ್ಯರೆಲ್ಲರೂ ಹೀಗಾಗಬಹುದೇ ಎಂದು ದೇವರೊಡನೆಯೇ ನಾವು ಕೇಳಬೇಕು!

ಒಂದು ಮುಕ್ಕಾಲನ್ನು ಉಳಿಸಿ—

ಲಕ್ಷಾಧಿಪತಿಯಾದವರ ಕಥೆಗಳೂ, ಅದೇ ಮುಕ್ಕಾಲನ್ನು ಉಳಿಸಹೋಗಿ ಲಕ್ಷಾಧಿಪತಿಗಳು ಭಿಕ್ಷಾಧಿಪತಿಗಳಾದ ಕಥೆಗಳೂ ಅಲ್ಲಲ್ಲಿ ಪ್ರಕಟವಾಗಿರುವುದನ್ನು ನೀವು ಓದಿರಬಹುದು. ಆದರೆ ಇಲ್ಲೊಂದು ಕಥೆಯಿದೆ. ಒಂದು ಮುಕ್ಕಾಲನ್ನು ಉಳಿಸಹೋಗಿ ಅವನು ತನ್ನಲ್ಲಿದ್ದ ೧೦ ಪವನುಗಳನ್ನು ಹೇಗೆ ಕಳೆದುಕೊಂಡನೆಂದು ಓದಿರಿ. ಲಂಡನಿನಲ್ಲಿ ಒಬ್ಬ ಗೃಹಸ್ಥನು ಹಳೆಯ ವರ್ತಮಾನಪತ್ರಿಕೆಯ ರಕ್ಷಾಪತ್ರದೊಳಗೆ ಹೊಸ ಪತ್ರಿಕೆಯೊಂದನ್ನು ಸೇರಿಸಿ, ತನ್ನ ಮಿತ್ರನೊಬ್ಬನಿಗೆ ಕಳುಹಿಸಿದನು. ಆ ಪತ್ರವನ್ನು ಅಂಚೆ ಆಫೀಸಿನವರು ಸೆರೆಹಿಡಿದರು. ವಿಚಾರಿಸಿ ಮೊಕದ್ದಮೆ ನಡೆಸಿದರು. ಅಪರಾಧಿಗೆ ೧೦ ಪೌಂಡುಗಳ ಮೊಬಲಗಿನ ದಂಡನೆಯು ವಿಧಿಸಲ್ಪಟ್ಟಿತು. ಒಂದು ಮುಕ್ಕಾಲಿನ ಸರಕಾರೀ ತಂಬಾಕನ್ನು ಪಡೆದುಕೊಂಡು ಅದರ ಸಿಗರೇಟನ್ನು ಮಾಡಿದ ಒಬ್ಬಳು ಬಡವೆಗೆ ಲಂಡನಿನಲ್ಲಿ ೪೭೬೨ ಪವನುಗಳ ದಂಡನೆಯಾಗಿದೆ. ಮಾತ್ರ ಅವಳು ಆ ದಂಡವನ್ನು ತೆರಲಾರದೆ ಸೆಟ್ಟಿಗೆ ಸೆರೆಮನೆಗೆ ಹೋದಳೆಂಬುದು ಸಂತೋಷಕರವೆನ್ನಿ!

'ಎತ್ತಿನ ಗಾಡಿಯಲ್ಲಿ ಲೋಕಸಂಚಾರ ಮಾಡೋಣವೇ?'

—ಎಂದು ಯಾರಾದರೊಬ್ಬ ಪತಿಯು ತನ್ನ ಸತಿಯೊಡನೆ ವಿಚಾರಿಸಿದರೆ ಒಡನೆ "ನಿಮ್ಮ ತಲೆ ಹುಚ್ಚಾಗಿದೆ ಸುಮ್ಮನಿರಿ" ಎಂದು ಹೇಳುವ ಸ್ತ್ರೀಯರು ನಮ್ಮಲ್ಲಿ ಕಡಮೆಯಾಗಲಾರರೆಂದು ನಮ್ಮ ಭರವಸೆ. ಆದರೆ ಮಿ। ಸಿರಿಲ್ ಡೋಬ್ ಬರೋ ಎಂಬವರು ಇದೇ ರೀತಿ ತನ್ನ ಪತ್ನಿಯೊಡನೆ ವಿಚಾರಿಸುವುದಕ್ಕಿಂತ ಮೊದಲೇ ಅವರ ಪತ್ನಿಯರು ಈ ಸಲಹೆಯನ್ನು ಕೊಟ್ಟು ೪೬ ರೂಪಾಯಿಗಳಿಗೆ ಒಂದು ಎತ್ತನ್ನೂ ಗಾಡಿಯನ್ನೂ ಪಡೆದು, ಈಗ ೩೬೦೦ ಮೈಲುಗಳನ್ನು ದಾಟಿರುವರು. ಅವರು ಅನ್ನ ನೀರಿಲ್ಲದೆ ದಿನಹರಣೆಮಾಡಿದ ಅನುಭವವೂ ಇದೆ. ಕೈಯಲ್ಲಿ ಕಾಸಿಲ್ಲದೆ ನಡೆದ ದಿನವೂ ಇದೆ. ಆದರೆ ಆ ಸ್ತ್ರೀಯು ಧೃತಿಗೆಡಲಿಲ್ಲ. ಗಂಡನಂತೂ ಧೀರನೇ. ಈಗ ಈ ದಂಪತಿಗಳು ಲಂಡನಿನಲ್ಲಿ ಬಂದಿಳಿದಿರುವರು. ತಮ್ಮ ಸಂಚಾರದ ಅನುಭವವನ್ನು ಹೇಳಿ ಮುದ್ದು ಪಡೆದು ಮುಂದೆ ನಡೆಯುತ್ತಿರುವರು.

ರಾಕ್ಷಸರು ಇಂದು ಕೂಡಾ ಇದ್ದಾರೆ—

ಅದೆಲ್ಲಿ? ಎಂದು ತಿಳಿಯಲು ನೀವು ಆತುರರಾಗಬಹುದು. ಸರ್ಬಿಯಾದ ಬುಕೀರ್ ಎಂಬಲ್ಲಿಗೆ ಪ್ರೊ। ಆಲ್ಬರ್ಟ್ ಫೋಕ್ಸ್ ಎಂಬ ಬಲ್ಗೇರಿಯಾದ ಸಂಶೋಧಕರೊಬ್ಬರು ಹೋದರು. ಅಲ್ಲಿ ರಾಕ್ಷಸನೊಬ್ಬನಿರುವನೆಂಬುದನ್ನು ತಿಳಿದರು. ಹೋಗಿ ನೋಡಿದರು. ಇವನು ೧೦ ಅಡಿ ೬ ಅಂಗುಲ ಎತ್ತರವಿರುವನು. ಇಷ್ಟು ದೀರ್ಘದೇಹಿಯು ಲೋಕದಲ್ಲಿರುವುದಿಲ್ಲ. ಇವನ ಪ್ರಾಯವು ಬರೀ ೧೯ ವರ್ಷ. ೩೪೦ ಪೌಂಡು ಭಾರವಿರುತ್ತಾನೆ. ಮುಖವು ಆನೆಮರಿಯ ದೊಡ್ಡ ಪ್ರತಿಮೆಯಂತಿದೆ. ಹಣೆಯ ಮೇಲೆ ಕೂದಲ ಗುಳ್ಳೆಗಳು ಎದ್ದಿವೆ. ಉದರ ಪ್ರಾಂತ್ಯವು ಬಹು ದೊಡ್ಡದಾಗಿರುವುದರಿಂದ ಅವನಿಗೆ ಎದ್ದು ನಿಲ್ಲಲು ತ್ರಾಣವಿರುವುದಿಲ್ಲ.

ನೀರಿನ ಮೇಲೆ ಮೋಟರ್ ನಡೆಯುತ್ತದೆ.

ಇದು ಕಲ್ಪಿತ ವಾರ್ತೆಯಲ್ಲ. ಜರ್ಮನಿಯ ಹಂಬಾರ್ಗ್‌ನ ಬೌಲಿಂಗ್ ಎಂಬ ತರುಣನು ಮೇ ೨೯ನೇ ದಿನ ಓಡಿಸಿ ತೋರಿಸಿದ ಅದ್ಭುತ! ಇವನ ಈ ಮೋಟರು ೧೪ ಅಡಿ ಉದ್ದವಿದೆ. ನೋಟಕ್ಕೆ ಇದು ಮೋಟರಿನಂತೆಯೇ ಇದೆ. ಮಾರ್ಗದ ಮೇಲೆ ನಡೆಯುವಾಗ ಇದು ನಾಲ್ಕು ಚಕ್ರಗಳ ಆಧಾರದಿಂದಲೇ ನಡೆಯುತ್ತದೆ. ನೀರಿಗಿಳಿದೊಡನೆ ಈ ನಾಲ್ಕು ಚಕ್ರಗಳೂ ಒಳಗೆ ಸೇರಿಬಿಡುತ್ತವೆ. ಒಡನೆಯೇ, ಎರಡು ಪೆಡಲ್‌ಗಳು ಹೊರಗೆ ಬರುತ್ತವೆ. ಮಾರ್ಗದ ಮೇಲೆ ನಿಮ್ಮ ಮೋಟರ್ ಯಾವ ವೇಗದಿಂದೋಡುತ್ತದೋ, ಅದೇ ವೇಗದಿಂದ ನೀರಿನ ಮೇಲೆಯೂ ಈ ಮೋಟರ್ ಓಡುತ್ತದೆಂದರೆ ನಿಮಗೆ ಆಶ್ಚರ್ಯವಾಗಬಹುದು.

ಅರಸನೆಂದರೆ ಬಹು ಸುಖಜೀವಿ—

ಎಂದು ನಮ್ಮೆಲ್ಲರ ತಿಳುವಳಿಕೆ. ಅವನ ವಿಲಾಸಮಂದಿರ, ಅವನ ಸೇವಾದಳಗಳು, ಅವನ ವೈಭವಗಳನ್ನು ಕಂಡ ನಾವು ಅವನನ್ನು ಕಂಡು ಮತ್ಸರಗೊಳ್ಳುವುದೂ ಇದೆ. ಆದರೆ ಅವನ ಗತಿ ಅವನಿಗೇ ಗೊತ್ತು! ಇತ್ತಲಾಗೆ ಮಂಚೂಕೋದ ಸಾರ್ವಭೌಮನಾದ ಕಾಂಗ್ ಡೇಯವರು ಜಪಾನಿನ ಸಾರ್ವಭೌಮರನ್ನು ಕಾಣಲು ಹೊರಟರು. ಮಾರ್ಸೇಲ್ಸಿನಲ್ಲಿ ಕಿಂಗ್ ಅಲೆಗ್ಸಾಂಡರನ್ನು ಕೊಲೆಮಾಡಿದಂತೆ ತನ್ನನ್ನೂ ಯಾರಾದರೂ ಕೊಂದಿಕ್ಕಬಹುದೆಂಬ ಭಯದಿಂದ ಅವರು ೪೦೦ ಮೈಲುಗಳ ಉದ್ದಕ್ಕೂ ಎರಡೆರಡು ಮೀಟರು ಅಗಲ ರಕ್ಷಕರ ಗೋಡೆಗಳನ್ನಿಡಿಸಿ ಅವುಗಳೊಳಗಿಂದ ಮೋಟರಿನಲ್ಲಿ ಓಡಿದರು. ರೈಲ್ವೆಯ ಪ್ರತಿಯೊಂದು ಯಾರ್ಡನ್ನೂ ಜಾಗ್ರತೆಯಿಂದ ಪರೀಕ್ಷಿಸಿದ ನಂತರವೇ ಅವರು ಕಂಬಿಯನ್ನು ದಾಟಿದರು.

ಮಂತ್ರಿಯ ಪುತ್ರಿಯು ಉಪಾಧ್ಯಾಯಿನಿಯಾಗಿರುವಳು.

ಮಿ। ಗ್ಲೇಡ್‌ಸ್ಟನ್ನೆಂದರೆ ಬ್ರಿಟಿಷ ಪ್ರಧಾನಮಂತ್ರಿಯಾಗಿದ್ದವರು. ಅವರ ಪುತ್ರಿ ಹೆಲೆನಾ ಎಂಬವಳು ನ್ಯೂಹೇವನ್ ಕಾಲೇಜಿನಲ್ಲಿ ತನ್ನ ವಿದ್ಯಾಭ್ಯಾಸಂಗವನ್ನು ಮುಗಿಸಿರುವಳು. ಈಗ ಅವಳು ಉಪಾಧ್ಯಾಯಿನಿಯಾಗಿ ಸೇವೆಸಲ್ಲಿಸುತ್ತಿರುವಳು. ಶ್ರೀಮಂತರ ಮಗಳು ಈ ವೃತ್ತಿಗಿಳಿಯುವುದನ್ನು ನೋಡಿ, ಹಿಂದೂದೇಶದಲ್ಲಿ ಹಲವರು ಕಣ್ಣು ಬಾಯಿ ಬಿಡಬಹುದು! ಆದರೆ ಇಂಗ್ಲೆಂಡಿನಲ್ಲಿ ಉದ್ಯೋಗವೇ ಮನುಷ್ಯಲಕ್ಷಣವೆಂದು ತಿಳಿಯುವ ಆದರ್ಶಪುರುಷರಿರುತ್ತಾರೆ.

ನೀವು ಚಾವಿ ಕೊಡುವುದೇ ಬೇಡ!

ಸೆಂಟ್ರಲ್ ಸ್ವೀಡನಿನ ಒರೆಬ್ರೋ ಎಂಬ ನಗರದಲ್ಲಿ ಒಂದು ದೊಡ್ಡ ಗಡಿಯಾರವಿದೆ. ೧೯೧೬ರಲ್ಲಿ ಅದನ್ನು ಅಲ್ಲಿಟ್ಟರು. ಅಂದಿನಿಂದ ಇಂದಿನವರೆಗೆ ಅದಕ್ಕೆ ಯಾರೂ ಚಾವಿ ಕೊಡಲೇ ಇಲ್ಲ—ಕೊಡುವ ಅಗತ್ಯವೇ ಇಲ್ಲ. ವಾತಾವರಣದ ಬಲದಿಂದಾಗಿಯೇ ಅದು ತನಗೆ ಬೇಕಾದ ಚಲನಾಶಕ್ತಿಯನ್ನು ಪಡೆದುಕೊಂಡು ನಡೆಯುತ್ತದೆ. ಇಷ್ಟರವರೆಗೂ ಅದು ಒಂದು ನಿಮಿಷದಷ್ಟು ವ್ಯತ್ಯಾಸವನ್ನು ತೋರಿಸದೆ ಘಂಟೆ ಹೊಡೆದಿದೆ.

ಹೃತ್ಕಮಲವಿಲ್ಲದೆ ಜೀವಿಸಿರುವವರು—

ಇರುವರೇ? ಇಲ್ಲ! ಆದರೆ, ಒಂದೇ ಹೃತ್ಕಮಲವಿರುವ ಬಾಲಕನೊಬ್ಬನು ಬದುಕಿ ಉಳಿದಿರುವ ಕತೆಯನ್ನು ಓದಿ—ಕೆಲಿಫೋರ್ನಿಯಾದ ಗ್ಲೆಂಡೇಲ್ ಎಂಬಲ್ಲಿ ರೋಸೆಲ್ ಎಂಬ ೬ ವರ್ಷ ಪ್ರಾಯದ ಒಬ್ಬ ಬಾಲಕನಿರುವನು. ಇವನಿಗೆ ಇರುವುದು ಒಂದೇ ಹೃತ್ಕಮಲ, ಅದು ಕೂಡಾ ಬಲಪಾರ್ಶ್ವದಲ್ಲಿ. ಇವನ ಶರೀರದ ಕೋಶವು ಇವನ ಎಡಹೃದಯದ ಸ್ಥಾನದಲ್ಲಿದೆ. ಎಕ್ಸ್‌ರೇ ಮೂಲಕ ಪರೀಕ್ಷಿಸಲಾಗಿ ಇಂತಹ ವಿಚಿತ್ರ ರೀತಿಯ ಪ್ರಾಣಿಯೊಂದಿದೆಯೆಂದು ತಿಳಿದುಬಂದಿದೆ. ಹೃದಯದ ಎಡಭಾಗದಲ್ಲೇ ಹೃತ್ಕಮಲವಿರುತ್ತದೆಂದು ಹೇಳುವ ವೈದ್ಯಶಾಸ್ತ್ರಜ್ಞರು ನಾಚಿಕೊಳ್ಳುವ ಪ್ರಸಂಗವಿದು!

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಸಾರ್ಥಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವಿಕಾಸವ - (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ್ಯ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ್ಯ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಅಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ.

Distributors for South Kanara —

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯ ಏಣಿಯನ್ನೇರಿ. ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಟಿನ್ನೊಂದಕ್ಕೆ ರೂ. 1

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ ಕಾಮಶಾಸ್ತ್ರವನ್ನೋದಿರಿ.

Agents — Shah Company, Mangalore
, Pearl & Sons, Mangalore

Atank Nigrah Pharmacy
Chickpet, Bangalore.
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ

ಚರಿತ್ರೆ ಮತ್ತು ಕಥೆಗಳು.	ರೂ. ಅ. ಪೈ	ಸಾಮಾನ್ಯ ವಿಜ್ಞಾನ.	ರೂ. ಅ. ಪೈ
ನಾಲ್ಕನೇ ದರ್ಜೆ	0 6 0		
ಮೂರನೇ ,,	0 4 6	ಎರಡನೇ ದರ್ಜೆ	0 3 0
ಎರಡನೇ ,,	0 4 0		
ಸಮಾಜಶಾಸ್ತ್ರ.		ಮೂರನೇ ,,	0 3 0
ಐದನೇ ದರ್ಜೆ	0 3 0		
ನಾಲ್ಕನೇ ,,	0 3 0	ನಾಲ್ಕನೇ ,,	0 5 0
ಮೂರನೇ ,,	0 2 6		
		ಐದನೇ ,,	0 6 0

ಅಜ್ಜಿ ಕಥೆಗಳು (ಸಚಿತ್ರ.)

ಮೂರು ಕರಡಿಗಳು.
ಹೇನು ಸತ್ತು ಕಾಗೆ ಬಡವಾಯಿತು.
ಮೆಣಸಿನ ಕಾಳಪ್ಪ.
ಜಗಳಗಂಟಿ ಮುದ್ದಿ
ಇಲಿಗಳ ಪಿಕ್ಷ್ ನಿಕ್
ಅಂಗಳ ದಂಗ್ಸು.
ಗುಡುಗುಡು ಗುಮ್ಮಟ ದೇವರು.
ಒಡ್ಡನ ಓಟ.
(ಇವುಗಳ ಕ್ರಯ. 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿ ಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೆ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ಶಿವರಾಮ ಕಾರಂತ ವಿರಚಿತ

ಗ್ನಾನ

ಜ್ಞಾನದ ಮೇಲೆ ವ್ಯಂಗ ಟೀಕೆ.

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ.

ದಪ್ಪಗಿನ ಆಂಟಿಕ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ.

ಕ್ರೌನ್ 1/8 ಆಕಾರದ ೧೮೦ ಪುಟಗಳು.

ಉತ್ತಮ ತರದ ಹಾಸ್ಯ

ಬೆಲೆ: 1-4-0

ಶಾರದಾ ಛಾಪಖಾನೆ, ಮಂಗಳೂರು.

ಇವರಿಂದ ಪಡೆಯಬಹುದು.

ನಡೆದ ಕತೆಗಳು.

True Stories.

ಬಿದಿ ಹುಗಿಸುವ ಸಮಯ:—೪ ನಿಮಿಷಗಳು.
All Rights Reserved.

[ಸಮಾಜದಲ್ಲಿನ ಕುಂದುಕೊರತೆಗಳನ್ನು ತೋರಿಸಿಕೊಡುವುದೇ 'ನಡೆದ ಕತೆಗಳು' ಇವುಗಳ ಉದ್ದೇಶ. ಘಟನೆಗಳೆಲ್ಲ ನಿಜವಾದುವುಗಳು. ಅವುಗಳನ್ನು ಸಂಯೋಜಿಸುವುದರಲ್ಲಿ ಮಾತ್ರ ಅನುಕೂಲ ಪಕ್ಕಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಹೆಸರುಗಳನ್ನು ಕೆಲವೆಡೆಗಳಲ್ಲಿ ಮಾತ್ರ ಬದಲಾಯಿಸಲಾಗಿದೆ.

ವರ–ದಕ್ಷಿಣೆ.

೬.

ಸೀತಮ್ಮ ಗಂಡನ ಮನೆಯಿಂದ ತಾಯಿಯ ಮನೆಗೆ ಬಂದು ಒಂದು ಮಾಸವು ದಾಟಿ ಹೋಯಿತು. ಆದರೂ ಅವಳ ಗಂಡ ರಾಮಪ್ಪನಾಗಲೀ, ಅವನ ಕಡೆಯವರಾಗಲೀ ಸೀತಮ್ಮಳನ್ನು ಕರೆದೊಯ್ಯಲು ಬರಲಿಲ್ಲ. ಮೊದಮೊದಲು ಸೀತಮ್ಮಳ ತಾಯ್ತಂದೆಯರಿಗೆ ಅವಳ ವಿಷಯವಾಗಿ ಏನೂ ತಿಳಿದುಬರಲಿಲ್ಲವಾದರೂ, ಎರಡುಮೂರು ವಾರಗಳು ದಾಟುತ್ತಲೇ ಅವರಿಗೆ ಸೀತಮ್ಮಳ ಪ್ರಕೃತಿಯು ನೆಟ್ಟಗಿಲ್ಲವೆಂದು ಕಂಡು ಬಂತು. ಆದರೂ ಅವರು ಅವಳೊಡನೆ ಏನನ್ನೂ ವಿಚಾರಿಸಲಿಲ್ಲ.

'ನಗೆಯ ರಾಣಿ'ಯೆಂದು ಹೆಸರು ಪಡೆದಿದ್ದ ಸೀತಮ್ಮಳ ನಿಸ್ತೇಜ ಮ್ಲಾನವದನವನ್ನು ಕಂಡ ನೆರೆಹೊರೆಯವರು ಏನೇನೋ ಆಡಿಕೊಳ್ಳುತ್ತಿದ್ದರು.

ಒಂದು ದಿನ ಸೀತಮ್ಮ ಮಿಂದಳು. ತಲೆಗೂದಲನ್ನು ಒರಸುತ್ತಾ ತನ್ನ ಕೋಣೆಗೆ ಹೋದಳು. ಏನೋ ವಸ್ತ್ರಗಳನ್ನು ಹುಡುಕುವಂತೆ ನಟಿಸಿದಳು. ಅತ್ತ ಇತ್ತ ನೋಡಿ, ಥಕ್ಕನೆ ಕೋಣೆಯ ಬಾಗಲನ್ನು ಹಾಕಿಕೊಂಡಳು.

ಸೀತಮ್ಮಳ ತಾಯಿ ಲಕ್ಷ್ಮಿಯೆಂದರೆ ಕುದ್ರೋಳಿಯಲ್ಲಿ ಬಹು ಹೆಸರುಳ್ಳ ಸ್ತ್ರೀ. ಅವಳ ವ್ಯವಹಾರಕೌಶಲ್ಯ, ಮಾತಿನ ಚಾಣ್ಮೆಗಳಿಗೆಲ್ಲ ಬೆರಗಾಗದವರು ಕಡಮೆ. ಗಂಡನ ಮನೆಯಿಂದ ಬಂದಾಗಿನಿಂದ ಸೀತಮ್ಮಳು ಯಾರೊಡನೆಯೂ ಮಾತನಾಡದೆ ಖಿನ್ನಮನಸ್ಕಳಾಗಿ ದಿನಹರಣ ಮಾಡುತ್ತಿರುವುದನ್ನು ಕಂಡು ಲಕ್ಷ್ಮಿಗೆ ಯೋಚನೆಗಿಟ್ಟಿತು. ಅವಳು ಸೀತಮ್ಮಳ ಪ್ರತಿ ಹೆಜ್ಜೆಯನ್ನು ಸಂಶಯದೃಷ್ಟಿಯಿಂದ ನೋಡಲಾರಂಭಿಸಿದಳು.

ಸೀತಮ್ಮ ಮಿಂದಾದ ಮೇಲೆ ಕೋಣೆಗೆ ಹೋಗಿ ಬಾಗಲು ಹಾಕಿಕೊಳ್ಳುವುದಾದರೂ ಏತಕ್ಕೆ ಎಂಬುದಾಗಿ ಯೋಚಿಸುತ್ತಲಿದ್ದ ಲಕ್ಷ್ಮಿಗೆ ಆ ದಿನ ಥಕ್ಕನೆ ಒಂದು ಯೋಚನೆಯಾಯಿತು. ಒಡನೆ ಎದ್ದು ಸೀತಮ್ಮಳ ಕೋಣೆಯ ಬಳಿಗೆ ನಡೆದಳು. ಬಾಗಲು ಹಾಕಿರುವುದನ್ನು ಕಂಡು ಮೆಲ್ಲಗೆ ಬಗ್ಗಿ, ಅದರ ಸಣ್ಣ ರಂಧ್ರದೊಳಗೆ ಒಂದು ಕಣ್ಣಿಟ್ಟು ಒಳಗೆ ದಿಟ್ಟಿಸಿದಳು. ನೋಡುವುದೇನು?–

ಸೀತಮ್ಮ ಕಿಟಕಿಯ ಬಳಿ ಬೆಳಕಿನಲ್ಲಿ ನಿಂತುಕೊಂಡಿದ್ದಳು. ಬಲ ತೊಡೆಯ ವಸ್ತ್ರವನ್ನು ಒಮ್ಮೆ ಮೇಲೆತ್ತುತ್ತಾ, ಒಮ್ಮೆ ಕೆಳಗಿಳಿಸುತ್ತಾ, ಕೈಯಲ್ಲಿದ್ದ ಯಾವುದೋ ಎಣ್ಣೆಯನ್ನು ತೊಡೆಗೆ ಸವರುತ್ತಿದ್ದಳು. ತಾಯಿಯ ಎದೆಗೆ ಶೂಲದಿಂದ ಚುಚ್ಚಿದಂತಾಯಿತು. ಆದರೂ ಮತ್ತೂ ನೋಡಿದಳು. ಸೀತಮ್ಮ ರವಿಕೆಯನ್ನೆತ್ತಿ ಎದೆಯ ಪಕ್ಕಕ್ಕೂ ಮದ್ದನ್ನು ಮುಟ್ಟಿಸಿದಳು. ದೊಡ್ಡ ಹುಣ್ಣೊಂದು ಅಲ್ಲಿತ್ತು. ಕಂಡ ಕಂಡಂತೆಯೇ, ಲಕ್ಷ್ಮಿಯ ತಲೆಗೆ ಸಿಡಿಲುಬಡಿದಂತೆ ಭಾಸವಾಯಿತು. 'ಸೀತ, ಸೀತ, ಬಾಗಲು ತೆರೆ. ಬೇಗ ತೆರೆ' ಎಂದಳು. ಸೀತ ಒಡನೆ ವಸ್ತ್ರವನ್ನು ಸರಿಪಡಿಸಿಕೊಂಡು, ಮದ್ದನ್ನು ಎಲ್ಲಿಯೋ ಅಡಗಿಸಿಟ್ಟು, ಬಾಗಲ ಬಳಿ ಬಂದು ಚಿಲಕವನ್ನು ಹಾರಿಸಿ ಬಾಗಲು ತೆರೆದಳು. ನಿಮಿಷಾರ್ಧದಲ್ಲಿ, ಲಕ್ಷ್ಮಿಯು ಪ್ರಜ್ಞಾಹೀನಳಾಗಿ ಸೀತಳ ಕೈಗಳ ಮೇಲೆ ಒರಗಿದಳು. . . . . ಮನೆಯವರೆಲ್ಲ ಕೂಡಿಕೊಂಡು ಅವಳನ್ನುಪಚರಿಸಿದರು. ಅವಳ ಸ್ಮೃತಿ ತಪ್ಪಲು ಕಾರಣವೇನೆಂದು ಯಾರಿಗೂ ತಿಳಿಯದಾದಾಯಿತು.

ಅರೆತಾಸು ಕಳೆಯಿತು. ಲಕ್ಷ್ಮಿಗೆ ಸ್ಮೃತಿ ಬಂತು. ಮೆಲ್ಲನೆ ಕಣ್ತೆರೆದಳು. ತನ್ನನ್ನೇ ನೋಡುತ್ತಿದ್ದ ಸೀತಮ್ಮಳನ್ನು ಕಂಡಳು. ಬಳಿಯಲ್ಲಿದ್ದವರನ್ನು ನೋಡಿದಳು. ಮೆಲ್ಲನೆ ಬಾಯ್ತೆರೆದು—"ನೀವೆಲ್ಲ ಹೊರಗೆ ಹೋಗಿರಿ. ಸೀತ ಇಲ್ಲಿರಲಿ" ಎಂದಳು. ಅವರೆಲ್ಲ ಆಶ್ಚರ್ಯಪಟ್ಟರು; ಆದರೂ ಅವಳೆಂದಂತೆ ಮಾಡಿದರು. ದೂರ, ಬಾಗಿಲ ಬಳಿ ನಿಂತು ಆಲಿಸಿದರು–ಅವರಿಗೆ ಈ ಸಂಭಾಷಣೆಯು ಕೇಳಿತು:

"ಸೀತಾ, ನಿನ್ನ ತೊಡೆ ಮತ್ತು ಎದೆಯಲ್ಲಿ ಘಾಯಗಳೆಲ್ಲಿಂದ?"

ಉತ್ತರವಿಲ್ಲ........"ಸೀತಾ, ಹೇಳು, ನಾನು ಯಾರೊಡನೆಯೂ ಹೇಳುವುದಿಲ್ಲ"

ಎರಡು ನಿಮಿಷಗಳ ತರುವಾಯ–"ಅವರಿಗೆ ಕೊಡುತ್ತೇನೆಂದು ಹೇಳಿದ ರೂಪಾಯಿಗಳನ್ನು ನೀವೇಕೆ ಕೊಡಲಿಲ್ಲ?"

"ಅವನು ಹೊಡೆದನೇ?" ಎಂಬ ಕಠೋರ ನುಡಿ.

"ವರದಕ್ಷಿಣೆಯಲ್ಲಿ ಬಾಕಿಯಿರುವ ರೂಪಾಯಿ ೩೦೦ ಕೊಡುತ್ತೇನೆಂದು ತಂದೆಯವರು ಭಾಷೆ ಕೊಟ್ಟಿದ್ದರಂತೆ. ಒಂದು ತಿಂಗಳೊಳಗೆ ಕೊಡುತ್ತೇನೆಂದು ಹೇಳಿದ್ದರೂ ಇಷ್ಟರ ವರೆಗೆ ಕೊಡಲಿಲ್ಲವಂತೆ. "ತಂದೆಯೊಡನೆ ಕೇಳು, ಹಣವನ್ನು ತಾ" ಎಂದರು. ನಾನೇನ್ನಲಿ? "ನಾನು ಹೇಗೆ ಹೇಳಲಿ?" ಎಂದೆ. ಅಷ್ಟು ಹೇಳಿದೊಡನೆ ಚರ್ಮದ ಕೊರಡೆಯಿಂದ ಪೆಟ್ಟು ಕೊಟ್ಟರು."

"ಅಯ್ಯೋ ಮಗಳೇ! ಆಗಲೇ ಯಾಕೆ ಹೇಳಲಿಲ್ಲ?"

ಲಕ್ಷ್ಮಿಯು ರೋದಿಸತೊಡಗಿದಳು. ತಾಯಿಯು ಅಳುವುದನ್ನು ಕಂಡ ಸೀತಮ್ಮಳ ದುಃಖವು ಉಕ್ಕಿ ಬಂತು. ಅವಳೂ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು.

"ಮುನ್ನೂರು ರೂಪಾಯಿಗಳನ್ನು ನಾವು ಕೊಡಲು ತಡಮಾಡುದಕ್ಕಾಗಿ ಅವನು ನಿನ್ನನ್ನು ಈ ರೀತಿ ಶಿಕ್ಷಿಸಿದನೇ? ಹೇ ನಾರಾಯಣ, ನಿನ್ನ ಮನಸ್ಸೇ!"..................

ಈಗ ಸೀತಮ್ಮ ಮನೆಯಲ್ಲೇ ಇದ್ದಾಳೆ. ನಾರಾಯಣನಿಗೆ ರೂಪಾಯಿಯೂ ಇಲ್ಲ! ಹುಡುಗಿಯೂ ಇಲ್ಲ!

ಮ. ಜಾ.

New Eara Technical School.

Near Market Square, Udipi.

Commercial classes-approved by the Madras Government-New session opens in June.

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್

ಸಂತೆಕಟ್ಟೆ, ಉಡುಪಿ.

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)

ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and inusre against unemployment. Datails may be had on application to the Manager.

ನಗಬಾರದು.

[ಸ್ವಕಪೋಲಕಲ್ಪಿತ ಹಾಸ್ಯಗಳನ್ನು ಕಳುಹಿಸುವವರಿಗೆ ಯೋಗ್ಯತಾನುಸಾರವಾಗಿ ಬಹುಮಾನಗಳನ್ನು ಕೊಡಲಾಗುವುದು.]

ರಾಮಪ್ಪ–ವಿಮಾನವನ್ನು ಹತ್ತಿ ಸ್ವರ್ಗಕ್ಕೆ ಹೋಗಬಹುದೇನ್ರಿ?

ಕೊರಗಪ್ಪ–ವಿಮಾನ ಹತ್ತಿ ಮೇಲಕ್ಕೆ ಹೋಗಿ ಕೆಳಗೆ ಧುಮುಕಿದರೆ ಖಂಡಿತ ಸ್ವರ್ಗಕ್ಕೆ ಹೋಗಬಹುದು.

\+ \+ \+ \+

ಜೈಲ್ಸ್ ಸುಪರಿಂಟೆಂಡೆಂಟ್:–(ಕಳ್ಳನನ್ನು ನೋಡಿ) ಅನ್ಯಾಯವಾಗಿ ನಿನ್ನನ್ನು ೧೦ ದಿನಗಳ ವರೆಗೆ ಜಾಸ್ತಿ ಇರಿಸಿಬಿಟ್ಟೆನಲ್ಲಾ!

ಕಳ್ಳ:–ಚಿಂತಿಸಬೇಡಿ; ಮುಂದಿನ ಸಾರಿ ಹೆಚ್ಚು ದಿನಗಳ ವಜಾ ಮಾಡಿಕೊಳ್ಳಬಹುದು!

\+ \+ \+ \+

ರಾಮರಾವ್–ಹೆಂಗಸರೆಲ್ಲ ಸ್ವತಂತ್ರಗಳಾದ ಮೇಲೆ ಗಂಡಸರ ಗತಿ ಏನಪ್ಪಾ?

ಭೀಮರಾವ್:–ಕಿವಿ, ಮೂಗು ಅವರ ಕೈಗೆ ಸಿಗದಂತೆ ಭದ್ರಪಡಿಸಿಕೊಳ್ಳುವುದೇ ನಮ್ಮ ನಮ್ಮ ಗತಿ!

\+ \+ \+ \+

ಧರ್ಮೋಪದೇಶಿ:–ನಾವು ಒಂದನ್ನು ಕೊಟ್ಟರೆ ದೇವರು ನಮಗೆ ಎರಡನ್ನು ಕೊಡುತ್ತಾನೆ.

ಪ್ರೇಕ್ಷಕರಲ್ಲಿ ಒಬ್ಬ:–ಹೌದು ಸ್ವಾಮಿ, ನಾನು ಮಗಳನ್ನು ಮದುವೆಮಾಡಿಕೊಟ್ಟೆ, ಈಗ ಮಗಳೂ ಅಳಿಯನೂ ಮನೆಗೆ ಬಂದು ಇಳಿದಿದ್ದಾರೆ.

\+ \+ \+ \+

ಬ್ರೇಕ್ ಇನ್ಸ್‌ಪೆಕ್ಟರ್:–ಎತ್ತರದಿಂದ ಮೋಟರ್ ಕಾರು ವೇಗವಾಗಿ ಬರುವಾಗ್ಗೆ, ಬ್ರೇಕ್ ಹಿಡಿಯದಿದ್ದರೆ ಏನು ಮಾಡುವಿ?

ಡ್ರೈವರ್:–ತಟ್ಟನೆ ಚಕ್ರದ ಮುಂದೆ ಧುಮಿಕಿ ಕಲ್ಲನ್ನು ಅಡ್ಡವಾಗಿಡುವೆ!

\+ \+ \+

ಹೆಂಡತಿ:–(ಹುಡುಗನನ್ನು ಮುದ್ದಿಸುತ್ತಾ ಗಂಡನನ್ನು ನೋಡಿ) ನಮ್ಮ ಕಿಟ್ಟು ಬಹು ಒಳ್ಳೇ ಹುಡುಗ!

ಕಿಟ್ಟು: ಅಪ್ಪಾ! ಕಿಸೆಯಿಂದ ಅಮ್ಮ ರೂಪಾಯಿ ತೆಗೆಯಲಿಲ್ಲ!

\+ \+ \+ \+

ರಾಜು:–ಮನೆಗಿಂತಲೂ ಹೊಟೇಲು ಸುಖವೆಂದು ತೋರುತ್ತೆ.

ರಾಮಪ್ಪ:–ಮನೆಯಲ್ಲಿ ಹೆಂಡತಿಯೊಂದಿಗೆ ಜಗಳವಾಡಿಕೊಂಡರೇನು?

\+ \+ \+ \+

ವೀರಪ್ಪ:–ವೈದ್ಯರು ನಿನಗೆ ಶರಾಯಿ ಕುಡಿಯಬೇಡೆಂದು ಹೇಳಿದರೇ?

ಸೋಮಪ್ಪ:–ಅವರು ಹೇಗೆ ಹೇಳಿಯಾರು? ಅವರ ಮಾವ ಶರಾಬು ಕಂಟ್ರಾಕ್ಟರು ಅಲ್ಲವೆ?

\+ \+ \+ \+

ಇಬ್ಬರು ಕುಡಿಕರು ಸರಾಯಿ ಅಂಗಡಿಯಲ್ಲಿ ಕುಡಿದುಕೊಂಡು, ಒಬ್ಬನು:–ಎಲಾ ಬೋರಾ! ಈ ಅಂಗಡಿಯನ್ನು ಕ್ರಯಕ್ಕೆ ತೆಗೆದುಬಿಡುವುದು ಎಂದು ಯೋಚಿಸುತ್ತೇನೆ.

ಬೋರಾ:–ತೊಂಚ ತಾಳೋ, ಇನ್ನು ೨-೩ ಡ್ರಾಂಗಳನ್ನು ಕುಡಿದ ಮೇಲೆ ನಾನೇ ಈ ಅಂಗಡಿಯನ್ನು ನಿನಗೆ ಮಾರಿಬಿಡುತ್ತೇನೆ.

\+ \+ \+ \+

ಕೊರಗ:–ಅಯ್ಯಾ, ನನಗೆ ಕಮಿಷನ್ ಕೊಡಬೇಕು.

ಗ್ರಾಮೊಫೋನ್ ರಿಪೇರರ್:–ಯಾವುದಕ್ಕಾಗಿ?

ಕೊರಗ:–ಈಗ ಒಬ್ಬರು ಗ್ರಾಮೊಫೋನ್ ಮಿಶನ್ ರಿಪೇರಿ ಮಾಡಲು ಕೊಡಲಿಲ್ಲವೆ?

ಗ್ರಾಮೊಫೋನ್ ರಿಪೇರರ್:–ಹೌದು.

ಕೊರಗ:–ಆ ಮಿಶನನ್ನು ನಾನೇ ಕೆಡಿಸಿದೆ.

ಎಂ. ಕೆ. ಎಸ್.

ವೈದಿಕ ಧರ್ಮವೇ ಮಾನವನಿಗೆ ನಿಜಧರ್ಮವು.

ಪುರಾಣ ಮತವು ಹಿಂದೂಸಮಾಜಕ್ಕೆ ಹಾನಿಕಾರಕವು.

ಯಾವುದಾದರೊಂದು ಧರ್ಮವು ಮಾನವ ಸಮುದಾಯಕ್ಕೆ ಪ್ರಯೋಜನವುಳ್ಳದ್ದಾಗಿರಬೇಕಾದರೆ ಆ ಧರ್ಮವು ವಿಶ್ವಧರ್ಮವಾಗಿರಬೇಕು. ಅದರ ಶಿಕ್ಷಣವು ಸಾರ್ವಭೌಮವಾಗಿರಬೇಕು. ಈಗಿನ ಕಾಲದಲ್ಲಿ ಜಗತ್ತಿನಲ್ಲಿ ಅಲ್ಲದೆ ಹಿಂದೂಸ್ಥಾನದಲ್ಲಿಯೂ ಅನೇಕ ಧರ್ಮಗಳು ರೂಢಿಯಲ್ಲಿವೆ. ಪ್ರತಿಯೊಬ್ಬರೂ ತಮ್ಮ ಧರ್ಮವೇ ವಿಶ್ವಧರ್ಮವೆಂದೂ ಇತರ ಧರ್ಮಗಳು ಬರೀ ಸಂಪ್ರದಾಯಗಳೆಂದೂ ಹೇಳಿಕೊಳ್ಳುತ್ತಿದ್ದಾರೆ. ಭಾರತ ವರ್ಷದಲ್ಲಿ ವೈದಿಕ ಧರ್ಮಾನುಯಾಯಿಗಳೂ ತಮ್ಮ ಧರ್ಮವನ್ನು ವಿಶ್ವಧರ್ಮವೆಂದು ಹೇಳಿಕೊಳ್ಳುತ್ತಿದ್ದಾರೆ. ನಮ್ಮ ಅಭಿಪ್ರಾಯವೇನೆಂದರೆ– ಯಾವ ಧರ್ಮದ ಸಿದ್ಧಾಂತವು ಪಕ್ಷಪಾತರಹಿತವಾಗಿದ್ದು ಮಾನವ ಸಮುದಾಯಕ್ಕೆ ಮಾತ್ರವಲ್ಲ, ಪ್ರಾಣಿವರ್ಗಕ್ಕೂ ಕಲ್ಯಾಣದಾಯಕವಾಗಿರುತ್ತದೋ ಆ ಧರ್ಮವೇ ವಿಶ್ವಧರ್ಮವೆನ್ನಲ್ಪಡುವುದು. ಈ ಕುರಿತು ಕೆಲವು ವಿಚಾರಗಳನ್ನು ವಾಚಕರ ಮುಂದಿಡಬಹುದು.

ವಿಶ್ವಧರ್ಮವೆಂಬುದು ಯಾವುದಾದರೊಂದು ಪ್ರತ್ಯೇಕ ಸಂಪ್ರದಾಯದಲ್ಲಿದ್ದು ಒಂದು ಪಂಗಡಕ್ಕೆ ಮಾತ್ರ ಅನ್ವಯಿಸುವಂತಿರಕೂಡದು. ವೇದದಲ್ಲಿ "ಕೃಣ್ವಂತೋ ವಿಶ್ವಮಾರ್ಯಂ" ಎಂದು ಎಲ್ಲರನ್ನೂ ಆರ್ಯರನ್ನಾಗಿ ಎಂದರೆ, ಉತ್ತಮರು ಸದಾಚಾರಿಗಳನ್ನಾಗಿ ಮಾಡಿರೆಂಬುದಾಗಿ ಬೋಧಿಸುತ್ತದೆ. ವೇದಗಳಲ್ಲಿ ಯಾವ ತರದ ಪಕ್ಷಪಾತವೂ ಇಲ್ಲದೆ ಎಲ್ಲರ ಉನ್ನತಿಯನ್ನು ಬಯಸುವುದೆಂಬುದು ಯಜುರ್ವೇದದ "ಯಥೇ ಮಾಂ ವಾಚಂ ಕಲ್ಯಾಣೀ ಮಾವದಾನಿ ಜನೇಭ್ಯ" ಎಂಬ ಮಂತ್ರದಿಂದಲೂ ಋಗ್ವೇದದ ೧೦ನೇ ಮಂಡಲ ೮ನೇ ಸೂಕ್ತ ೩ನೇ ಮಂತ್ರದಲ್ಲಿಯೂ ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ. ಇದೇ ಪ್ರಕಾರ ಋಗ್ವೇದದ "ಸಂಗಚ್ಛಧ್ವಂ ಸಂವದಧ್ವಂ ಸಂವೋ ಮನಾಂಸಿ ಜಾನತಾಮ್" ಎಂಬ ಮಂತ್ರವು ಮಾನವ ಸಮುದಾಯವನ್ನೆಲ್ಲಾ ಒಂದೇವಿಧದ ಐಕ್ಯದಲ್ಲಿರುವಂತೆ ಬೋಧಿಸುತ್ತಿದೆ. ವೇದವು ಯಾವ ತರದ ವ್ಯಕ್ತಿ ಧರ್ಮವನ್ನೂ ಬೋಧಿಸುವುದಿಲ್ಲ. ಅದು ಪ್ರಕಾಶವಾದಂದಿನಿಂದ ಇದುವರೆಗೆ ಇಡೀ ಜಗತ್ತಿಗೆ ಸಮಾನರೂಪವಾದ ಶಿಕ್ಷಣ, ಆಚಾರ ವಿಚಾರ ಮುಂತಾದುವುಗಳನ್ನು ಉಪದೇಶಿಸುತ್ತಾ ಬಂದಿದೆ. ವೇದಗಳ ಮಂತ್ರಗಳಾಗಲಿ ಮೂಲ ಸಿದ್ಧಾಂತಗಳಾಗಲೀ ಇದುವರೆಗೆ ಯಾವ ಪರಿವರ್ತನೆಗೂ ಈಡಾಗಲಿಲ್ಲ.

ಈಗಿನ ಕೆಲವು ಸಂಪ್ರದಾಯವಾದಿಗಳೇ ತಮ್ಮ ಸ್ವಾರ್ಥಸಿದ್ಧಿಗೋಸ್ಕರ ವೇದ ಮಂತ್ರಗಳ ಶಬ್ದಾರ್ಥಗಳನ್ನು ಅತ್ತಿತ್ತ ಎಳೆದೆಳೆದು ಅರ್ಥಕ್ಕೆ ಅನರ್ಥವನ್ನು ಮಾಡಿ ಒಬ್ಬೊಬ್ಬರು ಒಂದೊಂದು ಪದ್ಧತಿಯನ್ನು ಪ್ರಾರಂಭಿಸಿ ಅದರ ಅಭಿವೃದ್ಧಿಗಾಗಿ ಒಂದೊಂದು ವಿಧದ ವಿಗ್ರಹಗಳನ್ನು ನಿರ್ಮಿಸಿ ದೇವಸ್ಥಾನದಲ್ಲಿರಿಸಿ ಅವುಗಳ ಮುಖಾಂತರ ಧರ್ಮದ ಹೆಸರಲ್ಲಿ ವ್ಯಾಪಾರದ ವೃತ್ತಿಯನ್ನು ಕೈಕೊಂಡು ಏನೂ ತಿಳಿಯದವರಿಂದ ಹಣ ಸುಲಿಗೆ ಮಾಡುತ್ತಾರೆಯೇ ಹೊರತು ಇಂಥಾ ಕುಟಿಲತೆ ಮತ್ತು ಪಾಷಂಡ ಪದ್ಧತಿಗಳು ವೇದಗಳಲ್ಲಿಲ್ಲ. ಭಾರತ ವರ್ಷದಲ್ಲಿ ಬ್ರಾಹ್ಮಣರೆಂದು ಹೇಳಿಕೊಳ್ಳುವ ಸ್ವಾರ್ಥಪರಾಯಣರು ಪ್ರಚಾರಗೊಳಿಸಿದ ಸಾವಿರಾರು ಸಂಪ್ರದಾಯಗಳಿಂದ ಭಾರತೀಯ ಜನಾಂಗದ ಮೇಲೆ ಎಂಥಾ ಭಯಂಕರ ಪರಿಣಾಮವುಂಟಾಗಿದೆ ಎಂದರೆ, ಹೆಚ್ಚಿನವರು ನಿಜವಾದ ಧರ್ಮ ಯಾವುದು? ಮತ್ತದರಿಂದ ತಮಗೆ ದೊರೆಯುವ ಪ್ರಯೋಜನವೇನು? ಎಂಬುದನ್ನು ತಿಳಿಯಲು ಮರೆತು ಬಿಟ್ಟಿರುತ್ತಾರೆ.

ಟಿ. ವಿ.

ಅಗ್ರಗಣ್ಯ ಸಂಗೀತಜ್ಞರು ಅದರ ಪ್ರಶಂಸಾಗಾನವನ್ನು ಮಾಡಿದ್ದಾರೆ.

ಮುಸಿರಿ ಸುಬ್ರಹ್ಮಣ್ಯ ಐಯ್ಯರ್.

6 ಒಲಿವರ್ ರೋಡ್,
ಮೈಲಾಪುರ ಮದ್ರಾಸು
ತಾ. ೩—೫—೩೪.

ಅನೇಕ ಸಮಯದಿಂದ ನನ್ನ ಕುಟುಂಬದವರೆಲ್ಲ 'ಕೇಶವರ್ಧಿನಿ'ಯನ್ನು ಬಿಡದೆ ಉಪಯೋಗಿಸುತ್ತಿರುವರೆಂದು ತಿಳಿಸಲು ಸಂತೋಷಿಸುತ್ತೇನೆ. ಉದುರುವ ಕೂದಲನ್ನು ತಡೆಯುವ ಅದರ ಶಕ್ತಿಯನ್ನು ಪೂರ್ಣವಾಗಿ ತಿಳಿದು, ಅಲ್ಲದೆ ಕೂದಲನ್ನು ಅದು ಬೆಳೆಯಿಸುವ ಅದರ ಗುಣವನ್ನು ಅರಿತು ಅವರು ಅದರ ಗುಣಗಾನವನ್ನು ಮಾಡಿ ಸ್ನೇಹಿತರಿಗೂ ಅದನ್ನು ಶಿಫಾರಸು ಮಾಡುತ್ತಾರೆ.
ಕೇಶಗಳಿಗೂ, ವ ದ ೀಗೂ ಸಮರ್ಪಕವಾದ ಎಣ್ಣೆಯೊಂದು ಅಗತ್ಯವಿರುವವರು ಇದನ್ನುಪಯೋಗಿಸಬಹುದೆಂದು ನಾನು ಶಿಫಾರಸು ಮಾಡುತ್ತೇನೆ
(ಸಹಿ) ಮುಸಿರಿ ಸುಬ್ರಹ್ಮಣ್ಯ ಅಯ್ಯರ್.

ಬೋಳು ತಲೆಯವರಾಗಿರಬೇಡಿ ಅಥವಾ ತಲೆಕೂದಲು ಅಕಾಲಿಕ ಸಮಯದಲ್ಲಿ ಬೆಳ್ಳಗಾಗದಂತೆ ನೋಡಿ

ಬಾಟ್ಲಿ 1 ಕ್ಕೆ ಆಣೆ 12. **'ಕೇಶವರ್ಧಿನಿ'** ಪೇಕಿಂಗ್ ಮತ್ತು ಅಂಚೆವೆಚ್ಚ ಪ್ರತ್ಯೇಕ

ಜಿಲ್ಲೆನ ವಿವರ ವ್ಯಾಪಾರಿಗಳಲ್ಲಿ ಅಥವಾ ಈ ವಿಳಾಸದಲ್ಲಿ ಸಿಗುವುದು —
South India Chemicals, 11/ ROAD Mylapore Madras
ನಮ್ಮ ಏಜಂಟ — ಪ್ರೋಗ್ರೆಸ್ಸಿವ್ ಸ್ಟೋರ್ಸ್, ರಥಬೀದಿ ಮಂಗಳೂರು

1 CRORE

Karnatics

know nothing

of your

products.—

Advertise them

in

Swadeshabhimani

the pioneer

Weekly of the

South Kanara District.

For Advertisement rates apply to

The Advertisement Manager,

Swadeshabhimani

Mangalore

ಪ್ರಶಂಸೆ.

ಪ್ರಖ್ಯಾತ ಅಮೆರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ

ವಿ - ಮೊ - ಲ

VIM-O-LA

ಅಮೆರಿಕಾದ ಜೀವಸಾರ ವಸ್ತು.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ ಹೊಟ್ಟೆಯಲ್ಲಿ ಜೆಂಡಿನಂತೇಳುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ ನರಗಳನ್ನು ಪುಷ್ಟಗೊಳಿಸುವ ಶಕ್ತಿವರ್ಧಕ ಪಾನೀಯ. ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ. ಬಾಟ್ಲಿ 1 ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟೊಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ

'Vimola Depot'

Vimola Depot,

American Herbal Products Co.,
Sole representatives for above medicine

The National Kanara News Agency,

Sir Phirozsha Metha Road
Fort Bombay

Old! ***Famous!***

East & West Insurance Co., Limited.

Bonus Declared Rs 15/- Per Thousand Per Annum

Insurance in Force About	Rs 90,00,000
Annual Premium Income Over	Rs 4,50,000
Life Fund Over	Rs 7,00,000

Prompt Settlement of Claims
Low Rates of Premium and Various Attractive Plans.

Attractive and liberal agency contracts are offered to honest influential gentlemen

Inquiries Solicited.—

Messrs Padubidri Bros.,
Chief Agents,
PADUBIDRI BOMBAY

OR

Head Office
East & West Buildings,
Apollo Street, Fort Bombay

'ಜ್ಯೋತಿ'

ಸಚಿತ್ರ ಕನ್ನಡ ಮಾಸಪತ್ರಿಕೆ.

ಸಂಪಾದಕರು —ಕೆ ಹೈದರ್

ಸುರಸವಾದ ಕಥೆ, ಕವನಗಳು, ವಿಚಾರ ಪರಿಪ್ಲುತ ಲೇಖನಗಳು ಕಮನೀಯವಾದ ಚಿತ್ರಗಳು

ವಾರ್ಷಿಕ ಚಂದಾ ರೂ ೧—೮—೦

ಬಿಡಿಸಂಚಿಕೆ ರೂ ೦—೨—೦.

ಜಾಹೀರಾತ ದಾರರಿಗೆ ಉತ್ಕೃಷ್ಟ ಮಾಧ್ಯಮ.

ಲೇಡಿಸ್ ಬಾಂ

ಸ್ತ್ರೀಯರ ಜೀವನಾಧಾರ

ಪ್ರಕೃತಿ ದತ್ತವಾಗಿ ... ಅವರ ... ಗರ್ಭಕೋಶದ ... ಅನೇಕ ತರದ ಗುಪ್ತರೋಗಗಳನ್ನು ... ಗುಣವನ್ನು ...
ಉಪಯೋಗಿಸಿದವರ ಅಭಿಪ್ರಾಯ —

ರಾಮಕೃಷ್ಣ ಜೈನ್ ... ಲಾಹೋರ್ "I found your Ladies Balm worth the money I spent on it."

ಯಾವ ತೆರದ ಔಷಧಿಯಿಂದಲೂ ... ಲೇಡಿಸ ಬಾಂನ್ನು ಉಪಯೋಗಿಸಿರಿ ... ಔಷಧಿಯ ... ರೂ ೩—೦—೦ ...

ತಯಾರಿಸುವವರ —**ದಿ ಬಿಹಾರ್ ಕೆಮಿಕಲ್ ವರ್ಕ್ಸ್, ಬಾಗಲಪುರ.**

ಏಜಂಟರು — ಷಹಾ ಕಂಪನಿ, ... ಮಂಗಳೂರು.

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

ಕೆಲಸದ ಫಲಿತಾಂಶ.		ಲೈಫ್ ಫಂಡ್
1925—	ರೂ 21,24,250	500
1929—	ರೂ. 1,66,18,620	9 32,000
1934—	ರೂ ,46,77,223.	49 08 771

ಕ್ಲೆಯಿಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ ಕಂಪೆನಿಯ ಆಸ್ತಿ-57,00,000ಕ್ಕೆ ಮೀರಿದೆ. 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.
ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ. ಲಾಭಹೊಂದಬೇಕಾಗಿದೆ ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ 'ಲಕ್ಷ್ಮಿ'ಯಲ್ಲಿವೆ

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co., Ltd.,
Madras Branch,
No. 6, Sankuram Chetty St., G. T. MADRAS

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6, ಸಂಕುರಾಮ ಚೆಟ್ಟಿ ಬೀದಿ, ಜಿ ಟಿ. ಮದ್ರಾಸು.

The Canara Banking Corporation Udipi, Ltd.

Head office:—UDIPI, S. K. (Incorporated in British India) TEL.-'BANKING' ESTD. 1906.

Branches:—1 Udipi, 2 Coondapoor, 3 Car Street, Mangalore, 4 Shimoga, 5 Madras, 6. Bunder Mangalore, 7 Mercara

Progressive Statement from 1919–1935

Year	Subscribed Capital	Paid up Capital	Reserve and other Funds	Deposits	Investments on Govt Securities	Total Working Capital
1919	Rs. 24,500	Rs. 22970	Rs 7,140	Rs 21,942	–	Rs 61,197
1928	,, 1,54,400	,, 1,04,351	,, 29,149	,, 8,47,284	Rs 25,700	,, 5,88,275
1927	,, 2,25,000	,, 1,99,280	,, 88,000	,, 10,89,261	,, 1,86,984	,, 14,81,690
1931	, 2,25,000	2 25,000	, 204,631	,, 19,58,492	, 3,30 788	25 07 338
1934	,, 2,25,000	, 2 25 000	, 260,958	,, 24 95,829	, 6,51,559	, 31,62,454
31 5 35	, 3,50,000	,, 2,64,875	, 316,995	,, 24,68 948	6 77 059	, 36 01,625

ಕೋರ್ಪರೇಶನ್ ಆಫೀಸು, ಉಡುಪಿ, 6-6-35

M. Shrinivas Prabhu,
Manager

Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು ಇಲ್ಲಿಯ ವರೆಗಿನ ನಮ್ಮ ಪಿಲ್ಲಿಯಮ್ ಮತ್ತು ಕ ಪಸಿಯ ಹುಳು ಕಡ್ಡಿಯ ಮುಲಾಮಿನ 'ಕಿಂಗ್ ಎಂಡ್ ಕ್ವೀನ್' ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ ರೈಸಿಂಗ್ ಸನ'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮೂಲಕದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

ಮಂಗಳೂರಿನ ಶಾಖೆ ಕಂಪೆನಿಯಲ್ಲಿ ದೊರೆಯುವುದು

ರಜತೋತ್ಸವ ವರ್ಷ. ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್ (ಸ್ಥಾಪನೆ 1910) ರಜತೋತ್ಸವ ವರ್ಷ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಚೆಯರ್‌ಮೆನ್ ಸರ್ ಲಲ್ಲೂಭಾಯಿ ಸಮಲ್ದಾಸ್, ಕೆಟಿ ಸಿ ಐ ಇ ಜೆ ಪಿ)

ಇದರ ದಕ್ಷಿಣ ಹಿಂದುಸ್ಥಾನದ ಸ್ವದೇಶೀಯ ಸಂಸ್ಥೆಗಳ ಶಾಖಾ ಕಾರ್ಯದರ್ಶಿಗಳು, ಮುಂಬಾಯಿ ನಗರ ಮತ್ತು ಉಪನಗರಗಳ ಪ್ರಾಮುಖ್ಯ ಏಜಂಟರು

ಪೋಲಿಸಿದಾರರು ಮತ್ತು ಏಜಂಟರುಗಳಿಗೆ ನಮ್ಮ ಸಂದೇಶ –

ಕಳೆದ ಕಾಲು ಶತಮಾನಕ್ಕೆ ಮಿಕ್ಕಿದ ನಮ್ಮ ಜೀವವಿಮೆಯ ಪವಿತ್ರವಾದ ಸೇವೆಯಲ್ಲಿ ನಾವು ನಮ್ಮ ಪೋಲಿಸಿದಾರರ ಮತ್ತು ಏಜಂಟರ ಹಿತವನ್ನೇ ನಮ್ಮ ಧ್ಯೇಯವನ್ನಾಗಿ ಮುಂದಿಟ್ಟುಕೊಂಡು ಮುಂದರಿಯುತ್ತಾ ಬಂದಿರುವೆವು ಅವರ ಕಷ್ಟಗಳೂ ಆಶೆಗಳೂ ಮತ್ತು ಆಶಯಗಳೂ ನಮ್ಮದೆಂದೇ ಪರಿಗಣಿಸುತ್ತಾ ಬಂದಿರುವೆವು ಹೀಗೆ ಜೀವವಿಮಾ ಪ್ರಪಂಚದ ನಮ್ಮ ಅನುಲಕ್ಷ್ಯನೀಯವೂ ಅನುಭೂತಪೂರ್ವವೂ ಆದ ವಿಜಯದ ರಹಸ್ಯವು ಇದರಲ್ಲೇ ಅಡಕವಾಗಿದ್ದು ನಾವು ನಮ್ಮ ವ್ಯವಹಾರದಲ್ಲಿ ಒಂದು ಕೋಟಿಯಷ್ಟು ಜೀವನಾನ ಪೋಲಿಸಿಗಳನ್ನು ಜಾರಿಯಲ್ಲಿಟ್ಟುಕೊಳ್ಳಲಿಕ್ಕೆ ಸಮರ್ಥರನ್ನಾಗಿ ಮಾಡಿರುತ್ತದೆ ಅತ್ಯಂತ ಅಭಿಮಾನಾಸ್ಪದವಾದ ನಮ್ಮ ಮಹತ್ವದ ಭಾಷವೆಂದರೆ—ಒಂದೆರಡು ಉದಾಹರಣೆಗಳಲ್ಲದೆ ಕಳೆದ 25 ವರ್ಷಗಳ ಅವಧಿಯಲ್ಲಿ ನಮ್ಮ ಅಧಿಕೃತ ಏಜಂಟರುಗಳಲ್ಲಿ ಒಬ್ಬರಾದರೂ ನಮ್ಮೊಡನಿರುವ ನಿಕಟಸಂಬಂಧವನ್ನು ಮುರಿದಿಕ್ಕಿರುವುದಿಲ್ಲ

ಜೀವವಿಮಾ ವಿಕ್ರಯಕ್ರಮಗಳಲ್ಲಿ ಸಂಪೂರ್ಣ ತರಬೇತಿ ಕೊಡಲಾಗುತ್ತದೆ ಚತುರರಾದ ಉತ್ಸಾಹೀ ತರುಣರ ಭಾವೀ ಕಲ್ಯಾಣವಾಗುತ್ತದೆ

ನಮ್ಮ ಈ ಕೆಳಗಿನ ಯಾವುದಾದರೂ ಆಫೀಸುಗಳಿಗೆ ಬರೆಯಿರಿ ಅಥವಾ ಸ್ವತಃ ಬಂದು ಕಾಣಿರಿ –

(1)	(2)	(3)	(4)	(5)	(6)
ಇಸ್ಮಾಯಿಲ್ ಬಿಲ್ಡಿಂಗ್ ಲೋಹರ್ ಚಾಳ, ಮುಂಬಯಿ ನಂ 2	ಪೋಸ್ಟ್ ಬಾಕ್ಸ್ 337 ಮೌಂಟ್ ರೋಡ್ ಮದ್ರಾಸು	ವಿಶ್ವೇಶ್ವರಪುರಂ, ಬೆಂಗಳೂರು ಸಿಟಿ	ಬಜಾರ್ ರೋಡ್ ಕಲ್ಲಿಕೋಟೆ	ರಥಬೀದಿ, ಮಂಗಳೂರ	ಉಡುಪಿ, ದಕ್ಷಿಣ ಕನ್ನಡ

Karnataka Chemical and Pharmaceutical Works, Ltd, Udipi (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ (ದಕ್ಷಿಣ ಹಿಂದೂಸ್ಥಾನ)

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್ಹೋಲ್ಡ್ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು, ಖರ್ಚು ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನನ್ನೇ ಉಪಯೋಗಿಸಿರಿ ಸಿಲಿಕೇಟು ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ.

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)

ಕರ್ಣಾಟಕ ಸ್ನೋ ಕರ್ಣಾಟಕ ಬ್ರಿಲ್ಲೆಂಟೈನ್ ಆರೋರಾ ಕ್ರೀಮ್, ಕ್ರಿಮೊರ್ ಲಿಮೊಸಿನ್, ಕರ್ಣಾಟಕ ರೋಸ ಪೊಮೇಡ್.

ಇದಲ್ಲದೆ ನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್ ಪೇನು ಶಾಯಿಗಳೂ ಸಿದ್ಧವಾಗುವುವು.

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಪ್ಪ ಬಾಳಿಗ

ಹೆಡ್ ಆಫೀಸು ಮತ್ತು ಕಾರಖಾನೆ –ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೊ –(1) ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್; ಬೊಂಬಾಯಿ ನಂ. 2

(2) 1/70 ನೈನಿಯಪ್ಪ ನಾಯ್ಕನ ಬೀದಿ, ಜಾರ್ಜ್ ಟೌನ್ ಮದರಾಸು.

ಏಜಂಟ್ಸ್— ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

ವಾರ್ಷಿಕ ಚಂದಾ 2 ರೂಪಾಯಿ.   ಬಿಡಿ ಸಂಚಿಕೆ 1 ಆಣೆ.   ಟಪ್ಪಾಲು ಹಾಸಲು ಸೇರಿ ರೂ. 2-13-0.

P
for Quality Snuff
H. Rama Rao
and Sons.
High Class Snuff Manufacturers
Mangalore, S. I.
ASK FOR –
RAMA SNUFF.
The charm of Snuff Users!

ಸ್ವದೇಶಾಭಿಮಾನಿ

SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your
family TODAY
Buy a policy in the
THE BOMBAY LIFE
Mad us Branch Secretaries
Kochikar Brothers,

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ಪುಸ್ತಕ ೨೯   ಮಂಗಳೂರು ತಾ. ೨೮ನೇ ಶುಕ್ರವಾರ ಜೂನ ೧೯೩೫ (28-6-'35)   ಸಂಚಿಕೆ ೨೬



ಮೆಟ್ಟೂರು ಆಣೆಕಟ್ಟಿನ 'ಐರ್ವಿನ್ ಕೆನಲ್'

[illegible] 16 [illegible]
[illegible] 210 [illegible]



ಮೆಟ್ಟೂರು ಆಣೆಕಟ್ಟಿನ ಒಂದು ಪಾರ್ಶ್ವ

ನದಿಯಲ್ಲಿ ನೀರಿಲ್ಲ, ಅದನ್ನು ಮುಚ್ಚಿದ್ದಾರೆ. ನೀರು ಉಕ್ಕಿ ಬಂದರೆ ೭ ಕಿಂಡಿಗಳ ಮೂಲಕ ಅದನ್ನು ಕಮಾನಿನ ಹೊರಗೆ ಕಳುಹಿಸುವರು. ನದಿಯಲ್ಲಿ ನೆರೆಬಂದು ಆಣೆಕಟ್ಟಿನ ಎತ್ತರಕ್ಕೆ ಏರಿದರೆ ಮೇಲಿನ ೭ ಕಿಂಡಿಗಳಿಂದ ನೀರನ್ನು ಹೊರಗೆ ಕಳುಹಿಸುವರು. (ಗೋಡೆಯ ಮಹದಾಕಾರವನ್ನು ನೋಡುವುದು)

ಚಕ್ರ

(All Rights Reversed)

ರೊಕ್ಕ, ಎರಡಕ್ಕು ದುಃಖ ಕಾಣಕ್ಕ,
ಫಕ್ಕನೇ ಹೋಗ್ವುದು ರೊಕ್ಕ ನೋಡಕ್ಕ!
ಮಕ್ಕಳ ಮಾಡಿಗಳ ಮಾಡೋದು ರೊಕ್ಕ
ಸಕ್ಕರೆ ತುಪ್ಪವ ತಿನಿಸೋದು ರೊಕ್ಕ,
ಚಕ್ಕನೆ ಹೋದರೆ ಪ್ರಾಣಕ್ಕೆ ದುಃಖ,
ವ್ಯಾಕ್ತಿದ ಮುಂದೆಗೆ ಬೇಕಕ್ಕ ರೊಕ್ಕ,
ಕೈಟ್ಟಾಕ್ಕೆ ಬೇಕೀಗ ಹೆಚ್ಚಿನ ರೊಕ್ಕ
ಜುಬಿಲಿಗೆ ಸಾಕೀಗ ಇದ್ದುದು ರೊಕ್ಕ.

ಹಗೆ ಈಗ ಯಾವ ಕೆಲಸಕ್ಕೂ ಬೇಕಾದುದು ರೊಕ್ಕ ಅದಿಲ್ಲದ ನೆಲವನ್ನಾಧರಿಸಿ ಕುಳಿತುಕೊಳ್ಳಲೂ ಕಷ್ಟ, ಕಂಭವನ್ನಾಧರಿಸಿ ನಿಂತಿರಲೂ ಕಷ್ಟ, ಅಂತಹ ಅಮೂಲ್ಯವಾದ ರೊಕ್ಕವು ನಮ್ಮ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಈಗ ಬೇಕಾಗಿಬಂದಿದೆ ಸಂತೋಷ!

× × × × × ×

[illegible]ನೇಯ ಕನ್ನಡ ಸಾಹಿತ್ಯ ಸಮ್ಮೇಳನವು ಈ ಸಲ ಮುಂಬಾಯಿ ನಗರದಲ್ಲಿ ಇದೇ ಬರುವ ಡಿಸೆಂಬರ ತಿಂಗಳಲ್ಲಿ ಜರಗುವುದೆಂದು ತಿಳಿದುಬಂದಿದೆ ಮುಂಬಾಯಿಯವರು ಪರಿಷತ್ತಿಗೆ ಆಹ್ವಾನಕೊಟ್ಟು ತಮ್ಮ ವಾಙ್ಮಯಪ್ರೇಮವನ್ನು ತೋರಿಸಿದುದಕ್ಕಾಗಿ ಅಭಿನಂದನೀಯರು. ತಮ್ಮ ಉತ್ಸಾಹಕ್ಕನುಗುಣವಾದಷ್ಟು ಕಾರ್ಯವನ್ನು ಮಾಡದೆ ಮುಂಬಾಯಿಯವರು ಅಭಿನಂದನೀಯರಾಗಲಾರರೆಂದು ನಾನು ಭಾವಿಸಿದವನಿದ್ದೇನೆ

× × × × × ×

ಮುಂಬಾಯಿಯ ಕನ್ನಡಿಗರೆಂದರೆ ಬಹು ಅಭಿಮಾನಿಗಳು ತಮ ಭಾಷೆ ತಮ್ಮ ನಾಡು ಎಂಬ ಪ್ರೇಮವು ಅವರಲ್ಲಿ ವಿಶೇಷ. ಅವರ ವೈಶ್ಯವನ್ನು ಲಕ್ಷಿಸುವವರಲ್ಲ—ದೇಶಪ್ರೇಮಕ್ಕಾಗಿ ಸ್ವಾರ್ಥತ್ಯಾಗ ಮಾಡುವವರು ಇಂತಹವರನ್ನು ಸಾಹಿತ್ಯ ಪರಿಷತ್ತು ಹೆಚ್ಚಾಗಿ ತನ್ನ ಸದಸ್ಯರನ್ನಾಗಿ ಮಾಡಿಕೊಳ್ಳುವುದು ಅತ್ಯಗತ್ಯ!

× × × / + ×

ಸಾಹಿತ್ಯ ಪರಿಷತ್ತಿನ ನಾಯಕರು ತಮ್ಮ ಪೀಠದಿಂದ ಎರಡು ಮೆಟ್ಟಲು ಕೆಳಗಿಳಿದು ಮುಂಬಾಯಿ ಕನ್ನಡಿಗರನ್ನು ಒಲವಿನಿಂದ ಕರೆದು ಕೇಳಿಕೊಂಡರೆ ಪರಿಷತ್ತಿಗೆ [illegible] ಜನ ಆಜೀವ ಪೋಷಕರೂ [illegible] ಜನ ಸದಸ್ಯರಾಗುವುದೂ ಖಂಡಿತ

× × × × ×

ರೊಕ್ಕ ಬೇಕು ರೊಕ್ಕ ಬೇಕ ಎಂದು ಹೇಳಿ ಕುಳಿತುಬಿಟ್ಟರೆ ಕೊಡಬಹುದು, ಕೊಡಬಹುದೆಂದು ಹೇಳುತ್ತಾ ದಿನಗಳನ್ನು ಕಳೆದು ಉದ್ಯುಕ್ತರಾಗುವವರ ಸಂಖ್ಯೆ ಹೆಚ್ಚುತ್ತದೆ

× × × × × ×

ಪರಿಷತ್ತುಗಳಲ್ಲಿ ಗದ್ಯಪದ್ಯ ವಾಚನದ ಕ್ರಮಗಳಿವೆ ಈ ಕ್ರಮಗಳಿಂದಾಗಿ ಪರಿಷತ್ತಿಗೆ ಯಾವ ಪ್ರಯೋಜನವೇನೋ ತಿಳಿಯಲಾರೆ ಹಲಕೆಲವರು ತಂತಮ್ಮ ವಿದ್ವತ್ಪ್ರದರ್ಶನಕ್ಕಾಗಿ ಹಾಗೆ ವಾದಿ ತಮ್ಮದೇ ಮೇಲು ಎಂದು ವಾದಿಸಿ ಸಾಧಿಸುವುದು ಹೆಚ್ಚಾಗಿ ಕಂಡುಬರುತ್ತದೆ ಇಂತಹ ಸ್ವ ಅರ್ಥಿಗಳು ತಮ್ಮ ಪುಂಡಾಟಿಕೆಯನ್ನು ಬಿಡುವ ದಿವಸವಾವುದೋ!

× × × × × ×

ಕನ್ನಡಿಗರ ಮತ್ತೊಂದು ದೊಡ್ಡ ಜಗಳವೆಂದರೆ—ಪಠ್ಯಪುಸ್ತಕದ್ದು ತಾವು ಬರೆದ ಪುಸ್ತಕಗಳನ್ನು ಪಠ್ಯಪುಸ್ತಕಗಳನ್ನಾಗಿ ಮಾಡಿಬಿಡುವ ಒಂದು ಅಗ್ರಹದಿಂದ ಹಲವು ಆತ್ಮವನ್ನೇ ಮಾರಿಬಿಡುವುದೂ ಇದೆ ಸಾಹಿತ್ಯ ಪರಿಷತ್ತು ಇವರಿಗೆ ತಕ್ಕ ಔಷಧಿಯನ್ನರೆದರೆ ಎಲ್ಲರಿಗೂ ಹಿತವಿದೆ

× + × × × ×

ಕರ್ನಾಟಕ ಏಕೀಕರಣದ ಬಗ್ಗೆ ನಮ್ಮವರು ಮಾಡುವ ಪ್ರಯತ್ನವು ಎಷ್ಟಕ್ಕೂ ಸಾಲದೆಂಬುದಕ್ಕೆ ನಮಗೆ ಅದರಲ್ಲಿ ದೊರೆತ ನಿರಾಶೆಯೇ ಸಾಕ್ಷಿ

× × × × × ×

ಕನ್ನಡಕ್ಕೊಂದು ಯುನಿವರ್ಸಿಟಿ ಬೇಕಾಗಿದೆಯೆಂದು ನಾವು ಬೊಬ್ಬಿಟ್ಟದ್ದೂ ಉಂಟು ನಮ್ಮ ಬೊಬ್ಬೆಯು ಬೇಟೆಯಾಗಿ ಉಳಿದ ಅವಸ್ಥೆಯೂ ಕನ್ನಡನಾಡಿನಲ್ಲುಂಟು ನಾವು ಗುಲ್ಲೆಬ್ಬಿಸುವುದನ್ನು ಬಿಟ್ಟು ಕಾರ್ಯರಂಗಕ್ಕಿಳಿದರೆ ಎಲ್ಲವೂ ಸುಗಮವಾಗುವುದು ಅಂತಹ ಪುಣ್ಯದಿನವು ಬರಲಿ!—ಬರದುಹೋಗಲಿ!

—ಪ್ರಿ.

ಅನ್ಯರಲ್ಲಿನ ಶಕ್ತಿಬಲಗಳನ್ನು ಕಂಡು ಬೆರಗಾಗುವಿರೇಕೆ? ಅದನ್ನು ನೀವೂ ಹೊಂದಲಾಗುವುದಿಲ್ಲವೇ? ಶಕ್ತಿಯುತ ಸ್ನಾಯು, ಗಟ್ಟಿಯಾದ ಮೆದುಳು, ಚೇತನಯುತ ದೇಹಗಳು ಪೂರ್ಣವೂ ಯುಕ್ತವೂ ಆದ ರಕ್ಷಣೆಯಲ್ಲಿದೆ

'ಓವಲ್ಟಿನ್'ನಲ್ಲಿ ನಿಸರ್ಗಸಿದ್ಧವಾದ ಅಮೂಲ್ಯ ಆಹಾರಸಾರವಿದೆ ಬೆಳೆದ ಬಾರ್ಲಿ, ದನದ ಕೆನೆಹಾಲುಗಳು ಅತ್ಯಮೂಲ್ಯ ಫಾಸೀಯಗಳು, ದೇಹವೃದ್ಧಿಗೆ ಸಾಧಕವಾದವುಗಳು ಬಲವನ್ನೂ ಶಕ್ತಿಯನ್ನೂ ಆರೋಗ್ಯವನ್ನೂ ಕೊಟ್ಟು ಕಾಪಾಡುತ್ತದೆ ಅದರ ಚೇತನದಾಯಕ ಗುಣವನ್ನು ನೀವು ಕೂಡಲೇ ಕಂಡುಹಿಡಿಯುವಿರಿ ಆರೋಗ್ಯವನ್ನು ಹೊಂದುವಿರಿ

ನಿಮ್ಮ ಆಹಾರಕ್ಕೆ ಓವಲ್ಟಿನ್' ಸೇರಿಸಿರಿ,—ಅದು ಆರೋಗ್ಯಕರ, ಬಲವರ್ಧಕ ಮತ್ತು ಶಕ್ತಿದಾಯಕ

ಓವಲ್ಟಿನ್

ಮೆದುಳು, ನರ, ದೇಹಗಳನ್ನು ವೃದ್ಧಿಸುತ್ತದೆ

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ   ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ಸಿಗುತ್ತದೆ

ಏಜಂಟ —ಜೇಮ್ಸ್ ರ್‍ಯಾಟ್ 85 ಎ ಕ್ಲೈವ್ ಸ್ಟ್ರೀಟ್ ಕಲ್ಕತ್ತ ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ

OV/341

ನೋಟೀಸು

ಕುಂದಾಪುರದ ಮುನ್ಸಿಫ್ ಕೋರ್ಟಿನಲ್ಲಿ

S C 204/1935

ಬಸ್ರೂರು ಶಂಕ್ರಯ್ಯ ಶೆಟ್ಟಿ—ವಾದಿ

ಮತ್ತು

1 ಅಣ್ಣು ಉಡ್ಪ, ಕಂಡ್ಲೂರು ಅನಂತ ಉಡ್ಪರ ಮಗ 2 ವೆಂಕಟ ಸುಬ್ರಾಯ ಉಡ್ಪ 3 ಶಂಕ್ರ ಉಡ್ಪ—1ನೇ ಪ್ರತಿವಾದಿರ ಮಗಂದಿರು ಕಾವರಾಡಿ ಗ್ರಾಮದ ಕಂಡ್ಲೂರು- ಪ್ರತಿವಾದಿರು

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—ನೀವು ನಿಮ್ಮ ಕುಟುಂಬದ ಪ್ರಯೋಜನಾರ್ಥವಾಗಿ ವಾದಿಯಿಂದ ತಾರೀಕು 28-9 31ರಲ್ಲಿ ಪಡೆದ ರೂ 300ಕ್ಕೆ ಬರೆದು ಕೊಟ್ಟ ಕಂತುಕರಾರಿನ ಬಾಬ್ತು 28-9-'32, 28-3-'33 ಮತ್ತು ತಾ 28-3-34ಕ್ಕೆ ಬಹ ಕಂತುಗಳ ಅಸ್ಲುಬಡ್ಡಿ ಕೂಡಾ ರೂಪಾಯಿ 157 ಮತ್ತು ಕೋರ್ಟು ಖರ್ಚು ಸಮೇತ ಬರಮಾಡಿಕೊಳ್ಳುವರೆ ಮೇಲ್ಕಂಡ ಕೋರ್ಟಿನಲ್ಲಿ ವಾದಿಯು ಸದ್ರಿ ದಾವೆ ಮಾಡಿರುತ್ತಾನೆ ಸದ್ರಿ ದಾವೆಯು ತಾ 11-7 35ಕ್ಕೆ ತನಿಖೆ ಬಗ್ಗೆ ಇಟ್ಟಿರುತ್ತದೆ ಆ ದಿವಸ ನೀವು ಪೂರ್ವಾಹ್ನ ಘಂಟೆ 11ಕ್ಕೆ ಕೋರ್ಟು ಮುಂದೆ ಹಾಜರಾಗಿ ಉದಾಹರಣೆ ಇದ್ದರೆ ಜಾಹೀರು ಮಾಡಿಕೊಳ್ಳತಕ್ಕದ್ದು ಇಲ್ಲವಾದರೆ ಸದ್ರಿ ವ್ಯಾಜ್ಯವು ನಿಮ್ಮ ಗೈರುಹಾಜರಿ ಕುರಿತು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂತ ಈ ಮೂಲಕ ತಿಳಿಸೋಣವಾಗಿದೆ

ಕುಂದಾಪುರ, B. S Shetty, B.A.B.L.

[illegible]

Ested 1920]   THE   [1920ರಲ್ಲು ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು.

ಠೇವಣಾತಿಗಳ ದರ.

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ.

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur,
Dated 10—4—1935

G. N. Lakshman Pai,
Secretary.

ಸಾಹಿತ್ಯ ಸಂಗ್ರಹ.

ಸ್ತ್ರೀಯರೂ ಸಾಹಿತ್ಯವೂ.

'ಸರಸ್ವತಿ'ಯ ಸಂಪಾದಕಿಯರಾದ ಶ್ರೀಮತಿ ಆರ್ ಕಲ್ಯಾಣಮ್ಮ ಇವರು ಮೇಲಿನ ಶಿರೋನಾಮೆಯಿಂದ ಬರೆದ ಲೇಖನದಲ್ಲಿ ಅರ್ಥಭರಿತವಾಗಿ ಹೀಗೆ ಪ್ರತಿಪಾದಿಸಿರುವರು—ಸಾಹಿತ್ಯದೊಡನೆ ಹೆಂಗಸರನ್ನು ಸೇರಿಸಿರುವುದನ್ನು ನೋಡಿದರೆ ಆಶ್ಚರ್ಯಹೊಂದುವವರು ಅನೇಕರಿರಬಹುದು. ಹಾಗವರು ಆಶ್ಚರ್ಯಪಡುವುದರಲ್ಲೇನೋ ತಪ್ಪಿಲ್ಲ. ನಮ್ಮ ಮಹಿಳಾ ಜನಾಂಗವು ಇಂದು ಸಾಹಿತ್ಯದ ವಿಷಯದಲ್ಲಿ ಅಷ್ಟೊಂದು ಪರಾಙ್ಮುಖತೆಯನ್ನು ವಹಿಸಿರುವ ವಿಷಯವು ಅರಿತ ವಿಷಯವೇ. ಮಹಾರಾಷ್ಟ್ರ, ಹಿಂದೀ, ಆಂಧ್ರ ಸಾಹಿತ್ಯಗಳಲ್ಲಿ ಮಹಿಳೆಯರು ಮುಂದರಿದಿರುವಷ್ಟು ನಮ್ಮ ಕರ್ನಾಟಕ ಸೋದರಿಯರು ಮುಂದರಿದಿಲ್ಲವೆಂಬ ವಿಷಯವನ್ನು ಅತಿ ವಿಷಾದದಿಂದ ಹೇಳಬೇಕಾಗಿದೆ.

ಸಂಸಾರದ ವಿಧಾತ್ರಿಯರು ಹೇಗೆ ಮಹಿಳೆಯರೋ ಹಾಗೆಯೇ ಸಾಹಿತ್ಯದ ಜನ್ಮಧಾತ್ರಿಯರೂ ನಮ್ಮ ಮಹಿಳೆಯರೇ. ವಿದ್ಯಾಧಿದೇವತೆಯಾದ "ಸರಸ್ವತಿ"ಯೇ ಇದಕ್ಕೆ ಸಾಕ್ಷಿ. ಈಗ ಮಹಿಳೆಯರು ಇತರ ಕಾರ್ಯಕ್ಷೇತ್ರಗಳಲ್ಲಿ ಎಷ್ಟು ಮುಂದೆ ಬಂದಿರುವರು ಎಲ್ಲರೂ ಅರಿತ ವಿಷಯವು.

ಕನ್ನಡ ಪತ್ರಿಕೆಗಳು.

ಅವರಿಗಾಗಿ ಅಷ್ಟು ಶ್ರದ್ಧೆ ಇಲ್ಲದ್ದರಿಂದಲೋ ಸಾಕಾದಷ್ಟು ಉತ್ಸಾಹವಿಲ್ಲದ್ದರಿಂದಲೋ ಉತ್ತೇಜನ ಕೊಡುವವರಿಲ್ಲದ್ದರಿಂದಲೋ ಅವರಲ್ಲಿರುವ ಅಲ್ಪಸ್ವಲ್ಪ ಸಾಹಿತ್ಯಜ್ಞಾನವು ಕೂಡಾ ಪ್ರಕಾಶಕ್ಕೆ ಬಾರದೇ ಇರುವುದು. ನಮ್ಮ ಸಾಹಿತ್ಯಕ್ಷೇತ್ರದಲ್ಲಿ ಎಲ್ಲೋ ಅಲ್ಲೊಬ್ಬರ ಇಲ್ಲೊಬ್ಬರ ಹೆಸರುಗಳು ಪ್ರಭಾತ ತಾರೆಗಳಂತೆ ಮಸಕು ಮಸಕಾಗಿ ಪ್ರಕಾಶಿಸುತ್ತವೆ. ಕಂತಿ, ಸಂಚಿ ಹೊನ್ನಮ್ಮ ಮತ್ತು ಮಹಾದೇವಿಯಕ್ಕ ಇವರುಗಳು ಮಾತ್ರವಲ್ಲ, ಬಿಟ್ಟರೆ ದತ್ತಾರ ಹೆಸರುಗಳು ಪ್ರಕಾಶಕ್ಕೆ ಬಂದಿಲ್ಲ. ಇವರು ಸ್ವಲ್ಪ ಹಿಂದೆ—ಸ್ವರ್ಗಸ್ಥರಾಯಿತು. ಈಗಲೂ ಎಷ್ಟೋ ಮಂದಿ ಮಹಿಳೆಯರು ಸಾಹಿತ್ಯಕ್ಷೇತ್ರದಲ್ಲಿ ಮುಂದೆ ಬರಲು ಅರ್ಹರಾಗಿರುವರು. ಅವರಿಗೆ ಸಾಕಷ್ಟು ಉತ್ತೇಜನಕೊಟ್ಟು, ಅವರಲ್ಲಿ ಸಾಹಿತ್ಯಾಭಿರುಚಿಯನ್ನು ಹೆಚ್ಚಿಸಿ ಪ್ರಕಾಶಕ್ಕೆ ತರುವವರೇ ಇಲ್ಲ. ಈ ಕಾರಣದಿಂದ ನಮ್ಮ ಕನ್ನಡ ಭಾಷೆಯಲ್ಲಿ ಸ್ತ್ರೀಸಾಹಿತ್ಯಕ್ಕಿಂತಲೂ ಪುರುಷರ ಸಾಹಿತ್ಯವು ಹೆಚ್ಚಾಗಿ ಬೆಳೆಯಲು ಅವಕಾಶವಿರುವುದು. ಅನುಕೂಲವಿರುವುದು. ಸ್ತ್ರೀಯರಿಗಿಂತ ಪುರುಷರು ಹೆಚ್ಚು ವಿದ್ಯಾವಂತರಾಗಿರುವುದೂ, ಅವಕಾಶವಿರುವುದೂ ಸ್ತ್ರೀಯರಿಗೆ ವಿದ್ಯೆಯಿದ್ದರೂ ಕೂಡಾ ಇತರ ಸಾಂಸಾರಿಕ ಕ್ಲೇಶಗಳಿಗೆ ಸಿಲುಕಿ ಅವಕಾಶವು ದೊರೆಯದ್ದರಿಂದಲೂ, ಸಾಹಿತ್ಯಜ್ಞಾನವುಳ್ಳವರ ಪತಿಯೇ ಮೊದಲಾದವರು ಬಹಿರಂಗವಾಗಿ ಸೇವೆಮಾಡಲು ಅವಕಾಶವನ್ನು ಕೊಡದಿರುವುದರಿಂದಲೂ ಸ್ತ್ರೀ ಸಾಹಿತ್ಯವು ಅಭಿವೃದ್ಧಿಯಾಗಲು ಅಡಚಣೆಯಾಗಿರುವುದು. ಪ್ರಾಚೀನ ಸಾಹಿತ್ಯದ ಇತಿಹಾಸವನ್ನು ನೋಡಿದರೆ ಅಲ್ಲಿಯೂ ಇದೇ ಹಾಡು. ಸಾಹಿತ್ಯದಲ್ಲಿ ಉಲ್ಲೇಖಿತರಾಗಿರುವ ಮಹಿಳೆಯರ ಹೆಸರುಗಳನ್ನು ಹೇಳಲು ಒಂದು ಕೈಯಲ್ಲಿನ ಬೆರಳುಗಳೇ ಸಾಕಾಗಿರುವುದು. ಇಲ್ಲವೇ ಇಲ್ಲವೋ ಅಥವಾ ಇದ್ದೂ ಪ್ರಕಾಶಕ್ಕೆ ಬರದೆ ಇದೆಯೋ ಅದನ್ನೂ ಹೇಳುವುದಕ್ಕಾಗುವುದಿಲ್ಲ. ಈ ಅರ್ವಾಚೀನ ಕಾಲದಲ್ಲಿ ಅಲ್ಲಲ್ಲಿ ಮೊದಲಿಗಿಂತ ಹೆಚ್ಚಾಗಿ ಸಾಹಿತ್ಯ ಸೇವೆಗಾಗಿ ರಮಣಿಯರು ಮುಂದೆ ಬಂದಿರುವರು. ಆದರೆ ಇದೇನೂ ಅಷ್ಟೊಂದು ತೃಪ್ತಿಕರವಾಗಿಲ್ಲ. ಹಿಂದಿನ ಮಾತ್ರಕ್ಕೆ ಸ್ತ್ರೀಯರು ಸಾಹಿತ್ಯಸೇವೆ ಮಾಡಲಿಲ್ಲವೆಂದು ನಾನು ಹೇಳಿದ್ದಾಗಿ ಭಾವಿಸಬಾರದು. ವಂಗಸಾಹಿತ್ಯದಲ್ಲಿ ಶ್ರೀಮತಿ ಜ್ಯೋತಿರ್ಮಯಿ ಗಂಗೂಲಿ ಎಂ ಎ ಇವರೂ, ಶ್ರೀಮತಿ ಸರೋಜಿನಿದೇವಿಯವರೂ, ಹಿಂದೀ ಸಾಹಿತ್ಯದಲ್ಲಿ ಶ್ರೀಮತಿ ಮಹಾದೇವಿ ವರ್ಮಾ, ಎಂ ಎ ಮತ್ತು ಸುಭದ್ರಾ ಕುಮಾರಿ ಚಾಹ್ವಾಣಿಯವರೂ ಸುಪ್ರಸಿದ್ಧರಾಗಿರುವರು. ಮಹಾರಾಷ್ಟ್ರ, ಆಂಧ್ರ, ತಮಿಳು ಸಾಹಿತ್ಯದಲ್ಲಿಯೂ ಅನೇಕ ಮಂದಿ ಮುಂದೆ ಬಂದಿರುವರು. ನಮ್ಮ ಕನ್ನಡ ಸಾಹಿತ್ಯದಲ್ಲಿ ಯಾರೂ ಮುಂದೆ ಬರದಿರುವುದು ಶೋಚನೀಯವಾದ ವಿಷಯವು. ನಮ್ಮ ದೇಶದಲ್ಲಿ ಸ್ತ್ರೀಪುರುಷರ ಕರ್ತವ್ಯಗಳು ಬೇರೆಬೇರೆಯಾಗಿವೆ. ಕರ್ತವ್ಯಗಳಂತೆಯೇ ಸಾಹಿತ್ಯವೂ ಬೇರೆಬೇರೆಯಾಗಿವೆ. ನಮ್ಮ ನಾಡಿನ ಸ್ತ್ರೀಸಾಹಿತ್ಯದ ಬಹುಭಾಗವು ಇನ್ನೂ ಅಜ್ಞಾತವಾಸವನ್ನನುಭವಿಸುತ್ತಿದೆ. ನಮ್ಮ ಪ್ರಾಚೀನ ಮಹರ್ಷಿಗಳು ವೇದವನ್ನು ವಂಶಪಾರಂಪರ್ಯವಾಗಿ ರಕ್ಷಿಸಿದ್ದಂತೆಯೇ ಅನೇಕ ಸ್ತ್ರೀಯರು ವಂಶಪಾರಂಪರ್ಯವಾಗಿ ನಮ್ಮ ಸಾಹಿತ್ಯವನ್ನು ರಕ್ಷಿಸಿಕೊಂಡು ಬಂದಿರುವರು. ಮುಂದೆಯೂ ಹೀಗೆಯೇ ರಕ್ಷಿಸಲ್ಪಡುವುದೆಂದು ಖಂಡಿತವಾಗಿ ಹೇಳಲಾಗುವುದಿಲ್ಲ. ಏಕೆಂದರೆ ಹಿಂದಿನ ಕಾಲದ ರೀತಿಯೇ ಬೇರೆ, ಇಂದಿನ ಕಾಲದ ರೀತಿಯೇ ಬೇರೆ. ಈಗ ಬಿದ್ದವರು ಬಿದ್ದರು, ಎದ್ದವರು ಎದ್ದರು. ಏಳುವವರೂ ಅಥವಾ ಎದ್ದವರೂ ಬಿದ್ದವರನ್ನು ಮೇಲಕ್ಕೆತ್ತುವ ಗೋಜಿಗೆ ಹೋಗುವುದಿಲ್ಲ. ಈ ಆಧುನಿಕ ಕಾಲದ ಮಹಿಳೆಯರಲ್ಲಿ ಅನೇಕರು ಶಿಕ್ಷಿತರಾಗಿರುವರು. ಪಾಶ್ಚಾತ್ಯ ಸಂಸ್ಕೃತಿಯ ಅಭಿರುಚಿಯು ಅವರಿಗೆ ಹೆಚ್ಚು. ಅವರು ಅಭ್ಯಾಸಮಾಡುವ ಸಾಹಿತ್ಯವು ಪಾಶ್ಚಾತ್ಯ ಸಾಹಿತ್ಯ. ಶಿಕ್ಷಣಪಟ್ಟಿಯಲ್ಲಿ ನಮ್ಮ ಸಾಹಿತ್ಯಕ್ಕಿರುವ ಅವಕಾಶವು ಬಹಳ ಕಡಮೆ ಹೋಗಿರುವುದರಿಂದ ನಮ್ಮಲ್ಲಿ ನೇಕ ಮಹಿಳೆಯರಿಗೆ ಈ ಹಳೆಯ ಕಾಲದ ಹಾಡುಗಳ ಸ್ತ್ರೀ ಸಾಹಿತ್ಯದ ಮೇಲೆ ಪ್ರೀತಿಯಿರುವುದು ಅಸಂಭವವು. ಶಿಕ್ಷಣಹೊಂದಿದ ಇಂದಿನ ರಮಣಿಯರಿಗೆ ಈ ಹಳೆಯ ಸಾಹಿತ್ಯದಲ್ಲಿ ಪ್ರೀತಿಯಿಲ್ಲ. ಪ್ರೀತಿಯುಳ್ಳ ಹಳೆಯ ಕಾಲದವರಿಗೆ ವಿದ್ಯೆಯಿಲ್ಲ. ಹೀಗಿರುವುದರಿಂದ ಈ ಪ್ರಾಚೀನ ಸಾಹಿತ್ಯವು ಮಣ್ಣುಗೂಡುವ ಕಾಲವು ಪ್ರಾಪ್ತವಾಗಿರುವುದು.

ಕವಿಪರಿಚಯ

"ಜೀತೀಯ ವಿದ್ಯಾಲಯ ಪತ್ರಿಕೆ"—ಇದರಲ್ಲಿ ಶ್ರೀ ಕೃ ಶಾ ರವರು ಕವಿಪರಿಚಯವೆಂಬ ಶೀರ್ಷಿಕೆಯ ಇದ ಕಾಳಿದಾಸನ ಪರಿಚಯವನ್ನು ಈ ರೀತಿ ಭಾವಭಂಗಿಯಿಂದ ಮಾಡಿಕೊಟ್ಟಿದ್ದಾರೆ. "ಉಪಮಾ ಕಾಳಿದಾಸಸ್ಯ"—ಎಂದರೇನು? ಉಪ್ಪಮಾಪಿನಲ್ಲಿ ಕಾಳಿದಾಸನಿಗೆ ವಿಶೇಷ ಪ್ರೇಮವಿದ್ದಿತೇ? ಹಾಗಾಗದೆ ಉಪ್ಪಿಟ್ಟನ್ನು ಸೇರಿಗಟ್ಟಿ ಒಕ್ಕಿಲ್ಲದೆ ಗಟ್ಟಿಸುವ ವೀರಾಗ್ರಣಿಗಳೆಲ್ಲಾ ಅವನಂತೆಯೇ ಕವಿಗಳೊಳಗೆ ಅಗ್ರಗಣ್ಯರಾಗಿ ತಮ್ಮ ಅನಾಮಿಕೆಯನ್ನೇಕೆ ಸಾರ್ಥಕಗೊಳಿಸಲಾರರು! ಕೆಲವರು 'ಇವನ ದನ್ತ ಕುರುಬನೆಂದೂ ಬಹು ಮಂತ್ರ ತಂತ್ರದಿಂದ ರಾಜಕನ್ಯೆಯನ್ನು ಮದುವೆಯಾಗಿ ಅವಳ ಮೂಲಕ ಕಾಳಿಯ ಅನುಗ್ರಹಕ್ಕೆ ಪಾತ್ರನಾದ ಬಗೆಯ ಕತೆಯನ್ನು ಬರೆದಿರುವರು. ಬ್ರಾಹ್ಮಣ ಜಾತಿಯಲ್ಲಿಯೇ ಹುಟ್ಟಿದ್ದು ಕೇವಲ ಮೂಢ ಅತಿಶಯದಿಂದ "ಸಿಂಗಾ ದಾ ಮೋಕಗುಣಾ ಭವಸಿ" ಎಂಬಂತೆ ಕೆಲಸ ಕೆಟ್ಟಂತೆಯೂ ಇದಿಯಂತೆಯೂ ಆಗಬೇಕೆಂಬ ಅಭಿಪ್ರಾಯವೂ ಇದೆ. ಕಾಳಿದಾಸ ಎಂಬ ಹೆಸರು ಕಾಳಿಯ ವರಪ್ರಸಾದದಿಂದ ಬಂತೆಂದರೆ ಅವನ ಮೊದಲಿನ ಹೆಸರು ಏನಾಗಿರಬೇಕು? ಈ ಜನಜನಿತ ಕಥೆಗಳೆಲ್ಲಾ ಕೇವಲ ಮನೋರಂಜಕಗಳಾಗಿವೆಯೇ ಹೊರತು ಇವನ್ನು ಪ್ರಮಾಣವೆಂದು ಹೇಳಲು ಸಾಧ್ಯವಿಲ್ಲ.

ಈತನ ಕವಿತೆಗಳ ಮಂಗಳ ಶ್ಲೋಕಗಳು ಸಾಮಾನ್ಯವಾಗಿ ಈಶ್ವರಪರವಾಗಿರುವುದರಿಂದಲೂ ಈತನ ಗ್ರಂಥಗಳಲ್ಲಿ ವೇದ ಉಪನಿಷತ್ ಗೀತೆ ಮಹಾಭಾರತ ಶ್ರೀ ರಾಮಾಯಣ ಪುರಾಣ ಇವೇ ಮುಂತಾದ ವಿಚಾರಗಳು ದೊರಕುವುದರಿಂದಲೂ ಇವನು ಘನವೇದಾಂತಿಯೂ ಈಶ್ವರಭಕ್ತನೂ ಆಗಿರಬೇಕೆಂದು ಬೋಧೆಯಾಗುತ್ತದೆ. ವಿಶ್ವದರ್ಶಿ ನಾಟಕಗಳನ್ನು ರಚಿಸುವುದರಲ್ಲಿ ಷೇಕ್ಸ್‌ಪಿಯರ್ ಹೇಗೋ ಹಾಗೇ ಲೋಕವು ಮೆಚ್ಚುವಂತಹ ಕಾವ್ಯಗಳನ್ನು ರಚಿಸುವುದರಲ್ಲಿಯೂ ದಕ್ಷನೆನಿಸಿ ಕೀರ್ತಿಶೇಷನಾಗಿರುವನು. ಇವನ ಹೆಸರಿನಲ್ಲಿ ಮಾಲವಿಕಾಗ್ನಿಮಿತ್ರ, ವಿಕ್ರಮೋರ್ವಶೀಯ, ಶಾಕುಂತಲ— ಎಂಬ ಮೂರು ನಾಟಕಗಳು ರಘುವಂಶ ಕುಮಾರಸಂಭವ, ಮೇಘದೂತ—ಎಂಬ ಮೂರು ಕಾವ್ಯಗಳೂ ಪ್ರಸಿದ್ಧಿಯಾಗಿವೆ. ಮೇಲೆ ಹೇಳಿರುವ ನಾಟಕಗಳನ್ನು ಬರೆದ ಕಾಳಿದಾಸನು ಆ ಮೂರು ಕಾವ್ಯಗಳನ್ನು ಬರೆದ ಕಾಳಿದಾಸನಿಗಿಂತ ಭಿನ್ನನಾದವನೆಂದೂ ಕೆಲವರು ಅಭಿಪ್ರಾಯಪಡುವರು. ಆದರೆ ಇದಿನ್ನೂ ವಾದಗ್ರಸ್ತ.

ನಮ್ಮ ಕಾಳಿದಾಸನ ಕಾಲ, ದೇಶ, ಸ್ವರೂಪ, ಮುಂತಾದುವನ್ನು ಇವನ ಕವಿತೆಗಳಿಂದಲೇ ಊಹಿಸಬೇಕಾಗಿದೆ. ಇವನ ಕಾಲವಿಚಾರವಾಗಿ ಅನೇಕ ಭಿನ್ನಾಭಿಪ್ರಾಯಗಳಿದ್ದರೂ ಸುಮಾರು ಕ್ರಿ ಶ ನಾಲ್ಕನೆಯ ಶತಮಾನದಲ್ಲಿ ಇವನು ಇದ್ದಿರಬೇಕೆಂದು ಬಹುಮತದಿಂದ ಒಪ್ಪಬಹುದಾಗಿದೆ. ಇದು ತನ್ನ ಊರು, ಇವನು ಸ್ತ್ರೀಯನು, ಮತ್ತೊಬ್ಬನು ಅನ್ಯನು, ಎಂಬ ಅಲ್ಪ ಭಾವನೆಯು ಪರಮೋದಾರಚರಿತನಾದ ಇವನಿಗೆ ಸರಿದೋರದೆ, ದೇಶವೆಲ್ಲಾ ತನ್ನದು, ಮತ್ತು ಪ್ರಜೆಗಳೆಲ್ಲಾ ತನ್ನವರು ಎಂಬ ಪವಿತ್ರವಾದ ಭಾವನೆಯಿಂದ, ಇಂದೂ ಪ್ರಪಂಚಕ್ಕೆ ಆದರಣೀಯನಾಗಿರುವುದರಿಂದಲೇ ತನ್ನ ಸ್ವಂತ ಸ್ಥಳ ಎನ್ನಲು ಎಲ್ಲೂ ಹೇಳದೆ ಬಿಟ್ಟಿರಬಹುದು. ಇದರಿಂದ ಇಡೀ ದೇಶವೇ ಇವನು ತನ್ನವನೆಂದು ಹೆಮ್ಮೆಪಡಲು ಸಹಕಾರಿಯಾಗಿರುವುದೊಂದು ಸಂತೋಷದ ಸಂಗತಿ. "ಪುಂದಾ ಕವಿಷಯ! ಪ್ರಾರ್ಥೀ ಗಮಿಷ್ಯಾಮ್ಯುಪಹಾಸ್ಯತಾಂ" "ಭಾಸಕವಿಪುತ್ರ ಸೌಮಿಲ್ಲ ಕಾದೀನಾಂ ಪ್ರಬಂಧಾನತಿಕ್ರಮ್ಯ . . ." ಎಂದಿವೇ ಮುಂತಾದ ಕಡೆಗಳಲ್ಲೂ ಸ್ವೋತ್ಕರ್ಷತೆಯ ಶಿರೋಧೂನದ ಮೂಲಕ ಪರಗುಣ ಪರಮಾಣೂನ್ ಪರ್ವತೀಕೃತ್ಯ ನಿತ್ಯಂ ಎಂಬಂತೆ ಪರೋತ್ಕರ್ಷತೆಯನ್ನು ಉದ್ಘಾಟಿಸಿರುವುದು ಇವನ ಸಹಜವಾದ ಗಾಂಭೀರ್ಯಕ್ಕೆ ನಿದರ್ಶನವಾಗಿ ಸತ್ಪುರುಷರೆಲ್ಲಾ ಮೆಚ್ಚತಕ್ಕದ್ದಾಗುತ್ತದೆ.

ಪ್ರಕೃತಿಯನ್ನೂ ಮನುಷ್ಯನನ್ನೂ ಸಹಜರೀತಿಯಿಂದ ಚಿತ್ರಿಸಿರುವ ಚಿತ್ರಕಾರನೆಂದರೆ ಕಾಳಿದಾಸನೆನ್ನಬಹುದು. ಇವನ ಸ್ತ್ರೀವರ್ಣನವು ಅನ್ಯಾದೃಶವಾದುದು. ಈತನು ರಚಿಸಿರುವ ಸ್ತ್ರೀ ಪಾತ್ರಗಳು ಅತಿ ಕೋಮಲ ಮತ್ತು ಮಧುರ. ಆದರಲ್ಲಿ ಇವನ ನಡತೆಯು ಉದಾತ್ತವೂ ಸೌಜನ್ಯಯುಕ್ತವೂ ಆಗಿರುವುದು. ಇವನು ಯಾವುದನ್ನು ವರ್ಣಿಸಬೇಕಾದರೂ ಸಜೀವವಾಗಿಯೇ ವರ್ಣಿಸುವನು. ಅಲ್ಲದೆ ಧರ್ಮಮಾರ್ಗಕ್ಕೆ ಸ್ವಲ್ಪವೂ ವಿರೋಧವಾಗದಂತೆ ಬಹು ಜಾಗರೂಕತೆಯಿಂದ ವರ್ಣಿಸುವನು. ಇವನ ಕವಿತ್ವದಲ್ಲಿ ಗ್ರಾಮ್ಯ ಮತ್ತು ಅಶ್ಲೀಲ ಅಥವಾ ಅವಾಚ್ಯ ಶಬ್ದಗಳು ಕಂಡುಬರುವುದಿಲ್ಲ. ಉದಾತ್ತವಾದ ರಸ ಶುದ್ಧ ಮತ್ತು ಮಾರ್ಮಿಕ ವಿಚಾರಗಳು ಅನುಪಮ ಶಬ್ದಯೋಜನೆ ಇವನ್ನು ಸರಳವಾಗಿಯೂ ಉತ್ತಮವಾಗಿಯೂ ತೋರ್ಪಡಿಸುವುದು ಇವನ ಕವಿತೆಯ ವಿಶೇಷ ಲಕ್ಷಣವಾಗಿದೆ.

ಇವನ ವರ್ಣನೆಗಳು ಸ್ವಭಾವಸಿದ್ಧವೆನಲು ಪಲ್ಲವಾವೃತವಾದ ಏಕಾಂತಕ್ಕೆ ಏಟಿಯಿಂದಾದ್ಯಂತವಾದ ದೃಷ್ಟಾಂತವೂ ಪಿಸುಮಾತಿನಲ್ಲಿ ಕನ್ಯೆಯರ ಮನೋವೃತ್ತಿಗೆ ಚೇತನಂಬರಿದ ದೃಷ್ಟಾಂತವೂ ಸಾಕಾಗುವುದು. ಏಕಗೃಹಕ್ಕೆ ತೆರಳುವ ಶಕುಂತಲೆಗೆ ಕಣ್ವರ ಉಪದೇಶವು ಪ್ರತಿಯೊಬ್ಬ ರಮಣಿಯೂ ಅನುಸರಿಸತಕ್ಕದಾಗಿರುವುದು. ಷೇಕ್ಸ್‌ಪಿಯರ್ ಪೋಷಕರಲ್ಲಿ ಹೇಗೆ ಗಣ್ಯನೋ ಹಾಗೆಯೇ ಕರುಣಾರಸವನ್ನು ಸಹಜರೀತಿಯಿಂದ ವರ್ಣಿಸುವುದರಲ್ಲಿಯೂ ಕಾಳಿದಾಸನು ದಕ್ಷನಾಗಿರುವನು. ಶಾಕುಂತಲ ಮತ್ತು ವಿಕ್ರಮೋರ್ವಶೀಯದ ನಾಲ್ಕನೆಯ ಅಂಕಗಳು ಕರುಣರಸದ ಮುದ್ರೆಯಾಗಿರುವುದು. ಷೇಕ್ಸ್‌ಪಿಯರನಂತೆ ಸರ್ವಾಂಗಸುಂದರವೂ, ಕಾಠಿನ್ಯರಹಿತವೂ ಆಗಿರುವ ಹಾಸ್ಯರಸವನ್ನು ಚಾತುರ್ಯದಿಂದಲೂ ಸೊಗಸಿನಿಂದಲೂ ತೋರಿಸುವುದರಲ್ಲಿ ಇವನು ಅತ್ಯಂತ ನಿಪುಣನು. ಶಾಕುಂತಲದಲ್ಲಿ ದುಷ್ಯಂತ—ವಿದೂಷಕ, ಗ್ರಾಮರಕ್ಷಕ ಬೆಸ್ತ, ವಿಕ್ರಮೋರ್ವಶೀಯದಲ್ಲಿ ಪುರೂರವಸ್—ಮಾಣವಕ, ಇವರ ಭಾಷಣಗಳು ನೋಟಕರನ್ನು ಆನಂದಜಲಧಿಯಲ್ಲಿ ಮುಳುಗಿಸುವುದು."

ಪಾಶ್ಚಾತ್ಯನಾಗರಿಕತೆಯ ಪರಿಣಾಮವೆಲ್ಲಿ?

ಸಂಪತ್ತನ್ನು ನಿರ್ಮಿಸುವವರು ಮತ್ತು ಅವನ್ನುಪಯೋಗಿಸುವವರು ಇವರಿಬ್ಬರೊಳಗೆ ಜಗಳವೆದ್ದು, ಅದು ಕೊನೆಗಾಣುವ ಲಕ್ಷಣವು ಕಂಡುಬರುವುದಿಲ್ಲ. ಅದರಿಂದ ಎಲ್ಲೆಲ್ಲಿಯೂ ಅಶಾಂತಿಯು ಉಂಟಾಗಿದೆ ಎಂದು ಡಾ। ರವೀಂದ್ರನಾಥ ಠಾಕೂರರು ಹೇಳಿರುವರು. ಈಗಿನ ಸ್ಥಿತಿಯ ವಿಚಾರದಲ್ಲಿ ಅವರ ಅಭಿಪ್ರಾಯವು ಹೀಗಿದೆ— "ಯಾವ ಸಮಾಜದಲ್ಲಿ ಲೋಭ ಮತ್ತು ಪ್ರಭುತ್ವದ ಆಸೆ—ಈ ದುರ್ಗುಣಗಳು ಪ್ರಬಲವಾಗುವುವೋ ಆ ಸಮಾಜದ ಮನುಷ್ಯರು ಆಧ್ಯಾತ್ಮಿಕ ಉನ್ನತಿಯ ಪ್ರಯತ್ನವನ್ನು ಮಾಡದೆ ಕೇವಲ ತಮ್ಮ ವೈಭವವು ಹೇಗೆ ಅಭಿವೃದ್ಧಿಹೊಂದುವುದು ಎಂದು ಚಿಂತಿಸುತ್ತಿರುವರು. ದಿನದಿನಕ್ಕೆ ಹಳ್ಳಿಗಳ ಸಂಖ್ಯೆಯು ಕಡಿಮೆಯೂ ಗುತ್ತ ಪಟ್ಟಣಗಳ ಸಂಖ್ಯೆಯು ಬೆಳೆಯುತ್ತಿರುವುದಕ್ಕೆ ಆಧುನಿಕ ನವನಾಗರಿಕತೆಯಿಂದ ಉಂಟಾಗಿರುವ ಸುಖವಿಲಾಸಗಳ ಆಸೆಯೇ ಕಾರಣವಾಗಿದೆ. ಹಳ್ಳಿಹಳ್ಳಿಗಳು ಪಟ್ಟಣಗಳ ವಿಲಾಸಪ್ರಿಯತೆಗೋಸ್ಕರ ಈಗ ಸರ್ವಸ್ವವನ್ನೂ ಸೂರೆಗೊಟ್ಟು ಆತ್ಮನಾಶಮಾಡಿಕೊಳ್ಳಬೇಕಾಗಿ ಬಂದಿದೆ. ಇದರಿಂದ ಈಗ ಪಟ್ಟಣದ ವಿಲಾಸಿಗಳು—ಅರೆಹೊಟ್ಟೆತಿನ್ನುವ ಶ್ರಮಜೀವಿಗಳಾದ ಹಳ್ಳಿಗರು ಎಂದು ಸಮಾಜದಲ್ಲಿ ಎರಡು ಭಾಗವುಂಟಾಗಿದೆ. ಇಂಗ್ಲೆಂಡಿನಲ್ಲಿ ಜೀವನಧಾರಣ ಮಾಡುವುದಕ್ಕೆ ವಿಶೇಷವಾಗಿ ವೆಚ್ಚವಾಗುವುದರಿಂದ ಹಿಂದೂಸ್ಥಾನದಂತಹ ಜಿತರಾಷ್ಟ್ರದ ಆರ್ಥಿಕಶೋಷಣೆ ಮಾಡದೆ ಇಂಗ್ಲೆಂಡಿಗೆ ಗತ್ಯಂತರವಿಲ್ಲವಾಗಿದೆ. ಮತ್ತು ಯೂರೋಪಿನ ಮೂಲರಾಷ್ಟ್ರಗಳಿಗೆ ಏಷಿಯಾ ಮತ್ತು ಆಫ್ರಿಕಾ ಖಂಡಗಳ ಮೇಲಿನ ಪ್ರಭುತ್ವವು ಬೇಕಾಗಿರುವುದು. ಇದಕ್ಕಾಗಿಯೇ ಅಷ್ಟುಮಾತ್ರವಲ್ಲದೆ ಸ್ವತಃ ಯೂರೋಪಿನಲ್ಲಿ ಕೂಡಾ ಅಲ್ಪ ಸಂಖ್ಯಾತರಾದ ಶ್ರೀಮಂತರ ವಿಲಾಸಗಳು ಸಾಮಾನ್ಯ ಜನರ ಶ್ರಮಜೀವನದ ಆಧಾರದಿಂದಲೇ ನಡೆಯುತ್ತಿರುವುದು. ಜೀತರು ಮತ್ತು ಜಿತರು ಶ್ರೀಮಂತರು ಬಡವರೂ ಧಣಿದವಾಳಗಾರರು ಕೂಲಿಕಾರರು ಎಂದು ಮಾನವಸಮಾಜದಲ್ಲಿ ಎರಡು ಭಾಗಗಳುಂಟಾಗಿ ಅದರಲ್ಲಿ ಕಲಹವುಂಟಾಗಿರುತ್ತದೆ. ಈ ವಿಲಾಸದ ಅಭ್ಯಾಸದಿಂದಲೆ ಈ ಬಗೆಯ ದಾರುಣವಾದ ವಿಷಮತೆಯಿಂದ ಮಾನವಜಾತಿಯ ಉಚ್ಚ ಧ್ಯೇಯವಾದಕ್ಕೆ ಆತಂಕವೊದಗಿದೆ.

Bengal Co operative Journal

ಇನ್ನೂ ಗುಲಾಮಗಿರಿಯು ಇದೆ.

"ಸುಧಾರಿತ ಲೋಕ ಇಪ್ಪತ್ತನೇ ಶತಮಾನ" ಎಂದು ನಾವು ಹೆಮ್ಮೆಗೊಳ್ಳುವಂತೆ ಇಂದು ಲೋಕದಲ್ಲಿ ೫೦ರಿಂದ ೬ ಮಿಲ್ಲಿಯದಷ್ಟು ಗುಲಾಮರಿರುವರೆಂದು ತಿಳಿದುಬರುತ್ತದೆ. ಈ ಗುಲಾಮರೆಂದರೆ ಅಕ್ಷರಶಃ ಗುಲಾಮರೇ. ಕೇವಲ ಪರರ ಅಧೀನತೆಯೊಳಗಿನವರಲ್ಲ. ಅವರ ದೇಹದ ಅಧಿಕಾರವೂ ಒಡೆಯರ ಸ್ವಾಧೀನದಲ್ಲಿ. ಯಾವು ದಾದರೂ ಸಜೀವ ಸರಕನು ಮಾರಾಟಮಾಡುವಂತೆ ಅವರು ವಿಕ್ರಯಿಸಲ್ಪಡುತ್ತಿರುವರು. ಈ ಆರು ಮಿಲ್ಲಿಯ ಅಷ್ಟು ಗುಲಾಮರಲ್ಲದೆ ಇನ್ನೂ ಸರರಾಷ್ಟ್ರಕೆಯಲ್ಲಿರುವ ಗುಲಾಮ ರಿವ್ಯೂ ಇವರ! ಇಂದು ಹೆಚ್ಚಾಗಿ ಗುಲಾಮರಿರುವ ದೇಶಗಳೆಂದರೆ ಚೀನ ಅಬಿಸೀನಿಯಾ ಮತ್ತು ಅರೇಬಿಯಾ. ಈ ದೇಶಗಳಲ್ಲಿನ ಸರಿಯಾದ ಅಂಕಿಸಂಖ್ಯೆಗಳನ್ನು ತಿಳಿಯಬಂದಿಲ್ಲ. ಆದರೂ ಚೀನ ಒಂದರಲ್ಲೇ ೩ ಮಿಲ್ಲಿಯನ್ ಗುಲಾಮರಿರುವರೆಂದು ಅಂದಾಜು ಮಾಡಲಾಗಿದೆ. ಇಲ್ಲಿ ವಿಶೇಷವಾಗಿ ಹುಡುಗಿಯರೇ ಗುಲಾಮಗಿರಿಯಲ್ಲಿ ಇರುವರು. ಅಲ್ಲಿ ಎಲ್ಲೆಲ್ಲಿಯೂ ಹುಡುಗಿಯರನ್ನು ಸೇವಕರನ್ನಾಗಿಯೋ ಗುಲಾಮರನ್ನಾಗಿಯೋ ಕೊಂಡುಕೊಳ್ಳುವುದೂ ಮಾರಾಟಮಾಡುತ್ತಿರುವುದೂ ಕಡಮೆಯಿಲ್ಲವೆಂದು ಆಗೊಮ್ಮೆ ಎಂಬಲ್ಲಿ ಬ್ರಿಟಿಷ್ ಕೌನ್ಸಿಲರಾಗಿರುವ ಮಿ ರಸ್ಸೆಲ್ ಬ್ರೌನ್ ಸಾಹೇಬರು ಹೇಳುವರು. ಸಾಮಾನ್ಯವಾಗಿ ದಲ್ಲಿ ಈ ಹುಡುಗಿಯರ ವ್ಯಾಪಾರವು ಸಾರ್ವಜನಿಕವಾಗಿ ಬಜಾರುಗಳಲ್ಲಿ ಸಾರ್ವಜನಿಕವಾಗಿಯೂ ನಡೆಯುತ್ತಿರುತ್ತದೆ. ಅಬಿಸೀನಿಯಾದಲ್ಲಂತೂ ಗುಲಾಮಗಿರಿಯು ಸಾಮಾಜಿಕ ರೂಢಿಯಾಗಿಬಿಟ್ಟಿದೆ. ಗುಲಾಮರ ವ್ಯಾಪಾರ ಮಾಡುವವರು ಮೃಗಗಳನ್ನು ಹಿಡಿದು ತರುವಂತೆ ಕೆಲವು ಊರುಗಳಿಗೆ ನುಗ್ಗಿ ಹೆಂಗುಸರುಮಕ್ಕಳನ್ನು ಎತ್ತಿಕೊಂಡುಬರುವುದಿದೆಯೆಂದು ತಿಳಿದುಬರುತ್ತದೆ. ೧೯೧೩ರಿಂದ ೧೯೨೭ರೊಳಗೆ ಇಂತಹ ಬೇಟೆಗಳು ೧೪೩ ನಡೆದುವೆಂದು ಲೆಕ್ಕಹಿಡಲಾಗಿದೆ. ಅಬಿಸೀನಿಯಾದಲ್ಲಿ ಈ ರೀತಿ ಹಿಡಿದು ತಂದ ಗುಲಾಮರನ್ನು ಅರೇಬಿಯಾ ಮೊದಲಾದ ಕಡೆಗಳಲ್ಲಿ ಮಾರಾಟಮಾಡುವರು.

—International Review Missions'

ಕನ್ನಡ ಸಂಗೀತ ಸಭಾ, (ಅಮೆಚೂರ್ಸ್) ಮುಂಬಾಯಿ

ಇವರು ಶಿವಾ ಶಾಂತಿನಿಕೇತನ ಹಾಯಿಸ್ಕೂಲ್ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಇಲ್ಲಿಯ ಕಲ್ಬಾದೇವಿ ರಸ್ತೆಯಲ್ಲಿರುವ ಭಾಂಗವಾಡಿ ನಾಟ್ಯಮಂದಿರದಲ್ಲಿ ಜುಲಾಯಿ ೩ನೇ ಶುಕ್ರವಾರ ರಾತ್ರಿ ಘಂಟೆ ೯ಕ್ಕೆ "ಕೋಟಿಚೆನ್ನಯ" ಎಂಬ ಐತಿಹಾಸಿಕ ನಾಟಕವನ್ನು ಶ್ರೀ ಆರ್ ಎ ಜಹಗೀರದಾರ್, ಎಂ, ಎ ಎಲ್ ಎಲ್, ಬಿ ಇವರ ಅಧ್ಯಕ್ಷತೆಯಲ್ಲಿ ಅಭಿನಯಿಸಲಿರುವರು. ಉದಾರಿಗಳೂ ನಾಟಕಾಭಿಮಾನಿಗಳೂ ಆದ ಬಂಧುಭಗಿನಿಯರೆಲ್ಲರೂ ಪ್ರೇಮಪೂರ್ವಕವಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್
ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1—10—0

ಕೇಸರಿ ಕುಟೀರಂ
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು

ಅಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀವಾಮೃತವನ್ನು ಸೇವಿಸಿ

ಆರೋಗ್ಯಲಾಭವನ್ನು ಹೊಂದಿರಿ.

ನಿಮ್ಮಲ್ಲಿ ಚೈತನ್ಯವಿಲ್ಲವೋ, ಅಸುಖಿಯಾಗಿದ್ದೀರೋ, ದೇಹವು ಕಂಪಿಸುತ್ತಿದೆಯೋ, ನಿರಾಶಾಸ್ಥಿತಿಯಲ್ಲಿ, ದುಃಖದಲ್ಲಿರುವಿರೋ—ಹಾಗಿದ್ದರೆ ನಿಮಗೆ ಪರಿಣಾಮಕಾರಿಯಾಗುವ ಒಳ್ಳೆಯ ಟಾನಿಕ್ ಬೇಕು ಪಂಡಿತ ಡಿ ಗೋಪಾಲಾಚಾರ್ಲುರವರ ಪೂರ್ಣ ಆರೋಗ್ಯದಾಯಕವಾದ ಜೀವಾಮೃತವನ್ನು ಸೇವಿಸಿರಿ ನಿಮ್ಮ ಕೆಮಿಸ್ಟರಿಂದ ಒಂದು ಬಾಟ್ಲಿಯನ್ನು ಪಡೆಯಿರಿ ಅನುಪಾನಪತ್ರದಂತೆ ಅದನ್ನು ಸೇವಿಸಿ ಆಶ್ಚರ್ಯಕರ ರೀತಿಯಿಂದ ಶಾಂತಿಯೂ ಆರೋಗ್ಯವೂ ಲಭಿಸುವುದನ್ನು ಕಾಣಿರಿ ಒಂದು ಡೋಜು ಕುಡಿದಾಗಲೇ ನಿಮಗದರ ಮಹತ್ವವು ತಿಳಿದುಬರುವುದು. ಜೀವಾಮೃತವು ಬಲವನ್ನು ಹೆಚ್ಚಿಸುತ್ತದೆ ರಕ್ತವನ್ನು ಹೆಚ್ಚಿಸುತ್ತದೆ ನರಯೋಗಿಗಳ ಅಣುಗಳನ್ನು ಪೋಷಿಸುತ್ತದೆ ಜೀವನದ ಆನಂದವೇ ಹಸ್ತಗತವಾಗುತ್ತದೆ ಪ್ರಾಯ, ಪುಂಸ್ತ್ರೀಭೇದ, ಕಾಲಗಳ ಭೇದಾಭೇದವೇ ಇಲ್ಲ

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ದೊರೆಯುತ್ತದೆ.

ತಯಾರಿಸುವವರು **ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು**
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು—ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮನೆಯಲ್ಲಿನ ಉಪಯೋಗಕ್ಕೂ, ಸಣ್ಣ ತೋಟಗಳನ್ನುಳುವುದಕ್ಕೂ

ಕಿರ್ಲೋಸ್ಕರ ಹೌಸ್ ಸಿಸ್ಟಮ್ ಪಂಪು.

ನಿಮಗೆ ಪೂರ್ಣ ಸಂತೃಪ್ತಿಯು ನೀಯುತ್ತದೆ

ಒಂದು ಗುಂಡಿಯನ್ನೊತ್ತಿದರೆ ಸರಿ, ಪಂಪು ತನ್ನಷ್ಟಕ್ಕೆ ನಡೆಯುತ್ತದೆ.

ಎಲ್ಲಿಂದಾದರೂ, 1 ಇಂಚು ಪೈಪಿನ ಮೂಲಕ ನೀರನ್ನು ಒದಗಿಸಿ ಕೊಡುತ್ತದೆ.



¼ B H P ವಿದ್ಯುತ್ ಮೋಟರಿನೊಂದಿಗೆ ಪೂರ್ಣವಾಗಿರುತ್ತದೆ.

ವಿವರಕ್ಕೆ ಈ ಕೆಳಗಿನವರಿಗೆ ಬರೆಯಿರಿ—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ. ಸತಾರಾ.

ಡಿಸ್ಟ್ರಿಬ್ಯೂಟರರು—ಪೆರ್ರಿ ಎಂಡ್ ಕೋ. ಲಿಮಿಟೆಡ್, ಮದ್ರಾಸು.

ಜಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕೊಳೆರಕ್ಕೆ ದಿವ್ಯೌಷಧಿ ಉಪಯೋಗಿಸಿದರೆ ಗುಣ ಖಾತ್ರಿ
ಕ್ರಯ ಡಬ್ಬಿ 1ಕ್ಕೆ ರೂ 1—0—0

ಗುಹ್ಯರೋಗ ನಿವಾರಿಣೀ ತೈಲ
Anti-Veneraei Oil
(A V- Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ ಕುಟುಂಬ ಪಾರಂಪರ್ಯದ ವ ತಗಲಿದ ರೋಗವೂ ಗುಣವಾಗುವುದು ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು.

8 ಔನ್ಸಿನ ಬಾಟ್ಲಿ 1ಕ್ಕೆ ರೂ 2—8—0.

ಕೆ ವಿ, ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು

ರೈಲುಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4 20
ಮಿಕ್ಸೆಡ್	,, 5 55	ರಾತ್ರಿ 8 50
ಫಾಸ್ಟ್ ಪೆಸೆಂಜರ್	ಮ. 3 45	ಮ 12 40
ಶಟಲ್	ಸಂಜೆ 5 25	ಬೆಳಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ 8 25	ಮ 1 20
ಕಾಸರಗೋಡು ಪೆಸೆಂಜರು	ಸಂಜೆ 3 20	ಸಂಜೆ 6 15

ಕುಷ್ಠ ರೋಗ ಮತ್ತು ಫರಂಗಿ ರೋಗ

ಇತರ ಎಷ್ಟು ದೀರ್ಘಕಾಲದ ರೋಗವೇ ಆಗಿರಲಿ, ಯಾವ ಕಾರಣವೇ ಇರಲಿ, ನೀವು ಮದ್ದು ಮಾಡಿ ಮಾಡಿ ದಣಿದಿರಿ ನಿಮ್ಮ ರೋಗಗಳನ್ನು ಇಂದ್ರಜಾಲದಂತೆ ಶಾಶ್ವತವಾಗಿ 4 ವಾರಗಳಲ್ಲಿ ಗುಣಪಡಿಸಲಾಗುತ್ತದೆ ಪೂರ್ಣ ಗುಣ ಗ್ಯಾರಂಟಿ

ವಿವರಕ್ಕೆ ಬರೆಯಿರಿ.

Kamala Works,
Panchpota Bengal S B.
C·P S

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ ಸ್ಥ.

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾಯುತ ಸಮೇತ

ಋಗ್ವೇದೀ ಸಂಧ್ಯಾವಂದನೆ

(ವೈಷ್ಣವರಿಗೆ_ಊರ್ಧ್ವಪುಂಡ್ರ_ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ ಎ, ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ,

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕಾಂಟು.)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ
The Scientific Gold Bangles Co, Ltd,
Head Office -43 Byragimatam Street,
Post Box No. 203, Madras.

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ.

ಹೊಸತಾಗಿ ಆಮದಾದುದು ದೊರೆಯುವ ಇತರ ಕ್ಯಾಮರಗಳಿಗಿಂತ ಬಾಳಿಕೆ ಬರುವಂಥದು ಮತ್ತು ಉತ್ಕೃಷ್ಟವಾದುದು. ಫೋಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್, ೪ ಫಿಲ್ಮ್ ಎಕ್ಸ್ಪೋಜರ್ಸ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಅವಶ್ಯಕವಾದ ರಸಾಯನಿಕ ವಸ್ತುಗಳು, ಫೋಟೊ ತೆಗೆಯುವ ವಿಧಾನ ಶಿಕ್ಷಣಕೊಡುವ ಸಾಹಿತ್ಯ ಇವು ಉಚಿತವಾಗಿ ಕಳುಹಿಸಲಾಗುತ್ತದೆ ಬಲವಾದ ಲೆನ್ಸ್ ಇರುವ ಸಾಧಾರಣವಾದುದು ರೂ. ೩—೧೨—೦, ಉತ್ತಮವಾದುದು ೬—೧೪—೦ ಮಡಚುವ ಕ್ಯಾಮರಾ ರೂ ೫, ಉತ್ತಮವಾದ್ದು ರೂ. ೭ ಸ್ಪೆಶಲ್ ರೂ. ೧೦, ಹೆಚ್ಚಿಗೆ ಫಿಲ್ಮ್ ಬೇಕಾದರೆ ಡಜನ್ ೧ಕ್ಕೆ ೩ ಆಣೆ. ಎನ್‌ಲಾರ್ಜ್‌ಮೆಂಟಿನ ಸಾಧನಾ ಸಾಮಗ್ರಿ ೧ ಸೀಸೆಗೆ ೪ ಆಣೆ, ಫಿಕ್ಸಿಂಗ್ ಸಾಲ್ಟ್ ೧ ಡಬ್ಬಕ್ಕೆ ೩ ಆಣೆ. ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ. ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ.

ಭಾರತ ಯೂನಿಯನ್ ಟ್ರೇಡಿಂಗ್ ಕಂ.
ಪೋಸ್ಟ್‌ಬಾಕ್ಸ್ ನಂಬ್ರ ೨೪೯ (ಎಸ್ ಪಿ) ಕಲ್ಕತ್ತ

೨೧ನೇ ಕನ್ನಡ ಸಾಹಿತ್ಯ ಸಮ್ಮೇಳನ

ಬೊಂಬಾಯಿ ಪಟ್ಟಣದಲ್ಲಿ

(ಸಮಾಚಾರ ಪತ್ರಿಕೆ ೧.)

ಬರುವ ಡಿಸೆಂಬರ್ ತಿಂಗಳಲ್ಲಿ ನಡೆಯಬೇಕಾಗಿರುವ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬೊಂಬಾಯಿ ಪಟ್ಟಣಕ್ಕೆ ಆಹ್ವಾನಿಸಬೇಕೆಂದು ಆ ಪಟ್ಟಣದ ಕನ್ನಡ ಪ್ರಮುಖ ಜನರು ಉದ್ದೇಶಪಟ್ಟು, ಅದಕ್ಕೆ ಸಾರ್ವಜನಿಕ ಸ್ವರೂಪವನ್ನು ಕೊಡುವುದಕ್ಕಾಗಿ ಬೊಂಬಾಯಿ ಸರಕಾರದ ವಿದ್ಯಾ ಇಲಾಖೆಯ ಮಂತ್ರಿಗಳಾದ ಘನತೆವೆತ್ತ ದಿವಾನ್ ಬಹದ್ದೂರ್ ಶ್ರೀನಿವಾಸ್ ಎಸ್ ಟಿ ಕಂಬಳಿ ಅವರ ನೇತೃತ್ವದಲ್ಲಿ ಕಳೆದ ಮಾರ್ಚಿ ತಾ. ೧೭ನೇ ಭಾನುವಾರ ಒಂದು ಮಹಾಸಭೆಯನ್ನು ನಡೆಸಿದರು. ಅದರಲ್ಲಿ ಅನೇಕ ಮಂದಿ ಪ್ರಭಾವಶಾಲಿಗಳಾದ ಮಹನೀಯರು ಭಾಗವಹಿಸಿದ್ದರು. ಅನೇಕ ಉತ್ಸಾಹಪೂರಿತ ಭಾಷಣಗಳಾದ ಬಳಿಕ, "ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಾರ್ಯ ನಿರ್ವಾಹಕ ಮಂಡಲಿ"ಗೆ ಆಮಂತ್ರಣ ಕೊಡತಕ್ಕದ್ದೆಂದು ಆ ಮಹಾಸಭೆಯು ಸರ್ವಾನುಮತದಿಂದ ನಿರ್ಣಯ ಮಾಡಿತು. ಹೀಗೆ ಆದರ ವಿಶ್ವಾಸಗಳಿಂದ ಬಂದ ಆಹ್ವಾನವನ್ನು ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯು ತಾ ೨೧-೪-೩೫ನೇ ದಿನ ಕೃತಜ್ಞತೆಯಿಂದ ಸ್ವೀಕರಿಸಿತು.

ಸಮ್ಮೇಳನವನ್ನು ಬರಮಾಡಿಕೊಳ್ಳಲು ಮುಂಬಾಯಿಯಲ್ಲಿ ಬಲವಾದ ಸ್ವಾಗತ ಮಂಡಳಿ ಏರ್ಪಟ್ಟಿದೆ. ಅಲ್ಲಿಯ ಎಲ್ಲ ಕನ್ನಡ ಪ್ರಮುಖರೂ ಅದರಲ್ಲಿ ಒಮ್ಮನಸ್ಸಿನಿಂದ ಸೇರಿದ್ದಾರೆ. ಆ ಮಹಾ ಪಟ್ಟಣದಲ್ಲಿ ಕನ್ನಡಿಗರು ಸುಮಾರು ಹತ್ತು ಸಹಸ್ರ ಮಂದಿ ಇರುವರಲ್ಲದೆ, ಅವರಲ್ಲನೇಕರು ಭಾರೀ ಉದ್ಯೋಗಗಳಲ್ಲಿಯೂ, ವ್ಯಾಪಾರಗಳಲ್ಲಿಯೂ, ವಿದ್ವತ್ಕೀರ್ತಿಗಳಲ್ಲಿಯೂ ಗಣ್ಯರಾಗಿ ಮುಂದಕ್ಕೆ ಬಂದಿರುವರೆಂಬ ಸಂಗತಿಯು ಕನ್ನಡನಾಡಿಗೆ ಹೆಮ್ಮೆಯನ್ನುಂಟುಮಾಡತಕ್ಕದ್ದಾಗಿದೆ.

ಸಮ್ಮೇಳನವು ಯಶಸ್ವಿಯಾಗಿ ನಡೆಯಲು ತಕ್ಕ ಏರ್ಪಾಟುಗಳು ಈಗಾಗಲೇ ಪ್ರಾರಂಭವಾಗಿರುವಂತೆ ಪರಿಷತ್ತಿನ ಕಾರ್ಯಾಲಯಕ್ಕೆ ವರ್ತಮಾನ ಪತ್ರಗಳು ಬಂದಿವೆ. ಅತಿಥಿಗಳ ಅನುಕೂಲ/ಉಪಚಾರಗಳಿಗಾಗಿಯೂ, ಸಭಾ ಕಾರ್ಯಗಳಿಗೆ ಬೇಕಾದ ಸೌಕರ್ಯಗಳಿಗಾಗಿಯೂ ಸ್ವಾಗತ ಮಂಡಲಿಯವರು ವಿತರಣೆಯಿಂದಲೂ ಉದಾರತೆಯಿಂದಲೂ ವ್ಯವಸ್ಥೆ ಮಾಡಿಸತಕ್ಕವರಾಗಿದ್ದಾರೆ. ಮುಂದಿನ ಸಮ್ಮೇಳನವು ಕನ್ನಡದ ಪುನರುಜ್ಜೀವನ ಚರಿತ್ರೆಯಲ್ಲಿ ಅತ್ಯಂತ ಮಹತ್ವವುಳ್ಳದ್ದಾದೀತೆಂದು ಪರಿಷತ್ತು ನಿರೀಕ್ಷಿಸಿಕೊಂಡಿದೆ.

ಬ್ರಿಟಿಷ್ ಆಧಿಪತ್ಯದ ರಾಜಧಾನಿಯಾದ ಮಹಾಪಟ್ಟಣದಲ್ಲಿ ಕನ್ನಡ ಸಮ್ಮೇಳನ ನಡೆಯುವುದು ಇದೇ ಮೊದಲನೆಯ ಸಾರಿ. ಇದರಿಂದ ಸಮಸ್ತ ಇಂಡಿಯಾ ದೇಶದ ಗಮನವೂ ಕನ್ನಡದ ಕಡೆಗೆ ತಿರುಗಿ, ಕನ್ನಡದ ಪ್ರಕಾಶವು ವಿಸ್ತಾರವಾಗಲು ಕಾರಣವಾದೀತೆಂದು ಪರಿಷತ್ತಿಗೆ ನಂಬಿಕೆ ಇದೆ. ಮುಂದಿನ ಸಮ್ಮೇಳನದಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಗಳ ಏಕೀಕರಣಕ್ಕೂ ಭಾಷೆಯ ಪುರೋಭಿವೃದ್ಧಿಗೂ ಸಂಬಂಧಪಟ್ಟ ಅನೇಕ ಮಹತ್ವದ ಪ್ರಶ್ನೆಗಳು ಆಲೋಚನೆಗೆ ಬರತಕ್ಕವಾಗಿವೆ. ಇಂಥ ವಿಶೇಷ ಮುಖ್ಯತೆಯೂ ಮಹತ್ವವೂ ಉಳ್ಳ ಸಮ್ಮೇಳನಕ್ಕೆ ಎಲ್ಲ ಪ್ರಾಂತ್ಯಗಳಿಂದಲೂ ಕನ್ನಡದ ಅಭಿಮಾನಿಗಳು ದಯಮಾಡಿ ಬರಲು ಮನಸ್ಸು ಮಾಡಬೇಕೆಂದು ಪರಿಷತ್ತು ವಿನಯದಿಂದ ಬೇಡುತ್ತದೆ.

ಹೊಸ ಕ್ರಮ

ಈ ಸಾರಿಯ ಸಮ್ಮೇಳನ ಕ್ರಮದಲ್ಲಿ ಕೆಲವು ವಿಶೇಷಗಳುಂಟು. ಇನ್ನು ಮುಂದೆ ಸಮ್ಮೇಳನವನ್ನು ಕೂಡಿದ ಮಟ್ಟಿಗೂ ಭಾರತ ಸಮ್ಮೇಳನ ಪರಿಷತ್ತು, ಪ್ರಾಚ್ಯ ವಿದ್ವತ್ ಸಮ್ಮೇಳನ ಮೊದಲಾದ ಪ್ರಸಿದ್ಧ ಸಮ್ಮೇಳನಗಳ ರೀತಿಯಲ್ಲಿ ನಾನಾ ರಾಜ್ಯಾತ್ಮಕವನ್ನಾಗಿ ಮಾಡಿ ಬೆಳೆಸಬೇಕೆಂದು ಪರಿಷತ್ತಿಗೆ ಉದ್ದೇಶವಿದೆ. ತಾ. ೨-೫-೧೯೩೫ರಲ್ಲಿ ನಡೆದ ಪರಿಷತ್ತಿನ ವಿಶೇಷ ಅಧಿವೇಶನವು ಗೊತ್ತು ಮಾಡಿರುವ ಮೇರೆಗೆ, ಸಮ್ಮೇಳನದ ಅಂಗಗಳಾಗಿ ಸದ್ಯಕ್ಕೆ ಕಾವ್ಯಗೋಷ್ಠಿಯೊಂದೂ ಸಂಶೋಧನಗೋಷ್ಠಿಯೊಂದೂ ನಡೆಯತಕ್ಕವಾಗಿವೆ. ಅಲ್ಲದೆ ಭಾಷೆ ಸಂಸ್ಕೃತಿಗಳಿಗೂ ಜ್ಞಾನ ಪ್ರಸಾರಕ್ಕೂ ಸಂಬಂಧಪಟ್ಟ ಇತರ ವಿಚಾರಗಳಲ್ಲಿ ಯಾವುದರಲ್ಲಾದರೂ ಬಹುಮಂದಿ ಸದಸ್ಯ ಮಹಾಶಯರು ಆಸಕ್ತಿ ತೋರಿದರೆ, ಅಂಥ ವಿಚಾರಗಳಿಗೆ ಸಂಬಂಧಪಟ್ಟ ಗೋಷ್ಠಿಗಳನ್ನೂ ನಡೆಸಬಹುದು. ಈ ಹೊಸ ವ್ಯವಸ್ಥೆಗೆ ಸಂಬಂಧಪಟ್ಟ ನಿರ್ಣಯವನ್ನು ಈ ಕೆಳಗೆ ಕಾಣಿಸಿದೆ:–

೧ ಸಾಹಿತ್ಯ ಸಮ್ಮೇಳನವು ಸಾಧಾರಣವಾಗಿ ಮೂರು ದಿವಸ ನಡೆಯತಕ್ಕದ್ದು. ಆ ದಿವಸಗಳಲ್ಲಿ ಸಮ್ಮೇಳನದ ಅಂಗವಲ್ಲದ ಇತರ ಯಾವ ಸಭೆ ಸಮಾರಂಭಗಳಿಗಾಗಲಿ ಕಾಲ ದೊರಕಿಸಬೇಕಾದುದಿಲ್ಲ.

೨ ಸಮ್ಮೇಳನಕ್ಕೆ ಅಂಗವಾಗಿ ಈ ಕೆಳಗಣ ಮತ್ತು ಇತರ ಗೋಷ್ಠಿಗಳನ್ನು ನಡೆಸಬಹುದು:

ಅ ಕವಿಗೋಷ್ಠಿ

ಆ ಸಂಶೋಧಕ ಗೋಷ್ಠಿ

ಇ ಅಪೇಕ್ಷಣೀಯವೆಂದ ತೋರಿದ ಇತರ ಗೋಷ್ಠಿಗಳು.

ವಿವರಣೆ:– ಇದುವರೆಗೆ ಕವಿಸಮ್ಮೇಳನಗಳೆಂದು ಗದ್ಯಪದ್ಯ ಲೇಖಕ ಸಮ್ಮೇಳನಗಳೆಂದೂ ನಡೆದ ಕೂಟ ಬಂದಿರುವ ಏರ್ಪಾಟನ್ನು ಇನ್ನು ಮುಂದೆ ಕವಿಗೋಷ್ಠಿ ಎಂಬ ಹೆಸರಿನಿಂದ ನಡೆಸಬಹುದು. ಈ ಗೋಷ್ಠಿಯು ಪದ್ಯಕಾವ್ಯ ಗದ್ಯಕಾವ್ಯ ಉಪನ್ಯಾಸ ನಾಟಕ ಕಥೆ ಮೊದಲಾದ ಕಾವ್ಯ ಸಾಹಿತ್ಯ ಸಂಬಂಧ ವಿಚಾರಗಳಿಗೆ ಗಮನಕೊಡತಕ್ಕದ್ದು.

ಸಂಶೋಧಕ ಗೋಷ್ಠಿಯು ಸಾಹಿತ್ಯ ತತ್ತ್ವ ಭಾಷಾಶಾಸ್ತ್ರ ವ್ಯಾಕರಣ ಛಂದಸ್ಸು ಅಲಂಕಾರ ಶಾಸನ ಚರಿತ್ರೆ ಮೊದಲಾದ ಶಾಸ್ತ್ರಸಂಬಂಧ ವಿಚಾರಗಳಿಗೆ ಗಮನ ಕೊಡತಕ್ಕದ್ದು.

೩ ಗೋಷ್ಠಿಗಳ ಗಮನಕ್ಕೆ ಬರುವ ವಿಷಯಗಳನ್ನು ತಕ್ಕಂತೆ ವಿಂಗಡಿಸಿ ಬೇರೆ ಬೇರೆ ಗೋಷ್ಠಿಗಳಿಗೆ ಹಂಚುವ ಅಧಿಕಾರವು ಕಾರ್ಯನಿರ್ವಾಹಕ ಮಂಡಲಿಗೆ ಇರತಕ್ಕದ್ದು.

೪ ಯಾವ ಗೋಷ್ಠಿಗಾದರೂ ತಕ್ಕಷ್ಟು ಪ್ರಬಂಧಾದಿಗಳು ಬಾರದ ಪಕ್ಷದಲ್ಲಿ ಕಾರ್ಯನಿರ್ವಾಹಕ ಮಂಡಲಿಯು ಆ ಗೋಷ್ಠಿಯನ್ನು ವಿಸರ್ಜಿಸಬೇಕಾದ ನಿರ್ಬಂಧವಿರುವುದಿಲ್ಲ.

೫ ಈ ಗೋಷ್ಠಿಗಳು ಪ್ರತ್ಯೇಕವಾಗಿ ಸೇರಿ ತಮ್ಮ ಕಾರ್ಯಗಳನ್ನು ನಡೆಸಬಹುದು.

೬ ಈ ಗೋಷ್ಠಿಗಳ ಅಧ್ಯಕ್ಷರುಗಳನ್ನು ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯು ಸ್ವಾಗತ ಮಂಡಲಿಯೊಡನೆ ಆಲೋಚಿಸಿ ಗೊತ್ತುಮಾಡತಕ್ಕದ್ದು.

೭ ಈ ಗೋಷ್ಠಿಗಳಲ್ಲಿ ಓದಲಿಕ್ಕೆಂದು ಬರುವ ಪ್ರಬಂಧಗಳಲ್ಲಿಯೂ ನಿರ್ಣಯಕ್ಕೆಂದು ಬರುವ ಸೂಚನೆಗಳಲ್ಲಿಯೂ ಯಾವುಯಾವುವು ಮಹಾಜನ ಸಭೆಗೆ ಉಚಿತವಾದುವೆಂದು ಆಯಾ ಗೋಷ್ಠಿಯ ಅಧ್ಯಕ್ಷರು ಅಭಿಪ್ರಾಯಪಡುವರೋ ಅಂಥ ಪ್ರಬಂಧ ಮೊದಲಾದುವುಗಳನ್ನು ಅವರು ಸಮಗ್ರ ಸಮ್ಮೇಳನಾಧ್ಯಕ್ಷರಿಗೆ ಕಳುಹಿಸಿ ಶಿಫಾರಸು ಮಾಡಬಹುದು, ಮತ್ತು ಅಂಥವುಗಳಿಗೆ ಸಮ್ಮೇಳನಾಧ್ಯಕ್ಷರು ಮಹಾಸಭೆಯಲ್ಲಿ ಅವಕಾಶ ದೊರಕಿಸಬಹುದು.

೮ ಕಾವ್ಯವಾಚನ ಮೊದಲಾದ ಜನಸಾಮಾನ್ಯಕ್ಕೆ ರುಚಿಸುವ ಸಾಹಿತ್ಯ ಕಾರ್ಯಗಳನ್ನು ಸಮಗ್ರ ಸಮ್ಮೇಳನದ ಕಾರ್ಯಭಾಗವಾಗಿ ಮಹಾಜನರ ಸಭೆಯಲ್ಲಿ ನಡೆಸತಕ್ಕದ್ದು.

೯ ಸಮ್ಮೇಳನ ದಿವಸಗಳಲ್ಲಿ ಸಾಮಾನ್ಯವಾಗಿ ಅರ್ಧ ಭಾಗವನ್ನು ಮೇಲ್ಕಂಡ ಗೋಷ್ಠಿಗಳಿಗೂ ಉಳಿದ ಅರ್ಧವನ್ನು ಮಹಾಜನ ಸಭೆಗಳಿಗೂ ವಿನಿಯೋಗಿಸತಕ್ಕದ್ದು."

ಪ್ರಬಂಧಗಳು

ಈ ಏರ್ಪಾಟಿನ ಉದ್ದೇಶವು ತೃಪ್ತಿಕರವಾಗಿ ನೆರವೇರುವಂತೆ ಮಾಡುವ ಭಾರವು ನಮ್ಮ ದೇಶದ ವಿದ್ವಾಂಸರನ್ನೂ ಲೇಖಕರನ್ನೂ ಸೇರಿರುತ್ತದೆ. ಭಾಷೆಯ ಅಭಿವೃದ್ಧಿಗೂ, ಶಾಸ್ತ್ರ ಸಾಹಿತ್ಯ ಸಂಸ್ಕೃತಿಗಳ ವಿದ್ಯಾಪ್ರಚಾರಕ್ಕೂ ಸಂಬಂಧಪಟ್ಟ ನಾನಾ ವಿಚಾರಗಳನ್ನು ಕುರಿತ ಪ್ರಬಂಧಗಳನ್ನು ಪಂಡಿತರೂ ವಿಮರ್ಶಕರೂ ಈಗಿನಿಂದ ಸಿದ್ಧಪಡಿಸಬೇಕಾಗಿದೆ. ಸಮ್ಮೇಳನಕ್ಕೆ ಕಳೆಯೇರುವುದು ಈ ಪ್ರಬಂಧಗಳ ಗುಣದಿಂದಲೇ ಎಂಬುದನ್ನು ಹೇಳಬೇಕಾಗಿಲ್ಲ. ಅವು ಅತಿ ದೀರ್ಘವಾಗದೆ, ಹೊಸ ವಿಷಯಗಳಿಂದ ಕೂಡಿ, ವಿಮರ್ಶನ ದೃಷ್ಟಿಯುಳ್ಳವಾಗಿ, ಸಾಮಾನ್ಯ ಜನರಿಗೆ ಬೋಧೆಯಾಗುವ ಶೈಲಿಯಲ್ಲಿರಬೇಕೆಂದು ಸದಸ್ಯರು ಆಶಿಸುವುದು ಸ್ವಾಭಾವಿಕವೇ ಆಗಿದೆ. ಪ್ರಬಂಧ ಲೇಖಕರು ತಾವು ಉದ್ದೇಶಿಸಿರುವ ವಿಷಯಗಳನ್ನೂ ತಮ್ಮ ಪ್ರಬಂಧಗಳ ಸಂಗ್ರಹಗಳನ್ನೂ ಬರುವ ಅಕ್ಟೋಬರ್ ತಿಂಗಳೊಳಗಾಗಿ ಪರಿಷತ್ತಿನ ಕಾರ್ಯಾಲಯಕ್ಕೆ ಕಳುಹಿಸಬೇಕಾಗಿರುತ್ತದೆ. ಈ ವಿಚಾರಕ್ಕೆ ಸಂಬಂಧಪಟ್ಟ ನಿಯಮಗಳನ್ನು ಪರಿಷತ್ತಿನ ನಿಬಂಧನ ಪುಸ್ತಕದಲ್ಲಿ ಕಾಣಬಹುದು. [ಒಂದು ಪ್ರತಿಗೆ ೨ ಆಣೆ ಸ್ಟ್ಯಾಂಪು ಅಂಚೆ ಚೀಟಿಯನ್ನಿರಿಸಿ ಪರಿಷತ್ತಿನ ಕಾರ್ಯಾಲಯಕ್ಕೆ ಕಾಗದ ಬರೆದ ನಿಬಂಧನ ಪುಸ್ತಕವನ್ನು ತರಿಸಿಕೊಳ್ಳಬಹುದು.]

ಸಮ್ಮೇಳನಕ್ಕೆ ಸಂಬಂಧಪಟ್ಟ ಇತರ ವರ್ತಮಾನಗಳನ್ನು ಆಗಿಂದಾಗ್ಗೆ ಪ್ರಕಟಪಡಿಸಲಾಗುವುದು. ಮುಖ್ಯವಾಗಿ ಪ್ರಬಂಧ ಲೇಖಕರಿಗೆ ತಕ್ಕಷ್ಟು ಕಾಲಾವಕಾಶ ದೊರೆಯಲಿ ಎಂಬ ಉದ್ದೇಶದಿಂದ ಈ ಸಮಾಚಾರ ಪತ್ರಿಕೆಯನ್ನು ಈಗ ಪ್ರಕಟಿಸಿದೆ.

ಸದಸ್ಯತ್ವ

ಪರಿಷತ್ತಿನ ಅಧಿವೇಶನಗಳಲ್ಲಿ ನಡೆಯುವ ಚರ್ಚೆಗಳಲ್ಲಿಯೂ ತೀರ್ಮಾನಗಳಲ್ಲಿಯೂ ಭಾಗವಹಿಸಿ ಅಭಿಮತ ನೀಡುವ ಅಧಿಕಾರವನ್ನು ಬಯಸುವವರು ಅಧಿವೇಶನದ ಆಹ್ವಾನ ಪತ್ರಿಕೆಯ ತಾರೀಕಿಗೆ ೬ ತಿಂಗಳ ಹಿಂದಿನಿಂದ ಪರಿಷತ್ ಸದಸ್ಯರಾಗಿದ್ದಿರಬೇಕೆಂದು, ತಾ. ೨-೫-೧೯೩೫ರಲ್ಲಿ ನಡೆದ ವಿಶೇಷ ಅಧಿವೇಶನವು ತೀರ್ಮಾನ ಮಾಡಿರುತ್ತದೆ. ಅದರಂತೆ ಮುಂಬಯಿಯಲ್ಲಿ ನಡೆಯುವ ಮುಂದಿನ ವಾರ್ಷಿಕಾಧಿವೇಶನದಲ್ಲಿ ಸದಸ್ಯತ್ವದ ಹಕ್ಕುಗಳನ್ನು ಉಪಯೋಗಿಸಿಕೊಳ್ಳಬೇಕೆಂದಿರುವವರು ಇದೇ ಜೂನ್ ೩೦ರೊಳಗಾಗಿ ಸದಸ್ಯರಾಗಿ ಸೇರಿರಬೇಕು. ಎಲ್ಲ ಸದಸ್ಯರೂ ಅಧಿವೇಶನದ ದಿನದವರೆಗಿನ ತಮ್ಮ ಚಂದಾ ಬಾಕಿಯನ್ನು ಸಲ್ಲಿಸಿರಬೇಕಾಗಿರುವ ಹಣವನ್ನು ಬಾಕಿ ಇಲ್ಲದೆ ಸಲ್ಲಿಸಿರಬೇಕು. "ಪರಿಷತ್ತಿಗೆ ಸದಸ್ಯ ಸಂಪತ್ತಿನ ಆವಶ್ಯಕತೆ ಈಗ ಬಹು ತೀವ್ರವಾಗಿದೆ. ಈಗ ಪರಿಷತ್ತಿಗೆ ಸದಸ್ಯನಾಗಿ ಸೇರುವ ಪ್ರತಿಯೊಬ್ಬ ಕನ್ನಡಿಗನೂ ಕನ್ನಡದ ಪುರೋಭಿವೃದ್ಧಿಗೆ ಒಂದು ಹೊಸ ಇಟ್ಟಿಗೆಯನ್ನು ಕಟ್ಟಿದಂಥವನಾಗುತ್ತಾನೆ. ಪರಿಷತ್ತಿನ ಈಗಿನ ದೌರ್ಬಲ್ಯವನ್ನೂ, ನಮ್ಮ ದೇಶಭಾಷೆಯು ಏಳಿಗೆಗೆ ಬರಬೇಕಾದರೆ ಪರಿಷತ್ತಿಗೆ ದೊರೆಯಬೇಕಾಗಿರುವ ಪೋಷಣೆಯನ್ನೂ ಕನ್ನಡ ಮಹಾಜನರು ಗಮನದಲ್ಲಿರಿಸಿ, ಅದಷ್ಟು ಶೀಘ್ರವಾಗಿ ಪರಿಷತ್ತಿನ ಸದಸ್ಯತ್ವಕ್ಕೆ ತಮ್ಮ ದರಖಾಸ್ತುಗಳನ್ನು ಕಳುಹಿಸಬೇಕೆಂದು ಪರಿಷತ್ತು ಪ್ರಾರ್ಥಿಸುತ್ತದೆ.

ಸಮಸ್ತ ಕನ್ನಡ ಮಹಾಜನರೂ ಪರಿಷತ್ತಿಗೆ ನೆರವಾಗಿ ಬಂದು ಮುಂದಿನ ಸಮ್ಮೇಳನವು ಯಶಸ್ವಿಯಾಗುವಂತೆ ಸಹಕರಿಸುವರೆಂದು ಪರಿಷತ್ತು ನಿರೀಕ್ಷಿಸಿಕೊಂಡಿದೆ.

ಸಿ. ಕೆ. ವೆಂಕಟರಾಮಯ್ಯ,

ಎಂ. ಎ., ಎಲ್ ಎಲ್. ಬಿ.

ಗೌರವ ಕಾರ್ಯದರ್ಶಿ—ಕರ್ನಾಟಕ ಸಾಹಿತ್ಯ ಪರಿಷತ್ತು,

ಶ್ರೀ ಕೃಷ್ಣರಾಜೇಂದ್ರ ಪರಿಷನ್ಮಂದಿರ, ಚಾಮರಾಜಪೇಟೆ, ಬೆಂಗಳೂರು ಸಿಟಿ

Shiromani Narayanacharya

Choukhamba Benares City

THIS MAN
OUR CUSTOMER

ಶಾಸ್ತ್ರಗಳೇ ಪೂರ್ವಿಕರು ಆರೋಗ್ಯ ಅಥವಾ ಈಗಿನವರೇ ರಾವ ಜ್ಯಾಮಿನವರೇ ಪೂರ್ವಿಕರ ಆರೋಗ್ಯದೇ ಬಹಳವಾದ ಆರೋಗ್ಯ ಅದಕ್ಕೆ ಕಾರಣವೇನು? ಅವರು ಉಪಾಸ್ಯವನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಆರೋಗ್ಯ, ವೃದ್ಧಿ, ವಿದ್ಯಾಭಿವೃದ್ಧಿ, ಧನವೃದ್ಧಿ ಸಂತತಿ ಲಾಭ ಇವುಗಳೆಲ್ಲಾ ಆಗುವುವು. ...

(ಬೆಲೆ ಮತ್ತು ಇನಾಮುಗಳ ವಿವರ: ಮಾಡಲ್ಪಟ್ಟ ಪ್ರತಿಗಳಿಗೆ ... [illegible])

ಶಿರೋಮಣಿ ನಾರಾಯಣಾಚಾರ್ಯ

ಚೌಖಂಬಾ ಬನಾರಸ್ (ಕಾಶೀ)

ಕಡಿಮೆ ಬೆಲೆ.

ಹೊಸ ಕಂಪೆನಿ. **ಗ್ಯಾರಂಟಿ ಮಾಲು.**

ಗ್ಯಾರಂಟಿಯಾದ ಹೂವಿನ ಮತ್ತು ತರಕಾರಿ ಬೀಜಗಳು—ಹಣ್ಣಿನ ಗಿಡಗಳು, ಹೂವಿನ ಗಿಡಗಳು, ಹೂವುಗಳು ತರಕಾರಿ ಹಣ್ಣುಗಳು, ಸುಗಂಧ ದ್ರವ್ಯಗಳು ಬೇಕಾದರೆ ನಮ್ಮ ಹೊಸ ಕಂಪೆನಿಗೆ ಬರೆಯಿರಿ—ಕೆಟಲಾಗು ಇನಾಮು

ಮ್ಯಾನೇಜರ್—ರೋಯಲ್ ಸೀಡ್ ಕಂಪೆನಿ

ನಂ 27—B. ಸ್ಟ್ರೀಟ್ ಇಲ್‌ಲ್‌ಕೋಲ್,

ಅಲಸೂರು—B cont

ಜಿಲ್ಲಾ ಬಿಲ್ಲವರ ಮಹಾಸಭೆ

(ನಮ್ಮ ಸ್ವಂತ ಪ್ರತಿನಿಧಿಗಳಿಂದ)

ಇದೇ ತಾ. ೨೬–೬–೩೫ನೇ ರವಿವಾರ ಸಂಜೆ ೪ ಘಂಟೆಗೆ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಜಿಲ್ಲಾ ಬಿಲ್ಲವರ ಮಹಾಸಭೆಯೊಂದು ಸುಮಾರು ೩೦೦೦ ಜಾತಿ ಬಾಂಧವರ ನೆರವಿನಿಂದ ದೇವಸ್ಥಾನದ ಅಧ್ಯಕ್ಷರಾದ ಮು। ರಾ। ಎಚ್ ಕೊರಗಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು.

ದೇವಸ್ಥಾನದ ಸೆಕ್ರೆಟರಿಗಳಾದ ರಾವ್ ಬಹದ್ದೂರ್ ಎನ್. ಎಸ್ ಸುವರ್ಣರವರು ಮಹಾಸಭೆಯನ್ನು ಜರಗಿಸಲಾದ ಉದ್ದೇಶವನ್ನು ಸಂಕ್ಷಿಪ್ತವಾಗಿ ವಿವರಿಸಿ ಹೇಳಿ ಅಧ್ಯಕ್ಷರನ್ನು ಪೀಠಕ್ಕೆ ಆಹ್ವಾನಿಸಿದರು. ಕರತಾಡನಗಳ ಮಧ್ಯೆ ಅಧ್ಯಕ್ಷರು ಆಸನಾರೂಢರಾಗಲು, ಶ್ರೀ ಸುವರ್ಣರು ದೇವಸ್ಥಾನದಲ್ಲಿ ತಾ ೨೧–೪–೩೫ರಲ್ಲಿ ಜರಗಿದ ವಿವಾಹದ ವೇಳೆ ಆ ವಿವಾಹಕ್ಕೆ ಸಂಬಂಧಪಟ್ಟ ಶ್ರೀ ಅತ್ತಾವರ ಚಂದಪ್ಪನವರು ತನ್ನನ್ನು ಯಾವ ರೀತಿ ಅವಮಾನಗೊಳಿಸಲೆತ್ನಿಸಿದರೆಂಬುದನ್ನೂ, ತಾ ೫–೫–೩೫ರಲ್ಲಿ ದೇವಸ್ಥಾನದಲ್ಲಿ ನಡೆದ ಇನ್ನೊಂದು ವಿವಾಹದ ಸಮಯದಲ್ಲಿ ಅಧ್ಯಕ್ಷರಾದ ಶ್ರೀ ಎಚ್. ಕೊರಗಪ್ಪನವರ ಅಳಿಯ ಶ್ರೀ ಎನ್ ಮೈಂದಪ್ಪನವರೂ ಅವರ ಧರ್ಮಪತ್ನಿಯವರೂ ಇನ್ನಿತರ ಕೆಲವರೂ ಒಟ್ಟುಗೂಡಿ ತಾನು ವಿವಾಹ ಸಂಬಂಧವಾಗಿ ರಚಿಸಿದ ನಿಬಂಧನೆಗಳನ್ನುಲ್ಲಂಘಿಸಿ ಹೇಗೆ ತನ್ನನ್ನು ನೋಯಿಸಿದರೆಂದೂ ವಿವರಿಸಿ, "ಅಧ್ಯಕ್ಷರ ಮನೆತನದವರೇ ಹೀಗೆ ದೇವಸ್ಥಾನದ ಕಾಯಿದೆಗಳನ್ನುಲ್ಲಂಘಿಸಿ ನಡೆದು ನನ್ನ ಕಾರ್ಯದರ್ಶಿತ್ವವನ್ನು ಗೌರವಿಸಲು ಸಿದ್ಧರಿಲ್ಲವೆಂದಿರುವಾಗ ಯಾರ್‍ಯಾರ ಅಲ್ಲಸಲ್ಲದ ನುಡಿಗಳನ್ನು ಕೇಳಿ, ಈ ಸ್ಥಾನದಲ್ಲಿರಲು ನಾನು ಸಿದ್ಧನಿಲ್ಲ"ವೆಂದು ಸ್ಪಷ್ಟವಾಗಿ ಹೇಳಿ ಮಹಾಸಭೆಯು ತಾನು ಈ ಮೊದಲೇ ಕೊಟ್ಟ ರಾಜಿನಾಮೆಯನ್ನು ಸ್ವೀಕರಿಸಬೇಕೆಂದು ಆಗ್ರಹಪೂರ್ವಕವಾಗಿ ವಿನಂತಿಸಿದರು.

(ಅವರ ಭಾಷಣದ ಮಧ್ಯೆ ಬಾಯಿ ಹಾಕಿ ಅಸ್ವಾಮಿನಲ್ಲಿಯ ಶ್ರೀ ಕರ್ಕೇರರೆಂಬವರು ನಿಮ್ಮ ಭಾಷಣವು ದೀರ್ಘವಾಗುತ್ತದೆ"—ಎಂದು ಮೊದಲಾಗಿ ಮಾತನಾಡಿ ಸ್ವಲ್ಪ ಗೊಂದಲಕ್ಕೆ ಕಾರಣವಾಯಿತು)

ಶ್ರೀ। ಸುವರ್ಣರ ಭಾಷಣದ ನಂತರ ಆರೋಪಿತ ಪಕ್ಷದಿಂದ ಶ್ರೀ। ಎನ್ ಮೈಂದಪ್ಪನವರು ಎದ್ದು ತಾವು ಮನಸ್ಸು ದೇವಸ್ಥಾನದ ಕ್ರಮನಿಯಮಗಳನ್ನುಲ್ಲಂಘಿಸಲಿಲ್ಲವೆಂದೂ ಹಿರಿಯರನುಸರಿಸುತ್ತಿದ್ದ ಕ್ರಮಗಳನ್ನು ಮಾತ್ರ ಚಾಚೂ ತಪ್ಪದೆ ಪಾಲಿಸಿದೆನೆಂದೂ ಮೊದಲಾಗಿ ಹೇಳಿದರು. (ಇವರ ಭಾಷಣದ ಪ್ರವಾಹಕ್ಕೂ ಕೆಲಕೆಲವರ ಮಧ್ಯೆ ಮಧ್ಯೆ ತಡೆಯುಂಟಾಯಿತು) ಆ ಮೇಲೆ ಶ್ರೀ ದೂಜಪ್ಪ, ಶ್ರೀ। ಕರ್ಕೇರ, ಶ್ರೀ ಮೋನಪ್ಪ, ಶ್ರೀ। ಶಂಕರಪ್ಪ, ಶ್ರೀ ಸೋಮಪ್ಪ, ಶ್ರೀ। ವೆಂಕಪ್ಪ ಮೊದಲಾದವರ ಭಾಷಣಗಳು ನಡೆದುವು, ಒಟ್ಟಿನವರು ಒಂದೊಂದು ಪಕ್ಷವನ್ನು ಹಿಡಿದುಕೊಂಡೇ ಮಾತನಾಡಿದರು. ಶ್ರೀ ರಂ. ಕೃಷ್ಣರೆಂಬವರು ದ್ವಿಪಕ್ಷಗಳ ನ್ಯಾಯ ವಿಮರ್ಶೆಮಾಡಿದರಾದರೂ ಆರೋಪಿತರ ಆಚರಣೆಯನ್ನು ಖಂಡಿಸುವ ಮತ್ತು ಕಾರ್ಯದರ್ಶಿಗಳ ರಾಜಿನಾಮೆಯನ್ನು ಸ್ವೀಕರಿಸುವ ಕುರಿತಾಗಿ ನಿರ್ಧಾರಪೂರ್ವಕವಾಗಿ ಯಾರೂ ನುಡಿಯಲಿಲ್ಲ. ಒಟ್ಟೊಟ್ಟರ ಭಾಷಣವಾಗುವಾಗ ಒಂದೊಂದು ಪಕ್ಷದವರ ಕೈಚಪ್ಪಾಳೆ ನಗು ಶಹಭಾಸ್ ನಕಲಿ—ಇವೆಲ್ಲ ಕಡಿಮೆಯಾಗಿರಲಿಲ್ಲ. ಶ್ರೀ ಶಿವಭಕ್ತಿಯೋಗ ಸಂಘದ ಹೆಚ್ಚಿನ ತರುಣರು ಒಂದು ಗುಂಪಾಗಿ ಕುಳಿತು ಬಹುಮಟ್ಟಿನ ಮೌನವನ್ನೂ ಶ್ರದ್ಧೆಯನ್ನೂ ವಹಿಸಿ ಕಾರ್ಯಕ್ರಮಗಳನ್ನು ಉತ್ಸಾಹದಿಂದ ನಿರೀಕ್ಷಿಸುತ್ತಿದ್ದರು. "ಶ್ರೀ। ಸುವರ್ಣರು ರಾಜಿಕೊಡುವುದೇ ಲೇಸು—ಅವರು ಇಂತಹ ಅಸಭ್ಯ ವರ್ತನೆಗಳನ್ನು ಶಾಂತರಾಗಿ ಸ್ವೀಕರಿಸಿ ಈ ಸ್ಥಾನದಲ್ಲಿ ಮುಂದಕ್ಕೆ ಇರುವುದು ಯೋಗ್ಯವಲ್ಲ" ಎಂದೇ ಈ ಸಂಗಡದವರು ವಾದಿಸುತ್ತಿದ್ದರು.

"ಇಷ್ಟಾಗುವಾಗ ಶ್ರೀ ಸುಬ್ಬಣ್ಣರೆಂಬವರು ಎದ್ದು "ಈ ಮಹಾಸಭೆಯನ್ನು ೧೫ ದಿನಗಳ ನಂತರ ಪುನಃ ಜರಗಿಸಿ. ನಾವು ನಮ್ಮ ಕಡೆಯಿಂದ ಯೋಗ್ಯ ವ್ಯಾಜ್ಯಗಳನ್ನು ತರುವೆವು—ಆಗ ಎಲ್ಲವನ್ನೂ ನಿರ್ಧಾರ ಮಾಡೋಣ" ಎಂದರು. ಈ ನುಡಿಗಳು ವಿರುದ್ಧಪಕ್ಷದ ಮುಂದಾಳುಗಳಿಂದ ಬಂದೊಡನೆ ಹೆಚ್ಚಿನ ಸಭಿಕರು ಎದ್ದು ಹೊರಟು ಹೋದರು. ಅಧ್ಯಕ್ಷರ ತೀರ್ಮಾನವೇನೆಂದು ತಿಳಿಸಲಾಗಲಿಲ್ಲ. ಯಾವ ಠರಾವೂ ಬರೆಯಲ್ಪಡಲಿಲ್ಲ. ಮುಂದಿನ ಮಹಾಸಭೆಯು ಜರಗಬೇಕೆಂದಿರುವ ತಾರೀಕಿನ ನಿರ್ಣಯದ ಕುರಿತಾಗಿ ಹಲವು ವಿವಾದಗಳಿದ್ದು, ಕೊನೆಗೆ ಕಾರ್ಯದರ್ಶಿಗಳು ತನ್ನ ರಾಜಿನಾಮೆಯನ್ನು ೧೫ ದಿನಗಳೊಳಗೆ ಕ್ರಮಪ್ರಕಾರವಾಗಿ ಸ್ವೀಕರಿಸಬೇಕೆಂದು ಕೇಳಲಾಗಿ, ಗುಲ್ಲು—ಗೊಂದಲಗಳಿಂದಲೇ ಸಭಾಂತ್ಯವಾಯಿತು. ಕೆಲಕೆಲವರು ಸಭಾಂತ್ಯದಲ್ಲಿ ಹೊಡೆದಾಡಲೆತ್ನಿಸಿದಾದರೂ, ಪೋಲೀಸರ ದರ್ಶನವು ಅವರನ್ನು ನಿರಾಶೆಗೊಳಿಸಿತೆಂದು ಹೇಳಬಹುದು.

ಅಖಿಲ ಕರ್ನಾಟಕ ಪ್ರಾಂತೀಯ ವೈದ್ಯ ಮಂಡಳದ ಕಚೇರಿ, ಹುಬ್ಬಳ್ಳಿ.

ಪ್ರಕಟಣೆ.

ತಾ. ೩೦–೬–೧೯೩೫ನೇ ಭಾನುವಾರ ಸಾಯಂಕಾಲದ ನಾಲ್ಕು ಘಂಟೆಗೆ ಕಾರ್ಯಕಾರೀ ಮಂಡಳದ ತ್ರೈಮಾಸಿಕ ೨ನೇ ಸಭೆಯು ಮಂಗಳೂರ(ದ ಕ)ದಲ್ಲಿ ವೈದ್ಯರಾಜ ಬಿ ಆರ್ ಹರಿದಾಸ, ಇವರ ಮನೆಯಲ್ಲಿ ಸಭೆಯು ನೆರೆಯುವುದು. ಎಲ್ಲ ಸಭಾಸದರು ಸಂಯಾದ ಹೊತ್ತಿಗೆ ಹಾಜರಿರಬೇಕಾಗಿ ವಿನಂತಿ. ಬರಲಾಗದವರು ಕೆಳಗೆ ಕಾಣಿಸಿದ ವಿಷಯಗಳ ಬಗ್ಗೆ ತಮ್ಮ ಮತವನ್ನು ವೈದ್ಯರಾದ ಬಿ ಆರ್ ಹರಿದಾಸ ಸಮರ್ಥ ಆಯುರ್ವೇದಿಕ ಫಾರ್ಮಸಿ, ಮಂಗಳೂರ್, ಇವರ ವಿಳಾಸಕ್ಕೆ ಕಳಿಸಬೇಕು. ಚರ್ಚಿಸುವ ವಿಷಯಗಳು—

೧ ಕೈ। ಡಾ। ನಾಡಗೀರ ವ ರಾಮರಾವ ಮಹಿಷಿ ಇವರ ಅಕಾಲ ನಿಧನದ ಬಗ್ಗೆ ದುಃಖಪ್ರದರ್ಶನ

೨ (ಅ) ಕನಿಷ್ಟ ೮ ವರ್ಷಗಳಿಂದ ಆಯುರ್ವೇದ ಚಿಕಿತ್ಸಾಕ್ರಮದಲ್ಲಿ ಉಪಜೀವಿಕೆಯನ್ನು ಅವಲಂಬಿಸಿರುವ ಅಖಿಲ ಕರ್ನಾಟಕ ಪ್ರಾಂತದೊಳಗಿನ ಎಲ್ಲರಿಗೂ ವೈದ್ಯವಿಶಾರದ ಪದವಿಯನ್ನು ಕೊಟ್ಟು ಅವರನ್ನು ವೈದ್ಯ ಮಂಡಳದ ಸಭಾಸದರನ್ನಾಗಿ ಮಾಡಿಕೊಳ್ಳುವರ ಬಗ್ಗೆ

(ಬ) ವೈದ್ಯ ಪದವಿಯ ಸರ್ಟಿಫಿಕೇಟು ಕೊಡುವುದಕ್ಕೆ ಕೆಲವು ಫೀ ಇಡಬೇಕೋ ಇಡಬಾರದೋ, ಎಷ್ಟು ಇಡಬೇಕು

೩ ಆಯುರ್ವೇದ ಚಿಕಿತ್ಸಾ ಪದ್ಧತಿಯಲ್ಲಿ ವಿಶ್ವಾಸವುಳ್ಳವರಿಗೆ

(ಬ) ಆಯುರ್ವೇದ ಚಿಕಿತ್ಸೆಯನ್ನು ಕೆಲಮಟ್ಟಿಗಾದರೂ ಅವಲಂಬಿಸಿರುವವರಿಗೆ

(ಕ) ಆಯುರ್ವೇದ ಶಾಸ್ತ್ರದಲ್ಲಿ ಆದರ ಪ್ರೌಢ ಪಾವಾರ್ಕ್ಯ ಹಾಗೂ ಪಾಶ್ಚಿಮಾತ್ಯ ಪದವೀಧರ ಡಾಕ್ಟರರನ್ನು ಸಹ ಕರ್ನಾಟಕ ಪ್ರಾಂತೀಯ ಆಯುರ್ವೇದ ಮಂಡಳದ ಸದಸ್ಯರನ್ನು ಮಾಡಿಕೊಳ್ಳುವುದರ ಬಗ್ಗೆ

೪ ಕರ್ನಾಟಕ ಪ್ರಾಂತದಲ್ಲಿಯ ಆಯುರ್ವೇದಿಕ ಔಷಧಿ ಕಾರ್ಖಾನೆಗಳನ್ನು ಸುಧಾರಿಸುವ ಬಗ್ಗೆ

೫ ಅಖಿಲ ಭಾರತೀಯ ೨೬ನೇ ವೈದ್ಯ ಸಮ್ಮೇಲನಕ್ಕೆ ಕರ್ನಾಟಕ ಪ್ರಾಂತದೊಳಗಿನ ಸಭಾಪತಿಯನ್ನು ಆರಿಸುವ ಬಗ್ಗೆ

೬ ಅಖಿಲ ಕರ್ನಾಟಕ ಪ್ರಾಂತೀಯ ೮ನೇ ವೈದ್ಯ ಸಮ್ಮೇಲನ ಬಗ್ಗೆ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಬಂದ ಇನ್ನಿತರ ವಿಚಾರಗಳು

ಈ ವಿಷಯಗಳನ್ನು ಕುರಿತು ವಿಚಾರಮಾಡತಕ್ಕದಿರುತ್ತದೆ.

ಸಭಾಸದರು ತಾವು ಬರುವಾಗ ಈ ವಿಷಯಗಳ ಬಗ್ಗೆ ತಮ್ಮ ತಮ್ಮ ಪ್ರಾಂತದ ಪರಿಸ್ಥಿತಿಯನ್ನು ಅವಲೋಕಿಸಿಯೂ ಹೋದ ಕಾರ್ಯಕಾರಿ ಮಂಡಳದ ನಿರ್ಣಯಗಳನ್ನು ಪುನಃ ಅವಲೋಕಿಸಿಯೂ ಬರಬೇಕಾಗಿ ಪ್ರಾರ್ಥನೆ

ಕಾರ್ಯದರ್ಶಿ

BIRTH-CONTROL GOODS

Sale prices. For men P Ca Regina 2/10/-doz Neverrip 3 doz 1/1/-, Paragaon Heavy 1 doz. 1/10 -. For women (with directions) Solid Gin Check Pessary 1/3/-, Bulb-Spray 3/7/-, Oral Medicine for 6 months 1/4/-. Packing postage extra, 12½ rebate on orders worth 6/- & more on 12/-. The General Trading Co, 180, Manicktolla Street Calcutta



1935 IMPROVED STRONG ACCURATE SWISS LEVER WRIST WATCH 2 YRS GTD. NICKEL 2/6/-, GOLDEN 4/4/-, NICKEL RADIUM 3/4/-, SHOCK-PROOF 4 JEWELS EVER-BRIGHT CHROME 7/8/-, 15 JEWELLED CHROME 12/4/-, ROLLED GOLD 15/-, 3 TIMEPIECE 1/8/-, WITH ALARM 3/-, POCKET WATCH 1/13/-, POSTAGE PACKING FREE IF ORDERED 3. GENERAL TDG CO, 180 MANICKTOLLA ST. CALCUTTA.

New Era Technical School.

Near Market Square, Udipi

Commercial classes—approved by the Madras Government-New session opens in June.

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್
ಸಂತೆಕಟ್ಟೆ, ಉಡುಪಿ.
(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ)
ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ	3—15	4— 4
ಮುಸ್ತಿ	4— 4	4—10
ಗುಡ್ಡು	4— 2	4— 6
ಊರ ಅವ್ವಲ್ ಬೆಳ್ತಿಗೆ	4— 0	4—12
ರಂಗೂನು ಬೆ. ಗೋ ೧ಕ್ಕೆ	6—10	7— 4
ಎಲ್ಲೂರು ಬೆ ಮು ೧ಕ್ಕೆ	4— 4	4— 8
ಗೋದಿ ಗೋಣಿ ೧ಕ್ಕೆ	10— 0	12— 8
ತೊಗರಿ ಗೋಣಿ ೧ಕ್ಕೆ	10—8	11— 0
ಹುರುಳಿ ಗೋಣಿ ೧ಕ್ಕೆ	7—10	7—12
ಕಡಲೆ ಗೋಣಿ ೧ಕ್ಕೆ	8— 0	10— 8
ತೊಗರಿಬೇಳೆ ಗೋಣಿ೧ಕ್ಕೆ	10— 0	17— 0
ಉದ್ದು ಗೋಣಿ ೧ಕ್ಕೆ	8— 0	8— 8
ಹೆಸರು ಗೋಣಿ ೧ಕ್ಕೆ	9— 4	9—12
ಊರುಬೆಲ್ಲ ಖಂಡಿ ೧ಕ್ಕೆ	35— 0	37— 8
ಉಪ್ಪು ಗೋಣಿ ೧ಕ್ಕೆ	4—12	5—
ಕೊಬ್ಬರಿ ಖಂಡಿ ೧ಕ್ಕೆ	48— 0	55— 0
ಕೊಬ್ರಿ ಹಿಂಡಿ ಖಂಡಿ೧ಕ್ಕೆ	9— 8	20— [illegible]
ಎಳ್ಳಿಂಡಿ ಖಂಡಿ ೧ಕ್ಕೆ	38—12	35— 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	4—	4— 4
ಎಳ್ಳೆಣ್ಣೆ ಮುಡಿ ೧ಕ್ಕೆ	5— 2	6— [illegible]
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	5— 7	5—7
ಮೋರಿಸ ಸಕ್ಕರೆ ಮು ೧ಕ್ಕೆ	3—12	3—13
ಪುಣಸು	4—10	5—
ಸಾಸಿವೆ ಮುಡಿ ೧ಕ್ಕೆ	5—12	6— 0
ಕಾಳುಮೆಣಸು ಖ. ೧ಕ್ಕೆ	120— 0	130
ಮೆಂತ್ಯೆ ಮುಡಿ ೧ಕ್ಕೆ	23— 0	30— 0
ಗೇರುಬೀಜ ಮು. ೧ಕ್ಕೆ	4—14	5— 0
ಕಬ್ಬಿಣ ಖಂಡಿ ೧ಕ್ಕೆ	39— 0	30— 8
ತಾಂಬ್ರತಗಡು ಮು ೧ಕ್ಕೆ	9— [illegible]	9— 8
ತಾಂಬ್ರಪಾತ್ರೆಗಳು ಮು ೧ಕ್ಕೆ	11— 0	12— 0
ಹಿತ್ತಾಳೆ ಸೇರು ೧ಕ್ಕೆ	14—12	15— 0
ಹಿತ್ತಾಳೆ ತಗಡು ಮು. ೧ಕ್ಕೆ	8—12	9— 0
ಶವಣು ೧ಕ್ಕೆ	22— 8	23— 0
ಹುಣಸೆ ಹುಳಿ ಖಂಡಿ ೧ಕ್ಕೆ	20— 0	25— 8
ನೇಟಿವ್ ಕಾಫಿ ಖಂಡಿ ೧ಕ್ಕೆ	165— 0	175— 0
ಪ್ಲಾಂಟರಿ ಕಾಫಿ ಖಂಡಿ ೧ಕ್ಕೆ	220— 0	230— 0
ಮಡಿಕೇರಿ ಏಲಕ್ಕಿ	21— 0	24— 0
ಸಕಲೇಶಪುರ ಏಲಕ್ಕಿ	27— 0	30 — 0

LOOK SHARP! LOOK AHEAD

Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C A I I B) and also for Accountancy, Secretarial, and Insurance Courses (L A A., A C R A, F C. R. A, F L S A, A C I I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held

Ladies are also admitted.

Enrol yourself NOW Classes are in full swing Expert tuition (Oral or Postal) by well-qualified and experienced Lecturers

FEES VERY MODERATE

For further particulars apply to—

D R Murdeshwar,
Dip. Econ; F R Econ, S. (Lond.)
Principal
Ganapathy High School Street,
Mangalore

Comfortable like an Aeroplane

Use our swadeshi Mosquitonet for health Comfort and sound sleep, as if you are in an Aeroplane Sample cutting free More convenient if some advance sent with order

L	B	H	Price	Best
6 Ft	3½ Ft	3½ Ft.	Rs 1/12	2/8
6 ,,	4 ,,	4 ,,	,, 2 4	3/-
6½ ,,	4½ ,,	4½ ,,	2/8	3/8
7 ,,	5	5 ,,	,, 3/2	4/10
7½ ,,	6 ,,	6 ,,	4 4	5/12

G N Sharma, Post Box F 6706
Calcutta

ಕಣ್ಣಿನ ಮಲಿ.

"ಬ – ಸನ್" ಎಂಬ ನೇತ್ರಭಾಸ್ಕರ—ಈ ಔಷಧವು ಕಣ್ಣು ಪರೆ ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಅವಶ್ಯವಿಲ್ಲ ಖಾತರಿ ಗುಣದಾಯಕ, ಗುಣವಾಗದಿದ್ದರೆ ಹಣ ವಾಪಸ್ ಕ್ರಯ ರೂ. 2

ಪತ್ರವ್ಯವಹಾರ ಇಂಗ್ಲೀಷಿನಲ್ಲಿ —

Harj yasram, Panchpota, Bengal

ಶಾಲಿವಾಹನ ಬ। ಶಕ ೧೮೫೭ನೆಯ ಭಾವ ಸಂವತ್ಸರದ ಜ್ಯೇಷ್ಠ ಬ। ೧೪ ಶನಿವಾರದಿಂದ ಆಷಾಢ ಶು। ೪ ಶುಕ್ರವಾರದ ವರೆಗಿನ ಪಂಚಾಂಗ. (೧೯೩೫ನೇಯ ಮಿಥುನ ಕಾರ್ತೆಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
29	ಶನಿ	೧೪	೫೦	ರೋಹಿಣೀ	೯	೦೫	
30	ರವಿ	೩೦	೫೧	ಮೃಗಶಿರಾ	೧೦	೧೬	
1	ಸೋಮ	೧	೫೩	ಆರ್ದ್ರಾ	೧೪	೧೭	
2	ಮಂಗಳ	೨	೫೬	ಪುನರ್ವಸೂ	೧೮	೧೮	
3	ಬುಧ	೩	೬೦	ಪುಷ್ಯ	೨೩	೧೯	
4	ಗುರು	೪	೬೦	ಆಶ್ಲೇಷಾ	೨೯	೨೦	
5	ಶುಕ್ರ	೪	೪	ಮಘಾ	೩೫	೨೦	

‘ಜರ್ಮನಿಯು ಶಾಂತಿಯನ್ನೇ ಕಾಂಕ್ಷಿಸುವುದು.”

ಹರ್ ಹಿಟ್ಲರರೇ ಸ್ಪಷ್ಟೀಕರಿಸಿದರು.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ನಾನು ನನ್ನ ಹೆಸರನ್ನು ಹತ್ತು ಒಪ್ಪಂದಗಳಿಗೆ ಹಾಕುತ್ತಿದ್ದೆ. ಆದರೆ ನಾನು ಸಾರ್ ಚುನಾವಣೆಯ ಕಾಲದಲ್ಲಿ ಫ್ರಾನ್ಸಿಗೆ ಕೊಟ್ಟ ಭಾಷೆಯನ್ನು ಮೌಲ್ಯವು ಈ ಹೆಸರುಗಳಿಗೆ ಸಿಗಲಾರವೆಂದು ನನಗೆ ಗೊತ್ತಿದೆ

ನಾನು ಜರ್ಮನ್ ದೇಶದ ಧುರೀಣನಾಗಿ ಜಗತ್ತಿನೆದುರು ಸಾರ್ ಸಮಸ್ಯೆಯ ತೀರ್ಮಾನವಾದ ನಂತರ ಫ್ರಾನ್ಸಿನ ಮೇಲೆ ನಾನು ಯಾವ ರಾಜ್ಯದೃಷ್ಟಿಯನ್ನು ಇಡಲಾರೆನೆಂದು ನಿರ್ಧಾರಪೂರ್ವಕವಾಗಿ ಹೇಳಿದುದೊಂದೇ—ಎಲ್ಲಾ ಒಪ್ಪಂದಗಳಿಗಿಂತ ಪ್ರಾಮುಖ್ಯವಾದುದು—ಶಾಂತಿಗಾಗಿ ನನ್ನ ಆಶೆಯೆಷ್ಟೆಂದು ನನ್ನೀ ಆಚರಣೆಯೇ ವ್ಯಕ್ತಗೊಳಿಸುವುದು

ಇಂತಹ ನಿರ್ಧಾರದಿಂದಾಗಿ ನಮ್ಮ ಎರಡು ರಾಷ್ಟ್ರಗಳೊಳಗಿದ್ದ ಅಂತಃಕಲಹವು ಒಮ್ಮೆಗೆ ಕೊನೆಗೊಂಡಿತೆಂದೇ ನಾವು ಹೇಳುವವರಿದ್ದೇವೆ ದ್ವಿಪಕ್ಷಗಳ ತಂತಮ್ಮ ಉದ್ದೇಶ ಸಾಫಲ್ಯಗೊಳಿಸುವುದರಲ್ಲಿ ಮಾಡಬೇಕಾಗಿರುವ ತ್ಯಾಗಗಳನ್ನು ತಡೆಯುವುದಕ್ಕಾಗಿಯೇ ನಾವು ಹೀಗೆ ಮಾಡಬೇಕಾಯಿತು ಜನತೆಯು ಸಂಕಷ್ಟಕ್ಕೀಡಾಗಬಾರದೆಂದು ಹೀಗೆ ಮಾಡಿದೆವು

ಆದರೆ ಇಂತಹ ಆಚರಣೆಯನ್ನು ಕಂಡು ಮೆಚ್ಚದವರು ‘ಇದು ಮಹತ್ತಾದ್ದುದಲ್ಲ’ವೆಂದು ಹೇಳುವುದಾದರೆ, ನಾವು “ನಿಮ್ಮ ಮಾತೂ ಮಹತ್ತಾದುದಲ್ಲ” ಎಂದೆನ್ನಬೇಕಾಗುತ್ತದೆ

ಅವರವರು ಅವರವಂಗೆ ಬೇಕಾದಂತೆ, ನಮ್ಮ ಹೇಳಿಕೆಗಳಿಗೆ ಅರ್ಥಮಾಡಿಕೊಳ್ಳುವ ಅಭ್ಯಾಸವನ್ನು ನೋಡಿ ನಾವು ಸಂತಾಪಸೂಚನೆ ಮಾಡಬೇಕಾಗಿದೆ ಜರ್ಮನಿಯ ಜನರು ಜರ್ಮನರ ಹೆಸರಿನಲ್ಲಿ ಯಾವುದಾದರೊಂದು ನಿರ್ಧಾರವನ್ನು ಮಾಡಿದರೆ, ಯಾವ ಮಾತನ್ನಾದರೂ ಹೇಳಿದರೆ, ಅಂತಹ ನಿರ್ಧಾರಕ್ಕಾಗಲಿ, ಹೇಳಿಕೆಗಳಿಗಾಗಲೀ, ನಾವು ಸಹಿಯಿಟ್ಟಷ್ಟೇ ಬೆಲೆಯಿರುವುದು

‘ಸಾಮೂಹಿಕ ಸಹಕಾರ’ ‘ಸಾಮೂಹಿಕ ಚಳವಳಿ’ವೆಂದು ನಾವು ಬೊಬ್ಬಿಡುತ್ತಿದ್ದೇವೆ ಆದರೆ ಸಾಮೂಹಿಕವೆಂದರೇನು? ಅದರ ಅರ್ಥವನ್ನು ವಿವರಿಸುವವರು ಯಾರು? ಸಾಮೂಹಿಕ ಚಳವಳದ ದೆಸೆಯಿಂದ ಕಳೆದ ೧೭ ವರ್ಷಗಳಿಂದ ಏನೆಲ್ಲ ವಿಧ್ವಮಾನಗಳು ನಡೆದು ಹೋದುವೆಂದು ನಮಗೆ ತಿಳಿದಿವೆ

ವರ್ಸಲೆ ಸಂಧಿಯಲ್ಲಿ ಜಯಗೊಂಡ ಪಂಗಡಗಳು ಸಾಮೂಹಿಕ ಸಹಕಾರದ ಅರ್ಥವೇನೆಂದು ತಿಳಿಯುವ ಅಧಿಕಾರವನ್ನು ತಮ್ಮ ಮುಷ್ಟಿಯೊಳಗೆ ಇಟ್ಟುಕೊಂಟಿವೆ. ಈ ವಿಚಾರವನ್ನು ಇಲ್ಲೇ ಹೇಳಬೇಕಾಗಿದೆ ಕಾರಣ, ಜರ್ಮನ್ ಸರಕಾರದ ಉದ್ದೇಶವೇನೆಂದು ಈಗ ಹೇಳಬೇಕಾದ

ಸಾಮುದಾಯಿಕ ಸಹಕಾರವೆಂಬುದು ಅಮೆರಿಕಾದ ಪ್ರಸಿಡೆಂಟರಾದ ವಿಲ್ಸನರ ಸಾಹಿತ್ಯ ಸಂಪತ್ತು. ಯುದ್ಧವು ನಡೆಯುವ ಮೊದಲು ಏಕೋದ್ದೇಶವನ್ನಿಟ್ಟುಕೊಂಡೇ ರಾಷ್ಟ್ರಗಳು ಕೆಲಸಮಾಡುತ್ತಿದ್ದುವು. ಆದರೆ ನ್ಯಾಯವಾಗಿಯೋ ಅನ್ಯಾಯವಾಗಿಯೋ ಈ ಧೋರಣೆಯೇ ಒಮ್ಮಿಗಿನ ಯುದ್ಧದ ಜನನಕ್ಕೆ ಕಾರಣವಾಯಿತು. ಜರ್ಮನಿಯ ಜೀವನವು ಎಲ್ಲಿಯವರೆಗೆ ಇತ್ತೋ ಅಲ್ಲಿಯತನಕ ಈ ಧೋರಣೆಯನ್ನು ಹೊಂದಿಕೊಂಡೇ ಈ ರಾಷ್ಟ್ರಗಳು ಕಾರ್ಯಾಸಕ್ತವಾದುವು.

ಇಂತಹ ಅನಘಡಗಳು ಮುಂದಕ್ಕೆ ಸಂಭವಿಸಬಾರದೆಂದು ಈ ಧೋರಣೆಯು ಈ ಸೂತ್ರಗಳನ್ನು ಆಧರಿಸಿಕೊಳ್ಳುವಂತೆ ಮಾಡಲಾಯಿತು. ಶಾಂತಿಯೆಂದರೆ, ಒಬ್ಬೊಬ್ಬರ ಹಕ್ಕಾಗಿರಬಾರದು,—ಅದು ವಿಶ್ವವ್ಯಾಪಕವಾಗಿರಬೇಕು. ಎಲ್ಲರೂ ಒಪ್ಪಂದ ಮಾಡಿಕೊಂಡು ಶಸ್ತ್ರತ್ಯಾಗಮಾಡಬೇಕು—ಅದರಿಂದಾಗಿ ಎಲ್ಲರೂ ಸೌಭಾಗ್ಯಶಾಲಿಗಳಾಗಬೇಕು—ರಕ್ಷಿತರಾಗಬೇಕು. ಈ ಧೋರಣೆಯ ಪರಿಣಾಮವು ಜನಾಂಗಸಭೆಯ ಉದ್ಭವದಲ್ಲಿ ಕಂಡುಬಂತು. ಯುದ್ಧದ ಅಂತ್ಯಕಾಲದಲ್ಲಿ ಈ ಶಾಂತಿ ಧೋರಣೆಯನ್ನು ಪರಿಪಾಲಿಸಿದವರಲ್ಲಿ ಜರ್ಮನಿಯ ಜನರೇ ಮೊದಲಿಗರು. ಯುದ್ಧದಲ್ಲಿ ಭಾಗವಹಿಸಿ ಎಲ್ಲರಿಗಿಂತಲೂ ಹೆಚ್ಚು ನಷ್ಟ ಹೊಂದಿದ ದೇಶವು ಜರ್ಮನಿ. ಈ ಧೋರಣೆಯನ್ನು ಲೆಕ್ಕಿಸಿಯೇ ಜರ್ಮನ್ ಸೈನಿಕರು ತಮ್ಮ ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟುದು. ೧೯೧೯ರಲ್ಲಿ ವರ್ಸಲೆ ಸಂಧಿಯು ಆದಾಗಲೇ ಸಾಮೂಹಿಕ ಸಹಕಾರವನ್ನಿತ್ತ ಜನರನ್ನು ಮರಣಾಂತ ಶಿಕ್ಷೆಗೆ ಗುರಿಪಡಿಸಲಾಯಿತು

ಮೆಟ್ಟೂರಿನ ಅಣೆಕಟ್ಟು

ಪ್ರಪಂಚದಲ್ಲಿ ಅತಿ ದೊಡ್ಡದೆನಿಸಿರುವ ಮೆಟ್ಟೂರು ಅಣೆಕಟ್ಟು ಕಳೆದ ವರ್ಷ ರಚಿಸಲ್ಪಟ್ಟು ಲಕ್ಷಾಂತರ [illegible] ಜಮೀನಿನ ಸಾಗುವಳಿಗೆ ನೀರನ್ನೊದಗಿಸ[illegible] ಹಲವು ಬೇಸಾಯಗಾರರಿಗೆ ವರದಾನವೆ[illegible]

ಕಾವೇರಿ ನದಿಯು ಪಶ್ಚಿಮ ಘಟ್ಟದಲ್ಲಿ ಸಮುದ್ರ ಮಟ್ಟಕ್ಕಿಂತ ೪೪೦೦ ಅಡಿ ಉನ್ನತವಿರುವ ಕೊಡಗು ಪ್ರಾಂತ್ಯದ ಮಡಿಕೇರಿ ಬಳಿಯಲ್ಲಿ ಉದ್ಭವಿಸಿ ಪೂರ್ವಕ್ಕೆ ಹರಿದು ಬರುತ್ತ ೩೨೦೦೦ ಚದರಮೈಲುಗಳ ಸ್ಥಳವನ್ನಾಕ್ರಮಿಸಿ ೫೦೦ ಮೈಲು ಆ ತೀರವನ್ನು ದಾಟಿ ಹರಿಯುತ್ತ ಬಂಗಾಳ ಕೊಲ್ಲಿಗೆ ಹೋಗಿ ಸಂಗಮವಾಗುವುದು. ಮಳೆಗಾಲದಲ್ಲಿ ಪಶ್ಚಿಮ ಘಟ್ಟಗಳಲ್ಲಿ ಅತೀವವಾದ ಮಳೆ ಬೀಳುತ್ತದೆ ಅಲ್ಲದೆ [illegible] ಉತ್ತರ ಪಶ್ಚಿಮ [illegible] ಮಳೆಯು ಪಶ್ಚಿಮ ಘಟ್ಟಗಳ ಮಳೆಗಾಲವು [illegible] ಮೇಲೆ [illegible] ತನಕ ಕರೆಯುತ್ತ [illegible] ಜನವರಿ ತನಕ ಆಗಲಿರುವ ಬೆಳೆಯ [illegible] ಮಹಾ ನದಿಗಳಿಗೆ ಕಾರಣವಾಗುವುದಿದೆ ಹೇಮಾವತಿ, ಲಕ್ಷ್ಮಣತೀರ್ಥ, ಕಾಪಿನಿ, ಭವಾನಿ, ಅಮರಾವತಿ ಮೊದಲಾದ ಚಿಕ್ಕ ಪುಟ್ಟ ಹೊಳೆಗಳು ಕಾವೇರಿಯನ್ನು ಅಲ್ಲಲ್ಲಿ ಕೂಡುತ್ತಿರಲು, ನೆರೆಯನ್ನು ತಪ್ಪಿಸುವುದು ಅಸಾಧ್ಯವೆನಿಸುವುದು.

ತ್ರಿಚಿನಾಪಳ್ಳಿಯಿಂದ ೧೦ ಮೈಲು ದೂರದಲ್ಲಿ ಕಾವೇರಿ ನದಿಯು ಎರಡು ಭಾಗವಾಗಿ ಹರಿಯುತ್ತದೆ ಉತ್ತರ ದಿಕ್ಕಿಗೆ ಹರಿದ ಶಾಖೆಯು ಕೊಲರೂನ್ ಎಂದೆನಿಸಿದೆ ದಕ್ಷಿಣ ದಿಕ್ಕಿಗೆ ಹರಿದ ಶಾಖೆಗೆ ಕಾವೇರಿ ಎಂದೇ ಎನ್ನುವರು. ಈ ಎರಡೂ ಶಾಖೆಗಳು ೫೦ ಮೈಲು ಮುಂದೆ ಸಮೀಪಿಸಿವೆ ಈ ಭೂನಡುವಣ ಪ್ರದೇಶವು ಬಲು ಫಲವತ್ತಾದುದು ಆದರೆ ನೆರೆಯ ದೆಸೆಯಿಂದ ತುಂಬ ಹಾನಿಯಾಗುತ್ತಿದೆ. ಕಾವೇರಿ—ಕೊಲರೂನ್ ನದಿಗಳು ಪುನಃ ಸಮೀಪಿಸುತ್ತಲೇ, ಕಾವೇರಿ ನದಿಯ ಮೇಲೆ ಈ ಅಣೆಕಟ್ಟನ್ನು ಕಟ್ಟಿಸಿರುವರು.

ಕಾವೇರಿ-ಕೊಲರೂನ್ ನದಿಗಳ ನಡುವಣ ಭೂಪ್ರದೇಶದಲ್ಲಿ ಅಸಂಖ್ಯಾಕ ವರ್ಷಗಳಿಂದ ಕೃಷೀವಲರು ಜೀವಿಸಿಕೊಂಡಿದ್ದು, ಸಾಗುವಳಿ ನಡೆಸುತ್ತಿರುವರು ೧೮೦೧ನೇ ಇಸವಿಯಲ್ಲಿ ಈಸ್ಟ್ ಇಂಡಿಯಾ ಕಂಪೆನಿಯವರು ತಂಜಾವೂರು ಜಿಲ್ಲೆಯ ಆಡಳಿತವನ್ನು ವಹಿಸಿದಾಗ, ಅಲ್ಲಿಯ ವ್ಯವಸಾಯವು ಬಹು ಮಟ್ಟಿಗೆ ಹೀನಸ್ಥಿತಿಗೆ ಬಂದಿತ್ತು ಕಾಲುವೆಗಳಲ್ಲಿ ಹೊಯಿಗೆ ತುಂಬಿತ್ತು ನೀರಿನ ಸರಬರಾಯಿ ಚೆನ್ನಾಗಿಲ್ಲದೆ ಎಷ್ಟೋ ಜಮೀನು ಬಂಜರು ಬಿದ್ದಿತು, ನದಿಯಲ್ಲಿ ತುಂಬಿದ ಹೊಯಿಗೆಯನ್ನು ತೆಗೆಯುವುದೇ ಬ್ರಿಟಿಷ್ ಸರಕಾರದ ಮೊದಲನೆಯ ಸಮಸ್ಯೆಯಾಯಿತು. ಆದರೆ, ಇದರಿಂದ ತಾತ್ಕಾಲಿಕ ಉಪಶಮನವೆಂಬುದು ಮಾತ್ರ ಗೋಚರಿಸಿತು

೧೮೩೬ರಲ್ಲಿ ಸರ್ ಆರ್ಥರ್ ಕೊಟನ್ ಸಾಹೇಬರು ಒಂದು ಅಣೆಕಟ್ಟಿನ ಆವಶ್ಯಕತೆಯನ್ನು ಮನಗಂಡು,—ಕೊಲರೂನ್ ನದಿಯ ಮೇಲೆ ಒಂದು ಅಣೆಕಟ್ಟನ್ನು ಕಟ್ಟಿಸಿ, ಹೆಚ್ಚು ನೀರನ್ನು ಕಾವೇರಿಗೆ ಹರಿದು ಹೋಗುವಂತೆ ಸಾಧಿಸಿದರು ಆದರೆ, ಇದರಿಂದ ಕೊಲರೂನ್ ನದಿಯ ಬಳಿಯ ವ್ಯವಸಾಯ ಕ್ಷೇತ್ರವು ನೀರಿಲ್ಲದೆ ಹೋಗಲು [illegible] ಒಂದೂ [illegible]. ಈ ದೊಡ್ಡ ಅಣೆಕಟ್ಟಿನ ೭೦ ಮೈಲು ಕೆಳಗೆ ಮತ್ತೊಂದು ಅಣೆಕಟ್ಟನ್ನು ಕಟ್ಟಲಾಯಿತು. ಇದರಿಂದ ಮಳೆಗಾಲದಲ್ಲಿ ಕೆಲವು ದಿನದಿಂದ ನೀರು ಹೆಚ್ಚುತ್ತ ಇಬ್ಬದಿಯ ದಡಗಳೆಲ್ಲಾ ಹಾವಳಿಯಾಗತೊಡಗಿತು. ಇದನ್ನು ತಡೆಯಲು [illegible]ರಲ್ಲಿ ಅವಶ್ಯವಿರುವ [illegible] ನಡೆದು [illegible]

ಸುಧಾರಣೆಗಳೆಷ್ಟಾದರೂ, [illegible] ಅಭಾವದಿರುವ ದಿನಗಳಲ್ಲಿ ವ್ಯವಸಾಯ ಕ್ಷೇತ್ರ[illegible] ಕಷ್ಟಾನುಭವವಾಗುತ್ತಿರುವುದನ್ನು ಪರಿಹರಿಸುವ ಉಪಾಯವು ಕೈಕೊಳ್ಳಲ್ಪಡಲಿಲ್ಲ [illegible] ಸಂಗ್ರಹಿಸುವುದಕ್ಕಾಗಿ ಒಂದು ಸರೋವರದ ವ್ಯವಸ್ಥೆಯಾಗಬೇಕಾಗಿತ್ತು ಇದರ ಫಲವೇ ಮೆಟ್ಟೂರು ಅಣೆಕಟ್ಟು

ಮೆಟ್ಟೂರ ಅಣೆಕಟ್ಟಿನ [illegible] ೧೮೩೪ರಲ್ಲಿ [illegible] ಯೋಜನೆ [illegible] ನೂರು ವರ್ಷಗಳ ತನಕ ಅದರ ಇತ್ಯರ್ಥವಾಗುವುದೂ ಆಗಲಿಲ್ಲ ೧೯೦೪ರಲ್ಲಿ ಪಿ. ಮೊಸ್ ಎಂಬ ಆಂಗ್ಲ ಇಂಜಿನಿಯರು ಈ ಅಣೆಕಟ್ಟಿನ ಒಂದು ಅಂದಾಜು ಪಟ್ಟಿಯನ್ನು ತಯಾರಿಸಿದರು ೨೫೦ ಲಕ್ಷ ರೂಪಾಯಿಗಳ ವೆಚ್ಚದಿಂದ ೪೦ ಸಾವಿರ ಕ್ಯೂಬಿಕ್ ಫೀಟ್ ವಿಸ್ತಾರದ ಸರೋವರವನ್ನು ಕಟ್ಟಬಹುದೆಂದು ಅಂದಾಜು ಆಯಿತು ಇದರಿಂದ ಸೇಲಂ ಮತ್ತು ಕೊಯಂಬುತ್ತೂರು ಜಿಲ್ಲೆಗಳ ವ್ಯವಸಾಯಕ್ಕೂ ಅನುಕೂಲತೆಗಳನ್ನೊದಗಿಸಬೇಕೆಂದೂ ತಿಳಿಸಲಾಯಿತು ಆದರೆ ಅಷ್ಟೊಂದು ವ್ಯಯದಿಂದ ಸಿಗುವ ಪ್ರಯೋಜನವು ಗಣನೀಯವಲ್ಲವೆಂದು ಆಲೋಚನೆಯನ್ನಲ್ಲಿಗೇ ನಿಲ್ಲಿಸಿದರು. ಪುನಃ ೧೯೧೦ರಲ್ಲಿ ಕರ್ನಲ್ ಎಲ್ಲಿಸ್ ಎಂಬವರು ೩೮೫ ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ತಯಾರಿಸಿದರು ಈ ಯೋಜನೆಯು ಸಿದ್ಧವಾಗುತ್ತಿದ್ದಂತೆ ಮೈಸೂರು ಮತ್ತು ಮದರಾಸು ಸರಕಾರಗಳೊಳಗೆ ಕಾವೇರಿಯ ‘ಉಳಿಕೆ’ಯ ನೀರನ್ನು ಹಂಚಿಕೊಳ್ಳುವ ವಿಷಯವಾಗಿ ವಿವಾದವೆದ್ದಿತು ಕೃಷ್ಣರಾಜಸಾಗರದ ಅಣೆಕಟ್ಟನ್ನು ಸ್ವಲ್ಪ ಎತ್ತರಮಾಡುವುದಾಗಿಯೂ ಮೈಸೂರು ಯೋಜಿಸಿತು ಕೊನೆಗೆ ಸರ್ ಸಿ ಪಿ ರಾಮಸ್ವಾಮಿ ಅಯ್ಯರವರು ಸಾಹಸಪಟ್ಟು ಆ ಎರಡು ತಂಡಗಳೊಳಗೂ ಒಂದು ಬಗೆಯ ಒಪ್ಪಂದವನ್ನು ಮಾಡಲು, ಮೆಟ್ಟೂರ ಅಣೆಕಟ್ಟಿನ ಕಾರ್ಯಾರಂಭವಾಡು[illegible] ನಿರ್ಧಾರವು ಅಲ್ಲಿ ಸಮರ್ಥನೆ ಹೊಂದಿತೆಂದು ಹೇಳಬಹುದು ೧೯೨೫ರಲ್ಲಿ [illegible] ಲಕ್ಷ ರೂಪಾಯಿಗಳ ಅಂದಾಜುವೊತ್ತವು ನಿರ್ಧರಿಸಲ್ಪಟ್ಟು ಅದ[illegible] ಮಂಜೂರಾತಿಗಾಗಿ ಸ್ಟೇಟ್ ಸೆಕ್ರೆಟರಿಗೆ ಕಳುಹಲಾಯಿತು. ಮಂಜೂರಾತಿಯು ೧೯೨೫ರಲ್ಲಿ ಹೇಗೂ ದೊರೆಯಿತು. ೧೯೨೫ನೇ ಜುಲಾಯಿ ತಾರೀಕು [illegible]ರಲ್ಲಿ ಕೆಲಸವು [illegible] ಆಗಿನ ಗವರ್ನರರಿಂದ [illegible] ಗೋಶನರು ಅದರ ಶಿಲಾ ಸ್ಥಾಪನಾ ಸಮಾರಂಭವನ್ನು ನಡೆಸಿದರು

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 349 1934,

R I A 391 1935

ವಾದಿ—[illegible] ನಾರಾಯಣ [illegible], [illegible] ಗ್ರಾಮ

ಪ್ರತಿವಾದಿ 1 [illegible] ನಾರಾಯಣ [illegible] ರಾವ್, 2 [illegible] 3 [illegible] ರಂಗ ರಾವ್ 4 [illegible] ರಾವ್, [illegible] ಗ್ರಾಮ [illegible] ವಾಸಿರುವವರ

[illegible] ಮೇಲೆ ಕಾಣಿಸಿದ ಆಸಲು ಬಡ್ಡಿ ಹಣಗಳ ಬಗ್ಗೆ ಮಾಡಿದ [illegible] ಪ್ರತಿವಾದಿ [illegible] ಕೊಟ್ಟ [illegible] ಅರ್ಜಿಯು ತಾ 8-7-'35ಕ್ಕೆ [illegible] ಇಟ್ಟಿದೆ [illegible] ಆಕ್ಷೇಪವಿದ್ದರೆ [illegible] ಇಲ್ಲದಿದ್ದರೆ ಸದ್ರಿ ಅರ್ಜಿ [illegible] ಏಕಪಕ್ಷವಾಗಿ ತೀರ್ಮಾನ ಆಗುವುದು

ಕೋರ್ಟು ಕುಂದಾಪುರ 22 6 35 } K Raghunath Shenai, Pleader ಅರ್ಜಿದಾರನ ವಕೀಲರು

ಸದ್ಯದಲ್ಲೇ ಶ್ರೀ ಕೃಷ್ಣಾ ಸಿನೆಮದಲ್ಲಿ ಪ್ರದರ್ಶಿಸಲ್ಪಡಲಿರುವ “ಇಂದಿರಾ ಎಂ ಎ.” ಚಲಚ್ಚಿತ್ರದ ಒಂದು ದೃಶ್ಯ ಇದರಲ್ಲಿ ಮಿ ಬಿಲ್ಲಿಮೋರಿಯ, ಸುಲೋಚನ, ಜಿಲ್ಲೂ, ರಾಜ ಸ್ಯಾಂಡೊ, ಜೆನಾಬ ಶಿಷ್ಟಿ ಇವರು ಅಭಿನಯಿಸಿರುವರು.

ಸಂಯುಕ್ತ ಅಮೇರಿಕಾದಲ್ಲಿ ಧರ್ಮಗಳೊಳಗೆ ಹೋರಾಟ.

ಕ್ರೈಸ್ತ, ಹಿಂದೂ, ಅಥವಾ ಮುಸ್ಲಿಮ್?

[ಅಮೇರಿಕಾದಲ್ಲಿ ಸುಮಾರು ೧೨ ವರ್ಷಗಳ ವರೆಗೆ ವಾಸಿಸುತ್ತಿದ್ದು ಅಲ್ಲಿಯ ಜನರ ಆಚಾರವಿಚಾರ, ನೀತಿಧರ್ಮ ಮೊದಲಾದ ವಿಷಯಗಳ ಕುರಿತು ಹೆಚ್ಚಿನ ಅನುಭವ ಹೊಂದಿ, ಈಗ ಸ್ವದೇಶಕ್ಕೆ ಹಿಂತೆರಳಿರುವ ಪ್ರೋ॥ ಪಿ. ಗಣೇಶರಾಯರು ಸ್ವದೇಶಾಭಿಮಾನಿಗೆಂದು ಈ ದ್ವಿತೀಯ ಲೇಖನವೊಂದನ್ನು ಇಂಗ್ಲಿಷಿನಲ್ಲಿ ಬರೆದು ಕಳುಹಿಸಿರುವರು. ಅದನ್ನು ಅನುವಾದಿಸಿ ಪ್ರಕಟಿಸಲಾಗಿದೆ. ಬಾಹ್ಯ ಪ್ರಪಂಚದಲ್ಲಿನ ಆಗುಹೋಗುಗಳನ್ನು ತಿಳಿಸುವ ಇಂತಹ ವಿದ್ವತ್ಪೂರ್ಣ ಲೇಖನಗಳು ನಮ್ಮ ವಾಚಕರ ಪೂರ್ಣ ಅನುಗ್ರಹಕ್ಕೆ ಪಾತ್ರವಾಗದಿರದೆಂದು ಭಾವಿಸಿದವರಿದ್ದೇವೆ.]

ನಂ. ೧.

ಸಂಯುಕ್ತ ಅಮೇರಿಕಾದ ಜನಜೀವನದಲ್ಲಿ ತನ್ನ ಪ್ರತಿಭಾಮಯ ವರ್ಚಸ್ಸನ್ನು ತೋರಿಸಿ ಒಂದು ಕಾಲದಲ್ಲಿ ಅಟ್ಟಹಾಸದಿಂದ ಮೆರೆದ ಕ್ರೈಸ್ತಧರ್ಮವು-ಹಿಂದೆ ಅಲ್ಲದಿದ್ದರೂ,-ಈಗಣ ದಿನಗಳಲ್ಲಿ ದುರ್ಬಲವಾಗುತ್ತಿದೆಯೆಂಬ ವಿಷಯವನ್ನು ಅಲ್ಲಿಯ ಯುವಕಜನಾಂಗದ ಮನೋಪರಿಸ್ಥಿತಿಯನ್ನರಿತಿರುವ ಯಾವನಾದರೂ ಅಲ್ಲಗಳೆಯಲಾರನು. ದೇವರು, ಕ್ರಿಸ್ತ, ಮತ್ತು ಇಗರ್ಜಿಗಳ ಸುದ್ದಿಯೆತ್ತಿದರೆಂದರೆ ಹುಡುಗ ಹುಡುಗಿಯರು ಒಡನೆ ನಕ್ಕು, "ನೋನ್‌ಸೆನ್ಸ್" ಎಂದು ಸ್ಪಷ್ಟವಾಗಿ ಹೇಳಿಬಿಡುವುದನ್ನು ನಾವು ಪದೇ ಪದೇ ಕೇಳುತ್ತೇವೆ. "ನಾವು ಮೃತರಾಗಿ ಹಲವು ಕಾಲ ಉಳಿದೆವು-ಹೀಗಿರುವಾಗ, ಜೀವಂತರಾಗಿರುವ ಈ ವೇಳೆಯಲ್ಲಿ ನಾವೇಕೆ ಸುಖಿಸಬಾರದು?,' ಎಂಬುದೇ ಅಲ್ಲಿಯ ನಿರ್ಭೀತ ಯುವಕರ ವಿನೋದಪರ ನುಡಿ.

ಅಲ್ಲಿಯ ಯುವಕ ಜನಾಂಗದ ಬಹು ಪಕ್ಷೀಯರಿಗೆ ಕ್ರೈಸ್ತ ಧರ್ಮವೆಂದರೆ ಸಾಮಾಜಿಕ ಶಿಷ್ಟಾಚಾರಗಳನ್ನು ಬೋಧಿಸುವ ಧರ್ಮವೆಂಬ ಭಾವನೆಗಿಂತ ಬೇರೆ ಭಾವನೆಯೇ ಇಲ್ಲವೆಂಬುದು ನಿಸ್ಸಂದೇಹ ರವಿವಾರದ ಪೋಷಾಕುಗಳನ್ನು ಹಾಕಿಕೊಂಡು ಇಗರ್ಜಿಗಳಿಗೆ ಹೋಗುವುದು — ವಯೋಸಮಾನಸ್ಕರೊಡನೆ ಕೂಡಿ, ಪರಸ್ಪರ ಪರಿಚಯ ಮಾಡಿಕೊಂಡು ವಿನೋದಪ್ರಿಯರಾಗಿ ಕಾಲ ಕಳೆಯುವುದು— ಇವಿಷ್ಟೇ ಅವರು ಅನುಸರಿಸುವ ಧರ್ಮನಿಯಮಗಳು ಯುವಕರ ಸಂಖ್ಯೆಯು ಇಗರ್ಜಿಗಳನ್ನು ಸಂದರ್ಶಿಸುವ ರೂಢಿಯು ಮುರಿದು ಬೀಳುತ್ತಿದೆಯೆಂಬುದನ್ನು ತಿಳಿದುಕೊಂಡೇ ಈಗ ಅಲ್ಲಿ ಇಗರ್ಜಿಗಳಲ್ಲಿ ಯುವಕರ ಮನಸಾಕರ್ಷಿಸುವ ಕೆಲವು ಕಾರ್ಯರಂಗಗಳನ್ನು ತೆರೆಯಲಾಗಿದೆ ಅಲ್ಲಿಯ ಪ್ರತಿಯೊಂದು ಇಗರ್ಜಿಯಲ್ಲೂ "ಯುವಕರ ಸಂಘ"ವಿದೆ ಈ ಸಂಘವನ್ನು ಹೊಂದಿಕೊಂಡು ನಾಟಕ ಸಂಘ, ಕಲಾ ಮತ್ತು ಸಾಹಿತ್ಯ ಸಂಘಗಳಿವೆ ಈ ಸಂಘಗಳು ಬೆಳದಿಂಗಳ ವಿನೋದವಿಹಾರಗಳನ್ನೋ, ನರ್ತನ ಕೂಟಗಳನ್ನೋ, ಭೋಜನಗಳನ್ನೋ ಆಟಗಳನ್ನೋ ಜರಗಿಸಿ ಆನಂದದಿಂದ ದಿನಹರಣ ಮಾಡುತ್ತವೆ ವಿದೇಶದಿಂದ ಬಂದ ಪ್ರಾಜ್ಞರನ್ನೋ, ಅಥವಾ ತಮ್ಮ ನಗರದೊಳಗಿರುವ ಸುಜ್ಞಾನಿಗಳನ್ನೋ ಈ ಸಂಘಗಳು ತಮ್ಮಲ್ಲಿಗೆ ಆಹ್ವಾನಿಸಿ ಬೋಧಪ್ರದ ಭಾಷಣಗಳನ್ನು ಅವರಿಂದ ಮಾಡಿಸಿ, ಕೇಳಿ ಜ್ಞಾನಸಂಗ್ರಹ ಮಾಡುತ್ತವೆ ಬಾಹ್ಯ ಪ್ರಪಂಚದ ವಿಷಯಗಳ ಕುರಿತಾಗಿ ಮಾಯಾಲಾಂದ್ರ ಸಹಿತವಾದ ಭಾಷಣಗಳೇ ಹೆಚ್ಚಾಗಿ ನಡೆಸಲ್ಪಡುತ್ತವೆ

ಬೈಬಲ್ ಧರ್ಮ ಗ್ರಂಥವು ಪವಿತ್ರವೂ, ವಾಚನೀಯವೂ ನ್ಯಾಯನೀತಿ ಧರ್ಮ ಪ್ರಚೋದಿತವೂ ಎಂಬ ತಿಳುವಳಿಕೆಯು ಯುವಕ ಜನಾಂಗದಲ್ಲಿರದೆ, ಅದು ಹಲವು ಉಪದೇಶಕರ ಉದರಂಭರಣಕ್ಕೆ ಸಹಕಾರಿಯಾದ ನೀತಿಗ್ರಂಥವಾಗಿ ಪರಿಣಮಿಸಿರುತ್ತದೆ ಅಮೇರಿಕಾನರ ಪ್ರತಿಯೊಂದು ಮನೆಯಲ್ಲೂ 'ನವನಿರ್ಧಾರದ ಪ್ರತಿಯು ಕಾಣಸಿಗುತ್ತದೆಯಾದರೂ, ಅದನ್ನು ಓದ ತಿಳಿಯದವರಿಗಿಂತಲೂ ಅದನ್ನು ಓದದವರು ಅಧಿಕ ಸಂಖ್ಯೆಯಲ್ಲಿರುವರೆಂದರೆ ಅತಿಶಯೋಕ್ತಿಯಾಗಲಾರದು. ಇಂತಹವರ ಮಧ್ಯೆ ಬೈಬಲಿನ ಜನನವು ಹೇಗಾಯಿತು?-ಎಂದಾಯಿತು?-ಅದರ ಕಥಾನಾಯಕನಾರು?-ಕ್ರೈಸ್ತನ ಜೀವನಚರಿತ್ರೆಯೇನು?-ಅವನ ಶಿಷ್ಯರಾರು?-ಇವೇ ಮೊದಲಾದ ವಿಷಯಗಳ ದ್ವಂದ್ವಗಳಲ್ಲಿ ಸಿಲುಕಿ, ವಿವಿಧ ಭಾವನೆಗಳ ಸಂಘರ್ಷಣೆಯಿಂದ ಕಂಗೆಟ್ಟವರೂ ಇರುವರು.

ಧರ್ಮ ಸಂಬಂಧವಾದ ವಿಷಯಗಳಲ್ಲಿ ರಾಷ್ಟ್ರದ ಯುವಕವರ್ಗಕ್ಕಿರುವ ದುರ್ಲಕ್ಷ್ಯವನ್ನು ಕಂಡ ಎಷ್ಟೋ ಹಿರಿಯರು ಚಕಿತರಾಗಿರುವರು. ಈ ದುರ್ಲಕ್ಷ್ಯಕ್ಕೆ ಸಾಮಾಜಿಕ, ರಾಜಕೀಯ ಮತ್ತು ಕೈಗಾರಿಕೆಯ ಸಮಸ್ಯೆಗಳು ಮೂಲ ಹೇತುಗಳಾಗಿವೆಯೆಂಬುದು ನಿರ್ವಿವಾದ ಇಂತಹ ಪರಿಸ್ಥಿತಿಯಲ್ಲೂ ರಾಷ್ಟ್ರದ ನಿತ್ಯಜೀವನದ ಸ್ವಾಮಿತ್ವವನ್ನು ಧರ್ಮದ ಶ್ರದ್ಧೆಯೇ ಮಾಡುವಂತೆ ಅವಿಶ್ರಾಂತ ಪರಿಶ್ರಮವನ್ನು ವಹಿಸಲಾಗುತ್ತಿದೆ

ಸಂಯುಕ್ತ ಅಮೇರಿಕಾವು ಸಾಮಾನ್ಯವಾಗಿ ಕ್ರಿಶ್ಚನ್ ರಾಷ್ಟ್ರವೆಂದು ಕರೆಯಲ್ಪಡುತ್ತದೆಯಾದರೂ, ಸಂಪ್ರದಾಯಬದ್ಧವಾದ ಜಾತಿಗಳೊಳಗಿನ ಭೇದಾ ಭೇದವೂ, ಮತವ್ಯತ್ಯಾಸಗಳೂ ನಾಲ್ದೆಸೆಗಳಲ್ಲಿಯೂ ಭಯಂಕರವಾಗಿ ಹರಡಿಕೊಂಡಿವೆಯೆಂಬುದನ್ನು ಮರೆಯಲಾಗದು ಈ ರಾಷ್ಟ್ರವನ್ನು, ಪ್ರೊಟೆಸ್ಟಾಂಟರು ಮತ್ತು ರೋಮನ್ ಕೆಥೋಲಿಕರು ಎಂಬ ಎರಡು ಪಂಗಡಗಳನ್ನಾಗಿ ವಿಭಾಗಿಸಬಹುದು ಇತ್ತಂಡದವರೂ ಐತಿಹಾಸಿಕವಾದ ತಮ್ಮ ಮತದ್ವೇಷವನ್ನು ಬಿಟ್ಟಿರುವುದಿಲ್ಲ ಪ್ರೊಟೆಸ್ಟಾಂಟರು ಕೂಡಾ ಏಕಮತೀಯರಾಗಿರುವುದಿಲ್ಲ ಅವರವರೊಳಗೆ ಸುಮಾರು ಇನ್ನೂರು ಬಗೆಯ ಜಾತಿ ವ್ಯತ್ಯಾಸಗಳಿವೆ

ಬೇಪ್ಟಿಸ್ಟರು, ಸೆಕೆಂಡ್ ಬೇಪ್ಟಿಸ್ಟರು, ಪ್ರಿಸ್ಬಿಟೇರಿಯನರು, ಲೂಥರನರು ಎಪಿಸ್ಕೊಪಲಿನರು, ವಸ್ಲಿಯನರು, ಮೆಥೊಡಿಸ್ಟರು, ಹೊಸ ಮೆಥೊಡಿಸ್ಟರು, ಟ್ರಿನಿಟೇರಿಯನರು ಎಂಬಿವೇ ಮೊದಲಾದ ಮತಸ್ಥರು, ಪುನಃ ತಂತಮ್ಮೊಳಗೆ ಭಿನ್ನತೆಗಳನ್ನು ಕಲ್ಪಿಸಿಕೊಂಡು, ತಮ್ಮದೇ ಆದ ಧರ್ಮಸಂಸ್ಥೆಗಳನ್ನು ಸಂಸ್ಥಾಪಿಸಿಕೊಂಡು, ಅವುಗಳಿಗೆ ತಮ್ಮದೇ ಆದ ಧರ್ಮಗುರುಗಳನ್ನು ನೇಮಿಸಿಕೊಂಡಿರುವರು ಈ ಭಿನ್ನ ಭಿನ್ನ ಮತೋಪದೇಶಕರು ತಂತಮ್ಮ ಇಚ್ಛಾನುಸಾರವಾಗಿ ಪ್ರಾಚೀನ ಗ್ರಂಥವಾದ ಆ ಬೈಬಲನ್ನು ನೂರಾರು ಬಗೆಯಲ್ಲಿ ರೂಪಾಂತರಗೊಳಿಸಿ ಬರೆದುಕೊಳ್ಳುತ್ತಿರುವರು ಅಲ್ಲದೆ, ಯುನಿಟೇರಿಯನರು, ಯುನಿವರ್ಸಲಿಸ್ಟರು, ಕ್ರಿಶ್ಚಿಯನ್ ಸಾಯಂಟಿಸ್ಟರು, ಸ್ಪಿರಿಚುವಲಿಸ್ಟರು, ಇವೆಂಜಲಿಸ್ಟರು, ಬ್ಲೇಕ್ ಜೂಗಳು, ಎಪೊಸ್ಟೊಲಿಕ್ ಮತಸ್ಥರು, ದೇವರ ಇಗರ್ಜಿ ಮತಸ್ಥರು, ಪಾಗನರು, ಮರ್ಮನರು, ಧಕೋಬಾರರು, ಪ್ರಕೃತಿ ಆರಾಧಕರು, ನಗ್ನತೆಯನ್ನು ನಂಬುವವರು, ಡೇವಿಡ್ ಮತಸ್ಥರು,- ಹೀಗೆ ಅನೇಕ ಮತಾನುಯಾಯಿಗಳು ಅಲ್ಲಿರುವರು ಇವುಗಳಲ್ಲಿ ಹೆಚ್ಚಿನ ಮತಗಳು, ದೇಶದಲ್ಲಿ ಏನಾದರೊಂದು ಕ್ಷೋಭೆಯು ಸಂಘಟಿಸಿದೊಡನೆ ತಲೆಯೆತ್ತಿ ಬೇರೆ ಸಮಯದಲ್ಲಿ ಮೌನವಾಗಿರುವವುಗಳು ಈ ಮತಸ್ಥರಲ್ಲಿ ಬಹು ಮಟ್ಟಿನ ಮತಾಂಧತೆಯೂ ಪರಮತ ದ್ವೇಷವೂ, ಅಂತಃಕಲಹವಾದವೂ, ಅಸಹಿಷ್ಣುತೆಯೂ ಇದೆ. ಅಂಥ ರೂಢಿಗಳನ್ನನುಸರಿಸುವ ಪಂಗಡಗಳು ಎಂತಹ ಗೂಢವೂ, ಮೂಢವೂ ಮತ್ತು ಕ್ರೂರವೂ ಆದ ವಿಧಿ ಮತ್ತು ಸಮಾರಂಭಗಳನ್ನು ನೆರವೇರಿಸುತ್ತಿವೆಯೆಂದರೆ,-ತಾಂತ್ರಿಕವೂ ಮಾಂತ್ರಿಕವೂ ರಸಾಯನ ಶಾಸ್ತ್ರಬದ್ಧವೂ ಆಗಿ ನೆರವೇರುವ ಈ ಸಮಾರಂಭಗಳನ್ನು ಸರಕಾರವೂ ಕಂಡಕಂಡಲ್ಲಿ ಹಿಡಿದು ತಡೆಯುತ್ತದೆ

ಸಂಯುಕ್ತ ಅಮೇರಿಕಾದಲ್ಲಿರುವ ಮತಗಳೆಷ್ಟೆಂದು ಬಹು ಜಾಗ್ರತೆಯಿಂದ ಲೆಕ್ಕವಿಟ್ಟವರು ಈ ಸಂಖ್ಯೆಯು ೩೧೨ರಷ್ಟಿದೆ ಎನ್ನುತ್ತಿರುವರು

ಅಮೇರಿಕಾದಲ್ಲಿರುವ ಬೇರೆ ಬೇರೆ ವರ್ಣದವರು ತಮಗೆ ಕ್ರೈಸ್ತಮತಸ್ಥರಿಂದ ಅನ್ಯಾಯ ಪರ, ಅಸಹನೀಯ, ಅಮಾನುಷಿಕ ಸಂಕಷ್ಟಗಳು ಒದಗುವುದನ್ನು ಕಂಡು ಸಾವಿರ ಸಂಖ್ಯೆಯಲ್ಲಿ ಇನ್ನಿತರ ಮತಾವಲಂಬನೆಮಾಡಿದರು

ಎಲ್ಲಾ ಧರ್ಮಗಳ ಮೇಲೂ ಜನರಿಗೆ ಆಗ ವಿಶ್ವಾಸವು ಕಡಮೆಯಾಗಲಾರಂಭಿಸಿತು

ಆವೇಳೆಯಲ್ಲಿ [illegible] ಅದೇ ರೀತಿ ಕಾದಲ್ಲಿ ಸ್ವಾಮಿ ವಿವೇಕಾನಂದರು ಹಿಂದೂಮತದ ಬೀಜವನ್ನು ೧೯ನೇ ಶತಮಾನದಲ್ಲಿ ಬಿತ್ತಿದರು ಅವರ ಕಾರ್ಯಭಾರವನ್ನು ಅನೇಕಾನೇಕ ಅಮೇರಿಕಾನರೂ ಹಿಂದೀಯರೂ ವಹಿಸಿಕೊಂಡರು ಅಧ್ಯಾತ್ಮವಿದ್ಯೆಯೂ ಅಮೇರಿಕಾದ ಪ್ರಾಜ್ಞವರ್ಗವನ್ನೂ, ಶ್ರೀಮಂತ ಪಂಗಡವನ್ನೂ ಆಕ್ರಮಿಸಿ, ಪ್ರಾಚೀನ ಭಾರತದ ಋಷಿವರ್ಯರ ಉಪದೇಶಗಳನ್ನು ಅವರಲ್ಲಿ ತುಂಬಿತ್ತು ಮೇಡಮ್ ಬ್ಲಾವಾಟ್ಸ್ಕಿಯವರ ಬರೆದ 'ಧರ್ಮರಹಸ್ಯ'ವು ವೇದಾಂತತತ್ವದೊಡನೆ ಸರ್ವತೋಮುಖವಾಗಿ ಪರಿಸಲ್ಪಟ್ಟಿತು ಕ್ರಮೇಣ, ಯೋಗಸಂಬಂಧವಾದ ಸಾಹಿತ್ಯಗಳು ದಶದೆಸೆಗಳಿಂದಲೂ ಉದ್ಭವಿಸಿದುವು ಮಹಾಯುದ್ಧದ ಭೀತಿಯು ಕೊನೆಗೊಳ್ಳುತ್ತ ಬರುತ್ತಿದ್ದಾಗಲೇ ಅಮೇರಿಕಾದಲ್ಲಿ ನೈತಿಕ ಪುನರುದ್ಧಾರಕಾರ್ಯವು ತಲೆಯೆತ್ತಿ ಸಾರ್ವತ್ರಿಕವಾಗಿ ಹರಡಿತು

ಸ್ವಾಮಿ ವಿವೇಕಾನಂದರ ಕಾರ್ಯಾಸಕ್ತವಾದ ಸುಮಾರು ಆರು ಸಂಸ್ಥೆಗಳಿವೆ ಅಲ್ಲದೆ ಅಷ್ಟೇ ವೇದಾಂತ ಕೇಂದ್ರಗಳು ಅಮೇರಿಕಾದ ನಗರಗಳಲ್ಲಿವೆ ಇಪ್ಪತ್ತರಷ್ಟು ಅಥವಾ ಅದಕ್ಕಿಂತಲೂ ಹೆಚ್ಚು ಸ್ವತಂತ್ರ ಉಪದೇಶಕರು, ಭಾಷಣಕಾರರು, ಮನಃಶಾಸ್ತ್ರಜ್ಞರು, ರಹಸ್ಯಮಯ ಕಲಾಕೋವಿದರು, ಒಂದು ಕರಾವಳಿಯಿಂದ ಇನ್ನೊಂದು ಕರಾವಳಿಗೆ ಪ್ರವಾಸ ಬೆಳೆಸಿ ತಮ್ಮ ಕಾರ್ಯದಲ್ಲಿ ನಿಮಗ್ನರಾಗಿರುವರು ಕೆಲವರು ಸಾಧುಗಳಂತೆ ಕಾವಿಕಾಷಾಯವನ್ನು ಧಾರಣೆ ಮಾಡುವರು ಕೆಲವರು ಆಧುನಿಕ ಕ್ರಮದಂತೆ ಉಡಿಗೆತೊಡಿಗೆಗಳನ್ನುಡುವರು ಬಂಗಾಳದ ಹೆಸರುವಾಸಿಗಳಾದ ಸ್ವಾಮಿ ಯೋಗಾನಂದರೆಂಬ ಯೋಗಿವರ್ಯರು ಸಾವಿರಾರು ಶಿಷ್ಯರ ಪ್ರೇಮಾದರಗಳಿಗೆ ಪಾತ್ರರಾಗಿರುವರು ಬಿಚ್ಚಿದ ತಲೆಗೂದಲು, ದುಂಡಗಿನ ಮುಖ ಪ್ರಭಾವ, ಸರಳ ಜೀವನಕ್ರಮ—ಇವರದು ಸೌಜನ್ಯ ಮೂರ್ತಿಗಳು. ಯೋಗ ಸೂತ್ರ, ಹಿಂದೂ ಧರ್ಮತತ್ವ ಮೊದಲಾದುವುಗಳ ಮಹತ್ವವೇನೆಂದು ಅವರು ಭಾವಪ್ರಚೋದಿತವಾಗಿ ಸಭಿಕರ ಮುಂದಿಡಲು ಶಕ್ತರಾಗಿರುವರು, ಹಿಂದೂದೇಶದ ಪವಿತ್ರ ನಾಮವನ್ನು ಕಳಂಕಗೊಳಿಸುವವನ ಉದ್ಯಮಕ್ಕೆ ಪ್ರತಿಕಕ್ಷಿಗಳಾಗಿ ಕೆಲಸ ಮಾಡುವವರಿವರು. ಭಾರತವರ್ಷದಲ್ಲಿ ರಾಜಕೀಯ ಮತ್ತು ಸಾಮಾಜಿಕ ಪರಿವರ್ತನೆಗಳಾಗಬೇಕೆಂದು ಅಹರ್ನಿಶಿ ಸಾಹಸವು ನಡೆಯುತ್ತಲಿದೆಯಾದರೂ ಅದು ಇಂತಹ ಸಂದಿಗ್ಧತೆಯಲ್ಲೂ ಹೇಗೆ ನೈತಿಕ ಧೋರಣೆಯನ್ನೇ ಅನುಸರಿಸಿ ನಡೆಯುತ್ತಿದೆಯೆಂಬುದನ್ನೂ, ಶಾಂತಿ ಮತ್ತು ಸಹೋದರದ ಸೂತ್ರಗಳನ್ನು ಕಿಂಚಿನ್ಮಾತ್ರ ಮರೆಯದೆ ಅದು ಜಗತ್ತಿನ ಧರ್ಮಗಳಲ್ಲಿ ಹೇಗೆ ಪ್ರತಿಭಾಶಾಲಿ ಧರ್ಮವಾಗಿದೆಯೆಂದೂ ಅವರು ಅಮೇರಿಕಾನರಿಗೆ ತಿಳಿಸುವರು ಇಸ್ಲಾಂ ಮತವು ಅಮೇರಿಕಾದಲ್ಲಿ ಇತ್ತೀಚೆಗೆ ಬೆಳೆಯುತ್ತ ಬಂದಿತಾದರೂ ಅದರ ಪ್ರಗತಿಯು ಲಕ್ಷಣೀಯವಾಗಿದೆ. ಇಸ್ಲಾಂ ಧರ್ಮದ ಕುರಿತು ಎಂತಹ ಭಯಂಕರ ಅಭಿಪ್ರಾಯವು ಜನರ ಮನದಲ್ಲಿದೆಯೆಂದರೆ— ಸಾಮಾನ್ಯ ಮನುಷ್ಯನಿಗೆ ಇಸ್ಲಾಂ ಮತವೆಂದರೆ "ಭಯಂಕರ ತುರ್ಕರು" ತಮ್ಮ ಅಂತರ್ಗೃಹದಲ್ಲಿ ಅನೇಕ ಪತ್ನಿಗಳನ್ನಿಡುವವರು ಮರಣಭಯವನ್ನುಂಟುಮಾಡಿ ಅನ್ಯಮತಸ್ಥರನ್ನು ತಮ್ಮ ಮತಕ್ಕೆ ಸೇರಿಸುವವರು-ಸ್ವರ್ಗ, ಅಮಲು, ಸ್ತ್ರೀಯರು, ಹುಕ್ಕಾಗಳ ವಿಲಾಸಪ್ರಿಯರು. ಇಂತಹ ಭಾವನೆಯು ಮೂಡುವಂತೆ ಮಾಡಲಾಗಿದೆ

ಅಮೇರಿಕಾಕ್ಕೆ ಪ್ರಥಮದಲ್ಲಾಗಿ ಸರಪಣಿಯಲ್ಲಿ ಕಟ್ಟಿ ತರಲ್ಪಟ್ಟ ಆಫ್ರಿಕನರು ಅರಬ್ಬಿಗಳೊಡನೆ ವ್ಯಾಪಾರ ನಡೆಸುವರು. ಹೆಚ್ಚಿನ ಆಫ್ರಿಕನರಿಗೆ ಅರಬಿಧರ್ಮ ಭಾಷೆಯು ಮತ್ತು ಪರಿಚಯವಿದೆ ತಮ್ಮ ಯಜಮಾನರು ಯಾರೇ ಇರಲಿ,-ಆಫ್ರಿಕನರು ತಮ್ಮದೇ ಆದ ಕ್ರಮದಂತೆ ಉಡಿಗೆತೊಡಿಗೆಗಳನ್ನು ಧರಿಸುವರು ಈ ಆಫ್ರಿಕನರನ್ನು ಪ್ರೀತಿಯಿಂದಲೂ ವಿಶ್ವಾಸದಿಂದಲೂ ರಕ್ಷಿಸಿದರೆ ಅವರು ಯಾವ ಕಾರ್ಯಕ್ಕೂ ಉಪಯೋಗಬೀಳುವವರು ಅವರು ಈಗ ತಮ್ಮ ಭಾಷೆ, ತಮ್ಮ ಧರ್ಮ, ತಮ್ಮ ಹೆಸರು, ತಮ್ಮ ವಿಚಿತ್ರ ಪೋಷಾಕುಗಳನ್ನು ಬಿಟ್ಟು ಈಗ ತಮ್ಮ ಯಜಮಾನರನ್ನು ಅನುಸರಿಸುತ್ತಿರುವರು ಕಾಲಕ್ರಮೇಣ ಅಮೇರಿಕಾಕ್ಕೆ ಗುಂಪು ಗುಂಪಾಗಿ ಬಂದಿಳಿದು ಅಲ್ಲಿಯ ಆಧುನಿಕ ಜನಜೀವನದ ಪ್ರವಾಹಕ್ಕೆ ಸಿಕ್ಕಿ ಅವರು ಈಗ ಪೂರ್ಣ ಅಮೇರಿಕಾನರಾಗಿರುವರು. ಎಷ್ಟು ದೊಡ್ಡ ಧರ್ಮವಾದಿ, ಮತವಾದಿ, ಜಾತ್ಯಾಭಿಮಾನಿಯಾಗಿದ್ದರೂ, ನೂತನ ಅಮೇರಿಕಾದ ಆದರ್ಶಗಳು ಅವನನ್ನು ಕೊಚ್ಚಿಕೊಂಡು ಹೋಗದಿರಲಿಲ್ಲ

ಅಮೇರಿಕನ್ ನಿಗ್ರೋವು ಎಷ್ಟು ರಾಷ್ಟ್ರಭಕ್ತಿಯುತನೋ ಅಷ್ಟೇ ಧಾರ್ಮಿಕನೂ ಆಗಿರುವನು ಬಿಳಿಯ ಜನಾಂಗದಂತೆ ಅವನೂ ಮಹಾಯುದ್ಧದಲ್ಲಿ ಹೋರಾಡಿ "ಜಗತ್ತನ್ನು ಪ್ರಜಾಪ್ರಭುತ್ವ ಯೋಗ್ಯವನ್ನಾಗಿ ಮಾಡಿದನು" ಆದರೆ ಅವನು ಮನೆಗೆ ಹಿಂತೆರಳುತ್ತಲೇ ಮಾನುಷಿಕವಾದ ಯಾವ ಅಧಿಕಾರವೂ ಅವನಿಗಿಲ್ಲವೆಂದು ತಿಳಿಸಿಬಿಡಲಾಯಿತು ಅವನ ಮೇಲಿನ ಸಾಮಾಜಿಕ ನಿರ್ಬಂಧವು ನಿತ್ಯದಂತೆ ಕಠಿಣವೇ ಆಗಿದ್ದಿತು ಅವನು ದಿಗಿಲುಬಿದ್ದನು

ಇಂತಹ ಬಿಕ್ಕಟ್ಟಿನ ಕಾಲದಲ್ಲಿ ಈ ರಂಗಕ್ಕೆ ಜಮೈಕದ, ಮಾರ್ಕಸ್ ಗಾರ್ವೆ ಎಂಬವರು ನ್ಯೂಯೋರ್ಕಿನಲ್ಲಿ ಕಾಲಿಟ್ಟರು. ಇವರು ಯುರೋಪು ಖಂಡದಲ್ಲೆಲ್ಲಾ ಪ್ರವಾಸ ಬೆಳೆಸಿ ಹೆಚ್ಚಿನ ಅನುಭವಿಕರಾದವರು; ಇವರು ಒಳ್ಳೇ ರಾಜಶಾಸ್ತ್ರಜ್ಞರು, ಸ್ವಾತಂತ್ರ್ಯವಾದಿಗಳು; ಅಲ್ಲದೆ ಧೈರ್ಯಶಾಲಿಗಳು. ನಿಗ್ರೋಗಳ ಇಂತಹ ದುಃಸ್ಥಿತಿಯನ್ನು ಇವರು ಕಂಡರು. ಸಾಮಯಿಕ ವಿದ್ಯಮಾನದ ಸತ್ಪ್ರಯೋಜನವನ್ನು ಮಾಡಿಕೊಂಡು ಯುನಿವರ್ಸಲ್ ನಿಗ್ರೋ ಇಂಪ್ರೂಮೆಂಟ್ ಎಸೋಸಿಯೇಶನ್-(ವಿಶ್ವದ ನಿಗ್ರೋಗಳ ಶ್ರೇಯಃ ಸಂಘ)ವೊಂದನ್ನು ಸ್ಥಾಪಿಸಿದರು.

Attur Vaikunta Prabhu Bank, Dongerkery Street, Mangalore.
ಅತ್ತೂರು ವೈಕುಂಠ ಪ್ರಭು ಬೇಂಕ್, ಡೊಂಗರಕೇರಿ ಮಂಗಳೂರು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ನಗದ ಈಡಿನ ಮೇಲೆ ಸಾಲ ಪಡಕೊಂಡ ನಂತರ ಕ್ಲಪ್ತ ವ್ಯಾಯಿದೆಗೆ ಅಸಲು, ಬಡ್ಡಿ ಕೊಡದೆ ಈ ವರೆಗೆ ಬಾಕಿಮಾಡಿರುವುದರಿಂದಲೂ ಸದ್ರಿ ಸಾಲಗಳನ್ನು ಬ್ಬರಮಾಡಿಕೊಳ್ಳುವರೆ ಅವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸುಗಳ ಜ್ಯಾರಿಯಾಗಿಯೂ, ಕೆಲವು ಜ್ಯಾರಿಯಾಗದೆಯೂ ಬಂದಿರುವುದರಿಂದಲೂ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ 1935ನೇ ಜುಲ್ಯಾ ತಾ 5ನೇ ಶುಕ್ರವಾರದೊಳಗೆ ಬೇಂಕಿಗೆ ಸಲತಕ್ಕ ಅಸ್ಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿ ಐವೇಜುಗಳನ್ನು ಸಲಾಯಿಸಿ, ಬಿಡಿಸಿಕೊಂಡು ಹೋಗದೆ ಇದ್ದರೆ ಸದರಿಯವರು ಈಡಾಗಿಟ್ಟ ನಗಗಳನ್ನು ಇದೇ 1935ನೇ ಇಸವಿ ಜುಲ್ಯಾ ತಾ 6ನೇ ಶನಿವಾರ ಯಾ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ 2 ಗಂಟೆಗೆ ಬಹಿರಂಗವಾಗಿ ಏಲಂ ಮಾಡುವೆವು

	ಸಾಲದ ನಂಬ್ರು ಮತ್ತು ಆಡವಿಟ್ಟ ತಾ	ಸಾಲ ಪಡೆಕೊಂಡವರ ಹೆಸರು ಮತ್ತು ವಿಳಾಸ	ಬಡ್ಡಿ ರೂಪಾಯಿ
1	A 1 / 1-7-'32	ಜೆರ್ ಮನ್ ಬಂಗೇರ, S/o ಲೀವಿ ಬಂಗೇರ, ಉದ್ಯಾವರ	5/
2	A 58 / 15-7-32	ಕೊರಗ ದು, S/o ತೋಮು, ಅತ್ತಾವರ ಮಂಗಳೂರು.	5/
3	A 562 / 4-11-32	ಪಕೀರ ಸೆಟ್ಟಿ S/o ಗುಡ್ಡ ಮೇಸ್ತ್ರಿ, ಅತ್ತಾವರ ಮಂಗಳೂರು	5/
4	A 620 / 18-11 32	ಕೆ. ಕೃಷ್ಣ S/o ವಾಚರ್ ತುಕ [illegible] ಮಂಗಳೂರು	5/
5	A 664 / 3-12-32	ಗಿಲ್‌ಬರ್ಟ್ ಗೋನ್ಸ್ S/o ಹಸೆಲ್‌ಗೋನ್ಸ್ ಉದ್ಯಾವರ ಮಂಗಳೂರು	7/
6	A 240 / 8-4-33	ಕೊರಗ S/o ಕೋಮರು ಅತ್ತಾವರ ಮಂಗಳೂರು	8/
7	A 25[illegible] / 13-4 33	ಹಮ್ಮಬ್ಬ ಬ್ಯಾರಿ S/ ಕಾಂಗ್ ಬ್ಯಾರಿ ಹಳೆ ಪಟ್ಟಿ ಬಜಾರ	6
8	A 287 / 26 4-33	ಬಾಲು ಪೂಜಾರಿ N/o ಕೊರಗ ಪೂಜಾರಿ [illegible] ಮಂಗಳೂರು	7
9	A 290 / 27 4-33	ಕನಿಯ N/o ಕುಕ್ಯ [illegible] ಮಂಗಳೂರು	4/
10	A 330 / 8-5-33	ಕಾಂತಪ್ಪ S/o ಚೆನ್ನಪ್ಪ ಪೂಜಾರಿ ಬೋಳೂರು [illegible] ಮಂಗಳೂರು	7/
11	A 36[illegible] / 19-5-33	[illegible] N/o [illegible] ಉಚ್ಚಿಲ [illegible]	9/
12	A 417 / 31 5-33	[illegible] S/o [illegible] ಜಪ್ಪು ಮಂಗಳೂರು	5
13	A 437 / 5-6 33	ಕೊರಗ S/o [illegible] ಅತ್ತಾವರ ಮಂಗಳೂರು	6
14	A 456 / 10-6-33	[illegible] ನಂದಿ [illegible] ಮಂಗಳೂರು	5
15	A 469 / 14-6 33	ಬಿ ಪೂವಪ್ಪ S/o [illegible] ರಸ್ತೆ ಮಂಗಳೂರು	20
16	A 505 / 22-6-33	ಬೈರ, S/o ಕೊರಗ [illegible]	4/
17	A 534 / 1-7-33	ಕಾಂತಪ್ಪ S/o ಚೆನ್ನಪ್ಪ ಪೂಜಾರಿ ಬೋಳೂರು ಬಿಜೈ ಮಂಗಳೂರು	[illegible]
18	A 535 / 2 7-33	ಇಸ್ಮಾಯಿಲ್ ಬ್ಯಾರಿ S/o ಕಾದ್ರಿ ಬ್ಯಾರಿ, [illegible] ಉಳ್ಳಾಲ	7/
19	A 556 / 10-7 33	ಬಿ ಪೂವಪ್ಪ S/o [illegible] ರಸ್ತೆ ಮಂಗಳೂರು	15/
20	A 636 / 31-7-33	ಅಚ್ಯುತ S/o ಬೀರಪ್ಪ [illegible] ರೋಡ್ ಮಂಗಳೂರು	13/
21	A 673 / 12-8-33	ಶೇಕಬ್ಬ ಬ್ಯಾರಿ, S/o ಹಸನಬ್ಯಾರಿ, ಪಣಂಬೂರು	10/
22	A 724 / 22-8-33	ರುಕ್ಮಮಯ್ಯ S/o ಗುಡ್ಡ ಶೆಟ್ಟಿ ಮಿಶ್ಯನ್ ಗೋರಿ ಬಳಿ, ಕಂಕನಾಡಿ	7/
23	A 749 / 28-8-33	ಪಕ್ರಿ ಬ್ಯಾರಿ, S/o ಬಡುವ ಬ್ಯಾರಿ, [illegible] ಗ್ರಾಮ, ಕಂಕನಾಡಿ	6/
24	A 757 / 30-8-33	ಮೋಹನ ಪಾಲ್, S/o ನಿತ್ಯಪಾಲ್, ಡೊಂಗರಕೇರಿ ಮಂಗಳೂರು	15/
25	A 790 / 6-9-33	ಹಮ್ಮಬ್ಬ ಬ್ಯಾರಿ, S/o ಖಾದ್ರಿಬ್ಯಾರಿ ಬೈಕಂಪಾಡಿ, ಪಣಂಬೂರು	12/
26	A 811 / 11-9-33	ಹಸನೆಬ್ಯಾರಿ, S/o ಹೊಸಮನೆ ಬಿಯ್ಯಬ್ಯಾರಿ, ಸುರತ್ಕಲ್ ಪೋಸ್ಟ್	7/
27	A 824 / 13-9-33	ಮೋಹನಪಾಲ್ S/o ನಿತ್ಯಪಾಲ್ ಡೊಂಗರಕೇರಿ, ಮಂಗಳೂರು	11/
28	A 901 / 28-9-33	ಕೃಷ್ಣಭಟ್ (ಪಟೇಲ್) S/o ವಾಸುದೇವಭಟ್, ಉಳ್ಳಾಲ	15/
29	A 904 / 28-9-33	ಚೆನ್ನಪ್ಪ ಶೆಟ್ಟಿ, N/o ಜಾರಪ್ಪಶೆಟ್ಟಿ, ಪಡವು ಕುಲಶೇಖರ	5/
30	A 913 / 1-10-33	ಅಂಗರ, S/o ಬಸವ, ಬೋಳೂರು ಬಕ್ಷೇರಿ ಬಳಿ, ಮಂಗಳೂರು	4/
31	A 1077 / 6-11-33	ಗುಲಾಂ ಬ್ಯಾರಿ, S/o ಹಸನೆಬ್ಯಾರಿ ಮುಳವೂರು, ಬಜಪೆ	10/
32	A 1119 / 19-11-33	ಜಿ. ಬಸಪ್ಪ, S/o ಕೊರಗ, ಕೊಡಿಯಾಲಬೈಲು, ಮಂಗಳೂರು	5/
33	A 1159 / 29-11-33	ನಾರ್ಣಪ್ಪಯ್ಯ, S/o ವೆಂಕಟ್ರಮಣಯ್ಯ, ಮುಲ್ಲಾರು, ಗುರುಪುರ	8/
34	A 1160 / 29-11-33	ಪದ್ಮನಾಭ ಶೆಟ್ಟಿ, S/o ಬಾಬು ಶೆಟ್ಟಿ, ಕೊಡಿಯಾಲಬೈಲು, ಮಂಗಳೂರು	16/

[illegible]ನೇ ಪುಟಕ್ಕೆ ಮುಂದುವರಿಸಿದೆ

ಬಾಹ್ಯ ಪ್ರಪಂಚ ಪರಿಚಯ.

[ಜಗತ್ತಿನ ಎಲ್ಲಾ ರಾಷ್ಟ್ರಗಳ ವಿವರಗಳನ್ನು ಈ ಪುಟದಲ್ಲಿ ಕ್ರಮಶಃ ಸಂಕ್ಷಿಪ್ತವಾಗಿ ಪ್ರಕಟಿಸುತ್ತ ಬಂದು, ನಮ್ಮ ವಾಚಕರಿಗೆ ಬಾಹ್ಯಪ್ರಪಂಚದ ಪರಿಚಯವನ್ನು ಮಾಡಿಕೊಡಬೇಕೆಂದು ನಿರ್ಣಯಿಸಲಾಗಿದೆ-ಸಂ]

ಫ್ರಾನ್ಸ್.

ಇಂಗ್ಲಾಂಡು ಮತ್ತು ಫ್ರಾನ್ಸ್ ದೇಶಗಳನ್ನು ಭಿನ್ನಗೊಳಿಸಿರುವುದು ದೊಡ್ಡ ಸಮುದ್ರವೊಂದು ಮಾತ್ರ ಜಗತ್ತಿನ ಸುಂದರದೇಶಗಳಲ್ಲಿ ಫ್ರಾನ್ಸು ಒಂದು. ಫ್ರಾನ್ಸ್ ದೇಶವು ಎಷ್ಟು ಪ್ರಾಚೀನವೋ, ಅಷ್ಟೇ ಕಷ್ಟಗಳನ್ನು ಅದು ಸಹಿಸಿಕೊಂಡು ಬದುಕಿತು

ಅದರ ಪ್ರಾಚೀನತೆ

ಫ್ರಾನ್ಸಿನಲ್ಲಿ ಪ್ರಥಮದಲ್ಲಾಗಿ ಇದ್ದ ಜನಾಂಗದವರ ಹೆಸರು ಗೋಲ್ಸ್ ಎಂದು. ರೋಮನರು ಈ ಜನರೊಡನೆ ಯುದ್ಧ ನಡೆಸಿ, ಇವರನ್ನು ಸೋಲಿಸಿದ್ದರು ರೋಮನರ ಸಂಪರ್ಕವಾದ ಕಾಲದಿಂದ ಗೋಲ್ ಜನಾಂಗದಲ್ಲಿ ನವಸ್ಫೂರ್ತಿಯುಂಟಾಯಿತು. ಅವರಿಗೆ ನಾಗರಿಕತೆ ರಾಜ್ಯಾಡಳಿತೆ ಮೊದಲಾದ [illegible] ಅನುಭವವು ದೊರೆಯಿತು [illegible] ಸ್ವತಂತ್ರವಾಗಿ ಹೊಸ [illegible] ನಗರಗಳನ್ನು ನಿರ್ಮಿಸಿಕೊಂಡರು. ಲೈನ್ಸ್ ಎಂಬುದು ಇವರ ಪ್ರಧಾನ ನಗರ ಈಗ ಈ ನಗರವು [illegible] ಉದಾಗಿ [illegible] ಆಗಿನ ಕಾಲದ ಇವರ [illegible] ವೇದಬಾದ [illegible] ಈಗಲೂ [illegible] ಸಾರಿ ಹೇಳುತ್ತವೆ

ಫ್ರಾನ್ಸಿನ ಮೂಲ

[illegible] ಶತಮಾನಗಳು [illegible] ಗೋಲ್ ಜನಾಂಗ [illegible] ನಾಗಿದ್ದ [illegible] ಶಿಥಿಲವಾಗುತ್ತ [illegible] ರೋಮನರ ಶಕ್ತಿ [illegible] ಬಂತು. [illegible] ಪರಿಣಾಮವಾಗಿ [illegible] ಮೊದಲಾದ [illegible] ಗೋಲ್ [illegible] ರನ್ನು ಕೂಡಿಕೊಂಡರು. ರೋಮನರಿಂದ [illegible] ಸಾಧ್ಯವಾದ ಜರ್ಮನರ ಒಂದು ಪಂಗಡವು ಪೆರಿಸ್ ನಗರದಲ್ಲುಳಿಯಿತು ಈ ಪಂಗಡದವರನ್ನು 'ಫ್ರೆಂಕ್ಸ್' ಎಂದು ಕರೆಯುತ್ತಿದ್ದರು ಇವರ ಅರಸನಾದ ಕ್ಲೊವಿಸ್ ಎಂಬವನು ಕ್ರೈಸ್ತಮತಕ್ಕೆ ಸೇರಿ ರೋಮನರನ್ನು ಓಡಿಸಿ ಗೋಲ್ ಜನಾಂಗವನ್ನು ಏಕೀಕರಿಸಿದನು ಇವನ ಪಂಗಡದವರಾದ ಫ್ರೆಂಕ್ಸರೇ ಅವರ ದೇಶಕ್ಕೆ ಫ್ರಾನ್ಸ್ ಎಂಬ ಹೆಸರನ್ನು ಕೊಟ್ಟರು

ನಂತರ

ಕ್ಲೊವಿಸನ ನಿರ್ಬಲ ವಂಶಜರು ಅವನಂತೆ ಪ್ರತಿಭಾಶಾಲಿಗಳಾಗಲಿಲ್ಲ ಅವರು [illegible] ಹೋರಾಡಿಕೊಂಡು, ಹಲವು ಪಂಗಡಗಳನ್ನು ರಚಿಸಿಕೊಂಡು ದುರ್ಬಲರಾದರು. ಪಿಪಿನ್ ಎಂಬವನ [illegible] ಪಂಗಡಕ್ಕೆ ಅರಸನೆಂದೆಣಿಸಿಕೊಂಡನು ಇವನ ಮಗನಾದ ಚಾರ್ಲೆಮೇನನು [illegible] ಇತಿಹಾಸದಲ್ಲಿ ಪ್ರಸಿದ್ಧ ವ್ಯಕ್ತಿಯಾದನು. ಇವನು [illegible] ವಿಸ್ತಾರವಾದ ರಾಜ್ಯವನ್ನು ಕಟ್ಟಿದನು ಆದರೆ ಅದು ಇವನ ಅವಸಾನದ ನಂತರ ಉಳಿಯಲಿಲ್ಲ

ನೂರಾರು ವರ್ಷಗಳ ಯುದ್ಧ

ಫ್ರಾನ್ಸಿನಲ್ಲಿ [illegible] ವರ್ಷಗಳ ವರೆಗೆ ಯುದ್ಧಗಳ ಸರಮಾಲೆ [illegible] ಸ್ಪೈನ್ ದೇಶವನ್ನಾಕ್ರಮಿಸಿದ [illegible] ಗದವರು ಇವರ ಅಸ್ತಿತ್ವವನ್ನೇ [illegible] ಯಾರ [illegible] ಶಕ್ತಿ [illegible] ಅವರೇ ಅಧಿಪತಿ [illegible] ಕಾಲವು [illegible] ಪ್ರತಿಯೊಬ್ಬ [illegible] ತನ್ನ ಶಕ್ತಿಸಾಮರ್ಥ್ಯದಿಂದ [illegible] ತನ್ನ [illegible] ತ್ತಿದ್ದನು. ಈಗ ಫ್ರಾನ್ಸ್ [illegible] ಅಲ್ಲಲ್ಲಿ [illegible] ಕೋಟೆಕೊತ್ತಳಗಳ [illegible] ಕಾರಣಗಳೇ [illegible]

987 [illegible] ಹ್ಯೂ [illegible] ಎಂಬವನು ಫ್ರಾನ್ಸಿನ [illegible] ಇವನು ಹೊಸ ವಂಶವೊಂದನ್ನು ನಿರ್ಮಾಣಮಾಡಿಕೊಂಡು [illegible] ರಾಳಿದನು.

ವಜ್ರಗಳು! —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ 'ಎಕ್ಸ್‌ಟ್ರಾ ವ್ಹಾಯಿಟ್'' ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

Part Proprietors of —

Sri Krishna Mills & Co
Oil Manufacturers
Bunder, Mangalore.

Bhagavan Ganesh Pai & Co
Copper Sheet & Twist
Merchants, Camp Bazar,
Cannanore.

Representatives for the W.C.

M/s. A & F. Harvey
Cotton Spinners,
Tuticorin, Madura &c.

Guardian Assurance Co., Ltd.
(Incorporated in England)
Head Office: 68, King
William Street,
London, E. C. 4.

ಅನುಕ್ರಮಣಿಕೆ.

ಚಿತ್ರ ... ೨
ಸಾಹಿತ್ಯ ಸಂಗ್ರಹ ... ೪
ಕರ್ನಾಟಕ ವರ್ತಮಾನ ... ೧೪
ಜರ್ಮನಿಯು ಶಾಂತಿಯನ್ನೇ ಕಾಂಕ್ಷಿಸುವುದು ... ೭
ಅಗ್ರಲೇಖ
ಸ್ಫುಟವಿಚಾರಗಳು ... ೧೦
ಜಸ್ಟಿಸ್ ಪಕ್ಷದ ಪುನರುಜ್ಜೀವನ. ... ೧೦
ಸಂಯುಕ್ತ ಅಮೇರಿಕಾದಲ್ಲಿ ಧರ್ಮಗಳೊಳಗೆ ಹೋರಾಟ ೯
ವರ್ತಮಾನ ಸಂಗ್ರಹ
ಕರ್ನಾಟಕ ಸಾಹಿತ್ಯ ಪರಿಷತ್ತು ... ೮
ಮಂಗಳೂರು, ತಾಲೂಕುಗಳಿಂದ ... ೧೧
ವಿವಿಧ ಸಮಾಚಾರಗಳು. ... ೧೩

ಸ್ವದೇಶಾಭಿಮಾನಿ.

ತಾ. ೨೮ನೇ ಶುಕ್ರವಾರ ಜೂನ್ ೧೯೩೫

ಜಸ್ಟಿಸ್ ಪಕ್ಷದ ಪುನರುಜ್ಜೀವನ

ಕೊಯಮುತ್ತೂರಲ್ಲಿ ಜಸ್ಟಿಸ್ ಪಂಗಡದ ಒಂದು ಸಭೆ ಸೇರಿತು ಮಾನ್ಯ ಪಿ. ಟಿ ರಾಜನರೇ ಆಗ ಭಾಷಣ ಮಾಡುತ್ತಾ, ಸಂಬಳ ಕೊಟ್ಟು, ಜನಗಳನ್ನು ನೇಮಿಸಿ, ಈ ಪಂಗಡವನ್ನು ಬಲಪಡಿಸುವ ವ್ಯವಸ್ಥೆಗಳಾಗಬೇಕೆಂದು ಹಲವರಲ್ಲಿ ಸೂಚನೆಗಳಾಗಿವೆ ಎಂದರು ಊಟಕಮಂಡಿನಲ್ಲಿಯೂ ಇದೇ ಪಂಗಡದವರ ಒಂದು ಸಭೆಯಾಗಿದ್ದು, ಆಗ, ದಿವಾನ ಬಹದ್ದೂರ್ ರಾಮಸ್ವಾಮಿ ಮುದಲಿಯಾರರು, ಜನರೆಲ್ಲ ಜಸ್ಟಿಸ್ ಪಕ್ಷಕ್ಕೇ ಒಲಿದಿರುವಂತೆಯೂ, ಆದರೆ, ಮುಖಂಡರೇ ಮಾತ್ರ ಆಲಸ್ಯಚಕ್ರವರ್ತಿಗಳಾಗಿರುವಂತೆಯೂ ಹೇಳಿದರು. ಆಲಸ್ಯ ಚಕ್ರವರ್ತಿಗಳನ್ನು ಹಾಗೆಯೇ ಬಿಟ್ಟು, ಸಂಬಳದಾರ ಏಜಂಟರ ಮುಖಾಂತರ ಮುಖಂಡತನದ ಪ್ರಾತಿನಿಧ್ಯವನ್ನು ನಡೆಸುವುದೇ ಅಗತ್ಯವೆಂದು ಎರಡೂ ಸಭೆಗಳಲ್ಲಾದ ನಿರ್ಣಯದ ಸಾರಾಂಶ

ಜಸ್ಟಿಸ್ ಪಕ್ಷದ ಹಿತಚಿಂತನೆಯುಳ್ಳವರಿಗೆ ಇದು ಒಂದು ಶೋಚನೀಯ ನಿರ್ಧಾರವೆಂದೇ ತೋರುವುದರಲ್ಲಿ ಸಂದೇಹವಿಲ್ಲ ಸಂಬಳ ಕೊಟ್ಟು ಭಟರನ್ನು ಇರಿಸಿಕೊಂಡು, ಅವರಿಂದ ತಮ್ಮ ಮಹತ್ವವನ್ನು ಹೊಗಳಿಸಿಕೊಳ್ಳುವವರು ಇರಬಾರದೆಂದಿಲ್ಲ, ಆದರೆ ಇವರ ಮಹತ್ವವೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ ಎಂತಾದರೆ, ಹಾಗೆ ತಿಳಿದುಕೊಂಡವರು ತಾವಾಗಿಯೆ ಅಂತಹ ಮಹತ್ವವನ್ನು ನಿಜವಾಗಿಯೂ ಭಕ್ತಿಯಿಂದ ಗೌರವಿಸಿ, ಇತರರಿಗೂ ಅದು ಗೌರವಪಾತ್ರವಾದುದೆಂದೇ ತೋರಿಸಿಕೊಡದೆ ಇರಬಹುದೆ? ಭಗವಂತನ ಅಪಾರ ಮಹಿಮೆ ತಿಳಿದವರು ತಾವಾಗಿ ಅವನ ಗುಣಗಾನ ಹಾಡಿ, ಇತರರಿಗೂ ಬೋಧಿಸುವರು, ಗುಡಿಬ್ಯವಗಳಲ್ಲಿ ಅಪಾರ ಮಹಿಮೆಯ ಆರೋಪವನ್ನು ಉಂಟುಮಾಡಬೇಕಾದರೆ ಮಾತ್ರ, ಸಂಬಳದಾರೀ ಪಾತ್ರಿ ಪೂಜಾರಿ ಮೊದಲಾದವರ ಅಗತ್ಯವು ಕಾಣಬರುವುದಲ್ಲವೆ?

ಈಗ, ಜಸ್ಟಿಸ್ ಪಂಗಡದ ಮುಖಂಡರು ಕೊಟ್ಟಿರುವ ಸಲಹೆಯಿಂದ, ಅದರ ಮುಖಂಡರಿಗೇ ತಮ್ಮ ಪಂಗಡದವರಲ್ಲಿ ವಿಶೇಷ ಖಂಡಿತವಾಗಿರುವ ಭರವಸೆಯು ಸ್ವಲ್ಪ ಕಡಿಮೆಯಾಗಿದೆಯೆಂತೆ ತೋರುವುದು. ಅವರ ಸಭೆಗಳಲ್ಲಿ ಎಲ್ಲರು, "ಶಾಸನಸಭೆಗಳಿಗಾಗಿ ಬಹುಮುಖವಾಗಿ ಪ್ರಗತಿಗಾಗಿ ಸಾಧಿಸತಕ್ಕ ಸರ್ವರನ್ನು ಒಂದುಗೂಡಿಸುವರೆ ಒಂದು, ಪಂಗಡವನ್ನು ಮಾಡಿಕೊಳ್ಳೋಣ" ಎಂದೂ, "ಪ್ರಗತಿಯುಂಟಾಗದ ಹಾಗೆ ಸಾಧನೆಮಾಡುವವರ ಒಂದು ಪಂಗಡವು ಇರುವ ಕಾರಣ, ಇಂಗ್ಲೆಂಡಿನಲ್ಲಿ ಮಾಡಿರುವ ಹಾಗೆ, ನಾವೂ ಇಲ್ಲಿ ನೇಶನಲ್ ಗವರ್ನಮೆಂಟನ್ನು, (ಎಂದರೆ, ಎಲ್ಲ ಪಕ್ಷಗಳಿಂದ ಕೆಲವರನ್ನು ಆರಿಸಿ ಅವರ ಮಂತ್ರಿತ್ವದಲ್ಲಿ) ನಮ್ಮ ಸಂಸ್ಥಾನದಲ್ಲಿ ಸ್ಥಾಪಿಸೋಣ" ಎಂದೂ ಸೂಚನೆಗಳಾಗಿವೆ. ಇದನ್ನು ಓದುವಾಗ, ಜಸ್ಟಿಸ್ ಪಂಗಡಕ್ಕೆ ಒಂಟಿಯಾಗಿ ಇದಿರಾಳಿಗಳನ್ನು ಕಾದಾಡುವ ಬಲವು ಇಲ್ಲವೆಂದು ಸ್ಪಷ್ಟವಾದಂತಿದೆ. ಈ ಭಾವನೆಯು ಯಾವುದೊಂದು ಪಕ್ಷದಲ್ಲಿದ್ದರೆ, ಆ ಪಕ್ಷವು ವಿಜಯಶೀಲವಾಗುವುದು ಕಷ್ಟ. ಆದರೆ, ತಮ್ಮ ಬಲಹೀನತೆಯನ್ನು ತಿಳಿದುಕೊಂಡವರು ಬಲಹೊಂದುವುದಕ್ಕೆ ತಕ್ಕ ಪ್ರಯತ್ನಗಳನ್ನು ಮಾಡಲು ಸಮರ್ಥರಾಗದೆ ಹೋದರೂ, ಅಂತಹ ಪ್ರಯತ್ನಗಳನ್ನು ಮಾಡಬೇಕೆನ್ನುವಷ್ಟು ಜಾಣ್ಮೆಯುಳ್ಳವರೆಂದಾದರೂ ತೋರುವರು. ಪ್ರಗತಿಗಾಗಿ ರಾಜಕೀಯ ರಣರಂಗದಲ್ಲಿ ಕಾಲಿಡುವವರು ಎಲ್ಲರೂ ಒಮ್ಮನಸ್ಸಿನಿಂದ, ಒಂದೇ ಆದರ್ಶವುಳ್ಳವರಾಗಿ ಒಂದಾಗುವುದು ಸುಲಭ, ಆದರೆ ತನ್ನ ಚುನಾಯಿತ ಸದಸ್ಯರ ಸಂಖ್ಯೆಯು ಕಡಿಮೆಯಾಗಿರುವ ಯಾವುದೊಂದು ಪಕ್ಷವು, ಇಂತಹ ಇತರ ಪಂಗಡಗಳಿಂದ ಯಾವಾಗಲು ಖಂಡಿತ ಬೆಂಬಲ ಪಡೆದು, ತಾನೊಂದು ವಿಜಯ ಹೊಂದೀತೆಂದು ನಂಬುವುದು ಸ್ವಲ್ಪ ಅಸಾಧ್ಯವೇ ಸರಿ

ಜಸ್ಟಿಸ್ ಪಂಗಡವು ಈಗ ಕೈಕೊಳ್ಳಬಹುದಾಗಿರುವ ಕಾರ್ಯಕ್ರಮವೆಂದರೆ,— ಇಷ್ಟು ವರ್ಷ ತಾವು ಅಧಿಕಾರಾರೂಢರಾಗಿ ಲೋಕಹಿತಕ್ಕಾಗಿ ಮಾಡಿದುದೇನೆಂದು ಮತದಾರರಿಗೆ ವಿವರವಾಗಿ ಸಾರುವುದು, ಅದಲ್ಲದೆ ಕೊಂಗ್ರೆಸ್ ಪಕ್ಷವು ಮಾಡಲಿರುವುದೇನೆಂದು ತಿಳಿದು, ಅದನ್ನು ಖಂಡಿಸುವುದು.— ಇಷ್ಟೆ ಇದಕ್ಕಾಗಿ ತಮ್ಮ ಸ್ವಕೀಯ ಆದರ್ಶವನ್ನು ಉಜ್ವಲವಾಗಿಟ್ಟು ಸರ್ವರಿಗೂ ಅದು ಪ್ರದರ್ಶನಯೋಗ್ಯವಾಗಿರುವಂತೆ ನೋಡಿಕೊಳ್ಳಬೇಕಾದುದೂ, ಇದಿರಾಳಿಗಳ ಕಾರ್ಯಕ್ರಮಗಳ ಕೂಲಂಕಷ ಮಾಹಿತಿಯನ್ನು ಪಡೆಯುವುದೂ ಮಾತ್ರವಲ್ಲದೆ, 'ಮುಂದಾಳು'ಗಳು ಮತ್ತು 'ಹಿಂಬಾಲಿಕರು'ಗಳೊಳಗೆ ಅನ್ಯೋನ್ಯವಾದ ಸಹಕಾರವನ್ನು ಪಾಲಿಸಿ ಬೆಳೆಸುವುದು ಇನಿಷ್ಟೆ, ಇವರು ಸದ್ಯಕ್ಕೆ ಕೈಕೊಳ್ಳಬಹುದಾಗಿರುವ ಕಾರ್ಯಪ್ರಣಾಲಿಯಾಗಿದೆ

ನಿಜವಾಗಿ ಸದ್ಯಸ್ಥಿತಿಯಲ್ಲಿ, ಕೊಂಗ್ರೆಸ್ ಪಕ್ಷವೂ ಜಸ್ಟಿಸ್ ಪಕ್ಷವೂ ಕೆಲವಂಶದಲ್ಲಿ ಒಂದೇ ಮಟ್ಟವಾಗಿದೆ ಅವರೂ ಇವರೂ ಮುಂದೆ ಮಾಡಲಿರುವ ಮಹತ್ಕಾರ್ಯಗಳಾವುವೆಂದು ಯಾರಿಗೂ ಸಾರಿದುದಿಲ್ಲ ಜಸ್ಟಿಸ್ ಪಕ್ಷವಾದರೂ ಕೆಲವು ವರ್ಷ ಅಧಿಕಾರದಲ್ಲಿದ್ದು ಸ್ವಲ್ಪ ಕಾರ್ಯಸಾಧನೆ ಮಾಡಿರುವುದು, ಮುಂದೆ ಹೀಗೆ ಮಾಡಲಿದ್ದೇವೆಂದೂ ಕೆಲವು ಸೂಚನೆಗಳನ್ನೂ ಕೊಟ್ಟಿರುವುದು ಕೊಂಗ್ರೆಸ್ ಪಕ್ಷವು ಇನ್ನೂ ಅಧಿಕಾರವನ್ನು ಗ್ರಹಿಸುವ ನಿರ್ಣಯವನ್ನೇನೂ ಮಾಡಿಲ್ಲ ಇತ್ತಂಡಗಳೂ ಅದ್ಭುತ ಕಾರ್ಯಗಳನ್ನು ಮುಂದೆ ಮಾಡಲಿರುವುವಾಗಿ ಸೂಚಿಸಿವೆ ಇವೆರಡೂ ಪಕ್ಷಗಳೊಳಗೆ, ಮತದಾರರು ಯಾರ ಕಡೆಗೆ ಒಲಿಯಬಹುದೋ ಅದು ವಿಚಾರಿಗಳಿಗೆ ತಿಳಿದೇ ಇದೆ ಮತದಾರರಿಗೆ ಮುಂದಣ ವಿಚಾರಗಳನ್ನು ಕೂಲಂಕಷವಾಗಿ ವಿವರಿಸುವ ಅಗತ್ಯವೂ ಇದೆ, ಚುನಾವಣೆಯ ಕಾಲಕ್ಕೆ ಮೊದಲೇ ಕೊಂಗ್ರೆಸ್ ಪಕ್ಷವು ತನ್ನ ಮುಂದಿನ ಕಾರ್ಯಕ್ರಮವನ್ನು ಖಂಡಿತವಾಗಿ ನಿಶ್ಚಯಿಸಿಕೊಂಡು ಜನತೆಗೆ ಸಾರದಿರದು ಧೈರ್ಯವೂ ಉತ್ಸಾಹವೂ ಯಾರಲ್ಲಿರುವುದೋ, ಅವರು ನೀಲಗಿರಿಯ ಶಿಖರಗಳ ಮೇಲೆ ತಪೋಬಲವನ್ನು ಸಂಪಾದಿಸುವುದನ್ನು ಬಿಟ್ಟು, ವಾಸ್ತವವಾದ ರಂಗಸ್ಥಲದಲ್ಲಿರುವ ಪ್ರೇಕ್ಷಕರ ಇದಿರಲ್ಲಿ ಪ್ರತ್ಯಕ್ಷ ವಿಚಾರಗಳನ್ನು ಇಡುವುದರಿಂದ, ಮತದಾರರಿಗೆ ಉಪಯುಕ್ತ ಮಾಹಿತಿಯನ್ನು ಕೊಟ್ಟ ಪುಣ್ಯವನ್ನಾದರೂ ಕಟ್ಟಿಕೊಳ್ಳಬಹುದಲ್ಲವೆ?

ಸನಾತನ ಧರ್ಮದ—

ವಿನಾಶಕ್ಕೆ ಮೂರು ಕಾರಣಗಳೆಂದು ಬೆಜವಾಡದಲ್ಲಿ ಸೇರಿದ ಆಂಧ್ರ ಸನಾತನಿಗಳ ಸಭೆಯ ಅಧ್ಯಕ್ಷರೆಂದರು.—ಸಹಶಿಕ್ಷಣ, ವಿವಾಹ ವಿಚ್ಛೇದಕ್ರಮ, ಪ್ರೌಢವಿವಾಹ ಇವರ ಮಾತಿಗೆ ಬಹಳ ಬೆಲೆ ಅಗತ್ಯವಾಗಿಯೂ ಇರಬೇಕು ಆದರೆ ಕೆಲಪ್ರಶ್ನೆಗಳನ್ನು ಇವರಿಗೆ ಕೇಳಬೇಕಾಗುವುದು. ಸ್ತ್ರೀಪುರುಷರೊಳಗಣ ಸಂಬಂಧವನ್ನು ಮಾತ್ರವೇ ಅನುಸರಿಸಿ, ಸನಾತನ ಧರ್ಮವು ತನ್ನ ಬಾಳಿಕೆಯನ್ನು ನಿರ್ಧರಿಸಿದೆಯೋ? ಲೋಕದಲ್ಲಿ ಈಗ ಪ್ರಸಿದ್ಧಿಹೊಂದಿರುವ ಮತಸಂಪ್ರದಾಯಗಳಲ್ಲಿ, ಹಿಂದೂ ಧರ್ಮವು ಈಗ ತೋರುವ ಹಾಗೆಯೆ, ಕೇವಲ ಸಾಮಾಜಿಕ ಕಟ್ಟುಕಟ್ಟಳೆಗಳೇ ಮಾತ್ರ ಮೂಲಭಿತ್ತಿಯಾಗಿರುವುವೆ? ನೈತಿಕ ಮತ್ತು ಸಾಮಾಜಿಕ ಕಟ್ಟುಗಳೇ ಮಾತ್ರ 'ಧರ್ಮ'ವೆ? ರೀತಿನೀತಿಗಳಲ್ಲಿ ಸರ್ವತ್ರವೂ ಅನುಯಾಯಿಗಳಲ್ಲಿ ಭೇದವುಂಟಾಗಿ, ಹೆಚ್ಚಿನವರು ಒಂದೇ ಬಗೆಯ ಕಟ್ಟಿಗೆ ಒಳಪಟ್ಟರೆ ಅದರಿಂದ, ಧರ್ಮವು ವಿನಾಶ ಹೊಂದುವುದೆ? ಸನಾತನಧರ್ಮಕ್ಕೆ ಮೂಲದಲ್ಲಿ ಸತ್ವವಿಲ್ಲವೆ? ಆ ಸತ್ವವು ಮೇಲಣ ಮೂರು ಕಾರಣಗಳಿಂದ ಕುಂದಿ ಧರ್ಮ ನಾಶವಾಗಬಹುದೆ? ಸುಧಾರಕರ ಅಭಿಪ್ರಾಯದಲ್ಲಿ 'ಹಿಂದೂಸ್ತ್ರೀಯರ ಸ್ಥಾನಮಾನಾದಿಗಳು ಹಕ್ಕು ಜವಾಬುದಾರಿಗಳು ಇವು ಹಿಂದೂ ಪುರುಷರಿಗಿರುವುವುಗಳಿಗಿಂತ ಕಡಿಮೆಯಾದ ಹೊರತು ಸನಾತನಧರ್ಮವು ಬಚಾವಾಗಲಾರದೆಂಬುದು ಸುಳ್ಳೇ ಸುಳ್ಳು' ಆದರೆ, ಇವೇ ಕೆಲವು ವಿಷಯಗಳಲ್ಲಿ ಹಿಂದೂ ಜನರ ಶ್ರದ್ಧೆಯು ಕಡಿಮೆಯಾಗುವಂತೆ ತೋರಿದರೆ, ಹಿಂದೂ ಧರ್ಮದ ಕಡೆಗೆ ಜಗತ್ತಿನಲ್ಲಿ ಇರಬೇಕಾದ ಗೌರವವು ಕುಂದುವುದು ನಿಜವೆಂದು ಸನಾತನಿಗಳು ನಂಬಿರುವರು

ಒಂದೇ ದಿನದೊಳಗೆ ಮುಗಿಯುವ ವಿವಾಹ

ಗಳೂ ಉಪನಯನಗಳೂ ಶಾಸ್ತ್ರವಿರುದ್ಧವೆಂದು ಇದೇ ಸನಾತನಿಗಳ ಸಭೆಯಲ್ಲಿ ನಿರ್ಧಾರವಾಯಿತು. ಹಿಂದುಗಳಲ್ಲಿ ಎಲ್ಲೆಲ್ಲಿಯೂ ಹೆಚ್ಚುತ್ತಬರುವ ಈ ಪದ್ಧತಿಯು ಧರ್ಮದ್ರೋಹವಾಗಿದೆ, ಅದುಕಾರಣ ಅದನ್ನು ಮುರಿಯಲೇಬೇಕೆಂದು ಭಾಷಣಗಳಾದುವು ಈಗ ಭಜನೆಯ ಸಪ್ತಾಹಗಳಾಗಿ ಧರ್ಮದಲ್ಲಿ ಭಕ್ತಿಯು ಬೆಳೆದುಬರಲು ಅವಕಾಶವಿದ್ದುದು ಸಾಲದೆ, ವಿವಾಹಸಪ್ತಾಹವೂ ಇನ್ನೂ ಆಗಬೇಕಾಯಿತು ಅನುಭವವುಳ್ಳವರಿಗೆ ಅದರಲ್ಲೂ ಕನ್ಯಾಪಕ್ಷದವರಿಗೆ, 'ವಧು'ವು ಒಮ್ಮೆಗೆ 'ಹೆಂಡತಿ'ಯೆಂದಾದರೋ ಮುಂದಣ ಜನ್ಮದವರೆಗೆ ಸುಖ ಎಂದು ತೋರುವಾಗ, ಆಯುಷ್ಯ, ಅವಕಾಶವೂ, ಸಹಾಯವೂ ಅನುಕೂಲತೆಯೂ ಕಡಿಮೆಯಿರುವಲ್ಲಿ, ಏಳೇಳು ದಿನ ವಿವಾಹವಾಗಬೇಕೆಂದರೆ,—ಅದು ಮುಗಿವುದರೊಳಗೆ, 'ಯಾರಿಗೆ ವಿವಾಹ'ವೆಂದೂ ಪ್ರಶ್ನೆ ಎದ್ದೀತು ಮಾತ್ರವಲ್ಲದೆ, ವಿವಾಹ ಎಂಬ ಶಬ್ದವೇ ಅಳಿದುಹೋಗಿ, ಮತ್ತೇನೋ ರೂಢಿಗೆ ಬಂದೀತು ಎಂದು ಸುಧಾರಕರಲ್ಲಿ ವಿವೇಕವುಳ್ಳವರು ಹೇಳುವರು ಇದರಂತೆ, ಈ ಸನಾತನಿಗಳು ತಿರುಪತಿಗಿರಿಗೆ ಹೋಗಲು ರೈಲುಮಾರ್ಗ ಹಾಕಿಸುವುದು ತಪ್ಪು, 'ಶಾಸ್ತ್ರವಿರುದ್ಧ' ಎಂದೂ ನಿರ್ಧಾರಮಾಡಿರುವರು ಕಾಲಿಂದ ನಡೆದೇ 'ನಾಲ್ಕಾರು ತಿಂಗಳುಗಳಲ್ಲಿ ಬಂದರೆ ಬಂದೆ' ಎಂದು ನೆಂಟರಿಷ್ಟರನ್ನು ಬೀಳ್ಕೊಂಡು, ಉಯಿಲು ಬರೆದಿಟ್ಟು, ಊರಿಂದ ಮಾರಿ ಹೊರಟ ಹಾಗೆ ಹೊರಟರೆ ಮಾತ್ರ ಯಾತ್ರೆಯೆ? ಅದು ಶಾಸ್ತ್ರವೆ? ಅದು ಶಾಸ್ತ್ರಸಮ್ಮತವೆ? ಎಂದು ಸುಧಾರಕರ ಪ್ರಶ್ನೆಗಳಿವೆ. ಕಾಲ, ಸ್ಥಾನ, ಪಾತ್ರ ಯಾವುದನ್ನೂ ಗ್ರಹಿಸದೆ, ಧರ್ಮ-ಶಾಸ್ತ್ರ ಎಂದರೆ ಇನ್ನೂ ಹಿಯ್ಯಾಳಿಸುವ ಜನ ಹೆಚ್ಚಿ, ಅದರ ಗೌರವವನ್ನೆ ಕುಂದಿಸುವ ಹಾಗೆ ಸನಾತನಿಗಳು ಏಕೆ ಮಾಡುವರು?

ಗಾಜಿನ ಕೈಗಾರಿಕೆಯು

ನಮ್ಮ ದೇಶದಲ್ಲಿ ಬೆಳೆಯುತ್ತ ಬರುವ ಕಾರಣ, ಪರದೇಶಗಳಿಂದ ರಫ್ತಾಗುವ ಗಾಜಿನ ಸಾಮಾನುಗಳ ಮೇಲೆ ಸುಂಕವನ್ನು ಹೆಚ್ಚಿಸುವ ಮೂಲಕ, ಇಲ್ಲಿನ ಕೈಗಾರಿಕೆಗೆ ಪ್ರೋತ್ಸಾಹ ಕೊಡಬೇಕಾಗಿ ಕಾರ್ಖಾನೆಯವರು ಸರಕಾರಕ್ಕೆ ಬರೆದುಕೊಂಡ ಬಿನ್ನಪವು ವ್ಯರ್ಥವಾಯಿತು ಏಕೆಂದರೂ ಇಲ್ಲಿನವರಿಂದ ದೇಶಕ್ಕೆ ಸಾಕಾಗುವಷ್ಟು ಗಾಜಿನ ಸಾಮಾನುಗಳನ್ನು ತಯಾರಿಸಬಲ್ಲ ಸಂಘವವೇ ಇಲ್ಲವಾದ ಕಾರಣ, ಪರದೇಶೀ ಗಾಜಿನ ಮೇಲೆ ಸುಂಕವಿಲ್ಲ ಜಾಪಾನ್, ಬೆಲ್ಜಿಯಮ್, ಮಧ್ಯ ಯುರೋಪು ಇವೇ ಧಾರಾಳವಾಗಿ ಗಾಜಿನ ಸಾಮಾನುಗಳ ಮಳೆಸುರಿದು, ಎಲ್ಲಿ ಕಾಲಿಕ್ಕಿದರೂ ಇವೇ ಗಾಜಿನ ತುಂಡುಗಳಿಂದ ಗಾಯಗಳಾಗುತ್ತಿವೆ ಸ್ವದೇಶೀ ಗಾಜಿನ ಚೂರುಗಳು, ಕಾಲುತಪ್ಪಿ ಇಟ್ಟರೂ ಗಾಯಮಾಡಲು ಒದಗುವ ಹಾಗಿಲ್ಲ ಇಷ್ಟು ಸೌಕರ್ಯ ಸಾಲದೆ? ಗಾಜನ್ನು ತಯಾರುಮಾಡುವುದಕ್ಕೆ ಬೇಕಾಗುವ ರಸಾಯನಿಕ ವಸ್ತುಗಳ ಮೇಲೆ ಸುಂಕ ಇಳಿಸಲಾಗಿದೆ ಈ ಕೈಗಾರಿಕೆಯಲ್ಲಿ ಉತ್ತಮ ಅಭ್ಯುದಯ ಉಂಟಾಗುವ ಹಾಗೆ ಯೋಗ್ಯರನ್ನು ಶಿಕ್ಷಣಗೊಳಿಸಲು ಏರ್ಪಾಡು ಮಾಡಬೇಕೆಂದು ಟೆರಿಫ್ ಬೋರ್ಡಿನವರೇ ಶಿಫಾರಸು ಮಾಡಿದರೂ, ಸರಕಾರವು ಮೌನವಾಗಿದೆ ಸರಕಾರಕ್ಕೆ ಬೇಕಾದುದು ಗಾಜಿನ ಮೇಲಣ ಸುಂಕ, ಅದನ್ನು ಮಾಡಲು ತರಿಸುವ ಸಾಮಾನಿನ ಮೇಲೆ ಸುಂಕ ಆ ಸುಂಕವನ್ನು ಇಷ್ಟಿಷ್ಟು ಚೆನ್ನಾಗಿ ಗಾಜಿನ ಒಡವೆಗಳನ್ನು ಇಲ್ಲೇ ತಯಾರಿಸುವವರ ಸಲುವಾಗಿ ಕೈಯಿಟ್ಟರೆ ಮತ್ತೆ ಪರದೇಶದಿಂದ ಗಾಜು ಬಾರದೆ ಸುಂಕವೇ ಸಿಗದೆಂದು ಬೆದರಿಕೆಯೋ ಏನೋ!

ಭೂಕಂಪದ ಮಹಾ ಕಷ್ಟಕಾಲಃ

ಅಯಾಚಿತಗಳು ಅನುಚಿತವಾಗಿ ಎಂದೂ ಮುಂದೋರಿಗೆ ಇರದೆ ಒಂದರ ಮೇಲೊಂದಾಗಿ ಕೆಲೆದೋರುವಾಗ, ಇವುಗಳಿಂದ ಉಳಿದೂ ಅಳಿದಂತವರಿಗೆ ನೆರವಾಗುವುದು, ಅಳಿದು ಹೋಗದಿರುವ ಎಲ್ಲರ ಕರ್ತವ್ಯವಾಗಿದೆ ಅದನ್ನು ಪುನಃ ವಿವರಿಸಿ ಜಾಹೀರು ಮಾಡುವ ಅಗತ್ಯವೇ ಇರುವುದಿಲ್ಲ ಆದರೂ ಅಣ್ಣರು ಸಮಸ್ತರ ತಿಳುವಳಿಕೆಗೆ ಅದನ್ನು ತಂದು ಸಹಾಯ ನೀಡಿರೆನ್ನುವಾಗ ಹಿಂತೆಗೆಯುವುದು ಮಹಾಪಾತಕವಾಗುವುದು ಆದರೆ, ಕರುಣಾಳುವಾಗಿರುವ ಭಗವಂತನಲ್ಲಿ ಶ್ರದ್ಧಾ ವಿಶ್ವಾಸವನ್ನಿಟ್ಟು, ಅವನಿಗಾಗಿ ದುಡಿಯಲು, ಹಿಂದೆ ದುಡಿದಂತೆ, ಈಗಲೂ ಮುಂದೆ ಬರುವವರಿಗೆ, 'ಬೇಡ' ಎಂದೂ 'ಕೂಡದು' ಎಂದೂ ಸರಕಾರವೇ ಹೇಳುವುದಾದರೆ, ಸರಕಾರದ ಹಸ್ತಕರಲ್ಲಿ ಯಾರಿಗೂ ಇಂತಹ ನಿಷೇಧದ ಆರ್ಡರೇ ಬರುವುದಾದರೆ, ಏನೆನ್ನಬೇಕು? ಮಹಾತ್ಮಾಜೀಯವರು, ಕೊಂಗ್ರೆಸ್ ಅಧ್ಯಕ್ಷರು, ಅವರ ಪಕ್ಷದವರು ಯಾರೂ ಕ್ವೆಟ್ಟಾದ ಕಡೆಗೂ ಸುಳಿಯದಂತಾಗಿದೆ ಸಂಕಟ ನಿವಾರಣೆಯ ಪುಣ್ಯಕಾರ್ಯಕ್ಕೂ ಒಂದು ಗುತ್ತೆ ಇದೆಯೆ? ಅಥವಾ ಇಂತಹ ಲೋಕಸೇವಾಧುರೀಣರೆಂದು ಸರಕಾರದಿಂದ ಒಮ್ಮೆ ಮನ್ನಣೆ ಪಡೆದವರೇ, ಆ ವಾತಾವರಣದಲ್ಲಿ ತಾವೂ ಮೋಸಹೋಗಿ, ಇತರರಿಗೂ ಮೋಸ ಮಾಡುವರೆಂಬ ಭವಿಷ್ಯವನ್ನಾದರೂ ಯಾವನೊಬ್ಬ ಜೋಯಿಸನಾಗಲಿ, ವಿಜ್ಞಾನಿಯಾಗಲೀ ಹೇಳಿಕೊಟ್ಟಿರುವನೆ? ಕಲ್ಕತ್ತದ ಮ್ಯುನಿಸಿಪಾಲಿಟಿಯಿಂದ, ಸಂಕಟನಿವಾರಣೆಗಾಗಿ ವಸೂಲಾದ ವಂತಿಗೆಯನ್ನು ಮೇಯರ ಅಧ್ಯಕ್ಷರೇ ಅವರವರಿಗೆ ಹಿಂದೆ ಕೊಟ್ಟು ಬಿನ್ ಸರಕಾರೀ-ಸಹಾಯವೇ ಬೇಡವೆಂದೇನೋ ಸರಕಾರದ ಅಭಿಪ್ರಾಯವೆಂದು ತಿಳಿದುಕೊಂಡರಂತೆ. ದೇಶದ ದುರ್ಭಾಗ್ಯ!

ತಾಲೂಕುಗಳಿಂದ.

ಮೂಲ್ಕಿ— ಸ್ಥಳೀಯ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಮಾಸಿಕ ಸಭೆಯು, ಇದೇ ತಿಂಗಳ ತಾ ೧೫ರಲ್ಲಿ ಸೆಂಟರ್ ಸ್ಕೂಲಲ್ಲಿ ಮುಂಡ್ಕೂರು ಎಯ್ಡಡ್ ಶಾಲಾ ಮುಖ್ಯ ಉಪಾಧ್ಯಾಯರಾದ ಶ್ರೀ ವೆಂಕಪ್ಪ ಶೆಟ್ರ ಅಧ್ಯಕ್ಷತೆಯಲ್ಲಿ ಕೂಡಿಬಂತು. ಶ್ರೀ ಎಮ್ ಸೇಸು ಶೆಟ್ರು ಪ್ರಥಮ ತರಗತಿಯ ಮಕ್ಕಳಿಗೆ ಒಂದು ಭಾಷಾ ಪಾಠವನ್ನು ಕೊಟ್ಟರು. ಬೋರ್ಡ್ ಶಾಲಾ ಅಧ್ಯಾಪಕರಿಗೆ Personal Pay ಆಗಿ ಕೊಡುತ್ತ ಬಂದುದನ್ನು ಕಡಿತಮಾಡಿದುದು ಕೇವಲ ಅಸಮಂಜಸವೆಂದೂ ಅದನ್ನು ಹಿಂದೆ ಕೊಡಿಸುವಂತೆಯೂ ಸಂಬಳದಲ್ಲಿ ಶೇಕಡಾ ೫ ರಂತೆ ಕಡಿತಮಾಡಿದುದನ್ನು ತೆಗೆದುಹಾಕಬೇಕೆಂದೂ ಅಸ್ವಸ್ಥದ ರಜೆಗೆ ವೈದ್ಯ ಉದ್ಯೋಗಸ್ಥರ ಸರ್ಟಿಫಿಕೇಟು ಹಾಜರುಪಡಿಸಿದರೆ ಪೂರ್ಣ ಸಂಬಳ ಕೊಡಿಸುವಂತೆಯೂ ಸಂಬಂಧಪಟ್ಟವರನ್ನು ಕೇಳಿಕೊಳ್ಳಬೇಕೆಂದೂ ನಿರ್ಣಯಿಸಲಾಯಿತು. ಮುಂದಿನ ಸಭೆಯು ಇದೇ ಬರುವ ತಾ ೨೭—೭—೩೫ನೇ ಶನಿವಾರ ಸ್ಥಳೀಯ ಬೋರ್ಡ್ ಹುಡುಗಿಯರ ಶಾಲೆಯಲ್ಲಿ ಕೂಡಲಿರುವುದು.

ಸ್ಥಳೀಯ ಯೂನಿಯನ್ ಕ್ಲಬ್ಬಿನ ೨ನೇ ವರ್ಷದ ವರ್ಧಂತ್ಯುತ್ಸವವೂ ದಿವಂಗತ ಡಾ। ಬೋಳ ಪ್ಯಾಡು ರಾಯರ ಜನ್ಮದಿನಾಚರಣೆಯೂ ಇದೇ ಕಳೆದ ತಾರೀಕು ೧೬—೬—೩೫ನೇ ರವಿವಾರ ಸಾಯಂಕಾಲ ಘಂಟೆ ೪ಕ್ಕೆ ವಿಶೇಷ ಸಂಭ್ರಮದಿಂದ ಆಚರಿಸಲ್ಪಟ್ಟವು.

ಸ್ಥಳೀಯ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯು ಸಿದ್ಧಾಯಾರ್ಥವಾಗಿ ಏರ್ಪಡಿಸಿದ ಲಾಟರಿಯಲ್ಲಿ ಬಹುಮಾನಹೊಂದಿದವರ ಪೈಕಿ ಈ ವರೆಗೂ ಬಹುಮಾನಗಳನ್ನು ಪಡೆಕೊಳ್ಳದಿರುವವರು ಪ್ರೈಜ ಲಿಸ್ಟಿನಲ್ಲಿ ಪ್ರಕಟಿಸಿದ ಮೇರೆಗೆ ಇದೇ ತಾ ೩೦—೬—೩೫ರ ಒಳಗೆ ತಂತಮ್ಮ ಟಿಕೇಟುಗಳನ್ನು ರವಾನಿಸಿಕೊಟ್ಟು ಹಣ ಪಡಕೊಳ್ಳಬೇಕಾಗಿಯೂ ಅನಂತರ ಬಂದವುಗಳಿಗೆ [illegible] ಕೊಡಲಾಗಲಿಕ್ಕಿಲ್ಲವಾಗಿಯೂ ಹಾಗೆ ಪಡೆಯದೆ [illegible] ಯುವ ಹಣವನ್ನು ಶಾಲಾ ಫಂಡಿಗೆನೇ ಸೇರಿಸಲಾದೀತೆಂದೂ ಸದರಿ ಸೊಸೈಟಿಯ ಕಾರ್ಯದರ್ಶಿಯವರು ತಿಳಿಸುತ್ತಾರೆ. ಸಂಬಂಧಪಟ್ಟವರು ಈ ಬಗ್ಗೆ ಗಮನಕೊಟ್ಟು ತಂತಮ್ಮ ಬಹುಮಾನಗಳನ್ನು [illegible] ಅವಧಿಯೊಳಗಾಗಿ ಅವಶ್ಯ ಪಡೆಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.

ಮೂಡಬಿದ್ರಿ— ಈ ಸೆಂಟರಿನ ಉಪಾಧ್ಯಾಯರ ಸಂಘದ ೧೯೩೫ ೩೬ನೇ ವರ್ಷದ ಪ್ರಥಮ ಸಭೆಯು ಇದೇ ಜೂನ್ ೨೨ ನೇ ಶನಿವಾರ ೨ ಘಂಟೆಗೆ ಬೋರ್ಡ್ [illegible] ಹುಡುಗರ ಶಾಲೆಯಲ್ಲಿ ಮೂಡು ಕೊಣಾಜೆ ಶಾಲಾ ಹೆಡ್ ಮಾಸ್ತರ್ ಎ. ರಾಮಿ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ೧೩ ಶಾಲೆಗಳ ೩೩ ಮಂದಿ ಅಧ್ಯಾಪಕರು ಹಾಜರಿದ್ದರು. ಈ ವರ್ಷದ ಹೊಸ ಕಾರ್ಯಕಾರೀ ಮಂಡಳಿಗೆ ಈ ಕೆಳಗಣ ಅಧ್ಯಾಪಕರನ್ನು ಸರ್ವಾನುಮತದಿಂದ ಚುನಾಯಿಸಲಾಯಿತು. (೧) ಪಿ ಮಂಜೇಶ (೨) ಬಿ ಮಂಜುನಾಥಯ್ಯ (೩) ಎಮ್ ನರಸಿಂಹ ಶೆಣೈ (೪) ಎ. ಶಿವರಾವ್ (೫) ಮಹಮ್ಮದ್ ಸಾಹೇಬ್ (೬) ಎಲ್ ಎಸ್ ಹೆಗ್ಡೆ (೭) ಜಿ ಎಮ್ ಡಿ ಸೋಜ (೮) ಇದ್ದಬ್ಬಾರಿ, (೯) ಪಿ ರಮಾನಾಥರಾವ್. ಬರುವ ಸಭೆಯು ಆಗೋಸ್ತು ತಾ ೧೭ಕ್ಕೆ ಇಡಲ್ಪಟ್ಟದೆಯೆಂತಲೂ ನಂತರ ಹೊಸ ಕಾರ್ಯಕಾರೀ ಮಂಡಳಿಯ ಸಭೆಯು ಜರಗುವುದೆಂತಲೂ ಈ ಮೂಲಕ ತಿಳಿಸಲಾಗಿಯದೆ.

ಪಾಣೆಮಂಗಳೂರು—ಇಲ್ಲಿಯ ಗೌಡಸಾರಸ್ವತರು ಹೊಸತಾಗಿ ಕಟ್ಟಿಸಿದ ಶಾಲೆಯ ಪ್ರವೇಶ ಸಮಾರಂಭವು ಸಾಕಷ್ಟು ಸಂಭ್ರಮದೊಡನೆ ನೆರವೇರಿತು. ಪ್ರಥಮತಃ ವೈದಿಕ ವಿಧಿಯಂತೆ ಹವನ ಮುಂತಾದಗಳು ವೇದಪಾಠಕರಿಂದ ಸಾಂಗ್ಯವಾದೊಡನೆ ಮಾನ್ಯ ವಿದ್ಯಾ ಇಲಾಖೆಯ ಜಿಲ್ಲಾಧಿಕಾರಿಗಳಾದ ರಾ. ಕಣ್ಣಪ್ಪ ಅವರ್ಗಳ್ ಇವರನ್ನು ಶಾಲಾಮಕ್ಕಳು ವಾಲಗವೈಭವದೊಡನೆ ಇದಿರ್ಗೊಂಡು ಊರಸಮಸ್ತರ ಕೂಡೆ ಮೆರವಣಿಗೆಯೊಡನೆ ಶಾಲಾ ಕಟ್ಟಡವನ್ನು ಪ್ರವೇಶಿಸಿದೊಡನೆ ನೆರೆದ ಸಮಸ್ತರ ಅಪೇಕ್ಷೆಯಂತೆ ರಾ। ಕಣ್ಣಪ್ಪನವರು ಸಭಾಧ್ಯಕ್ಷತೆಯನ್ನು ವಹಿಸಿದ ಬಳಿಕ ತನ್ನನ್ನು ಗೌರವಿಸಿದ ಬಗ್ಗೆ ಸಭಿಕರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಲ್ಲದೆ ಹಣಕಾಸಿನ ಮುಗ್ಗಟ್ಟಿನ ಈಗಿನಂಥ ಕಾಲದಲ್ಲಾದರೂ ಒಗ್ಗಟ್ಟಿನಿಂದ ಇಂತಹ ಭವ್ಯಕಟ್ಟಡವನ್ನು ಉಪಕರಣಗಳೊಂದಿಗೆ ಪೂರೈಸಿಗೊಳಿಸಿ ಆ ಮೂಲಕ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಿದ್ದು ಅಭಿನಂದನೀಯವೆಂದೂ, ಇಂತಹ ವ್ಯವಸ್ಥೆಗಳಿಗೆ ತನ್ನಿಂದಾಗುವ ಉತ್ತೇಜನ ಕೊಡಲು ತಾನು ಸದಾ ತತ್ಪರನಿರುವೆನೆಂತಲೂ ಹೇಳಿದರು. ನಂತರ ಮಕ್ಕಳಿಗೂ ಇತರರಿಗೂ ತಿಂಡಿಪಾನಕಗಳೂ, ಬಡಬಗ್ಗರಿಗೆ ಮೃಷ್ಟಾನ್ನ ಭೋಜನವೂ ಮಾಡಿಸಿದ ನಂತರ ರಾಷ್ಟ್ರಗೀತದೊಂದಿಗೆ ಶಾಲಾ ಪ್ರವೇಶಸಮಾರಂಭವನ್ನು ಕೊನೆಗೊಳಿಸಲಾಯಿತು. ಈ ಸಂದರ್ಭದಲ್ಲಿ ಇಲ್ಲಿಯ ಯುವಕ ಸಂಘದವರು "ಭಕ್ತ ತುಕಾರಾಮ" ಎಂಬ ನಾಟಕವನ್ನಾಡಿ ತೋರಿಸಿದರು. ಸಮಾರಂಭಕ್ಕೆ ಆಮಂತ್ರಿತರಾಗಿ ಬಂದಿದ್ದ ಶ್ರೀ ಶಂಕರನಾರಾಯಣ ಹೊಳ್ಳರು ತಮ್ಮ ಕಾಲೋಚಿತವೂ ಆಬಾಲವೃದ್ಧರಿಗೂ ಸಂತೋಷಕರವೂ ಆದ ಅಭಿನಯದಿಂದ ಆದೀ ನಾಟಕಕ್ಕೆ ಕಳೆಯೇರಿಸಿದರು.

ಉಡುಪಿ— ಬರುವ ಜನವರಿಯಲ್ಲಿ ಶ್ರೀ ಪೇಜಾವರ ಮಠದ ಸ್ವಾಮಿಯವರು ಶ್ರೀ ಕೃಷ್ಣಪೂಜೆಯ ಪರ್ಯಾಯವನ್ನು ವಹಿಸುವರಿರುತ್ತಾ, ತತ್ಸಂಬಂಧವಾದ ಕಟ್ಟಿಗೆರಥದ ಮುಹೂರ್ತವು ಇದೇ ತಾರೀಕು ೧೯ರಲ್ಲಿ ಸಂಭ್ರಮದಿಂದ ನೆರವೇರಿತು.

ಸ್ಥಳೀಯ ಶ್ರೀ ಕೃಷ್ಣಪ್ರಸಾದ ಕರ್ನಾಟಕ ನಾಟಕ ಸಭೆಯವರ ಕಳೆದ ವಾರದಿಂದ ಇಲ್ಲಿ ಮೊಕ್ಕಾಂ ಮಾಡಿದ್ದು ತಾ ೧೯ರಿಂದ ತಮ್ಮ ದೇಖಾವೆಗಳನ್ನು ಪ್ರದರ್ಶಿಸುತ್ತಲಿದ್ದಾರೆ. ಜನಧನ ಪ್ರೋತ್ಸಾಹವೂ ತಕ್ಕಮಟ್ಟಿಗಿದೆ. ನಾಟಕಗಳೂ ಯೋಗ್ಯವಿದೆ. ಬಹಳಮಟ್ಟಿಗೆ ೩ ದಿನ ಪೌರಾಣಿಕ ಕಥೆಗಳೇ ಹೆಚ್ಚು.

[illegible] ಬರುವ ಸಮಯಕ್ಕೆ ಮುನಿಸಿಪಾಲಿಟಿಯು ಬೇಡವೆಂದು ಮನೆಗಳನ್ನು ಸರಕಾರಕ್ಕೆ ಕಳುಹಿಸಿಕೊಟ್ಟಿದ್ದಲ್ಲದೆ [illegible] ಹಳೆ ಊರಿನವರ [illegible] ಗಳನ್ನೂ ಆಹವಾಲಿಗಳನ್ನೂ [illegible] ಮಾನ್ಯ ಪ್ರಧಾನ ಮಂತ್ರಿಗಳ ಭೆಟ್ಟಿ [illegible] ಅಪೇಕ್ಷಿಸಿ ಪತ್ರವ್ಯವಹಾರ ನಡೆದಿದೆ. [illegible] ದಿನಾಲು ಹಾರೈಸುತ್ತಲಿದ್ದಾರೆ. [illegible] ಬರುವ ಜುಲಾಯಿ [illegible] ಇಲ್ಲಿ ಇದನ್ನು ಭೆಟ್ಟಿಯಾಗ ಪಡಿ ಸಮ್ಮತಿ ದೊರೆತರೆ ಬಹು ಅನುಕೂಲವಾಗುತ್ತಿತ್ತು.

ವಿಟ್ಲ— [illegible] ೬ ೩೫ನೇ ದಿನ ಅಪರಾಹ್ನ ಘಂಟೆ ೪ಕ್ಕೆ ಎಲ್ಲಿ [illegible] ಹಾಲ್ [illegible] ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ [illegible] ರಾಜಾ ಲಕ್ಷ್ಮಿನಾಥ ಸ್ವಾಮಿಜಿ [illegible] ಸಂಗಳಿಗೆ [illegible] ಸರ್ಟಿಫಿಕೇಟ್ ಬಿರುದನ್ನು ಇಂಡಿಯಾ ಸಾರ್ವಭೌಮ [illegible] ದಯಪಾಲಿಸಿದ ಸಂತೋಷದ ಸ್ಮರಣಾರ್ಥವಾಗಿ ರಾ। ದಿವಾನ್ ಕೇಶವಭಟ್ಟ ಮತ್ತು [illegible] ಕಂಟ್ರಾಕ್ಟರ್ ಇಂತಪ್ಪವರ [illegible] ಟೀಪಾರ್ಟಿ ಸತ್ಕಾರವು ನಡೆಯಿತು. ಈ ಸಮಯ ಅಧ್ಯಕ್ಷ ಸ್ಥಾನದಿಂದ ಡಿಸ್ಟ್ರಿಕ್ಟ ಕಲೆಕ್ಟರ್ ಮುನ್ಸಿಫ್ [illegible] ದೊಡ್ಡ ಅಧಿಕಾರಿಗಳೂ ಎಲ್ಲಾ ವರ್ಗದ ಊರಿನ ಎಲ್ಲಾ [illegible] ಖಾಸಗಿ ಗೃಹಸ್ಥರೂ ದಯಮಾಡಿಸಿದ್ದರು. ರಾಜ [illegible] ರವರ ಜೀವಮಾನದಲ್ಲಿ ಈ ವರೆಗೆ ಅವರು ಮಾಡಿದ ಸಾರ್ವಜನಿಕ [illegible] ಉಪಕಾರವನ್ನು ಸಭಿಕರು ಸ್ಮರಣೆಗೆ ತಂದ ಬಳಿಕ ರಾವ್ ಸಾಹೇಬರವರು ತಾವು ಈ ವರೆಗೆ ಮಾಡಿದ ಸಾರ್ವಜನಿಕ ಕೆಲಸವು ಅತೀ ಕಡಿಮೆಯೆಂತಲೂ ಇನ್ನೂ ಹೆಚ್ಚು ಮಾಡಲಿಕ್ಕಿದೆ ಎಂದೂ ಹೇಳಿದರು.

ಬಂಟ್ವಾಳ— ಮಂಗಳೂರು ಡಿವಿಜನಲ್ ಆಫೀಸರರು ಇಲ್ಲಿಗೆ ಬಂದು ಕ್ವೆಟ್ಟಾ ರಿಲೀಫ್ ಫಂಡಿಗಾಗಿ ಒಂದು ಕಮಿಟಿಯನ್ನು ನೇಮಿಸಿದರು.

ಇಲ್ಲಿಯ ಅಯ್ಯನಾಯ್ಕರ ಓಣಿಯ ಚರಂಡಿಗಳ ಕೆಸರು ತೆಗೆಯದೆ ಮಾರ್ಗದ ಮೇಲಿನಿಂದ ಕೊಳಚೆನೀರು ಹರಿದು ಹೋಗಿ ಹ್ಯಾಸ್ಕೂಲಿಗೆ ಹೋಗುವ ಮಕ್ಕಳಿಗೆ ಬಹಳ ಬೇಸರವುಂಟಾಗಿದೆ. ತೆಗೆಸಲಿಕ್ಕೆ ಬೋರ್ಡಿನಲ್ಲಿ ದುಡ್ಡಿಲ್ಲವೇ?

ಇಲ್ಲಿಯ ಬೋರ್ಡು ಹುಡುಗಿಯರ ಶಾಲೆಯಲ್ಲಿ ೭ನೇ ದರ್ಜೆ ತೆರೆಯಬೇಕೆಂದು ಊರಿನವರು ಎಷ್ಟು ವರ್ಷಗಳಿಂದ ಮನವಿಮಾಡಿದರೂ ಡಿಸ್ಟ್ರಿಕ್ಟ ಬೋರ್ಡಿಗೆ ಇದರ ಗೊಡವೆಯೇ ಇಲ್ಲ. ಇತರ ಕಡೆಗಳ ಜನರು ಕೇಳಿದರೆ ಶೀಘ್ರದಲ್ಲೇ ಕಾರ್ಯಾರಂಭವಾಗುತ್ತದೆ.

ಇಲ್ಲಿಯ ಕೆಲವು ಕಂಟ್ರಾಕ್ಟದಾರರು ಬೋರ್ಡಿನ ಕೆಲಸ ಮಾಡಿಸಿ ಒಂದು ವರುಷವಾದರೂ, ಅವರಿಗೆ ಹಣ ಈ ವರೆಗೆ ಸಿಗಲೇ ಇಲ್ಲ. [illegible] ಬಾರ್ಡು ಖಾಲಿಯಂತೆ.

ಮಂಗಳೂರು.

"ಸದ್ಯದಲ್ಲಿಯೇ ಡಿಸ್ಟ್ರಿಕ್ಟ್ ಬೋರ್ಡಿನ ನಡೆಯಲಿರುವ ಈ ಚುನಾವಣೆಯಲ್ಲಿ ಕಾಂಗ್ರೆಸ್ಸಿನವರು ಭಾಗವಹಿಸಬೇಕೆಂದು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ನಿರ್ಣಯಿಸಿ ಆ ಸಂಬಂಧವಾದ ಕೆಲಸವನ್ನು ನಡೆಸುವರೆ ಒಂದು ಕಮಿಟಿಯನ್ನೇರ್ಪಡಿಸಿರುವರು. ಈ ಕಮಿಟಿಗೆ ಜಿಲ್ಲೆಯ ಮುಖಂಡರನ್ನು ಸೇರಿಸಿ ಚುನಾವಣೆಯ ವಿಷಯದಲ್ಲಿ ಯಾವ್ಯಾವ ಕೆಲಸ ಮಾಡಬೇಕೆಂಬುದನ್ನೆಲ್ಲಾ ನಿಶ್ಚಯಿಸುವರೆ ಇಡೀ ಜಿಲ್ಲೆಯ ಪರವಾದ ಸಭೆಯೊಂದು ಇದೇ ಜುಲಾಯಿ ತಾ ೭ನೇ ಆದಿತ್ಯವಾರ ಸಂಜೆ ಘಂಟೆ ೪—೩೦ಕ್ಕೆ ಜಿಲ್ಲಾ ಕಾಂಗ್ರೆಸ್ ಆಫೀಸಿನಲ್ಲಿ ನಡೆಯಲಿರುವುದು. ಆದುದರಿಂದ ಕಾಂಗ್ರೆಸ್ಸಿನ ಪರವಾಗಿ ಡಿಸ್ಟ್ರಿಕ್ಟ್ ಬೋರ್ಡಿನ ಚುನಾವಣೆಗೆ ನಿಲ್ಲಲಪೇಕ್ಷಿಸುವವರೂ ಆ ಕುರಿತು ಸಹಾನುಭೂತಿಯುಳ್ಳವರೂ ಸದ್ರಿ ಸಭೆಗೆ ದಯಮಾಡಿಬಂದು ಪ್ರೋತ್ಸಾಹಿಸಬೇಕಾಗಿ ಅಪೇಕ್ಷಿಸುತ್ತೇನೆ" ಎಂದು ದಿ ದೇಶಪ್ರಭು ಕಮಿಟಿಯ ಕಾರ್ಯದರ್ಶಿ ಇವರು ತಿಳಿಸುತ್ತಾರೆ.

ಸಾಹುಕಾರ ಗಣೇಶ ಶ್ರೀನಿವಾಸ ಪೈಗಳ ಬೋರ್ಡಿನವ [illegible] ಹತ್ತಲ್ಲಿರುವ ಶ್ರೀ। ಡಾ। ಎಂ ಎನ್ ಪೈ ಇವರ ಡಿಸ್ಪೆನ್ಸರಿಯಲ್ಲಿ ೧೯೩೫ನೇ ಮಾರ್ಚ ಎಪ್ರಿಲ ಮೇ ಈ ಮೂರು ತಿಂಗಳುಗಳಲ್ಲಿ ಒಟ್ಟು ೬೦೬೩ ಜನರು ಧರ್ಮಾರ್ಥವಾಗಿ ಚಿಕಿತ್ಸೆಹೊಂದಿರುವರೆಂದು ತಿಳಿದುಬರುತ್ತದೆ. ಈ ಡಿಸ್ಪೆನ್ಸರಿಯ ಪೂರ್ಣ ಸದುಪಯೋಗವನ್ನು ಎಲ್ಲರೂ ಮಾಡಿಕೊಳ್ಳಲೆಂದು ಹಾರೈಕೆ.

ಮಂಗಳೂರು ಸಿಲ್ವರ್ ಜುಬಿಲಿ ಕಮಿಟಿಯವರು ಕ್ವೆಟ್ಟಾ ಸಂತ್ರಸ್ತರ ಫಂಡಿಗೆ ರೂ ೬೮೫—೧೦—೮ನ್ನು ರವಾನಿಸಿರುವರೆಂದು ತಿಳಿದುಬರುತ್ತದೆ.

ಕೆಲವು ಪೋಕರಿಗಳ ರಾತ್ರಿಕಾಲದಲ್ಲಿ ಗಡದ ಕೆಲವು ಕಂಡುಗಳಲ್ಲಿ ನಿಂತು ಪೋಲೀಸರು ಇಲ್ಲದ ಸಮಯವನ್ನು ಸಾಧಿಸಿ ಹಣಸುಲಿಗೆಮಾಡುತ್ತಿರುವುದನ್ನು ಎಲ್ಲಿಸ ವುದಕ್ಕಾಗಿಯೂ ಅಂತಹ ಘಟನೆಗಳು ಮುಂದೆ ನಡೆಯದಂತೆಯೂ ನಮ್ಮ ಜನಪ್ರಿಯ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟು ದೊರೆಗಳವರು ರಾತ್ರಿ ಕಾಲದಲ್ಲಿ ಬಸವನಗುಡಿ ಸೂಟರ್ ಪೇಟೆ ಕಂಕನಾಡಿ ಮೊದಲಾದ ಕಡೆಗಳಲ್ಲಿ ಸ್ಪೆಶಲ್ ಬೀಟನ್ನು ಏರ್ಪಡಿಸಿರುವುದಾಗಿ ತಿಳಿದುಬರುತ್ತದೆ.

ಎಚ್ಚರಿಕೆ!

ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ಶ್ರೀ ಎಂ ಗೋಪಾಲರಾವ್ ಅವರ ಪಠ್ಯಪುಸ್ತಕಗಳ ಮಾರಾಟವನ್ನು ನಾವು ನಿಲ್ಲಿಸಿರುವೆವೆಂದು ಕೆಲವು ಪ್ರಕಾಶಕರು ಸುಳ್ಳೇ ನಮ್ಮ ಗಿರಾಕಿಗಳನ್ನು, ಜಿಲ್ಲೆಯ ಕೆಲವು ಕಡೆಗಳಲ್ಲಿ ನಂಬಿಸುತ್ತಿರುವರಾಗಿ ನಮಗೆ ತಿಳಿದುಬಂದಿದೆ. ಆದುದರಿಂದ ನಾವು ನಮ್ಮ ಎಲ್ಲಾ ಗಿರಾಕಿಗಳಿಗೆ ತಿಳಿಸುವುದೇನೆಂದರೆ ಆ ಗಳರ ಪಠ್ಯಪುಸ್ತಕಗಳು ಪರಿಷ್ಕರಿಸಲ್ಪಟ್ಟಿದ್ದು ಶಾಲಾ ಮಕ್ಕಳಿಗೆ ಯೋಗ್ಯವಾಗುವಂತೆಯೇ ಬರೆಯಲ್ಪಟ್ಟಿವೆ. ಆವರ ಪುಸ್ತಕಗಳ ಪ್ರಶಸ್ತಿಗೆ ಅವರ ಇಪ್ಪತ್ತು ವರ್ಷಗಳ ಅನುಭವವೇ ಸಾಕ್ಷಿ. ನಮ್ಮ ಗಿರಾಕಿಗಳು ಮೋಸಹೋಗದೆ ನಮ್ಮನ್ನು ಮುಂಚಿನಂತೆಯೇ ಪ್ರೋತ್ಸಾಹಿಸಬೇಕಾಗಿ ಈ ಮೂಲಕ ಕೇಳಿಕೊಳ್ಳಲಾಗಿದೆ.

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ಪಡುಬಿದ್ರಿ— ತಾ ೨೫—೬—೩೫ನೇ ಸೋಮವಾರ ಅಪರಾಹ್ನ ಘಂಟೆ ೩ಕ್ಕೆ ಸ್ಥಳೀಯ ಲೋವರ್ ಎ. ಶಾಲೆಯಲ್ಲಿ ಜರಗಿದ ನಡ್ಸಾಲ್, ಪಾದೆಬೆಟ್ಟು ಗ್ರಾಮಗಳ ಪಂಚಾಯತಿ ಬೋರ್ಡ್ ಸದಸ್ಯರ ವಿಶೇಷಸಭೆಯಲ್ಲಿ ಸುಪ್ರಸಿದ್ಧ ಜಮೀನುದಾರರೂ, ಸಾಹುಕಾರರೂ ಆದ ಮ। ರಾ। ರಾ। ಕಟ್ಟಾಡಿಹಾರ್ ಸುಬ್ಬಣ್ಣ ಶ್ಯಾನುಭಾಗರವರು ಪಂಚಾಯತಿ ಬೋರ್ಡ್ ಅಧ್ಯಕ್ಷರಾಗಿಯೂ, ಪಾದೆಬೆಟ್ಟು ನಡಿಗುತ್ತಿನ ಜಮೀನುದಾರ್ ರಾ। ಮುದ್ದಣ್ಣ ಶೆಟ್ರುವರು ಉಪಾಧ್ಯಕ್ಷರಾಗಿಯೂ ಸರ್ವಾನುಮತದಿಂದ ಚುನಾಯಿತರಾದರು.

ದಕ್ಷಿಣ ಕನ್ನಡ ಬೋರ್ಡುಸ್ಕೂಲ್ ಉಪಾಧ್ಯಾಯರಿಗೆ ಸೂಚನೆ

ಲೋವರ್ ಗ್ರೇಡಿನಿಂದ ಹಾಯರ್ ಗ್ರೇಡಿಗೆ ಹೋದ ಬೋರ್ಡ್ ಸ್ಕೂಲ್ ಉಪಾಧ್ಯಾಯರಿಗೆ ಸ್ಕೇಲು ಪ್ರಕಾರ ಬರುವ ಮೊದಲೇ ೨೦ ರೂಪಾಯಿ ಹೆಚ್ಚು ಸಂಬಳವಿದ್ದರೆ ಆ ಹೆಚ್ಚಿನ ಸಂಬಳವನ್ನು ಎಡ್ವಾನ್ಸ್ ಇಂಕ್ರಿಮೆಂಟು ಎಂದು ಮಾಡಿ ಆದನ್ನು ಪರ್ಸನಲ್ ಎಲೋವೆನ್ಸನ್ನಾಗಿ ಬೋರ್ಡಿನವರು ಕೊಡುವರು. ಸದರಿ ಪರ್ಸನಲ್ ಎಲೋವೆನ್ಸ್ ಮುಂದಿನ ಇಂಕ್ರಿಮೆಂಟಿನಲ್ಲಿ ವಜಾ ಆಗುತ್ತಾ ಬರುವುದು. ಈ ಕ್ರಮದಿಂದ ಅಂಥಾ ಉಪಾಧ್ಯಾಯರಿಗೆ ಪರ್ಸನಲ್ ಎಲೋವೆನ್ಸ್ ಇಂಕ್ರಿಮೆಂಟಿನಲ್ಲಿ ವಜಾ ಆಗುವ ೫೦ ವರುಷಗಳ ವರೆಗೆ ರ್ಯಾವ ತರದ ಉಪಯೋಗವಿಲ್ಲದೆ ಮೊದಲು ಪಡೆಯುತ್ತಿದ್ದಷ್ಟೆ ಸಂಬಳವನ್ನು ಪಡೆಯಬೇಕಾಗುವುದು. ಆದುದರಿಂದ ಅವರು ಮೊದಲು ಪಡೆಯುತ್ತಿದ್ದ ಸಂಬಳದಿಂದಲೇ ಇಂಕ್ರಿಮೆಂಟು ಕೊಡಿಸುವ ಹಾಗೆ ಸಂಬಂಧಪಟ್ಟ ಉಪಾಧ್ಯಾಯರು ಬೋರ್ಡಿಗೆ ಪ್ರತ್ಯಪ್ರತ್ಯೇಕವಾಗಿ ಮನವಿ ಮಾಡಿಕೊಳ್ಳಬೇಕು.

ವಿ ಬಾಬುಶೆಟ್ಟಿ,
ಉಪಾಧ್ಯಾಯರ ಸಂಘದ ಕಾರ್ಯದರ್ಶಿ

ದಿ ಕೆನರಾ ಸ್ಟೂಡೆಂಟ್ಸ್ ಯೂನಿಯನ್, ಮುಂಬಾಯಿ

ಈ ಯೂನಿಯನ್ನಿನ ಪ್ರಥಮ ವಾರ್ಷಿಕ ಸಭೆಯು ಕಳೆದ ತಾ [illegible] ರಲ್ಲಿ ಶ್ರೀಯುತ ಕೆ ಎಸ್ ಶೆಟ್ಟಿ ಬಿ. ಎ ಇವರ ಅಧ್ಯಕ್ಷತೆಯಲ್ಲಿ ಕೋಟೆಯೊಳಗಿನ ಕಾವಸ್ಜೀ ಪಟೇಲ್ ಟ್ಯಾಂಕಿನಲ್ಲಿರುವ ಮ್ಯುನ್ಸಿಪಲ್ ಕನ್ನಡ ಶಾಲೆಯ ಮಹಾಡದಲ್ಲಿ ಬಹು ಸಂಭ್ರಮದಿಂದ ಜರಗಿತು. [illegible] ಕನ್ನಡಿಗರನೇಕರು [illegible] ಸಮಯಕ್ಕೆ ಸರಿಯಾಗಿಯೇ ಬಂದು ನೆರೆದಿದ್ದರು.

ವರದಿಯು ಓದಲ್ಪಟ್ಟ ತರುವಾಯ ಶ್ರೀಯುತರುಗಳಾದ ಪಿ ಎಸ್ ಬಂಗೇರ್ [illegible] ಎಸ್ ಉಳಿಯಾರ್ ಗೋಳಿ, ಎಮ್ ನಾರಾಯಣ್ ಕೆ ಎಸ್ [illegible] [illegible] ಹಿಟ್ಲರ್‌ಕಾರ್ ಮತ್ತು ಶ್ರೀಯುತ [illegible] ಇವರು ಯೂನಿಯನನ್ನು [illegible] ತಮ್ಮ ಅರ್ಥಗರ್ಭಿತ ಭಾಷಣಗಳಿಂದ ಸಭಿಕರ ಮನರಂಜನಗೊಳಿಸಿದರು.

ಅಧ್ಯಕ್ಷರ [illegible] ಅವಶ್ಯಕತೆಯನ್ನು ವಿವರಿಸಿ ಕೆಲವು ಹಿತಸೂಚನೆಗಳನ್ನು ಕೊಟ್ಟ ಬಳಿಕ ಸಭೆಯು [illegible] ನೆರೆದಿದ್ದ ಸಭಿಕರನ್ನು ಫಲಾಹಾರ [illegible] ಸತ್ಕರಿಸಲಾಯಿತು.

ಫುಟ್‌ಬೋಲ್ [illegible] ಬಂದ [illegible] ಗಳಲ್ಲಿ ಜೆಟ್ಟನ [illegible] ಕೋರಸುತ್ತಲ್ಲಿ [illegible] ಫುಟ್‌ಬೋಲ್ [illegible] ರಾದ ಶ್ರೀ [illegible] ಪಿಟಿಡಿತರಾಗಿ ಇದೇ [illegible] ಗೀಡಾದ [illegible] ವ್ಯಕ್ತ ಅತ್ಯಕ್ಕೆ [illegible] ಎಲ್ಲಾ ಸದಸ್ಯ ಪ್ರಾರ್ಥನೆ.

ಮೊಗವೀರ ಧರ್ಮಾರ್ಥ ವಾಚನಾಲಯ ಮತ್ತು ಗ್ರಂಥಾಲಯ, ಮುಂಬಾಯಿ

ಕೇವಲ ಮೊಗವೀರ ಜನಾಂಗದವರ ಒಗ್ಗಟ್ಟಿನಿಂದ ಮೊಗವೀರ ವ್ಯವಸ್ಥಾಪಕ ಮಂಡಳಿಯವರಿಂದ ಸ್ಥಾಪಿಸಲ್ಪಟ್ಟ ಈ ವಾಚನಾಲಯವು ಮತ್ತು ಗ್ರಂಥಾಲಯವು ಈಗ ಎಲ್ಲಾ ದಕ್ಷಿಣ ಕನ್ನಡಿಗರಿಗಾಗಿಯೂ ತೆರೆಯಲ್ಪಟ್ಟಿದೆ. ಗ್ರಂಥಾಲಯವು ೫೧ ಪೀಸ್ ಸ್ಟ್ರೀಟ್, ಫೋರ್ಟ್ ಇಲ್ಲಿದೆ. ಅನೇಕ ಬಗೆಯ ಇಂಗ್ಲೀಷ್ ಮತ್ತು ಕನ್ನಡ ಭಾಷೆಗಳಲ್ಲಿ ಉತ್ತಮ ಗ್ರಂಥಗಳಿವೆ. ದಕ್ಷಿಣ ಕನ್ನಡಿಗರಿಗೆ ಇಂಗ್ಲಿಷ್ ಯಾ ಕನ್ನಡ ದೈನಿಕ ಮತ್ತು ವಾರಪತ್ರಿಕೆ ಯಾ ಮಾಸಪತ್ರಿಕೆಗಳನ್ನೊದಗಿಸಿ ಕೊಡುವುದೇ ಉತ್ತಮ ವ್ಯವಸ್ಥೆ ಇದೆ. ಮುಂಬಾಯಿಯಲ್ಲಿರುವ ದಕ್ಷಿಣ ಕನ್ನಡಿಗರು ಇದರ ಸದುಪಯೋಗವಮಾಡಿಕೊಳ್ಳಬೇಕೆಂದು ಅಪೇಕ್ಷಿಸಲಾಗಿದೆ. ವಾಚನಾಲಯ ಮತ್ತು ಗ್ರಂಥಾಲಯವು ಬೆಳಗ್ಗೆ ಘಂಟೆ ೭ರಿಂದ ೧೧ ತನಕವೂ, ಸಂಜೆ ೬ರಿಂದ ೯ ತನಕವೂ, ರವಿವಾರ ಮತ್ತು ಇತರ ರಜಾ ದಿನಗಳಲ್ಲಿ ಬೆಳಗ್ಗೆ ೭ರಿಂದ ೧೧ ತನಕವೂ ತೆರೆದಿರಲ್ಪಡುತ್ತದೆಂದು ಗೌರವ ಕಾರ್ಯದರ್ಶಿಯವರಾದ ಬಿ. ದಂಬು

ಈ ವಾರದ ತಂತಿ ವಾರ್ತೆಗಳು:

ಇಟೆಲಿಯು ಲೀಗ್ ಆಫ್ ನೇಶನ್ಸನ್ನು ಬಿಡುವುದೇ?

ರೋಮ್, ಜೂನ್, ೨೨

ಇಟೆಲಿಯು ಲೀಗ್ ಆಫ್ ನೇಶನ್ಸನ್ನು ಬಿಡಬೇಕಾಗಿ ಬರಬಹುದು. ಇಟೆಲಿಯು ತನ್ನ ವಸಾಹತುಗಳಲ್ಲಿ ನಡೆಸುತ್ತಿರುವ ನೀತಿಯನ್ನು ಬದಲಾಯಿಸಬೇಕೆಂದು ಲೀಗ್ ಆಫ್ ನೇಶನ್ಸು ಒತ್ತಾಯಪಡಿಸಿದ್ದೇ ಆದರೆ ಆಗ ಇಟೆಲಿಯು ದೂರ ನಿಲ್ಲಲು ಹಿಂಜರಿಯಲಾರದು. ಆಗೋಸ್ತು ೩ನೇ ತಾರೀಕಿನಲ್ಲಿ ಇಟಲಿ ಅಬಿಸೀನಿಯ ಪ್ರಶ್ನೆಯ ಬಗ್ಗೆ ಲೀಗ್ ಸಭೆಯು ಒಂದು ಕೂಟವನ್ನು ಕರೆಯುವುದೆಂಬ ಊಹೆಯಿದೆ. ಜನಾಂಗಸಭೆಯ ಕೂಟವು ಜರಗಿದರೆ ಅದರಲ್ಲಿ ಇಟೆಲಿಯ ಪ್ರತಿನಿಧಿಯು ಹಾಜರಿರುವುದಿಲ್ಲ. ಇಟೆಲಿಯೇನಾದರೂ ಲೀಗ್ ಸಭೆಯನ್ನು ಬಿಡುವುದೇ ಆದರೆ ಆಗ ಅದರಿಂದ ಲೀಗ್ ಸಭೆಗೆ ಬಹಳ ಮಟ್ಟಿನ ತೊಂದರೆಯುಂಟಾಗುವುದರಲ್ಲಿ ಸಂದೇಹವಿಲ್ಲ.

ಪೇಷಾವರದಲ್ಲಿ ಭೀಷಣ ಬೆಂಕಿಯೆದ್ದಿತು!

ನಕಿಯಾಗಲ್ಲಿ ಜೂನ್, ೨೩

ಪೇಷಾವರ್ ನಗರದಲ್ಲಿ ಘೋರ ಬೆಂಕಿಯ ಅನಾಹುತವುಂಟಾಯಿತು. ಬೆಂಕಿಯು ಮೊನ್ನೆ ಮಧ್ಯಾಹ್ನ ೩ ಗಂಟೆಗೆ ಪ್ರಾರಂಭವಾಗಿ ಊರನ್ನೆಲ್ಲಾ ಹಬ್ಬಿತು. ರಾತ್ರಿಯೆಲ್ಲಾ ಸೈನ್ಯಗಳ ಸಹಾಯದಿಂದ ಬೆಂಕಿಯು ಆರಿಸಲ್ಪಟ್ಟಿತು.

ಸರಹದ್ದು ಪ್ರಾಂತ್ಯದ ಗವರ್ನರರೂ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ಲರಾದ ಎಚ್. ಬಿ. ಹೋಲಂವರೂ ಶುಕ್ರವಾರ ರಾತ್ರಿ ಪೇಶಾವರಕ್ಕೆ ಹೋದರು. ನಿನ್ನೆ ರಾತ್ರಿ ನಕಿಯಾಗಲ್ಲಿಗೆ ಹಿಂತಿರುಗಿದರು. ಪೇಶಾವರಿನಲ್ಲಿ ಉಂಟಾದ ಬಾರಿ ಬೆಂಕಿಯ ಅನಾಹುತದಿಂದ ೧೦೦೦ ಮನೆಗಳು ನಾಶವಾಗಿವೆಯೆಂದು ಅವರು ಹೇಳಿದರು. ಮರ ಮಟ್ಟುಗಳ ವ್ಯಾಪಾರದ ಮಾರ್ಕೆಟಿನಲ್ಲಿ ಪ್ರಾರಂಭವಾದ ಬೆಂಕಿಯು ಗಾಳಿಯ ಸಹಾಯದಿಂದ ಅತ್ತ ಪಕ್ಕವನ್ನೆಲ್ಲಾ ಆವರಿಸಿತು. ಫಯರ್ ಬ್ರಿಗೇಡಿನವರಿಗೆ ಸ್ಯಾಪರ್ ಮತ್ತು ಮೈನರುಗಳು ಬಹಳ ಸಹಾಯ ಮಾಡಿದರು. ಬೆಂಕಿಯು ಮುಂದರಿಯದಂತೆ ಮಾಡಲು ಸೈನಿಕರು ಮನೆಗಳನ್ನು ಕೆಡಹಬೇಕಾಯಿತು. ಎಲ್ಲಾ ಚರಸೊತ್ತನ್ನೂ ನಾಶವಾಗಿದೆ. ಪ್ರಾಣಾಪಾಯವೇನೂ ಸಂಭವಿಸಲಿಲ್ಲ. ಈ ಬೆಂಕಿಯು ಯಾವರೀತಿ ಹುಟ್ಟಿ ಹರಡಿಕೊಂಡುದನ್ನು ತನಿಖೆಮಾಡಲು ಸರ್ ಸಾಹಿಬ್ ಜಾದಾ ಅಬ್ದುಲ್ ಖೈಯಂಖಾನ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನೇರ್ಪಡಿಸಲಾಗಿದೆ.

ಅಂತರ್‍ರಾಷ್ಟ್ರೀಯ ಕೋರ್ಟಿಗೆ ಸರ್ ತೇಜ ಬಹದ್ದೂರ್ ಸಪ್ರೂರವರು.

ಜಿನೇವಾ ಜೂನ್, ೨೩

ಹೇಗ್‌ನಲ್ಲಿರುವ ಅಂತರ್‍ರಾಷ್ಟ್ರೀಯ ನ್ಯಾಯಸ್ಥಾನಕ್ಕೆ ಸರ್ ತೇಜಬಹದ್ದೂರ್ ಸಪ್ರೂರವರನ್ನು ಚುನಾಯಿಸಿರುವರು. ಅದಕ್ಕೆ ಸರ್ ಸಪ್ರೂರವರು ತಮ್ಮ ಒಪ್ಪಿಗೆಯನ್ನಿತ್ತಿರುತ್ತಾರೆ. ಜಪಾನೀ ಪ್ರತಿನಿಧಿಯಾದ ಅಡಾಚಿಯವರು ಮರಣ ಹೊಂದಿದುದರಿಂದ ಈ ಸ್ಥಾನವು ಖಾಲಿಬಿದ್ದಿತು. ಆ ಸ್ಥಾನಕ್ಕೆ ಸರ್ ಸಪ್ರೂರವರನ್ನು ನೇಮಿಸಲಾಯಿತು. ಸರ್ ಸಪ್ರೂರವರು ಜಿನೇವಾದಲ್ಲಿ ಒಂದೆರಡು ದಿನಗಳವರೆಗೆ ಇದ್ದರು. ನೇಪಲ್ಸಿನ ಮಾರ್ಗವಾಗಿ ಮುಂಬಾಯಿಗೆ ಹಿಂದಿರುಗಲಿರುವರು.

ಒಂದು ವಿಶೇಷ ಸಮ್ಮೇಳನ.

ಲಂಡನ್ ಜೂನ್, ೨೪

ಬ್ರಿಟನಿಗೂ ಹಿಂದೂದೇಶಕ್ಕೂ ಪರಸ್ಪರ ವ್ಯಾಪಾರದ ಹಕ್ಕುಗಳು ಹೇಗಿರಬೇಕೆಂದು ನಿರ್ಣಯಿಸಿಕೊಳ್ಳುವುದಕ್ಕಾಗಿ ಒಂದು ರೌಂಡ್‌ಟೇಬಲ್ ಸಮ್ಮೇಳನವು ಸೇರಬೇಕೆಂದು ಹರ್‌ಬರ್ಟ್ ಕಾರ್‌ರವರು ಮಾಡಿರುವ ಸೂಚನೆಯನ್ನು ಫೈನಾನ್ಶಿಯಲ್ ಟೈಮ್ಸ್ ಪತ್ರಿಕೆಯು ಸಮರ್ಥಿಸುತ್ತದೆ. ಬ್ರಿಟ್ನ ಭೂಕಂಪನಿಧಿಗೆ ಉದಾರ ಸಹಾಯ ಮಾಡಬೇಕೆಂದು ಮೋರ್ನಿಂಗ್ ಪೋಸ್ಟ್ ಪತ್ರಿಕೆಯು ಸೂಚಿಸಿದೆ.

ಬೆಕ್ಕು ಇಲಿಗಳನ್ನು ರಕ್ಷಿಸುತ್ತದೆ—ಮೊಸ್ಕೊ ಪ್ರದರ್ಶನಾಲಯದಲ್ಲಿ ವೈಚಿತ್ರ್ಯ.

ಮೊಸ್ಕೊ ಜೂನ್, ೨೨

ಒಂದು ಬೆಕ್ಕು ಇಲಿಗಳನ್ನು ತನ್ನ ಮರಿಗಳಂತೆಯೇ ಸಾಕುತ್ತಿದೆ—ಆ ಬೆಕ್ಕು ಮೊಸ್ಕೋ ಪ್ರಾಣಿಪ್ರದರ್ಶನಾಲಯದಲ್ಲಿ ದ ಬ. ಹೋಕೆಟರಿಗೆ ಕುರುಡು ಇಲಿಯ ಮರಿಗಳು ಸಿಕ್ಕಿದುವು. ಆ ಮರಿಗಳನ್ನು ಒಂದು ಬೆಕ್ಕಿನ ಬಳಿ ಇಟ್ಟು ನೋಡಿದರು. ಈ ಬೆಕ್ಕಿಗೆ ಮೂರು ಮರಿಗಳಿದ್ದುವು. ಬೆಕ್ಕಿಗೆ ಈ ಇಲಿಯ ಮರಿಗಳ ವಾಸನೆಯು ತಿಳಿದು ಬಂದಕೂಡಲೇ ಅದು ಅವುಗಳನ್ನು ಕಚ್ಚಲು ಹಿಡಿತು. ಆದರೆ ಬಳಿಯಲ್ಲಿದ್ದವರು ಮರಿಗಳನ್ನು ರಕ್ಷಿಸಿದರು. ಈ ಇಲಿಯ ಮರಿಗಳನ್ನು ಬೆಕ್ಕಿನ ಮರಿಗಳ ಜೊತೆಯಲ್ಲಿ ಹೀರಿನಲ್ಲಿ ಹಾಕಿ ಚೆನ್ನಾಗಿ ತೊಳೆದು ಶುದ್ಧ ಮಾಡಿ ಪುನಃ ಅವೆಲ್ಲವನ್ನೂ ಒಟ್ಟಿಗೆಹಾಕಿದರು. ಇಲಿಯ ಮರಿಗಳೂ ಬೆಕ್ಕಿನ ಮರಿಗಳೂ ಒಟ್ಟಿಗೆ ಇದ್ದುವು. ಬೆಕ್ಕು ಮರಿಗಳನ್ನು ಆಗ ಮಾತ್ರ ಕಚ್ಚಲಿಲ್ಲ. ಈಗ ಆ ಬೆಕ್ಕು ಇಲಿಯ ಮರಿಗಳನ್ನು ಸಾಕುತ್ತಿದೆ. ಪ್ರಾಣಿಗಳು ಕಣ್ಣಿಗೆ ಕಾಣುವ ವಸ್ತುವಿಗೆ ಪ್ರಾಧಾನ್ಯತೆಯನ್ನೂ ಕೊಡದೆ ವಾಸನೆಯ ಮೇಲೆಯೇ ಎಲ್ಲವನ್ನೂ ಗುರುತಿಸುವುದಾಗಿ ತಿಳಿದು ಬಂದಿದೆ.

ಜಪಾನು ಹೇಳಿದಂತೆ ಕೇಳಲಾರೆವು.

ನ್ಯಾಂಕಿಂಗ್ ಜೂನ್, ೨೧

ಜಪಾನು ಸರಕಾರವು ಹೇಳುತ್ತಿರುವ ಕೇಳಿಕೆಗಳಿಗೆ ಒಪ್ಪಿಗೆಯನ್ನೀಯುವುದಕ್ಕಿಂತ ರಾಜಿನಾಮೆಯನ್ನೀಯುವುದೇ ಶ್ರೇಷ್ಠವೆಂದು ನ್ಯಾಂಕಿಂಗ್ ಸರಕಾರದ ಸದಸ್ಯರನೇಕರು ಹೇಳುತ್ತಿದ್ದಾರೆ. ಜಪಾನೀ ಅಧಿಕಾರಿಗಳಿಗೆ ಒಂದು ಪತ್ರವನ್ನು ಬರೆಯಬೇಕೆಂದೂ, ಅಗಿನವರೆಗೆ ಜಪಾನೀಯರು ಕೇಳಿರುವ ನಿಬಂಧನೆಗಳಿಗೆ ಚೀನಾ ಸರಕಾರವು ಒಪ್ಪಿದೆಯೆಂದು ಆ ಪತ್ರದ ಮೂಲಕ ತಿಳಿಸಬೇಕೆಂದೂ ಅಲ್ಲಲ್ಲಿ ಸಲಹೆಗಳು ಬರುತ್ತಿವೆ. ಆದರೆ ಈ ಸಲಹೆಗಳ ವಿಷಯವಾಗಿ ಸಾರ್ವತ್ರಿಕ ಸಮಾಧಾನವುಂಟಾಗಿಲ್ಲ.

ಅಬಿಸೀನಿಯವು ಕ್ಷಮಾಪಣೆಯನ್ನು ಯೋಚಿಸಿತು.

ರೋಮ್ ಜೂನ್, ೨೨

ಅಡಿಸ್ ಅಬಾಬಾದಿನಲ್ಲಿಯ ಸಿನೇಮದ ಬಳಿ ಇಟಲಿಯ ಧ್ವಜವನ್ನು ಅಬಿಸೀನಿಯ ಸೈನಿಕನೊಬ್ಬನು ಹರಿದು ಅವಮಾನಿಸಿದನೆಂದು ಇಟಲಿಗೆ ವಾರ್ತೆಯು ಹೋಯಿತು. ಇಟಲಿಯು, ಆ ಸೈನಿಕನ ಪರವಾಗಿ ಸರಕಾರವು ಕ್ಷಮೆ ಕೇಳಬೇಕೆಂದಿತು. ಅಬಿಸೀನಿಯವು ಕ್ಷಮೆಯನ್ನು ಕೇಳಿತು.

ಫ್ರಾನ್ಸಿನಲ್ಲಿ ಏಡನ್ ರು. ಇಟಲಿಗೂ ಹೋಗಲಿರುವರು.

ಲಂಡನ್ ಜೂನ್, ೨೩

ನಾಳೆ ಬ್ರಿಟಿಷ್ ಮಂತ್ರಿಮಂಡಳದ ಅಂತೋನಿ ಏಡನ್‌ರವರು ಫ್ರಾನ್ಸಿನ ಮುಖ್ಯ ಮಂತ್ರಿಗಳಾದ ಎಂ. ಲಾವೆಲ್‌ರವರನ್ನು ಭೇಟಿಮಾಡಿ ಯುರೋಪಿನ ಪರಿಸ್ಥಿತಿಯ ಮೇಲೆ ಚರ್ಚಿಸಲಿರುವರು. ಅಲ್ಲದೆ ನೌಕಾಸೈನ್ಯದ ವಿಷಯವನ್ನು ಅವರು ಚರ್ಚಿಸುವರು. ಜರ್ಮನ್ ನೌಕಾ ಒಪ್ಪಂದದ ವಿಷಯವನ್ನು ವಿವರಿಸಿ, ಅದರ ಮೇಲೆ ಫ್ರಾನ್ಸಿನಿಂದ ಹೊರಟ ಟೀಕೆಗಳಿಗೆ ಸರಿಯಾದ ಉತ್ತರವೀಯುವರಲ್ಲದೆ ಲೋಕಾನೋ ವಿಮಾನ ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ಯೋಚಿಸಿರುವ ಪಂಚಿಕೆಯನ್ನು ತಿಳಿಸುವರು. ಎಂ. ಲಾವೆಲ್‌ರವರೊಡನೆ ಚರ್ಚೆ ನಡೆಸಿಕೊಂಡು, ಮಿ। ಏಡನ್‌ರವರು ಇಟಲಿಗೆ ಪ್ರಯಾಣ ಮಾಡಿ ಸಿನಿಯರ್ ಮುಸೊಲಿನಿಯವರೊಡನೆ ಸಂಭಾಷಣೆ ನಡೆಸುವರೆಂದು ತಿಳಿದು ಬಂದಿದೆ.

ನೋಟೀಸು.

ಕುಂದಾಪುರ ಡಿ. ಮುನ್ಸಿಫ್ ಕೋರ್ಟಿನಲ್ಲಿ

I. P. No. 7/1984.

R. I. A. No. 539 & 540/1935.

ಅರ್ಜದಾರ ವೆಂಕಟ್ರಮಣ ಶೆರೆಗಾರ. ಪುಟ್ಟ ಶೇರಿಗಾರನ ಮಗ. ಕುಂದಾಪುರ ಕಸಬಾ ಗ್ರಾಮ.

ಎದ್ರಿರು—

1. ವಕೀಲ ಪಿ. ಮಹಾಬಲರಾವ್, ಶ್ರೀನಿವಾಸರಾಯರ ಮಗ. ಕುಂದಾಪುರ ಕಸಬಾಗ್ರಾಮ.

2. ಕೋಡಿ ಹೋಬಳಿದಾರ ಲಕ್ಷ್ಮಮಣ ಶೆರೆಗಾರ, ಅಣ್ಣಪ್ಪ ಶೆರೆಗಾರನ ಮಗ. ಕುಂದಾಪುರ ಕಸಬಾಗ್ರಾಮದ ಕೋಡಿಯಲ್ಲಿರುವವ.

3. ಕಾರಿ ಯಾನೆ. ವಿಶ್ವೇಶ್ವರ ಹೊಳ್ಳ, ತಮ್ಮಯ್ಯ ಹೊಳ್ಳರ ಮಗ. ಒಡೇರ ಹೋಬಳಿ ಗ್ರಾಮ.

4. ನರಸಿಂಹ ಹತ್ವಾರ, ಹುಣಸೆಕಟ್ಟೆ ನಾಗಪ್ಪ ಹತ್ವಾರರ ಮಗ. ಕುಂದಾಪುರ ತಾಲೂಕು. ಕೋಣಿನಗ್ರಾಮದಲ್ಲಿರುವವ.

ಸದರಿ ಅರ್ಜದಾರನು ಆತನನ್ನು ದಿವಾಳಿದಾರನೆಂತ ಸ್ಥಾಪಿಸಬೇಕೆಂತ ಕೊಟ್ಟ ಮೇಲ್ಕಂಡ I. P. No. 7/1934ನೇ ಅರ್ಜಿಯಲ್ಲಿ ಡಿಸ್‌ಚಾರ್ಜು ಬಗ್ಗೆ ಅರ್ಜದಾರಗೆ ಕೊಟ್ಟ ವಾಯಿದೆಯನ್ನು ವೃದ್ಧಿಪಡಿಸಿಕೊಂಡು ಅರ್ಜದಾರನನ್ನು ಡಿಸ್‌ಚಾರ್ಜು ಮಾಡಬೇಕಾಗಿ ಕೊಟ್ಟ ಮೇಲ್ಕಂಡ ಅರ್ಜಿಗಳು ತಾ. 5—7—1935ಕ್ಕೆ ತನಿಖೆಗೆ ಇಟ್ಟಿದೆ. ಆ ಕುರಿತು ಆಕ್ಷೇಪಯಿದ್ದರೆ ಆ ತಾರೀಕಿನ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ತೀರ್ಮಾನಿಸತಕ್ಕದ್ದು.

ಕುಂದಾಪುರ, 22—6—35.

K. Raghunath Shenai,
ಅರ್ಜದಾರನ ಕಡೆ ವಕೀಲ.

(೯ನೇ ಪುಟದಿಂದ ಮುಂದುವರಿದುದು.)

	ಸಾಲದ ನಂಬ್ರ ಮತ್ತು ಅಡವಿಟ್ಟ ತಾ.	ಸಾಲ ಪಡಕೊಂಡವರ ಹೆಸರು ಮತ್ತು ವಿಳಾಸ.	ಸಾಲದ ಮೊತ್ತ ರೂ.
35	A 1192 12-12-33	ಅಮಾದ್ ಬ್ಯಾರಿ, S/o ಕೆ. ಕಾಟುಬ್ಯಾರಿ, ಕುದ್ರೋಳಿ, ಮಂಗಳೂರು	10/
36	A 1217 22-12-33	ಸೋಮಪ್ಪ ಪೂಜಾರಿ, S/o ಚತ್ರು ಪೂಜಾರಿ, ಹೊಸಬೆಟ್ಟು, ಸುರತಕಲ್	5/
37	A 588 28-3-35	ಗ್ಯಾಸ್‌ಲೈಟ್ ಅಮದ್, S/o ಕೆ. ಮೈದಿನಬ್ಯಾರಿ, ಕುದ್ರೋಳಿ, ಮಂಗಳೂರು	15/
38	1583 29-7-33	ಯಂ. ಸುಂದರ ಶೇಟ್, S/o ಸುಬ್ರಾಯ ಶೇಟ್, ಮಂಗಳೂರು	190/
39	618 14-4-34	ಯಂ. ಸುಂದರ ಶೇಟ್, S/o ಸುಬ್ರಾಯ ಶೇಟ್, ಮಂಗಳೂರು	57/
40	621 15-4-34	ಯಂ. ಸುಂದರ ಶೇಟ್, S/o ಸುಬ್ರಾಯ ಶೇಟ್, ಮಂಗಳೂರು	20/
41	1570 27-10-34	ಯಂ. ಸುಂದರ ಶೇಟ್, S/o ಸುಬ್ರಾಯ ಶೇಟ್, ಮಂಗಳೂರು	55/
42	1571 27-10-34	ಯಂ. ಸುಂದರ ಶೇಟ್, S/o ಸುಬ್ರಾಯ ಶೇಟ್, ಮಂಗಳೂರು	45/
43	1572 27-10-34	ಯಂ. ಸುಂದರ ಶೇಟ್, S/o ಸುಬ್ರಾಯ ಶೇಟ್, ಮಂಗಳೂರು	22/
44	1573 27-10-34	ಯಂ. ಸುಂದರ ಶೇಟ್, S/o ಸುಬ್ರಾಯ ಶೇಟ್, ಮಂಗಳೂರು	20/
45	1574 27-10-34	ಯಂ. ಸುಂದರ ಶೇಟ್, S/o ಸುಬ್ರಾಯ ಶೇಟ್, ಮಂಗಳೂರು	11/
46	1581 27-10-34	ಯಂ. ಸುಂದರ ಶೇಟ್, S/o ಸುಬ್ರಾಯ ಶೇಟ್, ಮಂಗಳೂರು	13/
47	1576 27-10-34	ಯಂ. ರಾಮ ಶೇಟ್, S/o ನಾರಾಯಣ ಶೇಟ್, ಮಂಗಳೂರು	25/
48	1577 27-10-34	ಕೃಷ್ಣ ಶೇಟ್, S/o ನಾರಾಯಣ ಶೇಟ್, ಮಂಗಳೂರು	10/
49	684 26-4-34	ಚಂದ್ರಯಾಚಾರಿ, S/o ಶಂಕರಯ್ಯಾಚಾರಿ, ಮಂಗಳೂರು	40/

ಮಂಗಳೂರು, 24—6—1935.

A. V. Prabhu,
ಪ್ರೊಪ್ರೈಟರ್, ಎ. ವಿ. ಪಿ. ಬೇಂಕ್.

KANNADA SAVINGS CERTIFICATES

Cashed even before maturity

available in denominations of Rs. 10/ and above.

TOTAL YIELD RS 4-6-0% P. A.

Paid once half yearly at 3½% p. a.

with an additional 1¼% p. a. on maturity

If Left To Accumulate

RS. 100/- Will Amount to **RS. 122-13-6**

Full Particulars from:—

CANARA BANK LTD.,

Estd. 1906.

OFFICES AT:

Bombay—Fort, Bombay—Mandvi, Hubli, Calicut, Cochin, Ernakulam, Alleppey, Bangalore, Davangere, Chickmagalur, Mangalore—Bunder, Mangalore—City, Kasaragod, Puttur, Buntwal, Karkala, Udipi, Coondapoor & Gangoli.

Subscribed Capital	Paid up Capital	Reserves	Deposits	Working Capital
6,00,000	3,31,000	4,50,000	58,62,000	73,49,000

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 91/1935.

ಎರ್ತು ಶೆಟ್ಟಿ 2 ಕಲ್ಯಾಣಿ ಮೂವೆ ಲಕ್ಷ್ಮಿ—ಅರ್ಜಿದಾರರು

ತಾ. 21–11–34ರಲ್ಲು ಮೃತಪಟ್ಟ ತಮ್ಮ ಮಗ ನರಶಿಂಹ ಶೆಟ್ಟಿ ಎಂಬವನು ನಂಬ್ರ 35762ನೇ ಪಾಸ್‌ಬುಕ್ ಪ್ರಕಾರ ಕಾಸರಗೋಡು ಪೋಸ್ಟು ಆಫೀಸಿನಲ್ಲಿ ಡಿಪೋಜಿಟು ಮಾಡಿದ ಬಾಬ್ತು ಅಸ್ಲು ಬಡ್ಡಿಯಿಂದ ಬರತಕ್ಕ ರೂಪಾಯಿ 128–1–11ನ್ನು ವಸೂಲು ಪಡೆಯುವರೆ 1ನೇ ಅರ್ಜಿದಾರನ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಸದರಿ ಅರ್ಜಿಯು ತಾ 9–7–35ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆ ಇಟ್ಟಿದೆ ಆ ಕುರಿತು ಆಕ್ಷೇಪ ಇದ್ದವರು ತಮ್ಮ ಆಕ್ಷೇಪಣೆಯನ್ನು ಸದ್ರಿ ತಾರೀಕಿನ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಬಹುದೆಂಬ ಸಂಗತಿ ಈ ಮೂಲಕ ತಿಳಿಸಲಾಗಿಯದೆ.

ಕಾಸರಗೋಡು, 29–5–135. } **C. Rama Rao,** ಅರ್ಜಿದಾರರ ಕಡೆ ವಕೀಲ

Wanted.

2 Canvassers of advertisements on a monthly salary of Rs. 20 for our Weekly

Apply to

The Advertisement Manager,
Swadeshabhimani Mangalore

ಕುಷ್ಠರೋಗ ಮತ್ತು ವಾತರೋಗ

ನೊಂದು ಕಂಗೆಟ್ಟು ಹೋಗಿರುವವರಿಗೆ !

ಮೂಲಿಕೆಯ ಔಷಧಿಗಳಿಂದ ಆಶ್ಚರ್ಯಕರವಾಗಿ ಪೂರ್ಣ ಗುಣವಾಗುತ್ತದೆ ಅದ್ಭುತಕರ ನಿವಾರಣ ಖಂಡಿತ

Veshajalay, Chandanpur
Khulna, Bengal (A W)

ಹಿಂದೀಯರಾದ ನಾವು ಹೇಗೆ ಮೋಸಹೊಂದುವೆವು!

ಓದಿರಿ—ದೀನರಾದ ನಮ್ಮ (ಹಿಂದೀಯರ) ಅಜ್ಞಾನವನ್ನು ವಿದೇಶೀ ಕಾರ್ಖಾನೆದಾರರು ಹೇಗೆ ಸದುಪಯೋಗ ಪಡಿಸಿಕೊಳ್ಳುವರೆಂಬುದನ್ನು ತಿಳಿದುಕೊಳ್ಳಲು— ಓದಿರಿ ಇದನ್ನು!—

ನೆಲಗಡಲೆ 'ಎಣ್ಣೆ'ಯು ಬಾದಾಮಿ ಎಣ್ಣೆಯಾಗಿದೆಯೆಂದು ಗೊತ್ತೇ?

ನಮ್ಮ ದೇಶದಲ್ಲಿ "ಶುದ್ಧ ಲೂಕಾ ಬಾದಾಮಿ ಎಣ್ಣೆ" ಎಂಬ ಹೆಸರಲ್ಲಿ ಮಾರಾಟಮಾಡಲ್ಪಡುತ್ತಿರುವ ಎಣ್ಣೆಯು ಬಾದಾಮಿ ಎಣ್ಣೆಯಲ್ಲ, ನಮ್ಮ ದೇಶದಿಂದಲೇ ಒಯ್ಯುವ ನೆಲಗಡಲೆಯಿಂದ ತೆಗೆದ ಶುದ್ಧ ನೆಲಗಡಲೆ ಎಣ್ಣೆಯಾಗಿದೆ. ("ಇಂಡಿಜಿನಸ್ ಡ್ರಗ್ ಒಫ್ ಇಂಡಿಯಾ" ಇದರ ಪುಟ 69ನ್ನು ನೋಡಿ.)

ವನಸ್ಪತಿ ತೈಲವಲ್ಲ–ಮೀನಿನ ತೈಲ' ತಿಳಿಯಿತೇ?

"ಇಂಪೀರಿಯಲ್ ಕೌನ್ಸಿಲ್ ಒಫ್ ಅಗ್ರಿಕಲ್ಚರಲ್ ರಿಸರ್ಚ್" ಇದರ "ಇಂಡಿಯನ್ ಓಯಿಲ್ ಕ್ರಶ್ಶಿಂಗ್ ಇಂಡಸಿ ಕಮಿಟಿ"ಯ ತೃತೀಯ ಸಭೆಯಲ್ಲಿ, ಪ್ರಕೃತ ಪರದೇಶದಿಂದ "Edible Hardened Oil" (ಆಹಾರಕ್ಕುಪಯೋಗಿಸಬಹುದಾದ ತೈಲ) ಎಂಬ ಚೀಟನ್ನು ಹಚ್ಚಿಸಿ, ಪರದೇಶಗಳಿಂದ ಮತ್ಸ್ಯತೈಲವನ್ನು ಹಿಂದೂದೇಶಕ್ಕೆ ಆಮದು ಮಾಡಿ "ಸಸ್ಯತೈಲ"ವೆಂಬುದಾಗಿ ಮಾರಾಟಮಾಡುತ್ತಿರುವರೆಂದು ಬಯಲಾಯಿತು ಆದರೆ,—

ಸತ್ತ ಹೆಗ್ಗಣಗಳ, ಬೆಕ್ಕುಗಳ, ನಾಯಿಗಳ ಮತ್ತು ದನ ಇತ್ಯಾದಿಗಳ ಕೊಬ್ಬಿನಿಂದಾಗುವ ಸಾಬೂನುಗಳು'–

ಇವುಗಳಿಗೆ ಸರಿಗಟ್ಟುವಂತಹುದು ಮತ್ತಾವುದಿದೆ? ಯುರೋಪಿನಲ್ಲಿ ಮೃಗಗಳ ಕೊಬ್ಬನ್ನೂ ಮೀನು ಎಣ್ಣೆಯನ್ನೂ ಆಹಾರಕ್ಕಾಗಿ ಉಪಯೋಗಿಸುತ್ತಿರುವಲ್ಲಿ ಸಾಬೂನು ತಯಾರಿಯಲ್ಲಿ ಉಪಯೋಗಿಸುವ ಹೆಚ್ಚಿನ ಕೊಬ್ಬುಗಳು ಸತ್ತ ಮೃಗಗಳ ಶರೀರಗಳಿಂದಲೂ, ವಧಾಖಾನೆಗಳಿಂದಲೂ, ರಸ್ತೆಗಳ 'ಕಚರಾ'ದಿಂದಲೂ, ಒಮ್ಮೊಮ್ಮೆ ಪರದೇಶಗಳಿಂದಲೂ ದೊರಕಿಸಿಕೊಂಡಂಥವುಗಳಾಗಿವೆ (ಸರ್ ಎಫ್ ಎ ಟಾಲ್ಬೋಟರವರ "ಮಿಲ್ಲಿಯನ್ಸ್ ಫ್ರೊಮ್ ವೇಸ್ಟ್" ಎಂಬ ಗ್ರಂಥನನ್ನೋದಿರಿ)

ಗೊಡ್ರೆಜ್ ವನಸ್ಪತಿ ಸುಗಂಧಸಾಬೂನುಗಳ

ವಿಷಯವಾಗಿ, ಅದನ್ನುಪಯೋಗಿಸುವ ಪ್ರಸಿದ್ಧಪುರುಷರೇನು ಹೇಳುವರೋ ಓದಿರಿ

ಕವಿರವೀಂದ್ರ.—"ಗೊಡ್ರೆಜ್ ಸಾಬೂನುಗಳಿಗಿಂತ ಉತ್ತಮವಾದ ವಿದೇಶೀ ಸಾಬೂನುಗಳನ್ನು ನಾನು ಕಂಡಿಲ್ಲ ಇನ್ನು ಮುಂದೆ ಗೊಡ್ರೆಜ್ ಸಾಬೂನುಗಳನ್ನೆ ಉಪಯೋಗಿಸಲು ನಿರ್ಧರಿಸಿದ್ದೇನೆ"

ಕೆಲ ವರ್ಷಗಳ ಹಿಂದೆ **ಡಾ। ಅನ್ನಿಬಿಸೆಂಟರು** ತಮ್ಮ "ನ್ಯೂ ಇಂಡಿಯಾ"ದ ಪತ್ರಿಕೆಯಲ್ಲಿ, ಗೊಡ್ರೆಜ್ ಸಾಬೂನುಗಳು ಪ್ರಪಂಚದಲ್ಲಿ ಅತ್ಯುತ್ಕೃಷ್ಟವೆಂದು ಪ್ರಶಂಸಿಸಿದ್ದರು

ರಾಷ್ಟ್ರೀಯ ಮಹಾಸಭೆಯ ಮಾಜಿ ಅಧ್ಯಕ್ಷರಾದ ಡಾ। ಅನ್ಸಾರಿಯವರು— ಗೊಡ್ರೆಜ್ ಸಾಬೂನುಗಳ ವಿಷಯವಾಗಿ ಹೇಳುವರು —"ಗೊಡ್ರೆಜ್ ಸಾಬೂನುಗಳ ಉತ್ತಮ ಗುಣಗಳನ್ನು ಗುರುತಿಸಲು ನನಗೆ ಅತ್ಯಾನಂದವಾಗುತ್ತದೆ ನಾನು ಅವುಗಳನ್ನು ಕಳೆದ ಹತ್ತು ವರ್ಷಗಳಿಂದಲೂ ಉಪಯೋಗಿಸುತ್ತಿದ್ದು, ಯುರೋಪಿನ ಯಾವ ಉತ್ತಮ ಸಾಬೂನುಗಳಿಗಿಂತಲೂ ಉತ್ಕೃಷ್ಟವೆಂಬುದನ್ನು ಮನಗಂಡಿದ್ದೇನೆ ಅವುಗಳು ಹಿಂದೂದೇಶದಲ್ಲಿ ಸಿದ್ಧವಾಗುತ್ತಿರುವುದಕ್ಕೂ ಅವುಗಳ ಉತ್ಕೃಷ್ಟತೆಯ ದೆಸೆಯಿಂದಲೂ ಹಿಂದೀಯರೆಲ್ಲ ಅವುಗಳನ್ನೇ ಉಪಯೋಗಿಸಬೇಕೆಂದು ನನ್ನ ಸಲಹೆ"

ಗೊಡ್ರೆಜ್ ಗಂಧದ ಸಾಬೂನು ಮತ್ತು ಶೇವಿಂಗ್ ಸ್ಟಿಕ್ } ಇವುಗಳನ್ನು ಉಪಯೋಗಿಸಿರಿ.

ಸೋಲ್ ಏಜಂಟರು:

ನಾದಿರ ಷಾ ಪ್ರಿಂಟರ್ ಎಂಡ್ ಕೊ, 165 C, ಬ್ರೋಡ್ವೇ, ಮದರಾಸು.

ಹೆಡ್ ಆಫೀಸು: ಬೊಂಬಾಯಿ ಇತರ ಶಾಖೆಗಳು—ಕಲ್ಕತ್ತಾ, ಲಾಹೋರ್ ಮತ್ತು ಕರಾಚಿ

ವಿ. ಸೂ: –ಗೊಡ್ರೆಜ್‌ರವರ ಹೆಸರಲ್ಲಿ ಮಾರಾಟವಾಗುತ್ತಿರುವ ಬಾರ್‌ಸೋಪ್ ಮತ್ತು ಇತರ (ಬಟ್ಟೆಯೊಗೆಯುವ) ಸಾಬೂನುಗಳಿಗೆ ಗೋದ್ರೆಜರವರಿಗೆ ಸಂಬಂಧವಿಲ್ಲ

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ ಸರ್ವೀಸು,

ಚಿಕ್ಕಮಗಳೂರು.

ದಕ್ಷಿಣ ಕನ್ನಡ ಜಿಲ್ಲೆಯಿಂದ ಮೈಸೂರು ಮತ್ತು ಮುಂಬೈ ಪ್ರಾಂತ್ಯಗಳಲ್ಲಿ ಸಂಚರಿಸಲಿಕ್ಕೆ ಅನುಕೂಲವಾದ ಮೋಟರ ಸರ್ವೀಸುಗಳು.

ಮುಂಬಾಯಿಯಿಂದ–ಪೂನಾ–ಬೆಳಗಾಂವ–ಧಾರವಾಡ–ಹುಬ್ಬಳ್ಳಿ–ಗೋವಾ ಇವೆಲ್ಲ ಕಡೆಗಳಿಂದ.

ಮಂಗಳೂರಿಗೆ–ಪುತ್ತೂರು–ಉಡುಪಿ–ಕಾರ್ಕಳ–ಬೆಳ್ತಂಗಡಿ–ವೇಣೂರು–ಬಂಟವಾಳ ಮೊದಲಾದ

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಊರುಗಳಿಗೆ

ಶೀಘ್ರ ಪ್ರಯಾಣ· ಅನುಕೂಲ ಸೌಕರ್ಯ· ಅತ್ಯಲ್ಪ ಖರ್ಚು· ಸುಂದರವಾದ ನೋಟ.

ಅಲ್ಲದೆ

ಮೈಸೂರಿನ ಅರಸರ ಶೆಕೆಕಾಲದ ವಾಸಸ್ಥಾನವಾದ ಮತ್ತು ಕಬ್ಬಿಣದ ಗನಿಯಾದ ಕೆಮ್ಮಣ್ಣು ಗುಂಡಿ–ಯಾತ್ರಾಸ್ಥಳವಾದ ಬಾಬಾಬುಡಾನಗಿರಿ–ಕೈಗಾರಿಕೆಯ ಕೇಂದ್ರವಾದ ಭದ್ರಾವತಿ–ಶಿಲಾಶಿಲ್ಪದ ಬೇಲೂರು, ಹಳೆ ಬೀಡು ಮಲೆನಾಡಿನ ಸಂಪತ್ತಾಗಿರುವ ಪ್ರಚಂಡ ಪಶ್ಚಿಮ ಘಟ್ಟಗಳು–

ಇವೆಲ್ಲ ನೋಟಗಳ ಅನುಭವವಾಗಬೇಕಾದರೆ ನಮ್ಮ ಸರ್ವೀಸುಗಳಲ್ಲಿ ಸಂಚರಿಸಿರಿ.

Chikmagalur Public Conveyance Motor Service,

CHIKMAGALUR.

ಪುಸ್ತಕ ವಿಮರ್ಶೆ.

[ಈ ಒಂದು ಭಾಗದಲ್ಲಿ ನಮಗೆ ಬಾರಂತ್ರಿಕ ಬರುವ ಸಾಹಿತ್ಯಗಳನ್ನು ಒಂದೊಂದಾಗಿ ವಿಮರ್ಶಿಸ ಬೇಕೆಂದಿರುತ್ತೇವೆ. ಪ್ರಕಾಶಕರೂ, ಲೇಖಕರೂ ತಂತಮ್ಮ ಕೃತಿಗಳನ್ನು ನಮ್ಮ ವಿಮರ್ಶೆಗಾಗಿ ಕಳುಹಿಸಿಕೊಡ ಬಹುದು]

'Progressive India' 'ಪ್ರೊಗ್ರೆಸ್ಸಿವ್ ಇಂಡಿಯಾ' (ಆಂಗ್ಲ ಮಾಸಪತ್ರಿಕೆ.) ಸಂಪಾದಕರು: ಡಿ. ಆರ್. ಮುರ್ಡೇಶ್ವರ್, ಡಿಪ್. ಇಕೊನ್. ಎಫ್. ಆರ್. ಇಕೊನ್, ಎಸ್. (ಲಂಡನ್) ಮಂಗಳೂರು; ಮುದ್ರಕರು: ಶಾರದಾ ಛಾಪಖಾನೆ, ಮಂಗಳೂರು. ವಾರ್ಷಿಕ ಚಂದಾ: (ಈ ದೇಶದೊಳಗೆ ರೂ. ೬.) ಬಿಡಿಸಂಚಿಕೆಯ ಬೆಲೆ. ಆಣೆ ೮.

ಈ ಪತ್ರಿಕೆಯು ಇದೇ ಕಳೆದ ಮೇ ತಿಂಗಳಲ್ಲಿ ಜನ್ಮವೆತ್ತಿರುತ್ತದೆ ಪ್ರಥಮ ಸಂಚಿಕೆಯಲ್ಲಿ ದೇಶದ ಕೆಲವು ಪ್ರಮುಖ ಆಂಗ್ಲ ಸಾಹಿತಿಗಳ ಲೇಖನಗಳಿವೆ ಶ್ರೀ। ಕೆ ಆರ್ ಶಾಸ್ತ್ರಿ, ಪ್ರೊ। ಕೆ ಸುಂದರರಾಮಯ್ಯರ್, ಪ್ರೊ। ಕೆ ಟಿ ಕೃಷ್ಣ ಸ್ವಾಮಿ, ಶ್ರೀ। ಕೆ ಜಗದೀಶ ಐಯ್ಯರ್ ಶ್ರೀ। ಕೆ ನಟೇಶನ್ ಮೊದಲಾದವರ ಲೇಖನಗಳು ವಿದ್ವತ್ಪೂರ್ಣವಾಗಿದ್ದು ಅಮೌಲ್ಯವಾಗಿವೆ ಅರ್ಥಶಾಸ್ತ್ರ, ಸಿದ್ಧಶಾಸ್ತ್ರ, ರಾಜಕೀಯಶಾಸ್ತ್ರಗಳ ಕುರಿತಾಗಿಯೂ, ಆಂಗ್ಲಸಾಹಿತ್ಯ, ಭಾರತದ ಪ್ರಗತಿ, ಇತಿಹಾಸಗಳ ಕುರಿತಾಗಿಯೂ ವಿಮರ್ಶಾತ್ಮಕವೂ, ಬೋಧಪ್ರದವೂ ಮತ್ತು ವಾಚನೀಯವೂ ಆದ ಲೇಖಗಳಿವೆ ಮನಮೋಹಕ ಮುದ್ರಣಕ್ಕೆ ತಕ್ಕುದಾದ ಪ್ರೌಢ ಲೇಖನಗಳು, ಸರ್ವಾಂಗ ಸುಂದರವಾದ ಮಾಸಿಕದ ಪ್ರೌಢಿಮೆಯೆಷ್ಟೆಂದು ತೋರಿಸುವ ಸಂಪಾದಕರ 'ನೋಟ್ಸ್'ನ ವಿಭಾಗ–ಅಂತೂ, ಶ್ರೀ ಮುರ್ಡೇಶ್ವರರ ಸಾಹಸವು ಜಿಲ್ಲೆಗೆ ಏಕೆ?–ಆಂಗ್ಲ ಸಾಹಿತ್ಯಕ್ಕೊಂದು ಭೂಷಣಪ್ರಾಯ. ವಿಷಯ ಈ ಮಾಸಿಕವು ಸಚಿತ್ರವಾದರೆ ಎಷ್ಟೋ ಹಿತವಿದೆ ಅಲ್ಲದೆ ಬಿಡಿಸಂಚಿಕೆಯ ಬೆಲೆಯೂ ಹಲವರಿಗೆ ಹೆಚ್ಚೆಂದು ತೋರಬಹುದು ಮಂಗಳೂರಿನ ಹಲವು ಸಂಪಾದಕರೊಡನೆ ಶ್ರೀ। ಮುರ್ಡೇಶ್ವರರಿಗೂ ಯಥಾಯೋಗ್ಯವಾದ ಪ್ರೋತ್ಸಾಹ–ಸಹಾನುಭೂತಿ–ಸಹಕಾರಗಳು ಸಿಗಲೆಂದು ಹಾರೈಸುವೆವು

ಧರ್ಮ ಸೆರೆ

ಸಾಮಾಜಿಕ ಕಾದಂಬರಿ.

ಲೇಖಕರು: ಜಡಭರತ; ಬೆಲೆ ೧೪ ಆಣೆ ಪ್ರಕಾಶಕರು: ಗೋವಿಂದ ಭೀಮಾಚಾರ್ಯ ಜೋಶಿ ಮನೋಹರ ಗ್ರಂಥಮಾಲಾ ಕಾರ್ಯಾಲಯ, ಸಾಧನಕೇರಿ, ಧಾರವಾಡ.

"ಕುರುಡಿ–ಕುಂಟಿ–ಮೂಕಿ–ಇಂತಹ ಅಂಗಹೀನ ಹುಡುಗಿಯರ ಮದುವೆಯಾಗುವುದು–ಬ್ರಾಹ್ಮಣ ಸಮಾಜದಲ್ಲಿಯಂತೂ–ಅತ್ಯಂತ ಕಷ್ಟಸಾಧ್ಯ! ಆದರೆ ಹುಡುಗಿಯೆಂದ ಮೇಲೆ ಮದುವೆಯನ್ನು ಮಾಡಿಯೇ ತೀರಬೇಕೆಂಬ ಧರ್ಮದ ಬಂಧನವನ್ನು ಮುರಿಯುವುದೂ ಅಷ್ಟೆ ಕಷ್ಟಸಾಧ್ಯ ಕೇವಲ ಈ ಧರ್ಮಬಂಧನವನ್ನು ಪಾಲಿಸುವುದಕ್ಕಾಗಿಯೆ ಅಂಗಹೀನ ಹುಡುಗಿಯರಿಗೆ ಮಂಗಳಸೂತ್ರ ಕಟ್ಟಿಸುವುದಕ್ಕೆ 'ಧರ್ಮಸೆರೆ ಬಿಡಿಸುವುದು' ಅಥವಾ 'ಕನ್ಯಾಸೆರೆ ಬಿಡಿಸುವುದು' ಎಂದು ಹೇಳುತ್ತಾರೆ ಹೇಗೆ ಧರ್ಮಸೆರೆ ಬಿಡಿಸಿದ ಒಂದೆರಡು ಸಂಗತಿಗಳನ್ನು ನನ್ನ ದೊಡ್ಡಪ್ಪನಬಾಯಿಂದ–ಹುಡುಗನಾಗಿದ್ದಾಗ ಕೇಳಿದ್ದೆ ಆ ನೆನಪೇ ನನ್ನನ್ನು ಈ ಕಾದಂಬರಿ ಬರೆಯಲು ಹಚ್ಚಿತು' ಎಂದು ಶ್ರೀ। ಜಡಭರತರು ಮುನ್ನುಡಿಯಲ್ಲಿ ಹೇಳಿರುವರು. ಕ್ರೌನ್ ಅಷ್ಟಪ್ರತಿಯ ೧೮೬ ಪುಟಗಳ ಈ ಕಾದಂಬರಿಯನ್ನು ಒಮ್ಮೆ ಓದಲಾರಂಭಿಸಿದರೆ–ಕಥೆಯ ಪ್ರವಾಹವು ನಮ್ಮ ಚಿತ್ತವನ್ನು ಮುಂದೆ ಮುಂದೆ ಕೊಚ್ಚಿಕೊಂಡೇ ಹೋಗುತ್ತದೆ. ಒಂದು ಭಾಗವನ್ನು ಓದಿ ಮುಗಿಸೋಣವೆಂದು ಬಗೆದರೆ ಆ ಭಾಗಾಂತ್ಯಕ್ಕೆ ಬರುತ್ತಲೇ ಇನ್ನೊಂದು ಭಾಗವನ್ನೂ ಪೂರ್ಣಗೊಳಿಸೋಣ ಎಂಬ ಇಚ್ಛೆಯ ಸ್ವಾಭಾವಿಕವಾಗಿ ಉಂಟಾಗುತ್ತದೆ. ಕಥೆಯ ಸಂವಿಧಾನ, ಸ್ವಭಾವಚಿತ್ರ, ಬರೆದ ಶೈಲಿ– ಇವೆಲ್ಲವೂ ಕಾದಂಬರಿಗೆ ಉತ್ಕೃಷ್ಟ ಸ್ಥಾನವನ್ನು ಕಲ್ಪಿಸಿಕೊಟ್ಟಿವೆ. ಈ ಗ್ರಂಥಪ್ರಕಾಶನ ಸಮಿತಿಯವರು ಇಂತಹ ಗ್ರಂಥಗಳನ್ನು ಹೆಚ್ಚೆಚ್ಚು ಪ್ರಕಾಶಿಸಲೆಂದೂ, ಇಂತಹ ಕಾದಂಬರಿಕಾರರು ಇಂತಹ ಕಾದಂಬರಿಗಳನ್ನು ಮತ್ತಷ್ಟು ಬರೆಯಲೆಂದೂ ಹಾರೈಸುವೆವು.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಇದರ ೧೯೩೪ರ ವರದಿಯು ನಮ್ಮ ಕೈಸೇರಿದೆ ಅವಲೋಕಿಸಿದ್ದಲ್ಲಿ ವರದಿಯ ವರ್ಷದಲ್ಲಿ ಕಂಪೆನಿಯು ೫೫೮೮ ಪೊಲಿಸಿಗಳನ್ನು ದೊರಕಿಸಿಕೊಂಡು ೧,೦೪,೩೩,೭೫೦ ರೂಪಾಯಿಗಳನ್ನು ಸಂಪಾದಿಸಿತೆಂದೂ, ಇದರಿಂದಾಗಿ ವರ್ಷಕ್ಕೆ ೫,೭೪,೬೩೪ ರೂಪಾಯಿಗಳ ಪ್ರೀಮಿಯಮ್ ಆದಾಯವು ದೊರೆಯಿತೆಂದೂ ತಿಳಿದು ಬರುತ್ತದೆ ವರದಿಯ ವರ್ಷದಲ್ಲಿ, ವ್ಯಾಪಾರಮಾಂದ್ಯದ ಗುಲ್ಲಿದ್ದಿರುವ–ಈ ಕಾಲದಲ್ಲೂ ಈ ಕಂಪೆನಿಯು ವರ್ಷಂಪ್ರತಿ ಅನುಲಕ್ಷಣೀಯ ಪ್ರಗತಿಯನ್ನು ಹೊಂದುತ್ತಿರುವುದನ್ನು ನೋಡಿದರೆ, ಈ ಕಂಪೆನಿಯು ಸರ್ವಜನಾದರಣೀಯವಾಗಿದೆಯೆಂಬ ಬಗ್ಗೆ ಸಂದೇಹವಿರುವುದಿಲ್ಲ ಮೆ ಸರ್ಸ್ ಕೊಚ್ಚಿ ಬ್ರದರ್ಸ್ಸರು ಈ ವಿಮಾ ಕಂಪೆನಿಯ ಜೀವನದಲ್ಲಿ ತಮ್ಮ ಪಾಲಿನ ಹೊಣೆಗಾರಿಕೆಯನ್ನು ವಹಿಸಿದಂದಿನಿಂದಂತೂ ಈ ವಿಮಾಕಂಪೆನಿಯು ದ್ವಿಗುಣಿತ ಶಕ್ತಿಯನ್ನು ಹೊಂದಿರುತ್ತದೆ ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸರು ೧೯೧೦ರಲ್ಲಿ ಇದರ ಏಜನ್ಸಿಯನ್ನು ತೆಗೆದುಕೊಂಡು ೧೯೩೫ಕ್ಕೆ ೨೫ ವರ್ಷಗಳು ಕಳೆಯುತ್ತಿದ್ದು, ಅವರ ಏಜನ್ಸಿಯ ರಜತೋತ್ಸವವು ಬೇಗನೇ ನೆರವೇರಲಿದೆ ಈ ಅವಧಿಯಲ್ಲಿ ಅವರು ಈ ಕಂಪೆನಿಗೆ ಒದಗಿಸಿಕೊಟ್ಟ ವಹಿವಾಟು ಕಂಪೆನಿಯ ಜೀವನದ ಭದ್ರತೆಗೆ ಅನುಪಮ ಸಹಕಾರವನ್ನಿತ್ತಿದೆ ಕೊಚ್ಚಿಕಾರ್ಸರ ರಜತೋತ್ಸವದ ವೇಳೆ ಅವರಿಗೆ ಲಕ್ಷೋಪಲಕ್ಷ ರೂಪಾಯಿಗಳ ವಹಿವಾಟು ದೊರೆಯಲೆಂದೂ ಸ್ವದೇಶಸ್ಥರದ್ದಾಆದ ಈ ವಿಮಾಕಂಪೆನಿಯನ್ನು ನಾವು ಪ್ರೋತ್ಸಾಹಿಸುವುದು ತೀರ ಅವಶ್ಯವೆಂದೂ ಹೇಳುವುದರಲ್ಲಿ ನಮಗೆ ತುಂಬಾ ಸಂತೋಷವಿದೆ

ಟೆಂಡರುಗಳು

ಕಾರುವಾರು ಮತ್ತು ಮಂಗಳೂರು ಕೂಡಾ ಸೇರಿರುವ ಈ ಮಂಗಳೂರು ಲೈಸಿನಲ್ಲಿ ಓಡಾಡತಕ್ಕ ಬೊಂಬೈ ಸ್ಟೀಮ್ ನೆವಿಗೇಶನ್ ಕಂಪೆನಿಯವರ ಸ್ಟೀಮರುಗಳಿಗೆ ಸರಕುಗಳನ್ನು ಹತ್ತಿಸಲೂ ಇಳಿಸಲೂ ಅಗತ್ಯವಿರುವ ಕೆಲಸಗಾರರನ್ನು, ಮೇಲ್ವಿಚಾರಕರನ್ನು ಒದಗಿಸುವ ಬಗ್ಗೆ ಮಂಗಳೂರು ಬಂದರದಲ್ಲಿ, ಸರಕುಗಳನ್ನು ತೀರದಲ್ಲಿ ಎತ್ತಿ ಇಳಿಸುವುದಕ್ಕೂ ಸದರಿ ಬೊಂಬೈ ಸ್ಟೀಮ್ ನೆವಿಗೇಶನ್ ಕಂಪೆನಿಯು ಈ ಮೂಲಕ ಟೆಂಡರುಗಳನ್ನು ಅಪೇಕ್ಷಿಸುತ್ತಿದೆ ಮತ್ತು ಈ ಕಂಟ್ರಾಕ್ಟಿನ ಷರತ್ತುಗಳನ್ನು ಕಂಪೆನಿಯ ಮಂಗಳೂರ ಆಫೀಸಿನಲ್ಲಿ ನೋಡಬಹುದು ಮತ್ತೂ ಈ ಕುರಿತಾದ ಹೆಚ್ಚಿನ ವಿವರಗಳುಳ್ಳ ಮಾಹಿತಿ ಪತ್ರಗಳನ್ನು ಪ್ರತಿಯೊಂದಕ್ಕೆ ೫ ರೂಪಾಯಿ ಕೆತ್ತಲ್ಲಿ ಒದಗಿಸಬಹುದು ಟೆಂಡರುಗಳನ್ನು ಕಂಪೆನಿಯ ಜನರಲ್ ಮೆನೇಜರ್, (100/ ಫ್ರೀರ್ ರೋಡ್ ಬೊಂಬಾಯಿ)ಗೇ ಸೀದಾ ರವಾನಿಸತಕ್ಕದ್ದು. ಕಂಪೆನಿಯು ಅತ್ಯಂತ ಕಡಮೆಯಾದ ದರಗಳನ್ನುಳ್ಳ ಟೆಂಡರುಗಳನ್ನಾಗಲೀ, ಅಥವಾ ಬೇರೆ ಯಾವ ಟೆಂಡರನ್ನಾಗಲೀ ಯಾವ ಕಾರಣವನ್ನೂ ಕೊಡದೆ ನಿರಾಕರಿಸುವ ಅಧಿಕಾರವನ್ನು ಇಟ್ಟುಕೊಂಡಿದೆ. ಮೊಹರು ಒತ್ತಿದ, ಸರಕುಗಳನ್ನು ಎತ್ತಿ ಇಳಿಸುವ ಟೆಂಡರುಗಳೆಂದು ಬರಹ ಮೂಲಕವಾಗಿ ಸೂಚಿಸುವ–ಆ ಎಲ್ಲಾ ಟೆಂಡರುಗಳೂ, ಇದೇ 1935ನೇ ಆಗೋಸ್ತು 25ನೇ ತಾರೀಖು ಮಧ್ಯಾಹ್ನ 12 ಘಂಟೆ (ಸ್ಟ್ಯಾಂಡರ್ಡ್ ಟೈಮ್)ಯೊಳಗಾಗಿ–ಜನರಲ್ ಮೆನೇಜರ್, 100 ಫ್ರೀರ್ ರೋಡ್ ಬೊಂಬಾಯಿ, ಇಲ್ಲಿಗೆ ತಲ್ಪತಕ್ಕದ್ದು.

Killick Nixon & Co.,

Agents,

The Bombay Steam Navigation Co., Ltd.

ಮೈಸೂರಿನ ಸಮಾಚಾರಗಳು.

ಬೆಂಗ್ಳೂರು ಪತ್ರ

(ನಮ್ಮ ಸ್ವಂತ ಪ್ರತಿನಿಧಿಯಿಂದ)

ಬೆಂಗಳೂರು, ತಾ. ೧೮–೬–೧೯೩೫.

ಶಿಕ್ಷಣ ಸಪ್ತಾಹ.

ಬೆಂಗಳೂರು ನಗರದ ಮುನಿಸಿಪಾಲಿಟಿಯ ಸ್ಕೂಲು ಬೋರ್ಡಿನವರು ಏರ್ಪಡಿಸಿರುವ ಮಕ್ಕಳ ಶಿಕ್ಷಣ ಸಪ್ತಾಹವು ೨೨ನೆಯ ತಾರೀಖು ಸುಲ್ತಾನ್ ಪೇಟೆಯ ಪ್ರಾಥಮಿಕ ಶಾಲೆಯಲ್ಲಿ ಪ್ರಾರಂಭವಾಯಿತು ರಾಜಮಂತ್ರ ಪ್ರವೀಣ ಶ್ರೀಮಾನ್ ಎಸ್ ಪಿ ರಾಜಗೋಪಾಲಾಚಾರ್ಯರವರು ಸಪ್ತಾಹದ ಪ್ರಾರಂಭೋತ್ಸವವನ್ನು ನೆರವೇರಿಸಿದರು ಶ್ರೀಮಾನ್ ನವರತ್ನ ರಾಮರಾಯರು ಸ್ವಾಗತಭಾಷಣವಿತ್ತರು

ಮೈಸೂರು ವೆಟರಿನರಿ ಮೆಡಿಕಲ್ ಎಸೋಸಿಯೇಶನ್.

ಮೇಲಿನ ಸಂಸ್ಥೆಯ ೭ನೆಯ ವಾರ್ಷಿಕ ಸಮ್ಮೇಳನವು ಇದೇ ತಿಂಗಳ ೨೨ನೇ ತಾರೀಕಿಗೆ ನಡೆಯಿತು ಸರ್ ಕೆ ಪಿ ಪುಟ್ಟಣ್ಣ ಶೆಟ್ಟಿಯವರು ಸಮ್ಮೇಳನದ ಪ್ರಾರಂಭ ಉತ್ಸವವನ್ನು ನೆರವೇರಿಸಿ ಭಾಷಣಮಾಡಿದರು.

ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್.

ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲಿನ ಅಧಿವೇಶನವು ನಿನ್ನೆಯ ದಿವಸ (ತಾ ೨೪ನೆಯ ಸೋಮವಾರ) ಸರ್ ಮಿರ್ಜಾ ಎಂ ಇಸ್ಮೆಯಿಲ್‌ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು ಅಕ್ಕಲಕೋಟೆಯ ರಾಜಾ ಸಾಹೇಬರೂ ಸಾಂಗ್ಲಿಯ ರಾಜರೂ ರಾಣಿಯವರೂ ಮಾನ್ಯ ಪ್ರೇಕ್ಷಕರಾಗಿ ಸಭೆಯನ್ನಲಂಕರಿಸಿದ್ದರು

೧೯೩೫ ೩೬ರ ಆಯ ವ್ಯಯದ ಅಂದಾಜು ಚರ್ಚೆಯಾಯಿತು

ಕೆ ಟಿ ಭಾಷ್ಯಂರವರು ಚರ್ಚೆಯನ್ನು ಪ್ರಾರಂಭಿಸಿದರು ಅವರು ಆಯವ್ಯಯದ ಅಂದಾಜನ್ನು ತಯಾರುಮಾಡುವುದರಲ್ಲಿ ಸರಕಾರದವರು ಹಣಕಾಸಿನ ಹಾಗೂ ತೆರಿಗೆಯ ಸಮಿತಿಗಳ ಸಲಹೆಗಳನ್ನು ತೆಗೆದುಕೊಂಡಿಲ್ಲವೆಂದು ಸೂಚಿಸಿದರು

ಆಯವ್ಯಯದ ತಕ್ಕಡಿಯನ್ನು ಸರಿತೂಗುವುದಕ್ಕೆ ಅವಧ್ಯನದಿಂದ (Reserves) ಮೊಬಲಗು ತೆಗೆದುಹಾಕಿರುವುದು ಸರಿಯಲ್ಲವೆಂದರು ಅಧಿವೇಶನವು ಒಂದು ವಾರ ನಡೆಯುವುದು

ಸಹಕಾರ ಸಮ್ಮೇಳನ

ಬೆಂಗಳೂರು ನಗರದ ಸಹಕಾರ ಸಮ್ಮೇಳನವು ಬರುವ ಜುಲೈ ೧೩–೧೪ನೆಯ ತಾರೀಕುಗಳಲ್ಲಿ ನಡೆಯುವುದಾಗಿ ಏರ್ಪಾಡಾಗಿದೆ ಮದರಾಸಿನ ಶ್ರೀ। ರಾಮದಾಸ ಪಂತುಲುರವರು ಅಧ್ಯಕ್ಷರಾಗಲು ಒಪ್ಪಿರುತ್ತಾರೆ

ಬಾಲ್ಯವಿವಾಹ ನಿರೋಧ

ಮ। ರಾ। ಜಿ ಚೆನ್ನಪ್ಪ ಎಂ ಎಲ್ ಸಿ, ಅವರು ಬಾಲ್ಯವಿವಾಹ ನಿರೋಧ ಮಸೂದೆಯೊಂದನ್ನು ಲೆಜಿಸ್ಲೇಟಿವ್ ಕೌನ್ಸಿಲಿನ ಮುಂದೆ ತರುವವರಾಗಿದ್ದಾರೆ ಈ ವಿಚಾರದ ಸಂಬಂಧದಲ್ಲಿ ಮಹಾಜನಾಭಿಪ್ರಾಯದ ಬೆಂಬಲ ಪಡೆಯುವ ಉದ್ದೇಶದಿಂದ ಇದೇ ತಿಂಗಳ ತಾರೀಕು ೧೭ನೆಯ ಸೋಮವಾರ ಸಾಯಂಕಾಲ ಮೈಸೂರು ಟೌನ್‌ಹಾಲಿನಲ್ಲಿ, ಮೈಸೂರು ಆರ್ಯಸಮಾಜದ ಆಶ್ರಯದಲ್ಲಿ ಸಭೆಸೇರಿತ್ತು. ಮ। ಚನ್ನಪ್ಪನವರೇ ಅಧ್ಯಕ್ಷರಾಗಿದ್ದರು.

ಶ್ರೀಮತಿ ಕಾಮೇಶ್ವರಮ್ಮನವರು ಈ ಮುಂದಿನ ಅರ್ಥವುಳ್ಳ ನಿರ್ಣಯವನ್ನು ಸೂಚಿದರು —

"ಲೆಜಿಸ್ಲೇಟಿವ್ ಕೌನ್ಸಿಲಿನ ಮುಂದೆ ಬರತಕ್ಕದ್ದಾಗಿರುವ ಬಾಲ್ಯವಿವಾಹನಿರೋಧ ಕಾನೂನನ್ನು ಮೈಸೂರಿನ ಈ ಸಾರ್ವಜನಿಕ ಸಭೆಯು ಮನಃಪೂರ್ವಕವಾಗಿ ಅನುಮೋದಿಸುತ್ತದೆಯಲ್ಲದೆ, ಲೆಜಿಸ್ಲೇಟಿವ್ ಸಭೆಯವರು ಈ ಕಾನೂನನ್ನು ಅಂಗೀಕರಿಸಿ ಪ್ರಗತಿಪರ ಮಾದರಿ ಮೈಸೂರಿಗೆ ಕೀರ್ತಿ ತರುವರೆಂದು ಆಶಿಸುತ್ತದೆ"–ಈ ನಿರ್ಣಯದ ವಿಚಾರವಾಗಿ ಸೂಚಕರು ಕೆಲಹೊತ್ತು ಭಾಷಣಮಾಡಿದ ಬಳಿಕ ಮಹಾಜನರು ವಿಷಯವನ್ನು ಚರ್ಚಿಸಿದರು. ಅಧ್ಯಕ್ಷರ ಭಾಷಣವಾದ ಬಳಿಕ ನಿರ್ಣಯವನ್ನು ಸಭೆಯು ಅಭಿಮತಕ್ಕೆ ಒಡ್ಡಲಾಗಿ ಬಹುಮತದಿಂದ ಅಂಗೀಕಾರವಾಯಿತು

ಮೈಸೂರು ಬಾರ್ ಎಸೋಸಿಯೇಶನ್.

ಮೇಲೆ ಕಂಡ ಸಂಘದವರು ಮದರಾಸಿನ ಪ್ರಸಿದ್ಧ ವಕೀಲರವರಾದ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯಂಗಾರ್ ಇವರ ಭಾವಚಿತ್ರವನ್ನು ಅನಾವರಣ ಮಾಡಿಸುವ ಉದ್ದೇಶದಿಂದ ೨೨ನೆಯ ತಾರೀಕು ಸಭೆಸೇರಿದ್ದರು ಮದರಾಸಿನ ಎಡ್ವೊಕೇಟ್ ಶ್ರೀ। ವಿ ವಿ ಶ್ರೀನಿವಾಸಯ್ಯಂಗಾರ್ಯರವರು ಶ್ರೀ। ಅಲ್ಲಾಡಿಯವರ ಗುಣಕಥನ ಮಾಡಿ ಅವರ ಭಾವಚಿತ್ರವನ್ನು ಅನಾವರಣ ಮಾಡಿದರು ಮೈಸೂರಿನ ಎಡ್ವೊಕೇಟರೂ ಬಾರ್ ಎಸೋಸಿಯೇಶನಿನ ಅಧ್ಯಕ್ಷರೂ ಆದ ಶ್ರೀ। ಸಿ ನರಸಿಂಹಯ್ಯನವರು ಸಭಾಧ್ಯಕ್ಷರಾಗಿದ್ದರು

ಬಾಲಿಕೆಯ ಈಜುವ ಸಾಹಸ

ಕುಮಾರಿ ಬೈರಮ್ಮಳ ಬೆಂಗಳೂರಿನ ಕೇವಲ ೮–೧೦ ವರ್ಷಗಳ ಬಾಲೆ ಈ ಹುಡುಗಿ ಬಹಳ ಹೊತ್ತಿನ ವರೆಗೆ ನೀರಿನಲ್ಲಿ ಈಜುತ್ತಿರಬಲ್ಲಳು ಬೆಂಗಳೂರಿನಲ್ಲಿ ಅವಳ ಈಜುಗಾರಿಕೆಯ ಪ್ರದರ್ಶನಗಳು ಅನೇಕ ಸಲ ನಡೆದು, ಅವಳಿಗೆ ಅನೇಕ ಬಹುಮಾನಗಳೂ ದೊರೆತಿವೆ

ಮೊನ್ನೆ ತಾ ೨೩ನೇ ಭಾನುವಾರ ಪ್ರಾತಃಕಾಲ ಮೈಸೂರಿನ ಕುಕ್ಕನ ಹಳ್ಳಿಕೆರೆಯಲ್ಲಿ ಇವಳ ಈಜುಗಾರಿಕೆಯ ಪ್ರದರ್ಶನ ನಡೆಯಿತು ಹುಡುಗಿ ಬೆಳಗ್ಗೆ ಆರುವರೆ ಘಂಟೆಗೆ ನೀರಿಗೆ ಪ್ರವೇಶಿಸಿ ಹನ್ನೆರಡು ಘಂಟೆಯ ತನಕ ಅವಿಚ್ಛಿನ್ನವಾಗಿ ಆಯಾಸವಿಲ್ಲದೆ ಈಜಾಡಿದಳು ಇನ್ನೊಂದು ವಿಶೇಷವೇನೆಂದರೆ, ಬೈರಮ್ಮಳು ಎರಡೂ ಕೈಗಳನ್ನು ಕಟ್ಟಿಸಿಕೊಂಡಿದ್ದಳು ಇದೇ ರೀತಿ ಕಲ್ಕತ್ತೆಯಲ್ಲಿ ಓರ್ವ ಬಾಲೆ ೬ ಘಂಟೆಗಳ ಕಾಲ ಮಾತ್ರ ಈಜಿರುವಳಂತೆ

ಭೂಕಂಪ ನಿಧಿಗೆ ಸಹಾಯ

ಕ್ವೆಟ್ಟಾ ಭೂಕಂಪ ನಿಧಿಗೆ ಮೈಸೂರು ಶ್ರೀಮನ್ಮಹಾರಾಜರವರು ಹತ್ತು ಸಾವಿರ (ರೂ ೧೦,೦೦೦) ರೂಪಾಯಿಗಳನ್ನು ದಾನ ಮಾಡಿದ್ದಾರೆ.

ತಗಡೂರಿನಲ್ಲಿ ವಾರ್ಷಿಕೋತ್ಸವಗಳು

ತಗಡೂರು ಖಾದಿ ಸಂಸ್ಥೆಯ ಐದನೆಯ ವಾರ್ಷಿಕೋತ್ಸವ, ಸತ್ಯಾಗ್ರಹಾಶ್ರಮದ ನಾಲ್ಕನೆಯ ವಾರ್ಷಿಕೋತ್ಸವ, ಆಸ್ಪತ್ರೆಯ ಎರಡನೆಯ ವಾರ್ಷಿಕೋತ್ಸವ, ಹರಿಜನ ವಿದ್ಯಾಲಯದ ವಾರ್ಷಿಕೋತ್ಸವವೂ ಒಟ್ಟಿಗೆ ಜರಗುವಂತೆ ಏರ್ಪಾಡಾಗಿದೆ. ಮದ್ರಾಸಿನ ಹಿಂದೂ ಪತ್ರಿಕೆಯ ಉಪಸಂಪಾದಕರಾಗಿದ್ದ ಆರ್. ಆರ್. ಭಾಷ್ಯಂ ಅಯ್ಯಂಗಾರ್, ಬಿ. ಎ. ಎಲ್. ಟಿ. ಅವರು ಅಧ್ಯಕ್ಷತೆ ವಹಿಸುವರು.

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purniah Chatram Road, Balepet,
BANGALORE CITY.

ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಡ್ ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ.
೫೫ ವರ್ಷದ ಅನುಭವ.
ಉಪಯೋಗಿಸಿದವರೇ ಹೇಳಿದ್ದಾರೆ
ಡಾ॥ ಗೌತಮ ರಾವ್ ಕೇಶವರವರ
ಫೊಸ್ಫರಸ್ ಗುಳಿಗೆಗಳು.
ಅಶಕ್ತತೆ ಹಾನಿ.
ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೨.
ಸ್ಟಾಕಿಸ್ಟ—ಬಾ ಕಂಪೆನಿ, ಮಂಗಳೂರು.
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.



ಮೂರು ಫ್ಯಾನ್ಸಿ ಮೊಡೆಲ್ ರಿಸ್ಟ್ ವಾಚುಗಳು. ಇವು ಹೊಳಪಿನಲ್ಲಿ ಬಂಗಾರಕ್ಕಿಂತಲೂ ಹೆಚ್ಚು ಬಹು ರಮ್ಯವಾಗಿವೆ. ಐದು ವರ್ಷಗಳ ಗ್ಯಾರಂಟಿ. ಒಂದು ಉತ್ತಮವಾದ ಜೇಬಿನ [illegible] ಗಂಟೆಯನ್ನು [illegible] ೧೦ ವರ್ಷಗಳ ಗ್ಯಾರಂಟಿ. ಒಂದು [illegible] ಪಾಕೆಟ್ ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವದಿಲ್ಲ. ಗ್ಯಾರಂಟಿ ೬ ವರ್ಷ [illegible] ಬಂಗಾರದ ಪ್ಲೇಟ್ [illegible] ಫೌಂಟನ್ ಪೆನ್. ಈ ಅತ್ಯುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ [illegible] ಇಷ್ಟವಿಲ್ಲದಿದ್ದರೆ ಬೆಲೆಯು ವಾಪಾಸ್. ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ.

ಶರ್ಮ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್, [illegible] S A ಕಲ್ಕತ್ತಾ.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್ ಕೆ [illegible] ಅವರ

ಸಂತಾನ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ [illegible] ಹಡೆಯುವುದರಿಂದ ಹೆಂಗಸರ ಆರೋಗ್ಯವು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ [illegible] ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. [illegible] ಏನು ಮಾಡಿದರೂ [illegible] ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. [illegible] ಸರ್ಟಿಫಿಕೇಟ ಡಾಕ್ಟರ ಜಿ. ಎ. ವೈದ್ಯ, ಎಲ್. ಸಿ. ಪಿ. ಎಸ್. [illegible] ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ [illegible] ರೂ ೪-೦-೦ [illegible]

ವಿಳಾಸ:—ಸಂಜೀವಿನೀ ಔಷಧಾಲಯ ಮು॥ ಪೊ॥ ಮಿರಜ, S M C.

NEW ARRIVALS.

Medicines.

Dr Schuessler's Twelve Tissue Remedies 5 gr bot As 4/—
Homoeopathy Medicines 5 gr bot As [illegible] —
Sugar of Milk Dr Schwabe's original bot 1lb Rs [illegible]
Haarlem Oil a world-renowned remedy As 8 per phial
Dr Hicle's New Curative Earth—Iodium Cure Rs 4 per lb
Dr Schwabe's other special remedies are always in stock
Please [illegible]
Kinmese B[illegible] a Family Guide to Biochemistry Re 1—
" Domestic Homoeopathy Re 1 4 -
If you own these two Books you will be able to pick up treatment and administer Tissue & Homoeopathic Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes and prices from As 2 6
Delightful in aroma charming in appearance. Please try

Kirloskar Pumps.

We are the Representatives of Kirloskar Brothers for their reliable Shallow well and Deep well Pumps, Spring Cots Spring Couches etc and stock—

Pipes and pipe fittings at cheap prices Coir Mats and Mattings
Steadler Pencils and Stationeries
We are the recognised agents for STEADLER'S all stationeries and shall be glad to serve you.

Olympia Typwriter.

An up-to-date Machine in Standard and portable sizes.
For Further particulars please write to—

Basel Mission Book & Tract Depository,
Mangalore, S K. or Hubli, S M.

The Popular Insurance Company, Ltd.

Head Office:—MANGALORE, S. India
The Pioneer Life Office of the West Coast.

A FEW PRESS OPINIONS.

Established as recently as 1929 the Popular Insurance Co Ltd, has already made considerable progress having at the end of 1934 a total business of over Rs. 10 lakhs in force with a premium income of over Rs 52 000 The Life Fund of the Company stood at the same date at over Rs. 50,000 The expenses of the office are moderate and mortality experience extremely favourable. During the year 1934, the Company completed business of over Rs 5,40,000 with a premium income of over Rs 26 000 The first quinquennial valuation of the Company is in progress and the report of the Actuary expected to be placed before the Directors of the Company before the end of May 1935. From the steady progress of the Company during the last five years and the economical and efficient management of its affairs, it is not too much to hope that the valuation will disclose a very sound position

Insurance & Finance Review, Calcutta.

ದಿ ಪೊಪ್ಯುಲರ್ ಇನ್ಸ್ಯೂರೆನ್ಸ್ ಕಂಪೆನಿ ಲಿಮಿಟೆಡ್—ಮಂಗಳೂರು [illegible] ವಿಮಾ ಕಂಪೆನಿಯವರು ಕಳುಹಿಸಿರುವ ವರದಿಯನ್ನು [illegible] ಸ್ವೀಕರಿಸುತ್ತೇವೆ. ಸ್ಥಾಪಿತವಾಗಿ ಐದು ವರ್ಷಗಳೊಳಗಾಗಿಯೇ ಈ ಕಂಪೆನಿಯು ಬಹಳ ವಹಿವಾಟುಗಳನ್ನು ನಡೆಸುವುದು ಸಂತೋಷಕರವಾದ ಸಂಗತಿ. [illegible] ಕಂಪೆನಿಯು ಎಷ್ಟು ಚೆನ್ನಾಗಿ ಕೆಲಸಮಾಡುತ್ತಿದೆಯೆಂಬುದು ಗೊತ್ತಾಗುವುದು. ಪಶ್ಚಿಮ ಕರಾವಳಿಯಲ್ಲಿ ಸ್ಥಾಪಿತವಾದುದು ಇದೊಂದೇ ವಿಮಾ ಕಂಪೆನಿ. [illegible] ಸಂಚಾಲಕರಿಗೆ ಧನ್ಯವಾದಗಳನ್ನರ್ಪಿಸಬೇಕು. ಈ ಕಂಪೆನಿಯು ದಿನೇ ದಿನೇ ಅಭಿವೃದ್ಧಿ ಹೊಂದಿ ಭರತಖಂಡದಲ್ಲಿ ಒಂದು ಪ್ರಧಾನ ಸ್ಥಾನವನ್ನು ಹೊಂದಿ ನಮ್ಮ ದೇಶದಿಂದ [illegible] ಇಲ್ಲಿ ನಿಲ್ಲಿಸುವರೆ ಶಕ್ತಿಯುಳ್ಳದಾಗಲೆಂದು ಹಾರೈಕೆ.

ರಾಷ್ಟ್ರಬಂಧು.

ಮಂಗಳೂರಿನಲ್ಲಿ ಸ್ಥಾಪಿತವಾಗಿರುವ ದಿ ಪೊಪ್ಯುಲರ್ ಇನ್ಸ್ಯೂರೆನ್ಸ್ ಕಂಪೆನಿಯು ವರ್ಷ ವರ್ಷ ಉನ್ನತಸ್ಥಿತಿಗೆ ಬರುತ್ತಿರುವುದು ಶ್ಲಾಘನೀಯವಾದ ವಿಚಾರ. ಈ ಕಂಪೆನಿಯು ಸ್ಥಾಪಿತವಾದುದು ಐದು ವರ್ಷಗಳ ಹಿಂದೆ; ಅಂದಿನಿಂದ ಜೀವವಿಮ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಹೆಸರುವಾಸಿ ಪಡೆಯುತ್ತಲೇ ಇದೆ × × × × × . ಈ ಕಂಪೆನಿಯು ಐದನೆ ವಾರ್ಷಿಕ ವರದಿಯು ತೃಪ್ತಿಕರವಾಗಿದೆ. ಕರ್ನಾಟಕದ ಈ ಕಂಪೆನಿಯು ವರ್ಷ ವರ್ಷ ಅಭಿವೃದ್ಧಿ ಹೊಂದಲೆಂಬುದೇ ನಮ್ಮ ಹಾರೈಕೆ

'ಪ್ರಜಾಮತ,' ಮದರಾಸು.

Wanted influential Agents in unrepresented areas on liberal terms.

ಈಜಿಪ್ಟ್‌ನಲ್ಲಿ ರಬ್ಬರಿನ ಹಾವು ನಾಲ್ಕು ಪ್ರಾಣಗಳನ್ನು ನುಂಗಿತು!

ಬೇಕೆಂದು ವನಮೃಗವಾದ ಮನುಷ್ಯ—

ಅಂದರೆ ಸ್ವೇಚ್ಛಾನುಸಾರ ವನಗಳನ್ನು ಹೊಕ್ಕು ಅಲ್ಲಿ ಮೃಗಗಳಂತೆ ಜೀವನ ನಡೆಸಿದ ಮನುಷ್ಯನೊಬ್ಬನಿರುವನೆಂದು 'ಟೈಮ್ಸ್' ಪತ್ರಿಕೆಯಿಂದ ತಿಳಿಯಲು ನಮಗೆ ಆಶ್ಚರ್ಯವಾಗುತ್ತದೆ. ಈ ವಾರ್ತೆಯನ್ನು ಪ್ರಕಟಿಸಲು ಮಹಾ ಸಂತೋಷವೆನಿಸುತ್ತದೆ ಬುಡಾಪೆಸ್ಟ್‌ನಲ್ಲಿಯ ಸೊಲಿಮಾರ್ ಎಂಬಲ್ಲಿನ ವನವೊಂದರಲ್ಲಿ ಬೇಟೆಗಾರರು ಕೆಲವರು ಬೇಟೆಯಾಡುತ್ತಿದ್ದಾಗ, ಹರಕುಮುರುಕು ಬಟ್ಟೆಯನ್ನುಟ್ಟುಕೊಂಡಿದ್ದ ಮನುಷ್ಯದೇಹಿ ಪ್ರಾಣಿಯೊಂದು ದೊಡ್ಡ ಮರವನ್ನು ಅಳಿಲಿನಂತೆ ಹತ್ತಿ ಕಣ್ತಪ್ಪಿಸಿಕೊಂಡಿತು ಅವರಿಗೆ ಆಶ್ಚರ್ಯವಾಯಿತು ಅವರು ಪೇಟೆಗೆ ಹೋಗಿ ಈ ವಿಷಯವನ್ನು ಪೋಲೀಸರಿಗೆ ತಿಳಿಸಿದರು. ಎರಡು ದಿನಗಳ ತನಕ ಈ ಪ್ರಾಣಿಯ ಪತ್ತೆಯ ಕೆಲಸವು ನಡೆಯಿತು. ಕಟ್ಟಕಡೆಗೆ ಒಂದು ದೊಡ್ಡ ಮರದ ಕೊಂಬೆಯ ಎಡೆಯಲ್ಲಿನ ದೊಡ್ಡ ಗೂಡಿನಲ್ಲಿ ಆ ಪ್ರಾಣಿಯು ಕಾಣಸಿಕ್ಕಿತು ಹಿಡಿದರು. ಅದು ಮನುಷ್ಯನಾಗಿತ್ತು ಮಾತನಾಡಿತು ತನ್ನ ಉದ್ದುದ್ದ ಗಡ್ಡವನ್ನು ತೋರಿಸಿತು ತನ್ನ ಆತ್ಮಕಥೆಯನ್ನು ಹೀಗೆಂದು ತಿಳಿಸಿತು "ನನ್ನ ಹೆಸರು ಕರಿ ರಿಟ್‌ಟಿರ್ ಬವೇರಿಯನ್ ಕುಲದವನು. ಯುದ್ಧದ ಸಮಯದಲ್ಲಿ ಹಂಗೇರಿಗೆ ಬಂದೆನು ೨೦ ವರ್ಷಗಳ ಹಿಂದೆ ನನ್ನ ಕುಲಗೃಹವು ಸುಟ್ಟುಹೋಗುವುದರಲ್ಲಿದ್ದಿತು ಆಗ ಥಟ್ಟನೆ ಮಳೆ ಬಂದು ಬೆಂಕಿಯು ಆರಿತು ಉಪಕಾರಸ್ಮರಣಾರ್ಥವಾಗಿ ನನ್ನ ಹಿರಿಯರು ಕುಟುಂಬದ ಕಿರಿಯನು ೧೦ ವರ್ಷಗಳ ವರೆಗೆ ಕಾಡಿನಲ್ಲಿ ವಾಸಮಾಡಬೇಕೆಂಬ ಹರಿಕೆ ಹೇಳಿದರು ಅದೇ ಮೇರೆಗೆ ನಾನು ಇಲ್ಲಿಗೆ ಬಂದೆನು. ಸ್ವಲ್ಪ ಕಾಲದಲ್ಲಿ ಈ ಹರಿಕೆಯು ಮುಗಿಯುವುದಾದರೂ, ಈ ಮೃಗಸಮಾನ ಜೀವನವು ಉತ್ತಮವೆಂದೇ ತೋರುತ್ತದೆ"

48 ಅಂಕ ನೀರು—48 ರೂಪಾಯಿ ದಂಡ

ಹಾಲಿಗೆ ನೀರನ್ನು ಮಿಶ್ರಮಾಡಿ ವಿಕ್ರಯಿಸುವವರು ಜಾಸ್ತಿಯಾಗಿರುವುದರಿಂದಲೇ ಹಿಂದೂದೇಶದಲ್ಲಿ ಗೋರಕ್ಷಣೆಯ ವಿಚಾರವು ಅಧೋಗತಿಯನ್ನೈದುತ್ತಿದೆ. ಹಾಲಿಗೆ ಅಲ್ಪವಾದರೂ ನೀರು ಬೆರಸದೆ ಇದ್ದರೆ ಧನವು ಹಾಲನ್ನೇ ಕೊಡುವುದಿಲ್ಲವೆಂಬ ಹಿಂದೂಶಾಸ್ತ್ರ(?)ದನ್ವಯ ರಾಜಮಹೇಂದ್ರಿಯಲ್ಲಿ ಗುಬ್ಬಿಯಮ್ಮ ಎಂಬವಳು ದಿನಂಪ್ರತಿ ಹಾಲಿಗೆ ನೀರು ಬೆರಸಿದಳು. ಒಂದು ದಿನ ಸ್ಯಾನಿಟರಿ ಇನ್ಸ್‌ಪೆಕ್ಟರ್‌ರು ಇವಳನ್ನು ಹಿಡಿದರು. ಇವಳ ಕೈಯಲ್ಲಿದ್ದ ಹಾಲನ್ನು ಶೋಧಿಸಿದರು ಪ್ರತ್ಯಕ್ಷವಾಗಿ ಶೇಕಡ ೪೮ ಅಂಶ ನೀರು ಅದರಲ್ಲಿತ್ತು. ಸ್ಟೇಶನರಿ ಸಬ್‌ಮೆಜಿಸ್ಟ್ರೇಟರಲ್ಲಿ ತನಿಖೆ ನಡೆಯಿತು ಧರ್ಮಾತ್ಮರಾದ ಅವರು ೪೮ ಅಂಶ ನೀರು ಬೆರಸಿದುದಕ್ಕಾಗಿ ೪೮ ರೂಪಾಯಿ ದಂಡವನ್ನು ಅವಳಿಗೆ ವಿಧಿಸಿದರು

ರಬ್ಬರಿನ ಹಾವು ನಾಲ್ಕು ಪ್ರಾಣಗಳನ್ನು ನುಂಗಿತು!

ಯಾರೂ ಆಶ್ಚರ್ಯಪಡಬಾರದು ಅಲ್ಲದೆ ಅವಸರಗೊಂಡು ಈ ವಾರ್ತೆಯು "ಶುದ್ಧ ಸುಳ್ಳು" ಎಂದು ತೀರ್ಮಾನವನ್ನೂ ಕೊಡಬಾರದು. ಮೊದಲು ಈ ಕಥೆಯನ್ನು ಓದಿಕೊಳ್ಳಿ ಈಜಿಪ್ಟಿನ ಟಂಟಾ ಎಂಬಲ್ಲಿ ತಂಟೆ ಮಹಮ್ಮದ್ ಇಬ್ರಾಹಿಮ್ ಎಂಬ ೧೨ ವರ್ಷ ಪ್ರಾಯದ ಬಾಲಕ ರಬ್ಬರಿನ ಒಂದು ಹಾವನ್ನು ಅಂಗಡಿಯಲ್ಲಿ ಪಡೆದು ಮನೆಗೆ ತಂದ ಹುಡುಗ ಮೊದಲು ತಾಯಿಯ ಬಳಿಗೆ ಹೋದ ಅವಳು ಅಡಿಗೆಮನೆಯಲ್ಲಿ ದೊಡ್ಡ ಪಾತ್ರೆಯೊಂದರಲ್ಲಿ ನೀರನ್ನು ಕಾಯಿಸುತ್ತಿದ್ದಳು ಇಬ್ರಾಹಿಮನು ಮೆಲ್ಲನೆ ಅವಳ ಹಿಂದೆ ಹೋಗಿ ಹಾವನ್ನು ತಾಯಿಯ ಮೇಲೆಸೆದುಬಿಟ್ಟ! ತಾಯಿಯು ಗಾಬರಿಗೊಂಡಳು! ಚಟ್ಟನೆ ಚೀರಿಕೊಂಡಳು ಕಾಲ್ತಪ್ಪಿ ಥಟ್ಟನೆ ಕುದಿಯುವ ನೀರಿಗೆ ಬಿದ್ದಳು ಈ ಗಲಭೆಯನ್ನು ಕೇಳಿ ಅವಳ ಇಬ್ಬರು ಹೆಣ್ಣುಮಕ್ಕಳು ಓಡಿಬಂದರು ಒಬ್ಬಳು ತಾಯಿಯ ಬಳಿಯಲ್ಲಿದ್ದ ಹಾವನ್ನು ಕಂಡು ಕಿಟಕಿಯೊಂದರ ಎಡೆಯಿಂದ ಕೆಳಗೆ ಹಾರಿ ನೆತ್ತರು ಕಾರಿ ಪ್ರಾಣಬಿಟ್ಟಳು. ಮತ್ತೊಬ್ಬಳು ಭಯದಿಂದಲೇ ಮೂರ್ಛೆಹೊಂದಿದಳು ತಂದೆಯು ಕಚೇರಿಯಿಂದ ಬಂದನು ಅವನಿಗೆ ಮಗನ ಮೇಲೆ ಸಿಟ್ಟೇರಿತು ಮಗನಿಗೆ ಪಶ್ಚಾತ್ತಾಪವುಂಟಾಯಿತು ತನ್ನ ಮೈಮೇಲೆಲ್ಲಾ ಪೆಟ್ರೋಲನ್ನು ಹೊಯ್ದುಕೊಂಡು ಬೆಂಕಿಕೊಟ್ಟು ಪ್ರಾಣತ್ಯಾಗ ಮಾಡಲೆತ್ನಿಸಿದನು

ಇನ್ನು ಭಯಪಡುವ ಅವಶ್ಯಕತೆಯಿಲ್ಲ!—

ಏಕೆಂದು ಗೊತ್ತೇ? ಗಂಡಹೆಂಡಿರ ಪ್ರೇಮದ ಪ್ರವಾಹಶಕ್ತಿಯೆಷ್ಟೆಂದು ತೋರಿಸುವ ಒಂದು ಯಂತ್ರವು ಸಿದ್ಧವಾಗಿದೆ ಈ ಯಂತ್ರದ ಹೆಸರು Termocouple (ಟರ್ಮೋಕಪ್‌ಲ್) ಎಂದು. ವಿವಾಹವಾಗಲಿರುವ ವಧು ಮತ್ತು ವರರನ್ನು ತಂದು ಅವರ ಕೈಯಲ್ಲಿ ಈ ಯಂತ್ರದ ಸರಳನ್ನು ಕೊಟ್ಟರೆ ಸರಿ ಅವರಿಬ್ಬರ ಪ್ರೇಮವು ಒಂದಾಗಬಹುದೋ ಅಂದರೆ—ಅವರು ಪರಸ್ಪರ ಪ್ರೇಮವಿಶ್ವಾಸಗಳಿಂದ ನಡೆದುಕೊಳ್ಳುವರೋ— ಎಂದು ಸ್ಪಷ್ಟವಾಗುತ್ತದೆ. ವಿದ್ಯುತ್ ಸಾಮಗ್ರಿಗಳನ್ನು ವಿಕ್ರಯಿಸುವ ಅಂಗಡಿಗೆ ಹೋಗಿ ಒಂದು ಬೆಟ್ಟರಿಯನ್ನು ಕೇಳಿದರೆ, ಆ ಅಂಗಡಿಗಾರನು ಬೇಕಾದ ಬೆಟ್ಟರಿಯನ್ನು ತೆಗೆದು ಅದನ್ನು ವಿದ್ಯುಚ್ಛಕ್ತಿಸೂಚಕ ಯಂತ್ರಕ್ಕೆ ತಾಗಿಸಿ, ಆ ಬೆಟ್ಟರಿಯ ಶಕ್ತಿಯನ್ನು ನೋಡುವನು. ಅಂತೆಯೇ ಹುಡುಗನೂ ಹುಡುಗಿಯೂ ಈ ಯಂತ್ರದಲ್ಲಿ ತಂತಮ್ಮ ಪ್ರೇಮದ ಭರವನ್ನು ಪರೀಕ್ಷಿಸಬಹುದು ಮುಂದಕ್ಕೆ ಗಂಡನು ಹೆಂಡತಿಯನ್ನು ಬಿಡುವ ಪ್ರಸಂಗವಾಗಲೀ ಹೆಂಡತಿಯು ಗಂಡನನ್ನು ಬಿಡುವ ಪ್ರಸಂಗವಾಗಲೀ ಇರಲಾರದೆಂದು ಊಹಿಸಬಹುದು ಏಕೆಂದರೆ ಇಬ್ಬರ ಪ್ರೇಮ ಪ್ರಭಾವವನ್ನರಿತೇ ಅಲ್ಲವೇ ವಿವಾಹ ಮಾಡುವುದು? ಮುಂದಕ್ಕೆ ವಿವಾಹವಾಗಲಿರುವ ತರುಣ ತರುಣಿಯರು ಈ ಯಂತ್ರವನ್ನುಪಯೋಗಿಸಿದರೆ! ದೇಹಕ್ಕೂ ದೇಶಕ್ಕೂ ಹಿತವಿದೆ!

ಚರ್ಚಿಲ್ಲರ ಕಥೆ

ಚರ್ಚಿಲ್ಲರು ಯಾರೆಂದು ಭಾರತೀಯರಿಗೆ ಪೂರ್ಣ ತಿಳಿದಿದೆ ಹಿಂದೂದೇಶಕ್ಕೆ ಸ್ವಾತಂತ್ರ್ಯವನ್ನು ಕೊಟ್ಟರೆ ಬ್ರಿಟಿಷರಿಗೆ ದಿನಕ್ಕೆರಡು ಸಾರಿ ಉಪವಾಸವೆಂದು ಹೇಳುವ ದೂರದೃಷ್ಟಿಯುಳ್ಳವರು ಅವರು. ಬಹು ರಾಜನೀತಿಜ್ಞರೆಂದು ಖ್ಯಾತಿಪಡೆದವರು ಸ್ವಭಾವವು ಒರಟಾದರೂ ಬಿಡಲಿಕ್ಕಿಲ್ಲವೆಂದು ಸತ್ಯದ ಆಗ್ರಹವನ್ನು ಹಿಡಿದು ಚಡಪಡಿಸುವ ಸ್ವಭಾವವುಳ್ಳವರು ರಾಜಕೀಯ ಶಾಸ್ತ್ರದಲ್ಲಿ ಪ್ರಾಜ್ಞರು ಅಂತಹವರ ಕಥೆಯೇನೆಂದು ಗೊತ್ತೇ? ಅವರು ತನ್ನ ಭೂಮಿಯನ್ನು ಸ್ವತಃ ಉಳುವರು ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ತೋಟದ ಕೆಲಸದಲ್ಲಿ ಚಿತ್ತವಿಡುವರು ಅದರ ಎಲ್ಲಾ ಕೆಲಸವನ್ನು ತಾವೇ ಮಾಡುವರು ವಿಚಿತ್ರವೆಂದರೆ—ಚರ್ಚಿಲ್ಲರು ಗೋಡೆ ಕಟ್ಟುವುದರಲ್ಲಿ ಬಹು ನಿಪುಣರು. ಇಟ್ಟಿಗೆಗಳ ಗೋಡೆಗಳಿಗೆ ಸಿಮೆಂಟನ್ನು ಗಾರೆಯನ್ನು ಉಪಯೋಗಿಸಿ ಕಟ್ಟಡಗಳನ್ನು ಕಟ್ಟುವುದರಲ್ಲಿ ಅವರಂತಹ ಬುದ್ಧಿಶಾಲಿಗಳು ಇಂಗ್ಲಾಂಡಿನಲ್ಲಿ ಕಡಮೆಯಂತೆ ಒನ್ನು ಅಲ್ಲಿಯ ಬ್ರಿಕ್‌ಲೇಯರ್ಸ್ ಸಂಘದವರು ಇವರನ್ನು ತಮ್ಮ ಕೆಲಸಕ್ಕೆಂದು ಕರೆದರು. ಇವರು ಒಪ್ಪಿದರು

ಆದರೆ ಇತರ ರಾಜಕೀಯ ಕೆಲಸಗಾರರು ಚರ್ಚಿಲ್ಲರಿಗೆ ಆ ವೃತ್ತಿಯು ಬೇಡವೆಂದು ಆಗ್ರಹಕೊಟ್ಟರು

ಮರಣದ ಮೇಲೆ ವಿಜಯ

ಹೊಲ್ಲಿವುಡ್ಡಿನ ಡಾ॥ ರಾಲ್ಫ್ ವಿಲ್ಲಿಯಾರ್ಡ್ ಎಂಬವರು ಮರಣದ ಮೇಲೆ ವಿಜಯವನ್ನು ಹೊಂದಿದ್ದಾರೆ ಒಂದು ಹಂದಿಯನ್ನು ಹಿಡಿದು, ಅದರ ಹೃದಯದ ತಾಕತ್ತು ಮಾತ್ರ ನಂದಿಹೋಗದಂತೆ ಮಾಡಿ, ಅದನ್ನು ಶೀತದಿಂದ ಕೊಂದು ಅದನ್ನು ಗಾಜಿನ ಪೆಟ್ಟಿಗೆಯೊಂದರಲ್ಲಿ ಇಟ್ಟರು ೪ ಮೂರು ದಿನಗಳಾದ ನಂತರ ಆ ಹಂದಿಯ ಹೃತ್ಕಮಲವನ್ನು ಪರಿಸ್ಪರ್ಶಿಸಿದಾಗ, ಆ ಅದೃಷ್ಟಶಾಲೀ ಹಂದಿಯು ಒದರಿತು. ಕ್ರಮೇಣ ಅದರ ಹೃದಯಶಾಖವನ್ನು ಹೆಚ್ಚಿಸಲಾಗಿ, ಆ ಹಂದಿಯು ಮೆಲ್ಲನೆ ಚೇತರಿಸಿಕೊಂಡು, ಎದ್ದು ತನ್ನ ನಿತ್ಯವೃತ್ತಿಗೆ ತೊಡಗಿತು ಮನುಷ್ಯನ ಹೃದಯವು ಕೂಡಾ ಕೆಲಸ ಮಾಡಲು ಸಮ್ಮತಿಸುವುದಾದರೆ, ಅವನು ಸತ್ತ ಮೇಲೆಯೂ ಅವನಿಗೆ ಜೀವದಾನ ಮಾಡಬಹುದೆಂದು ಈ ಡಾಕ್ಟರರು ತಿಳಿಸಿರುವರು ವೃದ್ಧಾಪ್ಯವು ಪ್ರಾಪ್ತವಾಗದಂತೆ ಇವರೊಂದು ಮದ್ದನ್ನು ಕಂಡುಹಿಡಿಯುತ್ತಿದ್ದರೆ ನಮ್ಮ ಆಶೀರ್ವಾದಕ್ಕೆ ಪಾತ್ರರಾಗುತ್ತಿದ್ದರು.

ಮಾನಸಶಕ್ತಿ—

—ಎಂದರೆ ಮನಸ್ಸಿನ ಶಕ್ತಿ ಇದು ಇದೆಯೋ ಇಲ್ಲವೋ ಎಂದು ನಮ್ಮಲ್ಲಿ ಹೆಚ್ಚಿನವರಿಗೆ ತಿಳಿದಿಲ್ಲ ಆದರೆ ಮನಸ್ಸಿನ ಪ್ರವಾಹಶಕ್ತಿಯೆಷ್ಟೆಂದು ಒಬ್ಬರು ಇಟಲಿ ದೇಶದವರು ತಿಳಿಸಿರುವರು ಕೆಲವು ಫಕೀರರು ತಮ್ಮ ಮಾನಸಿಕಶಕ್ತಿಯಿಂದ ಆಚರಣೆಗಳನ್ನು ಮೇಲಕ್ಕೆತ್ತುವುದನ್ನು ತಕ್ಕಡಿಗಳನ್ನು ಹೇಳಿಕೆಗೆ ಮಾಡುವುದನ್ನೂ ನೋಡಿದ ಇಟಲಿಯ ಮಾನಸಶಾಸ್ತ್ರಜ್ಞರೊಬ್ಬರು ಆ ಬಗ್ಗೆ ಒಂದು ಪರಿಶೋಧನೆಯನ್ನು ನಡೆಸಿದರು ಅವರಿಗೆ ತಿಳಿದುಬಂದುದೇನೆಂದರೆ—ಮನುಷ್ಯನ ಮಾನಸಶಕ್ತಿಯು ತೀಕ್ಷ್ಣವಾದ ವಯರ್‌ಲೆಸ್ ಯಂತ್ರಕ್ಕಿಂತಲೂ ಹರಿತವಿದೆ ಈ ವಿಷಯವು ಇಷ್ಟರ ತನಕ ಯಾರಿಂದಲೂ ಕಂಡುಹಿಡಿಯಲ್ಪಡಲಿಲ್ಲ ದೇಹಸಂಬಂಧವಾದ ಚೈತನ್ಯದಿಂದಾಗಿ ಮನುಷ್ಯನ ಮನಃಶಕ್ತಿಯು ಉತ್ಪನ್ನವಾಗುವುದು ಈ ಮನಃಶಕ್ತಿಯನ್ನು ಗಾಳಿಯಲ್ಲಿ ಎಷ್ಟು ದೂರದ ವರೆಗೂ ಹರಡಲು ಬಿಡಬಹುದು ಮಾತ್ರ ಆ ವ್ಯಕ್ತಿಗೆ ಅಷ್ಟು ಚಿತ್ತೈಕಾಗ್ರತೆಯು ಬೇಕು ರಷ್ಯದ ವಿಜ್ಞಾನಪರಿಷತ್ತಿನವರು ಶೋಧ ನಡೆಸಿ ಮನುಷ್ಯನ ಮೆದುಳಿನ ನರಗಳ ಕೇಂದ್ರದಿಂದ ಒಂದು ವಿಲಕ್ಷಣವಾದ ಅಲೆಯು ಹೊರಡುತ್ತದೆಂದೂ ಇದು ಗಾಳಿಯಲ್ಲಿ ೩೦೦೦ ಕಿಲೋಮಿಟರ್‌ಗಳಷ್ಟು ವಿಸ್ತೀರ್ಣಕ್ಕೆ ಹರಡುತ್ತದೆಂದೂ ಕಂಡುಹಿಡಿದಿರುವರು

ಅತ್ತೆಗೊಂದು ಕಾಲ,—
ಸೊಸೆಗೊಂದು ಕಾಲ.

ಇಂದು ಅತ್ತೆಗೆ ಬಂದ ಸಂಕಷ್ಟವು ನಾಳೆ ಸೊಸೆಗೆ ಬರುವುದಿದೆ ಆದುದರಿಂದ ಅತ್ತೆ ಮತ್ತು ಸೊಸೆಯರು ಜಗಳವಾಡದ ನೆಮ್ಮದಿಯಿಂದಿರುವುದು ಲೇಸು. ಶಾಲೆ ಕಾಲೇಜುವರಿಗೆ ಈ ಕಾಲ ಬರಲಾರದೆಂದು ನಾವು ಭಾವಿಸಿದ್ದೆವು ಆದರೆ ಮಾಡುವುದೇನು?—ಕಾಲಚಕ್ರವು ತಿರುಗಿ ನಿಂತಿದೆ ಕರಾಚಿಯಲ್ಲಿ ನಡೆದ ಗುಂಡೆಸೆತದ ಕುರಿತಾಗಿ ವಿಚಾರ ವಿನಿಮಯಮಾಡಿಕೊಳ್ಳುವುದಕ್ಕಾಗಿ ಮುಂಬಾಯಿ ಕಾಲೇಜಿಯವರು ಸಿಂಧ್ ದೇಶಕ್ಕೆ ಹೋಗಲಿದ್ದರು ಈ ವಾರ್ತೆಯು ಮುಂಬಾಯಿ ಪೋಲೀಸ್ ಕಮಿಷನರಿಗೆ ತಿಳಿದು ಬಂದು, "ಸ್ವಾಮಿ ಕಾಲೇಜಿಯನರೇ, ೧೯೩೬ನೆ ಇಸವಿಯ ಸ್ಪೆಶಿಯಲ್ ಎಮರ್ಜೆನ್ಸಿ ಪವರ್ಸ್ ಏಕ್ಟ್ ಮೇರೆಗೆ ತಾವು ಸಿಂಧಿಗೆ ಕಾಲಿಡಬಾರದು" ಎಂಬ ನೋಟೀಸನ್ನು ಅವರು ಕಾಲೇಜಿಯವರಿಗೆ ಕಳುಹಿಸಿದರು ಕಾಲೇಜಿಯವರು "ಅಸ್ತು" ಎಂದರು

ಕ್ಷೌರಕತ್ತಿಯ ನೂತನ ಉಪಯೋಗ

ಕ್ಷೌರಕತ್ತಿಯ ಉಪಯೋಗವೇನೆಂದು ನಿಮ್ಮೆಲ್ಲರಿಗೂ ತಿಳಿದಿದೆ ನಮ್ಮ ಹಿರಿಯರ ಕಾಲದಿಂದಲೂ ಗಡ್ಡ ಮತ್ತು ಮೀಸೆಗಳ ಕ್ಷೌರಮಾಡುವುದೇ ಅದರ ಉಪಯೋಗವಾಗಿತ್ತು ಈಗಲೂ ಅದು ಅದೇ ವೃತ್ತಿಯಲ್ಲಿದೆಯಾದರೂ ಡಿಲ್ಲಿಯಲ್ಲಿ ಕ್ಷೌರಕತ್ತಿಯ ನೂತನ ಉಪಯೋಗವನ್ನು ಒಬ್ಬ ಕ್ಷೌರಿಕನು ಕಂಡುಹಿಡಿದಿರುವನು ಡಿಲ್ಲಿಯಲ್ಲಿ ಸ್ವಯಂಸೇವಕ ಪಡೆಯವರು ಒಂದು ದಿನ ಅಲ್ಲಿಯ ಕ್ಷೌರಿಕರಿಗೂ ಸ್ವದೇಶೀಯವನೊಬ್ಬನಿಗೂ ಜಗಳವಾಯಿತು ಕ್ಷೌರಿಕನು ಬಾಯಿಮುಚ್ಚಿಕೊಂಡು ಮನೆಗೆ ನಡೆದನು ಕೆಲವು ದಿನಗಳು ಹೋಗುತ್ತಲೇ ಈ ಕ್ಷೌರಿಕನೊಡನೆ ಜಗಳವಾಡಿದ ಸ್ವಯಂಸೇವಕನು ಇವನ ಬಳಿಗೆ ಬಂದನು ಕ್ಷೌರಿಕನು ಅವನನ್ನು ಕಟ್ಟೆಯ ಮೇಲೆ ಕುಳ್ಳಿರಿಸಿದನು ಹರಿತವಾದ ಹೊಸ ಕ್ಷೌರಕತ್ತಿಯನ್ನು ಆಗಲೇ ತೆಗೆದು ಬಡಿಸಿ ಕಾಲೇಜಿನವನ ಮೂಗನ್ನು ಹಿಡಿದು ಅದರ ಒಂದು ಸಣ್ಣ ತುಂಡನ್ನು ತೆಗೆದುಬಿಟ್ಟನು ಕ್ಷೌರಿಕನ ಹೊಸ ನಾಥು ಮೂಗು ಕತ್ತರಿಸಿದವನ ಹೆಸರ ಅರಿದಯಾಳ್ ನೆನಪಿರಲಿ!

ಇಷ್ಟುಕಾಲ ಬದುಕಿ ಫಲವೇನು?

ಎಂಬುದೇ ನಮ್ಮ ಪ್ರಶ್ನೆ! ಕೆಂಟಕಿಯಲ್ಲಿ ೧೨೦ ವರ್ಷ ಪ್ರಾಯದ ಒಬ್ಬನು ೧೧೫ ವರ್ಷ ಪ್ರಾಯದ ತನ್ನ ಸಹೋದರನೊಡನೆ ಜಾತ್ರೆಯಲ್ಲಿ ಕುಳಿತಿರುವ ಫೋಟೋ ತೆಗೆದಾಗ ಆ ಪ್ರಾಂತ್ಯದಲ್ಲಿ ಒಟ್ಟು ೧೭ ಜನರು ನೂರು ವರ್ಷಗಳನ್ನು ದಾಟಿ ಬದುಕಿದವರೆಂದು ತಿಳಿದುಬಂತು ಮೇಲೆ ಹೇಳಿದ ಇವರಿಬ್ಬರೂ ಯುವಕರಂತೆ ದೃಢಕಾಯರಾಗಿರುತ್ತಾರೆ ಕಣ್ಣಿಗೆ ಕನ್ನಡಕವಿಲ್ಲ—ಕೈಗೆ ಊರುಗೋಲು ಇಲ್ಲ—ಮೈಯು ಸುಕ್ಕುಗೊಂಡಿರುವುದಿಲ್ಲ!—ಈ ಜನರೆಲ್ಲಾ ಇಷ್ಟಿಷ್ಟು ವರ್ಷ ಬದುಕುವುದರಿಂದಾಗಿ ಈಗಿನ ಯುವಕರಿಗೆ ಆಯುಷ್ಯ ಕಡಿಮೆಯಾಗಿರಬಹುದು!

೧೯೩೧ರಲ್ಲೇ ಎಚ್ಚರಿಸಿದ್ದರಂತೆ!

ಭೂಗರ್ಭಪರಿಶೋಧಕರಾದ ಡಾ॥ ವೆಸ್ಟರು ೧೯೩೧ರಲ್ಲಿ ಒಂದು ವರದಿಯನ್ನು ಬರೆದು ಕ್ವೆಟ್ಟಾದಲ್ಲಿ ಆಗಾಗ್ಗೆ ಭೂಕಂಪವಾಗುವ ಸಂಭವವಿರುವುದರಿಂದ ಸರಕಾರದ ಕಟ್ಟಡಗಳನ್ನು ಆದಷ್ಟು ಧೃಡವಾಗಿಯೂ ಗಟ್ಟಿಯಾಗಿಯೂ, ಭೂಕಂಪ ಬಾಧೆಯಿಂದ ದೂರವಾಗುವಂತೆಯೂ ಕಟ್ಟಬೇಕೆಂದು ಸೂಚಿಸಿದ್ದರು ಅವರ ಸೂಚನೆಯು ವರದಿಯು ಈಗ ಪ್ರಕಟವಾದೆ ಅಂದು ಕೊಟ್ಟ ಎಚ್ಚರಿಕೆಯನ್ನು ಅಲಕ್ಷಿಸಿದುದರಿಂದಾಗಿಯೇ ಇಂತಹ ದುರ್ಘಟನೆಯು ಒದಗಿತಂತೆ, ಮುಂದಕ್ಕೆ ಕ್ವೆಟ್ಟಾದಲ್ಲಿ ಅರ್ಥಕ್ವೇಕ್‌ಪ್ರೂಫ್ ಕಟ್ಟಡಗಳು ಕಟ್ಟಲ್ಪಡುವುವು.

ಭೂಕಂಪವಾಗುವುದೇ?

ಕಲ್ಲಿಕೋಟೆಯ ಒಂದು ಕಡೆಯಲ್ಲಿ ಸುಮಾರು ಒಂದು ಫರ್ಲಾಂಗು ವರೆಗೆ ಭೂಮಿಯಲ್ಲಿ ಬಿರುಕು ಬಿದ್ದಿದೆ ಭೂಕಂಪವಾಗುವ ಪೂರ್ವಸೂಚನೆಯಿದೆಂದು ಕೆಲವರ ಹೇಳಿಕೆ. ಆದರೆ ಪರಿಶೋಧಿಸಿದ್ದಲ್ಲಿ, ಇಲ್ಲಿ ಇಂತಹ ಬಿರುಕುಗಳು ಬೀಳುವುದು ಸ್ವಭಾವಿಕವೆಂದು ತಿಳಿದುಬಂದಿದೆಯೆಂಬುದು ಸಂತೋಷದ ಸುದ್ದಿ! ದೇವರು ಕಾಪಾಡಲಿ!

ದಿ ಸೌತ್ ಇಂಡಿಯಾ ಕೋ-ಒಪರೇಟಿವ್ ಇನ್‌ಶೂರೆನ್ಸ್ ಸೊಸೈಟಿ,

ಲಿಮಿಟೆಡ್.

ಮುಖ್ಯ ಕಚೇರಿ:— ಮದ್ರಾಸು

ಪೋಸ್ಟು ಬಾಕ್ಸ್ ನಂಬ್ರ 182

ಜೀವವಿಮೆಯ ಉತ್ಕೃಷ್ಟ ಪ್ರಯೋಜನಗಳನ್ನೆಲ್ಲ ಕೊಡುತ್ತದೆ

'ರಿಜಿಸ್ಟ್ರಾರ್ ಓಫ್ ಕೊಓಪರೇಟಿವ್ ಸೊಸೈಟೀಸ್' ಇವರ ಮೂಲಕ, ಸರಕಾರದಿಂದ ಆಡಳಿತೆಯ ಮೇಲ್ವಿಚಾರವೂ ಲೆಕ್ಕದ ಪರಿಶೋಧನೆಯೂ ನಡೆಯುತ್ತದೆ

ಪ್ರೀಮಿಯಂ ದರಗಳು ಬಲು ಕಡಿಮೆ. ಪಾಲಿಸಿಯ ಶರತ್ತುಗಳು ಆಕರ್ಷಕ.

100ರಿಂದ 5000 ರೂಪಾಯಿ ವರೆಗಿನ ಪಾಲಿಸಿಗಳು ಸ್ವೀಕರಿಸಲ್ಪಡುತ್ತವೆ.

ಕಡಿಮೆ ಖರ್ಚಿನಿಂದ ಹೆಚ್ಚು ಲಾಭ

ಬೇಕಾಗಿದ್ದಾರೆ.

ದಕ್ಷಿಣ ಕನ್ನಡ, ಕೊಡಗು, ಮೈಸೂರು ಸಂಸ್ಥಾನಗಳಲ್ಲಿ ಇದರ ಪ್ರತಿನಿಧಿಗಳಾಗುವ ಏಜಂಟರು ಬೇಕು

ಆಯಾ ವಿಭಾಗಗಳಿಂದ ಅರ್ಜಿ ಮಾಡುವವರು ಹೆಚ್ಚಿನ ಮಾಹಿತಿಯ ಬಗ್ಗೆ ಕೆಳಗಿನ ಲೋಕಲ್ ಬೋರ್ಡುಗಳಿಗೆ ಬರೆದುಕೊಳ್ಳಬಹುದು

(1) ಸೆಕ್ರೆಟರಿ ಸೌತ್ ಕೆನರಾ ಸೆಂಟ್ರಲ್ ಕೊ-ಒಪರೇಟಿವ್ ಬ್ಯಾಂಕ್, ಲಿಮಿಟೆಡ್, ಮಂಗಳೂರು,

(2) ಕನ್ವೀನರ್ ಕೂರ್ಗ್ ಲೋಕಲ್‌ಬೋರ್ಡ್ ಓಫ್ ದಿ ಸೌತ್ ಇಂಡಿಯಾ ಕೊ ಒಪರೇಟಿವ್ ಇನ್ಶೂರೆನ್ಸ್ ಸೊಸೈಟಿ C/o ಕೂರ್ಗ್ ಕೊ-ಒಪರೇಟಿವ್ ಸೆಂಟ್ರಲ್‌ಬ್ಯಾಂಕ್, ಲಿಮಿಟೆಡ್ ಮಡಿಕೇರಿ, ಕೊಡಗು.

(3) ವೈ ಶ್ರೀನಿವಾಸಯ್ಯ ಕನ್ವೀನರ್ ಮತ್ತು ಗೌರವ ಕಾರ್ಯದರ್ಶಿ, ಫೆಡರಲ್ ಕೊ ಒಪರೇಟಿವ್ ಯೂನಿಯನ್ ಓಫ್ ಮೈಸೂರು ಸಿಟಿ, ಮೈಸೂರು

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಥ್ವಿಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ.

Distributors for South Kanara:—

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯು ಹಣಯನ್ನೇರಿ ಲೋಕದಲ್ಲಿ ಸಾವಿರಾರು ಜನರು ಅವನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಡಬ್ಬಿಯೊಂದಕ್ಕೆ ರೂ. 1

ಹೆಚ್ಚಿನ ವಿವರಕ್ಕೆ ಧನರ್ಧರ್ಮ ಹಾಗೂ ಡಬ್ಬಿಯ ಜೊತೆಯ ವಿವರ ಕಳುಹಿಸಲ್ಪಡುವ ಪುಸ್ತಕ

ಕಾಮಶಾಸ್ತ್ರವನ್ನೋದಿರಿ

Agents—Shah Company Mangalore.
" Pearl & Sons, Mangalore.

Atank Nigrah Pharmacy
Chickpet, Bangalore

ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ. ಅಜ್ಜಿ ಕಥೆಗಳು (ಸಚಿತ್ರ.)

ಚರಿತ್ರೆ ಮತ್ತು ಕಥೆಗಳು.

	ರೂ.	ಆ.	ಪೈ.
ನಾಲ್ಕನೇ ದರ್ಜೆ	0	6	0
ಮೂರನೇ ,,	0	4	6
ಎರಡನೇ ,,	0	4	0

ಸಮಾಜಶಾಸ್ತ್ರ.

	ರೂ.	ಆ.	ಪೈ.
ಐದನೇ ದರ್ಜೆ	0	8	0
ನಾಲ್ಕನೇ ,,	0	8	0
ಮೂರನೇ ,,	0	2	6

ಸಾಮಾನ್ಯ ವಿಜ್ಞಾನ.

	ರೂ.	ಆ.	ಪೈ.
ಎರಡನೇ ದರ್ಜೆ	0	8	0
ಮೂರನೇ ,,	0	8	0
ನಾಲ್ಕನೇ ,,	0	5	0
ಐದನೇ ,,	0	6	0

ಮೂರು ಕರಡಿಗಳು.
ಹೇನು ಸತ್ತು ಕಾಗೆ ಬಡವಾಯಿತು.
ಮೆಣಸಿನ ಕಾಳಪ್ಪ.
ಅಗಸನ ಮುದ್ದೆ.
ಇಲಿಗಳ ಥಕ್ಕ ಥೈ.
ಜಂಗಳ ದುಡ್ಡು.
ಗುಡುಗುಡು ಗುಮ್ಮಟ ದೇವರು.
ಒಡ್ಡನ ಓಟ.
(ಇವುಗಳ ಕ್ರಯ: 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿ ಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೆ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ—

ಶಾರದಾ ಛಾಪಖಾನೆ, ಮಂಗಳೂರು.

ಶಿವರಾಮ ಕಾರಂತ ವಿರಚಿತ

ಗ್ನಾನ

ಜ್ಞಾನದ ಮೇಲೆ ವ್ಯಂಗ ಟೀಕೆ.

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ.

ದಪ್ಪಗಿನ ಆಂಟಿಕ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ.

ಕ್ರೌನ್ ಆಕಾರದ ೧೮೩ ಪುಟಗಳು.

ಉತ್ತಮ ತರದ ಹಾಸ್ಯ.

ಬೆಲೆ: 1-4-0

ಶಾರದಾ ಛಾಪಖಾನೆ, ಮಂಗಳೂರು.

ಇವರಿಂದ ಪಡೆಯಬಹುದು.

ನಡೆದ ಕತೆಗಳು.

True Stories

ಹಿಡಿ ಮುಗಿಸುವ ಸಮಯ — ಮೂರೇ ನಿಮಿಷಗಳು

All Rights Reserved

[ಸಮಾಜದಲ್ಲಿನ ಕುಂದುಕೊರತೆಗಳನ್ನು ಹೋಗಲಾಡಿಸುವುದೇ 'ನಡೆದ ಕತೆಗಳು'—ಇವುಗಳ ಉದ್ದೇಶ. ಘಟನೆಗಳೆಲ್ಲ ನಿಜವಾದುವುಗಳು; ಅವುಗಳನ್ನು ಸಂಯೋಜಿಸುವುದರಲ್ಲಿ ಮಾತ್ರ ಅನುಕೂಲ ಹಳ್ಳುಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಹೆಸರುಗಳನ್ನು ಕೆಲವೆಡೆಗಳಲ್ಲಿ ಮಾತ್ರ ಬದಲಾಯಿಸಲಾಗಿದೆ]

ಧರ್ಮದ ತಿರುಳು

೮

ಅಳಕೆಯ ದೊಡ್ಡ ಮನೆ ಸೋಮಯ್ಯನವರೆಂದರೆ ಸಮಾಜದ ಮುಖಂಡರಲ್ಲೊಬ್ಬರು ಜಾತಿಯಲ್ಲಿ ಯಾವ ವಾದವಿವಾದಗಳೇ ನಡೆಯಲಿ, ಅವುಗಳಿಗೆ ಸೋಮಯ್ಯನವರ ಅಧ್ಯಕ್ಷತೆಯಿಲ್ಲದೆ ಸಾಧ್ಯವಿಲ್ಲ ಅವರ ವಾಗ್ಪಟುತ್ವ, ಗಂಭೀರ ಮುಖಮುದ್ರೆ, ದಪ್ಪಗಿನ, ಸುಂದರ ಶರೀರ, ಧುರೀಣತೆಯ ಹೆಗ್ಗುರುತಾದ ಬೆಳೆದ ಹೊಟ್ಟೆ, ಅದಕ್ಕೆ ಸಮಾನವಾದ ದೇಹವರ್ಣ, ವಯಸ್ಸು ನಲ್ವತ್ತೈದಾದರೂ ನಡುಪ್ರಾಯವು ದಾಟಿದ ಚಿಹ್ನೆಯನ್ನು ತೋರಿಸದ ಪುಷ್ಟ ಅಂಗಾಂಗಗಳು,—ಇವೆಲ್ಲ ಅವರನ್ನು ಮುಂದಾಳುತ್ವಕ್ಕೆ ಅರ್ಹರನ್ನಾಗಿಯೇ ಮಾಡಿದ್ದುವೆನ್ನಲಡ್ಡಿಯಿಲ್ಲ

ದೊಡ್ಡ ಮನೆತನದವರೆಂದು ಸಮಾಜದಲ್ಲಿ ಹೆಸರುಳ್ಳ ಭಂಗಾರಕಟ್ಟೆ ತನಿಯಪ್ಪನವರ ಮಗ ಗುಮಾಸ್ತ ಕೃಷ್ಣಪ್ಪನು ಬೊಂಬಾಯಿಯಲ್ಲಿ ಬ್ರೆಡ್ ಸಿಕ್ವೆಸ್ಸರ ಮಗಳು ಮೇರಿಯನ್ನು ವಿವಾಹವಾಗುವನೆಂಬ ಸುದ್ದಿಯು ಮಂಗಳೂರಿಗೆ ತಲಪಿತು ಲಗ್ನವು ನಡೆದುದು ಸತ್ಯವೆಂಬ ಬಗ್ಗೆ ಕೃಷ್ಣಪ್ಪನ ಮಿತ್ರರ ಪತ್ರಗಳೂ ಬಂದುವು ಕೇಳಬೇಕೇ? ಸಮಾಜದವರ ಮನೆ ಮನೆಗಳಲ್ಲೂ ಈ ಸುದ್ದಿಯು ವಿದ್ಯುತ್ತಿನಂತೆ ಹರಡಿತು. ಎಲ್ಲಿ ಕೇಳಿದರೂ ಒಂದೇ ಮಾತು "ತನಿಯಪ್ಪನವರ ಮನೆತನವು ಗಾಳಿಪಾಲಾಯಿತು, ಅವರಿಗೆ ಬಹಿಷ್ಕಾರವಿಡಬೇಕ"

ಸೋಮಯ್ಯನವರು ಕೂಡಲೇ ಜಾತಿಗೃಹಸ್ಥರ ಕೂಟವೊಂದನ್ನು ಜರಗಿಸಿದರು ಅಧ್ಯಕ್ಷತೆಯನ್ನು ವಹಿಸಿ ಗುಮಾಸ್ತ ಕೃಷ್ಣಪ್ಪನಿಗೆ ಬಹಿಷ್ಕಾರವಿಟ್ಟರು ಅಲ್ಲದೆ, ಮುಂದಕ್ಕೆ ಜಾತಿಗೃಹಸ್ಥರಲ್ಲಾಗುವ ಯಾವ ಶುಭಾಶುಭ ಕಾರ್ಯಗಳಿಗೂ ಭಂಗಾರಕಟ್ಟೆ ತನಿಯಪ್ಪನವರಿಗೆ ಹೇಳಿಕೆಯಿರಕೂಡದು ಎಂದು ತೀರ್ಮಾನಿಸಿದರು "ನಮ್ಮ ಯುವಕರು ಜಾತಿಧರ್ಮವೇನೆಂಬುದನ್ನು ಮರೆತಿರುವರು ಅನ್ಯಮತಸ್ಥರ ಹುಡುಗಿಯರನ್ನು ಮದುವೆಯಾಗುವುದಕ್ಕೂ ಅವರು ಹಿಂಜರಿಯುವುದಿಲ್ಲ' ಎಂತಹ ನೀಚತನವಿದು' ಎಂತಹ ಅಧರ್ಮವಿದು 'ಪ್ರೇಮ ಪ್ರೇಮ' ಎಂದು ಹೇಳಿ ನರಕದ ಹೊಂಡಕ್ಕೆ ಬೀಳುತ್ತಿರುವರು ಇಂತಹ ಅತ್ಯಾಚಾರವನ್ನೆಸಗುವವರು ನಮ್ಮ ಜಾತಿಯಲ್ಲಿರಬಾರದು ಎಂದು ಮೊಂತಾಗಿ ಸೋಮಯ್ಯನವರು ಆವೇಶದಿಂದ ಉಪದೇಶಿಸಿದರು ಅವರ ನುಡಿಗಳಿಗೆ ತಲೆಯಲ್ಲಾಡಿಸದವರು ಸಭೆಯಲ್ಲಿರದಾದರು ಅವರ ಮಾತು ನ್ಯಾಯಸಮ್ಮತವಾದುದೆಂದೇ ಸಭಿಕರು ತೀರ್ಮಾನಿಸಿದರು ಆ ದಿನದ ಸಭೆಯಲ್ಲಿ ಇತರ ಕೆಲವು ವಿಷಯಗಳೂ ಚರ್ಚೆಗೆ ಬಂದುವು ಗುಜ್ಜರಕೆರೆ ಕೊರಗಪ್ಪನವರ ಮಗ ಆನಂದನು ಮಾಪಿಳ್ಳೆಯವರ 'ಮದ್ರಾಸ್ ಹೊಟೆಲ್'ನಲ್ಲಿ ಬಿರಿಯಾಣಿ ತಿಂದ ವಿಷಯ, ಹೊಲೆಯರೊಡನೆ ಕುಳಿತು ಉಂಡ ಸಂಕಪ್ಪನ ವರ್ತನೆಯು ಕುರಿತಾಗಿ, ದೇವಸ್ಥಾನದ ಅಡಳಿತೆದಾರ ಶಂಕರನವರ ಪತ್ನಿ ಕಲ್ಯಾಣಿಯು ಬ್ರಹ್ಮಸಮಾಜಕ್ಕೆ ಸೇರಿರುವ ವಿಷಯ,—ಇವುಗಳು ತರ್ಕಿಸಲ್ಪಟ್ಟುವು. ಇವುಗಳ ಕುರಿತಾಗಿ ಇನ್ನೊಂದು ಸಭೆಯಲ್ಲಿ ಯೋಚಿಸಿಕೊಳ್ಳಬೇಕೆಂಬ ನಿರ್ಧಾರವಾದ ನಂತರ ಸಭಾಂತ್ಯವಾಯಿತು.

ಕರ್ಮಫಲವೆಂಬುದು ಮನುಷ್ಯನನ್ನು ಬಿಟ್ಟುಹೋಗುವುದಿಲ್ಲವೆಂಬ ಮಾತು ಅಕ್ಷರಶಃ ನಿಜವಾದುದು ಆತ್ಮಶುದ್ಧಿಯಿಲ್ಲದ ಮನುಷ್ಯನು, ಸಮಾಜವನ್ನೋ, ಇತರರನ್ನೋ ವಂಚಿಸಿ, ತಾನೇತಾನಾಗಿ ಮೆರೆದರೂ, ಧರ್ಮದೇವತೆಯು ಮಾತ್ರ ಅಂತಹ ಆತ್ಮಘಾತಕನಿಗೆ ತಕ್ಕುದಾದ ಶಾಸನವನ್ನು—ಕನ್ನದೇ ಆದ ವಿಶಿಷ್ಟ ವಿಧಾನಗಳಿಂದ—ಮಾಡದೆ ಬಿಡುವುದಿಲ್ಲ. ಯಾರು ಕಾಯಾ, ವಾಚಾ, ಮನಸಾ, ಪರಿಶುದ್ಧನಿರುವನೋ ಅವನೇ ತನಗೆ ಬೇಕಾದವನೆಂದು ಧರ್ಮವು ಸಾರದಿರುವುದಿಲ್ಲ.

ಭಂಗಾರಕಟ್ಟೆ ತನಿಯಪ್ಪನವರ ಮಗನ ಮೇಲೆ ಬಹಿಷ್ಕಾರವು ಬಿದ್ದು ಎರಡೇ ಎರಡು ಮಾಸಗಳು ಕಳೆದಿರಲಿಲ್ಲ—ಸೋಮಯ್ಯನವರ ಮನೆಯಲ್ಲಿ ಒಂದು ಮಹಾ ಗಲಭೆ! ಅವರ ಹೆಂಡತಿಯು ಗೋಳೋ ಎಂದು ಬೊಬ್ಬಿಡುತ್ತಿದ್ದಳು ನೆರೆಹೊರೆಯವರು ಅವಳನ್ನು ಸಮಾಧಾನಿಸುತ್ತಿದ್ದರು ಕಾರಣವೇನು?—

ಕದ್ರಿಯಲ್ಲಿದ್ದ ತನ್ನ ಮನೆಯನ್ನು ಹಿತ್ತಿಲು ಸಮೇತ ಬೊಸ್ತೆಂ ಎಂಬವನಿಗೆ ಸೋಮಯ್ಯನವರು ಗೇಣಿಗೆ ಕೊಟ್ಟಿದ್ದರು ಮನೆಯ ಹೊಲಗದ್ದೆಗಳನ್ನು ಬಿಟ್ಟು ಹೊರಗೆ ಹೋಗುವ ಅಭ್ಯಾಸವು ಸೋಮಯ್ಯನವರಿಗೆ ಮುಂಚೆ ಇರಲಿಲ್ಲವಾದರೂ, ಇತ್ತೀಚೆಗೆ ಕದ್ರಿಯತ್ತ ಕಡೆ ಅವರ ಸವಾರಿಯು ಹೆಚ್ಚುತ್ತಾ ಬಂದಿತು ಎರಡು,—ತಪ್ಪಿದರೆ ಮೂರು ದಿನಗಳಿಗೊಮ್ಮೆ ಕದ್ರಿಯ ತನ್ನ ಹಿತ್ತಿಲನ್ನು ನೋಡಿಕೊಂಡು ಬರಲು ಹೋಗುತ್ತಿದ್ದರು ಅಲ್ಲಿಗೆ ಹೋಗಿ ಬೊಸ್ತೆಂನ ಮನೆಯಲ್ಲಿ ಸಂಜೆಯವರೆಗೆ ಉಳಿಯುತ್ತಿದ್ದರು ಮನೆಯಲ್ಲಿರುವ ಬೊಸ್ತೆಂನ ಹೆಂಡತಿ ಮತ್ತು ಮುದಿ ತಾಯಿಯೊಡನೆ ಮಾತನಾಡುತ್ತಾ ದಿನಹರಣ ಮಾಡುತ್ತಿದ್ದರು

ಈ ವಿಷಯವು ಬೊಸ್ತೆಂನಿಗೆ ಯಾರಿಂದಲೋ ತಿಳಿದುಬಂತು ತನ್ನ ಪತ್ನಿಯ ಮೇಲಿನ ಆರೋಪಕ್ಕೆ ಆಧಾರವಾಗಿರುವ ವಿಷಯವೇನೆಂದು ಕಂಡುಹಿಡಿಯಬೇಕೆಂದು ಒಂದು ದಿನ ಅಕಸ್ಮಾತ್ತಾಗಿ ಅಪರಾಹ್ನ ಮೂರು ಗಂಟೆಗೆ ಮನೆಗೆ ಬಂದನು ನೋಡುವುದೇನು?

ಅವನಿಗೆ ಸಿಟ್ಟೇರಿತು ಸೋಮಯ್ಯನವರ ಕಾಲುಗಂಟಿನ್ನೇ ಮುರಿಯಹಾಕಿದನು ಈ ಸುದ್ದಿಯು ಅವರ ಮನೆಗೆ ತಲಪುತ್ತಲೇ ಮನೆಯಲ್ಲೆಲ್ಲಾ ಗಲಭೆಯೆದ್ದಿತು. ಸೋಮಯ್ಯನವರ ಒಳಗುಟ್ಟು ಬಯಲಾಯಿತು. ಬೊಸ್ತೆಂನು ಈಗ ಹೆಂಡತಿಯನ್ನು ಅವಳಷ್ಟಕ್ಕೆ ಬಿಟ್ಟಿರುವನು ಈಗ ಸೋಮಯ್ಯನವರು ಹಿತ್ತಿಲನ್ನು ನೋಡಲು ಹೋಗುವುದೇ ಇಲ್ಲ!

ಹಲವು ಮುಂದಾಳುಗಳಿಗೆ ಸೋಮಯ್ಯನವರ ಕಥೆಯೇನೆಂದು ತಿಳಿದಿದೆ ಆದರೆ 'ಧರ್ಮದ ತಿರುಳ'ನ್ನು ತಿಳಿದ ಅವರು ಸೋಮಯ್ಯನವರ ವರ್ತನೆಯನ್ನು ಸಮಾಲೋಚಿಸುವ ಅಧರ್ಮಕ್ಕೆ ಕೈಯಿಡಲಾರರು

ಮ ಜಾ

ಸಂಯುಕ್ತ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಪುನರುಜ್ಜೀವನ

(ನಮ್ಮ ಮುಂಬಾಯಿ ಬಾತ್ಮಿದಾರರಿಂದ)

ಮುಂಬಾಯಿಯಲ್ಲಿರುವ ಗಿರಗಾಂ ಜಿಲ್ಲಾ ಚರ್ನಿರೋಡ್ ನಂಬ್ರ 264ನೇ ಮಂದಿರದ ಒಂದನೇ ಮಹಡಿಯಲ್ಲಿರುವ ಸಾರಸ್ವತ ಬ್ರಾಹ್ಮಣ ಸಮಾಜದ ಆಫೀಸಿನಲ್ಲಿ ಒಂದು ಸಭೆಯು ನೆರೆದು ಅದರಲ್ಲಿ 'ಸಂಯುಕ್ತ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಪುನರುಜ್ಜೀವನ'ದ ಪರಿಷತ್ತನ್ನು ಮುಂಬಾಯಿಯಲ್ಲಿ ಜರಗಿಸಬೇಕೆಂದು ಮೊದಲೇ ನಮೂದಿಸಿದಂತೆ ಅದನ್ನು ಅಲ್ಲಿ ಜರಗಿಸುವರೆ ಒಂದು ತಾತ್ಕಾಲಿಕ ಕಮಿಟಿಯೊಂದನ್ನು ರಚಿಸಲಾಯಿತು ಆ ಪರಿಷತ್ತನ್ನು ಇದೇ ಅಕ್ಟೋಬರ್ ತಿಂಗಳ ತಾರೀಖು ೨೭, ೨೮, ೨೯ರಲ್ಲಿ ಜರಗಿಸಬೇಕೆಂಬ ಠರಾವನ್ನು ಕಳೆದ ಫೆಬ್ರವರಿ ತಿಂಗಳ ತಾ. ೧೯ರಲ್ಲು ಸದ್ರಿ ಸಮಾಜ ಮಂದಿರದಲ್ಲಿ ಒಂದು ಸಭೆಯು ಮ. ರಾ. ರಾ. ವಿಶ್ವನಾಥ ರಾವ್ ಧಳವೀ Bar-At-Law ಇವರ ಅಧ್ಯಕ್ಷತೆಯಲ್ಲಿ ಕೂಡಿ ನಿರ್ಣಯಿಸಲಾಗಿತ್ತು ಮ. ರಾ. ರಾ. ಶಂಕರ ಪುಂಡಲೀಕ ವರ್ದೆ B. A. LL B ಮ. ರಾ. ರಾ. ಆನಂದ ರಾವ್ ಲಕ್ಷ್ಮಣ ಕಾವಡೀ B. S C ಮತ್ತು ಮ. ರಾ. ರಾ. ಶಾಂತರಾಮ ವಿನಾಯಕ ಕೆಂತರೆ ಎಂಬವರನ್ನು ಕಾರ್ಯದರ್ಶಿಯವರನ್ನಾಗಿ ಆರಿಸಲಾಗಿತ್ತು ಇವರಿಗೆ ಆದಷ್ಟು ಸಹಾಯವನ್ನು ಪರಿಷತ್ತಿನ ಸಮಯದಲ್ಲಿ ಮಾಡುವರೆ ಜನರಲ್ ಸೆಕ್ರೆಟರಿ ಎಂಬ ಸಹಾಯಕ ಕಾರ್ಯದರ್ಶಿಯವರನ್ನು ನೇಮಕಮಾಡಿದ್ದಾರೆ ಅದಲ್ಲದೆ ಈ ಕಮಿಟಿಯ ಸಭಾಸದಸ್ಯರು ಸ್ವಾಗತ ಕಮಿಟಿಯ ಸಭಾಸದಸ್ಯರೆಂದೆಣಿಸಿಕೊಳ್ಳಬೇಕು ಸ್ವಾಗತಕಮಿಟಿಯ ನೊದಲು ಸೇರುವ ಸಭಾಸದಸ್ಯರಿಗೆ ವರ್ಗಣಿ ಪ್ರತ್ಯೇಕ ರೂ ೧೦—೦—೦ ಪ್ರತಿನಿಧಿಯ ಫೀಸು ಪ್ರತ್ಯೇಕ ರೂ ೩—೦—೦ ವ ಇತರ ಪ್ರೇಕ್ಷಕರಿಗೆ ರೂ ೧—೦—೦, ಈ ಪ್ರಕಾರದ ನಿರ್ಣಯಗಳನ್ನು ರಚಾಯಿಸಿದರು ಕಲಾಕೌಶಲ್ಯದ ಪ್ರದರ್ಶನವನ್ನು ಕೂಡಾ ಜರಗಿಸುವುದಕ್ಕಾಗಿ ಠರಾವು ಮಾಡಿ ಅವುಗಳನ್ನು ಯಶಸ್ವಿಯಾಗಿ ಜರಗಿಸುವ ಬಗ್ಗೆ ಕೆಲಸಮಾಡುವುದಕ್ಕಾಗಿ ಸ್ತ್ರೀ ಪುರುಷರು ಸಭಾಸದಸ್ಯರಾಗಿ, ಹಾಗೆಯೇ ಅದರ ಮಾಹಿತಿಯನ್ನು ಪ್ರಸಿದ್ಧಪಡಿಸುವರೆ ಐಕ್ಯತೆಯಿಂದ ಹಣವನ್ನು ಆದಷ್ಟು ಸಂಗ್ರಹ ಮಾಡಬೇಕೆಂದು ಕೆಳಗೆ ಕೊಟ್ಟ ಮೂರು ಕಮಿಟಿಗಳನ್ನಾಗಿ ಮಾಡಿ ಇನ್ನೂ ಹೆಚ್ಚಿನ ಸಭಾಸದಸ್ಯರನ್ನು ಕೂಡಿಸುವರೆ ಅವರಿಗೆ ಅಧಿಕಾರ ಕೂಡ ಕೊಟ್ಟಿರುತ್ತಾರೆ

ಪ್ರದರ್ಶನ ಕಮಿಟಿ

ಶ್ರೀ ಸೌ. ನಲಿನೀಬಾಯಿ ವಿಶ್ವನಾಥ ರಾವ್ ಧಳವೀ ಬಿ ಎ ಜೆ ಪಿ ಡಾಕ್ಟರ್ ಸೌ ಮಾಲಿನೀಬಾಯಿ ಬಾಲಚಂದ್ರ ಸುಖನಕರ್ ಎಮ್ ಬಿ ಬಿ ಎಸ್ ಜೆ ಪಿ ಶ್ರೀ. ಸೌ ಶಾಂತಾಬಾಯಿ ಸೀತರಾಮ ಪಂತವಾಲಕರ್ ಜೆ ಪಿ ಶ್ರೀ. ಮಂಜುಳಾಬಾಯಿ ದತ್ತಾತ್ರಯ ರೇಗೆ ಶ್ರೀ ಸುಮತೀಬಾಯಿ ವಾಮನರಾವ್ ವರ್ದೆ ಶ್ರೀ. ಸೌ. ಸೀತಾಬಾಯಿ ರಾಮರಾವ್ ಪಡುಬಿದ್ರಿ ಶ್ರೀ. ಅಣ್ಣಾಜಿ ರಾವ್, ಮ. ರಾ. ಕೃಷ್ಣಾಜೀ ತಾತೋಬ ಮಂತ್ರಿ ಬಿ ಎ ಬಿ ಟಿ ಶ್ರೀ. ಸೌ. ಕಮಲಾಬಾಯಿ ರಾಮರಾವ್ ಡೊಂಗರಕೇರಿ ಮ. ರಾ. ದೊಂಡನಾಥ ಕಾಶೀನಾಥ ರೇಗೆ ಮ. ರಾ. ತೆಂಡುಲಕಾರ್ ಸದಾನಂದ ಲಕ್ಷ್ಮಣ ಕಾವಡಿ, ಬಿ ಎಸ್ ಸಿ ಶ್ರೀ. ವಿ ಎಸ್ ಶಿಬ್ರೂರಕರ್ ಮ. ರಾ. ವಾಮನ ಪುಂಡಲೀಕ ವರ್ದೆ B Com ಸೆಕ್ರೆಟರಿ

ಫ್ಯಾನೆನ್ಸ ಕಮಿಟಿ.

ಮ ರಾ. ವಿಶ್ವನಾಥ ರಾವ್ ಧಳವೀ ಬಿ ಎ ಎಲ್ಎಲ್ ಬಿ Bar-At-Law ಮ. ರಾ. ಭಿಕಾಜೀ ಸೀತಾರಾಮ ಸಬನೀಸ್ ಬಿ ಎ ಎಲ್ಎಲ್ ಬಿ ಮ. ರಾ. ಸಖಾರಾಮ ನಾಯ್ಕ, ಬಿ ಎ ಎಲ್ ಸಿ ಸಿ ಬೊಂಬೈ, ಬಿ ಎಸ್ ಸಿ ಮ. ರಾ. ಲಕ್ಷ್ಮೀಕಾಂತ ಶಾಂತರಾಮ ದಾಭೋಳಕಾರ್ ಮ ರಾ. ಶಂಕರ ಪುಂಡಲೀಕ ವರ್ದೆ, ಬಿ ಎ ಎಲ್ಎಲ್ ಬಿ ದೊಂಡನಾಥ ರೇಗೆ. ಮ. ರಾ. ಯಶವಂತ ಹನುಮಂತ ಸುಖತನಕರ್ ಮ. ರಾ. ರಾಮಚಂದ್ರ ಕೃಷ್ಣ ಪ್ರಭು ಮ. ರಾ. ಪುರುಷೋತ್ತಮ ಮಹದೇವ ಜಳವೆ ಮ. ರಾ. ಶಾಂತರಾಮ ವಿನಾಯಕ ಕೆಂತರೆ ಸೆಕ್ರೆಟರಿ

ಪಬ್ಲಿಸಿಟಿ ಕಮಿಟಿ.

ಮ. ರಾ. ರಾಮಚಂದ್ರ ಕೃಷ್ಣ ಪ್ರಭು ಮ. ರಾ. ಶ್ರೀಪಾದ ಮಹಾದೇವ ವರ್ದೆ, ಬಿ ಎ ಎಲ್ಎಲ್ ಬಿ. ವಿಟ್ಠಲ ಜೀವಾಜೀ ನಾಡಕರ್ಣಿ ಮುಂಬಾಯಿಯಲ್ಲಿ ಜರಗುವಂಥ ಈ ೯ನೇ ಸಂಯುಕ್ತ ಗೌಡ ಸಾರಸ್ವತ ಬ್ರಾಹ್ಮಣರ ಅಧಿವೇಶನದಲ್ಲಿ ಎಲ್ಲರೂ ಭಾಗವಹಿಸುವರಾಗಿ ನಂಬುತ್ತೇವೆ.

ನಗಬಾರದು.

[ಸ್ವಕಪೋಲ ಕಲ್ಪಿತ ಹಾಸ್ಯಗಳನ್ನು ಕಳುಹಿಸುವವರಿಗೆ ಯೋಗ್ಯತಾನುಸಾರವಾಗಿ ಬಹುಮಾನಗಳನ್ನು ಕೊಡಲಾಗುವುದು]

ಮೇಸ್ತರರು — ಮಗೂ, ಬಸವಾ, ಶ್ರೀರಾಮಚಂದ್ರನು ಯಾರು?

ಬಸವ — ನನ್ನ ದೊಡ್ಡಪ್ಪನ ಮಗ ರಾಮಚಂದ್ರ ಸಾರ್

\+ + + +

ರಂಗಪ್ಪ — ಭದ್ರಾ, ಮೊನ್ನೆ ನಿಮ್ಮಲ್ಲಿ ಯಾರೋ ಸತ್ತರಲ್ಲವೇ?

ಭದ್ರಪ್ಪ — ಹೌದು, ರಂಗಾ

ರಂಗಪ್ಪ — ಯಾರದು? ನೀನೋ ನಿನ್ನ ಅಣ್ಣನೋ?

\+ + + +

ಮೇಸ್ತ್ರು — ಶಾಮೂ, ತಿಂದದ್ದು ಹೆಚ್ಚಾಗಿ, ಅಜೀರ್ಣವಾದರೆ ಅದಕ್ಕೆ ಮಾಡಬೇಕಾದ ಉಪಶಮನವೇನು?

ಶಾಮು — ಹಿಂಗು ಮತ್ತು ಉಪ್ಪು ಒಟ್ಟು ಮಾಡಿ ಮೂರು ಕುಡ್ತೆ ನೀರಿನಲ್ಲಿ ಬೆರಸಿ ಕುಡಿಯಬೇಕು ಸಾರ್

ಮೇಸ್ತ್ರು — ಅದರಿಂದ ಏನು ಒಳ್ಳೆತ?

ಶಾಮು — ಇದೀ ಹೊಟ್ಟೆಯು ಆಹಾರದಿಂದ ತುಂಬಿ ಎಲ್ಲಿಯಾದರೂ ಖಾಲಿ ಸ್ಥಳ ಉಳಿದರೆ ಅದನ್ನು ಆ ಕುಡಿದ ನೀರು ತುಂಬಿಸುತ್ತದೆ ಸಾರ್

\+ + +

ಗೋವಿಂದಪ್ಪಯ್ಯ — ಸ್ವಾಮೀ ನಾನು ನಿನ್ನೆ ಬಪ್ಪನಾಡಿಗೆ ಹೋಗಿದ್ದೆ ಬರುವಾಗ ಒಂದು ನಾಗರ ಹಾವು ನನ್ನ ಬಲದಿಂದ ಹ್ಯೋಯಿತು ಅದು ಒಳ್ಳೆದೋ ಕೆಟ್ಟದೋ?

ಪುರೋಹಿತ — ಗೋವಿಂದು ನಿನ್ನನ್ನು ಕಚ್ಚದೆ ಅದೃಷ್ಟಕ್ಕೆ ಹೋದ ಹಾವೇ ಒಳ್ಳೇದು

\+ + + +

ಮೇಸ್ತರ — ತಿಮ್ಮಾ, ಸ್ಪೆಶ್ಯಲ್ ಎಂಬುದರ ಅರ್ಥವೇನು?

ತಿಮ್ಮ — ಹೇಳಲಿಕ್ಕೆ ಒಂದು ದಿನದ ರಜೆ ಬೇಕು ಸಾರ್

ಮೇಸ್ತರ — ಏಕೆ?

ತಿಮ್ಮ — ಡಿಕ್ಷ್ನರಿ ನೋಡಲಿಕ್ಕೆ ಸಾರ್

ಎಸ್ ಶೇಷಗಿರಿ ನಾಯಕ್

ರಾಮು — ಏನ್ರೀ' ಹೋಗಲಿಲ್ಲ?

ಭಾವ — ಹೋಗಿದ್ದರೆ ಇಲ್ಲಿ ಇರುತ್ತಿದ್ದೇನೇನ್ರೀ?

\+ + + +

ರೈತ — ಬಟ್ಟೆ ಗಜಕ್ಕೆ ಎಷ್ಟು, ಸ್ವಾಬ್ರೆ?

ಸಾಬಿ ಮೂರು ಅಡಿ ಗೌಡ

\+ + + +

೧ನೇ ರೈತ — ನಿಮ್ಮ ದನವು ಗದ್ದೆಯನ್ನೆಲ್ಲಾ ತಿಂದು ಬಿಡುತ್ತದಲ್ಲ

೨ನೇ ರೈತ — ನಿಮ್ಮ ಗದ್ದೆ ಹಾಗೆಯೇ ಇದೆ!

\+ + +

ಉಪಾಧ್ಯಾಯ — ಕಾರ್ಯಪ್ಪ' ನಿನ್ನೆ ಕನ್ನಡ ಪಾಠ ಎಷ್ಟಕ್ಕೆ ನಿಲ್ಲಿಸಿದ್ದು?

ಹುಡುಗ — ೪-೧೫ಕ್ಕೆ ಸಾರ್!

\+ + + +

ಯಜಮಾನ — ಕರು ಗಿಡವನ್ನೆಲ್ಲಾ ತಿನ್ನುತ್ತದೆ.

ಆಳು — ಇಲ್ಲ ಸ್ವಾಮಿ! ಬರೀ ಎಲೆಯನ್ನು ಮಾತ್ರ

ಕೆ. ಆರ್ ವೆಂಕಟೇಶ

ಅಗ್ರಗಣ್ಯ ಸಂಗೀತಜ್ಞರು ಅದರ ಪ್ರಶಂಸಾಗಾನವನ್ನು ಮಾಡಿದ್ದಾರೆ.

ಮುಸಿರಿ ಸುಬ್ರಹ್ಮಣ್ಯ ಐಯ್ಯರ್,

6 ಒಲಿವರ್ ರೋಡ್,
ಮೈಲಾಪುರ ಮದ್ರಾಸು.
ತಾ ೨–೫–೩೪.

ಅನೇಕ ಸಮಯದಿಂದ ನನ್ನ ಕುಟುಂಬದವರೆಲ್ಲ 'ಕೇಶವರ್ಧಿನಿ'ಯನ್ನು ಬಿಡದೆ ಉಪಯೋಗಿಸುತ್ತಿರುವರೆಂದು ತಿಳಿಸಲು ಸಂತೋಷಿಸುತ್ತೇನೆ. ಉದುರುವ ಕೂದಲನ್ನು ತಡೆಯುವ ಅದರ ಶಕ್ತಿಯನ್ನು ಪೂರ್ಣವಾಗಿ ತಿಳಿದು ಅಲ್ಲದೆ ಕೂದಲನ್ನು ಅದು ಬೆಳೆಯಿಸುವ ಅದರ ಗುಣವನ್ನು ಅರಿತು ಅವರು ಅದರ ಗುಣಗಾನವನ್ನು ಮಾಡಿ ಸ್ನೇಹಿತರಿಗೂ ಅದನ್ನು ಶಿಫಾರಸು ಮಾಡುತ್ತಾರೆ. ಕೇಶಗಳಿಗೂ ಮೆದುಳಿಗೂ ಸಮರ್ಪಕವಾದ ಎಣ್ಣೆಯೊಂದು ಅಗತ್ಯವಿರುವವರು ಇದನ್ನುಪಯೋಗಿಸಬಹುದೆಂದು ನಾನು ಶಿಫಾರಸು ಮಾಡುತ್ತೇನೆ.

(ಸಹಿ) ಮುಸಿರಿ ಸುಬ್ರಹ್ಮಣ್ಯ ಅಯ್ಯರ್.

ಬೋಳು ತಲೆಯವರಾಗಿರಬೇಡಿ ಅಥವಾ ತಲೆ ಕೂದಲು ಅಪರಿಪಕ್ವ ಸಮಯದಲ್ಲಿ ಬಿಳಿದಾಗದಂತೆ ನೋಡಿ

ಬಾಟ್ಲಿ 1ಕ್ಕೆ ಆಣೆ 12. **'ಕೇಶವರ್ಧಿನಿ'** ಪೇಕಿಂಗ್ ಮತ್ತು ಅಂಚೆವೆಚ್ಚ ಪ್ರತ್ಯೇಕ

ಹೆಚ್ಚಿನ ವಿವರ ವ್ಯಾಪಾರಿಗಳಲ್ಲಾಗಲೀ ಅಥವಾ ಈ ವಿಳಾಸದಲ್ಲಾಗಲೀ ಸಿಗುವುದು —

South India Chemicals, LUZ ROAD Mylapore Madras

ನಮ್ಮ ಏಜಂಟರು ಎ. ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

Kanara Watch Works, Mangalore.

Suppliers of standard Watches, Time pieces, Wrist watches, Clocks and various kinds of sporting materials etc, Quality and price unassailable Visit our Show Room and be satisfied

1¼ CRORE

Karnatics

know nothing

of your

products,—

Advertise them

in

Swadeshabhimani

the pioneer

Weekly of the

South Kanara District

For Advertisement rates apply to

The Advertisement Manager,

Swadeshabhimani,

Mangalore

ಪ್ರಶಂಸೆ.

ಪ್ರಖ್ಯಾತ ಅಮೆರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ

ವಿ-ಮೊ-ಲ

VIM-O-LA

ಅಮೆರಿಕಾದ ಜೀವಸಾರ ವಸ್ತು.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ ಹೊಟ್ಟೆಯಲ್ಲಿ ಬೆಂಕಿ ನಂತೆ ಉರಿಯುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ ನರಗಳನ್ನು ಪುಷ್ಟಿಗೊಳಿಸುವ ಶಕ್ತಿವರ್ಧಕ ಪಾನೀಯ ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ ಬಾಟ್ಲಿ 1 ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟೋಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ ಇಲ್ಲಿಗೆ ಬರೆಯಿರಿ

'Vimola Depot'

Manufactured by

American Herbal Products Co

Sole representatives for above medicine

The National Kanara News Agency,

Sir Phirozsha Metha Road,

Fort Bombay.

'ಜ್ಯೋತಿ'

ಸಚಿತ್ರ ಕನ್ನಡ ಮಾಸಪತ್ರಿಕೆ.

ಸಂಪಾದಕರು — ಕೆ ಹೈದರ್

ಸುರಸವಾದ ಕಥೆ, ಕವನಗಳು, ವಿಚಾರ ಪರಿಪ್ಲುತ ಲೇಖನಗಳು ಕಮನೀಯವಾದ ಚಿತ್ರಗಳು

ವಾರ್ಷಿಕ ಚಂದಾ ರೂ ೧—೮—೦

ಬಿಡಿಸಂಚಿಕೆ ರೂ. ೦—೨—೦.

ಜಾಹೀರಾತುದಾರರಿಗೆ ಅತ್ಯುತ್ತಮ ಮಾಧ್ಯಮ

ಲೇಡಿಸ್ ಬಾಂ

ಸ್ತ್ರೀಯರ ಜೀವನಾಧಾರ

ಸ್ತ್ರೀಯರು ಪುಷ್ಟರಾಗಿಯೂ ಕಾಂತಿಯುಕ್ತರಾಗಿಯೂ ಇರಬೇಕಾದರೆ, ಅವರ ಮುಟ್ಟುದೋಷ, ಆ ಸಮಯದಲಿ ಕಂಡುಬರುವ ಹೊಟ್ಟೆನೋವು ಸೊಂಟ ಹಿಡಿತ, ಗಂಟುನೋವು, ಮೈಯಲ್ಲಿ ದಡಿಕೆ ಬೀಳುವುದ ಬಿಳೇ ಸೆರಗು, ಗರ್ಭಕೋಶದ ನೋವು ಅಕ್ರಮ ರೀತಿಯಿಂದ ಮುಟ್ಟಾಗುವಿಕೆ ಬಂಜೆತನ, ಸಾಧಾರಣ ಸ್ವಯಂವಿಕಾರ ಮತ್ತು ಅವರ ಅನೇಕ ತರದ ಗುಪ್ತರೋಗಗಳನ್ನು ನಿವಾರಿಸಲು ಇದರ ಒಂದೇ ಒಂದು ಶೀಸೆಯನ್ನು ಉಪಯೋಗಿಸಿದರೆ ಗುಣವನ್ನು ಕಾಣುವಿರಿ

ಉಪಯೋಗಿಸಿದವರ ಅಭಿಪ್ರಾಯ —

ರಾಮಕೃಷ್ಣ ಜೈನ್ ಬಿ ಎ ಲಾಹೋರ್ 'I found your Ladies Balm worth the money I spent on it'

ಯಾವ ತರದ ಔಷಧಿಯಿಂದಲೂ ಬಹುಷ್ಟೆಯ ಅಸ್ವಸ್ಥವನ್ನು ಹೋಗಲಾಡಿಸಲು ಅಸಮರ್ಥರೆಂದಾದರೆ ನಮ್ಮ ಲೇಡಿಸ್ ಬಾಮನ್ನು ಉಪಯೋಗಿಸಿರಿ ಒಂದು ತಿಂಗಳ ಔಷಧಿಯಿರುವ ಶೀಸೆ ೧ಕ್ಕೆ ರೂ ೩—೦—೦ ವಿ ಪಿ ಖರ್ಚು ೦—೮—೦

ತಯಾರಿಸುವವರು —**ದಿ. ಬಿಹಾರ್ ಕೆಮಿಕಲ್ ವರ್ಕ್ಸ್, ಬಾಗಲಪುರ.**

ಏಜಂಟರು — ಷಹಾ ಕಂಪೆನಿ, ಗ ಕೋಲೇಜು ಎದುರು ಮಂಗಳೂರು

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ.

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು.

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

ಕೆಲಸದ ಫಲಿತಾಂಶ.		ಲೈಫ್ ಫಂಡ್
1925–	ರೂ 21,24,250	500
1929–	ರೂ 1 66,18 620	9,32,900
1934–	ರೂ 46 77 223	49 06,771.

ಕ್ಲೈಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ ಕಂಪೆನಿಯ ಆಸ್ತಿ–57,00,000ಕ್ಕೆ ಮೀರಿದೆ. 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ. ಲಾಭಹೊಂದಬೇಕಾಗಿದೆ —ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ 'ಲಕ್ಷ್ಮಿ'ಯಲ್ಲಿವೆ —

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co., Ltd,
Madras Branch,
No. 6, Sankuram Chetty St, G T MADRAS

ದಿ ಲಕ್ಷ್ಮಿ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6, ಸಂಕುರಾಮ ಚೆಟ್ಟಿ ಬೀದಿ, ಜಿ ಟಿ ಮದ್ರಾಸು

The Canara Banking Corporation Udipi, Ltd.

Head office:—UDIPI, S. K. (Incorporated in British India) Tel.-'BANKING' **ESTD. 1906.**

Branches:—1. Udipi, 2. Coondapoor, 3 Car Street, Mangalore, 4. Shimoga, 5. Madras, 6 Bunder Mangalore, 7. Mercara

Capital Paid-Up & Reserve Funds	Rs	5,84313—0—0
Investments on Goverment Securities	,,	6,77,059—0—0
Total Working Capital Exceeds	,,	36,00,000—0—0

Interest Allowed on Deposits up to 5% Per Annum

Before Investing, Please Call at our Head Office, or any of the Branches

ಕಾರ್ಪೊರೇಶನ್ ಆಫೀಸು, ಉಡುಪಿ, 6-6-35

M. Shrinivas Prabhu,
Manager

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.
ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು
ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯು ಹುಳು
ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ
ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ರಜತೋತ್ಸವ ವರ್ಷ. ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್ ಸ್ಥಾಪನೆ 1910 ರಜತೋತ್ಸವ ವರ್ಷ

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಚೆಯರ್‌ಮೆನ್.— ಸರ್. ಲಲ್ಲೂಭಾಯಿ ಸಮಲ್ದಾಸ್, ಕೆಟಿ ಸಿ ಐ ಇ ಜೆ ಪಿ)
ಇದರ ದಕ್ಷಿಣ ಹಿಂದೂಸ್ಥಾನ ಮತ್ತು ದೇಶೀಯ ಸಂಸ್ಥೆಗಳ ಶಾಖಾ ಕಾರ್ಯದರ್ಶಿಗಳ, ಮುಂಬಾಯಿ ನಗರ ಮತ್ತು ಉಪನಗರಗಳ ಪ್ರಮುಖ್ಯ ಏಜಂಟರು

ಪೋಲಿಸಿದಾರರು ಮತ್ತು ಏಜಂಟರುಗಳಿಗೆ ನಮ್ಮ ಸಂದೇಶ —

ಕಳೆದ ಕಾಲು ಶತಮಾನಕ್ಕೆ ಮಿಕ್ಕಿದ ನಮ್ಮ ಜೀವವಿಮೆಯ ಪವಿತ್ರವಾದ ಸೇವೆಯಲ್ಲಿ ನಾವು ನಮ್ಮ ಪೋಲಿಸಿದಾರರ ಮತ್ತು ಏಜಂಟರ ಹಿತವನ್ನೇ ನಮ್ಮ ಧ್ಯೇಯವನ್ನಾಗಿ ಮುಂದಿಟ್ಟುಕೊಂಡು ಮುಂದರಿಯುತ್ತಾ ಬಂದಿರುವೆವು ಅವರ ಕಷ್ಟಗಳೂ ಆಶೆಗಳೂ ಮತ್ತು ಆಶಯಗಳೂ ನಮ್ಮದೆಂದೇ ಪರಿಗಣಿಸುತ್ತಾ ಬಂದಿರುವೆವು ಹಿಂದೀ ಜೀವವಿಮಾ ಪ್ರಪಂಚದ ನಮ್ಮ ಅನುಲಕ್ಷ್ಯಣೀಯವೂ, ಅನುಭೂತಪೂರ್ವವೂ ಆದ ವಿಜಯದ ರಹಸ್ಯವು ಇದರಲ್ಲೇ ಅಡಕವಾಗಿದ್ದು ನಾವು ನಮ್ಮ ವ್ಯವಹಾರದಲ್ಲಿ ಒಂದು ಕೋಟಿಯಷ್ಟು ಮೊಬಲಗಿನ ಪೋಲಿಸಿಗಳನ್ನು ಚಾಲ್ತಿಯಲ್ಲಿಟ್ಟುಕೊಳ್ಳುವಷ್ಟು ಸಮರ್ಥರನ್ನಾಗಿ ಮಾಡಿರುತ್ತದೆ ಅತ್ಯಂತ ಅಭಿಮಾನಾಸ್ಪದವಾದ ನಮ್ಮ ಮಹತ್ವಾದ ಲಾಭವೆಂದರೆ—ಒಂದೆರಡು ಉದಾಹರಣೆಗಳಲ್ಲದೆ ಕಳೆದ 25 ವರ್ಷಗಳ ಅವಧಿಯಲ್ಲಿ ನಮ್ಮ ಶತಾಧಿಕ ಏಜಂಟರುಗಳಲ್ಲಿ ಒಬ್ಬರಾದರೂ ನಮ್ಮೊಡನಿರುವ ನಿಕಟಸಂಬಂಧವನ್ನು ಮುರಿದಿಕ್ಕಿರುವುದಿಲ್ಲ.

ಜೀವವಿಮಾ ವಿಕ್ರಯಕ್ರಮಗಳಲ್ಲಿ ಸಂಪೂರ್ಣ ತರಬೇತಿ ಕೊಡಲಾಗುತ್ತದೆ ಚತುರರಾದ ಉತ್ಸಾಹೀ ತರುಣರ ಭಾವೀ ಕಲ್ಯಾಣವಾಗುತ್ತದೆ

ನಮ್ಮ ಈ ಕೆಳಗಿನ ಯಾವುದಾದರೂ ಆಫೀಸುಗಳಿಗೆ ಬರೆಯಿರಿ ಅಥವಾ ಸ್ವತಹ ಬಂದು ಕಾಣಿರಿ.—

(1) ಇಸ್ಮಾಯಿಲ್ ಬಿಲ್ಡಿಂಗ್, ಲೋಹರ್ ಚಾಲ್, ಮುಂಬಯಿ ನಂ 2 (2) ಪೋಸ್ಟ್ ಬಾಕ್ಸ್ 887, ಮೌಂಟ್ ರೋಡ್ ಮದ್ರಾಸು. (3) ವಿಶ್ವೇಶ್ವರಪುರಂ, ಬೆಂಗಳೂರು ಸಿಟಿ (4) ಹಜೂರ್ ರೋಡ್, ಕಲ್ಲಿಕೋಟೆ (5, ರಥಬೀದಿ, ಮಂಗಳೂರು (6) ಉಡುಪಿ, ದಕ್ಷಿಣ ಕನ್ನಡ

Karnataka Chemical and Pharmaceutical Works, Ltd, Udipi (South India)
ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ' ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ
ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲ ಗುಣಗಳಿರುವ

ಕರ್ಣಾಟಕ ಹಾಸ್ಪೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು,
ಖರ್ಚು ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.
ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ. ಸಿಲಿಕೇಟ್ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ.

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)
ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲಿಯಂಟೈನ್, ಆರೋಗ್ಯ ಕ್ರೀಮ್—ಕ್ರೀಮ್ ಲಿಮೊನಿಸ್, ಕರ್ಣಾಟಕ ರೋಸ ಪೊಮೇಡ್.
ಇದಲ್ಲದೆನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್‌ಪೆನ್ನು ಶಾಯಿಗಳೂ ಸಿದ್ಧವಾಗುವುವು.

ಮೆನೆಜಿಂಗ್ ಡೈರೆಕ್ಟರ್—ವೆಂಕಟರಾಯ ಅಲ್ವಾ ಕಾಳಿಗೆ.
ಹೆಡ್ ಆಫೀಸು ಮತ್ತು ಕಾರಖಾನೆ.—ಉಡುಪಿ, ದಕ್ಷಿಣ ಹಿಂದೂಸ್ಥಾನ.
ವ್ಯಾಪಾರದ ಡಿಪೊ:—(1) ದೇವಕರಣ ಮೆಸ್ಸರ್ಸ್, 45 ಪ್ರಿನ್ಸೆಸ್-ಸ್ಟ್ರೀಟ್, ಬೊಂಬಾಯಿ ನಂ. 2
ಏಜಂಟ್ಸ್— (2) 1/70 ಸ್ವಾನಪ್ಪ ನ್ಯಾಕನ ಬೀದಿ, ಜಾರ್ಜ್ ಟೌನ್ ಮದರಾಸು.
ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

Edited, Printed & Published By A. S. Kamath at the Sharada Press. Car Street, Mangalore.

ವಾರ್ಷಿಕ ಚಂದಾ: ೩ ರೂಪಾಯಿ. ಬಿಡಿ ಸಂಚಿಕೆ 1 ಆಣೆ. ಟಪ್ಪಾಲು ಹಾಸಲು ಸೇರಿ ರೂ. ೩-೧೩-0.

P
for Quality Snuff
H. Rama Rao and Sons.
High Class Snuff Manufacturers
Mangalore, S. I.
ASK FOR –
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY
Buy a policy in THE BOMBAY LIFE
Madras Branch Secretaries
Kochikar Brothers,
Udipi, Mangalore, Bangalore, Madras, Bombay and Calicut

ESTABLISHED 1906
(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ಪುಸ್ತಕ ೨೯. ಮಂಗಳೂರು ತಾ. ೫ನೇ ಶುಕ್ರವಾರ ಜುಲಾಯಿ ೧೯೩೫ (5-7-'3೫) ಸಂಚಿಕೆ ೨೭

ಕ್ವೆಟ್ಟಾದ ಭೂತಪೂರ್ವ ಸೌಂದರ್ಯವನ್ನು ನೋಡಿ
[illegible] ಎಂದು ಕರೆಯಲ್ಪಡುತ್ತಿತ್ತು [illegible]



ಅದೇ ಕ್ವೆಟ್ಟಾವು ಭೂಕಂಪದ ದೆಸೆಯಿಂದ ಈ ಮೇಲಿನ ಚಿತ್ರದಲ್ಲಿ ಕಂಡುಬರುವಂತೆ ಆಗಿದೆ.
ಒಂದು ಕಾಲದಲ್ಲಿ ವೈಭವದಿಂದ ಮೆರೆಯುತ್ತಿದ್ದ ಪ್ರಾಂತ್ಯದಲ್ಲಿ ಈಗ ನರಿನಾಯಿಗಳೂ ನಿಲ್ಲುವುದಿಲ್ಲ.
ಮನೆಮಂದಿರಗಳು ಧ್ವಂಸವಾದ ಬಗೆಯನ್ನು ನೋಡಿ

ಚಕ್ರ

(All Rights Reversed)

ಜನರಲ್ಲಿರುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಷಡ್ವೈರಿಗಳನ್ನು ಓಡಿಸಬೇಕೆಂಬ ಆಶೆಯಿಂದ ಪ್ರಕೃತಿಯು ಮುನಿದು ಅಲ್ಲಲ್ಲಿ ಭೂಕಂಪವಾಗುತ್ತದೆ. ಹಾಗಿದ್ದರೂ ಜನರು ತಮ್ಮ ದುರ್ನಡತೆಯನ್ನು ತಿದ್ದಿಕೊಳ್ಳಲಾರರು!

ಕ್ವೆಟ್ಟಾದಲ್ಲಿ ಭೂಮಿಯು ಅಡಿಮೇಲಾದುದೇ ತಡ ಸತ್ತವರ ದುಡ್ಡುದುಗ್ಗಾಣಿಗಳನ್ನು ದೋಚಿಕೊಳ್ಳಲು ಹಲವು ಪಂಗಡಗಳೇ ಹೊರಟವಂತೆ. ಮಿಲಿಟರಿಯವರಲ್ಲದಿದ್ದರೆ ಲೂಟಿಯು ನಡೆಯುವುದು ನಿಜವಾಗಿತ್ತು!

ಹಿಂದೀಯರ ಈ ದ್ರವ್ಯಾಭಿಲಾಷೆಯನ್ನು ನೋಡಿಯೇ ಕ್ವೆಟ್ಟಾದಲ್ಲಿ ಮಿಲಿಟರಿಯವರು ನಗರವನ್ನು ಕಾವಲು ನೋಡುತ್ತಿರುವರು! ಯಾರೂ ಒಳಗೆ ಪ್ರವೇಶಿಸಬಾರದಂತೆ! ಕಾಂಗ್ರೆಸಿನವರದ್ದಾಗಲೀ, ಇನ್ನಿತರರದ್ದಾಗಲೀ ಪ್ರಯಾಣದ ಸಹಾಯವು ಬೇಡವೆಂದೇ ಇಂಡಿಯಾ ಸರಕಾರವು ಹೇಳಿಬಿಟ್ಟಿದೆ.

ಸರಕಾರಕ್ಕೆ ನಮ್ಮ ಮೇಲೆ ಪ್ರೇಮವಿಲ್ಲವೆಂದೂ, ಅದು ನಮ್ಮ ದುಡ್ಡುದುಗ್ಗಾಣಿಯನ್ನು ತಿಂದುತ್ತದೆಂದೂ ನಮ್ಮ ರಕ್ಷಣೆಯನ್ನು ಸರಿಯಾಗಿ ಮಾಡುವುದಿಲ್ಲವೆಂದೂ ಆರೋಪಿಸುವವರು ಬಹಳ! ಆ ಮಾತು ಸತ್ಯವೋ ಸುಳ್ಳೋ ಎಂದು ಕ್ವೆಟ್ಟಾದಲ್ಲಿ ತಿಳಿಯಬರುತ್ತೆ!

ಭಾರತೀಯರು ಕ್ವೆಟ್ಟಾಕ್ಕೆ ಪ್ರವೇಶಿಸಿ, ಅಲ್ಲಿ ಮೊದಲೇ ಹರಡಿರುವ ದುರ್ವಾಸನೆಯಿಂದಾಗಿಯೂ, ರೋಗಗಳಿಂದಾಗಿಯೂ ಸ್ವಸ್ಥ ಆರೋಗ್ಯದಿಂದಿರುವವರು ಬಳಲಬಾರದೆಂದೇ ಕ್ವೆಟ್ಟಾದಲ್ಲಿ ಸರಕಾರವು ಮಿಲಿಟರಿಯವರನ್ನು ಕಾವಲಿರಿಸಿ ಯಾರನ್ನೂ ಒಳಗೆ ಪ್ರವೇಶಿಸ ಬಿಡುವುದಿಲ್ಲ! ನೋಡಿ! ಎಷ್ಟು ಪ್ರೇಮ ನಮ್ಮ ಮೇಲೆ!

ಹೀಗಿದ್ದರೂ ಕೆಲವು ಜನರು ಬುದ್ಧಿಯನ್ನು ಮರೆತು, "ನಮ್ಮ ಜನರಿಗೆ ಸಹಾಯಮಾಡದಂತೆ ಸರಕಾರವು ನಮ್ಮನ್ನು ತಡೆದಿದೆ! ಇಂತಹ ಕಷ್ಟಕಾಲದಲ್ಲಿ ಹೀಗೆ ಮಾಡುವುದೇ? ಇದರಲ್ಲಿ ಏನೋ ಗೂಢಾರ್ಥವಿದೆ" ಎನ್ನುವವರು ಧಾರಾಳ!

ಹೇಗೆ ಹೇಳುವುದು?— ಕೆಲವು ಬ್ಯಾಂಕಿಯ ಕೆಲಸಗಾರರಲ್ಲಿಯೂ ಕೆಲವು ಪೋಲಿಗಳಿರಬಹುದು! ಅವರು ಕ್ವೆಟ್ಟಾದಲ್ಲಿ ಸತ್ತ ಜನರ ದ್ರವ್ಯಗಳನ್ನು ದೋಚಿಕೊಂಡರೆ ಮಹಾ ಸಂಕಷ್ಟವೇ ಒದಗುವುದಲ್ಲವೇ? ಇದನ್ನು ತಿಳಿದೇ ಸರಕಾರವು ಯಾರನ್ನೂ ಒಳಗೆ ಪ್ರವೇಶಿಸಬಿಡಲಿಲ್ಲ!

ನಮ್ಮ ಗಾಂಧೀಜಿಯವರೂ ಕೂಡಾ ಕ್ವೆಟ್ಟಾಕ್ಕೆ ಹೋಗಬಾರದೆಂದು ಅಪ್ಪಣೆಯಂತೆ! ನೋಡಿ! ಹಗಲಿರುಳು ನಿಂತು ಕೆಲಸಮಾಡುವ ಗಾಂಧಿಯವರ ಮೇಲೆಯೂ ಸರಕಾರಕ್ಕೆ ಎಷ್ಟು ಮಮತೆ? ಅವರ ಆರೋಗ್ಯದ ಮೇಲೆ ಎಷ್ಟು ಜತನ? ಆದರೆ ಗಾಂಧಿಯವರಿಗೆ ಮಾತ್ರ ಈ ಉಪಕಾರದ ಸ್ಮರಣೆಯಾದರೂ ಇದೆಯೇ?

ಎಲ್ಲಿಯಾದರೂ ಏನು! ಭೂಕಂಪವಾಗುವುದು,— ಎಲ್ಲಿಯಾದರೂ ಜನರು ಸಾಯುವುದು,— ಅಂತಹ ಭೀತಿಯು ಸರಕಾರಕ್ಕಿದ್ದೀತೇ? ನಮ್ಮ ಜನರು — ಮಿಲಿಟರಿಯವರಲ್ಲದೆ ಯಾರೂ ಕ್ವೆಟ್ಟಾಕ್ಕೆ ಕಾಲಿಡಬಾರದೆಂದು ಆಜ್ಞಾಪಿಸಲಾಗಿದೆ! ಜಯವಾಗಲಿ ಮಿಲಿಟರಿಯವರಿಗೆ!

"ಮಿಲಿಟರಿಯವರಿಗೆ ರೋಗ ಬರುವುದಿಲ್ಲವೋ? ಅವರು ಸತ್ತರೆ ದೇಶದ ರಕ್ಷಣೆ ಮಾಡುವವರಾರು?" ಎಂದು ನೀವು ಪ್ರಶ್ನಿಸಬಹುದು! ಆ ಪ್ರಶ್ನೆ ನಿಮಗೇತಕ್ಕೆ? ಮಿಲಿಟರಿಯವರು ಸಾಯಬಾರದೆಂದಲ್ಲವೇ ಅವರ ಕೈಯಲ್ಲಿ ತುಪಾಕಿ ಕೊಟ್ಟಿರುದು! ರೋಗಗಳಿಗೂ ಗುಂಡು ಹಾಕಿ ಅವರು ಕೊಲ್ಲಲು ಸಮರ್ಥರೆಂಬುದನ್ನು ನೀವು ಖಂಡಿತ ತಿಳಿಯಿರಿ!

"ಜನರ ಸೊತ್ತುಗಳನ್ನು ಮಿಲಿಟರಿಯವರು ಅಡಗಿಸಿಟ್ಟು ಮನೆಗೆ ಸಾಗಿಸಿದರೆ ಗತಿಯಾರು?"—ಎಂದು ಎರಡನೆಯ ಪ್ರಶ್ನೆಯನ್ನು ನೀವು ಹಾಕಬಹುದು. ಹಾಗೆ ಮಿಲಿಟರಿಯವರು ಮಾಡುವವರಲ್ಲ. ಶಾಂತಿ! ನೂರಾರು ರೂಪಾಯಿ ಸಂಬಳ ಪಡೆದು ಹಿಂದೂದೇಶದ ಸಣ್ಣ ದ್ರವ್ಯಭಂಡಾರವನ್ನೇ ಶೋಷಣಮಾಡುವ ಅವರಿಗೆ ಬೇರೆ ಸಂಪತ್ತೇಕೆ? ಅವರಲ್ಲಿರುವುದೇ ಅವರಿಗೆ ಹೆಚ್ಚಾಗಿದೆ, ಮನೆಗೆ ಕಳುಹಿಸಿದ ನಂತರವೂ ಅವರ ಜೇಬಿನಲ್ಲಿ ನೂರಾರು ರೂಪಾಯಿಗಳು ಉಳಿದು, ವೈನ್, ಬ್ರೇಂಡಿಗಳಿಗೆ ವೆಚ್ಚವಾಗುತ್ತವೆ. ಅವುಗಳನ್ನೆಲ್ಲ ಅವರು ಪರರಿಗೆ ದಾನಮಾಡುತ್ತಾರೆ. ತಿಳಿಯಿತೇ? — ಸುಮ್ಮಗೆ ಬೊಬ್ಬಿಡಬೇಡಿರಿ! ಶಾಂತವು ಅರಿ ಅಥವಾ ಹಾರಿ ಹೋದೀತು—ಎಂದು ಹೇಳುವ,

'ಸಾಯ್ಬ'.



ತನ್ನ ಮಗುವಿಗೆ ತಾನೇ ಮೊಲೆಯುಣ್ಣಿಸುವಂತೆ ಪ್ರತಿಯೊಬ್ಬ ತಾಯಿಯೂ ಬಯಸಬೇಕು. ಮಗುವಿನ ಆರೋಗ್ಯಪಾಲನೆಗೂ, ಅದು ಬಾಲರೋಗಗಳಿಗೆ ತುತ್ತಾಗದಂತೆಯೂ ಅದಕ್ಕೆ ಸ್ವಾಭಾವಿಕವಾಗಿ ಮೊಲೆಯುಣ್ಣಿಸಬೇಕು. ಎದೆಹಾಲು ನಿಮ್ಮ ಮಗುವಿಗೆ ಸಮರ್ಪಕವಾದ ಆಹಾರವಾಗಿದೆ. ಇದು ಮಗುವಿನ ಸೂಕ್ಷ್ಮ ಜೀರ್ಣಶಕ್ತಿಗೆ ತಕ್ಕುದಾದ ಆಹಾರವಾಗಿದೆ. ಮಗುವಿನ ಆರೋಗ್ಯಕ್ಕೂ ಬೆಳವಣಿಗೆಗೂ ವೃದ್ಧಿಗೂ ಸಾಧಕವಾದ ಪೌಷ್ಟಿಕ ಸಾರವು ಇದರಲ್ಲಿದೆ.

'ಓವಲ್ಟಿನ್' ಪಾನೀಯವನ್ನು ಮಗು ಜನಿಸುವ ಮೊದಲೂ, ಹುಟ್ಟಿ ಬೆಳೆಯುತ್ತಿರುವಾಗಲೂ ಅನುಕ್ರಮವಾಗಿ ಸೇವಿಸುತ್ತಾ ಇದ್ದರೆ, ಎದೆ ಹಾಲು ನಿಶ್ಚಿತವಾಗಿ ವೃದ್ಧಿಹೊಂದುತ್ತದೆ. ಅಲ್ಲದೆ ತಾಯಿಯ ಬಲ ಮತ್ತು ಚೈತನ್ಯವು ಕಾಪಾಡಲ್ಪಡುತ್ತದೆ. 'ಓವಲ್ಟಿನ್' ಎಂಬುದು ಪ್ರಕೃತಿಸಿದ್ಧ ಆಹಾರ. ಇದನ್ನು ಬೆಳೆದ ಬಾರ್ಲಿ ಬೀಜ, ದನದ ಕೆನೆ ಹಾಲು ಮತ್ತು ಕೊಕ್ಕೊಗಳಿಂದ ತಯಾರಿಸಲಾಗುತ್ತದೆ. ಆರೋಗ್ಯ, ಶಕ್ತಿ ಮತ್ತು ಚೈತನ್ಯ ರಕ್ಷಣೆಗೆ ಇದು ಅತ್ಯಮೂಲ್ಯ ಪಾನಕ. ಪಡೆಯುವಾಗ ತಾಜಾ ಓವಲ್ಟಿನನ್ನೇ ಪಡೆಯಿರಿ. ನಕಲಿಗಳನ್ನು ತ್ಯಜಿಸಿರಿ.

ನಿಮ್ಮ ಚಹಾಕ್ಕೆ 'ಓವಲ್ಟಿನ್' ಸೇರಿಸಿರಿ—ಅದು ಆರೋಗ್ಯಕರ, ಬಲವರ್ಧಕ ಮತ್ತು ಶಕ್ತಿದಾಯಕ.

ಓವಲ್‌ಟಿನ್

ಟೋನಿಕ್ ಆಹಾರ ಪಾನಕ.

OVALTINE

ತಾಯಂದಿರು ತಮ್ಮ ಮಕ್ಕಳಿಗೆ ಮೊಲೆಹಾಲನ್ನು ಕೊಟ್ಟು, ಸಾಕುವಂತೆ ಸಹಕರಿಸುತ್ತದೆ.

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ ದೊರೆಯುತ್ತದೆ.

ಏಜಂಟ್ — ಜೇಮ್ಸ್ ರ್‍ಯಾಟ್ 85 ಕ್ಲೈವ್ ಸ್ಟ್ರೀಟ್ ಕಲ್ಕತ್ತಾ, ಮತ್ತು ಮುಂಬಾಯಿ ಮದ್ರಾಸ.

OV/301

ಎಚ್ಚರಿಕೆ!

ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ಶ್ರೀ ಎಂ ಗಣಪತಿರಾವ್ ಐಗಳರ ಪಠ್ಯಪುಸ್ತಕಗಳು ಪಾಠಪಟ್ಟಿಗನುಸಾರವಾಗಿಲ್ಲವೆಂದು ಕೆಲವು ಪ್ರಕಾಶಕರು ಸುಳ್ಳು ಹೇಳಿ ನಮ್ಮ ಗಿರಾಕಿಗಳನ್ನು ಜಿಲ್ಲೆಯ ಕೆಲವು ಕಡೆಗಳಲ್ಲಿ ವಂಚಿಸುತ್ತಿರುವರಾಗಿ ನಮಗೆ ತಿಳಿದುಬಂದಿದೆ. ಆದುದರಿಂದ ನಾವು ನಮ್ಮ ಎಲ್ಲಾ ಗಿರಾಕಿಗಳಿಗೆ ತಿಳಿಸುವುದೇನೆಂದರೆ—ಐಗಳರ ಪಠ್ಯಪುಸ್ತಕಗಳು ಪಾಠಪಟ್ಟಿಗನುಸಾರವಾಗಿಯೇ ಶಾಲಾ ಮಕ್ಕಳಿಗೆ ಯೋಗ್ಯವಾಗುವಂತೆಯೇ ಬರೆಯಲ್ಪಟ್ಟಿವೆ. ಅವರ ಪುಸ್ತಕಗಳ ಪ್ರಖ್ಯಾತಿಗೆ ಅವರ ಇಪ್ಪತ್ತು ವರ್ಷಗಳ ಅನುಭವವೇ ಸಾಕ್ಷಿ. ನಮ್ಮ ಗಿರಾಕಿಗಳು ಮೋಸಹೋಗದೆ ನಮ್ಮನ್ನು ಮುಂಚಿನಂತೆಯೇ ಪ್ರೋತ್ಸಾಹಿಸಬೇಕಾಗಿ ಈ ಮೂಲಕ ಕೇಳಿಕೊಳ್ಳಲಾಗಿದೆ.

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

Ested 1920] THE [1920ರಲ್ಲಿ ಸ್ಥಾಪಿತವಾದದ್ದು.

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು

ಠೇವಣಾತಿಗಳ ದರ

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur,
Dated 10—4—1935.

G. N, Lakshman Pai,
Secretary.

ಸಾಹಿತ್ಯ-ಸಂಗ್ರಹ.

ಪ್ರಾಚೀನ ನಾಗರೀಕತೆಯೂ ಆಧುನಿಕ ನಾಗರೀಕತೆಯೂ.

ಪಂಡಿತ ಬಿ. ಶಿವರಾಮಯ್ಯನವರು "ದೇಶರಂಜನಿ"ದ ೧೯೩೧ರ ಡಿಶಂಬರ ಸಂಚಿಕೆಯಲ್ಲಿ ಹೀಗೆ ಬರೆದಿರುತ್ತಾರೆ "ನಗರೇ ಭವನಗರ—ಅಂದರೆ ಪಟ್ಟಣದಲ್ಲಿ ವಾಸವಾಗಿರುವವನೇ ನಾಗರನು. ನಾಗರನ ಭಾವನೇ ನಾಗರೀಕತೆ ಯೆಂದಾಗುವುದು ಗ್ರಾಮಗಳಲ್ಲಿ ವಾಸಮಾಡಿಕೊಂಡಿರುವ ಒಕ್ಕಲಿಗರು ಮೊದಲಾದವರಿಗೆಲ್ಲಾ ಗ್ರಾಮ್ಯರೆಂದು ಹೆಸರಿರುವುದು. ಈ ಗ್ರಾಮ್ಯವೆಂಬ ಪದವು ಸಾಧಾರಣವಾಗಿ ಮೌಢ್ಯವನ್ನು ಸೂಚಿಸುವುದು. ಆದದರಿಂದಲೇ 'ಗ್ರಾಮ್ಯ ಭಾಷೆ' ಎಂದರೆ ಗ್ರಾಮ್ಯಶಬ್ದ. ಅದೂವ್ಯಾಕರಣ ವ್ಯತಿರಿಕ್ತವಾದ ಹೆಡ್ಡ ಮಾತೆಂದೂ ಅರ್ಥವಾಗುವುದು, ಆದರೆ, ನಗರವಾಸಿಗಳು, ಒಳ್ಳೆಯ ಸಂಸ್ಕೃತರೂ ತಿಳಿದವರೂ ಎಂಬ ಭಾವದಿಂದ ಅವರ ಆಚಾರ ವ್ಯವಹಾರಾದಿಗಳಿಗೆ ನಾಗರಿಕತೆ ಎಂಬ ಹೆಸರು ಬಂದು ಕೊನೆಗೆ ಸಂಸ್ಕೃತ

ಕನ್ನಡ ಪತ್ರಿಕೆಗಳು.

ಜನರ ಎಲ್ಲಾ ಆಚಾರವ್ಯವಹಾರಗಳಿಗೂ ನಾಗರೀಕತೆ ಎಂಬ ಮಾತೇ ರೂಢಿಯಾಗಿ ಬಂತು. ನಮ್ಮ ಪ್ರಾಚೀನ ನಾಗರಿಕತೆಗೂ ಅರ್ವಾಚೀನ ನಾಗರೀಕತೆಗೂ ಎಷ್ಟೋ ಅಭ್ಯಂತರವಿರುವುದು. ನಮ್ಮ ಪ್ರಾಚೀನ ನಾಗರೀಕತೆಯು ನಮ್ಮ ದೇಶದ ಹವಾಗುಣಕ್ಕೂ ನಮ್ಮ ಆಹಾರ ವ್ಯವಹಾರಾದಿಗಳಿಗೂ ಅನುಕೂಲವಾಗಿದ್ದಿತು. ಈಗಿನ ನಮ್ಮ ನಾಗರಿಕತೆಯು ಈ ದೇಶದ ಹವಾಗುಣ ಮುಂತಾದವುಗಳಿಗೆಲ್ಲ ವ್ಯತಿರಿಕ್ತವಾಗಿ ಪಶ್ಚಿಮ ದೇಶೀಯರ ವಿದ್ಯಾಸಂಪರ್ಕದಿಂದ ದಿನದಿಂದ ದಿನಕ್ಕೆ ಅವರ ಆಚಾರ ವ್ಯವಹಾರಗಳನ್ನೇ ಹೋಲುತ್ತಾ ಬರುತ್ತಿರುವುದು. ಈಗ ಹಿಂದೂಗಳಲ್ಲವರ ಆಯುಃ ಪ್ರಮಾಣವು ತಗ್ಗುವ ದಕ್ಕೂ, ದಿನದಿಂದ ದಿನಕ್ಕೆ ರೋಜರುಜಿನಗಳ ಹೆಚ್ಚುವುದಕ್ಕೂ ಈ ನವನಾಗರೀಕತೆಯೇ ಪ್ರಬಲವಾದ ಕಾರಣವೆಂದು ಹೇಳಲು ಯಾವ ಆತಂಕವೂ ತೋರದು. ಆದರೆ, ಈ ನವನಾಗರೀಕತೆಯಿಂದ ಪುರಸ್ಕೃತರಾದ ಕೆಲ ಮಹನೀಯರು ಈ ಕಾರಣವನ್ನು ಹೇಳದೆ ಬಾಲ್ಯ ವಿವಾಹಾದಿಗಳೇ ಕಾರಣವೆಂದು ಅಲ್ಲದುದನ್ನು ಹೇಳಿ ಸಾಧಿಸುತ್ತಾರೆ. ಬಾಲ್ಯ ವಿವಾಹವು ನಡೆಯುತ್ತ ಬಂದಿರುವುದು ನಮ್ಮ ದೇಶದಲ್ಲಿ ನಿನ್ನೆ ಮೊನ್ನೆಯ ಮಾತಲ್ಲ. ಎರಡು ಮೂರು ಸಾವಿರ ವರ್ಷಗಳ ಹಿಂದಿನಿಂದಲೂ ನಡೆಯುತ್ತಿದ್ದಿತು. ವಿಚಾರಮಾಡುತ್ತಾ ಹೋದಲ್ಲಿ ಆಗ ಹೆಣ್ಣು ಮಕ್ಕಳಿಗೆ ಐದು ವರುಷ ವಯಸ್ಸಿನಲ್ಲೇ ಮದುವೆಯಾಗುತ್ತಿದ್ದಿತೆಂದು ತೋರುತ್ತದೆ"

ತತ್ವದ ಸ್ವರೂಪ

ಶ್ರೀ 'ನಾರಾಯಣ'ರು ಸುಬೋಧದಲ್ಲಿ ಹೀಗೆ ಬರೆದಿರುವರು "ವಿಜ್ಞಾನ ಶಾಸ್ತ್ರಜ್ಞರಾದ ಆಧುನಿಕ ಪಂಡಿತರು ವಸ್ತುವಿಭಜನೆಯನ್ನು (analysis of matter) ಮಾಡಿ ಎಲ್ಲಾ ಪದಾರ್ಥಗಳ ಸೃಷ್ಟಿಯೂ ಪ್ರಾಕೃತಿಕ ಪದಾರ್ಥಗಳಿಂದಲೇ (Matter) ಆಗಿರುವುದೆಂದು ಹೇಳುವರು. ಚೇತನದ (Spirit) ಸ್ಥಿತಿಯನ್ನು ಅವರಿನ್ನೂ ಕಂಡುಹಿಡಿದಿಲ್ಲ. ಅದರೂ ಪ್ರಪಂಚವು ಪ್ರಕೃತಿಯೊಂದರಿಂದಲೇ ಉಂಟಾಗಿರುವುದೆಂದು ತಿಳಿಯಕೂಡದು. ನಿರ್ಚೇತನವಾದ ಪ್ರಕೃತಿಯನ್ನು ಬೇಕಾಬೇಕಾದಂತೆ ಮಾರ್ಪಡಿಸಬಲ್ಲ ತಿಳುವಳಿಕೆಯುಳ್ಳ ಚೈತನ್ಯವು ಇದ್ದೇ ಇರಬೇಕು.

ಪ್ರಕೃತಿಯೆನ್ನುವ ಬೇರೆ ಪದಾರ್ಥವಿಲ್ಲ. ಅದು ಚೈತನ್ಯದ ಮತ್ತೊಂದು ದಾಸ್ಯರೂಪ (aspect) ಎನ್ನುವುದು ಕೆಲವರ ಮತ. ಹೀಗೆ ಹೇಳುವ ಆಧುನಿಕ ಪಂಡಿತರು ಸಿದ್ಧಾಂತಮಾಡಿರುವುದಿಲ್ಲ. ಸುಮ್ಮನೆ ಹಾಗೆ ಊಹಿಸುವರು. ಇದೇ ಮತವುಳ್ಳ ವೇದಾಂತಿಗಳು, ಪ್ರಕೃತಿಯು "ಅನಿರ್ವಾಚ್ಯವಾದ ಸದಸತ್" ಪದಾರ್ಥವೆಂದು ಹೇಳುವರೇ ಹೊರತು ನಿರ್ಧಾರವಾದುದನ್ನು ತಿಳಿಸುವುದಿಲ್ಲ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು, ತಾನು ಕ್ಷರಾಕ್ಷರಗಳಿಗಿಂತಲೂ, ಜಡಪ್ರಕೃತಿಗಿಂತಲೂ ಅನ್ಯನೆಂದೂ, ಅವು ತನಗೆ ಸೇರಿದುವೆಂದೂ ಹೇಳಿರುವನು. ಆದುದರಿಂದ ಪ್ರಕೃತಿಯು ಪರವಸ್ತುವನ್ನು ಆಶ್ರಯಿಸಿಕೊಂಡಿರುವ ಬೇರೆ ಪದಾರ್ಥವೆಂದು ಭಾವಿಸಬೇಕು. ಪ್ರಕೃತಿಯೆಂದರೆ, ಪೃಥಿವ್ಯಾದಿ ಪಂಚಭೂತಗಳೆಂದೇ ತಿಳಿಯಬಾರದು. ಅನೇಕ ಬಣ್ಣಗಳ ಬೆರಕೆಯಿಂದ ಜನಿತವಾದರೂ ಒಂದೇ ಒಂದಾಗಿ ತೋರುವ ಬಿಳಿಯ ಬಣ್ಣದಂತೆ ಸತ್ವ ರಜಸ್ತಮೋ ಗುಣಗಳು (ಪ್ರಕೃತಿ ಸೂಕ್ಷ್ಮರೂಪಗಳು) ಸಮ್ಮಿಳಿತವಾಗಿ ಪರವಸ್ತುವಿನಲ್ಲಿ ಇರುವುವು. ಅವುಗಳ ಏಕಭಾವಕ್ಕೆ "ಮೂಲಪ್ರಕೃತಿ" ಎಂದು ಹೆಸರು. ಅನಾದಿಯಾದ ಈ ಪ್ರಕೃತಿಯು ಸಮುದ್ರದ ನೀರಿನಲ್ಲಿರುವ ಉಪ್ಪಿನಂತೆ ಪರವಸ್ತುವಿನಲ್ಲಿ ಸೇರಿಕೊಂಡಿರುವುದು. ಚೈತನ್ಯವು ಸೃಷ್ಟಿಯನ್ನು ಮಾಡುವುದರ ಉದ್ದೇಶವೇನು?" ಎಂಬುದನ್ನು ಈಗ ವಿಚಾರಿಸೋಣ.

ಬ್ರಹ್ಮನ ವಿಷಯವನ್ನು ಕೊಂಚಮಟ್ಟಿಗೆ ತಿಳಿದಲ್ಲದೆ ಸೃಷ್ಟಿಯ ಕಾರಣವು ಸ್ಪಷ್ಟವಾಗುವುದಿಲ್ಲ. (ಬ್ರಹ್ಮನೆಂದರೆ ಇಲ್ಲಿ ಚತುರ್ಮುಖನಲ್ಲ, ಅವನ ಜನಕ) ಪಕ್ಷಬೀಜ ನ್ಯಾಯಾನುಸಾರ ಯಾವನ ಸ್ಥಿತಿಯು ಸ್ವತಸಿದ್ಧವೋ ಅಂತಹ ಬ್ರಹ್ಮನು ಸಕಲಪದಾರ್ಥವನ್ನೂ ಅರಿಯಬಲ್ಲವನು. ಪ್ರಕೃತಿಯ ವಿಚಾರವನ್ನೂ ತನ್ನ ವಿಚಾರವನ್ನೂ ಚೆನ್ನಾಗಿ ಬಲ್ಲವನ ದುದರಿಂದ ಅವನು ಚಿತ್ ಪದಾರ್ಥವಾಗಿರುವನು. ವಿವೇಕಪೂರ್ವಕವಾದ ಜ್ಞಾನದಿಂದ ಅನಂತ ಲಭಿಸುವುದು. ಅನುಭವದಲ್ಲಿ ಕಂಡುಬರುವುದು ಆದುದರಿಂದ ಚಿತ್ ಸ್ವರೂಪನಾದ ಬ್ರಹ್ಮನು ಆನಂದ ಸ್ವರೂಪನೂ ಆಗಿರುವನೆಂದು ತಿಳಿಯಬೇಕು. ಪ್ರಕೃತಿಯು ಕೇವಲ ಸತ್ ಪದಾರ್ಥವಾದುದರಿಂದ ಬ್ರಹ್ಮನು ಅದಕ್ಕಿಂತಲೂ ಭಿನ್ನನೂ ಮತ್ತು ಉತ್ತಮನು. ಜಡ ಪದಾರ್ಥವೇ ಸತ್ಯವೆ ದೂ ಅದರ ಚಿದಾನಂದ ಸ್ವರೂಪವೇ ಬ್ರಹ್ಮನೆಂದೂ ಒಟ್ಟಿನಲ್ಲಿ ಒಂದೇ ಪದಾರ್ಥವು ಇರುವುದೆಂದೂ ಹೇಳಬಾರದು. ಏಕೆಂದರೆ "ಸತ್ವ ಅಂತರ್ಯಾಮಿ" ಎಂಬ ಗೀತೋಕ್ತಿಯು ಅದಕ್ಕೆ ವಿರೋಧವನ್ನು ಬೋಧಿಸುತ್ತದೆ.

ಪ್ರಾಚೀನ ವಾಙ್ಮಯವೂ ಆಧುನಿಕ ವಾಙ್ಮಯವೂ

ಶ್ರೀ ಪಂಡಿತ ಮಹಾದೇವ ಪ್ರಭಾಕರ ಪೂಜಾರರವರು ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಈ ವಿಚಾರವಾಗಿ ಎರಡು ತ್ತ ಹೀಗೆ ಪ್ರತಿಪಾದಿಸಿರುವರು "ನಮ್ಮ ಪ್ರಾಚೀನ ಕನ್ನಡ ಸಾಹಿತ್ಯವು ಸಂಸ್ಕೃತ ಸಾಹಿತ್ಯವನ್ನೇ ಹೋಲುವುದು. ಕನ್ನಡಕ್ಕೆ ಸಂಸ್ಕೃತವೇ ಆಧಾರವಾಯಿತು. ಸಂಸ್ಕೃತದ ಅತಿ ಪ್ರಾಚೀನ ಸಾಹಿತ್ಯವು ವೇದವೇದಾಂತಾದಿ ಸಾಹಿತ್ಯವು ಉಂಟಾದ ಕಾಲದಲ್ಲಿ ಕನ್ನಡದಲ್ಲಿ ಸಾಹಿತ್ಯವು ಹುಟ್ಟಿರಲಾರದು. ಸಾಂಖ್ಯ ಯೋಗ ಮೊದಲಾದ ದರ್ಶನಗಳು ಜ್ಯೋತಿಷ್ಯ ವ್ಯಾಕರಣ ಛಂದಸ್ಸು ಮುಂತಾದ ವೇದಾಂಗಗಳು ಧರ್ಮಶಾಸ್ತ್ರಗಳು ಪುರಾಣಗಳು ಸಾಂಸ್ಕೃತಿಕ ಗಣನಾದ ಹಲವು ಬಗೆಯ ಸಾಹಿತ್ಯವು ಸಂಸ್ಕೃತದಲ್ಲಿ ಹುಟ್ಟಿ ಬೆಳೆಯುತ್ತಿದ್ದಾಗಲೂ ಕನ್ನಡಕ್ಕೆ ಸಾಹಿತ್ಯವಿದ್ದಿಲ್ಲ. ಲಿಪಿಯುಂಟಾಗ ವುದಕ್ಕಿಂತ ಮುಂಚಿನ ಕಾಲದಲ್ಲಿ ವಾಙ್ಮಯವು ಕನ್ನಡದಲ್ಲಿರಲಿಲ್ಲ. ಆಗ ಕನ್ನಡಿಗರು ಇಲ್ಲವೆಂದಾಗಲೀ ಅವರು ನಾಗರೀಕರಾಗಿರಲಿಲ್ಲವೆಂದಾಗಲೀ ಇತಿಹಾಸವು ಹೇಳುವುದಿಲ್ಲ. ಆದರೆ, ಸಂಸ್ಕೃತದ ಗಂಭೀರವಾದ ಸಾಹಿತ್ಯದ ಉಜ್ವಲವಾದ ಬೆಳಕಿಗೆ ಇತರ ಇತರ ಭಾಷೆಗಳ ಜನರ ಕಣ್ಣು ಕುಕ್ಕಿದುವು. ನಮ್ಮ ದೇಶದಲ್ಲಿ ಯಾವ ಭಾಷೆಯವರಾದರೂ ಸಂಸ್ಕೃತವನ್ನೇ ಓದುವುದೂ, ಸಂಸ್ಕೃತದಲ್ಲಿ ಗ್ರಂಥಗಳನ್ನು ರಚಿಸುವುದೂ ವಾಡಿಕೆಯಾಯಿತು. ಧರ್ಮಶಾಸ್ತ್ರಗಳು ದರ್ಶನಗಳು ಪುರಾಣಗಳು ಆ ಭಾಷೆಯಲ್ಲಿದ್ದುದರಿಂದ ಅದಕ್ಕೆ ಪರಮ ಗೌರವ ದೊರೆತು ಉಳಿದ ಭಾಷೆಗಳಿಗೆ ಗತಿಯಿರಲಿಲ್ಲ. ಇಷ್ಟೇ ಅಲ್ಲ, ಇತರ ಭಾಷೆಗಳು ಅನಾರ್ಯ ಭಾಷೆಗಳು ಗ್ರಾಮ್ಯ ಭಾಷೆಗಳು ಎಂದು ತಿರಸ್ಕಾರವನ್ನು ಪಡೆದುವು. ಈ ಕಾರಣದಿಂದಲೇ ಕರ್ನಾಟಕ ದೇಶದಲ್ಲಿ ಹುಟ್ಟಿದ ಅದ್ವಿತೀಯ ಪ್ರತಿಭಾಶಾಲಿಗಳೂ ಕೂಡಾ ತಮ್ಮ ಮಾತೃಭಾಷೆಯ ಮೊರೆಯನ್ನು ಕೇಳದೆ ಸಂಸ್ಕೃತದಲ್ಲಿ ಗ್ರಂಥಗಳನ್ನು ಬರೆದರು. ಕೃಷ್ಣವೇಣೀ ಭೀಮರಥೀ ನದಿಗಳ ನಡುವಣ ನಾಡಿನಲ್ಲಿ—ಎಂದರೆ ನಮ್ಮ ಉತ್ತರ ಕರ್ನಾಟಕದಲ್ಲಿ ಹುಟ್ಟಿ ಮುಣುವಳ್ಳಿಯಲ್ಲಿ ತಪಮಾಡಿ ಅಲೌಕಿಕ ಶಕ್ತಿಸಂಪನ್ನನಾದ ಸಮಂತಭದ್ರನೆಂಬ ಜೈನಾಚಾರ್ಯನು ಉಮಾಸ್ವಾತ್ಯಾಚಾರ್ಯ ಕೃತ ತತ್ವಾರ್ಥ ಸೂತ್ರಕ್ಕೆ ೮೪ ಸಹಸ್ರ ಗ್ರಂಥ ಪರಿಮಿತವಾದ 'ಗ್ರಂಥಹಸ್ತಿ' ಮಹಾಭಾಷ್ಯವನ್ನು ಸಂಸ್ಕೃತದಲ್ಲಿ ಬರೆದನಂತೆ ಕರ್ನಾಟಕ ದೇಶದ ಕೊಳ್ಳೇಗಾಲ ಗ್ರಾಮದ ಪೂಜ್ಯಪಾದಾಚಾರ್ಯನೆಂಬ ಜೈನ ಪಂಡಿತನು "ತತ್ವಾರ್ಥ ಸೂತ್ರ ಟಿಪ್ಪಣ" "ಜೈನೇಂದ್ರ ವ್ಯಾಕರಣ" ಮುಂತಾದ ಗ್ರಂಥಗಳನ್ನು ಸಂಸ್ಕೃತದಲ್ಲಿ ಬರೆದನು. ಪ್ರಾಚೀನ ಮಾತಂತಿರಲಿ, ಅರ್ವಾಚೀನರಾದ ವಿದ್ಯಾರಣ್ಯ ಸ್ವಾಮಿಗಳು ಅನೇಕ ಗ್ರಂಥಗಳನ್ನು ಸಂಸ್ಕೃತದಲ್ಲೇ ಬರೆದರಲ್ಲ! ತಮ್ಮ ನಾಡಿನ ಭಾಷೆಯಲ್ಲಿ ಒಂದು ಗ್ರಂಥವನ್ನು ಬರೆಯಬಾರದೇ?

ದೀರ್ಘತಮವಾದ ಪ್ರಾಚೀನ ಕಾಲದಲ್ಲಿ ಕನ್ನಡದಲ್ಲಿ ಸಾಹಿತ್ಯದ ಬೇರೆ ಬೇರೆ ಅಂಗಾಂಗಗಳು ಉಂಟಾಗಿರದಿದ್ದರೂ, ಮನುಷ್ಯನ ಪ್ರಕೃತಿಗೆ ಸಹಜವಾದ ಕಾವ್ಯಸಾಹಿತ್ಯವು ಉಂಟಾಗಿರಲಿಲ್ಲವೆಂಬುದು ಒಪ್ಪತಕ್ಕ ಮಾತಲ್ಲ. ಉಂಟಾಗಿರಬಹುದು, ಆದರೆ ಅದು ಈಗ ಉಪಲಬ್ಧವಾಗಿರಲಿಕ್ಕಿಲ್ಲ. ಇಲ್ಲವೆ ಅದು ಚಿರಜೀವಿಯಾಗಿರಲಿಕ್ಕಿಲ್ಲ. ನಮಗೆ ದೊರೆಯುವ ಕನ್ನಡ ಸಾಹಿತ್ಯವೆಲ್ಲ ಸಂಸ್ಕಾರ ಹೊಂದಿದ ಭಾಷೆಯಲ್ಲಿರುವುದೇ ಆಗಿದೆ. ವೇದಭಾಷೆಯಂತಹ ಭಾಷೆಯಲ್ಲಿ ಎಂದರೆ ಭಾಷೆ ಅನಿಯಂತ್ರಿತವಾಗಿದ್ದರೂ ಭಾವವು ಮುಖ್ಯವಾಗಿರುವ ಆದಿಕಾಲದ ಸಹಜಭಾಷೆಯಲ್ಲಿ ಕನ್ನಡ ಸಾಹಿತ್ಯವು ಇಲ್ಲ. ಇಷ್ಟೇ ಅಲ್ಲ, ಅಲ್ಲಿಂದೀಚೆಗೆ ಅನೇಕ ಶತಾಬ್ದಿಗಳ ಅವಧಿಯಲ್ಲಿ ಉಂಟಾಗಿರಬಹುದಾದ ವಾಙ್ಮಯವನ್ನು ಕೂಡಾ ಕನ್ನಡಿಗರು ಕಳೆದುಕೊಂಡಿದ್ದಾರೆ. ೧೦ನೆಯ ಶತಮಾನದ ಪಂಪನೇ ನಮಗೆ ಆದಿ ಕವಿ.

ಪಂಪನ ಕಾಲವೆಂದರೆ ಸಾಹಿತ್ಯ ರಂಗದಲ್ಲಿ—ವಿಶೇಷವಾಗಿ ಸಂಸ್ಕೃತ ಸಾಹಿತ್ಯದಲ್ಲಿ ಶಬ್ದಚಮತ್ಕೃತಿಯ ಪ್ರಭಾವವು ತಲೆದೋರಿದ ಕಾಲವು. ಆಗ ಕವಿ ಸಾಮ್ರಾಟನೆನಿಸಿದ ಬಾಣನ ಶಬ್ದಗುಂಫನ ಚಮತ್ಕಾರವು ಎಲ್ಲ ಕವಿಗಳನ್ನೂ ಮೋಹಗೊಳಿಸಿದ್ದಿತು. ಪಂಪನು ತನ್ನ ಗ್ರಂಥದಲ್ಲಿ ಬಾಣಕವಿಯ ವರ್ಣನೆಗಳನ್ನು ಪದ್ಯರಚನೆಯನ್ನು ಅನುಸರಿಸಿರುವುದನ್ನು ನೋಡಿದರೆ ಅಲ್ಲದೆ ಬಾಣನ ಕಾವ್ಯಗಳನ್ನು ಚೆನ್ನಾಗಿ ಪರಿಶೀಲಿಸಿದ್ದನೆಂಬುದು ಕಾಣಬರುವುದು. ಆ ಆದಿಕವಿ ಬಿಡಿದ ದಾರಿಯಲ್ಲಿ ಮುಂದಿನ ಕವಿಗಳು ಪದಾರ್ಪಣ ಮಾಡಿದರು. ಈ ಸಂಸ್ಕೃತ ಸಂಪ್ರದಾಯವು ಕನ್ನಡ ಸಾಹಿತ್ಯಕ್ಕೆ ಆಗೌರವವನ್ನುಂಟುಮಾಡಿತು. ಕನ್ನಡಿಗರಿಗೆ ಪ್ರಿಯವಸ್ತುಗಳನ್ನು ಮಾಡಲಿಲ್ಲ. ನಮ್ಮ ದೇಶದ ಹಲವು ಭಾಷೆಗಳು ಪರಾಧೀನವಾಗಿದ್ದ ಆ ಕಾಲದಲ್ಲಿ ನಮ್ಮ ಕನ್ನಡದಲ್ಲಿ ಸಂಸ್ಕೃತ ಪದ ಪ್ರಯೋಗ ಬಾಹುಳ್ಯವು ಆಶ್ಚರ್ಯವಲ್ಲ. ನನಗೆ ಒಪ್ಪಿಗೆಯಾದ ಮಾತು.

ನಮ್ಮ ಪ್ರಾಚೀನ ಕಾವ್ಯಗಳು ಸೃಷ್ಟಿಯಾದ ಕಾಲವು ಶಾಂತಿಪ್ರಧಾನವಾದದ್ದು. ಆ ಕಾಲದಲ್ಲಿ ರಾಜಕೀಯ ಸನ್ನಿವೇಶದಲ್ಲಿ ಆಗಾಗ ಸಂಘರ್ಷಗಳು ಬರುತ್ತಿದ್ದರೂ ಅವು ಸಾರ್ವತ್ರಿಕವಾದ ಕ್ಷೋಭೆಗೊಳಿಸುತ್ತಿರಲಿಲ್ಲ. ಅನ್ನವಸ್ತ್ರಗಳ ಸಮೃದ್ಧಿಯಿದ್ದುದರಿಂದ ಜೀವನಕಲಹವು ಉಗ್ರವಾಗಿರಲಿಲ್ಲ. ಆ ಶಾಂತಿಮಯ ಜೀವನದಲ್ಲಿ ಜನರು ನಿತ್ಯ ವ್ಯವಸಾಯಗಳನ್ನು ತೀರಿಸಿಕೊಂಡು ಕಾವ್ಯಶಾಸ್ತ್ರ ವಿನೋದದಲ್ಲಿ ಕಾಲವನ್ನು ಕಳೆದರು. ಶಾಂತಿಕ್ಕನುಗುಣವಾದ ಸಾಹಿತ್ಯವು ಆಗ ಯಾವುದೊಂದು ವಿಷಯವನ್ನೂ ಅಂಗೋಪಾಂಗಗಳಿಂದ ವಿಸ್ತರಿಸುವಲ್ಲಿಯೇ ಕವಿಗಳ ಗಮನವು. ಲಲಿತವೂ ಗಂಭೀರವೂ ಆದ ಸಂಸ್ಕೃತ ಭಾಷೆಯಲ್ಲಿ ಆ ಕಾಲದ ಸಾಹಿತ್ಯವು ಅನೇಕಾರ್ಥಕ ಶಬ್ದ ರಸ ಅಲಂಕಾರ ವ್ಯಂಗ್ಯ ಶ್ಲೇಷ ಮೊದಲಾದ ಸೌಕರ್ಯಗಳಿಂದ ಬಹು ಮಂಥರಗತಿಯಿಂದ ಸಾಗಿತು. ಇಂತಹ ಸಾಹಿತ್ಯಕ್ಕೆ ಶ್ರೋತಾರನೂ ಶಾಂತನಾದವನೇ ಬೇಕು.

ನೂತನ ಆದರ್ಶ

The Young Men of India, Burma and Ceylon ಎಂಬ ಪತ್ರಿಕೆಯಲ್ಲಿ ವಿಲ್ಬರ್ ಆರ್ ವೆಸ್ ಎಂಬವರು ಸಾರ್ವಜನಿಕ ಕ್ರಾಂತಿಯ ಕುರಿತಾಗಿ ಬರೆಯುತ್ತಾ "ಜನಸಾಮಾನ್ಯರು ಜಗತ್ತಿನ ರಾಷ್ಟ್ರಗಳ ಆಡಳಿತದಲ್ಲಿ ಅಕ್ಷ್ಮಿಯಾಗಿಸಿದ ಪ್ರಥಮ ಕ್ರಾಂತಿಯ ಕಾಲವಿದು. ನಿರಂಕುಶ ಸರ್ವಾಧಿಕಾರಿಗಳು ಹಲವು ದೇಶಗಳಲ್ಲಿ ಮೆರೆದಾಡಿದರೂ, ಸಾಮಾನ್ಯ ಜನರ ಧ್ವನಿಯು ಜಗತ್ತಿನಲ್ಲಿ ಈಗ ಬಹುತೀಕ್ಷ್ಣವಾಗಿ ಪರಿಣಾಮಕಾರಿಯಾಗುತ್ತಿದೆ.

ಹಿಂದಿನ ಕಾಲದಲ್ಲಿ ಜನರು ನಾವು ಅದೃಷ್ಟದ ಮಕ್ಕಳೆಂದು ಭಾವಿಸಿದ್ದರು. ಆಧುನಿಕ ಕಾಲದಲ್ಲಾದರೋ ತಾವೇ ಅದೃಷ್ಟದ ಸ್ವಾಮಿಗಳಾಗಬೇಕೆಂದು ಜನರು ಆಗ ಹಪಹಪಿಸುತ್ತಿರುವರು. ಜನರ ಸಾಮಾಜಿಕ ಜೀವನದಲ್ಲಿ ಪರಿವರ್ತನೆಯನ್ನುಂಟುಮಾಡಬೇಕೆಂದಾದರೆ ಶಾಂತಪರವೂ ಆಜ್ಞಾನಪೂ ಆದ ಸಂಘಟನೆಗಳು ತಾವಾಗಿಯೇ ಸಂಘಟಿಸಬೇಕೆಂದು ಆಶಿಸುತ್ತಿದ್ದೇವೆ. ಪ್ರಾಯೋಗಿಕ ದೂರದೃಷ್ಟಿಯೂ ಕರ್ಮವೂ ದುರ್ಲಕ್ಷ್ಯ ಕಲ್ಪಿಸುತ್ತಿದ್ದವು

ಇಂಗ್ಲಿಷ್ ಪತ್ರಿಕೆಗಳು.

ಆದರೆ, ಮುಂದಕ್ಕೆ ಈ ಸ್ಥಿತಿಯು ಮುಂದರಿಯಲಾರದು. ಕಾಲವು ಎಲ್ಲವನ್ನೂ ಮಾಡಲೆಂದು ಎಲ್ಲ ಹೊಣೆಯನ್ನೂ ಅದರ ಮೇಲೆ ಬಿಡುವ ಬದಲಾಗಿ ಈಗಿನ ಮನುಷ್ಯನು ಅದನ್ನುಂಟುಮಾಡಲೆಂದೇ ನೆಗೆಯುತ್ತಿರುವನು. ವರ್ತಮಾನಕಾಲ ಮತ್ತು ಭವಿಷ್ಯತ್ಕಾಲದಲ್ಲಿ ಏನಾಗಬೇಕೆಂದು ಅವನು ನಿರಂತರವಾಗಿ ಚಿಂತಿಸುತ್ತಿರುವನು. ಆದರೆ ನಾವು ವಿವೇಕದಿಂದ ಯೋಚನೆಯನ್ನು ಮಾಡುತ್ತೇವೋ? ನಮ್ಮ ದುರಾಶೆ, ಅಥವಾ ಆಸೆಗಳು ತೊಲಗಿಹೋಗಿ ಪ್ರಯೋಜನಕಾರೀ ಜ್ಞಾನ ಸಂಪಾದನೆಯಾಗಬೇಕೆಂದು ತಿಳಿಯದ ವಿನಹ ನಾವು ಸರಿಯಾಗಿ ಆಚರಿಸಲಾರೆವು. ನಮ್ಮ ಆದರ್ಶಕ್ಕೂ ನಮ್ಮ ಶಕ್ತಿಸಾಮರ್ಥ್ಯಕ್ಕೂ ಅಜಗಜಾಂತರವಿದೆ. ನಾವು ರಚಿಸಲು ಶಕ್ತಿವಂತರಿಗಿಂತಲೂ ಸುಂದರ ಆದರ್ಶವನ್ನು ನಾವು ದೃಷ್ಟಿಸುತ್ತಿದ್ದೇವೆ. ಆದುದರಿಂದ ಯಾವುದು ಸ್ವಾಭಾವಿಕವೋ ಯಾವುದು ತೀರ ಕಾರ್ಯಕಾರಿಯೋ ಅಂತಹ ವಿಷಯಗಳಿಗಾಗಿ ಮಾತ್ರ ಸಾಹಸಪಡುತ್ತಿರುವ ಆದರ್ಶಪರರಾಗಬೇಕು. ಆಧುನಿಕ ಜನಾಂಗದ ನೂತನ ಆದರ್ಶವೆಂದರೆ ಸುವ್ಯವಸ್ಥಿತವಾದ ಸಮಾಜ. ಇಂತಹ ಸುಸೂತ್ರಬದ್ಧ ಸಮಾಜವು ಉದ್ಭವಿಸಬೇಕೆಂದಾದರೆ ಅನರ್ಥಕಾರಿಯಾದ ವೈಯಕ್ತಿಕ ಆದರ್ಶಗಳ ಪ್ರಾಬಲ್ಯವು ತೊಲಗಿಹೋಗಬೇಕು. ವ್ಯಕ್ತಿಪರ ಸ್ವಾತಂತ್ರ್ಯಕ್ಕಿಂತ ಸಮಷ್ಟಿಯ ಹಿತದೃಷ್ಟಿಯೇ ಅಪೇಕ್ಷಣೀಯವಾದುದೆಂಬ ಭಾವನೆಯು ಬೆಳೆಯಬೇಕು. ಮನುಷ್ಯರಲ್ಲಿ ಅನಾದಿಯಾಗಿ ಬಂದ ಐಕ್ಯದ ಅನುಬಂಧ ಸ್ವಭಾವವೇ ಈಗ ೫೦ ಮಾರ್ಗದ್ವ ಸಮಾಜದ ಜನನವನ್ನು ನಿರೀಕ್ಷಿಸುತ್ತಿದೆ. ಪ್ರಾತಃಕಾಲ ಪ್ರಾಯವಾದ ವ್ಯಕ್ತಿಪರತೆಯು ಇತ್ತೀಚೆಗೆ ತಲೆಯೆತ್ತಿತು. ಆದರೆ ಮಹೋನ್ನತವೂ ಸ್ವಾಭಾವಿಕವೂ ಶಾಂತಿಪರವೂ ಆದ ಸಮಾಜ ನಿರ್ಮಾಣದ ಉದ್ದೇಶದಿಂದ ಮಾಯವಾಗಬೇಕು."

ಇನ್ನೊಂದು ಕಾಲಕ್ಕಾಗಿ ಫೋರ್ಡರ ಯೋಜನೆಗಳು

Indian Review ನಲ್ಲಿ ಡಾ। ಜೆ. ಎಮ್. ಕುಮಾರಪ್ಪನವರು ಹೀಗೆ ಬರೆಯುತ್ತಾರೆ —

ತನ್ನ ಹೊಸ ಯೋಜನೆಯ ಮೂಲಕ ಮಿಲಿಯಗಟ್ಟಲೆ ಜನರನ್ನು ಯಾಂತ್ರಿಕ ಉದ್ಯೋಗದಿಂದ ಸಮಸ್ಯೆಯನ್ನು ಬಗೆಹರಿಸಬಹುದೆಂದು ಮಿ. ಫೋರ್ಡರು ಹೇಳುವರು. "ನಿರುದ್ಯೋಗತೆಯನ್ನು ಹೋಗಲಾಡಿಸಬೇಕಾದರೆ ಭೂಮಿಯ ಉಪಯೋಗವನ್ನೇ ಪಡೆಯುವುದು ಹಿತ. ಅದು ನಿರುದ್ಯೋಗತೆಯನ್ನು ಹೋಗಲಾಡಿಸುವುದಲ್ಲದೆ ಅದರಿಂದ ಅನೇಕ ದಕ್ಷತೆಯೂ ಬರುವುದು. ಜನತೆಯು ಸಾಲಕ್ಕೆ ದೈನ್ಯತೆ ಭೂಮಿಯೂ ಪರಸ್ಪರ ಸ್ಪರ್ಧೆಯ ಭೂಮಿಯ ಜೀವನವನ್ನು ರಕ್ಷಿಸುತ್ತದೆ. ಭೂಮಿಯು ಅವನನ್ನು ಬದುಕಿಸುವ ಕೈಗಾರಿಕೆಯನ್ನು ಏರ್ಪಡಿಸುತ್ತದೆ. ಭೂಮಿಯನ್ನು ಪಡೆಯುತ್ತದೆ. ಆಶ್ರಯವನ್ನು ಪಡೆದು ಜೀವನನಡೆಸಲಾರಂಭಿಸಿದರೆ ಮಣ್ಣಿನ ಪ್ರಯೋಜನವು ನಮಗೆ ದೊರೆಯದೆ ನಾವು ಯಾತನೆಗೊಳಗಾಗಬೇಕಾಗುತ್ತದೆ. ಮಣ್ಣು ಸಂಪತ್ತಿನ ಆಗರ— ಬ್ಯಾಂಕುಗಳಲ್ಲ!" ಕೆಲಸಗಾರರಿಂದ ಮನಃಪೂರ್ವಕ ಕೆಲಸವನ್ನಾಶಿಸುವುದಾದರೆ ಅವರಿಗೆ ಅಧಿಕ ಸಂಬಳವನ್ನು ಕೊಡಬೇಕೆಂದು ವಾದಿಸುವವರಲ್ಲಿ ಫೋರ್ಡರವರು ಅಗ್ರಗಣ್ಯರು.

ಜನರು ಹೀಗೆ ಪಟ್ಟಣಗಳನ್ನು ತೊರೆದು ಹಳ್ಳಿಗಳಿಗೆ ಪ್ರವೇಶಿಸಿ ಪುದಾದರೆ ಜನರು ಹಳ್ಳಿಯನ್ನೂ ಯಂತ್ರವನ್ನೂ ಸಂದಿಸಿಕೊಂಡರೆ ಫ್ಯಾಕ್ಟರಿಗಳಲ್ಲಾಗುವ ಸಾಮಗ್ರಿಗಳ ಗತಿಯೇನಾಗುವುದು?— ಎಂದು ಕೆಲವರು ಕೇಳಬಹುದು. ಮಿ. ಫೋರ್ಡರು ಸಮಾಜದ ಗತಿಯೇನೆಂದು ಇಲ್ಲಿ ತರ್ಕಿಸುವುದಿಲ್ಲ—ಅವರು, ಕೈಗಾರಿಕೆಗೊದಗಿರುವ ಅಪಾಯವೆಷ್ಟೆಂದು ಹೇಳುವರು. ಮೋಟಾರ್ ವಾಹನಗಳ ವ್ಯಾಪಾರವ್ಯವಹಾರವಾಗಲಿ, ಇನ್ನಿತರ ಕೈಗಾರಿಕೆಯಾಗಲೀ ಯಾವ ಗತಿಗೀಡಾಗುತ್ತದೆಂದು ಹೇಳುವುದಿಲ್ಲ — ಕೈಗಾರಿಕೆಯು ಅಧೋಗತಿಗಿಳಿಯುವ ಜನತೆಯ

(೧೫ನೇ ಪುಟಕ್ಕೆ ಮುಂದರಿಯುವುದು.)

ಚಕ್ರ

(All Rights Reversed)

ಜನರಲ್ಲಿರುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಷಡ್ವೈರಿಗಳನ್ನು ಓಡಿಸಬೇಕೆಂಬ ಆಶೆಯಿಂದ ಪ್ರಕೃತಿಯು ಮುನಿದು ಅಲ್ಲಲ್ಲಿ ಭೂಕಂಪವಾಗುತ್ತದೆ. ಹಾಗಿದ್ದರೂ ಜನರು ತಮ್ಮ ದುರ್ಗುಣತೆಯನ್ನು ತಿದ್ದಿಕೊಳ್ಳಲಾರರು!

ಕ್ವೆಟ್ಟಾದಲ್ಲಿ ಭೂಮಿಯು ಅಡಿಮೇಲಾದುದೇ ತಡ ಸತ್ತವರ ದುಡ್ಡುದುಗ್ಗಾಣಿಗಳನ್ನು ದೋಚಿಕೊಳ್ಳಲು ಹಲವು ಪಂಗಡಗಳೇ ಹೊರಟವಂತೆ. ಮಿಲಿಟರಿಯವರಲ್ಲದಿದ್ದರೆ ಲೂಟಿಯು ನಡೆಯುವುದು ಸಹಜವಾಗಿತ್ತು!

ಹಿಂದೀಯರ ಈ ದ್ರವ್ಯಾಭಿಲಾಷೆಯನ್ನು ನೋಡಿಯೇ ಕ್ವೆಟ್ಟಾದಲ್ಲಿ ಮಿಲಿಟರಿಯವರು ನಗರವನ್ನು ಕಾವಲು ನೋಡುತ್ತಿರುವರು! ಯಾರೂ ಒಳಗೆ ಪ್ರವೇಶಿಸಬಾರದಂತೆ! ಕಾಂಗ್ರೆಸಿನವರದ್ದಾಗಲೀ, ಇನ್ನಿತರರದ್ದಾಗಲೀ ಪ್ರಯೋಜನದ ಸಹಾಯವು ಬೇಡವೆಂದೇ ಇಂಡಿಯಾ ಸರಕಾರವು ಹೇಳಿಬಿಟ್ಟಿದೆ.

ಸರಕಾರಕ್ಕೆ ನಮ್ಮ ಮೇಲೆ ಪ್ರೇಮವಿಲ್ಲವೆಂದೂ, ಅದು ನಮ್ಮ ದುಡ್ಡುದುಗ್ಗಾಣಿಯನ್ನು ಹಿಂಡುತ್ತದೆಂದೂ, ನಮ್ಮ ರಕ್ಷಣೆಯನ್ನು ಸರಿಯಾಗಿ ಮಾಡುವುದಿಲ್ಲವೆಂದೂ ಆರೋಪಿಸುವವರು ಬಹಳ! ಆ ಮಾತು ಸತ್ಯವೋ ಸುಳ್ಳೋ ಎಂದು ಕ್ವೆಟ್ಟಾದಲ್ಲಿ ತಿಳಿಯಬರುತ್ತೆ!

ಭಾರತೀಯರು ಕ್ವೆಟ್ಟಾಕ್ಕೆ ಪ್ರವೇಶಿಸಿ, ಅಲ್ಲಿ ಮೊದಲೇ ಹರಡಿರುವ ದುರ್ವಾಸನೆಯಿಂದಾಗಿಯೂ, ರೋಗಗಳಿಂದಾಗಿಯೂ ಸ್ವಸ್ಥ ಆರೋಗ್ಯದಿಂದಿರುವವರು ಬಳಲಬಾರದೆಂದೇ ಕ್ವೆಟ್ಟಾದಲ್ಲಿ ಸರಕಾರವು ಮಿಲಿಟರಿಯವರನ್ನು ಕಾವಲಿರಿಸಿ ಯಾರನ್ನೂ ಒಳಗೆ ಪ್ರವೇಶಿಸಬಿಡುವುದಿಲ್ಲ! ನೋಡಿ! ಎಷ್ಟು ಪ್ರೇಮ ನಮ್ಮ ಮೇಲೆ!

ಹೀಗಿದ್ದರೂ ಕೆಲವು ಜನರು ಬುದ್ಧಿಯನ್ನು ಮರೆತು "ನಮ್ಮ ಜನರಿಗೆ ಸಹಾಯಮಾಡದಂತೆ ಸರಕಾರವು ನಮ್ಮನ್ನು ತಡೆದಿದೆ! ಇಂತಹ ಕಷ್ಟಕಾಲದಲ್ಲಿ ಹೀಗೆ ಮಾಡುವುದೇ? ಇದರಲ್ಲಿ ಏನೋ ಗೂಢಾರ್ಥವಿದೆ" ಎನ್ನುವವರು ಧಾರಾಳ!

ಹೇಗೆ ಹೇಳುವುದು?— ಕೆಲವು ರಾಷ್ಟ್ರೀಯ ಕೆಲಸಗಾರರಲ್ಲಿಯೂ ಕೆಲವು ಪೋಲಿಗಳಿರಬಹುದು! ಅವರು ಕ್ವೆಟ್ಟಾದಲ್ಲಿ ಸತ್ತ ಜನರ ದ್ರವ್ಯಗಳನ್ನು ದೋಚಿಕೊಂಡರೆ ಮಹಾ ಸಂಕಷ್ಟವೇ ಒದಗುವುದಲ್ಲವೇ? ಇದನ್ನು ತಿಳಿದೇ ಸರಕಾರವು ಯಾರನ್ನೂ ಒಳಗೆ ಪ್ರವೇಶಿಸಬಿಡಲಿಲ್ಲ!

ನಮ್ಮ ಗಾಂಧ್ಯಪ್ಪನವರೂ ಕೂಡಾ ಕ್ವೆಟ್ಟಾಕ್ಕೆ ಹೋಗಬಾರದೆಂದು ಅಪ್ಪಣೆಯಂತೆ! ನೋಡಿ! ತನಗೆ ಎದುರಾಗಿ ನಿಂತು ಕೆಲಸಮಾಡುವ ಗಾಂಧಿಯವರ ಮೇಲೆಯೂ ಸರಕಾರಕ್ಕೆ ಎಷ್ಟು ಮಮತೆ? ಅವರ ಆರೋಗ್ಯದ ಮೇಲೆ ಎಷ್ಟು ಜತನ? ಆದರೆ ಗಾಂಧಿಯವರಿಗೆ ಮಾತ್ರ ಈ ಉಪಕಾರದ ಸ್ಮರಣೆಯಾದರೂ ಇದೆಯೇ?

ಎಲ್ಲಿಯಾದರೂ ಪುನಃ ಭೂಕಂಪನಾಗುವುದು,— ಎಲ್ಲಿಯಾದರೂ ಜನರು ಸಾಯುವುದು,— ಅಂತಹ ಭೀತಿಯು ಸರಕಾರಕ್ಕಿದ್ದೇ ನಮ್ಮ ಜನರು— ಮಿಲಿಟರಿಯವರಲ್ಲದೆ ಯಾರೂ ಕ್ವೆಟ್ಟಾಕ್ಕೆ ಕಾಲಿಡಬಾರದೆಂದು ಆಜ್ಞಾಪಿಸಲಾಗಿದೆ! ಜಯವಾಗಲಿ ಮಿಲಿಟರಿಯವರಿಗೆ!

"ಮಿಲಿಟರಿಯವರಿಗೆ ರೋಗ ಬರುವುದಿಲ್ಲವೋ? ಅವರು ಸತ್ತರೆ ದೇಶದ ರಕ್ಷಣೆ ಮಾಡುವವರಾರು?" ಎಂದು ನೀವು ಪ್ರಶ್ನಿಸಬಹುದು! ಆ ಪ್ರಶ್ನೆ ನಿಮಗೇತಕ್ಕೆ? ಮಿಲಿಟರಿಯವರು ಸಾಯಬಾರದೆಂದಲ್ಲವೇ ಅವರ ಕೈಯಲ್ಲಿ ತುಪಾಕಿ ಕೊಟ್ಟಿರುವುದು! ರೋಗಗಳಿಗೂ ಗುಂಡು ಹಾಕಿ ಅವರು ಕೊಲ್ಲಲು ಸಮರ್ಥರೆಂಬುದನ್ನು ನೀವು ಖಂಡಿತ ತಿಳಿಯಿರಿ!

"ಜನರ ಸೊತ್ತುಗಳನ್ನು ಮಿಲಿಟರಿಯವರು ಅಡಗಿಸಿಟ್ಟು ಮನೆಗೆ ಸಾಗಿಸಿದರೆ ಗತಿಯೇನು?"— ಎಂದು ಎರಡನೆಯ ಪ್ರಶ್ನೆಯನ್ನು ನೀವು ಹಾಕಬಹುದು. ಹಾಗೆ ಮಿಲಿಟರಿಯವರು ಮಾಡುವವರಲ್ಲ ಕಾಣಿರಿ! ನೂರಾರು ರೂಪಾಯಿ ಸಂಬಳ ಪಡೆದು ಹಿಂದೂದೇಶದ ಸಣ್ಣ ದ್ರವ್ಯಭಂಡಾರವನ್ನೇ ಶೋಷಣಮಾಡುವ ಅವರಿಗೆ ಬೇರೆ ಸಂಪತ್ತೇಕೆ? ಅವರಲ್ಲಿರುವುದೇ ಅವರಿಗೆ ಹೆಚ್ಚಾಗಿದೆ. ಮನೆಗೆ ಕಳುಹಿಸಿದ ನಂತರವೂ ಅವರ ದೇಹದಲ್ಲಿ ನೂರಾರು ರೂಪಾಯಿಗಳು ಉಳಿದು, ಸ್ವಿಸ್ ಬ್ಯಾಂಕುಗಳಿಗೆ ವೆಚ್ಚವಾಗುತ್ತವೆ. ಅವುಗಳನ್ನೆಲ್ಲಾ ಅವರು ಪರರಿಗೆ ದಾನಮಾಡುತ್ತಾರೆ. ತಿಳಿಯಿತೇ?— ಸುಮ್ಮಗೆ ಬೊಬ್ಬಿಡಬೇಡಿರಿ! ಕಂಠವು ಆರಿ ಅಥವಾ ಹಾರಿ ಹೋದೀತು— ಎಂದು ಹೇಳುವ,

'[illegible]'.

ಅವನಿಗೆ ನಾನೇ ಮೊಲೆಯುಣ್ಣಿಸುತ್ತೇನೆ

ತನ್ನ ಮಗುವಿಗೆ ತಾನೇ ಮೊಲೆಯುಣ್ಣಿಸುವಂತೆ ಪ್ರತಿಯೊಬ್ಬ ತಾಯಿಯೂ ಸಿದ್ಧಳಿರಬೇಕು. ಮಗುವಿನ ಆರೋಗ್ಯಪಾಲನೆಗೂ, ಅದು ಬಾಲರೋಗಗಳಿಗೆ ತುತ್ತಾಗದಂತೆಯೂ ಅದಕ್ಕೆ ಸ್ವಾಭಾವಿಕವಾಗಿ ಮೊಲೆಯುಣ್ಣಿಸಬೇಕು. ಎದೆ ಹಾಲು ನಿಮ್ಮ ಮಗುವಿಗೆ ಸಮರ್ಪಕವಾದ ಆಹಾರವಾಗಿದೆ. ಇದು ಮಗುವಿನ ಸೂಕ್ಷ್ಮ ಜೀರ್ಣಶಕ್ತಿಗೆ ತಕ್ಕುದಾದ ಆಹಾರವಾಗಿದೆ. ಮಗುವಿನ ಆರೋಗ್ಯಕರ ಬೆಳವಣಿಗೆಗೂ ವೃದ್ಧಿಗೂ ಸಾಧಕವಾದ ಪೌಷ್ಟಿಕ ಸಾರವು ಇದರಲ್ಲಿದೆ.

'ಓವಲ್ಟಿನ್' ಪಾನೀಯವನ್ನು ಮಗು ಜನಿಸುವ ಮೊದಲೂ, ಹುಟ್ಟಿ ಬೆಳೆಯುತ್ತಿರುವಾಗಲೂ ಅನುಕ್ರಮವಾಗಿ ಸೇವಿಸುತ್ತಾ ಇದ್ದರೆ, ಎದೆ ಹಾಲು ನಿಶ್ಚಿತವಾಗಿ ವೃದ್ಧಿಹೊಂದುತ್ತದೆ. ಅಲ್ಲದೆ ತಾಯಿಯ ಬಲ ಮತ್ತು ಚೈತನ್ಯವು ಕಾಪಾಡಲ್ಪಡುತ್ತದೆ. 'ಓವಲ್ಟಿನ್' ಎಂಬುದು ಪ್ರಕೃತಿಸಿದ್ಧ ಆಹಾರ. ಇದನ್ನು, ಬೆಳೆದ ಬಾರ್ಲಿ ಬೀಜ, ದನದ ಕೆನೆ ಹಾಲು ಮತ್ತು ಕೊಕ್ಕೋಗಳಿಂದ ತಯಾರಿಸಲಾಗುತ್ತದೆ. ಆರೋಗ್ಯ, ಶಕ್ತಿ ಮತ್ತು ಚೈತನ್ಯ ರಕ್ಷಣೆಗೆ ಇದು ಅತ್ಯಮೂಲ್ಯ ಪಾನಕ. ಪಡೆಯುವಾಗ ತಾಜಾ ಓವಲ್ಟಿನ್ನನ್ನೇ ಪಡೆಯಿರಿ. ನಕಲಿಗಳನ್ನು ತ್ಯಜಿಸಿರಿ.

ನಿಮ್ಮ ಚಹಾಕ್ಕೆ 'ಓವಲ್ಟಿನ್' ಸೇರಿಸಿರಿ—ಅದು ಆರೋಗ್ಯಕರ, ಬಲವರ್ಧಕ ಮತ್ತು ಶಕ್ತಿದಾಯಕ.

ಓವಲ್‌ಟಿನ್

ಟೋನಿಕ್ ಆಹಾರ ಪಾನಕ.

OVALTINE

ತಾಯಂದಿರು ತಮ್ಮ ಮಕ್ಕಳಿಗೆ ಮೊಲೆಹಾಲನ್ನು ಕೊಟ್ಟು ಸಾಕುವಂತೆ ಸಹಕರಿಸುತ್ತದೆ.

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ   ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ ದೊರೆಯುತ್ತದೆ

ಏಜಂಟ್ — ಜೇಮ್ಸ್ ರೈಟ್, ೩೫ಎ ರಿಪನ್ ಸ್ಟ್ರೀಟ್ ಕಲ್ಕತ್ತಾ, ಮತ್ತು ಮುಂಬಾಯಿ ಮದ್ರಾಸ.

OV/101

ಎಚ್ಚರಿಕೆ!

ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ಶ್ರೀ ಎಂ. ಗಣಪತಿರಾವ್ ಐಗಳರ ಪಠ್ಯಪುಸ್ತಕಗಳು ಪಾಠಪಟ್ಟಿಗನುಸಾರವಾಗಿಲ್ಲವೆಂದು ಕೆಲವು ಪ್ರಕಾಶಕರು ಸುಳ್ಳು ಹೇಳಿ ನಮ್ಮ ಗಿರಾಕಿಗಳನ್ನು ಜಿಲ್ಲೆಯ ಕೆಲವು ಕಡೆಗಳಲ್ಲಿ ವಂಚಿಸುತ್ತಿರುವರಾಗಿ ನಮಗೆ ತಿಳಿದುಬಂದಿದೆ. ಅದುದರಿಂದ ನಾವು ನಮ್ಮ ಎಲ್ಲಾ ಗಿರಾಕಿಗಳಿಗೆ ತಿಳಿಸುವುದೇನೆಂದರೆ— ಐಗಳರ ಪಠ್ಯಪುಸ್ತಕಗಳು ಪಾಠಪಟ್ಟಿಗನುಸಾರವಾಗಿಯೇ, ಶಾಲಾ ಮಕ್ಕಳಿಗೆ ಯೋಗ್ಯವಾಗುವಂತೆಯೇ ಬರೆಯಲ್ಪಟ್ಟಿವೆ. ಅವರ ಪುಸ್ತಕಗಳ ಪ್ರಶಸ್ತಿಗೆ ಅವರ ಇಪ್ಪತ್ತು ವರ್ಷಗಳ ಅನುಭವವೇ ಸಾಕ್ಷಿ. ನಮ್ಮ ಗಿರಾಕಿಗಳು ಮೋಸಹೋಗದೆ ನಮ್ಮನ್ನು ಮುಂಚಿನಂತೆಯೇ ಪ್ರೋತ್ಸಾಹಿಸಬೇಕಾಗಿ ಈ ಮೂಲಕ ಕೇಳಿಕೊಳ್ಳಲಾಗಿದೆ.

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

Estd 1920]   THE   [1920ರಲ್ಲಿ ಸ್ಥಾಪಿತವಾದದ್ದು.

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು.

ಠೇವಣಾತಿಗಳ ದರ

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur,
Dated 10—4—1935.

G. N. Lakshman Pai,
Secretary.

ಸಾಹಿತ್ಯ ಸಂಗ್ರಹ.

ಪ್ರಾಚೀನ ನಾಗರೀಕತೆಯೂ ಆಧುನಿಕ ನಾಗರೀಕತೆಯೂ

ಪಂಡಿತ ಎ. ಶಿವರಾಮಯ್ಯನವರು "ದೇಶರಂಜನ"ದ ೧೯೩೧ರ ಫಳಂಬರ ಸಂಚಿಕೆಯಲ್ಲಿ ಹೀಗೆ ಬರೆದಿರುತ್ತಾರೆ "ನಗರೀ ಭವನಗರ—ಅಂದರೆ ಪಟ್ಟಣದಲ್ಲಿ ವಾಸವಾಗಿರುವವನೇ ನಾಗರನು ನಾಗರನ ಭಾವವೇ ನಾಗರೀಕತೆಯೆಂದಾಗುವುದು. ಗ್ರಾಮದಲ್ಲಿ ವಾಸಮಾಡಿಕೊಂಡಿರುವ ಒಕ್ಕಲಿಗರು ಮೊದಲಾದವರಿಗೆಲ್ಲಾ ಗ್ರಾಮ್ಯರೆಂದು ಹೆಸರಿರುವುದು ಈ ಗ್ರಾಮ್ಯವೆಂಬ ಪದವು ಸಾಧಾರಣವಾಗಿ ಮೌಢ್ಯವನ್ನು ಸೂಚಿಸುವುದು. ಇದರಿಂದಲೇ "ಗ್ರಾಮ್ಯ ಭಾಷೆ" ಎಂದರೆ ಗ್ರಾಮಸ್ಥರು ಆಡುವ ವ್ಯಾಕರಣ ವ್ಯತಿರಿಕ್ತವಾದ ಹಳ್ಳಿ ಮಾತೆಂದೂ ಅರ್ಥವಾಗುತ್ತದೆ, ಆದರೆ ನಗರವಾಸಿಗಳು, ಒಳ್ಳೆಯ ಸಂಸ್ಕೃತರೂ ತಿಳಿದವರೂ ಎಂಬ ಭಾವದಿಂದ ಅವರ ಆಚಾರ ವ್ಯವಹಾರಾದಿಗಳಿಗೆ ನಾಗರಿಕತೆ ಎಂಬ ಹೆಸರು ಬಂದು ಕೊನೆಗೆ ಸಂಸ್ಕೃತ

ಕನ್ನಡ ಪತ್ರಿಕೆಗಳು. ನಾದ ಎಲ್ಲಾ ಆಚಾರವ್ಯವಹಾರಗಳಿಗೂ ನಾಗರೀಕತೆ

ಎಂಬ ಮಾತೇ ರೂಢಿಯಾಗಿ ಬಂತು. ನಮ್ಮ ಪ್ರಾಚೀನ ನಾಗರಿಕತೆಗೂ ಅರ್ವಾಚೀನ ನಾಗರೀಕತೆಗೂ ಎಷ್ಟೋ ಅಭ್ಯಂತರವಿರುವುದು. ನಮ್ಮ ಪ್ರಾಚೀನ ನಾಗರೀಕತೆಯು ನಮ್ಮ ದೇಶದ ಧರ್ಮಗುಣಕ್ಕೂ ನಮ್ಮ ಆಚಾರ ವ್ಯವಹಾರಾದಿಗಳಿಗೂ ಅನುಕೂಲವಾಗಿದ್ದಿತು. ಈಗಿನ ನಮ್ಮ ನಾಗರಿಕತೆಯು ಈ ದೇಶದ ಹವಾಗುಣ ಮುಂತಾದುವುಗಳಿಗೆಲ್ಲ ವ್ಯತಿರಿಕ್ತವಾಗಿ ಪಾಶ್ಚಾತ್ಯ ದೇಶೀಯರ ವಿದ್ಯಾಸಂಪರ್ಕದಿಂದ ದಿನದಿಂದ ದಿನಕ್ಕೆ ಅವರ ಆಚಾರ ವ್ಯವಹಾರಗಳನ್ನೇ ಹೋಲುತ್ತಾ ಬರುತ್ತಿರುವುದು. ಈಗ ಹಿಂದೂದೇಶದವರ ಆಯುಃಪ್ರಮಾಣವು ತಗ್ಗುವುದಕ್ಕೂ, ದಿನದಿಂದ ದಿನಕ್ಕೆ ರೋಗರುಜಿನಗಳು ಹೆಚ್ಚುವುದಕ್ಕೂ ಈ ನವನಾಗರೀಕತೆಯೇ ಪ್ರಬಲವಾದ ಕಾರಣವೆಂದು ಹೇಳಲು ಯಾವ ಅತಂಕವೂ ತೋರದು. ಆದರೆ, ಈ ನವನಾಗರೀಕತೆಯಿಂದ ಪುರಸ್ಕೃತರಾದ ಕೆಲ ಮಹನೀಯರು ಈ ಕಾರಣವನ್ನು ಹೇಳದೆ ಬಾಲ್ಯ ವಿವಾಹಾದಿಗಳೇ ಕಾರಣವೆಂದು ಅಲ್ಲದುದನ್ನು ಹೇಳಿ ಸಾಧಿಸುತ್ತಾರೆ. ಬಾಲ್ಯ ವಿವಾಹವು ನಡೆಯಲು ಪ್ರಾರಂಭವಾದುದು ನಮ್ಮ ದೇಶದಲ್ಲಿ ಇತ್ತೀಚೆಯ ಮಾತಲ್ಲ, ಎರಡು ಮೂರು [illegible] ವರ್ಷಗಳ ಹಿಂದಿನಿಂದಲೂ ನಡೆಯುತ್ತಿದ್ದಿತು. [illegible] ನೋಡಲ್ಲಿ ಆಗ ಹೆಣ್ಣು ಮಕ್ಕಳ [illegible] ವರುಷ ವಯಸ್ಸಿನಲ್ಲೇ ಮದುವೆಯಾಗುತ್ತಿದ್ದಿತೆಂದು, ತೋರುತ್ತದೆ."

ತತ್ವದ ಸ್ವರೂಪ

ಶ್ರೀ "ಬಾದರಾಯಣ"ರು ಸಂಬೋಧದಲ್ಲಿ ಹೀಗೆ ಬರೆದಿರುವರು, "ವಿಜ್ಞಾನ ಶಾಸ್ತ್ರಜ್ಞರಾದ ಆಧುನಿಕ ಪಂಡಿತರು ವಸ್ತುವಿಭಜನೆಯನ್ನು (analysis of matter) ಮಾಡಿ ಎಲ್ಲಾ ಪದಾರ್ಥಗಳ ಸೃಷ್ಟಿಯೂ ಪ್ರಾಕೃತಿಕ ಪದಾರ್ಥಗಳಿಂದಲೇ (Matter) ಆಗಿರುವುದೆಂದು ಹೇಳುವರು, ಚೇತನದ (Spirit) ಸ್ಥಿತಿಯನ್ನು ಅವರಿನ್ನೂ ಕಂಡುಹಿಡಿದಿಲ್ಲ. ಅದರೂ ಪ್ರಪಂಚವು ಪ್ರಕೃತಿಯೊಂದರಿಂದಲೇ ಉಂಟಾಗಿರುವುದೆಂದು ತಿಳಿಯಕೂಡದು. ನಿರ್ಚೇತನವಾದ ಪ್ರಕೃತಿಯನ್ನು ಬೇಕು ಬೇಕಾದಂತೆ ಮಾರ್ಪಡಿಸಬಲ್ಲ ತಿಳುವಳಿಕೆಯುಳ್ಳ ಚೈತನ್ಯವು ಇದ್ದೇ ಇರಬೇಕು.

ಪ್ರಕೃತಿಯೆನ್ನುವ ಬೇರೆ ಪದಾರ್ಥವಿಲ್ಲ, ಅದು ಚೈತನ್ಯದ ಮತ್ತೊಂದು ದಾಶ್ಯರೂಪ (aspect) ವೆನ್ನುವುದು ಕೆಲವರ ಮತ. ಹೀಗೆ ಹೇಳುವ ಆಧುನಿಕ ಪಂಡಿತರು ಸಿದ್ಧಾಂತಮಾಡಿರುವುದಿಲ್ಲ. ಸುಮ್ಮನೆ ಹಾಗೆ ಊಹಿಸುವರು. ಇದೇ ಮತವುಳ್ಳ ವೇದಾಂತಿಗಳು, ಪ್ರಕೃತಿಯು "ಅನಿರ್ವಾಚ್ಯವಾದ ಸದಸತ್" ಪದಾರ್ಥವೆಂದು ಹೇಳುವರೇ ಹೊರತು ನಿರ್ಧಾರವಾದುದನ್ನು ತಿಳಿಸುವುದಿಲ್ಲ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು, ತಾನು ಕ್ಷರಾಕ್ಷರಗಳಿಗಿಂತಲೂ, ಜಡಪ್ರಕೃತಿಗಿಂತಲೂ ಅನ್ಯನೆಂದೂ, ಅವು ತನಗೆ ಸೇರಿದುವೆಂದೂ ಹೇಳಿರುವನು. ಆದುದರಿಂದ ಪ್ರಕೃತಿಯು ಪರವಸ್ತುವನ್ನು ಆಶ್ರಯಿಸಿಕೊಂಡಿರುವ ಬೇರೆ ಪದಾರ್ಥವೆಂದು ಭಾವಿಸಬೇಕು, ಪ್ರಕೃತಿಯೆಂದರೆ, ಪೃಥಿವ್ಯಾದಿ ಪಂಚಭೂತಗಳೆಂದೇ ತಿಳಿಯಬಾರದು, ಅನೇಕ ಬಣ್ಣಗಳ ಬೆರಕೆಯಿಂದ ಜನಿತವಾದರೂ ಒಂದೇ ಒಂದಾಗಿ ತೋರುವ ಬಿಳಿಯ ಬಣ್ಣದಂತೆ ಸತ್ವ ರಜಸ್ತಮೋ ಗುಣಗಳು [ಪ್ರಕೃತಿ ಸೂಕ್ಷ್ಮರೂಪಗಳು] ಸಮ್ಮಿಳಿತವಾಗಿ ಪರವಸ್ತುವಿನಲ್ಲಿ ಇರುವುವು. ಅವುಗಳ ಏಕಭಾವಕ್ಕೆ "ಮೂಲಪ್ರಕೃತಿ" ಎಂದು ಹೆಸರು. ಅನಾದಿಯಾದ ಈ ಪ್ರಕೃತಿಯು ಸಮುದ್ರದ ನೀರಿನಲ್ಲಿರುವ ಉಪ್ಪಿನಂತೆ ಪರವಸ್ತುವಿನಲ್ಲಿ ಸೇರಿಕೊಂಡಿರುವುದು. ಚೈತನ್ಯವು ಸೃಷ್ಟಿಯನ್ನು ಮಾಡುವುದರ ಉದ್ದೇಶವೇನು?" ಎಂಬುದನ್ನು ಈಗ ವಿಚಾರಿಸೋಣ.

ಬ್ರಹ್ಮನ ವಿಷಯವನ್ನು ಕೊಂಚಮಟ್ಟಿಗೆ ತಿಳಿದಲ್ಲದೆ ಸೃಷ್ಟಿಯ ಕಾರಣವು ಸ್ಪಷ್ಟವಾಗುವುದಿಲ್ಲ (ಬ್ರಹ್ಮನೆಂದರೆ ಇಲ್ಲಿ ಚತುರ್ಮುಖನಲ್ಲ; ಅವನ ಜನಕ) ವಕ್ಷ್ಯಮಾಣ ನ್ಯಾಯಾನುಸಾರ ಯಾವನ ಸ್ಥಿತಿಯು ಸ್ವತಸ್ಸಿದ್ಧವೋ ಅಂತಹ ಬ್ರಹ್ಮನು ಸತ್ಪದಾರ್ಥವೆನಿಸಿಕೊಳ್ಳುವನು. ಪ್ರಕೃತಿಯ ವಿಕಾರವನ್ನೂ ತನ್ನ ವಿಕಾರವನ್ನೂ ಚೆನ್ನಾಗಿ ಬಲ್ಲವನಾದುದರಿಂದ ಅವನು ಚಿತ್ ಪದಾರ್ಥವಾಗಿರುವನು. ವಿವೇಕಪೂರ್ವಕವಾದ ಜ್ಞಾನದಿಂದ ಆನಂದ ಲಭಿಸುವುದು. ಅನುಭವದಲ್ಲಿ ಕಂಡುಬರುವುದು. ಆದುದರಿಂದ ಚಿತ್ ಸ್ವರೂಪಿಯಾದ ಬ್ರಹ್ಮನು ಆನಂದ ಸ್ವರೂಪನೂ ಆಗಿರುವನೆಂದು ತಿಳಿಯಬೇಕು. ಪ್ರಕೃತಿಯು ಕೇವಲ ಸತ್ ಪದಾರ್ಥವಾದುದರಿಂದ ಬ್ರಹ್ಮನು ಅದಕ್ಕಿಂತಲೂ ಭಿನ್ನನು. ಮತ್ತು ಉತ್ತಮನು. ಜಡಪದಾರ್ಥವೇ ಸತ್ಯವೆಂದೂ ಅದರ ಚಿದಾನಂದ ಸ್ವರೂಪವೇ ಬ್ರಹ್ಮವೆಂದೂ ಒಟ್ಟಿನಲ್ಲಿ ಒಂದೇ ಪದಾರ್ಥವು ಇರುವುದೆಂದೂ ಹೇಳಬಾರದು. ಏಕೆಂದರೆ "ಸತ್ವ ಅಂತೇಷು ತೇಷು ಮಯಿ" ಎಂಬ ಗೀತೋಕ್ತಿಯು ಅದಕ್ಕೆ ವಿರೋಧವನ್ನು ಬೋಧಿಸುತ್ತದೆ.'

ಪ್ರಾಚೀನ ವಾಙ್ಮಯವೂ ಆಧುನಿಕ ವಾಙ್ಮಯವೂ

ಶ್ರೀ ಪಂಡಿತ ಮಹಾದೇವ ಪ್ರಭಾಕರ ಪೂಜಾರರವರು ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಈ ವಿಚಾರವಾಗಿ ಬರೆಯುತ್ತಾ ಹೀಗೆ ಪ್ರತಿಪಾದಿಸಿರುವರು "ಇದ ಪ್ರಾಚೀನ ಕನ್ನಡ ಸಾಹಿತ್ಯವು ಆ ಸಂಸ್ಕೃತ ಸಾಹಿತ್ಯದನ್ನೇ ಹೋಲುವುದು. ಕನ್ನಡಕ್ಕೆ ಸಂಸ್ಕೃತವೇ ಆದರ್ಶವಾಯಿತು. ಸಂಸ್ಕೃತದ ಆ ಪ್ರಾಚೀನ ಸಾಹಿತ್ಯವು ವೇದ ವೇದಾಂತಾದಿ ಸಾಹಿತ್ಯವು ಉಂಟಾದ ಕಾಲದಲ್ಲಿ ಕನ್ನಡದಲ್ಲಿ ಸಾಹಿತ್ಯವು ಉಂಟಾಗಿರಲಾರದು. ಸಾಂಖ್ಯ, ಯೋಗ ಮೊದಲಾದ ದರ್ಶನಗಳು, ಜ್ಯೋತಿಷ್ಯ ವ್ಯಾಕರಣ ಛಂದಸ್ಸು ಮುಂತಾದ ವೇದಾಂಗಗಳು, ಧರ್ಮಶಾಸ್ತ್ರಗಳು, ಪುರಾಣಗಳು ವಾಸ್ತುಶಿಲ್ಪ ಗಣಿತ ಮುಂತಾದ ಹಲವು ಬಗೆಯ ಸಾಹಿತ್ಯವು ಸಂಸ್ಕೃತದಲ್ಲಿ ಬೆಳೆಯುತ್ತಿದ್ದಾಗಲೂ ಕನ್ನಡಕ್ಕೆ ಸಾಹಿತ್ಯವಿದ್ದಿಲ್ಲ. ಲಿಪಿಯುಂಟಾಗುವುದಕ್ಕಿಂತ ಮುಂಚಿನ ಕಾಲದಲ್ಲಿ ವಾಙ್ಮಯವು ಕನ್ನಡದಲ್ಲಿರಲಿಲ್ಲ. ಆಗ ಕನ್ನಡಿಗರು ಇಲ್ಲವೆಂದಾಗಲೀ, ಅವರು ನಾಗರೀಕರಾಗಿರಲಿಲ್ಲವೆಂದಾಗಲೀ ಇತಿಹಾಸವು ಹೇಳುವುದಿಲ್ಲ. ಆದರೆ, ಸಂಸ್ಕೃತದ ಗಂಭೀರವಾದ ಸಾಹಿತ್ಯದ ಉಜ್ವಲವಾದ ಬೆಳಕಿಗೆ ಇತರ ಇತರ ಭಾಷೆಗಳ ಜನರ ಕಣ್ಣು ಕುಕ್ಕಿದುವು. ನಮ್ಮ ದೇಶದಲ್ಲಿ ಯಾವ ಭಾಷೆಯವರಾದರೂ ಸಂಸ್ಕೃತವನ್ನೇ ಓದುವುದೂ, ಸಂಸ್ಕೃತದಲ್ಲಿ ಗ್ರಂಥಗಳನ್ನು ರಚಿಸುವುದೂ ವಾಡಿಕೆಯಾಯಿತು. ಧರ್ಮಶಾಸ್ತ್ರಗಳು, ದರ್ಶನಗಳು, ಪುರಾಣಗಳು ಆ ಭಾಷೆಯಲ್ಲಿದ್ದುದರಿಂದ ಅದಕ್ಕೆ ಕರೆಣ [illegible] ಹೊರತು ಉಳಿದ ಭಾಷೆಗಳಿಗೆ ಗೌರವದಲ್ಲಿ ಇಷ್ಟೇ ಅಲ್ಲ ಇತರ ಭಾಷೆಗಳು, ಅನಾರ್ಯ ಭಾಷೆಗಳು ಗ್ರಾಮ್ಯ ಭಾಷೆಗಳು ಎಂದು ತಿರಸ್ಕಾರವನ್ನು ಪಡೆದುವು. ಈ ಕಾರಣದಿಂದಲೇ ಕರ್ನಾಟಕ ದೇಶದಲ್ಲಿ ಹುಟ್ಟಿದ ಅದ್ವಿತೀಯ ಪ್ರತಿಭಾಶಾಲಿಗಳೂ ಕೂಡಾ ತಮ್ಮ ಮಾತೃಭಾಷೆಯ ಮೊರೆಯನ್ನು ಕೇಳದೆ ಸಂಸ್ಕೃತದಲ್ಲಿ ಗ್ರಂಥಗಳನ್ನು ಬರೆದರು, ಕೃಷ್ಣವೇಣೀ ಭೀಮರಥೀ ನದಿಗಳ ನಡುವಣ ನಾಡಿನಲ್ಲಿ—ಎಂದರೆ ನಮ್ಮ ಉತ್ತರ ಕರ್ನಾಟಕದಲ್ಲಿ ಹುಟ್ಟಿ ಮಣುವನ ಹಳ್ಳಿಯಲ್ಲಿ ಕಥವನಾದಿ ಅಲೌಕಿಕ ಶಕ್ತಿಸಂಪನ್ನನಾದ ಸಮಂತಭದ್ರನೆಂಬ ಜೈನಾಚಾರ್ಯನು ಉಮಾಸ್ವಾತ್ಯಾಚಾರ್ಯ ಕೃತ ತತ್ವಾರ್ಥ ಸೂತ್ರಕ್ಕೆ ೮೪ ಸಹಸ್ರ ಗ್ರಂಥ ಪರಿಮಿತವಾದ "ಗ್ರಂಥಹಸ್ತಿ" ಮಹಾಭಾಷ್ಯವನ್ನು ಸಂಸ್ಕೃತದಲ್ಲಿ ಬರೆದನಂತೆ, ಕರ್ನಾಟಕ ದೇಶದ ಕೊಳ್ಳೆಗಾಲ ಗ್ರಾಮದ ಪೂಜ್ಯಪಾದಾಚಾರ್ಯನೆಂಬ ಜೈನ ಪಂಡಿತನು "ತತ್ವಾರ್ಥ ಸೂತ್ರ ಟಿಪ್ಪಣಿ" "ಜೈನೇಂದ್ರ ವ್ಯಾಕರಣ" ಮುಂತಾದ ಗ್ರಂಥಗಳನ್ನು ಸಂಸ್ಕೃತದಲ್ಲಿ ಬರೆದನು. ಪ್ರಾಚೀನ ಮತಾಂತರದಲ್ಲಿ, ಅರ್ವಾಚೀನರಾದ ವಿದ್ಯಾರಣ್ಯ ಸ್ವಾಮಿಗಳು ಅನೇಕ ಗ್ರಂಥಗಳನ್ನು ಸಂಸ್ಕೃತದಲ್ಲೇ ಬರೆದರಲ್ಲ! ತಮ್ಮ ನಾಡಿನ ಭಾಷೆಯಲ್ಲಿ ಒಂದು ಗ್ರಂಥವನ್ನು ಬರೆಯಬಾರದೇ?

ದೀರ್ಘತಮವಾದ ಪ್ರಾಚೀನ-ಕಾಲದಲ್ಲಿ ಕನ್ನಡದಲ್ಲಿ ಸಾಹಿತ್ಯದ ಬೇರೆ ಬೇರೆ ಅಂಗಾಂಗಗಳು ಉಂಟಾಗಿರದಿದ್ದರೂ, ಮನುಷ್ಯನ ಪ್ರಕೃತಿಗೆ ಸಹಜವಾದ ಕಾವ್ಯಸಾಹಿತ್ಯವು ಉಂಟಾಗಿರಲಿಲ್ಲವೆಂಬುದು ಒಪ್ಪತಕ್ಕ ಮಾತಲ್ಲ, ಉಂಟಾಗಿರಬಹುದು, ಆದರೆ ಅದು ಈಗ ಉಪಲಬ್ಧವಾಗಿರಲಿಕ್ಕಿಲ್ಲ, ಇಲ್ಲವೆ ಅದು ಬರಹದಲ್ಲಿಯಾಗಿರಲಿಕ್ಕಿಲ್ಲ. ನಮಗೆ ದೊರೆಯುವ ಕನ್ನಡ ಸಾಹಿತ್ಯವೆಲ್ಲ ಸಂಸ್ಕಾರ ಹೊಂದಿದ ಭಾಷೆಯಲ್ಲಿರುವುದೇ ಆಗಿದೆ. ವೇದಭಾಷೆಯಂತಹ ಭಾಷೆಯಲ್ಲಿ ಎಂದರೆ, ಭಾಷೆ ಅನಿಯಂತ್ರಿತವಾಗಿದ್ದರೂ ಭಾವವು ಮುಖ್ಯವಾಗಿರುವ ಆದಿಕಾಲದ ಸಹಜಭಾಷೆಯಲ್ಲಿ ಕನ್ನಡ ಸಾಹಿತ್ಯವು ಇಲ್ಲ. ಇಷ್ಟೇ ಅಲ್ಲ, ಅಲ್ಲಿಂದೀಚೆಗೆ ಅನೇಕ ಶತಾಬ್ದಿಗಳ ಅವಧಿಯಲ್ಲಿ ಉಂಟಾಗಿರಬಹುದಾದ ವಾಙ್ಮಯವನ್ನು ಕೂಡಾ ಕನ್ನಡಿಗರು ಕಳೆದುಕೊಂಡಿದ್ದಾರೆ. ೧೦ನೆಯ ಶತಾಬ್ದಿಯ ಪಂಪನೇ ನಮಗೆ ಆದಿ ಕವಿ.

ಪಂಪನ ಕಾಲವೆಂದರೆ ಸಾಹಿತ್ಯ ರಾಜ್ಯದಲ್ಲಿ—ವಿಶೇಷವಾಗಿ ಸಂಸ್ಕೃತ ಸಾಹಿತ್ಯದಲ್ಲಿ ಬಹುಚಮತ್ಕೃತಿಯು ಪ್ರಭವವು ತಲೆದೋರಿದ ಕಾಲವು ಆಗ ಕವಿ ಸಾಮ್ರಾಜ್ಯ [illegible] ಬಾಣನ ಕಟ್ಟಗಂಥ ಚಮತ್ಕಾರವು ಎಲ್ಲ ಕವಿಗಳನ್ನು ಸೆರೆಗೊಳಿಸಿದ್ದಿತು. ಪಂಪನು ತನ್ನ ಗ್ರಂಥದಲ್ಲಿ ಬಾಣಕವಿಯ ವರ್ಣನೆಗಳನ್ನು ವಾಕ್ಯರಚನೆಯನ್ನು ಅನುಸರಿಸಿರುವುದನ್ನು ನೋಡಿದರೆ ಆತನು ಬಾಣನ ಕಾವ್ಯಗಳನ್ನು ಚೆನ್ನಾಗಿ ಪರಿಶೀಲಿಸಿದ್ದನೆಂಬುದು ಕಾಣಬರುವುದು. ಆ ಆದಿಕವಿ ಹಿಡಿದ ದಾರಿಯಲ್ಲಿ ಮುಂದಿನ ಕವಿಗಳು ಪದಾರ್ಪಣ ಮಾಡಿದರು. ಈ ಸಂಸ್ಕೃತಾನುಸರಣವು ಕನ್ನಡ ಸಾಹಿತ್ಯಕ್ಕೆ ಅಗೌರವವಲ್ಲ, ಕನ್ನಡಿಗರಿಗೆ ಅಭಿಮಾನ ಕೊರತೆಯೂ ಅಲ್ಲ. ನಮ್ಮ ದೇಶದ ಹಲವು ಭಾಷೆಗಳು ಉದಾಸೀನರಾಗಿದ್ದ ಆ ಕಾಲದಲ್ಲಿ ನಮ್ಮ ಕನ್ನಡದಲ್ಲಿ ಸಂಸ್ಕೃತ ಮಹಾಕಾವ್ಯಗಳಿಗೆ ಸಮಾನವಾದ ಮಹಾಕಾವ್ಯಗಳುಂಟಾದುದು ನಮಗೆ ಅಭಿಮಾನದ ಮಾತು.

ನಮ್ಮ ಪ್ರಾಚೀನ ಕಾವ್ಯಸಾಹಿತ್ಯವುಂಟಾದ ಕಾಲವು ಶಾಂತಿಪ್ರಧಾನವಾದುದು. ಆ ಕಾಲದಲ್ಲಿ ರಾಜಕೀಯ ಸಭೆಗಳಿಂದಲ್ಲಿ ಆಗಾಗ ಸಂಘರ್ಷ ನಡೆಯುತ್ತಿದ್ದರೂ ಅವು ಸಾಮಾನ್ಯ ಜನತೆಯನ್ನು ಅಷ್ಟೊಂದು ಕ್ಷೋಭೆಗೊಳಿಸುತ್ತಿರಲಿಲ್ಲ. ಅನ್ನವಸ್ತ್ರಗಳ ಸಮೃದ್ಧಿಯಿದ್ದುದರಿಂದ ಜೀವನಕಲಹವು ಉಗ್ರವಾಗಿರಲಿಲ್ಲ. ಆ ಶಾಂತಿಮಯ ಜೀವನದಲ್ಲಿ ಜನರು ತಮ್ಮ ವ್ಯವಸಾಯಗಳನ್ನು ತೀರಿಸಿಕೊಂಡು ಕಾವ್ಯಶಾಸ್ತ್ರ ವಿನೋದದಲ್ಲಿ ಕಾಲವನ್ನು ಕಳೆದರು. ಶಾಂತಿಪ್ರಧಾನವಾದ ಸಾಹಿತ್ಯವು ಆಗ ಯಾವದೊಂದು ವಿಷಯವನ್ನು ಅಂಗೋಪಾಂಗಗಳಿಂದ ವಿಸ್ತರಿಸುವಲ್ಲಿಯೇ ಕವಿಗಳ ಗಮನವು. ಒಳಿತನ್ನೂ ಗಂಭೀರವೂ ಆದ ಸಂಸ್ಕೃತ ಭಾಷೆಯಲ್ಲಿ ಆ ಕಾಲದ ಸಾಹಿತ್ಯವು ಅನೇಕಾರ್ಥಕ ಶಬ್ದ ರಸ ಅಲಂಕಾರ, ವ್ಯಂಗ್ಯ, ಶ್ಲೇಷ ಮೊದಲಾದ ಸೌಕರ್ಯಗಳಿಂದ ಬಹು ಸುಂದರವಾಗಿರುವ ಸಾಗಿತು. ಇಂತಹ ಸಾಹಿತ್ಯಕ್ಕೆ ಪ್ರೋತ್ಸಾಹವೂ ದೊರೆತಿರಬೇಕು.

ನೂತನ ಆದರ್ಶ.

The Young Man of India, Burma and Ceylon ಎಂಬ ಪತ್ರಿಕೆಯಲ್ಲಿ ಪಾಲ್ ಆರ್ ಮೇನ್ ಎಂಬವರು ಸಾಮಾಜಿಕ ಕ್ರಾಂತಿಯ ಕುರಿತಾಗಿ ಬರೆಯುತ್ತಾ "ಜನಸಾಮಾನ್ಯರು ಜಗತ್ತಿನ ರಂಗಭೂಮಿಯ ಆವರಣದಲ್ಲಿ ಲಕ್ಷ್ಯಹರಿಸಿದ ಪ್ರಥಮ ಕ್ರಾಂತಿಯುಗ ಇದು. ನಿರಂಕುಶ ಸರ್ವಾಧಿಕಾರಿಗಳು ಹಲವು ದೇಶಗಳಲ್ಲಿರುವರಾದರೂ, ಸಾಮಾನ್ಯ ಜನರ ಧ್ವನಿಯು ಜಗತ್ತಿನಲ್ಲಿ ಈಗ ಬಹುತೀವ್ರವಾಗಿ ಪರಿಣಾಮಕಾರಿಯಾಗುತ್ತಿದೆ.

ಹಿಂದಿನ ಕಾಲದಲ್ಲಿ ಜನರು ಸಾವು ಅದೃಷ್ಟದ ಮಕ್ಕಳೆಂದು ಭಾವಿಸಿದ್ದರು, ಆಧುನಿಕ ಕಾಲದಲ್ಲಾದರೋ ತಾವೇ ಅದೃಷ್ಟದ ಸ್ವಾಮಿಗಳಾಗಬೇಕೆಂದು ಜನರು ಅಗ್ರಹಪಡುತ್ತಿರುವರು. ಜನರ ಸಾಮಾಜಿಕ ಜೀವನದಲ್ಲಿ ಪರಿವರ್ತನೆಯನ್ನುಂಟುಮಾಡಬೇಕೆಂದಾದರೆ ಶಾಂತಪರವೂ ಅಜ್ಞಾನವೂ ಆದ ಸಂಘಟನೆಗಳು ತಾವಾಗಿಯೇ ಸಂಘಟಿಸಬೇಕೆಂದು ಆಶಿಸುತ್ತಿದ್ದೇವೆ, ಪ್ರಯೋಗಿಕ ದೂರದೃಷ್ಟಿಯೂ ಕರ್ಮವೂ ದುರ್ಲಭ. [illegible]

ಇಂಗ್ಲಿಷ್ ಪತ್ರಿಕೆಗಳು. ಆದರೆ, ಮುಂದಕ್ಕೆ ಈ ಸ್ಥಿತಿಯು ಮುಂದರಿಯಲಾರದು, ಕಾಲವು ಎಲ್ಲವನ್ನೂ ಮಾಡಲೆಂದು ಎಲ್ಲ ಹೊಣೆಯನ್ನೂ ಅದರ ಮೇಲೆ ಬಿಡುವ ಬದಲಾಗಿ ಈಗಿನ ಮನುಷ್ಯನು ಅದನ್ನುಂಟುಮಾಡಲೆಂದೇ ನೆಗೆಯುತ್ತಿರುವನು. ವರ್ತಮಾನಕಾಲ ಮತ್ತು ಭವಿಷ್ಯತ್ಕಾಲದಲ್ಲಿ ಏನಾಗಬೇಕೆಂದು ಅವನು ನಿರಂತರವಾಗಿ ಚಿಂತಿಸುತ್ತಿರುವನು. ಆದರೆ ನಾವು ವಿವೇಕದಿಂದ ಯೋಚನೆಯನ್ನು ಮಾಡುತ್ತೇವೋ? ನಮ್ಮ ದುರಾಶೆ, ಅಭಿಲಾಷೆಗಳು ತೀರಿಹೋಗಿ ಪ್ರಯೋಜನಕಾರೀ ಜ್ಞಾನ ಸಂಪಾದನೆಯಾಗಬೇಕೆಂದು ತಿಳಿಯದ ಹೊರತು ನಾವು ಸರಿಯಾಗಿ ಆಚರಿಸಲಾರೆವು. ನಮ್ಮ ಆದರ್ಶಕ್ಕೂ ನಮ್ಮ ಶಕ್ತಿಸಾಮರ್ಥ್ಯಕ್ಕೂ ಅಜಗಜಾಂತರವಿದೆ. ನಾವು ರಚಿಸಲು ಶಕ್ತರಾಗಿರುವುದಕ್ಕಿಂತಲೂ ಸುಂದರ ಆದರ್ಶವನ್ನು ನಾವು ಸೃಷ್ಟಿಸುತ್ತಿದ್ದೇವೆ. ಆದುದರಿಂದ ಯಾವುದು ಸ್ವೀಕಾರಾರ್ಹವೋ ಯಾವುದ ತೀರ ಕಾರ್ಯಕಾರಿಯೋ ಅಂತಹ ವಿಷಯಗಳಿಗಾಗಿ ಮಾತ್ರ ಸಾಹಸಪಡುತ್ತಿರುವ ಆದರ್ಶದವರಾಗಬೇಕು. ಆಧುನಿಕ ಜನಾಂಗದ ನೂತನ ಆದರ್ಶವೆಂದರೆ ಸುಸೂತ್ರವಾದ ಸಮಾಜ. ಇಂತಹ ಸುಸೂತ್ರಬದ್ಧ ಸಮಾಜವು ಉದ್ಭವಿಸಬೇಕೆಂದಾದರೆ ಅನರ್ಥಕಾರಿಯಾದ ವೈಯಕ್ತಿಕ ಆದರ್ಶಗಳ ಪ್ರಾಬಲ್ಯವು ತೊಲಗಿಹೋಗಬೇಕು. ವ್ಯಕ್ತಿಯ ಸ್ವಾತಂತ್ರ್ಯಕ್ಕಿಂತ ಸಮಷ್ಟಿಯ ಹಿತದೃಷ್ಟಿಯೇ ಅಧಿಕ ಪ್ರಾಮುಖ್ಯ ಭಾವನೆಯು ಜನಿಸಬೇಕು, ಮನುಷ್ಯನಲ್ಲಿ ಅವಶ್ಯವಾಗಿ ಬಂದ ಐಕ್ಯದ ಆದರ್ಶವು ಸ್ವಭಾವವೇ ಈಗ ಹಿರಿಯ ಒಡ್ಡು ಸಮಾಜದ ಜನನವನ್ನು ನಿರೀಕ್ಷಿಸುತ್ತಿದೆ. ಸ್ವತಂತ್ರ ಪ್ರಾಯವಾದ ವ್ಯಕ್ತಿತ್ವದ ತೆಯು ಇತ್ತೀಚೆಗೆ ತಲೆಯೆತ್ತಿತು. ಅದೀಗ ಮಹೋನ್ನತ ವಾದ ಶಾಶ್ವತವೂ ಶಾಂತಿಪರವೂ ಆದ ಸಮಾಜ ನಿರ್ಮಾಣಕ್ಕೆ ಉದ್ಧವದಿಂದ ವಿನಿಯೋಗವಾಗಬೇಕು."

ಇನ್ನೊಂದು ಕಾಲಕ್ಕಾಗಿ ಫ್ರೋಡರ ಯೋಜನೆಗಳು

Indian Reviewನಲ್ಲಿ ಡಾ॥ ಜೆ. ಎಮ್ ಕುಮಾರಪ್ಪನವರು ಹೀಗೆ ಬರೆಯುತ್ತಾರೆ —

ತನ್ನ ಪೂರ್ವ ಪೀಳಿಗೆಯವರ ಅವಿವೇಕದ ಕೃತಿಯ ಫಲವನ್ನು ಅನುಭವಿಸುತ್ತಿರುವ ನಿರುದ್ಯೋಗದ ಸಮಸ್ಯೆಯು ಬಗೆಹರಿಯದಿರುವುದರಿಂದ ಪ್ರೊ॥ ಫ್ರೋಡರು ಹೇಳುವಂತೆ ನಿರುದ್ಯೋಗತೆಯನ್ನು ಹೋಗಲಾಡಿಸಬೇಕಾದರೆ ಭೂಮಿಯ ಮೇಲೆ ಹೊಸ ವಸಾಹತುಗಳನ್ನು ನಿರ್ಮಿಸಿಕೊಳ್ಳುವುದು ಹಿತ. ಅದು ನಿರುದ್ಯೋಗತೆಯನ್ನು ಹೋಗಲಾಡಿಸುವುದಲ್ಲದೆ ಅದರಿಂದ ಅನೇಕರು ದಕ್ಷತೆಯೂ ಆಗುವುದು. ಜನತೆಯ ಸಂಖ್ಯೆ ಕೈಗಾರಿಕಾ ಭೂಮಿಯೂ ಸಂಚಾರದ ಸ್ವರೂಪ ಭೂಮಿಯ ಜೀವನವನ್ನು ರಕ್ಷಿಸುತ್ತದೆ. ಭೂಮಿಯು ಅವನನ್ನು ಬದುಕಿಸುವ ಕೈಗಾರಿಕೆಯನ್ನು ಪರ್ಯಾಪ್ತವಾಗಿ ಕೊಡುತ್ತದೆ. ಭೂಮಿಯನ್ನು ಮರೆತು, ಯಂತ್ರದ ಆಶ್ರಯವನ್ನು ಹೊಕ್ಕು ಜೀವನವನ್ನು ಆರಂಭಿಸಿದರೆ ಮನುಷ್ಯನ ಪ್ರಯೋಜನವು ನಮಗೆ ದೊರೆಯದೆ ನಾವು ಯಾತನೆಗೊಳಗಾಗಬೇಕಾಗುತ್ತದೆ. ಹಣ್ಣು ಸಂಪತ್ತಿನ ಆಗರ— ಬೇರಾವುದಲ್ಲ" ಹೆಂಗಸರಿಂದ ಪುನಃ ಪ್ರಾಕೃತಿಕ ಕೆಲಸವನ್ನು ಕಲಿಸುವುದಾದರೆ ಅವರಿಗೆ ಅಧಿಕ ಸಂಬಳವನ್ನು ಕೊಡಬೇಕೆಂದು ವಾದಿಸುವವರಲ್ಲಿ ಫ್ರೋಡರವರು ಅಗ್ರಗಣ್ಯರು.

ಜನರು ಹೀಗೆ ಯಂತ್ರಗಳನ್ನು ತೊರೆದು ಹಳ್ಳಿಗಳಿಗೆ ಪ್ರವೇಶಿಸ ಬೇಕಾದರೆ, ಜನರು ಹಳ್ಳಿಯನ್ನು, ಯಂತ್ರವನ್ನು ನಂಬಿಕೊಂಡಿರುವ ಫ್ಯಾಕ್ಟರಿಗಳಲ್ಲಿನ ಸಾಮಗ್ರಿಗಳ ಗತಿಯೇನಾಗುವುದು?—ಎಂದು ಕೆಲವರು ಕೇಳಬಹುದು, ಪ್ರೊ॥ ಫ್ರೋಡರು ಸಮಾಜದ ಗತಿಯೇನೆಂದು ಇಲ್ಲಿ ತರ್ಕಿಸುವುದಿಲ್ಲ—ಆದರೂ, ಕೈಗಾರಿಕೆಗೊಂದಿಗಿರುವ ಅಪಾಯವನ್ನೆಂದು ಹೇಳುವರು. ಹೋಟೆಲ್ ವಾಹನಗಳ ವ್ಯಾಪಾರವ್ಯವಹಾರವಾಗಲಿ, ಇನ್ನಿತರ ಕೈಗಾರಿಕೆಯಾಗಲೀ ಯಾವ ಗತಿಗೆಯುತ್ತದೆಂದು ಹೇಳುವುದಿಲ್ಲ.— ಕೈಗಾರಿಕೆಯು ಅಧೋಗತಿಗಿಳಿಯುವ ಜನತೆಯು

(ಇನ್ನೂ ಮುಂದಿದೆ ಮುಂದಿನ ಸಂಚಿಕೆಯಲ್ಲಿ ಮುಂದರಿಯುವುದು.)

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟಿನ ದೋಷ, ಮುಟ್ಟಾಗುವುದರಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ 3 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು

ಅವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ
ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು

ಒಂದು ತಿಂಗಳಲ್ಲಿ ಅನೋಘವಾದ ಗುಣ, ಇದು ಜಾಡ್ಯವನ್ನು ಗುಣಪಡಿಸುವುದಲ್ಲದೆ ವ್ಯಾಧಿಯು ಬಾರದಂತೆ ತಡೆಮಾಡುವುದು

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವೆ

ತಯಾರಿಸುವವರು ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಎಲ್ಲಾ ಕೆಲಸಗಳಿಗೂ ಕಿರ್ಲೋಸ್ಕರ ಪಂಪುಗಳು



ಯು. ಪಿ. ಟೈಪಿನ ಸೆಂಟ್ರಿಪ್ಯುಗಲ್ ಪಂಪಿನ ಬದಲಿಗೆ ಅಥವಾ ವಿನಿಮಯಕ್ಕಾಗಿ—

ಸಪೂರವೂ ಆಳವೂ ಆದ ಬಾವಿಗಳಿಗೆ.

ವಿವರಕ್ಕೆ ಈ ಕೆಳಗಿನವರಿಗೆ ಬರೆಯಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ. ಸತಾರಾ

ಡಿಸ್ಟ್ರಿಬ್ಯೂಟರರು—ಪೆರ್‍ರಿ ಎಂಡ್ ಕೋ., ಲಿಮಿಟೆಡ್, ಮದ್ರಾಸು.

ಟ್ರೈನಿಂಗ್ ಶಾಲಾ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಸೋಸಿಯೊಲೊಜಿ ಅಥವಾ **ಸಮಾಜಶಾಸ್ತ್ರ**

ಕ್ರಯ ರೂ 1

ಶಾರದಾ ಛಾಪಖಾನೆ, ಮಂಗಳೂರು.

ಜಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕಾಲರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!
ಕ್ರಯ ಡಬ್ಬಿ 1ಕ್ಕೆ ರೂ 1–0–0

ಗುಹ್ಯರೋಗ ನಿವಾರಿಣೀ ತೈಲ
Anti-Veneraei Oil
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧ. ಕಟುಂಬ ಪಾರಂಪರ್ಯದ ಈ ತಗಲಿದ ರೋಗವೂ ಗುಣವಾಗುವುದು ನಿರೋಗಿಗಳೂ ಪ್ರೋಕ್ಷಿಯು ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು

8 ಔನ್ಸಿನ ಬಾಟ್ಲಿ 1ಕ್ಕೆ ರೂ 2—8—0

ಕೆ ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು

ರೈಲು ಬಂಡಿಗಳ ಸಮಯ.

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಿಗ್ಗೆ 9 50	ಸಂಜೆ 4 20
ಮಿಕ್ಸಡ್	,, 5 55	ರಾತ್ರಿ 8 50
ಫಾಸ್ಟ್ ಪೆಸೆಂಜರ್	ಮ. 2 45	ಮ. 12 40
ಶಟಲ್	ಸಂಜೆ 5 25	ಬೆಳಿಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ 8 25	ಮ. 1 20
ಕಾಸರಗೋಡು ಪೆಸೆಂಜರು	ಸಂಜೆ 3 20	ಸಂಜೆ 6-15

ಕುಷ್ಠ ರೋಗ ಮತ್ತು ಫರಂಗಿ ರೋಗ

ಇತರ ಎಷ್ಟು ದೀರ್ಘಕಾಲದ ರೋಗವೇ ಆಗಿರಲಿ, ಯಾವ ಕಾರಣವೇ ಇರಲಿ, ನೀವು ಮದ್ದು ಮಾಡಿ ಮಾಡಿ ದಣಿದಿದ್ದರೆ, ನಿಮ್ಮ ರೋಗಗಳನ್ನು ಇಂದ್ರಜಾಲದಂತೆ ಶಾಶ್ವತವಾಗಿ 4 ವಾರಗಳಲ್ಲಿ ಗುಣಪಡಿಸಲಾಗುತ್ತದೆ ಪೂರ್ಣಗುಣ ಗೇರಂಟಿ

ವಿವರಕ್ಕೆ ಬರೆಯಿರಿ

Kamala Works,
Panchpota Bengal S. B
C. P S.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾಯುತ ಸಮೇತ

ಋಗ್ವೇದೀ ಸಂಧ್ಯಾವಂದನೆ

(ವೈಷ್ಣವರಿಗೆ_ಊರ್ಧ್ವಪುಂಡ್ರ_ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಸಹಿತ.

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟ್ ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ -
The Scientific Gold Bangles Co., Ltd.,
Head Office -43, Byragimatam Street,
Post Box No. 203, Madras.

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ.



ಹೊಸತಾಗಿ ಆಮದಾದುದು ದೊರೆಯುವ ಇತರ ಕ್ಯಾಮರಗಳಿಗಿಂತ ಬಾಳಿಕೆ ಬರುವಂಥದು ಮತ್ತು ಉತ್ತಮವಾದುದು. ಫೋಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ. ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್, ೪ ಫಿಲ್ಮ್ ಎಕ್ಸ್ಪೋಜರ್ಸ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಅವಶ್ಯಕವಾದ ರಸಾಯನಿಕ ವಸ್ತುಗಳು, ಫೋಟೋ ತೆಗೆಯುವ ವಿಧಾನ, ಶಿಕ್ಷಣಕೊಡುವ ಸಾಹಿತ್ಯ—ಇವು ಉಚಿತವಾಗಿ ಕಳುಹಿಸಲಾಗುತ್ತದೆ ಬಲವಾದ ಲೆನ್ಸ್. ಬೆಲೆ ಸಾಮಾನ್ಯವಾದುದು ರೂ. ೩–೧೨–೦, ಉತ್ತಮವಾದುದು ೬–೧೨–೦ ಮಡಚುವ ಕ್ಯಾಮರಾ ರೂ ೫, ಉತ್ತಮವಾದ್ದು ರೂ. ೭ ಸ್ಪೆಶ್ಯಲ್ ರೂ. ೧೧, ಹೆಚ್ಚಿಗೆ ಫಿಲ್ಮ್ ಬೇಕಾದರೆ ಡಜನ್ ೧ಕ್ಕೆ ೬ ಆಣೆ. ಎನ್‌ಲಾರ್ಜ್‌ಮೆಂಟಿನ ಸಾಧನಾ ಸಾಮಗ್ರಿ ೧ ಶೀಸೆಗೆ ೪ ಆಣೆ, ಫಿಕ್ಸಿಂಗ್ ಸಾಲ್ಟ್ ೧ ಡಬ್ಬಿಗೆ ೨ ಆಣೆ, ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ.

ಭಾರತ ಯೂನಿಯನ್ ಟ್ರೇಡಿಂಗ್ ಕಂ-
ಪೋಸ್ಟ್‌ಬಾಕ್ಸ್ ನಂಬ್ರ ೨೪೧೪ (ಎಚ್ ಎ) ಕಲ್ಕತ್ತಾ

ಕನ್ನಡ ಸಾಹಿ

ಗಮಕ ಕ

ಕರ್ಣಾಟಕ ಸಾಹಿತ್ಯ ಪರಿಷ

ನರಸಿಂಹಾಚಾರ್ಯ

“ಗಮಕ ವಿದ್ಯೆಯು ಉತ್ತಮವಾದ

(ನಮ್ಮ ಸ್ವಂತ ಪ್ರತಿನಿಧಿಯಿ

ಕರ್ಣಾಟಕ ಸಾಹಿತ್ಯ ಪರಿಷತ್ತು ಕನ್ನಡ ಕಾವ್ಯಗಳನ್ನು ಜನಸಾಮಾನ್ಯಕ್ಕೆ ಪ್ರಚುರಪಡಿಸಲು ಗಮಕ ವಿದ್ಯೆಯು ಅತ್ಯುಪಯುಕ್ತ ಸಾಧನವೆಂಬುದನ್ನು ಮನಗಂಡು, ಆ ವಿದ್ಯೆಯನ್ನು ಕಲಿಸುವ ಉದ್ದೇಶದಿಂದ ಒಂದು ಗಮಕಕಲಾ ಅಭ್ಯಾಸಗೋಷ್ಠಿಯನ್ನು ಏರ್ಪಡಿಸಿದ್ದ ಸಂಗತಿಯು ಈ ಹಿಂದೆಯೇ ಪತ್ರಿಕೆಗಳಲ್ಲಿ ಪ್ರಕಟಪಡಿಸಿದ್ದ ಪರಿಷತ್ತಿನ ಪ್ರಸಿದ್ಧ ಪತ್ರಿಕೆಯಿಂದ ಕನ್ನಡ ಮಹಾಜನರಿಗೆ ವಿದಿತವಾಗಿರಬೇಕು ಪರಿಷತ್ತು ಗಮಕಕಲಾ ಶಿಕ್ಷಣಕಾರ್ಯವನ್ನು ವಹಿಸಿಕೊಂಡು, ಪ್ರಸಿದ್ಧ ಗಮಕಿಗಳಾದ ಶ್ರೀಮಾನ್ ಎಸ್ ಜಿ ಬಿಂದೂರಾಯರವರನ್ನು ಗಮಕ ಶಿಕ್ಷಕರನ್ನಾಗಿ ನೇಮಿಸಿ, ಸುಮಾರು ಎರಡು ತಿಂಗಳಿಂದ ಗಮಕ ತರಗತಿಯನ್ನು ನಡೆಸಿಕೊಂಡು ಬಂದಿತು ಹಾಗೆ ಶಿಕ್ಷಿತರಾದ ವಿದ್ಯಾರ್ಥಿಗಳಿಗೆ ಕೆಲವು ದಿವಸಗಳ ಹಿಂದೆ ಒಂದು ಪರೀಕ್ಷೆಯನ್ನು ನಡೆಯಿಸಿತ್ತು

ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಿಕೆಗಳನ್ನು ಕೊಡುವುದಕ್ಕಾಗಿ ಪರಿಷತ್ತು ಕಳೆದ ಜೂನ್ ತಾರೀಖು ೨೭ನೇ ಶನಿವಾರ ಸಾಯಂಕಾಲ ಕನ್ನಡದ ಅಭಿಮಾನಿಗಳ ಸಭೆಯೊಂದನ್ನು ಏರ್ಪಡಿಸಿತು ಕನ್ನಡದ ಆಚಾರ್ಯಪುರುಷರಾದ ಪ್ರಾಕ್ತನ ವಿಮರ್ಶವಿಚಕ್ಷಣ ಮಹಾ ಮಹೋಪಾಧ್ಯಾಯ ಇತ್ಯಾದಿ ಬಿರುದಾಂಕಿತರಾದ ಶ್ರೀಮಾನ್ ಆರ್ ನರಸಿಂಹಾಚಾರ್ಯರವರು ಸಭಾಧ್ಯಕ್ಷರಾಗಿದ್ದರು.

ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯನವರು ಪರಿಷತ್ತು ನಡೆಸಿರುವ ಗಮಕಕಲಾ ಶಿಕ್ಷಣ ಕಾರ್ಯದ ಸಂಗ್ರಹ ವರದಿಯೊಂದನ್ನು ಓದಿದ ಬಳಿಕ, ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಭಾರತ ಜೈಮಿನಿ ಭಾರತಾದಿ ಕೆಲವು ಕಾವ್ಯಗಳ ಭಾಗಗಳನ್ನು ಓದಿ ತಾವು ಕಲಿತ ಗಮಕ ವಿದ್ಯೆಯನ್ನು ಪ್ರದರ್ಶಿಸಿದರು ಅನಂತರ ಶ್ರೀಮಾನ್ ನರಸಿಂಹಾಚಾರ್ಯರವರು ಸ್ವಹಸ್ತದಿಂದ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಿಕೆಗಳನ್ನು ದಯಪಾಲಿಸಿದರು ಗಮಕ ಶಿಕ್ಷಕರಾಗಿ ಪರಿಷತ್ತಿಗೂ ಕನ್ನಡನಾಡಿಗೂ ಉಪಕಾರ ಮಾಡಿರುವ ಶ್ರೀಮಾನ್ ಎಸ್ ಜಿ ಬಿಂದೂರಾಯರವರಿಗೆ ಪರಿಷತ್ತು ಒಂದು ಶಾಲನ್ನು ಬಹುಮಾನ ಮಾಡಿತು ಶ್ರೀಮಾನ್ ಬಿ. ಎಂ ಶ್ರೀಕಂಠಯ್ಯನವರು ವಂದನಾ ಸಮರ್ಪಣೆಯನ್ನು ಸಲ್ಲಿಸಿದ ಮೇಲೆ ಅಂದಿನ ಸಭೆ ಮುಕ್ತಾಯವಾಯಿತು

ಶ್ರೀಮಾನ್ ನರಸಿಂಹಾಚಾರ್ಯರ ಭಾಷಣದ ಸಾರಾಂಶ

[ಇದು ಅಧ್ಯಕ್ಷಭಾಷಣದ ಲಘುಸಂಗ್ರಹ ಮಾತ್ರ. ಅಲ್ಲಲ್ಲಿ ಲೋಪದೋಷಗಳಿದ್ದರೂ ಇರಬಹುದು]

ಇದುವರೆಗೂ ನಡೆದ ವಿಷಯಗಳನ್ನು ಕೇಳಿ ಕರ್ಣಾನಂದವೂ ಹೃದಯಾನಂದವೂ ಆಗಿದೆ. ಇಂಥ ಸಂದರ್ಭಗಳಲ್ಲಿ ಮಾತನಾಡುವುದು ವಿಧಿಯಾಗಿ ಹೋಗಿದೆ ಆದರೆ ಅದು ಅವಶ್ಯಕ

ಗಮಕ ವಿದ್ಯೆಯು ಉತ್ತಮವಾದ ಕಲೆ ಅದರಲ್ಲಿ ಪ್ರಾವೀಣ್ಯ ಹೊಂದಬೇಕಾದರೆ ಬಹಳ ಬಹಳ ಶ್ರಮ. ಅದನ್ನು ಕಲಿಯುವುದಕ್ಕೆ ಸಾಮಗ್ರಿ ಬಹಳವಿದೆ

ಜೈನರಲ್ಲಿಯೂ, ವೀರಶೈವರಲ್ಲಿಯೂ, ತಮಿಳರಲ್ಲಿಯೂ ಪಾಂಡಿತ್ಯವನ್ನು ನಾಲ್ಕು ಭಾಗವನ್ನಾಗಿ ಮಾಡಿದ್ದಾರೆ ಅವು ಯಾವುವೆಂದರೆ-ಕವಿತ್ವ, ಗಮಕತ್ವ, ವಾದಿತ್ವ, ಮತ್ತು ವಾಗ್ಮಿತ್ವ. ಅನೇಕರು ಈ ನಾಲ್ಕನ್ನೂ ಹೊಂದಿದ್ದರು. ಗಮಕ ಕಲೆ ಕವಿತ್ವದ ಜೊತೆಯಲ್ಲಿಯೇ ಸೇರಿರುವುದು ಒಂದು ವಿಶೇಷ

ಸಂಸ್ಕೃತ ಸಾಹಿತ್ಯದಲ್ಲಿಯೂ ಜೈನ ಸಾಹಿತ್ಯದಲ್ಲಿಯೂ ಹೀಗೆ ವಿಭಾಗ ಮಾಡಿರುವುದು ಗೊತ್ತಾಗುತ್ತದೆ

ಆದಿಪಂಪನು ‘ವಿಕ್ರಮಾರ್ಜುನ ವಿಜಯದಲ್ಲಿ’’ ಒಂದು ಸಂದರ್ಭದಲ್ಲಿ ಹೀಗೆ ಹೇಳಿದ್ದಾನೆ.

ಕವಿ ಗಮಕಿ ವಾದಿ ವಾಗ್ಮಿ
ಪ್ರವರರ ಪಂಡಿತರ ನೆಗಲ್ದ ಮಾತರವರಸ।
ಬ್ಬವದವರೊಡ್ಡಂ ತೊಡೆದ।
ನ್ನವಾಸದೊಳಗ ದೋರ್ದಸಾಗಳ್ ಹರಿಗಂ॥

ಪೊನ್ನನು ಹೀಗೆ ಹೇಳಿಕೊಂಡಿದ್ದಾನೆ —

ಇದಿರ್ಗೆ ಒರೆ ಪ್ರಶ್ನಿಗಂ ಕಿಡ।
ಸದಿರಂ ಪಿರಿಗಮಕಿ ವಾದಿ ವಾಗ್ಮಿಗಳ ಇವ॥
ತ್ವದ ಗಮಕಿತ್ವದ ವಾದಿ।
ತ್ವದ ವಾಗ್ಮಿತ್ವದ ಪೊಡರ್ಪುಮಂ ದರ್ಪಮುಮಂ।

ಪೊನ್ನನು ನಾಲ್ಕರಲ್ಲಿಯೂ ಪಂಡಿತನಾಗಿದ್ದನು.

ಕನ್ನಡ ಪಂಚತಂತ್ರವನ್ನು ಬರೆದಿರುವ ದುರ್ಗಸಿಂಹನು ಹೀಗೆ ಹೇಳಿದ್ದಾನೆ

ಕವಿಗಮಕಿ ವಾದಿ ವಾಗ್ಮಿ
ಪ್ರವರಂ ಶ್ರೀ ವಾದಿರಾಜ ಮುನಿ ಪುಂಗವರು
ಸವದಿಂ ತಿರ್ದಿದರೆನೆ ಭೂ
ಭುವನದೊಳದನ್ನೆಂದೆ ಕೀರ್ತಿಗೊನೆಯ ದರೋಳರೇ

ಸಂಸ್ಕೃತ ಸಾಹಿತ್ಯದಲ್ಲಿ ನೋಡಿದರೆ, ಜಿನಸೇನಾಚಾರ್ಯರು ಸಮಂತಭದ್ರನನ್ನು ಸ್ತೋತ್ರಮಾಡುವಾಗ ಅವರು ಈ ನಾಲ್ಕು ವಿದ್ಯೆಗಳಲ್ಲಿಯೂ ಪಾಂಡಿತ್ಯ ಹೊಂದಿದ್ದಾರೆಂದು ಹೇಳುತ್ತಾರೆ. ಶ್ರವಣಬೆಳಗೊಳದ ಶಾಸನವೊಂದರಲ್ಲಿ ಜಿನಚಂದ್ರನ ಸ್ತೋತ್ರವಿದೆ, ಅಲ್ಲಿಯೂ ಇದೇ ರೀತಿ ಉಲ್ಲೇಖವಿದೆ ದೇವೋತ್ತಮನೆಂಬ ನಿಘಂಟುಕಾರನು “ನಾನಾರ್ಥ ರತ್ನಾಕರ’ವನ್ನು “ಗಮಕಿಗಳ ರಸಾವಾಸ” ಎಂದು ಹೇಳಿಕೊಂಡಿದ್ದಾನೆ.

ಗಮಕಿ ಎಂಬ ಪದದ ಅರ್ಥವೇನು? ಅರ್ಥ ವಿಚಾರ ಮಾಡಬೇಕಾದರೆ ನಿಘಂಟುವಿಗೆ ಹೋಗಬೇಕು ಮಂಗರಾಜ ನಿಘಂಟುವಿನಲ್ಲಿ ಈ ಪದಕ್ಕೆ ವಾಚಕ, ಎಂದರೆ ಓದುವವನು, ಎಂದು ಇದೆ “ಮಾರವ್ಯಾಸನು ‘‘ಓದಿ ಹೊಗಳಿಸಿಕೊ... ಗಮಕಿಗಳು’’ ಎಂದು ಹೇಳುತ್ತಾನೆ ನೀತಿಸಾರದಲ್ಲಿ ಗಮಕಿ ಹೇಗೆ ಓದಬೇಕೆಂದು ತಿಳಿಸಿದೆ—

‘ಎಡಪಡೆ ತಡೆಯದೆ ತಲೆಯಿಂ।
ಕೊಡುಹದೆ ರಸಮಂ ಕಿಡಿಸದೆ
ಸಡಳರ ಚಿತ್ತಾ ಕೊಡಬಡಲ’’—
ಹೀಗೆ ಓದುವನು ಗಮಕಿ

ಇನ್ನು ಈ ಗಮಕಕಲೆಯ ಪ್ರಾಚೀನತೆಯನ್ನು ಕುರಿತು ಎರಡು ಮಾತು ಹೇಳುತ್ತೇನೆ ನನಗೆ ತಿಳಿದ ಮಟ್ಟಿಗೆ ಶಾಕುಂತಲ ನಾಟಕವನ್ನು ಕನ್ನಡದಲ್ಲಿ ಬರೆದಿರುವ **ಬಸವಪ್ಪ ಶಾಸ್ತ್ರಿಗಳು** ಭಾರತ ಓದುತ್ತಿದ್ದವರು ಗಮಕ ವಿದ್ಯೆಯು ಹಿಂದೆ ಒಂದು ಕಲೆ ಎನ್ನಿಸಿಕೊಂಡು ೬೪ ಕಲೆಗಳಲ್ಲಿ ಸೇರಿದ್ದಿತು ಬಲು ಹಿಂದೆಯೇ ಇದರ ಪ್ರಚಾರವಿತ್ತು. ಈ ವಿದ್ಯೆಯು ಇಂದಿನದಲ್ಲ ಬಹಳ ಪುರಾತನವಾದುದು

ಈ ವಿದ್ಯೆ ಸುಲಭವಾಗಿ ಬರತಕ್ಕದ್ದಲ್ಲ ಶಿಕ್ಷಣ ಬೇಕು ಶಿಕ್ಷೆಯನ್ನು ಹೊಂದಿ ಓದತಕ್ಕವರು ಇತರರಿಗೆ ಆನಂದವನ್ನು ಉಂಟುಮಾಡುವರು ಗಮಕಿ ತಾನು ಕವಿಯಾಗಿಯೂ ಇರಬೇಕು ಸಂಗೀತ ಜ್ಞಾನವಿರಬೇಕು, ಒಳ್ಳೆಯ ಶಾರೀರವಿರಬೇಕು ಅವನಿಗೆ ವ್ಯಾಕರಣ ಜ್ಞಾನವಿರಬೇಕು ರಸಕ್ಕೆ ತಕ್ಕ ರಾಗ ಹಾಕಿ ಓದಬೇಕು ಸಂಗೀತ ಶಾಸ್ತ್ರದಲ್ಲಿ ರಸಕ್ಕೂ ಕಾಲಕ್ಕೂ ತಕ್ಕ ರಾಗಗಳನ್ನು ಹೇಳಿದೆ ರಸಾನುಗುಣವಾದ ವೃತ್ತಗಳನ್ನೂ ಹೇಳಿದೆ ಉದಾಹರಣೆಗಾಗಿ ಕರುಣರಸಕ್ಕೆ ಮಂದಾಕ್ರಾಂತ, ಶೃಂಗಾರಕ್ಕೆ ಪೃಥ್ವಿ, ಸ್ರಗ್ಧರಾ, ವೀರಕ್ಕೆ ಶಿಖರಿಣಿ, ಶಾರ್ದೂಲ ವಿಕ್ರೀಡಿತ. ರಸಕ್ಕೆ ತಕ್ಕ ರಾಗ ಹಾಕಬೇಕು. ಅದರೆ ರಾಗಕ್ಕಾಗಿ ಅರ್ಥವನ್ನೂ ಭಾವವನ್ನೂ ಕೆಡಿಸಬಾರದು ಕವಿಯ ಆಶಯವನ್ನು ತಿಳಿದು ಓದಿದರೆ ಇತರರಿಗೆ ಹೃದಯವ್ಯಾಮುಕ, ಎಲ್ಲಲ್ಲಿ ನಿಲ್ಲಿಸಬೇಕೋ ಅಲ್ಲಲ್ಲಿ ಸರಿಯಾಗಿ ನಿಲ್ಲಿಸಿ ಓದಬೇಕು ಕೆಲವರು ಸಂಗೀತ ಹೇಳುವ ಹಾಗೆ—‘ವಿನಯಕಂಭೂ। ತಗಣಾದಿ ಸಾಯಂ’ ಎಂದು ಓದಿದರೆ ಹಿತವಾಗಿರುತ್ತದೆಯೇ? ವೀರರಸವನ್ನು ಓದಿದರೆ ನನ್ನಂಥ ಮುದುಕನೂ ಆವೇಶಗೊಳ್ಳಬೇಕು, ಶೋಕರಸವನ್ನು ಓದುತ್ತಿದ್ದರೆ ಕಣ್ಣೀರು ಬರಬೇಕು

ಇದುವರೆಗೆ ಹೇಳಿದ್ದೆಲ್ಲ ಪುರುಷರ ವಿಷಯವಾಯಿತು ಗಮಕ ಕಲೆಯನ್ನು ಸ್ತ್ರೀಯರು ಕಲಿತುಕೊಳ್ಳಕೂಡದೆ? ಸಮ್ಮರಿ ಸ್ತ್ರೀಯರೂ ಗಮಕಿಗಳಾಗಿದ್ದರೆಂಬುದಕ್ಕೆ ಆಧಾರವಿದೆ ಪಂಪಯ ಅಜಿತಪುರಾಣದ ಆಶ್ವಾಸದಲ್ಲಿ ತಿರುಮಲಮ್ಮನೆಂಬ ಗಮಕಿಯಿದ್ದಳೆಂತೆ “ಸ...ನಾಥ ...ರಿತ್ರೆ’’ಯಲ್ಲಿ ನಾಗಶ್ರೀ ಎಂಬಾಕೆಯು ಕಾವ್ಯವಾಚನ ಮಾಡಿದಂತೆ ಹೇಳಿದೆ ಈಗಲೂ ನಮ್ಮ ಮೈಸೂರಿನ ನಾಗಮ್ಮ ಭಾರತ ಓದುವುದು ಎಲ್ಲರಿಗೂ ತಿಳಿದ ವಿಷಯ

ಹೀಗೆ ಭಾಷಣ ಮಾಡಿ ಕೊನೆಯಲ್ಲಿ ಶ್ರೀಮಾನ್ ನರಸಿಂಹಾಚಾರ್ಯರವರು ಪರಿಷತ್ತು ಗಮಕಕಲಾ ಶಿಕ್ಷಣದ ಕಾರ್ಯದಲ್ಲಿ ಪ್ರಯತ್ನಪಟ್ಟಿರುವುದು ಸ್ತುತ್ಯವೆಂದೂ, ಕನ್ನಡಿಗರು ಈ ಸಂಬಂಧವಾಗಿ ಪರಿಷತ್ತಿಗೆ ಅಗತ್ಯವಾಗಿ ಸಹಾಯಮಾಡಬೇಕೆಂದೂ ಸಭೆಯಲ್ಲಿ ನೆರೆದಿದ್ದ ಮಹಾಜನರಿಗೆ ಬಿನ್ನವಿಸಿಕೊಂಡರು ಅವರ ದಯ ಬೊತೆಗ ನಮ್ಮ ದಯ ನ್ನೂ ಸೇರಿಸಿ ಅವರ ವಿನ್ನಪವು ಅಲ್ಲಿ ನೆರೆದಿದ್ದವರಿಗೆ ಮಾತ್ರವಲ್ಲ, ಸಮಸ್ತ ಕನ್ನಡಿಗರಿಗೂ ಎಂದು ಹೇಳಬೇಕಾಗಿದೆ

ಪರಿಷತ್ತಿನ ಲಕ್ಷ್ಮೀಪ್ರಸನ್ನವಾದ ಹೊರತು ಪರಿಷತ್ತಿನ ಆರಾಧ್ಯದೇವತೆ ಸಂಸ್ಕೃತಿ ದೇವಿಯು ಹೊರಗೆ ಬಂದು ಕನ್ನಡನಾಡಿನ ಎಲ್ಲಾ ಭಾಗಗಳಲ್ಲಿ ನಲಿಯಲಾರಳು ಗಮಕ ಕಲಾಶಿಕ್ಷಣ, ಉಪನ್ಯಾಸ ಗ್ರಂಥಪ್ರಕಟನೆ ಮೊದಲಾದ ಪರಿಷತ್ತಿನ ಒಂದೊಂದು ಕಾರ್ಯಕ್ಕೂ ಕನ್ನಡನಾಡಿನ ಪರ್ತಕರೂ, ಐಶ್ವರ್ಯವಂತರೂ, ಜಮೀನುದಾರರೂ ತಮ್ಮ ತಮ್ಮ ಹೆಸರಿನಲ್ಲಿ ಒಂದೊಂದು ನಿಧಿಯನ್ನು ಏರ್ಪಡಿಸಿಕೊಟ್ಟದ್ದೇ ಆದರೆ ಪರಿಷತ್ತಿನ ಕಾರ್ಯಪ್ರಪಂಚವು ವಿಸ್ತಾರವಾದೀತು ಮುಖ್ಯವಾಗಿ ಈ ಗಮಕಕಲೆಯ ಶಿಕ್ಷಣಕ್ಕಾಗಿ ಯಾರಾದರೂ ಮಹನೀಯರು ಪರಿಷತ್ತಿಗೆ ದ್ರವ್ಯಸಹಾಯಮಾಡುವುದಾದರೆ ಅವರಿಂದ ಕನ್ನಡಕ್ಕೆ ಮಹೋಪಕಾರವಾಗುತ್ತದೆ ಏಕೆಂದರೆ-ಗಮಕ ಕಲೆ ಹಿಂದೆ ಮುಖ್ಯವಾಗಿತ್ತು ಮುಂದೆಯೂ ಅಷ್ಟು ಮುಖ್ಯವಾದುದಾಗಿ ಪರಿಣಮಿಸುವ ಚಿಹ್ನೆಗಳಿವೆ. ಹಳ್ಳಿಯವರು ಕನ್ನಡ ಕಾವ್ಯಗಳನ್ನು ತಾವೇ ಓದಲಾರರು, ಸಮರ್ಥ ಗಮಕಿಯೊಬ್ಬನಿದ್ದರೆ ಅವನು ಸಂಚರಿಸುವ ಗ್ರಂಥಭಂಡಾರ ಕನ್ನಡ ಸಾಹಿತ್ಯದ ಸರ್ವತ್ರ ಪ್ರಚಾರವಾಗಬೇಕಾದರೆ ಗಮಕಿಗಳಿಂದಲೇ ಸಾಧ್ಯ

ಮೈಸೂರು ನ್ಯಾಯವಿಧಾಯಕ ಸಭೆಯ ಅಧಿವೇಶನ.

ಮೊದಲನೆಯ ದಿವಸ.

ಮೈಸೂರು ನ್ಯಾಯವಿಧಾಯಕ ಸಭೆಯ ಅಧಿವೇಶನವು ಜೂನ್ ತಾ. ೨೯ನೆಯ ಸೋಮವಾರ ಪ್ರಾರಂಭವಾಯಿತು ದಿವಾನ್ ಸಾಹೇಬರವರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು.

ಪ್ರಶ್ನೋತ್ತರಗಳು.

ಆಯವ್ಯಯವನ್ನು ಕುರಿತು ಚರ್ಚೆ ಆರಂಭವಾಗುವ ಮೊದಲು ಸಣ್ಣ ಪುಟ್ಟ ಪ್ರಶ್ನೆಗಳು ಸದಸ್ಯರಿಂದ ಬಂದುವು.

ಸಂಸ್ಥಾನದ ಕೆರೆಗಳು.

ಸಂಸ್ಥಾನದಲ್ಲಿ ದೊಡ್ಡ ಕೆರೆಗಳೆಷ್ಟು, ಸಣ್ಣ ಕೆರೆಗಳೆಷ್ಟು, ಅವನ್ನು ಆಗಿಂದಾಗ್ಗೆ ರಿಪೇರಿಮಾಡಿಸುತ್ತಿದೆಯೆ ಎಂದು ಒಬ್ಬ ಸದಸ್ಯರು ಕೇಳಿದರು ಕೆರೆಗಳ ಲೆಕ್ಕ ಸರಕಾರದವರಲ್ಲಿಲ್ಲವೆ, ಉತ್ತರ ಒಂತು ರಿಪೇರಿ ವಿಚಾರ ಅದರಲ್ಲಿ ಪ್ರೋಗ್ರಾಮ್ ಏನಿಲ್ಲ, ದುಡ್ಡು ದೊರೆತಂತೆ ಮಾಡಿಸಲಾಗುತ್ತದೆ ಎಂದು ಚೀಫ್ ಇಂಜಿನಿಯರ್ ಉತ್ತರಕೊಟ್ಟರು

ಅಸಿಸ್ಟೆಂಟ್ ಕಮಿಶನರುಗಳಿಗೆ ಪ್ರಮೋಷನ್.

ಅಸಿಸ್ಟೆಂಟ್ ಕಮಿಶನರುಗಳಿಗೆ ಪ್ರಮೋಶನ್ ಕೊಡುವ ವಿಚಾರದಲ್ಲಿ ಸರಕಾರದ ನೀತಿ ಏನೆಂದು ಒಬ್ಬರು ಪ್ರಶ್ನಿಸಿದರು ನೀತಿ ಎಂದರೆ ಕೋಮುವಾರು ಜಾತಿವಾರು ದೃಷ್ಟಿಯಿಂದ ಪ್ರಮೋಶನ್ ಕೊಡುತ್ತೀರ ಎಂದು ಪ್ರಶ್ನೆಯು ಅಂತರಾರ್ಥ ಕೆಲಸಕ್ಕೆ ನೇಮಕಮಾಡುವಾಗ ಕೋಮುವಾರು ಪ್ರಾತಿನಿಧ್ಯದ ನೀತಿ ಅನುಸರಿಸುತ್ತಿದ್ದರೂ, ಪ್ರಮೋಷನ್ ಕೊಡುವಾಗ ವ್ಯಕ್ತಿ ವ್ಯಕ್ತಿಯ ಸಾಮರ್ಥ್ಯವನ್ನು ಮಾತ್ರ ಗಣನೆಗೆ ತಂದುಕೊಳ್ಳಲಾಗುವುದೆಂದು ಸ್ಮಾಯಿತ್ ಸಾಹೇಬರು ಉತ್ತರವಿತ್ತರು. ಸಂತೋಷಕರವಾದ ಸಂಗತಿ

[illegible] ಗೈತರು ಕಷ್ಟದಲ್ಲಿದ್ದಾರೆ, ಭೂಕಂದಾಯ ಕಡಮೆಯಾಗಿದೆ, ಕಷ್ಟಾನುಭವಿಸುವರಲ್ಲದಿದ್ದರೂ ಕಷ್ಟದಲ್ಲಿ ನರಳುತ್ತಿರುವ ಹಳ್ಳಿಗಾಡಿನವರಿಗೆ ತಕ್ಕಮಟ್ಟಿಗಾದರೂ ಸಹಾಯ ಮಾಡಲು, ಉತ್ಪತ್ತಿ ಕಡಮೆಯಾಗಿರುವಾಗ, ಹಣವನ್ನು ಎಲ್ಲಿಂದ ತರಬೇಕು? ಆ ಹಣವನ್ನು ದುರುಪಯೋಗಪಡಿಸಿದ್ದರೆ ಅದು ಬೇರೆ ಮಾತು ಈ ಸಂಬಂಧದಲ್ಲಿ ಪಿ ಸುಬ್ಬರಾಮಶೆಟ್ಟರು ಸರಕಾರದ ನೀತಿಯನ್ನು ಸಮರ್ಥಿಸಿ ಮಾತಾಡಿದರು

(ಮುಂದಿನ ಸಂಚಿಕೆಯಲ್ಲಿ ಕೊನೆಗೊಳ್ಳುವುದು.)

TENDERS

The Bombay Steam Navigation Company invite tenders for the supply of labour and supervision for the work of stevedoring their steamers plying on the Mangalore-Line between Karwar & Mangalore inclusive, also the shore handling of cargo at the port of Mangalore. Conditions of Contract may be seen at the Coy's office at Mangalore and copies of specifications will be supplied on payment of Rs. 5/- per copy. Tenders should be addressed to the General Manager of the Company direct (100, Frere Road, Bombay). The Coy. reserve the right of rejecting the lowest or any tender without assigning any reason for so doing. Sealed tenders superscribed Tenders for stevedoring and tenders for shore handling, must reach the General Manager at 100, Frere Road Bombay by 12 noon (S. T.) on 25th August 1935.

Killick Nixon & Co.,
Agents,
The Bombay Steam Navigation Company, Ltd.

Shiromani Narayanacharya

Choukhamba Benares City

THIS MAN
OUR CUSTOMER

ಶಾಸ್ತ್ರಗಳೇ ಪೂರ್ವಿಕರು ಆರೋಗ್ಯರೇ ಅಥವ ಋಷಿಗಳವರೇ, ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಅಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವು. ಹಾಗಾದರೆ ನಮಗೆ ಅಸಲ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಅಕ್ಕಿ ಪ್ರಮಾಣದ ಕಂಠೀಸರ 1ಕ್ಕೆ ಆಣೆ 100ದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 300ದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 360ದ ರೂ. 50ರ ವರೆಗೆ. ಮತ್ತು 3–4–5–6–7–8 ಮುಖಗಳ ಕಾಳು 1ಕ್ಕೆ ಆಣೆ 400ದ ರೂಪಾಯಿ 10. ಮತ್ತು 9–10–11 ಮುಖಗಳುಳ್ಳ ಕಾಳು 1ಕ್ಕೆ ರೂ. 100ದ 30ರ ವರೆಗೆ 12–13–14 ಮುಖದ ಕಾಳು 1ಕ್ಕೆ ರೂಪಾಯಿ 400ದ 100ರ ವರೆಗೆ. ಸಣ್ಣ ರುದ್ರಾಕ್ಷಿ ಅವರೆಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ಅದಕ್ಕಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು—1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕಾಶಿ ಪೀತಾಂಬರ ಕೆಟಲಾಗಿನೊಡನೆ 3 ಇನಾಮುಗಳು).

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬನಾರಿಸ್ (ಕಾಶೀ)

ಕಡಮೆ ಬೆಲೆ.

ಹೊಸ ಕಂಪೆನಿ. ಗ್ಯಾರಂಟಿ ಮಾಲು.

ಗ್ಯಾರಂಟಿಯಾದ ಹೂವಿನ ಮತ್ತು ತರಕಾರಿ ಬೀಜಗಳು—ಹಣ್ಣಿನ ಗಿಡಗಳು, ಹೂವಿನ ಗಿಡಗಳು, ಹೂವುಗಳು ತರಕಾರಿ ಹಣ್ಣುಗಳು, ಸುಗಂಧ ದ್ರವ್ಯಗಳು ಬೇಕಾದರೆ ನಮ್ಮ ಹೊಸ ಕಂಪೆನಿಗೆ ಬರೆಯಿರಿ—ಕೆಟಲಾಗು ಇನಾಮು.

ಮ್ಯಾನೇಜರ್—ರೋಯಲ್ ಸೀಡ್ ಕಂಪೆನಿ
ನಂ. 27—B. ಸ್ಟ್ರೀಟ್ ಇಲ್‌ಲ್‌ಕೋಲ್,
ಆಲಸೂರು— B. cont.

New Era Technical School.

Near Market Square, Udipi.

Commercial classes-approved by the Madras Government-New session opens in June.

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್
ಸಂತೆಕಟ್ಟೆ, ಉಡುಪಿ.
(ಮದ್ರಾಸು ಸರಕಾರದಿಂದ ಅಂಗೀಕರಿಸಲಾಗಿದೆ.)
ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಿಯಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and inusre against unemployment. Datails may be had on application to the Manager.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
ರಾಶಿ ಅಕ್ಕಿ ...	3—15	4— 4
ಮುಸ್ಸಿ ...	4— 4	4—10
ಗುಡ್ಡ ...	4— 2	4— 6
ಊರ ಅನ್ನಲ್ ಬೆಲ್ಲಿಗೆ ...	4— 0	4—12
ರಂಗೂನು ಬಿ. ಗೋ. ಗಳ್ಳ...	6—10	7— 4
ಎಲ್ಲೂರು ಬೆ. ಮು. ಗಳ್ಳ...	4— 4	4— 8
ಗೋದಿ ಗೋಣಿ ಗಳ್ಳ ...	10— 0	12— 8
ತೊಗರಿ ಗೋಣಿ ಗಳ್ಳ ...	10 —8	11— 0
ಹುರುಳಿ ಗೋಣಿ ಗಳ್ಳ ...	7—10	7 —12
ಕಡಲೆ ಗೋಣಿ ಗಳ್ಳ ...	8 — 0	10— 8
ತೊಗರಿಬೇಳೆ ಗೋಣಿ ಗಳ್ಳ...	10— 0	17— 0
ಉದ್ದು ಗೋಣಿ ಗಳ್ಳ ...	8— 0	8— 8
ಹೆಸರು ಗೋಣಿ ಗಳ್ಳ ...	9— 4	9—12
ಊರುಬೆಲ್ಲ ಖಂಡಿ ಗಳ್ಳ ...	35— 0	37— 8
ಉಪ್ಪು ಗೋಣಿ ಗಳ್ಳ ...	4—12	5— 2
ಕೊಬ್ರಿ ಖಂಡಿ ಗಳ್ಳ ...	48— 0	55— 0
ಕೊಬ್ರಿ ಹಿಂಡಿ ಖಂಡಿ ಗಳ್ಳ...	19— 8	20— 8
ಎಳ್ಳೆಂಡಿ ಖಂಡಿ ಗಳ್ಳ ...	38—12	85— 0
ಕೊಬ್ರಿ ಎಣ್ಣೆ ಮಣ ಗಳ್ಳ...	4—	4— 14
ಎಳ್ಳೆಣ್ಣೆ ಮಣ ಗಳ್ಳ ...	5— 2	6— 0
ಚಿಮಿಣಿಎಣ್ಣೆ ಪೆಟ್ಟಿಗೆ ಗಳ್ಳ...	5— 7	5—7
ಮೋರಿಸ ಸಕ್ಕರೆ ಮ. ಗಳ್ಳ...	3—12	3—13
ಮೆಣಸು ...	4—10	5— 0
ಸಾಸಿವೆ ಮುಡಿ ಗಳ್ಳ ...	5 —12	6— 0
ಕಾಳುಮೆಣಸು ಖ. ಗಳ್ಳ ...	120— 0	180— 0
ಯೇಲಕ್ಕಿ ಮಣ ಗಳ್ಳ ...	23— 0	30— 0
ಗೇರುಬೀಜ ಮು. ಗಳ್ಳ ...	4—14	4 — 14
ಕಬ್ಬಿಣ ಖಂಡಿ ಗಳ್ಳ ...	30— 0	39— 8
ತಾಂಬ್ರತಗಡು ಮ. ಗಳ್ಳ...	9— 6	9— 8
ತಾಂಬ್ರಪಾತ್ರಗಳು ಮ. ಗಳ್ಳ	11— 0	12— 0
ಅಡಿಕೆ ಸೇರು ಗಳ್ಳ ...	14—12	15— 0
ಹಿತ್ತಾಳೆ ತಗಡು ಮ. ಗಳ್ಳ...	8— 12	9— 0
ಹವಸು ಗಳ್ಳ ...	22— 8	23— 0
ಹುಣಸೆ ಹುಳಿ ಖಂಡಿ ಗಳ್ಳ...	20— 0	25— 8
ನೇಟಿವ್ ಕಾಫಿ ಖಂಡಿ ಗಳ್ಳ	165— 0	175— 0
ಫಿಬೇರಿ ಕಾಫಿ ಖಂಡಿ ಗಳ್ಳ...	220— 0	230— 0
ಮಡಿಕೇರಿ ಏಲಕ್ಕಿ ...	23— 0	24— 0
ಸಕಲೇಶಪುರ ಏಲಕ್ಕಿ ...	27— 0	30 — 0

LOOK SHARP! LOOK AHEAD

Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy; Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

Ladies are also admitted.

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to:—

D. R. Murdeshwar,
Dip. Econ; F. R. Econ; S. (Lond.)
Principal.
Ganapathy High School Street,
Mangalore.

Comfortable like an Aeroplane.

Use our swadeshi Mosquitonet for health, Comfort and sound sleep; as if you are in an Aeroplane. Sample cutting free More convenient if some advance sent with order.

L.	B.	H.	Price.	Best.
6 Fit.	3½ Fit.	3½ Fit.	Rs. 1/12	3/8
6 „	4 „	4 „	„ 2/4	3/-
6½ „	4½ „	4½ „	„ 2/8	3/8
7 „	5 „	5 „	„ 3/2	4/10
7½ „	6 „	6 „	„ 4/4	5/12

G. M. Sharma, Post Box F 6706, Calcutta

ಕಣ್ಣಿನ ಪರೆ.

"ಐ—ಸನ್" ಎಂಬ ನೇತ್ರಭಾಸ್ಕರ—ಈ ಔಷಧವು ಕಣ್ಣುಪರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರ ವಾಸಿಯೂ, ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಅವಶ್ಯವಿಲ್ಲ. ಖಾತರಿ ಗುಣಕಾರಿ. ಗುಣವಾಗದಿದ್ದರೆ ಹಣ ವಾಪಸ್. ಕ್ರಯ ರೂ. 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ:—

Hary yasram, Panchpota, Bengal.

ಶಾಲಿವಾಹನ ಶಕ ೧೮೫೭ನೆಯ ಭಾವ ಸಂವತ್ಸರದ ಆಷಾಢ ಶು| ೫ ಶನಿವಾರದಿಂದ ಆಷಾಢ ಶು| ೧೧ ಶುಕ್ರವಾರದ ವರೆಗಿನ ಪಂಚಾಂಗ. (೧೯೩೫ನೇಯ ಮಿಥುನ ಕಾರ್ತೆಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ಶೇರಾ
6	ಶನಿ	೫	೯	ಪುಬ್ಬಾ	೪೧	೨೨	
7	ರವಿ	೬	೧೪	ಉತ್ತರಾ	೪೩	೨೩	
8	ಸೋಮ	೭	೧೮	ಹಸ್ತಾ	೪೭	೨೪	
9	ಕುಜ	೮	೨೨	ಚಿತ್ರಾ	೫೧	೨೫	
10	ಬುಧ	೯	೨೪	ಸ್ವಾತಿ	೫೦	೨೬	
11	ಗುರು	೧೦	೨೫	ಸ್ವಾತಿ	೮	೨೭	
11	ಶುಕ್ರ	೧೧	೨೬	ವಿಶಾಖಾ	೬	೨೮	

ಬಾಹ್ಯ ಪ್ರಪಂಚ ಪರಿಚಯ.

ಫ್ರಾನ್ಸ್.

ಇಂಗ್ಲಾಂಡ್, ಫ್ರಾನ್ಸ್

987ನೇ ಇಸವಿಯಲ್ಲಿ ಹಗ್ ಕೇಪೆಟ್ ಎಂಬವನು ಫ್ರಾನ್ಸಿನ ಅರಸನಾದನು- ಫ್ರಾನ್ಸಿನಲ್ಲಿ ಕ್ರಾಂತಿಯುಂಟಾಗುವ ತನಕ ಅವನು ರಾಜ್ಯವಾಳಿದನು ತನ್ನ ರಾಜ್ಯವನ್ನು ವಿಸ್ತರಿಸಿದನು. ಫ್ರಾನ್ಸಿನ ಕಿರೀಟವನ್ನುಳಿಸಿಕೊಳ್ಳಬೇಕಾದರೆ ಫ್ರೆಂಚರು ಆಗಾಗ್ಗೆ ಯುದ್ಧವನ್ನು ಹೂಡಲೇ ಬೇಕಾಗಿತ್ತು ಕಾರಣ-ಇಂಗ್ಲಾಂಡು ಫ್ರಾನ್ಸಿನ ಮೇಲಿನ ತನ್ನ ಹಕ್ಕು ಬಾಧ್ಯತೆಗಳನ್ನು ಸೂಚಿಸುತ್ತಲೇ ಇತ್ತು. ಇಂಗ್ಲಿಷರು ಫ್ರಾನ್ಸಿನ ಹೆಚ್ಚಿನ ಭೂಭಾಗವನ್ನು ವಶೀಕರಿಸಿಕೊಂಡಿದ್ದರು ಒಂದು ಕಾಲದಲ್ಲಿ ಪೆರಿಸ್ ಸರಕಾರವು ಕೂಡಾ ಅವರ ವಶವಿತ್ತು, ಹೀಗಾಗಿ ಇಂಗ್ಲಾಂಡು ಮತ್ತು ಫ್ರಾನ್ಸ್‌ಗಳೊಳಗೆ ಸದಾ ಸರ್ವದಾ ಯುದ್ಧವು ನಡೆಯುತ್ತಲೇ ಇತ್ತು ವಂಶದ್ವೇಷವಂತೂ ಮರೆಯಲ್ಪಡಲೇ ಇಲ್ಲ. 1558ರಲ್ಲಿ ಫ್ರೆಂಚರು ಕ್ರಾಂತಿಯೆದ್ದು ಕೆಲೈ ನಗರವನ್ನು ಮುತ್ತಿದರು ಆಗ ಇಂಗ್ಲಿಷರು ಸೋತುಹೋದರು

ಫ್ರಾನ್ಸಿನ ಸಂಪತ್ತು

ಎಷ್ಟು ಯುದ್ಧಗಳು ಫ್ರಾನ್ಸಿನಲ್ಲಿ ನಡೆದರೂ ಅದು ಬಡತನಕ್ಕೀಳಿಯಲಿಲ್ಲ ಅಷ್ಟು ಹೇರಳ ಸಂಪತ್ತು ಅದಕ್ಕಿತ್ತು ಫ್ರಾನ್ಸಿನ ಸಿರಿಯ ಬಲದಿಂದಾಗಿ ಅಲ್ಲಿಯ ಅರಸರು ದಿನೇ ದಿನೇ ಶಕ್ತಿವಂತರಾಗಿ ಅನ್ಯ ದೇಶಿಗರನ್ನು ಜಯಿಸುವಷ್ಟು ಸಮರ್ಥರಾಗಿದ್ದರು ಫ್ರಾನ್ಸಿನ ವಸಾಹತುಗಳು, ನಗರಗಳು, ಭೂಮಿಗಳು ದೇಶಗಳು ಹೆಚ್ಚುತ್ತಾ ಹೋದುವು ಒಂದು ಕಾಲದಲ್ಲಿ ಇಡೀ ಯೂರೋಪಿನಲ್ಲಿ ಫ್ರಾನ್ಸು ಮಹಾ ಬಲಶಾಲಿ ರಾಷ್ಟ್ರವಾಗಿದ್ದಿತ ರೋಮನ್ ಕೆಥೊಲಿಕ್ ಮತವನ್ನು ವಿರೋಧಿಸಿ ಲೂಥರನು ಪ್ರಚಾರ ಕಾರ್ಯವನ್ನು ನಡೆಸಿದಾಗ ಅನೇಕಾನೇಕ ಫ್ರೆಂಚ್ ಜನರು ಪ್ರೊಟೆಸ್ಟಾಂಟ ಮತವನ್ನು ಅವಲಂಬಿಸಿದರು ಇದರ ಪರಿಣಾಮವಾಗಿ ಒಂದರ ಹಿಂದೆ ಧರ್ಮ ಯುದ್ಧಗಳು ನಡೆದುವು - ಕೊನೆಗೆ ಪ್ರೊಟೆಸ್ಟಾಂಟರನ್ನು ಫ್ರಾನ್ಸಿನಲ್ಲಿ ನಾಶನಮಾಡಲಾಯಿತು

ಫ್ರೆಂಚರ ಶಕ್ತಿ

ಲೂಯಿಸ್ XIV ನ ಕಾಲದ ಐಶ್ವರ್ಯವು ಎಷ್ಟರವರೆಗೆ ಇತ್ತೆಂದರೆ,—ಜಗತ್ತಿನಲ್ಲಿ ಅವರಿಗೆ ಸಮಾನರಾದ ಸಿರಿವಂತರು ಬೇರಾರೂ ಇರಲಿಲ್ಲ ಹೀಗಿದ್ದುದರಿಂದ ಫ್ರೆಂಚರು ಇಡೀ ಪ್ರಪಂಚವನ್ನೇ ಗೆಲ್ಲುವರೋ ಎಂಬ ಸಂದೇಹವು ತಲೆಯೆತ್ತಿತು ಉತ್ತರ ಅಮೇರಿಕಾದಲ್ಲಿ ಅವರು ದೊಡ್ಡ ದೊಡ್ಡ ರಾಜ್ಯಗಳನ್ನು ಸ್ಥಾಪಿಸಿಕೊಂಡರು. ಸಾಹಿತ್ಯ, ಸಂಗೀತ ಕಲೆಗಳ ಉದ್ಧಾರವಾಯಿತು ಅರಸರ ಅರಮನೆಗಳು ಶ್ರೀಮಂತರ ಬಂಗಲೆಗಳು-ಇವೆಲ್ಲ ಅತ್ಯದ್ಭುತಕರವಾಗಿ ರಚಿಸಲ್ಪಟ್ಟುವು

ಬೊನಪಾರ್ಟ್

ಅರಸರೂ ಶ್ರೀಮಂತರೂ ಸುಖಲೋಲುಪರಾಗಿ ಜೀವನ ನಡೆಸುತ್ತಿದ್ದರು ಸಾಮಾನ್ಯ ಜನರು ಮಾತ್ರ ದರಿದ್ರಾವಸ್ಥೆಯಲ್ಲೇ ಇದ್ದರು ಅವರ ಸಂಕಷ್ಟವು ಅಸಹನೀಯಾವಸ್ಥೆಗೆ ಬಂದಿತು ಆಗ 1789ರಲ್ಲಿ ಮಹಾಕ್ರಾಂತಿಯು ಎದ್ದುಕೊಂಡಿತು. ಚಕ್ರಾಧಿಪತಿಯನ್ನು ಸಿಂಹಾಸನಾಚ್ಯುತನನ್ನಾಗಿ ಮಾಡಲಾಯಿತು. ಅರಸನನ್ನೂ ಮಹಾರಾಜ್ಞಿಯನ್ನೂ ಗಲ್ಲಿಗೇರಿಸಲಾಯಿತು. ಧರ್ಮಗುರುಗಳನ್ನು ದೇಶದ ಹೊರಗಟ್ಟಲಾಯಿತು. ತರುಣ ನೆಪೊಲಿಯನ್ ಬೊನಪಾರ್ಟನು ಪ್ರಜಾಪಕ್ಷೀಯರ ಸೈನ್ಯವನ್ನು ನಡೆಸಿದನು, ಎಲ್ಲರನ್ನೂ ಸೋಲಿಸಿದನು ಅವನೇ ಚಕ್ರಾಧಿಪತಿಯಾದನು ಅವನು ಬಹು ಸಾಹಸಮಯ ಜೀವನವನ್ನು ನಡೆಸಿ ಇತಿಹಾಸ ಪುರುಷಪುಂಗವನಾಗಿಯೂ ಫ್ರಾನ್ಸಿನ ಆರಾಧ್ಯ ವ್ಯಕ್ತಿಯಾಗಿಯೂ ಇದ್ದನು ಕ್ರಮೇಣ ಅವನ ಮೇಲೆ ಬ್ರಿಟಿಷರ ದ್ವೇಷವು ಹೆಚ್ಚಾಯಿತು ಅವರೊಡನೆ ಜರ್ಮನರೂ ಸೇರಿ ರಷ್ಯನರಿಲ್ಲ ದ್ವಿಪಕ್ಷಗಳ ಹೆಣಗಾಟದ ಕಾರಣವಾಗಿ ಬೊನಪಾರ್ಟೆಯು ಪರಾಜಯಗೊಂಡು ಸೈಂಟ್ ಹೆಲಿನಾ ಎಂಬ ದ್ವೀಪದಲ್ಲಿ ಆಶ್ರಯ ಪಡೆದು, ಅಲ್ಲಿಯೇ ಕಾಲವಾದನು.

1848ರಲ್ಲಿ ಪುನಃ ರಾಜ್ಯಾಧಿಕಾರವು ಸ್ಥಾಪನೆಗೊಂಡಿತು. ಆದರೆ ಜನರು ದಂಗೆಯೆದ್ದರು ಅವರು ಪ್ರಜಾಪ್ರಭುತ್ವವನ್ನೇ ಸ್ಥಾಪಿಸಿದರು ಬೊನಪಾರ್ಟೆಯ ಕುಟುಂಬಿಕರಲ್ಲೊಬ್ಬನಾದ ಲೂಯಿಸ್ ನೆಪೋಲಿಯನ ಎಂಬವನನ್ನು ಅಧ್ಯಕ್ಷನನ್ನಾಗಿ ಚುನಾಯಿಸಿದರು. ಅವನು ನೆಪೊಲಿಯನ್ III ಎಂಬಬಿರುದಿನಿಂದ ಮೆರೆದನು 18 ವರ್ಷಗಳ ವರೆಗೆ ಅವನು ಸಾರ್ವಭೌಮನಾಗಿ ಆಳಿದನು

1870ರಲ್ಲಿ ಫ್ರಾನ್ಸ್ ಮತ್ತು ಜರ್ಮನಿಯ ಸಂಯುಕ್ತ ಸಂಸ್ಥಾನಗಳೊಳಗೆ ಯುದ್ಧವು ನಡೆಯಿತು

ಸೈನಿಕ ಜನಾಂಗವಾದ ತಮ್ಮನ್ನು ಯಾವ ರಾಷ್ಟ್ರವೂ ಸೋಲಿಸಲಾರದೆಂದು ಫ್ರೆಂಚರು ತಿಳಿದಿದ್ದರಾದರೂ, ಜರ್ಮನರ ಅವಿಶ್ರಾಂತ ಪರಿಶ್ರಮ ಮತ್ತು ದೂರದೃಷ್ಟಿಯೆದುರು ಅವರ ಅಹಂಭಾವವು ನಿಲ್ಲಲಾರದಾಯಿತು ಫ್ರೆಂಚರು ಜರ್ಮನರಿಂದ ನಿಶ್ಶೇಷವಾಗಿ ಪರಾಜಯಹೊಂದಿದರು ನೆಪೋಲಿಯನನ್ನು ಸಿಂಹಾಸನದಿಂದ ಓಡಿಸಲಾಯಿತು ಪುನಃ ಪ್ರಜಾಪ್ರಭುತ್ವವನ್ನು ಸ್ಥಾಪಿಸಲಾಯಿತು. ಅಲ್ಸೇಸ್ ಮತ್ತು ಲೋರೈನ್ ಎಂಬ ದೊಡ್ಡ ಪ್ರಾಂತ್ಯಗಳನು ಜರ್ಮನರಿಗೆ ಕೊಟ್ಟು ಅವುಗಳೊಡನೆ ಹೇರಳ ಕಪ್ಪ ತೆತ್ತು ಫ್ರಾನ್ಸು ಸಂಧಿ ಹೊಂದಿತು. ಒದಗಿ ಕೊಳ್ಳಬೇಕಾಯಿತು.

1914ರಲ್ಲಿ ಮಹಾಯುದ್ಧವು ಪ್ರಾರಂಭವಾಯಿತು ಫ್ರಾನ್ಸ್ ಮತ್ತು ಜರ್ಮನಿಗಳು ಪುನಃ ಹೋರಾಡಿದುವು ಈ ಸಂದರ್ಭದಲ್ಲಿ ಫ್ರಾನ್ಸಿಗೆ ಗ್ರೇಟ್ ಬ್ರಿಟನ ಸಹಾಯವು ಒದಗಿತು ಫ್ರಾನ್ಸು ಜರ್ಮನಿಯ ಕೈಯಿಂದ ತನ್ನ ಅಂದಿನ ಎರಡ ಪ್ರಾಂತ್ಯಗಳನ್ನು ತೆಗೆದುಕೊಂಡಿತು.

ಫ್ರಾನ್ಸ್ ದೇಶವು ಭೂಲೋಕದಲ್ಲಿನ ಎಲ್ಲಾ ನಗರಗಳಲ್ಲಿ ಅತ್ಯಂತ ರಮಣೀಯವಾದುದೆಂಬ ಹೇಳಿಕೆಯಿದೆ 'ಸುಂದರ ಫ್ರಾನ್ಸ್' ಎಂದೆ ಮೊದಲು ಅದರ ಹೆಸರಿತ್ತು ಫಲವತ್ತಾದ ಭೂಮಿ, ಮನೋಹರವಾದ ಪುಷ್ಪಸಂಕುಲ, ಕಾಲಕ್ರಮವಾಗಿ ಬರುವ ಮಳೆ ಬೆಳೆಯುವ ಬೆಳೆ, ರಮ್ಯ ಸರೋವರಗಳು, ಸಂಪತ್ಸಮೃದ್ಧ ದ್ರಾಕ್ಷಿಯ ತೋಟಗಳು, ಅಮೌಲ್ಯ ಖನಿಜಗಳು ಇವೆಲ್ಲ ಫ್ರಾನ್ಸಿನ ಯೋಗ್ಯತೆಗೆ ಕೀರ್ತಿ ತರುವಂತಹವುಗಳು

ಫ್ರಾನ್ಸ್ ಮತ್ತು ಇಂಗ್ಲಾಂಡು ನೆರೆಹೊರೆಯ ದೇಶಗಳು ಸಪೂರವಾದ ಸರೋವರವು ಮಾತ್ರ ಈ ಎರಡು ದೇಶಗಳನ್ನು ವಿಚ್ಛೇದಿಸಿದೆ ಈ ಸರೋವರದ ಒಂದು ತುದಿಯು ಇಂಗ್ಲಾಂಡಿನಿಂದ ಬರೀ 20 ಮೈಲು ದೂರದಲ್ಲಿದೆ.

ಸಾವಿರಾರು ವರ್ಷಗಳ ಹಿಂದೆ ಇಂಗ್ಲಾಂಡ್ ಮತ್ತು ಫ್ರಾನ್ಸು ಒಮ್ಮೆ ಸೆಣಸಾಡಿಕೊಂಡು, ಒಮ್ಮೆ ರಾಜಿಯಾಗಿಕೊಂಡಿದ್ದುವು. ಈ ಎರಡು ರಾಷ್ಟ್ರಗಳೊಳಗೆ ನಡೆದ ಯುದ್ಧಗಳಿಗೆ ಲೆಕ್ಕವೇ ಇಲ್ಲ ಮಹಾಯುದ್ಧದಲ್ಲಿ ಈ ಎರಡು ದೇಶಗಳೂ ಒಟ್ಟಾಗಿ ಯುದ್ಧಕ್ಕೆ ನಿಂತುವು ಮಹಾಕ್ರಾಂತಿಯ ಸಮಯದಲ್ಲಿ ಫ್ರಾನ್ಸಿನಿಂದ ಹೊರಗಟ್ಟಲ್ಪಟ್ಟ ಧನರು ಇಂಗ್ಲಾಂಡಿನಲ್ಲಿ ವಾಸಿಸಲಾರಂಭಿಸಿದರು ಅಸಂಖ್ಯ ಬ್ರಿಟಿಷರು ಫ್ರಾನ್ಸಿಗೆ ಬಂದು ನೆಲಸಿದರು

ಆಚಾರ ವಿಚಾರ

ಹೀಗಿದ್ದರೂ ಎರಡು ದೇಶಗಳ ಜನರ ಆಚಾರ ವಿಚಾರ ಮತ್ತು ವ್ಯವಹಾರಗಳಲ್ಲಿ ಹೆಚ್ಚಿನ ಭೇದಾಭೇದಗಳಿವೆ ಬ್ರಿಟಿಷರು ಒಂದು ಪಕ್ಷವನ್ನು ಹಿಡಿದರೆ ಫ್ರೆಂಚರು ಇನ್ನೊಂದು ಪಕ್ಷಕ್ಕೆ ನಿಲ್ಲುವರು ಬ್ರಿಟಿಷರ ಭೋಜನ ಕ್ರಮ ಚಹಾ ಸೇವನಾ ಕ್ರಮಗಳನ್ನು ಫ್ರೆಂಚರು ಮೆಚ್ಚುವುದಿಲ್ಲ ಪ್ರತಿಯಾಗಿ, ಬ್ರಿಟಿಷರೂ ಫ್ರೆಂಚರ ಭಕ್ಷ್ಯ ವಸ್ತುಗಳನ್ನು ಕಂಡು ಸ್ವೀಕರಿಸುವುದಿಲ್ಲ ಕಪ್ಪೆಗಳನ್ನೂ, ಕಡುರೆಯ ಮಾಂಸವನ್ನೂ ಫ್ರೆಂಚರು ತಿನ್ನುವುದನ್ನು ನೋಡಿದರೆ ಬ್ರಿಟಿಷರು ಹೇಸುವುದುಂಟು

ಭೇದ

ಚಹಾ ಕುಡಿಯುವ ಅಭ್ಯಾಸವು ಈಗ ಫ್ರೆಂಚರಿಗೂ ತಗಲಿದೆ ಸಂಜೆ ನಾಲ್ಕು ಗಂಟೆಗೆ ಚಹಾ ಕುಡಿಯುವ ಕ್ರಮವು ಫ್ರಾನ್ಸಿನ ನಗರವಾಸಿಗಳಲ್ಲಿ ಹೆಚ್ಚುತ್ತಾ ಇದೆ ಸಂಜೆ 6 ತಾಸಾಗುತ್ತಲೇ ರಾತ್ರಿಯ ಭೋಜನ ಮಾಡುವರು ಫ್ರೆಂಚನೆಂದರೆ ಗಂಭೀರ ಸ್ವಭಾವ, ಚಂಚಲ ಸ್ವಭಾವಿಯಾದ ಬಹು ಸರಳ ಮನಸ್ಸಿನ ಕೋಪಿಯೆಂಬ ಭಾವನೆಯು ಬ್ರಿಟಿಷನಲ್ಲಿ ಮೊದಲಿತ್ತು ಹಾಗೆಯೇ, ಬ್ರಿಟಿಷನೆಂದರೆ ಹೃದಯರಹಿತನೂ ಕಠೋರನೂ ಎಂಬ ಭಾವನೆಯು ಫ್ರೆಂಚನಲ್ಲಿತ್ತು ಬ್ರಿಟಿಷರು ಮಹಾಯುದ್ಧದ ವೇಳೆ ಪರಸ್ಪರ ಭಾವನೆಗಳನ್ನು ತಿಳಿದುಕೊಳ್ಳಲು ಸಮರ್ಥರಾದರು ಫ್ರೆಂಚನು ಮಹಾ ಧೈರ್ಯಶಾಲಿ. ಸಮಯ ನೋಡಿ ಬೇಕುಬೇಕಾದಂತೆ ವಿಜಯಶಾಲಿಯೆನಿಸಿಕೊಂಡು ಕೆಲಸ ಮಾಡುವ ಸಾಹಸವು ಅವನಲ್ಲಿದೆ.

ಫ್ರೆಂಚರ ಧರ್ಮ

ಫ್ರೆಂಚರ ಆಚಾರ ವ್ಯವಹಾರಗಳಿಗೆಲ್ಲ ಕ್ರೈಸ್ತ ಧರ್ಮವೇ ಆಧಾರ ಪ್ರಾಚೀನ ಕಾಲದಿಂದಲೂ ಫ್ರಾನ್ಸು ಕೆಥೋಲಿಕರ ಪ್ರಭಾವಕ್ಕೊಳಗಾದುದರಿಂದಲೂ, ಪ್ರೊಟೆಸ್ಟಾಂಟರನ್ನು ಆವರು ದೇಶದಿಂದ ಹೊರಗಟ್ಟಿದುದರಿಂದಲೂ ಅವರು ಕ್ರೈಸ್ತ ಧರ್ಮಾನುಯಾಯಿಗಳಾಗಿಯೇ ಇರಬೇಕಾಯಿತು.

ಪೆರಿಸ್

ಫ್ರಾನ್ಸಿನ ಪ್ರಧಾನ ನಗರವಾದ ಪೆರಿಸ್ ಒಂದನ್ನು ನೋಡಿದೊಡನೆ, ಫ್ರಾನ್ಸ್ ದೇಶದ ಸೌಂದರ್ಯವಷ್ಟೆಂದು ವ್ಯಕ್ತವಾಗುವುದು. ಅದರ ಸೊಬಗು ಒಂದೇ ಇತರ ನಗರಗಳನ್ನು ನಮ್ಮ ದೃಷ್ಟಿಯಲ್ಲಿ ಅಲ್ಪವೆಂದು ಮಾಡುತ್ತದೆ

ಸೌಂದರ್ಯ

ಸುಖವಿಹಾರಿಗಳಾಗಿ ಹೋಗುವ ಪ್ರಣಯ ಪ್ರಣಯಿನಿಗಳು ಫ್ರಾನ್ಸಿನಲ್ಲೇ ಇಳಿಯುವರ ಸುಖವಿಹಾರಾರ್ಥ ಕರಾವಳಿಯ ಸುತ್ತಲೂ ಆಸನಗಳನ್ನು ರಚಿಸಿದಲಾಗಿದೆ ಟ್ರೂವಿಲ್, ಡೀಪ್‌ಗಳೆಂಬ ವಿಹಾರ ಭೂಮಿಯಲ್ಲಿ ಸಾವಿರಾರು ಜನರು ರಾತ್ರಿಂದಿವ ಸ್ನಾನಿಸುವರು ಮೆಡಿಟರೇನಿಯನ್ ಸಮುದ್ರ ಕರಾವಳಿಯಲ್ಲಿರುವ ನಗರವು ಬಹು ಆನಂದಕರವಾಗಿದೆ ವಸಂತ ಋತುವಿನ ಕಾಲದಲ್ಲಿ ಕೆನ್ಸ್ ಮತ್ತು ನೈಸ್ ಎಂಬ ವಿಹಾರಸ್ಥಾನವು ಸುಖೋಪಭೋಗಿಗಳಾದ ಜನರಿಂದ ತುಂಬಿ ತುಳುಕುತ್ತದೆ ಫ್ರಾನ್ಸಿನ ನಗರಗಳ ಭವ್ಯತೆ ಮತ್ತು ಸೌಂದರ್ಯವು ಬಹು ಪ್ರಶಂಸನೀಯವಾಗಿದೆ ಶಿಲ್ಪಕಲೆ, ವರ್ಣಕಲೆ ಚಿತ್ರಕಲೆಗಳ ಪರಮಾವಧಿಯು ಈ ನಗರಗಳಲ್ಲಿ ಕಂಡುಬರುತ್ತದೆ ರೋಮ್ ಎಂಬಲ್ಲಿರುವ ಗೋಥಿಕ್ ನಮೂನೆಯ ನಗರವು ಪ್ರಪಂಚದಲ್ಲೆಲ್ಲಾ ಪ್ರಸಿದ್ಧಿಯುಳ್ಳದಾಗಿ ನಿಂತಿದೆ ರೋಮ್ ನಗರದಲ್ಲಿ ಸೈಂಟ್ ಜೋನ್ ಒಫ್ ಆರ್ಕಳನ್ನು 500 ವರ್ಷಗಳ ಹಿಂದೆ ಭಸ್ಮೀಕರಿಸಲಾಯಿತು. ಜೋನ್ ಒಫ್ ಆರ್ಕಳ ಹೆಸರ ಫ್ರಾನ್ಸಿನ ಬಾಲವೃದ್ಧರ ನಾಲಿಗೆಯಲ್ಲಿದೆ

ಫ್ರಾನ್ಸಿನಲ್ಲಿ ಎಷ್ಟೋ ಸುಂದರ ಪ್ರದೇಶಗಳಿವೆಯೇ ಅವನ್ನೆಲ್ಲ ಶ್ರೀಮಂತವರ್ಗವು ಆಕ್ರಮಿಸಿಕೊಂಡಿದೆ ಪ್ರತಿಯೊಂದು ಮೂಲೆಯಲ್ಲಿಯೂ ಅವರ ಮನೆಮಠಗಳಿವೆ

KANNADA

Savings Certificates can be cashed even before maturity.

Full Particulars from—

CANARA BANK LTD

OFFICES AT

Bombay—Fort	Mangalore—Bunder,
Bombay—Mandvi,	Mangalore—City,
Hubli	Kasaragod
Calicut,	Puttur,
Cochin,	Buntwal,
Ernakulam,	Karkala,
Alleppey,	Udipi,
Bangalore,	Coondapoor,
Davangere,	&
Chickmagalur,	Gangoli.

AVAILABLE IN DENOMINATIONS OF Rs. 10/ UPWORDS

TOTAL YIELD RS 4-6-0 P. A.

Paid once half yearly at 3½ p a with an additional 1¼% p. a. on maturity If Left To Accumulate

RS. 100/-

Will Amount to

RS. 122-13-6

Estd 1906

CANARA BANK LIMITED.

Subscribed Capital		Paid up Capital
6,00,000		3,31,000
Reserves	Deposits	Working Capital
4,50,000	58,62,000	73,49,000

ಮೈಲುಕಲ್ಲುಗಳೊಡನೆ ಮಾತುಕಥೆಗಳು

ಲೇಖಕರು:—ಶ್ರೀ ಶಿವರಾಮ ಕಾರಂತರು.

ಒಂದು (ದೊಡ್ಡ) ಮಾತು

[ಇದೊಂದು ಹೊಸ ಲೇಖಮಾಲೆ. ಲೇಖಮಾಲೆ ಎನ್ನುವುದಕ್ಕಿಂತ, ಸಂಭಾಷಣೆಗಳ ಸರೆ—ಎನ್ನಬಹುದು ಎಷ್ಟೋ ಸಾರಿ, ನಮಗೆ ಮನುಷ್ಯರೊಡನೆ ಮಾತನಾಡಿ ಬೇಸರವಾಗುವುದುಂಟು; ಇತ್ತ ಮಾತನಾಡುವ ಚಟವು ನಿಲ್ಲುವಂತಿಲ್ಲ. ಮಾತು ಬಲ್ಲವನು ಮಾತನಾಡದೆ ಸುಮ್ಮನೆ ಇರಬಲ್ಲನೇ? ಹಾಗಿದ್ದು ನನ್ನಂಥವನು—ಮಾತನಾಡದೆ ಇರುವುದು ಹೇಗೆ? ಮಾತನಾಡುವುದಕ್ಕೆ ಯಾರೂ ಅಂಜಬೇಕಾಗಿಲ್ಲ, ಮಾತು ಬಂದರಾಯಿತು ಮಾತನಾಡುವ ವಿಷಯವು ಮುಖ್ಯವಲ್ಲ ಮಾತನಾಡುವವರು ನಾವೆಂದ ಬಳಿಕ, ವಿಷಯವನ್ನಾಧರಿಸಿ ಏಕೆ ಮಾತನಾಡಬೇಕು?—ಇದು ಮಾತುಗಾರರ ಮುಂದಿರುವ ಒಂದು ಪ್ರಶ್ನೆ

ನಮ್ಮನ್ನು ಇತರರು ಮಾತನಾಡಿಸುವುದಾದರೂ, ಅವರಿಗೂ ಬಾಯಿ ಬೇಕೆಂದಿಲ್ಲ. ಎಷ್ಟೋ ಬಾರಿ, ಬಾಯಿ ಇರುವವರಿಗಿಂತ ಬಾಯಿ ಇಲ್ಲದವರು ಮಾತನಾಡುವುದು (ನಮ್ಮೂರ ಬಾಯಿಗಳನ್ನು ಬಿಟ್ಟು) ಅಧಿಕ ಇಂಥ ವ್ಯಕ್ತಿಗಳು (ಈ ಶಬ್ದಕೋಶದಲ್ಲಿ ವ್ಯಕ್ತಿತ್ವವಿಲ್ಲವೆಂದು ಜನಸಾಮಾನ್ಯರು ತಿಳಿಯುವ ವಸ್ತುಒಡವೆಗಳೂ ಸೇರಿವೆ) ನಮ್ಮೊಡನೆ ಬೆಳೆಯಿಸುವ ಸಂಭಾಷಣೆಯನ್ನು ಓದುಗರ ಮುಂದೆ ನಿಲ್ಲಿಸೋಣವೆಂಬುದು ನನ್ನ ಆ—ಕಾಂಕ್ಷೆ]

೧. ಮಿ॥ ದುಸ್ತುಬಿನ್

ಮಂಗಳೂರಿನ ಬೀದಿಯೊಂದರಲ್ಲಿ ಒಂದು ದಿವಸ ಬಿರಬಿರನೆ ನಡೆಯುತ್ತಿದ್ದೆ ಬೆಳಗಿನ ಮುಂಜಾನೆ, ಜನಸಂಚಾರವಿದ್ದಿಲ್ಲ. ನಾನೂ ರಸ್ತೆ—ಇಬ್ಬರೇ ಆ ಸಮಯ ಎಚ್ಚರವಿದ್ದವರೆಂದು ತಿಳಿಯಬೇಕು ಏಕಾಗ್ರಚಿತ್ತನಾಗಿ ಯಾವ ವಿಷಯವನ್ನೂ ಯೋಚಿಸದೆ ಹಾದಿ ಸಾಗುತ್ತಿದ್ದ ನನ್ನ ಕಾಲುಗಳು ಒಮ್ಮಿಂದೊಮ್ಮೆಗೇ ತಡೆದು ನಿಂತುವು ನಾನೂ ನಿಂತೆ—ಅದು ಕೇವಲ ನನ್ನ ಕಾಲುಗಳು ನಿಂತುದರಿಂದ ಎಂದು ತಿಳಿಯಬೇಡಿ ಮೊದಲು ನಿಂತುದು—ಮೂಗು ಏನಾಯಿತೋ ಏನೋ ಅದು ನಿಂತಿತು ಯೋಚಿಸಿದೆ—ಬಲು ದುರ್ವಾಸನೆಯೊಂದು ನನ್ನ ಮೂಗನ್ನು ತಡೆದು ಹಿಡಿಯಿತು ಸುತ್ತ ನೋಡಿದೆ ಯಾರೂ ಇದ್ದಿಲ್ಲ ಬಲು ಸೂಕ್ಷ್ಮವಾಗಿ ಕಣ್ಣನ್ನು ಹರಿಸಲು ಬಹು ತಲ್ಲೀನವಾದ ಮಿ॥ ದುಸ್ತುಬೀನು ಕಾಣಿಸಿದನು ಮರದ ಸನ್ಯಾಸಿಯಂತೆ ಕಾವಿ ಬಟ್ಟೆಯನ್ನು ತೊಟ್ಟು ಸಮಾಧಿ ಅವಸ್ಥೆಯಲ್ಲಿ—ಭರತಮಾತೆಯೊಡನೆ ತನ್ಮಯವಾದಂತೆ ಅದು ನಿಂತಿತ್ತು ನನಗೆ ತಡೆಯಲಾರದ ಕೋಪ ಬಂದ. ಈ ಪ್ರಸ್ತಾವ ಪ್ರಾರಂಭವಾಯಿತು ಇವರ ತೀರ್ಮಾನವು ಸ್ವಾಭಾವಿಕವಾಗಿ ವಾಚಕರಿಗೆ ಸೇರಿದಯೆಂದೂ ಕಸದ ಬುಟ್ಟಿಗೆ ಸೇರಿಲ್ಲವೆಂದೂ ಈ ಮೂಲಕ ಸಮೂದಿಸೋಣಾಗಿದೆ

ನಾನು—ಅಲ್ಲವಯ್ಯ, ಇದೇನು! ದಿನಕ್ಕೊಂದು ಜಾಗ ಹಿಡಿಯುತ್ತೀ, ನಿನಗೆ ಗತಿಗೋತ್ರವೇ ಇಲ್ಲವೇ?

ದುಸ್ತುಬಿನ್—ಗತಿ, ಗೋತ್ರ ನನಗೆ! ನನ್ನ ಕಾವಿ ಬಣ್ಣ ನೋಡಿ ಹೀಗೆ ಕೇಳಿದರೆ? ಸನ್ಯಾಸಿ ಸಮಾನನಾದ ನಾನು ಮೂರು ದಿನಕ್ಕೊಮ್ಮೆಯಾದರೂ ಠಾವನ್ನು ಬದಲಿಸಬೇಕೆಂದು ಸ್ಮೃತಿವಚನವಿರುವಾಗ- (ಈ ವಚನ ನನ್ನ ಸ್ಮೃತಿಯಲ್ಲಿರಲಿಲ್ಲ)

ನಾನು-ನೀನೇನು ಅವಹಾಸ್ಯ ಮಾಡುತ್ತೀಯಾ? ಅಲ್ಲ ಮಕ್ಕಳ ಕಾಲಿನ ಫುಟ್‌ಬಾಲಿನಂತೆ ಗಳಿಗೆಗೊಂದು ಕಡೆ, ನೀನು ಸಂಚಾರಕ್ಕೆ ಹೊರಡುತ್ತೀ! ಸ್ನಾನವಿಲ್ಲ—ಸಂಧ್ಯಾವಂದನೆಯಿಲ್ಲ! ಶೌಚವಿಲ್ಲ-ಸುಧಾರಣೆಯಿಲ್ಲ—

(ಆಕಸ್ಮಿಕವಾಗಿ ಪ್ರಾತಃರ್ವಂದನೆಗೆಂಬಂತೆ ದುಸ್ತುಬೀನನು ಅಲ್ಲೇ ಉರುಳಿಬಿದ್ದನು ಅದರೊಳಗಿಂದ ಒಂದು ಮುಸಿಸಿವಳ್ ನಾಯಿಯು ಹೊರಟು ಹೋಯಿತು ನಾತವು (ಸು-ವಲ್ಲ) ಮತ್ತಷ್ಟು ಕೆದರಿತು)

ಅವನು—ನೋಡಿ ನಿಮ್ಮ ಬಾಯಿ! ಸಂಧ್ಯಾವಂದನೆಯ ವಿಚಾರ ಹೇಳುವಾಗ, ಪ್ರಾತಃರ್ವಂದನೆ ಮಾಡುವಸ್ಥಿತಿಯಾಯಿತು

ಈ ಮಾತನ್ನು ಆಡುವಾಗ ಅದು ಕಣ್ಣೀರನ್ನು ಸುರಿಸಿತು ಟಪ್ಪೆಂಬ ಸದ್ದಾಗಿ, ಅದರ ತಗಡು ಬಿರಿದು, ನಾಲ್ಕು (ದಿಕ್ಕುಗಳು ಅಷ್ಟವಿದ್ದಲ್ಲಿ ಅಷ್ಟು ದಿಕ್ಕಿಗೆ) ಒಳಗಿನ ಕರುಳು ಮಾಂಸವೆಲ್ಲಾ ಚೆದರಿದಂತೆ ಚೆದರಿತು

ಈ ಸಮಯದಲ್ಲಿ ಭಗವಾನ್ ಭಾಸ್ಕರನು ಉದಯಿಸಿದನು ಮಧ್ಯ ಬೀದಿಯಲ್ಲಿ ಎದೆಯೊಡೆದು ಬಿದ್ದ ದುಸ್ತುಬೀನು-ಸುತ್ತ ಚೆದರಿದ ಅವನ ಈ ಪಾರ್ಥಿವ ಕಾಯದ ಭಗ್ನಾವಶೇಷಗಳು! ಜನರೂ ಸೇರಿದರು ಅತ್ತಿತ್ತ ಸರಿಯುವವರು, ಮೂಗು ಹಿಡಿದು ಆ ಕರುಣಾಮಯ ದೃಶ್ಯವನ್ನು ನೋಡಲಾರದೆ ಮರಳಿದರು ಒಬ್ಬರೂ ಅದನ್ನು ಎತ್ತಲಿಲ್ಲ! ಸಾಲದುದಕ್ಕೆ-ಸರ್ಕಾರಿ ರಸ್ತೆಯಲ್ಲಿ ಟೂಟುವೇಂಟು ಹಾಕಿದವರು ಜಾರಿಬಿದ್ದರೆ ಜಾರಿ, ಬಿದ್ದುದನ್ನೆ ಕಂಡಷ್ಟುನಗುವಿನಿಂದ ಕಂಡು ಹೋದರು ಅದರಿಂದ ನನ್ನ ಎದೆ ಕರೆಗಿತು (ಈಗ ನನ್ನ ವಶವಿರುವುದು ಬೇರೊಂದು ಗಟ್ಟಿಯಾದ ಎದೆ. ಕರಗಿಹೋದ ಎದೆಯಿಂದ ಈ ಲೇಖ ಬರೆಯಲು ಸಾಧ್ಯವಿಲ್ಲವಷ್ಟೆ)

ನಾನು ನಿಂತು ನೋಡಿದೆ ಮಾತನ್ನು ವಿನಯದಿಂದ ಅಲ್ಲ, ಕರುಣೆಯಿಂದ ಮುಂದರಿಸಿದೆ—

ನಾನು—ಅಪ್ಪಾ, ನಿನ್ನನ್ನು ಸಾಯುವ ಗಳಿಗೆಯಲ್ಲಿ ಹೀಗೆ ಅವಹಾಸ್ಯ ಮಾಡಿದೆನೆಂದು ಕೋಪಿಸಬೇಡ. ಇತರರಷ್ಟು ನೀಚನು ನಾನಲ್ಲ

ಅವನು—(ಮೌನ)

ನನ್ನ ಮಾತುಗಳಿಂದ ಅವನು ಬಲು ನೊಂದಿರುವನೆಂದು ತೋರಿತು ಆಗ ನಾನು ಅವನಿಗೆ ಧೈರ್ಯ ಹುಟ್ಟಲೆಂದು ಕಾಗದ ಪೆನ್ನುಗಳನ್ನು ಹಿಡಿದು "ಅಣ್ಣಾ, ಕೋಪಿಸಬೇಡ ಕೋಪವು ಮಹಾ ಪಾಪವು ನಿನಗಿರುವ ಈ ಕೊನೆಯ ನಾಲ್ಕೋ ಎಂಟೋ (ಮುಂದೆ ಅದು ಎಂಟು ತಿಂಗಳ ತನಕವೂ ಮುಂದರಿಯಿತು ಕಾರಣ ಅದರ ಹೆಣವನ್ನು ಮುನ್ಸಿಪಾಲಿಟಿಯವರು ಸಾಗಿಸಲೇ ಇಲ್ಲ) ಗಳಿಗೆಯೊಳಗೆ ನಿನ್ನ ಆತ್ಮಕಥೆಯನ್ನು ಹೇಳು ಅಲ್ಲ-ನಿನ್ನ ಮೃತ್ಯುವಾಕ್ಯಗಳನ್ನು ಉಸುರು ಜಗತ್ತಿಗೆ ಪ್ರಚುರಪಡಿಸುವೆ" ಎಂದೆ

ಅದು ತುಸು ಶಾಂತಿಯನ್ನು ಪಡೆದುಕೊಂಡು, ಬಲು ದೀನವಾಗಿ ಮಾತನಾಡಿತು "ಈ ತನಕ ಇಷ್ಟು ವಿನಯದಿಂದ, ವಿನಯದಿಂದೇನು, ಕೋಪದಿಂದಲೂ ಸಹ ಮಾತನಾಡಿಸಿದವರಿಲ್ಲ ನೀನೇ ಈ ದಿನ ಮಾತನಾಡಿಸುತ್ತೀಯಾ? ಮನುಷ್ಯರಲಿ ಪ್ರಥಮನು ನೀನು'—ಎಂದು ಅಂದಿತು ನನಗೂ ಅಂಥ ಗೌರವ ದೊರಕಿದುದು ಅದೂ ಪ್ರಥಮ ಬಾರಿಗೆ

ನಾನು—ಅಣ್ಣಾ, 'ನಗೆ ಏನು ಹೇಳಬೇಕೆಂದು ಚೆನ್ನಾಗಿ ತೋರಲಾರದು ನಾನು ಯುಕ್ತವಾದುದನ್ನು ಕೇಳಿದರೆ ಹೇಳುವೆಯಾ?

ಅದು—ಅಯುಕ್ತವಾದುದನ್ನು ತುಂಬಿಸಲು ನನ್ನನ್ನು ಸೃಷ್ಟಿಸಿ (ಎರಡು ಕಣ್ಣೀರು ಮಿಡಿಯಿತು) ಆಗಲಿ

ನಾನು ನಿನ್ನನ್ನು ಈ ನಾಲ್ಕು ವರ್ಷಗಳಿಂದ ನೋಡುತ್ತಿದ್ದೇನೆ

ಅದು—ಅಲ್ಲ ನಾನು ಹುಟ್ಟಿ ಇದಿಗೆ ಆರು ವರ್ಷಗಳಾದುವು ಈ ಬೀದಿಗೆ ಬಂದ ಬಳಿಕವೆ ವರ್ಷಗಳಾದುವು

ನಾನು ಅದೇ ಬಲು ದೀರ್ಘ ಸಮಯದಿಂದ ನೋಡುತ್ತಿದ್ದೇನೆ ಆದರೆ ದಿನಕ್ಕೆ ಒಂದೊಂದು ಕಡೆ ನೀನು ಕಾಣಿಸಲು ಕಾರಣವೆ ನು? ನ? ಸ್ಥಾನಗಳಲ್ಲಿ ಇದರೂ ಬಹಳ ಸಂತೋಷವೇಯಾ ಕೊ ಸಬೇಡ.

ಅವನು ಇದು ನನ್ನ ತಪ್ಪಲ್ಲ ನಾನು ಬಂದವನು ಒಂದು ಮನೆಯ ಗೇಟಿನ ಎದುರಿಗೆ ಸ್ಥಾಪಿತನಾದೆ ಆದರೆ ಒಹಳ ದಿವಸವಾದರೂ ನನ್ನನ್ನು ಮಾತನಾಡಿಸಿದವರಿಲ್ಲ ಶಾಲೆಯ ಹುಡುಗರೆಲ್ಲ ಕಲ್ಲೆಸೆದ ನನ್ನ ಬೆನ್ನು ಕೀಲನ್ನೆ ಮುರಿಯತೊಡಗಿದರು ರಾಯರ ಮನೆಯವರು ನನ್ನ ಸುತ್ತು ಕಶ್ಮಲ ಸುರಿಯುತ್ತಿದ್ದರು ಅದನ್ನು ಕಂಡು, ಯಾರೋ ನನ್ನನ್ನು ಎರಡನೇ ರಾಯರ ಮನೆಯ ಎದುರು ಇರಿಸಿದರು ಒಂದು ದಿನ ಮುಂಜಾನೆ ಒಂದು ಹೋಗಸು ಒಂದು ಒಂದು ಕೋಲಿನಿಂದ ನನ್ನನ್ನು ತಳ್ಳಿ ಉರುಳಿಸಿ, ನೆರೆಮನೆಯ ಎದುರು ಕೆಡೆದಳು ಅಲ್ಲಿ ಸ್ಥಾಪಿತನಾದೆ ಆ ಮನೆಯವರು ಮೂಗು ಮುಚ್ಚಿಕೊಂಡು ಇನ್ನೊಂದು ಮನೆಗೆ ನನ್ನನ್ನುರುಳಿಸಿದರು—ಆದರೆ ನನ್ನ ತಪ್ಪು ಅದರಲ್ಲಿಲ್ಲ ನಾನು ನಾರುವೆನೆಂದು ಅವರು ಹೇಳಿದರೂ, ಅವರ ಹಿತ್ತಿಲ ಬಾಗಿಲು ನಾರಿದಷ್ಟು ನಾನು ನಾರಲಿಲ್ಲ

ನಾನು—ನಿನ್ನ ಆರೋಪ ಈ ಮನೆಯವರ ಮೇಲೆಯೇ ಏನು?

ಅವನು—ಆರೋಪವೇನು! ನಾನು ಮುನ್ಸಿಪಾಲ್ ಕೋಟಿಗಳ ಅನಾದರಕ್ಕೆ ಪಾತ್ರನಾದೆ! ಹಾದಿಯಲ್ಲಿ ಬಿದ್ದ ಕಸಕಡ್ಡಿಗಳನ್ನು ಒಯ್ಯಲೂ, ಬಲುದಿನ, ನನ್ನ ಬಳಿಗೆ ಬಂದವರಿಲ್ಲ ಏಕೆ ಬಲ್ಲಿರಾ? ಅವರಿಗೆ ನನ್ನನ್ನು ಮುಟ್ಟಲು ನಾಚಿಕೆಯಂತೆ ಈ ಕೇರಿಯ ಮನೆಯ ಮಡದಿಯರು, ನನ್ನನ್ನು ಮನೆಯ ಹಿಂದಿನ ಮನೆಯಾಗಿ ತಿಳಿದರು ಇನ್ನೇನು ಮಾನವುಳಿಯಿತು ನನಗೆ!

ನಾನು—ನಿನ್ನನ್ನು ಯಾರೂ ಮಾತನಾಡಿಸಲಿಲ್ಲವೆ?

ಅವನು—ಹಾಗೆಂದರೆ ಅನ್ಯಾಯ ಈಗ ನನ್ನ ಗರ್ಭ ಸೀಳಿ ಹೋದ ನಾಯಿಯೊಂದು, ಅನವರತವೂ ನನ್ನ ಆಶ್ರಯದಲ್ಲಿ ಬೆಳೆದುದು ಹೆಚ್ಚೇನು—ರಾಯರ ಮನೆಯವರಲ್ಲಿ ಒಂದು ನಾಯಿ ಮರಿ ಹಾಕಿತು ಅವರಿಗೆ ಮರಿಗಳನ್ನು ಕೊಲ್ಲಲು ಕೈಬರಲಿಲ್ಲ ಅದರಲ್ಲಿ ಒಂದು, ಹೆಣ್ಣುಮರಿಯೆಂದು ನನಗೆ ಒಪ್ಪಿಸಿದರು ಅಲ್ಲಿಂದ ಅದರ ಸಂಸಾರವನ್ನು ಸಾಕಿದವನೇ ನಾನು!

ನಾನು—ಅಷ್ಟು ಮಾಡಿದ ನಿನಗೇ ಅದು ಇಂದು ಮೃತ್ಯುವಾಯಿತೇ?

ಅವನು—ಅದರ ತಪ್ಪೇನು ಪಾಪ, ನನ್ನ ಸಾಯುವ ಗಳಿಗೆ ಬಂದಿತು ಇಂದು ಅತಿ ವ್ಯಥೆಯಿಂದ ನನ್ನ ಹೊಟ್ಟೆ ಬಿರಿಯಿತು

ನಾನು—ಅಂಥ ಮಹಾವ್ಯಥೆಯಿಂದ ಈ ಮಹಾ ಮರಣವಾಯಿತೇ?

ಅವನು—ಅಹುದು, ಮಹಾ!—ಅಲ್ಲಿ ನೋಡಿ..

ಅಷ್ಟರಲ್ಲಿ ಹಿಂದೆ ಹೊರಟು ಹೋದ ಸದರಿ ಹೆಣ್ಣು ನಾಯಿಯು ಬಂದು, ಅಲ್ಲಿ ಬಿದ್ದ ರೊಚ್ಚೆಯನ್ನು ಕೆದರಿ ಏನನ್ನೋ ತಿನ್ನತೊಡಗಿತು!

ನಾನು—ಅಯ್ಯೋ, ಪಾಪಿ ನಾಯಿಯೇ!

ಅವನು—ಅದನ್ನು ಬೈಯ್ಯಬೇಡ ಅದಕ್ಕಿಲ್ಲಯ ಪಾಪ! ಅದು ಪಾಪ ಹರಿಸುತ್ತಿದೆ!

ನನಗೆ ಈ ಮಾತು ತಿಳಿಯದೆ ಹೋಯಿತು ಮೂಕನಂತೆ ಆ ನಾಯಿಯನ್ನು ನೋಡಿದೆ ಆ ನಾಯಿಯು ಏನನ್ನೋ ಅಲ್ಲಿಂದ ಎತ್ತಿಕೊಂಡು ಓಡಿತು ನನಗೆ ಆತುರವಾಗಿ ನಾನೂ ಹಿಂಬಾಲಿಸಿದೆ ಅದರ ದಾರಿಯನ್ನು ನೋಡಿದೆ ಇನ್ನೊಂದು ದುಸ್ತುಬೀನಿನ ಬಳಿಗೆ ಹೋಗಿ ಬಿಡಾರ ನಿಶ್ಚಯ ಮಾಡಿ ಅದು ಬಂದಿತ್ತಷ್ಟೆ. ಅಲ್ಲಿಗೆ ಈ ವಸ್ತುವನ್ನು ಹೊತ್ತುಕೊಂಡು ಹೋದುದು ಹೋಗಿ ನೋಡಿದರೆ—ಒಂದು ಕೈ! ಅದಕ್ಕೆ ಐದು ಬೆರಳು! ನಾಯಿಯ ಕೈಯಲ್ಲ! ಗಾಬರಿಗೊಂಡು ನಾನು ಬಂದೆ—ತಿರುಗಿ ಕೈಯಾಗಲಿರುವ ದುಸ್ತುಬೀನಿನಲ್ಲಿಗೇನೆ ಬಂದೆ!

ನಾನು—ಇದರ ಗೂಢವೇನು?

ಅವನು—ಅಷ್ಟು ಮೂರ್ಖನೇ ನೀನು? (ನಾನು ನೊಂದೆ) ಇದು ನನ್ನ ಇತಿಹಾಸದಲ್ಲಿ ನಾಲ್ಕನೆಯ ಬಾರಿಗೆ ಆದುದು!

ನಾನು—ಇದು—ಎಂದರೆ?

ಅವನು—ಅದನ್ನು ನೋಡಿಲ್ಲವೇ? ಕೈಯನ್ನು ಈ ಬೀದಿಯಲ್ಲಿ ಇನ್ನೊಂದು ರಾಯರ ಮನೆಯಿದೆ ಅಲ್ಲಿನ ದಾಸಿ ನಿತ್ಯವೂ ನನ್ನನ್ನು ಉಪಚರಿಸುತ್ತಿದ್ದಳು ನಿನ್ನೆ ರಾತ್ರಿ, ಕಸತರುವ ಬದಲು ಇದನ್ನು ತಂದು ದಬಕ್ಕನೆ ಸುರಿದಳು! ಮಳೆ ಬರುತ್ತಿತ್ತು ಮಗು ಕೂಗಿತು ತುಸು ಹೊತ್ತು ಅನಂತರ ಈಗ ಓಡಿಹೋದ ನಾಯಿಯು ಅದನ್ನು ತನ್ನ ಹೊಟ್ಟೆಯಲ್ಲಿ ಇರಿಸಿಕೊಂಡಿತು ನಿನ್ನೆ ಒತ್ತ ಕೆಲಸದ ಎಡೆಯಲ್ಲಿ ಈ ಮೆಟರ್ನಿಟಿ ಆಸ್ಪತ್ರೆ ಕೆಲಸವನ್ನು ಮಾಡುತ್ತಿದ್ದೇನೆ!

ನನಗೆ ಬಹಳ ಮರುಕವಾಯಿತು ಮೌನವಾಗಿ ನಿಂತಿದ್ದೆ ಮಾತನಾಡುವ ಸಾಹಸ ಬರಲಿಲ್ಲ ಅಷ್ಟರಲ್ಲಿ ಆ ನಾಯಿಯು ತಿರುಗಿ ಬಂದಿತು ರೊಚ್ಚೆಯನ್ನು ಕೆದರಿ, ಅಲ್ಲಿಂದೊಂದು ತೀರ ಹೊಸ ಬೂಟನ್ನು (ಬೂಟ್ಸಲ್ಲ ಏಕವಚನದ ಬೂಟು) ಒಯ್ಯಿತು ನನ್ನ ಆಶ್ಚರ್ಯ ಹೆಚ್ಚಿತು, ಅಷ್ಟು ಚಿಕ್ಕ ಮಗುವಿನ ಕಾಲಿಗೆ, ಇಂಥ ದೊಡ್ಡ, ಇಂಥ ಹೊಸ ಬೂಟು ಹೇಗೆ ಬ ದಿತೆಂದು! ಅವನಿಗೆ ನನ್ನ ಮನಸ್ಸಿನಲ್ಲಿ ಸಂಚರಿಸುತ್ತಿದ್ದ ಪ್ರಶ್ನೆ ತಿಳಿಯಿತೋ ಏನೋ—

ಅವನು—ಅದನ್ನೇನು ನೋಡುವೆ? ಇಲ್ಲಿಯ ತನಕ ಜೀರ್ಣವಾದ ಪಾಪಾಸುಗಳೆಲ್ಲ ನನಗೇ ಬರುತ್ತಿದ್ದುವು ನಾಲ್ಕು ದಿನಗಳ ಕೆಳಗೆ ಒಂದು ಜತೆ ಹೊಸ ಬೂಟ್ಸು ಬಂದಿತು!

ನಾನು ಬ ದಿತು!

ಅವನು—ಬಂದಿತು—ಎಂದರೆ ಬರಬೇಕಾಗಿ ಬಂದಿತು

ಪ್ರೋಮೋನಿನವನಂತೆ—ಒಬ್ಬ ಹಳ್ಳಿಯ ಹುಡುಗ ಬಂದಿದ್ದ ಮೈದಾನಿಗೆ ಹೋಗಿ ಒಂದು ಜತೆ ಹೊಸ ಬೂಟನ್ನು ಖರೀದಿ ಮಾಡಿದನಂತೆ ಇಲ್ಲಿಗ ಅವನ್ನು ಮೆಟ್ಟಿಕೊಂಡು ಬರುವಾಗ ಒಂದೆರಡು ತಾಸು ಸಹ ಆಗಿರಲಿಲ್ಲ. ಅದನ್ನು ಹಾಕಿಕೊಂಡು ಅಲ್ಲಿ ಎಳೆದುಕೊಂಡು ಬಂದನು! ಕಳಚಿದನು ಕಾಲು ತುಂಬ ಬೊಕ್ಕೆಯಾಗಿತ್ತು ನಿಂತುಕೊಂಡಿರುವಾಗ—ಒಬ್ಬ ಹುಡುಗ ಅಲ್ಲಿಗೆ ಬಂದು "ವರ್ತಮಾನ ಪತ್ರ ಬೇಕೆ?"—ಎಂದು ಅವನನ್ನು ಕೇಳಿದ! ಯಾವ ಪತ್ರ, ಏನು ಎಂದು ವಿಚಾರಿಸದೆ ಈ ಹುಡುಗನು ಕೊಂಡುಕೊಂಡ!

ಅವನ ರೀತಿ ನೋಡಿದರೆ, ನನಗೆ ತಿಳಿದಷ್ಟು ಬರಹವೂ ಅವನಿಗೆ ತಿಳಿದಿರಲಿಲ್ಲವೆಂಬುದು ಖಂಡಿತ

ನಾನು—ಹಾಗಾದರೆ ಅದನ್ನೇಕೆ ತೆಗೆದುಕೊಂಡನು?

ಅವನು—ಏಕೆಂದರೆ-ತನ್ನ ಬೂಟ್ಸಿನ ಗೌರವ ಕಾಪಾಡಲು. ಹಾಗೆ, ಅದರಲ್ಲಿ ಸುತ್ತಿ—ಕಂಕುಳಲ್ಲಿರಿಸಿ ಹೊರಟೇ ಹೋದನು ಅದೇ ಸಂಜೆ ತಿರುಗಿ ನನ್ನ ಮಾರ್ಗವಾಗಿ ಬಂದನು! ಅದನ್ನು ಬಿಡಿಸಿ, ಕಾಲಿಗೆ ಇರಿಸಿಕೊಳ್ಳುವ ಎಂಬ ಗಳಿಗೆಯಲ್ಲಿ ಯಾರೋ—ಎದುರಾದುದನ್ನು ಕಂಡು, ಕಳ್ಳರಂತೆ ಅಂಜಿದನು ಒಮ್ಮೆಗೇ ಏನು ತೋಚಿತೋ—ಏನೋ, ಅವೆರಡನ್ನು ಕಳಚಿ ನನ್ನ ವಶ ಒಪ್ಪಿಸಿ, ಮುಂದರಿದನು. ತಿರುಗಿ ಆ ಹುಡುಗ ನನ್ನಲ್ಲಿ ಬರಲಿಲ್ಲ! ಅವನ ರೀತಿ ನೋಡಿ ನನಗೇ ಬೆರಗಾಯಿತು

ನಾನು—ನನಗೂ ಬೆರಗಾಗುತ್ತಿದೆ

(೧೪ನೇ ಪುಟಕ್ಕೆ ಮುಂದುವರಿದುದು)

ಕಣ್ಣಿಲ್ಲದಿದ್ದರೂ ನೋಡುವ ಭಾರತೀಯನಿರುವನು!

ಹಿಂದೆ ಓಡಿಸಿದರು.

ಲಾಹೋರಿನ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಮೌಲಾನಾ ಹಬಿಬುರ್ ರಹಿಮಾನ್ ಹುದಿಯನ್ವಿ ಎಂಬವರ ಮೇಲೆ ಒಂದು ಕಟ್ಟಪ್ಪಣೆ ಹೊರಡಿಸಿ ಶಿಖಾಪುರದಲ್ಲಿ ಜರಗಲಿರುವ ಮಜಲಿ ಅಹರಾರ್—ಎ—ಹಿಂದ್ ಪರಿಷತ್ತಿನ ಅಧ್ಯಕ್ಷತೆ ವಹಿಸುವುದಕ್ಕಾಗಿ ಅವರು ಅತ್ತ ತೆರಳಬಾರದೆಂದೂ, ಅವರು ಈಗ ಇಳಿದಿರುವ ಮುಜಫ್ಫರು ನಗರವನ್ನು ಒಡನೆ ಬಿಟ್ಟು ಹಿಂತೆರಳಬೇಕೆಂದೂ ಆಜ್ಞಾಪಿಸಿದರು. ಅದೇ ಮೇರೆಗೆ ಮೌಲಾನಾರವರು ಹಿಂದೆ ಬಂದರು. ಪರಿಷತ್ತಿನ ಸ್ವಾಗತಸಮಿತಿಯವರು ನಿಷೇಧಸೂಚನೆ ಮಾಡಿರುವರು. ಮೌಲಾನರು ತನ್ನ ಅಧ್ಯಕ್ಷ ಭಾಷಣದಲ್ಲಿ ಕರಾಚಿಯ ಗುಂಡೆಸೆತದ ಕುರಿತಾಗಿ ಭಾಷಣಮಾಡಬಾರದೆಂದು ಸರಕಾರವು ಹೀಗೆ ಮಾಡಿತೆಂದು ತಿಳಿದುಬಂದಿದೆ.

ಇಪ್ಪತ್ತನಾಲ್ಕು ಮನೆಗಳು ಬಸ್ಮ!

ಮದುರೆಯಿಂದ ಒಂಭತ್ತು ಮೈಲು ದೂರದಲ್ಲಿರುವ ಇಲುಪ್ಪಕುಡಿ ಎಂಬಲ್ಲಿ ಮೊಂಡಮುನ್ ಕುಡುಂಬನ್ ಎಂಬವನ ಮನೆಯಲ್ಲಿ ಬೆಂಕಿಯೆದ್ದು, ಗಾಳಿಯು ಓಟದಿಂದಾಗಿ ವಿಸ್ತಾರವಾಗಿ ಹರಡಿ ೨೪ ಮನೆಗಳನ್ನು ಆಹುತಿಯಾಗಿ ನಡೆಯಿತು. ಪ್ರಾಣನಾಶಕವಾಗಿರ ವುದಿಲ್ಲ. ನೂರಾರು ಜನರು ನಿರ್ಗತಿಕರಾಗಿರುವರು.

ಅಖಿಳಭಾರತ ಕೊಂಗ್ರೆಸ್ ಕಮಿಟಿ.

ಅಲ್ಲಹಾಬಾದಿನಲ್ಲಿ ಜುಲೈ ೩ ಗಳಲ್ಲಿ ಅಖಿಳಭಾರತ ಕೊಂಗ್ರೆಸ್ ಕಮಿಟಿ ಸಭೆಯು ಜರಗುವುದೆಂದು ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ಸರಿಯಲ್ಲವೆಂದೂ, ಅದು ಜುಲೈಯಲ್ಲಿ ಜರಗುವುದು ಸಂಭವನೀಯವಾದರೂ ತಾರೀಕನ್ನು ನಿಷ್ಕರ್ಷಿಸಿರುವುದಿಲ್ಲವೆಂದೂ ತಿಳಿಸಲಾಗಿದೆ.

ಕಣ್ಣಿಲ್ಲದಿದ್ದರೂ ನೋಡುವ ಭಾರತೀಯನಿರುವನು!

ಕಾಶ್ಮೀರದ ವಿ ಕುರ್ಬಾನ್ ಎಂಬ ೨೯ ವರ್ಷ ಪ್ರಾಯದ ಯುವಕನೊಬ್ಬನು ಈಗ ಲಂಡನಿನಲ್ಲಿರುವನು. ಎಷ್ಟು ದಪ್ಪವಾದ ಹಲಿಗೆಗಳನ್ನು, ಕಬ್ಬಿಣದ ತಗಡನ್ನು ಅವನ ಕಣ್ಣಿಗೆ ಕಟ್ಟಿದರೂ ಎದುರಿರುವ ಪುಸ್ತಕಗಳನ್ನು ಓದುವನು. ಚಿತ್ರಗಳ ವರ್ಣನೆಯನ್ನು ಮಾಡುವನು. ಜನರ ಪರಿಚಯವನ್ನು ಹೇಳುವನು. ಲೇಟಿನ್ ತಿಳಿಯದಿದ್ದರೂ, ಹಲಿಗೆಯ ಮೇಲೆ ಬರೆಯಲ್ಪಡುವ ಅಕ್ಷರಗಳನ್ನು ಹಾಗೆಯೇ ಪ್ರತಿ ನಕಲಿಸುವನು. ಸೀಲ್ ಹಾಕಿಡಲ್ಪಟ್ಟ ಗ್ರಂಥವೊಂದನ್ನು ಅವನ ಕೈಗೆ ಕೊಡಲಾಗಿ ಅವನದನ್ನು ನಿರರ್ಗಳವಾಗಿ ಓದಿಬಿಟ್ಟನು. ಚಿತ್ತೈಕಾಗ್ರತೆಯೇ ತನ್ನ ಈ ಶಕ್ತಿಗೆ ಕಾರಣವೆಂದು ಅವನು ಹೇಳುತ್ತಿರುವನು. ಲಂಡನಿನ ಡಾಕ್ಟರರೆಲ್ಲ ಕಣ್ಣು ಬಾಯಿಬಿಡುತ್ತಿರುವರು.

ಕ್ವೆಟ್ಟಾ ಭೂಕಂಪದ ಪರಿಣಾಮ

ದಿಲ್ಲಿಯ 'ತಾಜ್' ಎಂಬ ಪತ್ರಿಕೆಯ ಪ್ರಕಾಶಕರಾದ ಶ್ರೀ ಧರ್ಮಪಾಲ ಗುಪ್ತರೆಂಬವರು ತನ್ನ ಪತ್ರಿಕೆಯಲ್ಲಿ ಕ್ವೆಟ್ಟಾದಲ್ಲಿನ ಅಧಿಕಾರಿಗಳ ಕುರಿತಾಗಿ ಟೀಕಿಸಿ ಬರೆದುದಕ್ಕಾಗಿ ೧೦೦೦ ರೂಪಾಯಿಗಳನ್ನು ಸರಕಾರವು ವಶೀಕರಿಸಿಕೊಂಡಿತು. ಅಲ್ಲಿಯ 'ಕುಮಿಗಜೆಟ್' ಪತ್ರಿಕೆಯಲ್ಲೂ ಈ ವಿಷಯಕವಾದ ಟೀಕೆಯನ್ನು ಬರೆದುದಕ್ಕಾಗಿ ಜುಲಾಯಿ ೭ನೇ ತಾರೀಕಿನೊಳಗೆ ೧೦೦೦ ರೂಪಾಯಿಗಳ ಭದ್ರತೆಯನ್ನು ಕೊಡಬೇಕಾಗಿ ಕೇಳಿಕೊಳ್ಳಲಾಗಿದೆ.

ಲಂಡನಿನಿಂದ ಪೂನಕ್ಕೆ ಮೋಟರ್ ಸಂಚಾರ.

ಮಿ। ಎಚ್ ಕೆ ಭಾರ್ಗವಾಲೆ ಎಂಬ ಪೂನದ ಬೇರಿಸ್ಟರರೊಬ್ಬರು ೨೪ ದಿನ ೩ ತಾಸುಗಳೊಳಗೆ ಲಂಡನಿನಿಂದ ಪೂನಕ್ಕೆ ತನ್ನ ಮೋಟರಿನಲ್ಲಿ ಸಂಚರಿಸಿ ಪೂನಕ್ಕೆ ಬಂದಿರುವರು. ಎಪ್ರಿಲ್ ೨ನೇ ದಿನ ಇವರು ಲಂಡನಿಗೆ ತೆರಳಿದರು. ಮೇ ೧೦ರಲ್ಲಿ ಲಂಡನಿಗೆ ತಲಪಿದರು. ತುರ್ಕಿಯ ಗಡಿಪ್ರಾಂತ್ಯದಲ್ಲಿ ಇವರನ್ನು ೯ ದಿನಗಳ ವರೆಗೆ ತಡೆದು ನಿಲ್ಲಿಸಲಾಯಿತು. ಎಲ್ಲಾ ಸರಕಾರಗಳು ತನಗೆ ಸೌಲಭ್ಯವನ್ನು ಒದಗಿಸಿ ಕೊಟ್ಟುವೆಂದೂ, ಹಂಗೇರಿಯಾದ ಮಾರ್ಗಗಳು ಬಹು ಸುಗಮವೆಂದೂ, ಮತ್ತು ಬಲೂಚಿಸ್ಥಾನದ ಮಾರ್ಗಗಳು ಬಹು ದುರ್ಗಮವೆಂದೂ ಇವರು ಹೇಳಿದರು. ಮನುಷ್ಯ ಮತ್ತು ಯಂತ್ರಗಳ ಶಕ್ತಿಪರೀಕ್ಷೆಯೇ ಇವರ ಸಂಚಾರದ ಉದ್ದೇಶ.

ಪೇಶಾವರದಲ್ಲಿನ ನಿರ್ಗತಿಕರಿಗೆ ಸಹಾಯ.

ಮೊನ್ನೆ ಪೇಶಾವರದಲ್ಲಿ ಎದ್ದ ಬೆಂಕಿಯಿಂದಾಗಿ ನಿರ್ಗತಿಕರಾದ ಸಾವಿರಾರು ಜನರನ್ನು ರಕ್ಷಿಸಬೇಕೆಂದು ಪೇಶಾವರ ಮುನಿಸಿಪಾಲಿಟಿಯು ನಿರ್ಧರಿಸಿರುತ್ತದೆ. ೨ ಲಕ್ಷ ರೂಪಾಯಿಗಳನ್ನು ಸಾಲರೂಪವಾಗಿ ಜನರಿಗೆ ಕೊಟ್ಟು ಅವರ ಮನೆಗಳನ್ನು ಕಟ್ಟಿಸಬೇಕೆಂದು ನಿಶ್ಚಯಿಸಿದ್ದಾರೆ. ಸರಕಾರವು ೫ ಲಕ್ಷ ರೂಪಾಯಿಗಳ ದಾನವನ್ನು ಮಾಡಬೇಕೆಂದು ಕೇಳಿಕೊಳ್ಳಲಾಗಿದೆ. ... ಲಕ್ಷ ರೂಪಾಯಿಗಳನ್ನು ... ಪೇಶಾವರದ ... ಶಾಲೆಗಳನ್ನು ... ನಿರ್ಗತಿಕರನ್ನು ಈ ಶಾಲೆಗಳಲ್ಲಿ ರಕ್ಷಿಸಲಾಗುತ್ತದೆ.

ವಿದ್ಯಾರ್ಥಿಗಳ ಆಗ್ರಹ.

ಹೈದರಾಬಾದಿನ ಉಸ್ಮಾನಿಯಾ ಯುನಿವರ್ಸಿಟಿಯಲ್ಲಿ ... ವಿದ್ಯಾರ್ಥಿಗಳು ... ಕೊಟ್ಟ ಉತ್ತರದ ಪತ್ರಗಳನ್ನು ಪುನಃ ಪರೀಕ್ಷಿಸಬೇಕೆಂದು ... ತಮ್ಮ ಉತ್ತರಗಳಿಗೆ ಸರಿಯಾದ ಬೆಲೆಯು ದೊರೆತಿರುವುದಿಲ್ಲವೆಂದು ಹೇಳುತ್ತಿರುವರು.

೧೦೦೦ ರೂಪಾಯಿ ವಶವಾಯಿತು

ಮುಂಬಯಿಯ ವೆಂಕಟೇಶ್ವರ ಸ್ಟೇಂಡಾರ್ಡ್ ಎಂಬ ಪತ್ರಿಕೆಯು ಕ್ವೆಟ್ಟಾದಲ್ಲಿನ ಸರಕಾರದ ವರ್ತನೆಯನ್ನು ಟೀಕಿಸಿ ಬರೆದ ಲೇಖನವು ಇಂಡಿಯನ್ ಪ್ರೆಸ್ ಎಮರ್ಜೆನ್ಸಿ ಪವರ್ ಶಾಸನಕ್ಕೆ ಅನ್ವಯಿಸುತ್ತದಾದುದರಿಂದ ಮುಂಬಯಿ ಸರಕಾರವು ಆ ಪತ್ರಿಕೆಯ ೧೦೦೦ ರೂಪಾಯಿ ಭದ್ರತೆಯನ್ನು ವಶೀಕರಿಸಿಕೊಂಡಿದೆ.

ಬಂಗಾಳದಲ್ಲಿನ ದಂಡನೀತಿ.

ಬಂಗಾಳದಲ್ಲಿನ ಸರಕಾರದ ದಂಡನೀತಿಯ ಕುರಿತಾಗಿ ವಿಚಾರಿಸಿಕೊಳ್ಳುವುದಕ್ಕಾಗಿ ಎಸೆಂಬ್ಲಿ ಮೆಂಬರರು ಒಂದು ಸಮಿತಿಯನ್ನೇ ರಚಿಸಿರುವರು. ಸಮಿತಿಗೆ ಸರಕಾರವೂ ಕೂಡಾ ಸಹಾಯಮಾಡಬೇಕಾಗಿ ಕಮಿಟಿಯ ಪರವಾಗಿ ಶ್ರೀ ಮೋಹನ್‌ಲಾಲ್ ಸಕ್ಸೇನರವರು ಕೇಳಿಕೊಂಡದಕ್ಕೆ ಬಂಗಾಳ ಸರಕಾರದ ಚೀಫ್ ಸೆಕ್ರೆಟರಿಯವರು ತನ್ನ ಸಹಕಾರವನ್ನು ನಿರಾಕರಿಸಿ ಪತ್ರ ಬರೆದಿರುವರು.

ಲೋರಿಯು ಅಡಿಮೇಲಾಗಿ ಬಿತ್ತು

ದಿಲ್ಲಿಯಲ್ಲಿ ದಿಬ್ಬಣಿಗರ ಒಂದು ಲೋರಿಯು ಅತಿ ವೇಗದಿಂದ ಮಾರ್ಗದ ಮೇಲೆ ಓಡುತ್ತಿದ್ದಾಗ ಲೋರಿಯ ಒಂದು ಚಕ್ರದ ಗಾಳಿಯು ಫಕ್ಕನೆ ಹೋಗಿಬಿಟ್ಟು ಲೋರಿಯು ಅಡಿಮೇಲಾಗಿ ಬಿದ್ದುಬಿಟ್ಟಿತು. ೧೨ ಜನರು ವಿಶೇಷ ಜಖಂಗೊಂಡಿರುವರು.

ಮೋಟರ್ ವ್ಯಾಪಾರ.

ಹಿಂದೂದೇಶಕ್ಕೆ ಆಮದಾಗಿರುವ ಮೋಟರುಗಳು ಮತ್ತು ಅವುಗಳ ಒಟ್ಟು ಬೆಲೆ ೧೯೩೨ರಲ್ಲಿ ೫೨೫೨ ಮೋಟರುಗಳು, ಬೆಲೆ ರೂ ೧೦,೬೩೩,೨೦೦೦, ೧೯೩೩ರಲ್ಲಿ ೯೫೭೫ ಮೋಟರುಗಳು, ಬೆಲೆ ರೂ ೧೭,೬೭,೨೦೦೦ ೧೯೩೪ರಲ್ಲಿ ೧೩೨೮೬ ಮೋಟರುಗಳು ಬೆಲೆ ೨೩,೯೫,೬೦೦೦ ಮೋಟರು ಸೈಕಲುಗಳ ಸಂಖ್ಯೆ ೧೯೩೨ರಲ್ಲಿ ೬೩೧ ಬೆಲೆ ೩೧,೩೦೦೦, ೧೯೩೩ರಲ್ಲಿ ೬೧೯, ೩೩೨೦೦೦ ೧೯೩೪ರಲ್ಲಿ ೮೬೨ ಮೋಟರು ರೂ ೪೭೦೦೦೦

ಫ್ರೀಪ್ರೆಸ್ ಪತ್ರಿಕೆಯು ನಿಂತಿತು.

ಮುಂಬಯಿಯ ಫ್ರೀಪ್ರೆಸ್ ಪತ್ರಿಕೆಯು ೨೯ರಲ್ಲಿ ತನ್ನ ಕೊನೆಯ ಸಂಚಿಕೆಯನ್ನು ಹೊರಡಿಸಿ ನಿಂತಿತು. ಡಿರೆಕ್ಟರ್ ಪಾಲುಗಾರರು ವ್ಯಾಪಾರವನ್ನು ವಹಿಸಿ ಡಿಪೆಂಡ ಭದ್ರತೆಯನ್ನು ತೆಗೆದುಕೊಳ್ಳಬೇಕೆಂದಿರುವರು. ಸರಕಾರವು ಫ್ರೀಪ್ರೆಸ್ಸಿನ ಭದ್ರತೆಯ ಹಣವನ್ನು ವಶೀಕರಿಸಿಕೊಂಡುದರಿಂದಾಗಿ ಅದನ್ನು ನಡೆಸಬೇಕಾದರೆ ಪತ್ರಿಕೆಯ ಸಂಪಾದಕರಾದ ಶ್ರೀ ಸದಾನಂದರು ಸರಕಾರಕ್ಕೆ ಬರೆದ ಕಾಗದದಲ್ಲಿ ಫ್ರೀಪ್ರೆಸ್ಸನ್ನು ಹೊರಡಿಸಬೇಕಾದರೆ ಹೊಸ ಭದ್ರತೆಯ ಹಣವನ್ನು ಕಟ್ಟಿ ಹೊಸತಾಗಿ ಹೊರಡಿಸಬೇಕೆಂದು ಸರಕಾರವು ತಿಳಿಸಿರುತ್ತದೆ.

೬೦೦೦೦ ರೂಪಾಯಿಗಳ ನಷ್ಟ

ಅಹ್ಮದಾಬಾದಿನ ಕಾಲೂಪುರದಲ್ಲಿ ... ಬೆಂಕಿ ... ಅಂಗಡಿಗಳೂ, ದಾಸ್ತಾನಿನ ... ಭಸ್ಮವಾಗಿ ಹೋಗಿವೆ. ... ರೂಪಾಯಿಗಳ ನಷ್ಟವಾಗಿದೆ.

ಸಿಡಿಲಿನ ಪ್ರತಾಪ

ಅಹ್ಮದಾಬಾದಿನ ರಕ್ತ ... ಎಂಬಲ್ಲಿನ ದೊಡ್ಡ ಅರಮನೆಗೆ ಸಿಡಿಲು ಒಡೆದು ... ಬೆಲೆಯುಳ್ಳ ವಸ್ತುಗಳಿಗೆ ಬೆಂಕಿ ತಗಲಿತು. ೨೪ ತಾಸುಗಳ ತನಕ ಬೆಂಕಿಯು ಉರಿದು ಕೆಲವು ವಸ್ತುಗಳು ಅಗ್ನಿಗಾಹುತಿಯಾದವು. ೩೦,೦೦೦ ರೂಪಾಯಿಗಳ ನಷ್ಟವುಂಟಾದದ್ದಾಗಿ ಅಂದಾಜು.

೧೬ ಗನಿ ಕೆಲಸಗಾರರು ಹತರಾದರು!

ಸ್ಫೋಟನವಾಗಿ ಮಹಾ ಅನಾಹುತವಾಯಿತು.

ಕಲ್ಕತ್ತಾ ಜುಲಾಯಿ ೧

ಬಿಹಾರಿನ ಧನಬಡ್ ಎಂಬಲ್ಲಿನ ಬಡಗಿಗೆ ಗನಿಯಲ್ಲಿ ಕೆಲಸ ನಡೆಯುತ್ತಿದ್ದಾಗ ಗನಿಯೊಳಗೆ ಒಂದು ಸ್ಫೋಟನವಾಗಿ ಅದರೊಳಗಿದ್ದ ೧೬ ಜನರು ಅಲ್ಲೇ ಮೃತರಾದರು. ೧೨ ಜನರನ್ನು ಮೇಲೆ ತೆಗೆದರು. ಅಸಿಸ್ಟಾಂಟ್ ಮೆನೆಜರರಾದ ಚಟರ್ಜಿಯವರೂ ಅವರ ಮಿತ್ರರೊಬ್ಬರೂ ತನಿಖೆ ನಡೆಸುವುದಕ್ಕಾಗಿ ಕೆಳಗಿಳಿದರು. ಅವರೂ ಮೃತರಾದರು. ಗನಿಯ ಬಾಯಿಯಲ್ಲಿ ಬೆಂಕಿಯು ಮೇಲೆದ್ದು ೩೩ ಮಂದಿ ಮೇಲೇರುವಾಗ ಬಹುಮಟ್ಟಿಗೆ ಸುಟ್ಟರು. ಬೆಂಕಿಯು ಇನ್ನೂ ಉರಿಯುತ್ತಿದೆ. ಗಾಯಗೊಂಡವರನ್ನು ಆಸ್ಪತ್ರೆಗೆ ಕಳುಹಿಸಲಾಗಿದೆ.

ಬಳ್ಳಾರಿ, ಅನಂತಪುರಗಳಲ್ಲಿ ಕ್ಷಾಮ.

ಜನರು ಮಹಾ ಯಾತನೆಗೊಳಗಾಗಿರುವರು

ಉದಕಮಂಡಲ, ಜುಲೈ ೧

ಬಳ್ಳಾರಿ ಅನಂತಪುರಗಳಲ್ಲಿನ ಕ್ಷಾಮಪೀಡಿತ ಜನರ ಪರಿಸ್ಥಿತಿಯು ವಿವರವು ಪ್ರಕಟವಾಗಿರುತ್ತದೆ. ಕ್ಷಾಮದಿಂದ ಪೀಡಿತರಾಗಿರುವವರ ಸಂಖ್ಯೆಯು ಹೆಚ್ಚುತ್ತಿದೆಯಂತೆ. ಅನಂತಪುರದಲ್ಲಿ ೧। ಲಕ್ಷ ಜನರು ಪೀಡೆಗೊಳಗಾಗಿರುವರು. ಅಂದರೆ ಜನಸಂಖ್ಯೆಯು ಐದರಲ್ಲೊಂದು ಪಾಲು ಜನರು ಕ್ಷಾಮದ ಬಾಯಿಗೆ ತುತ್ತಾಗಿರುವರು. ಮಳೆಯು ಸರಿಯಾಗಿ ಬರದಿದ್ದರೆ ಜನರ ಸಂಕಟವು ಇನ್ನೂ ಹೆಚ್ಚಾಗಬಹುದೆಂದು ಸರಕಾರವು ಊಹಿಸಿರುತ್ತದೆ. ಅನಂತಪುರ ಮತ್ತು ಬಳ್ಳಾರಿಗಳಲ್ಲಿ ಸ್ವಲ್ಪ ಸ್ವಲ್ಪ ಮಳೆಯು ಬಂತು. ಆದರೆ ಕೃಷಿ ಮಾಡುವುದಕ್ಕೆ ಬೇಕಾಗುವಷ್ಟು ನೀರು ದೊರೆಯದಿರುವುದರಿಂದ ಈ ಮಳೆಯು ಏನೂ ಪ್ರಯೋಜನವಿಲ್ಲದಂತಾಗಿದೆ.

ಜಠರಾಗ್ನಿಯ ಅಜೀರ್ಣದಿಂದಾಗಿ ಹಲವು ವರ್ಷಗಳ ಬಾಧೆ.

ನೀವು ಉದರವಾಯು ... ಸುಡುವಂತಾಗುವ ಅಜೀರ್ಣ ... ಅನೇಕ ವರ್ಷಗಳ ವರೆಗೆ ಬಾಧಿಸಲ್ಪಟ್ಟು ಆ ವೇಳೆ ಒಂದು ಔಷಧಿ ದೊರೆತು ಅದರಿಂದ ನೀವು ಪೂರ್ಣ ಗುಣಹೊಂದಿದೊಡನೆ ಅದೊಂದು ಅದ್ಭುತವೆನ್ನುವಿರಲ್ಲ? ಮೆಕ್ಲೀನ್ ಬ್ರಾಂಡ್ ಸ್ಟೊಮೆಕ್ ಪೌಡರ್ (ಉದರರೋಗ ನಿವಾರಕ ಚೂರ್ಣ) ನಿಂದ ... ವಾ ... ಮಿ। L ... ವರು ಹೀಗೆ ಹೇಳುವರು ... ನೀವು ಸಂಗ್ರಹಿಸಿ ... ಅಜೀರ್ಣದ ... ಜಠರಾಗ್ನಿಯ ... ಬಾಧಿಸಲ್ಪಟ್ಟಿದ್ದೆ ...

... ವರು ಹೇಳುವುದನ್ನು ಓದಿರಿ — ಅನೇಕ ವರ್ಷಗಳ ವರೆಗೆ ಜಠರಾಗ್ನಿ ಮತ್ತು ಅಜೀರ್ಣಗಳಿಂದಾಗಿ ... ಮೆಕ್ಲೀನ್ ಬ್ರಾಂಡ್ ಸ್ಟೊಮೆಕ್ ಪೌಡರನ್ನು ... ಅದರ ಉಪಯೋಗದಿಂದ ... ಇಂದೇ ಒಂದು ಬಾಟ್ಲಿಯನ್ನು ಪಡೆಯಿರಿ. ಆದರೆ ಕೆಂಪು ಮುದ್ರೆಯ ಖಾತ್ರಿ ಮೆಕ್ಲೀನ್ ಬ್ರಾಂಡ್ ಸ್ಟೊಮೆಕ್ ಪೌಡರನ್ನೇ ಪಡೆಯುವಂತೆ ಎಚ್ಚರವಿರಿ.

Alex. C. Maclean

ಎಂಬ ಈ ದಸ್ಕತ ಆ ಮೊಹರಿನ ಮೇಲಿದೆ. ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ದೊರೆಯಬಲ್ಲದು.

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್,

೬, ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು—

ಇಲ್ಲಿಗೆ ಬರೆಯಿರಿ.

ಬಿಲ್ಲೆಗಳ ರೂಪದಿಂದಲೂ ವಿಕ್ರಯಿಸಲ್ಪಡುತ್ತದೆ.

ಅನುಕ್ರಮಣಿಕೆ.

ಚಿತ್ರ	೩
ಸಾಹಿತ್ಯ ಸಂಗ್ರಹ	೪
ಛಾಯಾಚಿತ್ರಖಂಡ	೬
ಮೈಲುಗಲ್ಲುಗಳೊಡನೆ ಮಾತುಕತೆಗಳು	೮
ಕಣ್ಣಿಲ್ಲದಿದ್ದರೂ ನೋಡುವ ಭಾರತೀಯನಿರುವನು	೯
ಅಗ್ರಲೇಖ	
ಸ್ಫುಟವಿಚಾರಗಳು	೧೦
ಶಿಕ್ಷಣಪ್ರಚಾರದಲ್ಲಿ ಎರಡು ವಿಷಯಗಳು	೧೦
ವರ್ತಮಾನ ಸಂಗ್ರಹ	
ಕರ್ನಾಟಕದ ವರ್ತಮಾನ	೫
ಮಂಗಳೂರು, ತಾಲ್ಲೂಕುಗಳಿಂದ	೧೧
ವಿವಿಧ ಸಮಾಚಾರಗಳು,	೧೩
ನಡೆದ ಕತೆಗಳು	೧೪

ಸ್ವದೇಶಾಭಿಮಾನಿ.

ತಾ ೫ನೇ ಶುಕ್ರವಾರ ಜುಲೈ ೧೯೩೫

ಶಿಕ್ಷಣಪ್ರಚಾರದಲ್ಲಿ: ಎರಡು ವಿಷಯಗಳು.

ಕಳೆದ ವಾರ, ಸರಕಾರವು ವಿದ್ಯಾಪ್ರಚಾರವನ್ನು ಕುರಿತಾದ ಹೊಸ ವರದಿಗಳನ್ನು ಪ್ರಕಟಿಸಿಯದೆ ೧೯೩೩-೩೪ರಲ್ಲಿ ಅಸ್ಪೃಶ್ಯರೊಳಗೆ ಶಿಕ್ಷಣವು ಹಬ್ಬಿರುವ ವಿಷಯವಾಗಿ, ಸಾಮಾನ್ಯ ಶಾಲೆಗಳಲ್ಲಿ ೮೩೦೩೦ ಅಸ್ಪೃಶ್ಯ ವಿದ್ಯಾರ್ಥಿಗಳು (ಹಿಂದಣ ವರ್ಷದಲ್ಲಿದ್ದುದಕ್ಕಿಂತ ಸೇಕಡಾ ೧೭ ಹೆಚ್ಚು) ಇರುವರಾಗಿಯೂ, ಆದರೆ ಇವರು ಎಲ್ಲ ಪ್ರಾಥಮಿಕ ಶಾಲೆಗಳಲ್ಲೋದುವ ಅಸ್ಪೃಶ್ಯ ವಿದ್ಯಾರ್ಥಿಗಳಲ್ಲಿ ಸೇಕಡಾ ೧೮ರಂತೆ ಮಾತ್ರ ಆಗಿರುವರಾಗಿಯೂ ತಿಳಿಸಲಾಗಿದೆ ಇದರಿಂದ ನೂರು ಅಸ್ಪೃಶ್ಯ ವಿದ್ಯಾರ್ಥಿಗಳಲ್ಲಿ, ೮೪ ಮಂದಿಯಾದರೂ ಅವರಿಗಾಗಿಯೆ ಇರುವ ಶಾಲೆಗಳಲ್ಲಿ ಓದುತ್ತಿರುವರೆಂದೂ ಇತರ ಸಮಾಜಗಳ ಮಕ್ಕಳೊಡನೆ ಇವರಿಗೆ ಇನ್ನೂ ಸಂಪರ್ಕವಿಲ್ಲವೆಂದೂ ಗೊತ್ತಾಗುವುದು ಬಡತನ, ಮೇಲ್ಜಾತಿಗಳವರ ಒಕ್ಕಲುಗಳಾಗಿರುವಕಾರಣ, ಸ್ವಕೀಯರಿಗಾಗಿಯೆ ಶಾಲೆಗಳು ಇರುವ ಕಾರಣ,-ಇವುಗಳಿಂದಾಗಿ ಇಂತಹ ಅಸಂಪರ್ಕತೆಯು ಉಂಟಾಗಿದೆ ವಿದ್ಯಾಸಂಪಾದನೆಯ ಮೇಲಣ ಅಸಡ್ಡೆಯೂ ತೀರ ಹೆಚ್ಚಿನದೇ, ಅದು ತಲೆಾಂತರದಿಂದ ಬಂದ ಅವಗುಣ ಮಾತ್ರವಲ್ಲದೆ, ಕುಲವೃತ್ತಿಗೆ ಅನುಚಿತವಾದುದೆಂದೂ ಅನುಪಯುಕ್ತವೆಂದೂ ಇವರಲ್ಲಿ ನಂಬುಗೆ ಇದೆ ಸಾಮಾನ್ಯ ಶಾಲೆಗಳಲ್ಲಿ, ನೂರರಲ್ಲಿ ೯೩ರಂತೆ ಅಸ್ಪೃಶ್ಯರನ್ನು ಸೇರಿಸಿಕೊಳ್ಳುವುವಾಗಿ ತಿಳಿಸಿವೆಯಾದರೂ ೫೦ರಷ್ಟೆ ಮಾತ್ರ ಶಾಲೆಗಳಲ್ಲಿ ಅಸ್ಪೃಶ್ಯ ವಿದ್ಯಾರ್ಥಿಗಳು ಓದುತ್ತಿರುವರು

ಸರಕಾರವು ಈ ಮಧ್ಯೆ ಒಂದು ಹೊಸ ರೂಲನ್ನು ಪ್ರಕಟಿಸಿಯದೆ ಯಾವುದೊಂದು ಶಾಲೆಯು ಒಂದು ಮೈಲು ವಿಸ್ತೀರ್ಣದೊಳಗೆ ಅಸ್ಪೃಶ್ಯ ವಿದ್ಯಾರ್ಥಿಗಳು ವಾಸ್ತವ್ಯವನ್ನೆ ಮಾಡಿಲ್ಲದಿರುವಲ್ಲಿ ಮಾತ್ರ ಅಥವಾ ಇತರ ಸ್ಪಷ್ಟ ಕಾರಣಗಳನ್ನು ತೋರಿಸಿದಲ್ಲಿ ಮಾತ್ರ, ಅಸ್ಪೃಶ್ಯ ವಿದ್ಯಾರ್ಥಿಯು ಇಲ್ಲದ ಶಾಲೆಯು, ಅಂತಹ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಿಲ್ಲೆಂದೇ ನಿರ್ಧರಿಸಲಾದೀತು—ಎಂದೇ ಈ ಸೂತ್ರ! ಅಸ್ಪೃಶ್ಯರು ಶಾಲೆಗೆ ಹೋಗದಿರಲು ಕಾರಣಗಳನ್ನು (ಮೇಲೆ ಹೇಳಲಾದುವು) ಸರಕಾರವೇ ಕೊಟ್ಟಿರುವಾಗ, ಅವರು ಶಾಲೆಗೆ ಸೇರುವ ಹಾಗೆ ಮಾಡುವ ಜವಾಬುದಾರಿಯನ್ನು ಶಾಲೆಗಳ ಮೇಲೆಯೆ ಹೊರಿಸಿರುವುದು ಎಂತಹ ನ್ಯಾಯವೋ ತಿಳಿಯಲಾಗದಂತಿದೆ. ಊರ ಜನಗಳಲ್ಲಿ ಅಸ್ಪೃಶ್ಯರ ವಿದ್ಯಾಭಿವೃದ್ಧಿಗಾಗಿ ಆಸಕ್ತಿಯನ್ನುಂಟುಮಾಡಲು ಇಂತಹ ತಂತ್ರವನ್ನ ಹೂಡಬಹುದಾಗಿ ಸೂಚಿಸಿದ ಮಹಾಪುರುಷರೇ ಅಸ್ಪೃಶ್ಯರ ವಿದ್ಯಾಭಿವೃದ್ಧಿಗೆ ಖಂಡಿತವಾಗಿಯೂ ಆತಂಕವನ್ನುಂಟುಮಾಡಿರುವರು.

ಚೆಂಗಲ್ಪಟ್ಟಿನ ಒಂದು ಶಾಲೆಯಲ್ಲಿ, ಉಪಾಧ್ಯಾಯರೇ ಅಸ್ಪೃಶ್ಯರನ್ನು ಸೇರಿಸಿಕೊಳ್ಳಲು ಆಕ್ಷೇಪಿಸಿದರು, 'ಮೇಲ್ತರಗತಿಗಳ ಶಾಲೆಗಳಲ್ಲಿ ಅಸ್ಪೃಶ್ಯ ಉಪಾಧ್ಯಾಯರನ್ನು ಹೆಚ್ಚಾಗಿ ನೇಮಕ ಮಾಡಬೇಕಾಗಿ' ಸರಕಾರವು ಈ ಆಕ್ಷೇಪ ಮುರಿಯಲು ಸೂಚಿಸಿಯದೆ ಆದರೆ, ಅಸ್ಪೃಶ್ಯಸಮಾಜದ ಉಪಾಧ್ಯಾಯರೇ ಇಲ್ಲದಿರುವ ನೀಲಗಿರಿ ತಂಜಾವೂರ ಜಿಲ್ಲೆಗಳ ಸಾಮಾನ್ಯ ಶಾಲೆಗಳಲ್ಲಿ, ಅಸ್ಪೃಶ್ಯ ವಿದ್ಯಾರ್ಥಿಗಳ ಸಂಖ್ಯೆಯು ಸುಮಾರು ಒಂದೂವರೆ ಪಾಲು ಹೆಚ್ಚಿರುವುದು ಇಂತಹ ೧೮೦೦೦ ಶಾಲೆಗಳೊಳಗೆ, ಕೇವಲ ೨೪ ಶಾಲೆಗಳಿಂದ ಮಾತ್ರ, ಅಸ್ಪೃಶ್ಯ ವಿದ್ಯಾರ್ಥಿಗಳು ಬರುವರೆಂದು ಮಿಕ್ಕ ವಿದ್ಯಾರ್ಥಿಗಳು ಶಾಲೆ ತ್ಯಜಿಸಿದರೆಂದೂ ವರದಿಯಲ್ಲಿದೆ ಹಾಗೆಂದು, ಒಂದು ಬೋರ್ಡಿನವರು, ಅಸ್ಪೃಶ್ಯರಿಗಾಗಿಯೇ ಬೇರೊಂದು ಶಾಲೆ ತೆರೆಯುವೆವು ಎಂದಾಗ ತಾನೆ ಸರಕಾರವು, ಇದು ಸೂತ್ರವಿರುದ್ಧವಾಗಿದೆ ಎಂದಿತೆ ಸಂಸ್ಥಾನದ ಜನಸಂಖ್ಯೆಯಲ್ಲಿ (ಒಟ್ಟು) ನೂರಕ್ಕೆ ೯ರಂತೆ ಗಂಡು ಮಕ್ಕಳೂ ೩ರಷ್ಟರಂತೆ ಹೆಣ್ಣು ಮಕ್ಕಳೂ ಶಾಲೆಯಲ್ಲಿ ಓದುತ್ತಿರುವಾಗ, ಅಸ್ಪೃಶ್ಯರ ಸಂಖ್ಯೆಯಲ್ಲಿ ನೂರಕ್ಕೆ ೭ ಗಂಡು ಮತ್ತು ೨ ಹೆಣ್ಣು ಹೆಣ್ಣುಮಕ್ಕಳು ಮಾತ್ರ ಶಾಲೆಗೆ ಹೋಗುತ್ತಿರಲು ಕಾರಣವೇನೆಂದು ವಿಚಾರಿಸಿ,-ಅನ ಕೂಲವಾದಲ್ಲಿ ಸಾಮಾನ್ಯ ಶಾಲೆಗಳನ್ನೆ ವರ್ಗಾಯಿಸಿ, ತಿರಸ್ಕಾರಮಾಡುವವರನ್ನೆ ದಂಡಿಸಿ, ಜನರಲ್ಲಿ ವಿದ್ಯಾಭ್ಯಾಸದ ಕಡೆಗೆ ಮನಸೋಲುವಂತೆ ಬೋಧನೆ ಹಬ್ಬಿಸಿ ಖಾಸಗಿ ಜನಗಳ ಸಹಕಾರ ಪಡೆದರೇ ಈ ಭಾಗದಲ್ಲಿ ವಿಜಯವುಂಟು

ವಿಜಯ ದಶಮಿಗೆ ಸರಿಯಾಗಿ ಯುದ್ಧವೇ?

ಎಂಬ ಪ್ರಶ್ನೆಯನ್ನು ಯುರೋಪಿನ ಪ್ರಕೃತ ಸ್ಥಿತಿಯು ಸೂಚಿಸುತ್ತಲಿದೆ ಇಟಲಿಗೂ ಅಬಿಸಿನಿಯಕ್ಕೂ ಗಡಿನಾಡಿನ ವಿಷಯವಾಗಿ ಕಲಹಗಳಾಗಿವೆ ಎಷ್ಟೆಂದರೂ ಅವು ಸಮಾಧಾನ ಹೊಂದಿಲ್ಲ, ಜನಾಂಗಸಂಘವು ಏನೋ ಮಾಡಲಿಕ್ಕಿದೆಯಂತೆ ಅಬಿಸಿನಿಯವು ಇಟಲಿಯ ಆಶ್ರಯದಲ್ಲಿರುವಷ್ಟು ವ್ಯವಸ್ಥೆಯೊಂದು ಉಂಟಾಗದೆ ಇಟಲಿಯು ತನ್ನೆಲ್ಲ ವಸಾಹತಗಳಲ್ಲಿ ರೈಲುಮಾರ್ಗ ನೀಡಲಾರದು ಅತಿ ಪ್ರಾಚೀನಕಾಲದಿಂದಲೂ ಸ್ವತಂತ್ರವಾಗಿರುವ ಅಬಿಸಿನಿಯದ ಮೇಲೆ ಇಟಲಿಯು ಈಗ ಆಸೆಯಿಂದಲೂ ಲೋಭದಿಂದಲೂ ಕೈಯಿಕ್ಕುವುದು ಯುರೋಪಿನ ಮುಖ್ಯ ರಾಷ್ಟ್ರಗಳಿಗೆ ಸಮ್ಮತವಾಗಿಲ್ಲ ಆ ಸರಹದ್ದಿನಲ್ಲಿ ಯುದ್ಧವಾದರೆ ಅಲ್ಲಿ ಅಗತ್ಯಬೇಕಾಗಿರುವಷ್ಟು ಸೈನಿಕರನ್ನು ಇಟಲಿಯು ಸನ್ನಾಹಸಮೇತ ಅತ್ತ ಕಳಿಸಿಯೇ ಇದೆ ಮಂಚುಕೂವೊ ರಾಜ್ಯವನ್ನು ಆಕ್ರಮಣ ಮಾಡಿ ತನ್ನ ಅಧಿಕಾರವನ್ನು ಚೀನದ ಮೇಲೆ ಪ್ರಯೋಗಿಸಲು ಯುದ್ಧವನ್ನು ಮಾಡಿದ ಜಪಾನು, ಜನಾಂಗಸಂಘವನ್ನು ಬಿಟ್ಟು ಹೊರನಡೆದ ಹಾಗೆಯೆ, ಅಬಿಸಿನಿಯವನ್ನು ನುಗ್ಗಿ ಹೋರಾಡಲಿರುವ ಇಟಲಿಯೂ ಜನಾಂಗ ಸಂಘದ ಸದಸ್ಯತೆಗೆ ರಾಜೀನಾಮೆಕೊಡಬಹುದಾಗಿಯೂ ಊಹೆ ಇದೆ ಫ್ರಾನ್ಸು ಇಂಗ್ಲೆಂಡುಗಳು ಈ ವಿಷಯದಲ್ಲಿ ತೀವ್ರಾಲೋಚನೆ ಮಾಡುತ್ತಲಿವೆ, ಇವೆರಡರ ವಸಾಹತುಗಳೂ ಅಲ್ಲೇ ಇವೆಯಷ್ಟೆ,-ಯುದ್ಧವಾದರೆ?



ಹೌಸ್ ಒಫ್ ಲೋರ್ಡ್ಸ್ ಸಭಾ ಮಂದಿರದಲ್ಲಿ

ಹಾಜರಿಯ ಸರಾಸರಿಯು ೩೦-೫೦. ಬ್ರಿಟಿಷ ಶಾಸನವನ್ನೆ ಬುಡಮೇಲಾಗುವಂತೆ ಯಾವುದೊಂದು ಚಳವಳ ಅಥವಾ ಉತ್ಪಾತ ಉಂಟಾಗುವುದಾಗಿ ತಿಳಿದುಕೊಂಡರೆ ಮಾತ್ರ ಲೋರ್ಡ್ ಶ್ರೀಮಂತರು ನೂರು-ನೂರೈವತ್ತು ಮಂದಿ ನೆರೆದುಬರುವರು ಇಂಡಿಯಾ ಮಸೂದೆಯ ಚರ್ಚೆಯ ಕಾಲದಲ್ಲಿ ೨೯೧ ಮಂದಿ ಹಾಜರಾಗಿದ್ದುದು, ಸದಸ್ಯರಲ್ಲಿರುವ ಅತ್ಯಾತುರತೆಯನ್ನು ತೋರಿಸುತ್ತಿದೆ ಹಾಗೆಂದು ಇಂಡಿಯಾ ವಿಷಯಕ ಯಾವುದೊಂದು ಚರ್ಚಾಕಾಲದಲ್ಲಿ ೫೦ ಮಂದಿ ಇದ್ದರೇ ಅದೊಂದು ಪುಣ್ಯಕಾಲ ಈ ಸಲ, ಸರಕಾರದ ಬೆಂಬಲಕ್ಕೆ ತಾವಿದ್ದೇವೆಂದು ತೋರಿಸಲು, ಮಂತ್ರಿಮಂತ್ರಿಮಂಡಲದ ತೀರ್ಮಾನಕ್ಕೆ ವೋಟು ಕೊಡುವುದಕ್ಕಾಗಿ ಹೀಗೆ ಅತಿಕಷ್ಟದಿಂದ ಕೂಡಿರಬೇಕಾಯಿತು ಮಸೂದೆಯಲ್ಲಿದ್ದುದೇನೆಂದು ತಿಳಿದವರು ಅಥವಾ ತಿಳಿಯುವ ಆತುರವುಳ್ಳವರು ತೀರ ಕಡಿಮೆ ಮುಖ್ಯ ವೋಟಿಗಾಗಿಯೆ ಈ ದೊಡ್ಡ ಕೂಟ ಹೇಗೂ ೨೩೬ ವೋಟುಗಳು ಮಸೂದೆಗಾದುವು, ಮಸೂದೆ ಮಂಜೂರಾಯಿತು ೫೫ ಮಂದಿ ವಿರುದ್ಧಮತಕೊಟ್ಟರು, ಇದು ಅತ್ಯಾಶ್ಚರ್ಯ

ವೈದಿಕ ಪುರೋಹಿತೋತ್ತಮಾಚಾರ್ಯರು

ಎಂಬ ಬಿರುದನ್ನು ಕೊಡಬಹುದಾದರೆ ಅದು ಈ ಲೋರ್ಡ್ಸ್ ಸಭೆಯಲ್ಲಿರುವ ಎಕ್ಸೆಟರ್ ಪ್ರಾಂತ್ಯದ ಬಿಷಪ್ ಸ್ವಾಮಿಗಳಿಗೇ ಸಲ್ಲತಕ್ಕದು ಈ ಧಾರ್ಮಿಕ ಗುರುಗಳು, ಪರಲೋಕ ವಿಚಾರದಲ್ಲೂ ಪರಹಿತ ಸಾಧನೆಯಲ್ಲೂ ನಿರತರಾಗಿರತಕ್ಕವರು ಇವರು ತೀರ ಲೌಕಿಕವಾದ ಈ ಶ್ರೀಮಂತ ಸಭೆಯಲ್ಲಿ ಈ ಕಾಲದಲ್ಲಿರುವುದು ಈ ಯುಗಕ್ಕೆ ಒಂದು ಬಗೆಯ ಅವಹೇಳನ ಒಂದು ಶತಮಾನಕ್ಕೆ ಹಿಂದೆ, ಇದೇ ಲೋರ್ಡ್ಸ್ ಸಭೆಯಲ್ಲಿ ಐದು ಶಿಲ್ಲಿಂಗ್ (2¼ ರೂಪಾಯಿ) ಗಿಂತ ಹೆಚ್ಚಿನ ಬೆಲೆಯ ಸಾಮಾನು ಕದ್ದವರಿಗೆ ಫಾಸೀಶಿಕ್ಷೆ ವಿಧಿಸಬೇಕಾಗಿ ಒಬ್ಬ ಲೋರ್ಡರು ಸೂಚಿಸಿದರು ಆಗ ಏಳು ಮಂದಿ ಧರ್ಮಗುರುಗಳು ಅಲ್ಲಿದ್ದು, 'ಅದಕ್ಕಿಂತ ಒಂದು ಪೆನ್ನಿ ಕಡಿಮೆ ಕದ್ದವರಿಗೆ ಟ್ರಾಪುಶಿಕ್ಷೆಯಾದರೆ ಸಾಕು, ಐದು ಶಿಲ್ಲಿಂಗ್ ಭರ್ತಿಯಾದರೆ ಮಾತ್ರ ಫಾಸೀದಂಡನೆ, ಇಷ್ಟರಿಂದ ಬ್ರಿಟಿಷ ಶಾಸನದ ಗೌರವಕ್ಕೆ ಸಮಾಧಾನವಿದೆ' ಎಂದು ತಿಳಿಸಿದರು ನಮ್ಮ ಈ ಎಕ್ಸೆಟರ್ ಬಿಷಪರೂ, ಹಾಗೆಯೆ, ಭಾರತೀಯರಿಗೆ ಪ್ರಜಾಸತ್ತೆಯ ರಾಜ್ಯಭಾರವನ್ನು ಕೊಡುವುದರ ಅನ್ಯಾಯವನ್ನು ಕುರಿತು,- 'ಚೀನಾ ದೇಖೋ ಜಿಕಾಗೊ ದೇಖೋ' ಎಲ್ಲೆಲ್ಲಿಯೂ ಜನರಲ್ಲಿ ನೀತಿಯಿಲ್ಲ, ಸೇನಾನಾಯಕರಿಗೆ ಬೆನ್ನಲುಬಿಲ್ಲ ಎಂದರು ಕೆಲವು ಲೋರ್ಡರು ಜರ್ಮನಿ, ಇಟಲಿ, ರಷ್ಯಾಗಳಲ್ಲಿನ ಪ್ರಜಾಸತ್ತೆಯ ಪಾಪಫಲಗಳನ್ನು ನೋಡಿ ಬರಬೇಕೆಂದು ಸೂಚಿಸಿದರು ಈ ವೈದಿಕರ ಇಂತಹ ರಾಜಕೀಯ ಭಾಷಣಗಳನ್ನು ಓದಿ, ಒಂದು ಬ್ರಿಟಿಷ ಪತ್ರಿಕೆಯೇ ಹೀಗೆನ್ನುತ್ತಿದೆ- ಇವರು ಇಂತಹ ಪ್ರಾಚೀನ ಗೊಡ್ಡುನೀತಿಯನ್ನು ಇಟಲಿಯಲ್ಲಿ ಸಾರುವರಾದರೆ, ಅಲ್ಲಿ ಇವರ ಬಾಯಿಗೆ ಬೀಗಹಾಕುವರು, ಜರ್ಮನಿಯಲ್ಲಾದರೆ ಇವರನ್ನು ಜೈಲಿನಲ್ಲಿ ಇಡುವರು, ರಷ್ಯದಲ್ಲಾದರೆ-ಇವರನ್ನು ವಸ್ತುಪ್ರದರ್ಶನಾಲಯದಲ್ಲಿ, ಒಂದು ಕಪಾಟಿನಲ್ಲಿಡುವರು ಇಷ್ಟು ಶಿಫಾರಸುಳ್ಳವರೂ ಭಾರತೀಯರಲ್ಲಿ ಪ್ರಜಾಸತ್ತೆಯನ್ನು ಬಳಕೆಗೆ ತರಲೀಬಾರದಾಗಿ ಸಾರಿರುವರು,-ಲೊರ್ಡ ಸಭೆಯಲ್ಲಿ!

ಗ್ರಾಮೋದ್ಧಾರಕ್ಕಾಗಿ ಸೂಚನೆಗಳು:-

ಮುಂಬಾಯಿಯ ಮಾಜಿ ಗವರ್ನರರು ಗ್ರಾಮೋದ್ಧಾರವೇ ಕರ್ತವ್ಯ ಎಂದು ಲಂಡನಿನ ಒಂದು ಪತ್ರಿಕೆಯಲ್ಲಿ ಲೇಖನ ಬರೆದು, ಅದರಲ್ಲಿ ಹಲವು ಸೂಚನೆಗಳನ್ನು ಕೊಟ್ಟಿರುವರು ಮಾಯಾದೀಪ, ಸಿನೆಮಾ, ಗ್ರಾಮಫೋನ್, ರೇಡಿಯೋ ಇವುಗಳ ಮೂಲಕವಾಗಿ ಜನಶಿಕ್ಷಣವನ್ನು ಹೆಚ್ಚಿಸಿ, ತನ್ಮೂಲಕವಾಗಿ ಜನರೊಳಗೆ ಜೀವನಕ್ರಮವೂ ಸುಧಾರಣೆಗೊಳ್ಳುವಂತೆ ಸಾಧಿಸಬೇಕು ಎನ್ನುವುದೇ ಇವರ ಶಿಫಾರಸು ಹಿಂದೆ, ಮಿಶನರಿಗಳು ಹಳ್ಳಿಗಳಿಗೆ ಗುಡಿಸಲು ಸಂದರ್ಶನಮಾಡಲು ಹೋಗುವುದಿದ್ದಿತು ಕ್ಷೇಮಸಾಧನೆಯ ಏರ್ಪಾಡುಗಳನ್ನು ಕುರಿತು ಬೋಧಿಸಿ,-ಸಾಬೂನು, ಹಲ್ಲುತಿಕ್ಕುವ ಪುಡಿ, ಬ್ರಶ್, ಕೂಡಲು 'ಮೋಳೆ'ಗಳು ಮೊದಲಾದುವನ್ನು ಕುರಿತೂ ಆನಂದವನ್ನುಂಟುಮಾಡುವಷ್ಟು ವರ್ಣನೆ ಮಾಡುತ್ತಿದ್ದರು ಗ್ರಾಮಗಳಲ್ಲಿ ಇವುಗಳ ಅಗತ್ಯವೇ ಇಲ್ಲವಾದರೂ, ಯುರೋಪೀಯ ಕೈಗಾರಿಕೆಗಳಿಗೆ ಅಲ್ಲಿ ಮುಂದೆ ಗಿರಾಕಿಗಳಾಗಲು ಇದು ಉತ್ತಮೋಪಾಯವಾಗಿದ್ದಿತು ವಿಟಮಿನ್ನುಗಳ ವಿಷಯ ರೇಡಿಯೋ ಭಾಷಣವನ್ನು ಉಪವಾಸಿಗಳಿಗೂ, ರೇಡಿಯೋ ಸಂಗೀತವನ್ನು ಸಾಲಗಾರರ ಬೈಗಳಿಂದ ಕಿವುಡಾದವರಿಗೂ, ಸಿನೆಮಾ ಚಿತ್ರಗಳನ್ನು ಮಲೇರಿಯ ಜ್ವರ ಪೀಡಿತರಿಗೂ ಪ್ರದರ್ಶಿಸಿ ಯಾವ ಗ್ರಾಮೋದ್ಧಾರವಾಗುವುದೋ ತಿಳಿಯದು ಸರಕಾರವು ಒಂದು ಕೋಟಿ ರೂಪಾಯಿಗಳನ್ನು ಈ ಬಗೆಯ ವ್ಯಯಕ್ಕಾಗಿಯೆ ಸೆಂಕ್ಷನು ಮಾಡಿರಲಾರದೆಂದು ಐದು ವರ್ಷ ಮುಂಬಾಯಿಯ ಗವರ್ನರಾದವರಿಗೂ (ಸರ್ ಫ್ರೆಡರಿಕ್ ಸ್ಕೈಕ್ಸ್) ತಿಳಿದಿಲ್ಲವೆಂದರೆ,—ನಮ್ಮ ಗ್ರಾಮಗಳ ದುರ್ಭಾಗ್ಯವೇ, ಅಥವಾ ಸರ್‌ರ ಮೂರ್ಖತನವೆ?

ಕರ್ನಾಟಕಾಂಧ್ರ ಚಳವಳ

ಬಳ್ಳಾರಿಯ ಸಿರಗುಪ್ಪಾ ತಾಲೂಕಿನ ಒಬ್ಬ ವಕೀಲರು, ಜಿಲ್ಲಾ ಜಡ್ಜರ ಕೋರ್ಟಿನಲ್ಲಿ ವಿಚಾರಣೆಯಾಗುತ್ತಿದ್ದ ಒಂದು ಮೊಕದ್ದಮೆಯಲ್ಲಿ ಸಾಕ್ಷ್ಯ ಹೇಳಲು ಬಂದಿದ್ದು, ತಮ್ಮ ರಿಪೋರ್ಟನ್ನು ತೆಲುಗು ಭಾಷೆಯಲ್ಲಿಯೇ ಓದಿಹೇಳಿದರು ಪ್ರೊಸಿಕ್ಯೂಟರರು ಅವರಿಗೆ ಪ್ರಶ್ನೆಗಳನ್ನು ತೆಲುಗುಭಾಷೆಯಲ್ಲಿ ಕೇಳಲು, 'ನನಗೆ ತೆಲುಗು ಚೆನ್ನಾಗಿ ಬಾರದು' ಎನ್ನುತ್ತ, ವಕೀಲರು ಕನ್ನಡದಲ್ಲೇ ಪ್ರಶ್ನೆ ಕೇಳಬೇಕೆಂದರು. ಪ್ರೊಸಿಕ್ಯೂಟರರು ಇದು ಕರ್ನಾಟಕಾಂಧ್ರ ಚಳವಳದ ಫಲವಾಗಿದೆ ಎಂದೂ, ಬಳ್ಳಾರಿಯಲ್ಲಿರುವ ಕರ್ನಾಟಕ ಸಂಘದ ಪ್ರೋತ್ಸಾಹದಿಂದಾಗಿ ಇಂತಹ ಬುದ್ಧಿಯು ವಕೀಲರಿಗೆ ಬಂದಿರುವುದೆಂದೂ, ಇದರಿಂದ ಬಳ್ಳಾರಿಯು ಕನ್ನಡಜಿಲ್ಲೆಯೆಂದು ತೋರಿಸಲು ಇವರು ಪ್ರಯತ್ನಪಡುತ್ತಾರೆಂದೂ, ರಿಪೋರ್ಟನ್ನು ತೆಲುಗಿನಲ್ಲಿ ಬರೆದು ಓದಿಹೇಳಿದ ಬಳಿಕ, ತೆಲುಗಿನಲ್ಲೇ ಆಡಬಾರದೆಂಬ ನೆವನವು ಸುಳ್ಳೆಂದೂ ಆಕ್ಷೇಪವೆತ್ತಿದರು. ಜಡ್ಜರೂ ಇದನ್ನು ಒತ್ತಿಹೇಳಿದರು ಆದರೂ, ತೆಲುಗು ಪ್ರಶ್ನೆಗಳಿಗೆ ಮೌನವಾಗಿದ್ದು, ಕನ್ನಡ ಪ್ರಶ್ನೆಗಳಿಗೆ ಕೂಡಲೇ ಸಮರ್ಪಕವಾಗಿಯೂ ವಕೀಲರು ಪ್ರೊಸಿಕ್ಯೂಟರರಿಗೆ ಉತ್ತರಕೊಟ್ಟರು.

ಮಂಗಳೂರು.

ಇದೇ ತಿಂಗಳ ತಾ. ೭ನೇ ಆದಿತ್ಯವಾರ ಬೆಳಿಗ್ಗೆ ಘಂಟೆ ೯ಕ್ಕೆ ಮಂಗಳೂರು ಸಿಟಿ ಆರ್ಯಸಮಾಜ ಮಂದಿರದಲಿ "ಮೃತ್ಯು ಮತ್ತು ಪರಲೋಕ"ದ ಕುರಿತು ಭಾಷಣ ವಿರುವುದು. ಸರ್ವರಿಗೂ ಸ್ವಾಗತವಿದೆ

ಕಾರ್ಕಳ ಶ್ರೀ ಸದಾಶಿವರಾಯರು ಪಬ್ಲಿಕ್ ಪ್ರೊಸಿಕ್ಯೂಟರರಾಗಿಯೂ, ಶ್ರೀ ಬಿ ವೆಂಕಟರಾಯ ಮಲ್ಯರು ಸರಕಾರಿ ಪ್ಲೀಡರರಾಗಿಯೂ ತಾತ್ಕಾಲಿಕ ಹುದ್ದೇದಾರರಾಗಿ ನೇಮಕ ಹೊಂದಿರುವರು.

ಶೈಟ್ಟಿ ಭೂಕಂಪ ದಿನಾಚರಣೆಯು ಕಳೆದ ಆದಿತ್ಯವಾರ ಕಾಂಗ್ರೆಸಿನವರಿಂದ ಜರಗಿಸಲ್ಪಟ್ಟಿತು ಸ್ವಯಂಸೇವಕರು ಕ್ವೆಟ್ಟಾ ನಿಧಿಗಾಗಿ ಡಬ್ಬಿಗಳನ್ನು ಹಿಡಿದುಕೊಂಡು ಹೋಗಿ ಧನಸಂಗ್ರಹಮಾಡಿದರು ಸಂಜೆಗೆ ರಘುನಾಥಯ್ಯ ಸ್ಮಾರಕ ಮಂದಿರದಲ್ಲಿ ಸಭೆ ಜರಗಿತು ಶ್ರೀ ವಿಟ್ಠಲ ಶೆಟ್ಟರು ಅಧ್ಯಕ್ಷರಾಗಿದ್ದರು

ಇದೇ ತಾ. ೩೦ಕ್ಕೆ ಗದಗಿನಲ್ಲಿ ಕೂಡಲಿರುವ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸಭೆಗೆ ಸ್ಥಳೀಯ ಕಾಂಗ್ರೆಸ್ ಕೆಲಸಗಾರರೆಲ್ಲರೂ ಹೋಗಲಿರುವುದರಿಂದ ತಾ. ೨೮ಕ್ಕೆ ಕೂಡಲಿದ್ದ ಸ್ವಾಗತ ಸಮಿತಿಯ ಸಭೆಯನ್ನು ಜುಲಾಯಿ ತಾ ೭ನೇ ಸಂಜೆ ೪-೩೦ಕ್ಕೆ ಅನಿವಾರ್ಯವಾಗಿ ಮುಂದರಿಸಿರುತ್ತದೆ. ಆದುದರಿಂದ ಸ್ವಾಗತ ಸಮಿತಿಯ ಸದಸ್ಯರೆಲ್ಲರೂ, ಅನಾನುಕೂಲತೆಗಳನ್ನು ಗಮನಿಸದೆ 'ಕಾಂಗ್ರೆಸ್ ಹೌಸಿನಲ್ಲಿ' ಕೂಡಲಿರುವ ಮುಂದರಿಸಿದ ಸಭೆಗೆ ದಯಮಾಡಿ ಬರಬೇಕಾಗಿ ಅಪೇಕ್ಷಿಸುತ್ತೇನೆ ೭೦ ಪತ್ರಿನ ವರದಿ ಮತ್ತು ಲೆಕ್ಕ ಕೂಡ ತಯಾರಾಗುತ್ತದೆ ಎಂದು ಶ್ರೀ ಸೂರಪ್ಪಯ್ಯನವರು ತಿಳಿಸುತ್ತಾರೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೫೦೦೦ ಮಂದಿ ಕಾಂಗ್ರೆಸ್ ಸದಸ್ಯರಿರುವರೆಂದು ತಿಳಿದುಬರುತ್ತದೆ.

"ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ ಲಿಮಿಟೆಡ್, ಇದರ ಒಂದು ಶಾಖೆಯು ಇದೇ ತಿಂಗಳ ತಾ. ೮ನೇ ಸೋಮವಾರ ವೀರರಾಜೇಂದ್ರಪೇಟೆಯಲ್ಲಿ ತೆರೆಯಲ್ಪಡುವುದೆಂದು ತಿಳಿದುಬರುತ್ತದೆ. ಇದರ ಒಂದು ಶಾಖೆಯು ಈ ಮೊದಲೇ ಮಡಿಕೇರಿಯಲ್ಲಿರುತ್ತದೆ. ಇದಕ್ಕೆ ಯಶವನ್ನೇ ಬಯಸುವೆವು

ಮಳೆಗಾಲದ ನಿಮಿತ್ತ ಮಾರ್ಗಮಾರ್ಗಗಳಲ್ಲಿ ಸುಳಿಯುತ್ತಿದೆ ಕಡೆಗಳಲ್ಲಿ, ಚರಂಡಿಗಳಲ್ಲಿನ ಹೊಯಿಗೆಯಲ್ಲಿ ದಾರಿಯ ಕೆಸರಲ್ಲಿ ಬೆರಸಿ, ಉತ್ತಮವಾದ ಗದ್ದೆಯ ರೂಪವನ್ನು ತಾಳಿದೆ ಮಳೆ ಚೆನ್ನಾಗಿ ಸುರಿದರೆ, ಈ ನಿವೇದಿಯು ಉತ್ತಮ ದುರುಸ್ತಿಯಾಗಿ ಮಾರ್ಪಡುವುದರಲ್ಲಿ ಸಂದೇಹವಿಲ್ಲ.

ಇದೇ ತಾ. ೨೮ಲ್ಲಿ ಜಿಲ್ಲಾ ಸೆಶ್ಶನ್ ಜಡ್ಜರು ಕೋರ್ಟು ಕೆಲಸವನ್ನು ಪ್ರಾರಂಭಿಸುವ ಮೊದಲು ಶ್ರೀಮಾನ್ ಎಮ್ ಎನ್ ಪ್ರಭುಗಳವರ ಜೀವನವನ್ನೂ ಅವರು ಈ ಕೋರ್ಟಿನಲ್ಲಿ ನಡೆಸುತ್ತಿದ್ದ ಕಾರ್ಯಭಾರ, ಅವರ ನೈಪುಣ್ಯ, ಕುಶಲತೆ, ಮೊದಲಾದುವನ್ನೂ ಕುರಿತು ಪ್ರಶಂಸಿಸಿ ಸಹಸಂತಾಪಸೂಚಕವಾಗಿ ಸ್ಮಾರಕಭಾಷಣ ಮಾಡಿದರು

ಸ್ಥಳೀಯ ಶ್ರೀಕೃಷ್ಣ ಸಿನೆಮದಲ್ಲಿ ಶನಿವಾರದಿಂದ ಪ್ರಖ್ಯಾತ ನಟನಾದ ಬೋರಿಸ್ ಕಾರ್ಲೋಫ್ ಎಂಬವನಿಂದ ಅಭಿನಯಿಸಲ್ಪಟ್ಟ "ಬ್ಲೇಕ್ ಕೇಟ್" ಎಂಬ ಮಾತಾಡುವ ಚಿತ್ರವು ಪ್ರದರ್ಶಿಸಲ್ಪಡುವುದು

ನಮ್ಮ ಜಿಲ್ಲೆಯ ಆದ್ಯ ಮತ್ತು ಕ[illegible] ಗೌಡಸಾರಸ್ವತ [illegible]ಗಳೊಂದರಲ್ಲಿ ಹುಟ್ಟಿ ಬೆಳೆದು, ಇಲ್ಲಿನ ಕೆನರಾ ಹೈಸ್ಕೂಲಿನಲ್ಲಿ ಗವರ್ನಮೆಂಟು ಕೊಲೇಜಿನಲ್ಲಿ ಮೊದಲಿನ ಶಿಕ್ಷಣ ಹೊಂದಿ, ಮುಂದೆ ಬಿ ಎ, ಬಿ ಎಲ್ ಪದವಿಗಳನ್ನು ಗಳಿಸಿ[illegible] ಸ್ವಸಮಾಜದಲ್ಲಿ ವಿಶೇಷವಾದ ವಾತ್ಸಲ್ಯದಿಂದಲೂ, ಸ[illegible]ಕರಾಗಿಯೂ ಸಮಸ್ತ ಸಮಾಜಗಳೊಡನೆ ಪ್ರೇಮದಿಂದಲೂ ನಡೆಯುತ್ತಿದ್ದು, ಮೊದಲ [illegible]ದಿನಲ್ಲಿ ನಂತರ [illegible] ವಕಾಲತ್ತು ನಡೆಸಿ, ಕಕ್ಷಿಗಾರರ ಹಿತಕ್ಕಾಗಿಯೆ ದುಡಿದ, ಎರಡು ವರ್ಷಗಳ ಹಿಂದೆ, ಸರಕಾರದ ಪಬ್ಲಿಕ್ ಪ್ರೊಸಿಕ್ಯೂಟರ್ ಮತ್ತು ಗವರ್ನಮೆಂಟ್ ಪ್ಲೀಡರರಾಗಿದ್ದು ಹತ್ತು ದಿನಗಳಿಂದ ಬಹುಕಾಲದಿಂದ ಪೀಡಿಸುತ್ತಿದ್ದ ಮೂತ್ರ ರೋಗಕ್ಕೆ [illegible] ಸ್ವಸ[illegible] ಸಮಸ್ತರ ದುಃಖಸಂತಾಪಗಳು ಒಮ್ಮೆಲೇ [illegible], ಕಳೆದ [illegible] ರ ಗಂಟೆಗೆ ದಿವಂಗತರಾದ

ಶ್ರೀ ಎಂ. ಎನ್ ಪ್ರಭು,-

ಇವರ ಆತ್ಮಕ್ಕೆ ಶಾಂತಿಯಿರಲಿ!

ಮಂಗಳೂರಿನ ಅಕ್ಕಿ ಮತ್ತು ಬೀನಸು ವರ್ತಕರ ಒಂದು ಸಭೆಯು ತಾ ೨೮ನೇ ದಿನ ಸೇಟ್ ಅಬ್ದುಲ್ ಸತ್ತಾರ್ ತಯೂಬ್‌ರವರ ಆಫೀಸಿನಲ್ಲಿ ಶ್ರೀ ಸುಟೀರ್ ನಾಗಪ್ಪನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು ಮಂಗಳೂರಿನ ಅಕ್ಕಿ ಮತ್ತು ಬೀನಸು ಆಮದುಗಾರರ ಎಲ್ಲಾ ಪ್ರತಿನಿಧಿಗಳೂ ಸಭೆಯಲ್ಲಿ ಉಪಸ್ಥಿತರಾಗಿದ್ದರು ಸಭೆಯಲ್ಲಿ ಈ ಠರಾವುಗಳಾದುವು

(೧) ತಾ ೧೫ನೇ ಸಪ್ಟಂಬರದಿಂದ ತಾ ೧೫ನೇ ಮೇಯ ಬದಲು ತಾ ೧ನೇ ಸಪ್ಟಂಬರದಿಂದ ತಾ ೧೫ನೇ ಮೇ ವರೆಗೆ ಸ್ಟೀಮರ್ ಕಂಪೆನಿಗಳು ಸರಕುಗಳ ಪ್ರತಿಯೊಂದು ಗೋಣಿಗೆ ೩ ಆಣೆಯಂತೆ ದರವನ್ನು ಹಾಕಬೇಕೆಂದೂ, ಅವುಗಳು ಕಳೆದ ಎರಡು ವರ್ಷಗಳಲ್ಲಿ ಸರಕುಗಳನ್ನೇರಿಸುವುದರಲ್ಲಿ ತಾವು ಹೆಚ್ಚಿಗೆ ವಸೂಲು ಮಾಡಿದ ಮೊತ್ತವನ್ನು ಹಿಂದೆ ಕೊಟ್ಟಂತೆ ೧೯೩೪-೩೫ರ ವರ್ಷದಲ್ಲಿ ಹೆಚ್ಚಿಗೆ ವಸೂಲುಮಾಡಿದ ಹಣವನ್ನು ಹಿಂದೆ ಕೊಡಬೇಕೆಂದು ಕೇಳಿಕೊಳ್ಳಬೇಕೆಂದೂ ನಿರ್ಣಯಿಸಲಾಯಿತು.

(೨) ಸೌತ್ ಇಂಡಿಯನ್ ರೈಲ್ವೆ ಎಡ್ಮಿನಿಸ್ಟ್ರೇಶನ್‌ನವರು ಸಾಮಾನ್ಯ ಧಾನ್ಯಗಳನ್ನೂ ಬೀಜಗಳನ್ನೂ ಮಂಗಳೂರಿನಿಂದ ಆಚೆಕಲ್‌ವರೆಗೊಯ್ಯುವ ದರವನ್ನು ಜೂನ್ ತಿಂಗಳಿನಿಂದ ಸಪ್ಟಂಬರ ತಿಂಗಳ ವರೆಗಿಡಬೇಕೆಂದು ಕೇಳಿಕೊಳ್ಳಬೇಕೆಂದು ಠರಾವು ಮಾಡಲಾಯಿತು

(೩) ಬಂದರದಲ್ಲಿ ಒಂದು ಸಬ ಪೋಸ್ಟ್ ಆಫೀಸನ್ನು ತೆರೆಯಬೇಕೆಂದು ಅಂಚೆ ಅಧಿಕಾರಿಗಳೊಡನೆ ಕೇಳಿಕೊಳ್ಳಬೇಕೆಂದು ನಿರ್ಣಯಿಸಲಾಯಿತು.

(೪) ಒಂದು ಬಂದರದಿಂದ ಇನ್ನೊಂದು ಬಂದರಕ್ಕೆ ಊರ ದೋಣಿಗಳಲ್ಲಿ ಅಕ್ಕಿ, ಭತ್ತಗಳನ್ನೊಯ್ಯುವಾಗ ಅವುಗಳನ್ನು ಕಸ್ಟಮ್ಸ ಲೇಂಡಿಂಗ್ ಸರ್ಟಿಫಿಕೇಟನ್ನು ತೋರಿಸಬೇಕೆ ವಾದ ಕ್ರಮವನ್ನು ತಿದ್ದುಪಡಿ ಅಥವಾ ರದ್ದುಗೊಳಿಸುವಂತೆ ಕಸ್ಟಮ್ಸ ಅಧಿಕಾರಿಗಳನ್ನು ಕೇಳಿಕೊಳ್ಳಬೇಕಾಗಿ ನಿರ್ಣಯಿಸಲಾಯಿತು.

(೫) ಮಂಗಳೂರಿನ ವರ್ತಕರ ಪರವಾಗಿ ಸೇಟ್ ಅಬ್ದುಲ್ ಸತ್ತಾರ್ ತಯೂಬ್‌ರವರು ಸಂಕಷ್ಟಗಳನ್ನು ಅಧಿಕಾರಿಗಳಿಗೆ ತಿಳಿಸಬೇಕೆಂದು ಠರಾವು ಮಾಡಲಾಯಿತು

ಶ್ರೀ ಕಾಶೀಮಠ ಸಂಸ್ಥಾನದ ಶ್ರೀಮದ್ಭುವನೇಂದ್ರ ತೀರ್ಥ ಶ್ರೀಪಾದಂಗಳವರ ಪುಣ್ಯತಿಥಿಯು ಇದೇ ತಾ ೨ನೇ ಮಂಗಳವಾರ ವಿಜೃಂಭಣೆಯಿಂದ ಶ್ರೀ ದೇವಸ್ಥಾನದಲ್ಲಿ ಆಚರಿಸಲ್ಪಟ್ಟಿತು ಸಾವಿರಾರು ಜನರಿಗೆ ಸಮಾರಾಧನೆ (ಅನ್ನದಾನ) ಉತ್ಸವ ಮೊದಲಾದುವು ಇದ್ದುವು

ಕರ್ನಾಟಕ ಪ್ರಾಂತಿಕ ವೈದ್ಯಮಂಡಲಿಯ ಸಮ್ಮೇಳನವೊಂದು ಇಲ್ಲಿ ಶನಿವಾರ ಜರಗಿತು ಮರುದಿನ ಡಾ॥ ಸಾಮೆಯವರು ಕೆನರಾ ಹೈಸ್ಕೂಲಿನಲ್ಲಿ ಆಯುರ್ವೇದ ವಿಚಾರದಲ್ಲಿ ಅತ್ಯುತ್ತಮ ಸಲಹೆಕೊಡುತ್ತಾ ಭಾಷಣ ಮಾಡಿದರು ಇವರ ಗೊತ್ತುವಳಿಗಳನ್ನು ಬೇರೊಂದು ಪುಟದಲ್ಲಿ ಕೊಟ್ಟದ್ದೇವೆ

ನಮ್ಮ ನಗರದ ಆರೋಗ್ಯಸಂಖ್ಯೆ - ಜೂನ್ ತಾರೀಕು ೨೨ಕ್ಕೆ ಅಂತ್ಯವಾಗುವ ವಾರದಲ್ಲಿ ನಗರದ ಒಟ್ಟು ಮರಣ ಸಂಖ್ಯೆ ೧೪ ಜನನ ೫೫ ಸಿಡುಬುಇರಲಿಲ್ಲ

ಇದೇ ತಾ ೮ನೇ ಬೆಳಿಗ್ಗೆ ಬೋಳಾರದ ಮ॥ ರಾ॥ ರಾ॥ ಎ ಬಿ ಪಿಂಟೋರವರ ಹಂಚುಕಾರ್ಖಾನೆಯ ಗೇಟಿನ ಬಳಿ ಮೃತವಾಗಿದ್ದ ಒಂದು ಸಣ್ಣ ಗಂಡು ಕೂಸು ಮಾರ್ಗದ ಮೇಲೆ ಬಿದ್ದಿತ್ತು ನೂರಾರು ಜನರು ಇದನ್ನು ನೋಡುತ್ತಿದ್ದರು ಯಾರೋ ಹೆಂಗಸು ಹೆತ್ತು ಬಿಸಾಡಿದ ಮಗುವೆಂದು ತಿಳಿದುಬಂದಿದೆ

ತಾಲೂಕುಗಳಿಂದ

ಕೊಕ್ಕರ್ಣೆ:— ಸ್ಥಳೀಯ ಬೋರ್ಡು ಡಿಸ್ಪೆನ್ಸರಿಯ ಡಾಕ್ಟರರಾದ ಡಾ॥ ರಾಜು ಬೋಂಟ್ರರವರ ಹೆಚ್ಚಿನ ಪ್ರೋತ್ಸಾಹದಿಂದ ಬ್ರಹ್ಮಾವರ, ಬಾರ್ಕೂರು, ಹೆಗ್ಗುಂಜೆ ಮೊದಲಾದ ಕಡೆಗಳಲ್ಲಿ ಈಗಾಗಲೇ ಹಿಂದೀ ಪ್ರಚಾರ ಮಾಡುತ್ತಿರುವ ದಕ್ಷಿಣ ಕನ್ನಡ ಹಿಂದೀ ಪ್ರಚಾರ ಸಂಘದ ಪ್ರಚಾರಕರಾದ ಶ್ರೀ ಪಟೇಲ್ ಗಣಪತಿ ಶರ್ಮರು ಇದೇ ತಾ. ೧೮ರಲ್ಲಿ ಸ್ಥಳೀಯ ಬೋ॥ ಎ॥ ಶಾಲೆಯಲ್ಲಿ ಹಿಂದೀ ಕ್ಲಾಸೊಂದನ್ನು ತೆರೆದಿರುವುದು ಅತ್ಯಂತ ಸಂತೋಷಕರ.

ಉಡುಪಿ:— ಶ್ರೀ ಕೃಷ್ಣ ಮಾರುತಿ ಪ್ರಸಾದಿತ ಕರ್ನಾಟಕ—ನಾಟಕ ಸಭಾ ಉಡುಪಿ ಇವರು ಕಳೆದ ತಾ ೧೮ರಿಂದ ಸ್ಥಳೀಯ ಶ್ರೀ ರಾಮಕೃಷ್ಣ ಸಿನೆಮಾ ಥಿಯೇಟರಿನಲ್ಲಿ ತಮ್ಮ ನಾಟ್ಯಕಲೆಗಳನ್ನು ಪ್ರದರ್ಶಿಸ ತೊಡಗಿರುತ್ತಾರೆ

ಶ್ರೀಕೃಷ್ಣ ಸನ್ನಿಧಾನದ ಗೋಶಾಲೆಯಲ್ಲಿ ಇತ್ತೀಚೆಗೆ ದನಗಳಿಗೊಂದು ಸಾಂಕ್ರಾಮಿಕ ರೋಗವು ಪ್ರಾಪ್ತಿಯಾಗಿದೆ ಸಿಡುಬು ರೋಗವೆಂತ ಎರಡು ಮೂರು ದಿನಗಳೊಳಗಾಗಿ ನಾಲ್ಕೈದು ದನಗಳು ಸತ್ತುಹೋದುದುವು ಪರ್ಯಾಯ ಶ್ರೀ ಪಾದಂಗಳವರೂ ಚಿಕ್ಕ ಪಟ್ಟಾಭಿಷಿಕ್ತರಾದ ಶ್ರೀ ಪಾದಂಗಳವರೂ ಕಳೆದ ಸೋಮವಾರ ತ್ರಿಸಂಧ್ಯಾಕಾಲದಲ್ಲಿ ಮಹತೋಭಾರ ಶ್ರೀ[illegible]ದನಂತೇಶ್ವರ ಚಂದ್ರೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ರೋಗದ ಉಪಶಮನಕ್ಕಾಗಿ ಪ್ರಾರ್ಥನೆ ಮಾಡಿದುದಾಯಿತು. ಸ್ವದೇಶಿ ವಿದೇಶಿ ಚಿಕಿತ್ಸೆಗಳು ನಡೆಯುತ್ತಲಿವೆ ರೋಗಸೋಂಕದ ದನಗಳನ್ನು ಭೋಜನ ಶಾಲೆಯಲ್ಲಿ ಕಟ್ಟಿರುತ್ತಾರೆ

ಬೇಸಾಯವು ಬೈಲು ಗದ್ದೆಗಳಲ್ಲಿ ಸಹ ಅರ್ಧ[illegible] ಮುಗಿಯಲಿಲ್ಲ ಬಡ ಒಕ್ಕಲಿಗರು ಗದ್ದೆಗಳಿಗೆ [illegible] ಬೆಲ್ಲಿ ಸಾಧ್ಯವಿದ್ದಷ್ಟು ನೇಜಿ ನಡುತ್ತಿದ್ದಾರೆ. ಮೋಟು[illegible] ರಾಜನ ಒಡೆತನದ ಬಗ್ಗೆ [illegible] ತೀಯೂರಾಭಿಷೇಕ [illegible] ನಡೆಯುತ್ತಿದ್ದ [illegible] ತೋಟಗಾರರ [illegible] ಅನಿತ್ಯವಾದ ದಿನ ಅವರ ಪಾದ್ಯ [illegible] ಅಕ್ಕಿ[illegible] ಎಲ್ಲ[illegible] ಆಲೋಚನೆ [illegible]ವರು

"ಜತೋ[illegible] ಸ್ವರ್ಗ[illegible]—ಶ್ರೀ ಫಲಿ[illegible] ಮಠದ ಶ್ರೀ ಸುಧೀಂದ್ರ ತೀರ್ಥ ಶ್ರೀ ಪಾದಂಗಳವರು ತಮ್ಮ ಶಿಷ್ಯ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥರೊಂದಿಗೆ ಪ್ರಯಾಣ ಬೆಳೆಸಿದರು. ತಮ್ಮ [illegible]ಳ ಆರಾಧನೆಯು ಸಲುವಾಗಿ

ಹದಿಮೂರು ತಿಂಗಳ ಗರ್ಭಿಣಿಯು ಹನ್ನೊಂದು ತಿಂಗಳ ಮಗುವನ್ನು ಪ್ರಸವಿಸಿದ್ದು!-

ಉಡುಪಿ ತಾಲೂಕು [illegible] ಕಬೆಟ್ಟು ಗ್ರಾಮದ ಸುಮಾರು ೧೬ ವರ್ಷ ಪ್ರಾಯದ ರಾಜ ಪೂ[illegible] ಜಾತಿಯ [illegible] ಯೆಂಬವಳಿಗೆ ಕೆಲವು ಸಮಯದಿಂದ ಗರ್ಭಿಣಿಯಾಗದೇ [illegible] ಆತುರತೆ ಇದ್ದರೂ ಅವಳ ಇಷ್ಟವು ನೆರವೇರಲಿಲ್ಲ ಆದಕ್ಕವಳು ತನ್ನ ಇಚ್ಛಾಪೂರ್ತಿಗಾಗಿ ಹೊಟ್ಟೆಗೆ ಬಟ್ಟೆ ಸುತ್ತಿಕೊಂಡು ತಾನು ಗರ್ಭಿಣಿಯೆಂಬಂತೆ ನಟಿಸಿ ಮನೆಯವರಿಂದ ಸೀಮಂತ ಪ್ರಸ್ತವನ್ನು ಕೂಡಾ ಮಾಡಿಸಿಕೊಂಡಳು ತಿಂಗಳು ೧೪ ದಾಟಿದರೂ ಪ್ರಸವಿಸಲಿಲ್ಲ ಇದಕ್ಕಾಗಿ ತನ್ನ ನೆರೆಯ ಸ್ವಜಾತಿಯ ಮನೆಯಲ್ಲಿದ್ದ ೧೧ ತಿಂಗಳ ಮಗುವನ್ನು ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಕದ್ದುಕೊಂಡು ಹೋಗಿ ಆ ಮಗುವನ್ನು ತಾನು ಈಗ ತಾನೇ ಹೆತ್ತದ್ದೆಂದು ವಾರ್ತೆ ಹಬ್ಬಿಸಿದಳು. ನೆರೆಕರೆಯವರು ಬಂದು ನೋಡಲು ಮಗುವಿನ ಬಾಯಿಯಲ್ಲಿ ಹಲ್ಲುಗಳಿರುವುದನ್ನೂ, ಅದರ ಬೆಳವಣಿಗೆಯನ್ನೂ ಕಂಡು ಮಗುವಿನ ವಿಷಯ ಶಂಕಿಸಲ್ಪಟ್ಟದ್ದು ಮಾತ್ರವಲ್ಲದೆ ಆಶ್ಚರ್ಯ ಹೊಂದಿದರು ಕೆಲಸಕ್ಕೆ ಹೋಗಿದ್ದ ಮಗುವಿನ ತಾಯಿಯು, ಮನೆಯಲ್ಲಿ ಮಗುವಿಲ್ಲದಿರುವುದನ್ನು ಕಂಡು ಗಾಬರಿಪಟ್ಟು ಹುಡುಕುತ್ತ ಅಲ್ಲಿಗೆ ಬಂದು ಆ ಮಗುವನ್ನು ಕಂಡು, ತನ್ನದೆಂದು ವಾದಿಸಿ, ಅವರೊಳಗೆ ಜಗಳಕ್ಕಾರಂಭವಾಯಿತು. ಆಗಲೆ ಅವಳು ತನ್ನ ಮಗುವನ್ನು ಎತ್ತಿಕೊಂಡು ನಡೆದುಬಿಟ್ಟಳು ಮಗುವಿನ ಮನೆಯವರು ಫಿರ್ಯಾದು ಕೊಡಲಾಗಿ, ಪೋಲೀಸರು ಬಂದು ಕ್ರಮವಾದ ತನಿಖೆ ನಡೆಸುವಾಗ, ಅಪಾದಿತಳ ಕಪಟವು ಬಯಲಾಗಿ ಅವಳನ್ನು ಕೈದುಮಾಡಿ, ಸ್ಟೇಶನಿಗೊಯ್ದು, ನಂತರ ಜಾಮೀನಿನ ಮೇಲೆ ಬಿಟ್ಟಿರುತ್ತಾರೆ.

ಪುತ್ತೂರು— ಕಳೆದ ತಾರೀಕು ೧೪—೬—೩೫ರಲ್ಲಿ ಒಂದು ಎತ್ತು ಮತ್ತು ಕರುವನ್ನು ಹಿಡಿದ ೧೦॥ ಅಡಿ ಉದ್ದ, ೩॥ ಅಡಿ ಎತ್ತರದ ಒಂದು ಹೆಬ್ಬುಲಿಯನ್ನು ಇರ್ವೆ ಸಂಪಾಜೆ ಗ್ರಾಮದ ಕಿಲಾರು ರಾಮಚಂದ್ರಯ್ಯನವರು ಬಹಳ ಸಾಹಸದಿಂದ ಗುಂಡುಹೊಡೆದು ಕೊಂದಿರುವರು. ಜನರಿಗೆ ಬಹಳ ನಷ್ಟವನ್ನುಂಟುಮಾಡಿದ ಹುಲಿಯನ್ನು ಕೊಂದುದಕ್ಕಾಗಿ ಎಲ್ಲರೂ ರಾಮಚಂದ್ರಯ್ಯನವರ ಉಪಕಾರಸ್ಮರಣ ಮಾಡಬೇಕಾಗಿದೆ.

ಹಂಗಾರಕಟ್ಟೆ:— ಇದು ಬಾಳ ಕುದ್ರು ಐರೋಡಿ, ಬೆಂಗರೆ ಕೋಡಿ ಬಾಣಸಟ್ಟಣ ಪಾಂಡೇಶ್ವರ ಎಂಬಿತ್ಯಾದಿ ಹಲವು ಗ್ರಾಮಗಳ ಮಧ್ಯದಲ್ಲಿದ್ದು ಸುತ್ತಮುತ್ತಲಿನ ಜನರ ಉಪಯೋಗಾರ್ಥವಾಗಿ ಉಡುಪಿ ತಾಲೂಕು ಬೋರ್ಡು ಪ್ರೆಸಿಡೆಂಟ ದಿವಂಗತ ರಾ॥ ಎನ್ ರಾಮಯ್ಯ ಶೆಟ್ಟರವರ ಕಾಲದಲ್ಲಿ ಒಂದು ರೂರಲ್ ಡಿಸ್ಪೆನ್ಸರಿಯನ್ನು ಸೆಂಕ್ಷನ್ ಮಾಡಿ ಕಳೆದ ೧—೨—೩೪ರಲ್ಲಿ ತೆರೆದ [illegible] ಯವು ಸಕಲರಿಗೂ ತಿಳಿದೇ ಇದೆ ಇಲ್ಲಿ ಯಾವನಿಗಾದರೂ ವೈದ್ಯಸಹಾಯವು ಬೇಕಾದರೆ ಬಸ್ಸು ಸರ್ವೀಸುಗಳ ಅನುಕೂಲತೆಗಳಿಲ್ಲದ್ದರಿಂದ [illegible] ನಡೆದು ಹೋಗಬೇಕು. ಹಾಗೂ ಇಲ್ಲಿಯು ಫಿಲ್ಟರ್ ರಿಂಗ್ ಯಾರ್ಡಿನಲ್ಲಿ [illegible] ಇತ್ಯಾದಿ ರೋಗವು [illegible] ಅಸ್ಪತ್ರೆಯ ಅವಶ್ಯಕತೆ ಬೇಕೇ ಬೇಕ [illegible] ಈ ಆಸ್ಪತ್ರೆಯ [illegible] ಇದು ವರೆಗೆ [illegible] ಉಡುಪಿ [illegible] ಬಡ ಜನರ [illegible] ಈ ಆಸ್ಪತ್ರೆಯನ್ನು ಇಲ್ಲೇ ಇರಗೊಳಿಸಬೇಕಾಗಿ ಈ ಗ್ರಾಮಸ್ಥರ (೫೦೦ ಜನ) ಅರ್ಜಿ [illegible] ಫಲಿಸಿದಾಗಿ ಆಸ್ಪತ್ರೆಯು [illegible] ಅಥವಾ [illegible] ಅಸ್ಪತ್ರೆಯನ್ನು [illegible] ಇಲ್ಲಿಂದ ತೆಗೆಯುವದಕ್ಕೆ [illegible] ಸಾಧ್ಯ[illegible] ಅನುವಿದ್ದ [illegible] ಈ ವಿಷಯವನ್ನು [illegible] ಬೋರ್ಡಿನವರು [illegible] ಆಸ್ಪತ್ರೆಯನ್ನು ಇಲ್ಲಿಯೇ ಇರಗೊಳಿಸಬೇಕಾಗಿ ಪ್ರಾರ್ಥನೆ ಎಂದು [illegible]

ಕಾಸರಗೋಡು: [illegible] ಸಭೆಯು [illegible] ಶ್ರೀ [illegible] ನಡೆಯಿತು [illegible] ಸ್ಥಳೀಯ [illegible] ಕಾಂಗ್ರೆಸ್ ಮಾಡಲಾಯಿತು.

ನೋಟೀಸು

ಪುತ್ತೂರು ಡಿ ಮುನ್ಸಿಫ್ ಕೋರ್ಟಿನಲ್ಲಿ

[illegible]

ಈಶ್ವರ ಭಟ್ಟ—ವಾದಿ

[illegible]—ಪ್ರತಿವಾದಿ

ಸದ್ರಿ ಪ್ರತಿವಾದಿ [illegible] ಮಾಡುವ ನ್ಯಾಕಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲಿನ ವ್ಯಾಜ್ಯವು ತಾ 8-7-35ಕ್ಕೆ ಅಖೈರಿ ತೀರ್ಮಾನದ ಬಗ್ಗೆ ಇಟ್ಟಿರುತ್ತದ ಸದ್ರಿ ತಾರೀಕು ಹಗಲು ಘಂಟೆ 10ಕ್ಕೆ ಈ ಕೋರ್ಟು ಮುಂದೆ ಸ್ವತಹವಾಗಲೀ ವಕೀಲರ ದ್ವಾರವಾಗಲೀ ಹಾಜರು ಆಗಿ ತಿಳಿಸಿಕೊಳ್ಳತಕ್ಕದ್ದು ಹಾಗೆ ಹಾಜರು ಆಗದಿದ್ದರೆ-ಈ ವಿಷಯದಲ್ಲಿ ಏಕಪಕ್ಷ ವಿಚಾರಣೆಯಿಂದ ತೀರ್ಮಾನಿಸಲಾಗುವುದು.

ಪುತ್ತೂರು,
2—7—35.

C. S. Shastry,
Vakil for Plff.

ಈ ವಾರದ ತಂತಿವಾರ್ತೆಗಳು.

ಬ್ರಿಟನ್‌ನಲ್ಲಿ ಪ್ರಚಂಡ ಬಿರುಗಾಳಿ ವಿಪರೀತ ನೆರೆ.

ಬ್ರಿಟನಿನ ಹಲವು ಕಡೆಗಳಲ್ಲಿ ಮಹಾ ಉಷ್ಣವಿದ್ದಿದೆ, ಅದರೊಡನೆ ಬಿರುಗಾಳಿಯೂ ಬೀಸುತ್ತಿದೆ. ಗ್ಲಾಸ್ಗೋವಿನಲ್ಲಿ ಬರಿಯ ಒಂಭತ್ತು ತಾಸುಗಳಲ್ಲಿ ಮೂರು ಅಂಗುಲದಷ್ಟು ಮಳೆಯು ಬಂತು. ಪರ್ಗ ಶಯರಿನಲ್ಲಿ ಒಂದು ದೊಡ್ಡ ಸಂಕವನ್ನು ನೀರು ಕೊಚ್ಚಿಕೊಂಡು ಹೋಗಿದೆ. ಗ್ಲಾಸ್ಗೋವಿನಲ್ಲಿಯ ಹಲವು ಪ್ರದೇಶಗಳು ಜಲಮಯವಾಗಿವೆ. ಬಿರುಗಾಳಿಯು ಬೀಸಿ ಹಲವು ಮನೆ ಮಠಗಳನ್ನು ನೆಲಕ್ಕುರುಳಿಸಿರುತ್ತದೆ.

ಆಂಗ್ಲೊ ಇಂಡಿಯನ್ ಯುವಕಯುವತಿಯರಿಬ್ಬರ ಮರಣ.

ಹುಬ್ಬಳ್ಳಿ, ಜೂನ್ ೩೦

ಗದಗಿನ ಒಬ್ಬ ಆಂಗ್ಲೊ ಇಂಡಿಯನ್ ತರುಣಿಯು ರೈಫಲ್ ಹೊಡೆತದಿಂದ ಮರಣ ಹೊಂದಿರುವಳು. ಇವಳ ಮೃತದೇಹವು ಬಿದ್ದಿದ್ದ ಕಡೆ ಒಬ್ಬ ಆಂಗ್ಲೋ ಇಂಡಿಯನ ಯುವಕನೂ ರೈಫಲಿನಿಂದಾದ ಘಾಯದಿಂದ ಮೃತನಾಗಿ ಬಿದ್ದಿದ್ದನು. ಮೃತ ತರುಣಿಯ ಗಂಡನು ಸ್ಟೇಶನ್ ಡ್ಯೂಟಿಗಾಗಿ ಹೊರಗೆ ಹೋಗಿದ್ದನು. ಈ ವಿಷಯವಾಗಿ ತನಿಖಿ ನಡೆಸುತ್ತಿದ್ದಾರೆಂದು ವಾಯುವಾರ್ತೆ ಪ್ರಕಟಿಸಿದೆ.

ನ್ಯೂಯೋರ್ಕಿನಲ್ಲಿ ಮಳೆಯ ಹಾವಳಿ

ಸಂಯುಕ್ತ ಸಂಸ್ಥಾನದ ಪಶ್ಚಿಮ ಪ್ರಾಂತ್ಯದಲ್ಲಿ ವಿಪರೀತ ಮಳೆ ಬಂದು ನದಿಗಳಲ್ಲಿ ನೀರು ತುಂಬಿ, ೧೬೩ ಜನರು ಮರಣಹೊಂದಿದರು. ನೆಬ್ರಾಸ್ಕಾದಲ್ಲಿ ೧೦೬ ಜನರು ಮರಣಹೊಂದಿದರು. ಪ್ರವಾಹಕ್ಕೊಳಗಾದ ಸಂಸ್ಥಾನಗಳೆಂದರೆ ನೆಬ್ರಾಸ್ಕಾ, ಟೆಕ್ಸಾಸ್, ಒಕಲಹಾಮಾ, ಕೊಲೊರೇಡೊ, ವ್ಯೋಮಿಂಗ್ ಮತ್ತು ನ್ಯೂ ಮೆಕ್ಸಿಕೊ.

ಫ್ರಾನ್ಸಿನ ಚೇಂಬರಿನಲ್ಲಿ ತರುಣಿಯೊಬ್ಬಳ ಗೊಂದಲ.

ಫ್ರಾನ್ಸಿನ ಚೇಂಬರ್ ಸಭೆಯಲ್ಲಿ ಆಶ್ಚರ್ಯಕರ ಸಂಘಟನೆಯೊಂದು ನಡೆಯಿತು. ಪ್ರಾಮುಖ್ಯ ಚರ್ಚೆಯು ನಡೆಯುತ್ತಿದ್ದಾಗ, ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಸುಂದರಿ ಹೆಂಗಸೊಬ್ಬಳು ಒಂದು ಹಗ್ಗದ ಸಹಾಯದಿಂದ ಮೆಲ್ಲನೆ ಕೆಳಗಿಳಿದು ಡೆಪ್ಯೂಟಿಯ ಸ್ಥಾನದಲ್ಲಿ ಬಂದು ಕುಳಿತುಬಿಟ್ಟಳು. ಇದನ್ನು ಕಂಡು ಸಭಾ ಸದಸ್ಯರು ಬಹು ಕೋಪಗೊಂಡರು. ಪೋಲೀಸರನ್ನು ಕರೆಯಲಾಯಿತು. ಪೋಲೀಸರು ಅವಳನ್ನು ಹೊರಗೆ ಕರೆದೊಯ್ದರು. ಈ ಸಂಘಟನೆಯಿಂದಾಗಿ ಸಭೆಯು ಮುಂದಿಡಲ್ಪಟ್ಟಿತು. ವಿಚಾರಿಸಲಾಗಿ "ದೇಶದ ಪ್ರಜಾಸಂತತಿಯು ಬಡತನದಿಂದ ನಾಶವಾಗುತ್ತಿರುವುದನ್ನು ಇವರಿಗೆ ತಿಳಿಸುವುದಕ್ಕಾಗಿ ನಾನು ಹೀಗೆ ಮಾಡಿದೆ" ಎಂದು ಅವಳು ಹೇಳಿದಳು.

ಕನಸಿನ ಫಲವಾಗಿ ಮೂರ್ತಿ ಸಿಕ್ಕಿತು

ಸತ್ಯ ಯುಗದ ನಾರಾಯಣ ಮೂರ್ತಿಯೊಂದು ಬಂಗಾಳಿಯೊಬ್ಬನಿಗೆ ವಿಚಿತ್ರ ಸನ್ನಿವೇಶದಲ್ಲಿ ದೊರಕಿರುವುದು. ಬಾಬು ರಮಣ ಕಾಂತ ಮೋದಿ ಎಂಬ ಬಂಗಾಳಿಯು ರಾತ್ರಿ ಮಲಗಿ ನಿದ್ದೆ ಮಾಡುತ್ತಿದ್ದನು. ಅವನಿಗೆ ಒಂದು ವಿಚಿತ್ರ ದೃಶ್ಯವು ಕಂಡು ಬಂತು. ತಾನು ಬಹು ಭೀಕರ ಜಲಧಿಯಲ್ಲಿದ್ದಂತೆ ಭಾಸವಾಯಿತು. ಸಮುದ್ರದ ಒಂದೆಡೆಯಿಂದ ಉಗ್ರ ರೂಪಿಗಳಾದ ದೊಡ್ಡದೊಡ್ಡ ಮೃಗಗಳು ಅವನಿಗೆ ಕಂಡುಬಂದುವು. ಅವನು ಸಮುದ್ರವನ್ನು ದಾಟಿದಂತೆ ಭಾಸವಾಯಿತು. ದೃಶ್ಯವು ಮಾಯವಾಯಿತು. ಒಡನೆ ಒಂದು ಕೂಗು ಕೇಳಿಸಿತು. "ನಾನು ಇಲ್ಲಿದ್ದೇನೆ, ನನ್ನನ್ನು ರಕ್ಷಿಸು" ಎಂದಿತು. ಮರುದಿನ ಬೆಳಿಗ್ಗೆ ಅವನು ಸಮೀಪದ ಗಿಡವೊಂದಕ್ಕೆ ಅಕಸ್ಮಾತ್ ನೀರು ಹೊಯ್ಯಲು ಹೋದನು. ಅಲ್ಲಿ ಅವನಿಗೊಂದು ಸಣ್ಣ ವಿಗ್ರಹವು ದೊರೆಯಿತು. ಪುರೋಹಿತರೊಡನೆ ವಿಚಾರಿಸಿದಾಗ ಅದು ಸತ್ಯಯುಗದ ನಾರಾಯಣ ದೇವರ ವಿಗ್ರಹವೆಂದು ತಿಳಿದುಬಂತು.

ಕೆಲವು ದಿನಗಳ ಹಿಂದೆ ಜರ್ಮನಿಯ ರೀನ್ ಡಶಿಪ್ (?) ಸಿಡಿಮದ್ದಿನ ಕಾರ್ಖಾನೆಯಲ್ಲಿ ಆದ ಸ್ಫೋಟನೆಯ ದೆಸೆಯಿಂದ ಉಂಟಾಗಿರುವ ಮರಣವು ೧೦೨ ಎಂದು ಈಗ ಲೆಕ್ಕ ಹಾಕಲಾಗಿದೆ.

ಎಬಿಸೀನಿಯಾ ಸಮಸ್ಯೆ. ಬ್ರಿಟಿಷ ಸಲಹೆಯು ಇಟಲಿಯಿಂದ ತಿರಸ್ಕೃತವಾಯಿತು!

ಲಂಡನ್, ಜುಲಾಯಿ ೧

ಮಿ। ಏಡನರು ರೋಮಿಗೆ ಪಟ್ಟಣಕ್ಕೆ ಹೋಗಿ ಅಲ್ಲಿಯ ಸರ್ವಾಧಿಪತಿಗಳಾದ ಸೀನಿಯರ್ ಮುಸ್ಸೋಲಿನಿಯವರನ್ನು ಕಂಡು, ಯುರೋಪು ಖಂಡದ ಶಾಂತಿರಕ್ಷಣೆಯ ಕುರಿತಾಗಿ ಅವರೊಡನೆ ಮಾತನಾಡಿ ಹಿಂತಿರುಗಿದರು. ಮಿ। ಏಡನರನ್ನು ಪ್ರಶ್ನಿಸಿದ್ದಲ್ಲಿ, ಅವರು ಹೀಗೆಂದರು —"ಇಟಲಿ ಎಬಿಸೀನಿಯನರೊಳಗಣ ಕಚ್ಚಾಟವನ್ನು ನಿಲ್ಲಿಸಬೇಕೆಂದು ಬ್ರಿಟಿಷ ಸರಕಾರವು ಆಶಿಸಿ, ಬ್ರಿಟಿಷ ಸೊಮಾಲಿಲೆಂಡ್‌ನ ಒಂದು ತುಂಡು ಪ್ರಾಂತ್ಯವನ್ನು ಇಟಲಿಗೆ ಕೊಡಬೇಕೆಂದೂ, ಇಂತಹ ರಿಯಾಯಿತಿಯನ್ನು ಕೊಡುವುದರಿಂದಾಗಿ ಇಟಲಿಯು ಅಬಿಸೀನಿಯಾಕ್ಕೆ ಸಲ್ಲಿಸಲಿರುವ ರಿಯಾಯಿತಿಯು ಪೂರ್ತಿಗೊಳ್ಳುವುದೆಂದೂ ತಿಳಿಸಿದೆವು. ಪ್ರತಿಫಲವಾಗಿ ಬ್ರಿಟನಿಗೆ ಏನೂ ಅಗತ್ಯವಿರುವುದಿಲ್ಲವೆಂದೂ, ಇಟಲಿಯ ವಶದಲ್ಲಿರುವ ಪ್ರದೇಶಗಳಲ್ಲಿ ದನ ಮೇಯಿಸುವ ಹಕ್ಕುಗಳನ್ನು ಮಾತ್ರ ಆ ಪ್ರಾಂತ್ಯದ ಹಳ್ಳಿಗರಿಗೆ ಕೊಡಬೇಕೆಂದೂ ನಾವು ಮುಸ್ಸೋಲಿನಿಯವರಿಗೆ ಸೂಚಿಸಿದೆವು. ಆದರೆ ಮುಸ್ಸೋಲಿನಿಯವರು ಈ ಸಲಹೆಯನ್ನು ಸ್ವೀಕರಿಸಲೊಪ್ಪಲಿಲ್ಲ"

'ಬ್ರಿಟನು ಶಾಂತಿಪಥವನ್ನನುಸರಿಸುತ್ತಿದೆ' ಬ್ರಿಟಿಷ ಪ್ರಧಾನ ಮಂತ್ರಿಗಳ ಹೇಳಿಕೆ

ಲಂಡನ್ ಜೂನ್ ೨೯

"ಬ್ರಿಟಿಷ್ ಧೋರಣೆಯು ಲೀಗ್ ಆಫ್ ನೇಶನ್ಸಿನ ಕಾವನೆಂಟನ್ನು ಪೂರ್ಣವಾಗಿ ಹೊಂದಿಕೊಂಡಿದೆ. ಶಾಂತಿಪಥವನ್ನನುಸರಿಸುವುದೇ ಅದರ ಮುಖ್ಯ ಧೋರಣೆ. ಯೂರೋಪಿನಲ್ಲಿಯೂ ಇತರ ದೇಶಗಳಲ್ಲಿಯೂ ಶಾಂತಿಗಾಗಿಯೂ ಪರಸ್ಪರ ಸೌಹಾರ್ದಕ್ಕಾಗಿಯೂ ಬ್ರಿಟನು ಪರಿಶ್ರಮಪಡುತ್ತಾ ಇದೆ" ಎಂದು ಮಿ। ಬಾಲ್ಡ್‌ವಿನ್ನರು ಫೇಲ್ಲಿನ ಟ್ರಾಂಹಂ ಪಾರ್ಕಿನಲ್ಲಿ ನೇಶನಲ್ ಸರಕಾರದ ಪ್ರದರ್ಶನದ ವೇಳೆ ಭಾಷಣ ಮಾಡಿದರು. ಫೆಬ್ರವರಿ ೩ನೇ ತಾರೀಕಿನಲ್ಲಿ ಆಂಗ್ಲೋ ಫ್ರೆಂಚ್ ಒಪ್ಪಂದದಲ್ಲಿ ಸೂಚಿತವಾಗಿರುವ ಧೋರಣೆಯೇ ನಮ್ಮ ಕಾರ್ಯಕ್ರಮವಾಗಿರುತ್ತದೆ. ಸ್ಟ್ರೆಸಾ ಸಮ್ಮೇಳನದಲ್ಲಿ ಫ್ರಾನ್ಸು ಇಟಲಿಯೊಡನೆ ಬ್ರಿಟನ್ನು ಮಾಡಿಕೊಂಡಿರುವ ಒಪ್ಪಂದಕ್ಕೂ ಈಗ ಬ್ರಿಟನಿಗೂ, ಜರ್ಮನಿಗೂ ಆಗಿರುವ ಒಪ್ಪಂದಕ್ಕೂ ಅಸಾಮಂಜಸ್ಯವಿಲ್ಲ ಎಂದರು

ಡಾರ್ಜಿಲಿಂಗಿನಲ್ಲಿ ಭೂಕಂಪ'

ಕಲ್ಕತ್ತ ಜುಲೈ ೩

ಡಾರ್ಜಿಲಿಂಗ್ ಮತ್ತು ಜಲ್‌ಪೈಗುರಿಯಲ್ಲಿ ಸಾಧಾರಣದ ತೀಕ್ಷ್ಣತೆಯ ಭೂಕಂಪವು ಆದಿತ್ಯವಾರ ಮಧ್ಯಾಹ್ನ ನಡೆಯಿತು. ಪ್ರಾಣ ನಾಶವಾಗಿರಲಿಲ್ಲ

ಮೈಸೂರು ವಿದ್ಯಾರ್ಥಿಗೆ ಬೊಂಬಾಯಿ ವಿಶ್ವವಿದ್ಯಾಲಯದ ಬಹುಮಾನ.

ಶಿವಮೊಗ್ಗೆಯ ಡಾ। ಮಾಧವರಾಯರ ಸೋದರರು ಮಿ। ಆರ್. ಡಿ. ರಾಣೆಬೆನ್ನೂರು ಬಿ. ಎ. ಅವರು ಬೊಂಬಾಯಿ ವಿಶ್ವವಿದ್ಯಾಲಯದ ಎಲ್. ಎಲ್. ಬಿ. ಯ ಮೊದಲನೆಯ ವರ್ಷದ ಪರೀಕ್ಷೆಯಲ್ಲಿ ಮೊದಲನೆಯವರಾಗಿ ತೇರ್ಗಡೆ ಹೊಂದಿರುತ್ತಾರಾಗಿ ವಿಶ್ವವಿದ್ಯಾಲಯದವರು ಅವರಿಗೆ ಕಿನಲಾಚ್ (Kinlooh) ಸ್ವರ್ಣಪದಕವನ್ನೂ ನಾನೂರು ರೂಪಾಯಿ ಬಹುಮಾನವನ್ನು ಕೊಟ್ಟಿರುತ್ತಾರೆಂದು ತಿಳಿಸಲು ಸಂತೋಷಿಸುತ್ತೇವೆ.

ಪಾಟಿಯಾಲಾ ಮಹಾರಾಜರು ಸ್ವಸ್ಥರಾದರು. ವೆಸ್ಟ್‌ಮಿಂಸ್ಟರ್ ದೇವಸ್ಥಾನದಲ್ಲಿ ಮೂರು ದಿನಗಳ ಪ್ರಾರ್ಥನೆ.

ಲಂಡನ್, ಜೂನ್ ೩೦

ಪಂಜಾಬಿನಲ್ಲಿ ಪಾಟಿಯಾಲ ಮಹಾರಾಜರು ಅಸ್ವಸ್ಥರಾಗಿದ್ದರು. ಅವರ ಅಸ್ವಸ್ಥತೆಯು ಸಿವಾರಣೆಯಾಗಲೆಂದು ವೆಸ್ಟ್‌ಮಿಂಸ್ಟರ್‌ನಲ್ಲಿರುವ ಭೂಪೇಂದ್ರ ದೇವಸ್ಥಾನದಲ್ಲಿ ಮೂರು ದಿನಗಳ ಪ್ರಾರ್ಥನೆಯು ನಡೆಯಿತು. ಪ್ರಾರ್ಥನೆಯು ಅಂತ್ಯವಾಗುವುದರೊಳಗೆ ಬೆಂಗಳೂರಿನಿಂದ ಒಂದು ವರ್ತಮಾನವು ಬಂದು, ಮಹಾರಾಜರು ಆರೋಗ್ಯ ಹೊಂದಿರುವರೆಂದೂ ಈ ದಿನ ಟ್ರಾಂಗ್ ಕ್ಲಬ್ ಕುದುರೆ ಪಂದ್ಯದಲ್ಲಿ ಭಾಗವಹಿಸಿದ್ದರೆಂದೂ ತಿಳಿದುಬಂತು

೫೦೦ ಅತಿಥಿಗಳು ನೆರೆದುಬಂದರು- ಮದುವೆಯು ಮಾತ್ರ ಜರಗಲಿಲ್ಲ!

ಹುಡುಗನಿಗೆ ಹುಡುಗಿಯ ವೇಷ ಹಾಕಿದರು.

ವಿವಾಹಪ್ರಿಯ ವರನನ್ನು ವಂಚಿಸಿದರೇ?

ಇದು ಲಕ್ನೋವಿನಲ್ಲಿ ನಡೆದ ಕತೆ. ರಾಮ ಕಾಸ್ ಎಂಬ ಲಕ್ನೋವಿನ ಧನಿಕನೊಬ್ಬನಿಗೆ ವಿವಾಹವಾಗಬೇಕೆಂಬ ಇಚ್ಛೆಯುಂಟಾಯಿತು. ವಧುವನ್ನು ಅನ್ವೇಷಿಸುತ್ತಿದ್ದಾಗ ದೈವವಶಾತ್ ಮಹೇಶ್ ಎಂಬವನು ವರನಿಗೆ ಗಂಟುಬಿದ್ದ; ಬಾರಾಬಂಕಿಯಲ್ಲಿ ನನ್ನ ಕುಟುಂಬದಲ್ಲಿ ಸುಂದರಿಯಾದ ವಧುವಿರುತ್ತಾಳೆಂದೂ ಹುಡುಗಿಯನ್ನು ನೋಡಲು ಬನ್ನಿರೆಂದೂ ಹೇಳಿ ಕೆಲವು ದಿನಗಳ ನಂತರ ರಾಮ್‌ಕಾಸನನ್ನೂ ಅವನ ಅಣ್ಣನನ್ನೂ ಬಾರಾಬಂಕಿಗೆ ಕರೆದುಕೊಂಡು ಹೋದನು. ಇಬ್ಬರೂ ವಧುವನ್ನು ನೋಡಿದರು. ಅವಳ ವದನಾರವಿಂದವನ್ನು ನೋಡಿ ಆನಂದತುಂದಿಲರಾಗಿ ಮದುವೆಯ ನಿಶ್ಚಯ ಮಾಡಿದರು. ಮದುವೆಗೆ ಒಂದು ವಾರವಿದೆಯೆಂಬಾಗ ಮಹೇಶನು ರಾಮ್‌ಕಾಸನ ಮನೆಗೆ ಬಂದು "ವಧುವಿನ ತಾಯಿಯು ಬಹು ಬಡವಳು. ೩೦೦ ರೂಪಾಯಿಗಳಿಲ್ಲದ ವಿನಹ ವಿವಾಹವನ್ನು ಸುಖವಾಗಿ ಜರಗಿಸಲು ಸಾಧ್ಯ" ಎಂದನು. ಪಾಪ! ಸಂದಿಗ್ಧನಾದ ರಾಮ್‌ಕಾಸನು ೩೦೦ ರೂಪಾಯಿಗಳನ್ನು ಮಹೇಶನಿಗೆ ಕೊಟ್ಟನು.

ಮದುವೆಯ ದಿನವು ಬಂತು. ರಾಮ್‌ಕಾಸನ ಮನೆಯಲ್ಲಿ ವಾದ್ಯವಾಲಗಗಳೇನು? ಗೌಜಿಗದ್ದಲವೇನು? - ನೆಂಟರಿಷ್ಟರೇನು? - ಅತಿಥಿ ಅಭ್ಯಾಗತರೇನು? ೫೦೦ ಅತಿಥಿಗಳು ನೆರೆದಿದ್ದರು. ವಿವಾಹ ಚಪ್ಪರದಲ್ಲಿ ಕುಳಿತು ಬಾರಾಬಂಕಿಯಿಂದ ಬರಲಿದ್ದ ವಧುವಿನ ದಿಬ್ಬಣವನ್ನು ನಿರೀಕ್ಷಿಸುತ್ತಿದ್ದರು. ಅಪರಾಹ್ನ ಮೂರು ಗಂಟೆಗೆ ಬರುವೆವೆಂದು ಮಾತುಕೊಟ್ಟಿದ್ದ ವಧುವಿನ ಕಡೆಯವರ ಪತ್ತೆಯೇ ಇಲ್ಲ! ಇದೇನು ಕಷ್ಟ? ಎಂದು ಸಂಜೆ ಏಳು ಗಂಟೆಗೆ ವರನ ಕಡೆಯವರು ಮೋಟಾರಿನ ಮೂಲಕ ಬಾರಾಬಂಕಿಗೆ ಹೋದರು. ವಧುವಿನ ಮನೆಯನ್ನು ಕಂಡರು—ಹೇಳಲೇನು?—ಹೊರಗಿನಿಂದ ಮನೆಗೆ ಬಾಗಿಲು ಹಾಕಿ ದೊಡ್ಡದೊಂದು ಬೀಗವನ್ನು ಹಾಕಿದ್ದರು. ನೆರೆಹೊರೆಯವರೊಡನೆ ವಿಚಾರಿಸಿದರು. ತಿಳಿದುದೇನು? ಮಹೇಶನಿಗೆ ಅಲ್ಲಿ ಕುಟುಂಬಿಕರೂ ಇಲ್ಲ— ಆ ಕುಟುಂಬಿಕರಿಗೆ ವಿವಾಹವಯಸ್ಕಳಾದ ಪುತ್ರಿಯೂ ಇಲ್ಲ! ಕೇಳಿ ಅವರ ತಲೆಗೆ ಒನಕೆಯಿಂದ ಎರಡೇಟು ಕೊಟ್ಟಂತಾಯಿತು. ಬಂದವರು ಟೋಪಿಯನ್ನು ತಿರುಗಿಸಿಟ್ಟು ಮನೆಗೆ ಹಿಂತಿರುಗಿದರು. ವಾರ್ತೆಯು ಅತಿಥಿಗಳ ಕಿವಿಗೆ ಬೀಳುತ್ತಲೇ ಅವರು ಕಂಗೆಟ್ಟರು!— ಮದುವೆಯಿಲ್ಲದ ಭೋಜನವನ್ನಂತೂ ನೆನೆನೆನೆದು ಅವರಿಗೆ ಕೋಪಬರುತ್ತಿತ್ತು! ಅದರೊಡನೆ ಪಾಯಸದಡಿಗೆಗಳು ಅಷ್ಟರ ತನಕವೂ ಉದರದಾಳಕ್ಕೆ ಹೋಗದಿರುವ ಉರಿ ಅವರಿಗೆ!

ಈಗ ಮಹೇಶನನ್ನೂ ಹುಡುಗಿಯೆಂದು ವೇಷವಿಟ್ಟಿದ್ದ ಹುಡುಗನನ್ನೂ ಸೆರೆಹಿಡಿದು ಕೋರ್ಟಿಗೆ ತಂದಿರುವರು.

ಜಪಾನಿನಲ್ಲಿ ನೆರೆ—60 ಜನರ ಮರಣ!

ಟೋಕಿಯೋ, ಜೂನ್ ೨೯.

ಜಪಾನಿನಲ್ಲಿ ಕಳೆದ ವಾರ ಬಹು ಬಿರುಸಾಗಿ ಮಳೆ ಸುರಿಯಿತು. ನೆರೆ ಬಂತು. ಕ್ಯೋಟೋ, ಒಸಾಕಾ, ಕಿಬು ಎಂಬ ಪ್ರಾಂತ್ಯಗಳಲ್ಲಿ ಜನರು ಮನೆಮಾರುಗಳನ್ನೇ ಕಳಕೊಂಡರು. ಕ್ಯೋಟೋ ಎಂಬಲ್ಲಿ ೨೦,೦೦೦ ಜನರು ನಿರಾಶ್ರಿತರಾಗಿರುವರು. ಒಸಾಕಾದಲ್ಲಿ ೬೦,೦೦೦ ಜನರಿಗೆ ಮನೆಯಿಲ್ಲ. ೨೦,೦೦೦,೦೦೦ ಯೆನ್‌ಗಳಷ್ಟು ನಷ್ಟವಾಗಿದೆ. ೬೦ ಶವಗಳು ದೊರಕಿವೆ

ಮಾರ್ಗಗಳಲ್ಲಿ ಬಿರುಕುಬಿದ್ದಿವೆ- ಭೂಕಂಪದ ಫಲವು ಅಲ್ಲಹಾಬಾದಿನಲ್ಲಿ.

ಜುಲಾಯಿ, ೨

ಅಲ್ಲಹಾಬಾದಿನಲ್ಲಿ ಬಿರುಸಾದ ಮಳೆಯು ಬಂದು ಮಾರ್ಗಗಳು ನದಿಗಳಾದುವು. ನೀರು ಇಳಿದುಹೋದ ನಂತರ ಜೋರ್ಜ್ ಟೌನ್, ಸಿವಿಲ್ ಸ್ಟೇಷನ್ ಹೆಮಿಲ್ಟನ್ ರೋಡುಗಳಲ್ಲಿ ಅರ್ಧ ಮೈಲುಗಳಂತಲೂ ಉದ್ದಕ್ಕೆ ಮಾರ್ಗಗಳಲ್ಲಿ ಬಿರುಕು ಬಿದ್ದುವು. ಭೂಮಿಯು ಸರಿಯಾಗಿ ಎರಡು ಹೋಳುಗಳಾಗಿದೆ. ಅನೇಕ ಜನರು ದೈವವಶಾತ್ ಅವುಗಳಿಂದ ಪಾರಾದರು. ಮುನಿಸಿಪಾಲಿಟಿಯವರು ಈ ಬಿರುಕುಗಳನ್ನು ಮುಚ್ಚುತ್ತಿರುವರು. ಜನರಿಗೆ ಎಚ್ಚರಿಕೆಯನ್ನು ಕೊಟ್ಟಿರುವರು. ಮುನಿಸಿಪಲ್ ಎಂಜಿನಿಯರರು ಹೇಳುವಂತೆ—ಈ ಬಿರುಕುಗಳು ಹೋದ್ಸಿನ ಭೂಕಂಪದ ಪರಿಣಾಮವಾಗಿ ಬಿದ್ದಿವೆಯೆಂದೂ ಭೂಮಿಯ ಒಳಪಾರ್ಶ್ವವು ಒಡೆದುಹೋಗಿರುವುದರಿಂದ ಕ್ರಮೇಣ ಮೇಲ್ಭಾಗವೂ ಒಡೆಯಿತೆಂದೂ ಗೊತ್ತಾಗಿದೆ

ಭೀಕರ ಭೂಕಂಪ-ಬಹುವಾದ ಅನಾಹುತ'

ಇಸ್ತಾಂಬುಲ್ ಜೂನ್ ೩೦

ಇಲ್ಲಿ ತಾ ೩೦ನೇ ದಿನ ಭೀಕರ ಭೂಕಂಪವಾಯಿತು. ಜನರು ಪ್ರಾಣಭಯದಿಂದ ಬಯಲು ಸ್ಥಳಗಳಿಗೆ ಓಡಿದರು. ಕೆಟ್ಟ ಅನಾಹುತವೂ ನಷ್ಟವೂ ಉಂಟಾಗಿದೆ

ವಜ್ರಗಳು! —— ವಜ್ರಗಳು!

ನಮ್ಮಲ್ಲಿ 'ಅಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಹಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

Part Proprietors of —
Sri Krishna Mills & Co
Oil Manufacturers
Bunder, Mangalore

Bhagavan Ganesh Pai & Co
Copper Sheet & Twist
Merchants, Camp Bazar,
Cannanore.

Representatives for the W.C.
M/s. A & F. Harvey
Cotton Spinners,
Tuticorin, Madura &c.

Guardian Assurance Co., Ltd.
(Incorporated in England)
Head Office: 68, King
William Street,
London, E C 4.

ಹಿಂದೀಯರಾದ ನಾವು ಹೇಗೆ ಮೋಸಹೊಂದುವೆವು!

ಓದಿರಿ – ದೀನರಾದ ನಮ್ಮ (ಹಿಂದೀಯರ) ಅಜ್ಞಾನವನ್ನು ವಿದೇಶೀ ಕಾರ್ಖಾನೆದಾರರು ಹೇಗೆ ಸದುಪಯೋಗ ಪಡಿಸಿಕೊಳ್ಳುವರೆಂಬುದನ್ನು ತಿಳಿದುಕೊಳ್ಳಲು—ಓದಿರಿ ಇದನ್ನು!—

ನೆಲಗಡಲೆ ಎಣ್ಣೆಯು ಬಾದಾಮಿ ಎಣ್ಣೆಯಾಗಿದೆಯೆಂದು ಗೊತ್ತೇ?

ನಮ್ಮ ದೇಶದಲ್ಲಿ "ಶುದ್ಧ ಲೂಕಾ ಬಾದಾಮಿ ಎಣ್ಣೆ",ಎಂಬ ಹೆಸರಲ್ಲಿ ಮಾರಾಟಮಾಡಲ್ಪಡುತ್ತಿರುವ ಎಣ್ಣೆಯು ಬಾದಾಮಿ ಎಣ್ಣೆಯಲ್ಲ; ನಮ್ಮ ದೇಶದಿಂದಲೇ ಒಯ್ದು ನೆಲಗಡಲೆಯಿಂದ ತೆಗೆದ ಶುದ್ಧ ನೆಲಗಡಲೆ ಎಣ್ಣೆಯಾಗಿದೆ. ("ಇಂಡಿಜೆನಸ್ ಡ್ರಗ್ ಒಫ್ ಇಂಡಿಯಾ" ಇದರ ಪುಟ 59ನ್ನು ನೋಡಿ.)

ವನಸ್ಪತಿ ತೈಲವಲ್ಲ–ಮೀನಿನ ತೈಲ' ತಿಳಿಯಿತೇ?

"ಇಂಪೀರಿಯಲ್ ಕೌನ್ಸಿಲ್ ಒಫ್ ಅಗ್ರಿಕಲ್ಚರಲ್ ರಿಸರ್ಚ್" ಇದರ "ಇಂಡಿಯನ್ ಓಯಿಲ್ ಕ್ರಶ್ಶಿಂಗ್ ಇಂಡಸ್ಟ್ರಿ ಕಮಿಟಿ"ಯ ತೃತೀಯ ಸಭೆಯಲ್ಲಿ, ಪ್ರಕೃತ ಪರದೇಶದಿಂದ "Edible Hardened Oil" (ಆಹಾರಕ್ಕುಪಯೋಗಿಸಬಹುದಾದ ತೈಲ) ಎಂಬ ಚೀಟನ್ನು ಹಚ್ಚಿಸಿ, ಪರದೇಶಗಳಿಂದ ಮತ್ಸ್ಯತೈಲವನ್ನು ಹಿಂದೂದೇಶಕ್ಕೆ ಆಮದು ಮಾಡಿ "ಸಸ್ಯತೈಲ"ವೆಂಬುದಾಗಿ ಮಾರಾಟಮಾಡುತ್ತಿರುವರೆಂದು ಬಯಲಾಯಿತು ಆದರೆ,—

ಸತ್ತ, ಹೆಗ್ಗಣಗಳ, ಬೆಕ್ಕುಗಳ, ನಾಯಿಗಳ ಮತ್ತು ದನ ಇತ್ಯಾದಿಗಳ ಕೊಬ್ಬಿನಿಂದಾಗುವ ಸಾಬೂನುಗಳು'–

ಇವುಗಳಿಗೆ ಸರಿಗಟ್ಟುವಂತಹುದು ಮತ್ತಾವುದಿದೆ? ಯುರೋಪಿನಲ್ಲಿ ಮೃಗಗಳ ಕೊಬ್ಬನ್ನೂ ಮೀನು ಎಣ್ಣೆಯನ್ನೂ ಆಹಾರಕ್ಕಾಗಿ ಉಪಯೋಗಿಸುತ್ತಿರುವಲ್ಲಿ ಸಾಬೂನುತಯಾರಿಯಲ್ಲಿ ಉಪಯೋಗಿಸುವ ಹೆಚ್ಚಿನ ಕೊಬ್ಬುಗಳು ಸತ್ತ ಮೃಗಗಳ ಶರೀರಗಳಿಂದಲೂ, ವಧಾಖಾನೆಗಳಿಂದಲೂ, ರಸ್ತೆಗಳ 'ಕಚರಾ'ದಿಂದಲೂ, ಒಮ್ಮೊಮ್ಮೆ ನರದೇಹಗಳಿಂದಲೂ ದೊರಕಿಸಿಕೊಂಡಂಥವುಗಳಾಗಿವೆ. (ಸರ್ ಎಫ್. ಎ. ಟಾಲ್ಬೋಟರವರ "ಮಿಲ್ಲಿಯನ್ಸ್ ಫ್ರೊಮ್ ವೇಸ್ಟ್" ಎಂಬ ಗ್ರಂಥವನ್ನೋದಿರಿ)

ಗೊಡ್ರೆಜ್ ವನಸ್ಪತಿ ಸುಗಂಧಸಾಬೂನುಗಳ

ವಿಷಯವಾಗಿ, ಅದನ್ನುಪಯೋಗಿಸುವ ಪ್ರಸಿದ್ಧಪುರುಷರೇನು ಹೇಳುವರೋ ಓದಿರಿ —

ಕವಿರವೀಂದ್ರ:—"ಗೊಡ್ರೆಜ್ ಸಾಬೂನುಗಳಿಗಿಂತ ಉತ್ತಮವಾದ ವಿದೇಶೀ ಸಾಬೂನುಗಳನ್ನು ನಾನು ಕಂಡಿಲ್ಲ ಇನ್ನು ಮುಂದೆ ಗೊಡ್ರೆಜ್ ಸಾಬೂನುಗಳನ್ನೆ ಉಪಯೋಗಿಸಲು ನಿರ್ಧರಿಸಿದ್ದೇನೆ"

ಕೆಲ ವರ್ಷಗಳ ಹಿಂದೆ ಡಾ। ಅನ್ನಿಬಿಸೆಂಟರು ತಮ್ಮ 'ನ್ಯೂ ಇಂಡಿಯಾ'ದ ಪತ್ರಿಕೆಯಲ್ಲಿ, ಗೊಡ್ರೆಜ್ ಸಾಬೂನುಗಳು ಪ್ರಪಂಚದಲ್ಲಿ ಅತ್ಯುತ್ಕೃಷ್ಟವೆಂದು ಪ್ರಕಟಿಸಿದ್ದರು

ರಾಷ್ಟ್ರೀಯ ಮಹಾಸಭೆಯ ಮಾಜಿ ಅಧ್ಯಕ್ಷರಾದ ಡಾ। ಅನ್ಸಾರಿಯವರು – ಗೊಡ್ರೆಜ್ ಸಾಬೂನುಗಳ ವಿಷಯವಾಗಿ ಹೇಳುವರು —"ಗೊಡ್ರೆಜ್ ಸಾಬೂನುಗಳ ಉತ್ತಮ ಗುಣಗಳನ್ನು ಗುರುತಿಸಲು ನನಗೆ ಅತ್ಯಾನಂದವಾಗುತ್ತದೆ ನಾನು ಅವುಗಳನ್ನು ಕಳೆದ ... ವರ್ಷಗಳಿಂದಲೂ ಉಪಯೋಗಿಸುತ್ತಿದ್ದು, ಯ ರೋಪಿನ ಯಾವ ಉತ್ತಮ ಸಾಬೂನುಗಳಿಗಿಂತಲೂ ಉತ್ಕೃಷ್ಟವೆಂಬುದನ್ನು ಮನಗಂಡಿದ್ದೇನೆ ಅವುಗಳು ಹಿಂದೂದೇಶದಲ್ಲಿ ಸಿದ್ಧವಾಗುತ್ತಿರುವುದಕ್ಕೂ ಅವುಗಳ ಉತ್ಕೃಷ್ಟತೆಯ ದೆಸೆಯಿಂದಲೂ ಹಿಂದೀಯರೆಲ್ಲ ಅವುಗಳನ್ನೇ ಉಪಯೋಗಿಸಬೇಕೆಂದು ನನ್ನ ಸಲಹೆ."

ಗೊಡ್ರೆಜ್ ಗಂಧದ ಸಾಬೂನು ಮತ್ತು ಶೇವಿಂಗ್ ಸ್ಟಿಕ್ } ಇವುಗಳನ್ನು ಉಪಯೋಗಿಸಿರಿ

ಸೋಲ್ ಏಜಂಟರು:

ನಾದಿರ ಷಾ ಪ್ರಿಂಟರ್ ಎಂಡ್ ಕೋ, 165, ಬ್ರೋಡ್ವೇ, ಮದರಾಸು

ಹೆಡ್ ಆಫೀಸು: ಮುಂಬಾಯಿ ಶಾಖೆಗಳು.—ಕಲ್ಕತ್ತಾ, ಲಾಹೋರ್ ಮತ್ತು ಕರಾಚಿ

ವಿ. ಸೂ:—ಗೊಡ್ರೆಜ್‌ರವರ ಹೆಸರಲ್ಲಿ ಮಾರಾಟವಾಗುತ್ತಿರುವ ಹಾರ್ಸೋಪ್ ಮತ್ತು ಇತರ (ಬಟ್ಟೆಯೊಗೆಯುವ) ಸಾಬೂನುಗಳಿಗೂ ಗೊಡ್ರೆಜರವರಿಗೆ ಸಂಬಂಧವಿಲ್ಲ

೧೦೦ ರೂಪಾಯಿ ಬಹುಮಾನ

(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು, ಅಲ್ಲದೆ ಶಾಂತಿಯುತವಾದುದು, ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ, ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ ವ್ಯವಹಾರದಲ್ಲಿ ಜಯ. ಗಂಡು ಮಕ್ಕಳಾಗುತ್ತವೆ ಧನ ಸಿಗುತ್ತದೆ. ರೋಗ ವಾಸಿಯಾಗುತ್ತದೆ ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ. ಇದೊಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಶ್ರಮವಿಲ್ಲ. ಇನ್ನೊಬ್ಬರಿಗೆ ದಾಸರಾಗಿರಬೇಕಾದ ಅವಶ್ಯಕವಿಲ್ಲ ಇದು ನಿಮ್ಮ ಸಂಗಡ ಇದ್ದರೆ ಸಾಕು ಜಯ. ಬೆಲೆ ರೂ ೩ ಮಾತ್ರ.

CLP.S. Bengal Mesmarism House
5–7 Panchpota, Bengal (s.B.)

Wanted.

2 Canvassers of advertisements on a monthly salary of Rs 20 for our Weekly

Apply to

The Advertisement Manager,
Swadeshabhimani Mangalore.

ಕುಷ್ಠರೋಗ ಮತ್ತು ವಾತರೋಗ
ನೊಂದು ಕಂಗೆಟ್ಟು ಹೋಗಿರುವವರಿಗೆ
ಮೂಲಿಕೆಯ ಔಷಧಿಗಳಿಂದ ಆಶ್ಚರ್ಯಕರವಾದ ಪೂರ್ಣ ಗುಣವಾಗುತ್ತದೆ ಅದ್ಭುತಕರ ವಿವರಣೆ ಉಚಿತ

Veshajalaya, Chandanpur
Khulna Bengal (A W)

BIRTH-CONTROL GOODS

Sale price. For men P Co Regira 2/10 doz Neverrip ½ doz 1/1/. Paragaon Heavy ½ doz 1/10/-. For women (with directions) Solid Rim Check Pessary 1/3/-, Bulb-Spray 3/-/-, Oral Medicine for 6 months 1/4/-. Pack ag postage extra. 12½% rebate on orders ... & 25% on 12/-. The General Trading Co 186, Manicktolla Street Ca...

IMPROVED STRONG ACCURATE SWISS LEVER WRIST WATCH 2 YRS G'TD NICKEL 3/6/-, GOLDEN 4/4/-, NICKEL RADIUM 3 4/ . SHOCK-PROOF & JEWELS EVER BRIGHT CHROME 7/8/-, 15 JEWELLED CHROME 12 4/ , ... GOLD 15/ 8 TIMEPIECE 1/9/, WITH ALARM 3/ POCKET WATCH 1/13/-. POSTAGE PACKING FREE IF ORDERED 3. GENERAL TDG. CO. 186 MANICKTOLLA STREET ...

For Your Electrical Requirements

ಇಲೆಕ್ಟ್ರಿಕ್ ಫಿಟ್ಟಿಂಗು ಮಾಡಬೇಕಾದರೆ ಇಲೆಕ್ಟ್ರಿಕಲ ಸಾಮಾನುಗಳು ಬೇಕಾದರೆ

ವಿಶ್ವಾಸಕರ ವ್ಯಾಪಾರವನ್ನು ನಡೆಸಬೇಕೆಂದಿದ್ದರೆ

ನಮ್ಮ ಇಲೆಕ್ಟ್ರಿಕ್ ಸಾಮಾನಿನ ಮಾರಾಟದ ಅಂಗಡಿಯನ್ನು ಸಂದರ್ಶಿಸಿರಿ

Estimates Submitted without obligation

ಇಲೆಕ್ಟ್ರಿಕ್ ಫಿಟ್ಟಿಂಗುಗಳ ಅಂದಾಜು ಮೌಲ್ಯದ ಪಟ್ಟಿಯನ್ನು ಉಚಿತವಾಗಿ ತಯಾರಿಸಿಕೊಡುತ್ತೇವೆ.

Electric fans, Household appliances, Table lamps,

Very Attractive chandeliers and other fittings

Every thing in Electricity

Goods supplied on approval and guarantee of Manufacture

First class Goods First class Work First class Attendance

An Enquiry at our Electrical Show Rooms will cost you Nothing

And

Will gain You excellent Service.

The Canara Public Conveyance Company Ltd., Kodialbail Mangalore.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S. No 191/1935.

ಚೆರಕರೆ ಕೋರ ನಾಯರ್-ವಾದಿ.

ಮತ್ತು

1. ಪೆರಳತ್ತ ಪಯ್ಯಾಡ್ಯನ್ ಕನಿಚ್ಚಿ ವೀಟಿಲ್ ರಾಮನ್ನಾರ, ಬಿರುಧ್ವ ಹೆಂಗ್ಸಿನ ಮಗ, ವಡ್ಡಂಬಾಡ ದೇಶಂ, ಕರಿವೆಳ್ಳೂರ ಅಂಶಂ ಚಿರ್ಕಲ್ ತಾಲ್ಲೂಕು. 2. ಓಟ್ಟತಯ್ಯಿಲ್ ಮಹಮ್ಮದ ಹಸನಾರಿ ಅಳಿಯ, ಸದ್ರಿ ವಡ್ಡಂಬಾಡ ದೇಶತ್ತ. ಹಾಲಿ ಕಾಸರಗೋಡು ತಾಲೂಕು ಮೂಡು ಎಳೇರಿ ಗ್ರಾಮದಲ್ಲಿರುವವ—ಪ್ರತಿವಾದಿರು.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ-

1ನೇ ಪ್ರತಿವಾದಿಯು ವಾದಿಗೆ ತಾರೀಕು 28-10-31ರಲ್ಲು ಬರಕೊಟ್ಟ ರಜಿಸ್ಟ್ರ ಕೈವಶಪಣೆಯ ಆಧಾರಕ್ಕೆ ಕಾರಣವಾದ ಆಸ್ತಿಯಲ್ಲಿ ಇರುವ ಒಳ್ಳೆಮಣಸು ಕೊಯ್ದು ತೆಗೆಯುವರೆಯೂ, ವಾದಿಯ ಸ್ವಾಧೀನತೆಗೆ ಕೂಡಾ ಆತಂಕಪಡಿಸದಂತೆ ಪ್ರತಿವಾದಿರ ಮೇಲೆ ಶಾಶ್ವತ ಇಂಜೆಕ್ಷನ್ ಕೊಡಿಸಬೇಕಾಗಿ ವಾದಿಯು ದಾಖ್ಲೆ ಮಾಡಿದ ಮೇಲ್ಕಂಡ ವ್ಯಾಜ್ಯವು ಅಖೈರತೀರ್ಪಿ ಬಗ್ಗೆ ತಾ. 22-7-'35ಕ್ಕೆ ಇಟ್ಟಿರುತ್ತದೆ. ಆಕ್ಷೇಪವಿದ್ದಲ್ಲಿ ಕೋರ್ಟಿನ ಮುಂದೆ ಆ ದಿವಸ ಹಾಜರಾಗಿ ವ್ಯವಹರಿಸತಕ್ಕದ್ದು ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಕೋರ್ಟಿನ ಹುಕುಂ ಪ್ರಕಾರ ತಿಳಿಸೋಣಾಗಿಯದೆ.

Kasaragod, 1-7-'35. } **K Vittal Nayak,** *Advocate for Plaintiff.*

ನೋಟೀಸು.

ದಕ್ಷಿಣ ಕನ್ನಡ ಜಿಲ್ಲಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O P. No. 30/1935.

In the matter of the debts of Parwati Alias Gowri Bai—Intestate & deceased

1 ಬಿ ಶ್ರೀನಿವಾಸ ಬಾಳಿಗಾ, ಉಪೇಂದ್ರ ಬಾಳಿಗರ ಮಗ.

2. ಬಿ. ದೇವರಾವ ಬಾಳಿಗಾ, 3. ಬಿ ದಯಾನಂದ ಬಾಳಿಗಾ, 4 ಬಿ. ಸದಾನಂದ ಬಾಳಿಗಾ, 5 ಬಿ ವೆಂಕಟ್ರಾಯ ಬಾಳಿಗಾ, 1ನೇ ಶ್ರೀನಿವಾಸ ಬಾಳಿಗರ ಮಗಂದಿರು. ಪೈಕಿ 5ನೇ ಪ್ರಾಯನರ ಕ್ಷೇಮಚಿಂತಕ ತಂದೆ 1ನೇ ಅರ್ಜಿದಾರ ಶ್ರೀನಿವಾಸ ಬಾಳಿಗಾ

6. ರಾಜನಿ ಬಾಯಿ, ಕೆ ರಾಮ ರಾಯರ ಹೆಂಡ್ತಿ, 7. ಆನಂದಿ ಬಾಯಿ, ಕೆ. ಸರ್ವೋತ್ತಮ ಬಾಬು ಕಮ್ತಿರ ಹೆಂಡ್ತಿ

1 ಲಾಗಾಯ್ತು 5ನೇಯವರು ಮಂಗಳೂರ ಶಹರ ಕೊಡಿಯಾಲಬೈಲು, 6ನೇ ಬಂಟವಾಳ 7ನೇ ಕಾರ್ಕಳ ತಾಲ್ಲೂಕ ಶಿರ್ವದಲ್ಲಿ ಇರುವಂತವರು—ಅರ್ಜಿದಾರರು

ಮತ್ತು

ಬಿ ಕೇಶವರಾವ ಬಾಳಿಗಾ, ಶ್ರೀನಿವಾಸ ಬಾಳಿಗರ ಮಗ, ಪೋಸ್ಟ್ ಆಫೀಸ್ ಇನ್ಸ್ಪೆಕ್ಟರ, ಹಾಸನ ಸಬ್ ಡಿವಿಜನ್ ಚಿಕ್ಕಮಗಳೂರು—ರಿಸ್ಪಾಂಡೆಂಟ.

ಮೃತಪಟ್ಟ ಪಾರ್ವತಿ ಯಾನೆ ಗೌರಿ ಬಾಯಿಗೆ ಹೊರಗಿನಿಂದ ಬರತಕ್ಕ ಹಣಗಳ ವಸೂಲಿ ಕುರಿತು 1ನೇ ಅರ್ಜಿದಾರನ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅಪೇಕ್ಷಿಸಿ ಸದ್ರಿ ಅರ್ಜಿದಾರರು ದಾಖಲು ಮಾಡಿರುವ ಮೇಲಿನ ಅರ್ಜಿಯು ಇದೇ ಬರುವ ತಾ. 25-7-1935ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆ ನಿಶ್ಚಯಿಸಿ ಇರುವದರಿಂದ ಆಕ್ಷೇಪವುಳ್ಳವರು ತಮ್ಮ ಆಕ್ಷೇಪಗಳನ್ನು ಸದ್ರಿ ವಾಯಿದೆಗೆ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

ಮಂಗಳೂರು, 29-6-'35. } **A. Varada Rao,** *Advocate for Petrs.*

(ಕಳೆದ ಪುಟದಿಂದ ಮುಂದುವರಿದುದು)

ನಿಜಕ್ಕೂ ನನ್ನ ಆತುರವು ಹೆಚ್ಚಿ ನಾನು—ಸುತ್ತ ಚೆಡರಿದ ರೊಚ್ಚೆಯನ್ನು ಕಂಡೆ; ಪರಿಶೀಲಿಸಿದೆ. ಅದರ ಮಾದರಿಯನ್ನು ಸಹ ಮಾಡಬೇಕಾಯಿತು. ಸಾರ್ವಜನಿಕರ ಪರಾಂಬರಿಕೆಯ ಬಗ್ಗೆ ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಟ್ಟಿರುತ್ತೇನೆ.

ಒಡೆದ ಬಳೆಚೂರುಗಳು ...ನಾನ್ನೂರು ಕಾಗದ ಚೂರುಗಳು (ಅವನ್ನು ಓದಿ ನೋಡಲಾಗಿ—ಅವುಗಳಲ್ಲಿ ಕೆಲವು ಗೋವಾ ಸೋಡ್ತಿ ಚೀಟುಗಳು. ಇವು ಬಹಳವಾಗಿ ಚಿತ್ರಹಿಂಸೆಗೆ ಗುರಿಯಾದಂತೆ ಕಂಡಿತು.

ಒಂದೆರಡು ಕಾಗದದ ಚೂರುಗಳು ದಾಕ್ತರರ ಮದ್ದಿನ ಪಟ್ಟಿಗಳಾಗಿದ್ದವು. ಒಂದು ಒಡೆಯದೆ, ಸಕರೀರಿಯಾಗಿದ್ದ ವಿಸ್ಕಿ ಸೀಸೆ ಒಂದು ಮಿತಸಂತತಿಯ ವಿಷಯವಾದ ಒಂದು ಪ್ರಸಿದ್ಧ ಗ್ರಂಥ—ಇದಕ್ಕೆ ಬಹಳ ವಯಸ್ಸಾಗಿದ್ದಂತೆಯೂ ಕೆಲವೊಂದು ನಡುವಣ ಹಾಳೆಗಳು ಹರಿದು, ಉಳಿದುವು ಉಳಿದಂತೆಯೂ ಕಂಡಿತು. ಒಂದೆರಡು ವಿಶ್ವವಿದ್ಯಾಲಯದ ಪರೀಕ್ಷಾ ಪತ್ರಗಳೂ ಇದ್ದುವು ಕ್ಷೌರಾವಶೇಷಗಳು ಉಳಿದ ಮೂಲುಗಳಲ್ಲಿ ಮುಕ್ಕಾಲು ಮೂರು ವೀಸವಾಗಿತ್ತು.

ನನ್ನ ಕಣ್ಣೆದುರಿಗೇನೆ ಮುನ್ಸಿಪಲ್ ಲಾರಿಯೊಂದು ಬಂದು, ಆ ದುಸ್ತುಬೀನಿನ ನಷ್ಟಕಾಯವನ್ನು ಬಿಟ್ಟು ಉಳಿದ ಸಾಕ್ಷಿ ಕಂಭಗಳನ್ನೆಲ್ಲಾ ತಿತ್ತು ಒಯ್ದುದರಿಂದ, ಆ ಮೃತ್ಯುಪತ್ರವನ್ನು ನಾನು ಉಪಾಯವಿಲ್ಲದೆ ನಿಲ್ಲಿಸಬೇಕಾಯಿತು.

ನಾನು ಹೊರಡುವ ಗಳಿಗೆಗೆ ಅವನಾಗಿ ನನ್ನನ್ನು ಕರೆದನು

ನಾನು—ಏಕೆ?

ಅವನು—ಇಷ್ಟೆಲ್ಲ ಬರೆದುಕೊಂಡ ಮೇಲೆ ನನ್ನನ್ನು ಮರೆತು ಬಿಡುವೆಯಾ?

ನಾನು—ಇಲ್ಲ, ಆದರೆ ಏನು ಮಾಡಬೇಕು

ಅವನು—ಹಿಂದಿನ ಕಾಲದಲ್ಲಿ ಕವಿಗಳು ನನ್ನಂಥ ಬೀದಿ ಕಾಪಿನಾಳ್ವರ ಸಲುವಾಗಿ ಚರ್ಮಶ್ಲೋಕವನ್ನು ಬರೆಯುತ್ತಿದ್ದರು' ನೀನು ಯಾರನ್ನಾದರೂ ಹಿಡಿದು ನನ್ನ ವಿಷಯವಾಗಿ ಒಂದು ಅಂತಹ!

ನಾನು—ಚರ್ಮಶ್ಲೋಕವನ್ನು!

ಅವನು—ಆಗಲಾರದೇ'

ನಾನು—ನನಗೆ ಕಾವ್ಯ ಪರಿಚಯವಿಲ್ಲ, ಉಳಿದವರಿಂದ ಮಾಡಿಸಲು ಧೈರ್ಯ ಸಾಲದು'

ಅವನು—ಅಯ್ಯೋ ನನಗೆ ಯೋಗ್ಯತೆಯಿಲ್ಲ, ಅರ್ಹವಿಲ್ಲದವರಿಗೆ ಸನ್ಮಾನ ದೊರೆತಿದೆ! ಜನ್ಮದಲ್ಲಿ ಒಂದು ಗಳಿಗೆ ಸ್ವಾರ್ಥಮರೆಯದವರೂ ದಿವಾನ ಬಹದೂರರಾಗಿದ್ದಾರೆ—

ಏನಿಲ್ಲ—ಒಂದು ಸಾಮಾನ್ಯಕವನವಾದರೂ ಸಾಕು!

ನಾನು—ಪ್ರಾಸವಿಲ್ಲದಿದ್ದರೂ ಚಿಂತೆಯಿಲ್ಲವೇ!

ಅವನು—ಪ್ರಾಸ ಬೇಡ' ನನ್ನ ಹೆಸರಿಗೆ ಸರಿಪ್ರಾಸ ಬರುವ ಶಬ್ದಗಳನ್ನು ಹೆಣೆದು ಕವಿತೆ ರಚಿಸಲು, ಪ್ರಾಸವನ್ನಾಯ ಬಲ್ಲ ಪರಕವಿಗಳು ಈಗೆಲ್ಲಿ!

ನನಗೆ ಬಲು ಅವಮಾನವಾಯಿತು ಇಂದಿನ ಯುಗಧರ್ಮಕ್ಕೆ ಸರಿಯಾಗಿ ಮೌನವಾಂತು ಹೊರಟುಹೋದೆ

ಅಖಿಲ ಕರ್ನಾಟಕ ವೈದ್ಯ ಸಮ್ಮೇಲನದ ದ್ವಿತೀಯ ತ್ರೈಮಾಸಿಕ ಸಭೆ.

ಮಂಗಳೂರು, ತಾ ೩೦-೬-೩೫

ಶ್ರೀ ಸಮರ್ಥ ಔಷಧಾಲಯದಲ್ಲಿ ಜರಗಿದ ಈ ಸಭೆಗೆ ಹಾಜರಾದವರು:

೧. ಕರ್ನಾಟಕ ಆಯುರ್ವೇದ ಮಂಡಲದ ಕಾರ್ಯದರ್ಶಿಗಳಾದ ಹಲಸೀಕರ ವೈದ್ಯರು ಈವತ್ತಿನ ಸಭೆಗೆ ಬಿ ಆರ್. ಹರಿದಾಸರನ್ನು ಅಧ್ಯಕ್ಷರನ್ನಾಗಿ ಆರಿಸಿದರು. ರಾಯಭಾಗಕರು ಅನುಮೋದಿಸಿದರು. ೨. ದಾವಣಗೆರೆಯಲ್ಲಿ ಆಗಿಹೋದ ಕಾರ್ಯಕಾರಿ ಮಂಡಲದ ವರದಿಯನ್ನು ಓದಿ ಪುಷ್ಟೀಕರಿಸಲ್ಪಟ್ಟಿದೆ. ಪುಷ್ಟೀಕರಿಸಿದವರು—ಎಚ್. ಎನ್. ಶೆಟ್ಟಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

೧ ವೈದ್ಯ ಬಿ.ಆರ್ ಹಂದಾಸ್, ೨ ಹಲಸೀಕರ್ ವೈದ್ಯರು, ೩ ಡಾ। ಸೋನ್ಟಕ್ಕೆ, ಎಮ್. ಬಿ. ಬಿ ಎಸ್. ೪ ರಾಯಭಾಗಕರ ವೈದ್ಯ, ೫ ಡಾಕ್ಟರ ಸ್ವಾಮಿ, ಎಮ್.ಡಿ ಪಿ.ಎಚ್. ಎನ್. ಶಾಸ್ತ್ರಿ, ೭ ಪಿ ಸುಬ್ಬರಾವ್, ೮ ಬಿ. ಪಾಂಡುರಂಗ ಭಟ್, ಎ ಬಿ. ೯ ಎಮ್. ವಿ. ಶಾಸ್ತ್ರಿ, ೧೦. ಬಾಲಕೃಷ್ಣ ವೈದ್ಯ, ೧೧. ಐತಪ್ಪ ಪಂಡಿತ, ೧೨ ಎಚ್ ತಿಮ್ಮಪ್ಪ ಪಂಡಿತ. ೧೩ ಪಿ ನರಸಿಂಹ ಪೈ, ೧೪ ಪರಮೇಶ್ವರ, ಪಂಡಿತ, ೧೫ ಕೆ ಎಸ್ ಭಂಡಾರ್‌ಕಾರ್, ೧೬. ಕವಿರಾಜ, ಎಸ್. ಎಮ್. ಶೆಟ್ಟಿ, ೧೭. ಗೋಪಾಲ್‌ಕೃಷ್ಣ ರಾವ್, ವೈದ್ಯ.

೩ ಕೈ। ಡಾ। ನಾಡಗೀರರವರು ಮತ್ತು ರಾಮರಾವ್ ಮಹಿಷಿ—ಇವರ ಅಕಾಲ ನಿಧನದ ಬಗ್ಗೆ ದುಃಖ ಪ್ರದರ್ಶನ ಮಾಡಲಾಯಿತು. ೪. ಕನಿಷ್ಠ ಎಂಟು ವರ್ಷಗಳಿಂದ ಆಯುರ್ವೇದ ಚಿಕಿತ್ಸಾಕ್ರಮದಲ್ಲಿ ಉಪಜೀವಿಕೆಯನ್ನು ಅವಲಂಬಿಸಿರುವ ನಿಖಿಲ ಕರ್ನಾಟಕ ಪ್ರಾಂತದೊಳಗಿನ ಎಲ್ಲರಿಗೂ ವೈದ್ಯನೆಂಬ ಪದವಿಯನ್ನು ಕೊಟ್ಟು, ಅವರನ್ನು ವೈದ್ಯಮಂಡಲದ ಸಭಾಸದರನ್ನಾಗಿ ಮಾಡಿಕೊಳ್ಳುವುದರ ಬಗ್ಗೆ ಕೆಳಗೆ ಹೆಸರು ಕಾಣಿಸಿದ ಮೂವರ ಒಂದು ಕಮಿಟಿಯನ್ನು ಏರ್ಪಡಿಸಲಾಯಿತು.

೧ ವೈದ್ಯ ಎ ಕೆ ರಾಯಭಾಗಕರ, ೨. ಡಾ। ಸೋನ್‌ಟಕ್ಕೇ, ೩ ವೈದ್ಯ ಹಲಸೀಕರರು

ಗೊತ್ತುವಳಿ ನಂಬ್ರ ೫.

ಅಖಿಲ ಕರ್ನಾಟಕ ಪ್ರಾಂತೀಯ ೬ನೆಯ ವೈದ್ಯ ಸಮ್ಮೇಳನವನ್ನು ಶಿವಮೊಗ್ಗೆಯಲ್ಲಿ ಕೂಡಿಸುವ ಕುರಿತು, ಅಲ್ಲಿಯ ಪಂಡಿತರಿಗೆ ಪ್ರೋತ್ಸಾಹಿಸಬೇಕೆಂದು, ಚಿಕ್ಕ ಬಳ್ಳಾಪುರದ ವೈದ್ಯ ಪಿ ಸುಬ್ಬರಾಯರು ಸೂಚಿಸಿದ್ದನ್ನು, ಕವಿರಾಜ ಎಸ್. ಎಮ್ ಶೆಟ್ಟಿ ಅನುಮೋದಿಸಿ, ಸರ್ವಸಮ್ಮತವಾಗಿ ಮಂಜೂರುಮಾಡಲಾಯಿತು.

ಗೊತ್ತುವಳಿ ನಂಬ್ರ ೬.

ಅಖಿಲ ಭಾರತೀಯ ೨೫ನೇ ವೈದ್ಯ ಸಮ್ಮೇಲನಕ್ಕೆ ಕರ್ನಾಟಕ ಪ್ರಾಂತದೊಳಗಿನವರೊಬ್ಬ ಸಭಾಪತಿಯನ್ನು ಆರಿಸಬೇಕೆಂದು ಸೂಚಿತವಾಗಿ ಡಾ। ಎಮ್. ಆರ್ ಸಾಮಿ, ಎಮ್ ಡಿ, ಪಿ. ಎಚ್. ಡಿ., ಡಿ. ಪಿ ಎಚ್ ರವರ ಹೆಸರನ್ನು ಮಹಾಮಂಡಲದ ಇದಿರಲ್ಲಿ ವಿನಂತಿಸಿ ಇಡಬೇಕಾಗಿ ನಿರ್ಧಾರವಾಯಿತು.

ಅವಳನ್ನು ಎತ್ತಿಕೊಂಡೇ ಮಾಳಿಗೆಯಿಂದ ಕೆಳಗಿಳಿಸುತ್ತಿದ್ದರು!

ಸ್ವತಃ ತಾನೇ ವಸ್ತ್ರಧಾರಣೆಮಾಡಲಾರಳು.

ಈಗ ಎಂಟು ದನಗಳ ಹಾಲು ಕರೆಯುವಳು.

ಅವಳೊಬ್ಬ ರೈತನ ಹೆಂಡತಿ—ಅವಳು ತನ್ನ ಪಾದವನ್ನು ನೆಲದಲ್ಲಿ ಇಡಲಾರದಾದಳು—ನಿಜವಾಗಿಯೂ ಹೆಂಡತಿಗೂ ಗಂಡನಿಗೂ ಮಹಾ ಸಂಕಷ್ಟವಲ್ಲವೆ?—ಇದಕ್ಕೆ ಕಾರಣ—ಪಕ್ಷವಾತ ರೋಗ ನಿರುಪಾಯಕ ಸ್ಥಿತಿಗೊಳಗಾಗಿದ್ದಳವಳು.

ಈಗ ಅವಳು 8 ದನಗಳನ್ನು ಕರೆಯುವಷ್ಟು ಸಾಮರ್ಥ್ಯವನ್ನು ಹೊಂದಿರುತ್ತಾಳೆಂದರೆ, ಅವಳ ಈಗಿನ ಆನಂದವೆಷ್ಟೆಂದು ನಾವು ಬೇರೆ ಹೇಳುವುದಿಲ್ಲ. ಅದರಲ್ಲೂ 67 ವರ್ಷ ಪ್ರಾಯವಾದ ಈ ಸಮಯದಲ್ಲಿ, ಈ ಕೆಳಗಿನ ಪತ್ರದಲ್ಲಿ ಅವಳು ತನ್ನ ಅನುಭವವನ್ನು ನಮಗೆ ಬರೆಯುತ್ತಾಳೆ:—



ಪಕ್ಷವಾತ ರೋಗಕ್ಕೆಂದು ನಾನು ಕ್ರುಶೆನ್ ಲವಣವನ್ನುಪಯೋಗಿಸುತ್ತಿದ್ದೇನೆ. ಮೊದಲು ನಾನು ಎಷ್ಟು ಅಸ್ವಸ್ಥಳಾಗಿದ್ದೆನೆಂದರೆ—ನನ್ನ ಪಾದಗಳನ್ನು ನೆಲದ ಮೇಲೆ ಇಡಲಾಗುತ್ತಿದ್ದಿಲ್ಲ ನನ್ನ ಪತಿಯವರು ನನ್ನನ್ನು ಮಾಳಿಗೆಯಿಂದ ಕೆಳಗೆ ಎತ್ತಿ ಒಯ್ಯುತ್ತಿದ್ದರು ಒಬ್ಬ ಮಿತ್ರಳು ನನಗೆ ಕ್ರುಶೆನ್ ಲವಣದ ಕುರಿತಾಗಿ ಬರೆದಳು ಅದೇ ವೇಳೆಗೆ ನಾನು ಅದನ್ನು ತೆಗೆದು ಕೊಳ್ಳಬೇಕೆಂದಾಲೋಚಿಸಿದೆ. ಈಗ ನಾನು ಹಟ್ಟಿಗೆ ಹೋಗಿ 8 ದನಗಳನ್ನು ಕರೆಯಲು ಶಕ್ತಳಾಗಿರುವೆನು. ನಾನು ಈ ದಿನ ಒಂದು ಬಾಟ್ಲಿ ಕ್ರುಶೆನ್ ಲವಣವನ್ನು ಪಡೆದುಕೊಂಡಿರುವೆನು. ನಾವು ಪಡೆದಿರುವ ಔಷಧಗಳಲ್ಲಿ ಇದು ಅತ್ಯಂತ ಅಗ್ಗವೆಂದು ನನ್ನ ಗಂಡ ಹೇಳುತ್ತಾರೆ. ಈಗ ನಾನು 67 ವರ್ಷದ ಪ್ರಾಯಸ್ಥಳಾಗಿರುವೆನು ಸುಖಿಯಾಗಿಯೇ ಇರುವೆನು

Mrs P B M

ಯೂರಿಕ್ ಎಸಿಡ್ ದೇಹದೊಳಗೆ ಸೇರಿಕೊಂಡಿದ್ದರೆ ಪಕ್ಷವಾತವು ತಲೆಯೆತ್ತುತ್ತದೆ ಯೂರಿಕ್ ಎಸಿಡ್ ಅಣುಗಳನ್ನು ಕರಗಿಸುವ ಶಕ್ತಿಯು ಕ್ರುಶೆನ್ ಲವಣದ ಎರಡು ಸಾರಗಳಿಗಿದೆ ಮತ್ತಿತರ ಸಾರಗಳು ಕರಗಿದ ಅಣುಗಳನ್ನು ದೇಹದಿಂದ ಹೊರಗಟ್ಟುತ್ತವೆ

ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ ಕ್ರುಶೆನ್ ಸೋಲ್ಟ್ ದೊರೆಯುತ್ತದೆ.

WANTED

Enetgetic, Active and Influential men to work as organisers and Agents on very attractive terms in areas mentioned below—

1. Mysore, Hassan and Kadur districts
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಜ್ಡ ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ.
೪೫ ವರ್ಷದ ಅನುಭವ
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್
ಕೇಶವರವರ
ಫೊಸ್ಪರಸ್ ಗುಳಿಗೆಗಳು.
ಅತ್ಯುತ್ತಮ ಟಾನಿಕ್.
ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೪.
ಸ್ಟಾಕಿಸ್ಟ್—[illegible] ಕಂಪೆನಿ ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ
ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ

ಮೂರು ಫ್ಯಾನ್ಸಿ ಸ್ಪೋರ್ಟ್ ರಿಸ್ಟ್ ವಾಚುಗಳ [illegible] ಬಂಗಾರಕ್ಕಿಂತಲೂ ಹೆಚ್ಚು [illegible] ಐದು ವರ್ಷಗಳ ಗ್ಯಾರಂಟಿ [illegible] ಉತ್ತಮವಾದ [illegible] ಫೇಸ್ ಸರಿಯಾದ ಗಂಟೆಯನ್ನು ತೋರಿಸುತ್ತ ೧೦ ವರ್ಷಗಳ ಗ್ಯಾರಂಟಿ ಒಂದು [illegible] ಪಾಕೆಟು ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವುದಿಲ್ಲ ಗ್ಯಾರಂಟಿ [illegible] ವರ್ಷ [illegible] ಬಂಗಾರದ ಪ್ಲೇಟ್ [illegible] ಫೌಂಟನ್ ಪೆನ್ ಈ ಅತ್ಯುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ [illegible] ನಿಮಗೆ [illegible] ದಿಷ್ಟಕ್ಕೆ [illegible] ವಾಪಾಸ್ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ

ಶರ್ಮಾ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ [illegible] S A ಕಲ್ಕತ್ತಾ

[ಗುಣವಾಗದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಸ್ ಕೆ [illegible] ರವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆಶಯ ಅಶಕ್ತವಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು ಡಾಕ್ಟರ ಬಿ. ಎ ವೈದ್ಯ, ಎಲ್ ಸಿ ಪಿ ಎಸ್ [illegible] ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ [illegible] ಕಿಮ್ಮತ್ತು ರೂ ೪-೦-೦ ವಿ ಪಿ ಅಣೆ [illegible]

ವಿಳಾಸ—ಸಂಜೀವಿನೀ ಔಷಧಾಲಯ ಮು ಪೊ ವಿಂಚಿ, S M C

NEW ARRIVALS.

Medicines.

Dr Schuessler's Twelve Tissue Remedies 5 gr bot As 4/-
Homœopathy Medicines 5 gr bot As [illegible]
Sugar of Milk Dr Schwabe's original l b t 1 lb Rs 2
Haarlem Oil a world renowned remedy As [illegible] per phial
Dr Heele s New Curative Earth—Rudium Cure Rs 4 per lb
Dr Schwabe's other special remedies are always in stock
Please consult us [illegible]
Kannese Book a Family Guide to Biochemistry Re 1-
„ Domestic Homœopathy Rs 1 4-
If you own these two Books you will be able to pick up treatment and administer Tissue & Homœopathy Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes and prices from As 2/6
Delightful in aroma charming in appearance Please try

Kirloskar Pumps.

We are the Representatives for Kirloskar Brothers for their reliable Shallow well and Deep well Pumps Spring Cots Spring Couches etc and stock—
Pipes and pipe fittings at cheap prices Coir Mats and Mattings Staedtler Pencils and Stationeries
We are the recognised agents for STAEDTLER S all stationeries and shall be glad to serve you

Olympia Typwriter.

An up-to date Machine in Standard and portable sizes
For Futher particulars please write to—

Basel Mission Book & Tract Depository,
Mangalore, S K or Hubli, S M.

The Popular Insurance Company, Ltd.

Head Office:—MANGALORE, S India
The Pioneer Life Office of the West Coast.

A FEW PRESS OPINIONS

Established as recently as 1929 the Popular Insurance Co Ltd, has already made considerable progress having at the end of 1934 a total business of over Rs 10 lakhs in force with a premium income of over Rs 52 000 The Life Fund of the Company stood at the same date at over Rs. 50,000 The expenses of the office are moderate and mortality experience extremely favourable During the year 1934, the Company completed business of over Rs 5,40 000 with a premium income of over Rs 26,000 The first quinquennial valuation of the Company is in progress and the report of the Actuary expected to be placed before the Directors of the Company before the end of May 1935 From the steady progress of the Company during the last five years and the economical and efficient management of its affairs, it is not too much to hope that the valuation will disclose a very sound position

Insurance & Finance Review, Calcutta

ದಿ ಪೋಪ್ಯುಲರ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್—ಮಂಗಳೂರು—ಮೇಲಿನ ವಿಮಾ ಕಂಪೆನಿಯವರು ಕಳುಹಿಸಿರುವ ವರದಿಯನ್ನು [illegible] ಆನಂದದಿಂದ ಸ್ವೀಕರಿಸುತ್ತೇವೆ ಸ್ಥಾಪಿತವಾಗಿ ಐದು ವರ್ಷಗಳೊಳಗಾಗಿಯೇ ಈ ಕಂಪೆನಿಯು ಬಹಳ ಮಹಿಮಾಟುಗಳನ್ನು ನಡೆಸಿರುವುದು ಸಂತೋಷಕರವಾದ ಸಂಗತಿ ವಿಮಾ ನಿಧಿಯು ಐವತ್ತು ಸಾವಿರಕ್ಕಿಂತಲೂ ಮಿಕ್ಕಿದೆ. ಇದರಿಂದಲೇ ಕಂಪೆನಿಯು ಎಷ್ಟು ಚೆನ್ನಾಗಿ ಕೆಲಸಮಾಡುತ್ತಿದೆಯೆಂಬುದು ಗೊತ್ತಾಗುವುದು ಪಶ್ಚಿಮ ಕರಾವಳಿಯಲ್ಲಿ ಸ್ಥಾಪಿತವಾದುದು ಇದೊಂದೇ ವಿಮಾ ಕಂಪೆನಿ ಇಷ್ಟು ದಕ್ಷತೆಯಿಂದ ನಡೆಸಿಕೊಂಡು ಬರುವ ಕಂಪೆನಿಯ ಸಂಚಾಲಕರಿಗೆ ಧನ್ಯವಾದಗಳನ್ನರ್ಪಿಸಬೇಕು ಈ ಕಂಪೆನಿಯು ದಿನೇ ದಿನೇ ಅಭಿವೃದ್ಧಿ ಹೊಂದಿ ಭರತಖಂಡದಲ್ಲಿ ಒಂದು ಪ್ರಧಾನ ಸ್ಥಾನವನ್ನು ಹೊಂದಿ ನಮ್ಮ ದೇಶದಿಂದ ಪ್ರತ್ಯೇಕ ವಿದೇಶಕ್ಕೆ ಹೋಗತಕ್ಕ ನಿಧಿಯನ್ನು ಇಲ್ಲೇ ನಿಲ್ಲಿಸುವರೆ ಶಕ್ತಿಯುಳ್ಳದಾಗಲೆಂದು ಹಾರೈಕೆ

ರಾಷ್ಟ್ರಬಂಧು.

ಮಂಗಳೂರಿನಲ್ಲಿ ಸ್ಥಾಪಿತವಾಗಿರುವ ದಿ ಪೋಪ್ಯುಲರ್ ಇನ್ಷೂರೆನ್ಸ್ ಕಂಪೆನಿಯು ವರ್ಷ ವರ್ಷ ಊರ್ಜಿತಸ್ಥಿತಿಗೆ ಬರುತ್ತಿರುವುದು ಶ್ಲಾಘನೀಯವಾದ ವಿಚಾರ ಈ ಕಂಪೆನಿಯು ಸ್ಥಾಪಿತವಾದುದು ಐದು ವರ್ಷಗಳ ಹಿಂದೆ, ಅಂದಿನಿಂದ ಜೀವವಿಮಾ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಹೆಸರುವಾಸಿ ಪಡೆಯುತ್ತಲೇ ಇದೆ × × × × × ಈ ಕಂಪೆನಿಯ ಐದನೆ ವಾರ್ಷಿಕ ವರದಿಯು ತೃಪ್ತಿಕರವಾಗಿದೆ. ಕರ್ನಾಟಕದ ಈ ಕಂಪೆನಿಯು ವರ್ಷ ವರ್ಷ ಅಭಿವೃದ್ಧಿಹೊಂದಲೆಂಬುದೇ ನಮ್ಮ ಹಾರೈಕೆ

'ಪ್ರಜಾಮಿತ್ರ,' ಮದರಾಸು.

Wanted Influential Agents in unrepresented areas on liberal terms.

ಸಿಂಧ್‌ಪ್ರಾಂತ್ಯದಲ್ಲಿ ಮಹಾ ಕ್ಷೋಭೆ! ಭೂಕಂಪವಾಗುವುದೆಂಬ ಭಯ!

ಜೂನ್ ೨೮ನೇ ದಿನ ಸಿಂಧ್ ಪ್ರಾಂತ್ಯದಲ್ಲಿ ಭೂಕಂಪ ವಾಗುವುದೆಂದು ಕೆಲವು ಜೋಯಿಸರು ಭವಿಷ್ಯತ್ತು ಹೇಳಿದುದರಿಂದಾಗಿ ಆ ದಿನ ಸಿಂಧ್ ಪ್ರಾಂತ್ಯದಲ್ಲೆಲ್ಲಾ ಮಹಾ ಕ್ಷೋಭೆ! ಎಲ್ಲಾ ಜನರು ಮನೆಮಾರುಗಳನ್ನು ಬಿಟ್ಟು ಬಯಲು ಪ್ರದೇಶಗಳಲ್ಲಿ ಮಲಗಿದರು. ಬಳ್ಳಾರಿ ಸುಕ್ಕೂರು, ಜಿಲ್ಲೆಗಳ ಶೇಕಡಾ ೮೦ ಜನರು ರಾತ್ರಿ ಇಡೀ ಕಣ್ಣುಮುಚ್ಚಲಿಲ್ಲ. ಬಡುಕುಭಾಗ್ಯಗಳು ಇದ್ದಲ್ಲೇ ಇದ್ದುವು. ಸಾವಿರಾರು ಜನರು ಬೇಂಕುಗಳಲ್ಲಿದ್ದ ಹಣವನ್ನು ಹಿಂಗೆಳೆದುಕೊಂಡರು. ಭಜನೆ, ಪ್ರಾರ್ಥನೆಗಳಲ್ಲಿಯೇ ಕಾಲವನ್ನು ಕಳೆದರು. ಜನರು ತ್ಯಜಿಸಿಹೋದ ಮನೆಮಾರುಗಳ ರಕ್ಷಣೆ ನೋಡುವುದಕ್ಕಾಗಿ ಸ್ಪೆಶಲ್ ಪೋಲೀಸರನ್ನಿಡಬೇಕಾಯಿತು.

ನೀರನ್ನೊದಗಿಸುವ ಗಿಡವಿದೆ,

—ಆದರೆ ಕ್ಷಾಮಪೀಡಿತ ದೇಶಗಳಲ್ಲಿ ಇದನ್ನು ಬೆಳೆಯಿಸಲು ಸಾಧ್ಯವೋ? ತಿಳಿದಿಲ್ಲ. ಪೆರ್ಸ್‌ನಲ್ಲಿ ಈ ಗಿಡವಿದೆ. ಇದರ ಎಲೆಗಳು ಬಹಳ ಅಗಲವಾಗಿದ್ದು ಬೇಸಿಗೆಯ ಕಾಲದಲ್ಲಿ ಎಲೆಯ ಮೂಲಕ ನೀರನ್ನು ಸುರುತ್ತಾ ಇರುವುದು. ಎಲ್ಲಿ ನೀರಿಲ್ಲದಿದ್ದರೂ ಈ ಗಿಡದಿಂದಿಳಿಯುವ ನೀರು ಕಡಿಮೆಯಾಗುವುದಿಲ್ಲ. ಮಳೆಯಿಂದ ದೊರೆಯುವಂತೆ ಈ ಗಿಡದಿಂದಲೂ ನೀರು ಸಿಗುತ್ತದೆಂದು ಹೇಳುವರು. ಈ ಗಿಡಗಳನ್ನು ನೆಟ್ಟು ಇವುಗಳ ಬುಡದಲ್ಲಿ ಸಣ್ಣ ಕೆರೆಗಳನ್ನು ಕಟ್ಟಿದರೆ—ಅಥವಾ ದೊಡ್ಡ ಪಾತ್ರೆಯನ್ನಿಟ್ಟರೆ ನೀರು ಧಾರಾಳ!—ಇಂತಹ ಗಿಡಗಳನ್ನು ಬಳ್ಳಾರಿ ಅನಂತಪುರಗಳಲ್ಲಿ ಬೆಳೆಯಿಸಿದರೆ ಲೋಕೋಪಕಾರವಾಗುವುದು.

ಬೇಡುವವರ ಉದ್ಧಾರ—

—ನೂಡಬೇಕೆಂದು ದೇಶದ ಹಲವೆಡೆಗಳಲ್ಲಿ ಹಲವು ನಗರಸಭೆಗಳು—ಹಲವು ನಾಗರಿಕರ ಚಳವಳಿ. ಆದರೆ ಬೇಡುವವರೇ ಉದ್ಧಾರವಾಗುವುದಾದರೆ ಇವರ ಸಹಾಯ ನಾದರೂ ಏಕೆ? ಚಿಕೊಸ್ಲೋವೇಕಿಯಾದಲ್ಲಿ ಭಿಕ್ಷುಕರು ಹೆಚ್ಚು. ಹಗಲು ಬೀದಿಯಲ್ಲಿ ತಿರುಗಾಡಿ ರಾತ್ರಿ ಅಂಗಡಿ ಬಾಗಲುಗಳಲ್ಲಿ ಮಲಗುವರು. ತಂತಮ್ಮ ಸ್ವಂತ ಸಂಪಾದನೆಯ ಕುರಿತಾಗಿ ಮಾತನಾಡುವರು. ಹೀಗೆ ವಿಚಾರವಿನಿಮಯವಾಗ ಪ್ರಿರ್ಬ್ಬಾಗ ಹೆಚ್ಚಿನ ಭಿಕ್ಷುಕರಿಗೆ ಸರಿಯಾದ ಸಂಪಾದನೆಯಾಗ ಪುದಿಲ್ಲವೆಂದು ಅವರೊಳಗೊಬ್ಬನು ಅರಿತನು. ಒಂದು ಸಂಘವನ್ನು ನಿರ್ಮಿಸಿದನು. ಎಲ್ಲರೂ ದುಡ್ಡು ಸಂಚಯಿಸಿ ಒಂದು ಹೋಟೆಲನ್ನು ಹಿಡಿದರು. ಅಂತಿಂಥವ ಇಂತಿಂತಹ ಮನೆಗಳ್ಲೇ ಬೇಡಬೇಕೆಂದು ನಿರ್ಧರಿಸಿಕೊಂಡರು. ಈಗ ಎಲ್ಲರೂ ಸುಖಿಗಳಾಗಿದ್ದಾರೆ. ನಮ್ಮ ಒಕ್ಕಲಿಗರೂ ಆಲೋಚಿಸಿದರೆ?

ಆಯುಷ್ಯ ಬೇಕಯ್ಯ!—

ಇಲ್ಲದಿದ್ದರೆ ಮನುಷ್ಯನು ಹೆಚ್ಚು ಬದುಕುವುದೇ ಇಲ್ಲ! ಆಯುಷ್ಯವಿದ್ದವನು ಅಳಲನ್ನು ನುಂಗಿದರೂ ಸಾಯನು! ಮೊನ್ನೆ ಕ್ವೆಟ್ಟಾದಲ್ಲಿ ಭೂಕಂಪವಾಯಿತಷ್ಟೆ. ಆಗ ಅಲ್ಲಿ ಅಪ್ಪೃತಸರ ನಿವಾಸಿಯಾದ ಗಿಯಾನ್ ಅರ್ಜುನ್ ಸಿಂಘರೆಂಬ ಧನಿಕರೊಬ್ಬರು ಭೂಕಂಪಕ್ಕೆ ಸಿಕ್ಕಿ ಒಂದು ಮನೆಯ ಕೋಣೆಗಳಡಿಯೊಳಗೆ ಬಿದ್ದರು. ೧೯ ದಿನಗಳು ಕಳೆದ ನಂತರ ಇವರನ್ನು ಮಿಲಿಟರಿಯವರು ಹುಡುಕಿ ತೆಗೆದರು. ಪ್ರಾಣವು ಹೋಗಿರಲಿಲ್ಲ. ಚೇತನಕೊಟ್ಟ ಮೇಲೆ ಅರ್ಜುನ್ ಸಿಂಘರು ಸ್ವಸ್ಥರಾಗಿರುವರು. ತಾನೊಬ್ಬ ಆಯುಷ್ಯವಂತನೆಂಬ ಧನ್ಯತೆಯಿಂದ ಈಗ ಪರರಿಗೆ ಸಹಾಯ ಮಾಡುತ್ತಿರುವರು. ಕೋಣೆಗಳಡಿಯಲ್ಲಿ ಜೀವಂತವಿದ್ದು ನಿಸ್ಸಹಾಯರಾಗಿ ಪರಲೋಕವಾಸಿಗಳಾದವರು ಎಷ್ಟೋ!

ಭತ್ತವೆಂಬುದು—

—೧೦೦೦ ವರ್ಷಗಳ ಹಿಂದಿನಿಂದಲೂ ಈ ಲೋಕದಲ್ಲಿತ್ತೆಂದು ತಿಳಿದುಬಂದಿದೆ. ಹೀಗಿದ್ದರೂ ನಾವು ಬೇಸರಿಸದೆ ಅದನ್ನು ತಿನ್ನುತ್ತೇವಲ್ಲ! ಜಪಾನಿನಲ್ಲಿ ಪ್ರಾಚೀನ ಕಾಲದ ಒಂದು ಪ್ರತಿಮೆಯು ದೊರೆಯಿತು. ಅದನ್ನು ವಿಜ್ಞಾನಿಗಳೆಂಬ ಭ್ರಾಂತರು ಪರೀಕ್ಷಿಸಿದರು. ನೋಡುವುದೇನು! ೧೦೦೦ ವರ್ಷಗಳ ಹಿಂದೆ ಆ ಪ್ರತಿಮೆಯೊಳಗಿಡಲ್ಪಟ್ಟಿದ್ದ ಒಂದು ಮುಷ್ಟಿ ಭತ್ತವು ಅದರೊಳಗೆ ಕಂಡುಬಂತು. ಈ ಭತ್ತಗಳನ್ನು ಈಗ ಆ ವಿಜ್ಞಾನಿಗಳು ಬಿತ್ತುವರು. ಬೆಳೆಯ್ವಾಗದಿದ್ದು ಮೊಳಕೆಗೊಂಡರೆ ೧೦೦೦ ವರ್ಷಗಳ ಹಿಂದಿದ್ದ ಭತ್ತದ ಅಕ್ಕಿಯ ಊಟಮಾಡಿದಂತಾಗುವುದು. ಆ ಭತ್ತಗಳನ್ನು ಪ್ರತಿಮೆಯ ಸ್ಮೃತಿಯ ಸ್ಮಾರಕವಾಗಿ ಇಟ್ಟಿದ್ದರಂತೆ.

ಸಹರಾ ಮರುಳುಭೂಮಿಯು ನಗರವಾಗಿತ್ತೇ?

ಆಶ್ಚರ್ಯ! ನಿಜವಾಗಿಯೂ ಆಶ್ಚರ್ಯ! ಮರುಳುಗಾಡೆಂದು—ಅದೂ ಕೂಡಾ ಪ್ರಪಂಚದ ದವಡೆಯಿಂದೇ ಪ್ರಸಿದ್ಧಿಗೊಂಡ ಸಹಾರ ಮರುಳುಗಾಡಿನಲ್ಲಿ ನೇಗಿಲುಗಳು, ಒರಳುಗಳು, ಸಾಹಿತ್ಯಸಾಮಗ್ರಿಗಳು ಭೂಮಿಯಡಿಯಲ್ಲಿ ದೊರೆಯುತ್ತವೆಂದರೆ ಆಶ್ಚರ್ಯ! ಆರು ಸಾವಿರ ವರ್ಷಗಳ ಹಿಂದೆ ಈ ಭೂಭಾಗವು ಬಹು ಫಲವತ್ತಾದ ಹೊಲ ಮತ್ತು ತೋಟಗಳನ್ನೊಳಗೊಂಡಿತ್ತೆಂದು ಈಗ ಭೂಶಾಸ್ತ್ರಜ್ಞರು ಹೇಳುತ್ತಿರುವರು. ಮನುಷ್ಯರು ಕೂಡಾ ಅಲ್ಲಿ ಬಹುಸಂಖ್ಯೆಯಲ್ಲಿದ್ದು ಅದೊಂದು ದೊಡ್ಡ ನಗರವೇ ಆಗಿತ್ತೆಂದೂ ಹೇಳಬಹುದಾಗಿದೆ. ಕಾಲಚಕ್ರದ ತುಳಿದಾಟಕ್ಕೆ ಸಿಕ್ಕಿ ಈಗ ಸಹಾರವು ಗಾಡಿಯ ಸ್ಮಶಾನಭೂಮಿಯಾಗಿದೆ. ದಿಸಲಿಬೇಗೆಯನ್ನುಂಡು ಹೊಯಿಗೆಯಲ್ಲಿ ಹೊರಳುವ ಭೂಮಿಯಾಗಿದೆ!

ಎಲ್ಲವೂ ನಮ್ಮ ಒಳ್ಳೆಯದಕ್ಕಾಗಿ ಆಗುತ್ತವೆ—

ಎಂದು ಆಶಾವಾದಿಗಳು ಹೇಳುವ ಹೇಳಿಕೆ ಅವರ ಮಯಾರ್ದೆಯನ್ನು ಕೆಡಿಸಲೋ ಎಂಬಂತೆ ಇಲ್ಲೊಂದು ವಾರ್ತೆ. ಇಂಗ್ಲಾಂಡಿನಲ್ಲಿ ಜೇನ್‌ಜೂಲಿಯನ್ ಲೊಮೊರ್‌ಡೇಂಟ್ ಎಂಬ ಸೈನಿಕನೊಬ್ಬನು ಯುದ್ಧದಲ್ಲಿ ಗಾಯಗೊಂಡನು. ಕುರುಡನಾದನು. "ಒಟ್ಟಿ"ನರಿಕ್ಕೆ ಪೆಟ್ಟಾಗಿರಲಿಲ್ಲ. ೮ ಲಕ್ಷವೇಣು ಅವನ ಎರಡು ಕಣ್ಣುಗಳೂ ಕಾಣಲಿಲ್ಲ. ಇತ್ತಲಾಗೆ ಅವನು ಒಂದು ಟೇಕ್ಸಿಯಲ್ಲಿ ಹೋಗುತ್ತಿರುವಾಗ ತಲೆಗೆ ಪೆಟ್ಟಾಗಿ ಆಸ್ಪತ್ರೆ ಸೇರಿದನು. ಅವನ ತಲೆಯನ್ನು ಒಪರೇಶನ್ ಮಾಡಲಾಯಿತು. ಅದು ಗುಣವಾದೊಡನೆ ಅವನು ತನ್ನ ಕಣ್ಣುಗಳೆರಡನ್ನು ಒಪರೇಶನ್ ಮಾಡಲು ಹೇಳಿದನು. ಅವನ ಆಶೆಯು ಈಡೇರಿತು. ದೈವವಶಾತ್ ೨೦ ವರ್ಷಗಳ ಹಿಂದೆ ಪರಲೋಕಕ್ಕೆ ಹೋದ ಕಣ್ಣುಗಳು ಪುನಃ ಬಂದುವು.

ಇಷ್ಟು ಹಾಲು ಎಲ್ಲಿಂದ ಬಂತು?

ನಿಜವಾಗಿಯೂ ಆಶ್ಚರ್ಯ! ಹೈದರಾಬಾದಿನ ಸರ್ಕಾರದ ಸುಲ್ತಾನ್ ಮಾಲ ರವರ ಕಪಿಲಾತಳಿ ಎಂಬ ದನವು ಕಳೆದ ವರ್ಷದ ೩೯೫ ದಿನಗಳೊಳಗೆ ೮೫೭೩ ಪೌಂಡ ಹಾಲನ್ನು ಕೊಟ್ಟಿರುತ್ತದೆ. ಒಂದೇ ವಾರದಲ್ಲಿ ಇದು ೨೮೭ ಪೌಂಡ ಹಾಲು ಕೊಟ್ಟಿದೆ! ಇಷ್ಟು ಹಾಲು ಕೊಡುವ ದನವು ಅಖಿಲ ಹಿಂದೂ ದೇಶದಲ್ಲಿಲ್ಲವಂತೆ. ಈ ಹಾಲಿಗೆ ನೀರು ಬೆರಸುತ್ತಾರೋ ಇಲ್ಲವೋ ಎಂಬುದು ಮಾತ್ರ ತಿಳಿಸಿರುವುದಿಲ್ಲ. ನೀರು ಬೆರಸಿ ಲೆಕ್ಕ ತೆಗೆಯುವುದಾದರೆ ನಮ್ಮ ಎಷ್ಟೋ ದನಗಳು ಮೇಲಿನ ದನವನ್ನು ಸೋಲಿಸುವುದು ಖಂಡಿತವೆಂದು ಹೇಳಬಿಟ್ಟಿರುವೆವು.

ಮಹಾರಾಜರು ಮಹಾ ರಾಜರಾದರೆ?—

ಮಹಾಜನರೂ ಮಹಾ ಜನರಾಗುತ್ತಾರೆ—ಮತ್ತು ಮಹಾಸರಕಾರವೂ ಮಹಾ ಸರಕಾರವಾಗಿ ಮಹಾ ವೆಚ್ಚಗಳನ್ನು ನಿಲ್ಲಿಸುತ್ತದೆ—ಅಷ್ಟೆ. ಆಲ್ವಾರ್ ಸಂಸ್ಥಾನದ ಮಹಾರಾಜರು ಮಹಾ ರಾಜರಾದುದರಿಂದ ಸಂಸ್ಥಾನದ ಆಡಳಿತವು ಕೆಟ್ಟುಹೋಗಿ ಇಂಡಿಯಾ ಸರಕಾರವು ಅವರ ಕೈಹಿಡಿದು ಸಿಂಹಾಸನದಿಂದ ಇಳಿಗಿಸಿ ತಿಂಗಳಿಗೆ ೫೦೦೦ ರೂಪಾಯಿಗಳ ಚೆಕ್ಕನ್ನು ಕೊಡುವೆವೆಂದು ಟೆನ್ನು ಕಟ್ಟಿ, ಅವರನ್ನು ಆಲ್ವಾರಿನ ಹೊರಗೆ ನಿಲ್ಲಿಸಿರುವರು. ಮಹಾರಾಜರ ಅರಮನೆಗಳಲ್ಲಿ ಇದ್ದ ೧೫೦ ಒಂಟೆ ಅನೇಕ ರೋಲ್ಸ್ ರೋಯಿಸ್ ಕಾರುಗಳನ್ನು ಮಾರಿಬಿಡಲಿರುವುದು. ಕೌನ್ಸಿಲ್ ಆಫ್ ಎಡ್ಮಿನಿಸ್ಟ್ರೇಶನ್ ದೇಶವನ್ನಾಳುತ್ತದೆ. ಜನರು ಕೈಬಾಯಿ ಬಿಟ್ಟು ನೋಡುತ್ತಿದ್ದಾರೆ. ಮಹಾರಾಜರು ಮಹಾ ರಾಜರಾದರೆ ಇದೇ ಫಲ!

ಗಂಡಸಿನಂತೆ ಹೆಂಗಸಿರಬೇಕು!

ಸಾಧ್ಯವೋ? ಅಲ್ಲ! ಅಸಾಧ್ಯವೋ ಅಲ್ಲ! ಬರೋಡದ ಶಾಸನವು ಹೇಗಿದೆ ನೋಡಿ! ಹೆಂಗಸರ ಸ್ಥಾನಮಾನಗಳನ್ನು ಹೆಚ್ಚಿಸುವ ಹೊಸ ಕಾನೂನೊಂದು ಈಗ ಅಲ್ಲಿ ಪ್ರಚಾರಕ್ಕೆ ಬಂದಿದೆ. ಹಿಂದೂ ಕುಟುಂಬದಲ್ಲಿನ ವಿಧವೆಯ ಸ್ಥಾನವು ಉತ್ತಮವಾಗಿದೆ. ಆಕೆಗೂ ಆಸ್ತಿಯಲ್ಲಿ ಹಕ್ಕಿದೆ ಎಂಬ ಶಾಸನವಾಗಿರುವುದರಿಂದ ಕುಟುಂಬದ ಆಸ್ತಿಗೆ ಹೆಂಗಸು ಕೂಡಾ ಹಕ್ಕುದಾರಳಾಗಿ ಸಮಾನತೆಯನ್ನು ಹೊಂದಿದ್ದಾಳೆ. ಗಂಡನ ಸ್ವಾರ್ಜಿತ ಆಸ್ತಿಯಲ್ಲಿ ತನ್ನ ಗಂಡುಮಕ್ಕಳಿಗೆ ಇರುವಷ್ಟು ಹಕ್ಕು ಹೆಂಡತಿಗೂ ಇದೆ. ತನ್ನ ಅತ್ತೆಯು ಕಾಲವಾದ ನಂತರ ಅವಳ ಆಸ್ತಿಯು ಇವಳಿಗೇ ಸಿಗಬೇಕು. ಹೀಗೆ ಮುದುಕಿಯಿಂದ ಸೊಸೆಯು ಗೌರವದಿಂದ ಬದುಕಬಹುದಾಗಿದೆ.

ಗಡ್ಡಮೀಸೆಗಳನ್ನು ಬೋಳಿಸುವವರು—

ಆಗತ್ಯವಾಗಿ ತಿಳಿಯಬೇಕು! ಗಡ್ಡಮೀಸೆಗಳನ್ನು ಎರಡು ದಿನಕ್ಕೊಂದು ಸಲ ಕ್ಷೌರಕತ್ತಿಯಿಂದ ಬೋಳಿಸುವ ಅಗತ್ಯವೇ ಇಲ್ಲ! ಲಂಡನಿನಲ್ಲಿ ಒಂದು ತರದ ದ್ರಾವಕವನ್ನು ಕಂಡುಹಿಡಿಯಲಾಗಿದೆ. ಇದನ್ನು ನಿಮ್ಮ ಮೋರೆಗೆ ಲೇಪಿಸಿ ಕರವಸ್ತ್ರದಿಂದ ಇದನ್ನು ಒರಸಿ ಬಿಟ್ಟರೆ ಸರಿ! ಗಡ್ಡವೂ ಇಲ್ಲ! ಅದರ ಬುಡವೂ ಇಲ್ಲ! ಆದರೆ ಮಾಡಲೇನು? ನಿಮ್ಮ ಗಡ್ಡಕ್ಕಾಗಿ ಈ ದ್ರಾವಕವನ್ನು ಕಂಡುಹಿಡಿಯಲಾಗಲಿಲ್ಲವೆಂಬ ದುಃಖವಾರ್ತೆಯೊಂದು ಮಾತ್ರ ಇದೆ. ಬ್ರಿಟಿಷ ಮಹಿಳೆಯರು ಕೈಗಳಿಗೆ ಹೊದಿಸುವ ಗ್ಲೌಸ್‌ಗಳ ಚರ್ಮಗಳನ್ನು ಮೃದುಮಾಡುವುದಕ್ಕಾಗಿ ಈ ಎಣ್ಣೆಯನ್ನುಪಯೋಗಿಸಲಾಗುತ್ತದೆ.

ಲೋಕಕ್ಕೆ ಮೊದಲು ಬಂದವರಾರು?

ಆದಂ ಅವ್ವ ಎಂದು ಬೈಬಲನ್ನು ತಿಳಿದವರು ಹೇಳುವರು. ಆದರೆ ಲೋಕಕ್ಕೆ ಎಲ್ಲರಿಗಿಂತಲೂ ಮೊದಲು ಬಂದುದು ಇರುವೆರಾಯನೇ ಎಂಬ ಸಂದೇಹವಿದೆ. ಪ್ರಾಣಿಶಾಸ್ತ್ರಜ್ಞರು ಈಗ ತಿಳಿದಿರುವಂತೆ ಇರುವೆರಾಯನು ಭೂಲೋಕದಲ್ಲಿ ಹುಟ್ಟಿ ೩೦ ಕೋಟಿ ವರ್ಷಗಳಾದುವಂತೆ! ಇದಕ್ಕಿಂತ ಮೊದಲು ಯಾವ ಪ್ರಾಣಿಯು ಜಗತ್ತಿನಲ್ಲಿತ್ತೋ! ಇಷ್ಟು ಪ್ರಾಚೀನ ಕಾಲದಲ್ಲಿ ಬಂದು ಬದುಕಿ ಕಾಲನ ಬಾಯಿಗೆ ಸಿಕ್ಕಿ ಸತ್ತ ಇರುವೆಗಳ ಶವ(?)ಗಳು ದೊರೆತಿವೆ. ಈ ಶವಗಳನ್ನು ಹೂಣಿಟ್ಟವರಾರೋ!

"ಪತ್ರಿಕಾ ಸಂಪಾದಕರು ಕಣ್ತೆರೆಯಿರಿ!

ಏಕೆ? ಪ್ರಪಂಚವನ್ನು ಸರಿಯಾಗಿ ನೋಡುವುದಕ್ಕಲ್ಲ, ತಮ್ಮ ಉದ್ಯೋಗದಿಂದ ಲಾಭಗಳಿಸುವುದಕ್ಕಾಗಿ" ಎಂದು ನಾವು ಹೇಳಿದರೆ ಈ ಮಾತು ಎಷ್ಟು ಜನರಿಗೆ ಕೇಳಬಹುದೋ? ಅದು ಹೇಗೂ ಇರಲಿ. ಪತ್ರಿಕೋದ್ಯಮದ ಪ್ರಶಂಸೆಯನ್ನು ನೋಡಿ! ಲಂಡನಿನ ಅಸೋಸಿಯೇಟೆಡ್ ನ್ಯೂಸ್ ಪೇಪರ್ಸ್ ಲಿಮಿಟೆಡ್ ಇದರ ಗತವರ್ಷದ ವರದಿಯು ಪ್ರಕಟವಾಗಿದ್ದು ಕೆಲವು ವಿಷಯಗಳು ಹೊರಬಿದ್ದಿವೆ. ಈ ಮುದ್ರಾಲಯವು "ಡೈಲಿ ಹೆರಾಲ್ಡ್" ಎಂಬ ದೈನಿಕಪತ್ರಿಕೆಯನ್ನೂ "ಟೀಟ್ಸ್" ಮತ್ತು "ಜೋನ್‌ಬುಲ್" ಎಂಬ ವಾರಪತ್ರಿಕೆಗಳನ್ನೂ ಪ್ರಕಾಶಿಸುತ್ತಿರುವರು. "ಡೈಲಿ ಹೆರಾಲ್ಡ್" ಪತ್ರಿಕೆಯು ೧೮ ತಿಂಗಳಲ್ಲಿ ದಿನ ಒಂದಕ್ಕೆ ೨೦,೦೦,೦೦೦ ಪ್ರತಿಗಳನ್ನು ಮೀರಿ ವಿಕ್ರಯವಾಗುತ್ತದೆ. ಇಷ್ಟು ಮಾರಾಟವಾಗುವ ಪತ್ರಿಕೆಯು ಜಗತ್ತಿನಲ್ಲಿ ಇದೊಂದೇ! "ಟೀಟ್ಸ್" ಪತ್ರಿಕೆಯು ವಾರಕ್ಕೆ ೩೩,೦೦,೦೦೦ ಮಾರಾಟವಾಗುತ್ತದೆ. "ಜೋನ್‌ಬುಲ್" ಕೂಡಾ ವಾರಕ್ಕೆ ೧೫,೦೦,೦೦೦ಕ್ಕೆ ಮಿಕ್ಕಿ ಮಾರಾಟವಾಗುತ್ತದೆ. ಕಳೆದ ವರ್ಷ ಈ ಮುದ್ರಾಲಯಕ್ಕೆ ೩,೪೭,೨೧೬ ಪೌಂಡು ಲಾಭವಾಯಿತು!

ಶೆಫೀಲ್ಡ್‌ನಲ್ಲಿ ಶಾಕುಂತಳಾ

ಶೆಫೀಲ್ಡ್ ಎಡ್ಯುಕೇಶನಲ್ ಸೆಟ್ಲ್‌ಮೆಂಟ್ ಪ್ಲೇಯರ್ಸು ಕಾಳಿದಾಸನ "ಶಾಕುಂತಳ"ವನ್ನು ನೂತನವಾಗಿ ಇಲ್ಲಿ ಅಭಿನಯಿಸಿದರು. ಈ ನಾಟಕವನ್ನು ಕಂಡ ಬ್ರಿಟಿಷರು ಕಾಳಿದಾಸನ ವಿದ್ವತ್ತನ್ನು ಕೊಂಡಾಡಿದರು.

(೩ನೇ ಪುಟದಿಂದ ಮುಂದರಿದುದು)

ಬದುಕನ್ನು ಹೇಗೆ ಜೀವನಕ್ಕೆ ಸರಿದೂಗಿಸಬಹುದು—ಎಂಬುದು ಅವರ ಈಗಿನ ಚಿಂತನೆ. "ವಿಲಿಯಾನಧಿ ಜನರಿಗೆ ಈಗ ಬದುಕು ಎಂಬುದು ಮಹದ್ವಿಷಯವಾಗಿ ನಿಂತಿದೆ. ವಾಹನಗಳನ್ನಿಟ್ಟುಕೊಂಡೇ ಜೀವಿಸಬೇಕೆಂಬ ಬದುಕಲ್ಲ. ಕೈಗಾರಿಕೆ ಇಲ್ಲದೆ ಜನರು ಹೊಟ್ಟೆಗೆ ಅನ್ನವನ್ನು ಮಾತ್ರ ತಿಂದು ಫಲವೇನು? ಎಂದು ಕೇಳುವವರೂ ಇರುವರು. ಹಾಗೆ ಇರುವವರೇ ಈಗ ಹೆಚ್ಚಿನ ಸಂಖ್ಯೆಯಲ್ಲಿಲ್ಲವೇ? ಕೈಗಾರಿಕೆಗಳ ಸಾಮಗ್ರಿಗಳ ಉಪಯೋಗವಿಲ್ಲದೆ ಜನರು ಬಾಳಲಾರರೇ? ವ್ಯಾಪಾರವಿಲ್ಲದೆ ಜೀವನವನ್ನು ನಡೆಸಬಹುದು. ವಿನೋದ ವಿಹಾರದಲ್ಲಿ ಮಗ್ನರಾಗಿ ಮೋಟರ್‌ಕಾರ್‌ಗಳನ್ನಿಟ್ಟುಕೊಂಡು ನಡೆಸಬೇಕೆಂಬ ಆ ಅಂತಸ್ತನ್ನು ಜೀವನಕ್ಕಿಟ್ಟುಕೊಂಡು ಬಾಳಲಾರದು. ಎಂದು ಹೇಳುವ ಕಾಲವು ಈಗ ಬಂದಿದೆ." ಫೋರ್ಡರ ಅಭಿಪ್ರಾಯದಂತೆ ಕೃಷಿಯನ್ನೂ ಕೈಗಾರಿಕೆಯನ್ನೂ ಸಂಯೋಜಿಸಬೇಕೆಂದು ಅರ್ಥವಾಗುತ್ತದೆ. ಇಂತಹ ಚಳವಳಿವು ನಡೆಯಬೇಕೆಂದೇ ಅವರು ಹೇಳುತ್ತಿರುವುದು. ನಗರಗಳಿಂದ ಏನೂ ಪ್ರಯೋಜನವಿಲ್ಲವೆಂದು ಫೋರ್ಡ್ ಮತ್ತು ತನ್ನ ಆಸಕ್ತಿಕ ಆಕರದಿಂದಾಗಿ ಅಮೇರಿಕಾದ ಉಪಟಳವನ್ನು ತಂದೊಡ್ಡುವುದೇ ಈ ನವ ಪ್ರಯಾಸವೆಂದು ಅವರು ಹೇಳುವರು. ಕೈಗಾರಿಕೆಗಳಿಂದ ತಯಾರಿಸಿದ ಮತ್ತು ವಿದ್ಯುಚ್ಛಕ್ತಿಯನ್ನುಪಯೋಗಿಸುವ ರೈತನೀಗ ದೇಶದ ಅವರೀಗ ಅರಿಸುವ ಜನಗಳು. ಕೃಷಿಗೆ ಜನರು ಇಳಿಯಬೇಕೆಂದು ಅವರು ಸೂಚಿಸುವಂತದರೂ ಈ ಕೃಷಿಯ ರಂಗದಲ್ಲಿರುವವರೊಡನೆ ಸ್ಪರ್ಧಿಸುವಂತಾಗಬಾರದು ಎಂದು ಅವರ ಆಶಯ.

ದಿ ಸೌತ್ ಇಂಡಿಯಾ ಕೋ-ಒಪರೇಟಿವ್ ಇನ್‌ಶೂರೆನ್ಸ್ ಸೊಸೈಟಿ,

ಲಿಮಿಟೆಡ್.

ಮುಖ್ಯ ಕಚೇರಿ — ಮದ್ರಾಸು

ಪೋಸ್ಟು ಬಾಕ್ಸ್ ನಂಬ್ರ 182

ಜೀವವಿಮೆಯ ಉತ್ಕೃಷ್ಟ ಪ್ರಯೋಜನಗಳನ್ನೆಲ್ಲ ಕೊಡುತ್ತದೆ

'ರಿಜಿಸ್ಟ್ರಾರ್ ಓಫ್ ಕೊಒಪರೇಟಿವ್ ಸೊಸೈಟೀಸ್' ಇವರ ಮೂಲಕ, ಸರಕಾರದಿಂದ ಆಡಳಿತೆಯ ಮೇಲ್ವಿಚಾರವೂ ಲೆಕ್ಕದ ಪರಿಶೋಧನೆಯೂ ನಡೆಯುತ್ತದೆ

ಪ್ರೀಮಿಯಂ ದರಗಳು ಬಲು ಕಡಿಮೆ. ಪಾಲಿಸಿಯ ಶರತಗಳು ಅತ್ಯಾಕರ್ಷಕ-

100ರಿಂದ 5000 ರೂಪಾಯಿ ವರೆಗಿನ ಪಾಲಿಸಿಗಳು ಸ್ವೀಕರಿಸಲ್ಪಡುತ್ತವೆ

ಕಡಿಮೆ ಖರ್ಚಿನಿಂದ ಹೆಚ್ಚು ಲಾಭ

ಬೇಕಾಗಿದ್ದಾರೆ.

ದಕ್ಷಿಣ ಕನ್ನಡ, ಕೊಡಗು, ಮೈಸೂರು ಸಂಸ್ಥಾನಗಳಲ್ಲಿ ಇದರ ಪ್ರತಿನಿಧಿಗಳಾಗುವ ಏಜಂಟರು ಬೇಕು

ಆಯಾ ವಿಭಾಗಗಳಿಂದ ಅರ್ಜಿ ಮಾಡುವವರು ಹೆಚ್ಚಿನ ಮಾಹಿತಿಯ ಬಗ್ಗೆ ಕೆಳಗಿನ ಲೋಕಲ್‌ಬೋರ್ಡುಗಳಿಗೆ ಬರೆದುಕೊಳ್ಳಬಹುದು

(1) ಸೆಕ್ರೆಟರಿ, ಸೌತ್ ಕೆನರಾ ಸೆಂಟ್ರಲ್ ಕೋಒಪರೇಟಿವ್ ಬ್ಯಾಂಕ್, ಲಿಮಿಟೆಡ್, ಮಂಗಳೂರು

(2) ಕನ್ವೀನರ್, ಕೂರ್ಗ ಲೋಕಲ್‌ಬೋರ್ಡ್ ಓಫ್ ದಿ ಸೌತ್ ಇಂಡಿಯಾ ಕೋ ಒಪರೇಟಿವ್ ಇನ್ಶೂರೆನ್ಸ್ ಸೊಸೈಟಿ C/o ಕೂರ್ಗ ಕೋಒಪರೇಟಿವ್ ಸೆಂಟ್ರಲ್ ಬ್ಯಾಂಕ್, ಲಿಮಿಟೆಡ್ ಮಡಿಕೇರಿ, ಕೊಡಗು

(3) ಶ್ರೀ ಶ್ರೀನಿವಾಸಯ್ಯ ಕನ್ವೀನರ್ ಮತ್ತು ಗೌರವ ಕಾರ್ಯದರ್ಶಿ, ಫೆಡರಲ್ ಕೋ ಒಪರೇಟಿವ್ ಯೂನಿಯನ್ ಓಫ್ ಮೈಸೂರು ಸಿಟಿ, ಮೈಸೂರು.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು — ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವಿಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ್ಯ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ್ಯ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ



Distributors for South Kanara —

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ

ಅಪ್ರತಿಮ.

ಆರೋಗ್ಯಕ್ಕೆ

32 ... 1

ಕಾವ ... ವನೆ ...

Shah Company ...
Pearl & Sons BANGALORE

Atank Nigrah Pharmacy
Chickpet, Bangalore
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟುಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಪ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ

ಚರಿತ್ರೆ ಮತ್ತು ಕಥೆಗಳು.

	ರೂ	ಆ	ಪೈ
ನಾಲ್ಕನೇ ದರ್ಜೆ	0	6	0
ಮೂರನೇ ,,	0	4	6
ಎರಡನೇ ,,	0	4	0

ಸಮಾಜಶಾಸ್ತ್ರ.

	ರೂ	ಆ	ಪೈ
ಐದನೇ ದರ್ಜೆ	0	8	0
ನಾಲ್ಕನೇ ,,	0	8	0
ಮೂರನೇ ,,	0	2	6

ಸಾಮಾನ್ಯ ವಿಜ್ಞಾನ.

	ರೂ	ಆ	ಪೈ
ಎರಡನೇ ದರ್ಜೆ	0	8	0
ಮೂರನೇ ,,	0	8	0
ನಾಲ್ಕನೇ ,,	0	6	0
ಐದನೇ ,,	0	6	0

ಅಜ್ಜಿ ಕಥೆಗಳು (ಸಚಿತ್ರ.)

ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು.
ಮೆಣಸಿನ ಕಾಳಪ್ಪ
ಅಗಸನ ಮುದ್ದೆ
ಇಲಿಗಳ ಥಕ್ಕ ಥೈ
ಅಂಗಳ ದುಗ್ಗ
ಗುಡುಗುಡು ಗುಮ್ಮಟ ದೇವರು.
ಒಡ್ಡನ ಓಟ.
(ಇವುಗಳ ಕ್ರಯ 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿ ಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೆಯ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ಶಿವರಾಮ ಕಾರಂತ ವಿರಚಿತ

ಗ್ನಾನ

ಜ್ಞಾನದ ಮೇಲೆ ವ್ಯಂಗ ಟೀಕೆ.
ಈಗ ಗ್ರಂಥರೂಪದಲ್ಲಿ
ಸಿದ್ಧವಾಗಿದೆ
ದಪ್ಪಗಿನ ಆಂಟಿಕ್ ಕಾಗದದಲ್ಲಿ
ಅಂದವಾಗಿ ಮುದ್ರಿಸಲ್ಪಟ್ಟಿದೆ.
ಕ್ರೌನ್ ¼ ಆಕಾರದ ೧೮೪ ಪುಟಗಳು.
ಉತ್ತಮ ತರದ ಹಾಸ್ಯ.
ಬೆಲೆ 1-4-0
ಶಾರದಾ ಛಾಪಖಾನೆ, ಮಂಗಳೂರು.
ಇವರಿಂದ ಪಡೆಯಬಹುದು.

ನಡೆದ ಕತೆಗಳು.

True Stories

ನಡೆಯುತ್ತಿರುವ ಸಮಯ—ಮೂರೇ ನಿಮಿಷಗಳು

All Rights Reserved.

[ಸಮಾಜದಲ್ಲಿನ ಕುಂದುಕೊರತೆಗಳನ್ನು ಹೋಗಲಾಡಿಸುವುದೇ 'ನಡೆದ ಕತೆಗಳು'—ಇವುಗಳ ಉದ್ದೇಶ. ಘಟನೆಗಳೆಲ್ಲ ನಿಜವಾದುವುಗಳು; ಅವುಗಳನ್ನು ಸಂಯೋಜಿಸುವುದರಲ್ಲಿ ಮಾತ್ರ ಅನುಕೂಲ ಹೆಸ್ರುಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಹೆಸರುಗಳನ್ನು ಕೆಲವೆಡೆಗಳಲ್ಲಿ ಮಾತ್ರ ಬದಲಾಯಿಸಲಾಗಿದೆ.]

ಅವರ ಶಾಸ್ತ್ರ.

ಡೊಂಗರಕೇರಿ ಶ್ರೀನಿವಾಸ ಭಟ್ಟರೆಂದರೆ ಮಂಗಳೂರಲ್ಲಿ ಹೆಚ್ಚಿನ ಹೆಸರುಳ್ಳವರು. ವಿವಾಹ, ಉಪನಯನ, ಶ್ರಾದ್ಧಾ ಮೊದಲಾದ ಶುಭಾಶುಭಕಾರ್ಯಗಳಲ್ಲಿ ಅವರು ನಗರದ ಜನರೊಡನೆ ಸಹಕರಿಸಿಯೇ ನಡೆಯುತ್ತಿದ್ದರು ಯಾವುದಾದರೂ ಕೆಲಸಕ್ಕೆ ಭಟ್ಟರುಗಳ ಅಗತ್ಯವಿದೆಯೆಂದು ಕಂಡುಬಂದರೆ ಮಂಗಳೂರವರು ಅವರನ್ನು ಮರೆಯುವಂತಿಲ್ಲ. ಬಂದು ವಿಚಾರಿಸಿದರೆ ಸರಿ—"ಈಗಲೇ! ಹೊರಡುವೆನು"—ಎಂದು ಹೇಳಿ ದೊಡ್ಡ ಎಲವಸ್ತ್ರವನ್ನು ಮೈಮೇಲೆ ಹಾಕಿ ಹೊರಹೊರಡುವರು.

ಭಟ್ಟರ ಒಬ್ಬಳೇ ಮಗಳಾದ ವಸಂತಿಬಾಯಿಯು ವೈಧವ್ಯ ದುಃಖಕ್ಕೊಳಗಾಗಿ ಆರು ವರ್ಷಗಳಾದುವು ಆದರೂ ಅವಳ ಮುಂದನವಾಗಿರುವುದಿಲ್ಲ ಆ ವಿಚಾರವು ಭಟ್ಟರ ಮನಸ್ಸಿನಲ್ಲಿದೆಯಾದರೂ, ಪ್ರೇಮದ ಪುತ್ರಿಯು,—ಅದರಲ್ಲೂ ಒಬ್ಬಳೇ ಒಬ್ಬಳಾದ—ವಸಂತಿಯು ರೂಪವನ್ನು ಕೆಡಿಸುವ ದುಃಖಮಯ ಕಾರ್ಯಕ್ಕೆ ಅವರು ಮನಸ್ಸುಮಾಡಲಿಲ್ಲ

ವಸಂತಿಯು ವೈಧವ್ಯ ದುಃಖವನ್ನು ಮರೆತು ನವತರುಣಿಯಾಗಿ, ಸುಂದರಿಯಾಗಿ ಬೆಳೆದಿದ್ದಾಳೆ. ಅವಳ ನಡಿಗೆ, ಅವಳ ಉಡಿಗೆಗಳು ಅವಳ ಬೆಡಗಿಗೆ ಪುಟಗೊಟ್ಟಿದ್ದುವು

ಸುಧಾರಕವರ್ಗದ ರಂಗರಾಯನು ವಸಂತಿಯನ್ನು ವಿವಾಹವಾಗಲು ಸಿದ್ಧನಿರುವೆನೆಂದು ಭಟ್ಟರಿಗೆ ಪತ್ರ ಬರೆದನು. ಆದರೆ ಭಟ್ಟರು ಅವನ ಚತುರತೆಯನ್ನು ಖಂಡಿಸಿ 'ತಮ್ಮ ಪತ್ರವು ತಲಪಿತು ಜಾತಿಭ್ರಷ್ಟರೂ ಧರ್ಮಭ್ರಷ್ಟರೂ ಆಗಲು ಸಿದ್ಧರಾಗಿರುವ ತಮ್ಮ ಧೈರ್ಯವನ್ನು ನೋಡಿ ನಾವು ಮೆಚ್ಚುವುದಿಲ್ಲ' ವೆಂದು ಉತ್ತರವನ್ನಿತ್ತರು ಹಲವರು ಹಲವು ರೀತಿಯಿಂದ ಭಟ್ಟರಿಗೆ ಸಮಾಧಾನ ಹೇಳಿ ವಸಂತಿಗೆ ವಿವಾಹಮಾಡಬೇಕೆಂದು ಬೋಧಿಸಿದರು; ಆದರೆ ಭಟ್ಟರು—"ನನ್ನ ಜೀವವಿರುವ ತನಕ ಈ ಕೆಲಸವು ಅಸಾಧ್ಯ ವಿಧವಾ ವಿವಾಹವು ಎಂದೂ ಶಾಸ್ತ್ರಸಮ್ಮತವಾದುದಲ್ಲ"—ಎಂದರು + + + +

ಇದು ಕಳೆದು ಒಂದು ವರ್ಷವು ದಾಟುತ್ತಲೇ ಶ್ರೀನಿವಾಸ ಭಟ್ಟರ ಪತ್ನಿ ಸುಭದ್ರಾದೇವಿಯವರು ಗರ್ಭಸ್ರಾವದಿಂದ ಕಾಲವಶರಾದರು, ೬೨ ವರ್ಷ ವಯಸ್ಕರಾದ ಭಟ್ಟರನ್ನು ವಿಧುರರನ್ನಾಗಿ ಮಾಡಿದರು ಭಟ್ಟರ ದುಃಖಕ್ಕೆ ಪಾರವೇ ಇರಲಿಲ್ಲ ಒಂದು ಕಡೆಯಿಂದ ಪ್ರೇಮದ ಪುತ್ರಿಯು ವಿಧವೆಯಾಗಿದ್ದು ಮನೆಯಲ್ಲಿ ಭಯವನ್ನೆಬ್ಬಿಸಿದ್ದಾಳೆ ಮತ್ತೊಂದು ಕಡೆಯಿಂದ ಗುಣವಂತೆ ಪತ್ನಿಯು ಕಾಲಾಧೀನಳಾಗಿ ಮನೆಯ ಆಡಳಿತೆಯ ಶಕ್ತಿಯನ್ನಪಹರಿಸಿದ್ದಾಳೆ + + +

ಭಟ್ಟರು ಒಂದು ವರ್ಷ ನಾಲ್ಕು ತಿಂಗಳುಗಳ ತನಕ ವಿಧುರಾವಸ್ಥೆಯಲ್ಲೇ ಇದ್ದರು ಅಷ್ಟಾಗುವಾಗ, ಸೋಮೇಶ್ವರ ಕುರುಸಾಲು ಭೀಮಾಚಾರ್ಯರ ಪುತ್ರಿ ಸುಮತಿಯನ್ನು ವಿವಾಹವಾಗುವುದೆಂದು ನಿಶ್ಚೈಸಿದರು. ಮದುವೆಯ ದಿನವು ಸಮೀಪಿಸುತ್ತಿದ್ದಾಗ ಒಂದು ದಿನ ಭಟ್ಟರಿಗೆ ಈ ಅರ್ಥದ ಒಂದು ಪತ್ರವು ತಲಪಿತು. 'ತರುಣಿಯೋರ್ವಳನ್ನು ಮನೆಯಲ್ಲಿಟ್ಟುಕೊಂಡು—ದಾಂಪತ್ಯ ಜೀವನದ ತಿಲಾಂಶ ಅನುಭವವಾದರೂ ಇಲ್ಲದ ಬಾಲವಿಧವೆಯೋರ್ವಳನ್ನು ಒಳಗಿಟ್ಟುಕೊಂಡು ೬೫ ವರ್ಷ ದಾಟಿದ ನೀವು ೧೮ ವರ್ಷ ಪ್ರಾಯದ ಕನ್ನಿಕೆಯನ್ನು ವಿವಾಹವಾಗಲು ಸಿದ್ಧರಾಗಿರುವಿರಿ! ಧಿಕ್ಕಾರ ನಿಮ್ಮ ಶಾಸ್ತ್ರಕ್ಕೆ! ಧಿಕ್ಕಾರ ನಿಮ್ಮ ಧರ್ಮಕ್ಕೆ! ವಿಧವೆಯರ ಶಾಪವು ನಿಮ್ಮ ಸಮಾಜದಲ್ಲಿ ಕಾರ್ಯಾಸಕ್ತವಾಗಿದೆಯೆಂಬುದನ್ನು ಸ್ವಲ್ಪ ಪರ್ಯಾಲೋಚಿಸಿರಿ ಇಂತಿ ನಿಮ್ಮ ಹಿತಾಕಾಂಕ್ಷಿ ಸುಂದರ'

ಆದರೆ, ಭಟ್ಟರ ಶಾಸ್ತ್ರವು ಅವರ ವಿವಾಹವನ್ನು ನಿಷೇಧಿಸಿರುವುದಿಲ್ಲವಾದುದರಿಂದಲೂ, ಅವರ ಮನು(?)ಧರ್ಮಶಾಸ್ತ್ರವು ಅವರ ಆಚಾರವನ್ನು ಸಮರ್ಥಿಸಿ ಶ್ಲೋಕಗಳನ್ನು ಧರಿಸಿಕೊಂಡಿರುವುದರಿಂದಲೂ ಅವರು—'ಸುಂದರನ' ಪತ್ರದ ನ್ಯಾಯಕ್ಕೊಡಂಬಡಲಾರದಾದರು—ವಿವಾಹವು ಜರಗಿಯೇ ಜರಗಿತು—ತನ್ನ ಪುತ್ರಿ ವಸಂತಿಗಿಂತಲೂ ಸಣ್ಣವಳಾದ ಸುಮತಿಯು ಅವರ ಮನೆಗೆಲಸದಲ್ಲಿ ನಿರತಳಾದಳು.

'ಸುಂದರನ' ಪತ್ರದ ಅರ್ಥವನ್ನು ತಿಳಿದುಕೊಂಡಿರುವ ವಸಂತಿಯು ಧರ್ಮದ ಅರ್ಥವೇನೆಂದು ಎಂದು ತಿಳಿಯುವಳೋ ಹೇಳಲಾಗದು.

ಮು. ಶಾ.

ನಗೆಬಾರೆಡು.

[ಸ್ವಕಪೋಲ ಕಲ್ಪಿತ ಹಾಸ್ಯಗಳನ್ನು ಕಳುಹಿಸುವವರಿಗೆ ಯೋಗ್ಯತಾನುಸಾರವಾಗಿ ಬಹುಮಾನಗಳನ್ನು ಕೊಡಲಾಗುವುದು.]

ಭಿಕ್ಷುಕ.—ಏನಾದರೂ ನೀಡಿ ಸ್ವಾಮಿ.

ಹುಡುಗ—ಮನೆಯಲ್ಲಿ ಯಜಮಾನರು ಇಲ್ಲ. ಹೊರಗೆ ಹೋಗಿದ್ದಾರೆ. ಹೋಗು! ಹೋಗು!

ಭಿಕ್ಷುಕ.—ನಾನು ಯಜಮಾನರನ್ನು ನೋಡಲು ಬಂದಿಲ್ಲ ಸ್ವಾಮಿ,—ಭಿಕ್ಷೆಗಾಗಿ!

\+ + + +

ಉಪಾಧ್ಯಾಯ—ಸಂಜೀವ, ಖಾರ ಯಾವ ವಸ್ತುವಿನಲ್ಲಿದೆ?

ಸಂಜೀವ—ಉಪಾಹಾರದಲ್ಲಿದೆ ಸಾರ್.

\+ + +

ಗುರು—ನಾನು ನಿನ್ನನ್ನು ನಿನ್ನ ಒಳ್ಳೆಯದಕ್ಕಾಗಿ ಹೊಡೆಯೋದು ಗೊತ್ತೇ ರಾಮಪ್ಪ?

ರಾಮಪ್ಪ—ನಾನೂ ಹಾಗೆಯೇ ನಿಮ್ಮ ಒಳ್ಳೆಯದನ್ನು ಆಶಿಸಲೇ ಸಾರ್

\+ + + +

ಶಾಲಾ ಇನ್ಸ್‌ಪೆಕ್ಟರರು—ಕ್ಲಾಸಿಗೆ ಬಂದರು ಹುಡುಗರೆಲ್ಲ ಎದ್ದು ನಿಂತರು ಇನ್ಸ್‌ಪೆಕ್ಟರರ ಹೇಳಿಕೆಯ ಮೇರೆಗೆ ಕುಳಿತರು ಹುಡುಗರಿಗೆ ಕೆಲವು ಪ್ರಶ್ನೆಗಳನ್ನು ಹಾಕಿದರು ಒಬ್ಬನೂ ಮಾತನಾಡಲಿಲ್ಲ ಇನ್ಸ್‌ಪೆಕ್ಟರರಿಗೆ ಆಶ್ಚರ್ಯವಾಯಿತು ಒಬ್ಬ ಹುಡುಗನನ್ನು ಕರೆದು 'ಇಗೋ, ಈ ರೂಪಾಯಿ ಬೇಕೋ? ಎಂದರು'

ಹುಡುಗ—ಕೊಡಿ ರಾಯರೇ

ಇನ್ಸ್‌ಪೆಕ್ಟರ್—ಇಷ್ಟರತನಕ ಯಾರೂ ಮಾತನಾಡಲಿಲ್ಲವೇಕೆ?

ಹುಡುಗ—'ನಮ್ಮ ಉಪಾಧ್ಯಾಯರು ನೀವು ಬಂದಾಗ ಬಾಯಿತೆರೆಯಬಾರದು ಎಂದಿದ್ದಾರೆ'

\+ + + +

ಉಪಾಧ್ಯಾಯ—ಬೀಡಿ ಸೇದೋಕೆ ಎಲ್ಲಿ ಕಲ್ತುಕೊಂಡಿಯೋ ಹನುಮ?

ಹನುಮ—'ನಿಮ್ಮ ಶಾಲೆಯ ಪಾಯಿಖಾನೆಯಲ್ಲಿ ಸಾರ್'

ಉಪಾಧ್ಯಾಯ—ಅದು ಹೇಗೋ!

ಹನುಮ—ನೀವು ಪಾಯಿಖಾನೆಯಲ್ಲಿ ಎಳೆಯುತ್ತಿರೋದನ್ನು ನೋಡಿ ಸಾರ್

\+ + +

ಮಾಸ್ತರರು—ಕತ್ತೆ! ಒಂದು ಪ್ರಶ್ನೆಗೂ ಸರಿಯಾಗಿ ಉತ್ತರವಿತ್ತಿಲ್ಲ! ನಿನ್ನ ತಲೆಯಲ್ಲಿ ಕೋಡು ಬೈಹುಲ್ಲೇ?

ಹುಡುಗ.—(ತಲೆಗೆ ಕೈಹಾಕಿಕೊಂಡು,ಅಳುತ್ತಾ) ನಾನು ಶಾಲೆಗೆ ಹೊರಡುವಾಗ ಅಮ್ಮ ದನಕ್ಕೆ ಬೈಹುಲ್ಲು ಹಾಕು ಎಂದಳು. ಸ್ವಲ್ಪ ಬೈಹುಲ್ಲು ದನಕ್ಕೆ ಹಾಕಿದೆ ಆಗ ಬೈಲು ತಲೆಗೆ ಹಾರಿರಬಹುದು ಸಾರ್.

\+ + + +

ಯಾತ್ರಿಕ—(ಒಬ್ಬ ಹುಡುಗನನ್ನು ಕುರಿತು) ಗೋಕರ್ಣಕ್ಕೆ ಹೋಗುವ ದಾರಿ ಯಾವುದು?

ಹುಡುಗ:—ಹಸುವಿನ ಮೂಗಿನ ಮೇಲೆ ನೆಟ್ಟಗೆ ಹೋಗಿ, ಕೊಂಬಿನ ಹತ್ತಿರ ತಿರುಗಿದರೆ ಗೋಕರ್ಣ ಅಲ್ಲೆ ಸಿಗುತ್ತದೆ

\+ + + +

ಉಪಾಧ್ಯಾಯ.—ಯಾವ ವಸ್ತುವಿನ ಒಂದೆಡೆಯಲ್ಲಿ ನೋಡಿದರೆ, ಇನ್ನೊಂದೆಡೆಯಲ್ಲಿರುವುದು ಕಾಣುವುದೋ ಅದಕ್ಕೆ ಪಾರದರ್ಶಕವೆಂದು ಹೆಸರು ತಿಳಿಯಿತೋ, ರಾಮು, ಒಂದು ಉದಾಹರಣೆಯನ್ನು ಕೊಡು

ರಾಮು.—(ಥಟ್ಟನೆದ್ದು) ಕಿಟಿಕಿ, ಸಾರ್!

\+ + + +

ಉಪಾಧ್ಯಾಯ—ನಾನು ತಲೆ ಕೆಳಗಾಗಿ ನಿಂತರೆ ನನ್ನ ದೇಹದ ರಕ್ತವನ್ನೆಲ್ಲಾ ತಲೆಗೆ ಹರಿಯುತ್ತದೆ ಆಗ ನನಗೇನಾಗುತ್ತದೆ, ಕೃಷ್ಣ?

ಕೃಷ್ಣ—ನೀವೇ ಹೇಳಿ ಸಾರ್ ಹಾಗೆ ನಿಲ್ಲುವುದು ನೀವೇ ಅಲ್ಲವೇ?

\+ + + +

ತಾಯಿ—ಅಪ್ಪು, ನಿನ್ನನ್ನು ಮಾಸ್ತರರು ಪ್ರೀತಿಸುತ್ತಾರೋ ಇಲ್ಲವೋ?

ಮಗು—ಹೌದಮ್ಮ, ಪ್ರೀತಿಸುತ್ತಾರೆ, ಎಲ್ಲರನ್ನೂ ಸಂಜೆ ಮನೆಗೆ ಕಳುಹಿಸಿದನಂತರ ನನ್ನನ್ನು ಅರ್ಧ ಘಂಟೆಯ ವರೆಗೆ ಶಾಲೆಯಲ್ಲಿಯೇ ಇದ್ದು ಪಾಠ ಓದಿದ ನಂತರ ಮನೆಗೆ ಹೋಗೆಂತ ಹೇಳಿ ವಾರಕ್ಕೆ ಮೂರಾವರ್ತಿಯಾದರೂ ನಿಲ್ಲಿಸುತ್ತಾರೆ

"ವಿನೋದಿನಿ"

ವಾರ್ತಾಸಂಗ್ರಹ.

ಲೋಕಸಂಚಾರ

ಸುಮಾತ್ರದ ನಿವಾಸಿಯಾದ ಮಿ| ಉಮರ್ ಎಂಬ ಯುವಕನು ಸಲೀಮ್ ಮತ್ತು ಹಕೀಮ್ ಎಂಬಿಬ್ಬರೊಡನೆ ಕಳೆದ ಮೂರು ವರ್ಷಗಳ ಪೂರ್ವದಲ್ಲಿ ಬೈಸಿಕಲ್‌ನ ಮೇಲೆ ಲೋಕಸಂಚಾರಕ್ಕೆ ಹೊರಟಿರುವನು ಜಾವಾ, ಬೋರ್ನಿಯೊ, ಸೆಲಿಬೆಸ್, ಫಿಲಿಫೈನ್ಸ್, ಇಂಡೊಚೈನಾ, ಮಲಯಾ, ಸಯಾಂ, ಬರ್ಮಾ ಮೊದಲಾದ ಹಲವು ದೇಶಗಳನ್ನು ಇವರು ಕಂಡಿರುವರು ಕಳೆದ ವರ್ಷ ಕಲ್ಕತ್ತೆಗೂ ಬಂದಿದ್ದರು ಇವರೀಗ ಆಫ್ಘನಿಸ್ಥಾನದಲ್ಲಿರುವರ ಇನ್ನು ಏಳು ವರ್ಷಗಳ ನಂತರ ತಮ್ಮ ಮನೆಯನ್ನು ಸೇರುವ ಅಂದಾಜು ಅವರಲ್ಲಿದೆಯೆಂದೂ ತನ್ಮಧ್ಯೆ ಅವರು ಭೂಲೋಕದ ಎಲ್ಲಾ ದೇಶಗಳಲ್ಲಿ ಸುತ್ತಾಡುವರೆಂದೂ ತಿಳಿದುಬಂದಿದೆ ಅವರಿಗೆ ಯಶ ದೊರೆಯಲಿ

ವಿಷಕೊಟ್ಟು ಕೊಂದಳು.

ಲಾಹೋರಿನಲ್ಲಿ ವಾಸಿಸುವ ಖಂದಹರದ ಸಿವಿಲ್ ಸರ್ಜನರ ಪತ್ನಿ ಮರಿಯಮ್ಮ ಎಂಬವಳು ಖಂದಹಾರಿನಿಂದ ಲಾಹೋರಿಗೆ ಬಂದು, ಮನೆಯಲ್ಲಿ ಒಂದು ಪಾಯಸವನ್ನು ಮಾಡಿ ನೆರೆಹೊರೆಯಲ್ಲಿನ ಮುಸ್ಲಿಮ ಮಹಿಳೆಯರಿಗೆ ಹಂಚಿದ್ದಳು ತಿಂದವರಲ್ಲಿ ಮೂವರು ಪರಲೋಕಯಾತ್ರೆ ಬೆಳೆಸಿದರು ಅವಳನ್ನು ಸೆರೆ ಹಿಡಿದಿರುತ್ತಾರೆ ಮರಿಯಮ್ಮಳು ತಾನು ತಪ್ಪು ಮಾಡಿಲ್ಲವೆಂದೇ ಹೇಳುತ್ತಿರುವಳು. ಪಾಯಸ ಮಾಡಿದ್ದೂ ತಪ್ಪಾಯಿತೇ?

ಕೊಲೆಯಾದವನು ಬದುಕಿದನೇ?

ಕಡಪದಲ್ಲಿ ಪೆದ್ದಬಲಿ ರೆಡ್ಡಿ ಎಂಬವನನ್ನು ಕೊಲೆ ಮಾಡಿದರೆಂದು ಸುದ್ದಿ ಹರಡಿತು. ಅವನ ಹಗೆಗಳಾದ ಪೆದ್ದಭೂಮಿ ರೆಡ್ಡಿ ಎಂಬವನ ಮೇಲೆ ಅರ್ಜಿ ಹಾಕಿದರು. ಅವನನ್ನು ಪೋಲೀಸರು ಸೆರೆಹಿಡಿದು ವಿಚಾರಿಸಿದರು. ತಾನು ಕೊಲೆಮಾಡಲೇ ಇಲ್ಲ ವೆಂದನು. ಕಡಪಾ ಸ್ಟೇಷನರಿ ಮೆಜಿಸ್ಟ್ರೇಟರಲ್ಲಿ ವಿಚಾರಣೆ ನಡೆಯುತ್ತಿದ್ದಿತು ೧೬ ಸಾಕ್ಷಿಗಳಲ್ಲಿ ಒಬ್ಬನ ವಿಚಾರಣೆಯು ನಡೆಯಲಿದ್ದಿತು, ಅಷ್ಟರಲ್ಲಿ ಜಮ್ಮಲ ಮಡಗುವಿನಿಂದ ಪೋಲೀಸ ಸ್ಟೇಶನಿನ ಒಂದು ತಂತಿ ಬಂದು, ಪೆದ್ದಬಲಿ ರೆಡ್ಡಿಯು ಜೀವಂತನಾಗಿರುವನೆಂದು ತಿಳಿಸಲಾಯಿತು. ಕೂಡಲೇ ಮುಂದಿನ ವಿಚಾರಣೆಯು ರದ್ದುಮಾಡಲ್ಪಟ್ಟಿತು. ಕಲ್ಲಪ್ರೊದತೂರು ಸ್ಟೇಶನಿಗೆ ಪೆದ್ದ ರೆಡ್ಡಿಯನ್ನು ಪೋಲೀಸರು ಕರೆದು ತಂದಿರುವರು.

ಹದಿನಾರು ವರ್ಷದ ಬಾಲಕನನ್ನು ಕಿವಿಯಲೆತ್ತಿಸಿದನು.

ದಿಲ್ಲಿಯತ್ತ ಸೀತಾರಾಮ್ ಎಂಬಲ್ಲಿನ ಬಜಾರ್ ಒಂದರಲ್ಲಿ ೧೬ ವರ್ಷ ಪ್ರಾಯದ ಬಾಲಕನು ನಡೆಯುತ್ತಿದ್ದನು. ಅಷ್ಟರಲ್ಲಿ ಮುಮ್ತಾಜ್ ಎಂಬ ೨೫ ವರ್ಷ ಪ್ರಾಯದವನು ಬಂದು ಅವನ ಕೊರಳನ್ನು ಹಿಡಿದನು ತನ್ನ ಕೈಯಲ್ಲಿದ್ದ ಕ್ಷೌರಕತ್ತಿಯಿಂದ ಅವನ ಕತ್ತನ್ನು ಕತ್ತರಿಸಿಬಿಟ್ಟನು ಬಾಲಕನು ರಕ್ತಧಾರೆಯ ಮೇಲೆ ಒರಗುತ್ತಿರುವಾಗ ಜನರು ಬಂದು ಮುಮ್ತಾಜನನ್ನು ಹಿಡಿದು ಪೋಲೀಸರಿಗೆ ಕೊಟ್ಟರು ಬಾಲಕನು ಮುಮ್ತಾಜನನ್ನು ನಿತ್ಯದಂತೆ ಕಾಣಲು ಅವನ ಮನೆಗೆ ಹೋಗದಿದ್ದುದಕ್ಕಾಗಿ ಈ ಯತ್ನವೆಂದು ತಿಳಿದುಬಂದಿದೆ.

ತುಷಾರಕಾಂತಿ ಘೋಸರ ಬಿಡುಗಡೆ.

ಕಲ್ಕತ್ತದ ಅಮೃತಬಜಾರ ಪತ್ರಿಕೆಯ ಸಂಪಾದಕರಾದ ಶ್ರೀ ತುಷಾರಕಾಂತಿ ಘೋಸರು ನಿಷಿದ್ಧ ಲೇಖನವೊಂದನ್ನು ಪ್ರಕಟಿಸಿದುದಕ್ಕಾಗಿ ಮೂರು ತಿಂಗಳ ಸಾದಾ ಸಜೆಗೊಳಗಾಗಿದ್ದರಷ್ಟೆ ಅವರ ಕಾರಾಗೃಹದ ಅವಧಿಯು ಒಂದು ದಿನದ ಮೊದಲೇ ಅವರನ್ನು ಬಿಡುಗಡೆ ಮಾಡಿದರು ಶ್ರೀಯುತರ ಆರೋಗ್ಯಕಾಯರಾಗಿಯೇ ಇದ್ದಾರೆ

ಬ್ರಿಟನಿನಲ್ಲಿ ಅಸಹನೀಯ ತಾಪ.

೧೮೭೧ರ ನಂತರ ಇಂತಹ ಅಸಹನೀಯ ತಾಪವನ್ನು ಬ್ರಿಟನು ಅನುಭವಿಸಿರಲಿಲ್ಲ. ಲಂಡನಿನಲ್ಲಿ ತಾಪವು ಬಹು ವಿಪರೀತವಾಗಿದೆ. ಅನೇಕ ಮರಣಗಳೂ ಸಂಭವಿಸಿವೆ. ಯುರೋಪು ಖಂಡವೆಲ್ಲಾ ಸೂರ್ಯನ ತಾಪದಿಂದ ಬೇಯುತ್ತಿದೆ ಸ್ವೀಡನಿನಲ್ಲಿ ವಿಪರೀತ ಉಷ್ಣವೆದ್ದುದರಿಂದ ಜನರು ಗುಂಪು ಗುಂಪಾಗಿ ಸಮುದ್ರಕ್ಕೆ ಹೋಗಿ ಸ್ನಾನಕ್ಕಿಳಿದರು ಇದರೊಡನೆ ರಾತ್ರಿಕಾಲದಲ್ಲಿ ವಿಚಿತ್ರಕರವಾದ ಚಳಿಯೂ ತಲೆಯೆತ್ತುತ್ತಿದೆ

ಬಾವಿಯೊಳಗಾದವರು'

ಹೈದರಾಬಾದಿನ ನಾಲ್ಗೊಂಡಾ ಎಂಬಲ್ಲಿ ಒಂದು ದೊಡ್ಡ ಬಾವಿಯನ್ನು, ೧೩ ಜನರು ಕೂಡಿ ಅಗೆಯುತ್ತಿದ್ದಾಗ ಬಾವಿಯ ಒಂದು ಪಾರ್ಶ್ವದ ಗೋಡೆಯು ಜರಿದುಬಿದ್ದು, ಎಲ್ಲರೂ ಭೂಗತರಾದರು ಒಡನೆ ಹಲವರು ಸಹಾಯವಿತ್ತುದರಿಂದಾಗಿ ೧೦ ಜನರು ಬದುಕಿ ಉಳಿದರು. ಮೂವರು ತೀರಿಕೊಂಡರು ಕೂಲಿಗಾರರು ಯಾವಾಗಲೂ ಎಚ್ಚರದಿಂದಿರಬೇಕಾಗಿದೆ

ಆವರಿಗೆ ಹೇರಳ ಸಂಪತ್ತು ದೊರೆಯಿತು'

ಪಾಲ್ಘಾಟಿನ ಶ್ರೀ|| ಮನ್ನಡಿ ನಾಯರ್ ಎಂಬವರಿಗೆ ಒಲವಕೋಟ್ ರೈಲ್ವೆ ಸ್ಟೇಶನ್ ಮತ್ತು ಪೊದನೂರು ಮಧ್ಯೆಯಿರುವ 'ಕಂಚಿ ಕಟ್ಟೆ ಗುಡ್ಡ' ಎಂಬ ಆಸ್ತಿಯಿತ್ತು ದೊಡ್ಡ ಪರ್ವತ ಪ್ರದೇಶವದು. ಅವರು ಅಲ್ಲಿ ಪರೀಕ್ಷಿಸಲಾಗಿ—ಆ ಭೂಮಿಯಲ್ಲಿ ಬೆಳ್ಳಿ, ಬಂಗಾರ, ತಾಮ್ರ, ವಜ್ರ ವೈಢೂರ್ಯಗಳಿವೆಯೆಂದು ತಿಳಿದುಬಂತು ಈಗ ಅವರು ಒಂದು ಇಂಗ್ಲಿಷ್ ಕಂಪೆನಿಗೆ ಗನಿ ತೋಡುವ ಕಂಟ್ರಾಕ್ಟನ್ನು ಕೊಟ್ಟಿರುವರು. ಕೆಲಸವು ನಡೆಯುತ್ತಲಿದೆ. ಯೂರೋಪಿಗೆ ಹೋಗಿ ಈ ಬಗ್ಗೆ ವ್ಯವಸ್ಥೆ ಕೂಡಾ ಮಾಡಲಿರುವರು. ಮಲಬಾರ್ ಸ್ವರ್ಣ ಭೂಮಿಯಾಯಿತೇ?

ಅಗ್ರಗಣ್ಯ ಸಂಗೀತಜ್ಞರು ಅದರ ಪ್ರಶಂಸಾಗಾನವನ್ನು ಮಾಡಿದ್ದಾರೆ.

ಮುಸಿರಿ ಸುಬ್ರಹ್ಮಣ್ಯ ಐಯ್ಯರ್,

6 ಒಲಿವರ್ ರೋಡ್,
ಮೈಲಾಪುರ ಮದ್ರಾಸು
ತಾ. ೨-೫-೨೪

ಅನೇಕ ಸಮಯದಿಂದ ನನ್ನ ಕುಟುಂಬದವರೆಲ್ಲ ಕೇಶವರ್ಧಿನಿಯನ್ನು ಬಿಡದೆ ಉಪಯೋಗಿಸುತ್ತಿರು ವರೆಂದು ತಿಳಿಸಲು ಸಂತೋಷಿಸುತ್ತೇನೆ ಉದು ರುವ ಕೂದಲನ್ನು ತಡೆಯುವ ಅದರ ಶಕ್ತಿಯನ್ನು ಪೂರ್ಣವಾಗಿ ತಿಳಿದು, ಅಲ್ಲದೆ ಕೂದಲನ್ನು ಅದು ಬೆಳೆಯಿಸುವ ಅದರ ಗುಣವನ್ನು ಅರಿತು ಅವರು ಅದರ ಗುಣಗಾನವನ್ನು ಮಾಡಿ ಸ್ನೇಹಿತರಿಗೂ ಅದನ್ನು ಶಿಫಾರಸು ಮಾಡುತ್ತಾರೆ ಕೇಶಗಳಿಗೂ ಮೆದುಳಿಗೂ ಸಮರ್ಪಕವಾದ ಎಣ್ಣೆಯೊಂದು ಅಗತ್ಯವಿರುವವರು ಇದನ್ನುಪಯೋಗಿಸ ಬಹುದೆಂದು ನಾನು ಶಿಫಾರಸು ಮಾಡುತ್ತೇನೆ

(ಸಹಿ) ಮುಸಿರಿ ಸುಬ್ರಹ್ಮಣ್ಯ ಅಯ್ಯರ್.

ಬೋಳು ತಲೆಯವರಾಗಿರಬೇಡ ಅಥವಾ ತಲೆಕೂದಲು ಅಪರಿಪಕ್ವ ಸಮಯದಲ್ಲಿ ಬಿಳಿದಾಗದಂತೆ ನೋಡಿ

ಬಾಟ್ಲಿ 1ಕ್ಕೆ ಆಣೆ 12 **'ಕೇಶವರ್ಧಿನಿ'** ಪೇಕಿಂಗ್ ಮತ್ತು ಅಂಚೆವೆಚ್ಚ ಪ್ರತ್ಯೇಕ

ಹೆಚ್ಚಿನ ವಿವರ ವ್ಯಾಪಾರಿಗಳಲ್ಲಾಗಲೀ ಅಥವಾ ಈ ವಿಳಾಸದಲ್ಲಾಗಲೀ ಸಿಗುವುದು —

South India Chemicals, LUZ ROAD Mylapore Madras

ನಮ್ಮ ಪ್ರವರ್ತಕರು—ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

ಕೆನರಾ ವಾಚ್ ವರ್ಕ್ಸ್, ಮಂಗಳೂರು.

ದಿನಂಪ್ರತಿ ನೂರಾರು ಗಿರಾಕಿಗಳು ಬಂದು ನಮ್ಮಲ್ಲಿರುವ ಹಲವು ಬಗೆಯ ಕೈಗಡಿಯಾರ, ಗೋಡೆಯ ಗಡಿಯಾರ, ಆಟದ ಸಾಮಾನು ಮೊದಲಾದುವುಗಳನ್ನು ಪಡೆದು, ಸಂತೃಪ್ತಿ ಹೊಂದಿ ಸಂತೋಷದಿಂದ ಹೋಗುವ ವಿಷಯವೊಂದೇ ನಮ್ಮಲ್ಲಿನ ಸರಕು ಗಳಿಗೆ ಜನರಿಂದ ದೊರೆತಿರುವ ಪ್ರಶಂಸೆ ನೀವೂ ನಮ್ಮಲ್ಲಿಗೆ ಬರ ಬಹುದು_ತೃಪ್ತಿ ಹೊಂದಬಹುದು-ಮೆಚ್ಚಿದರೆ ಪಡೆಯಬಹುದು.

ಎಲ್ಲೆಲ್ಲಿ ನೋಡಿದರೂ ಸ್ವದೇಶಾಭಿಮಾನಿ!

ಆಬಾಲವೃದ್ಧರು ಓದುವುದು ಸ್ವದೇಶಾಭಿಮಾನಿಯನ್ನು!

ಗಿರಾಕಿಗಳು ದಿನೇ ದಿನೇ ಹೆಚ್ಚುತ್ತಿದ್ದಾರೆ

ಕೊನೆಯ ಒಂದೆರಡು ಪ್ರತಿಗಳೂ ವಿಕ್ರಯವಾಗುತ್ತವೆ!

ವಾರಂಪ್ರತಿ ಹೆಚ್ಚಿನ ಪ್ರತಿಗಳನ್ನು ಮುದ್ರಿಸುತ್ತೇವೆ.

ಸರ್ವರೂ ಓದಿ ಆನಂದಿಸಿರಿ!

ಬೆಲೆ ಒಂದಾಣೆ ಮಾತ್ರ!

ಎಲ್ಲಾ ಏಜಂಟರುಗಳಲ್ಲಿಯೂ ಸಿಗುತ್ತವೆ

1¼ CRORE

Karnatics

know nothing

of your

products,—

Advertise them

in

Swadeshabhimani

the pioneer

Weekly of the

South Kanara District

For Advertisement rates apply to

The Advertisement Manager,

Swadeshabhimani,

Mangalore

ಪ್ರಶಂಸೆ.

ಪ್ರಖ್ಯಾತ ಅಮೆರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ

ವಿ-ಮೊ-ಲ

VIM-O-LA

ಅಮೆರಿಕಾದ ಜೀವಸಾರ ವಸ್ತು.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲ ಕಾರೀ ಔಷಧಿ ಹೊಟ್ಟೆಯಲ್ಲಿ ಚೆಂಡಿ ನಂತೇಳುವ ವಾಯುವನ್ನೂ, ಅಜೀರ್ಣ ವನ್ನೂ ಕೂಡಲೇ ಗುಣಪಡಿಸುತ್ತದೆ ನರ ಗಳನ್ನು ಪುಷ್ಟಗೊಳಿಸುವ ಶಕ್ತಿವರ್ಧಕ ಪಾನೀಯ. ಕೂಡಲೇ ಒಂದು ಬಾಟ್ಲಿಯ ನ್ನುಪಯೋಗಿಸಿರಿ ಬಾಟ್ಲಿ 1ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ ಸ್ಟೋಕಿ ಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆ ಗಳಲ್ಲಿ ಬೇಕಾಗಿದ್ದಾರೆ ಇಲ್ಲಿಗೆ ಬರೆಯಿರಿ

'Vimola Depot'

Manufactured by

American Herbal Products Co,

Sole representatives for above medicine

The National Kanara News Agency,

Sir Phirozsha Metha Road
Fort Bombay

ಲೇಡಿಸ್ ಬಾಂ

ಸ್ತ್ರೀಯರ ಜೀವನಾಧಾರ

ಸ್ತ್ರೀಯರು ಪುಷ್ಟರಾಗಿಯೂ ಕಾಂತಿಯುಕ್ತರಾಗಿಯೂ ಇರಬೇಕಾದರೆ, ಅವರ ಮುಟ್ಟುದೋಷ, ಆ ಸಮಯದಲ್ಲಿ ಕಂಡುಬರುವ ಹೊಟ್ಟೆನೋವು ಸೊಂಟ ಹಿಡಿತ, ಗಂಟುನೋವು, ಮೈಯಲ್ಲಿ ದಡಿಕೆ ಬೀಳುವುದು, ಬಿಳೀ ಸೆರಗು, ಗರ್ಭಕೋಶದ ನೋವು, ಅಕ್ರಮ ರೀತಿಯಿಂದ ಮುಟ್ಟಾಗುವಿಕೆ, ಬಂಜೆತನ, ಸಾಧಾರಣ ಕ್ಷಯವಿಕಾರ ಮತ್ತು ಅವರ ಅನೇಕ ತರದ ಗುಪ್ತರೋಗಗಳನ್ನು ನಿವಾರಿಸಲು ಇದರ ಒಂದೇ ಒಂದು ಶೀಸೆಯನ್ನು ಉಪಯೋಗಿಸಿದರೆ ಗುಣವನ್ನು ಕಾಣುವಿರಿ

ಉಪಯೋಗಿಸಿದವರ ಅಭಿಪ್ರಾಯ —

ರಾಮಕೃಷ್ಣ ಜೈನ್ ಬಿ ಎ ಲಾಹೋರ್ I found your Ladies Balm worth the money I spent on it '

ಯಾವ ತರದ ಔಷಧಿಯಿಂದಲೂ ಬಹಿಷ್ಟೆಯ ಅಸಮವನ್ನು ಹೋಗಲಾಡಿಸಲು ಅಸಮರ್ಥರೆಂದಾದರೆ ನಮ್ಮ ಲೇಡಿಸ್ ಬಾಮನ್ನು ಉಪಯೋಗಿಸಿ ಒಂದು ತಿಂಗಳ ಔಷಧಿಯಿರುವ ಶೀಸೆಗೆ ರೂ ೩—೦—೦ ವಿ ಪಿ ಖರ್ಚು ೦—೬—೦

ತಯಾರಿಸುವವರು —**ದಿ. ಬಿಹಾರ್ ಕೆಮಿಕಲ್ ವರ್ಕ್ಸ್, ಬಾಗಲಪುರ.**

ಏಜಂಟರು—ಷಹಾ ಕಂಪೆನಿ, ಗವರ್ನ್ಮೆಂಟ್ ಕಾಲೇಜು ಎದುರು ಮಂಗಳೂರು.

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ.

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು.

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

	ಕೆಲಸದ ಫಲಿತಾಂಶ	ಲೈಫ್ ಫಂಡ್
1925–	ರೂ. 21,24 250	500
1929–	ರೂ 1 66,18 620	9 32,900
1934–	ರೂ 46,77 223	49 06,771

ಕ್ಲೆಯಿಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ ಕಂಪೆನಿಯ ಆಸ್ತಿ-57,00,000ಕ್ಕೆ ಮೀರಿದೆ. 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ ಲಾಭಹೊಂದಬೇಕಾಗಿದೆ ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ 'ಲಕ್ಷ್ಮಿ'ಯಲ್ಲಿವೆ

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co, Ltd,
Madras Branch,
No. 6, Sankuram Chetty St, G. T MADRAS

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6, ಸಂಕುರಾಮು ಚೆಟ್ಟಿ ಬೀದಿ, ಜಿ. ಟಿ ಮದ್ರಾಸು

The Canara Banking Corporation Udipi, Ltd.

Head office:—UDIPI, S. K. (*Incorporated in British India*) Tel.-'BANKING' **ESTD. 1906.**

Branches:—1 Udipi, 2. Coondapoor, 3. Car Street, Mangalore, 4. Shimoga, 5. Madras, 6. Bunder Mangalore, 7 Mercara

Capital Paid-Up & Reserve Funds Rs 5,84313—0—0
Investments on Goverment Securities „ 6,77,059—0—0
Total Working Capital Exceeds „ 36,00,000—0—0
Interest Allowed on Deposits up to 5% Per Annum.

Before Investing, Please Call at our Head Office, or any of the Branches

ಕೋರ್ಪೊರೇಶನ್ ಆಫೀಸು, ಉಡುಪಿ, 6-6-35

M. Shrinivas Prabhu,
Manager

Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.
ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು
ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು
ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ
ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ನಿಮಿತ್ತದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದು ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ರಜತೋತ್ಸವ ವರ್ಷ. ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್ ಸ್ಥಾಪನ 1910 ರಜತೋತ್ಸವ ವರ್ಷ.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಚೆಯರ್‌ಮೆನ್.—ಸರ್, ಲಲ್ಲೂಭಾಯಿ ಸಮಲ್ದಾಸ್, [illegible])

ಇದು ದಕ್ಷಿಣ ಹಿಂದೂಸ್ಥಾನ ಮತ್ತು ದೇಶೀಯ ಸಂಸ್ಥೆಗಳ [illegible] ಕಾರ್ಯದರ್ಶಿಗಳು [illegible]

ಪೋಲಿಸಿದಾರರು ಮತ್ತು ಏಜಂಟರುಗಳಿಗೆ ನಮ್ಮ ಸಂದೇಶ —

[illegible] ನಮ್ಮ ಜೀವವಿಮೆಯ [illegible] ನಮ್ಮ ಪೋಲಿಸಿದಾರರ ಮತ್ತು ಏಜಂಟರ [illegible] ಮುಂದಿಟ್ಟುಕೊಂಡು ಮುಂದರಿಯುತ್ತಾ ಬಂದಿರುವೆವು [illegible] ಬಂದಿರುವೆವು [illegible] ನಮ್ಮ [illegible] ಅನುಭೂತಪೂರ್ವವೂ ಆದ ವಿಜಯದ ರಹಸ್ಯವು ಇದರಲ್ಲೇ ಅಡಕವಾಗಿದ್ದು ನಾವು ನಮ್ಮ ವ್ಯವಹಾರದಲ್ಲಿ ಒಂದು ಕೋಟಿಯಷ್ಟು [illegible] ಪೋಲಿಸಿಗಳನ್ನು [illegible] ಅತ್ಯಂತ ಅಭಿಮಾನಾಸ್ಪದವಾದ ನಮ್ಮ ಮಹತ್ವಾದ [illegible] ಕಳೆದ 25 ವರ್ಷಗಳ ಅವಧಿಯಲ್ಲೂ ನಮ್ಮ [illegible] ಏಜಂಟರುಗಳಲ್ಲಿ ಒಬ್ಬರಾದರೂ ನಮ್ಮೊಡನಿರುವ ನಿಕಟಸಂಬಂಧವನ್ನು ಮುರಿದಿಕ್ಕಿರುವುದಿಲ್ಲ

ಜೀವವಿಮಾ ವಿಕ್ರಯಕ್ರಮಗಳಲ್ಲಿ ಸಂಪೂರ್ಣ ತರಬೇತಿ ಕೊಡಲಾಗುತ್ತದೆ ಚತುರರಾದ ಉತ್ಸಾಹೀ ತರುಣರ ಭಾವೀ ಕಲ್ಯಾಣವಾಗುತ್ತದೆ

ನಮ್ಮ ಈ ಕೆಳಗಿನ ಯಾವುದಾದರೂ ಆಫೀಸುಗಳಿಗೆ ಬರೆಯಿರಿ ಅಥವಾ ಸ್ವತಃ ಬಂದು ಕಾಣಿರಿ

(1) ಇಸ್ಮಾಯಿಲ್ ಬಿಲ್ಡಿಂಗ್, ಹೋರ್ನ್‌ಬಿ ರೋಡ್, ಬೊಂಬಾಯಿ ನಂ 2 (2) ಪೋಸ್ಟ್ ಬಾಕ್ಸ್ 337, ಮೌಂಟ್ ರೋಡ್ ಮದ್ರಾಸು (3) ವಿಶ್ವೇಶ್ವರಪುರಂ, ಬೆಂಗಳೂರು ಸಿಟಿ (4) ಹಜೂರ್ ರೋಡ್, ಕಲ್ಲಿಕೋಟೆ (5) ರಥಬೀದಿ, ಮಂಗಳೂರು. (6 ಉಡುಪಿ, ದಕ್ಷಿಣ ಕನ್ನಡ

Karnataka Chemical and Pharmaceutical Works, Ltd , Udipi (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ
ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್ಹೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು,
ಖರ್ಚೂ ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.
ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ. ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ.

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಗ್ರಿಗಳು (Toilets)
ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲಿಂಟೈನ್, ಅರೋರಾ ಕ್ರೀಮ್, ಕ್ರಿಮೋರ್ ಲಿಕೊರಿಸ್, ಕರ್ಣಾಟಕ ರೋಸ ಪೊಮೇಡ್.
ಇದಲ್ಲದೆನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪಥಿಕ್ ಔಷಧಗಳೂ, ಫೌಂಟನ್‌ಪೆನು ಶಾಯಿಗಳೂ ಸಿದ್ಧವಾಗುವುವು

ಮೆನೆಜಿಂಗ್ ಡೈರೆಕ್ಟರ್—ವೆಂಕಟಪ್ಪಯ್ಯ ಅಪ್ಪಪ್ಪ ಬಾಳಿಗ.
ಹೆಡ್ ಆಫೀಸು ಮತ್ತು ಕಾರಖಾನೆ —ಉಡುಪಿ, ದಕ್ಷಿಣ ಹಿಂದೂಸ್ಥಾನ.
ವ್ಯಾಪಾರದ ಡಿಪೋ —(1) ದೇವಕರಣ ಮೆನ್ಶನ್ಸ್, 48 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2
ಏಜಂಟ್ಸ್— (2) 1/70 ನ್ಯಾನಪ್ಪ ನ್ಯಾಕನ ಬೀದಿ, ಜಾರ್ಜ್ ಟೌನ್ ಮದರಾಸು.
ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

Edited, Printed & Published By [illegible]

ವಾರ್ಷಿಕ ಚಂದಾ: 2 ರೂಪಾಯಿ. ಬಿಡಿ ಸಂಚಿಕೆ 1 ಆಣೆ. ಟಪ್ಪಾಲು ಹಾಸಲು ಸೇರಿ ರೂ. ೨-೧೨-೦.

for Quality Snuff
H. Rama Rao and Sons.
High Class Snuff Manufacturers
Mangalore, S I
ASK FOR
RAMA SNUFF
The charm of Snuff Users!

ಸ್ವದೇಶಾಭಿಮಾನಿ

SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in THE BOMBAY LIFE
Madras Branch Secretaries
Kochikar Brothers
Udipi Mangalore Bangalore Madras Bombay and Calcutta

ESTABLISHED 1906

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ಪುಸ್ತಕ ೨೯ ಮಂಗಳೂರು ತಾ. ೧೨ನೇ ಶುಕ್ರವಾರ ಜುಲಾಯಿ ೧೯೩೫ (12—7—'35) ಸಂಚಿಕೆ ೨೮

THE C. P. C. BUILDINGS.

The New Centre of Business.

ನಮ್ಮ ಬಿಲ್ಡಿಂಗಿನಲ್ಲಿ ವಹಿವಾಟು ನಡೆಸುವವರು

ಎದುರು ಮಾರ್ಗದಲ್ಲಿ

1 ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ, ಇಲ್ಲಿ ಮಂಗಳೂರಿನಿಂದ ಎಲ್ಲಾ ಪೆ ... ಗಳು ದೊರಕುತ್ತವೆ

2. ಚಿರ್ದಪ್ಪ ಕೆಣಾಯವರ ಜೀನಸಿನ ಅಂಗಡಿ, ಇಲ್ಲಿ ... ಗಳು ದೊರಕುತ್ತವೆ

3 ... ಕಂಪೆನಿಯ ಮಾರಾಟದ ಅಂಗಡಿ, ಇಲ್ಲಿ ಇಲೆಕ್ಟ್ರಿಕ್ ... ನಗಳು ದೊರಕುತ್ತವೆ

4. ಜಯಲಕ್ಷ್ಮಿ ಸ್ಟೋರ್ಸ್, ಇಲ್ಲಿ ... ಮತ್ತು ಹಾರ್ಡ್‌ವೇರ್ ದೊರಕುತ್ತವೆ



Front View

ಎದುರು ಮಾರ್ಗದಲ್ಲಿ

Dr. M S Prabhu, ...

ಇತರ ಚಿಕಿತ್ಸಾಲಯ

ಹಿಂದೆ ಕೆಳಗಿನ ಭಾಗದಲ್ಲಿ —

ಶಿವರಾಮ ಕಾರಂತರ ಬ್ಲೋಕ್ ಮಾಡುವ

Pre... Studio

ಮಾಳಿಗೆಯಲ್ಲಿ —

1 ಬಿ ಶಾಂತಾರಾಮ್ ರಾವ್, ...

ಲೆಕ್ಕ ಪರೀಕ್ಷಕರ

2. United India Assurance Co., Ltd.

ಇನ್ಶೂರೆನ್ಸ್ ಕಂಪೆನಿ

Rear View Photographed immediately after—completion.

The Canara Public Conveyance Company Ltd., Kodialbail Mangalore.

ಚಕ್ರ

(All Rights Reversed)

ಏನೂ ಕೆಲಸವಿಲ್ಲದ ಮನಸ್ಸಿನೊಳಗೆ ಮೈದಾನಿನ ಚಿತ್ರವೋ, ಬಾವಟೆಗುಡ್ಡೆಯ ರೂಪವೋ, ಹೊಳೆಕಿನಾರೆ ಅಥವಾ ರೈಲ್ವೇ ಸ್ಟೇಷನಿನ ಸಂಗಾಡಗಳೋ ಪ್ರತಿಬಿಂಬಿತ ವಾಗುತ್ತವೆ ಆಗ ಆಯಾಯ ಸ್ಥಳಗಳಿಗೆ ವಿಹಾರಾರ್ಥ ಹೋಗೋಣವೆಂಬ ಇಚ್ಛೆಯುಂಟಾಗುತ್ತದೆ ಇದು ಸ್ವಾಭಾವಿಕ!

× + × × × ×

ಇಂತಹ ಸ್ವಭಾವವುಳ್ಳ ನಾಲ್ಕು ಮಂದಿಗಳು ಬಾವಟೆಗುಡ್ಡೆಯ ಸೀಟು ಒಂದರಲ್ಲಿ ಕುಳಿತು ಮಂಗಳೂರಿನ ಪತ್ರಿಕೆಗಳು ಪ್ರಕಾಶನ ಮಂಡಲಗಳು ಟೆಕ್ಸ್ಟ್‌ಬುಕ್ ಕಮಿಟಿ—ಇವೇ ಮೊದಲಾದ ವಿಚಾರಗಳ ನ್ನೆತ್ತಿಹಿಡಿದು ಸಂಭಾಷಿಸುತ್ತಿದ್ದರು. (ಸಾಯ್ಬನು ಹತ್ತಿರ ವಿರುವನೆಂದು ತಿಳಿದೂ ಅವರು ಮಾತನಾಡುತ್ತಿದ್ದರು)

× × × × × ×

"ಮಂಗಳೂರಿನ ಪತ್ರಿಕೆಗಳಲ್ಲೆಲ್ಲ ಎಡ್ವರ್ಟೈಜ್‌ಮೆಂಟ್ ಜಾಸ್ತಿ ಕಾಣ್ರಿ, ಚಿಟ್ಟಣ್ಣನವರೇ? ನಾವೇನು—ದುಡ್ಡು ಅದಕ್ಕಾಗಿಯೇ ಕೊಡೋದೇ?" ಎಂದು ಮಿಸೆ ಬೋಳಿಸಿದ್ದ ಕುಳ್ಳ ಪ್ರಾಣಿಯು ಸ್ಫುಟವಿಟ್ಟಿತು! ಈ ಪ್ರಾಣಿಯು ಮಾತ್ರ ಯಾವುದೊಂದು ಪತ್ರಿಕೆಯ ಚಂದಾದಾರನೂ ಅಲ್ಲವೆಂಬ ಸುಖವಾರ್ತೆಯು ನನಗೆ ಸಿಕ್ಕಿತು ಏನು ಸೊಕ್ಕಯ್ಯ ಕೆಲವು ಕನ್ನಡಿಗರಿಗೆ! ಜಾಹೀರಾತು ಅಷ್ಟಿಷ್ಟು ಹಾಕಿಯೂ ಕೂಡ ಪ್ರಾಣೋತ್ಕ್ರಮಣ ಸ್ಥಿತಿಗೆ ಬರುವ ಪತ್ರಿಕೆಗಳ ಗತಿಯೇನೆಂದು ಇವರಿಗೇನು ಗೊತ್ತು? ಪಾಲಕ್ಕೆ ಒಂದಾಣೆಯಂತೆ ಬರುವುದಕ್ಕೇ ಬುಕ್ಸ್ವಾಯಿ ಹುಣ್ಣುಮೇಗೊಂಡು ಅವಿಚಾರಕ್ಕೆಗೊಂಡು ಪತ್ರಿಕೆ ಪಡೆದವರೇ ಭಾಗ್ಯವಂತರು! ಹಾಗಿರುವಾಗ ಜಾಹೀರಾತು ಹೆಚ್ಚಾಗುತ್ತಿದೆಯೆಂದು ಬೊಬ್ಬಿಡುವ ಈ ಜನರಿಗೆ ಬುದ್ಧಿ ಇಲ್ಲವೆಂದು ಸಾಯ್ಬನ ಸ್ಟೇಟ್‌ಮೆಂಟ್

× × × × × ×

ಇನ್ನು ಅನೇಕ ಕನ್ನಡಿಗರಿಗೆ ವಾಚನಾಭಿರುಚಿಯಿದೆಯೇ? ಅದೂ ಇಲ್ಲ ಪತ್ರಿಕೆ ತೆಗೆದರು—ಮೊದಲು ಚಿತ್ರಗಳನ್ನು ನೋಡುತ್ತಾ ಹೋದರು ಆ ಮೇಲೆ ಲೇಖನಗಳ ಶಿರೋನಾಮೆಗಳು ಆ ಮೇಲೆ ನ್ಯೂಸ್ ನುಡ್ಸು ಕೊಟ್ಟು ಬರೆಸುವ ಘನ್ನತ ಲೇಖನಗಳೆಂದರೆ ಅನೇಕರಿಗೆ ಕಾಲಕಸಗಳಂತೆ

× × × × × ×

ನಾನು ಹೇಳಾಪುದೇನೆಂದರೆ—ಕನ್ನಡ ಪತ್ರಿಕೆಗಳು ಕನ್ನಡಿಗರ ಉತ್ಸಾಹವನ್ನು ಪಡೆಯಬೇಕಾದರೆ ಬೆಳೆದು ಬಾಳಬೇಕಾದರೆ ಕನ್ನಡಿಗರೆಲ್ಲರಲ್ಲೂ—ಮುಖ್ಯ ಮುದುಕರಲ್ಲೂ ವಾಚನಾಭಿರುಚಿಯುಂಟಾಗಬೇಕು ಕಾಫಿ ಹೊಟೇಲಿನಲ್ಲಿ ಸೇರುವಾಗಲು ಮಾಡುವ ಒಂದೆರಡಾಣೆಗಳಿಂದ ಅವರು ಶಾಶ್ವತ ಜ್ಞಾನ ಸಂಪಾದನೆಗಾಗಿ ಪತ್ರಿಕೆ—ಗ್ರಂಥಗಳನ್ನು ತೆಗೆದು ಓದಬೇಕು ಯಾರೋ ಕೆಲವು ಸಂಪಾದಕರು ಏಕೋ ಮಾಡತಕ್ಕದೆಂಬ ಭಾವನೆಯು ನಮ್ಮಲ್ಲಿರಬಾರದು ಹಾಗಾದರೆ ಕನ್ನಡವು ಬೆಳೆಯುತ್ತದೆ

× × × × × ×

ಪ್ರಕಾಶಕರ ಕುರಿತಾಗಿ ಪ್ರಕಾಶಕರು ಬರಹಗಾರರಿಗೆ ಸಾಕಷ್ಟು ಹಣವನ್ನು ಕೊಡುವುದಿಲ್ಲ ಪ್ರಕಾಶನ ಕಾರ್ಯವು ಆಮೆಯ ಗತಿಯಿಂದ ನಡೆಯುತ್ತದೆ—ಎಂಬ ಮಾತು ಸರಿ,—ಈ ಕೆಲಸಕ್ಕೂ ಸಾರ್ವಜನಿಕರ ಸಹಾಯವು ಬೇಕು ಜನರ ಪ್ರೇಮಬೇಕು ಸದಾರ್ಥವಿಲ್ಲದ ಅನ್ನವು ಹೇಗೆ ರುಚಿಸುವುದಿಲ್ಲವೋ ಹಾಗೆ ಬೆಚ್ಚದ ಹಣಸಿಗದ ಪ್ರಕಾಶನ ಕೆಲಸವು ಯಾರಿಗೆ ಬೇಕಾಗಿದೆ? ಇದಕ್ಕೂ ಬೇಕಾದುದು ಓದುಗರ ಸಂಖ್ಯೆ

× × × × + ×

ಟೆಕ್ಸ್ಟ್‌ಬುಕ್ ಕಮಿಟಿಯ ಕುರಿತಾದ ಕೆಲವು ಟೀಕೆಗಳನ್ನೂ ಬಾವಟೆ ಕಟ್ಟೆ ಕೂಟವು ಮಾಡಿತು. "ನಾನು ಪ್ರಕಾಶಿಸಿದ ಒಂದು ಪದ್ಯ ಪುಸ್ತಕವನ್ನು ಆ ಕಮಿಟಿಯವರು ಮೂಲೆಸೇ ಕಗ್ಗತ್ತಲಿಗೆ ಇಟ್ಟಿದ್ದಾರಯ್ಯ! ಏನು? ಈ ಕಮಿಟಿಯವರು ಕುಡಿಯುವುದು ಯಾವ ಹಾಲನ್ನು? ಸಣ್ಣ ಸಣ್ಣ ಹುಡುಗರಿಗೆ ಭಾಮಿನಿಯೋ ಕಾಮಿನಿಯೋ ಮೊದಲಾದ ಪದ್ಯಗಳ ಅರ್ಥವಾಗುತ್ತದೆಯೋ? ಶಾಲೆಗಳಿಗೆ ಹೋಗಿ ಕೇಳಿದರೆ "ಪದ್ಯಗಳು ಈ ಮಕ್ಕಳಿಗೆ ಬಹಳ ಕಷ್ಟವಾದುವು" ಎನ್ನುತ್ತಾರೆ ಹಾಗಾದರೆ ಈ ಕಮಿಟಿಯವರು ಶಿಫಾರಸು ಮಾಡಿದುದೇಕೆ?" ಎಂದು ಟೆಕ್ಸ್ಟ್‌ಬುಕ್ ಕಮಿಟಿಯವರು ಪುಸ್ತಕಗಳನ್ನು ಓದುತ್ತಾರೋ ಎಂಬ ಸಂದೇಹವು ಕೂಡಾ ಈ ವರ್ಗಕ್ಕೆ ಇದೆಯಂತೆ!

'ಸಾಯ್ಬ'.

ಆರೋಗ್ಯಕ್ಕೆ ಓವಲ್ಟಿನ್ ಎಂಬುದು ಅತ್ಯಮೋಘ ಪಾನಕವೆಂದು ಸರ್ವ ಜಗತ್ತೇ ಶಿಫಾರಸು ಮಾಡಿರುತ್ತದೆ ನಿಮ್ಮ ಮನೆಯಲ್ಲಿ ಓವಲ್ಟಿನ್ ನನ್ನು ದಿನಂಪ್ರತಿ ಪಾನಕವನ್ನಾಗಿ ಮಾಡಿರಿ ನಿಮ್ಮ ಕುಟುಂಬದ ಪ್ರತಿ ಮೆಂಬರರಿಗೆ ಅದರ ಅಸಮಾನವಾದ ದೇಹವರ್ಧಕ ಶಕ್ತಿಯ ಪ್ರಯೋಜನವು ದೊರೆಯಲಿ ಸರಿಯಾದ ದೇಹಪೋಷಣೆಯಲ್ಲೇ ಆರೋಗ್ಯವು ಹೊಂದಿಕೊಂಡಿದೆಯೆಂಬುದು ತಿಳಿದಿರಲಿ ದೇಹ, ನರ ಮೆದುಳುಗಳನ್ನು ಸುಸ್ಥಿತಿಯಲ್ಲಿಡಬೇಕಾದರೆ ಓವಲ್ಟಿನ್ ಎಂಬ ಅನುಪಮ ಪಾನಕವೇ ಅವಶ್ಯ ಓವಲ್ಟಿನ್ ರುಚಿಕರವಾಗಿದೆ ನಿಮ್ಮ ಚಹಕ್ಕೆ ಓವಲ್ಟಿನ್ ಕೇವಲ—ಅದು ಆರೋಗ್ಯಕರ ಬಲವರ್ಧಕ

ನಿಮ್ಮ ಮನೆಯಲ್ಲಿ "ಓವಲ್ಟಿನ್"ನನ್ನು ಉಪಯೋಗಿಸಿದರೆ ನಿಮ್ಮ ಕುಟುಂಬಕ್ಕೆ ನೀವು ಅತ್ಯುತ್ಕೃಷ್ಟ ಆಹಾರವನ್ನೊದಗಿಸಿಕೊಟ್ಟಂತಾಗುತ್ತದೆ ಇದನ್ನು ಪ್ರಕೃತಿಜನ್ಯ ವಸ್ತುಗಳಿಂದ ತಯಾರಿಸಲಾಗಿದೆ ಬೆಳೆದ ಬಾರ್ಲಿ, ದನದ ಕೆನೆಹಾಲು ಮತ್ತು ವಿಶಿಷ್ಟವಾಗಿ ತಯಾರಿಸಿದ ಕೋಕ್ಕೊಗಳಿಂದ ಇದು ಉತ್ಪನ್ನವಾಯಿತು. ದೇಹಾರೋಗ್ಯಕ್ಕಾಗಿ ಇದನ್ನು ದರ್ಶಾವಿದೇಕದಿಂದ ಆರೋಗ್ಯಶಕ್ತಿ ಮತ್ತು ಚೈತನ್ಯಗಳನ್ನು ವೃದ್ಧಿಸಿಕೊಳ್ಳಿರಿ ಯಾವಾಗಲೂ ತಾಜಾ "ಓವಲ್ಟಿನ್"ನ್ನೇ ಪಡೆಂದು ನಕಲಿಗಳನ್ನು ಧಿಕ್ಕರಿಸಿರಿ, ಅವು ಗುಣದಲ್ಲೂ ಕ್ರಿಯೆಯಲ್ಲೂ ತಾಜಾ "ಓವಲ್ಟಿನ್"ಗೆ ಸರಿಸಾಟಿಯಾಗವು ನಿಮ್ಮ ಚಹಾಕ್ಕೆ ಓವಲ್ಟಿನ ಸೇರಿಸಿರಿ—ಅದು ಆರೋಗ್ಯಕರ ಬಲವರ್ಧಕ ಮತ್ತು ಶಕ್ತಿದಾಯಕ

"ಓವಲ್ಟಿನ್" ಟೋನಿಕ್, ಆಹಾರ, ಪಾನಕ.

OVALTINE

ಮಿದುಳು, ನರ, ದೇಹಗಳನ್ನು ರಚಿಸುತ್ತದೆ

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ದೊರೆಯುತ್ತದೆ

ಏಜಂಟ್—ಜೇಮ್ಸ್ ರೈಟ್ ೯೨ ಎ ರಿಪನ್‌ಸ್ಟ್ರೀಟ್ ಕಲ್ಕತ್ತಾ ಮತ್ತು ಮುಂಬಯಿ ಮದ್ರಾಸು

OV 109

ಎಚ್ಚರಿಕೆ!

ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ಶ್ರೀ ಎಂ ಗಣಪತಿರಾವ್ ಐಗಳರ ಪದ್ಯಪುಸ್ತಕಗಳು ಪಾಠಪಟ್ಟಿಗನುಸಾರವಾಗಿಲ್ಲವೆಂದು ಕೆಲವು ಪ್ರಕಾಶಕರು ಸುಳ್ಳು ಹೇಳಿ ನಮ್ಮ ಗಿರಾಕಿಗಳನ್ನು ಜಿಲ್ಲೆಯ ಕೆಲವು ಕಡೆಗಳಲ್ಲಿ ವಂಚಿಸುತ್ತಿರುವರಾಗಿ ನಮಗೆ ತಿಳಿದುಬಂದಿದೆ ಆದುದರಿಂದ ನಾವು ನಮ್ಮ ಎಲ್ಲಾ ಗಿರಾಕಿಗಳಿಗೆ ತಿಳಿಸುವುದೇನೆಂದರೆ—ಐಗಳರ ಪದ್ಯಪುಸ್ತಕಗಳು ಪಾಠಪಟ್ಟಿಗನುಸಾರವಾಗಿಯೇ ಶಾಲಾ ಮಕ್ಕಳಿಗೆ ಯೋಗ್ಯವಾಗುವಂತೆಯೇ ಬರೆಯಲ್ಪಟ್ಟಿವೆ ಅವರ ಪುಸ್ತಕಗಳ ಪ್ರಶಸ್ತಿಗೆ ಅವರ ಇಪ್ಪತ್ತು ವರ್ಷಗಳ ಅನುಭವವೇ ಸಾಕ್ಷಿ ನಮ್ಮ ಗಿರಾಕಿಗಳು ಮೋಸಹೋಗದೆ ನಮ್ಮನ್ನು ಮುಂಚಿನಂತೆಯೇ ಪ್ರೋತ್ಸಾಹಿಸಬೇಕಾಗಿ ಈ ಮೂಲಕ ಕೇಳಿಕೊಳ್ಳಲಾಗಿದೆ

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

Estd 1920] THE [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು.

ಠೇವಣಾತಿಗಳ ದರ.

ನಿರಮಿ ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ,

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur,
Dated 10—4—1935.

G. N Lakshman Pai,
Secretary.

ಸಾಹಿತ್ಯ ಸಂಗ್ರಹ.

ಶಾಸನಕರ್ನಾಟಕ.

ಶ್ರೀಯುತ ದೇಸಾಯಿ ಪಾಂಡುರಂಗರಾಯರು "ಜಯಕರ್ನಾಟಕ"ದಲ್ಲಿ ಈ ವಿಷಯವಾಗಿ ಹೀಗೆ ಬರೆದಿದ್ದಾರೆ.—ಶಿಲ್ಪ, ಸಂಗೀತ, ಚಿತ್ರ ಮುಂತಾದ ಕಲೆಗಳಂತೆ ಜನಾಂಗದ ಜೀವನವು ತೋರಕೊಡುವ ಭೂಮಿಕೆಗಳಲ್ಲಿ ಸಾಹಿತ್ಯವು ಉನ್ನತಸ್ಥಾನವನ್ನು ಅಲಂಕರಿಸಿದೆ. ಬುದ್ಧಿಯು ಮಾನವ ಜೀವನದ ಪ್ರಧಾನ ಅಂಗವಾಗಿದ್ದು, ಸಾಹಿತ್ಯವು ಬುದ್ಧಿಯ ಪರಿಷ್ಕಾರವಾಗಿದೆ. ಸಾಹಿತ್ಯವು ಸಂಗೀತ ಮೊದಲಾದ ಕಲೆಗಳ ಸ್ವಾರಸ್ಯವನ್ನು ತಕ್ಕಮಟ್ಟಿಗೆ ತನ್ನಲ್ಲಿ ಉಳಿಸಬಹುದಾದರೂ ಆ ಸಂಗೀತಾದಿ ಕಲೆಗಳು ಮಾತ್ರ ಸಾಹಿತ್ಯದ ಸವಿಯನ್ನು ಮನಗಾಣಿಸಲು ಅಸಮರ್ಥವಾಗಿರುವುದರಿಂದ ಕಲೆಗಳಲ್ಲಿ ಸಾಹಿತ್ಯವು ಅಗ್ರಸ್ಥಾನವನ್ನು ಪಡೆಯುವುದು ಸ್ವಾಭಾವಿಕವೆ ಆಗಿದೆ.

ಪ್ರಾಚೀನ ಕನ್ನಡ ಸಾಹಿತ್ಯವು ವಿಧವಿಧವಾಗಿ ಬೆಳೆದು ಹೋಗಿರುವುದು, ಅದೆಲ್ಲವೂ ಈಗ ನಮ್ಮ ಕಾಲದವರೆಗೆ ನಮ್ಮ ಅವಗಾಹನೆಗೆ ಬಂದಿದೆ, ಬರಲಿಕ್ಕೆ ಸಾಧ್ಯವಿದೆ ಎಂದು ದಿಟ್ಟತನದಿಂದ ಹೇಳಲಿಕ್ಕಾಗದು. ಕನ್ನಡ ಸಾಹಿತ್ಯದ ಕೆಲ ಭಾಗವು ಕಾಡಕಲ್ಲುಬಂಡೆಗಳ ಮೇಲೆ ಬರೆಯಲ್ಪಟ್ಟು ಶಿಲಾಶಾಸನ **ಕನ್ನಡ ಪತ್ರಿಕೆಗಳು.** ರೂಪವಾಗಿ ನಿಂತಿರುವುದು ಕನ್ನಡದ ಒಂದು ಹೆಮ್ಮೆ, ಒಂದು ವೈಶಿಷ್ಟ್ಯ. ಕನ್ನಡ ಸಾಹಿತ್ಯದ ಇಷ್ಟೊಂದು ವೈಶಿಷ್ಟ್ಯಕ್ಕಾಗಿ ಕನ್ನಡಿಗರು ಹೆಮ್ಮೆಪಡಬೇಕಾಗಿದ್ದರೂ, ಅದಕಷ್ಟು ಹೆಚ್ಚಾಗಿ ಹಳ್ಳಿಕೊಂಪೆಗಳ ಕಲ್ಲುಬಂಡೆಗಳಲ್ಲಿ ಕಣ್ಣಿಗೆ ಕಾಣಿಸದೆ ಕಣ್ಮರೆಯಾಗುತ್ತಲಿರುವ ಕನ್ನಡಶಾಸನ ಸಾಹಿತ್ಯವು ಈಗ ಅಂತರಿಕ್ಷಪ್ರಕಾಶಿತವಾಗಿರುವ ಈ ಕನ್ನಡ ಶಾಸನಸಾಹಿತ್ಯವು ಕೂಡ ಸಮ್ಯಕ್ಪುಷ್ಟವಾಗಿಲ್ಲ

ಸಂಸ್ಕೃತಿ, ಇತಿಹಾಸ ಇವುಗಳ ದೃಷ್ಟಿಯಿಂದ ಈ ಶಾಸನಸಾಮುಗ್ರಿಯ ಅಧ್ಯಯನವು ಎಷ್ಟು ಉದ್ಬೋಧಕವಾಗಿದೆಯೋ ಅಷ್ಟೆ ಅದು ಭಾಷೆ, ಸಾಹಿತ್ಯ, ಕಾವ್ಯ ಇವುಗಳ ದೃಷ್ಟಿಯಿಂದಲೂ ಬಹು ಫಲಕಾರಿಯಾಗಿದೆ. ಒಂದು ಪರಿಯಿಂದ ನೋಡಲು, ಈ ಶಾಸನಸಾಹಿತ್ಯವು ಇತರ ಸಾಹಿತ್ಯಕ್ಕಿಂತಲೂ ಜನಜೀವನಕ್ಕೆ ಹೆಚ್ಚು ನಿಕಟ ಸಂಬಂಧದ ಯಥಾರ್ಥ ಪ್ರತಿಬಿಂಬವೂ ಆಗಿದೆ/ ಶಾಸನಗಳ ವಿಷಯವಾಗಿರುವ ಐತಿಹಾಸಿಕ, ಭೌಗೋಲಿಕ, ರಾಜಕೀಯ, ಸಾಮಾಜಿಕ ಮುಂತಾದ ಘಟನಾವಳಿಗಳ ನಿರೂಪಣೆಯೊಡನೆ ಸತ್ಯಸೃಷ್ಟಿಗೆ ಸಂಬಂಧವುಳ್ಳದು ಆಗಿರುವುದು ಅಲ್ಲದೆ, ಅದರಲ್ಲಿ ಆಗಾಗ ಬೆರೆತು ಬರುವ ಕವಿಪ್ರತಿಭೆಯ ಕಾವ್ಯಮಯ ವರ್ಣನೆಯು ಸಂದರ್ಭಗಳಾದರೂ ಹೆಚ್ಚಾಗಿ ನಮ್ಮ ಸ್ಫೂರ್ತಿಯನ್ನು ಅಗ್ರಪೀಠಕ್ಕೇರಿಸಿದೆ. ಪಂಪ, ರನ್ನ ಮೊದಲಾದ ಕವಿಗಳು ತಮ್ಮ ಕಾವ್ಯಗಳಲ್ಲಿ ಸಾಕ್ಷಾತ್ಕರಿಸಿಕೊಂಡುದು ಎಷ್ಟಾದರೂ ಪೌರಾಣಿಕವಾಗಲಿ ಕಥಾತ್ಮಕವಾಗಲಿ ಕಲ್ಪನಾಸೃಷ್ಟಿ. ನಮ್ಮ ಶಾಸನ ಕವಿಗಳು ಪ್ರತ್ಯಕ್ಷವಾಗಿ ಕಾಣುವುದು ಸತ್ಯ ಸೃಷ್ಟಿ. ಆ ಕವಿಗಳ ದೇಶವಿದೇಶ ಸನ್ನಿವೇಶಗಳು ಸತ್ಯಾಭಾಸವಾದುವು. ಈ ಕವಿಗಳ ವಸ್ತುವಿನ್ಯಾಸಗಳು ಸತ್ಯಸ್ವರೂಪವುಳ್ಳವು. ಅವರ ಕಥೆಯ ರಾಜರು, ಪ್ರಧಾನರು, ನಾಯಕರು ಕವಿಕಲ್ಪಿತ ಪುರುಷರು. ಇವರ ಕಥನದ ಆ ನಮ್ಮ ವೀರರು, ಧೀರರಾಗಿ ಮರ್ತ್ಯಮಾಂಸ ಮನುಷ್ಯರು. ನಮ್ಮ ಶಾಸನಕವಿಗಳಲ್ಲಿ ಆಗಾಗ ಕಲ್ಪನೆಯ ರೆಕ್ಕೆಗಳನ್ನು ಮಿಡಿಯುತ್ತ ಅಂತರಿಕ್ಷದಲ್ಲಿ ವಿಹರಿಸುವ ಮೋಹವು ಹುಟ್ಟುತ್ತಿರಲಿಲ್ಲವೆಂದಲ್ಲ ಆದರೂ ಈ ಸ್ಥೂಲ ಪ್ರಪಂಚವನ್ನು ಸರ್ವಥಾ ಮರೆವಷ್ಟು ಮೈಮರೆತು ಅವರಿಗೆ ಬರಲು ಅನುವಿರಲಿಲ್ಲ. ಆದುದರಿಂದ ಶಾಸನ ಸಾಹಿತ್ಯದಲ್ಲಿ ಕನ್ನಡದ ಜೀವನವು ಹೆಚ್ಚು ನಿಕಟವಾಗಿ ಪ್ರತಿಬಿಂಬಿತವಾಗಿರಲಿಕ್ಕೆ ಸಾಕು.

ಶಾಸನಗಳನ್ನು ಬಹುರೀತಿಯಿಂದ ಪರಿಶೀಲಿಸಬಹುದಾದರೂ ಅವುಗಳ ಐತಿಹಾಸಿಕ ಸ್ವರೂಪವನ್ನು ಮರೆಯದೆ, ಸಾಹಿತ್ಯದ ಹೃದಯದಿಂದ ಅವುಗಳನ್ನು ಸವಿದರೆ ಅವುಗಳ ಸ್ವಾರಸ್ಯವು ಹೆಚ್ಚು ಹೃದಯಂಗಮವಾಗಬಲ್ಲದು. ಬರಿಯ ಸಾಹಿತ್ಯ ಕಲೆ ಎನ್ನುತ್ತ ಮುಗಿಲಲ್ಲಿ ಸಂಸಾರಮಾಡಿದರೆ, ಅದರಿಂದ ನಮ್ಮ ಜೀವನವು ಯಾವ ಬಗೆಯಿಂದಲೂ ಸಮೃದ್ಧವಾಗಲಾರದು. ಸಂಸ್ಕೃತಿಯ ಹೊಳೆಯ ದಡದಲ್ಲಿ ಮೊಳೆದು ಬೆಳೆಯುತ್ತಿರುವ ನಮ್ಮ ಜೀವನಸಸಿಗಳು ವಿವಿಧ ಸಂಸ್ಕಾರಗಳ ಸಾರವನ್ನು ಹೀರಿಕೊಂಡು ಬಲಿಯುತ್ತವೆ. ಸಾಹಿತ್ಯದಲ್ಲಿ ಐತಿಹಾಸಿಕ ಆಂದೋಲನಗಳ ನೆರಳು ಬೀಳುವಂತೆ, ಇತಿಹಾಸದಲ್ಲಿಯೂ ನಮ್ಮ ಸಂಸ್ಕೃತಿಯ, ನಮ್ಮ ಜೀವನದ, ನಮ್ಮ ಸಾಹಿತ್ಯದ ಛಾಯೆ ಒಡಮೂಡುವುದುಂಟು. ಇತಿಹಾಸ ಸಾಹಿತ್ಯಗಳು ಹೀಗೆ ಪರಸ್ಪರೋಪಜೀವಿ, ಅನ್ಯೋನ್ಯ ಸಂಬಂಧವುಳ್ಳವು.

ಈ ಬುದ್ಧಿಯಿಂದ ವಿಚಾರಿಸುತ್ತ ಈ ಶಾಸನಗಳಲ್ಲಿ ಪಡಿನೆಳಲುಗೊಂಡಿರುವ ನಮ್ಮ ಹಿಂದಣ ಹಿರಿಯರ ಜೀವನದ ಅನೇಕ ಬಗೆಗಳು, ಅವರ ಧಾರ್ಮಿಕಕಲ್ಪನೆಗಳು, ರಾಜಕೀಯ ಪದ್ಧತಿಗಳು ಸಾಮಾಜಿಕ ನಡೆನುಡಿಗಳು,—ನಾಡಿನ ಸ್ಥಿತಿ, ಬರಿತೆ, ಅರಸರು, ಅಧಿಕಾರಿಗಳು, ವೀರರು, ಮಹಾತ್ಮರು, ಧುರೀಣರು, ಸತಿಯರು ಮೊದಲಾದವರನ್ನು ನಿರೀಕ್ಷಿಸುವ ಅವರ ರೀತಿಗಳು ಇವುಗಳನ್ನು ಅಭ್ಯಸಿಸುವುದು ಕನ್ನಡ ಸಂಸ್ಕೃತಿಯ ಸಂಶೋಧನ ದೃಷ್ಟಿಯಿಂದ ಅತಿ ಮನೋರಂಜಕವೂ ಪ್ರಬೋಧಕವೂ ಆಗಿದೆ.

ಸಾಹಿತ್ಯ ಪರಿಷತ್ತಿನ ಮುಂದಿನ ಕ್ರಮವೇನು?

ಶ್ರೀ. ಜಿ. ಪ್ರಾಣೇಶ್ವರರಾವ್, ಮೈಸೂರು ಕಾಂ, ಎಂ. ಎ. ಇವರು ಪ್ರಜಾಮತದಲ್ಲಿ ಮೇಲಿನ ಶಿರೋನಾಮೆಯಿಂದ ಬರೆದು ಹೀಗೆ ತಿಳಿಸಿದ್ದಾರೆ.—"ಈಗ ನಮ್ಮ ಭಾಷೆಯು ಏಳಿಗೆಗೆ ಬಾರದಿರಲು ಮೊದಲು ಕೆಲವು ಕಾರಣಗಳನ್ನು ತಿಳಿದುಕೊಳ್ಳಬೇಕಾಗಿದೆ. ಇದರಲ್ಲಿ ನನಗೆ ತೋರುವ ಮಟ್ಟಿಗೆ ಮೊದಲನೆಯ ಕಾರಣವೆಂದರೆ,—ಬೇರೆ ಬೇರೆ ಭಾಷೆಗಳ ಗಡಿಪ್ರಾಂತ್ಯಗಳಲ್ಲಿರುವ ಕನ್ನಡಿಗರು ತಮ್ಮ ಮಾತೃಭಾಷೆಯ ವಿಚಾರದಲ್ಲಿ ವಿಶೇಷ ಆದರವಿಲ್ಲದಂತಾಗಿರುವುದು. (೨) ತಮಗೆ ಬೇರೆ ಭಾಷೆಯವರಿಂದ ಏನಾದರೂ ಗಲಾಟೆ ಬಂದರೆ ಆ ಕಾಲದಲ್ಲಿ ಮಾತ್ರ ಗುಲ್ಲೆಬ್ಬಿಸುವುದು ಆ ಮೇಲೆ ಅದರ ಫಲ ನಿರೀಕ್ಷಣೆಯಲ್ಲಿ ನಿದ್ರಿಸುತ್ತಿರುವುದು (೩) ಕನ್ನಡದಲ್ಲಿ 'ಸಾಹಿತ್ಯ'ವೆಂದರೇನು ಎಂಬುದು ಇನ್ನೂ ನಿರ್ಣಯವಾಗದೆ ಕೇವಲ ಒಂದು ಕಥೆ ಯಾ ಕೆಲವು ಪದ್ಯ ಬರೆದವರು ಮಾತ್ರ ಸಾಹಿತಿಗಳೆಂದು ಕೆಲವರು ನಿರ್ಣಯಿಸಿಕೊಂಡು ತಮ್ಮ ಮನಸ್ಸು ಬಂದಂತೆ ವರ್ತಿಸುತ್ತಿರುವುದು. (೪) ನಮ್ಮಲ್ಲಿ ನೀತಿ, ಧರ್ಮ ಇತಿಹಾಸ ಶಾಸ್ತ್ರ ಇವೇ ಮೊದಲಾದ ವಿಷಯಗಳ ಗ್ರಂಥಕಾರರು ಸಾಹಿತಿಗಳಲ್ಲವೆಂದು ಅವರನ್ನು ನಿಕೃಷ್ಟದೃಷ್ಟಿಯಿಂದ ನೋಡುವುದು (೫) ನಮ್ಮಲ್ಲೀಗ ಕೆಲವರು ಸಾಹಿತಿಗಳು ಪರಸ್ಪರ ಸ್ತುತಿಪಾಠಕ ಸಂಘದವರಂತೆ ಆಚರಿಸುತ್ತ ಕೇವಲ ತಮ್ಮ ಕಾರ್ಯಕಲಾಪಗಳ ಪ್ರಕಟಣೆಯನ್ನು ಮಾತ್ರ ಪತ್ರಿಕೆಗಳಲ್ಲಿ ಮಾಡುತ್ತಿರುವುದು. ಇದನ್ನು ಮುಂದೆ ಬರಗೊಡದಂತೆ ಪಠ್ಯಪುಸ್ತಕ ಸಮಿತಿ ಸಾಹಿತ್ಯ ಪರಿಷತ್ತು ಮುಂತಾದ ಸಂಸ್ಥೆಗಳನ್ನು ಪರಸ್ಪರ ಸ್ತುತಿಪಾಠಕ ಸಂಘದವರು ಆಕ್ರಮಿಸಿಕೊಂಡಿರುವುದು. (೬) ಕನ್ನಡ ಪಂಡಿತವರ್ಗದವರ ಸಾಹಿತ್ಯಕೃತಿಗಳನ್ನು ಅವಹೇಳನ ದೃಷ್ಟಿಯಿಂದ ನೋಡುವುದಲ್ಲದೆ, ಅವುಗಳನ್ನು ಅಲ್ಲಗಳೆಯುತ್ತಿರುವುದು—ಇವಲ್ಲದೆ ಇನ್ನೂ ಬೇರೆ ಕಾರಣಗಳಿರಬಹುದು. ಈ ಕಾರಣಗಳಿಗೆ ಕರ್ನಾಟಕ ಸಾಹಿತ್ಯ ಪರಿಷತ್ತೇ ಕಾರಣವೆಂದು ಹೇಳಬಹುದು ಏಕೆಂದರೆ ಬೇರೆ ಬೇರೆ ಭಾಷೆಗಳ ಗಡಿನಾಡಿನಲ್ಲಿರುವ ಕನ್ನಡಿಗರನ್ನು ಎಚ್ಚರಿಸಲು, ಅಥವಾ ಕನ್ನಡ ಶಾಲೆಗಳನ್ನು ಸ್ಥಾಪಿಸಲು ಪರಿಷತ್ತಿನವರು ತಮ್ಮ ಪ್ರಚಾರಕರನ್ನು ಕಳುಹಿಸಬೇಕು ಅವರ ಹೆಚ್ಚಿಕ್ಕಾಗಿ ಸ್ಥಳೀಯರಿಂದ ಧನಸಂಗ್ರಹ ಮಾಡಬೇಕು ತಾವೂ ಕಿಂಚಿತ್ ಧನಸಹಾಯ ಮಾಡಬೇಕು. ಮತ್ತೆ ಅಂಥಾ ಕಡೆಗಳಲ್ಲಿ ಗಮಕಿಗಳನ್ನೂ ಆಗಾಗ್ಗೆ ಕಳುಹಿಸಿ ಪುರಾಣ, ಪ್ರವಚನಾದಿಗಳನ್ನು ಕಳುಹಿಸಬೇಕು. ಆಗ ಅಲ್ಲಿಯ ಕನ್ನಡಿಗರು ಜಾಗೃತರಾಗಿ ತಮ್ಮ ಭಾಷೆಯ ಏಳಿಗೆಗಾಗಿ ಅಥವಾ ಅದು ಆ ಪ್ರಾಂತ್ಯದಲ್ಲಿ ಸಜೀವವಾಗಿರುವುದಕ್ಕಾಗಿ ಬೇಕಾದ ಪ್ರಯತ್ನಗಳನ್ನು ಮಾಡಬಹುದು. ಇನ್ನೂ ಕನ್ನಡದಲ್ಲಿ 'ಸಾಹಿತ್ಯ'ವೆಂದರೇನೆಂದು ಈ ವರೆಗೆ ನಿರ್ಣಯವಾಗಿಲ್ಲ. ಉತ್ತರ ಪ್ರಾಂತ್ಯದಲ್ಲಿ ವಿದ್ಯಾಪ್ರಚಾರಕವಾದ ಎಲ್ಲ ಬಗೆಯ ಗ್ರಂಥಕಾರರೂ 'ಸಾಹಿತಿ'ಗಳ ವರ್ಗದಲ್ಲಿ ಗಣ್ಯರಾಗಿರುವರು ನಮ್ಮಲ್ಲಿ ಕಥೆ ಮತ್ತು ಪದ್ಯ ಇವುಗಳನ್ನು ಬಿಟ್ಟರೆ ನೀತಿ, ಧರ್ಮ, ಇತಿಹಾಸ, ಪುರಾಣ, ಬೇರೆ ಶಾಸ್ತ್ರೀಯ ಗ್ರಂಥ, ವಾರಪತ್ರಿಕೆ, ನಿತ್ಯಪತ್ರಿಕೆ, ಮಾಸಪತ್ರಿಕೆ, ಸ್ತ್ರೀಯರಿಗೆ ಸಂಬಂಧಿಸಿದ ಪುಸ್ತಕಗಳು ಇವೇ ಮೊದಲಾದುವು ಯಾವ ವರ್ಗಕ್ಕೆ ಸೇರುವವೋ ಎಂದು ನೋಡಬೇಕಾಗಿದೆ. ಮತ್ತೆ ಅವುಗಳ ಸೇವಕರು ಸಾಹಿತಿಗಳೋ ಕೇವಲ ಭಾಷಾಸೇವಕರೋ ಅಥವಾ ಏನೂ ಅಲ್ಲದವರೋ ಎಂಬುದನ್ನು ನಿರ್ಣಯಿಸಬೇಕಾಗಿದೆ. ಈ ಕಾರ್ಯವನ್ನು ಸಾಹಿತ್ಯ ಪರಿಷತ್ತು ಈಗಾಗಲೇ ಮಾಡಬಹುದಾಗಿತ್ತು. ಅವನ್ನು ಮಾಡಲು ಅದಕ್ಕೆ ವಾರ್ಷಿಕ ವರದಿ ಬರೆಯುವುದು ಮತ್ತೆ ತ್ರೈಮಾಸಿಕ ನಡೆಸುವುದು ಇವೇ ಕೆಲಸಗಳು ಭಾರವಾಗಿ, ಮಾಸಿಕವೇ ಒಂದೊಂದು ಸಲ ಷಾಣ್ಮಾಸಿಕದಂತೆ ಬರಲಾರಂಭಿಸಿದೆ ಈ ಕೆಲಸವನ್ನು ಇನ್ನು ಮುಂದಾದರೂ ಸಾಹಿತ್ಯ ಸಮ್ಮೇಳನ ಕಾಲದಲ್ಲಿ ಕನ್ನಡ ದೇಶದ ಎಲ್ಲಾ ಲೇಖಕವರ್ಗದವರ ಸಮ್ಮೇಳನವನ್ನೂ ಸೇರಿಸಿ ನಿರ್ಣಯಿಸಬೇಕಾಗಿದೆ. ಮತ್ತೆ ಅದರ ಸಮ್ಮೇಳನವನ್ನು ವರ್ಷವರ್ಷವೂ ನಡೆಯಿಸುತ್ತ ಇರಬೇಕು. ಅದರ ಕಾರ್ಯಾಲಯವೊಂದನ್ನು ಸ್ಥಾಪಿಸಬೇಕು. ಆ ಕಾರ್ಯಾಲಯದವರು ಕನ್ನಡದಲ್ಲಿ ಇದು ವರೆಗೆ ಪ್ರಕಟವಾದ, ಆಗುವ ಎಲ್ಲ ಕನ್ನಡ ಗ್ರಂಥಗಳನ್ನೂ ತಮ್ಮ ಭಾಂಡಾರದಲ್ಲಿಟ್ಟಿರಬೇಕು. ಅವುಗಳ ಗ್ರಂಥಕರ್ತರ ಪರಿಚಯವನ್ನೂ, ಗ್ರಂಥಗಳ ಪಟ್ಟಿಯನ್ನೂ ಇಟ್ಟಿರಬೇಕು. ಹೀಗೆ ಹೊಸದಾಗಿ ಹೊರಬೀಳುತ್ತಿರುವ ಎಲ್ಲ ಗ್ರಂಥಗಳ ಪಟ್ಟಿಯನ್ನೂ ಕನ್ನಡ ನಾಡಿನ ಎಲ್ಲ ಪತ್ರಿಕೆಗಳಲ್ಲಿ ಪ್ರಕಟಿಸುತ್ತಿರಬೇಕು. ಇದರಿಂದ ನಿಜವಾಗಿ ಕನ್ನಡ ಸಾಹಿತ್ಯದ ಬೆಳವಣಿಗೆಯು ಎಲ್ಲ ಭಾಗದಿಂದಲೂ ಎಷ್ಟರಮಟ್ಟಿಗೆ ಆಗಿದೆ ಎಂಬುದು ಕನ್ನಡಿಗರಿಗೆ ಗೊತ್ತಾಗುವುದು"

ವಿಮಾನದ ಉಪಯೋಗ

ವಿಜ್ಞಾನವು ನಮಗೆ ಹಲವು ವಿಧಾನಗಳಿಂದ ಸಹಾಯವೀಯುತ್ತದೆ ಆದರೆ ಅದರ ಸಾಧನಗಳಂತೆ ಬಾಧಕಗಳೂ ಇಲ್ಲದಿಲ್ಲ. ಉದಾಹರಣಾರ್ಥ—ವಿಮಾನ, ಇದು ಒಂದೂರಿನಿಂದ ಇನ್ನೊಂದೂರಿಗೆ ಬಹು ಅಲ್ಪ ಸಮಯದಲ್ಲಿ ಮುಟ್ಟುವಂತೆ ಸಹಾಯಕವಾಗಿದೆ ದಿಕ್ಕಿಲ್ಲದೆ ನಾವು ಹಾರುವೆವು ಆದರೆ ಇತ್ತೀಚೆಗೆ ಒಂದು ಹೊಸ ಭಯವು ತಲೆದೋರಿರುವುದು ಈ ವಿಮಾನ ಸಂಚಾರದಿಂದ ರೋಗಗಳೂ ಸಂಚರಿಸಿ ಒಂದೂರಿನಿಂದ ಇನ್ನೊಂದೂರಿಗೆ ಸುಲಭವಾಗಿ ವರ್ಗ ಹೊಂದಬಹುದೇ' ೩೦ ವರುಷಗಳ ಹಿಂದೆ ಕಂಡುಹಿಡಿಯಲಾದಂತೆ—ಹಳದಿ ಜ್ವರವೆಂಬುದು ಒಂದು ಜಾತಿಯ ಸೊಳ್ಳೆಗಳಿಂದುಂಟಾಗುವುದೆಂದು ತಿಳಿದುಬಂತು ಇದು ಎಷ್ಟು ಭಯಂಕರವಾಗಿರುವುದೆಂದರೆ —ರಿಕನಲ್ಲಿ ರಿಯೋ ಜನೇರೋ ಎಂಬಲ್ಲಿ ಕಲೆದೋರಿದಾಗ, ತಗಲಿದ ಪ್ರತಿ ೫೦ ಮಂದಿಯಲ್ಲಿ ಒಬ್ಬನು ಮಾತ್ರ ಬದುಕಿ ಉಳಿದನಂತೆ. ಈ ರೋಗವು ವಿಮಾನದ ಮೂಲಕ ವಿಶ್ವದ ಗ್ರಾಮಗ್ರಾಮಗಳಿಗೂ ಹಂಚಹೋಗಿದೆಯೆಂದು ಧೈರ್ಯವಾಗಿ ಹೇಳಬಹುದೇ? ಅದು ಒಮ್ಮೆ ಯಾರಿಗಾದರೂ ತಗಲಿತೆಂದರೆ ಮತ್ತೆ ಹುಡುಕಲು ವಿಳಂಬವಿಲ್ಲ. ಒಂದು ಕೋಟಿಗೆ ತಗಲಿದರೂ ಸಾಕು—ಮನುಷ್ಯನಿಗೆ ತಗಲುತ್ತದೆ **ಆಂಗ್ಲ ಪತ್ರಿಕೆಗಳು.** ವಿಷವೆಂಬುದು ಕಿವಿಮದ್ದಿನ ಒಂದು ಉಗ್ರಾಣದಂತಿದೆ ಒಂದು ಸಣ್ಣ ಕಿಡಿ ಹತ್ತಿದರೆ ಸಾಕು—ಅದನ್ನು ಮತ್ತೆ ನಂದಿಸುವವರಾರು? ಹಿಂದೆ ಯೂರೋಪಿನಲ್ಲಿ 'ಬ್ಲೇಕ್ ಡೆತ್' ಮತ್ತು ಸ್ಪೆಶಿಕ್ ಇನ್‌ಫ್ಲ್ಯುಯೆಂಜಾ ಎಂಬ ರೋಗಗಳು ದಾಳಿಯನ್ನು ವಿವರಿಸುವ ಹಾವಳಿಯ ಭಯಂಕರ ಚರಿತ್ರೆಯೊಂದನ್ನು ವಿಶ್ವದಲ್ಲೆಲ್ಲ ಉಂಟುಮಾಡಬಹುದು ಇದರಿಂದ ವರ್ಗಗಟ್ಟಳೆ ಮರಣಗಳೇ ಉಂಟಾಗಿ—ಶಕ್ತಿಯು ಕ್ಷಾಮದಿಂದ ಬೇರ್ಪಡುವುದೂ ಅಸಂಭವನೀಯವಲ್ಲ

'Modern Thinker'

ಬಾಲಿಕೆಯರ ಶಿಕ್ಷಣ.

'The Bihar and Orissa Co-operative Journal"ನಲ್ಲಿ ಮಿ ಎಫ್. ಎಲ್. ಬ್ರೈನ್ ಐ. ಸಿ. ಎಸ್. ಇವರು ಒಂದು ಲೇಖನವನ್ನು ಪ್ರಕಟಿಸಿರುವರು, ಅವರು ಸೂಚಿಸುವುದೇನೆಂದರೆ —ಪ್ರಪಂಚದ ಯಾವ ದೇಶದ ಹಳ್ಳಿಯಲ್ಲೂ ಹಳ್ಳಿಗರಶಕ್ತಿಗೆ ಶಾಲೆಗಳನ್ನಿಡಲು ಸಾಧ್ಯ. ಅದರಲ್ಲೂ ಬಡ ಭಾರತ ದೇಶವು ಎರಡು ಶಾಲೆಗಳನ್ನಿಟ್ಟುಕೊಳ್ಳಲು ಸಾಧ್ಯವೇ ಇಲ್ಲ ನಾನು ಸಂದರ್ಶಿಸಿದ ಪ್ರತಿಯೊಂದು ಹಳ್ಳಿಯಲ್ಲೂ ಜನರು "ಭೂಕಂದಾಯವನ್ನಿಳಿಸಿರಿ—ಇನ್ನೊಂದು ಶಾಲೆಯನ್ನು ತೆರೆಯಿರಿ" ಎಂದು ಹೊರಿಯುತ್ತಿರುವರು. ಯಾರಿಗೆ ಎರಡು ಶಾಲೆಗಳು ಬೇಕೋ ಅವರು ದ್ವಿಗುಣಿತ ಭೂಕಂದಾಯವನ್ನು ಕೊಡಬೇಕು. ಎಷ್ಟೋ ಹಳ್ಳಿಗಳಲ್ಲಿ ಶಾಲೆಗಳೇ ಇರದಿರುವಾಗ, ಒಂದೊಂದು ಹಳ್ಳಿಯಲ್ಲಿ ಎರಡೆರಡು ಶಾಲೆಗಳನ್ನಿಡುವುದು /ಸಮಂಜಸವಾಗಿಲ್ಲ

ಒಂದು ವೇಳೆ ಗ್ರಾಮಗಳಲ್ಲಿ ಬಾಲಿಕೆಯರ ಪಾಠಶಾಲೆಗಳನ್ನು ತೆರೆದರೂ ಆ ಶಾಲೆಗಳಿಗನ್ನುವರುವ ಅಧ್ಯಾಪಕಿಯರನ್ನು ತರಬೇತುಗೊಳಿಸಲು ೨೫ ವರ್ಷಗಳಾದರೂ ಬೇಕಾಗುವುವು. ನಗರದಲ್ಲಿರುವ ಬಾಲಿಕೆಯರ ಗ್ರಾಮಗಳ ಶಾಲೆಗಳಿಗೆ ಹೋಗುವುದಿಲ್ಲ. ಒಂದು ವೇಳೆ ಅವರು ಹೋದರೂ, ಅವರು ಹಳ್ಳಿಗರಾಗಿ ಮಾರ್ಪಡುವರು.

"ಸಂಯುಕ್ತ ಅಮೇರಿಕಾದಲ್ಲಿ ಧರ್ಮಗಳೊಳಗೆ ಹೋರಾಟ."

ಮೇಲಿನ ಶಿರೋನಾಮೆಯಿಂದ ಪ್ರೊ. ಟಿ. ಗಣೇಶರಾಯರು ಬರೆದ ಲೇಖನದ ಉತ್ತರಾರ್ಧದಲ್ಲಿ ಅವರು ಮಾರ್ಕಸ್‌ಗಾರ್ವೆಯವರ ಕುರಿತು ಹೀಗೆ ಬರೆದಿದ್ದಾರೆ—

"ಮಾರ್ಕಸ್ ಗಾರ್ವೆಯವರು ಎಲ್ಲಿಗೆ ಹೋದರೋ ಅಲ್ಲಿ, ಆಫ್ರಿಕಾ, ಅಮೇರಿಕಾ, ಆಸ್ಟ್ರೇಲಿಯಾ ಮೊದಲಾದ ಎಲ್ಲಾ ದೇಶಗಳಲ್ಲೂ ಅವರು ನಿಗ್ರೋಗಳ ಐಕ್ಯವನ್ನು ಸಾಧಿಸಿದರು. ಆಫ್ರಿಕವನ್ನು ಆಫ್ರಿಕನರ ನಿಜದೇಶವನ್ನಾಗಿ ಮಾಡಬೇಕೆಂದು ಹೇಳಿ ಅವರು ಆಫ್ರಿಕನರನ್ನು ಪ್ರೋತ್ಸಾಹಿಸಿದರು—ಅವರನ್ನು ಜುಂಬುಂಬಿಸಿದರು ಇಷ್ಟರವರ ತಮ್ಮ ಪ್ರಾಚೀನ ಸಂಸ್ಕೃತಿ ಪ್ರಾಚೀನ ಅರಸರು, ರಾಣಿಗಳು ಎಂಬ ಅಭಿಮಾನವನ್ನೇ ಕಟ್ಟಿಕೊಂಡು ಸುಮ್ಮಗೆ ಕುಳಿತುಕೊಂಡಿದ್ದ ಆಫ್ರಿಕನರು ಎಚ್ಚತ್ತರು ತಮ್ಮನ್ನು ಗುಲಾಮರನ್ನಾಗಿ ಮಾಡಿದ ಕ್ರೈಸ್ತಧರ್ಮವನ್ನು ನಿಂದಿಸತೊಡಗಿದರು. ತಮ್ಮ ಸ್ವಾತಂತ್ರ್ಯ ಸಂಪಾದನೆಗಾಗಿ ಯಾವ ಮಾರ್ಗವನ್ನಾದರೂ ಅವಲಂಬಿಸುವುದೆಂದು ನಿರ್ಧಾರಮಾಡಿದರು

ಟರ್ಕಿ, ಪರ್ಶಿಯಾ ಅಫಘಾನಿಸ್ಥಾನ ಬಲೂಚಿಸ್ಥಾನ, ಮತ್ತು ಹಿಂದೂದೇಶಗಳಲ್ಲೂ ಇಸ್ಲಾಂ ಮತದ ಪ್ರಸಾರದ ಕಾರ್ಯವು ಈ ಮೊದಲೇ ಉತ್ಸಾಹಯೋಗ್ಯವಾಗಿಯೂ ನಡೆಯುತ್ತಿತ್ತು. ರಾಜಕೀಯವಾಗಿಯೂ ಸಾಂಸ್ಕೃತಿಕವಾಗಿಯೂ ಇಸ್ಲಾಮದ ಹಲವು ವಿಘ್ನಗಳಿಂದಲೂ [illegible] ಈ ಧರ್ಮವು ಪುನಃ ತಲೆಯೆತ್ತುತ್ತಿತ್ತು. ತನ್ನ ಪೂರ್ವಸ್ಥಿತಿಗೆ ಬರಬೇಕೆಂದು ಅದು ಪ್ರಯತ್ನವನ್ನು ಮಾಡುತ್ತಿತ್ತು. ಅನ್ಯ ಮತಸ್ಥರನ್ನು ಸ್ವಮತಾವಲಂಬಿಗಳನ್ನಾಗಿ ಮಾಡಲು ಪ್ರಪಂಚದ ಮೂಲೆಮೂಲೆಗೂ ಹಲವು ಪ್ರಚಾರಕರನ್ನು ಕಳಿಸುತ್ತಿತ್ತು. ಇಂತಹ ಪ್ರಚಾರಕರಲ್ಲಿ ಕೆಲವರು ಅಮೆರಿಕಾದಲ್ಲಿದ್ದರು. ಇವರಲ್ಲಿ ಅಗ್ರಗಣ್ಯರಾಗಿ ಮುಸ್ತಫಾ ಮಹಮ್ಮದ್ ಸದಿಕ್ ರವರು ಇವರು ಅಹ್ಮದಿಯ ಪಂಥದವರು. ಇವರು ಅವಿಶ್ರಾಂತವಾಗಿ ಕೆಲಸಮಾಡಿದರು. ಇವರ ಅನುಯಾಯಿಗಳು ಅಮೇರಿಕಾದ ನೀಗ್ರೋ ವರ್ಗವು ಮಾತ್ರವಲ್ಲ ಆ ವರ್ಗವು ಅಮೇರಿಕಾದ ಬಿಳಿ ಜನಾಂಗದ ಒಂದು ಬದಿಯೇ ಅಂತವಲ್ಲದೆ ಸದಿಕ್‌ರವರು ಇವರಲ್ಲಿ ಸಾವಿರಾರು ಜನರನ್ನು ಇಸ್ಲಾಂ ಮತಕ್ಕೆ ಸೇರಿಸಿದರು.

ಇಸ್ಲಾಂ ಮತದ ಪ್ರಾಚೀನತೆ ಅದರ ಪೂರ್ವದ ವೈಭವ ಅದರ ಇತಿಹಾಸ—ಇವುಗಳನ್ನು ತಿಳಿಸಿಕೊಟ್ಟು ಇಸ್ಲಾಮಿನ ಬಂಧುತ್ವವೇನು— ಅದರ ಮಹತ್ವವೇನೆಂದು ಜನರಿಗೆ ಬೋಧಿಸಲಾಯಿತು. ಮನುಷ್ಯರೊಳಗೆ ಭ್ರಾತೃಭಾವವನ್ನು ಎಲ್ಲ ಜೀವನ ಮೇಲಿನ ವಿಶ್ವಾಸವನ್ನೂ ಈ ಮತವು ಉಪದೇಶಿಸುತ್ತದೆಂದು ತಿಳಿಸಲಾಯಿತು ಈ ತತ್ವಗಳನ್ನು ಅದು ಉಪದೇಶಿಸುವುದೇ ಅಲ್ಲ ಇದನ್ನು ಅಭ್ಯಸಿಸಲಾಯಿತು. ಯಾವ ಮತಸ್ಥನೇ ಇರಲಿ ಮುಸ್ಲಿಮನು ಸಹೋದರನಾಗಿಯೇ ಇರುವನೆಂದು ಉಪದೇಶಿಸಲಾಯಿತು.

ಇಸ್ಲಾಂ ಮತವು ನಿಗ್ರೋಗಳ ಹಿಡಿಯಿತು. ನೂರಾರು ಸಾವಿರ ಜನರು ಈ ಮತಪ್ರವರ್ತನಕ್ಕೆ ವಿಶ್ವಾಸಕ್ಕೆ ಇಸ್ಲಾಂ ಧರ್ಮವು ಸಹಾಯವಾಯಿತು. ಪುರುಷರು ಕೆಂಪು ಟೊಪ್ಪಿಯನ್ನೂ ಸ್ತ್ರೀಯರು ಮಸುಕು ಟೊಪ್ಪಿಯನ್ನೂ ತಮ್ಮ ತಲೆಯ ಮೇಲೆ ಧರಿಸಿದರು. ತಮ್ಮ ಧರ್ಮದ ಚಿಹ್ನೆ ಇದು ಎಂದು ಪ್ರಚಾರಮಾಡಿದರು.

ಎಲ್ಲ ಇಸ್ಲಾಂ ಮತಸ್ಥರು ಒಂದು ಬಿಲ್ಲೆಯನ್ನು ಧರಿಸುತ್ತಿದ್ದರು. ಅದರಲ್ಲಿ ೭ ಅಂಕೆಯು ಇತ್ತು. ಅವರು ಮತಾವಲಂಬನೆ ಮಾಡುವುದಕ್ಕಾಗಿ ಅವರಿಗೆ ಪ್ರತ್ಯೇಕ ಕಾರ್ಡುಗಳನ್ನು ಕೊಡುತ್ತಿದ್ದರು. ಪಾಂಡಿತ್ಯವೂ, ವಿನಯವೂ ಮತ್ತು ನಿಸ್ವಾರ್ಥವೂ ಆದ ಈ ಮಿಷನರಿಗಳ ಕೆಲಸದಲ್ಲಿ ನೂತನ ಸ್ಫೂರ್ತಿಯು ತಲೆದೋರಿತು. ಇದನ್ನು ನೋಡಿದ ಕೆಲವು ಅಮೇರಿಕನರು ಮತ್ಸರಗೊಂಡು, ತಮ್ಮ ಪಕ್ಷವನ್ನು ಬಲಪಡಿಸಿಕೊಳ್ಳುವುದಕ್ಕಾಗಿ ಏರ್ಪಾಡುಗಳನ್ನು ಮಾಡಿದರು. ಅವರು ಪ್ರಚಾರಕಾರ್ಯವನ್ನೇ ಪ್ರಧಾನವೆಂದು ನಂಬಿದ ಪ್ರವಾಸಿಯನ್ನೇ ನಂಬಿಕೊಂಡಿದ್ದರು. ಆಧುನಿಕ ಅಮೇರಿಕನ್ ನಿಗ್ರೋಗಳ ಮುಖ್ಯ ಇಸ್ಲಾಂ ಧರ್ಮದ ಪ್ರಬಂಧ ಅಗ್ನಿಯಂತೆ ಹರಡುತ್ತಿತ್ತು. ಪೂರ್ವಾಚಾರದಿಗಳೂ ಅದನ್ನು ಅವಲಂಬಿಸಿದರು ಉತ್ತರ ಮತ್ತು ದಕ್ಷಿಣ ಪ್ರಾಂತ್ಯಗಳ ಕೈಗಾರಿಕೆಯ ಕೇಂದ್ರಗಳಾದ ನಗರಗಳಲ್ಲೂ ಜನರು ಸಾವಿರಗಟ್ಟಲೆಯಲ್ಲಿ ಇಸ್ಲಾಮರಾದರು.

(ಇನ್ನೂ ಪೂರ್ತಿ [illegible])

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್
ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು; ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. ೫ ಮತ್ತು 1—10—0

ಕೇಸರಿ ಕುಟೀರಂ
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು.

ಅವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನ ಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ
ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು.

ಒಂದು ತಿಂಗಳಲ್ಲಿ ಅಮೋಘವಾದ ಗುಣ; ಇದು ಜಾಡ್ಯವನ್ನು ಗುಣಪಡಿಸವುದಲ್ಲದೆ ವ್ಯಾಧಿಯು ಬಾರದಂತೆ ತಡೆಮಾಡುವುದು

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವೆ

ತಯಾರಿಸುವವರು ಆಯುರ್ವೇದಾಶ್ರಮ, ಪೋ. ಬೋ. ಕ್ಸ್ 287, ಮದರಾಸು
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು—ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಜಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕಾಲರೆಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ
ಕ್ರಯ ಡಬ್ಬಿ 1ಕ್ಕೆ ರೂ. 1—0—0

ಗುಹ್ಯರೋಗ ನಿವಾರಿಣೀ ತೈಲ
Anti-Venerael Oil
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ, ಕುಟುಂಬ ಪಾರಂಪರ್ಯದ ವ ಶಗಳಿದ ರೋಗವು ಗುಣವಾಗುವುದು ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು
8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ. 2—8—0

ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಳ್ ಸಿ. ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾಕೃತಿ ಸಮೇತ

ಋಗ್ವೇದೀ ಸಂಧ್ಯಾವಂದನೆ

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)
ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ,

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು.

ಹೊಸ ಕೆಟಲಾಗು ದಮ್ಮಾರ್ಥ.
ವಿಳಾಸ -
TheScientificGold Bangles Co , Ltd ,
Head Office:-43, Byragimatam Street,
Post Box No. 203, Madras.

ಕಿರ್ಲೋಸ್ಕರ
ಕಲ್ಯಾಣ ಡೆಕೋರ್ಟಿಕೇಟರ್.



ನೆಲಗಡಲೆ ಒಡೆಯುವ ಉತ್ತಮ ಶಕ್ತಿಯುಳ್ಳದು
ಗಂಟೆಗೆ 75ರಿಂದ 80 ಗೋಣಿಗಳನ್ನು ಒಡೆಯಬಹುದು.
6 B. H. P. ಅಶ್ವಶಕ್ತಿ ಬೇಕು.
ಕೈ ಮತ್ತು ವಿದ್ಯುಚ್ಛಕ್ತಿಯ ಯಂತ್ರಗಳ ವಿವಿಧ ರೀತಿಯ ಸಚಿತ್ರ ಕೆಟಲಾಗು ಕಳುಹಿಸಲಾಗುತ್ತದೆ.

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ. ಸತಾರಾ.

ಡಿಸ್ಟ್ರಿಬ್ಯೂಟರರು—ಪೆರ್ರಿ ಎಂಡ್ ಕೋ, ಲಿಮಿಟೆಡ್, ಮದ್ರಾಸು.

ರೈಲುಬಂಡಿಗಳ ಸಮಯ.

ಗಾಡಿಗಳು.	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಿಗ್ಗೆ 9 50	ಸಂಜೆ 4 20
ಮಿಕ್ಸೆಡ್	,, 5 55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 2 45	ಮ. 12 40
ತ್ರಿಟಲ್	ಸಂಜೆ 5-25	ಬೆಳಿಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ 8 25	ಮ. 1-20
ಕಾಸರಗೋಡು ಪೆಸೆಂಜರು	ಸಂಜೆ 8 20	ಸಂಜೆ 6-15

ಕುಷ್ಠ ರೋಗ ಮತ್ತು ಫರಂಗಿ ರೋಗ

ಇತರ ಎಷ್ಟು ದೀರ್ಘಕಾಲದ ರೋಗವೇ ಆಗಿರಲಿ ಯಾವ ಕಾರಣವೇ ಇರಲಿ ನೀವು ಮದ್ದು ಮಾಡಿ ಮಾಡಿ ದಣಿದಿರಿ. ನಮ್ಮ ರೋಗಗಳನ್ನು ಇಂದ್ರಜಾಲದಂತೆ ಶಾಶ್ವತವಾಗಿ ೩ ವಾರಗಳಲ್ಲಿ ಗುಣಪಡಿಸಲಾಗುತ್ತದೆ ಪೂರ್ಣ ಗುಣ ಗ್ಯಾರಂಟಿ,

ವಿವರಕ್ಕೆ ಬರೆಯಿರಿ.

Kamala Works,
Panchpota Bengal S B.
C. P. S.

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ.



ಹೊಸತಾಗಿ ಆಮದಾದುದು ದೊರೆಯುವ ಇತರ ಕ್ಯಾಮರಗಳಿಗಿಂತ ಬಾಳಿಕೆ ಬರುವಂಥದು ಮತ್ತು ಉತ್ತಮವಾದುದು, ಫೊಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ. ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್, ೪ ಫಿಲ್ಮ್ ಎಕ್ಸ್‌ಪೋಜರ್ಸ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಅವಶ್ಯಕವಾದ ರಸಾಯನಿಕ ವಸ್ತುಗಳು, ಫೋಟೊ ತೆಗೆಯುವ ವಿಧಾನ, ಶಿಕ್ಷಣಕೊಡುವ ಪುಸ್ತಕ—ಇವು ಉಚಿತವಾಗಿ ಕಳುಹಿಸಲಾಗುತ್ತದೆ. ಬಲವಾದ ಲೆನ್ಸ್. ಬೆಲೆ ಸಾಮಾನ್ಯವಾದುದು ರೂ. [illegible], ಉತ್ತಮವಾದುದು [illegible]. ಮಡಚುವ ಕ್ಯಾಮರಾ ರೂ. [illegible], ಉತ್ತಮವಾದ್ದು ರೂ. [illegible] ಸ್ಪೆಶಲ್ ರೂ. [illegible]. ಹೆಚ್ಚಿಗೆ ಫಿಲ್ಮ್ ಬೇಕಾದರೆ ಡಜನ್ [illegible] ಆಣೆ. ಎನ್‌ಲಾರ್ಜ್‌ಮೆಂಟಿನ ಸಾಧನ ಸಾಮಗ್ರಿ [illegible] ಆಣೆ, ಫಿಕ್ಸಿಂಗ್ ಸಾಲ್ಟ್ [illegible] ಡಬ್ಬಕ್ಕೆ [illegible] ಆಣೆ, ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ. ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ.

ಭಾರತ ಯೂನಿಯನ್ ಟ್ರೇಡಿಂಗ್ ಕಂ.
ಪೋಸ್ಟ್‌ಬಾಕ್ಸ್ ನಂಬ್ರ [illegible] (ಎಸ್. ಎ) ಕಲ್ಕತ್ತ

ಟ್ರೈನಿಂಗ್ ಶಾಲಾ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಸೋಶಿಯೋಲೊಜಿ ಅಥವಾ ಸಮಾಜಶಾಸ್ತ್ರ

ಕ್ರಯ ರೂ. 1
ಶಾರದಾ ಛಾಪಖಾನೆ, ಮಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

ಸದಾರೋಗ್ಯದ ರಹಸ್ಯವೇನು?

ಇದರಲ್ಲಿ ಯಾವ ರಹಸ್ಯವೂ ಅಡಗಿಲ್ಲ—ಯಾವ ಇಂದ್ರಜಾಲವೂ ಇಲ್ಲ—ನಿಮ್ಮಂತರ್ಯದ ಸ್ಥಿತಿಯು ಹೇಗಿದೆಯೋ ಅದ ಪುಟ್ಟಿಗೆ ನೀವು ಸದಾ ರೋಗ್ಯವು ಹೊಂದಿಕೊಂಡಿದೆ. ನಿಮ್ಮ ಆಂತರ್ದೇಹವು ಬಾಹ್ಯ ದೇಹಕ್ಕಿಂತಲೂ ಹೆಚ್ಚು ಶುದ್ಧವಾಗಿರುವುದು ಅಗತ್ಯ. ರೋಗಬಾಧೆ ತಲೆಸಿಡಿತ, ನಿದ್ರಾಭಂಗ ಅಜೀರ್ಣ, ತಲೆಬಿಸಿ, ಪಿತ್ಥಪ್ಲೀಹ ಗಳು ನಿಮ್ಮ ಒಳದೇಹವು ಶುದ್ಧವಿಲ್ಲದಿರುವುದರಿಂದಲೇ ಪ್ರಾಪ್ತವಾಗುತ್ತವೆ. ಕೆಸ್ಟರ್ ಒಯಿಲ್ (ಹರಳೆಣ್ಣೆ)ಯನ್ನು ತೆಗೆದುಕೊಳ್ಳುವುದೇ ಅಂತಃ ಶುಚಿ ಪಾಲನೆಗೆ ಭದ್ರವೂ ರಕ್ಷಕವೂ ಆದ ಉಪಾಯವೆಂದು

ಯಾವ ವೈದ್ಯನೂ ಹೇಳುವನು

ಸ್ವಸ್ತಿಕ್ ಮೆಡಿಸಿನಲ್ ಕೆಸ್ಟರ್ ಒಯಿಲ್‌ಗಿಂತ ಉತ್ತಮ, ಅದಕ್ಕಿಂತ ಶುದ್ಧವಾದ ಹರಳೆಣ್ಣೆಯು ಭರತಖಂಡದಲ್ಲಿ ಸಿಗುವುದಿಲ್ಲ. ಅದನ್ನು ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲೂ ಸರಕಾರಿ ಸಂಸ್ಥೆಗಳಲ್ಲೂ ಉಪಯೋಗಿಸುತ್ತಾರೆ. ಅದಕ್ಕೆ ರುಚಿಯಿಲ್ಲ—ವಾಸನೆಯಿಲ್ಲ. ಬಹು ಸೌಮ್ಯವಾಗಿ ಕೆಲಸಮಾಡುತ್ತದೆ. ಶೇಕಡಾ ೧೦೦ರಷ್ಟು ಶುದ್ಧವೆಂದು ಗೇರಂಟಿ ಇದೆ. ಅಂತಃಶುಚಿ ಮಾಡುವುದರಲ್ಲಿ ಪ್ರಾಯಸ್ಥರಿಗೂ ಮಕ್ಕಳಿಗೂ ಇದಕ್ಕಿಂತ ಉತ್ತಮವಾದುದಿಲ್ಲ.

ಓಲ್ ಇಂಡಿಯಾ ಮೆಡಿಕಲ್ ಕೋನ್ಫರೆನ್ಸ್ ಎಗ್ಸಿಬಿಷನ್ ೧೯೩೪—ಇದರಲ್ಲಿ ಶಿಫಾರಸು ಪತ್ರ ದೊರಕಿದೆ.

೧೯೩೪ರ ಓಲ್ ಇಂಡಿಯಾ ಇಂಡಸ್ಟ್ರಿಯಲ್ ಎಗ್ಸಿಬಿಷನಲ್ಲಿ ಭಂಗಾರದ ಪದಕ ದೊರಕಿದೆ.

ಇಲ್ಲಿಗೆ ಬರೆಯಿರಿ —

ಸ್ವಸ್ತಿಕ್ ಒಯಿಲ್ ಮಿಲ್ಸ್ ಲಿಮಿಟೆಡ್,

ವಡಾಲ ಮುಂಬಾಯಿ 15

ದ ಕ ಜಿಲ್ಲಾ ಏಜಂಟರು —

ಎಸ್ ಎಸ್ ವಿ ನಾಯಕ್ ಎಂಡ್ ಕೊ ಮಂಗಳೂರು

ಉ ಕ ಜಿಲ್ಲಾ ಏಜಂಟರು —

ಎಸ್ ಎಸ್ ರಂಗ್ನೆ ಶೆಣೈ ಟಿ ಶಿ ಕಾರವಾರ



SWASTIK MEDICINAL CASTOR OIL

(ಅನೇ ಪುಟದಿಂದ ಮುಂದುವರಿದುದು.)

ಅಲ್ಲೀಗ ಶೇಕಡ ಲಕ್ಷ್ಯ ಕಡಿಮೆ ಜನರು ಓದ ಬರಹ ಬಾರದವರಾಗಿದ್ದಾರೆಂದು ತಿಳಿಯುತ್ತೇವೆ.

ಆದರೆ ನಮ್ಮ ದೇಶದ ಸಂಗತಿಯೇ ಬೇರೆ. ಸದ್ವಿದ್ಯೆಯ ಮಹತ್ವವನ್ನು ಚೆನ್ನಾಗಿ ಮನಗಂಡ ಆಂಗ್ಲೇಯರ ಪ್ರಭುತ್ವಕ್ಕೆ ಪ್ರಾರಂಭವಾಗಿ ೧೫೦—ಇನ್ನೂರು ವರ್ಷಗಳು ಕಳೆದುಹೋದರೂ ನಮ್ಮ ಸರಕಾರವು ನಮಗಾಗಿ ಕಡ್ಡಾಯದ ಧರ್ಮಾರ್ಥ ಪ್ರಾಥಮಿಕ ಶಿಕ್ಷಣವನ್ನು ಕೊಡುವಂಥ ಕಾರ್ಯವನ್ನೇನೂ ಮಾಡದಿದ್ದರೂ, ಮೆಲ್ಲಮೆಲ್ಲನೆ ಆಗುತ್ತಿರುವ ಶಿಕ್ಷಣ ಪ್ರಗತಿಯನ್ನು ಸೂಚಿಸುವ ವಾರ್ಷಿಕ, ಪಂಚವಾರ್ಷಿಕ ವರದಿಗಳನ್ನಾದರೂ ಕಾಲಕಾಲಕ್ಕೆ ಪ್ರಕಟಿಸಿ ಚಿರಸ್ಮರಣೀಯವಾಗಿದೆ ಎನ್ನೋಣ. ಅಷ್ಟಕ್ಕಾಗಿಯಾದರೂ ನಮ್ಮ ದಯಾಳು ಸರಕಾರದ ಉಪಕಾರಸ್ಮರಣೆ ಮಾಡಿದಷ್ಟು ಸಾಲದಲ್ಲವೆ? ೧೯೨೨ರಿಂದ ೧೯೩೨ರ ವರೆಗಿನ ೫ ವರ್ಷಗಳ ಶಿಕ್ಷಣಪ್ರಚಾರದಿಂದ ೧೯೩೨ನೇ ವರ್ಷಾಂತ್ಯದಲ್ಲಿ ನಮ್ಮ ದೇಶದ ಬೇರೆ ಬೇರೆ ಪ್ರಾಂತಗಳಲ್ಲಿ ಅಕ್ಷರಸ್ಥರ ಸಂಖ್ಯೆ ಈ ಪ್ರಕಾರ ಇತ್ತು.

	ಪ್ರತಿನೂರು ಪುರುಷರಲ್ಲಿ	ಪ್ರತಿನೂರು ಸ್ತ್ರೀಯರಲ್ಲಿ
ಮದ್ರಾಸು	೯-೫೦	೩-೧೦
ಬೊಂಬಾಯಿ	೯ ೦೮	೨ ೮೩
ಬಂಗಾಳ	೮ ೩೦	೨-೩೨
ಸಂಯುಕ್ತ ಪ್ರಾಂತಗಳು	೫ ೩೦	೦ ೬೨
ಪಂಜಾಬು	೮ ೮೨	೧ ೮೪
ಬರ್ಮಾ	೬-೮೧	೩ ೦೧
ಬಿಹಾರ್ ಒರಿಸ್ಸಾ	೫-೧೫	೦ ೬೭
ಮಧ್ಯ ಪ್ರಾಂತಗಳು	೫ ೦೭	೦ ೮೫
ಅಸ್ಸಾಮ್	೬-೮೮	೧ ೫೦
[illegible]	೫ ೨೦	೧ ೨೦

೧೯೩೦—೩೧ರ ವರ್ಷದಲ್ಲಿ ಇಂಗ್ಲೆಂಡಿನ ಶಿಕ್ಷಣ ಪ್ರಗತಿಯು ಹೇಗಿತ್ತೆಂದರೆ ಆ ವರ್ಷ ಅಲ್ಲಿ ಸರಕಾರವು ಶಿಕ್ಷಣಕ್ಕಾಗಿ [illegible] ಶತಮಾನಗಳಿಂದ ಮೀಸಲಾಗಿ ಇಟ್ಟ [illegible] ಕಡೆಗಿದೆ.

ಶಿಕ್ಷಣದ ಪ್ರಯೋಜನಗಳನ್ನು ಜನರಿಗೆ ತೋರಿಸಿಕೊಟ್ಟು ಕಡ್ಡಾಯದ ಧರ್ಮಾರ್ಥ ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡಿದ ಹೊರತು ದೇಶದ ಪ್ರಗತಿಯು ಅಶಕ್ಯವು. ಈಗಲೇ ನಮ್ಮ ಮದ್ರಾಸು ಸರಕಾರದ ಮಂತ್ರಿಕೂಟವು ೩೦ ವರ್ಷಗಳ ಒಳಗೆ ಎಲ್ಲ ಬಾಲಬಾಲಿಕೆಯರಿಗೂ ಕಡ್ಡಾಯದ ಧರ್ಮಾರ್ಥ ಪ್ರಾಥಮಿಕ ಶಿಕ್ಷಣವನ್ನು ಕೊಡುವ ಯೋಜನೆಯೊಂದನ್ನು ಸಿದ್ಧಮಾಡುವುದರಲ್ಲಿ ದ್ದಾರೆಂದು ತಿಳಿದು ಬರುತ್ತದೆ. ಇದು ಒಂದು ಶುಭಲಕ್ಷಣವೆನ್ನಬಹುದಾದರೂ ಯೋಜನೆಯು ಪ್ರಕಟವಾದ ಹೊರತು ಅದರ ಸಾಧ್ಯಾಸಾಧ್ಯತೆಯ ಕುರಿತು ಏನನ್ನೂ ಹೇಳಲಾಗುವುದಿಲ್ಲ.

ಕಡ್ಡಾಯದ ಧರ್ಮಾರ್ಥ ಪ್ರಾಥಮಿಕ ಶಿಕ್ಷಣವನ್ನು ಕೊಡುವ ಏರ್ಪಾಡು ಆಗಬೇಕೆಂದು ನಾಲ್ಕೂ ಮೂಲೆಗಳಿಂದ ಒತ್ತಾಯವಾಗುತ್ತಿರುವಾಗ ಆಗ್ರಾ ಅಯೋಧ್ಯೆಗಳ ಸಂಯುಕ್ತ ಸಂಸ್ಥಾನಗಳಲ್ಲಿ ಮಾತ್ರ ಬಾಲಕರ ಮಟ್ಟಿಗೆ ಏರ್ಪಡಿಸಿದ ಅಂಥ ಶಿಕ್ಷಣದ ಯೋಜನೆಯು ಫಲಕಾರಿಯಾಗಲಿಲ್ಲವೆಂದು ಅಲ್ಲಿಯ ವಿದ್ಯಾಖಾತೆಯ ಅಸಿಸ್ಟಾಂಟ ಡೈರೆಕ್ಟರರು ವರದಿ ಬರೆದಿರುವುದೊಂದು ಅನ್ನದಲ್ಲಿ ಕಲ್ಲು ಬಂದ ಹಾಗೆ ಆಗಿದೆ. ಪರಂತು ಜಗತ್ತಿನ ಎಲ್ಲ ಸ್ವತಂತ್ರ ರಾಷ್ಟ್ರಗಳಲ್ಲಿ ಈ ಯೋಜನೆಯು ನಿರೀಕ್ಷಿಸಿದುದಕ್ಕಿಂತಲೂ ಹೆಚ್ಚು ಫಲಕಾರಿಯಾಗಿರುತ್ತ ಪರತಂತ್ರ ಹಿಂದೂದೇಶದ ಒಂದಾನೊಂದು ಪ್ರಾಂತದಲ್ಲಿ ಅದು ಯಶಸ್ವಿಯಾಗಲಿಲ್ಲವೆನ್ನಬೇಕಾದರೆ ಯಾವುದೋ ಒಂದು ಗೂಢ ಕಾರಣವಿರಬೇಕಲ್ಲವೆ? ಆಂಗ್ಲ ಸರಕಾರದ ವಿದ್ಯಾಖಾತೆಯ ಆ ಆಂಗ್ಲೇಯ ಅಧಿಕಾರಿಗಳ ಹೇಳಿಕೆ [illegible] ಸಂಪೂರ್ಣ ಕಾರಣಗಳು ಇನ್ನು ಗೊತ್ತಾಗಬೇಕು. ವಸ್ತುಸ್ಥಿತಿಯು ಹೇಗಿದೆಯೋ ತಿಳಿಯಲಿಲ್ಲ. ಅದು ಹೇಗಿದ್ದರೂ ಇಷ್ಟನ್ನು ಯಾರ ಆಕ್ಷೇಪವೂ ಇಲ್ಲದೆ ಹೇಳಬಹುದು. ಪ್ರಾಮಾಣಿಕ ಇಚ್ಛೆಯೂ ಅದಕ್ಕೆ ತಕ್ಕ ಸತ್ಪ್ರಯತ್ನಗಳೂ ಇದ್ದರೆ ಯಾವ ಸತ್ಕಾರ್ಯವೂ ನಿಷ್ಫಲವಾಗದು. ಸರಕಾರದವರಿಂದ ಇದು ಶಕ್ಯವು. ಆದ್ದರಿಂದಲೇ ಈಗ ಪ್ರಬಲ ಆಂದೋಲನವನ್ನು ಎಬ್ಬಿಸಿ ಜನಜಾಗೃತಿಯನ್ನುಂಟುಮಾಡಿ ಲೋಕಮತವನ್ನು ನಮ್ಮ ಕಡೆಗೆ ಮಾಡಿಕೊಳ್ಳಬೇಕಾಗಿದೆ.

ಕಟಪಾಡಿ ಶ್ರೀನಿವಾಸ ಶಣೈ

ಪ್ರಕಟಣೆ

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 152/1931

ಕ್ರಮ ಅಮಲ್ದಾರಿ ನಂಬ್ರ 80/1935

ಕ್ರಮ ಇ ಎ ನಂಬ್ರ 60/1935

ಎಡಪದವು ಪಾಂಡು ಗೌಡ—ಅರ್ಜಿದಾರ

ಮತ್ತು

ಅಪ್ಪಯ್ಯಯಾನೆ ಕೃಷ್ಣ ದಾಸ ಸಹಾ— ಎದ್ರಿರು

ಮೇಲೆ ಹೆಸರು ಕಾಣಿಸಿರುವ ಅರ್ಜಿದಾರನ ಗ ಣಕ್ಕೆ ಮೇಲೆ ಕಾಣಿಸಿರುವ ದಾವೆಯಲ್ಲಿ ಆಗಿರುವ ಡಿಕ್ರಿಯ ಸಮಾಧಾನದ ಬಗ್ಗೆ ಸದ್ರಿ ಅರ್ಜಿದಾರನು ಮೇಲೆ ಕಾಣಿಸಿರುವ ಕೋರ್ಟಿನಲ್ಲಿ ಮೇಲೆ ಕಾಣಿಸಿರುವ ನಂಬ್ರದ ಅಮಲ್ದಾರಿಯನ್ನು ನಡಿಸಿ ಸದ್ರಿ ದಾವೆಯ ಡಿಕ್ರಿಯಲ್ಲಿ ಮೂರಂಟಿಕ್ಕೆ ವಿಧಿ ಇರುವ ಸ್ಥಿರ ಆಸ್ತಿಯನ್ನು ಏಲಂ ಮಾಡಿಸಬೇಕಾಗಿ ಅಪೇಕ್ಷಿಸಿ ಮಾಡಿ ಡೈಪ್ಟ್ ಇಸ್ತಿಹಾರವನ್ನು ಹಾಜರುಮಾಡಿರುತ್ತಾನೆ ಮತ್ತು ಸದ್ರಿ ಏಲಂನಿಂದ ಹುಟ್ಟಿ ಬರುವ ಹಣವನ್ನು ಬಿಡ್ ಮತ್ತು ಸೆಟ್ಆಫ್ ಮಾಡುವರೇ ಕೋರ್ಟಿನವರ ಅನುಜ್ಞೆ ಕೇಳಿ ಮೇಲೆ ಕಾಣಿಸಿರುವ ಕ್ರಮ ಇ ಎ ಅರ್ಜಿಯನ್ನು ಕೂಡಾ ದಾಖಲು ಮಾಡಿರುತ್ತಾನೆ. ಸದ್ರಿ ಡ್ರೈಪ್ಟ ಇಸ್ತಿಹಾರು ಯಾಕೆ ಮಂಜೂರು ಮಾಡಬಾರದೆಂಬುದರ ಕುರಿತು ಮತ್ತು ಬಿಡ್ ಮತ್ತು ಸೆಟ್‌ಒಫ್ ಅರ್ಜಿ ಯಾಕೆ ಮಂಜೂರು ಮಾಡಬಾರದೆಂಬುದರ ಕುರಿತು 2ನೇ ಎದ್ರಿ ಲಕ್ಷ್ಮೀದಾಸ ಮತ್ತು 3ನೇ ಎದ್ರಿ ಹರಿದಾಸ ಈ ಎರಡು ಜನರಿಗೆ ಈ ಮೊದಲು ಮಾಡಿಸಿದ ನೋಟೀಸುಗಳಿಗೆ ಅವರು ಸಿಕ್ಕದೆ ಇರುವುದರಿಂದ ಅವರಿಬ್ಬರ ನೋಟೀಸನ್ನು ಈ ವರ್ತಮಾನ ಪತ್ರದಲ್ಲಿ ಪ್ರಕಟಪಡಿಸಬೇಕೆಂತ ಪಗ್ಯಾರೆ ಕೋರ್ಟಿನವರು ಹುಕುಂ ಕೊಟ್ಟಿರುವುದರಿಂದ ಇದನ್ನು ಪ್ರಕಟಪಡಿಸಲಾಗುತ್ತದೆ. ಮೇಲೆ ಕಾಣಿಸಿರುವ ವಿಷಯಗಳು ತಾ 1-8-'35ನೇ ದಿನ ಪೂರ್ವಾಹ್ನ 11 ಗಂಟೆಗೆ ಮೇಲೆ ಹೆಸರು ಕಾಣಿಸಿರುವ ಕೋರ್ಟಿನ ಮುಂದೆ ತನಿಖೆ ನಡೆಸಿ ತೀರ್ಮಾನಮಾಡಲ್ಪಡುವದೆಂತಲೂ ಆ ಸಮಯ ಮೇಲೆ ಹೆಸರು ಕಾಣಿಸಲ್ಪಟ್ಟವರು ಈ ಕೋರ್ಟಿಗೆ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಹೇಳಿಕೊಳ್ಳಬಹುದು ಎಂತ ಈ ಮೂಲಕ ತಿಳಿಸಲಾಗುತ್ತದೆ.

ಕೋರ್ಟಿನವರ ಹುಕುಂ ಪ್ರಕಾರ

ಕಾರ್ಕಳ, 6 7-35 | ಇಡ್ಯದ ವಾಸುದೇವಯ್ಯ, ಬಿ ಎ ಬಿ ಎಲ್, ಅರ್ಜಿದಾರನ ಪರ ವಕೀಲ.

ಭೋಜಿಸಿದ ನಂತರ ಭಯಂಕರ ವೇದನೆ.

ಪ್ರತಿಯೊಂದು ಭೋಜನದ ನಂತರ ಭಯಂಕರ ವೇದನೆಯಾಗುವುದು, [illegible] ಒದಗುವುದೆಂದಿ [illegible] ಉಣ್ಣಲು [illegible] ಭಯ [illegible] — ಈ ಸ್ಥಿತಿ [illegible] ಬ್ರೇಂಡ್ ಸ್ಟೊಮಕ್ ಪೌಡರ [illegible]

ಅವರ ಅಭಿಪ್ರಾಯ ಪತ್ರವನ್ನು ಓದಿ —

[illegible] ಸ್ಟೊಮಕ್ ಪೌಡರ [illegible] ಒಂದು ಭೋಜನವನ್ನು ಮಾಡಿದರೂ [illegible] ವೇದನೆಯಾಗುತ್ತಿತ್ತು. ಭಯಂಕರ [illegible] ನೋವಿಲ್ಲದೆ ನಾನು ಭೋಜನಮಾಡಲು ಸಾಧ್ಯವಾಗುತ್ತಿದ್ದಿಲ್ಲ. ಈ ಪರಿಸ್ಥಿತಿಯಲ್ಲಿ ನಾನು [illegible] ಇದ್ದೆ. ಆದರೆ ಈಗ ಧನ್ಯನಾಗಿರುವೆ. [illegible] ನೋವಿನ ಒಯಿಲ್ಲದೆ [illegible] ಭೋಜನ [illegible] ಶಕ್ತನಾಗಿರುವೆ. ನಿಮ್ಮ [illegible] ಮೆಕಲೀನ್ ಬ್ರೇಂಡ್ ಸ್ಟೊಮಕ್ ಪೌಡರಿನ ಕುರಿತಾಗಿ ನನಗೆ ಮೊದಲು ತಿಳಿದಿರಲಿಲ್ಲವಲ್ಲಾ — ಎಂಬುದೇ ನನ್ನ ಈಗಿನ [illegible] ನನಗೆ ಕೊಟ್ಟ [illegible] ನಮಸ್ಕಾರ.

[illegible] ಮೂಲಭೂತ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ [illegible] ಪಡೆಯುವಂತೆ ಎಚ್ಚರದಿಂದ ಕೇಳಿರಿ [illegible] ತೀವ್ರಗತಿಯ ಚೂರ್ಣವನ್ನು ಪಡೆದು ಅಪಾಯಕ್ಕೆ ಒಳಬೀಳಬೇಡಿ. ಮುದ್ದೆ, ಗುರ್ತು [illegible] ಗಳಲ್ಲಿ ಕೆಂಪಗಿನ ಮುದ್ರೆಯಿರುವ,

ಈ ದಸ್ಕತು ಇರುವ ಮೆಕ್‌ಲೀನ ಸ್ಟೊಮಕ್ ಪೌಡರನ್ನೇ ಪಡೆಯುವಂತೆ ಜಾಗ್ರತರಾಗಿ.

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರ್‌ಗಳಿಂದ ಪಡೆಯಬಹುದು—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್,

1, ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು—

ಇಲ್ಲಿಗೆ ಬರೆಯಿರಿ

ಬಿಲ್ಲೆಗಳ ರೂಪದಿಂದಲೂ ವಿಕ್ರಯಿಸಲ್ಪಡುತ್ತವೆ



ವಾರ್ತಾಸಂಗ್ರಹ.

ವಿಮಾನದಲ್ಲಿ ೨೭ ದಿನಗಳು.

ಫ್ರೆಂಡ್ ಮತ್ತು ಅಲ್‌ಕೀಸ್ ಎಂಬಿಬ್ಬರು ಸಹೋದರರು ೨೭ ದಿನಗಳ ತನಕ ವಿಮಾನದಲ್ಲಿ ಸಂಚರಿಸಿ ಜಗತ್ತಿನ ದಾಖಲೆಯನ್ನು ಮುರಿದಿರುವರು. ೧೯೩೦ರಲ್ಲಿ ಡೇಲ್ ಮತ್ತು ಜೇಕ್ಸನರೆಂಬವರು ೬೪೭ ತಾಸು ೨೮ ಮಿನಿಟುಗಳ ತನಕ ಹಾರ್‍ಯಾಡಿದ್ದರು. ಆ ದಾಖಲೆಯು ಮುರಿಯಲ್ಪಟ್ಟಿತು

ಗ್ರಾಮವನ್ನು ಮುತ್ತಿರುವರು!
ಗಂಡ ಹೆಂಡಿರಿಗೆ ಹೊಡೆದರು.
೩೩ ಮುಸ್ಲಿಮರನ್ನು ಬಂಧಿಸಿದರು.

ರಾಜಶಾಹಿ ಜುಲೈ ೬,

ಜ್ಞಿಶ್ರಾ ಎಂಬ ಗ್ರಾಮದಲ್ಲಿ ಗಂಡಹೆಂಡಿರಿಬ್ಬರಿಗೆ ನೂರಾರು ಜನರು ಕೂಡಿ ಹೊಡೆದು ಚಿತ್ರಹಿಂಸೆ ನಡೆಸುತ್ತಿದ್ದಾಗ ಪೋಲೀಸರು ಬಂದು ಅವರಲ್ಲಿ ೩೩ ಮಂದಿಯನ್ನು ಸೆರೆ ಹಿಡಿದೊಯ್ದರು

ಒಬ್ಬ ಹಿಂದೂ ಹುಡುಗನು ಒಬ್ಬ ಮುಸ್ಲಿಮನಿಗೆ ತಂಟೆಮಾಡಿದನು ಮುಸ್ಲಿಮರು ಆ ಹುಡುಗನಿಗೆ ಹೊಡೆಯುತ್ತಿರುವಾಗ ಕೆಲವು ಜನ ಮುಖಂಡರು ಒಟ್ಟುಗೂಡಿ, ಪಂಚಾಯತು ನಡೆಸಿ ಹುಡುಗನಿಗೆ ಕೆಲವು ಪೆಟ್ಟುಗಳನ್ನು ಕೊಟ್ಟು ಶಿಕ್ಷಿಸಿಬಿಟ್ಟರು

ಆ ತೀರ್ಮಾನವಾಗುವಾಗ ಹಾಜರಿ ಇಲ್ಲದಿದ್ದ ಒಬ್ಬ ಮುಸ್ಲಿಮನು ಹುಡುಗನಿಗೆ ಕೊಡಲ್ಪಟ್ಟ ಶಿಕ್ಷೆಯು ಸಾಕಾಗದೆಂದು ಹೇಳಿದನು ಅವನು ದೊಡ್ಡ ಕೂಟವೊಂದನ್ನು ಕೂಡಿಸಿ ದಂಗೆಯೆಬ್ಬಿಸಿ ಆ ಹುಡುಗನ ತಾಯಿ ತಂದೆಯವರಿಬ್ಬರನ್ನು ಹಿಡಿದು ಹೊಡೆಯಲಾರಂಭಮಾಡಲಾಯಿತು ಮಾರ್ಗ ಮಾರ್ಗಗಳಲ್ಲಿ ಆ ಗಂಡಹೆಂಡಿರನ್ನು ಮೆರವಣಿಗೆಯಿಂದೊಯ್ಯಲಾಯಿತು ಅವರ ಸಹಾಯಕ್ಕೆ ಯಾರೂ ಹೋಗಬಾರದಾಗಿ ಮುಸ್ಲಿಮರ ಕಡೆಗಟ್ಟಿದರು ರಾತ್ರಿ ಆ ವಾರ್ತೆಯು ಪೋಲೀಸ ಸ್ಟೇಶನಿಗೆ ತಲಪಿತು. ಸಾಬ್ ಇನ್ ಸ್ಪೆಕ್ಟರು ಬಂದು ೩೩ ಮಂದಿಯನ್ನು ಸೆರೆ ಹಿಡಿದರು

ಅಬೋಟಾಬಾದ್‌ನಲ್ಲಿ ಬೆಂಕಿ
ಎರಡು ಸಾವಿರ ಮನೆಗಳು ಸುಟ್ಟು ಹೋದುವು

ಅಬೋಟಾಬಾದ್‌ನಲ್ಲಿ ಮೊನ್ನೆ ಬೆಂಕಿಯೆದ್ದುಬಿಟ್ಟು ೨೦೦೦ ಮನೆಗಳು ಸುಟ್ಟು ಹೋದುವು ೫೦ ಲಕ್ಷ ರೂಪಾಯಿಗಳ ನಷ್ಟವಾದ ಅಂದಾಜು ಆಗಿದೆ ಕೆಲವು ಮನೆಗಳನ್ನು ಸ್ಫೋಟನಗೊಳಿಸಿ ಮಿಲಿಟರಿಯವರು ಬೆಂಕಿಯನ್ನು ನೊಂದಿಸಲೆತ್ನಿಸಿದರು ಹಿಂದೀಯರಿರುವ ಪಾರಾರವೆಲ್ಲ ಸುಟ್ಟು ಬೂದಿಯಾಗಿದೆ ಗವರ್ನರರು ಬೆಂಕಿಯ ಹಾವಳಿಯನ್ನು ನೋಡಿಕೊಂಡು ಹಿಂದಿರುಗಿದರು ಮೊನ್ನೆ ಪೇಶಾವರದಲ್ಲಾದಷ್ಟು ನಷ್ಟವಾಗಿದೆಯಂತೆ

ರುಮೇನಿಯಾದ ಮುಸ್ಲಿಮರು ಪರದೇಶ ವಾಸಕ್ಕಾಗಿ ಹೊರಟರು.
ತುರ್ಕಿ ದೇಶದವರ ರಿಯಾಯಿತಿ.

ಬುಚಾರೆಸ್ಟ್, ಜುಲೈ ೬

ಸೌತ್ ಈಸ್ಟರ್ನ್ ರುಮೇನಿಯಾದಲ್ಲಿದ್ದ ೬೦,೦೦೦ ಮಹಮ್ಮದೀಯರಲ್ಲಿ ಒಂದು ದೊಡ್ಡ ಪಂಗಡವು ತುರ್ಕಿ ದೇಶಕ್ಕೆ ಸ್ಟೀಮರ್ ಮೂಲಕ ಹೊರಟಿರುತ್ತದೆ ಏಶಿಯಾ ಮೈನರ್‌ನಲ್ಲಿ ಅವರಿಗೆ ಭೂದಾನಮಾಡುವೆನೆಂದು ತುರ್ಕಿಯ ಕೆಮಲ್ ಪಾಷಾರವರು ಹೇಳಿದುದೇ ಈ ಪರದೇಶ ವಾಸದ ಕಾರಣ ಈ ಶತಮಾನದಲ್ಲಿ ಪರದೇಶ ವಾಸಿಗಳಾಗಿ ಹೋದವರಲ್ಲಿ ಇದೇ ಅತೀ ದೊಡ್ಡ ಸಂಖ್ಯೆ ರುಮೇನಿಯಾದಲ್ಲಿನ ಆರ್ಥಿಕ ಸ್ಥಿತಿಯು ಉತ್ತಮವಾಗಿರುವುದೂ ಒಂದು ಕಾರಣವಾಗಿದೆ.

Shiromani Narayanacharya

Choukhamba Benares City

THIS MAN WISHES HE HAD.

ಶಾಸ್ತ್ರಗಳೇ ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ, ರಾಮಚಂದ್ರಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಜಿಡದೆ ಯಾವಾಗಲೂ ಧಾರಣೆ ಮಾಡುತ್ತ ಇದ್ದರು ಅದರಿಂದ ಏನು ಫಲ? ಅದನ್ನು ಧರಿಸಿದರೆ ಅಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವವು ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು

ಸಣ್ಣ-ಅಡ್ಡೆ ಪ್ರಮಾಣದ ಕಂಠಿಸರ ೧ಕ್ಕೆ ಆಣೆ ೧೦ರಿಂದ ರೂ. ೩ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ ೧ಕ್ಕೆ ಆಣೆ ೪ರಿಂದ ರೂ ೭೫ರ ವರೆಗೆ ಗೌರೀಶಂಕರ ರುದ್ರಾಕ್ಷಿ ೧ಕ್ಕೆ ರೂ. ೩೦೦ರಿಂದ ರೂ ೫೦೦ರ ವರೆಗೆ ಮತ್ತು 2-4-5-6-7 8 ಮುಖಗಳ ಕಾಳು 1ಕ್ಕೆ ಆಣೆ 4ರಿಂದ ರೂಪಾಯಿ 10 ಮತ್ತು 9-10-11 ಮುಖಗಳುಳ್ಳ ಕಾಳು 1ಕ್ಕೆ ರೂ 10ರಿಂದ 30ರ ವರೆಗೆ 12-13-14 ಮುಖದ ಕಾಳು 1ಕ್ಕೆ ರೂಪಾಯಿ 40ರಿಂದ 100ರ ವರೆಗೆ ಸಣ್ಣ ರುದ್ರಾಕ್ಷೀ ಅವರೆಲ್ಲಕ್ಕಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ ದೊಡ್ಡ ರುದ್ರಾಕ್ಷೀ ಅವರೆಲ್ಲಕ್ಕಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು (ಹಿಂದಿನ್ನಕ್ಕೆ ಕ್ಲೋ ರಾಗಿ ಬರೆದರೆ ಇನಾಮವಾಗಿ ಕಳುಹಿಸುತ್ತೇವೆ ೧ ಆಣೆ ಸ್ಟಾಂಪು ಕಳುಹಿಸಿದರೆ ೩ ಇನಾಮುಗಳ - 1 ವಿಶ್ವೇಶ್ವರ ಪಟ, 1 ಶಾಂತೀ ಸ್ತೋತ್ರ 1 ಕಾಶಿ ಚಿತ್ರ... ಕಳುಹಿಸಿಕೊಡನೆ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯ

ಚೌಖಂಬಾ, ಬೆನಾರಿಸ್ (ಕಾಶಿ)

BIRTH-CONTROL GOODS

Sale price. For men P Ca Regina 2/10/-doz Neverrip ½ doz 1/1/ ,Paragon Heavy ½ doz 1/10/-, For women (with directions) Solid Rim Check Pessary 1/3/-, Bulb-Spray 3/6/-, Oral Medicine for 6 month 1/4/-. Packing postage extra. 12½% rebate on orders worth 6/- & 25% on 12/-. The General Trading Co 155, Manicktolla Street Calcutta

Wanted.

2 Canvassers of advertisements on a monthly salary of Rs 20 for our Weekly

Apply to

The Advertisement Manager,

Swadeshabhimani Mangalore.

APPROVED STRONG ACCURATE SWISS LEVER WRIST WATCH 2 YRS GTD NICKEL 3/8/-, GOLDEN 4/4/-, NICKEL RADIUM 3/4/ SHOCK-PROOF 4 JEWELS EVER-BRIGHT CHROME 7/8/- 15 JEWELLED CHROME 12/4/ , R. GOLD 15/ , R TIMEPIECE 2/8/, WITH ALARM 3/-. POCKET WATCH 1/12/ .POSTAGE PACKING FREE IF ORDERED 3. GENERAL TDG CO, 155 MANICKTOLLA ST. CALCUTTA

ಕುಷ್ಠರೋಗ ಮತ್ತು ವಾತರೋಗ

ನೊಂದು ಕಂಗೆಟ್ಟು ಹೋಗಿರುವವರಿಗೆ

ಮೂಲಿಕೆಯ ಔಷಧಗಳಿಂದ ಆಶ್ಚರ್ಯಕರವಾಗಿ ಪೂರ್ಣ ಗುಣವಾಗುತ್ತದೆ. ಅದ್ಭುತಕರ ಸಮಾಚಾರ ಪುಂಡಿಕ

Yeshajalaya, Chandanpur

Khulna, Bengal (A W.)

New Era Technical School.

Near Market Square, Udipi.

Commercial classes-approved by the Madras Government-New session opens in June.

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್

ಸಂತೆಕಟ್ಟೆ, ಉಡುಪಿ

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)

ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಿಯಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ	3—15	4— 4
ಮುಸ್ಕತಿ ..	4— 4	4—10
ಗುಡ್ಡು	4— 2	4— 6
ಊರ ಅವ್ವಲ್ ಬೆಳ್ತಿಗೆ	4— 0	4—12
ರಂಗೂನು ಬೆ. ಗೋ ಗಿಕ್ಕೆ	6—10	7— 4
ಎಲ್ಲೂರು ಬೆ ಮು ಗಿಕ್ಕೆ	4— 4	4— 8
ಗೋದಿ ಗೋಣಿ ಗಿಕ್ಕೆ	10— 0	12— 8
ತೊಗರಿ ಗೋಣಿ ಗಿಕ್ಕೆ	10 —8	11— 0
ಹುರುಳಿ ಗೋಣಿ ಗಿಕ್ಕೆ	7 —10	7 —12
ಕಡಲೆ ಗೋಣಿ ಗಿಕ್ಕೆ	8 — 0	10— 8
ತೊಗರಿಬೇಳೆ ಗೋಣಿಗಿಕ್ಕೆ	10— 0	17— 0
ಉದ್ದು ಗೋಣಿ ಗಿಕ್ಕೆ	8— 0	8— 8
ಹೆಸರು ಗೋಣಿ ಗಿಕ್ಕೆ	9— 4	9—12
ಊರುಬೆಲ್ಲ ಖಂಡಿ ಗಿಕ್ಕೆ	35— 0	37— 8
ಉಪ್ಪು ಗೋಣಿ ಗಿಕ್ಕೆ	4—12	5— 4
ಕೊಬ್ರಿ ಖಂಡಿ ಗಿಕ್ಕೆ	48— 0	55— 0
ಕೊಪ್ರಿ ಹಿಂಡಿ ಖಂಡಿ ಗಿಕ್ಕೆ	19— 8	20— 8
ಎಳ್ಳಿಂಡಿ ಖಂಡಿ ಗಿಕ್ಕೆ	31— 4	32— 0
ಕೊಪ್ರಿ ಎಣ್ಣೆ ಮಣ ಗಿಕ್ಕೆ	3—14	4— 14
ಎಳ್ಳೆಣ್ಣೆ ಮಣ ಗಿಕ್ಕೆ	5— 2	6— 0
ಚಿಮಿಣಿಎಣ್ಣೆ ಪೆಟ್ಟಿಗೆ ಗಿಕ್ಕೆ	5— 8	5—12
ಜಾವಾ ಸಕ್ಕರೆ ಮ. ಗಿಕ್ಕೆ	3—12	3—13
ಮೆಣಸು	4—10	5— 1
ಸಾಸಿವೆ ಮುಡಿ ಗಿಕ್ಕೆ	5 —12	6— 0
ಕಾಳುಮೆಣಸು ಖ. ಗಿಕ್ಕೆ	100— 0	110 0
ಯೇಲಕ್ಕಿ ಮಣ ಗಿಕ್ಕೆ	23— 0	30— 0
ಜೀರುಜೀಜ ಮ. ಗಿಕ್ಕೆ	4—10	4 — 11
ಕಪ್ಪಣ ಖಂಡಿ ಗಿಕ್ಕೆ	39— 0	39— 8
ಸಾಂಪ್ರಾಣಿಗಳು ಮ. ಗಿಕ್ಕೆ	9— 0	9— 8
ಸಾಂಪ್ರಾಣಿಪಾತ್ರೆಗಳು ಮ ಗಿಕ್ಕೆ	11— 0	12— 0
ಚೀನಿಬೆಲ್ಲ ಸೇರು ಗಿಕ್ಕೆ	14—12	15— 0
ಹಿತ್ತಾಳೆ ತಗಡು ಮ. ಗಿಕ್ಕೆ	8— 12	9— 0
ಹವಸು ಗಿಕ್ಕೆ	22— 8	23— 0
ಹುಣಸೆ ಹುಳಿ ಖಂಡಿ ಗಿಕ್ಕೆ	20— 0	25— 8
ನೇಟಿವ್ ಕಾಫಿ ಖಂಡಿ ಗಿಕ್ಕೆ	170— 0	180— 0
ಫ್ಲಂಟೇಶ ಕಾಫಿ ಖಂಡಿ ಗಿಕ್ಕೆ	220— 0	252— 0
ಮುಡಿಕೇರಿ ಏಲಕ್ಕಿ	24— 0	24— 0
ಸಕಲೇಶಪುರ ಏಲಕ್ಕಿ ..	27— 0	30 — 0

LOOK SHARP! LOOK AHEAD

Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S. S. L. C's and also for those, who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

Ladies are also admitted.

Enrol yourself NOW. Classes are in full swing. Expert tuition (Oral or Postal) by well qualified and experienced Lecturers

FEES VERY MODERATE

For further particulars apply to —

D R Murdeshwar,

Dip Econ; F R Econ, S. (Lond.)

Principal

Ganapathy High School Street,

Mangalore.

Comfortable like an Aeroplane



Use our swadeshi Mosquitonet for health, Comfort and sound sleep, as if you are in an Aeroplane Sample cutting free More convenient if some advance sent with order.

L	B	H	Price	Best.
6 Ft	3½ Ft.	3½ Ft.	Rs 1/12	2/8
6 ,,	4 ,,	4 ,,	,, 2/4	3/-
6½ ,,	4½ ,,	4½ ,,	,, 2/8	3/8
7 ,,	5 ,,	5 ,,	,, 3/2	4/10
7½ ,,	6 ,,	6 ,,	,, 4/4	5/12

G M Sharma, Post Box F 6706

Calcutta

ಕಣ್ಣಿನ ಪರೆ.

"ಐ - ಸನ್" ಎಂಬ (ನೇತ್ರಭಾಸ್ಕರ್)-ಈ ಔಷಧವು ಕಣ್ಣುಪರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಅವಶ್ಯವಿಲ್ಲ ಖಾತರಿ ಗುಣಲಾಭ. ಗುಣವಾಗದಿದ್ದರೆ ಹಣ ವಾಪಸ್ ಕ್ರಯ ರೂ. 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ —

Haiy yasram, Panchpota, Bengal

ಶಾಲಿವಾಹನ ಶ. ೧೮೫೭ನೆಯ ಭಾವ ಸಂವತ್ಸರದ ಜ್ಯೇಷ್ಠ ಬ. ೧೩ ಶನಿವಾರದಿಂದ ಜ್ಯೇಷ್ಠ ಬ. ೩ ಶುಕ್ರವಾರದ ವರೆಗಿನ ಪಂಚಾಂಗ. (ಗಣೇಶದೇವಜ್ಞ ಕರ್ನಾಟಕ ಅಡಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
13	ಶನಿ	೧೩	೨೪	ಅನುರಾಧಾ	೪	೨೯	
14	ರವಿ	೧೪	೨೨	ಜ್ಯೇಷ್ಠಾ	೪	೩೦	
15	ಸೋಮ	೦೪	೧೮	ಮೂಲಾ	೩	೩೦	
16	ಕುಜ	೧೫	೧೪	ಪೂ ಷಾಢ	೦	೩೨	
17	ಬುಧ	೧	೯	ಶ್ರವಣಾ	೫೪	೧	
18	ಗುರು	೩	೩೨	ಧನಿಷ್ಠಾ	೫೦	೨	
19	ಶುಕ್ರ	೪	೫೧	ಶತಭಿಷಾ	೪೬	೩	

ಪೋಲೆಂಡ್.

ಸ್ವಾತಂತ್ರ್ಯ

18ನೇ ಶತಮಾನದ ಮಧ್ಯದ ವರೆಗೆ ಪೋಲೆಂಡ್ ದೊಡ್ಡ ರಾಷ್ಟ್ರವಾಗಿತ್ತು. ಆ ಮೇಲೆ ಅದರ ಅವನತಿಯು ಪ್ರಾಪ್ತವಾಯಿತು. ರಷ್ಯ, ಪ್ರಶ್ಯಾ, ಆಸ್ಟ್ರಿಯಾಗಳ ಬಗಲೊಳಗೆ ಬಿದ್ದು, ಅನಂತರದ 130 ವರ್ಷಗಳ ವರೆಗೆ ಅದು ಕಷ್ಟ ಪಡಬೇಕಾಯಿತು. ಆದರೆ ತಮ್ಮ ಜನ್ಮಭೂಮಿಯಾದ ಪೋಲೆಂಡು ಒಂದಲ್ಲ ಒಂದು ದಿನ ಸ್ವತಂತ್ರವಾಗಿಯೇ ಆಗುವುದೆಂದು ಪೋಲರು ದೃಢಾತ್ಮಕರಾಗಿ ನಂಬಿಕೊಂಡಿದ್ದರು. ಮಹಾಯುದ್ಧದ ಅಂತ್ಯಕಾಲದಲ್ಲಿ ಪೋಲೆಂಡಿಗೆ ಅದರ ಮೊದಲಿನ ಸ್ವಾತಂತ್ರ್ಯವು ದೊರೆಯಿತು ತಮ್ಮ ರಾಷ್ಟ್ರದ ಪುರಾತನ ಹೆಸರನ್ನು ಕಾಪಾಡಬೇಕೆಂದೂ, ಪ್ರಜಾಪ್ರಭುತ್ವವನ್ನು ಸ್ಥಾಪಿಸಬೇಕೆಂದೂ ದೃಢೀಕರಿಸಿ ಎಷ್ಟೋ ಮಂದಿ ಪೋಲಿಷ್ ದ್ವೀಪಾಂತರವಾಸಿಗಳು ದೇಶಕ್ಕೆ ಬಂದರು.

ಅದರ ಪೂರ್ವದ ಸಂಕಷ್ಟಗಳು

ಪೋಲೆಂಡು ಸಣ್ಣ ರಾಷ್ಟ್ರ 180 ವರ್ಷ ವರ್ಷಗಳ ಹಿಂದೆ ಆಸ್ಟ್ರಿಯಾ, ಹಂಗೇರಿ, ಪ್ರಶ್ಯ ಮತ್ತು ರಷ್ಯಗಳು ಒಂದಾಗಿ ಅದರ ಸ್ವಾತಂತ್ರ್ಯವನ್ನು ಮುರಿಯಬೇಕೆಂದು ನಿರ್ಧರಿಸಿದರು. ಅವರು ಪೋಲೆಂಡಿನಲ್ಲಿ ಧಾಳಿ ನಡೆಸಿ, ಜನರನ್ನು ಸೋಲಿಸಿ, ದೊರೆತ ಭೂಮಿ ಬದುಕುಗಳನ್ನು ತಂತಮ್ಮೊಳಗೆ ಹಂಚಿಕೊಂಡರು. ಪೋಲಿಶ್ ಜನರು ಸ್ವಾತಂತ್ರ್ಯಕ್ಕಾಗಿ ಹೋರಾಡಿದರೆಂದು ತಿಳಿದೊಡನೆ ಅವರನ್ನು ಬಂಧಿಸಿಡಲಾಯಿತು ಕೆಲವು ವೇಳೆ ಅಂತಹರನ್ನು ಕೊಲ್ಲಲಾಯಿತು ಅನೇಕಾನೇಕರನ್ನು ದ್ವೀಪಾಂತರಕ್ಕೆ ಕಳುಹಿಸಲಾಯಿತು. ಅವರು ತಮ್ಮ ಸ್ವಂತಭಾಷೆಯನ್ನು ಕೂಡಾ ಪ್ರಯೋಗಿಸಬಾರದೆಂದು ಸ್ವಲ್ಪ ಸಮಯ ಕಟ್ಟಪ್ಪಣೆಯಿದ್ದಿತು ಪೋಲೆಂಡು ಪುನಃ ಸ್ವತಂತ್ರವಾಗಲಾರದೆಂದು ಅದರ ವೈರಿಗಳು ನಿರ್ಧರಿಸಿದರು.

ವಿವರ.

ಆದರೂ ಪೋಲೆಂಡು ಪುನಃ ಸ್ವತಂತ್ರವಾಯಿತು. ಪುನಃ ತಮ್ಮ ನಾಡು ಜಗತ್ತಿನ ರಾಷ್ಟ್ರಗಳಲ್ಲಿ ಅಗ್ರಗಣ್ಯವಾಗಿ ನಿಲ್ಲಬೇಕೆಂದು ಸಾಹಸವಾಗುತ್ತಲಿದೆ, ಯುನೈಟೆಡ್ ಕಿಂಗ್‌ಡಮ್ ಗಿರುವುದಕ್ಕಿಂತ ಅರ್ಧಪಾಲು ಹೆಚ್ಚು ಭೂಮಿಯು ಪೋಲೆಂಡಿಗಿದೆ ವಿಸ್ತೀರ್ಣದಲ್ಲೂ ಜನಸಂಖ್ಯೆಯಲ್ಲೂ ಅದು ಯೂರೋಪಿನ ದೊಡ್ಡ ರಾಷ್ಟ್ರಗಳಲ್ಲಿ 6ನೇ ಸ್ಥಾನದಲ್ಲಿದೆ. ಆದರೆ ಪುರಾತನದಲ್ಲಿ ಬಾಲ್ಟಿಕ್‌ನಿಂದ ಬ್ಲೇಕ್ ಸೀ ವರೆಗೆ ಹರಡಿದ್ದ ಪೋಲೆಂಡಿನಷ್ಟು ವಿಶಾಲವಾಗಿರುವುದಿಲ್ಲ. ಮೊದಲಿನ ಅರ್ಧದಷ್ಟಿದೆ. ಪೋಲರು ಬಹು ಶ್ರಮಜೀವಿಗಳು. ಅವರ ಭೂಮಿಯು ಬಹು ಫಲವತ್ತಾದುದು. ನದಿ ಸರೋವರಗಳು ಅನೇಕಾನೇಕವಿದ್ದು, ಅಲ್ಲಿ ನೀರಿನ ಸರಬರಾಯಿಗೇನೂ ಕಡಿಮೆಯಿಲ್ಲ ಪೋಲೆಂಡ್ ಎಂದರೆ 'ಪ್ರದೇಶ ಭೂಮಿ' ಎಂದು ಅರ್ಥ. ಪೋಲೆಂಡಿನ ಅಧಿಕ ಪ್ರಮಾಣ ಭೂಮಿಯೆಲ್ಲಾ ಸಮತಟ್ಟಾದುದು.

ಸ್ವಾತಂತ್ರ್ಯ ಪ್ರಿಯತೆ.

ಪೋಲರನ್ನು ಜಯಿಸುವುದು ಅದೇಕೆ ಕಷ್ಟ? ಅವರು ಬಹು ಬಲಿಷ್ಠ ಜನಾಂಗಿಕರು. ತಮ್ಮ ದೇಶವೆಂದರೆ ಅವರಿಗೆ ಪ್ರಾಣ. ಅದರ ಅಭಿಮಾನವನ್ನುಳಿಸುವುದಕ್ಕಾಗಿ ಅವರು ಏನು ಮಾಡಲೂ ಸಿದ್ಧರು. ಅವರ ವೈರಿಗಳು ಜಯಗೊಂಡರೆ ಪೋಲೆಂಡಿನ ಪ್ರತಿಯೊಬ್ಬಳು ತಾಯಿಯೂ ತನ್ನ ಮಕ್ಕಳನ್ನು ಕುರಿತು 'ನೀವು ದೊಡ್ಡವರಾಗಿ ಬಾಳಿರಿ. ಪೋಲೆಂಡನ್ನು ಸ್ವತಂತ್ರವನ್ನಾಗಿ ಮಾಡಿರಿ'' ಎನ್ನುವಳು

ಬಾಹ್ಯ ಪ್ರಪಂಚ ಪರಿಚಯ.

ವಂಶ

ಪೋಲ್ ದೇಶಸ್ಥರಲ್ಲಿ ಅನೇಕ ವಂಶಗಳು ಸಮ್ಮಿಳಿತವಾಗಿವೆ. ಅವರು ರಷ್ಯನರಂತಿರುವರು. ಅವರಂತೆ ಸೌಂದರ್ಯ ಮತ್ತು ಸಂಗೀತಾಭಿರುಚಿಯುಳ್ಳವರಾಗಿರುವರು. ಪೋಲೆಂಡಿನಲ್ಲಿ ಜಗತ್ತಿನ ಪ್ರಖ್ಯಾತ ಕಲಾವಿದರೂ ವಿಜ್ಞಾನಿಗಳೂ ಜನ್ಮವೆತ್ತಿದರು ಸೂರ್ಯನ ಸುತ್ತಲೂ ಭೂಮಿಯು ತಿರುಗುತ್ತದೆ; ಭೂಮಿಯ ಸುತ್ತ ಸೂರ್ಯನು ತಿರುಗುವುದಿಲ್ಲವೆಂದು ಕಂಡು ಹಿಡಿದ ಕೋಪರ್ನಿಕಸನು ಪೋಲನು ಇವನ ಈ ಶೋಧಕ್ಕಾಗಿ ಇವನನ್ನು ಸೆರೆಯಲ್ಲಿ ಹಾಕಿ ಶಿಕ್ಷೆ ವಿಧಿಸಿದರು. ಜಗದ್ವಿಖ್ಯಾತ ಸಂಗೀತಜ್ಞನಾದ ಚೋಪಿನನೂ ಪೋಲನು ರೇಡಿಯಮನ್ನು ಕಂಡು ಹಿಡಿದ ಮೇಡಂ ಕ್ಯೂರಿಯೂ ಪೋಲ್ ವಂಶಜಳು ಮೃದಂಗ ಬಾರಿಸುವುದರಲ್ಲಿ ಅನುಪಮನೆಂದೆಣಿಸಿದ ಪಡೆರೆವಿಸ್ಕಿಯನ್ನು ಪೋಲರ ಪ್ರಜಾಪ್ರಭುತ್ವದ ಮಂತ್ರಿಯನ್ನಾಗಿ ಚುನಾಯಿಸಲಾಯಿತು ಮಹಾಮಹಾ ಕಲಾಸಂಪನ್ನರು, ಚಿತ್ರಕಾರರು, ಗಾಯಕರು ಇವರನ್ನೆಲ್ಲಾ ಪೋಲೆಂಡ್ ಈಗಲೂ ಧರೆಗೆಂದಗಿಸುತ್ತದೆ

ಬುದ್ಧಿ ಕೌಶಲ್ಯ.

ವಿದ್ಯಾವಂತನಾದ ಪೋಲನು ಸಾಧಾರಣ ಮಟ್ಟದ ಫ್ರೆಂಚ್ ಜನಾಂಗಿಕನಂತೆ ಕಾರ್ಯಶಾಲಿ ಪೋಲನು ಯಾವಾಗಲೂ ಉತ್ತೇಜಿತನು, ಸೂಕ್ಷ್ಮಬುದ್ಧಿಕುಶಲನು, ದೂರದೃಷ್ಟಿಯುಳ್ಳವನು ಯಾವ ಕಾರ್ಯ ಕೈಗೊಂಡರು ತಿಳಿಯುತ್ತಾರೋ ಅಂತಹ ಕೆಲಸವನ್ನೇ ಮಾಡುವ ಸ್ವಭಾವ ಅವನದ್ದು ಕಾರಣ ಆ ಕೆಲಸವು ಸರಿಯಾದುದೆಂದೇ ಅವನ ಅಭಿಪ್ರಾಯ ಕನಸಿನಲ್ಲಿ ಕಂಡುಬಂದ ವಿಷಯಗಳ ಮೇಲೆ ಅವನಿಗೆ ಪೂರ್ಣ ನಂಬಿಕೆ ಆ ವಿದ್ಯಮಾನಗಳೆಲ್ಲ ಸಂಭವಿಸುವುವೆಂದೇ ಅವನ ತಿಳುವಳಿಕೆ ಅವನು ಮನಸ್ಸಿನ ಕಷ್ಟ ಮತ್ತು ದುಃಖಗಳನ್ನು ಸಹಿಸುವವನೇ ಅಲ್ಲ ಈ ರೀತಿಯ ಸೂಕ್ಷ್ಮಬುದ್ಧಿಯು ಅವನ ನೆರೆಯವರು ಅವನನ್ನು ... ತಿಳಿಯುತ್ತಿರುವರು

ಪ್ರತಿ ಮೂರು ಜನ ಪೋಲರಲ್ಲಿ ಇಬ್ಬರು ನಗರಗಳಲ್ಲೇ ವಾಸಿಸುವರು. ನಗರವಾಸಿಗಳಲ್ಲಿ ಹೆಚ್ಚಿನವರು ಧನಿಕರು. ಅವರಿಗೆ ಎಷ್ಟೋ ದೊಡ್ಡ ದೊಡ್ಡ ಆಸ್ತಿಗಳಿವೆ ಅವರ ಎರಡು ದೊಡ್ಡ ಎಸ್ಟೇಟುಗಳು ಇಂಗ್ಲಾಂಡಿನಷ್ಟು ದೊಡ್ಡದಾಗಿದ್ದವು

ಸಂಪ್ರದಾಯ

ವಿವಾಹಿತ ಸ್ತ್ರೀಯರ ಬಲಗೈಯ ಹಿಂತಟ್ಟನ್ನು ಮುದ್ದಿಸುವುದು ಅಲ್ಲಿಯ ಸ್ವಾಗತ ಮತ್ತು ವಿದಾಯ ಸಮಯಗಳ ಸಂಪ್ರದಾಯ. ಪರಿಚಿತರು ಕಾಣಸಿಕ್ಕಿದರೆ ಸ್ತ್ರೀಯೇ ತನ್ನ ಬಲಗೈಯನ್ನೆತ್ತಿ ಮುದ್ದಿಸುವಳು ಆದರೆ ಅವಿವಾಹಿತ ತರುಣಿಯು ಅದಕ್ಕೆ ಸಿದ್ಧಳಿರುವುದಿಲ್ಲ "ನಾನು ಅಷ್ಟು ಪ್ರಾಯಸ್ಥಳೇ?'' ಎಂದು ಪ್ರಶ್ನಿಸುತ್ತಾಳೆ.

ಉದ್ಯೋಗಗಳು.

ಬೇಟೆಯಾಡುವುದು, ಮೀನು ಹಿಡಿಯುವುದು, ಪ್ರಯಾಣ ಮಾಡುವುದು ಮತ್ತು ಆಸ್ತಿಗಳ ಮೇಲ್ವಿಚಾರ ನೋಡುವುದು ಇವೇ ದೊಡ್ಡಲಾದುವು ಪೋಲಿಶ್ ರೈತಾಪಿಗಳ ನಿಕೃಷ್ಟ ಕೆಲಸ ತಾವು ಮನೆಯಲ್ಲೇ ಕೆಲಸಮಾಡುವವರಾದುದರಿಂದ ಅವರ ಮನೆಗಳ ಸ್ತ್ರೀಯರೂ ಮನೆಯಲ್ಲಿ ಕೆಲಸಗಳನ್ನು ಮಾಡಬೇಕಾಗುತ್ತದೆ.

ಮಗುವು ನಡೆಯಲು ಶಕ್ತವಾಯಿತೆಂದೊಡನೆ ಅವನ್ನು ಗದ್ದೆಗಳಿಗೆ ಕಳುಹಿಸಿ ಕಾಡುಕೋಳಿಗಳನ್ನೋ ದನಕರುಗಳನ್ನೋ ಓಡಿಸುವ ಕೆಲಸವು ಅವರಿಗೆ ಒಪ್ಪಿಸಲ್ಪಡುತ್ತದೆ ಪುರುಷರಂತೆ ಸ್ತ್ರೀಯರೂ ಮುಂಜಾನೆ ಎದ್ದು ಬೈಗಿನ ವರೆಗೆ ಕೆಲಸಮಾಡುವರು. ಪೋಲೆಂಡಿನ ಅನೇಕ ಕಡೆಗಳಲ್ಲಿ ಈಗಲೂ ಸ್ತ್ರೀಪುರುಷರು ತಮಗೆ ಬೇಕಾಗುವ ವಸ್ತ್ರದಂತೆ ಉಡಿಗೆತೊಡಿಗೆಗಳನ್ನು ತಾವೇ ರಚಿಸಿಕೊಳ್ಳುತ್ತಿರುವರು.

ಧರ್ಮಶ್ರದ್ಧೆ

ಪ್ರತಿಯೊಂದು ಗ್ರಾಮದಲ್ಲಿಯೂ ಧರ್ಮಗುರು ... ಪ್ರತಿ ಪೋಲಿಶ್ ಜನರು ಕೆಥೋಲಿಕರು. ಒಮ್ಮೆ ಕ್ರಮ್ಬಾಂತರ, ... ಮನೆಮನೆಗಳಲ್ಲಿ ಹೆಚ್ಚಾಗಿ ಮರಗಳಿಂದ ನಿರ್ಮಿತವಾದ ವುಗಳು ತೈಲದಲ್ಲಿ ಚಿತ್ರಿಸಿದವು. ಬಡವರು. ಆದರೆ, ಎಷ್ಟು ... ತಪ್ಪದೆ ಒಂದು ... ಇಗರ್ಜಿಯನ್ನು ನಿರ್ಮಿಸಿಕೊಳ್ಳದೆ ಅವರಿಂದ ಜೀವನ ನಡೆಸಲು ಸಾಧ್ಯ ಹೇಗೆ ಎಂಬುದಾದರೂ ಒಂದು ಇಗರ್ಜಿಯನ್ನು ಕಟ್ಟುವರು ರವಿವಾರಗಳಲ್ಲಿ ಗುಂಪುಗುಂಪಾಗಿ ಇಗರ್ಜಿಗಳಿಗೆ ಹೋಗುವರು.

ಪೋಲೆಂಡಿನಲ್ಲಿ ಯೆಹೂದ್ಯರನ್ನು ಬಹುವಾಗಿ ದ್ವೇಷಿಸುತ್ತಾರೆ. ಧರ್ಮಗುರುಗಳ ಮೇಲೆ ಜನರಿಗೆ ಎಷ್ಟು ಪ್ರೇಮವಿದೆಯೋ ಅಷ್ಟೇ ಹಗೆಯು ಈ ಜಾತಿಯವರ ಮೇಲಿದೆ ಇದಕ್ಕೆ ಕಾರಣ— ಈ ಯೆಹೂದಿಯರು ಹಣವನ್ನು ಸಾಲಕೊಟ್ಟು ಹೇರಳ ಬಡ್ಡಿ ಸಂಪಾದಿಸುವುದು. ಎಷ್ಟೋ ರೈತರ ಕುಟುಂಬಗಳು ಈ ಸಾಲಗಳಿಂದಾಗಿ ನಿರ್ನಾಮವಾದುವು. ಸಾಲ ಕೊಡುವ ವ್ಯಾಪಾರವು ತಮ್ಮ ದೇಶದಲ್ಲಿರಬಾರದೆಂದು ಜನರ ಪ್ರಕೃತದ ಆಗ್ರಹ ಧರ್ಮಗುರುಗಳೇ ಈಗೀಗ ಹಲಕೆಲವು ಬೇಂಕುಗಳನ್ನು ಸ್ಥಾಪಿಸಿ ರೈತರಿಗೆ ಸಹಾಯ ಕೊಡುತ್ತಿರುವರು.

ಪೋಲರ ಎಲ್ಲಾ ವರ್ಗದವರೂ ಸಂಗೀತ ಮತ್ತು ನರ್ತನಗಳಿಗೆ ಮರುಳಾಗುತ್ತಾರೆ. ಬಡವರಿಂದ ಧನಿಕರೊಳಗಿನವರ ಮನೆಯಲ್ಲೂ ಸಂಗೀತ ಸಾಹಿತ್ಯ ಸಾಮಗ್ರಿಗಳು, ನರ್ತನ ಪಾರಗಳು ಇಲ್ಲದಿಲ್ಲ

ನಗರದ ಮಧ್ಯದಿಂದಲೇ ಹರಿಯುವ ವಿಸ್ಚುಲಾ ಎಂಬ ನದಿಯೇ ಪೋಲೆಂಡಿನಲ್ಲಿ ಪ್ರಧಾನವಾದುದು. ಕರ್ಪಾತಿಯನ್ ಗುಡ್ಡದಿಂದ ಬಾಲ್ಟಿಕ್ ಸೀ ವರೆಗೆ ಇದು ಹರಿಯುತ್ತದೆ ಈ ನದಿಯ ಉಪನದಿಗಳು ಭೂಮಿಯನ್ನು ಫಲವತ್ತಾಗಿಡಲು ಸಾಧಕವಾಗಿವೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಲೂ, ವ್ಯಾಪಾರಾಭಿವೃದ್ಧಿಗೂ ಇವುಗಳು ಅನುಕೂಲ್ಯವಾಗಿವೆ ವರ್ಷದಲ್ಲಿ ಮೂರು ನಾಲ್ಕು ತಿಂಗಳುಗಳಲ್ಲಿ ನದಿಗಳು ಶೀತದಿಂದ ಗಟ್ಟಿಯಾಗುವುದಿದೆ ಆಗ ಈ ನದಿಗಳು ಸುಂದರವಾದ ಮಾರ್ಗಗಳಾಗುತ್ತವೆ

ಪೋಲೆಂಡಿನಲ್ಲಿ ಅನ್ಯರಾಷ್ಟ್ರ ಸಂಪರ್ಕವು ಹೆಚ್ಚುತ್ತಿದ್ದು ಜನರು ತಮ್ಮ ಪೂರ್ವಾಚಾರ ವಿಚಾರಗಳನ್ನೆಲ್ಲಾ ಮರೆತುಬಿಡುತ್ತಿದ್ದಾರೆ ಸುಖದಾಯಕವಾದ ಆಧುನಿಕ ಅನುಕೂಲಕ್ರಮ ವಿಧಾನಗಳಿಗೆ ಶರಣುಬರುತ್ತಿದ್ದಾರೆ ದೊಡ್ಡ ದೊಡ್ಡ ಕೈಗಾರಿಕಾ ಕೇಂದ್ರಗಳ ತಲೆಯೆತ್ತಿವೆ ಲೊಡ್ಜ್ ಎಂಬಲ್ಲಿ ದೊಡ್ಡ ಉದ್ಯಮಕೇಂದ್ರವು ನಿರ್ಮಾಣಹೊಂದಿ ಸಾವಿರಾರು ಜನರು ದಿನನಿತ್ಯ ಅಲ್ಲಿ ಹೊಟ್ಟೆ ತುಂಬಿಸುತ್ತಿರುವರು

ಪೋಲೆಂಡಿನ ಪಟ್ಟಣಗಳೆಲ್ಲ ಚಿತ್ರಮಯ. ವಾರ್ಸಾ, ಲ್ವೊ, ಪೋಸನ್, ಕ್ರಾಕೋ ಮೊದಲಾದ ನಗರಗಳು ಯೂರೋಪು ಖಂಡದಲ್ಲೇ ಅತ್ಯಂತ ಸುಂದರವೆಂದು ಖ್ಯಾತಿಗೊಂಡಿವೆ ವಾರ್ಸಾಕ್ಕೆ ಅಪರಿಚಿತನೊಬ್ಬನು ಬರುವುದಾದರೆ, ಅವನ ಹತಿರ ಮತ್ತು ಹೊಸತುಗಳ ಸಮ್ಮಿಶ್ರಣವನ್ನು ಅಲ್ಲಿ ಕಾಣಬಹುದು

ಪ್ರಾಚೀನ ಕಟ್ಟಡಗಳು ಪೋಲೆಂಡಿನ ಪೂರ್ವದ ಅರಸರುಗಳ ಅರಮನೆಯೊಂದ ಪ್ರೇಕ್ಷಣೀಯವಿದೆ ಮೊದಲು ಇದು ರಷ್ಯನ್ ಗವರ್ನರ್ ಜನರಲರ ಅರಮನೆಯಾಗಿತ್ತು. ಈಗ ಪೋಲಿಶ್ ಅಧ್ಯಕ್ಷರ ವಾಸಸ್ಥಾನವಾಗಿದೆ

KANNADA

Savings Certificates can be cashed even before maturity.

Full Particulars from—

CANARA BANK LTD

OFFICES AT:

Bombay—Fort,	Mangalore—Bunder,
Bombay—Mandvi,	Mangalore—City,
Hubli,	Kasaragod,
Calicut,	Puttur,
Cochin,	Buntwal,
Ernakulam,	Karkala,
Alleppey,	Udipi,
Bangalore,	Coondapoor,
Davangere,	&
Chickmagalur,	Gangoli.

AVAILABLE IN DENOMINATIONS OF Rs. 10/ UPWORDS.

TOTAL YIELD RS 4-6-0% P.A.

Paid once half yearly at 3½% p. a. with an additional 1¼% p. a. on maturity If Left To Accumulate

RS. 100/- Will Amount to **RS. 122-13-6**

Estd 1906

CANARA BANK LIMITED.

Subscribed Capital		Paid up Capital
6,00,000		3,31,000
Reserves	Deposits	Working Capital
4,50,000	58,62,000	73,49,000

ಮೈಲುಕಲ್ಲುಗಳೊಡನೆ ಮಾತುಕಥೆಗಳು

ಲೇಖಕರು.— ಕೆ. ಶಿವರಾಮ ಕಾರಂತರು.

೨. ಪರಿತ್ಯಕ್ತ ದೀಪಸ್ತಂಭ

ತಿರುಗಿ ಮಂಗಳೂರಿನ ಬೀದಿಯಲ್ಲಿ, ಬೀದಿಯ ಸಂದಲ್ಲ ಮಂಗಳೂರಲ್ಲಿ ಬೀದಿಯ ಸಂದುಗಳು ಕಡಿಮೆ ಸಂದುಗಳಲ್ಲಿ ಬೀದಿಗಳೇ ಅಧಿಕ. ನಾನು ಹೇಳುತ್ತಿರುವ ಪ್ರದೇಶವು—ರಾಜಮಾರ್ಗಗಳು ಮಂತ್ರಿಗಳಂತೆ ಸೇರಿ ಮಂತ್ರಾಲೋಚನೆ ಮಾಡುತ್ತಿರುವ ಪ್ರದೇಶವು ಒಂದು ಸಂಜೆ—ಸಂಜೆ ಅಂದರೆ, ಸಂಜೆ ಕಳೆದ ಕೆಲವು ತಾಸುಗಳ ಬಳಿಕ. ಶುಕ್ಲಪಕ್ಷದಲ್ಲಿ ಕಾಣಿಸುವ ಚಂದ್ರನೇ ಆ ದಿನವೂ ಕಾಣಿಸಿದ್ದ ಸಾಮಾನ್ಯವಾಗಿ ಅವನ ಪ್ರಕಾಶವಾಗಿತ್ತು. ಹುಟ್ಟಿನಂತೇನು ಬೆಳದಿಂಗಳು ಹರಡಿರಲಿಲ್ಲ—ಹರಡಿದ್ದರೆ ನಷ್ಟವೇನೋ ತಿಳಿಯದು ಆ ದಿನ ಕ್ಷೀಣ ಬೆಳಕಿನಂತೆ ಅದು ಹರಡಿತ್ತು ಬೇಸರವೆದ್ದು, ಸೆಕೆಕಾಲದ ಸೊಳ್ಳೆಗಳ ಕಾಟಕ್ಕೆ ಅಂಜಿ ಬಯಲಿನ ಕಡೆಗೆ ಹೊರಟು, ನಡುವೆ ಈ ಪ್ರದೇಶಕ್ಕೆ ಬಂದೆ ಎದುರಿಗೆ ಭೇಟಿಯಾಯಿತು ಒಂದು ಡಿಸ್ಕಾರ್ಡೆಡ್ ದೀಪದ ಕಂಭ! ಸಂಸ್ಕೃತದಲ್ಲಿ ನುಡಿದರೆ ಚೆನ್ನಾಗುವುದೆಂದು ಪರಿತ್ಯಕ್ತ ದೀಪಸ್ತಂಭವೆನ್ನಬೇಕಾಗಿದೆ ಮಹಾ ಸಾಧ್ವಿಯು ನಿಂತಿದೆ—ಅದು ನಿಂತಿತ್ತು ಜೋಲುಮೋರೆ, ಮನಸ್ಸಿನಲ್ಲಿ ಬಲು ವ್ಯಥೆ ತುಂಬಿದ್ದಿರಬೇಕು ಒಂದು ಕಡೆ ಚಂದ್ರನಿಂದ, ಅದರೊಂದು ನೆರಳು ಹೊರಟಿತ್ತು ಇನ್ನೊಂದು ಕಡೆ ವಿದ್ಯುತ್ ದೀಪವೊಂದು ಮಿನುಗುತ್ತಿತ್ತು ಅದೂ ಮುತ್ತೈದೆ ದೀಪದ ಕಂಭದ ನೆರಳನ್ನು ಕೆಡೆಯುತ್ತಿತ್ತು ಆದರೆ ಒಂದು ಪರಿವರ್ತನೆ ಮಾತ್ರ ವಿಶೇಷವಾಗಿ ಕಾಣಿಸುತ್ತಿತ್ತು - ಅದರೊಳಕ್ಕೆ ನ್ಯಾಯವಾಗಿ ಉರಿಯಬೇಕಾಗಿದ್ದ ದೀಪ ಉರಿಯುತ್ತಿರಲಿಲ್ಲ ಸುಮ್ಮನೆ ಹಾದಿ ಸಾಗಿ ಹೋಗಲಾರದ ನಾನು ಮಾತನಾಡಿಸುತ್ತ ನಿಂತೆ!

ನಾನು-ಅಮ್ಮಾ, ಏನಿದು ಇಷ್ಟು ಚಿಂತೆಯಿಂದ, ಅಶೋಕವನದಲ್ಲಿ ಸೀತೆ ಕಾದು ಕರಗಿ ಕುಳಿತಂತೆ, ನೀನು ನಿಂತಿರುವೆ?

ಅವಳು (ಮೌನ)

ನಾನು-ಪರಪುರುಷನೊಡನೆ ಮಾತನಾಡಲಾಕಿಯೆಂದೇ? ಅಥವಾ ಹೃದಯದಲ್ಲಿ ವ್ಯಥೆಯು ತುಂಬಿದುದರಿಂದಲೇ! ಜನರೂ ಸುಳಿಯುವುದಿಲ್ಲ, ಸುತ್ತಲಿನ ಕಾಶ ಕೂಟವೂ ಮೌನ—ನೀನು ಹಾಗೆ! ಏನಿದು—ಎಲ್ಲ ಸೂತಕದ ಚಿಹ್ನೆಯೇ

ಅವಳು—ಏಕೆ ಕಣ್ಣಿಲ್ಲವೆ?

ನಾನು-(ಮುಟ್ಟಿ ನೋಡಿದೆ, ಇದ್ದಿತ್ತು ಇದ್ದಿದ್ದುವು—ಅಷ್ಟೆ ಅಲ್ಲ ನನ್ನೆರಡೂ ಕಣ್ಣುಗಳು ತೆರೆದಿದ್ದುವು.)—ಇವೆ ಏಕೆ!

ಅವಳು ಎದುರಿಗೇನು?

ನಾನು—ನೀನು!

ಅವಳು—ನಾನಾಯಿತಲ್ಲ, ಇನ್ನೂ ಏದುರು!

ನಾನು—(ನೋಡಿದೆ) ಏನೂ ಕಾಣಿಸಲಿಲ್ಲ!

ಅವಳು—ಚೆನ್ನಾಗಿ ನೋಡಬಾರದೇ?

ನಾನು—(ನೋಡಿದೆ, ಒಂದು ವಿದ್ಯುತ್ ದೀಪವು ಕಾಣಿಸಿತು)

ಅವಳು—ಹೊಸ ಹೆಂಡತಿಯು ಮನೆಗೆ ಬಂದಿರುವಳು!

ನಾನು—ಯಾರೂ, ನಿನ್ನನ್ನು ಉರಿಸುವುದಿಲ್ಲವೇ?

ಅವಳು ಉರಿಸುವವರೂ ಇಲ್ಲ, ಹೂಳುವವರೂ ಇಲ್ಲ

ನಾನು—ಮತ್ತು ನಿಂತಿರುವೆಯೇಕೆ? ನಿನ್ನಂತೆ ಇನ್ನೂ ನಿಂತವರಿಲ್ಲ!

ಅವಳು—ನಾನು ಮುಂದಿನ ಯುಗಕ್ಕೆ ಸಾಕ್ಷಿಯಾಗಲೆಂದು ನಿಂತೆ ಸರಿಯಾದ ಮಂಗಳೂರಿನಲ್ಲಿ ಮ್ಯೂಸಿಯಮ್ ಕೇಂಬೆಲನಿದ್ದರೆ, ನನಗೆ ವಿಶ್ರಾಂತಿಯಾದರೂ ಸಿಗುತ್ತಿತ್ತು

ನನಗೆ ಬಲು ದುಃಖವಾಯಿತು ಪರಿತ್ಯಕ್ತ ಆ ದೀಪದ ಸ್ತಂಭವನ್ನು ಕಂಡು, ನಿಜಕ್ಕೂ ಸೀತಾಮಾತೆಯಂತೆ, ಅಶೋಕವನದ ಸೀತೆಯಲ್ಲ, ರಾಮನಿಂದ ಶಿಕ್ಷಿಸಲ್ಪಟ್ಟ ಸೀತೆಯಂತೆ, ದುಷ್ಯಂತನಿಂದ ಸ್ಕ್ಯಾಂಡಲ್ ನೋಡಿ ಹಿಡಿಯಲ್ಪಟ್ಟ ಶಕುಂತಲೆಯಂತೆ ಅವಳು ಕಾಣಿಸಿದಳು

ನಾನು—ಅಮ್ಮಾ

ಅವಳು—ನೀನು ಧಾರವಾಡದವನೇ?

ನಾನು—ಏಕೆ ಹಾಗೆ ಹೇಳುವಿ?

ಅವಳು—ಧಾರವಾಡದವರು, ಪತಿವಿಯೋಗಿಗಳನ್ನು ಅಮ್ಮ ಎಂದು ಕರೆಯುತ್ತಾರೆ ನೀನು ನನ್ನನ್ನು ಅವಮಾನಿಸುವೆಯಾ?

ನಾನು—ಅಮ್ಮ, ನಿನ್ನನ್ನು ನೋಡಿ ಹಾಗೆಂದೆನೆಯೇ? ನೀನು ಭರತಮಾತೆಯಂತೆ, ಭರತ ಪತಿವಿಹೀನಳಾಗಿ ಆರ್ತಸ್ಥಿತಿಗೆ ಬಂದಿರುವ ನಿನ್ನನ್ನು ಕಂಡು ಅವಮಾನಗೊಳಿಸುವುದೇ?

ಅಮ್ಮ, ಏಕೆ ಇಲ್ಲಿ ನಿಂತಿರುವೆ ಇನ್ನೂ. ನವಯುಗವು ಬಂದಿತು! ವಿದ್ಯುತ್ ಗುಳ್ಳೆಗಳನ್ನು ಉರಿಸುತ್ತಿದ್ದಾರೆ! ನಿನ್ನನ್ನು ವಿಶ್ರಾಂತಿಗಾದರೂ ಒಯ್ಯಲಾರರೆ?

ಅವಳು—ಇಲ್ಲ—ನಾನು ಪ್ರಾಚೀನಯುಗದ ಮಾಸ್ತಿ ಕಲ್ಲಿನಂತೆ ನಿಲ್ಲಬೇಕಾಗಿದೆ ನನ್ನನ್ನು ನಟ್ಟುದೂ ಸೂತಕರ ಸ್ಮಾರಣೆಗಾಗಿ, ನಾನು ಉಳಿಯುವುದೂ ಅಷ್ಟಕ್ಕೆ.

ನಾನು—ಸೂತಕಕ್ಕಾಗಿ ನಟ್ಟರೇ?

ಅವಳು—ಕೆಳಗೆ ನೋಡು!

(ನೋಡಿ ಓದಿದೆ) 'ಇಂಥವರ ಧರ್ಮಪತ್ನಿ, ಇಂಥವರ ಸಲುವಾಗಿ ಈ ದೀಪಸ್ತಂಭವನ್ನು ವಿರಾಜಿಸಲಾಗಿದೆ'—ಎಂದು ಬರೆದಿತ್ತು.

ನಾನು—ಹೊ! ಪುಣ್ಯಕೆಲಸ ಅಲ್ಪ ಬುದ್ಧಿಯವರು, ಕಾರ್ತಿಕಮಾಸವೊಂದರಲ್ಲೇ, ಆಕಾಶಗೂಡನ್ನು ರಚಿಸುತ್ತಾರೆ ಉಳಿದ ರಾತ್ರಿಗಳಲ್ಲೂ ಮಡಿದ ಆತ್ಮಗಳು ಹಾದಿ ತಪ್ಪೀತೆಂದು, ಈ ದೀಪವನ್ನು ನಟ್ಟರೇ? ಆದರೆ—ಆತ್ಮಗಳು ಮಂಗಳೂರಿನ ಈ ಹಾದಿಯಾಗಿ ಬರಲು ಕಾರಣವಿದೆಯೆ?

ಅವಳು—ನೀನು ವಿಚಾರಹೀನ ನಟ್ಟರೆಂದ ಮಾತ್ರಕ್ಕೆ ಆಯಿತೇ? ನನ್ನಿಂದ ಯಾರಿಗೆ ಏನೂ ಆಗಲಿಲ್ಲ! ನನ್ನ ಮನೆಯನ್ನು ಬೆಳಗಿದವರಾರು?

ನಾನು—ಏಕೆ, ಬುರುಡೆ, ದೀಪ—ಎಲ್ಲ ಇದೆಯಲ್ಲ!

ಅವಳು ನೋಡಪ್ಪ

ನಾನು ಪತ್ತೇದಾರನಂತೆ, ಆ ಕಂಭವೇರಿ ಒಳಗಿನ ಅವಯವಗಳನ್ನು ನೋಡಿದೆ ತೆರಿಗೆಯಿಂದ ಒಡೆಯಲ್ಪಟ್ಟ ಪ್ರಜಾಜನರ ತಲೆಬುರುಡೆಯಂತೆ ಅಲ್ಲಿನ ಬುರುಡೆಯಿತ್ತು ದೀಪವಿತ್ತು—ಬತ್ತಿಯಿದ್ದಿಲ್ಲ!

ಅವಳು ತಿಳಿಯಿತೇ!

ನಾನು—ಬುರುಡೆ ದುರುಸ್ತಿ ಇಲ್ಲ, ಬತ್ತಿ—ಬತ್ತಿ ಊಹುಂ!

ಅವಳು—ಅದಿದ್ದರೂ ನನ್ನ ಅವಸ್ಥೆ ಹೀಗೆಯೇ

ನಾನು ಏಕೆ?

ಅವಳು—ಇದನ್ನು ಉರಿಸುವ ಸಾಬಿಗೆ ನನ್ನ ಮೇಲೆ ಮೊದಲಿನಿಂದಲೂ ಅನಾದರ ನನ್ನ ಬಳಿಗೆ ಬಂದಾಗಲೆಲ್ಲ "ಇಲ್ಲಿ ಉರಿಯುವ ದೀಪ ಬಡವರ ಮನೆಯನ್ನು ಬೆಳಗಲಿ"—ಎನ್ನುತ್ತಿದ್ದ

ನಾನು—ಉರಿಸಲೇ ಇಲ್ಲವೆ!

ಅವಳು—ಹಾಗ ಮಾಡಿದರೆ ಸಿಟ್ಟಾಗುವೆನೆಂದು, ಒಳಸ್ನಾನ ಮಾಡದೆ ಮಡಿಯುಡುವ ಭಟ್ಟನಂತೆ ಮಾಡಿದನು!

ನಾನು—ಏನದು?

ಅವಳು—ಗಿಡ್ಡನಾದ ಬತ್ತಿ ಉರಿಸಿ ಹೋದ ಹದಿನೈದು ನಿಮಿಷದಲ್ಲಿ ನನ್ನ ಎದುರಿಗೆ ಎಣ್ಣೆಯಿಲ್ಲ ಎಣ್ಣೆಯನ್ನು ತಂದು ಮನೆತರೆ ನೀರು ಸುರಿದು—ಎಣ್ಣೆಯನ್ನು ಮೇಲೇರಿಸಿದ!

ನಾನು—ಬಲು ಚತುರ! ಆದರೆ, ನೊಂದಿದ ದೀಪವನ್ನು ಕಂಡು ಅರ್ಜಿ ಮಾಡಿದವರಿಲ್ಲವೇ?

ಅವಳು—ಜನರಿಗೆ ನಾಂದ್ಯೆನೆಂದು ತಿಳಿದರಲ್ಲವೆ! ಹಗಲಿಗೆ ಇಲ್ಲಿ ನಿಂತಿರುತ್ತೇನೆ! ರಾತ್ರಿಯಾದರೆ—ಎದುರಿನ ಬೀದಿ ಅಂಗಡಿಯವರು ಬಲವಾದ ಇನ್ನೊಂದು ದೀಪ ಉರಿಸುತ್ತಾರೆ ಹೀಗಾಗಿ ನಾನಿದ್ದೂ ಸತ್ತಂತೆ

ನಾನು—ನಿನ್ನನ್ನು ಇಲ್ಲಿ ಸ್ಥಾಪನೆ ಮಾಡಿದವರು!

ಅವಳು—ನನ್ನ ಹಣೆಯ ಮೇಲೆ (ಎದೆಯ) ಬರೆದ ಚರ್ಮಶ್ಲೋಕವನ್ನು ಹಗಲಲ್ಲಲ್ಲದೆ ರಾತ್ರಿ ಯಾರು ಓದುತ್ತಾರೆ?

ನಾನು ಹಾಗಾದರೆ ನಿನ್ನನ್ನು ಯಾಕೆ ನಟ್ಟರು?

ಅವಳು ನಾನಿಲ್ಲವಾದರೆ, ಇದು ನಡುಬೀದಿಯಲ್ಲಿ ನಟ್ಟ ಗೋರಿಯಾದೀತೆಂದು ಗೋರಿಗೂ, ಮಾಸ್ತಿ ಕೈಗೂ ವ್ಯತ್ಯಾಸವಿಲ್ಲವೇ?

ನಾನು—ಅಯ್ಯೊ ತಾಯಿ! ಈ ಅವಮಾನ ಸಹಿಸಿ ಎಷ್ಟು ದಿವಸ ಇರುವೆ?

ಅವಳು—ನನಗೆ ಅನಂತವಾಗಿ ಇರುವ ಆಸೆ ಹೊಸ ಯುಗ ಬಂದಿದೆ ವಿದ್ಯುತ್ತಿನಿಂದ ನನ್ನ ಜೀವನ ಅವಮಾನಿತವಾಯಿತು ನಾನು ನಿಲ್ಲುತ್ತೇನೆ ಒಳಗೆ ದೀಪವಿಲ್ಲದ ಆಚಾರ್ಯರು ಪಂಡಿತರು ಪ್ರಪಂಚ ಮುಂದರಿಯುವುದನ್ನು ಕಂಡು ಶಾಸ್ತ್ರ ಓದುವುದನ್ನು ಬಿಡುತ್ತಾರೆಯೇ? ಅವರ ಕಾಲದ ಸಂಸ್ಕೃತಿಯ ಕುರುಹಾಗಿ, ಅರ್ಥವಾಗದ ಆಕಾರ ಹೊತ್ತು ನಾನೂ ನಿಲ್ಲುತ್ತೇನೆ ಚತುರ್ಮುಖ ಬ್ರಹ್ಮನಂತೆ ನಾಲ್ಕು ದಿಕ್ಕು ನೋಡುತ್ತ ನಿಂತಿರುತ್ತೇನೆ!

ನಾನು—ಬ್ರಹ್ಮನ ನಾಲ್ಕು ಮುಖಗಳು ಹೀಗೆ, ನಾಲ್ಕು ದಿಕ್ಕಿಗೆ ಇದ್ದುವೇ? ಅಥವ ಕೈಯಲ್ಲಿ ಹಿಡಿಯುವ ಇಸ್ಪೀಟು ಎಲೆಗಳಂತೆ ಒಂದೇ ಸಾಲಿನಲ್ಲಿ ಇದ್ದುವೇ?

ಅವಳು—ನನ್ನಂತೆಯೇ ಇರಬೇಕು

ನಾನು—ಹಾಗಿದ್ದರೆ, ಎಲ್ಲಾದರು ಸಂಚಾರಕ್ಕೆ ಹೋಗುವಾಗ!

ಅವಳು—ಬ್ರಹ್ಮನು ಸಂಚರಿಸುತ್ತಿದ್ದನೇ, ಅವನಿಗೆ ಕಾಲಿದೆಯೆಂಬುದೂ ತಿಳಿಯದು ರುಂಡ, ಮುಂಡ ಬಾಯಿಗಳಷ್ಟೆ ಅದರಿಂದಲೆ ವಿಷ್ಣುವು ಅವನನ್ನು ತಾವರೆ ಹೂವಿನಲ್ಲಿ ಅಡಗಿಸಿ ಕುಳ್ಳಿರಿಸಿ ಬಿಟ್ಟಿದ್ದಾನೆ—ಏಳುವುದಕ್ಕಿಲ್ಲ.

ನಾನು—ನನಗೆ ಆ ಯೋಚನೆ ಹೊಳೆದಿರಲಿಲ್ಲ! ಆದರೆ ಹಾಗೆ ನಿಂತು, ಏನು ಉಪಯೋಗ!

ಅವಳು—ಈ ವರೆಗೆ ಹೊಂದಿದವರಿಲ್ಲವೇ! ನೀನು ಜಸ್ಟಿಸ್ ರಾನಡೆ ವಿಚಾರ ಕೇಳಿಲ್ಲವೆ! ಅವನು ನನ್ನ ಬಂಧುವೊಬ್ಬನ ತೋಳಿಗೆ ತನ್ನ ಜುಟ್ಟನ್ನು ಸಿಕ್ಕಿಸಿಕೊಂಡು, ಓದಿ ಪ್ರವೀಣನಾಗಿ ಕೊನೆಗೆ—ನ್ಯಾಯಾಧೀಶನಾದನು!

ನಾನು—ಯಾರು ಅದು ತೆಲಂಗರೇ, ಅಥವ ರಾನಡೆಯವರೇ?

ಅವಳು—ಯಾರಾದರೂ ವ್ಯತ್ಯಾಸವೇನು? ನ್ಯಾಯಾಧೀಶರಾಗುವ ಆಲೋಚನೆಯಿರುವವರು ನನ್ನಲ್ಲಿಗೆ ಬಂದರಾಯಿತು

ನಾನು—ಈಗ ಹಾಗಲ್ಲ ಸಿಗುವುದಿಲ್ಲವಂತೆ ಕೆಲಸ ಅದಕ್ಕೆ ಬಹಳ ಪರೀಕ್ಷೆ, ಜಾತಿ, ಕೋಮು—ಇವುಗಳ ತನಿಖೆ ನಡೆಯಬೇಕಂತಲ್ಲ!

ಅವಳು—ಹಾಗಾದರೆ ಇನ್ನೊಂದು ಕೆಲಸಕ್ಕಾದರೂ ನಾನು ನಿಂತಿರಬೇಕು

ನಾನು—ಏನದು

ಅವಳು—ಬೇಡ, ಹೋಗು, ನೀನೆ ಹಾಗ ಮಾಡಿಬಿಟ್ಟೆಯಾ—ಅಂದರೆ ಮುಂದೆ ಪತ್ರಿಕೆಗಳಿಗೆ ಬರೆಯುವ ಅಸಾಮಿಗಳಲ್ಲಿ ಒಬ್ಬನೂ ಇಲ್ಲದಂತಾಗಬಹುದು

ನಾನು—ನಿನ್ನ ಮಾತೇ ತಿಳಿಯದು!

ಅವಳು—ಯಾರಿಗೂ ಹೇಳುವುದಿಲ್ಲವೆಂದರೆ ಮಾತ್ರ

ನಾನು—ಇಲ್ಲ

ಅವಳು—ನನ್ನನ್ನು ಇಲ್ಲಿ ಇರಿಸಿದ ಕಾರಣ ತಿಳಿಯದೇ ಈ ನಗರದಲ್ಲಿ ನಿರುದ್ಯೋಗ ಹೆಚ್ಚುತ್ತಿದೆಯಂತೆ! ಬಲು ಕಲಿತು ನಿರಾಶರಾದ ತರುಣರಿಗೆ ನಾನಾದರೂ ಆಶ್ರಯ ಕೊಡಲೆಂದು

ನಾನು—ನೇಣು ಹಾ

ಅವಳು—ಮೆಲ್ಲ ಮಾತನಾಡು ಅಂಥವರು ಯಾವಾಗಲೂ ಇಲ್ಲಿ ಸಂಚರಿಸಿರುತ್ತಾರೆ ಅವರಿಗೆ ತೊಂದರೆಯೆಂದರೆ—ಈ ವಿದ್ಯುತ್ ದೀಪ ಆ, ಮೇಲಿನ ಚಂದ್ರ—ಅವರು ಮರೆಯಾಗಿಬಿಟ್ಟರೆ

ನಾನು—ಅಮ್ಮ ನಿಜವಾಗಿಯೂ ನೀನು ಭರತಾಂಬೆಯ ಮಗಳು ನಿನ್ನ ತಾಯಿ ಪರರಿಗೆ ಉಪಕಾರ ಮಾಡಿ, ಮನೆ ಮಕ್ಕಳನ್ನು ಉಪವಾಸವಿರಿಸಿದಂತೆ ನೀನಾದರೂ, ಉಪಕಾರ ಮಾಡುತ್ತಿರುವೆಯಲ್ಲ

ದೂರದಿಂದ ಭಾರತ ಮಾತಾಕಿ ಜೈ ಎಂಬ ಸದ್ದು ಕೇಳಿಸಿತು ಇನ್ನು ಅಲ್ಲಿ ನಿಲ್ಲಲಾಗದೆಂದು ಹೊರಟೆ. ಈ ಪ್ರಸ್ತಾಪವನ್ನು ಯಾರಿಗೂ ಹೇಳ' ಬಾರದೆಂದು ವಚನವಿತ್ತುದರಿಂದ ಬರೆಯಬೇಕಾಯಿತು ಇದು ಈಗಿನ ಧರ್ಮಕ್ಕೆ ವಿರೋಧವಾಗಲಾರದಷ್ಟೆ

ಶಿಕ್ಷಣದ ಪ್ರಗತಿ.

ಪ್ರಪಂಚದ ನಾನಾ ಭಾಗಗಳೊಡನೆ ಪರಸ್ಪರ ವ್ಯವಹಾರ ಸಂಬಂಧವು ಬೆಳೆದು ಪರಸ್ಪರೋನ್ನತಿಗಾಗಿ ಜನರು ಬೇರೆ ಬೇರೆ ಜನಾಂಗಗಳ ಉತ್ಥಾನ ಪತನಗಳ ಕಾರ್ಯಕಾರಣ ಸಂಬಂಧವನ್ನು ಯೋಚಿಸಿದ ಫಲವಾಗಿ ಈಗ ಎಲ್ಲೆಲ್ಲಿಯೂ ಕೇಳಿಬರುತ್ತಿರುವ ಒಂದೇ ಒಂದು ಸೊಲ್ಲು ಎಂದರೆ—ದೇಶದ ಸ್ವಾಭಾವಿಕ ಬೆಳವಣಿಗೆಯಾಗಬೇಕೆಂದು ಇಚ್ಛಿಸುತ್ತಿರಾ? ಹಾಗಾದರೆ ಶಿಕ್ಷಣ ಪ್ರಚಾರ ಮಾಡಿ, ರಾಷ್ಟ್ರದ ಸರ್ವಾಂಗೋನ್ನತಿಯಾಗಬೇಕೆನ್ನುತ್ತಿರಾ?—ಹಾಗಾದರೆ ಶಿಕ್ಷಣ ಪ್ರಚಾರ ಮಾಡಿ—ಎಂಬುದಾಗಿದೆ ಶಾಲೆಗೆ ಹೋಗುವ ಪ್ರಾಯದ ಎಲ್ಲ ಬಾಲ ಬಾಲಿಕೆಯರಿಗೆ ಕನಿಷ್ಠ ಪಕ್ಷ ಪ್ರಾಥಮಿಕ ಶಿಕ್ಷಣವನ್ನಾದರೂ ಕೊಟ್ಟೇ ತೀರಬೇಕೆನ್ನುವ ಮಾತಿನಲ್ಲಿ ತಥ್ಯವಿಲ್ಲವೆ? ಅವಶ್ಯವಾಗಿ ಉಂಟು ಈಗ ಒಂದು ದೇಶದಲ್ಲಾದ ಅಭಿವೃದ್ಧಿಯನ್ನು ಅಳೆಯಲಿಕ್ಕೆ ಆ ದೇಶದಲ್ಲಾದ ಸದ್ವಿದ್ಯೆಯ ಪ್ರಸಾರವನ್ನೇ ಮಾನವಾಗಿಟ್ಟುಕೊ ಳ್ಳುತ್ತಾರೆ ಇಂಗ್ಲಂಡು, ಅಮೆರಿಕಾ ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳು ಇಂದು ಉಳಿದ ರಾಷ್ಟ್ರಗಳಿಗಿಂತ ಹೆಚ್ಚು ಅಧಿಕಾರ, ಶಕ್ತಿ, ಸಂಪತ್ತುಗಳನ್ನು ಸಂಪಾದಿಸಿಟ್ಟುಕೊಂಡು ಮೆರೆಯುತ್ತಿರಲಿಕ್ಕೆ ಆ ದೇಶಗಳ ಜನರು ವಿದ್ಯಾಪ್ರೇಮಿಗಳಾಗಿರುವುದೂ, ಅಲ್ಲಿ ಸರ್ವತ್ರ ಪ್ರಾಥಮಿಕ ಶಿಕ್ಷಣವನ್ನು ಧರ್ಮಾರ್ಥವಾಗಿಯೂ ಕಡ್ಡಾಯವಾಗಿಯೂ ಕೊಡುವ ಏರ್ಪಾಡಾಗಿರುವುದೂ ಮುಖ್ಯ ಕಾರಣಗಳಾಗಿರುವುದನ್ನು ಎಲ್ಲರೂ ತಿಳಿದಿರುವರು. ಒಂದು ರಾಷ್ಟ್ರದ ಉತ್ಥಾನದ ಈ ಮರ್ಮವನ್ನು ತಿಳುಕೊಂಡ ಮೇಲೆಯೇ ರಷ್ಯದಲ್ಲಿ ಕ್ರಾಂತಿಯಾದ ಮೇಲೆ ಸ್ಥಾಪಿತವಾದ ನವೀನ ಸರಕಾರವು ೧೦—೧೫ ವರ್ಷಗಳ ಅವಧಿಯಲ್ಲಿ ನಿರಕ್ಷರತೆಯ ಭೂತವನ್ನು ದೇಶದಿಂದ ಗಡೀಪಾರು ಮಾಡುವ ಮೊದಲನೆ ಕಾರ್ಯದಲ್ಲಿ ನಿರತವಾಯಿತು ಆದುದರಿಂದಲೆ

(೫ನೇ ಪುಟಕ್ಕೆ ಮುಂದುವರಿಯುವುದು)

ಓಡುತ್ತಿರುವ ರೈಲ್ವೇ ಟ್ರೈನಿಗೆ ಕಳ್ಳಕಾಕರು ನುಗ್ಗಿದರು!!!

ನಮಗೆ ಈ ಗೊಂದಲ ಬೇಡ.

ಅಬಿಸೀನಿಯಾ ವ್ಯವಹಾರ ಮತ್ತು ಫ್ರಾನ್ಸಿನ ನಿರ್ಧಾರ.

ರಾಯಿಟರ್ ಎಕ್ಸ್‌ಪ್ರೆಸ್, ಜುಲೈ ೭

ಅಬಿಸೀನಿಯಾದ ಮೇಲೆ ಇಟಲಿ ದೇಶವು ವ್ಯಕ್ತಗೊಳಿಸುತ್ತಿರುವ ಸಂಗ್ರಾಮ ಮನೋಭಾವವನ್ನು ನಿರೋಧಿಸುವುದಕ್ಕಾಗಿ ಬ್ರಿಟನು ಪ್ರಯತ್ನಿಸುತ್ತಿದೆ ಈ ಪ್ರಯತ್ನಗಳೊಂದಿಗೆ ಫ್ರಾನ್ಸ್ ದೇಶವು ಸಹಕರಿಸುವುದಿಲ್ಲವೆಂದು ಈಗ ಗೊತ್ತಾಗಿದೆ ಈ ಅಭಿಪ್ರಾಯವು 'ಟೆಂಪ್ಸ್' ಎಂಬ ಪತ್ರಿಕೆಯ ಅಗ್ರಲೇಖನದಿಂದ ವ್ಯಕ್ತವಾಗಿದೆ 'ಟೆಂಪ್ಸ್' ಪತ್ರಿಕೆಯಲ್ಲಿ ಬರುವ ಲೇಖನಗಳೆಲ್ಲವೂ ಸರಕಾರದ ಮನೋಭಿಪ್ರಾಯವನ್ನು ಚಿತ್ರಿಸುವಂತಹುದು. ಬ್ರಿಟಿಷ್ ಕ್ಯಾಬಿನೆಟ್ಟಿನವರು ಇತರ ರಾಷ್ಟ್ರಗಳ ಸಲಹೆ ಕೇಳದೆ, ಅಬಿಸೀನಿಯಾ ಇಟಲಿ ಗಲಭೆಯ ಬಗ್ಗೆ ವ್ಯವಹರಿಸುತ್ತಿರುವುದು ಸರಿಯಾಗಿಲವೆಂದೂ ಈ ಪ್ರಯತ್ನಗಳಿಗೆ ಫ್ರಾನ್ಸು ಕೈಹಾಕಕೂಡದೆಂದೂ ಈ ಸಮಯದಲ್ಲಿ ಸುಮ್ಮನಿರುವುದೇ ಮೇಲೆಂದೂ 'ಟೆಂಪ್ಸ್' ಪತ್ರಿಕೆಯು ತಿಳಿಸುತ್ತಿದೆ ಪತ್ರಿಕೆಯಲ್ಲಿಯ ಎರಡನೆಯ ವಾಕ್ಯವಿದು 'ಲೀಗಿನ ಭದ್ರತೆಯನ್ನು ಕಾಪಾಡುವುದ ನಮ್ಮ ಧರ್ಮ ಒಂದು ವೇಳೆ ಲೀಗನ್ನು ಇಟಲಿಯು ತ್ಯಜಿಸಿದರೆ ಆಗ ಲೀಗಿಗೆ ಬೀ[illegible]ವಾದ [illegible]ವಾಗುವುದು '

ಹಿಂದೂ ಮಠಗಳ ಮಸೂದೆ ಬಿದ್ದುಹೋಯಿತು

ಸಿಲೆಕ್ಟ್ ಕಮಿಟಿಯ ತೀರ್ಮಾನ

(ನಮ್ಮ ಸ್ವಂತ ವಾರ್ತಾಹರರಿಂದ)

ಮದ್ರಾಸ್ ಜುಲೈ ೯

ಹಿಂದೂ ಮಠಗಳ [illegible] ಸಂಬಂಧ ನಾಗಿ ವಿಚಾರಣೆ ನಡೆಸುವುದಕ್ಕಾಗಿ [illegible]ಟಾಗಿದ್ದ ಮದ್ರಾಸ್ ನ್ಯಾಯ ವಿಧಾಯಕ ಸಭೆಯ ಸಿಲೆಕ್ಟ್ ಕಮಿಟಿಯು ಮಸೂದೆಯನ್ನು ನಿಲ್ಲಿಸಬೇಕೆಂದು ಕಮಿಟಿಯು ತೀರ್ಮಾನಿಸಿದೆ [illegible] ದವರು ತಂದಿದ್ದ ಮಸೂದೆಗೆ ವಿರೋಧ [illegible] ವೋಟು ಗಳಿಂದ ಪಾಸಾಯಿತು ಮಿ। ಸುಬ್ರಹ್ಮಣ್ಯ ಭಟ್ಟರವರು ಮಾತ್ರ ಯಾವ ಕಡೆಗೂ ವೋಟು ಕೊಡದೆ ಸುಮ್ಮನಿದ್ದರು

ಮೈಸೂರು ನ್ಯಾಯವಿಧಾಯಕ ಸಭೆ

ವ್ಯಭಿಚಾರ ನಿರೋಧ ಮಸೂದೆಗೆ ಒಪ್ಪಿಗೆ

ಬೆಂಗಳೂರು ಜುಲೈ ೪

ನಿನ್ನೆ ದಿವಸ ನ್ಯಾಯವಿಧಾಯಕ ಸಭೆಯಲ್ಲಿ ಬಾಲ್ಯವಿವಾಹ ನಿರೋಧ ಮಸೂದೆಯ ಚರ್ಚೆಯಲ್ಲಿ ಶ್ರೀ। ದಾಸಪ್ಪನವರು ಹೇಳಿದ್ದೇನೆಂದರೆ —

"೧೮೯೪ರಲ್ಲಿ ಅನುಮೋದಿಸಲಾದ ಬಾಲ್ಯ ವಿವಾಹ ನಿರೋಧ ಶಾಸನದಲ್ಲಿ ೫೦ ವರ್ಷಕ್ಕೆ ಮೇಲ್ಪಟ್ಟ ಮನುಷ್ಯನು ವಿವಾಹವಾಗಬೇಕಾದರೆ ಹುಡುಗಿಯ ವಯಸ್ಸು ಕನಿಷ್ಠಪಕ್ಷ ೧೪ ವರ್ಷವಾದರೂ ಇರಬೇಕೆಂದು ಹೇಳಲಾಗಿದೆ ಆ ಕಾಲದಲ್ಲಿಯೇ ಈ ವಿಧಿಯಿರುವಾಗ ಈಗ ಏತಕ್ಕೆ ಅಂತಹ ವಿಧಿಯು ಕಾನೂನಾಗಬಾರದು ಶಂಕರಾಚಾರ್ಯ, ರಾಮಾನುಜಾಚಾರ್ಯ ಮುಂತಾದ ಮಹನೀಯರ ಶಿಷ್ಯರಲ್ಲಿ ಹೆಚ್ಚು ಮಂದಿ ಮೈಸೂರಿನ ಹೊರಗೆ ಇರುವಾಗ, ಈ ಸಂಸ್ಥಾನದಲ್ಲಿ ಹಿಂದೂ ಧರ್ಮಕ್ಕೆ ಅಡಚಣೆ ಬರುವುದೇ? ಬರುವುದಿಲ್ಲ ಈ ಶಾಸನದಿಂದ ಹಿಂದೂಧರ್ಮವು ಉದ್ಧಾರವಾಗುವುದಲ್ಲದೆ ಅದು ಹಾಳಾಗುವುದಿಲ್ಲ. ೧೪ ವರ್ಷಕ್ಕೆ ಮೇಲ್ಪಟ್ಟಿರುವ ವಿಧವೆಯರ ಸಂಖ್ಯೆಯನ್ನು ಒಬ್ಬ ಸದಸ್ಯರು ಸೂಚಿಸಿದರು. ಆದರೆ ಅವರು ಆ ವಿಧವೆಯರ ಸಂಖ್ಯೆಯನ್ನು ತೆಗೆದುಕೊಂಡು, ಅವರು ವಿಧವೆಯರಾದುದು ೧೪ ವರ್ಷಕ್ಕೆ ಮುಂಚೆಯೋ ಅಥವಾ ಅನಂತರವೇ ಎಂಬುದನ್ನು ಗಮನಿಸಿದರೆ ಅದರಿಂದ ಆಶ್ಚರ್ಯಕರವಾದ ಸಂಖ್ಯೆಯು ವ್ಯಕ್ತವಾಗುವುದು "

ಓಡುತ್ತಿರುವ ರೈಲ್ವೇ ಟ್ರೈನಿಗೆ ಕಳ್ಳಕಾಕರು ನುಗ್ಗಿದರು

ಅಲ್ಲಹಾಬಾದ್ ಜೂನ್, ೯

ಬಿ ಎನ್. ಡಬ್ಲ್ಯು ರೈಲ್ವೇ ಕಂಪೆನಿಯವರ ಒಂದು ಟ್ರೈನು ವಾಲ್ಟರ್‌ಗಂಜ ಮತ್ತು ತೆನಿಚ ಎಂಬ ಊರುಗಳ ಮಧ್ಯದಲ್ಲಿ ಓಡುತ್ತಿರುವ ಸಮಯದಲ್ಲಿ ನಾಲ್ಕು ಮಂದಿ ಅಪಾದಿತರು ಒಂದು ಇಂಟರ್ ಕ್ಲಾಸ್ ಗಾಡಿಯನ್ನು ಸೇರಿ, ಒಳಗಿದ್ದ ಒಬ್ಬ ಪ್ರಯಾಣಿಕ ಕಣ್ಣುಗಳಲ್ಲಿ ಯಾವುದೋ ಒಂದು ತರದ ಹುಡಿಯನ್ನು ಹಾಕಿ, ಅವನಲ್ಲಿದ್ದ ೨೨೦೦ ರೂಪಾಯಿಗಳನ್ನು ಕಿತ್ತು ಕೆಳಗೆ ದುಮುಕಿ ಓಡಿಹೋದರು ಒಬ್ಬನು ರೈಲಿನ ಅಡಿಯಲ್ಲಿ ಬಿದ್ದು ಮೃತನಾಗಿರುವನು ಇವರನ್ನು ಈಗ ಹಿಡಿದಿದ್ದಾರೆ ತನಿಖೆಯು ನಡೆಯುತ್ತಿದೆ ಹಣವು ಸಿಕ್ಕಿತು

ಬಳ್ಳಾರಿಯಲ್ಲಿ

ತೆಲುಗು. ಕನ್ನಡದ ಮೇಲೆ ಚರ್ಚೆ.

ಬಳ್ಳಾರಿ, ಜುಲಾಯಿ ೬

ಬಳ್ಳಾರಿ ಜಿಲ್ಲೆಗೆ ಸರಿಯಾದ ದೇಶ ಭಾಷೆಯ ವಿಷಯ [illegible] ಉಪಾಧ್ಯಾಯರ ಸಂಘದ ಈ ದಿವಸ ನಡೆದ ಸಭೆಯಲ್ಲಿ ಬಿರುಸಾದ ಚರ್ಚೆಯು ನಡೆಯಿತು

ಸೀರಕ್ಷೈಪ ಶಾಲೆ ಮಿ। ಗೋವಿಂದಾಚಾರ್ಯರು ಎಂಬವರು ಬಳ್ಳಾರಿಯಲ್ಲಿ ಆರು ಲಕ್ಷಕ್ಕೆ ಹೆಚ್ಚಾಗಿ ಕನ್ನಡಿಗರು ಇರುವುದರಿಂದ ಕನ್ನಡವೇ ದೇಶಭಾಷೆಯಾಗಬೇಕೆಂದು ಭಾಷಣವಿತ್ತರು. ವಿದ್ಯಾರಣ್ಯರ ಕರ್ಣಾಟಕ ಸಾಮ್ರಾಜ್ಯದ ಸ್ಥಾಪನಾಚಾರ್ಯರೆಂದು ಇವರ ಭಾಷಣದಲ್ಲಿ ತಿಳಿಸಿದರು ನೆರೆದವರಲ್ಲಿ ಹಲವರು ಇವರ ಮತವನ್ನು ಸಹಕರಿಸಿ ಭಾಷಣವಿತ್ತರು

ಮಿ ಕೃಷ್ಣಮೂರ್ತಿ ಎಂಬವರು - ಹರಿಹರ, ವಿಜಯನಗರ ಸಾಮ್ರಾಜ್ಯವನ್ನು ರಚಿಸಿದವರು, ಬಳ್ಳಾರಿಯನ್ನು ವಿಜಯನಗರಕ್ಕೆ ಕೂಡಿಸಿದ್ದುದರಿಂದ,- ಎಂಬ ಚರಿತ್ರಾಧಾರದಿಂದ, ತೆಲುಗು ಬಳ್ಳಾರಿಯ ದೇಶಭಾಷೆ ಆಗತಕ್ಕದ್ದೆಂದೂ, ಮತ್ತು ಬಳ್ಳಾರಿ ಜನಸಂಖ್ಯೆಯು ಶೇಕಡಾ ೬೦ರಷ್ಟು ತೆಲುಗರೇ ಆಗಿರುತ್ತಾರೆಂತಲೂ, ಮತ್ತು ಕನ್ನಡಿಗರು ವಿಜಯನಗರದ ಅವಸಾನದ ನಂತರ ಬಳ್ಳಾರಿಯನ್ನು ಸೇರಿದರೆಂತಲೂ, ಭಾಷಣ ಮಾಡಿದರು

ಆದರೆ ಈ ಚರ್ಚೆ ಸಭೆಯು ನ್ಯಾಯವಾದ ರೀತಿಯಲ್ಲಿ ನಡೆಯಲಿಲ್ಲ ಅಲ್ಲಲ್ಲಿ ಪರಸ್ಪರ ವೈಷಮ್ಯದ ಕುರುಹುಗಳು ಕಾಣುತ್ತಿದ್ದುವು

ಮಿ ನರಸಿಂಹ ಶಾಸ್ತ್ರಿಗಳು, (ಡಿಪ್ಯುಟಿ ಇನ್ಸ್‌ಪೆಕ್ಟರ್ ಒಫ್ ಸ್ಕೂಲ್ಸ್) ಕನ್ನಡ-ತೆಲುಗು ಎಂಬ ವೈಷಮ್ಯ ಬೆಳೆಯಿಸಬಾರದಾಗಿ ಕೋರಿ, ಭಾಷಣವಿತ್ತರು ಯಾವುದೊಂದೂ ನಿರ್ಣಯಕ್ಕೆ ಬಾರದೆ ಸಭೆಯು ಮುಕ್ತಾಯವಾಯಿತು

ಜರ್ಮನಿಗೆ ಯುದ್ಧನಾವೆಗಳ ರಚನೆ.

೨೮ ಸಬ್‌ಮೇರಿನುಗಳನ್ನು ರಚಿಸುವರು.

ಬರ್ಲಿನ್, ಜುಲಾಯಿ, ೮.

ಮೊನ್ನೆ ತಾನೆ ನಡೆದ ಎಂಗ್ಲೊ ಜರ್ಮನ್ ಒಪ್ಪಂದದಿಂದಾಗಿ ಜರ್ಮನಿಯವರು ೧೯೩೫ ವರ್ಷಕ್ಕೆ ಬೇಕಾದ ನೌಕಾರಚನೆಯನ್ನು ಮೊದಲು ನಿಶ್ಚಯಿಸಿಯದೆ. ಈ ಕೆಳಗೆ ನಮೂದಿಸಿದಂತೆ ನೌಕಾರಚನೆಯು ನಡೆಯುವುದು

(೧) ೨೬,೦೦೦ ಟನ್ನಿನ ಭಾರ ಹೊರುವ ಯುದ್ಧನಾವೆಗಳು ೨

(೨) ೧೦,೦೦೦ ಟನ್ನಿನ ಭಾರ ಹೊರುವ ಯುದ್ಧನಾವೆಗಳು ೨

(೩) ೧೬೨೫ ಟನ್ನಿನ ಭಾರ ಹೊರುವ ಯುದ್ಧನಾವೆಗಳು ೧೬.

(೪) ೨೮ ಸಮುದ್ರಗತದಲ್ಲಿ ನಡೆಯುವ ಯುದ್ಧನಾವೆಗಳು (ಸಬ್ ಮೇರಿನುಗಳು) ಭಾರ ೬೫೦ ಟನ್

(೫) ೫೦೦ ಟನ್ನಿನ ಭಾರ ಹೊರುವ ಯುದ್ಧನಾವೆಗಳು ೬

(೬) ೨೫೦ ಟನ್ನಿನ ಭಾರ ಹೊರುವ ಯುದ್ಧನಾವೆಗಳು ೨೦

ಮೇಲಿನವುಗಳು ಸಮಸ್ತ ಯುದ್ಧ ಸಾಮಗ್ರಿಗಳಿಂದ ಕೂಡಿದವುಗಳು.

ಲಾಹೋರಿನ ಸಿಕ್ ಮುಸ್ಲಿಮರ ದಂಗೆ

Press Comminique

ಲಾಹೋರ್ ಜುಲಾಯಿ ೮

ಇದು ಒಂದು ಮಸೀದಿಯ ಕುರಿತಾಗಿ ಎದ್ದ ವಿವಾದದಿಂದ ಉಂಟಾದುದು ಇದರ ಹೆಸರು ಸಾಹಿದ್‌ಗಂಜ ಮಸೀದಿ ಎಂದು. ಇದು ಸುಮಾರು ೧೬೦ ವರ್ಷಗಳಿಂದ ಸಿಕ್ಕರ ವಶದಲ್ಲಿತ್ತು ಮತ್ತು [illegible]ಕ್ಕೆ ನಡೆದ ಕೋರ್ಟು ವ್ಯವಹರಣೆ ಪ್ರಕಾರ ಸಿಕ್ಕರ ಇದರ ಮೇಲಿನ ಹಕ್ಕು ಎಂಥ್ಯತೆಗಳ ಭದ್ರವಾದವು ಇದನ್ನು ಅಲ್ಲಗಳೆ[illegible] ಒಂದು ಅಪೀಲನ್ನು ಮಾಡಿದರ ಇದರಿಂದಾಗಿ ಸರಕಾರದವರು ಹಕ್ಕು ಎಂಥ್ಯತೆಯ ವ್ಯವಹಾರ ಸರಿಯಾಗಿ ತೀರ್ಮಾನವಾಗುವ ವರೆಗೆ, ಸಿಕ್ಕರ ಅದರಲ್ಲಿ ಇರಬಹುದು. ಆದರೆ ಮುಸ್ಲಿಮ್ ಧರ್ಮಕ್ಕೆ ವಿರುದ್ಧವಾಗಿ ಯಾರೂ ನರ್ತಿಸುವಾದರಾಗಿ ಅಪ್ಪಣೆ ಕೊಟ್ಟಿದ್ದರು ಇವರಲ್ಲಿ ಒಪ್ಪಂದ ಮಾಡಲು ಮಾಡಿದ ಹಲವು ಯೋಜನೆಗಳು ನಡೆಯುತ್ತಿವೆ

ಕೆಲವು ಸಿಕ್ಖಪ್ರಮುಖರ, ಅವರ ಸಂಪದ ಜುಲಾಯಿ ೮ರಲ್ಲಿ ನಡೆದ ಅಧಿವೇಶನದ ನಂತರ, ಒಪ್ಪಂದದ ಕುರಿತಾಗಿ ತಮ್ಮ ಶರ್ತಗಳನ್ನು ಮತ್ತು (ಮಸೀದಿಯನ್ನು [illegible]ಸಲು ಅಥವಾ ಕೆಡಿಸುವುದು ತಮಗೆ ಇಷ್ಟವೋ ಎಂಬುದರ ವಿಷಯ ತಿಳಿಸುವರಾಗಿ ಸರಕಾರಕ್ಕೆ ತಿಳಿಸಿದ್ದಾರೆ

ಆದರೆ, ಸಿಕ್ಕರು ಮಸೀದಿಯನ್ನು ಕೆಡಿಸಲು ನಿರ್ಧರಿಸಿದುದರ ಮೇಲೆ ಸರಕಾರಕ್ಕೆ ಹೆಚ್ಚಿನ ಆಶ್ಚರ್ಯವು ಉಂಟಾಗಿದೆ ಈ ನಿರ್ಧಾರದ ಕಾರಣ ಅವರಿಗೆ ತಿಳಿವಿಲ್ಲ. ಸಿಕ್ಕ ಪ್ರಮುಖರು ತಮ್ಮ ಜನಗಳ ಮೇಲಿನ ಅಧಿಕಾರವು ತಪ್ಪಿಹೋದಂತೆ ಕಾಣುತ್ತವೆ ಕಾರಣ, ಶಾಲಿಂಗೇಟ ಎಂಬ ದೊರಕಿದ ಒಂದು ಸಿಕ್ಕನ ಹೆಣದಿಂದಾಗಿ ಶಸ್ತ್ರ ಪರೀಕ್ಷೆಯಿಂದ ನೋಡಲಾಗಿ ಈತನು ದಂಗೆಯಿಂದ ಸತ್ತುದಲ್ಲ ಎಂದು ನಿಶ್ಚಿತವಾಗಿದೆ ಆದರೂ ಸಿಕ್ಕರು ಇದನ್ನು ನಂಬಲಾರದಾದರು ಸರಕಾರದ ದಂಗೆಯು ಮುಂದುವರಿಯದಂತೆ ಎಲ್ಲಾ ಭದ್ರತೆಗಳನ್ನು ವಹಿಸುತ್ತಿವೆ.

ಭೂಲೋಕದ ಆಢ್ಯ ಧನಿಕ ರೋಕ್ ಫೆಲ್ಲರ್‌ರ ೯೬ನೇ ಜನ್ಮೋತ್ಸವ.

ಹೆಚ್ಚಿನ ವಯ್ಯಾರವಿಲ್ಲದೆ ನಡೆಯಿತು.

ಜುಲಾಯಿ ೮,

ಅಮೇರಿಕಾ ದೇಶದ ಜೋನ್ ಡಿ ರೋಕ್ ಫೆಲ್ಲರ್‌ರ ಪರಿಚಯವು ಎಲ್ಲರಿಗೂ ಉಂಟು. ಇವರು ಭೂಲೋಕದ ಆಢ್ಯ ಧನಿಕರು. ಇವರು ಮೊನ್ನೆ ತಮ್ಮ ೯೬ನೇ ಜನ್ಮೋತ್ಸವವನ್ನು ಕೈಕೊಂಡರು. ವಯಸ್ಸು ಅಷ್ಟು ಹೆಚ್ಚಾದರೂ ರೋಕ್‌ಫೆಲ್ಲರರು ಆರೋಗ್ಯವಂತರಾಗಿರುವರು. ಈ ಉತ್ಸವವನ್ನು ಬಹಳ ಶಾಂತಿಯಿಂದ ಜರಗಿಸಿದರು.

ಕೊಂಗ್ರೆಸ್ಸೂ ಜಿಲ್ಲಾ ಸಂಸ್ಥೆಗಳೂ

ಕೊಂಗ್ರೆಸ್ಸು ಇನ್ನು ಮುಂದಕ್ಕೆ, ದೇಶದ ಯಾವತ್ತೂ ಜಿಲ್ಲಾ ನಾಗರೀಕ ಸಂಸ್ಥೆಗಳ ಆಡಳಿತದಲ್ಲಿ ಕೈಹಾಕಬೇಕಾಗಿ ನಿರ್ಣಯಿಸಿದೆ ಇದರಿಂದಾಗಿ, ಸಾರ್ವಜನಿಕರ ಜೀವಮಾನವನ್ನು ಪವಿತ್ರಗೊಳಿಸಲೂ, ಹೆಸರು ತುಂಬಿದ ಮುನಿಸಿಪಾಲಿಟಿಯ ಕೆಲವು ಸ್ಥಳಗಳನ್ನು ನಿರ್ಮಲಗೊಳಿಸಲೂ ಉದಾಸೀನತ್ವದಿಂದ, ಸರಿಯಾಗಿ ನಡೆಯದೆ ಇರುವ ಲೋಕಲ್ ಬೋರ್ಡುಗಳ ಉದ್ಧಾರಗೊಳಿಸುವುದೂ, ಪ್ರಾಥಮಿಕ ಶಿಕ್ಷಣದ ಉದ್ಧಾರವನ್ನೂ, (ಇಲ್ಲಿ ವಿದ್ಯಾರ್ಥಿಗಳಿಗೆ, ಕೈಗಾರಿಕೆ,-ಗದ್ದೆ ವ್ಯವಸಾಯದಲ್ಲಿ ಶಿಕ್ಷಣವು ದೊರೆಯುವಂತೆ ಮಾಡುವುದು) ಸ್ವದೇಶಿ ಚಳವಳವನ್ನು ಮುಂದ ವರಿಸಲಿಕ್ಕೂ, ಹಳ್ಳಿಗಳ [illegible] ಉದ್ಯೋಗಗಳನ್ನು ಪುನರುಜ್ಜೀವನ ಮಾಡುವುದೂ, ಗ್ರಾಮೋದ್ಧಾರ ಕೆಲಸವು ಸಾಂಗವಾಗಿ ನಡೆಸ ವುದೂ, ಪಾಡಿಯ ಪ್ರಚಾರವೂ, ಹಳ್ಳಿ ಪಂಚಾಯತುಗಳು ಸರಿಯಾಗಿ ನಡೆಯುವಂತೆಯೂ, ಎಲ್ಲೆಲ್ಲ ದೇಶಪ್ರೇಮವೂ ದೇಶದ [illegible] ಸ್ಮರಣೆಯು ನಡೆಯುವಂತೆಯೂ, ಪರಸ್ಪರ ಜಾತಿವೈಷಮ್ಯವಿಲ್ಲದಂತೆ ಮಾಡಲೂ, ಕೊಂಗ್ರೆಸ್ಸಿಗೆ ಸಾಧ್ಯವಾಗುವುದು ಈ ಕಾರಣದಿಂದಾಗಿ, ಈ ಭಾರಿ ನಡೆಯುವ [illegible] ಡಿಸ್ಟ್ರಿಕ್ಟ್ [illegible] ಮುನಿಸಿಪಾಲಿಟಿ, ಲೋಕಲ್ [illegible] ಚುನಾವಣೆಗಳಿಗೆ ಕೊಂಗ್ರೆಸ್ [illegible] ಸದಸ್ಯರನ್ನು ಕಳುಹಿಸುವುದು. ಪ್ರತಿಯೊಬ್ಬ ಕೊಂಗ್ರೆಸ ಸದಸ್ಯನಿಗೆ ಈ ಕೆಳಗಿನವುಗಳು ಮುಖ್ಯ ಧ್ಯೇಯವಾಗಿರುವುವು -

೧ ಕೊಂಗ್ರೆಸ್ಸಿನ ಸದಸ್ಯರು ಲೋಕಲ್ ಬೋರ್ಡುಗಳ ಮತ್ತು ಯಾವತ್ತು ಸಾರ್ವಜನಿಕ ಪ್ರಯೋಜನಕರವಾದ ಸಂಸ್ಥೆಗಳ ಏಳಿಗೆಯನ್ನೇ ಬಯಸುವರು.

೨ [illegible] ಸಂಸ್ಥೆಗಳ ಅರ್ಥ ಸಂಚಯವು, (ಲೆಕ್ಕದ ಪಾಠಗಳಿಲ್ಲದೆ) ಹೆಚ್ಚಾಗುವಂತೆ ನೋಡಿಕೊಳ್ಳುವರು

೩ ಪ್ರಾಂತಿಕ ಸರಕಾರದ ಮೇಲಿನ ಸಂಸ್ಥೆಗಳಿಗೆ ಬೇಕಾದ ಹೆಚ್ಚಿನ ಅರ್ಥ ಸಹಾಯವನ್ನು ಕೇಳುವುದು

೪ ಈಗ ಇರುವ ಪ್ರಾಂತಿಕ ಸರಕಾರದ, ಈ ಸಂಸ್ಥೆಗಳ ಮೇಲಿನ ಅಧಿಕಾರವನ್ನು ಇದಷ್ಟು ಕಟ್ಟಿಗೆ ತಗಿಸುವುದು.

Notice.

The public are hereby informed that the undersigned never was nor is the secretary or partner of Mr Helmuth Hackspiel and the letters which were signed by him as the Secretary of Mr Helmuth Hackspiel have absolutely no binding effect on him The undersigned therefore cannot be held liable by Mr Helmuth Hackspiel or by any one, as the secretary or partner of Mr. Helmuth Hackspiel

"Deerholme"
Mangalore,
10—7—'35

C. Wright.

ಅನುಕ್ರಮಣಿಕೆ.

ಚಿತ್ರ	೨
ಸಾಹಿತ್ಯ ಸಂಗ್ರಹ	೩
ಬಾಲ್ಯಪ್ರಪಂಚ	೭
ಮೈಲುಕಲ್ಲುಗಳೊಡನೆ ಮಾತುಕತೆಗಳು	೪
ಅಗ್ರಲೇಖ	
ಸ್ಫುಟವಿಚಾರಗಳು	೧೦
ಯುದ್ಧಾತುರತೆ	೧೦
ವರ್ತಮಾನ ಸಂಗ್ರಹ	
ಕರ್ನಾಟಕ ವರ್ತಮಾನ	೧೩
ಇಟಲಿಯು ಯುದ್ಧಮಾಡಲು ನಿರ್ಧರಿಸಿದೆ	೧೪
ಮಂಗಳೂರು, ತಾಲೂಕುಗಳಿಂದ	೧೧
ವಿವಿಧ ಸಮಾಚಾರಗಳು,	೧೬
ನಡೆದ ಕತೆಗಳು	೧೮

ಸ್ವದೇಶಾಭಿಮಾನಿ.

ತಾ. ೧೨ನೇ ಶುಕ್ರವಾರ ಜುಲೈ ೧೯೩೫

ಯುದ್ಧಾತುರತೆ.

ಇಟಲಿಯು ಯುದ್ಧಸನ್ನದ್ಧವಾಗಿದೆ ಯುದ್ಧವು ಯೂರೋಪೀಯ ಜನಾಂಗಗಳೊಡನೆ ಅಲ್ಲ, ಆಫ್ರಿಕದಲ್ಲಿ ಎಷ್ಟೋ ಶತಮಾನಗಳಿಂದ ಸ್ವತಂತ್ರವಾಗಿರುತ್ತಿರುವ ಅಬಿಸೀನಿಯ ರಾಜ್ಯದೊಡನೆ' ಆ ರಾಜ್ಯದ ಗಡಿನಾಡಿನಲ್ಲಿ ಇಟಲಿಗೆ ಸ್ವಲ್ಪ ಸ್ಥಳವಿದೆ ಮಹಾ ಯುದ್ಧದಲ್ಲಿ ಇಟಲಿಯು ಮಾಡಿದ ಸಹಾಯಕ್ಕಾಗಿ ಇಂಗ್ಲೆಂಡೂ ಫ್ರಾನ್ಸೂ ತಮತಮಗೆ ಕೆಂಪು ಸಮುದ್ರ ತೀರದಲ್ಲಿರುವ ನಾಡುಗಳಿಗೆ ಸಮೀಪದಲ್ಲಿ, ಇಟಲಿಗೂ ಇಷ್ಟು ರಾಷ್ಟ್ರವನ್ನು ಕೊಟ್ಟವೆ ಇದಾದ ಬಳಿಕ, ಇಂಗ್ಲೆಂಡಿಗೆ ಸೇರಿದ ಜರ್ಮನಿಯ ವಸಾಹತುಗಳೂ, ಫ್ರಾನ್ಸಿಗೆ ಸೇರಿದ ಜರ್ಮನ್ ತುಂಡೂ ಬಹಳವಾಗಿ ಲಾಭದಾಯಕವಾದುದೆಂದು ಇಟಲಿಗೂ ತೋರಿಬರಲು ಆರಂಭವಾಯಿತ ಇಟಲಿಯು ಅದಕ್ಕಾಗಿ ತನ್ನ ಸಾಮ್ರಾಜ್ಯವನ್ನು ಅಲ್ಲಿ ಸ್ಥಾಪಿಸಲೆಳಸಿ ಈ ಮಹತ್ವಾಕಾಂಕ್ಷೆಯನ್ನು ಪೋಷಿಸ ತೊಡಗಿತ್ತು ಯುರೋಪಿನಲ್ಲಿ ಜರ್ಮನ-ಫ್ರೆಂಚ್ ಮತ್ತು ಇತರ ದ್ವಂದ್ವಗಳ ಹೋರಾಟವು ನಡೆವಾಗ, ತೆಂಕಣ ಯುರೋಪಿನಲ್ಲಿ ಅಧಿನಾಯಕತ್ವವನ್ನು ಇಟಲಿಯೇ ತಳೆದು, ಮಧ್ಯ ಜನಾಂಗಗಳಲ್ಲಿ ಮೇಲುಮೇಲಕ್ಕೆ ಎದ್ದು ಬರುತ್ತಿರಲು ಫ್ರಾನ್ಸಿನೊಡನೆ ಕರಾರು ಮೂಲಕ, ಫ್ರಾನ್ಸಿಗೆ ಸೇರಿಯೂ ಬ್ರಿಟಿಷ ವಸಾಹತಿಗೆ ಸಮೀಪವೂ ಇರುವ ಆಫ್ರಿಕದಲ್ಲಿನ ಮರಳು ಕಾಡಿನಲ್ಲೊಂದು ತುಂಡನ್ನೂ ಇಟಲಿಗೆ ಸೀದಾ ತೆಂಕಲಿಗಿರುವ ತುಂಡೊಂದನ್ನು ಇಟಲಿಯು ವಶಪಡಿಸಿಕೊಂಡಿತು ಇನ್ನು ನಡುವೆ ಇರುವುದೆಂದರೆ ಅಬಿಸೀನಿಯಾ, ಅಲ್ಲಿ 'ತೋಳನೂ ಕುರಿಮರಿಯೂ' ಎಂಬ ಕಟ್ಟು ಕಥೆಯ ಅಭಿನಯವಾಯಿತು ಕುರಿಮರಿಯು ತಪ್ಪು ಮಾಡಿಲ್ಲವೆಂದು ಜನಾಂಗ ಸಂಘಕ್ಕೆ ತಿಳುಹಿ, ತೋಳನ ಬಾಯಿಂದ ಕಾಪಾಡಬೇಕೆಂದಿತು ರಾಜಿಪ್ರಸ್ತಾವವಾಯಿತು ಅಬಿಸೀನಿಯವನ್ನು ಸುಧಾರಣೆಗೊಳಿಸಲು ಯೋಗ್ಯ ಅನುಕೂಲತೆಗಳನ್ನು ಕೊಟ್ಟಿಲ್ಲದೆ, ಇಟಲಿಗೆ ಸಮಾಧಾನವಾಗದೆಂದು ಸಾರಲಾಯಿತು ಜನಾಂಗ ಸಂಘವು ನೇಮಿಸಿದ ಕಮಿಶನು, ತೋಳ ಕುರಿಮರಿಗಳೊಳಗಣ ಜಗಳದ ವಿಚಾರಣೆಯನ್ನು ಇನ್ನೂ ಮಾಡುತ್ತಿರುವಾಗಲೇ ಸರ್ವತಂತ್ರ ಸ್ವತಂತ್ರನಾದ ಮುಸ್ಸೊಲಿನಿಯು "ಹಿಂತೆಗೆವುದಿಲ್ಲ, ಸಂಪೂರ್ಣ ಸಮಾಧಾನವಾಗಬೇಕಾಗಿದೆ, ಕಪ್ಪು ಬಣ್ಣದ ಜನಗಳೊಡನೆ ಇಟಲಿಯು ಕಾದು ಎಂದೋ ಒಮ್ಮೆ ಮಾತ್ರ ಸೋತಿದೆ, ಈಗೆಲ್ಲವೂ ಕಾದು ಗೆಲ್ಲುವುದಕ್ಕೆ ಸಿದ್ಧವಾಗಿದೆ, ಯುದ್ಧದ ವರೆಗೆ ಸರ್ತ' ಎಂದು ಸಾರುತ್ತ, ಈ ಅಭಿನಯದ ಕಾಲದಲ್ಲಿ ತಾಸಿದ್ದ ವಿಮಾನಕ್ಕೆ ಸಿಡಿಲು ಬಡೆದರೂ, ತನಗೆ ಅಪಾಯವಿಲ್ಲದರಿಂದ, ದಿಗ್ವಿಜಯಕ್ಕೇನೂ ಅವಲಕ್ಷಣವಿಲ್ಲೆಂದು, ಇನ್ನೂ ಇನ್ನೂ ಸೇನೆಗಳನ್ನು ಆಫ್ರಿಕಕ್ಕೆ ಕಳಿಸಿಕೊಟ್ಟಿರುವನು. ಬ್ರಿಟಿಷರ ನೌಕಾಬಲದಷ್ಟು ತನ್ನದಿರಬೇಕೆಂದೂ 'ಒಂದು ಶರ್ತ. ಹೀಗೆ ಯುದ್ಧವಾಗದೆ ಇಟಲಿಗೆ ತೃಪ್ತಿಯಿಲ್ಲ; ಜನಾಂಗ ಸಂಘವು ತಡೆಗಟ್ಟಿದರೆ, ಅದನ್ನು ತ್ಯಜಿಸಿಯಾದರೂ ಯುದ್ಧ ಮಾಡುವುದು ನಿಶ್ಚಿತವಾಗಿದೆ.

ಸುಧಾರಣೆಗಾಗಿ ಉದ್ಯಮಿಸುವುದೆಂಬ ಉದ್ದೇಶವನ್ನೊಮ್ಮೆ ಸಾರಿದ ಇಟಲಿಯು ಈಗ ಸಮರೋದ್ಯಮದಲ್ಲಿ ಪ್ರವರ್ತಿಸಲಿರುವುದು ವಿಚಿತ್ರವಲ್ಲವೇ? "ನಮ್ಮ ತಪ್ಪಿದ್ದರೆ ಪರಿಹಾರ ಹೇಳಿದಷ್ಟು ಕೊಡಲು ಸಿದ್ಧರಾಗಿದ್ದೇವೆ, ವಿಚಾರಣೆಯಾಗಲಿ" ಎಂದು ಅಬಿಸೀನಿಯವು ಹೇಳುವಾಗ,-"ಸಮರದಿಂದಲ್ಲದೆ ಸಮಾಧಾನವಿಲ್ಲ, ಸಂಧಾನವನ್ನು ಸಾಧಬೇಕು" ಎನ್ನುವ ಇಟಲಿಯು, ಯುರೋಪಿಯ ರಾಷ್ಟ್ರಗಳಲ್ಲಿ ಸಂಭಾವಿತರು ನಡೆದುಕೊಳ್ಳುವ ರೀತಿಯನ್ನೆ ಅವಲಂಬಿಸುತ್ತಿದೆಯೇ? ಇಂಗ್ಲೆಂಡಿನ ಸರಕಾರವು, ಈ ನಡುವೆ,ನಮ್ಮದೊಂದು ತುಂಡನ್ನು ನಿಮಗೆ ಕೊಡುತ್ತೇವೆ ಕೈಯೆತ್ತದಿರಿ, ಎಂದು ಇಟಲಿಯ ಸಮಾಧಾನಕ್ಕಾಗಿ ನಿವೇದಿಸಿಕೊಂಡುದೇಕೆ? ಇಟಲಿಯ ಪತ್ರಿಕೆಗಳು "ಅಬಿಸೀನಿಯಕ್ಕೆ ಯುದ್ಧ ಸರಂಜಾಮುವನ್ನು ಇಂಗ್ಲೆಂಡು ಕಳಿಸುತ್ತಿದೆಯಲ್ಲಾ" ಎಂದು ಗುಲ್ಲೆಬ್ಬಿಸಿದುದೇಕೆ? ಆ ನಿವೇದನೆಗೂ, ಈ ಗುಲ್ಲಿಗೂ ತಾತ್ಕಾಲೀಯವಾದ ಸಂಬಂಧವಾದರೂ ಇರುವುದೆ?

ಅಬಿಸೀನಿಯದ ಮೇಲೆ ಸಾರ್ವಭೌಮಾಧಿಕಾರವನ್ನು ತನಗೊಪ್ಪಿಸಬೇಕೆಂದು ಇಟಲಿಯು ಹಟವಿದೆ, ಇಟಲಿಯ ಜನಸಂಖ್ಯೆ ಹೆಚ್ಚುತ್ತಲೇ ಇದೆ, ಸರಕಾರವೇ ಪ್ರೋತ್ಸಾಹ ವಹಿಸಿ, ಸಾವಿರ ಗಟ್ಟಲೆಯಾಗಿ ಆಗಾಗ ವಿವಾಹ ಮಾಡಿಸುತ್ತಿದೆ ಆ ಜನಾಧಿಕ್ಯತೆಗೂ ಈ ಯುದ್ಧಾತುರತೆ ಸಾಮ್ರಾಜ್ಯಲಾಲಸೆಗಳಿಗೂ ಗಂಟಿಕ್ಕುವುದೆ? ಯುರೋಪಿನಲ್ಲಿ ಹೀಗೆಂದರೆ ಚೀನವನ್ನು ನುಗ್ಗಿ, ಅದಕ್ಕೆ ಕಂಕಣ ಗ್ರಹಣ ಹಿಡಿದು, ಮಂಚೂರಿಯದ ತುಂಡನ್ನು ಪ್ರತ್ಯೇಕಿಸಿ ತನ್ನ ಅಂಕೆಯಲ್ಲಿಟ್ಟುಕೊಂಡಿರುವ ಜಾಪಾನು ಏನು ಅನ್ಯಾಯ ಮಾಡಿತೆಂದು ಯಾವ ಯುರೋಪಿಯ ಸರಕಾರವು ತಾನೆ ಹೇಳಬಲ್ಲುದು?

ಜಸ್ಟಿಸ್ ಪಾರ್ಟಿಯ ಮಹಾತ್ಮೆ

ಮುಂದೆ ಚುನಾವಣೆಯುಂಟಾದಲ್ಲಿ ಸರ್ವತ್ರವೂ ವಿಜಯಿಗಳಾಗಬೇಕೆಂಬ ಆಸೆಯಿಂದ, ಜಸ್ಟಿಸ್ ಸಂಗಡದವರು ಜಿಲ್ಲೆ ಜಿಲ್ಲೆಗಳಲ್ಲಿ ಸಭೆಗೂಡಿಸಿ, ತಮ್ಮ ಮಹಾತ್ಮೆಯನ್ನು ಸಾರುತ್ತಿದ್ದಾರೆ ಕೌನ್ಸಿಲಿನಲ್ಲೂ ಎಸೆಂಬ್ಲಿಯಲ್ಲೂ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಜಸ್ಟಿಸ್ ಪಕ್ಷದವರಿಗೆ ಸಿಂತಲ್ಲಿ ಜಯವಿಲ್ಲ, ಇದರ ಕಾರಣ, ಪಕ್ಷದಲ್ಲಿ ಒಡಕು ಹುಟ್ಟಿದೆ ಎಂದೂ, ಆ ಒಡಕನ್ನು ಸರಿಪಡಿಸಿಯೂ ಮಹಾತ್ಮೆಯನ್ನು ಸಾರಿಯೂ ಇದಿರಾಳಿಗಳ' ಇಲ್ಲದಂತೆ ಮಾಡಬೇಕೆಂದೂ ಈಗ ಪ್ರಚಂಡ ಹರಿಕಥೆಗಳಿಗೆ ಪ್ರಾರಂಭವಾಗಿದೆ ಜಿಲ್ಲಾ ಬೋರ್ಡು ಮುನಿಸಿಪಾಲಿಟಿಗಳನ್ನು ಸೂತ್ರದ ಗೊಂಬೆಗಳಂತೆ, ಕಮಿಶನರುಗಳ ಕೈಯಲ್ಲಿಟ್ಟಿದೆ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವಾಗಲು ಅನುಕೂಲವಾದ ಶಾಸನ್ನ ಮಾಡಿ, ಹಣವಿಲ್ಲದೆ, ಮುನ್ನಡೆಯಲಾರದೆ, ಆಕ್ರಿನ ಸುಗುಣಗಳನ್ನು ಹೊಗಳುತ್ತಿದೆ, ಖಾಸಗಿ ಮಂಬರುಗಳಿಗೆ ವಿಶ್ವವಿದ್ಯಾನಿಲಯದ ಮೇಲ್ವಿಚಾರಣೆಯಲ್ಲಿ ಎಡೆಕೊಟ್ಟು, ಗ್ರೇಟನ್ನು ಕಡಮೆಮಾಡುತ್ತ ಬರಲಿದೆ; ಸಹಕಾರೀ ಸಂಘಗಳ ಬಗ್ಗೆ ಅದವಿನ ಬೇಂಕುಗಳನ್ನು ಸೃಷ್ಟಿಸಿ, ಇನ್ನು ಆಸ್ತಿ ಅಡವು ಇಡಲು, ಸುಲಭಮಾಡಿಟ್ಟಿದೆ, ಪನಗಲ್ ರಾಜರ ಕಾಲದಿಂದಂತೂ ಜಾತಿವಾರು ನೇಮಕಗಳ ಪರಂಪರೆಯಾಗಿ ಚಲ್ಲರೆ ಸಾಕಿರಲಿ,-ತಿರುಪತಿ ವೆಂಕಟರಮಣನ ಆಡಳಿತದ ಏರ್ಪಾಡೂ ಇವರದೇ-ಇಷ್ಟನ್ನೆ ಸಾರುತ್ತ, ಕೊಂಗ್ರೆಸ್ ಪಕ್ಷವನ್ನು ದೂರುತ್ತ ಹರಿಕಥೆಗಳಾಗುತ್ತಿವೆ

ಮೈಸೂರು ಮಹಾರಾಜರವರು

ಸ್ವಲ್ಪ ಆರೋಗ್ಯ ಕೆಟ್ಟುದರಿಂದ ಕುದುರೆ ಜೂಜಿನ ಕಾಲಕ್ಕೆ ದಯಮಾಡಿಸಲಾಗಲಿಲ್ಲವೆಂದು ಜುಲೈ ತಾ ೧೦ರಲ್ಲಿ ಪ್ರಕಟವಾದಂದಿನಿಂದ, ದೇವರ ದಯೆಯಿಂದ, ಅವರು ಆರೋಗ್ಯ ಲಾಭವನ್ನು ಮಾಡಿಕೊಳ್ಳುತ್ತ ಬರುತ್ತಾರಾಗಿಯೂ, ಇನ್ನೊಂದೆರಡು ವಾರಗಳ ಅವಕಾಶದಲ್ಲಿ ಸಂಪೂರ್ಣ ಕ್ಷೇಮವನ್ನು ಪಡೆಯುವರೆಂದೂ ಅಭಯವನ್ನು ಸೂಚಿಸುವ ವಾರ್ತೆಯು ಈಗ, ಅವರ ಪ್ರಜಾಗಣಕ್ಕೂ ಕನ್ನಡಿಗರೆಲ್ಲರಿಗೂ ತುಂಬ ಸಂತೋಷವನ್ನೂ ಧೈರ್ಯವನ್ನೂ ಉಂಟುಮಾಡದಿರದು ಮಹಾರಾಜರಿಗೆ ಸಣ್ಣನೆ ಜಾಡ್ಯವು ತಲೆದೋರಿತು ಕೂಡಲೇ ಪ್ರಜಾವರ್ಗದ ನಾಡಿ ಬಡಿಯುವುದೇ ನಿಂತಂತಾಯಿತು. ಮಾದರಿ ಸಂಸ್ಥಾನವನ್ನು ೨೫ ವರ್ಷಗಳಿಗೆ ಮೇಲ್ಪಟ್ಟು ಬಹಳ ಚೆನ್ನಾಗಿ ಪ್ರಜಾಗಣದ, ಕ್ಷೇಮಾಭ್ಯುದಯಕ್ಕಾಗಿಯೆ ಸಾಧಿಸಿ ಆಳುವುದಕ್ಕೆ ನಿರಂತರವಾಗಿ ಚಿಂತನೆಗೊಳಪಟ್ಟಿರುವ ಮಹಾರಾಜರು, ಅಳ್ತಿಕೆಯ ಕಾರ್ಯಗೌರವದಿಂದಾಗಿ ಹೀಗೆ ದಣಿದುದರಿಂದಲೇ ಈಗ ಅವರಿಗೆ ಎರಡು ವಾರಗಳ ವಿಶ್ರಾಂತಿಯು ಅತ್ಯವಶ್ಯಕವೇ ಆಗಿದೆ ಇನ್ನು ಅವರು ತ್ವರೆಯಲ್ಲಿ ಆರೋಗ್ಯ ಲಾಭವನ್ನು ಹೊಂದಿ ಇನ್ನಷ್ಟು ಧಾರಾಳವಾಗಿ ಪ್ರಜಾಕೋಟಿಯನ್ನು ಪಾಲಿಸುತ್ತ, ಬಹುಕಾಲವೂ ಆಳುತ್ತಿರಲೆಂದೇ ಕನ್ನಡಿಗರು ಭಗವಂತನಲ್ಲಿ ಪ್ರಾರ್ಥಿಸಿಕೊಳ್ಳುತ್ತಿರುವರು

ಮುಸ್ಲಿಮರ ವಿಷಯ ದುರಭಿಪ್ರಾಯಗಳು

ಉಂಟಾಗಲು ಮುಖ್ಯ ಕಾರಣವೆಂದರೆ, ಇಸ್ಲಾಮಿನ ಇತಿಹಾಸವನ್ನೆ ತಪ್ಪಾಗಿ ರಚಿಸಿದುದೂ, ಬೋಧಿಸಿದುದೂ ಆಗಿದೆ ಇಸ್ಲಾಮ್ ಎಂಬ ಶಾಂತಿಸಾಧಕ ಮತದ ತತ್ವಗಳನ್ನಾಗಲಿ, ಮುಸ್ಲಿಮರು ರಾಜ್ಯಗಳನ್ನು ಸಂಪಾದಿಸಿದ ರೀತಿಯ ಸತ್ಯತೆಯನ್ನಾಗಲಿ ಸರಿಯಾಗಿ ತಿಳಿಯದವರೂ ಇತರ ಧರ್ಮಗಳೂ ಇತರ ರಾಜತ್ವಗಳೂ ಉತ್ತಮವೆಂದು ಪಕ್ಷಪಾತದಿಂದ ತೋರಿಸುವ ಉದ್ದೇಶವುಳ್ಳವರೂ ಬರೆದಿರುವ ಹಾಳು ಇತಿಹಾಸಗಳನ್ನು ಓದಿಯೆ, ಕಲಿಸಿಯೆ ಈ ದುರಭಿಪ್ರಾಯಗಳು ಉಂಟಾಗಿವೆ ಇವುಗಳಿಂದಾಗಿ ಮುಸ್ಲಿಮರಿಗೂ ಇತರ ಸಮಾಜಗಳಿಗೂ ಆಗಾಗ ಕ್ಲೇಶಗಳುಂಟಾಗುವುವು ಯುದ್ಧದಲ್ಲಿ ಸೆರೆ ಹಿಡಿದವರನ್ನು ಸ್ವಮತಕ್ಕೆ ಸೇರಿದರೆ ಮುಸ್ಲಿಮರು ಬಿಡುಗಡೆ ಮಾಡಿದ್ದಿರಬಹುದು, ಹೊರತು, ಕೊಂದೇ ಹಾಕುವೆವೆಂದು ಬೆದರಿಸಿ ಮತಪ್ರಚಾರವನ್ನು ಮುಸ್ಲಿಮರು ಮಾಡಿರಲಿಕ್ಕಿಲ್ಲ ಟಿಪ್ಪು ಸುಲ್ತಾನನಾಗಲಿ ಹೈದರಲ್ಲಿಯಾಗಲಿ, ಎಷ್ಟೋ ಹಿಂದೂ ದೇವಾಲಯಗಳಿಗೂ ಮಠಗಳಿಗೂ ಬೇಕಾಗುವಷ್ಟು ಉಂಬಳಿ ಬಿಟ್ಟಿರುವುದು ತಿಳಿದೇ ಇರುವಾಗ, ಹಿಂದೂ ದ್ವೇಷವು ಅವರಲ್ಲಿತ್ತೆಂದು ಧೈರ್ಯದಿಂದ ಹೇಳುವ ಚರಿತ್ರೆ ಪುಸ್ತಕಗಳನ್ನು ಇನ್ನೂ ಕಲಿಸುತ್ತಿರಬೇಕೇ?

ಆದರೂ ಮತಕ್ಕನುಸಾರ ಬುದ್ಧಿವಂತಿಕೆ ಉಂಟಾಗುವುದೇ?

ಪಂಜಾಬಿನ ಹಿಂದುಗಳು ಸರಕಾರಕ್ಕೊಂದು ಮನವಿ ಕಳಿಸಿರುವರು. "ಮತವೊಂದೇ ಮಾತ್ರ ಉತ್ತಮ ಡೈವರರನ್ನೂ ಗಾರ್ಡರನ್ನೂ ಗುಮಾಸ್ತರನ್ನೂ ಸ್ಟೇಶನು ಮಾಸ್ತರರನ್ನೂ ಆಡಳಿತದಾರರನ್ನೂ ಉಂಟುಮಾಡುವುದೆಂದು ನಂಬುವಿರಾದರೆ, ಈ ಮನವಿಯನ್ನೋದುವ ಅಗತ್ಯವಿಲ್ಲ" ಎಂದೇ ಅವರ ಅರಿಕೆ ಒಂದೇ ಸಮನಾದ ಯೋಗ್ಯತೆಯುಳ್ಳವರಲ್ಲಿ, ಅಥವಾ ಹೆಚ್ಚುಕಡಿಮೆಯಿದ್ದರೂ, ನೂರು ಉಮೇದುವಾರರಲ್ಲಿ ೮೦ ಮಂದಿ ಮುಸ್ಲಿಮರಿಗೂ ೨೦ ಮಂದಿ ಹಿಂದುಗಳಿಗೂ ಅಲ್ಲಿ ಕೆಲಸಕ್ಕೆ ನೇಮಿಸಬಹುದಾಗಿ ರೈಲ್ವೆಯಲ್ಲಿ ಆಜ್ಞೆ ಹೊರಟಿರುವುದಂತೆ! ರೈಲ್ವೆಗಳೆಂದರೆ, ಅವು ಸಾರ್ವಜನಿಕ ವ್ಯಾಪಾರ ಸಂಘಗಳು ಎಂದು ಎಲ್ಲರೂ ಒಪ್ಪುವರು, ಇವುಗಳಲ್ಲಿ ಗಿರಾಕಿಗಳು ಎಲ್ಲರೂ ಬೇಕು, ಧನಿಯ ಕೆಲಸಕ್ಕೆ ಮಾತ್ರ ಇಂತಹದೊಂದೇ ಮತದವರು ಇಂತಿಷ್ಟು ಅಧಿಕ ಪ್ರಮಾಣದಲ್ಲಿ ಬೇಕು ಎಂದರೆ ಆದೀತೆ? ರೈಲ್ವೆಯಲ್ಲಿ ಕೆಲಸ ಮಾಡುವವರಿಗೆ ಅಗತ್ಯವಿರ ವ ನಿಪುಣತೆಯು, ಯಾವುದೊಂದು ಜಾತಿಗೆಂದೇ ಗುತ್ತಿಗೆ ಕೊಟ್ಟುದಲ್ಲವಷ್ಟೆ' ಹಿಂದುಗಳೇನು, ಇತರರೇನು? ಯೋಗ್ಯರೂ ನಿಪುಣರೂ ಆಗಿರುವರೇ ಮಾತ್ರ ಈ ಕೆಲಸಕ್ಕೆ ಅರ್ಹರಾಗಬೇಕಲ್ಲದೆ, ಹುಟ್ಟಿದ ಅಥವಾ ಸೇರಿಕೊಂಡ ಜಾತಿ ಇಂತಹದೆಂದು ಮಾತ್ರ ಅರ್ಹತೆ ಉಂಟಾಗುವುದೆ? ಎಂದು ಮನವಿಯು ಮಾತು.

ಅಲ್ಪಾವಧಿಗೆ ಸೆರೆಮನೆ:

ಕೆಲವೇ ತಿಂಗಳುಗಳ ತನಕ, ತಪ್ಪಿತಸ್ಥರನ್ನು ಜೈಲಿಗೆ ಕಳುಹುವುದು ಅನವಶ್ಯಕವಾದ ಖರ್ಚಿಗೂ ಕೇವಲ ಆಡಂಬರಕ್ಕೂ ಕಾರಣವಾಗುವುದೆಂದೂ, ಅದರ ಬದಲಾಗಿ 'ಪ್ರೊಬೇಶನ್ ಕ್ರಮದಲ್ಲಿ ದಂಡನೆ ವಿಧಿಸಿದಲ್ಲಿ ಉತ್ತಮ ಪರಿಣಾಮಗಳುಂಟಾಗಿವೆ ಎಂದೂ, ಇಂಗ್ಲೆಂಡಿನ ಜೈಲುಗಳನ್ನು ವಿಮರ್ಶಿಸಿದವರೊಬ್ಬರ ಅಭಿಪ್ರಾಯವಿದೆ ನಮ್ಮ ಸಂಸ್ಥಾನದ ಜೈಲುಗಳ ಆಡಳಿತದ ರಿಪೋರ್ಟಿನಲ್ಲಿ ಇವೆರಡೂ ಕ್ರಮಗಳನ್ನು ಹೋಲಿಸಿ ಟೀಕಿಸಿದ್ದುಂಟು ಈ ಸಂಸ್ಥಾನದಲ್ಲಿ 'ಪ್ರೊಬೇಶನ್ ಆಕ್ಟನ್ನು' ಬೇಗನೆ ಜ್ಯಾರಿಗೆ ತರುವ ವ್ಯವಸ್ಥೆ ಮಾಡುವರೆ ಸರಕಾರವು ನಿರ್ಧರಿಸಿದೆ ಎಂದು ಇಲಾಖೆಯು ತರಾಬರೆದಿದೆ ಕಳೆದನೇ ಇಸವಿಯಲ್ಲಿ, ಚಿಲ್ಲರೆ ಅವಧಿಗೆ ಜೈಲು ದಂಡನೆ ಪಡೆದವರ ಸಂಖ್ಯೆಯು ಹಿಂದಣ ವರ್ಷಗಳಿಗಿಂತ ಹೆಚ್ಚಾಗಿದೆ ಎಳೆಯವರಿಗೆ ಜೈಲು ಸ್ಕೂಲು ಇದೆ, ಮೊದಲು ತಪ್ಪಿತಸ್ಥರಿಗೆ ಜುಲುಮಾನೆ ಅದನ್ನು ತೆರದಿದ್ದಲ್ಲಿ ಜೈಲು ಅಲ್ಪಾವಧಿಗೆ ಜೈಲುದಂಡನೆ ಕೂಡ ದೆಂದರೆ, ದೀರ್ಘಾವಧಿಗೆ ಸೆರೆಮನೆಗೆ ಕಳುಹಬೇಕಾಗುವುದ ಇದು ನ್ಯಾಯವಾಗುವುದಿಲ್ಲ ಅಲ್ಪಾವಧಿ ದಂಡನೆಯಿಂದ ತಪ್ಪಿತಸ್ಥನು ಜೈಲು ವಾಸಕ್ಕೇ ತಿರುಗ ಬಂತೆ ಕೆಡುವ ಸಂಭವ ಹೆಚ್ಚು ಅದಕ್ಕೆ ಬದಲಾಗಿ ಪ್ರೊಬೇಶನ್ ಕ್ರಮ ಸರಿ ಎಂದು ಸರಕಾರವು ಒಪ್ಪಿಕೊಂಡು ಹೊಸ ಆಕ್ಟನ್ನು ಮಾಡುವುದರಲ್ಲಿದೆ

ಲವಂಗದ ವ್ಯಾಪಾರವು

ಮುಖ್ಯವಾಗಿ ಜೆಂಝಿಬಾರ್ ದ್ವೀಪದಲ್ಲಿ ಆಗುವುದು ಇದು ಅಲ್ಲಿನ ಇಂಗ್ಲಿಷ ವರ್ತಕರ ಕೈಯಲ್ಲಿರದೆ, ಇಲ್ಲಿಂದ ಅಲ್ಲಿಗೆ ಹೋಗಿ ಉಳುಕೊಂಡಿರುವ ಹಿಂದೀಯರ ವ್ಯಾಪಾರವಾಗಿದೆ ಈಗ, ಹಿಂದೀಯರನ್ನು ಈ ವ್ಯಾಪಾರದಿಂದ ತಪ್ಪಿಸುವ ಹಾಗೆ,ಆ ಸರಕಾರವು ಪ್ರಯತ್ನಪಟ್ಟು ಹೊಸ ಕಾನೂನು ಮಾಡಿರುವುದು ಹಿಂದೀಯರ ದೂರು ಇಂಡಿಯಾ ಸರಕಾರಕ್ಕೆ ಮುಟ್ಟಿದಾಗ, ವಿಚಾರವಾಯಿತು, ಕಮಿಶನಾಯಿತು, ರಿಪೋರ್ಟಾಯಿತು ವ್ಯಾಪಾರಕ್ಕೆ ಮೊದಲಾಗುವುದು ಜುಲಾಯಿಯಲ್ಲಿ, ಈಗ ಪೋಣೋಣವೆಂದು ಮಾರ್ಚಿಯಲ್ಲಿ ಹೇಳಿದ್ದಿತು. ಆದರೂ ಇನ್ನೂ ಈ ಹಿಂದೀಯರ ದೂರಿನ ಇತ್ಯರ್ಥವಾಗಿಲ್ಲ' ಜೆಂಝಿಬಾರಿನ ಲವಂಗಕ್ಕೆ ಮುಖ್ಯ ಗಿರಾಕಿಗಳು ಹಿಂದೀಯರೆ ಆಗಿರುವ ಪ್ರಯುಕ್ತ, ಆ ಲವಂಗದ ಮೇಲೆ ಅತಿರೇಕ ಸುಂಕವನ್ನು ಹೊರಿಸಿ, ಆ ವ್ಯಾಪಾರವೇ ಇಲ್ಲಿಯಾಗದಂತೆ ಮಾಡುವುದು ಅತಿ ಕಠಿನವಾದ ಪ್ರತಿಕ್ರಿಯೆಯಾದರೂ, ಹಾಗೆ ಮಾಡುವಂತೆ ನಿಶ್ಚಯಿಸಲಾದೀತೆಂದು ಸರಕಾರವು ಆ ದ್ವೀಪಕ್ಕೆ ತಿಳಿಸಿದರೇ, ಅಷ್ಟರೊಳಗೆ ಅಲ್ಲಿ ವಿವೇಕವುಂಟಾಗಿ, ಹಿಂದೀ ವರ್ತಕರಿಗೆ ಉಂಟಾಗಿರುವ ಬಾಧೆಯು ಕಡಿಮೆಯಾದೀತಲ್ಲ?

ಈ ವಾರದ ತಂತಿವಾರ್ತೆಗಳು.

ಬ್ರಿಟಿಷ್ ಸಾಮಾನುಗಳ ಮೇಲೆ ಸುಂಕ

ವಿಚಾರಣೆ ನಡೆಸಲು ಟಾರಿಫ್ ಬೋರ್ಡಿನ ಆಜ್ಞೆ.

ಮುಂಬೈ,

ಭಾರತೀಯ ನೇಯಿಗೆ ಕೈಗಾರಿಕೆಯ ಸಂಬಂಧವಾಗಿ ಆಗಸ್ಟಿನಲ್ಲಿ ವಿಚಾರಣೆ ನಡೆಸಲು ಇಂಡಿಯನ್ ಟಾರಿಫ್ ಬೋರ್ಡಿಗೆ ಇಂಡಿಯಾ ಸರಕಾರವು ತಿಳಿಸಿರುವುದಾಗಿ ಗೊತ್ತಾಗಿದೆ. ಬ್ರಿಟಿಷ್ ಹತ್ತಿ ಕೈಗಾರಿಕೆ ಸಾಮಾನುಗಳ ಮೇಲಿನ ಸುಂಕದ ಅವಧಿಯು ಮುಂದಿನ ಡಿಸೆಂಬರ್ ಹೊತ್ತಿಗೆ ಮುಗಿಯುವುದು ಆದ್ದರಿಂದಲೇ ಈ ಪ್ರಯತ್ನವೆಂದು ಹೇಳಲಾಗಿದೆ ಈಗ ಟ್ಯಾರಿಫ್ ಬೋರ್ಡಿನವರು ಬ್ರಿಟಿಷ್ ಹತ್ತಿ ಕೈಗಾರಿಕೆ ಸಾಮಾನುಗಳ ಮೇಲಿನ ಸುಂಕದ ವಿಷಯವಾಗಿ ಸಂಪೂರ್ಣ ವಿಚಾರಣೆ ನಡೆಸಬೇಕೆಂದು ಟಾರಿಫ್ ಬೋರ್ಡಿಗೆ ತಿಳಿಸಿರುವರು. ಈಗಿನ ಸುಂಕದ ದರದಲ್ಲಿ ಎಷ್ಟು ಬದಲಾವಣೆ ಮಾಡಬೇಕು ಎಂಬ ವಿಷಯವನ್ನು ಪರಿಶೀಲಿಸಬೇಕಾಗಿದೆ. ಸದ್ಯಕ್ಕೆ ಟಾರಿಫ್ ಬೋರ್ಡಿನ ಅಧ್ಯಕ್ಷ ಮತ್ತು ಸದಸ್ಯರನ್ನು ಬದಲಾಯಿಸಬೇಕೆಂಬ ಊಹೆಯಿದೆ

ಮುನಿಸಿಪಲ್ ಆಯವ್ಯಯ

ಮೈಸೂರು,

ಮೈಸೂರು ಪೌರಸಭೆಯ ಮ್ಯಾನೇಜಿಂಗ್ ಸಮಿತಿಯವರಿಂದ ಒಪ್ಪಲಾಗಿರುವ ಪೌರಸಭೆಯ ಮುಂದಿನ ಸಾಲಿನ ಆಯವ್ಯಯವು ಇದೇ ಮಾಹೆ ೧೬ನೇ ತಾರೀಕಿನ ದಿನ ನಡೆಯಲಿಕ್ಕಿರುವ ಪೌರಸಭಾ ಮೀಟಿಂಗಿನಲ್ಲಿ ಪರ್ಯಾಲೋಚನೆಗೆ ಬರುವುದು ಅನೇಕ ವರ್ಷಕಾಲ ಪೌರಸಭೆಯ ಆರ್ಥಿಕ ಸ್ಥಿತಿಯು ಸಮರ್ಪಕವಾಗಿತ್ತೆಂದೂ ಇತ್ತೀಚೆಗೆ ಮಾತ್ರ ಸುಮಾರು ೩೦—೭೦ ಸಾವಿರ ರೂಪಾಯಿ ಕಡಿಮೆ ಬಂದಿದೆಯೆಂದೂ ಗೊತ್ತಾಗಿದೆ. ಆಯವ್ಯಯವನ್ನು ಸರಿಪಡಿಸಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಕಬ್ಬಿಣದ ಸಾಮಾನು, ಸಾಬೂನು ಮತ್ತು ಸುಗಂಧ ದ್ರವ್ಯ ಮುಂತಾದವುಗಳ ಮೇಲೆ ಆಕ್ಟ್ರಾಯ್ ಸುಂಕ ಹಾಕಿದರೆ ಆದಾಯ ಹೆಚ್ಚುತ್ತದೆ ಟಬ್ಬದ ಬಂಡಿಗಳಲ್ಲಿ ರಸ್ತೆಗಳನ್ನು ದುರುಸ್ತು ಮಾಡುವುದು, ಡ್ರೈನೇಜ್ ಮತ್ತು ಸಾರ್ವಜನಿಕ ಆರೋಗ್ಯ ಕೆಲಸಗಳನ್ನು ನಡೆಯಿಸಿಕೊಂಡು ಬರುವುದು ಮುಂತಾದುವುಗಳಲ್ಲದೆ ಒತ್ತಟ್ಟಿಗಿರುವ 'ಸ್ಲಂ' ಸ್ಥಳಗಳನ್ನು ಉತ್ತಮಪಡಿಸುವುದರಲ್ಲಿ ಸ್ವಲ್ಪ ಕೆಲಸ ಮಾಡಲಾಗುತ್ತದೆ ಅದಕ್ಕೆ ೮೦೦೦ ರೂಪಾಯಿಗೆ ಅಂದಾಜು ಮಾಡಲಾಗಿದೆ ಕಚಡಾ ಸಾಗಿಸಲು ರಬ್ಬರ್ ಟೈರ್ ಹಾಕಿರುವ ಗಾಡಿಗಳನ್ನು ಕೊಂಡುಕೊಳ್ಳಲು ಏರ್ಪಾಡು ಮಾಡಲಾಗಿದೆ. ನಗರದಲ್ಲಿರುವ ಇಲಿಗಳನ್ನು ನಾಶಮಾಡಲು ೫೦೦೦ ರೂಪಾಯಿಗಳ ಅಂದಾಜನ್ನು ತಯಾರಿಸಲಾಗಿದೆ ಇಲಿಗಳನ್ನು ಬೋನಿನಲ್ಲಿ ಹಿಡಿಯುವುದು, ಇಲಿ ಬಿಲಗಳಿಗೆ ಸೈನೋಗ್ಯಾಸ್ ಬಿಡುವುದು, ಇಲಿ ಬಿಲಗಳನ್ನು ಒಡೆದು ಹಾಕುವುದು ಮುಂತಾದ ಕೆಲಸಗಳನ್ನು ನಡೆಸಬೇಕಾಗುತ್ತದೆ ಸಾರ್ವಜನಿಕ ಉಪಯೋಗಕ್ಕಾಗಿ ನಗರ ಮಂದಿರದ ಆವರಣದಲ್ಲಿ ಒಂದು ಲೌಡ್ ಸ್ಪೀಕರ್ ಹಾಕಬೇಕೆಂದೂ ಅದಕ್ಕಾಗಿ ಒಂದು ಒಳ್ಳೇ ವೈರ್‌ಲೆಸ್ ಸೆಟ್ ಕೊಂಡುಕೊಳ್ಳಬೇಕೆಂದೂ ೩೫೦೦ ರೂಪಾಯಿ ಅಂದಾಜು ಮಾಡಲಾಗಿದೆ. ಇರ್ವಿನ್ ನಗರದಲ್ಲಿ ಒಂದು ಸಣ್ಣ ಮಾರ್ಕೆಟ್ ಕಟ್ಟಬೇಕೆಂದು ಸಲಹೆಯಿದೆ.

ರಾಗಿಣಿ ದೇವಿಯ ಪ್ರಪಂಚ ಪ್ರವಾಸ

ಡೆಲ್ಲಿ,

ಪ್ರಸಿದ್ಧ ಅಮೆರಿಕಾ ನೃತ್ಯಕಾರಳಾದ ರಾಗಿಣೀದೇವಿಯು ಕಥಾಕಳಿ ನೃತ್ಯವೃಂದದೊಡನೆ ಪ್ರಪಂಚ ಪ್ರವಾಸ ನಡೆಸಲು ಪ್ರಯತ್ನಿಸುತ್ತಿದ್ದಾಳೆಂದು ಗೊತ್ತಾಗಿದೆ. ಇವಳು ಸದ್ಯದಲ್ಲಿ ಮಲಬಾರಿನಲ್ಲಿದ್ದಾಳೆ. ಕೊಲಂಬೋವಿನಿಂದ ಪ್ರಾರಂಭ ಮಾಡಿ ಸಿಂಗಪೂರ್, ಚೀನಾ, ಜಪಾನ್, ಅಮೆರಿಕಾ ಸಂಯುಕ್ತ ಸಂಸ್ಥಾನ ಮತ್ತು ಯೂರೋಪಿಗೆ ಹೋಗುವಳು. ಈ ಗುಂಪಿನಲ್ಲಿ ಭಾರತೀಯ ಸ್ತ್ರೀಯರನ್ನೂ ಕರೆದುಕೊಂಡು ಹೋಗುವಳು.

ಕ್ವೆಟ್ಟಾ,

ಮೊನ್ನೆ ದಿನ ೨೪ ಗಂಟೆಗಳಿಂದ ಇಲ್ಲಿ ನಾಲ್ಕಾವರ್ತಿ ಭೂಮಿ ಅದುರಿತು. ಬೆಳಗ್ಗೆ ೩—೧೫ರಲ್ಲಿ ಭೂಮಿಯು ಅದುರಿದಾಗ ಮಾತ್ರ ಅದು ಬಹಳ ಬಿರುಸಾಗಿತ್ತು. ಆ ಸಮಯದಲ್ಲಿ ಕಂಟೋನ್‌ಮೆಂಟ್ ಮತ್ತು ರಿಫ್ಯೂಜಿ ಕ್ಯಾಂಪಿನಲ್ಲಿ ಮಲಗಿದ್ದ ಜನರೆಲ್ಲರೂ ಎಚ್ಚರಗೊಂಡರು

ಹುಬ್ಬಳ್ಳಿ ಸ್ತ್ರೀಯರ ಸಭೆ

ಹುಬ್ಬಳ್ಳಿ ಜುಲೈ ೬

ಹುಬ್ಬಳ್ಳಿ ಭಗಿನೀ ಮಂಡಳದ ಆಶ್ರಯದಲ್ಲಿ ಒಂದು ಮಹಿಳಾ ಸಭೆಯು ನಡೆಯಿತು. ಅವಿಭಕ್ತ ಕುಟುಂಬದಲ್ಲಿ ವಿಧವೆಯರಿಗೆ ದಕ್ಕು ತೆಗೆದುಕೊಳ್ಳುವ ಹಕ್ಕಿನ ಸಂಬಂಧವಾಗಿ ಮಿ। ದೇಸಾಯಿಯವರು ತಂದಿರುವ ಮಸೂದೆಯನ್ನು ವಿರೋಧಿಸುವುದಕ್ಕಾಗಿ ಈ ಸಭೆ ನಡೆಯಿತು. ಮಿಸ್ ಮಾಲತಿಯವರು ಶ್ರೀ ದೇಸಾಯಿಯವರ ಮಸೂದೆಯನ್ನೂ ಈಗ ಸಭೆ ನಡೆಸುತ್ತಿರುವುದರ ಆಶ್ರಯವನ್ನೂ ವಿವರಿಸಿದರು. ಈ ಮಸೂದೆಯಿಂದ ವಿಧವೆಯರ ಹಕ್ಕು ಬಾಧ್ಯತೆಗಳು ಕಡಿಮೆಯಾಗುವುವೆಂದು ಈ ಸಭೆಯಲ್ಲಿ ತೀರ್ಮಾನವಾಯಿತು. ವಿಧವೆಯರಿಗೆ ಸರಿಯಾದ ಭಾಗ ಬರಬೇಕೆಂದು ಈ ಮಂಡಳಿಯು ಒತ್ತಾಯಪಡಿಸಿತು

ಮಿ। ವಾಲವೇಕರ್‌ರವರು ಈಗಿನ ಸ್ತ್ರೀಯರ ಪರಿಸ್ಥಿತಿಯನ್ನು ವಿವರಿಸಿ ಪ್ರಿವಿ ಕೌನ್ಸಿಲಿನವರು ರೂಲಿಂಗ್ ಮಾಡಿದ್ದನ್ನೂ, ಮಿ। ದೇಸಾಯಿಯವರ ಮಸೂದೆಯನ್ನೂ ತಿಳಿಸಿದರು. ಶ್ರೀಮತಿ ಮಿಣಧಾಬಾಯಿ ಸಿರೂರ್‌ರವರು ಅಧ್ಯಕ್ಷತೆ ವಹಿಸಿದ್ದರು [illegible] ಅಧ್ಯಕ್ಷರು ಈ ಸಭೆಯಲ್ಲದ [illegible] ಸದಸ್ಯರುಗಳೂ ಮತ್ತು [illegible] ಕಳ ೬ ಸಲು ಅನ ಷ್ಟೆ ಪಡೆದ ಶ್ರೀಮತಿ ಉಮಾಬಾಯಿ ಕುಂದಾಪುರ ಇವರ ಕೊನೆಯ ಭಾಷಣದೊಡನೆ ಸಭೆಯು ಮುಕ್ತಾಯವಾಯಿತು.

ಗ್ರೀಸ್ ದೇಶದ ಮಾಜಿ ಮಹಾರಾಣಿ.

ದಾಂಪತ್ಯ ವಿಚ್ಛೇದವಾಯಿತು!

ಬುಕಾರೆಸ್ಟ್ ಜುಲೈ ೩

ಗ್ರೀಸ್ ದೇಶದ ಮಾಜಿ ಮಹಾರಾಣಿಯಾದ ಎಲಿಜಬೆತಳು ದಾಂಪತ್ಯ ವಿಚ್ಛೇದ ಮಾಡಬೇಕೆಂದು ಅರ್ಜಿ ಹಾಕಿದಳು ಅವಳನ್ನು ಗಂಡ ದೂರ ಬಿಟ್ಟಿರುವುದೇ ಆಧಾರ. ರುಮೇನಿಯನ್ ಶಾಸನದಂತೆ ಈ ವರ್ತನೆಯು ಮಾನಸಿಕ ಕ್ರೌರ್ಯವೆಂದು ಪರಿಗಣಿಸಲ್ಪಡುತ್ತದೆ

ಬಾಗಿಲು ಹಾಕಿಕೊಂಡು ೫ ಮಂದಿ ನ್ಯಾಯಾಧೀಶರು ಅರ್ಜಿಯನ್ನು ಓದಿದರು ಅವರೆಲ್ಲರೂ ಕೆಂಪಂಗಿಯನ್ನು ಧರಿಸಿದ್ದರು ದ್ವಿಪಕ್ಷಗಳವರೂ ಅಲ್ಲಿರಲಿಲ್ಲ ೨೦ ನಿಮಿಷಗಳ ಕಾಲ ಮಾತ್ರ ನ್ಯಾಯಾಧೀಶರು ಕೆಲಸ ಮಾಡಿದರು.

ಐದು ದಿನಗಳೊಳಗೆ ಮಾಜಿ ಕಿಂಗ್ ಜೋರ್ಜನು ಅಪೀಲು ಮಾಡದಿದ್ದರೆ ನ್ಯಾಯಾಧೀಶರ ತೀರ್ಮಾನವು ಸಮಾಪ್ತ ತೀರ್ಮಾನವಾಗುವುದು

ಹಾಂಗ್ಕೈ ನಗರವಾಸಿಗಳ ಭೀತಿ!

ದಂಗೆಖೋರರ ಬೆದರಿಕೆ.

ಹಾಂಗ್ಕೈ ಜುಲೈ ೭

ಕಳೆದ ವಾರ ಪೀಕಿಂಗಿಗೆ ಮುತ್ತಿಗೆ ಹಾಕಿದ ಎರಡು ಸಾವಿರ ಮಂದಿ ದಂಗೆಖೋರರು ಹಾಂಗ್ಕೈಯ ವಾಯುವ್ಯ ಭಾಗದಲ್ಲಿ ೨೫ ಮೈಲುಗಳ ದೂರದಲ್ಲಿ ಬಂದು ಸೇರಿದ್ದಾರೆ ಹಾಂಗ್ಕೈ ನಗರವನ್ನು ಮುತ್ತುವುದಾಗಿ ಧಸ್ತ ಪತ್ರಿಕೆಗಳನ್ನು ಹಂಚಿದ್ದಾರೆ. ಉತ್ತರ ಬಡಾವಣೆಗಳಲ್ಲಿ ಮಿಲಿಟರಿಯವರ ಬಂದೋಬಸ್ತು ಮಾಡಿಯಾಗಿರುವರು

ಇಂಗ್ಲೆಂಡಿನಿಂದ ಭಾರತ ಪ್ರಮುಖರ ಆಗಮನ.

ಬೊಂಬಾಯಿ, ಜುಲೈ ೮

ಈ ದಿನ ಬೊಂಬಾಯಿಯ ನೌಕಾ ನಿಲ್ದಾಣಕ್ಕೆ ಬಂದ "ವಿಕ್ಟೋರಿಯಾ" ಜಹಜಿನಲ್ಲಿ ಸರ್ ತೇಜ ಬಹದೂರ್ ಸಪ್ರುರವರೂ, ಸರ್ ಮನುಭಾಯಿ ಮೆಹತಾರವರೂ, ನವಾಬ್ ಲಿಯಾಖತ್ ಖಾನರೂ, ಹೈದರಾಬಾದ್ ಸಂಸ್ಥಾನದ ರಾಜಕುಮಾರರೂ ಮತ್ತು ಅವರ ಪತ್ನಿಯವರೂ ಬಂದರು

ಗಾಂಧಿಜಿಯವರಿಗೆ ಹೊಟ್ಟೆ ನೋವು.

ನಾಗಪುರ, ಜುಲೈ ೩

ವಾರ್ಧಾವಿನಿಂದ ಬಂದ ಒಂದು ತಂತಿ ಸುದ್ದಿಯಲ್ಲಿ ಕಳೆದ ವಾರದ ಕೊನೆಯಲ್ಲಿ ಮಹಾತ್ಮಾ ಗಾಂಧಿಯವರಿಗೆ ಹೊಟ್ಟೆ ನೋವು ಉಂಟಾಗಿತ್ತೆಂದು ತಿಳಿದುಬಂದಿದೆ.

ಶುಕ್ರವಾರ ಸಂಜೆ ಪ್ರಾರ್ಥನೆಯನ್ನು ಮುಗಿಸಿದ ಮೇಲೆ ಅವರಿಗೆ ಹೊಟ್ಟೆನೋವು ಉಂಟಾಯಿತೆಂದೂ ಮೂರು ಗಂಟೆಗಳ ಕಾಲ ಅದು ಅಸಾಧ್ಯವಾಗಿ ಬಾಧೆ ಕೊಡುತ್ತಿದ್ದಿತೆಂದೂ ತಿಳಿದುಬರುತ್ತದೆ ಈಗ ಅವರು ಉತ್ತಮಗೊಳ್ಳುತ್ತಿರುವರೆಂದೂ ಏನೂ ತೊಂದರೆಗೆ ಅವಕಾಶವಿಲ್ಲವೆಂದೂ ತಿಳಿದುಬರುತ್ತದೆ

ಬಾಂಬಿನ ಸ್ಫೋಟನ!

9 ಜನರಿಗೆ ಘಾಯ!

ಲಕ್ನೋ, ಜುಲೈ ೩

ನಿನ್ನೆ ರಾತ್ರಿ ಗಣೇಶಗಂಜಿನಲ್ಲಿ ಒಂದು ಒಂಟಿ ಬಾಂಬಿನ ಆಸ್ಫೋಟನವುಂಟಾಗಿ ೯ ಜನರಿಗೆ ಗಾಯವಾಗಿದೆ. ರಥಜಾತ್ರಾ ಉತ್ಸವವು ಹೊರಟುಹೋದ ಕೂಡಲೇ ಯಾರೋ ಒಬ್ಬನು ರಸ್ತೆಯಲ್ಲಿ ಒಂದು ಬಾಂಬನ್ನು ಎಸೆದುದರ ಫಲವಾಗಿ ಬಹಳ ಶಬ್ದದೊಡನೆ ಸ್ಫೋಟನವಾಯಿತು ಇದರ ಫಲವಾಗಿ ೯ ಜನರಿಗೆ ಘಾಯವಾಯಿತು ಹತ್ತಿರ ನಿಂತಿದ್ದ ಜನರು ಓಡಿದರು ಪೋಲೀಸರೂ ಬಂದರು ಯಾರ ದಸ್ತಗಿರಿಯೂ ಆಗಿಲ್ಲ. ತನಿಖೆ ನಡೆಯುತ್ತಿದೆ.

ಶ್ರೀಮತಿ ಕಮಲಾದೇವಿ ಮತ್ತು ಮಂಗಳೂರಿನ ಸದಸ್ಯರು

ಹುಬ್ಬಳ್ಳಿ ಜುಲೈ ೧

ಶ್ರೀಮತಿ ಕಮಲಾದೇವಿ ಮತ್ತು ಇತರ ಆರು ಜನ ಮಂಗಳೂರಿನ ಪ್ರತಿನಿಧಿಗಳು ಈ ದಿನ ಬೆಳಗ್ಗೆ ಗದಗಿನಿಂದ ಇಲ್ಲಿಗೆ ಬಂದರು ಮಂಗಳೂರಿನ ಈ ಪ್ರತಿನಿಧಿಗಳೂ ಬೆಂಗಳೂರಿನ ಶ್ರೀ ಎಸ್ ವೆಂಕಟರಮಣಯ್ಯನವರೂ ಇಲ್ಲಿಯ ಖಾದಿ ಕಾರ್ಯಕ್ರಮವನ್ನು ಸಂದರ್ಶಿಸಿದರು. ಡಾ। ಹರ್ಡೀಕರರೂ ಅವರ ಜತೆಯೇ ಇದ್ದರು. ನಂತರ ಮಂಗಳೂರಿನ ಸದಸ್ಯರೆಲ್ಲರೂ ಮಂಗಳೂರಿಗೆ ರೈಲಿನಲ್ಲಿ ಪ್ರಯಾಣ ಬೆಳೆಸಿದರು

ಚೀನಾ ದಂಗೆಖೋರನಿಗೆ ಮರಣದಂಡನೆ.

ಪೀಕಿಂಗ್ ೩

ಕಳೆದ ಫೆಬ್ರವರಿ ಚೀನಾ ಟಿಬೆಟ್ಟಿನ ಸೈನಿಕರು ನಡೆಸಿದ ದಂಗೆಯ ಫಲವಾಗಿ ಈಗ ಅದರ ಮುಖ್ಯ ನಾಯಕರಲ್ಲೊಬ್ಬನಾದ ಟುಯಾನ್ ಟಾಟಿಯು ಮರಣದಂಡನೆಗೆ ಗುರಿಯಾಗಿದ್ದಾನೆ ಈ ದಂಗೆಯ ಸಂಬಂಧವಾಗಿ ೧೦೯ ಜನರ ದಸ್ತಗಿರಿಯಾಗಿದೆ. ಕೋರ್ಟ್ ಮಾರ್ಷಲ್ಲಿನಲ್ಲಿ ಅವರನ್ನೆಲ್ಲಾ ವಿಚಾರಿಸಲಾಗುವುದು

ಕೊತ್ವಾಲರ ಮನೆಯ ಮೇಲೆ ಬಾಂಬು

ಕಾನ್ಪುರ, ಜುಲೈ ೭

ನಗರದ ಕೊತ್ವಾಲರಾದ ಮಿ। ಬಿಯಸ್ ಮಹಮದ್ ಖಾನ್‌ರವರ ಮನೆಯನ್ನು ನಾಶಮಾಡುವ ಪ್ರಯತ್ನವು ನಡೆಯಿತು. ನಿನ್ನೆ ರಾತ್ರಿ ಈ ಮನೆಯ ಮೇಲುಗಡೆ ಒಂದು ಬಾಂಬು ಬಿದ್ದಿತು. ಈ ಕೊತ್ವಾಲಿಯಲ್ಲಿ ಈ ವಾರದಲ್ಲಿ ಇದೇ ಎರಡನೆಯ ಬಾಂಬು ಕೊತ್ವಾಲರ ಸಹೋದರರಾದ ಮಹಮದ ಅಲಿಖಾನ್ ಇವರು ಬೆಳಗ್ಗೆ ಎದ್ದಾಗ, ತಮ್ಮ ಮಗಳ ಹತ್ತಿರ ಎರಡು ಗಜದಲ್ಲಿ ಭಾರಿ ಬಾಂಬು ಕರಟ ಸಹಿತ ಬಿದ್ದದ್ದನ್ನು ನೋಡಿದರು. ಈ ಬಾಂಬಿನಲ್ಲಿ ಅನೇಕ ಸಿಡಿಮದ್ದಿನ ಪದಾರ್ಥಗಳೂ ಪಾದರಸ, ಗಾಜು ಮುಂತಾದುವೂ ಇದ್ದುವು. ಪೋಲೀಸರು ತನಿಖೆ ನಡೆಸುತ್ತಿರುವರು.

ನೋಟೀಸು.

ಕಾಸರಗೋಡು ಡಿ ಮು ಕೋರ್ಟಿನಲ್ಲಿ

O P. N 103/1935

1 ಮರಿಯಮ್ಮ [illegible] ಕಾವಿಲ್ [illegible] ಹಾಜಿ ವಿಧವೆ, 2 ಬೀಪಾತುಮ್ಮ, 3. ಅಹಮ್ಮದ 4 ಅಬ್ದುಲ್ಲರಹಿಮಾನ್ (ಮೈನರು), 5 [illegible] (ಮೈನರು), 6. ಜೈನಬಾ (ಮೈನರು) 7 [illegible] (ಮೈನರು)- [illegible] ಕಾವಿಲ್ ಮಮ್ಮು [illegible] ಹಾಜಿ ಮಕ್ಕಳು-ಅರ್ಜಿದಾರರು

[illegible] ಗ್ರಾಮದಲ್ಲಿ ತಾರೀಕು 4—11—34ರಲ್ಲಿ ಮೃತಪಟ್ಟ [illegible] ಕಾವಿಲ್ ಮಮ್ಮು [illegible] ಹಾಜಿಗೆ [illegible] ಬರತಕ್ಕ [illegible] ಅರ್ಜಿದಾರರಿಗೆ [illegible] ಅವರು [illegible] ಅರ್ಜಿ [illegible] ಮಾಡಿದ [illegible] ಅರ್ಜಿ [illegible] 21—7—34ಕ್ಕೆ ಇಟ್ಟಿರುತ್ತದೆ ಈ [illegible] ದಿವಸ [illegible] ಹಾಜರ ಮಾಡತಕ್ಕದ್ದು

ಕಾಸರಗೋಡು 1—7—35

K. S. Shetty,
Vakil for Petitioners

ವಜ್ರಗಳು! —— ವಜ್ರಗಳು

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲೂ ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಯಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್ ರಥಬೀದಿ ಮಂಗಳೂರು.

(ಸನ್ 1856ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

Part Proprietors of —
Sri Krishna Mills & Co
Oil Manufacturers
Bunder, Mangalore
Bhagavan Ganesh Pai & Co
Copper Sheet & Twist
Merchants, Camp Bazar,
Cannanore

Representatives in the W C
M/s A & F Harvey
Cotton Spinners
Tuticorin Madura &c
Guardian Assurance Co, Ltd
(Incorporated in England)
Head Office: 68, King
William Street,
London, E. C. 4.

ಮಂಗಳೂರು.

ಇಂದಿನಿಂದ ಸ್ಥಳೀಯ ಶ್ರೀಕೃಷ್ಣ ಸಿನೇಮ ಮಂದಿರ ದಲ್ಲಿ ಒಂದು ಸಾರ್ವಜನಿಕ ಹಿಂದೀ ವರ್ಗವು ಪ್ರಾರಂಭ ವಾಗುವುದು. ಹಿಂದಿಯನ್ನು ಕಲಿಯಲಿಚ್ಛಿಸುವವರೆಲ್ಲ ರಿಗೂ ಪ್ರವೇಶವಿದೆ. ವರ್ಗವು ಮಂಗಳವಾರ, ಗುರು ವಾರ ಮತ್ತು ಆದಿತ್ಯವಾರಗಳಲ್ಲಿ ಬೆಳಿಗ್ಗೆ ಗಂಟೆ ೮ರಿಂದ ೯ರ ತನಕ ನಡೆಸಲ್ಪಡುವುದು.

ಸ್ಥಳೀಯ ಶ್ರೀ ಕೃಷ್ಣಾ ಸಿನೇಮಾದ ಮಾಲಕರಾದ ಶ್ರೀ ಎ ಕೃಷ್ಣಾಜಿರಾಯರವರು ಅತ್ಯುತ್ತಮವೂ, ಆಧುನಿಕವೂ ಆದ 'ಸಿಂಪ್ಲೆಕ್ಸ್' ಸಿಸ್ಟಂನ ಟೋಕಿ ಪ್ರೊಜೆಕ್ಟರ್ ಯಂತ್ರವನ್ನು ತಂದಿದ್ದು ಈ ಹೊಸ ಯಂತ್ರದ ಮೂಲಕ ಸದ್ಯದಲ್ಲಿಯೇ ಟಾಕಿಗಳು ಪ್ರದರ್ಶಿಸಲ್ಪಡುವುವು.

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಉಡುಪಿ ಲಿಮಿಟೆಡ್, ಇದರ ಶಾಖೆಯೊಂದು ೫ನೇ, ಆರಲ್ಲು ವೀರ ರಾಜೇಂದ್ರ ಪೇಟೆಯಲ್ಲಿ ತೆರೆಯಲ್ಪಟ್ಟಿದೆ ಅನೇಕ ಮಂದಿ ಸ್ಥಳೀಯ ಗೃಹಸ್ಥರೂ, ವ್ಯಾಪಾರಿಗಳೂ, ಪ್ಲಾಂಟರುಗಳೂ, ಹಾಜರಿದ್ದರು.

ಡಾ| ವಿಠಲಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಪಟ್ಟಣಿಗರು ರಘುನಾಥಯ್ಯ ಮೆಮೋರಿಯಲ್ ಹೋಲಿನಲ್ಲಿ ಸಭೆ ಕೂಡಿ, ಕ್ವೆಟ್ಟಾದ ಭೂಕಂಪ ಪೀಡಿತರಿಗಾಗಿ ಸಹಾನುಭೂತಿಯನ್ನು ಪ್ರದರ್ಶಿಸುವ ಠರಾವು ಮಾಡಿದರು.

ಇಲ್ಲಿಂದ ಪಿಲಿಕ್ಕೋಡ್ಲುಗಳಿಗೂ, ಕಾಸರಗೋಡಿಗೂ ಹೋಗುವ ಪ್ಯಾಸೆಂಜರು ಟ್ರೈನುಗಳಿಗೆ ಇದೇ ೫ನೇ ೧೦ರಿಂದ ಫಸ್ಟ್ ಮತ್ತು ಸೆಕೆಂಡ್ ಕ್ಲಾಸ್ ಇರುವ ಜೊತೆಗಿನ ಬಂಡಿಯೊಂದನ್ನು ತಗುಲಿಸುವ ಏರ್ಪಾಡನ್ನು ರೈಲ್ವೆಯವರು ಮಾಡಿರುವರು ಮೇಲ್ದರಗತಿಗಳಲ್ಲಿ ಪ್ರಯಾಣ ಮಾಡುವವರಿಗೆ ಇದು ಬಹಳ ಅನುಕೂಲ

ಶ್ರೀ| ಎಮ್ ಎಸ್ ಪ್ರಭುಗಳ ನಿಧನದಿಂದ ಖಾಲಿ ಬಿದ್ದಿರುವ ಪಬ್ಲಿಕ್ ಪ್ರೊಸಿಕ್ಯೂಟರ್ ಸ್ಥಾನಕ್ಕೆ ಪ್ರಮುಖ ವಕೀಲರನೇಕರು ಪ್ರಯತ್ನಪಡುತ್ತಿರುವರು ಹೊಸ ನೇಮಕವು ಸದ್ಯದಲ್ಲಿಯೇ ಆಗಲಿಕ್ಕಿದೆ.

ಮಲಬಾರ್ ಡಿ ಬೋ ಇಂಜಿನಿಯರಾದ ಪಿ. ಎನ್ ಕೃಷ್ಣ ಪಿಳ್ಳೆಯವರು ೧೫ ತಿಂಗಳ ರಜೆಯನ್ನು ಪಡೆಕೊಂಡಿರುವದರಿಂದ ಅವರ ಸ್ಥಾನದಲ್ಲಿ ಸೇಲಮಿನ ಲೋಕಲ್ ಫಂಡ್ ಆಸಿಸ್ಟಾಂಟ್ ಇಂಜಿನಿಯರಾದ ಮಿ. ಬಿ. ನರಸಿಂಹ ಶೆಣ್ಯೆಯವರು ನೇಮಕಮಾಡಲ್ಪಟ್ಟಿರುವರು

ಕರ್ನಾಟಕ ಪ್ರಾಂತಿಕ ರಾಜಕೀಯ ಪರಿಷತ್ತಿನ ಸ್ವಾಗತ ಸಮಿತಿ— ಮೊನ್ನೆ ಜುಲೈ ೩ನೇ ೭ಕ್ಕೆ ಕರ್ನಾಟಕ ಪ್ರಾಂತಿಕ ರಾಜಕೀಯ ಪರಿಷತ್ತಿನ ಸ್ವಾಗತ ಸಮಿತಿಯ ಅಖೈರಿನ ಸಭೆಯು, ಇಲ್ಲಿಯ ಕಾಂಗ್ರೆಸ್ಸು ಮಂದಿರದಲ್ಲಿ ಕೂಡಿತು. ಇದರಲ್ಲಿ ಪರಿಷತ್ತಿನ ಲೆಕ್ಕಾಚಾರದ ವಿಷಯವು ಚರ್ಚಿಸಲಾಯಿತು, ಮತ್ತು ಪರಿಷತ್ತಿನ ವರದಿಯನ್ನು ಬಹುಮತದಿಂದ ಸ್ವೀಕರಿಸಲಾಯಿತು ಶ್ರೀಮತಿ ಕಮಲಾದೇವಿಯವರು ಆ ದಿವಸ ಅಧ್ಯಕ್ಷರಾಗಿದ್ದರು. ಶ್ರೀ| ಹಲ್ಸನಾಡ ಸೂರಪ್ಪಯ್ಯನವರು, ಪರಿಷತ್ತಿನ ಲೆಕ್ಕಾಚಾರಗಳನ್ನೂ ವರದಿಯನ್ನೂ ಸಭಿಕರ ಮುಂದೆ ಇಟ್ಟರು ಇವುಗಳು ಬಹುಮತದಿಂದ ಸ್ವೀಕರಿಸಲಾಯಿತು ಈ ಸಭೆಯು ಲೆಕ್ಕಪತ್ರಗಳನ್ನು ಇಲ್ಲಿಯ ಎಸ್ ಸಿ ಸಿ ಸಿ ಬೇಂಕಿನ ಸೆಕ್ರೆಟರಿಗಳಾದ ಬಿ ಶಾಂತಾರಾಮ ರಾವ್ ಇವರಿಂದ ಪರಿಶೋಧಿಸಬೇಕೆಂಬ ಠರಾವನ್ನು ಮಾಡಿದರು ಕೊನೆಗೆ ಸಭೆಯು ಮುಕ್ತಾಯವಾಯಿತು.

ಇಲ್ಲಿ ಮೊನ್ನೆ ಯಾರೋ ಕಳ್ಳರು ಸಿ ಪಿ ಸಿ ಕಂಪೆನಿ ಹೊಸ ಕಟ್ಟೋಣದಲ್ಲಿರುವ ಡಾ ಎಂ ಎಸ್ ಪ್ರಭುಗಳ ಔಷಧಾಲಯವನ್ನು ರಾತ್ರಿ ಬೀಗ ಮುರಿದು ಹೊಕ್ಕು ಏನೂ ಸಿಗದೆ ಹಿಂದೆ ಹೋಗಿರುವರು ಇನ್ನೂ ಹೀಗೆ ಹಲವು ಕಳವು ಊರಿನ ಬೇರೆ ಬೇರೆ ಕಡೆಗಳಲ್ಲಿ ನಡೆಯುತ್ತಿರುವುದು ಜನರು ಎಚ್ಚರಿಕೆಯಿಂದಿರಲಿ.

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿಯವರು ಪ್ರಯಾಣಿಕರ ಸೌಕರ್ಯಕ್ಕಾಗಿ ಮೊನ್ನೆ ೫ನೇ ೧೦ರಿಂದ ಟಿಕೇಟಿನ ದರಗಳನ್ನು ಇಳಿಸಿರುವರು. ಇದರಿಂದ ಪ್ರಯಾಣಿಕರು ಹೆಚ್ಚಿನ ಪ್ರಯೋಜನ ಪಡುವರೆಂದು ನಮ್ಮ ಭರವಸೆ ಈ ಇಳಿತದಿಂದಾಗಿ ಇಲ್ಲಿಂದ ಗುರುಪುರ, ಮಿಜಾರ ಮೊದಲಾದ ಊರುಗಳಿಗೆ ಹೋಗಲು ಪ್ರಯಾಣಿಕರಿಗೆ ಸ್ಥಳವು ದೊರಕದೆ ಹೆಚ್ಚಿನ ಅನಾನುಕೂಲತೆಯಾಗುತ್ತಿದೆ. ಈ ವಿಷಯ ಸಂಬಂಧಪಟ್ಟವರು ನಿಗಾ ತೆಗೆದುಕೊಳ್ಳುವರೆಂಗಿ ನಮ್ಮ ವಿನಂತಿ

ತಾಲೂಕುಗಳಿಂದ.

ಕಾರ್ಕಳ— ಕ್ವೆಟ್ಟಾದ ಭೂಕಂಪದಿಂದ ನಿರಾಶ್ರಿತರಾದವರ ಸಹಾಯಕ್ಕೆ ಧನಸಂಗ್ರಹಮಾಡುವ ಉದ್ದೇಶದಿಂದ ಇಲ್ಲಿ ಉಂಟಾದ ಬಿನ್ ಅಧಿಕಾರಿಗಳ ಸಹಾಯಸಮಿತಿಯ ಸಹಾಶ್ರಯದಲ್ಲಿ ಸ್ಥಳೀಯ ಶ್ರೀ ವೆಂಕಟ್ರಮಣ ಹಾಯರ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿಗಳು ಆಡಿದ 'ಶ್ರೀಕೃಷ್ಣ ಸಂಧಾನ'ವೆಂಬ ನಾಟಕದಿಂದ ಹುಟ್ಟಿ ಬಂದ ಐವೇಜು ರೂಪಾಯಿ ೭೫/ ಮತ್ತು ವಂತಿಗೆಯಿಂದ ಬಂದ ರೂಪಾಯಿ ೫೦/ ಹೀಗೆ ಒಟ್ಟು ರೂಪಾಯಿ ೧೨೫/ನ್ನು ಬಾಬು ರಾಜೇಂದ್ರ ಪ್ರಸಾದರ ಕೇಂದ್ರ ಸಹಾಯ ನಿಧಿಗೆ ಕಳುಹಿಸಿಕೊಡಲಾಗುವುದು

ಕ್ವೆಟ್ಟಾ ಭೂಕಂಪದ ವ್ಹಾಯ್ಸರಾಯರ ನಿಧಿಗೂ ಅಧಿಕಾರಿ ವರ್ಗದ ವಂತಿಗೆಪಟ್ಟಿಯು ಆಗಿದೆ. ಅದಕ್ಕಾಗಿಯೇ ಕುಂದಾಪುರ ಡಿವಿಜನಿನ ಸಬ್ ಕಲೆಕ್ಟರರು ಬೋರ್ಡ್ ಹೈಸ್ಕೂಲಿನಲ್ಲಿ ಒಂದು ಸಭೆಯನ್ನು ಮಾಡಿರುವರು

ಸ್ವದೇಶಿ ಪ್ರಚಾರಕರ ಒಂದು ಸಭೆಯು ಶ್ರೀ ಕೆ. ರಾಘವೇಂದ್ರರಾಯರ ಅಧ್ಯಕ್ಷತೆಯಲ್ಲಿ ಆಗ ಆಗತಾನೇ ಜನ್ಮಕ್ಕೆ ಬಂದ ಕಾರ್ಕಳ ಸ್ವದೇಶಿ ಪ್ರಚಾರಕ ಸಂಘವನ್ನು ಜಿಲ್ಲಾ ಸ್ವದೇಶೀ ಪ್ರಚಾರ ಸಂಘಕ್ಕೆ ಸಂಯೋಜಿಸಬೇಕೆಂದು ನಿರ್ಣಯವಾಗಿದೆ. ಹಲ್ಸನಾಡು ಸೂರಪ್ಪಯ್ಯನವರು ಬಂದು ಸುಮಾರು ೧೨೫ ರೂಪಾಯಿಗಳ ಖದ್ದರನ್ನು ಮಾರಿಯೂ ಹೋಗಿದ್ದಾರೆ

ಕಾಸರಗೋಡು— ಇದೇ ಕಳೆದ ೬ನೇ ಶನಿವಾರ ಬೆಳಿಗ್ಗೆ ಈ ತಾಲೂಕಿನ ಸುಪ್ರಸಿದ್ಧ ಶ್ರೀಮಂತ ಮನೆತನದ ಪುಂಡೂರು ನಾರಾಯಣ ಪುಣಿಂಚತ್ತಾಯರು ತನ್ನ ೬೬ನೇ ವರ್ಷ ಪ್ರಾಯದಲ್ಲಿ ದಿವಂಗತರಾದರೆಂದು ತಿಳಿಸಲು ವಿಷಾದಪಡುತ್ತೇವೆ ಹೆಚ್ಚಿನ ಧನಿಕರಾಗಿದ್ದ ಪುಂಡೂರು ಮನೆಯಲ್ಲಾದ 'ಧರ್ಮಸತ್ರ'ವಲ್ಲ, ಶ್ರೀ ಕಿನ್ನಿಮಾಣಿ ದೈವಸ್ಥಾನದ ಜೀರ್ಣೋದ್ಧಾರ ಆಲಂಗೋಡ್ಲು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶ ಇವೇ ಮೊದಲಾದ ಸತ್ಕರ್ಮಗಳನ್ನು ನಡೆಯಿಸುವುದರಲ್ಲಿ ಇವರ ಮತ್ತು ಇವರ ಸಹೋದರ ಶೇಷ ರಾಮಚಂದ್ರ ಪುಣಿಂಚತ್ತಾಯರೂ ಹೆಚ್ಚಿನ ಪರಿಶ್ರಮವನ್ನು ವಹಿಸಿ ಯಶಸ್ವಿಗಳಾಗಿರುವರು ಇವರ ನಿಧನದಿಂದ ದ್ರಾವಿಡ ಬ್ರಾಹ್ಮಣ ವರ್ಗದಲ್ಲಿ ಧರ್ಮನಿಷ್ಠಾವಂತರೊಬ್ಬರು ಮರೆಯಾದಂತಾಯಿತು ದಿವಂಗತರ ಆತ್ಮಕ್ಕೆ ಶಾಂತಿ ಸಿಗಲಿ!

ಉಡುಪಿ — ಸ್ಥಳೀಯ ಬೋರ್ಡ್ ಹೈಸ್ಕೂಲಿನಲ್ಲಿ ಪ್ರತಿ ವರ್ಷವೂ ವಿದ್ಯಾರ್ಥಿಗಳ ಹಾಜರಿಯು ಹೆಚ್ಚುತ್ತಲಿದ್ದು, ಸ್ಥಳಸಂಕೋಚದ ನೆಲೆಯಿಂದ ಪ್ರವೇಶ ಹೊಂದಲು ಬರುತ್ತಿರುವ ವಿದ್ಯಾರ್ಥಿಗಳನ್ನು ನಿರಾಕರಿಸಬೇಕಾಗುವ ಪ್ರಸಂಗವು ಪದೇ ಪದೇ ಒದಗುತ್ತಿರುವುದು ಬೋರ್ಡ್ ಹೈಸ್ಕೂಲುಗಳಲ್ಲೆಲ್ಲಾ ಇಲ್ಲಿನ ಹೈಸ್ಕೂಲು ವಿದ್ಯಾರ್ಥಿಗಳ ಸಂಖ್ಯೆಯೇ ಅತಿಹೆಚ್ಚಾಗಿ ಉತ್ಪನ್ನದಲ್ಲೂ ಪ್ರಧಾನವಾಗಿರುವ ವಿಷಯ ಸಂಬಂಧಪಟ್ಟವರಿಗೆಲ್ಲಾ ತಿಳಿದಿದ್ದಾಗಿದೆ ಈ ಕುರಿತು ಶಾಲಾ ಎಡ್ವೈಸರಿ ಸಮಿತಿ, ಶಾಲಾ ಮುಖ್ಯೋಪಾಧ್ಯಾಯರು, ಬೋರ್ಡ್ ಮೆಂಬರರು, ಶಾಲಾ ಇನ್ಸ್‌ಪೆಕ್ಟರರು ಮುಂತಾದ ಮಹನೀಯರೆಲ್ಲಾ ಜಿಲ್ಲಾ ಬೋರ್ಡಿಗೆ ಮೇಲಿಂದ ಮೇಲೆ ಸೂಚಿಸಿ ಒತ್ತಾಯಪಡಿಸಿದ್ದೂ ಇದೆ ಕಳೆದ ವರ್ಷವೂ ಶಾಲಾ ಕಟ್ಟಡವನ್ನು ವಿಸ್ತರಿಸುವ ಬಗ್ಗೆ ಕಳೆದ ವರ್ಷ ಗ್ರಾಂಟು ಮಂಜೂರುಮಾಡಲಾಗಿದ್ದರೂ ಯಾವುದೋ ನ್ಯೂನತೆ ಅಥವಾ ಕಾರಣದಿಂದ ಅದನ್ನುಪಯೋಗಿಸಲಾರದೆ ಸದರಿ ಗ್ರಾಂಟು ವ್ಯರ್ಥವಾಯಿತು. ಈ ವರ್ಷವೂ ಬೋರ್ಡ್ ಹಾಗೂ ಸರಕಾರದವರಿಂದ ಒಟ್ಟು ಸುಮಾರು ರೂಪಾಯಿ ೧೭,೦೦೦ದಷ್ಟು ಗ್ರಾಂಟು ದೊರೆತಿದೆ ಸದ್ಯ ಶಾಲೆಯಲ್ಲಿ ೪೮೫ ವಿದ್ಯಾರ್ಥಿಗಳಿರುತ್ತಾರೆ, ಆದಾಗ್ಯೂ ಸ್ಥಳಾಭಾವದಿಂದ ಹಲವು ವಿದ್ಯಾರ್ಥಿಗಳಿಗೆ ಪ್ರವೇಶಕೊಡಲಾಗಲಿಲ್ಲ. ಕಳೆದ ವರ್ಷಕ್ಕಿಂತ ಸುಮಾರು ೯೦ ವಿದ್ಯಾರ್ಥಿಗಳು ಹೆಚ್ಚಾಗಿ ಹಾಜರಿದ್ದಾರೆ. ಈ ಬಗ್ಗೆ ಶಾಲಾ ಎಡ್ವೈಸರಿ ಸಮಿತಿಯು ಕಳೆದ ವಾರ ಸಭೆಸೇರಿ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಿಗೆ ಈ ಬಗ್ಗೆ ಪ್ರತ್ಯೇಕ ಸೂಚನೆಯನ್ನು ಕೊಟ್ಟಿದ್ದಾರೆಂದೂ, ತಾವು ಶಾಲಾಭಿವೃದ್ಧಿಯ ಬಗ್ಗೆ ಆಗಿಂದಾಗ ಕೊಡುತ್ತಿದ್ದ ಸೂಚನೆಗಳು ನಿರರ್ಥಕವಾಗಿರುವುದರಿಂದ ತಮ್ಮ ಈಗಣ ಸೂಚನೆಯ ಸಮರ್ಪಕ ಇತ್ಯರ್ಥವಾಗದಿದ್ದಲ್ಲಿ ತಾವು ರಾಜಿನಾಮೆಯನ್ನು ಕೊಡುವುದಾಗಿ ತಿಳಿಸಿರುವರೆಂದೂ ಸುದ್ದಿಯುಂಟು. ಆದುದರಿಂದ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರು ಇದರ ಕುರಿತು ತೀವ್ರ ಯೋಚನೆ ಮಾಡಿ, ಶಾಲಾಕಟ್ಟಡವನ್ನು ವಿಸ್ತರಿಸುವ ಕೆಲಸವನ್ನು ಕೂಡಲೇ ಪ್ರಾರಂಭಿಸುವಂತೆ ಏರ್ಪಾಟು ಮಾಡುವರಾಗಿ ಕೂಡಾ ಮಹಾಜನರ ಕೋರಿಕೆಯಾಗಿದೆ. ಈ ಬಗ್ಗೆ ಮಾನ್ಯ ಬೋರ್ಡ್ ಅಧ್ಯಕ್ಷರನ್ನು ಕಂಡು ಮಾತನಾಡುವರೆ ಒಂದು ಡೆಪ್ಯುಟೇಶನೂ ತಯಾರಾಗಿದೆಯೆಂದು ತಿಳಿದುಬರುತ್ತದೆ.

ಸದರಿ ಬೋರ್ಡ್ ಹೈಸ್ಕೂಲಿನಲ್ಲಿ ಬಾಲಕ ಬಾಲಿಕೆಯರು ಕೂಡಿ ಸುಮಾರು ೩೦ ಪಂಚಮ ವಿದ್ಯಾರ್ಥಿಗಳಿರುತ್ತಾ ಅವರು ಉಡುಪಿಯ ನೆರೆಹೊರೆಯ ಗ್ರಾಮಗಳಿಂದ ಬರುವವರಿದ್ದು, ಮಧ್ಯಾಹ್ನದ ಊಟದವರೆಗೆ ಅವರು ಸ್ವಲ್ಪ ತೊಂದರೆ ಅನುಭವಿಸುತ್ತಿರುವರು, ಜಿಲ್ಲಾ ಹರಿಜನಸೇವಾ ಸಂಘದವರಿಗೆ ಈ ವಿಷಯವನ್ನು ಮಾನ್ಯ ಹೆಡ್ಮಾಸ್ತರರು ತಿಳಿಯಗೊಡಿಸಿದ್ದಲ್ಲಿ ಸಮುತ್ತರವು ದೊರೆತಿತ್ತು ಆದರೆ ಇದುವರೆಗೆ ಯಾವ ಏರ್ಪಾಟೂ ಆಗಿದ್ದಿಲ್ಲ. ಸದರಿ ಹೆಡ್ಮಾಸ್ತರರು ಇದರ ಕುರಿತು ಇನ್ನೂ ಹಲವು ಗೃಹಸ್ಥರೊಡನೆ ಪ್ರಸ್ತಾಪಮಾಡಿರುತ್ತಾರೆ. ಅಂತೆ ಜಿಲ್ಲಾ ಹರಿಜನಸೇವಾ ಸಂಘದವರು ಈ ಪಂಚಮ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ತೀವ್ರ ಮಾಡಲೆಂದು ಹಾರೈಸಲಾಗುತ್ತದೆ. ಈ ಏರ್ಪಾಡಿಗೆ ಊರ ಪ್ರಮುಖರೂ ಸಹಕರಿಸುವರೆಂದೂ ಕೋರಲಾಗುತ್ತದೆ

ಶ್ರೀ ಕೃಷ್ಣದೇವಸ್ಥಾನದ ಗೋಶಾಲೆಯಲ್ಲಿ ಉಂಟಾದ ಜಾನುವಾರುರೋಗವು ಹೇಗೂ ವಾಸಿಯಾಗುತ್ತದೆ, ಅಲ್ಲಲ್ಲಿ ಹಲಕೆಲ ಮನೆಗಳ ಇದರ ಸ್ವಲ್ಪ ಬಾಧೆ ತಟ್ಟಿರುವುದಾಗಿ ಸುದ್ದಿಯುಂಟು ಪಶುವೈದ್ಯ ಇಲಾಖೆಯವರು ಇದರ ಗಮನ ತಕ್ಕೊಳ್ಳಲಿ.

ಇಲ್ಲಿನ ಕೆನರಾ ಬೇಂಕಿಂಗ್ ಕೋರ್ಪೊರೇಶನ್ ಉಡುಪಿ, ಲಿಮಿಟೆಡಿನ ಶಾಖೆಯೊಂದು ಇದೇ ೩ನೇ, ೮ರಲ್ಲು ಕೊಡಗಿನ ವೀರರಾಜೇಂದ್ರ ಪೇಟೆಯಲ್ಲಿ ತೆರೆಯಲ್ಪಟ್ಟಿದೆ

ಉಡುಪಿಯ ಸಂದುಗೊಂದುಗಳಲ್ಲಿ ತುಂಟರು ದಾರಿಗರನ್ನು ಅಡ್ಡಕಡೆದು ಬೆದರಿಸಿ ಮೈಮೇಲಿನ ಒಡವೆರಾಸುಗಳನ್ನು ಕಿತ್ತುಕೊಳ್ಳುವರು ೫ನೇ ೯ಕ್ಕೆ ಕುಂಡಿಲಕಾಡಿನ ಸಂಧಿಯಲ್ಲಿ ಉಡುಪಿಗೆ ಬರುತ್ತಿದ್ದ ದಾರಿಗರೊಬ್ಬರನ್ನು ೫-೬ ಜನರು ಅಟಕಾಯಿಸಿ ೪ ರೂಪಾಯಿಗಳನ್ನು ಕಸಕೊಳ್ಳಲಾಯಿತು ಪೋಲೀಸರು ತಕ್ಕ ಬಂದೋಬಸ್ತು ಮಾಡಲಿ

ದಕ್ಷಿಣ ಕನ್ನಡದಲ್ಲಿ ಕಾಂಗ್ರೆಸ್ಸು ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯಲ್ಲಿ ಭಾಗವಹಿಸುವುದು

ಮೊನ್ನೆ ಜುಲ್ಯಾ ೫ನೇ ೭ನೇ ದಿನ ಮಂಗಳೂರಿನಲ್ಲಿ ನಡೆದ ಜಿಲ್ಲಾ ಕಾಂಗ್ರೆಸ್ಸಿನ ಕಮಿಟಿಯ ನಿರ್ಧಾರದ ಪ್ರಕಾರ ವಾಗಿ, ಕಾಂಗ್ರೆಸ್ಸು ಈ ಬಾರಿ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಗೆ ಸದಸ್ಯರನ್ನು ಕಳುಹಿಸುವುದು ಇದರ ವಿಚಾರವಾಗಿ ಕೆಲಸ ನಡೆಸಲು ಒಂದು ಕಮಿಟಿಯನ್ನು ನಿರ್ಮಿಸಿದ್ದಾರೆ. ಈ ಸಭೆಯು, ಇಲ್ಲಿಯ ಕಾಂಗ್ರೆಸ್ ಮಂದಿರದಲ್ಲಿ ಶ್ರೀಯುತ ಎಂ. ಉಮೇಶರಾವ್, ವಕೀಲ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಸಭೆಗೆ ಬಂದವರು: ಶ್ರೀಗಳಾದ ಜೆ. ಎ ಸಲ್ಡಾನ್ಹಾ, ಕೋಟಿ ರಾಮಕೃಷ್ಣ ಕಾರಂತ, ಎ. ಬಿ. ಶೆಟ್ಟಿ; ಡಿ| ಬೋ| ಪ್ರೆಸಿಡೆಂಟ್, ಕೆ. ಎಸ್. ಭಟ್, ಕೆ. ಎಸ್. ಮಹಾಬಲ ಹೆಗ್ಡೆ, ಎಂ. ಎಸ್ ಅಧಿಕಾರಿ, ಬಿ. ವೆಂಕಪ್ಪ ರೈ, ಯು. ಶ್ರೀನಿವಾಸ ಮಲ್ಯ, ರಂಗನಾಥ ಪೂಂಜ, ಕೃಷ್ಣರಾಯ ಕೊಡ್ಗಿ ಮತ್ತು ಹಲ್ಸನಾಡು ಸೂರಪ್ಪಯ್ಯನವರು.

ಡಿಸ್ಟ್ರಿಕ್ಟ್ ಬೋರ್ಡಿನ ಚುನಾವಣೆಯು ಒಕ್ಟೋಬರ ತಿಂಗಳಲ್ಲಿ ನಡೆಯುವುದೆಂದು ತಿಳಿದುಬರುತ್ತದೆ. ಈ ಕೆಳಗಿನವರು ಸದಸ್ಯರನ್ನು ಆರಿಸುವ ಕಾರ್ಯಕಾರಿ ಮಂಡಳಿಯ ಮೆಂಬರರು, ಶ್ರೀಗಳಾದ ಕೋಟಿ ರಾಮಕೃಷ್ಣ ಕಾರಂತ, (ಅಧ್ಯಕ್ಷ) ಎಂ. ಆರ್. ಪೂಂಜ, (ಉಪಾಧ್ಯಕ್ಷ) ಹಲಸನಾಡು ಸೂರಪ್ಪಯ್ಯ ಮತ್ತು ಬಿ. ವೆಂಕಪ್ಪರೈಗಳು (ಜತೆಕಾರ್ಯದರ್ಶಿಗಳು), ಮನೇಲ ಅಣ್ಣಪ್ಪ ನಾಯ್ಕ (ಕೋಶಾಧಿಕಾರಿ), ಎ. ಬಿ. ಶೆಟ್ಟಿ, ಯು. ಶ್ರೀನಿವಾಸ ಮಲ್ಯ, ಡಾ| ವಿಠ್ಠಲ ಶೆಟ್ಟಿ, ಎಮ್. ಶಿವರಾವ್, ಕೆ. ಎಸ್ ಭಟ್, ಡಾ| ವಿಠ್ಠಲ ಭಂಡಾರಿ, ಕೃಷ್ಣರಾಯ ಕೊಡ್ಗಿ, ಎಂ ಉಮೇಶ ರಾವ್, ಜೆ ಎ. ಸಲ್ಡಾನ್ಹಾ, ಹಲವು ಸೂಚನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು

NOTICE

Bombay Life Assurance Company, Ltd., Fort, Bombay

Mrs Susheela alias Nethravathi Bai, the claimant under Policy No. 26631 on the life of the late Mr Raghavendra Narasimha Bhatt under which a claim has occured having notified that the said Policy has either been lost or misplaced and could not be traced, notice is hereby given that duplicate Policy will be issued and the amount due under the Policy will be paid to the above claimant if there be no objection recorded in our Head Office to our doing so within a month of the issue of this notice

for The Bombay Life Assce Co, Ltd

Jyotendra L Mehta,
MANAGER.

Rock-bottom charges. Please come & visit once Try once atleast Do not miss & do not repent

Royal Gold House,

(Prop —M Vaman Nayak & Sons)

Hampankatta—MANGALORE—S Kanara

NICKEL PLATING WILL BE UNDERTAKEN ON GUARANTEED SYSTEM

Motor parts Cycle parts, Gramophone parts, Surgical instruments and etc, are plated in most scientific method under guaranteed system

Under special request at the time of depression

Platings are undertaken at Moderate Charges

18ct. Rolled Gold Jewel Guaranteed for 10 Years.

ದಿ ರೊಯಲ್ ಗೋಲ್ಡ್ ಹೌಸ್,

ಬಹಳ ಸುಲಭ ದರದಲ್ಲಿ ಗೇರೆಂಟಿಕೊಟ್ಟು ಎಲ್ಲಾ ಒಡವೆಗಳಿಗೆ ಪ್ಲೇಟಿಂಗ್ ಮಾಡಲಾಗುವುದು

ಇತರ ವಿಚಾರಗಳಿಗೆ —

ಎಮ್. ವಾಮನ ನಾಯಕ್ ಎಂಡ್ ಸನ್ಸ್,

18Ct. ರೋಲ್ಡ್ ಗೋಲ್ಡ್ ಜುವೆಲರ್ಸ್,
ಹಂಪನಕಟ್ಟೆ, ಮಂಗಳೂರು, ದ. ಕ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಬಡವರ ಸ್ಥಿತಿ ಉತ್ತಮವಾಗಬೇಕು.

ಮು| ಬಿ. ರಾಮಚಂದ್ರರವರು ಸಾಮಾನ್ಯ ಜನರ, ಬಡವರ ಸ್ಥಿತಿಗತಿಗಳನ್ನು ಉತ್ತಮ ಪಡಿಸಬೇಕೆಂದು ಆಗ್ರಹಪೂರ್ವಕವಾಗಿ ಸ್ಫೂರ್ತಿಯುತವಾಗಿ ಮಾತಾಡಿದರು. ಸಾಮಾನ್ಯ ಜನರ ವಿದ್ಯಾಭ್ಯಾಸ, ಅವರ ಆರೋಗ್ಯ, ಅವರ ನೈತಿಕ ಉನ್ನತಿ ಇವಕ್ಕೆ ಹೆಚ್ಚು ಗಮನಕೊಡಬೇಕೆಂದರು. ಇದಕ್ಕೆ ಹೆಚ್ಚು ಹಣಬೇಕು

ಹಣ ಒದಗಿಸಲು ಸರಕಾರದ ಆಡಳಿತದ ವೆಚ್ಚವನ್ನು ಕಡಮೆಮಾಡಬೇಕೆಂದೂ ವಿಶ್ವಯುನ ವರಂತರು ಮತ್ತು ಮಧ್ಯ ಪಂಗಡದವರಿಂದ ಹೆಚ್ಚು ತೆರಿಗೆ ವಸೂಲು ಮಾಡಬೇಕೆಂದೂ ಅವರ ಸಲಹೆ

ಎರಡನೆಯ ದಿವಸ.

ಮೊದಲು ಸದಸ್ಯರಿಂದ ಬಂದಿದ್ದ 'ಇಂಟರ್ ಪೆಲೇಷನ್'ಗಳಿಗೆ ಸರಕಾರದವರು ಉತ್ತರ ಕೊಟ್ಟರು

ಗ್ರಾಮ ಪಂಚಾಯತಿಗಳ ಹಣದ ಉಪಯೋಗ.

ಗ್ರಾಮ ಪಂಚಾಯತಿಗಳ ಫಂಡಿನಿಂದ ಸ್ಕೂಲು ಕಟ್ಟಡಗಳನ್ನು ಕಟ್ಟಿಸುವುದಕ್ಕಾಗಲೀ, ರಿಪೇರಿ ಮಾಡುವುದಕ್ಕಾಗಲೀ ಹಣವನ್ನು ತೆಗೆಯಕೂಡದೆಂದು ಸರಕಾರದವರು ಹುಕುಂ ಮಾಡಿರುತ್ತಾರೆಯೆ." ಎಂದು ಮು| ಜಿ ಚೆನ್ನಪ್ಪನವರು ಕೇಳಿದ್ದರು. ಈ ಸಂಬಂಧವಾಗಿ ಮು| ರಾ| ರಾಜಗೋಪಾಲಾಚಾರ್ಯರವರು —ಸರಕಾರದವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೆಚ್ಚುಹೆಚ್ಚಾಗಿ ಅಭಿವೃದ್ಧಿಪಡಿಸುವ ಅಪೇಕ್ಷೆಯುಳ್ಳವರಾಗಿರುವರೆಂದೂ ಗ್ರಾಮ ಪಂಚಾಯಿತಿಯ ಹಣವನ್ನು ಇತರ ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸುವುದಕ್ಕೆ ಮಾತ್ರ ಮೀಸಲಾಗಿಟ್ಟಿರಬೇಕೆಂದೂ ಈ ಸಂಬಂಧವಾಗಿ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರು ಒಂದು ಹುಕುಮನ್ನು ಹೊರಡಿಸಿರುವುದಾಗಿಯೂ ತಿಳಿವಳಿಕೆ ಕೊಟ್ಟರು.

ಸರಕಾರದ ಆದಾಯ ಹೆಚ್ಚಬೇಕು

ಅನಂತರ ಶ್ರೀ| ಚೆಂಗಲರಾಯ ರೆಡ್ಡಿಯವರು ಆಯವ್ಯಯದ ಸ್ಥಿತಿಯನ್ನು ಕುರಿತು ಮಾತಾಡಿದರು ಕೆಲವು ಸಭಾಸದಸ್ಯರು ಬಡ್ಜೆಟ್ಟನ್ನು ಕಡಮೆಮಾಡಬೇಕೆಂದು ಕೇಳುತ್ತಾರೆ, ಸಂಸ್ಥಾನ ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನೂ ಕೇಳುತ್ತಾರೆ, ಇದು ಹೇಗೆ ಸಾಧ್ಯ? ಈ ಸಮಸ್ಯೆಯನ್ನು ಸರಕಾರದವರೇ ಬಿಡಿಸಬೇಕೆಂದು ಸಮಸ್ಯೆಯನ್ನು ಮಾತ್ರ ಮುಂದಿಟ್ಟರು. ಆ ಸಮಸ್ಯೆಯನ್ನು ಬಿಡಿಸುವುದು ಸರಕಾರದ ಕರ್ತವ್ಯವೆಂದರು

ಶ್ರೀಮಾನ್ ರೆಡ್ಡಿಯವರು ಸರಕಾರದ ಆಯವನ್ನು ಹೆಚ್ಚಿಸುವ ಆವಶ್ಯಕತೆಯನ್ನು ಕುರಿತು ಮಾತನಾಡುತ್ತ ಸಂಸ್ಥಾನದ ಕಾಡುಗಳಿಂದ ಹೆಚ್ಚು ಪ್ರಯೋಜನ ಹೊಂದಬಹುದೆಂದು ಸೂಚಿಸಿದರು ಆದಾಯದ ಮೇಲಿನ ತೆರಿಗೆಯಿಂದ ಇನ್ನೂ ಹೆಚ್ಚು ಉತ್ಪತ್ತಿ ಪಡೆಯಬಹುದೆಂದೂ ಹೇಳಿದರು ಕೊನೆಯದಾಗಿ, ಸರಕಾರದ ಆಡಳಿತದ ವೆಚ್ಚವನ್ನು ತಗ್ಗಿಸಬೇಕೆಂದೂ ಆಡಳಿತದ ವ್ಯವಸ್ಥೆಯಲ್ಲಿ ಸರಕಾರದವರು ಸರಕಾರದ ಉದ್ಯೋಗಿಗಳಲ್ಲದೆ ಪ್ರಜೆಗಳ ಪ್ರತಿನಿಧಿಗಳಲ್ಲಿ ಹೆಚ್ಚು ನಂಬಿಕೆ ವಿಶ್ವಾಸಗಳನ್ನಿಟ್ಟು ಅವರ ಸಹಾಯ ತೆಗೆದುಕೊಳ್ಳಬೇಕೆಂದೂ ಸಲಹೆಕೊಟ್ಟರು

ಸಂಸ್ಥಾನಕ್ಕೆಲ್ಲಾ ವಿದ್ಯುಚ್ಛಕ್ತಿಯ ಸೌಕರ್ಯಗಳನ್ನು ಹರಡುವುದರ ಮೂಲಕ ಸ್ವಲ್ಪ ಆದಾಯ ಹೆಚ್ಚಬಹುದೆಂದು ಮು| ಡಿ ಎಚ್ ಚಂದ್ರಶೇಖರಯ್ಯನವರು ಸೂಚಿಸಿದರು ಇದು ಕಾಲಕ್ರಮದಲ್ಲಿ ಸಾಧ್ಯವಾಗುವ ವಿಷಯ

ರೈತರ ಮೇಲೆ ಹೆಚ್ಚು ತೆರಿಗೆಯ ಹೊರೆ ಕೂಡದು.

ಆಯವ್ಯಯದ ವಿಚಾರವನ್ನು ಎತ್ತಿ ವಿಮರ್ಶಿಸುತ್ತ ಮು| ಗುಂಡಪ್ಪನವರು—ತೆರಿಗೆಯಿಂದ

ಮೈಸೂರಿನ ಸಮಾಚಾರಗಳು.

ನ್ಯಾಯವಿಧಾಯಕ ಸಭೆಯ ಅಧಿವೇಶನ.

(ನಮ್ಮ ಸ್ವಂತ ಪ್ರತಿನಿಧಿಯಿಂದ)

ಬೆಂಗಳೂರು, ತಾ. ೯-೭-೧೯೩೫.

ಹೆಚ್ಚು ಹಣವನ್ನು ನಿರೀಕ್ಷಿಸಲಾಗದು ಬಡರೈತರಿಗೆ ಈಗ ಇರುವ ತೆರಿಗೆಯ ಹೊರೆಯೇ ಸಾಕಾಗಿದೆ ಸರಕಾರದ ಉದ್ಯೋಗಸ್ಥರ ಸಂಬಳಗಳಾದರೋ ಸಾಮಾನ್ಯ ಜನರ ಆದಾಯಕ್ಕೆ ಮೀರಿದೆ ಅವರಿಗೂ ಇವರಿಗೂ ಸರಿಸಮಾನತ್ವವನ್ನು ಸ್ಥಾಪಿಸುವುದು ಎಲ್ಲ ವಿಧದಿಂದಲೂ ಕ್ಷೇಮಕರ—ಎಂದು ಹೇಳಿ, ಸರಕಾರಿ ನೌಕರರ ಸಂಬಳಗಳನ್ನು ಕಡಮೆಮಾಡಬಾರದೇಕೆ ಎಂದು ವ್ಯಂಗ್ಯವಾಗಿ ಸೂಚಿಸಿದರು ತಕ್ಕಷ್ಟು ಸಂಬಳ ಕೊಡದೆ ಹೋದರೆ ಸಮರ್ಥರಾದವರು ದುಡಿಯಲು ಸಿಕ್ಕುವುದಿಲ್ಲವೆಂದು ಸರಕಾರ ಹೇಳುವುದರಲ್ಲಿ ಸತ್ಯಾಂಶವಿದೆ ಸಮರ್ಥರಾದವರೆಲ್ಲ ಸರಕಾರದ ಸ್ವತ್ತಲ್ಲವಲ್ಲ ಸರಕಾರೀ ಕೆಲಸಕ್ಕೆ ಸೇರದೆ ಪ್ರಜಾಸೇವೆ ಮಾಡ ಸಮರ್ಥರೂ ಇದ್ದಾರಲ್ಲವೆ?— ಎಂದು ಮು| ಗುಂಡಪ್ಪನವರು ನುಡಿಸಿದರು. ಅನಂತರ ಮು| ಗುಂಡಪ್ಪನವರು ಕೈಗಾರಿಕೆ ಉದ್ಯಮಗಳ ವಿಚಾರದಲ್ಲಿ ಸರಕಾರದವರ ರೀತಿ ನೀತಿಗಳನ್ನು ವಿಮರ್ಶಿಸಿ ಮಾತಾಡಿದರು. ಮೈಸೂರು ಗಂಧದ ಎಣ್ಣೆ ವ್ಯಾಪಾರವು ಬಿದ್ದು ಹೋಗಿದೆ ಅದರಿಂದ ಬೇರೆ ವಿಧದ ಪ್ರಯೋಜನಗಳನ್ನು ಹೊಂದುವ ವಿಚಾರದಲ್ಲಿಯೂ ಇತರ ಸಣ್ಣ ಪುಟ್ಟ ಕೈಗಾರಿಕೆಗಳ ವಿಚಾರದಲ್ಲಿಯೂ ಸಾರ್ವಜನಿಕರಿಂದ ಹೆಚ್ಚು ಸಹಾಯ ಪಡೆದು ಮುಂದುವರಿಯಬೇಕೆಂದು ಸಲಹೆ ಕೊಟ್ಟರು.

ಮೂರನೆಯ ದಿವಸದ ಪ್ರಶ್ನೋತ್ತರಗಳು

ಮು| ಜೆ ಮಹಮ್ಮದ್ ಇಮಾಂರವರು ಮೈಸೂರು ಸರಕಾರವು ಕೃಷ್ಣರಾಜ ಸಾಗರ ಹೈಡ್ರೋ ಇಲೆಕ್ಟ್ರಿಕ್ ವರ್ಕ್ಸ್ ಸಂಬಂಧದಲ್ಲಿ ಮದರಾಸು ಸರಕಾರಕ್ಕೆ ಕೊಡುತ್ತಿರುವ ರಾಯಲ್ಟಿ ಎಷ್ಟು, ಹೀಗೆ ಕೊಡುತ್ತಿರುವುದು ಅನ್ಯಾಯವಲ್ಲವೆ, ಅದನ್ನು ವಜಾ ಮಾಡಿಸುವುದಕ್ಕಾಗಿ ಮಾಡುತ್ತಿರುವ ಪ್ರಯತ್ನದ ಫಲಿತಾಂಶವೇನೆಂದು ಕೇಳಿದರು ಮು| ಎನ್ ಎಸ್ ಅಯ್ಯಂಗಾರ್ಯರವರು ಬೇಕಾದ ವಿವರಗಳನ್ನು ತಿಳಿಸಿ, ಈ ವಿಚಾರವನ್ನು ಇಂಡಿಯಾ ಸರಕಾರದವರ ಗಮನಕ್ಕೆ ತೀರ್ಮಾನಕ್ಕಾಗಿ ತರಲಾಗಿದೆಯೆಂದು ಹೇಳಿದರು

ಮು ಕೆ ಚೆಂಗಲರಾಯ ರೆಡ್ಡಿಯವರು, ಸರಕಾರವು ವೇಸ್ಟ್ ಸಿಲ್ಕ್ ಸ್ಪಿನ್ನಿಂಗ್ ಫ್ಯಾಕ್ಟರಿಯನ್ನು ಸ್ಥಾಪಿಸಲು ನಿರ್ಧರಿಸಿರುವುದೇ, ನಿರ್ಧರಿಸಿರುವುದಾದರೆ ಎಲ್ಲಿ ಎಂದು ಕೇಳಿದರು

ಮಿ| ಮ್ಯಾಥನ್ ಸಾಹೇಬರು ಉತ್ತರ ಕೊಡುತ್ತ, ಈ ಕೈಗಾರಿಕೆಗೆ ೫ ಲಕ್ಷ ರೂ. ಗಳ ಮೇಲೆ ಬೇಕಾಗುತ್ತದೆಯೆಂದೂ, ಯಂತ್ರೋಪಕರಣಗಳನ್ನು ತರಿಸಿಕೊಳ್ಳುವುದಕ್ಕೆ ಪತ್ರವ್ಯವಹಾರ ಮಾಡುತ್ತಿದೆಯೆಂದೂ ಈ ಕೈಗಾರಿಕೆಯನ್ನು ಸುವ್ಯವಸ್ಥಿತ ರೀತಿಯಲ್ಲಿ ಸ್ಥಾಪಿಸಬೇಕಾಗಿರುವುದರಿಂದ ದೀರ್ಘಾಲೋಚನೆ ಆವಶ್ಯಕವೆಂದೂ ತಿಳಿಸಿದರು

ಚಿನ್ನದ ಗಣಿಗಳು

ಮೈಸೂರು ದೇಶದಲ್ಲಿ ಕೋಲಾರವಲ್ಲದೆ ಇತರ ಕಡೆಗಳಲ್ಲಿ ಚಿನ್ನವನ್ನು ತೆಗೆಯುವ ಸಾಧ್ಯತೆಯ ಪರೀಕ್ಷೆಯ ಪ್ರಯತ್ನಕ್ಕೆ ಮೆಸರ್ಸ್ ಜಾನ್ ಟೈಲರ್ ಮತ್ತು ಕಂಪೆನಿಯವರಿಗೆ ಲೈಸನ್ಸ್ ಕೊಟ್ಟಿರಲಾಗಿದೆಯೇ, ಸರಕಾರದವರೇ ಈ ಪ್ರಯತ್ನವನ್ನು ಕೈಕೊಳ್ಳಲಾಗುವುದಿಲ್ಲವೆ ಎಂಬ ಪ್ರಶ್ನೆಯನ್ನು ಸರಕಾರದವರು ಆಲೋಚಿಸಿರುವರೇ, ಎಂದು ಮು| ಚೆಂಗಲರಾಯ ರೆಡ್ಡಿಯವರು ಪ್ರಶ್ನೆಗಳನ್ನು ಕೇಳಿದರು ಮೊದಲನೆಯ ಪ್ರಶ್ನೆಗೆ ಮು| ಮ್ಯಾಥನ್ ಸಾಹೇಬರು ಇಲ್ಲವೆಂದರು ಎರಡನೆಯ ಪ್ರಶ್ನೆಯ ವಿಚಾರವಾಗಿ ವಿನೋದಕರವಾದ ಪ್ರಶ್ನೋತ್ತರಗಳು ನಡೆದುವು ಸರಕಾರದವರು ಇಂಥ ಪ್ರಯತ್ನವನ್ನೂ ಕೈಗೊಳ್ಳುವುದು ಸಾಧ್ಯವಲ್ಲವೆಂದ—ಮ್ಯಾಥನ್ ಸಾಹೇಬರ ಅಭಿಪ್ರಾಯ ಚಿನ್ನ ಸಿಕ್ಕಿದರೂ ಸಿಕ್ಕಬಹುದು, ಇಲ್ಲದಿದ್ದರೂ ಇಲ್ಲ

ಜೋಗದ ಜಲಪಾತದಿಂದ ವಿದ್ಯುಚ್ಛಕ್ತಿ

ಈ ಸಂಬಂಧವಾಗಿ ಬೊಂಬಾಯಿ ಸರಕಾರಕ್ಕೂ ಮೈಸೂರು ಸರಕಾರಕ್ಕೂ ನಡೆಯುತ್ತಿದ್ದ ವ್ಯವಹಾರ ಎಲ್ಲಿಗೆ ಬಂತು ಎಂದು ಮು| ಚೆಂಗಲರಾಯ ರೆಡ್ಡಿಯವರ ಮತ್ತೊಂದು ಪ್ರಶ್ನೆ ಕೊನೆಗೊಳ್ಳುತ್ತ ಬಂದಿದೆ, ಹೆಚ್ಚಿಗೆ ವಿವರಗಳೆಲ್ಲ ಗೋಪ್ಯ ಎಂದು ಸರಕಾರದ ಉತ್ತರ

ಪ್ರಶ್ನೋತ್ತರಗಳಾದ ಬಳಿಕ ಆಯವ್ಯಯದ ಮೇಲಿನ ಚರ್ಚೆ ಪ್ರಾರಂಭವಾಯಿತು ಚರ್ಚೆಗೆ ಮೊದಲು ಫೈನಾನ್ಷಿಯಲ್ ಸೆಕ್ರೆಟರಿಯವರು ಸರಕಾರದ ಹಣಕಾಸಿನ ನೀತಿರೀತಿಗಳನ್ನು ಸಮರ್ಥಿಸಿ ಭಾಷಣಮಾಡಿದರು.

ಡಿಸ್ಟ್ರಿಕ್ಟುಗಳ ಸಂಖ್ಯೆಯನ್ನು ಕಡಮೆ ಮಾಡಬೇಕು.

ಡಿಸ್ಟ್ರಿಕ್ಟುಗಳ ಸಂಖ್ಯೆಯನ್ನು ಕಡಮೆ ಮಾಡಬೇಕು. ಒಂದು ಡಿಸ್ಟ್ರಿಕ್ಟು ಹೋದರೆ ಎಷ್ಟೋ ವೆಚ್ಚ ಉಳಿಯುತ್ತೆ ಎಂದ ಮು| ಕೆ ಟಿ ಭಾಷ್ಯಂ ಅವರ ಒಂದ 'ಕಟ್ ಮೋಷನ್' ತಂದರು

ಮು ಗ ಪತ್ನ ಗೆ ತರ ಜಿಲ್ಲೆಗಳ ತಾಲೂಕುಗಳ ರಚನೆಯಲ್ಲಿ ಬದಲಾವಣೆಮಾಡಬೇಕೆಂದರ ಮೈಸೂರ ಜಿಲ್ಲೆಗೆ ತಾಲೂಕುಗಳ ಸೆತ್ತ, ಕಲಿಭಾರ ಅವುಗಳಲ್ಲಿ ಕೆಲವನ್ನು ಹಾಸನ ಜಿಲ್ಲೆಗೆ ಸೇರಿಸಬೇಕ —ಎಂದರು

ಮು| ರಾ| ಗಳಾದ ಸಿ ಹಯವದನ ರಾಯರ, ಕೆ ಆರ್ ಶ್ರೀನಿವಾಸಯ್ಯಂಗಾರರು ಮುಂತಾದವರು ಮೇಲಿನ ಸಲಹೆಯನ್ನು ವಿರೋಧಿಸಿ ಮಾತನಾಡಿದರು. ಈಗಿನ ಆಡಳಿತದ ಸುವ್ಯವಸ್ಥೆ ಅಂತರವೃದ್ಧಿಗಳಿಗೆ ಡಿಸ್ಟ್ರಿಕ್ಟುಗಳು ಸಣ್ಣವಾಗಿರುವುದೇ ಕಾರಣ, ಆದ್ದರಿಂದ ಡಿಸ್ಟ್ರಿಕ್ಟುಗಳನ್ನು ಕಡಮೆಮಾಡುವ ಬದಲು ಹೆಚ್ಚಿಸಬೇಕೆಂದು ಮು| ಹಯವದನ ರಾಯರವರ ಅಭಿಪ್ರಾಯ ಈಗಿನ ಆಡಳಿತದಲ್ಲಿ ಅಧಿಕಾರಿಗಳಿಗೂ ರೈತರಿಗೂ ನಿಕಟ ಸಂಬಂಧವಿದೆ, ಡಿಸ್ಟ್ರಿಕ್ಟುಗಳ ಸಂಖ್ಯೆಯನ್ನು ಕಡಮೆಮಾಡಿದ್ದಾದರೆ ಈ ಸಂಬಂಧ ತಪ್ಪಿಹೋಗುವುದು ಎಂದು ಮು| ಮ್ಯಾಥನ್ ಸಾಹೇಬರು ನುಡಿದರು

"ಕಟ್ ಮೋಷ"ನನ್ನು ಹಿಂದಿರುಗಿಸಿಕೊಳ್ಳಲಾಯಿತು

ಭೂಕಂದಾಯದ ಆಡಳಿತದ ಸಂಬಂಧವಾಗಿ ಇನ್ನು ಕೆಲವು "ಕಟ್ ಮೋಷನ್"ಗಳು ಬಂದು ಚರ್ಚೆಯಾಗಿ ಹಿಂದಕ್ಕೆ ತೆಗೆದುಕೊಳ್ಳಲಾದುವು ಈ ಸಂಬಂಧವಾಗಿ ಸರಕಾರವು ಕೇಳಿದ ಮೊತ್ತಕ್ಕೆ—ಸಭೆ ಸಮ್ಮತಿ ಕೊಟ್ಟಿತು

ನಾಲ್ಕನೆಯ ದಿವಸ

ಆಯವ್ಯಯದ ಚರ್ಚೆಗೆ ಮೊದಲು ಕೆಲವು ಪ್ರಶ್ನೋತ್ತರಗಳು ನಡೆದುವು

ಕಾಡಿನ ಉತ್ಪತ್ತಿಯ ಸಂಬಂಧವಾಗಿ ರೂ ೨೧,೫೫,೦೦೦ಕ್ಕೆ ಮು| ಮ್ಯಾಥನ್ ಸಾಹೇಬರು ಸಭೆಯ ಸಮ್ಮತಿ ಕೇಳಿದರು

ಮು| ಡಿ ಎಚ್ ಚಂದ್ರಶೇಖರಯ್ಯನವರು ಸರಕಾರವು ಕಾಡಿನ ಸಾಮಗ್ರಿಯನ್ನು ಇನ್ನೂ ಹೆಚ್ಚು ಆದಾಯ ಬರುವಂತೆ ಉಪಯೋಗಿಸಿಕೊಳ್ಳಬೇಕೆಂದೂ, ದೀಪದ ಕಡ್ಡಿ ಮತ್ತು ಕಾಗದದ ಕಾರ್ಖಾನೆಗಳನ್ನು ಸ್ಥಾಪಿಸಬೇಕೆಂದೂ "ಕಟ್ ಮೋಷನ್" ತಂದರು.

ಇದು ವರೆಗೂ ಚರ್ಮ ಹದಮಾಡುವುದಕ್ಕೆ ಉಪಯೋಗಿಸುತ್ತಿದ್ದ ತಂಗಡಿ ಚಕ್ಕೆಗೆ ಬದಲಾಗಿ ದಕ್ಷಿಣ ಆಫ್ರಿಕದಿಂದ ವಸ್ತು ವಿಶೇಷವೊಂದನ್ನು ತರಿಸುವುದಕ್ಕೆ ಮೊದಲಾಗಿದೆಯೆಂದೂ ಇದರಿಂದ ದೇಶಕ್ಕೆ ಬಹಳ ನಷ್ಟವುಂಟಾಗುತ್ತಿದೆಯೆಂದೂ ಕೆ. ಟಿ. ಭಾಷ್ಯಂರವರು ಸೂಚಿಸಿದರು ಚೀಫ್ ಫ್ಲೋರೆಸ್ಟ್ ಕನ್‌ಸರ್ವೇಟರ್‌ರವರಾದ ಮು| ಬಿ. ವಿ. ರಾಮಯ್ಯಂಗಾರರು ಪ್ರಶ್ನೆಗಳಿಗೂ ಸಂದೇಹ ಸಲಹೆಗಳಿಗೂ ಉತ್ತರ ಸಮಾಧಾನಗಳನ್ನು ಹೇಳಿದ ತರುವಾಯ "ಕಟ್ ಮೋಷನ್" ಹಿಂದಕ್ಕೆ ತೆಗೆದುಕೊಳ್ಳಲಾಯಿತು ತೋರಿಸಿದ್ದ ಮೊಬಲಗಿಗೆ ಸಭೆ ಸಮ್ಮತಿ ಕೊಟ್ಟಿತು.

ಮದ್ಯಪಾನ ನಿರೋಧ.

ಅನಂತರ "ಎಕ್ಸೈಸ್" ಬಾಬಿನಲ್ಲಿ ಸ್ವಲ್ಪ ಹೊತ್ತು ಚರ್ಚೆ ನಡೆಯಿತು ಇದರ ಸಂಬಂಧದಲ್ಲಿ ಮು| ಎಸ್ ಪಿ ರಾಜಗೋಪಾಲಾಚಾರ್ಯರವರು ರೂ ೩, ೭ ೫,೦೦೦ ತೋರಿಸಿ ಸಭೆಯ ಸಮ್ಮತಿ ಕೇಳಿದರು.

ನಾನಾ ಬಗೆಯ ಮದ್ಯವನ್ನು ತಯಾರಿಸುವ ಪಶ್ನೆಗೆ ಚರ್ಚೆಗೆ ಬಂದಿತ ಮದ್ಯಪಾನ ನಿರೋಧಕ್ಕೆ ಸರಕಾರಕ್ಕೆ ಹಣಬೇಕಾದ ಹೊರತು ಅದನ್ನು ತಯಾರಿಸುವುದೆಂದರೇನು ಒಂದಿಬ್ಬರು ಆಶ್ಚರ್ಯಪಟ್ಟರು

ಈ ವಿಚಾರವಾಗಿ ಎಕ್ಸೈಸ್ ಕಮಿಷನರು ಮದ್ಯಪಾನವು ನಿರೋಧವು ಸಾಧ್ಯವೇ ಇಲ್ಲವೆಂದು ಉತ್ತರಕೊಟ್ಟರು ಮು| ರಾಜಗೋಪಾಲಾಚಾರ್ಯರವರು ಅವರನ್ನು ಸಮರ್ಥಿಸಿ ಮಾತನಾಡುತ್ತ, ಮದ್ಯಪಾನ ನಿರೋಧವು ಜನಗಳ ಮನಸ್ಸಿನಿಂದಲೇ ಆಗಬೇಕೇ ಹೊರತು ಸರಕಾರ ಈ ವಿಷಯದಲ್ಲಿ ಏನ ಮಾಡಲೂ ಸಾಧ್ಯವಿಲ್ಲವೆಂದು ಸೂಚಿಸಿದರು ಮದ್ಯಪಾನ ನಿರೋಧದ ಪ್ರಚಾರಕಾರ್ಯಕ್ಕೆ ಸರಕಾರವು ತಕ್ಕಷ್ಟು ಪ್ರೋತ್ಸಾಹ ಸಹಾಯಗಳನ್ನು ಕೊಟ್ಟಿರುವುದಾಗಿ ತಿಳಿಸಿದರು.

[ಅವೆ ರಿಕದ ದೃಷ್ಟಾಂತ ನಮ್ಮ ಮುಂದ ಇಲ್ಲವೆ! ಸರಕಾರವು ಏನು ಮಾಡೀತು? ಜನರ ಮನಸ್ಸು ತಿದ್ದುತ್ತ ಬರಬೇಕು. ಅಷ್ಟೆ]

ಇನ್ನು ಸ್ವಲ್ಪ ಹೊತ್ತು ಚರ್ಚೆ ನಡೆದ ಬಳಿಕ ಸರಕಾರವು ತೋರಿಸಿದ ಮೊಬಲಗಿಗೆ ಸಭೆ ಒಪ್ಪಿಗೆ ಕೊಟ್ಟಿತು ಅನಂತರ 'ಕ್ಷಿಲ-ಗ್ಗನೆಯ' ಸಾಲಿಗೆ ಸಂಬಂಧಿಸಿ ಕೆಲವು ಜಿಲ್ಲೆ ವೆಚ್ಚಗಳಿಗೆ ಹೆಚ್ಚಿಗೆ ಹಣವನ್ನು ಸರಕಾರವು ಕೇಳಿತು, ಸಭೆ ಒಪ್ಪಿಗೆ ಕೊಟ್ಟಿತು.

ಶ್ರೀಮನ್ಮಹಾರಾಜರವರಿಗೆ ದೇಹಾಲಸ್ಯ

ಶ್ರೀಮನ್ಮಹಾರಾಜರವರು ಬೆಂಗಳೂರಿಗೆ ಕುದುರೆ ಜೂಜಿನ ಸಂಬಂಧವಾಗಿ ಬಂದಿದ್ದು ದೇಹಾಲಸ್ಯದ ಪ್ರಯುಕ್ತ ಇಲ್ಲಿಯೇ ಉಳಿದುಕೊಂಡಿದ್ದಾರೆ ಅವರಿಗೆ ಗುಣಮುಖವಾಗಲೆಂದು ರಾಜಧಾನಿಯಲ್ಲಿ ಅರಮನೆಯ ವೈದಿಕ ಮಂಡಲಿಯು ಜಪಹೋಮಗಳನ್ನು ನಡೆಸುತ್ತಿದ್ದಾರೆ ಆತಂಕಕ್ಕೆ ಕಾರಣವಿಲ್ಲವೆಂದು ತಿಳಿದುಬರುತ್ತದೆ

ಮೈಸೂರು ವಿದ್ಯಾರ್ಥಿಗೆ ಬಹುಮಾನ.

ದೊಡ್ಡ ಬಳ್ಳಾಪುರದ ಲೋಕಸೇವಾನಿರತ ಮು| ಡಿ ಕೊಂಕಾಡಿಯಪ್ಪನವರ ಸಂಬಂಧಿ ಮು| ಡಿ ಆರ್ ಸದಾಶಿವಯ್ಯನೆಂಬ ವಿದ್ಯಾರ್ಥಿಯು ಕಾಶಿಯ ಹಿಂದೂ ವಿಶ್ವವಿದ್ಯಾಲಯದ ಮೆಕಾನಿಕಲ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಬಿ ಎಸ್. ಸಿ. ಪರೀಕ್ಷೆಯಲ್ಲಿ ಮೊದಲನೆಯವನಾಗಿ ತೇರ್ಗಡೆಹೊಂದಿರುತ್ತಾನೆ. ಅವನಿಗೆ ಪ್ರಿನ್ಸ್ ಒಫ್ ವೇಲ್ಸ್ ಸ್ವರ್ಣಪದಕವು ಕೊಡಲ್ಪಟ್ಟಿದೆ.

ಕೆಂಪಂಗಿಯವರ ಮಹಾಸೈನ್ಯ.

ರೋಮ್ ಜುಲೈ ೬.

ಸಲೆರ್ನೋವಿಗೆ ಬ್ಲೇಕ್ ಶರ್ಟ್ಸ್ ಡಿವಿಜನನ್ನು ನೋಡಹೋಗುತ್ತಿದ್ದಾಗ ಸೀನಿಯರ್ ಮುಸೋಲಿನಿಯವರು ಸಂಚರಿಸುತ್ತಿದ್ದ ವಿಮಾನಕ್ಕೆ ಮಿಂಚು ಹೊಡೆಯಿತು. ಈ ಸೈನಿಕರು ಈ ತಿಂಗಳಾಂತ್ಯದಲ್ಲಿ ಇಟೆಲಿಯನ್ ಕೊಲೊನಿಗೆ ಹೋಗುವರು.

ವಯರ್‌ಲೆಸ್ ಓಪರೇಟರನು ಬೋಧ ತಪ್ಪಿ ಬಿದ್ದನು. ವಿಮಾನವು ಹಾಳಾಗಿರುವುದಿಲ್ಲ. ಮುಸೋಲಿನಿಯವರಿಗೆ ಬಾಧೆಯುಂಟಾಗಿಲ್ಲ.

ಸಲೆರ್ನೋವಿನಲ್ಲಿ ಮುಸೋಲಿನಿಯವರು ವಿಮಾನದಿಂದಿಳಿದು ಒಂದು ಫಿರಂಗಿಯ ಮೇಲೆ ನಿಂತು ಒಂದು ಪ್ರಚಂಡ ಭಾಷಣ ಮಾಡಿದರು ಈ ನಿರ್ಧಾರದಿಂದ ಸರಕಾರವಾಗಲೀ ಜನಾಂಗವಾಗಲೀ ಹಿಂದೆ ಬರುವುದೇ ಇಲ್ಲವೆಂದು ಅವರು ತಿಳಿಸಿದರು

ಕರಿಜನಾಂಗವನ್ನು ಇಟೆಲಿಯವರು ಈ ಮೊದಲೇ ಸೋಲಿಸಿರುವರು ೧೮೯೬ರಲ್ಲಿ ನಡೆದ ಅಡುವಾ ಯುದ್ಧವು ಮಾತ್ರ ಒಂದು ಪ್ರತ್ಯೇಕ. ಅದರಲ್ಲಿ ಇಟೆಲಿಯಾನರಿಗೆ ಸೋಲಾಯಿತು. ೧೦,೮೦೦ ಎಬಿಸೀನಿಯಾನರೆದುರು ೪೦೦೦ ಇಟೆಲಿಯಾನರಿದ್ದುದೇ ಇದಕ್ಕೆ ಕಾರಣ.

ಆಫ್ರಿಕಕ್ಕೆ ಹೊರಟ ಸೈನಿಕರ ಬೆಂಬಳವಾಗಿ ಸಮಸ್ತ ಇಟೆಲಿಯೇ ಇತ್ತು ಪ್ರತಿಯೊಬ್ಬ ಇಟೆಲಿಯಾನನಿಗೂ ವೀರತೆಯ ಜೀವನವು ಬೇಕು ಅವನಿಗೆ ನಿಷ್ಪ್ರಯೋಜಕ ಜೀವನವು ಬೇಡ ಈ ಭಾಷಣವನ್ನು ಪ್ರಚಂಡೋತ್ಸಾಹದಿಂದ ಪುರಸ್ಕರಿಸಲಾಯಿತು

ಸೀನಿಯರ್ ಮುಸೋಲಿನಿಯವರ ಇಬ್ಬರು ಮಕ್ಕಳು ವಿಟ್ಟೋರಿಯೋ ಮತ್ತು ಬ್ರುನೋ ಎಂಬಿಬ್ಬರು ತಂದೆಯೊಡನೆ ಬೇಡಿ ಕಾಡಿ ಕೊಲೊನಿಗಳಲ್ಲಿ ಸ್ವಯಂಸೇವಕರಾಗಿ ಕೆಲಸ ಮಾಡಲು ಅನುಮತಿ ಪಡೆದರು. ಹಿರಿಯವನ ಪ್ರಾಯ ೧೯ ಕಿರಿಯವನ ಪ್ರಾಯ ೧೭

ಇಟೆಲಿಯನ್ ವಿಮಾನಬಲದಲ್ಲಿ ಸ್ವಯಂಸೇವಕರಾಗಿ ಕೆಲಸ ಮಾಡುವೆವೆಂದು ಅವರು ಮಾಡಿದ ಅರ್ಜಿಯನ್ನು ವಿಮಾನ ಸಚಿವರು ಸ್ವೀಕರಿಸುತ್ತಾರೆ ಬ್ಲೇಕ್‌ಶರ್ಟ್ ಡಿವಿಜನೊಡನೆ ಅವರು ಬೇಗನೇ ಆಫ್ರಿಕಕ್ಕೆ ಹೋಗಲಿರುವರು

ಬ್ರುನೋ ಎಂಬವನು ಯುರೋಪಿನ ವೈಮಾನಿಕರಲ್ಲಿ ಕಿರಿಯವನು

ಜನರಲ್ ಗ್ಯಸಿಪ ಎಂಬವರು ಒಂದು ದೊಡ್ಡ ಸೈನ್ಯವನ್ನು ರಚಿಸುವುದಕ್ಕಾಗಿ ಮುಸೋಲಿನಿಯವರ ಅಪ್ಪಣೆ ಪಡೆಯಲಿರುವರು

ಲೋರ್ಡ್ ಸೆಂಕೆಯವರನ್ನು ತೆಗೆದೆಸೆದರೇ?

ಪುನರ್ರಚಿತವಾದ ಮಂತ್ರಿಮಂಡಲದಲ್ಲಿ ಲೋರ್ಡ್ ಚೆನ್ಸಲರಾಗಿದ್ದ ಲೋರ್ಡ್ ಸೆಂಕೆಯವರನ್ನು ಹೊಸ ಮಂತ್ರಿಯಾದ ಬಾಲ್ಡ್‌ವಿನ್ನರು ಏಕೆ ಸೇರಿಸಿಕೊಳ್ಳಲಿಲ್ಲ-ಅಷ್ಟು ಘನ ವ್ಯಕ್ತಿಯನ್ನು ದೂರವಿಟ್ಟುದಾದರೂ ಏಕೆ?-ಎಂಬ ಪ್ರಶ್ನೆಯು ಇಂಗ್ಲಾಂಡಿನಲ್ಲೆದ್ದಿದೆ ಈ ವಿಷಯವಾಗಿ ಬರೆಯಲ್ಪಟ್ಟ ಒಂದು ಭಾಷಣವನ್ನು ಮಂತ್ರಿಮಂಡಲದಿಂದ ಅದಷ್ಟು ದೂರವಿರಿಸಲು ಯತ್ನವಾಯಿತೆಂದೂ ತಿಳಿದುಬಂದಿದೆ ತನ್ನನ್ನು ಹೊರಗೆ ಹಾಕುತ್ತಾರೆಂಬ ವಿಷಯದ ಅರಿವೇ ಇಲ್ಲದ ಸೆಂಕೆಯವರು ಈ ಭಾಷಣವನ್ನು ತಯಾರಿಸಿಟ್ಟಿದರಂತೆ "ಪಾಪ" ಇನ್ನೂ ಅವರು ಸಾರ್ವಜನಿಕ ಕೆಲಸಕ್ಕೆ ಕೈಯನ್ನೇ ಹಾಕುವುದಿಲ್ಲವಂತೆ.

ಸಪ್ರೂರವರು ವಿಶ್ವಕೋಶದ ಮುಖ್ಯ ಸಂಪಾದಕರು.

ಬಟರ್ ವರ್ತ್ ಎಂಬ ಕಂಪೆನಿಯವರು ರಚಿಸಲಿರುವ "ಎನ್‌ಸೈಕ್ಲೋಪಿಡಿಯಾ ಆಫ್ ಜನರಲ್ ಏಕ್ಟ್ಸ್ ಎಂಡ್ ಕೋಡ್ಸ್ ಆಫ್ ಇಂಡಿಯಾ" ಎಂಬ ವಿಶ್ವಕೋಶದ ಮುಖ್ಯ ಸಂಪಾದಕರನ್ನಾಗಿ ಸರ್ ತೇಜ ಬಹದ್ದೂರ್ ಸಪ್ರೂರವರನ್ನು ಆರಿಸಿದ್ದಾರೆ ಅವರು ಅನುಮತಿಯನ್ನಿತ್ತಿರುತ್ತಾರೆ

ಇಟೆಲಿಯು ಯುದ್ಧ ಮಾಡಲು ನಿರ್ಧರಿಸಿದೆ!

ಹಿಂದಿರುಗಲಾರೆವೆಂದು ಮುಸೋಲಿನಿಯವರು ಹೇಳುವರು!

ವಿಮಾನಕ್ಕೆ ಸಿಡಿಲುಬಡಿಯಿತು-ಮುಸೋಲಿನಿಯವರು ಸುಖವಾಗಿರುವರು!

ಮಕ್ಕಳು ಬ್ಲೇಕ್‌ಶರ್ಟ್ ಡಿವಿಜನನ್ನು ಸೇರಿದರು!

ಅಬಿಸೀನಿಯಾದಲ್ಲಿ ಜನಾಂಗವನ್ನು ರಚಿಸುವುದಕ್ಕಾಗಿ ಅಮೆರಿಕಾನರ ಯೋಜನೆ!

ಅವರು ಯುದ್ಧ ಮಾಡಲು ಸನ್ನದ್ಧರಾಗಿರುವರು. ಈ ನಿರ್ಧಾರದಿಂದ ಸರಕಾರವಾಗಲೀ ಜನರಾಗಲೀ ಹಿಂದಿರುಗುವಂತಿಲ್ಲ. ಆಫ್ರಿಕಕ್ಕೆ ಹೊರಟ ತಮ್ಮ ಮಕ್ಕಳನ್ನು ಸಮಸ್ತ ಇಟೆಲಿಯು ಆಶೀರ್ವದಿಸಿತು. ವೀರರಂತೆ ಬಾಳದ ಜೀವನವು ನಿಷ್ಪ್ರಯೋಜಕ ಜೀವನವೆಂದು ಸಮಸ್ತ ಇಟೆಲಿಯು ತಿಳಿದಿದೆ.

ಸಲೆರ್ನೋವಿನಲ್ಲಿ ಸೀನಿಯರ್ ಮುಸೋಲಿನಿಯವರು ಬ್ಲೇಕ್ ಶರ್ಟ್ ಡಿವಿಜನಿನವರೆದುರು ಭಾಷಣಮಾಡುತ್ತ ಮೇಲಿನ ಅಭಿಪ್ರಾಯದಂತೆ ಭಾಷಣಮಾಡಿದರು ಈಸ್ಟ್ ಆಫ್ರಿಕಾದ ಇಟೆಲಿಯನ್ ಕೊಲೊನಿಗಳಿಗೆ ಇಟೆಲಿಯ ಸೈನಿಕರು ಈ ತಿಂಗಳಾಂತ್ಯದಲ್ಲಿ ಹೊರಡಲಿರುವರು

ವಿಮಾನಕ್ಕೆ ಮಿಂಚು ಹೊಡೆಯಿತು

ಸಲೆರ್ನೋವಿಗೆ ಮುಸೋಲಿನಿಯವರು ವಿಮಾನ ಮೂಲಕ ಹೋಗುತ್ತಿದ್ದಾಗ ಅದಕ್ಕೆ ಮಿಂಚು ಹೊಡೆಯಿತು ವಯರ್‌ಲೆಸ್ ಓಪರೇಟರನು ಮೂರ್ಛೆತಪ್ಪಿ ಬಿದ್ದನು ಮುಸೋಲಿನಿಯವರಿಗೆ ಯಾವ ಬಾಧಕವೂ ಬಟ್ಟಿಲ್ಲ ಈ ಮಧ್ಯೆ ಅಡಿಸ್ ಅಬಾಬದಲ್ಲಿರುವ ಅಮೆರಿಕನ್ ಚಾರ್ಜ್ ಡಿ ಎಫೇರ್' ಸಂಸ್ಥೆಯು ೧೩೫ ಮಂದಿ ಅಮೆರಿಕಾನರು ಕೂಡಲೇ ಅಮೆರಿಕಾಕ್ಕೆ ಬರುವಂತೆ ಮಾಡಬೇಕೆಂದೂ ಅಥವಾ ಅಬಿಸೀನಿಯಾದಲ್ಲಿರ ವ ಅಮೆರಿಕಾನರ ರಕ್ಷಣೆಗಾಗಿ ಅಗತ್ಯವಿರುವ ಎಲ್ಲಾ ಯೋಜನೆಗಳನ್ನು ಹೂಡಬೇಕೆಂದೂ ಅಜ್ಞಾಪಿಸಿದೆ.

— — — —

ಲೋರ್ಡ್ ಎಂಪ್‌ತಿಲ್ಲರ ಮರಣ

ಭಾರತದ ಮಾಜಿ ವೈಸರಾಯರು

ಲಂಡನ್, ಜುಲೈ ೭

ಲೋರ್ಡ್ ಎಂಪ್‌ತಿಲ್ಲರ ಮರಣಹೊಂದಿದರು ಕಳೆದ ಗುರುವಾರ ಲೋರ್ಡ್ ಎಂಪ್‌ತಿಲ್ಲರು ಹೃದಯವೇದನೆಯ ನಿವಾರಣೆಗಾಗಿ ಲಂಡನಿನ ಒಂದು ನರ್ಸಿಂಗ್ ಹೋಮಿಗೆ ಹೋದರು ಈ ರೋಗವು ನಿವೋನಿಯವಾಗಿ ಪರಿಣಮಿಸಿತು.

ಇವರು ೧೮೬೯ರಲ್ಲಿ ರೋಮಿನಲ್ಲಿ ಜನಿಸಿದರು ಈಟನ್ ಮತ್ತು ನ್ಯೂ ಕೊಲೆಜ್‌ಗಳಲ್ಲಿ ಇವರ ವಿದ್ಯಾಭ್ಯಾಸಂಗವು ನಡೆಯಿತು ೧೮೯೯ರಿಂದ ೧೯೦೬ರ ವರೆಗೆ ಲೋರ್ಡ್ ಎಂಪ್‌ತಿಲ್ಲರು ಮದ್ರಾಸಿನ ಗವರ್ನರರಾಗಿದ್ದರು ೧೯೦೪ರಲ್ಲಿ ಅವರು ಕೆಲವು ಸಮಯ ಇಂಡಿಯದ ವೈಸರಾಯರಾಗಿಯೂ ಗವರ್ನರ್ ಜನರಲರಾಗಿಯೂ ಕೆಲಸ ನೋಡಿದರು ಇವರ ಲಂಡನ್ ರೋವಿಂಗ್ ಕ್ಲಬ್ಬಿನ ಅಧ್ಯಕ್ಷರಾಗಿದ್ದರು ಬೆಡ್‌ಫೋರ್ಡ್ ಕೌಂಟಿ ಕೌನ್ಸಿಲ್‌ನ ಚೆಯರ್‌ಮೆನರಾಗಿದ್ದರು ನೇಶನಲ್ ಪಯರ್ ಬ್ರಿಗೇಡ್ಸ್ ಎಸೋಸಿಯೇಶನಿನ ಅಧ್ಯಕ್ಷರಾಗಿದ್ದರು

ಲಾಹೋರಿನಲ್ಲಿ ಮಹಾಕ್ಷೋಭೆ!

ಪೋಲೀಸರು ಕ್ಲಿಷ್ಟಕಾಲದಲ್ಲಿ ತಡೆದರು

ಮುಸ್ಲಿಮರು ಸಿಖ್ಖರ ಮೇಲೆ ಬೀಳ ಹೋದರು!

ಸಶಸ್ತ್ರ ಧಾರಿಗಳಾಗಿದ್ದ ಗುಂಪಿನ ಮೇಲೆ ಲಾಠಿ!

ಲಾಹೋರು, ಜುಲೈ ೫

ಕಳೆದ ಕೆಲವು ದಿನಗಳಿಂದ ಇಲ್ಲಿಯ ಸಿಖ್‌ಗಂಜ್ ಪರಾರದಲ್ಲಿ ಗಲಾಟೆಯೆದ್ದಿದೆ ಒಂದು ಮಸೀದಿಯ ಕುರಿತಾಗಿ ಎದ್ದ ವಿವಾದವು ಪರ್ವತಾಕಾರಕ್ಕೆ ಬೆಳೆದಿದೆ ತಾ ೪ರಲ್ಲಿ ದ್ವಿಪಕ್ಷಗಳ ಮುಖಂಡರು ಕೂಡಿ ಸಮಾಧಾನ ಮಾಡಲೆತ್ನಿಸಿದರಾದರೂ ಶುಕ್ರವಾರ ದಿನ ಮಹಾಕ್ಷೋಭೆಯೆದ್ದಿತು ೨೦೦೦ದಿಂದ ೩೦೦೦ ಮುಸ್ಲಿಮರು ಶುಕ್ರವಾರದ ಪ್ರಾರ್ಥನೆ ನಡೆಸಿದ ವೇಳೆ ಮೆರವಣಿಗೆ ಮಾಡಿಕೊಂಡು ಗುರುದ್ವಾರಕ್ಕೆ ಹೋದರು

ಇದರ ವಾಸನೆಯನ್ನು ತಿಳಿದಿದ್ದ ಅನೇಕ ಸಿಖ್ಖರು ಗುರುದ್ವಾರದಲ್ಲಿ ಕಾದು ಕುಳಿತ್ತಿದ್ದರು ಇವರ ಮಧ್ಯ ೨೦೦ ಮಂದಿ ಸ್ತ್ರೀಯರೂ ಇದ್ದರು. ಎಲ್ಲರೂ ಶಸ್ತ್ರಧಾರಣೆ ಮಾಡಿಕೊಂಡಿದ್ದರು ಒಂದು ಸಾವಿರ ಸಿಖ್ಖರು ಗುರುದ್ವಾರದ ಬಾಗಿಲಲ್ಲಿ ಶಸ್ತ್ರಧಾರಿಗಳಾಗಿ ನಿಂತಿದ್ದರು ಗುರುದ್ವಾರವು ರಣಭೂಮಿಯಂತೆ ಕ್ಷೋಭಾಮಯವಾಗಿದ್ದಿತು

ಗುರುದ್ವಾರದ ಬಳಿ ಮುಸ್ಲಿಮರ ಗುಂಪು ಬರಲು, ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಅವರನ್ನು ಚದರಿಸಹೇಳಿದರು

೨೦೦ ಜನ ಪೋಲೀಸರು ಜನರ ಗುಂಪನ್ನು ದೂಡಿದರು ಒಂದು ಮೈಲಿನ ವರೆಗೆ ದೂಡಿ ಕೊನೆಗೆ ಲಾಠಿಚಾರ್ಜ್ ಗಾರಂಭಿಸಿದರು ಜನರ ಗುಂಪಿನಿಂದ ಬಂದ ಒಂದು ಕಲ್ಲಿನಿಂದಾಗಿ ಒಬ್ಬ ಪೋಲೀಸನ ತಲೆಯೊಡೆಯಿತು ಸಬ್ ಇನ್ಸ್‌ಪೆಕ್ಟರನೊಬ್ಬನು ಗಾಯಗೊಂಡಿರುವನು.

ಶಸ್ತ್ರಧಾರಿಗಳಾದ ಪೋಲೀಸ ಪೌಜೂ, ಕುದುರೆ ಲಾಠಿಗಳನ್ನು ಹಿಡಿದುಕೊಂಡು ಗುರುದ್ವಾರದಲ್ಲಿ ನಿಂತಿರುವರು ಕರೆದೊಡನೆ ನಿಮಿಷ ಮಾತ್ರದೊಳಗೆ ಸಿದ್ಧರಾಗಬೇಕೆಂದು ಮಿಲಿಟರಿಯವರಿಗೆ ತಿಳಿಸಲಾಗಿದೆ

ಪಟ್ಟಣವನ್ನು ಮುಚ್ಚಲಾಗಿದೆ ಪೋಲೀಸರು ಪಹರೆ ನೋಡುತ್ತಿರುವರು

ಆರು ಜಿಲ್ಲೆಗಳಿಂದ ರಿಜರ್ವ್ ಪೋಲೀಸರನ್ನು ಕಳುಹಿಸಲಾಗಿದೆ

ಕರಾಚಿಯಲ್ಲಿ ವೈಸರಾಯರು.

ಕ್ವೆಟ್ಟಾದಲ್ಲಿ ನೊಂದವರ ಕುರಿತು ವಿಚಾರಿಸಿದರು

ಕರಾಚಿ, ತಾ ೬.

ಈ ದಿನ ಸಂಜೆ ೪ ೧೫ಕ್ಕೆ ಮಾನ್ಯ ವೈಸರಾಯರೂ ಅವರ ಪತ್ನಿಯವರೂ ಸ್ಪೆಶಲ್ ರೈಲಿನಲ್ಲಿ ಇಲ್ಲಿಳಿದರು. ಇಲ್ಲಿಯ ಅಧಿಕಾರಿಗಳು ಅವರನ್ನು ಕೂಡಿಕೊಂಡು ಸಿವಿಲ್ ಆಸ್ಪತ್ರೆಗೆ ಹೋದರು ವೈಸರಾಯರು ಸವಿಶೇಷರಾಗಿ ಅಲ್ಲಿ ಒಂದು ಕಾಸಿನ ತನಕ ಜನರ ಸ್ಥಿತಿಗತಿಗಳ ವಿಚಾರವಾಗಿ ತನಿಖೆ ನಡೆಸಿ ಆ ಮೇಲೆ ಹಾಜ್ ಕೇಂಪಿಗೆ ಹೋದರು. ವೈಸರಾಯರು ಎಲ್ಲಾ ವಾರ್ಡುಗಳಲ್ಲೂ ತಿರುಗಿ ರೋಗಿಗಳೊಡನೆ ಮಾತನಾಡಿದರು ಪ್ರತಿಯೊಬ್ಬನೊಡನೆಯೂ ಅವರು ಮಾತುಕತೆಗಳನ್ನು ನಡೆಸಿ ಆತ್ಮಕಥೆಗಳನ್ನು ಕೇಳುತ್ತಿದ್ದರು. ಅವರನ್ನು ಉತ್ತೇಜಕ ನುಡಿಗಳಿಂದ ಪ್ರೋತ್ಸಾಹಿಸುತ್ತಿದ್ದರು. ಲೇಡಿ ವಿಲ್ಲಿಂಗ್ಡನ್ನರು ಅನಾಥ ಮಕ್ಕಳ ಮತ್ತು ಸ್ತ್ರೀಯರ ಮೇಲ್ವಿಚಾರ ಮಾಡುತ್ತಿದ್ದರು ಒಬ್ಬ ರೋಗಿಯು ತಾನು ಭೂಕಂಪವಾಗುವ ದಿನದ ಮಧ್ಯಾಹ್ನವೇ ಹೇಗೆ ಅಲ್ಲಿಗೆ ಬಂದೆನೆಂಬ ಕಥೆಯನ್ನು ಹೇಳಿದನು 'ನೀನು ಬೇಗನೇ ಗುಣಹೊಂದುವಿ' ಎಂದು ವೈಸರಾಯರು ಅವನಿಗೆ ಹೇಳಿದರು ಒಬ್ಬನು "೨೬ ಮಂದಿಯಿದ್ದ ಒಂದು ಕುಟುಂಬದಲ್ಲಿ ನಾನೊಬ್ಬನೇ ಬದುಕಿ ಉಳಿದೆನ' ಎಂದನು 'ಇಪ್ಪತ್ತಾರರಲ್ಲಿ?' ಎಂದು ಒಡನೆ ವೈಸರಾಯರು ಚಕಿತರಾಗಿ ಆಶ್ಚರ್ಯವನ್ನು ಸೂಚಿಸಿದರು ಕ್ವೆಟ್ಟಾದ ಡಿ ಎಸ್ ಪಿ ಯವರಾದ ಅಬ್ದುಲ್ ಸಾಹಿಬ್ ಎಂಬವರನ್ನು ವೈಸರಾಯರು ಕಂಡರು ತನ್ನ ಸಮಸ್ತ ಖಾತೆಯೇ ಹೇಗೆ ಧ್ವಂಸವಾಯಿತೆಂಬುದನ್ನು ಸಾಹೆಬರು ವೈಸರಾಯರಿಗೆ ತಿಳಿಸಿದರು ತನ್ನನ್ನು ಮಣ್ಣರಾಶಿಯಿಂದ ಅಗೆದು ತೆಗೆದರೆಂದು ಹೇಳಿದರು ವೈಸರಾಯರು ಅವರನ್ನು ಉತ್ತೇಜಿಸುತ್ತಾ ಎಲ್ಲವೂ ಬೇಗನೆ ಸರಿಹೋಗುವುದು, ತನ್ನ ನೌಕರರನ್ನೂ ಜನರನ್ನೂ ಸುಖಿಗಳನ್ನಾಗಿ ಮಾಡಲು ಸರಕಾರವು ಭಗೀರಥ ಯತ್ನಮಾಡುವುದು ಎಂದರು

ಕರಾಚಿ ಖಾದಿ ಅಂಗಡಿಯಲ್ಲಿ ಜಪ್ತಿ.

ಕರಾಚಿ ಜುಲೈ ೬.

ಕರಾಚಿಯ ಖಾದಿಭಂಡಾರದಲ್ಲಿ ಪೋಲೀಸರು ಜಪ್ತಿ ನಡೆಸಿದರು ಭಗತ್‌ಸಿಂಗನ ಚಿತ್ರಗಳಿದ್ದ ೨೮ ಗೋಣ ಚೀಲಗಳನ್ನು ಪೋಲೀಸರು ಕೊಂಡ್ಹೋದರು

ಬೆಳ್ಳಿಯುಳ್ಳ ವಿಚಿತ್ರ ಮೊಟ್ಟೆಯಿದೆಯೇ?

ಇಲ್ಲವೆಂದೂ ಹೇಳಲಾಗುವುದಿಲ್ಲ! ಈ ವಿಚಿತ್ರ ಲೋಕದಲ್ಲಿ ಏನೆಲ್ಲ ವಿಚಿತ್ರಗಳು ನಡೆಯುತ್ತವೆಂದು ಯಾರಿಗೆ ಗೊತ್ತು? ಅಮೆರಿಕದ ಮಸಾಚುಸೆಟ್ಸ್ ಎಂಬ ಪ್ರಾಂತ್ಯದ ಹಳ್ಳಿಯೊಂದರಲ್ಲಿ ವಿಚಿತ್ರ ಸಂಗತಿಯು ನಡೆದಿದೆ ಒಂದು ದಿನ ಮಧ್ಯಾಹ್ನ ಹೆರಿಯಟ್ ಸ್ಮಿತ್ ಎಂಬವಳು ತನ್ನ ಗಂಡನ ತಿಂದಿಗೆಂದು ಒಂದು ಕೋಳಿ ಮೊಟ್ಟೆಯನ್ನು ಕಾಯಿಸುತ್ತಿದ್ದಾಗ ಬಾಣಲೆಯಲ್ಲಿ ಢಣ ರಣ ಶಬ್ದವಾಯಿತು ಅವಳಿಗೆ ಆಶ್ಚರ್ಯವಾಯಿತು ಬಾಣಲೆಯಲ್ಲಿದ್ದ ಮೊಟ್ಟೆಗಳನ್ನು ತೆಗೆದು ನೋಡಿದಾಗ ಒಂದು ಮೊಟ್ಟೆಯ ಹಳದಿಯೊಳಗೆ ೫೦ ಸೆಂಟ್‌ನ ಬೆಳ್ಳಿ ನಾಣ್ಯವೊಂದು ಹತ್ತಿಕೊಂಡಿದ್ದುದು ಕಂಡುಬಂತು

ದ್ವಿಪತ್ನಿಗಳಿದ್ದರೆ ಅನುಕೂಲ.

ತಿರುವಾಂಕೂರಿನಲ್ಲೊಬ್ಬ ಹಿಂದು ಕ್ರೈಸ್ತಮತಕ್ಕೆ ಸೇರಬೇಕೆಂದು ಅವನಿಗೆ ಅಭಿಲಾಷೆ ಹುಟ್ಟಿತು. ತನ್ನ ಅಭಿಪ್ರಾಯವನ್ನವನು ಒಬ್ಬ ಪಾದ್ರಿಗೆ ತಿಳಿಸಿದ ಪಾದ್ರಿಯೂ ಇದನ್ನು ಕೇಳಿ ಸಂತೋಷಿಸಿದ ಆದರೆ ಇವನಿಗೆ ಧರ್ಮದೀಕ್ಷೆ ಕೊಡಲು ಒಂದು ಅಡ್ಡಿ ಬಂತು. ಇವನಿಗೆ ಇಬ್ಬರು ಹೆಂಡಂದಿಯರು! ಕ್ರೈಸ್ತಮತಕ್ರಮಾನುಸಾರವಾಗಿ ಏಕಕಾಲದಲ್ಲಿ ಇಬ್ಬರು ಹೆಂಡಿರನ್ನು ಮದುವೆಯಾಗಲವಕಾಶವಿಲ್ಲ. ಇದು ಪಾದ್ರಿಗಳ ಮುಂದಿದ್ದ ಪ್ರಶ್ನೆ ಅದರಂತೆ ಜಾತಿ ಬದಲಾಯಿಸಲಿಕ್ಕೆ ಹೋದವನಿಗೂ ಒಂದು ಕಷ್ಟ ಬಂತು. ಜಾತಿ ಬಿಟ್ಟು ಬೇರೆ ಜಾತಿಗೆ ಹೋಗಬಹುದು ಆದರೆ ಮದುವೆ ಮಾಡಿಕೊಂಡ ಹೆಂಡತಿಯ ಕೈಬಿಡುವುದು ಹೇಗೆ ಕೊನೆಗೆ ಅವನನ್ನು ಸ್ವೀಕರಿಸಲು ಸಾಧ್ಯವೇ ಇಲ್ಲವೆಂದು ತೀರ್ಮಾನಿಸಿ ಬಿಟ್ಟರು. ಅಂತೂ ಎರಡು ಹೆಂಡತಿಯಿಂದ ಜಾತಿ ಉಳಿಯಿತು

WANTED

Energetic, Active and Influential men to work as organisers and Agents on very attractive terms in areas mentioned below—

1 Mysore, Hassanand Kadur districts.

2. Coorg, South Canara, Shimoga and Chitaldrug districts.

3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purniah Chatram Road, Balepet,
BANGALORE CITY

ಡಾಕ್ಟರ ವಾಮನ ಗೋಪಾಳರವರ

ಐಡೋಯಿಡ್ಡ ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ.
೪೫ ವರ್ಷದ ಅನುಭವ
ಉಪಯೋಗಿಸಿದವರೇ ಹೇಳ್ಯಾರೆ
ಡಾ॥ ಗೌತಮ ರಾವ್ ಕೇಶವರವರ
ಫೋಸ್ಫರಸ್ ಗುಳಿಗೆಗಳು.
ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ್
ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೪
ಸ್ಟಾಕಿಸ್ಟ— ಪಾ ಕಂಪನಿ, ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.



ಮೂರು ಫ್ಯಾನ್ಸಿ ಮೂಟ್ ರಿಸ್ಟ್ ವಾಚು ಗಳು ಇವು ನೋಟಕ್ಕೆ ಬಂಗಾರಕ್ಕಿಂತಲೂ ಹೆಚ್ಚು ಬಹು ರಮ್ಯವಾಗಿವೆ ಐದು ವರ್ಷಗಳ ಗ್ಯಾರಂಟಿ ಒಂದು ಉತ್ತಮವಾದ ಟೈಂ ಪೀಸ್ ಸರಿಯಾದ ಗಂಟೆಯನ್ನು ತೋರಿಸುತ್ತೆ ೧೦ ವರ್ಷಗಳ ಗ್ಯಾರಂಟಿ ಒಂದು ಲಿವರ್ ಪಾಕೆಟ್ ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವುದಿಲ್ಲ ಗ್ಯಾರಂಟಿ ೮ ವರ್ಷ ಅತಿ ... ಟಿಂ ಪ್ಲೇಟ್ ... ಬಂಗಾರ ಪ್ಲೇಟ್ ... ವಸ್ತುರಾಜ್ಯ ಫೌಂಟನ್ ಪೆನ್ ಈ ಉತ್ಕೃಷ್ಟ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ ಕೊಡ ಬೇವು ನಮಗೆ ಇಷ್ಟವಿದ್ದರೆ ಬೆಲೆಯು ವಾಪಾಸ್ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ

/ ಕಮೂರ್ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. ೨೪೯ S A ಕಲ್ಕತ್ತಾ

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಮ್ ಕೆ ... ಇವರ

ಸತಂತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಅದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಶುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟ ಡಾಕ್ಟರ ಜೆ. ಎ ವೈದ್ಯ, ಎಲ್ ಸಿ ಪಿ ಎಸ್ ಕೆಳವಾಡಿಯವರು ಕಾಣೇ ಈ ಚೂರ್ಣದಿಂದ ಯಾವ ತರದ ಅಪಾಯವಾಗದು. ಗರ್ಭಧಾರಣವೂ ಆಗುವುದಿಲ್ಲ ಚೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ ೪—೮—೦ ವಿ ಪಿ ಅಂಚೆ ಖ

ವಿಳಾಸ —ಸಂಜೀವಿನೀ ಔಷಧಾಲಯ ಮು ಪೊ ವಿರಜಿ, S M. C

NEW ARRIVALS.

Medicines.

Dr Schuessler's Twelve Tissue Remedies a gr bot As 4/
Homeopathy Medicines a . b t As 5/—
Sugar f Milk Dr Schwabe s original bot 1lb Rs 2/-
Haarlem Oil—a world renowned remedy As per phial
Dr Hiele s New Curative Earth—Radium Cure Rs 4/ per lb

Dr Schwabe s other special remedies are always in stock

Please consult us f ... p ... t

Kannese B k n Family Guide t Biochemistry Re 1/—

" D mestic H moeopathy Rs 1-4/-

If you own these tw B oks y u will be able t pick up treatment and admini ter Tissue & H moeopathy Medicines successfully without consulting others

German Toilet Soaps, Shaving sticks and Washing and Bleaching powders.

T il t soaps t suit all tastes and prices fr m As 0 6
Delightful in aroma, charming in appearance. Please try

Kirloskar Pumps.

We are the Representatives for Kirloskar Brothers for their reliable Shallow well and Deep w l Pumps Spring Cots Spring Couches etc, and stock—

Pipes and pipe fittings at cheap prices (ir Mats and Mattings Steadler Pencils and Stationeries

We are the recognised agents for STEADLER'S all stationeries and shall be glad to serve you

Olympia Typwriter.

An up-to date Machine in Standard and portable sizes
For Further particulars please write t —

Basel Mission Book & Tract Depository,
Mangalore, S K or Hubli, S M.

The Popular Insurance Company, Ltd.

Head Office:—MANGALORE, S India
The Pioneer Life Office of the West Coast.

A FEW PRESS OPINIONS

Established as recently as 1929, the Popular Insurance Co Ltd , has already made considerable progress having at the end of 1934 a total business of over Rs. 10 lakhs in force with a premium income of over Rs 52 000 The Life Fund of the Company stood at the same date at over Rs 50,000 The expenses of the office are moderate and mortality experience extremely favourable During the year 1934 the Company completed business of over Rs 5,10,000 with a premium income of over Rs. 26,000 The first quinquennial valuation of the Company is in progress and the report of the Actuary expected to be placed before the Directors of the Company before the end of May 1935 From the steady progress of the Company during the last five years and the economical and efficient management of its affairs, it is not too much to hope that the valuation will disclose a very sound position

Insurance & Finance Review Calcutta

ದಿ ಪೊಪ್ಯುಲರ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್—ಮಂಗಳೂರು —ಮೇಲಿನ ವಿಮಾ ಕಂಪೆನಿಯವರು ಕಳುಹಿಸಿದ ವರದಿಯನ್ನೂ ಲೆಕ್ಕ ಪತ್ರ ವಿವರದ ಪಟ್ಟಿಯನ್ನೂ ನೂತನ ... ಪ್ರಾಸ್ಪೆಕ್ಟಸ್ಸನ್ನೂ ಆಭಾರದಿಂದ ಸ್ವೀಕರಿಸುತ್ತೇವೆ. ಸ್ಥಾಪಿತವಾಗಿ ಐದು ವರ್ಷಗಳೊಳಗಾಗಿಯೇ ಈ ಕಂಪೆನಿಯು ಬಹಳ ಪ್ರಗತಿಗಳನ್ನು ನಡೆಸಿರುವುದು ಸಂತೋಷಕರವಾದ ಸಂಗತಿ ವಿಮಾ ನಿಧಿಯ ... ಕಂಪೆನಿಯು ಎಷ್ಟು ಚೆನ್ನಾಗಿ ಕೆಲಸಮಾಡುತ್ತದೆಯೆಂಬುದು ಗೊತ್ತಾಗುವುದು ಪಶ್ಚಿಮ ಕರಾವಳಿಯಲ್ಲಿ ಸ್ಥಾಪಿತವಾದುದು ಇದೊಂದೇ ವಿಮಾ ಕಂಪೆನಿ ಇಷ್ಟು ದಕ್ಷತೆಯಿಂದ ನಡೆಸಿಕೊಂಡು ಬರುವ ಕಂಪೆನಿಯ ಸಂಚಾಲಕರಿಗೆ ಧನ್ಯವಾದಗಳನ್ನರ್ಪಿಸಬೇಕು ಈ ಕಂಪೆನಿಯು ದಿನೇ ದಿನೇ ಅಭಿವೃದ್ಧಿ ಹೊಂದಿ ಭರತಖಂಡದಲ್ಲಿ ಒಂದು ಪ್ರಧಾನ ಸ್ಥಾನವನ್ನು ಹೊಂದಿ ನಮ್ಮ ದೇಶದಿಂದ ಪ್ರತ್ಯೇಕ ವಿದೇಶಕ್ಕೆ ಹೋಗತಕ್ಕ ನಿಧಿಯನ್ನು ಇಲ್ಲೆ ನಿಲ್ಲಿಸುವರೆ ಶಕ್ತಿಯುಳ್ಳದಾಗಲೆಂದು ಹಾರೈಕೆ

ರಾಷ್ಟ್ರಬಂಧು.

ಮಂಗಳೂರಿನಲ್ಲಿ ಸ್ಥಾಪಿತವಾಗಿರುವ ದಿ ಪೊಪ್ಯುಲರ್ ಇನ್ಸೂರೆನ್ಸ್ ಕಂಪೆನಿಯು ವರ್ಷ ವರ್ಷ ಊರ್ಜಿತಸ್ಥಿತಿಗೆ ಬರುತ್ತಿರುವುದು ಶ್ಲಾಘನೀಯವಾದ ವಿಚಾರ. ಈ ಕಂಪೆನಿಯು ಸ್ಥಾಪಿತವಾದುದು ಐದು ವರ್ಷಗಳ ಹಿಂದೆ, ಅಂದಿನಿಂದ ಜೀವವಿಮಾ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಹೆಸರುವಾಸಿ ಪಡೆಯುತ್ತಲೇ ಇದೆ × × × × × ಈ ಕಂಪೆನಿಯ ಐದನೆ ವಾರ್ಷಿಕ ವರದಿಯು ತೃಪ್ತಿಕರವಾಗಿದೆ ಕರ್ನಾಟಕದ ಈ ಕಂಪೆನಿಯು ವರ್ಷ ವರ್ಷ ಅಭಿವೃದ್ಧಿಹೊಂದಲೆಂಬುದೇ ನಮ್ಮ ಹಾರೈಕೆ.

'ಪ್ರಜಾಮತ,' ಮದರಾಸು.

Wanted influential Agents in unrepresented areas on liberal terms.

ಮಾತನಾಡುವ ವರ್ತಮಾನ ಪತ್ರಗಳು ಬರಲಿವೆ!!!

ಫೋಟೋಲಿಪ್ಟೊಫೋನ್ ಓದುತ್ತದೆ. ಇನ್ನೊಂದು ಮಹಾ ಶೋಧೆ.

ಚಲಚಿತ್ರವು ಮಾತನಾಡುವುದನ್ನು ನಾವು ನೋಡಿ ದಣಿದೆವು. ಈಗ ವರ್ತಮಾನ ಪತ್ರಗಳು ಮಾತನಾಡುವುದನ್ನು ನಾವು ಕೇಳಲಿದ್ದೇವೆ. ಅಂದರೆ ಪತ್ರಿಕೆಯನ್ನು ಬಿಡಿಸಿದೊಡನೆ ಅದು ನುಡಿಯುವುದಿಲ್ಲ—ಅದನ್ನು ನುಡಿಸಲಬಹುದು. ಅಂತಹ ಪತ್ರಿಕೆಯಲ್ಲಿ ವಿಶಾಲವಾದ ಒಂದು ಚಿತ್ರವಿರುವುದು. ಫೋಟೋಲಿಪ್ಟೊಫೋನಿನ ಶಕ್ತಿಯಿಂದ ಈ ಚಿತ್ರದಿಂದ ನುಡಿಗಳು ಬರುವವು.

ಬಹಿಷ್ಕಾರದ ಮಹಿಮೆ.

ಈ ಸುದ್ದಿಯು ದೂರದೇಶದ್ದಲ್ಲ. ಮಂಗಳವಾಡಿಯಿಂದ ಬಂದುದು. ಅಲ್ಲಿ ಅಯ್ಯಪ್ಪಮಣೆಯ ಎಂಬವರು ಬಹಳ ಬಡವರು. ಅಲ್ಲಿಯ ಭಗವತಿ ದೇವಸ್ಥಾನದ ಮೊಕ್ತೇಸರರು, ೧೯೩೨ನೇ ಇಸವಿಯಲ್ಲಿ ಜಾತಿಯ ಗುರಿಕಾರರೊಳಗೂ ಅವರೊಳಗೂ ವಿವಾದವೆದ್ದು ಅವರ ಮೇಲೆ ತಪ್ಪು ಹೊರಿಸಿ ಬಹಿಷ್ಕಾರಹಾಕಿದರು. ಈ ಬಹಿಷ್ಕಾರದ ಮಹಿಮೆಗಾರಂಭವಾಯಿತು. ಅವರಿಗೆ ಸಿಟ್ಟೇರಿತು. ಹೇಳಿದರು "ನಾನು ಇನ್ನುಮುಂದೆ ಊಟ ಮಾಡಬೇಕಾದರೆ ಇಲ್ಲಿಯಂತೆ ಪ್ರತಿ ದೈವಕ್ಕೂ ದೇವಸ್ಥಾನವನ್ನು ಇದೇ ಸ್ಥಳದಲ್ಲಿ ಕಟ್ಟಿಸಿ ದೈವದೇವರಿಗೆ ಶಾಸ್ತ್ರೋಕ್ತ ಸಂಪ್ರೋಕ್ಷಣೆಗೊಳಿಸಿ, ಜಾತ್ರೆ ಪೂರೈಸಿ ಬ್ರಹ್ಮಕಲಶಮಾಡಿಯೇ ಮಾಡುವೆನು. ಆದಾಗದೆ ಊಟ ಮಾಡಲಾರೆ. ಆದಾಗದೆ ಹೋದರೆ ಆತ್ಮಹತ್ಯೆ ಮಾಡಿಕೊಳ್ಳುವೆನು" ಅಲ್ಲಿಂದ ಹೊರಟ ವ್ಯಕ್ತಿಯು ಪರಿಶ್ರಮಪಟ್ಟ ಸಫಲರಾಯಿತು. ಮೊದಲು ಐದು ರೂಪಾಯಿಗಳಷ್ಟು ಅಲ್ಪ ದ್ರವ್ಯವು ಇಲ್ಲದಿದ್ದ ಈ ವ್ಯಕ್ತಿಯು ಈಗ ಐದು ಸಾವಿರ ರೂಪಾಯಿ ವೆಚ್ಚಮಾಡಿ ದೈವದೇವರ ಬಗ್ಗೆ ಐದು ಕಟ್ಟಡಗಳನ್ನೂ, ಹೆಂಗಸರು ಮಕ್ಕಳು ಉಳಿದುಕೊಳ್ಳುವುದಕ್ಕಾಗಿ ಸುತ್ತೂ ಕಲ್ಲಿನ ಪೌಳಿ, ಪ್ರತಿ ಕಟ್ಟಡದ ಸುತ್ತಿಗೆ ಸಾಗುವಾನಿ ಮರದ ಪಳಿಗಳು, ಬ್ರಹ್ಮಕಲಶಕ್ಕೆ ಎರಡು ದಿನಗಳ ವೆಚ್ಚದ ಬಗ್ಗೆ ಊಟೋಪಚಾರಗಳ ಸಾಹಿತ್ಯ—ಇವೆಲ್ಲವನ್ನೂ ಸಿದ್ಧಪಡಿಸಿತು. ಜಾತಿಯವರ ಒಂದೊಂದು ದಿನದ ಊಟಕ್ಕೆ ಕಡಮೆಪಕ್ಷ ಎರಡು ಮುಡಿಗಳಷ್ಟು ಅಕ್ಕಿ ವೆಚ್ಚವಾಗುತ್ತದೆ. ಅಷ್ಟು ವೆಚ್ಚ ಮಾಡಿಯೂ ಈ ವ್ಯಕ್ತಿಯಲ್ಲಿ ಹೇರಳ ಧನವಿದೆ. ಇವರು ಬಹು ಬಡವರು. ಒಬ್ಬರೊಂದಿಗಿರುವುದು ನಾಲ್ಕೈದು ಮಕ್ಕಳು. ಊಟಮಾಡದಿದ್ದರೂ ದೇಹವು ಬಾಡಿದುದಿಲ್ಲ. ದೀರ್ಘತ್ವ ವರ್ಷ ಪ್ರಾಯ ದಾಟಿದ ಶರೀರವು. ಈ ದೇವಸ್ಥಾನದಲ್ಲಿ ಭಗವತಿ, ವಿಷ್ಣುಮೂರ್ತಿ, ಮಲರಾಯ, ಮಹಿಷಾಸುರ ಮತ್ತು ಗುಳಿಗ ಈ ದೈವಗಳ ಮೂರ್ತಿಗಳಿವೆ. ಬ್ರಹ್ಮಕಲಶವು ಇದೇ ಮೇ ತಾ. ೩ರಲ್ಲಿ ಜರಗಿತು; ಇವರಿಗೆ ವೆಚ್ಚದ ಬಗ್ಗೆ ಇಷ್ಟು ಹಣವು ಎಲ್ಲಿಂದ ಬಂತು, ಯಾರು ಕೊಟ್ಟರು ಎಂಬುದಾಗಿ ಮುಂಗೆಲವಾಡಿಯಲ್ಲಿ ಯಾರಿಗೂ ತಿಳಿಯದು. ಇಷ್ಟು ಬಡವನು ಭಕ್ತಿಪುರಸ್ಸರವಾಗಿ ಇಷ್ಟು ವೆಚ್ಚಮಾಡಲು ಸಮರ್ಥನಾದುದನ್ನು ನೋಡಿ ಎಲ್ಲರೂ ಬೆರಗಾಗುತ್ತಿರುವರು.

"ಹಿಂಸೆಮಾಡಬೇಡಿ" ಎಂದಿದ್ದ ಬುದ್ಧ

ಆದರೆ ಜನರು ಅಹಿಂಸೆಯೇನೆಂದು ಕಲಿಯಲಿಲ್ಲ. ಹಿಂಸಿಸಲ್ಪಡದಿದ್ದ ಒಂದು ಹಾವು ಹಿಂಸೆಯಿಂದಲೇ ಹಿಂಸಕನನ್ನು ಕೊಂದ ಕಥೆಯನ್ನು ಓದುತ್ತೀರಾ?—ಗುಡಿವಾಡದ ಬಳಿ ವೆಂಕಟರಾಮಯ್ಯನೆಂಬವನ ಮನೆಯಲ್ಲಿ ವಿಜೃಂಭಣೆಯಿಂದ ವಿವಾಹವು ಜರಗಿತು. ಆ ಮದುವೆಗೆ ತನ್ನ ಅಣ್ಣನ ಮಗಳನ್ನು ಕರೆಮಾಡಿಸಿದ್ದನು. ಮದುವೆಯು ರಾತ್ರಿ ಬಹು ಹೊತ್ತಾದಮೇಲೆ ಮುಗಿದುದರಿಂದ ಅಣ್ಣನ ಮಗಳನ್ನು ಒಂದು ಗಾಡಿಯಲ್ಲಿ ಕುಳ್ಳಿರಿಸಿ ಮನೆಗೆ ಕಳುಹಿಸಿದನು. ಸೂರಮ್ಮಳ ಕೈಯಲ್ಲಿ ಸಣ್ಣ ಮಗುವೊಂದಿತ್ತು. ಗಾಡಿಯು ಬಹುದೂರ ಹೋಗುತ್ತಲೇ ಒಂದು ಕಡೆ ನಿಂತುಬಿಟ್ಟಿತು. ಕತ್ತಲೆಯಲ್ಲಿ ಯಾನೋಬ್ಬ ಬಂದು ಗಾಡಿಗೆ ಹತ್ತಿ ಸೂರಮ್ಮಳ ಆಭರಣಗಳನ್ನು ಕೂಡಲೇ ಕೊಡಬೇಕೆಂದು ಸೂರಮ್ಮಳಿಗೆ ಹೇಳಿದನು. ಆವಳಿಗೆ ಪ್ರಾಣವು ಉಳಿಯಬೇಕಾಗಿತ್ತು. ೩೦೦ ರೂಪಾಯಿ ಬೆಲೆಬಾಳುವ ಆಭರಣಗಳನ್ನು ತೆಗೆದುಕೊಟ್ಟಳು. ಆದರೆ ದರೋಡೆಗಾರನಿಗೆ ಸಮಾಧಾನವಾಗಲಿಲ್ಲ. ಆವಳು ಮನೆಗೆ ಹೋಗಿ, ತನ್ನನ್ನು ಹಿಡಿಸಿಯಾಳೆಂದು ನೆನೆದು ಅವಳನ್ನು ಗಾಡಿಯಿಂದ ಕೆಳಗಿಳಿಸಿ—ಎದೆಯ ಕಲ್ಲಬಳಿ ನಿಲ್ಲಿಸಿ, ಒಂದು ದೊಡ್ಡ ಕಲ್ಲನ್ನೆತ್ತಲು ಹೋದ. ನೋಡುವುದೇನು? ಅಲ್ಲೊಂದು ಹಾವು ಇತ್ತು. ಅವನನ್ನು ಒಡನೆ ಕಚ್ಚಿಬಿಟ್ಟಿತು. 'ಸತ್ತೆ ಸತ್ತೆ'ನೆಂದು ಅವನು ಅಲ್ಲೇ ಒರಗಿದ. ಆ ಹೆಂಗಸು ಮಗುವನ್ನು ಹಿಡಿದುಕೊಂಡು ರಾತ್ರಿಯನ್ನು ಅಲ್ಲೇ ಕಳೆದು ಬೆಳಗ್ಗೆ ಮನೆಗೆ ಹೋಗಿ ಕಥೆಯನ್ನು ಹೇಳಿದಳು. ಗಾಡಿಯವನ ಪತ್ತೆ ನಡೆಯುತ್ತದೆ.

ಪರಲೋಕ ನರಲೋಕಗಳಿಗೆ ಭೇದವಿಲ್ಲವೇ?

ಕೆಲವರು ಇಲ್ಲವೆನ್ನುವರು, ಕೆಲವರು ಉಂಟೆನ್ನುವರು. ಪರಲೋಕಕ್ಕೆ ಹೋದವರೂ ತಾನು ನರಲೋಕಕ್ಕೆ ಬರುವೆನೆಂದು ಹೇಳಿರುವ ಸರ್ ಒಲಿವರ್ ಲೋಡ್ಜರ ಕಥೆ ಕೇಳಿ. ಇವರು ಪ್ರಖ್ಯಾತ ವಿಜ್ಞಾನಿಗಳು. ಬರ್ಮಿಂಗ್‌ಹೇಂ ವಿಶ್ವವಿದ್ಯಾಲಯದಲ್ಲಿ ಪ್ರಧಾನಾಧ್ಯಾಪಕರಾಗಿದ್ದವರು. ಘೋರಯುದ್ಧದಲ್ಲಿ ತನ್ನ ಮಗನು ಮಡಿದು ಹೋದಂದಿನಿಂದ ಇವರ ಚಿತ್ತವನ್ನು ಅಧ್ಯಾತ್ಮವಿದ್ಯೆಯು ಸೆಳೆಯಿತು. ಆತ್ಮವು ಅನಂತವಾದುದು, ದೇಹವು ಸತ್ತರೂ ಅದು ಸಾಯುವುದಿಲ್ಲ. ಅದು ಸಜೀವವಾಗಿಯೇ ಉಳಿಯುತ್ತದೆ ಎಂದು ಇವರು ಸಿದ್ಧಾಂತಮಾಡಿದ್ದರು. ಸತ್ತವರನ್ನು ನೋಡುವುದೂ, ಅವರೊಡನೆ ಮಾತನಾಡುವುದೂ ಸಾಧ್ಯವೆಂಬುದನ್ನು ಇವರು ಪ್ರಾಯೋಗಿಕವಾಗಿ ಸಿದ್ಧಾಂತಗೊಳಿಸಿದುವರು. ಇವರು ತಮ್ಮ ಮೃತ ಪುತ್ರನೊಡನೆ ಆಗಾಗ್ಗೆ ಅನೇಕ ಸಲ ಮಾತನಾಡಿರುತ್ತಾರೆ. ಕೆಲವು ಸಮಯದ ಹಿಂದೆ ತೀರಿಕೊಂಡ ತಮ್ಮ ಹೆಂಡತಿಯೊಡನೆಯೂ ಇವರು ಮಾತನಾಡಿರುವರೆಂದು ತಿಳಿಸಿದವರು. ಅವಳು ಪುನಃ ಭೂಮಿಗೆ ಹಿಂದಿರುಗುವಳೆಂದು ಅವರು ನಿರೀಕ್ಷಿಸುತ್ತಿರುವರು. ಅದಕ್ಕಾಗಿ ಅವಳಿಗೆಂದು ಒಂದು ಪ್ರತ್ಯೇಕ ಕೋಣೆಯನ್ನೇ ಏರ್ಪಡಿಸಿರುತ್ತಾರೆ. ಅವಳ ಚಿತ್ರದ ಕೆಲಸವು ಅವಳು ಸಾಯುವಾಗ ಅರ್ಧವಾಗಿತ್ತು. ಅದನ್ನವಳು ಪೂರ್ಣಗೊಳಿಸುವಳೆಂದು ಆಕೆಯ ಲೇಖನಿಗಳನ್ನು ಅವಳ ಮೇಜಿನ ಬಳಿ ಇಟ್ಟಿರುವರು. ೧೯೩೨ರ ಎಪ್ರಿಲ್ ತಿಂಗಳಲ್ಲಿ ಒಂದು ಲಕ್ಕೋಟೆಯಲ್ಲಿ ಒಂದು ಸಂದೇಶವನ್ನು ಬರೆದಿಟ್ಟಿರುವರು. ತಾನು ಸತ್ತಮೇಲೆ ಬಂದು ಅದನ್ನು ಜನರಿಗೆ ಓದಿಹೇಳುವೆನಾಗಿ ಹೇಳುತ್ತಾರೆ.

ಮನುಷ್ಯರ ಆಹಾರವು—

ಅಕ್ಕಿ ಗೋಧಿಗಳಲ್ಲ. ಬೇರೆ ಹಲವಿವೆ ಪಶ್ಚಿಮ ಆಫ್ರಿಕಾ ಪ್ರಾಂತ್ಯದಲ್ಲಿ ಶೋಧೆ ನಡೆಸಲು ಹೊರಟಿದ್ದ ಮಿ ಇವಾನ್ ಟಿ. ಸಾಂಡರ್ಸ್ ಎಂಬವರು ತಮ್ಮ ಅನುಭವವನ್ನು ಹೇಳುತ್ತಾರೆ—"ನಾವೂ ಆವರ ಜೊತೆಗಾರರೂ ಪ್ರವಾಸಕಾಲದಲ್ಲಿ ಇರುವೆಗಳನ್ನು ಹುರಿದು ತಿಂದೆವಂತೆ! ಅಲ್ಲಿಯ ಜನರಿಗೆ ಇರುವೆಗಳೇ ತಿಂಡಿಯಂತೆ! ಅವರು ಕೆಟ್ಟದ್ದನ್ನು ಬಲಾತ್ಕಾರದಿಂದ ತಿನ್ನಬೇಕಾಯಿತು. ಒಮ್ಮೆ ಈ ಶೋಧನಕಾರರ ಮಿತ್ರ ಅಸ್ವಸ್ಥದಲ್ಲಿ ಬಿದ್ದ. ಅವನ ಸುತ್ತಲೂ ಇರುವೆಗಳು ಸುತ್ತುಕೂಡಿದುವು. ಅವುಗಳನ್ನು ಕೆಲಸಗಾರರು ಹಿಡಿದು ತಿಂದರು. ಈ ಪ್ರಾಂತ್ಯದಲ್ಲಿ ಹಲ್ಲಿಗಳನ್ನು ಕೂಡಾ ತಿನ್ನುವ ಪದ್ಧತಿಯಿದೆಯಂತೆ. ಉಪ್ಪಿನಲ್ಲಿ ಹಲ್ಲಿಗಳನ್ನು ಹಾಕಿ ಹುರಿದು, ತಿನ್ನುವುದೇ ಇವರ ರುಚಿಯಾದ ಭೋಜನ"

ದಂಪತಿಗಳ ವಕಾಲತ್ತನ್ನು ವಹಿಸುವುದಕ್ಕಾಗಿ

ಪಾಶ್ಚಾತ್ಯ ದೇಶಗಳು ಮದುವೆಮಾಡಿಕೊಳ್ಳುವುದಕ್ಕಿಂತ ಮದುವೆಯ ಸಂಬಂಧವನ್ನು ಮುರಿದುಕೊಳ್ಳಲು ಹೆಚ್ಚು ಅವಕಾಶವಿದೆ. ಕಾನೂನಿನ ಸೌಕರ್ಯವಿದೆ. ಹೀಗಾಗಿ ಗಂಡಹೆಂಡರಿಗೆ ಸ್ವಲ್ಪ ಮನಸ್ತಾಪಹುಟ್ಟಿದರೆ ಸಾಕು, ಅವರದನ್ನು ಸರಿಪಡಿಸಿಕೊಂಡು ಸುಖವಾಗಿ ಬಾಳುವ ಗೋಜಿಗೆ ಹೋಗದೆ ತಕ್ಷಣ ವಿವಾಹ ವಿಚ್ಛೇದದ ನ್ಯಾಯಾಸ್ಥಾನಕ್ಕೆ ಓಡುತ್ತಾರೆ. ಪ್ರಕೃತ ಇಂಗ್ಲೆಂಡ್ ಒಂದರಲ್ಲಿ ವರ್ಷಂಪ್ರತಿ ೨೦,೦೦೦ ವಿವಾಹ ವಿಚ್ಛೇದಗಳು ನಡೆಯುತ್ತವೆ. ಇವುಗಳಲ್ಲಿ ನಾಲ್ಕು ಸಾವಿರ ಜನರು ಕೋರ್ಟಿನ ತೀರ್ಪಿನಂತೆ ತಮ್ಮ ವಿವಾಹ ಸಂಬಂಧವನ್ನು ಬಿಟ್ಟು ಹೆಂಗಸರಿಗೆ ಜೀವನಾಂಶ ಕೊಡಲಾರದೆ ಸೆರೆಮನೆಗೆ ದಾಖಲಾಗುತ್ತಾರೆ. ಹೀಗೆ ವಿಪರೀತ ಪರಿಸ್ಥಿತಿಗೆ ಬಂದಿರುವ ಈ ವಿವಾಹವಿಚ್ಛೇದಗಳ ವಿಚಾರವಾಗಿ ತಕ್ಕ ತನಿಖೆನಡೆಸಿ ಇವನ್ನು ಕಡಮೆಮಾಡುವ ಬಗ್ಗೆ ಆವಶ್ಯ ಸಲಹೆಗಳನ್ನು ಕೊಡಲು ಇಂಗ್ಲೆಂಡಿನ ಸರಕಾರದವರು ಒಂದು ಸಮಿತಿಯನ್ನು ನೇಮಿಸಿದ್ದಾರೆ. ಅಂತೂ ಗಂಡಹೆಂಡಿರ ಪುಣ್ಯ!

ಮನುಷ್ಯರೇ ಅಲ್ಲ—ಮೃಗಗಳೂ ಭವಿಷ್ಯವಾದಿಗಳೇ!

ಮಾರ್ಕ್ಹೇಮ್ ಕೊಲಿಯರಿ ಎಂಬಲ್ಲಿನ ಕಲ್ಲಿದ್ದಲ ಗಣಿಯಲ್ಲಿ ಏಳು ವರ್ಷಗಳಿಂದಲೂ ಕೆಲಸಮಾಡುತ್ತಿದ್ದ ಒಂದು ಕುದುರೆಯು ಒಂದು ದಿನ ಅದರ ಯಜಮಾನನ ಹಕೋಟಿಗೊಳಗಾಗದೆ ತಪ್ಪಿಸಿಕೊಂಡು ಓಡಿತು. ಆ ಕೆಲಸಗಾರನು ಸಿಟ್ಟಾಗಿ, ಕಲ್ಲಿದ್ದಲಿನ ಗಣಿಯೊಳಗೆ ತಾನೊಬ್ಬನೇ ಇಳಿಯಲು, ಮಾಳಿಗೆಯಂತಿದ್ದ ಮೇಲಿನ ಭೂಮಿಯು ಕುಸಿದು ಅವನ ಮೇಲೆ ಬಿದ್ದು ಅವನು ಮೃತನಾದನು. ಬರ್ಮದಲ್ಲಿಯೂ ಒಮ್ಮೆ ಹೀಗೆಯೇ ನಡೆಯಿತು. ಮರದ ದೊಡ್ಡ ದೊಡ್ಡ ದಿಮ್ಮಿಗಳನ್ನು ಸಾಗಿಸುವುದಕ್ಕಾಗಿ ಅಲ್ಲಿ ಆನೆಗಳನ್ನು ಉಪಯೋಗಿಸುತ್ತಾರೆ. ಒಂದು ಸಲ ಒಂದು ಆನೆಯು ಮಾವಟಿಗನ ಶಿಕ್ಷೆಯೊಂದನ್ನು ಲಕ್ಷಿಸದೆ ಹಿಂದಿರುಗಿತು. ಕೊನೆಗೆ, ಆ ದಿಮ್ಮಿಗಳನ್ನೆಲ್ಲ ಹಲವು ಬಂಡಿಗಳ ಮೇಲೆ ಹಾಕಿಕೊಂಡು ಸಾಗುತ್ತಿರಲು ಅರ್ಧದಾರಿಯಲ್ಲಿ ಆ ಬಂಡಿಗಳು ಒಂದು ಸೇತುವೆಯೊಡನೆ ಬಿದ್ದು ನೀರುಪಾಲಾದುವು. ಹೀಗೆ ಪ್ರಾಣಿಗಳು ಮನುಷ್ಯರಿಗಿಂತ ಹೆಚ್ಚಿನ ಭವಿಷ್ಯವಾದಿಗಳಾಗಿವೆಯೆಂದು ತಿಳಿಯಬಹುದು.

24 ಮಕ್ಕಳ ತಾಯಿಯೊಬ್ಬಳಿರುವಳು,—

ಅದು ಕೂಡಾ ಅವಳಿಗೆ ೪೫ ವರ್ಷ ವಯಸ್ಸಾಗುವಾಗಲೇ ಇಷ್ಟು ಮಕ್ಕಳು. ಇನ್ನೆಷ್ಟು ಹೆರುವಳೋ! ಲಂಡನ್ ನಗರದಲ್ಲಿರುವಳವಳು. ಹೆಸರು ಮಿಸೆಸ್ ಮೂರ್. ಇವಳ ಕಡೆಯ ಮಗುವಿನ ವಯಸ್ಸು ೧೨. ತಾನು ಇನ್ನೂ ಕೆಲವು ಮಕ್ಕಳನ್ನು ಹೆರಬಹುದು ಎಂದು ಅವಳ ಹೇಳಿಕೆ. ಆದರೆ ಗಂಡ ಮಾತ್ರ ಈ ಸಂಸಾರ ಹೆಚ್ಚಾಯಿತೆನ್ನುತ್ತಾನೆ. ಮಕ್ಕಳಿಗೆ ಶೀತವಾದರೆ ಮಹಾ ಸಂಕಷ್ಟ ಒದಗಬಹುದೆಂದು ಅವನು ಹೀಗೆಂದಿರಬಹುದು.

ಫಾಶೀ ಶಿಕ್ಷೆಯನ್ನು ತೆಗೆದುಹಾಕಲಾಗುವುದೆ?

ಹಿಂದೂ ದೇಶದಲ್ಲಿ ಫಾಶೀ ಶಿಕ್ಷೆಯನ್ನು ತೆಗೆದುಹಾಕಬೇಕೆಂಬ ಬಗ್ಗೆ ಶ್ರೀ ವಿ ವಿ ಗಿರಿಯವರು ದಿಲ್ಲಿಯ ನ್ಯಾಯವಿಧಾಯಕ ಸಭೆಯಲ್ಲಿ ಒಂದು ಮಸೂದೆಯನ್ನು ತಂದರು. ಅವರು ವರದಿಯಲ್ಲಿ ಹೀಗೆ ಸೂಚಿಸಿದ್ದಾರೆ 'ದೇಹಾಂತ ಶಿಕ್ಷೆಯನ್ನು ಆಸ್ಟ್ರೇಲಿಯಾ ಬೆಲ್ಜಿಯಂ, ಡೆನ್‌ಮಾರ್ಕ್ ಹೊಲ್ಲೆಂಡ್, ಇಟಲಿ, ನಾರ್ವೆ ಪೋರ್ಚುಗಲ್, ಸ್ವೀಡನ್ ಮತ್ತು ಅಮೇರಿಕದ ಕೆಲವು ದೇಶಗಳವರೂ ತೆಗೆದುಹಾಕಿರುವರು. ಈಚೆಗೆ ಐರ್ಲೆಂಡಿನ ಫ್ರೀಸ್ಟೇಟಿನಲ್ಲಿಯೂ ಕೂಡಾ ಅದನ್ನು ತೆಗೆದುಬಿಟ್ಟಿರುವರು. ಇಂಗ್ಲೆಂಡಿನವರು ಈ ಶಿಕ್ಷೆಯು ಬಹು ಅನ್ಯಾಯವಾದುದೆಂದು ಅಭಿಪ್ರಾಯಪಟ್ಟಿರುವರು. ಫಾಶಿ ಶಿಕ್ಷೆಯನ್ನು ಜಾರಿಗೆ ತರುವ ಭಾರವು ಜೈಲು ಅಧಿಕಾರಿಗಳಿಗಿದೆ. ಅವರ ಈ ಕರ್ತವ್ಯವು ಅವರಿಗೆ ಎಷ್ಟೋ ದುಃಖವನ್ನುಂಟುಮಾಡುವುದು. ಅಲ್ಲದೆ ಕಾರಾಗೃಹವಾಸಿಯ ನಡತೆಯು ಒಳ್ಳೆಯದಾಗದು. ಫಾಶಿ ಶಿಕ್ಷೆಗೆ ಗುರಿಯಾದ ಕೈದಿಗಳ ಬಂಧುಗಳಿಗೆ ಅನೇಕ ತೊಂದರೆಗಳೊದಗುವುವು. ಬಂಧುಗಳು ಏನು ತಪ್ಪು ಮಾಡಿರದಿದ್ದರೂ ಅವರು ಕಷ್ಟವನ್ನನುಭವಿಸಬೇಕಾಗುತ್ತದೆ. ಅನೇಕರು ಎದುರು ಕೋಪದಿಂದಾಗಿ ಕೊಲೆಗಳನ್ನು ಮಾಡುವರು. ತಾವೇನು ಮಾಡಿದೆವೆಂದು ವಿದ್ಯಮಾನವು ಘಟಿಸಿದ ನಂತರವೇ ಅವರಿಗೆ ತಿಳಿಯಬರುವುದು. ಫಾಶಿ ಶಿಕ್ಷೆಗೆ ಗುರಿಯಾಗುವವರು ತಮ್ಮ ಜೀವನ ಕ್ರಮವನ್ನು ತಿದ್ದಿ ಸರಿಪಡಿಸಿಕೊಳ್ಳಲು ಅವಕಾಶವೇ ಇರುವುದಿಲ್ಲ.

ಬೇರೆಯವರು ಸತ್ತರೆ ನಮಗೇನು?—

—ಎಂದು ಮುಂದಕ್ಕೆ ಯಾರೂ ಅಸಡ್ಡೆತೋರಿಸಬಾರದು. ಬೇರೆಯವರು ಸತ್ತರೆ ಉಳಿದವರಿಗೆ ಲಾಭವಾಗುವ ವಿಚಾರ ತಿಳಿದಿದೆಯೇ?—ಓದಿ. ಈಗ ಇಂಗ್ಲೆಂಡಿನಲ್ಲಿ ೮೯೩ ಮಂದಿ ಕೋಟ್ಯಾಧೀಶರಿರುವರು. ಇಂಗ್ಲೆಂಡಿನ ಶಾಸನದ ಮೇರೆಗೆ—ಯಾವನಾದರೊಬ್ಬ ಶ್ರೀಮಂತನು ಕಾಲವಶನಾದರೆ, ಅವನ ಆಸ್ತಿಗಳಿಗೆ ವಾರೀಸುದಾರರಾಗುವವರು ಮೃತನ ಆಸ್ತಿಯ ಮೌಲ್ಯದ ಮೇಲೆ ಶೇಕಡಾ ೧೫ರಿಂದ ೧೫೦ ವರೆಗೆ ಕಂದಾಯ ಕೊಡಬೇಕು. ಕೋಟ್ಯಾಧಿಪತಿಗಳು ಪರಲೋಕವಾಸಿಯಾದರೆಂದರೆ ಅವರ ವಾರಿಸುದಾರರು ಅನಿವಾರ್ಯವಾಗಿ ಸರಕಾರಕ್ಕೆ ಹೇರಳ ದ್ರವ್ಯವನ್ನು ಕೊಡಲೇ ಬೇಕಾಗುತ್ತದೆ. ಈ ಜನರ ಕಂದಾಯಪಡೆಯಲು ಪ್ರತ್ಯೇಕ ಖಾತೆಯೇ ಇದೆಯಂತೆ.

ಗ್ರಂಥಚೌರ್ಯಕ್ಕಾಗಿ ಏನಾಯಿತು?

—ಓದಿ! ರೋಬರ್ಟ್ ಬ್ರಿಡ್ಜೆಸ್ ಎಂಬ ದಿವಂಗತ ಕವಿಯೊಬ್ಬನು ಪೊಯಟ್ ಲಾರೆಟ್ ಆಗಿದ್ದನು. ಅವನ ಬರಹಗಳ ಪ್ರಕಾಶನ ಕೆಲಸವನ್ನು ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್ಸಿಗೆ ಕೊಡಲಾಗಿದೆ. ಮೊನ್ನೆ ಅಲ್ಲೊಂದು ಒಂದು ಪುಸ್ತಕವು ಪ್ರಕಟವಾಯಿತು. ಅದರಲ್ಲಿದ್ದ ಕವಿತೆಗಳು ಕೆಲವು ತನ್ನ ಗಂಡನಿಂದ ಬರೆಯಲ್ಪಟ್ಟವುಗಳೆಂದೂ, ಅವುಗಳನ್ನು ಅಪ್ಪಣೆಯಿಲ್ಲದೆ ಚೋರಿ ಮಾಡಿದುದಕ್ಕಾಗಿ ೧೦೦೦ ರೂಪಾಯಿ ನಷ್ಟವನ್ನು ಕೊಡಬೇಕೆಂದೂ ಕವಿಯ ಪತ್ನಿಯು ದಾವೆ ಹೂಡಿದಳು. ೩೫೦ ರೂಪಾಯಿ ಕೊಡಬೇಕೆಂದು ತೀರ್ಮಾನವಾಗಿದೆ.

ರೋಗದ ಬೀಜವೆಲ್ಲಿ?

ಎಂದು ಕೇಳುವವರಿಗೆ ಅವು ಹಲ್ಲುಗಳೇ ಎನ್ನುವ ವೈದ್ಯಶಾಸ್ತ್ರಜ್ಞರು. ಮನುಷ್ಯರ ರೋಗಗಳಿಗೆಲ್ಲ ಕೆಟ್ಟ ಹಲ್ಲುಗಳೇ ಮೂಲವೆಂದು ಅಭಿಪ್ರಾಯಪಡಲಾಗಿದೆ. ಕೆಲವು ವೈದ್ಯರು ಈ ಬಗ್ಗೆ ಸಂಶೋಧನೆಗಳನ್ನು ನಡೆಸಿದ ನಂತರ—ಸಾಧಾರಣ ವ್ಯಾಯಾಮ, ಉತ್ತಮ ಆಹಾರ—ಗಳ ಸೇವನೆಗಳ ಅಭ್ಯಾಸ ಮಾಡುತ್ತಾ ಬಂದರೆ ಜನರು ಯಾವ ರೋಗ ಬಾಧೆಯಿಲ್ಲದೆಯೂ ಹೆಚ್ಚು ಕಾಲ ಜೀವಿಸಬಹುದೆಂದು ಅಭಿಪ್ರಾಯಪಟ್ಟಿರುವರು.

(೩ನೇ ಪುಟದಿಂದ ಮುಂದ ವರಿದುದು)

ಅರ್ಕಾನ್ಸಾಸ್ ಎಂಬಲ್ಲಿನ ಮಿ. ಪರ್ಲಿಯನ್ ಎಂಬವರು ಈ ಧರ್ಮದ ಅನೇಕಸ್ಪೂರ್ತ ಅನುಯಾಯಿಗಳಾದರು. ದೇವರೇ ಅವರೊಡನೆ ಮಾತನಾಡಿ ಅವರು ತಮ್ಮ ಜನರನ್ನು ಮುನ್ನಡೆಸಬೇಕೆಂದು ಹೇಳಿದರಂತೆ! ಒಡನೆ ಅವರು ಪಲ್ಲಿಯುಪ್ಪುರಾಗಲಿಲ್ಲ. ಅವರು ಅಲ್ಪರ್ ಆಷ್ಟದ್ ಎಂಬ ಪ್ರವಾದಿಯಾದರು. ಅವರು ಪಿತಾಮಹಿಯಾದ ಭಾಷೆಯಿಂದ ನುಡಿಯುತ್ತಿದ್ದರು. ಅದನ್ನು ಅರಬೀಭಾಷೆಯೆಂದು ಹೇಳುತ್ತಿದ್ದರು. ಅದರ ವಿದ್ವತ್ತನ್ನು ಪ್ರಶ್ನಿಸುವವರೇ ಇಲ್ಲವಾದರು. ಒಂದು ಕುರಾನು ಗ್ರಂಥವು ಬೇಕಾಯಿತು. ಮೂಲದಿಂದಲೇ ಅದನ್ನು ತರ್ಜುಮೆಗೊಳಿಸಬೇಕೆಂದು [illegible] ಆದರೆ ಹಾಗೆ ಯಾರೂ ಮಾಡಲಾರದಾದರು. ಅಷ್ಟರಲ್ಲಿ ಡಾ ಮಹಮ್ಮದ್ ಸಡಿಕನು ತನ್ನ ಅಮೇರಿಕನ್ ಅನುಯಾಯಿಗಳಿಗಾಗಿ ಅಂಗ್ಲಭಾಷೆಗೆ ಪರಿವರ್ತಿಸಿಟ್ಟಿದ್ದ ಕೊರಾನಿನ ಒಂದು ಸಂಕ್ಷಿಪ್ತಗ್ರಂಥವು ದೊರೆಯಿತು. ಹೊಸತಾಗಿ ಬಂದ ಪ್ರವಾದಿಯು ಇದನ್ನು ವಿಸ್ತಾರವಾಗಿ ಬರೆದುಕೊಂಡು ಮುದ್ರಿಸಿ, ತನ್ನ ಹಿಂಬಾಲಕರೊಳಗೆ ಹಂಚಿಕೊಂಡರು.

ಶುದ್ಧ ಹೃದಯಗಳೂ, ಕಾರ್ಯಸಾಧಕರೂ ಅವರಿಂದ ಯಾವ ಭಾದೆಯೂ ಬರಲಿಲ್ಲ. ಆದರೆ ಪ್ರಸ್ತುತ ಸಂಪತ್ತನ್ನು ಹೊಂದಿಕೊಂಡಿದ್ದ ಪದವಿಗಳನ್ನಾಕಿಸಿದವರಿಂದ ತೊಂದರೆಯಾಯಿತು. ಸ್ವಲ್ಪ ಸಮಯದಲ್ಲೇ ಹಲವು ಕಕ್ಷಿಗಳುಂಟಾದುವು. ಹಲಕೆಲವರ ತಂತ್ರಗಳು ನಡೆದುವು. ದ್ವೇಷಸಾಧನೆಗಾರಂಭವಾಯಿತು. ಕ್ರಮೇಣ ಈ ಅಂತಃಕಲಹವು ಮಹಾ ಸಡೋವರವಾಗಿ ಪರಿಣಾಮ ಹೊಯ್ ಕೈ ನಡೆಯಿತು. ೧೯೨೮ರಿಂದ ೧೯೩೩ರ ಆದಿಯ ವರೆಗೆ ಮುಷ್ಟಿಯುದ್ಧ, ಪಿಸ್ತೂಲ ಪ್ರಯೋಗ, ಕುಮಂತ್ರದ ಕೆಲಸಗಳು ನಿಗ್ರೋಗಳ ಹಲವು ಚರ್ಚುಗಳಲ್ಲಿ ನಡೆದುವು. ಚಿಕಾಗೋ ನಗರದ ಹಾದಿಬೀದಿಗಳಲ್ಲಿ ಖೂನಿಗಳು ನಡೆದುವು. ಶಾಸನವು ಮಧ್ಯಕ್ಕೆ ಬಂತು. ವಿಚಾರಣೆ ನಡೆಯಿತು. ಆದರೆ ನಿಜವಾದ ತಪ್ಪುಗಾರರು ಹೊರಗಾದರು. ಒಟ್ಟು ಅದೊಂದು ಕಳಂಕಪ್ರಾಯ ಹೋರಾಟ, ಸಂಶಾಯವಾಗಿ ಜನರಿಗೆ ವಿಶ್ವಾಸವು ಕಡಮೆಯಾಯಿತು—ಅದು ಕಳೆದ ನಂತರ ಶಾಂತಿಯು ನೆಲೆಸಿತು. ಆದರೆ ಆದರೊಡನೆ ನವಚೇತನವೂ ಬಂತು. ಪ್ರವಾದಿಗಳು ಹೆಚ್ಚಿದರು, ಒಬ್ಬ ಪ್ರವಾದಿಯು ಸ್ಥಾನದಲ್ಲಿ ಹಲವರು ನಿಂತರು, ತಾವು ಜನರಿಗೆ ಸಹಾಯವಿತ್ತು ರಕ್ಷಿಸಲು ದೇವರಿಂದ ಕಳುಹಿಸಲ್ಪಟ್ಟವರೆಂದರು. ಇವರ ಉದ್ದುದ್ದ ಗಡ್ಡ, ಮಟಕ್ಕ ಪೋಷಾಕು, ಮಂತ್ರೋಚ್ಚಾರ, ವಿಧಿವಿಧಾನಗಳು, ಪೌರೋಹಿತ್ಯ ಕ್ರಮವಿಷಯಗಳು—ಇವೆಲ್ಲ ಜನರಲ್ಲಿ ಅವರ್ಣನೀಯ ಭಾವನೆಗಳನ್ನು ತಂದೊಡ್ಡಿದುವು. ಕೊನೆಗೆ ಈ ಪ್ರವಾದಿಗಳ ಮಹತ್ತು ರಹಸ್ಯಮಯ ಧರ್ಮವಾಗಿ ನಿಂತಿತು.

ಪ್ರಥಮದಲ್ಲಾಗಿ ಪ್ರಚಾರಕರಾಗಿ ಹೋಗಿರುವವರ ಉಪದೇಶಗಳು ಈಗ ಅಮೇರಿಕಾದಲ್ಲಿ ನೂತನ ಶಕ್ತಿಯನ್ನು ಪ್ರಸರಿಸುತ್ತವೆ. ವರ್ಣಗಳನ್ನು ಸ್ವೀಕರಿಸಿರುವವರಿಗೆ ಮೂಲಮತದ ಮೇಲೆ ಗೌರವವಿದೆ. ಸಮರ್ಥಕವಾದ ಸಂಘಟನಾಬದ್ಧ ಚಳವಳಿಯು ನಡೆದರೆ ೫೦ ಮಿಲಿಯ ಸಂಖ್ಯೆಯಲ್ಲಿರುವ ನೀಗ್ರೋಗಳ ಅರ್ಧ ಜನಾಂಗವನ್ನಾದರೂ ಇಸ್ಲಾಂ ಧರ್ಮದ ಪ್ರಭಾವದೊಳಗೆ ತರಬಹುದು. ಹೊಸ ಇಸ್ಲಾಮಿನ ಶಕ್ತಿ, ಚೇತನ ಮತ್ತು ಕಾರ್ಯಧುರಂಧರತೆಗಿದೊಂದು ಸುಸಂದರ್ಭ.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವಿಕಾಸವ - (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ನಮ್ಮಲ್ಲಿ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ.



Distributors for South Kanara —

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಆಯಾಸ ... ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ

ಭದ್ರತೆಯು.

ಆರೋಗ್ಯಕ್ಕೆ ... ರಾಜಪಥ

32 ಮಾತ್ರೆಗಳ ಟಿನ್ನೊಂದಕ್ಕೆ ರೂ 1

ಕಾಪಿ ರಾಸ್ತುವನ್ನೊಂದಿರಿ

Shah Company, ...
Pearl & Sons, MANGALORE

Atank Nigrah Pharmacy
Chickpet, Bangalore.
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು,

ಸಾಮಾನ್ಯ ವಿಜ್ಞಾನ.

ಚರಿತ್ರೆ ಮತ್ತು ಕಥೆಗಳು.	ರೂ	ಆ.	ಪೈ.
ನಾಲ್ಕನೇ ದರ್ಜೆ	0	6	0
ಮೂರನೇ ,,	0	4	6
ಎರಡನೇ ,,	0	4	0
ಸಮಾಜಶಾಸ್ತ್ರ.			
ಐದನೇ ದರ್ಜೆ	0	8	0
ನಾಲ್ಕನೇ ,,	0	8	0
ಮೂರನೇ ,,	0	2	6

ಸಾಮಾನ್ಯ ವಿಜ್ಞಾನ.	ರೂ	ಆ.	ಪೈ
ಎರಡನೇ ದರ್ಜೆ	0	8	0
ಮೂರನೇ ,,	0	8	0
ನಾಲ್ಕನೇ ,,	0	5	0
ಐದನೇ ,,	0	6	0

ಅಜ್ಜಿ ಕಥೆಗಳು (ಸಚಿತ್ರ.)

ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು.
ಮೊಲನಿನ ಕಾಳಪ್ಪ.
ಅಗ್ಗಣೆ ಮುದ್ದೆ
ಇಲಿಗಳ ಧಕ್ಕ ಧೈ
ಅಂಗಳ ದುಗ್ಗು.
ಗುಡುಗುಡು ಗುಮ್ಮಟ ದೇವರು.
ಒಡ್ಡನ ಓಟ.
(ಇವುಗಳ ಕ್ರಯ 1ಕ್ಕೆ 0–0–9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿ ಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ಶಿವರಾಮ ಕಾರಂತ ವಿರಚಿತ

ಗ್ನಾನ

ಜ್ಞಾನದ ಮೇಲೆ ವ್ಯಂಗ ಟೀಕೆ.

ಈಗ ಗ್ರಂಥರೂಪದಲ್ಲಿ

ಸಿದ್ಧವಾಗಿದೆ.

ದಪ್ಪಗಿನ ಅಂಟಿಕ್ ಕಾಗದದಲ್ಲಿ

ಅಂದವಾಗಿ ಮುದ್ರಿಸಲ್ಪಟ್ಟಿದೆ.

ಕ್ರೌನ್ ¼ ಆಕಾರದ ೧೮೩ ಪುಟಗಳು.

ಉತ್ತಮ ತರಧ ಹಾಸ್ಯ.

ಬೆಲೆ. 1-4-0

ಶಾರದಾ ಛಾಪಖಾನೆ, ಮಂಗಳೂರು.

ಇವರಿಂದ ಪಡೆಯಬಹುದು.

ನಡೆದ ಕತೆಗಳು.

True Stories.

ಓದಿ ಮುಗಿಸುವ ಸಮಯ:—ಮೂರೇ ನಿಮಿಷಗಳು.

All Rights Reserved.

[ಸಮಾಜದಲ್ಲಿನ ಕುಂದುಕೊರತೆಗಳನ್ನು ತೋರಗೊಡಿಸುವುದೇ 'ನಡೆದ ಕತೆಗಳ'—ಇವುಗಳ ಉದ್ದೇಶ. ಘಟನೆಗಳೆಲ್ಲ ನಿಜವಾದುವುಗಳು; ಅವುಗಳನ್ನು ಸಂಯೋಜಿಸುವುದರಲ್ಲಿ ಮಾತ್ರ ಅನುಕೂಲ ಹಕ್ಕುಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಹೆಸರುಗಳನ್ನು ಕೆಲ ಕಡೆಗಳಲ್ಲಿ ಮಾತ್ರ ಬದಲಾಯಿಸಲಾಗಿದೆ.

ಶ್ರೀ ವೆಂಕಟರಮಣನ ಮಹಾತ್ಮೆ

ನಮ್ಮ ಮುನಿಸಿಪಾಲಿಟಿಯವರು ತಮ್ಮ ಆಯದಲ್ಲಿ ಅಲ್ಪಾಂಶವನ್ನು ಪ್ರತ್ಯೇಕಿಸಿಟ್ಟು, ಊರಿನೊಳಗಣ ವೈದ್ಯರ ಖಾನೆಸುಮಾರಿಯನ್ನು ತೆಗೆಯುವುದಾದರೆ ಒಟ್ಟುಗಿಂಮಂದಿ 'ವೈದ್ಯರು' ದೊರಕಬಹುದು. ಆದರೆ ಅವರು 'ಪಂಡಿತರು' ಗಳ ಖಾನೆಸುಮಾರಿಯನ್ನು ತೆಗೆಯುವುದಾದರೆ ಈ ಜಾತಿಗೆ ಸೇರಿದವರು ಮಾರ್ಗಕ್ಕೊಬ್ಬರಿರುವರೆಂದು ಖಚಿತವಾಗಬಹುದು.

ವೈದ್ಯರೆಂದರೆ—ಆಯುರ್ವೇದ ಶಾಸ್ತ್ರಾನುಗುಣವಾಗಿ ಮದ್ದುಕೊಟ್ಟು ಬೀಲು ಕಳುಹಿಸುವವರು. ಪಂಡಿತರೆಂದರೆ ಚುಟುಕು ಮದ್ದುಗಳನ್ನು ಕೊಟ್ಟು ರೋಗಗಳನ್ನು ಚುಟುಕಾಗಿ ಗುಣಪಡಿಸಿ, ಚುಟುಕು ದುಡ್ಡನ್ನು ಪಡೆಯುವವರು:—

ಅಂತಹ ಚುಟುಕು ಪಂಡಿತರಲ್ಲಿ ಮ। ರಾ। ರಾ। ಕೊಡಿಯಾಲಬೈಲು ರಾಮಣ್ಣನವರೊಬ್ಬರು. ಅವರು ಪಂಡಿತರಾದ ಕಥೆಯನ್ನು ಕೇಳಿ:

ವಯಸ್ಸು ನಲ್ವತ್ತು ಮೀರಿ ಮೂವರು ಮಕ್ಕಳಾದರೂ ಅವರಿಗೆ ಉದ್ಯೋಗ ಹಂಚು ಕಾರ್ಖಾನೆಯಲ್ಲಿ ಮಣ್ಣು ಹೊರುವ ಭಾಗ್ಯವು ತಪ್ಪಲಿಲ್ಲ! ಫಲವಾಗಿ, ಅವರ ಧರ್ಮಪತ್ನಿಗೆ ದಿನಂಪ್ರತಿ ಅಡಿಗೆ ಮಾಡುವ ಪುಣ್ಯವೂ ಸಿಗುತ್ತಿದ್ದಿಲ್ಲ, ಅಲ್ಲದೆ ಮಕ್ಕಳಿಗೆ ಮೂರು ಹೊತ್ತು ಉಣ್ಣುವ ಕಷ್ಟವೂ ಇರುತ್ತಿದ್ದಿಲ್ಲ.

ಆದರೆ, ನಾಗಮ್ಮ ಅಡಿಗೆಮಾಡದೆ ಎಷ್ಟು ದಿನಗಳ ವರೆಗೆ ಹೀಗೆ ಉದಾಸೀನಳಾಗುವಳು? ಮಕ್ಕಳು ಹೇಗೆ ಸುಮ್ಮಗಿದ್ದಾವು?

ಒಂದು ದಿನ ನಾಗಮ್ಮ ತನ್ನ ಬಟ್ಟೆಬರೆಗಳನ್ನು ಮೂಟೆಗಟ್ಟಿ, ಸಣ್ಣ ಸಣ್ಣ ಮೂರು ಮಕ್ಕಳನ್ನೂ ಹಿಡಿದುಕೊಂಡು ರಾಮಣ್ಣನವರ ಅಂಗಳದಲ್ಲಿ ನಿಂತಳು " ತಾನು ಈಗಲೇ ಹೊರಗೆ ನಡೆಯುವೆನೆಂದಳು. "ವರ್ಷದಲ್ಲಿ ಮುನ್ನೂರು ದಿನ ನಾನೂ ನನ್ನ ಮಕ್ಕಳೂ ಬರಿ ಹೊಟ್ಟೆಯಲ್ಲಿ ರಬೇಕೆಂದಾದರೆ ನಿಮಗೆ ನಾನೇಕೆ? ನೀವು ನನಗೇಕೆ? ಇದೇ ದಾರಿದ್ರ್ಯವಸ್ಥೆಯಲ್ಲಿರಬೇಕೆಂದು ನಾನಾಗಲೀ ನನ್ನ ಹಿರಿಯರಾಗಲೀ ಹರಕೆ ಹೇಳಿಕೊಂಡಿರುತ್ತೇವೆಯೇ?"—ಎಂದು ಒದರಿದಳು ಗಂಡಹೆಂಡಿರ ಕಲಹವೆನ್ನಿ. ಮರುದಿನ ಅವರು ರಾಜಿಯಾದರು.

ಜಗಳವಾದಂದಿನಿಂದ ರಾಮಣ್ಣನವರ ಚಿತ್ತವೃತ್ತಿಯೇ ಬೇರಾಯಿತು. ನಿತ್ಯದ ಉತ್ಸಾಹವು ದೀರ್ಘಚಿಂತನೆಯ ಮುಚ್ಚಿಯೊಳಗಾಯಿತು. ಅನುದಿನದ ನಗೆಯು ವ್ಯಾಕುಲತೆಯ ವಶವಾಯಿತು. ಹೇಗಾದರೂ ಮಾಡಿ, ಏನಾದರೂ ಮಾಡಿ, ನಾಗಮ್ಮನನ್ನು ಸಂತೈಸಲೇ ಬೇಕು—ಬದುಕಿ ಬಾಳಬೇಕು—ಬಾಳಿ ಉಳಿಸಬೇಕು—ಎಂದು ನಿರ್ಧರಿಸಿದರು.

ಮರು ರವಿವಾರದಿಂದಲೇ ಅವರು ಪ್ರಾತಃಕಾಲ ಮಿಂದರು. ಮಡಿಯುಟ್ಟರು; ಗಂಧ ಕುಂಕುಮಗಳ ನಾಮಗಳನ್ನು ಹಾಕಿಕೊಂಡರು; ತುಳಸಿಯ ಎಲೆಯೊಂದನ್ನು ಕಿವಿಯ ಒಳತೂತಿನಲ್ಲಿಟ್ಟುಕೊಂಡರು. ಗೋಡೆಯ ಸಣ್ಣ ಕಟಾಟಿನಲ್ಲಿದ್ದ ಶ್ರೀ ವೆಂಕಟರಮಣನ ಪಟದ ಪಾದಪೂಜೆ ಮಾಡಿದರು.

ಮನುಷ್ಯನು ಕಂಗೆಟ್ಟ ಸಂದಿಗ್ಧತೆಯೇ ಅವನ ಸತ್ವಪರೀಕ್ಷಾ ಸಮಯ. ಆ ಸಮಯದಲ್ಲಿ ಅವನು ಸ್ಥಿರಚಿತ್ತನಾಗಿ ಯಾವುದೋ ಒಂದು ಅಜ್ಞಾತ ವಸ್ತುವನ್ನು ಕುರಿತು ಮೌನವಾಗಿ ಮೊರೆಯಿಡುತ್ತಾನೆ. ಅಂತಹ ಮೊರೆಯೇ ಭಕ್ತಿ. ಅಮೃತ ಕಷೋಲವಾದ ಭಕ್ತಿಯು ಪರಿಪಾಕವೇ ನೂತನ ಸ್ಫೂರ್ತಿ! ಅಂತಹ ಸ್ಫೂರ್ತಿ ಸಂಪಾದನೆಯೇ ಜೀವನದ ಸಂಜೀವನ.

ಅಂತಹ ಸಂಜೀವನವನ್ನು ರಾಮಣ್ಣನವರು ಸಂಪಾದಿಸಿದರು.

ಒಂದು ದಿನ ಬೆಳಿಗ್ಗೆ ಕಾರ್ಖಾನೆಗೆ ಹೋಗುವಾಗ ಅವರಿಗೆ ಬೊಕ್ಕಪಟ್ಣದ ತನಿಯ ಮೇಸ್ತ್ರಿಯವರ ಅಳಿಯ ಕೃಷ್ಣಪ್ಪನು ದಾರಿಯಲ್ಲಿ ಸಿಕ್ಕಿದ. "ಏನು ಕೃಷ್ಣಪ್ಪ ಬಹಳ ಅವಸರದಿಂದ ಹೋಗುತ್ತಿ?" ಎಂದರು ರಾಮಣ್ಣನವರು. ಅವನ ಮೋರೆಯು ಬಾಡಿತು. ಸ್ವಲ್ಪ ಯೋಚಿಸಿದ, ಮತ್ತು 'ಮಾವನಿಗೆ ಚಳಿ, ನಿಮಗೆ ಗೊತ್ತಿಲ್ಲವೇ? ನಾವು ಆಶೆಬಿಟ್ಟಿದ್ದೇವೆ! ಜ್ವರವು ನೆತ್ತಿಗಡರಿದೆ' ಎಂದನು. ರಾಮಣ್ಣನವರು ಕೂಲಂಕಷವನ್ನು ವಿಚಾರಿಸಿದರು. "ಆಗಬಹುದು—ಹೋಗು" ಎಂದು ಕನಿಕರ ಹೃದಯಿಗಳಾಗಿ ಹೇಳಿದರು.

ರಾಮಣ್ಣನವರು ಕೆಲಸಕ್ಕೆ ಹೋಗಲಿಲ್ಲ. "ನನ್ನ ಹೆಂಡತಿಗೆ ಜ್ವರ ಬರುತ್ತದಾದುದರಿಂದ ನನಗೆ ಈ ದಿನ ಕೆಲಸಕ್ಕೆ ಬರಲು ಸಾಧ್ಯವಿಲ್ಲ" ಎಂದು ಹೇಳೆಂದು ಗೆಳೆಯ ಪೋಂಕ್ರನಿಗೆ ಹೇಳಿದರು. ನೆಟ್ಟಗೆ ರಥಬೀದಿಗೆ ಬಂದರು. ಅಣ್ಣಪ್ಪ ನ್ಯಾಕರ ಮದ್ದಿನ ಅಂಗಡಿಯನ್ನು ಹೊಕ್ಕರು.

'ಗೃಹವೈದ್ಯ' ಎಂಬ ಗ್ರಂಥವನ್ನು ಎತ್ತಿಕೊಂಡು ಕನ್ನಡಕ ಕನ್ನಡಕಕ್ಕೆ ಕೆಲಸಕೊಟ್ಟಿದ್ದ ಅಣ್ಣಪ್ಪ ನಾಯಕರು ರಾಮಣ್ಣನವರನ್ನು ಕುಳ್ಳಿರಿಸಿ ಜ್ವರದ ವಿವರವನ್ನು ಕೇಳಿದರು. 'ಎಂಟು ದಿನಗಳಾದುವು ಸ್ವಾಮಿ, ನಿನ್ನೆಯಿಂದ ಜ್ವರವು ತಲೆಗ ನೆತ್ತಿಗಡರಿದೆ. ಮೂರು ಮಕ್ಕಳಿವೆ. ಸಾಕುವುದು ಹೇಗೆಂದು ತಿಳಿಯಲಾರೆ' ಎಂದು ಮೊದಲಾಗಿ ಬಿನ್ನವಿಸಿಕೊಂಡರು. 'ಇಗೋ, ಈ ಮದ್ದು, ನಿನಗೆ ಧರ್ಮಕ್ಕೆ ಕೊಟ್ಟೆ. ಕೆಗೆದುಕೊಂಡು, ಕಷಾಯಮಾಡಿ ಅವಳಿಗೆ ಈಗಲೇ ಕೊಡು. ಶ್ರೀ ನರಸಿಂಹಸಿದ್ಧಾನ' ಎಂದು ಹೇಳಿ ಅಣ್ಣಪ್ಪನವರು ಕೆಲವು ಚೂರ್ಣಗಳನ್ನು ಕೊಟ್ಟರು.

ಆ ಚೂರ್ಣಗಳನ್ನು ಹಿಡಿದುಕೊಂಡು ನಮ್ಮ ರಾಮಣ್ಣನವರು ನೆಟ್ಟಗೆ ತನಿಯ ಮೇಸ್ತ್ರಿಯವರ ಮನೆಗೆ ಹೋದರು. ರೋಗಿಯನ್ನು ಕಾಣಹೋದ ನಾಲ್ಕಾರು ಜನರೊಡನೆ ತಾನೂ ವ್ಯಸನಾಕ್ರಾಂತರಾಗಿ ಕುಳಿತರು.

ಅರ್ಧ ತಾಸು ಕಳೆದ ಮೇಲೆ 'ಈಗ ಯಾರ ಮದ್ದು?' ಎಂದರು. 'ಯಾರದೂ ಇಲ್ಲ, ಎಲ್ಲಾ ಬಿಟ್ಟಿದ್ದೇವೆ' ಎಂದಳು ಮೇಸ್ತ್ರಿಯವರ ಪತ್ನಿ ಸುಬ್ಬು. ರಾಮಣ್ಣನವರು ಸ್ವಲ್ಪ ಯೋಚಿಸಿದರು. "ಇಕೊ, ನಾನೊಂದು ಕಷಾಯವನ್ನು ಕೊಡುತ್ತೇನೆ. ನನ್ನ ಹೆಂಡತಿಯೂ ಇದೇ ಜ್ವರಕ್ಕೆ ಸಿಕ್ಕಿ ಹೀಗೆಯೇ ಮಲಗಿದ್ದಾಗ ನಾನು ನನ್ನ ಅಜ್ಜ ಕರ್ಗಿಯ ಹೇಳಿದ್ದ ಈ ಮದ್ದನ್ನು ಅವಳಿಗೆ ಕೊಟ್ಟಿದ್ದೆ. ಜ್ವರವು ಕೂಡಲೇ ವಾಸಿಯಾಗಿದೆ" ಎಂದರು.

ರಾಮಣ್ಣನವರ ಅದೃಷ್ಟವು ತಿರುಗಿತು: ಅವರ ಅದೇ ಕಷಾಯದಿಂದ ಮೇಸ್ತ್ರಿಗಳು ಗುಣಹೊಂದಿದರು ಎಲ್ಲೆಲ್ಲೂ ರಾಮಣ್ಣನವರ ಹೆಸರು! ಬೊಕ್ಕಪಟ್ಣ ಕೊಡಿಯಾಲಬೈಲಿನ ಜನರೆಗೆಲ್ಲ ಅವರು ವಿಶ್ವಾಸಸ್ಥಿಯ ಪಂಡಿತರಾದರು.

ಈಗ ಅವರ ಮನೆಯು ಔಷಧಶಾಲೆಯಾಗಿದೆ. ಬಂದು ಹೋಗುತ್ತಿರುವ ರೋಗಿಗಳಿಗೆ ಲೆಕ್ಕವಿಲ್ಲ. ಕೈಗೆ ಬೀಳುವ ದುಡ್ಡಿಗೆ ಕಡಮೆಯಿಲ್ಲ. ಬಂದ ರೋಗಿಗಳ ವಿವರವನ್ನು ಪಡೆದು, ಆ ವಿವರವನ್ನು ಅಣ್ಣಪ್ಪ ನಾಯಕರಿಗೆ ಹೇಳಿ, ಮದ್ದುಗಳೆಲ್ಲಾ ತನ್ನ ಹಿರಿಯರದ್ದೆಂದು ನಂಬಿಸಿ ಜಾಣ್ಮೆಯನ್ನು ತೋರಿಸುವ ಅವರ ಬುದ್ಧಿಗೆ ಎಣೆಯಿಲ್ಲ. ಪಂಡಿತರು(ಅವರನ್ನೀಗ ಪಂಡಿತರೆಂದೇ ಸಂಬೋಧಿಸಿ ಅರ್ಹತೆಯನ್ನು ಮಾನಿಸಲೇಕಾಗಿದೆ.) ಈಗ ಕಾರ್ಖಾನೆಗೆ ಹೋಗುವುದಿಲ್ಲ. (ಮ. ಜಾ.)

ನಗಬಾರದು.

[ಸ್ವಕಪೋಲ ಕಲ್ಪಿತ ಹಾಸ್ಯಗಳನ್ನು ಕಳುಹಿಸುವವರಿಗೆ ಯೋಗ್ಯತಾನುಸಾರವಾಗಿ ಬಹುಮಾನಗಳನ್ನು ಕೊಡಲಾಗುವುದು.]

(ಬೀಡಿ ಎಳೆದುಕೊಂಡು ಹೋದ ಹುಡುಗನನ್ನು ನೋಡಿ ಉಪಾಧ್ಯಾಯರು ಮರುದಿನ ಕ್ಲಾಸಿನಲ್ಲಿ)

ಉಪಾಧ್ಯಾಯ:—ಲೋ, ನಿನಗೆ ಬೀಡಿ ಎಳೆಯುವುದಕ್ಕೆ ಯಾರು ಕಲಿಸಿದರೋ?

ವಿದ್ಯಾರ್ಥಿ:—ತಂದೆ ಸಾರ್.

ಉಪಾಧ್ಯಾಯ:— (ಸಿಟ್ಟಿನಿಂದ) ತಂದೆ! ಅದು ಹೇಗೋ?

ವಿದ್ಯಾರ್ಥಿ:—ನನ್ನ ಕೈಯಲ್ಲಿ ಬೀಡಿ ಕೊಟ್ಟು ಅಡಿಗೆ ಮನೆಯಿಂದ ತನ್ನ ಆಫೀಸು ರೂಮಿಗೆ ಹೊತ್ತಿಸಿ ತರುವುದಕ್ಕೆ ಯಾವಾಗಲೂ ಹೇಳುತ್ತಿದ್ದರು. ಅಡಿಗೆ ಮನೆಯಿಂದ ಆಫೀಸು ರೂಮಿಗೆ ಬರುವಾಗ್ಲೆ ಅದು ನೊಂದುಹೋಗಬಾರದೆಂದು ಒಂದೊಂದು "ದಮ್" ಎಳೆಯುತ್ತಿದ್ದೆ.

\+ + + +

ಸಂಕಣ್ಣ:—'ವಕೀಲ' ಅಂದರೆ ಅರ್ಥವೇನು?

ಸೀನಣ್ಣ:—'ವ' ಅಂದರೆ ವಶಮಾಡುವವ 'ಕೀ' ಅಂದರೆ ಕಿಸೆ ಖಾಲಿಯಾದವ 'ಲ' ಅಂದರೆ ಲಂಚ ಹೊಡೆಯುವವ

\+ + +

ಉಪಾಧ್ಯಾಯ:—ಸದುಪದೇಶವನ್ನು ಕೇಳಿ ಅದರ ಹಾಗೆ ನಡೆಯದಿದ್ದರೆ "ಓದುವುದು ಶಾಸ್ತ್ರ ಇಕ್ಕುವುದು ಗಾಳ" ಎನ್ನುತ್ತಾರೆ! ಹಾಗೆ.

ಹುಡುಗ:—(ಎದ್ದು) ನಿಮ್ಮಂತೆ!

ಉಪಾಧ್ಯಾಯ:—ಹೇಗೊ?

ಹುಡುಗ:—ಹೊಟೆಲಿಗೆ ಹೋಗಿ ಕಾಫಿ ಕುಡಿಯಬಾರದೆಂದು ನೀವು ಮೊನ್ನೆ ಹೇಳಿದ್ದಿರಿ. ನಿನ್ನೆ ನೀವು ಧನಲಕ್ಷ್ಮಿ ವಿಲಾಸದಲ್ಲಿ ಕಾಫಿ ಕುಡಿಯುತ್ತಿದ್ದುದನ್ನು ನಾನು ನೋಡಿದ್ದೇನೆ ಸಾರ್.

\+ + + +

ಡ್ರಿಲ್ ಮೇಸ್ತ್ರು:—ಲೋ ಕೃಷ್ಣ ನಿನ್ನೆ ಕೊಟ್ಟಿರುವ "ಬಸ್ಕಿ" ಸಾಧನ ಮಾಡಿದ್ದಿಯೊ?

ಕೃಷ್ಣ:—ಇಲ್ಲ ಸಾರ್.

ಡ್ರಿಲ್ ಮೇಸ್ತ್ರು:—ಯಾಕೋ?

ಕೃಷ್ಣ:—ಬೆಳಿಗ್ಗೆ ಸಾಧನಕ್ಕೆ ಪ್ರಾರಂಭಿಸಿದ ಅಪ್ಪರಲ್ಲಿ ಅಪ್ಪ ಬಂದು "ಕೈಕಾಲು ಯಾಕೆ ಬಡೆದುಕೊಳ್ಳುವಿಯೊ! ತಿಂದದ್ದು ಕರಗೊದಿಲ್ವೊ? ಎಂದು ಬೈದ್ರು ಸಾರ್.

ಡ್ರಿಲ್ ಮಾಸ್ತ್ರು:—ನಾನು ಹೇಳಿದ್ದು ಎಂತ ಹೇಳಲಿಲ್ಲವೆ?

ಕೃಷ್ಣ:—ಹೇಳಿದೆ ಸಾರ್, ಅದಕ್ಕವರು ನಿನ್ನ ಮಾಸ್ಟ್ರಿಗೆ ಸಂಬಳ ತಿಂದು ಬೇರೆ ಕೆಲಸ ವಿಲ್ಲವೋ? ಕೈಕಾಲು ಮುರಿದು ಹೋದರೆ ನಮಗೆ ಹೋಯಿತು" ಎಂದು ಹೇಳಿದ್ರು.

\+ + + +

(ಅಳುತ್ತಾ ಬರುವ ಮಗನಿಗೆ)

ತಂದೆ:—ಯಾಕೋ ಕೂಗುತಿದ್ದಿ? ಯಾರು ಹೊಡೆದರು?

ಮಗ:—ಅಣ್ಣ ಲಟ್ಟನೆ ರಟ್ಟೆಗೆ ಹೊಡೆದ

ತಂದೆ:—ಅವನನ್ನಿಲ್ಲಿ ಕರೆ! ಅಹಂಕಾರ ತಲೆಗೇರಿದುದನ್ನು ಇಳಿಸುತ್ತೇನೆ!

ಮಗ:—ಬೇಡಪ್ಪ, ಪ್ರಥಮತಃ ನಾನು ಅವನಿಗೊಂದು ಹೊಡೆದೆ. ನಾನು ಕೊಟ್ಟದ್ದು ಮಾತ್ರ ಮೆಲ್ಲಾಯಿತು. ಅವನು ಕೊಟ್ಟದ್ದು ಜೋರಾಯಿತು ಅಪ್ಪ.

\+ + + +

(ಹಳ್ಳಿಯ ಮಾಸ್ತ್ರು ಒಬ್ಬ ಧನಿಕನ ಮಗನೊಡನೆ)

ಮೇಸ್ತ್ರು:—ಹುಡುಗಾ ನಾನೀ ಮಾಸ್ತ್ರ ಕೆಲಸಕ್ಕೆ ರಾಜಿ ಕೊಟ್ಟು ನಿಮ್ಮ ಮನೆಗೆ ಬಂದ್ರೆ ಏನು ಕೆಲಸ ಕೊಡುತ್ತೀಯೊ?

ಹುಡುಗ:—ಗದ್ದೆ ಉಳುವ ಕೆಲಸ ಸಾರ್!

\+ + + +

(ತಂದೆ ಬೆಂಗಳೂರು ನೋಡದ ಮಗನೊಡನೆ)

ತಂದೆ:— ಮಗನೆ, ನಿನ್ನನ್ನೀಗ ಬೆಂಗಳೂರಿನ ರಸ್ತೆಯೊಂದರಲ್ಲಿ ನಿಲ್ಲಿಸಿದರೆ ಎಲ್ಲಿಗೆ ಹೋಗುವೆ?

ಮಗ:—ಅಲ್ಲಿರುವ ನಿಮ್ಮ ಅತ್ತೆಯ ಮನೆಗೆ ಹೋಗುವೆನಪ್ಪ.

ಪಿ. ಕೆ. ಸುಂದರ.

ತಾಯಿ:—ಮಗೂ, ಪೇಟೆಗೆ ಹೋಗಿ ತರಕಾರಿ ತೆಗೆದುಕೊಂಡು ಬಾ, ಇಗೋ ಒಂದಾಣೆ.

ಮಗು:—ಅಮ್ಮಾ, ಲಂಚ ತೆಕ್ಕೊಂಡು ಕೆಲಸ ಮಾಡಬಾರದೆಂದು ತಂದೆಯವರು ಹೇಳಿದ್ದಾರಲ್ಲ!

\+ + +

ತಂದೆ:—ನಿನಗೇನು ಬೇಕು ಮಗೂ?

ಮಗು:—ನಿಮಗೆ ಇರುವುದು ನನಗೂ ಬೇಕಪ್ಪ!

ಟಿ ಶ್ರೀನಿವಾಸ್ ಕುಂಜ್ ಬ್ಯಾರಿ

Wanted.

One paid Organizer on decent pay and Allowance for the District of South Kanara or Mercara for a well established Life Office of over 25 years' standing. Gentlemen of experience with educational qualifications and who can guarantee business need apply

Box No. 5.
C/o Swadeshabhimani.

೧೦೦ ರೂಪಾಯಿ ಬಹುಮಾನ

(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು, ಅಲ್ಲದೆ ಶಾಂತಿಯುತವಾದುದು, ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ. ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ, ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ, ಗಂಡು ಮಕ್ಕಳಾಗುತ್ತವೆ, ಧನ ಸಿಗುತ್ತದೆ, ರೋಗ ವಾಸಿಯಾಗುತ್ತದೆ. ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ. ಇದರಿಂದ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಶ್ರಮವಿಲ್ಲ, ಇನ್ನೊಬ್ಬರಿಗೆ ದಾಸರಾಗಿರ ಬೇಕಾದ ಅವಶ್ಯಕವಿಲ್ಲ. ಇದು ನಿಮ್ಮ ಸಂಗಡ ಇದ್ದರೆ ಸಾಕು ಜಯ, ಬೆಲೆ ರೂ ೨ ಮಾತ್ರ.

CI.P.8 Bengal Mesmarism House
5—7 Panchpota. Bengal (S.B.)

ಕಡಮೆ ಬೆಲೆ.

ಹೊಸ ಕಂಪೆನಿ. ಗ್ಯಾರಂಟಿ ಮಾಲ.

ಗ್ಯಾರಂಟಿಯಾದ ಹೂವಿನ ಮತ್ತು ತರಕಾರಿ ಬೀಜಗಳು—ಹಣ್ಣಿನ ಗಿಡಗಳು, ಹೂವಿನ ಗಿಡಗಳು, ಹೂವುಗಳು ತರಕಾರಿ ಹಣ್ಣುಗಳು, ಸುಗಂಧ ದ್ರವ್ಯಗಳು ಬೇಕಾದರೆ ನಮ್ಮ ಹೊಸ ಕಂಪೆನಿಗೆ ಬರೆಯಿರಿ—ಕೆಟಲಾಗು ಇನಾಮು.

ಮ್ಯಾನೇಜರ್—ರೋಯಲ್ ಸೀಡ್ ಕಂಪೆನಿ

ನಂ. 27—B. ಸ್ಟ್ರೀಟ್ ಇಲ್‌ಲ್‌ಕೋಲ್,

ಬೆಂಗಳೂರು— B. cont.

ಅಗ್ರಗಣ್ಯ ಸಂಗೀತಜ್ಞರು ಅದರ ಪ್ರಶಂಸಾಗಾನವನ್ನು ಮಾಡಿದ್ದಾರೆ

ಮುಸಿರಿ ಸುಬ್ರಹ್ಮಣ್ಯ ಐಯ್ಯರ್, 6 ಒಲಿವರ್ ರೋಡ್, ಮೈಲಾಪುರ ಮದ್ರಾಸು ತಾ. ೨–೫–೩೪.

ಅನೇಕ ಸಮಯದಿಂದ ನನ್ನ ಕುಟುಂಬದವರೆಲ್ಲ ಕೇಶವರ್ಧಿನಿಯನ್ನು ಬಿಡದೆ ಉಪಯೋಗಿಸುತ್ತಿರುವರೆಂದು ತಿಳಿಸಲು ಸಂತೋಷಿಸುತ್ತೇನೆ. ಉದುರುವ ಕೂದಲನ್ನು ತಡೆಯುವ ಅದರ ಶಕ್ತಿಯನ್ನು ಪೂರ್ಣವಾಗಿ ತಿಳಿದು, ಅಲ್ಲದೆ ಕೂದಲನ್ನು ಅದು ಬೆಳೆಯಿಸುವ ಅದರ ಗುಣವನ್ನು ಅರಿತು ಅವರು ಅದರ ಗುಣಗಾನವನ್ನು ಮಾಡಿ ಸ್ನೇಹಿತರಿಗೂ ಅದನ್ನು ಶಿಫಾರಸು ಮಾಡುತ್ತಾರೆ. ಕೇಶಗಳಿಗೂ ಮೆದುಳಿಗೂ ಸಮರ್ಪಕವಾದ ಎಣ್ಣೆಯೊಂದು ಆಗತ್ಯವಿರುವವರು ಇದನ್ನುಪಯೋಗಿಸಬಹುದೆಂದು ನಾನು ಶಿಫಾರಸು ಮಾಡುತ್ತೇನೆ.

(ಸಹಿ) ಮುಸಿರಿ ಸುಬ್ರಹ್ಮಣ್ಯ ಅಯ್ಯರ್.

ಬೋಳು ತಲೆಯುವಂತಾಗಿರಬೇಡಿ ಅಥವಾ ತಲೆಕೂದಲು ಅಸಂಪಕ್ವ ಸಮಯದಲ್ಲಿ ಬೆಳ್ಳಗಾಗದಂತೆ ನೋಡಿ.

ಬಾಟ್ಲಿ 1ಕ್ಕೆ ಆಣೆ 12. **'ಕೇಶವರ್ಧಿನಿ'** ಪೇಕಿಂಗ್ ಮತ್ತು ಅಂಚೆವೆಚ್ಚ ಪ್ರತ್ಯೇಕ

ಪೆಟ್ಟಿನ ವಿವರ ವ್ಯಾಪಾರಿಗಳಲ್ಲಾಗಲೀ ಅಥವಾ ಈ ವಿಳಾಸದಲ್ಲಾಗಲೀ ಸಿಗುವುದು —

South India Chemicals, Luz Road, Mylapore Madras

ನಮ್ಮ ಏಜೆಂಟರು—ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

ಕೆನರಾ ವಾಚ್ ವರ್ಕ್ಸ್, ಮಂಗಳೂರು.

ದಿನಂಪ್ರತಿ ನೂರಾರು ಗಿರಾಕಿಗಳು ಬಂದು ನಮ್ಮಲ್ಲಿರುವ ಹಲವು ಬಗೆಯ ಕೈಗಡಿಯಾರ, ಗೋಡೆಯ ಗಡಿಯಾರ, ಆಟದ ಸಾಮಾನು ಮೊದಲಾದವುಗಳನ್ನು ಪಡೆದು, ಸಂತೃಪ್ತಿ ಹೊಂದಿ ಸಂತೋಷದಿಂದ ಹೋಗುವ ವಿಷಯವೊಂದೇ ನಮ್ಮಲ್ಲಿನ ಸರಕುಗಳಿಗೆ ಜನರಿಂದ ದೊರೆತಿರುವ ಪ್ರಶಂಸೆ. ನೀವೂ ನಮ್ಮಲ್ಲಿಗೆ ಬರಬಹುದು—ತೃಪ್ತಿ ಹೊಂದಬಹುದು—ಬೇಕಾದರೆ ಪಡೆಯಬಹುದು

ಎಲ್ಲೆಲ್ಲಿ ನೋಡಿದರೂ ಸ್ವದೇಶಾಭಿಮಾನಿ!

?

ಆಬಾಲವೃದ್ಧರು ಓದುವುದು ಸ್ವದೇಶಾಭಿಮಾನಿಯನ್ನು!
ಗಿರಾಕಿಗಳು ದಿನೇ ದಿನೇ ಹೆಚ್ಚುತ್ತಿದ್ದಾರೆ -
ಕೊನೆಯ ಒಂದೆರಡು ಪ್ರತಿಗಳೂ ವಿಕ್ರಯವಾಗುತ್ತವೆ
ವಾರಂಪ್ರತಿ ಹಚ್ಚಿನ ಪ್ರತಿಗಳನ್ನು ಮುದ್ರಿಸುತ್ತೇವೆ.

ಸರ್ವರೂ ಓದಿ ಆನಂದಿಸಿರಿ!

ಬೆಲೆ ಒಂದಾಣೆ ಮಾತ್ರ!
ಎಲ್ಲಾ ಏಜಂಟರುಗಳಲ್ಲಿಯೂ ಸಿಗುತ್ತದೆ

$1\frac{1}{4}$ CRORE

Karnatics know nothing of your products,—
Advertise them in

Swadeshabhimani

the pioneer Weekly of the South Kanara District

For Advertisement rates apply to

The Advertisement Manager,
Swadeshabhimani
Mangalore

ಪ್ರಶಂಸೆ.

ಪ್ರಖ್ಯಾತ ಅಮೇರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ

ವಿ–ಮೊ–ಲ

VIM-O-LA

ಅಮೆರಿಕಾದ ಜೀವಸಾರ ವಸ್ತು.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧ ಹೊಟ್ಟೆಯಲ್ಲಿ ಚೆಂಡಿನಂತೇಳುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಗೊಳಿಸುವ ಶಕ್ತಿವರ್ಧಕ ಪಾನೀಯ: ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ. ಬಾಟ್ಲಿ 1ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ತ್ರೀ ಸ್ವರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ

"Vimola Depot"

Manufactured by

American Herbal Products Co.,
Sole representatives for the above medicine

The National Kanara News Agency,
Sir Phirozsha Metha Road,
Fort Bombay.

ಲೇಡಿಸ್ ಬಾಂ

ಸ್ತ್ರೀಯರ ಜೀವನಾಧಾರ

ಸ್ತ್ರೀಯರು ಪುಷ್ಟರಾಗಿಯೂ ಕಾಂತಿಯುಕ್ತರಾಗಿಯೂ ಇರಬೇಕಾದರೆ, ಅವರ ಮುಟ್ಟಿನದೋಷ, ಆ ಸಮಯದಲ್ಲಿ ಬರುವ ಹೊಟ್ಟೆನೋವು, ಸೊಂಟ ಹಿಡಿತ, ಗಂಟುನೋವು, ಮೈಯಲ್ಲಿ ದಡಿಕೆ ಬೀಳುವುದು, ಬಿಳೀ ಶೆರಗ, ಗರ್ಭಕೋಶದ ನೋವು, ಅಕ್ರಮ ರೀತಿಯಿಂದ ರಕ್ತಸ್ರಾವ, ಬಂಜೆತನ, ಸಾಧಾರಣ ಕ್ಷಯ ವಿಕಾರ ಮತ್ತು ಅವರ ಅನೇಕ ತರದ ಗುಪ್ತರೋಗಗಳನ್ನು ನಿವಾರಿಸಲು ಇದರ ಒಂದೇ ಒಂದು ಶೀಸೆಯನ್ನು ಉಪಯೋಗಿಸಿದರೆ ಗುಣವನ್ನು ಕಾಣುವಿರಿ

ಉಪಯೋಗಿಸಿದವರ ಅಭಿಪ್ರಾಯ —

ರಾಮಕೃಷ್ಣ ಜೈನ್ ಬಿ ಎ ಲಾಹೋರ್ "I found your Ladies Balm worth the money I spent on it."

ಯಾವ ತೆರದ ಔಷಧಿಯಿಂದಲೂ ಬಹುಷ್ಟೈಷ. ಅಕನೆ ನಮ್ಮ ಹೇಳಿಗಾಯಿತು. ಅನುಭವಕ್ಕೆ ಬಂದಾದರೆ ನಮ್ಮ ಲೇಡಿಸ್ ಬಾಮನ್ನು ಉಪಯೋಗಿಸಿ ... ಔಷಧಿಯಿರುವ ಶೀಸೆಗಕ್ಕೆ ರೂ ೩–೦–೦ ವಿ ಪಿ ಖರ್ಚು ೦–೮–೦

ತಯಾರಿಸುವವರು —**ದಿ. ಬಿಹಾರ್ ಕೆಮಿಕಲ್ ವರ್ಕ್ಸ್, ಭಾಗಲಪುರ**

ಏಜಂಟರು—ಷಹಾ ಕಂಪೆನಿ, ಗ ಕೋಲೇಜು ಎದುರು ಮಂಗಳೂರು.

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ.

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು.

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

ಕೆಲಸದ ಫಲಿತಾಂಶ.		ಲೈಫ್ ಫಂಡ್
1925–	ರೂ 21,24 250	500
1929–	ರೂ 1,66,18 620	9,32,000
1934–	ರೂ 46,77,223	41 08,771

ಕ್ಲೈಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ. ಕಂಪೆನಿಯ ಆಸ್ತಿ–57,00,000ಕ್ಕೆ ಮೀರಿದೆ. 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ. ಲಾಭಹೊಂದಬೇಕಾಗಿದೆ. ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ 'ಲಕ್ಷ್ಮಿ'ಯಲ್ಲಿವೆ

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co., Ltd.,
Madras Branch,
No 6, Sankuram Chetty St., G. T. MADRAS.

ದಿ ಲಕ್ಷ್ಮಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6 ಸಂಕುರಾಮ ಚೆಟ್ಟಿ ಬೀದಿ ಜಿ. ಟಿ. ಮದ್ರಾಸು.

The Canara Banking Corporation Udipi, Ltd.

Head office:—UDIPI, S. K　(Incorporated in British India)　T. -'BANKING'　**ESTD. 1906.**

Branches:—1 Udipi, 2 Coondapoor, 3 Car Street, Mangalore, 4. Shimoga, 5. Madras, 6 Bunder Mangalore, 7. Mercara.

ANNOUNCEMENT.

We beg to announce that a Branch of the Corporation will be opened at Virarajendrapet shortly. Please watch the date.

ಬೇಗನೇ ನಮ್ಮ ಬೇಂಕಿನ ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ಸ್ಥಾಪಿಸಲ್ಪಡಲಿರುವುದು ದಿನವನ್ನು ನಿರೀಕ್ಷಿಸಿರಿ.

ಕೋರ್ಪರೇಶನ್ ಆಫೀಸು, ಉಡುಪಿ, 28-6-35

M. Shrinivas Prabhu,
Manager

Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.
ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ರೌನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಂಕೆಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

Our Silver Jubilee Year!　/　**Our Silver Jubilee Year!**

Messrs. KOCHIKAR BROTHERS (Estd 1910)

Branch Secretaries for Madras Presidency including India States
Chief Agents for Bombay City and Suburbs

The Bombay Life Assurance Co. Ltd.

Attractive Schemes of Assurances with rebate on annual premiums and additional rebate on larger assurances

Excellent Bonuses to agents for Jubilee Year Business

IT PAYS YOU TO REPRESENT US

Wanted agents in unrepresented areas

Apply to any of the following Offices —

P B No 337, Mount Road	Visweswarapuram Circle	Huzur Road	Car Street	UDIPI	Esmail Bldg, Loharchawl,
Madras	Bangalore City	Calicut	Mangalore	S India.	Bombay No 2

Karnataka Chemical and Pharmaceutical Works, Ltd, Udipi (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ　　ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್ಹೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು, ಖರ್ಚು ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ.

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)
ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲಿಂಟ್ಯಾನ್, ಆರೋರಾ ಕ್ರೀಮ್, ಕ್ರಿಮೋರ್ ಲಿಮೋನಿಸ್, ಕರ್ಣಾಟಕ ರೋಸ ಪೊಮೇಡ್ ಇದಲ್ಲದೆ ನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್‌ಪೇನು ಶಾಯಿಗಳೂ ಸಿದ್ಧವಾಗುವುವು

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಣ್ಣಪ್ಪ ಬಾಳಿಗ.

ಹೆಡ್ ಆಫೀಸು ಮತ್ತು ಕಾರಖಾನೆ —ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೋ —(1) ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2

ಏಜಂಟ್ಸ್—　(2) 1/70 ನ್ಯಾನಪ್ಪ ನ್ಯಾಕನ ಬೀದಿ, ಪಾರ್ಕ್ ಟೌನ್ ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

Edited, Printed & Published By A. S Kamath at the Sharada Press, Car Street, Mangalore.

ವಾರ್ಷಿಕ ಚಂದಾ: 2 ರೂಪಾಯಿ. ಬಿಡಿ ಸಂಚಿಕೆ 1 ಆಣೆ. ಟಪ್ಪಾಲು ಹಾಸಲು ಸೇರಿ ರೂ. 2-13-0.

...r Quality Snuff
H. Rama Rao and Sons.
High Class Snuff Manufacturers
Mangalore, S. I.
ASK FOR:-
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT".
Safeguard yourself & your family TODAY.
Buy a policy in THE BOMBAY LIFE.
Madras Branch Secretaries:
Kodhikar Brothers,
Udipi, Mangalore, Bangalore, Madras, Bombay and Calicut.

ESTABLISHED 1906
(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಪುಸ್ತಕ ೨೯. ಮಂಗಳೂರು ತಾ. ೧೯ನೇ ಶುಕ್ರವಾರ ಜುಲಾಯಿ ೧೯೩೫. (19 7—'35) ಸಂಚಿಕೆ ೨೯

THE C. P. C. BUILDINGS.

The New Centre of Business.

ನಮ್ಮ ಬಿಲ್ಡಿಂಗಿನಲ್ಲಿ ವಹಿವಾಟು ನಡೆಸುವವರು:

ಎದುರು ಮಾರ್ಗದಲ್ಲಿ:-

1. ಕಂಬೈಂಡ್ ಬುಕ್ಕಿಂಗ್ ಏಜನ್ಸಿ, ಇಲ್ಲಿ ಮಂಗಳೂರಿನಿಂದ ಎಲ್ಲಾ ಊರುಗಳಿಗೆ ಟಿಕೇಟುಗಳು ದೊರಕುತ್ತವೆ.

2. ಚರ್ಡಪ್ಪ ಕಿಣಿಯವರ ಜೀನಸಿನ ಅಂಗಡಿ, ಇಲ್ಲಿ ಮನೆಖರ್ಚಿನ ಎಲ್ಲಾ ಸಾಮಾನುಗಳು ದೊರಕುತ್ತವೆ.

3. ಸಿ. ಪಿ. ಸಿ. ಕಂಪೆನಿಯ ಮೋಟರ್ ಸಾಮಾನುಗಳ ವ್ಯಾಪಾರದ ಅಂಗಡಿ, ಇಲ್ಲಿ ಇಲೆಕ್ಟ್ರಿಕ್ ಫಿಟ್ಟಿಂಗ್ಸ್ ವಗೈರೆ ಸಾಮಾನುಗಳು ದೊರಕುತ್ತವೆ.

4. ಜಯಲಕ್ಷ್ಮಿ ಸ್ಟೋರ್ಸ್, ಇಲ್ಲಿ ಸ್ಟೇಶನರಿ ಮತ್ತು ಹಾರ್ಡ್‌ವೇರ್ ದೊರಕುತ್ತವೆ.

Front View.



ಬದಿ ಮಾರ್ಗದಲ್ಲಿ:-

Dr. M. S. Prabhu, M. B. & B. S.
ಇವರ ಔಷಧಾಲಯ.

ಹಿಂದೆ ಕೆಳಗಿನ ಭಾಗದಲ್ಲಿ:—

ಶಿವರಾಮ ಕಾರಂತರ ಬ್ಲೋಕ್ ಮಾಡುವ
Process Studio.

ಮಾಳಿಗೆಯಲ್ಲಿ:-

1. ಬಿ. ಶಾಂತಾರಾಮ್ ರಾವ್, B. A., B. L.
ಲೆಕ್ಕ ಪರೀಕ್ಷಕರು.

2. United India Assurance Co., Ltd.
ಇನ್ಶ್ಯೂರೆನ್ಸ್ ಕಂಪೆನಿ.

Rear View. Photographed immediately after completion.

The Canara Public Conveyance Company Ltd., Kodialbail Mangalore.

ಚಕ್ರ

(All Rights Reversed)

ಓಹೋ, ಇದೇನು, ಜವಾಹರಲಾಲರೇ! ಏನಯ್ಯಾ! ಕ್ಷೇಮವೇ! ಕಮಲಾನೆಹರುರವರ ಪತ್ರಗಳು. ಬಂದಿವೆಯೋ! ಅವು ನಾಳೆ ತಲುಪುತ್ತವೆಯೋ! ಅವರು ಬರ್ಲಿನ್‌ಗೆ ಹೋದ ಮೇಲೆ ಪತ್ರ ಬರೆದಿರುವರಷ್ಟೆ ಓಹೋ, ಒಳ್ಳೇದು ದೇವರು ಒಳ್ಳೇದು ಮಾಡಲಿ!

× × × × × ×

ನೀವಿರುವ ಜೈಲ್ ಎಂದರೆ ಬಹಳ ಹೆಸರೋದುದು, ಹೇಗೆ?— ಸುಸಿಗಳನ್ನು ಎಷ್ಟು ಸಾಕಿಟ್ಟಿದ್ದೀರಿ, ರಾತ್ರಿ ಕಿವಿಯ ಬಳಿ ಬಂದು ಸಂಗೀತ ಹೇಳುತ್ತವೆಯೋ! ಅವುಗಳ ಪದಕ್ಕನುಸಾರವಾಗಿ ತಟಲೆ ಓಡಿಸಬೇಕಯ್ಯ, ಬಹಳ ರಸವತ್ತಾಗುತ್ತದೆ! ಬಹಳ ಕೋಲಾಗುತ್ತದೆ!

× + × × × ×

ಸ್ವಲ್ಪ ಕ್ಷೀಣವಾದಂತಿರುತ್ತೀರಿ, ಏನು? ಸಂಸಾರದ ಧೂಳಿನಲ್ಲಿ ಮುಳುಗುವ ಆಶೆಯಾಗಿದೆಯೋ? ಸರಕಾರದ ಉಪ್ಪನ್ನ ತಿಂದು ಜೈಲೊಳಗೆ ಜೀವಿಸುವುದರಿಂದ ದೊರೆಯುವಷ್ಟು ಸುಖ ಹೊರಗೆ ಎಲ್ಲಿದೆ ಸ್ವಾಮೀ, ಸಿಮ್ಮದೆಲ್ಲಾ ವೃಥಾ! ಕೆಲಸವಾದಡೆ, ಪೆನ್ಶನ್ ದಾರರ ಹಾಗೆ ಕೂತು ತಿನ್ನುತ್ತೀರಿ ಏನು, ಸಣ್ಣ ಭಾಷಣ ಮಾಡಿದರಾಯಿತು! ನಿಮಗೆ ಮರುದಿನ ಅನ್ನಕೊಡುವವರಿರುವರು! ನಮ್ಮ ಗತಿಯೋ ಸ್ವಾಮಿ ಅದನ್ನು ಹೇಳತೀರದು!

× × × × × ×

ಮೊನ್ನೆ ಭೂಕಂಪವಾಯಿತು ೩,೫೦೦ ಜನರು ಕಾಲವಾದರು. ಬಾಕಿಯಾದ ಜನಕ್ಕೆ ಲೆಕ್ಕವಿಲ್ಲ ಭೂಕಂಪವಾದುದು ಕ್ವೆಟ್ಟಾದಲ್ಲಿ—ಆದರೆ ನಮಗೆ ಕಷ್ಟ ಹೇಗೆ ಗೊತ್ತೀ? ದಾರಿನಡೆಯಲಿಕ್ಕಿಲ್ಲ ಸ್ವಾಮಿ, ನಿಮ್ಮ ಜಾತೀಯ ಕೊಂಗ್ರೆಸ್ ಮುಂದಿ ಕೆಲವರು ಕೂಡಿಕೊಂಡು ದಳ್ಳಿಯನು ಕಿಶಿಗೇನೆ ತಾಗಿಸುತ್ತಾರೆ ದುಡ್ಡು ಕೊಟ್ಟು ಕೊಟ್ಟು ಕೈ ಸೋತುಹೋಯಿತು ಜವಾಹರಲಾಲರೇ! ಇನ್ನು ಕ್ವೆಟ್ಟಾದವರ ಉದ್ಧಾರವಾಗುವುದೆಂದೇ ಉಳಿದಿದೆ!

× × × × × ×

ನಿಮ್ಮನ್ನು ಸೆರೆಯಿಂದ ಹೊರಗೆ ಬಿಡಬೇಕೆಂದು ಅನೇಕ ಜನರು ಪ್ರಾರ್ಥಿಸುತ್ತಿದ್ದಾರಯ್ಯ! ಕಣ್ಣು ಒಡೆಯುವಷ್ಟು ದೊಡ್ಡ ಶಿರೋನಾಮೆಯನ್ನು ಪತ್ರಿಕೆಗಳಲ್ಲಿ ಹಾಕಿ "ಜವಾಹರಲಾಲರ ಬಿಡುಗಡೆಯಾಗುವುದೇ?" ಎಂದು ತಾವು ಹೀಗೇ ಪ್ರಶ್ನಿಸುತ್ತಿರುವರು ಅಲ್ಲದೆ ಲೀಡರುಗಳನ್ನು ಬರೆಸಿ ನಿಮ್ಮನ್ನು ಅವಶ್ಯವಾಗಿ ಸಿಮ್ಲಾ ಪಾರ್ಲಿಮೆಂಟಿಗೆ ಹೊರಗೆ ಕಳುಹಿಸಬೇಕೆಂದು ಹೇಳುತ್ತಿರುವರು

× × × × × ×

ನಿಮ್ಮ ಮಾಂಸದಲ್ಲಿ ೧೦ ಪೌಂಡು ಕಡಿಮೆಯಿದ್ದಿದೆ ಎಂಬ ವಾರ್ತೆಯು ಊರೆಲ್ಲಾ ಹರಡಿರುತ್ತದಯ್ಯ! ನಿಮ್ಮ ಮಾಂಸವು ಕಡಿಮೆಯಾಗ ಇಷ್ಟು ಬೊಬ್ಬಿಡುವ ಜನರು ನೀವು ಸಂಸಾರಾಪತ್ತಿಯಲ್ಲಿ ಸಿಕ್ಕು ಕಷ್ಟಪಟ್ಟರೆ ಅವರ ನಾಲಿಗೆ ನಡೆಯುವುದೇ ಇಲ್ಲ—ಲೇಖನಿ ಓಡುವುದೇ ಇಲ್ಲ!

× × × × × ×

ನಿಮ್ಮಾಣೆ, ನಾನು ಸತ್ಯವಾಗಿ ಹೇಳುವುದಾದರೆ ಹೇಳುತ್ತೇನೆ ಕೇಳಿ ನೀವು ಎಂದೂ ಜೈಲಿನ ಹೊರಗೆ ಹೋಗಕೂಡದು, ಸರಕಾರದವರು ಶುಕ್ರನಿಗೆ ಚಂದ್ರಾಹಾರವನ್ನುಪಯೋಗಿಸಿದರೂ ಜೈಲೊಳಗೇ ಇರುವನೆಂದು ಖಂಡಿತ ಹೇಳಬೇಕು

× + × × × ×

ಕಾರಣ ಕೇಳಿ! ಕೊಂಗ್ರೆಸಿನವರೊಳಗೆ ಭಿನ್ನಾಭಿಪ್ರಾಯವೆದ್ದಿದೆ ಸೋಶಿಯಲಿಸ್ಟರು ಕೊಂಗ್ರೆಸ್ಸಿನವರ ಕಿವಿ ಹಿಂಡುತ್ತಿದ್ದಾರೆ ಎಲ್ಲಿಯೂ ಯಾರಿಗೂ ಅದರ ದೆಸೆಯಿಂದ ಸುಖವಿಲ್ಲ, ಇಂತಹ ಕಷ್ಟ ರಾಜ್ಯಕ್ಕೆ ನೀವು ಕಾಲಿಡಬೇಡಿ! ನಿಮ್ಮಾಣೆ ಬೇಡಿ!

× × × × × ×

ನಿಮ್ಮನ್ನು ಜೈಲಿಗೆ ಕಳುಹಿಸುವುದು ಸರಕಾರವೆಂಬ ಮಾತಿಗೆ ನಾನು ಎಂದೂ ಒಪ್ಪಲಾರೆ ಏಕೆ ಕೇಳುವಿರಾ? ನೀವು ದೊಡ್ಡ ಮನುಷ್ಯರೆಂಬ ಭಾವನೆಯಿಂದ ನಿಮ್ಮನ್ನು ಸಭೆಗಳಿಗೆ ಅಧ್ಯಕ್ಷರನ್ನಾಗಿ ಮಾಡಿ, ನಿಮ್ಮಿಂದ ಭಾಷಣ ಮಾಡಿಸುವುದು ಯಾರು? ನಿಮ್ಮ ದೇಶಸ್ಥರೇ! ನೀವು ನಿಮ್ಮ ಅಭ್ಯಾಸದಂತೆ ಸ್ಪಷ್ಟವಾಗಿ—ಇದ್ದುದನ್ನು ಇದ್ದಂತೆ—ಹೇಳಿದೊಡನೆ ಪೋಲೀಸರು ನಿಮ್ಮನ್ನು 'ಅರೆಸ್ಟ್' ಮಾಡಿ ಜೈಲಿಗೊಯ್ಯುತ್ತಾರೆ ನೋಡಿ, ಯಾರು ಮಾಡುವುದು ಇದನ್ನೆಲ್ಲ?— ಅಲ್ಲಲ್ಲ,— ನಾನು ಹೇಳುತ್ತೇನೆಂದು ಕೋಪಗೊಳ್ಳಬೇಡಿ!

'ಸಾಯ್ಬ'.



ಅಸ್ವಸ್ಥದಲ್ಲಿ ಬಿದ್ದು ಏಳುತ್ತಿರುವವರು 'ಓವಲ್ಟಿನ್'ನಲ್ಲಿರುವ ಚೈತನ್ಯದಾಯಕವೂ ಆರೋಗ್ಯದಾಯಕವೂ ಆದ ಗುಣಗಳನ್ನು ಕಂಡ ಸಂತೋಷಗೊಳ್ಳುವರು ಕುಂದಿದ ಅಜೀರ್ಣತೆಗೂ ಕ್ರಮ ತಪ್ಪಿದ ಹಸಿವಿಗೂ 'ಓವಲ್ಟಿನ್' ಅತ್ಯುತ್ಕೃಷ್ಟ ಪಾನಕ

'ಓವಲ್ಟಿನ್' ನರಗಳನ್ನು ಪುಷ್ಟೀಕರಿಸುತ್ತದೆ ರಕ್ತವನ್ನು ವೃದ್ಧಿಗೊಳಿಸುತ್ತದೆ, ನಿದ್ರೆಯನ್ನುತ್ಪನ್ನಮಾಡುತ್ತದೆ, ರೋಗವನ್ನು ಓಡಿಸಿ ದೇಹಾರೋಗ್ಯವನ್ನು ವೃದ್ಧಿಸುತ್ತದೆ,—ಇದೀ ದೇಹವನ್ನು ಬೆಳೆಯಿಸಿ ಬಲವನ್ನೀಯುತ್ತದೆ ಅಸ್ವಸ್ಥದಲ್ಲಿರುವವರ ಕೋಣೆಗೆ 'ಓವಲ್ಟಿನ್' ಹೊಕ್ಕೊಡನೆ ಶೀಘ್ರ ಗುಣಲಾಭವಾಗುತ್ತದೆ

'ಓವಲ್ಟಿನ್' ಎಂಬುದು ದೇಹ ಪೋಷಣೆಗೆ ಅನುಪಮ ಪಾನಕ ಆರೋಗ್ಯವನ್ನೂ ಶಕ್ತಿಯನ್ನೂ ದೇಹದಲ್ಲಿ ತುಂಬಿಸುತ್ತದೆ ಬೆಳೆದ ಬಾರ್ಲಿ, ದನದ ಕೆನೆಹಾಲು, ಗೋದಿ—ಇವೇ ಮೊದಲಾದ ಪ್ರಕೃತಿಸಿದ್ಧ ವಸ್ತುಗಳಿಂದ ತಯಾರಿಸಲ್ಪಟ್ಟುದು

ನಿಮ್ಮ ಚಹಾಕ್ಕೆ 'ಓವಲ್ಟಿನ್' ಸೇರಿಸಿರಿ—ಅದು ಆರೋಗ್ಯಕರ, ಬಲವರ್ಧಕ ಮತ್ತು ಶಕ್ತಿದಾಯಕ

'ಓವಲ್ಟಿನ್'

ಮಿದುಳು, ನರ, ದೇಹಗಳನ್ನು ರಚಿಸುತ್ತದೆ.

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ,

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ದೊರೆಯುತ್ತದೆ.

ಏಜಂಟ್,—ಜೇಮ್ಸ್ ವೈಟ್ ಕಂ. ರಿಪನ್ ಸ್ಟ್ರೀಟ ಕಲ್ಕತ್ತಾ ಮತ್ತು ಮುಂಬಯಿ ಮದ್ರಾಸು

OV 117

ತಯಾರಾಗಿದೆ!

ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ ಸಮಾಜ ಶಾಸ್ತ್ರ ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ ಇದನ್ನು ೧೯೩೫ರ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜ ಶಾಸ್ತ್ರವು ಅಚ್ಚಿನಲ್ಲಿದೆ

ಆರು, ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುದು

ಇಲ್ಲಿಗೆ ಕೂಡಲೇ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

Estd 1920] THE [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು

ರೇವಣಾತಿಗಳ ದರ.

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 4ರಂತೆ, 6 ತಿಂಗಳಿಗೆ ಶೇಕಡಾ 5ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur,
Dated 10—4—1935

G. N Lakshman Pai,

ಸಾಹಿತ್ಯ ಸಂಗ್ರಹ.

ಗಮಕಿಯು ಕವಿಯೆ?

"ಸುಬೋಧ"ದಲ್ಲಿ ಗಮಕಿ ಶ್ರೀಮಾನ್ ಕಳಲೆ ಸಂಕಪ್ಪದೂರಾಚಾರ್ ಬಿ ಎ ಎಲ್. ಟಿ ಇವರು ಹೀಗೆ ಬರೆದಿದ್ದಾರೆ: 'ಗಮಕಿ' ಎಂಬ ಪದದ ಗೂಢಾರ್ಥವು ಸಾಮಾನ್ಯವಾಗಿ ಅನೇಕರಿಗೆ ತಿಳಿದಿರಲಾರದು. ಈ ಪದದ ನಿಷ್ಪತ್ತಿ ಸಂಸ್ಕೃತದಿಂದಲೇ ಆಗಿದೆ ಎಂದು ಧಾರಾಳವಾಗಿ ಹೇಳಬಹುದು. ಸಂಸ್ಕೃತಭಾಷೆಯಲ್ಲಿ 'ಗಮ್' ಧಾತುವು ಬೇರೆ ಬೇರೆ ಉಪಸರ್ಗಗಳ ಸಂಸರ್ಗದಿಂದ ವಿಧವಿಧವಾದ ಅರ್ಥಗಳನ್ನು ಕೊಡುತ್ತದೆ. "ಗಚ್ಛತಿ" ಎಂದರೆ ಹೋಗುತ್ತಾನೆ ಎಂತಲೂ, ಅವ+ಗಚ್ಛತಿ ಎಂದರೆ ತಿಳಿಯುತ್ತಾನೆಂತಲೂ ಅರ್ಥವಾಗುವುದು. ಅಲ್ಲದೆ ಗಮನಾರ್ಥಕ ಧಾತುಗಳು ಜ್ಞಾನಾರ್ಥಕ ಧಾತುಗಳೆಂದಾಗಿ ವ್ಯಾಕರಣ ಶಾಸ್ತ್ರಜ್ಞರಿಂದ ನಿರ್ಧಾರಿತವಾಗಿದೆ. 'ಗಮ್' ಧಾತುವು ಬೋಧಸಾರ್ಥಕದಲ್ಲಿ ಪ್ರಯೋಗಿಸಲ್ಪಡುವುದು. ಬೋಧನಾರ್ಥಕದಲ್ಲಿ ಇತರರಿಗೆ ತಿಳುವಳಿಕೆಯನ್ನುಂಟುಮಾಡುವುದು ಎಂಬ ಅರ್ಥವನ್ನು ಕೊಡುವುದು. 'ಗಮಯತಿ ಇತಿ ಗಮಕಃ' ಇತರರ ಮನಸ್ಸನ್ನು ಒಯ್ಯುವವನು ಎಂಬ ಅರ್ಥದಲ್ಲಿಯೂ 'ಗಮ್' ಧಾತುವನ್ನು ಪ್ರಯೋಗಿಸಬಹುದು.

ಕನ್ನಡ ಪತ್ರಿಕೆಗಳು.

ಈ ಮೇಲೆ ಹೇಳಿದ ಎರಡು ಅರ್ಥಗಳು 'ಗಮಕ' ಶಬ್ದದಲ್ಲಿ ಅಡಕವಾಗಿರುವುವು. ಈ 'ಗಮಕ' ಶಕ್ತಿಯು ಯಾವನಲ್ಲಿರುವುದೋ ಅವನೇ ಗಮಕಿ ಎನ್ನಿಸಿಕೊಳ್ಳುವನು. 'ಗಮಕಿ' ಎಂಬ ಶಬ್ದವು ಸಂಸ್ಕೃತ ಭಾಷೆಯಲ್ಲಿ ಎಲ್ಲಿಯೂ ಉಪಯೋಗಿಸಲ್ಪಟ್ಟಿರುವ ಹಾಗೆ ತೋರುವುದಿಲ್ಲ. ಈ ಪದದ ನಿಷ್ಪತ್ತಿಯು ಸಂಸ್ಕೃತಭಾಷೆಯಿಂದಾಗಿದ್ದರೂ, 'ಗಮಕಿ' ಎಂಬ ಪದವು ಕನ್ನಡ ಪದವೆಂಬುದಾಗಿಯೇ ಭಾವಿಸಬೇಕು. ಪ್ರಾಚೀನ ಕನ್ನಡ ಕವಿಗಳು ತಮ್ಮ ಕಾವ್ಯಗಳಲ್ಲಿನ ಪ್ರಾರಂಭದಲ್ಲಿ 'ಕವಿ ಗಮಕಿ, ವಾಗ್ಮಿವಾದಿಗಳಿಗೆ' ವಂದಿಸಿ ಕಾವ್ಯಾರಂಭ ಮಾಡುವುದು ಸಾಂಪ್ರದಾಯವಾಗಿದೆ. ಅಂದಮೇಲೆ 'ಗಮಕಿ' ಎಂಬ ಹೆಸರಿನಿಂದ ಕರೆಯಿಸಿಕೊಳ್ಳಲ್ಪಡುತ್ತಿದ್ದ ಜನರು ಹಿಂದಿನ ಕಾಲದಲ್ಲಿದ್ದರೆಂಬುದು ವ್ಯಕ್ತವಾಗುತ್ತದೆ. 'ಕವಿ, ಗಮಕಿ' ಎಂಬ ಎರಡು ಪದಗಳು ರೂಢಿಯಲ್ಲಿರುವುದರಿಂದ, ಕವಿಯೇ ಒಂದು ಗುಂಪಿಗೆ ಸೇರಿದವನೆಂತಲೂ, ಗಮಕಿಯೇ ಒಂದು ಗುಂಪಿಗೆ ಸೇರಿದವನೆಂತಲೂ ಸಾಮಾನ್ಯವಾಗಿ ಎಲ್ಲರೂ ಅಭಿಪ್ರಾಯಪಡುವರು. ಆದರೆ ಕವಿಗಮಕಿಗಳಿರುವ ಪರಸ್ಪರ ಸಂಬಂಧವು ಅವರುಗಳನ್ನು ಪ್ರತ್ಯೇಕಿಸುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಗಮಕಿಯು ಕವಿಯೇ ಆಹುದು ಎಂದು ಹೇಳಿದರೂ ತಪ್ಪಾಗಲಾರದು. ಏಕೆಂದರೆ ಕವಿಯಲ್ಲಿ ಕಾಣಬಹುದಾದ ಗುಣಗಳಲ್ಲನೇಕವನ್ನು ಗಮಕಿಯಲ್ಲಿ ಕಾಣಬಹುದು. ಕವಿಗೆ ಬುದ್ಧಿಶಕ್ತಿಯೂ ಕಲ್ಪನಾಶಕ್ತಿಯೂ ಹೆಚ್ಚಾಗಿರಬೇಕು. 'ರವಿ ಕಾಣದ್ದನ್ನು ಕವಿ ಕಾಣಬಲ್ಲ'ನಾದ್ದರಿಂದ, ಹೊಸ ಹೊಸ ಭಾವಗಳನ್ನೂ ಮಾನಸಿಕ ಚಿತ್ರಗಳನ್ನೂ ತನ್ನ ಕೃತಿಯಲ್ಲಿ ತೋರಿಸಬಲ್ಲನು. ಕವಿಯು ಕೃತಿಯನ್ನು ರಚಿಸಿದರೆ ಅದೇ ಕೃತಿಯನ್ನು ಗಮಕಿಯು ತನ್ನ ಬುದ್ಧಿಶಕ್ತಿಯ ಬಲದಿಂದಲೂ ಕಲ್ಪನಾಶಕ್ತಿಯ ಸಾಮರ್ಥ್ಯದಿಂದಲೂ ಅರ್ಥ ರಸ ಭಾವಗರ್ಭಿತವಾಗಿ ಪಠಣಮಾಡಿ, ಕೆಲವು ವೇಳೆ ಕವಿಗೆ ತೋರದಿರುವ ಹೊಸ ಭಾವಗಳನ್ನೂ ಶ್ರೋತೃಗಳ ಮನಸ್ಸಿನಲ್ಲಿ ಮೂಡುವ ಹಾಗೆ ಮಾಡಬಲ್ಲನು. (ಲಕ್ಷ್ಮೀಶಕವಿಯ ಪದ್ಯವೊಂದನ್ನು ಬಿಟ್ಟಿದೆ ಸಂ) ....ಕವಿಯು ರಸಜ್ಞನೂ ಭಾವಜ್ಞನೂ ಆಗಿರುವನು. ಕವಿತೆಯು ರಸಭಾವಗಳಿಂದ ಪುಷ್ಟಿಯಾಗಿದ್ದರೆ, ಅದು ಉತ್ತಮ ಜಾತಿಯ ಕಾವ್ಯವೆನಿಸಿಕೊಳ್ಳುವುದು. ಗಮಕಿಯೂ ಸಹ ರಸಜ್ಞನಾಗಿಯೂ ಭಾವಜ್ಞನಾಗಿಯೂ ಇರಬೇಕು. ಕಾವ್ಯದಲ್ಲಿ ಕವಿಯು ಚಿತ್ರಿಸಿರುವ ಶೃಂಗಾರವೇ ಮೊದಲಾದ ನವರಸಗಳನ್ನು ತಾನು ತಿಳಿದು, ಅನುಭವಿಸಿ, ಶ್ರೋತೃಗಳ ಹೃದಯದಲ್ಲಿ ಅದೇ ರಸಭಾವಗಳು ಆವಿರ್ಭವಿಸುವಂತೆ ಮಾಡಬೇಕು. ಈ ಸಂದರ್ಭದಲ್ಲಿ ಗಮಕಿಗೂ ನಟನಿಗೂ ಕೆಲವು ಸಾಮ್ಯಗಳುಂಟು. ನಟನು ನಾಟಕದಲ್ಲಿ ನಾಟಕಕರ್ತೃವು ಪ್ರತಿಪಾದಿಸಿರುವ ರಸ ಭಾವಗಳನ್ನು ತಾನು ಸ್ವತಃ ಆಸ್ವಾದನೆಮಾಡಿ ಪ್ರೇಕ್ಷಕರ ಮನಸ್ಸನ್ನು ತನ್ನೊಡನೆ ಸೆಳೆಯಬಲ್ಲನು. ನಟನಿಗೆ ದೃಶ್ಯಕಾವ್ಯವೇ ವಸ್ತುವಾದರೆ ಗಮಕಿಗೆ ಶ್ರಾವ್ಯಕಾವ್ಯವು ವಸ್ತುವಾಗಿದೆ. ಗಮಕಿಯು ಕೆಲವು ವೇಳೆಯಲ್ಲಿ ಶ್ರಾವ್ಯಕಾವ್ಯವನ್ನು ದೃಶ್ಯಕಾವ್ಯವನ್ನಾಗಿ ಮಾಡತಕ್ಕ ಶಕ್ತಿಯನ್ನು ಪಡೆದಿರುವನು.

ಗಮಕಿಯು ಕಾವ್ಯದ ರಸಭಾವಗಳನ್ನು ಪ್ರತಿಪಾದಿಸಲು ತಾನೇ ರಸಜ್ಞನೂ ಭಾವಜ್ಞನೂ ಆಗಿರುವನು. ಕವಿಯು ತನ್ನ ಮನಸ್ಸಿನಲ್ಲಿ ಮೂಡತಕ್ಕ ಭಾವಗಳನ್ನು ಹೊರಪಡಿಸಲು ಭಾಷೆಯನ್ನೇ ಅಂಗವನ್ನಾಗಿ ಮಾಡಿಕೊಂಡಿರುವನು. ಕಾವ್ಯದಲ್ಲಿ ತಾನು ಪ್ರಯೋಗಿಸಿದ ಶಬ್ದಗಳ ಸ್ವರೂಪವನ್ನು ಕವಿಯೂ ಅರಿತಿರಬೇಕು. ಅಲ್ಲದೆ ವ್ಯಾಕರಣ, ಛಂದಸ್ಸು, ಅಲಂಕಾರಗಳನ್ನು ತಕ್ಕಮಟ್ಟಿಗೆ ತಿಳಿದಿರಬೇಕು. ಒಟ್ಟಿನಲ್ಲಿ ಕವಿಯು ಭಾಷಾಪಾಂಡಿತ್ಯವನ್ನು ಸಂಪಾದಿಸಿರಬೇಕು—ಗಮಕಿಯೂ ಸಹ ಕವಿಯು ಪ್ರಯೋಗಿಸಿರುವ ಶಬ್ದಸೌಷ್ಠವವನ್ನು ಕಾವ್ಯದಲ್ಲಿನ ಛಂದಸ್ಸು ಅಲಂಕಾರಗಳ ಸ್ವರೂಪವನ್ನು ಮನನಮಾಡಬೇಕಾಗಿರುವುದರಿಂದ, ಕವಿಗೆ ಸಮಾನವಾದ ಅಥವಾ ಇನ್ನೂ ಹೆಚ್ಚಿನ ಭಾಷಾಪಾಂಡಿತ್ಯವನ್ನು ಪಡೆದಿರುವನು. ಈ ಭಾಷಾಪಾಂಡಿತ್ಯದ ಸಹಾಯದಿಂದ ಗಮಕಿಯು ಕಾವ್ಯದ ರಸಭಾವಗಳನ್ನು ಹೊರಪಡಿಸಲು ಅವಶ್ಯಕವಾದರೆ, ಅದು ಗಮಕಿಗೆ ಕಾವ್ಯದ ರಸಭಾವಗಳನ್ನು ಅರಿವುಗೊಡಲು ಸಹಕಾರಿಯಾಗುವುದು. ಗಮಕಿಯು ತನ್ನಲ್ಲಿ ಕವಿಸಹೃದಯತ್ವವಿರುವುದರಿಂದ ಕವಿಯ ರಸಭಾವಗಳನ್ನು ಪ್ರತಿಪಾದಿಸಬಲ್ಲನು.

ಕವಿಗಮಕಿಗಳಿಗೆ ಪರಸ್ಪರ ಸಾಮ್ಯವನ್ನು ನಾವು ವಿಶೇಷವಾಗಿ ಕಾಣಬಹುದಾದ್ದರಿಂದ ಅವರನ್ನು ನಾವು ಪ್ರತ್ಯೇಕಿಸಲಾಗುವುದಿಲ್ಲ. ಕವಿಯು ಒಂದುವೇಳೆ ತಾನೇ ಗಮಕಿಯಾಗಿಯೂ ಇರಬಹುದು ಅಥವಾ ಇಲ್ಲದೆಯೂ ಇರಬಹುದು. ಗಮಕಿಯಾದರೋ ತಾನು ಕವಿಯೇ ಆಗಿರಬೇಕು.

ಶಬ್ದಚಿತ್ರಗಳು

ಶ್ರೀ ಜೆ. ವಾಮನಭಟ್, ಬಿ ಎ ಇವರು ಕರ್ನಾಟಕ ಬಂಧುವಿನಲ್ಲಿ ಹೀಗೆ ಬರೆದಿರುವರು. "ಮಳೆಯ ಹನಿಗಳಿಗೆ ಸೂರ್ಯನ ಕಿರಣಗಳ ಸಂಪರ್ಕವಾಗಿ ಕಾಮನ ಬಿಲ್ಲು ಆಕಾಶದಲ್ಲಿ ತೋರುವಂತೆ ಕಾವ್ಯದ ವಸ್ತುವಿಗೂ ಕವಿಯ ಪ್ರತಿಭೆಗೂ ಕೂಡಿಕೆಯಾಗಿ ಸಾಹಿತ್ಯದಲ್ಲಿ ಶಬ್ದಚಿತ್ರಗಳು ಕಂಡುಬರುತ್ತವೆ. ಅವುಗಳು ಕಾಮನಬಿಲ್ಲಿನಂತೆ ಕ್ಷಣಿಕವಾಗಿದ್ದರೂ, ಆಬಾಲವೃದ್ಧರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ಉಳಿಯುವಂತಹವುಗಳಾಗಿವೆ. ನದಿಯ ತೀರದಲ್ಲಿ ತಿರುಗಾಡುವಾಗ, ತೋಟಗಳ ಬದಿಯಲ್ಲಿ ವಿಹರಿಸುತ್ತಿರುವಾಗ, ಹೂದೋಟದಲ್ಲಿ ವಿಶ್ರಮಿಸುವಾಗ ಸಾಹಿತ್ಯದ ಶಬ್ದಚಿತ್ರಗಳು ಸ್ಮೃತಿಪಥಕ್ಕೆ ಬಂದೊಡನೆಯೆ, ನಾವು ಸಂತೋಷಪಡುವೆವು. ಚೆಲುವಿನ ವಸ್ತುವು ಶಾಶ್ವತವಾದ ಆನಂದವೆಂದು ರಸಿಕರು ಅನ್ನುವುದುಂಟು. ಆದರೆ ಚೆಲುವು ಅಳಿಯುವುದಿಲ್ಲ, ಕಡೆಯ ವರೆಗೆ ಉಳಿಯುತ್ತದೆ. ಚೆಲುವೆಂಬುದು ವಸ್ತುವಿನಲ್ಲಿಲ್ಲ. ನಮ್ಮ ಕಣ್ಣಿನ ಬೆಳಕು ವಸ್ತುವಿನೊಡನೆ ಸೇರಿ ಚೆಲುವೆಂಬುದು ಮನಃಕಲ್ಪನೆಯಾಗಿ ಉಂಟಾಗುತ್ತದೆ. ಆದುದರಿಂದಲೇ ವಸ್ತುವು ಅಳಿದರೂ ಚೆಲುವು ಉಳಿಯುತ್ತದೆ. ಅಂದರೆ, ಜಗತ್ತು ನಶ್ವರವಾಗಿದೆ. ಮನುಷ್ಯನ ಕಲ್ಪನೆಯು ಶಾಶ್ವತವಾಗಿದೆ.

ಚೆಲುವೆಂಬುದು ವಸ್ತುವಿನಲ್ಲಿಲ್ಲ, ಅದು ಮನಸ್ಸಿನ ಕಲ್ಪನೆಯಾಗಿದೆ. ವಸ್ತುವನ್ನೂ ಚೆಲುವನ್ನೂ ನಿರೂಪಿಸುವ ಶಬ್ದವೂ ಮನಸ್ಸಿನ ಕಲ್ಪನೆಯು. ಸೂರ್ಯ ಚಂದ್ರ, ದನ, ಕುರಿ, ಮೊದಲಾದ ಶಬ್ದಗಳು ಮನಸ್ಸಿನ ಕಲ್ಪನೆಗಳಾಗಿಯೇ ಶಾಶ್ವತವಾಗಿವೆ ಎಂದು ಪೂರ್ವಿಕರು ಅನ್ನುವುದುಂಟು. ಆದುದರಿಂದಲೇ ಜಗತ್ತಿಗೆ ಪ್ರಳಯವಾದರೂ, ಈಶ್ವರನು ಹೊಸ ಸೃಷ್ಟಿಯ ಕಾಲದಲ್ಲಿ ಗತಕಲ್ಪದ ವೇದದ ಶಬ್ದಚಿತ್ರಗಳನ್ನು ಸ್ಮರಿಸಿ ಸೂರ್ಯಾದಿಗಳನ್ನು ಸೃಷ್ಟಿಸುವನೆಂದು ಹೇಳುವ ವಾಡಿಕೆಯಿದೆ. ಮನಸ್ಸಿನ ಕಲ್ಪನೆಗೆ ಚೆಲುವಿದ್ದರೆ, ಅದು ಶಬ್ದಚಿತ್ರವಾಗುತ್ತದೆ. ಶಬ್ದಚಿತ್ರವಾದುದು ಶಾಶ್ವತವಾಗಿ ಉಳಿಯುತ್ತದೆ, ಇಲ್ಲದಿದ್ದುದು ನಶ್ವರವಾಗಿ ಅಳಿಯುತ್ತದೆ.

ಕಲ್ಪನೆಯನ್ನು ಮಾಡುವಂತಹ ದೈವಶಕ್ತಿಯು ಮನುಷ್ಯನಿಗೆ ಇರುವುದರಿಂದಲೇ ಜಗತ್ತೂ ಇದೆ; ಜಗತ್ತಿನ ಸಾವಿರಾರು ಸಂತತಿಗಳಿವೆ. ಕಾಮನ ಬಿಲ್ಲು ನಿಜವಾಗಿಯೂ ಆಕಾಶದಲ್ಲಿಲ್ಲ. ಅದು ಆಕಾಶದಲ್ಲಿ ತೋರುವ ಬಣ್ಣ; ಆದರೆ ಆಕಾಶವೂ ಇಲ್ಲ; ಬಣ್ಣವೂ ಇಲ್ಲ. ಇವೆರಡರದೊಂದು ವಿಕಾರ ಸ್ವರೂಪವು. ಕಾಮನಬಿಲ್ಲು ಎಂಬುದು ಹೇಗೆ ಉತ್ಪನ್ನವಾಯಿತು? ಮನುಷ್ಯನ ಮನಸ್ಸಿನಿಂದ ಮನಸ್ಸಿಗೆ ಅದು ಬಿಲ್ಲಿನಂತೆ ಕಂಡು ಬಂತು. ಬಿಲ್ಲಿಗಿಂತ ಸುಂದರವಾಗುವುದರಿಂದ ಕಾಮನ ಬಿಲ್ಲೆಂದಿತು. ಕಾಮನದಿಲ್ಲ, ಇಲ್ಲ. ಕಾಮನು ಬಿಲ್ಲನ್ನು ಹಿಡಿದಿಲ್ಲ. ಬಿಲ್ಲಿಗೆ ಹೂವಿನ ಬಾಣ ಕೆಳಗೆ ಬೀಳುವುದಿಲ್ಲ. ಹಾಗಿದ್ದರೂ ಪರಟಾಪದ ತೂಗುಯ್ಯಾಲೆಯಲ್ಲಿ ಮನುಷ್ಯನು ತೂಗುವನು. ಕಾಮನಬಿಲ್ಲು ತೋರಿದೊಡನೆ ನವಿಲು ಸಹಚರಿಯೊಡನೆ ನಲಿಯುವುದು.

ಸುಂದರವಾದ ಶಬ್ದಚಿತ್ರಕ್ಕೆ ಕವಿತೆಯನ್ನುವೆವು. ಶಬ್ದಚಿತ್ರವು ಮನಸ್ಸಿನ ಕಲ್ಪನೆಯು. ಇದು ಜಗದ್ಬಿಂಬವಾಗಿದೆ. ಆದುದರಿಂದ ಶಾಶ್ವತವು ಜಗತ್ತೆಂಬುದೂ ಕಲ್ಪನೆಯಾಗಿದೆ. ಜಗತ್ತು ಇದೆ ಎಂದೆನ್ನುವವನು ಜಗತ್ತಿನ ಲಯಗೈಯ್ಯುವುದಿಲ್ಲ. ಅಂತೂ ಕಲ್ಪನೆಯಿಂದಲೆ ಜಗತ್ತು ಇದ್ದ ಜಗತ್ತಿನ ವಿಷಯ. ಆಲೋಚಿಸಿ ಹೋಗಿ ಜಗತ್ತು ಇಲ್ಲವೆಂದ. ನಿರ್ಧಾರವಾದಿ "ಜಗನ್ಮಿಥ್ಯಾ" ಎಂಬ ಮನ ಕಲ್ಪನೆಯನ್ನು ಚಿತ್ರಿಸಿದ ಶಂಕರಾಚಾರ್ಯರು ಶ್ರೇಷ್ಠವಾದ ಕವಿತೆಯನ್ನು ರಚಿಸಿದವರೆಂದು ಹೇಳಬಹುದು. ಜಗತ್ತು ಮನಸ್ಸಿನ ಕಲ್ಪನೆ, ಆದ್ದರಿಂದದು ಸುಳ್ಳು. ಇಲ್ಲ ಆದರೊಂದು ಚೆಲುವು. ಆದೀಗ ಶ್ರೇಷ್ಠವಾದ ಕವಿತೆಯು.

"ಕವಿ ಕಂಡದ್ದು ರವಿ ಕಾಣನ" ಎಂಬುದು ಲೋಕದ ನಾಣ್ಣುಡಿ. ನಾವು ಕಂಡ ನಾವು ಅನುಭವಿಸಿದ ವಿಷಯನ್ನು ಒಪ್ಪಿಸಿದೋ? ಅದೇ ವಿಷಯವು ರಮಗೂ [illegible] ಕವಿಗಳು [illegible] ವರು. ಕನಕಾಚಲ' ಕನಕವೆಂದರೆ ಸೋದಿ ಬಣ್ಣವು ಅಚಲವೆಂದರೆ ಕೇಳ ಬಣ್ಣವು. ಆದರೆ ಕನಕಾಚಲವೆಂದರೆ, ಕೇವಲ ಶಬ್ದಚಿತ್ರವು. ಕನಕಾಚಲವೆಂಬುದು ಕವಿಯ ಕಲ್ಪನೆ, ಜಗತ್ತೆಂಬುದು ಸಂಸಾರಿಯ ಭ್ರಮೆ, ಕಾಮನಬಿಲ್ಲೆಂಬುದು ರಸಿಕನ ಊಹೆಯಾಗಿದ್ದರೂ ಅವುಗಳೆಲ್ಲವೂ ಶಬ್ದಬ್ರಹ್ಮನಲ್ಲಿ ಸೇರಿ, ಚಿತ್ರಗಳಾಗಿ ಪರಿವರ್ತಿಸಲ್ಪಟ್ಟು ಕಲ್ಪದಿಂದ ಕಲ್ಪಕ್ಕೆ ಉಳಿದು ಬರುತ್ತವೆ. ಶಬ್ದಚಿತ್ರಗಳು ಉಳಿಯುವುದರಿಂದಲೇ ಸೃಷ್ಟಿಯು [illegible] ಪೂರ್ವಕಲ್ಪದ ಪ್ರಳಯದ ನಂತರ ಹುಟ್ಟುತ್ತಿದೆ. ಆದುದರಿಂದ, ಸುಂದರವಾದ ಶಬ್ದಚಿತ್ರವೇ ಕವಿತೆಯನ್ನು [illegible] ಮನಸ್ಸಿನ ಸುಂದರವಾದ ಕಲ್ಪನೆಯು ಕವಿತೆಯ ಜೀವಾಳವೆನ್ನುವರು.

ಫ್ರಾನ್ಸ್ ಮತ್ತು ಹಿಂದೂದೇಶಗಳೊಳಗಣ ಸಾಂಸ್ಕೃತಿಕ ಸಂಬಂಧ

ಡಾ|| ಕಾಳಿದಾಸ ನಾಗರೆಂಬವರು ಒಂದು ಶೋಧನಾತ್ಮಕ ಲೇಖನವನ್ನು ಬರೆದು ಹಿಂದೂ ದೇಶ ಮತ್ತು ಫ್ರಾನ್ಸ್‌ಗಳ ಸಾಂಸ್ಕೃತಿಕ ಸಂಬಂಧವು ಬಹು ಪ್ರಾಚೀನ ಕಾಲದಿಂದಲೂ ಇತ್ತೆಂಬುದನ್ನು ಚೆನ್ನಾಗಿ ಪ್ರತಿಪಾದಿಸಿರುವರು. ೧೬೮೭ರಲ್ಲಿ ಲಾಲ್‌ಬೇರ್ ಎಂಬ ಫ್ರೆಂಚ್ ಮುಖಂಡನೊಬ್ಬನು ಸಯಾಮಿನಿಂದ ಯೂರೋಪಿಗೆ ಜ್ಯೋತಿಷ್ಯ ಗಣಿತವನ್ನೊಯ್ದಿದ್ದನು. ಅವನೊಯ್ದ ಕೆಲ ಕೆಲವು ಕೋಷ್ಟಕಗಳು ಅಲ್ಲಿ ಬಹುಕಾಲದ ತನಕ ಕುತೂಹಲವನ್ನು ಮಾಡುತ್ತಿದ್ದುವು.

ಇಂಗ್ಲಿಷ್ ಪತ್ರಿಕೆಗಳು.

ಕಾಸ್ಸಿನಿ ಎಂಬ ಆ ಕಾಲದ ಪ್ರಸಿದ್ಧ ಜ್ಯೋತಿಷಿಯೊಬ್ಬನು ಅವುಗಳನ್ನು ಗುಣಿಸಿ, ವಿವರಿಸಿ ಹೇಳಿ ಫ್ರೆಂಚರನ್ನು ಬೆರಗುಗೊಳಿಸಿದನು. ೧೭೬೯ರಲ್ಲಿ ಲೆಜೆಂಟೀಲ್ ಎಂಬ ಫ್ರೆಂಚ್ ಗಣಿತಜ್ಞನೊಬ್ಬನು ಹಿಂದೂದೇಶಕ್ಕೆ ಬಂದು ಇಲ್ಲಿ ಜ್ಯೋತಿಷ್ಯವನ್ನು ಅಭ್ಯಸಿಸಿ, ೧೭೭೨ರಲ್ಲಿ ಸ್ವದೇಶಕ್ಕೆ ಮರಳಿ ಹೋಗಿ, ಹಿಂದೂಗಳ ಅದ್ಭುತಕರ ಗಣಿತ ಜ್ಞಾನವನ್ನು ಅಲ್ಲಿಯವರಿಗೆ ತಿಳಿಯಪಡಿಸಿದನು. ೧೮೦೩ರಲ್ಲಿ ಹಿಂದೂ ದೇಶದ ಕೆಲವು ಅಮೂಲ್ಯ ಸಂಸ್ಕೃತ ಗ್ರಂಥಗಳು ಫ್ರೆಂಚ್ ಭಾಷೆಯಲ್ಲಿ ಪರಿವರ್ತಿತವಾದುವು. ಫ್ರಾನ್ಸಿನಲ್ಲಿ ಮೊದಲು ಹಿಂದೂದೇಶದ ಪೂರ್ವಕಾಲೀನ ಪ್ರಸಿದ್ಧ ಭಾಷೆಗಳ ಬಗ್ಗೆ ಶಿಕ್ಷಣಾಲಯಗಳೂ ಬಿರುದುಗಳೂ ಸೃಷ್ಟಿಗೊಂಡುವು.

India and the World

ಈ ಕಾಲದ 'ಜಾತಿ'ಯ ಅರ್ಥವೇನು?

ಹಿಂದೂದೇಶದ ಹಲವು ಸಮಾಜಗಳನ್ನು ಪರಿಶೀಲಿಸಿ ನೋಡಿದರೆ ಪ್ರಥಮತಃ ದೃಗ್ಗೋಚರವಾಗುತ್ತಿರುವುದು ಇಲ್ಲಿಯ ನಾನಾ ಜಾತಿಗಳು. ಸೂಕ್ಷ್ಮವಾಗಿ ಶೋಧಿಸಿದರೆ, ಈ 'ಜಾತಿ'ಗಳೆಂಬುವು ಪ್ರಾಚೀನ ಜಾತಿಗಳ ನೆರಳುಗಳಾಗಿರುವುದು ಕಂಡುಬರುವುದು. ಅದನ್ನೀಗ ಪುನಃ ವಿವರಿಸಬೇಕಾಗಿದೆ. 'ಜಾತಿ' ಎಂಬುದರ ಅರ್ಥವು ಕೆಟ್ಟು, ಅದು ಪ್ರಕೃತ ಸ್ಥಿತಿಗೆ ಬರಲು ಕಾರಣವೇನು? ಮೇಲುಜಾತಿಯ ಹಿಂದೂಗಳು ಕೆಲಕೆಲ ಹಕ್ಕು ಬಾಧ್ಯತೆಗಳಿಗಾಗಿ ಕಾದಾಡುತ್ತ ತಮ್ಮ ಯೋಗ್ಯತೆಯನ್ನು ಸ್ವಾರ್ಥ ಸಾಧನೆಯಲ್ಲಿ ಮರೆಯಲಾರಂಭಿಸಿದರು. ವ್ಯಕ್ತಿಗಳಿಗನುಸಾರವಾಗಿ ವಿಭಾಗಿಸಲ್ಪಟ್ಟ ಜಾತಿಗಳು ಹೋಗಿ, ಜನನ ಮಾತ್ರದಿಂದ ಜಾತಿಯ ನಿರ್ಣಯವಾಗತೊಡಗಿತು. ಈಗೀಗ ಕ್ರಾಂತಿಯ ಲಕ್ಷಣಗಳು ಕಾಣುತ್ತಿವೆ. ಫ್ರಾನ್ಸಿನ ಮಹಾ ಕ್ರಾಂತಿಯ ಲಕ್ಷಣಗಳು ಕಾಣುತ್ತಿವೆ. ಫ್ರಾನ್ಸಿನ ಮಹಾಕ್ರಾಂತಿಯಂತಹ ಕ್ರಾಂತಿಯು ಹಿಂದೂ ಸಮಾಜದಲ್ಲಿಯೂ ತಲೆದೋರುವುದೋ ಎಂಬ ಸಂದೇಹವು ತಲೆಯೆತ್ತಿರುವುದು. ಅದನ್ನು ತಡೆಯುವುದಕ್ಕೂ ಚಿಕಿತ್ಸೆ ನಡೆಸುವುದಕ್ಕೂ ಮೇಲ್ಜಾತಿಯ ಹಿಂದೂಗಳೇ ಸಮರ್ಥರು. ಅವರು ತಮ್ಮ ಅಸ್ಪೃಶ್ಯ ಬಾಂಧವರನ್ನು ಕರುಣೆಯಿಂದಲೂ ಮಮತೆಯಿಂದಲೂ ಕೈಗೊಟ್ಟು ಬಳಿಗೆ ಸೆಳೆದುಕೊಂಡರೆ ಅವರ ಹೃದಯದಿಂದ ಅಂಜಿಕೆಯನ್ನೂ ಸಂದೇಹವನ್ನೂ ಹೋಗಲಾಡಿಸಿ ತಮ್ಮ ಹಕ್ಕುಗಳ ಹಟವನ್ನು ಬಿಟ್ಟುಕೊಟ್ಟು ಅವರವರ ಹಕ್ಕುಗಳನ್ನು ಅವರವರಿಗೆ ಕೊಟ್ಟರೆ, ಸ್ವಸಮಾಜದೊಳಗಿನ ಕುಂದುಕೊರತೆಗಳನ್ನು ತಿದ್ದಿದರೆ—ಅದುವೇ ಚಿಕಿತ್ಸೆ. [illegible] ಜನರು ದೇವಾಲಯಗಳ ಮುಂದೆ ಸತ್ಯಾಗ್ರಹವನ್ನೇಕೆ ಕೈಕೊಳ್ಳುವರು?—ಅವರನ್ನು ಮೇಲ್ಜಾತಿ ಹಿಂದೂಗಳು ಈ ತನಕ ದೂರವಿರಿಸಿ ದೇವರ ಬಾಗಿಲನ್ನು ಮುಚ್ಚಿದ್ದರಿಂದ ಅವರು ಉದ್ರೇಕಗೊಂಡಿರುವರು. ದೇವಾಲಯಕ್ಕೆ ಯಾವ ಕರದ ಸಹಾಯವನ್ನು ನೀಡಲು ಹಿಂಜರಿಯದ ಕೀಳು ಜಾತಿಯವರನ್ನು ದೇವಾಲಯಗಳೊಳಗೆ ಪ್ರವೇಶಿಸಬಿಡದೆ ಇರುವುದು ಅನ್ಯಾಯ. ಅವರು ಸತ್ಯಾಗ್ರಹ ಮಾಡಿ ಪ್ರವೇಶ ಪಡೆದರೆ ಅನ್ಯಾಯವೇನು? [illegible] ಹಿಂದೂಗಳು ಸ್ವೀಕರಿಸಲೇ ಬೇಕಾಗಿದೆ. [illegible] ಜನನದಿಂದ ನಿರ್ಣಯಿಸದೆ [illegible] ವ್ಯಕ್ತಿ [illegible] ಗುಣದಿಂದ [illegible]. [illegible] ಮಹಾತ್ಮಾ ಗಾಂಧಿಯವರ [illegible] ಅದರಂತೆ [illegible] ವ್ಯಕ್ತಿಗಳ [illegible] ಸನ್ಯಾಸವನ್ನು ಸ್ವೀಕರಿಸುವ [illegible] ಬ್ರಾಹ್ಮಣರಿದ್ದರಷ್ಟೆ? [illegible] ಜಗತ್ತನ್ನೇ ಬೆಳಗಿದೆ! ಮೇಲ್ಜಾತಿ ಹಿಂದೂಗಳು ಪೂರ್ವಕಾಲದಂತೆ ಈಗಲೂ ಯೋಗ್ಯತೆ ಇದ್ದವರನ್ನು ಮಾನಿಸಲು ಸಿದ್ಧರಾಗಿಲ್ಲವಾದರೆ ಹಿಂದೂಗಳ ಅಧಃಪತನಕ್ಕೆ ಕಟ್ಟಕಡೆಯ [illegible] ಯವಿಲ್ಲ.

Prabhuddha Bharatha.

ಅಫಘಾನಿಸ್ಥಾನದಿಂದ ಹಿಂದೂದೇಶಕ್ಕೆ ಅಪಾಯ

ಹಲವು ಆಂಗ್ಲೇಯರ ಅಭಿಪ್ರಾಯದಲ್ಲಿ ಅಫಘಾನಿಸ್ಥಾನದಿಂದ ಹಿಂದೂದೇಶಕ್ಕೆ ಅಪಾಯವು ತಪ್ಪಿದ್ದಲ್ಲವೆಂದಿದೆ. ಆದರೆ ಇದಕ್ಕೆ ಆಧಾರವೇನು?—೧೯೧೯ರಲ್ಲಿ ಅಮಾನುಲ್ಲರು ಶಸ್ತ್ರವೆತ್ತಿದುದು—ಅದು ಮಹಾಯುದ್ಧದ ಜ್ವರದ ಕೊನೆಯ ಅವತಾರವಾಯಿತು. ಅದರ ದುಷ್ಫಲವನ್ನು ಕಂಡ ಅಫಘಾನಿಗಳು—ಅವರ ಮುಂದಿನ ಅರಸರು ಯಾರೂ ಇನ್ನು ಶಸ್ತ್ರವನ್ನೆತ್ತುವಂತಿಲ್ಲ. ೧೯೦೪ರಲ್ಲಿ ಗಡಿಪ್ರಾಂತ್ಯದ ಮೂಲನಿವಾಸಿಗಳು ದಂಗೆಯೆದ್ದಾಗ ಅಫಘಾನಿಸ್ಥಾನದವರೂ ಆ ದಂಗೆಯನ್ನು ನಿಲ್ಲಿಸಲು ಯತ್ನಿಸಿರುವರೆಂದು ಸರಕಾರದ ದಾಖಲೆಯೇ ಇದೆ. ೧೯೩೩ರಲ್ಲಿ ಖೋಸ್ಟದಲ್ಲಿ ಅಫಘಾನರು ದಂಗೆಯೆದ್ದಾಗ, ಇಂಡಿಯಾ ಸರಕಾರವು ಆ ದಂಗೆಯನ್ನಡಗಿಸುವಲ್ಲಿ ಸಹಾಯವಮಾಡಿತೆಂಬುದಕ್ಕೆ ಅಫಘಾನ ಸರಕಾರವು ಕೃತಜ್ಞನಾಗಿದೆ. ಅಫಘಾನಿಸ್ಥಾನದಲ್ಲಿರುವ ಸೈನ್ಯವೀಗ ೪೦,೦೦೦. ಇದರಿಂದೇನೋ ವಿಶೇಷ ಭಯವು ಯಾರಿಗೂ ಇರದು. ಸ್ವಿಜರ್ಲೆಂಡಿನಿಂದ ಫ್ರಾನ್ಸಿಗೆ ಅಪಾಯವಿರುವುದೆನ್ನುವುದು ಎಷ್ಟು ಹುಚ್ಚುತನವೋ ಅಷ್ಟೇ ಅಫಘಾನ್—ಇಂಡಿಯದ ಪ್ರಶ್ನೆಯೂ ಆಗಿದೆ.

"Asiatic Review"

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾದುಹಿತ ಸಮೇತ

ಋಗ್ವೇದೀ ಸಂಧ್ಯಾವಂದನೆ

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ, ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ,

ಬೆಲೆ ಆಣೆ 3.

(30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರ

ಆಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀವಾಮೃತವನ್ನು ಸೇವಿಸಿ

ಆರೋಗ್ಯಲಾಭವನ್ನು ಹೊಂದಿರಿ.

ನಿಮ್ಮಲ್ಲಿ ಚೈತನ್ಯವಿಲ್ಲವೋ, ಅಸುಖಿಯಾಗಿದ್ದೀರೋ, ದೇಹವು ಕಂಪಿಸುತ್ತಿದೆಯೋ, ನಿರಾಶಾಸ್ಥಿತಿಯಲ್ಲಿ, ದುಃಖದಲ್ಲಿರುವಿರೋ—ಹಾಗಿದ್ದರೆ ನಿಮಗೆ ಪರಿಣಾಮಕಾರಿಯಾಗುವ ಒಳ್ಳೆಯ ಟೋನಿಕ್ ಬೇಕು. ಪಂಡಿತ ಡಿ ಗೋಪಾಲಾಚಾರ್ಲುರವರ ಪೂರ್ಣ ಆರೋಗ್ಯದಾಯಕವಾದ ಜೀವಾಮೃತವನ್ನು ಸೇವಿಸಿರಿ ನಿಮ್ಮ ಕೆಮಿಸ್ಟರಿಂದ ಒಂದು ಬಾಟ್ಲಿಯನ್ನು ಪಡೆಯಿರಿ ಅನುಪಾನಪತ್ರದಂತೆ ಅದನ್ನು ಸೇವಿಸಿ ಆಶ್ಚರ್ಯಕರ ರೀತಿಯಿಂದ ಕಾಂತಿಯೂ ಆರೋಗ್ಯವೂ ಲಭಿಸುವುದನ್ನು ಕಾಣಿರಿ ಒಂದು ಡೋಜು ಕುಡಿದಾಗಲೇ ನಿಮಗದರ ಮಹತ್ವವು ತಿಳಿದುಬರುವುದು. ಜೀವಾಮೃತವು ಬಲವನ್ನು ಹೆಚ್ಚಿಸುತ್ತದೆ ರಕ್ತವನ್ನು ಹೆಚ್ಚಿಸುತ್ತದೆ ನರಯೋಗಗಳ ಅಣುಗಳನ್ನು ಪೋಷಿಸುತ್ತದೆ ಜೀವನದ ಆನಂದವೇ ಹಸ್ತಗತವಾಗುತ್ತದೆ ವಯಸ್ಸು, ಸ್ತ್ರೀಪುರುಷಭೇದ, ಕಾಲಗಳ ಭೇದಾಭೇದವೇ ಇಲ್ಲ

ಎಲ್ಲ ಕೆಮಿಸ್ಟರಲ್ಲಿಯೂ ಎರಡು-ಸೈಜುಗಳಲ್ಲಿ ಮಾರಲ್ಪಡುತ್ತದೆ.

ತಯಾರಿಸುವವರು ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು —ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಚಾಕುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕಾಲರೆಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!
ಕ್ರಯ ಶಿಶೆ 1ಕ್ಕೆ ರೂ 1—0—0

ಗುಹ್ಯರೋಗ ನಿವಾರಿಣೀ ತೈಲ
Anti-Veneraol Oil
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ. ಕುಟುಂಬ ಪಾರಂಪರ್ಯದ ವ ತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು

8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ 3—8—0

ಕೆ. ವಿ. ಕೃಷ್ಣನ್,
ಕಲ್ಪಾಯಿ, ಮಲಬಾರ್,
ಅಥವಾ
ಬಾಲ್ ಸಿ. ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು

ರೈಲುಬಂಡಿಗಳ ಸಮಯ

ಗಾಡಿಗಳು.	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಿಗ್ಗೆ 9 50	ಸಂಜೆ 4 20
ಮಿಕ್ಸೆಡ್	,, 5 55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 2 45	ಮ. 12 40
ಶಟಲ್	ಸಂಜೆ 5 25	ಬೆಳಿಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ. 8 25	ಮ. 1-20
ಕಾಸರಗೋಡು ಪೆಸೆಂಜರು	ಸಂಜೆ 8 20	ಸಂಜೆ 6-15

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು



ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ -
The Scientific Gold Bangles Co , Ltd ,
Head Office -43, Byragimatam Street,
Post Box No 203, Madras.

ಕಿರ್ಲೋಸ್ಕರ ಕಿಫಾಯತ್ ರಹತ್

ಸಮಯವನ್ನೂ ಕೆಲಸವನ್ನೂ ಉಳಿಸುತ್ತದೆ.



ಸಣ್ಣ ದೊಡ್ಡ ಭೂಮ್ಯಾಲಕರು ಇದನ್ನು ಉಳಲಿಕ್ಕೂ ನೀರು ಒದಗಿಸಿಕೊಳ್ಳಲಿಕ್ಕೂ ಅತ್ಯುಪಯುಕ್ತವೆಂದು ಹೊಗಳಿರುವರು.

60 ಅಡಿ ಆಳವುಳ್ಳ ಬಾವಿಗೂ ಆಗುತ್ತದೆ

ಹೆಚ್ಚಿನ ವಿವರಗಳಿಗೆ ಈ ಕೆಳಗಿನವರಿಗೆ ಬರೆಯಿರಿ.

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ, ಸತಾರಾ.

ಡಿಸ್ಟ್ರಿಬ್ಯೂಟರರು—ಪೆರ್ರಿ ಎಂಡ್ ಕೋ, ಲಿಮಿಟೆಡ್, ಮದ್ರಾಸು.

ಕುಷ್ಠ ರೋಗ ಮತ್ತು ಫರಂಗಿ ರೋಗ

ಇತರ ಎಷ್ಟು ದೀರ್ಘಕಾಲದ ರೋಗವೇ ಆಗಿರಲಿ ಯಾವ ಕಾರಣವೇ ಇರಲಿ ನೀವು ಮದ್ದು ಮಾಡಿ ಮಾಡಿ ದಣಿದಿರಿ ನಿಮ್ಮ ರೋಗಗಳನ್ನು ಇಂಜೆಕ್ಷನದಂತೆ ಶಾಶ್ವತವಾಗಿ 4 ವಾರಗಳಲ್ಲಿ ಗುಣಪಡಿಸಲಾಗುತ್ತದೆ ಪೂರ್ಣ ಗುಣ ಗೇರಂಟಿ,

ವಿವರಕ್ಕೆ ಬರೆಯಿರಿ.

Kamala Works,
Panchpota Bengal S. B.

C. P S.

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ.



ಹೊಸತಾಗಿ ಆಮದಾದುದು ದೊರೆಯುವ ಇತರ ಕ್ಯಾಮರಗಳಿಗಿಂತ ಬಾಳಿಕೆ ಬರುವಂಥದು ಮತ್ತು ಉತ್ತಮವಾದುದು ಫೋಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ. ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್, ೪ ಫಿಲ್ಮ್ ಎಕ್ಸ್‌ಪೋಜರ್ಸ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಆವಶ್ಯಕವಾದ ರಸಾಯನಿಕ ವಸ್ತುಗಳು, ಫೋಟೋ ತೆಗೆಯುವ ವಿಧಾನ, ಶಿಕ್ಷಣಕೊಡುವ ಸಾಹಿತ್ಯ—ಇವು ಉಚಿತವಾಗಿ ಕಳುಹಿಸಲಾಗುತ್ತದೆ, ಬಲವಾದ ಲೆನ್ಸ್ ಬೆಲೆ ಸಾಧಾರಣವಾದುದು ರೂ. [illegible], ಉತ್ತಮವಾದುದು [illegible] ಮಡಚುವ ಕ್ಯಾಮರಾ ರೂ. [illegible], ಉತ್ತಮವಾದ್ದು ರೂ. [illegible] ಸ್ಪೆಶಲ್ ರೂ. ೧೧, ಹೆಚ್ಚಿಗೆ ಫಿಲ್ಮ್ ಬೇಕಾದರೆ ಡಜನ್ ೧ಕ್ಕೆ [illegible] ಆಣೆ. ಎನ್‌ಲಾರ್ಜ್‌ಮೆಂಟಿನ ಸಾಧನಾ ಸಾಮಗ್ರಿ ೧ ಶೀಸೆಗೆ ೪ ಆಣೆ, ಫಿಕ್ಸಿಂಗ್ ಸಾಲ್ಟ್ ೧ ಡಬ್ಬಿಕ್ಕೆ [illegible] ಆಣೆ, ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ, ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ.

ಭಾರತ ಯೂನಿಯನ್ ಟ್ರೇಡಿಂಗ್ ಕಂ.
ಪೋಸ್ಟ್‌ಬಾಕ್ಸ್ ನಂಬ್ರ [illegible] (ಎಸ್. ಎ) ಕಲ್ಕತ್ತ

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

ಪದಕವನ್ನು ಎಬ್ಬಿಸಿ ನುಂಗಿದನು! ಕಳ್ಳನಿಗೆ ಸೆರೆಯಾಯಿತು!

ಕಳ್ಳನೊಡನೆ ಸ್ತ್ರೀಯ ಹೋರಾಟ.

ನೆಲ್ಲೂರು, ಜುಲೈ ತಾ. ೧೧

ತುಲಸಿ ಅಮ್ಮ ಎಂಬವಳು ರಾತ್ರಿ ಅವಳ ಮನೆಯ ಚಾವಡಿಯಲ್ಲಿ ತನ್ನ ಸಣ್ಣ ಮಗುವೊಂದರೊಡನೆ ನಿದ್ರಿಸುತ್ತಿದ್ದಳು. ಅವಳಿಗೆ ಥಕ್ಕನೆ ಎಚ್ಚರವಾಗಿ ನೋಡಲು, ಮನೆಯೊಳಗೆ ಹಲವರಿದ್ದಂತೆ ಭಾಸವಾಯಿತು. ಬೊಬ್ಬಿಟ್ಟಳು. ಎಲ್ಲರೂ ಓಡುತ್ತಿರುವಾಗ ಒಬ್ಬನನ್ನು ಅವಳು ಬಿಗಿಯಾಗಿ ಹಿಡಿದು ಆರ್ಭಟಿಸಿದಳು. ನೆರೆಹೊರೆಯವರು ಓಡಿ ಬಂದು ಆತನನ್ನು ಸೆರೆ ಹಿಡಿದರು. ಉಳಿದವರು ತಪ್ಪಿಸಿಕೊಂಡರು ೭ ಮಂದಿಯನ್ನು ಈ ಸಂಬಂಧವಾಗಿ ಬಂಧಿಸಿರುವರು.

ಮಾರ್ವಾಡಿಯು ತಪ್ಪಿಸಿಕೊಂಡ.

ಮದ್ರಾಸು, ಜುಲೈ ತಾ. ೧೧

ರಜಪುತಾನದ ರೋಲ್ ಗ್ರಾಮದಲ್ಲಿದ್ದ ಪ್ರಸಾರಂ ತಿವಾರಿ ಎಂಬ ೩೩ ವರ್ಷ ಪ್ರಾಯದ ಒಬ್ಬ ಮಾರ್ವಾಡಿಯು ಮದ್ರಾಸಿನ ಜವಳಿ ಬಜಾರಿನಲ್ಲಿ ಭಂಗಾರದ ಅಡವಿನ ಮೇಲೆ ರೂಪಾಯಿಗಳನ್ನು ಕೊಡುವ ವ್ಯಾಪಾರದಲ್ಲಿದ್ದನು ಒಟ್ಟು ೨೫೦೦೦ ರೂಪಾಯಿಗಳಷ್ಟು ಬೆಲೆಬಾಳುವ ನಗಗಳು ವಶವಾಗುತ್ತಲೇ ಪೊನ್ನೆ ಅವುಗಳನ್ನು ಇನ್ನೊಬ್ಬನಲ್ಲಿ ೧೫,೦೦೦ ರೂಪಾಯಿಗಳಿಗೆ ಅಡವಿಟ್ಟು ಹಣದೊಡನೆ ಪರಾರಿಯಾಗಿರುವನು ಪೋಲೀಸರು ಹುಡುಕುತ್ತಿರುವರು.

ಶ್ರೀಮತಿ ಕಮಲಾ ನಹರುಗಳು ಬರ್ಲಿನಿಗೆ ಹೋದರು.

ಶ್ರೀಮತಿ ಕಮಲಾ ನೆಹರುರವರು ಕುಮಾರಿ ಇಂದಿರಾಳನ್ನು ಕೂಡಿಕೊಂಡು ಪ್ರೇಗ್ ಮಾರ್ಗವಾಗಿ ಬರ್ಲಿನಿಗೆ ಹೋದರು. ಕಮಲಾ ನೆಹರುರವರು ಹಸನ್ಮುಖಿಗಳಾಗಿಯೇ ಇರುತ್ತಾರೆ ಶ್ರೀಮತಿಯವರು ಒಳಗಾಗಬೇಕಾಗಿರುವ ಶಸ್ತ್ರ ಚಿಕಿತ್ಸೆಯಲ್ಲಿ ಅವರು ಪೂರ್ಣವಾಗ ಯಶವನ್ನು ಹೊಂದುವುದು ನಿಜವೆಂದು ಪ್ರೊಫೆಸರ್ ಸ್ಟೋಮೇನ್ ಎಂಬ ಡಾಕ್ಟರರು ಆಶ್ವಾಸನೆಯಿತ್ತಿರುವರು. ಈ ಓಪರೇಶನಿನ ಸಂಬಂಧವಾದ ಕೆಲಸಗಳಿಗಾಗಿ ಡಾ। ಅಟಲರು ಬರ್ಲಿನಿಗೆ ಈ ಮೊದಲೇ ಹೋಗಿರುತ್ತಾರೆ ಪ್ರೊಫೆಸರ್ ಲೆನ್ನಿ ಮೊದಲಾದವರು ಕಮಲಾ ನೆಹರುರವರನ್ನು ಪ್ರೇಗ್ ಸ್ಟೇಶನಿನಲ್ಲಿ ಬೀಳ್ಕೊಟ್ಟರು ಪ್ರೊಫೆಸರ್ ಡಾ। ಅನ್ ವೆರಿಚ್ಚರ್‌ರವರು ಓಪರೇಶನ್ ಮಾಡುವರು. ಈ ವೈದ್ಯರು ಇಂತಹ ಅನೇಕ ಓಪರೇಶನ್‌ಗಳನ್ನು ಮಾಡಿ ಅನುಭವಿಕರಾದವರು. ಅಲ್ಲಿ ಸ್ವಸ್ಥರಾದೊಡನೆ ಶ್ರೀಮತಿಯವರು ಸ್ವಿಜರ್‌ಲೆಂಡಿಗೆ ತೆರಳುವರು

ಶಾರದಾ ಶಾಸನದನ್ವಯ ಶಿಕ್ಷೆ. ಹೆತ್ತವರು, ಮದುಮಗ ಮತ್ತು ಪುರೋಹಿತರಿಗೆ ದಂಡ

ಪುದುಚೇರಿ ಜುಲೈ, ೧೧,

ಫ್ರೆಂಚ್ ಪೇಟೆಯಲ್ಲಿ ರಾಮಚಂದ್ರ ಮೂರ್ತಿ ಎಂಬ ೨೨ ವರ್ಷ ಪ್ರಾಯದ ಯುವಕನಿಗೆ ೧೨ ವರ್ಷ ಪ್ರಾಯದ ಬಾಲಕಿಯನ್ನು ಕೊಟ್ಟು ಕಳೆದ ಫೆಬ್ರವರಿ ತಾ. ೨೮ರಲ್ಲಿ ಮದುವೆ ಮಾಡಿ ಕೊಟ್ಟುದಕ್ಕಾಗಿ ನಾಗಲಿಂಗಂ, ಸೊರಚಲಂಬ ಅಮ್ಮಾಳ್, ಡಿ. ವೆಂಕಟಾಚಲಂ ಎಂಬವರಿಗೆ ವಿವಿಧ ಶಿಕ್ಷೆಯಾಗಿದೆ. ವರನಿಗೂ ಶಿಕ್ಷೆಯಾಗಿದೆ ನಾಗಲಿಂಗಂ ಮತ್ತು ಸೊರಚಲಂಬ ಅಮ್ಮಾಳ್‌ರವರು ವಧು ತಯಾರಮ್ಮಾಳ ಹೆತ್ತವರು. ವೆಂಕಟಾಚಲಂರವರು ಪುರೋಹಿತರು ತಂದೆಗೆ ೨೦೦ ರೂಪಾಯಿ ಜುಲುಮಾನೆ, ಅವನ ಹೆಂಡತಿಗೆ ರೂಪಾಯಿ ೫೦ ವರನಿಗೆ ರೂ ೭೫. ವೆಂಕಟಾಚಲಂರವರಿಗೆ ರೂ. ೫೦ ಈ ಪ್ರಕಾರವಾಗಿ ಜುಲುಮಾನೆ ವಿಧಿಸಿದ್ದಾರೆ.

ಉಗಿಬಂಡಿಯ ಬ್ಯೂಲರ್‌ಗಳಿಗಾಗಿ ಜರ್ಮನಿಗೆ ಹಿಂದೀಯ ಕಂಟ್ರಾಕ್ಟು.

ಲಾಹೋರಿನ ನೋರ್ತ್‌ವೆಸ್ಟರ್ನ್ ರೈಲ್ವೇ ಕಂಪೆನಿಯವರು ಜರ್ಮನಿಯ ಹೆನ್ಸ್‌ಚೆಡ್ ಎಂಡ್ ಸನ್ ಕಸೇಲ್ ರವರಿಗೊಂದು ಕಂಟ್ರಾಕ್ಟ್ ಕೊಟ್ಟು ಅಲ್ಲಿಂದ ೩೩ ಉಗಿಬಂಡಿಯ ಬ್ಯೋಲರುಗಳನ್ನು ತರಿಸುವಂತೇರ್ಪಾಡುಮಾಡಿರುವರು. ಸೌತ್ ಆಫ್ರಿಕನ್ ಸ್ಟೇಟ್ ರೈಲ್ವೆಗಳಿಗಾಗಿ ಇದೇ ಕಂಪೆನಿಯು ಆರು ಎಕ್ಸ್‌ಪ್ರೆಸ್ ಉಗಿಬಂಡಿಗಳನ್ನು ರಚಿಸುತ್ತದೆ ಸೌತ್ ಆಫ್ರಿಕಾವು ಈ ಕಂಪೆನಿಯಿಂದ ೮೦ ರೈಲ್ವೇ ಎಂಜಿನುಗಳನ್ನೂ ೧೬೦ ಬ್ಯೊಲರುಗಳನ್ನೂ ಕಳೆದ ಹತ್ತು ವರ್ಷಗಳಲ್ಲಿ ತರಿಸಿಕೊಂಡಿದೆ

ಪದಕವನ್ನು ಎಬ್ಬಿಸಿ ನುಂಗಿದನು ಕಳ್ಳನಿಗೆ ಸೆರೆಯಾಯಿತು.

ನೆಲ್ಲೂರು, ಜುಲೈ ೧೧

ಕಳೆದ ಮಾರ್ಚಿ ೩೧ರಲ್ಲಿ ರಂಗನಾಥ ಸ್ವಾಮಿ ಉತ್ಸವಕ್ಕೆಂದು ಒಬ್ಬಳು ಸ್ತ್ರೀಯು ಬಜಾರಿಗೆ ಹೋದಾಗ ಮದ್ರಾಸಿನ ದೊರೆಸ್ವಾಮಿ ಎಂಬವನೊಬ್ಬನು ಆ ಸ್ತ್ರೀಯೊಡನಿದ್ದ ಐದು ವರ್ಷ ಪ್ರಾಯದ ಬಾಲಕಿಯ ಸೊಂಟದಲ್ಲಿದ್ದ ನೂಲನ್ನು ಕತ್ತರಿಸಿ ಆ ನೂಲಿನಲ್ಲಿದ್ದ ಭಂಗಾರದ ಪದಕವೊಂದನ್ನು ಎಬ್ಬಿಸಿದನು ಇದನ್ನು ಕಂಡ ಒಬ್ಬ ಅಂಗಡಿಗಾರನು ಇವನ ಹಿಂದೆಯೇ ಓಡಿ ಇವನನ್ನು ಹಿಡಿದನು ವಿಚಾರಿಸಲಾಗಿ, ತಾನು ಪದಕವನ್ನು ತೆಗೆದಿಲ್ಲವೆಂದು ಹೇಳಿದನು. ಆದರೆ ಸುತ್ತುಮುತ್ತು ಕೂಡಿದವರು ಅವರ ಮಾತನ್ನು ನಂಬಲ್ಲಾರದಾದರು ದೊರೆಸ್ವಾಮಿಯನ್ನು ಎಕ್ಸ್‌ರೇಯಲ್ಲಿ ಪರೀಕ್ಷಿಸಲು ಉದರಕೋಶದಲ್ಲಿ ಪದಕವು ಕಂಡುಬಂತು. ಸೆಶ್ಶನ್ಸ್ ಜಡ್ಜರು ಅಪಾದಿತನಿಗೆ ೨೭ ತಿಂಗಳುಗಳ ಕಠಿಣ ಶಿಕ್ಷೆಯನ್ನು ವಿಧಿಸಿ ನಾಲ್ಕು ವರ್ಷಗಳ ತನಕ ಅವನು ತನ್ನ ವಾಸವನ್ನು ಪೋಲೀಸರಿಗೆ ತಿಳಿಸುತ್ತಿರಬೇಕೆಂದು ತೀರ್ಮಾನಿಸಿದರು.

ಡಕಾಯಿತನನ್ನು ನೋಡುವುದಕ್ಕಾಗಿ ೫೦೦೦ ಜನರು

ಚಿತ್ತೂರು, ಜುಲೈ ತಾ ೧೦,

ಒಟ್ಟು ೧೦ ಕೊಲೆಗಳನ್ನು ಮಾಡಿ, ತನ್ನ ಸಂಗಾತಿಗಳ ಸಹಾಯದಿಂದ ಊರಲ್ಲೆಲ್ಲಾ ಡಕಾಯಿತಿ ನಡೆಸಿ, ಬಹು ಕೌಶಲ್ಯದಿಂದ ತಲೆ ತಪ್ಪಿಸಿಕೊಳ್ಳುತ್ತಿದ್ದ ಅಂಬೋತುಲ ಗಿಡ್ಡಾಡು ಎಂಬವನನ್ನು ಸೆರೆಹಿಡಿಯಲಾಗಿದೆ. ಕಾಡಿನಲ್ಲೆಲ್ಲ ಪೋಲೀಸರು ಹುಡುಕಾಡಿ ಸೋತರು ಅವನ ಗುಂಪಿಗೆ ಸೇರಿದ ಮೂವರನ್ನು ಆಲಲ್ಲಿ ಸೆರೆಹಿಡಿದರು ಕೊನೆಗೆ [illegible] ಎಂಬಲ್ಲಿ ಗಿಡ್ಡಾಡುವು ತನ್ನ ಮಿತ್ರನೊಬ್ಬನ ಮನೆಯಲ್ಲಿ ಊಟಕ್ಕಿರುವನೆಂದು ತಿಳಿದು ಬಂತು ಪೋಲೀಸ್ ಇನ್ಸ್‌ಪೆಕ್ಟರರು ಪೋಲೀಸರ ಒಂದು ದಳವನ್ನು ತೆಗೆದುಕೊಂಡು ಹೋಗಿ ಆ ಮನೆಯನ್ನು ಮುತ್ತಿದರ ಗಿಡ್ಡಾಡುವು ಒಂದು ಕಿಟಕಿಯ ಮೂಲಕ ಹೊರಗೆ ಹಾರುವವನಿದ್ದನು ಅಷ್ಟರಲ್ಲಿ ಸಬ್ ಇನ್ಸ್‌ಪೆಕ್ಟರು ತನ್ನ ಪಿಸ್ತೂಲಿನಿಂದ ಅವನನ್ನು [illegible] ಬೀಳಿಸಿದರು. ಅವನನ್ನು ಸ್ಟೇಶನಿಗೆ ಕೊಂಡುಹೋದರು. ಈ ಪ್ರಖ್ಯಾತ ಡಕಾಯಿತನನ್ನು ನೋಡುವುದಕ್ಕಾಗಿ ೫೦೦೦ ಜನರು ನೆರೆದು ಬಂದಿದ್ದರು.

ಪೌರ್ವಾತ್ಯ ದೇಶಗಳ ಪರಿಸ್ಥಿತಿ ಕೆಮಲ್ ಪಾಶಾರರ ಭೇಟಿ!

ಕೈರೋ ಜುಲೈ ೫

ಈಜಿಪ್ಟಿನ ಒಂದು ವಾರ್ತಾ ಪತ್ರಿಕೆಯ ಪ್ರತಿನಿಧಿಯೊಬ್ಬರು ಕೆಮಲ್ ಪಾಶಾರವರನ್ನು ಸಂದರ್ಶಿಸಿ "ಬೇಗನೆ ಯುದ್ಧವು ಸಂಭವಿಸಬಹುದೋ" ಎಂದು ಪ್ರಶ್ನಿಸಿದಾಗ, ಪಾಶಾರವರು ಸ್ವಲ್ಪ ಯೋಚಿಸಿ, "ನಾವು ಮುಂದಿನ ವಿಷಯದ ಕುರಿತು ಮಾತನಾಡಲಾಗದು ಯುದ್ಧದ ಅಪಾಯವು ಪ್ರಕೃತದಲ್ಲೇ ಇದೆ" ಎಂದರು. "ಕೆಲವು ತಿಂಗಳುಗಳ ಹಿಂದಿದ್ದುದಕ್ಕಿಂತ ಈಗ ಯುರೋಪಿನ ಪರಿಸ್ಥಿತಿಯು ಹಾಳಾಗಿದೆಯೇ ಇಲ್ಲವೋ" ಎಂದು ಕೇಳಿದಾಗ "ಈಗ ಪೂರ್ಣ ದುಃಸ್ಥಿತಿಯೊದಗಿದೆ. ಯುದ್ಧವನ್ನು ಮುಂಗಾಣಲಾರದ ಕೆಲವು ಅವಿಶ್ವಾಸಿ ಮುಖಂಡರು ಬೇಕೆಂದು ಕಲಹಪ್ರಿಯರಾಗಿ ಮುಂದೊತ್ತಿರುವರು. ಅಪಾರ್ಥ ಮಾಡಿಯೂ, ರಾಷ್ಟ್ರೀಯತ್ವದ ದುರುಪಯೋಗ ಮಾಡಿಯೂ ಸಂಪ್ರದಾಯಕ್ಕೆ ತಿಲಾಂಜಲಿಯನ್ನಿತ್ತು ಅವರು ರಾಷ್ಟ್ರ ವಿಘಾತುಕಿಗಳಾಗಿರುವರು. ಈಗ ಜನತೆಯು ತನ್ನ ಧ್ವನಿಯನ್ನೆತ್ತಬೇಕಾಗಿದೆ. ಗುಣಾಢ್ಯರೂ, ನೀತಿವಂತರೂ ಆದ ಮುಂದಾಳುಗಳ ಹೆಗಲ ಮೇಲೆ ತಂತಮ್ಮ ರಾಷ್ಟ್ರಗಳ ಭಾರವನ್ನಿಡುವ ಪ್ರಸಂಗವು ಬಂದಿದೆ" ಎಂದರು.

ಮುಂಬಾಯಿಯ ಮೇಯರರಾದ ನರಿಮನ್ನರ ಮೇಲಿನ ಆರೋಪಣೆಯನ್ನು ಸರಕಾರವು ಹಿಂತೆಗೆಯಿತು.

ಮುಂಬಾಯಿಯ ಚರ್ಚ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರಾದ ಶ್ರೀ। ಟಿ ಎನ್ ದಿ ಕಂದಲವಾಲರಿಗೆ ಸರಕಾರೀ ವಕೀಲರಾದ ಶ್ರೀ ಜೆ ಸಿ ವಾಕರರವರು ಒಂದು ಮನವಿಮಾಡಿ ಮುಂಬಾಯಿ ಮೇಯರರಾದ ಶ್ರೀ। ಕೆ ಎಫ್ ನರಿಮಾನರ ಮೇಲೆ ಮೋಟರ್ ವಾಹನ ಶಾಸನದನ್ವಯ ಇರುವ ಮೊಕದ್ದಮೆಯನ್ನು ಹಿಂತೆಗೆಯಬೇಕೆಂದು ಸರಕಾರವು ತನಗೆ ತಿಳಿಸಿದೆಯಾಗಿಯೂ, ಹಾಗೆ ಮಾಡುವುದರಿಂದಲೇ ನ್ಯಾಯ ವಿಧಾಯಕ ಸಭೆಯಲ್ಲಿ ಈ ಸಂಬಂಧವಾದ ಚರ್ಚೆಯನ್ನು ನಿಷ್ಪಕ್ಷಪಾತವಾಗಿ ಚರ್ಚಿಸಬಹುದೆಂದೂ ಹೇಳಿರುವರು. ಮೆಜಿಸ್ಟ್ರೇಟರು ನರಿಮನರನ್ನು ಬಿಡುಗಡೆ ಮಾಡಿ ಈ ಮೊಕದ್ದಮೆ [illegible] ಹೈಕೋರ್ಟಿಗೆ ಮಾಡಿದ ಸೂಚನೆಯನ್ನು ಹಿಂತೆಗೆಯುವೆನೆಂದು ತಿಳಿಸಿದರು.

ಪಂಜಾಬ್ ಮುಸ್ಲಿಮರ ಗುಣನಡತೆಗಾಗಿ ಮಸೀದಿಯ ದಾನ.

ಸರಕಾರದ ನಿರ್ಣಯ

ಲಾಹೋರು ಜುಲೈ ೧೪

ಕಳೆದ [illegible] ಸಿಕ್ಖರಿಗೂ ಮುಸ್ಲಿಮರಿಗೂ ಪಂಜಾಬಿನಲ್ಲಿ ಜಗಳವೆದ್ದಾಗ ಪಂಜಾಬಿನ ಮುಸ್ಲಿಮರು [illegible] ಶಾಂತಿಯುತವಾಗಿ ವರ್ತಿಸಿಕೊಂಡುದಕ್ಕಾಗಿಯೂ, [illegible] ಮಸೀದಿ [illegible] ಕೆಡವಿದ್ದುದಕ್ಕಾಗಿ [illegible] ಸರಕಾರವು ಮುಸ್ಲಿಮರಿಗೆ ಒಂದು ಸಳದ ನಿವೇಶನವನ್ನು ಕೊಡಬೇಕೆಂದು ತೀರ್ಮಾನಿಸಿರುತ್ತದೆ ಈ ಮಸೀದಿಯು ಸರಕಾರದ ವಶದಲ್ಲಿ ಇದ್ದಿತು ಮುಸ್ಲಿಮರು ಅದನ್ನು [illegible] ಇದ್ದರು ಈಗ ಅದರಲ್ಲಿರುವ [illegible] ಬೇರೆ ಕಡೆ ಸ್ಥಳಾಂತರಿಸಿ, ಅದನ್ನು ಮುಸ್ಲಿಮರಿಗೆ ಸರಕಾರವು ಕೊಡುವುದು

ದಿ ನೆಪ್ಚುನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ನೆಪ್ಚುನ್ ಧರ್ಮಾರ್ಥ ಗಡಿಯಾರದೊಂದಿಗೆ ನಿಮ್ಮ ಜೀವವಿಮೆ ಮಾಡಿರಿ.

ಬಡವರಿಗೂ ಮಧ್ಯಮ ಸ್ಥಿತಿಯ ಜನರಿಗೂ ನೆಪ್ಚುನ್ ಎಂಬುದು ಪ್ರಮುಖ ವಿಮಾ ಕಂಪೆನಿ.

ದಿನಕ್ಕೆ ಒಂದಾಣೆ ಅಥವಾ ಹೆಚ್ಚನ್ನು ಶೇಖರಿಸಿ ಒಂದು ವರ್ಷದಿಂದ 50 ವರ್ಷ ಪ್ರಾಯದ ವರೆಗಿನವರು ಪೋಲಿಸಿ ಪಡೆಯುವಂತೆ ಸೂತ್ರವನ್ನು ಮಾಡಲಾಗಿದೆ.

ನಾಣ್ಯಗಳನ್ನು ಅದರ ತೂತಿನೊಳಗೆ ಹಾಕಿದ ವಿನಹ ಕೆಲಸ ಮಾಡಲಾರದ ಒಂದು ಪೆಟ್ಟಿಗೆಯನ್ನು ಪ್ರತಿಯೊಬ್ಬ ಪೋಲಿಸಿದಾರನಿಗೆ ಧರ್ಮಾರ್ಥವಾಗಿ ಕೊಡಲಾಗುವುದು. ಸುಮಾರು 10,000 ಮಂದಿ ಈ ಧರ್ಮಾರ್ಥವಾದ ಗಡಿಯಾರವನ್ನು ಪಡೆದಿರುವರು.

ಉದಾರ ಶರ್ತಗಳ ಮೇಲೆ ಏಜಂಟರು ಬೇಕಾಗಿದ್ದಾರೆ. ಪ್ರೊಸ್ಪೆಕ್ಟಸ್ ಮತ್ತು ಏಜನ್ಸಿಗಳಿಗಾಗಿ ಮುಂಬಾಯಿಯ ಹೆಡ್ ಆಫೀಸಿಗೆ ಬರೆಯಿರಿ.

ದಿ ನೆಪ್ಚುನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಹೆಡ್ ಆಫೀಸು, 17, ಎಸ್ಪ್ಲನೇಡ್ ಸರ್ಕಲ್, ಫೋರ್ಟ್ ಮುಂಬಾಯಿ.

ಅಥವಾ, ಸ್ಥಳೀಕ ಪ್ರತಿನಿಧಿ ಶ್ರೀ। ಎಚ್. ಕೆ. ತಿಂಗಳಾಯ, ಹಂಪ್ಗೆ ಬಜಾರ್, ಮಂಗಳೂರು. ಇವರಿಗೆ ಬರೆಯಿರಿ.

ಸಂಪಾದಕರ ಟಿಪ್ಪಣಿ ಉಪಪತ್ರಿಗೆ.

[ಪತ್ರಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆಕೊಡುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತ ದೃಷ್ಟಿಯಿಂದಿದ್ದು ಉತ್ತಮ ಶೈಲಿಯಲ್ಲಿರತಕ್ಕದ್ದು. ಸಂ.]

ಹರಿಜನ ಸೇವೆಗೆ ನೆರವಾಗುವಿರಾ?

ಸಮಸ್ತ ಕರ್ನಾಟಕಸ್ಥರಲ್ಲಿ ಬಿನ್ನಹ—

ಮಹನೀಯರೇ, ಮಹಾತ್ಮಾಜೀಯವರು ಕರ್ನಾಟಕದಲ್ಲಿ ಸಂಚರಿಸಿ ಹೋದಂದಿನಿಂದ ನಮ್ಮಲ್ಲಿ ಹರಿಜನ ಸೇವೆಯ ಚಟುವಟಿಕೆಗಳು ಹೆಚ್ಚು ಪ್ರಮಾಣದಿಂದ ನಡೆದಿವೆಯಷ್ಟೆ. ಈ ಕಾರ್ಯದಲ್ಲಿ ಇನ್ನೂ ಹೆಚ್ಚು ಕಾರ್ಯಗಳು ಅಚ್ಚುಕಟ್ಟಾಗಿಯೂ, ಸುವ್ಯವಸ್ಥೆಯಿಂದಲೂ, ಸುಸಂಘಟಿತವಾಗಿಯೂ ಮುಂದುವರಿಯಬೇಕಾದರೆ ಜನತೆಯು ತನ್ನ ಸಹಕಾರದ ಕೈಯನ್ನು ಇನ್ನೂ ಮುಂದೆ ಚಾಚಬೇಕಲ್ಲವೇ? ಹರಿಜನ ಸೇವಕ ಸಂಘವು ಕರ್ನಾಟಕದಲ್ಲಿ ಅಸ್ತಿತ್ವದಲ್ಲಿ ಬಂದು ಎರಡು ವರ್ಷಗಳಾಗಿದ್ದರೂ ಕಳೆದ ಒಂದು ವರ್ಷದಲ್ಲಿ ಅತ್ಯುತ್ತಮ ಕೆಲಸ ಮಾಡಿದೆಯೆನ್ನಬಹುದು. ಅದರ ವರದಿಯು ಇನ್ನು ಸ್ವಲ್ಪ ದಿವಸಗಳಲ್ಲಿ ತಮ್ಮ ಕೈಸೇರುವುದು.

ಇನ್ನು ಮುಂದಿನ ವರ್ಷದ ಕಾರ್ಯಕಲಾಪಗಳ ಯೋಜನೆ, ಆಯವ್ಯಯದ ಅಂದಾಜುಪತ್ರಿಕೆಗಳನ್ನು ಸಿದ್ಧಮಾಡಬೇಕಾಗಿದೆ. ಅದಕ್ಕಾಗಿ ಮುಖ್ಯವಾಗಿ ಮಹಾತ್ಮರಿಗೆ ಧನನಿಧಿಯನ್ನು ಅರ್ಪಿಸಿದ ಸ್ಥಳದವರು ತಮ್ಮ ಹರಿಜನ ಕಾರ್ಯವೇನಾದರೂ ನಡೆಸಬೇಕಾದರೆ ಈ ಆಯವ್ಯಯ ಪತ್ರಿಕೆಯ ಸಿದ್ಧತೆಯಲ್ಲಿ ಆ ಆ ಜಿಲ್ಲೆಯ ಸೆಕ್ರೆಟರಿಯವರೊಂದಿಗೆ ಸಹಕರಿಸಬೇಡವೆ? ಮಹಾತ್ಮರು ಸಂಚರಿಸದ ಸ್ಥಳದವರೂ ಕೂಡ ಈ ಕಾರ್ಯದಲ್ಲಿ ತಮ್ಮ ವಿಚಾರ ವಿನಿಮಯ ಮಾಡುವುದು ಅತ್ಯವಶ್ಯವು. ಕರ್ನಾಟಕದ ಪ್ರತಿಯೊಂದು ಜಿಲ್ಲೆಗೊಂದರಂತೆ ೭ ಜಿಲ್ಲಾ ಕಮಿಟಿಗಳು ಸ್ಥಾಪಿತವಾಗಿ ಕಾರ್ಯ ನಡೆಸಿವೆ. ಅನೇಕ ತಾಲೂಕು ಕಮಿಟಿಗಳು ಸ್ಥಾಪಿತವಾಗಿದ್ದರೂ ಕೆಲವು ಮಾತ್ರ ಚಟುವಟಿಕೆಗಳನ್ನು ತೋರಿಸುತ್ತಲಿವೆ. ಇದು ವಿಷಾದಕರವು. ಈ ಎಲ್ಲರೂ ತಮ್ಮ ತಮ್ಮ ಯೋಜನೆಗಳನ್ನು ಆಯಾಯ ಜಿಲ್ಲಾ ಕಮಿಟಿಗಳ ಮುಂದೆ ಮಂಡಿಸಿ ಹಣದ ಪರಿಸ್ಥಿತಿ—ಅನುಕೂಲತೆಗಳನ್ನೂ ಲಕ್ಷ್ಯದಲ್ಲಿ ಹಂಚು/ ಪಾಸುಮಾಡಿಸಿಕೊಳ್ಳಬೇಕು. ಈ ಆಯವ್ಯಯ ಪತ್ರಿಕೆಯು ೧ನೇ ಅಕ್ಟೋಬರದಿಂದ ೧ನೇ ಅಕ್ಟೋಬರ ವರೆಗೆ ಮಾತ್ರ ಇರಬೇಕು. ಈ ವಿಷಯದಲ್ಲಿ ಸರ್ವರೂ ಜಾಗೃತರಾಗಿ ವರ್ತಿಸುವರೆಂದು ನಮ್ಮ ನಂಬುಗೆ.

ಜಿಲ್ಲಾ ಕಮಿಟಿಯಿಂದ ಪಾಸಾದ ಅಂದಾಜು ಪತ್ರಿಕೆಯು ಪ್ರಾಂತಿಕ ಬೋರ್ಡಿನಿಂದ ಶಿಫಾರಸಾಗಿ ಇಲ್ಲಿಯ ಮಧ್ಯವರ್ತಿ ಮಂಡಲದಿಂದ ಮಂಜೂರಾಗಬೇಕಾಗುತ್ತದೆ. ಅದಕ್ಕೆಲ್ಲ ಅವಧಿಯು ಬೇಕು. ಕಾರಣ, ಸರ್ವ ಹರಿಜನ ಹಿತೈಷಿಗಳು ಮುಂದೆಬಂದು ಜಿಲ್ಲಾ ಸೆಕ್ರೆಟರಿಯವರಿಗೆ ನೆರವಾಗಬೇಕಾಗಿ ನಮ್ಮ ವಿನಂತಿ. ಹರಿಜನ ಸೇವಕ ಸಂಘದ ಜಿಲ್ಲಾ ಸೆಕ್ರೆಟರಿಯವರು ತಮ್ಮ ಜಿಲ್ಲೆಯ ಕಾರ್ಯಕರ್ತರೊಡನೆ ವಿಚಾರಿಸಿ ಈ ಮೊದಲೇ ಸರ್ಕ್ಯುಲರ ಮುಖಾಂತರ ತಿಳಿಸಿದ ಪ್ರಕಾರ, ಈ ತಿಂಗಳ ಕೊನೆಯ ಒಳಗಾಗಿ ತಮ್ಮ ಯೋಜನೆ ಅಂದಾಜು ಪತ್ರಿಕೆಗಳನ್ನು ಪ್ರಾಂತಿಕ ಆಫೀಸಿಗೆ ಕಳುಹಿಸಬೇಕಾಗಿ ವಿನಂತಿ—

ತಮ್ಮ

ಪಾಟೀಲ ಕಲ್ಲನ ಗೌಡರು,
ಸೆಕ್ರೆಟರಿ, ಕ. ಪ್ರಾ. ಹ. ಸೇ. ಸಂಘ, ಹುಬ್ಬಳ್ಳಿ.

ಮುಂಬಾಯಿ ಕನ್ನಡಿಗರಲ್ಲಿ ವಿನಂತಿ

ಮೂಲ್ಕಿಯಲ್ಲಿ ಹಿಂದೆ ವೈದ್ಯ ಉದ್ಯೋಗಸ್ಥರಾಗಿದ್ದ ಶ್ರೀಮಾನ್ ಕರಂಡೆ ರಾಮರಾಯರು ೩೦ ವರ್ಷಗಳ ಮೊದಲು ಬಡರೋಗಿಗಳ ಒಂದು ಸಹಾಯಕ ನಿಧಿಯನ್ನು ಸ್ಥಾಪಿಸಿದರು. ಈ ವರೆಗೆ ಇದೊಂದು ಚಿಕ್ಕ ದವಾಖಾನೆಯಾಗಿದ್ದು, ಲೋಕಲ್‌ಬೋರ್ಡುಗಳ ಹಾಗೂ ಪುರಜನರ ಸಹಕಾರ ಸಹಾನುಭೂತಿಯಿಂದ ಸದ್ಯ ಒಳರೋಗಿಗಳಿಂದೊಡಗೂಡಿದ ಪಕ್ಕಾ ಆಸ್ಪತ್ರೆಯಾಗಿ ಪರಿಗಣಿಸಲ್ಪಟ್ಟಿದೆ. ಇಲ್ಲಿ ಬಿಗರ್ತಿಕರಿಗೆ ಆಹಾರವನ್ನು ಅಂದರೆ ಪಥ್ಯವನ್ನು ಕೊಡುವ ಏರ್ಪಾಡೂ ಇದೆ. ಬಡರೋಗಿಗಳ ಸಂಖ್ಯೆಯು ದಿನೇ ದಿನೇ ಏರುತ್ತ ಬರುವುದರಿಂದಲೂ, ನಾನಾ ವಿಧದ ರೋಗದಿಂದ ನರಳುವ ಅನಾಥರು ಬಂದು ಸೇರುವುದರಿಂದಲೂ ಈ ವಾರ್ಡುಗಳನ್ನು ವಿಸ್ತಾರಪಡಿಸುವ ಹಾಗೂ ಚಿಕ್ಕಿತ್ಸೆ ವೈದ್ಯಕೀಯ ಸಲಕರಣೆಗಳನ್ನೊದಗಿಸಿ ಕೊಡುವ ಆವಶ್ಯಕತೆಯಿದ್ದರೂ ಆರ್ಥಿಕ ಮುಗ್ಗಟ್ಟಿನ ದೆಸೆಯಿಂದಾಗಿ ಈ ಯೋಜನೆಯು ಇನ್ನೂ ಕೈಗೂಡದಿರುವುದು ಚಿಂತಾಜನಕವಾಗಿರುತ್ತದೆ.

ಈ ದುಃಸ್ಥಿತಿಯನ್ನು ನಿವಾರಿಸುವ ನಿಮಿತ್ತ ಸಂಸ್ಥೆಯ ಸಹಾಯಾರ್ಥವಾಗಿ 'ಸತ್ಯಹರಿಶ್ಚಂದ್ರ' ಎಂಬ ಧಾರ್ಮಿಕ ನಾಟಕವನ್ನು ಮುಂಬಾಯಿ ಕರ್ನಾಟಕ ನೂತನ ಸಂಗೀತ ಸಭೆಯವರು ಇದೇ ಬರುವ ಆಗೋಸ್ತು ತಿಂಗಳ ತಾ. ೧೩ನೇ ಮಂಗಳವಾರ ರಾತ್ರಿ ೯ ಘಂಟೆ ಗಕ್ಕೆ ಠಾಕ್ರದ್ವಾರದಲ್ಲಿರುವ ಭಾಂಗ್ವಾಡಿ ಥಿಯೇಟರಿನಲ್ಲಿ ಅಭಿನಯಿಸುವರು.

ಮುಲ್ಕಿಯ ಮುಂಬಾಯಿ ನಿವಾಸಿಗಳು.

Shiromani Narayanacharya

Choukhamba Benares City

THIS MAN
OUR CUSTOMER

ಶಾಸ್ತ್ರಗಳೇ ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ, ರಾಮಕೃಷ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಆರೋಗ್ಯಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ದೀರ್ಘವೃದ್ಧಿ ಸಂಪತ್ತು ಕೀರ್ತಿ ಇಷ್ಟಗಳೆಲ್ಲಾ ಆಗುವವು ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುತ್ತದೆ.

ಸಣ್ಣ ಆಷ್ಟೆ ಪ್ರಮಾಣದ ಕಂಠಿಸರ ೧ಕ್ಕೆ ಆಡೆ ೧೦ರಿಂದ ರೂ. ೨೫ರ ವರೆಗೆ ೧೦೮ ರುದ್ರಾಕ್ಷಿಗಳುಳ್ಳ ಸರ ೧ಕ್ಕೆ ಆಡೆ ೩ರಿಂದ ರೂ. ೨೫ರ ವರೆಗೆ, ಗೌರೀಶಂಕರ ರುದ್ರಾಕ್ಷಿ ೧ಕ್ಕೆ ರೂ. ೩ರಿಂದ ರೂ. ೫೦ರ ವರೆಗೆ ಮತ್ತು 3–4–5–6–7–8 ಮುಖಗಳ ಕಾಳು ೧ಕ್ಕೆ ಆಡೆ ೪ರಿಂದ ರೂಪಾಯಿ 10. ಮತ್ತು 9–10–11 ಮುಖಗಳುಳ್ಳ ಕಾಳು 1ಕ್ಕೆ ರೂ. 1ರಿಂದ 3ರ ವರೆಗೆ 12–13–14 ಮುಖದ ಕಾಳು 1ಕ್ಕೆ ರೂಪಾಯಿ ೪ರಿಂದ ೧೦೦ರ ವರೆಗೆ. ಸಣ್ಣ ರುದ್ರಾಕ್ಷೀ ಆದರೆ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಆದಕ್ಕಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು (ವಿವರಕ್ಕೆ ಕಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ ೧ ಆಣೆ ಸ್ಟಾಂಪು ಕಳುಹಿಸಿದರೆ ೩ ಇನಾಮುಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕಾಶಿ ಪಿತ್ರಂಬರ ಕಟಲಾಗಿನೊಡನೆ ೩ ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬನಾರಸ್ (ಕಾಶೀ)

BIRTH-CONTROL GOODS

Sale price. For men F Ca Regina 2/10/-doz Never p 3 doz 1/1/-. Paragoon Heavy 1 doz 1/10/-. For women (with directions) Soluq Rim Check Pessary 1/3/-, Bulb-Spray 3/6/-, Oral Medicine for 6 months 1/4/-. Pack ag Postage extra. 12½% rebate on orders of Rs 5/- & 25% on 10/-. The General Trading Co. 186, Manicktolla Street Calcutta

ಕುಷ್ಠರೋಗ ಮತ್ತು ವಾತರೋಗ ನೊಂದು ಕಂಗೆಟ್ಟು ಹೋಗಿರುವವರಿಗೆ

ಮೂಲಿಕೆಯ ಔಷಧಿಗಳಿಂದ ಆಶ್ಚರ್ಯಕರವಾಗಿ ಪೂರ್ಣ ಗುಣವಾಗುತ್ತದೆ. ಆದ್ಭುತಕರ ವಿವಾರಣೆ ಬರೆಯಿರಿ.
Yeshajalaya, Chandanpur
Khulna, Bengal (A. W.)



New Era Technical School.

Near Market Square, Udipi.

Commercial classes-approved by the Madras Government-New session opens in June.

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್
ಸಂತೆಕಟ್ಟೆ, ಉಡುಪಿ.
(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)
ಇಲ್ಲಿ ಟ್ಯಾಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ	3—15	4— 4
ಮುಸ್ಸಾಕಿ	4— 4	4—10
ಗುಜ್ಜು	4— 2	4— 6
ಊರ ಅಕ್ಕಲ್ ಬೆಳ್ತಿಗೆ	4— 0	4—12
ರಂಗೂನು ಬೆ. ಗೋ. ಗೆಕ್ಕೆ	6—10	7— 4
ಎಲ್ಲೂರು ಬೆ. ಮು. ಗೆಕ್ಕೆ	4— 4	4— 8
ಗೋದಿ ಗೋಣಿ ಗೆಕ್ಕೆ	10— 0	12— 8
ತೊಗರಿ ಗೋಣಿ ಗೆಕ್ಕೆ	10—8	11— 0
ಹುರುಳಿ ಗೋಣಿ ಗೆಕ್ಕೆ	7—12	7—14
ಕಡಲೆ ಗೋಣಿ ಗೆಕ್ಕೆ	8— 0	10— 8
ತೊಗರಿಬೇಳೆ ಗೋಣಿಗೆಕ್ಕೆ	10— 0	17— 0
ಉದ್ದು ಗೋಣಿ ಗೆಕ್ಕೆ	8— 0	8— 8
ಹೆಸರು ಗೋಣಿ ಗೆಕ್ಕೆ	9— 4	9—12
ಊರುಬೆಲ್ಲ ಖಂಡಿ ಗೆಕ್ಕೆ	35— 0	37— 8
ಉಪ್ಪು ಗೋಣಿ ಗೆಕ್ಕೆ	4—12	5— 2
ಕೊಬ್ರಿ ಖಂಡಿ ಗೆಕ್ಕೆ	48— 0	55— 0
ಕೊಬ್ರಿ ಹಿಂಡಿ ಖಂಡಿ ಗೆಕ್ಕೆ	20— 0	—
ಎಳ್ಳೆಣ್ಣೆ ಖಂಡಿ ಗೆಕ್ಕೆ	31— 4	82— 0
ಕೊಬ್ಬರಿ ಎಣ್ಣೆ ಮಣ ಗೆಕ್ಕೆ	3—15	4— 14
ಎಳ್ಳೆಣ್ಣೆ ಮಣ ಗೆಕ್ಕೆ	5— 2	6— 0
ಚಿಮಿಣಿಎಣ್ಣೆ ಪೆಟ್ಟಿಗೆ ಗೆಕ್ಕೆ	5— 8	5—12
ಮೋರಿಸ ಸಕ್ಕರೆ ಮ. ಗೆಕ್ಕೆ	3—12	3—13
ಮೆಣಸು	4—10	5— 0
ಸಾಸಿವೆ ಮುಡಿ ಗೆಕ್ಕೆ	5—12	6— 0
ಕಾಳುಮೆಣಸು ಖ. ಗೆಕ್ಕೆ	100— 0	110— 0
ಯೇಲಕ್ಕಿ ಮಣ ಗೆಕ್ಕೆ	23— 0	30— 0
ಗೇರುಬೀಜ ಮು. ಗೆಕ್ಕೆ	4— 4	4 — 6
ಕಬ್ಬಿಣ ಖಂಡಿ ಗೆಕ್ಕೆ	30— 0	39— 8
ತಾಂಬ್ರದ ತಗಡು ಮ. ಗೆಕ್ಕೆ	9— 0	9— 8
ತಾಂಬ್ರಪಾತ್ರಗಳು ಮ. ಗೆಕ್ಕೆ	11— 0	12— 0
ಹಿತ್ತಾಳೆ ಸೇರು ಗೆಕ್ಕೆ	14—12	15— 0
ಹಿತ್ತಾಳೆ ತಗಡು ಮ. ಗೆಕ್ಕೆ..	8— 12	9— 0
ಸತುವು ಗೆಕ್ಕೆ	22— 8	23— 0
ಹುಣಸೆ ಹುಳಿ ಖಂಡಿ ಗೆಕ್ಕೆ	20— 0	25— 8
ನೇಟಿವ್ ಕಾಫಿ ಖಂಡಿ ಗೆಕ್ಕೆ	170— 0	180— 0
ಪ್ಲಾಂಟೇರ ಕಾಫಿ ಖಂಡಿ ಗೆಕ್ಕೆ	220— 0	252— 0
ಮಡಿಕೇರಿ ಏಲಕ್ಕಿ ..	28— 0	26— 0
ಸಕಲೇಶಪುರ ಏಲಕ್ಕಿ	28— 0	38 — 0

LOOK SHARP! LOOK AHEAD

Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy; Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

Ladies are also admitted.

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to:—

D. R. Murdeshwar,
Dip. Econ, F. R. Econ, S. (Lond.)
Principal.
Ganapathy High School Street,
Mangalore.

Comfortable like an Aeroplane

Use our swadeshi Mosquitonet for health, Comfort and sound sleep; as if you are in an Aeroplane. Sample cutting free. More convenient if some advance sent with order.

L.	B	H	Price.	Best.
6 Ft.	3½ Ft.	3½ Ft.	Rs. 1/12	2/8
6 „	4 „	4 „	„ 2/4	3/-
6½ „	4½ „	4½ „	„ 2/8	3/8
7 „	5 „	5 „	„ 3/2	4/10
7½ „	6 „	6 „	„ 4/4	5/12

G. M. Sharma, Post Box F 6706
Calcutta

ಕನ್ನಡ ಪರಿ.

"ಐ–ಸರ್" ಎಂಬ ನೇತ್ರಭಾಸ್ಕರ—ಈ ಔಷಧವು ಕಣ್ಣಿನ, ದೃಷ್ಟಿಮಾಂದ್ಯ ಇತ್ಯಾದಿಯನ್ನು ತೀಕ್ಷ್ಣವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ ಶಸ್ತ್ರಕ್ರಿಯೆಯು ಅವಶ್ಯವಿಲ್ಲ. ಖಾತರಿ ಗುಣಕಾರಕ, ಗುಣವಾಗದಿದ್ದರೆ ಹಣ ವಾಪಸ್. ಕ್ರಯ ರೂ. 2.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ:—

Hary yasram, Panchpota, Bengal

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಆಷಾಢ ಬ. ೫ ಶನಿವಾರದಿಂದ ಆಷಾಢ ಬ. ೧೧ ಶುಕ್ರವಾರದ ವರೆಗಿನ ಪಂಚಾಂಗ (೧೯೩೫ನೇಯ ಜುಲೈ ಅಲ್ಲಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಳೆ ನಕ್ಷತ್ರ	ಹಬ್ಬ
20	ಶನಿ	೫	೪೫	ಪೂ. ಭಾ	೪೩	೪	
21	ರವಿ	೬	೩೯	ಉ. ಭಾದ್ರ	೩೯	೫	
22	ಸೋಮ	೭	೩೪	ರೇವತಿ	೩೫	೬	
23	ಮಂಗಳ	೮	೨೯	ಅಶ್ವಿನಿ	೩೨	೭	
24	ಬುಧ	೯	೨೫	ಭರಣಿ	೩೦	೮	
25	ಗುರು	೧೦	೨೨	ಕೃತ್ತಿಕಾ	೨೯	೯	
26	ಶುಕ್ರ	೧೧	೨೦	ರೋಹಿಣಿ	೨೯	೧೦	

ಯುದ್ಧ ಮತ್ತು ಎತಿಯೋಪಿಯಾ

ಇಟಲಿಯು ಎದುರಿರುವ ಸಂಕಷ್ಟಗಳು.

ಇಟಲಿ ಮತ್ತು ಎಬಿಸೀನಿಯಾಗಳೊಳಗೆ ಯುದ್ಧವು ನಡೆಯಲಿದೆಯೆಂಬ ವಾರ್ತೆಯು ಜಗತ್ತಿನಲ್ಲಿ ವಿದ್ಯುತ್ ಪ್ರವಾಹದಂತೆ ಹರಡಿ, ಈ ಯುದ್ಧವು ಪ್ರಪಂಚದ ನಾಶಕ್ಕೆ ಕಾರಣವಾಗುವುದೋ ಎಂಬ ಭಯವು ತಲೆದೋರಿದೆ ಮಿ| ಪೆಟ್ರಿಕ್‌ಬವರ್ ಎಂಬವರು ಎಬಿಸೀನಿಯಾದಿಂದ ಇತ್ತೀಚೆಗೆ ಹಿಂತೆರಳಿದವರು. ಅವರು ಎಬಿಸೀನಿಯಾದ ಸೈನ್ಯಶಕ್ತಿ ಆ ದೇಶವನ್ನು ಜಯಿಸುವ ಇಟಲಿಯ ಆಕಾಂಕ್ಷೆಯಲ್ಲಿ ಇಟಲಿಗಿರುವ ಪ್ರಯಾಸ- ಇವುಗಳನ್ನೆಲ್ಲ ಹೀಗೆ ತಿಳಿಸಿರುವರು.

ಎತಿಯೋಪಿಯಾವನ್ನು ಜಯಿಸುವುದೆಂದರೆ ಮಿಲಿಟರಿಗೆ ಸುಲಭ ಕೆಲಸವಾಗಿಲ್ಲ. ಈ ದೇಶವು 420,000 ಚದರ ಮೈಲುಗಳಷ್ಟು ವಿಸ್ತೀರ್ಣವಿದ್ದು, ಇಟಲಿ, ಫ್ರಾನ್ಸ್, ಮತ್ತು ಬ್ರಿಟನ್‌ಗಳನ್ನು ಒಟ್ಟುಗೂಡಿಸಿದರಾಗುವಷ್ಟು ವಿಸ್ತಾರವಾಗಿದೆ ಅಥವಾ ನ್ಯೂ ಸೌತ್‌ವೇಲ್ಸ್ ದೇಶದಷ್ಟು ವಿಸ್ತಾರವಾಗಿದೆ ಈ ದೇಶದ ಜನಗಣತಿಯು ಇನ್ನೂ ನಡೆದಿರುವುದಿಲ್ಲ ಆದರೂ 10 ಮಿಲಿಯ ಜನರಿರುವರೆಂದು ಅಂದಾಜು ಮಾಡಲಾಗಿದೆ 'Conquering Lion of Judah' ಎಂಬುದೇ ಇವರ ರಾಷ್ಟ್ರಧ್ವಜ ಸರಕಾರವು ಸಾಹಸಗೈದರೆ ಒಂದು ಮಿಲಿಯ ಜನರನ್ನಾದರೂ ರಣರಂಗಕ್ಕಿಳಿಸಬಹುದು, ಮಾತ್ರ, ರಾಸಸ್ ಪಕ್ಷದ ಮುಖಂಡರ ಬೆಂಬಲವು ಮಾತ್ರ ದೊರಕಬೇಕಾಗಿದೆ. ಇಷ್ಟರಲ್ಲೇ 700,000 ಜನರು ರಣರಂಗಕ್ಕಿಳಿಯಲು ಸಿದ್ಧರಾಗಿರುವರೆಂದು ತಿಳಿದುಬಂದಿದೆ

ಈ ಒಕ್ಟೋಬರದ ವರೆಗೆ ಯುದ್ಧವು ಸಂಘಟಿಸಿ ಬರದಂತೆ ತಂತ್ರ ಹೂಡಲಾಗುತ್ತಿದೆ ಅಷ್ಟರವರೆಗೆ ಯುದ್ಧವು ನಡೆಯುವುದು ಸಂಭವನೀಯವಲ್ಲ. ಜೂನ್ ಜುಲಾಯಿ ಮತ್ತು ಆಗೋಸ್ತು ತಿಂಗಳುಗಳಲ್ಲಿ ತಿಂಗಳೊಂದರ 20 ಅಂಗುಲ ಮಳೆಯು ಬಿದ್ದು ಅತಿವೃಷ್ಟಿಯುಂಟಾಗುತ್ತದೆ ಅಲ್ಲದೆ ಈ ಮಳೆಗಾಲಗಳಲ್ಲಿನ ರೋಗರುಜಿನೆಗಳನ್ನು ಅನುಭವಿಸಬೇಕಾಗಿದೆ ಹೀಗಿರುವುದರಿಂದ ಎತಿಯೋಪಿಯಾಕ್ಕೆ ಬರುವ ಯಾವ ಯೂರೋಪಿಯನ್ ಸೈನ್ಯವೂ ಹೇರಳ ಧೈರ್ಯ ಮಾಡಿ ದಾಳಿ ಮಾಡಿಕೊಂಡೇ ಬರಬೇಕಾಗುತ್ತದೆ ಇಟಲಿಯಾನರು ಹಾಗೆಯೇ ಈ ದೇಶಸ್ಥರಿಗಾದರೆ ಅಭ್ಯಾಸವಿರುವುದರಿಂದ ಅವರಿಗೆ ಕಷ್ಟವಾಗುವುದಿಲ್ಲ

ಸಪ್ಟಂಬರ ಒಕ್ಟೋಬರ ತಿಂಗಳುಗಳಲ್ಲಿ ಮಳೆಯು ನಿಂತೊಡನೆ ದಪ್ಪವಾದ ಹಿಮವು ಬೀಳುತ್ತದೆ ಹೊರಗಿನಿಂದ ಬರುವ ಸೈನ್ಯವು ಮರುಳುಗಾಡುಗಳನ್ನು ದಾಟಿಕೊಂಡು ಬರಬೇಕಾಗಿದೆ ನೀರನ್ನು ಎಲ್ಲಿ ಹೋದಾಗಲೂ ಒಯ್ಯಬೇಕಾಗುತ್ತದೆ. ಆದರೆ ವೈರಿಯು ನುಗ್ಗುವುದಾದರೆ ಇದೇ ಸುಸಂದರ್ಭ

ಮಧ್ಯೆ ಮಧ್ಯೆ ದೊಡ್ಡ ದೊಡ್ಡ ಕಾಡುಗಳಿವೆ. ಇವುಗಳಲ್ಲಿ ಮಾರ್ಗಗಳಿಲ್ಲ ಸೈನ್ಯಗಳು ಪ್ರತ್ಯೇಕ ಮಾರ್ಗಗಳನ್ನು ರಚಿಸಿಕೊಂಡೇ ಮುಂದೆ ಸಾಗಬೇಕಾಗುತ್ತದೆ ಲಾವಾ ಇರುವ ಪ್ರದೇಶಗಳೂ ಅಲ್ಲಲ್ಲಿವೆ. ದೊಡ್ಡ ದೊಡ್ಡ ಪರ್ವತಗಳಲ್ಲಿ ಈ ಲಾವದ ಕಲ್ಲು ದಿನ್ನೆಗಳು ಮೊನೆಯೆತ್ತಿ ನಿಂತಿವೆ. ಬಂಡೆಗಳು ಕೂಡಾ ಇವೆ ಈ ಪ್ರದೇಶಗಳನ್ನು ದಾಟುವುದು ದುರ್ಲಭ

ಎತಿಯೋಪಿಯಾದ ರಾಜಧಾನಿಯಾಗಿರುವ ಆದಿಸ್—ಅಬಾಬವನ್ನು ಸಮೀಪಿಸಿದ ಕೂಡಲೆ ಇಡೀ ಭೂಪ್ರದೇಶವು ಎತ್ತರ ಎತ್ತರಕ್ಕೆ ಹೋದಂತೆ ಕಂಡುಬರುತ್ತದೆ. ಹಲವು ಕಡೆಗಳಲ್ಲಿ ದೊಡ್ಡ ದೊಡ್ಡ ಮೋರಿಗಳಿವೆ ದೊಡ್ಡ

ಬಾಹ್ಯ ಪ್ರಪಂಚ ಪರಿಚಯ.

ದೊಡ್ಡ ಖನಿಗಳೂ ಇವೆ. ರಕ್ಷಣೆಹೊಂದಲೆತ್ನಿಸುವ ಸೈನ್ಯಗಳಿಗೆ ಪ್ರದೇಶಗಳಲ್ಲಡಗಿ ಕುಳಿತು ಯುದ್ಧ ಮಾಡಲು ಸುಲಭವಿದೆ, ಆದರೆ ಶತ್ರುಗಳಿಗೆ ಕಷ್ಟವೇ ಸರಿ

ಎದುರೆದುರು ನಿಂತು ಯುದ್ಧ ಮಾಡಲು ಸಾಧ್ಯವೇ ಇಲ್ಲ. ಒಂದು ವೇಳೆ ಯುದ್ಧ ಮಾಡಿದರೂ ಅದರಿಂದ ಪ್ರಯೋಜನವಾಗುವಂತಿಲ್ಲ. ಎತಿಯೋಪಿಯಾನರಿಗೆ ಈ ರೀತಿಯ ಯುದ್ಧಗಳನ್ನು ಮಾಡಿ ಹೆಚ್ಚಿನ ಅನುಭವವಿದೆ ಅವರ ಹಿರಿಯರು ಎಷ್ಟೋ ಸಲ ಯುದ್ಧಗಳನ್ನು ನಡೆಸಿ ವಿಜಯಿಗಳಾಗಿರುವರು ಯುದ್ಧದಲ್ಲಿ ಎತಿಯೋಪಿಯಾ ಜನಾಂಗದವರು ಜಾಣರು ಅವರು ಎಷ್ಟು ದಿನಗಳ ವರೆಗಾದರೂ ಯುದ್ಧ ಮಾಡುವರು ಎಷ್ಟು ದಿನಗಳ ವರೆಗಾದರೂ ಉಪವಾಸವಿರಲು ಶಕ್ತರು ಆದಿಸ್ ಅಬಾಬವು ಸಮುದ್ರಮಟ್ಟದಿಂದ 9000 ಅಡಿ ಎತ್ತರವಿದೆ

ಎತಿಯೋಪಿಯನರು ಕ್ಲೇಶ ಸಹಿಷ್ಣುಗಳು ಕುಶಲರು, ಧೈರ್ಯಶಾಲಿಗಳು, ಯುದ್ಧರಂಗದಲ್ಲಿ ಗಾಯಗೊಂಡವರನ್ನು ಗಾಡಿಗಳಲ್ಲಿ ಸಾಗಿಸಿ, ಅವರಿಗೆ ಚಿಕಿತ್ಸೆ ನಡೆಸುವುದಕ್ಕಾಗಿ ಒಂದು ವಾರವನ್ನು ತೆಗೆಯುವ ಕತೆಗಳೂ ಇವೆ

ಅವರು ನುಗ್ಗುವವರಲ್ಲ ಅವರು [illegible] ಯುದ್ಧಗಳು ನಡೆಯುವುದಿಲ್ಲವಾದರೂ, ಯುದ್ಧದ ಭಯವು ಇಲ್ಲವಾದರೂ ಜನರ ಸೊಂಟದಲ್ಲಿ ರೈಫಲ್‌ಗಳನ್ನು ಇಟ್ಟುಕೊಂಡೇ ಇರುವರು [illegible] ಗುಂಡುಗಳು ಬಹು ಅಗ್ಗವಾಗಿ ವಿಕ್ರಯಿಸಲ್ಪಡುತ್ತವೆ ಒಂದು ಶಿಲ್ಲಿಂಗಿಗೆ ಮೂರು ಗುಂಡುಗಳು ವಿಕ್ರಯಿಸಲ್ಪಡುತ್ತವೆ

ಪ್ರಕೃತದಲ್ಲಿ ಸಮ್ರಾಟನು ಲೋಂಗಳಲ್ಲಿ ಆಧುನಿಕ ಯುದ್ಧೋಪಕರಣಗಳನ್ನು ತರಿಸುತ್ತಿರುವನು ಮಾರ್ಗಗಳ ರಚನಾ ಕಾರ್ಯವನ್ನು ಹೆಚ್ಚು ಹೆಚ್ಚಾಗಿ ನಡೆಸುತ್ತಿದ್ದ ಸಮ್ರಾಟನು ಸದ್ಯಕ್ಕೆ ಆ ಕೆಲಸವನ್ನು ನಿಲ್ಲಿಸಿ ಅದಕ್ಕೆ ವೆಚ್ಚವಾಗುವ ಹಣವನ್ನು ಶಸ್ತ್ರಗಳನ್ನು ಪಡೆಯುವುದಕ್ಕಾಗಿ ವಿನಿಯೋಗಿಸುತ್ತಿರುವನು ಮಾರ್ಗಗಳು ಉತ್ತಮ ಸ್ಥಿತಿಯಲ್ಲಿದ್ದರೆ ವೈರಿಗಳಿಗೆ ಮುಂಸಾಗಲು ಸುಲಭ ಸಾಧ್ಯವಾಗುವುದೆಂದು ಅವುಗಳನ್ನು ರಚಿಸುವ ಕೆಲಸವೇ ನಡೆಯುವುದಿಲ್ಲ.

ಪ್ರಕೃತದಲ್ಲಿ ಎತಿಯೋಪಿಯಾನ್ ಸೈನ್ಯದಲ್ಲಿ 70,000 ಮಂದಿ ಇರುವರು. ಸ್ವೀಡರೂ ಬೆಲ್ಜಿಯನರೂ ಅವರನ್ನು ತರಬೇತುಗೊಳಿಸುತ್ತಿರುವರು ಆದರೆ ಖಾಸಗಿ ಸೈನ್ಯಗಳ ಮೇಲೆಯೂ ಅವರ ಮುಖಂಡರ ಮೇಲೆಯೂ ದೇಶದ ರಕ್ಷಣೆಯು ಹೊಂದಿಕೊಂಡಿದೆ

ರಸೌಸ್ ಎಂಬ ಪಂಗಡದಲ್ಲೇ 70,000 ಜನರ ಕಾಲಾಳುಗಳಿರುವರು ಈ ಪಂಗಡದವರು ಭಿನ್ನಭಿನ್ನವಾಗಬೇಕೆಂದು ಇಟಲಿಯಾನರು ಹಂಚಿಕೆ ಹೂಡುತ್ತಾರಾದರೂ, ಎತಿಯೋಪಿಯಾನರು ಈಗ ಮುಂಚಿಗಿಂತಲೂ ಹೆಚ್ಚು ಒಗ್ಗಟ್ಟಿನಿಂದಿರುವರು. ಎತಿಯೋಪಿಯಾನರ ಸ್ಮರಣೆಯಲ್ಲಿ ಹಸಿಹಸಿಯಾಗಿರುವುದೊಂದರೆ ಅಡೋವದಲ್ಲಿ 1896ರಲ್ಲಿ ನಡೆದ ಯುದ್ಧ ಈ ಸಮರದಲ್ಲಿ ಇಟಲಿಯನ್ನು ಪೂರ್ಣವಾಗಿ ಪರಾಜಯಗೊಳಿಸಲಾಯಿತು ಎತಿಯೋಪಿಯಾನ ಮಿಲಿಟರಿಯವರ ದಾಖಲೆಯಲ್ಲಿರುವುದು ಮಗ್ದಾಲದಲ್ಲಿ ಕಿಂಗ್ ಥಿಯೊಡೋರನಿಗೆ ದೊರೆತ ಸೋಲು ಈ ಸೋಲಿಗೆ ಕೆಲವು ನಾಯಕರು ಅರಸನಿಗೆ ಸಹಾಯವೀಯದಿದ್ದುದೇ ಮುಖ್ಯ ಕಾರಣ. ಮಗ್ದಾಲದಲ್ಲಿ ಈ ನಾಯಕರು ಒಳ್ಳೆಯ ಪಾಠಗಳನ್ನು ಕಲಿತರು ಅಡೋವಾದ ರಣದಲ್ಲಿ ಅವರಿಗೆ ವಿಶ್ವಾಸವು ಹುಟ್ಟಿತು ಸದ್ಯದಲ್ಲಿ ಜನರ ಆಸೆ ತೃಪ್ತಿಯನ್ನು ಪಡಿಸಲು ಸಾಧ್ಯವಾಗುವುದೋ ಎಂಬ [illegible] ಸಂದೇಹವಿದೆ [illegible] ದುರ್ಬಲವಾದುದು ಆದುದರಿಂದ ತಮ್ಮ ರಾಷ್ಟ್ರಧ್ವಜವನ್ನುಳಿಸಿಕೊಳ್ಳುವ [illegible] ಸರ್ವರೂ ಸಹಕರಿಸುವುದರಲ್ಲಿ ಸಂದೇಹವಿಲ್ಲ

ಈ ರೀತಿಯ ಸಂಕಷ್ಟಗಳನ್ನು ಹಾಯ್ದುಕೊಂಡು ಇಟಲಿಯಾನರು ಯುದ್ಧವನ್ನು ನಡೆಸಬೇಕಾಗಿದೆ ಈ ಕಷ್ಟಗಳನ್ನು [illegible] ಆರಿಸಲು ಆಧುನಿಕ ಶಸ್ತ್ರೋಪಕರಣಗಳನ್ನು ಸಿದ್ಧಗೊಳಿಸಬೇಕಾಗಿದೆ ಇಟಲಿಯಾನರು ವಿಮಾನಗಳನ್ನುಪಯೋಗಿಸಿ [illegible] ಬಹುದು. ಪರ್ವತಗಳಲ್ಲಿ ಎತಿಯೋಪಿಯಾನ ಸೈನ್ಯಗಳಿಗೆ ಯಾವ [illegible] ಪ್ರದೇಶ ಇಟಲಿಯದ ಸಾಧ್ಯವಿಲ್ಲ ಆದಿಸ್ ಅಬಾಬವನ್ನು ಕೇಂದ್ರವನ್ನಾಗಿ ಮಾಡಿ ಅಲ್ಲಿ 80,000 ಜನರನ್ನು ಕಾಣಬಹುದು ಆದರೆ ರಾಜಧಾನಿಯೊಂದನ್ನು ನಿರ್ನಾಮ ಮಾಡಿದರೆ ಎತಿಯೋಪಿಯಾದ ನಾಶವಾದಂತಾಗಲಾರದು, ಏಕೆಂದರೆ ಪ್ರಧಾನ ನಗರವು ಚಕ್ರವರ್ತಿಯ ಒಂದು ಮೊಕ್ಕಾಂ ಮಾತ್ರ ಅವನು ಮಾರ್ಗಗಳಿಲ್ಲದ ಯಾವ ಪ್ರಾಂತ್ಯದಲ್ಲಾದರೂ ವಾಸಿಸಬಹುದು, ಆ ಮೂಲಕ ಸ್ವರಕ್ಷಣೆಯನ್ನು ಮಾಡಿಕೊಳ್ಳಬಹುದು

ಈ ದೇಶವನ್ನು ಜಯಿಸುವ ಇಟಲಿಯ ಆಶೆಯು ಎಷ್ಟಕ್ಕೂ ಸುಲಭವಾಗಿಲ್ಲ. ಎತಿಯೋಪಿಯಾವನ್ನು ಸೋಲಿಸಬೇಕೆಂದಾದರೆ ಬಹಳ ಕಷ್ಟವಿದೆ,—ಕೆಲವು ವರ್ಷಗಳಾದರೂ ತಗಲಬಹುದು ಎತಿಯೋಪಿಯಾನರಿಗಿಂತ ಹೆಚ್ಚು ನಷ್ಟವು ಇಟಲಿಗೆ ಖಂಡಿತವಾಗಿಯೂ ಆಗಬಹುದು

ವಿಮಾನಕ್ಕೆ ಬೆಂಕಿ ತಗಲಿತು.

6 ಮಂದಿ ಸುಟ್ಟು ಹೋದರು.

ಎಮ್‌ಸ್ಟರ್‌ಡಾಂ ಜುಲಾಯಿ ೧೮

ಮಾಲ್ಟಿ [illegible] ಹಾರುತ್ತಿದ್ದಾಗ ಒಂದು ಡಚ್ ವಿಮಾನಕ್ಕೆ ಬೆಂಕಿ ತಗಲಿ ಸುಟ್ಟು ಹೋಯಿತು [illegible] ಪ್ರಯಾಣಿಕರೂ ನಾಲ್ಕು ಜನರು ವೈಮಾನಿಕರೂ ಮರಣ ಹೊಂದಿದರು 14 ಮಂದಿಯನ್ನು [illegible] ಸುತ್ತು ಪ್ರಯಾಣಿಕರಿದ್ದ [illegible] ಇಂಗ್ಲೀಷರಿದ್ದರು ವಿಮಾನವು ಹಾರುತ್ತಿದ್ದಾಗ [illegible] ಬಾಧಕವಿದ್ದುದು [illegible] ಅದನ್ನು ಕಾಣದಲೇ [illegible] ಕೆಳಗಿಳಿ[illegible] ಆರ್ಧ [illegible] ಅದು ಸುಟ್ಟು ಹೋಯಿತು [illegible] ಮತ್ತು ನ್ಯಾಮೋಸ್ [illegible] ಇಂಗ್ಲೀಷರು ಮೃತರಾದರು

ಬ್ರಿಟಿಷ್ ಬೇಂಕುಗಳಲ್ಲಿ ವಹಿವಾಟು ಹೆಚ್ಚಿತು.

ಲಂಡನ್ ಜುಲಾಯಿ ೧೮

1934ರ [illegible] [illegible] ವಹಿವಾಟು [illegible] [illegible] [illegible] [illegible] 1 [illegible] 1682 [illegible] 1794 [illegible] [illegible]

KANNADA

Savings Certificates can be cashed even before maturity.

Full Particulars from—

CANARA BANK LTD

OFFICES AT

Bombay—Fort, Mangalore—Bunder,
Bombay—Mandvi, Mangalore—City,
Hubli, Kasaragod,
Calicut, Puttur,
Cochin, Buntwal,
Ernakulam, Karkala,
Alleppey, Udipi,
Bangalore, Coondapoor,
Davangere, &
Chickmagalur, Gangoli.

AVAILABLE IN DENOMINATIONS OF Rs. 10 UPWORDS

TOTAL YIELD RS 4-6-0 P.A

Paid once half yearly at 3½ p. a. with an additional 1¼% p. a. on maturity If Left To Accumulate

RS. 100/- Will Amount to RS. 122-13-6

ESTD 1906

CANARA BANK LIMITED.

Subscribed Capital		Paid up Capital
6,00,000		3,31,000
Reserves	Deposits	Working Capital
4,50,000	58,62,000	73,49,000

ನಮ್ಮ ಜಿಲ್ಲಾ ಬೋರ್ಡ್.

ಈ ಜಿಲ್ಲೆಯು ನಮ್ಮ ಜಿಲ್ಲೆ ಎಂಬುದು ಎಷ್ಟು ಸರಿಯೊ, ಅದಕ್ಕಿಂತಲೂ ಈ ಜಿಲ್ಲಾ ಬೋರ್ಡ್ ನಮ್ಮ ಬೋರ್ಡ್ ಎಂಬುದು ಇನ್ನೂ ಹೆಚ್ಚು ಸಂಗತವಾದುದೇ ಹೀಗಿರುವ ಕಾರಣ, ನಮ್ಮ ಜಿಲ್ಲಾ ಬೋರ್ಡಿನ ಆಡಳಿತವನ್ನು (೧೯೩೪–೩೫) ಕುರಿತಾಗಿ, ನಮ್ಮಲ್ಲಿ ಪ್ರತಿಯೊಬ್ಬಂಗೆ ಅಭಿಮಾನವೂ ಅಭಿಪ್ರಾಯವೂ ಇದ್ದು ವಿಮರ್ಶಿಸಲು ಅಧಿಕಾರವೂ ಇರುವುದಾದರೂ, ಇತರರಿಗೆ ತಿಳಿದು ಬರಬಹುದಾದ ಆಡಂಬರ ಅಥವಾ ಯೋಗ್ಯತೆ, ಅಭಿವೃದ್ಧಿ ಅಥವಾ ನ್ಯೂನತೆಗಳಿಗಿಂತ ನಮಗೇ ತಿಳಿದು ಬರುವುದು ಅನುಭವಸಿದ್ಧವೇ ಆದರೂ ಸರಕಾರವೇ ವಿಮರ್ಶಿಸಿ ಬರೆದಿರುವ ವಿಚಾರಗಳನ್ನು ನಮ್ಮ ವಾಚಕರ ಮುಂದಿಡುತ್ತೇವೆ

ಎಳೆಗೂಸುಗಳ ಮರಣಗಳು, ಬಾಳಂತಿಯರ ಮರಣಗಳು ಹಿಂದಣ ವರ್ಷದಲ್ಲಾದುದಕ್ಕಿಂತ ಈ ವರ್ಷ ಹೆಚ್ಚಿವೆ

ಬೋರ್ಡಿನ ಅಧಿಕಾರದಲ್ಲಿರುವ ರಸ್ತೆಗಳು ೧೪೪೧ ಮೈಲು (ಕಳೆದ ವರ್ಷ ೧೪೭೬) ಎಂದರೆ ಈ ವರ್ಷ ೩೫ ಮೈಲು ಹೆಚ್ಚಿಗೆ 'ಟ್ರಂಕ್' ರೋಡು ೧೦೬ ಮೈಲು, ಹಿಂದಣ ವರ್ಷದಲ್ಲಿದ್ದುದಕ್ಕಿಂತ ಮಂಗಳೂರು–ಮೈಸೂರು ರಸ್ತೆ ಚೆನ್ನಾಗಿದೆ, ಆದರೆ ಜಿಲ್ಲೆಯೊಳಗಣ ಇತರ ಹೆದ್ದಾರಿಗಳು ಮಾತ್ರ ಈ ರಸ್ತೆಯಷ್ಟು ಚೆನ್ನಾಗಿಲ್ಲವೆಂದು ಸುಪರಿಂಟೆಂಡಿಂಗ್ ಇಂಜಿನೀಯರು ಹೇಳಿದ್ದಾರೆ ಎರಡು ಹೆದ್ದಾರಿಗಳ ದುರುಸ್ತಿ ವಿಚಾರದಲ್ಲಿ ಅವರೇ ಸೂಚಿಸಿದ್ದಾರೆ ಮೋಟರ್ ಚಲಾವಣೆಗೆ, ಸೆಕೆಂಡ್ ಕ್ಲಾಸ್ ರಸ್ತೆಗಳು ಯೋಗ್ಯವಾಗಿಲವೆಂದು ಕಲೆಕ್ಟರರು ಟೀಕಿಸಿದ್ದಾರೆ ಈ ಸೂಚನೆಗಳನ್ನು ಬೋರ್ಡ್ ಅನುಸರಿಸುವಂತೆ ಭರವಸೆ ಕೊಟ್ಟಿದೆ. ಹಣ ಮಾತ್ರ ಬೇಕಾಗಿದೆ, ಅಷ್ಟೆ

ಸಂಕ, ಸೇತುವೆ, ಕಲ್ವರ್ಟುಗಳಿಗಾಗಿ ಈ ವರ್ಷ ೫೮೯೮೯ ರೂಪಾಯಿ ವ್ಯಯವಾಗಿದೆ, ಹಿಂದಣ ವರ್ಷ ಇದರ ಅರೆವಾಸಿಗಿಂತ ಕಡಮೆ (೨೫೦೮೩) ಎರಡು ದೊಡ್ಡ ಕಾಮಗಾರಿಗಳು ಮುಗಿದುವು, ಎಂಟು ಚಿಕ್ಕವು ಮುಗಿಯುತ್ತಿದ್ದುವು

ವರಿಗಳಿಂದ ದೊರೆತುದು ರೂ ೬೫೦೭೮ (ಹಿಂದಣ ವರ್ಷ ರೂ ೪೪೭೪೫) ಒಂಭತ್ತು ಛತ್ರಗಳನ್ನು ಮೂರು ಆಶ್ರಯ ಶಾಲೆಗಳನ್ನು ಬೋರ್ಡ್ ಈ ವರ್ಷ ಕೈಬಿಟ್ಟಿತು. ಈಗ ಜಿಲ್ಲೆಯಲ್ಲಿ ಇವು ೮೮ ಮತ್ತು ೨೦ (ಕ್ರಮವಾಗಿ) ಇವೆ

ಯಾವ ಶಾಲೆಗೂ ಹೋಗದ ಗಂಡು ಮಕ್ಕಳು ಶೇಕಡಾ ೪೯, ಕಳೆದ ವರ್ಷವೂ ಇಷ್ಟೆ, ಹೆಣ್ಣು ಮಕ್ಕಳು ಸೇಕಡಾ ೭೯ ಇದ್ದುವು, ಈಗ ೭೭

ಗಂಡು– ಹೆಣ್ಣು ಮಕ್ಕಳ ಮೂಲ ಶಾಲೆಗಳು ೫೬೯+೮೯, ಹಿಂದಣ ವರ್ಷದಲ್ಲಿದ್ದುದಕ್ಕಿಂತ ೨೬ ಹೆಚ್ಚು, ಇವುಗಳಲ್ಲಿ ಹಲವು ಪಂಚಾಯತುಗಳ ಕೈಯಿಂದ ಪುನ ಕೈವರ್ತಿಸಿಕೊಂಡುವು ಶಾಲೆಗಳಲ್ಲೋದುವ ಮಕ್ಕಳ ಸಂಖ್ಯೆ ಗಂಡು ೩೮೧೬೭ರಿಂದ ೩೬೨೩೩ಕ್ಕೂ ಹೆಣ್ಣು ೬೨೫೦ರಿಂದ ೫೮೬೯ಕ್ಕೂ ಇಳಿಯಿತು ಹುಡುಗರ ಶಾಲೆಗಳಲ್ಲಿ ಸಂಖ್ಯೆ ಕುಂದುತ್ತಾ ಬಂದಿದೆ ಎಲ್ಲ ಸಮಾಜಗಳ ಮಕ್ಕಳನ್ನು ನಿರಾತಂಕವಾಗಿ ಬೋರ್ಡ್ ಶಾಲೆಗಳಲ್ಲಿ ಸೇರಿಸಿಕೊಳ್ಳಲಾಗಿದೆ ಏಳು ಬೋರ್ಡ್ ಸೆಕೆಂಡರಿ ಶಾಲೆಗಳಿವೆ, ಸೆಕೆಂಡರಿ ಡಿಪಾರ್ಟ್‌ಮೆಂಟಿನಲ್ಲಿ ಮಕ್ಕಳ ಸಂಖ್ಯೆ ೧೫೫೦ರಿಂದ ೧೫೯೯ಕ್ಕೆ ಏರಿದೆ, ಇದರಲ್ಲಿ ೧೬೭ ಹುಡುಗಿಯರೂ ೩೧೨ ಹಿಂದುಳಿದ ಸಮಾಜದ ಮಕ್ಕಳೂ ಇರುವರು

ಬೋರ್ಡ್ ೪ ಆಸ್ಪತ್ರೆಗಳನ್ನೂ, ೮ ಡಿಸ್ಪೆನ್ಸರಿಯನ್ನೂ, ೧೪ ರೂರಲ್ ಡಿಸ್ಪೆನ್ಸರಿಗಳನ್ನೂ, ೭ ಆಯುರ್ವೇದಿಕ, ವೈದ್ಯಾಲಯಗಳನ್ನೂ ಇಟ್ಟುಕೊಂಡಿದ್ದು, ೭೨೩ ಒಳರೋಗಿಗಳನ್ನೂ (ಕಳೆದ ವರ್ಷ ೫೯೯) ೩೨೪೮೮೪ ಹೊರರೋಗಿಗಳನ್ನೂ (ಹಿಂದಣ ವರ್ಷ ೩೭೦೪೯೫) ಉಪಚರಿಸಿ ಶುಶ್ರೂಷೆ ಮಾಡಿಯದೆ

ಜನಸಂಖ್ಯೆಯು ಸಾವಿರಕ್ಕೆ ೪೧ರಂತೆ ಜನನಗಳಾಗುತ್ತಿದ್ದವು, ಈ ವರ್ಷ ೩೬. ಕೂಲೀ ಜನರು ಇಲ್ಲಿ ದುಡಿಯಲಾರದೆ ಗಟ್ಟಕ್ಕೆ ಹೋದ ಕಾರಣ, ಇಂತಹ ಆರ್ಥಿಕ ಸ್ಥಿತಿಯು ದುರ್ಗತಿಯಿಂದ ಹೀಗೆ ಆಯಿತೆಂದು ಬೋರ್ಡ್ ವಿವರಿಸಿಯದೆ ಬೋರ್ಡಿನ ೩೮ ಸೂಲಗಿತ್ತಿಯರೂ (೫ ಇತರರು) ೩೯೭೮ ಬಾಳಂತಿಗಳ ಹೆರಿಗೆ ಮಾಡಿರುವರು, ಎಂದರೆ ಜನನಗಳಲ್ಲಿ ಸೇಕಡಾ ೮ ರಂತಾಯಿತು

ಆರೋಗ್ಯವರ್ಧಕ ಸಿಬ್ಬಂದಿಯು ಪ್ರಚಾರ ಕಾರ್ಯವನ್ನು ಎಂದಿನಂತೆ ಮಾಡಿರುವುದು ೧೩೮ ಕಡೆಗಳಲ್ಲಿ ಬೇಬೀವೀಕ್ ಆಚರಣೆಯಾಗಿದೆ ಕಾರ್ಕಳದಲ್ಲಿರುವ ಒಂದೇಮಾತ್ರ ಮೆಟರ್ನಿಟಿಸೆಂಟರು ತೃಪ್ತಿಕರವಾಗಿ ಕೆಲಸ ಮಾಡಿಯದೆ ಸಾವಿರ ಜನಗಳಲ್ಲಿ ೧೪೫ರಿಂದ ೧೭೨ಕ್ಕೆ ಏರುವಷ್ಟು ಹೆಚ್ಚಿನ ಮರಣಗಳೂ, ಹೆರಿಗೆಯಿಂದ ೩೭೩ರಿಂದ ೪೧೪ಕ್ಕೆ ಏರುವಷ್ಟು ಮರಣಗಳೂ ಆಗಿವೆ! ಹಳೇ ಸೂಲಗಿತಿಯವರನ್ನು ತಾಜಾ ಸೂಲಗಿತ್ತಿಯವರನ್ನಾಗಿ ತರಬೇತುಮಾಡಲೂ, ಚಾಯಿಲ್ಡ್ ವೆಲ್ಫೇರ್ ಎಸೊಸಿಯೇಶನನ್ನು ಬೋರ್ಡಿನ ಆಡಳಿತದಲ್ಲಿ ಇರಿಸಿಕೊಳ್ಳಲೂ ವಿಲೆವಾರಿ ನಡೆದಿದೆ ಇದರಿಂದ ಇನ್ನಷ್ಟು ಸೌಕರ್ಯಗಳೂ ಅನುಕೂಲವಾಗಿ ಹೆಚ್ಚುವುವೆಂದು ನಂಬಲಾಗಿದೆ—

ಕೈಲ್ಡೆಸೆಸ್ ಫಂಡಿನಿಂದ ರೇವಣಾತಿಯಾಗಿಟ್ಟುದು (ಈ ವರ್ಷಾಂತ್ಯದ ವರೆಗೆ) ರೂಪಾಯಿ ೯೦,೦೦೦ ಮೋಟರ್ ಬಸ್ ಲೈಸೆನ್ಸುಗಳಿಂದ ಈ ವರ್ಷ ೧೧೨,೪೨೩ ರೂಪಾಯಿ ದೊರೆಯಿತ (ಹಿಂದಣ ವರ್ಷ ೧೧೬೦೮೪) 'ಚಿಕ್ಕ ಪಂಚಾಯತು' ಬೋರ್ಡುಗಳ ಸಂಖ್ಯೆ ೯೪ರಿಂದ ೯೬ಕ್ಕೆ ಏರಿತು, ದೊಡ್ಡ ಪಂಚಾಯತು ಬೋರ್ಡುಗಳು ಈ ಜಿಲ್ಲೆಯಲ್ಲಿ ಇಲ್ಲ

ಜಿಲ್ಲಾ ಬೋರ್ಡಿನ ಕಾಪತ್ರಯಗಳು ಬಹಳ, ಆದರೂ ಆಡಳಿತವು ತೃಪ್ತಿಕರವಾಗಿದೆ ಹೆದ್ದಾರಿಗಳನ್ನು ಯೋಗ್ಯಸ್ಥಿತಿಗೆ ತರುವರೆ ಬೋರ್ಡ್ ಸಂಪೂರ್ಣ ಪ್ರಯತ್ನಿಸುವುದಾಗಿ ಸರಕಾರವು ನಂಬಿದೆ ಸರಕಾರದ ಈ ವಿಮರ್ಶೆ ಓದಿ ಬೋರ್ಡ್ ಮೆಂಬರರು ಏನಂತೆ?

ಪೋಲೀಸ್ ಸಬ್ ಇನ್ಸ್‌ಪೆಕ್ಟರನನ್ನು ತಿವಿದರು.

ಅಪಾದಿತನನ್ನು ಗುಂಡಿಕ್ಕಿ ಕೊಂದರು!

ಚೀರಲಾ ಜುಲೈ ೧೩

ಇಲ್ಲಿ ಈ ದಿನ ಬೆಳಿಗ್ಗೆ ಬಾಪಟಲಾ ಟೌನ್ ಪೋಲೀಸಿನ ಸಬ್ ಇನ್ಸ್‌ಪೆಕ್ಟರ್ ಸುಬ್ಬಯ್ಯ ನಾಯುಡುರೆಂಬವರು ಒಂದು ಕಳ್ಳತನದ ಕುರಿತಾಗಿ ವಿಚಾರಿಸುತ್ತಿದ್ದಾಗ ನೀಲಂ ವೀರಸ್ವಾಮಿ ಎಂಬವನೊಬ್ಬನು ಅವರನ್ನು ತಿವಿದನು ಅಪಾದಿತನನ್ನು ಒಡನೆ ಗುಂಡಿಕ್ಕಿ ಕೊಲ್ಲಲಾಯಿತು

ಸಂಯುಕ್ತ ಸಂಸ್ಥಾನದಲ್ಲಿ ಭಯಂಕರ ನೆರೆ!

ಅನೇಕ ಮರಣಗಳು

ಮಿಲಿಟರಿಯವರು ಜಾಗೃತರಾಗಿರಬೇಕೆಂದು ಅಪ್ಪಣೆ.

ನ್ಯೂಯೋರ್ಕ್, ಜುಲೈ ೯

ನ್ಯೂಯೋರ್ಕಿನಲ್ಲಿ ಭಯಂಕರ ನೆರೆ. ದಿನಂಪ್ರತಿ ವಿಪರೀತ ಮಳೆಯು ಸುರಿಯಿತು. ನೆರೆಯು ಪಟ್ಟಣವನ್ನು ಮುತ್ತಿತು ೩೬ ಜನರು ಮೃತರಾಗಿರುವರು ೮ ಜನರು ಕಾಣೆಯಾಗಿರುವರು ಪೆನ್‌ಸಿಲ್ವಾನಿಯಾ ಸಂಸ್ಥಾನದಲ್ಲಿ ಬಿರುಗಾಳಿಯೊಂದು ಬೀಸಿ ೪೦೦ ಜನರು ಜಖಂಗೊಂಡರು ೨೪ ಮಂದಿ ನಾಶವಾದರು ನ್ಯೂಯೋರ್ಕ್ ಕೌಂಟಿಗಳಲ್ಲಿ ನೂರಾರು ಜನರು ನಿರ್ಗತಿಕರಾಗಿರುವರು ೨ ಮಿಲಿಯ ಸ್ಟರ್ಲಿಂಗ್‌ಗಳ ನಷ್ಟವಾಗಬಹುದೆಂದು ಅಂದಾಜು ಎಲ್ಮಿರಾ ಎಂಬಲ್ಲಿ ಲೂಟಿಯು ನಡೆಯಲಿದೆಯೆಂಬ ಭಯದಿಂದ ಮಿಲಿಟರಿಯವರು ಜಾಗೃತರಾಗಿರಬೇಕೆಂದು ಅಪ್ಪಣೆ ಕೊಡಲಾಗಿದೆ

ಭಾರಿ ಹಿಂದೀಯ ಸಾಹಸ

ಅಮೆರಿಕಾ ಮತ್ತು ಯೂರೋಪು ದೇಶಗಳಿಂದ ಇಂಡಿಯಾಕ್ಕೆ ಪೆಟ್ರೋಲ್ ಮತ್ತು ಚಿಮಿಣಿ ಎಣ್ಣೆಯ ಭಾರಿ ಆಯಾತ

ಜವಾಬ್ದಾರಿ ಪಕ್ಷದಿಂದ ತಿಳಿದುಬರುವಂತೆ ಮುಂಬಾಯಿಯಲ್ಲಿ ಹೆಸರಾಂತಾಸಿ ಕಂಪೆನಿಯೊಂದು ಶೀಘ್ರದಲ್ಲಿ ಪೆಟ್ರೋಲ್, ಚಿಮಿಣಿ ಎಣ್ಣೆ ಮೊದಲಾದ ಇನ್ನಿತರ ಎಣ್ಣೆಗಳನ್ನೂ ಅಮೆರಿಕಾ ಮತ್ತು ಯುರೋಪುಗಳಿಂದ ಆಮದು ಮಾಡಲಿದೆಯೆಂದೂ, ಈ ಸಂಬಂಧವಾಗಿ ಭಾರಿ ಭಂಡವಾಳವನ್ನೆತ್ತಿ ಒಂದು ದೊಡ್ಡ ಕಂಪೆನಿಯು ಸ್ಥಾಪನೆಯಾಗಲಿದೆಯೆಂದೂ ತಿಳಿಯುತ್ತೇವೆ ಪ್ರಥಮದ್ದಾಗಿ ಈ ಕಂಪೆನಿಯು ಮುಂಬಾಯಿ ಸಂಸ್ಥಾನದಲ್ಲೂ ಉತ್ತರ ಮತ್ತು ದಕ್ಷಿಣ ಹಿಂದೂಸ್ಥಾನದಲ್ಲೂ ವ್ಯಾಪಾರ ನಡೆಸುವುದು ಅದಕ್ಕಾಗಿ ವಿವಿಧ ಎಣ್ಣೆಗಳ 30ರಿಂದ 40 ಲಕ್ಷ ಗೆಲನುಗಳಷ್ಟು ಹಿಡಿಯುವ ದೊಡ್ಡ ಟೇಂಕ್‌ಗಳನ್ನು ಈ ಕಂಪೆನಿಯು ರಚಿಸಲಿದೆ

ಇಷ್ಟರ ವರೆಗೆ ಈ ವ್ಯಾಪಾರವು ಹಿಂದೂ ದೇಶದಲ್ಲಿ, ಮುಖ್ಯವಾಗಿ ಯುರೋಪಿಯನ್ ಮತ್ತು ಅಮೆರಿಕನ್ ಕಂಪೆನಿಗಳ ಕೈವಶವಾಗಿಯೇ ಇತ್ತು. ಪರಿಣಾಮವಾಗಿ, ಹಿಂದೂ ದೇಶದಲ್ಲಿ ಪೆಟ್ರೋಲ್ ಮತ್ತು ಚಿಮಿಣಿಎಣ್ಣೆಯ ಕ್ರಯವು ಜಗತ್ತಿನ ಯಾವ ದೇಶದಲ್ಲೂ ಇಲ್ಲದಷ್ಟು ಹೆಚ್ಚಿಗೆ ಇರಿಸಲ್ಪಟ್ಟಿತ್ತು. ಆದರೆ ಈ ಕಂಪೆನಿಯು ಬಹು ಸಮೃದ್ಧವಾಗಿ ಈ ಎಣ್ಣೆಗಳನ್ನು ಆಮದು ಮಾಡಲಿರುವುದರಿಂದ, ಗಿರಾಕಿಗಳಿಗೆ ಸ್ವಾಭಾವಿಕವಾಗಿ ಕಡಮೆ ಕ್ರಯದ ಪ್ರಯೋಜನವು ದೊರಕೀತೆಂದು ನಿರೀಕ್ಷಿಸಲ್ಪಟ್ಟಿದೆ

ಈ ಕಂಪೆನಿಯು ಆಡಳಿತೆಯು ಅನುಭವಿಕರೂ ಪ್ರತಿಭಾ ಸಂಪನ್ನರೂ ಆದವರ ಹಸ್ತದಲ್ಲಿರುವುದರಿಂದ ಈ ಉದ್ಯಮದಲ್ಲಿ ಜಯವು ನಿಶ್ಚಿತವಾಗಿದೆ

ಜಕೋಬಬಾದಿನಲ್ಲಿ ಪರ್ವತ ನಿವಾಸಿಗಳ ಅಂತಃಕಲಹ

೮೦೦೦ ಜಮಾಲಿಗಳು ಸಿಂಧ್‌ಗೆ ಪ್ರಯಾಣಬೆಳೆಸಿದರು

ಕರಾಚಿ ಜುಲೈ ೧೦

ಬಲೂಚ್ ಪರ್ವತ ನಿವಾಸಿಗಳಲ್ಲಿ ಬಗ್ಟಿ ಎಂಬ ಮತಸ್ಥರಿಗೂ ಜಮಾಲಿಗಳೆಂಬ ಕುಲದವರಿಗೂ ಖಿರ್‌ತಾರ್ ಪ್ರದೇಶದಲ್ಲಿ ನೀರುವಳಿ ಪಡೆಸುವ ಕುರಿತಾಗಿ ಅಂತಃಕಲಹವೆದ್ದ ಪರಿಣಾಮವಾಗಿ ೮೦೦೦ ಜಮಾಲಿಗಳು ಸಿಂಧ್ ಗಡಿನಾಡಿನಿಂದ ಷಹಾದದ್ ಕೋಟ್, ಗರ್ ಯಾಸಿನ್ ಮತ್ತು ಇತರ ಸಿಂಧ್ ಗ್ರಾಮಗಳಿಗೆ ದೇಶಾಟನ ಹೊರಟರು

ಅದೋನಿಯಲ್ಲಿ ೩ ಕೊಲೆಗಳು!

ಕಬ್ಬಿಣದ ಸರಳಿನಲ್ಲಿ ಹೊಡೆದರು!

ಇಬ್ಬರು ಸ್ತ್ರೀ ಮತ್ತು ಒಬ್ಬ ಯುವಕನ ಕೊಲೆ!

ಬಳ್ಳಾರಿ, ಜುಲೈ ೮.

ಅದೋನಿಯ ಗೋವಳ ಸುಬ್ಬಣ್ಣನೆಂಬವನು ತನ್ನ ಪ್ರಥಮ ಪತ್ನಿ ರುಕ್ಮಾಬಾಯಿ ಎಂಬವಳನ್ನೂ ಪಾಂಡಪ್ಪ ಎಂಬ ತರುಣನನ್ನೂ ಇವರೊಡನೆ ತನ್ನ ಎರಡನೆಯ ಹೆಂಡತಿ ಭೀಮಬಾಯಿ ಎಂಬವಳನ್ನೂ ಕಬ್ಬಿಣದ ಸರಳಿನಲ್ಲಿ ಹೊಡೆದು ಕೊಂದಿರುವನು ಶುಕ್ರವಾರ ರಾತ್ರೆ ೧೨ ಗಂಟೆಕ್ಕೆ ಸುಬ್ಬಣ್ಣನ ಮನೆಯಲ್ಲಿ ಮಹಾ ಆರ್ಭಟವೆದ್ದಿತು ನೆರೆಹೊರೆಯವರು ಓಡಿದರು ಮನೆಯ ಬಾಗಿಲು ಒಳಗಿಂದ ಹಾಕಲ್ಪಟ್ಟಿದ್ದಿತು ಪೋಲೀಸರು ಬಂದು ಬಾಗಿಲೊಡೆದು ಒಳಗೆ ನುಗ್ಗಿದರು ನೋಡಲಾಗಿ ಸುಬ್ಬಣ್ಣನು ಮೂರು ಹೆಣಗಳ ಮಧ್ಯೆ ಕುಳಿತಿದ್ದನು. ಬಳಿಯಲ್ಲಿ ಒಂದು ಕಬ್ಬಿಣದ ಸರಳನ್ನಿಟ್ಟುಕೊಂಡಿದ್ದನು ಕೊಲೆಗೆ, ಕಾರಣವೇನೆಂದು ಕೇಳಲಾಗಿ ತನ್ನ ಮೊದಲನೆಯ ಹೆಂಡತಿಯೊಂದಿಗೆ ಪಾಂಡಪ್ಪನು ದುಷ್ಟ ಸಂಪರ್ಕದಲ್ಲಿದ್ದುದನ್ನು ಕಂಡು ಉದ್ರೇಕಗೊಂಡು ತಾನು ಅವರೀರ್ವರ ಕೊಲೆ ಮಾಡಿದೆನೆಂದು ಹೇಳಿದನು ಎರಡನೆಯವಳಿಗೂ ಇದು ಗೊತ್ತಿದ್ದುದರಿಂದ ಅವಳನ್ನೂ ನಾಶಮಾಡಿದೆನೆಂದನು. ಹೇಳುತ್ತಾ, ಸರಳನ್ನು ಪೋಲೀಸರಿಗೆ ಕೊಟ್ಟು ಬೇಡಿಗೆ ತಾನೇ ಕೈಯೊಡ್ಡಿದ್ದನು ಹೆಣಗಳನ್ನು ಆಸ್ಪತ್ರೆಗೊಯ್ದರು ಮುಂದಿನ ವಿಚಾರಣೆಗಳು ನಡೆಯುತ್ತಿವೆ

ಸಿಲೋನ್ ಸ್ಟೇಟ್ ಕೌನ್ಸಿಲಿನ ಸಭಾನಾಯಕರಿಗೆ ಸೆರೆಯಾಯಿತು.

ಕೊಲೊಂಬೊ ಜುಲೈ ೧೦

ಸಿಲೋನ್ ಸ್ಟೇಟ್ ಕೌನ್ಸಿಲಿನ ಮಾಜಿ ಸಭಾನಾಯಕರಾಗಿದ್ದ ಮಿ| ಎ ಎಫ್ ಮೊಲಾಮೂರ್ ಎಂಬವರು ರತ್ನಪುರ ಡಿಸ್ಟ್ರಿಕ್ಟ್ ಕೋರ್ಟಿನ ಅಪ್ಪಣೆಯನ್ನುಲ್ಲಂಘಿಸಿ, ದಿವಂಗತ ಜೆ ಡಬ್ಲ್ಯೂ ಮುದುವನವಾಲಾ ಎಂಬವರ ವೀಲ್ ನಾಮೆಯಿಂದ ೨೨,೦೦೦ ರೂಪಾಯಿಗಳ ಬದಲು ೫೨,೦೦೦ ರೂಪಾಯಿಗಳನ್ನು ಇಂಪೀರಿಯಲ್ ಬೇಂಕಿನಿಂದ ತೆಗೆದುದಕ್ಕಾಗಿ,—ಕೋರ್ಟಿನ ಉಲ್ಲಂಘನೆಯ ಒಂದೇ ವಿಷಯಕ್ಕಾಗಿ—ಒಂದು ವರ್ಷದ ಸಾದಾಸಜೆಗೆ ಗುರಿಯಾದರು ಪ್ರಿವಿಕೌನ್ಸಿಲಿನಲ್ಲೂ ಅವರಿಗೆ ಸೋಲಾಯಿತು ಅವರನ್ನು ಪೋಲೀಸರು ಸೆರೆಗೊಯ್ದರು

೧೦೦ ರೂಪಾಯಿ ಬಹುಮಾನ

(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು, ಅಲ್ಲದೆ ಶಾಂತಿಯುತವಾದುದು, ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ, ಅವರು ಸುಲಭವಾಗಿ ವಶರಾಗುತ್ತಾರೆ ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ ಗಂಡು ಮಕ್ಕಳಾಗುತ್ತವೆ ಧನ ಸಿಗುತ್ತದೆ ರೋಗ ವಾಸಿಯಾಗುತ್ತದೆ. ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ, ಇದೊಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ ಕೊಡುವೆವು ಇನ್ನೊಬ್ಬರಿಗೆ ದಾಸರಾಗಿರಬೇಕಾದ ಆವಶ್ಯಕವಿಲ್ಲ ಇದು ನಿಮ್ಮ ಸಂಗಡ ಇದ್ದರೆ ಸಾಕು ಜಯ ಬೆಲೆ ರೂ. ೨ ಮಾತ್ರ.

೮೮೩ Bengal Mesmarism House
5–7 Panchpota, Bengal (E R.)

Wanted.

2 Canvassers of advertisements on a monthly salary of Rs. 20 for our Weekly.

Apply to

The Advertisement Manager,
Swadeshabhimani Mangalore.

ಲಾಹೋರಿನಲ್ಲಿ ಮಹಾ ಆಂದೋಲನ

ಸಭೆಗಳನ್ನು ನಿಷೇಧಿಸಿದರು.

ಮುಸ್ಲಿಮರನ್ನು ಗಡಿಪಾರು ಮಾಡಿದರು.

ಮುನವಿದಾರರೊಡನೆ ಸರಕಾರದ ಸಂಭಾಷಣೆ

ಲಾಹೋರು, ಜುಲೈ ೧೪

ಶಾಹಿದ್‌ಗಂಜ್ ಮಸೀದಿಯನ್ನು ವಿಧ್ವಂಸ ಮಾಡುವ ಕುರಿತಾಗಿ ಆಲೋಚಿಸಲು ಯಾರೂ ಯಾವ ಸಭೆಯನ್ನಾದರೂ ಲಾಹೋರು ಜಿಲ್ಲೆಯೊಳಗೆ ಇನ್ನು ೧ ತಿಂಗಳ ವರೆಗೆ ಜರಗಿಸಬಾರದಾಗಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಅಪ್ಪಣೆಯಿತ್ತಿರುವರು. ಒಂದು ವಾರದೊಳಗೆ ಸೆಕ್ಷನ್ ೧೪೪ರನ್ವಯದ ಶಾಸನವು ಮೂರು ಸಲ ಪ್ರಕಟವಾಯಿತು.

ಈ ದಿನ ಇಲ್ಲಿಯ ಮೋಚಿಗೇಟಿನ ಹೊರಗಡೆ, ಮುನಿಸಿಪಾಲಿಟಿಯ ತೋಟದಲ್ಲಿ ಸಾವಿರಗಟ್ಟಳೆ ಮುಸ್ಲಿಮರ ಸಭೆ ಜರಗಿಸಿದರು. ಎಲ್ಲರೂ ನೀಲಿ ಟುಬ್ಬವನ್ನು ಹಾಕಿಕೊಂಡಿದ್ದರು. ನಿಮಿಷಕ್ಕೊಮ್ಮೆ "ಅಲ್ಲಹೋ-ಅಕ್ಬರ್" ಎಂದು ಜಯಘೋಷ ಮಾಡುತ್ತಿದ್ದರು.

'ಜಮೀನ್ದಾರ್' ಪತ್ರಿಕೆಯ ಮಾಲಕರಾದ ಮೌಲಾನಾ ಜಫರಾಲಿಖಾನ್, 'ರಿಯಾಸತ್'ನ ಮಾಲಕರಾದ ಸಯ್ಯದ್ ಹಬೀಬ್ ಮತ್ತು ಮುನಿಸಿಪಲ್ ಕಮಿಶನರರಾದ ಮಿಯಾನ್ ಫೆರೋಜುದ್ದೀನ್ ಎಂಬವರು ಜನರ ನಾಯಕರಾಗಿದ್ದರು. ಅವರು ದೀರ್ಘವೂ ಆವೇಶಮಯವೂ ಆದ ಭಾಷಣಗಳನ್ನಿತ್ತು ಶಹಿದ್‌ಗಂಜ್ ಮಸೀದಿಯ ಕಟ್ಟಡವನ್ನು ಸರಕಾರವು ತಮಗೆ ಕೊಡದಿದ್ದರೆ ಮಹಾ ಅನರ್ಥವುಂಟಾಗಬಹುದೆಂದು ಹೇಳಿದರು. ಈ ಮಸೀದಿಯು ಹಿಂತಿರುಗಿ ಸಿಗಬೇಕೆಂಬ ಬಗೆ ಜನರು ಆಗ್ರಹ ತೊಡಬೇಕೆಂದೂ, ಮುಸ್ಲಿಮ ಧರ್ಮ ಧ್ವಜದಡಿಯಲ್ಲಿ ಈಗ ಎಲ್ಲರೂ ನಿಲ್ಲಬೇಕೆಂದೂ ಹೇಳಿದರು. ಈ ಮಸೀದಿಯನ್ನು ಸರಿಯಾಗಿ ಕಟ್ಟಿ ತಮಗೆ ಕೊಡದ ವಿನಹ ತಾವು ಎಂದೂ ಸಂತೃಪ್ತರಾಗಲಾರೆವೆಂದು ಭಾಷಣ ಮಾಡಿದರು.

ತಾ ೧೯ನೇ ದಿನ ಜುಮ್ಮಾ ಪ್ರಾರ್ಥನೆಯು ಪಿ. ಗಿಡಾಹ ಮೈದಾನ ಅಖಿಳ ಹಿಂದೂಸ್ಥಾನದಲ್ಲಿ ಶಾಹೀದ್‌ಗಂಜ ಮಸೀದಿಯ ದಿನಾಚರಣೆಯನ್ನು ನೆರವೇರಿಸಬೇಕೆಂದು ತೀರ್ಮಾನವಾಯಿತು.

ಅಹಮ್ಮದಾಬಾದಿನಲ್ಲಿ ಕೊಲೆ

ಅಹ್ಮದಾಬಾದ್ ಡಿಸ್ಟ್ರಿಕ್ಟಿಗೆ ಸೇರಿದ ಒಂದು ಊರಿನಲ್ಲಿ ದೇವರ ಉತ್ಸವವೊಂದರಲ್ಲಿ ಹೋಗುತ್ತಿದ್ದ ನಾಗಜಿ ಎಂಬವನನ್ನು ಅವನ ದ್ವೇಷಿಗಳು ಎಲ್ಲರ ಎದುರಿನಲ್ಲಿಯೇ ಕೊಲೆ ಮಾಡಿದರು. ನಾಗಜಿಯ ಕಡೆಯವರು ತಮ್ಮ ಶತ್ರುಗಳಿಗೆಲ್ಲಾ ಶಿಕ್ಷೆ ಮಾಡಿಸಲು ಇದೇ ಸಮಯವೆಂದು ಯೋಚಿಸಿ, ಅಲ್ಲಿದ್ದವರನ್ನೂ ಅಲ್ಲಿ ಇಲ್ಲದ ಕೆಲವರನ್ನೂ ಸೇರಿಸಿ ಅಪರಾಧಿಸ್ಥಾನದಲ್ಲಿ ನಿಲ್ಲಿಸಿದರು. ಈ ಕುತಂತ್ರದಿಂದ ನಿಜವಾದ ಕೊಲೆಪಾತಕರೂ ನಿರಪರಾಧಿಗಳೆಂದು ಬಿಡುಗಡೆಯಾಗಲು ಅವಕಾಶ ದೊರೆಯಿತು. ಪಬ್ಲಿಕ್ಕಾಗಿ ನಡೆದ ಕೊಲೆಯು ವಿಚಾರವಾಗಿಯೂ ಉತ್ಪ್ರೇಕ್ಷೆಯಿಲ್ಲದೆ ನಿಜಾಂಶಗಳನ್ನು ಫಿರ್ಯಾದಿನಲ್ಲಿ ನಮೂದಿಸಿದ್ದರೆ, ಕೊಲೆಪಾತಕರು ತಪ್ಪಿಸಿಕೊಳ್ಳುತ್ತಿರಲಿಲ್ಲವೆಂದೂ, ಇದಕ್ಕೆ ಫಿರ್ಯಾದಿಗಳೇ ಕಾರಣಭೂತರೆಂದೂ ಜಡ್ಜರವರು ಟೀಕೆ ಮಾಡಿ ಹೇಳಿರುತ್ತಾರೆ. ನಿಜವಾದ ಕೇಸುಗಳು ಕೋರ್ಟುಗಳಲ್ಲಿ ಕೆಟ್ಟುಹೋಗಲು ದ್ವೇಷಾಸೂಯೆಗಳಿಂದ ಕೂಡಿ ಉತ್ಪ್ರೇಕ್ಷೆಮಾಡುವುದೇ ಕಾರಣವೆಂದು ಹೇಳಬಹುದಾಗಿದೆ.

ರಿವಾಲ್ವರು ಸಿಕ್ಕಿತು.

ಕಲ್ಕತ್ತ, ಜುಲೈ ೧೭

ಕಲ್ಕತ್ತದ ಕಿದ್ದರ್‌ಪುರ ಗಾರ್ಡನ್ ರೀಚ್ ರೋಡಿನ ಬಳಿಯ ಅಂಗಡಿಯಲ್ಲಿ ಅನದಿ ಚಕ್ರವರ್ತಿ ಎಂಬವನ ವಶ ದೊಡ್ಡ ರಿವಾಲ್ವರೂ ಕೆಲವು ಗುಂಡುಗಳೂ ದೊರಕಿವೆ. ಆಲಿಪುರ ಗೂಢಚಾರರು ವಿಚಾರಣೆ ನಡೆಸುತ್ತಿರುವರು.

ಡಿಲ್ಲಿಯ ಟೊಂಗಾ ಡ್ರೈವರರ ಮುಷ್ಕರ.

ಟ್ರಾಫಿಕ್ ಪೋಲೀಸರ ಅತಿರೇಕಕ್ಕಾಗಿ

ನ್ಯೂಡಿಲ್ಲಿ, ಜುಲೈ ೧೫

ಟ್ರಾಫಿಕ್ ಪೋಲೀಸರು ಯಾವ ಕಾರಣವನ್ನೂ ಮುಂದಿಡದೆ ತಮ್ಮವರಲ್ಲಿ ಕೆಲವರನ್ನು ಕೈದುಮಾಡಿ ಅತಿರೇಕ ಪ್ರದರ್ಶನ ಮಾಡಿದ ರೆಂದು ಇಲ್ಲಿ ಎರಡು ಸಾವಿರ ಟೊಂಗಾ ಡ್ರೈವರರು ಮುಷ್ಕರ ಹಿಡಿದಿರುವರು. ತಮ್ಮ ಪಕ್ಷಕ್ಕೆ ಇನ್ನೂ ಅನೇಕರನ್ನು ಸೇರಿಸುವ ಸಾಹಸದಲ್ಲಿ ಅವರಿರುವರು. ಪೋಲೀಸರು ಮಾರ್ಗಗಳಲ್ಲಿ ಕಾವಲು ನೋಡುತ್ತಿರುವರು.

೩೦೦೦ ಮೈಲುಗಳನ್ನು ಒಮ್ಮೆಗೇ ಹಾರಿದಳು

೮ ತಾಸುಗಳಲ್ಲಿ ನ್ಯೂಯೋರ್ಕಿನಿಂದ ಬರ್ಬೇಂಕಿಗೆ ಹಾರಿದ ಅಮೇರಿಕನ್ ತರುಣಿ!

ಬರ್ಬೇಂಕ್ (ಕೆಲಿಫೋರ್ನಿಯಾ) ಜುಲೈ ೧೭

ಮಿಸ್ ಲೌರಾ ಇಂಗಾಲ್ಸ್ ಎಂಬ ಅಮೇರಿಕನ್ ಸತಿಯೊಬ್ಬಳು, ನ್ಯೂಯೋರ್ಕಿನಿಂದ ಬರ್ಬೇಂಕಿಗೆ ವಿಮಾನ ಮೂಲಕ ೮ ತಾಸುಗಳೊಳಗೆ ಹಾರಿ ೩೦೦೦ ಮೈಲುಗಳನ್ನು ಒಮ್ಮೆಗೇ ಹಾರಿ ಮಿಸ್ ಅಮೇಲಿಯಾ ಎರ್‌ಹಾರ್ಡ್ ಎಂಬವಳು ಮಾಡಿದ ದಾಖಲೆಯನ್ನು ಮುರಿದಿರುವಳು.

ಗೋಡೆಯು ಬಿದ್ದು ಬಿಟ್ಟಿತು

ಸ್ತ್ರೀಯರು ಜಖಂಗೊಂಡರು!

ಜ್ಹಾನ್ಸಿ ಜುಲೈ ೧೭

ಜ್ಹಾನ್ಸಿಯಲ್ಲಿ ಪುರಾತನ ಕಾಲದ ಒಂದು ಚಾರ್‌ಗಂಜ್ ಎಂಬಲ್ಲಿ ಇದ್ದ ದೊಡ್ಡ ಗೋಡೆಯು ಕೆಡವಿ ಬಿದ್ದು ಒಬ್ಬ ಹೆಂಗಸು ಕೆಲಸಗಾರನ ಕೆಳಗೆ ಸತ್ತಳು. ಆದಿಗ ಬಿದ್ದಳು. ಅವಳ ಮಗಳೂ ಜಖಂಗೊಂಡಳು.

ಮಾಜಿ ಮುನಿಸಿಪಲ್ ಅಧ್ಯಕ್ಷರ ಸೆರೆ

ಶಾಂತಿರಕ್ಷಣೆಗಾಗಿ ಸರಕಾರದ ಏರ್ಪಾಡು

ಕೊಟ್ಟಾಯಂ ಜುಲೈ ೧೭

ಚಂಗನಚೇರಿಯ ಮುನಿಸಿಪಾಲಿಟಿಯ ಮಾಜಿ ಅಧ್ಯಕ್ಷರಾದ ಶ್ರೀ| ಪಿ ಜೆ ಸೆಬಾಸ್ಟಿಯನ್ ಎಂಬವರನ್ನು ಸೆರೆಹಿಡಿಯಲಾಯಿತು. ತಿರುವಾಂಕೂರಿನಲ್ಲಿ ಇವರು ಎಬ್ಬಿಸಿದ ಕಲಹವೇ ಈ ಕೈದಿಗೆ ಕಾರಣ.

ತರುಣಿಯನ್ನು ಬಲಾತ್ಕಾರದಿಂದ ಒಯ್ದರು.

ವಿವಾಹವಿಚ್ಛೇದ ಮಾಡಿದ ಹುಡುಗಿಯ ಪುನರ್ವಿವಾಹ

ಶಸ್ತ್ರಧಾರಿಗಳು ಮನೆ ನುಗ್ಗಿದರು

ಆರು ಮಂದಿ ಗಾಯಗೊಂಡರು.

ಲಾಹೋರು ಜುಲೈ ೧೭

ಲಾಹೋರಿನ ಚುನಿಯಾನ್ ಗ್ರಾಮದಲ್ಲಿ ಒಂದು ಭೀಕರ ಅತ್ಯಾಚಾರವು ನಡೆದಿದೆ. ಹದಿನೆರಡು ಮಂದಿ ಹಳ್ಳಿಗರು ಮನೆನುಗ್ಗಿ ವಿವಾಹಿತಳಾಗಿದ್ದ ಒಬ್ಬಳು ತರುಣಿಯನ್ನು ಒಯ್ದರು. ಈ ತರುಣಿಯು ಚಿಕ್ಕವಳಾಗಿದ್ದಾಗ ಇವಳನ್ನು ಒಬ್ಬ ಮುಸ್ಲಿಮನಿಗೆ ವಿವಾಹಮಾಡಿಕೊಡಲಾಯಿತು. ಇವಳು ಪ್ರಾಯಕ್ಕೆ ಬಂದಾಗ ಇವಳ ಪಕ್ಷದವರಿಗೂ ಗಂಡನ ಪಕ್ಷದವರಿಗೂ ಒಳಜಗಳವೆದ್ದಿತು. ಪರಿಣಾಮವಾಗಿ ಹುಡುಗಿಯು ವಿವಾಹವಿಚ್ಛೇದ ಮಾಡಿಕೊಳ್ಳಬೇಕಾಯಿತು. ಇವಳನ್ನು ಆರಾಗ್ ಎಂಬ ಇನ್ನೊಬ್ಬ ಯುವಕನಿಗೆ ವಿವಾಹಮಾಡಿಕೊಡಲಾಯಿತು. ಮದುವೆಯಾದ ನಂತರ ವಧೂವರರು ಚುನಿಯಾನ್‌ಗೆ ವಿಹಾರಾರ್ಥವಾಗಿ ಬಂದರು. ಮೊನ್ನೆ, ಮಧ್ಯರಾತ್ರಿ ಅವರು ಇಳಿದಿದ್ದ ಮನೆಗೆ ೧೨ ಜನರು ನುಗ್ಗಿ ಹುಡುಗಿಯನ್ನೆತ್ತಿಕೊಂಡು ಓಡಿಬಿಟ್ಟರು. ಕೆಲವರು ಜಖಂಗೊಂಡಿರುವರು.

ವಿಧವೆಯನ್ನು ಕೊಂದಿರುವರು!

ವಸ್ತ್ರವನ್ನು ಕುತ್ತಿಗೆಗೆ ಕಟ್ಟಿದರು!

ಮೀರತ್, ಜುಲೈ ೧೭.

ಮುಹಾರಿ ಹರಪಾಲರೆಂಬ ವಿಧವೆ ಶ್ರೀಮತಿ ಕೃಪಾದೇವಿ ಎಂಬ ೬೦ ವರ್ಷ ಪ್ರಾಯದ ಹೆಂಗಸನ್ನು ಇಲ್ಲಿಯ ಜುಮ್ಮಾ ಮಸೀದಿಯ ಬಳಿ ಕೊಂದಿಕ್ಕಿರುವರು. ನಗಗಳಿಷ್ಟಿಟ್ಟು ಬಡ್ಡಿಗೆ ದುಡ್ಡು ಕೊಡುವುದೇ ಇವಳ ಗುಪ್ತವ್ಯಾಪಾರವಾಗಿತ್ತು. ಕುತ್ತಿಗೆಗೂ ಕೈಗಳಿಗೂ ವಸ್ತ್ರವನ್ನು ಕಟ್ಟಿದ್ದರು. ಪೋಲಿಸರು ತನಿಖೆ ನಡೆಸುತ್ತಿರುವರು.

ಕ್ವಿನೀನ ವೈಪರೀತ್ಯ

ಸಿಂಹಳ ದ್ವೀಪದ ಕೊಲಂಬೋ ನಗರದಲ್ಲಿ ೧೧ ವರ್ಷದ ಪ್ಯಾರೆನ್ಸ್ ಪಾಲ್ಸೆನ್ ಎಂಬ ಹುಡುಗಿಗೆ ಪ್ರವರ್ತಿಗಾಗಿ ಔಷಧಿಯನ್ನು ಕೊಡಬೇಕೆಂದು ಉದ್ದೇಶಿಸಿ ತಾಯಿಯಾದವಳು ಕ್ವಿನೀನನ್ನು ನೀರಿನಲ್ಲಿ ಕರಗಿಸಿ ಕುಡಿಸಿಬಿಟ್ಟಳು. ಪ್ರವರ್ತಿಯ ಔಷಧಿಯ ಪರಿಮಾಣಕ್ಕೆ ಕ್ವಿನೀನನ್ನು ಕರಗಿಸಿಕೊಟ್ಟುದರಿಂದ ಕ್ವಿನೀನ ಪರಿಮಾಣವು ಮಿತಿಮೀರಿ, ಹುಡುಗಿಗೆ ಅಸ್ವಾಸ್ಥ್ಯವುಂಟಾಯಿತು. ಆಸ್ಪತ್ರೆಗೆ ಸಾಗಿಸಲ್ಪಟ್ಟ ಸ್ವಲ್ಪ ಹೊತ್ತಿನೊಳಗಾಗಿ ಹುಡುಗಿಯು ಮೃತಳಾದಳು. ದೊಡ್ಡವರಿಗೆ ಕೊಡುವ ಕ್ವಿನೀನ ಪರಿಮಾಣದಿಂದ ೩ ಗ್ರೇನಗಳಿಗಿಂತ ಹೆಚ್ಚು ಹುಡುಗಿಗೆ ಕರಗಿಸಿ ಕುಡಿಸಿದ ೨೪೦ ಗ್ರೇನಗಳಷ್ಟಿದ್ದು ವೈದ್ಯರು ಊಹಿಸಿರುವರು.

ಗ್ರಾಮಾಭಿವೃದ್ಧಿ

ಸ್ವಗ್ರಾಮವನ್ನು ದೂರದಲ್ಲಿ ಹಳ್ಳಿ ವಿದ್ಯಾವಂತರಿರುವರು. ಆದರೆ ಸ್ವಗ್ರಾಮಾಭಿಮಾನವನ್ನು ಕಾಯ್ದುಕೊಂಡು ಪರಿಶೀಲಿಸುವ ಮಹನೀಯರೆಂದು ಇಂಥವರ ಕಳಂಕಗಳು ಕಣ್ಣಿಗೆ ಕಾಣುತ್ತವೆ. ಡಂಕ್ಟರು ಪರಂಜಪೆ ಎಂಬವರು ತಮ್ಮ ಜನ್ಮಸ್ಥಾನವಾದ ಮುರುಡ್ ಗ್ರಾಮದಲ್ಲಿ ಸರ್ಬಂಧ ಪ್ರಾಥಮಿಕ ವಿದ್ಯಾಭ್ಯಾಸವನ್ನು ಸ್ವಂತ ಖರ್ಚಿನಿಂದ ಪ್ರಾರಂಭಿಸಿರುವರು. ಲಾರ್ಡ್ ಸಿಂಹರವರೂ ತಮ್ಮ ಸ್ವಗ್ರಾಮದ ಅಭಿವೃದ್ಧಿಗೆ ತಂದರು. ದಿವಂಗತ ಚಿತ್ತರಂಜನ ದಾಸರೂ, ಸರ್ ಪುರುಷೋತ್ತಮದಾಸ್ ಠಾಕೂರ್ ದಾಸರವರೂ ಗ್ರಾಮಾಭಿವೃದ್ಧಿಯನ್ನು ತಮ್ಮ ಧ್ಯೇಯವಾಗಿಟ್ಟುಕೊಂಡಿದ್ದರು. ಈಗ ವಿದ್ಯಾವಂತರಾಗಿರುವವರೆಲ್ಲಾ ಸ್ವಗ್ರಾಮದ ವಿಷಯದಲ್ಲಿ ನಾಚಿಕೆಪಡದೆ, ಅಲ್ಲಿನ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಸೊಂಟಕಟ್ಟಿದರೆ, ದೇಶಾಭಿವೃದ್ಧಿಯು ತಾನಾಗಿ ನಡೆಯುವುದು.

ತಂತ್ರದ ಪರಮಾವಧಿ

ಡಿಸ್ಟ್ರಿಕ್ಟ್ ಮತ್ತು ಸಷನ್ಸ್ ಜಡ್ಜರ ಮುಂದೆ ಇಂದೊರ್ ಮಹಾರಾಜರ ವಿರುದ್ಧ ಕಾಂಗರಲ್ಲೊಬ್ಬರ ಪಿಳಿಯನೆಂದೂ ಹೇಳಿಕೊಳ್ಳುತ್ತಿದ್ದ ದೇಸಾಯ್ ಎಂಬವನು ಲಾಹೋರಿನ ಒಂದು ವಿಮೆ ಕಂಪೆನಿಗೆ ಹೋಗಿ, ಅವರ ಏಜನ್ಸಿಯನ್ನು ಪಡೆದು, ಕಾಶ್ಮೀರ ದೇಶಕ್ಕೆ ಹೋದಂತೆ ನಟಿಸಿ, ಇಂಡೋರ್ ಮಹಾರಾಜರ ಜೀವವಿಮೆಗೆ ಪ್ರೀಮಿಯಂ ತಂದುದಾಗಿ ಹೇಳಿ ಭಾರಿ ಮೊಬಲಗಿನ ಎರಡು ಚೆಕ್‌ಗಳನ್ನು ಕಂಪೆನಿಗೆ ಒಪ್ಪಿಸಿದನು. ಈ ಪ್ರೀಮಿಯಂ ಮೇಲೆ ೨೦೪ ರೂಪಾಯಿಗಳನ್ನು ಕಂಪೆನಿಯಿಂದ ಕಮಿಶನ್ ಪಡೆದು ಪರಾರಿಯಾದನು. ಇನ್ನೂ ಪತ್ತೆಯಾಗಿರುವುದಿಲ್ಲ.

ಗ್ರಾಮಾಭಿವೃದ್ಧಿ

ಗ್ರಾಮಾಂತರ ಜನರಿಗೆ ಮಾರ್ಕೆಟ್ ಪ್ರದೇಶಗಳ ಅನುಕೂಲಗಳನ್ನು ಒದಗಿಸಿಕೊಡಲು ಗ್ರಾಮಾಂತರಗಳಿಗೆ ರಸ್ತೆ ಸಂಬಂಧವು ಬೇಕಾಗಿರುವುದು ಅತ್ಯಗತ್ಯ. ಮದ್ರಾಸ್ ಸರಕಾರದವರಿಂದ ನೇಮಕವಾಗಿರುವ ಸ್ಪೆಷಲ್ ಎಜನ್ಸಿಯವರೊಬ್ಬರು, ಮದ್ರಾಸು ಅಧಿಪತ್ಯದ ರಸ್ತೆಗಳನ್ನು ಅಭಿವೃದ್ಧಿಗೆ ತರುವುದಕ್ಕೂ, ಗ್ರಾಮಾಂತರಗಳಿಗೆ ಹೊಸರಸ್ತೆಗಳನ್ನು ಹಾಕುವುದಕ್ಕೂ ಕೆಲವು ಸೇತುವೆಗಳನ್ನು ಕಟ್ಟಿಸುವುದಕ್ಕೂ ಮಾಡಿ ಕೋಟಿ ರೂಪಾಯಿಗಳ ಒಂದು ಸ್ಕೀಮನ್ನು ತಯಾರಿಸಿರುವರು. ಇದರಲ್ಲಿ ಒಂದು ಕೋಟಿ ರೂಪಾಯಿಯು ಸೇತುವೆಗಳಿಗಾಗಿ ಖರ್ಚಾಗುವುದು.

ದೊಡ್ಡ ಬಸ್ ಜಂಕ್ಷನ್

ಬಸ್‌ಗಳ ಸಂಚಾರವು ಇಂಡಿಯದ ಮೇಲೆಲ್ಲಾ ಬಹಳವಾಗಿ ಹೆಚ್ಚುತ್ತಿದೆ. ಬಸ್‌ಸಂಚಾರವಿಲ್ಲದ ರಸ್ತೆಗಳೇ ಇಂಡಿಯದಲ್ಲಿಲ್ಲವೆನ್ನಬಹುದು. ... ದಲ್ಲಿರುವ ... ಅತ್ಯಂತ ದೊಡ್ಡ ಬಸ್ ಜಂಕ್ಷನ್ ಎಂದು ಹೇಳಬಹುದು.

Wanted.

One capital Organizer on decent pay and All wance for the District of South Kanara, Madras for a well established Life Office of over 25 years standing. Gentlemen of experience and educational qualifications and who can guarantee business may apply.

Box N

C/o Swadeshabhimani

ANNOUNCEMENT

Messrs H. Rama Rao & Sons,

Snuff Manufacturers

CAR STREET MANGALORE

Have much pleasure in announcing to the public that for the convenience of their numerous customers they have opened a Branch opposite The Webster Market where a fresh supply of all varieties of their famous snuff is always available.

ಕಡಮೆ ಬೆಲೆ.

ಹೊಸ ಕಂಪೆನಿ. **ಗ್ಯಾರಂಟಿ ಮಾಲು.**

ಗ್ಯಾರಂಟಿಯಾದ ಹೂವಿನ ಮತ್ತು ತರಕಾರಿ ಬೀಜಗಳು—ಹಣ್ಣಿನ ಗಿಡಗಳು, ಹೂವಿನ ಗಿಡಗಳು, ಹೂವುಗಳು ತರಕಾರಿ ಹಣ್ಣುಗಳು, ಸುಗಂಧ ದ್ರವ್ಯಗಳು ಬೇಕಾದರೆ ನಮ್ಮ ಹೊಸ ಕಂಪೆನಿಗೆ ಬರೆಯಿರಿ—ಕೆಟಲಾಗು ಇನಾಮು.

ಮ್ಯಾನೇಜರ್—ರೋಯಲ್ ಸೀಡ್ ಕಂಪೆನಿ

ನಂ. 27-B ಸ್ಟ್ರೀಟ್ ಇಲ್‌ಲ್‌ಕೋಲ್,

ಆಲಸೂರು- B cont

ಅನುಕ್ರಮಣಿಕೆ.

ಚಿತ್ರ ೨
ಸಾಹಿತ್ಯ ಸಂಗ್ರಹ ೪
ಬಾಹ್ಯಪ್ರಪಂಚ ೬
ನಮ್ಮ ಜಿಲ್ಲಾ ಬೋರ್ಡು ೮
ಅಗ್ರಲೇಖ
ಸ್ಫುಟವಿಚಾರಗಳು ೧೦
ಗ್ರಾಮಾಭ್ಯುದಯ ೧೦
ವರ್ತಮಾನ ಸಂಗ್ರಹ
ಕರ್ನಾಟಕ ವರ್ತಮಾನ ೧೪
ಮಂಗಳೂರು, ತಾಲೂಕುಗಳಿಂದ ೧೫
ವಿವಿಧ ಸಮಾಚಾರಗಳು ೧೬
ನಡೆದ ಕತೆಗಳು ೧೮

ಸ್ವದೇಶಾಭಿಮಾನಿ

ತಾ. ೧೯ನೇ ಶುಕ್ರವಾರ ಜುಲೈ ೧೯೩೫

ಗ್ರಾಮಾಭ್ಯುದಯ.

ಗ್ರಾಮಾಭ್ಯುದಯದ ಸಾಧನೆಯೇ ಈಗಣ ಮುಖ್ಯ ಕರ್ತವ್ಯವೆಂದೂ ಸರಕಾರವೂ, ಕಾಂಗ್ರೆಸ್ ಸಭೆಯೂ, ಇತರ ಸರ್ವ ಪಕ್ಷಗಳೂ ಒಪ್ಪಿಕೊಂಡಿವೆ ಪಂಜಾಬು ಸರಕಾರವು ಈ ಸಾಧನೆಯನ್ನು ಕೈಕೊಂಡು ಕೆಲವು ವರ್ಷಗಳಾಗಿವೆ ಅಲ್ಲಿ ಈ ಇಲಾಖೆಯು ಒಬ್ಬ ಕಮಿಶನರರ ಕೈಯಲ್ಲಿದೆ ಅವರು ತಮ್ಮ ಸಾಧನಗಳನ್ನು ವಿವರಿಸಿ ಒಂದು ಹಸ್ತಕವನ್ನು ಪ್ರಕಟಿಸಿರುವರು ಅದರಿಂದ, ನಮ್ಮ ಸರಕಾರವು ಈಗ ಇದೇ ಕಾರ್ಯಕ್ಕಾಗಿ ಪಡೆದ ೧೬ ಲಕ್ಷ ರೂಪಾಯಿಗಳನ್ನು ಹೇಗೆ ಉತ್ತಮವಾಗಿ ವಿನಿಯೋಗಿಸಬಹುದೆಂಬುದಕ್ಕೆ ಬೇಕನ್ನು ಸೂಚನೆಗಳು ದೊರೆವುವು ಸರಕಾರಕ್ಕೆ ಬೇಗೆಯೋ ಹಾಗೆಯೋ ಇತರ ಗ್ರಾಮೋನ್ನತಿ ಸಾಧಕರಿಗೂ ಇವು ಉಪಯೋಗಕ್ಕೆ ಬೀಳದಿರವು

ಮೊದಲಾಗಿ ಈ ಸಾಧಕರು ಯಾರೋ ಇರಲಿ, ಗ್ರಾಮಸ್ಥರ ವಿಶ್ವಾಸವನ್ನು ಪಡೆದುಕೊಳ್ಳಲು ಪ್ರಯತ್ನಿಸಬೇಕು ಇದಕ್ಕಾಗಿ ಗ್ರಾಮಸ್ಥರೊಡನೆ ತುಂಬ ಸಹಾನುಭೂತಿಯಿಂದ, ವರ್ತಿಸಬೇಕು ಸಹಾನುಭೂತಿಯುಳ್ಳವರೊಡನೆ ಕೃತಜ್ಞಭಾವದಿಂದ ನಡೆದುಕೊಳ್ಳುವುದು ನಮ್ಮ ಹಳ್ಳಿಗರ ಲಕ್ಷಣವೇ ಆಗಿದೆ ಪಂಜಾಬಿನಲ್ಲಿ ಹಳ್ಳಿಗಳೆಲ್ಲವೂ ಈ ಅಭ್ಯುದಯ ಸಾಧಕರಲ್ಲಿ ಪೂರ್ಣ ವಿಶ್ವಾಸದಿಂದ ನಡೆದುಕೊಳ್ಳುತ್ತಾರೆ, ಆದರೆ, ಮೇಲಧಿಕಾರಿಗಳ ದುರ್ಲಕ್ಷವು ಮಾತ್ರ ಹೆಚ್ಚಾಗಿದೆ, ಎಂದರೆ, ಅಗತ್ಯವಾಗಿರುವ ಧನಸಹಾಯವು ದೊರೆವುದು ಕಷ್ಟವಾಗಿದೆ ಗ್ರಾಮಾಭ್ಯುದಯ ವಿಷಯವನ್ನು ಶತಮಾನಕಾಲದಿಂದ ಮರೆತು ಹೋದದರಿಂದ, ಇಂದು ಅದನ್ನು ಕೈಕೊಂಡು ವಿಜಯ ಹೊಂದಬೇಕಾದರೆ ಹಣವು ಬಹಳ ಬೇಕು

ಎರಡನೆದಾಗಿ, ಗ್ರಾಮಸ್ಥರಿಗೇ ಅಭ್ಯುದಯಾಕಾಂಕ್ಷೆ ಇಲ್ಲವಾದಲ್ಲಿ, ಈ ಕೆಲಸದ ಗೋಜಿಗೆ ಹೋಗುವುದೂ ಅನ್ಯಾಯವಾಗುವುದು, ಎಂದು ಹಲವರು ಸಾರುವುದುಂಟು ಕೇವಲ ಪಶುಗಳಿಗೇ ಆದರೂ, ತನ್ನ ರಕ್ಷಣೆ ಬೇಡವೆಂದೇನೂ ಇಲ್ಲವಷ್ಟೆ ಆದುದರಿಂದ, ಮೇಲಣ ಅಧಿಕಾರಿಗಳು ಹಳ್ಳಿಗಳಲ್ಲಿ ಅವತಾರವೆತ್ತಿ, ಅವರೊಡನೆ ಕಲೆತು, ಸಾಧಿಸುವುದರಿಂದ ಕೃತಾರ್ಥರಾಗುವರು ಸೂಚನೆಗಳಿಂದಲೇ ಪ್ರಯೋಜನವಿಲ್ಲ, ಸೂಚನೆಯೊಡನೆ ಹಣವೂ ಧಾರಾಳ ಹರಿಯಬೇಕು

ನೀರಾವರಿ ಕೆಲಸ, ವಿದ್ಯುಚ್ಛಕ್ತಿಯ ಉತ್ಪಾದನ ಮೊದಲಾದುವುಗಳಿಗೆ ಸೂಚನೆಗಳು ಬಂದಂತೆಯೆ ಹಣವೂ ಒದಗಿದ ಕಾರಣವೇ, ಎಲ್ಲೆಲ್ಲಿಯೂ ಇವುಗಳಿಂದ ಪ್ರಯೋಜನಗಳುಂಟಾಗಿ, ಅಭ್ಯುದಯವಾಗಿದೆ ಹಣ ವ್ಯಯವಾದುದಕ್ಕೆ ತಕ್ಕ ಆಯವೂ ಬರುತ್ತಿದೆ ಹಾಗೆಂದು, ಆರೋಗ್ಯರಕ್ಷಣೆ ಮತ್ತು ಶಿಕ್ಷಣ ಪ್ರಚಾರ,—ಇವುಗಳಿಗಾಗಿ ವ್ಯಯವಾಗುವ ಮೊಬಲಗು, ಬಡ್ಡಿಯನ್ನು ಸಹ ಹಿಂದೆ ತರಲಾರದೆಂದು ತಿಳಿದೇ, ಇವುಗಳಿಗಾಗಿ ಅಗತ್ಯ ವ್ಯಯಿಸಬೇಕಾಗಿದೆ.

ಉತ್ತಮ ರೀತಿಯ ಕೃಷಿ, ಕೃಷಿಕಾರ್ಯದಲ್ಲಿ ಅವಶ್ಯವಾಗದಂತಹ ಪ್ರಯತ್ನ, ಉತ್ಪನ್ನಗಳ ಮಾರಾಟಕ್ಕೆ ಅನುಕೂಲತೆಗಳು,—ಇವೇ ಮುಖ್ಯವಾಗಿ ಪ್ರಚಾರಕ್ಕೆ ಬರುವಂತಾಗಬೇಕು ನೀರಾಶ್ರಯ ಕಡಿಮೆಯಿರುವ ನಮ್ಮ ಸಂಸ್ಥಾನದಲ್ಲಿ, ನೀರಿನ ಪುರವರೆಗಾಗಿ ಮೊದಲ ಪ್ರಯತ್ನಗಳಾಗಬೇಕೆಂದು ಮುಖ್ಯ ಮಂತ್ರಿಗಳು ಸೂಚಿಸಿರುವುದು ನ್ಯಾಯವಾಗಿದೆ

ಪುರಾತನ ಕಾಲದ ರೀತಿ ಪದ್ಧತಿಗಳನ್ನು ತ್ಯಜಿಸಲು ಹಳ್ಳಿಗರಲ್ಲಿ ಬಹಳ ಅಸಡ್ಡೆ ಇದೆ, ಆರ್ಥಿಕ ದುರವಸ್ಥೆಯಿಂದಾಗಿ, ಈ ಅಸಡ್ಡೆಗೆ ಬಲಬಂದಿದೆ ಹಳ್ಳಿಯಲ್ಲಿ ನಡೆವ ಶುಭ ಶೋಭನಾದಿಗಳಿಗೂ, ಜಾತ್ರೆ ಉತ್ಸವಾದಿಗಳಿಗೂ ನಡೆವ ವಿಶೇಷ ವ್ಯಯವನ್ನು ತಡೆವುದು ಕಷ್ಟ, ಇದಕ್ಕಾಗಿ ಸಾಲ ಎತ್ತುತ್ತಿರುವುದೂ, ಹಗುರವಾಗಿ ಪಾವತಿಮಾಡುವಂತೆ ತಾನೆಣಿಸಿ, ಕೊನೆಗೆ ಎಲ್ಲವನ್ನು ಕಳೆದುಕೊಳ್ಳುವುದೂ, ಹಳ್ಳಿಗನ ರೂಢಿಯಾಗಿ ಬಂದಿದೆ ಒಂದು ವೇಳೆ ಕೈಯಲ್ಲಿ ಹೆಚ್ಚಿಗೆ ಹಣವಿದ್ದರೂ, ಸಾಲ ಪಾವತಿಗಾಗಿ ಹಳ್ಳಿಗರು ಪ್ರಯತ್ನಿಸುವುದು ಕಡಿಮೆ ಈಗ ಮುಗ್ಗಟ್ಟಿನ ಪ್ರಭಾವದಿಂದಂತೂ, ಸಾಲ ಕೊಟ್ಟರೆ ಧರ್ಮ ಮಾಡಿದ ಹಾಗೆಣಿಸಬೇಕಾಗಿದೆ, ಆದರೆ, ಇದರಿಂದಲೇ, ಮುಂದೆ ಸಾಲ ಸಿಗುವುದೂ ಕಷ್ಟವಾಗಿದೆ ಅನವಶ್ಯಕವಾದುವುಗಳಿಗಾಗಿ ಅತಿಶಯವಾದ ಖರ್ಚನ್ನು ಮಾಡುವ ಅಭ್ಯಾಸವು ಮಾಯವಾಗುವಂತೆ ಪ್ರಚಾರವು ಅಗತ್ಯವಾಗಿದೆ

ಹೆಣ್ಣು ಮಕ್ಕಳ ವಿದ್ಯಾಭ್ಯಾಸವು ಮತ್ತೊಂದು ಅಗತ್ಯ ವಿಚಾರ ಪಂಜಾಬಿನ ಕಮಿಶನರರ ಅಭಿಪ್ರಾಯದಲ್ಲಿ ಗ್ರಾಮಾಭ್ಯುದಯಕ್ಕೆ ವ್ಯಯವಾಗುವ ಹಣದ ಉತ್ತಮಾಂಶವನ್ನು ಇದಕ್ಕಾಗಿಯೆ ವ್ಯಯಿಸಬೇಕೆಂದಿದೆ ಸಾಮಾಜಿಕ, ಮತ್ತು ಆರ್ಥಿಕ ಪ್ರಗತಿಗಳಿಗೆ ಇದೇ ಮುಖ್ಯ ಕಾರಣವಾದೀತೆಂದು ಅವರು ನಂಬಿರುತ್ತಾರೆ ಹಣದ ನಿಜವಾದ ಸದ್ವಿನಿಯೋಗವೆಂದರೆ ಇದೇ

ಆರೋಗ್ಯ ಮತ್ತು ತಿಳಿವಳಿಕೆ,—ಇವೆರಡರ ಅಭ್ಯುದಯವೇ ಗ್ರಾಮಾಭ್ಯುದಯ. ಹಾಳಾಗಿ ನಷ್ಟವಾಗುವುದಾವುದೋ ಅದನ್ನು ಉಪಯೋಗಕ್ಕೆ ಬರುವಂತೆ ಮಾಡುವುದೇ ಅಭ್ಯುದಯ ಸಾಧನೆ ಎಲ್ಲಕ್ಕೂ ಮೊದಲಾಗಿ ಕೃಷಿಕನ ಸಂಪನ್ನತೆಯ ಕಡೆಗೇ ಲಕ್ಷ್ಯವನ್ನಿಡುವುದರಿಂದಲೆ ಗ್ರಾಮೋದ್ಧಾರವಾಗುವುದು

ಬಿ ಎಲ್. ಸಾಕಾಗಿದೆಯೋ?

ಈ ವರ್ಷದ ಪರೀಕ್ಷೆಗೆ ೪೯೧ ಮಂದಿ ಕೂತರು, ೧೨೪ ಪಾಸಾದರು, ೩೬೭ ನಾಪಾಸಾದರು ಇವರೊಳಗೂ ೩೩೧ ಫೈಲಾದವರು ಕ್ರಿಮಿನಲ್ ಕಾನೂನು ಕುರಿತಾದ ಪರೀಕ್ಷೆಯಲ್ಲಿ' ಸೇಕಡಾ ೭೭ರಂತೆ ಈ ವಿಭಾಗದಲ್ಲಿಯೆ ಫೈಲಾದುದನ್ನು ನೋಡುವಾಗ, ಮದ್ರಾಸಿನ ಮತ್ತು ತ್ರಿವೆಂಡ್ರಮಿನ ಕಾಲೇಜುಗಳೆರಡರಲ್ಲೂ ಏನೋ ವಿಶೇಷ ಮಾರ್ಪಾಟು ಉಂಟಾದಂತೆ ತೋರುತ್ತಿದೆ ೧೨೨ ಮಂದಿ ಉಳಿದೆರಡು ಭಾಗಗಳಲ್ಲಿ ಪಾಸಾಗಿ, ಕ್ರಿಮಿನಲ್ ಕಾನೂನಿನಲ್ಲಿ ಮಾತ್ರ ಫೈಲಾಗಿ, ಸಂಗೆಟ್ಟಿರುವರು ಕ್ರಿಮಿನಲ್ ಬಾಬಿನಲ್ಲಿ ಹೀಗೆ ಮೋಸಹೋಗುವಂತೆ, ಎರಡು ಕಾಲೇಜುಗಳೇ ಏಕೆ ಸಿಕ್ಕಿಬಿದ್ದುವು?—ವಿಚಾರ ಯೋಗ್ಯವಾಗಿಲ್ಲವೇ?



ಅರಸುಗಳ ದಶೆ

ಮಹಾಯುದ್ಧದ ಕೊನೆಯಲ್ಲಿ, ಹಲವರಸರು ತಾವಾಗಿ ರಾಜ್ಯದಿಂದ ಪಲಾಯನ ಮಾಡಿದರು, ಹಲವರನ್ನು ಪಲಾಯನ ಮಾಡಿಸಿದರು ಈಗ, ಪುನಃ 'ಅರಸುಗಳಿಗಿದು ಪೀರ' ಎಂತಾಗಿದೆ ರಾಜವಂಶವನ್ನೆ ಹೊರಕ್ಕಟ್ಟಿರುವ ಆಸ್ಟ್ರಿಯಾ ರಾಜ್ಯಕ್ಕೆ, ಆ ವಂಶದ ಮೇಲೆ ಹಾಕಿದ ಬಹಿಷ್ಕಾರ ತೆಗೆದಿಕ್ಕಿ, ಅರಸನನ್ನೆ ಪುನಃ ತರಿಸಿಕೊಳ್ಳಬೇಕೆಂದಾಗಿದೆ ಗ್ರೀಕ್‌ದಲ್ಲಿ, ರಾಜನನ್ನು ಕರೆಸಿಕೊಳ್ಳಬೇಕಾಗಿ ಅಲ್ಲಿನ ಪಾರ್ಲಿಮೆಂಟು ನಿರ್ಧರಿಸಿ, ಅರಸರ ಹೆಸರೆತ್ತಿ ಜಯಕಾರವನ್ನು ಮಾಡಿದೆ, ಇದುವರೆಗೆ ಆಳಿದ ಪ್ರಜಾಪಕ್ಷಗಳಲ್ಲಿ ದಂಗೆಗಳಾಗಿವೆ ಕೊಡತಕ್ಕ ಪೊಗದಿ ತೆತ್ತಿಲ್ಲದ ಐರ್ಲಾಂಡು ಅಷ್ಟು ಅನ್ಯಾಯ ಮಾಡಿದುದಿಲ್ಲ, ಆದರೆ ಬ್ರಿಟಿಷ ರಾಜತ್ವವೇ ಬೇಡವೆನ್ನುವುದು ಅಖಂಡ ಅಪರಾಧವೆಂದು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಪ್ರಸ್ತಾಪ ಬಂದಿದೆ ಪ್ರಜಾಸತ್ತೆಯೇ ಮುಖ್ಯವಾಗಿರುವ ದೇಶಗಳಲ್ಲಿ, ರಾಜಭಕ್ತಿಯು ಅಲ್ಲಿಲ್ಲದ ರಾಜರಲ್ಲೇ ಧಾರಾಳವಾಗಿರುವುದು ವಿಚಿತ್ರವಲ್ಲವೆ? ಜರ್ಮನಿ, ಅಫಘಾನಿಸ್ಥಾನ, ಸ್ಪೈನ್ ದೇಶಗಳು ಏನಂತೆ?

ದಾಕಿಗೆ ವಿರೋಧ:

ಜಯಸಿಂಹ ಸ್ವಾಮಿಗಳೆಂದರೆ ಎರ್ನಾಕುಲ ಸಮಾಜದಲ್ಲಿ ಹೆಸರುಳ್ಳವರು, ಒನರೆರಿ ಬೆಂಚ್ ಮೆಜಿಸ್ಟ್ರೇಟರಾಗಿದ್ದವರು ಮಕ್ಕಳಿಗೆ ದಾಕು ಹಾಕಿಸಲು ಹಾಜರುಪಡಿಸುವುದಿಲ್ಲವಾಗಿ ಇವರ ಮೇಲೆ ಮೊಕದ್ದಮೆ, "ಇದು ನನ್ನ ಮನಸ್ಸಾಕ್ಷಿಗೆ ವಿರೋಧ, ನಾವು ಸಸ್ಯಾಹಾರಿಗಳು, ಪ್ರಾಣಿಜನ್ಯವಾದ ದಾಕನ್ನು ನನ್ನ ಮಕ್ಕಳ ರಕ್ತದಲ್ಲಿ ಬೆರಸುವುದಾಗದು, ದಾಕಿನಿಂದ ಸಿಡುಬು ಅನಾಹುತವೇನೂ ಶಾಂತವಾಗದು, ಕಡಿಮೆಯಾಗದು, ಅದರ ಬದಲಾಗಿ ನಾನಾ ಹೊಸ ರೋಗಗಳು ತಲೆದೋರಿದ್ದುದುಂಟು, ಧರ್ಮ ಸ್ವಾತಂತ್ರ್ಯವು ಇರುವ ಹಾಗೆಯೇ ಚಿಕಿತ್ಸಾ ಸ್ವಾತಂತ್ರ್ಯವೂ ಅಗತ್ಯವಿದೆ ಎಂದು ಹೇಳಿದ್ದಲ್ಲದೆ, ಹಲವು ಶಾಸ್ತ್ರಜ್ಞರ ಲೇಖಗಳನ್ನೂ ಸಾಕ್ಷಿಗಾಗಿ ಕೊಟ್ಟರು ಈ ವಿಷಯವನ್ನು ಹೈಕೋರ್ಟಿನಲ್ಲಿ ತನಿಖಿಗಬೇಕಾಗಿ ಅವರ ಅರ್ಜಿ ಈ ಅರ್ಜಿಯನ್ನು ಹೈಕೋರ್ಟಿನಲ್ಲಿ ಇತ್ಯರ್ಥಿಸುವುದರ ಪರಿಣಾಮವು ಹೆಚ್ಚಿನದಾಗಿದೆ ಎಂಬುದರಿಂದ ಮಾತ್ರ ಈ ವೃತ್ತಾಂತಕ್ಕೆ ಇಷ್ಟು ಮಹತ್ವ ಕೊಡಬೇಕಾಗಿದೆ. ದಾಕಿನ ಪರಿಣಾಮವು ಉತ್ತಮವೆಂಬುದಕ್ಕೆ ಯುರೋಪ ಅಮೇರಿಕಗಳಲ್ಲೂ ಆಕ್ಷೇಪವೆತ್ತುವ ಪಂಗಡಗಳು ಬಹಳವಿವೆ. ಇತ್ತ ದಾಕು ಹಾಕಿದವರಿಗೆ ಸಿಡುಬಿನ ಗಂಡಾಂತರ ಕಡಿಮೆ ಎಂಬ ರುಜುವಾತೂ' ಪ್ರಸಿದ್ಧವಿದೆ ಇದರಲ್ಲಿನ 'ಚಿಕಿತ್ಸಾ ಸ್ವಾತಂತ್ರ್ಯ' ವಿಚಾರ ಮಾತ್ರ ನೋಡಬೇಕು

ಕ್ವೆಟ್ಟಾ ಸ್ಥಿತಿ

ಕರ್ನಲ್ ರಸೆಲ್‌ರವರು ಆ ಪ್ರಾಂತ್ಯಕ್ಕೆ ಹೋಗಿದ್ದು, ಹೂತುಹೋದವರ ಕಳೇಬರಗಳ ವಿಷಯವಾಗಿ ಬರೆಯುತ್ತಾ,—ಇದೊಂದು ದೊಡ್ಡ ಸಮಸ್ಯೆಯಾಗಿದೆ. ಹೆಣಗಳನ್ನೆತ್ತುವವರಿಗೆ ಮೋರೆಗೆ ಮುಸುಕು, ಕೈಗಳಿಗೆ ಚರ್ಮದ ಚೀಲಗಳು ಇಟ್ಟಿದ್ದರೂ, ಅವರಿಗೂ ತನಗೂ ಬಲು ಅಸಹ್ಯವೂ ಅಸಹನೀಯವೂ ಆಗಿ ಈ ಉತ್ತರಕ್ರಿಯಾ ಕಾರ್ಯವು ತೋರಿತು ಇದರಲ್ಲೂ ಅತಿ ಬಾಧಕಕರ ವಿಷಯವೆಂದರೆ, ನೊಣಗಳು, ಇವು ಹೆಣಗಳಲ್ಲೇ ಹುಟ್ಟಿ ಬೆಳೆದ ರೋಗ ಪ್ರಸಾರಕ ಮಹಾ ಸಂಕಟವಾಗಿವೆ. ಜನಸಂಖ್ಯೆಯು ೬೬ ೭೦ ೦೦೦, ರೈಲ್ವೆ ಮೂಲಕ ಹೊರಟವರು ೩೧,೫೦೦, ಶಿಬಿರಗಳಲ್ಲಿ ೮೫೦೦, ದೊರೆತ ಹೆಣಗಳು ೨೫೦೦; ಸೈನಿಕರೇ ಮೊದಲಾಗಿ ೧೨೦೦೦ ಇದ್ದಾರೆ ಹೀಗೆ ೧೨ ಸಾವಿರದಿಂದ ೧೬ ಸಾವಿರದ ವರೆಗೆ ಹೆಣಗಳು ನೆಲದಲ್ಲಿ ಹೂತುಹೋಗಿವೆ (ಇನ್ನೆಷ್ಟೋ ಸಾವಿರ ಹೆಚ್ಚು ಇರಬಹುದು) ೩೦೦೦ ಜನರನ್ನಿನ್ನೂ ಕೆಲಸಕ್ಕಿಟ್ಟುಕೊಂಡು ಕಿರುಕಡೆಗಳಲ್ಲಿನ ಹೆಣಗಳನ್ನು ಎತ್ತುವರಾದರೂ, ಅದೇ ಒಂದು ಮಹಾರೋಗಕ್ಕೆ ಕಾರಣವಾಗಬಹುದೆಂದು, ಮುಂದೆ ಚಳಿಗಾಲದಲ್ಲಿ ಈ ಉದ್ಯಮಕ್ಕೆ ಮುಕ್ತಾಯ ಮಾಡುವರಂತೆ!"

ಇಂಡಿಯಾ ಆಕ್ಟು

ಈ ಮಹಾಮಸೂದೆಯನ್ನು ಆಗುವಷ್ಟು ಸಿಂಗಾರವಾಗುವಂತೆ ತಯಾರಿಸಿ, ಲೋರ್ಡ್ಸರು ಮಂಜೂರು ಮಾಡಿದಂತಾಗಿದೆ ಇನ್ನು ಇದಕ್ಕೆ ಭೂಪಾಶ್ಕೆಯ ಒಪ್ಪಕೊಟ್ಟು, ಭಾರತಿಗೆ ಇದನ್ನು ಪಾರ್ಲಿಮೆಂಟು ಒಪ್ಪಿಸುವುದು ಮಾತಿನ ಒಕ್ಕಣೆ ಹೇಗೂ ಇರಲಿ, ಸುಧಾರಣೆಗಳು ಎಂತಹವೇ ಇರಲಿ, ಅವನ್ನು ಕೈಕೊಂಡು ನಡೆಸುವುದೊಂದು ವಿಚಾರ ಬೇರೆ ಇದೇ ಮುಖ್ಯ ಸಿವಿಲ್ ಆಫೀಸರರು, ದೇಶೀಯ ರಾಜರುಗಳು, ಮುಖಂಡರು, ಆಯಾ ಮತಾಭಿಮಾನಿಗಳು ಇವರೇ ಅಲ್ಲದೆ ನಾನಾ ರಾಜಕೀಯ ಪಂಗಡ ಪಕ್ಷ ಪಕ್ಷಪಾತಗಳು ಇವೆಲ್ಲ ಅಂಗಗಳು ಒಂದಾಗಿ ಸೇರಿದರೆ ಮಾತ್ರ ಆಕ್ಟು ಕೆಲಸಕ್ಕೆ ಬಂದೀತು ಪಾರ್ಲಿಮೆಂಟು ಇಷ್ಟು ವರ್ಷ ಪ್ರಸವವೇದನೆಯನ್ನು ಕಳೆದದ್ದು ಸಾರ್ಥಕವಾದೀತು

ಮದ್ರಾಸು ಕೌನ್ಸಿಲಿನ ಆಯುರ್ವರ್ಧನೆ.

ಆಗೋಸ್ತು ತಾ ೧೦ರಲ್ಲಿ ಗವರ್ನರರು ಕೌನ್ಸಿಲಿಗೊಂದು ಸ್ವಸ್ತಿವಾಚನ ಹೇಳುವ ಸುಸಂದರ್ಭವೇ, ಕೌನ್ಸಿಲಿನ ಆಯುರ್ವರ್ಧನೆಗೂ ಸುಮುಹೂರ್ತವಾಗಬಹುದೆಂದೂ ಇನ್ನೊಂದು ಸಂವತ್ಸರದ ವರೆಗೂ ಇವರೇ ಮಹಾನುಭಾವರಾಗಿರುವ ಕೌನ್ಸಿಲರರೇ ಕೂಡಿ ಕೌನ್ಸಿಲು ನಡೆವ ಹಾಗೆ ಆಶ್ವಾಸನ ಕೊಡುವರೆಂದೂ ಅಂದಾಜು ಒರೆಯಲಾಗಿದೆ ಎರಡು ಪರ್ಯಾಯಗಳಷ್ಟು ಅವಧಿಗೆ ಒಂದೇ ಪರ್ಯಾಯಕ್ಕೆಂದು ಚುನಾವಣೆ ಹೊಂದಿದವರಿಂದ ಕೆಲಸ ಮಾಡಿಸಿಕೊಳ್ಳುವ ಭಾರವು ಸರಕಾರದ ಮೇಲೆ ಬಿದ್ದಿದೆ, ನಿಜ ಅದರಂತೆ ಈಗಲೆ ಚುನಾವಣೆಯಾದರೆ ಮರುವರ್ಷ ಚುನಾವಣೆಯು ಮಗದೊಮ್ಮೆ ಉಂಟಾಗಬಹುದು ಮಾತ್ರವಲ್ಲ, ಕಾಂಗ್ರೆಸ್ ಪಕ್ಷವೇ ಗೆದ್ದು ಒಳನುಗ್ಗಲೂ ಈಗ ಅವಕಾಶವಿದೆ. ಜಸ್ಟಿಸ್ ಪಕ್ಷದ ಕಥಾ ಕಾಲಕ್ಷೇಪಗಳು ಇನ್ನಷ್ಟು ಜರುಗಿ ಆ ಪಕ್ಷದವರ ಸಾಧನೆಗಳ ಮಹಾತ್ಮೆಯು ಸಂಪೂರ್ಣ ಪ್ರಕಟವಾಗುವುದಕ್ಕೂ ಒಂದು ವರ್ಷವಾದರೂ ಬೇಡವೆ?

ಮಂಗಳೂರು.

"ಸೆಂಟ್ರಲ್ ಬೋರ್ಡಿನಿಂದ ಬಂದಿರುವ ಹೊಸ ಸರ್ಕ್ಯುಲರ್ ಮೇರೆಗೆ ನಮ್ಮ ಜಿಲ್ಲೆಯ ಮುಂದಿನ ಆಯ ವ್ಯಯಗಳ ಪಟ್ಟಿಯನ್ನು ಚರ್ಚಿಸುವುದಕ್ಕಾಗಿ ಮತ್ತು ಅಧ್ಯಕ್ಷರ ಅನುಮತಿಯಿಂದ ಇನ್ನಿತರ ಹಲವು ವಿಷಯ ಗಳನ್ನು ಆಲೋಚಿಸುವುದಕ್ಕಾಗಿ ನಮ್ಮ ಜಿಲ್ಲಾ ಹರಿಜನ ಸಂಘದ ಸಭೆಯು ಮಂಗಳೂರಿನಲ್ಲಿರುವ ಡಿ. ಸಿ. ಮಿಶನ್ ಹೋಲಿನಲ್ಲಿ ತಾ. ೨೧-೭-೧೯೩೫ನೇ ಆದಿತ್ಯವಾರ ಸಾಯಂಕಾಲ ಘಂಟೆ ೫-೩೦ಕ್ಕೆ ಕೂಡಲಿಕ್ಕಿದೆ. ಸದಸ್ಯ ರೆಲ್ಲರೂ ಬರಬೇಕಾಗಿ ವಿನಂತಿ" ಎಂದು ಶ್ರೀ ಯಸ್ ಯಸ್ ಶಿಲ್ಲಿ, ಕಾರ್ಯದರ್ಶಿ ಇವರು ತಿಳಿಸುತ್ತಾರೆ.

ಮಂಗಳೂರಿನ ಕ್ವೆಟ್ಟಾ ಭೂಕಂಪನಿವಾರಣಾ ಸಮಿತಿಯು ಜಿಲ್ಲಾ ಕಲೆಕ್ಟರರಾದ ಮಿ। ಇ ಎಂ ಗೋನಾ ರವರ ಅಧ್ಯಕ್ಷತೆಯಲ್ಲಿ ಇಷ್ಟರ ತನಕ ರೂ. ೩೩೫೫ನ್ನು ಸಂಗ್ರಹಿಸಿರುತ್ತದೆ. ಕಮಿಟಿಯ ಸದಸ್ಯರು ಮನೆಮನೆಗೆ ತಿರುಗಿ ಒಟ್ಟು ೧೬೦೦ ರೂಪಾಯಿಗಳನ್ನು ಸಂಗ್ರಹಿಸಿರುವರು.

ಇಲ್ಲಿಯ ಪ್ರಸಿದ್ಧ ವಸ್ತ್ರ ವ್ಯಾಪಾರಿಗಳಾದ ಮೆಸರ್ಸ್ ಎಚ್. ರಾಮರಾವ್ ಎಂಡ್ ಸನ್ಸ್‌ರವರ ಶಾಖೆಯೊಂದು ಗಿರಾಕಿಗಳ ಮತ್ತು ಸಾರ್ವಜನಿಕ ಸೌಕರ್ಯಕ್ಕಾಗಿ ವೆಬೆಸ್ಟರ್ ಮಾರ್ಕೆಟಿನ ಎದುರಿನಲ್ಲಿ ತೆರೆಯಲಾಗಿದೆ.

ಈ ಜಿಲ್ಲೆಯಲ್ಲಿ ಅಬಕಾರಿ ಸರ್ಕಲ್ ಇನ್ಸ್ಪೆಕ್ಟರಾಗಿ ಹಲವು ವರ್ಷಗಳಿಂದ ತೃಪ್ತಿಕರವಾಗಿ ಕೆಲಸನಡೆಸಿ, ತಮ್ಮ ಅಧೀನವರ್ಗದ ಪರಿಚಿತರ ಮತ್ತು ಜನಸಾಮಾನ್ಯರ ಆಪಿಂದ ಪ್ರೀತಿಗೌರವಗಳನ್ನು ಸಂಪಾದಿಸಿರುವ ರಾವ್ ಸಾಹೇಬ್ ಸಿ. ರಾಘವನ್, ಬಿ ಎ ಇವರಿಗೆ ತಿರುಚಿನಾಪಳ್ಳಿಗೆ ವರ್ಗವಾಗಿದೆ. ಆ ಬಿರುದು ಶ್ರೀಯುತರಿಗೆ ದೊರಕಿದುದೂ ಈ ಜಿಲ್ಲೆಯಲ್ಲಿಯೇ ಎಂಬುದೂ ಸಂತೋಷಕರ. ಅವರ ಸ್ಥಾನದಲ್ಲಿ ಕಾಸರಗೋಡು ಇನ್ಸ್ಪೆಕ್ಟರರಾದ ಮಿ। ಕುಮಾರನ್ ಉಣ್ಣಿಯವರು ನೇಮಿಸಲ್ಪಟ್ಟಿರುವರು.

ಮದ್ರಾಸ್ ಇನ್ಸ್ಪೆಕ್ಟರ್ ಜನರಲ್ ಒಫ್ ಪೋಲೀಸರಾದ ಸರ್ ಚಾರ್ಲ್ಸ್ ಬಿ ಕನ್ನಿಂಗ್ಹಾಮರವರು ಇದೇ ತಾ ೧೬ಕ್ಕೆ ಬಂದು, ಈ ತಿಂಗಳ ಅಂತ್ಯದ ವರೆಗೆ ನಮ್ಮ ಜಿಲ್ಲೆಯಲ್ಲಿ ಸಂಚರಿಸಲಿರುವರೆಂದು ತಿಳಿಯುತ್ತೇವೆ.

"ಮಿತ್ರಮಂಡಳಿಯ ನೇತೃತ್ವದಲ್ಲಿ ಶ್ರೀಯುತ ಗರೂಡ ಸದಾಶಿವರಾವ್ ಕರ್ನಾಟಕ ನಾಟಕಾಲಂಕಾರ ಅಭಿನಯಕೇಸರಿಯವರು ಜುಲಾಯಿ ತಾ ೨೧ನೇ ಆದಿತ್ಯವಾರ ಸಾಯಂಕಾಲ ಗಂಟೆ ೪-೩೦ಕ್ಕೆ ಕೆನರಾ ಹೈಸ್ಕೂಲ್ ಭುವನೇಂದ್ರ ಹೋಲಿನಲ್ಲಿ ಭಾಷಣವನ್ನು ಕೊಡಲಿರುವರು. ಶ್ರೀಯುತ ಟಿ ನಾರಾಯಣಭಟ್ ವಿದ್ವಾನ್ ಇವರು ಪ್ರೊ। ಗೋಕಾಕರ ಸಿಲ್ಕ ವಿತೆಗಳ ವಿಷಯ ವಿಮರ್ಶಿಸುವರು. ಈ ಸಂದರ್ಭದಲ್ಲಿ ಉಡುಪಿ, ವಿದ್ವಾನ್ ಸೀತಾರಾಮಾಚಾರ್ಯರು ಅಧ್ಯಕ್ಷಸ್ಥಾನವನ್ನು ವಹಿಸಲು ಒಪ್ಪಿರುವರು. ಸದಸ್ಯರು ಅಲ್ಲದೆ ಕನ್ನಡ ಪ್ರೇಮಿಗಳು ಸಹ ದಯಮಾಡಿ ಬಂದು ಸಭೆಯನ್ನು ಸಾಂಗಗೊಳಿಸ ಬೇಕಾಗಿ ಅಪೇಕ್ಷಿಸೋಣಾಗುತ್ತದೆ" ಎಂದು ಮಿತ್ರ ಮಂಡಳಿ ಮಂಗಳೂರು, ಇದರ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಇದೇ ತಿಂಗಳ ತಾರೀಖು ೨೧ನೇ ಆದಿತ್ಯವಾರ ಬೆಳಿಗ್ಗೆ ಗಂಟೆ ೯ಕ್ಕೆ ಬಿ ಟಿ ಆರ್ಯಸಮಾಜದಲ್ಲಿ "ಈಶ್ವರೋಪಾಸನೆ"ಯ ಕುರಿತು ಶ್ರೀಯುತ ಮೋಹನಪ್ಪ ತಿಂಗಳಾಯರು ಭಾಷಣಮಾಡುವರು. ಸರ್ವರಿಗೂ ಸ್ವಾಗತವಿದೆ.

ಮದ್ರಾಸ್ ಗವರ್ನರರಾದ ಲೋರ್ಡ್ ಎರ್ಸ್ಕಿನ್ ರವರು ತಮ್ಮ ಧರ್ಮಪತ್ನಿಯನ್ನೊಡಗೂಡಿ ಇದೇ ಒಕ್ಟೋಬರ ತಾರೀಖು ಸುಮಾರು ೧೪ಕ್ಕೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಸಂದರ್ಶಿಸಲಿರುವರು. ಅವರು ಇಲ್ಲಿ ೫ ದಿನಗಳ ವರೆಗೆ ಮೊಕ್ಕಾಂ ಮಾಡುವರು.

ತಾ. ೧೯ನೇ ಜುಲಾಯಿಗೆ ಅಂತ್ಯವಾಗುವ ಮಂಗಳೂರು ಮುನಿಸಿಪಾಲಿಟಿಯ ಆರೋಗ್ಯವರದಿಯಿಂದ— ಈ ವಾರದಲ್ಲಿ ೧೭ ಮರಣಗಳೂ ೩೫ ಜನನಗಳೂ ಆಗಿವೆಯೆಂದು ತಿಳಿದುಬರುತ್ತದೆ.

ಮ. ರಾ. ರಾ. ಪಸಿದ್ಧಾಕ್ಷರು ಸ್ಥಾಪಕರಾದ ಕಾರ್ನಾಡ ವೈದ್ಯ ಶಂಕರ ನಾರಾಯಣ ಭಟ್ಟರು ಬಸ್ಸಿನಿಂದ ಬಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಾರೆಂಗಿ ಈ ಮೊದಲು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತಷ್ಟೆ. ಈಗ ಅವರು ಸಂಪೂರ್ಣ ಗುಣ ಹೊಂದಿ ನಿನ್ನೆ ತಾ. ೧೭ನೇ ಗುರುವಾರ ಮನೆಗೆ ಹೋದರು.

ತಾಲೂಕುಗಳಿಂದ.

ಕಾರ್ಕಳ— ಮಂಗಳೂರು ತಾಲೂಕಿನ ಸ್ವಸಮಾಜಸ್ಥರಲ್ಲಿ ಶ್ರೀಮಂತರೂ ವಿದ್ಯಾವಂತರೂ, ಅಧ್ಯ ಮಹನೀಯರಲ್ಲೊಬ್ಬರೂ ಆದ ಶ್ರೀ ಎಮ್ ಎಸ್ ಎಲ್ ಶೆಟ್ಟಿಗಾರರವರು ಕಳೆದ ತಾ. ೩೦ರಲ್ಲಿ ಕಾರ್ಕಳ ಶ್ರೀಪದ್ಮಶಾಲಿ ವೈಶ್ಯಸಮಾಜ ಸೇವಾಯುವಕ ಸಂಘವನ್ನು ಸಂದರ್ಶಿಸಿ, ಸ್ವಸಮಾಜದ ಏಳಿಗೆಗಾಗಿ ಸಂಘವು ಕೈಕೊಂಡಿರುವ ಅದ್ವಿತೀಯವಾದ ಧ್ಯೇಯ, ಧೋರಣೆ, ಕಾರ್ಯಗಳನ್ನು ಕಂಡು ಕುಂಬಾ ಆನಂದಪಟ್ಟು, ಸಂಘದ ಅಭ್ಯುದಯಕ್ಕಾಗಿ ಹಲವು ಹಿತಸೂಕ್ತಿಗಳನ್ನಿತ್ತು ತಾನೂ ಸಂಘದ ಓರ್ವ ಸದಸ್ಯರಾಗಿ ತನ್ನ ಪ್ರಾಂತ್ಯದಲ್ಲಿ ಸಂಘದ ಸದುದ್ದೇಶಗಳನ್ನು ಶಕ್ತಿಮೀರಿ ಪ್ರಚಾರಿಸುವುದಾಗಿ ಆಶ್ವಾಸನೆಯನ್ನಿತ್ತುದು ಸ್ತುತ್ಯ. ಜಿಲ್ಲೆಯ ವಿದ್ಯಾವಂತರಾದ ಇತರ ಸ್ವಸಮಾಜ ತರುಣರು ಇನ್ನಾದರೂ ಸ್ವಸಮಾಜದ ತೀವ್ರ ಸೇವೆಯ ಆವಶ್ಯಕವನ್ನರಿತು ಶ್ರೀಯುತರ ಆದರ್ಶವನ್ನನುಸರಿಸಲಾರರೆ?

ಸಂಘದ ತೃತೀಯ ತ್ರೈಮಾಸಿಕ ವಿಶೇಷ ಸಭೆಯು ಇದೇ ತಾ ೨೦ರಲ್ಲಿ ಜರಗಲಿದ್ದು, ಸಂಘಕ್ಕೆ ಹಾಗೂ ಸಮಾಜಕ್ಕೆ ಸಂಬಂಧಿಸಿದ ಹಲವು ಮಹತ್ವದ ವಿಷಯಗಳು ನಿರ್ಣಯಿಸಲಿರುವವು. ಅಖಿಲ ದ ಕ ಜಿಲ್ಲಾ ಸ್ವಸಮಾಜ ಯುವಕಪರಿಷತ್ತಿನ ಕುರಿತಾದ ಒಂದು ಠರಾವನ್ನೂ ಶ್ರೀ ಬ್ರಹ್ಮಾನಂದರು ಈ ಸಭೆಯ ಮುಂದಿಡಲಿರುವರು. ಸಮಾಜ ಹಿತಚಿಂತಕರಾದ ಸದ್ಗೃಹಸ್ಥರಾರಾದರೂ ತಕ್ಕ ಸಲಹೆಗಳನ್ನು ರವಾನಿಸಿಕೊಟ್ಟಲ್ಲಿ ಅತ್ಯಾದರಪೂರ್ವಕವಾಗಿ ಸ್ವೀಕರಿಸಿ ಕಾರ್ಯರೂಪಕ್ಕೆ ತರಲು ಯತ್ನಿಸಲಾಗುವುದು.

ಮೂಲ್ಕಿ— ತಾ. ೧೫-೭-೩೫ರಲ್ಲಿ ಮಧ್ಯಾಹ್ನ ೨ ಗಂಟೆಗೆ ಇಲ್ಲಿನ ರಾಧಾರಾಣಿ ಪ್ರೆಸ್ಸಿನ್ನು, ಸಂಸ್ಥಾಪಿಸಿಯೂ ಭಾರತಿ ಪಾಕ್ಷಿಕಪತ್ರಿಕೆಯನ್ನು ಹೊರಡಿಸಿ ವರೆ ಸರ್ವಾನುಕೂಲತೆಯನ್ನು ನೀಡಿಯೂ ಮೂಲ್ಕಿಯಲ್ಲಿ ಯಾವತ್ತು ನಾಗರಿಕತೆಯ ಸಲ್ಲಕ್ಷಣಗಳಿಗೆ ಬಹಳವಾಗಿ ಪ್ರತಿಕ್ತನಾತುತ್ತ ವೈದಿಕವರ್ಗದಲ್ಲಿದ್ದರೂ ಸಮಸ್ತ ಲೋಕವ್ಯವಹಾರದಲ್ಲಿ ಚೆನ್ನಾಗಿ ಪರಿಶ್ರಮವನ್ನುಳ್ಳ ವೇದಮೂರ್ತಿ ಪಣಂಬೂರು ಅಪ್ಪಭಟ್ಟರು (ಪಿ ಎ ಭಟ್) ಬಹು ದಿನಗಳಿಂದ ಅವರನ್ನು ಪೀಡಿಸುತಲಿದ್ದ ಕ್ಷಯರೋಗಕ್ಕೆ ತುತ್ತಾಗಿ ವೈಕುಂಠವಾಸಿಯಾ[illegible] ಗಳಿದ್ದು [illegible]ಯ ವಯಸ್ಸಿನಲ್ಲಿ ಇವರು ವೃದ್ಧರಾದ [illegible], ವೃದ್ಧರಿಂದ ಇವರ ತಿರಿಯರಿಗೂ ಇವರ ವಾತ್ಸಲ್ಯಾರ್ಹರಾದ ಬಂಧುಮಿತ್ರರಿಗೂ ಪ್ರೆಸ್ ಪತ್ರಿಕೆಗಳಿಗೂ ತುಂಬಲಾರದ ನಷ್ಟವುಂಟಾಗಿದೆ. ಪರಮಾತ್ಮನು ಎಲ್ಲವನ್ನೂ ಸಾವಧಾನದಿಂದ ಪರಿಪಾಲಿಸುತ್ತ ದಿವಂಗತರು ಪ್ರಾರಂಭಿಸಿ ದೃಢಪಡಿಸಿರುವ ಉದ್ಯಮವೆಲ್ಲವೂ ಮುಂದೆ ಅವರ ಆಶಯಕ್ಕೆ ತೃಪ್ತಿಯಾಗುವ ರೀತಿಯಲ್ಲಿ ಆಶೀರ್ವದಿಸಿ ಕಾಪಾಡಲೆಂದು ಹಾರೈಸುತ್ತೇವೆ.

ಕುಂದಾಪುರ— ಕಳೆದ ವಾರ ಇಲ್ಲಿನ ಗಂಗೊಳ್ಳಿ ಹೊಳೆಯಲ್ಲಿ ಪ್ರಚಂಡ ನೆರೆ ಬಂದು, ನಾಲ್ಕು ಜಾನುವಾರುಗಳೂ, ಒಂದು ಮಗುವಿನ ಶವವೂ ನೀರುಪಾಲಾಗಿರುತ್ತವೆಂದು ವಾರ್ತೆ.

ಕ್ವೆಟ್ಟಾ ಭೂಕಂಪದ ಪರಿಣಾಮದಿಂದ ನಿರ್ಗತಿಕರಾದವರಿಗೆ ತಕ್ಕಷ್ಟು ದ್ರವ್ಯಸಹಾಯವನ್ನೀಯಬೇಕೆಂದು ಇಲ್ಲಿನ ಸಬ್ ಕಲೆಕ್ಟರರಾದ ಶ್ರೀ ಎಸ್ ವೆಂಕಟೇಶ್ವರನ್ ಎಂ ಎ, ಐ ಸಿ ಎಸ್ ರವರು ಸರ್ವ ಜನರ ಅವಗಾಹನೆ ಬಗ್ಗೆ ಒಂದು ವಿನಂತಿಪತ್ರವನ್ನು ಹೊರಡಿಸಿರುವರು. ಶೇಖರಿಸಿದ ಹಣವನ್ನು ಮೈಸೂರಾಯರ ಕ್ವೆಟ್ಟಾ ಭೂಕಂಪದ ಸಹಾಯ ನಿಧಿಗೆ ಸೇರಿಸುವ ಏರ್ಪಾಡಿರುತ್ತದೆಂದು ವಾರ್ತೆ.

ಉಡುಪಿ— ಕೆಲ ದಿನಗಳ ಹಿಂದೆ ಶ್ರೀ ಕೃಷ್ಣ ದೇವಸ್ಥಾನದ ಗೋಶಾಲೆಯಲ್ಲಿ ಉಂಟಾದ ಜಾನುವಾರು ರೋಗವು ಅಲ್ಲಿ ಈಗ್ಗೆ ಗುಣವಾಗಿದ್ದರೂ ಊರಿನ ಹಲ ಕೆಲ ಕಡೆಗಳಲ್ಲಿ ತಲೆದೋರಿದೆ. ಇದನ್ನು ಆರಂಭದಲ್ಲೇ ಅಡಗಿಸುವ ಹವಣಿಕೆಯನ್ನು ಮಾಡುವುದುತ್ತಮ!

ಕುಂದಾಪುರದ ಬಳಿಯಲ್ಲಾದ ಕಳ್ಳಾಟಿಕೆಯು ಕಳೆದ ಸಂಚಿಕೆಯಲ್ಲಿದ್ದಂತೆ ಇದೇ ತಿಂಗಳಲ್ಲಿ ಸಂಭವಿಸಿದ್ದಲ್ಲ, ಕಳೆದ ತಿಂಗಳಲ್ಲಾದದ್ದಾಗಿರುತ್ತದೆ. ಚಿಕ್ಕ ಕಳವುಗಳ ಸುದ್ದಿಯು ಪಟ್ಟಣದ ಎಲ್ಲೆಡೆಗಳಿಂದಲೂ ದಿನೇ ದಿನೇ ಕೇಳಬರುತ್ತಿದೆ, ಪಟ್ಟಣಿಗರು ಜಾಗರೂಕರಾಗಿರಲಿ.

ಫರಂಗಿಪೇಟೆ— ಇಲ್ಲಿಯ ಘಮ ಮಹಮ್ಮದನ್ ಬೋರ್ಡು ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು

ಅಣ್ಣನು ತಮ್ಮನನ್ನು ಕೊಂದನು!

ಅವನ ಪತ್ನಿಯೇ ಇವನ ಪತ್ನಿ!

ಕಲ್ಲಿಕೋಟೆಯಲ್ಲಿ ಭಯಂಕರ ಮೊಕದ್ದಮೆ

ಕಲ್ಲಿಕೋಟೆ, ಜುಲಾಯಿ ೧೫

ಕಲ್ಲಿಕೋಟೆಯ ಸೆಶನ್ಸ್ ಜಡ್ಜರ ಕೋರ್ಟಿನಲ್ಲಿ ಕೌತುಕಪ್ರಾಯ ಮೊಕದ್ದಮೆಯೊಂದು ಬಂದು ಈ ಕತೆಯು ಪ್ರಕಟವಾಗಿರುತ್ತದೆ. ವಲ್ಲುವಾನಾಡ್ ತಾಲೂಕಿನ ಪೆರಿಯಂತಲ್‌ಮನ್ನ ಎಂಬಲ್ಲಿ ಪನ್‌ಹನ್‌ಕುಟ್ಟಿ ಎಂಬ ಬಡಗಿ, ಇಟೂಲ್ಲಿ ಎಂಬವಳನ್ನು ನಾಲ್ಕು ವರ್ಷಗಳ ಹಿಂದೆ ಮದುವೆಯಾಗಿದ್ದನು. ತಮ್ಮ ಜಾತಿಯ ಕಟ್ಟಳೆಯಂತೆ ಇಟೂಲ್ಲಿಯನ್ನೇ ಪನ್‌ಹನ್‌ಕುಟ್ಟಿಯ ತಮ್ಮ ಶಂಕರನೆಂಬವನೂ ವಿವಾಹವಾದನು. ಅಣ್ಣ ತಮ್ಮಂದಿರಿಬ್ಬರು ಒಂದೇ ಹೆಂಡತಿಯನ್ನು ವಿವಾಹವಾಗಿ ಸುಖದಿಂದಲೇ ದಿನಹರಣ ಮಾಡುತ್ತಿದ್ದರು. ಕ್ರಮೇಣ ಇಟೂಲ್ಲಿಯ ಪ್ರೇಮವು ಶಂಕರನ ಕಡೆಗೆ ತಿರುಗಿತೆಂದು ಪನ್‌ಹನ್‌ಕುಟ್ಟಿಯು ಸಂಶಯಿಸಿದ. ಅವನಿಗೆ ಅವಳ ಮೇಲೆ ಸಂದೇಹವೇ ಇತ್ತು, ಒಂದು ದಿನ ರಾತ್ರಿ ತನ್ನ ಕೋಣೆಯಲ್ಲಿ ಮಲಗಿದ್ದ ಇಟೂಲ್ಲಿಯು ಮೆಲ್ಲನೆ ಎದ್ದುಕೊಂಡು ಮಾಳಿಗೆಯನ್ನು ಹತ್ತಿದಳು. ಅಲ್ಲಿ ಶಂಕರನು ಮಲಗಿದ್ದನು. ಇದನ್ನು ಕಂಡ ಪನ್‌ಹನ್‌ಕುಟ್ಟಿಯು ಒಂದು ಕತ್ತಿಯನ್ನು ಹಿಡಿದುಕೊಂಡು ಅವಳ ಹಿಂದೆಯೇ ಮಾಳಿಗೆಯನ್ನು ಹತ್ತಿದನು. ಅವಳು ಅವನು ಬರುವುದನ್ನು ತಿಳಿದು ಪಕ್ಕದ ಕೋಣೆಯಲ್ಲಿ ಅಡಗಿಕೊಂಡಳು. ಪನ್‌ಹನ್‌ಕುಟ್ಟಿಯು ಉದ್ರೇಕಗೊಂಡು ನೆಟ್ಟಗೆ ಶಂಕರನ ಹಾಸಿಗೆಯ ಬಳಿ ಹೋಗಿ ನಿದ್ರಿಸುತ್ತಿದ್ದ ಶಂಕರನನ್ನು ತಿವಿದನು. ಅವನ ನರಳುವಿಕೆಯೊಡನೆ ಇಟೂಲ್ಲಿಯ ಆರ್ಭಟವೂ ಹೊರಟಿತು. ಪನ್‌ಹನ್‌ಕುಟ್ಟಿಯು ಅವಳನ್ನೂ ಕೊಂದನು. ಅಪಾದಿತನು ತಾನು ಕೊಲೆಗಾರನಲ್ಲವೆಂದೇ ಹೇಳುತ್ತಿರುವನು. ತಾನು ಮಲಗಿದ್ದಾಗ ಯಾರೋ ತನ್ನ ಹೆಂಡತಿಯನ್ನು ಕರೆದಂತಾಯಿತೆಂದೂ ಆ ವಳು ಕರೆದವನೊಡನೆ ಸೇರಿಕೊಂಡಂತೆಯೂ ಆಗಂತುಕನ ತನ್ನ ಮೇಲೆ ಬಿದ್ದಾಗ ತಾನು ತನ್ನ ರಕ್ಷಣೆಗಾಗಿ ಕತ್ತಿಯ ಸ್ಥಾನಿಯೋಗಿದೆ ಎಂದೂ ಹೇಳಿದನು.

ಒರಿಸ್ಸಾದಿಂದ ಊರ ಮಹಮ್ಮದೀ ಗೃಹಸ್ಥರು ಮುಂದರಿಸಿದ ಹೊಸ ಕಟ್ಟೋಣ ಪ್ರವೇಶೋತ್ಸವವು ತಾರೀಖು ೧೯-೭-೩೫ರಲ್ಲಿ ಶ್ರೀರಾಮಾ ಪಾಯಂಚ್ ಎಲಿಮೆಂಟರಿ ಶಾಲಾ ಮುಖ್ಯೋಪಾಧ್ಯಾಯ ಶ್ರೀಯುತ ಎ. ರಾಮಚಂದ್ರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ರಾಜದ್ರೋಹದ ಆರೋಪಣೆ. ಮುಂಬಾಯಿ ಲೇಬರ್ ಮುಖಂಡರ ಸೆರೆ

ಮುಂಬಯಿ, ಜುಲಾಯಿ ೧೫

ಮುಂಬಾಯಿಯ ಲೇಬರ್ ಧುರೀಣರಾದ ಶ್ರೀ ಆರ್ ಎಸ್, ನಿಂಬ್‌ಕರ್‌ರವರು ಮೇ ತಿಂಗಳಲ್ಲಿ ಮದ್ರಾಸಿನಲ್ಲಿ ರಾಜದ್ರೋಹಾತ್ಮಕ ಭಾಷಣ ಮಾಡಿದರೆಂಬ ಅಪಾದನೆಯ ಮೇಲೆ ಸೆರೆ ಹಿಡಿಯಲ್ಪಟ್ಟಿರುವರು.

ಮೌಲಾನಾ ಶೌಕತಾಲಿಯವರು ಕರಾಚಿಗೆ ಬರಲೇ ಬಾರದು

ಮುಂಬಯಿ, ಜುಲಾಯಿ ೧೫

ಮೌಲಾನಾ ಶೌಕತಾಲಿಯವರು ಕರಾಚಿಗೆ ಬರಬಾರದೆಂಬ ಸರಕಾರದ ಆಜ್ಞೆಯ ಅವಧಿಯು ಮೊನ್ನೆ ಮುಗಿಯುತ್ತಿದ್ದಾಗಲೇ ಆ ಅವಧಿಯನ್ನು ಅನಿಶ್ಚಿತ ಕಾಲದವರೆಗೆ— ಮುಂದರಿಸಿದಬೇಕೆಂದು ತೀರ್ಮಾನವಾಗಿರುತ್ತದೆ.

ಚೀನಾದಲ್ಲಿ ಬಯಂಕರ ನೆರೆ. ನೂರಾರು ಜನರು ಮೃತರಾದರು.

ಪೆಕಿಂಗ್ ಜುಲಾಯಿ ೧೫

ಚೀನಾದ [illegible] ನೆರೆ [illegible] ನೂರಾರು ಜನರು ಮೃತರಾ[illegible] ಜನರು ಮನೆ[illegible]

ಮುಸ್ಲಿಮ್ ಮತಕ್ಕೆ ಸೇರಿದರು

ತಿನ್ನೆವೆಲ್ಲಿ ಜುಲಾಯಿ ೧೫

[illegible]

ಮೈಸರಾಯರ ಭೂಕಂಪ ನಿಧಿ

[illegible]

ಮೊಡರ್ನ್ ಕೆಫೆಯು ನವಕಾರ್ಯೋದ್ಯಮ

[illegible]

Rock-bottom charges. Please come & visit once. Try once atleast. Do not miss & do not repent

Royal Gold House,

(Prop. M. Vaman Nayak & Sons)

Hampankatta—MANGALORE—S. Kanara

NICKEL PLATING WILL BE UNDERTAKEN ON GUARANTEED SYSTEM

Motor parts, Cycle parts, Gramophone parts, Surgical instruments and etc. are plated in most scientific method under guaranteed system

Under special request at the time of depression

Platings are undertaken at Moderate Charges

18ct. Rolled Gold Jewels Guaranteed for 10 Years

ದಿ ರೊಯಲ್ ಗೋಲ್ಡ್ ಹೌಸ್,

ಬಹಳ ಸುಲಭ ದರದಲ್ಲಿ ನೀಕೆಲ್ ಕೊಟ್ಟು ಎಲ್ಲಾ ಒಡವೆಗಳಿಗೆ ಪ್ಲೇಟಿಂಗ್ ಮಾಡಲಾಗುವುದು

ಇತರ ವಿಚಾರಗಳಿಗೆ –

ಎಮ್. ವಾಮನ ನಾಯಕ್ ಎಂಡ್ ಸನ್ಸ್,

18Ct ರೋಲ್ಡ್ ಗೋಲ್ಡ್ ಜುವೆಲ್ಸ್

ಹಂಪನಕಟ್ಟೆ, ಮಂಗಳೂರು, ದ ಕ

ಅನುಕ್ರಮಣಿಕೆ.

ಚಿತ್ರ	೩
ಸಾಹಿತ್ಯ ಸಂಗ್ರಹ	೪
ಬಾಲ್ಯಪ್ರಪಂಚ	೬
ನಮ್ಮ ಜಿಲ್ಲಾ ಬೋರ್ಡ್	೮
ಅಗ್ರಲೇಖ	
ಸ್ಫುಟವಿಚಾರಗಳು	೧೦
ಗ್ರಾಮಾಭ್ಯುದಯ	೧೦
ವರ್ತಮಾನ ಸಂಗ್ರಹ	
ಕರ್ನಾಟಕ ವರ್ತಮಾನ	೧೪
ಮಂಗಳೂರು, ತಾಲೂಕುಗಳಿಂದ	೧೧
ವಿವಿಧ ಸಮಾಚಾರಗಳು	೧೬
ನಡೆದ ಕತೆಗಳು	೧೮

ಸ್ವದೇಶಾಭಿಮಾನಿ.

ತಾ. ೧೯ನೇ ಶುಕ್ರವಾರ ಜುಲೈ ೧೯೩೫

ಗ್ರಾಮಾಭ್ಯುದಯ.

ಗ್ರಾಮಾಭ್ಯುದಯದ ಸಾಧನೆಯೇ ಈಗಣ ಮುಖ್ಯ ಕರ್ತವ್ಯವೆಂದೂ ಸರಕಾರವೂ, ಕಾಂಗ್ರೆಸ್ ಸಭೆಯೂ, ಇತರ ಸರ್ವ ಪಕ್ಷಗಳೂ ಒಪ್ಪಿಕೊಂಡಿವೆ ಪಂಜಾಬು ಸರಕಾರವು ಈ ಸಾಧನೆಯನ್ನು ಕೈಕೊಂಡು ಕೆಲವು ವರ್ಷಗಳಾಗಿವೆ ಅಲ್ಲಿ ಈ ಇಲಾಖೆಯು ಒಬ್ಬ ಕಮಿಶನರರ ಕೈಯಲ್ಲಿದೆ ಅವರು ತಮ್ಮ ಸಾಧನಗಳನ್ನು ವಿವರಿಸಿ ಒಂದು ಪುಸ್ತಕವನ್ನು ಪ್ರಕಟಿಸಿರುವರು ಅದರಿಂದ, ನಮ್ಮ ಸರಕಾರವು ಈಗ ಇದೇ ಕಾರ್ಯಕ್ಕಾಗಿ ತೆಗೆದ ೧೬ ಲಕ್ಷ ರೂಪಾಯಿಗಳನ್ನು ಹೇಗೆ ಉತ್ತಮವಾಗಿ ವಿನಿಯೋಗಿಸಬಹುದೆಂಬುದಕ್ಕೆ ಸಾಕಷ್ಟು ಸೂಚನೆಗಳು ದೊರೆವುವು ಸರಕಾರಕ್ಕೆ ಹೇಗೆಯೋ ಹಾಗೆಯೇ ಇತರ ಗ್ರಾಮೋನ್ನತಿ ಸಾಧಕರಿಗೂ ಇವು ಉಪಯೋಗಕ್ಕೆ ಬೀಳದಿರವು

ಮೊದಲಾಗಿ ಈ ಸಾಧಕರು, ಯಾರೇ ಇರಲಿ, ಗ್ರಾಮಸ್ಥರ ವಿಶ್ವಾಸವನ್ನು ಪಡೆದುಕೊಳ್ಳಲು ಪ್ರಯತ್ನಿಸಬೇಕು ಇದಕ್ಕಾಗಿ ಗ್ರಾಮಸ್ಥರೊಡನೆ ತುಂಬ ಸಹಾನುಭೂತಿಯಿಂದ, ವರ್ತಿಸಬೇಕು ಸಹಾನುಭೂತಿಯುಳ್ಳವರೊಡನೆ ಕೃತಜ್ಞಭಾವದಿಂದ ನಡೆದುಕೊಳ್ಳುವುದು ನಮ್ಮ ಹಳ್ಳಿಗರ ಲಕ್ಷಣವೇ ಆಗಿದೆ. ಪಂಜಾಬಿನಲ್ಲಿ ಹಳ್ಳಿಗಳೆಲ್ಲವೂ ಈ ಅಭ್ಯುದಯ ಸಾಧಕರಲ್ಲಿ ಪೂರ್ಣ ವಿಶ್ವಾಸದಿಂದ ನಡೆದುಕೊಳ್ಳುತ್ತಾರೆ, ಆದರೆ, ಮೇಲಧಿಕಾರಿಗಳ ದುರ್ಲಕ್ಷವು ಮಾತ್ರ ಹೆಚ್ಚಾಗಿದೆ, ಎಂದರೆ, ಅಗತ್ಯವಾಗಿರುವ ಧನಸಹಾಯವು ದೊರೆವುದು ಕಷ್ಟವಾಗಿದೆ ಗ್ರಾಮಾಭ್ಯುದಯ ವಿಷಯವನ್ನು ಶತಮಾನಕಾಲದಿಂದ ಮರೆತು ಹೋದ ದರಿಂದ, ಇಂದು ಅದನ್ನು ಕೈಕೊಂಡು ವಿಜಯ ಹೊಂದಬೇಕಾದರೆ ಹಣವು ಬಹಳ ಬೇಕು

ಎರಡನೆದಾಗಿ, ಗ್ರಾಮಸ್ಥರಿಗೇ ಅಭ್ಯುದಯಾಕಾಂಕ್ಷೆ ಇಲ್ಲವಾದಲ್ಲಿ, ಈ ಕೆಲಸದ ಗೋಜಿಗೆ ಹೋಗುವುದೂ ಅನ್ಯಾಯವಾಗುವುದು, ಎಂದು ಹಲವರು ಸಾರುವುದುಂಟು ಕೇವಲ ಪಶುಗಳಿಗೇ ಆದರೂ, ತನ್ನ ರಕ್ಷಣೆ ಬೇಡವೆಂದೇನೂ ಇಲ್ಲವಷ್ಟೆ ಆದುದರಿಂದ, ಮೇಲಣ ಅಧಿಕಾರಿಗಳು ಹಳ್ಳಿಗಳಲ್ಲಿ ಅವತಾರವೆತ್ತಿ, ಅವರೊಡನೆ ಕಲೆತು, ಸಾಧಿಸುವುದರಿಂದ ಕೃತಾರ್ಥರಾಗುವರು ಸೂಚನೆಗಳಿಂದಲೇ ಪ್ರಯೋಜನವಿಲ್ಲ, ಸೂಚನೆಯೊಡನೆ ಹಣವೂ ಧಾರಾಳ ಹರಿಯಬೇಕು

ನೀರಾವರಿ ಕೆಲಸ, ವಿದ್ಯುಚ್ಛಕ್ತಿಯ ಉತ್ಪಾದನ ಮೊದಲಾದುವುಗಳಿಗೆ ಸೂಚನೆಗಳು ಬಂದಂತೆಯೆ ಹಣವೂ ಒದಗಿದ ಕಾರಣವೇ, ಎಲ್ಲೆಲ್ಲಿಯೂ ಇವುಗಳಿಂದ ಪ್ರಯೋಜನಗಳುಂಟಾಗಿ ಅಭ್ಯುದಯವಾಗಿದೆ ಹಣ ವ್ಯಯವಾದುದಕ್ಕೆ ತಕ್ಕ ಆಯವೂ ಬರುತ್ತಿದೆ ಹಾಗೆಂದು, ಆರೋಗ್ಯರಕ್ಷಣೆ ಮತ್ತು ಶಿಕ್ಷಣಪ್ರಚಾರ,—ಇವುಗಳಿಗಾಗಿ ವ್ಯಯವಾಗುವ ಮೊಬಲಗು, ಬಡ್ಡಿಯನ್ನು ಸಹ ಹಿಂದೆ ತರಲಾರದೆಂದು ತಿಳಿದೇ, ಇವುಗಳಿಗಾಗಿ ಅಗತ್ಯ ವ್ಯಯಿಸಬೇಕಾಗಿದೆ.

ಉತ್ತಮ ರೀತಿಯ ಕೃಷಿ, ಕೃಷಿಕಾರ್ಯದಲ್ಲಿ ಅಪವ್ಯಯವಾಗದಂತಹ ಪ್ರಯತ್ನ, ಉತ್ಪನ್ನಗಳ ಮಾರಾಟಕ್ಕೆ ಅನುಕೂಲತೆಗಳು,—ಇವೇ ಮುಖ್ಯವಾಗಿ ಪ್ರಚಾರಕ್ಕೆ ಬರುವಂತಾಗಬೇಕು ನೀರಾಶ್ರಯ ಕಡಿಮೆಯಿರುವ ನಮ್ಮ ಸಂಸ್ಥಾನದಲ್ಲಿ, ನೀರಿನ ಪುರವರೆಗಾಗಿ ಮೊದಲ ಪ್ರಯತ್ನಗಳಾಗಬೇಕೆಂದು ಮುಖ್ಯ ಮಂತ್ರಿಗಳು ಸೂಚಿಸಿರುವುದು ನ್ಯಾಯವಾಗಿದೆ

ಪುರಾತನ ಕಾಲದ ರೀತಿ ಪದ್ಧತಿಗಳನ್ನು ತ್ಯಜಿಸಲು ಹಳ್ಳಿಗರಲ್ಲಿ ಬಹಳ ಅಸಡ್ಡೆ ಇದೆ, ಆರ್ಥಿಕ ದುರವಸ್ಥೆಯುಂಟಾಗಿ, ಈ ಅಸಡ್ಡೆಗೆ ಬಲಬಂದಿದೆ ಹಳ್ಳಿಯಲ್ಲಿ ನಡೆವ ಶುಭ ಶೋಭನಾದಿಗಳಿಗೂ, ಜಾತ್ರೆ ಉತ್ಸವಾದಿಗಳಿಗೂ ನಡೆವ ವಿಶೇಷ ವ್ಯಯವನ್ನು ತಡೆವುದು ಕಷ್ಟ, ಇದಕ್ಕಾಗಿ ಸಾಲ ಎತ್ತುತ್ತಿರುವುದೂ, ಹಗುರವಾಗಿ ಪಾವತಿಮಾಡುವಂತೆ ತಾನೆಣಿಸಿ, ಕೊನೆಗೆ ಎಲ್ಲವನ್ನು ಕಳೆದುಕೊಳ್ಳುವುದೂ, ಹಳ್ಳಿಗನ ರೂಢಿಯಾಗಿ ಬಂದಿದೆ ಒಂದು ವೇಳೆ ಕೈಯಲ್ಲಿ ಹೆಚ್ಚಿಗೆ ಹಣವಿದ್ದರೂ, ಸಾಲ ಪಾವತಿಗಾಗಿ ಹಳ್ಳಿಗರು ಪ್ರಯತ್ನಿಸುವುದು ಕಡಿಮೆ ಈಗ ಮುಗ್ಗಟ್ಟಿನ ಪ್ರಭಾವದಿಂದಂತೂ, ಸಾಲ ಕೊಟ್ಟರೆ ಧರ್ಮ ಮಾಡಿದ ಹಾಗೆಣಿಸಬೇಕಾಗಿದೆ, ಆದರೆ, ಇದರಿಂದಲೇ, ಮುಂದೆ ಸಾಲ ಸಿಗುವುದೂ ಕಷ್ಟವಾಗಿದೆ ಅನವಶ್ಯಕವಾದುವುಗಳಿಗಾಗಿ ಅತಿಶಯವಾದ ಖರ್ಚನ್ನು ಮಾಡುವ ಅಭ್ಯಾಸವು ಮಾಯವಾಗುವಂತೆ ಪ್ರಚಾರವು ಅಗತ್ಯವಾಗಿದೆ

ಹೆಣ್ಣು ಮಕ್ಕಳ ವಿದ್ಯಾಭ್ಯಾಸವು ಮತ್ತೊಂದು ಅಗತ್ಯ ವಿಚಾರ ಪಂಜಾಬಿನ ಕಮಿಶನರರ ಅಭ್ಯಾಸದಲ್ಲಿ ಗ್ರಾಮಾಭ್ಯುದಯಕ್ಕೆ ವ್ಯಯವಾಗುವ ಹಣದ ಉತ್ತಮಾಂಶವನ್ನು ಇದಕ್ಕಾಗಿಯೆ ವ್ಯಯಿಸಬೇಕೆಂದಿದೆ ಸಾಮಾಜಿಕ, ಮತ್ತು ಆರ್ಥಿಕ ಪ್ರಗತಿಗಳಿಗೆ ಇದೇ ಮುಖ್ಯ ಕಾರಣವಾದೀತೆಂದು ಅವರು ನಂಬಿರುತ್ತಾರೆ ಹಣದ ನಿಜವಾದ ಸದ್ವಿನಿಯೋಗವೆಂದರೆ ಇದೇ

ಆರೋಗ್ಯ ಮತ್ತು ತಿಳಿವಳಿಕೆ,—ಇವೆರಡರ ಅಭ್ಯುದಯವೇ ಗ್ರಾಮಾಭ್ಯುದಯ ಹಾಳಾಗಿ ನಷ್ಟವಾಗುವುದಾವುದೋ ಅದನ್ನು ಉಪಯೋಗಕ್ಕೆ ಬರುವಂತೆ ಮಾಡುವುದೇ ಅಭ್ಯುದಯ ಸಾಧನೆ ಎಲ್ಲಕ್ಕೂ ಮೊದಲಾಗಿ ರೈತನ ಸಂಪನ್ನತೆಯ ಕಡೆಗೇ ಲಕ್ಷ್ಯವನ್ನಿಡುವುದರಿಂದಲೆ ಗ್ರಾಮೋದ್ಧಾರವಾಗುವುದು

ಬಿ ಎಲ್. ಸಾಕಾಗಿದೆಯೇ?

ಈ ವರ್ಷದ ಪರೀಕ್ಷೆಗೆ ೪೯೧ ಮಂದಿ ಕೂತರು, ೧೨೪ ಪಾಸಾದರು, ೩೬೭ ನಾಪಾಸಾದರು ಇವರೊಳಗೂ ೩೩೧ ಫೈಲಾದವರು ಕ್ರಿಮಿನಲ್ ಕಾನೂನು ಕುರಿತಾದ ಪರೀಕ್ಷೆಯಲ್ಲಿ! ನೇಕಡಾ ೬೭ರಂತೆ ಈ ವಿಭಾಗದಲ್ಲಿಯೆ ಫೈಲಾದುದನ್ನು ನೋಡುವಾಗ, ಮದ್ರಾಸಿನ ಮತ್ತು ತ್ರಿವೇಂದ್ರಮಿನ ಕಾಲೇಜುಗಳೆರಡರಲ್ಲೂ ಏನೋ ವಿಶೇಷ ಮಾರ್ಪಾಟು ಉಂಟಾದಂತೆ ತೋರುತ್ತಿದೆ. ೧೨೨ ಮಂದಿ ಉಳಿದೆರಡು ಭಾಗಗಳಲ್ಲಿ ಪಾಸಾಗಿ, ಕ್ರಿಮಿನಲ್ ಕಾನೂನಿನಲ್ಲಿ ಮಾತ್ರ ಫೈಲಾಗಿ, ಸಿಂಗೆಟ್ಟಿರುವರು ಕ್ರಿಮಿನಲ್ ಬಾಬಿನಲ್ಲಿ ಹೀಗೆ ಮೋಸಹೋಗುವಂತೆ, ಎರಡು ಕಾಲೇಜುಗಳೇ ಏಕೆ ಸಿಕ್ಕಿಬಿದ್ದುವು?—ವಿಚಾರ ಯೋಗ್ಯವಾಗಿಲ್ಲವೇ?

ಸ್ಫುಟವಿಚಾರಗಳು.

ಅರಸುಗಳ ದಶೆ.

ಮಹಾಯುದ್ಧದ ಕೊನೆಯಲ್ಲಿ, ಹಲವರಸರು ತಾವಾಗಿ ರಾಜ್ಯದಿಂದ ಪಲಾಯನ ಮಾಡಿದರು, ಹಲವರನ್ನು ಪಲಾಯನ ಮಾಡಿಸಿದರು. ಈಗ, ಪುನಃ 'ಅರಸುಗಳಿಗಿದು ಏರ' ಎಂತಾಗಿದೆ. ರಾಜವಂಶವನ್ನೆ ಹೊರಕ್ಕಟ್ಟಿರುವ ಆಸ್ಟ್ರಿಯಾ ರಾಜ್ಯಕ್ಕೆ, ಆ ವಂಶದ ಮೇಲೆ ಹಾಕಿದ ಬಹಿಷ್ಕಾರ ತೆಗೆದಿಕ್ಕಿ, ಅರಸನನ್ನೆ ಪುನಃ ತಂದುಕೊಳ್ಳಬೇಕೆಂದಾಗಿದೆ. ಗ್ರೀಕ್ ದಲ್ಲಿ, ರಾಜನನ್ನು ಕರೆಸಿಕೊಳ್ಳಬೇಕಾಗಿ ಅಲ್ಲಿನ ಪಾರ್ಲಿಮೆಂಟು ನಿರ್ಧರಿಸಿ, ಅರಸರ ಹೆಸರೆತ್ತಿ ಜಯಕಾರವನ್ನು ಮಾಡಿದೆ; ಇದುವರೆಗೆ ಆಳಿದ ಪ್ರಜಾಪಕ್ಷಗಳಲ್ಲಿ ದಂಗೆಗಳಾಗಿವೆ ಕೊಡತಕ್ಕ ಪೂಗದಿ ತೆತ್ತಿಲ್ಲದ ಏರ್ಲಾಂಡು ಅಷ್ಟು ಅನ್ಯಾಯ ಮಾಡಿದುದಿಲ್ಲ, ಆದರೆ ಬ್ರಿಟಿಷ ರಾಜತ್ವವೇ ಬೇಡವೆನ್ನುವುದು ಅಖಂಡ ಅಪರಾಧವೆಂದು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಪ್ರಸ್ತಾಪ ಬಂದಿದೆ ಪ್ರಜಾಸತ್ತೆಯೇ ಮುಖ್ಯವಾಗಿರುವ ದೇಶಗಳಲ್ಲಿ, ರಾಜಭಕ್ತಿಯು ಅಲ್ಲಿಲ್ಲದ ರಾಜರಲ್ಲೇ ಧಾರಾಳವಾಗಿರುವುದು ವಿಚಿತ್ರವಲ್ಲವೆ? ಜರ್ಮನಿ, ಅಫಘಾನಿಸ್ಥಾನ, ಸ್ಪೈನ್ ದೇಶಗಳು ಏನಂತೆ?

ದಾಕಿಗೆ ವಿರೋಧ:

ಜಯಸಿಂಹ ಸ್ವಾಮಿಗಳೆಂದರೆ ಎಲ್ಲಾವ ಸಮಾಜದಲ್ಲಿ ಹೆಸರುಳ್ಳವರು, ಒನರರಿ ಬೆಂಚ್ ಮೆಜಿಸ್ಟ್ರೇಟರಾಗಿದ್ದವರು ಮಕ್ಕಳಿಗೆ ದಾಕು ಹಾಕಿಸಲು ಹಾಜರುಪಡಿಸುವುದಿಲ್ಲವಾಗಿ ಇವರ ಮೇಲೆ ಮೊಕದ್ದಮೆ, "ಇದು ನನ್ನ ಮನಸ್ಸಾಕ್ಷಿಗೆ ವಿರೋಧ, ನಾವು ಸಸ್ಯಾಹಾರಿಗಳು, ಪ್ರಾಣಿಜನ್ಯವಾದ ದಾಕನ್ನು ನನ್ನ ಮಕ್ಕಳ ರಕ್ತದಲ್ಲಿ ಬೆರಸುವುದಾಗದು, ದಾಕಿನಿಂದ ಸಿಡುಬು ಅನಾಹುತವೇನೂ ಶಾಂತವಾಗದು, ಕಡಿಮೆಯಾಗದು, ಅದರ ಬದಲಾಗಿ ನಾನಾ ಹೊಸ ರೋಗಗಳು ತಲೆದೋರಿದ್ದುದುಂಟು, ಧರ್ಮ ಸ್ವಾತಂತ್ರ್ಯವು ಇರುವ ಹಾಗೆಯೇ ಚಿಕಿತ್ಸಾ ಸ್ವಾತಂತ್ರ್ಯವೂ ಅಗತ್ಯವಿದೆ ಎಂದು ಹೇಳಿದ್ದಲ್ಲದೆ, ಹಲವು ಶಾಸ್ತ್ರಜ್ಞರ ಲೇಖಗಳನ್ನೂ ಸಾಕ್ಷಿಗಾಗಿ ಕೊಟ್ಟರು ಈ ವಿಷಯವನ್ನು ಹೈಕೋರ್ಟಿನಲ್ಲಿ ತನಿಖಿಗಬೇಕಾಗಿ ಅವರ ಅರ್ಜಿ ಈ ಅರ್ಜಿಯನ್ನು ಹೈಕೋರ್ಟಿನಲ್ಲಿ ಇತ್ಯರ್ಥಿಸುವುದರ ಪರಿಣಾಮವು ಹೆಚ್ಚಿನದಾಗಿದೆ ಎಂಬುದರಿಂದ ಮಾತ್ರ ಈ ವೃತ್ತಾಂತಕ್ಕೆ ಇಷ್ಟು ಮಹತ್ವ ಕೊಡಬೇಕಾಗಿದೆ ದಾಕಿನ ಪರಿಣಾಮವು ಉತ್ತಮವೆಂಬುದಕ್ಕೆ ಯುರೋಪ ಅಮೇರಿಕಗಳಲ್ಲೂ ಆಕ್ಷೇಪವೆತ್ತುವ ಪಂಗಡಗಳು ಬಹಳವಿವೆ. ಇತ್ತ ದಾಕು ಹಾಕಿದವರಿಗೆ ಸಿಡುಬಿನ ಗಂಡಾಂತರ ಕಡಿಮೆ ಎಂಬ ಋಜುವಾತೂ ಪ್ರಸಿದ್ಧವಿದೆ ಇದರಲ್ಲಿನ 'ಚಿಕಿತ್ಸಾ ಸ್ವಾತಂತ್ರ್ಯ' ವಿಚಾರ ಮಾತ್ರ ನೋಡಬೇಕು

ಕ್ವೆಟ್ಟಾ ಸ್ಥಿತಿ

ಕರ್ನೆಲ್ ರಸೆಲ್‌ರವರು ಆ ಪ್ರಾಂತ್ಯಕ್ಕೆ ಹೋಗಿದ್ದು, ಹೂತುಹೋದವರ ಕಳೇಬರಗಳ ವಿಷಯವಾಗಿ ಬರೆಯುತ್ತಾ,—"ಇದೊಂದು ದೊಡ್ಡ ಸಮಸ್ಯೆಯಾಗಿದೆ. ಹೆಣಗಳನ್ನೆತ್ತುವವರಿಗೆ ಮೋರೆಗೆ ಮುಸುಕು, ಕೈಗಳಿಗೆ ಚರ್ಮದ ಚೀಲಗಳು ಇಪ್ಪಿದ್ದರೂ, ಅವರಿಗೂ ತನಗೂ ಬಲು ಅಸಹ್ಯವೂ ಅಸಹನೀಯವೂ ಆಗಿ ಈ ಉತ್ತರಕ್ರಿಯಾ ಕಾರ್ಯವು ತೋರಿತು. ಇದರಲ್ಲೂ ಅತಿ ಬಾಧಕಕರ ವಿಷಯವೆಂದರೆ, ನೊಣಗಳು; ಇವು ಹೆಣಗಳಲ್ಲೇ ಹುಟ್ಟಿ ಬೆಳೆದ ರೋಗ ಪ್ರಸಾರಕ ಮಹಾ ಸಂಕಟವಾಗಿವೆ ಜನಸಂಖ್ಯೆಯು ೬೬ ೭೦ ೦೦೦; ರೈಲ್ವೆ ಮೂಲಕ ಹೊರಟವರು ೩೧,೫೦೦, ಶಿಬಿರಗಳಲ್ಲಿ ೮೫೦೦; ದೊರೆತ ಹೆಣಗಳು ೨೫೦೦; ಸೈನಿಕರೇ ಮೊದಲಾಗಿ ೧೨೦೦೦ ಇದ್ದಾರೆ ಹೀಗೆ ೧೨ ಸಾವಿರದಿಂದ ೧೬ ಸಾವಿರದ ವರೆಗೆ ಹೆಣಗಳು ನೆಲದಲ್ಲಿ ಹೂತುಹೋಗಿವೆ (ಇನ್ನೆಷ್ಟೋ ಸಾವಿರ ಹೆಚ್ಚು ಇರಬಹುದು) ೩೦೦೦ ಜನರನ್ನಿನ್ನೂ ಕೆಲಸಕ್ಕಿಟ್ಟುಕೊಂಡು ಕೆಲಕಡೆಗಳಲ್ಲಿನ ಹೆಣಗಳನ್ನು ಎತ್ತುವರಾದರೂ, ಅದೇ ಒಂದು ಮಹಾರೋಗಕ್ಕೆ ಕಾರಣವಾಗಬಹುದೆಂದು, ಮುಂದೆ ಚಳಿಗಾಲದಲ್ಲಿ ಈ ಉದ್ಯಮಕ್ಕೆ ಮುಕ್ತಾಯ ಮಾಡುವರಂತೆ!"

ಇಂಡಿಯಾ ಆಕ್ಟು.

ಈ ಮಹಾಮಸೂದೆಯನ್ನು ಆಗುವಷ್ಟು ಸಿಂಗಾರವಾಗುವಂತೆ ತಯಾರಿಸಿ, ಲೋರ್ಡ್ಸ್‌ರು ಮಂಜೂರು ಮಾಡಿದಂತಾಗಿದೆ ಇನ್ನು ಇದಕ್ಕೆ ಭಾಷಾಶೈಲಿಯ ಒಪ್ಪಕೊಟ್ಟು, ಭಾರತಿಗೆ ಇದನ್ನು ಪಾರ್ಲಿಮೆಂಟು ಒಪ್ಪಿಸುವುದು ಮಾತಿನ ಒಕ್ಕಣೆ ಹೇಗೂ ಇರಲಿ, ಸುಧಾರಣೆಗಳು ಎಂತಹವೇ ಇರಲಿ, ಅವನ್ನು ಕೈಕೊಂಡು ನಡೆಸುವುದೊಂದು ವಿಚಾರ ಬೇರೆ ಇದೇ ಮುಖ್ಯ ಸಿವಿಲ್ ಆಫೀಸರರು, ದೇಶೀಯ ರಾಜರುಗಳು, ಮುಖಂಡರು, ಆಯಾ ಮತಾಭಿಮಾನಿಗಳು ಇವರೇ ಅಲ್ಲದೆ ನಾನಾ ರಾಜಕೀಯ ಪಂಗಡ ಪಕ್ಷ ಪಕ್ಷಪಾತಗಳು ಇವೆಲ್ಲ ಅಂಗಗಳು ಒಂದಾಗಿ ಸೇರಿದರೆ ಮಾತ್ರ ಆಕ್ಟು ಕೆಲಸಕ್ಕೆ ಬಂದೀತು ಪಾರ್ಲಿಮೆಂಟು ಇಷ್ಟು ವರ್ಷ ಪ್ರಸವವೇದನೆಯನ್ನು ತಳೆದದ್ದೂ ಸಾರ್ಥಕವಾದೀತು

ಮದ್ರಾಸು ಕೌನ್ಸಿಲಿನ ಆಯುರ್ವರ್ಧನೆ.

ಆಗೋಸ್ತು ತಾ ೧೦ರಲ್ಲಿ ಗವರ್ನರರು ಕೌನ್ಸಿಲಿಗೊಂದು ಸ್ವಸ್ತಿವಾಚನ ಹೇಳುವ ಸುಸಂದರ್ಭವೇ, ಕೌನ್ಸಿಲಿನ ಆಯುರ್ವರ್ಧನೆಗೂ ಸುಮುಹೂರ್ತವಾಗಬಹುದೆಂದೂ ಇನ್ನೊಂದು ಸಂವತ್ಸರದ ವರೆಗೂ ಇವರೇ ಮಹಾನುಭಾವರಾಗಿರುವ ಕೌನ್ಸಿಲರರೇ ಕೂಡಿ ಕೌನ್ಸಿಲು ನಡೆವ ಹಾಗೆ ಆಶ್ವಾಸನ ಕೊಡುವರೆಂದೂ ಅಂದಾಜು ಬರೆಯಲಾಗಿದೆ ಎರಡು ಪರ್ಯಾಯಗಳಷ್ಟು ಅವಧಿಗೆ ಒಂದೇ ಪರ್ಯಾಯಕ್ಕೆಂದು ಚುನಾವಣೆ ಹೊಂದಿದವರಿಂದ ಕೆಲಸ ಮಾಡಿಸಿಕೊಳ್ಳುವ ಭಾರವು ಸರಕಾರದ್ದ ಮೇಲೆ ಬಿದ್ದಿದೆ, ನಿಜ. ಅದರಂತೆ ಈಗಲೆ ಚುನಾವಣೆಯಾದರೆ ಮರುವರ್ಷ ಚುನಾವಣೆಯು ಮಗದೊಮ್ಮೆ ಉಂಟಾಗಬಹುದು. ಮಾತ್ರವಲ್ಲ, ಕಾಂಗ್ರೆಸ್ ಪಕ್ಷವೇ ಗೆದ್ದು ಒಳನುಗ್ಗಲೂ ಈಗ ಅವಕಾಶವಿದೆ. ಜಸ್ಟಿಸ್ ಪಕ್ಷದ ಕಥಾ ಕಾಲಕ್ಷೇಪಗಳು ಇನ್ನಷ್ಟು ಜರುಗಿ ಆ ಪಕ್ಷದವರ ಸಾಧನೆಗಳ ಮಹತ್ವಯು ಸಂಪೂರ್ಣ ಪ್ರಕಟವಾಗುವುದಕ್ಕೂ ಒಂದು ವರ್ಷವಾದರೂ ಬೇಡವೆ?

ಮಂಗಳೂರು.

"ಸೆಂಟ್ರಲ್ ಬೋರ್ಡಿನಿಂದ ಬಂದಿರುವ ಹೊಸ ಸರ್ಕ್ಯುಲರ್ ಮೇರೆಗೆ ನಮ್ಮ ಜಿಲ್ಲೆಯ ಮುಂದಿನ ಆಯ ವ್ಯಯಗಳ ಪಟ್ಟಿಯನ್ನು ಚರ್ಚಿಸುವುದಕ್ಕಾಗಿ ಮತ್ತು ಅಧ್ಯಕ್ಷರ ಅನುಮತಿಯಿಂದ ಅನ್ಯತರ ಹಲವು ವಿಷಯ ಗಳನ್ನು ಆಲೋಚಿಸುವುದಕ್ಕಾಗಿ ನಮ್ಮ ಜಿಲ್ಲಾ ಹರಿಜನ ಸಂಘದ ಸಭೆಯು ಮಂಗಳೂರಿನಲ್ಲಿರುವ ಬಿ. ಸಿ. ಮಿಶನ್ ಹೋಲಿನಲ್ಲಿ ತಾ. ೨೧-೭-೧೯೩೫ನೇ ಆದಿತ್ಯವಾರ ಸಾಯಂಕಾಲ ಘಂಟೆ ೫.೩೦ಕ್ಕೆ ಕೂಡಲಿಕ್ಕಿದೆ. ಸದಸ್ಯ ರೆಲ್ಲರೂ ಬರಬೇಕಾಗಿ ವಿನಂತಿ" ಎಂದು ಶ್ರೀ ಯನ್ ಯಸ್ ಶಿಲ್ಲೆ, ಕಾರ್ಯದರ್ಶಿ ಇವರು ತಿಳಿಸುತ್ತಾರೆ.

" ಮಂಗಳೂರಿನ ಕ್ವೆಟ್ಟಾ ಭೂಕಂಪನಿವಾರಣಾ ಸಮಿತಿಯು ಜಿಲ್ಲಾ ಕಲೆಕ್ಟರರಾದ ಮಿ ಇ. ಎಂ ಗೋನ್ ರವರ ಅಧ್ಯಕ್ಷತೆಯಲ್ಲಿ ಇಷ್ಟರ ತನಕ ರೂ. ೨೩೫೫ಅನ್ನು ಸಂಗ್ರಹಿಸಿರುತ್ತದೆ. ಕಮಿಟಿಯ ಸದಸ್ಯರು ಮನೆಮನೆಗೆ ತಿರುಗಿ ಒಟ್ಟು ೧೬೩೦ ರೂಪಾಯಿಗಳನ್ನು ಸಂಗ್ರಹಿಸಿರುವರು.

ಇಲ್ಲಿಯ ಪ್ರಸಿದ್ಧ ನಶ್ಯ ವ್ಯಾಪಾರಿಗಳಾದ ಮೆಸರ್ಸ್ ಎಚ್ ರಾಮರಾವ್ ಎಂಡ್ ಸನ್ಸ್‌ರವರ ಶಾಖೆಯೊಂದು ಗಿರಾಕಿಗಳ ಮತ್ತು ಸಾರ್ವಜನಿಕ ಸೌಕರ್ಯಕ್ಕಾಗಿ ಸೆಂಟ್ರಲ್ ಮಾರ್ಕೆಟಿನ ಎದುರಿನಲ್ಲಿ ತೆರೆಯಲಾಗಿದೆ.

ಈ ಜಿಲ್ಲೆಯಲ್ಲಿ ಅಬಕಾರಿ ಸರ್ಕಲ್ ಇನ್ಸ್‌ಪೆಕ್ಟರರಾಗಿ ಹಲವು ವರ್ಷಗಳಿಂದ ತೃಪ್ತಿಕರವಾಗಿ ಕೆಲಸನಡೆಸಿ, ತಮ್ಮ ಅಧೀನವರ್ಗದ ಹಾಗೂ ಇತರ ಮತ್ತು ಜನಸಾಮಾನ್ಯರ ಅಖಂಡ ಪ್ರೀತಿಗೌರವಗಳನ್ನು ಸಂಪಾದಿಸಿರುವ ರಾವ್ ಸಾಹೇಬ್ ಸಿ. ರಾಘವನ್, ಬಿ ಎ. ಇವರಿಗೆ ತಿರುಚಿನಾಪಳ್ಳಿಗೆ ವರ್ಗವಾಗಿದೆ. ಆ ಬಿರುದು ಶ್ರೀಯುತರಿಗೆ ದೊರಕಿದುದೂ ಈ ಜಿಲ್ಲೆಯಲ್ಲಿಯೇ ಎಂಬುದೂ ಸಂತೋಷಕರ. ಅವರ ಸ್ಥಾನದಲ್ಲಿ ಕಾಸರಗೋಡು ಇನ್ಸ್‌ಪೆಕ್ಟರರಾದ ಮಿ ಕುಮಾರನ್ ಉಣ್ಣಿಯವರು ನೇಮಿಸಲ್ಪಟ್ಟಿರುವರು."

ಮದ್ರಾಸ್ ಇನ್ಸ್‌ಪೆಕ್ಟರ್ ಜನರಲ್ ಒಫ್ ಪೋಲೀಸ ರಾದ ಸರ್ ಚಾರ್ಲ್ಸ್ ಬಿ. ಕನ್ನಿಂಗ್‌ಹಾಮ್‌ರವರು ಇದೇ ತಾ. ೧೮ಕ್ಕೆ ಬಂದು, ಈ ತಿಂಗಳ ಅಂತ್ಯದ ವರೆಗೆ ನಮ್ಮ ಜಿಲ್ಲೆಯಲ್ಲಿ ಸಂಚರಿಸಲಿರುವರೆಂದು ತಿಳಿಯುತ್ತೇವೆ.

"ಮಿತ್ರಮಂಡಳಿಯ ನೇತೃತ್ವದಲ್ಲಿ ಶ್ರೀಯ ಎಸ ಗರೂಡ ಸದಾಶಿವರಾವ್, ಕರ್ನಾಟಕ ನಾಟಕಾಲಂಕಾರ ಅಭಿನಯಕೇಸರಿಯವರು ಜುಲಾಯಿ ೨೭ ೨೧ನೇ ಆದಿತ್ಯವಾರ ಸಾಯಂಕಾಲ ಘಂಟೆ ೮ ೩೦ಕ್ಕೆ ಕೆನರಾ ಹೈಸ್ಕೂಲ್ ಭುವನೇಂದ್ರ ಹೋಲಿನಲ್ಲಿ ಭಾಷಣವನ್ನು ಕೊಡಲಿರುವರು. ಶ್ರೀಯುತ ಟಿ. ನಾರಾಯಣಭಟ್ ವಿದ್ವಾನ್ ಇವರು ಪ್ರೊ. ಗೋಕಾಕರ ನೀಳ್ಗವಿತೆಗಳ ವಿಷಯ ವಿಮರ್ಶಿಸುವರು. ಈ ಸಂದರ್ಭದಲ್ಲಿ ಉಡುಪಿ, ವಿದ್ವಾನ್ ಸೀತಾರಾಮಾಚಾರ್ಯರು ಅಧ್ಯಕ್ಷಸ್ಥಾನವನ್ನು ವಹಿಸಲು ಒಪ್ಪಿರುವರು. ಸದಸ್ಯರು ಅಲ್ಲದೆ, ಕನ್ನಡ ಪ್ರೇಮಿಗಳು ಸಹ ದಯಮಾಡಿ ಬಂದು ಸಭೆಯನ್ನು ಶೃಂಗರಿಸ ಬೇಕಾಗಿ ಅಪೇಕ್ಷಿಸಲಾಗುತ್ತದೆ" ಎಂದು ಮಿತ್ರಮಂಡಳಿ ಮಂಗಳೂರು, ಇದರ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಇದೇ ತಿಂಗಳ ತಾರೀಕು ೨೧ನೇ ಆದಿತ್ಯವಾರ ಬೆಳಗ್ಗೆ ಗಂಟೆ ೯ಕ್ಕೆ ಸಿಟಿ ಆರ್ಯಸಮಾಜದಲ್ಲಿ "ಅಸ್ಪೃಶ್ಯೋದ್ಧಾರ"ದ ಕುರಿತು ಶ್ರೀಯುತ ಮೋಹನಪ್ಪ ತಿಂಗಳಾಯರು ಭಾಷಣಮಾಡುವರು. ಸರ್ವರಿಗೂ ಸ್ವಾಗತವಿದೆ.

ಮದ್ರಾಸ್ ಗವರ್ನರರಾದ ಲೋರ್ಡ್ ಎರ್ಸ್ಕಿನ್ ರವರು ತಮ್ಮ ಧರ್ಮಪತ್ನಿಯನ್ನೊಡಗೂಡಿ ಇದೇ ಅಕ್ಟೋಬರ ತಾರೀಕು ಸುಮಾರು ೧೮ಕ್ಕೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಸಂದರ್ಶಿಸಲಿರುವರು. ಅವರು ಇಲ್ಲಿ ೫ ದಿನಗಳ ವರೆಗೆ ಮೊಕ್ಕಾಂ ಮಾಡುವರು.

ತಾ. ೧೩ನೇ ಜುಲಾಯಿಗೆ ಅಂತ್ಯವಾಗುವ ಮಂಗಳೂರು ಮುನಿಸಿಪಾಲಿಟಿಯ ಆರೋಗ್ಯವರದಿಯಿಂದ— ಈ ವಾರದಲ್ಲಿ ೧೭ ಮರಣಗಳೂ ೭೫ ಜನನಗಳೂ ಆಗಿವೆಯೆಂದು ತಿಳಿದುಬರುತ್ತದೆ.

ಮ ರಾ. ರಾ ಪಡಿಪ್ಪಾಕ್ಷರು ಸ್ಥಾಪಕರಾದ ಬಾಬಾಜಿ ವೈದ್ಯ ಶಂಕರ ನಾರಾಯಣ ಭಟ್ಟರು ಬಸ್ಸಿನಿಂದ ಬಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಾರಾಗಿ ಈ ಮೊದಲು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತಷ್ಟೆ. ಈಗ ಅವರು ಸಂಪೂರ್ಣ ಗುಣ ಹೊಂದಿ ನಿನ್ನೆ ತಾ. ೧೭ನೇ ಗುರುವಾರ ಮನೆಗೆ ಹೋದರು.

ತಾಲೂಕುಗಳಿಂದ.

ಕಾರ್ಕಳ— ಮಂಗಳೂರು ತಾಲೂಕಿನ ಸ್ವಸಮಾಜಸ್ಥರಲ್ಲಿ ಶ್ರೀಮಂತರೂ ವಿದ್ಯಾವಂತರೂ, ಅಧ್ಯ ಮಹನೀಯರಲ್ಲೊಬ್ಬರೂ ಆದ ಶ್ರೀ ಎಮ್ ಎಸ್ ಎಲ್ ಶೆಟ್ಟಿಗಾರರವರು ಕಳೆದ ತಾ. ೩ರಲ್ಲಿ ಕಾರ್ಕಳ ಶ್ರೀಪದ್ಮಸಾಲಿ ವೈಶ್ಯಸಮಾಜ ಸೇವಾಭಿವರ್ಧಕ ಸಂಘವನ್ನು ಸಂದರ್ಶಿಸಿ, ಸ್ವಸಮಾಜದ ಏಳಿಗೆಗಾಗಿ ಸಂಘವು ಕೈಕೊಂಡಿರುವ ಅದ್ವಿತೀಯವಾದ ಧ್ಯೇಯ, ಧೋರಣೆ, ಕಾರ್ಯಗಳನ್ನು ಕಂಡು ಕೇಳಿ ಬಹಳ ಆನಂದಪಟ್ಟು, ಸಂಘದ ಅಭ್ಯುದಯಕ್ಕಾಗಿ ಹಲವು ಹಿತಸೂಕ್ತಿಗಳನ್ನಿತ್ತು, ತಾವೂ ಸಂಘದ ಓರ್ವ ಸದಸ್ಯರಾಗಿ ತನ್ನ ಪ್ರಾಂತ್ಯದಲ್ಲಿ ಸಂಘದ ಸದುದ್ದೇಶಗಳನ್ನು ಶಕ್ತಿಮೀರಿ ಪ್ರಚಾರಿಸುವುದಾಗಿ ಆಶ್ವಾಸನೆಯನ್ನಿತ್ತುದು ಸ್ತುತ್ಯ. ಜಿಲ್ಲೆಯ ವಿದ್ಯಾವಂತರಾದ ಇತರ ಸ್ವಸಮಾಜ ತರುಣರು ಇನ್ನಾದರೂ ಸ್ವಸಮಾಜದ ತೀವ್ರ ಸೇವೆಯ ಅವಶ್ಯವನ್ನರಿತು ಶ್ರೀಯುತರ ಆದರ್ಶವನ್ನನುಸರಿಸಲಾರರೆ?

ಸಂಘದ ತೃತೀಯ ತ್ರೈಮಾಸಿಕ ವಿಶೇಷ ಸಭೆಯು ಇದೇ ತಾ ೨೦ರಲ್ಲು ಜರಗಲಿದ್ದು, ಸಂಘಕ್ಕೆ ಹಾಗೂ ಸಮಾಜಕ್ಕೆ ಸಂಬಂಧಿಸಿದ ಹಲವು ಮಹತ್ವದ ವಿಷಯಗಳು ನಿರ್ಣಯಿಸಲಿರುವವು. 'ಅಖಿಲ ದ. ಕ. ಜಿಲ್ಲಾ ಸ್ವಸಮಾಜ ಯುವಕಪರಿಷತ್ತಿ'ನ ಕುರಿತಾದ ಒಂದು ಠರಾವನ್ನೂ ಶ್ರೀ ಬ್ರಹ್ಮಾನಂದರು ಈ ಸಭೆಯ ಮುಂದಿಡಲಿರುವರು. ಸಮಾಜ ಹಿತಕಾಂಕ್ಷಿಗಳಾದ ಸದ್ಗೃಹಸ್ಥರಾರಾದರೂ ತಕ್ಕ ಸಲಹೆಗಳನ್ನು ರವಾನಿಸಿಕೊಟ್ಟಲ್ಲಿ ಅತ್ಯಾದರಪೂರ್ವಕವಾಗಿ ಸ್ವೀಕರಿಸಿ, ಕಾರ್ಯರೂಪಕ್ಕೆ ತರಲು ಯತ್ನಿಸಲಾಗುವುದು.

ಮೂಲ್ಕಿ— ತಾ ೧೫-೭-೩೫ರಲ್ಲಿ ಮಧ್ಯಾಹ್ನ ೨ ಗಂಟೆಗೆ ಇಲ್ಲಿನ ರಾಧಾಕಾಂತ ಪ್ರೆಸ್ಸನ್ನು ಸಂಸ್ಥಾಪಿಸಿಯೂ ಭಾರತಿ ಮಾಸಪತ್ರಿಕೆಯನ್ನು ಹೊರಡಿಸುವರೆ ಸರ್ವಾನುಕೂಲತೆಯನ್ನು ಮಾಡಿಯೂ ಮೂಲ್ಕಿಯಲ್ಲಿ ಯಾವತ್ತು ನಾಗರಿಕತೆಯ ಸಲ್ಲಕ್ಷಣಗಳಿಗೆ ಬಹಳವಾಗಿ ಪ್ರಯತ್ನಮಾಡುತ್ತ, ವೈದಿಕವರ್ಗದಲ್ಲಿದ್ದರೂ ಸಮಸ್ತ ಲೋಕವ್ಯವಹಾರದಲ್ಲಿ ಚೆನ್ನಾಗಿ ಪರಿಶ್ರಮವನ್ನುಳ್ಳ ವೇದಮೂರ್ತಿ ಪಣಂಬೂರು ಅಪ್ಪಭಟ್ಟರು (ಎ ಎ ಭಟ್) ಬಹು ದಿನಗಳಿಂದ ಅವರನ್ನು ಪೀಡಿಸುತಲಿದ್ದ ಶ್ವಾಸರೋಗಕ್ಕೆ ಕೊನೆಗೆ ವೈಕುಂಠವಾಸಿಯಾದರು. ದಕ್ಷರೂ ನಿಷ್ಠುರರೂ, ಸದ್ಗುಣಿಗಳೂ, ಸಚ್ಚರಿತರೂ ಆಗಿದ್ದು ಎಳೆಯ ವಯಸ್ಸಿನಲ್ಲೇ ಇವರು ಮೃತರಾದುದರಿಂದ ವೃದ್ಧರಾದ ಇವರ ಹಿರಿಯರಿಗೂ ಇವರ ವಾತ್ಸಲ್ಯಪಾಲಿತ ಬಂಧುಮಿತ್ರರಿಗೂ ಪ್ರೆಸ್— ಪತ್ರಿಕೆಗಳಿಗೂ ಅಪಾರ ನಷ್ಟವೇ ಆಗಿದೆ. ಪರಮಾತ್ಮನು ಎಲ್ಲವನ್ನೂ ಸಾವಧಾನದಿಂದ ಪರಿಪಾಲಿಸುತ್ತ, ದಿವಂಗತರು ಪ್ರಾರಂಭಿಸಿ ಮೂಲ್ಕಿಗೆ ಶ್ರೇಯಸ್ಕರವಾಗಿ ಮಾಡಿದ ಉದ್ಯಮವೆಲ್ಲವೂ ಮುಂದೆ ಅವರ ಆತ್ಮಕ್ಕೆ ತೃಪ್ತಿಯಾಗುವ ರೀತಿಯಲ್ಲಿ ಆಶೀರ್ವದಿಸಿ ಕಾಪಾಡಲೆಂದು ಹಾರೈಸುತ್ತೇವೆ.

ಕುಂದಾಪುರ— ಕಳೆದ ವಾರ ಇಲ್ಲಿನ ಗಂಗೊಳ್ಳಿ ಹೊಳೆಯಲ್ಲಿ ಪ್ರಚಂಡ ನೆರೆ ಬಂದು, ನಾಲ್ಕು ಜಾನುವಾರುಗಳೂ, ಒಂದು ಮಗುವಿನ ಶವವೂ ನೀರುಪಾಲಾಗಿರುತ್ತವೆಂದು ವಾರ್ತೆ.

ಕ್ವೆಟ್ಟಾ ಭೂಕಂಪದ ಪರಿಣಾಮದಿಂದ ನಿರ್ಗತಿಕರಾದವರಿಗೆ ತಕ್ಕಷ್ಟು ಪ್ರಾಣ್ಯಸಹಾಯವನ್ನೀಯಬೇಕೆಂದು ಇಲ್ಲಿನ ಸಬ್ ಕಲೆಕ್ಟರರಾದ ಶ್ರೀ ಎಸ್ ವೆಂಕಟೇಶ್ವರನ್ ಎಂ. ಎ., ಐ ಸಿ. ಎಸ್. ರವರು ಸರ್ವ ಜನರ ಅವಗಾಹನೆ ಬಗ್ಗೆ ಒಂದು ವಿನಂತಿಪತ್ರವನ್ನು ಹೊರಡಿಸಿರುವರು. ಶೇಖರಿಸಿದ ಹಣವನ್ನು ವೈಸರಾಯರ ಕ್ವೆಟ್ಟಾ ಭೂಕಂಪದ ಸಹಾಯ ನಿಧಿಗೆ ಸೇರಿಸ ವ ನಿರ್ಧರಿಸಿರುತ್ತಾರೆಂದು ವಾರ್ತೆ.

ಉಡುಪಿ— ಕೆಲ ದಿನಗಳ ಹಿಂದೆ ಶ್ರೀ ಕೃಷ್ಣ ದೇವಸ್ಥಾನದ ಗೋಶಾಲೆಯಲ್ಲಿ ಉಂಟಾದ ಜಾನುವಾರು ರೋಗವು ಅಲ್ಲಿ ಈಗ್ಗೆ ಗುಣವಾಗಿದ್ದರೂ, ಊರಿನ ಹಲ ಕೆಲ ಕಡೆಗಳಲ್ಲಿ ತಲೆದೋರಿದೆ. ಇದನ್ನು ಆರಂಭದಲ್ಲೇ ಅಡಗಿಸುವ ಹವಣಿಕೆಯನ್ನು ಮಾಡುವುದುತ್ತಮ!

ಕುಂದಬಾರಂದಿನ ಬಳಿಯಲ್ಲಾದ ಕಳ್ಳತನದ ಕಟ್ಟಡ ಸಂಟೆಕೆಯಲ್ಲಿದ್ದಂತೆ ಇದೇ ತಿಂಗಳಲ್ಲಿ ಸಂಭವಿಸಿದ್ದಲ್ಲ, ಕಳೆದ ತಿಂಗಳಲ್ಲಾದ್ದಾಗಿರುತ್ತದೆ. ಚಿಕ್ಕ ಕಳವುಗಳ ಸುದ್ದಿಯು ಪಟ್ಟಣದ ಎಲ್ಲೆಡೆಗಳಿಂದಲೂ ದಿನೇ ದಿನೇ ಕೇಳಬರುತ್ತಿದೆ, ಪಟ್ಟಣಿಗರು ಜಾಗರೂಕರಾಗಿರಲಿ.

ಫರಂಗಿಪೇಟೆ— ಇಲ್ಲಿಯ ಪ್ರದು ಮುಹಮ್ಮದನ್ ಬೋರ್ಡು ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು

ಅಣ್ಣನು ತಮ್ಮನನ್ನು ಕೊಂದನು!

ಅವನ ಪತ್ನಿಯೇ ಇವನ ಪತ್ನಿ!

ಕಳ್ಳಿಕೋಟೆಯಲ್ಲಿ ಭಯಂಕರ ಮೊಕದ್ದಮೆ

ಕಳ್ಳಿಕೋಟೆ, ಜುಲೈ ೧೫

ಕಳ್ಳಿಕೋಟೆಯ ಸೆಶನ್ಸ್ ಜಡ್ಜರ ಕಚೇರಿಯಲ್ಲಿ ಕೌತುಕಪ್ರಾಯ ಮೊಕದ್ದಮೆಯೊಂದು ಬಂದು ಈ ಕತೆಯು ಪ್ರಕಟವಾಗಿರುತ್ತದೆ. ವಲ್ಲುವನಾಡ್ ತಾಲೂಕಿನ ಪೆರಿಯಂತಲ್‌ಮಣ್ಣ ಎಂಬಲ್ಲಿ ಪನ್‌ಹನ್‌ಕುಟ್ಟಿ ಎಂಬ ಬಡಗಿ, ಇಟೂಲ್ಲಿ ಎಂಬವಳನ್ನು ನಾಲ್ಕು ವರ್ಷಗಳ ಹಿಂದೆ ಮದುವೆಯಾಗಿದ್ದನು. ತಮ್ಮ ಜಾತಿಯ ಕಟ್ಟಳೆಯಂತೆ ಇಟೂಲ್ಲಿಯನ್ನೇ ಪನ್‌ಹನ್‌ಕುಟ್ಟಿಯ ತಮ್ಮ ಶಂಕರನ್ ಎಂಬವನೂ ವಿವಾಹವಾದನು. ಅಣ್ಣ ತಮ್ಮಂದಿರಿಬ್ಬರು ಒಂದೇ ಹೆಂಡತಿಯನ್ನು ವಿವಾಹವಾಗಿ ಸುಖದಿಂದಲೇ ದಿನಹರಣ ಮಾಡುತ್ತಿದ್ದರು. ಕ್ರಮೇಣ ಇಟ್ಟೂಲಿನ ಪ್ರೇಮವು ಶಂಕರನ ಕಡೆಗೆ ತಿರುಗಿತೆಂದು ಪನ್‌ಹನ್‌ಕುಟ್ಟಿಯು ಸಂಶಯಿಸಿದ. ಆವಾಗ ಅವನ ಮೇಲೆ ಸಂದೇಹವೇ ಇತ್ತು, ಒಂದು ದಿನ ರಾತ್ರಿ ತನ್ನ ಕೋಣೆಯಲ್ಲಿ ಮಲಗಿದ್ದ ಇಟ್ಟೂಲು ಮೆಲ್ಲನೆ ಎದ್ದುಕೊಂಡು ಮಾಳಿಗೆಯನ್ನು ಹತ್ತಿದಳು. ಅಲ್ಲಿ ಶಂಕರನು ಮಲಗಿದ್ದನು. ಇದನ್ನು ಕಂಡ ಪನ್‌ಹನ್‌ಕುಟ್ಟಿಯು ಒಂದು ಕತ್ತಿಯನ್ನು ಹಿಡಿದುಕೊಂಡು ಅವಳ ಹಿಂದೆಯೇ ಮಾಳಿಗೆಯನ್ನು ಹತ್ತಿದನು. ಅವಳು ಅವನು ಬರುವುದನ್ನು ತಿಳಿದು ಪಕ್ಕದ ಕೋಣೆಯಲ್ಲಿ ಅಡಗಿಕುಳಿತಳು. ಪನ್‌ಹನ್‌ಕುಟ್ಟಿಯು ಉದ್ರೇಕಗೊಂಡು ನೆಟ್ಟಗೆ ಶಂಕರನ ಹಾಸಿಗೆಯ ಬಳಿ ಹೋಗಿ ನಿದ್ರಿಸುತ್ತಿದ್ದ ಶಂಕರನನ್ನು ತಿವಿದನು. ಅವನ ನರಳುವಿಕೆಯೊಡನೆ ಇಟ್ಟೂಲಿನ ಆರ್ಭಟವೂ ಹೊರಟಿತು. ಪನ್‌ಹನ್‌ಕುಟ್ಟಿಯು ಅವಳನ್ನೂ ಹೊಡೆದನು. ಆಪಾದಿತನು ತಾನು ಕೊಲೆಗಾರನಲ್ಲವೆಂದೇ ಹೇಳುತ್ತಿರುವನು. ತಾನು ಮಲಗಿದ್ದಾಗ ಯಾರೋ ತನ್ನ ಹೆಂಡತಿಯನ್ನು ಕರೆದಂತಾಯಿತೆಂದೂ, ಅವಳು ಕರೆದವನೊಡನೆ ಸೇರಿಕೊಂಡಂತೆಯೂ ಆಗಂತುಕನು ತನ್ನ ಮೇಲೆ ಬಿದ್ದಾಗ ತಾನು ತನ್ನ ರಕ್ಷಣೆಗಾಗಿ ಕತ್ತಿಯನ್ನುಪಯೋಗಿಸಿದೆನೆಂದೂ ಹೇಳಿದನು.

ನಿರಿದ್ದರಿಂದ, ಊರ ಮಹಮ್ಮದೀ ಗೃಹಸ್ಥರು ಮುಂದರಿಸಿದ ಹೊಸ ಕಟ್ಟೋಣ ಪ್ರವೇಶೋತ್ಸವವು ತಾರೀಕು ೧೪-೭-೩೫ರಲ್ಲು ಶ್ರೀರಾಮಾ ಹಾಯರ್ ಎಲಿಮೆಂಟರಿ ಶಾಲಾ ಮುಖ್ಯೋಪಾಧ್ಯಾಯ ಶ್ರೀಯುತ ಎ ರಾಮಚಂದ್ರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ರಾಜದ್ರೋಹದ ಆರೋಪಣೆ.

ಮುಂಬಾಯಿ ಲೇಬರ್ ಮುಖಂಡರ ಸೆರೆ

ಮುಂಬಯಿ, ಜುಲೈ ೧೫

ಮುಂಬಾಯಿಯ ಲೇಬರ್ ಧುರೀಣರಾದ ಶ್ರೀ ಆರ್. ಎಸ್ ನಿಂಬ್‌ಕರ್‌ರವರು ಮೇ ತಿಂಗಳಲ್ಲಿ ಮದ್ರಾಸಿನಲ್ಲಿ ರಾಜದ್ರೋಹಾತ್ಮಕ ಭಾಷಣ ಮಾಡಿದರೆಂಬ ಆಪಾದನೆಯ ಮೇಲೆ ಸೆರೆ ಹಿಡಿಯಲ್ಪಟ್ಟಿರುತ್ತಾರೆ.

ಮೌಲಾನಾ ಶೌಕತಾಲಿಯವರು ಕರಾಚಿಗೆ ಬರಲೇ ಬಾರದು

ಕರಾಚಿ ಜುಲೈ ೧೫

ಮೌಲಾನಾ ಶೌಕತಾಲಿಯವರು ಕರಾಚಿಗೆ ಬರಬಾರದೆಂಬ ಸರಕಾರದ ಆಜ್ಞೆಯ ಅವಧಿಯು ಮುಗಿಯುತ್ತಿದ್ದಂತೆಯೇ ಆ ಅವಧಿಯನ್ನು ಅನಿಶ್ಚಿತ ಕಾಲದವರೆಗೆ— ಮುಂದರಿಸಬೇಕೆಂದು ತೀರ್ಮಾನವಾಗಿರುತ್ತದೆ.

ಚೀನಾದಲ್ಲಿ ಭಯಂಕರ ನೆರೆ.

ನೂರಾರು ಜನರು ಮೃತರಾದರು.

ಪೆಕಿಂಗ್ ಜುಲೈ ೧೫

ಚೀನಾದ ವೆಸ್ಟ್ ಹಾನ ಕಿಂಗ್‌ನಲ್ಲಿ ನೆರೆ ಬಂದು ನೂರಾರು ಜನರು ಮೃತರಾಗಿರುವರು. ೫೦,೦೦೦ ಜನರು ಮನೆಮಾರಿಲ್ಲದೆ ನಿರ್ಗತಿಕರಾಗಿರುವರು.

ಮುಸ್ಲಿಮ್ ಮತಕ್ಕೆ ಸೇರಿದರು

ತಿನ್ನವೆಲ್ಲಿ ಜುಲೈ ೧೫

ಕೈಲಸಪುರದಲ್ಲಿ ಪ್ರೊಟೆಸ್ಟಂಟ್ ಕ್ರೈಸ್ತ, ೩ ಮಂದಿಯ ಒಂದು ಕುಟುಂಬವು ಇಸ್ಲಾಮ್ ಮತವನ್ನವಲಂಬಿಸಿರುತ್ತದೆ. ಸ್ಥಳೀಯ ಮಸೀದಿಯಲ್ಲಿ ಮತದೀಕ್ಷೆಯು ನಡೆಯಿತು.

ವೈಸರಾಯರ ಭೂಕಂಪ ನಿಧಿ

ಜುಲಾಯಿ ೧೭ರ ತನಕ ವೈಸರಾಯರ ಕ್ವೆಟ್ಟಾ ಭೂಕಂಪದ ನಿಧಿಯಲ್ಲಿಯೂ ೨೭ ೭೩ ಲಕ್ಷ ರೂಪಾಯಿಗಳಲ್ಲಿ ೮ ೩೦೫ ಪೌಂಡುಗಳೂ ಸಂಗ್ರಹಿತವಾಗಿವೆ.

ಮೊಡರ್ನ್ ಕೆಫೆಯ ನವಕಾರ್ಯೋದ್ಯಮ.

ಇದೇ ಜೂನ್ ತಿಂಗಳ ೧೦ನೇ ತಾರೀಕು ವರೆಗೆ ಮೆಸರ್ಸ್ ಪೈ ಬ್ರದರ್ಸ್ ಆಡಳಿತೆಯಲ್ಲಿ ನಡೆದು ಕೊಂಡು ಬಂದಿದ್ದ "ಎಕ್ಸೆಲ್ಸಿಯರ್ ರೆಸ್ಟೋರೆಂಟ್" ಎಂಬ ಉಪಹಾರಭವನದ ಮುಂದಿನ ನಡಾವಳಿಯನ್ನು ಮೋಡರ್ನ್ ಕೆಫೆಯ ಮ್ಯಾನೇಜರಾದ ಶ್ರೀ ಕೆ ಸೀತಾರಾಮ ಯಡಿಯಾಳರು ಸರಕಾರದ ಲೈಸೆನ್ಸು ಮೂಲಕ ವಹಿಸಿಕೊಂಡು ಇದೇ ತಿಂಗಳ ತಾ ೧೧ನೇ ಗುರುವಾರ ಪ್ರಾತಃಕಾಲದಿಂದ ಕಾರ್ಯಾರಂಭ ಮಾಡಿರುತ್ತಾರೆ.

Rock-bottom charges. Please come & visit once Try once atleast Do not miss & do not repent

Royal Gold House,

(Prop —M Vaman Nayak & Son)

Hampankatta—MANGALORE—S Kanara

NICKEL PLATING WILL BE UNDERTAKEN ON GUARANTEED SYSTEM

Motor parts, Cycle parts, Gramophone parts, Surgical Instruments and etc, are plated in most scientific method under guaranteed system

Under special request at the time of depression

Platings are undertaken at Moderate Charges.

18ct. Rolled Gold Jewels Guaranteed for 10 Years

ದಿ ರೊಯಲ್ ಗೋಲ್ಡ್ ಹೌಸ್,

ಬಹಳ ಸುಲಭ ದರದಲ್ಲಿ ಗೇರಂಟಿಕೊಟ್ಟು ಎಲ್ಲಾ ಒಡವೆಗಳಿಗೆ ಪ್ಲೇಟಿಂಗ್ ಮಾಡಲಾಗುವುದು

ಇತರ ವಿಚಾರಗಳಿಗೆ—

ಎಮ್. ವಾಮನ ನಾಯಕ್ ಎಂಡ್ ಸನ್ಸ್,

18Ct. ರೋಲ್ಡ್ ಗೋಲ್ಡ್ ಜುವೆಲ್ಸ್,

ಹಂಪನಕಟ್ಟೆ, ಮಂಗಳೂರು, ದ. ಕ

ಈ ವಾರದ ತಂತಿವಾರ್ತೆಗಳು.

ಬೆಂಕಿಯನ್ನು ಕಾರುತ್ತಿರುವ ಹೊಂಡ!
ಕಲ್ಲುಗಳು ಮುಟ್ಟಿದವರನ್ನು ಸುಟ್ಟಿತು.
ನೈನಿತಾಲ್‌ನಲ್ಲಿ ಭೂವೈಚಿತ್ರ್ಯ!

ನೈನಿತಾಲ್, ಜುಲೈ ೧೩

ನೈನಿತಾಲ್‌ನಲ್ಲಿ ಕೆಲವು ದಿನಗಳಿಂದ ಒಂದು ವಿಚಿತ್ರ ಸಂಗತಿಯು ನಡೆಯುತ್ತಿದೆ. ಅಲ್ಲಿಯ ಕಲ್ಲಿತಾಲ್ ಎಂಬಲ್ಲಿನ ಮೋಟರ್ ಟರ್ಮಿನಸ್‌ನ ಬಳಿ ಒಂದು ಸಣ್ಣ ಹೊಂಡದಿಂದ ಬೆಂಕಿಯೂ ಹೊಗೆಯೂ ಹೊರಬೀಳುತ್ತಿವೆ. ಇದನ್ನು ನೋಡುವುದಕ್ಕಾಗಿ ಸಾವಿರಾರು ಜನರು ಅತ್ತ ಹೋಗುತ್ತಿರುವರು. ಆ ವಠಾರದಲ್ಲಿ ಬಿದ್ದಿರುವ ಕೆಲವು ಸುಂದರ ಕಲ್ಲುಗಳನ್ನು ಹೆಕ್ಕಿದವರ ಕೈಬೆರಳುಗಳು ಸುಟ್ಟುಹೋಗಿವೆ. ಒಬ್ಬ ಕೂಲಿಯಾಳುವು ಆ ಕಲ್ಲುಗಳ ಸೌಂದರ್ಯವನ್ನು ಕಂಡು, ಕೆಲವನ್ನು ಹೆಕ್ಕಿ ಜೇಬಿನೊಳಗೆ ತುಂಬಿದನು. ಕೂಡಲೇ ಅವನ ಜೇಬು ಸುಟ್ಟುಹೋಗಿ ವಸ್ತ್ರಕ್ಕೆ ಬೆಂಕಿಹಿಡಿಯಿತು. ಆ ಬೆಂಕಿಯನ್ನು ದಾರಿಗರು ನಂದಿಸಿದರು. ಈ ವಠಾರದಲ್ಲಿ ಗಂಧಕವೂ ಫೋಸ್ಫರಸ್ಸೂ ಸಮೃದ್ಧವಾಗಿವೆ.

ಅವಘಡಗಳಿಂದ ಪಾರಾಗುವುದಕ್ಕಾಗಿ ಉಪಾಯ
ತರಬೇತುಹೊಂದಿದ ಕೆಲಸಗಾರರ ನೇಮಕ.

ದುರಾ ಅವಘಡಗಳಾಗುವುದನ್ನು ತಪ್ಪಿಸುವುದಕ್ಕಾಗಿ ಸಂಯುಕ್ತಪ್ರಾಂತ್ಯ ಸರಕಾರವು ಇನ್ನುಮುಂದೆ ವಿದ್ಯುತ್ ಕಂಪೆನಿಗಳ ಕೆಲಸಗಾರರೆಲ್ಲ ಆ ವಿಷಯಕವಾದ ಕೆಲಸಗಳಲ್ಲಿ ಅನುಭವಹೊಂದಿಯೇ ಕೆಲಸಕ್ಕೆ ಸೇರಬೇಕೆಂದು ನಿರ್ಣಯಿಸಿರುತ್ತದೆ. ಈ ಉದ್ಯೋಗದಲ್ಲಿರುವ ಕೆಲಸಗಾರರನ್ನು ಪರೀಕ್ಷಿಸುವುದಕ್ಕಾಗಿ ಒಂದು ಬೋರ್ಡನ್ನು ನಿರ್ಮಿಸಲಿರುವರು.

ವಿಗ್ರಹವನ್ನೇ ಕದ್ದರು!

ಹೈದರಾಬಾದ್ ಜುಲೈ ೧೩

ಇಲ್ಲಿಯ ಸೀತಾರಾಮ ದೇವಸ್ಥಾನದಲ್ಲಿದ್ದ ಶ್ರೀಕೃಷ್ಣ ಮತ್ತು ರುಕ್ಮಿಣಿ ವಿಗ್ರಹಗಳನ್ನು ಕದ್ದಿರುವರು. ಒಬ್ಬನನ್ನು ಈ ಸಂಬಂಧವಾಗಿ ಸೆರೆಹಿಡಿದಿರುವರು.

ಸಾಹುಕಾರನ ಕುಟುಂಬವೇ ನಾಶವಾಯಿತು
ಮದುವೆಗೆಂದು ಹೋದವರು ಕ್ವೆಟ್ಟಾದಿಂದ ಹಿಂದಿರುಗಿಲ್ಲ
ವಧೂವರರ ಪತ್ತೆಯೇ ಇಲ್ಲ!

ಹೈದರಾಬಾದ ಜುಲಾಯಿ ೧೩

ಕೈಬೋಟೀಲಾಲ ಸಾಹುಕಾರ್ ಎಂಬವರ ಕುಟುಂಬದವರು ಕೆಲವರು ಒಂದು ಮದುವೆಗೆಂದು ಕ್ವೆಟ್ಟಕ್ಕೆ ಮೇ ತಿಂಗಳಲ್ಲಿ ಹೋದವರು ಇನ್ನೂ ಹಿಂದಿರುಗಿರುವುದಿಲ್ಲ. ಬೋಟೀಲಾಲರ ಇಬ್ಬರು ಗಂಡು ಮಕ್ಕಳು ಮಣ್ಣಿನಡಿ ಬಿದ್ದು ಮೃತರಾದರು. ಅವರ ತಾಯಿಯು ಕುಂಬಾ ಘಾಸಿಗೊಂಡು, ಡೆರಾಗಾಜಿಗೆ ತರಲ್ಪಟ್ಟರು. ವಧೂವರರ ಪತ್ತೆಯೇ ಸಿಕ್ಕಿಲ್ಲ.

ತನ್ನ ಕುಟುಂಬದಲ್ಲಿ ಮರಣಗಳನ್ನು ಕಾಣದ ಹಳಬ ತೀರಿಕೊಂಡನು.

ಎಟ್ಟಾವಾ ಜುಲಾಯಿ ೧೩

ಇಲ್ಲಿಯ ೯೦ ವರ್ಷ ಪ್ರಾಯದ ಥಾಕರರೊಬ್ಬನು ನಿನ್ನೆ ತೀರಿಕೊಂಡ. ೬೦ ಮಂದಿಯಿರುವ ತನ್ನ ಕುಟುಂಬದಲ್ಲಿ, ಅವನ ಮರಣದ ತನಕ ಒಂದೇ ಒಂದು ಮರಣವಾದುದನ್ನು ಅವನು ಕಂಡಿರಲಿಲ್ಲ. ಅವನ ಹಿರಿಯ ಮಗನಿಗೆ ೬೦ ವರ್ಷಪ್ರಾಯ; ದೊಡ್ಡಮಗನಿಗೆ ೪೦ ವರ್ಷ.

ಇಡೀ ಕುಟುಂಬವನ್ನೇ ಕೈದುಮಾಡಲಾಯಿತು!

ಬಂಗಾಲ್ ಜುಲೈ ೧೩

ದೇವೇಂದ್ರನಾಥ್ ದಾಸ್ ವಕೀಲ ಇವರನ್ನೂ ಇವರ ಪತ್ನಿ ಮತ್ತು ಪುತ್ರಿಯನ್ನೂ ಸೆರೆಹಿಡಿಯಲಾಗಿದೆ. ಕೆಲವು ನಿಷಿದ್ಧ ಗ್ರಂಥಗಳ ಇವರ ವಶವಿದ್ದುದೇ ಈ ಕೈದಿಗೆ ಕಾರಣ.

ಎರಡು ತಲೆಗಳಿರುವ ಒಂದೇ ಮಗು!
ಎರಡೂವರೆ ತಾಸು ಮಾತ್ರ ಬದುಕಿತು.

ದಿಬ್ರುಗಢ್, ಜುಲೈ ೧೪.

ಡೂಂಡೂಮಾ ಸರ್ಕಲಿನಲ್ಲಿ ಓರ್ವ ಕೂಲಿ ಹೆಂಗುಸು ಒಂದು ಮಗುವನ್ನು ಹೆತ್ತಿರುವಳು. ಅದಕ್ಕೆ ಎರಡು ತಲೆಗಳಿದ್ದುವು; ಒಂದೇ ದೇಹವಿತ್ತು. ಇತರ ಮಕ್ಕಳಷ್ಟೇ ದೊಡ್ಡ ಅಂಗವಿತ್ತು. ಅದು ಬದುಕಿದುದು ಎರಡೂವರೆ ತಾಸು ಮಾತ್ರ! ಇಲ್ಲಿಯ ಡೂಂಡೂಮಾ ಟೀ ಕಂಪೆನಿ ಲಿಮಿಟೆಡ್‌, ಇದರ ಸುಪರಿಂಟೆಂಡೆಂಟರಾದ ಮಿ। ಡಬ್ಲ್ಯೂ। ಡೊಗ್ಲಾಸ್ ಎಂಬವರು ಅದನ್ನು ಲಂಡನಿನ ವಸ್ತುಪ್ರದರ್ಶನಾಲಯಕ್ಕೆ ಕಳುಹಿಸುವುದಕ್ಕಾಗಿ ಜಾಗ್ರತೆಯಿಂದಿಟ್ಟಿರುವರು.

ಡೆಟಿನ್ಯೂಗಳ ಬಿಡುಗಡೆ

ಕಲ್ಕತ್ತ ಜುಲೈ ೧೬.

ಯುನೈಟೆಡ್ ಪ್ರೆಸ್ ವಾರ್ತಾಧಾರಕನು ಮೊದಲೇ ತಿಳಿಸಿದಂತೆ ಸರಕಾರವು ಬಂಗಾಳದ ಡೆಟಿನ್ಯೂಗಳನ್ನು ಬಿಡುಗಡೆ ಮಾಡುತ್ತಲಿದೆ. ೮೦೦ ಡೆಟಿನ್ಯೂಗಳನ್ನು ಗ್ರಾಮಗಳಿಗೆ ಕಳುಹಿಸಿರುವರು. ೨೫೦ ಮಂದಿಯನ್ನು ಶರ್ತಬದ್ಧವಾಗಿ ಬಿಟ್ಟಿರುವರು. ೧೦೦ ಮಂದಿಯನ್ನು ಯಾವ ಶರ್ತವಿಲ್ಲದೆಯೇ ಬಿಡುಗಡೆ ಮಾಡಿರುವರು.

ಮೀರತ್ತಿನಲ್ಲಿ ಸ್ಥಾನಿಕ ಸಂಸ್ಥೆಗಳಿಗೆ ಕೊಂಗ್ರೆಸಿನವರ ಉಮೇದ್ವಾರಿಕೆ.

ಮೀರತ್ ಜುಲಾಯಿ ೧೫

ಸ್ಥಾನಿಕ ಸಂಸ್ಥೆಗಳಿಗೆ ಕೊಂಗ್ರೆಸ್ ಪಕ್ಷೀಯರು ಉಮೇದ್ವಾರರಾಗಿ ನಿಲ್ಲಬೇಕೆಂಬ ಬಗ್ಗೆ ಮೀರತ್ ಡಿಸ್ಟ್ರಿಕ್ಟ್ ಕೊಂಗ್ರೆಸ್ ಕಮಿಟಿಯಲ್ಲಿ ಮೊನ್ನೆ ದೀರ್ಘ ಚರ್ಚೆಯಾಗಿ ಕೊನೆಗೆ ಈ ಸಲದ ಚುನಾವಣೆಗಳಿಗೆ ತಾವು ಉಮೇದ್ವಾರರಾಗಿ ನಿಲ್ಲಬೇಕೆಂದು ನಿರ್ಣಯಿಸಲಾಗಿದೆ. ಕಮಿಟಿಯ ಅಧ್ಯಕ್ಷರು ಒಂದು ಅಡ್ವೈಸರಿ ಬೋರ್ಡನ್ನು ಸ್ಥಾಪಿಸಿ ಚುನಾವಣೆಯ ಕೆಲಸವನ್ನು ಮುಂದೊತ್ತಬೇಕೆಂದು ಅಧಿಕಾರವೀಯಲಾಗಿದೆ.

ಲಾಹೋರಿನಲ್ಲಿ ಇನ್ನೂ ಕೆಲವು ಕೈದುಗಳು!

ಲಾಹೋರ್ ಜುಲೈ ೧೫

ಲಾಹೋರಿನ ಶಾಹಿದ್ ಗಂಜ ಮಸೀದಿಯ ಚಳವಳಿಯ ಮುಸ್ಲಿಮ ಧುರೀಣರಲ್ಲಿ ಆರೇಳರನ್ನು ಅವರವರ ಹಳ್ಳಿಗಳಲ್ಲಿ ನಿರ್ಬಂಧಗೊಳಿಸಿ ಇಡಲಾಗಿದೆ. ಪ್ರಥಮ ಸರ್ವಾಧಿಕಾರಿಯನ್ನು ಸೆರೆ ಹಿಡಿದೊಡನೆ ಮುಸ್ಲಿಮ ಕೌನ್ಸಿಲ್ ಒಫ್ ಏಕ್ಷನ್ ಸಭೆ ಸೇರಿ, ಮರುದಿನ ಸರ್ವಾಧಿಕಾರಿ ಯಾರೆಂದು ನಿರ್ಣಯವಾದಾಗ ನೀಲಿ ಅಂಗಿಯ ಸ್ವಯಂಸೇವಕರನ್ನು ಕಳುಹಿಸಿ ಮುಸ್ಲಿಮರು ಸತ್ಯಾಗ್ರಹವನ್ನು ಕೈಕೊಳ್ಳಬೇಕೆಂದು ನಿರ್ಣಯಿಸಿದರು. ಲಾಹೋರಿನ ಅನೇಕ ಬಜಾರುಗಳಲ್ಲಿ ಹರತಾಳ ಆಚರಿಸಲ್ಪಡುತ್ತಿದೆ. ಕೆಲವು ಸ್ವಯಂಸೇವಕರು ಹರತಾಳವಾಚರಿಸಬೇಕೆಂದು ಜನರಿಗೆ ಬೋಧಿಸುತ್ತಿದ್ದಾಗ ಅವರನ್ನು ಪೋಲೀಸರು ಸೆರೆಹಿಡಿದಿರುವರು. ಅನಾಹುತವಾಗುವ ಭಯದಿಂದ ಹಿಂದೂಗಳು ಅಂಗಡಿಗಳನ್ನು ಮುಚ್ಚಿರುವರು. ವ್ಯಾಪಾರ ವ್ಯವಹಾರಗಳು ಸಾಕಷ್ಟು ನಡೆಯುವುದಿಲ್ಲ.

ಲಾಹೋರಿನ ವಾರ್ತಾಪತ್ರಿಕೆಗಳ ಮೇಲೆ ಶಾಹಿದ್ ಗಂಜ್ ಮಸೀದಿಯ ಕುರಿತಾದ ವಾರ್ತೆಗಳ ಪ್ರಕಟಣೆಯ ಕುರಿತಾಗಿ ಇಡಲ್ಪಟ್ಟ ನಿರ್ಬಂಧವು ಇನ್ನೂ ಒಂದು ವಾರದ ತನಕ ಮುಂದರಿಸಲ್ಪಟ್ಟಿರುತ್ತದೆ.

ಮಗಳನ್ನು ಕೊಂದ ತಂದೆ!
ಅವರ ತಪ್ಪಿಗಾಗಿ ಇವಳನ್ನು ಕೊಂದನು

ಆಗ್ರಾ, ಜುಲೈ ೧೫

ಆಗ್ರಾ ಜಿಲ್ಲೆಯ ಸಹಾಯಿ ಎಂಬಲ್ಲಿ ಗರೀಬ ಎಂಬವನೊಬ್ಬನು ಮಧ್ಯರಾತ್ರಿ ತನ್ನ ಮಗಳನ್ನು ಕೊಂದಿಕ್ಕಿದನು. ಅವಳ ರಕ್ಷಣೆಗಾಗಿ ಓಡಿದವರನ್ನು ಅವನು ಹಿಂಗಟ್ಟಿಸಿದನು. ಗರೀಬನು ತನ್ನ ಮಗಳನ್ನು ಓರ್ವ ಗೃಹಸ್ಥನಿಗೆ ವಿವಾಹಮಾಡಿಕೊಡುವೆನೆಂದು ನಂಬಿಸಿ ಸ್ವಲ್ಪ ಹಣವನ್ನು ಪಡೆದನು. ಆದರೆ ಈ ನೆಂಟಸ್ತಿಕೆಗೆ ಅವಳ ಇತರ ಸಹೋದರರು ಸಮ್ಮತಿಸಲಿಲ್ಲ. ಅವರ ಮೇಲಣ ಸಿಟ್ಟಿನಿಂದ ಗರೀಬ ತಂದೆಯು ತನ್ನ ಮಗಳನ್ನೇ ಕೊಂದಿಕ್ಕಿದನು. ಈಗ ಗರೀಬನನ್ನು ಸೆರೆಹಿಡಿದಿರುವರು.

ಕರ್ನಾಟಕ ಫ್ರೀ ನೈಟ್‌ಸ್ಕೂಲ್, ಕುಮಟಾ ರಸ್ತೆ, ಬೊಂಬಾಯಿ.

ಈ ಶಾಲೆಯ ಉಪಾಧ್ಯಾಯರ ಸಭೆಯು ಕಳೆದವಾರ ಸದ್ರಿ ಶಾಲೆಯಲ್ಲಿ ಸೇರಿ, ೧೯೩೫—೩೬ರ ವರೆಗಿನ ಆಫೀಸ್ ಬೇರಾರ್‌ರು ಚುನಾಯಿಸಲ್ಪಟ್ಟಿರುತ್ತಾರೆ. ಶ್ರೀಗಳಾದ ಎಸ್. ಎಸ್. ಶೆಟ್ಟಿ, ಬಿ. ಕಾಂ. ಅಧ್ಯಕ್ಷ, ಟಿ. ಎಂ. ಉಚ್ಚಿಲ್, ಹೆಡ್ಮಾಸ್ತರ್, ಡಿ. ಆರ್. ಅಂಚನ್, ಅಸಿಸ್ಟೆಂಟ್ ಹೆಡ್ಮಾಸ್ತರ್. ಎಂ ಬಿ. ಸುವರ್ಣ, ಜನರಲ್ ಸೆಕ್ರೆಟರಿ ಎ. ಬಿ. ಶೆಟ್ಟಿಗಾರ್, ಜನರಲ್ ಟ್ರೆಜರರ್.

ಲೋಕೋ ಭಿನ್ನರುಚಿಃ

ಕೆಲವರು ದುಡ್ಡನ್ನು ಕದಿಯುವರು, ಕೆಲವರು ಸೀಯಾಳವನ್ನು ಕದಿಯುವರು, ಕೆಲವರು ವಸ್ತ್ರಗಳನ್ನು ಕದಿಯುವರು; ಆದರೆ ಹೆಂಡವನ್ನು ಕದಿಯುವವರು ಕಡಮೆ. ಮದ್ರಾಸಿನ ಗುರುವಾಲ್ ಸಮ್ಮಂಧ ಗ್ರಾಮನಿ ಅಮ್ಮನ್ ಕೊಯಿಲ್ ಸ್ಟ್ರೀಟ್‌ನಲ್ಲಿದ್ದ ಒಂದು ಹೆಂಡದಂಗಡಿಯಲ್ಲಿ ಯಾರೋ ಕೆಲವು ಕೊಡ ಕಳ್ಳನ್ನು ಕಳವು ಮಾಡಿರುತ್ತಾರೆ. ಯಾರೆಂದು ತಿಳಿದುಬಂದಿಲ್ಲ. ವಿಚಾರಣೆಯಾಗುತ್ತಲಿದೆ.

ಮೊಗವೀರ ಸಂಘಕ್ಕೆ ಬೊಂಬಾಯಿ ನಗರ ಅಧ್ಯಕ್ಷರ ಅಭಯ

ಇದೇ ತಾ. ೧೪ರಲ್ಲಿ, ಮೊಗವೀರ ಸಂಘದಲ್ಲಿ ಬೊಂಬಾಯಿಯ ನಗರಾಧ್ಯಕ್ಷರಾದ ಮಿ। ಕೆ ಎಫ್ ನರಿಮಾನರು ಭಾಷಣವೀಯುವಾಗ “ಸದ್ಯ ಬೊಂಬಾಯಿಯಲ್ಲಿ ಕ್ಲಬ್ ಮತ್ತು ಸಿನೇಮಾಗಳಲ್ಲಿ ವೃಥಾ ಕಾಲಹರಣ ಮಾಡುತ್ತಿರುವ ಬರೇ ನೂರು ಯುವಕರು ಮುಂದೆಬಂದಲ್ಲಿ ಐದು ಯಾ ಹತ್ತು ವರ್ಷಗಳೊಳಗೆ ಈ ನಗರದಲ್ಲಿ ಅವಿದ್ಯೆಯನ್ನು ತೊಲಗಿಸಬಹುದೆಂದೂ, ಆಗ ಕೊಂಗ್ರೆಸ್ ವಿದ್ಯಾಪ್ರಸಾರದ ಕಾರ್ಯವನ್ನು ಕೂಡಲೇ ಕೈಕೊಳ್ಳುವುದಾಗಿಯೂ ಹೇಳಿದರು.

ಅಬಿಸೀನಿಯಾದಲ್ಲಿ ಇಟೆಲಿಯಾದ ಪ್ರಜೆಗಳಿಗೆ ಬಾಧೆ!

ಎಬಿಸೀನಿಯಾದಲ್ಲಿ ಇಟೆಲಿಯ ಪ್ರಜೆಗಳನ್ನು ಎಬಿಸೀನಿಯಾ ಸೈನಿಕರು ಬಹಳವಾಗಿ ಬಾಧಿಸುತ್ತಿರುವರೆಂದು ಇಟೆಲಿಯು ಪ್ರಕಟಿಸಿರುತ್ತದೆ. ಅದೋವಾದ ಇಟೆಲಿಯನ ಕನ್ಸಲರಿಗೆ ಆಹಾರ ಸಾಮಾಗ್ರಿಗಳನ್ನು ವಿಕ್ರಯಿಸಿದ ೨೫ ಮಂದಿಗಳನ್ನು ಸೆರೆಹಿಡಿಯಲಾಗಿದೆ. ಇಟೇಲಿಯನ್ ಮಿಲಿಟರಿ ಎಟೇಚ್‌ನ ಅನೇಕ ಕೆಲಸಗಾರರನ್ನು ಸೆರೆ ಹಿಡಿದಿದ್ದಾರೆ. ಗೊಂಡಾರದಲ್ಲಿ ಇಟೇಲಿಯನ್ ಕನ್ಸಲರ ಪತ್ನಿಯೂ ಎರಡು ಮಕ್ಕಳೂ ಹೋಗಲಿರುವಾಗ ಎಬಿಸೀನಿಯಾ ಸೈನಿಕರು ಅವರನ್ನು ಎರಡು ದಿವಸಗಳ ವರೆಗೆ ತಡೆದರು. ಕನ್ಸಲರು ವ್ಯಸನಸೂಚನೆ ಮಾಡಿ ಮನವಿಮಾಡಿಕೊಂಡ ಮೇಲೆಯೇ ಅವರನ್ನು ಬಿಡುಗಡೆ ಮಾಡಲಾಯಿತು.

ಬ್ರಿಟಿಷ ವಸ್ತ್ರೋದ್ಯಮಿಗಾರಿಕೆಯವರ ದುಷ್ಟ ಚಾಳಿ.

ಇದೇ ಜೂನ್ ೨೫ನೆಗೆ ಬಂಗಾಳ ಗಿರಣಿಮಾಲೀಕರ ಸಂಘದ ತ್ರೈಮಾಸಿಕ ಸಭೆಯು ಸೇರಿದಾಗ, ಬಂಗಾಳದಲ್ಲಿ ೧೯೩೪—೩೫ರಲ್ಲಿ ಕಳೆದ ೧೯೩೩—೩೪ಕ್ಕಿಂತ ೫೦ ಮಿಲ್ಲಿಯ ಗಜ ವಸ್ತ್ರ ಹೆಚ್ಚು ತಯಾರಾಗಿದೆಯಾಗಿಯೂ, ಆದರೆ, ಅದೇ ಅವಧಿಯಲ್ಲಿ ಅಷ್ಟೇ ಪರಿಮಾಣದಲ್ಲಿ ವಿದೇಶಿ ವಸ್ತ್ರವೂ ಬಂಗಾಳಕ್ಕೆ ಆಮದಾಗಿರುವುದಾಗಿಯೂ ಅಲ್ಲದೆ, ಬಂಗಾಳದಲ್ಲಿ ಉತ್ಪನ್ನವಾಗುವ ವಸ್ತ್ರದ ಮಾರಾಟವು ವಿದೇಶಗಳಿಂದ ಇಂದಿಗೂ ಆಮದಾಗುತ್ತದೆಂದೂ ವರದಿಯಿಂದ ತಿಳಿದುಬಂತು. ಬಂಗಾಳದಲ್ಲಿ ವಸ್ತ್ರ ಕೈಗಾರಿಕೆಯನ್ನು ಹೇಗೆ ವೃದ್ಧಿಗೊಳಿಸಬಹುದೆಂಬ ಶೋಧಪ್ರಯತ್ನಗಳನ್ನು ಮಾಡಬೇಕೆಂಬ ನಿರ್ಧಾರವೂ ಆಯಿತು. ಕೆಲವು ಬ್ರಿಟಿಷ ವಸ್ತ್ರ ಕೈಗಾರಿಕೆಯವರು ತಮ್ಮ ವಸ್ತ್ರಗಳ ಮೇಲೆ ತಮ್ಮದೇ ಮೊಹರನ್ನು ಹಾಕುವ ಬದಲಿಗೆ, ಹಿಂದೀ ಆಮದುಗಾರರ ಮೊಹರನ್ನು ಹಾಕುತ್ತಿರುವರಾಗಿ ಈ ದುಷ್ಟ ಚಾಳಿಯ ಬಗೆ ಇಂಡಿಯಾ ಸರಕಾರಕ್ಕೆ ತಿಳಿಸಿರುವರು.

ಗಾಳಿ ತುಂಬಿದ ಚಕ್ರಗಳಿರುವ ಎತ್ತಿನ ಗಾಡಿಗಳಿಗೆ ಟೋಲ್‌ಗೇಟ್ ಫೀಸ್ ಇಲ್ಲ.

ಗಾಳಿ ತುಂಬಿದ ಚಕ್ರಗಳಿರುವ ಎತ್ತಿನ ಗಾಡಿಗಳ ಮೇಲೆ ಟೋಲ್‌ಗೇಟ್ ಫೀಸನ್ನು ಹೊರಿಸಬಾರದೆಂದು ಮುಂಬಯಿ ಸರಕಾರವು ನಿರ್ಣಯಿಸಿರುತ್ತದೆ. ಮಾರ್ಗಗಳನ್ನು ಹಾಳುಗೆಡಹಲು ಕಬ್ಬಿಣದ ಪಟ್ಟಿಯಿರುವ ಚಕ್ರಗಳ ಗಾಡಿಗಳೇ ಹೆಚ್ಚಿನ ಕಾರಣವಾಗಿವೆಯಾದುದರಿಂದ ಮುಂದಕ್ಕೆ ಮಾರ್ಗಗಳ ಮೇಲಣ ವೆಚ್ಚವನ್ನಿಳಿಸುವುದಕ್ಕಾಗಿ ಗಾಳಿ ತುಂಬಿದ ಚಕ್ರಗಳಿರುವ ಗಾಡಿಗಳನ್ನೇ ಹೆಚ್ಚು ಹೆಚ್ಚಾಗಿ ಬಳಸುವಂತೆ ಸರಕಾರವು ಪ್ರೋತ್ಸಾಹವೀಯಬೇಕೆಂದಾಗಿದೆ. ತಮ್ಮ ಎಲ್ಲಾ ಕೆಲಸಗಳಿಗೂ ಉಪಯೋಗಿಸಲ್ಪಡುವ ಗಾಡಿಗಳ ಚಕ್ರಗಳು ರಬ್ಬರಿನಿಂದಲೇ ರಚಿಸಲ್ಪಟ್ಟಿರಬೇಕಾಗಿಯೂ ಅಥವಾ ಗಾಳಿ ತುಂಬಿದ ಚಕ್ರಗಳಿರಬೇಕಾಗಿಯೂ ಸರಕಾರವು ಯೋಚಿಸಿಕೊಂಡಿದೆ.

ಧೋತಿ ಮತ್ತು ಜುಬ್ಬಗಳನ್ನು ಹಾಕಿಕೊಂಡೇ ಸಾರ್ವಭೌಮರ ದರ್ಶನ

ಲಂಡನಿನಲ್ಲಿರುವ ಶ್ರೀ। ಡಿ ಕೆ ಲಾಹಿರಿ ಚೌಧುರಿ ಎಂಬವರು ಸಾರ್ವಭೌಮರನ್ನು ಧೋತಿ ಮತ್ತು ಜುಬ್ಬಗಳನ್ನು ಧರಿಸಿಕೊಂಡೇ ದರ್ಶನ ಮಾಡಲಿರುವರು. ಹೀಗೆ ಭೇಟಿ ಮಾಡಲು ತನಗೆ ಅಪ್ಪಣೆ ಕೊಡಬೇಕೆಂದು ಶ್ರೀ। ಚೌಧುರಿಯವರು ಲೋರ್ಡ್ ಚೆಂಬರ್‌ಲೇನರಿಗೆ ಅರ್ಜಿ ಹಾಕಿರುವರು. ಇದರಿಂದಾಗಿ ಈ ಉಡಿಗೆ ತೊಡಿಗೆಯು ಲಂಡನಿನಲ್ಲಿ ಪ್ರಚಾರವಾಗಲಿದೆ.

ವಜ್ರಗಳು! —— ವಜ್ರಗಳು

ನಮ್ಮಲ್ಲಿ ‘ಅಂಟವರ್ಪ’ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ “ಬ್ಲು ಜಾಗ್ಗರ” ವಜ್ರಗಳೂ “ಎಕ್ಸ್‌ಟ್ರಾ ವ್ಹಾಯಿಟ್” ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

Part Proprietors of —

Sri Krishna Mills & Co
Oil Manufacturers
Bunder, Mangalore

Bhagavan Ganesh Pai & Co
Copper Sheet & Twist
Merchants, Camp Bazar,
Cannanore.

Representatives for the W.C.

M/s A. & F. Harvey
Cotton Spinners,
Tuticorin, Madura &c.

Guardian Assurance Co., Ltd.
(Incorporated in England)
Head Office: 68, King
William Street,
London, E. C 4.

ಪುಸ್ತಕ ವಿಮರ್ಶೆ.

ಲೇಖಕರು:—ಶ್ರೀ 'ಆನಂದಕಂದ' ಮನೋಹರ ಗ್ರಂಥಮಾಲೆ, ೧೧ನೇ ಕುಸುಮ. ಬೆಲೆ ೧೪ ಆಣೆಗಳು. ಪ್ರಕಾಶಕರು: ಮನೋಹರ ಗ್ರಂಥಮಾಲಾ ಕಾರ್ಯಾಲಯ, ಸಾಧನಕೇರಿ–ಧಾರವಾಡ.

ಇದೊಂದು ಐತಿಹಾಸಿಕ ಕಾದಂಬರಿ ಶ್ರೀ ಆನಂದಕಂದರು ಸ್ವತಂತ್ರವಾಗಿ ಬರೆದುದು, 'ಫರನಾವೋ ನುನೀಝ್' ಎಂಬ ಪೋರ್ತುಗೀಝ್ ಪ್ರವಾಸಿಯ ವರದಿಯಲ್ಲಿ ದೊರೆತಿರುವ ಐತಿಹಾಸಿಕ ಘಟನೆಯೊಂದು ಈ ಕಾದಂಬರಿಗೆ ವಸ್ತುವಾಗಿದೆ "ಸೋರ್ಸಿಸ್ ಆಫ್ ವಿಜಯನಗರ ಹಿಸ್ಟ್ರಿ" ಎಂಬ ಪುಸ್ತಕದೊಳಗಿದ್ದ ವಿರೂಪಾಕ್ಷರಾಯನ ಕಾಲದ ಶಾಸನ, ಕಾವ್ಯ ನಾಟಕಗಳ ಬೇರೆ ಬೇರೆ ಭಾಗಗಳು ವಸ್ತುವಿನ ಬೆಳವಣಿಗೆಗೆ ಸಹಾಯವನ್ನು ಮಾಡಿವೆ. ಕಥೆಯನ್ನು ಓದುವಾಗ ವಿಜಯನಗರದ ಅಂದಿನ ವೈಭವ, ಜನರ ಪರಿಸ್ಥಿತಿ, ಆಚಾರ ವಿಚಾರ, ಗುಣನಡತೆಗಳು ಕಣ್ಮುಂದೆ ನಿಂತಂತಾಗುತ್ತವೆ. ಪ್ರಾಚೀನ ಕನ್ನಡನಾಡಿನ ವೈಭವ, ಎಂಥೆಂತಹ ಸ್ವಭಾವದವರಿದ್ದು, ಹೇಗೆಲ್ಲ ವರ್ತಿಸಿ, ಎಂಥೆಂತಹ ಪರಿಸ್ಥಿತಿಗೊಳಗಾದರು ಎಂಬ ವಿಷಯಗಳನ್ನು ಭಾವಭರಿತವಾಗಿ ಚಿತ್ರಿಸಿದ್ದಾರೆ

ಈ ಕಾದಂಬರಿಯು ೧೭೮ ಪುಟಗಳನ್ನು ಮುಗುಚುವಾಗಲೂ ಐತಿಹಾಸಿಕ ಗ್ರಂಥವನ್ನೋದಿದಂತಾಗುತ್ತದೆ ಕಥಾಸರಣಿಯು ಸಿರರ್ಗಳವಾಗಿ ಹರಿದುಕೊಂಡು ವಾಚಕರಲ್ಲಿ ಆನಂದೋತ್ಸಾಹಗಳನ್ನುಕ್ಕನ್ನಗೊಳಿಸುತ್ತದೆ ಭಾಷಾಶೈಲಿಯ ವಿಷಯ ಹೆಚ್ಚು ಹೇಳಬೇಕಾಗಿಲ್ಲ ಆನಂದಕಂದರ ಇತರ ಕೃತಿಗಳಲ್ಲಿರುವ ಸರಳತೆ, ನವೀನತೆ, ಲಾಲಿತ್ಯ, ಗಾಂಭೀರ್ಯ, ಮೊದಲಾದ ಎಲ್ಲ ಗುಣಗಳೂ ಇದರಲ್ಲಿವೆ ಉತ್ತರ ಕನ್ನಡದ ಶೈಲಿಯು ನೆರಳಿದೆಯಾದರೂ ವಾಚನವು ಯಾರಿಗೂ ಕಷ್ಟವಾಗಲಾರದು ಇಂತಹ ಅಮೂಲ್ಯ ಕಾದಂಬರಿಗಳು ಕನ್ನಡ ನಾಡಿನಲ್ಲಿ ಒಂದೊಂದಾಗಿ ಹೊರಬರುತ್ತಿರುವುದರಿಂದ ಕನ್ನಡನಾಡಿನ ಶುಭೋದಯ ಕಾಲವು ಹೆಚ್ಚು ದೂರವಿಲ್ಲವೆಂಬುದು ವಿದಿತವಾಗುವುದು ಗ್ರಂಥಪ್ರಕಾಶನ ಸಮಿತಿಯವರ ಸಾಹಸಕ್ಕಾಗಿ ನಮ್ಮ ಹೃತ್ಪೂರ್ವಕ ಅಭಿವಂದನೆ

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No 56/1935

ರಾಮಕೃಷ್ಣ ಹೊಬಳಿದಾರ ಕೂಡಾ–ಅರ್ಜಿದಾರರು

ಮತ್ತು

ಮರ್ಲಿ ಕೇರಿಗಾರ್ತಿ ಎದ್ರಿಳು.

ಅರ್ಜಿದಾರರ ಸಹೋದರ ವ ಎದ್ರಿಳ ಗಂಡ ತಾ. 29–5–1935ರಲ್ಲು ಮೃತಪಟ್ಟ ಅನಂತಯ್ಯ ಹೊಬಳಿದಾರಗೆ ಬೊಂಬಾಯಿ ಲ್ಯಾಫ್ ಇನ್ಶೂರೆನ್ಸ್ ಕಂಪೆನಿಯಿಂದ ನಂಬ್ರ 10875ನೇ ಪೊಲಿಸಿ ಪ್ರಕಾರ ಸಿಕ್ಕಬೇಕಾದ ಧ್ರವದನ್ನು ವಸೂಲುಮಾಡಿಕೊಳ್ಳಲಿಕ್ಕೆ ತಾವು ಹಕ್ಕುದಾರರೆಂತಲೂ ಆ ಬಗ್ಗೆ ತಮಗೆ ವಾರಿಶಿ ಸರ್ಟಿಫಿಕೇಟು ಕೊಡಿಸಬೇಕಾಗಿ ಕೊಟ್ಟ ಅರ್ಜಿಯು ಮೇಲೆ ಕಾಣಿಸಿದ ಕೋರ್ಟಿನಲ್ಲಿ ತಾ. 6–8–1935ಕ್ಕೆ ತನ್ನಿಗೆ ಇಟ್ಟಿರುತ್ತದೆ. ಈ ಬಾಬಿನಲ್ಲಿ ಆಕ್ಷೇಪವುಳ್ಳವರು ತಮ್ಮ ಆಕ್ಷೇಪಗಳನ್ನು ಸದ್ರಿ ತಾರೀಕಿನಲ್ಲಿ ಕೋರ್ಟು ಮುಂದೆ ಹಾಜರು ಆಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ತಿಳಿಸೋಣಾಗುತ್ತದೆ.

G. Sanjiva Rao, B. A. LL. B.

Pleader for the Petrs

15–7–1935, ಮೊಕ್ಕಾಂ, ಕುಂದಾಪುರ

ಶೃಂಗೇರಿ ಜಹಗೀರ್ ವರ್ತಮಾನ.

(ಶೃಂಗೇರಿ ಪತ್ರ)

ಕಳೆದ ಒಂದು ತಿಂಗಳಿಂದೀಚೆ ಶೃಂಗೇರಿ ಶ್ರೀ ಶ್ರೀಜಗದ್ಗುರು ಚಂದ್ರಶೇಖರ ಭಾರತೀ ಸ್ವಾಮಿಗಳವರು ಜಹಗೀರಿಯ ಸ್ವತಂತ್ರ ಆಡಳಿತ ಕಾರ್ಯಕ್ರಮಗಳ ವಿಷಯದಲ್ಲಿ ಶ್ರೀ ಶ್ರೀಗಳವರೇ ಖುದ್ದು ಮುತುವರ್ಜಿಯನ್ನು ವಹಿಸುತ್ತಲಿರುವರು ಎಂಬುದಾಗಿ ಕೇಳಿ ತಿಳಿದು ಬರುತ್ತದೆ

ಆರ್ಥಿಕ ಮುಗ್ಗಟ್ಟು ಇಡೀ ಜಗತ್ತಿಗೇ ಬಂದೊದಗಿರುವುದು ಸರಿಯಷ್ಟೆ ಇತ್ತೀಚೆಗೆ ಶ್ರೀ ಶ್ರೀಗಳವರು ಖುದ್ದು ಬಜೆಟ್ಟು ಮುಂತಾದ ಕಾರ್ಯಕ್ರಮಗಳ ಮತ್ತು ಸಂಬಳ ವಗೈರೆ ಲೆಕ್ಕಾಚಾರಗಳನ್ನು ಪರಾಂಬರಿಸಿ ಅನೇಕ ಬಾಬುಗಳಲ್ಲಿ ಅನಾವಶ್ಯಕವಾಗಿ ಹಣವು ವ್ಯಯವಾಗುತ್ತಲಿರುವುದನ್ನು ಕಮ್ಮಿ ಮಾಡಿಸಿ, ಅವಶ್ಯಕವಾಗಿ ಬೇಕಾಗಿರುವ ಬಾಬುಗಳಿಗೆ ಕಮ್ಮಿ ಖರ್ಚು ಇರುವುದನ್ನು ಕಂಡು ಹೆಚ್ಚಿನ ಖರ್ಚುಮಾಡಬೇಕಾಗಿಯೂ ಅಪ್ಪಣೆ ಇತ್ತಿರುವರಂತೆ. ಅಲ್ಲದೆ, ಇಲ್ಲಿ ಹಿಂದೆ ಸರ್ವಾಧಿಕಾರಿಗಳಾಗಿ ವೇ॥ ಬ್ರ॥ ನಂಜನಗೂಡು ಶ್ರೀ ಶ್ರೀಕಂಠ ಶಾಸ್ತ್ರಿಗಳವರಿಗೆ ಪೆನ್‌ಶನ್ ವಗೈರೆ ಎಂಬುದಾಗಿ ಸುಮಾರು ೩೫೦ ರೂಪಾಯಿಗಳ ವರೆಗೂ ಸಲ್ಲುತ್ತಿರುವುದನ್ನು ಪರಾಂಬರಿಸಿ ಶ್ರೀ॥ ಶಾಸ್ತ್ರಿಗಳವರಿಗೆ ಆರ್ಥಿಕ ಮುಗ್ಗಟ್ಟಿನ ಪ್ರಯುಕ್ತ ಸುಮಾರು ೧೦೦ ರೂಪಾಯಿಗಳನ್ನು ಕಮ್ಮಿ ಮಾಡಿ ಕಳುಹಿಸಬೇಕೆಂತಲೂ, ಶ್ರೀ॥ ಶಾಸ್ತ್ರಿಗಳವರ ಸಹೋದರರಾದ ಶ್ರೀ॥ ಯಜ್ಞೇಶ್ವರ ಶಾಸ್ತ್ರಿಗಳವರಿಗೆ ಸಲ್ಲುತ್ತಿರುವ ಸುಮಾರು ೫೦ ರೂಪಾಯಿಗಳ ಬಗ್ಗೆ ಸುಮಾರು ೧೫ ರೂಪಾಯಿಗಳನ್ನು ಕಮ್ಮಿಮಾಡಿ ಕಳುಹಿಸಬೇಕೆಂತಲೂ, ಮತ್ತೊಬ್ಬ ಸಹೋದರರಾದ ಶ್ರೀ॥ ಕೃಷ್ಣ ಶಾಸ್ತ್ರಿಗಳವರಿಗೆ ಸುಮಾರು ೧೫೦ ರೂಪಾಯಿಗಳ ಮೇಲ್ಪಟ್ಟು ಸಲ್ಲುತ್ತಿರುವುದರಿಂದ ಸುಮಾರು ೧೦೦ ರೂಪಾಯಿಗಳನ್ನು ಕಮ್ಮಿಮಾಡಿ ಕಳುಹಿಸಬೇಕೆಂತಲೂ ಈಗಿನ ಸರ್ವಾಧಿಕಾರಿಗಳಿಗೆ ಅಪ್ಪಣೆ ಇತ್ತರೆಂದೂ, ಸದ್ರಿ ಸರ್ವಾಧಿಕಾರಿಗಳು ಶ್ರೀ ಶ್ರೀಗಳವರ ಹೇಳಿಕೆಗೆ ಮನನ ಮಾಡದೆ ಎಂದಿನಂತೆ ಸಲ್ಲುತ್ತಿದ್ದ ಸಂಬಳಗಳನ್ನೇ ರವಾನಿಸಿಕೊಟ್ಟಿರುವಂತೆಯೂ ವರ್ತಮಾನವು ಕೇಳಿ ತಿಳಿದುಬರುತ್ತದೆ

ಕಷ್ಟಪಟ್ಟು ಕೆಲಸಮಾಡುವವರಿಗೆ ಕಮ್ಮಿ ಸಂಬಳವೂ, ಪೆನ್‌ಷನ್‌ದಾರರಿಗೆ ಹೆಚ್ಚಿನ ಸಂಬಳವೂ ಸಲ್ಲುತ್ತಿರುವುದನ್ನಂತೂ ಕೇಳಿ ತಿಳಿಸಲು ಬಹಳ ವಿಷಾದಿಸಬೇಕಾಗಿದೆ

ಇಲ್ಲಿಯ ಬಡ ರೈತಾಪಿಗಳ ಮೊರೆಯನ್ನು ಶ್ರೀ ಶ್ರೀಗಳವರ ದಿವ್ಯಚರಣ ಸನ್ನಿಧಾನಂಗಳಿಗೆ ಮುಟ್ಟಿಸುವರೇ ಇರುವುದಿಲ್ಲ. ಶ್ರೀಮಂತ ರೈತರುಗಳು ಅವರವರಿಗೆ ಬೇಕಾದ ರಿಯಾಯಿತಿಗಳನ್ನು ಮಾತ್ರ ಅವರು ಒದಗಿಸಿಕೊಳ್ಳುತ್ತಿರುವರು. ರೈತಾಪಿಗಳ ಪರವಾಗಿ ಸದ್ರಿ ಮೇಲ್ಕಂಡ ಸರ್ವಾಧಿಕಾರಿಗಳ ಖುದ್ದು ಅಪ್ಪಣೆಯಂತೆ 'ಪ್ರಜಾಹಿತೈಷಿ' ಸುಬ್ರಹ್ಮಣ್ಯಂ ಎಂಬವರು ರೈತಾಪಿಗಳ ಮೊರೆಯನ್ನು ಸದ್ರಿ ಅಧಿಕಾರಿಗಳ ಸನ್ನಿಧಾನಕ್ಕೆ ಅರ್ಪಿಸುವ ಬಗ್ಗೆ ಕೆಲಸ ಮಾಡಿದ್ದಕ್ಕೆ, ಸದ್ರಿ 'ಪ್ರಜಾಹಿತೈಷಿ'ಗಳಿಗೆ, ಸದ್ರಿ ಸರ್ವಾಧಿಕಾರಿಗಳೇ ಶ್ರೀಮಠದ ಮಹಾಜನಗಳ ಛತ್ರದಲ್ಲಿ ದಯಪಾಲಿಸಲಾಗಿದ್ದ ಒಪ್ಪೊತ್ತಿನ ಅನ್ನದಾನಕ್ಕೂ ತಾವೇ ಅಡ್ಡಿಹಾಕಿದರು ಘನ ಸರಕಾರದವರಾದರೋ ಸದ್ರಿ 'ಪ್ರಜಾಹಿತೈಷಿ'ಗಳು ಕೊಪ್ಪ ತಾಲೂಕು ಬಡರೈತಾಪಿಗಳ ಪರವಾಗಿಯೂ, ಜಹಗೀರಿಯ ಬಡ ರೈತಾಪಿಗಳ ಪರವಾಗಿಯೂ, ಘನಸರಕಾರದಕ್ಕೂ ಜಹಗೀರ್ ಸವಾ ಧಿಕಾರಿಗಳಲ್ಲಿಯೂ ರೈತಾಪಿಗಳ ಇಚ್ಛೆಯಂತೆ ರೈತಾಪಿಗಳ ಕೋರಿಕೆಯನ್ನು ರೈತಾಪಿಗಳ ಕಷ್ಟಪರಿಹಾರದ ಬಗ್ಗೆ ಅಹವಾಲ್ ಅರ್ಜಿಯನ್ನು ರವಾನಿಸಿದ್ದಕ್ಕೆ ಘನ ಸರಕಾರದವರು ಸದ್ರಿ 'ಪ್ರಜಾಹಿತೈಷಿ'ಗಳ ಮೇಲೆ 'ಗಡೀಪಾರ್' ಹುಕುಮನ್ನೂ, ಗ್ರಾಮಾಂತರಗಳಲ್ಲಿ ಪ್ರವೇಶಿಸಕೂಡದೆಂದೂ, ಹಾಗೆ ಪ್ರವೇಶಿಸುವುದಾಗಲೀ, ಶೃಂಗೇರಿ ಶಹರನ್ನು ಬಿಟ್ಟು ಎಲ್ಲಿಯಾದರೂ ಹೋಗುವುದಾದರಾಗಲೀ, ಶೃಂಗೇರಿ ಪೋಲೀಸ್ ಸ್ಟೇಶನಿನಲ್ಲಿ ಇಂದ ಕಡೆಗೆ ಹೋಗುವುದಾಗಿಯೂ, ಇಂಥಾ ಕಾರ್ಯಾಂತರದಿಂದ ಹೋಗುವುದಾಗಿಯೂ ತಿಳಿಸಿ ಹೋಗಬೇಕೆಂದು ಶೃಂಗೇರಿ ಪೋ॥ ಸ॥ ಇನ್ಸ್‌ಪೆಕ್ಟರಿಗೆ ಹುಕುಂ ದಯಪಾಲಿಸಿರುವರು. ರೈತಾಪಿಗಳು ಇಂಥಾ ಕಂದಾಯ ರಿಯಾಯಿತಿಯ ವಿಷಯದಲ್ಲಿ ಅರ್ಜಿ ಬರೆದುಕೊಂಡಲ್ಲಿ ಸೋಲೀಸ್ ಜ್ಯಾರಿಮಾಡುವುದಾಗಿ ಬೆದರಿಸುವುದಲ್ಲದೆ, ಕೆಲವರ ಮೇಲೆ ಜ್ಯಾರಿಮಾಡಿಯೂ ಇರುತ್ತಾರೆ ಸದ್ರಿ 'ಪ್ರಜಾಹಿತೈಷಿ'ಗಳನ್ನು ಶ್ರೀ ಶ್ರೀಗಳವರ ದರ್ಶನಮಾಡಲು ಅವಕಾಶವೇ ಕೊಡುವುದಿಲ್ಲ ಪಟೇಲರುಗಳಾಗಲೀ, ರೈತರುಗಳಲ್ಲಿ ಮುಖಂಡರೆನಿಸಿಕೊಂಡಿರುವವರಾಗಲೀ ಶ್ರೀ ಶ್ರೀಗಳವರಲ್ಲಿ ಬಡರೈತಾಪಿಗಳ ಬಗ್ಗೆ ಕಷ್ಟಪರಿಹಾರಗಳನ್ನು ಕಲ್ಪಿಸಿಕೊಡುವರಾಗಿ ನಂಬಿದೆ ಅಲ್ಲದೆ, ಶ್ರೀ ಶ್ರೀಗಳವರಲ್ಲಿ ಬಡರೈತಾಪಿಗಳ ಗೋಳನ್ನು ನಿವಾರಿಸಿ ಕೊಟ್ಟು ಕಾಪಾಡಬೇಕಾಗಿ ಬಡರೈತಾಪಿಗಳು ಬೇಡಿಕೊಳ್ಳುತ್ತಾರೆ

'ಬಡರೈತ.'

ಮೈಸೂರಿನ ಸಮಾಚಾರಗಳು.

ಮೈಸೂರು ನ್ಯಾಯವಿಧಾಯಕ ಸಭೆ! ಐದನೆಯ ದಿವಸ.

ಆ ದಿವಸದ ಕಾರ್ಯಕಲಾಪಗಳಲ್ಲಿ ಮುಖ್ಯವಾದ ಪ್ರಶ್ನೆ ಮುಜರಾಯಿ ದೇವಾಲಯಗಳಿಗೆ ಆದಿಕರ್ಣಾಟಕರನ್ನು (ಹರಿಜನರನ್ನು) ಬಿಡುವುದನ್ನು ಕುರಿತದ್ದಾಗಿತ್ತು.

ಆದಿಕರ್ಣಾಟಕರಿಗೆ ದೇವಾಲಯ ಪ್ರವೇಶ

ಮುಜರಾಯಿ ಸಂಸ್ಥೆಗಳಿಗಾಗಿ ಶ್ರೀಮಾನ್ ಎಸ್. ಪಿ. ರಾಜಗೋಪಾಲಾಚಾರ್ಯರವರು ರೂ ೩,೫೨,೦೦೦ನ್ನು ಕೇಳಿದಾಗ ಮು| ಟಿ. ರಾಮಚಂದ್ರರವರು-ಹಿಂದೂಗಳಲ್ಲದ ಇತರರಿಗೆ ದೇವಾಲಯಗಳಲ್ಲಿ ಎಲ್ಲಿಯ ವರೆಗೆ ಪ್ರವೇಶವಿದೆಯೋ ಆದಿಕರ್ಣಾಟಕರಿಗೂ ಅಲ್ಲಿಯವರೆಗಾದರೂ ಪ್ರವೇಶ ದೊರಕಿಸಬೇಕೆಂದು ಮು| ರಾಮಚಂದ್ರರವರು ಒಂದು 'ಕಟ್‌ಮೋಷನ್' ತಂದರು. ಅವರು ದಿವಾನರು ಒಂದು ಸಲ ಹೇಳಿದ್ದ ಈ ವಾಕ್ಯವನ್ನು ಸಭೆಯ ಗಮನಕ್ಕೆ ತಂದರು.

'ಆದಿಕರ್ಣಾಟಕ'ದವರು ನಮ್ಮ ಬಲಕ್ಕೆ ಒಂದು ಬಲವಾಗಿರಬೇಕು ಅವರನ್ನು ಹೆಚ್ಚು ಹೆಚ್ಚು ಹಿಂದೂಗಳನ್ನಾಗಿ ಮಾಡುವುದು ನಮ್ಮ ಗುರಿಯಾಗಿರಬೇಕು ಏಕೆಂದರೆ ಅವರೂ ನಂಗಡಕ್ಕೆ ಸೇರಿದವರೇ'-ಈ ವಿಚಾರದಲ್ಲಿ ಸರಕಾರದವರು ಸಹಾನುಭೂತಿ ತೋರಬೇಕೆಂದು ಮು| ರಾಮಚಂದ್ರರವರು ಕೋರಿದರು

ಅನೇಕ ಮಂದಿ ಸದಸ್ಯರು ಮೇಲಿನ ಕೋರಿಕೆಯನ್ನು ಅನುಮೋದಿಸಿದ ಬಳಿಕ, ಮು| ರಾಜಗೋಪಾಲಾಚಾರ್ಯರವರು ಸರಕಾರವು ಈ ವಿಚಾರದಲ್ಲಿ ಸಾಧ್ಯವಾದ ಮಟ್ಟಿನ ಪ್ರಯತ್ನಗಳನ್ನೆಲ್ಲಾ ಕೈಕೊಳ್ಳುವುದೆಂದು ಭರವಸೆ ಕೊಟ್ಟರು

ಕೃಷಿಕರ ಸಭೆಗಳಿಗೆ ಸರಕಾರದ ಅಡ್ಡಿ.

ಆರನೆಯ ದಿವಸದ ಆಯವ್ಯಯದ ಮೇಲಿನ ಚರ್ಚೆಯ ಸಂಬಂಧದಲ್ಲಿ ಮು| ಎಚ್ ಸಿ ಗುಂಡಪ್ಪ ಗೌಡರು-ಪ್ರಜಾಮಂಡಲಿಯ ಆಶ್ರಯದಲ್ಲಿ ಕೃಷಿಕರ ಸಭೆಗಳನ್ನು (ಹಾಸನ ಡಿಸ್ಟ್ರಿಕ್ಟಿನಲ್ಲಿ) ಸೇರದಂತೆ ಸರಕಾರವು ಅಡ್ಡಿ ಮಾಡಿದ್ದು ಸರಿಯಲ್ಲವೆಂದು ಒಂದು 'ಕಟ್ ಮೋಷನ್' ತಂದರು ಆ ಸಭೆಗಳು ರೈತರ ಕಷ್ಟಗಳನ್ನು ಸರಕಾರದ ಗಮನಕ್ಕೆ ತರುವ ಉದ್ದೇಶದಿಂದ ಕೂಡುತ್ತಿದ್ದುವೇ ಹೊರತು ಸ್ವಲ್ಪವೂ ರಾಜಕೀಯವಾಗಿರಲಿಲ್ಲವೆಂದೂ, ಅವುಗಳನ್ನು ಬಹಿಷ್ಕರಿಸಿದ್ದು ಮಾದರಿ ಸಂಸ್ಥಾನವೆಂದು ಹೆಸರು ಹೊಂದಿರುವ ಮೈಸೂರಿಗೆ ತಕ್ಕುದಲ್ಲವೆಂದೂ ಕಟ್ ಮೋಷನನ್ನು ಸಮರ್ಥಿಸಿ ಮು| ಪಿ ಸುಬ್ಬರಾಮ ಶೆಟ್ಟರೂ ಇನ್ನು ಕೆಲವರೂ ಸೂಚಿಸಿದರು. ಮು| ಕೆ ವಿ ಅನಂತರಾಮನ್‌ರವರು ಕಟ್ ಮೋಷನಿಗೆ ಉತ್ತರ ಕೊಡುತ್ತ, ಸಭೆಗಳ ಉದ್ದೇಶದಲ್ಲಿ ಸರಕಾರದ ಸಹಾನುಭೂತಿಯಿದ್ದರೂ ಸಭೆಗಳಲ್ಲಿ ಮಾಡಿದ ಕೆಲವರ ಭಾಷಣಗಳು ಹದ್ದುಮೀರಿದ್ದವೆಂದೂ ಆದ್ದರಿಂದ ಸಭೆಗಳನ್ನು ಬಹಿಷ್ಕರಿಸಬೇಕಾಯಿತೇ ವಿನಹ ಪ್ರಜೆಗಳ ಸ್ವಾತಂತ್ರ್ಯಕ್ಕೆ ಅಡ್ಡಿ ತರಬೇಕೆಂದಲ್ಲವೆಂದೂ ಹೇಳಿದರು ಮ್ಯಾಥನ್ ಸಾಹೇಬರೂ ಇದೇ ಅಂಶವನ್ನು ವಿವರಿಸಿ ತಿಳಿಸಿದರು

ಕೌನ್ಸಿಲಿಗೆ ಖಾಸಗಿ ಮೆಂಬರರು.

ಸರಕಾರದ ಅಧಿಕಾರಿಯಲ್ಲದ ಕೌನ್ಸಿಲರ್ ಒಬ್ಬರನ್ನು ನೇಮಕಮಾಡಬೇಕೆಂಬ ಸೂಚನೆ ಬಂದಿತು ಈ ಸೂಚನೆಯ ಅಂಗೀಕಾರಕ್ಕೆ ಏನೂ ಅಡ್ಡಿಯಿಲ್ಲವೆಂದೂ, ಯಾವಾಗ ಮತ್ತು ಯಾರನ್ನು ನೇಮಕಮಾಡಬೇಕೆಂಬ ನಿಷ್ಕರ್ಷೆ ಶ್ರೀಮನ್ಮಹಾರಾಜರವರ ಚಿತ್ತಕ್ಕೆ ಬಿಡಬೇಕೆಂದೂ ಮು| ಮ್ಯಾಥನ್ ಸಾಹೇಬರು ಭರವಸೆಯಿತ್ತರು.

ಮಸೂದೆಗಳು.

ಆಯವ್ಯಯದ ಮೇಲೆ ಚರ್ಚೆ ನಡೆದು, ಆಯವ್ಯಯದ ಮೊಬಲಗುಗಳಿಗೆ ಸಭೆಯ ಮಂಜೂರಾತಿ ದೊರಕಿದನಂತರ ಸರಕಾರದ ಕೆಲವು ಮಸೂದೆಗಳು ಚರ್ಚೆಗೆ ಬಂದುವು ಮೈಸೂರು ರೋಡ್ ಟ್ರಾಫಿಕ್ ಮತ್ತು ಟಾಕ್ಸಸ್ ಮಸೂದೆ, ಮೈಸೂರು ಕೊ-ಆಪರೇಟಿವ್ ಸೊಸೈಟಿಗಳ ನಿಬಂಧನೆಯ ತಿದ್ದುಪಡಿಯ ಮಸೂದೆ, ಸಿನಿಮೋಟಾಗ್ರಾಫ್ ನಿಬಂಧನೆಯ ತಿದ್ದುಪಡಿಯ ಮಸೂದೆ--ಇವುಗಳು ಕಾನೂನುಗಳಾಗಿ ಪಾಸಾದುವು

ನ್ಯಾಯವಿಧಾಯಕ ಸಭೆಯ ಅಧಿವೇಶನದ ಪರಿಸಮಾಪ್ತಿ

(ನಮ್ಮ ಸ್ವಂತ ಪ್ರತಿನಿಧಿಯಿಂದ)

ಬೆಂಗಳೂರು, ತಾ. ೧೬-೭-೧೯೩೪.

ಖಾಸಗಿ ಮಸೂದೆಗಳು.

ಬಾಲ್ಯವಿವಾಹ ನಿರೋಧ.

ಖಾಸಗಿ (non-official) ಮಸೂದೆಗಳಲ್ಲಿ ಮೊದಲನೆಯದಾಗಿ ಬಂದುದು ಮು| ಚೆನ್ನಪ್ಪನವರು ತಂದ ಬಾಲ್ಯವಿವಾಹ ನಿರೋಧ ಮಸೂದೆ ಈ ಮಸೂದೆಯನ್ನು ಸಭೆಯ ಮುಂದಿಡುತ್ತ ಮು| ಚೆನ್ನಪ್ಪನವರು-ಮೈಸೂರು ೧೮೯೪ನೆಯ ಇಸವಿಯಲ್ಲಿಯೇ ಈ ವಿಷಯದಲ್ಲಿ ವಿಧಿಸಿದ ಕಾನೂನಿಗಿಂತ ಒಂದು ಹೆಜ್ಜೆ ಮುಂದೆ ಹೋಗಿದೆಯೆಂದೂ, ಬ್ರಿಟಿಷ್ ಇಂಡಿಯಾದಲ್ಲಿ ಜ್ಯಾರಿಯಲ್ಲಿರುವ ಶಾರದಾ ಕಾನೂನನ್ನು ಮೈಸೂರು ಅನುಸರಿಸಲು ತಕ್ಕಕಾಲ ಒದಗಿದೆಯೆಂದೂ ಈಗ ೪೦ ವರ್ಷಗಳಿಂದ ಸಮಾಜ ಸುಧಾರಕರ ಲಕ್ಷ್ಯಕ್ಕೆ ಬೀಳದಿರುವ ಈ ವಿಚಾರವನ್ನು ಸರಕಾರವು ಕೈಗೊಂಡು ವಿಧಿಸಬೇಕಾದುದು ಅನಿವಾರ್ಯವೆಂದೂ ತಿಳಿಸಿ, ಬಾಲ್ಯವಿವಾಹದಿಂದ ಸಂಭವಿಸುವ ಕೇಡುಗಳನ್ನು ವಿವರಿಸಿ, ದೇಶದ ಹಿತಕ್ಕಾಗಿ ಅದನ್ನು ನಿಲ್ಲಿಸಬೇಕೆಂದು ಸೂಚಿಸಿದರು ಮು| ಡಾ ಬಿ ಎಸ್. ಪುಟ್ಟಸ್ವಾಮಿಯವರು ಮಸೂದೆಯನ್ನು ಅನುಮೋದಿಸಿದರು

ಮೊಟ್ಟಮೊದಲು ಮು| ಅಬ್ಬಾಸ್ ಖಾನರವರು ಮಸೂದೆಯನ್ನು ವಿರೋಧಿಸಿ ಮಾತನಾಡಿದರು ಈ ಮಸೂದೆಯು ವ್ಯಕ್ತಿಗಳ ಮತಸ್ವಾತಂತ್ರ್ಯಕ್ಕೆ ಅಡ್ಡಿ ತರುವುದೆಂದು ವಾದಿಸಿದರು ಸಾಮಾಜಿಕ ವಿಷಯಗಳಲ್ಲಿ ಕಾನೂನು ವಿಧಿಸುವುದು ಅನಪೇಕ್ಷಣೀಯವೆಂದು ಕೊರಾನಿನಿಂದ ವಾಕ್ಯಗಳನ್ನು ಉದ್ಧರಿಸಿ ತೋರಿಸಿದರು

ಮಸೂದೆಯನ್ನು ಕಾನೂನಾಗಿ ಮಾಡಕೂಡದೆಂದು ಬಂದಿದ್ದ ಅನೇಕ ಅಸಮ್ಮತಿ ಸೂಚಕವಾದ ಅರ್ಜಿಗಳನ್ನು ಕೌನ್ಸಿಲಿನ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದರು ಹೀಗೆ ಅರ್ಜಿ ಹಾಕಿದ್ದವರಲ್ಲಿ ಶೃಂಗೇರಿ ಮಠ, ಕೂಡಲಿ ಮಠ ಯತಿರಾಜ ಮಠ ಇವುಗಳ ಅಧಿಕಾರಿಗಳೂ ಇದ್ದರು

ಅನಂತರ ಮು| ಡಿ ವಿ ಗುಂಡಪ್ಪನವರು ಮಸೂದೆಯನ್ನು ವಿರೋಧಿಸಿ ಮಾತನಾಡಿದರು. "ತಪ್ಪೊ ನೆಪ್ಪೊ-ಹಿಂದೂಗಳು ಶಾಸ್ತ್ರಕ್ಕೆ ಒಂದು ಅರ್ಥವನ್ನು ಕೊಟ್ಟುಕೊಂಡಿದ್ದಾರೆ ಅದರಂತೆ ಹುಡುಗಿಯು ಪುಷ್ಪವತಿಯಾಗುವುದಕ್ಕಿಂತ ಮುಂಚೆ ಮದುವೆಮಾಡಬೇಕು ಈಗ ಸಭೆಯ ಮುಂದಿರುವ ಮಸೂದೆಯ ಪ್ರಕಾರ ಹುಡುಗಿಗೆ ೧೪ ವರ್ಷಕ್ಕಿಂತ ಮುಂಚೆ ಮದುವೆಯಾಗಕೂಡದು-ಅಂದರೆ ಪುಷ್ಪವತಿಯಾದ ಮೇಲೆ ಮದುವೆ ಮಾಡಬೇಕು ಎಂದು ವಿಧಿಸಿದಂತಾಯಿತು ಈ ವಿಷಯದಲ್ಲಿ ಕಾನೂನಾದರೆ ಪ್ರಜೆಗಳ ಸಾಮಾಜಿಕ ಸ್ವಾತಂತ್ರ್ಯಕ್ಕೆ ಅಡ್ಡಿ ಬರದಿರಬಹುದು ಆದರೆ ಅವರ ಆತ್ಮಸಾಕ್ಷಿಯ ಸ್ವಾತಂತ್ರ್ಯಕ್ಕೆ ಭಂಗಬರುತ್ತದೆ ಅವರು ಕಾನೂನಿಗೆ ಹೆದರಬೇಕು, ಮತ್ತು ಶಾಸ್ತ್ರಕ್ಕೂ ವಿರೋಧವಾಗಿ ನಡೆಯಲಾರರು ಹೀಗಾಗಿ ಈ ಮಸೂದೆಯು ಅಂಥವರ ಪ್ರಾಮಾಣಿಕತೆಯನ್ನು ಕಸಿದುಕೊಂಡು ಅನೇಕ ಅನರ್ಥಗಳನ್ನುಂಟುಮಾಡುತ್ತದೆ" ಎಂದು ಸೊಗಸಾಗಿ ವಾದಿಸಿದರು

ಅನಂತರ ಮು| ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ಯರವರು ಅನೇಕ ಸಂಪೂರ್ಣವಾದ ಭಾಷಣ ಮಾಡಿದರು ಒಂದು ಪಂಗಡವು ಬಹುಕಾಲದಿಂದ ಶಾಸ್ತ್ರದಲ್ಲಿ ಇಟ್ಟಿರುವ ವಿಶ್ವಾಸದ ಮೇಲೆ ಸರಕಾರವು ಹೇಗೆ ಅಧಿಕಾರ ಮಾಡೀತು ಎಂದು ಪ್ರಶ್ನಿಸಿದರು. ಅಲ್ಲದೆ, ಬಾಲ್ಯವಿವಾಹದ ವಿಷಯದಲ್ಲಿ ತಪ್ಪು ಭಾವನೆಯಿದೆಯೆಂದೂ, ಈ ಮಸೂದೆಯು ಹಿಂದೂ ಶಾಸ್ತ್ರಕ್ಕೆ ತೀರ ವಿರುದ್ಧವಾಗಿದೆಯೆಂದೂ ವಾದಿಸಿದರು

ಈ ಮಸೂದೆಯು ಎರಡು ತಪ್ಪು ತಿಳುವಳಿಕೆಗಳಿಂದ ಹೊರಬಿದ್ದಿದೆ. ಬಾಲ್ಯ ವಿವಾಹದಿಂದ ಜನಾಂಗದ ದೈಹಿಕಬಲವೂ ದಾರ್ಢ್ಯವೂ ಕೆಡುವುದೆಂದೂ ಬಾಲವಿಧವೆಯರು ಹೆಚ್ಚುವರೆಂದೂ ಈ ಮಸೂದೆಯು ಊಹಿಸುತ್ತದೆ ಎರಡೂ ತಪ್ಪು ತಿಳುವಳಿಕೆಗಳು ವಿವಾಹವೆಂದ ಮಾತ್ರಕ್ಕೆ ಬಾಲದಂಪತಿಗಳು ದೇಹಸಂಬಂಧವನ್ನು ಹೊಂದುವುದಿಲ್ಲ, ೧೪ ವರ್ಷಕ್ಕೆ ಒಳಪಟ್ಟ ವಿಧವೆಯರ ಸಂಖ್ಯೆಯಾದರೋ ತೀರ ವಿರಳ

ಕೊನೆಯಲ್ಲಿ ಹೀಗೆ ಹೇಳಿ ಮು| ಶ್ರೀನಿವಾಸಯ್ಯಂಗಾರ್ಯರವರು ತಮ್ಮ ಭಾಷಣವನ್ನು ಮುಗಿಸಿದರು -"ಈ ಮಸೂದೆಯು ಶಾರದಾ ಕಾನೂನಿನ ಸರಲು. ಮಿಸ್ ಮೇಯೋವಿನ ಪುಸ್ತಕದ ಕುಮಂತ್ರ ಶಾರದಾ ಕಾನೂನನ್ನು ಪ್ರೇರೇಪಿಸಿದ್ದರೆ, ಆ ಕಾನೂನಿನ ಕೆಟ್ಟ ಗಾಳಿ ಈ ಮಸೂದೆಗೆ ಧೂಪ ಹಾಕಿದೆ. ಇದನ್ನು ಮೊಳಕೆಯಲ್ಲೇ ಮುರಿಯಬೇಕು."

ತರುವಾಯ ಮು|ಗಳಾದ ಎಚ್ ಸಿದ್ದಯ್ಯನವರು ಎಚ್ ಸಿ ದಾಸಪ್ಪನವರೂ ಮಸೂದೆಯನ್ನು ಸಮರ್ಥಿಸಿ ಮಾತನಾಡಿದರು ಮು|ರಾಗಳಾದ ಹಯವದನರಾಯರೂ ಬಿ ಕೆ ಗರುಡಾಚಾರ್ಯರವರೂ ವಿರೋಧಿಸಿ ಮಾತನಾಡಿದರು ಈ ಮಸೂದೆಯನ್ನು ತರುವುದು ನೀರೆ ಕೇಗಿಗೆ ಔಷಧ ಕೊಡುವಂತೆ ಎಂದು ಮು| ಗರುಡಾಚಾರ್ಯರವರು ಹೇಳಿದರು ಇನ್ನು ಕೆಲವರು ಚರ್ಚೆ ನಡೆಸಿದ ಮೇಲೆ ಮಸೂದೆಯನ್ನು ಸಭೆಯ ಮತಕೊಡಲಾಗಿ, ಅದು ಬಹುಮತದಿಂದ ನಿರಾಕೃತವಾಯಿತು

ಹಕ್ಕುದಾರಿ ಶಾನುಭೋಗರು.

ಮೈಸೂರು ಸಂಸ್ಥಾನದಲ್ಲಿ ಶಾನುಭೋಗರ ಹುದ್ದೆ ಇದು ವರೆಗೂ ಹಕ್ಕುದಾರಿಯಾಗಿಯೇ ನಡೆದುಕೊಂಡು ಬಂದಿದೆ ಇದರಿಂದ ಅನೇಕ ವೇಳೆ ನಿಷ್ಪ್ರಯೋಜಕರಾದವರು ಕೆಲಸಕ್ಕೆ ಬರುವರೆಂದೂ, ಕೆಲಸ ಸರಿಯಾಗಿ ನಡೆಯುವುದಿಲ್ಲವೆಂದೂ, ಅಲ್ಲದೆ ಇನ್ನೂ ಅನೇಕ ಕಾರಣಗಳಿಂದಲೂ ಈ ಹಕ್ಕುದಾರಿಯನ್ನು ಹುದ್ದೆಯನ್ನು ವಜಾ ಮಾಡುವ ಬಗ್ಗೆ ಸರಕಾರದವರು ಹುಕುಮು ಹೊರಡಿಸಿದ್ದಾರೆ ಈ ಹುಕುಮಿನ ಪ್ರಕಾರ ತಮ್ಮ ಹಕ್ಕನ್ನು ಕಳೆದುಕೊಳ್ಳತಕ್ಕ ಈಗಿನ ಶಾನುಭೋಗರುಗಳಿಗೆ ಬೇರೆ ವಿಧವಾದ ಸಹಾಯ (compensation) ಕೊಡಲು ಸರಕಾರದವರು ಏರ್ಪಾಡು ಮಾಡಬೇಕೆಂದಿದ್ದಾರೆ ಇನ್ನುಮುಂದೆ ಶಾನುಭೋಗ ಹುದ್ದೆ ಸಂಬಳ ದೊರೆಯುವ ಸರಕಾರಿ ಹುದ್ದೆಯಾಗುವುದು

ಮೈಸೂರು ಪ್ರಜಾಪ್ರತಿನಿಧಿಯ ಸಭೆಯ ದಸರಾ ಅಧಿವೇಶನ.

ಮೇಲಿನ ಅಧಿವೇಶನವು ಅಕ್ಟೋಬರ್ ತಿಂಗಳು ೮ನೆಯ ತಾರೀಕಿನಿಂದ ಮೊದಲಾಗುವುದೆಂದು ನಿಶ್ಚಯವಾಗಿದೆ

ಮೈಸೂರು ವಿಶ್ವವಿದ್ಯಾಲಯದ ಪದವೀದಾನ ಮಹೋತ್ಸವ (ಕಾನ್ವೊಕೇಷನ್)

ಇದು ಮುಂದಿನ ಅಕ್ಟೋಬರು ತಿಂಗಳಲ್ಲಿ ನಡೆಯುವುದಾಗಿದೆ ಅಲಹಾಬಾದಿನ "ಲೀಡರ್" ಎಂಬ ಪತ್ರಿಕೆಯ ಸಂಪಾದಕರಾದ ಸುಪ್ರಸಿದ್ಧ ಮು| ಸಿ ವೈ ಚಿಂತಾಮಣಿಯವರು ಆ ಸಂದರ್ಭದಲ್ಲಿ ಪದವೀದಾನ ಭಾಷಣವನ್ನು (Convocation Address) ಕೊಡಲು ಒಪ್ಪಿರುತ್ತಾರೆಂದು ತಿಳಿದುಬರುತ್ತದೆ.

ಮೈಸೂರಿನಲ್ಲಿ ಬ್ರಾಡ್‌ಕಾಸ್ಟಿಂಗ್.

ಸದ್ಯದಲ್ಲಿಯೇ ಮೈಸೂರು ನಗರದ ಜಗನ್ಮೋಹನ ಅರಮನೆಯ ಕಟ್ಟಡದಲ್ಲಿ ಒಂದು ಬ್ರಾಡ್ ಕಾಸ್ಟಿಂಗ್ ಮಂದಿರವು ಸ್ಥಾಪಿತವಾಗುವುದೆಂದೂ ಅರಮನೆಯ ಆಸ್ಥಾನದ ಸಂಗೀತ ವಿದ್ವಾಂಸರುಗಳು ಕಾಲಕಾಲಕ್ಕೆ ಗಾನಮಾಡುವುದೆಂದೂ ತಿಳಿದುಬರುತ್ತದೆ ಇದು ಸಂತೋಷಕರವಾದ ಸಂಗೀತ

ತುಮಕೂರು ಪೌರಸಭೆಯವರು ತುಮಕೂರು ಪಾರ್ಕಿನಲ್ಲಿ ಒಂದು ರೇಡಿಯೋ ಯಂತ್ರವನ್ನು ಸ್ಥಾಪಿಸಿರುತ್ತಾರೆ ಈ ಮಾದರಿಯನ್ನು ಸಂಸ್ಥಾನದ ಎಲ್ಲಾ ಪೌರಸಭೆಯವರೂ ಅನುಸರಿಸಬೇಕು. ಸರಕಾರದವರು ಈ ಪ್ರಯತ್ನಗಳಿಗೆ ಪ್ರೋತ್ಸಾಹ ಕೊಡುವುದಲ್ಲದೆ ತಾವೇ ಸ್ವತಃ ಮುಖ್ಯ ಮುಖ್ಯ ಗ್ರಾಮಗಳಲ್ಲಿಯಾದರೂ ರೇಡಿಯೋ ಯಂತ್ರೋಪಕರಣಗಳನ್ನು ಕಾಲಕ್ರಮದಲ್ಲಿ ಸ್ಥಾಪಿಸಬೇಕು ಅಂದು ಮೈಸೂರಿನಲ್ಲಿ ಸ್ಥಾಪಿತವಾಗುವ "ಬ್ರಾಡ್ ಕಾಸ್ಟಿಂಗ್" ಕೇಂದ್ರವು ಸಾರ್ಥಕ ಹೊಂದುವುದು. ಸಂಗೀತದ ಆನಂದವೊಂದೇ ಅಲ್ಲದೆ ಜ್ಞಾನವನ್ನೂ ತಿಳಿವನ್ನೂ ಅಲ್ಪ ಪ್ರಯಾಸದಲ್ಲಿ ಸಂಸ್ಥಾನದ ಸಾಮಾನ್ಯ ಜನರಿಗೆ ಹರಡಲು ಆಗ ಸಾಧ್ಯವಾಗುವುದು

ಕೊ-ಆಪರೇಟಿವ್ ಸೊಸೈಟಿಯವರ ಸಮ್ಮೇಳನ

ಬೆಂಗಳೂರು ನಗರದ ಕೋ-ಆಪರೇಟಿವ್ ಸೊಸೈಟಿಗಳ ಡೈರೆಕ್ಟರುಗಳ ಮೊದಲನೆಯ ಸಮ್ಮೇಳನವು ಇದೇ ತಿಂಗಳು ೧೩ನೆಯ ತಾರೀಕು ಶನಿವಾರ ಮತ್ತು ಮರುದಿನ ಪಬ್ಲಿಕ್ ಬ್ಯಾಂಕ್ ಕಟ್ಟಡದಲ್ಲಿ ನಡೆಯಿತು ದಿವಾನರು ಸಮ್ಮೇಳನವನ್ನು ಪ್ರಾರಂಭಗೊಳಿಸಿದರು ಮದರಾಸಿನ ಎ ರಾಮದಾಸ್ ಪಂತುಲುರವರು ಅಧ್ಯಕ್ಷರಾಗಿದ್ದರು

ಮು| ತಗಡೂರು ರಾಮಚಂದ್ರರಾಯರ ಉಪವಾಸ

ತಾವು ಕೈಕೊಂಡಿರುವ ಮತ್ತು ಇತರ ವಿಧವಾದ ಗ್ರಾಮ ಪುನರುದ್ಧಾರ ಕಾರ್ಯಗಳಿಗಾಗಿ ಶ್ರೀಮಂತ ಮುಖಂಡರುಗಳ ಸಹಾನುಭೂತಿ ಸಹಾಯಗಳನ್ನು ದೊರಕಿಸಿಕೊಳ್ಳುವ ಉದ್ದೇಶದಿಂದ ಶ್ರೀ| ತಗಡೂರರವರು ಇವತ್ತಿನಿಂದ (೧೬-೭-'೩೪) ಬೆಂಗಳೂರಿನಲ್ಲಿದ್ದುಕೊಂಡು ೨೧ ದಿವಸಗಳ ಅಖಂಡ ಉಪವಾಸ ವ್ರತವನ್ನು ಮತ್ತೆ ಕೈಕೊಂಡಿದ್ದಾರೆ ಈ ಬಗ್ಗೆ ಅವರು ಒಂದು ದೀರ್ಘವಾದ ಹೇಳಿಕೆಯನ್ನು ಪ್ರಕಟಿಸಿದ್ದಾರೆ

ಯೋಗಾಸನಗಳ ಪ್ರದರ್ಶನ

ಇದೇ ತಿಂಗಳ ತಾ. ೧೧ನೆಯ ದಿವಸ ಮೈಸೂರು ರಂಗಾಚಾರ್ಲು ಭವನದಲ್ಲಿ ಮೈಸೂರು ಸಂಸ್ಕೃತ ಕಾಲೇಜಿನ ಅಧ್ಯಾಪಕರೂ ಯೋಗಾಸನಗಳ ಶಿಕ್ಷಕರೂ ಆದ ಶ್ರೀ| ಕೃಷ್ಣಮಾಚಾರ್ಯರು ಮತ್ತು ಅವರ ಶಿಷ್ಯಂದಿರುಗಳ ಯೋಗಾಸನ ಪ್ರದರ್ಶನವು ನಡೆಯಿತು ಡೆ ಕಮಿಶನರವರಾದ ಮು| ಬಿ. ಟಿ. ಕೇಶವಯ್ಯಂಗಾರ್ಯರವರು ಸಭಾಧ್ಯಕ್ಷರಾಗಿದ್ದರು.

ಶ್ರೀಮನ್ಮಹಾರಾಜರವರ ಪ್ರೋತ್ಸಾಹ ಸಹಾಯಗಳಿಂದ ಶ್ರೀ| ಕೃಷ್ಣಮಾಚಾರ್ಯರವರು ತಮ್ಮ 'ಯೋಗಶಾಲೆ'ಯನ್ನು ನಡೆಸಿಕೊಂಡು ಬರುತ್ತಿದ್ದಾರೆ

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purniah Chatram Road, Balepet,
BANGALORE CITY

ಡಾಕ್ಟರ ವಾಮನ ಗೋಪಾಳರವರ

ಇಹಿಡಾಯಿಜ್ಞ
ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ.
[illegible] ವರ್ಷದ ಅನುಭವ.
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್
ಕೇಶವರವರ
ಫೋಸ್ಪರಸ್ ಗುಳಿಗೆಗಳು.
[illegible]

ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, [illegible], ಮುಂಬಾಯಿ ೪.
ಸ್ಟಾಕಿಸ್ಟ್ — [illegible] ಕಂಪೆನಿ ಮಂಗಳೂರು
[illegible]

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.



ಮೂರು ಫ್ಯಾನ್ಸಿ ಮೂಟ್ ರಿಸ್ಟ್ ವಾಚುಗಳು ಇವು ಕಲಾಕೌಶಲದಲ್ಲಿ ಬಂಗಾರಕ್ಕಿಂತಲೂ ಕಡಿಮೆ ಬಹು ರಮ್ಯವಾಗಿವೆ ಐದು ವರ್ಷಗಳ ಗ್ಯಾರಂಟಿ ಒಂದು ಉತ್ತಮವಾದ ಟೀ ಟೈಂ ಪೀಸ್ ಸರಿಯಾದ ಗಂಟೆಯನ್ನು ತೋರಿಸುತ್ತ ೧೦ ವರ್ಷಗಳ ಗ್ಯಾರಂಟಿ ಒಂದು ಲಿವರ್ ಪಾಕೆಟ್ ಗಡಿಯಾರ ಕಲ್ಲಿನ ಮೇಲೆ ಬಿದ್ದರೂ ಒಡೆಯುವುದಿಲ್ಲ ಗ್ಯಾರಂಟಿ ೮ ವರ್ಷ. [illegible] ಫೌಂಟನ್ ಪೆನ್ ಈ ಅತ್ಯುತ್ತಮ ಸಾಮಾನುಗಳೆಲ್ಲಾ ಐದೇ ರೂಪಾಯಿಗಳಿಗೆ ಕೊಡುವೆವು ನಿಮಗೆ ಇಷ್ಟವಿದ್ದರೆ ಬೆಲೆಯು ವಾಪಾಸ್ ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ

ಶರ್ಮಾ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ [illegible] 8 A ಕಲ್ಕತ್ತಾ

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಅವರ

ಸಂತಾನ ಪ್ರತಿಬಂಧಕ ಚೂರ್ಣ (ರಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತವಾಗುತ್ತದೆ, ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು [illegible] ಗರ್ಭಧಾರಣ ಬಂದಾಗುವುದು [illegible] ಡಾಕ್ಟರ ಟಿ. ಎ. ವೈದ್ಯ, ಎಲ್ ಎ. ಎಸ್ [illegible] ಈ ಚೂರ್ಣದಿಂದ ಯಾವ ತರದ ಅಪಾಯವಾಗಲು ಗರ್ಭಧಾರಣವೂ ಆಗುವುದಿಲ್ಲ [illegible] ರೂ ೪—೦—೦ ವಿ ಪಿ ಆಗಿ ೮

ವಿಳಾಸ—ಸಂಜೀವಿನೀ ಔಷಧಾಲಯ ಪಾ ಪೊ ಮಿರಜ, S M C.

NEW ARRIVALS.

Medicines.

Dr Schuessler's Twelve Tissue Remedies 5 gr bot As 4/-
Homoeopathy Medicines 5 gr bot As 5/-
Sugar of Milk Dr Schwabe's original bot 1lb Rs 2/-
Haarlem Oil—a world renowned remedy As 8 per phial
Dr Haele's New Curative Earth—Radium Cure Rs 4/ per lb

Dr Schwabe's other special remedies are always in stock

Please consult us for your requirements

Kannaese Book a Family Guide to Biochemistry Re 1/-
" Domestic Homoeopathy Rs 1-4 -

If you own these two Books you will be able to pick up treatment and administer Tissue & Homoeopathy Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes and prices from As 2/6
Delightful in aroma, charming in appearance. Please try.

Kirloskar Pumps.

We are the Representatives for Kirloskar Brothers for their reliable Shallow well and Deep-well Pumps, Spring Cots Spring Couches etc. and stock—

Pipes and pipe fittings at cheap prices. Coir Mats and Mattings Steadler Pencils and Stationeries

We are the recognised agents for STEADLER'S all stationeries and shall be glad to serve you.

Olympia Typwriter.

An up-to date Machine in Standard and portable sizes

For Futher particulars please write to—

Basel Mission Book & Tract Depository,
Mangalore, S K. or Hubli, S M.

The Popular Insurance Company, Ltd.

Head Office:—MANGALORE, S India

The Pioneer Life Office of the West Coast.

A FEW PRESS OPINIONS.

Established as recently as 1929, the Popular Insurance Co Ltd., has already made considerable progress having at the end of 1934 a total business of over Rs 10 lakhs in force with a premium income of over Rs. 52,000. The Life Fund of the Company stood at the same date at over Rs. 50,000 The expenses of the office are moderate and mortality experience extremely favourable. During the year 1934, the Company completed business of over Rs. 5,40,000 with a premium income of over Rs. 26,000. The first quinquennial valuation of the Company is in progress and the report of the Actuary expected to be placed before the Directors of the Company before the end of May 1935 From the steady progress of the Company during the last five years and the economical and efficient management of its affairs, it is not too much to hope that the valuation will disclose a very sound position.

Insurance & Finance Review, Calcutta

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್—ಮಂಗಳೂರು—[illegible] ಈ ಕಂಪೆನಿಯು [illegible] ಇಲ್ಲ ನಿಲ್ಲಿಸುವರ ಶಕ್ತಿಯುಳ್ಳದಾಗಲೆಂದು ಹಾರೈಕೆ.

'ರಾಷ್ಟ್ರಬಂಧು.'

ಮಂಗಳೂರಿನಲ್ಲಿ ಸ್ಥಾಪಿತವಾಗಿರುವ ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿಯು [illegible] ಈ ಕಂಪೆನಿಯು [illegible] × × × × × ಈ ಕಂಪೆನಿಯು [illegible]

'ಪ್ರಜಾಮತ,' ಮದರಾಸು

Wanted Influential Agents in unrepresented areas on liberal terms.

ಮಂಗಳೂರಿಗೆ ಮಾನ್ಯ ಮದರಾಸು ಗವರ್ನರರ ಆಗಮನ!

ಮನುಷ್ಯನು ಕಲಿಸಿದ ಬುದ್ಧಿಯಲ್ಲವೇ?

ಕಳ್ಳತನವು ಮನುಷ್ಯವರ್ಗದಲ್ಲಿರುವಷ್ಟು ಬೇರಾವ ಪ್ರಾಣಿವರ್ಗದಲ್ಲಿಯೂ ಇರುವುದಿಲ್ಲವೆಂದರೆ ತಪ್ಪಾಗಲಾರದು. ಯಾರು ಬಹು ವಿವೇಕಿಗಳೋ, ಅವರಿಗೆ ಕದ್ದುಕೊಳ್ಳಲು ಅಷ್ಟು ಸುಲಭವಿದೆ. ಕಳ್ಳರು ಯಾವಾಗಲೂ ಬುದ್ಧಿವಂತರೇ ಇರುವರು. ಮಾತ್ರ ಅವರ ಬುದ್ಧಿಯು ದುರುಪಯೋಗ ಮಾತ್ರವಾಗುತ್ತದೆ. ಇಂತಹ ಕಳ್ಳತನವು ಈಗ ಪ್ರಾಣಿಗಳಿಗೂ ಬರುತ್ತದೆಂದಾದರೆ ಈ ವಿದ್ಯೆಯು ಅವುಗಳಿಗೆ ಮನುಷ್ಯನಿಂದಲೇ ಕಲಿಸಲ್ಪಟ್ಟಿತೆಂದು ಹೇಳುವುದು ತಪ್ಪೇ? ವಿಲ್ಲುಪುರ ವಿರುಧುನಗರ ಮಾರ್ಗವಾಗಿ ಹೋಗುತ್ತಿದ್ದ ಒಂದು ರೈಲಿನಲ್ಲಿ ಒಬ್ಬಳು ಸ್ತ್ರೀಯು ಒಂದು ಗಂಟನ್ನು ಇಟ್ಟು, ಸ್ವಲ್ಪ ಹಣ್ಣುಗಳನ್ನು ಪಡೆಯುವುದಕ್ಕಾಗಿ ಹೊರಗೆ ಹೋದಳು. ಐದು ನಿಮಿಷಗಳಲ್ಲಿ ಹಿಂದಿರುಗಿ ಬಂದು ನೋಡಲು, ೩೦೦ ರೂಪಾಯಿಗಳನ್ನೊಳಗೊಂಡಿದ್ದ ಅವಳ ಗಂಟು ಇಟ್ಟಲ್ಲಿದ್ದಿಲ್ಲ. ಅವಳು ಬೊಬ್ಬಿಟ್ಟು ಸ್ವಲ್ಪ ಹೊತ್ತಿನ ಬಳಿಕ ಬೇರೊಂದು ರೈಲು ಹಿಡಿದು, ಕೊಡಿಯುತನಲ್ ಸ್ಟೇಷನಿನಲ್ಲಿ ರೈಲು ನಿಂತ ಮೇಲೆ ಅವಳು ಇನ್ನೊಂದು ರೈಲಿನಲ್ಲಿ ಹಿಂತಿರುಗಿದಳು. ಪೋಲೀಸರಿಗೂ ಸ್ಟೇಶನ್‌ಮಾಸ್ತರರಿಗೂ ದೂರಿಟ್ಟಳು. ಅವರು ಹುಡುಕಾಡ ತೊಡಗಿದರು. ಸುಮಾರು ೪ ತಾಸುಗಳು ಕಳೆಯುತ್ತಲೇ, ಒಂದು ಸಣ್ಣ ಮರದಲ್ಲಿ ಒಂದು ಕೋತಿಯು ಕಂಡಿತು. ಸ್ತ್ರೀಯು ಆ ಗಂಟಿನ ನೂಲನ್ನು ಬಿಚ್ಚುತ್ತಿತ್ತು. ಅದಕ್ಕೆ ಹಣ್ಣುಹಂಪಲುಗಳನ್ನೆಸೆದರು. ಒಡನೆ, ಅದು ಗಂಟನ್ನು ಕೆಳಗೆಸೆದು ಹಣ್ಣುಗಳನ್ನು ಹೆಕ್ಕಿತು. ಸ್ತ್ರೀಗೆ ಅವಳ ಗಂಟು ಸುರಕ್ಷಿತವಾಗಿ ದೊರೆಯಿತು.

ನಿರುದ್ಯೋಗತೆಯು ಅಸಹನೀಯವೆಂದೆನ್ನುವವರು—

ಯಾವ ದೇಶದಲ್ಲೂ ಇರುವುದು ಈಗೀಗ ಕಾಣಬರುತ್ತದೆ. ಆದರೆ, ಈ ನಿರುದ್ಯೋಗತೆಯ ಸತ್ಫಲವೇನೆಂದು ಅರಿತವರ ಸಂಖ್ಯೆಯು ಮಾತ್ರ ಕಡಮೆ. ನಿರುದ್ಯೋಗತೆಯು ಹೆಚ್ಚಿದರೆ ಜನರಿಗೆ ಬುದ್ಧಿ ಬರುತ್ತದೆ. ಆ ಬುದ್ಧಿಯು ದ್ರವ್ಯಾರ್ಜನೆಯ ನೂತನ ಕ್ರಮಗಳನ್ನು ಕಲಿಸುತ್ತದೆ. ನಿರುದ್ಯೋಗತೆಯು ಮಹಾತ್ಮೆಯೇನೆಂದು ಕೇಳಿ—ಕಲ್ಕತ್ತಾ ಪಟ್ಟಣದಲ್ಲಿ ಕೆಲಸವಿಲ್ಲದವನು ಅವನು ಬೆಳೆಸುವುದಿಲ್ಲ. ಆದರೆ ಹಣವನ್ನು ಸಂಪಾದಿಸುತ್ತಾನೆ. ಇವನ ಕೆಲಸವೇನು?—ಮೋಟರುಗಳು ಓಡುವಾಗ ಅವುಗಳ ಹಿಂದೆ ನಿಂತು ಬೊಬ್ಬಿಡುವನು. ತನ್ನ ಮೇಲೆ ಮೋಟರು ಓಡಿತೆಂದು ಹೇಳಿ ಅಳುವನು. ಕಾಲಿನಲ್ಲಿರುವ ಗಾಯಗಳನ್ನು ತೋರಿಸುವನು. ಮೋಟರ್ ಡ್ರೈವರರು ಪೋಲೀಸರ ಕೈಗಳಿಂದ ತಪ್ಪಿಸಿಕೊಳ್ಳುವುದಕ್ಕಾಗಿ ೬ ಎರಡು ರೂಪಾಯಿಗಳನ್ನು 'ಗಾಯಗೊಂಡವನಿಗೆ' ಕೊಡುವರು. ಮೊನ್ನೆ ಹೀಗೆ ಬೊಬ್ಬಿಟ್ಟವನೊಬ್ಬನನ್ನು ಪೋಲೀಸರು ಹಿಡಿದು ಬಾಯ್ಬಿಡಿಸಿದರು. ತನ್ನ ಕಾಲಿನ ಮೇಲೆ ಮೋಟರು ಓಡಿತೆಂದು ತಾನು ಸುಳ್ಳು ಹೇಳಿಯೇ ಹಣ ಪಡೆಯುತ್ತಿದ್ದನೆಂದು ಒಪ್ಪಿಕೊಂಡನು.

ಯಾವುದರಲ್ಲೇ ಆಗಲಿ, ಮೊದಲೇ ತಿಳಿಸಿಬಿಡುವುದು ಉತ್ತಮ

ತೋಟದಲ್ಲಿನ ಸಿಂಬೆ ಮರವನ್ನು ತನ್ನ ಹೊಸ ಚೂರಿಯಿಂದ ಕತ್ತರಿಸಿದ ಬಾಲಕನು ತಂದೆಯ ಸಿಟ್ಟಿಗೆ ಹೆದರಿ ತಾನು ಮಾಡಿದ ಕೃತ್ಯವನ್ನು ತಂದೆಗೆ—ಅವನಿಗೆ ತಿಳಿಯುವ ಮೊದಲೇ—ಹೇಳಿದನಂತೆ. ಅವನಿಗೆ ತಂದೆಯು ಒಂದು ನೀರು ಪೆಪ್ಪರ್‌ಮಿಂಟನ್ನು ಕೊಟ್ಟು ಪುರಸ್ಕರಿಸಿದನಂತೆ. ಹಾಗೆ ಕಪುರ್ತಲಾ ಮಹಾರಾಜರವರು ಮಾಡಲು ಬಯಸಿದರು. ಅವರು ಮೊನ್ನೆ ಅಮೇರಿಕಾಕ್ಕೆ ಹೋದರು. ಸ್ಟೀಮರಿನಿಂದ ಕೆಳಗಿಳಿಯುತ್ತಲೇ ಹೀಗೆ ಹೇಳಿದರು—"ನಾನು ಪ್ರಪಂಚದ ಐಶ್ವರ್ಯವಂತರಲ್ಲೊಬ್ಬನೆಂದು ಅಮೇರಿಕಾದ ಕಳ್ಳರಿಗೆ ತಿಳಿದಿರಬಹುದು. ಆದರೆ ಈ ಸಲ ನಾನು ನನ್ನೊಂದಿಗೆ ಯಾವ ದ್ರವ್ಯವನ್ನಾಗಲೀ, ಖಜಾನೆಯನ್ನಾಗಲೀ ತಂದಿರುವುದಿಲ್ಲ. ಆದುದರಿಂದ ಕಳ್ಳಕಾಕರು ನನ್ನ ಮೇಲೆ ಬೀಳುವುದು ಅಗತ್ಯವಿಲ್ಲ" ಎಂದು ಪತ್ರಿಕೆಗಳ ಮೂಲಕ ಪ್ರಕಟಿಸಿದರು. ಮೊದಲೊಮ್ಮೆ ಈ ಮಹಾರಾಜರ ದೊಡ್ಡ ಪೆಟ್ಟಿಗೆಯನ್ನು ಇವರ ಹೂಗಿನಡಿಯಿಂದಲೇ ಅಮೇರಿಕಾದಲ್ಲಿ ಕದ್ದೊಯ್ದಿರುವರಂತೆ. ಮಹಾರಾಜರು ತನ್ನ ಸ್ಥಿತಿಯನ್ನು ಮೊದಲೇ ತಿಳಿಸಿದುದು ಸುಖಕರ!

ಲೋಹಗಳನ್ನು ತಿಂದು ದ್ರಾಕ್ಷರಸವನ್ನು ಕುಡಿದವನೊಬ್ಬನು—

—ಇರುವನು. ಅವನು ಒಂದು ದಿನ ಸತ್ತನು. ಅವನನ್ನು ಎಕ್ಸ್‌ರೇ ಮೂಲಕ ಪರೀಕ್ಷಿಸಿ ನೋಡಲು, ಅವನ ಉದರಕೋಶದಲ್ಲಿ ಈ ಕೆಳಗಿನ ಸಾಮಾನುಗಳಿದ್ದುವು. ೨೧೮ ಸ್ಕ್ರೂಗಳು ಮತ್ತು ಮೊಳೆಗಳು; ೩೮ ಸರಿಗೆ ತುಂಡುಗಳು, ೫ ಚಮಚೆಗಳು, ೧ ದೊಡ್ಡ ಚಮಚ, ೮ ಚಮಚೆಕೈಗಳು, ೫ ಮಾಂಸಮೊಳೆಗಳು, ೩ ಜೇಬುಚೂರಿಗಳು, ೧ ಕೋಟಿನ ಗುಂಡಿ, ೩೬ ಗ್ರಾಮಫೋನು ಪಿನ್ನುಗಳು, ೨ ಮಾಂಸ ತೂಗಿಸುವ ಕೊಕ್ಕೆಗಳು, ೧ ಬೀಗದ ಕೈ, ೨ ಪೆಟ್ಟಿಗೆ ಬೀಗದ ಕೈಗಳು, ೪೫ ಸೇಫ್ಟಿಪಿನ್ನುಗಳು, ೧೨ ಲೋಹದ ಉಂಗುರಗಳು, ೬ ತಾಮ್ರದ ನಾಣ್ಯಗಳು, ೧೯೬ ರಿವಾಲ್ವರ್ ಗುಂಡುಗಳು ಇವನು ವಿವಿಧ ಸಾಮಾನುಗಳನ್ನು ತಿಂದು ಜನರನ್ನು ಬೆರಗುಗೊಳಿಸಿದನು. ಈ ವೃತ್ತಿಯಲ್ಲಿದ್ದೇ ಪ್ರಾಣಬಿಟ್ಟನು. ನಿಜವಾಗಿಯೂ ದುಃಖಕರ ವಾರ್ತೆ.

"ಹೇಗಾದರೂ ಮಾಡಿ ದ್ರವ್ಯಾರ್ಜನೆ ಮಾಡಬೇಕು"—

ಎಂದು ನಿರ್ಣಯಿಸಿರುವವರಲ್ಲಿ ಆಂಗ್ಲ ಪತ್ರಿಕಾಕರ್ತರಲ್ಲಿ ಹಲವರಿರುವರು. ತಮ್ಮ ಪತ್ರಿಕೆಯ ಚಂದಾದಾರರನ್ನು ಹೆಚ್ಚಿಸುವುದಕ್ಕಾಗಿ ಅವರು ಮಾಡುವ ಸಾಹಸವು ಅಷ್ಟಿಷ್ಟಲ್ಲ. ಇಂಗ್ಲಿಷ್ ವಾರ್ತಾಪತ್ರಿಕೆಯೊಂದು, ಅವಿವಾಹಿತಳಾಗಿದ್ದ ಒಬ್ಬಳು ಸ್ತ್ರೀಯ ಭಾವಚಿತ್ರವನ್ನು ಮುತಿಷ್ಟಿಟ್ಟ ಪುರುಷನ ಚಿತ್ರದ ಜತೆಯಲ್ಲಿ ಸೇರಿಸಿ, ಈಗಿನ ಯುವತಿಯರು ಎಷ್ಟರ ವರೆಗೆ ಸ್ವಾತಂತ್ರ್ಯವನ್ನು ವಹಿಸಿರುವರೆಂದು ತೋರಿಸಿತು. ಇದೇ ಪತ್ರಿಕೆಯಲ್ಲಿ ಸಚಿತ್ರವಾದ ಒಂದು ಲೇಖನವೂ ಪ್ರಕಟಿಸಲ್ಪಟ್ಟಿತು. ಈಗ ಈ ಸ್ತ್ರೀಯು ವಿವಾಹಿತಳಾಗಿರುವಳು. ತನ್ನ ಚಿತ್ರವನ್ನು ಪ್ರಕಟಿಸಿದ್ದು ಅಪಮಾನಕರವೆಂದು ಅವಳು ದಾವೆ ಹೂಡಿದಳು. ತನ್ನ ಪತ್ನಿಯ ಚಿತ್ರವನ್ನು ಪರಪುರುಷನ ಚಿತ್ರದೊಡನೆ ಪ್ರಕಟಿಸಿದುದು ತನಗೆ ಅಪಮಾನಕರವೆಂದು ಗಂಡನೂ ದಾವೆ ಹೂಡಿದನು. ಅವಳಿಗೆ ೧೬೦೦ ಸವರಿನ್‌ಗಳ ಪರಿಹಾರ ದ್ರವ್ಯವು ದೊರೆಯಿತು. ಗಂಡನಿಗೆ ಮಾತ್ರ ಏನೂ ಸಿಗಲಿಲ್ಲ. ಅವನ ವ್ಯಾಜ್ಯಕ್ಕೆ ಕಾರಣಗಳು ಸಾಕಾಗಲಿಲ್ಲವಂತೆ!

ಯಾರೂ ಇಲ್ಲದಿದ್ದರೆ ದೇವರೇ ಗತಿ!

ಫ್ರೆಂಚ್ ಸ್ತ್ರೀಯೊಬ್ಬಳು ಕಾರಣಾಂತರದಿಂದ ದೇಶಭ್ರಷ್ಟಳಾಗಿ ಓಡಿಸಲ್ಪಟ್ಟಳು. ಫ್ರೆಂಚನೊಬ್ಬನನ್ನು ವಿವಾಹವಾಗದ ವಿನಹ ಸ್ವದೇಶಕ್ಕೆ ಹಿಂತಿರುಗಬಾರದೆಂದು ಕಾನೂನು ಇದ್ದಿತು. ಆದರೆ ಅವಳನ್ನು ವಿವಾಹವಾಗುವವರಾರು?—ಯಾರೂ ಇಲ್ಲ! ಹಲವು ಫ್ರೆಂಚರನ್ನು ಹಲವು ರೀತಿಯಿಂದ ಆಕರ್ಷಿಸಿದಳು. ಆದರೆ ಅವಳಿಗೆ ದೊರೆತುದು 'ನಾಸ್ತಿ' ಎಂಬ ಉತ್ತರವೇ. ಒಂದು ದಿನ ಮಾರ್ಗದಲ್ಲಿ ನಡೆಯುತ್ತಿದ್ದಾಗ ಅವಳಿಗೊಬ್ಬ ಮುದುಕನ ಭೆಟ್ಟಿಯಾಯಿತು. ಅವನು ಫ್ರೆಂಚನೆಂದು ಅವಳಿಗೆ ತಿಳಿದುಬಂತು. ಅವಿವಾಹಿತನೆಂದೂ ಗೊತ್ತಾಯಿತು. ಅವನನ್ನು ಮನೆಗೆ ಬರಹೇಳಿದಳು, ಮಡಿಯುಡಿಸಿದಳು. ಆಮಂತ್ರಣ ಪತ್ರಿಕೆಗಳನ್ನು ಅಚ್ಚುಗೊಳಿಸಿ, ಆ ಮುದುಕನನ್ನು ತಾನು ಮದುವೆಯಾಗುವೆನೆಂದಳು. ವಿವಾಹವು ಬಹು ವಿಜೃಂಭಣೆಯಿಂದ ಜರಗಿತು. ವಿವಾಹವಾದ ಕೆಲವು ದಿನಗಳಲ್ಲೇ ಗಂಡನನ್ನು ಹುಚ್ಚರ ಆಸ್ಪತ್ರೆಗೆ ಕಳುಹಿಸಿ, ತಾನು ಸ್ವದೇಶಕ್ಕೆ ನಡೆದಳು. ಈಗ ಎಲ್ಲರಂತೆ ಅವಳೂ ಒಬ್ಬಳು ಗೃಹಿಣಿ. ಯಾರೂ ಇಲ್ಲದಿದ್ದರೆ ದೇವರೇ ಗತಿ!

ಸೋದರತ್ತೆಯ ಶಾಪದ ಬಲೆ

—ಸ್ಪೇಂದು ತಿಳಿದ ಒಬ್ಬ ಮನುಷ್ಯನಿರುವನು. ತೀರಿದ ಅವನ ಕೊಲೆ ಮಾಡಿದವನೂ ಅವನು. ನಾಸಿಕದಲ್ಲಿದ್ದ ಅವನ ಎರಡು ಮಕ್ಕಳೂ ರೋಗಗ್ರಸ್ತವಾಗಿ ತೀರಿಕೊಂಡುವು. ಸ್ವಲ್ಪ ದಿನಗಳಲ್ಲಿ ಅವನ ಪತ್ನಿಯು ಅಸ್ವಸ್ಥಳಾದಳು. ಅದಾದ ಮೇಲೆ ತಾನೂ ರೋಗದಿಂದ ನರಳಿದನು. ಒಂದು ದಿನ ಜ್ಯೋತಿಷ್ಯನಲ್ಲಿಗೆ ಹೋಗಿ ವಿಚಾರಿಸಿದನು. ಸೋದರತ್ತೆಯ ಶಾಪದಿಂದ ಹೀಗಾಯಿತೆಂದು ತಿಳಿದುಬಂತು. ಒಂದು ದಿನ ರಾತ್ರಿ ಸೋದರತ್ತೆಯನ್ನು ಮನೆಗೆ ಬರಮಾಡಿಕೊಂಡನು. ಉಪಚಾರಗಳಾಗಿ ಉಭಯಕುಶಲ ಪ್ರಶ್ನೆಗಳು ಮುಗಿದು ಎಲ್ಲರೂ ಮಲಗಿದರು. ಈ ಮುದಿಕಿಯು ಮಲ್ಲಗೆ ಹಾಸಿಗೆಯಿಂದೆದ್ದುಕೊಂಡ. ಕತ್ತಿಯಿಂದ ಸೋದರತ್ತೆಯ ಕತ್ತನ್ನೇ ಕೊಯ್ದುಬಿಟ್ಟ. ವಿಚಾರಣೆ ನಡೆಯಿತು. ಕಪ್ಪು ಸ್ಥಾಪನೆಯಾಯಿತು. ಅವನಿಗೆ ದ್ವೀಪಾಂತರವಾಸವೂ ದೊರಕಿತು. ಇದು ಕೂಡಾ ಸೋದರತ್ತೆಯ ಶಾಪದಿಂದಲೇ ಆಗಿರಬಹುದೆಂದು ಭಟ್ಟರು ಹೇಳಬಹುದು!

ಕಾನೂನು ಎಂದರೇನು?—

ಎಂದು ತಿಳಿಯಬೇಕಾದರೆ ಈ ಸ್ತ್ರೀಯಿಂದ ಕಲಿಯಬೇಕು. ಲಂಡನ್ ನಗರದಲ್ಲಿ ಒಬ್ಬಳು ಸ್ತ್ರೀಯು ನಡೆಸುತ್ತಿದ್ದ ಒಂದು ವ್ಯಾಪಾರದ ಜತೆಯಲ್ಲಿ ರಹಸ್ಯವಾಗಿ ಬೇರೆ ವೃತ್ತಿಗಳನ್ನು ನಡೆಸುತ್ತಿದ್ದಳೆಂದು ಆರ್ಪ ಹೋಗಿ, ಅವಳಿಗಿತ್ತ ಲೈಸೆನ್ಸು ರದ್ದುಹೊಂದಿತು. ಈ ಸಂಬಂಧವಾಗಿ ಅವಳು ಯೋಗ್ಯ ಉದಾಹರಣೆಗಳನ್ನು ಕೊಟ್ಟು ಲೈಸನ್ಸನ್ನು ಪುನಃ ಪಡೆದಳು. ಅವಳ ಮೇಲೆ ಯಾವ ಅಪರಾಧವೂ ಹೊರಿಸಲ್ಪಡಲಿಲ್ಲ. ಲೈಸನ್ಸು ರದ್ದಾದ ಕಾರಣಗಳನ್ನೂ ವರ್ತಮಾನಗಳನ್ನೂ ಅನೇಕ ಪತ್ರಿಕೆಗಳು ಪ್ರಕಟಿಸಿದವು. ಆದರೆ, ಅವಳ ಬಿಡುಗಡೆಯಾದ ವಿಷಯವನ್ನು ಯಾವ ಪತ್ರಿಕೆಯೂ ಪ್ರಕಟಿಸಲಿಲ್ಲ. ಅವಳು ಅಂಥಾ ಪತ್ರಿಕೆಗಳ ಮೇಲೆ ದಾವೆ ಹೂಡಿದಳು. ಏಳು ಪತ್ರಿಕಾಕರ್ತರುಗಳಿಂದ ಅವಳು ೧೫೫೦ ಸವರಿನ್‌ಗಳ ಪರಿಹಾರದ್ರವ್ಯವನ್ನು ಪಡೆದಿರುವಳು.

ನಿರುದ್ಯೋಗಿಗಳು ಬಡವರೇ? ಎಂಬ ಪ್ರಶ್ನೆ!

ಟೊರಂಟೋ ನಗರದಲ್ಲಿ ನಿರುದ್ಯೋಗಿಯೆಂದು ಹೇಳಿಕೊಂಡು ಸರಕಾರದಿಂದ ಜೀವನಾಂಶ ಪಡೆಯುತ್ತಿದ್ದವನೊಬ್ಬನ ನಿಜಸ್ಥಿತಿಯನ್ನು ವಿಚಾರಿಸುವಲ್ಲಿ ಅವನ ವಾಸದ ಮನೆಯು ೪೨೦೦ ಸವರಿನ್‌ಗಳಷ್ಟು ಮೌಲ್ಯದ್ದಾಗಿತ್ತೆಂದೂ ಅಡಿಗೆ ಮೊದಲಾದ ಕೆಲಸಗಳಿಗೆ ಬಟ್ಲರ್‌ಗಳನ್ನು ನೇಮಕಮಾಡಿಕೊಂಡಿದ್ದನೆಂದೂ ತಿಳಿದುಬಂತು. ಅವನಿಗೆ ಸಿಗುತ್ತಿದ್ದ ಜೀವನಾಂಶವು ಕೂಡಲೇ ನಿಂತುಹೋಯಿತು.

ಡಾಕ್ಟರನನ್ನು ಸೋಲಿಸಿದಳು.

ಮೇರಿಜೆನ್ ಸ್ಟಬ್ಬಿನ್ ಎಂಬವಳೊಬ್ಬಳು ಆರು ವರ್ಷ ಪ್ರಾಯದ ಮಗುವಾಗಿದ್ದಾಗ ಅವಳ ದೇಹಸ್ಥಿತಿಯನ್ನು ಪರೀಕ್ಷಿಸಿದ ಡಾಕ್ಟರುಗಳು ಮಗುವು ಇನ್ನು ಆರುವರ್ಷಗಳು ಬದುಕುವುದಿಲ್ಲವೆಂದು ಅಭಿಪ್ರಾಯಪಟ್ಟಿದ್ದರು. ಈಗ ಅವಳು ೧೦೩ ವರ್ಷ ವಯಸ್ಕಳಾಗಿರುತ್ತಾಳೆ. ಕನ್ನಡಕವಿಲ್ಲದೆ ಓದಲೂ ಬರೆಯಲೂ ಶಕ್ತಳು. ತನ್ನ ದಿನನಿತ್ಯದ ಕಾರ್ಯಗಳ ಪಟ್ಟಿಯನ್ನು ಸ್ವಹಸ್ತದಿಂದಲೇ ಬರೆಯುತ್ತಾಳೆ.

"ಸುಂದರಿಯರನ್ನು ನಂಬಬೇಡ"—

—ಎಂದು ಯಾರೋ ಹೇಳುವುದು ನಾವು ಕೇಳಿದ್ದೇವೆ, ಆದೇಕೆಂದು ಈಗ ಗೊತ್ತಾಯಿತು. ಕೇಪ್‌—ಗೊಂಡಾದಲ್ಲಿ ಕೆಲವು ಭಂಡಾಯಗಾರರು ಊರನ್ನೆಲ್ಲಾ ಲೂಟಿ ಮಾಡುತ್ತಿದ್ದರು. ಪೋಲೀಸರು ಎಷ್ಟು ಪ್ರಯತ್ನ ಮಾಡಿದರೂ ಅವರು ಸಿಗಲಿಲ್ಲ. ಮೂರು ದಿನಗಳ ವರೆಗೆ ಅನ್ನಾಹಾರವಿಲ್ಲದೆ ಹುಡುಕಾಡಿ ದಣಿದು ಕೊನೆಗೆ ಸುಂದರಿಯೋರ್ವಳ ಆಶ್ರಯವನ್ನು ಹೊಕ್ಕರು. ಅವಳೊಡನೆ ವಿಚಾರಿಸಿದಾಗ, ಅವಳು ಕಳ್ಳರ ಆಶ್ರಯವನ್ನೆಲ್ಲ ತಿಳಿಸಿದಳು. ಅವಳ ಸಲಹೆಗಳ ಮೇರೆಗೆ ಪೋಲೀಸರು ಕೆಲಸ ನಡೆಸಿದರು. ಎರಡು ತಂಗಡಗಳನ್ನು ಸೆರೆಹಿಡಿದರು. ತಮ್ಮ ಸುಂದರಿಯು ತಮ್ಮನ್ನು ಹಿಡಿಸಿದುದರಿಂದ ಕಳ್ಳರು ಈಗ ಯೋಚನೆಗೆ ತೊಡಗಿರುವರು.

ಕವಿಗಳಿಗೆ ದೇವಸ್ಥಾನ ಪ್ರವೇಶ ಚಳವಳವು ಅಗತ್ಯವಿಲ್ಲವೆಂದು—

—ಈಗ ತಿಳಿಯಿತು. ಅಖಿಲ ಭಾರತ ಡಿಪ್ರೆಸ್ಡ್ ಕ್ಲಾಸಸ್ ಈಗಿನ ಜನರಲ್ ಸೆಕ್ರೆಟರಿಯವರಾದ ಶ್ರೀ ಪಿ. ಎನ್. ರಾಜಭೋಜರವರು ಶಾಂತಿನಿಕೇತನಕ್ಕೆ ಹೋಗಿ ಕವಿರವೀಂದ್ರರನ್ನು ಭೇಟಿಯಾದರು. ಸಂಭಾಷಣೆಯಲ್ಲಿ ಕವಿಗಳು ಹರಿಜನರು ದೇವಸ್ಥಾನ ಪ್ರವೇಶಕ್ಕಾಗಿ ಹೋರಾಡಕೂಡದು. ಇದರಿಂದ ಅವರ ಚಳವಳವು ಧಾರ್ಮಿಕ ಬಲವನ್ನು ಹೊಂದಲಾರದು ಎಂದರು. ಅಲ್ಲದೆ ಎಲ್ಲಾ ಹಿಂದೂಗಳು ತಾವು ಹಿಂದೂಗಳೆಂದೇ ಹೇಳಿಸಿಕೊಳ್ಳಬೇಕು. ಜಾತಿಪಂಗಡಗಳೆಂದು ಹೇಳಿಕೊಳ್ಳಬಾರದು ಎಂದು ತಿಳಿಸಿದರು. ಹರಿಜನ ಎಂಬ ಶಬ್ದವನ್ನು ಕಂಡು ತಾನು ಮೆಚ್ಚುವುದಿಲ್ಲವೆಂದು ಅವರು ಹೇಳಿದರು. ಅಸ್ಪೃಶ್ಯರಿಗೆ ಈ ಹೆಸರನ್ನು ಕೊಟ್ಟಿರುವುದರಿಂದ ಜಾತಿಭೇದಗಳು ಹೆಚ್ಚುವುವೆಂದು ಅವರು ಅಭಿಪ್ರಾಯಪಟ್ಟರು.

ಗಂಡನ ಪ್ರೇಮವು—

ಹೆಚ್ಚಾದರೆ ಹೆಂಡತಿಯು ಜೋರಾಗುತ್ತಾಳೆ, ಹೆಂಡತಿಯ ಪ್ರೇಮವು ಹೆಚ್ಚಾದರೆ ಗಂಡ ಜೋರಾಗುತ್ತಾನೆ. ಇವೆರಡರ ಸರಿಸಮಾನತೆಯಿಂದ ನಡೆಕೊಂಡರೆ ಸಂಸಾರವು ಸುಖದಾಯಕವಾಗುವುದು. ಕೋಪ್ಪಮಿನ ಉಸಿಂಗನಪಲ್ಲಿ ಹಳ್ಳಿಯಲ್ಲಿ ಒಬ್ಬ ಎಂಬವಳೊಬ್ಬಳು ಬಾವಿಗೆ ಹಾರಿ ಪ್ರಾಣ ಕಳೆದುಕೊಂಡಳು. ಗಂಡನು ಕೊಡುತ್ತಿದ್ದ ಕಷ್ಟವನ್ನು ಸಹಿಸಲಾರದೆ ಅವಳು ಹೀಗೆ ಮಾಡಿದಳಂತೆ. ಅವಳು ಅವನನ್ನು ಬಹು ಪ್ರೀತಿಸುತ್ತಿದ್ದುದರಿಂದಲೇ ಅವಳಿಗೆ ಈ ದುರವಸ್ಥೆ ಬಂದಿತೇನೋ ತಾವೇ!

ದಿ ಸೌತ್ ಇಂಡಿಯಾ ಕೋ-ಆಪರೇಟಿವ್ ಇನ್‌ಶೂರೆನ್ಸ್ ಸೊಸೈಟಿ,

ಲಿಮಿಟೆಡ್.

ಮುಖ್ಯ ಕಚೇರಿ — ಮದ್ರಾಸು.

ಪೋಸ್ಟು ಬಾಕ್ಸ್ ನಂಬ್ರ 182

ಜೀವವಿಮೆಯ ಉತ್ಕೃಷ್ಟ ಪ್ರಯೋಜನಗಳನ್ನೆಲ್ಲ ಕೊಡುತ್ತದೆ.

'ರಿಜಿಸ್ಟ್ರಾರ್ ಓಫ್ ಕೊ ಒಪರೇಟಿವ್ ಸೊಸೈಟೀಸ್' ಇವರ ಮೂಲಕ, ಸರಕಾರದಿಂದ ಅಧಿಕೃತೆಯ ಮೇಲ್ವಿಚಾರವೂ ಲೆಕ್ಕದ ಪರಿಶೋಧನೆಯೂ ನಡೆಯುತ್ತದೆ.

ಪ್ರೀಮಿಯಂ ದರಗಳು ಬಲು ಕಡಿಮೆ. ಪಾಲಿಸಿಯ ಶರತಗಳು ಆಕರ್ಷಕ.

100 ರಿಂದ 5000 ರೂಪಾಯಿ ವರೆಗಿನ ಪಾಲಿಸಿಗಳು ಸ್ವೀಕರಿಸಲ್ಪಡುತ್ತವೆ.

ಕಡಿಮೆ ಖರ್ಚಿನಿಂದ ಹೆಚ್ಚು ಲಾಭ.

ಬೇಕಾಗಿದ್ದಾರೆ.

ದಕ್ಷಿಣ ಕನ್ನಡ, ಕೊಡಗು, ಮೈಸೂರು ಸಂಸ್ಥಾನಗಳಲ್ಲಿ ಇದರ ಪ್ರತಿನಿಧಿಗಳಾಗುವ ಏಜಂಟರು ಬೇಕು.

ಆಯಾ ವಿಭಾಗಗಳಿಂದ ಅರ್ಜಿ ಮಾಡುವವರು ಹೆಚ್ಚಿನ ಮಾಹಿತಿಯ ಬಗ್ಗೆ ಕೆಳಗಿನ ಲೋಕಲ್‌ಬೋರ್ಡುಗಳಿಗೆ ಬರೆದುಕೊಳ್ಳಬಹುದು.

(1) ಸೆಕ್ರೆಟರಿ, ಸೌತ್ ಕೆನರಾ ಸೆಂಟ್ರಲ್ ಕೊ-ಒಪರೇಟಿವ್ ಬ್ಯಾಂಕ್, ಲಿಮಿಟೆಡ್, ಮಂಗಳೂರು.

(2) ಕಮಿಶನರ್, ಕೂರ್ಗ್ ಲೋಕಲ್‌ಬೋರ್ಡ್ ಓಫ್ ದಿ ಸೌತ್ ಇಂಡಿಯಾ ಕೊ-ಒಪರೇಟಿವ್ ಇನ್ಶ್ಯೂರೆನ್ಸ್ ಸೊಸೈಟಿ C/o ಕೂರ್ಗ್ ಕೊ-ಒಪರೇಟಿವ್ ಸೆಂಟ್ರಲ್ ಬ್ಯಾಂಕ್, ಲಿಮಿಟೆಡ್ ಮಡಿಕೇರಿ, ಕೊಡಗು.

(3) ವೈ ಶ್ರೀನಿವಾಸಯ್ಯ, ಕಮಿಶನರ್ ಮತ್ತು ಗೌರವ ಕಾರ್ಯದರ್ಶಿ, ಫೆಡರಲ್ ಕೊ-ಒಪರೇಟಿವ್ ಯೂನಿಯನ್ ಓಫ್ ಮೈಸೂರು ಸಿಟಿ, ಮೈಸೂರು

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವಿಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ–(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ್ಯ–(ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ್ಯ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ–(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ–(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ



Distributors for South Kanara –

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಟಿನ್ನೊ ... 1

ಕಾವ ಶಾಸ್ತ್ರವನ್ನೋದಿರಿ

Shah Company ...
Pearl & Sons ...

Atank Nigrah Pharmacy
Chickpet, Bangalore
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ ಬೆಂಗಳೂರು

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ.

ಚರಿತ್ರೆ ಮತ್ತು ಕಥೆಗಳು.

	ರೂ	ಆ	ಪೈ
ನಾಲ್ಕನೇ ದರ್ಜೆ	0	6	0
ಮೂರನೇ ,,	0	4	6
ಎರಡನೇ ,,	0	4	0
ಸಮಾಜಶಾಸ್ತ್ರ			
ಐದನೇ ದರ್ಜೆ	0	8	0
ನಾಲ್ಕನೇ ,,	0	8	0
ಮೂರನೇ ,,	0	2	6

ಸಾಮಾನ್ಯ ವಿಜ್ಞಾನ.

	ರೂ	ಆ	ಪೈ
ಎರಡನೇ ದರ್ಜೆ	0	8	0
ಮೂರನೇ ,,	0	8	0
ನಾಲ್ಕನೇ ,,	0	5	0
ಐದನೇ ,,	0	6	0

ಅಜ್ಜಿ ಕಥೆಗಳು (ಸಚಿತ್ರ.)

ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು
ಮೊಣಸಿನ ಕಾಳಪ್ಪ
ಕಾರ್ಗಡಿ ಮುದ್ದೆ
ಇಲಿಗಳ ಥಕ್ಕ ಧೈ
ಆಂಗಳ ಮುಗ್ಗು
ಗುಡುಗುಡು ಗುಮ್ಮಟ ದೇವರು
ಒಡ್ಡನ ಓಟ.
(ಇವುಗಳ ಕ್ರಯ. 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿ ಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ಶಿವರಾಮ ಕಾರಂತ ವಿರಚಿತ

ಗ್ನಾನ

ಜ್ಞಾನದ ಮೇಲೆ ವ್ಯಂಗ ಟೀಕೆ.

ಈಗ ಗ್ರಂಥರೂಪದಲ್ಲಿ

ಸಿದ್ಧವಾಗಿದೆ

ದಪ್ಪಗಿನ ಆಂಟಿಕ್ ಕಾಗದದಲ್ಲಿ

ಅಂದವಾಗಿ ಮುದ್ರಿಸಲ್ಪಟ್ಟಿವೆ.

ಕ್ರೌನ್ ¼ ಆಕಾರದ ೧೮೩ ಪುಟಗಳು

ಉತ್ತಮ ತರದ ಹಾಸ್ಯ.

ಬೆಲೆ 1-4-0

ಶಾರದಾ ಛಾಪಖಾನ, ಮಂಗಳೂರು.

ಇವರಿಂದ ಪಡೆಯಬಹುದು

ನಡೆದ ಕತೆಗಳು.

True Stories.

ಒಂದು ಸುಗಿಸುದ ಸರಣಿ—ಮೂರೇ ನಿಮಿಷಗಳು.

All Rights Reserved.

[ಸಮಾಜದಲ್ಲಿನ ಕುಂದುಕೊರತೆಗಳನ್ನು ಹೋಗ ಲಾಡಿಸುವುದೇ 'ನಡೆದ ಕತೆಗಳು'—ಇವುಗಳ ಉದ್ದೇಶ. ಘಟನೆಗಳಲ್ಲಿ ನಿಜವಾದುವುಗಳು; ಅವುಗಳನ್ನು ಸಂಯೋಜಿಸುವುದರಲ್ಲಿ ಮಾತ್ರ ಅನುಕೂಲ ಹಕ್ಕುಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಹೆಸರುಗಳನ್ನು ಕೆಲವೆಡೆಗಳಲ್ಲಿ ಮಾತ್ರ ಬದಲಾಯಿಸಲಾಗಿದೆ.

ಪ್ರೇಮಲೀಲೆ.

೧೨.

ತಹಶೀಲ್ದಾರ ಕೋದಂಡರಾಯರು ಕಾಲವಶರಾಗಿ ಐವತ್ತು ವರ್ಷಗಳು ದಾಟಿಹೋಗಿರುವುವಾದರೂ, ಘಳಸೀಲಿನಲ್ಲಿರುವ ಅವರ ಆ ಭವ್ಯಭವನದ "ತಹಶೀಲ್ದಾರರ ಮನೆ" ಯೆಂಬ ಹೆಸರು ಇಂದಿಗೂ ಹೋಗಿರುವುದಿಲ್ಲ.

ಈಗ "ತಹಶೀಲ್ದಾರರ ಮನೆ"ಯಲ್ಲಿರುವುದು ಘನ ಉದ್ಯೋಗಸ್ಥರಾದ ಅವರ ಮಗ ನರಸಿಂಹರಾಯರು; ಅವರ ಪತ್ನಿ ರುಕ್ಮಿಣೀ ಬಾಯಿ ಮತ್ತು ನಾಲ್ಕು ಮಕ್ಕಳು.

ನರಸಿಂಹರಾಯರಿಗೆ ಕ್ರಿಕೆಟ್ ಆಟವೆಂದರೆ ಪ್ರಾಣ. ಮೈದಾನ್ ಕೊರಗನು ಆಟದ ಸಾಹಿತ್ಯಗಳನ್ನಿಟ್ಟು, ನೆಟ್ ಊರಿ ಬಿಟ್ಟನೆಂದರೆ ಸರಿ,-ಆಗಲೇ ನರಸಿಂಹರಾಯರು ಪ್ರತ್ಯಕ್ಷ. "ಕೊರಗ, ಅವರೆಲ್ಲ ಬರುವ ಮೊದಲು ಎರಡು ಚೆಂಡು ಹಾಕು, ನೋಡೋಣ," ಎಂದು ಹೇಳಿ, ಹೊಸ ಬೇಟನ್ನು ತೆಗೆದು, ನಾಲ್ಕು ಚೆಂಡುಗಳನ್ನು ನಾಲ್ಕು ದಿಕ್ಕುಗಳಿಗೆ ಕಳುಹಿಸಿ, ಬೇಟನ್ನು ಕೆಳಗಿಟ್ಟು ಸುಮ್ಮಗೆ ಕುಳಿತುಕೊಳ್ಳುವರು. ಆ ಚೆಂಡುಗಳನ್ನು ಕೊರಗನು ಹೇಗೂ ಹೆಕ್ಕಿ ತರುತ್ತಿದ್ದನೆನ್ನಿ.

ಸ್ಟಿವನ್ಸ್ ಬ್ರದರ್ಸ್ ಕಂಪೆನಿಯ ಮೆನೆಜರರಾದ ಮಿ| ಮಿಂಟೋ ಜೆಕ್ಸನರೆಂಬ ಆಂಗ್ಲೇಯರು ನರಸಿಂಹರಾಯರ ಮೈದಾನಿನ ಗೆಳೆಯರು. ಇವರ ಮೈತ್ರಿಯು ವಿಚಿತ್ರವಾದುದು. ಇವರ ಇತರ ಮಿತ್ರರು ಇವರಿಬ್ಬರಿಗೆ 'ಮೈದಾನ್ ಸ್ನೇಹಿತರು' ಎಂದು ಹೆಸರಿಟ್ಟಿದ್ದರು.

ಮಿ| ಮಿಂಟೋರವರಿಗೊಂದು ಬುಲ್‌ಡೋಗ್ ಇತ್ತು. ಮಿಂಟೋರವರು ಸ್ವಪತ್ನಿಯನ್ನಾದರೂ ಇಂಗ್ಲೆಂಡಿಗೆ ಕಳುಹಿಸಿ ಒಂದು ವರ್ಷ ಸುಮ್ಮಗಿರುತ್ತಿದ್ದರು; ಆದರೆ ಇವರಿಗೆ ಈ ನಾಯಿಯನ್ನು ಬಿಟ್ಟು ಒಂದು ದಿನವನ್ನು ಕಳೆಯುವುದೇ ಪ್ರಯಾಸಕರವೆಂದೆನಿಸುತ್ತಿದ್ದಿತು. 'ಅದಿಲ್ಲದಿದ್ದರೆ ನನ್ನ ಅಂಗದ ಯಾವುದೋ ಒಂದು ಭಾಗವು ಬಿದ್ದಂತೆ ಭಾಸವಾಗುತ್ತದೆ' ಎಂದು ಅವರು ನರಸಿಂಹರಾಯರೊಡನೆ ಆಗಾಗ್ಗೆ ಹೇಳುತ್ತಿದ್ದರು.

ಈ ನಾಯಿಯು ಇಟ್ಟ ಮೂರು ಮರಿಗಳಲ್ಲಿ ಒಂದು ಮರಿಗೆ 'ಥೇಂಕ್ಸ್' ಎಂಬ ಹೆಸರಿಟ್ಟು ಮಿ| ಮಿಂಟೋರವರು ಅದನ್ನು ನರಸಿಂಹರಾಯರಿಗೆ ಕೊಟ್ಟು, 'ಇದು ನಮ್ಮ ಮೈತ್ರಿಯ ಸ್ಮರಣೆಗಾಗಿ-' ಎಂದು ಹೇಳಿದರು. 'ಥೇಂಕ್ಸ್' ಎಂದು ಹೇಳಿ ನರಸಿಂಹರಾಯರು ಅದನ್ನು ತೆಗೆದುಕೊಂಡರು. ನಾಯಿಯ ದಾನವನ್ನು ಮಾಡಿದ ಪುಣ್ಯದಿಂದ ಮಿ| ಮಿಂಟೋರವರಿಗೆ ಇಂಗ್ಲಾಂಡಿನಿಂದ ಕರೆ ಬಂದು ಅವರು ಮಂಗಳೂರನ್ನು ಬಿಟ್ಟರು.

ನರಸಿಂಹರಾಯರಿಗೆ 'ಥೇಂಕ್ಸ'ನ ಮೇಲೆ ಬಹು ಮಮತೆ. ಪ್ರೀತಿಯ ಮಗುವು ತೊಡೆಯ ಮೇಲಿದ್ದರೂ, ಅವರು ಮೊದಲು 'ಥೇಂಕ್ಸ'ನ್ನೇ ಮುದ್ದಿಸುತ್ತಿದ್ದರು. ಬೆಂದ ಅನ್ನವು ಎರಡನೇ ಬಟ್ಟಲಿಗೆ ಹಾಕಲ್ಪಟ್ಟಿತೆಂದರೆ, ಕ್ಷಣ ಮಾತ್ರದಲ್ಲಿ ಮೊದಲನೇ ಬಟ್ಟಲು ನಾಯಿಯ ಮುಂದೆಯಿರುತ್ತಿತ್ತು. ಹಾಲು, ಪರಮಾನ್ನ, ಮಾಂಸ ಮತ್ತು ರೊಟ್ಟಿಗಳನ್ನು ನರಸಿಂಹರಾಯರು ಅದಕ್ಕೆ ಒಲವಿನಿಂದ ಕೊಡುತ್ತಿದ್ದರು. ಅಂತೂ, ದಿನಕ್ಕೆ ನಾಲ್ಕಾಣೆಗಿಂತ ಕಡಮೆಯನ್ನು ಅವರು 'ಥೇಂಕ್ಸ್'ಗಾಗಿ ವೆಚ್ಚಮಾಡುತ್ತಿದ್ದಿಲ್ಲ.

ನರಸಿಂಹರಾಯರ ಮನೆಯಲ್ಲಿ ಸೋಮಕ್ಕೆ ಒಬ್ಬಳೇ ಕೆಲಸದವಳು. ದಿನಕ್ಕೆ ಮೂರು ಗುಡಾಣ ನೀರು ಹಾಕುವುದು, ಮಾರ್ಕೆಟಿಗೆ ಹೋಗಿ ಬೇಕುಬೇಕಾದುವುಗಳನ್ನು ತಂದು ಅಡಿಗೆ ಮಾಡುವುದು, ಮಕ್ಕಳು ಮರಿಗಳನ್ನು ಮೀಯಿಸುವುದು, ವಸ್ತ್ರ ಒಗೆಯುವುದು—ಇವೇ ಮೊದಲಾದುವುಗಳು ಅವಳ ನಿತ್ಯದ ಕೆಲಸ. (ಇವುಗಳ ಮೇಲೆ ದಿನಕ್ಕೆರಡು ಮೂರಾವರ್ತಿಯಾದರೂ ರುಕ್ಮಿಣಿಬಾಯಿಯಿಂದ ಬೈಗಳನ್ನು ಕೇಳುವ ಕೆಲಸವೂ ಇದ್ದಿತು. ಇಂತಹ ಕೆಲಸವನ್ನು ರಾಯರು ಕೂಡ ಸೋಮಕ್ಕೆಗೆ ಅಪರೂಪವಾಗಿಯಾದರೂ ಕೊಡದಿರುತ್ತಿದ್ದಿಲ್ಲ.)

ಸೋಮಕ್ಕೆಗೆ ತಿಂಗಳಿಗೆ ಮೂರು ರೂಪಾಯಿಗಳು ಸಂಬಳ.

ಸಂಬಳ ಸಿಗುವ ದಿನದ ಆನಂದವೆಂದರೆ ಸೋಮಕ್ಕೆಗೆ ಸೋದ್ದಿಯು ಹಣಸಿಕ್ಕಿದ ಆನಂದದಂತೆ. ಕಾರಣ: ಅವಳಿಗೆ ಸಂಬಳ ಸಿಗುವುದೇ ಅಪರೂಪ! ಕೆಲಸಕ್ಕೆ ಸೇರಿದ ಒಂದನೇ ತಿಂಗಳಲ್ಲಿ ಅವಳಿಗೆ ೩ನೇ ತಾರೀಕಿನ ದಿನ ಸಂಬಳವು ಸಿಕ್ಕಿದ್ದಿತು. ಆ ಮೇಲೆ—ಒಂದೂವರೆ ವರ್ಷ ದಾಟಿತು—ಇಷ್ಟು ಸಮಯದಲ್ಲಿ ಒಟ್ಟು ೬ ರೂಪಾಯಿಗಳು ದೊರೆತ ಭಾಗ್ಯವು ಅವಳಿಗೆ ಬರಲಿಲ್ಲ.

ನಾಯಿಯ ಆಹಾರದ ವೆಚ್ಚವು ದಿನ ಒಂದಕ್ಕೆ ನಾಲ್ಕಾಣೆಗಿಂತ ಕಡಮೆಯಾಗುತ್ತಿದ್ದಿಲ್ಲ.

ಸೋಮಕ್ಕೆಯ ಕಷ್ಟ ಹೇಳತೀರದು: ಗಂಡಸಿಲ್ಲದ ಒಬ್ಬಳು ಮಗಳನ್ನೂ ಅವಳ ಹಸುಗೂಸನ್ನೂ ರಕ್ಷಿಸಬೇಕೆಂಬ ಒಂದೇ ಒಂದು ಉದ್ದೇಶದಿಂದ ಅವಳು ವೆಂಕಟೇಶ ಶ್ಯಾನುಭಾಗರ ಅಂಗಡಿಯಲ್ಲಿ, ತಿಂಗಳಿಗೆ ಕಡಮೆಯೆಂದರೆ ನಾಲ್ಕು ರೂಪಾಯಿ ಸಾಲಮಾಡುತ್ತಿದ್ದಳು. 'ಸಾಲವನ್ನು ನಾಳೆ ಪಾವತಿ ಮಾಡುತ್ತೇನೆ, ನಾಡದು ಮಾಡುತ್ತೇನೆ' ಸಂಬಳ ನಾಳೆ ಕೊಡುತ್ತೇನೆಂದು ಹೇಳಿದ್ದಾರೆ; ನಾಡದು ಕೊಡುತ್ತೇನೆಂದು ಹೇಳಿದ್ದಾರೆ' ಎಂದು ಶ್ಯಾನುಭಾಗರಿಗೆ ಹೇಳಿ ನಂಬಿಸುವುದು ಅವಳ ಮತ್ತೊಂದು ಕೆಲಸ. ಈ ಧಾಟಿಯನ್ನು ಕೇಳಿ ಕೇಳಿ ಬೇಸರಗೊಳ್ಳುವ ಶ್ಯಾನುಭಾಗರು 'ನಿನಗೊಬ್ಬ ರಾಯ! ಅವನಿಗೊಂದು ಉದ್ಯೋಗ! ಇನ್ನೂರೈವತ್ತು ರೂಪಾಯಿ ಸಂಬಳ ಸಿಗುವುದನ್ನು ಗುಜ್ಜರ ಕೆರೆಗೆ ಹಾಕುತ್ತಾನೋ ಕೇಳು!!' ಎಂದು ಒಮ್ಮೊಮ್ಮೆ ಸಿಟ್ಟಿನಿಂದ ಒದರುತ್ತಿದ್ದರು.

ಚಿಲ್ಲರೆ ಸಾಲಗಳ ಬಲೆಯೊಳಗೆ ಸಿಲುಕಿದ ಸೋಮಕ್ಕೆಗೆ ದಾರಿ ನಡೆಯಲು ನಾಚಿಕೆಯಾಗುತ್ತಿತ್ತು. ಅಮ್ಮನೊಡನೆ ಹೇಳಿ ರಾಯರೊಡನೆ ಸಂಬಳವನ್ನು ಕೇಳಿಸಿದರೆ 'ಬರುವ ತಿಂಗಳಲ್ಲಿ ಒಟ್ಟುಕೊಡುತ್ತೇನೆ. ಈ ಸಲ ಎಲ್ಲಾ ಖರ್ಚಾಯಿತು' ಎಂಬ ಉತ್ತರವು ನಿತ್ಯದಂತೆ ಬರುತ್ತಿತ್ತು.

ಆದರೂ ನಾಯಿಯ ಆಹಾರದ ವೆಚ್ಚವು ದಿನ ಒಂದಕ್ಕೆ ನಾಲ್ಕಾಣೆಗಿಂತ ಕಡಮೆಯಾಗುತ್ತಿದ್ದಿಲ್ಲ.

ಅಲ್ಲಹಾಬಾದಿನಲ್ಲಿ ಒಬ್ಬ ಅಧಿಕಾರಿಯು ದಾದಿಗೆ ಸಂಬಳ ಕೊಡದಿದ್ದುದಕ್ಕಾಗಿ ಅವಳು ಅವನ ಕೂಸನ್ನೆತ್ತಿಕೊಂಡು ಪರದೇಶಕ್ಕೆ ಓಡಿಹೋದಳಂತೆ; ರಾಯರ ಮಗು ಸುಮಂತನನ್ನು ಸೋಮಕ್ಕೆಯು ಎತ್ತಿಕೊಂಡು ಹೋಗಿ ರಾಯರ 'ಪ್ರೇಮಲೀಲೆ'ಯನ್ನು ಬೆಂದೊದಲ ಕತ್ತಿಯಿಂದ ಕಡಿಯದಿರಲೆಂದು ಪ್ರಾರ್ಥಿಸೋಣವೇ?

ಮು. ಶಾ.

ನಗಬಾರದು.

[ಸ್ವಕಪೋಲ ಕಲ್ಪಿತ ಹಾಸ್ಯಗಳನ್ನು ಕಳುಹಿಸುವವರಿಗೆ ಯೋಗ್ಯತಾನುಸಾರವಾಗಿ ಬಹುಮಾನಗಳನ್ನು ಕೊಡಲಾಗುವುದು.]

ಒಂದು ಕ್ಲಾಸಿನಲ್ಲಿ ಉಪಾಧ್ಯಾಯರು ಹುಡುಗರಿಗೆ ರಾಮಾಯಣದ ಕಥೆಯನ್ನು ಹೇಳುತ್ತಾ, "ಜಿಂಕೆಯನ್ನು ತರಲು ಹೋದ ರಾಮನು ಬಾರದಿದ್ದುದನ್ನು ಕಂಡು ಸೀತೆಯು ದುಃಖದಿಂದ ಅಳುತ್ತಿದ್ದಳು"...ಎಂದು ವಿವರಿಸುತ್ತಿದ್ದರು. ತೂಕಡಿಸುತ್ತಿದ್ದ ಒಬ್ಬ ಹುಡುಗನನ್ನು ನೋಡಿ—

ಉಪಾಧ್ಯಾಯ:—ಎಲೋ ಕೃಷ್ಣ, ಸೀತೆಯು ಏನು ಮಾಡುತ್ತಿದ್ದಳು?

ಹುಡುಗ:—ಅಳುತ್ತಿದ್ದಳು ಸರ್.

ಉಪಾಧ್ಯಾಯ:—ಏತಕ್ಕೋ?

ಹುಡುಗ:—ನನ್ನ ಪುಸ್ತಕವನ್ನು ಹರಿದುಹಾಕಿದುದಕ್ಕೆ ನಾನು ಹೊಡೆದೆ ಸರ್.

\+ \+ \+ \+

ಹೆಂಡತಿ:—ತೀರಿ ಹೋದ ಪ್ರಥಮ ಹೆಂಡತಿಯನ್ನು ನೀವು ಯಾವಾಗಲೂ ಹೊಗಳುತ್ತಿರಲ್ಲಾ! ನನ್ನನ್ನು ಒಂದು ದಿವಸವಾದರೂ ಹೊಗಳಿದ್ದೀರಾ?

ಗಂಡ:—ಲೇ, ನೀನು ಸಹ ಅವಳ ಹಾಗೆ ಸತ್ತ ಮೇಲೆ ಹೊಗಳುತ್ತೇನೆ.

\+ \+ \+ \+

ತಾಯಿ:—ಎಲಾ ರಾಮು, ಟ್ಯಾಪ್ ಪೀಸನ್ನು ಒಡೆದು ಹಾಕಿದ ವಿಷಯ ನಿನ್ನ ತಂದೆಗೆ ಗೊತ್ತಾಗಿದೆಯಲ್ಲಾ!

ರಾಮು:—ಇಲ್ಲಮ್ಮ, ನನ್ನ ಕೂಡೆ ಕೇಳಲಿಲ್ಲವಲ್ಲ!

ತಾಯಿ:—ನೀನು ಶಾಲೆಗೆ ಹೋಗಿದ್ದಿ; ಇಂದು ನಿನ್ನ ತಲೆ ಕಂಡರೆ ಸರಿ ನೋಡು......

ರಾಮು:—ಹಾಗಾದರೆ ಅಪ್ಪನು ತಲೆ ನೋಡದ ಹಾಗೆ ಟೊಪ್ಪಿಯನ್ನು ಹಾಕಿಕೊಳ್ಳುತ್ತೇನಮ್ಮ.

\+ \+ \+

ಮೇಸ್ಟ್ರು:—ರಂಗಾ, ನಿನಗೆ ಮನೆಯಲ್ಲಿ ದಿನ ಒಂದಕ್ಕೆ ಒಂದಾಣೆಯಂತೆ ಕೊಟ್ಟರೆ ತಿಂಗಳಿಗೆಷ್ಟಾಯಿತು?

ರಂಗ:—ಇಲ್ಲ ಸರ್, ನಮ್ಮಮ್ಮ ಒಂದು ಕಾಸು ಕೂಡಾ ಕೊಡುವುದಿಲ್ಲ ಸರ್!

\+ \+ \+ \+

ತಿಪ್ಪಾ ಭಟ್ಟರು:—ಸ್ವಾಮಿ, ವಕೀಲರೇ ನೆರೆಮನೆಯ ರಂಗರಾಯರು ಬೇಕೆಂತಲೇ ಅನ್ಯಾಯ ಮಾಡಿದ್ದಾರಲ್ಲಾ. ಕೋರ್ಟಿಗೆ ಹೋಗದೆ ಅದನ್ನು ಇಲ್ಲಿಯೇ ತೀರ್ಮಾನ ಮಾಡಲಾರಿರಾ?

ವಕೀಲ:—ಭಟ್ಟರೇ ಆಗಬಹುದು. 'ಅ' ಎಂಬ ಅಕ್ಷರವನ್ನು ಬಾಯಿಂದ ಉಚ್ಚರಿಸಿದ್ದರೆ ಸರಿ. ನ್ಯಾಯವಾಯಿತಲ್ಲಾ. ರುಸುಮನ್ನು ಈಗಲೇ ಕೊಡುವಿರಾ? ಅಥವಾ ಬಿಲ್ ಮಾಡಲೇ?

\+ \+ \+

ರೋಗಿ:—ವೈದ್ಯರೇ ಜ್ವರ ಬಂದಿದೆ; ಅದರೊಡನೆ ವಿಪರೀತವಾದ ತಲೆಶೂಲೆ, ಕೆಲವು ದಿವಸಗಳಿಂದ ಮಲಬದ್ಧತೆ ಕೂಡಾ ಇದೆ.

ವೈದ್ಯ:—"ಹೆದರುವ ಅವಶ್ಯವಿಲ್ಲ. ಮನುಷ್ಯನಿಗೆ ಮಲವೇ ಬಲ. ತಲೆಶೂಲೆಗಾಗಿ ಈ ಮದ್ದನ್ನು ಅರೆದು ತಲೆಗೆ ಇಡಿರಿ. ಕೂಡಲೇ ನಿಲ್ಲುವುದು" ಎಂದು ಹೊರಟುಹೋದರು.

ರೋಗಿಯ ಮನೆಯವ:—(ಸುಸು ಸಮಯದ ನಂತರ) ವೈದ್ಯರೇ, ರೋಗಿಯು ಮೃತಪಟ್ಟಂತೆ ಕಾಣುತ್ತದಲ್ಲಾ.

ವೈದ್ಯ:—ಮೃತಪಟ್ಟರೂ ಚಿಂತಿಲ್ಲ ಸ್ವಾಮಿ—ತಲೆಶೂಲೆ ಖಂಡಿತ ಗುಣವಾಗಿದೆ.

ಕೆ. ರಾಮರಾವ್.

ನೋಟೀಸು.

ದಕ್ಷಿಣ ಕನ್ನಡ ಜಿಲ್ಲಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O. P. ನಂಬ್ರ 89/1935.

In the matter of Sarojani Bai—a minor.

1. B. R. ಶರ್ಕರಾ, ಉಳ್ಳಾಲ್ ಮುಂಡಪ್ಪನ ಮಗ. 2. ಅಪ್ಪಣ್ಣ, ತಿಂಮಪ್ಪನ ಮಗ. 3. ಲಕ್ಷ್ಮಿ, ತಿಂಮಪ್ಪನ ಹೆಂಡ್ತಿ. 4. ರಾಧಮ್ಮ, ಕದ್ರಿ ಐತಪ್ಪನ ಹೆಂಡ್ತಿ. 5. ಕಲ್ಯಾಣಿ, ವೆಂಕಟಪ್ಪನ ವಿಧವೆ. ಮಂಗಳೂರು ಶಹರ ಪೈಕಿ ಪೆಂಟ್‌ಲೆಂಡ್ ಪೇಟೆಯಲ್ಲಿರುವವರು—ಅರ್ಜಿದಾರರು."

ಮೇಲ್ಕಂಡ ಮೈನರ ಸರೋಜಿನಿ ಬಾಯಿಯ ಸೊತ್ತುಗಳ ಬಾಬಿನಲ್ಲಿ ಅವಳ ತಂದೆಯಾದ 1ನೇ ಅರ್ಜಿದಾರರನ್ನು ಗಾರ್ಡಿಯನ್ನಾಗಿ ಮೊಕ್ರರು ಮಾಡಬೇಕೆಂತ ಸದ್ರಿ ಅರ್ಜಿದಾರರು ಮೇಲ್ಕಂಡ ಅರ್ಜಿಯನ್ನು ದಾಖಲ್ಲು ಮಾಡಿದೆ ಸದ್ರಿ ಅರ್ಜಿಯ ತನ್ಖಿಯು ತಾ. 29-7-'35ಕ್ಕೆ ನಿಶ್ಚಯಿಸಿರುವುದರಿಂದ ಆಕ್ಷೇಪವುಳ್ಳವರು ತಮ್ಮ ಆಕ್ಷೇಪಗಳನ್ನು ಸದ್ರಿ ತಾರೀಕಿಗೆ ಜಾಹೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು, 5—7—'35. | K. Devadas Nayak, Vakil for Petitioners.

"ಮೇಲೆ ಮೇಲೆ ವೇದನೆ ಗೊಳ್ಳುತ್ತಿದ್ದೆ"

ಎರಡು ವರ್ಷಗಳ ವರೆಗೆ ಉದರ ವೇದನೆಯಿಂದ ಕಷ್ಟಪಟ್ಟು, ಆಸ್ಪತ್ರೆಯ ಚಿಕಿತ್ಸೆಯಾದನಂತರವೂ ಅದು ಗುಣವಾಗದಿದ್ದು ನೊಂದುಕೊಳ್ಳುವಾಗ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರ್‌ನ ಒಂದೇ ಒಂದು ಬಾಟ್ಲಿಯಿಂದ ಶೀಘ್ರ ಗುಣವಾಯಿತೆಂದರೆ ಅದೊಂದು ವಿಚಿತ್ರವೆಂದು ನಾವು ಭಾವಿಸಲಾರೆವಾ? ಆದರೂ ಮಿ| W. E. H. ರವರು ಅವರ ನುಡಿಗಳಿಂದಲೇ ವ್ಯಕ್ತಪಡಿಸಿರುವುದನ್ನು ಓದಿರಿ:—

ನಾನು ಆಸ್ಪತ್ರೆಯಲ್ಲಿದ್ದೆ, ಎರಡು ಸಲ ಎಕ್ಸ್‌ರೇ ತಗೊಂಡರು, ಎರಡು ವರ್ಷಗಳಿಂದ ಉದರವೇದನೆಯಿಂದ ಬಳಲುತ್ತಿದ್ದೆ. ಒಮ್ಮೊಮ್ಮೆ, ಮೇಲೆ ಮೇಲೆ ವೇದನೆಯಾಗುತ್ತಿತ್ತು. ಅಷ್ಟರಲ್ಲಿ ಒಬ್ಬ ಗೆಳೆಯರು ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಉಪಯೋಗಿಸೆಂದು ಹೇಳಿದರು. ಅದು ಅದ್ಭುತವನ್ನೇ ನಡೆಸಿತು. ಒಂದು ಬಾಟ್ಲಿಯ ಪುಡಿಯನ್ನು ತೆಗೆದುಕೊಂಡೊಡನೆ ನನಗೆ ಬಹು ಸ್ವಾಸ್ಥ್ಯವು ಲಭಿಸಿತು. ಮುಂದಕ್ಕೆ ನಾನು ಅದನ್ನು ಇಟ್ಟುಕೊಳ್ಳದೇನು. ಹೊಟ್ಟೆ ನೋವಿನಿಂದ ಕಷ್ಟಪಡುತ್ತಿರುವವರಿಗೆಲ್ಲ ಅದನ್ನು ಶಿಫಾರಸು ಮಾಡುವೆನು.

ಯಾವ ರೀತಿಯ ಹೊಟ್ಟೆಯ ಬಾಧೆಯಿಂದ ಕಷ್ಟಪಡುತ್ತಿರುವಿರಾದರೂ, ನಿಮಗೆ ಮಿ| H., ರವರಿಗೆ ದೊರೆತ ಸುಖ ದೊರೆಯುವುದು. ಆದರೆ ಕೆಲವು ಅಂಗಡಿಗಳ ಲಾಭಕ್ಕಾಗಿ ಕೀಳು ತರಗತಿಯ ವಸ್ತುವನ್ನು ಪಡೆದು ಅಪಾಯಕ್ಕೆ ಗುರಿಯಾಗಬೇಡಿ. ಕೆಂಪು ಮುದ್ರೆಯಿರುವ ಉತ್ತಮ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನೇ ನಿಮ್ಮ ಕೆಮಿಸ್ಟರಿಂದ ಪಡೆಯಿರಿ. ಸೀಲು, ರಕ್ಷಾಪತ್ರ, ಮತ್ತು ಬಿಲ್ಲೆಗಳ ಮೇಲೆ



ಎಂಬ ದಸ್ಕತು ಇದೆ. ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್, 13, ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು— —ಇವರಿಗೆ ಬರೆಯಿರಿ.

ಬಿಲ್ಲೆಗಳ ರೂಪದಿಂದಲೂ ವಿಕ್ರಯಿಸಲ್ಪಡುತ್ತದೆ.

ಅಗ್ರಗಣ್ಯ ಸಂಗೀತಜ್ಞರು ಅದರ ಪ್ರಶಂಸಾಗಾನವನ್ನು ಮಾಡಿದ್ದಾರೆ.

ಮುಸಿರಿ ಸುಬ್ರಹ್ಮಣ್ಯ ಐಯ್ಯರ್,

6 ಒಲಿವರ್ ರೋಡ್,
ಮೈಲಾಪುರ ಮದ್ರಾಸು

ಅನೇಕ ಸಮಯದಿಂದ ನನ್ನ ಕುಟುಂಬದವರೆಲ್ಲ 'ಕೇಶವರ್ಧಿನಿ'ಯನ್ನು ಬಿಡದೆ ಉಪಯೋಗಿಸುತ್ತಿದ್ದಾರೆಂದು ತಿಳಿಸಲು ಸಂತೋಷಿಸುತ್ತೇನೆ. ಉದುರುವ ಕೂದಲನ್ನು ತಡೆಯುವ ಅದರ ಶಕ್ತಿಯನ್ನು ಪೂರ್ಣವಾಗಿ ತಿಳಿದು, ಅಲ್ಲದೆ ಕೂದಲನ್ನು ಅದು ಬೆಳೆಯಿಸುವ ಅದರ ಗುಣವನ್ನು ಅರಿತು ಅವರು ಅದರ ಗುಣಗಾನವನ್ನು ಮಾಡಿ ಸ್ನೇಹಿತರಿಗೂ ಅದನ್ನು ಶಿಫಾರಸು ಮಾಡುತ್ತಾರೆ ... ನಾನು ಶಿಫಾರಸು ಮಾಡುತ್ತೇನೆ

(ಸಹಿ)ಮುಸಿರಿ ಸುಬ್ರಹ್ಮಣ್ಯ ಅಯ್ಯರ್.

ಬಾಟ್ಲಿ 1ಕ್ಕೆ ಆಣೆ 12. **'ಕೇಶವರ್ಧಿನಿ'** ಪೇಕಿಂಗ್ ಮತ್ತು ಅಂಚೆವೆಚ್ಚ ಪ್ರತ್ಯೇಕ

South Indi Chemicals, 11 Z Road, Mylapore Madras

Kanara Watch Works, Mangalore.

Suppliers of standard Watches, Time pieces, Wrist watches, Clocks and various kinds of sporting materials etc, Quality and price unassailable Visit our Show Room and be satisfied

---

ಎಲ್ಲೆಲ್ಲಿ ನೋಡಿದರೂ ಸ್ವದೇಶಾಭಿಮಾನಿ!

ಆಬಾಲವೃದ್ಧರು ಓದುವುದು ಸ್ವದೇಶಾಭಿಮಾನಿಯನ್ನು!

ಗಿರಾಕಿಗಳು ದಿನೇ ದಿನೇ ಹೆಚ್ಚುತ್ತಿದ್ದಾರೆ -

ಕೊನೆಯ ಬಂದರೆ ಪ್ರತಿಗಳೂ ವಿಕ್ರಯವಾಗುತ್ತವೆ!

ವಾರಂಪ್ರತಿ ಹೆಚ್ಚಿನ ಪ್ರತಿಗಳನ್ನು ಮುದ್ರಿಸುತ್ತೇವೆ.

?

ಸರ್ವರೂ ಓದಿ ಆನಂದಿಸಿರಿ!

ಬೆಲೆ ಒಂದಾಣೆ ಮಾತ್ರ!

ಎಲ್ಲಾ ಏಜಂಟರುಗಳಲ್ಲಿಯೂ ಸಿಗುತ್ತವೆ

$1\frac{1}{4}$ CRORE

Karnatics know nothing of your products;— Advertise them in

Swadeshabhimani

the pioneer Weekly of the South Kanara District.

For Advertisement rates apply to

The Advertisement Manager,
Swadeshabhimani
Mangalore

ಪ್ರಶಂಸೆ.

ಪ್ರಖ್ಯಾತ ಅಮೇರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ.

ವಿ-ಮೊ-ಲ

VIM-O-LA

ಅಮೇರಿಕಾದ ಜೀವಸಾರ ಪೇಸ್ಟ್.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ ಹೊಟ್ಟೆಯಲ್ಲಿ ಚೆಂಡಿನಂತೇಳುವ ವಾಯುವನ್ನು, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಗೊಳಿಸುವ ಶಕ್ತಿವರ್ಧಕ ಪಾನೀಯ. ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ. ಬಾಟ್ಲಿ 1ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟಾಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ

"Vimola Depot"

Manufactured by

American Herbal Products Co ,

Sole representatives for above medicine

The National Kanara News Agency,
Sir Pherozsha Metha Road
Fort Bombay

ಲೇಡಿಸ್ ಬಾಂ

ಸ್ತ್ರೀಯರ ಜೀವನಾಧಾರ

ಸ್ತ್ರೀಯರು ಪುಷ್ಟರಾಗಿಯೂ ಕಾಂತಿಯುಕ್ತರಾಗಿಯೂ ಇರಬೇಕಾದರೆ, ಅವರ ಮುಟ್ಟಿನ ದೋಷ, ಆ ಸಮಯದಲ್ಲಿ ಕಂಡುಬರುವ ಹೊಟ್ಟೆನೋವು ಸೊಂಟ ಹಿಡಿತ, ಗಂಟುನೋವು, ಮೈಯಲ್ಲಿ ದಣಿಕೆ ಬೀಳುವುದು, ಬಿಳೀ ಸೆರಗು, ಗರ್ಭಕೋಶದ ನೋವು, ... ಬಂಜೆತನ, ಸಾಧಾರಣ ಕ್ಷಯವಿಕಾರ ಮತ್ತು ಇತರ ಅನೇಕ ತರದ ಗುಪ್ತರೋಗಗಳನ್ನು ನಿವಾರಿಸಲು ಇದರ ಒಂದೇ ಒಂದು ಶೀಸೆಯನ್ನು ಉಪಯೋಗಿಸಿ ಇದರ ಗುಣವನ್ನು ಕಾಣುವಿರಿ

ಉಪಯೋಗಿಸಿದವರ ಅಭಿಪ್ರಾಯ —

ರಾಮಕೃಷ್ಣ ಜೈನ್ ಬಿ ಎ ಲಾಹೋರ್ 'I found your Ladies Balm worth the money I spent on it '

ಯಾವ ತೆರದ ಔಷಧಿಯಿಂದಲೂ ಬಹುಪ್ರಯತ್ನ ... ಅಸಮರ್ಥರೆಂದಾದರೆ ನಮ್ಮ ಲೇಡಿಸ್ ಬಾಮನ್ನು ಉಪಯೋಗಿಸಿ ಒಂದು ತಿಂಗಳ ಔಷಧಿಯುಳ್ಳ ಶೀಸೆಗೆ ರೂ ...

ತಯಾರಿಸುವವರು —**ದಿ. ಬಿಹಾರ್ ಕೆಮಿಕಲ್ ವರ್ಕ್ಸ್, ಭಾಗಲಪುರ.**

ಏಜಂಟರು—ಷಹಾ ಕಂಪೆನಿ, ಗ. ಕಾಲೇಜು ಎದುರು ಮಂಗಳೂರು

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷ್ಮಿಯ ಪ್ರಗತಿ.

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

ಕೆಲಸದ ಫಲಿತಾಂಶ.		ಲೈಫ್ ಫಂಡ್
1925—	ರೂ 21,24,250	500
1929—	ರೂ 1,66,18,620	9,32,900
1934—	ರೂ ,46 77,223	49 08,771.

ಕ್ಲೈಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ ಕಂಪೆನಿಯ ಆಸ್ತಿ-57,00,000ಕ್ಕೆ ಮೀರಿದೆ. 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ ಲಾಭಹೊಂದಬೇಕಾಗಿದೆ ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ 'ಲಕ್ಷ್ಮಿ'ಯಲ್ಲಿವೆ

ಏಜಂಟರುಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co , Ltd ,
Madras Branch,
No 6, Sankuram Chetty St , G. T MADRAS

ದಿ ಲಕ್ಷ್ಮಿ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6, ಸಂಕುರಾಮ ಚೆಟ್ಟಿ ಬೀದಿ, ಜಿ. ಟಿ ಮದ್ರಾಸು

The Canara Banking Corporation Udipi, Ltd.

Head office: -UDIPI, S K (Incorporated in British India) Tel -'BANKING' **ESTD. 1906.**

Branches:—1. Udipi, 2 Coondapoor, 3 Car Street, Mangalore, 4 Shimoga, 5 Madras (George Town), **6 Bunder Mangalore, 7 Mercara** (North Coorg), **& 8 Virarajendrapet** (South Coorg)

Authorised, Issued & Subscribed Capital Rs	5,50,000—0—0
Paid-Up Capital	„ 2,69,795—0 0
Reserve & other Funds	„ 3,21,326—0—0
Investment on Goverment Securities	„ 6,77,059-15—0
Deposits	„ 25,47,463-13—6
Total Working Capital Exceeds	„ 36,00,000—0—0

Office of the Corporation Udipi, 10th July 1935

M. Shrinivas Prabhu,
Manager

Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ
ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು
ಇಲ್ಲಿಯ ವರೆಗಿನ ನಮ್ಮ ಎಲ್ಲಿಯುನಾ ವ ಕ್ತ ಕಂಪನಿಯ ಹುಳು
ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ
ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

Our Silver Jubilee Year! **Our Silver Jubilee Year!**

Messrs. KOCHIKAR BROTHERS (Estd 1910)

Branch Secretaries for Madras Presidency including India States

Chief Agents for Bombay City and Suburbs

The Bombay Life Assurance Co. Ltd.

Attractive Schemes of Assurances with rebate on annual premiums and additional rebate on larger assurances

Excellent Bonuses to Agents for Jubilee Year Business

IT PAYS YOU TO REPRESENT US

Wanted agents in unrepresented areas.

Apply to any of the following Offices —

P B N 337 Mount Road Madras	Visweswarapuram Circle Bangalore City	Huzur Road Calicut	Car Street, Mangalore	UDIPI S India	Ismail Bldg, Loharchawl, Bombay No 2

Karnataka Chemical and Pharmaceutical Works, Ltd, Udipi. (South India)

ಕರ್ಣಾಟಕ ಕೆಮಿಕಲ್ ಎಂಡ್, ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ' ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ
ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್ಹೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚು ಕಾಲ ಬಾಳುವುವು, ಖರ್ಚೂ ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ. ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ.

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)
ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲಿಂಟ್ಯಾನ್, ಅರೋರಾ ಕ್ರೀಮ್, ಕ್ರಿಮೊರ್ ಲಿಮೊಸಿಸ್, ಕರ್ಣಾಟಕ ರೋಸ ಪೌಡರ್
ಇದಲ್ಲದೆ ನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್‌ಪೇನು ಶಾಯಿಗಳೂ ಸಿದ್ಧವಾಗುವುವು

ಮೆನೇಜಿಂಗ್ ಡ್ಯಾರೆಕ್ಟರ್—ವೆಂಕಟ್ರಾಯ ಅಣ್ಣಪ್ಪ ಬಾಳಿಗ.

ಹೆಡ್ ಆಫೀಸು ಮತ್ತು ಕಾರಖಾನೆ – ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೋ –(1) ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2

ಏಜಂಟ್ಸ್— (2) 1/70 ನ್ಯಾನಪ್ಪ ನ್ಯಾಕನ ಬೀದಿ, ಜಾರ್ಜ ಟೌನ್ ಮದರಾಸ.

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

Edited, Printed & Published By A. S. Kamath at the Sharada Press, Car Street, Mangalore.

for Quality Snuff
H. Rama Rao and Sons.
High Class Snuff Manufacturers
Mangalore S I
ASK FOR –
RAMA SNUFF
The charm of Snuff Users

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your Family TODAY
Buy a policy in THE BOMBAY LIFE
Madras Branch Secretaries
Kochikar Brothers,
Udipi Mangalore Bangalore Madras, Bombay and Calicut

ESTABLISHED 1906
(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ಪುಸ್ತಕ ೨೯. ಮಂಗಳೂರು ತಾ. ೨೬ನೇ ಶುಕ್ರವಾರ ಜುಲಾಯಿ ೧೯೩೫ (26–7–'35) ಸಂಚಿಕೆ ೩೦

THE C. P. C. BUILDINGS.

The New Centre of Business

ನಮ್ಮ ಬಿಲ್ಡಿಂಗಿನಲ್ಲಿ ವಹಿವಾಟು ನಡೆಸುವವರು

ಎದುರು ಮಾರ್ಗದಲ್ಲಿ –

1 ಕಂಬೈಂಡ್ ಬುಕ್ಕಿಂಗ್ ಏಜನ್ಸಿ, ಇಲ್ಲಿ ಮಂಗಳೂರಿನಿಂದ ... ಗಳು ದೊರಕುತ್ತವೆ

2 ಚಡಗಪ್ಪ ... ಅಂಗಡಿ, ಇಲ್ಲಿ ... ಎಲ್ಲಾ ಸಾಮಾನುಗಳು ದೊರಕುತ್ತವೆ

3 ಸಿ ಪಿ ಸಿ ಕಂಪೆನಿಯ ಮೋಟರ್ ಸಾಮಾನುಗಳ ಮಾರಾಟದ ಅಂಗಡಿ, ಇಲ್ಲಿ ಇಲೆಕ್ಟ್ರಿಕ್ ಫಿಟ್ಟಿಂಗ್ಸ್ ಮತ್ತೆ ಸಾಮಾನುಗಳ ದೊರಕುತ್ತವೆ

4. ಜಯಲಕ್ಷ್ಮಿ ಸ್ಟೋರ್ಸ್, ಇಲ್ಲಿ ... ಮತ್ತು ಹಾರ್ಡ್‌ವೇರ್ ದೊರಕುತ್ತವೆ



Front View

ಎದು ಮಾರ್ಗದಲ್ಲಿ

Dr. M. S. Prabhu, M. B. B. S.
ಇವರ ಚಿಕಿತ್ಸಾಲಯ

ಹಿಂದೆ ಕೆಳಗಿನ ಭಾಗದಲ್ಲಿ –

ಶಿವರಾಮ ಕಾರಂತರ ಬ್ಲೋಕ್ ಮಾಡುವ
Process Studio

ಮಾಳಿಗೆಯಲ್ಲಿ –

1. ಬಿ ಶಾಂತಾರಾಮ್ ರಾವ್, (B. A.)
ಲೆಕ್ಕ ಪರಿಶೋಧಕರು.

2. United India Assurance Co., Ltd.
ಇನ್ಸೂರೆನ್ಸ್ ಕಂಪೆನಿ



Rear View

Photographed immediately after completion.

The Canara Public Conveyance Company Ltd., Kodialbail Mangalore.

ಚಕ್ರ

(All Rights Reversed)

ಓಹೋ! ಅಬ್ದುಲ್ ಘಫಾರ್ ಖಾನರೇ? ಏನಯ್ಯಾ, ಸೌಖ್ಯವೇ? ಇದೇನು ಗಡ್ಡ ಬೆಳೆದಿದೆ? ಮುಖವು ಸ್ವಲ್ಪ ಬಾಡಿದೆ?

× × × × × ×

ಮೊನ್ನೆ ಜವಾಹರಲಾಲರ ಮಾನಸಿಕ ಭೇಟಿಯೂ ಆಯಿತು. ನೋಡಿ! ಬಹಳ ಬಡವಾಗಿದ್ದಾರೆ, ಹಾಪ್ ನಾಸಿಗಳ ಧೈರ್ಯವನ್ನೀಗ ಅವರು ಇರುವುದಿಲ್ಲವಂತೆ ಈಗ ಅದರ ಅಗತ್ಯವು ಕಡಮೆಯಾಗಿದೆಯೆಂದು ತಿಳಿಸಿದರು.

× + × × × ×

ನಿಮ್ಮನ್ನು ಸೆರೆಯೊಳಗಿಂದ ಬಿಡಲೇ ಬೇಕೆಂದು ಹಲವರು ಹಲವು ರೀತಿಯಿಂದ ಯತ್ನಿಸುತ್ತಿರುವರಲ್ಲ! ಏಕೆಂದು ನನಗೆ ತಿಳಿಯದು! ಇಷ್ಟು ಸುಖದಲ್ಲಿ ನೀವಿರುವಾಗ ನೀವು ಹೊರಗೆಹೋಗಿ ಬಿಸಿಲಲ್ಲಿ ಏಕೆ ಬೀಳಬೇಕೋ ನನಗೆ ತಿಳಿಯದು!

× × × × × ×

ನೀವು ಹೊರಗಿರುವುದಾದರೆ ನಿಮಗೆ ನೂರಾರು ಪತ್ರಿಕೆಗಳು ಓದಲು ಸಿಗುತ್ತವೆ. ಅವುಗಳನ್ನು ಅನಿವಾರ್ಯವಾಗಿ ಓದಿ ತಲೆ ಹಾಳುಮಾಡಿಕೊಳ್ಳಬೇಕಾಗುತ್ತದೆ ಅದೇ ರೀತಿ, ನೀವು ಹೊರಗಿರುವುದಾದರೆ ಹಲವು ಮಿತ್ರರಿಗೆ ಹಲವು ಸಾವಿರ ಕಾಗದಪತ್ರಗಳನ್ನು ಬರೆದು, ಹಲವು ರೂಪಾಯಿಗಳನ್ನು ಅಂಚೆ ಆಫೀಸಿಗೆ ಅರ್ಪಿಸಬೇಕಾಗುತ್ತದೆ. ನೋಡಿ ಎಷ್ಟು ವೆಚ್ಚ! ಯಾರಿಗೆ ಬೇಕು ಈ ನಷ್ಟ?

× × × × × ×

ನಿಮ್ಮನ್ನು ಮನೆಗೆ ಹೋಗಗೊಡದಿರುವುದರಿಂದ ಎಷ್ಟೊಂದು ಪ್ರಯೋಜನವಿದೆಯೆಂದು ತಿಳಿದಿರುವಿರಾ! ಮನೆಯ ಹೆಂಗಸರು ಮಕ್ಕಳ ಆರೋಗ್ಯದ ಕುರಿತು ಯೋಚಿಸುವ ಆದೊಂದು ದೊಡ್ಡ ಕೆಲಸದ ಭಾರವೇ ನಿಮಗೆ ಇಲ್ಲ! ನೇರಾಗಿ ಈ ಹೊತ್ತು ಅಕ್ಕಿ ಇಲ್ಲ, ನಾಳೆ ದಾಳಿ ಇಲ್ಲ, ನಾಡಿದು ಮೆಣಸು ಇಲ್ಲ - ಎಂಬ ಗೃಹಚ್ಛಿದ್ರಗಳ ಕುರಿತಾಗಿ ಯೋಚಿಸುವ ಕೆಲಸವೇ ಇಲ್ಲ ನೋಡಿ!

× × × × × ×

ಅದರಮೇಲೆ, ಈ ಹೊತ್ತು ಆ ಸಭೆಯಲ್ಲಿ ಭಾಷಣ, ನಾಳೆ ಈ ಸಭೆಯಲ್ಲಿ ಭಾಷಣ ಮಾಡಿ ಒಳ್ಳೆಮೆಣಸಿನ ಕಷಾಯ ಕುಡಿಯುವುದೋ, ಎದೆಕರಗಿಸಿಕೊಳ್ಳುವುದೋ ಇವೇ ಮೊದಲಾದ ಚಿಲ್ಲರೆ ಕೆಲಸಗಳೂ ಇಲ್ಲ ನೋಡಿ!

× × × × × ×

ಸರಕಾರಕ್ಕೆ ನಿಮ್ಮ ಮೇಲೆ ಪ್ರೀತಿ ಇಲ್ಲ, ಪ್ರೀತಿ ಇಲ್ಲ ಎಂದು ಹೇಳುವವರೆಷ್ಟೋ ಮಂದಿ. ಎಂತಹ ಸುಳ್ಳು! ಎಂತಹ ಮೌಢ್ಯ! ನಿಮ್ಮಂತಹ ಪ್ರತಿಭಾಸಂಪನ್ನರು ಭಾಷಣಮಾಡಿ ಕ್ಷಯರೋಗಕ್ಕೆ ತುತ್ತಾಗಬಾರದೆಂಬ ಆರಾಧೆಯಿಂದ ನೀವು ಎಲ್ಲಿಯಾದರೂ ಭಾಷಣಕೊಟ್ಟಿರೆಂದರೆ ಸಾಕು - ನಿಮ್ಮನ್ನು ಹಿಡಿದು ಸೆರೆಗೆ ತಗೆಗೊಯ್ಯುತ್ತಾರೆ

× + × × × ×

ಅರಮನೆಗೂ ಸೆರೆಮನೆಗೂ ಏನು ವ್ಯತ್ಯಾಸ? ಸೆರೆಯನ್ನು ಅರಮನೆ ಮಾಡಿದರೆ ಅದೂ ಒಂದೇ ಇದೂ ಒಂದೇ!

× × × × × ×

ಈಗ ನಮ್ಮ ಚಕ್ರವರ್ತಿಗಳಿದ್ದಾರಲ್ಲ! ಅವರದೇನು ಅರಮನೆಯೇ? ಅವರ ಸ್ವಾತಂತ್ರ್ಯವನ್ನು ಪಾರ್ಲಿಮೆಂಟು ಚೆನ್ನಾಗಿ ನಿರ್ಬಂಧಿಸಿಕೊಂಡಿದೆಯಂತೆ ಹಾಗಿರುವಾಗ ಅವರ ಅರಮನೆ ಅರಸುಮನೆಯೋ ನೀವೇ ಹೇಳಿ!

× × × × × ×

ಜವಾಹರಲಾಲರಂತೆ ನಿಮ್ಮ ಮಾಂಸವೂ ಕರಗಿ ಹೋಗಿದೆಯೆಂದು ಊರೆಲ್ಲೆಲ್ಲಾ ಟೊಳ್ಳು! ಎಂತಹ ಹೊಟ್ಟೆಕಿಚ್ಚಯ್ಯಾ ಈ ಜನರಿಗೆ! ನಿಮ್ಮನ್ನು ಸುಖದಿಂದಿರಲೂ ಬಿಡರು.

+ × × × × ×

ನಿಮ್ಮ ಆರೋಗ್ಯಾಭಿವೃದ್ಧಿಯಾಗಲೆಂದು ನಾನು ಹಾರೈಸುವೆನೆಂದು ನಿಮಗೆ ಖಂಡಿತ ತಿಳಿಸುತ್ತೇನೆ ಇನ್ನೊಮ್ಮೆ ಯಾವಾಗಲಾದರೂ ಪುರುಸೊತ್ತಾದರೆ ಬರುತ್ತೇನೆ 'ಗುಡ್‌ನೈಟ್'!

'ಸಾಧ್ಯ'.

ಮಕ್ಕಳನ್ನು ಬಲಿಷ್ಠರನ್ನಾಗಿಯೂ ಆರೋಗ್ಯಶಾಲಿಗಳನ್ನಾಗಿಯೂ ಮಾಡುವುದಕ್ಕೆ ಅವರಿಗೆ 'ಓವಲ್ಟಿನ್'ನನ್ನು ದಿನನಿತ್ಯದ ಪಾನೀಯವನ್ನಾಗಿ ಕೊಡುವುದೊಂದಲ್ಲದೆ ಬೇರೆ ನಿಶ್ಚಿತದಾರಿಯಿಲ್ಲ 'ಓವಲ್ಟಿನ್'ನಲ್ಲಿ ಪ್ರಕೃತಿಸಿದ್ಧವಾಗಿರುವ ದೇಹವರ್ಧಕ ಆಹಾರ ಸಾರವಿದೆ ಇದು ಮಕ್ಕಳ ಆರೋಗ್ಯ, ಶಕ್ತಿ, ಮೇಧಾಶಕ್ತಿ, ಸ್ನಾಯುಶಕ್ತಿ, ದೇಹಶಕ್ತಿಗಳಿಗೆ ಬೇಕಾದ ಪೋಷಣಾಸಾರಗಳನ್ನೊದಗಿಸಿಕೊಡುತ್ತದೆ 'ಓವಲ್ಟಿನ್'ನ ಸೇವನೆಯೆಂದರೆ ದೇಹದಾರ್ಢ್ಯಕ್ಕೆ ಪಂಚಾಂಗ ವಿಟ್ಟಂತೆ

'ಓವಲ್ಟಿನ್'ನನ್ನು ಎಲ್ಲಾ ಪ್ರಾಯದ ಮಕ್ಕಳೂ ಮೆಚ್ಚುತ್ತಾರೆ. ಅದರ ರುಚಿಕರವಾದ ಪರಿಮಳವನ್ನು ಅವರು ಆಸ್ವಾದಿಸಲಾಶಿಸುತ್ತಾರೆ ತಮ್ಮ ಮಕ್ಕಳಿಗೆ ಇದನ್ನು ಕೊಡುವ ತಾಯಂದಿರು ಇದರ ಸತ್ಪರಿಣಾಮವನ್ನು ಕಂಡುಕೊಳ್ಳುವರು ಹಸುಳೆಗಳಿಗೆ ಧಾರಾಳ ಪೋಷಣವಿತ್ತು ದಿನೇ ದಿನೇ ಅವರನ್ನು ಬೆಳೆಸಿ ರಾತ್ರೆ ನಿದ್ರೆಕೊಡುತ್ತದೆ

ನಿಮ್ಮ ಚಹಕ್ಕೆ 'ಓವಲ್ಟಿನ್' ಸೇರಿಸಿರಿ, — ಅದು ಆರೋಗ್ಯಕರ, ಬಲವರ್ಧಕ ಮತ್ತು ಶಕ್ತಿದಾಯಕ

"ಓವಲ್ಟಿನ್"

ಮಿದುಳು, ನರ, ದೇಹಗಳನ್ನು ಬೆಳೆಸುತ್ತದೆ.

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ದೊರೆಯುತ್ತದೆ

ಏಜಂಟ್ — ಜೇಮ್ಸ್‌ರೈಟ್ ೧೨ಎ. ರಿಶನ್ ಸ್ಟ್ರೀಟ್, ಕಲ್ಕತ್ತಾ, ಮತ್ತು ಮುಂಬಾಯಿ, ಮದ್ರಾಸು

OV/325

ತಯಾರಾಗಿದೆ!

ಗೌ। ಹಾ। ಎ। ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

ಸಮಾಜಶಾಸ್ತ್ರ

ಅಥವಾ

ಸೊಸಿಯೊಲೊಜಿ.

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ ಇದನ್ನು ಗಳಿಕರ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ

ಏಳನೇ ಮತ್ತು ಎರಡನೇ ದರ್ಜೆಗಳ ಸಮಾಜಶಾಸ್ತ್ರವು ಅಚ್ಚಿನಲ್ಲಿದೆ

ಆರು, ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುವು.

ಇಲ್ಲಿಗೆ ಕೂಡಲೇ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

Ested 1920] **THE** [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು.

ಠೇವಣಾತಿಗಳ ದರ

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur,
Dated 10—4—1935.

G. N. Lakshman Pai,
Secretary.

ಸಾಹಿತ್ಯ ಸಂಗ್ರಹ.

ಚೀನೀಯ ಸಾಹಿತ್ಯ.

ಜಗತ್ತಿನ ಪ್ರಾಚೀನ ಸಾಹಿತ್ಯಗಳಲ್ಲಿ ಬೌದ್ಧ ಕಾಲೀನ ಸಾಹಿತ್ಯವನ್ನು ಪ್ರಶಂಸಿಸಿ ಶ್ರೀ ಎಸ್. ತಾಚಿಬಾನೋ ಎಂಬವರು 'The Young East' ಎಂಬ ಪತ್ರಿಕೆಯಲ್ಲಿ ಹೀಗೆಂದು ಬರೆದಿರುತ್ತಾರೆ ....

ನಮ್ಮ ಕಾಲಮಾನಕ್ಕೆ ಬಂದಮಟ್ಟಿಗೆ ಬುದ್ಧನ ಉಪದೇಶಗಳನ್ನೆಲ್ಲ ಮೊದಲಾಗಿ ಪಾಲಿ ಮತ್ತು ಸಂಸ್ಕೃತ ಭಾಷೆಗಳಲ್ಲಿಯೂ ಮತ್ತು ಇನ್ನಿತರ ಕೆಲವು ಭಾಷೆಗಳಲ್ಲಿಯೂ ಬರೆದಿಟ್ಟಿದ್ದರು. ಈ ಭಾಷೆಗಳಿಂದಲೇ ಅದನ್ನು ಸೋಗ್ದಿಯಾನಾ, ಖೋಟನ್, ಕುಚಾ ಎಂಬ ಮಧ್ಯ ಏಶಿಯಾ ಖಂಡದ ಭಾಷೆಗಳಲ್ಲಿ ತರ್ಜುಮೆಮಾಡಿಕೊಳ್ಳಲಾಯಿತು. ಈ ಭಾಷೆಗಳಲ್ಲಿ ಬರೆದಿಡಲ್ಪಟ್ಟಿರುವ ಹೆಚ್ಚಿನ ಶಿಷ್ಟಲೇಖಗಳು ಈಗ ಕಳೆದುಹೋಗಿವೆ. ಪಾಲಿ ಭಾಷೆಯಲ್ಲಿ ಮತ್ತು ಸಂಸ್ಕೃತ ಭಾಷೆಯಲ್ಲಿ ಒಂದು ಭಾಗ-ಇಷ್ಟು ಮಾತ್ರ ಈಗ ಸಿಗುತ್ತದೆ. ಚೀನೀಯ ಬೌದ್ಧಶಾಸ್ತ್ರಗಳೆಲ್ಲ ಮಧ್ಯ ಏಶಿಯಾದ ಈ ಭಾಷೆಗಳಲ್ಲೇ ಬರೆಯಲ್ಪಟ್ಟವು. ಚೀನೀಯ ಭಾಷೆಯಿಂದಲೇ ಈ ಶಾಸ್ತ್ರಗಳನ್ನು ಟಿಬೇಟಿಯನ್ ಭಾಷೆಗೆ ಪರಿವರ್ತಿಸಿಕೊಳ್ಳಲಾಯಿತು. ಮಂಗೋಲಿಯನ್, ಮಂಚೂರಿಯನ್ ಮತ್ತು ಅಧುನಿಕ ಚೀನೀಯ ಭಾಷೆಗಳಿಗೆ ಈ ಶಾಸ್ತ್ರಗಳನ್ನು ಟಿಬೇಟಿಯನ್ ಭಾಷೆಯಿಂದಲೇ ತರಲಾಯಿತು. ಟಿಬೇಟಿಯನ್ ನಮೂನೆಯ ಬೌದ್ಧಧರ್ಮವು ಲಾಮಾ ಧರ್ಮವನ್ನೇ ಅನುಕರಿಸಿ ಪ್ರತ್ಯೇಕವಾದಂತೆ ಕಾಣುತ್ತದೆ. ಬುದ್ಧನ ಉಪದೇಶದ ಪ್ರಥಮ ಕಾಲೀನ ಭಾಗವು ಮೂಲದ ಪಾಲಿಯಲ್ಲಿ ಕಳೆದು ಹೋಗಿರುವುದನ್ನು ಗಮನಿಸಿದರೆ ನಮಗೆ ಚೀನೀ ಭಾಷಾಂತರ ಪ್ರತಿಯೊಂದು ಸಿಗುವುದು. ಪಾಲಿ, ಟಿಬೇಟಿಯನ್ ಮತ್ತು ಚೀನೀಯ ಭಾಷೆಗಳಲ್ಲಿ ಬರೆದ ತ್ರಿಪಿಟಕ ಗ್ರಂಥಗಳು ಕೊನೆಯ ಭಾಷೆ, ಅಂದರೆ ಚೀನೀ ಭಾಷೆಯಲ್ಲಿ ಬರೆಯಲ್ಪಟ್ಟಿರುವ ಗ್ರಂಥವೇ ಪ್ರಾಮಾಣ್ಯವಾದುದು. ಚೀನೀಯ ಬೌದ್ಧಸಾಹಿತ್ಯವು ಸಜೀವವಾಗಿರುವ ಪವಿತ್ರ ಸಾಹಿತ್ಯಗಳನ್ನೆಲ್ಲ ಕಡೆಗಾಣಿಸುತ್ತದೆ. ಅದು ಬಹು ವಿಸ್ತಾರವಾದುದು ಮತ್ತು ವೈವಿಧ್ಯವುಳ್ಳದ್ದು. ಒಂದು ಸಾಹಿತ್ಯವನ್ನು ಇನ್ನೊಂದರೊಡನೆ ತುಲನೆಮಾಡಿ ನೋಡುವುದು ಸುಲಭವಲ್ಲ. ಆದರೆ ಚೀನಾಸಾಹಿತ್ಯದ ಮಟ್ಟಿಗೆ ಹೇಳುತ್ತೇವಾದರೆ ಅದು ಪಾಲಿಗಿಂತ ೧೦ ಪಾಲು ದೊಡ್ಡದೆಂದು ಹೇಳಬೇಕಾಗುವುದಿಲ್ಲ. ಬುದ್ಧನ ಸ್ವಂತ ಬೋಧೆಗಳನ್ನೊಳಗೊಂಡಿರುವ ಕೃತಿಗಳೇ ಈ ಭಾಷೆಯಲ್ಲಿವೆ. ಅಲ್ಲದೆ ಅವನ ಶಿಷ್ಯರಿಂದ [illegible] ಅನೇಕ ಕೃತಿಗಳೂ ಇವೆ. ಅರ್ವಾಚೀನ ಕಾಲದ ಪ್ರಖ್ಯಾತ ಟೀಕಾಕಾರ ಕೃತಿಗಳೂ ಇವೆ.

ಬಂಗಾಲಿ ಸಾಹಿತ್ಯದಲ್ಲಿ ವಾಸ್ತವಿಕತೆ.

(Realism), ರಂಜಕ ಸಾಹಿತ್ಯವು (Romantic Literature) ಜೀವನದ ಯಾವುದೇ ಒಂದು ಉದ್ದೇಶವನ್ನೇ ಲಕ್ಷ್ಯದಲ್ಲಿಟ್ಟುಕೊಂಡು ಮಿಕ್ಕುದನ್ನು ಮರೆತು ತಲ್ಲೀನವಾಗಿ ನಡೆಯುತ್ತ, ನಡೆಯುತ್ತ ಅನುಭವವಿರುದ್ಧವಾದ ವಿಷಯಗಳನ್ನು ಕುರಿತು ಹೇಳುವುದಕ್ಕೂ ಆರಂಭಿಸುತ್ತದೆ. ಈ ಜಗತ್ತಿನ ಪೂರ್ವ ದೇವರು ಸಿನ್ನೆಯ ದೇವರುಗಳಾಗಿದ್ದರು ತಮಗೆ ಅಧಿಕಾರವಿದ್ದಾಗ ಜಗತ್ತನ್ನೇ ಕಟ್ಟಬೇಕೆಂದು ಯತ್ನಿಸಿದರು, ತಾವೇ ಕಟ್ಟಳೆಯಾದರು. ಹಾಗೆ ಜೀವನವನ್ನೆಲ್ಲ ಒಂದೇ ಅಚ್ಚಿಗೆ ಹಾಕಿ ಮುದ್ರೆಯೊತ್ತುವ ಪ್ರಯತ್ನವು ಎಂದಿಗೂ ಸಫಲವಾಗುವುದಿಲ್ಲ. ಯಾವುದನ್ನು ತಿರಸ್ಕರಿಸಿ ನಾವು ಹೊರದೂಡುವೆವೋ ಅದೇ ಪ್ರತಿಭಟಿಸುತ್ತದೆ, ಗೌರವಿಸಬೇಕೆಂದು ಮೊರೆಯಿಡುತ್ತದೆ. ಹೋರಾಟದ ಹೊಡೆದಾಟದಲ್ಲಿ ಸುರಿಸುರಿದು ಬಲಿಷ್ಠವಾಗಿ ತನ್ನನ್ನು ತುಳಿದಿದ್ದವನನ್ನು ತುಳಿಯುತ್ತದೆ.

ವಂಗಸಾಹಿತ್ಯದಲ್ಲಿ ಆಗುತ್ತಿರುವುದು ಇದು. ಇದುವರೆಗೆ ನಾವು ತಿರಸ್ಕಾರದಿಂದ ತುಳಿದಿಟ್ಟಿದ್ದ ಕಾಮವಾಸನೆಗಳಿಗೂ ಕಾಮಚಿಂತನೆಗಳಿಗೂ ಈಗ ತಮ್ಮ ವಿಚಿತ್ರಪಿಶಾಚ ನರ್ತನಕ್ಕೆ ಆರಂಭಿಸಿವೆ. ಜೀವಿತದಲ್ಲಿ ಕಾಮವಾಸನೆಗೆ, ಕಾಮತೃಪ್ತಿಗೆ ಎಡೆಯುಂಟು. ಆದರೆ ಅದೇ ಪ್ರಧಾನವಾದದ್ದು, ಅದನ್ನು ಬಿಟ್ಟರೆ ಇನ್ನಿಲ್ಲ, ಎಂದಾದರೆ ಅದು ಅವಾಸ್ತವ.

ಈ ದೃಷ್ಟಿಯಿಂದ ಇತ್ತೀಚಿಗಿನ ಸಾಹಿತ್ಯವು ಅವಾಸ್ತವದ ಹಾದಿಯಲ್ಲಿ ನಡೆಯುತ್ತಿದೆಯೆನ್ನಬಹುದು. ಸಾಹಿತ್ಯದ ಹಿಂದಿನ ವಿಷಯಪ್ರಪಂಚವನ್ನು ಬಿಟ್ಟು ಮಿಕ್ಕೆಲ್ಲದರಲ್ಲಿ ಲೀನವಾಗಿದ್ದುದರ ಬದಲು ಈಗ ವಿಷಯಪ್ರಪಂಚದಲ್ಲಿ ಲೀನವಾಗುತ್ತಿದೆಯೆಂಬುದು ಅಧುನಿಕದ ಮನಸ್ಸಿಗೆ ಬಂದಿಲ್ಲ. ಹಿಂದಿನ ಮೃದುಮಧುರ ಜೀವಿತದ ಚಿತ್ರಗಳಿಗೆ ಬದಲಾಗಿ ಕಾರಾಗೃಹದ ಕಿಡುಕಿನ ವಿಲಕ್ಷಣ ಚಿತ್ರಗಳು ಬರುತ್ತಿವೆ. ಜೀವನವೆಲ್ಲ ಮೃದುಮಧುರವೇ ಅಲ್ಲ. ಹಾಗೆಯೇ, ಜೀವನವು ಕೇವಲ ಕುರೂಪವೂ ಕೆಟ್ಟದೂ ಅಲ್ಲ. ಜೀವನವೆಂದರೆ ಇವೆರಡೇ ಎಂದು ಹೇಳುವುದೂ ಒಂದನ್ನು ಮರೆತು ಇನ್ನೊಂದರಲ್ಲಿ ಲೀನವಾಗುವುದೂ ಜೀವನದ ಚಿತ್ರದ ಬೆಳಕು ಕತ್ತಲೆಗಳನ್ನು ಮರೆತಂತೆ, ಅದರ ವಿಚಿತ್ರತೆಯ ಸೌಂದರ್ಯವನ್ನೇ ಅಳಿಸಿದಂತೆ, ಅದೂ ಅವಾಸ್ತವದ ಒಂದು ಸ್ವರೂಪ.

ಇದನ್ನೇ ಇನ್ನೊಂದು ದೃಷ್ಟಿಯಿಂದ ನೋಡೋಣ. ಕಾಮೋಪಚಾರದಲ್ಲಿ ತೋರಿಬರುವ ವಿಷಮೋತ್ಸಾಹವು, ನಮ್ಮ ಕಣ್ಣ ಮುಂದೆಯೇ ಕಂಡುಬರುವ ಬಡತನ, ಅನಾರೋಗ್ಯ ಅವ್ಯವಸ್ಥೆ ಮೊದಲಾದ ಅಭಾವದ ಕಡೆಗೆ ಓಡುವುದೆ? ದೇಶದ ಸಾಹಿತ್ಯದಲ್ಲಿ ದೇಶದ ಅಧೋಗತಿ, ರಾಜಕೀಯ ದುರ್ಗತಿಗಳು ರೂಪುಗೊಂಡಿವೆಯೋ? ದೇಶದ ಆಂದೋಲನವು ಸಾಹಿತಿಗಳ ಕಣ್ಣಿಗಾದರೂ ಬಿದ್ದಿದೆಯೋ? ರಾಜಕೀಯಾಂದೋಲನವು ಸಾಹಿತ್ಯಕ್ಕೆ ವಸ್ತುವಲ್ಲವೆಂದು ಆಕ್ಷೇಪಿಸಬಹುದು. ಆದರೆ ಜನಾಂಗದ ಹೃದಯದ ಅಂತರಾಂತರದಿಂದ ಎದ್ದು ಬರುತ್ತಿರುವ ಆಶೋತ್ತರಗಳನ್ನು ಅಧುನಿಕ ಸಾಹಿತ್ಯದಲ್ಲಿ ಚಿತ್ರಿಸದಿದ್ದರೆ ಹೇಗೆ? ಕಲಾವಂತನೂ ಸಾಹಿತಿಯೂ ಪರಿಸ್ಥಿತಿಯ ಸ್ವರೂಪವನ್ನು ಅರಿತು ಬದಲಿಸುವ ಕೆಲಸ ಪಕ್ಷದವರಿಗಾಗಲೀ [illegible] ಅದಿಲ್ಲದೆ ಪರಿಸ್ಥಿತಿಯನ್ನು ಅರಿಯಲಾರದವರ ಕೃತಿಗಳನ್ನು ನಾವೇನೆನ್ನಬೇಕು? ಈ ಅವಾಸ್ತವಿಕತೆಯು ನಮ್ಮಲ್ಲಿ ಅನೇಕ ರೂಪದಿಂದ ನೆಲಸಿದೆ. ರಾಜಕೀಯ ದಾಸ್ಯವೂ ಇದಕ್ಕೊಂದು ಕಾರಣ. ನಾವು ಈಗಿರುವ ಸ್ಥಿತಿಯನ್ನು ಸಹಿಸಲಾರದೆ ನಮ್ಮ [illegible]ಗಳನ್ನು ನೋಡಲಾರದೆ, ಈ ಅವಾಸ್ತವ ಸಾಹಿತ್ಯದ ಕನಸಿನಲ್ಲಿ ಒಂದು ಗಳಿಗೆಯಾದರೂ ಮರೆಯಾಗಿರಬೇಕೆನ್ನುತ್ತೇವೆ. ನಮ್ಮಲ್ಲಿ ನಮಗೆ ನಂಬಿಗೆ ಇಲ್ಲ. ಆದರಿಂದಲೇ ನಾವು ಪಿಸ ಶೇಗೆ [illegible]ದಾಗಿಲ್ಲ. ಪ್ರಾಚೀನ ವೈಭವವನ್ನು ಕುರಿತ ಅಭಿಮಾನ, ಭವಿಷ್ಯತ್ತಿನ ವೈಭವದ ಸ್ವಪ್ನ—ಈ ಎರಡರಲ್ಲಿ ಮಗ್ನರಾಗಿ ಕೇವಲ ವರ್ತಮಾನ ಪ್ರಪಂಚದ ಕಷ್ಟನಷ್ಟಗಳನ್ನು ಗಮನಿಸದ ಭ್ರಾಂತಿಯಲ್ಲಿದ್ದೇವೆ. ಇದರ ಫಲವಾಗಿ ಸಾಹಿತ್ಯದಲ್ಲಿ, ಅದರಲ್ಲೂ ನಾಟಕದಲ್ಲಿ ಈ ಅವಾಸ್ತವಿಕತೆಯು ಎದ್ದು ಕಾಣುತ್ತದೆ. 'Triveni'

ಸೊಂಟದ ಮಾದಿನೂರು.

ಶ್ರೀ ಪಾಂಡುರಂಗರಾವ್ ಭೀಮರಾವ್ ದೇಸಾಯಿ ಇವರು ಕರ್ನಾಟಕ ಇತಿಹಾಸ ಸಂಶೋಧಕ ಮಂಡಳ ಧಾರವಾಡ, ಇವರಿಂದ ಪ್ರಕಾಶಿತವಾದ ಪ್ರಾಚೀನ ಕರ್ನಾಟಕದ ಎರಡನೆಯ ಸಂಚಿಕೆಯಲ್ಲಿ ಹೀಗೆ ಬರೆದಿರುವರು "ಮಾದಿನೂರು ಈಗೊಂದು ಹಳ್ಳಿ. ಕೊಪ್ಪಳದ ಉತ್ತರಕ್ಕೆ ನಾಲ್ಕು ಮೈಲು ಭಕ್ತಿವೈರಾಗ್ಯ ಖನಿಯಾದ ಶ್ರೀ ಭಾಗವತ ರಹಸ್ಯವನ್ನು ಸಾರರೂಪದಿಂದ ತೆಲುಗಿನಿಂದ ಕನ್ನಡಿಗರಿಗೆ ಉಪಕಾರದ ಮಾರ್ಗವನ್ನು ತೋರಿಸಿಕೊಟ್ಟು ಸಾರೋದ್ಧಾರನೆಂಬ ಸುಧಾಸಾರವಾದ ಅಸಾಮಾನ್ಯ ಗ್ರಂಥರತ್ನವನ್ನು ನಿರ್ಮಿಸಿದ ಶ್ರೀ ವಿಷ್ಣುತೀರ್ಥ ಉಪಾಸಕರ (ಕ. ೧೭೬೬–೧೮೦೯) ವೃಂದಾವನವು ಇಲ್ಲಿ ಇರುವುದರಿಂದ ವಿಶಿಷ್ಟ ಮಾಧ್ವಸಮಾಜಕ್ಕೆ ಈ ಊರು ಈಗಲೂ ಪುಣ್ಯಭೂಮಿಯೂ ಯಾತ್ರಾಸ್ಥಳವೂ ಆಗಿದೆ. ಆದರೂ ಇತರರಿಗೆ ಈಗ ಈ ಊರು ತೀರ ಅಪ್ರಸಿದ್ಧವೇ ಎಂದು ಹೇಳಬಹುದು. ಆದರೆ ಬಹು ಕಾಲದ ವರೆಗೆ ಅಗ್ರಹಾರವೆಂಬ ಧಾರ್ಮಿಕ ವೈಭವದಿಂದಲೂ ಕೆಲಕಾಲದ ವರೆಗೆ ರಾಜಧಾನಿಯಾಗಿ ರಾಜಕೀಯ ವೈಭವದಿಂದಲೂ ಮೆರೆದು, ಇತಿಹಾಸಕಾಲದಲ್ಲಿ ಕರ್ನಾಟಕದ ಸುಪ್ರಸಿದ್ಧವಾದ ಹಿರಿಯರ ಮನೆತನಗಳ ಆಶ್ರಯಸ್ಥಾನವಾದ ಈ ಊರ ಲಕ್ಷ್ಯವು ಉಪೇಕ್ಷಣೀಯವಾದುದಾಗಿಲ್ಲ. ಅಲ್ಲದೆ ಆಧುನಿಕ ಸಂಶೋಧನ ಕಿರಣಗಳಿಂದ ಕರ್ನಾಟಕದ ಕತ್ತಲೆಗವಿದ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಬೆಳಕಾದಿದ್ದು ಇತಿಹಾಸದ ಹೊಸ ಹೊಸ ಸಂಗತಿಗಳು ಬೆಳಕಿಗೆ ಬರುತ್ತಿರುವುದರಿಂದ ಯಾವುದೇ ಐತಿಹಾಸಿಕ ಅಂಶವನ್ನು ಕ್ಷುಲ್ಲಕವೆಂದು ಕಡೆಗಣಿಸಬಾರದಂತೆ ಇದ್ದು. ಉದಾಹರಣಾರ್ಥವಾಗಿ ಸುಪ್ರಸಿದ್ಧ ಜೈನ ಪುಣ್ಯಕ್ಷೇತ್ರ ಕೊಪಣವೆಂದು ಸಿದ್ಧವಾದ ಕೊಪ್ಪಳದ ಶಿಲಾಹಾರದ ಒಂದು ಶಾಖಾ ಮನೆತನವು ಕೆಲಕಾಲ ಪ್ರಾಂತ್ಯದಲ್ಲಿ ಆಳುತ್ತಿದ್ದ ಬಗ್ಗೆ ಕೆಲವು ಶಾಸನಗಳು ಈ ಪ್ರಾಂತ್ಯದಲ್ಲಿ ದೊರಕಿವೆ. ಕಲಚೂರ್ಯರು ಕರ್ನಾಟಕದಲ್ಲಿ ಆಳಿದ್ದೇನೋ ಅಲ್ಪ ಕಾಲವಾಗಿದ್ದರೂ ಅವರು ಕರ್ನಾಟಕದ ಇತಿಹಾಸದಲ್ಲಿ ತಾಳಿದ ಬಾಳಿದ್ದು ಮಾತ್ರ ಅಲ್ಪವಾಗಿಲ್ಲ. ಇದಕ್ಕೆ ಅವರ ಆಳ್ವಿಕೆಯ ಅಲ್ಪಾವಧಿಗೆ ಅತಿ ಹಿರಿದ ಪ್ರಮಾಣದಲ್ಲಿ ಸಿಗುವ ಅವರ ಶಾಸನಗಳೇ ಸಾಕ್ಷಿ. ಹೇಗೆಯೇ ಆಗಲಿ, ಸಂಪಾದಿಸಿದ ರಾಜ್ಯವನ್ನು ಧರ್ಮದಿಂದ ಆಳಿದುದು ಅವನಿಗೆ ಭೂಷಣವೇ. ಬಿಜ್ಜಳನ ಹಾಗೂ ಅವನ ಮಕ್ಕಳ ಮೂವತ್ತು ವರ್ಷಗಳ ಆಳಿಕೆಯ ಅವಧಿಯಲ್ಲಿ ಅವರು 'ಧರ್ಮ'ವನ್ನು ನೆಲೆಗೊಳಿಸಿದ ಶಾಸನಗಳು ಅನೇಕ ಸ್ಥಳಗಳಲ್ಲಿ ಹೇರಳವಾಗಿ ದೊರೆಯುವುವು. ಬಿಜ್ಜಳನ ಮಕ್ಕಳಾದ ರಾಯಮುರಾರಿ ಸೋವಿದೇವ, ಸಂಕಮ ಮುಂತಾದವರ ಶಾಸನಗಳಲ್ಲಿ ಅವರ ರಾಜಧಾನಿಯು ಉಲ್ಲೇಖಿತವು "ಸೊಂಟದ ಮಾದಿನೂರು ಕುಪ್ಪದ" "ಮೊದಗನೂರ ಬೆಳವಡಿನೋಳ್" ಎಂದು ಬಹಳ ಬಾರಿ ಬರೆಯಲ್ಪಡುವುದು. ಈ ಸ್ಥಳದ ಕಡೆಗೆ ಇತಿಹಾಸಕರ ಲಕ್ಷ್ಯವು ಇದುವರೆಗೆ ಸಾಕಷ್ಟು ಹೋದಂತೆ ತೋರುವುದಿಲ್ಲ.

ಭರತ ನಾಟ್ಯ (ನೃತ್ಯಕಲೆ)

ಶ್ರೀಮಾನ್ ಟಿ. ಶೇಷಗಿರಿಯವರು ಕಲಾ ಮಾಸಪತ್ರಿಕೆಯಲ್ಲಿ ಈ ಶಿರೋನಾಮೆಯಿಂದ ಪ್ರಕಟಿಸಿದ ಲೇಖನವು ರಂಜನೀಯವಿದೆ "ಭರತ ನಾಟ್ಯವು ಅಂದರೆ ಶಾಸ್ತ್ರೀಯವಾದ ನೃತ್ಯವು. ನಮ್ಮ ಪ್ರಾಚೀನ ಸಂಸ್ಕೃತಿಯ [illegible] ಪ್ರಾಚೀನ ಭಾರತದ ಜೀವನದಲ್ಲಿ ನೃತ್ಯವು ಒಂದು ಮುಖ್ಯ ಭಾಗವಹಿಸಿದ್ದಿತು. ಇಂತಹ ಉತ್ಕೃಷ್ಟ ಕಲೆಯು ತಾನೆ ಜನ್ಮಧಾರಣವಾದಿದ ಭೂಮಿಯಲ್ಲಿಯೆ [illegible] ಬರುತ್ತಿರುವುದು ಒಂದು ವಿಷಾದ ಪ್ರಸಂಗ. ಈ ನೃತ್ಯಕಲೆಯು ಶಿವ ಕೃಷ್ಣ ಪಾರ್ವತಿ ಲಕ್ಷ್ಮಿ ಮುಂತಾದ ದೇವದೇವಿ ಮತ್ತು ಉಷಾ ಉತ್ತರೆ ಮತ್ತು ಮಾಳವಿಕ ಮುಂತಾದ ರಾಜಕುಮಾರಿಯರ ಜೀವನದೊಡನೆ ಬೆರೆತುಕೊಂಡಿದ್ದುದು. ಅಲ್ಲದೆ ನಾಟ್ಯಶಾಸ್ತ್ರದೊಡನೆ ಏಕ್ಯತೆಯನ್ನು ಪಡೆದು ನೃತ್ಯಕಲೆಯೊಂದು ಉತ್ತಮ ಸಾಧನೆಯೆಂದು ತಿಳಿಯಲ್ಪಟ್ಟಿದೆ. ನೃತ್ಯಕಲೆಯನ್ನು ವಿಸ್ತೀರ್ಣವಾಗಿ, ಕ್ರಮವಾಗಿ ತಿಳಿದಲ್ಲಿ ಮನುಷ್ಯನ ಜೀವಿತದಲ್ಲಿ ವ್ಯರ್ಥವಾಗಿ ಹೋಗುವ ಅನೇಕ ಸ್ವಭಾವಗಳು, ಆಚಾರಗಳು ಉತ್ತಮ ಕಲಾ ಸೃಷ್ಟಿಗೆ ಅವಕಾಶ ಕಲ್ಪಿಸುವುದು.

ನೃತ್ಯಕಲೆಯು ಸುಮಾರು ಒಂದುನೂರು ವರ್ಷಗಳಿಂದೀಚೆಗೆ ದುರ್ದೆಶೆಗೆ ಸಿಕ್ಕಿಬಿದ್ದಿರುವುದು ಒಂದು ಆಕಸ್ಮಿಕ. ಈ ನೃತ್ಯಕಲೆಯನ್ನು ವೃಥಾ ಅಪವಾದದೊಂದಿಗೆ ಕೂಡಿಸುತ್ತಿರುವುದು ನಾಟ್ಯಕಲೆಯ ಅಭಿವೃದ್ಧಿಗೆ ಕುಂದು ತಂದಿದೆ. ಮಾನ್ಯತೆಯು ಈ ನಾಟ್ಯಕಲೆಯನ್ನು ಈ ಅಪವಾದದಿಂದ ದೂರಮಾಡಲು ಕಲೆಯನ್ನೇ ನಿರ್ಮೂಲ ಮಾಡುವುದು ಸರಿಯಲ್ಲ. ಈ ನಾಟ್ಯಕಲೆಯ ಆರಾಧಕರನ್ನು ಉತ್ತಮ ಸ್ಥಿತಿಗೆ ತರುವುದೂ ಸಂಸಾರಿಗಳಾದವರು ಈ ಕಲೆಯನ್ನು ಕೈಗೊಳ್ಳುವುದೂ ಅತ್ಯಾವಶ್ಯಕ. ಒಬ್ಬನು ನೆಗಡಿಯಿಂದ ನರಳುತ್ತಿದ್ದಲ್ಲಿ ಮೂಗನ್ನೇ ಕತ್ತರಿಸುವುದು ಉಚಿತವಾಗಿಯೂ ಸರಿಯಲ್ಲ. ನಾಟ್ಯಪ್ರದರ್ಶನವನ್ನು ನಿಲ್ಲಿಸಿಬಿಡುವುದರಿಂದ ವ್ಯಭಿಚಾರವೃತ್ತಿಗೆ ತಡೆಯಾಗುವುದೆಂದು ಯಾರಾದರೂ ತಿಳಿಯುವುದಾದರೆ ಅದು ಅವರ ಭ್ರಾಂತಿ.

ನಮ್ಮ ಸಂಸ್ಕೃತಿಯ ಅಭಿವೃದ್ಧಿಯಲ್ಲಿ ಭಾರತೀಯ ನಾಟ್ಯಕಲೆಯ ಪುನರಭ್ಯುದಯದ ವಿಷಯವು ಒಂದು ಪ್ರಧಾನಪಾತ್ರ ವಹಿಸಿರುವುದು. ಸಂಗೀತ ಸಮ್ಮೇಳನವು ನಾಟ್ಯಕಲೆಯ ವಿಷಯದಲ್ಲಿ ಅಭಿರುಚಿಯನ್ನು ತೆಗೆದುಕೊಂಡು ಈ ಸಂಬಂಧದಲ್ಲಿ ಅನೇಕ ಗೊತ್ತುವಳಿಗಳನ್ನು ಮಾಡಿದ ಈ ಒಂದು ವರ್ಷದಿಂದೀಚೆಗೆ ನಾಟ್ಯಕಲೆಯ ಪುನರಭ್ಯುದಯ ವಿಷಯವು ಕಲಾಭಿಮಾನಿಗಳ ಗಮನಕ್ಕೆ ಬಂದು ಅನೇಕರು ಹೆಚ್ಚು ಆಸಕ್ತಿಯನ್ನು ತೋರುತ್ತಿದ್ದಾರೆ. [illegible] ಮುಂತಾದವರು ಈ ವಿಷಯದಲ್ಲಿ ಈಗೀಗ ಹೆಚ್ಚು ಉತ್ಸಾಹವನ್ನು ತೋರಿ ಈ ಕಲೆಯ ಪ್ರತಿಬಂಧದಲ್ಲಿ ತೊಡಗಿರುವರು. ಹಿಂದೂ ಸಂಸ್ಕೃತಿಯಲ್ಲಿ ಗೀತ ವಾದ್ಯ, ನೃತ್ಯ ಎಂಬ ಸಂಗೀತವನ್ನು [illegible] ಸುತ್ತದು [illegible] ಮಾತ್ರವಲ್ಲ ನಾಟ್ಯವು ಸಂಗೀತದಲ್ಲಿ ಬಹು ಮುಖ್ಯ ಭಾಗ ಆದುದರಿಂದಲೇ ಮ್ಯೂಜಿಕಲ್ ಎಕಾಡೆಮಿಯವರು ಈ ಭಾಗದಲ್ಲಿ ಹೆಚ್ಚು ಗಮನಕೊಡುವುದು ಅವಶ್ಯಕವಾಗಿದೆ.

ಅಧ್ಯಕ್ಷರಾದ ಶ್ರೀಯುತ ಪಿಳ್ಳೆಯವರು ಹೇಳುವಂತೆ ಈ ನೃತ್ಯಕಲೆಯು ನಮ್ಮ ಜ್ಞಾನಕ್ಕೂ ಮನಸ್ಸಿಗೂ ಇಂದ್ರಿಯಗಳಿಗೂ ಇತರ ಎಲ್ಲ ಕಲೆಗಳಿಗಿಂತಲೂ ಅಧಿಕ ಆನಂದದಾಯಕವಾದದು. ಒಬ್ಬ ರಾಗ ತಾಳಗಳ ಪ್ರದರ್ಶನಕ್ಕೆ ಭರತ ನಾಟ್ಯವು ಉತ್ತಮ ಸಾಧನೆ. ಮನೋಭಾವಗಳು ಅಂದರೆ ರಸಗಳು ಮುಖ್ಯವಾಗಿ ಅಭಿನಯದಿಂದ ಪ್ರದರ್ಶಿಸಲ್ಪಡುವುದು. ತಾಳವನ್ನು ಅನುಸರಿಸಿ ಕಾಲಿನ ಪದಗಳ ಸಂಚಾರದಿಂದಲೂ ಹಸ್ತಗಳ ಸಹಾಯದಿಂದಲೂ ತೋರಿಸಲ್ಪಡುವುದು. ಭಾವ ಅಥವಾ ರಸ ಪ್ರದರ್ಶನವನ್ನು ಮುಖ್ಯವಾಗಿ ನಾಟ್ಯ ವಿಭಾಗಗಳಾಗಿ ವಿಂಗಡಿಸಬಹುದು.

[illegible] ಆಂಗಿಕ ಅಭಿನಯ. ಈ ರೀತಿ ಶರೀರವನ್ನು [illegible] ಅಭಿನಯ [illegible] ಅಂಗಾಭಿನಯ ಪ್ರತ್ಯಂಗಾಭಿನಯ ಉಪಾಂಗಾಭಿನಯ ಎಂದು ೩ ಭಾಗಗಳಾಗಿ ಮಾಡಬಹುದು. ಆದರೆ [illegible]ಗಳು ಮತ್ತು ಮುಖಭಾವ ಭಾವಪ್ರದರ್ಶನ ಮಾಡುವ ಅಂಗಾಭಿನಯವೇ ಭರತನಾಟ್ಯದ ಜೀವ [illegible] ವಾಚನಾಭಿನಯ [illegible] ಅಭಿಪ್ರಾಯವನ್ನು [illegible] ಅಭಿನಯವು [illegible] ಇತರ [illegible]ದಿಂದಲೂ ತೋರಿಸಲ್ಪಡುವ ಅಭಿನಯ

Rock-bottom charges. Please come & visit once Try once atleast Do not miss & do not repent

Royal Gold House,

(Prop —M Vaman Nayak & Sons)

Hampankatta—MANGALORE—S Kanara

NICKEL PLATING WILL BE UNDERTAKEN ON GUARANTEED SYSTEM

Motor parts, Cycle parts, Gramophone parts, Surgical instruments and etc, are plated in most scientific method under guaranteed system.

Under special request at the time of depression

Platings are undertaken at Moderate Charges

18ct. Rolled Gold Jewels Guaranteed for 10 Years

ದಿ ರೊಯಲ್ ಗೋಲ್ಡ್ ಹೌಸ್,

ಬಹಳ ಸುಲಭ ದರದಲ್ಲಿ ಗೇರೆಂಟಿಕೊಟ್ಟು ಎಲ್ಲಾ ಒಡವೆಗಳಿಗೆ ಪ್ಲೇಟಿಂಗ್ ಮಾಡಲಾಗುವುದು.

ಇತರ ವಿಚಾರಗಳಿಗೆ —

ಎಮ್. ವಾಮನ ನಾಯಕ್ ಎಂಡ್ ಸನ್ಸ್,

18Ct ರೋಲ್ಡ್ ಗೋಲ್ಡ್ ಜುವೆಲರ್ಸ್,

ಹಂಪನಕಟ್ಟೆ, ಮಂಗಳೂರು, ದ. ಕ.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜನಲ್ಲಿ ದೊರೆಯುತ್ತದೆ   ರೂ. 8 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಮಂಗಳೂರು ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘದ ಮೂಲ್ಕಿ ಶಾಖೆಯ ರಾಸಾಯನಿಕ ಔಷಧಿಗಳ ವಿಕ್ರಯದ ಏಜನ್ಸಿಯ ಬಗ್ಗೆ ಯೋಗ್ಯರಾದ ಮತ್ತು ಹೆಚ್ಚಿನ ಚಟುವಟಿಕೆಯ ಏಜಂಟರು ಬೇಕಾಗಿದೆ. ಕಮಿಶನ್ ವಗೈರೆ ಎಲ್ಲಾ ವಿಷಯಗಳ ಕುರಿತು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ಗೌರವ ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ
ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾಯುಕ ಸಮೇತ

ಋಗ್ವೇದೀ ಸಂಧ್ಯಾವಂದನೆ

(ನ್ಯಾಸವಿಧಿ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ,

ಬೆಲೆ ಆಣೆ 8.

30, 60, 100 ಪ್ರತಿಗಳನ್ನು ಒಮ್ಮೆಲೆ ತರಿಸಿಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಜೀವಾಮೃತವನ್ನು ಸೇವಿಸಿ

ಅಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಆರೋಗ್ಯಲಾಭವನ್ನು ಹೊಂದಿರಿ.

ನಿಮ್ಮಲ್ಲಿ ಚೈತನ್ಯವಿಲ್ಲವೋ, ಅಸುಖಿಯಾಗಿದ್ದೀರೋ, ದೇಹವು ಕಂಪಿಸುತ್ತಿದೆಯೋ, ನಿರಾಶಾಸ್ಥಿತಿಯಲ್ಲಿ, ದುಃಖದಲ್ಲಿರುವಿರೋ—ಹಾಗಿದ್ದರೆ ನಿಮಗೆ ಪರಿಣಾಮಕಾರಿಯಾಗುವ ಒಳ್ಳೆಯ ಟೋನಿಕ್ ಬೇಕು ಪಂಡಿತ ಡಿ ಗೋಪಾಲಾಚಾರ್ಲುರವರ ಪೂರ್ಣ ಆರೋಗ್ಯದಾಯಕವಾದ ಜೀವಾಮೃತವನ್ನು ಸೇವಿಸಿರಿ ನಿಮ್ಮ ಕೆಮಿಸ್ಟರಿಂದ ಒಂದು ಬಾಟ್ಲಿಯನ್ನು ಪಡೆಯಿರಿ ಅನುಪಾನಪತ್ರದಂತೆ ಅದನ್ನು ಸೇವಿಸಿ ಆಶ್ಚರ್ಯಕರ ರೀತಿಯಿಂದ ಕಾಂತಿಯೂ ಆರೋಗ್ಯವೂ ಲಭಿಸುವುದನ್ನು ಕಾಣಿರಿ ಒಂದು ಡೋಜು ಕುಡಿದಾಗಲೇ ನಿಮಗದರ ಮಹತ್ವವು ತಿಳಿಯಬರುವುದು. ಜೀವಾಮೃತವು ಬಲವನ್ನು ಹೆಚ್ಚಿಸುತ್ತದೆ ರಕ್ತವನ್ನು ಹೆಚ್ಚಿಸುತ್ತದೆ ನರಯೋಗಿಗಳ ಅಣುಗಳನ್ನು ಪೋಷಿಸುತ್ತದೆ/ ಜೀವನದ ಆನಂದವೇ ಹಸ್ತಗತವಾಗುತ್ತದೆ ಪ್ರಾಯ, ಪುಂಸ್ತ್ರೀಭೇದ, ಕಾಲಗಳ ಭೇದಾಭೇದವೇ ಇಲ್ಲ

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ಮಾರಲ್ಪಡುತ್ತದೆ

ತಯಾರಿಸುವವರು ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು

ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರರು —ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
೪೩, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಜಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕೋಲರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!
ಕ್ರಯ ಡಬ್ಬಿ 1ಕ್ಕೆ ರೂ 1—0—0

ಗುಹ್ಯರೋಗ ನಿವಾರಿಣೀ ತೈಲ
Anti-Venerael Oil
(A V Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ, ಕುಟುಂಬ ಪಾರಂಪರ್ಯದ ಈ ತಗಲಿದ ರೋಗವು ಗುಣವಾಗುವುದು ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು.

8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ. 2—8—0.

ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು

ರೈಲುಬಂಡಿಗಳ ಸಮಯ.

ಗಾಡಿಗಳು,	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಿಗ್ಗೆ 9 50	ಸಂಜೆ 4 20
ಮಿಕ್ಸೆಡ್	,, 5 55	ರಾತ್ರಿ 8 50
ಫಾಸ್ಟ್ ಪೆಸೆಂಜರ್	ಮ. 2 45	ಮ. 12 40
ಶಟಲ್	ಸಂಜೆ 5 25	ಬೆಳಿಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ 8 25	ಮ 1 20
ಕಾಸರಗೋಡು ಪೆಸೆಂಜರು	ಸಂಜೆ 8 20	ಸಂಜೆ 6 15

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ

The Scientific Gold Bangles Co , Ltd.,
Head Office—43, Byragimatam Street,
Post Box No. 208, Madras.

ಕಿರ್ಲೋಸ್ಕರ

ಕಲ್ಯಾಣ ಡೆಕೋರ್ಟಿಕೇಟರ್.



ನೆಲಗಡಲೆ ಒಡೆಯುವ ಉತ್ತಮ ಶಕ್ತಿಯುಳ್ಳದು

ಗಂಟೆಗೆ 75ರಿಂದ 80 ಗೋಣಿಗಳನ್ನು

ಒಡೆಯಬಹುದು

6 B H.P ಅಶ್ವಶಕ್ತಿ ಬೇಕು

ಕೈ ಮತ್ತು ವಿದ್ಯುಚ್ಛಕ್ತಿಯ ಯಂತ್ರಗಳ

ವಿವಿಧ ರೀತಿಯ ಸಚಿತ್ರ ಕೆಟಲಾಗು

ಕಳುಹಿಸಲಾಗುತ್ತದೆ

ಹೆಚ್ಚಿನ ವಿವರಗಳಿಗೆ ಈ ಕೆಳಗಿನವರಿಗೆ ಬರೆಯಿರಿ

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್, ಕಿರ್ಲೋಸ್ಕರವಾಡಿ, ಸತಾರಾ

ಡಿಸ್ಟ್ರಿಬ್ಯೂಟರರು—ಪೆರ್ರಿ ಎಂಡ್ ಕೋ, ಲಿಮಿಟೆಡ್, ಮದ್ರಾಸು

ಕುಷ್ಠ ರೋಗ ಮತ್ತು ಫರಂಗಿ ರೋಗ

ಇತರ ಎಷ್ಟು ದೀರ್ಘಕಾಲದ ರೋಗವೇ ಆಗಿರಲಿ ಯಾವ ಕಾರಣವೇ ಇರಲಿ, ನೀವು ಮದ್ದು ಮಾಡಿ ಮಾಡಿ ದಣಿದಿರಿ ನಿಮ್ಮ ರೋಗಗಳನ್ನು ಇಂದ್ರಜಾಲದಂತೆ ಶಾಶ್ವತವಾಗಿ 4 ವಾರಗಳಲ್ಲಿ ಗುಣಪಡಿಸಲಾಗುತ್ತದೆ ಪೂರ್ಣ ಗುಣ ಗ್ಯಾರಂಟಿ,

ವಿವರಕ್ಕೆ ಬರೆಯಿರಿ.

Kamala Works,
Panchpota Bengal S. B.

C P S

ಉತ್ತಮ ತರದ ಮಡಚುವ ಮತ್ತು ಪೆಟ್ಟಿಗೆ ಕ್ಯಾಮರಾ.



ಹೊಸತಾಗಿ ಆಮದಾದುದು ದೊರೆಯುವ ಇತರ ಕ್ಯಾಮರಗಳಿಗಿಂತ ಬಾಳಿಕೆ ಬರುವಂಥದು ಮತ್ತು ಉತ್ತಮವಾದುದು ಫೋಟೋ ತೆಗೆಯುವುದನ್ನು ಕಲಿಯುವವರಿಗೆ ಇದೊಂದು ಸುಸಂಧಿ. ಕ್ಯಾಮರಾ ಸಂಗಡ ೧ ಡಜನ್ ಪ್ರಿಂಟಿಂಗ್ ಪೇಪರ್, ೪ ಫಿಲ್ಮ್ ಎಕ್ಸ್‌ಪೋಜರ್ಸ್ ಮತ್ತು ಚಿತ್ರಗಳನ್ನು ದೊಡ್ಡದು ಮಾಡಲು ಆವಶ್ಯಕವಾದ ರಾಸಾಯನಿಕ ವಸ್ತುಗಳು, ಫೋಟೋ ತೆಗೆಯುವ ವಿಧಾನ, ಶಿಕ್ಷಣಕೊಡುವ ಗೈಡ್ ಇವು ಉಚಿತವಾಗಿ ಕಳುಹಿಸಲಾಗುತ್ತದೆ ಬಲವಾದ ಲೆನ್ಸ್, ಬೆಲೆ ಸಾಮಾನ್ಯವಾದುದು ರೂ. ...... ಉತ್ತಮವಾದುದು ...... ಮಡಚುವ ಕ್ಯಾಮರಾ ರೂ. ೫, ಉತ್ತಮವಾದ್ದು ರೂ. ೭ ಸ್ಪೆಶಲ್ ರೂ. ೧೦, ಪೆಟ್ಟಿಗೆ ಫಿಲ್ಮ್ ಬೇಕಾದರೆ ಡಜನ್ ೧ಕ್ಕೆ ೬ ಆಣೆ. ಎನ್‌ಲಾರ್ಜ್ ಮೆಂಟಿನ ಸಾಧನ ಸಾಮಗ್ರಿ ೧ ಸೀಸೆಗೆ ೪ ಆಣೆ, ಫಿಕ್ಸಿಂಗ್ ಸಾಲ್ಟ್ ೧ ಡಬ್ಬಿಗೆ ೨ ಆಣೆ, ಪ್ಯಾಕಿಂಗ್ ಮತ್ತು ಪೋಸ್ಟೇಜು ಪ್ರತ್ಯೇಕ, ಮೂರು ಕ್ಯಾಮರಾ ಪೆಟ್ಟಿಗೆಗಳನ್ನು ಕೊಂಡುಕೊಂಡರೆ ಪೋಸ್ಟೇಜು ಉಚಿತ.

ಭಾರತ ಯೂನಿಯನ್ ಟ್ರೇಡಿಂಗ್ ಕಂ
ಪೋಸ್ಟ್‌ಬಾಕ್ಸ್ ನಂಬ್ರ ..... (ಎಸ್ ಎ) ಕಲ್ಕತ್ತ

'ಸ್ವದೇಶಾಭಿಮಾನಿ'

ಇಂದೇ ಚಂದಾದಾರರಾಗಿರಿ!

ಉತ್ತಮವರ್ಗದ ವಾರಪತ್ರಿಕೆ.
ಇಂದೇ ಪಡಕೊಳ್ಳಿರಿ—ಓದಿರಿ!
ಕನ್ನಡದ ರುಚಿಯನ್ನರಿಯಿರಿ!

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

ಅಮಾನುಷಿಕವೂ ಭೀಕರವೂ ಆದ ಕ್ರೌರ್ಯ!

ಹುಡುಗಿಯ ಮೈಮೇಲೆ ೯೪ ಘಾಯಗಳು! ೧೫ ಸ್ಥಳಗಳಲ್ಲಿ ಮೈಯು ಒಡೆದಿದೆ!

೭೯ ಸಲ ಸರಳಿನಿಂದ ಬರೆ ಇಟ್ಟ ಗುರುತುಗಳು!

ಕೋಲಾರದಲ್ಲಿ ಗಂಡಹೆಂಡಿರಿಬ್ಬರು ಹೆತ್ತವರಿಲ್ಲದ ಬಾಲಕಿಗೆ ಕೊಟ್ಟ ಶಿಕ್ಷೆಯ ಪ್ರಕರಣ!

ಕೋಲಾರ ಚಿನ್ನದ ಗಣಿಯ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರಾದ ಮಿ| ಅಬ್ದುಲ್ ಹಕ್‌ರವರ ಕೋರ್ಟಿನಲ್ಲಿ ಒಂದು ಭಯಂಕರ ಪ್ರಕರಣದ ತೀರ್ಮಾನವು ನೊನ್ನೆ ನಡೆಯಿತು.

ಕೋಲಾರದ ಚೇಂಪಿಯನ್ ರೀಫ್ಸ್ ಮೈನಿಂಗ್ ಆಫೀಸಿನಲ್ಲಿ ರಾಜಾರಾವ್ ಎಂಬ ೩೧ ವರ್ಷ ಪ್ರಾಯದ ಇಂಡಿಯನ್ ಕ್ರೈಸ್ತ. ಅವನ ಹೆಂಡತಿ ಕಣ್ಣಮ್ಮ, ಅವಳಿಗೆ ೨೨ ವರ್ಷ ಪ್ರಾಯ. ಇವರ ಮನೆಯಲ್ಲಿ ಜೀವರತ್ನಂ ಎಂಬ ೧೧ ವರ್ಷ ಪ್ರಾಯದ ಬಾಲಕಿಯೋರ್ವಳು ಕೆಲಸಕ್ಕಿದ್ದಳು. ಅವಳಿಗೆ ಹೆತ್ತವರಿಲ್ಲ. ಈ ಗಂಡ ಹೆಂಡಿರೊಡನೆ ಕಳೆದ ಎಳೆಂಟು ತಿಂಗಳುಗಳ ಹಿಂದೆ ಕೂಡಿಕೊಂಡು ಅವಳ ಜಾತಿಗೆ ಸೇರಿದ್ದಳು.

ರಾಜಾರಾಯನು ಕೆಲಸಕ್ಕೆ ಹೋದ ಮೇಲೆ ಪೂರ್ವಾಹ್ನ ಕಣ್ಣಮ್ಮಳನ್ನು ಒಬ್ಬ ತರುಣನು ಭೇಟಿಯಾಗುತ್ತಿದ್ದ. ಹುಡುಗಿ ಇದನ್ನು ಯಾವಾಗಲೂ ನೋಡುತ್ತಿದ್ದಳು. ಇದೇ ಜೂನ್ ೮ನೇ ದಿನ ಅವಳು ಆ ತರುಣನಿಗೆ ಹಣವನ್ನು ಕೊಟ್ಟಳು. ಮನೆಗೆಲಸದ ಹಾಕಿನ ಸಂದರ್ಭದಲ್ಲಿ ಹುಡುಗಿಯು ಕಣ್ಣಮ್ಮಳನ್ನು ಮಕ್ಕಳಾಟಿಕೆಯಿಂದ ಗದರಿಸಿ, ಕಣ್ಣಮ್ಮಳು ಆ ಆಗಂತುಕನಿಗಿತ್ತ ಹಣದ ಕುರಿತಾಗಿ ರಾಜಾರಾಯರೊಡನೆ ತಾನು ಹೇಳುವೆನೆಂದಳು.

ಒಡನೆ ಜೀವರತ್ನಂಳಿಗೆ ಪೆಟ್ಟು ಬಿತ್ತು. ಹೊಡೆದು ಹೊಡೆದು ಸಾಕಾಗದೆ, ಕಬ್ಬಿಣದ ಸರಳನ್ನು ಬೆಂಕಿಯಲ್ಲಿ ಕಾಯಿಸಿ ಜೀವರತ್ನಳ ಅಂಗಾಂಗಗಳಿಗೆ ಬರೆ ಎಳೆದಳು. ಅದರ ಮೇಲೆ ಚೆನ್ನಾಗಿ ಹೊಡೆದಳು. ನೆರೆಹೊರೆಯವರು ಬಿಡಿಸಲೆತ್ನಿಸಿದರೂ ನಿಷ್ಫಲವಾಯಿತು.

ರಾಜಾರಾಯನು ಮಧ್ಯಾಹ್ನ ೧೨ ಘಂಟೆಗೆ ಮನೆಗೆ ಬಂದನು. ಜೀವರತ್ನಳು ಆ ಹಣವನ್ನು ಕದ್ದು ಒಬ್ಬ ಅಪರಿಚಿತನಿಗೆ ಕೊಟ್ಟಿರುವಳೆಂದು ಕಣ್ಣಮ್ಮಳು ಗಂಡನೊಡನೆ ಹೇಳಿದಳು. ಗಂಡನು ರೇಗಿಕೊಂಡ. ಹೆಂಡತಿಯು ಬರೆ ಎಳೆದುದು ಸಾಕಾಗದೆಂದ ಹುಡುಗಿಯನ್ನು ಇನ್ನೂ ಶಿಕ್ಷಿಸಬೇಕೆಂದ ಗಂಡಹೆಂಡಿರಿಬ್ಬರೂ ಒಟ್ಟಾಗಿ ಆ ಹುಡುಗಿಯನ್ನು ಅಡಿಗೆಕೋಣೆಗೆ ಎಳೆದುಕೊಂಡು ಹೋಗಿ ಇಬ್ಬರೂ ಬೆತ್ತದಿಂದ ಹೊಡೆದರು. ಒಂದು ಬೆತ್ತವು ತೋರವಾಗಿತ್ತು, ಒಂದು ಸಪೂರವಾಗಿತ್ತು, ತೋರದ ಬೆತ್ತವನ್ನು ರಾಜಾರಾಯನುಪಯೋಗಿಸಿದ. ಸಪೂರದ್ದನ್ನು ಕಣ್ಣಮ್ಮಳು ಉಪಯೋಗಿಸಿದಳು. ರಾಜಾರಾಯನು ಹುಡುಗಿಗೆ ಹೊಡೆಯುತ್ತಾ ಸತ್ಯವನ್ನು ಹೇಳೆಂದು ಗದರಿಸುತ್ತಿದ್ದ. ಅಷ್ಟರಲ್ಲಿ ಬೆತ್ತದ ಒಂದು ಪೆಟ್ಟು ಗೋಡೆಯ ಮೇಲಿನ ದೀಪಕ್ಕೆ ಬಿತ್ತು. ಅದರ ಗಾಜಿನ ಹುಡಿ ನೆಲದ ಮೇಲೆ ಬಿತ್ತು. ಆ ಚೂರುಗಳನ್ನು ಹುಡುಗಿಯು ಒಡನೆ ಹೆಕ್ಕಬೇಕೆಂದ. ಇಷ್ಟಾಗುವಾಗ ಹುಡುಗಿಯ ಮೈಮೇಲಿನ ಯಾವ ವಸ್ತ್ರವೂ ಇರಲಿಲ್ಲ. ನಿತ್ರಾಣಗೊಂಡಿದ್ದರೂ ಹುಡುಗಿಯು ಗಾಜಿನ ಚೂರುಗಳನ್ನೆಲ್ಲ ಹೆಕ್ಕಿ ಹೊರಗೆಸೆಯಬಂದಳು.

ಈ ಅನಾಹುತವನ್ನು ನೋಡುತ್ತ ನಿಂತಿದ್ದವರು, ಹುಡುಗಿಯು ನಗ್ನಳಾಗಿ ಹೊರಗೆ ಬಂದು ಗಾಜಿನ ಚೂರುಗಳನ್ನೆಸೆಯುವುದನ್ನು ಕಂಡರು. ಅವಳು ಮೂರ್ಛೆಹೋಗಿ ಬಿದ್ದರಲ್ಲಿ ನೂರಾರು ಜನರು ಅಲ್ಲಿ ನೆರೆದು ಬಂದು, ಹುಡುಗಿಯನ್ನೆತ್ತಿಕೊಂಡು ಆಸ್ಪತ್ರೆಗೊಯ್ದರು. ಪೋಲೀಸರಿಗೂ ತಿಳಿಸಿದರು.

ಜೀವರತ್ನಳನ್ನು ಆಸ್ಪತ್ರೆಗೆ ತರುವಾಗ ಅವಳು ಸ್ಮೃತಿಶೂನ್ಯಳಾಗಿದ್ದಳು. ಅವಳಿಗೆ ಆಸ್ಪತ್ರೆಯಲ್ಲಿ ದೊರೆತ ಸಹಾಯದಿಂದಾಗಿಯೇ ಅವಳು ಬದುಕಿ ಉಳಿದಳೆಂದು ಸರ್ಜನರು ಹೇಳಿದರು. ತನ್ನ ಮೇಲಿನ ಘಾಯಗಳನ್ನು ಆ ಗಂಡಹೆಂಡಿರಿಬ್ಬರು ಮಾಡಿದರೆಂದು ಜೀವರತ್ನಳು ತನ್ನ ನಿರ್ಬಲ ಸ್ಥಿತಿಯ ಸಮಯ ಹೇಳಿದಳು.

೯೪ ಘಾಯಗಳು ಅವಳ ಮೈಮೇಲೆ ಇದ್ದುವು. ೧೫ ಗಡಿಗಳಾಗಿದ್ದುವು. ೭೯ ಸಲ ಕೊಳ್ಳಿಯಿಂದ ಬರೆ ಎಳೆದಿದ್ದರು. ಬರೆ ಎಳೆಯದ ಮತ್ತು ಪೆಟ್ಟು ಬೀಳದೆ ಇದ್ದ ಸ್ಥಳವು ಅವಳ ಅಂಗದಲ್ಲಿರಲಿಲ್ಲ. ಕೆಲವು ಘಾಯಗಳು ಅವಳ ರೂಪವನ್ನೇ ಕೆಡಿಸಿವೆ. ಅವಳ ಜೀವಮಾನದ ವರೆಗೂ ಹುಣ್ಣಿನ ಕಲೆಗಳು ಹೋಗಲಾರವು. ಬಲಗಾಲಿನ ಮೇಲೆ ದೊಡ್ಡ ಘಾಯವಾಗಿದೆ. ಇದು ಗುಣವಾಗಲು ಇನ್ನೂ ಹದಿನೈದು ದಿನಗಳು ಬೇಕಾಗುವುವು. ಸೆತ್ತೆ ಬಾಸೇಂಟ ಎಡರೊಡೆಗಳ ಮೇಲೆ ಚೊಕ್ಕ ದೊಡ್ಡ ಘಾಯಗಳಿವೆ. ತಲೆಯ ಹುಣ್ಣು ಬಹು ಗಂಭೀರವಾಗಿದೆ.

ಅಧಿಕಾರಿಗಳ ವಿಚಾರಿಸಲಾಗಿ, ರಾಜಾರಾಯನ ಮನೆಯ ಸುತ್ತಲೂ ೨೦೦೦ರಿಂದ ೩೦೦೦ ಜನರು ನೆರೆದಿದ್ದರೆಂದೂ, ಅವರೆಲ್ಲರೂ ಕೂಡಿ ಹುಡುಗಿಯನ್ನು ಬಲಾತ್ಕಾರದಿಂದೆಳೆದು ಆಸ್ಪತ್ರೆಗೆ ಕೊಂಡೊಯ್ದರೆಂದೂ ತಿಳಿದುಬಂತು. ಅಪರಾಧಿಗಳನ್ನು ಸೆರೆಹಿಡಿಯಲು ಬಂದ ಪೋಲೀಸರು ಜನಸಮೂಹದ ರೋಷವನ್ನು ಕಂಡು ಅಪರಾಧಿಗಳನ್ನು ಮನೆಯ ಹೊರಗೆ ತರಲು ಹೆದರಿದರು.

ರಾಜಾರಾಯನನ್ನು ಸೆರೆಹಿಡಿದು ಜಡತಿ ನಡೆಸಲಾಗಿ ಅವನ ಜೇಬಿನಲ್ಲಿ ಒಂದು ಬಿಸ್ಕೀಟಿನೊಡನೆ ಕೆಲವು ಕಾಗದಚೂರುಗಳೂ ಇದ್ದುವು. ಅದೇ ದಿನ ಮಧ್ಯಾಹ್ನ ಆಫೀಸಿಗೆ ಹೋಗಿ ಅಲ್ಲಿಂದ ಅವನು ಬರೆದ ಚೀಟಿಗಳವು. ಆಫೀಸಿನ ಮೇಸ್ತ್ರಿಯೊಬ್ಬನೊಡನೆ ಈ ಚೀಟಿಗಳನ್ನು ಕಳುಹಿಸಿಕೊಟ್ಟು ತನ್ನ ಪತ್ನಿಗೆ ತಲುಪಿಸಬೇಕೆಂದು ಸೂಚಿಸಿದರೂ ಮನೆಯ ಸುತ್ತಲೂ ಕೋಪಾವಿಷ್ಟ ಜನಸಮೂಹವು ನಿಂತಿರುವುದನ್ನು ಕಂಡು ಅವನು ಒಳಪ್ರವೇಶಿಸಲಾರದೆ ಆ ಚೀಟಿಗಳನ್ನು ಹಿಂದೆಯೇ ತರಬೇಕಾಯಿತು.

ಒಂದನೇ ಚೀಟಿನಲ್ಲಿ ಹೀಗಿತ್ತು—"ಪ್ರಿಯ ಕಣ್ಣ, ಒಂದು ನೂರು ಜನರು ಒಟ್ಟಾಗಿ ಹುಡುಗಿಯನ್ನು ಒಯ್ದುದನ್ನು ನಾನು ನೋಡಿದೆ. ಅವಳನ್ನು ಪೋಲೀಸ್ ಸ್ಟೇಶನಿಗೆ ಕೊಂಡೊಯ್ದರು. ಅವರು ಹೋಗಲಿ. ತಪ್ಪಿಸುವುದಕ್ಕೆ ಒಳ್ಳೇ ಉಪಾಯವನ್ನು ಹೂಡು. ಅವರು ನಮ್ಮ ಬಳಿಗೆ ಬರಬಹುದು. ಹೆದರಬೇಡ. ನಿನ್ನ ಪ್ರೀತಿಯ, ರಾಜು."

ಎರಡನೇ ಚೀಟಿನಲ್ಲಿ—"ಯಾರಾದರೂ ನಿನ್ನ ಬಳಿ ಬಂದು ಕೇಳಿದರೆ ಬೀಗಳು ತನ್ನಷ್ಟಕ್ಕೆ ತಾನೇ ದತ್ತಪ್ರತ್ತಿಯೆಂದು ಹೇಳು. ಆಗ ನಮಗೆ ಕೆಲವು ತಿಂಗಳ ಶಿಕ್ಷೆ ನಾವು ಹೊಡೆದ ಬಹುದೆಂದು ತಿಳಿದು."

ಈ ಕಾಗದಪತ್ರಗಳೆಲ್ಲ ಆಫೀಸಿನದ್ದೆಂತ ಆಫೀಸಿನ ಪ್ರೋಪ್ರೈಟರ್ ವಾಟ್ಸನರು ಹೇಳಿದರು.

ರಾಜಾರಾಯನಿಗೆ ನಾಲ್ಕು ತಿಂಗಳ ಕಠಿಣ ಶಿಕ್ಷೆಯುಂಟಾಯಿತು. ಅವನ ಹೆಂಡತಿಗೆ ಏಳು ತಿಂಗಳುಗಳ ಕಠಿಣ ಶಿಕ್ಷೆಯಾಯಿತು.

ಭಾರೀ ಚಿಮಿಣಿ ಎಣ್ಣೆ ಮತ್ತು ಪೆಟ್ರೋಲ್‌ಗಳ ಕಂಟ್ರಾಕ್ಟು

ಭಾರತಕ್ಕೆ ಉತ್ತಮ ತರಗತಿಯ ಪೆಟ್ರೋಲಿನ ಆಯಾತ.

ಯುರೋಪಿಯನ್ ಮತ್ತು ಅಮೇರಿಕನ್ ಎಣ್ಣೆ ವ್ಯಾಪಾರಿಗಳೊಡನೆ ಭಾರತೀಯ ಕಂಪೆನಿಯ ಕರಾರು.

ಭಾರತೀಯರ ಒಂದು ಹೊಸ ಸಾಹಸದ ಕುರಿತಾಗಿ ನಾವು ಈ ಮೊದಲು ತಿಳಿಸಿರುತ್ತೇವೆ. ಈ ಸಂಬಂಧವಾದ ಜವಾಬ್ದಾರೀ ವರ್ತಮಾನವನ್ನು ಅಧಿಕೃತ ಪಕ್ಷದಿಂದ ಕೇಳಿದಂತೆ—ಆ ಎಣ್ಣೆಯ ಕಂಪೆನಿಯು ಅಮೇರಿಕನ್ ಮತ್ತು ಯುರೋಪಿಯನ್ ವ್ಯಾಪಾರಿಗಳೊಡನೆ ಹೀಗೆ ಕಂಟ್ರಾಕ್ಟು ಮಾಡಿದೆಯೆಂದರೆ—ಹಿಂದೂದೇಶಕ್ಕೆ ನಿರ್ದಿಷ್ಟವಾಗಿ, ಸಾಕಷ್ಟು ಪೆಟ್ರೋಲ್, ಚಿಮಿಣಿ ಎಣ್ಣೆ ಮತ್ತು ಇನ್ನಿತರ ಎಣ್ಣೆಗಳು ದೊರೆಯುವುದು ನಿಶ್ಚಯವೆಂದು ಮಾಡಿರುತ್ತದೆ.

ಯುರೋಪಿನಲ್ಲಿ ಪೆಟ್ರೋಲನ್ನು ಎರಡು ಬಗೆಗಳನ್ನಾಗಿ (ಉತ್ತಮ ತರಗತಿದ್ದು ಮತ್ತು ಸಾಧಾರಣ ತರಗತಿದ್ದು) ಎಂದು ವಿಕ್ರಯಿಸುತ್ತಾರೆ. ಮೋಟರಿಷ್ಟನು ಉತ್ತಮ ಅಥವಾ ಸಾಧಾರಣ ತರಗತಿಯವುಗಳಿಂದಲೇ ಬೇಕಾದುದನ್ನು ಆರಿಸಬೇಕು. ಇಷ್ಟರ ತನಕ ಉತ್ತಮ ತರಗತಿಯ ಪೆಟ್ರೋಲನ್ನು ಹಿಂದೂಸ್ಥಾನಕ್ಕೆ ಆಮದು ಮಾಡಲಾಗಲಿಲ್ಲ. ಆದರೆ ಈ ಕಂಪೆನಿಯು ಎಕ್ಸ್‌ಟ್ರಾ ಲೈಟ್ ಪೆಟ್ರೋಲ್ ಎಂಬ ಉತ್ಕೃಷ್ಟ ಪೆಟ್ರೋಲನ್ನೇ ಆಮದು ಮಾಡುವುದು. ಮೋಟರಿಷ್ಟರಿಗೆ ಎಷ್ಟೋ ಕಾಲದಿಂದ ಬೇಕಾದ ಈ ವಸ್ತುವು ದೊರೆತು ತೃಪ್ತಿಗೊಳ್ಳುವಂತಾಗಿದೆ.

ದಿ ನೆಪ್ಚೂನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ನೆಪ್ಚೂನ್ ಧರ್ಮಾರ್ಥ ಗಡಿಯಾರದೊಂದಿಗೆ ನಿಮ್ಮ ಜೀವವಿಮೆ ಮಾಡಿರಿ.

ಬಡವರಿಗೂ ಮಧ್ಯಮಸ್ಥಿತಿಯ ಜನರಿಗೂ ನೆಪ್ಚೂನ್ ಎಂಬುದು ಪ್ರಮುಖ ವಿಮಾ ಕಂಪೆನಿ.

ದಿನಕ್ಕೆ ಒಂದಾಣೆ ಅಥವಾ ಹೆಚ್ಚನ್ನು ಶೇಖರಿಸಿ ಒಂದು ವರ್ಷದಿಂದ ೬೦ ವರ್ಷ ಪ್ರಾಯದ ವರೆಗಿನವರು ಪೋಲಿಸಿ ಪಡೆಯುವಂತೆ ಸೂತ್ರವನ್ನು ಮಾಡಲಾಗಿದೆ.

ನಾಣ್ಯಗಳನ್ನು ಅದರ ತೂತಿನೊಳಗೆ ಹಾಕಿದ ವಿನಹ ತೆರೆಯಲು ಮಾಡಲಾರದ ಒಂದು ಪೆಟ್ಟಿಗೆಯನ್ನು ಪ್ರತಿಯೊಬ್ಬ ಪೋಲಿಸಿದಾರನಿಗೆ ಧರ್ಮಾರ್ಥವಾಗಿ ಕೊಡಲಾಗುವುದು. ಸುಮಾರು 10,000 ಮಂದಿ ಈ ಧರ್ಮಾರ್ಥವಾದ ಗಡಿಯಾರವನ್ನು ಪಡೆದಿರುವರು

* ಉದಾರ ಶರ್ತಗಳ ಮೇಲೆ ಏಜಂಟರು ಬೇಕಾಗಿದ್ದಾರೆ
ಪ್ರಾಸ್ಪೆಕ್ಟಸ್ ಮತ್ತು ಏಜನ್ಸಿಗಳಿಗಾಗಿ ಮುಂಬಾಯಿಯ ಹೆಡ್ ಆಫೀಸಿಗೆ ಬರೆಯಿರಿ.

ದಿ ನೆಪ್ಚೂನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಹೆಡ್ ಆಫೀಸು, 17. ಎಸ್ಪ್ಲನೇಡ್ ಸರ್ಕಲ್, ಫೋರ್ಟ್ ಮುಂಬಾಯಿ.

ಅಥವಾ, ಸ್ಥಳೀಯ ಪ್ರತಿನಿಧಿ **ಶ್ರೀ| ಎಚ್. ಕೆ. ತಿಂಗಳಾಯ,** ಪ್ಯೂಗೆ ಬಜಾರ್, ಮಂಗಳೂರು. ಇವರಿಗೆ ಬರೆಯಿರಿ

ಸಂಪಾದಕರ ಟಪ್ಪಾಲುಪೆಟ್ಟಿಗೆ.

[ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆಕೊಡುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತ ದೃಷ್ಟಿಯಿಂದಿದ್ದು ಉತ್ತಮ ಶೈಲಿಯಲ್ಲಿರತಕ್ಕದ್ದು. ಸಂ.]

ಗೋವಾ ಲೋಟರಿ.

ಎಲ್ಲಾ ಜನರ ಅವಗಾಹನೆಯ ಬಗ್ಗೆ.

ಸ್ವದೇಶಾಭಿಮಾನಿಯೇ,

ಹಿಂದೂಸ್ಥಾನದಲ್ಲಿ ಪೋರ್ತುಗೀಸರಿಗೆ ಸಿಕ್ಕಿದ ರಾಜ್ಯಗಳಲ್ಲಿ ಗೋವೆಯು ಒಂದು ಪ್ರಾಮುಖ್ಯವಾದ ದೇಶವೇ ಆಗಿರುತ್ತದೆನ್ನಬಹುದು. ಇಲ್ಲಿ ಎಷ್ಟೋ ವರ್ಷಗಳಿಂದ ಅಂದರೆ ಪಣಜೀ, ಮಡಗಾಂ, ಮಾಪ್ಸಾ ಎಂಬ ಮೂರು ಸ್ಥಳಗಳಿಂದ ತಿಂಗಳೊಂದರ ಮೂರು ತರದ ಸೋಡ್ತಿ ಟಿಕೇಟು ಯಾನೆ ಲೋಟರಿಂಗಳು ಪ್ರತಿ ತಿಂಗಳಲ್ಲಿ ತಪ್ಪದೆ ಹೊರಬೀಳುತ್ತಾ ಇವೆ. ಇದರ ಮಹಿಮೆಯು ಇಡೀ ಹಿಂದುಸ್ಥಾನದ ಹಳ್ಳಿಪಳ್ಳಿಗಳಲ್ಲಿ ದೇಶಪಟ್ಟಣಗಳಲ್ಲಿ ಹಬ್ಬಿರುತ್ತದೆ. ಇವುಗಳಲ್ಲಿ ಪ್ರತ್ಯೇಕ ಸಮಯದಲ್ಲಿ ಸರಾಸರಿ ತಿಂಗಳೊಂದರಲ್ಲಿ ಎರಡು ಲಕ್ಷ ರೂಪಾಯಿಗಳ ಟಿಕೇಟುಗಳು ಖರ್ಚಾಗುತ್ತವೆ. ಪ್ರತಿಯೊಂದ ಟಿಕೇಟಿನ ಕ್ರಯವು ಒಂದು ರೂಪಾಯಿ ಇರುತ್ತದೆ. ಆದುದರಿಂದ ಎಳೆಗಿಂದ ಸಾಮಾನ್ಯರವರೆಗೆ ದುಡಿದು ಕೆಲಸ ಮಾಡುವ ಬಡಬಗ್ಗರು ಹಣದ ಆಶೆಯಿಂದ ಬಹಳ ಟಿಕೇಟುಗಳನ್ನು ಕೊಂಡುಕೊಳ್ಳುತ್ತಾರೆ. ಜನವರಿ ತಿಂಗಳ ಆಗಾಯತು ಡಿಸಂಬರ್ ತಿಂಗಳವರೆಗೆ ೫೦೦ ಟಿಕೇಟುಗಳನ್ನು ಡ್ರೋ ಮಾಡುತ್ತಾರೆ. ಅವರಿಂದ ಹಣ ಸಿಕ್ಕುವ ಸಂಭವವು ಬಹಳ ವಿರಳವಾಗಿರುತ್ತದೆ. ಟಿಕೇಟಿನ ಡ್ರೋ ಮಾಡುವಲ್ಲಿ ಕೂತುಕೊಂಡರೆ ಟಿಕೇಟು ಡ್ರೋ ಮಾಡಿದ ತರುವಾಯ ಯಾವ ನಂಬರಿಗೆ ಪ್ರಥಮ ಸೋಡ್ತಿ ಎದ್ದಿದೆಯೋ ಆ ನಂಬರಿನ ಅಂಕಡೆಗಳಿಂದ ಪೂರ್ಣಾಂಗವಾಗಿ ಒಬ್ಬಿಗೆ ಒಕ್ಕಿಸು ಹಂಚಿಕೆಯಾಗುವುದನ್ನು ನೋಡಬಹುದು. ಆದರೆ ಪ್ರಥಮ ಟಿಕೇಟು ಎದ್ದರೆ ಆ ಟಿಕೇಟಿನ ಬವುಂಟು ಆದರಿಂ, ೧೯,೩೯, ೩೯, ೯೯ಗಳಂತೆ ೧೦ ನಂಬರುಗಳ ಅಂತರಕ್ಕೆ ಮೂರು ಮೂರು ರೂಪಾಯಿಗಳು ಸಿಗುವುವು. ಇದರಿಂದ ಹೆಚ್ಚು ಹಣವು ಮುವತ್ತಾಗಿ ಹೋಗುತ್ತದೆ. ಇದರಿಂದ ಎಷ್ಟೋ ಜನರು ನಿರಾಶೆಯಾಗುವರು. ಹೀಗಿರುವುದರಿಂದ ಜನರು ಏಜಂಟರಿಂದ ಟಿಕೇಟುಗಳನ್ನು ಪಡಕೊಳ್ಳುವುದು ನಿಲ್ಲಿಸಬೇಕು. ಏಜಂಟರಿಗೆ ಕಂಪನಿಯಿಂದ ಸಿಕ್ಕುವ ಲಾಭವು ಅಷ್ಟಿಷ್ಟಲ್ಲ. ಅವರಿಗೆ ಸಾಕಾಗುವಷ್ಟು ಕಮಿಶನ್ ದೊರೆಯುತ್ತದೆ. ಹೀಗಿರುವಾಗ ಅವರು ಜನರ ಕುತ್ತಿಗೆಗೆ ಟಿಕೇಟುಗಳನ್ನು ಕಟ್ಟಿಕೊಡುತ್ತಾರೆ. ಪೋರ್ತುಗೀಸರ ರಾಜ್ಯವಾದ ಗೋವೆಗೆ ಹೋಗುತ್ತಿರುವ ಹಣವನ್ನು ತಡೆಯುವುದಕ್ಕೋಸ್ಕರ ಚರ್ಚೆ ಮಾಡಿ ಕೆಲವು ಪ್ರಶ್ನೆಗಳನ್ನು ಮುಂದೆ ತಂದು ಕಾಯಮಾಗಿ ಇಡುವಂಥವುಗಳಾಗಬೇಕು. ಗೋವೆಯ ಲೋಟ್ರಿಯ ಟಿಕೇಟುಗಳನ್ನು ಮಾರುವವರಿಗೆ ತಕ್ಕ ಕ್ಯಾದೆಗಳಿಂದ ಕಾಯಂ ಆದ ಹುಕುಂಗಳನ್ನು ಜಾರಿಗೆ ತಂದು ಅವುಗಳನ್ನು ಮಾರದಂತೆ ನಿಲ್ಲಿಸಬೇಕು. ಏಕೆಂದರೆ ಗೋವೆಗೆ ಪ್ರತಿ ಒಂದು ತಿಂಗಳಲ್ಲಿ ಲಕ್ಷಗಟ್ಟಲೆ ರೂಪಾಯಿ ಹೋಗುತ್ತದೆ. ಅದು ಹೋಗದಂತೆ ತಡೆಯಬೇಕು.

ವಿ. ಎಸ್. ಶಿಬ್ರೂರಕರ್.



PROVED STRONG ACCURATE SWISS LEVER WRIST WATCH 3 YRS GTD NICKEL 2/6/-, GOLDEN 4/4/-, NICKEL RADIUM 3/4/-, SHOCK-PROOF 4 JEWELS EVER-BRIGHT CHROME 7/6/- 15 JEWELLED CHROME 12 4/-, R. GOLD 15/-, 8 TIMEPIECE 1/3/-, WITH ALARM 3/-, POCKET WATCH 2/13/- POSTAGE, PACKING FREE IF ORDERED 3. GENERAL TDG CO. 188 MANICKTOLLA ST. CALCUTTA

Shiromani Narayanacharya

Choukhamba *Benares City*



THIS MAN
WISHES HE HAD

ಶಾಸ್ತ್ರಿಗಳೇ ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತ ಇದ್ದರು. ಆದರಿಂದ ಏನು ಫಲ? ಅದನ್ನು ಧರಿಸಿದರೆ ಅಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವು. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಅಡ್ಡ ಪ್ರಮಾಣದ ಕಂಠಿಸರ 1ಕ್ಕೆ ಆಣೆ 10ರ ರೂ 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 5ರ ವರೆಗೆ ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ 3ರಿಂದ ರೂ 50ರ ವರೆಗೆ ಮತ್ತು —4—5—6—7 8 ಮುಖಗಳ ಕಾಳು 1ಕ್ಕೆ ಆಣೆ 4ರಿಂದ ರೂಪಾಯಿ 10 ಮತ್ತು 9-10-11 ಮುಖಗಳುಳ್ಳ ಕಾಳು 1ಕ್ಕೆ ರೂ 10ರಿಂದ 30ರ ವರೆಗೆ 12 13-14 ಮುಖದ ಕಾಳು 1ಕ್ಕೆ ರೂಪಾಯಿ 40ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷಿ ಅವರೆಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು (ವಿವರಕ್ಕೆ ಕೆಟಲಾಗ್ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕಾಶಿ ಪಂಚಾಂಗ. ಕೆಟಲಾಗಿನೊಡನೆ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ

ಚೌಖಂಬಾ ಬನಾರಸ್ (ಕಾಶೀ)

SIKI H-CONTROL GOODS

Sex trick For men P Cs. Regina 7/10 -doz Neverrip 3 doz 1/½/, Paragon Heavy ½ doz 1/10. For women (with directions) Solid Rim Check Pessary 1/3/-, Bulb-Spray 3/6/-, Oral Medicine for 6 months 1/4/-. Pack ag postage extra. 12½% rebate on orders & Rs 5/- & 25% on 12/. The General Trading Co 188 Manicktolla Street Calcutta

ಕುಷ್ಠರೋಗ ಮತ್ತು ವಾತರೋಗ

ನೊಂದು ಕಂಗೆಟ್ಟು ಹೋಗಿರುವವರಿಗೆ

ಮೂಲಿಕೆಯ ಔಷಧಿಗಳಿಂದ ಆಶ್ಚರ್ಯಕರವಾಗಿ ಪೂರ್ಣ ಗುಣವಾಗುತ್ತದೆ. ಅದ್ಭುತಕರ ವಿವರಣೆ ಉಚಿತ

Yeshajalaya, Chandanpur

Khulna, Bengal (A W.)

೧೦೦ ರೂಪಾಯಿ ಬಹುಮಾನ

(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು. ಅಲ್ಲದೆ ಶಾಂತಿಯುತವಾದುದು. ಬಹಳ ಆಶ್ಚರ್ಯಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ. ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ, ಅವರು ಸುಲಭವಾಗಿ ವಶವಾಗುತ್ತಾರೆ. ಐಶ್ವರ್ಯವೂ ವಿಜಯವೂ ಆಗುತ್ತದೆ. ವ್ಯವಹಾರದಲ್ಲಿ ಜಯ ಉಂಟು. ಮಕ್ಕಳಾಗುತ್ತವೆ. ಭೂತ ಪಿಶಾಚಿ ಬಾಧೆ ರೋಗ ವಾಸಿಯಾಗುತ್ತದೆ. ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ. ಇದರಿಂದ ಆಗುವುದಿಲ್ಲವೆಂದು ಸಿದ್ಧಾಂತ ಪಡಿಸುವವರಿಗೆ ಮೇಲ್ಕಂಡ ಬಹುಮಾನ. ಕ್ರಯವಿಲ್ಲ. ಇನ್ನೊಬ್ಬರಿಗೆ ಬಾಡಿಗೆಗಾಗಿ ಬೇಕಾದ ಅವಶ್ಯಕವಿಲ್ಲ. ಇದು ನಿಮ್ಮ ಸಂಗಡ ಇದ್ದರೆ ಸಾಕು ಜಯ. ಬೆಲೆ ರೂ 2 ಮಾತ್ರ.

Bengal Mesmerism House
Panchpota, Bengal (s a.)

New Era Technical School.

Near Market Square, Udipi.

Commercial classes-approved by the Madras Government-New session opens in June

ನ್ಯೂ ಈರಾ ಟೆಕ್ನಿಕಲ್ ಸ್ಕೂಲ

ಸಂತೆಕಟ್ಟೆ, ಉಡುಪಿ.

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿರುವ)

ಇಲ್ಲಿ ಟ್ಯಾಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ ಆ
ರಾಶಿ ಅಕ್ಕಿ	3—15	4— 5
ಮಸ್ಕತಿ	4— 6	4—10
ಗುಡ್ಡು	4— 2	4— 8
ಊರ ಅಪ್ಸಲ್ ಬೆಳ್ತಿಗೆ	4— 4	4— 8
ರಂಗೂನು ಬೆ. ಗೋ ಒಕ್ಕೆ	6—10	7— 4
ಎಲ್ಲೂರು ಬೆ ಮು ಒಕ್ಕೆ	4— 4	4— 8
ಗೋದಿ ಗೋಣಿ ಒಕ್ಕೆ	10— 0	12— 8
ತೊಗರಿ ಗೋಣಿ ಒಕ್ಕೆ	10 —8	11— 0
ಹುರುಳಿ ಗೋಣಿ ಒಕ್ಕೆ	7—10	7 —14
ಕಡಲೆ ಗೋಣಿ ಒಕ್ಕೆ	8 — 0	10— 8
ತೊಗರಿಬೇಳೆ ಗೋಣಿ ಒಕ್ಕೆ	10— 0	17— 0
ಉದ್ದು ಗೋಣಿ ಒಕ್ಕೆ	8— 0	8— 8
ಹೆಸರು ಗೋಣಿ ಒಕ್ಕೆ	9— 4	9—12
ಉರುಬೆಲ್ಲ ಖಂಡಿ ಒಕ್ಕೆ	35— 0	37— 8
ಉಪ್ಪು ಗೋಣಿ ಒಕ್ಕೆ	4—12	5— 4
ಕೊಬ್ರಿ ಖಂಡಿ ಒಕ್ಕೆ	48— 0	55— 0
ಕೊಬ್ರಿ ಹಿಂಡಿ ಖಂಡಿ ಒಕ್ಕೆ	20— 0	—
ಎಳ್ಳಿಂಡಿ ಖಂಡಿ ಒಕ್ಕೆ	.0— 0	32— 0
ಕೊಬ್ರಿ ಎಣ್ಣೆ ಮಣ ಒಕ್ಕೆ	3— 5	4— 14
ಎಳ್ಳೆಣ್ಣೆ ಮಣ ಒಕ್ಕೆ	5— 2	6— 0
ಚಿಮಿಣಿಎಣ್ಣೆ ಪೆಟ್ಟಿಗೆ ಒಕ್ಕೆ	5— 8	5 —12
ಮೋರಿಸ ಸಕ್ಕರೆ ಮ. ಒಕ್ಕೆ	3—11	3—13
ಮೆಣಸು	4—10	6 —
ಸಾಸಿವೆ ಮುಡಿ ಒಕ್ಕೆ	5 —12	6— 0
ಕಾಳುಮೆಣಸು ಖ. ಒಕ್ಕೆ	100— 0	110 0
ಯಾಲಕ್ಕಿ ಮಣ ಒಕ್ಕೆ	23— 0	30— 0
ಗೇರುಬೀಜ ಮು. ಒಕ್ಕೆ	4— 4	4 — 6
ಕಬ್ಬಿಣ ಖಂಡಿ ಒಕ್ಕೆ	39— 0	39— 8
ತಾಂಬ್ರ ತಗಡು ಮ ಒಕ್ಕೆ	0—	9— 9
ತಾಂಬ್ರಪಾತ್ರಗಳು ಮ ಒಕ್ಕೆ	11— 0	12— 0
ಹಿತ್ತಾಳೆ ಸೀದು ಒಕ್ಕೆ	14—12	15— 0
ಹಿತ್ತಾಳೆ ತಗಡು ಮ. ಒಕ್ಕೆ	8— 12	9— 0
ಸವನು ಒಕ್ಕೆ	22— 8	23— 0
ಹುಣಸೆ ಹುಳಿ ಖಂಡಿ ಒಕ್ಕೆ	20— 0	25— 8
ನೇಟಿವ್ ಕಾಫಿ ಖಂಡಿ ಒಕ್ಕೆ	170— 0	180— 0
ಪ್ಲಾಂಟರ ಕಾಫಿ ಖಂಡಿ ಒಕ್ಕೆ	220— 0	250— 0
ಮಡಿಕೇರಿ ಏಲಕ್ಕಿ	23— 0	25— 0
ಸಕಲೇಶಪುರ ಏಲಕ್ಕಿ	28 0	38 — 0

LOOK SHARP! LOOK AHEAD

Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L A A, A. C. R A, F. C. R. A., F. I. S A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

Ladies are also admitted.

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to—

D R Murdeshwar,
Dip Econ; F. R Econ, S. (Lond.)
Principal.
Ganapathy High School Street,
Mangalore

Comfortable like an Aeroplane



Use our swadeshi Mosquitonet for health, Comfort and sound sleep, as if you are in an Aeroplane. Sample cutting free. More convenient if some advance sent with order

L	B	H	Price.	Best.
6 Fit	3½ Fit	3½ Fit.	Rs 1/12	2/6
6 „	4 „	4 „	„ 2/4	3/-
6½ „	4½ „	4½ „	„ 2/8	3/8
7 „	5 „	5 „	„ 3/2	4/10
7½ „	6 „	6 „	„ 4/4	5/12

G M. Sharma, Post Box F 6706.
Calcutta

ಕಣ್ಣಿನ ಪಟಿ.

"ಐ—ಸನ್" ಎಂಬ ನೇತ್ರಭಾಸ್ಕರ—ಈ ಔಷಧವು ಕಣ್ಣುಪೊರೆ, ದೃಷ್ಟಿಮಾಂದ್ಯ ಇತ್ಯಾದಿಯನ್ನು ತೀವ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ. ಶಸ್ತ್ರಕ್ರಿಯೆಯು ಅವಶ್ಯವಿಲ್ಲ. ಖಾತರಿ ಗುಣಲಾಭ. ಗುಣವಾಗದಿದ್ದರೆ ಹಣ ವಾಪಸ್. ಕ್ರಯ ರೂ. 2

ಪತ್ರವ್ಯವಹಾರ ಇಂಗ್ಲೀಷಿನಲ್ಲಿ —

Haryyasram, Panchpota, Bengal

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಆಷಾಢ ಬ ೧೨ ಶನಿವಾರದಿಂದ ಶ್ರಾವಣ ಶು ೩ ಶುಕ್ರವಾರದ ವರೆಗಿನ ಪಂಚಾಂಗ (೧೯೩೫ನೇಯ ಕರ್ನಾಟಕ ಅಟಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
27	ಶನಿ	೧೨	೧೯	ಮೃಗಶಿರಾ	೪೫	೧೦	ಅಮಾವಾಸ್ಯೆ
28	ರವಿ	೧೪	೧೯	ಆರ್ದ್ರಾ	೪೨	೧೨	
29	ಸೋಮ	೧೪	೨೧	ಪುನರ್ವಸು	೪೬	೧೪	
30	ಮಂಗಳ	೩೦	೨೪	ಪುಷ್ಯ	೪೧	೧೪	
31	ಬುಧ	೧	೨೮	ಆಶ್ಲೇಷಾ	೪೬	೧೮	
1.	ಗುರು	೨	೩೨	ಮಘಾ	೫೩	೧೬	
2	ಶುಕ್ರ	೩	೩೭	ಹುಬ್ಬಾ	೫೯	೧೭	

ಬಾಹ್ಯ ಪ್ರಪಂಚ ಪರಿಚಯ.

ಒಸ್ಟ್ರೇಲಿಯಾ

ಒಸ್ಟ್ರೇಲಿಯಾವು ಸಂಯುಕ್ತ ಅಮೇರಿಕಾಕ್ಕಿಂತ ದೊಡ್ಡದು. ಆದರೆ ಅಲ್ಲಿ ಸಾಕಷ್ಟು ಜನರಿಲ್ಲ. ಜನಸಂಖ್ಯೆ 6,000,000ಕ್ಕಿಂತಲೂ ಕಡಮೆ. ಪರಿಣಾಮವಾಗಿ ಜನನಿವಾಸವಿಲ್ಲದ ಪ್ರದೇಶಗಳೇ ಅಲ್ಲಿ ಹೆಚ್ಚು. ಇದಕ್ಕಾಗಿ ಈ ದೇಶವನ್ನು "ಖಾಲಿ ಭೂಮಿ" ಎನ್ನುವರು. ಜನಸಂಖ್ಯೆಯು ಕಡಮೆಯಾಗಿರುವುದರಿಂದ ಒಸ್ಟ್ರೇಲಿಯಾದಲ್ಲಿ ಯಾವ ಪ್ರಗತಿಪರ ಸಾಹಸಕ್ಕೂ ಕೈಹಾಕಲಾಗಲಿಲ್ಲ. ಕಾರಣವಾಗಿ ದೇಶವು ಸಜೀವವಾಗಿರುವಂತೆ ತೋರುವುದಿಲ್ಲ.

ಒಸ್ಟ್ರೇಲಿಯಾದಲ್ಲಿರುವ ವಿಜಾತೀಯವಾದ ಪ್ರಾಣಿಗಳಾಗಲೀ ಪಕ್ಷಿಗಳಾಗಲೀ ಜಗತ್ತಿನ ಯಾವ ದೇಶದಲ್ಲೂ ಇರುವುದಿಲ್ಲ. ಕಂಗೇರೋವಿನಂತಹ ಒಂದು ಪ್ರಾಣಿಯು ಅಲ್ಲಿದೆ. ಅದು ತನ್ನ ಹೊಟ್ಟೆಯಲ್ಲಿರುವ ಚೀಲದಲ್ಲಿ ತನ್ನ ಮರಿಗಳನ್ನಿಟ್ಟುಕೊಂಡು ಓಡುತ್ತದೆ. ನಗುವ ಕತ್ತೆಗಳೂ ಅಲ್ಲಿವೆ. ಕಾಡುಗುಡ್ಡಗಳನ್ನು ಹೊಕ್ಕೊಡನೆ ಈ ಕತ್ತೆಗಳು ಪೊದರುಗಳೆಡೆಯಲ್ಲಿ ಅಡಗಿಕೊಂಡು ಜನರು ಮರೆಯಾದೊಡನೆ-ಹೆಚ್ಚಾಗಿ-ಮನುಷ್ಯರೇ ನಗುವಂತೆ ನಗುತ್ತವೆ.

ಒಸ್ಟ್ರೇಲಿಯಾದಲ್ಲಿ ಸಿದ್ಧವಾಗುವಷ್ಟು ಉಣ್ಣೆಯು ಬೇರಾವ ದೇಶದಲ್ಲೂ ಆಗುವುದಿಲ್ಲ. ಅಲ್ಲಿ ದೊರೆಯುವಷ್ಟು ಹಣ್ಣು ಹಂಪಲುಗಳು, ಬೆಣ್ಣೆ, ಮೊಸರುಗಳು ಬೇರೆಲ್ಲಿಯೂ ದೊರೆಯದು.

ಒಸ್ಟ್ರೇಲಿಯಾವು 3,000,000 ಚಚ್ಚೌಕ ಮೈಲುಗಳಷ್ಟು ವಿಸ್ತೀರ್ಣವಿದೆ. ಈ ದೇಶವನ್ನು 300 ವರ್ಷಗಳ ಹಿಂದೆ ಕಂಡು ಹಿಡಿಯಲಾಯಿತು. ವಿಲ್ಲಿಯಂ ಡೇಂಪಿಯರ್ ಎಂಬವನು ರೋಬಕ್ ಬೇ ಎಂಬಲ್ಲಿ 1688ರಲ್ಲಿ ಇಳಿದನು.

ನಿಜವಾದ ಒಸ್ಟ್ರೇಲಿಯಾ ದೇಶವನ್ನು ಕಂಡು ಹಿಡಿದುದು ಕೆಪ್ಟನ್ ಕುಕ್ ಎಂಬ ಇಂಗ್ಲಾಂಡಿನ ಅಸಾಧಾರಣ ಸಾಹಸಿಗನು. ಅವನು 1770ರಲ್ಲಿ ಪೆಸಿಫಿಕ್ ಸಮುದ್ರದಲ್ಲಿ ಒಂದು ಶೋಧನ ಸಂಚಾರವನ್ನು ನಡೆಸಿದನು. ಅವನು ಈಗ ಸಿಡ್ನಿ ಪಟ್ಟಣವಿರುವಲ್ಲಿಗೆ ತಲಪಿದನು. ನಾಡಿನ ಸೊಬಗು ಅವನ ಮನವನ್ನಾಕರ್ಷಿಸಿತು. ಅವನಿಗೆ ಆ ನಾಡಿನಲ್ಲಿ ವಿಪುಲವಾದ ವ್ಯಾಪಾರ ವ್ಯವಹಾರಗಳನ್ನು ನಡೆಸಬಹುದೆಂದು ತೋರಿಬಂತು. ಅವನು ಆ ನಾಡಿಗೆ ಬೊಟನಿ ಬೇ ಎಂದು ಹೆಸರಿಟ್ಟು ಅದು ಇಂಗ್ಲಾಂಡಿನ ರಾಜ್ಯಾಂಶವೆಂದು ಸಾರಿದನು.

ಇಂಗ್ಲಾಂಡು ಒಂದು ಹೊಸ ದೇಶದ ಅಗತ್ಯದಲ್ಲಿದ್ದಾಗ ಈ ದೇಶವನ್ನು ಕಂಡುಹಿಡಿಯಲಾಯಿತು. ಪ್ರಾಚೀನ ಕಾಲದಿಂದಲೂ ಇಂಗ್ಲಾಂಡಿನಲ್ಲಿ ಕೊಲೆಪಾತಕಿಗಳಾದವರನ್ನು ಗಡಿಪಾರು ಮಾಡುವ ಕ್ರಮವಿತ್ತು. ಅನೇಕಾನೇಕರನ್ನು ವರ್ಜೀನಿಯಾ ಮತ್ತು ವೆಸ್ಟ್ ಇಂಡೀಸ್‌ಗಳಿಗೆ ಕಳುಹಿಸಿದ್ದರು. ಆದರೆ ಅವರನ್ನು ಹೀಗೆ ಈ ದೇಶಗಳಿಗೆ ಗಡಿಪಾರು ಮಾಡುತ್ತಿರುವುದರಿಂದಾಗಿ ಅಮೇರಿಕನ ಕೊಲೊನಿಗಳವರು ರೇಗಿ ಬೀಳುತ್ತಿದ್ದರು.

ಮುಂದಕ್ಕೆ ರಾಜದ್ರೋಹಿಗಳನ್ನು ಈ ಪ್ರಾಂತ್ಯಕ್ಕೆ ಗಡಿಪಾರು ಮಾಡಬೇಕೆಂದು ನಿರ್ಣಯವಾಯಿತು. 1788ನೇ ಇಸವಿ ಜನವರಿ 28ಕ್ಕೆ ರಾಜದ್ರೋಹಿಗಳ ಪ್ರಥಮ ಪಂಗಡವು ಬೊಟನಿ ಬೇಗೆ ತಲಪಿತು. ಬಂದವರು ತಮ್ಮೊಂದಿಗೆ ಎಲ್ಲಾ ಸಾಮಗ್ರಿಗಳನ್ನು ತರಬೇಕಾಗಿದ್ದಿತು. ಕಾರಣ, ಪ್ರಾಂತ್ಯದಲ್ಲಿ ಯಾವ ಆಹಾರವಾಗಲೀ ಸಾಹಿತ್ಯಗಳಾಗಲೀ ಸಿಗುತ್ತಿದ್ದಿಲ್ಲ.

ಈ ದಿನವನ್ನು ಈಗ ಒಸ್ಟ್ರೇಲಿಯದ ಜನ್ಮದಿನವೆಂದು ಆಚರಿಸುತ್ತಿರುವರು. ಮತ್ತು ಹಲವು ರಾಜದ್ರೋಹಿಗಳ ಪಂಗಡಗಳು ಅಲ್ಲಲ್ಲಿ ಬಂದುವು. ಕ್ರಮೇಣ, ಬೊಟನಿ ಬೇಯು ಭೀಕರ ದೇಶವಾಯ್ತು.

ಒಸ್ಟ್ರೇಲಿಯದಲ್ಲಿ ಸಂಚರಿಸಿದ ಜನರು ಅಲ್ಲಿಯ ಫಲವತ್ತಾದ ಭೂಮಿ ಇನ್ನಿತರ ವೈಶಿಷ್ಟ್ಯಗಳನ್ನು ಕಂಡರು. ಸಾಮಾನ್ಯ ಜನರು ಮೆಲ್ಲಗೆ ಒಸ್ಟ್ರೇಲಿಯಾದಲ್ಲಿಳಿದರು. ನಾಗರಿಕ ದೇಶವು ಬೆಳೆಯಿತು. ಕಾಲ ಕ್ರಮೇಣ ಜನಸಂಖ್ಯೆಯು ಅಲ್ಲಿ ಹೆಚ್ಚಿತು. ಕೊನೆಗೆ ಒಸ್ಟ್ರೇಲಿಯಾದ ಜನರು ಒಂದಾಗಿ ಮುಂದಕ್ಕೆ ರಾಜದ್ರೋಹಿಗಳನ್ನು ಈ ದೇಶಕ್ಕೆ ಕಳುಹಿಸಬಾರದೆಂದು ನಿಶ್ಚಯ ಮಾಡಿದರು. 1840ರಲ್ಲಿ ಇಂಗ್ಲಾಂಡಿನಿಂದ ಒಸ್ಟ್ರೇಲಿಯಾಕ್ಕೆ ಕೊನೆಯ ಪಂಗಡವೊಂದನ್ನು ಕಳುಹಿಸಲಾಯಿತು.

ಒಸ್ಟ್ರೇಲಿಯಾದ ಜನರು ಅಲ್ಲಿಯ ಕುರಿ ಮಂದೆಗಳನ್ನು ಕಂಡುಹಿಡಿದರು. ತಮ್ಮ ನಾಡಿನಲ್ಲಿ ಕಾಣಸಿಗುವಷ್ಟು ಕುರಿಗಳು ಮತ್ತೆಲ್ಲಿಯೂ ಸಿಗಲಾರವೆಂದು ತಿಳಿದು, ಅವರು ಉಣ್ಣೆಯ ವ್ಯಾಪಾರವನ್ನೇ ತಮ್ಮ ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಳ್ಳಲಾರಂಭಿಸಿದರು. ಕುರಿ ಮಂದೆಗಳನ್ನು ಮೇಯಿಸುವುದಕ್ಕಾಗಿ ದೊಡ್ಡ ದೊಡ್ಡ ಗುಡ್ಡ ಕಾಡುಗಳನ್ನು ಪಡೆದುಕೊಂಡರು. ನ್ಯೂಸೌತ್ ವೇಲ್ಸ್ ಸರಹದ್ದಿನ ವರೆಗೂ ಅವರ ಪ್ರದೇಶಗಳು ವ್ಯಾಪಿಸಿದುವು. ಉಣ್ಣೆಯ ಕೈಗಾರಿಕೆಗಾಗಿ ನೂರಾರು ಮಳಿಗೆಗಳಾದುವು.

ಒಂದು ದಿನ ಒಬ್ಬ ಕುರುಬನು ಗುಡ್ಡದ ಹಾದಿಯ ಮೇಲಿಂದ ಒಂದು ಕೊರಡು ಚಿನ್ನವನ್ನು ಹೆಕ್ಕಿದನು. ಅದನ್ನವನು ಮೆಲ್ಬೊರ್ನಿಗೆ ತಂದನು. ದುರ್ದೈವವಶಾತ್, ಈ ವರ್ತಮಾನವು ಲೋಕದಲ್ಲಿ ಹರಡಿ ಒಸ್ಟ್ರೇಲಿಯಾದಲ್ಲಿ ಚಿನ್ನವು ದೊರೆಯುತ್ತದೆಂದು ತಿಳಿದುಬಂತು. ಜನರು ತಂಡತಂಡವಾಗಿ ಅತ್ತ ತೆರಳಿದರು. ಚರಿತ್ರೆಯಲ್ಲಿ ಎಂದೂ ಕಾಣದ ಆವೇಶವು ಆ ಜನರಲ್ಲಿ ಕಂಡು ಬಂತು.

ಚಿನ್ನವನ್ನು ಹೆಕ್ಕಲು ಧಾವಿಸಿದ ಜನರಲ್ಲಿ ಅನೇಕರು ರೋಗಗ್ರಸ್ತರಾಗಿ ತೀರಿಕೊಂಡರು. ಅನೇಕಾನೇಕರಿಗೆ ಭೂಮಿಯಲ್ಲಿ ಚಿನ್ನವು ದೊರೆಯಿತು. ಎಷ್ಟೋ ಮಂದಿ ಬಹಳ ಐಶ್ವರ್ಯವಂತರಾದರು. ಒಂದು ಕಾಲದಲ್ಲಿ ಜನನಿವಾಸವಿಲ್ಲದ ವಿಕ್ಟೋರಿಯಾ ಸಂಸ್ಥಾನವು ಸ್ವಲ್ಪ ಸಮಯದಲ್ಲೇ ಜನನಿಬಿಡವಾಗಿ ಬಿಟ್ಟಿತು.

ಒಸ್ಟ್ರೇಲಿಯಾದ ಜನರಲ್ಲಿ ನೂತನ ಸ್ಫೂರ್ತಿಯುಂಟಾಯಿತು. ಅವರು ತಂತಮ್ಮ ಕಾರ್ಖಾನೆಗಳನ್ನು ನಿರ್ಮಿಸಿಕೊಂಡರು. ಕಲ್ಲಿದ್ದಲು ಗಣಿಗಳನ್ನು ತೋಡಿದರು. ನ್ಯೂ ಸೌತ್ ವೇಲ್ಸನ್ನು ಕಂಡುಹಿಡಿದರು. ಪಶ್ಚಿಮ ದೇಶಗಳಲ್ಲಿ ಶೋಧೆ ನಡೆಸಿ ಚಿನ್ನದ ಗಣಿಗಳನ್ನು ಅಗೆಸಿದರು. ಹತ್ತಿ ಕಬ್ಬುಗಳ ಬೆಳೆಗಳಾದುವು. ತಂಕರದ ಮುತ್ತುಚಿಪ್ಪುಗಳ ವ್ಯಾಪಾರವು ಪ್ರಾರಂಭಿಸಲ್ಪಟ್ಟಿತು.

ಒಸ್ಟ್ರೇಲಿಯಾನರಿಗೆ ಇಂಗ್ಲಾಂಡಿನ ಮೇಲೆ ಬಹು ಪ್ರೇಮ. ಇಂಗ್ಲಾಂಡಿನಿಂದ 12000 ಮೈಲುಗಳಷ್ಟು ದೂರದಲ್ಲಿ ಅವರಿರುವರಾದರೂ, ಇಂಗ್ಲಾಂಡು ತಮ್ಮ ಸ್ವದೇಶವೆಂದೇ ಅವರು ತಿಳಿಯುತ್ತಿರುವರು. ಆಗಾಗ್ಗೆ ಇಂಗ್ಲಾಂಡನ್ನು ನೋಡಲು ಬರುವರು. ಬ್ರಿಟಿಷ ವಸ್ತುಗಳನ್ನೂ ಜನರನ್ನೂ ಅವರು ಬಹುವಾಗಿ ಪ್ರೀತಿಸುವರು. ಮಹಾಯುದ್ಧದ ಸಮಯದಲ್ಲಿ ಒಸ್ಟ್ರೇಲಿಯಾವು ಯೂರೋಪಿಗೂ ಈಜಿಪ್ಟಿಗೂ ದೊಡ್ಡ ಸೈನ್ಯವನ್ನು ಕಳುಹಿಸಿ ಮಾತೃಭೂಮಿಯನ್ನು ರಕ್ಷಿಸುವ ಸಾಹಸದಲ್ಲಿ ಸಹಕರಿಸಿತು.

ಒಸ್ಟ್ರೇಲಿಯಾದಲ್ಲಿ ಜೀವಿಸುವುದೆಂದರೆ ಆನಂದವುಂಟಾಗುತ್ತದೆ. ಅಲ್ಲಿ ಸೂರ್ಯಪ್ರಕಾಶಿತವಾದ ಸುಂದರವಾದ ಭೂಮಿಯಿದೆ. ಅಲ್ಲಿ ಬೇಸಿಗೆ ಕಾಲವು ದೊಡ್ಡದು. ಉಷ್ಣವು ಹೆಚ್ಚು. ಚಳಿಗಾಲದಲ್ಲಿ ಬಹಳ ಚಳಿ.

ಒಸ್ಟ್ರೇಲಿಯಾನರ ಒಂದು ಸಮಸ್ಯೆಯೆಂದರೆ ಅವರ ವಾಸದ ವಿಷಯ. ಅಲ್ಲಿಯ ಜನರೆಲ್ಲರೂ ಪಟ್ಟಣವಾಸವನ್ನೇ ಆಶಿಸುವರು. ಕೃಷಿಗೆ ಯೋಗ್ಯವಾದ ವಿಶಾಲ ಭೂಮಿಯು ಅವರ ದೇಶದಲ್ಲಿ ಸಿದ್ಧವಾಗಿದೆಯಾದರೂ ಅವರು ಬೇಸಾಯಕ್ಕೆ ಲಕ್ಷ್ಯ ಹರಿಸುವುದು ಕಡಮೆಯೆಂದೇ ಭಾಸವಾಗುತ್ತದೆ. ಪ್ರತಿ ಐದು ಮಂದಿಯಲ್ಲಿ ಇಬ್ಬರು ಸಿಡ್ನಿ ಅಥವಾ ಮೆಲ್ಬೋರ್ನ್ ನಗರಗಳಲ್ಲಿ ವಾಸಿಸುವರು. ಸಿಡ್ನಿಯು ನ್ಯೂ ಸೌತ್ ವೇಲ್ಸಿನ ರಾಜಧಾನಿ. ಮೆಲ್ಬೋರ್ನ್ ವಿಕ್ಟೋರಿಯಾದ ರಾಜಧಾನಿ. ಈ ಎರಡು ಪ್ರಧಾನ ನಗರಗಳು ಒಂದನ್ನೊಂದು ಪ್ರತಿಭಟಿಸುತ್ತವೆ. ಒಂದಕ್ಕಿಂತ ಇನ್ನೊಂದು ಉನ್ನತವಾಗಬೇಕೆಂದು ಪಂಥಗಟ್ಟಿದಂತಿವೆ.

ಒಸ್ಟ್ರೇಲಿಯಾ ದೇಶವನ್ನು ಪ್ರಥಮದಲ್ಲಾಗಿ ರಾಜ್ಯಾಡಳಿತದ ಆವರಣಕ್ಕೆ ತಂದಾಗ ಅಲ್ಲಿಯ ಪ್ರತಿಯೊಂದು ಸಂಸ್ಥಾನಕ್ಕೂ ಅದರ ಸ್ವಂತ ಸರಕಾರವಿತ್ತು. ಇಂಗ್ಲಾಂಡಿನ ಅರಸರಿತ್ತ ಗವರ್ನರ್ ಜನರಲನೋ ಗವರ್ನರನೋ ಪ್ರತಿನಿಧಿಸುತ್ತಿದ್ದನು. ಆಗ ಒಟ್ಟು ಆರು ಸಂಸ್ಥಾನಗಳಿದ್ದುವು:- ನ್ಯೂ ಸೌತ ವೇಲ್ಸ್, ವಿಕ್ಟೋರಿಯಾ, ಸೌತ್ ಒಸ್ಟ್ರೇಲಿಯಾ, ಕ್ವೀನ್ಸ್‌ಲ್ಯಾಂಡ್, ವೆಸ್ಟರ್ನ್ ಒಸ್ಟ್ರೇಲಿಯಾ ಮತ್ತು ತಸ್ಮಾನಿಯಾ. ಪ್ರತಿಯೊಂದು ಸಂಸ್ಥಾನವೂ ತನ್ನ ಮಟ್ಟಿಗೆ ಸ್ವತಂತ್ರವಾಗಿದ್ದಿತು. ಆದರೆ ಜನಸಂಖ್ಯೆಯು ಹೆಚ್ಚಿದಂತೆ ಈ ಸಂಸ್ಥಾನಗಳು ಐಕ್ಯತೆಯನ್ನು ಇಚ್ಛಿಸಿದುವು. ತಾವು ಒಂದಾಗಿ ರಾಜ್ಯವನ್ನಾಳಿದರೆ ಲಾಭವಿದೆಯೆಂದು ಜನರು ಕಂಡು ಕೊಂಡರು. 1901ರಲ್ಲಿ ಒಸ್ಟ್ರೇಲಿಯಾದ ಕೊಮನ್‌ವೆಲ್ತಿನ ಸ್ಥಾಪನೆಯಾಯಿತು. ಇದೇ ಒಸ್ಟ್ರೇಲಿಯಾವನ್ನು 6 ಸಂಸ್ಥಾನಗಳನ್ನಾಗಿ ವಿಭಾಗಿಸಲಾಯಿತು.

ಕೊಮನ್‌ವೆಲ್ತಿನ ಪ್ರಧಾನ ನಗರವು ಯಾವುದಾಗಬೇಕೆಂಬ ಕುರಿತಾಗಿ ಬಹಳವಾದ ವಿವಾದವಿದ್ದಿತು. ಕೊನೆಗೆ ಮೆಲ್ಬೋರ್ನ್ ಮತ್ತು ಸಿಡ್ನಿಗಳ ಮಧ್ಯೆ 900 ಚದರ ಮೈಲುಗಳಷ್ಟು ವಿಸ್ತೀರ್ಣವುಳ್ಳ ಪ್ರದೇಶವೊಂದನ್ನು ಗೊತ್ತು ಮಾಡಲಾಯಿತು. ಒಂದು ಕಾಲದಲ್ಲಿ ಕುರಿ ಮಂದೆಯು ಮೇಯುತ್ತಿದ್ದ ಗುಡ್ಡಬೆಟ್ಟಗಳಿದ್ದ ಸ್ಥಾನದಲ್ಲಿ ಕನ್‌ಬೇರಾ ಎಂಬ ಪ್ರಧಾನ ನಗರ ರಚನೆಯನ್ನು ಮಾಡಲಾಯಿತು.

ಕನ್‌ಬೇರಾವು ನಿರೀಕ್ಷಿಸಿದಷ್ಟು ಪ್ರಗತಿಪರವಾಗಿರುವುದಿಲ್ಲ. ಸಿಡ್ನಿಯು ಮಾತ್ರ ಬಹು ವಿರಾಜಮಾನವಾಗಿದೆ.

ಸಿಡ್ನಿಯು ಒಸ್ಟ್ರೇಲಿಯಾದ ವಾಣಿಜ್ಯ ಕೇಂದ್ರ. ಸ್ಟೀಮರ್ ಮತ್ತು ರೈಲುಗಳ ದೊಡ್ಡ ದೊಡ್ಡ ಕಂಪೆನಿಗಳಿವೆ. ಈ ಪಟ್ಟಣದಲ್ಲಿ 1911ರಲ್ಲಿ ಸಾಧಾರಣ ಒಂದು ಮಿಲಿಯ ಜನರು ವಾಸಿಸುತ್ತಿದ್ದರು. ಈಗ ಇಲ್ಲಿಯ ಜನಸಂಖ್ಯೆಯು ಅತಿರೇಕವಾಗಿದೆ. ಇದೀಗ ಗ್ಲಾಸ್ಗೊ ಮತ್ತು ಹೇಂಬರ್ಗ್ ಪಟ್ಟಣಗಳಷ್ಟು ದೊಡ್ಡದಾಗಿದೆ.

ಮೆಲ್ಬೋರ್ನ್ ಪ್ರಾಂತ್ಯದಲ್ಲಿ 1835ರಲ್ಲಿ ಬರೇ 150 ಜನರಿದ್ದರು. ಈಗ ಅಲ್ಲಿ 800,000 ಜನರಿರುವರು. ಮಾರ್ಗಗಳೂ ಕಟ್ಟಡಗಳೂ ಪ್ರಾಂತ್ಯದ ಸೌಂದರ್ಯವನ್ನು ಹೆಚ್ಚಿಸಿದೆ.

THERE IS A
WHITE LIGHT SHINING

FULL & SQUARE in the piercing light of PUBLIC OPINION to each bank stands revealed to the people whom it serves.

The service which any bank renders is never better nor worse than people belive it to be. Public opinion determines its success or failure. The strong bank receives not only the deposits of people, but also the hearty support which prompts them to recommend it to their friends.

ESTD 1906.

CANARA BANK LTD.

MANGALORE.

OFFICES AT —

Bombay—Fort,	Mangalore—Bunder,
Bombay—Mandvi,	Mangalore—City,
Hubli,	Kasaragod,
Calicut,	Puttur,
Cochin,	Buntwal,
Ernakulam,	Karkala,
Alleppey,	Udipi,
Bangalore,	Coondapoor,
Dangerave,	&
Chickmagalur,	Gangoli.

Capital	Reserves	Working Capital
3,31,000	4,50,000	73,49,000

ನೈಲು ಕಲ್ಲುಗಳೊಡನೆ 'ಮಾತುಕಥೆಗಳು

ಲೇಖಕರು:—ಕೂ. ಶಿವರಾಮ ಕಾರಂತರು

ಗುಡಿಯಿಲ್ಲದ ಮಹಾಲಿಂಗ

[ಸುಳ್ಯದ ಬಳಿಯ ಕಗ್ಗಾಡಿನಲ್ಲೊಂದು ದಿನ ಭೇಟಿಯಾದ ಮಹಾಲಿಂಗನ ಕಥೆಯಿದು. ಪಯಸ್ವಿನೀ ನದಿಯ ತೀರ ನಾವು ಕೆಲವರು ಅಲಟ್ಟೆಗೆ ಹೋಗುತ್ತಿದ್ದೆವು ನದಿಯಾಚೆಗಿನ ದಟ್ಟ ಕಾಡಿನಲ್ಲಿ ಮಹಾಲಿಂಗನ ಗುಡಿಯಿದೆ ಗುಡಿಯೋಗ- ಸುತ್ತಲಿನ ಪ್ರದೇಶದೊಂದಿಗೆ ಬೆರತಿದೆ ಮಹಾಲಿಂಗನೊಬ್ಬನು, ಅಕಿ ಕೆಸರು, ಕೊಳಚೆಗಳಲ್ಲಿ ನಿಂತು ರೋದಿಸುತ್ತಿದ್ದಾನೆ ಅಂತಹ ಮಹಾಲಿಂಗರು ನಮ್ಮ ಜಿಲ್ಲೆಯ ನೂರಾರು ಮೂಲೆಗಳಲ್ಲಿರುವರು. ಎಷ್ಟೋ ಮಹಾಲಿಂಗರು, ಇದೇ ರೀತಿ ನನ್ನೊಡನೆ ಮಾತನಾಡಿದುದರಿಂದ, ಈ ಮಹಾಲಿಂಗನ ವಿಚಾರ ಬರೆಯುತ್ತಿದ್ದೇನೆ!]

ನಾವು ಕೆಲವರು ನದಿಯನ್ನು ದಾಟಿದೆವು ಕಲ್ಲು ಬಂಡೆಗಳ ಮೇಲೆ ನೊಸರು ಕಡೆಯುವಂತೆ, ತನ್ನನ್ನು ತಾನು ಕಡೆದುಕೊಂಡು ಪಯಸ್ವಿನಿ ಹರಿಯುತ್ತಿದ್ದಳು. ಪಯಸ್ವಿನಿ, ತಪಸ್ವಿನಿಯು ಅಹುದೋ ಏನೋ—ಕಾಡಿನೆಡೆಯಲ್ಲೆ ಅವಳ ವಾಸ ಪಯಸ್ವಿನಿಯ ನೀರನ್ನು ಕುಡಿದೆವು—ಉಂಡ ಮನೆಗೆರಡೆಣಿಸಿ—ನೀರಿನ್ನು ಕುಡಿದು ಅವಳ ಮೋರೆಯ ಮೇಲೆ ಉಗುಳಿ ಮುಂದೆ ಸಾಗಿದೆವು ತುಸು ದೂರ ಸರಿದಿದ್ದೆವಷ್ಟೆ—ದರಿದ್ರದ ಮರಕಪ್ಪೆಯೊಂದು, ಕಿರುಚುತಿತ್ತು.

ನಾನು—ಎಲಾ, ಚಿರಿಚಿರಿ ಚೀರುವರು ಯಾರು, ಇಸ್ಕೂಲು ಮಾಸ್ತರರ ಹಾಗೆ' ಯಾರು ಇದರ ಲೆಕ್ಕರು ಕೇಳುವವರಂತೆ

ನನ್ನ ಜತೆಯಲ್ಲಿದ್ದ ಒಬ್ಬರು ಮಾಸ್ತರರು—(ಸಿಟ್ಟಾದರೋ ಏನೋ) ಅದು ಮರಕಪ್ಪೆಯಲ್ಲವೆ

ನಾನು—ಕಪ್ಪೆ ಎಂದರೆ ಬ್ರಾಹ್ಮಣನಂತೆ ನಾವು ಚಿಕ್ಕವರಿರುವಾಗ ನಮ್ಮಮ್ಮ ಹಾಗೆ ಹೇಳುತ್ತಿದ್ದ ನೆನಪು ಅದನ್ನು ಕೊಂದರೆ ವಿಪ್ರರನ್ನು ಕೊಂದಷ್ಟು ಪಾಪ ಎನ್ನುತ್ತಿದ್ದರು ಮುಂಗಾರು ಮಳೆಗೆ ನಮ್ಮೂರ ಗದ್ದೆ ಅಂಚಿನಲ್ಲಿ, ಅವು ಸಾಲಾಗಿ ಕುಳಿತು ಟ್ರೊಂಯಿ ಗುಟ್ಟುವುದನ್ನು ನಾನು ಕಂಡವನು ಬ್ರಾಹ್ಮಣರು ರುದ್ರದ ದಿವಸ ಅದೇ ರೀತಿ ವೇದದ ಋಕ್ಕು ಹೇಳಿದುದನ್ನು ಕೇಳಿದ್ದೆ ಹೀಗಿದ್ದು—ಅದನ್ನು ಬ್ರಾಹ್ಮಣ ಜಾತಿಗೆ ಸೇರಿಸಿದ್ದು ತಪ್ಪಲ್ಲ ಆದರೆ—ಕಪ್ಪೆಗೆ ಮರವೇರುವ ಕೆಲಸವೇಕೆ? ಬಿಲ್ಲವರ ಕೆಲಸ ಬ್ರಾಹ್ಮಣರಿಗೇಕೆ?

ಮಾಸ್ತರರು—ಛೇ, ಅದು ಇರುವುದು ಹೆಚ್ಚಾಗಿ ಮರದ ಮೇಲೆ, ಅತ್ತಿಂದಿತ್ತ ಹಾರುವುದೂ ಉಂಟು

ನಾನು—ಹಾಂ . ಈ ಜಾತಿಯ ಕಪ್ಪೆಗಳನ್ನು ಕಂಡು "ಹಾರುವ" ಎಂದದ್ದು ಇರಲಿ, ನೋಡಿಬಿಡುವ ಹಾರುವವನ ರೂಪವನ್ನಾದರೂ!

ಮಾಸ್ತರರು—ಸದ್ದ ಆಯಿತು, ಕಪ್ಪೆ ನೋಡಲಿಕ್ಕೆ ನಿಂತರೆ, ಹೊತ್ತು ಮುಣುಗೀತು ಅಲಟ್ಟೆ ಮುಟ್ಟುವಾಗ

ನಾನು—ಆಲಾ, ಆ ಕಪ್ಪೆ ಏನು ಮಂತ್ರ ಹೇಳುತ್ತಿದೆ? ರುದ್ರದ ಬ್ರಾಹ್ಮಣರ ಹಾಗೆ

(ಹೀಗೆಂದು ಭಾರೀ ಪತ್ತೆದಾರನಂತೆ, ಅದರ ನಿನಾದವು ಹೊರಡುಟ್ಟು ಸ್ಥಳಕ್ಕೆ ವಿಜಯಂಗೈದೆ! ನೋಡುವಲ್ಲಿ ಸದರಿ ಕಪ್ಪೆಯಿತ್ತು ಒಂದು ಕಲ್ಲಿನ ಮೇಲೆ ಕುಳಿತು—ಟ್ರೊಂಯಿಗುಟ್ಟುತ್ತಿತ್ತು)

ನಾನು—ಬ್ರಾಹ್ಮಣರು ಶಿವಲಿಂಗದ ಮುಂದೆ ಕುಳಿತು ರುದ್ರ ಹೇಳಿದರೆ, ನೀನು ಲಿಂಗದ ತಲೆಯ ಮೇಲೆಯೇ ಕೂತು

(ಕಪ್ಪೆಗೆ ಅವಮಾನವಾಯಿತೋ ಏನೋ, ಅದು ಓಡಿತು)

ಮಾಸ್ತರರು—ಅಲ್ಲ, ಅದು ನಿಜಕ್ಕೂ ಶಿವಲಿಂಗವೇ! ಈ ಗುಡಿಯ ಹೆಸರೇನು? ನೋಡಿ ಅದರ ಪಾಣಿಪೀಠ, ಗುಡಿಕಲ್ಲು ಎಲ್ಲ ಚೆದರಿ ಬಿದ್ದದ್ದು.

(ಹಾಳು ಗುಡಿಯೊಂದರ ಭಗ್ನಾವಶೇಷಗಳು ಕಾಣಿಸುತ್ತಿದ್ದವು. ಮಹಾಲಿಂಗನು ಕುಳಿತಿದ್ದಾನೆ, ಗುಡಿಗೆ ಮಾಡು ಗೋಡೆಗಳೆರಡೂ ಇಲ್ಲ; ಏನೇನೋ ನನ್ನ ಮನಸ್ಸಿನಲ್ಲಿ ವಿಚಾರಗಳು ಬಂದುವು)

ನಾನು—ಅಪ್ಪಾ, ಲಿಂಗಾ, ಯಾಕೇ ಈ ಜನರು ನಿನ್ನನ್ನು ಅಟ್ಟಕ್ಕೇರಿಸಿ, ಮಹಾಲಿಂಗನನ್ನಾಗಿ ಮಾಡಬೇಕು? ಈಗ ಹೀಗೆ . . .

ಮಹಾಲಿಂಗ—ನೀನಾರಯ್ಯ, ಹೀಗೆ ಬಲು ಕರುಣೆಯಿಂದ,

ನಾನು—ನಾನು ಅಂದರೆ ನಿನ್ನ ಹೆಸರಿನವ. ಶಿವರಾಮ ಅಂತ. ಶಿವನ ಸಿಟ್ಟು ಹೆಚ್ಚಾದೀತು ಅಂತ ಹೆದರಿ ಪೆಚ್ಚರಾಮನನ್ನು ಜತೆಗೆ ದೋಸ್ತಿ ಮಾಡಿಸಿ ಬಿಟ್ಟರು ಅದು ಬಿಡ—ನಿನ್ನ ಅವಸ್ಥೆಯೇನು! ನಮ್ಮೂರಲ್ಲಿ ಒಬ್ಬ ಮಹಾಲಿಂಗನಿದ್ದಾನೆ ಏನು ಅವನ ರೀತಿ! ಅಳೆತ್ತರದ ಅಸಾಮಿ' ದಿನಕ್ಕೆರಡು ಸಾರಿ ಅಭಿಷೇಕ, (ಬರಿ ನೀರಲ್ಲಪ್ಪ)—ಮಳೆದಿನವೂ ಸಹ. ಗೋಗಣದಲ್ಲಿದ್ದಾನೆ ಒಬ್ಬ—ಅವನ ವೈಭವ ಹೇಳಿತೀರದು

ಮಹಾ ಅದೇ ವೈಭವವೋ ಅವರದ್ದು ನನ್ನ ಹಾಗೆ ಇರುವುದು ಎಷ್ಟೋ ಲೇಸು.

ನಾನು—ಬಾಲ ಹೋದ ನರಿ ಕಥೆ

ಮಹಾ—ಅಲ್ಲವಯ್ಯ ನನ್ನ ಹೆಸರಿದ ಎಂದು ನಿನಗೆ ಅನ್ನುತ್ತೇನೆ ಇಲ್ಲಿ ನೀರದ ಮೇಲೆ ಕೂತು ಏನು ಅನ್ಯಾಯಕ್ಕೆಲ್ಲ ಸಾಕ್ಷಿಯಾಗಬೇಕಿತ್ತು ಅನ್ನುತ್ತೀಯಾ?

ನಾನು— ಅನ್ಯಾಯವೆಲ್ಲಿ ಪುಣ್ಯಪಾಪ! ಭಕ್ತಿಯಿರಲಿ, ಇಲ್ಲದಿರಲಿ—ಏಕಾದಶವೂ ದ್ವಾದಶವೂ ರುದ್ರ ಮಾಡ್ತಾರೆ ಅರ್ಥ ಅವರಿಗೆ ತಿಳಿಯದು ಅದನ್ನು ನಾವು ಮಾಡುವುದಿಲ್ಲ ನಮ್ಮಲ್ಲೀನಾದರೂ ಮಹಾಸಭೆಯಾದರೆ ಅಧ್ಯಕ್ಷ ಅನ್ನುವ ಅಸಾಮಿ ಗದ್ದುಗೆ ಏರಿ ಕೂತರೆ, ನಾಲ್ಕು ನಾಲ್ಕು ತಾಸು ಏಳುವುದಕ್ಕಿಲ್ಲ ಬಂದ ಬಂದ ನಾಲಿಗೆ ಚಪಲದ ಅಸಾಮಿಗಳು ಕಿರುಚಿದ್ದೆಲ್ಲಾ ಚೆನ್ನಾಗಿದೆ—ಎಂತ ಅನುಭವಿಸಬೇಕು ಇಲ್ಲಿ ಹಾಗೆ ಒದುರುವುದಿಲ್ಲವಲ್ಲ ಒದರುವ ಭಾಷೆ ಸಂಸ್ಕೃತ ನಿನಗೆ ತಿಳಿದಿರಬೇಕು ವಿಷಯ ನಿನ್ನ ಸ್ತುತಿ

ಮಹಾ—ಬೆಂಕಿಬಿತ್ತು ಆ ಸ್ತುತಿಗೆ ಬಾಯಿ ಪಾಠ ಮಾಡಿ ಮೇಲಿಂದ ಮೇಲೆ ಅದನ್ನು ಹೇಳುತ್ತಾ ಇದ್ದರೆ, ಬೇಸರ ಅಲ್ಲ—ಕಿವಿ ಹೊಡ್ದು ಹೋಗಲಿ ಅನಿಸುತ್ತೆ

ನಾನು—ಅನಿಸುತ್ತೆ ಅನಿಸಿದರೆ ನಷ್ಟವೇನು? ಪೂಜೆ, ಹೂವು, ಹಾರ, ಗಂಧ ಇತ್ಯಾದಿ ಎಲ್ಲ ಇರುವಾಗ'

ಮಹಾ—ಅಯ್ಯೊ ಬೇಡಪ್ಪ—ಆ ವಿಷಯ ಬಿಡು ಕರುಳು-ಕತ್ತರಿಸುತ್ತೆ ನೆನೆದರೆ

ನಾನು—ಕರುಳು ಕಿತ್ತುಹಾಕಿ ಬಿಡು ಕಕ್ಕಲ ಹೊರುವ ಕರುಳಿದ್ದರೆ ಹೊಟ್ಟೆ ತೂಲಿ

ಮಹಾ—ಮಾತು ಸರಿಯೆ' ಆದರೆ ಅದರ ವೈಭವ, ನನ್ನ ಹೀನಾವಸ್ಥೆ 'ಎನ್ನುತ್ತೀಯಲ್ಲ'

ನಾನು—ಗೋಕರ್ಣೇಶ್ವರನ ವೈಭವ'

ಮಹಾ—ನಿಜ!

ಅದೇ ಬೇಡ ಎಂದೆ' ನೂರು ಜಪ ಮಾಡುತ್ತೇನೆ ಎಂದು ಮಾತು ಕೊಡುತ್ತಾನೆ ಪೂಜಾರಿ, ನೈವೇದ್ಯಕ್ಕೆ, ಮತ್ತೆ ಸಹ ಜಪವಿಲ್ಲ' ನೈವೇದ್ಯ. ಅಗು ಪಾವು ಅಕ್ಕಿ ಕೊಂಡು, ಎರಡು ಪಾವು ನನಸಿ ಒಂದು ಪಾವು ತೋರಿಸಿ ಮನೆಗೆ ಒಯ್ಯುತ್ತಾನೆ.

ಅಯ್ಯೊ ಅಯ್ಯೊ—ಆ ಮಹಾಲಿಂಗ ಭಟ್ಟ ಅಂತ ನನ್ನ ಹೆಸರಿನವನಿದ್ದ' ನನ್ನ ಮುಂದಿನ ನಂದಾದೀಪವನ್ನು ರಾತ್ರಿ ಗುಡಿಮುಚ್ಚುವಾಗ ತಾನೇ ನೊಂದಿಸಿ, ಬೆಳಗ್ಗೆ ಬಂದಾಗ ತಿರುಗಿ ಹುಟ್ಟಿ ಬಿಡುತ್ತಿದ್ದ . . . .

ನಾನು—ಪೂಜಾರಿಯ ಮಾತು ಬಿಡು. ಅವನಿಗೂ ಪೂಜೆ ಮಾಡಿ ಬೇಸರ ಬರಲಾರದೇ' ಸರಕಾರಿ ಗುಮಾಸ್ತಿಕೆಯಂತೆ, ಅವನೇನು ಗೀಚಿದ್ದೇ ಗೀಚುವುದು. ಆದರೆ ಬರುವ ಭಕ್ತರಿಗಾದರೂ ನಿನ್ನ ಮೇಲೆ ಪ್ರೀತಿಯಿತ್ತೋ ಇಲ್ಲವೊ . . .

ಮಹಾ—ಎಲ್ಲಿ ಪ್ರೀತಿಯಿದ್ದವರೇ

ನಾನು—ಹಾಗೆ ಹೇಳು ಮತ್ತೆ.

ಮಹಾ—ಹೇಳುವುದೇನು ನನ್ನ ಗೋಳನ್ನು! ಬಂದು ಬಂದವರು ನನ್ನ ಹತ್ತಿರ ಫಿರ್ಯಾದಿ ವಿನಹ ಇನ್ನೇನಿಲ್ಲ ಒಬ್ಬಾಕೆ ಬಂದಳು—ತನಗೆ ಮಕ್ಕಳಿಲ್ಲ ಎಂದು ಅತ್ತಳು. ಇನ್ನೊಬ್ಬನಿಗೆ ಸಾಲವಿದೆಯಿದೆಯಂತೆ. ತೀರಿಸಯ್ಯಾ ಎಂದು ಅತ್ತ. ಮೂರನೆಯವನು ಎಲ್ಲಾ ಬಿಟ್ಟು—ತನ್ನ ಕೋಣ ಕಂಬಳದಲ್ಲಿ ಗೆಲವಾಗಲಿ ಎಂದು ಕೇಳಿದ.

ನಾನು—ಕೋಣನೇ ನಂದಿಯ್ದೇ!

ಮಹಾ—ನನ್ನ ನಂದಿಯೇ' ನೋಡಲ್ಲಿ ಎಂಟು ಚೂರಾಗಿ ಬಿದ್ದಿದೆ

ನಾನು—ಯಾರು ಭಜನಿ ಮಹಮ್ಮದ ಬಂದಿದ್ದನೇ ಇಲ್ಲಿ?

ಮಹಾ—ಭಜನಿ ಯಾಕೆ' ಆ ಮಹಾಲಿಂಗ ಭಟ್ಟನ ತಮ್ಮನೊಬ್ಬನಿದ್ದ—ಅವನ ಕೆಲಸ ಎತ್ತಿ ಕಸರತ್ತು ಮಾಡಿ ನಂದಿಯನ್ನು ಕೆಡೆದು ಚೂರು ಮಾಡಿದ! ಊರಲ್ಲಿ ಬೊಬ್ಬೆ ಬಿತ್ತು. ನಂದಿ ಚೂರಾಯಿತು, ಊರು ಸುಡುತ್ತದೆ ಎಂದು ಭಟ್ಟನ ತಮ್ಮನ ಮೇಲೆ ಸಂಶಯ ಬಂದಿತು ಅವನೇನು ಧೀರ—ನನ್ನ ಮುಂದೆ ಆಣೆ ಮಾಡಿ ಹೇಳಿಬಿಟ್ಟ—ನಾನು ಆ ದಿನ ಗುಡಿಗೇನೆ ಬಂದವನಲ್ಲ'

ನಾನು—ನಂದಿ ಗ ಇನ್ನು ನಿನ್ನ ಪಾರ್ವತಿ, ಮಗ ಗಣೇಶ, ಶೃಂಗಿ ಭೃಂಗಿ ಮೊದಲಾದ ಪರಿವಾರ

ಮಹಾ—ಎಂಥವನು ನೀನು! ನನ್ನ ಅವಸ್ಥೆ ಹೀಗಾಗಿರುವಾಗ ಭಂಗಾರದ ಪಾರ್ವತಿಯನ್ನು

ನಾನು—ಪಾರ್ವತಿಯೆಂದರೇನು ಚಿನ್ನಕ್ಕೆ ಸಮ.

ಮಹಾ—ಅವಳನ್ನು ಮಾಡಿದ್ದು ಚಿನ್ನದಿಂದ ಎಂದು, ಇನ್ನೊಬ್ಬ ಪೂಜಾರಿ, ಇಲ್ಲಿನ ಮಾಲೆಯವಳು ಜತೆಯಿಂದ ಎತ್ತಿಕೊಂಡು ಹೋಗಿ—ರಾತಾರಾತ್ರಿ ಕರಗಿಸಿ ಬಿಟ್ಟರು' ಅಲ್ಲಿಂದ ಕಳೆಗುಂದಿತು

ನಾನು—ಪತ್ನಿಯನ್ನಗಲಿದ ಮೇಲೆ'

ಮಹಾ—ಅಗುಲುವುದೆಲ್ಲಿ ಬಂತು

ಮಹಾ—ಮುನ್ನೂರು ವರ್ಷದ ಕೆಳಗೆ, ನನ್ನನ್ನು ಸ್ಥಾಪನೆ ಮಾಡಿದಾಗ ಆ ವೈಭವವೇನು' ಪಾರ್ವತಿಯನ್ನೂ ನನ್ನನ್ನೂ ಕುಳ್ಳಿರಿಸಿ ಲಗ್ನ ಮಾಡಿಸಿ, ಕೋಣೆಯಲ್ಲಿ ಹಾಕಿ!

(ಈ ಪಬ್ಲಿಕ್ ಫಂಕ್ಶನ್ ಹೇಳುತ್ತ ಅವನಿಗೆ ನಾಚುಗೆಯಾಗಿ ಕಣ್ಣೀರು ಬಂದಿತು)

ನಾನು—ಹೋಗಲಿ ಬಿಡು ಆ ವಿಚಾರ ಅವಂಗೇನು—ದಾಪತ್ಯ ಏಕಾಂತದ ವಿಚಾರ ಪಬ್ಲಿಕ್ ಆಗಕೂಡದು ಎಂತ ಶುದ್ಧ ಪಶು ಮುಂಡೇ ಗಂಡರು

ಮಹಾ—ಅವಂಗದು ಅನ್ಯಾಯವಾಗಿರಲಿಲ್ಲ'

ನಾನು—ಏನು, ಆಗಿನವರೂ ಅಷ್ಟು ಲಜ್ಜ ಭಂಡರೇ—

ಮಹಾ—ಏನೋ—ನನ್ನ ಪ್ರಥಮದ ಪೂಜಾರಿ, ಆಗಿನ ದೇವದಾಸಿ—ಅವರು ನಿತ್ಯವೂ ನನ್ನ ಗುಡಿಯನ್ನು

ನಾನು—ಹೇಗಲಿ ಬಿಡು. ಹ್ಯಾಗೂ ನಿನಗೆ ತಿಳಿಯದೆ ಹೋಗುವ ಹಾಗಿಲ್ಲ ನಿನ್ನನ್ನು ಅಂತ ರಂಗಕ್ಕೆ ಒಯ್ಯೋಣ ಅಂತ ಮಾಡಿದರು ಅವರು ಸತ್ತರಲ್ಲ ಈಗ . . . ವಿನಾಯಕ'

ಮಹಾ—ಓಹೋ ಮಗ ವಿನಾಯಕನಿಗೆ, ಆಗ ಸಾವಿರ ತೆಂಗಿನಕಾಯಿಯ ಮೂಡು ಗಣಪತಿ

ನಾನು ಅಲ್ಲಿ ಮಹಾಲಿಂಗ!. ಈ ಕೊಬರಿ ತಿನ್ನುವ ಪಾಠ ನಿನ್ನ ಮಗನಿಗೆ ಹೇಗಾಯಿತು! ಹಿಮಾಲಯದಲ್ಲೂ ತೆಂಗಿನ ತೋಟವಿದೆಯೆ!

ಮಹಾ—ಕೊಬರಿ ಮಗನೆಲ್ಲ ತಿನ್ನುತ್ತಿದ್ದ. ಕೊಬರಿ ಅವರಿಗೆ ರಥ ಎಂದು ಅವನ ಗುಡಿ ಹೊಸ್ತಿಲಿಗೆ ಬಡಿದು, ಅದರ ದಾರಿಂದ ಒಡೆದ್ದಾಸುತು ಆ ಮೇಲೆ ಚಿಪ್ಪು ಅಲ್ಲಿ ಎಸೆದರೆ—ಇನ್ನೊಬ್ಬನ ಕಾಲಿಗೆ ತಾಗಿ ರಕ್ತ ಸುರಿದ ಮೇಲೆಯೇ ಅದನ್ನು ತೆಗೆಯಬೇಕು.

ನಾನು—ಈಗ ತಾಪಾಕಲಂ. ನಿನ್ನನ್ನು ಸ್ಥಾಪಿಸಿ ಎಷ್ಟು ವರುಷವಾಯಿತು!

ಮಹಾ—ಮುನ್ನೂರಾಯಿತೆಂದೆನಲ್ಲ— ಅಂದರೆ ಈಗ ಪೂಜೆ ನಿಂತು ಅರುವತ್ತಾಯಿತು'

ನಾನು—ಮುನ್ನೂರು ವರ್ಷ! ಅಂದರೆ ಬ್ರಿಟಿಷರು ಬಂದಾಗ ನೀನು ಬಂದೆ, ನೀನು ಇಳಿದೆ, ಅವರು ಇಳಿಯಲಿಲ್ಲ—ಅಂತಲೇ— ಆದರೆ ನಮ್ಮವರಲ್ಲಿ ಒಬ್ಬ ಮಹಾಲಿಂಗನಿದ್ದಾನೆ .. ಅವನನ್ನು ಪಾಂಡವರು ತಂದಿಟ್ಟು ಇರಿಸಿದರಂತೆ!

ಮಹಾ—ನನ್ನ ವಿಷಯವೂ ಹಾಗೆ ಇತ್ತು ಕಥೆ, ನಿಮ್ಮ ಜನರಿಗೆ, ಮರೆತುಹೋಗುವಷ್ಟು ಹಿಂದಾದ ಪಾಪವೆಲ್ಲ—ಪಾಂಡವರ ತಲೆಯ ಮೇಲೆ.

ನಾನು—ಇರಲಿ, ನಿನಗೆ ಉಂಬಳಿಗಿಂಬಳಿ ಇದ್ದಲಿಲ್ಲವೇ!

ಮಹಾ—ಇತ್ತು—ಒಂದು ಹತ್ತು ವರುಷ ಭಾರಿ ಉತ್ಸವ, ಪೂಜೆ—ಎಲ್ಲ ಆಯಿತು! ದೇವರೆಂದರೆ—"ಮಲೆಯೂರ ಮಹಾಲಿಂಗ"—ಎನಿಸಿದೆ

ಕೊನೆಗೆ ಉಂಬಳಿಗಾಗಿ ನಾಲ್ಕು ಸಾರಿ ಕೈಕೈಯಾಯಿತು ನನ್ನ ಸನ್ನಿಧಿಯಲ್ಲಿ. . . . .! ಅನಂತರ ಎಲ್ಲಾ ತಿಂದರು, ನಾನು ಉಳಿದೆ.

ನಾನು—ಪೂಜೆ, ಗೀಜೆ

ಮಹಾ—ಯತ್ರ ತಸ್ಮಿನ್ ತತ್ರ ಭಕ್ತಿ'

ನಾನು—ಹೋಗಲ ಒರೆ ಗುಡಿಯನ್ನಾದರೂ ಬಿಡಬಹುದಲ್ಲವೊ .

ಮಹಾ—ಪೂಜೆ ಹೋಯಿತು, ಮಾಡಿನ ಹುಲ್ಲು ಕೊಳೆಯಿತು ಬಾವಲಿಗಳು ಸಹ ನಾಚಿಕೊಂಡು ಹೊರಟುವು ಒಂದೊಂದೇ ಮರ ಮೋಪು ಬಿತ್ತು . ಕೊಳೆಯಿತು!

ಈಗ ನನ್ನ ಗುಡಿಯ ಕಲ್ಲುಗಳು ಯಾರಾರ ಮನೆಯ ಚಟ್ಟಲು, ಮೆಟ್ಟಲು .

ನಾನು ಗಂಧವಿಲ್ಲ, ಅಭಿಷೇಕವಿಲ್ಲ, ಗುಡಿಯಿಲ್ಲ, ಗೋಪುರವಿಲ್ಲ

ಮಹಾ—ಎಲ್ಲಾ ಇದೆ ಗಂಧ ಮೇಲಿಂದ, ಅಭಿಷೇಕ ಅಪೂರ್ವಕ್ಕೆ ಈ ಹಾದಿಯಾಗಿ ಸಾಗುವ ನಾಯಿಗಳಿಂದ—ಗುಡಿಗೋಪುರ ನೀಲವಾದದ್ದು'

ಇಲ್ಲ ನಾನು ಮೂರನೆ ಕಣ್ಣು ತೆರೆಯದೆ ಮೋಸವಾಯಿತು .

ನಾನು—ಅದು ಅಷ್ಟೆ! ಈಗ ನೋಡು ಬಬ್ಬರ್ಯ, ಪಂಜುರ್ಲಿ, ಕಲ್ಲುರ್ಟಿ—ಇವಕ್ಕೆಲ್ಲ ನೇಮ ತಪ್ಪುವುದಿದೆಯೇ! ನೀನು ಗಾಂಧಿ ಪಾರ್ಟಿ ಸೇರಿದೆ ಜಬರ್ದಸ್ತಿಯಿಲ್ಲದೆ ಯಾರು ಕೇಳುವುದಿಲ್ಲ ನಿನ್ನಣ್ಣ ಗುಜರಾತಿನ ಸೋಮನಾಥ—ಮರ್ಯಾದೆ ಕಳೆದ, ಕಳೆದುಕೊಂಡ' ನಾನು ಅನ್ನುತ್ತೇನೆ—ನೀವು ದೇವರು ತುಂಬ ಬಾಬುಗಳು, ಹೀಗೆ ಪೆಚ್ಚ ಗಿರಕೂಡದು' ಹಾಲು, ಉಂಡ್ಲಕ್ಕ, ಕಡುಬು ಪಾಯಸ—ಊ ಹೂಂ ಪರ್ವ' ಇನ್ನು ಬ್ರಾಂಬ್ರ ಗಿಲೀಟು—ರುದ್ರ ಅನ್ನುತ್ತಾರಲ್ಲ! ಮಕ್ಕಳ ಮಗ್ಗಿಯೊಂದ ಹಾಗೆ ಪಟಪಟ ಸುರಿಯುವ ಲೆಕ್ಕ—ಕೂಡ್ದೇ ಕೂಡ್ದು'

ಮಹಾ—ಮತ್ತೇನು ಮಾಡ್ಲಿ ನಾನು!

ನಾನು—ಅಲ್ಲಿ ಪ್ರಳಯಕಾಲದ ಮನುಷ್ಯನೀನು!

ಮಹಾ—ಹಣೆಗಣ್ಣು ತೆರೆಯುವುದೇ!

ನಾನು—ಸದ್ದ ಆಯಿತು' ಎಲ್ಲಾ ಸುಟ್ಟಿತೆಂದರೆ ಮತ್ತೇನು ಉಳಿಯಿತು? ನಮ್ಮವರು ಸುಬ್ರಾಯ ಸೆಟ್ಟರ್ ಹಾಗೆ ದಬಾಯಿಸಿ ಮಾಡಿ, ಅಸ್ತಿಧ್ವಂಸ ಮಾಡಿದರೆ ನಾಳೆಗೆ ಏನಾದತು! ಸುಡಬಾರದು, ಸುಟ್ಟ ಹಾಗೆ ಆಗಬೇಕು.

ಪೂಜಾರಿ ಬಂದರೆ—ಮೂಗು ಕೊಯ್ದು ಕೊಡು' ಎನ್ನು ಮಕ್ಕಳು ಕೇಳಲಿಕ್ಕೆ ಬಂದರೋ—ಹೆಚ್ಚಾದವರಿಂದ ಕಡತಕ್ಕೊಳ್ಳಿ ಅನ್ನು!

ತೆಂಗಿನಕಾಯಿ, ಕದಲೆಬೇಳೆ ತಂದರೋ—ಕುದುರೆಗೆ ಹಾಕಿ! ನನಗೆ ಬೇಕು ತಲೆ! ನಿಮ್ಮಂತಹವರ ತಲೆ—ಮಿದುಳಿಲ್ಲದ ತಲೆ'—ಎನ್ನು.

(ಇನ್ನೊಮ್ಮೆ ಭೇಟಿಕ್ಕೆ ಮುಂದುವರಿಯುವುದು)

ಚೀನದಲ್ಲಿ ನೆರೆ

ಚೀನಾದಲ್ಲಿ ಯಾಂಗಿ ಸಿಕಿಯಾಂಗ್ ನದಿಯಲ್ಲಿ ಮೇರೆ ಮೀರಿದ ಪ್ರವಾಹವೆದ್ದು ಮಹಾ ಅನಾಹುತವಾಗಿದೆ. ಪ್ರವಾಹವು ಇನ್ನೂ ಏರುತ್ತಲೇ ಇದೆ. ನದಿಯ ಎರಡು ಪಾರ್ಶ್ವಗಳಲ್ಲಿದ್ದ ಸಾವಿರಾರು ಹಳ್ಳಿಗಳೂ, ನೂರಾರು ಪಟ್ಟಣಗಳೂ ಜಲಮಯವಾಗಿವೆ. ಜನರು ಮರಗಳ ಮೇಲೆ ವಾಸಿಸುತ್ತಿರುವರು. ಡೈಕ್ ಎಂಬ ದಂಡೆಯು ಪ್ರವಾಹ ಶಕ್ತಿಯಿಂದ ಕೆಡವಿ ಬಿದ್ದರೆ ಲಕ್ಷಾಂತರ ಜನರ ಊರಾದ ಹಾನಿ ಪ್ರಾಂತ್ಯವು ನಾಶವಾಗುವುದು ಎಂಟಿ ಎಂಬಲ್ಲಿ ೨೦೦೦ ಜನರೂ ಎಂಚೆಂಗ್ ಎಂಬಲ್ಲಿ ೧೦೦೦ ಜನರೂ ನೀರು ಪಾಲಾದರು ೫೦ ೦೦೦ ಜನರು ನಿರ್ಗತಿಕರಾಗಿರುವರು

ವಿವಾಹ ಸಂಭ್ರಮದಲ್ಲಿ ಭಾಗವಹಿಸಿದ ೭೦ ಮಂದಿ ಮೃತರಾದರು

ನ್ಯೂಡಿಲ್ಲಿ, ಜುಲ್ಯಾ ತಾ ೨೧,

ಶಹರಣಪುರದಿಂದ ಬಂದಿರುವ ಒಂದು ವಾರ್ತೆಯಿಂದ ಅಲ್ಲಿ ಒಂದು ವಿವಾಹ ಸಂಭ್ರಮದಲ್ಲಿ ಭಾಗವಹಿಸಿದ ೭೦ ಮಂದಿ ಮೃತರಾದರೆಂದು ತಿಳಿದುಬರುತ್ತದೆ, ವಿವಾಹದ ನಂತರ ನಡೆದ ಒಂದ ಭೋಜನವೇ ಈ ಮರಣಗಳಿಗೆ ಕಾರಣವೆಂದು ತಿಳಿದುಬಂದಿದೆ ಅನ್ನಕ್ಕೆ ಬಡಿಸಲ್ಪಟ್ಟ ಸಾಂಬಾರವನ್ನು ಬೇಯಿಸಿದ ಗುದಾಣದೊಳ. ಒಂದು ದೊಡ್ಡ ವಿಷಮಯ ಹಾವು ಬಿದ್ದು ಬೆಂದಿರುತ್ತದೆಂದು ವಿಚಾರಿಸಲಾಗಿ ತಿಳಿಯಿತು.

ಪೋಲೀಸರನ್ನೇ ಕಟ್ಟಿ ಹಾಕಿದರು

ರಾಜಶಾಹಿ ಮಲ್ಲಿಯ ಕುಮಾರ್ ಗ್ರಾಮದಲ್ಲಿ ಒಂದು ಮೊಕದ್ದಮೆಯ ಕುರಿತಾಗಿ ತನಿಖೆ ನಡೆಸುವುದಕ್ಕಾಗಿ ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಒಬ್ಬ ಪೋಲೀಸ, ಇವರಿಬ್ಬರು ಹೋದರು ತಕ್ಷೀರುಗಾರರ ಇವರಿಬ್ಬರನ್ನು ಹಿಡಿದು ಹೊಡೆದ ಬಂಧಿಸಿ ಹಾಕಿದರು.

ಅಮೆರಿಕಾ ರಷ್ಯಾಗಳ ಒಪ್ಪಂದ

ಸಂಯುಕ್ತ ಅಮೆರಿಕಾವೂ ರಷ್ಯಾವೂ ಒಂದು ಒಪ್ಪಂದವನ್ನು ಮಾಡಿಕೊಂಡು ಎರಡು ರಾಷ್ಟ್ರಗಳೊಳಗೆ ಪರಸ್ಪರವಾಗಿ ನಡೆಯುತ್ತಿದ್ದ ವ್ಯಾಪಾರವನ್ನು ಇನ್ನು ಮುಂದೆ ನಾಲ್ಕು ಹೆಚ್ಚಿಸಿಕೊಳ್ಳಬೇಕೆಂದು ನಿಶ್ಚಯಿಸಲಾಗಿದೆ

ಹಿಂದೂ ಮುಸ್ಲಿಂ ಗಲಭೆಯ ಪರಿಣಾಮ.

ಕಳೆದ ವಾರ ಕಡಲೂರಿನಲ್ಲಿ ಹಿಂದೂ ಮುಸ್ಲಿಂ ಗಲಭೆಯಾಯಿತು. ೫೧ ಜನ ಹಿಂದೂ ಮುಸ್ಲಿಮರನ್ನು ರಿಮಾಂಡಿನಲ್ಲಿಡಲಾಯಿತು

ಗಂಡನು ಹೆಂಡತಿಯ ಮೂಗನ್ನು ಕೊಯ್ದನು.

ದಾವಣಗೆರೆ, ಜುಲೈ ೧೫,

ತಾಯಿನಾಡು ಬಾತ್ಮಿದಾರರು ತಿಳಿಸಿರುವಂತೆ ಇಲ್ಲಿಯ ಕೊರಮರವನು ತನ್ನ ಹೆಂಡತಿಯ ಮೂಗನ್ನು ತಾನೇ ಕುಡುಗೋಲಿನಿಂದ ಕೊಯ್ದಿರುವನೆಂದು ತಿಳಿದುಬಂದಿದೆ. ಏಕೆ ಕೊಯ್ದನೆಂದು ತಿಳಿದುಬಂದಿಲ್ಲ ಎಲ್ಲಿಯೋ ಓಡಿರುವನು ಕೊರಮರ ಬರ್ಮ ಎಂಬವನು ಅವನ ಹೆಂಡತಿಯೊಡನೆ ಕಲವು ವರ್ಷಗಳಿಂದ ಇರುತ್ತಿದ್ದನು ಮೊನ್ನೆ ಈಚಲ ಕಡ್ಡಿಯನ್ನು ಕೊಯ್ಯುತ್ತಿರುವಾಗ ಇವರೊಳಗೆ ವಾದವಿವಾದವು ಬೆಳೆದು ಅವನು ಇವಳ ಮೂಗನ್ನು ಕಡಿದನು.

ನೋಟೀಸು

ಪುತ್ತೂರು ತಾಲೂಕು ನ್ಯಾಯ ತರ್ಫ ಗ್ರಾಮ ಕೋಡಿಯಾನ ಬಳ್ಳಿಯೊಂಬಲ್ಲಿರುವ ಅಪ್ಪು ಶೆಟ್ಟಿ ಮಗ ಬಸ್ತು ಶೆಟ್ಟಿಯು ಈ ಮೂಲಕ ತಿಳಿಯಪಡಿಸುವುದೇನೆಂದರೆ —

ನ್ಯಾಯ ತರ್ಫ ಗ್ರಾಮದ ಕೋಡಿಯಾನ ಬಳ್ಳಿಯೊಂಬಲ್ಲಿ ನಾನು ಚಿಕ್ಕಂದಿನಿಂದಲೂ ನನ್ನ ಹಿರಿಯರಿಂದ [illegible] ಅನುಭವಿಸಿ ಬರುವ (ಸದರಿ ಗ್ರಾಮದ (1) ಸರ್ವೆ ನಂಬ್ರ 81/3-5 ಮತ್ತು 10/12 17ನೇ ಸ್ಥಳಗಳನ್ನು ಕಷ್ಟ ಕೃಷಿ ಮಾಡಿಕೊಂಡು ಬರುತ್ತಿದ್ದೇನೆ ನನ್ನ ಸದ್ರಿ ಅಪ್ಪುಗಳಿಗೆ ಕಳೆದ 1930ನೇ ಇಸವಿಯಲ್ಲಿ ಇದೇ ಗ್ರಾಮದ ಶ್ರೀನಿವಾಸ ನಂಬಿಗೆತ್ತಾಯರ [illegible] (ಒಂದನ್ನು) (2) ಜೊತೆಗೆ ಕಟ್ಟಿದ [illegible] ನನ್ನ ಎಡಹೆಬ್ಬೆಟ್ಟು ಮುದ್ರೆ ಮ ದಸ್ಕತು ಈ ಗ್ರಾಮದ ಪಟೇಲರು ಬೇಕೆಂತ ಒಂದು ಫೋರ್ಮನ್ನು [illegible] [illegible] [illegible] [illegible] [illegible] ಈ [illegible] ಒಂದು [illegible] ಮಾಡಿಸುವುದರಲ್ಲಿ [illegible] ದೊಡ್ಡಿಂದ [illegible] ಎಡಹೆಬ್ಬೆಟ್ಟು ಮ ದಸ್ಕತು ಜೊತೆಗೆ ಸಂಬಂಧಿಸಿದ [illegible] (8) [illegible] [illegible] ಈ ಮೂಲಕ ತಿಳಿಸುತ್ತೇನೆ 8 ಚಿತ್ತುಗಳು ಮಾತ್ರ

ಕೋಡಿಯಾನಬಳ್ಳಿ, 23—7—'35 } ಎಡಹೆಬ್ಬೆಟ್ಟು ಮ ದಸ್ಕತು ಬಸ್ತು ಶೆಟ್ಟಿಯ ರುಜು

ಕಡಮೆ ಬೆಲೆ.

ಹೊಸ ಕಂಪೆನಿ. ಗ್ಯಾರಂಟಿ ಮಾಲು.

ಗ್ಯಾರಂಟಿಯಾದ ಹೂವಿನ ಮತ್ತು ತರಕಾರಿ ಬೀಜಗಳು—ಹಣ್ಣಿನ ಗಿಡಗಳು, ಹೂವಿನ ಗಿಡಗಳು, ಹೂವುಗಳು ತರಕಾರಿ ಹಣ್ಣುಗಳು, ಸುಗಂಧ ದ್ರವ್ಯಗಳು ಬೇಕಾದರೆ ನಮ್ಮ ಹೊಸ ಕಂಪೆನಿಗೆ ಬರೆಯಿರಿ—ಕೆಟಲಾಗು ಇನಾಮು.

ಮ್ಯಾನೇಜರ್—ರೋಯಲ್ ಸೀಡ್ ಕಂಪೆನಿ

ನಂ 27—. ಸ್ಟ್ರೀಟ್ ಇಲ್ ಲ್ ಕೋಲ್,

ಬೆಂಗಳೂರು— B cant

ಕೆನರಾ ವಾಚ್ ವರ್ಕ್ಸ್, ಮಂಗಳೂರು

ದಿನಂಪ್ರತಿ ನೂರಾರು ಗಿರಾಕಿಗಳು ಬಂದು ನಮ್ಮಲ್ಲಿರುವ ಹಲವು ಬಗೆಯ ಕೈಗಡಿಯ ರ, ಗೋಡೆಯ ಗಡಿಯಾರ ಆಟದ ಸಾಮಾನು ನೋಡಲಾದುವುಗಳನ್ನು ಪಡೆದು, ಸಂತೃಪ್ತಿ ಹೊಂದಿ ಸಂತೋಷದಿಂದ ಹೋಗುವ ವಿಷಯವೊಂದೇ ನಮ್ಮಲ್ಲಿನ ಸರಕುಗಳಿಗೆ ಜನರಿಂದ ದೊರೆತಿರುವ ಪ್ರಶಂಸೆ ನೀವೂ ನಮ್ಮಲ್ಲಿಗೆ ಬರಬಹುದು, ತೃಪ್ತಿ ಹೊಂದಬಹುದು—ನಂಬ್ರದರೆ ಪಡೆಯಬಹುದು

ನೋಟೀಸು.

Attur Vaikunta Prabhu Bank, Mangalore

ಅತ್ತೂರು ವೈಕುಂಠ ಪ್ರಭು ಬೇಂಕ್, ಡೊಂಗರಕೇರಿ, ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಾಲ ಪಡಕೊಂಡ ನಂತರ ಕ್ಲಪ್ತ ವಾಯಿದೆಗೆ ಅಸಲು, ಬಡ್ಡಿ ಕೊಡದೆ ಈ ವರೆಗೆ ಬಾಕಿ ಮಾಡಿಕೊಂಡಿರುವುದರಿಂದಲೂ ಸದರಿ ಸಾಲಗಳನ್ನು ಭರಮಾಡಿಕೊಳ್ಳುವರೆ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಜ್ಯಾರಿಯಾಗಿಯೂ, ಕೆಲವು ಜ್ಯಾರಿಯಾಗದೆಯೂ ಬಂದಿರುವುದರಿಂದಲೂ, ಸದರಿಯವರು ಈಡಿಟ್ಟ ನಗಗಳನ್ನು ಇದೇ 1935ನೇ ಅಗೋಸ್ತು ತಾ. 2ನೇ ಶುಕ್ರವಾರದೊಳಗೆ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿ ಐವೇಜುಗಳನ್ನು ಸಲ್ಲಾಯಿಸಿ, ಬಿಡಿಸಿಕೊಂಡು ಹೋಗದೆ ಇದ್ದರೆ, ಸದರಿಯವರು ಈಡಾಗಿಟ್ಟ ನಗಗಳನ್ನು ಇದೇ 1935ನೇ ಇಸವಿ ಅಗೋಸ್ತು ತಾ 3ನೇ ಶನಿವಾರ ಯಾ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ 2 ಗಂಟೆಗೆ ಸರಿಯಾಗಿ ಬಹಿರಂಗವಾಗಿ ಏಲಂ ಮಾಡುವೆವು

	ಸಾಲದ ನಂಬ್ರ ಮತ್ತು ಅಡವಿಟ್ಟ ತಾ	ಸಾಲ ಪಡಕೊಂಡವರ ಹೆಸರು ಮತ್ತು ವಿಳಾಸ	ಸಾಲದ ಮೊತ್ತ
1	A 1642 3-11-34	ಸುಂದರ ಶೆಟ್ S/o ಯು ಸುಬ್ರಾಯ ಶೆಟ್ ಮಾರ್ಕೆಟು ರಸ್ತೆ ಮಂಗಳೂರು.	9/-
2	A 1631 3-11-34	ಸುಂದರ ಶೆಟ್, S/o ಯು ಸುಬ್ರಾಯ ಶೆಟ್ ಮಾರ್ಕೆಟು ರಸ್ತೆ, ಮಂಗಳೂರು	7/-
3	A 1630 3-11-34	ಸುಂದರ ಶೆಟ್ S/o ಯು ಸುಬ್ರಾಯ ಶೆಟ್ ಮಾರ್ಕೆಟು ರಸ್ತೆ ಮಂಗಳೂರು	7 -
4	A 1629 3-11-34	ಸುಬ್ರಾಯ ಶೆಟ್ S/o ಯು ಮಂಜುನಾಥ ಶೆಟ್, ಭಗವಂತಕೇರಿ ಮಂಗಳೂರು	12/-
5	A 1628 3-11-34	ಸುಬ್ರಾಯ ಶೆಟ್ S/o ಯು ಮಂಜುನಾಥ ಶೆಟ್, ಭಗವಂತಕೇರಿ ಮಂಗಳೂರು	6 -
6	A 1627 3-11-34	ಸುಬ್ರಾಯ ಶೆಟ್, S/o ಯು ಮಂಜುನಾಥ ಶೆಟ್ ಭಗವಂತಕೇರಿ ಮಂಗಳೂರು	13
7	A 1626 3-11-34	ಸುಬ್ರಾಯ ಶೆಟ್, S/o ಯು ಮಂಜುನಾಥ ಶೆಟ್ ಭಗವಂತಕೇರಿ ಮಂಗಳೂರು	5
8	A 1625 3-11-34	ಸುಬ್ರಾಯ ಶೆಟ್ S/o ಯು ಮಂಜುನಾಥ ಶೆಟ್ ಭಗವಂತಕೇರಿ ಮಂಗಳೂರು	7 -
9	A [illegible]94 27-[illegible]-34	ಸುಂದರ ಶೆಟ್ S/o ಯು ಸುಬ್ರಾಯ ಶೆಟ್ ಮಾರ್ಕೆಟು ರಸ್ತೆ ಮಂಗಳೂರು	35 -
10	A [illegible]67 26-[illegible]-34	ಸುಂದರ ಶೆಟ್, S/o ಯು ಸುಬ್ರಾಯ ಶೆಟ್ ಮಾರ್ಕೆಟು ರಸ್ತೆ ಮಂಗಳೂರು	20/-
11	A 56[illegible] 21-[illegible]-34	ಸುಂದರ ಶೆಟ್ S/o ಯು ಸುಬ್ರಾಯ ಶೆಟ್, ಮಾರ್ಕೆಟು ರಸ್ತೆ ಮಂಗಳೂರು	45 -
12	A 1280 4-9-34	ಕೆ ಅಬ್ದುಲ್ಲ S/o [illegible] ಕೆಂಜಾರ ಗ್ರಾಮ ಮಂಗಳೂರು ತಾಲೂಕು	6 -
13	A 1240 30-8-34	[illegible] S/o [illegible] ಬ್ಯಾರಿ, [illegible] ಗ್ರಾಮ ಮಂಗಳೂರು	12 -
14	A 1051 8-8-34	[illegible] ಪೂಜಾರಿ S/o [illegible] ಪೂಜಾರಿ, [illegible] ಮಂಗಳೂರು	6 -
15	A 1028 30-7-34	[illegible] ಮಂಗಳೂರು	5 -
16	A 942 19-7-34	[illegible] ಮಂಗಳೂರು	4
17	A 7[illegible] 28-6-34	[illegible] ಪೂಜಾರಿ [illegible] ಮಂಗಳೂರು	16
18	A 748 18-6-34	[illegible] S [illegible] ಶೆಟ್ಟಿ [illegible] ಮಂಗಳೂರು	16.-
19	A 412 26-4-34	[illegible] N/o [illegible] ಬೊಕ್ಕಪಟ್ಣ ಮಂಗಳೂರು	13 -
20	732 5-5-34	ಕೆ [illegible] S/o [illegible] ಬ್ಯಾರಿ, [illegible] ಮಂಗಳೂರು	20 -
21	1977 16-9-3[illegible]	ಕೆ ಅಮದ S/o [illegible] ಬ್ಯಾರಿ, ಕುದ್ರೋಳಿ ಮಂಗಳೂರು	8
22	2[illegible]71 10-12-32	ಪಿ ಮುಕ್ಕರೆಂಜ್ಞ [illegible] D/o [illegible] ಮುಕ್ಕರೆಂಜ್ಞ [illegible] ಮಂಗಳೂರು	70
23	2[illegible]1[illegible] 8-12-32	ಪಿ ಕೃಷ್ಣಯ್ಯ S/o ವೆಂಕಪ್ಪಮಣಯ್ಯ ಕೊರಂಜಿ [illegible]	35 -
24	279[illegible] 30-11-32	[illegible] D/o [illegible] ಮುಕ್ಕರೆಂಜ್ಞ, ಉರ್ವ, ಮಂಗಳೂರು	25 -
25	2145 [illegible]-9-32	ಬೊಗ್ಗು ಪೂಜಾರಿ N/o [illegible] ಪೂಜಾರಿ, ಕೆಂಜಾರು ಗ್ರಾಮ, ಮಂಗಳೂರು ತಾಲೂಕು	52 -
26	1566 24-6-32	ಕೆ. ತಮ್ಮಯ್ಯ S/o ದೇವು ಮೂಲ್ಯ, [illegible] ಪೋರ್ಟರ್ [illegible] ಮಂಗಳೂರು	11/-

ಮಂಗಳೂರು, 25—7—1935.

A. V. Prabhu,
ಪ್ರೊಪ್ರೈಟರ್, ಎ ವಿ ಪಿ. ಬೇಂಕ್.

ಪುರಾತನ ನಗರ ಶೋಧನೆ.

ಖೈರ್‌ಪುರ ಸಂಸ್ಥಾನದಲ್ಲಿ ಪೋಟ್ ದೋಚೆಯ ಬಳಿ ಒಂದು ಪುರಾತನ ನಗರವು ಕಾಣಸಿಕ್ಕಿತು. ಈ ನಗರವು ಮಹೇಂದ್ರ ಜಾದೋಗಿಂತಲೂ ಹಿಂದಿನ ಕಾಲದ್ದೆಂದು ತಿಳಿಸಲಾಗಿದೆ. ೯ ತಿಂಗಳುಗಳ ಹಿಂದೆ ಈ ಸಂಸ್ಥಾನಾಧೀಶರಾದ ಧಾಕೂರ್ ಸಾಹೇಬರಿಗೆ ಬತ್ತಿಹೋಗಿರುವ ನದಿಯ ತಲದಲ್ಲಿ ಒಂದು ದೊಡ್ಡ ದಿಣ್ಣೆಯು ಕಾಣಸಿಕ್ಕಿತು. ಆ ಸ್ಥಳವನ್ನು ಅವರು ಗುಟ್ಟಾಗಿ ಅಗೆಸಿದರು. ಹಿಂದಿನ ಕಾಲದ ಅನೇಕ ಶಸ್ತ್ರಗಳೂ ಇತರ ಸಾಮಾನುಗಳೂ ದೊರೆತುವು. ಮುಂಬಯಿಯ ಪ್ರೊಫೆಸರ್ ಘುರಿಯವರು ಧಾಕೂರ್ ಸಾಹೇಬರ ಹೇಳಿಕೆಯನ್ನು ಸಮರ್ಥಿಸಿ ದೊಡ್ಡ ನಗರದ ಕುರುಹು ದೊರೆತಿರುವುದು ಎಂದು ತಿಳಿಸಿದರು.

ಮೈಲುಕಲ್ಲುಗಳೊಡನೆ ಮಾತುಕಥೆಗಳು

ಲೇಖಕರು:— ಕೆ. ಶಿವರಾಮ ಕಾರಂತರು

ಗುಡಿಯಿಲ್ಲದ ಮಹಾಲಿಂಗ

[ಸುಳ್ಯದ ಬಳಿಯ ಕಗ್ಗಾಡಿನಲ್ಲೊಂದು ದಿನ ಭೇಟಿ ಕೊಟ್ಟ ಮಹಾಲಿಂಗನ ಕಥೆಯಿದು. ಪಯಸ್ವಿನೀ ನದಿಯ ತೀರ ನಾವು ಕೆಲವರು ಅಲೆಟ್ಟಿಗೆ ಹೋಗುತ್ತಿದ್ದೆವು. ನದಿ ಯಾಚೆಗಿನ ದಟ್ಟ ಕಾಡಿನಲ್ಲಿ ಮಹಾಲಿಂಗನ ಗುಡಿಯಿದೆ. ಗುಡಿಯೋಗ– ಸುತ್ತಲಿನ ಪ್ರದೇಶದೊಂದಿಗೆ ಬೆರತಿದೆ. ಮಹಾಲಿಂಗನೊಬ್ಬನು, ಅರೆ ಕೆಸರು, ಕೊಳಚೆಗಳಲ್ಲಿ ನಿಂತು ರೋದಿಸುತ್ತಿದ್ದಾನೆ. ಅಂತಹ ಮಹಾಲಿಂಗರು ನಮ್ಮ ಜಿಲ್ಲೆಯ ನೂರಾರು ಮೂಲೆಗಳಲ್ಲಿರುವರು. ಎಷ್ಟೋ ಮಹಾಲಿಂಗರು, ಇದೇ ರೀತಿ ನನ್ನೊಡನೆ ಮಾತನಾಡಿದುದರಿಂದ, ಈ ಮಹಾಲಿಂಗನ ವಿಚಾರ ಬರೆಯುತ್ತಿದ್ದೇನೆ!]

ನಾವು ಕೆಲವರು ನದಿಯನ್ನು ದಾಟಿದೆವು. ಕಲ್ಲು ಬಂಡೆಗಳ ಮೇಲೆ ಮೊಸಳು ಕಡೆಯುವಂತೆ, ತನ್ನನ್ನು ತಾನು ಕಡೆದುಕೊಂಡು ಪಯಸ್ವಿನಿ ಹರಿಯುತ್ತಿದ್ದಳು. ಪಯಸ್ವಿನಿ, ತಪಸ್ವಿನಿಯು ಅಹುದೋ ಏನೋ–ಕಾಡಿನೆಡೆಯಲ್ಲಿ ಅವಳ ವಾಸ. ಪಯಸ್ವಿನಿಯ ನೀರನ್ನು ಕುಡಿದೆವು–ಉಂಡ ಮನೆಗೆರಡೆಣಿಸಿ–– ನೀರಿಷ್ಟು ಕುಡಿದು ಅವಳ ಮೋರೆಯ ಮೇಲೆ ಉಗುಳಿ ಮುಂದೆ ಸಾಗಿದೆವು. ತುಸು ದೂರ ಸರಿದಿದ್ದೆವಷ್ಟೆ–ದರಿದ್ರದ ಮರಕಪ್ಪೆಯೊಂದು, ಕಿರುಚುತಿತ್ತು.

ನಾನು–ಎಲಾ, ಚಿರಿಚಿರಿ ಚೀರುವದು ಯಾರು, ಇಸ್ಕೂಲು ಮಾಸ್ತರರ ಹಾಗೆ' ಯಾರು ಇದರ ಲೆಕ್ಕರು ಕೇಳುವವರಂತೆ

ನನ್ನ ಜತೆಯಲ್ಲಿದ್ದ ಒಬ್ಬರು ಮಾಸ್ತರರು–(ಸಿಟ್ಟಾದರೋ ಏನೋ) ಅದು ಮರಕಪ್ಪೆಯಲ್ಲವೆ!

ನಾನು–ಕಪ್ಪೆ ಎಂದರೆ ಬ್ರಾಹ್ಮಣನಂತೆ. ನಾವು ಚಿಕ್ಕವರಿರುವಾಗ ನಮ್ಮನ್ನು ಹಾಗೆ ಹೇಳುತಿದ್ದ ನೆನಪು. ಅದನ್ನು ಕೊಂದರೆ ವಿಪ್ರರನ್ನು ಕೊಂದಷ್ಟು ಪಾಪ ಎನ್ನುತ್ತಿದ್ದರು. ಮುಂಗಾರು ಮಳೆಗೆ ನಮ್ಮೂರ ಗದ್ದೆ ಅಂಚಿನಲ್ಲಿ ಅವು ನಾಲಾತಿಗೆ ಕುಳಿತು ಟ್ರೋಂಯ ಗುಟ್ಟುವುದನ್ನ, ನಾನು ಕಂಡೆನು. ಬ್ರಾಹ್ಮಣರು ರುದ್ರದ ದಿವಸ ಅದೇ ರೀತಿ ವೇದದ ಋಕ್ಕು ಹೇಳಿದುದನ್ನು ಕೇಳಿದ್ದೆ. ಹೀಗಿದ್ದು–ಅದನ್ನು ಬ್ರಾಹ್ಮಣ ಜಾತಿಗೆ ಸೇರಿಸಿದ್ದು ತಪ್ಪಲ್ಲ. ಆದರೆ–ಕಪ್ಪೆಗೆ ಮರವೇರುವ ಕೆಲಸವೇಕೆ? ಬಿಲ್ಲವರ ಕೆಲಸ ಬ್ರಾಹ್ಮಣಂಗೇಕೆ?

ಮಾಸ್ತರರು—ಛೇ, ಅದು ಇರುವುದು ಹೆಚ್ಚಾಗಿ ಮರದ ಮೇಲೆ, ಅತ್ತಿಂದಿತ್ತ ಹಾರುವುದೂ ಉಂಟು

ನಾನು–ಹಾಂ ಈ ಜಾತಿಯ ಕಪ್ಪೆಗಳನ್ನು ಕಂಡು "ಹಾರುವ" ಎಂದದ್ದು ಇರಲಿ, ನೋಡಿಬಿಡುವ ಹಾರುವವನ ರೂಪವನ್ನಾದರೂ!

ಮಾಸ್ತರರು–ಪದ್ಧ ಆಯಿತು, ಕಪ್ಪೆ ನೋಡಲಿಕ್ಕೆ ನಿಂತರೆ, ಹೊತ್ತು ಮುಣುಗೀತು ಅಲೆಟ್ಟಿ ಮುಟ್ಟುವಾಗ

ನಾನು–ಅಲಾ, ಆ ಕಪ್ಪೆ ಏನು ಮಂತ್ರ ಹೇಳುತ್ತಿದೆ? ರುದ್ರದ ಬ್ರಾಹ್ಮಣರ ಹಾಗೆ

(ಹೀಗೆಂದು ಭಾರೀ ಪತ್ತೆದಾರನಂತೆ, ಆದರೆ ನಿನಾದವು ಪೊರಮಟ್ಟು ಸ್ಥಳಕ್ಕೆ ವಿಜಯಂಗೈದೆ' ನೋಡುವಲ್ಲಿ ಸದರಿ ಕಪ್ಪೆ ಯಿತ್ತು ಒಂದು ಕಲ್ಲಿನ ಮೇಲೆ ಕುಳಿತು–ಟ್ರೊಂಯಿಗುಟ್ಟುತ್ತಿತ್ತು)

ನಾನು–ಬ್ರಾಹ್ಮಣರು ಶಿವಲಿಂಗದ ಮುಂದೆ ಕುಳಿತು ರುದ್ರ ಹೇಳಿದರೆ, ನೀನು ಲಿಂಗದ ತಲೆಯ ಮೇಲೆಯೇ ಕೂತು

(ಕಪ್ಪೆಗೆ ಅಪಮಾನವಾಯಿತೋ ಏನೋ, ಅದು ಓಡಿತು)

ಮಾಸ್ತರರು–ಅಲ್ಲ, ಅದು ನಿಜಕ್ಕೂ ಶಿವಲಿಂಗವೇ! ಈ ಗುಡಿಯ ಹೆಸರೇನು? ನೋಡಿ ಅದರ ಪಾಣಿಪೀಠ, ಗುಡಿಕಲ್ಲು ಎಲ್ಲ ಚೆದರಿ ಬಿದ್ದದ್ದು ...

(ಹಾಳು ಗುಡಿಯೊಂದರ ಭಗ್ನಾವಶೇಷಗಳು ಕಾಣಿಸುತ್ತಿದ್ದವು. ಮಹಾಲಿಂಗನು ಕುಳಿತಿದ್ದಾನೆ, ಗುಡಿಗೆ ಮಾಡು ಗೋಡೆಗಳೆರಡೂ ಇಲ್ಲ, ಏನೇನೋ ನನ್ನ ಮನಸ್ಸಿನಲ್ಲಿ ವಿಚಾರಗಳು ಬಂದುವು)

ನಾನು–ಅಪ್ಪಾ, ಲಿಂಗಾ, ಯಾಕೇ ಈ ಜನರು ನಿನ್ನನ್ನು ಅಟ್ಟಕ್ಕೇರಿಸಿ, ಮಹಾಲಿಂಗನನ್ನಾಗಿ ಮಾಡಬೇಕು? ಈಗ ಹೀಗೆ .

ಮಹಾಲಿಂಗ–ನೀನಾರಯ್ಯ, ಹೀಗೆ ಬಲು ಕರುಣೆಯಿಂದ

ನಾನು–ನಾನು ಅಂದರೆ ನಿನ್ನ ಹೆಸರಿನವ ಶಿವರಾಮ ಅಂತ. ಶಿವನ ಸಿಟ್ಟು ಹೆಚ್ಚಾದೀತು ಅಂತ ಹೆದರಿ ಪೆಚ್ಚರಾಮನನ್ನು ಜತೆಗೆ ದೋಸ್ತಿ ಮಾಡಿಸಿ ಬಿಟ್ಟರು. ಅದು ಬಿಡು–ನಿನ್ನ ಅವಸ್ಥೆಯೇನು! ನಮ್ಮೂರಲ್ಲಿ ಒಬ್ಬ ಮಹಾಲಿಂಗನಿದ್ದಾನೆ. ಏನು ಅವನ ರೀತಿ! ಆಳೆತ್ತರದ ಅಸಾಮಿ' ದಿನಕ್ಕೆರಡು ಸಾರಿ ಅಭಿಷೇಕ, (ಬರಿ ನೀರಲ್ಲಪ್ಪ)–ಮಳೆದಿನವೂ ಸಹ ಗೋಗಣದಲ್ಲಿದ್ದಾನೆ ಒಬ್ಬ–ಅವನ ವೈಭವ ಹೇಳಿ ತೀರದು

ಮಹಾ–ಅದೇ ವೈಭವವೂ ಅವರದ್ದು ನನ್ನ ಹಾಗೆ ಇರುವುದು ಎಷ್ಟೋ ಲೇಸು

ನಾನು—ಬಾಲ ಹೋದ ನರಿ ಕಥೆ

ಮಹಾ–ಅಲ್ಲವಯ್ಯ ನನ್ನ ಹೆಸರಿನ ಎಂದು ನಿನಗೆ ಅನ್ನುತ್ತೇನೆ. ಇಲ್ಲಿ ನೀರದ ಮೇಲೆ ಕೂತು ಏನು ಅನ್ಯಾಯಕ್ಕೆಲ್ಲ ಸಾಕ್ಷಿಯಾಗಬೇಕಿತ್ತು ಅನ್ನುತ್ತೀಯಾ?

ನಾನು— ಅನ್ಯಾಯವೆಲ್ಲಿ ಪುಣ್ಯಪಾಪ: ಭಕ್ತಿಯಿರಲಿ, ಇಲ್ಲದಿರಲಿ–ಏಕಾದಶವೂ ದ್ವಾದಶವೂ ರುದ್ರ ಮಾಡ್ತಾರೆ. ಅರ್ಥ ಅವರಿಗೆ ತಿಳಿಯದು. ಅದನ್ನು ನಾವು ಮಾಡುವುದಿಲ್ಲ. ನಮ್ಮಲ್ಲೇನಾದರೂ ಮಹಾಸಭೆ ಯಾದರೆ ಅಧ್ಯಕ್ಷ ಅನ್ನುವ ಅಸಾಮಿ ಗದ್ದುಗೆ ಏರಿ ಕೂತರೆ, ನಾಲ್ಕು ನಾಲ್ಕು ತಾಸು ವಿಳುವುದ ಕ್ಕಿಲ್ಲ. ಬಂದ ಬಂದ ನಾಲಿಗೆ ಚಪಲದ ಅಸಾಮಿಗಳು ಕಿರುಚಿದ್ದೆಲ್ಲಾ ಚೆನ್ನಾಗಿದೆ–ಎಂತ ಅನುಭವಿಸಬೇಕು. ಇಲ್ಲಿ ಹಾಗೆ ಒದರುವುದಿಲ್ಲವಲ್ಲ. ಒದರುವ ಭಾಷೆ ಸಂಸ್ಕೃತ ನಿನಗೆ ತಿಳಿದಿರಬೇಕು. ವಿಷಯ ನಿನ್ನ ಸ್ತುತಿ

ಮಹಾ–ಬೆಂಕಿಬಿಕ್ಕಿ ಆ ಸ್ತುತಿಗೆ. ಬಾಯಿ ನೋವ ಮಾಡಿ ಮೇಲಿಂದ ಮೇಲೆ ಅದನ್ನು ಹೇಳುತ್ತಾ ಇದ್ದರೆ, ಬೇಸರ ಅಲ್ಲ. ಕಿವಿ ಹೊಡ್ದು ಹೋಗಲಿ ಅನಿಸುತ್ತೆ

ನಾನು— ಅನಿಸುತ್ತೆ. ಅನಿಸಿದರೆ ನಷ್ಟವೇನು? ಪೂಜೆ, ಹೂವು, ಹಾರ, ಗಂಧ ಇತ್ಯಾದಿ ಎಲ್ಲ ಇರುವಾಗ!

ಮಹಾ–ಅಯ್ಯೋ ಬೇಡಪ್ಪ—ಆ ವಿಷಯ ಬಿಡು ಕರುಳು ಕತ್ತರಿಸುತ್ತೆ ನೆನೆದರೆ'

ನಾನು–ಕರುಳು ಕಿತ್ತುಹಾಕಿ ಬಿಡು. ಕಕ್ಕಲ ಹೊರುವ ಕರುಳಿದ್ದರೆ ಹೊಟ್ಟೆ ಶೂಲೆ

ಮಹಾ–ಮಾತು ಸರಿಯೆ' ಆದರೆ ಅದರ ವೈಭವ, ನನ್ನ ಹೀನಾವಸ್ಥೆ 'ಎನ್ನುತ್ತೀಯಲ್ಲ'

ನಾನು–ಗೋಕರ್ಣೇಶ್ವರನ ವೈಭವ'

ಮಹಾ–ನಿಜ!

ಅದೇ ಬೇಡ ಎಂದೆ! ನೂರು ಜಪ ಮಾಡುತ್ತೇನೆ ಎಂದು ಮಾತು ಕೊಡುತ್ತಾನೆ ಪೂಜಾರಿ, ನನ್ನೆದುರಿಗೆ ಮತ್ತೆ ಸಹ ಜಪವಿಲ್ಲ. ನೈವೇದ್ಯ ಅರು ಪಾವು ಅಕ್ಕಿ ಕೊಂಡು, ಎರಡು ಪಾವು ನೆನಸಿ ಒಂದು ಪಾವು ತೋರಿಸಿ ಮನೆಗೆ ಒಯ್ಯುತ್ತಾನೆ.

ಅಯ್ಯೊ ಅಯ್ಯೊ ಆ ಮಹಾಲಿಂಗ ಭಟ್ಟ ಅಂತ ನನ್ನ ಹೆಸರಿನವನಿದ್ದ' ನನ್ನ ಮುಂದಿನ ನಂದಾದೀಪವನ್ನು–ರಾತ್ರಿ ಗುಡಿಮುಚ್ಚುವಾಗ ತಾನೇ ನೊಂದಿಸಿ, ಬೆಳಿಗ್ಗೆ ಬಂದಾಗ ತಿರುಗಿ ಹುಟ್ಟಿ ಬಿಡುತ್ತಿದ್ದ

ನಾನು—ಪೂಜಾರಿಯ ಮಾತು ಬಿಡು. ಅವನಿಗೂ ಪೂಜೆ ಮಾಡಿ ಬೇಸರ ಬರಲಾರದೇ' ಸರಕಾರಿ ಗುಮಾಸ್ತಿಕೆಯಂತೆ, ಅವನೇನು ಗೀಚಿದ್ದೇ ಗೀಚುವುದು. ಆದರೆ ಬರುವ ಭಕ್ತರಿಗಾದರೂ ನಿನ್ನ ಮೇಲೆ ಪ್ರೀತಿಯಿತ್ತೋ ಇಲ್ಲವೋ . .

ಮಹಾ–ಎಲ್ಲಾ ಪ್ರೀತಿಯುಳ್ಳವರೇ. .

ನಾನು–ಹಾಗೆ ಹೇಳು ಮತ್ತೆ.

ಮಹಾ–ಹೇಳುವುದೇನು ನನ್ನ ಗೋಳನ್ನು! ಬಂದು ಬಂದವರು ನನ್ನ ಹತ್ತಿರ ಫಿರ್ಯಾದಿ ವಿನಹ ಇನ್ನೇನಿಲ್ಲ. ಒಬ್ಬಾಕೆ ಬಂದಳು–ತನಗೆ ಮಕ್ಕಳಿಲ್ಲ ಎಂದು ಅತ್ತಳು. ಇನ್ನೊಬ್ಬನಿಗೆ ಸಾಲವಿದೆಯಿದೆಯಂತೆ ತೀರಿಸಯ್ಯಾ ಎಂದು ಅತ್ತ. ಮೂರನೆಯವನು ಎಲ್ಲಾ ಬಿಟ್ಟು–ತನ್ನ ಕೋಣ ಕಂಬಳದಲ್ಲಿ ಗೆಲವಾಗಲಿ ಎಂದು ಕೇಳಿದ

ನಾನು–ಕೋಣನೇ ನಂದಿಯೋ!

ಮಹಾ–ನನ್ನ ನಂದಿಯೋ' ನೋಡಲ್ಲಿ ಎಂಟು ಚೂರಾಗಿ ಬಿದ್ದಿದೆ'

ನಾನು–ಯಾರು ಘಜನಿ ಮಹಮ್ಮದ ಬಂದಿದ್ದನೇ ಇಲ್ಲಿ?

ಮಹಾ–ಘಜನಿ ಯಾಕೆ! ಆ ಮಹಾಲಿಂಗ ಭಟ್ಟನ ತಮ್ಮನೊಬ್ಬನಿದ್ದ–ಅವನ ಕೆಲಸ. ಎತ್ತಿ ಕಸರತ್ತು ಮಾಡಿ ನಂದಿಯನ್ನು ಕೆಡೆದು ಚೂರು ಮಾಡಿದ! ಊರಲ್ಲಿ ಬೊಬ್ಬೆ ಬಿತ್ತು. ನಂದಿ ಚೂರಾಯಿತು, ಊರು ಸುಡುತ್ತದೆ ಎಂದು. ಭಟ್ಟನ ತಮ್ಮನ ಮೇಲೆ ಸಂಶಯ ಬಂದಿತು. ಅವನೇನು ಧೀರ–ನನ್ನ ಮುಂದೆ ಆಣೆ ಮಾಡಿ ಹೇಳಿಬಿಟ್ಟ–ನಾನು ಆ ದಿನ ಗುಡಿಗೇನೆ ಬಂದವನಲ್ಲ'

ನಾನು–ನಂದಿ ಇನ್ನು ನಿನ್ನ ಪಾರ್ವತಿ, ಮಗ ಗಣೇಶ, ಶೃಂಗಿ ಭೃಂಗಿ ಮೊದಲಾದ ಪರಿವಾರ

ಮಹಾ–ಎಂಥವನು ನೀನು' ನನ್ನ ಅವಸ್ಥೆ ಹೀಗಾಗಿರುವಾಗ ಭಂಗಾರದ ಪಾರ್ವತಿಯನ್ನು

ನಾನು–ಪಾರ್ವತಿಯೆಂದರೇನೆ ಚಿನ್ನಕ್ಕೆ ಸಮ

ಮಹಾ–ಅವಳನ್ನು ಮಾಡಿದ್ದು ಚಿನ್ನದಿಂದ ಎಂದು ಇನ್ನೊಬ್ಬ ಪೂಜಾರಿ, ಇಲ್ಲಿನ ಮಾಲಿಯವಳು ಜತೆಯಿಂದ ಎತ್ತಿಕೊಂಡು ಹೋಗಿ–ರಾತೋರಾತ್ರಿ ಕರಗಿಸಿ ಬಿಟ್ಟರು' ಅಲ್ಲಿಂದ ಕಳೆಗುಂದಿತ್ತು

ನಾನು–ಪತ್ನಿಯನ್ನಗಲಿದ ಮೇಲೆ'

ಮಹಾ–ಅಗುಲುವುದೆಲ್ಲಿ ಬಂತು

ಮಹಾ–ಮುನ್ನೂರು ವರ್ಷದ ಕೆಳಗೆ, ನನ್ನನ್ನು ಸ್ಥಾಪನೆ ಮಾಡಿದಾಗ ಆ ವೈಭವವೇನು' ಪಾರ್ವತಿಯನ್ನೂ ನನ್ನನ್ನೂ ಕುಳ್ಳಿರಿಸಿ ಲಗ್ನ ಮಾಡಿಸಿ, ಕೋಣೆಯಲ್ಲಿ ಹಾಕಿ!

(ಈ ಪಬ್ಲಿಕ್ ಫಂಕ್ಷನ್ ಹೇಳುತ್ತ ಅವನಿಗೆ ನಾಚುಗೆಯಾಗಿ ಕಣ್ಣೀರು ಬಂದಿತು)

ನಾನು–ಹೋಗಲಿ ಬಿಡು ಆ ವಿಚಾರ. ಅವಂಗೇನು–ದಾಂಪತ್ಯ ಏಕಾಂತದ ವಿಚಾರ ಪಬ್ಲಿಕ್ ಆಗಕೂಡದು ಎಂತ ಶುದ್ಧ ಪಶು ಮುಂಡೇ ಗಂಡರು

ಮಹಾ–ಅವಂಗದು ಅನ್ಯಾಯವಾಗಿರಲಿಲ್ಲ

ನಾನು–ಏನು, ಆಗಿನವರೂ ಅಷ್ಟು ಲಜ್ಜ ಭಂಡರೇ–

ಮಹಾ–ಏನೋ–ನನ್ನ ಪ್ರಥಮದ ಪೂಜಾರಿ, ಆಗಿನ ದೇವದಾಸಿ–ಅವರು ನಿತ್ಯವೂ ನನ್ನ ಗುಡಿಯನ್ನು

ನಾನು–ಹೇಗಲಿ ಬಿಡು. ಹ್ಯಾಗೂ ನಿನಗೆ ತಿಳಿಯದೆ ಹೋಗುವ ಹಾಗಿಲ್ಲ. ನಿನ್ನನ್ನು ಅಂತರಂಗಕ್ಕೆ ಒಯ್ಯೋಣ ಅಂತ ಮಾಡಿದರು. ಅವರು ಸತ್ತರಲ್ಲ ಈಗ . . . ವಿನಾಯಕ'

ಮಹಾ–ಓಹೋ ಮಗ ವಿನಾಯಕನಿಗೆ, ಆಗ ಸಾವಿರ ತೆಂಗಿನಕಾಯಿಯ ಮಾಡು ಗಣಪತಿ

ನಾನು ಅಲ್ಲಿ ಮಹಾಲಿಂಗ! ಈ ಕೊಬರಿ ತಿನ್ನುವ ಪಾಳಿ ನಿನ್ನ ಮಗನಿಗೆ ಹೇಗಾಯಿತು! ಹಿಮಾಲಯದಲ್ಲಿ ತೆಂಗಿನ ತೋಟವಿದೆಯೆ!

ಮಹಾ–ಕೊಬರಿ ಮಗನೆಲ್ಲ ತಿನ್ನುತ್ತಿದ್ದ. ಕೊಬರಿ ಅವರಿಗೆ. ರಥ ಎಂದು ಅವನ ಗುಡಿ ಹೊಸ್ತಿಲಿಗೆ ಬಡಿದು, ಅದರ ದಾರಂದ ಒಡೆದ್ದಾಯಿತು. ಆ ಮೇಲೆ ಚಿಪ್ಪು ಅಲ್ಲಿ ಎಸೆದರೆ–ಇನ್ನೊಬ್ಬನ ಕಾಲಿಗೆ ತಾಗಿ ರಕ್ತ ಸುರಿದ ಮೇಲೆಯೇ ಅದನ್ನು ತೆಗೆಯಬೇಕು.

ನಾನು–ಈಗ ಕಾಜಾಕಲಂ. ನಿನ್ನನ್ನು ಸ್ಥಾಪಿಸಿ ಎಷ್ಟು ವರುಷವಾಯಿತು'

ಮಹಾ—ಮುನ್ನೂರಾಯಿತೆಂದೆನಲ್ಲ. ಅಂದರೆ ಈಗ ಪೂಜೆ ನಿಂತು ಅರುವತ್ತಾಯಿತು'

ನಾನು–ಮುನ್ನೂರು ವರ್ಷ! ಅಂದರೆ ಬ್ರಿಟಿಷರು ಬಂದಾಗ ನೀನು ಬಂದೆ, ನೀನು ಇಳಿದೆ, ಅವರು ಇಳಿಯಲಿಲ್ಲ–ಅಂತಲೇ! ಆದರೆ ನಮ್ಮವರಲ್ಲಿ ಒಬ್ಬ ಮಹಾಲಿಂಗನಿದ್ದಾನೆ ಅವನನ್ನು ಪಾಂಡವರು ತಂದು ಇರಿಸಿದರಂತೆ!

ಮಹಾ–ನನ್ನ ವಿಷಯವೂ ಹಾಗೆ ಇತ್ತು ಕಥೆ. ನಿಮ್ಮ ಜನರಿಗೆ, ಮರೆತುಹೋಗುವಷ್ಟು, ಹಿಂದಾದ ಪಾಪವೆಲ್ಲ–ಪಾಂಡವರ ತಲೆಯ ಮೇಲೆ

ನಾನು–ಇರಲಿ, ನಿನಗೆ ಉಂಬಳಿಗಿಂಬಳಿ ಇರಲಿಲ್ಲವೆ'

ಮಹಾ–ಇತ್ತು–ಒಂದು ಹತ್ತು ವರುಷ ಭಾರಿ ಉತ್ಸವ, ಪೂಜೆ–ಎಲ್ಲ ಆಯಿತು' ದೇವರೆಂದರೆ–"ಮಲೆಯೂರ ಮಹಾಲಿಂಗ"–ಎನಿಸಿದೆ

ಕೊನೆಗೆ ಉಂಬಳಿಗಾಗಿ ನಾಲ್ಕು ಸಾರಿ ಕೈಕೈಯಾಯಿತು ನನ್ನ ಸನ್ನಿಧಿಯಲ್ಲಿ . ಅನಂತರ ಎಲ್ಲಾ ತಿಂದರು, ನಾನು ಉಳಿದೆ.

ನಾನು–ಪೂಜೆ, ಗೀಜೆ

ಮಹಾ–ಯತ್ರ ತಸ್ತಿಕ್ ತತ್ರ ಭಕ್ತಿ

ನಾನು–ಹೋಗಲ ಬರಿ ಗುಡಿಯನ್ನಾದರೂ ಬಿಡಬಹುದಲ್ಲವೊ

ಮಹಾ–ಪೂಜೆ ಹೋಯಿತು, ಮಾಡಿನ ಹುಲ್ಲು ಕೊಳೆಯಿತು. ಬಾವಲಿಗಳು ಸಹ ನಾಚಿಕೊಂಡು ಹೊರಟುವು. ಒಂದೊಂದೇ ಮರ ಮೋಪು ಬಿತ್ತು. ಕೊಳೆಯಿತು!

ಈಗ ನನ್ನ ಗುಡಿಯ ಕಲ್ಲುಗಳು ಯಾರ್ಯಾರ ಮನೆಯ ಬಟ್ಟಲು, ಮೆಟ್ಟಲು

ನಾನು ಗಂಧವಿಲ್ಲ, ಅಭಿಷೇಕವಿಲ್ಲ, ಗುಡಿಯಿಲ್ಲ, ಗೋಪುರವಿಲ್ಲ

ಮಹಾ–ಎಲ್ಲಾ ಇದೆ. ಗಂಧ ಮೇಲಿಂದ, ಅಭಿಷೇಕ ಅಪೂರ್ವಕ್ಕೆ ಈ ಹಾದಿಯಾಗಿ ಸಾಗುವ ನಾಯಿಗಳಿಂದ–ಗುಡಿಗೋಪುರ ನೀಲವಾದದ್ದು

ಇಲ್ಲ ನಾನು ಮೂರನೆ ಕಣ್ಣು ತೆರೆಯದೆ ಮೋಸವಾಯಿತು

ನಾನು–ಅದು ಅಷ್ಟೆ! ಈಗ ನೋಡು ಬಬ್ಬರ್ಯ, ಪಂಜುರ್ಲಿ, ಕಲ್ಕುರ್ಟಿ–ಇವಕ್ಕೆಲ್ಲ ನೇಮ ತಪ್ಪುವುದಿದೆಯೇ' ನೀನು ಗಾಂಧಿ ಪಾರ್ಟಿ ಸೇರಿದೆ' ಜಬರ್‌ದಸ್ತಿಯಿಲ್ಲದೆ ಯಾರು ಕೇಳುವುದಿಲ್ಲ. ನಿನ್ನಣ್ಣ ಗುಜರಾತಿನ ಸೋಮನಾಥ–ಮರ್ಯಾದೆ ಕಳೆದ, ಕಳೆದುಕೊಂಡ' ನಾನು ಅನ್ನುತ್ತೇನೆ—ನೀವು ದೇವರು ಅಂಬ ಬಾಬುಗಳು, ಹೀಗೆ ಪೆಚ್ಚಾಗಿರಕೂಡದು! ಹಾಲು, ಉಂಡ್ಲಕ್ಕ, ಕಡಬು ಪಾಯಸ–ಊಹೂಂ ವರ್ಜ್ಯ. ಇನ್ನು ಬ್ರಾಂಬ್ರ ಗಿಲೀಟು–ರುದ್ರ ಅನ್ನುತ್ತಾರಲ್ಲ! ಮಕ್ಕಳ ಮಗ್ಗಿಯಿಂದ ಹಾಗೆ ಪಟಪಟ ಸುರಿಯುವ ಲೆಕ್ಕ–ಕೂಡ್ಲೇ ಕೊಡ್ಸು'

ಮಹಾ—ಮತ್ತೇನು ಮಾಡ್ಲಿ ನಾನು!

ನಾನು—ಅಲ್ಲಿ ಪ್ರಳಯಕಾಲದ ಮನುಷ್ಯ ನೀನು!

ಮಹಾ–ಫಣೆಗಣ್ಣು ತೆರೆಯುವುದೇ'

ನಾನು–ಪದ್ಧ ಆಯಿತು' ಎಲ್ಲಾ ಸುಟ್ಟಿತೆಂದರೆ ಮತ್ತೇನು ಉಳಿಯಿತು? ನಮ್ಮವರು ಸುಬ್ರಾಯ ಸೆಟ್ಟರ ಹಾಗೆ ದರ್ಬಾರು ಮಾಡಿ, ಅಸ್ತಿಧ್ವಂಸ ಮಾಡಿದರೆ ನಾಳೆಗೆ ಏಕಾದಶಿ' ಸುಡಬಾರದು, ಸುಟ್ಟ ಹಾಗೆ ಆಗಬೇಕು

ಪೂಜಾರಿ ಬಂದರೆ—ಮೂಗು ಕೊಯ್ದು ಕೊಡು' ಎನ್ನು ಮಕ್ಕಳು ಕೇಳಲಿಕ್ಕೆ ಬಂದರೋ–ಹೆಚ್ಚಾದವರಿಂದ ಕಡತಕ್ಕೊಳ್ಳಿ ಅನ್ನು!

ತೆಂಗಿನಕಾಯಿ, ಕಡಲೆಬೇಳೆ ತಂದರೋ–ಕುದುರೆಗೆ ಹಾಕಿ' ನನಗೆ ಬೇಕು ತಲೆ! ನಿಮ್ಮಂತಹವರ ತಲೆ—ಮಿದುಳಿಲ್ಲದ ತಲೆ!–ಎನ್ನು.

(ಇನ್ನೊಂದು ಪುಟಕ್ಕೆ ಮುಂದುವರಿದುದು)

ಚೀನದಲ್ಲಿ ನೆರೆ

ಚೀನಾದಲ್ಲಿ ಯಾಂಗಿ ಸಿಕಿಯಾಂಗ್ ನದಿಯಲ್ಲಿ ಮೇರೆ ಮೀರಿದ ಪ್ರವಾಹವೆದ್ದು ಮಹಾ ಅನಾಹುತವಾಗಿದೆ. ಪ್ರವಾಹವು ಇನ್ನೂ ಏರುತ್ತಲೇ ಇದೆ. ನದಿಯ ಎರಡು ಪಾರ್ಶ್ವಗಳಲ್ಲಿದ್ದ ಸಾವಿರಾರು ಹಳ್ಳಿಗಳೂ, ನೂರಾರು ಪಟ್ಟಣಗಳೂ ಜಲಮಯವಾಗಿವೆ. ಜನರು ಮರಗಳ ಮೇಲೆ ವಾಸಿಸುತ್ತಿರುವರು. ಡೈಕ್ ಎಂಬ ದಂಡೆಯು ಪ್ರವಾಹ ಶಕ್ತಿಯಿಂದ ಕೆಡವಿ ಬಿದ್ದರೆ ಲಕ್ಷಾಂತರ ಜನರ ಊರಾದ ಹಾನಿ ಪ್ರಾಂತ್ಯವು ನಾಶವಾಗುವುದು. ಎಂಚಿ ಎಂಬಲ್ಲಿ ೨೦೦೦ ಜನರೂ ಎಂಚೆಂಗ್ ಎಂಬಲ್ಲಿ ೧೦೦೦ ಜನರೂ ನೀರು ಪಾಲಾದರು. ೫೦,೦೦೦ ಜನರು ನಿರ್ಗತಿಕರಾಗಿರುವರು.

ವಿವಾಹ ಸಂಭ್ರಮದಲ್ಲಿ ಭಾಗವಹಿಸಿದ ೭೦ ಮಂದಿ ಮೃತರಾದರು

ನ್ಯೂಡಿಲ್ಲಿ, ಜುಲಾಯಿ ತಾ ೨೧

ಶಹರಣಪುರದಿಂದ ಬಂದಿರುವ ಒಂದು ವಾರ್ತೆಯಿಂದ ಅಲ್ಲಿ ಒಂದು ವಿವಾಹ ಸಂಭ್ರಮದಲ್ಲಿ ಭಾಗವಹಿಸಿದ ೭೦ ಮಂದಿ ಮೃತರಾದರೆಂದು ತಿಳಿದುಬರುತ್ತದೆ. ವಿವಾಹದ ನಂತರ ನಡೆದ ಒಂದು ಭೋಜನವೇ ಈ ಮರಣಗಳಿಗೆ ಕಾರಣವೆಂದು ತಿಳಿದುಬಂದಿದೆ. ಅನ್ನಕ್ಕೆ ಬಡಿಸಲ್ಪಟ್ಟ ಸಾಂಬಾರವನ್ನು ಬೇಯಿಸಿದ ಗುಡಾಣದೊಳಗೆ ಒಂದು ದೊಡ್ಡ ವಿಷಮಯ ಹಾವು ಬಿದ್ದು ಬೆಂದಿರುತ್ತದೆಂದು ವಿಚಾರಿಸಲಾಗಿ ತಿಳಿಯಿತು.

ಪೋಲೀಸರನ್ನೇ ಕಟ್ಟಿ ಹಾಕಿದರು

ರಿಬಜಶಾಹಿಯಲ್ಲಿಯ ಕುಮಾರ್ ಗ್ರಾಮಕ್ಕೆ ಒಂದು ಮೋಕದ್ದಮೆಯ ಕುರಿತಾಗಿ ತನಿಖೆ ನಡೆಸುವುದಕ್ಕಾಗಿ ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಒಬ್ಬ ಪೋಲೀಸ ಇವರಿಬ್ಬರ ಹೋದರು. ತಕ್ಷೀರ ಗಾರರು ಇವರಿಬ್ಬರನ್ನು ಹಿಡಿದು ಹೊಡೆದು ಬಂಧಿಸಿ ಹಾಕಿದರು.

ಅಮೆರಿಕಾ ರಷ್ಯಾಗಳ ಒಪ್ಪಂದ.

ಸಂಯುಕ್ತ ಅಮೆರಿಕಾವೂ ರಷ್ಯಾವೂ ಒಂದು ಒಪ್ಪಂದವನ್ನು ಮಾಡಿಕೊಂಡು ಎರಡು ರಾಷ್ಟ್ರಗಳೊಳಗೆ ಪರಸ್ಪರವಾಗಿ ನಡೆಯುತ್ತಿದ್ದ ವ್ಯಾಪಾರವನ್ನು ಇನ್ನೂ ಮೂರರಷ್ಟು ಪಾಲು ಹೆಚ್ಚಿಸಿಕೊಳ್ಳಬೇಕೆಂದು ನಿಷ್ಕರ್ಷಿಸಲಾಗಿದೆ.

ಹಿಂದೂ ಮುಸ್ಲಿಂ ಗಲಭೆಯ ಪರಿಣಾಮ.

ಕಳೆದ ವಾರ ಕಡಲೂರಿನಲ್ಲಿ ಹಿಂದೂ ಮುಸ್ಲಿಂ ಗಲಭೆಯಾಯಿತು. ೫೧ ಜನ ಹಿಂದೂ ಮುಸ್ಲಿಮರನ್ನು ರಿಮಾಂಡಿನಲ್ಲಿಡಲಾಯಿತು.

ಗಂಡನು ಹೆಂಡತಿಯ ಮೂಗನ್ನು ಕೊಯ್ದನು.

ದಾವಣಗೆರೆ, ಜುಲೈ ೧೯.

ತಾಯಿನಾಡು ಬಾತ್ಮಿದಾರರು ತಿಳಿಸಿರುವಂತೆ ಇಲ್ಲಿಯ ಕೊರಮನನು ತನ್ನ ಹೆಂಡತಿಯ ಮೂಗನ್ನು ತಾನೇ ಕುಡುಗೋಲಿನಿಂದ ಕೊಯ್ದಿರುವನೆಂದು ತಿಳಿದುಬಂದಿದೆ. ಏಕೆ ಕೊಯ್ದನೆಂದು ತಿಳಿದುಬಂದಿಲ್ಲ. ಎಲ್ಲಿಯೋ ಓಡಿರುವನು. ಕೊರಮರ ಬರ್ಮ ಎಂಬವನು ಅವನ ಹೆಂಡತಿಯೊಡನೆ ಕೆಲವು ವರ್ಷಗಳಿಂದ ಇರುತ್ತಿದ್ದನು. ಮೊನ್ನೆ ಈಚಲ ಕಡ್ಡಿಯನ್ನು ಕೊಯ್ಯುತ್ತಿರುವಾಗ ಇವರೊಳಗೆ ವಾದವಿವಾದವು ಬೆಳೆದು ಅವನು ಅವಳ ಮೂಗನ್ನು ಕಡಿದನು.

ನೋಟೀಸು.

ಪುತ್ತೂರು ತಾಲೂಕು ನ್ಯಾಯತರ್ಫ ಗ್ರಾಮ ಕೊಡಿಯಾಲ ಬಳ್ಳಿಯೆಂಬಲ್ಲಿರುವ ಅಪ್ಪು ಶೆಟ್ಟಿ ಮಗ ಬಸ್ತು ಶೆಟ್ಟಿಯು ಈ ಮೂಲಕ ತಿಳಿಯಪಡಿಸುವುದೇನೆಂದರೆ –

ನ್ಯಾಯ ತರ್ಫ ಗ್ರಾಮದ ಕೊಡಿಯಾಲ ಬಳ್ಳಿಯೆಂಬಲ್ಲಿ ನಾನು ಚಿಕ್ಕಂದಿನಿಂದಲೂ ನನ್ನ [illegible] ಗೆ [illegible] ಅನುಭೋಗ [illegible] (ಸದರಿ ಗ್ರಾಮದ (1) ಸರ್ವೆ ನಂಬ್ರ 41 / 5 ಮತ್ತು 10/12 17ನೇ ಸ್ಥಳಗಳನ್ನು ಕಷ್ಟ [illegible] ಮಾಡಿಕೊಂಡು ಬರುತ್ತಿದ್ದೇನೆ. ನನ್ನ ಸದ್ರಿ [illegible] ಕಳೆದ 1930ನೇ ಇಸವಿಯಲ್ಲಿ ಇದೇ ಗ್ರಾಮದ ಶ್ರೀನಿವಾಸ [illegible] ಮೂರ ಮಾನುಷರುಗಳು (ಒಂದದ್ದನ್ನು) (2) ದೊಡ್ಡಿಗೆ ಕಟ್ಟಿದ ಬಾಬಿನಲ್ಲಿ ನನ್ನ ಎಡಪೆಟ್ಟಿಬ್ಬ ಪಾಲ್ಗೊಂಡ ಪಸ್ತ [illegible] ಗ್ರಾಮದ ಪಟೇಲರು ಬೇಕೆಂತ [illegible] ಕ್ರೋಧಿಸಿ [illegible] ಪಡದಿದ್ದುದರಿಂದ [illegible] ಈ ಅನ್ಯಾಯ [illegible] ಪ್ಯಾಗಾದರೂ ಮಾಡಿ [illegible] ಹಾಕಬೇಕೆಂದಿರುವ [illegible] ಕೃಷ್ಣ ಭಟ್ಟರೆಂಬವರ ಒಳಸಂಚಿನಿಂದ ಈ ಪಟೇಲರು ಏನಾದರೂ ಒಂದು ದಾಖ್ಲೆ ಮಾಡಿಸುವುದರಲ್ಲಿ [illegible] ನಾನು ವರ್ತಮಾನ ಕೇಳುತ್ತೇನೆ. ಅದ್ದರಿಂದ [illegible] ಎಡಪಟ್ಟಿ [illegible] ದಸ್ಕತು [illegible] ಸಂಬಂಧಿಸಿದ ಹೊರತು ಬೇರೆ (3) [illegible] ದಾಖ್ಲೆಗಳಲ್ಲಿ ಏನಾದರೂ ಅದಕ್ಕೆ [illegible] ರಾಗತಕ್ಕವುಗಳಲ್ಲವೆಂಬುದಾಗಿ ಈ ಮೂಲಕ ತಿಳಿಸುತ್ತೇನೆ. 3 ಚಿತ್ರಗಳು ಮಾತ್ರ

ಕೊಡಿಯಾಲಬಳ್ಳಿ 23—7—'35 } ಎಡಪೆಟ್ಟಿಬ್ಬ ಪ ದಸ್ಕತ ಬಸ್ತು ಶೆಟ್ಟಿಯ ರುಜು

ಕಡಿಮೆ ಬೆಲೆ.

ಹೊಸ ಕಂಪೆನಿ. ಗ್ಯಾರಂಟಿ ಮಾಲು.

ಗ್ಯಾರಂಟಿಯಾದ ಹೂವಿನ ಮತ್ತು ತರಕಾರಿ ಬೀಜಗಳು – ಹಣ್ಣಿನ ಗಿಡಗಳು, ಹೂವಿನ ಗಿಡಗಳು, ಹೂವುಗಳು ತರಕಾರಿ ಹಣ್ಣುಗಳು, ಸುಗಂಧ ದ್ರವ್ಯಗಳು ಬೇಕಾದರ ನಮ್ಮ ಹೊಸ ಕಂಪೆನಿಗ ಬರೆಯಿರಿ – ಕೆಟಲಾಗು ಇನಾಮು

ಮ್ಯಾನೇಜರ್ – ರೋಯಲ್ ಸೀಡ್ ಕಂಪೆನಿ

ನಂ. 27 – ಸ್ಟ್ರೀಟ್ ಇಲ್ ಲ್ ಕೋಲ್,

ಆಲಸೂರು – B cant

ಕೆನರಾ ವಾಚ್ ವರ್ಕ್ಸ್, ಮಂಗಳೂರು.

ದಿನಂಪ್ರತಿ ನೂರಾರು ಗಿರಾಕಿಗಳು ಬಂದು ನಮ್ಮಲ್ಲಿರುವ ಹಲವು ಬಗೆಯ ಕೈಗಡಿಯಾರ, ಗೋಡೆಯ ಗಡಿಯಾರ ಆಟದ ಸಾಮಾನು ಮೊದಲಾದುವುಗಳನ್ನು ಪಡೆದು, ಸಂತೃಪ್ತಿ ಹೊಂದಿ ಸಂತೋಷದಿಂದ ಹೋಗುವ ವಿಷಯವೊಂದೇ ನಮ್ಮಲ್ಲಿನ ಸರಕುಗಳಿಗೆ ಜನರಿಂದ ದೊರೆತಿರುವ ಪ್ರಶಂಸೆ. ನೀವೂ ನಮ್ಮಲ್ಲಿಗೆ ಬರಬಹುದು – ತೃಪ್ತಿ ಹೊಂದಬಹುದು – ಮೆಚ್ಚುಗೆ ಪಡೆಯಬಹುದು

ನೋಟೀಸು.

Attur Vaikunta Prabhu Bank, Mangalore

ಅತ್ತೂರು ವೈಕುಂಠ ಪ್ರಭು ಬೇಂಕ್, ಡೊಂಗರಕೇರಿ, ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನ, ಬೆಳ್ಳಿ, ನಗಗಳ ಈಡಿನ ಮೇಲೆ ಸಾಲ ಪಡಕೊಂಡ ನಂತರ ಕ್ಲಪ್ತ ವಾಯಿದೆಗೆ ಅಸಲು, ಬಡ್ಡಿ ಕೊಡದೆ ಈ ವರೆಗೆ ಬಾಕಿ ಮಾಡಿಕೊಂಡಿರುವುದರಿಂದಲೂ ಸದರಿ ಸಾಲಗಳನ್ನು ಬರಮಾಡಿಕೊಳ್ಳುವರೆ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಜ್ಯಾರಿಯಾಗಿಯೂ, ಕೆಲವು ಜ್ಯಾರಿಯಾಗದೆಯೂ ಬಂದಿರುವುದರಿಂದಲೂ, ಸದರಿಯವರು ಈಡಿಟ್ಟ ನಗಗಳನ್ನು ಇದೇ 1935ನೇ ಅಗೋಸ್ತು ತಾ 2ನೇ ಶುಕ್ರವಾರದೊಳಗೆ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿ ಐವೇಜುಗಳನ್ನು ಸಲಾಯಿಸಿ, ಬಿಡಿಸಿಕೊಂಡು ಹೋಗದೆ ಇದ್ದರೆ, ಸದರಿಯವರು ಈಡಾಗಿಟ್ಟ ನಗಗಳನ್ನು ಇದೇ 1935ನೇ ಇಸವಿ ಅಗೋಸ್ತು ತಾ 3ನೇ ಶನಿವಾರ ಇಲ್ಲಾ ಅನಂತರ ನಮಗೆ ಯುಕ್ತಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ 2 ಗಂಟೆಗೆ ಸರಿಯಾಗಿ ಬಹಿರಂಗವಾಗಿ ಏಲಂ ಮಾಡುವೆವು.

	ಸಾಲದ ನಂಬ್ರ ಮತ್ತು ಅಡಪಿಟ್ಟ ತಾ	ಸಾಲ ಪಡಕೊಂಡವರ ಹೆಸರು ಮತ್ತು ವಿಳಾಸ	ಬಾಕಿ ಬಡ್ಡಿ
1	A 1632 3-11-34	ಸುಂದರ ಶೇಟ್ S/o ಯಂ ಸುಬ್ರಾಯ ಶೇಟ್ ಮಾರ್ಕೆಟು ರಸ್ತೆ, ಮಂಗಳೂರು	9/–
2	A 1631 3 11 34	ಸುಂದರ ಶೇಟ್ S/o ಯಂ ಸುಬ್ರಾಯ ಶೇಟ್ ಮಾರ್ಕೆಟು ರಸ್ತೆ, ಮಂಗಳೂರು	7/–
3	A 1630 3-11-34	ಸುಂದರ ಶೇಟ್ S/o ಯಂ ಸುಬ್ರಾಯ ಶೇಟ್ ಮಾರ್ಕೆಟು ರಸ್ತೆ, ಮಂಗಳೂರು	7/
4	A 1629 3-11-34	ಸುಬ್ರಾಯ ಶೇಟ್ S/o ಯಂ ಮಂಜುನಾಥ ಶೇಟ್, ಭಗವಂತಕೇರಿ ಮಂಗಳೂರು	12/–
5	A 1628 3-11-34	ಸುಬ್ರಾಯ ಶೇಟ್ S/o ಯಂ ಮಂಜುನಾಥ ಶೇಟ್, ಭಗವಂತಕೇರಿ ಮಂಗಳೂರು	6/
6	A 1627 3-11-34	ಸುಬ್ರಾಯ ಶೇಟ್, S/o ಯಂ ಮಂಜುನಾಥ ಶೇಟ್ ಭಗವಂತಕೇರಿ ಮಂಗಳೂರು	13/–
7	A 1626 3-11 34	ಸುಬ್ರಾಯ ಶೇಟ್ S/o ಯಂ ಮಂಜುನಾಥ ಶೇಟ್ ಭಗವಂತಕೇರಿ ಮಂಗಳೂರು	8 –
8	A 1625 3-11-34	ಸುಬ್ರಾಯ ಶೇಟ್ S/o ಯಂ ಮಂಜುನಾಥ ಶೇಟ್ ಭಗವಂತಕೇರಿ ಮಂಗಳೂರು	7 –
9	A [illegible] 27 [illegible] 34	ಸುಂದರ ಶೇಟ್ S/o ಯಂ ಸುಬ್ರಾಯ ಶೇಟ್ ಮಾರ್ಕೆಟು ರಸ್ತೆ ಮಂಗಳೂರು	35/–
10	A [illegible]7 26– –34	ಸುಂದರ ಶೇಟ್, S/o ಯಂ ಸುಬ್ರಾಯ ಶೇಟ್, ಮಾರ್ಕೆಟು ರಸ್ತೆ ಮಂಗಳೂರು	20/–
11	A 56[illegible] 24 5 34	ಸುಂದರ ಶೇಟ್ S/o ಯಂ ಸುಬ್ರಾಯ ಶೇಟ್, ಮಾರ್ಕೆಟು ರಸ್ತೆ, ಮಂಗಳೂರು	45/–
12	A 1[illegible]0 4 [illegible] 34	[illegible] S/o [illegible] ಗ್ರಾಮ ಮಂಗಳೂರು ತಾಲೂಕು,	6 –
13	A 1210 30-8-34	[illegible] S/o [illegible] ಗ್ರಾಮ ಮಂಜೇಶ್ವರ	12 –
14	A 1051 3-8 34	[illegible] S/o [illegible] ಉರ್ವ ಮಂಗಳೂರು	6 –
15	A 1023 30 34	[illegible] S/o [illegible] ಮಂಗಳೂರು	5 –
16	A 912 19-7-34	[illegible] S/o [illegible] ಮಂಗಳೂರು	4 –
17	A 766 23-6-34	[illegible] S/o [illegible] ಪೂಜಾರಿ ಬಂಗ್ರ ಕೂಳೂರು ಮಂಗಳೂರು	16
18	A 748 18-6-34	[illegible] S/o [illegible] ಶೆಟ್ಟಿ [illegible] ಮಂಗಳೂರು	18/
19	A 442 26-4 34	ಪಕೀರ N/o [illegible] ಬ್ಯಾರಿ ಬೊಕ್ಕಪಟ್ಣ ಮಂಗಳೂರು	13 –
20	722 [illegible] 5-34	ಕೆ ಅಹಮದ್ S/o ಮ್ಯಾದಿನ್ ಬ್ಯಾರಿ, ಕುದ್ರೋಳಿ ಮಂಗಳೂರು	20 –
21	1977 16-9-34	ಕೆ ಅಹಮದ್ S/o ಮ್ಯಾದಿನ್ ಬ್ಯಾರಿ ಕುದ್ರೋಳಿ ಮಂಗಳೂರು	8
22	2871 10 12 32	ಪಿ ಮಸ್ಕರೇಂಜ್ಸ್ ಬಾಯಿ D/o ಇನಾಸ್ ಮಸ್ಕರೇಂಜ್ಸ್, ಉರ್ವ, ಮಂಗಳೂರು,	70/
23	2818 3-12-32	ಬಿ ಕೃಷ್ಣಯ್ಯ S/o ವೆಂಕಟ್ರಮಣಯ್ಯ ಕೊರಂಜಿ, ಗುರುವಾಯನಕೆರೆ	35 –
24	2795 30-11-32	ಪಿ ಮಸ್ಕರೇಂಜ್ಸ್ ಬಾಯಿ D/o ಇನಾಸ್ ಮಸ್ಕರೇಂಜ್ಸ್, ಉರ್ವ, ಮಂಗಳೂರು	25/
25	2145 7—9—32	ಬೊಗ್ಗು ಪೂಜಾರಿ N/o ಐತ ಪೂಜಾರಿ, ಕೆಂಜಾರು ಗ್ರಾಮ, ಮಂಗಳೂರು ತಾಲೂಕು.	52/–
26	1566 24-6-32	ಕೆ ತಮ್ಮಯ್ಯ S/o ದೇವು ಮೂಲ್ಯ, ಶಂಕರ ವಿಠಲ ಮೋಟರ್ ಕಂಪೆನಿ, ಮೋಟರ್ ಫಿಟ್ಟರ್ ಮಂಗಳೂರು.	11/–

ಮಂಗಳೂರು,
25—7—1935.

A. V. Prabhu,
ಪ್ರೊಪ್ರೈಟರ್, ಎ ವಿ ಪಿ ಬೇಂಕ್.

ಪುರಾತನ ನಗರ ಶೋಧನೆ.

ಖೈರ್‌ಪುರ ಸಂಸ್ಥಾನದಲ್ಲಿ ಮೋಟ್ ಡೋಚೆಯ ಬಳಿ ಒಂದು ಪುರಾತನ ನಗರವು ಕಾಣಸಿಕ್ಕಿತು. ಈ ನಗರವು ಮಹೇಂದ್ರ ಜಾಡೋಗಿಂತಲೂ ಹಿಂದಿನ ಕಾಲದ್ದೆಂದು ತಿಳಿಸಲಾಗಿದೆ. ೯ ತಿಂಗಳುಗಳ ಹಿಂದೆ ಈ ಸಂಸ್ಥಾನಾಧೀಶರಾದ ಥಾಕೂರ್ ಸಾಹೇಬರಿಗೆ ಬತ್ತಿಹೋಗಿರುವ ನದಿಯ ತಲದಲ್ಲಿ ಒಂದು ದೊಡ್ಡ ದಿಣ್ಣೆಯು ಕಾಣಸಿಕ್ಕಿತು. ಆ ಸ್ಥಳವನ್ನು ಅವರು ಗುಟ್ಟಾಗಿ ಅಗೆಸಿದರು. ಹಿಂದಿನ ಕಾಲದ ಅನೇಕ ಕನ್ನಡಿಗಳೂ ಇತರ ಸಾಮಗ್ರಿಗಳೂ ದೊರೆತುವು. ಮುಂಬಾಯಿಯ ಪ್ರೊಫೆಸರ್ ಫೋರಿಯವರು ಥಾಕೂರ್ ಸಾಹೇಬರ ಹೇಳಿಕೆಯನ್ನು ಸಮರ್ಥಿಸಿ ದೊಡ್ಡ ನಗರವೇ ಕಾಣಬರಬಹುದು ಎಂದು ತಿಳಿಸಿದವರು.

ಅನುಕ್ರಮಣಿಕೆ.

ಚಿತ್ರ	೨
ಸಾಹಿತ್ಯ ಸಂಗ್ರಹ	೩
ಅಮಾನುಷಿಕವೂ ಭೀಕರವೂ ಆದ ಕ್ರೌರ್ಯ	೫
ಬಾಲ್ಯಪ್ರಪಂಚ ...	೬
ಮೈಲುಕಲ್ಲುಗಳೊಡನೆ ಮಾತುಕಥೆಗಳು,	೮
ಅಗ್ರಲೇಖ	
ಸ್ಫುಟವಿಚಾರಗಳು	೧೦
ರಾಜದ್ರೋಹಕರವಲ್ಲದ ಭಾಷಣ	೧೦
ವರ್ತಮಾನ ಸಂಗ್ರಹ	
ಶಿಕ್ಷಣ ಪ್ರಚಾರಕ್ಕಾಗಿ ಪಂಚವಾರ್ಷಿಕ ಯೋಜನೆಯೊಂದಾಗಬೇಕು	೧೪
ಮಂಗಳೂರು, ತಾಲೂಕುಗಳಿಂದ	೧೧
ವಿವಿಧ ಸಮಾಚಾರಗಳು,	೧೬
ನಡೆದ ಕತೆಗಳು	೧೮

ಸ್ವದೇಶಾಭಿಮಾನಿ.

ತಾ. ೨೬ ನೇ ಶುಕ್ರವಾರ ಜುಲೈ ೧೯೩೫

ರಾಜದ್ರೋಹಕರವಲ್ಲದ ಭಾಷಣ

ಕಲ್ಕತ್ತದಲ್ಲಿ ಕಮಲಕೃಷ್ಣ ಸರ್ಕಾರನೆಂಬವನು, ಕಳೆದ ನವಂಬರ ತಾ ೧೧ರಲ್ಲಿ ಬಂಗಾಳದ ಯುವಕ ಸಮಿತಿಯ ಸಭೆಯಲ್ಲಿ ಮಾಡಿದ ಭಾಷಣವು ರಾಜದ್ರೋಹಾತ್ಮಕವಾದುದೆಂದು ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಅವನಿಗೆ ಒಂದು ವರ್ಷದ ಕಠಿನ ಸಜೆ ವಿಧಿಸಿದರು ಹೈಕೋರ್ಟಿನಲ್ಲಿ ಈ ದಂಡನೆಯ ಮೇಲೆ ಅಪ್ಪೀಲು ವಿಚಾರಣೆಗೆ ಬರಲು, ಇಬ್ಬರು ಬ್ರಿಟಿಷ ಜಡ್ಜರು,—ಆ ಭಾಷಣವು ರಾಜದ್ರೋಹಕರವೆನ್ನುವುದು ವ್ಯರ್ಥವೆಂದೂ, ಈಗ ಇರುವ ರಾಜ್ಯಭಾರ ಕ್ರಮಕ್ಕಿಂತ ಬೇರೊಂದು ರಾಜ್ಯಭಾರ ಕ್ರಮವು ಉತ್ತಮವೆಂದು ಹೇಳಿದ ಮಾತ್ರಕ್ಕೆ, ಅಂತಹ ಪ್ರತಿಯೊಂದು ಹೇಳಿಕೆಯೂ ರಾಜದ್ರೋಹಕರವೆನ್ನುವುದು ಅನ್ಯಾಯವಾಗುವುದೆಂದೂ, ಏಕೆಂದರೆ ಇಂತಹ ಹೇಳಿಕೆಯಿಂದ ಈಗಣ ಸರಕಾರವನ್ನೆ ಹಗೆತನದಿಂದ ಅಥವಾ ಅಧನ್ನು ಕೀಳುದೃಷ್ಟಿಯಿಂದ ಕಂಡಂತೇನೂ ಆಗುವುದಿಲ್ಲವೆಂದೂ ತೀರ್ಮಾನಿಸಿ, ಸರ್ಕಾರನನ್ನು ವಿಮೋಚನೆಗೊಳಿಸಿದರು

ಸಮಿಷ್ಟಿಗಣ ಸಂಸಾರ ಕ್ರಮವು ಸೋಶಲ ಶಾಹಿಕ್ರಮ, ಇದಕ್ಕಿಂತ ಬೊಲ್ಶೆವಿಕ್ ಸರಕಾರ ಕ್ರಮವು ಮೇಲಾಗಿದೆ ಎಂದು ಸರ್ಕಾರನ ಭಾಷಣವಾಗಿದ್ದಿತು ಅದಲ್ಲದೆ, ಯುವಕರು, ಹೆಚ್ಚು ಹೆಚ್ಚಾಗಿ ಆ ಸಮಿತಿಯ ಸದಸ್ಯರಾಗಿ, ಸಮುದಾಯವಾದವೆ ಉತ್ತಮವೆಂಬ ಅಭಿಪ್ರಾಯವು ಆಗುವಷ್ಟು ಹೆಚ್ಚು ಜನರಲ್ಲಿ ಉಂಟಾಗುವ ಹಾಗೆ ಪ್ರಯತ್ನಿಸಬೇಕಾಗಿಯೂ ಅವನ ಸೂಚನೆಯಾಗಿದ್ದಿತು

ಇಂತಹ ಭಾಷಣವನ್ನು ಆಧಾರವಾಗಿಟ್ಟುಕೊಂಡು, ಆಕ್ಷೇಪವನ್ನೆತ್ತಿ, ಸರಕಾರವು ಮೊಕದ್ದಮೆ ನಡೆಸಿದ್ದುದು ವಿವೇಕವಲ್ಲವೆಂದೂ, ಹಾಗೆ ವರ್ತಿಸಿದಲ್ಲಿ, ಜರ್ಮನಿ ಮತ್ತು ಇಟಲಿಗಳಲ್ಲಿ ಹೆಚ್ಚಿನ ಮಟ್ಟಿಗೆ ಭಾಷಣ ಸ್ವಾತಂತ್ರ್ಯವನ್ನೆ ನಿರ್ಮೂಲಿಸಿರುವ ಹಾಗೆ ನಮ್ಮ ಸರಕಾರವೂ ವರ್ತಿಸುವುದಾಗಿ ಜನರಲ್ಲಿ ತಪ್ಪು ಅಭಿಪ್ರಾಯವು ಉಂಟಾಗುವುದಕ್ಕೆ ಅವಕಾಶವಾಗುವುದೆಂದೂ ಜಡ್ಜರವರು ಎಚ್ಚರಿಸಿ ಬರೆದಿರುವರು

'ಈ ದೇಶದಲ್ಲಿ, ನಮ್ಮ ತಿಳಿವಳಿಕೆಗೆ ಬಂದ ಮಟ್ಟಿಗೆ, ಅಂತಹ ಸ್ಥಿತಿಯೇನೂ ಉಂಟಾಗಿಲ್ಲ' ಎಂದೇ ಅಪ್ಪೀಲನ್ನು ತೀರ್ಮಾನಿಸಿದರು

ಭಾಷಣಗಳಲ್ಲಿನ ಅಭಿಪ್ರಾಯಗಳಿಂದ, ಸರಕಾರದ ಕಡೆಗೆ ಹಗೆತನ, ನಿಂದಾಬುದ್ಧಿ, ಅಥವಾ ಅಪ್ರೇಮಗಳು ಕೇಳುವವರಲ್ಲಿ ಉದ್ರೇಕಗೊಳ್ಳುವಂತಾಗಿದೆಯೆ ಎಂಬುದನ್ನು ಇತ್ಯರ್ಥಿಸಿ, ಹಾಗಾಗಿದ್ದರೆ ಮಾತ್ರ ಅದು ರಾಜದ್ರೋಹಕರವೆಂದು ಪಿನಲ್ ಕೋಡಿನ ೧೨೪ A. ಸೆಕ್ಷನಿಗೆ ಒಳಪಡುವ ತಪ್ಪೆನಾಗುವುದು. ಎಷ್ಟೋ ಸಲ, ಭಾಷಣಗಳನ್ನು ಕೊಟ್ಟ ವಿದ್ಯಮಾನ ಮತ್ತು ವಾತಾವರಣಗಳನ್ನು ಎಣಿಕೆಗೆ ತಂದುಕೊಂಡ ವಿನಾ, ಈ ಸೆಕ್ಷನು ಅನ್ವಯಿಸುವುದೇ ಇಲ್ಲವೇ ಎಂಬುದನ್ನು ಖಂಡಿತ ಹೇಳಬರುವುದಿಲ್ಲ. ಅದೂ ಅಲ್ಲದೆ, ಭಾಷಣಕರ್ತನ ಉದ್ದೇಶವು ಹೇಗಿದ್ದರೂ, ಭಾಷಣದ ಪರಿಣಾಮವು ಸಭಿಕರ ಮೇಲೆ ಹೇಗಾಯಿತೆಂದು ನಿಷ್ಕರ್ಷೆ ಮಾಡಿ ನೋಡಬೇಕಾಗುವುದು ಒಬ್ಬನ ಮನಸ್ಸಿನೊಳಗಣ ಅಭಿಪ್ರಾಯವು, ಅದನ್ನು ಕೇಳಿದ ಅಥವಾ ತಿಳಿದವನಿಂದ ಯಾವ ಕೃತ್ಯಕ್ಕೆ ನಡೆಯಿಸುತ್ತದೆ ಎಂಬ ವಿಚಾರವು ಮುಖ್ಯವಾಗಿದೆ ಹೀಗಿರುವುದರಿಂದ, ಎಷ್ಟೋ ವೇಳೆ ರಾಜದ್ರೋಹಕ್ಕಾಗಿ ದಂಡನೆ ಹೊಂದುವವರ ವಿಚಾರಣೆಯು, ಕಲ್ಕತ್ತೆಯಲ್ಲಿ ಜಡ್ಜರು ಹೇಳಿರುವ ಅಥವಾ ಸೂಚಿಸಿರುವ ಸೂಕ್ಷ್ಮ ರೀತಿಯಿಂದ ನಡೆದಿತ್ತೆಂದು ಹೇಳಲು ಧೈರ್ಯ ಬಾರದಾದರೂ, ಈ ಜಡ್ಜರ ತೀರ್ಪು ತನ್ನ ಬಲಕ್ಕೇ ಇದೆಯೆಂದು ಯಾವನಾದರೂ, ಕಂಟಿಗಾಗಿ ಹಾತೊರೆಯುತ್ತಿರುವ ಜನಗಳ ಹಿಂಡಿನಲ್ಲಿ ಬೊಲ್ಶೆವಿಕ ಧರ್ಮವನ್ನು ಪ್ರಚಾರ ಮಾಡತೊಡಗಿದರೆ, ಅವನು ಮೋಸಹೋಗುವನು. ಆಗ ಅವನು ನಾನು ಬರೇ ತತ್ವಗಳನ್ನು ವಿವರಿಸಿದ್ದೆನೇ ಹೊರತು, ಹೀಗೆಲ್ಲ ಗಲಭೆ ಮಾಡಿ, ಗೊಂದಲ ಹಬ್ಬಿಸಿರೆಂದವನೇ ಅಲ್ಲ ಎಂದರೆ, ನ್ಯಾಯ ಬಲ್ಲ ಯಾವನೂ ಅವನ ಪಕ್ಷವನ್ನು ವಹಿಸಲಾರನು ಭಾಷಣ ಸ್ವಾತಂತ್ರ್ಯವನ್ನು, ಮೇಲೆ ಹೇಳಿದ ತೀರ್ಮಾನವು ಕಾಪಾಡುವುದು, ಅದು ಸರಕಾರಕ್ಕೆ ಗೌರವ ತರುವುದಾಗಿದೆ, ಪ್ರಜೆಗಳಿಗೂ ಹೆಮ್ಮೆಯ ಮಾತು ಹಾಗೆಂದು,—(ಸ್ವಾತಂತ್ರ್ಯವುಂಟೆಂದು) ಲೋಕ ಹಾಸಿ ಮಾಡುವುದೆ?

ಮಜೀದಿ ಬಳಿ ವಾದ್ಯ

ಕಳೆದ ರವಿವಾರ, ಕರ್ನೂಲಿನಲ್ಲಿ ಮುಸ್ಲಿಮರದೊಂದು ಮಹಾಸಭೆ ಸೇರಿತು ಆಗ ಮುಖಂಡರೊಬ್ಬರು ಭಾಷಣ ಮಾಡುತ್ತ,—ಮೌನವಾಗಿ ಮಜೀದಿಗಳಲ್ಲಿ ಪ್ರಾರ್ಥನೆಗಳು ನಡೆಯಾಗಲಿಲ್ಲ, ಯಥಾರ್ಥವಾದ ಗೌರವಬುದ್ಧಿಯಿಂದ ಹಿಂದೂ ರಾಜರುಗಳು ಆಳುತ್ತಿದ್ದ ಕಾಲಗಳಲ್ಲಾದರೂ, ವಾದ್ಯವೇ ಮೊದಲಾದ ಗಾಯನಗದ್ದಲಗಳು ನಡೆಯುದಂತೆ ನಿಯಮ ಮಾಡಿ ಪಾಲಿಸಿಕೊಂಡು ಬರುತ್ತಿದ್ದರು,—ಎಂದು ಸಭಿಕರಿಗೆ ನಿವೇದಿಸಿದರು ಹಳೆಯ ಇತಿಹಾಸದಿಂದ ಇದಕ್ಕಾಗಿ ಆಧಾರಗಳನ್ನೇನೂ ಅಲ್ಲಿ ಕೊಟ್ಟದಿಲ್ಲವಾದರೂ, ಅದಷ್ಟನ್ನು ಹಾಗೆಯೆ ಬಿಡೋಣ ಈ ವಿಷಯವಾಗಿ ಈಗ ಕಾನೂನು ಮತ್ತು ಕಾನೂನಿನಂತೆ ವ್ಯವಹಾರ ಹೇಗಿದೆ ಎಂಬುದು ಇನ್ನೂ ಸರಿದೋರುವುದಿಲ್ಲವೆಂದೂ ಭಾಷಣಕರ್ತರು ಹೇಳಿದರು.

ಎಲ್ಲೂರಿನಲ್ಲಿ, ಅಲ್ಲಿನ ಸಬ್ ಮೆಜಿಸ್ಟ್ರೇಟರು ಇಂಡಿಯನ್ ಪೋಲೀಸ್ ಆಕ್ಟಿನ ೩೦ (೪)ನೇ ಸೆಕ್ಷನನ್ನು ಕುರಿತು ಟೀಕಿಸಿ, "ಈ ಸೆಕ್ಷನಿನ ಮೇರೆಗೆ, ಹಬ್ಬ ಮತ್ತು ಉತ್ಸವಾದಿಗಳ ಸಮಯದಲ್ಲಿ ಹೆದ್ದಾರಿಗಳಲ್ಲಿ ಎಷ್ಟು ವಾದ್ಯ ಮೊದಲಾದ ಸಂಭ್ರಮಗಳು ಇರಬಹುದೆಂದು ನಿರ್ಧರಿಸಿ ತಮ್ಮ ಕಾರ್ಯ ನಿರ್ವಹಿಸಲು ಪೋಲೀಸರಿಗೆ ಅಧಿಕಾರ ಕೊಡುತ್ತಿದೆ, ಹೊರತು, ಅಂತಹ ವಾದ್ಯ ಮೊದಲಾದವನ್ನು ಬಾರಿಸಲೇ ಕೂಡದೆಂದು ನಿರ್ಬಂಧಿಸಲು ಅಧಿಕಾರ ಕೊಡುವುದಿಲ್ಲ" ಎಂದರು

ಇದರಿಂದ, ಎಷ್ಟು ಬಲವಾಗಿ ಅಥವಾ ಕಡಿಮೆಯಾಗಿ ವಾದ್ಯ ಬಾರಿಸಬಹುದೆಂದು ಮಾತ್ರ ಪೋಲೀಸರಿಗೆ ಅಧಿಕಾರವಿದೆಯೇ ಹೊರತು, ವಾದ್ಯವನ್ನು ಬಾರಿಸದಂತೆ ಮಾಡಲು ಅಧಿಕಾರವಿಲ್ಲವಾಗಿ ತೋರುವುದು ಕಾನೂನು ಸ್ಪಷ್ಟವಾಗಿಲ್ಲವೆಂಬುದು ತಪ್ಪಾದರೂ, ತೃಪ್ತಿಕರವಾಗಿಲ್ಲವೆಂಬುದು ನಿಜ ಆದುದರಿಂದ ಕರ್ನೂಲಿನಲ್ಲಾದ ಸಭೆಯು—ಈ ಸಂಸ್ಥಾನದಲ್ಲಿ ಆಗಾಗ ತಲೆದೋರಬಹುದಾಗಿರುವ ಸಾಮಾಜಿಕ ಜಗಳಗಳು ದೂರಗೊಳ್ಳುವ ಹಾಗೆ, ಸರಕಾರವು 'ಮಜೀದಿಯ ಬಳಿ ವಾದ್ಯ'ವನ್ನು ಕುರಿತಾಗಿ ನಿಯಮಗಳನ್ನು ಮಾಡುವುದುತ್ತಮವೆಂದು ನಿರ್ಣಯಮಾಡಿದುದು ಸಮಂಜಸವಾಗಿದೆ. ವಾದ್ಯವನ್ನು ನಿಲ್ಲಿಸುವ ಅಧಿಕಾರವು ಪೋಲೀಸರಿಗೆ ಇಲ್ಲದಿರುವಲ್ಲಿ, ಎಷ್ಟು ಜೋರಾಗಿ ಅಥವಾ ಪಿಸುಗುಟ್ಟುವ ಸ್ವರದಲ್ಲಿ ಮಾತ್ರ ಅದನ್ನು ಬಾರಿಸಬೇಕೆನ್ನುವ ಅಧಿಕಾರವಿದ್ದು, ಮಜೀದಿಗಳಲ್ಲಿ ಪ್ರಾರ್ಥನೆಯಾಗುವ ಕಾಲಕ್ಕೆ, ಅಲ್ಲಿಗೆ ವಾದ್ಯರವವು ಕೇಳಿಸದ ಹಾಗೆ ಪೋಲೀಸರು ಯಾವ ಬಗೆಯಲ್ಲಿ ವಾದ್ಯದ ಗದ್ದಲದ ಆಕ್ಷೇಪವನ್ನು ನಿವಾರಿಸಲಾಪರು?

ಆದರೆ, ಮದ್ರಾಸು ಸರಕಾರವು ಈ ಭಾಗದಲ್ಲಿ ನಿಬಂಧನೆ ಮಾಡಲು ಶಕ್ತವಾಗಿರುವುದಕ್ಕಿಂತ ಹೆಚ್ಚಾಗಿ ಇಂಡಿಯಾ ಸರಕಾರವೇ ಅಧಿಕಾರವುಳ್ಳದೆಂದು ತೋರುವುದು.



ವಿಜಯನಗರ ಸಾಮ್ರಾಜ್ಯ

ಇದರ ಷಟ್‌ಶತಸಾಂವತ್ಸರಿಕ ಮಹೋತ್ಸವವು ಕನ್ನಡಿಗರಿರುವಲ್ಲೆಲ್ಲ ಬರುವ ಮಹಾನವಮಿಯ ಕಾಲಕ್ಕೆ ಜರಗಬೇಕಾಗಿರುವುದು ಕನ್ನಡಿಗರ ಅಭಿಮಾನದ ಕರ್ತವ್ಯವು. 'ಮರೆತು ಹೋದ ಸಾಮ್ರಾಜ್ಯ' ಎಂದು ಹೆಸರಿಗೆ ಬಂದಿರುವ, 'ಎಂದೂ ಮರೆಯಲಸಾಧ್ಯವಾಗಿರುವ ಸಾಮ್ರಾಜ್ಯ'ವಾಗಿರುವ ವಿಜಯನಗರದ ಮಹತ್ವದ ನೆನಪು ಕನ್ನಡಿಗರಿಗೆ ಉಂಟಾಗುತ್ತಿರುವುದರಿಂದ, ಕನ್ನಡ ನಾಡೆಂಬುದರ ಗಡಿಗಳ ಕಡೆಗಾದರೂ ಕನ್ನಡಿಗರ ದೃಷ್ಟಿ ಹರಿದೀತು, ಭಾಷಾ ಸಾಹಿತ್ಯ ಸಂಸ್ಕೃತಿಗಳ ಸ್ಮೃತಿಯುಂಟಾದೀತು, ಕಳೆದು ಹೋದುದನ್ನು ಕಂಡುಕೊಳ್ಳುವ ಭಾಗ್ಯವುಂಟಾದೀತು ಹೀಗೆ ಮರೆಯಾದುದರ ನೆಂಟೆಯವನ್ನು ಸರ್ವತೋಮುಖವಾಗಿ ಮಾಡಿಕೊಡಲು, 'ಅರುಣೋದಯ' ಪತ್ರಿಕೆಯು ಉದ್ಯಮ ಮಾಡುತ್ತಿರುವುದು ಮಹಾನವಮಿಯ ಕಾಲಕ್ಕೆ ವಿಶೇಷ ಸಂಚಿಕೆಯನ್ನು ಹೊರಡಿಸುವುದೂ, ಪ್ರಾಮುಖ್ಯರಾದ ಸಾಹಿತಿಗಳಿಂದ ಲೇಖನಗಳನ್ನು ಬರೆಯಿಸುವುದೂ, ನೂರಾರು ಚಿತ್ರಗಳಿಂದ ಅದನ್ನು ಅಲಂಕರಿಸುವುದೂ ಈ ಉದ್ಯಮಕ್ಕೆ ಸಂಬಂಧಿಸಿರುವ ಕಾರಣ, ವಿಜಯನಗರ ಸಾಮ್ರಾಜ್ಯ ಸಂಚಿಕೆಯು ಕೊನೆಯ ಪಕ್ಷ ಮುಂಬಾಯಿಯ ಟೈಮ್ಸ್ ಪತ್ರವು ಹೊರಡಿಸಿದ ಜ್ಯುಬಿಲಿ ಸಂಚಿಕೆಯಷ್ಟೆ ಅಂದವಾಗಿ ಹೊರಡುವ ಹಾಗೆ ಸರ್ವರೂ ಸಂಪೂರ್ಣವಾಗಿ ಸಹಕರಿಸಿ ಸಾಮ್ರಾಜ್ಯ ಸಂಚಿಕೆಯು ಸ್ಮಾರಕ ಸಂಚಿಕೆಯಾಗುವಂತೆ ಸಾಧಿಸುವರಾಗಿ ನಂಬಿರುತ್ತೇವೆ

ನೊನ್-ಗೆಜೆಟೆಡ್ ಆಫಿಸರರು

ಗುಂಟೂರಲ್ಲಿ ಸಭೆ ಸೇರಿದರು ಕಲೆಕ್ಟರ ಸಾಹೇಬರೇ ಅಧ್ಯಕ್ಷರು ಇವರು ಸಭಿಕರಿಗೆ ಬುದ್ಧಿವಾದವನ್ನು ಹೇಳುತ್ತ,—'ಹಿಂದೂ ಮುಸ್ಲಿಮ, ಬ್ರಾಹ್ಮಣ—ಬ್ರಾಹ್ಮಣೇತರ, ಇತ್ಯಾದಿ ಜಾತಿ ಮತ ಸಮಾಜಗಳೊಳಗಣ ಭೇದಗಳ ದೆಸೆಯಿಂದಾದ ಮತ್ಸರಪೂರ್ಣ ಭಾವನೆಗಳು ಸರಕಾರದ ಉದ್ಯೋಗಸ್ಥರಲ್ಲಿ ಇರದೆ ಮಾಯವಾಗಿದ್ದರೆ ಎಷ್ಟು ಸುಲಭವಾಗಿ ನಿರಾತಂಕವಾಗಿಯೂ ಎಲ್ಲವೂ ಸಾಗಬಹುದಾಗಿದ್ದಿತು! ಉದ್ಯೋಗಸ್ಥರನ್ನು ಅವರು ಉದ್ಯೋಗಸ್ಥರೆಂದೇ ಎಣಿಸುವ ಬದಲಾಗಿ, ಒಂದೇ ಸರ್ವಿಸಿನ ಬಂಧುಗಳೆಂದು ಎಣಿಸುವ ಬದಲಾಗಿ,—ಹೀಗೆ ಜಾತಿಯಲ್ಲಿ ಮೇಲು ಕೀಳು, ಹಗೆ ಮತ್ಸರ ಇವೇ ತೋರುತ್ತಿರುವುದನ್ನು ವರ್ಜಿಸುವುದು ಉತ್ತಮವಲ್ಲವೆ?' ಜಿಲ್ಲಾಧಿಕಾರಿಗಳ ಕೆಲಸದಲ್ಲಿ ಬಹಳ ಹೊತ್ತೆಲ್ಲ, ಈ ಜಾತಿಗಳ ತಾರತಮ್ಯದಿಂದಾಗುವ, ಮತ್ತೂ ಒಳಜಾತಿಗಳೊಳಗಣ ಮತ್ಸರ ಹಗೆಗಳಿಂದಾಗುವ ದುಷ್ಪರಿಣಾಮಗಳನ್ನು ನಿವಾರಿಸುವುದಕ್ಕೇ ವಿನಿಯೋಗವಾಗುತ್ತಿದೆ ಎಂದೂ ಬಹಳವಾಗಿ ವಿವರಿಸಿರುವರು ಇನ್ನು ಹೊಸ ಸುಧಾರಣೆಗಳು ಉಂಟಾಗುವ ಕಾಲದಲ್ಲಿ ಸರಕಾರದ ನೌಕರರೆಂದರೆ ಎಲ್ಲರೂ ಒಂದೇ ತೆರದ ಕೆಲಸಗಾರರು, ದೇಶಸೇವಕರು ಎಂಬ ಭಾವನೆಯು ಹರಡುವ ಅಗತ್ಯವಿದೆ ಹೊರತು, ಈ ವಿಷಬೀಜವನ್ನು ಇನ್ನೂ ಚೆನ್ನಾಗಿ ಬಿತ್ತಿ ಬೆಳೆಸುವ ಅಗತ್ಯವಿರದಷ್ಟೆ!

ಒಳ ವಕೀಲರು

ಎಂಬೊಂದು ಹೊಸ ವೃತ್ತಿಯನ್ನು ಕೈಕೊಂಡು ನ್ಯಾಯಸ್ಥಳಗಳಲ್ಲಿ ನ್ಯಾಯಾಧಿಪತಿಗಳನ್ನು ತಳಮಳಗೊಳಿಸುವ ಮಹಾ ಸಮುದಾಯವನ್ನು ಕುರಿತು, ಎಷ್ಟೋ ಜಿಲ್ಲಾ ಜಡ್ಜರೂ ಮಾತ್ರವಲ್ಲದೆ, ಅವರ ದೆಸೆಯಿಂದಾಗಿ ಅನ್ಯಾಯ ಹೊಂದಿದವರೂ ದೂರುವಂತಾಗಿದೆ. 'ಕಾನೂನು ಬಲ್ಲವರು ಹಳ್ಳಿಯಲ್ಲಿಲ್ಲ, ಹಳ್ಳಿಗರು ಹುಟ್ಟುಸುಳ್ಳರಲ್ಲ, ಆದರೆ, ಅವರು ಸುಳ್ಳು ನುಡಿಯುವುದಕ್ಕೆ ನ್ಯಾಯಸ್ಥಾನಗಳೇ ಮಾತ್ರ ಯೋಗ್ಯಸ್ಥಳಗಳೆಂದು ಅವರಿಗೆ ಬೇಕಾದುದನ್ನೆಲ್ಲ ಕಲಿಸಿಕೊಡುತ್ತಾರೆಯೋ ಎಂಬಂತೆ ತೋರುತ್ತಿದೆ ಹೀಗೆ ತೋರಿ ಬರಲು, ಒಳ ವಕೀಲರ ಸಾಧನೆಗಳೇ ಕಾರಣವಾಗಿವೆ ಇವರು ಹಳ್ಳಿಗಳಲ್ಲಿ ಪ್ರಬಲವಾದುದೇ ಮಾತ್ರವಲ್ಲದೆ, ಪಟ್ಟಣಗಳೊಳಗೂ ನುಗ್ಗಿರುವರು ಅತಿ ಕಠಿಣ ಪರಿಣಾಮಗಳು ಇವರ ದುರ್ಬೋಧನೆ ಒಳಸಂಚುಗಳ ಫಲವಾಗಿವೆ ವಕೀಲರಾಗಿರುವವರು ತಮ್ಮ ವೃತ್ತಿಯಲ್ಲಿ ಕೃತಾರ್ಥರಾಗಬೇಕಾದರೆ, ಇಂತಹರ ದುಶ್ಚಾಳಿಗಳನ್ನು ನಿರ್ಮೂಲಿಸುವುದು ಅಗತ್ಯವಾಗಿದೆ' ಹೀಗೆಂದು ಮಧುರಾಜಿಲ್ಲೆಯ ಬಾರ್ ಲೀಗ್ ಸಂಘದಲ್ಲಿ ಮೊದಲನೆ ಭಾಷಣಕಾಲದಲ್ಲಿ ಅಲ್ಲಿನ ಜಿಲ್ಲಾ ಜಡ್ಜರು ಸೂಚನೆಕೊಟ್ಟಿರುವರು.

ಮಂಗಳೂರು ಕಾಫಿ

ಕಾಫಿ ಮಾರ್ಕೇಟಿನ ವರದಿಯನ್ನು ಮಂಗಳೂರು ಬಂದರದ ಅಂದಾಜಿನಿಂದಲೇ ಎಲ್ಲ ಪ್ಲಾಂಟರುಗಳೂ ವ್ಯಾಪಾರಿಗಳೂ ಪರಿಶೀಲನೆ ಮಾಡುವರು ಈಗ ನಮ್ಮಲ್ಲಿ ಯಾವುದೋ ಒಂದು ಕಾರ್ಖಾನೆಯಲ್ಲಿ (ಅಥವಾ ಇಂತಹವು ಎಷ್ಟಿವೆಯೋ?) ಕಡಮೆ ತರಗತಿಯ ಕಾಫಿಯನ್ನು ಅದು ಮೇಲ್ತರಗತಿಯದ್ದೆಂದು ತೋರಿಕೆಗೆ ಮಾತ್ರ ಒಪ್ಪುವ ಹಾಗೆ ತಯಾರಿಸುತ್ತಿರುವರೆಂದೂ, ಜರ್ಮನಿಯಿಂದ ಇದಕ್ಕಾಗಿ ಅಗತ್ಯವಿರುವ ಬಣ್ಣ ಮತ್ತು ಬಣ್ಣ ಬಳಿಯುವ ಯಂತ್ರವೂ ಇಲ್ಲಿ ತರಲಾಗಿದೆಯೆಂದೂ, ಈ ಕಾರಣದಿಂದ, ಇತರ ಕಾಫಿಗೆ, ಇಲ್ಲಿನ ಕಾಫಿಗಿಂತ ಹಂಡ್ರೆಡ್ವೇಟಿಗೆ ೫ ರೂಪಾಯಿ ಹೆಚ್ಚಿಗೆ ಬೆಲೆ ಸಿಗುವ ಬದಲಾಗಿ, ಈ ಕಾಫಿಗೇ ಇತರ ಕಾಫಿಯ ಹೆಚ್ಚಿನ ಪಾಲು ಸಿಗುತ್ತದೆಂದೂ, ಕಾಫೀ ಬೀಜಗಳನ್ನು ಕೈಯಲ್ಲಿ ಸ್ವಲ್ಪ ತಿಕ್ಕುತ್ತಲೆ ಈ ಕೃತಕರೀತಿಯ ಬಣ್ಣವು ಬಯಲಾಗುತ್ತವುದೆಂದೂ, ಪ್ಲೇಂಟರರು ಪ್ರಕಟಿಸಿರುತ್ತಾರೆ. ಇದು ನಿಜವಾದರೆ, ಒಂದು ವ್ಯಾಪಾರದ ಗೌರವವು ಕೆಡುವ ಸಂಭವವಿದೆ ಮಂಗಳೂರಿಗೆ ಇದು ಕೀರ್ತಿಯ ಮಾತೇ?

ಮಂಗಳೂರು.

ಗೇರುಬೀಜ ವ್ಯಾಪಾರಿಗಳ ಸಂಘವೊಂದನ್ನು ಸ್ಥಾಪಿಸುವ ಉದ್ದೇಶದಿಂದ ಇದೇ ತಾ. ೧೫ನೇ ಗುರುವಾರ ರಾತ್ರಿ ಘಂಟೆ ೯ಕ್ಕೆ ಶ್ರೀ ಸಾಹುಕಾರ ಮಟೀಲ ಅಣ್ಣಪ್ಪ ನಾಯ್ಕರವರಲ್ಲಿ ಪ್ರಮುಖ ವ್ಯಾಪಾರಿಗಳ ಒಂದು ಸಭೆಯು ಜರಗಿತು. ಸಭೆಗೆ ಅಮೇರಿಕದ ಜೆನೋಬಿಯಾ ಕಂಪೆನಿಯ ಪ್ರತಿನಿಧಿಗಳಾದ ಮಿ। ಜುಲುಮ್ ಇವರೂ ಪಿಯರ್ಸ್ ಲೆಸ್ಲಿ ಎಂಡ್ ಕಂಪೆನಿಯ ಮೆನೇಜರರಾದ ಮಿ। ಜೆಫ್ರೀಸ್, ಮಿ। ಎಸ್. ಠಾಕೂರ್, ಶ್ರೀಗಳಾದ ಡಿ. ಪಿ. ನಾಯ್ಕ್, ಮಿಟಾರ್ ಗೋವಿಂದಪ್ಪ, ಯು. ನಾರಾಯಣ ಮಲ್ಯ, ಎಂ. ರಘುನಾಥ ನಾಯ್ಕ್ ಇವರೇ ಮೊದಲಾದವರು ಹಾಜರಿದ್ದರು ಅನೇಕ ಸೂಚನೆ-ಪ್ರತಿಸೂಚನೆ, ಚರ್ಚೆಗಳು ನಡೆದು, ಎಲ್ಲ ಗೇರುಬೀಜ ವ್ಯಾಪಾರಿಗಳು ಪರಸ್ಪರ ಮೈತ್ರಿಯಿಂದಲೂ ಸಹಾನುಭೂತಿಯಿಂದಲೂ ನಡೆದುಕೊಳ್ಳುತ್ತಿರುವ ಪ್ರಯುಕ್ತ ಸದ್ಯ ಈ ವ್ಯಾಪಾರವು ಎಂದಿನಂತೆ ನಡೆದುಬರುತ್ತಿರಲೆಂದೂ, ಸಂಘದ ಬಗ್ಗೆ ರಚನಾತ್ಮಕ ನಿಬಂಧನೆಗಳನ್ನು ರಚಿಸಿದ ನಂತರ ಸ್ಥಾಪನೆಯ ಕುರಿತು ಮುಂದೆ ಆಲೋಚಿಸಬಹುದೆಂದೂ ತೀರ್ಮಾನವಾಗಿ, ರಾತ್ರೆ ಸುಮಾರು ೧೨-೩೦ಕ್ಕೆ ಸಭೆ ಚದರಿತು.

ಕೆನರಾ ಬ್ಯಾಂಕ್ ಲಿಮಿಟೆಡ್ಡಿನ ಎಲ್ಲಾ ಶಾಖೆಗಳ ಏಜಂಟರುಗಳ ಕಾನ್ಫರೆನ್ಸು ಒಂದು ಮುಂದಿನ ತಿಂಗಳ ಪ್ರಥಮದಲ್ಲಿ ಸೇರಲಿರುವುದೆಂದು ತಿಳಿಯುತ್ತೇವೆ ಕಳೆದ ವರುಷ ಇಂಥದ್ದೇ ಸಭೆಯೊಂದು ನಡೆದಿದ್ದು ಬ್ಯಾಂಕಿನ ಪ್ರಗತಿಯ ಹಾಗೂ ಅದರ ಗಿರಾಕಿಗಳ ಸಂಬಂಧದ ವಿಷಯಗಳು ಚರ್ಚಿತವಾಗಿದ್ದು ಇದು ತುಂಬಾ ಉಪಯುಕ್ತವಾಗಿತ್ತೆಂದು ಬೇರೆ ಹೇಳಬೇಕಾಗಿಲ್ಲ ಈ ವರ್ಷದ ಸಭೆಯಲ್ಲಿ ಚರ್ಚಿತವಾಗತಕ್ಕ ಮುಖ್ಯ ವಿಷಯ 'ಇನ್ನೂ ಹೆಚ್ಚಿನ ಸೇವೆಯನ್ನು ನಾವು ಹೇಗೆ ಮಾಡಬಹುದು ಮತ್ತು ಗಿರಾಕಿಗಳಿಗೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಹೇಗೆ ಕೊಡಬಹುದು' ಎಂಬುದಾಗಿರುತ್ತದೆಂದೂ ಈ ವಿಷಯ ಸಾರ್ವಜನಿಕ ಅಭಿಪ್ರಾಯಗಳನ್ನೂ ಸೂಚನೆಗಳನ್ನೂ ಮೇನೇಜಿಂಗ್ ಡೈರೆಕ್ಟರವರು ವಿಚಾರಿಸಲಿರುವರೆಂದೂ ತಿಳಿಯುತ್ತೇವೆ

ಶ್ರೀಯುತರುಗಳಾದ ಪಂಜೆ ಮಂಗೇಶರಾವ್ ಮತ್ತು ಬೆನೆಗಲ್ ರಾಮರಾವ್ ಇವರನ್ನು ಮೈಸೂರು ಕನ್ನಡ ಬೋರ್ಡು ಆಫ್ ಸ್ಟಡೀಸ್‌ಗೆ ಇದೇ ಜುಲೈ ತಾ ೧೭ರಿಂದ ೩ ವರ್ಷಗಳ ಬಗ್ಗೆ ನೇಮಕಮಾಡಿದ್ದಾರೆಂದು ತಿಳಿದು ಬರುತ್ತದೆ.

ಕಲ್ಲಡ್ಕ ಮತ್ತು ಕಾಂಞಂಗಾಡ್ ಮಧ್ಯೆ ೬೪ ಚನೇ ಮೈಲ್ ನಂಬ್ರ ೩-ಇದರ ಕಲ್ವರ್ಟ್ ಹಾಳಾಗಿರುತ್ತದೆ ಆದುದರಿಂದ ಬೇಕಲ್ ಮತ್ತು ಕಾಂಞಂಗಾಡ್ ಮಧ್ಯದ ಮಾರ್ಗಗಳನ್ನು ಇನ್ನು ಮುಂದೆ ತಿಳಿಸುವ ದಿನದ ವರೆಗೆ ಮುಚ್ಚಲಾಗಿದೆ.

ಮಂಗಳೂರು-ಮೈಸೂರು ಟ್ರಂಕ್ ರಸ್ತೆಯ ೩೭/೮ನೇ ಮೈಲಿಯ ಪುಂಜಾಲಕಟ್ಟೆಯಲ್ಲಿನ ಸಂಕವು ಹಾಳಾಗಿರುವುದರಿಂದ ಸೀದಾ ಚಲಾವಣೆಗೆ ಪುಂಜಾಲಕಟ್ಟೆಯ ಮೂಲಕ ಅಸಾಧ್ಯವಾಗಿರುತ್ತದೆಂದೂ ಇನ್ನು ಒಂದು ವಾರ ಯಾ ಹತ್ತು ದಿವಸಗಳೊಳಗೆ ಸೀದಾ ಚಲಾವಣೆಗೆ ಅನುಕೂಲವಾಗುವುದೆಂದೂ ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರರು ತಿಳಿಸುತ್ತಾರೆ.

ಇಲ್ಲಿಂದ ತಿರುಚನಾಪಳ್ಳಿಗೆ ವರ್ಗವಾದ ಮಂಗಳೂರು ಸರ್ಕಲ್ ಅಬ್ಕಾರಿ ಇನ್ಸಪೆಕ್ಟರರಾದ ರಾ। ಸಿ. ರಾಘವನ್ ಬಿ ಎ ಇವರ ಸನ್ಮಾನಾರ್ಥವಾಗಿ ಇಲ್ಲಿಯ ಸಾಹುಕಾರ್ ಎಂ ವೆಂಕಟೇಶ ಪೈಯವರಲ್ಲಿ ಒಂದು ಸಂತೋಷಕೂಟವನ್ನು ಏರ್ಪಡಿಸಲಾಗಿತ್ತು ಅನೇಕ ಮಂದಿ ಆಹ್ವಾನಿತ ಗೃಹಸ್ಥರು ಇದಕ್ಕೆ ಚಿತ್ತೈಸಿದ್ದರು ಶ್ರೀಯುತರ ಪತ್ನಿಯವರಿಗೂ ಇಲ್ಲಿನ ಮಹಿಳಾ ಸಭೆಯಲ್ಲಿ ಸತ್ಕಾರವು ನಡೆಯಿಸಲಾಯಿತು.

ಈಗ ಕಲ್ಕತ್ತೆಯ ಹೈಕೋರ್ಟು ಜಡ್ಜರಾಗಿರುವ ಶ್ರೀ ಬೆನೆಗಲ್ ನರಸಿಂಗರಾವ್, ಐ. ಸಿ ಎಸ್. ಇವರು 'ಸ್ಟೇಚೂ ಬುಕ್ ರಿವಿಜನ್'ನ ಡ್ಯೂಟಿಯ ಸಂಬಂಧ ಸ್ಪೆಶಲ್ ಆಫೀಸರರಾಗಿ ನೇಮಕಹೊಂದಿದ್ದಾರೆ.

ಕಂಕನಾಡಿ ಬಳಿಯ ಮಿಶನ್ ಗೋರಿಯ ಸಮೀಪದ ಒಂದು ಕ್ರೈಸ್ತರ ಮನೆಯಲ್ಲಿ, ಒಬ್ಬಳೇ ಒಬ್ಬ ಹೆಂಗುಸು ಇದ್ದ ಸಮಯವನ್ನು ಕಾದು, ನಡುಹಗಲಿನ ಸಮಯಕ್ಕೆ ಒಬ್ಬ ಪರಕೀಯ ಕ್ರೈಸ್ತನು ನುಗ್ಗಿ, ಆ ಹೆಂಗುಸಿಗೆ ನಾನಾ ಕ್ರಮಗಳಿಂದ ಮೂರ್ಛೆ ಬರಿಸಿ, ಆಕೆಯ ಮೈಮೇಲಿದ್ದ ಸುಮಾರು ೮-೧೦ ಪವನಿನ ಚಿನ್ನಾಭರಣಗಳನ್ನು ಕದ್ದು ಓಡಿದನೆಂದೂ, ಆತನು ಅವುಗಳನ್ನು ಸರಾಫನಿಗೆ ಮಾರಿದ್ದನೆಂದೂ ಬೆಳಕಿಗೆ ಬಂದ ಮೇಲೆ ಅಪರಾಧಿಯು ಕೈದಾಗಿದೆ. ಹೆಂಗಸು ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವಳೆಂದೂ ತಿಳಿದುಬರುತ್ತದೆ

ಬ್ರಿಟಿಷ್ ಕರ್ನಾಟಕದ ಮೊದಲನೇ ವಿಮಾ ಕಂಪೆನಿಯಾದ ಪೊಪ್ಯೂಲರ್ ಇನ್ಶೂರೆನ್ಸ್ ಕಂಪೆನಿಯ ಪ್ರಥಮ ಐದು ವರ್ಷಗಳ ವೌಲ್ಯವೇತನವು ನಡೆದಿದ್ದು ಅಷ್ಟುವೇಳೆಯವರು ಎಲ್ಲ ವಿಮಾಪತ್ರಗಳ ಮೇಲೆ ಸಾವಿರ ರೂಪಾಯಿಗಳಿಗೆ ವರ್ಷವೊಂದರ ರೂ. ೧೦ರಂತೆ ಬೋನಸ್ಸನ್ನೂ ಮತ್ತು ಪಾಲುದಾರರಿಗೆ ೩೪-೩೫ನೇ ಇಸವಿಗಳ ಬಗ್ಗೆ ಸೇಕಡಾ ೫ರ ಸಲೆಯ ಲಾಭವನ್ನು ಹಂಚಲು ಶಿಫಾರಸು ಮಾಡಿರುವರೆಂದು ತಿಳಿದುಬರುತ್ತದೆ. ಮೊದಲನೇ ವೌಲ್ಯವೇತನದಲ್ಲಿ ಇಷ್ಟು ಹೆಚ್ಚಿನ ಬೋನಸ್ಸನ್ನು ಹಂಚಿದ ಕಂಪೆನಿಗಳು ಅತಿ ವಿರಳವಾಗಿರುತ್ತದೆ. ಇದು ಕರ್ನಾಟಕಕ್ಕೂ ಹಾಗೂ ಭಾರತ ವಿಮಾಪ್ರಪಂಚಕ್ಕೂ ಭೂಷಣಾಸ್ಪದವಾದ ಸಂಗತಿಯಾಗಿರುತ್ತದೆ.

ನಮ್ಮ ಜಿಲ್ಲೆಯ ಸೇಲಂ ಡಿಸ್ಟ್ರಿಕ್ಟ್ ಲೋಕಲ್ ಫಂಡ್ ಅಸಿಸ್ಟಾಂಟ್ ಇಂಜಿನಿಯರ ಒಳ್ಳಂಬೆ ನರಸಿಂಹ ಶೆಣೈಯವರು ಮಲಬಾರು ಜಿಲ್ಲೆಯ ಆಕ್ಟಿಂಗ್ ಡಿಸ್ಟ್ರಿಕ್ಟ್ ಬೋರ್ಡ್ ಇಂಜಿನಿಯರರಾಗಿ ನೇಮಿಸಲ್ಪಟ್ಟಿರುವರು.

ಮಲಬಾರು, ದಕ್ಷಿಣ ಕನ್ನಡ ಕೊಯಮುತ್ತೂರು ಜಿಲ್ಲೆಗಳ ಸರ್ಕಲಿನ ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಬೋರ್ಡ್ ಮೆಂಬರರಾಗಿ ರಿಟ್ಯಾರ್ಡ್ ಡೆಪ್ಯುಟಿ ಕಲೆಕ್ಟರ ಇ ಪದ್ಮಗಿರೀಶ ಅಯ್ಯರ್, ಬಿ ಎ ಇವರು ನೇಮಿಸಲ್ಪಟ್ಟು ಇದೇ ತಾ ೧೧ರಲ್ಲಿ ಚಾರ್ಜುವಹಿಸಿಕೊಂಡಿರುವರಾಗಿ ತಿಳಿದುಬರುತ್ತದೆ.

ಕಾಸರಗೋಡು ಸರ್ಕಲಿನ ಎಕ್ಸೈಜ್ ಸರ್ಕಲ್ ಇನ್ಸಪೆಕ್ಟರರಾಗಿರುವ ಶ್ರೀ ಪಿ ಕೆ ಕುಮಾರನ್ ಉಣ್ಣಿ ಇವರು ಮಂಗಳೂರು ಸರ್ಕಲಿಗೆ ವರ್ಗಾಯಿಸಲ್ಪಟ್ಟಿರುವರು. ಮಾಯಾವರಂ ಸರ್ಕಲಿನ ಶ್ರೀ ಎಚ್ ರಂಗಾಚಾರ್ಯರವರು ಕಾಸರಗೋಡಿಗೆ ಬಂದು ಚಾರ್ಜು ವಹಿಸಿರುವರು.

ಡಿ। ಬೋರ್ಡಿಗೆ ಕಾಂಗ್ರೆಸ್ ಉಮೇದ್ವಾರರು ದ ಕ ಜಿಲ್ಲಾ ಬೋರ್ಡಿಗೆ ಕಾಂಗ್ರೆಸ್ಸಿನ ಕಡೆಯಿಂದ ಉಮೇದ್ವಾರರಾಗಿ ನಿಲ್ಲುವ ಸಂಬಂಧವಾಗಿ ಯೋಚಿಸುವುದಕ್ಕಾಗಿ ಇದೇ ತಾ ೨೦ನೇ ದಿನ ಶ್ರೀ ಕೆ ಆರ್ ಕಾರಂತರ ಅಧ್ಯಕ್ಷತೆಯಲ್ಲೊಂದು ಸಭೆಯು ಜರಗಿತು ಪ್ರಥಮದಲ್ಲಿ ಅಧ್ಯಕ್ಷರು ಮಾತನಾಡುತ್ತ, ಈ ಸ್ಥಾನಗಳಿಗೆ ಕಾಂಗ್ರೆಸ್ಸಿನ ಪರವಾಗಿ ನಿಂತಿರುವ ಕೆಲವು ಕಾಂಗ್ರೆಸ್ ಪಕ್ಷೀಯರ ಸ್ವಭಾವವನ್ನು ಕುರಿತಾಗಿ ತನಗೂ ಕೆಕ್ರೆಟರಿಯವರಿಗೂ ಬಂದಿರುವ ಪತ್ರಗಳ ವಿಚಾರವಾಗಿ ತಿಳಿಸಿದರು ಕಾಂಗ್ರೆಸ್ಸಿನ ಪ್ರತಿಷ್ಠೆಯನ್ನು ಕಾಯ್ದುಕೊಳ್ಳಲು ಶಕ್ತರಾಗಿರುವವರೇ ಈ ಸ್ಥಾನಗಳಿಗೆ ಉಮೇದ್ವಾರರಾಗಿ ನಿಲ್ಲಬೇಕೆಂದು ಆ ಪತ್ರಗಳು ಸೂಚಿಸಿವೆ ಎಂದರು ಕಾಂಗ್ರೆಸ್ಸು ಬೋರ್ಡಿನಲ್ಲಿ ಮಾಡುವ ಕೆಲಸಗಳೇನೆಂದು ಅದರು ಸೂಚಿಸಿದರು ಎಲಿಮೆಂಟರಿ ಶಿಕ್ಷಣದ ಪ್ರಚಾರ, ಅದನ್ನು ಕಡ್ಡಾಯವೂ ಧರ್ಮಾರ್ಥವೂ ಮಾಡುವುದು, ಹಿಂದೀ ಪ್ರಚಾರ, ಕೈಗಾರಿಕೆಗಳನ್ನು ಕಲಿಸುವ ಮತ್ತು ಮಲೇರಿಯಾ ನಿವಾರಣೆ ಇವೇ ಮೊದಲಾದುವು ತಮ್ಮ ಉದ್ದೇಶಗಳೆಂದು ತಿಳಿಸಿದರು. ಬೋರ್ಡಿಗೆ ಚುನಾಯಿತರಾಗಿ ಹೋಗುವ ಸದಸ್ಯರು ಖಾದಿಯುಡುವ ಕುರಿತಾಗಿ ದೀರ್ಘ ಚರ್ಚೆಯು ನಡೆದು ಆ ವಿಷಯವು ಅಲ್ಲೇ ಬಿಡಲ್ಪಟ್ಟಿತು.

"ಸದ್ಯದಲ್ಲೇ ನಡೆಯಲಿರುವ ಜಿಲ್ಲಾ ಬೋರ್ಡು ಚುನಾವಣೆಗೆ ನಮ್ಮ ಜಿಲ್ಲೆಯಲ್ಲೂ ಕಾಂಗ್ರೆಸ್ ಕಡೆಯಿಂದ ಉಮೇದ್ವಾರರನ್ನು ನಿಲ್ಲಿಸಬೇಕೆಂದು ನಿಶ್ಚಯಿಸಲಾಗಿದೆ, ಮತ್ತು ಅದಕ್ಕಾಗಿ ಒಂದು ಸಮಿತಿಯೂ ಏರ್ಪಡಿಸಲ್ಪಟ್ಟಿದೆ. ಒಂದೇ ಮಾತಿನಿಂದ ಹೇಳುವುದಾದರೆ, ಜಿಲ್ಲಾ ಬೋರ್ಡಿನಿಂದ ಜನರು ಹೊಂದಬಹುದಾದ ಅತಿ ಹೆಚ್ಚಿನ ಪ್ರಯೋಜನ ಮತ್ತು ಉಪಕಾರವನ್ನು ಜಾತಿಭೇದವಿಲ್ಲದೆ ಎಲ್ಲರೂ ಸುಲಭವಾಗಿ ಹೊಂದುವಂತೆ ಮಾಡುವುದಕ್ಕಾಗಿಯೂ, ಜಿಲ್ಲೆಯಲ್ಲಿ ರಾಷ್ಟ್ರೀಯ ಭಾವನೆಯ ಬೆಳವಣಿಗೆಗಾಗಿ ಕೂಡ ಕಾಂಗ್ರೆಸ್ಸು ಈ ಬಾರಿಯ ಚುನಾವಣೆಯಲ್ಲಿ ಭಾಗವಹಿಸಬೇಕೆಂದಿರುವುದು ಕಾಂಗ್ರೆಸ್ ಪರವಾಗಿ ಯಾವ ಸರ್ಕಲಿಗೆ ಯಾರನ್ನು ಚುನಾಯಿಸಲಾಗುವುದೆಂದು ಆಗೋಸ್ತು ೧೫ನೇ ತಾರೀಕಿನ ನಂತರ ಪ್ರಕಟಿಸಲಾಗುವುದು. ಅತನಕ ಮತದಾರರೆಲ್ಲರೂ ಯಾವ ಉಮೇದ್ವಾರರಿಗೂ ಯಾವ ತರದ ವಾಗ್ದಾನವನ್ನೂ ಮಾಡಬಾರದಾಗಿ ಸೂಚಿಸುತ್ತೇವೆ" ಎಂದು ಶ್ರೀಗಳಾದ ಸೂರಪ್ಪಯ್ಯ ಪಳ್ಳನಾಡು ಮತ್ತು ಬಿ. ವೆಂಕಪ್ಪ ರೈ ಇವರು ತಿಳಿಸುತ್ತಾರೆ.

ತಾಲೂಕುಗಳಿಂದ.

ಕಾರ್ಕಳ:—ತಾ ೧೮-೭-೩೫ರಲ್ಲಿ ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಳಿಯ ಸಭೆಯು ಶ್ರೀಯುತ ಬುರ್ಕಳ ನಾಗಪ್ಪ ಹೆಗ್ಡೆರ ಅಧ್ಯಕ್ಷತೆಯಲ್ಲಿ ಸೇರಿ, ಬರುವ ಜಿಲ್ಲಾ ಬೋರ್ಡು ಚುನಾವಣೆಗೆ ಕಾಂಗ್ರೆಸ್ ಕಡೆಯಿಂದ ಉಮೇದ್ವಾರರನ್ನು ನಿಲ್ಲಿಸಬೇಕೆಂದು ನಿರ್ಣಯಿಸಲಾಗಿ ಆ ಬಗ್ಗೆ ಕೆಲಸಮಾಡಲು ತಾಲೂಕಿನ ಪ್ರಮುಖ ಮಹನೀಯರಿಂದೊಡಗೂಡಿದ ಒಂದು ಸಿವಿಲ್ ಬೋರ್ಡು ಸ್ಥಾಪಿಸಲ್ಪಟ್ಟಿತು. ಅನಂತರ ತಾ. ೧-೩-೩೫ರಿಂದ ತಾ ೧೮-೭-೩೫ರ ವರೆಗಿನ ಕಾಂಗ್ರೆಸ್ ಕಮಿಟಿಯ ಲೆಕ್ಕವು ಪರಿಶೋಧಿಸಲ್ಪಟ್ಟು ಈ ಕೆಳಗೆ ಕಾಣಿಸಿದ ಪ್ರಕಾರ ಜಮಾಖರ್ಚಿನ ವಿವರವು ಮಂಜೂರುಮಾಡಲ್ಪಟ್ಟಿತು. ಜಮಾ—ಶ್ರೀ ಬಾಬೂ ರಾಜೇಂದ್ರಪ್ರಸಾದರು ಬಂದಾಗ ವಂತಿಗೆ ಮೂಲಕ ಜಮಾ ರೂ ೧೬-೨-೦ ೬೨೩ ಕಾಂಗ್ರೆಸ್ ಮೆಂಬರಿಕೆಯ ಫೀಸು ರೂ. ೧೫೫-೧೨-೦ ಕೂಡಾ ರೂ ೧೭೧-೧೪-೦ ಖರ್ಚು—ಟಪ್ಪಾಲು ರೂ. ೧-೧-೦, ಕಾಂಗ್ರೆಸ್ ಮುಖಂಡರ ಸತ್ಕಾರ ರೂ ೧೫-೧೨-೬, ಪ್ರಿಂಟಿಂಗ್ ಚಾರ್ಜು ರೂ ೧೧-೦-೦, ಇತರ ಖರ್ಚು ರೂಪಾಯಿ ೬-೯-೫ ಟ್ರಿವಲಿಂಗ್ ಚಾರ್ಜು ರೂ ೧೩-೧೫-೯, ಸ್ವಯಂಸೇವಕರ ಖರ್ಚು ರೂ ೩ ೩-೯, ಪ್ರಕಟಣೆ ರೂ ೨-೨-೦ ಜುಮ್ಲಾ ಮೆಂಬರಿಕೆ ಹಣದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಸಲತಕ್ಕ ಅರ್ಧಾಂಶದ ಹಣ ೭೭-೧೪-೦ ಕೂಡಾ ಖರ್ಚು ರೂ ೧೩೯-೧೦-೫, ಶಿಲ್ಕು ರೂ ೪೦-೩-೭ (ಎಂ ಎಸ್ ಅಧಿಕಾರಿ ಜತೆ।ಕಾರ್ಯದರ್ಶಿ)

ವಿಶ್ವಧರ್ಮವನ್ನು ಬೋಧಿಸಲಿಕ್ಕೆ ಶ್ರೀಮದ್ಭಗವದ್ಗೀತೆಯು ಉಪಯುಕ್ತವಾಗಿರುವುದೆಂದೂ, ಇಸ್ಲಾಂ ಧರ್ಮದಲ್ಲಿ ಕಂಡುಬರುವ ಅನೇಕ ತತ್ವವಿಷಯಗಳು ಗೀತೆಯಲ್ಲಿಯೂ ಇರುವವೆಂದೂ ಪಾಠಶಾಲೆಗಳಲ್ಲಿ ನೀತಿಶಾಸ್ತ್ರ ಮತ್ತು ತತ್ವಜ್ಞಾನವನ್ನು ಬೋಧಿಸುವ ಪಠ್ಯಪುಸ್ತಕವನ್ನಾಗಿಡಲಿಕ್ಕೆ ಅದು ಯೋಗ್ಯವಾಗಿರುವುದೆಂದೂ ಜಾತಿಮತ ಸಂಪ್ರದಾಯ ವರ್ಣಭೇದವಿಲ್ಲದೆ ಗೀತೆಯನ್ನು ಎಲ್ಲರೂ ಓದಿ ಪ್ರಯೋಜನ ಪಡೆಯಬಹುದೆಂದೂ ಇಲ್ಲಿಯ ಪ್ರಸಿದ್ಧ ವಕೀಲರಾದ ಶ್ರೀ ಎಚ್ ಎಸ್ ಹುಸ್ಸೇನ ಸಾಹೇಬರವರು ಅನ್ಯೋನ್ಯವಾದ ಸಮ್ಮತಿಯನ್ನಿತ್ತು ತನ್ನ ಉದಾರ ಹೃದಯದ ಪರಿಚಯಮಾಡಿಕೊಟ್ಟಿರುವರು. ಸ್ತುತ್ಯಾರ್ಹವಾಗಿದೆ ಎಲ್ಲರೂ ಅವರ ಮಾತಿನ ಸ್ವಾರಸ್ಯವನ್ನು ಕಂಡು ಭಗವದ್ಗೀತೆಯ ಪಠನಾಭ್ಯಾಸಕ್ಕೆ ಪ್ರಾರಂಭಿಸುವರೆಂದು ನಂಬಲಾಗಿದೆ

ಸ್ಥಳೀಕ ಹರಿಜನ ಸೇವಾ ಸಂಘದ ೩೧-೩-೩೫ರ ವರೆಗಿನ ಕಾರ್ಯನಿರ್ವಹದ ವರದಿಯು ಅಚ್ಚಾಗಿ ಪ್ರಕಟವಾಗಿದೆ, ಸಂಘವನ್ನು ರಿಜಿಸ್ಟ್ರಿ ಮಾಡಲಾಗಿದೆ, ಹರಿಜನರ ಉಪಯೋಗಕ್ಕಾಗಿ ಒಂದು ಬಾವಿಯನ್ನು ತೋಡಲಾಗಿದೆಯಲ್ಲದೆ, ಹರಿಜನ ಸಂಬಂಧವಾದ ಮಾಹಿತಿ ಸಂಗ್ರಹವು ಹರಿಜನರಿಗೆ ಊಟೋಪಚಾರಗಳೂ ವರದಿ ವರ್ಷದಲ್ಲಿ ಆಗಿದೆ. ಸದಸ್ಯರಿಂದ ೬ ರೂಪಾಯಿ, ಇತರರಿಂದ ರೂ. ೯೦-೮-೦ ಜಮೆಯಾಗಿದ್ದು ರಿಜಿಸ್ಟ್ರಿ ಬಗ್ಗೆ ರೂ. ೫೦, ವಸ್ತ್ರಊಟಗಳ ಬಗ್ಗೆ ೨೦-೭-೦, ಬಾವಿ ಬಗ್ಗೆ ರೂ. ೩೮-೧೫-೬ ಪತ್ರವ್ಯವಹಾರಕ್ಕೆ ೦-೩-೦ ಖರ್ಚಾಗಿರುವುದರಿಂದ ಸಂಘದ ಆರ್ಥಿಕ ಸ್ಥಿತಿಯು ಚೆನ್ನಾಗಿರುವುದಿಲ್ಲವೆಂಬುದು ಸ್ವಯಂವ್ಯಕ್ತವಾಗುತ್ತದೆ. ಮಹಾಜನರು ಉದಾರಸಹಾಯವನ್ನಿತ್ತು ತಮ್ಮಿಂದ ಹರಿಜನಸೇವೆ ಮಾಡಿಸಿಕೊಳ್ಳಬೇಕೆಂದು ಸಂಘವು ಪ್ರಾರ್ಥಿಸ್ಸಿರುವುದನ್ನು ಎಲ್ಲರೂ ಮನ್ನಿಸುವರಾಗಿ ನಮ್ಮ ವಿಶ್ವಾಸ.

ಗಿಂಡಿಯ ಇಂಜಿನಿಯರಿಂಗ್ ಕಾಲೇಜಿನ ಕೊನೆಯ ವರ್ಷದ ವಿದ್ಯಾರ್ಥಿಯಾದ ಸುಮಾರು ೨೩ ವರ್ಷ ಪ್ರಾಯದ ಮಿ। ಆಲ್ಬರ್ಟ್ ಡಿಸೋಜಾ ಎಂಬ ಮಂಗಳೂರಿನ ತರುಣನೊಬ್ಬನು ಮದರಾಸಿನ ಅಡ್ಯಾರದ ಇಲಿಯಟ್ಸ್ ಬೀಚಿನಲ್ಲಿ ಸ್ನಾನಮಾಡುವುದಕ್ಕಾಗಿ ದೇವರಾಜ ಭಟ್ ಎಂಬ ಸಹಪಾಠಿಯೊಡನೆ ಹೋಗಿ, ತನಗೆ ಈಜುಬರುವುದೆನ್ನುತ್ತ ಸಮುದ್ರದ ಆಳಕ್ಕೆ ಹೋಗಿ, ಮುಳುಗಿದನು. ಭಟ್ಟನು ಈ ವಿಚಾರವನ್ನು ಒಡನೆ ಕೆಲವು ಮೊಗವೀರರಿಗೆ ತಿಳಿಸಿ ಸೋಜನನ್ನು ಹುಡುಕಿಸಿದನು. ಆದರೆ ಅವರ ಯತ್ನವು ನಿಷ್ಫಲವಾಯಿತು ಭಟ್ಟನು ಈ ವಿಚಾರವನ್ನು ಪೋಲೀಸರಿಗೆ ತಿಳಿಸಿದನು ಶವವು ಮರುದಿನ ಟ್ರಿಪ್ಲಿಕೇನಿನ ನೇಪಿಯರ್ ಸಂಕದ ಬಳಿ ನೀರಲ್ಲಿ ದೊರೆಯಿತು. ಅಂದು ಮೃತನ ಸ್ಮರಣಾರ್ಥ ಕಾಲೇಜು ಮುಚ್ಚಲ್ಪಟ್ಟಿತು

ಉಡುಪಿಯಿಂದ ಕಂಡಿಮಕ್ಕಳಿಬ್ಬರು ಹಲವು ದಿನಗಳ ಮೊದಲು ಮಂಗಳೂರಿಗೆ ಬಂದು, ತಮಗೆ ದೇವಿಯ ದರ್ಶನ ಬರುವುದೆಂದೂ, ಕಾಯಿಲೆಗಳ ಕಾರಣ, ಭವಿಷ್ಯದ್ವಿಷಯಗಳನ್ನು ತಿಳಿಸಲು ಶಕ್ತರೆಂದೂ ಹೇಳಿ, ಜನವನ್ನು ನಂಬಿಸಿ, ಹಣ ಸಂಪಾದಿಸುತ್ತಿದ್ದರು. ಇಲ್ಲಿಯ ಕೆಲವು ಸದ್ಗೃಹಸ್ಥರಿಗೆ ಇವರ ಕುತಂತ್ರಗಳ ರಹಸ್ಯವು ದೊರೆತು, ಕಂದಿಮಕ್ಕಳಿಬ್ಬರನ್ನೂ ಒಂದು ಮನೆಗೆ ಕರೆದುಕೊಂಡುಹೋಗಿ ಗದರಿಸಿ ಬಾಯ್ಬಿಡಿಸಲಾಗಿ, ತಮ್ಮ ಹೊಟ್ಟೆಹೊರುವುದಕ್ಕಾಗಿ ಈ ವೃತ್ತಿಗಿಳಿದಿರುವವೆಂದು ಸತ್ಯವನ್ನು ನುಡಿದರು. ಮುಂದಕ್ಕೆ ತಾವು ಮಂಗಳೂರಲ್ಲಿ ಸರ್ವಥಾ ನಿಲ್ಲದೆ ಮರಳಿನ್ನಿಗನೇ ಉಡುಪಿಗೆ ತೆರಳುವವೆಂದು ಹೇಳಿ, ಅದೇ ಮೋಟರಿಗೆ ಅವರಿಬ್ಬರೂ ಕಮ್ಮಾರಿಗೆ ನಡೆದರು. ಮೋಸಗಾರರ ಬಲೆಗೆ ಬೀಳದಂತೆ ಜನರು ಎಚ್ಚರಿರಲಿ!

ಕುಂದಾಪುರ—ಇಲ್ಲಿಯ ಸಿವಿಲ್ ಅಸಿಸ್ಟಾಂಟ್ ಸರ್ಜನರಾಗಿದ್ದ ಶ್ರೀಯುತ ಮುಂಡ್ಕೂರು ಸಂಜೀವ ರಾವ್, ಎಂ. ಬಿ. ಬಿ. ಎಸ್. ಇವರಿಗೆ ಮಲಬಾರು ಜಿಲ್ಲೆಯ ಪೆರಿಂತಲಮನ್ನಾ ಎಂಬಲ್ಲಿಗೆ ವರ್ಗವಾಗಿದೆ.

ಇಲ್ಲಿಂದ ಸುಮಾರು ೧೦ ಮೈಲು ಉತ್ತರಕ್ಕೆ ನಾವುಂದ ಎಂಬಲ್ಲಿ ಬೈಂದೂರು ಕಡೆಯಿಂದ ಬರುತ್ತಿದ್ದ ಬಸ್ಸು, ಇದಿರಿಗೆ ಸಿಕ್ಕಿದ್ದ ನಾಯಿಯನ್ನು ರಕ್ಷಿಸುವ ಬಗ್ಗೆ ಫಕ್ಕನೆ ತಿರುಗುವಾಗ ಮಗುಚಿಬಿದ್ದು ದಾರಿ ನಡೆಯುತ್ತಿದ್ದ ಮೂರು ಹೆಂಗಸರಿಗೆ ವಿಶೇಷ ಪೆಟ್ಟು ಆಗಿರುತ್ತದೆಂದೂ ಆ ಹೆಂಗುಸರು ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದಿರುತ್ತಾರೆಂದೂ ತಿಳಿದುಬರುತ್ತದೆ.

ಬಂಟ್ವಾಳ—ಇದೇ ತಾ ೭ರಲ್ಲಿ ಇಲ್ಲಿಯ ಪಿ ಸಿ ಪಿ ಯವರ ಹೊಸ ಕಟ್ಟಡದ ಪ್ರವೇಶಸಮಾರಂಭವು ಬಹು ವಿಜೃಂಭಣೆಯಿಂದ ಜರಗಿತು.

ಉಡುಪಿ—ಈಚೆಗೆ ಇಲ್ಲಿ ತಲೆದೋರಿರುವ ಕ್ಯಾಂಡರ್ ಪೆಸ್ಟ್ ಎಂಬ ಜಾನುವಾರು ರೋಗ ನಿವಾರಣೆ ಬಗ್ಗೆ ಪಶುವೈದ್ಯ ಇಲಾಖೆಯವರು ಊರಿನ ಜಾನುವಾರುಗಳಿಗೆ ಇನೊಕ್ಯುಲೇಶನ್ ಮಾಡುತ್ತಿರುವರು. ನಿರಾಧಾರವಾದ ಸುಳ್ಳು ಅಭಿಪ್ರಾಯಗಳನ್ನು ತೊಲಗಿಸಿ, ಮಹಾಜನರು ತಂತಮ್ಮ ದನಕರುಗಳಿಗೆ ಸರಿ ಚಿಕಿತ್ಸೆಯನ್ನು ಮಾಡಿಸುವುದು ಆವಶ್ಯಕವೂ ಹಿತಕಾರಿಯೂ ಆಗಿದೆ

ಮದ್ರಾಸಿನಿಂದ ಮಂಗಳೂರಿಗೆ ಕಳೆದ ವಾರ ಚಿತ್ತೈಸಿದ್ದ ಪೋಲೀಸ್ ಇನ್ಸ್‌ಪೆಕ್ಟರ ಜನರಲರವರು ಕಾರ್ಯನಿಮಿತ್ತವಾಗಿ ಇದೇ ತಾ ೨೮ನೆಗೆ ಉಡುಪಿಗೆ ಚಿತ್ತೈಸಲಿದ್ದಾರೆ

ಆಗಾಮಿ ದಫೆಯಲ್ಲಿ ನಮ್ಮ ಜಿಲ್ಲೆಬೋರ್ಡಿಗೆ ಬೋರ್ಡು ಮೆಂಬರರ ಚುನಾವಣೆಯು ನಡೆಯಲಿರುವುದಾಗಿ ಜಿಲ್ಲಾ ಇಲೆಕ್ಷನ್ ಬೋರ್ಡೊಂದು ಈಚೆಗೆ ಮಂಗಳೂರಿನಲ್ಲಿ ಸ್ಥಾಪನೆಯಾಗಿದೆ ಅದನ್ನು ಸುಸೂತ್ರಗೊಳಿಸಲು ಕೆಲವು ನಿಯಮಗಳು ಮಂಜೂರಾಗಿವೆಯೆಂದೂ ಸ್ಥಳಿಕ ಬಾವಿ ವಿಷಯಕ ಚರ್ಚೆಯೊಡನೆ ಮುಂದಣ ಸಭೆಗೆ ಮುಂದು ಸಿದ್ಧಲಾಗಿದೆಯೆಂದೂ ತಿಳಿದುಬರುತ್ತದೆ ಮಂಜೂರಾದ ನಿಯಮಗಳನ್ನು ಇನ್ನೂ ಸಾರ್ವಜನಿಕದಲ್ಲಿನ ನಿಯಮಗಳನ್ನೂ ಜಿಲ್ಲೆಯ ಎಲ್ಲ ಪತ್ರಿಕೆಗಳಲ್ಲಿ ಪ್ರಕಟಿಸಿ ಆ ಬಗ್ಗೆ ಉಪಸೂಚನೆಗಳನ್ನು ಕೊಡುವಂತೆ ಅಪೇಕ್ಷಿಸುವುದು ಉಚಿತವಾಗಿದೆ. ಈ ಬಗೆ ಪ್ರಾಂತಿಕ ಇಲ್ಲವೆ ಅಖಿಲ ಭಾರತ ಕೇಂದ್ರ ಸಮಿತಿಯವರ ಅಭಿಪ್ರಾಯಗಳನ್ನು ತರಿಸಿ ಸಜ್ಜುಗೊಳಿಸುವುದರಲ್ಲಿ ಮಾನ್ಯವಿದೆ. ಕಾಂಗ್ರೆಸ್ ಸದಸ್ಯರು ಚುನಾವಣೆಯಾಗಿ ಬಂದ ಮೇಲೆ ನಡೆಸಿಕೊಳ್ಳಬೇಕಾದ ಶಿಸ್ತಿನ ಬಗ್ಗೂ ಹೆಚ್ಚಿನ ವಿವೇಚನೆ ಅವಶ್ಯ

ಒಂದು ವಾರದಿಂದ ಇಲ್ಲಿ ಮಳೆಯ ಅಭಾವ; ಪ್ರತಿಯೊಬ್ಬರು ಹೇಳುವ, ಊರವರ ಆರೋಗ್ಯವೂ ಕೆಟ್ಟಿದೆ. ಕೆಲವರೆಗಳಲ್ಲಿ ಬೇಸಾಯವೂ ಅಪೂರ್ಣ.

ಬೋರ್ಡು ಎಲಿಮೆಂಟರಿ ಉಪಾಧ್ಯಾಯರ ಪ್ರಚಂಡ ಮಹಾಸಭೆ

ಉಪಾಧ್ಯಾಯ ಬಂಧುಗಳೇ, (೨೧ ೮-೩೫)

ನಿಮ್ಮಲ್ಲಿ ಧೈರ್ಯವೂ, ಸಾಹಸವೂ, ಉತ್ಸಾಹವೂ ಇರುವುದಾದರೆ ನಿಮಗೆ ಬಂದೊದಗಿದ ಕಷ್ಟಗಳನ್ನು ಪರಿಹರಿಸುವರೆ ಸಿದ್ಧರಾಗಿರಿ, ಕಡೆತನಕ ಪ್ರಯತ್ನಿಸಿ ಸಾಧಿಸಿ ನೋಡಿರಿ. ಅದೃಷ್ಟವು ಇದ್ದ ಹಾಗೆ ಆಗಲಿ ಎಂಬ ಹಳೆಯ ಮಾತನ್ನು ಬಿಟ್ಟುಬಿಟ್ಟು ಸಾಧಿಸಿದರೆ ಸಕಲ ಸಿಂಗುಬಹುದೆಂಬ ನಾಣ್ಣುಡಿಯನ್ನು ನೆನಪಿಗೆ ತಂದು, ಪ್ರಯತ್ನದಿಂದ ಕಾರ್ಯ ಸಾಧಿಸಿ ಅದೃಷ್ಟಪರೀಕ್ಷೆ ಮಾಡಿರಿ, ಹೆಚ್ಚುಬಿಟ್ಟಷ್ಟು ಕೊರಗಿ, ಮರುಗಿ, ಕಳವಳಪಟ್ಟು ಅಲ್ಲಿಯೇ ಬಿದ್ದು, ಅಚೇತನಾವಸ್ಥೆಯಲ್ಲಿ ನಿಕೃಷ್ಟ ಮ

ಯಾಗಿರುವುದಕ್ಕಿಂತ ಸ್ವಪ್ರಯತ್ನದಿಂದ ಕಾರ್ಯವನ್ನು ಸಾಧಿಸಿ ಮತ್ತು ಫಲವು ದೊರೆಯದೆ ಹೋದರೆ ಕಾರ್ಯಸಾಧನೆಯು ಪಾಪಸಿಕ ಚೈತನ್ಯದ (ಕರ್ಮಯೋಗದ) ಸಾಧನವಾದರೂ ಉಂಟಾಯಿತೆಂದು ಸಂತೋಷಪಟ್ಟು ಶಾಂತರಾಗಿರುವುದು ಒಳ್ಳೆಯದು.

ಉಪಾಧ್ಯಾಯರೇ, ಈ ಕಡೆ ನೋಡಿರಿ (೧) ಈಗಿನ ಸ್ಕೇಲಿನ 'ಮಕ್ಸಿಮಮ್' ಪೇಗಿಂತ ಹೆಚ್ಚು ಇದ್ದ ಪರ್ಸನಲ್ ಎಲೋವೆನ್ಸನ್ನು ಕೂಡಾ ವಜಾ ಮಾಡಬೇಕೆಂದು ಸರಕಾರದ ಹುಕುಂ ಈಗ ತಾನೇ ಬೋರ್ಡಿಗೆ ಬಂದಿರುತ್ತದೆ. ಜನರಲ್ ಕಟ್‌ನಿಂದ ವಿನಾಯತಿ ಕೂಡಾ ಸಿಕ್ಕಲಿಲ್ಲ. [illegible]

[illegible]

ವಿ. ಬಾಬು ಶೆಟ್ಟಿ,
ಜಿಲ್ಲಾ ಉಪಾಧ್ಯಾಯರ ಸಂಘದ ಕಾರ್ಯದರ್ಶಿ.

ಗೌಡಸಾರಸ್ವತ ವೃಂದದೊಡನೆ ಒಂದು ವಿಜ್ಞಾಪನೆ

ರಾಮೇಶ್ವರ ಗೌಡ ಸಾರಸ್ವತ ವೃಂದಕ್ಕೆ ಸೇರಿದ ಶ್ರೀ ಕೋದಂಡರಾಮ ದೇವಸ್ಥಾನದ ಪುನರ್‌ರಚನಾ ಕಾರ್ಯವು ಪ್ರಾರಂಭಿಸಲ್ಪಟ್ಟಿರುತ್ತದೆ. ರಿಟಾಯರ್ಡ್ ಇಂಜಿನಿಯರ್ ರಾವ್ ಬಹದೂರ್ ಗಣಪತಿ ಕುದ್ವರು ಮುದ್ದಾಗಿ ಒಂದು ಕೆಲಸದ ಮೇಲ್ವಿಚಾರಣೆಯಲ್ಲಿ ನಿರತರಾಗಿರುತ್ತಾರೆ. ಮುಂಬಯಿಯಿಂದ ಶ್ರೀ ವಿನಾಯಕರಾವ್ ಮಾಮುನನಾಯ್ಕರವರು ಸಹ ಬಂದು ಸಹಕರಿಸುತ್ತಿದ್ದಾರೆ. [illegible]

ಮಲಬಾರಿಗೆ ಬೌದ್ಧ ಪ್ರಚಾರಕರನ್ನು ಆಮಂತ್ರಿಸಲಾಯಿತು
ತೀಯರ ಮತಾಂತರಕ್ಕಾಗಿ

ಬೆನಾರಿಸ್ ಜುಲಾಯಿ, ೨೦

[illegible]

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗವರ್ನರರ ಸಂಚಾರ

[illegible]

ಬಾರ್ಕೂರ್ ಬಿಲ್ಲವ ಚಾರಿಟಿ ಫಂಡು, ಮುಂಬಾಯಿ.

[illegible]

ಊರೊಳಗೆ ಬಸ್ ಸರ್ವಿಸ್.
ಸ್ಥಳೀಕ ಸಂಸ್ಥೆಗಳಿಗೆ ಸರಕಾರದ ಆಜ್ಞೆ.

ಉದಕಮಂಡಲ, ಜುಲಾಯಿ, ೧೨

ಬಸ್‌ಗಳಲ್ಲಿ ಪ್ರಯಾಣದಾರರ ಮತ್ತು ಸಾಮಾನು ಗಳನ್ನು ರವಾನಿಸುವವರು ತಾವು ಕೊಟ್ಟ ದರದ ಟಿಕೇಟಿನ ಒಂದು ಕೌಂಟರ್‌ಫೋಯಿಲನ್ನು ತಮ್ಮ ವಶ ಇಟ್ಟು ಕೊಳ್ಳುವಂತೆ ಮಾಡಬೇಕೆಂದೂ, ಈ ದ್ವಿಪ್ರತಿಗಳನ್ನು ಅಧಿಕಾರಿಗಳು ತನಿಖೆ ಮಾಡಿದ್ದಲ್ಲಿ ತೋರಿಸುವಂತಾಗಬೇಕೆಂದೂ ಸರಕಾರವು ಅಭಿಪ್ರಾಯಪಟ್ಟು, ಸ್ಥಳೀಕ ಸಂಸ್ಥೆಗಳು ಈ ಬಗ್ಗೆ [illegible]

ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲ್.
ಆಗೋಸ್ತಿನಲ್ಲಿ ೫ ದಿನಗಳ ಅಧಿವೇಶನ

[illegible]

ಇಟೆಲಿಯು ರಾಜಿಗೆ ಸಿದ್ಧವಿಲ್ಲ

[illegible]

ಇಟೆಲೀ ಎಬಿಸೀನಿಯಾ ವಿವಾದವನ್ನು ಪರಿಹರಿಸಲು ಒಂದು ವಿಚಾರಣಾಸಮಿತಿ

[illegible]

ಸೋಮಾಲಿಲೇಂಡ್ ಪ್ರಭುತ್ವದವರು ಬ್ರಿಟನ್, ಇಟೆಲಿ, ಮತ್ತು ಬೆಲ್ಜಿಯಂ ಮಂತ್ರಿಗಳಿಗೂ ಎಬಿಸೀನಿಯಾಕ್ಕೆ ತನ್ನ ರಾಜ್ಯವನ್ನು ಕಾಯಲು ವಿದೇಶಗಳಿಂದ ಶಸ್ತ್ರಾಸ್ತ್ರಗಳನ್ನು ಕೊಂಡುಕೊಳ್ಳಲು ೧೯೩೦ನೇ ಸಂಧಾನದ ಪ್ರಕಾರ ಹಕ್ಕಿರುವುದೆಂದು ಒಂದು ಪತ್ರವನ್ನು ಕಳುಹಿಸಿದೆ.

ಇಟೆಲಿ ಎಬಿಸೀನಿಯಾ ಸಮಸ್ಯೆಯು ಬ್ರಿಟನ್ನಿನ ಲಕ್ಷ್ಯದಲ್ಲಿದೆ

[illegible]

ನಿಲ್ಲಬೇಕೋ ಬೇಡವೋ?
ಪಂಚಾಯತ ಬೋರ್ಡು ಮೆಂಬರರ ಪೀಕಲಾಟ.

[illegible]

ಕ್ವೆಟ್ಟಾ ಭೂಕಂಪ ಕಷ್ಟನಿವಾರಣೆಯ ಕುರಿತು ಬಾಬೂರಾಜೇಂದ್ರರ ಅನುಭವ.

[illegible]

ಬಿಲ್ಲವರ ಎಸೋಸಿಯೇಶನ್ ಮುಂಬಯಿ

[illegible]

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. P. No. 127/1935.

ಮಾಧವಿ ಅಮ್ಮ, ಮೃತಪಟ್ಟ ಚೆಪ್ಪಾಡಿ ಪಟೇಲ್ ಕೇಳುನ್ನಾಯರ ವಿಧವೆ, ಕಿಣಾನೂರು ಗ್ರಾಮದ ಪರ್ವೆಯಲ್ಲಿರುವವಳು—ಅರ್ಜಿದಾರಳು

ಮತ್ತು

ಮಾಧವನ್ ನ್ಯಾರ ಸಹಾ 9 ಜನರು—ರೆಸ್ಪಾಂಡೆಂಟರು.

ಇವರೊಳಗೆ-

ತಾ 28—7—'35

ಸದ್ರಿ ಅರ್ಜಿದಾರಳ ಕಡೆಯಿಂದ ಬರ ಕೊಂಡ ನೋಟೀಸು

ಕಿಣಾನೂರು ಗ್ರಾಮದ ಪರ್ವೆಯಲ್ಲಿರುವ ಮೃತಪಟ್ಟ ಪಟೇಲ್ ಚೆಪ್ಪಾಡಿ ಕೇಳುನ್ನಾಯರಿಗೆ ಬರತಕ್ಕ ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟು ಕ್ರಮಸಂಖ್ಯೆ 169/'35 ಮತ್ತು O P. No 497/'35 ನೇ ವ್ಯಾಜ್ಯಗಳಲ್ಲಿ ಕೇಳಿದ ಐವಜನ್ನು ವಸೂಲು ಮಾಡುವರೆ ಅರ್ಜಿದಾರಳು ಹಕ್ಕುದಾರಳಾಗಿರುವುದರಿಂದ ತನಗೆ ವಾರಿಸ್ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ 1-8-'35ಕ್ಕೆ ತನಿಖೆಗ ಇಟ್ಟಿರುತ್ತದೆಯೆಂತಲೂ ಆಕ್ಷೇಪವುಳ್ಳವರು ಆ ದಿವಸ 11 ಗಂಟೆಗೆ ಕೋರ್ಟಿನಲ್ಲಿ ತಮ್ಮ ಆಕ್ಷೇಪಣೆಗಳನ್ನು ಮನವಿಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ

ಕಾಸರಗೋಡು, 23—7—'35 } C. M. Kukambu Nair, *Vakil for Petitioner*

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮ ಸಂಖ್ಯೆ 513/'31 R L P 520/'31

ಮರುದೇವಿ ಅಮ್ಮ—ಅರ್ಜಿದಾರಳ

ಮತ್ತು

ಪುಟ್ಟಮ್ಮ ಯಾನೆ ಲಕ್ಷ್ಮಿ ಹೆಗಡ್ತಿ ಎದ್ರಿಳು

ಇಂತಿವರೊಳಗೆ

ಎದ್ರಿಳಿಗೆ ಅವಳ ಪಕ್ಷಗಳಿಂದ ಶಿರ್ತೆ ಮತ್ತು ಭಾವ ಸಂಗಗಳ ಬಾಬ್ತು ಬರತಕ್ಕ ಬಾಕಿ ಗೇಣಿಯನ್ನು ಮೇಲ್ಕಾಣಿಸಿದ ಅಮಲ್ ಜಾರಿಯಲ್ಲಿ ಅರ್ಜಿದಾರಳು ಜಪ್ತಿ ಮಾಡಿಸಿರುವುದರಿಂದ ಕೋರ್ಟಿನವರು ಇನ್ನೊಂದು ಹುಕುಂ ಕೊಡುವ ತನಕ ಎದ್ರಿಳು ಸದ್ರಿ ಗೇಣಿಗಳನ್ನು ವಸೂಲು ಮಾಡದಂತೆ ಈ ಮೂಲಕ ನಿರ್ಬಂಧಿಸೋಣಾಗಿದೆ ಮತ್ತು ಸದ್ರಿ ಅಮಲ್ ಜಾರಿಯು ಇದೇ ಬರುವ ತಾ 9-8-1935ಕ್ಕೆ ಇಟ್ಟಿರುವುದರಿಂದ ಎದ್ರಿಳ ಆಕ್ಷೇಪ ಇದ್ದರೆ ಆ ದಿನ ಬೆಳಗ್ಗೆ 11 ಘಂಟೆಗೆ ಸದ್ರಿ ಕೋರ್ಟಿಗೆ ಹಾಜರಾಗಿ ಉದಹರಿಸಬಹುದು ಎಂಬ ಸಂಗ್ತಿಯನ್ನು ಎದ್ರಿಳಿಗೆ ಈ ಮೂಲಕ ತಿಳಿಸೋಣಾಗಿದೆ

P Ramachandra Rau,
Pleader for Petitioner
ಕಾರ್ಕಳ, 22—7—1935.

Notice.

The temporary bridge for the diversion road at Punjalcutta in mile 27/8 of Mangalore-Mysore Trunk Road No. A. 22 has been damaged and the public are informed that through traffic is therefore not possible at present via Punjalcutta. It is hoped to restore through communication in a week or ten days.

District Board Engineer's office S K Mangalore 13—7—1935 } S/d P S. Barboza, District Board Engineer.

ಪ್ರಶಂಸೆ.

ಪ್ರಖ್ಯಾತ ಅಮೇರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ.

ವಿ—ಮೊ—ಲ

VIM-O-LA

ಅಮೇರಿಕಾದ ಜೀವಸಾರ ವಸ್ತು.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ ಹೊಟ್ಟೆಯಲ್ಲಿ ಚೆಂಡಿನಂತೇಳುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಗೊಳಿಸುವ ಶಕ್ತಿವರ್ಧಕ ಪಾನೀಯ: ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ. ಬಾಟ್ಲಿ 1ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟಾಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ

"Vimola Depot"

Manufactured by

American Herbal Products Co,

Sole representatives for above medicine

The National Kanara News Agency,

Sir Pherozsha Metha Road
Fort Bombay

"GUPTA MANTRA"

A reward of Rs 100

The objects, which cannot be achieved by spending lacs of rupees may be had by repeating this Mantra seven times There is no necessity of undergoing any hardship to make it effective. It is effective without any preparation. This is a "WASHIKARAN MANTRA" It will make you fortunate give you service and advancement and bring you profit in trade. A reward of Rs. 100, if proved fallible Price including postage etc, Rs 2-7-0.

Siddha Mantra Ashram,
KATRISARAI (GAYA)

M A A

WHITE LEPROSY AND LEUCODERMA

A few day's application of this medicine cures WHITE LEPROSY and LEUCODERMA radically Get rid of this horrible disease by application of this medicine inspite of failure by hundreds of Hakims, Doctors, Kavirajas and advertisers Rs 500 rewarded if proved fallible Price Rs 2/-

VAIDYARAJ AKHIL KISHORE RAM
P O KATRISARAI (GAYA)

M A A

(ಆನೇ ಪುಟದಿಂದ ಮುಂದುವರಿದುದು)

ನಾನು—ಯಾರಾದರೂ ಆ ಶಿಖರದ ಮೇಲೆ, ನನ್ನ ಬಳಿಗೆ ಬಂದಾರೆಯೋ, ನನಗೆ ಗುಡಿ ತಿರುಗಿ ಕಟ್ಟಿಸಿಯಾರೆಯೋ!

ನಾನು—ಎಲಾ! ಅಷ್ಟು ಗೊತ್ತಾಗಜೇ, ಸ್ವಸ್ತ ಊರಿಂದೂರು ತಿರುಗಬಾರದೇ ನನ್ನಹಾಂಗೆ! ಗುಡಿಕಟ್ಟಿ ಕೊಡುತ್ತಾರೆ ಎಂತ ಗುಂಡು, ಕಲ್ಲಾಗಿ ಬಿದ್ದೀ ನಿನ್ನ ಅವಸ್ಥೆ ಹೀಂಗಾಯಿತು! ಹೊರಡು—ಸರ್ಕೀಟಿಗೆ ನಿನ್ನನ್ನು ಜನರು ನೋಡಬೇಕೆನ್ನುತ್ತಾರೋ—ಬರದಿ ನಿನ್ನ ಹಿಂದೆ ಎಲಾ ಮೊದ್ದೀ ಇಷ್ಟಲ್ಲೀ ಬಿದ್ದಿದ್ದರೆ, ಮರ್ಯಾದೆ ಬಂದೀತೇ?

ಅಷ್ಟು ಅಂದೆ ಮಹಾಲಿಂಗನು ಮತ್ತೆ ಮಾತಾಡಲಿಲ್ಲ! ನಾನು ಸಿಟ್ಟಿಗೆ ಹೊರಟೆ! ಆ ದಿನ ಸಂಜೆ ಮರಳಿ ಬರುವಾಗ ಮಹಾಲಿಂಗನ ತಲೆಯ ಮೇಲೆ ಕುಳಿತ—"ಹಾರುವ' ತಿರುಗಿ ಮಂತ್ರ ಹೇಳುತ್ತಿದ್ದ

ಮುಂದಿನ ವರುಷ—ಅಲ್ಲಿ ಒಂದು ಸ್ಟಾರ್ಟ್ ಕಂಪ್ ಆಯಿತು. ಆ ದಿನ ಮಹಾಲಿಂಗನನ್ನು ಹಿಡಿದು, ಪಯಸ್ವಿನಿ ಕಲ್ಲಿನ ಮೇಲೆ ಉರುಳಿಸಿ—ಚಟ್ನಿಪುಡಿ ಮಾಡಿದ್ದರು.

ಆಶ್ಚರ್ಯವಲ್ಲ ನಿಂತಲ್ಲೇ ನಿಂತರೆ ದೇವರಿಗೂ ಮರ್ಯಾದೆ ಇಲ್ಲ ಸಂಚಾರಿ ಕಾಲಕ್ಕೆ ಸರ್ಕೀಟಿನ ದೇವರು ಬೇಕು.

ಹಿಂದೀಯರಾದ ನಾವು ಹೇಗೆ ಮೋಸಹೊಂದುವೆವು!

ಓದಿರಿ ದೀನರಾದ ನಮ್ಮ (ಹಿಂದೀಯರ) ಅಜ್ಞಾನವನ್ನು ವಿದೇಶೀ ಕಾರ್ಖಾನೆದಾರರು ಹೇಗ ಸದುಪಯೋಗ ಪಡಿಸಿಕೊಳ್ಳುತ್ತಿರುವುದನ್ನು ತಿಳಿದುಕೊಳ್ಳಲು— ಓದಿರಿ ಇದನ್ನು —

ನೆಲಗಡಲೆ ಎಣ್ಣೆಯು ಬಾದಾಮಿ ಎಣ್ಣೆಯಾಗಿದೆಯೆಂದು ಗೊತ್ತೇ?

ನಮ್ಮ ದೇಶದಲ್ಲಿ "ಶುದ್ಧ ಬಿಳಿ ಬಾದಾಮಿ ಎಣ್ಣೆ" ಎಂಬ ಹೆಸರಲ್ಲಿ ಮಾರಾಟವಾಗುತ್ತಿರುವ ಎಣ್ಣೆಯು ಬಾದಾಮಿ ಎಣ್ಣೆಯಲ್ಲ, ನಮ್ಮ ದೇಶದಿಂದಲೇ ಒಯ್ದ ನೆಲಗಡಲೆಯಿಂದ ತೆಗದ ಶುದ್ಧ ನೆಲಗಡಲ ಎಣ್ಣೆಯಾಗಿದ (" ಇಂಡಿಸ್ಟ್ರೀಸ್ ಪಗ್ ಒಫ್ ಇಂಡಿಯಾ" ಇದರ ಪುಟ 59ನ್ನು ನೋಡಿ)

ವನಸ್ಪತಿ ತೈಲವಲ್ಲ—ಮೀನಿನ ತೈಲ! ತಿಳಿಯಿತೇ?

'ಇಂಪೀರಿಯಲ್ ಕೌನ್ಸಿಲ್ ಒಫ್ ಅಗ್ರಿಕಲ್ಚರಲ್ ರಿಸರ್ಚ್'' ಇದರ 'ಇಂಡಿಯನ್ ಓಯಿಲ್ ಕ್ರಶಿಂಗ್ ಇಂಡಸ್ಟ್ರಿ ಕಮಿಟಿ'ಯ ತೃತೀಯ ಸಭೆಯಲ್ಲಿ, ಪ್ರಕೃತ ವರದೀಶದಿಂದ "Edible Hardened Oil" (ಆಹಾರಕ್ಕುಪಯೋಗಿಸುವ ಗಟ್ಟಿಯಾದ ತೈಲ) ಎಂಬ ಚೀಟನ್ನು ಹಚ್ಚಿಸಿ, ಪರದೇಶಗಳಿಂದ ಮತ್ಸ್ಯತೈಲವನ್ನು ಹಿಂದೂದೇಶಕ್ಕೆ ಆಮದು ಮಾಡಿ ಸಸ್ಯತೈಲವೆಂಬುದಾಗಿ ಮಾರಾಟಮಾಡುತ್ತಿರುವರೆಂದು ಬಯಲಾಯಿತು ಆದರೆ, —

ಸತ್ತ ಹೆಗ್ಗಣಗಳ, ಬೆಕ್ಕುಗಳ, ನಾಯಿಗಳ ಮತ್ತು ದನ ಇತ್ಯಾದಿಗಳ ಕೊಬ್ಬಿನಿಂದಾಗುವ ಸಾಬೂನುಗಳು!—

ಇವುಗಳಿಗೆ ಸರಿಗಟ್ಟುವಂತಹುದು ಮತ್ತಾವುದಿದೆ? ಯುರೋಪಿನಲ್ಲಿ ಮೃಗಗಳ ಕೊಬ್ಬನ್ನು ಮಾನವ ಆಹಾರಕ್ಕಾಗಿ ಉಪಯೋಗಿಸುತ್ತಿರುವಲ್ಲಿ ಸಾಬೂನುತಯಾರಿಯಲ್ಲಿ ಉಪಯೋಗಿಸುವ ಹೆಚ್ಚಿನ ಕೊಬ್ಬುಗಳು ಸತ್ತ ಮೃಗಗಳ ಶರೀರಗಳಿಂದಲೂ, ವಧಾಶಾಲೆಗಳಿಂದಲೂ, ರಸ್ತೆಗಳ 'ಕಚರಾ'ದಿಂದಲೂ, ಒಮ್ಮೊಮ್ಮೆ ನದೀಗಳಿಂದಲೂ ದೊರಕಿಸಿಕೊಂಡಂದವುಗಳಾಗಿವೆ (ಸರ್ ಎಫ್. ಎ ಟಾಲ್ಬೊಟರವರ "ಮಿಲ್ಲಿಯನ್ಸ್ ಫ್ರೊಮ್ ವೇಸ್ಟ್" ಎಂಬ ಗ್ರಂಥವನ್ನೋದಿರಿ)

ಗೊಡ್ರೆಜ್ ವನಸ್ಪತಿ ಸುಗಂಧಸಾಬೂನುಗಳ

ವಿಷಯವಾಗಿ, ಅದನ್ನುಪಯೋಗಿಸುವ ಪ್ರಸಿದ್ಧಪುರುಷರೇನು ಹೇಳುವರೋ ಓದಿರಿ —

ಕವಿರವೀಂದ್ರ:—"ಗೊಡ್ರೆಜ್ ಸಾಬೂನುಗಳಿಗಿಂತ ಉತ್ತಮವಾದ ವಿದೇಶೀ ಸಾಬೂನುಗಳನ್ನು ನಾನು ಕಂಡಿಲ್ಲ ಇನ್ನು ಮುಂದೆ ಗೊಡ್ರೆಜ್ ಸಾಬೂನುಗಳನ್ನೆ ಉಪಯೋಗಿಸಲು ನಿರ್ಧರಿಸಿದ್ದೇನೆ"

ಕೆಲ ವರ್ಷಗಳ ಹಿಂದೆ ಡಾ। ಅನ್ನಿಬಿಸೆಂಟರು ತಮ್ಮ "ನ್ಯೂ ಇಂಡಿಯಾ"ದ ಪತ್ರಿಕೆಯಲ್ಲಿ, ಗೊಡ್ರೆಜ್ ಸಾಬೂನಗಳು 'ಪ್ರಪಂಚದಲ್ಲಿ ಅತ್ಯುತ್ಕೃಷ್ಟವೆಂದು ಪ್ರಶಂಸಿಸಿದ್ದರು

ರಾಷ್ಟ್ರೀಯ ಮಹಾಸಭೆಯ ಮಾಜಿ ಅಧ್ಯಕ್ಷರಾದ ಡಾ। ಅನ್ಸಾರಿಯವರು— ಗೊಡ್ರೆಜ್ ಸಾಬೂನುಗಳ ವಿಷಯವಾಗಿ ಹೇಳುವರು —"ಗೊಡ್ರೆಜ್ ಸಾಬೂನುಗಳ ಉತ್ತಮ ಗುಣಗಳನ್ನು ಗುರುತಿಸಲು ನನಗೆ ಆನಂದವಾಗುತ್ತದೆ ನಾನು ಅವುಗಳನ್ನು ಕಳೆದ ಹತ್ತು ವರ್ಷಗಳಿಂದಲೂ ಉಪಯೋಗಿಸುತ್ತಿದ್ದು, ಯುರೋಪಿನ ಯಾವ ಉತ್ತಮ ಸಾಬೂನುಗಳಿಗಿಂತಲೂ ಉತ್ಕೃಷ್ಟವೆಂಬುದನ್ನು ಮನಗಂಡಿದ್ದೇನೆ ಅವುಗಳು ಹಿಂದೂದೇಶದಲ್ಲಿ ಸಿದ್ಧವಾಗುತ್ತಿರುವುದಕೂ ಅವುಗಳ ಉತ್ಕೃಷ್ಟತೆಯ ದೆಸೆಯಿಂದಲೂ ಹಿಂದೀಯರೆಲ್ಲ ಅವುಗಳನ್ನೇ ಉಪಯೋಗಿಸಬೇಕೆಂದು ನನ್ನ ಸಲಹೆ."

ಗೊಡ್ರೆಜ್ ಗಂಧದ ಸಾಬೂನು ಮತ್ತು ಶೇವಿಂಗ್ ಸ್ಟಿಕ್ } ಇವುಗಳನ್ನು ಉಪಯೋಗಿಸಿರಿ.

ಸೋಲ್ ಏಜಂಟರು:

ನಾದಿರ ಷಾ ಪ್ರಿಂಟರ್ ಎಂಡ್ ಕೊ, 165, C, ಬ್ರೋಡ್ವೇ, ಮದರಾಸು.

ಹೆಡ್ ಆಫೀಸು: ಬೊಂಬಾಯಿ. ಇತರ ಶಾಖೆಗಳು—ಕಲ್ಕತ್ತಾ, ಲಾಹೋರ್ ಮತ್ತು ಕರಾಚಿ

ವಿ. ಸೂ:—ಗೊಡ್ರೆಜ್‌ರವರ ಹೆಸರಲ್ಲಿ ಮಾರಾಟವಾಗುತ್ತಿರುವ ಬಾರ್‌ಸೋಪ್ ಮತ್ತು ಇತರ (ಬಟ್ಟೆ ಒಗೆಯುವ) ಸಾಬೂನುಗಳಿಗೆ ಗೊಡ್ರೆಜರವರಿಗೆ ಸಂಬಂಧವಿಲ್ಲ.

ಶಿಕ್ಷಣ ಪ್ರಚಾರಕ್ಕಾಗಿ ಪಂಚವಾರ್ಷಿಕ ಯೋಜನೆಯೊಂದಾಗಬೇಕು.

ಯಾವುದಾದರೊಂದು ಮಹತ್ವದ ಕಾರ್ಯವನ್ನು ಯಶಸ್ವಿಯಾಗಿ ಕೊನೆಗಾಣಿಸಬೇಕಾದರೆ ನಿಶ್ಚಯಿಸಿದ ಅವಧಿಯೊಳಗಾಗಿ ಅದನ್ನು ಪೂರೈಸಲಿಕ್ಕೆ ಮೊದಲೇ ಒಂದು ಕಾರ್ಯಕ್ರಮವನ್ನು ಮಾಡಿಟ್ಟುಕೊಳ್ಳುವುದು ಕಾರ್ಯಾರ್ಥಿಗಳ ಒಂದು ಶೀಲವಾಗಿರುತ್ತದೆ. ಆದುದರಿಂದಲೇ ಗ್ರಾಮೋದ್ಯೋಗ, ಗ್ರಾಮ ಸಂಘಟನೆ, ಸಹಕಾರ, ಹಿಂದೀ ಮೊದಲಾದುವುಗಳ ಪ್ರಚಾರಾದಿಕಾರ್ಯಗಳನ್ನು ಮುಂದೊತ್ತುವುದಕ್ಕಾಗಿ ಪಂಚವಾರ್ಷಿಕ ಯೋಜನೆಗಳನ್ನು ಸಂಬಂಧಪಟ್ಟವರು ತಯಾರಿಸುತ್ತಿರುವುದರ ಸಮಾಚಾರಗಳನ್ನು ವಾಚಕರು ಪತ್ರಪತ್ರಿಕೆಗಳಿಂದ ಓದಿ ಕೇಳಿ ತಿಳಿದಿರಬಹುದು. ತಂತಮ್ಮ ಕರ್ತೃತ್ವಶಕ್ತಿಯನ್ನು ಅಳೆದು ತಮ್ಮ ಅನುಕೂಲತೆ ಪ್ರತಿಕೂಲತೆಗಳ ಪರಾಮರ್ಶೆಮಾಡಿ ಐದು ಅಥವಾ ಇಂತಿಷ್ಟೇ ಕಾಲಾವಧಿಯೊಳಗೆ ಇಂತಿಷ್ಟು ಕಾರ್ಯವಾಗಬೇಕೆಂದು ಮೊದಲೇ ನಿಶ್ಚಯಿಸಿ, ಆ ಪ್ರಕಾರ ತ್ರಿಕರಣಶುದ್ಧಿಯಿಂದ ಕರ್ತವ್ಯಕ್ಷೇತ್ರದಲ್ಲಿ ಇಳಿದರೆ ಅಭೂತಪೂರ್ವ ಸಫಲತೆಯು ಪ್ರಾಪ್ತವಾಗುವುದೆಂಬುದಕ್ಕೆ ರಸ್ಯದಲ್ಲಿ ಹಿಂದೆ ಆಗಿಹೋದ ಪ್ರಥಮ ಪಂಚವಾರ್ಷಿಕ ಯೋಜನೆಯೂ, ಈಗ ಆಲೋಚನೆಯಾದ ದ್ವಿತೀಯ ಪಂಚವಾರ್ಷಿಕ ಯೋಜನೆಯೂ, ಎರಡು ದೊಡ್ಡ ಪ್ರಮಾಣಗಳೆನ್ನುವುದಕ್ಕೆ ಯಾವ ಸಂಶಯವೂ ಇರಲಾರದು. ಸಾಹಸ ಮತ್ತು ಇಚ್ಛಾಶಕ್ತಿಗಳೆರಡು ಇದ್ದು ಅನುಭವಿಕ ತಜ್ಞರಿಂದ ಸಿದ್ಧವಾದ ಕಾರ್ಯಕ್ರಮವೊಂದಿದ್ದರೆ ಯಾವ ಕಾರ್ಯವಾದರೂ ಅಸಾಧ್ಯವೆಂದು ತೋರಲಿಕ್ಕಿಲ್ಲ.

ಸುಮಾರು ೧೯೨೮ನೇ ಇಸವಿಯಿಂದ ಪ್ರಾರಂಭಿಸಿ ಮುಂದೆ ಐದು ವರ್ಷಗಳವರೆಗೆಂದು ರಸ್ಯದ ನವೀನ ಸರಕಾರವು ತಯಾರಿಸಿದ ಪ್ರಥಮದ ಪಂಚವಾರ್ಷಿಕ ಯೋಜನೆಯು ಪ್ರಪಂಚದ ಇತಿಹಾಸದಲ್ಲಿಯೇ ಮಹತ್ವವನ್ನು ಪಡೆದಿರುವುದು. ಜಗತ್ತಿನ ಮುಖ್ಯ ಮುಖ್ಯ ಜನರ ಮನಸ್ಸು ಆ ಯೋಜನೆಯ ಸಫಲಾಸಫಲತೆಯ ವಿಚಾರದ ಕಡೆಗೆ ಹರಿದಷ್ಟು ಬೇರಾವ ಕಡೆಗೂ ಹರಿಯಲಿಲ್ಲವೆಂದು ನಿರ್ಭಯವಾಗಿ ಹೇಳಬಹುದು. ಕುಂದುಕೊರತೆಗಳು ಪ್ರತಿಯೊಂದು ಕಾರ್ಯದಲ್ಲಿಯೂ ಕಂಡುಬರುವುದು ಸಹಜವಾಗಿರಬಹುದಾದರೂ ಶಿಕ್ಷಣ ಕ್ಷೇತ್ರದಲ್ಲಿ ರಸ್ಯದ ಪಂಚವಾರ್ಷಿಕ ಯೋಜನೆಗೆ ದೊರೆತ ವಿಜಯವು ನಿಷ್ಪಕ್ಷಪಾತಿಗಳಾದ ಪ್ರಪಂಚದ ವಿಚಾರಿಗಳೆಲ್ಲರನ್ನೂ ತಲೆದೂಗುವಂತೆ ಮಾಡಿಬಿಟ್ಟಿದೆ. ಅಂತರ್ರಾಷ್ಟ್ರೀಯ ದೃಷ್ಟಿಯಿಂದ ಒಂದು ಜನಾಂಗಕ್ಕೆ ರಾಜಕೀಯ ಮಹತ್ವವು ದೊರೆಯಬೇಕಾದರೆ ಸ್ತ್ರೀಪುರುಷ ಭೇದವಿಲ್ಲದೆ ಆ ಜನಾಂಗಕ್ಕೆ ಸೇರಿದವರೆಲ್ಲರೂ ಓದು ಬರಹ ಜ್ಞಾನವಷ್ಟನ್ನಾದರೂ ಪಡೆದಿರಬೇಕೆಂದು ಲೆನಿನನ ನಿಶ್ಚಿತ ಅಭಿಪ್ರಾಯವಾಗಿತ್ತು. ಲೆನಿನನ ಈ ಅಭಿಪ್ರಾಯವನ್ನು ತಪ್ಪೆಂದು ಸಾಧಿಸುವುದು ಸಾಧ್ಯವೇ ಅಲ್ಲ. ೧೯೧೭ನೇ ಇಸವಿಯ ತನಕ ಕಡ್ಡಾಯದ ಪ್ರಾಥಮಿಕ ಶಿಕ್ಷಣವೆಂಬುದು ರಸ್ಯದ ಜನರಿಗೆ ಸ್ವಪ್ನ ಪ್ರಾಯವಾಗಿತ್ತು ಮಾತ್ರವಲ್ಲದೆ ಅಂದು ಆ ಜನರಿಗೆ ಈ ಧ್ಯೇಯ ಸಾಧನೆಯು ಎಂದೋ ಒಂದು ದಿನ ಸಾಧ್ಯವಾಗುವಂತಹದ್ದೆಂದು ತೋರಿತ್ತು. ಆದರೆ ಆ ಮೇಲೆ ಮೂರು ನಾಲ್ಕು ವರ್ಷಗಳಲ್ಲಿ ಅಲ್ಲಿ ಮಹಾಕ್ರಾಂತಿಯು ಆಗಿ ಹೊಸ ಸರಕಾರದ ಸ್ಥಾಪನೆಯಾಯಿತು. ಲೆನಿನನೇ ಆ ಸರಕಾರದ ಮುಖ್ಯಾಧಿಕಾರಿಯಾದನು. ಮುಂದೆ ಲೆನಿನನ ಸರಕಾರಕ್ಕೆ ತನ್ನ ಅಂತರಂಗ ಬಹಿರಂಗ ಶತ್ರುಗಳೊಡನೆ ಹೋರಾಡಿ ಅವರ ಉಪಟಳವನ್ನು ಅಣಗಿಸಿ ದೇಶದಲ್ಲಿ ಶಾಂತಿ ರಕ್ಷಣೆ ಮಾಡಲಿಕ್ಕಾಗಿಯೇ ಕೆಲವು ವರ್ಷಗಳನ್ನು ಕಳೆಯಬೇಕಾದ ಅವಶ್ಯಕತೆಯುಂಟಾಯಿತಾದರೂ ಕೂಡಾ, ಅದರ ಲಕ್ಷ್ಯವು ಶಿಕ್ಷಣ ಪ್ರಚಾರದ ಕಡೆಗೆನೇ ಇತ್ತು. ಆ ಕಾರಣದಿಂದ ರಸ್ಯದಲ್ಲಿ ೧೯೨೦ರಲ್ಲಿ ಶೇಕಡಾ ೬೦ರಷ್ಟು ಪುರುಷರೂ, ೭೦ರಷ್ಟು ಸ್ತ್ರೀಯರೂ, ಒಟ್ಟು ಜನಸಂಖ್ಯೆಯಲ್ಲಿ ೬೮ರಷ್ಟು ಸ್ತ್ರೀಪುರುಷರೂ ಅಶಿಕ್ಷಿತರಾಗಿದ್ದರು. ಪರಂತು ೧೯೨೮ರಲ್ಲಿ ಸರಕಾರವು ಪಂಚವಾರ್ಷಿಕ ಯೋಜನೆಯನ್ನು ತಯಾರಿಸಿತು. ಆರ್ಥಿಕ, ಸಾಮಾಜಿಕ, ರಾಜಕೀಯ ದೃಷ್ಟಿಯಿಂದ ದೇಶದ ಬಲವನ್ನೂ ಪ್ರತಿಷ್ಠೆಯನ್ನೂ ಹೆಚ್ಚಿಸುವುದು ಈ ಯೋಜನೆಯ ಉದ್ದೇಶವಾಗಿದ್ದುದು ಮಾತ್ರವಲ್ಲದೆ, ಬಾಲಬಾಲಿಕೆಯರಿಗೂ ಅಶಿಕ್ಷಿತ ಸ್ತ್ರೀಪುರುಷರಿಗೂ ಕಡ್ಡಾಯದ ಪ್ರಾಥಮಿಕ ಶಿಕ್ಷಣವನ್ನು ಕೊಡಬೇಕೆಂಬುದು ಕೂಡ ಆ ಯೋಜನೆಯ ಒಂದು ಕಾರ್ಯಕ್ರಮವಾಗಿತ್ತು. ಪಂಚವಾರ್ಷಿಕ ಯೋಜನೆಯು ಕಾರ್ಯರೂಪಕ್ಕೆ ಬಂದ ಮೂರು ವರ್ಷಗಳ ಒಳಗಾಗಿ ಅಂದರೆ ೧೯೩೧ರಲ್ಲಿಯೇ ರಸ್ಯದಲ್ಲಿ ಸೇಕಡಾ ೯ರಷ್ಟು ಮಂದಿ ಮಾತ್ರ ಅಶಿಕ್ಷಿತರುಳಿದರು. ೧೯೩೩-೩೪ರಲ್ಲಿ ರಸ್ಯದ ಬಾಲಬಾಲಿಕೆಯರಲ್ಲಿ ಒಬ್ಬರಾದರೂ ಹಿಂದೆ ಉಳಿಯದೆ ಎಲ್ಲರೂ ಮುಂದೆ ಬಂದು ಪಾಠಶಾಲೆಗಳಲ್ಲಿ ಓದುತ್ತಿದ್ದಿರಬಹುದೆಂದು ಪ್ರಸಿದ್ಧ ವಿದ್ವಾಂಸರಾದ ಮೋರಿಸ್ ಹಿಂಡಸ್ ಎಂಬವರು ಹೇಳಿರುವರು. ಈಗ ದ್ವಿತೀಯ ಪಂಚವಾರ್ಷಿಕ ಯೋಜನೆಯು ಕಾರ್ಯರೂಪಕ್ಕೆ ಬಂದಿರುವಾಗ ಉಳಿದ ಅತ್ಯಲ್ಪ ಸಂಖ್ಯೆಯ ಅಶಿಕ್ಷಿತರೂ ಶಿಕ್ಷಿತರೆನ್ನಿಸಿಕೊಳ್ಳುವುದರಲ್ಲಿನೂ ಸಂದೇಹವಿರುವುದಿಲ್ಲ.

ಒಂದು ದೇಶಕ್ಕೆ ಸಾಧ್ಯವಾದುದು ಪ್ರಾಯಶಃ ಎಲ್ಲ ದೇಶಗಳಿಗೂ ಸಾಧ್ಯವಾಗಬೇಕು. ಎರಡು ದೇಶಗಳ ಪರಿಸ್ಥಿತಿಯು ಸರ್ವಸಾಧಾರಣ ಒಂದೇ ಆದಾಗ ಈ ಮಾತು ಅಕ್ಷರಶಃ ಸತ್ಯವೆಂದು ಪ್ರತೀತವಾಗುವುದು. ಹಿಂದುಸ್ಥಾನ ರಸ್ಯಗಳೆರಡೂ ಕೃಷಿಪ್ರಧಾನ ಬಡದೇಶಗಳು. ರಸ್ಯದಲ್ಲಿ ೧೦-೧೫ ವರ್ಷಗಳ ಒಳಗಾಗಿ ನಿರಕ್ಷರ ಭೂತವನ್ನು ದೇಶದಿಂದ ಗಡೀಪಾರು ಮಾಡುವುದು ಸಾಧ್ಯವೆಂದಾಯಿತಾದರೆ ನಮಗೇಕೆ ಹಾಗೆ ಮಾಡುವುದು ಸಾಧ್ಯವಾಗಲಾರದು? ಅಂದರೆ, ಒಂದು ವಿಷಯದಲ್ಲಿ ಮಾತ್ರ ಈ ಎರಡು ದೇಶಗಳೊಳಗೆ ಅಂತರವಿದೆ-ರಸ್ಯದಲ್ಲಿ ರಾಜಕೀಯ ಸ್ವಾತಂತ್ರ್ಯವಿದೆ. ಸರಕಾರವು ಪ್ರಜೆಗಳದ್ದೇ ಆಗಿದೆ. ಸರಕಾರದ ಹಿತವೇ ಸರಕಾರದ ಹಿತವು ಆದರೆ ಇಲ್ಲಿ ನಮ್ಮ ದೇಶದಲ್ಲಿ ರಾಜಕೀಯ ಸ್ವಾತಂತ್ರ್ಯವಿಲ್ಲ. ಪ್ರಜಾಹಿತಕಾರ್ಯಗಳ ಕಡೆಗೆ ಸರಕಾರವು ಕೊಡುವ ಧ್ಯಾನವು ಪರ್ಯಾಪ್ತವಾಗಿರುವುದಿಲ್ಲ, ಅಷ್ಟೆ.

ಹೇಗಿದ್ದರೂ ದೇಶೋನ್ನತಿಗೆ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣಪ್ರಚಾರವಾಗಬೇಕಾದುದು ಪರಮಾವಶ್ಯಕ. ಇದನ್ನು ಎಲ್ಲರೂ ಒಪ್ಪುತ್ತಾರೆ. ನಮ್ಮ ದೇಶದಲ್ಲಿ ಅಕ್ಷರಸ್ಥರೆನ್ನಿಸುವವರು ಒಟ್ಟು ಜನಸಂಖ್ಯೆಯ ಶೇಕಡಾ ೮ರಷ್ಟು ಮಾತ್ರ ಇದ್ದಾರೆ. ಆದ್ದರಿಂದ ಎಷ್ಟು ಶೀಘ್ರದಲ್ಲಿ ದೇಶೋನ್ನತಿ ಆಗಬೇಕೆನ್ನುವರೋ ಅಷ್ಟೇ ತ್ವರಿತದಿಂದ ಪ್ರಾಥಮಿಕ ಶಿಕ್ಷಣಪ್ರಚಾರವೂ ನಡೆಯಬೇಕು. ಕಡ್ಡಾಯದ ಧರ್ಮಾರ್ಥ ಪ್ರಾಥಮಿಕ ಶಿಕ್ಷಣವನ್ನು ಪಡೆಯುವುದು ಪ್ರತಿಯೊಬ್ಬ ದೇಶವಾಸಿಯ ಮೂಲಭೂತ ಹಕ್ಕು ಆಗಿದೆ.

ಆದುದರಿಂದ ಶಿಕ್ಷಣಪ್ರಚಾರದಲ್ಲಿ ಮಹತ್ವಾದ ವಿಜಯವನ್ನು ಸಂಪಾದಿಸಿದ ರಸ್ಯ ಮೊದಲಾದ ದೇಶಗಳ ಶಿಕ್ಷಣ ವ್ಯವಸ್ಥೆಯ ವಿಶೇಷ ಅಧ್ಯಯನ ಮಾಡಿದ ಅನುಭವಿಕ ತಜ್ಞರುಗಳಿಂದ ನಮ್ಮ ದೇಶಕ್ಕಾಗಿಯೂ ಒಂದು ಪಂಚವಾರ್ಷಿಕ ಯೋಜನೆಯನ್ನು ತಯಾರಿಸಿ ಆ ಪ್ರಕಾರ ಪ್ರಾಥಮಿಕ ಶಿಕ್ಷಣವನ್ನು ಎಲ್ಲ ಬಾಲಬಾಲಕಿಯರಿಗೆ ಕಡ್ಡಾಯವಾಗಿಯೂ ಧರ್ಮಾರ್ಥವಾಗಿಯೂ ಕೊಡಿಸುವ ಏರ್ಪಾಡನ್ನು ಸರಕಾರವು ಈಗಲೇ ಮಾಡಬೇಕೆಂದು ನಮಗನ್ನಿಸುತ್ತದೆ. ಸರಕಾರದ ಮೊದಲಿನ ಕಾರ್ಯವಾಗಿರಬೇಕಾದ ಇದನ್ನು ಜನಮುಖಂಡರುಗಳ ಸಹಕಾರ ಸಹಾಯಗಳನ್ನು ಪಡೆದು ಯಶಸ್ವಿಯಾಗಿ ಮಾಡಿ ಮುಗಿಸುವುದು ನಮ್ಮ ಸರಕಾರಕ್ಕೇನೂ ಅಸಾಧ್ಯವಾಗಿರುವ ಹಾಗೆ ತೋರುವುದಿಲ್ಲ.

ಕಟಪಾಡಿ ಶ್ರೀನಿವಾಸ ಶೆಣೈ.

ದೈವಗಳನ್ನು ಶಾಂತಮಾಡಲು ಮನುಷ್ಯನನ್ನು ಸುಟ್ಟರು!

ಇಬ್ಬರನ್ನು ಫಾಶಿಗೇರಿಸುವರು.

ನಾಗಪುರ, ಜುಲೈ ೧೬.

ಅಡ್ಕೂ ಮತ್ತು ತಿಮ್ಮ ಎಂಬಿಬ್ಬರು ತಮ್ಮ ಪೈರು ಚೆನ್ನಾಗಿ ಬೆಳೆಯಲೆಂದು ಹರಕೆ ಹೇಳಿ, ದೊಡ್ಡ ಅಗ್ನಿಕುಂಡವೊಂದನ್ನು ಗದ್ದೆಯಲ್ಲಿ ಮಾಡಿ ಭೀಮ ಎಂಬ ಮುದಿಯನೋರ್ವನನ್ನು ಅದರಲ್ಲಿ ಹಾಕಿದರು. ಪ್ರಥಮ ಸಲ ಅವನು ಕೈಯಿಂದ ತಪ್ಪಿಸಿ ಓಡಿದನು. ಅವನನ್ನು ಬಲಾತ್ಕಾರದಿಂದ ಹಿಡಿದು ತಂದು ಪುನಃ ಬೆಂಕಿಯಲ್ಲಿ ಹಾಕಿದರು. ಅವನು ಸತ್ತನು. ಚಂದಾದಲ್ಲಿ ಸೆಶನ್ಸ್ ಜಡ್ಜರು ಈ ಸಂಬಂಧವಾಗಿ ಇಬ್ಬರನ್ನೂ ಶಿಕ್ಷಿಸಿದರು.

ಜಪಾನಿನಲ್ಲಿ ಭೂಕಂಪ

ಜಪಾನಿನ ಬಜೂಕ ಜಿಲ್ಲೆಯಲ್ಲಿ ಪ್ರಬಲವಾದ ಭೂಕಂಪವಾಗಿ ಸಾವಿರಾರು ಮನೆಗಳು ವಿಧ್ವಂಸವಾದುವು. ಬೆಂಕಿಯೆದ್ದು ನೂರಾರು ಮನೆಗಳು ಭಸ್ಮವಾದುವು. ೨೪ ಜನರು ಮೃತಪಟ್ಟರು.

ಯೆಹೂದಿಯರ ಮೇಲೆ ಹಗೆ

ಜರ್ಮನರು ಬೇಸಿಗೆ ಕಾಲದಲ್ಲಿ ಆಚರಿಸುವ ಹಬ್ಬವೊಂದನ್ನು ಈ ಸಲ ಹಾಸಲ್‌ಬರ್ಗ್ ಎಂಬ ಪರ್ವತ ಪ್ರಾಂತ್ಯದಲ್ಲಿ ನಡೆಸಲಾಯಿತು. ೨೦,೦೦೦ ಯುವಕರು ಯೆಹೂದ್ಯರ ಮೇಲಣ ದ್ವೇಷವನ್ನು ಸಾಧಿಸುವುದಾಗಿ ಪಣ ತೊಟ್ಟರು. ಫ್ರಾಂಕೋನಿಯಿಂದ ಈ ಹಬ್ಬಕ್ಕೆ ೨ ಲಕ್ಷ ಜನರು ಬಂದರು. ೪ ಸ್ಪೆಶಲ್ ರೈಲ್‌ಗಳು ಹೋದುವು.

ಹೊಸ ನದಿ

ಅಸ್ಸಾಂ ದೇಶದ ನಾದಿಯಾ ಸರಹದ್ದು ಪ್ರಾಂತ್ಯದ ಅಧಿಕಾರಿಯು ತಿಳಿಸುವ ಪ್ರಕಾರ ಹಿಮಾಲಯದ ಉತ್ತರ ತಪ್ಪಲಿನಲ್ಲಿ ಬ್ರಹ್ಮಪುತ್ರಾ ನದಿಯ ಮೂಲಸ್ಥಾನದ ಬಳಿ ಅಗಾಧವಾದ ಹಿಮದ ನದಿಯೊಂದು ಕಣಿವೆಗೆ ಇಳಿಯುತ್ತಿರುವುದಾಗಿ ಗೊತ್ತಾಗಿದೆ. ಇದು ೬೨ ಮೈಲು ಉದ್ದವಾಗಿಯೂ ೪ ಮೈಲು ಅಗಲವಾಗಿಯೂ ನೂರಾರು ಅಡಿ ಆಳವಾಗಿಯೂ ಇರುವುದು. ಇದು ತಗ್ಗಾದ ಉಷ್ಣ ಪ್ರಾಂತ್ಯವನ್ನು ತಲಪುತ್ತಲೇ ಒಂದೇ ಸವನೆ ಕರಗಿ ಬ್ರಹ್ಮಪುತ್ರಾ ನದಿಯಲ್ಲಿ ಮೇರೆ ಮೀರಿದ ಪ್ರವಾಹವನ್ನುಂಟುಮಾಡುವುದೆಂಬ ಭಯವುಂಟಾಗಿದೆ. ಅಸ್ಸಾಂ, ಬಂಗಾಳ ಪ್ರಾಂತ್ಯಗಳಲ್ಲಿ ಈ ನದಿಯ ಎರಡು ಕಡೆಗಳಲ್ಲಿಯೂ ಇರುವ ಊರುಗಳನ್ನು ಈಗಾಗಲೇ ಬಿಟ್ಟುಬಿಡಲಾಗಿದೆ.

ಬೇಬಿ ಸಬ್‌ಮೆರಿನ್

ನೀರಿನಲ್ಲಿ ಮುಳುಗಿ ಸಂಚರಿಸುವ ಸಬ್‌ಮೆರಿನುಗಳು ಅಕಸ್ಮಾತ್ ಕೆಟ್ಟುಹೋದರೆ ಅವುಗಳಲ್ಲಿನ ಜನರು ಸುಲಭವಾಗಿ ತಪ್ಪಿಸಿಕೊಂಡು ಮೇಲಕ್ಕೆ ಬರುವಂತೆ ಬೇಬಿ ಸಬ್‌ಮೆರಿನ್‌ಗಳನ್ನು ರಚಿಸಿರುವರು. ಇವುಗಳು ಸಬ್‌ಮೆರಿನ್‌ಗಳಂತೆಯೇ ಇರುವುವು. ಯಂತ್ರವು ಕೆಟ್ಟು ಸಬ್‌ಮೆರಿನ್ ಭೂಶಾಯಿಯಾದಾಗ ಅದರ ಜನರು ಬೇಬಿ ಸಬ್‌ಮೆರಿನ್‌ನೊಳಗೆ ಸೇರಿಕೊಂಡು, ಬಾಗಿಲು ಮುಚ್ಚಿ ಕಳಚಿಬಿಡುವರು. ಆಗ ಅದು ಚೆಂಡಿನಂತೆ ಮೇಲೆ ಬರುವುದು. ದೂರದ ಹಡಗಿನವರು ಗುರುತಿಸಲು ಒಂದು ಸಣ್ಣ ಧ್ವಜಸ್ತಂಭವೂ ಇದಕ್ಕೆ ಇದ್ದು ಅದಕ್ಕೆ ಬಾವುಟ ಕಟ್ಟುವರು. ವರ್ತಮಾನ ಪ್ರಸಾರಕ್ಕಾಗಿ ವೈರ್‌ಲೆಸ್ ಯಂತ್ರವೂ ಅದರಲ್ಲಿರುತ್ತದೆ. ಎಲ್ಲರಿಗೂ ಒಂದೆರಡು ದಿವಸಗಳಿಗೆ ಸಾಕಾಗುವಷ್ಟು ಆಹಾರವನ್ನು ಅದರಲ್ಲಿ ಮೊದಲೇ ಅಣಿಮಾಡಿಕೊಂಡಿರುವರು.

ಗ್ರೀಸ್‌ಗೆ ರಾಜನು ಬೇಕು

ಗ್ರೀಸ್ ದೇಶದಲ್ಲಿ ದೀರ್ಘ ಕಾಲದಿಂದ ಆಳುತ್ತಿದ್ದ ರಾಜಮನೆತನದವರು ಸ್ಥಾನಚ್ಯುತರಾಗಿ ವಿದೇಶವಾಸಿಗಳಾಗಬೇಕಾಯಿತು. ಆದರೆ ಈ ಪ್ರತಿನಿಧಿ ಪ್ರಭುತ್ವವು ಬೇಕೆಂದು ಪ್ರಜೆಗಳ ಗುಲ್ಲೆದ್ದಿದೆ. ರಾಜನನ್ನು ಗ್ರೀಸ್‌ಗೆ ಕರೆತರುವ ಯೋಚನೆಯಾಗಿದೆ. ೧೫ನೇ ನವಂಬರದಲ್ಲಿ ಪ್ರಜೆಗಳ ವೋಟುಗಳನ್ನು ಪಡೆಯಲಿರುವರು.

ರಷ್ಯಾದಲ್ಲಿ ಜನಸಂಖ್ಯೆ.

ರಷ್ಯದಲ್ಲಿ ಪ್ರಜೆಗಳ ಸಂಖ್ಯೆಯು ದಿನೇ ಹೆಚ್ಚುತ್ತಿದೆ. ಕಳೆದ ೯ ವರ್ಷಗಳಲ್ಲಿ ಎರಡೂವರೆ ಕೋಟಿ ಪ್ರಜೆಗಳು ಹೆಚ್ಚಿದವರು. ರಷ್ಯಾ ಚಕ್ರಾಧಿಪತ್ಯವು ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದರೂ ಅದಕ್ಕೆ ತಕ್ಕ ಹಾಗೆ ಪ್ರಜಾಸಂಖ್ಯೆಯನ್ನು ಪಡೆದಿಲ್ಲ. ಜನರಿಗೆ ಜೀವನೋಪಾಯದ ಭಯವಿಲ್ಲದಂತೆ ಅಲ್ಲಿನ ಸರಕಾರದವರು ನೋಡಿಕೊಳ್ಳುತ್ತಿರುವರು.

ಅಜೀರ್ಣದಿಂದ ಜೀವನವೊಂದು ಹೊರೆಯಾಗಿ ಕಾಣುತ್ತಿತ್ತು.

ಯಾವ ವಿಧದ ಉದರರೋಗದಿಂದಲೂ ಬಾಧಿತರಾಗುವ ಎಲ್ಲಾ ರೋಗಿಗಳನ್ನು ಅನ್ನುರಂಜಿಸುವ ಒಂದು ಪತ್ರವು ಇಲ್ಲಿದೆ

ವಾಯು ಸಂಬಂಧವಾದ ಇನ್‌ಫ್ಲುಯೆಂಜಾದಿಂದ ಬಾಧೆಪಡುತ್ತಿದ್ದು ತನಗೆ ತನ್ನ ಜೀವನವೊಂದು ಹೊರೆಯಾಗಿ ಕಾಣುತ್ತಿದ್ದ ಒಬ್ಬ ಮನುಷ್ಯನ ಅನುಭವವಿದು. ಕೊನೆಗೆ ಇವನಿಗೆ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರ್ ಎಂಬ ಚೂರ್ಣದಿಂದಲೇ ಪೂರ್ಣ ಗುಣವು ದೊರೆಯಿತು. ಮಿ। J H S ಎಂಬವರ ಕತೆ ಇದು. ಅವರ ಪತ್ರದ ಮೂಲಪ್ರತಿಯು ನಮ್ಮ ಫೈಲಿನಲ್ಲಿದೆ —

"ಈ ವರ್ಷಾವಧಿಯಲ್ಲಿ ನನಗೆ ವಾಯು ಸಂಬಂಧವಾದ ಇನ್‌ಫ್ಲುಯೆಂಜಾ ಇತ್ತು. ಇದರಿಂದಾಗಿ ನನಗೆ ದೀರ್ಘಕಾಲದ ಅಜೀರ್ಣವಿತ್ತು. ಇದು ನನ್ನ ಒಳದೇಹದಲ್ಲಿ ಭಯಂಕರ ವೇದನೆಯನ್ನುಂಟುಮಾಡುತ್ತಿದ್ದಿತು. ಎದೆಯು ಹಾರುತ್ತಿತ್ತು, ಮಲಬದ್ಧತೆಯಾಗುತ್ತಿತ್ತು. ಅನೇಕ ತಿಂಗಳುಗಳ ತನಕ ಜೀವನವು ಒಂದು ಹೊರೆಯಂತೆ ಕಾಣುತ್ತಿತ್ತು. ನೆರೆಹೊರೆಯವರೊಬ್ಬರು ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಶಿಫಾರಸು ಮಾಡುವ ತನಕ ನನಗೆ ಯಾವುದರಿಂದಲೂ ಗುಣತೋರಲಿಲ್ಲ. ಅದನ್ನು ಎರಡು ದಿನಗಳ ತನಕ ತೆಗೆದುಕೊಂಡ ಮೇಲೆ ಒಳಗಣ ವೇದನೆಯು ಕಡಮೆಯಾಯಿತು. ೧೫ ದಿನಗಳೊಳಗೆ ನಾನು ಯಥಾವಸ್ಥಿತಿಗೆ ಬಂದೆ. ಈಗ, ಯಾವ ರೋಗಬಾಧೆಯೂ ಇಲ್ಲದೆ ಯಾವುದನ್ನೂ ತಿನ್ನಲು ಶಕ್ತನು."

ನೀವು ಎಂತಹ ಉದರ ವೇದನೆಯಿಂದ ಬಾಧಿತರಾಗಿರುವಿರಾದರೂ, ಈ ವ್ಯಕ್ತಿಯು ಹೊಂದಿದ ಗುಣವನ್ನೇ ಹೊಂದಬಹುದು — ಆದರೆ ಖಾಸಾ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನೇ ನಿಮ್ಮ ಕೆಮಿಸ್ಟರಿಂದ ಪಡೆಯುವಂತೆ ಜಾಗ್ರತರಾಗಿರಿ. ಅದಕ್ಕೆ ಕೆಂಪು [illegible]

ಎಂಬ ಸಹಿಯು ಮುದ್ರೆ, ಬಿಲ್ಲೆ ಮತ್ತು ಚೀಟಿಗಳ ಮೇಲಿದೆ.

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್,
15 ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು—
ಇಲ್ಲಿಗೆ ಬರೆಯಿರಿ.

ಬಿಲ್ಲೆಗಳ ರೂಪದಿಂದಲೂ ವಿಕ್ರಯಿಸಲ್ಪಡುತ್ತದೆ.

WANTED

Energetic, Active and Influential men to work as organisers and Agents on very attractive terms in areas mentioned below—

1 Mysore, Hassanand Kadur districts.
2 Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY.

ಡಾಕ್ಟರ ವಾಮನ ಗೋಪಾಳರವರ



ಐಟಿಡಾಯಿಡ್ಡ
ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ.
೪೫ ವರ್ಷದ ಅನುಭವ
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ' ರಾವ್
ಕೇಶವರವರ
ಫೊಸ್ಫರಸ್ ಗುಳಿಗೆಗಳು.
[illegible]

ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, [illegible], ಮುಂಬಯಿ ೨.
[illegible] ಕಂಪೆನಿ, ಮಂಗಳೂರು.
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

ಐದು ಗಡಿಯಾರಗಳೂ ಮತ್ತು ಇತರ ಸಾಮಾನುಗಳೂ ಐದೇ ರೂಪಾಯಿಗಳಿಗೆ

ಈ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ.



ಮೂರು ಫ್ಯಾನ್ಸಿ ಮೂಟ್ ರಿಸ್ಟ್ ವಾಚುಗಳು [illegible]

ಶರ್ಮ ಬ್ರದರ್ಸ್ ಅಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ [illegible] ಕಲ್ಕತ್ತಾ

(ಗುಣಬಾರದಿದ್ದರೆ ಹಣ ವಾಪಾಸು)

[illegible]

ಸತಂತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

[illegible]

[illegible] S M C

NEW ARRIVALS.

Medicines.

Dr Schuessler's Twelve Tissue Remedies 5 gr bot As 4/-
Homoeopathy Medicines 5 gr bot As 5/-
Sugar of Milk Dr Schwabe's original bot 1lb Rs 2-
Hamilton Oil- world-renowned remedy As 8-per phial
Dr Hiele's New Curative Tooth-Rubium Cure Rs 1/ per lb

Dr Schwabe's other special remedies are always in stock

Please consult us for price [illegible]

Kanarese Book a Family Guide to Biochemistry Re 1-
" Domestic Homoeopathy Re 1 1

If you own these two Books you will be able to pick up treatment and administer Tissue & Homoeopathic Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes and prices from As 2 6
Delightful in aroma, charming in appearance. Please try

Kirloskar Pumps.

We are the Representatives for Kirloskar Brothers for their reliable Shallow well and Deep well Pumps, Spring Cots, Spring Couches etc and steel—

Pipes and pipe fittings at cheap prices Coir Mats and Mattings

Steadler Pencils and Stationeries

We are the recognised agents for STEADLERS stationeries and shall be glad to serve you

Olympia Typwriter.

An up-to-date Machine in Standard and portable sizes

For Further particulars please write to—

Basel Mission Book & Tract Depository,
Mangalore, S K or Hubli, S M.

The Popular Insurance Company, Ltd.

Head Ofiice:—MANGALORE, S India

The Pioneer Life Office of the West Coast.

A FEW PRESS OPINIONS.

Established as recently as 1929, the Popular Insurance Co Ltd, has already made considerable progress having at the end of 1934 a total business of over Rs 10 lakhs in force with a premium income of over Rs 52,000 The Life Fund of the Company stood at the same date at over Rs 50,000 The expenses of the office are moderate and mortality experience extremely favourable. During the year 1934, the Company completed business of over Rs. 5,40,000 with a premium income of over Rs 26,000 The first quinquennial valuation of the Company is in progress and the report of the Actuary expected to be placed before the Directors of the Company before the end of May 1935 From the steady progress of the Company during the last five years and the economical and efficient management of its affairs, it is not too much to hope that the valuation will disclose a very sound position

Insurance and Finance Review, Calcutta

ದಿ ಪೋಪ್ಯುಲರ್ ಇನ್ಶ್ಯುರೆನ್ಸ್ ಕಂಪೆನಿ ಲಿಮಿಟೆಡ್—ಮಂಗಳೂರು [illegible]

ವಾಸ್ತ್ಯಬಂಧು.

ಮಂಗಳೂರಿನಲ್ಲಿ ಸ್ಥಾಪಿತವಾಗಿರುವ ದಿ ಪೋಪ್ಯುಲರ್ ಇನ್ಶ್ಯುರೆನ್ಸ್ ಕಂಪೆನಿಯು [illegible]

× × × × ×

'ಪ್ರಜಾಮತ,' ಮದರಾಸು

Wanted influential Agents in unrepresented areas on liberal terms.

ಮನುಷ್ಯನು ಪಕ್ಷಿಗಳಂತೆ ಬೇಗನೇ ಹಾರ್ಬ್ಯಾಡುವನು!!

ಓಡುವ ಸಿನೆಮಾ ಕಂಪೆನಿಗಳು—

ಬಂದಿವೆ! ಕಿಂಗ್‌ಕ್ರಾಸ್‌ನಿಂದ ಲೀಡ್ಸ್‌ಗೆ, ಅಲ್ಲಿಂದ ಲಂಡನಿಗೆ ಓಡುವ ಬ್ರಿಟಿಷ್ ಎಕ್ಸ್‌ಪ್ರೆಸ್ ಟ್ರೈನ್ ಬಂದಿರುತ್ತದೆ; ಇದರೊಳಗೆ ದೊಡ್ಡ ಸಿನೆಮಾ ಥಿಯೇಟರೇ ಇದೆ, ಮಾತನಾಡುವ ಚಲಚ್ಚಿತ್ರವು ಪ್ರದರ್ಶಿಸಲ್ಪಡುತ್ತದೆ ರೈಲು ಓಡುತ್ತಿರುವಂತೆಯೇ ಪ್ರಯಾಣಿಕರಿಗೆ ಸಿನೇಮಾ ನೋಡುವ ಸೌಕರ್ಯವಿದೆ, ಲೀಡ್ಸ್ ಮಾರ್ಗದಲ್ಲಿ ಓಡುವ ಈ ರೈಲಿಗೆ ಹತ್ತುವ ಪ್ರಯಾಣಿಕರು ಹೆಚ್ಚು ರವಿವಾರ ದಿನ ಈ ಟಾಕಿಯ ಸ್ಥಳಗಳನ್ನು ಕಳೆಗಟ್ಟು ಅಲ್ಲಲ್ಲಿ ಸಿನೇಮಾ ತೋರಿಸುವರು, ಪಾತೇ ಎಕ್ವಿಪ್‌ಮೆಂಟ್ ಲಿಮಿಟೆಡ್ ಇವರು ಎಲ್ಲಾ ಸಾಹಿತ್ಯಗಳನ್ನು ಒದಗಿಸಿಕೊಡುತ್ತಿರುವರು

ನಗರರಚನೆಗೆ ಒಂದು ಮಿಲಿಯ ಪವನು!

ದಕ್ಷಿಣ ರೊಡೇಶಿಯಾದ ಬಳಿ ಉಸಾಕ ಎಂಬ ನಗರವನ್ನು ರಚಿಸಿರುವರು ಲಿವಿಂಗ್‌ಸ್ಟನ್‌ನ ಪ್ರಧಾನ ನಗರವೇ ಇದಾಗುವುದು, ಇದರ ರಚನೆಗೆ ೧,೦೦೦,೦೦೦ ಪವನುಗಳ ವೆಚ್ಚವಾಯಿತು ಈ ನಗರ ರಚನೆಯಲ್ಲಿ ವೈಶಿಷ್ಟ್ಯವೆಂದರೆ—ಕೆಲವು ವರ್ಷಗಳ ಮೊದಲು ಈ ಪ್ರದೇಶವು ಸಿಂಹರಾಜನ ನೆಲೆವೀಡಾಗಿತ್ತು, ಭೀಕರ ವನಗಳು ಅಲ್ಲಿದ್ದುವು ಅವುಗಳನ್ನೆಲ್ಲಾ ಹೋಗಲಾಡಿಸಿ ಈಗ ಈ ನಗರವನ್ನು ಅತ್ಯಾಧುನಿಕವನ್ನಾಗಿ ಮಾರ್ಪಡಿಸಿರುವರು ೧೯೩೧ರಲ್ಲಿ ಇದರ ರಚನೆಯ ಪ್ರಥಮ ಹಂತಂಗವನ್ನು ಇರಿಸಿದರು, ಈಗ ೧೬ ಮೈಲುಗಳಷ್ಟು ಮಾರ್ಗಗಳವೆ ೧೨ ಮೈಲುಗಳ ವರೆಗೆ ವಿದ್ಯುದ್ದೀಪಗಳನ್ನಿಟ್ಟಿರುವರು

ಜಡ್ಜರು ಡಾಕ್ಟರರಾಗಿಯೂ ಇರಬೇಕು!

ಎಂದರೆ ಮಾತ್ರ ಜನತೆಗೆ ಹೆಚ್ಚಿನ ಉಪಕಾರವಾದೀತು ಎಂದು ನಮಗೆ ತಿಳಿಸುವ ಒಂದು ಕಥೆಯಿದೆ! ಇಂಗ್ಲಾಂಡಿನ ಜೇಮ್ಸ್‌ಸ್ಟೆಡ್ ಎಂಬಲ್ಲಿ ಜೋಕ್‌ವಿಕ್ಸ್ ಎಂಬ ೩೮ ವರ್ಷ ಪ್ರಾಯದ ಅಂಗಡಿಗಾರನು ಅವ ಕೊಟ್ಟಳ ಮೇಲಿನ ಪ್ರೇಮದಿಂದ ಮಾರ್ಗದ ಮೇಲೆಯೇ ಆತ್ಮಹತ್ಯ ನಡೆಸಿದನು, ಅವನನ್ನು ಕೋರ್ಟಿಗೆಳೆಯಲಾಯಿತು ಮೆಟ್ರೊಪೋಲಿಟನ್‌ನಲ್ಲಿ ಇವನ ನ್ಯಾಯ ವಿಚಾರಣೆಯಾಯಿತು ವಿನೋದ ಘೃಣಿಸಿ ಅವನು ಹೀಗೆ ಮಾಡಿರಬೇಕೆಂದು ನ್ಯಾಯಾಧೀಶರಿಗೆ ತಿಳಿದು ಬಂದಿತು ಅವನ ತಪ್ಪು ಸ್ವೀಕರಿಸಲಾಯಿತು—ಆದರೆ ಬುದ್ಧಿಮಾಂದ್ಯತೆ ತನ್ನಲ್ಲಿ ಇದೆಯೆ? ಯಾವ ದಳದ ನ್ಯಾಯಗಲೀ ಶಿಕ್ಷಿಸುವ್ಯಾಗಲೀ ವಿಧಿಸಲಿಲ್ಲ ಮಾನಸ ಮತ್ತು ವೈದ್ಯಕೀಯ ಶಸ್ತ್ರಚಿಕಿತ್ಸೆ ಮಾಡಿ ಅವನನ್ನು ಸರಿಮಾಡಬೇಕೆಂದು ಅಜ್ಞಾಪಿಸಿದರು

೮ ಅಡಿ ೨॥ ಇಂಚ್ ಎತ್ತರವುಳ್ಳ ಹುಡುಗ,

ವಾಡ್ಲೋ ಎಂಬಲ್ಲಿರುವನು! ಅವನ ಹೆಸರು ರೋಬರ್ಟ ವಾಡ್ಲೋ ಪ್ರಾಯ ೧೭ ವರ್ಷ! ಭಾರ ೩೮೫ ಪೌಂಡುಗಳು, ಅವನು ಮಲಗುವ ಕೋಣೆಯೇ ಪ್ರತ್ಯೇಕ, ಅವನ ಕೋಣೆಯ ಬಾಗಿಲೇ ಪ್ರತ್ಯೇಕ, ಅದರಲ್ಲೂ ಅವನು ಹಾಸಿಗೆ, ಬೂಟ್ಸು, ಅಂಗಿಗಳು ಎಲ್ಲವೂ ಪ್ರತ್ಯೇಕ! ನಿಮ್ಮ ಮನೆಗೆ ಅವನನ್ನು ಆಮಂತ್ರಿಸಿದರೆಂದರೆ ನಿಮ್ಮ ಬಾಗಿಲ ನೆತ್ತಿಯಲ್ಲಿ ಅವನ ಸೊಂಟವು ಮಾತ್ರ ನಿಲ್ಲುವುದು! ಪುನಃ ಇನ್ನೂ ಬೆಳೆಯುತ್ತಿರುವನು! "ಬ್ರೋಬ್ಡಿಂಗ್ನ"ನೆಂಬ ಹೆಸರಿಗೆ ಯೋಗ್ಯನಾಗುವನೋ ಎಂಬ ಸಂದೇಹ! ಇವನ ಮಾತಾಪಿತೃಗಳೆಲ್ಲ ನಮ್ಮಂತೆ ಸಾಮಾನ್ಯ ಗಾತ್ರವುಳ್ಳವರು ಇವನ ಸಹೋದರ ಸಹೋದರಿಯರೂ ಸಾಧಾರಣ ಆಕೃತಿಯವರು ಇವನ ಪಿಟ್ಯುಟರಿ ಗ್ಲೇಂಡ್ ಬಹಳವಾಗಿ ಕೆಲಸನಡೆಸುತ್ತಿರುವುದರಿಂದಲೇ ಈ ಬೆಳವಣಿಗೆಗೆ ಕಾರಣವಂತೆ

ಚಲಚ್ಚಿತ್ರದ ಸೃಷ್ಟಿಕರ್ತನಾರು?

ಪೆರಿಸಿನ ಲೂಯಿ ಲೀಯರ್ ಎಂಬವನು. ೪೦ ವರ್ಷಗಳ ಹಿಂದೆ ಅವನು ಇದನ್ನು ಕಂಡುಹಿಡಿದನು ೧೮೯೫ರಲ್ಲಿ ಜನರಿಗೆ ಸಿನೆಮಾ ಎಂದರೆ ಏನೆಂದು ತಿಳಿದಿರಲಿಲ್ಲ ಆಗಿನ ಜನರನ್ನು ಕತ್ತಲಾದ ಕೋಣೆಯೊಳಗೆ ಕುಳ್ಳಿರಿಸಿ ತರತರದ ದೃಶ್ಯಗಳನ್ನು ಮಾತ್ರ ಪ್ರದರ್ಶಿಸುತ್ತಿದ್ದರು ರೈಲುಬಂಡಿಯ ಓಟ ಸಮುದ್ರದ ನೀರಿನ ಆಟ ಇವುಗಳೇ ಆಗಿನ ವಸ್ತುಗಳು, ಪ್ರಥಮ ಸಿನೇಮಾ ಪ್ರದರ್ಶನದಿಂದ ಒಟ್ಟು ೩೫ ಫ್ರಾಂಕುಗಳು ಲಾಭವಾಗಿದ್ದುವಂತೆ.

ಹುಚ್ಚುತನವೆಂದರೆ ಎಂದರೇನು?

ಎಂದು ಎಲ್ಲರಿಗೂ ತಿಳಿದ ವಿಷಯ! ಬಾಯಿಗೆ ಬಂದಂತೆ ನುಡಿಯುವವರೂ, ಮನಬಂದಂತೆ ಆಚರಿಸುವವರೂ, ಇಚ್ಛಾನುಸಾರ ನಗುವವರೂ ಹುಚ್ಚರೆಂದು ಅನೇಕರ ಅಭಿಪ್ರಾಯ, ಆದರೆ, ಲೋಕವು ನಡೆಯುವುದೇ ಹುಚ್ಚುತನದಿಂದ, ಮನುಷ್ಯನ ಬಾಳ್ವೆಯೇ ಒಂದು ಹುಚ್ಚು ಕೆಲವರಿಗೆ ದ್ರವ್ಯಾರ್ಜನೆಯ ಹುಚ್ಚು, ಕೆಲವರಿಗೆ ಸಂಪಾದನೆಯ ಹುಚ್ಚು; ಕೆಲವರಿಗೆ ಉದ್ಯೋಗ ಸಂಪಾದನೆಯ ಹುಚ್ಚು, ಹೀಗೆ ಎಲ್ಲವೂ—ಹುಚ್ಚು! ಹಂಗೇರಿಯದ ಒಬ್ಬ ನಿವೃತ್ತ ಉಪಾಧ್ಯಾಯರಿಗೊಂದು ಹುಚ್ಚು—ಕಳೆದ ೩೦ ವರ್ಷಗಳಿಂದಲೂ ಇದರಿಂದ ಬಾಧಿತರಾಗಿದ್ದರು ಈಗ ಪ್ರಪಂಚವು ಅನುಸರಿಸಬಡುತ್ತಿರುವ ಕೆಲೆಂಡರನ್ನು ರದ್ದುಮಾಡಬೇಕೆಂದೇ ಅವರ ಆಗ್ರಹ. ಒಂದು ಪ್ಲೇನ್ ದಿಡಿಸಿ ಲೀಗ್ ಒಫ್ ನೇಶನ್ಸಿಗೆ ಕಳುಹಿಸಿರುವರು ಇವರ ಲೆಕ್ಕದಲ್ಲಿ ವರ್ಷಕ್ಕೆ ೧೦ ತಿಂಗಳು ಮಾತ್ರ, ತಿಂಗಳಿಗೆ ೩೬ ದಿನಗಳು, ಪ್ರತಿ ವಾರಕ್ಕೆ ೬ ದಿನಗಳು, ಎಪ್ರಿಲ್ ಜೂನ್ ತಿಂಗಳುಗಳು ಇಲ್ಲವೇ ಇಲ್ಲ ಗುರುವಾರ ದಿನವೇ ಇಲ್ಲ ೩೬೫ ದಿನಗಳ ಅಂತ್ಯದಲ್ಲೇ ಕ್ರಿಸ್‌ಮಸ್ ಬರುವುದು

ಬೇಲಿ ಹೊಲವನ್ನೇ ಮೇಯಿತು!—

ಇದನ್ನು ಕಂಡ ರೈತನು ಹೊಲದ ಮೇಲೊಂದು ಬೋನನ್ನು ಇಟ್ಟು ಬೇಲಿಯನ್ನು ಸೆರೆಹಿಡಿದನು, ಇಂತಹ ಕಥೆಯು ಬಂದಿದೆ ಗ್ಲೌಸೆಸ್ಟರ್‌ಶೈರಿನಲ್ಲಿಯ ನೋರ್ತ್‌ಲೀಚ ಎಂಬಲ್ಲಿ ವಿದ್ಯುತ್ ಸಾಹಿತ್ಯಗಳನ್ನು ವಿಕ್ರಯಿಸುವ ಒಬ್ಬನ ಅಂಗಡಿಯಿಂದ ಆಗಾಗ್ಗೆ ಸರಕುಗಳ ಕಳವಾಗುತ್ತಿದ್ದಿತು, ಕಳ್ಳನನ್ನು ಹಿಡಿಯಲು ಅವನಿಂದಾಗಲಿಲ್ಲ ಒಂದು ದಿನ ದೀರ್ಘಾಲೋಚನೆ ಮಾಡಿದನಂತರ ಅವನಿಗೆ ಒಂದು ತಂತ್ರವು ಹೊಳೆಯಿತು, ಬಿಳಿಯ ಪ್ಯಂಟ್‌ನ ಡಬ್ಬಿಯೊಂದನ್ನು ಬಾಗಿಲ ಒಳಗಿಂದ ಹಾಕಿ ರಾತ್ರಿ ಬಾಗಿಲುಹಾಕಿದ, ಶನಿಶನಿ ವರಬಂತೆ ಕಳ್ಳನು ಅದೇ ದಿನ ರಾತ್ರಿ ನುಗ್ಗಿದ, ಬಾಗಿಲು ತೆರೆದು ಒಳಗೆ ಪ್ರವೇಶಿಸುತ್ತಿದ್ದಾಗ ಪ್ಯೆಂಟಿನ ಡಬ್ಬಿಯು ಅವನ ತಲೆಯಮೇಲೆ ಬಿತ್ತು ಅವನ ಪೋಷಾಕು ಬಿಳಿದಾಯಿತು. ಏನುಮಾಡಿದರೂ ಅದು ಅಳಿಸಲು ಬರುವಂತಿದ್ದಿಲ್ಲ ಕೈಸಾಲಿಗೆ ಬಿದ್ದಲ್ಲಿಯೂ ಅದು ಚರ್ಮದ ತಮ್ಮನಂತೆ ಅಂಟಿಕೊಂಡಿತು! ಮರುದಿನ ತನಿಖೆ ನಡೆಯಿತು ಅಷ್ಟು ಪಟ್ಟಣದಲ್ಲಿ ಆ ರಾತ್ರಿ ಇದ್ದವರನ್ನು ಪರೀಕ್ಷಿಸಲಾಯಿತು ಗುಟ್ಟು ರಟ್ಟಾಯಿತು ರಾತ್ರಿ ಅಲ್ಲಿ ನಿಂತಿದ್ದ ಪೋಲೀಸನು ಈ ಕಳ್ಳತನವನ್ನು ನಡೆಸಿದನೆಂದು ಸಿದ್ಧವಾಯಿತು, ಅವನಿಗೆ ೧೨ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು.

ಬಂತೇ ಬಂತು ಎಣ್ಣೆಯಿಲ್ಲದ ಮೋಟರು!

ಲಂಡನಿನ ಮಾರ್ಗದ ಮೇಲೊಂದು ಮೋಟಾರು ಓಡುತ್ತಿದೆ, ಇದಕ್ಕೆ ಎಂಜಿನು ಇಲ್ಲ ಹಲಕೆಲವು ಗುಂಡಿಗಳು ಕ್ಲಚ್, ಗೀಯರ್‌ಗಳಿಲ್ಲ, ಗಂಟೆಗೆ ೩೫ ಮೈಲು ಓಡಲು ಶಕ್ತವಾಗಿದೆ ಇದರ ಪ್ರತಿಯೊಂದು ಅಂಶವೂ ವಿದ್ಯುತ್‌ಮಯ, ವಿದ್ಯುತ್ ಪ್ರವಾಹದಿಂದಲೇ ಚಕ್ರಗಳ ಚಲನೆ—ಪ್ರಕಾಶ—ಇವೆಲ್ಲ, ಪೆಟ್ರೋಲ್ ಆಗಲೀ ಎಣ್ಣೆಯಾಗಲೀ ಆವಶ್ಯವೇ ಇಲ್ಲ, ಈ ಮೋಟರಿನ ಬೆಲೆ ೨೦೦ ಪೌಂಡು, ಇಂತಹ ಮೋಟರುಗಳು ಹೆಚ್ಚಿದರೆ ಎಣ್ಣೆಯ ಕಂಪೆನಿಗಳು ಸೋಲುವುದು ನಿಶ್ಚಯ!

ನಿರುದ್ಯೋಗ ನಿವಾರಣೆಯಾಗಬೇಕಾದರೆ

ಉಪಾಯವೇನು! ಎಂದು ಯೋಚಿಸ ಮವರು ಇದೇ ಜಗತ್ತಿನಲ್ಲೇ ತುಂಬಿರುವರು ಆದರೆ ಸಮಸ್ಯೆಯು ಬಗೆಹರಿದಿರುವುದಿಲ್ಲ ಕೊಲ್ಚೆಸ್ಟರ್‌ಬೇಯಲ್ಲಿ ನೇಶನಲ್ ಯೂನಿಯನ್ ಒಫ್ ಕ್ಲಾರ್ಕ್ಸ್ ಇವರ ಪರಿಷತ್ತಿನಲ್ಲಿ ಸಿ ಎಚ್ ಡಬ್ಲ್ಯು ಹಗ್ಸ್ ಎಂಬವರು ಭಾಷಣ ಮಾಡುತ್ತಾ "ಮನೆಯಲ್ಲಿ ಪ್ರೀತಿಯ ಮಾತಾಪಿತೃಗಳಿದ್ದು ಉಣ್ಣಲಿಕ್ಕಿನ್ನಲು ಸಾಕಷ್ಟು ಅನುಕೂಲವಿದ್ದು ತನ್ನ ವೆಚ್ಚದ ಹಣವನ್ನು ಹುಟ್ಟಿಸುವ ಕ್ಲಾರ್ಕರನ್ನು ಕೆಲಸಕ್ಕಿಡಲಾಗದು" ಎಂದು ಭಾಷಣಮಾಡಿದರು, ಹಿಂದೂಸ್ಥಾನದಲ್ಲೂ ಹೀಗೆ ಹೇಳುವವರಿಲ್ಲವೇ? ಈಗ ಉದ್ಯೋಗಸ್ಥರಾಗಿರುವವರಲ್ಲಿ ಎಷ್ಟು ಮಂದಿ ಶ್ರೀಮಂತರಿಲ್ಲ! ಅವರಿಗೆ ಜೀವನದ ಎಲ್ಲಾ ಸೌಕರ್ಯಗಳಿರುವುವಾದರೂ 'ಪೋಕೆಟ್' ಮನಿಯನ್ನು ಸಂಪಾದಿಸ ವುದಕ್ಕಾಗಿ ಅವರು ಕೆಲಸ ಮಾಡುವರು ಅವರನ್ನೆಲ್ಲ ಕೆಲಸದಿಂದ ತೆಗೆದರಾಗದೇ?

'ಸ್ವಾತಂತ್ರ್ಯಬೇಕು,' ಸ್ವಾತಂತ್ರ್ಯಬೇಕು'—

—ಎಂದು ಬೊಬ್ಬಿಡುವವರು ಬಹುಮಂದಿ ಎಂತಹ ಸ್ವಾತಂತ್ರ್ಯವೆಂದು ಯಾರಿಗೂ ತಿಳಿದಿಲ್ಲ, ತಾನು ಉಂಡುತಿಂದು, ಮಡಿಯುಟ್ಟು ಸುಖದಿಂದ, ಭೋಗೋಪಭೋಗಗಳ ಎತ್ತಿದಾಗಿ ಸಾಕಿ ಸಲಹಿದ ತನ್ನ ಪ್ರಾಣವನ್ನು ತಾನೇ ಅಂತ್ಯಮಾಡಿಕೊಳ್ಳಲು ಯತ್ನಿಸಿ ಬದುಕಿ ಉಳಿದರೆ, ಅವನನ್ನು ಒಡನೆ ಪೋಲೀಸರು ಸೆರೆಹಿಡಿದು, ಕೋರ್ಟಿನವರು ಶಿಕ್ಷಿಸುವರು! ಇದಕ್ಕಿಂತ ಕೀಳಾದ ಸ್ವಾತಂತ್ರ್ಯವಿದೆಯೇ! ಅಂಥ ಸ್ವಾತಂತ್ರ್ಯವು ಫ್ರಾನ್ಸಿನಲ್ಲಿ ಇದೆ ಅಲ್ಲಿ ಸುಂದರ ಮಂದಿರಗಳು, ಪ್ರಾಚೀನ ಕಟ್ಟಡಗಳು, ಯಾವುದೇ ಇರಲಿ —ನಿಮ್ಮ ಸ್ವಂತದ್ದೇ ಇರಲಿ, ಫೈನ್ ಆರ್ಟ್ಸ್ ಸಂಸ್ಥೆಯವರು ಅವುಗಳನ್ನು ತಮ್ಮ ಪಟ್ಟಿಯಲ್ಲಿ ಸೇರಿಸಿದ ನಂತರ, ಅವುಗಳನ್ನು ನೀವು ಯಾವ ಸಂದರ್ಭದಲ್ಲೂ ನಾಶಮಾಡಕೂಡದು! ಅಲ್ಲದೆ ಅವುಗಳನ್ನು ವಿರೂಪಗೊಳಿಸಬಾರದು ನಿಮ್ಮ ಹಿರಿಯರು ಒಂದು ಉನ್ನತವೂ ಚಿತ್ತಾಕರ್ಷಕವೂ ಆದ ಒಂದು ಕಟ್ಟಡವನ್ನು ಕಟ್ಟಿದರೆಂದು ತಿಳಿಯಿರಿ ಅದರ ಸೊಬಗಿಗೆ ಈ ಕಲಾಸಂಸ್ಥೆಯವರು ಮನಸೋತರೆ ನಿಮ್ಮ ಭಾಗ್ಯವೇ ಹೋಯಿತು, ಆ ಮೇಲೆ ನೀವು ಆ ಕಟ್ಟಡದ ಒಂದು ಸಣ್ಣ ಪಾಷಾಣವನ್ನೂ ಕೂಡಾ ಅಲುಗಾಡಿಸಬಾರದು! ಅಗಲಿಕ್ಕೆ ನಿಮ್ಮ ಸ್ವಂತದ್ದು—ಅದನ್ನು ನೀವು ಉಪಯೋಗಿಸಬಹುದು, ಆದರೆ, ಹಾಳುಮಾಡಬಾರದು ಫ್ರಾನ್ಸಿನ ಹೊಟೇಲ್ ಬೀಫ್‌ಮಂಟ್ ಎಂಬ ಹೊಟೇಲಿನ ಒಂದು ಅಂಗವನ್ನು ಅದರ ಯಜಮಾನನು ಒಬ್ಬನಿಗೆ ವಿಕ್ರಯಿಸಿದನು, ಫ್ರೆಂಚ್ ಮುನಿಸ್ಟ್ರಿಯವರು ಮೊಕದ್ದಮೆ ಹೂಡಿ ಯಜಮಾನನನ್ನು ದಂಡಿಸಿದರು "ಏನಯ್ಯಾ ನಮ್ಮಪ್ಪನ ಆಸ್ತಿಯ ಮೇಲೆ ನಾವು ಅಧಿಕಾರ ತೋರಿಸಬಾರದೇ" ಎಂದು ಅವನ ಸ್ವಾತಂತ್ರ್ಯಾಂಕ್ಷಿತ ಪ್ರಶ್ನೆ! ನಿಜವಾಗಿಯೂ ಪಾಪ!

ಮನುಷ್ಯನು ಪಕ್ಷಿಗಳಂತೆ ಹಾರುವನು!—

ಯಾವ ದಿನವೆಂದು ಕೇಳಬೇಡಿ! ಇಂದಲ್ಲ ನಾಳೆ, ನಾಳೆಯಲ್ಲ ನಾಡದು, ಅವನು ಪಕ್ಷಿಗಳಂತೆ ಹಾರುವುದು ಖಂಡಿತ! ಕೃತ್ರಿಮ ರೆಕ್ಕೆಗಳನ್ನು ಧರಿಸಿ ಅವನು ವ್ಯೋಮಸಂಚಾರ ಮಾಡುವ ಬದಲು—ಒಂದು ಕಡಿದಾದ ಇನ್ನೊಂದು ಕಡೆಗೆ ಹಾರುವುದು ನಿಶ್ಚಯ ಎನ್ನುವದಿಂದ ಕೆಳಗೆ ಹಾರುವಾಗ ವೈಮಾನಿಕರು ಉಪಯೋಗಿಸುವ ಗಾಳಿಯ ಕೊಡೆಯು ಪ್ರಯೋಗವಿರದ ಮನುಷ್ಯನು ಪಕ್ಷಿಗಳಂತೆ ಮುಂದೆ ಮುಂದೆ ಹಾರಬಹುದೆಂದು ಒಬ್ಬ ವೈಮಾನಿಕನ ಶೋಧ ಈ ಸರಿ ಬ್ಯಾಟ್‌ನಂತಹ ರೆಕ್ಕೆಯನ್ನು ಹಾರುವವನು ತನ್ನ ಎದೆಯಡಿಗಟ್ಟಿಕೊಂಡು ಸಣ್ಣ ಯಂತ್ರವನ್ನು ತಿರುಗಿಸಿಬಿಟ್ಟರೆ ಮತ್ತೆ ಕೇಳಬೇಕಾದುದಿಲ್ಲ, ಅವನು ಮುಂದೆ ಮುಂದೆ ಹಾರುವುದೇ ಸರಿ ನಮ್ಮೂರಿಗೆ ಈ ಯಂತ್ರವು ಬೇಗನೇ ಬಂದರೆ ಬಸ್ ಚಾರ್ಜಾದರೂ ಉಳಿದೀತು!

ವೈಮಾನಿಕರಿಲ್ಲದೆ ಹಾರುವ ವಿಮಾನವು—

ಕಂಡುಹಿಡಿಯಲ್ಪಟ್ಟು ಲಂಡನಿನಲ್ಲಿ ಹಾರುತ್ತಿದೆ, ಬ್ರಿಟಿಷ್ ಏಯರ್‌ಮಿನಿಸ್ಟ್ರಿಯವರು ಕಳೆದ ಅನೇಕ ವರ್ಷಗಳಿಂದ ಶೋಧನೆಯ ಇದೀಗ ಒಂದು ವಿಮಾನವನ್ನು ಕಂಡುಹಿಡಿದಿರುವರು ಇದರಲ್ಲಿ ಯಾರೂ ಕುಳಿತುಕೊಳ್ಳುವುದವಶ್ಯವಿಲ್ಲ ಒಂದು ಗಂಟೆಗೆ ೧೦೩ ಮೈಲುಗಳಷ್ಟು ವೇಗದಿಂದ ತಾನೇ ಹಾರ್ಬ್ಯಾಡಬಲ್ಲುದು, ೧೦,೦೦೦ ಅಡಿಗಳಷ್ಟು ಮೇಲಕ್ಕೂ ಹೋಗಬಲ್ಲುದು, ಎಷ್ಟು ವಿಸ್ತೀರ್ಣಕ್ಕೆ ಬೇಕೋ ಅಷ್ಟು ವಿಸ್ತೀರ್ಣದ ವರೆಗೆ ಇದನ್ನು ಹಾರಿಸಬಹುದು ಯಂತ್ರನಿರ್ಮಾಣಕರು ಭೂಮಿಯ ಮೇಲೆ ನಿಂತೇ ಅದನ್ನು ಬೇಕಾದ ಕಡೆ ಹಾರಿಸಬಹುದು, ಇದನ್ನು ಸಂಚಲಿಸುವುದಾವುದು ಎಂದು ನೀವು ಕೇಳಬಹುದು ವಿಮಾನವನ್ನು ಮೇಲೆ ಹಾರಬಿಟ್ಟು ಕೆಳಗೆ ಭೂಮಿಯ ಮೇಲೆ ಒಂದು ರೇಡಿಯೋ ಯಂತ್ರವನ್ನಿಡುವರು, ಆ ರೇಡಿಯೋ ಯಂತ್ರದಲ್ಲಿ ಯಾವ ಗುಂಡಿಯನ್ನು ಒತ್ತುವರೋ ಆ ಗುಂಡಿಗನುಸಾರವಾದ ದಿಕ್ಕಿಗೆ ಅದು ತಾನಾಗಿಯೇ ತಿರುಗುವುದು ಇಳಿಸುವುದು ಹತ್ತಿಸುವುದು ಎಲ್ಲಾ ರೇಡಿಯೋ ಶಕ್ತಿಯಿಂದ! ಕೆಂಟ್‌ನ ಫರ್ನಬರೋ ಏರೋಡ್ರೋಮಿನಲ್ಲಿ ಹಾರಿದ ವಿಮಾನದ ಚಿತ್ರವು ಬಂದಿದೆ

ರೂಸ್‌ವೆಲ್ಟರ ಔದಾರ್ಯ,

ಅಮೇರಿಕದ ಪ್ರಸಿಡೆಂಟ್ ರೂಸ್‌ವೆಲ್ಟರು ಕೂಲಿಯ ಕೆಲಸದಲ್ಲಿ ಹೆಚ್ಚಿನ ಗೌರವವಿದೆಯೆಂದು ಭಾವಿಸುವವರ ಪೈಕಿ ಒಬ್ಬರು ವಿದ್ಯಾಪಂಡಿತ ವಿದ್ಯಾರ್ಥಿಗಳೂ ತಮ್ಮ ರಜಾ ದಿನಗಳನ್ನು ಕೈಕೆಲಸಗಳಲ್ಲಿ ಕಳೆಯಬೇಕೆಂಬುದು ಅವರ ಅಭಿಮತ ರೂಸ್‌ವೆಲ್ಟರು ತಮ್ಮ ಕಿರಿಯ ಮಗನಾದ ಜೋನ್ ಎಂಬವನನ್ನು ಒಂದಾನೊಂದು ಆಕೆಟ್ರಿಯ ಕೆಲಸದಲ್ಲಿ ಕೂಲಿಗಾರರೊಂದಿಗೆ ಕೆಲಸಮಾಡಲು ಕಳುಹಿಸಿರುತ್ತಾರೆ ಇದರಿಂದ ಬಡಜನರಿಗೆ ನಷ್ಟವಾಗಬಾರದೆಂದೂ ತಮ್ಮ ಮಗನು ಕೂಲಿ ತೆಗೆದುಕೊಳ್ಳುವುದಿಲ್ಲವೆಂದೂ ಅವನು ಹೋಗಿ ಬರುವ ಮತ್ತು ಅವನ ಜೀವನವೆಚ್ಚಗಳೆಲ್ಲವನ್ನು ತಾನೇ ಕೊಡುವುದಾಗಿಯೂ ಪ್ರಕಟಿಸಿರುತ್ತಾರೆ ಜೋನ್‌ರೂಸ್‌ವೆಲ್ಟನು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಆರು ಅಡಿ, ನಾಲ್ಕು ಅಂಗುಲ ಎತ್ತರವಿರುತ್ತಾನೆ ೧೮ ವರ್ಷ ಪ್ರಾಯ ನಮ್ಮ ತರುಣರೋ?

ವಜ್ರಗಳು! —— ವಜ್ರಗಳು

ನಮ್ಮಲ್ಲಿ 'ಅಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ

ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಯಿಟ" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾಹುಕಾರ ಶ್ರೀನಿವಾಸ ರಂಗ ಪೈ,

ಸಾಹುಕಾರ ಮಹಾಲ್, ರಥಬೀದಿ ಮಂಗಳೂರು.

(ಸನ್ 1856ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

Part Proprietors of —

Sri Krishna Mills & Co
Oil Manufacturers
Bunder, Mangalore

Bhagavan Ganesh Pai & Co
Copper Sheet & Twist
Merchants, Camp Bazar,
Cannanore.

Representatives for the W.C.

M/s. A & F. Harvey
Cotton Spinners,
Tuticorin, Madura &c.

Guardian Assurance Co., Ltd.
(Incorporated in England)
Head Office: 68, King
William Street,
London, E. C. 4.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವಿಕಾಸವ (ನಿಶ್ಶಕ್ತಿಗೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಪ್ರಾಂಪ್ಟಿಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ.

Distributors for South Kanara —

Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಂಜಾಟಗಳಲ್ಲಿ ಲೋಕದಲ್ಲಿ ಸಾವಿರಾರು ಜನರು ಇದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

೩೨ ಮಾತ್ರೆಗಳ ಟಿನ್ನೊಂದಕ್ಕೆ ರೂ 1

ಹೆಚ್ಚಿನ ವಿವರಕ್ಕೆ ಧನ್ವಂತರಿ ಹಾಗೂ ಟಿಪ್ಪಣಿ ಪಾಕೆಟು ವಿನ್ ಕಳುಹಿಸಲ್ಪಡುವ ಪುಸ್ತಕ ಕಾಮಶಾಸ್ತ್ರವನ್ನೋದಿರಿ.

Agents —Shah Company, MANGALORE
,, Pearl & Sons MANGALORE

Atank Nigrah Pharmacy
Chickpet, Bangalore.
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸು ಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ. ಅಜ್ಜಿ ಕಥೆಗಳು (ಸಚಿತ್ರ.)

ಚರಿತ್ರೆ ಮತ್ತು ಕಥೆಗಳು.	ರೂ. ಆ ಪೈ.	ಸಾಮಾನ್ಯ ವಿಜ್ಞಾನ.	ರೂ ಆ. ಪೈ	ಮೂರು ಕರಡಿಗಳು
				ಹೇನು ಸತ್ತು ಕಾಗೆ ಬಡವಾಯಿತು.
ನಾಲ್ಕನೇ ದರ್ಜೆ	0 6 0			ಮೊಲಸಿನ ಕಾಳಪ್ಪ.
ಮೂರನೇ ,,	0 4 6	ಎರಡನೇ ದರ್ಜೆ	0 8 0	ಅರಗಿನ ಮುದ್ದೆ
ಎರಡನೇ ,,	0 4 0			ಇಲಿಗಳ ಧಕ್ಕ ಪೈ.
ಸಮಾಜಶಾಸ್ತ್ರ.		ಮೂರನೇ ,,	0 8 0	ಜಿಂಗಳ ದುಗ್ಗ.
ಐದನೇ ದರ್ಜೆ	0 3 0			ಗುಡುಗುಡು ಗುಮ್ಮಟ ದೇವರು.
ನಾಲ್ಕನೇ ,,	0 8 0	ನಾಲ್ಕನೇ ,,	0 5 0	ಒಡ್ಡನ ಓಟ.
ಮೂರನೇ ,,	0 2 6			
		ಐದನೇ ,,	0 6 0	(ಇವುಗಳ ಕ್ರಯ: 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿ ಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೆ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ಶಿವರಾಮ ಕಾರಂತ ವಿರಚಿತ

ಗ್ನಾನ

ಜ್ಞಾನದ ಮೇಲೆ ವ್ಯಂಗ ಟೀಕೆ.

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ

ದಪ್ಪಗಿನ ಅಂಟಿಕ್ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿದೆ.

ಕ್ರೌನ್ ¼ ಆಕಾರದ ೧೮೦ ಪುಟಗಳು.

ಉತ್ತಮ ತರದ ಹಾಸ್ಯ.

ಬೆಲೆ. 1-4-0

ಶಾರದಾ ಛಾಪಖಾನೆ, ಮಂಗಳೂರು.

ಇವರಿಂದ ಪಡೆಯಬಹುದು.

ನಡೆದ ಕತೆಗಳು.

True Stories

ಓದಿ ಮುಗಿಸುವ ಸಮಯ ... ಮೂರೇ ನಿಮಿಷಗಳು

All Rights Reserved.

[ಸಮಾಜದಲ್ಲಿನ ಕುಂದುಕೊರತೆಗಳನ್ನು ತೋರಿಸಿಕೊಡುವುದೇ 'ನಡೆದ ಕತೆಗಳು'—ಇವುಗಳ ಉದ್ದೇಶ. ಘಟನೆಗಳೆಲ್ಲ ನಿಜವಾದುವುಗಳು, ಅವುಗಳನ್ನು ಸಂಯೋಜಿಸುವುದರಲ್ಲಿ ಮಾತ್ರ ಅನುಕೂಲ ಹಕ್ಕುಗಳನ್ನು ಉಪಯೋಗಿಸಿಕೊಳ್ಳಲಾಗಿದೆ ಹೆಸರುಗಳನ್ನು ಕೆಲವೆಡೆಗಳಲ್ಲಿ ಮಾತ್ರ ಬದಲಾಯಿಸಲಾಗಿದೆ]

೧೩.

ಹರಿಜನ ಸೇವೆ.

ಮಹಾತ್ಮಾ ಗಾಂಧಿಯವರು ಹರಿಜನ ನಿಧಿಯನ್ನೆತ್ತಲು ಇತರ ಪ್ರಾಂತ್ಯಗಳಲ್ಲಿ ಸಂಚರಿಸಿದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಸಂಚರಿಸಿದ ಕಾಲವದು. ಮಹಾತ್ಮರ ಆಗಮನದ ವಾರ್ತೆಯ ಜ್ಯೋತಿಯು ಹಳ್ಳಿಹಳ್ಳಿಗಳಲ್ಲಿ ಪಸರಿಸಿ, ಜನರಿಗೆ 'ಹರಿಜನ ಸೇವೆ'ಯ ದಿವ್ಯಾದರ್ಶವು ದೃಗ್ಗೋಚರವಾಗಿದ್ದಿತು.

"ಹರಿಜನ ಬಂಧು"ಗಳೆಂದೆಣಿಸಿಕೊಂಡಿದ್ದ ರಘುನಾಥರಾವ್ ಅಳಸೂರ್‌ಕಾರರು ಮಹಾತ್ಮರ ಆಗಮನದ ದಿನ ತನ್ನ ಮನೆಯಲ್ಲಿ ಹರಿಜನರಿಗೆ ಮೃಷ್ಟಾನ್ನ ಭೋಜನವನ್ನು ಹಾಕಿದರು, ಉಡಿಗೆತೊಡಿಗೆಗಳನ್ನು ಕೊಟ್ಟರು, ಎಣ್ಣೆ ನೀರು ಗಳನ್ನಿತ್ತರು ಅವರ ತೇಗು ಮತ್ತು ಆನಂದಗಳನ್ನು ಕಂಡು ಧನ್ಯನೆಂದೆಣಿಸಿಕೊಂಡರು

ಅಳಸೂರರಲ್ಲಿ ಜಾತಿಭೇದದ ಎಳ್ಳಷ್ಟು ವಾಸನೆಯಿಲ್ಲವೆಂಬ ವಿಷಯವು ಅವರು ಅಂದು ಶೂದ್ರ ಸ್ವಯಂಸೇವಕರನ್ನೂ ತನ್ನ ಮನೆಯ ಅಡಿಗೆಕೋಣೆಗೆ ಪ್ರವೇಶಿಸಬಿಟ್ಟುದ್ದರಿಂದಲೂ ಸ್ವಯಂವ್ಯಕ್ತ ಅಂತಹವರು ಹರಿಜನ ಸೇವಾಕಾಂಕ್ಷಿತರಾಗಿರುವುದು ಶಿಷ್ಟೊಂದು ಅಸ್ವಾಭಾವಿಕವೆಂದು ನಾವು ಹೇಳಲಾರೆವು

ಅಳಸೂರರ ಮನೆಯಲ್ಲಿ ಅಂದು ಮಹಾ ಕೋಲಾಹಲ ಹಲವು ಜನ ಶಿಕ್ಷಿತ ಸ್ವಯಂಸೇವಕರು - ಕೆಲವು ಮಂದಿ ಮಹಿಳೆಯರು, ಆನಂದೋತ್ಸಾಹದಿಂದಲೇ ಸೇವಾಬದ್ಧರಾಗಿದ್ದರು.

ಅಂದು ಅಳಸೂರರ ಪ್ರೇಮದ ಪುತ್ರಿ ರಾಜೀವಿಗೆ ಒಂದು ನಿಮಿಷ ಬಿಡುವಿಲ್ಲ ಆ ಕೋಣೆಯಿಂದ ಈ ಕೋಣೆಗೆ ಓಡುವುದು,—ಈ ಕೋಣೆಯಿಂದ ಆ ಕೋಣೆಗೆ ಧಾವಿಸುವುದು,—ಸ್ವಯಂಸೇವಕರು ಕೇಳಿದ ವಸ್ತುಒಡವೆಗಳನ್ನು ಒದಗಿಸುವುದು—ಬೆವರನ್ನು ಕರವಸ್ತ್ರದಿಂದ ಒರಸುವುದು—ಇವೇ ಮೊದಲಾದ ಕೆಲಸಗಳ ಸುರಿಮಳೆಯು ಅವಳ ತಲೆಯ ಮೇಲಿಲ್ಲಿ ಅವಳ ಮೇಜಿನ ಮೇಲೆ ಬಿದ್ದಿದ್ದ 'ಹರಿಜನ' ಪತ್ರಿಕೆ ಮತ್ತು ಇನ್ನಿತರ ಗ್ರಂಥಗಳು, ಅವಳ ಅಂದಿನ ಚಿತ್ತಶೂನ್ಯತೆಯನ್ನು ಬೆರಳೊಡ್ಡಿ ತೋರಿಸುತ್ತಿದ್ದುವು

ಅಂದಿನ ಸ್ವಯಂಸೇವಕರ ಮುಖಂಡನಾದ ಶ್ರೀಮಾನ್ ಸಂಜೀವ (ಬಿ ಎ ಎಲ್ ಟಿ) ನ ಶ್ರಮವು ಪೂರ್ಣ ಶ್ಲಾಘ್ಯವಾಗಿತ್ತು ತಾನು ಶೂದ್ರನೆಂಬ ಸತ್ಯವನ್ನು ಮರೆತು ಅವನು ರಾಯರ ಮನೆಯ ಕೋಣೆಗಳಿಗೆಲ್ಲ ನಿರ್ಭೀತನಾಗಿ ತಲೆಹೊಗಿಸಿದುದನ್ನು ಲಕ್ಷಿಸುವಾಗ, ಅವನ ಮನದ ವಿಕಾಸವೆಷ್ಟಿರಬಹುದೆಂದು ಚಿಂತಿಸಬೇಕಾಗುತ್ತದೆ ಅವನ ಸುಂದರವದನ, ದೂರದೃಷ್ಟಿ ಸಸ್ಮಿತವಾದ ಕಾಂತಿಮಯ ನೇತ್ರಗಳು, ಅವುಗಳಿಗೆ ಯೋಗ್ಯ ಆಭರಣಗಳನ್ನು ತೊಡಿಸಿದ ತೆ ಕಾಣುವ ಕನ್ನಡಕ, ಸೊಬಗಿನ ಮುಖಕ್ಕೆ ಸಮಾನವಾದ ಎತ್ತರವೂ ವಿಶಾಲವೂ ಆದ ಹಣೆ, ಗಿಳಿಯ ಕೊಕ್ಕಿನಂತೆ ಬಗ್ಗಿಕೊಂಡಿರುವ ಅಂದವಾದ ನಾಸಿಕ,—ಇವೆಲ್ಲಕ್ಕಿಂತಲೂ, ಅಚ್ಚುಕಟ್ಟಾಗಿ ಬಾಚಿದ ತಲೆಗೂದಲಿನ ಮನಮೋಹಕ ಕ್ರಾಫ್—ನಿಜವಾಗಿಯೂ ಉತ್ತಮ ಕುಲಸಂಭೂತರ ಸಲ್ಲಕ್ಷಣಗಳು!

ಅವನ ಸೌಂದರ್ಯೋಪಾಸನೆಯನ್ನು ಕೆಲವು ಯುವತಿಯರೇ ಮಾಡುತ್ತಿದ್ದರೆಂದರೆ, ಕೇವಲ ೨೦ ವರ್ಷ ಪ್ರಾಯದ ವಿದ್ಯಾರ್ಥಿನಿ ರಾಜೀವಿಯು ಹೇಗೆ ಮಾಡದಿರುವಳು? ತಂದೆಯಂತೆ ಅವಳಿಗೂ ಜಾತಿಭೇದವಿರುವುದಿಲ್ಲವಷ್ಟೆ.

ಕೆಲವು ದಿನಗಳು ಕಳೆದುವು. ಅಳಸೂರ್‌ಕಾರರಿಗೊಂದು ಪತ್ರವು ತಲಪಿತು. ಅದರಲ್ಲಿ, 'ನೀವು ನಿಮ್ಮ ಮಗಳಿಗಿತ್ತಿರುವ ಸ್ವಾತಂತ್ರ್ಯವು ಮೇರೆ ಮೀರಿರುತ್ತದೆಂದು ನಮ್ಮ ಅಭಿಮತ. ಸಹಪಂಕ್ತಿಭೋಜನದ ದಿನ ಅವಳು ಸ್ವಯಂಸೇವಕರೊಡನೆ,ಅದೂ ಕೂಡಾ ಸಂಜೀವನೊಡನೆ ತೋರಿಸುತ್ತಿದ್ದ ಸಲಿಗೆಯು ನಮ್ಮಂತಹ ಸನಾತನಿಗ್ರಳಿಗೆ ಖಂಡನೀಯವೆಂದು ತೋರುತ್ತದೆ' 'ತಿಮ್ಮ' ಎಂದು ಬರೆದಿದ್ದಿತು.

ಈ ಪತ್ರವು ತಲಪುವ ನೊದಲೇ ಅಳಸೂರರ ಮನೆಯಲ್ಲಿ ಈ ವಿಷಯಕವಾದ ಪ್ರಶ್ನೆಯೆದ್ದಿದ್ದಿತು ಇದರ ಸಾರಾಂಶವಿಷ್ಟೆ ರಾಜೀವಿಯು ಶಿಷ್ಯ ಸಂಜೀವನ ಮೇಲೆ ಹೆಚ್ಚಿನ ಅನುರಕ್ತಳಾಗಿದ್ದಂತೆ ನಟಿಸುತ್ತಿದ್ದುದು ಈ ಕುರಿತು ತಂದೆ ಮಗಳಿಗೂ ಮನೆಯ ಹೆಂಗಸರಿಗೂ ವಾದವಿವಾದ! ಗುಟ್ಟಿನಲ್ಲಿ ಚರ್ಚೆ ನಡೆಯುತ್ತಾದರೂ ಗುಟ್ಟಿನ ಒಂದು ತುಂಡು ಮನೆಯ ಹೊರಗೆ ಬಂದೊಡನೆ ರಾಜೀವಿಯು ತಂದೆಗೆ ಹೀಗೆ ಹೇಳಿದಳೆಂದು ತಿಳಿದುಬಂತು. "ಹರಿಜನ ಸೇವೆ, ಹರಿಜನ ಸೇವೆಯೆಂದು ಬೊಬ್ಬಿಡುತ್ತಿರುವಿರಿ. ಮೈದಾನುಗಳಲ್ಲಿ ಭಾಷಣಮಾಡಿ ಎಲ್ಲರೂ 'ಹರಿಜನ ಸೇವೆ' ಮಾಡಿ ಎನ್ನುವಿರಿ ಶೂದ್ರರೇನು ಹರಿಜನರೇ? ಹರಿಜನರನ್ನು ಮನೆಯೊಳಗೆ ಪ್ರವೇಶಿಸುವ ಬಿಡುವ ನೀವು, ನಾನು ಶೂದ್ರನೊಡನೆ ಮಾತನಾಡಿದುದಕ್ಕೆ ರೇಗುವುದೇಕೆ? ಹರಿಜನರೂ ಜಾತಿ ಹಿಂದೂಗಳೂ ತಂತಮ್ಮೊಳಗೆ ಪರಸ್ಪರ ವಿವಾಹಕ್ಕೂ ಕೈಹಾಕಿ ಸಮಾಜದ ನಿರ್ಬಂಧವನ್ನು ಮುರಿಯಬೇಕೆಂದು ನೀವು ಹೇಳಿದುದನ್ನು ನಾನು ಎಷ್ಟೋ ಸಲ ಕೇಳಿರುವೆನ ಈಗ, ಬರಿಯ ಶೂದ್ರನೊಬ್ಬನೊಡನೆ ನಾನು ಮಾತನಾಡಿದುದಕ್ಕೆ ಇಷ್ಟು ಗೊಂದಲವೇ?"

ಅವಳ ಮಾತಿನ ಜಾಣ್ಮೆಯು ವಿವೇಕಿಗಳಿಗೆ ತಿಳಿದುಬರಬಹುದು ಅಳಸೂರರ 'ಹರಿಜನ ಸೇವೆ'ಯ ಕತೆಯು ಗೊತ್ತಾಗಬಹುದು

ಮ ಜಾ.

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O P No 42/1935

1 ದಾಮೋದರ, ಅಮ್ಮುಂಜೆ ವಿಠ್ಠಲ ನ್ಯಾಕರ ಮಗ ಮ್ಯಾನರೆ, ಕ್ಷೇಮಚಿಂತಕಳು ತಾಯಿ ಸೇವಂತಿ ಯಾನೆ ಇಂದಿರಾಬಾಯಿ, ವಿಟ್ಠಲ ನ್ಯಾಕರ ವಿಧವೆ 2 ಅಮ್ಮುಂಜೆ ಕೃಷ್ಣಪ್ಪ ನ್ಯಾಕ, ಲಕ್ಷ್ಮಣ ನ್ಯಾಕರ ಮಗ, ಉಡುಪಿ ತಾಲ್ಲೂಕು ಉಪ್ಪೂರು ಗ್ರಾಮದ ಅಮ್ಮುಂಜೆಯಲ್ಲಿರುವವರು—ಅರ್ಜಿದಾರರು

1ನೇ ಅರ್ಜಿದಾರರ ತಂದೆ ಮೃತ ವಿಟ್ಠಲ ನ್ಯಾಕರ ಬಾಬ್ತು The Bombay Life Assurance Co Ltd Bombay ಈ ಕಂಪೆನಿಯಿಂದ ಎರಕ್ಷ್ಯ ನಂಬ್ರ 24584ನೇ ಪೊಲಿಸಿಯ ರೂ 987 8—0ನ್ನು ವಸೂಲಿ ಕುರಿತ 1ನೇ ಅರ್ಜಿದಾರನ ಕ್ಷೇಮಚಿಂತಕಳಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಸದ್ರಿ ಅರ್ಜಿಯು ತಾರೀಕು 5-8-1935ರಲ್ಲು ಇತ್ಯರ್ಥಾಗಿಯದೆ. ಆ ಬಗ್ಗೆ ಆಕ್ಷೇಪ ಹೇಳುವವರು ಸದ್ರಿ ತಸ್ಕಿ ದಿವಸ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಆಕ್ಷೇಪ ಜ್ಯಾಹೀರು ಮಾಡತಕ್ಕದ್ದು.

Udipi, S K } K. Ramanath Pai,
18-7-'35. } *Pleader for Petitioners.*

ನಗಬಾರದು.

[ಸ್ವಕಪೋಲ ಕಲ್ಪಿತ ಹಾಸ್ಯಗಳನ್ನು ಕಳುಹಿಸುವವರಿಗೆ ಯೋಗ್ಯತಾನುಸಾರವಾಗಿ ಬಹುಮಾನಗಳನ್ನು ಕೊಡಲಾಗುವುದು]

ನ್ಯಾಯಾಧೀಶ—ನೀನು ಬಾಳೆಗೊನೆ ಕದ್ದಿಯೆಂದು ಈ ಮೂವರು ಸಾಕ್ಷಿ ಹೇಳುತ್ತಾರಲ್ಲ. ನಿನ್ನನ್ನು ಯಾಕೆ ಶಿಕ್ಷಿಸಬಾರದು?

ಗೌಡ —ಸ್ವಾಮಿ ನಾನು ಬಾಳೆಗೊನೆ ಕದಿಯಲಿಲ್ಲವೆಂದು ಹತ್ತು ಮಂದಿಯು ಸಾಕ್ಷಿ ಕೊಟ್ಟರೆ ನನ್ನನ್ನು ಯಾಕೆ ಬಿಡಬಾರದು?

\+ + + +

ಹೋಟೇಲುಗಾರ —ಕಾಫಿ ಕುಡಿದಾಯಿತಲ್ಲಾ, ಕಾಸೆಲ್ಲಿದೆ?

ಗಿರಾಕಿ —ಕರಲು ಮರೆತು ಬಿಟ್ಟೆ ಸ್ವಾಮಿ, ಈಗ ತರುತ್ತೇನೆ

ಹೋಟೇಲುಗಾರ — ಅದಾಗದು (ಗದರಿಸುವನು)

ಗಿರಾಕಿ —ನೀವು ಕೊಟ್ಟ ಹಾಗೆ ನನ್ನ ಹೊಟ್ಟೆಯಿಂದ ತೆಗೆದುಕೊಳ್ಳಿರಿ ನಿಮ್ಮ ರಗಳೆ ಬೇಡಪ್ಪಾ!

\+ + + +

ಮಗ —ಅಪ್ಪಾ, ನಾನು ಅಮ್ಮನನ್ನು ಅಮ್ಮಾ ಎಂದು ಕರೆಯುತ್ತೇನೆ ನೀವು ಹಾಗೆ ಏಕೆ ಕರೆಯುವುದಿಲ್ಲ?

ತಂದೆ —ಹುಟ್ಟಿದರೆ ಹುಟ್ಟಬೇಕು ನಿನ್ನಂಥ ಮಗು ನೀನು ಹೋಗಿ ನಿನ್ನ ಅಮ್ಮನೊಡನೆ ಕೇಳು.

\+ + + +

ಮಿಸ್ಟ್ರೆಸ್ —ಎಲಾ ಹುಡಗಿ ನೀನು ಶಾಲೆಗೆ ಏಕೆ ತಡವಾಗಿ, ಬರುತ್ತಿರುವಿ? ನಾನು ನಿನ್ನ ತಾಯಿಯಾಗಿದ್ದರೆ ನಿನಗೆ ಬುದ್ಧಿ ಕಲಿಸುತ್ತಿದ್ದೆ!

ಹುಡುಗಿ —ನೀವು ತಾಯಿಯಾಗುತ್ತಿದ್ದರೆ ನಾನು ತಂದೆಯೊಡನೆ ಹೇಳುತ್ತಿದ್ದೆ

\+ + + +

ಉಪಾಧ್ಯಾಯ (ಬೋರ್ಡಿನ ಮೇಲೆ ಒಂದು ಕೋಳಿಯ ಚಿತ್ರವನ್ನು ಬಿಡಿಸಿ) ಮಕ್ಕಳೇ ಇಂಥ ಒಂದು ಕೋಳಿಯ ಚಿತ್ರವನ್ನು ಬಿಡಿಸಿ ತೋರಿಸಿರಿ

ಚಿತ್ರ ಬಿಡಿಸಲು ಬಾರದ ಹುಡುಗ —ನಾನು ಕೋಳಿಯನ್ನು ಬರೆದು ಯಾಕೆ ತೋರಿಸಬೇಕು? ನಮ್ಮ ಮನೆಗೆ ಬನ್ನಿರಿ! ತಾಜಾ ಕೋಳಿಯನ್ನೇ ತೋರಿಸುತ್ತೇನೆ ಸಾರ್

\+ + + +

ತಂದೆ —ಮಗೂ ಶಾಲೆಗೆ ಹೋಗು, ಏಕೆ ತಡ ಮಾಡುವೆ?

ಮಗು —ಅಪ್ಪಾ ಮಳೆಬರುತ್ತದೆಯಲ್ಲಾ'

ತಂದೆ —ಮಗೂ ಮಳೆಯಿಲ್ಲವೆಂದು ನೆನಸಿಕೊಂಡು ಶಾಲೆಗೆ ಹೋಗಬಾರದೇಕೆ?

ಮಗು —ಅಪ್ಪಾ ನಾನು ಶಾಲೆಗೆ ಹೋದೆನೆಂದು ನೀವು ನೆನಸಿಕೊಳ್ಳಬಾರದೇಕೆ?

ಟಿ ವೆಂಕಟರಮಣ್ ಟ್ಯಾಂ

ಮಾಸ್ಟರ್ —ಹುಡುಗರೇ, ನೀವು ಬೀಡಿ, ಮದ್ಯಪಾನಗಳನ್ನು ಸೇವಿಸಬಾರದು ಅವುಗಳಿಂದ ಬಹು ಕೆಡುಕುಂಟು.

ಒಬ್ಬ ಹುಡುಗ —ಹಾಗಾದರೆ ನೀವು ಏಕೆ ಅಭ್ಯಾಸಮಾಡಿದ್ದು ಸಾರ್?

ಮಾಸ್ಟರ್ -ಆ ಅಭ್ಯಾಸಗಳಿಂದಾಗುವ ಕೆಡುಕನ್ನು ನಿಮಗೆ ತೋರಿಸಲಿಕ್ಕೆ ಅಭ್ಯಾಸ ಮಾಡಿದ್ದು ಅಷ್ಟೆ'

\+ + + +

ಅಣ್ಣ—ನೀನು ಯಾಕೊ ಹೀಗೆ ಹೊಡೆಯುತ್ತೀ?

ತಮ್ಮ:—ಬೇರೆ ರೀತಿಯಲ್ಲಿ ಹೊಡೆಯಲು ಬರೋದಿಲ್ಲಣ್ಣ.

\+ + + +

ಜಡ್ಜಿ.—ನೀನು ಈ ಲಡಾಯಿ ಆಗುವಾಗ್ಗೆ ಏನು ಮಾಡುತ್ತಿದ್ದೆ?

ಸಾಕ್ಷಿಗಾರ.—ಅದೇ ಕೋಣೆಯಲ್ಲಿ ಮಲಗಿದ್ದೆ ಸ್ವಾಮಿ, ನಿದ್ರೆ ಬಿದ್ದಿತ್ತು.

ಜಡ್ಜಿ:—ನೀನು ಯಾಕೆ ಅಲ್ಲಿ ಮಲಗಿದ್ದು?

ಸಾಕ್ಷಿಗಾರ—ಏನೂ ಗೊತ್ತಿಲ್ಲದ ನನ್ನನ್ನು ಸಾಕ್ಷಿಗೆ ಕರೆಯುವರೆಂದು ನಿದ್ರೆ ಮಾಡಿದ್ದು.

ಜಡ್ಜಿ:—ಹಾಗಾದರೆ ಈಗೇಕೆ ಸಾಕ್ಷಿ ಹೇಳಲು ಬಂದಿರುವೆ?

ಸಾಕ್ಷಿಗಾರ—ಆ ಮನೆಯವರು—ನನಗೆ ನಿದ್ರೆ ಬಂದದ್ದು ಯಾರಿಗೂ ಗೊತ್ತಿಲ್ಲವೆಂದು ಹೇಳಿದ್ದರಿಂದ.

\+ + + +

ರಾಮು —ನೀನು ನಾರಾಯಣನನ್ನು ಹೊಡೆಯಬೇಕು.

ಕೃಷ್ಣ:—ನನಗೆ ಕೋಪ ಬಂದರೆ ಹೊಡೆಯುತ್ತೇನೆ ಆದರೆ ಕೋಪವು ಬರುವುದಿಲ್ಲ

ರಾಮು—ಹಾಗಾದರೆ ಕೋಪ ಬರಬೇಕಾದರೆ ಏನು ಮಾಡಬೇಕು?

ಕೃಷ್ಣ—ಇದು ಒಂದು ರೂಪಾಯಿ.

ಸೀತಾರಾಮು,

ಪೋಲೀಸು.—(ಗಾಡಿಯ ಡ್ರೈವರನೊಡನೆ,) ಏನೋ? ಗಾಡಿ ಯಾವ ಸ್ವಾದಿಗೆ ಹೊಡೆಯುತ್ತೀಯೋ, ತಲೆಸರಿಯಿಲ್ಲವೋ ನಿನಗೆ?

ಗಾಡಿಯವನು.—ಸ್ವಾಮಿ, ಮೊನ್ನೆ ದಿನ ಕ್ಷೌರ ಮಾಡಿಕೊಳ್ಳುವಾಗ ನನಗೆ ಸೀನು ಬಂತು. ಆಗ ಕೌರಿಕನ ರೇಜರ್ ತಾಗಿ ಸಣ್ಣ ಗಾಯವಾಗಿದೆ

ಪೋಲೀಸು - ಏ ಮಂಗಾ, ರೂಲು ಗೊತ್ತಿಲ್ಲವೇನು ನಿನಗೆ?

ಗಾಡಿಯವನು —ರೋಲು ಗೊತ್ತುಂಟು ಸ್ವಾಮಿ ನಮ್ಮಲ್ಲಿ ಹುಡುಗರು ಅದನ್ನು ಗೆರೆ ಹಾಕಲಿಕ್ಕೆ ಉಪಯೋಗಿಸುತ್ತಾರೆ.

\+ + + +

ಪಟೇಲರು —ತಿಮ್ಮಾ (ಕಳೆಯಾರ), ಗ್ರಾಮ ಸಂಚರಣೆ ಮಾಡಿದ ಬಗ್ಗೆ ಬೀಟ್ ರಿಜಿಸ್ಟ್ರು ತಂದು ಏಕೆ ಹಾಜರುಪಡಿಸಲಿಲ್ಲ?

ತಿಮ್ಮ —ಸ್ವಾಮಿ, ತಾವು ಈ ಊರಿನಲ್ಲೇ ಇಲ್ಲದಿದ್ದರೆ ನಾನು ಬೀಟ್ ರಿಜಿಸ್ಟ್ರು ಯಾರಿಗೆ ತೋರಿಸಲಿ?

ಪಟೇಲ್ —ನಮ್ಮಲ್ಲಿ ಹೆಬ್ಬಾಗಿಲಿಗೆ ಆದರೂ ಹಾಜರು ಮಾಡಬಹುದಿತ್ತಲ್ಲಾ

ತಿಮ್ಮ —ನಿಮ್ಮಲ್ಲಿ ಹೆಬ್ಬಾಗಿಲಿಗೆ ಹಾಜರುಮಾಡುವುದು ಕೋಳಿಸಿಲ್ಲ ಸ್ವಾಮಿ

\+ + + +

ಒಕ್ಕಲಿಗನು —ಹೌದಯ್ಯ ಸಾವಕಾರ್ರೆ, ಅಕ್ಕಿಯನ್ನು ಹ್ಯಾಗೆ ತೆಗೆದುಕೊಳ್ಳುತ್ತೀರಿ?

ಸಾಹುಕಾರ —ಅಕ್ಕಿಯನ್ನು ಅಳತೆ ಮಾಡಿ ತಕ್ಕೊಳ್ಳಬಹುದು

\+ + + +

೧ನೇ ದಾರಿಗನು —ಹಾಯ್ಕಾಡಿಯಿಂದ ಹಾರ್ಕಳ್ಳಿಗೆ ಎಷ್ಟು ದೂರ ಉಂಟು?

೨ನೇ ದಾರಿಗನು —ಹಾಯ್ಕಾಡಿಯಿಂದ ಹಾರ್ಕಳ್ಳಿಗೆ ಹೋದಷ್ಟೇ ಉಂಟು

ಜಿ ವಿ ಶೆಣೈ,

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಸ್ಮಾಲ ನಂಬ್ರ 899/1935

ಬ ರೊಲಿ ಕೊಗ್ಗ ಕಾಮತ್ ಎಂಡ್ ಸನ್ಸ್ ಮೆನೆಜರ ಮರೊಳಿ ಕೊಗ್ಗ ಕಾಮತ್—ವಾದಿ.

ಜೆ ಯಸ್ ಮಾರ್ಟಿನ್—ಪ್ರತಿವಾದಿ.

ವಾದಿಯು ಪ್ರತಿವಾದಿಯ . ಮೇಲೆ ರೂಪಾಯಿ 79-18-2ಕ್ಕೆ ಸದ್ರಿ ದಾವೆಯು ಮಾಡಿರುತ್ತಾರೆ. ಅದು ತಾ 6-8-1935ಕ್ಕೆ ಮೇಲ್ಕಂಡ ಕೋರ್ಟು ಮುಂದೆ ತನಿಖೆಗೆ ಇಟ್ಟಿರುತ್ತದೆ ಆದುದರಿಂದ ಸದ್ರಿ ತಾರೀಕಿಗೆ ಹಗಲು 11 ಘಂಟೆಗೆ ಆ ಕುರಿತು ಆಕ್ಷೇಪ ಇದ್ದರೆ ಜ್ಯಾಹೀರು ಮಾಡತಕ್ಕದ್ದು. ತಪ್ಪಿದರೆ ಪ್ರತಿವಾದಿಯ ತಿವ್ಯಾ ತೀರ್ಮಾನವಾಗುವುದು ತಿಳಿದಿರುವದು.

19-7-'35 } P. N Bhandarkar,
ಮಂಗಳೂರು } *Vakil for Plaintiff*

ಲೇಡಿಸ್ ಬಾಂ

ಸ್ತ್ರೀಯರ ಜೀವನಾಧಾರ

ಸ್ತ್ರೀಯರು ಪುಷ್ಟರಾಗಿಯೂ ಕಾಂತಿಯುಕ್ತರಾಗಿಯೂ ಇರಬೇಕಾದರೆ, ಅವರ ಮುಟ್ಟಿನದೋಷ, ಆ ಸಮಯದಲಿ ಕಂಡುಬರುವ ಹೊಟ್ಟೆನೋವು ಸೊಂಟ ಹಿಡಿತ, ಗಂಟುನೋವು, ಮೈಯಲ್ಲಿ ದದಿಕೆಬೀಳುವುದು, ಬಿಳೀ ಶೆರಗು, ಗರ್ಭಕೋಶದ ನೋವು, ಅಕ್ರಮ ರೀತಿಯಿಂದ ಮುಟ್ಟಾಗುವಿಕೆ, ಬಂಜೆತನ, ಸಾಧಾರಣ ಕ್ಷಯವಿಕಾರ ಮತ್ತು ಅವರ ಅನೇಕ ತರದ ಗುಪ್ತರೋಗಗಳನ್ನು ನಿವಾರಿಸಲು ಇದರ ಒಂದೇ ಒಂದು ಶೀಸೆಯನ್ನು ಉಪಯೋಗಿಸಿದರೆ ಗುಣವನ್ನು ಕಾಣುವಿರಿ.

ಉಪಯೋಗಿಸಿದವರ ಅಭಿಪ್ರಾಯ:—

ರಾಮಕೃಷ್ಣ ಜೈನ್ ಬಿ. ಎ ಲಾಹೋರ್ 'I found your Ladies Balm worth the money I spent on it'

ಯಾವ ತೆರದ ಔಷಧಿಯಿಂದಲೂ ಬಹಿಷ್ಟೆಯ ಅಕ್ರಮವನ್ನು ಹೋಗಲಾಡಿಸಲು ಅಸಮರ್ಥರಿಂದಾದರೆ ನಮ್ಮ ಲೇಡಿಸ್ ಬಾಮನ್ನು ಉಪಯೋಗಿಸಿರಿ ಒಂದು ತಿಂಗಳ ಔಷಧಿಯಿರುವ ಶೀಸೆ ೧ಕ್ಕೆ ರೂ ೩—೦—೦ ವಿ ಪಿ ಖರ್ಚು ೦—೮—೦.

ತಯಾರಿಸುವವರು —**ದಿ ಬಿಹಾರ್ ಕೆಮಿಕಲ್ ವರ್ಕ್ಸ್, ಬಾಗಲಪುರ.**

ಏಜಂಟರು—ಷಹಾ ಕಂಪೆನಿ, ಗ ಕೋಲೇಜು ಎದುರು ಮಂಗಳೂರು

ಅಗ್ರಗಣ್ಯ ಸಂಗೀತಜ್ಞರು ಅದರ ಪ್ರಶಂಸಾಗಾನವನ್ನು ಮಾಡಿದ್ದಾರೆ.

ಮುಸಿರಿ ಸುಬ್ರಹ್ಮಣ್ಯ ಐಯ್ಯರ್,

6 ಒಲಿವರ್ ರೋಡ್,
ಮೈಲಾಪುರ ಮದ್ರಾಸು.
ತಾ ೨—೫—೩೪

ಅನೇಕ ಸಮಯದಿಂದ ನನ್ನ ಕುಟುಂಬದವರೆಲ್ಲ 'ಕೇಶವರ್ಧಿನಿ'ಯನ್ನು ಬಿಡದೆ ಉಪಯೋಗಿಸುತ್ತಿರುವರೆಂದು ತಿಳಿಸಲು ಸಂತೋಷಿಸುತ್ತೇನೆ. ಉದುರುವ ಕೂದಲನ್ನು ತಡೆಯುವ ಅದರ ಶಕ್ತಿಯನ್ನು ಪೂರ್ಣವಾಗಿ ತಿಳಿದು, ಅಲ್ಲದೆ ಕೂದಲನ್ನು ಅಚ್ಚು ಬೆಳೆಯಿಸುವ ಅದರ ಗುಣವನ್ನು ಅರಿತು ಅವರು ಅದರ ಗುಣಗಾನವನ್ನು ಮಾಡಿ ಸ್ನೇಹಿತರಿಗೂ ಅದನ್ನು ಶಿಫಾರಸು ಮಾಡುತ್ತಾರೆ ಕೇಶಗಳಿಗೂ, ಮೆದುಳಿಗೂ ಸಮರ್ಪಕವಾದ ಎಣ್ಣೆಯೊಂದು ಅಗತ್ಯವಿರುವವರು ಇದನ್ನುಪಯೋಗಿಸಬಹುದೆಂದು ನಾನು ಶಿಫಾರಸು ಮಾಡುತ್ತೇನೆ.

(ಸಹಿ)ಮುಸಿರಿ ಸುಬ್ರಹ್ಮಣ್ಯ ಅಯ್ಯರ್.

ಬೋಳು ತಲೆಯವರಾಗಬೇಡಿ ಅಥವಾ ತಲೆಕೂದಲು ಅಪರಿಪಕ್ವ ಸಮಯದಲ್ಲಿ ಬೆಳ್ಳಗಾಗದಂತೆ ನೋಡಿ

ಬಾಟ್ಲಿ 1ಕ್ಕೆ ಆಣೆ 12. **'ಕೇಶವರ್ಧಿನಿ'** ಪೇಕಿಂಗ್ ಮತ್ತು ಅಂಚೆವೆಚ್ಚ ಪ್ರತ್ಯೇಕ.

ಪಟ್ಟಣದ ವಿವರ ವ್ಯಾಪಾರಿಗಳಲ್ಲಿ ಅಥವಾ ಈ ವಿಳಾಸದಲ್ಲಿ ಸಿಗುವುದು —

South India Chemicals, LUZ ROAD, Mylapore Madras

ನಮ್ಮ ಪ್ರವರ್ತಕರು—ಪೋರ್ಟ್ಲೆಂಡ್ ಸ್ಟೋರ್ಸ್, ರಥಬೀದಿ ಮಂಗಳೂರು

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಒಡೆಯುವುದು, ಮಲ ಬದ್ಧತೆ, ಮಳೆಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯ ಸ್ತಂಭನ ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿ ಮಾಡುವುದು ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನು ಉಂಟು ಮಾಡುವುದು.

ಬಾಟ್ಲಿ 1ಕ್ಕೆ ರೂ. 2-8-0

ಬಾಲಗ್ರಹ ಗುಟಿಕೆ

ಮಕ್ಕಳ ಕೆಮ್ಮು, ಕಫ, ಕೆಮ್ಮು, ಉಬ್ಬಸ ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು.

ಬಾಟ್ಲಿ 1ಕ್ಕೆ 10 ಆಣೆ 3 ಬಾಟ್ಲಿಗಳಿಗೆ ರೂ 1-12 0



ಅಲ್ಲದೆ ಬಾಲಗ್ರಹ ತೈಲ, ಬಾಲಗ್ರಹ ದ್ರವ ಸಹಾ ದೊರೆಯುತ್ತವೆ ಕ್ರಯ ಬಾಲಗ್ರಹ ತೈಲ ಬಾಟ್ಲಿ 1ಕ್ಕೆ 8 ಆಣೆ ಬಾಲಗ್ರಹ ದ್ರವ ಬಾಟ್ಲಿ 1ಕ್ಕೆ ರೂ 1—0—0.

ಮಲೇರಿಯಾ ನಿವಾರಿಣೀ

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣ ಜ್ವರ, ಕಫ ಜ್ವರ, ಜ್ವರಗೆಡ್ಡೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು ಮಲೇರಿಯಾ ಜ್ವರ ಇರತಕ್ಕ ಪ್ರಾಂತ್ಯಗಳಲ್ಲಿ ವಾಸಿಸುವವರಿಗೆ ಇದಕ್ಕಿಂತ ಉತ್ತಮವಾದ ಔಷಧಿಯು ಬೇರೊಂದಿಲ್ಲ

ಬಾಟ್ಲಿ 1ಕ್ಕೆ ರೂ 1-8-0 ಸಣ್ಣ ಬಾಟ್ಲಿ 1ಕ್ಕೆ ಆಣೆ 13

ಮೇಹಕುಠಾರ

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟ ನೋವು, ಮೂತ್ರ ಆಗಾಗ ಬರುವಿಕೆ, ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು ಕ್ರಯ ಡಬ್ಬಿ 1ಕ್ಕೆ ರೂ 2—8—0 ಮಾತ್ರ

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ:- ಶ್ರೀ ರಾಮಾ ಸ್ಟೋರ್ಸ್ ಹೌಸ್ ಶ್ರೀರಾಮ ಪೇಟೆ ಕಾಸರಗೋಡು ಡಾ ಶ್ರೀನಿವಾಸ ಪೈ ಪ್ರಕಾಶ್ ... ಮೆಸರ್ಸ್ ಮುಲ್ಲರ್ ... ಬ್ರದರ್ಸ್ ... ಚಿಕ್ಕಪೇಟೆ ಬೆಂಗಳೂರು ಸಿಟಿ ಮೆಸರ್ಸ್ ಕಾಮತ್ ಎಂಡ್ ಕೊ, ಶಾಂತಿಹೌಸ್ ಗಿರ್‍ಗಾವ್ ಬ್ಯಾಕ್‍ರೋಡ್ ಮುಂಬಾಯಿ, ನಂ 1 ದಿ ವೆಂಕಟ ಹೋಟೆಲ್, ಮಡಿಕೇರಿ ಕೊಡಗು ರಾಯ್ ಫಾರ್ಮಸಿ, ...

The Laxhmi Insurance Company Ltd, Lahore.

ದಿ ಲಕ್ಷ್ಮಿ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್, ಲಾಹೋರ್.

ಒಂಭತ್ತು ವರ್ಷಗಳಲ್ಲಿ ಲಕ್ಷಣೀಯ ಪ್ರಗತಿ

ರಾಷ್ಟ್ರಧುರೀಣರಾದ ಲಾಲಾಲಜಪತ ರೈ ಮತ್ತು ಪಂಡಿತ ಮೋತಿಲಾಲ ನೆಹರುಗಳಿಂದ ಸ್ಥಾಪಿಸಲ್ಪಟ್ಟಿತು

1924. ಪ್ರಗತಿ ಸೂಚನೆ 1934.

ವರ್ಷದ ಅಂತ್ಯ ಎಪ್ರಿಲ್ 30ಕ್ಕೆ

ಕೆಲಸದ ಫಲಿತಾಂಶ.		ಲೈಫ್ ಫಂಡ್
1925—	ರೂ 21,24,250	500
1929—	ರೂ. 1,66,18,620	9,32,000
1934—	ರೂ 46,77,223.	49 06,771.

ಕ್ಲೈಮ್ಸ್‌ಗಳಿಗೆ ಕೊಟ್ಟ ಹಣ 8,50,000ಕ್ಕೆ ಮೀರಿದೆ ಕಂಪೆನಿಯ ಆಸ್ತಿ-57,00,000ಕ್ಕೆ ಮೀರಿದೆ. 1933-34ರಲ್ಲಿ 1,00,00,000 ಪಾಲಿಸಿಗಳು ಹಂಚಲ್ಪಟ್ಟಿವೆ.

ರಾಷ್ಟ್ರಾಭಿಮಾನಿಗಳೆಲ್ಲರೂ ಈ ಕಂಪೆನಿಯಲ್ಲೇ ವಿಮೆ ಎತ್ತಬೇಕಾಗಿದೆ ಲಾಭಹೊಂದಬೇಕಾಗಿದೆ. ಜೀವ ವಿಮೆಗೆ ಬೇಕಾದ ಎಲ್ಲಾ ಸೌಕರ್ಯಗಳೂ 'ಲಕ್ಷ್ಮಿ'ಯಲ್ಲಿವೆ

ಏಜಂಟರಗಳಿಲ್ಲದ ಸ್ಥಳಗಳಲ್ಲಿ ಜನಪ್ರಿಯರಾದ ಏಜಂಟರುಗಳು ಬೇಕಾಗಿದ್ದಾರೆ.

The Laxhmi Insurance Co, Ltd.,
Madras Branch,
No. 6, Sankuram Chetty St, G. T. MADRAS

ದಿ ಲಕ್ಷ್ಮಿ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್,
ಮದ್ರಾಸು ಶಾಖೆ,
ನಂಬ್ರ 6, ಸಂಕುರಾಮ ಚೆಟ್ಟಿ ಬೀದಿ, ಜಿ ಟಿ ಮದ್ರಾಸು.

ಸ್ವದೇಶಾಭಿಮಾನಿ ಪತ್ರಿಕೆಗೆ ಇಂದೇ ಚಂದಾದಾರರಾಗಿರಿ

The Canara Banking Corporation Udipi, Ltd.

Head office:—UDIPI, S. K. (Incorporated in British India) TEL.-'BANKING' **ESTD. 1906.**

Branches:—1. Udipi, 2. Coondapoor, 3. Car Street, Mangalore, 4. Shimoga, 5. Madras (George Town), **6. Bunder Mangalore, 7. Mercara** (North Coorg), **& 8. Virarajendrapet** (South Coorg).

Authorised, Issued & Subscribed Capital	Rs.	3,50,000—0—0
Paid-Up Capital	"	2,69,795—0—0
Reserve & other Funds	"	3,21,326—0—0
Investment on Goverment Securities	"	6,77,059-15-0
Deposits	"	25,47,463-13-6
Total Working Capital Exceeds	"	36,00,000—0—0

Office of the Corporation Udipi, 10th July 1935.

M. Shrinivas Prabhu,
Manager.

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು ಇಲ್ಲಿಯ ವರೆಗಿನ ನಮ್ಮ ಏಲ್ಲಿಯುವ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ರೌನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪ್ರೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

Our Silver Jubilee Year! **Our Silver Jubilee Year!**

Messrs. KOCHIKAR BROTHERS (Estd 1910)

Branch Secretaries for Madras Presidency including Indian States
Chief Agents for Bombay City and Suburbs

The Bombay Life Assurance Co. Ltd.

Attractive Schemes of Assurances with rebate on annual premiums and additional rebate on larger assurances

Excellent Bonuses to agents for Jubilee Year Business

IT PAYS YOU TO REPRESENT US.

Wanted agents in unrepresented areas.

Apply to any of the following Offices—

P B No 337, Mount Road Madras	Visweswarapuram Circle, Bangalore City.	Huzur Road, Calicut.	Car Street, Mangalore	UDIPI, S India	Esmail Bldg., Loharchawl, Bombay No 2

ಕರ್ಣಾಟಕ ಪ್ರಸೂತಿಸಂಜೀವನ:

ಬಾಣಂತಿಯರಿಗಾಗಿಯೇ ತಯಾರುಮಾಡಿದ ಅಮೋಘ ಔಷಧ ಇದು ಗರ್ಭಕೋಶದೊಳಗಣ ಎಲ್ಲಾ ಕರದ ನಂದನ್ನು ಹೊರಗೆ ಹಾಕಿ ಗರ್ಭಕೋಶವನ್ನು ಸ್ವಪ್ರಮಾಣದಲ್ಲಿ ನಿಲ್ಲಿಸುವುದು. ಇದರ ಸೇವನೆಯಿಂದ ಸರ್ವ ಧಾತುಗಳು ಮೊದಲಿನಂತೆಯೇ ತುಂಬುವವು.

ಕರ್ಣಾಟಕ ಕ್ಷೀರಬಲಾ:

ಪಕ್ಷವಾತಕ್ಕೆ ಇದಕ್ಕೆ ಸಮಾನವಾದ ಔಷಧವು ಬೇರೆ ಇಲ್ಲ.

ನಮ್ಮ ಔಷಧಗಳು ಮದ್ರಾಸು ಗವರ್ನಮೆಂಟಿನ ಸೆಂಟ್ರಲ್ ಬೋರ್ಡ್ ಒಫ್ ಇಂಡಿಯನ್ ಮೆಡಿಸಿನ್ಸ್‌ನವರಿಂದ ಮಂಜೂರುಮಾಡಲ್ಪಟ್ಟಿವೆ

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲ್ಲೋಪತಿಕ್ ಔಷಧಗಳೂ, ಶಾಸ್ತ್ರರೀತ್ಯಾ ಆಯುರ್ವೇದ ಔಷಧಗಳೂ, ಅಲಂಕಾರ ಸಾಮಗ್ರಿಗಳೂ (Toilets), ಸಾಬೂನುಗಳೂ, ಫೌಂಟನ್ ಪೆನು ಶಾಯಿಗಳೂ ತಯಾರಾಗುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರೆಯಿರಿ—

ವೆಂಕಟ್ರಾಯ ಅಣ್ಣಪ್ಪ ಬಾಳಿಗ—ಮೆನೆಜಿಂಗ್ ಡೈರೆಕ್ಟರ್.

ಕರ್ಣಾಟಕ ಕೆಮಿಕಲ್ ಮತ್ತು ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್ ಉಡುಪಿ.

ಹೆಡ್ ಆಫೀಸು ಮತ್ತು ಕಾರಖಾನೆ.—ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೋಗಳು.—(1) ರಥಬೀದಿ ಮಂಗಳೂರು. (2) 1/70 ನ್ಯಾನಪ್ಪ ನ್ಯಾಕನ ಬೀದಿ, ಪಾರ್ಕ್‌ಟೌನ್ ಮದ್ರಾಸು. (3) ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

Karnataka Chemical and Pharmaceutical Works, Ltd., Udipi. (South India)

Edited, Printed & Published By A. S. Kamath at the Sharada Press, Car Street, Mangalore.